ಅಮೃತ ವರ್ಷ

ಸಂಪಾದಕರು
ಹ.ಕ. ರಾಜೇಗೌಡ
ಡಾ. ಡಿ. ಕೆ. ರಾಜೇಂದ್ರ



ಅಮೃತ ವರ್ಷ

(ದೇಜಗೌ ಅಭಿನಂದನ ಗ್ರಂಥ)

ಅಮೃತ ವರ್ಷ

ಸಂಪಾದಕರು

ಹ. ಕ. ರಾಜೇಗೌಡ

ಡಾ. ಡಿ. ಕೆ. ರಾಜೇಂದ್ರ

ಪ್ರಕಾಶಕರು

ದೇಜಗೌ ೭೫ ಅಭಿನಂದನ ಸಮಿತಿ

ಬೆಂಗಳೂರು

AMRUTHA VARSHA- A felicitation volume presented on the occasion of 75th year of Dr. D. Javare Gowda a great writer and a scholar of kannada language edited by H.K. Raje Gowda Dr. D. K. Rajendra. pp xxiv + 814 First Edition 1995 Price Rs. 200.

ಬೆಲೆ : ಇನ್ನೂರು ರೂಪಾಯಿ

ಪ್ರತಿಗಳು ದೊರೆಯುವ ಸ್ಥಳ :
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀ ಪುರಂ
ಮೈಸೂರು- 570 012

ಮುದ್ರಕರು :
ಎಸ್. ಟಿ. ಎನ್. ಆಫ್‌ಸೆಟ್ ಪ್ರಿಂಟರ್ಸ್
ತಾವರೆಗೆರೆ, ಮಂಡ್ಯ

ದೇಜಗೌ ೭೫ ಅಭಿನಂದನ ಸಮಿತಿ

ಗೌರವಾಧ್ಯಕ್ಷರು

ಡಾ. ಪು. ತಿ. ನರಸಿಂಹಾಚಾರ್

ಕಾರ್ಯಾಧ್ಯಕ್ಷರು

ಡಾ. ಸಿದ್ದಯ್ಯ ಪುರಾಣಿಕ

ಉಪಾಧ್ಯಕ್ಷರು

ಎಸ್. ಮಂಚಯ್ಯ

ಪ್ರೊ. ಚಿ. ನ. ಮಂಗಳ

ಕೋಶಾಧ್ಯಕ್ಷರು:

ಡಾ. ವಿಜಯಾ

ಪ್ರಧಾನ ಕಾರ್ಯದರ್ಶಿ	:	ಪ್ರೊ. ಎಂ. ಎಚ್. ಕೃಷ್ಣಯ್ಯ
ವ್ಯವಸ್ಥಾಪಕ ಕಾರ್ಯದರ್ಶಿ	:	ಎಚ್. ಎಂ. ಬೋರಯ್ಯ
ಕಾರ್ಯದರ್ಶಿಗಳು	:	ಆಲ್ಲ ಚಿರಂಜೀವಿ
		ನಾ. ಗೀತಾಚಾರ್ಯ

ಸದಸ್ಯರು

ಶ್ರೀ ಎಚ್. ಎಲ್. ನಾಗೇಗೌಡ
ಶ್ರೀ ಗೊ. ರು. ಚನ್ನಬಸಪ್ಪ
ಡಾ. ಹಂ. ಪ. ನಾಗರಾಜಯ್ಯ
ಪ್ರೊ. ಎಚ್. ಆರ್. ದಾಸೇಗೌಡ
ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
ಡಾ. ಹೋ. ಶ್ರೀನಿವಾಸಯ್ಯ
ಶ್ರೀ ಎಚ್. ಬಿ. ಜ್ವಾಲನಯ್ಯ
ಶ್ರೀ ಶಾಂತರಸ
ಶ್ರೀ ಪ್ರಭಾಕರ ರೆಡ್ಡಿ ಕೆ.
ಪ್ರೊ. ಕೆ. ಜಿ. ನಾಗರಾಜಪ್ಪ
ಶ್ರೀಮತಿ ಶೈಲಜ ಉಡಚಣ
ಶ್ರೀ ಮ. ಗ. ಶೆಟ್ಟಿ
ಶ್ರೀ ಗುರುಮೂರ್ತಿ
ಶ್ರೀ ಕೆ. ಆರ್. ಲಿಂಗಪ್ಪ
ಶ್ರೀ ಕೆ. ವಿ. ಚಂದ್ರಣ್ಣಗೌಡ
ಶ್ರೀಮತಿ ಬಿ. ಟಿ. ಲಲಿತ ನಾಯಕ್
ಪ್ರೊ. ಬಿ. ಆರ್. ರಾಮಚಂದ್ರ ಗೌಡ
ಶ್ರೀ ಸಾ. ರಾ. ಗೋವಿಂದು

ಪ್ರೊ. ಎಲ್. ಎಸ್. ಶೇಷಗಿರಿರಾವ್
ಡಾ. ಎಂ. ಚಿದಾನಂದ ಮೂರ್ತಿ
ಶ್ರೀ ಕೊ. ಚೆನ್ನಬಸಪ್ಪ
ಡಾ. ಎಂ. ಎಂ. ಕಲ್ಬುರ್ಗಿ
ಡಾ. ಡಿ. ಕೆ. ರಾಜೇಂದ್ರ
ಶ್ರೀ ಸಂಗಮನಾಥ ಜಿ. ಹಂಡಿ
ಪ್ರೊ. ಕು. ಶಿ. ಹರಿದಾಸ ಭಟ್ಟ
ಶ್ರೀ ಬಿ. ಎ. ಸನದಿ
ಶ್ರೀ ವೀರೇಂದ್ರ ಸಿಂಪಿ
ಪ್ರೊ. ಬಿ. ವಿ. ವೀರಭದ್ರಪ್ಪ
ಪ್ರೊ. ಪಿ. ಎಸ್. ಶ್ರೀನಿವಾಸ್
ಶ್ರೀ ಡಿ. ಜೆ. ಪದ್ಮನಾಭ
ಶ್ರೀ ಬಾ. ಸಾಮಗ
ಪ್ರೊ. ಎಚ್. ಜೆ. ಲಕ್ಕಪ್ಪಗೌಡ
ಶ್ರೀ ಹ. ಕ. ರಾಜೇಗೌಡ
ಡಾ. ಜೀ. ಶಂ ಪರಮಶಿವಯ್ಯ
ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ
ಸೂ. ಸುಬ್ರಮಣ್ಯಂ
(ಆಂತರಿಕ ಲೆಕ್ಕ ಪರಿಶೋಧಕರು)

ಕಾರ್ಯಾಧ್ಯಕ್ಷರ ಮಾತು

ಮಾನ್ಯ ದೇವೇಗೌಡ ಜವರೇಗೌಡರಿಗೆ 1994 ಕ್ಕೆ ಎಪ್ಪತ್ತಾರು ವರ್ಷಗಳು. ಈಗ ಅವರಿಗೆ ಎಪ್ಪತ್ತೇಳು ವರ್ಷಗಳು. ಒಬ್ಬ ವ್ಯಕ್ತಿಯ ಜೀವನದಲ್ಲಿ 60ನೇ ಹುಟ್ಟುಹಬ್ಬ ಪ್ರಮುಖಘಟ್ಟ. ತನ್ನ ಜೀವನದ ಸಾಧನೆ ಮತ್ತು ವೈಫಲ್ಯಗಳನ್ನು, ಏಳು ಬೀಳುಗಳನ್ನು ಮತ್ತು ಸಮಾಜಕ್ಕೆ ತಾನು ಸಲ್ಲಿಸಿದ ಕಾಣಿಕೆಯನ್ನು ಕುರಿತು ಮೆಲುಕು ಹಾಕುವ ಕಾಲ. 'ದೇಜಗೌ' ಅವರು ಅದನ್ನೂ ದಾಟಿ ಹದಿನೈದು ವರ್ಷಗಳು ಮುನ್ನಡೆದಿದ್ದಾರೆ. ಈ ಘಟ್ಟ ಇನ್ನೂ ಮುಖ್ಯವಾದುದು. ಈ ವಯಸ್ಸಿನಲ್ಲಿ ತನ್ನದನ್ನು ಮರೆತು ಆಧ್ಯಾತ್ಮಿಕದತ್ತ ಮನಸ್ಸನ್ನು ತಿರುಗಿಸುವ ಹಂತ, ಸಮಾಜದ, ರಾಷ್ಟ್ರದ ಮತ್ತು ವಿಶ್ವದ ಕ್ಷೇಮ ಚಿಂತನೆಯ ಹಂತ. ಆಧ್ಯಾತ್ಮದ ಕಡೆಗೆ ಮನಸ್ಸು ತಿರುಗಿದ್ದರೂ ಅವರು ಲೌಕಿಕದಿಂದ ಪೂರ್ಣವಾಗಿ ಮುಕ್ತರಾಗಿಲ್ಲ. ಅವರಂತಹವರು ಹಾಗೆ ಮಾಡಲು ಸಾಧ್ಯವೂ ಇಲ್ಲ. ಅವರಿನ್ನೂ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು, ಶೈಕ್ಷಣಿಕ, ರಾಜಕೀಯ, ಆರ್ಥಿಕ ಮುಂತಾದ ಸಮಸ್ಯೆಗಳ ಬಗ್ಗೆ ಚಿಂತನಶೀಲರಾಗಿದ್ದು, ಆಗಾಗ್ಗೆ ತಮ್ಮ ಭಾವನೆಗಳನ್ನು ಜನರ ಮುಂದಿಡುತ್ತಿದ್ದಾರೆ. ಇಂತಹ ಒಬ್ಬ ಚಿಂತನ ಶೀಲ ವ್ಯಕ್ತಿಯನ್ನು ಸಮಾಜ ಗೌರವಿಸುವುದು ಸಹಜವೆ. ಅದು ಸಮಾಜ ತನ್ನನ್ನು ತಾನೇ ಗೌರವಿಸಿಕೊಂಡಂತೆ.

"ದೇಜಗೌ" ಅವರ ಆತ್ಮೀಯರು, ಅಂದರೆ ಆ ಗುಂಪಿನಲ್ಲಿ ಅವರ ಬಗ್ಗೆ ಸದಾ ಗೌರವ ಭಾವನೆಯಿಂದ ವರ್ತಿಸುತ್ತಿರುವ ಅವರ ಶಿಷ್ಯ ವರ್ಗ, ಸಹೋದ್ಯೋಗಿಗಳು, ಅವರ ಮಿತ್ರರು ಮತ್ತು ಅವರ ಅಭಿಮಾನಿಗಳು, ಅವರ ಎಪ್ಪತ್ತೈದನೆ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿ ಗೌರವಿಸಬೇಕೆಂದು ನಿರ್ಧರಿಸಿ ಪು. ತಿ. ನರಸಿಂಹಾಚಾರ್ಯರು ಅಧ್ಯಕ್ಷರಾಗಿದ್ದು ಅದಕ್ಕಾಗಿ ದಿವಂಗತ ಡಾ. ಸಿದ್ದಯ್ಯ ಪುರಾಣಿಕರ ಕಾರ್ಯಾಧ್ಯಕ್ಷತೆಯಲ್ಲಿ ಒಂದು ಅಭಿನಂದನ ಸಮಿತಿ ರಚಿಸಿ ಕಾರ್ಯ ಪ್ರಾರಂಭಿಸಿದರು. "ದೇಜಗೌ" ಎಪ್ಪತ್ತೈದು ವರ್ಷಗಳ ತುಂಬು ಜೀವನ ನಡೆಸಿ ಕನ್ನಡದ ಸೇನಾನಿಯಾಗಿ ಅವರ ಗುರು ದಿವಂಗತ ರಾಷ್ಟ್ರ ಕವಿ ಕುವೆಂಪು ಅವರಿಗಿತ್ತ "ಕನ್ನಡ ಡಿಂಡಿಮ" ವನ್ನು ಸಮರ್ಥವಾಗಿ ಬಾರಿಸಿ ಜನರನ್ನು ಎಚ್ಚರಿಸಿ ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಗುರುತಿಸುವ ರೀತಿಯಲ್ಲಿ ಸುಮಾರು ಸಾವಿರ ಪುಟಗಳ ಗಾತ್ರದ ಒಂದು ಅಭಿನಂದನ ಗ್ರಂಥ ಅರ್ಪಿಸಬೇಕು ಮತ್ತು ಬೆಂಗಳೂರಿನಲ್ಲಿ ವೈಭವಪೂರ್ಣ ಸಮಾರಂಭ ವ್ಯವಸ್ಥೆ ಮಾಡಬೇಕೆಂದು ಸಮಿತಿ ನಿರ್ಧರಿಸಿತು. ಈ ನಿರ್ಧಾರದಂತೆ ಸಮಿತಿ ಕಾರ್ಯ ಪ್ರಾರಂಭಿಸಿತು.

ಅಭಿನಂದನ ಗ್ರಂಥಕ್ಕೆ ಲೇಖನಗಳನ್ನು ಸಂಗ್ರಹಿಸುವುದು ಸುಲಭದ ಕೆಲಸವೇನಲ್ಲ. ಆದರೂ ಲೇಖಕರನ್ನೂ ಪತ್ರ ಮುಖೇನ ಮತ್ತು ವೈಯಕ್ತಿಕವಾಗಿ ಸಂಪರ್ಕಿಸಿ ಲೇಖನಗಳನ್ನು ಸಂಗ್ರಹಿಸಲು ಪ್ರಯತ್ನಿಸಿ ಸಫಲರಾಗಿದ್ದೇವೆ. ಈ ಲೇಖನಗಳ ಕರ್ತೃಗಳು ಖ್ಯಾತ ಸಾಹಿತಿಗಳೂ ಅವರವರ ಕ್ಷೇತ್ರದಲ್ಲಿ ಅಧಿಕೃತವಾಗಿ ಅಭಿಪ್ರಾಯಗಳನ್ನು ವ್ಯಕ್ತ ಮಾಡಬಲ್ಲವರೂ ಆಗಿರುವುದರಿಂದ ಅವುಗಳ ಮೌಲ್ಯ ಮಾಪನ ಮಾಡುವ ಪ್ರಯತ್ನ ನಾನು ಮಾಡಬಯಸುವುದಿಲ್ಲ. ಅದನ್ನು ಓದುಗರಿಗೇ ಬಿಟ್ಟಿದ್ದೇನೆ.

ಈ ಅಭಿನಂದನ ಗ್ರಂಥಕ್ಕೆ "ಅಮೃತ ವರ್ಷ" ಎಂದು ಹೆಸರಿಟ್ಟಿರುವುದು ಔಚಿತ್ಯಪೂರ್ಣವಾಗಿದೆ. ಈ ಗ್ರಂಥದಲ್ಲಿ ಆರು ಭಾಗಗಳಿವೆ. ಮೊದಲನೆಯ ಭಾಗ "ನೆನಪಿನ ಬುತ್ತಿ" ಈ ನೆನಪಿನ ಬುತ್ತಿ ೧೫೮ ಪುಟಗಳಲ್ಲಿ ಕಾವೇರಿಯ ಪ್ರವಾಹದೋಪಾದಿಯಲ್ಲಿ ಹರಿಯುವುದು. ಆ ನೆನಪಿನ ಬುತ್ತಿಯಲ್ಲಿ ಕಷ್ಟಕಾರ್ಪಣ್ಯಗಳ ಚಿತ್ರ ಇದೆ; ಹೊಗಳಿಕೆ ತೆಗಳಿಕೆಗಳ ಚಿತ್ರವಿದೆ; ಅವರ ದೌರ್ಬಲ್ಯಗಳ ಚಿತ್ರ ಇದೆ; ಅವರ ಸಾಧನೆ ವೈಫಲ್ಯಗಳ ಚಿತ್ರ ಇದೆ. ಆ ಚಿತ್ರದಲ್ಲಿ ಉತ್ಪ್ರೇಕ್ಷೆಯೂ ಇರಬಹುದು. ಆದರೆ ಈ ನೆನಪಿನ ಬುತ್ತಿ ಅಪೂರ್ಣ. ಅವರ ನೆನಪಿನ ಬುತ್ತಿ ಬಿಚ್ಚಿದರೆ ಒಂದು ಬೃಹತ್ ಗ್ರಂಥವೇ ಆಗಬಹುದು. ಈ ಬುತ್ತಿಯಲ್ಲಿ ಏನೇನಿದೆಯೋ ಅವೆಲ್ಲವೂ ಕಾಲಾನುಕ್ರಮವಾಗಿ ಬಂದಿಲ್ಲ. ಆದರೂ ಈ ನೆನಪಿನ ಬುತ್ತಿ ಅವರನ್ನು ಅರಿತುಕೊಳ್ಳಲು ನೆರವಾಗುವುದು ಎಂಬುದು ನನ್ನ ನಂಬಿಕೆ.

ಎರಡನೆಯ ಭಾಗ ಅವರ ವ್ಯಕ್ತಿತ್ವ ಮತ್ತು ಹಿರಿಮೆಯನ್ನು ಕುರಿತದ್ದು. ಈ ಭಾಗ ಹಲವು ಪುಟಗಳಲ್ಲಿ ಸ್ಫುಟಗೊಂಡಿದೆ. ರಾಷ್ಟ್ರದ ಹಿರಿಯ ನಾಯಕರಾದ ಸಿದ್ದವನಹಳ್ಳಿ ನಿಜಲಿಂಗಪ್ಪನವರು 'ದೇಜಗೌ' ಅವರನ್ನು "ಸರಸ್ವತಿಯವರಪುತ್ರ" ಎಂದು ಕರೆದಿದ್ದಾರೆ. "ದೇಜಗೌ" ಅವರು ಬಸವಣ್ಣನವರ ವಿಚಾರದಲ್ಲಿ ಹಾಗೂ ಭಗವಾನ್ ಬುದ್ಧನ ವಿಚಾರದಲ್ಲಿ, ಬಸವಣ್ಣ ಮತ್ತು ಅಂಬೇಡ್ಕರ್ ಇವರ ವಿಚಾರದಲ್ಲಿ ಬರೆದಿರುವ ಗ್ರಂಥಗಳು ಅವರ ಮನೋವೈಶಾಲ್ಯ, ಸತ್ಯ ಪ್ರೇಮಗಳಿಗೆ ಸಾಕ್ಷಿ. ಸಾಮಾನ್ಯ ಜನತೆಯಲ್ಲಿ ಮೇಲು ಕೀಳು ಮುಂತಾದ ಮೂಢನಂಬಿಕೆಗಳನ್ನು ತೆಗೆದು ಹಾಕಿ, ಮೇಲ್ಕಂಡ ಮಹನೀಯರುಗಳು ಮತ್ತು ಮಹಾತ್ಮ ಗಾಂಧಿಯವರ ಆಧ್ಯಾತ್ಮಿಕ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳನ್ನು ಜನತೆಯ ಮುಂದಿಟ್ಟು ಜನರ ವಿಚಾರವಂತಿಕೆಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ. ಬಹಳ ಮಟ್ಟಿಗೆ ಕೃತಕೃತ್ಯರೂ ಆಗಿರುತ್ತಾರೆ. ಇದಕ್ಕಾಗಿ ಸಮಾಜವು ದೇ. ಜವರೇಗೌಡರಿಗೆ ಕೃತಜ್ಞವಾಗಿರಬೇಕು. ಇದು ಸಾಕಲ್ಲದೆ ಅವರ ಹಿರಿಮೆಯನ್ನು ಗುರುತಿಸಲು ಪಂಚಮುಖದ ಪರಮೇಶ್ವರ, ಸಾತ್ವಿಕಪ್ರೀತಿ, ವಿದ್ಯಾರ್ಥಿಪ್ರಿಯ, ಕನ್ನಡದಸುಪುತ್ರ, ವಜ್ರಾದಪಿಕಠೋರಾಣಿ ಜಗತ್ತಿನ ಮಹಾನ್ ಪ್ರತಿಭೆ ಮುಂತಾದ ಲೇಖನಗಳು ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಕನ್ನಡಿಗಳು.

ಭಾಗ ಮೂರರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ಕುರಿತ ಲೇಖನಗಳಿವೆ. ಅವರು ಭಾಷಾಂತರದ ಆಚಾರ್ಯರೆಂದೇ ಹೇಳಬಹುದು. ಶಿಕ್ಷಣ ಪದ್ಧತಿ, ಶಿಕ್ಷಣ ಮಾಧ್ಯಮ, ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಅವರ ನಿಲುವು ಮತ್ತೆ ಮತ್ತೆ ಆಲೋಚಿಸುವಂತೆ ಮಾಡುತ್ತವೆ.

ಭಾಗ ನಾಲ್ಕರಲ್ಲಿ ಸಂಸ್ಕೃತಿ ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳಿವೆ. ಇವೆಲ್ಲವೂ ಆಯಾ ಕ್ಷೇತ್ರದಲ್ಲಿ ತಜ್ಞರೆಂದು ಹೆಸರುಗಳಿಸಿರುವ ವಿದ್ವಾಂಸರು ಬರೆದಿರುವ ಲೇಖನಗಳು. ಅವುಗಳು ವಿದ್ವತ್ಪೂರ್ಣವಾಗಿವೆ. ಒಟ್ಟಿನಲ್ಲಿ ಈ ಪುಸ್ತಕದ ಲೇಖನಗಳು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿರುವುದಲ್ಲದೆ ಓದುಗರಿಗೆ ಮುದವನ್ನೂ ಉಂಟು ಮಾಡುತ್ತವೆ ಎಂದು ನಂಬಿದ್ದೇನೆ. ಇದು ನಿಜಕ್ಕೂ "ದೇಜಗೌ" ಅವರ ಹಿರಿಮೆಗೆ ತಕ್ಕದಾದ ಗ್ರಂಥ.

ಈ ಗ್ರಂಥಕ್ಕೆ ಮುನ್ನುಡಿ ಬರೆಯಬೇಕಾಗಿದ್ದವರು "ದೇಜಗೌ" ಅವರ ಆತ್ಮೀಯರಾದ ದಿವಂಗತ ಡಾ. ಸಿದ್ದಯ್ಯ ಪುರಾಣಿಕರು. "ನನ್ನ ಆರೋಗ್ಯವೂ ಏರುಪೇರಾಗುತ್ತಿದೆ ಈ ಸಮಾರಂಭವನ್ನು ಆದಷ್ಟು ಜಾಗ್ರತೆ ಮಾಡಿ ಮುಗಿಸಬೇಕು" ಎಂದು ಹಲವು ಸಾರಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ನಮ್ಮ ದುರಾದೃಷ್ಟ; ಈ ಅಭಿನಂದನಗ್ರಂಥ 'ಅಮೃತವರ್ಷಕ್ಕೆ' ಮುನ್ನಡಿ ಬರೆಯುವ ಮುನ್ನವೇ ಅವರು ನಮ್ಮನ್ನಗಲಿದರು. ಅವರ ಅಗಲಿಕೆಯನ್ನು ನೆನಪಿಸಿಕೊಳ್ಳುತ್ತ ಅವರಿಗೆ ಭಗವಂತ ಸದ್ಗತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

"ಅಮೃತ ವರ್ಷ" ಕ್ಕೆ ಮುನ್ನುಡಿ ಬರೆಯುವ ಪುಣ್ಯಕಾರ್ಯ ನನ್ನ ಪಾಲಿಗೆ ಬಂದುದು ಆಕಸ್ಮಿಕ. "ದೇಜಗೌ" ಮತ್ತು ನನ್ನ ಸಂಬಂಧ ಅನಿರ್ವಚನೀಯ. ನಮ್ಮ ನಡುವೆ ವಿರೋಧಾಭಿಪ್ರಾಯಗಳಿವೆ. ಆದರೆ ಅವು ನಮ್ಮ ವೈಯಕ್ತಿಕ ಸಂಬಂಧಕ್ಕೆ ಎಂದೂ ಧಕ್ಕೆ ಉಂಟು ಮಾಡಿಲ್ಲ. ಅನೇಕ ವಿಷಯಗಳಲ್ಲಿ ನಮ್ಮಿಬ್ಬರ ನಿಲುವು ಬೇರೆ ಬೇರೆಯೇ ಆಗಿದ್ದರೂ ಅವರ ಬಗೆಗಿನ ನನ್ನ ಗೌರವ ಎಳ್ಳಷ್ಟೂ ಕಡಿಮೆ ಆಗಿಲ್ಲ. ಅವರು ಶತಾಯುವಾಗಿ ಕನ್ನಡ ನಾಡು ನುಡಿಗಳ ಸೇವೆಯನ್ನು ಮಾಡುವಂತೆ ಭಗವಂತ ಅವರಿಗೆ ಆಯುರಾರೋಗ್ಯ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.

ಒಂದು ಅಭಿನಂದನ ಗ್ರಂಥ ಪ್ರಕಟಿಸುವುದು ಸುಲಭವೇನಲ್ಲ. ಇದರಲ್ಲಿ ಸಂಪಾದಕರ ಕೆಲಸ ಕಷ್ಟದ ಕೆಲಸ. ಆ ಕೆಲಸವನ್ನು ಶ್ರೀ ಹ. ಕ. ರಾಜೇಗೌಡರು ಮತ್ತು ಡಾ. ಡಿ.ಕೆ. ರಾಜೇಂದ್ರ ಅವರು ಯಶಸ್ವಿಯಾಗಿ ನಿರ್ವಹಿಸಿ ಅಭಿನಂದನೀಯರಾಗಿದ್ದಾರೆ. ಈ ಗ್ರಂಥಕ್ಕೆ ಉತ್ಕೃಷ್ಟ ಲೇಖನಗಳನ್ನು ಕಳುಹಿಸಿಕೊಟ್ಟ ಎಲ್ಲ ಮಹನೀಯರು ಮತ್ತು ಮಹಿಳೆಯರುಗಳಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸದಿದ್ದರೆ ಕರ್ತವ್ಯಚ್ಯುತಿ ಮಾಡಿದಂತಾಗುತ್ತದೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮಿತ್ರ, ಎಚ್. ಆರ್. ದಾಸೇಗೌಡರು, ಕಾರ್ಯದರ್ಶಿಗಳಾದ ಶ್ರೀ ಎಂ. ಎಚ್. ಕೃಷ್ಣಯ್ಯನವರೂ ಈ ಗ್ರಂಥ ಈ ರೂಪದಲ್ಲಿ ಬರಲು ಶ್ರಮವಹಿಸಿದ್ದಾರೆ. ಎಲ್ಲರಿಗಿಂತ ಮಿಗಿಲಾಗಿ ನನ್ನ ಕಿರಿಯ ಮಿತ್ರರಾದ ಶ್ರೀ ಚಿರಂಜೀವಿ ಮತ್ತು ಶ್ರೀ ಎಚ್. ಎಂ. ಬೋರಯ್ಯನವರುಗಳ ಕಳಕಳಿ ಮತ್ತು ಉತ್ಸಾಹ ಯಾರನ್ನೂ ನಾಚಿಸುವಂತಹುದೇ. ಅವರ ಒತ್ತಡ, ಓಡಾಟ ಇಲ್ಲದಿದ್ದರೆ ಈ ಗ್ರಂಥ ಬೆಳಕು ಕಾಣುವುದು ಇನ್ನೂ ವಿಳಂಬವಾಗುತ್ತಿತ್ತೇನೊ. ಆ ಇಬ್ಬರು ಮಹನೀಯರುಗಳೂ ಅಭಿನಂದನಾರ್ಹರು.

ಈ ಗ್ರಂಥವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್, ಎಸ್.ಟಿ.ಎನ್. ಮುದ್ರಣಾಲಯದ ಮಾಲೀಕರಾದ ಶ್ರೀಮತಿ ಮೀರಾಶಿವಲಿಂಗಯ್ಯ ಅವರಿಗೆ ಕೃತಜ್ಞತೆ ಸಲ್ಲಿಸಿ ನನ್ನ ಮುನ್ನುಡಿಗೆ ಮಂಗಳ ಹಾಡುತ್ತೇನೆ-

ಸ. ಮಂಚಯ್ಯ
ನಿಯೋಜಿತ ಕಾರ್ಯಾಧ್ಯಕ್ಷ

ಸಂಪಾದಕರ ಪರವಾಗಿ

ಸುಮಾರು ಎರಡು ವರ್ಷಗಳ ಹಿಂದೆ ಒಂದು ಸಂಜೆ ಬೆಂಗಳೂರಿನಿಂದ ಶ್ರೀ ಆಲ್ಲಚಿರಂಜೀವಿ, ಶ್ರೀ ಎಚ್.ಎಂ. ಬೋರಯ್ಯ ಮನೆಗೆ ಅನಿರೀಕ್ಷಿತವಾಗಿ ಬಂದರು. ಈ ಮಿತ್ರರನ್ನು ನಾನು ಕಳೆದ ಅನೇಕ ವರ್ಷಗಳಿಂದ ಬಲ್ಲೆ. ಈ ಇಬ್ಬರೂ ಕನ್ನಡ ನಾಡು ನುಡಿಯ ಬಗ್ಗೆ ವೀರಮಾಹೇಶ್ವರ ನಿಷ್ಠೆಯವರು. ಒಳಗೆ ಬಂದು ಕುಳಿತು "ಡಾ. ದೇಜಗೌ ಅವರಿಗೆ ಇನ್ನೇನು ಎಪ್ಪತ್ತೈದು ವರ್ಷ ತುಂಬುತ್ತಿದೆ. ಅವರ ೭೫ ನೆಯ ಹುಟ್ಟು ಹಬ್ಬವನ್ನು ಬೆಂಗಳೂರಿನಲ್ಲಿ ಅದ್ದೂರಿಯಾಗಿ ಆಚರಿಸಬೇಕು. ಆ ಸಂದರ್ಭದಲ್ಲಿ ಒಂದು ಗ್ರಂಥ ಅರ್ಪಿಸಬೇಕು. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಒಂದೊಂದು ಬಡಾವಣೆಗೆ ದೇಜಗೌ ನಗರ ಎಂದು ಹೆಸರಿಡುವಂತೆ ಮಾಡಬೇಕು" ಇತ್ಯಾದಿ ಸುಮಾರು ಅರ್ಧ ಗಂಟೆ ಆ ಮಿತ್ರರು ಅಭಿನಂದನ ಯೋಜನೆ ಕುರಿತು ಹೇಳುತ್ತಲೇ ನಡೆದರು. ದೇಜಗೌ ಬಗೆಗಿನ ಅವರ ನಿಸ್ವಾರ್ಥಭಾವನೆಗಳು ನನ್ನಲ್ಲಿ ಸಂಕೋಚವನ್ನೂ ನಾಚಿಕೆಯನ್ನೂ ಉಂಟು ಮಾಡಿದವು. ನಾವು ಮೈಸೂರಿನಲ್ಲಿರುವ ಬಹುತೇಕ ಲೇಖಕರು. ಅದರಲ್ಲೂ ಶೈಕ್ಷಣಿಕ ಕ್ಷೇತ್ರದಲ್ಲಿರುವವರು ಒಂದಲ್ಲ ಒಂದು ರೀತಿಯಲ್ಲಿ ದೇಜಗೌ ಅವರಿಗೆ ಋಣಿಗಳಾಗಿದ್ದೇವೆ. ಆದರೆ ಇದನ್ನೆಲ್ಲಾ ನಾವ್ಯಾರೂ ಯೋಚಿಸಲಿಲ್ಲವಲ್ಲ ಎಂದು. ಆ ಭಾವನೆಯಲ್ಲಿಯೆ "ಹೇಳಿ, ಈ ವಿಷಯದಲ್ಲಿ ನೀವು ವಹಿಸುವ ಯಾವುದೇ ಕೆಲಸವನ್ನು ನಾನು ಮಾಡುತ್ತೇನೆ" ಎಂದು ಅವರಿಗೆ ತಿಳಿಸಿದೆ.

ಶ್ರೀ ಚಿರಂಜೀವಿಯವರು ಮುಂದುವರಿಸಿದರು "ಮೊನ್ನೆ ಬೆಂಗಳೂರಿನಲ್ಲಿ ಸಭೆ ಸೇರಿದ್ದೆವು. ಪುತಿನ, ಸಿದ್ದಯ್ಯ ಪುರಾಣಿಕ ಎಲ್.ಎಸ್. ಶೇಷಗಿರಿರಾವ್, ಎಂ.ಎಂ ಕಲ್ಬುರ್ಗಿ, ಎಚ್. ಎಲ್. ನಾಗೇಗೌಡ, ಜಿ. ಎಸ್. ಸಿದ್ದಲಿಂಗಯ್ಯ, ಎಸ್. ಮಂಚಯ್ಯ, ಎಚ್. ಆರ್. ದಾಸೇಗೌಡ ಹಿರಿಕಿರಿಯ ಸಾಹಿತಿಗಳ ಒಂದು ಸುದೀರ್ಘ ಪಟ್ಟಿಯನ್ನೇ ಹೇಳಿ "ಎಲ್ಲರೂ ಈ ಗ್ರಂಥಕ್ಕೆ ನಿಮ್ಮನ್ನು ಸಂಪಾದಕರಾಗಿ ಆರಿಸಿದ್ದಾರೆ. ಆ ವಿಚಾರವನ್ನು ಹೇಳಿ ನಿಮ್ಮ ಒಪ್ಪಿಗೆ ಪಡೆಯಲು ಬಂದಿದ್ದೇವೆ" ಎಂದರು. ಈ ತೀರ್ಮಾನಕ್ಕೆ ಅವರು ಕೊಟ್ಟ ಕಾರಣ ನಾನು ದೇಜಗೌ ಅವರನ್ನು ಹತ್ತಿರದಿಂದ ಬಲ್ಲವನು, ಅವರನ್ನು ಅರ್ಥಮಾಡಿಕೊಂಡವನು, ಅವರ ಅಂತರಂಗದ ಶಿಷ್ಯ ಎಂಬುದು. ನಾನು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಚಿರಂಜೀವಿ ಹೇಳಿದ ಸಭೆಯಲ್ಲಿದ್ದವರೆಲ್ಲ ಹಿರಿಯರು, ನಾಡಿನ ಹೆಸರಾಂತ ಸಾಹಿತಿಗಳು, ದೇಜಗೌ ಅವರನ್ನು ನನಗಿಂತ ಮೊದಲಿಂದ ಕಂಡವರು. ಅಂತಹ ಹಿರಿಯರೆಲ್ಲ ಸೇರಿ ನನಗೆ ವಹಿಸಿದ ಈ ಜವಾಬ್ದಾರಿ ಸಮುದ್ರ ಲಂಘನ ಸಮಯದಲ್ಲಿ ಆಂಜನೇಯನಿಗೆ ದೊರೆತ ಪ್ರೇರಕ ಶಕ್ತಿಯಂತೆನಿಸಿತು. ಆಗಲಿ ಎಂದು ನನ್ನ ಒಪ್ಪಿಗೆಯನ್ನು ಅವರಿಗೆ ತಿಳಿಸಿದೆ.

ದೇಜಗೌ ಅವರನ್ನು ನೆನೆದಾಗಲೆಲ್ಲಾ ನಮ್ಮೂರ ದೊಡ್ಡ ಆಲದಮರದ ನೆನಪಾಗುತ್ತದೆ. ಬೇಸಿಗೆಯ ಕಾಲದಲ್ಲಿ ಅದು ಹಣ್ಣು ಬಿಟ್ಟಾಗ ಈ ಮರದ ವೈಭವ ವೈವಿಧ್ಯತೆಯನ್ನು ಕಂಡವರಿಗೆ ಮಾತ್ರ ನನ್ನ ಹೋಲಿಕೆಯ ಅರ್ಥವಾಗುತ್ತದೆ. ಕೆಲವರು ಕಲ್ಪವೃಕ್ಷಕ್ಕೂ, ಕೆಲವರು ಶ್ರೀಗಂಧದ ಮರಕ್ಕೂ ಅವರನ್ನು ಹೋಲಿಸಿದ್ದಾರೆ. ಈ ಎರಡೂ

ಕೇವಲ ಕೆಲವರಿಗೆ ಮಾತ್ರ ದಕ್ಕುವಂಥವು. ಆದರೆ ಒಂದು ಆಲದಮರ ಎಲ್ಲಾ ರೀತಿಯ, ಎಲ್ಲಾ ಜಾತಿಯ ಪಶುಪಕ್ಷಿಗಳಿಗೆ ಆಶ್ರಯ ನೀಡುತ್ತದೆ. ಇವುಗಳಲ್ಲಿ ಉಪಯೋಗಿ, ನಿರುಪಯೋಗಿ, ಒಳ್ಳೆಯ, ಕೆಟ್ಟ, ಶಾಂತ ಕ್ರೂರ ಎಲ್ಲಾ ರೀತಿಯ ಪ್ರಾಣಿ ಪಕ್ಷಿಗಳೂ ಇರುತ್ತವೆ. ದೇಜಗೌ ಆಶ್ರಯವೂ ಅಂಥದು. ಅದನ್ನು ನೆನೆದಾಗಲೆಲ್ಲಾ ನನ್ನ ನೆನಪಿಗೆ ಬರುವುದು ನಮ್ಮೂರ ತೋಪಿನ ಆ ದೊಡ್ಡ ಆಲದ ಮರ, ಅದರಾಶ್ರಯದ ಪ್ರಾಣಿ ಪಕ್ಷಿಗಳು.

ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಮೊದಲ ಸಲ ದೇಜಗೌ ನೋಡಿದ್ದು. ಅಂತರ ಶಾಲೆಗಳ ಚರ್ಚಾಸ್ಪರ್ಧೆಯೊಂದರಲ್ಲಿ ಮೊದಲ ಬಹುಮಾನ ಪಡೆದ ಹಳ್ಳಿಯ ಹುಡುಗನ ಹೆಗಲ ಮೇಲೆ ಪ್ರೀತಿಯಿಂದ ಕೈಯಿಟ್ಟು ಹರಸಿದ ಗುರುಕೃಪೆ ಇಂದಿಗೂ ನನ್ನ ಪಾಲಿಗೆ ಉಳಿದು ಬಂದಿರುವುದು ನನ್ನ ಪುಣ್ಯ ಎಂದೇ ಭಾವಿಸಿದ್ದೇನೆ. ನನಗೆ ನನ್ನಂಥ ಅನೇಕರಿಗೆ ಧ್ವನಿಕೊಟ್ಟವರು, ಆತ್ಮಾಭಿಮಾನ, ಆತ್ಮಸ್ಥೈರ್ಯ ಕೊಟ್ಟವರು, ಬೇರಾರಿಗೂ ನಾವು ಕಡಿಮೆಯಲ್ಲ ಎಂದು ತಲೆ ಎತ್ತಿ ನಿಲ್ಲುವಂತೆ ಮಾಡಿದವರು ದೇಜಗೌ. ನಾನಿದ್ದರೆ ಮಾತ್ರ ಈ ಕೆಲಸ ಒಪ್ಪುತ್ತೇನೆ ಇಲ್ಲವಾದರೆ ಇಲ್ಲ ಎಂದು ದೊಡ್ಡ ದೊಡ್ಡ ರಾಜಕಾರಣಿಗಳಿಗೆ, ಮಠಾಧಿಪತಿಗಳಿಗೆ ಹೇಳಿಬಿಡುವಷ್ಟು ಶಿಷ್ಯವಾತ್ಸಲ್ಯ ನನ್ನ ಪಾಲಿಗಿದೆ. ತಮ್ಮ ವಲಯಕ್ಕೆ ಬಂದವರಿಗೆಲ್ಲ ಅವರವರ ಕ್ಷೇತ್ರದಲ್ಲಿ ಮುಂದುವರಿಯಲು ಮಾರ್ಗದರ್ಶನ ಮಾಡುತ್ತ ಬೆಳೆಯಿಸಿದವರು. ದೇಜಗೌ ಸಂಪರ್ಕ ಆಗದಿದ್ದರೆ ಅನಾಮಿಕರಾಗಿ ಹೋಗುತ್ತಿದ್ದ ಅನೇಕರು ಹೆಸರಾಂತರಾಗಿರುವುದನ್ನು ನಾನು ಕಂಡಿದ್ದೇನೆ. ಇಂದಿಗೂ ದೇಜಗೌ ತಮ್ಮ ಈ ಉದಾರತೆಯನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ.

ದೇಜಗೌ ಅವರದು ಕನ್ನಡದ ಬಗ್ಗೆ ವೀರನಿಷ್ಠೆ. ಆದರೆ ಅದು ಅಂಧಾಭಿಮಾನವಲ್ಲ. ಶ್ರೀ ಕುವೆಂಪು ಪ್ರಣೀತವಾದ ನಿರಂಕುಶ ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಯಿಂದ ರೂಪಿತವಾದುದು. ಕನ್ನಡಭಾಷೆ ಜಗತ್ತಿನ ಯಾವುದೇ ಭಾಷೆಗೆ ಎರಡನೆಯದಾಗ ಬಾರದೆಂಬುದು ಅವರ ಅಚಲ ನಿಲುವು. ಅದಕ್ಕೆ ಬೇಕಾಗುವ ಎಲ್ಲಾ ರೀತಿಯ ಕೆಲಸಗಳನ್ನೂ ಅವರು ತಮ್ಮ ಅಧಿಕಾರಾವಧಿಯಲ್ಲಿ ಆರಂಭಿಸಿದರು. ಕೇವಲ ಮೂರು ನಾಲ್ಕು ಮಂದಿ ಅಧ್ಯಾಪಕರು ಮಾತ್ರ ಇರುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಇಲಾಖೆಯನ್ನು ನೂರು ಜನರು ಕೆಲಸ ಮಾಡುವ ಕನ್ನಡ ಅಧ್ಯಯನ ಸಂಸ್ಥೆಯಾಗಿ ರೂಪಿಸಿ ಕುವೆಂಪು ಅವರ ಸಂಶೋಧನೆ, ಬೋಧನೆ ಪ್ರಸಾರ ಯೋಜನೆಯನ್ನು ಕಾರ್ಯಗತ ಮಾಡಿದವರು ದೇಜಗೌ. ಇಂದು ಕನ್ನಡ ನಾಡಿನ ಶಾಲಾಕಾಲೇಜುಗಳಲ್ಲಿ ಶೇ.೪೦ ಆದರೂ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿದ್ದಾರೆ. ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪಿ. ಎಚ್. ಡಿ. ಪ್ರಬಂಧಗಳ ಸಂಶೋಧನೆ ಕನ್ನಡದಲ್ಲಿ ಆಗಲು ಅವಕಾಶವಿದೆ. ಈ ಪ್ರಯತ್ನದ ಸಿಂಹಪಾಲು ದೇಜಗೌ ಅವರಿಗೆ ಸಲ್ಲುತ್ತದೆ. ಕನ್ನಡ ಭಾಷೆಗೆ ಅವಶ್ಯಕವಾದ ವಿಶ್ವಕೋಶ, ಎಫಿಗ್ರಾಫಿಯಾ ಕರ್ನಾಟಕ, ಪ್ರಾಚೀನ ಹಸ್ತಪ್ರತಿಗಳ ಸಂಪಾದನೆ, ಭಾಷಾಂತರ, ಜಾನಪದ ಈ ಎಲ್ಲವೂ ಪರಸ್ಪರ ಪೂರಕವಾಗಿ ಕೆಲಸ ಮಾಡುವಂತೆ ಕನ್ನಡ ಅಧ್ಯಯನ ಸಂಸ್ಥೆ ರೂಪಿತವಾಯಿತು. ಗ್ರಾಮ

ಸಂಸ್ಕೃತಿಯನ್ನು ವಿಶ್ವವಿದ್ಯಾನಿಲಯದ ಮೆಟ್ಟಿಲು ಹತ್ತಿಸಿ ಇತರ ವಿಷಯಗಳ ಸರಿಸಮನಾಗಿ ಕೂರಿಸಿದವರು ದೇಜಗೌ. ತಮ್ಮ ಅಧಿಕಾರದ ಆದಿಯಿಂದಲೂ ಕನ್ನಡ ಪರವಾದ ಹೋರಾಟ, ಚಳುವಳಿಗಳಲ್ಲಿ ಮುಂಚೂಣಿಯಲ್ಲಿದ್ದವರು. ಕನ್ನಡದ ಸ್ಥಾನಮಾನಗಳು ಇಷ್ಟರ ಮಟ್ಟಿಗಾದರೂ ಆಗಲು ಕಾರಣರಾದ ಪ್ರಮುಖ ಕೆಲವೇ ಹಿರಿಯರಲ್ಲಿ ದೇಜಗೌ ಸೇರುತ್ತಾರೆ. ಅವರು ಮುಕ್ಕಾಲು ಶತಮಾನ ನಮ್ಮೊಂದಿಗಿರುವುದು ಸಂತೋಷದ ವಿಷಯ. ಗುರುಗಳ ಅಮೃತ ವರ್ಷದ ಈ ಶುಭ ಸಂದರ್ಭದಲ್ಲಿ ನಾಡಿನ ಜನತೆಯ ಪರವಾಗಿ ಸಲ್ಲುತ್ತಿರುವ ಈ ಅಭಿನಂದನ ಕಾರ್ಯದಲ್ಲಿ ನನಗೂ ಅವಕಾಶ ದೊರೆತುದು ನನ್ನ ಪುಣ್ಯ ಎಂದು ಭಾವಿಸಿದ್ದೇನೆ.

ಬೆಂಗಳೂರಿನಲ್ಲಿ ನಡೆದ ಮುಂದಿನ ಸಭೆಗೆ ಹೋಗುವ ಮುನ್ನ ಈ ಗ್ರಂಥದ ಸಂಪಾದನೆಗೆ ಇನ್ನೊಬ್ಬರು ಸಂಪಾದಕರನ್ನು ಸೂಚಿಸುವಂತೆ ಹಿರಿಯರಾದ ಸಿದ್ದಯ್ಯ ಪುರಾಣಿಕರನ್ನು ಕೇಳಿದೆ. ಅವರು ಉದಾರವಾಗಿ ನಿಮಗೆ ಯಾರು ಬೇಕೋ ಅವರನ್ನು ಸೇರಿಸಿಕೊಳ್ಳಿ ಎಂದರು. ಮಿತ್ರರೂ, ಕನ್ನಡ ಪ್ರಾಧ್ಯಾಪಕರೂ, ಹೆಸರಾಂತ ಲೇಖಕರೂ ಆದ ಡಾ. ಡಿ. ಕೆ. ರಾಜೇಂದ್ರ ಅವರನ್ನು "ನಾವಿಬ್ಬರೂ ಸೇರಿ ಈ ಕೆಲಸ ಮಾಡೋಣ" ಎಂದು ಕೋರಿದೆ. ಅವರು ನನ್ನ ಕೋರಿಕೆಯನ್ನು ಮನ್ನಿಸಿದರು. ಡಾ. ರಾಜೇಂದ್ರ ಸರಳ ಸಜ್ಜನಿಕೆಯ ನಿರಾಡಂಬರ ವ್ಯಕ್ತಿ. ತಮ್ಮ ಕರ್ತವ್ಯದ ಹಾದಿಯ ಆಚೀಚೆಗೂ ತಿರುಗಿ ನೋಡಿದವರಲ್ಲ. ಹಮ್ಮು ಬಿಮ್ಮು ಬಿಗುವು ಬಿಮ್ಮಾನಗಳಿಂದ ದೂರವಾಗಿ ನಗುನಗುತ್ತಾ ಎಲ್ಲರೊಂದಿಗೆ ಹೊಂದಿ ನಡೆಯುವವರು. ಅಬ್ಬರ ಆಡಂಬರಗಳ ಈ ಕಾಲದಲ್ಲಿ ರಾಜೇಂದ್ರ ಅಂತಹ ವ್ಯಕ್ತಿತ್ವ ಬೇಸಿಗೆಯ ಬೆಳಗಿನ ತಂಪಿನಂತೆ. ಅಮೃತವರ್ಷ ಮೈದುಂಬಿ ಸುಂದರವಾಗಿ ಬರಲು ಅವರ ಸಹಕಾರವೆ ಕಾರಣ. ಲೇಖಕರನ್ನು ಕಾಡಿಬೇಡಿ ಲೇಖನ ತಂದು ಅವುಗಳನ್ನು ಪರಿಶೀಲಿಸಿ ಅಚ್ಚಿಗೆ ಸಿದ್ಧ ಮಾಡಿದ್ದಾರೆ. ಸುಮಾರು ಒಂದೂವರೆ ವರ್ಷ ಅವರು ತಮ್ಮ ಜವಾಬ್ದಾರಿಗಳ ಮಧ್ಯೆಯೂ ಈ ಕೆಲಸ ಮಾಡಿದ್ದಾರೆ. ಇಂಥ ಮಿತ್ರರ ಸಹಕಾರ ಸ್ನೇಹಗಳಿದ್ದರೆ ಎಂತಹ ಹೊರೆಯನ್ನಾದರೂ ಹೊರಬಹುದು. ಡಾ. ರಾಜೇಂದ್ರ ಅವರು ನನ್ನ ಬಗ್ಗೆ ತೋರಿದ ಸ್ನೇಹ ವಿಶ್ವಾಸಗಳಿಗೆ ನಾನು ಋಣಿಯಾಗಿದ್ದೇನೆ.

ಲೇಖನಗಳನ್ನು ಸಂಪಾದಿಸುವುದು ಅದರಲ್ಲೂ ನಿಗದಿತ ವಿಷಯ ಕೊಟ್ಟು ಬರೆಸುವುದು ಅತಿ ಕಷ್ಟದ ಕೆಲಸ. ನಿಮ್ಮಲ್ಲಿರುವ ಒಂದು ಲೇಖನ ಕಳಿಸಿ ಎಂದರೆ ಕಡೆಯ ಪಕ್ಷ ಕೆಲವರಾದರೂ ಕೂಡಲೆ ಪ್ರತಿಕ್ರಿಯಿಸುತ್ತಾರೆ. ನಿರ್ದಿಷ್ಟ ವಿಷಯ ಸೂಚಿಸಿ ಬರೆಯಲು ಕೋರಿದರೆ ನೂರರಲ್ಲಿ ತೊಂಬತ್ತು ನಕಾರಾತ್ಮಕ ಉತ್ತರ ಬರುತ್ತವೆ. ಯಾವ ಯಾವುದೋ ಕಾರಣಗಳಿಂದ ಒಪ್ಪಿದ ಹತ್ತರಲ್ಲಿಯೂ ಆರು ಬರುವುದಿಲ್ಲ. ನಮ್ಮ ಪಾಡೂ ಹಾಗೆಯೇ ಆಯಿತು. ಕರ್ನಾಟಕ ಸಂಸ್ಕೃತಿಯ ಅನೇಕ ಮಜಲುಗಳನ್ನು ಕುರಿತ ಹೊಸ ರೀತಿಯ ಗ್ರಂಥವೊಂದರ ಯೋಜನೆ ಹಾಕಲಾಯಿತು. ಅದರಂತೆ ಹೊರಟಾಗ ಲೇಖಕರ ಕೊರತೆ, ದೊರೆತ ಕೆಲವರು ತೋರಿಸಿದ ಅಸಹಾಯಕತೆ, ಅವರ ಒಪ್ಪಿಗೆಯ ಉತ್ತರಕ್ಕಾಗಿ ಕಾಯ್ದ ಕಾಲ, ಕಡೆಯವರೆಗೂ ಕಳಿಸುತ್ತೇನೆಂದೂ ಅಂಚೆಗೆ ಹಾಕಿದ್ದೇನೆಂದಾಗಲೂ ಲೇಖನಗಳು ಬಾರದಿದ್ದಾಗ ನಮ್ಮ ಮೂಲ ಯೋಜನೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಲಾಯಿತು. ಹೊಸ ವಿಷಯ ಕುರಿತು ಬರೆಯಲು

ಬೇಕಾಗುವ ಕಾಲ, ಶ್ರಮ, ವಸ್ತು ಮಾಹಿತಿ ಇವುಗಳ ಕಷ್ಟ ನಮಗೂ ತಿಳಿದವೇ ಆದುದರಿಂದ ಯಾರನ್ನೂ ಆಕ್ಷೇಪಿಸುವಂತಿಲ್ಲ. ಮಾರ್ಚಾಡಿನ ನಂತರ ಕೆಲಸ ಸ್ವಲ್ಪ ಮಟ್ಟಿಗೆ ಸುಗಮವಾಯಿತು. ಲೇಖಕರೂ ಬಹುತೇಕ ಸ್ಪಂದಿಸಿದರು. ಅದರ ಫಲವೇ ಅಮೃತವರ್ಷ ದೇಜಗೌ ಅಭಿನಂದನ ಸಂಪುಟ.

ಅಮೃತವರ್ಷದಲ್ಲಿ ಆರು ಭಾಗಗಳಿವೆ. ಯಾವುದೇ ಅಭಿನಂದನ ಗ್ರಂಥದಲ್ಲಿ ಯಾರಿಗೆ ಅಭಿನಂದನೆ ಸಲ್ಲುತ್ತದೆಯೊ ಅವರ ಜೀವನ ವಿವರ ಇರಬೇಕೆಂಬುದು ಸಂಪ್ರದಾಯ. ಈಗಾಗಲೇ ದೇಜಗೌ ಹೋರಾಟದ ಬದುಕು ಭಾಗ ೧, ೨ ಪ್ರಕಟವಾಗಿವೆ. ಅವುಗಳನ್ನೆ ಸಂಪಾದಿಸಿ ಮುದ್ರಿಸುವ ಅಭಿಪ್ರಾಯವೇ ಇತ್ತು. ಈ ಆತ್ಮಕಥನದಲ್ಲಿ ಸೇರದಿದ್ದ ಎಷ್ಟೋ ನೆನಪುಗಳನ್ನು ಘಟನೆ, ಸಂದರ್ಭ ಸನ್ನಿವೇಶಗಳನ್ನು ದೇಜಗೌ ಆಗಾಗ ಹೇಳುತ್ತಿದ್ದುದುಂಟು. ಅವುಗಳನ್ನೆ ಬರೆದುಕೊಡಿ ಎಂದು ಅಭಿನಂದನ ಸಮಿತಿಯವರು ಕೇಳಿದಾಗ ನೆನಪಿನ ಬುತ್ತಿ ಎಂಬ ಹೆಸರಿನಲ್ಲಿ ಬರೆದುಕೊಟ್ಟಿದ್ದಾರೆ. ಈ ನೆನಪಿನ ಬುತ್ತಿ ಅನೇಕ ಸಂದರ್ಭಗಳ ಮೇಲೆ ಬೆಳಕು ಚೆಲ್ಲುತ್ತದೆ. ಸುಮಾರು ೧೫೦ ಪುಟಗಳ ನೆನಪಿನ ಬುತ್ತಿ ಈ ಸಂಪುಟದ ಮೊದಲ ಭಾಗ. ಇದರ ಪೂರ್ಣ ಹೊಣೆ ದೇಜಗೌ ಅವರದು.

ಅಭಿನಂದನೆಗೆ ಪಾತ್ರರಾದ ವ್ಯಕ್ತಿಯನ್ನು ಕುರಿತಂತೆ ಅವರನ್ನು ಹತ್ತಿರದಿಂದ ದೂರದಿಂದ ಬಲ್ಲವರಿಂದ ಲೇಖನಾಭಿಪ್ರಾಯ ಬರೆಸುವುದೂ ಅಭಿನಂದನ ಗ್ರಂಥಗಳ ಒಂದು ಸಂಪ್ರದಾಯ. ದೇಜಗೌ ಅವರ ಬಗ್ಗೆ ಈಗಾಗಲೇ ದೇಜಗೌ ಐವತ್ತು, ಅಂತಃಕರಣ, ರಸಷಷ್ಠಿ, ದೇಜಗೌ ಎಪ್ಪತ್ತರ ಹೊಸ್ತಿಲಲ್ಲಿ, ಈ ನಾಲಕ್ಕು ಅಭಿನಂದನ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಅವರ ಗುರುಗಳು, ಹಿರಿಯರು, ಸ್ನೇಹಿತರು, ಶಿಷ್ಯರು ಅವರ ವ್ಯಕ್ತಿತ್ವ ಕುರಿತು ಬರೆದಿದ್ದಾರೆ. ಅಮೃತ ವರ್ಷದಲ್ಲಿ ಒಬ್ಬಿಬ್ಬರು ಹಿಂದಿನ ಅಭಿನಂದನ ಗ್ರಂಥಗಳಲ್ಲಿ ಬರೆದಿದ್ದಾರಾದರೂ ಈ ಗ್ರಂಥದ ಎರಡನೆಯ ಭಾಗ ವ್ಯಕ್ತಿತ್ವ ಹಿರಿಮೆಯಲ್ಲಿ ಬರೆದವರು ಮೊದಲ ಬಾರಿಗೆ ದೇಜಗೌ ಕುರಿತು ಬರೆದವರು ಯುವ ಪೀಳಿಗೆಯವರು ಹೆಚ್ಚು. ಅನೇಕರು ಕಾವ್ಯದಲ್ಲಿ ದೇಜಗೌ ವ್ಯಕ್ತಿತ್ವ ಹಿಡಿದಿಟ್ಟಿದ್ದಾರೆ. ಐವತ್ತರಿಂದ ಅಮೃತವರ್ಷದವರೆಗೆ ದೇಜಗೌ ಅವರ ವ್ಯಕ್ತಿತ್ವ ಕನ್ನಡಲೇಖಕರ ಮೇಲೆ ಉಂಟು ಮಾಡಿರುವ ಪ್ರಭಾವವನ್ನು ಈ ಭಾಗದ ಬರಹಗಳಲ್ಲಿ ಗುರುತಿಸಬಹುದಾಗಿದೆ.

ಕನ್ನಡ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಕೆಲಸ ಮಾಡಿರುವ ದೇಜಗೌ ದೈತ್ಯ ಪ್ರತಿಭೆ ಅಸಾಧಾರಣವಾದುದು. ಇದರೊಂದಿಗೆ ಆಡಳಿತದ ಉನ್ನತ ಹುದ್ದೆಗಳು, ವಿದ್ಯಾರ್ಥಿಗಳ ಸಮಸ್ಯೆ, ಶಿಕ್ಷಣಸಮಸ್ಯೆ, ಸಂಘಸಂಸ್ಥೆಗಳೊಂದಿಗಿನ ಅವರ ಸಂಬಂಧಗಳನ್ನು ಮರೆಯುವಂತಿಲ್ಲ. ದೇಜಗೌ ತಾವು ಕೈಹಾಕಿದ ಕೆಲಸಗಳನ್ನು ಸಮರ್ಪಕವಾಗಿ ಮಾಡಿ ಮುಗಿಸಿ ಅಲ್ಲಿ ತಮ್ಮ ಛಾಪು ಉಳಿಯುವಂತೆ ಕಾರ್ಯ ನಿರ್ವಹಿಸುವವರು. ಮೂರನೆಯ ಭಾಗದಲ್ಲಿ ವಿವಿಧ ಪ್ರಕಾರಗಳಿಗೆ ದೇಜಗೌ ಕೊಡುಗೆ ಏನು? ಎಂಬುದನ್ನು ಕುರಿತ ಲೇಖನಗಳನ್ನು ಕೊಡಲಾಗಿದೆ. ಅವರೊಂದಿಗೆ ಆಯಾ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನೇಕರು ದೇಜಗೌ ಕೊಡುಗೆಯನ್ನು ಕುರಿತು ಬರೆದಿದ್ದಾರೆ. ಇದರ ವಿಸ್ತಾರ ದೇಜಗೌ ಅವರ ಚಿಂತನೆಯ ಆಳ ಅಗಲಗಳನ್ನು ಪ್ರತಿಬಿಂಬಿಸುತ್ತದೆ. ಒಬ್ಬ ವ್ಯಕ್ತಿ ಇಷ್ಟೊಂದು ಪ್ರಕಾರಗಳಲ್ಲಿ ಕೆಲಸ ಮಾಡಲು ಸಾಧ್ಯವೆ?ಒಂದು ವೇಳೆ

ಮಾಡಿದರು ಪ್ರತಿಕ್ಷೇತ್ರದಲ್ಲೂ ಸ್ವತಂತ್ರತೆಯ ಮುದ್ರೆಯೊತ್ತಲು ಸಾಧ್ಯವೆ? ಎಂಬ ಬೆರಗು ಹುಟ್ಟುವುದು ಸಹಜ. ಆದರೆ ದೇಜಗೌ ತಾವು ಕೆಲಸ ಮಾಡಿದ ಪ್ರಕಾರಗಳಲ್ಲೆಲ್ಲಾ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ.

ಕರ್ನಾಟಕದ ಸಂಸ್ಕೃತಿ ವೈವಿಧ್ಯಮಯವಾದುದು. ಇಲ್ಲಿ ನಾನಾ ರೀತಿಯ ಜನಾಂಗಗಳಿದ್ದು ಅವುಗಳ ಆಚಾರವಿಚಾರಗಳು ವೈವಿಧ್ಯಮಯವಾಗಿವೆ. ಈ ನೆಲದಲ್ಲಿ ಅನೇಕ ಧರ್ಮಗಳು ಸಂಸ್ಥಾಪನೆ ಗೊಂಡಿವೆ. ಜಗತ್ತಿನ ಎಲ್ಲಾ ಸಂಸ್ಕೃತಿಗಳನ್ನು ಈ ನೆಲ ಸ್ವಾಗತಿಸಿಯೂ ತನ್ನ ತನವನ್ನೂ ಉಳಿಸಿಕೊಂಡಿದೆ. ನಮ್ಮ ಗ್ರಾಮಸಂಸ್ಕೃತಿಯಂತೂ ಅತ್ಯಪೂರ್ವವಾದುದಾಗಿದೆ. ಇದರೊಂದಿಗೆ ಹಬ್ಬಹರಿದಿನಗಳು, ಜಾತ್ರೆಗಳು, ಪ್ರಾಣಿಪಕ್ಷಿಗಳು, ವ್ಯವಸಾಯ ಹೀಗೆ ಸಂಸ್ಕೃತಿಯ ವ್ಯಾಪ್ತಿ ಹಿರಿದಾಗುತ್ತದೆ. ಅನೇಕ ರೀತಿಯ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು ಇಲ್ಲಿವೆ. ಇವುಗಳನ್ನು ಕುರಿತ ಲೇಖನಗಳನ್ನು ನಾಲ್ಕನೆಯ ಭಾಗ ಸಂಸ್ಕೃತಿಕ ಕರ್ನಾಟಕದಲ್ಲಿ ಸೇರಿಸಲಾಗಿದೆ. ಇಡೀ ಗ್ರಂಥವೆ ನಮ್ಮ ಸಂಸ್ಕೃತಿಯ ಉಗಮ, ವಿಕಾಸ, ಏಳುಬೀಳು ಒಳಿತು, ಕೆಡುಕುಗಳನ್ನು ಕುರಿತಂತೆ ರೂಪಿತವಾಗಬೇಕಿತ್ತು. ಕರ್ನಾಟಕದ ಪ್ರಧಾನ ಸಂಸ್ಕೃತಿಗಳಿಂದ ಹಿಡಿದು ನಮ್ಮ ಪ್ರಾಣಿ ಪಕ್ಷಿ ಸಂಸ್ಕೃತಿಯವರೆಗೆ ಅನೇಕ ವೈವಿಧ್ಯಮಯ ಅಧ್ಯಯನಗಳು ಈ ಭಾಗದಲ್ಲಿವೆ. ಕರ್ನಾಟಕ ಸಂಸ್ಕೃತಿಯ ಬಗ್ಗೆ ಕೆಲಸ ಮಾಡುವವರಿಗೆ ಈ ಬರಹಗಳು ಆಕರಗಳನ್ನು ಒದಗಿಸುತ್ತವೆಂಬುದರಲ್ಲಿ ಅನುಮಾನವಿಲ್ಲ.ಅನೇಕ ಕೃತಿಗಳು ದೇಜಗೌ ಅವರಿಂದ ಹೊರಬಂದಿವೆ. ಪ್ರಾಚೀನ ಕಾವ್ಯಗಳ ಸಂಪಾದನೆ, ಭಾಷಾಂತರ, ವಿಮರ್ಶೆ, ಜಾನಪದ ಈ ಕೃತಿಗಳನ್ನು ಕುರಿತು ಅನೇಕರು ತಮ್ಮ ತಮ್ಮ ದೃಷ್ಟಿಯಿಂದ ಅರ್ಥೈಸಿದ್ದಾರೆ, ವಿಮರ್ಶಿಸಿದ್ದಾರೆ, ವಿವರಿಸಿದ್ದಾರೆ. ಈ ಸಂಬಂಧವಾದ ಲೇಖನಗಳನ್ನು ಐದನೆಯ ಭಾಗ ಕೃತಿ ಸಮೀಕ್ಷೆಯಲ್ಲಿ ಕೊಡಲಾಗಿದೆ. ಅನೇಕರು ಸ್ವತಹ ಲೇಖಕರು ವಿಮರ್ಶಕರೂ ಆದವರು ದೇಜಗೌ ಅವರ ಕೃತಿಗಳನ್ನು ಓದಿ ತಮಗನ್ನಿಸಿದ್ದನ್ನು ಈ ಲೇಖನಗಳಲ್ಲಿ ದಾಖಲು ಮಾಡಿದ್ದಾರೆ. ಕೆಲವು ಸಂಕೀರ್ಣ ಲೇಖನಗಳನ್ನೂ ಈ ಭಾಗದಲ್ಲಿಯೇ ಸೇರಿಸಲಾಗಿದೆ.

ನಮ್ಮ ಎಷ್ಟೋ ಲೇಖಕರು ಎಷ್ಟು ಕೃತಿಗಳನ್ನು ಹೊರತಂದಿದ್ದಾರೆಂಬುದೇ ಅನೇಕರಿಗೆ ತಿಳಿದಿರುವುದಿಲ್ಲ. ಪ್ರಖ್ಯಾತವಾದ ಕೆಲವು ಕೃತಿಗಳು ಜನಮನದಲ್ಲಿ ಉಳಿದು ಮಿಕ್ಕವು ಮರೆಯಾಗಿ ಬಿಡುವುದುಂಟು. ದೇಜಗೌ ಅವರು ಎಷ್ಟು ಕೃತಿಗಳನ್ನು ಹೊರತಂದಿದ್ದಾರೆ. ಅವು ಯಾವ ಯಾವ ಪ್ರಕಾರಕ್ಕೆ ಸೇರಿದವು ಅವುಗಳ ವಿಶೇಷವೇನು? ಈ ಮುಂತಾದ ವಿವರಗಳನ್ನು ಆರನೆಯ ಭಾಗ ಕೃತಿಸಂಪದದಲ್ಲಿ ಸೇರಿಸಲಾಗಿದೆ. ದೇಜಗೌ ಮೊದಲ ಕೃತಿಯಿಂದ ಇತ್ತೀಚಿಗೆ ಬಂದ 'ನಾನು ಮೆಚ್ಚಿದವರು'ವರೆಗೆ ಅವರ ಸಮಗ್ರ ಕೃತಿ ಸೂಚಿಯನ್ನು ಈ ಭಾಗದಲ್ಲಿ ಕಾಣಬಹುದು. ಇದರಿಂದ ದೇಜಗೌ ಅವರ ಕೃತಿ ಸಂಪದ ಎಷ್ಟು ಅಗಾಧವಾದುದು ವೈವಿಧ್ಯಮಯವಾದುದು ಎಂಬ ಅರಿವಾಗುತ್ತದೆ.

ಈ ಹಿಂದೆಯೆ ದೇಜಗೌ ಅವರಿಗೆ ಸಂದಿರುವ ನಾಲ್ಕು ಅಭಿನಂದನ ಗ್ರಂಥಗಳ ಲೇಖನ ಮತ್ತು ಅವುಗಳ ವಿಷಯಗಳಿಗೂ ಆದಷ್ಟು ಪುನರುಕ್ತಿಯಾಗದಂತೆ ಅಮೃತವರ್ಷವನ್ನು ರೂಪಿಸಲು ಪ್ರಯತ್ನಿಸಿದ್ದೇವೆ. ದೇಜಗೌ ಅವರ ಜೀವನ, ಸಾಹಿತ್ಯ

ಸಮಗ್ರತೆಯ ಪರಿಪೂರ್ಣವಲ್ಲದಿದ್ದರೂ ಪೂರ್ಣಚಿತ್ರವೊಂದು ಈ ಗ್ರಂಥದ ಓದುಗರಿಗೆ ಉಂಟಾಗುವಂತೆ ಪ್ರಯತ್ನಿಸಿದ್ದೇವೆ. ಹೇಳಿ ಕೇಳಿ ಇದೊಂದು ಅಭಿನಂದನ ಗ್ರಂಥ. ಎಪ್ಪತ್ತೈದು ವಸಂತಗಳ ಕಾಲ ಕಳೆದೂ ಸಕ್ರಿಯವಾಗಿ ನಮ್ಮೊಂದಿಗಿರುವ ಹಿರಿಯ ಚೇತನವೊಂದಕ್ಕೆ ಸಲ್ಲಿಸಿದ ಕೃತಜ್ಞತೆ. ಈ ದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ಪರಿಭಾವಿಸಿದರೆ ಸಂಪಾದಕರ ಶ್ರಮ ಸಾರ್ಥಕವೆಂದು ಭಾವಿಸುತ್ತೇವೆ.

ಅಮೃತವರ್ಷದಲ್ಲಿ ದೇಜಗೌ ಅವರಿಗೆ ಸಲ್ಲಿಸುವ ಅಭಿನಂದನೆ ಮತ್ತು ಗ್ರಂಥ ಸಮರ್ಪಣೆಯ ಸಮಿತಿಯ ಅಧ್ಯಕ್ಷರು ದಿವಂಗತ ಸಿದ್ದಯ್ಯ ಪುರಾಣಿಕರು. ಕನ್ನಡದ ಹೆಸರಾಂತ ಕವಿ ಕಾವ್ಯಾನಂದರು. ಐ. ಎ. ಎಸ್. ಅಧಿಕಾರಿಯಾದರೂ ಸಾಹಿತ್ಯ ಸಂಸರ್ಗದಿಂದಾಗಿ ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿ. ಅಭಿನಂದನ ಸಮಿತಿಯ ಸಭೆಗಳು ಅವರ ಮನೆಯಲ್ಲಿಯೇ ನಡೆಯುತ್ತಿದ್ದವು. ಬಂದವರೆಲ್ಲರನ್ನೂ ಹಿರಿಕಿರಿಯರೆನ್ನದೆ ಅತ್ಯಾದರದಿಂದ ಸ್ವಾಗತಿಸಿ ಸತ್ಕರಿಸುವ ಅವರ ರೀತಿ ಸುಸಂಸ್ಕೃತ ಮನೆಯೊಂದರ ಅಪರೂಪವಾದ ಉದಾಹರಣೆ. ನಮ್ಮನ್ನು ಸಂಪಾದಕರನ್ನು ಪದೇ ಪದೇ ಸಂಪರ್ಕಿಸಿ ಅಮೃತವರ್ಷದ ಪ್ರಗತಿಯ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಅವರು ಇಹವನ್ನು ತ್ಯಜಿಸುವ ಹಿಂದಿನ ರಾತ್ರಿ ನಮಗೆ ಬರಲು ಹೇಳಿ ಕಳಿಸಿದ್ದರು. ನಾವಿಬ್ಬರೂ ಹೊರಡುವಷ್ಟರಲ್ಲಿ ಎಲ್ಲಿತ್ತೋ ಭೋರ್ಗರೆಯುವ ಮಳೆ ಆರಂಭವಾಯಿತು. ಎಷ್ಟು ಪ್ರಯತ್ನಿಸಿದರೂ ವಾಹನಗಳು ದೊರೆಯಲಿಲ್ಲ. ಮಳೆ ನಿಂತಾಗ ಕಾಲ ಮೀರಿತ್ತು. ದೂರವಾಣಿಯ ಮೂಲಕ ವಿಚಾರಿಸಿದಾಗ ಅವರು ಮಲಗಿರುವುದಾಗಿಯೂ ಮತ್ತೊಂದು ದಿನ ಬರಲು ಸೂಚಿಸಿರುವುದಾಗಿಯೂ ತಿಳಿಯಿತು. ಆದರೆ ವಿಧಿ! ಆ ಮತ್ತೊಂದು ಅವಕಾಶ ನಮಗೆ ದೊರೆಯಲಿಲ್ಲ. ಸಿದ್ದಯ್ಯ ಪುರಾಣಿಕರ ದೇಹ ಮರೆಯಾದರೂ ಕಾವ್ಯಾನಂದ ನಮ್ಮೊಂದಿಗೆ ಬದುಕಿದ್ದಾರೆ. ಈ ಗ್ರಂಥ ಈ ಸಮಾರಂಭ ಅವರು ಭೌತಿಕವಾಗಿ ನೋಡಿದ್ದರೆ ನಮಗೂ ಸಂತೋಷವಾಗುತ್ತಿತ್ತು. ಆದರೀಗವರು ಅಶರೀರಿಯಾಗಿ ಇದರಲ್ಲಿ ಪಾಲುಗೊಳ್ಳುತ್ತಾರೆಂಬ ನಂಬಿಕೆ ನಮ್ಮದು. ಆ ಹಿರಿಯ ಚೇತನಕ್ಕೆ ನಮ್ಮ ಕೃತಜ್ಞತಾಪೂರ್ವಕ ನಮನಗಳು.

ಅಭಿನಂದನ ಸಮಿತಿಯಲ್ಲಿ ಡಾ. ಪುತಿನ. ಎಚ್. ಎಲ್. ನಾಗೇಗೌಡ. ಎಲ್. ಎಸ್. ಶೇಷಗಿರಿರಾವ್. ಎಸ್. ಮಂಚಯ್ಯ. ಜಿ. ಎಸ್. ಸಿದ್ದಲಿಂಗಯ್ಯ. ಎಂ. ಎಂ. ಕಲ್ಬುರ್ಗಿ ಎಂ.ಎಚ್. ಕೃಷ್ಣಯ್ಯ ಮುಂತಾದ ಹಿರಿಯರಿದ್ದಾರೆ. ಈ ಎಲ್ಲ ಮಹನೀಯರೂ ಕನ್ನಡದ ಹೆಸರಾಂತ ಕವಿಗಳು ಸಾಹಿತಿಗಳು. ಈ ಗ್ರಂಥದ ಕೆಲಸದಲ್ಲಿ ಅವರೆಲ್ಲರೂ ನೆರವಾಗಿದ್ದಾರೆ. ಡಾ. ಎಂ. ಎಂ. ಕಲ್ಬುರ್ಗಿಯವರು ಅನೇಕ ಲೇಖನಗಳನ್ನು ಬರೆಯಿಸಿ ಕಳಿಸಿದ್ದಾರೆ. ಅಭಿನಂದನ ಸಮಿತಿಯ ಎಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಈ ಗ್ರಂಥಕ್ಕೆ ಸಂಬಂಧಿಸಿದಂತೆ ಮೂವರನ್ನು ನಾವು ವಿಶೇಷವಾಗಿ ನೆನೆಯಲೇಬೇಕು. ಶ್ರೀ ಎಚ್. ಆರ್. ದಾಸೇಗೌಡರು. ಶ್ರೀ ಅಲ್ಲ ಚಿರಂಜೀವಿ ಮತ್ತು ಶ್ರೀ ಎಚ್.ಎಂ. ಬೋರಯ್ಯ ಅವರು. ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶ್ರೀ ಎಚ್. ಆರ್. ದಾಸೇಗೌಡರು ಸದಾ ಸಹಾಯ ಹಸ್ತರು. ಅವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಅಧಿಕಾರ ಹುದ್ದೆಗಳನ್ನು ಹೊಂದಿದ್ದ ಸಮಯದಲ್ಲಿ

ವಿದ್ಯಾರ್ಥಿಗಳಿಗೆ ಅಧ್ಯಾಪಕ ಪ್ರಾಧ್ಯಾಪಕರಿಗೆ ತೋರಿಸಿದ ಸಹಾಯ ಸಹಕಾರಗಳು ಅವಿಸ್ಮರಣೀಯ. ಭಾರತ ಮತ್ತು ಅಂತರ ರಾಷ್ಟ್ರೀಯ ಅನೇಕ ಸಂಘ ಸಂಸ್ಥೆಗಳಲ್ಲಿ ವಿಶೇಷವಾಗಿ ಶಿಕ್ಷಣ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ರಾಜ್ಯಶಾಸ್ತ್ರದ ಪ್ರಾಧ್ಯಾಪಕರೂ ಆದ ಅವರು ಒಳ್ಳೆಯ ಬರಹಗಾರರೂ ಆಗಿದ್ದಾರೆ. ಬೆಂಗಳೂರಿನಲ್ಲಿ ಕುವೆಂಪು ಅಧ್ಯಯನ ಕೇಂದ್ರ ಸ್ಥಾಪಿಸಿ ಅನೇಕ ಸಾಹಿತ್ಯಿಕ ಕಾರ್ಯಕ್ರಮ ನಡೆಸುವುದರೊಂದಿಗೆ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಅವರ ಮಿತ್ರವಲಯ ಅಚ್ಚರಿ ಉಂಟು ಮಾಡುವಂಥದು. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾಗಿ ಅದಕ್ಕೊಂದು ಘನತೆಯನ್ನು ತಂದುಕೊಟ್ಟಿದ್ದಾರೆ. ಅಮೃತವರ್ಷಗ್ರಂಥದ ಪ್ರತಿಹಂತದಲ್ಲಿಯೂ ಗೌಡರ ಸಹಾಯ ಸಹಕಾರಗಳು ನಮಗೆ ಲಭಿಸಿವೆ. ಅವರಿಗೆ ನಮ್ಮ ವಿನಮ್ರ ಕೃತಜ್ಞತೆಗಳು ಸಲ್ಲುತ್ತವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅದರಲ್ಲೂ ಸಮ್ಮೇಳನಾಧ್ಯಕ್ಷರ ಮೆರವಣಿಗೆಯ ಸಂದರ್ಭಗಳಲ್ಲಿ ಕನ್ನಡ ಚಾಮುಂಡಿ ಮೈದುಂಬಿ ಬಂದಂತೆ ಕನ್ನಡ ಪರ ಘೋಷಣೆಗಳನ್ನು ಕೂಗುತ್ತಾ ಕುಣಿಯುವ ವ್ಯಕ್ತಿಯೊಬ್ಬರನ್ನು ಸಾಮಾನ್ಯವಾಗಿ ಎಲ್ಲರೂ ನೋಡಿರುತ್ತಾರೆ. ಸಮ್ಮೇಳನ ಮರೆತರೂ ಈ ವ್ಯಕ್ತಿಯನ್ನು ಮರೆಯುವಂತಿಲ್ಲ. ಅವರೇ ಆಲ್ಲಚಿರಂಜೀವಿ, ಸ್ವತಃ ಲೇಖಕರೂ ಆದ ಚಿರಂಜೀವಿ ಅವರ ಕನ್ನಡ ನಿಷ್ಠೆ ಅಪರೂಪವಾದುದು. ಅವರ ಇನ್ನೊಂದು ಮುಖ ನಾಡುನುಡಿಗಳಿಗೆ ಸೇವೆಗೈದ ಹಿರಿಯರಿಗೆ ಸನ್ಮಾನ ಮಾಡುವ ಕಾಯಕ. ಅವರನ್ನು ಕಂಡಾಗಲೆಲ್ಲ ಶ್ರೀ ರಾಮಾಯಣ ದರ್ಶನಂನ ಆಂಜನೇಯನ ನೆನಪಾಗುತ್ತದೆ. ದೇಜಗೌ ಅವರ ಬಗ್ಗೆ ಅವರ ಅಭಿಮಾನ ಉಪಮಾತೀತ. ಈ ಕೆಲಸಕ್ಕಾಗಿ ಅವರು ಮೈಸೂರು ಬೆಂಗಳೂರುಗಳ ನಡುವೆ ನಡೆಸಿರುವ ಓಡಾಟ ಲೇಖನಗಳನ್ನು ಸಂಗ್ರಹಿಸುವಲ್ಲಿ ಅವರ ಉತ್ಸಾಹ ಎಂತಹವರನ್ನೂ ಚಕಿತಗೊಳಿಸುವಂಥದು. ಅವರ ವಿನಯ ತಾಳ್ಮೆಗಳು ಈ ಉದ್ವೇಗದ ಜೀವನದಲ್ಲಿ ಅನುಕರಣ ಯೋಗ್ಯವಾದವು. ಅವರು ನಮಗೆ ನೀಡಿರುವ ಸಹಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ.

ಶ್ರೀ ಎಚ್.ಎಂ. ಬೋರಯ್ಯ ಮತ್ತು ಚಿರಂಜೀವಿ ಒಂದು ನಾಣ್ಯದ ಎರಡು ಮುಖದಂತೆ. ಅವರಿಬ್ಬರೂ ಒಟ್ಟಿಗೇ ಸೇರಿ ಇಂತಹ ಅನೇಕ ಅಭಿನಂದನ ಕಾರ್ಯಗಳನ್ನು ಅನುಮಾಡಿದ್ದಾರೆ. ಈ ಜೋಡಿಯ ವಿನಯ ಸಂಪನ್ನತೆಗೆ ಯಾರೂ ಇಲ್ಲ ಎನ್ನಲಾಗುವುದಿಲ್ಲ. ದೇಜಗೌ ಅವರು ಶ್ರೀ ಬೋರಯ್ಯನವರ ಕಾರ್ಯಕ್ಷಮತೆಯನ್ನು ಅಪಾರವಾಗಿ ಮೆಚ್ಚಿಕೊಂಡವರು. ಬೋರಯ್ಯನವರು ತೆರೆಮರೆಯಲ್ಲಿಯೇ ಇದ್ದು ಕಾರ್ಯಸಾಧನೆ ಮಾಡುವವರು. ಧನ ಸಂಗ್ರಹ ಕಾರ್ಯವೆಂದರೆ ಅಲ್ಲಿ ಬೋರಯ್ಯನವರ ಹೆಸರಿರುತ್ತದೆ. ಅವರ ಕಾರ್ಯ ನಿಷ್ಠೆ, ಪ್ರಾಮಾಣಿಕತೆಗಳು ಮೆಚ್ಚುವಂತಹವು. ದೇಜಗೌ ೭೫ ಅಭಿನಂದನ ಸಮಿತಿ ಮತ್ತು ಅಮೃತವರ್ಷಗ್ರಂಥ ಕೆಲಸಗಳಲ್ಲಿ ಬೋರಯ್ಯನವರ ಶ್ರಮ ಅಪಾರ. ಒಂದು ಚಿರಂಜೀವಿಯವರ ಆರ್ಭಟದ ಮುಖ ಮತ್ತೊಂದು ಬೋರಯ್ಯನವರ ಸೌಮ್ಯ ಮುಖ. ಈ ಜೋಡಿಯಿಂದ ಅಪೂರ್ವವಾದ ಇಂತಹ ಅನೇಕ ಸಾಂಸ್ಕೃತಿಕ ಕಾರ್ಯಗಳು ನಡೆಯುವಲ್ಲಿ ಆಶ್ಚರ್ಯವಿಲ್ಲ. ಇವು ಸುಮ್ಮನಿರುವ

ಚೇತನಗಳಲ್ಲ. ನಮ್ಮೊಂದಿಗೆ ಅನೇಕ ವಿಧದಲ್ಲಿ ಸಹಕರಿಸಿರುವ ಬೋರಯ್ಯನವರಿಗೆ ನಾವು ಋಣಿಗಳು.

ಮಂಡ್ಯದ ಮಂಡ್ಯ ಕಂಪ್ಯೂಟರ್ ಸೆಂಟರಿನ ಎಸ್. ಟಿ. ಎನ್. ಆಫ್‌ಸೆಟ್ ಮುದ್ರಣಾಲಯದ ಮಾಲೀಕ ದಂಪತಿಗಳು ಡಾ. ಶಿವಲಿಂಗಯ್ಯ ಮತ್ತು ಶ್ರೀಮತಿ ಮೀರಾಶಿವಲಿಂಗಯ್ಯ ಅಮೃತವರ್ಷ ಗ್ರಂಥವನ್ನು ಸುಂದರವಾಗಿ ಮುದ್ರಿಸಲು ಕಾರಣರಾಗಿದ್ದಾರೆ. ಅವರದು ನಮ್ಮದು ವ್ಯಾಪಾರಿ ಸಂಬಂಧವಾಗಿರದೆ ಬಂಧು ಸಂಬಂಧವೆಂಬಂತೆ ನೋಡಿಕೊಂಡಿದ್ದಾರೆ. ನಮ್ಮ ತಿದ್ದುಪಡಿ ಸೇರ್ಪಡೆಗಳ ಉಪಟಳವನ್ನೆಲ್ಲಾ ಸಹಿಸಿ ನಾವು ಹೋದಾಗಲೆಲ್ಲಾ ಆತಿಥ್ಯ ನೀಡಿದ್ದಾರೆ. ಈ ದಂಪತಿಗಳ ಸಜ್ಜನಿಕೆಗೆ ನಾವು ಕೃತಜ್ಞರಾಗಿದ್ದೇವೆ. ಈ ಕೆಲಸದಲ್ಲಿ ಸಹಕರಿಸಿರುವ ಅವರ ಮುದ್ರಣಾಲಯದವರು ಮತ್ತು ಕಂಪ್ಯೂಟರ್ ಸೆಂಟರ್‌ನವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಅಮೃತ ವರ್ಷದ ಕರಡು ತಿದ್ದುವ ಕಾರ್ಯವನ್ನು ಶ್ರೀ ಎನ್.ಎಸ್. ಶಾರದ ಪ್ರಸಾದ್ ಅವರು ಪ್ರೀತಿಯಿಂದ ಮಾಡಿಕೊಟ್ಟಿದ್ದಾರೆ. ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ ಹಾಗು ಈ ಕೆಲಸದಲ್ಲಿ ನೆರವಾದ ಎಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕರ್ನಾಟಕದ ಹಿರಿಯ ರಾಜಕಾರಣಿ, ಗಾಂಧೀವಾದಿ, ರಾಷ್ಟ್ರನಾಯಕ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀ ಎನ್. ಡಿ. ವೆಂಕಟೇಶ್ ಅವರು ಅಮೃತವರ್ಷ ಬಿಡುಗಡೆ ಮಾಡುತ್ತಿರುವುದು ಸಂತೋಷದ ಸಂಗತಿ. ದೇಜಗೌ ಅವರ ಶತಮಾನೋತ್ಸವವನ್ನು ಆಚರಿಸುವ ಅವಕಾಶವೂ ನಮಗೆ ದೊರೆಯಲಿ ಎಂದು ಹಾರೈಸಿ ಈ ವಿಶಿಷ್ಟ ಗ್ರಂಥ ಅಮೃತ ವರ್ಷವನ್ನು ದೇಜಗೌ ಅಭಿನಂದನೆಯ ಕುರುಹಾಗಿ ಸಾಹಿತ್ಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ.

ಮೈಸೂರು
೩. ೩. ೧೯೯೩

ಹ. ಕ. ರಾಜೇಗೌಡ
ಡಾ. ಡಿ. ಕೆ. ರಾಜೇಂದ್ರ

ಅಮೃತವರ್ಷದೊಳಗೆ

ಭಾಗ - ಐದು

ಭಾಗ - ಆರು

ಭಾಗ - ಒಂದು

ನೆನಪಿನ ಬುತ್ತಿ

ದೇಜಗೌ




ಗುರುಗಳೊಡನೆ



ಅಮೃತ ವರ್ಷದ ಸಂಪಾದಕರೊಂದಿಗೆ ದೇ.ಜ.ಗೌ



ಮೈಸೂರಿನಲ್ಲಿ ದೇಜಗೌ 75



ಅಮೆರಿಕೆಯ ಶ್ರೀಮತಿ ಶಾರದಾ ರಾಜಣ್ಣ ಅವರಿಂದ
ಟ್ರಸ್ಟಿಗೆ ಕಾಣಿಕೆ ಸ್ವೀಕಾರ



7-8 - 9 -1991 ವಾರ್ಷಿಕೋತ್ಸವ ಸಾವಿರ ಶಿವಾನುಭವ



ಮದ್ದೂರ ಬಳಿಯ ಸವಣಪ್ಪ ಬೆಟ್ಟದ ಆರೋಹಣ - 1994







ಕುವೆಂಪು ಗೋಕಾಕ್, ಸಿದ್ದಯ್ಯ ಪುರಾಣಿಕ ಅವರೊಂದಿಗೆ ದೇ.ಜ.ಗೌ



ಕೊಯಮತ್ತೂರಿನ ಅವಿನಾಶಲಿಂಗಂ ಚೆಟ್ಟಿಯಾರ್ ಸಂಸ್ಥೆಯಲ್ಲಿ ಘಟಿಕೋತ್ಸವ ಭಾಷಣ
ಶ್ರೀಸಿದ್ದಲಿಂಗಯ್ಯ, ಅವಿನಾಶಲಿಂಗಂ ಚೆಟ್ಟಿಯಾರ್, ಜಿ. ಡಿ. ನಾಯ್ಡು



ಯಾರಿವರು ?



ಶ್ರೀ ಕೃಷ್ಣಮೂರ್ತಿಪುರಾಣಿಕ್ ಅವರ ದಿವಂಗತ ಧರ್ಮಪತ್ನಿ ಸೌಭಾಗ್ಯವತಿ ಗಂಗಾ
ಅವರ ಚಿತ್ರಪಟಕ್ಕೆ ದೇ.ಜ.ಗೌ. ದಂಪತಿಗಳು ಗೌರವ ತೋರಿಸುವಾಗ

ಪೀಠಿಕೆ

ನನ್ನ ಎಪ್ಪತ್ತೈದನೆಯ ಜನ್ಮವರ್ಷದ ನೆನಪಿಗಾಗಿ (ಈಗ-1994-ಎಪ್ಪತ್ತಾರು ತುಂಬಿದೆ) ಅಭಿನಂದನಾ ಗ್ರಂಥವೊಂದನ್ನು ಪ್ರಕಟಿಸುವ ಸಂದರ್ಭದಲ್ಲಿ ಸ್ವವಿಷಯವನ್ನು ಕುರಿತು ಬರೆದು ಕೊಡುವಂತೆ ಆತ್ಮೀಯರಾದ ಡಾ. ಸಿದ್ಧಯ್ಯ ಪುರಾಣಿಕರೂ, ಪ್ರಿಯ ಮಿತ್ರರಾದ ಶ್ರೀ. ಎಚ್. ಆರ್. ದಾಸೇಗೌಡ ಮತ್ತು ಶ್ರೀ ಎಂ. ಎಚ್. ಕೃಷ್ಣಯ್ಯ ಅವರೂ, ಶ್ರೀ ಚಿರಂಜೀವಿ ಅಲ್ಲ ಅವರೂ, ಸಂಪಾದಕರಾದ ಶ್ರೀ. ಹ. ಕ. ರಾಜೇಗೌಡರೂ, ಡಾ. ಡಿ. ಕೆ. ರಾಜೇಂದ್ರ ಅವರೂ ಒತ್ತಾಯಿಸಲಾಗಿ, ಇದರ ಬಹು ಭಾಗವನ್ನು ಅಮೆರಿಕೆಯಲ್ಲಿ ನನ್ನ ಅಳಿಯ-ಮಗಳ ಮನೆಯಲ್ಲಿ ಬರೆದೆ. ನನ್ನ ಬಳಿ ದಿನಚರಿಗಳಾಗಲಿ, ಪತ್ರ ವ್ಯವಹಾರಗಳಾಗಲಿ ಇದ್ದಿದ್ದರೆ ಈ ಬುತ್ತಿ ದೊಡ್ಡದಾಗುತ್ತಿತ್ತು. ಅಗಳುಗಳು ನೆನಪಿಗೆ ಬಂದ ಕ್ರಮದಲ್ಲಿ ಬರೆದಿರುವುದರಿಂದ ಕಾಲಾನುಕ್ರಮಕ್ಕೆ ಅಡ್ಡಿಯುಂಟಾಗಿದೆ. ಇವು ಒಂದೊಂದೂ ಸ್ವತಂತ್ರವಾದದ್ದರಿಂದ ಆ ಅಡ್ಡಿಯೂ ನಿವಾರಣೆಯಾದಂತಿದೆ. ಎಂದಾದರೊಂದು ದಿನ ನನ್ನ ದೌರ್ಬಲ್ಯಗಳನ್ನು ಪ್ರಕಟಿಸಿ ಗುರುಹಿರಿಯರ ಮತ್ತು ಕಿರಿಯರ ಮುಂದೆ ತಪ್ಪೊಪ್ಪಿಕೊಳ್ಳಬೇಕೆಂಬ ನನ್ನ ಸಂಕಲ್ಪ ಸಿದ್ಧಿಸಿದ್ದಕ್ಕಾಗಿ ನನಗೆ ತುಂಬ ಸಂತೋಷವಾಗಿದೆ. ನನ್ನ ತಪ್ಪೊಪ್ಪಿಗೆಯಿಂದ ಬಂಧು ಮಿತ್ರರಲ್ಲಿ ತುಸು ತಳಮಳವುಂಟಾಗಬಹುದು, ಅಥವಾ ಅವರಿಂದ ಮೆಚ್ಚುಗೆ ದೊರೆಯಬಹುದು. ಅದು ನನಗೆ ಮುಖ್ಯವಲ್ಲ. ನನ್ನ ಸಂಕಲ್ಪ ಪೂರೈಸಿದ ಒಂದೇ ತೃಪ್ತಿ ನನಗೆ. ನನ್ನ ದೌರ್ಬಲ್ಯಗಳು ಇಷ್ಟಕ್ಕೇ ಮುಗಿದಿವೆಯೆಂದು ನಾನು ಹೇಳಲಾರೆ. ಸದ್ಯಕ್ಕೆ ನೆನಪಿಗೆ ಬಂದಷ್ಟನ್ನು ಮಾತ್ರ ಸಂಕ್ಷೇಪವಾಗಿ ವಿವರಿಸಿದ್ದೇನೆ. ಇವನ್ನೋದಿದ ನಂತರವೂ ಬಂಧು ಮಿತ್ರರು ನನ್ನನ್ನು ಕ್ಷಮಿಸಿ, ಎಂದಿನಂತೆ ಪ್ರೀತಿಸುತ್ತಾರೆಂದು ನಂಬಿದ್ದೇನೆ. ನನ್ನ ಈ ನಂಬಿಕೆ ಹುಸಿಯಾದರೂ ಪತಿತ ಪಾವನ ಸ್ವರೂಪಿಯಾದ ನನ್ನ ದೈವ ಮತ್ತು ಸಮಾಜ ಮಾತ್ರ ನನ್ನನ್ನು ಖಂಡಿತವಾಗಿಯೂ ಕ್ಷಮಿಸುತ್ತಾರೆಂಬ ಭರವಸೆ ನನಗಿದೆ.

ಈಗಾಗಲೇ ನನ್ನ ಆತ್ಮಕಥೆ 'ಹೋರಾಟದ ಬದುಕು' ಎರಡು ಸಂಪುಟಗಳಲ್ಲಿ ಬೆಳಕು ಕಂಡಿದೆ. ನನ್ನ ದಿನಚರಿ, ಪತ್ರ ವ್ಯವಹಾರ ಮತ್ತು ನನ್ನ ಸಾಹಿತ್ಯ ನನ್ನ ಬದುಕಿನ ಮೇಲೆ, ಸ್ವಭಾವ ಮನೋಧರ್ಮಗಳ ಮೇಲೆ ಸಾಕಷ್ಟು ಬೆಳಕು ಬೀರುತ್ತವೆ. ಒಟ್ಟಿನಲ್ಲಿ ಲೋಕವನ್ನು ಗುರುವನ್ನು, ದೇವರನ್ನು ನಾನು ವಂಚಿಸಿಲ್ಲವೆಂದಾದರೆ, ನನಗದೇ ತೃಪ್ತಿ, ಹಾಗೂ ಮುಕ್ತಿ.

ನಾನು - ಶಿಕ್ಷಣ

೧೯೬೪ನೆಯ ಸಂವತ್ಸರ. ಗೋಣಿಕೊಪ್ಪಲಿನಲ್ಲೊಂದು ನಾನು ಪ್ರಥಮದರ್ಜೆ ಶಿಕ್ಷಣಕಾಲೇಜನ್ನು ತೆರೆಯುವ ವಿಚಾರ ವಿಶ್ವವಿದ್ಯಾನಿಲಯದ ಮುಂದಿತ್ತು. ಮಾನ್ಯತಾ ಸಮಿತಿಯನ್ನು ನೇಮಿಸಲಾಗಿತ್ತು. ಐದು ಮಂದಿ ಸದಸ್ಯರಿದ್ದರೂ ಹೋದವರು ಮೂರು ಮಂದಿ: ಡಾ. ಕೆ. ಬಿ. ವೈ. ತೋಟಪ್ಪ, ಶ್ರೀಮತಿ ಎಂ. ಜಯಲಕ್ಷ್ಮಮ್ಮಣ್ಣಿ (ಕೊಲಿ ಜಿಯಟ್ ಡೈರೆಕ್ಟರ್) ಮತ್ತು ನಾನು.

ಗೋಣಿಕೊಪ್ಪಲ್ ಆ ಕಾಲಕ್ಕೆ ಕೇವಲ ೪ ಸಾವಿರ ಜನಸಂಖ್ಯೆಯುಳ್ಳ ಸಣ್ಣೂರು. ಅದು ತಾಲ್ಲೂಕು ಕೇಂದ್ರವೂ ಅಲ್ಲ; ಹೋಬಳಿ ಕೇಂದ್ರವೋ ಏನೋ ಅದು ಗೊತ್ತಿಲ್ಲ. ಅಲ್ಲಿ ಮುಂದುವರಿದ ವರ್ಗದ ಜನರೆಂದರೆ ಕೊಡವರು. ಕೊಡವರು ಯಾರೆಂದರೆ, ಇಡೀ ಜಗತ್ತಿಗೇ ಗೊತ್ತು. ಅವರು ಆಜನ್ಮ ಯೋಧರು. ಇಂಡಿಯಾದ ಹೆಸರಾಂತ ದಂಡನಾಯಕರವರು; ಸೈನ್ಯದ ಎಲ್ಲ ದರ್ಜೆಗಳಲ್ಲಿಯೂ ವೀರಾವೇಶದಿಂದ ದೇಶ ಪ್ರೇಮದಿಂದ ಹೋರಾಡಿ ಪ್ರಾಣ ತೆತ್ತವರು; ಉಳಿದವರು ಊರು ಸೇರಿದ[illegible] ಜಗತ್ತಿನ ವೀರ ಜನಾಂಗಗಳಲ್ಲಿ ಇವರದೂ ಒಂದು. ದೈಹಿಕವಾಗಿ, ಮಾನಸಿಕವಾಗಿ ಸುಂದರರು. ದೃಢಿಷ್ಠರು, ಬಲಿಷ್ಠರು, ಎದೆಗಾರರು, ಚಲಗಾರರು, ಧರ್ಮಭೀರುಗಳು, ಸತ್ಯವಂತರು, ಆತ್ಮ ಪ್ರತ್ಯಯವುಳ್ಳವರು; ನೀತಿನಿಷ್ಠರು. ಆ ಪ್ರದೇಶದ ಸುತ್ತಮುತ್ತ ಇವರಲ್ಲದೆ ಅಪಾರ ಸಂಖ್ಯೆಯಲ್ಲಿ ಬುಡಕಟ್ಟು ಜನರಿದ್ದಾರೆ, ಹಿಂದುಳಿದವರಿದ್ದಾರೆ, ದಲಿತರಿದ್ದಾರೆ.

ಮಾನ್ಯತಾ ಸಮಿತಿ ಊರಿನ ಪಂಚಾಯಿತಿ ಹಾಲಿನಲ್ಲಿ ಪ್ರಮುಖರೊಡನೆ ಮಾತುಕತೆ ಆರಂಭಿಸಿತು; ಸಮಿತಿಯ ಯಾವೊಂದು ಪ್ರಶ್ನೆಗಳಿಗೂ ಉತ್ತರ ಸಿದ್ಧಪಡಿಸಿಕೊಂಡಿರಲಿಲ್ಲ, ಆ ಪ್ರಮುಖರು. ಶ್ರೀ ಸಿ. ಬಿ. ಮತ್ತಣ್ಣನವರು ಪ್ಲಾಂಟರ್, ಕಾಫಿ ಕ್ಯೂರಿಂಗ್ ವರ್ಕ್ಸ್ ಮಾಲೀಕರು ಮತ್ತು ತಾಲ್ಲೂಕುಬೋರ್ಡ್ ಅಧ್ಯಕ್ಷರು. ಅವರೇ ಜನರ ಪರವಾಗಿ ಕಾಲೇಜಿಗೆ ಅರ್ಜಿದಾರರು. ಸಭೆಯಲ್ಲಿ ಅನೇಕ ನಿವೃತ್ತ ಸೈನ್ಯಾಧಿಕಾರಿಗಳೂ, ಪ್ಲಾಂಟರೂ ಜತೆಗೆ ಒಂದಿನ ಕೊಡಗಿನಮುಖ್ಯ ಕಾರ್ಯದರ್ಶಿಗಳಾಗಿದ್ದ ರಾವ್ ಸಾಹೇಬ್ ಉತ್ತಪ್ಪನವರೂ ಹಾಜರಿದ್ದರು. ಕಾಲೇಜಿಗೆ ಬೇಕಾದ ನಿವೇಶನ, ಕಾಲೇಜಿಗೆ ಬೇಕಾವ ಕಟ್ಟಡ, ಉಪಾಧ್ಯಾಯರ ವಸತಿ ಗೃಹಗಳು, ಮೂರು ಲಕ್ಷ ರೂಪಾಯಿ ಪುದುವಟ್ಟು, ಇವುಗಳಲ್ಲಿ ಯಾವೊಂದು ಸಿದ್ಧವಿಲ್ಲವೆಂದಾಗ ಕಾಲೇಜಿಗೆ ಮಾನ್ಯತೆ ನೀಡುವುದೆಂತು? 'ನೀವು ತಿಳಿಸಿದ ಸಮಯದೊಳಗೆ ಅವೆಲ್ಲವೂ ಸಿದ್ಧವಾಗಿರುತ್ತವೆ'ಂದು ಶ್ರೀ ಮುತ್ತಣ್ಣನವರೂ ಉತ್ತಪ್ಪನವರೂ[1] ಉತ್ತರ ಕೊಟ್ಟರು.

---

1. ಉಳಿದ ಮಹನೀಯರ ಹೆಸರು ನನಗೀಗ ನೆನಪಿನಲ್ಲಿಲ್ಲ

ಸಮಿತಿಯ ಪರವಾಗಿ ನಾನೇ ಉತ್ತರ ಕೊಟ್ಟೆ. "ಇಂಥದೊಂದು ಪುಟ್ಟ ಹಳ್ಳಿಯಲ್ಲಿ ಪ್ರಥಮ ದರ್ಜೆ ಕಾಲೇಜೊಂದು ಸರಸ್ವತಿಯ ದೇಗುಲದಂತೆ ಸ್ಥಾಪನೆಗೊಳ್ಳುತ್ತಿರುವುದು ಸಂತೋಷದ ಸಂಗತಿ. ಹಳ್ಳಿಗಳ ಮಕ್ಕಳು ನಗರಗಳಿಗೆ ಹೋಗುವುದನ್ನು ತಪ್ಪಿಸಬೇಕಾದರೆ, ವಿದ್ಯಾ ಜ್ಯೋತಿ ಅವರವರ ಮನೆಗಳಿಗೆ ತಲುಪುವಂತಾಗಬೇಕು. ಹಳ್ಳಿಗಳಿಂದ ನಗರಗಳಿಗೆ ಹರಿಯುವ ಹಣ ಹಳ್ಳಿಯಲ್ಲಿಯೇ ವಿತರಣೆಯಾಗಬೇಕು. ಊರು ಬಿಟ್ಟು ಹೊರಗೆ ಹೋಗಲಾರದ ಹೆಣ್ಣುಮಕ್ಕಳಿಗೆ ಇದೊಂದು ವರವಾಗುತ್ತದೆ. ಆದಷ್ಟು ಬೇಗ ವಿಶ್ವವಿದ್ಯಾನಿಲಯದ ಷರತ್ತುಗಳನ್ನು ಪೂರೈಸಿ".

ಮಧ್ಯಾಹ್ನದ ಭೋಜನ ತುಸು ತಡವಾಗಿ ಮುಗಿಯಿತು. ನಾವು ಕಾರೇರುವ ಸಮಯದಲ್ಲಿ ತಮ್ಮ ಸಂಪ್ರದಾಯದಂತೆ ಮುಂದಾಳುಗಳು ತಲಾ ಒಂದು ಬಾಟಲಿ ಜೇನನ್ನು ಒಂದು ಪೊಟ್ಟಣ ಏಲಕ್ಕಿಯನ್ನು ನಮಗೆ ಕೊಟ್ಟರು. ನಾವು ಮೂವರೂ ಎಗ್ಗಿಲ್ಲದೆ ಅವನ್ನು ಕಾರೊಳಗಿರಿಸಿಕೊಂಡೆವು. ಕಾರು ಹೊರಡುವ ಮುನ್ನ ಕೊಲಿಜಿಯಟ್ ಡೈರೆಕ್ಟರ್ 'ಏನು ನಿರ್ಣಯ ಮಾಡಿದ್ದೀರಿ?' ಎಂದು ಪ್ರಶ್ನಿಸಿದರು. 'ಷರತ್ತುಗಳನ್ನು ಪೂರೈಸಿದರೆ ಕೊಟ್ಟರಾಯಿತು, ತಾಯಿ. ಇಲ್ಲಿಯ ಜನ ವಿಶ್ವಾಸಾರ್ಹರು. ನಾವು ಹೇಳಿದ್ದನ್ನೆಲ್ಲ ಪೂರೈಸುತ್ತಾರೆ' ಎಂದೆ. 'ನನ್ನ ಒಪ್ಪಿಗೆಯಿಲ್ಲ. ಮುಂದೆ ಮೈಸೂರಿನಲ್ಲಿ ಚರ್ಚೆಯಾಗಬಹುದೆಂದು ಕೊಂಡಿದ್ದೆ', ' ಜೇನು ಏಲಕ್ಕಿ ಸ್ವೀಕರಿಸಿದ ಮೇಲೆ ಚರ್ಚೆ ಅನಗತ್ಯವೆಂದು ನಾನು ತಿಳಿದೆ' ಎಂದು ನಗೆಯಾಡಿದೆ. ನನ್ನ ನಗೆ ಅವರಿಗೆ ಕೋಪ ಬರಿಸಿತು, ಅವರ ಬಿಳಿಯ ಮುಖ ಕೆಂಗೆಂಡವಾಯಿತು. 'ಈಗಲೇ ಚರ್ಚೆಯಾಗಬೇಕು' ಎಂದವರು ಹಟ ಹಿಡಿದರು.

ಮತ್ತೆ ಎಲ್ಲರೂ ಕೆಳಗಿಳಿದು ಚಾವಡಿಗೆ ಹೋದೆವು. ಮುತ್ತಣ್ಣ ಉತ್ತಪ್ಪ ಮೊದಲಾದವರ ಮುಖದ ಮೇಲೆ ನಿರಾಶೆ ನೆರೆದಿತ್ತು. ಸುಮಾರು ಅರ್ಧಗಂಟೆ ಚರ್ಚೆ ನಡೆಯಿತು. 'ಈ ತಾಯಿ ಅಸಮ್ಮತಿ ಸೂಚಿಸುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ತೋಟಪ್ಪನವರನ್ನು ಕೇಳಿದೆ. 'ಕಾಲೇಜು ಕೊಡಬೇಕೆಂಬುದು ನನ್ನ ಅಭಿಪ್ರಾಯ' ಎಂದು ತೋಟಪ್ಪ ನುಡಿದರು. 'ಕಾಲೇಜಿನ ಪರವಾಗಿ ಬಹುಮತಾಭಿಪ್ರಾಯವಿದೆ. ಇದ್ದುದನ್ನು ಇದ್ದಂತೆ ವರದಿ ಮಾಡೋಣ' ಎಂದು ತೀರ್ಮಾನವಾಯಿತು.

ಮಾರನೆಯ ದಿನ ಬೆಳಿಗ್ಗೆ ಶ್ರೀ ಮುತ್ತಣ್ಣನವರು ಒಂಟಿಕೊಪ್ಪಲಿನ ನಮ್ಮ ಮನೆಯ ಅಂಗಳದಲ್ಲಿ ಹಾಜರು. ಹಿಂದಿನ ರಾತ್ರಿ ಅವರ ಕಣ್ಣಿಗೆ ನಿದ್ದೆ ಹತ್ತಿದಂತೆ ಕಾಣಲಿಲ್ಲ. ಕಾಲೇಜನ್ನು ಸ್ಥಾಪಿಸಿ, ಬೆಳೆಸಿ, ನೋಡುವ ಆಸೆ ಅವರದು. ಎಂಥ ತ್ಯಾಗಕ್ಕಾದರೂ ಅವರು ಸಿದ್ಧರಾಗಿದ್ದರು. ನಮ್ಮ ಷರತ್ತುಗಳನ್ನು ಪೂರೈಸುವ ಬಗ್ಗೆಯೂ ಉಪಾಯಗಳನ್ನು ಅಣಿಮಾಡಿಕೊಂಡು ಬಂದಿದ್ದರು.'ಈ ಬಗ್ಗೆ ಚಿಂತಿಸಬೇಡಿ, ಮುತ್ತಣ್ಣನವರೆ, ನಿಮ್ಮ ಕಾಲೇಜುಗಳಲ್ಲಿ ಬಿ. ಎ. ತರಗತಿಯಲ್ಲಿ ಐಚ್ಛಿಕ ಕನ್ನಡ ಪಠ್ಯವಾಗಲಿ, ಇದೊಂದೇ ನಾನು ವೈಯಕ್ತಿಕವಾಗಿ ಕೇಳುವ ಷರತ್ತು' ಎಂದೆ. ಅದಕ್ಕವರು ಒಪ್ಪಿದರು. ಅವರು ಎಲ್ಲ ಷರತ್ತುಗಳನ್ನು ಪೂರೈಸಿ, ಮಾನ್ಯತೆಯನ್ನು ಪಡೆದುಕೊಂಡರು.

ಎಲ್ಲ ಕೊಡವರಂತೆ ಮುತ್ತಣ್ಣನವರು ಶಿಸ್ತುಗಾರರು; ಕೊಟ್ಟ ಮಾತನ್ನು ನಡೆಸುವ, ಹಿಡಿದದ್ದನ್ನು ಪೂರೈಸುವ ಛಲಗಾರರು; ತ್ಯಾಗವೀರರು; ಕೃತಜ್ಞತೆಯ ಸಂಸ್ಕೃತಿಯುಳ್ಳ ಸಜ್ಜನರು. ಕಾಲೇಜಿನ ಉದ್ಘಾಟನಾ ಸಮಾರಂಭವನ್ನು ನನ್ನಿಂದಲೇ ನೆರವೇರಿಸಬೇಕೆಂಬ ಇಚ್ಛೆ ಅವರದು. 'ಮಂತ್ರಿಗಳನ್ನೊ ರಾಜಕೀಯ ನಾಯಕರನ್ನೊ ಕರೆಯಿರಿ. ಅವರಿಂದ ನಿಮ್ಮ ಕಾಲೇಜಿಗೆ ಮುಂದೆ ಅನುಕೂಲವಾಗಬಹುದು. ನನ್ನನ್ನು ಬಿಟ್ಟು ಬಿಡಿ ಎಂದು ನಾನವರನ್ನು ಒತ್ತಾಯಿಸಿದೆ. ನನ್ನ ಒತ್ತಾಯಕ್ಕೆ ಅವರ ನೇರ ಉತ್ತರವಿದು ' ಮಂತ್ರಿಗಳಿಂದ ನಮಗೇನೂ ಆಗಬೇಕಾಗಿಲ್ಲ. ನಮಗೆ ಬೇಕಾದ್ದು ನಿಮ್ಮಂಥ ತಜ್ಞರ ಸಲಹೆ ಸಹಕಾರಗಳು. ನಮ್ಮೂರಿಗೆ ಕಾಲೇಜು ಮಂಜೂರು ಮಾಡಿಸಿದವರು ನೀವು! ನೀವೇ ಅದನ್ನು ಉದ್ಘಾಟಿಸಬೇಕು'. ಅವರ ಉತ್ಸಾಹಕ್ಕೆ ಭಂಗಬರಬಾರದೆಂದು ನಾನು ಅವರು ಒಪ್ಪಿಸಿದ ಕಾರ್ಯವನ್ನು ನೆರವೇರಿಸಿದೆ. ಕೆಲವು ತಿಂಗಳನಂತರ, ನಾನು ಕುಲಪತಿಯಾಗಿದ್ದಾಗ ಫೀಲ್ಡ್ ಮಾರ್ಷಲ್ ಕಾರಿಯಪ್ಪರೊಡನೆ ಕಾಲೇಜಿನ ಯಾವುದೋ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿದ ನೆನಪಿದೆ.

1972ರಲ್ಲೊ 1973ರಲ್ಲೊ ವಿಶ್ವವಿದ್ಯಾನಿಲಯ ಆಯೋಗದ ಅಧ್ಯಕ್ಷರಾದ ಡಾ. ಡಿ. ಎಸ್. ಕೊಠಾರಿಯವರು ಸಪತ್ನಿಕರಾಗಿ ಮೈಸೂರಿಗೆ ಬಂದಿದ್ದರು. ನಾಗರಹೊಳೆ ಅಭಯಾರಣ್ಯದಲ್ಲಿ ಒಂದು ರಾತ್ರಿ ತಂಗಬಹುದೆಂದು ನಾನವರಿಗೆ ಸೂಚಿಸಿದೆ. ನನ್ನ ಸೂಚನೆಯನ್ನವರು ಮನ್ನಿಸಿದರು. ಅವರ ಜತೆಯಲ್ಲಿರುವುದೇ ಮಹತ್ವಪೂರ್ಣವಾದ ಶಿಕ್ಷಣವಾಗುತ್ತಿತ್ತು. ಅವರ ಜ್ಞಾನಾಸಕ್ತಿ ಯಾವಾಗಲೂ ಕಾವು ಕಳೆದುಕೊಂಡದ್ದಿಲ್ಲ. ಹಕ್ಕಿಯೋ ಗಿಡವೋ ನೈಸರ್ಗಿಕ ಸನ್ನಿವೇಶವೋ ಶಿಕ್ಷಣ ಸಮಸ್ಯೆಯೋ - ಯಾವುದಾದರೂ ವಿಷಯವೆತ್ತಿಕೊಂಡು ಸಂವಾದಕ್ಕೆಳೆಯುತ್ತಿದ್ದರು. ಪ್ರಶ್ನೋಪಪ್ರಶ್ನೆಗಳ ಮಳೆಗರೆ ಯುತ್ತಿದ್ದರು. ರಾತ್ರಿ ನಿರ್ಮಲವಾದ ನಕ್ಷತ್ರ ಖಚಿತ ಆಕಾಶ. ಕಿವಿಯಿರಿಯುವ ಮೌನ. ಊಟ ಮುಗಿದ ನಂತರ ಹೊರಗಡೆ ಕುಳಿತು ಹತ್ತು ಗಂಟೆಯತನಕ ಹಲವಾರು ವಿಷಯಗಳನ್ನು ಕುರಿತು ಚರ್ಚಿಸುವಾಗ ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಕಡೆಗೆ ನಮ್ಮ ಗಮನ ಹರಿಯಿತು. 'ಗ್ರಾಮೀಣ ನಿರುದ್ಯೋಗಿಗಳು ಉದ್ಯೋಗಾರ್ಥಿಗಳಾಗಿ ನಗರಗಳನ್ನು ಸೇರುವಂತೆ, ವಿದ್ಯಾರ್ಥಿಗಳು ಸಹ ಉನ್ನತ ಶಿಕ್ಷಣಕ್ಕಾಗಿ ಪಟ್ಟಣಗಳಲ್ಲಿ ಕಿಕ್ಕಿರಿಯುತ್ತಾರೆ. ಹಳ್ಳಿಗಳಲ್ಲಿ ಕಾಲೇಜುಗಳು ಸಂಸ್ಥಾಪನೆಗೊಂಡದ್ದಾದರೆ, ಹೆಚ್ಚು ಖರ್ಚಿಲ್ಲದೆ ಹಳ್ಳಿಯ ಮಕ್ಕಳು ವಿದ್ಯೆ ಕಲಿಯುತ್ತಾರೆ. ಜತೆಗೆ ಜ್ಞಾನದ ಪರಿಸರ ನಿರ್ಮಾಣ ವಾಗುತ್ತದೆ ಎಂದು ನಾನು ಉದ್ಗಾರ ತೆಗೆದೆ. ನನ್ನ ಅಭಿಪ್ರಾಯ ಅವರಿಗೆ ಆಪ್ಯಾಯಮಾನವಾಯಿತು. ತಕ್ಷಣವೇ ನಾನು ಗೋಣಿಕೊಪ್ಪಲು ಕಾಲೇಜಿನ ಇತಿಹಾಸವನ್ನು ಅದರ ಸಾರ್ಥಕತೆಯನ್ನು ವಿವರಿಸಿದೆ. 'ಹಾಗಾದರೆ ಆ ಕಾಲೇಜನ್ನು ನಾನು ನೋಡಲೇಬೇಕು. ಬೆಳಿಗ್ಗೆ ಆದಷ್ಟು ಬೇಗ ಇಲ್ಲಿಯ ಕೆಲಸ ಮುಗಿಸಿ ಹೊರಡೋಣ' ಎಂದವರು ನುಡಿದರು.

ಬೆಳಗ್ಗೆ ಹನ್ನೊಂದು ಗಂಟೆಯ ವೇಳೆಗೆ ನಾವು ಕಾವೇರಿ ಕಾಲೇಜು ಸೇರಿದೆವು. ಅಲ್ಲಿಯ ಕಟ್ಟಡಗಳನ್ನೆಲ್ಲ ಒಂದು ಸುತ್ತು ನೋಡಿದಾಗ, ಅಧ್ಯಾಪಕರೊಡನೆ ವಿದ್ಯಾರ್ಥಿಗಳೊಡನೆ ಮಾತಾಡಿದಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ಜೈತ್ರ ಯಾತ್ರೆಯಲ್ಲಿ ವಿಜಯ ಕೈ

ಸೇರಿದಾಗ ಏನು ಆನಂದವಾಗಬಹುದೋ ಅಷ್ಟೇ ಆನಂದ ಅವರಿಗಾದದ್ದುಂಟು. ಅವರು ವಿಜ್ಞಾನಿಯಾದದ್ದರಿಂದ ಭಾವೋದ್ವಿಗ್ನರಾಗಲಿಲ್ಲ. ಆತ್ಮತೃಪ್ತಿಯ ಆನಂದ ಅವರ ಸುಸ್ನಿಗ್ಧ ವದನದಲ್ಲಿ ಲಹರಿಗೊಂಡಿತ್ತು. 'ನಾಲ್ಕು ಸಾವಿರ ಜನರ ಹಳ್ಳಿಯಲ್ಲಿ ಇಂಥ ಕಾಲೇಜೇ'' ಎಂದು ಆಶ್ಚರ್ಯದಿಂದ ಉದ್ಗಾರ ತೆಗೆದರು. 'ಇಂಥ ಕಾಲೇಜನ್ನು ನನ್ನ ಜೀವಮಾನದಲ್ಲಿ ನೋಡಬೇಕೆಂದು ಆಶೆಯಿಟ್ಟುಕೊಂಡಿದ್ದೆ. ನನ್ನ ಆಶೆ ಪೂರೈಸಿದೆ. ಉತ್ತರದಲ್ಲಿ ಇಂಥದೊಂದು ಕಾಲೇಜಿದೆ' ಎಂದು ನುಡಿದರು. ಪ್ರಾಂಶುಪಾಲರ ಕಡೆಗೆ ತಿರುಗಿಕೊಂಡು 'ನೀವೇನಾದರೂ ಆಯೋಗದಿಂದ ಧನಸಹಾಯ ಕೇಳಿದ್ದೀರಾ?' ಎಂದು ಪ್ರಶ್ನಿಸಿದರು. 'ಇಲ್ಲ'ಎಂಬುದು ಪ್ರಾಂಶುಪಾಲರ ಉತ್ತರ. 'ಕೊಡವರು ಸ್ವಾಭಿಮಾನಿಗಳು' ಎಂದು ನಾನು ಕಿಡಿ ಹಾರಿಸಿದೆ. 'ಇದು ಹಕ್ಕಿನ ಪ್ರಶ್ನೆಯೇ ಹೊರತು ಸ್ವಾಭಿಮಾನದ ಪ್ರಶ್ನೆಯಲ್ಲ. ಇಂಥ ಕಾಲೇಜಿಗೆ ಆಯೋಗ ಧನ ಸಹಾಯ ಮಾಡಬೇಕು' ಎಂದು ಹೇಳಿ ಕೊಠಾರಿಯವರೇ ಯಾವ ಯಾವ ಬಾಬ್ತುಗಳಿಗಾಗಿ ಹಣ ಕೇಳಬಹುದೆಂಬುದನ್ನು ತಿಳಿಸಿದರು.

ಪ್ರಾಂಶುಪಾಲರಿಂದ ದಾಖಲೆಗಳು ಆಯೋಗದ ಕಚೇರಿಯನ್ನು ತಲುಪಿದ ಕೆಲವು ದಿನಗಳೊಳಗಾಗಿಯೇ ಧನ ಸಹಾಯ ಮಂಜೂರಾಯಿತೆಂದು ನಾನುತಿಳಿದೆ. ಸಾಹಸ ಪ್ರಿಯತೆ ಕೊಡವರ ಮುಖ್ಯ ಲಕ್ಷಣಗಳಲ್ಲೊಂದು. ಅವರ ಸಾಹಸ ಪ್ರಿಯತೆಗೆ ಈ ಕಾಲೇಜು ಜೀವಂತ ಸಾಕ್ಷಿಯಾಗಿದೆ. ಕಾವೇರಿ ಕಾಲೇಜು ಯಾವಾಗಲೂ ಅಭಿವರ್ಧನೆಯ ದಾರಿಯಲ್ಲಿ ಸಾಗಲಿ, ಕೊಡವರ ಗುಣಧರ್ಮ ಸಂಸ್ಕೃತಿಗಳನ್ನು ಪ್ರತಿಬಿಂಬಿಸಲಿ!

ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಮಿತ್ರರಾದ ಶ್ರೀ ಮುತ್ತಣ್ಣನವರೂ ಅವರ ಅಂದಿನ ಗೆಳೆಯರೂ ನೆನಪಿನ ಅಂಗಳದಲ್ಲಿ ಹಾದು ಹೋಗುತ್ತಾರೆ. ಅವರಲ್ಲಿ ಹಲವರು ಈಗ ಇಲ್ಲ-ಭೌತಿಕವಾಗಿ. ಅವರ ಆತ್ಮತೇಜಸ್ಸು ಮಾತ್ರ ಈ ಕಾಲೇಜನ್ನೆಲ್ಲ ತುಂಬಿಕೊಂಡು, ಅದಕ್ಕೆ ದಿವ್ಯ ರಕ್ಷೆಯಾಗುಳಿದಿದೆ.

ಸುಮಾರು ಇದೇ ಸಮಯದಲ್ಲಿ ನಂಜನಗೂಡಿನಲ್ಲಿ ಪ್ರಥಮದರ್ಜೆ ಕಾಲೇಜು ತೆರೆಯಲು ಸುತ್ತೂರು ಮಠದ ಶ್ರೀಗಳವರು ಯೋಚಿಸಿದ್ದರು. 1968ನೆಯ ಇಸವಿ ಜುಲೈ 7ರಂದು ಮಾನ್ಯತಾ ಸಮಿತಿ ಅಲ್ಲಿಗೆ ಹೋಗಬೇಕಾಗಿತ್ತು. ಹಿಂದಿನ ದಿನ ನನಗೆ ಐವತ್ತು ತುಂಬಿದ ಹಬ್ಬವನ್ನು ಆಚರಿಸಿರಲಾಗಿ ನನಗೆ ತುಸು ಆಯಾಸವಾಗಿತ್ತು. ನಂಜನಗೂಡಿಗೆ ಬರುವುದಿಲ್ಲವೆಂದು ಸಂಬಂಧಪಟ್ಟವರಿಗೆ ಹೇಳಿ ಕಳಿಸಿದೆ. ಕಾರು ಕಳಿಸಿ ನನ್ನನ್ನು ಕರೆಸಿಕೊಂಡು ನಂಜನಗೂಡಿಗೆ ಹೋಗಲೇಬೇಕೆಂದು ಸುತ್ತೂರು ಶ್ರೀಗಳವರು ಪ್ರೀತಿಯಿಂದ ಒತ್ತಾಯಿಸಿದರು. ವಿಧಿಯಿಲ್ಲದೆ ಸಮಿತಿಯೊಡನೆ ಹೊರಟೆ. ಗೋಣಿ ಕೊಪ್ಪಲಿಗೆ ಹೋಗಿದ್ದ ಮೂವರೇ ಅಲ್ಲಿಗೆ ಹೋದೆವು.

ನಾವು ಹೋದದ್ದು ಪ್ರೌಢಶಾಲಾ ಕಟ್ಟಡಕ್ಕೆಂಬುದು ನನ್ನ ನೆನಪು. ಆ ಕಟ್ಟಡವನ್ನು ಹೂ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. 'ದೇಜಗೌ ಐವತ್ತು' ಎಂದು ಅಲ್ಲೊಂದು ಫಲಕ ಎದ್ದು ಕಾಣುತ್ತಿತ್ತು. ಅದನ್ನು ನೋಡಿದಾಗ ನನಗೆ ದಿಗ್ಭ್ರಮೆಯಾಯಿತು. ನಮ್ಮನ್ನು

ನೇರವಾಗಿ ಅಲಂಕೃತ ವೇದಿಕೆಗೆ ಕೊಂಡೊಯ್ಯಲಾಯಿತು. ಸಭಾಂಗಣ ಕಿಕ್ಕಿರಿದಿತ್ತು. ಸಭಾಧ್ಯಕ್ಷತೆಯನ್ನು ಡಾ. ಕೆ. ಬಿ. ವೈ. ತೋಟಪ್ಪನವರು ವಹಿಸಿದರು. ಮೈಸೂರಿಂದ ಬಂದಿದ್ದ ಒಬ್ಬಿಬ್ಬರು ಮಿತ್ರರು ಅಭಿನಂದನ ಭಾಷಣ ಮಾಡಿದರು. ನನ್ನ ಪಾಲಿಗೆ ಅದೊಂದು ಮಕ್ಕಳ ಆಟದಂತೆ ಅಚ್ಚರಿಗೊಳಿಸಿತು. ನನ್ನ ಭಾಷಣದಲ್ಲಿ ನಾನು ಸ್ವಾಮೀಜಿಯವರಿಗೆ ನನ್ನ ಕೃತಜ್ಞತೆ ಸಲ್ಲಿಸಿದೆ. 'ಪ್ರತಿ ತಾಲ್ಲೂಕಿನಲ್ಲಿಯೂ ಒಂದು ಕಾಲೇಜಿರಬೇಕೆಂಬುದು ನನ್ನ ಆಶೆ. ಸರಸ್ವತಿಯ ತೇರು ಪಟ್ಟಣದಿಂದ ಪಟ್ಟಣಕ್ಕೆ ಹರಿಯುತ್ತಿರಬೇಕು. ತಾವಿದ್ದಲ್ಲಿಯೇ ಮಕ್ಕಳು ಪದವಿ ಪಡೆಯುವಂಥ ಅವಕಾಶ ಕಲ್ಪಿಸಬೇಕು. ಗಂಡು ಮಕ್ಕಳು ವ್ಯಾಸಂಗಕ್ಕಾಗಿ ರೈಲಿನಲ್ಲಿ ಮೈಸೂರಿಗೆ ಬರಬಹುದು. ಹೆಣ್ಣುಮಕ್ಕಳೊ? ಬೆಳಿಗ್ಗೆ ಮನೆ ಬಿಟ್ಟವರು ಒಣ ಮೋರೆ ಹಾಕಿಕೊಂಡು ಮನೆ ಸೇರುವಾಗ ಸಂಜೆಯಾಗುತ್ತದೆ. ಅವರ ಅವಸ್ಥೆಯನ್ನು ನೋಡಿ ನಾನು ಸಂಕಟ ಪಟ್ಟಿದ್ದೇನೆ. ಮಕ್ಕಳು ಹಿಂದಿರುಗಿ ಮನೆ ಸೇರುವ ತನಕ ತಂದೆ ತಾಯಿಯರು ಕುತೂಹಲದ ಮೊನೆಯ ಮೇಲೆ ತಪಸ್ಸು ಮಾಡುತ್ತಾರೆ. ಯಾವ ಹೆಣ್ಣು ಹೆತ್ತ ತಾಯಿಗಾದರೂ ಈ ದೃಶ್ಯವನ್ನು ನೋಡಿ ಎದೆ ಕರಗಬೇಕು'. ಇದು ನನ್ನ ಭಾಷಣದ ಸಾರಾಂಶ.

ಸಮಾರಂಭ ಮುಗಿದನಂತರ ಕಾಲೇಜು ಮಾನ್ಯತೆಯನ್ನು ಚರ್ಚಿಸುವ ಸಲುವಾಗಿ ಸಮಿತಿ ಸೇರಿತು. ಸಮಿತಿಯ ಸ್ತ್ರೀ ಸದಸ್ಯೆಯೊಬ್ಬರು ಮೊದಲೇ ಮಾತು ಪ್ರಾರಂಭಿಸಿ 'ಜವರೇಗೌಡರು ತಮ್ಮ ಭಾಷಣದಲ್ಲಿ ಸಮಿತಿ ಏನು ಮಾಡಬೇಕೆಂಬುದನ್ನು ಸೂಚಿಸಿದ್ದಾರೆ. ನಮ್ಮ ಬಾಯನ್ನು ಕಟ್ಟಿದ್ದಾರೆ' ಎಂದರು. 'ಕ್ಷಮಿಸಿ. ಅಭಿನಂದನ ಭಾಷಣಕ್ಕೆ ನೀಡಿದ ಉತ್ತರವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿಲ್ಲ. ಊರಿನ ಪ್ರತಿನಿಧಿಗಳು ತಮ್ಮ ಮನವಿ ಪತ್ರದಲ್ಲಿ ಉಲ್ಲೇಖಿಸಿದ ವಿಚಾರಗಳಿಗೆ ನನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. ತೀರ್ಮಾನ ತೆಗೆದು ಕೊಳ್ಳಬೇಕಾದ್ದು ಈ ಸಮಿತಿಯೇ' ಎಂದು ನಾನು ಹೇಳಿದೆ. ಅದಿಲ್ಲ, ಇದಿಲ್ಲ ಎಂದು ಆ ತಾಯಿ ಗೊಣಗಲಾರಂಭಿಸಿದರು. ಸಕಾಲದಲ್ಲಿ ಎಲ್ಲವನ್ನು ಒದಗಿಸುವುದಾಗಿ ಆಡಳಿತ ಮಂಡಲಿಯ ಪ್ರತಿನಿಧಿಗಳು ಉತ್ತರಿಸಿದರು. ಅಲ್ಲಿ ಪ್ರಾರಂಭವಾಗಲಿರುವ ಕಾಲೇಜಿಗೆ ಮಾನ್ಯತೆ ನೀಡಬಹುದೆಂದು ತೀರ್ಮಾನಿಸಲಾಯಿತು.

ನಾನು ಕುಲಪತಿಯಾದ ನಂತರವೂ ಗ್ರಾಮೀಣ ಕಾಲೇಜುಗಳ ಬಗೆಗಿನ ಉದಾರ ನೀತಿಯನ್ನು ಮುಂದುವರಿಸಿದೆ. ಆ ಅವಧಿಯಲ್ಲಿ ವಿಶ್ವವಿದ್ಯಾನಿಲಯ ಮಾನ್ಯತೆ ನೀಡಿದ ಹಲವು ಕಾಲೇಜುಗಳ ಪೈಕಿ ಎರಡನ್ನು ಮಾತ್ರ ಉಲ್ಲೇಖಿಸಬಹುದು. ಅವುಗಳಲ್ಲೊಂದು ಚನ್ನಪಟ್ಟಣದ ಕುವೆಂಪು ಮಹಾವಿದ್ಯಾಲಯ. 'ವಿಶ್ವವಿದ್ಯಾನಿಲಯ ವಿಧಿಸುವ ಎಲ್ಲ ಶರತ್ತುಗಳನ್ನು ಪಾಲಿಸುತ್ತೇನೆ. ನಿಮ್ಮ ಊರಿಗೊಂದು ಕಾಲೇಜು ಬೇಡವೆ? ಸಾರ್ವಜನಿಕ ಒಕ್ಕಲಿಗರ ವಿದ್ಯಾರ್ಥಿನಿಲಯವನ್ನು ಸದ್ಯಕ್ಕೆ ಬಿಡಿಸಿ ಕೊಟ್ಟರೆ ಸಾಕು. ಉಳಿದದ್ದನ್ನೆಲ್ಲ ನಾನು ನೋಡಿಕೊಳ್ಳುತ್ತೇನೆ' ಎಂಬುದಾಗಿ ಮುಂದೆ ಬಂದವರು ಬೆಂಗಳೂರಿನ ಪತ್ರಿಕೋದ್ಯಮಿ, ದಾನಿ ರಾಮಲಿಂಗಯ್ಯನವರು. ನೆಲದ ಋಣ ತೀರಿಸಬೇಕೆನ್ನುವ ಆಸೆ ನನ್ನ ಮನದಲ್ಲಿ ಗರಿಗೆದರಿತು. ಹತ್ತು-ಹದಿನೈದು ಸಾವಿರ ಜನಸಂಖ್ಯೆಯಿರುವ ಪುತ್ತೂರಿನಲ್ಲಿ ಎರಡು

ಕಾಲೇಜಿರುವುದಾದರೆ, ನಾಲ್ಕು ಸಾವಿರ ಜನರಿರುವ ಗೋಣಿಕೊಪ್ಪಲಿನಲ್ಲಿ ಕಾಲೇಜು ವಿಜೃಂಭಿಸುತ್ತಿರಬೇಕಾದರೆ, ನನ್ನ ಊರಿನಲ್ಲಿ, ನಾನು ಬೆಳೆದ ಊರಿನಲ್ಲಿ, ಇಪ್ಪತ್ತೈದು ಸಾವಿರ ಜನಸಂಖ್ಯೆಯಿರುವ ಪಟ್ಟಣದಲ್ಲಿ ಒಂದಾದರೂ ಕಾಲೇಜು ಬೇಡವೇ ಎಂದು ನನ್ನ ಮನದಲ್ಲಿ ಛಲ ಚಿಗುರುತ್ತಿತ್ತು. ರಾಮಲಿಂಗಯ್ಯನವರ ಕೈಗೆ ಕಾಲೇಜು ಹೋಗುತ್ತದೆಂದು ಕಳವಳಗೊಂಡ ಕೆಲವು ರಾಜಕೀಯ ಮುಂದಾಳುಗಳು ಮುಖ್ಯಮಂತ್ರಿಗಳಿಗೆ ಏನೇನೋ ಆಮಿಷ ತೋರಿಸಿ, ದೂರು ಕೊಟ್ಟರೆಂದು ತೋರುತ್ತದೆ. ಮುಖ್ಯ ಮಂತ್ರಿ ದೇವರಾಜ ಅರಸು ಅವರು ಕುಲ ಸಚಿವ ಡಿ. ವಿ. ಅರಸು ಅವರನ್ನು ಕರೆಸಿಕೊಂಡು 'ಚನ್ನಪಟ್ಟಣದಲ್ಲಿ ಕಾಲೇಜು ಪ್ರಾರಂಭಿಸಲು ಅನುಮತಿ ಕೋರಿ ಯಾರೂ ಅರ್ಜಿ ಹಾಕಿದ್ದಾರಂತೆ. ಅವರಿಗೆ ಅವಕಾಶ ಕೊಡಬೇಡಿ. ಮುಂದಿನ ವರ್ಷ ಮತ್ತೊಬ್ಬ ಗಣ್ಯರು ಅರ್ಜಿ ಹಾಕುತ್ತಾರೆ'ಎಂದು ಹೇಳಿಕಳಿಸಿದರು. ಆ ಕಾಲದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಮಾತ್ರವಲ್ಲ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೂ ಸರ್ಕಾರವನ್ನು ಕೇಳದೆಯೆ ಅನುಮತಿ ನೀಡುವ ಹಕ್ಕು ವಿಶ್ವವಿದ್ಯಾನಿಲಯಕ್ಕಿತ್ತು. ಕುಲಸಚಿವರು ಮುಖ್ಯಮಂತ್ರಿಗಳ ಆಶಯವನ್ನು ನನಗೆ ತಿಳಿಸಿ 'ಏನು ಮಾಡಲಿ, ಸಾರ್?' ಎಂದರು. 'ಮುಖ್ಯಮಂತ್ರಿಗಳ ಮಾತು ಕೇಳಬೇಕಾದ್ದೇ. ಆದರೆ ಇದರಲ್ಲೇನೋ ರಾಜಕೀಯವಿದೆ. ನನ್ನ ಕಾಲದಲ್ಲಿ ನನ್ನೂರಿನಲ್ಲೊಂದು ಕಾಲೇಜು ಆಗಬೇಕೆಂಬುದು ನನ್ನಿಚ್ಛೆ. ಯಾರೋ ಪುಣ್ಯಾತ್ಮರು ಸ್ವಂತ ಹಣ ಖರ್ಚುಮಾಡಲು ಸಿದ್ಧರಾಗಿದ್ದಾರೆ. ಈ ಸಂದರ್ಭದಲ್ಲಿ ನೀವು ನನ್ನ ಮಾತು ನಡೆಸುತ್ತೀರೋ, ದೇವರಾಜ ಅರಸರ ಮಾತನ್ನೋ?' ಎಂದು ಕೇಳಿದೆ. 'ನಿಮ್ಮ ಮಾತೇ ನನಗೆ ಮುಖ್ಯ' ಎಂದು ಡಿ. ವಿ. ಅರಸು ನುಡಿದರು. 'ಹಾಗಾದರೆ ನಾಳೆ ನಾಡಿದ್ದರಲ್ಲಿ ಮಾನ್ಯತಾ ಸಮಿತಿ ಕಳಿಸಿ' ಎಂದೆ. ವಿದ್ಯಾರ್ಥಿನಿಲಯವನ್ನು ಬಿಟ್ಟು ಕೊಡುವಂತೆ ಆ ಹೊತ್ತಿಗಾಗಲೇ ನಾನು ಬಿ. ಜೆ. ಲಿಂಗೇಗೌಡರಿಗೆ ಹೇಳಿದ್ದೆ. ಮಾನ್ಯತಾ ಸಮಿತಿಯ ವರದಿ ಅನುಕೂಲಕರವಾಗಿತ್ತು. ರಾಮಲಿಂಗಯ್ಯನವರು ಕಾಲೇಜು ಪ್ರಾರಂಭಿಸಿದರು, ಬೆಳೆಸಿದರು, ಉಳಿಸಿದರು. ಅದಕ್ಕೊಂದು ಪ್ರಶಸ್ತವಾದ ನಿವೇಶನವನ್ನು ಪಡೆದುಕೊಂಡರು.

ಮತ್ತೊಂದು, ಆದಿಚುಂಚನಗಿರಿಯ ಪ್ರಥಮ ದರ್ಜೆ ಕಾಲೇಜು. ಆ ಕಾಲಕ್ಕೆ ಅಲ್ಲಿಯ ಶ್ರೀಮಠ ಸಂಸ್ಕೃತ ಕಾಲೇಜನ್ನು ಮಾತ್ರ ನಡೆಸುತ್ತಿತ್ತು. ಆಗಿನ ಸ್ವಾಮಿಗಳಿಗೆ ಆದೆ ತಾನೆ ಪಟ್ಟಾಭಿಷೇಕವಾಗಿತ್ತೆಂದು ತೋರುತ್ತದೆ. ಅವರೊಮ್ಮೆ ಮೈಸೂರಿಗೆ ಬಂದಿದ್ದಾಗ ಕಾಲೇಜು ಪ್ರಾರಂಭಿಸುವ ವಿಷಯವನ್ನು ನಾನೇ ಪ್ರಸ್ತಾಪಿಸಿದೆ. 'ಅರ್ಜಿ ಹಾಕಬೇಕಾದ ಅವಧಿ ಮುಗಿಯುತ್ತಿದೆ. ನಾನು ಮಾನ್ಯತಾ ಶುಲ್ಕ ಕಟ್ಟಿ, ಅರ್ಜಿ ಹಾಕಿಸಿರುತ್ತೇನೆ. ನೀವು ಹಿಂದಿನಿಂದ ಆ ಹಣ ಕಳಿಸಬಹುದು' ಎಂದೆ. ಅವರು ಸಲೀಸಾಗಿ ಸಮ್ಮತಿ ನೀಡಿದರು. ನಾನೇ ಒಂದು ದಿನ ರಜ ಹಾಕಿ, ಆದಿಚುಂಚನಗಿರಿಗೆ ಹೋಗಿ, ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಏನೇನಿರಬೇಕೆಂಬುದನ್ನು ವಿವರಿಸಿ, ಅನೌಪಚಾರಿಕವಾಗಿ ಕಾಲೇಜನ್ನು ಪ್ರಾರಂಭಿಸಿದ್ದನ್ನು ನೋಡಿಬಂದೆ. ಅಷ್ಟೇ ಅಲ್ಲ, ಆ ಕಾಲೇಜಿಗೊಬ್ಬ ಪ್ರಾಂಶುಪಾಲರ ಹೆಸರನ್ನು ಸಹ ನಾನೇ ಸೂಚಿಸಿದೆ. ಆದಿಚುಂಚನಗಿರಿಯ ಪೀಠಾಧಿಪತಿಗಳಾದ ಶ್ರೀ ಶ್ರೀ ಬಾಲಗಂಗಾಧರನಾಥ

ಸ್ವಾಮಿಗಳು ಕರ್ತೃತ್ವ ಸಾಮರ್ಥ್ಯವುಳ್ಳ ಪುಣ್ಯಶಾಲಿಗಳು; ನಭೂತೋನ ಭವಿಷ್ಯತಿ ಎನ್ನುವಂತೆ ಶ್ರೀಮಠವನ್ನು ಶ್ರೀಮಂತಗೊಳಿಸಿದ್ದಾರೆ. ದಕ್ಷಿಣ ಕರ್ನಾಟಕದಲ್ಲೆಲ್ಲ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ; ಸಮಾಜದಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ; ಪ್ರಾಯಶಃ ಇಡೀ ಕರ್ನಾಟಕದಲ್ಲಿ ಈ ಮಠ ಬೆಳೆದಷ್ಟು ಶೀಘ್ರವಾಗಿ, ವ್ಯಾಪಕವಾಗಿ, ಯಶಸ್ವಿಯಾಗಿ ಮತ್ತೊಂದು ಮಠ ಬೆಳೆದಿಲ್ಲವೆಂದೇ ಹೇಳಬಹುದು.

ವೈದ್ಯ ವಿಜ್ಞಾನವೀಗ ಶಾಖೋಪಶಾಖೆಗಳಾಗಿ ಬೆಳೆದಿದೆಯಷ್ಟೆ. ಕಣ್ಣು ಮೂಗು ಅಷ್ಟೊಂದು ಹತ್ತಿರವಿದ್ದರೂ ಕಣ್ಣಿಗೊಬ್ಬ ಡಾಕ್ಟರು, ಮೂಗಿಗೊಬ್ಬ ಡಾಕ್ಟರು ಈಗ ಬೇಕಾಗಿದೆ. ಬೆಂಗಳೂರಿನಂಥ ಮಹಾನಗರದಲ್ಲಿ ದೊರೆಯುವ ವೈದ್ಯ ಸೌಲಭ್ಯ ಬೀದರ್‌ನಲ್ಲಿ ದೊರೆಯುವುದಿಲ್ಲ. ಎಲ್ಲರಿಗೂ ಹತ್ತಿರದಲ್ಲಿ ವೈದ್ಯ ಸೌಲಭ್ಯ ದೊರೆಯ ಬೇಕಾದರೆ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ಒಂದೊಂದು ಮೆಡಿಕಲ್ ಕಾಲೇಜಿರಬೇಕೆಂಬುದು ನನ್ನ ಖಚಿತ ಮತ. ಒಂದೊಂದು ಕಾಲೇಜಿಗೂ ಪ್ರವೇಶಾವಕಾಶ ಎಪ್ಪತ್ತೈದಕ್ಕಿಂತ ಹೆಚ್ಚಾಗಿರಬಾರದು. ಕಾಲೇಜಿನೊಂದಿಗೆ ಆಸ್ಪತ್ರೆಯೂ ಅನಿವಾರ್ಯವಾಗಿ ಬೆಳೆಯಬೇಕಷ್ಟೆ. ಈ ವ್ಯವಸ್ಥೆಯಿಂದಾಗಿ ವಿಕೇಂದ್ರೀಕರಣ ತತ್ತ್ವವನ್ನು ಪಾಲಿಸಿ ದಂತಾಗುತ್ತದೆ.

ಉನ್ನತ ಶಿಕ್ಷಣದ ವೆಚ್ಚವನ್ನು ಸಮಾಜ ಭರಿಸಬೇಕೇ ಹೊರತಾಗಿ, ಸರ್ಕಾರದ ಮೇಲೆ ಅದರ ಭಾರ ಅತಿಯಾಗಬಾರದೆಂಬ ನೀತಿ ಸ್ವಾಗತಾರ್ಹವಾದದ್ದು. ಇದು ಗಾಂಧೀಜಿಯ ಮತವೂ ಹೌದು. ಹೆಸರೇನೇ ಇರಲಿ, ಸಾರ್ವಜನಿಕ ಶುಲ್ಕದ ಅಥವಾ ದತ್ತಿಯ ಮೂಲಕ ಉನ್ನತ ಶಿಕ್ಷಣ ಅಭಿವೃದ್ಧಿ ಹೊಂದಬೇಕಾದ್ದು ಅತ್ಯವಶ್ಯ. ಅಭಿವೃದ್ಧಿಮುಖವಾಗಿರುವ ಇಂಡಿಯಾದಂಥ ರಾಷ್ಟ್ರದಲ್ಲಿ ಈ ಪದ್ಧತಿಯನ್ನನುಸರಿಸಬೇಕಾದ್ದು ದೇಶದ ಸರ್ವಾಂಗೀಣ ವಿಕಾಸದ ದೃಷ್ಟಿಯಿಂದ ಅನಿವಾರ್ಯ. ಕೋಪತಾಪ ಸಂಕಟಗಳಿಲ್ಲದೆ, ಸರ್ಕಾರವನ್ನು ಬಯ್ಯದೆ ಭಂಗಿಸದೆ ಸಾರ್ವಜನಿಕರು ಶುಲ್ಕವನ್ನು ತೆರುವ ಮುಖ್ಯ ಬಾಬತ್ತುಗಳಲ್ಲಿ ಇದೂ ಒಂದು. ಶಿಕ್ಷಣ ಕ್ಷೇತ್ರದಲ್ಲಿ ಉಳಿಸಿದ ಹಣವನ್ನು ಸರ್ಕಾರ ನೀರಾವರಿ, ವಿದ್ಯುಚ್ಛಕ್ತಿ, ಕೈಗಾರಿಕೆ ಮೊದಲಾದ ಲಾಭದಾಯಕವಾದ, ಆರ್ಥಿಕೋನ್ನತಿಗೆ ನೆರವಾಗುವ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಂಗತಿಗಳಿಗೆ ವಿನಿಯೋಗಿಸಬಹುದೆಂಬುದನ್ನು ಆರ್ಥಿಕ ವ್ಯವಹಾರಗಳ ಮೇನೇಜರುಗಳು ಅರಿಯಬೇಕಾಗಿದೆ. ಈ ಮಾರ್ಗಾನುಸರಣೆಯಿಂದ ವಿಶೇಷ ಯೋಗ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆಂಬ ಬೊಬ್ಬೆಗೆ ಅತ್ಯುದಾರವಾದ ಬೆಲೆ ಕೊಡಬೇಕಾಗಿಲ್ಲ. ಜನತೆ ಸಾಮಾಜಿಕ ನ್ಯಾಯವನ್ನು ಮರೆಯುವಂತಿಲ್ಲ. ಅಂಕಾರ್ಜನೆಯೊಂದೇ ಯೋಗ್ಯತೆಯ ಲಕ್ಷಣವಲ್ಲ. ಎಷ್ಟು ಅಂಕ ಗಳಿಸಿದವನನ್ನು ಯೋಗ್ಯತೆಯ ಪರಿಧಿಯೊಳಗೆ ತರಬಹುದು? ಶೇಕಡ ತೊಂಬತ್ತು ಅಥವಾ ಹೆಚ್ಚಿಗೆ ಅಂಕ ಬಂದ ವಿದ್ಯಾರ್ಥಿಗಳನ್ನು ವಿಶೇಷ ಯೋಗ್ಯತೆಯ ಪಟ್ಟಿಗೆ ಸೇರಿಸಬಹುದೇ? ವಿಶೇಷ ಯೋಗ್ಯತೆಯ ಬಗೆಗೆ ವಾದಿಸುವ ಸಾಮಾನ್ಯಯೋಗ್ಯತೆಯ ರಾಜಕೀಯ ನಾಯಕರ ಮತ್ತು ಆ ಪರವಾಗಿ ತೀರ್ಪು ಕೊಡುವ

ನ್ಯಾಯಮೂರ್ತಿಗಳ ವಿದ್ಯಾರ್ಥಿ ಜೀವನ ಕಾಲದ ಅಂಕ ಪಟ್ಟಿಯನ್ನು ಸಾರ್ವಜನಿಕ ಪರಿಶೀಲನೆಗೆ ಒಳಗು ಪಡಿಸಬೇಕಾಗುತ್ತದೆ. ಒಂದು ಪಕ್ಷ ವಿಶೇಷ ಯೋಗ್ಯತೆ ಇರುವ ವಿದ್ಯಾರ್ಥಿಗಳು ಬಡತನದ ಒಗೆತನದಿಂದ ಬಂದಿದ್ದರೆ [illegible] ರಾಗುತ್ತಾರೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಕಲ ಸೌಲಭ್ಯಗಳುಳ್ಳ ಸಂಸಾರದಿಂದ ಬಂದ ವಿದ್ಯಾರ್ಥಿ ನೂರಕ್ಕೆ ನೂರು ಅಂಕ ಪಡೆದಿದ್ದರೂ ನಿರ್ಗತಿಕ ಕುಟುಂಬದವನಾಗಿದ್ದು ಶೇಕಡ ಐವತ್ತು ಅಂಕಗಳನ್ನು ಪಡೆದ ವಿದ್ಯಾರ್ಥಿಗಿಂತ ಮೇಲಲ್ಲವೆಂದೇ ಹೇಳಬೇಕಾಗುತ್ತದೆ. ಅಧಿಕಾರದಲ್ಲಿರುವ ಜನ ತಮ್ಮವರಿಗನುಕೂಲವಾದ ಯೋಜನೆಗಳನ್ನು ಮಾತ್ರ ಜಾರಿಗೆ ತರುತ್ತಾರೆನ್ನುವುದಕ್ಕೆ ಇಂದಿನ ತಾಂತ್ರಿಕ ಶಿಕ್ಷಣದ ವ್ಯವಸ್ಥೆಯೇ ಜ್ವಲಂತ ನಿದರ್ಶನವಾಗಿದೆ.

ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಶಿಕ್ಷಣದ ರಚನೆಯಲ್ಲಿ ಮಾರ್ಪಾಡು ಮಾಡಬೇಕೆಂಬುದು ನನ್ನ ಅಪೇಕ್ಷೆಯಾಗಿತ್ತು. ಪದವಿ ಶಿಕ್ಷಣದ ಒಂದೊಂದು ತರಗತಿಯೂ ಸ್ವತಂತ್ರ ಘಟಕವಾಗಬೇಕೆಂದೂ, ಸಾಧ್ಯವಾದರೆ ವಿದ್ಯಾರ್ಥಿ ಯಾವಾಗಲಾದರೂ ಪ್ರಮಾಣ ಪತ್ರಿಕೆ ಪಡೆದು ಕಾಲೇಜು ಬಿಡಬಹುದೆಂದೂ, ಹಾಗೆಯೇ ನಾಲ್ಕು ಸ್ನಾತಕೋತ್ತರ ಡಿಪ್ಲೊಮೊ ಪಡೆದವನಿಗೆ ಎಂ. ಎ ಪದವಿ ಕೊಡಬಹುದೆಂದೂ ನಾನು ಯೋಚಿಸಿದ್ದೆ. ಅಷ್ಟೇ ಅಲ್ಲ, ಬಿ. ಜಿ. ಎಲ್ ಎಂಬ ತರಗತಿಯನ್ನು ಈ ನಿಟ್ಟಿನಲ್ಲಿ ತೆರೆದಿದ್ದೆ. ಈ ನೂತನ ಕ್ರಮದ ಚರ್ಚೆಗಾಗಿ ಪ್ರಿನ್ಸಿಪಾಲ್ ಮತ್ತು ಪ್ರಾಧ್ಯಾಪಕರ ಗೋಷ್ಠಿಯೊಂದನ್ನು ಆಲೋಕದಲ್ಲಿ ಏರ್ಪಡಿಸಿದ್ದೆ. ಅವರು ಒಪ್ಪಲಿಲ್ಲವಾಗಿ ನನ್ನ ಯೋಜನೆ ಸೋತಿತು.

ನನ್ನ ಕಾಲದಲ್ಲಿ ಅನೇಕ ಸ್ನಾತಕೋತ್ತರ ವಿಭಾಗಗಳು ಹೊಸದಾಗಿ ಪ್ರಾರಂಭವಾದುವಷ್ಟೆ. ಅವುಗಳ ಪೈಕಿ ರೀಜನಲ್ ಕಾಲೇಜಿನಲ್ಲಿ ತೆರೆಯಲು ಅವಕಾಶಕೊಟ್ಟ ಸ್ನಾತಕೋತ್ತರ(ಎಂ.ಎಸ್‌ಸಿ. ಎಡ್) ತರಗತಿಗಳು ತಮಗೆ ಪ್ರತಿ ಸ್ಪರ್ಧಿಗಳೊ ಎನ್ನುವ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರನ್ನು ಕಳವಳಕ್ಕೀಡು ಮಾಡಿದಂತೆ ತೋರುತ್ತದೆ. ಆ ಕಾಲೇಜಿನ ಪ್ರಿನ್ಸಿಪಾಲರು ಅವುಗಳ ಬಗ್ಗೆ ನನ್ನೊಡನೆ ಮೊದಲೇ ಚರ್ಚಿಸಿದ್ದರು. ಅವುಗಳ ವಿಶಿಷ್ಟ ನೂತನತೆಗಾಗಿ ನಾನು ಅವುಗಳ ಪ್ರಾರಂಭಕ್ಕೆ ಅನುಮತಿ ನೀಡಬೇಕೆಂದು ನಿರ್ಧರಿಸಿದ್ದೆ. ಪ್ರಾಧ್ಯಾಪಕರು ಅಟಕಾಯಿಸಿದರೂ ನನ್ನ ಚಲವೇ ಗೆದ್ದಿತು. ಚಲನಶೀಲತೆ ವಿಶ್ವವಿದ್ಯಾನಿಲಯಗಳ ಗುರಿಯಾಗಿರಬೇಕೆಂಬುದು ನನ್ನ ಅಚಲ ನಿಲವು.

ಖಾಸಗಿ ವಲಯದಲ್ಲಿ ಸಿಗುವ ಶಿಕ್ಷಣದ ಮಟ್ಟ ಯಾವುದೇ ಸರ್ಕಾರಿ ವಲಯದಲ್ಲಿ ಸಿಗುವುದಿಲ್ಲವೆನ್ನುವ ಸಂಗತಿ ಜಗಜ್ಜಾಹೀರಾಗಿದೆಯಷ್ಟೆ. ಅಮೆರಿಕೆಯಂಥ ಸಂಪತ್ಸಮೃದ್ಧ ರಾಷ್ಟ್ರದಲ್ಲಿಯೂ ಖಾಸಗಿ ಜನ ಅಥವಾ ಸಂಸ್ಥೆಗಳು ನೀಡುವ ಶಿಕ್ಷಣವೇ ಸರ್ವೋತ್ತಮವಾದದ್ದೆಂಬುದು ಸರ್ವ ಸಾಧಾರಣ ಸಂಗತಿಯಾಗಿದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯ ಮತ್ತು ಟಫ್ಟ್ಸ್ ವೈದ್ಯ ಶಾಲೆಗಳನ್ನು ಕೇವಲ ನಿದರ್ಶನಾರ್ಥವಾಗಿ ಹೆಸರಿಸಬಹುದು. ಶಿಶು ಶಿಕ್ಷಣದಿಂದ ಒಡಿದು ಸ್ನಾತಕೋತ್ತರ ಶಿಕ್ಷಣದವರೆಗಿನ ಜವಾಬ್ದಾರಿಯಲ್ಲಿ ಬಹು ಭಾಗ ಆದೇಶದಲ್ಲಿ ಖಾಸಗಿ ವಲಯಕ್ಕೆ ಸೇರಿದ್ದೆಂಬುದನ್ನು ಈ

ಸಂದರ್ಭದಲ್ಲಿ ಮರೆಯಲಾಗದು. ಸರ್ಕಾರ ಆ ಶಿಕ್ಷಣ ಸಂಸ್ಥೆಗಳ ಮಟ್ಟದ ಬಗ್ಗೆ ಆಗಿಂದಾಗ್ಗೆ ಪರಿಶೀಲನೆ ನಡೆಸಿ, ತನ್ನ ವರದಿಯನ್ನು ಪ್ರಕಟಿಸಬಹುದೇ ಹೊರತು, ಅವುಗಳ ಮೇಲೆ ಬೇರಾವುದೇ ನಿಯಂತ್ರಣವನ್ನದು ಇರಿಸಿಕೊಂಡಿರುವುದಿಲ್ಲ. ಅವುಗಳ ಆಡಳಿತದಲ್ಲಿ ಅದು ತಲೆ ಹಾಕುವುದಿಲ್ಲ. ವಿದ್ಯಾರ್ಥಿಗಳ ಪ್ರವೇಶ ನೀತಿಯನ್ನು ನಿರ್ಧರಿಸುವವರು ಆಡಳಿತ ಮಂಡಲಿಯೆ ಹೊರತು, ಸರ್ಕಾರವೂ ಅಲ್ಲ, ನ್ಯಾಯಾಲಯವೂ ಅಲ್ಲ, ಶಾಸನ ಸಭೆಯೂ ಅಲ್ಲ. ಇಂಡಿಯಾ ದೇಶದಲ್ಲಂತೂ ಸರ್ಕಾರ ನ್ಯಾಯಾಲಯ ಶಾಸನ ಸಭೆಗಳೆಲ್ಲರೂ ಸೇರಿಕೊಂಡು, ಅನಾವಶ್ಯಕವಾಗಿ ಶಿಕ್ಷಣ ವಿಷಯಗಳಲ್ಲಿ ತಲೆ ಹಾಕಿ, ಆ ಕ್ಷೇತ್ರದಲ್ಲಿ ಗೊಂದಲವನ್ನುಂಟುಮಾಡಿವೆ.

ಜನರನ್ನು ತಲುಪಬೇಕಾದ ಸೌಲಭ್ಯಗಳಲ್ಲಿ ಶಿಕ್ಷಣದಷ್ಟೇ ಆರೋಗ್ಯವೂ ಮುಖ್ಯ. ಮೈಸೂರು ಬೆಂಗಳೂರುಗಳಿಗೆ ಆರೋಗ್ಯಾನುಕೂಲಗಳು ಸೀಮಿತವಾಗಬಾರದೆಂಬ ದೃಷ್ಟಿಯಿಂದ, ಅವು ಗ್ರಾಮಾಂತರದ ಜನರಿಗೆ ಲಭ್ಯವಾಗುವ ದಿಶೆಯಲ್ಲಿ ಪ್ರಯೋಗ ನಡೆಸುವುದು ಸೂಕ್ತವೆಂದು ತಿಳಿದು ಮಂಡ್ಯದಲ್ಲೊಂದು ವೈದ್ಯ ಕಾಲೇಜನ್ನು ಸ್ಥಾಪಿಸಲು ನಾನು ಪ್ರಯತ್ನ ನಡೆಸಿದೆ. ಆ ಕಾಲದಲ್ಲಿ ಕಾಲೇಜುಗಳಿಗೆ ಮಾನ್ಯತೆ ನೀಡುವ ಸರ್ವಾಧಿಕಾರ ವಿಶ್ವವಿದ್ಯಾನಿಲಯಗಳಿಗಿತ್ತು. ಸರ್ಕಾರಕ್ಕಿರಲೇ ಇಲ್ಲ. ಪರಿಣತ ಮಂಡಲಿಯ ಶಿಫಾರಸಿನ ಮೇರೆಗೆ ಅಕೆಡೆಮಿ ಕೌನ್ಸಿಲ್‌ನ ಅಂಗೀಕಾರವನ್ನು ಪಡೆಯಲಾಯಿತು. ಅದೇ ಸಮಯಕ್ಕೆ ಸರಿಯಾಗಿ ರಾಜ್ಯದ ಮಠವೊಂದು ತನಗೂ ಒಂದು ವೈದ್ಯ ಕಾಲೇಜು ಬೇಕೆಂದು ಅರ್ಜಿ ಸಲ್ಲಿಸಿ, ಸರ್ಕಾರದ ಮೂಲಕ ಒತ್ತಡ ತರಲು ಪ್ರಯತ್ನಿಸಿತು. 'ಹೇಗೂ ಒಂದು ಕಾಲೇಜಿಗೆ ಮಂಜೂರಾತಿ ನೀಡಲಾಗುತ್ತಿದೆ. ನಿಮ್ಮ ಅರ್ಜಿಯನ್ನು ಪರಿಣತ ಮಂಡಲಿಗೆ ಕಳಿಸಿ, ಅಗತ್ಯವಾದ ಪೂರ್ವಭಾವೀಕ್ರಮಗಳನ್ನು ಕೈಗೊಳ್ಳುತ್ತೇನೆ. ನಾಲ್ಕೈದು ತಿಂಗಳಲ್ಲಿ ನಿಮಗೂ ಕಾಲೇಜು ದೊರೆಯುವಂತೆ ವ್ಯವಸ್ಥೆಮಾಡುತ್ತೇನೆ. ಅಲ್ಲಿಯ ತನಕ ಸುಮ್ಮನಿರಿ. ಇಲ್ಲವಾದರೆ ಎರಡು ಕಡೆಗಳಿಗೂ ಕಾಲೇಜು ದೊರೆಯುವುದಿಲ್ಲ' ಎಂದು ಸಂಬಂಧ ಪಟ್ಟವರಿಗೆ ಹೇಳಿಕಳಿಸಿದೆ. ಆದರೂ ಅವರು ಸರ್ಕಾರದ ಬೆನ್ನು ಹತ್ತಿದರು.

ಆಗ ವಿದ್ಯಾಮಂತ್ರಿಯಾಗಿದ್ದ ಶಂಕರಗೌಡರು ಹೇಳಿಕಳಿಸಿ 'ಮಂಡ್ಯಕ್ಕೆ ಮೆಡಿಕಲ್ ಕಾಲೇಜು ಪ್ರಾರಂಭಿಸಲು ಸನ್ನಾಹ ಮಾಡಿದ್ದೀರಂತೆ. ಮಠವೊಂದು ಸರ್ಕಾರದ ಮೇಲೆ ಒತ್ತಡ ತಂದಿದೆ. ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಬೇರೆ ಜಿಲ್ಲೆಯವರೂ ಗಲಾಟೆ ಮಾಡುತ್ತಾರೆ. ಅದರಿಂದಾಗಿ ಹೊಸ ಮೆಡಿಕಲ್ ಕಾಲೇಜುಗಳೇ ಬೇಡವೆಂದು ಮುಖ್ಯಮಂತ್ರಿಗಳು ನಿರ್ಧಾರ ತೆಗೆದುಕೊಂಡಿದ್ದಾರೆ. ಇಷ್ಟರ ಮೇಲೆ ನೀವು ಪಟ ಮಾಡಿದರೆ, ಅವರು ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾರೆ. ನನ್ನ ಮಾತು ತೆಗೆಯಬೇಡಿ' ಎಂದರು. ಶಂಕರಗೌಡರಿಗೇ ಬೇಡವಾದ್ದು ನನಗೇಕೆಂದು ನಾನು ತೆಪ್ಪಗಾದೆ. ಆದರೆ ಮುಂದಾದದ್ದೇನು? ಮೈಸೂರು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಲಾ ಎರಡೆರಡು, ಬೆಂಗಳೂರಿನಲ್ಲಿ ಐದೊ, ಆರೊ ವೈದ್ಯ ಕಾಲೇಜುಗಳು ಪ್ರಾರಂಭವಾದುವು. ಆರೇಳು ಜಿಲ್ಲೆಗಳು ಆರೋಗ್ಯ ಸೌಲಭ್ಯಗಳಿಂದ ವಂಚಿತವಾಗಿವೆ. ಒಂದು ನೆಲೆಯಿಂದ ನನ್ನ

ಅಪ್ರಕಟಿತ ಯೋಜನೆ ಈಗಕಾರ್ಯಗತಗೊಂಡಂತಾಗಿದೆ. ಆಗಿನ ಸರ್ಕಾರಕ್ಕೆ ದೂರದೃಷ್ಟಿ ಇರಲಿಲ್ಲವೆಂಬುದು ಈಗಂತು ಸ್ಪಷ್ಟವಾಗಿದೆ. ಸರ್ಕಾರ ನನ್ನ ಮಾತು ಕೇಳಿದ್ದರೆ, ಎಲ್ಲ ಜಿಲ್ಲೆಗಳಿಗೂ ವೈದ್ಯ ಕಾಲೇಜಿನ ಸೌಲಭ್ಯ ದೊರೆಯುತ್ತಿತ್ತು.

ವೈದ್ಯ ಶಿಕ್ಷಣಕ್ಕೆ ಸಂಬಂಧಿಸಿದ ಮತ್ತೊಂದು ಆಲೋಚನೆಯನ್ನು ಇಲ್ಲಿಯೇ ಹೇಳಿ ಮುಗಿಸಿಬಿಡಬಹುದು. ಇಂಡಿಯಾದಲ್ಲಿ ವಿಲಾಯಿತಿ ಪದ್ಧತಿಯ ಜತೆಗೆ, ಸ್ಥಳೀಯ ಆಯುರ್ವೇದ ಸಿದ್ಧ ಪದ್ಧತಿಗಳೂ, ಯುನಾನಿ ಹೋಮಿಯೋಪಥಿ ಅಕುಪಂಕ್ಚರ ಪದ್ಧತಿಗಳೂ ಜಾರಿಯಲ್ಲಿವೆ. ಹೋಮಿಯೋಪಥಿಯಂತೂ ಗ್ರಾಮಾಂತರ ಪ್ರದೇಶಕ್ಕೂ ತನ್ನ ಪ್ರಭಾವವನ್ನು ಹರಿಸುತ್ತಿದೆ. ಅಂದ ಮೇಲೆ ನಾಡಿನ ಆರೋಗ್ಯ ರಕ್ಷಣೆಗೆ ಎಲ್ಲ ಪದ್ಧತಿಗಳ ಹರಹು ಅತ್ಯಗತ್ಯವೆಂಬುದನ್ನು ಸರ್ವರೂ ಒಪ್ಪಿಕೊಳ್ಳಬೇಕಾಗಿದೆ. ನಾನಾ ಕಾರಣಗಳಿಂದ ವಿಲಾಯಿತಿ ಪದ್ಧತಿಯೊಂದೇ ದೇಶದ ಅಗತ್ಯಗಳನ್ನು ಕೊರತೆಗಳನ್ನು ಪೂರೈಸಲಾರದೆಂಬ ವಾಸ್ತವಿಕ ಸಂಗತಿ ಸುಸ್ಪಷ್ಟವಾಗಿದೆ. ಸಾವಿರಾರು ವರ್ಷಗಳಿಂದ ಬಡವ ಬಲ್ಲಿದ, ನಾಗರಿಕ ಗ್ರಾಮಿಕ ಎಂಬ ಭೇದವಿಲ್ಲದೆ, ಈ ದೇಶದ ಆರೋಗ್ಯವನ್ನು ಕಾಪಾಡಿಕೊಂಡು ಬಂದಿರುವ, ಅಲೆಕ್ಸಾಂಡರ್‌ನಿಗೂ ಪ್ರಿಯವಾಗಿದ್ದ, ವಿಲಾಯಿತಿ ಯುನಾನಿ ಪದ್ಧತಿಗಳಿಗೂ ಆಧಾರಭೂತವಾಗಿರುವ, ಭೌತಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಸರ್ವರ ಮನಸ್ಸನ್ನು ಆಕ್ರಮಿಸಿಕೊಂಡಿರುವ ವಿಲಾಯಿತಿ ಪದ್ಧತಿಯ ನಡುವೆಯೂ ತನ್ನ ಯಶಸ್ಸನ್ನು ಅನಿವಾರ್ಯತೆಯನ್ನು ಉಳಿಸಿಕೊಂಡಿರುವ ದೇಶೀಯ ಪದ್ಧತಿಯನ್ನು ಸಾಕಷ್ಟು ಪ್ರೋತ್ಸಾಹಿಸಬೇಕು, ಅದಕ್ಕಂಟಿಕೊಂಡು ಬಂದಿರುವ ಅಳಲೆ ಕಷಾಯಿಯ ಕಳಂಕವನ್ನು ತೊಡೆದು, ಅದು ಬೇರೆ ಪದ್ಧತಿಗಳಿಗೆ ಹೆಗಲೆಣೆಯಾಗಿ ನಿಲ್ಲುವಂಥ ಆತ್ಮಗೌರವವನ್ನು ಸಂಪಾದಿಸಲು ಬೇಕಾದ ಅವಕಾಶವನ್ನು ಕಲ್ಪಿಸಬೇಕುಃ ಇದು ನನ್ನ ಬಹು ದಿನದ ಆಸೆ. ವಿಶ್ವವಿದ್ಯಾನಿಲಯದ ಕಕ್ಷೆಯೊಳಗೆ ಆ ಶಿಕ್ಷಣ ವ್ಯವಸ್ಥೆಯನ್ನು ಸೇರಿಸುವ ತನಕ ಆಯುರ್ವೇದಕ್ಕೆ ಸ್ಥಾನಮಾನಗಳೂ ಇಲ್ಲ, ಮೋಕ್ಷವೂ ಇಲ್ಲ ಎಂಬುದು ನನ್ನ ಅಭಿಮತ. ಗ್ರಾಮೀಣ ಅಧ್ಯಯನವೆಂಬ ವಿಭಾಗವನ್ನು ವಿಶ್ವವಿದ್ಯಾನಿಲಯದಲ್ಲಿ ತೆರೆದಾಗ, ಆಯುರ್ವೇದದ ಮೂಲ ತತ್ವಗಳನ್ನು ಕೊನೆಗೆ ಐಚ್ಛಿಕವಾಗಿಯಾದರೂ ಅದರಲ್ಲೇಕೆ ಸೇರಿಸಬಾರದೆಂಬ ಇರಾದೆ ನನಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ವಿಶ್ವವಿದ್ಯಾನಿಲಯದಲ್ಲಿ ಆಯುರ್ವೇದಕ್ಕೊಂದು ಫ್ಯಾಕಲ್ಟಿ ಇರಲಿಲ್ಲ. ಆ ವಿಷಯ ಆಕೆಡೆಮಿಕ್ ಕೌನ್ಸಿಲ್‌ನಲ್ಲಿ ಚರ್ಚೆಗೆ ಬಂದಾಗ, ಆಯುರ್ವೇದಕ್ಕೊಂದು ಪ್ರತ್ಯೇಕ ಫ್ಯಾಕಲ್ಟಿ ಬೇಡ, ಚಾಲ್ತಿಯಲ್ಲಿರುವ ಮೆಡಿಕಲ್ ಫ್ಯಾಕಲ್ಟಿಯನ್ನು ವಿಸ್ತರಿಸಿ, ಅದರೊಳಗೆ ಆಯುರ್ವೇದದ ತಜ್ಞರನ್ನು ಸೇರಿಸಿದರೆ ಸಾಕೆಂಬ ಸೂಚನೆಯನ್ನು ನಾನು ನೀಡಿದೆ. ಸಂಪ್ರದಾಯ ಶರಣರಿಗೆ ಶುಚಿ ಮನೋಭಾವದ ಸ್ವಪ್ರತಿಷ್ಠರಿಗೆ ವಿನೂತನ ಸೂಚನೆ ಹಿಡಿಸುವುದು ಕಷ್ಟ. ವಿಲಾಯಿತಿ ಪದ್ಧತಿಯ ತಜ್ಞರ ದೃಷ್ಟಿಯಲ್ಲಿ ಆಯುರ್ವೇದ ಮೈಲಿಗೆ; ಆದ್ದರಿಂದ ಅದು ಮೆಡಿಕಲ್ ಫ್ಯಾಕಲ್ಟಿಯಲ್ಲಿ ಸೇರ್ಪಡೆಗೊಳ್ಳಲು ಲಾಯಕ್ಕಾದದ್ದಲ್ಲವೆಂದು

ಅವರು ಹಟ ಹಿಡಿದರು. ನಾನು ಪಟ್ಟು ಹಿಡಿದು. ನನ್ನ ಅಧಿಕಾರದರ್ಪವನ್ನು ಬಳಸಿಕೊಂಡು ಇಚ್ಛಿತವನ್ನು ಗೆದ್ದುಕೊಂಡದ್ದಾಯಿತು.

ಆಯುರ್ವೇದದಲ್ಲಿ ಸ್ನಾತಕೋತ್ತರ ಇಲಾಖೆಗಳನ್ನು ತೆರೆದಾಗಲೂ ಇಂಥದೇ ಜಟಾಪಟಿ ನಡೆಯಿತು. ಫ್ಯಾಕಲ್ಟಿಯಲ್ಲಿ ವಿರೋಧದ ವಾಸನೆ ಕಂಡು ಬರಲಾಗಿ ಆ ವಿಷಯವನ್ನು ನೇರವಾಗಿ ಅಕೆಡೆಮಿಕ್ ಕೌನ್ಸಿಲ್‌ಗೆ ಕೊಂಡೊಯ್ಯಲಾಯಿತು. ಅಲ್ಲಿ ಸ್ನಾತಕೋತ್ತರ ತರಗತಿಗಳ ಪ್ರಾರಂಭಕ್ಕೆ ಅಂಗೀಕಾರ ಪಡೆಯಲಾಯಿತು.

ನನ್ನ ಮತ್ತೊಂದು ಸಲಹೆಯನ್ನು ಆಯುರ್ವೇದ ಮತ್ತು ವಿಲಾಯಿತಿಮದ್ದಿನವರ ಮುಂದಿಟ್ಟು, ಖಾಸಗಿಯಾಗಿ ಚರ್ಚಿಸಿ. ಅವರ ಮನವೊಲಿಸಿಕೊಳ್ಳಲು ಯತ್ನಿಸಿದೆ. ಅದೊಂದು ಕ್ರಾಂತ್ರಿಕಾರಕ ಸಲಹೆ. ಆಯುರ್ವೇದ ವಿದ್ಯಾರ್ಥಿಗಳು ಒಂದು ವರ್ಷ ಹೆಚ್ಚಾಗಿ ಓದಿ ವಿಲಾಯತಿ ಪದ್ಧತಿಯ ಮೂಲಭೂತ ತತ್ತ್ವಗಳಲ್ಲಿ ಪರಿಶ್ರಮ ಪಡೆಯಬೇಕು; ಮತ್ತು ವಿಲಾಯತಿ ಪದ್ಧತಿಯವರು ಒಂದು ವರ್ಷ ಆಯುರ್ವೇದದ ಮೂಲಭೂತ ತತ್ತ್ವಗಳನ್ನು ಅಧ್ಯಯನ ಮಾಡಬೇಕು. ಅಗತ್ಯವೆಂದು ಕಂಡು ಬಂದರೆ ಸ್ನಾತಕೋತ್ತರ ಡಿಪ್ಲೊಮಾ ತರಗತಿಯಲ್ಲಿ ಆ ವಿಷಯಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಬಹುದು. ಜತೆಗೆ ಸಂಶೋಧನಾಕ್ಷೇತ್ರದಲ್ಲಾದರೂ ಮಡಿ ಮೈಲಿಗೆಯ ಭಾವನೆಯನ್ನು ಬಿಡಬೇಕು- ಈ ಸೂಚನೆಗಳನ್ನು ನಾನಾ ಕಾರಣಗಳಿಂದಾಗಿ ಅಕೆಡೆಮಿಕ್ ಕೌನ್ಸಿಲ್ ಮುಂದೆ ತರಲಾಗಲಿಲ್ಲ.

ಕರ್ನಾಟಕ ಸರ್ಕಾರ ಹೈದರಾಬಾದಿನ ಡಾ. ಮೇಲ್ಕೋಟೆಯವರ ಅಧ್ಯಕ್ಷತೆಯಲ್ಲಿ ವೈದ್ಯ ಶಿಕ್ಷಣದ ಪುನರ್ವ್ಯವಸ್ಥೆಯ ಬಗ್ಗೆ ವರದಿ ತಯಾರಿಸುವ ಸಲುವಾಗಿ ಒಂದು ಸಮಿತಿಯನ್ನು ನೇಮಿಸಿತ್ತು. ಅದು ಏಕ ಸದಸ್ಯ ಸಮಿತಿಯೊ, ಬಹು ಸದಸ್ಯ ಸಮಿತಿಯೊ ನನಗೀಗ ಜ್ಞಾಪಕವಿಲ್ಲ. ಮೇಲ್ಕೋಟೆಯವರೊಮ್ಮೆ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಬಿಡಾರ ಹೂಡಿದ್ದರು. ಆ ದಿನ ನಾನೂ ಅಲ್ಲಿಯೇ ಉಳಿದಿದ್ದೆ. ಎಲ್ಲ ವೈದ್ಯ ಪದ್ಧತಿಗಳ ಬಗ್ಗೆ ಒಂದೇ ಚಾವಣಿಯಡಿಯಲ್ಲಿ ಸಂಶೋಧನೆ ನಡೆಯುವಂಥ ಶಿಖರೋನ್ನತ ವೈದ್ಯ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವಂತೆ ನೀವೇಕೆ ಸರ್ಕಾರಕ್ಕೆ ಸಲಹೆ ಕೊಡಬಾರದೆಂದು ನಾನವರಿಗೆ ಮಾತುಕತೆಯ ಮಧ್ಯೆ ಸಲಹೆ ನೀಡಿದ್ದೆ. ಆ ಪದ್ಧತಿಯ ನಡುವೆಯೇ ಅಂತರಶಿಸ್ತೀಯ ತೌಲನಿಕ ಸಂಶೋಧನಾಧ್ಯಯನಗಳನ್ನು ವ್ಯವಸ್ಥೆಗೊಳಿಸಬಹುದೆಂದೂ ಸೂಚಿಸಿದ್ದೆ. ನನ್ನ ಸಲಹೆ ಅತ್ಯಂತ ಉಪಯುಕ್ತವಾದದ್ದೆಂದು ಅವರೇ ಹೇಳಿದ್ದರು. ಆ ಸಲಹೆಯನ್ನು ತಮ್ಮ ವರದಿಯಲ್ಲಿ ಸೇರಿಸಿದರೆ, ಇಲ್ಲವೆ ಎಂಬ ವಿಷಯವಾಗಲಿ, ಆ ವರದಿಯ ಹಣೆ ಬರಹವೇನಾಯಿತೆಂಬ ಸಂಗತಿಯಾಗಲಿ ನನಗೆ ನಂತರ ತಿಳಿಯಲಿಲ್ಲ.

'ಗ್ರಾಮೀಣ ಅಧ್ಯಯನ'ವೆಂಬ ಇಲಾಖೆಯನ್ನು ತೆರೆಯಬೇಕು. ಅದನ್ನು ಸ್ನಾತಕೋತ್ತರ ಅಧ್ಯಯನದವರೆಗೆ ಒಯ್ಯಬೇಕು ಎಂಬ ಆಲೋಚನೆ ಸಹ ನನ್ನ ಮನವನ್ನಾಕ್ರಮಿಸಿಕೊಂಡಿತ್ತು. ಆ ವಿಷಯದಲ್ಲಿ ತೇರ್ಗಡೆ ಹೊಂದಿದವರಿಗೆ ಸರ್ಕಾರದ ನೇಮಕಾತಿಗಳಲ್ಲಿ, ಅದರಲ್ಲಿಯೂ ರೆವಿನ್ಯೂ ಇಲಾಖೆಯಲ್ಲಿ ಆದ್ಯತೆ ದೊರಕಬೇಕೆಂಬುದು

ನನ್ನ ಅಭಿಪ್ರಾಯ. ನಾನಿದ್ದಾಗಲೇ ಡಿಗ್ರಿ ತರಗತಿಗಳಿಗೆ ಅದನ್ನು ಐಚ್ಛಿಕ ವಿಭಾಗದಲ್ಲಿ ಸೇರಿಸಿದ್ದೆ. ಅದು ಎಲ್ಲಿಯತನಕ, ಎಷ್ಟರ ಮಟ್ಟಿಗೆ ಬೆಳಿದಿದೆಯೋ ಗೊತ್ತಿಲ್ಲ.

ಮತ್ತೊಂದು ಕ್ರಾಂತಿಕಾರಕ ಘಟನೆ ಎಂದರೆ ಪಿಎಚ್‌ಡಿ ನಿಬಂಧವನ್ನು ಕನ್ನಡದಲ್ಲಿ ಬರೆಯಬಹುದೆಂದು ಆಜ್ಞೆ ಮಾಡಿದ್ದು. ಕಾನೂನು ಪರೀಕ್ಷೆಗೂ ಕನ್ನಡ ಮಾಧ್ಯಮವನ್ನು ವಿಸ್ತರಿಸಲಾಗಿ ದಾವಣಗೆರೆಯ ವಿದ್ಯಾರ್ಥಿ ಮಿತ್ರರೊಬ್ಬರು ಕನ್ನಡದಲ್ಲಿ ಉತ್ತರ ಬರೆದರು. ಅವರ ಹೆಸರೀಗ ಮರೆತು ಹೋಗಿದೆ. ನಿವೃತ್ತಾನಂತರ ದಾವಣಗೆರೆಗೆ ಹೋಗಿದ್ದ ಸಮಯದಲ್ಲವರು ನನ್ನನ್ನು ಭೇಟಿಮಾಡಿ 'ನಿಮ್ಮಿಂದಾಗಿ ನಾನು ಕನ್ನಡದಲ್ಲಿ ಉತ್ತರ ಬರೆದೆ. ಅದೇ ನೆಪವಾಗಿ ನನ್ನ ಪತ್ರಿಕೆಗಳಿಗೆ ಬೆಲೆ ಕಟ್ಟಲಿಲ್ಲ. ನಾನು ಕೋರ್ಟು ಮೆಟ್ಟಲು ಹತ್ತಬೇಕಾಯಿತು' ಎಂದು ಸಂಕಟ ಪಟ್ಟುಕೊಂಡರು. 'ಕೋರ್ಟಿನಲ್ಲೇನಾದರೂ ನ್ಯಾಯ ಬುದ್ಧಿ ಇದ್ದರೆ ನಿಮಗೆ ಗೆಲುವಾಗುತ್ತದೆ' ಎಂದವರನ್ನು ಸಮಾಧಾನಪಡಿಸಿದೆ. ಅವರು ಗೆದ್ದರೆಂದು ನನಗೆ ನಂತರ ತಿಳಿಯಿತು.

ಪಂಡಿತರಿಗಾಗುತ್ತಿದ್ದ ಅನ್ಯಾಯ ಜಗತ್ತಿಗೆ ಗೊತ್ತಿದ್ದದ್ದೇ. ಪಂಡಿತ ಪರೀಕ್ಷೆಯನ್ನು ಡಿಗ್ರಿ ಪರೀಕ್ಷೆಗೆ ಸಮಾನವೆಂದು ಘೋಷಿಸುವ ಸಲುವಾಗಿ, ಅವರಿಗೆ ಬಿಎಡ್ ತರಗತಿಗೆ ಪ್ರವೇಶಾವಕಾಶ ಕಲ್ಪಿಸಿದ್ದಲ್ಲದೆ, ಬಿಎಡ್ ಪಾಸಾದವರು ಕನ್ನಡ ಎಂ. ಎ. ತರಗತಿಗೂ ಸೇರಬಹುದೆಂದು ಅನುಮತಿ ನೀಡಿದೆ. ಪಂಡಿತರು ಸಹ ಕೆ. ಎ. ಎಸ್. ಮೊದಲಾದ ಪರೀಕ್ಷೆಗಳಿಗೆ ಕೂರಲಿ, ತಹಸಿಲ್‌ದಾರ್ ಪೋಲಿಸ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಸ್ಪರ್ಧಿಸಲೆಂಬುದೇ ನನ್ನ ಈ ಎಲ್ಲ ಪ್ರಯತ್ನಗಳಿಗೆ ಮೂಲ ಕಾರಣ. ಇತ್ತೀಚೆಗೆ ಸರ್ಕಾರ ಪಂಡಿತ ಪರೀಕ್ಷೆಯನ್ನೇ ರದ್ದು ಮಾಡುವ ಮಸಲತ್ತು ಮಾಡಿದೆಯೆಂಬ ಸುದ್ದಿ ಹರಡಿದೆ. ಇದು ನಿಜವಾದ ಪಕ್ಷದಲ್ಲಿ ಸರ್ಕಾರ ಕನ್ನಡ ವಿರೋಧಿ ಎಂದೇ ಹೇಳಬೇಕಾಗುತ್ತದೆ.

ಪಂಡಿತ ತರಗತಿ ಪ್ರಾರಂಭವಾದಾಗ ಅದು ನಾಡಿನ ಒಂದು ಪ್ರಮುಖ ಅಗತ್ಯವನ್ನು ಪೂರೈಸಿತ್ತು. ಅದು ಕನ್ನಡದ ಅಧ್ಯಯನಕ್ಕೊಂದು ಭದ್ರ ತಳಹದಿಯನ್ನು ನಿರ್ಮಿಸಿತ್ತು. ಸುಮಾರು ಎಪ್ಪತ್ತೈದು ವರ್ಷಗಳ ಕಾಲ ಪ್ರೌಢಶಾಲಾ ಹಂತದ ಕನ್ನಡದ ಅಧ್ಯಯನ - ಬೋಧನೆಗಳಿಗೆ ಪಂಡಿತರೆ ಆಧಾರಪ್ರಾಯರಾಗಿದ್ದರು. ಕಾಲಾನಂತರದಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ವ್ಯಾಸಂಗ ಮಾಡಿದ ಪದವೀಧರರ ಸವಾಲನ್ನವರು ಎದುರಿಸಬೇಕಾಯಿತು. ಅವರೆಷ್ಟೇ ಘನಪಂಡಿತರಾದರೂ, ಪಂಡಿತರಾಗಿಯೇ ಸೇವೆಯಿಂದ ನಿವೃತ್ತರಾಗುತ್ತಿದ್ದರು. ಮೂರು ವಿಷಯಗಳನ್ನೋದಿದ ಪ್ರಯುಕ್ತ ಪದವೀಧರರ ಜ್ಞಾನಕೋಶಕ್ಕೆ ವೈಶಾಲ್ಯಲಭಿಸುತ್ತಿತ್ತು, ನಿಜ. ಆದರೆ ಸಂಸ್ಕೃತದೊಡನೆ ಕನ್ನಡವನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದುದರಿಂದ ಪಂಡಿತರ ಜ್ಞಾನಕ್ಕೆ ಗಂಭೀರತೆ ಗಾಂಭೀರ್ಯಗಳೊದಗುತ್ತಿದ್ದುವು. ಎರಡೂ ಕಾಲುವೆಗಳ ಜ್ಞಾನ ಕನ್ನಡದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅತ್ಯಾವಶ್ಯಕ. ಕನ್ನಡ ಬೋಧಕರಿಗೆ ಸಂಸ್ಕೃತ ಇಂಗ್ಲೀಷ್ ಎರಡೂ ಅನಿವಾರ್ಯ. ಪದವೀಧರರು ಇಂಗ್ಲೀಷ್ ಕಲಿಯುತ್ತಾರೆ. ಅವರಿಗೆ ಸಂಸ್ಕೃತದ ಸೋಂಕಿಲ್ಲ. ಸಂಸ್ಕೃತದ ಸೋಂಕಿಲ್ಲದವನು ಖಂಡಿತವಾಗಿ ಕನ್ನಡದಲ್ಲಿ ಖಚಿತ ಜ್ಞಾನ

ಸಂಪಾದಿಸಲಾರನು. ಇಂಗ್ಲೀಷ್ ಕಲಿಯದ ಪಂಡಿತನಿಗೆ ಆಧುನಿಕ ಜ್ಞಾನದ ಸಂಪರ್ಕವಿರುವುದಿಲ್ಲ. ಈ ಕಾರಣಕ್ಕಾಗಿ ಪಂಡಿತ ಪರೀಕ್ಷೆಯ ಪಠ್ಯಕ್ರಮದಲ್ಲಿ ಒಂದು ತೌಲನಿಕ ಸಾಹಿತ್ಯ ಪತ್ರಿಕೆಯನ್ನೂ, ಜತೆಗೆ ಎರಡಾದರೂ ಇಂಗ್ಲೀಷ್ ಭಾಷೆಯ ಪತ್ರಿಕೆಗಳನ್ನೂ ಅಳವಡಿಸಿ, ಪಂಡಿತರನ್ನು ಆಧುನೀಕರಣಗೊಳಿಸಬೇಕೆಂಬುದು ನನ್ನ ಉದ್ದೇಶವಾಗಿತ್ತು.

ಈ ಉದ್ದೇಶದಿಂದ - ಹಾಗೂ ಪಂಡಿತರ ಸ್ಥಾನಮಾನಗಳನ್ನು ಹೆಚ್ಚಿಸುವ ಅಭಿಲಾಷೆಯಿಂದ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ಮಂಚಯ್ಯನವರನ್ನೂ ಎಚ್. ಎನ್. ನಂಜೇಗೌಡ ಮೊದಲಾದ ಪಂಡಿತರನ್ನೂ ಸೇರಿಸಿಕೊಂಡು 'ಕನ್ನಡ ಅಧ್ಯಾಪಕ ಪರಿಷತ್ತ'ನ್ನು ಸ್ಥಾಪಿಸಿದೆ. ಈ ಸ್ನೇಹಿತರು ತ್ರಿಕರಣ ಪೂರ್ವಕವಾಗಿ ನನ್ನೊಡನೆ ಶ್ರಮಿಸಿದರು. ಬಿ. ಎಡ್. ಪದವಿಯಲ್ಲದೆ ಪಂಡಿತರನ್ನು ಪದವೀಧರರಿಗೆಣೆಯಾಗಿ ಗ್ರಹಿಸಲಾಗದೆಂಬ ನಿಯಮವಿದ್ದದ್ದರಿಂದ, ಅವರಿಗೆ ಬಿ ಎಡ್ ತರಗತಿಗೆ ಪ್ರವೇಶಾವಕಾಶವೊದಗಿಸುವ ಜವಾಬ್ದಾರಿಯನ್ನು ನಾನು ವಹಿಸಿಕೊಂಡೆ. ಪಂಡಿತ ಹುದ್ದೆಗೆ ಮಾತ್ರವಲ್ಲದೆ, ರೆವಿನ್ಯೂ ಪೋಲಿಸ್ ಮೊದಲಾದ ಇಲಾಖೆಗಳಿಗೂ ಅವರು ಅರ್ಹರೆಂದು ಗಣಿಸುವ ಸಲುವಾಗಿ ಪಂಡಿತ ಪರೀಕ್ಷೆ ಪದವಿ ಪರೀಕ್ಷೆಗೆ ಸಮನೆಂದು ಸ್ಥಾಪಿಸಲಾಯಿತು. ಕನ್ನಡ ಬೋಧನ ಮಾಧ್ಯಮವಾಗದೆ ಪಂಡಿತರು ಬಿ. ಎಡ್ ಪದವಿ ತರಗತಿಗೆ ಸೇರುವಂತಿರಲಿಲ್ಲ. ಆವಾಗಿನ ಡೀನರೂ ಪ್ರಾಧ್ಯಾಪಕರೂ ಸಂಚು ಹೂಡಿ ಕನ್ನಡ ಮಾಧ್ಯಮ ಬರದ ಹಾಗೆ ತಾವು ಕಲಿತಿದ್ದ ಕುಟಿಲ ವಿದ್ಯೆಯನ್ನೆಲ್ಲ ಪ್ರದರ್ಶಿಸಿದರು. ಆಗ ನಾನೇ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ನಿರ್ಣಯವನ್ನು ಮಂಡಿಸಿ, ವಾದಿಸಿ, ಜೋರುಮಾಡಿ ಒಪ್ಪಿಗೆ ಪಡೆಯಬೇಕಾಯಿತು. ಜತೆಗೆ ಪಂಡಿತರು ಎಂ. ಎ.ತರಗತಿಗಳಿಗೆ ಸೇರುವ ಅವಕಾಶವನ್ನು ಸಹ ಕಲ್ಪಿಸಲಾಯಿತು.

ಅನೇಕ ಮಂದಿ ಪಂಡಿತರಿಗೆ ಈ ವ್ಯವಸ್ಥೆಯಿಂದ ತುಂಬ ಅನುಕೂಲ ವಾಯಿತು.'ಶಾಲುಪಂಡಿತ'ರೆಂದು ಅವರಿಗಂಟಿಕೊಂಡಿದ್ದ ಕಳಂಕ ನಿವಾರಣೆಯಾಯಿತು. ಆದರೆ ನಾನು ಸೂಚಿಸಿದಂತೆ ಪಠ್ಯಕ್ರಮ ಬದಲಾವಣೆಯಾದಂತೆ ಕಾಣುವುದಿಲ್ಲ. ಅಷ್ಟು ಮಾತ್ರವಲ್ಲ, ದುರ್ದೈವದಿಂದ ಪಂಡಿತ ಪರೀಕ್ಷೆಯನ್ನು ರದ್ದು ಗೊಳಿಸುವ ಸನ್ನಾಹ ನಡೆದಿದೆ. ಇದರಿಂದಾಗಿ ಕನ್ನಡದ ಒಂದಂಗ ಭಗ್ನವಾಯಿತೆಂದೇ ನನ್ನ ಲೆಕ್ಕ. ನಾನು ಕಟ್ಟಲು ಬಂದಿದ್ದೇನೆಯೇ ಹೊರತು ಮುರಿಯಲಲ್ಲ ಎಂದು ಪ್ರವಾದಿಯೊಬ್ಬ ಹೇಳಿದ್ದ. ಇಯಾಸ್ ಅಧಿಕಾರಿಗಳು ಮತ್ತು ಅವರನ್ನೇ ನಂಬಿಕೊಂಡಿರುವ ರಾಜಕೀಯ ನಾಯಕರು ಹೇಳುತ್ತಾರೆ: 'ನಾವು ಮುರಿಯಲು ಬಂದಿದ್ದೇವೆಯೇ ಹೊರತು ಕಟ್ಟಲು ಬಂದಿಲ್ಲ' ಎಂದು. ನಾಲಗೆಯಲ್ಲಿ ಹುಣ್ಣಾದರೆ ಅದಕ್ಕೆ ತಕ್ಕ ಮದ್ದು ಮಾಡಬೇಕೇ ಹೊರತು ಅದನ್ನೇ ಕಿತ್ತು ಹಾಕುವುದು ಬುದ್ಧಿವಂತ ವೈದ್ಯನ ಲಕ್ಷಣವಲ್ಲ.

'ಪಂಡಿತ ಶಿಕ್ಷಣಕ್ಕೆ ಅರ್ಧಚಂದ್ರ ಎಂಬ ಹೆಸರಿನಲ್ಲಿ ಅನೇಕ ಪತ್ರಿಕೆಗಳಿಗೆ ಒಂದು ಲೇಖನ ಬರೆದಿದ್ದೆ, 1993ರ ಸೆಪ್ಟೆಂಬರ್ ತಿಂಗಳ 10ರಂದು (ಕನ್ನಡ ಪ್ರಭ) ಅದರ ಒಂದು ಕಂಡಿಕೆಯ ಕೆಲವು ವಾಕ್ಯಗಳನ್ನು ಮಾತ್ರ ಇಲ್ಲಿ ಉದ್ಧರಿಸುತ್ತೇನೆ. 'ಭಾಷೆ ಸಾಹಿತ್ಯ

ಸಂಸ್ಕೃತಿಗಳ ವಿಷಯದಲ್ಲಿ ಅಧಿಕಾರಿಗಳಿಗೆ ಪ್ರವೇಶವೂ ಇಲ್ಲ, ಸಹಾನುಭೂತಿಯೂ ಇಲ್ಲ. ಡೆಪ್ಯೂಟಾದ ವಿದ್ಯಾರ್ಥಿಗಳಿಗೆ ಭತ್ಯ ನೀಡುವ ವಿಷಯದಲ್ಲಿ ತಕರಾರು ಹುಟ್ಟಿದ್ದೇ ಕಾರಣವಾಗಿ ಅವರ ಮೇಲೆ ಕತ್ತಿ ಬೀಸಿದ್ದು ಅಕ್ಷಮ್ಯ ಅಪರಾಧ. ಇದಲ್ಲದೆ ಬೇರೆ ಕಾರಣವಿದ್ದರೂ, ಅದನ್ನು ಸಮಾಧಿಗೊಯ್ದು ತಿಥಿ ಮಾಡುವ ಮುನ್ನ ತಜ್ಞರೊಡನೆ ಸಮಾಲೋಚನೆ ನಡೆಸಬಹುದಿತ್ತು. ಅದರ ನಿರ್ನಾಮದಿಂದ ಉಳಿಯಬಹುದಾದ ನಾಲ್ಕೈದು ಲಕ್ಷ ಹಣದಿಂದ ಸರ್ಕಾರದ ಬರ ತಪ್ಪುತ್ತದೆಯೆ? ಕನ್ನಡ ವಿದ್ವತ್ತಿನ ದೃಷ್ಟಿಯಿಂದ ಆ ವ್ಯವಸ್ಥೆಗೆ ಹತ್ತು ಲಕ್ಷ ಹೆಚ್ಚಾಗಿ ಖರ್ಚುಮಾಡಿದರೂ ಉಚಿತವಾಗುತ್ತಿತ್ತು'. ಈ ಪತ್ರ ಸರ್ಕಾರದ, ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ಭಾಷಾ ಪ್ರಾಧಿಕಾರದ ಗಮನಕ್ಕೆ ಬಂತೋ ಏನೋ ಕಾಣೆ. ಬಂದರೂ ಇದೊಂದು ಯಃಕಶ್ಚಿತ್ ವಿಷಯವೆಂದು ಕೈಬಿಟ್ಟಿರಬೇಕು. ನನ್ನ ದೃಷ್ಟಿಯಲ್ಲಿ ಯಾವುದೂ ಯಃಕಶ್ಚಿತ್ ವಿಷಯವಲ್ಲ. ಆದರೆ ಪಂಡಿತ ಪರೀಕ್ಷೆಯ ರದ್ದಿಯಾತಿಯಿಂದ ಕನ್ನಡದ ವಿದ್ವತ್ತಿನ ಮೇಲೆ ಆಘಾತವುಂಟಾಗಬಹುದೆಂಬ ಸಂದೇಹ ನನಗಿದೆ. ಕನ್ನಡ ಚಳುವಳಿ ಅನೇಕ ನೆಲೆಗಳಿಂದ ನಡೆಯಬೇಕೆನ್ನುವುದಕ್ಕೆ ಇದೂ ಒಂದು ನಿದರ್ಶನ.

ಪ್ರೌಢಶಾಲಾ ಹಂತದವರೆಗಿನ ಶಿಕ್ಷಣ ಉಚಿತವಾಗಬೇಕು; ಕಡ್ಡಾಯವಾಗಬೇಕು; ಅದರ ಹೊರೆಯನ್ನು ಸರ್ಕಾರ ಹೊರಬೇಕು. ಉನ್ನತಶಿಕ್ಷಣ ಸಮಾಜದ ಹೊಣೆಗಾರಿಕೆಯಾಗಬೇಕು. ಹೀಗೆಂದು ಹೇಳಿದವರು ರಾಷ್ಟ್ರಪಿತ ಮಹಾತ್ಮಗಾಂಧಿಯವರು. ಗೋಡ್ಸೆ ಹೋದರೂ, ಅವನ ಚೇತನ ಅನೇಕ ನಾಯಕರ ಮನಸ್ಸನ್ನು ಹೊಕ್ಕು ಗಾಂಧಿ ತತ್ತ್ವಗಳಿಗೆ ಕತ್ತರಿ ಹಾಕುತ್ತಿದೆ. ಇಂಡಿಯಾ ದೇಶದ ಶಿಕ್ಷಣ ಪದ್ಧತಿ ಎಂದೋ ಹಳಿತಪ್ಪಿತೆಂಬುದನ್ನು ಮರೆಯುವಂತಿಲ್ಲ. ಗಾಂಧೀಜಿಯ ಸಲಹೆಯನ್ನು ಜಾರಿಗೊಳಿಸಿದ್ದರೆ ಶಿಕ್ಷಣಕ್ಕೆ ಮಾಡುತ್ತಿರುವ ದುಂದು ವೆಚ್ಚವನ್ನು ಕಡಿತಗೊಳಿಸಿ, ಉಳಿದ ಹಣವನ್ನು ನೀರಾವರಿ ವಿದ್ಯುತ್ ಯೋಜನೆಗಳಿಗೆ ಖರ್ಚುಮಾಡಬಹುದಿತ್ತು. ಪ್ರೌಢ ಶಿಕ್ಷಣದ ಜತೆಗೆ ವಯಸ್ಕರ ಶಿಕ್ಷಣದ ಕಡೆಗೂ ಅದು ಗಮನ ಹರಿಸಬಹುದಿತ್ತು. ಸ್ವಯಂಸೇವಾ ಸಂಸ್ಥೆಗಳ ಮೂಲಕ ವಯಸ್ಕರ ಶಿಕ್ಷಣವನ್ನು ಯಶಸ್ವಿಯಾಗಿ ನೆರವೇರಿಸಬಹುದಿತ್ತು. ಲೋಕಖ್ಯಾತಿಯನ್ನು ಗಳಿಸಿದ್ದ ವಯಸ್ಕರ ಶಿಕ್ಷಣ ಸಮಿತಿಯನ್ನು ಕಡೆಗಣಿಸಿ, ಸರ್ಕಾರ ಅದಕ್ಕೊಂದು ಇಲಾಖೆಯನ್ನು ಸೃಷ್ಟಿಸಿದ ನಂತರ ಆ ಶಿಕ್ಷಣ ಕುಂಠಿತಗೊಂಡಿದೆ.

ಮುಖ್ಯವಾಗಿ ನಾನು ಹೇಳಬೇಕೆಂದಿರುವುದು, ವಯಸ್ಕರ ಶಿಕ್ಷಣ ಸಮಿತಿ ಪ್ರಾರಂಭವಾದಾಗ ರಾತ್ರಿ ಶಾಲೆಯ ಉಪಾಧ್ಯಾಯನಾಗಿದ್ದು, ಮುಂದೆ ಅದು ಕೈಗೊಂಡ ನಾನಾ ಯೋಜನೆಗಳಲ್ಲಿ ನಾನು ತೊಡಗಿಸಿಕೊಂಡಿದ್ದೆ. ವಿದ್ಯಾಪೀಠಗಳ ವ್ಯವಸ್ಥೆಯಲ್ಲಿ, ಅವುಗಳಿಗೆ ಪಠ್ಯಕ್ರಮ ರೂಪಿಸುವಲ್ಲಿ ನಾನು ಸಂಪೂರ್ಣವಾಗಿ ಸಹಕಾರ ನೀಡಿದ್ದೆ. 'ವಿದ್ಯಾಪೀಠಗಳು' ಎಂಬ ಪುಸ್ತಕವನ್ನು ಪ್ರಕಟಿಸಿದ್ದೆ. ಸ್ಥಳೀಯ ಸಂಸ್ಥೆಗಳ ಅಥವಾ ಪಂಚಾಯತ್ ರಾಜ್ ಪರಿಧಿಯಲ್ಲಿ ಬರುವ ಜನತಾ ಪ್ರತಿನಿಧಿಗಳಿಗೆ ಮತ್ತು ನೌಕರರಿಗೆ ಅವು ತರಬೇತಿ ಕೇಂದ್ರಗಳಾಗಬೇಕೆಂಬುದು ನನ್ನ ನಿರೀಕ್ಷೆಯಾಗಿತ್ತು. ವಯಸ್ಕರ ಶಿಕ್ಷಣ ಸಮಿತಿ

ಜನತಾ ಅಥವಾ ಜೀವನ ಶಿಕ್ಷಣ ವಿಶ್ವವಿದ್ಯಾನಿಲಯವಾಗುವ ಎಲ್ಲ ಅರ್ಹತೆಯನ್ನು ಪಡೆದಿತ್ತು. ದುರದೃಷ್ಟವಶಾತ್ ನೌಕರ ಷಾಹಿಯ ತುಳಿತಕ್ಕೆ ಸಿಕ್ಕಿ ಆ ಸಂಸ್ಥೆ ಹಿಂದಿನ ವೈಭವವನ್ನು ಕಳೆದುಕೊಂಡು, ನೆಲ ಕಚ್ಚಿದೆ.

ಇಯಾಸ್ ಅಧಿಕಾರಿಗಳ ಕೈಗೆ ಸಿಕ್ಕಿದ ಯಾವ ಉತ್ತಮ ವ್ಯವಸ್ಥೆಯಾದರೂ, ಕಟುಕನ ಕೈಗೆ ಸಿಕ್ಕಿದ ಕುರಿಯಂತಾಗುತ್ತದೆಂಬುದಕ್ಕೆ ಪುಸ್ತಕ ಪ್ರಪಂಚವನ್ನೇ ಉದಾಹರಿಸಬಹುದು. ಖಾಸಗಿ ಅಧ್ಯಕ್ಷರಿಲ್ಲದಾಗ ಸರ್ಕಾರ ವಯಸ್ಕರ ಶಿಕ್ಷಣ ಸಮಿತಿಯನ್ನು ಇಯಾಸ್ ಅಧಿಕಾರಿಗಳ ವಶಕ್ಕೊಪ್ಪಿಸುತ್ತದೆ. ಅವರಿಗೆ ಶಿಕ್ಷಣದ ಬಗ್ಗೆ ತಜ್ಞತೆಯೂ ಇಲ್ಲ, ಆಸಕ್ತಿಯೂ ಇಲ್ಲ, ಕಚೇರಿಯ ಕಡೆ ತಿರುಗಿ ನೋಡುವುದೂ ಇಲ್ಲ; ತಜ್ಞರೊಡನೆ ಸಮಾಲೋಚನೆ ನಡೆಸುವ ವಿನಯವೂ ಇಲ್ಲ ಆ ಸರ್ವಜ್ಞರಿಗೆ. ನಷ್ಟದಲ್ಲಿ ನಡೆಯುತ್ತದೆಂದು ಅಧಿಕಾರಿಣಿಯೊಬ್ಬರು, ನಾನೆಷ್ಟು ವಿನಂತಿಸಿಕೊಂಡರೂ ಕೇಳದೆ ಅದನ್ನು ನಿಲ್ಲಿಸಿಬಿಟ್ಟರು. ಶ್ರೀ ಪ್ರಭಾಕರ ರಾಣೆಯವರು ಮಂತ್ರಿಯಾದಾಗ, ಶ್ರೀ ಕೆ. ಶಿವರಾಮು ಪ್ರಧಾನ ಕಾರ್ಯದರ್ಶಿಗಳಾದಾಗ ಆ ಪ್ರತಿಷ್ಠಿತ ಪತ್ರಿಕೆಯ ಪುನರುಜ್ಜೀವನದ ಬಗ್ಗೆ ಮನವಿ ಮಾಡಿಕೊಂಡೆ. ಕುಲಪತಿ ಎನ್. ಎಸ್. ಸುಬ್ಬರಾಯರು ಪ್ರಬುದ್ಧ ಕರ್ನಾಟಕದ ಬಗ್ಗೆ ತಳೆದಿದ್ದ ನಿಲುವನ್ನು ವಿವರಿಸಿದೆ. ಹಿಂದಿನ ಅಧಿಕಾರಿಣಿಗೂ ಪ್ರಬುದ್ಧ ಕರ್ನಾಟಕದ ಉದಾಹರಣೆಯನ್ನು ನಿರವಿಸಿದ್ದೆ. ಆ ಅಧಿಕಾರಿಣಿ ತಮಿಳಿಯಾದ್ದರಿಂದ, ಆಕೆಗೆ ಕನ್ನಡ ನಾಡು ನುಡಿಗಳಲ್ಲಿ ಆಸಕ್ತಿಯಿಲ್ಲದ್ದರಿಂದ, ಸಂಬಳಕ್ಕಾಗಿ ಗುಮಾಸ್ತೆಯಂತೆ ಕೆಲಸ ಮಾಡುತ್ತಿದ್ದುದರಿಂದ ನಾನು ಹೇಳಿದ ಕತೆ ಅವರ ಕಿವಿಗೂ ಹೋಗಲಿಲ್ಲ[1]. ರಾಣೆ ಮತ್ತು ಶಿವರಾಮು ಅವರು ಅದಕ್ಕೆ ಜೀವನದಾನ ಮಾಡಿದರು. ಸೃಜನಶೀಲರಲ್ಲದ ಅಧಿಕಾರಿಗಳಿಂದ ದೇಶಕ್ಕೆ ಅಪಾಯವೇ ಹೊರತು ಒಳಿತಾಗಲಾರದು.

ರಾಣೆಯವರು ಮೈಸೂರಿಗೆ ಬಂದಾಗ ನನ್ನನ್ನು ಕರೆಸಿಕೊಂಡು ವಯಸ್ಕರ ಶಿಕ್ಷಣ ಸಮಿತಿ ಬಗ್ಗೆ ತಾಳ್ಮೆಯಿಂದ, ಆಸಕ್ತಿಯಿಂದ ಚರ್ಚೆ ನಡೆಸಿದರು. ವಿದ್ಯಾಪೀಠಗಳು ಜನತಾ ವಿದ್ಯಾಲಯಗಳಾಗುವಂತೆ, ನಿರಕ್ಷರತಾ ನಿವಾರಣಾ ಯೋಜನೆಗಳು ಸಮಿತಿಯ ಮೂಲಕ ಕಾರ್ಯಗತಗೊಳ್ಳುವಂತೆ, ವಯಸ್ಕರ ಶಿಕ್ಷಣಕ್ಕೆ ಸಂಬಂಧಪಟ್ಟ ಸಾಹಿತ್ಯ ನಿರ್ಮಾಣದ ಹೊಣೆಗಾರಿಕೆಯನ್ನು ಸಮಿತಿಗೊಪ್ಪಿಸುವಂತೆ, ಸಂಪನ್ಮೂಲ ಕೇಂದ್ರ ಸಮಿತಿಯಲ್ಲಿ ವಿಲೀನಗೊಂಡು ವಿಶೇಷ ಸಂಶೋಧನೆಗೆ ಅವಕಾಶವಾಗುವ ರೀತಿಯಲ್ಲಿ ಏರ್ಪಾಡು ಮಾಡುವಂತೆ ನಾನವರನ್ನು ಕೇಳಿಕೊಂಡೆ. 'ನಾನು ಏಕಸದಸ್ಯ ಸಮಿತಿಯನ್ನು ನೇಮಿಸಲು ನಿರ್ಧರಿಸಿದ್ದೇನೆ. ತಾವು ಆ ಸಮಿತಿಯ ಸದಸ್ಯರಾಗಿದ್ದುಕೊಂಡು ವಯಸ್ಕರ ಶಿಕ್ಷಣ ಸಮಿತಿ ಪರಿಣಾಮಕಾರಿಯಾಗಿ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯವಾಗುವಂತೆ ನೀವೊಂದು ವರದಿ ಕೊಡಿ'ಎಂದವರು ಕೇಳಿಕೊಂಡರು. ಅಷ್ಟೇ ಅಲ್ಲ, ಅವರು ಪತ್ರಿಕಾಗೋಷ್ಠಿಯನ್ನು ಕರೆದು ತಮ್ಮ ಮೇಲ್ಕಂಡ ನಿರ್ಧಾರವನ್ನು ಪ್ರಕಟಿಸಿದರು. 1994ರ ಮಾರ್ಚ್ ಮೊದಲವಾರ

1. ಅದರ ವಿವರಣೆಯನ್ನು ಪುಸ್ತಕ ಪ್ರಪಂಚದ 42 ನೆಯ ಸಂಪುಟದ 2 ನೆಯ ಸಂಚಿಕೆಯಲ್ಲಿ ಕೊಟ್ಟಿದ್ದೇನೆ.

ರಾಣೆಯವರು ಸಿಕ್ಕಿದಾಗ, ಅವರೇ ಏಕ ಸದಸ್ಯ ಸಮಿತಿಯ ವಿಷಯವೆತ್ತಿಕೊಂಡು 'ನೋಡಿ, ಸಾರ್, ಸಮಿತಿ ರಚನೆಯ ಬಗ್ಗೆ ಶಿಫಾರಸು ಮಾಡಿ, ಮುಖ್ಯಮಂತ್ರಿಗಳಿಗೆ ಕಳಿಸಿಕೊಟ್ಟು ಒಂದು ವರ್ಷದ ಮೇಲಾಯಿತು. ಒಂದೆರಡು ಸಲ ಆ ವಿಷಯವನ್ನು ಅವರ ನೆನಪಿಗೆ ತಂದದ್ದೂ ಆಯಿತು. ಅವರು ಮಾತಾಡಲಿಲ್ಲ'ಎಂದರು. 'ಸ್ವಾಮಿ, ಆ ಸಮಿತಿಯ ಸದಸ್ಯನಾಗಬೇಕೆಂದು ನಾನು ಕಾತರನಾಗಿರಲಿಲ್ಲ. ಪ್ರಾಯಶಃ ನಾನು ತಮಗಾಗದ ಎರಡು ಬಹು ಸಂಖ್ಯಾತ ಕೋಮುಗಳಲ್ಲಿ ಒಂದಕ್ಕೆ ಸೇರಿದವನೆಂಬ ಮಾತ್ಸರ್ಯದಿಂದ, ಛಲದಿಂದ ನಿಮ್ಮ ಶಿಫಾರಸಿಗೆ ಮುಖ್ಯಮಂತ್ರಿಗಳು ಸೊಪ್ಪು ಹಾಕಿಲ್ಲವೆಂದು ತೋರುತ್ತದೆ. ಈ ವಿಷಯವನ್ನಿಲ್ಲಿಗೇ ಮರೆತು ಬಿಡೋಣ'ಎಂದು ನಾನವರಿಗೆ ತಿಳಿಸಿದೆ. 'ನೀವೊಮ್ಮೆ ಈ ಬಗ್ಗೆ ಅವರನ್ನೇಕೆ ಕಾಣಬಾರದು?'ಎಂದರು. 'ನನ್ನ ಜೀವನದಲ್ಲಿ ನಾನೆಂದೂ ಆತ್ಮಗೌರವವನ್ನು ಬಲಿಕೊಟ್ಟು, ಯಾರ ಮುಂದೆಯೂ ಹಲ್ಲುಗಿಂಜಿದವನಲ್ಲ, ಒಮ್ಮೆ ವಿನಾ. ನಾನು ನಿವೃತ್ತನಾದರೂ, ನಿರುದ್ಯೋಗಿಯಲ್ಲ. ರಾಜಕೀಯ ದರ್ಪದ ಮುಂದೆ ಸ್ವಂತಕ್ಕಾಗಿ ತಲೆ ಬಾಗಲಾರೆ ' ಎಂದೆ. ತುಂಬ ಸಭ್ಯರಾದ ರಾಣೆಯವರು ತೆಪ್ಪಗಾದರು.

*****

ನಾನು - ನಂಬಿಕೆ

ನಾನು ಪ್ರಾಥಮಿಕ ಶಾಲೆಯ ವಿದ್ಯಾರ್ಥಿ. ಎಷ್ಟನೆಯ ತರಗತಿಯಲ್ಲಿದ್ದೆನೋ ನೆನಪಿಲ್ಲ. ನಮ್ಮದು ಸುಣ್ಣಗಾರೆ ಕಾಣದ. ಕಿಟಕಿ ಕದಗಳಿಲ್ಲದ. ಕೊಟ್ಟಿಗೆಯನ್ನು ಹೋಲುವ ಸಗಣಿ ನೆಲದ ಮನೆ. ನಮ್ಮ ಕುಟುಂಬದ ಆರ್ಥಿಕಾರೋಗ್ಯಕ್ಕೆ ಮನೆಯ ಪರಿಸ್ಥಿತಿಯೇ ಸುಸ್ಪಷ್ಟ ನಿದರ್ಶನವಾಗಿತ್ತು. ಹಳ್ಳಿಯಲ್ಲಿ ನಾವಿದ್ದ ಹೊಲಮನೆ ಬಿಟ್ಟು-ಹೆಚ್ಚೆಂದರೆ ನನ್ನ ಮಾತಾಮಹಿಯ ಮನೆ ಬಿಟ್ಟು-ಬೇರೆಲ್ಲಿಯೂ ಹೋದವನಲ್ಲ. ನಾನೇತಕ್ಕೆ ಓದುತ್ತಿದ್ದೆನೆಂಬುದೂ ಗೊತ್ತಿರಲಿಲ್ಲ. ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯ ನಂತರ ಮುಂದೇನಿದೆ ಎಂಬುದೂ ನನ್ನ ಗಮಾರ ಬುದ್ಧಿಗೆ ಹೊಳೆದಿರಲಿಲ್ಲ. ಲೋಕವ್ಯವಹಾರ ಜ್ಞಾನವಂತು ನನ್ನ ಪಾಲಿಗೆ ಶೂನ್ಯ. ತಂದೆ ತಾಯಿಯರಂತು ನಿರಕ್ಷರ ಕುಕ್ಷಿಗಳು. ಮಗ ಓದುವುದಾಗಿ ಹಟ ಹಿಡಿದಿದ್ದಾನೆ;ಯಾರೋ ಪುಣ್ಯಾತ್ಮರು ಪುಸ್ತಕ ಬಟ್ಟೆ ತಂದು ಕೊಟ್ಟಿದ್ದಾರೆ; ಎಷ್ಟು ದಿನ ಸಾಧ್ಯವೋ ಅಷ್ಟು ದಿನ ಓದಿಕೊಳ್ಳಲಿ ಎಂಬುದು ಅವರ ನಿರೀಕ್ಷೆ. ನನ್ನ ಭವಿಷ್ಯದ ಬಗ್ಗೆ ಅವರಿಗೂ ಯೋಚನೆಯಿಲ್ಲ. ಇಂದು ಬದುಕಿದರೆ ಸಾಕು. ನಾಳೆ ಏನು ಬೇಕಾದರೂ ಆಗಲಿ ಎಂಬ ಅನಿಶ್ಚಯತೆಯಲ್ಲಿಯೇ ಅವರು ಕಾಲ ಹಾಕುತ್ತಿದ್ದರು.

ಹೀಗಿರುವಾಗ ಅಪರಿಚಯಸ್ಥನೊಬ್ಬ ಇದ್ದಕ್ಕಿದ್ದಂತೆ ಮನೆಗೆ ಬಂದ. ಅವನು ಕಚ್ಚೆ ಹಾಕಿದ್ದ; ಶಲ್ಯದಿಂದ ಮುಂಡವನ್ನು ಮರೆಮಾಡಿ ಕೊಂಡಿದ್ದ; ತಲೆಯ ಹಿಂಬದಿಯಲ್ಲಿ ಗಂಟು ಹಾಕಿದ್ದ ಜುಟ್ಟು ಇತ್ತು; ಕೈಯಲ್ಲೊಂದು ಸಣ್ಣ ಪುಸ್ತಕವಿತ್ತು. ಆದರವನಿಗೆ ಮಾತು ಬರುತ್ತಿರಲಿಲ್ಲ; ಸನ್ನೆಯೇ ಅವನ ಭಾಷೆ. ಅವನ ಸನ್ನೆಗಳಿಗೆ ವ್ಯಾಖ್ಯಾನ ಹೇಳುವ ಸಲುವಾಗಿ ಅವನೊಡನೆ ಸಹಾಯಕನೊಬ್ಬ ಬಂದಿದ್ದ. 'ಇವರು ನಿಮ್ಮ ಹುಡುಗನ ಭವಿಷ್ಯ ಹೇಳುತ್ತಾರೆ'ಎಂದು ಸಹಾಯಕ ನಮ್ಮ ತಂದೆಯೊಡನೆ ನುಡಿದ. ತಂದೆಗೆ ಇಷ್ಟವಿರಲಿಲ್ಲ. 'ದುಡ್ಡಿಗಾಗಿ ಹೆದರಬೇಡಿ. ನೀವು ಕೊಟ್ಟಷ್ಟನ್ನು ಈಸಿಕೊಳ್ಳುತ್ತಾರೆ. ಎಲ್ಲರ ಮನೆಗೂ ಇವರು ಹೋಗುವುದಿಲ್ಲ. ನಿಮ್ಮ ಮನೆಗೆ ಹೋಗಬೇಕೆಂದು ಅವರ ಅಂತರ್ವಾಣಿ ನುಡಿದಿರಬೇಕು. ಬಂದಿದ್ದಾರೆ. ಏನೋ ವಿಶೇಷವಿರಬೇಕು. ಹೇಳಲಿ ಬಿಡಿ' ಎಂದು ಸಹಾಯಕ ಒತ್ತಾಯ ಮಾಡಿದ. ತಂದೆ ಆಗಲೆಂದರು.

ಭವಿಷ್ಯಜ್ಞ ನನ್ನ ಕೈಹಿಡಿದು ನೋಡಿದ;ಕೆಲವು ನಿಮಿಷ ನನ್ನ ಮುಖವನ್ನೆ ದುರುಗುಟ್ಟಿಕೊಂಡು ನೋಡಿದ. ಅವನು ಸನ್ನೆ ಮಾಡುತ್ತಿದ್ದ; ಸಹಾಯಕ ಅದನ್ನು ಬಿಡಿಸಿ ಹೇಳುತ್ತಿದ್ದ. ಒಮ್ಮೊಮ್ಮೆ ಭಾಷೆಯೆನ್ನಲಾಗದ ಧ್ವನಿಸುರುಳಿಯನ್ನು ಬಿಚ್ಚುತ್ತಿದ್ದ. ಅದಕ್ಕೂ ವ್ಯಾಖ್ಯಾನಕಾರನೇ ಅರ್ಥ ಹೇಳಬೇಕಾಗಿತ್ತು. ಆ ಅರ್ಥ ತಂದೆಗೆ ತಿಳಿಯುತ್ತಿತ್ತೆಂದು ತೋರುತ್ತದೆ. ಅವರಿಗೆ ಖುಷಿಯಾಗುತ್ತಿತ್ತು. ನನಗಂತೂ ಅದೂ ತಿಳಿಯುತ್ತಿರಲಿಲ್ಲ. ನನಗೆ ಬೇಕಾಗಿಯೂ ಇರಲಿಲ್ಲ. ಒಮ್ಮೆ ಭವಿಷ್ಯಜ್ಞ ನನ್ನ ನಾಲಗೆಯನ್ನು ಹೊರಗೆ ಚಾಚುವಂತೆ ಹೇಳಿದ. ತನ್ನಲ್ಲಿದ್ದೊಂದು ಕಡ್ಡಿ(ಅದೆಂಥದೋ ಗೊತ್ತಿಲ್ಲ)ಯಿಂದ ನಾಲಗೆಯ ಮೇಲೆ

ಏನೋ ಬರೆದ. (ಓಂ ಇರಬಹುದೆ?) 'ಇವನು ದೊಡ್ಡ ವಿದ್ಯಾವಂತನಾಗುತ್ತಾ'ನೆಂದು ಸಹಾಯಕ ವಿವರಿಸಿದ. ಭವಿಷ್ಯಜ್ಞ ಬಲಗೈಯಿಂದ ಹಕ್ಕಿಯ ಹಾರಾಟವನ್ನು ಸನ್ನೆಗಳ ಮೂಲಕ ತೋರಿಸಿದ. 'ಇವನು ಮುಂದೆ ದೊಡ್ಡ ಅಧಿಕಾರಿಯಾಗುತ್ತಾನೆ; ವಿಮಾನದಲ್ಲಿ ಹಾರಾಡುತ್ತಾನೆ' ಎಂದು ಸಹಾಯಕ ವ್ಯಾಖ್ಯಾನಿಸಿದ. ಕೊನೆಯ ವ್ಯಾಖ್ಯಾನವನ್ನು ತಂದೆ ನಂಬಲಿಲ್ಲ. 'ನಾವಿರೋದು ಕೋಳಿಗೂಡು. ಹೊಟ್ಟೆಗೆ ಎರಡು ಹೊತ್ತು ಹಿಟ್ಟು ಸಿಕ್ಕಿದ್ರೆ ಸಾಕು. ಇದೆಲ್ಲ ನಮ್ಗೇಕೆ ಬಿಡಿ ಸ್ವಾಮಿ' ಎಂದರು. ನನಗಂತು ಆ ಬಗ್ಗೆ ಲಕ್ಷ್ಯವೇ ಇರಲಿಲ್ಲ..

ಆ ಮೇಲೆ ಅವರ ನೆನಪು ಮನಸ್ಸಿನ ಪಾತಾಳದಲ್ಲಿ ಮರೆಯಾಯಿತು. ನಾನು ಇಂಟರ್ ಮಿಡಿಯಟ್ ಮುಗಿಸಿದಾಗ ಒಮ್ಮೆ ತಂದೆ ಆ ಭವಿಷ್ಯಜ್ಞನ ನೆನಪು ಎತ್ತಿದ್ದರು. ನಾನು ಎಂ. ಎ. ಪದವೀಧರನಾಗುತ್ತಿದ್ದಂತೆ ಅವನು ನುಡಿದ ಭವಿಷ್ಯದ ಬಗ್ಗೆ ನಂಬಿಕೆ ಮೊಳಿಯಲಾರಂಭಿಸಿತು. ಮೊಳೆತರೂ ಮರೆಯುತ್ತಿದ್ದೆ. ನನ್ನ ವೈಚಾರಿಕ ಮನೋಧರ್ಮ ಆ ನೆನಪನ್ನು ಕೆಳಕ್ಕದುಮುತ್ತಿತ್ತು.

ಭವಿಷ್ಯಜ್ಞರಿಗಾಗಲಿ ಜ್ಯೋತಿಷಿಗಳಿಗಾಗಲಿ ಅಥವಾ ಬೇರೆ ಯಾರಿಗೇ ಆಗಲಿ ನಾನು ಕೈಕೊಟ್ಟದ್ದು ಅದೇ ಪ್ರಥಮ, ಅದೇ ಅಂತಿಮ.

ನಮ್ಮ ತಂದೆ ದೈವಭಕ್ತರು. ಬೆಳಿಗ್ಗೆ ಸೂರ್ಯನಿಗೆದುರಾಗಿ ನಿಂತುಕೊಂಡು ಪ್ರಾರ್ಥನೆ ಮಾಡದೆ, ವಿಭೂತಿಯನ್ನು ಧರಿಸದೆ ಯಾವ ಕೆಲಸಕ್ಕೂ ಕೈಹಾಕುತ್ತಿರಲಿಲ್ಲ. ಸಂಜೆ ಹೊತ್ತು ಮುಖಕ್ಕೆ ನೀರೆರಚಿಕೊಂಡು ದೇವರ ಹೆಸರು ಹೇಳಿಕೊಳ್ಳುತ್ತಿದ್ದರು. ಪುರಾಣ ಪ್ರವಚನಗಳು ನಡೆಯುವಲ್ಲಿ ಅವರು ಹಾಜರು. ಅವರು ಅಂಧರಾದ ಮೇಲಂತೂ ಎಚ್ಚರವಾಗಿದ್ದಾಗಲೆಲ್ಲ ದೈವಸ್ಮರಣೆ ನಡೆಯುತ್ತಿತ್ತು. ರಾತ್ರಿಯ ಹೊತ್ತು ನಿದ್ದೆ ಬರದಿದ್ದಾಗ ಎದ್ದು ಕುಳಿತುಕೊಂಡು, ದೇವರ ನಾಮಗಳನ್ನು ಹೇಳಿಕೊಂಡು 'ನನ್ನ ಪಾಪಗಳನ್ನು ತೊಡೆದು ಕಾಪಾಡಪ್ಪ' ಎಂದು ಪಕ್ಕದವರಿಗೆ ಕೇಳಿಸುವಂತೆ ನೆನೆಯುತ್ತಿದ್ದರು. ದೈವದ ಹುಚ್ಚನ್ನು ಮಕ್ಕಳಿಗೂ ವರ್ಗಾಯಿಸಲು ಅವರು ಪ್ರಯತ್ನಿಸುತ್ತಿದ್ದರು.

ಹಬ್ಬ ಹರಿದಿನಗಳಲ್ಲಿ ಮನೆಯ ಜನರೆಲ್ಲ-ಚಿಳ್ಳೆ ಪಿಳ್ಳೆಗಳೂ ಸಹ - ದೇವಸ್ಥಾನಕ್ಕೆ ಹೋಗಬೇಕೆಂಬುದು ಹಿರಿಯರ ಕಟ್ಟಾಜ್ಞೆಯಷ್ಟೆ. ದೇವಸ್ಥಾನಕ್ಕೆ ಹೋಗಲು ನನಗೆ ಮನಸ್ಸು ಬರುತ್ತಿರಲಿಲ್ಲ. ಹೋಗದಿದ್ದಾಗ ತಂದೆ ಬಯ್ಯುತ್ತಿದ್ದರು; ಹೊಡೆಯುತ್ತಿದ್ದರು; ಮುನಿಸಿಕೊಳ್ಳುತ್ತಿದ್ದರು. ಅನಿವಾರ್ಯವಾದಾಗ ಹೋಗಿ ತಾಯಿಯ ಹಿಂದೆ ನಿಂತಿದ್ದು ಬರುತ್ತಿದ್ದೆ. ಕಲ್ಲಿನಲ್ಲಿ ದೇವನಿದ್ದಾನೆಯೆ? ಇರುವುದಾದರೆ, ಕಣ್ಣಿಗೆ ಕಾಣುವ ಎಲ್ಲ ಮರಕಲ್ಲುಗಳಲ್ಲಿಯೂ ದೇವರಿರಲೇ ಬೇಕಲ್ಲವೆ? ಇದ್ದದ್ದಾದರೆ, ದೇವಾಲಯಕ್ಕೇಕೆ ಹೋಗಬೇಕೆಂಬುದು ನನ್ನ ಆಗಿನ ತರ್ಕ. ತಂದೆಯೊಂದಿಗೆ ಹೋಗಿ, ಚಂದ್ರಹಾಸ ಸಂಬಂಧದ ಹರಿಕಥೆಯನ್ನು ಕೇಳಿ ನಾನೂ ಒಂದು ನುಣ್ಣನೆಯ ಕಲ್ಲುಗೋಲಿಯನ್ನು ಜೇಬೊಳಗಿಟ್ಟುಕೊಂಡಿದ್ದು, ಆಗಾಗ್ಗೆ ಯಾರೂ, ಇಲ್ಲದಾಗ, ಹೊರಗೆ ತೆಗೆದು ಕಣ್ಣಿಗೊತ್ತಿಕೊಳ್ಳುತ್ತಿದ್ದೆ. ಪುರಂದರದಾಸ ಕೃತ ಉಡುಪಿ ಕೃಷ್ಣನ ಕೀರ್ತನೆಯನ್ನು ಆಗಾಗ ಮೆಲುಕು ಹಾಕುತ್ತಿದ್ದೆ.

ದೇವರಲ್ಲಿ ನಂಬಿಕೆ ಹುಟ್ಟಲು. ಸಾಲಿಗ್ರಾಮ ಸದೃಶ ಶಿಲೆಯನ್ನು ಜೇಬಿನಲ್ಲಿರಿಸಿಕೊಳ್ಳಲು ಮುಖ್ಯವಾದ ಕಾರಣ ದೆವ್ವ, ಹಾವು, ಕಳ್ಳರ ಬಗೆಗಿನ ನನ್ನ ಭೀತಿ. ನಾನೊಬ್ಬ ಪುಕ್ಕಲು ಹುಡುಗ. ಹೊತ್ತು ಮುಳುಗಿದ ಮೇಲೆ ನಾನು ಹೊರಗೆ ಹೋದವನೇ ಅಲ್ಲ. ಹಗಲಿನಲ್ಲಿ ಸಹ ಹಗ್ಗ ಬಿದ್ದಿದ್ದರೆ ಹಾವೆಂದು ಹೆದರುತ್ತಿದ್ದೆ. ಯಾರದ್ದಾದರೂ ನೆರಳು ಕಂಡ ಕೂಡಲೇ ಅಂಜುತ್ತಿದ್ದೆ. ಬೇಲಿಯಲ್ಲಿ ಹೆಂಟೆಗೊದ್ದನೋ ಅಳಿಲೋ ಸದ್ದು ಮಾಡಿದರೆ ಸಾಕು, ಎದೆ ಡವ ಡವನೆ ಒಡೆದುಕೊಳ್ಳುತ್ತಿತ್ತು. ಹೆದರಿಕೆಯಿಂದ ಪಾರಾಗಲು ಅಪ್ಪ ಕೊಟ್ಟ ಉಪದೇಶ ದೇವರ ನಾಮ ಸ್ಮರಣೆ.

ಮಾಧ್ಯಮಿಕ ಶಾಲೆಯ ವ್ಯಾಸಂಗಕ್ಕಾಗಿ ನಾನು ಚನ್ನಪಟ್ಟಣಕ್ಕೆ ಪ್ರತಿನಿತ್ಯ ಹೋಗಬೇಕಾಗಿತ್ತಷ್ಟೆ. ನನ್ನ ಜತೆಯಲ್ಲಿ ಕೆಲವು ಹುಡುಗರು ಬರುತ್ತಿದ್ದರು. ಅವರಿಲ್ಲದ ದಿನ ಒಂಟಿಯಾಗಿ ಹೋಗಲು-ಬರಲು ಹೆದರಿಕೆಯಾಗುತ್ತಿತ್ತು. ಮೋಡದ ದಿನಗಳಲ್ಲಂತು ಎಡಗೈಯಲ್ಲಿ ಎದೆ ಹಿಡಿದುಕೊಂಡೇ ಓಡೋಡಿ ದಾರಿ ಸಾಗಿಸುತ್ತಿದ್ದೆ. 'ಶ್ರೀಕೃಷ್ಣನನ್ನು ಸದಾ ಸ್ಮರಿಸು; ನಿನಗೇನೂ ಆಗುವುದಿಲ್ಲ. ಅವನೇ ನಿನ್ನ ಕ್ಷೇಮ ನೋಡಿಕೊಳ್ಳುತ್ತಾನೆ. ಅವನು ಎಲ್ಲೆಲ್ಲಿಯೂ ಇದ್ದಾನೆ' ಎಂದು ನನ್ನ ಪುಕ್ಕಲತನವನ್ನು ಬಲ್ಲ ತಂದೆ ದಿನಾಲೂ ನನಗೆ ಹೇಳುತ್ತಿದ್ದರು. ಗುಡುಗು ಸಿಡಿಲು ಮಿಂಚು ಆರ್ಭಟಿಸುವಾಗ ಅರ್ಜುನನ ದಶನಾಮಗಳನ್ನು ಉಚ್ಚರಿಸುವಂತೆ ನನಗೆ ಧೈರ್ಯ ತುಂಬಿದ್ದರು. ಆಕಾಶದ ದೇವತೆಯಾದ ಇಂದ್ರ ಗುಡುಗು ಸಿಡಿಲು ಮಳೆಗಳಿಗೂ ಒಡೆಯ, ಇಂದ್ರನ ಮಗ ಅರ್ಜುನ. ಮಗನನ್ನು ಸ್ತುತಿಸಿದರೆ ತಂದೆಯ ಕೋಪ ಶಮನವಾಗುತ್ತದೆ. ಹೀಗೆಂದು ಯಾರೊ ತಂದೆಗೆ ಹೇಳಿಕೊಟ್ಟಿದ್ದರೆಂದು ತೋರುತ್ತದೆ. ನನಗೂ ಅದೇ ದೀಕ್ಷೆ ಪ್ರಾಪ್ತವಾಯಿತು. ಅದೆಲ್ಲ ಬರಿಯ ಬುರುಡೆ; ಮೂಢನಂಬಿಕೆ;ಗೊಡ್ಡು ಪುರಾಣ ಎಂದು ನಾನು ಬಿ. ಎ. ಆನರ್ಸ್ ತರಗತಿಗೆ ಹೋದ ನಂತರ ತಿರಸ್ಕರಿಸಿದ್ದುಂಟು. ಆದರೆ ಆ ಹೊತ್ತಿಗೆ ಅಂಥ ನಂಬಿಕೆಗಳು ಭೀತಿ ದೌರ್ಬಲ್ಯಗಳಿಗೆ ಸಿದ್ಧೌಷಧಿಗಳಾಗಿದ್ದುವೆನ್ನುವುದನ್ನು ಅಲ್ಲಗಳೆಯಲಾಗದು. ಈ ವಿಷಯದ ಬಗ್ಗೆ ಮನೋವಿಜ್ಞಾನ ಹೆಚ್ಚು ಬೆಳಕು ಚೆಲ್ಲಬೇಕಾಗಿದೆ.

ಒಂದು ದಿನ ಸಂಜೆ ಚನ್ನಪಟ್ಟಣದಿಂದ ನಾನೊಬ್ಬನೇ ಊರಿಗೆ ಬರುತ್ತಿದ್ದೆ. ಡಿಸೆಂಬರ್ ತಿಂಗಳಿರಬಹುದು. ಬಹುಬೇಗ ಕತ್ತಲಾಗುತ್ತಿತ್ತು. ಕೂಡ್ಲೂರು ಕೆರೆ ಏರಿಯ ಮೇಲೆ ಬರುವ ಹೊತ್ತಿಗೆ ಕತ್ತಲ ಇಳಿಕೆ ಪ್ರಾರಂಭವಾಗುತ್ತಿತ್ತು. ನನ್ನ ಶತ್ರುಗಳಾದ ದೆವ್ವ, ಸರ್ಪಗಳು ನನ್ನ ಮೇಲೆ ಎಗರಬಹುದೆಂಬ ಪುಕೀರು ನನ್ನ ಮೈಮನಗಳನ್ನೆಲ್ಲ ಆಕ್ರಮಿಸಿಕೊಂಡಿತು. ಸಮೀಪದಲ್ಲಿ ಯಾವೊಂದು ಹಳ್ಳಿಯೂ ಇರಲಿಲ್ಲವಾದ್ದರಿಂದ ಯಾರನ್ನೂ ಕೂಗಿಕೊಳ್ಳುವಂತಿರಲಿಲ್ಲ. ಒಂದು ಪಕ್ಷ ಊರಿದ್ದು ಕೂಗಿಕೊಂಡರೆ ನನ್ನ ಭೀತಿಯನ್ನು ತೋರ್ಪಡಿಸಿಕೊಂಡಂತಾಗುತ್ತದೆ. ನಮ್ಮ ತಂದೆಯ ಉಪದೇಶ ನೆನಪಿಗೆ ಬಂತು. ನನಗೆ ಗೊತ್ತಿದ್ದ ಕೃಷ್ಣನ ಹೆಸರುಗಳನ್ನು ನಾಲಿಗೆಯ ಮೇಲೆ ಕುಣಿಸಲಾರಂಭಿಸಿದೆ. ಬಲಭಾಗದ ಬೇಲಿಯಲ್ಲಿ ಏನೋ ಸದ್ದಾಯಿತು; ಮರುಕ್ಷಣದಲ್ಲಿಯೇ ವ್ಯಕ್ತಿಯೊಂದು ನನ್ನ

ಮುಂದೆ ಪ್ರತ್ಯಕ್ಷವಾಗಿ ಎಡಗಡೆಗೆ ಓಡಿಹೋದಂತಾಯಿತು. ಆ ವ್ಯಕ್ತಿ ಕೃಷ್ಣನೆ ಇರಬೇಕೆಂದು ಮನಸ್ಸಿಗೆ ದೃಢವಾಯಿತು. ಇಂಥ ಘಟನೆಗಳಿಗೆ ಲೆಕ್ಕವೇ ಇಲ್ಲ.

ಮತ್ತೊಂದು ಸಲ ಬೆಳಿಗ್ಗೆ ನಾನು ಮನೆಯಲ್ಲಿ ಒಬ್ಬನೇ ಇದ್ದೆ. ನನ್ನ ಬಳಿಯಿದ್ದ ಕರಿಯ ಕಲ್ಲು ಗೋಲಿಯನ್ನು ತೊಳೆದು ಗಂಧದ ಕಡ್ಡಿ ಹಚ್ಚಿ 'ಉಡುಪಿ ಕೃಷ್ಣ ಪೊಡವಿಗೊಡೆಯ ಬಿಡದೆ ಕಾಯೊ ಮೃಡನ ಸಖನೆ' ಎಂಬ ಕೀರ್ತನೆಯನ್ನು ಹೇಳಿಕೊಂಡು ಪೂಜೆ ಮಾಡಿದೆ. ಆ ಪೂಜೆ ಬಹು ಹೊತ್ತು ನಡೆಯಿತು. ಅಕ್ಕಿ ನೈವೇದ್ಯವನ್ನು ಸಲ್ಲಿಸಿದ್ದೂ ಆಯಿತು. ಆಗ ಶ್ರೀ ಕೃಷ್ಣ ಪ್ರತ್ಯಕ್ಷನಾಗಿ ನನ್ನೊಡನೆ ಆಡುತ್ತಿದ್ದ. ಇದೆಲ್ಲ ಮಾನಸಿಕ ವೈಚಿತ್ರ್ಯವೋ ವಾಸ್ತವಿಕ ಸತ್ಯವೋ ಗೊತ್ತಿಲ್ಲ. ನರಸಿಂಹ ಕಂಬದಲ್ಲಿದ್ದಾನೆಂದು ತಿಳಿದು, ಎಷ್ಟೋ ಸಲ ಅದನ್ನೆ ನೋಡುತ್ತ ಕುಳಿತಿರುತ್ತಿದ್ದುದೂ ಉಂಟು. (ಆ ಹೊತ್ತಿಗೆ ಕುವೆಂಪು ಅವರ 'ನನ್ನ ಗೋಪಾಲ' ನಾಟಕವನ್ನಾಗಲಿ. 'ನೆನಪಿನ ದೋಣಿ' ಯನ್ನಾಗಲೀ ನಾನು ಓದಿರಲಿಲ್ಲ. ಪ್ರಾಯಶಃ ಆಗ ಅವು ಪ್ರಕಟವಾಗಿರಲಿಲ್ಲ. ಅಷ್ಟೇ ಅಲ್ಲ, ಕುವೆಂಪು ಅವರ ಹೆಸರನ್ನು ಸಹ ನಾನು ಕೇಳಿರಲಿಲ್ಲ) ಅಲ್ಲಿಂದೀಚೆಗೆ ನನ್ನ ಬದುಕಿನಲ್ಲಿ ಅಂಥ ಸಂಗತಿಗಳು ನಡೆದದ್ದು ನೆನಪಿಲ್ಲ. ಶ್ರೀ ರಾಮಕೃಷ್ಣ ಆಶ್ರಮದ ವಿದ್ಯಾರ್ಥಿನಿಲಯವನ್ನು ಸೇರಿದ ನಂತರ ಶ್ರೀರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರು ನನ್ನ ಉಪಾಸ್ಯ ಶಕ್ತಿಗಳಾಗಿದ್ದಾರೆ.

ದೆವ್ವಗಳ ಬಗೆಗಿನ ನನ್ನ ಅನುಭವ ಇಷ್ಟಕ್ಕೇ ಮುಗಿಯಲಿಲ್ಲ; ಆದರೆ ನಾನು ಡಿಗ್ರಿ ತರಗತಿಯನ್ನು ಸೇರಿದ ನಂತರ ನನ್ನ ಶರೀರದಲ್ಲಿ ನೆಲೆಗೊಂಡಿದ್ದ ಭೀತಿಯ ಬೇತಾಳ ಕಣ್ಮರೆಯಾಯಿತು. ಮನಮರೆಯಾಯಿತು. ದೆವ್ವಗಳು ಇರುವುದೇ ನಿಜವಾದರೆ, ಅವುಗಳನ್ನು ನೋಡಬೇಕೆಂಬ ಕುತೂಹಲ ನನ್ನ ಮನಸ್ಸನ್ನು ಪ್ರವೇಶಿಸಿತ್ತು, ಸೂರೆಗೊಂಡಿತ್ತು. ಆದಕ್ಕಾಗಿ ಕತ್ತಲಲ್ಲಿ ಊರ ಹೊರಗಡೆ, ಜನ ನಿರ್ದೇಶಿಸಿದ್ದ ದೆವ್ವದ ನೆಲೆಗಳಲ್ಲಿ ಹಲವು ಸಲ ಸುತ್ತಾಡಿದ್ದುಂಟು. ಊರಿನ ಮಿತ್ರರನ್ನು ಸೇರಿಸಿಕೊಂಡು ಜ್ಞಾನೋದಯ ಸಂಘವನ್ನು ಕಟ್ಟುತ್ತಿದ್ದ ಕಾಲ. ಸಂಘದ ಕಡೆಗೆ ಸುಬ್ಬೇಗೌಡರನ್ನು ಒಲಿಸಿಕೊಳ್ಳಬೇಕೆಂದು ಕೆಂಚೇಗೌಡ, ಲಿಂಗಾಚಾರಿ ಮತ್ತು ನಾನು ಬೆಳಕೆರೆಗೆ ಹೋಗಿದ್ದೆವು. ಸಂಘದ ಕೆಲಸಕ್ಕಾಗಿ ನಾವು ಮೂವರು ಹಗಲು ಇರುಳೆನ್ನದೆ ಸುತ್ತುತ್ತಿದ್ದೆವು. ಹೆಚ್ಚಾಗಿ ಇರುಳು. ಆ ದಿನ ಚೆನ್ನಪ್ಪ ಗೌಡರು ನಮ್ಮ ಜತೆಯಲ್ಲಿದ್ದರು. ಜನ ಸಿಕ್ಕಿದಾಗ, ಕೂರಿಸಿಕೊಂಡು ಸುಶ್ರಾವ್ಯವಾಗಿ ಭಾರತ ಓದಿ, ಊಟ ಹಾಕಿಸಿ, ಕಳಿಸುತ್ತಿದ್ದುದು ಸುಬ್ಬೇಗೌಡರ ಪದ್ಧತಿ. ಅವರು ಒಳ್ಳೆಯ ಗಮಕಿಯೆಂದು ಪ್ರಸಿದ್ಧರಾಗಿದ್ದರು. ಅವರ ಕಂಠ ಮಧುಮಧುರವಾಗಿತ್ತು. ನಾವೆಲ್ಲಿ ಹೋದರೂ, ಎಷ್ಟು ಹೊತ್ತಾದರೂ, ಊರಿಗೆ ಹಿಂದಿರುಗಿ ಬರಲೇಬೇಕು. ಆ ದಿನ ಬೆಳಕೆರೆ ಬಿಟ್ಟಾಗ ಮಧ್ಯ ರಾತ್ರಿ ಕಳೆಯುವುದರಲ್ಲಿತ್ತು; ತಿಂಗಳ ಬೆಳಕಿನ ಹಾಲು ಹೊಳೆ ಹರಿದಿತ್ತು. ಗೋವಿಂದ ಹಳ್ಳಿಯ ಸುಡುಗಾಡಿನ ಮೂಲಕ ನಾವು ಹೋಗಬೇಕಿತ್ತು. ಅದರ ಹತ್ತಿರ ಬಂದಾಗ ನನ್ನ ಹಿಂದೆ ಬರುತ್ತಿದ್ದ ಚೆನ್ನಪ್ಪಗೌಡರು ನನ್ನನ್ನು ಹಿಂದೆ ಹಾಕಿ ಮುಂದೆ ಬಂದರು; ನನ್ನ ಕಾಲ ಸಂದಿಯಲ್ಲಿ ಹಂದಿಮರಿಯೊಂದು ನುಸುಳಿದಂತಾಗಿ ನಾನು ಲಿಂಗಾಚಾರಿಯ ಮುಂದೆ

ಹೋದೆ;ಎಲ್ಲರಿಗಿಂತ ಮುಂದೆ ಹೋಗಲು ಚನ್ನಪ್ಪಗೌಡ ಪ್ರಯತ್ನಿಸಿದರು. ಊರು ತಲುಪಿ ಚನ್ನಪ್ಪಗೌಡರ ಮನೆಯ ಜಗುಲಿಯ ಮೇಲೆ ಕುಳಿತು ನಂನಮ್ಮ ಅನುಭವಗಳನ್ನು ಹಂಚಿಕೊಳ್ಳುವಾಗ ಹಂದಿಮರಿಯ ಪ್ರಸ್ತಾಪವೂ ಬಂತು. ಅದು ಕಂಡದ್ದು ನಮ್ಮಿಬ್ಬರಿಗೆ ಮಾತ್ರ. ನಮ್ಮ ಹೆದರಿಕೆಯೇ ಹಂದಿಮರಿಯಾಯಿತೋ ಏನೋ ಕಾಣೆ. ಆದರೆ ಅದನ್ನೊದೆಯಲು ನಾನು ಪ್ರಯತ್ನಿಸಿ ವಿಫಲನಾದದ್ದುಂಟು. ದೆವ್ವ ಕಣ್ಣಿಗೆ ಬಿದ್ದಿದ್ದಾದರೆ ಅದನ್ನು ಎಕ್ಕಡದಲ್ಲಿ ಒದೆಯಬೇಕೆನ್ನುವ ನನ್ನ ಆಸೆ ಈ ಹೊತ್ತಿಗೂ ಫಲಿಸಿಲ್ಲ.

ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗ ಒಮ್ಮೆ ನಾನು ಮೈಸೂರಿಂದ ರಾತ್ರಿ ರೈಲಿನಲ್ಲಿ ಊರಿಗೆ ಹೋದೆ. ರೈಲು ಸುಮಾರು ಹನ್ನೊಂದು ಗಂಟೆಗೆ ಮೈಸೂರು ಬಿಟ್ಟು, ಸುಮಾರು ಎರಡು ಗಂಟೆಯ ಹೊತ್ತಿಗೆ ಶೆಟ್ಟಿಹಳ್ಳಿ ತಲುಪುತ್ತದೆ. ಅಲ್ಲಿಂದ ಎರಡು ಮೈಲಿ ನಮ್ಮೂರು. ಅಷ್ಟು ಹೊತ್ತಿನಲ್ಲಿ ಊರಿಗೆ ಹೋಗುವುದಾದರೂ ಹೇಗೆ? ಹೋಗಿ ಮಾಡುವುದಾದರೂ ಏನು? ಮತ್ತಿಕೆರೆ ಬಳಿಯ ಸುಂಕದ ಕಟ್ಟೆಯ ಜಗಲಿಯ ಮೇಲೆ ಮಲಗಿದ್ದು, ಕೋಳಿ ಕೂಗಿದ ಮೇಲೆ ಎದ್ದು ಹೋದರಾಯಿತೆಂದು ಅಲ್ಲಿಗೆ ಹೋದೆ. ನನ್ನನ್ನು ಕಳ್ಳನೆಂದು ಬಗೆದೋ ಏನೋ, ನಾಯಿಗಳು ಬೊಗಳಲಾರಂಭಿಸಿದವು. ಹಾಗೆಯೇ ಅವು ಬೊಗಳು ಮುಂದುವರಿಸಿದ್ದಾದರೆ ಜನ ಎದ್ದು ಬಂದಾರೆಂಬ ಸಂಶಯದಿಂದ ಅಲ್ಲಿ ಮಲಗುವುದೇ ಬೇಡವೆಂದುಕೊಂಡು ನನ್ನ ಪ್ರಯಾಣ ಮುಂದುವರಿಸಿದೆ. ಮತ್ತಿಕೆರೆಯ ಗದ್ದೆ ಬಯಲನ್ನು ದಾಟಿ ಸಂಕಲಗೆರೆಯನ್ನು ಸಮೀಪಿಸುತ್ತಿದ್ದಂತೆ ಆ ಊರಿಗೂ ನಮ್ಮೂರಿಗೂ ನಡುವೆ ಇದ್ದ ಅಡ್ಡ ಹಳ್ಳ ನೆನಪಿಗೆ ಬಂತು. ನಿರ್ಭೀತನೆಂದು ಕೊಂಡಿದ್ದ ನಾನೂ ಮೂತ್ರ ವಿಸರ್ಜನೆ ಮಾಡಬೇಕಾಯಿತು. ಅಂಗಾಂಗಳನ್ನು ನಿಯಂತ್ರಿಸಿಕೊಂಡು, ಮನಸ್ಸನ್ನು ಬಿಗಿ ಹಿಡಿದು ಧೈರ್ಯವನ್ನು ಒಟ್ಟುಗೂಡಿಸಿಕೊಳ್ಳದಿದ್ದರೆ ಮಲವಿಸರ್ಜನೆಯೂ ನಡೆದು ಹೋಗುತ್ತಿತ್ತು. ನಮ್ಮೂರಿನ ಜನ ಅಡ್ಡ ಹಳ್ಳದಲ್ಲಿದ್ದ ದೆವ್ವದ ಬಗ್ಗೆ ಅನೇಕ ಕಥೆಗಳನ್ನು ಹೇಳಿದ್ದರು. ಮಧ್ಯ ರಾತ್ರಿ ಒಬ್ಬೊಬ್ಬರೇ ಅಲ್ಲಿ ಬರುತ್ತಿರಲಿಲ್ಲವಂತೆ. ಹಳ್ಳದಲ್ಲಿ ಕಾಲಿಡುತ್ತಿದ್ದಂತೆಯೆ ಎಷ್ಟೋ ಜನ ರಕ್ತ ಕಾರಿಕೊಂಡು, ಮೈಗೆಲ್ಲ ಮಲ ಮಾಡಿಕೊಂಡು ಸತ್ತು ಹೋಗಿದ್ದರೆಂದು, ಅವರ ಪಟ್ಟಿಯನ್ನು ಸಹ ಹೇಳುತ್ತಿದ್ದರು. ರಾತ್ರಿಯಿರಲಿ, ಹಗಲು ಹೊತ್ತು ಬರಬೇಕಾದರೂ ಜನ ಹೆದರುತ್ತಿದ್ದರು. ಹೆಂಗಸರಂತು ಒಬ್ಬೊಬ್ಬರೇ ಬರುತ್ತಿರಲಿಲ್ಲ. ದೆವ್ವ ಎಷ್ಟಿವೆ, ಹೇಗಿವೆ, ಯಾವ ರೀತಿ ವರ್ತಿಸುತ್ತವೆ ಎಂಬುದನ್ನು ನೋಡಿಯೇ ಬಿಡುವುದೆಂದು ಎದೆ ಮನಸ್ಸಿಗೆ ಹೇಳುತ್ತಿತ್ತು. ಅಡ್ಡ ಹಳ್ಳ ಸಮೀಪಿಸುತ್ತಿದ್ದಂತೆ, ಕಲ್ಲು ಪಾಸರೆಯ ಮೇಲೆ ಕುಳಿತುಕೊಂಡು ಮತ್ತೊಮ್ಮೆ ಎದೆಗೆ ಧೈರ್ಯ ಹೇಳಿದೆ. ದೆವ್ವ ಎದುರಾದ ಕೂಡಲೇ ಬಾರಿಸಿಬಿಡುವುದೆಂದು ಬಲಗೈಯಲ್ಲಿ ಕಾಲಿನ ಎಕ್ಕಡಗಳನ್ನು ಹಿಡಿದುಕೊಂಡೆ. ಜೇಬಿನಲ್ಲಿದ್ದ ಸಣ್ಣ ಚಾಕನ್ನು ಅಲಗು ತೆಗೆದು, ದೆವ್ವ ಎಕ್ಕಡಕ್ಕೆ ಜಗ್ಗದಿದ್ದರಿರಲೆಂದು ಮತ್ತೊಂದು ಮುಷ್ಟಿಯಲ್ಲಿ ಸೇರಿಸಿಕೊಂಡೆ. ಮೊದಲೇ ಉಚ್ಚೆ ಖಾಲಿ ಮಾಡಿದರೆ ಮುಂದೆ ಅನಾಹುತ ಸಂಭವಿಸಲಾರದೆಂದು ಮುಂಜಾಗ್ರತಾ ಕಾರ್ಯಕ್ರಮವಾಗಿ ಬಲಾತ್ಕಾರವಾಗಿ ಹೊರಚೆಲ್ಲಿದೆ. ಹಳ್ಳದ ಬೇಲಿ ಸಮೀಪಿಸುತ್ತಿದ್ದಂತೆ ಏನೋ ಚಲಿಸಿದಂತಾಯಿತು; ಇಡೀ ಬೇಲಿಯೇ

ತತ್ತರಿಸಿದಂತಾಯಿತು. ಮೈಮೇಲೆಲ್ಲ ಮುಳ್ಳು ಎದ್ದಂತಾಯಿತು. ಒಂದೆರಡು ಸಾರಿ ಉಗಿದು, ಹಲ್ಲು ಮಟ್ಟೆ ಕಚ್ಚಿಕೊಂಡು ಹಳ್ಳಕ್ಕಿಳಿದೆ; ಎಂದೂ ಇಲ್ಲದ ಧೈರ್ಯ ರಸ ಶರೀರದ ನರನರಗಳಲ್ಲಿ ಹರಿದಂತಾಯಿತು. 'ಬಂಚೋತ್, ಈಗ ಬಾ, ಒಂದು ಕೈ ನೋಡ್ತೀನಿ' ಎಂದೊಂದು ಸಲ ಎಕ್ಕಡಗಳನ್ನು ಬಲವಾಗಿ ನೆಲಕ್ಕೆ ಬಡಿದೆ. ಬೇಲಿಯೊಳಗೆ ಏನೋ ಪ್ರಾಣಿ ಓಡಿ ಹೋಯಿತು. ಅದೇ ದೆವ್ವವಿರಬೇಕು, ಒಂದು ಕೈ ನೋಡಿಯೇ ಬಿಡೋಣವೆಂದು ಭದ್ರವಾಗಿ ಹೆಜ್ಜೆಯೂರಿ ನಿಂತೆ. ಚಡ್ಡಿಯನ್ನೊಮ್ಮೆ ಸವರಿ ನೋಡಿಕೊಂಡೆ. ಏನೂ ಆಗಿರಲಿಲ್ಲ. ತಲೆಯೆತ್ತಿ ನೋಡಿದೆ. ಚುಕ್ಕಿಗಳು ನಗುತ್ತಿದ್ದವು. ಹಳ್ಳದ ಎದುರೇರಿಯನ್ನು ಹತ್ತಿದೆ. ದೆವ್ವಗಳು ಬಂದು ಹೊರಟು ಹೋದುವೋ ಏನೋ, ಅವುಗಳಿಗೂ ವೇಳಾಪಟ್ಟಿ ಇದ್ದರೂ ಇರಬಹುದು. ಬೇರೆ ಕಡೆ ಬಲಿ ಹುಡುಕಿಕೊಂಡು ಹೋಗಿರಬಹುದು. ಇನ್ನೂ ಮೂರು ಗಂಟೆಯಾಗಿಲ್ಲ. ಈಗ ಬಂದರೂ ಬರಬಹುದು. ಇಷ್ಟು ಹೊತ್ತಿಗೆ ಮನೆಗೆ ಹೋದರೆ ಅಪ್ಪನಿಂದ ಬಯ್ಗುಳ ಕೇಳಬೇಕಾದೀತೇನೋ. ಹೇಗೂ ಇಲ್ಲೊಂದು ಬಂಡೆಯಿದೆ. ಅಗೋ ಚಂದ್ರ ಹುಟ್ಟುತ್ತಿದ್ದಾನೆ. ಇಲ್ಲಿಯ ಗಿಡಗೆಂಟೆಗಳು - ಏಕೆ ಸಚರಾಚರ ವಸ್ತುಗಳೆಲ್ಲವೂ- ಚಂದ್ರ ಸುರಿಯುವ ಸುರಲೋಕದ ಸೋಮರಸವನ್ನು ಕುಡಿದು, ಸೌಂದರ್ಯ ಸಾಗರದಿಂದ ಉದ್ಭವಿಸಿದಂತೆ ಕಾಣುತ್ತವೆ. ಬೆಳಕು ಹರಿಯುತ್ತಿದ್ದಂತೆ ಮನೆಗೆ ಹೋದರಾಯಿತು ಎಂದುಕೊಂಡು ಬಂಡೆಯ ಮೇಲೆ ಭದ್ರವಾಗಿ ಅಂಡೂರಿದೆ. ಹಳ್ಳದ ಕಡೆಗೆ ದೃಷ್ಟಿಯಾಗಿ, ಒಮ್ಮೊಮ್ಮೆ ಆ ದೃಷ್ಟಿಯನ್ನು ಸುತ್ತಮುತ್ತ ಹರಿಸುತ್ತಿರುವಾಗ, ಹಲವು ಆಲೋಚನಾ ತರಂಗಗಳ ಮಧ್ಯೆ ವಿಚಿತ್ರವಾದ ವರ್ಣರಂಜಿತವಾದ ಅಲೆಯೊಂದು ಮಿಂಚಿದಾಗ ಮೈಗುಡಿಗಟ್ಟಿತು: ' ದೆವ್ವ ಗಂಡಲ್ಲದೆ ಹೆಣ್ಣಾಗಿದ್ದರೆ ಏನು ಮಾಡುವುದು?' ಸುದೈವದಿಂದ ಎಂಥ ದೆವ್ವವೂ ಬರಲಿಲ್ಲ. 'ಇಷ್ಟು ಹೊತ್ತಿನಲ್ಲಿ ಅಡ್ಡ ಹಳ್ಳದಲ್ಲಿ ಬಂದೆಯಾ, ಸೂ........ಮಗನೆ? ಏನಾದರೂ ಆಗಬಾರದ್ದು ಆಗಿದ್ದರೆ ಗತಿಯೇನು?' ಎಂದು ಮನೆಗೆ ಹೋದಾಗ ಅಪ್ಪನಿಂದ ಬೈಗುಳ ಕೇಳಬೇಕಾಯಿತೇ ಹೊರತು, ನಾನು ನಿರೀಕ್ಷಿಸಿದ ಶಹಭಾಸ್‌ಗಿರಿ ದೊರೆಯಲಿಲ್ಲ. ಆದರೆ ಆ ಸುದ್ದಿ ಊರಲ್ಲೆಲ್ಲ ಹರಡಿದಾಗ ಯುವಕರ ಎದೆಯಲ್ಲಿ ಕೆಚ್ಚು ಮೂಡಿತು.

ಈ ಪ್ರಕರಣವಾದನಂತರ ದೆವ್ವಗಳೇ ಇಲ್ಲವೆಂದು, ಭೀತಿಯೇ ದೆವ್ವವಾಗಿ ಕಾಣಿಸಿಕೊಳ್ಳುತ್ತದೆಂದೂ, ಶೇಕ್ಸ್‌ಪಿಯರ್ ನಾಟಕಗಳಲ್ಲಿ ಬರುವ ಭೂತಗಳು ವಾಸ್ತವವಲ್ಲವೆಂದೂ, ಕಾವ್ಯಪ್ರತಿಮೆಗಳೆಂದು ಅವನ್ನು ಪರಿಗಣಿಸಬೇಕೆಂದೂ ನಾನು ಓರಗೆಯ ಮಿತ್ರರೊಡನೆ ವಾದಿಸತೊಡಗಿದೆ. ಹಳ್ಳಿಯ ಕುರಿಗಾಹಿ ಬಳಗದ ಮಿತ್ರರು ನನ್ನ ವಾದವನ್ನು ಸವಾಲಾಗಿ ಸ್ವೀಕರಿಸಿ, 'ನಮ್ಮೊಡನೆ 'ಮಂದೆ'ಗೆ ಬನ್ನಿ ತೋರಿಸ್ತೇವೆ' ಎಂದು ಹಟ ಮಾಡಿದರು. ಮಂದೆ ಕಾಯುವುದೆಂದರೆ ನನಗೆ ಯಾವಾಗಲೂ ಹಿಗ್ಗು. ನನ್ನ ಕೈಕಾಲುಗಳಲ್ಲಿ ವಿದ್ಯುಚ್ಛಕ್ತಿಯೇ ಹರಿದಂತಾಗುತ್ತಿತ್ತು. ಅದಕ್ಕೆ ಮುಖ್ಯ ಕಾರಣ ಎರಡು : ಕೃತಕವಾದ ಗೋಡೆ ಚಾವಣಿಗಳಿಲ್ಲದ ನೆಲದ ಮೇಲೆ ಕುರಿಗಳ ಪಕ್ಕದಲ್ಲಿ ಅಂಗಾತನೆ ಮಲಗಿಕೊಂಡು ಸುನೀಲ ಜಲರಾಶಿಯ ಗಗನವನ್ನು ಚಂಚಲ ಶೀಲ ಚಂದ್ರ ತಾರೆಗಳನ್ನು

ನೋಡಿ ನೋಡಿ ಆದಿ ಮಾನವನಿಗೆ ಮಾತ್ರ ಸಾಧ್ಯವಾದ ಅನಿರ್ವಚನೀಯ ಸುಖವನ್ನನುಭವಿಸುವ ಕುತೂಹಲ ಒಂದು; ತೋಳ ಕಿರುಬಾದಿ ಕ್ರೂರ ಪ್ರಾಣಿಗಳಿಂದ ಸಾಧುಪ್ರಾಣಿಗಳನ್ನು ರಕ್ಷಿಸುವ ಸಾಹಸಾವಕಾಶದ ಉಪಯೋಗ ಮತ್ತೊಂದು. ಆದಿನ ಮಂದೆ ಹೂಡಿದ್ದು ನಮ್ಮ ಕಣದ ಹೊಲದಲ್ಲಿ. 'ಈಚಲು ಚಾಪೆ ಕಂಬಳಿ ಕಂಕುಳಲ್ಲಿರುಕಿಕೊಂಡು ದೆವ್ವವನ್ನು ಕಾಣುವ ಕಾತರತೆಯಿಂದ ಬಹುಬೇಗನೆ ಹೊಲದ ಬಳಿಗೆ ಹೋದೆ. ನಾವು ಮೂರ್ನಾಲ್ಕು ಮಂದಿ ಹುಡುಗರು ಹರಟೆ ಹೊಡೆಯುತ್ತ, ಕಾಕು ಕೇಕೆ ಹಾಕುತ್ತ, ಸರಿಹೊತ್ತಿನ ತನಕ ಕಾದಿರಬೇಕು. 'ಅಗೋ ಅಲ್ಲಿ ನೋಡು, ಬಂತು ಬಂತು ಕೊಳ್ಳಿ ದೆವ್ವ, ಶೆಟ್ಟಿ ಹಳ್ಳಿ ಕೆರೆ ಏರಿ ಮೇಲೆ ತೋರಿಸಿಕೊಳ್ಳುತ್ತ ಮರೆಯಾಗುತ್ತ ಕಣ್ಣು ಮುಚ್ಚಾಲೆಯಾಟವಾಡುತ್ತದೆ ನೋಡು' ಎಂದು ನಮ್ಮಲ್ಲೊಬ್ಬ ಕೂಗಿಕೊಂಡ 'ಹೌದಪ್ಪ ಹೌದು' ಅದೆಷ್ಟು ದೊಡ್ಡದಾಗಿದೆ ಆದರ ಕೈಗೆ ಸಿಕ್ಕಿದರೆ ಮುಗಿದೆ ಹೋಯಿತು ಎಂದ ಮತ್ತೊಬ್ಬ. ನನಗೂ ನಿಜ ಅಂತ ಅನ್ನಿಸ್ತು. ಮೂಳಿಯಾದರೂ ಸಿಗುವುದಾದರೆ ಸತ್ತದ್ದಕ್ಕೆ ಸಾಕ್ಷಿ ಸಿಕ್ಕಿದಂತಾಗುತ್ತದೆ. ಕೋರ್ಟಿನಲ್ಲಿ ಸಾಕ್ಷಿ ಸಿಗದಿದ್ದರೂ ಸೃಷ್ಟಿಸುತ್ತಾರೆ. ಇಲ್ಲಿ ನಿಜ ಅಂತ ಸಾಧಿಸೋದು ಹೇಗೆ? ಈ ಪ್ರಶ್ನೆಗೆ ನನ್ನ ಗೆಳೆಯರ ಬಳಿ ಉತ್ತರವಿಲ್ಲ. 'ಅಲ್ಲಿಗೆ ಹೋಗಿ ಬರೋಣ, ನಡೆಯಿರಿ. ನನ್ನ ಬಳಿ ತಾತಿಯಿದೆ. ಏನೂ ಆಗೋಲ್ಲ' ಎಂದು ಏನೇನೋ ಪೂಸಿ ಮಾಡಿ, ಧೈರ್ಯ ತುಂಬಿ, ಇಬ್ಬರನ್ನು ಕರೆದುಕೊಂಡು ಹೊರಟೆ. ಕೆರೆ ಏರಿಯ ಬಳಿ ಹೋಗುತ್ತಿದ್ದಂತೆ, ಕೊಳ್ಳಿಯಾಗಲಿ ದೆವ್ವವಾಗಲಿ ಕಾಣಿಸುತ್ತಿರಲಿಲ್ಲ. ಏರಿ ಹತ್ತಿ ನಿಂತಾಗಲೂ ದೆವ್ವದ ವಾಸನೆಯೇ ಸಿಗಲಿಲ್ಲ. 'ತಾತಿ ಇದೆ ಅಂದಲ್ಲಪ್ಪ, ಅದಕ್ಕವು ಹೆದರಿ ಅವಿತುಕೊಂಡುವು ಅಂತ ಕಾಣ್ತದೆ' ಎಂದು ಗೆಳೆಯರು ನನ್ನ ವಾದಕ್ಕೆ ಕಡಿವಾಣ ಹಾಕಲು ಪ್ರಯತ್ನಿಸಿದರು.'ನಿಮಗೆ ಧೈರ್ಯ ಬರಲಿ ಅಂತ ಹೇಳ್ದೆ. ನನ್ನ ಹತ್ತಿರ ತಾತಿಯೂ ಇಲ್ಲ, ಭೀತಿಯೂ ಇಲ್ಲ; ಇರೋದು ಭಾತಿ ಒಂದೇ' ಎಂದೆ. ಮತ್ತೂ ತುಸು ಹೊತ್ತು ಅಲ್ಲಿಯೆ ಕಾದೆವು. ಬಂದ ದಾರಿಗೆ ಸುಂಕವಿಲ್ಲವೆಂದು ಹಿಂದಿರುಗಿದೆವು.

ಮಂದೆಯ ಬಳಿ ಬರುತ್ತಿದ್ದಂತೆ ಶಂಭೂಗೌಡನ ತೋಪಿನಲ್ಲಿ (ಮಂದೆಯಿಂದ ಅರ್ಧಫರ್ಲಾಂಗಿರಬಹುದು) ಬೆಳಕು ಕಾಣಿಸಿಕೊಂಡಿತು. 'ನೋಡಿದೇನಪ್ಪಾ, ಈ ಕಡೆ ನಾವು ಹೋದರೆ, ಆ ಕಡೆಯಿಂದ ಬಳಸಿಕೊಂಡು ದೆವ್ವ ಇಲ್ಲಿಗೆ ಬಂದು ಬಿಟ್ಟಿದೆ. ಅದು ನಮ್ಮ ಕಡೆಗೇ ಬರುವಂತಿದೆ' ಎಂದರು ನನ್ನ ಗೆಳೆಯರು. ಇವರಿಗೂ ಕೈಕಾಲು ನಡುಗಲಾರಂಭಿಸಿದುವು. ನಾನೊಂದು ಸಿಳ್ಳೆ ಹಾಕಿದೆ. ಆ ಕಡೆಯಿಂದ ಸಿಳ್ಳೆಯ ಪ್ರತ್ಯುತ್ತರ ಬಂತು. 'ಕೊಳ್ಳಿ ದೆವ್ವ ಅಲ್ಲ ಕಣ್ರಯ್ಯ. ಅದು ಲ್ಯಾಂಟರ್ನ್. ಯಾರೋ ಊರಿನ ದಾರಿಗುಂಟ ಹೋಗ್ತಿದ್ರು. ಸಿಳ್ಳೆ ಕೇಳಿ ಈ ಕಡೆಗೆ ಬರುವಂತಿದೆ' ಎಂದೆ. ಮೂರ್ನಾಲ್ಕು ನಿಮಿಷಗಳಲ್ಲಿ ನನ್ನ ಮಾತು ನಿಜವಾಯಿತು. ದೂರದ ಊರಿಗೆ ಪಯಣ ಹೊರಟಿದ್ದ ಅವರಿಗೂ ಶೆಟ್ಟಿಹಳ್ಳಿ ಕೆರೆ ಏರಿಯ ಕೊಳ್ಳಿ ದೆವ್ವ ಕಾಣಿಸಿತಂತೆ. ಅವರಿಗೂ ದಿಗಿಲಾಯಿತಂತೆ. 'ಅಲ್ಲಿ ದೆವ್ವವೇ ಇರಲಿಲ್ಲ. ನೋಡೋಣ ಅಂತ ಹೋಗಿದ್ದೆವು. ಯಾರೋ ನಿಮ್ಮ ಹಾಗೆ ಲಾಂದ್ರ ಹಿಡಿದುಕೊಂಡು

ಪಯಣ ಹೊರಟಿರಬೇಕೆಂದು ತೋರುತ್ತದೆ' ಎಂದೆ. ನನ್ನ ಮಾತಿನಲ್ಲಿ ಅವರಿಗೆ ನಂಬಿಕೆ ಹುಟ್ಟಲಿಲ್ಲ.

ಎಷ್ಟೋ ದಿನಗಳ ನಂತರ ಈ ಕತೆಯನ್ನು ಭೌತ ವಿಜ್ಞಾನದ ಪ್ರಾಧ್ಯಾಪಕರಿಗೆ ಹೇಳಿದೆ. 'ನೀವು ಹೇಳಿದ ಜಾಗದಲ್ಲಿ ದನಗಳದ್ದೋ ಮನುಷ್ಯರದ್ದೋ ಮೂಳೆಗಳು ಬಿದ್ದಿರಬೇಕು. ಅವುಗಳಲ್ಲಿ ರಂಜಕವಿರುತ್ತದೆ. ಗಾಳಿ ಬೀಸಿ ಅದಕ್ಕೆ ಆಮ್ಲಜನಕ ಸಂಪರ್ಕವೊದಗಿದ್ದಾದರೆ ರಂಜಕದಿಂದ ಕಾಂತಿ ಹೊರ ಹೊಮ್ಮುತ್ತದೆ. ಗಾಳಿ ನಿಂತ ಕೂಡಲೇ ಕಾಂತಿ ನಿಂತು ಹೋಗುತ್ತದೆ'ಎಂದವರು ನುಡಿದರು. ನಾನು ಮತ್ತೆ ಅಲ್ಲಿಗೆ ಹೋಗಿ ಪರಿಶೀಲನೆ ನಡೆಸಲಿಲ್ಲ. ಮೈಸೂರಿನ ಚಾಮುಂಡಿ ತಪ್ಪಲ ಬಳಿಯ ಸುಡುಗಾಡಿನಲ್ಲಿ ಆ ರಂಜಕದ ಮಹತ್ವವನ್ನು ಗುರುತಿಸಿದೆ. ಆದ್ದರಿಂದಲೇ ಕೊಳ್ಳಿ ದೆವ್ವಗಳ ಕಾಟ ಮಸಣದಲ್ಲಿ ವಿಪರೀತ!

ಬೆನ್ನು ಹತ್ತಿದ ಭೂತ ಸುಲಭವಾಗಿ ಬಿಟ್ಟು ಹೋಗುವುದಿಲ್ಲವಷ್ಟೆ. ನನಗೊಬ್ಬರು ಗೆಳೆಯ ನೆಂಟರಿದ್ದಾರೆ; ಸೌಕರ್ಯಕ್ಕಾಗಿ ಒಬ್ಬರು ಷಡ್ಡಕರೆಂದು ಅವರನ್ನು ಕರೆಯುತ್ತೇನೆ. ಒಬ್ಬರೆಂದರೆ ಹಲವರಲ್ಲಿ ಒಬ್ಬರೆಂದರ್ಥ. ನಾನು ಮದುವೆಯಾದ ನಂತರ ನನ್ನಾಕೆಯನ್ನು ತವರಿನಿಂದ ಕದಲಿಸಿರಲಿಲ್ಲ, ಮೂರ್‍ನಾಲ್ಕು ವರ್ಷ. ನಾನು ಬೆಂಗಳೂರಿನಲ್ಲ ಪುಡಿ ಹುದ್ದೆಯಲ್ಲಿದ್ದೆ. ಪುಡಿ ಮಾಡುವ ಹುದ್ದೆಯಲ್ಲ. ಸಣ್ಣ ಹುದ್ದೆ ಎಂದರ್ಥ. ಪ್ರಪಂಚದ ಸುವಿಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರು ರಚಿಸಿದ 'ಸ್ಮಾಲ್ ಈಸ್‌ಬ್ಯೂಟಿ ಫುಲ್' ಎಂಬ ಗ್ರಂಥ ಹಲವು ಗಣ್ಯರ ಗಮನ ಸೆಳೆದಿದೆ. ನನಗೂ 'ಸ್ಮಾಲ್' ಇಷ್ಟ, ಈಚೀಚೆಗೆ, ವಯಸ್ಸಾಗುತ್ತಾ ಆಗುತ್ತಾ. ಮೊದಲೇ ಆ ಪುಸ್ತಕ ನನ್ನ ಕೈಗೆ ಸಿಕ್ಕಿದ್ದರೆ ಸ್ಮಾಲ್ ಹುದ್ದೆಗೆ ಬಹಿಷ್ಕಾರ ಹಾಕುತ್ತಿರಲಿಲ್ಲ. ಅದಿರಲಿ, ಸಣ್ಣ ಹುದ್ದೆಯಲ್ಲಿದ್ದಾಗ ನಾನು ಮಾವನ ಮನೆಗೆ ಅಲ್ಲ ಅಲ್ಲ, ಮಡದಿಯ ಮನೆಗೆ, ಯಾರಾದರೂ ಆಡಿಕೊಂಡಾರೆಂಬ ಸಂಕೋಚದಿಂದ ತಲೆ ತಗ್ಗಿಸಿಕೊಂಡು ವಾರಕ್ಕೊಮ್ಮೆ ಬರುತ್ತಿದ್ದೆ-ವಾರಕ್ಕೊಮ್ಮೆ ಎಂದರೆ ಶನಿವಾರ ಸಂಜೆ. ನನಗೆ ಸಂಜೆ ರೈಲೇ ಇಷ್ಟ. ಏಕೆ ಅಂತ ಕಾರಣ ಕೇಳಬಾರದು. ಬುದ್ಧಿ ಹರಿತವಾಗಿದ್ದರೆ, ಲೋಕಾನುಭವವಿದ್ದರೆ, ಅರ್ಥಮಾಡಿಕೊಳ್ಳಿ ಅಥವಾ ಮರೆತು ಬಿಡಿ. ಆ ರೈಲು ನನಗೋಸ್ಕರ ನಿಧಾನವಾಗಿ ತೆವಳುತ್ತ, ರಾತ್ರಿ ಎಂಟುವರೆ ಗಂಟೆಗೆ ಚನ್ನಪಟ್ಟಣ ಸೇರುತ್ತಿತ್ತು. ಅಲ್ಲಿಂದ ಮಡದಿಯ ಅಲ್ಲ, ಅಲ್ಲ, ಮಾವನ - ಮನೆ ಒಂದೂವರೆ ಮೈಲಿ ಇರಬಹುದು. ಅರ್ಧಗಂಟೆಯಲ್ಲಿ ನಡೆದೇ ಊರಿನ ಜನಕ್ಕೆ ಕಾಣಿಸದಂತೆ ಮನೆ ಸೇರಿಕೊಳ್ಳುತ್ತಿದ್ದೆ. ಅಳಿಯ ಬೆಳಕಿನಲ್ಲಿಯೇ ಬರಬೇಕೆಂಬುದು ಮನೆಯವರ ಇಚ್ಛೆ. ಅವರು ಉದಾರಿಗಳು, ಜಾಮಾತೃ ವತ್ಸಲರು, ಸುಸಂಸ್ಕೃತರು, ನಿಜ. ಆದರೂ ಅವರು ಅಳಿಯನ ಅಂತರಂಗವನ್ನೂ ಅರ್ಥಮಾಡಿಕೊಳ್ಳಬಾರದೇ? ಅವರಲ್ಲಿ ಯಾರಿಗಾದರೂ ನನ್ನ ಪರಿಸ್ಥಿತಿ ಒದಗಿದ್ದರೆ ಅರ್ಥವಾಗುತ್ತಿತ್ತು. ಅದಿರಲಿ, ಯಾರಾದರೂ ಮತ್ತೊಂದು ಪ್ರಶ್ನೆಯನ್ನೂ ಕೇಳಲವಕಾಶವುಂಟು. ಪ್ರಾಧ್ಯಾಪಕರಾಗಲಿ, ಶಾಸಕರಾಗಲಿ ಅಥವಾ ಓಸುಣರಾಗಲಿ, ಪ್ರಶ್ನೆಯನ್ನು ಕೇಳುವಲ್ಲಿ ಕಷ್ಟವಾಗದು. ಉತ್ತರ ಬರೆಯಿರೆಂದು ಅವರನ್ನೇ ಕೇಳಿದಾಗ ಗೊತ್ತಾಗುತ್ತದೆ ಅವರ ಬಂಡವಾಳ. ನನ್ನನ್ನು ಕೇಳಬಹುದಾದ ಪ್ರಶ್ನೆ ಯಾವುದು? ಮಾವನ

ಮನೆಗೆ ಯಾವಾಗಲೂ ಠೀಕಾಗಿ ಜಬ್ಬಾಗಿ ಹೋಗಬೇಕಲ್ಲವೇ? ಚನ್ನಪಟ್ಟಣದಲ್ಲಿ ಕುದುರೆ ಗಾಡಿ ಎಷ್ಟಿಲ್ಲ? ಆ ಪ್ರಶ್ನೆಗಳ ಅಂತರಾರ್ಥ, ವಿಶೇಷಾರ್ಥ, ಗೂಢಾರ್ಥ, ವ್ಯಂಗ್ಯಾರ್ಥ ಎಲ್ಲವೂ ನನಗೆ ಗೊತ್ತು. ನಾನೇನು ಸಾಹಿತಿಯಲ್ಲವೆ? 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ?' ಎಂದು ಎಂಟುನೂರು ವರ್ಷಗಳ ಹಿಂದಿನ ಆ ಮಹಾತಾಯಿ ಈಚಿನವರಿಗೆ ಎಂಥ ಪಾಠ ಕಲಿಸಿದ್ದಾರೆ? ನಿಮ್ಮಲ್ಲಿ ಕವಿತಾ ಪ್ರತಿಭೆಯಿದ್ದರೆ ಅಂಥದೊಂದು ವಚನ ರಚಿಸಿ. ಬೇಡ ವಚನದ ಒಂದು ಸಾಲು ರಚಿಸಿ ಎಂದು ಸಮಕಾಲೀನರು ಮುಂದಿಗೆ ಎಸೆಯಬಹುದು. ನಾನು ರಚಿಸಲಿಲ್ಲ, ಅವರೇ ರಚಿಸಿ ಗಾಳಿಯಲ್ಲಿ ತೂರಬಹುದು: ಮಾವನ ಮನೆಯಲ್ಲಿ ಮಡದಿಯನ್ನು ಮಡಗಿ ಮಾನ ಮರ್ಯಾದೆಗಳಿಗಂಜಿದಡೆಂತಯ್ಯ-ಎಂದು.

ಮುಖ್ಯ ವಿಷಯ ಬಿಟ್ಟು ಮಾತು ಎಲ್ಲೆಲ್ಲಿಯೋ ಹೋಯಿತು. ಡಬ್ಬ ಕಟ್ಟಿದ ಬಾಲದ ಕತ್ತೆಯಂತೆ. ನಿಲ್ದಾಣದ ಹೊರಗೆ ಬಂದಾಗ ಷಡ್ವಕರೂ ಸಿಕ್ಕಿದರು. ಅವರೂ ಬೆಂಗಳೂರಿನಿಂದ ಬಂದುದಾಗಿ ಹೇಳಿದರು. ಬಯಲಿನಲ್ಲಿ ಮೇಯುವ ಜಾನುವಾರುಗಳಿಗೆ ಗೊತ್ತು ಸಂಜೆಯಾದ ಕೂಡಲೇ ಎಲ್ಲಿಗೆ ಹೋಗಬೇಕೆಂದು. ನಮ್ಮ ಗಮ್ಯ ಸ್ಥಾನ ಯಾವುದೆಂದು ನಮ್ಮಿಬ್ಬರಿಗೂ ಗೊತ್ತಿದ್ದುದರಿಂದ ಆ ಬಗ್ಗೆ ಪ್ರಶ್ನೆ ಕೇಳುವಷ್ಟು ಹೆಡ್ಡರಲ್ಲ ನಾವು. ಮಳೆ ಬೇರೆ ಲೊಟಕುತ್ತಿತ್ತು, ನಾವೂ ಮರದಡಿ ನಿಂತೆವು. ಯಾರದೋ ಮನೆಯ ಸೂರಿನಡಿ ನಿಂತೆವು. ಮಳೆಯೊಡನೆ ನಮ್ಮ ಹಠವೆಯೂ ಸ್ಪರ್ಧಿಸುತ್ತಿತ್ತು. ನಮ್ಮ ಬಗ್ಗೆ ಅದಕ್ಕೂ ಸಹಾನುಭೂತಿಯಿಲ್ಲ. ಕಡೆಗೂ ನಾವೇ ಗೆದ್ದವು. ಬಟ್ಟೆ ಒದ್ದೆಯಾದರೂ ಸರಿಯೇ ಎಂದು ನಾವು ಹೊರಟೇ ಬಿಟ್ಟೆವು. ನಮ್ಮ ಛಲವನ್ನು ಮೆಚ್ಚಿದ ಮಳೆರಾಯ ತನ್ನ ರಭಸವನ್ನು ಕುಗ್ಗಿಸಿದ. ಕೆರೆ ಏರಿ ಹಿಂದಿನ (ಈಗ ಆ ದಾರಿಯನ್ನು ರೈತರು ಅಪಹರಿಸಿಕೊಂಡಿದ್ದಾರೆ) ದಾರಿಯಲ್ಲಿ ನಡೆದು, ಓಣಿಯನ್ನು ದಾಟಿ, ಲಾಳ ಗಟ್ಟದ ಕಡೆಗೆ ತಿರುಗಿ, ನಾಲ್ಕು ಮೂರು ಹೆಜ್ಜೆ ಹಾಕಿರಬಹುದು. ಷಡ್ವಕರು ನನ್ನ ಭುಜ ಹಿಡಿದುಕೊಂಡು 'ಗೌಡ್ರೆ, ಅಗೊ, ಅಲ್ಲಿ ನೋಡಿ, ಭೂಮಿಗೂ ಆಕಾಶಕ್ಕೂ ಎಡೆಯಿಲ್ಲದಂತೆ ನಿಂತಿದೆ. ಚಲಿಸುವುದೂ ಇಲ್ಲ. ನನ್ನ ನಡಿಗೆ ಉಡುಗಿಹೋಗಿದೆ. ಹಿಂದಕ್ಕೆ ಹೋಗೋಣ' ಎಂದು ತೊದಲಿದರು. ಮೋಡಹಿಡಿದ ಕಗ್ಗತ್ತಲಲ್ಲಿ ಎಲ್ಲ ವಸ್ತುಗಳು ವಿರೂಪವಾಗಿ ಕಾಣಿಸುತ್ತಿದ್ದವು. ನಮ್ಮನ್ನೇನೂ ಮಾಡೋದಿಲ್ರಿ. ಅದು ಮರದ ಮೋಟಿದ್ದಂತೆ ಕಾಣುತ್ತದೆ' ಎಂದವರಿಗೆ ನಾನು ಧೈರ್ಯ ನೀಡಲು ಮಾಡಿದ ಯತ್ನ ಫಲಕಾರಿಯಾಗಲಿಲ್ಲ; ಇಲ್ಲ, ಇಲ್ಲ, ಸಾಧ್ಯವಿಲ್ಲ. ಅದು ನಮ್ಮ ಕಡೆಗೆ ಬರುತ್ತಿದೆ; ' ಅದು ನಮ್ಮ ಕಡೆಗೆ ಬರುತ್ತಿಲ್ರಿ; ನಾವು ಅದರ ಕಡೆಗೆ ಹೋಗುತ್ತಿದ್ದೇವೆ' ಆ ಭೂತವನ್ನು ಬಲಕ್ಕೆ ಬಿಟ್ಟುಕೊಂಡು, ಊರು ದಾಟಿ ಮುಂದೆ ಹೋದರೆ, ಅವರಿಗೆ ಕೊಳ್ಳಿ ದೆವ್ವ ದೂರದಲ್ಲಿ ಕಾಣಿಸಬೇಕೆ? 'ಅದು ಕೊಳ್ಳಿದೆವ್ವ ಅಲ್ಲ ಕಣ್ರಿ, ಆಲೆಮನೆ ಇರಬೇಕು. ಅಲ್ಲಿಗೆ ಹೋಗೋಣ.......' ಎಂದು ನಾನು ಮಾತು ಮುಗಿಸುವ ಮುನ್ನವೇ 'ನಾನಂತು ಬರೋದಿಲ್ಲ. ಈ ಮರದಡಿಯಲ್ಲಿಯೇ ರಾತ್ರಿ ಕಳೆದೇನು' ಎಂದವರು ಗುಡುಗಿದರು. 'ಅಲ್ರಿ, ಈಗ ಮನೇಲಿ ಎಲ್ಲ ಮಲಗಿರ್ತಾರೆ. ಆಲೆಮನೆಗೆ ಹೋಗಿ ಯಾರನ್ನಾದರೂ ಕರೆದುಕೊಂಡು

ಬಂದು ಬಾಗಿಲು ತೆಗಿಸೋಣ' ಎಂದೆ. ಅವರು ಕೆಳಗೆ ಕುಳಿತೇ ಬಿಟ್ಟರು. 'ಇಲ್ಲೇ ಕುಳಿತಿರಿ. ಯಾರನ್ನಾದರೂ ಇಲ್ಲಿಗೇ ಕರೆದುಕೊಂಡು ಬರ್ತೀನಿ' ಎಂದು ನಾನು ಸರಸರನೆ ಹೊರಟೆ. ಅವರೂ ಹಿಂದೆಯೇ ಬಂದರು. ನಿಜಕ್ಕೂ ದೆವ್ವ ಅವರಿಗೆ ಕಾಣಿಸಿತೋ, ಅವೇಳೆಯಲ್ಲಿ ಮಾವನ ಊರಿಗೆ ಹೋಗುವುದೇಕೆಂದು ಆವುಟ ತೆಗೆದರೋ, ಅಥವಾ ಪ್ರತಿ ವಾರಾಂತ್ಯದಲ್ಲಿ ಆ ಮಾರ್ಗವಾಗಿ ಬರುತ್ತಿದ್ದ ನನ್ನನ್ನು ಹೆದರಿಸಲು ಆ ಉಪಾಯ ಹೂಡಿದರೋ ಗೊತ್ತಿಲ್ಲ.

ಈ ಹಿಂದೆಯೇ ದಾಖಲಿಸಬೇಕಾಗಿದ್ದ ಸಂಗತಿಯನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಭೂತ ಪ್ರೇತಗಳ ಬಗ್ಗೆ ನಂಬಿಕೆಯಿದ್ದು ಹೆದರುತ್ತಿದ್ದ ದಿನಗಳವು. ನಾನಾಗ ಪ್ರೌಢಶಾಲೆಯಲ್ಲಿ ಓದುತ್ತಿದ್ದೆ. ನಮ್ಮೂರಿನ ಮೇಲೆ ಪ್ಲೇಗು ಮಾರಮ್ಮನ ಕೃಪಾದೃಷ್ಟಿ ಬಿದ್ದಿತು. ಆ ತಾಯಿಯ ದೃಷ್ಟಿ ಬಿದ್ದಾಗ ಜನ ಮೊದಲು ಕೈಗೊಳ್ಳುತ್ತಿದ್ದ ಕಾರ್ಯಕ್ರಮವೆಂದರೆ ಊರು ಬಿಡುವುದು. ಬಿಟ್ಟ ಊರಿಗೆ ಎಂಥ ಧೈರ್ಯಸ್ಥನೂ ತಲೆ ಹಾಕುತ್ತಿರಲಿಲ್ಲ-ಹಗಲಾಗಲಿ, ಇರುಳಾಗಲಿ. ಕಳ್ಳರನ್ನು ಕಂಡರೆ ಮಾತ್ರ ಆ ತಾಯಿ ಹೆದರುತ್ತಿದ್ದಳೆಂದು ಕಾಣುತ್ತದೆ. ಕಳ್ಳರು ಓತ್ತಲಿನ ತೆಂಗು ತರಕಾರಿ ಲೂಟಿ ಮಾಡಿದರು, ಮುಂಡಿಗೆ ಕಂಬ ಬೋದಿಗೆ ಕಳಚಿಕೊಂಡು ಹೋದರು, ಇತ್ಯಾದಿ ಪುಕಾರುಗಳಿದ್ದ ಇಮ್ದವು. ಜನ ಬಿಟ್ಟಾ ಮನೆಗಳಲ್ಲಿ ಭೂತ ಪ್ರೇತಗಳು ಸೇರಿಕೊಳ್ಳುತ್ತವೆಂಬ ಪ್ರತೀತಿಯೂ ಇತ್ತು. ಶಾಲೆಯ ಹುಡುಗರು ನಾವು ಕೆಲವರು ಭೂತಗಳನ್ನು ಹುಡುಕಿಕೊಂಡೇ ಒಟ್ಟಾಗಿ ಮನೆಗಳನ್ನು ಸೋಸಿದ್ದುಂಟು. ಜನ ತಿಳಿಸಿದ್ದಂತೆ'ಗಾಳಿ' ಇರಲಿಲ್ಲ; ಗಾಳಿಯಿತ್ತು, ನಿಜ. ಆ ಸುದ್ದಿ ತಿಳಿದ ನಮ್ಮ ತಂದೆ ನನಗೆ ಬಿಸಿ ಮುಟ್ಟಿಸಿದ್ದೂ ಉಂಟು. ಈಗ ನನಗನಿಸುತ್ತದೆ, ನಮ್ಮ ಸದ್ಗುಣಗಳಿಗೆಂತೂ ಅಂತೆಯೇ ದುರ್ಗುಣ ದೌರ್ಬಲ್ಯಗಳಿಗೆ ಹಿರಿಯರೂ ಕಾರಣರೆಂದು. ನಮಗೆ ಹೊಡೆದು ಬಡಿದು ನಮ್ಮಲ್ಲಿ ಅಂಜಿಕೆಯನ್ನು ಹುಟ್ಟಿಸುತ್ತಿದ್ದರು. ಅವರ ಇಂಥ ಶಿಕ್ಷೆಯಲ್ಲಿ ವಾತ್ಸಲ್ಯವಿತ್ತೇ ಹೊರತು ದ್ವೇಷವಿರಲಿಲ್ಲ.

ಮೈಸೂರಿಗೆ ವರ್ಗವಾಗಿ ಬಂದಾಗ ನಾನು ಪಡುವಾರ ಹಳ್ಳಿ (ಈಗಿನ ವಿನಾಯಕ ನಗರ)ಯಲ್ಲಿ ಮನೆ ಮಾಡಿದೆ. ಆ ತುಂಡು ಬೀದಿಯಲ್ಲಿ ಅದೇ ಕೊನೆಯ ಮನೆ. ಅಲ್ಲಿದ್ದದ್ದು ನಾಲ್ಕೈದು ಮನೆ ಮಾತ್ರ. ಗಂಡನ ಹಿಂಸೆಗೆ ಗುರಿಯಾದ ತರುಣಿಯರಿಗೆ'ಭಗ್ನ ಪ್ರಣಯದಿಂದ ನಿರಾಶೆಗೊಂಡ ಯುವಕ-ಯುವತಿಯವರಿಗೆ, ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳಿಗೆ ಕುಕ್ಕರಹಳ್ಳಿ ಕೆರೆ ಆಶ್ರಯ ಸ್ಥಾನವಾಗಿತ್ತಷ್ಟೆ. ನಮ್ಮ ಹಿತೈಷಿಗಳು ಬಂದು 'ಇಲ್ಲೇಕೆ ಮನೆ ಮಾಡಿದ್ದೀರಿ? ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಪ್ರೇತಗಳು ಕುಣಿಯುವುದು ನಿಮ್ಮ ಮನೆಗೆ ಕಾಣಿಸುತ್ತದೆ. ಜಾಗ್ರತೆ ಮನೆ ಖಾಲಿ ಮಾಡಿ, ಹೊರಗೆ ಹೋದರೆ ಬೇಗ ಮನೆಗೆ ಬಂದು ಬಿಡಿ' ಎಂದು ಸದ್ಯ ನನಗೆ ಮಾತ್ರ - ಬುದ್ಧಿವಾದ ಹೇಳುತ್ತಿದ್ದರು. 'ಆಗಲಿ, ಬೇರೆ ಮನೆ ಹುಡುಕುತ್ತೇನೆ' ಎಂದು ಅವರಿಗೆ ಸಮಾಧಾನ ಹೇಳಿ ಕಳಿಸುತ್ತಿದ್ದೆ'. ನನಗೆ'ಮಾತ್ರ ಒಳಗೊಳಗೆ ನಗು. 'ನಮ್ಮ ಮನೆಯಲ್ಲಿ ಮೂರ್‍ನಾಲ್ಕು ಮಂದಿ ಗಂಡಸರಿರುವಾಗ, ನಮ್ಮತನಕ ಬರಲು ಯಾವ ಪ್ರೇತಕ್ಕೆ ತಾನೆ ಧೈರ್ಯವಿದೆ' ಎಂದು. ಬೆಳಗ್ಗೆ 5-30ಗೆ ಎದ್ದು ಬಟ್ಟೆ ಒಗೆಯಲು ಒಬ್ಬನೇ ಕೆರೆಯ ತಡಿಗೆ ಹೋಗುತ್ತಿದ್ದೆ. ಎಷ್ಟೋ ಸಲ ರಾತ್ರಿ ಹತ್ತು- ಹನ್ನೊಂದು ಗಂಟೆಯ

ಸಮಯದಲ್ಲಿ ಆ ಕೆರೆಯ ಮುಖಾಂತರ ಮನೆಗೆ ಬಂದಿದ್ದೇನೆ. ಒಬ್ಬಾನೊಬ್ಬನೇ. ಯಾವೊಂದು ಪ್ರೇತವೂ ನನ್ನ ಕಣ್ಣಿಗೆ ಬೀಳಲಿಲ್ಲ. ಶೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ಅಂತೆ. ರಕ್ತಾಕ್ಷಿಯ ಬಸವಯ್ಯನಂತೆ ಸಂಬಂಧವಿದ್ದರೆ ಮಾತ್ರ ಪ್ರೇತಗಳು ಕಾಣಿಸಿಕೊಳ್ಳುತ್ತವೆಯೋ ಏನೋ. ಪಟ್ಟಣಗಳಲ್ಲಿ ಗಾಳಿ ಸೇರಿಕೊಂಡು ಕೆಲವು ಮನೆಗಳು ಖಾಲಿ ಬಿದ್ದಿರುವುದುಂಟು. ಅವು ಅಗ್ಗವಾಗಿ ಸಿಗುತ್ತವೆಂಬ ಕಾರಣಕ್ಕಾಗಿ ಕೊಳ್ಳಲು ಸಹ ಯೋಚಿಸಿದ್ದೆ. ಸಂಜೆಯ ಹೊತ್ತು ಅಂಥ ಮನೆಗಳಲ್ಲಿ ನಿಂತು ಬಂದದ್ದೂ ಉಂಟು. ಮನೆಯವರ ಮನಸ್ಸಿಗೆ ಆಘಾತವಾಗಬಾರದು ಎಂಬ ದೃಷ್ಟಿಯಿಂದ ಆ ಯೋಚನೆಯನ್ನು ಕಾರ್ಯಗತಗೊಳಿಸಲಾಗಲಿಲ್ಲ.

ಅಂತು ಭೂತದ ಕತೆ ಭೂತಾಕಾರವಾಗಿ ಬೆಳೆದಿದೆ. ಸದ್ಯಕ್ಕಿಷ್ಟೇ ಸಾಕು.

*****

ನನ್ನ ಸ್ವಭಾವ: ಭಾವುಕತೆ, ಅಳುಬುರುಕತನ

ಭಾವಾವೇಶದಿಂದ ಕೂಡಿದ ಅಳುಬುರುಕತನ ನನ್ನ ಹುಟ್ಟು ಗುಣ. ಆ ಗುಣ ಆನುವಂಶಿಕವಿದ್ದಂತೆ ಕಾಣುವುದಿಲ್ಲ. ಇದ್ದರೂ ಅದು ತುಂಬ ತೆಳ್ಳನೆಯದೆಂಬಂತೆ ಮಾತ್ರ ತೋರುತ್ತದೆ. ನನ್ನ ಮನೆಯಲ್ಲಿ ಅಣ್ಣನಾಗಲಿ ಅಕ್ಕತಂಗಿಯರಾಗಲಿ, ತಂದೆಯಾಗಲಿ ಎಂಥ ಸಂದರ್ಭದಲ್ಲಾದರೂ ಹೆಚ್ಚು ಅತ್ತಂತೆ ನನಗೆ ನೆನಪಿಲ್ಲ. ತಾಯಿಯಲ್ಲಿದ್ದ ಆ ಗುಣ ನನಗಂಟಿಕೊಂಡಿದ್ದು, ಬಹುವಾಗಿ, ವಯಸ್ಸಾದಂತೆಲ್ಲ ಮತ್ತೂ ಬಹುವಾಗಿ ಬೆಳೆದಿದೆ. ಮನೆಯಲ್ಲಿ ಅಪ್ಪ- ಅಮ್ಮ ಬಯ್ದಾಡಿದರೆ, ಅಣ್ಣ- ಅಪ್ಪ ಜಗಳವಾಡಿದರೆ, ಅಕ್ಕತಂಗಿಯರು ಬಯ್ಸಿಸಿಕೊಂಡು ಅಳುತ್ತಿದ್ದರೆ, ಅಥವಾ ನನ್ನನ್ನೇ ಅಪ್ಪ ಬಯ್ದರೆ ರೋದಿಸುತ್ತಿದ್ದೆ. ಹೆಚ್ಚು ಕೋಪ ಬಂದಾಗಲೂ ಅತ್ತು ಮರೆಯುತ್ತಿದ್ದುದುಂಟು. ಕುರಿಮೇಕೆ ಕಾಯುವಾಗ, ಅವುಗಳ ನೋವನ್ನು ನೋಡಿ ಸಹಿಸಲಾರದೆ ಅತ್ತಿದ್ದೇನೆ. ಪಕ್ಕದ ಮನೆಯಲ್ಲಿ ಯಾರಾದರೂ ಅಳುತ್ತಿದ್ದರೆ ನಾನು ಅಳುಮೋರೆ ಮಾಡಿಕೊಂಡು ಕುಳಿತಿರುತ್ತಿದ್ದೆ. ನಮ್ಮವರೆ ಆಗಬೇಕಾಗಿಲ್ಲ, ಯಾರೂ ಸತ್ತರೂ ನಾನು ಅತ್ತದ್ದುಂಟು. ನಮ್ಮ ಮನೆಯ ಮಗಳೆ ಆಗಬೇಕಾಗಿಲ್ಲ, ನೆರೆಹೊರೆಯ ಹೆಣ್ಣು ಮಕ್ಕಳು ಗಂಡನ ಮನೆಗೆ ಹೋಗುವಾಗ ನಾನು ಕಣ್ಣೀರು ಹರಿಸುತ್ತಿದ್ದೆ. ನನಗೆ ಅವಮಾನವಾದಾಗಲಂತು ಅತ್ತು ಬಳಲಿದಾಗ ಅದು ಮರೆತು ಹೋಗುತ್ತದೆ. ಆ ಕಾರಣದಿಂದಾಗಿ ತಂದೆ ನನ್ನನ್ನು ಅಳುಗುನ್ನಿಯೆಂದು ಆಗಾಗ್ಗೆ ಕರೆಯುತ್ತಿದ್ದರು.

ನಾನು ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಗಿಸಿ ಬೆಂಗಳೂರಿಗೆ ಹೋಗುವ ತನಕ ಅವ್ವನ ಮಗ್ಗುಲಲ್ಲಿ ಮಲಗುತ್ತಿದ್ದೆ. ಜಗತ್ತಿನಲ್ಲಿ ನನಗೆ ಅತ್ಯಂತ ಪ್ರಿಯವಾದ ವಸ್ತುವೆಂದರೆ ನನ್ನವ್ವ. ಅಪ್ಪ ನನ್ನನ್ನು ಬಯ್ದಾಗ ನನ್ನ ಪರ ವಹಿಸಿಕೊಳ್ಳುತ್ತಿದ್ದವರು, ಹೊಡೆದಾಗ ಅಡ್ಡ ಬರುತ್ತಿದ್ದವರು ಅವ್ವ. ನನ್ನ ಶ್ರೀಮತಿಯೋ ನನ್ನ ಮಗಳೋ ಅಥವಾ ಬೇರಾವ ಹೆಂಗಸರೊ ಅಳುತ್ತಿದ್ದರೆ ನನ್ನ ತಾಯಿಯ ನೆನಪಾಗಿ ಅತ್ತು ಬಿಡುತ್ತೇನೆ. ಹೈಸ್ಕೂಲಿನಲ್ಲಿದ್ದಾಗ ಎರಡು ಮೂರು ಸಲ ತಿಂಗಳೋ ಎರಡು ತಿಂಗಳೋ ಚನ್ನಪಟ್ಟಣದಲ್ಲಿರಬೇಕಾಗಿತ್ತು. ಗೊತ್ತಿದ್ದವರ ಮನೆಗೆ ಅಕ್ಕಿ ಬೇಳೆ ಮೊದಲಾದ ಅಡುಗೆ ಪದಾರ್ಥಗಳನ್ನು ಹೊತ್ತುಕೊಂಡು ಹೋಗಿ, ನನ್ನನ್ನಲ್ಲಿ ಬಿಟ್ಟು ಬರುತ್ತಿದ್ದವರು ಅವರೇ. ಕೂಡಲೂರು ಕೆರೆ ಏರಿ ದಾಟಿದರೆ ಕೋಡಿಯ ಮೂಲೆಯಲ್ಲೊಂದು ಗೊಬ್ಬಳಿ ಮರವಿತ್ತು. ಅದು ನಮಗೆ ವಿಶ್ರಾಮದಾಣ. 'ಏನಪ್ಪ, ಆ ಮನೆಯ ಜನ ಎಂತೋ ಹೇಗೋ, ತಲೆನೋವು ಮೂಗು ನೋವು ಬಂದರೆ ಏನು ಮಾಡ್ತೀ. ರಾತ್ರಿ ಹೊತ್ತು ಉಚ್ಚೆ-ಹುಯ್ಬೇಕಾದ್ರೂ ಒಬ್ಬನೇ ಹೊರಗೆ ಹೋಗ್ಬೇಕಲ್ಲ. ತಲೆಯಲ್ಲಿ ಹೇನು ಹತ್ತಿಕೊಂಡರೆ ಬಗಿಯುವವರು ಯಾರು?' ಎಂದು ನನ್ನನ್ನವರು ತಬ್ಬಿಕೊಂಡು, ತಲೆಯನ್ನು ಮುಂಡಾಡಿ, ಗೊಳೋ ಅಂತ ಅತ್ತರು: ಅವರೊಡನೆ ನಾನೂ ಅಳುಗೂಡಿಸಿದರೆ ಕೆರೆ ತುಂಬುವಷ್ಟು ನೀರು ಹರಿಯುತ್ತಿತ್ತೇನೋ. ಆ ಮುಳ್ಳಿನ ಮರಕ್ಕೂ

ಮರುಕ ಹುಟ್ಟಿರಬೇಕು. ನಮ್ಮ ಆಕ್ರಂದನವನ್ನಾಲಿಸಿ. ನನ್ನನ್ನು ಕೋಟೆ ರಾಯರ ಮನೆಯಲ್ಲವರು ಬಿಟ್ಟು ಬಂದಾಗ ಆದೆಷ್ಟು ಅತ್ತೆನೋ? ರಾತ್ರಿಯಂತು ನಿದ್ದೆ ಬರುವ ತನಕ ಒಂದೇ ಸಮನೆ ಅಳುತ್ತಿದ್ದೆ.

ನಮ್ಮಪ್ಪನನ್ನು ನನ್ನ ಚಿಕ್ಕಪ್ಪನೂ, ಅವನ ಮಕ್ಕಳೂ ಬೀದಿಯಲ್ಲಿ ಕೆಡವಿಕೊಂಡು ಹೊಡೆಯುತ್ತಿದ್ದುದಾಗಲಿ, ದೊಡ್ಡಿ ಹೊಲದ ತೆವರಿಯ ಮೇಲೆ ಮೂರ್ಛೆ ಹೋಗುವ ತನಕ ನನ್ನ ಚಿಕ್ಕಪ್ಪನ ಪೋಲಿ ಮಗ ಅಣ್ಣನನ್ನು ಗಟ್ಟಿಸುತ್ತಿದ್ದುದಾಗಲಿ ನೆನಪಿಗೆ ಬಂದರೆ ಈಗಲೂ ಅಳು ಬರುತ್ತದೆ. ನಾನಾಗ ಸಣ್ಣವನಾದ್ದರಿಂದ ಅಸಹಾಯಕನಂತೆ ಲಬೊ ಲಬೊ ಎಂದು ಬಾಯಿ ಬಡಿದುಕೊಳ್ಳುತ್ತಿದ್ದೆ.

ನಾನು ಇಂಟರ್ ಮೀಡಿಯಟ್ ತರಗತಿಗೆ ಸೇರಲು ಬೆಂಗಳೂರಿಗೆ ಹೋಗ ಬೇಕಾಯಿತಷ್ಟೆ. ನನ್ನ ಜೀವನದ ರೋದನಾಧ್ಯಾಯಗಳಲ್ಲಿ ಅದು ದೀರ್ಘವಾದದ್ದೆಂದೇ ಹೇಳಬೇಕು. ನನ್ನನ್ನೂ ಅವ್ವನನ್ನೂ ಹಿಡಿದುಕೊಂಡಿದ್ದ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿ, ಕತ್ತು ಹಿಡಿದು ವಿಧಿ ನನ್ನನ್ನಲ್ಲಿಗೆ ನೂಕುತ್ತಿದ್ದಂತೆ ನನಗಾಗ ಅನಿಸುತ್ತಿತ್ತು. ಬೆಂಗಳೂರಿಗೆ ಹೊರಡುವ ಮುನ್ನ ಮೂರ್ನಾಲ್ಕು ದಿನಗಳಿಂದಲೇ ನಾನೂ ಅವ್ವ ಅಳಲಾರಂಭಿಸಿದೆವು. ನಮ್ಮ ಊರಿಗೂ ಬೆಂಗಳೂರಿಗೂ ಭೂಮ್ಯಂತರಿಕ್ಷದಷ್ಟು ಅಂತರವಿದ್ದಂತೆ, ಯಾರೂ ಕಾಣದ ಊರಿಗೆ ಹೋಗುತ್ತಿದ್ದಂತೆ ಚಿಂತೆ ನಮ್ಮಿಬ್ಬರ ಎದೆಯನ್ನು ಕೊರೆಯುತ್ತಿತ್ತು. ನನ್ನವ್ವನ ಮಗ್ಗುಲ ವಾತ್ಸಲ್ಯ ಸುಖವನ್ನು ಅವರ ಇರುಳು ಹೇನು ಬೇಟೆಯ ನೊಚ್ಚನೆಯ ಸವಿಯನ್ನು ಮುಂದೆ ಇಡೀ ಬದುಕಿನಲ್ಲಿಯೇ ಅನುಭವಿಸಲಾರೆನೆಂಬ ಕಟು ವಾಸ್ತವ ನಿರೀಕ್ಷೆಯಿಂದಲೋ ಏನೋ ನಾನು ಕೊನೆಯೆರಡು ರಾತ್ರಿ ನಿದ್ದೆ ಮಾಡಲಿಲ್ಲ. ಹಗಲು ಹೊಲದ ಬಳಿ ಹೋಗಿ ಮರಗಳ ಕೆಳಗೆ ಕುಳಿತು ಅತ್ತು ಅತ್ತು ಸುಸ್ತಾದನಂತರ, ಶರೀರದ ನೀರು ಖಾಲಿಯಾದ ನಂತರ ಮನೆಗೆ ಬರುತ್ತಿದ್ದೆ. ಹಳ್ಳಿಯ ಮುಗ್ಧೆ ಏನು ಬುದ್ಧಿ ಹೇಳಬಹುದೋ ಹೇಳಿ. ಉಳಿಸಿಟ್ಟುಕೊಂಡಿದ್ದ ಎರಡು ರೂಪಾಯನ್ನು ಯಾರೂ ಕಾಣದಂತೆ ಅವ್ವ ಕೊಟ್ಟರು. ಆ ದಿನವೂ ಬಂದೇ ಬಿಟ್ಟಿತು! ರೈಲಿನಲ್ಲಿ ಜನ ನೋಡಿಯಾರೆಂದು ಬಿಗಿಹಿಡಿದಿದ್ದ ಅಳುವಿನ ಕಟ್ಟೆ ರೈಲಿಳಿಯುತ್ತಿದ್ದಂತೆ ಒಡೆಯಿತು. ಬಳಿಯಿದ್ದ ಮಿತ್ರರೊಬ್ಬರು ಸಮಾಧಾನ ಮಾಡಿ, ಒಕ್ಕಲಿಗ ಹಾಸ್ಟೆಲ್ಲಿಗೆ ಕರೆದೊಯ್ದುರು.

ಹಾಸ್ಟೆಲ್ಲಿನಲ್ಲಿದ್ದ ಕಾಲದಲ್ಲಿ ಹಗಲು ಹೇಗೋ ಕಳೆದುಹೋಗುತ್ತಿತ್ತು. ರೋದನ ದೇವಿ ನನ್ನ ಮೈಮೇಲೆ ರಾತ್ರಿ ಮಾತ್ರ ಬರುತ್ತಿದ್ದಳು. ಅವಳು ಮೋಹದ ಬಲೆ ಬೀಸಿದಾಗ ನಾನು ಹಾಸ್ಟೆಲ್ ಹೊರಗೆ ಬಯಲಿನಲ್ಲಿದ್ದ ಕಲ್ಲುಬೆಂಚಿನ ಮೇಲೆ ಕುಳಿತು ಸಾಕಷ್ಟು ಅತ್ತ ನಂತರ ನನ್ನ ಕೋಣೆಗೆ ಹೋಗುತ್ತಿದ್ದೆ. ಅದು ನನ್ನ ನಿತ್ಯಕಾರ್ಯವಾಗಿತ್ತೆಂದೇ ಹೇಳಬಹುದು. ಆಗ ಅವ್ವ ಪ್ರತ್ಯಕ್ಷಳಾಗಿ ಪಕ್ಕದಲ್ಲಿ ಕುಳಿತು ಮುಖಕ್ಕೆ ಮುಖಕೊಟ್ಟು ಅಳುತ್ತಿದ್ದಳು. ಎಷ್ಟೋಸಲ ಕನಸಿನಲ್ಲಿ ಬಂದು ನನ್ನನ್ನ ಸಂತೈಸುತ್ತಿದ್ದುದೂ ಉಂಟು. ವಿದ್ಯಾರ್ಥಿವೇತನ ಬರದಿದ್ದರೆ ನಾನು ಓದು ಮುಂದುವರಿಸುವಂತಿರಲಿಲ್ಲ. ವೇತನ ಸಮಿತಿಯ ಸದಸ್ಯರಾದ ನಮ್ಮೂರ ಕಡೆಯ ರಾಜಕಾರಣಿಗಳನ್ನು ಕಂಡು ನನ್ನ ಸ್ಥಿತಿಯನ್ನು ವಿವರಿಸಿದಾಗ ಅವರು

ಸಹಾನುಭೂತಿ ತೋರದಿದ್ದಾಗ, ನನ್ನ ಅನಾಥ ಸ್ಥಿತಿಯನ್ನು ನೆನೆದು ಅದೇ ಕಲ್ಲು ಬೆಂಚಿನ ಮೇಲೆ ಕುಳಿತು ಅದೂ ಕರಗುವಂತೆ ಗೋಳ್ಗರೆದೆ. ಸಂತೋಷದ ಸಂದರ್ಭದಲ್ಲಿಯೂ ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳುತ್ತೇನೆಂಬುದನ್ನು ಮೊದಲೇ ಹೇಳಬೇಕಿತ್ತು. ಪ್ರಣತಾರ್ಥಿಹರನ್ ಎಂಬ ಗುರುಗಳೊಬ್ಬರ ಕೃಪೆಯಿಂದ ವಿದ್ಯಾರ್ಥಿವೇತನ ದೊರೆತಾಗ, ಆ ಗುರುಗಳಿಗೆ ಪರೋಕ್ಷವಾಗಿ ಅಶ್ರು ಕಾಣಿಕೆಯನ್ನು ಅರ್ಪಿಸಿದ್ದೇನೆ.

ನನಗೆ ಮೊದಲು ಗುರುದರ್ಶನವಾದದ್ದೇ ಕನಸಿನಲ್ಲಿ; ಆ ಮೇಲೆ ಅವರ ಭಾವಚಿತ್ರದಲ್ಲಿ. ದೂರದಿಂದಾದರೂ ಪ್ರಪ್ರಥಮತಃ ಗುರುಗಳ ದರ್ಶನವಾದದ್ದು ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದಲ್ಲಿ, ಶ್ರೀಪರಮಹಂಸರ ಶತಮಾನೋತ್ಸವ ಸಮಯದಲ್ಲಿ-1936 ರಲ್ಲೆಂದು ತೋರುತ್ತದೆ. ಅವರ ಸಮ್ಮೋಹನಾಕಾರವನ್ನು ಕಣ್ಣಾನ ಗಳಿಂದ ಹೀರಿ ತಣಿಯಬೇಕು, ಅವರ ಪ್ರತಿಮೆಯನ್ನು ಹೃದಯದಲ್ಲಡಗಿಸಿಕೊಳ್ಳಬೇಕು, ಸಾಧ್ಯವಾದರೆ ಕೈಗಳಿಂದ, ಇಲ್ಲವಾದರೆ ಕಣ್ಣುಗಳಿಂದಾದರೂ ಅವರ ಪಾದಕಮಲಗಳನ್ನು ಸ್ಪರ್ಶಿಸಬೇಕೆಂದು ನಾನು ಆ ಸಮಾರಂಭಕ್ಕೆ ಹೋಗಿದ್ದೆ. ಪ್ರಾರ್ಥನಾ ಸಮಯಕ್ಕಷ್ಟೆ ವೇದಿಕೆಗೆ ಬಂದು, ಅದು ಮುಗಿದ ಕೂಡಲೇ ಅದೃಶ್ಯರಾದರು. ಸುತ್ತಣವರಿಗೆ ಬೆರಗಾಗುವಂತೆ ನನ್ನ ಕಣ್ಣುಗಳಿಂದ ಆನಂದಾಶ್ರು ಕೋಡಿಹರಿಯಿತು. ಅವರ ದಿವ್ಯವಪುವನ್ನು ಸ್ಪರ್ಶಿಸುವ ಪುಣ್ಯ ಹಸ್ತಗಳಿಗೆ ಲಭಿಸದಿದ್ದರೂ ನೇತ್ರಮನಗಳಿಗೆ ಪ್ರಾಪ್ತಿಸಿದ ಆ ದಿವ್ಯಕ್ಷಣ ನನ್ನ ಜೀವನದ ಅಪೂರ್ವ ಭವ್ಯ ಘಟನೆಯಾಗಿ ನನ್ನ ಚಿತ್ತ ಭೂಮಿಕೆಯಲ್ಲಿ ಎಂದೆಂದೂ ಮಾಸದ ಸ್ಮಾರಕವಾಗಿ ನಾಟಿಕೊಂಡಿದೆ. ಆ ಘಟನೆ ನೆನಪಿಗೆ ಬಂದಾಗಲೆಲ್ಲ ಎದೆ ಬಾಗಿಲು ಮುಚ್ಚಿಕೊಳ್ಳುತ್ತದೆ, ಮೈಮನಗಳಿಗೆ ರೋಮಾಂಚನವಾಗುತ್ತದೆ, ಕುಣಿಕೆಯಲ್ಲಿ ಹನಿ ಇಣುಕುತ್ತದೆ.

ನೆಂಟರಾಗಲಿ ಗೆಳೆಯರಾಗಲಿ, ಕೊನೆಗೆ ಅಪರಿಚಿತರೆ ಆಗಲಿ, ಎರಡು ದಿನ ಜತೆಯಲ್ಲಿದ್ದೋ ಮನೆಯಲ್ಲಿದ್ದೋ ಹೋಗುವಾಗ ಅಳು ಸುರಿಯುತ್ತದೆ; ಮರೆಗೆ ಹೋಗಿ ಅತ್ತ ಮೇಲೆ ಸಮಾಧಾನವಾಗುತ್ತದೆ. ಪುತಿನ ಅವರೂ, ಅವರ ಮಡದಿ ಶೇಷಮ್ಮನವರೂ, ಮೈಸೂರು ಬಿಟ್ಟು ಬೆಂಗಳೂರಿಗೆ ಹೋದಾಗ ಯಾರಿಗೂ ಗೊತ್ತಾಗದಂತೆ ಕೆಲವು ದಿನ ಕಣ್ಣೀರು ಸುರಿಸಿದೆ; ಅವರಿದ್ದ ಮನೆ ಮುಂದೆ ಒಂದೆರಡು ಸಲ ತಿರುಗಾಡಿದೆ. ಜರ್ಮನಿಯ ವಿಜ್ಞಾನಿಯೊಬ್ಬರು-ನನ್ನ ಮಗನ ಗೆಳೆಯರು - ತಮ್ಮ ಪತ್ನಿಯೊಡನೆ ನಮ್ಮ ಮನೆಯಲ್ಲಿ ಕೆಲವಾರು ದಿನಗಳಿದ್ದು ಹಿಂದಿರುಗಿದಾಗ ವಿಯೋಗದುಃಖದ ಪ್ರವಾಹದಲ್ಲಿ ಸಿಕ್ಕಿಕೊಂಡ ನಿದ್ರೆ ತಳಮಳಿಸುತ್ತಿತ್ತು. ಸಾಮಾನ್ಯವಾಗಿ ನಾನು ಯಾರ ಮನೆಗಾದರೂ ಹೋಗಿ ಎರಡು ಮೂರು ದಿನ ಇದ್ದು ಅಭ್ಯಾಸವಿಲ್ಲ; ಅಕಸ್ಮಾತ್ತಾಗಿ ಇದ್ದದ್ದಾದರೆ, ಅವರ ಮನೆ ಬಿಟ್ಟು ಹೋಗುವಾಗ ಕರುಳು ಕಿವಿಚಿದಂತಾಗುತ್ತದೆ. ವಿದೇಶದಲ್ಲಿರುವ ಮಗಳು- ಅಳಿಯಂದಿರ ಮನೆಗೆ ಐದಾರು ಸಲ ಹೋಗಿದ್ದೇನೆ. ಹೊರಡುವ ಮುನ್ನ, ವಿಮಾನದಲ್ಲಿ ಹೋಗುವಾಗ ಮೈಸೂರಿನಲ್ಲಿರುವ ಮಗ-ಸೊಸೆ-ಮೊಮ್ಮಗ ಪುಟ್ಟಕ್ಕ ಗಂಗೆಯರನ್ನು ಬಿಟ್ಟಿರಲಾರದೆ ಅಳುತ್ತೇನೆ. ಮಾತ್ರವಲ್ಲ, ಟ್ರಸ್ಟಿನ ಲಿಂಗಪ್ಪ ಲಿಂಗಯ್ಯಾದಿ ಗೆಳೆಯರನ್ನು ಬಿಟ್ಟಿರಲಾರದೆ

ಅಳುತ್ತೇನೆ; ಬರುವಾಗ ಅಳಿಯ-ಮಗಳು-ಮೊಮ್ಮಕ್ಕಳ ಅಗಲಿಕೆಯಿಂದ ಮನಸ್ಸಿನಲ್ಲಿ ಉತ್ಪತ್ತಿಯಾದ ತಾಪದಿಂದ ಸೂರ್ಯನ ಪ್ರತಾಪ ಪ್ರಖರಗೊಂಡಿರಬೇಕೆನಿಸುತ್ತದೆ. ನಾನು ಒಂದು ಹುದ್ದೆಯಿಂದ ಮತ್ತೊಂದು ದೊಡ್ಡ ಹುದ್ದೆಗೇರಿ ಚಾರ್ಜು ಕೊಡುವಾಗ ಅಲ್ಲಿಯೇ ಬಿಟ್ಟು ಹೋಗುವ ಸಹೋದ್ಯೋಗಿಗಳನ್ನು ಜನರನ್ನು ಅಲ್ಲಿಯ ಗಿಡಮರ ಕುರ್ಚಿಗಳನ್ನು ನೋಡಿ ರೋದಿಸಿದ್ದೇನೆ. ನಾಲ್ಕೇ ತಿಂಗಳು ಸಹ್ಯಾದ್ರಿಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದರೂ. ಅಲ್ಲಿಯ ಸನ್ಮಿತ್ರರನ್ನು ಬಿಟ್ಟು ಬರುವಾಗ, ತುಂಗಾನದಿಯಲ್ಲಿ ನೆರೆಯೇರಿತ್ತು. ತೀನಂಶ್ರೀಯವರಿಂದ ಪ್ರಾಧ್ಯಾಪಕಾಧಿಕಾರವನ್ನು ವಹಿಸಿಕೊಳ್ಳುವಾಗ ವಿಧಿಯನ್ನು ಬಯ್ದು ಗೋಳ್ಗರೆದದ್ದುಂಟು; ಅವರು ತೀರಿಹೋದಾಗ ಅದೆಷ್ಟು ದಿನ ಅತ್ತೆನೊ? ಯಾವಾಗಲೂ ಅವರ ನೆನಪಿನೊಡನೆ ಕಣ್ಣೀರು ಒತ್ತರಿಸುತ್ತದೆ. ಕ್ರಾಫರ್ಡ್ ಭವನದಿಂದ ಕನ್ನಡ ಅಧ್ಯಯನ ಸಂಸ್ಥೆಗೆ ಹಿಂದಿರುಗಿದ ನಂತರ ನಾನು ಕಣ್ಣೀರಲ್ಲಿ ಮುಳುಗೆದ್ದಿದ್ದೇನೆ. ಯಾರೊಡನೆಯಾಗಲಿ ರೇಗಾಡಿ ಕೂಗಾಡಿ ಬಯ್ದಾಡಿದ್ದಾದರೆ ಕೆಲವು ಕ್ಷಣಗಳನಂತರ ಪಶ್ಚಾತ್ತಾಪದಿಂದ ಅತ್ತು ಕರೆದ ನಂತರ ಮನಸ್ಸು ಶಾಂತವಾಗುತ್ತದೆ. ಇತ್ತೀಚೆಗೆ (1994) ಮಂಡ್ಯದಲ್ಲಿ ನಡೆದ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕ್ಯಾತನಹಳ್ಳಿ ರಾಮಣ್ಣನವರನ್ನು ಬಯ್ದುದ್ದಕ್ಕಾಗಿ ಕೊರಗಿ ಕರಗಿದ್ದುಂಟು. ಯಾರ ಮೇಲಾದರೂ ನಿಷ್ಕಾರಣವಾಗಿ ಕೋಪ ಬಂದದ್ದಾದರೆ ಅದು ಮಳೆಯಾಗಿ ಸುರಿಯುವ ತನಕ ಹೃದಯದ ಕಾವು ಅಡಗುವುದಿಲ್ಲ. ನನ್ನ ಮಡದಿ-ಮಗನ ಮೇಲೆ ಎಂದಾದರೊಮ್ಮೆ ಕೋಪಿಸಿಕೊಂಡಾಗ ತಲೆದಿಂಬು ಒದ್ದೆಯಾಗುತ್ತದೆ; ಮಡದಿಯ ಕ್ಷಮೆ ಯಾಚಿಸಿದಲ್ಲದೆ ಮನಸ್ಸಿಗೆ ಆರೋಗ್ಯ ಸಮನಿಸದು.

ಅಳುವವರನ್ನು ಕಂಡರೆ ನನಗೂ ಅಳು ಬರುತ್ತದೆಂದು ಈ ಮೊದಲೇ ಹೇಳಿದ್ದೇನೆ. ಆದರಿಂದಾಗಿ ರುಗ್ಣಶಯ್ಯೆಯಲ್ಲೊರಗಿರುವವರನ್ನು ನೋಡಲು ಮನಸ್ಸು ಹಿಂಜರಿಯುತ್ತದೆ. ನನಗೂ ಅಂಥ ಗತಿಯೊದಗಿದರೆ, ಅವರಂತೆ ನರಳುವ ಸನ್ನಿವೇಶ ಸಂದರ್ಭ ಸಂಭವಿಸಿದ್ದಾದರೆ ಆ ಕಷ್ಟವನ್ನು ನಾನು ತಡೆದುಕೊಳ್ಳಬಲ್ಲೆನೆ ಎಂಬ ಸುಪ್ತಭಯವೂ ಹಿಂಜರಿತಕ್ಕೆ ಕಾರಣವಾಗಿರಬಹುದು. ಅಪ್ರಜ್ಞಾಸ್ಥಿತಿಯಲ್ಲಿದ್ದ ಕೆ. ವಿ. ಶಂಕರಗೌಡ ಮತ್ತು ಎಂ. ಎಚ್. ಮರೀಗೌಡರನ್ನು, ಪ್ರಜ್ಞಾಸ್ಥಿತಿಯಲ್ಲಿದ್ದರೂ ಏಳೆಂಟು ವರ್ಷಗಳಿಂದ ಹಾಸುಗೆ ಹಿಡಿದಿರುವ ಎಚ್. ಎಂ. ಶಂಕರನಾರಾಯಣರಾಯರನ್ನು ನೋಡಿದಾಗ ಭಾವೋದ್ರೇಕದಿಂದ ಕಣ್ಣು ತಿರ್ರನೆ ತಿರುಗಿದಂತಾಗುತ್ತದೆ; ಮನೆಗೆ ಹಿಂದಿರುಗಿದ ನಂತರ ಮನಸ್ಸಿನ ಕುದಿಪದಿಂದ ಕಣ್ಣಲ್ಲಿ ನೀರುಕ್ಕುತ್ತದೆ. ಆದ್ದರಿಂದ ಅಂಥಲ್ಲಿಗೆ ನಾನು ಹೋಗುವುದೆ ಕಡಿಮೆ. ಸತ್ತವರ ಮನೆಗಂತು ನಾನು ಹೋಗಲಾರೆ. ಮಾರನೆಯ ಬೆಳಗ್ಗೆ ನಗುತ್ತಾರಾದರೂ, ಇಂದು ಹೆಣವನ್ನು ನೋಡಿ ಅಳುವವರನ್ನು ನೋಡಿದಾಗ ನನ್ನ ಎದೆ ಡವಡವ ಎಂದು ಹೊಡೆದುಕೊಳ್ಳುತ್ತದೆ. ಕಲ್ಲೇಗೌಡರು ತೀರಿಕೊಂಡ ಸಮಯದಲ್ಲಿ ರೇವತಿಯ ರೋದನ ನೋಡಿ ನನ್ನ ಕೈಕಾಲೇ ಬಿದ್ದಂತಾಯಿತು. ಶಂಕರಗೌಡರ ಮರಣದ ಸುದ್ದಿ ತಿಳಿದಾಗ ನಾನು ಅಮೆರಿಕೆಯಲ್ಲಿದ್ದೆ. ಕಣ್ಣಿಗೆ ಶಸ್ತ್ರ

ಚಿಕಿತ್ಸೆಯಾಗಿದ್ದರೂ ಅದೆಷ್ಟು ಅತ್ತೆನೋ. ಕಪ್ಪು ಕನ್ನಡಕದಿಂದಾಗಿ ನನ್ನ ನೀರವಾಶ್ರು ಯಾರಿಗೂ ಗೋಚರಿಸುತ್ತಿರಲಿಲ್ಲ.

ನನ್ನ ಜೀವನದ ಸುದೀರ್ಘ ರೋದನಾಧ್ಯಾಯಗಳಲ್ಲಿ ಮುಖ್ಯವಾದುವು ಎರಡು: ಒಂದು, ಮಗಳಿಗೆ ಸಂಬಂಧಿಸಿದ್ದು; ಎರಡು, ಗುರುಗಳಿಗೆ ಸಂಬಂಧಿಸಿದ್ದು. ಮದುವೆಯಾದನಂತರ ಗಂಡನ ಮನೆಗೆ ಹೋಗಬೇಕಾದ್ದು, ಗಂಡ ಮತ್ತು ಮಕ್ಕಳನ್ನು ನೋಡಿಕೊಳ್ಳಬೇಕಾದ್ದು ಹೆಣ್ಣಿಗೆ ಸಹಜ. ಅವಳು ನಮ್ಮೊಡನಿದ್ದಾಗ ತಾಯಿ, ಅಕ್ಕ, ತಂಗಿ, ಲಕ್ಷ್ಮಿ, ಕಣ್ಮಣಿ ಎಲ್ಲವೂ ಆಗಿದ್ದಳು. ಮನಸ್ಸಿಗೇನಾದರೂ ವ್ಯಥೆಯಾಗಿತ್ತೆಂದರೆ ಅವಳನ್ನು ನೋಡಿದ ಕೂಡಲೆ ಮಾಯವಾಗುತ್ತಿತ್ತು. ಅವಳು ಮದುವೆಯಾದಾಗ ನನ್ನ ಹೃದಯವನ್ನೇ ಕಳಚಿಕೊಂಡು ಹೋಗುತ್ತಾಳೋ ಎನ್ನುವಷ್ಟು ಭಾವೋದ್ರೇಕಕ್ಕೆ ನಾನು ಪಕ್ಕಾದೆ. ವಿದೇಶಕ್ಕೆ ಹೊರಟು ನಿಂತಾಗಲಂತು ನನ್ನ ಅಳು, ಗೋಳು, ಸುಯ್ಲು, ರೋದನ, ಆಕ್ರಂದನವನ್ನು ಅಜನಸತಿ ಸಹ ಬಣ್ಣಿಸಲಾರಳು. ಒಮ್ಮೊಮ್ಮೆ ಹೃದಯವೇ ನಿಂತು ಹೋದಂತೆ, ತಲೆ ತಿರುಗುತ್ತಿದ್ದಂತೆ, ಉಸಿರು ನಿಂತು ಹೋದಂತೆ ತಳಮಳಗುಟ್ಟುತ್ತಿದ್ದೆ. ರಾತ್ರಿ ವೇಳೆ ಒಬ್ಬನೇ ಮಲಗಲು ಹೆದರುತ್ತಿದ್ದೆ. ಹದಿನೈದು ದಿನವಾದರೂ ನಿದ್ದೆಯಿಲ್ಲ. ಕೊನೆಗೆ ಸಿಂಧೆ ಡಾಕ್ಟರ್‌ರ ಸಲಹೆಯ ಮೇರೆಗೆ ಕೆಲವು ದಿನ ನಿದ್ರೆ ಮಾತ್ರೆ ನುಂಗಬೇಕಾಯಿತು. ಆರೇಳು ತಿಂಗಳಲ್ಲಿಯೇ ಅವರಿದ್ದ ಐರ್ಲೆಂಡಿಗೆ ಹೋಗಿ ನೋಡಿದಾಗ ಅಯ್ಯೋ ಎನಿಸಿತು; ನನ್ನ ವ್ಯಥೆ ಮತ್ತಷ್ಟು ತೀವ್ರವಾಯಿತು. 1976ರಲ್ಲೊಮ್ಮೆ ಮಗನೊಂದಿಗೆ ಅವಳು ಬಂದಿದ್ದಳು. ಚಂದ್ರು ಬಂದಿರಲಿಲ್ಲ. ಅವಳನ್ನು ವಾಪಸು ಕಳಿಸಲು ವಿಮಾನ ನಿಲ್ದಾಣಕ್ಕೆ ಪ್ರಭು ಬಂದಿದ್ದ. ಅವನೊಂದಿಗೆ ಏನೋ ಹೇಳಿಕೊಂಡು ಅಳುತ್ತಿದ್ದ ದೃಶ್ಯವನ್ನು ನೆನಸಿಕೊಂಡಾಗ ಈಗಲೂ ಬಿಕ್ಕಿ ಬಿಕ್ಕಿ ಅಳದಿದ್ದರೆ ಸಮಾಧಾನವಾಗದು. 1980ರಲ್ಲಿ ಮತ್ತು 1982ರಲ್ಲಿ ಅವರ ಅಮೆರಿಕೆಯ ಮನೆಗೆ ಹೋದೆ, ಮಡದಿಯೊಡನೆ, ಆಗಲೂ ನನಗೆ ಅತೃಪ್ತಿ. 1987ರಲ್ಲಿ ಹೋಗಿ ಇದ್ದು ಅವರ ವಹಿವಾಟನ್ನು ನೋಡಿದ ಮೇಲೆ, ಅವರ ಶ್ರೀಮಂತಿಕೆಯ ಫಲವನ್ನು ಅನುಭವಿಸಿದ ನಂತರ ನಮಗೂ ಅಂತರಿಕ್ಷಕ್ಕೂ ನಡುವೆ ಮೂರೇ ಗೇಣು ಅಂತರವೆನ್ನುವಷ್ಟು ಹರ್ಷವಾಯಿತು. ಆದರೂ ಅಗಲಿಕೆಯ ಬೇನೆ ತಪ್ಪಿದ್ದಲ್ಲ. ಪ್ರತಿನಿತ್ಯ ಹಲವು ಸಲ ನನ್ನ ಮನ ಅಮೆರಿಕೆಗೆ ಓಡುತ್ತದೆ; ಅವರ ಮನೆಯೊಳಗೆ, ತೋಟದಲ್ಲಿ, ಚಿಕಿತ್ಸಾಲಯದಲ್ಲಿ ಸುತ್ತಾಡಿ ಬಸವಳಿದು ಸೋತು ಮಲಗುತ್ತದೆ. ಇದು ಜೀವನ ಪರ್ಯಂತ ಇರುವ ವ್ಯಥೆ; ಆ ವ್ಯಥೆಯ ಹಿಂದೆಯೇ ಅವರ ಆದರ್ಶ ಸಂಸಾರವನ್ನು ಮಕ್ಕಳ ಬೌದ್ಧಿಕ ಬೆಳವಣಿಗೆಯನ್ನು, ಸುಸಮೃದ್ಧ ಜೀವನವನ್ನು ನೆನೆದಾಗ ಮನಸ್ಸಿಗೆ ಶಾಂತಿಯೊದಗುತ್ತದೆ. ವ್ಯಥೆ, ತೃಪ್ತಿ, ಶಾಂತಿ ಇವು ಮೂರೂ ಜತೆ ಜತೆಯಾಗಿ ನನ್ನ ನಿತ್ಯ ಸಂಗತಿಗಳಾಗುತ್ತವೆ;ನನ್ನ ಪ್ರತಿನಿತ್ಯದ ಪ್ರಾರ್ಥನೆಯಲ್ಲಿ ಅವರ ಶ್ರೇಯೋಭಿಲಾಷೆ ಇದ್ದೇ ಇರುತ್ತದೆ.

1982ರಲ್ಲಿ ಗುರುಪತ್ನಿಯವರು ತೀರಿಕೊಂಡಾಗ ಹಾಗೂ ಅನಂತರ ಗುರುಗಳ ಪರಿಸ್ಥಿತಿ ಬಲ್ಲವರಿಗೆ ಚಿಂತಾಜನಕವಾಗುತ್ತಿತ್ತು. ಅವರನ್ನು ನೋಡಿದಾಗಲೆಲ್ಲ ನನಗೆ ಭಯವಾಗುತ್ತಿತ್ತು; ಕಣ್ಣು ಮಡುಗಟ್ಟುತ್ತಿತ್ತು. ಅದೆಷ್ಟು ಸಲ ಅವರ ಜತೆಯಲ್ಲಿ ನಾನೂ

ಅತ್ತೆನೊ? ಹಲವು ಸಲ ಬಿಕ್ಕಳು ಒಡಿಯಲಾರದೆ ಮಾತಿನ ಮಧ್ಯದಲ್ಲಿಯೇ ಹೊರಗೆ ಬಂದದ್ದೂ ಉಂಟು. ರುಗ್ಣಶಯ್ಯಾಗತರಾದನಂತರ ಅವರನ್ನು ನೋಡಿದಾಗಲೆಲ್ಲ ನನಗೆ ಹೃದಯವೇ ಕಿತ್ತು ಬಂದಂತಾಗುತ್ತದೆ. ಉದಯರವಿಯಿಂದ ಹೊರಗೆ ಕಾಲಿಡುತ್ತಿದ್ದಂತೆಯೇ ದುಗುಡ ನೆರೆಯಾಗಿ ಸಶಬ್ದವಾಗಿ ಹರಿಯುತ್ತದೆ. ಅವರ ಆರೋಗ್ಯಕ್ಕಾಗಿ ಪ್ರತಿನಿತ್ಯ ಒಂದೆರಡು ಸಲವಾದರೂ ಗುರು ಮಹಾರಾಜರಿಗೆ ಪ್ರಾರ್ಥನೆ ಸಲ್ಲಿಸಿ. ಒಂದೆರಡು ಕಣ್ಣು ಹನಿ ನಿವೇದಿಸದಿದ್ದರೆ ಮನಸ್ಸಿಗೆ ಶಾಂತಿಯಿಲ್ಲ. ಕಳೆದ ವರ್ಷವೇ (1993) ನಾನು ಅಮೆರಿಕೆಗೆ ಹೋಗಬೇಕಾಗಿತ್ತು. ಅವರ ಕಾಯಿಲೆಯಿಂದಾಗಿ ಹೋಗಲಿಲ್ಲ. ಈ ಸಲ ಹೊರಡುವ ಮುನ್ನ (9.3.1994)ವೇ ಅವರ ಪಾದಕ್ಕೆ ಹಣೆಯನ್ನು ಮುಟ್ಟಿಸಿ. ಕಣ್ಣೀರು ಚಿಮುಕಿಸಿದೆ. ನನ್ನ ಶ್ರೀಮತಿ ಸಹ. ಅಲ್ಲಿಗೆ ಹೋದಾಗಿನಿಂದ ನನ್ನ ಮನಸ್ಸು ಇಲ್ಲಿಯೇ ಇದೆ. ಅವರದೇ ಚಿಂತೆ. ಚಿಂತೆಯೊಡಹುಟ್ಟಲ್ಲವೆ ಕಣ್ಣೀರು? ಚಿಂತೆಯಿಂದ ಪಾರಾಗಲು ಕೈಮನಗಳ ತುಂಬ ಕೆಲಸ ಹಚ್ಚಿಕೊಂಡದ್ದುಂಟು. ರಾತ್ರಿ ಮಲಗುವಾಗ ಅವರ ಹೃದಯ ವಿದ್ರಾವಕವೂ ಚಿಂತಾಜನಕವೂ ಕನಿಕರನೀಯವೂ ಆದ ಅಪ್ರಜ್ಞಾವಸ್ಥೆಯ ದುಃಸ್ಥಿತಿಯ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಹೆತ್ತ ತಾಯಿಯಂತೆ ಭವತಾರಿಣಿಯಂತೆ ಅವರ ಶುಶ್ರೂಷೆಯನ್ನು ಶ್ರದ್ಧಾನಿಷ್ಠೆಗಳಿಂದ ಎಸಗುತ್ತಿರುವ ಸುಶೀಲೆ ಪುಣ್ಯವತಿ ತಾರಿಣಿಯ ಪಾದಗಳಿಗೆ ಮನ ಎರಗುತ್ತದೆ. ಗುರು ಶುಶ್ರೂಷೆ ಮಾಡುವ ಯಾರೇ ಆಗಲಿ. ದಾದಿಯೇ ಆಗಲಿ ನನಗೆ ತಾಯಿಯ ಸಮಾನ. ಎಷ್ಟು ಹೊತ್ತಿಗೆ ಗುರುಪಾದದರ್ಶನವಾದೀತೋ ಎಂದು ಮನಸ್ಸು ಯಾವಾಗಲೂ ಪರಿತಪಿಸುತ್ತದೆ. ಇಂದಲ್ಲ ನಾಳೆ ಗುರುಗಳ ಆತ್ಮ ಗಳಿತ ದೇಹದಿಂದ ಮುಕ್ತಿ ಹೊಂದಬೇಕಾಗಿದೆ. ಆಗ ನನ್ನಂಥವರು ಅನಾಥರಾಗುತ್ತಾರೆ. ಭಿಕಾರಿಗಳಾಗುತ್ತಾರೆ. ಅನವರತ ದುಃಖಾರ್ತರಾಗುತ್ತಾರೆ. ಕಣ್ಣೀರಲ್ಲದ್ದಿದ ನೆನಪು ಶೇಷಾಯುಷ್ಯದ ನನ್ನ ಬದುಕಿನ ಬೇರ್ಪಡದ ಭಾಗವಾಗುತ್ತದೆ; ನನ್ನ ಶ್ರೇಯಸ್ಸಿಗೆ ಸಾಧನವಾಗುತ್ತದೆ.

ಪ್ರಿಯ ಜನರ ಅಗಲಿಕೆಗಿಂತ ತೀವ್ರತರವಾದ ಶಿಕ್ಷೆ ಮತ್ತೊಂದಿರಲಾರದು. 1988ರಲ್ಲಿ ನನ್ನ ಮಗ ಪ್ರಸಾದ್. ಸೊಸೆ ರೇವತಿ ಮತ್ತು ಮೊಮ್ಮಗ ಸತ್ಯೇನ್ ನಾಲ್ಕು ತಿಂಗಳ ಅಮೆರಿಕೆಯ ಪ್ರವಾಸಕ್ಕಾಗಿ ತೆರಳಿದರು. ಆ ದೊಡ್ಡಮನೆಯಲ್ಲಿದ್ದವರು ನಾವಿಬ್ಬರು ಮತ್ತು ಗಂಗೆ. ಇಡೀ ಮನೆಯೇ ಬಿಕೋ ಎನ್ನಿಸುತ್ತಿತ್ತು. ಎಲ್ಲರೂ ಊಟದ ಸಮಯದಲ್ಲಿ ಒಟ್ಟಿಗಿರುತ್ತಿದ್ದೆವು. ನಮ್ಮ ಹರಟೆಗೆ ಅದೇ ಸಮಯ. ಇಬ್ಬರೇ ಕುಳಿತು ಉಣ್ಣುವಾಗ ತುತ್ತು ಗಂಟಲಲ್ಲೇ ಸಿಕ್ಕಿ ಕೊಂಡಂತಾಗುತ್ತಿತ್ತು. ಅವಳು ಬೆಳಸಿದ ಒತ್ತಲಿನ ಗಿಡಗಳನ್ನು ನೋಡಿದಾಗ ರೇವತಿಯ ನೆನಪಾಗಿ ದುಃಖ ಒತ್ತರಿಸುತ್ತಿತ್ತು. ವಯಸ್ಸಾದವರಿಗೆ ಮೊಮ್ಮಕ್ಕಳ ಮೇಲಿರುವ ಪ್ರೀತಿ ವಯಸ್ಸಾದ ಮಕ್ಕಳ ಮೇಲಿರುವುದಿಲ್ಲವಷ್ಟೆ. ಪ್ರೀತಿಯಿದ್ದ ಕಡೆ ವ್ಯಸನ ಭಯಗಳೂ ಹೆಚ್ಚು; ಅಧಿಕ ಪ್ರೀತಿಯಿದ್ದಲ್ಲಿ ವ್ಯಸನವೂ ಮಿತಿ ಮೀರುತ್ತದೆ. ಅವರು ದೂರ ದೇಶಕ್ಕೆ ಹೋದಾಗ ಮನಸ್ಸು ಏನೇನನ್ನೊ ಊಹಿಸಕೊಂಡು ವಿಲಿವಿಲಿ ಒದ್ದಾಡುತ್ತದೆ. ಮನಸ್ಸಿನ ಗಗನದಲ್ಲಿ ಕಟ್ಟಿದ ದುಃಖ ಮೋಡದ ಕಣ್ಣಿನಲ್ಲಿ ಕರಗಿ ನೀರಾಗಿ ಸುರಿಯುತ್ತದೆ.

ನನ್ನಂತೆಯೇ ನನ್ನ ಮಗನದೂ ಹೆಂಗರುಳು. ಆದರೆ ನನ್ನಷ್ಟು ಅವನಿಗೆ ಭಾವೋದ್ರೇಕವಿಲ್ಲವಾದ್ದರಿಂದ, ಯಾವಾಗೆಂದರೆ ಆಗ ಅವನಿಗೆ ಅಳು ಬರುವುದಿಲ್ಲ. ಅಗಲಿಕೆಯ ಅಳಲನ್ನು ಕಡಮೆ ಮಾಡಿಕೊಳ್ಳುವ ಸಲುವಾಗಿ ನಾನು ಟಾಲ್‌ಸ್ಟಾಯ್ ಮಹರ್ಷಿಯನ್ನು ಆಶ್ರಯಿಸಿದೆ. ದಿನಕ್ಕೆ ಹತ್ತುಗಂಟೆ ಯುದ್ಧ ಮತ್ತು ಶಾಂತಿಯ ಭಾಷಾಂತರಕ್ಕೆ ಕೂರುತ್ತಿದ್ದೆ. ಹಾಗೂ ದುಃಖ ಭಾರವಾದಾಗ ಉದಯರವಿಗೆ ಹೋಗಿ, ಗುರುದರ್ಶನ ಮಾಡಿದರೆ ಸಾಕು, ಅದು ಇಳಿದು ಹೋಗುತ್ತಿತ್ತು. ಅವರ ದರ್ಶನಾಮೃತವಾಣಿಗಳೆರಡೂ ನನ್ನ ಪಾಲಿಗೆ ಮಂತ್ರಗಳಾಗಿವೆ, ತಾಯಿತಿಗಳಾಗಿವೆ.

ನನ್ನಣ್ಣ ಎರಡು ಸಲ ಖಾಯಿಲೆ ಮಲಗಿದ. ಸತ್ತು ಹೋಗುತ್ತಾನೇನೊ ಎನ್ನುವಷ್ಟು ತೀವ್ರವಾಗಿತ್ತು ಆ ಖಾಯಿಲೆ. ಎರಡು ಸಲವೂ ನನ್ನ ಮನೆಯಲ್ಲಿಟ್ಟುಕೊಂಡು ಉಪಚರಿಸಲಾಗಿ ದೈವಕೃಪೆಯಿಂದ ಅವನು ಉಳಿದುಕೊಂಡ. ನನಗೆಲ್ಲಿ ಚಿತ್ತಭ್ರಮಣೆಯಾಗುತ್ತದೆಯೊ ಎನ್ನುವಷ್ಟು ಕಾತರತೆ ನನ್ನನ್ನು ಹಗಲಿರುಳು ಕಾಡುತ್ತಿತ್ತು. ಆ ಕಾತರತೆಯಿಂದ ಪಾರಾಗಿ, ಮನಸ್ಸು ನಿರ್ಮಲವಾಗಬೇಕಾದರೆ ಕಣ್ಣೀರು ಅನಿವಾರ್ಯ. ಯಾವಾಗಲೂ ಬಹಿರಂಗದ ರೋದನ ಪ್ರದರ್ಶನಕ್ಕಿಂತ ಏಕಾಂತದ ಆಕ್ರಂದನವೆ ಅಧಿಕ. ಹಲವು ಸಲ ಅವನ ಮೇಲೆ ಎಗರಾಡಿದ್ದೇನೆ. ಅವನನ್ನು ಬಯ್ದಿದ್ದೇನೆ; ಬಯ್ಯುತ್ತ ಬಯ್ಯುತ್ತ ಅತ್ತಿದ್ದೇನೆ. ಅವನ ಮಕ್ಕಳಿಗೆ ಪಾಲುಕೊಡುವ ಸಂದರ್ಭದಲ್ಲಂತು ಅಕ್ಷಮ್ಯವೆನ್ನುವಷ್ಟರ ಮಟ್ಟಿಗೆ ಕಠಿಣ ಮಾತುಗಳನ್ನು ಪ್ರಯೋಗಿಸಬೇಕಾಯಿತು. ಅವನಿಗೆ ಪಾಲು ಕೊಡಲಿಷ್ಟವಿಲ್ಲ; ಅದರಿಂದಾಗಿ ನಿರಾಶಾಪೀಡಿತರಾದ ಮಕ್ಕಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಹಿಂದಿನ ಅವಿಭಕ್ತ ಕುಟುಂಬದ ವ್ಯವಸ್ಥೆ ಈ ಕಾಲಕ್ಕೆ ಸರಿಹೊಂದುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಈ ಕಾಲದ ಲಕ್ಷಣ. ಪಾಲುಕೊಟ್ಟ ನಂತರ ಆ ಮಕ್ಕಳು ಸುಖವಾಗಿದ್ದಾರೆ.

ಅವನ ಹಿರಿಯ ಮಗ ದೇಶಿರಾಜ ನನ್ನ ಮನೆಗೆ ಬಂದಾಗ ಮೂರುವರೆ ವರ್ಷದವನಿರಬಹುದು. ಏನೇ ಆಗಲಿ ಹುಟ್ಟಿಸಿದವರಿಂದ ಹೆತ್ತವರಿಂದ ದೊರಕುವ ಪ್ರೀತಿ ಅನ್ಯರಿಂದ ದೊರಕಲಾರದು.ಹತ್ತು ವರ್ಷದವರೆಗಾದರೂ ಮಕ್ಕಳು ವಿಶುದ್ಧ ನಿರ್ಮಲ ಪ್ರೀತಿಯ ಪಾತಿಯಲ್ಲಿ ಬೆಳೆದಾಗ ಮಾತ್ರ ಅವರ ಬುದ್ಧಿ ಮೊದಲಾಗಿ ಅವರ ಸರ್ವಾಂಗೀಣ ವಿಕಾಸ ಸಾಧ್ಯ. ನನ್ನ ಮಗನ ಆರೋಗ್ಯ ಹುಟ್ಟಿದ ಮೇಲೆ ಮೂರ್ನಾಲ್ಕು ವರ್ಷ ಏಕ ರೀತಿಯಾಗಿ ಸುಸ್ಥಿತಿಯಲ್ಲಿರಲಿಲ್ಲ. ನಾನು ಮತ್ತು ನನ್ನ ಶ್ರೀಮತಿ ಅವನ ಆರೋಗ್ಯ ಪಾಲನೆಗಾಗಿ ತುಂಬ ಮುತುವರ್ಜಿ ವಹಿಸುತ್ತಿದ್ದೆವು. ಆ ಕಾಲದಲ್ಲಿ ನನ್ನ ಮಡದಿ ಅನುಭವಿಸುತ್ತಿದ್ದ ಕಷ್ಟ ಹೇಳತೀರದು. ಹತ್ತು ಹನ್ನೆರಡು ಜನರ ಯೋಗಕ್ಷೇಮದ ಜವಾಬ್ದಾರಿ ಹೊತ್ತುಕೊಂಡಿದ್ದರು - ರೋಗಿ ಮಗನ ಬಗೆಗಿನ ನಮ್ಮ ಮುತುವರ್ಜಿ ದೇಶಿರಾಜನ ಎಳೆಯ ಮನಸ್ಸಿನಲ್ಲಿ ಅತೃಪ್ತಿ, ನಿರಾಶೆ, ಮಾತ್ಸರ್ಯಗಳು ತಲೆಯೆತ್ತಲು ಕಾರಣವಾಗಿರಬೇಕು. ಹೀಗಾಗಿ ಅವನಿಗೆ ಓದಿನಲ್ಲಿ ಆಸಕ್ತಿಯಿಲ್ಲ, ಅವನನ್ನು ತನ್ನ ಮನೆಗೆ ಕರೆದೊಯ್ಯುವ ಇಚ್ಛೆ ಅವನಪ್ಪನಿಗಿಲ್ಲ. ಪ್ರೀತಿಯ ಅಭಾವದಿಂದಾಗಿ ಅವನು ಬೇಜವಾಬ್ದಾರಿಯಿಂದ ವರ್ತಿಸುತ್ತಾನೆ. ಆ ಕಾರಣಕ್ಕಾಗಿ, ಯಾವುದೊ ಸಂಘದ ಹಣ

(ಕೇವಲ ಐದು ರೂ.) ದುರುಪಯೋಗ ಪಡಿಸಿಕೊಂಡನೆಂಬ ಮಾತು ಬರಲಾಗಿ, ಎರಡು ಮೂರು ಸಾರಿ ಅವನನ್ನು ಹೊಡೆದದ್ದೂ, ಆಮೇಲೆ ಗಂಟೆಗಟ್ಟಳೆ ಅತ್ತದ್ದೂ. ಈಗಲೂ ನೆನೆದಾಗ ಕಣ್ಣೀರು ಸ್ರವಿಸುತ್ತದೆ. ಅವನು ಕಾನೂನು ಪರೀಕ್ಷೆ ಪಾಸು ಮಾಡಬೇಕು. ರಾಜಕೀಯ ಕ್ಷೇತ್ರದಲ್ಲಿ ದೊಡ್ಡದಾಗಿ ಬೆಳೆಯಬೇಕೆಂಬುದು ಆಗಿನ ನನ್ನ ಆಸೆ. ನನ್ನ ಆಸೆ ಈಡೇರಲಿಲ್ಲವಾಗಿ ಅವನ ಬಗ್ಗೆ ನಿರ್ಲಕ್ಷ್ಯ ತಾಳಿದೆ. ಅನುಕೂಲ ಮಾಡಿಕೊಡುವ ಅವಕಾಶವಿದ್ದಾಗ ನನ್ನ ಮಾತು ಮೀರಿದನೆಂಬ ಕಾರಣಕ್ಕಾಗಿ ಕೋಪ ; ಅವನ ಬಗ್ಗೆ ಸಹಾನುಭೂತಿಯಿರುವಾಗ ನಾನು ನಿಸ್ಸಹಾಯಕ. ಹೀಗಾಗಿ ಅವನನ್ನು ನೆನೆದಾಗ ಈಗಲೂ ಸಂಕಟವಾಗುತ್ತದೆ;ನನ್ನ ಸಂಕಟಕ್ಕೆ ಅಳು ಒಂದೇ ಪರಿಹಾರ ಸಾಧನ.

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಗಳಲ್ಲಿ ನನ್ನನ್ನು ವೈಯಕ್ತಿಕವಾಗಿ ಟೀಕಿಸಲು ಗುಡುಗುತ್ತಿದ್ದ ಘರ್ಜಿಸುತ್ತಿದ್ದ ಪ್ರಶ್ನೆಗಳು ಸಾಮಾನ್ಯವಾಗಿ ಹಾಮಾ ನಾಯಕ ಮತ್ತು ಸಣ್ಣ ರಾಮೇಗೌಡರಿಗೆ ಸಂಬಂಧಿಸಿದುವು. ನಾಯಕರು ಕನ್ನಡದ ಎಂ. ಎ. ಪಾಸುಮಾಡಿಲ್ಲ, ಅವರು ಕನ್ನಡ ಪ್ರೊಫೆಸರ್ ಆದದ್ದು ಸರಿಯೇ? ಸಣ್ಣ ರಾಮೇಗೌಡರರಿಗೆ ಸಾಕಷ್ಟು ಅರ್ಹತೆಯೂ ಇಲ್ಲ, ವಯಸ್ಸಿನ ಬಗ್ಗೆ ಪ್ರಾಮಾಣಿಕರೂ ಅಲ್ಲ: ಈ ಇಬ್ಬರನ್ನೂ ಅವರವರ ಹುದ್ದೆಗಳಿಂದ ತೆಗೆಯಿರಿ. ಇತ್ಯಾದಿ ಭಾಷಣಗಳನ್ನು ಕೇಳುವಾಗ ನನಗೆ ತುಂಬ ಹಿಂಸೆಯಾಗುತ್ತಿತ್ತು; ನಾನು ಭಾವೋದ್ರೇಕದಿಂದ ಉತ್ತರ ಕೊಡುವಾಗ ಅತ್ತದ್ದೂ ಉಂಟು. ಯಾರ ಬಗ್ಗೆ ನಾನು ದೂಷಣೆ ಹೊರಬೇಕಾಗಿತ್ತೋ, ಯಾರ ಸಂಬಂಧವಾಗಿ ನಾನು ಅಳಬೇಕಾಗಿತ್ತೋ ಅವರಿಗೆ ನನ್ನ ವಿಷಯದಲ್ಲಿ ಕನಿಕರವಿಲ್ಲ. ಸಾರ್ವಜನಿಕ ವೇದಿಕೆಯ ಮೇಲಿಂದ ಮಾತಾಡುವಾಗಲೂ ಕೆಲವೊಮ್ಮೆ ಈ ಭಾವೋದ್ರೇಕ ನನ್ನನ್ನು ಕಾಡುತ್ತಿದೆ : ಆಗ ನಾನು ಗುಡುಗುತ್ತೇನೆ, ಇಲ್ಲವೆ ಗದ್ಗದಿಸುತ್ತೇನೆ. ಸಾಮಾನ್ಯವಾಗಿ ನನಗೆ ಸಂಬಂಧಿಸಿದ ಸನ್ಮಾನ ಅಥವಾ ಅಭಿನಂದನ ಸಮಾರಂಭಗಳಲ್ಲಿ ಹಾಗಾಗುವುದುಂಟು; ನಾನು ಹೇಗಿದ್ದೆ? ಹೇಗಾದೆ? ಇದಕ್ಕೆಲ್ಲ ಗುರುಕೃಪೆ ಕಾರಣವಲ್ಲವೆ? ಎಂಬ ಭಾವನೆಗಳು ನನ್ನ ಮನವನ್ನೆಲ್ಲ ತುಂಬಿಕೊಳ್ಳುತ್ತವೆ. ಕುವೆಂಪು ಅವರನ್ನು ಕುರಿತು ಮಾತಾಡುವಾಗಲಂತು ನನ್ನ ಭಕ್ತಿಯ ಭಾರದಿಂದ ಭಾವಪರವಶನಾಗುತ್ತೇನೆ.

ಸಂತೋಷ ಸಂಭ್ರಮದಲ್ಲಿ ಈಜಾಡುವಾಗ ಭವ್ಯ ದೃಶ್ಯಗಳನ್ನು ನೋಡುವಾಗ ದುಃಖದಾವಾಗ್ನಿಯಲ್ಲಿ ಬೇಯುವಾಗ ನನ್ನ ಹೃದಯ ಅರಳುತ್ತದೆ ಅಥವಾ ಹಿಂಡುತ್ತದೆ. ದುಃಖ ಸಂತೋಷ ಸಂದರ್ಭಗಳೆರಡರಲ್ಲಿಯೂ ಅಳು ಸಮಾನ. ಮದುವೆ ಹಬ್ಬಗಳಲ್ಲಿ, ಕುರಿ ಮಂದೆ ಕಾಯುತ್ತ ಬೆನ್ನಡಿಯಾಗಿ ಮಲಗಿ ಗಗನದ ತಾರೆಗಳನ್ನು ನೋಡುವಾಗ, ಸಾಗರವನ್ನು ದರ್ಶಿಸುವಾಗ, ಜಪಾನಿನ ನಾರಾದ ಮತ್ತು ಬುದ್ಧಗಯೆಯ ಬುದ್ಧನ ಮುಂದೆ, ಶ್ರವಣ ಬೆಳ್ಗೊಳದ ಗೊಮ್ಮಟೇಶ್ವರನ ಮುಂದೆ ನಿಂತಾಗ, ಗ್ರ್ಯಾಂಡ್ ಕೆನ್ಯನ್ನಿನ ಚಿತ್ರ ವಿಚಿತ್ರ ವಿಸ್ಮಯಕಾರಿ ದೃಶ್ಯಗಳನ್ನೀಕ್ಷಿಸುವಾಗ, ಗುರುಗಳಿಗೆ ಜ್ಞಾನಪೀಠ ಪ್ರಶಸ್ತಿಪ್ರದಾನ ಮಾಡಿದ ಸಮಾರಂಭದಲ್ಲಿ, ಸುಬ್ಬುಲಕ್ಷ್ಮಿಯ ಸಂಗೀತವನ್ನು ಕೇಳಿದಾಗ, ಗುಬ್ಬಿವೀರಣ್ಣನವರ ಕುರುಕ್ಷೇತ್ರ ನಾಟಕವನ್ನು ನೋಡಿದಾಗ ನಾನನುಭವಿಸಿದ ಆನಂದ

ಅಶ್ರುಲಹರಿಯಾಗಿ ಹರಿದದ್ದುಂಟು. ನನ್ನ ಮಡದಿ, ಪುತಿನ, ಸಿದ್ಧಯ್ಯ ಪುರಾಣಿಕರು, ಶ್ರೀ ಮತ್ತು ಶ್ರೀಮತಿ ಈರಯ್ಯ ದಂಪತಿಗಳು, ದೇಶಿಗೌಡರು ಆಸ್ಪತ್ರೆಯಲ್ಲಿದ್ದಾಗ, ಗಾಂಧೀಜಿ, ಅನಕೃ, ರಂಗಣ್ಣ, ಕರಿಬಸಯ್ಯ ಮತ್ತು ರಾಜೀವ್ ಗಾಂಧಿ ಸತ್ತಾಗ, ಅಥವಾ ಅಮಾನುಷ ರೀತಿಯಲ್ಲಿ ಕೊಲೆಗೊಂಡಾಗ, ರಂಗನತಿಟ್ಟಿನ ಪಕ್ಷಿಗಳು ಪ್ರವಾಹಕ್ಕೆ ಬಲಿಯಾದಾಗ, ನಾಗರ ಹೊಳೆಯ ಹುಲಿಗಳು ವಿಜ್ಞಾನಿಯ ಪ್ರಯೋಗಗಳಿಗೆ ಆಹುತಿಯಾದಾಗ, ತಂದೆತಾಯಿಯರು ತೀರಿಕೊಂಡಾಗ, ದುಷ್ಕಟಗಳಲ್ಲಿ ನನ್ನ ಮೈ ಮನಸ್ಸುಗಳು ಸಿಲುಕಿಕೊಂಡಾಗ, ಗಾಂಧೀಜಿಯ ಉಪವಾಸ ಸಂದರ್ಭದಲ್ಲಿ, ಬಡಬಗ್ಗರ ಗೋಳನ್ನು ನೋಡಿದಾಗ ಹೃದಯವೇ ಕರಗಿ ಅಶ್ರು ಜಲಪಾತವಾಗಿ ಧುಮುಕಿದ್ದುಂಟು. ಮಹಾಭಾರತ ಶ್ರೀರಾಮಾಯಣದರ್ಶನಗಳಂಥ ಗ್ರಂಥಗಳ ವಾಚನ ಕಣ್ಣೀರಿನ ಜತೆ ಜತೆಯಲ್ಲಿಯೇ ಸಾಗಬೇಕು. ಅನ್ನಾಕರೆನಿನ ಭಾಷಾಂತರಿಸುವಾಗ, ಅಂಬೇಡ್ಕರ್ ಜೀವನ ಚರಿತ್ರೆಯನ್ನು ರಚಿಸುವಾಗ ಅಶ್ರು ಜಲಮಿಶ್ರಿತ ಮಸಿಯನ್ನು ಬಳಸಿದ್ದೇನೆ.

ನನ್ನ ಅಳು ಬುರುಕತನಕ್ಕೆ ಇವಿಷ್ಟೆ ನಿದರ್ಶನಗಳೆಂದು ತಿಳಿಯಬಾರದು. ಇಂಥವು ಅಸಂಖ್ಯ. ಕೇವಲ ಉದಾಹರಣೆಗಾಗಿ ಪ್ರಾತಿನಿಧಿಕವಾಗಿ ತಕ್ಷಣ ನೆನಪಿಗೆ ಬಂದ ಕೆಲವನ್ನು ಮಾತ್ರ ಇಲ್ಲಿ ದಾಖಲಿಸಿದ್ದೇನೆ. ಪರರ ಕಣ್ಣಿಗೆ ದೌರ್ಬಲ್ಯವಾಗಿ ಕಾಣುವ ಈ ನನ್ನ ಅಳು ಬುರುಕತನ ನನ್ನ ಪಾಲಿಗೆ ಸೌಬಲ್ಯವಾಗಿದೆ. ಇದು ಪಶ್ಚಾತ್ತಾಪದ ಸಂಕೇತ, ಕೋಪತಾಪಗಳೇ ಮೊದಲಾದ ಭಾವ ವೈವಿಧ್ಯದ ಅತಿರೇಕ ಉದ್ರೇಕಗಳ ಅಮೃತಾಂಜನ, ಪಾಪಕರ್ಮಗಳ ಗಂಗಾಸ್ನಾನ, ದುರ್ಗುಣ ಆಸುರೀಗುಣಗಳನ್ನು ಕೊಚ್ಚುವ ನಯಾಗರ, ಪರರ ಅನ್ಯಾಯ ಮಾತ್ಸರ್ಯಾದಿ ಉಪದ್ರವಗಳನ್ನು ಮರಸುವ ಮಾಹಕದ್ರವ. ಭಾವೋದ್ರೇಕದ ಕಾಳ್ಗಿಚ್ಚಿಗೆ ಅಶ್ರುಧಾರೆಯೇ ಏಕಮಾತ್ರ ಪರಿಹಾರ. ಕಣ್ಣೀರಿನ ಹರಿವಿನೊಡನೆ ಹೃದಯದ ಭಾರ ಇಳಿಯುತ್ತದೆ. ಮನಸ್ಸು ನಿರ್ಮಲವಾಗುತ್ತದೆ. ನನ್ನ ಹೃದಯದ ಗಂಗೋತ್ರಿ ತಲಕಾವೇರಿಗಳಲ್ಲಿ ಪ್ರತಿನಿತ್ಯ ದೇವತೆಗಳು ಬಂದು ಮೀಯುತ್ತಾರೆ. ನನ್ನ ಬಾಲ್ಯದಿಂದ ಹರಿಯುತ್ತಿರುವ ಅಶ್ರು ಗಂಗಾವಾರಿಯನ್ನು ಸಂಗ್ರಹಿಸಿದ್ದರೆ ಮಿಚಿಗನ್ ಸರೋವರ ವಲ್ಲದಿದ್ದರೆ, ಕನ್ನಂಬಾಡಿಯಾದರು ತುಂಬುತ್ತಿತ್ತೆನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ನನ್ನ ಅಳುಬುರುಕು ತನಕ್ಕೂ ಮುಂಗೋಪಕ್ಕೂ ಹೊಕ್ಕುಳ ಬಳ್ಳಿಯ ಸಂಬಂಧವಿದೆ. ಅಳುಬುರುಕತನವಿಲ್ಲದಿದ್ದ ಪಕ್ಷದಲ್ಲಿ ನನ್ನ ಮುಂಗೋಪಕ್ಕೆ ನಾನೇ ಸುಟ್ಟು ಬೂದಿಯಾಗುತ್ತಿದ್ದೆನೋ ಏನೋ. ಕೋಪ ಅಳತೆ ಮೀರಿದಾಗ, ಅಪಾಯಕಾರಿಯಾಗಿ ಕಂಡಾಗ ನಾನು ಏಕಾಂತ ಸ್ಥಳಕ್ಕೆ ಹೋಗಿ ಅತ್ತು ಬಿಡುತ್ತೇನೆ. ಬಂಧು ರೂಪದಲ್ಲಿಯೊ, ಮಿತ್ರರೂಪದಲ್ಲಿಯೊ, ಅಧಿಕಾರ ರೂಪದಲ್ಲಿಯೊ ನನಗೆ ಸಂಬಂಧ ಪಟ್ಟವರು ನನ್ನ ಮಾತಿಗೆ ಸೊಪ್ಪು ಹಾಕದಿದ್ದಾಗ, ನನ್ನ ಬುದ್ಧಿವಾದ ಕೇಳದಿದ್ದಾಗ, ಯಾರೇ ಆಗಲಿ ಅಧರ್ಮದಲ್ಲಿ ಕಾಲಿಟ್ಟಾಗ, ನೀತಿಗೆಟ್ಟಾಗ, ಅನ್ಯಾಯವೆಸಗಿದಾಗ ನನಗೆ ಬೇಗ ಕೋಪ ಬರುತ್ತದೆ. ಅದು ಸಾಗರದ ಉಬ್ಬರವಿಳಿದಂತೆ ಕ್ಷಣಿಕವೇ ಹೊರತು ಸ್ಥಾಯಿಯಲ್ಲ. ಅದನ್ನು ಹೃದಯದಲ್ಲಿರಿಸಿಕೊಂಡು ಕೊಳೆಯಿಸುವ ಸ್ವಭಾವ ನನ್ನದಲ್ಲ. ಕೋಪದ ಪ್ರಕರಣ ನಡೆದ

ಕೆಲವು ಗಂಟೆ ಅಥವಾ ದಿನಗಳ ನಂತರ ಅದು ಮರೆತು ಹೋಗುತ್ತದೆ ; ಇಲ್ಲವೇ ಪಶ್ಚಾತ್ತಾಪವಾಗಿ ಪರಿಣಮಿಸುತ್ತದೆ. ನನ್ನ ಕೋಪಕ್ಕೆ ಗುರಿಯಾದ ವ್ಯಕ್ತಿಗಳು ಮತ್ತೆ ಬಂದಾಗ ಅವರ ಇಚ್ಛೆಗಳನ್ನು ಈಡೇರಿಸಿದ ಸಂದರ್ಭಗಳೂ ಹಲವಾರಿವೆ. ಒಂದೆರಡನ್ನು ಮಾತ್ರ ಇಲ್ಲಿ ನಿರೂಪಿಸುತ್ತೇನೆ.

ಶಂಭೂಗೌಡ ನನ್ನ ಬಾಲ್ಯ ಸ್ನೇಹಿತ. ಒಂದೇ ಪ್ರಾಥಮಿಕ ಶಾಲೆಯಲ್ಲಿ ಓದಿದವರು. ರಾತ್ರಿ ವೇಳೆ ನಮ್ಮ ಮನೆಯ ಪಡಸಾಲೆಯ ಮೇಲೆ ಇಬ್ಬರೂ ಪಕ್ಕಪಕ್ಕದಲ್ಲಿ ಮಲಗುತ್ತಿದ್ದೆವು.ಅವನ ದೂರದ ಸಂಬಂಧಿಯೊಬ್ಬರು ಒಂದು ದಿನ ಬಂದು, ಯಾವುದೋ ಕಾರಣಕ್ಕಾಗಿ ಗೊತ್ತಾಗಿದ್ದ ಮದುವೆ ನಿಂತು ಹೋಯಿತು ಅದೇ ಲಗ್ನದಲ್ಲಿ ನಿಮ್ಮ ಮಗನಿಗೆ ನಮ್ಮ ಕಡೆಯ ಹೆಣ್ಣನ್ನು ಮದುವೆ ಮಾಡಿಕೊಡಬೇಕೆಂದಿದ್ದೇವೆ, ಹೇಗಾದರೂ ಮಾಡಿ ಒಪ್ಪಿಸಿ ಎಂದು ಅವನ ತಂದೆಯ ಮುಂದೆ ಅಂಗಲಾಚಿದರು. ತಂದೆ ಮತ್ತು ಮಗ ಇಬ್ಬರೂ ಹೆಣ್ಣು ನೋಡಿಕೊಂಡು ಬರುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಅಂಥ ವ್ಯವಹಾರಗಳಲ್ಲಿ ನಾನು ನಿರನುಭವಿ. ಸ್ನೇಹಿತನ ಮೇಲಣ ಅಭಿಮಾನವೂ, ನನ್ನ ಸುಪ್ತಾಹಂಕಾರವೂ ಕಾರಣವಾಗಿ, ಹೆಣ್ಣು ನೋಡಿಕೊಂಡು ಬಂದೆ, ಮದುವೆಯೂ ಆಯಿತು. ಅವನು ಪ್ರಾಥಮಿಕ ಶಾಲೆ ಉಪಾಧ್ಯಾಯನೂ ಆದ. ನಿವೃತ್ತಿಯೂ ಹತ್ತಿರವಾಯಿತು.

ನಾನು ಕುಲಪತಿಯಾದ ಮೂರ್‍ನಾಲ್ಕು ದಿನಗಳಲ್ಲಿಯೇ ನನ್ನ ಕಚೇರಿಗೆ ಬಂದು ‘ ನನ್ನ ಮಗನಿಗೆ ಎಸ್. ಎಸ್. ಎಲ್. ಸಿ. ಆಗಿದೆ. ಒಂದು ಕೆಲಸ ಕೊಡಿ’ ಎಂದ. ‘ಇದೇತಾನೆ ಅಧಿಕಾರ ವಹಿಸಿಕೊಂಡಿದ್ದೇನೆ, ಸದ್ಯಕ್ಕೆ ಸಾಧ್ಯವಿಲ್ಲ’ ಎಂದೆ. ಹಿಂದಿನ ಸಲುಗೆಯಿಂದಲೆ ‘ನನಗಲ್ಲದೆ ನೀವು ಇನ್ಯಾರಿಗೆ ಸಹಾಯ ಮಾಡುತ್ತೀರಿ. ಬೇರೆ ಜಾತಿಯ ಜನ ಇಲ್ಲಿದ್ದರೆ ಬರುತ್ತಿದ್ದನೆ’ ಎಂದು ಇನ್ನೂ ಏನೇನೋ ಮಾತಾಡಿದ ‘ನೋಡಯ್ಯ ಇಲ್ಲಿ ನಮ್ಮವರು ನಿಮ್ಮವರು ಎಂದರೆ ನಡೆಯದು’ ಎಂದು ನಾನೂ ರೇಗಾಡಿ ಕಳಿಸಿದೆ. ಅವನ ಮೇಲೆ ರೇಗಾಡಿದ್ದು ಸರಿಯೆ ಎಂದು ಆ ದಿನ ಸಂಜೆಯೇ ನೆನಪಾಯಿತು. ಪಾಪ, ಅವನು ಅತ್ತುಕೊಂಡು ಹೋದನೇನೊ? ಎಂದು ನನ್ನ ಮನಸ್ಸು ಸಹ ರೋದನಗೈದಿತು. ಮುದ್ರಣಾಲಯದ ನಿರ್ದೇಶಕರಿಗೆ ಹೇಳಿಕಳಿಸಿ, ಬಂದಾಗ ‘ ಏನ್ರಿ, ನನ್ನ ಸ್ನೇಹಿತ ಬಡ ಉಪಾಧ್ಯಾಯ. ಅವನ ಮಗ ಎಸ್ಸೆಸ್ಸೆಲ್ಸಿ ಪಾಸು ಮಾಡಿದ್ದಾನೆ. ಅವನಿಗೆ ತಾಂತ್ರಿಕ ತರಬೇತಿ ನೀಡಿ ಒಂದು ಒಳ್ಳೆಯ ಕೆಲಸ ಕೊಡಬೇಕು’ ಎಂದೆ. ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೂ ತುಸು ದೊಡ್ಡದಾದ ನೌಕರಿಯನ್ನು ಆ ಹುಡುಗನಿಗೆ ಕೊಟ್ಟೆ. ಅಷ್ಟು ದೊಡ್ಡ ಹುದ್ದೆ ಸಿಕ್ಕಿದ್ದು ತಂದೆ ಮಕ್ಕಳಿಬ್ಬರಿಗೂ ಆಶ್ಚರ್ಯವಾಗಿರಬೇಕು.

ಡಿ. ವಿ. ಅರಸುವೊಮ್ಮೆ ವಿದ್ಯಾರ್ಥಿ ಕ್ಷೇಮಪಾಲಕ ಹುದ್ದೆಗೆ ಅರ್ಜಿ ಹಾಕಿಕೊಂಡಿದ್ದರು.ಆ ಕಾಲಕ್ಕೆ ಅವರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಅಧ್ಯಾಪಕರು. ಆ ಹುದ್ದೆಗೆ ನೇಮಕವಾಗತಕ್ಕವನು ಸಿಗರೇಟು ವಿಸ್ಕಿ ಮೊದಲಾದ ದುಶ್ಚಟಗಳಿಗೆ ದಾಸನಾಗಿರ ಬಾರದೆಂಬುದು ನನ್ನ ಮತ್ತು ಆಯ್ಕೆ ಸಮಿತಿಯ ಉಳಿದ ಸದಸ್ಯರ ಮತ. ಸಮಿತಿಯಲ್ಲಿ ನಾನಿದ್ದುದರಿಂದ ಕುಲಪತಿಯ ಆಪ್ತಕಾರ್ಯದರ್ಶಿಗಳಾದ ಅವರಿಗೆ ಆ ಹುದ್ದೆ

ಸಿಗುತ್ತದೆಂಬ ಭರವಸೆ ಅರಸುವಿಗೂ ಇತ್ತು. ಸರ್ವರಿಗೂ ತಿಳಿದಿತ್ತು. ನಿಷ್ಕಳಂಕ ಚಾರಿತ್ರ್ಯದ ಉ. ಕಾ. ಸುಬ್ಬರಾಯಾಚಾರ್ಯರ ಅರ್ಜಿಯೂ ಇದ್ದದ್ದರಿಂದ, ಅರಸುವಿಗೆ ಆ ಹುದ್ದೆ ಸಿಗಲಿಲ್ಲ. ಅರಸು ನನ್ನ ಬಳಿ ಬಂದು ರೇಗಾಡಿದರೂ, ಕೊನೆಗೆ ಅತ್ತರು. ನಾನೂ ರೇಗಾಡಿದೆ. ಅತ್ತೆ. ಮೂರನೆಯ ತಿಂಗಳೇ ಅವರಿದ್ದ ಕಾರ್ಯದರ್ಶಿ ಹುದ್ದೆಯನ್ನೆ ಮೇಲೇರಿಸಲು ಪ್ರಯತ್ನ ಮಾಡಿ, ಯಶಸ್ವಿಯಾದೆ. ಅನಂತರ ಅಂಚೆ ಮತ್ತು ತೆರಪಿನ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸ್ಥಾನದಲ್ಲಿ ಅವರನ್ನು ಖಾಯಂಗೊಳಿಸಿದ್ದಲ್ಲದೆ ನನ್ನ ಆಪ್ತ ಕಾರ್ಯದರ್ಶಿಯಾಗಿ, ಅನಂತರ ಕುಲಸಚಿವರಾಗಿ ನೇಮಿಸಿಕೊಂಡೆ. ನಮ್ಮ ಆಡಳಿತದ ಬಗ್ಗೆ ಅನಾವಶ್ಯಕವಾಗಿ ಟೀಕೆ ಬಂದಾಗ ಇಬ್ಬರೂ ಅತ್ತುದುಂಟು. ಅವರು ಕುಲಪತಿಯಾದ ನಂತರ ನನ್ನ ಕಡೆಗೆ ತಿರುಗಿ ನೋಡಲಿಲ್ಲ.

ಈ ವರ್ಗಕ್ಕೆ ಸೇರಿದವರಲ್ಲಿ ಇಂದು ಉಪಕುಲಸಚಿವರಾಗಿರುವ ನಂಜುಂಡೇಗೌಡರೂ ಒಬ್ಬರು. ಅವರಿಗೆ ಮೊದಲು ಧರ್ಮಸ್ಥಳದಲ್ಲಿ ಕೆಲಸ ಕೊಡಿಸಿದೆ. ಅದೇಕೋ ನನಗೆ ಸರಿಬೀಳದು, ಕೆ. ಆರ್. ನಗರದಲ್ಲಿ ಪ್ರಥಮ ದರ್ಜೆ ಕಾಲೇಜು ಶುರುವಾಗಲಿದೆ; ಅಲ್ಲಿ ನನ್ನನ್ನು ಪ್ರಿನ್ಸಿಪಾಲ್ ಮಾಡಿಸಿ ಎಂದರು. ಅದೂ ಆಯಿತು. ಅಲ್ಲಿಯೂ ಹೊಂದಿಕೊಳ್ಳಲಿಲ್ಲ. ವಿಶ್ವವಿದ್ಯಾನಿಲಯದ ಕಚೇರಿಗೆ ಇಬ್ಬರೊ ಮೂವರೊ ಸಹಾಯಕ ಕುಲಸಚಿವರನ್ನು ತೆಗೆದುಕೊಳ್ಳಬೇಕಾಗಿತ್ತು. ಅದರ ಮೇಲೆ ಅವರ ಆಸೆಯ ಕಣ್ಣು ಬಿತ್ತು. ಮನೆಗೆ ಬಂದರು, ಅಡ್ಡಬಿದ್ದರು, ನನಗದನ್ನು ಕೊಡಿಸಿ ಎಂದರು. ಎಲ್ಲ ಕೆಲಸಗಳೂ ನಿಮ್ಮೊಬ್ಬರಿಗೆ ಬೇಕೇನ್ರಿ, ಆಗೋದಿಲ್ಲ, ಹೋಗ್ರಿ ಎಂದು ಚಾವಣಿ ಎದ್ದು ಹೋಗುತ್ತದೆಯೋ ಎನ್ನುವಷ್ಟರ ಮಟ್ಟಿಗೆ ಕೂಗಾಡಿದೆ. ಕೊಡ್ತೀನಿ ಅಂತ ವಚನ ನೀಡುವತನಕ ಹೋಗೋಲ್ಲ, ಇಲ್ಲೆಯೇ ನೇಣು ಹಾಕಿಕೊಡು ಸಾಯ್ತೇನೆ ಎಂದು ಗೋಳ್ಗರೆದರು. ಯಾವಾಗಲೂ ನನ್ನ ಕೋಪಕ್ಕೆ ನಾನೇ ಬಲಿ. ಕೊಟ್ಟೆ. ನಾನೂ ನಿವೃತ್ತನಾದೆ. ಸಿಂಡಿಕೇಟ್‌ಗೆ ಚುನಾವಣೆ ಬಂದುವು. ಪ್ರೊ. ಎಂ. ಮಾದಯ್ಯ ನನ್ನನ್ನು ಹಿಡಿದರು. ಅವರಿಗೆ ಗೊತ್ತಿದ್ದವರೊಬ್ಬರ ಓಟುಕೊಡಿಸಿ ಎಂದು ನಂಜುಂಡೇಗೌಡರಿಗೆ ಹೇಳಿದೆ. ಒಕ್ಕಲಿಗರೊಬ್ಬರು ಸ್ಪರ್ಧಿಯಾಗಿದ್ದುದರಿಂದ ಅದು ಮಾದಯ್ಯನವರಿಗೆ ದಕ್ಕಲಿಲ್ಲ. ಆಮೇಲೆ ಅವರಿಗೂ ನನಗೂ ಇದ್ದ ಸಂಬಂಧ ಪೂರ್ಣ ಕಡಿದು ಹೋಯಿತು. ಈಗವರು ಮಾದಯ್ಯನವರಿಗೆ ಅಧೀನರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ದಕ್ಷತೆಯ ಬಗ್ಗೆ ನನಗೇನೂ ತಿಳಿದಿಲ್ಲ.

ಕೇವಲ ಪ್ರಾತಿನಿಧಿಕವಾಗಿ ಎರಡು ಮೂರು ಉದಾಹರಣೆಗಳನ್ನು ಮಾತ್ರ ನಿರವಿಸಿದ್ದೇನೆ. ಇದನ್ನು ಬರೆಯುವಾಗ ಇನ್ನೂ ಅನೇಕ ಮುಖಗಳು ನನ್ನ ಕಣ್ಮುಂದೆ ಗೋಚರಿಸುತ್ತವೆ. ಕಲ್ಲಯ್ಯ ಒಬ್ಬರು ಪ್ರಕಾಶಕರು. ಅವರನ್ನೆಷ್ಟು ಬಯ್ದಿದ್ದೇನೆಯೋ, ಅವರ ಮೇಲೆ ರೇಗಾಡಿದ್ದೇನೆಯೊ? ರೇಗಿದಾಗ ಅವರ ಮುಖದ ಮೇಲೆ ಕಾಣಿಸಿಕೊಳ್ಳುತ್ತಿದ್ದ ದುಗುಡವನ್ನು ನಾನೆಂದೂ ಮರೆಯಲಾರೆ. ಆದ್ದರಿಂದಲೇ ಅವರಿಗೆ ಮೇಲಿಂದ ಮೇಲೆ ಸಹಾಯ ಮಾಡಿದ್ದೇನೆ, ನಿವೃತ್ತನಾದ ನಂತರವೂ, ನನ್ನ ಹಲವು ಪುಸ್ತಕಗಳನ್ನು ಪ್ರಕಟಿಸಿ

ನನಗವರು ಉಪಕಾರ ಮಾಡಿದ್ದಾರೆ. ನಾನವರಿಗೆ ಯಾವಾಗಲೂ ಶ್ರೇಯಸ್ಸು ಕೋರುತ್ತೇನೆ. ವಯೋಭಾರದಿಂದ ಕೋಪ ಜರ್ಜರಿತವಾಗಿದೆ. ಬಹು ಭಾಗ ಕಡಿಮೆಯಾಗಿದೆ; ಆಳು ಮಾತ್ರ ನಿಂತಿಲ್ಲ. ಈ ಹೊತ್ತಿಗೂ ಕೆಲವು ಮಿತ್ರರು ಉದಾಹರಣೆಗೆ. ವಿದ್ವಾನ್ ಶಿವಕುಮಾರ ಸ್ವಾಮಿಗಳು - ನಿಮ್ಮಿಂದ ಬಯ್ಸಿ ಕೊಳ್ಳುವುದರಲ್ಲೊಂದು ಸುಖವಿದೆ ಎನ್ನುತ್ತಾರೆ. ಕುಲಪತಿಯಾಗಿದ್ದಾಗ ಹಲವು ಮಂದಿತಪ್ಪಿತಸ್ಥರ ಮೇಲೆ ಕೋಪ ಕಾರಿದ್ದೇನೆ. ತುಂಬ ರಾಜಕೀಯ ಮಾಡುತ್ತಿದ್ದ ರೀಡರ್ ಒಬ್ಬರನ್ನು ಸಿಂಡಿಕೇಟ್ ವಜಾಮಾಡಿದರೂ ಆ ಸಂಬಂಧದ ನಿರ್ಣಯವನ್ನು ನಾನು ಜಾರಿಗೆ ಕೊಡಲಿಲ್ಲ. ಎಷ್ಟೇ ಸಮಸ್ಯೆಗಳಿದ್ದರೂ ನಾನು ಪೋಲೀಸ್ ದಳದ ರಕ್ಷಣೆಯಲ್ಲಿ ಆಡಳಿತ ನಡೆಸಲಿಲ್ಲ; ಮನೆಗೆ ಪೋಲಿಸಿನವರ ರಕ್ಷಣೆ ಪಡೆಯಲಿಲ್ಲ. ಒಬ್ಬ ನೌಕರನನ್ನು ವಜಾ ಮಾಡುವುದಿರಲಿ. ಜುಲ್ಮಾನೆ ಹಾಕಿ ಶಿಕ್ಷಿಸಲಿಲ್ಲ. ನನ್ನಲ್ಲೊಂದೂ ಅಂಥ ಅಪರಾಧೀ ಮನೋಭಾವ ತಲೆಯೆತ್ತಲಿಲ್ಲ. ಶುದ್ಧ ಹಸ್ತ. ನಿರ್ಮಲ ಹೃದಯ. ಪ್ರಬುದ್ಧ ಮನಸ್ಸು ಮತ್ತು ಸಚ್ಚಾರಿತ್ರ್ಯವಿರುವವರೆಗೆ ಕುಲಪತಿಯಾದವನು ಯಾರಿಗೂ ಹೆದರಬೇಕಾಗಿಲ್ಲ. ಅವನ ಚಾರಿತ್ರ್ಯವೇ ಅವನನ್ನು ರಕ್ಷಿಸುತ್ತದೆ. ನನ್ನನ್ನು ಹಿಂದೆ ಮುಂದೆ ಬಯ್ದುವರಿಗೂ ಅವಕಾಶವಿದ್ದಾಗ ಸಹಾಯಮಾಡಿದ್ದೇನೆ. ಅರ್ಹತೆಯನ್ನು ಕಡೆಗಣಿಸಲಿಲ್ಲ. ಜಾತೀಯತೆಯನ್ನು ಪುರಸ್ಕರಿಸಲಿಲ್ಲ. ಇಷ್ಟೆಲ್ಲ ಹೇಳುವಾಗ. ನಾನು ನಿಷ್ಕಳಂಕ ವ್ಯಕ್ತಿಯೆಂದು. ಎಂದೂ ತಪ್ಪು ಮಾಡಿಲ್ಲವೆಂದು ಸಾಧಿಸುವ ಹಟ ನನ್ನಲ್ಲಿಲ್ಲ. ಮರವು ಆಲಸ್ಯ ಆಹಂಕಾರ ಮಾನವನ ಸಹಜ ಗುಣಗಳು ಅವನೆಷ್ಟೇ ಶಿಸ್ತುಗಾರನಾದರೂ ಅವನಿಗರಿವಾಗದಂತೆಯೇ ಹೊಂಚು ಹಾಕುತ್ತಿದ್ದು. ಅವನನ್ನು ಬಲೆಗೊಳಿಸುತ್ತವೆ. ಅವನ ಮೇಲೆ ಸವಾರಿಮಾಡುತ್ತವೆ. ಒಮ್ಮೊಮ್ಮೆ ಹೊಗಳಿಕೆಗೆ ಗುಲಾಮನಾಗುವುದೂ ಉಂಟು. ಈ ಕಾರಣಗಳಿಂದಾಗಿ ನನ್ನಿಂದ ಹಿಡಿ ಮಂದಿಗೆ ಅನ್ಯಾಯವಾಗಿರಬಹುದು. ಅದು ನನ್ನ ಗಮನಕ್ಕೂ ಬಂದಿದೆ. ಅದಕ್ಕಾಗಿ ಪಶ್ಚಾತ್ತಾಪ ಪಟ್ಟಿದ್ದೇನೆ. ಅನೇಕ ಕಡೆ ಬರವಣಿಗೆಯಲ್ಲಿ ಅದನ್ನೆಲ್ಲ ತೋಡಿಕೊಂಡಿದ್ದೇನೆ.

*****

ನಾನು ಮತ್ತು ಹಲವರು

ಡಾ. ವಿ. ಕೆ. ಆರ್. ವಿ. ರಾವ್ ನಾಡಿನ ಪ್ರಖ್ಯಾತ ಅರ್ಥಶಾಸ್ತ್ರಜ್ಞರು; ಶಿಕ್ಷಣತಜ್ಞರು; ಬಹು ಸಂಸ್ಥೆಗಳ ಸೃಷ್ಟಿಕರ್ತರು; ದೇಶಭಾಷಾ ಮಾಧ್ಯಮದ ಬೆಂಬಲಿಗರು. ಅವರು ಕೇಂದ್ರ ವಿದ್ಯಾಮಂತ್ರಿಯಾಗಿದ್ದಾಗ ನಾನವರನ್ನು ಪದವೀದಾನ ಸಮಾರಂಭದ ದೀಕ್ಷಾಂತ ಭಾಷಣಕ್ಕೆ ಕರೆದಿದ್ದೆ. ಆಗ ಸಮಾರಂಭ ಮಾನಸಗಂಗೋತ್ರಿಯ ಬಯಲು ರಂಗ ಮಂದಿರದಲ್ಲಿ ವೈಭವೋಪೇತವಾಗಿ ನಡೆಯುತ್ತಿತ್ತು. ಈಗ ಆ ಕಾಲದ ವೈಭವವೂ ಇಲ್ಲ, ಸ್ನಾತಕ ಸಮಸ್ತರಿಗೆ ಖುದ್ದಾಗಿ ಪದವಿ ಪಡೆಯುವ ಅವಕಾಶವೂ ಇಲ್ಲ. ಅಂಥ ಭವ್ಯವಾದ ಕಾನ್ವೊಕೇಷನ್ ಅನ್ನು ತಾವೆಂದೂ ನೋಡಿಲ್ಲವೆಂದು ನನ್ನ ಕುಲಪತಿಯ ಅವಧಿಯಲ್ಲಿಯೇ ದೀಕ್ಷಾಂತ ಭಾಷಣಮಾಡಿದ್ದ ಸಿದ್ಧಾರ್ಥಶಂಕರರೇ ಉದ್ಗಾರ ತೆಗೆದಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭಕ್ಕೊಂದು ಪರಂಪರೆಯಿದೆ. ಮಹಾರಾಜರು ಕುಲಾಧಿಪತಿಗಳಾಗಿದ್ದ ಕಾಲದಲ್ಲಿ ಆ ಪರಂಪರೆ ಪ್ರಾರಂಭವಾಯಿತು. ಮಹಾರಾಜರು ಇತಿಹಾಸದಿಂದ ಮರೆಯಾದ ನಂತರವೂ ಅದೇ ಪರಂಪರೆ ಉಳಿದುಕೊಂಡು ಬಂದಿದೆ. ಕ್ಲುಪ್ತ ಕಾಲದಲ್ಲಿ ವಿಧಿವಿಧಾನಗಳೆಲ್ಲವೂ ಮುಗಿಯ ಬೇಕಾಗಿದ್ದುದರಿಂದ ಪ್ರತಿಯೊಂದು ಕಾರ್ಯಕ್ರಮವೂ ಕ್ಷಿಪ್ರವಾಗಿ ಜರುಗುತ್ತಿದ್ದವು. ಮಹಾರಾಜರಿಗೆ ಅನಾನುಕೂಲವಾಗಬಾರದು ಮತ್ತು ಬೇಸರವಾಗಬಾರದೆಂಬುದೇ ಕ್ಲುಪ್ತಕಾಲದ ಕ್ಷಿಪ್ರವೇಗದ ಉದ್ದೇಶವಾಗಿತ್ತು. ಭಾಷಣಕಾರರ ಅವಧಿಯ ನಿಷ್ಕರ್ಷೆಯನ್ನು ಅವರಿಗೇ ಬಿಡಲಾಗುತ್ತಿತ್ತು. ಆದರೆ ಕುಲಪತಿಗಳು ಅವರ ಸಾಧನೆ ಸಿದ್ಧಿ ಪ್ರಶಸ್ತಿಗಳ ಪ್ರಶಂಸೆಗೆಂದು ನಾಲಿಗೆ ಚಾಚದೆ ಅವರ ಪರಿಚಯವನ್ನು ಎರಡು ಮಾತಿನಲ್ಲಿ ಮುಗಿಸಿ ಭಾಷಣ ಮಾಡುವಂತೆ ಅವರನ್ನು ಪ್ರಾರ್ಥಿಸುತ್ತಿದ್ದರು. ನನ್ನ ಕಾಲದಲ್ಲಿ ಆರು ಸಮಾರಂಭಗಳು ನಡೆದು ಆರು ಮಂದಿ-ಮಂದಿಯಲ್ಲ, ಗಣ್ಯರು ಭಾಷಣ ಮಾಡಿದ್ದರು ಅವರಲ್ಲಿಬ್ಬರು ಮಾತ್ರ - ಆ ಇಬ್ಬರಲ್ಲಿ ವಿಶೇಷವಾಗಿ ರಾಯರು-ತಮ್ಮನ್ನು ಸಭೆಗೆ ಸರಿಯಾಗಿ ಪರಿಚಯ ಮಾಡಿಕೊಡಲಿಲ್ಲವೆಂದು ಕ್ಯಾತೆ ತೆಗೆದಿದ್ದರು. ನನ್ನ ಮುಂದೆ ಅವರೇನೂ ಬಾಯಿ ಬೀಗ ತೆಗೆಯಲಿಲ್ಲ. ರಾಜ್ಯಪಾಲ ಶ್ರೀ ಧರ್ಮವೀರರ ಮುಂದೆ ಹೇಳಿಕೊಂಡು, ಕೋಪದ ಗುಡುಗು ಸಿಡಿಲುಗಳನ್ನು ಉರುಳಿಸಿದ್ದರಂತೆ.

ಸಮಾರಂಭ ಮುಗಿದ ನಂತರ ರಾಜ್ಯಪಾಲರು ನನ್ನನ್ನು ಒತ್ತಟ್ಟಿಗೆ ಕರೆದು ಆ ವಿಷಯವನ್ನು ಪ್ರಸ್ತಾಪಿಸಿದರು. ನಾನವರಿಗೆ ಹೇಳಿದೆ: 'ಇದು ನಮ್ಮ ಪದ್ಧತಿ. ಹಳೆಯ ಪದ್ಧತಿಯನ್ನು ಬದಲಾಯಿಸಬಾರದೆಂದಿಲ್ಲ, ಬದಲಾಯಿಸಬಹುದಿತ್ತು. ಬದಲಾವಣೆಗೆ ಕಾರಣ ಕಾಣಲಿಲ್ಲ. ಕಾನ್ವೊಕೇಷನ್ ಅಲ್ಲಿ ಅವಕಾಶ ಸಿಕ್ಕಿತೆಂದು ಕುಲಪತಿಯೇ ತನ್ನನ್ನು ತಾನು ಪ್ರದರ್ಶಿಸಿಕೊಳ್ಳಬಾರದು; ಪರಿಚಯ ಭಾಷಣ ದೀರ್ಘವಾದರೆ ವಿದ್ಯಾರ್ಥಿಗಳು ಸಹಿಸಲಾರರು. ಅವರು ಮುಖ್ಯ ಅತಿಥಿಗಳ ಭಾಷಣ ಕೇಳಲು ಕಾತರರಾಗಿರುತ್ತಾರೆ.

ಸಾಮಾನ್ಯವಾಗಿ ಭಾಷಣಕ್ಕೆ ಆಹ್ವಾನಿತರಾದವರೆಲ್ಲರೂ ವಿದ್ಯಾವಂತರು ಬಲ್ಲವರೇ ಆಗಿರುತ್ತಾರೆ; ನಗಣ್ಯರನ್ನು ಅಖ್ಯಾತರನ್ನು ಕರೆಯುವುದೇ ಇಲ್ಲ. ಸಭಿಕರಿಗೆ ಗೊತ್ತಿರುವುದನ್ನೇ ಮತ್ತೆ ಹೇಳುವುದು - ಅದರಲ್ಲಿಯೂ ಇಂಥ ಗಂಭೀರ ಸಮಾರಂಭದಲ್ಲಿ ಪುನರಾವರ್ತನೆ ಮಾಡುವುದು - ಹುಡುಗಾಟವಾಗುತ್ತದೆ. ನಾಚಿಕೆಗೇಡಿನ ಪ್ರಸಂಗ ವಾಗುತ್ತದೆ. ಒಂದು ಪಕ್ಷ ಹೇಳಬಹುದೆಂದೇ ಇಟ್ಟುಕೊಳ್ಳೋಣ: ಭಾಷಣಕಾರರಿಗೆ ಕಸಿವಿಸಿಯಾಗಬಹುದು. ಇಲ್ಲದ್ದು, ಇದ್ದದ್ದು ಎಲ್ಲ ಪ್ರವರವನ್ನು ಈ ಜನರ ಮುಂದೆ ಒಡ್ಡಬೇಕೆ? ನನ್ನ ವಿಷಯ ಇವರಿಗೆ ಗೊತ್ತಿಲ್ಲವೆ? ಈ ರೀತಿ ನನಗೆ ಅವಮಾನ ಮಾಡಬಹುದೆ? ಹೀಗಾಗಬಾರದೆಂದೇ ಈ ವಿಶ್ವವಿದ್ಯಾನಿಲಯದಲ್ಲಿ ಅನಾವಶ್ಯಕವಾದ ಪದ್ಧತಿಯನ್ನು ಕೈಬಿಡಲಾಗಿದೆ. ಹೇಗೋ ಭೋಜನ ಕೂಟಕ್ಕೆ ಬರುತ್ತಾರಲ್ಲ; ಇದನ್ನವರೊಡನೆ ಪ್ರಸ್ತಾಪಿಸುತ್ತೇನೆ. ' ರಾವ್ ವಿಷಯ ಗೊತ್ತಿದೆಯಲ್ಲ, ಪ್ರತಿಷ್ಠೆಯ ಮನುಷ್ಯ. ತಮ್ಮ ಕೋಪದ ಗುಂಡನ್ನು ವಿಶ್ವವಿದ್ಯಾನಿಲಯದ ಮೇಲೆ ಹಾರಿಸಿಯಾರು. ಅದನ್ನೇನೂ ಎತ್ತ ಬೇಡಿ, ನಾನೇ ಅವರನ್ನು ಸರಿಮಾಡಿದ್ದೇನೆ' ಎಂದರು ರಾಜ್ಯಪಾಲರು.

ರಾಯರ ತಿಕ್ಕಲು ನಡವಳಿಕೆಗೆ ಕಾರಣವೇ ಬೇರೆ. ಅದು ಧರ್ಮವೀರರಿಗೆ ತಿಳಿಯದ ವಿಷಯವೇನಲ್ಲ. ಕನ್ನಡದಲ್ಲಿ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿಕೊಳ್ಳಬೇಕೆಂಬ ತೆವಲು ರಾಯರದು. ಭಾಷಣ ಕನ್ನಡದ್ದಾದರೂ, ಅದಕ್ಕೆ ಬಳಸಿದ್ದ ಲಿಪಿ ರೋಮನ್. ಕನ್ನಡ ಲಿಪಿಯ ರೋಮನಾಂತರ ಅಪಾಯಕಾರಿ. ರೋಮನ್ ವರ್ಣಮಾಲೆಯಲ್ಲಿಲ್ಲದ ಧ್ವನಿಮಾಗಳಿಗೆ ಸಾಂಕೇತಿಕ ಧ್ವನಿಮಾಗಳನ್ನು ಬಳಸಿದರೆ ಓದುವುದು ಸುಲಭವಾಗುತ್ತದೆ. ಕನ್ನಡದ ಮೂರ್ಧನ್ಯಾಕ್ಷರಗಳಿಗೆ ಮತ್ತು ದೀರ್ಘಾಕ್ಷರಗಳಿಗೆ ಸಂವಾದಿಯಾದ ಅಕ್ಷರಗಳು ರೋಮನ್ ವರ್ಣಮೊಲೆಯಲ್ಲಿಲ್ಲ. ಮೊದಲೇ ಒಂದೆರಡು ಸಲ ರೋಮನ್ ಲಿಪಿಯ ಭಾಷಣವನ್ನು ಓದಿಕೊಂಡು ಬಂದಿದ್ದರೆ ಉಚ್ಚಾರಣೆ ಅಧ್ವಾನವಾಗುತ್ತಿರಲಿಲ್ಲ. ಅವರ ಉಚ್ಚಾರಣೆ ನಗೆಪಾಟಲಿಗೆ ಗುರಿಯಾಗಿತ್ತು. ನಾನೇ ಒಂದೆರಡು ಸಾರಿ ಅಚ್ಚಾಗಿದ್ದ ಇಂಗ್ಲಿಷ್ ಭಾಷಣವನ್ನೋದುವಂತೆ ಅವರನ್ನು ವಿನಂತಿಸಿಕೊಂಡೆ. ನನ್ನ ವಿನಂತಿಗೆ ಅವರು ಕಿವುಡು ಗಿವಿ ತಿರುಗಿಸಿದರು. ಅಂತು ಕೊನೆಯ ತನಕ ಅವರು ಕೈ ಚಪ್ಪಾಳೆ ಗಿಟ್ಟಿಸಿಕೊಂಡರು. ಕೈ ಚಪ್ಪಾಳೆಯ ಅರ್ಥ ಅವರಿಗೆ ಮಾತ್ರವಲ್ಲ, ಕನ್ನಡ ಬಾರದ ಧರ್ಮವೀರರಿಗೂ ಗೊತ್ತಾಯಿತು. ರಾಯರ ನನ್ನ ಮೇಲಣ ರೇಗಿಗೆ ಕಾರಣ ನನಗೆ ಮೊದಲೇ ಗೊತ್ತಿತ್ತು. ನಾನವರನ್ನು ಕರೆದ ತಪ್ಪಿಗೆ ಸಿಕ್ಕಿದ ಮರ್ಯಾದೆ ಇದು.

ಮಂತ್ರಿ ಪದವಿಯಿಂದ ನಿರ್ಗಮನಗೊಂಡನಂತರ ರಾಯರೊಂದು ದಿನ ಬೆಂಗಳೂರಿನಿಂದ ಅಪರಾಹ್ನ ಐದು ಗಂಟೆ ಸಮಯದಲ್ಲಿ ನನಗೆ ಫೋನು ಮಾಡಿ ' ನಾನು ಮೈಸೂರಿಗೆ ಬರುತ್ತಿದ್ದೇನೆ. 7.30ರ ವೇಳೆಗೆ ನಿಮ್ಮನ್ನು ಭೇಟಿ ಮಾಡುತ್ತೇನೆ' ಎಂದರು. ಅವರ ಮಾತಿನಲ್ಲಿ ಪ್ರಶಂಸೆಯ ಸ್ನೇಹದ ನಿಕಟತ್ವದ ಧ್ವನಿಯಿತ್ತು. ಆಗಲೆಂದೆ - ಗೊತ್ತಾದ ವೇಳೆಗೆ ಬಂದರು. ಗೌಡರೆ, ನಾನೀಗ ಬೆಂಗಳೂರಿಗೆ ಬಂದು ಬಿಟ್ಟಿದ್ದೇನೆ. ಅಲ್ಲಿ ನಾನೊಂದು ಸಂಸ್ಥೆಯನ್ನು -ಸಮಾಜ ಮತ್ತು ಆರ್ಥಿಕ ಅಭಿವೃದ್ಧಿ ಸಂಸ್ಥೆ- ತೆಗೆಯಲು ಸಂಕಲ್ಪಿಸಿ, ಎಲ್ಲ

ಏರ್ಪಾಡುಗಳನ್ನು ಮಾಡಿದ್ದಾಗಿದೆ. ನೀವು ಆ ಸಂಸ್ಥೆಯ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಬೇಕು. ಶುಲ್ಕ ಒಂದು ಸಾವಿರ ಮಾತ್ರ. ಅವರು ಮಾತು ನಿಲ್ಲಿಸುವ ಮುನ್ನವೇ ಆಗಲಿ ಎಂದೆ. ' ಅದಕ್ಕಿಂತಲೂ ಮುಖ್ಯವಾದ ಸಹಾಯ ಈ ಸಂಸ್ಥೆಗೆ ನಿಮ್ಮಿಂದ ಒದಗಬೇಕಾಗಿದೆ. ನೀವು ಆಗುತ್ತದೆಂದರೆ ಹೇಳುತ್ತೇನೆ.' ಎಂದರು. ' ಆದೀತು' ಎಂದೆ. ' 'ಈಗಾಗಲೇ ಈ ಸಂಸ್ಥೆಯ ಮಾನ್ಯತೆಯ ಬಗ್ಗೆ ಹಲವು ವಿಶ್ವವಿದ್ಯಾನಿಲಯಗಳಿಗೆ ಪತ್ರ ಬರೆದಿದ್ದೆ, ಮಂತ್ರಿಯಾಗಿದ್ದಾಗ ಮಾತು ಕೊಟ್ಟವರು ಈಗ ಹಿಂಜರಿಯುತ್ತಿದ್ದಾರೆ. ಮಾನ್ಯತೆ ನೀಡುವಲ್ಲಿ ನೀವು ಅಗ್ರಗಣ್ಯರಾಗಬೇಕು' ಎಂದರು' ತಥಾಸ್ತು' ಎಂದೆ.

ಹದಿನೈದು ಇಪ್ಪತ್ತು ದಿನಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತಾ ಪತ್ರ ಅವರಿಗೆ ಹೋಯಿತು. ಅವರಿಗಾದ ಆನಂದ ಹೇಳತೀರದು. ಫೋನಿನಲ್ಲಿಯೇ ಆ ಪ್ರವಾಹ ನನ್ನ ತನಕ ಬಂತು. ನಾನೂ ಒಂದೆರಡು ಸಲ ಆ ಸಂಸ್ಥೆಯ ಕಾರ್ಯಕಾರಿ ಸಭೆಗೆ ಹೋಗಿದ್ದೆ. ಮೈಸೂರು ವಿಶ್ವವಿದ್ಯಾನಿಲಯ ತೆಗೆದುಕೊಂಡಿದ್ದ ಶೀಘ್ರನಿರ್ಣಯಕ್ಕಾಗಿ ನಾನು ಪ್ರೊ. ಗೌಡರಿಗೆ ಋಣಿಯಾಗಿದ್ದೇನೆ ಎಂದು ಎಲ್ಲ ಸದಸ್ಯರ ಮುಂದೆ ಹೊಗಳಿದರು; ಭೋಜನದ ಸಮಯದಲ್ಲಿ ಪಕ್ಕದಲ್ಲಿ ಕೂರಿಸಿಕೊಂಡು ನನ್ನ ಬೆನ್ನು ತಟ್ಟಿದರು.' ಈತ ಎಂಥ ದೊಡ್ಡ ಮನುಷ್ಯ' ಎಂದು ಮನಸ್ಸಿನಲ್ಲಿಯೇ ಅವರನ್ನು ಅಭಿನಂದಿಸಿದೆ. ಹಳೆಯ ಕಹಿಯನ್ನು ಈ ಹೊಸ ಸಿಹಿ ಸಂಪೂರ್ಣವಾಗಿ ಅಳಿಸಿಬಿಟ್ಟಿತು.

ಮಹಾರಾಜ ಕಾಲೇಜು ಸೇರಿದ ನಂತರ ಎಲ್ಲ ಪ್ರಾಧ್ಯಾಪಕ-ಅಧ್ಯಾಪಕರು ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವಿರಿಸಿಕೊಂಡಿದ್ದರು. ಕುವೆಂಪು ವಿಷಯ ಹೇಳಬೇಕಾಗಿಲ್ಲ. ತೀನಂಶ್ರೀ ಅವರಂತು ನನ್ನನ್ನು ಸ್ವಂತ ತಮ್ಮನೆಂದೇ ತಿಳಿದು ನನ್ನನ್ನು ಪ್ರೀತಿಸಿ, ಬಾವಣಿಸಿ, ಸದಾ ನನ್ನ ಹಿತವನ್ನೇ ಬಯಸಿದರು. ಏಕೋ ಏನೋ, ದೊಲನ ಮಾತ್ರ ನನ್ನನ್ನು ದ್ವೇಷಿಸುತ್ತಿದ್ದರೆಂದೇ ಹೇಳಬೇಕು, ನಾನವರಿಗೆ ಕಾಣಿಸಿಕೊಂಡಾಗಿನಿಂದ. ನನ್ನ ಬಗ್ಗೆ ಅವರಿಗೆ ನಿಷ್ಕಾರಣವಾಗಿ ಅಸಮಾಧಾನ ಮೂಡಬೇಕಾದರೆ, ಹಿಂದಿನ ಜನ್ಮದ್ದೇನೊ ಕಾರಣವಿರಬೇಕೆಂದು ತಿಳಿಯಬೇಕಾಗಿದೆ.; ಹಿಂದಿನ ಜನ್ಮವನ್ನು ನಂಬಬಹುದೆಂಬ ಊಹೆಯನ್ನು ನನ್ನ - ಅವರ ಸಂಬಂಧ ಬಲಪಡಿಸುತ್ತದೆ. ಮೊದಲನೆಯ ದಿನವೆ 'ಕನ್ನಡ ಏಕ್ರೀ ತಕ್ಕೊಂಡ್ರಿ; ಅದರಲ್ಲೇನಿದೆ. ಅಂತ ಬಂದ್ರಿ 'ಕೆಲಸವಂತು ಸಿಗೋಲ್ಲ' ಎಂದರು ಅವರು. ನಾನು ಮಾತಾಡಲಿಲ್ಲ.

ನಾನು ಎಂ. ಎ. ತರಗತಿಯಲ್ಲೋದುತ್ತಿದ್ದಾಗ, ಕಾಲೇಜಿನಲ್ಲೊಂದು ಹುದ್ದೆ ಖಾಲಿಯಿತ್ತು. ಆಗ ಬ್ರಾಹ್ಮಣೇತರರ ಚಳುವಳಿ ನಡೆಯುತ್ತಿದ್ದ ಕಾಲ. ವಿಶ್ವವಿದ್ಯಾನಿಲಯದ ಆಡಳಿತ ಮಂಡಲಿಯಲ್ಲಿ ಬ್ರಾಹ್ಮಣೇತರರ ಪರವಾಗಿ ಗಲಾಟೆ ಆಯಿತು. ಆಗ ಕುಲಪತಿ ಎನ್. ಎಸ್. ಸುಬ್ಬರಾಯರು ಕನ್ನಡ ಪ್ರಾಧ್ಯಾಪಕರನ್ನು ಕರೆಸಿ ' ಏನ್ರಿ ಶಾಸ್ತ್ರಿಗಳೆ, ನೀವು ಈತನಕ ಒಬ್ಬನಾದರೂ ಬ್ರಾಹ್ಮಣೇತರನನ್ನು ತಯಾರು ಮಾಡಿಲ್ಲವೆ? 'ಎಂದು ಪ್ರಶ್ನಿಸಿದರಂತೆ. 'ಶಾಸ್ತ್ರಿಗಳು ನನ್ನ ಹೆಸರು ಹೇಳಿ', ಅವರು ಎಂ. ಎ. ನಲ್ಲಿ ಓದುತ್ತಿರುವುದರಿಂದ, ಹುದ್ದೆಗೆ ಬರಲಾರರು ' ಎಂದರಂತೆ. ಶಾಸ್ತ್ರಿಗಳೆ ಮತ್ತೆ ದೊಲನ

ಅವರನ್ನು ಕಳಿಸಿ, ನನ್ನ ಅಭಿಪ್ರಾಯ ತಿಳಿದು ಬರುವಂತೆ ಹೇಳಿರಬೇಕು. ದೊಲನ ಒಂದು ದಿನ ನಿಮ್ಮ ಎಂ. ಎ. ಅನ್ನು ನಡುನೀರಿನಲ್ಲಿ ಬಿಟ್ಟು ಪಂಡಿತ ಕೆಲಸ ಮಾಡಲು ಬಯಸ್ತೀರೇನು ನೀವು? ಈಗ ಆ ಹುದ್ದೆಯಲ್ಲಿ ಹಂಗಾಮಿಯಾಗಿ ಕೆಲಸಮಾಡುತ್ತಿರುವವರಿಗೆ ಅನ್ಯಾಯವಾಗುವುದಿಲ್ಲವೇ ಅದು?' ಅಂತ ಕೇಳಿದರು ನನ್ನನ್ನು. ಮತ್ತೊಂದು ದಿನ ಅದೇ ತರನ ಪ್ರಶ್ನೆ ಕೇಳಿದರು. ಆ ಪ್ರಶ್ನೆಗಳಿಂದಲೇ ನಾನು ಹೆದರಿ, ಆ ಹುದ್ದೆಯ ಕಡೆಗೆ ಮುಖ ತಿರುಗಿಸಲಿಲ್ಲ. ಈ ಘಟನೆ ನಡೆದದ್ದು 1942ರಲ್ಲಿ.

ನಾನು ಎಲ್ಲೆಲ್ಲೋ ಒದ್ದಾಡಿಕೊಂಡು 1946ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಹುದ್ದೆಯನ್ನು ಪಡೆದೆ. ನನ್ನ ಮೇಲೆ ಇಲಾಖೆಯ ಜನರನ್ನೆತ್ತಿ ಕಟ್ಟಲು ಅವರು ಪ್ರಯತ್ನಿಸಿದರು. ಇತರರ ಮೇಲೆ ನನ್ನನ್ನು ಛೂಬಿಡಲು ಪ್ರಯತ್ನಿಸಿದರು. ನಾನಂತು ಅವರ ಮಾತಿಗೆ ಸೊಪ್ಪು ಹಾಕಲಿಲ್ಲ. ತೀ. ನಂ. ಶ್ರೀ. ಅವರಿಗೆ ನಾನು ಹತ್ತಿರವಾಗುತ್ತಿದ್ದುದು ಅವರಿಗೆ ಸಹಿಸಲಿಲ್ಲ. 'ಅವನು ಕುವೆಂಪು ಭಕ್ತ ಕಣಯ್ಯ; ನೀನವನನ್ನು ತಲೆ ಮೇಲೆ ಕೂರಿಸಿಕೊಂಡಿದ್ದೀಯ' ಎಂದು ತೀನಂಶ್ರೀ ಅವರನ್ನು ನನ್ನಿಂದ ದೂರಮಾಡಲು ಪ್ರಯತ್ನಿಸಿದರು. ಈ ವಿಷಯವನ್ನು ನನಗೆ ಹೇಳಿದವರೇ ತೀನಂಶ್ರೀ ಅವರು. ಅದೆ ತಾನೆ ಅವರಿಬ್ಬರ ನಡುವೆ ವಿರಸ ಪ್ರಾರಂಭವಾಗಿತ್ತು. ತೀನಂಶ್ರೀಯವರು ನನ್ನನ್ನು ಎಂದಿನಂತೆ, ಏಕೆ ಮಿಗಿಲಾಗಿಯೇ, ನನ್ನನ್ನು ಸ್ನೇಹಪೂರ್ಣ ವಿಶ್ವಾಸದಿಂದ ಕಾಣುತ್ತಿದ್ದರು; ಅಷ್ಟೇ ಅಲ್ಲ, ನಾನು ಪ್ರಾಧ್ಯಾಪಕನಾಗುವಂತೆ ಹರಸಿದರು.

ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯಲ್ಲಿ ಪ್ರೊ. ಎಂ. ಮರಿಯಪ್ಪ ಭಟ್ಟರ ಜತೆಗೆ ಪ್ರೊ. ಡಿ. ಕೆ. ಭೀಮಸೇನರಾವ್ ಇದ್ದರು. ಸಮಿತಿಯ ಸಭೆ ಮುಗಿದನಂತರ ಭೀಮಸೇನ ರಾಯರು ನನ್ನನ್ನು ಕರೆದುಕೊಂಡು, ತಮ್ಮ ಸಹ ಪಾಠಿಯಾಗಿದ್ದ ದೊಲನ ಅವರ ಮನೆಗೆ ಹೋದರು. ' ನರಸಿಂಹಾಚಾರ್, ಜವರೇಗೌಡರು ಪ್ರಾಧ್ಯಾಪಕರಾಗಿದ್ದಾರೆ. ಅವರನ್ನು ಆಶೀರ್ವದಿಸಿ' ಎಂದರು. ದೊಲನ ಉಪಚಾರಕ್ಕಾದರೂ ಒಂದು ಮಾತು ಆಡಲಿಲ್ಲ. ಅವರ ಮುಖದ ಮೇಲೆ ವಿಷಾದದ ಮೋಡ ಸುಳಿದಾಡುತ್ತಿತ್ತು. ಅವರ ಮನೆಯಿಂದ ತೀನಂಶ್ರೀ ಮನೆಗೆ ಹೋದೆವು. ಭೀಮಸೇನ ರಾಯರು ಬಾಯಿತೆರೆಯುವ ಮುನ್ನವೇ ' ಜವರೇಗೌಡರು ಪ್ರಾಧ್ಯಾಪಕರಾಗಿರಬೇಕಲ್ಲವೆ? ನನಗೆ ತುಂಬ ಸಂತೋಷವಾಗಿದೆ.' ಎಂದು ಹೇಳುತ್ತ ತಮ್ಮ ಶ್ರೀಮತಿಯವರನ್ನು ಕರೆದು ' ಜವರೇಗೌಡ ಪ್ರಾಧ್ಯಾಪಕರಾಗಿದ್ದಾರೆ. ಹಾಲು ತಂದುಕೊಡು' ಎಂದರು. ನನ್ನ ಕಣ್ಣಿನಲ್ಲಿ ಆನಂದದ ಹರ್ಷಬಾಷ್ಪ ಮಡುಗಟ್ಟಿತು. ನಾನು ಕುಲಪತಿಯಾದಾಗ ಅವರು ಬದುಕಿದ್ದರೆ ಅದೆಷ್ಟು ಆನಂದವಾಗುತ್ತಿತ್ತೋ, ನಾನು ಊಹಿಸಿಕೊಳ್ಳಬಲ್ಲೆ.

ಶ್ರೀ ಜ ನಾರಾಯಣರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನನ್ನನ್ನು ನಲವತ್ತೇಳನೆಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಚುನಾಯಿಸಿದರು. ವಯಸ್ಸು ವಿದ್ವತ್ತು ಪ್ರತಿಭೆ ಸಾಧನೆ ಸಿದ್ಧಿಗಳಲ್ಲಿ ನನಗಿಂತ ಹಿರಿಯರಾಗಿದ್ದವರು ಪು.ತಿ.ನ. ಎಸ್.ವಿ. ರಂಗಣ್ಣ ಇದ್ದರು. ಅವರೂ ನಾನು ತಕರಾರಿಲ್ಲದೆ. ಆ ಪದವಿ ಅವರಿಗೆ ಸಲ್ಲಬೇಕಾಗಿತ್ತು.

ಇವರಿಗೆ ಸಲ್ಲಬೇಕಾಗಿತ್ತು ಎಂಬುದಾಗಿ ಉಪಚಾರದ [illegible] ಮಾತನ್ನಾಡಿ ಒಪ್ಪಿಕೊಂಡೆ. ರಂಗಣ್ಣನವರು ಕಛೇರಿಗೆ ಬಂದು ನನ್ನನ್ನು [illegible] ಸಮ್ಮೇಳನಕ್ಕೂ ಬಂದರು. ಕನ್ನಡ ಅಧ್ಯಯನ ಸಂಸ್ಥೆ ಆ ಸಂದರ್ಭದಲ್ಲಿ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ನನಗೊಂದು ಅಭಿನಂದನ ಸಮಾರಂಭ ಏರ್ಪಡಿಸಿತ್ತು. ದೊಲನ ಅವರೂ ಭಾಷಣಕಾರರಲ್ಲೊಬ್ಬರು. ಜವರೇಗೌಡ ಅಧ್ಯಕ್ಷನಾಗಲಿಕ್ಕೆ ಯಾವ ಸಾಧನೆ ಮಾಡಿದ್ದಾರೆ. ಯಾವ ಸಿದ್ಧಿ ಪಡೆದಿದ್ದಾರೆ ಎಂಬರ್ಥ ಬರುವಂತೆ ಮಾತಾಡಿದರು. ನಾನವರ ಭಾಷಣದ ವಿಷಯವನ್ನೇ ಪ್ರಸ್ತಾಪಿಸದೆ. ನನ್ನ ಉತ್ತರವನ್ನು ಚುಟುಕದಲ್ಲಿ ಮುಗಿಸಿದೆ.

೧೯೭೦ ಈ ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಸಮ್ಮೇಳನ ಮುಗಿಯಿತು ಮುಂದಿನ ಜನವರಿ ತಿಂಗಳ ಆದಿಯಲ್ಲಿ ನನಗೂ ಅವರಿಗೂ ಪತ್ರರೂಪದ ಕಲಹ ಪ್ರಾರಂಭವಾಯಿತು. ನನ್ನ ಬಗ್ಗೆ ಅವರು ವಿಷ ಕಾರುತ್ತಿದ್ದುದನ್ನು ಅವರು ಜಗಳಗಂಟು ಹಾಕುತನವನ್ನು ಕುರಿತು ನಿದರ್ಶನಗಳೊಡನೆ ಅವರಿಗೆ ಬರೆಯುತ್ತಿದ್ದೆ. ಅವರಾಗ ರುಗ್ಣಶಯ್ಯೆಯಲ್ಲಿದ್ದರು. ತಮ್ಮನ್ನು ನೋಡಬೇಕೆಂದೂ, ಹಿಂದಿನದೆಲ್ಲ ಮರೆತು ಬಿಡಬೇಕೆಂದೂ ಅವರು ತಮ್ಮ ಕೊನೆಯ ಪತ್ರದಲ್ಲಿ ಕೇಳಿಕೊಂಡಿದ್ದರು. ನನ್ನ ಮನಸ್ಸಿಗೆ ಶಾಂತಿ ಬರಬೇಕಾದರೆ ನಮ್ಮ ನಡುವಣ ಪತ್ರವ್ಯವಹಾರವನ್ನು ಸುಟ್ಟು, ನನಗೆ ತಿಳಿಸಿ. ನನ್ನನ್ನು ಕ್ಷಮಿಸಿ ಎಂದು ನನ್ನ ಕೈಹಿಡಿದುಕೊಂಡು. ನನ್ನನ್ನು ಕುರಿತ ತಮ್ಮೊಂದು ಲೇಖನವನ್ನು ಪ್ರಕಟಿಸಬೇಕೆಂದು ಹೇಳಿಕೊಟ್ಟರು. ಕಣ್ಣೀರು ತಡೆಯಲು ನನ್ನಿಂದ ಸಾಧ್ಯವಾಗಲಿಲ್ಲ. ಗುರುಗಳ ಆ ಕ್ಷಣದ ಪರಿಸ್ಥಿತಿಯನ್ನು ನೋಡಿ ಅವರು ಘನ ವಿದ್ವಾಂಸರೆಂಬುದರಲ್ಲಿ ಸಂದೇಹವೇ ಇಲ್ಲ. ಅಂಥ ವಿದ್ವತ್ತು ನಮಗೆ ಲಭಿಸಬಾರದೆ ಎಂದು ಆಸೆ ಪಡುವವರಲ್ಲಿ ನಾನೂ ಒಬ್ಬ.

ತಳುವಿದರೆ ಆ ಪತ್ರವ್ಯವಹಾರ ಯಾವ ರೂಪವನ್ನು ತಾಳುತ್ತದೆಯೊ, ನನ್ನ ಮನಸ್ಸೇ ಬದಲಾವಣೆಯಾಗಬಹುದೋ ಏನೋ ಎಂದುಕೊಂಡು. ಅವರಿಗೆ ಅಂಗೈ ಮೇಲೆ ಅಂಗೈಯಿಟ್ಟು ನಾನು ಕೊಟ್ಟ ಭಾಷೆಯನ್ನು ಗೌರವಿಸಬೇಕೆಂದು ಪತ್ರಗಳನ್ನೆಲ್ಲ ಅಗ್ನಿದೇವನಿಗೆ ಆಹುತಿ ಅರ್ಪಿಸಿದೆ: ಅವರು ನನ್ನನ್ನು ಕುರಿತು ಬರೆದಿದ್ದ ಲೇಖನವನ್ನು ಆಲನಹಳ್ಳಿ ಕೃಷ್ಣ ತಾವು ಸಂಪಾದಿಸಿದ 'ಅಂತಃಕರಣ'ದಲ್ಲಿ ಮುದ್ರಿಸಿದರು. ಈಗಲೂ ಅದನ್ನೋದುವಾಗ ನನಗೆ ಪುಳಕವಾಗುತ್ತದೆ. ನನ್ನ ಸ್ಮೃತಿ ಮಂದಿರದಲ್ಲಿ ನೆಲಸಿರುವ ಅವರ ಚೇತನಕ್ಕೆ ನನ್ನ ಮನಸ್ಸು ಗೌರವದಿಂದ ಮಣಿಯುತ್ತದೆ.

ಕನ್ನಡ ಸಾಹಿತ್ಯದ ಅಂತರಿಕ್ಷದಲ್ಲಿ ಸದಾ ಪ್ರಜ್ವಲಿಸುವ ಮತ್ತೊಂದು ಉಜ್ವಲ ತಾರೆಯೆಂದರೆ ಡಿವಿಜಿಯವರು. ಅವರು ಘನ ಪಂಡಿತರೆಂದು, ಪ್ರತಿಭಾವಂತ ಕವಿಯೆಂದು. ಶ್ರೇಷ್ಠ ರಾಜ್ಯಶಾಸ್ತ್ರ ವಿಶಾರದರೆಂದೂ, ಸರ್ವೋತ್ತಮ ಪತ್ರಿಕಾಕರ್ತರೆಂದು, ಪ್ರಥಮ ದರ್ಜೆಯ ಗದ್ಯಕಾರರೆಂದು ಪ್ರಸಿದ್ಧರಾಗಿದ್ದಾರೆ. ಅವರ ಕೃತಿಗಳಿಗೆ ಮಾರು ಹೋಗಿದ್ದ ನಾನು ಅವುಗಳನ್ನು ಕುರಿತು ಒಂದು ಲೇಖನ ಬರೆದಿದ್ದೆ. ಆದೆ ತಾನೆ ನಾನು ಸಾಹಿತ್ಯಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿದ್ದೆ. ನನ್ನನ್ನು ನೋಡಬೇಕೆಂದವರು ದೊಲನ ಮೂಲಕ ಹೇಳಿಕಳಿಸಿದ್ದರು.

ಒಂದು ದಿನ ಸಂಜೆ ದೊಲನ ನನ್ನವರಲ್ಲಿಗೆ ಕರೆದುಕೊಂಡು ಹೋದರು. ಬಸವನ ಗುಡಿಯ ಹಿಂದಿನ ಒಂದು ಬಂಡೆಯ ಮೇಲೆ, ಇನ್ನರ್ಧಗಂಟೆಯಲ್ಲಿ ಅಸ್ತಮಿಸಲಿದ್ದ ಸೂರ್ಯನಿಗೆ ಬೆನ್ನುಕೊಟ್ಟು ಮುಂದೆ ಕಡಲೆಕಾಯಿ ರಾಶಿ ಹಾಕಿಕೊಂಡು, ಪಿ. ಆರ್. ರಾಮಯ್ಯ, ಸೋಮಶೇಖರರಾವ್ ಮೊದಲಾದ ಐದಾರು ಮಂದಿ ಗಣ್ಯರ ಮಧ್ಯದಲ್ಲಿ ಡಿವಿಜಿ ಗಣೇಶನಂತೆ ವಿರಾಜಮಾನರಾಗಿದ್ದರು.

ನಾವಿಬ್ಬರೂ ಬಂಡೆಯ ಇಳಿಜಾರಿನಲ್ಲಿ ಅವರಿಗೆ ಮತ್ತು ಕಡಲೆಕಾಯಿ ಗುಡ್ಡೆಗೆ ಸನಿಹದಲ್ಲಿ ಕುಳಿತುಕೊಂಡೆವು. ಅವರ ಮಾತು ಹರಿದಿತ್ತು. ಹಲ್ಲುಕೈಗಳು ಕಡಲೆಕಾಯಿ ಸಂಹಾರದಲ್ಲಿ ತೊಡಗಿದ್ದುವು. 'ಮಡ್ಡಿ ಸರ್ಕಾರದಲ್ಲಿ ಚಡ್ಡಿ ಜನರಿಗೆ ಮಾತ್ರ ಪುರಸ್ಕಾರ ಎಲ್ಲೆಲ್ಲಿಯೂ ಹೆಡ್ಡರದೇ ದರ್ಬಾರು. ಆದಕ್ಕೇನೆ ಸ್ವಾತಂತ್ರ್ಯ ಇಷ್ಟುಬೇಗ ಬರಬಾರದೆಂದು ನಾವು ಕೆಲವರು ಮಾತಾಡಿಕೊಂಡಿದ್ದೆವು. ಈಗಂತು ಲಿಂಗಾಯತರು ಏಕೀಕರಣಕ್ಕಾಗಿ ಹೊಡೆದಾಡುತ್ತಿದ್ದಾರೆ. ದ್ವಿಕರ್ಣಾಟಕವಾದರೆ ಮೇಲು' ಎಂದು ಡಿ ವಿ ಜಿ ಮತ್ತು ಮಿತ್ರರು ಚರ್ಚೆ ನಡಸಿದ್ದರು. ಚರ್ಚೆಯಲ್ಲಿ ನಡುನಡುವೆ ಬ್ರಾಹ್ಮಣೇತರರ ಮೇಲೆ ಅಶ್ಲೀಲ ಗದಾ ಪ್ರಹಾರ ನಡೆದಿತ್ತು. ನಾವಲ್ಲಿಗೆ ಹೋಗಿ ಎರಡು ಮೂರು ನಿಮಿಷವಾಗಿತ್ತು. ಮುಂದೆ ಏನನಾಹುತ ನಡೆಯುತ್ತದೆಯೊ ಎಂಬ ಭೀತಿಯಿಂದ ದೊಲನ ನನ್ನ ಹೆಸರನ್ನು ಪ್ರಕಟಿಸಿದರು. 'ಓಹೋ, ಇವರೇ ಜವರೇಗೌಡರೇನು? ತರುಣರು, ಭೇಷ್ ವಯಸ್ಸಾದವರೆಂದು ತಿಳಿದಿದ್ದೆ. ನೀವೂ ನಮ್ಮವರೇ. ಹತ್ತಿರ ಬನ್ನಿ' ಎಂದು ಡಿವಿಜಿ ನುಡಿದರು. ಅವರ ಬಳಿ ಸರಿದಾಗ ಬೆನ್ನು ತಟ್ಟಿದರು. ಬೈಗಾಗುತ್ತಿದ್ದಂತೆ ಎಲ್ಲರೂ ಎದ್ದರು. 'ಆಗಾಗ್ಗೆ ಬರ್ತಾ ಇರಿ, ಜವರೇಗೌಡರೆ. ನಿಮ್ಮ ಬರವಣಿಗೆ ನನಗೆ ಹಿಡಿಸಿದೆ ನಿಲ್ಲಿಸಬೇಡಿ' ಎಂದು ನುಡಿದು ನಮ್ಮಿಬ್ಬರನ್ನು ಕಳಿಸಿಕೊಟ್ಟರು.

ಆಮೇಲೆ ನಾನವರ ಬಳಿ ಹೋಗಲಿಲ್ಲ; ಪತ್ರವ್ಯವಹಾರ ಒಂದೆರಡು ಸಲ ನಡೆದಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಯೋಜನೆಯನ್ನು ಪ್ರಾರಂಭಿಸಿದಾಗ, ಅದು ಆರೋಗ್ಯಕರ ಯೋಜನೆಯಲ್ಲ. ನೀವದನ್ನು ವಿರೋಧಿಸಿ' ಎಂದವರು ಇತರರಿಗೆಂತೊ ಅಂತೆಯೆ ನನಗೂ ಪತ್ರ ಬರೆದಿದ್ದರು. ಪ್ರಪ್ರಥಮ ಬಹುಮಾನ ಕುವೆಂಪು ಅವರಿಗೆ ಸಿಕ್ಕಿದಾಗ, ಅದನ್ನು ತಿರಸ್ಕರಿಸುವಂತೆ ಅವರಿಗೂ ಪತ್ರ ಬರೆದಿದ್ದರು. ತಮಗದು ದೊರೆತಾಗ ಸದ್ದು ಮಾಡದೆ ಪಡೆದುಕೊಂಡದ್ದು ಅವರ ದೊಡ್ಡಸ್ತಿಕೆಗೆ ಸಾಕ್ಷಿಯಾಗಿದೆ. ತಮ್ಮದೊಂದು ಪುಸ್ತಕವನ್ನು ಪಠ್ಯವಾಗಿ ಗೊತ್ತು ಮಾಡುವಂತೆ ನನಗೊಂದೆರಡು ಸಲ ಪತ್ರ ಬರೆದದ್ದುಂಟು.

ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಕೆಲವು ಮಂದಿ ಗಣ್ಯರನ್ನು ಗೌರವಿಸುವ ಸಲುವಾಗಿ ಡಿವಿಜಿಯವರನ್ನು ಆಹ್ವಾನಿಸಲಾಗಿತ್ತು. ಆ ವರ್ಷ ನಾನೇ ಅಧ್ಯಕ್ಷ. 'ದೊಲನ ಅವರನ್ನು ಬಿಟ್ಟರೆ ಮತ್ತೊಬ್ಬ ವಿದ್ವಾಂಸರು ಸಿಗುವುದಿಲ್ಲ. ಅವರ ನಂತರ ಕನ್ನಡ ವಿದ್ವತ್ತಿಗೆ ಬರಗಾಲ' ಬರುತ್ತದೆಂದವರು ಭವಿಷ್ಯ ನುಡಿದಿದ್ದರು. ಈಗ ನಮ್ಮ ಕಣ್ಣೆದುರಿಗೆ ಒಬ್ಬರಲ್ಲ ಇಬ್ಬರಲ್ಲ ಸಾಲು ಸಾಲೇ ವಿದ್ವಾಂಸರಿದ್ದಾರೆ. ಅವರೀಗ ಬದುಕಿದ್ದರೆ ತುಂಬ ಸಂತೋಷಪಡುತ್ತಿದ್ದರೋ ಏನೋ.

ನನ್ನ ಮಿತ್ರೋತ್ತಮರೊಬ್ಬರು, ಎಚ್. ಎಂ. ಶಂಕರನಾರಾಯಣರಾಯರು ನಾನು ಪ್ರಾಧ್ಯಾಪಕನಾದಾಗ 'ಕನ್ನಡ ಇಲಾಖೆಗೆ ಅವಸರ್ಪಿಣಿಯುಗ ಪ್ರಾರಂಭವಾಗಿದೆ' ಎಂದು ಹೇಳಿದರು. ಕೆಲವು ತಿಂಗಳ ನಂತರ ಅವರು 'ನಾನು ಹೇಳಿದ್ದು ತಪ್ಪು. ಇಲಾಖೆಯಲ್ಲಿ ಇಷ್ಟೊಂದು ಪ್ರಗತಿ ಯಾವತ್ತೂ ಆದದ್ದಿಲ್ಲ' ಎಂದು ನುಡಿದರು. ನುಡಿದದ್ದು ಮಾತ್ರವಲ್ಲ, ನನ್ನ ಹಲವು ಪುಸ್ತಕಗಳನ್ನು ಪ್ರಕಟಿಸಿ, ಪ್ರಶಂಸಿಸಿ, ಉಪಕಾರ ಮಾಡಿದ್ದಾರೆ.ನಾನವರ ಉಪಕಾರವನ್ನು ಎಂದೆಂದಿಗೂ ಮರೆಯಲಾರೆ. ಅವರು ಸಮಕಾಲೀನ ಘನ ವಿದ್ವಾಂಸರಲ್ಲೊಬ್ಬರು.

ಇದೇ ಸಂದರ್ಭದಲ್ಲಿ ನಾನು ನೆನೆಯಲೇ ಬೇಕಾದ ಮತ್ತೆರಡು ಹೆಸರು ಡಿ. ವಿ. ಕೆ. ಮೂರ್ತಿ ಮತ್ತು ಜಿ. ಕಲ್ಲಯ್ಯ. ಮೂರ್ತಿಯವರು ಬರಿಯ ಪ್ರಕಾಶಕರಲ್ಲ, ಮಹಾವಿದ್ವಾಂಸರೂ ಹೌದು. ಅವರು ಬಾಯಿ ತೆರೆದರೆ ಸಾಕು, ವಿಶ್ವವಿದ್ಯಾನಿಲಯದ ನಿಜವಾದ ಪ್ರಾಧ್ಯಾಪಕರು ಮಾತಾಡಿದಷ್ಟು ಹರ್ಷವಾಗುತ್ತದೆ. ತಾವು ಪ್ರಕಟಿಸುವ ಪುಸ್ತಕಗಳನ್ನು ನಮ್ಮ ಜನರ ಪ್ರಗತಿ ಜ್ಞಾನ ವಿಸ್ತಾರವನ್ನವಲಂಬಿಸಿದೆ, ಅಂಥ ಜ್ಞಾನ ವಿಸ್ತಾರಕ್ಕೆ ಬೇಕಾದ ಗ್ರಂಥಗಳನ್ನು ಪ್ರಕಟಿಸಬೇಕೆಂಬುದೇ ಅವರ ಪ್ರಕಾಶನದ ಪ್ರಧಾನ ಧ್ಯೇಯ. ಮರೆತೂ ಅವರು ಕಳಪೆ ಪುಸ್ತಕಗಳನ್ನು ಪ್ರಕಟಿಸುವುದಿಲ್ಲ. ವಿದ್ವಾಂಸರು ಪ್ರಕಾಶಕರಾದರೆ ದೇಶಕ್ಕೆ ಸಮಾಜಕ್ಕೆ ಒಳಿತಾಗುತ್ತದೆ. ನನ್ನ ಕೆಲವು ಪುಸ್ತಕಗಳನ್ನು ಮೆಚ್ಚಿ ಪ್ರಕಟಿಸುವ ಮೂಲಕ ಅವರು ನನಗೆ, ನನ್ನ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆ.

ಲೋಕ ವ್ಯವಹಾರಜ್ಞರಾದ ಜಿ. ಕಲ್ಲಯ್ಯ ನನ್ನ ಹಲವು ಪುಸ್ತಕಗಳನ್ನು ಪ್ರಕಟಿಸಿ ಉಪಕಾರ ಮಾಡಿದ್ದಾರೆ. ವ್ಯವಹಾರ ಕೌಶಲವೇ ಅವರ ಪ್ರಕಾಶನದ ಗುರಿ. ಅದವರ ವೃತ್ತಿಯೂ ಹೌದು. ನಾನು ಏನೇ ಹಸ್ತಪ್ರತಿಯನ್ನು ಕಳಿಸಿದರೂ ಅದನ್ನು ಕೊಂಕು ತೆಗೆಯದೆ ಮುಕ್ತ ಮನಸ್ಸಿನಿಂದ ಪ್ರಕಟಿಸಿದ್ದಾರೆ. ಕಷ್ಟದಲ್ಲಿರುವ ಲೇಖಕ ಮಿತ್ರರಿಗೆ ಹಣಕೊಡಿರೆಂದು ಹೇಳಿದಾಗ, ತಳುವದೆ ಮರು ಮಾತಾಡದೆ ಕೊಟ್ಟದ್ದುಂಟು. ನಿದರ್ಶನಾರ್ಥವಾಗಿ ನಿರಂಜನರ ಹೆಸರನ್ನಿಲ್ಲಿ ಹೇಳಬಹುದು.

ನನ್ನ ಒಂದೊ ಎರಡೊ ಪುಸ್ತಕಗಳನ್ನು ಪ್ರಕಟಿಸಿದ ಇತರ ಪ್ರಕಾಶಕರಿಗು ಸಹ ನನ್ನ ವಂದನೆಗಳು ಸಲ್ಲಬೇಕಾಗಿದೆ. ಹಲವು ಮಂದಿಮುದ್ರಕರು ನನ್ನ ಮತ್ತು ಇತರರ ಗ್ರಂಥಗಳನ್ನು ಅಚ್ಚು ಮಾಡುವ ಮೂಲಕ ನನ್ನ ಮತ್ತು ನನ್ನಂಥ ಹಲವು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರಲ್ಲದೆ, ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪರಮೋಪಕಾರವೆಸಗಿದ್ದಾರೆ. ಅವರಲ್ಲಿ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಮುದ್ರಣಾಲಯದ ಮಾಲೀಕರಾದ ಜಿ. ಹೆಚ್. ಕೃಷ್ಣಮೂರ್ತಿ ಮತ್ತು ರಾಜೇಂದ್ರ ಮುದ್ರಣಾಲಯದ ಡಿ. ಎನ್. ಲೋಕಪ್ಪ ಅವರನ್ನು ಎಂದಿಗೂ ಮರೆಯಲಾರೆ. ಕೃಷ್ಣಮೂರ್ತಿ ಅಚ್ಚುಕಟ್ಟಿಗೆ ಪ್ರಾಮಾಣಿಕತೆಗೆ ಹೆಸರಾದವರು. ಲೋಕಪ್ಪ ವಿನಯಕ್ಕೆ, ಅಕೃತ್ರಿಮ ಸ್ನೇಹಕ್ಕೆ ಹೆಸರಾದವರು. ಇಬ್ಬರೂ ವಿದ್ವತ್ಪಕ್ಷಪಾತಿಗಳು, ಔದಾರ್ಯವಂತರು, ಶಿಸ್ತುಗಾರರು, ಗುಣವಂತರು.

ನಾನೊಮ್ಮೆ ಅಮೆರಿಕೆಗೆ ಹೋಗಿದ್ದೆ. ಒಂದು ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಪಾಲ್ಗೊಳ್ಳಬೇಕಿತ್ತು. ಅಲ್ಲಿಯ ಮಿತ್ರರ ಬಲಾತ್ಕಾರಕ್ಕಾಗಿ ನನ್ನ ಅಳಿಯಂದಿರ ಮನೆಯಿಂದ ಅಲ್ಲಿಗೆ ಎರಡು ಸಾವಿರ ಮೈಲಿ ದೂರ ನನ್ನಲ್ಲಿಗೆ ಕಳಿಸಿಕೊಟ್ಟವರೂ ಅಳಿಯ ಮಗಳೇ. ನಾನು ಆಶಯ ಭಾಷಣ ಮಾಡಬೇಕೆಂದು ಕಾರ್ಯಕರ್ತರ ಅಭಿಲಾಷೆ. ನನ್ನನ್ನು ಸಭೆಗೆ ಪರಿಚಯ ಮಾಡಿಕೊಟ್ಟವರು ವೈದ್ಯರಾದರೂ, ಕನ್ನಡ ಸಾಹಿತ್ಯದ ಬಗ್ಗೆ , ಅದರಲ್ಲಿಯೂ ಕುವೆಂಪು ಸಾಹಿತ್ಯದ ಬಗ್ಗೆ ಅಭಿಮಾನವುಳ್ಳವರು. ಅವರು ಜಾಣರು, ಸ್ನೇಹಶೀಲರು, ಸೇವಾ ಪ್ರವೃತ್ತಿಯುಳ್ಳವರು, ಸ್ವಪ್ರಶಂಸೆಯಲ್ಲಿ ಔಚಿತ್ಯವನ್ನು ಸಹ ಮರೆಯುವ ಗಟ್ಟಿಗರು. ಅದು ಎಲ್ಲ ಮಾನವರ ಸಹಜ ದೌರ್ಬಲ್ಯವೇ ಸರಿ. ಆದರೆ ಸ್ವಪ್ರಶಂಸೆ ಎಲ್ಲಿ ಯಾವಾಗ ಹೇಗೆ ಎಷ್ಟು ಎಂಬ ಔಚಿತ್ಯ ಜ್ಞಾನವಿರದಿದ್ದರೆ ಅದು ವಿಕಾರವಾಗುತ್ತದೆ. ಈಗ ನಾನು ಬರೆಯುತ್ತಿರುವುದೂ ಸ್ವಪ್ರಶಂಸೆಗೆ ನಿದರ್ಶನವಾಗುತ್ತದೆ, ನಿಜ. ಆದರೆ ಪ್ರಕೃತ ಸಂದರ್ಭದಲಿ ಅನಿವಾರ್ಯ.

ನನ್ನ ಬಗ್ಗೆ ಮಾಡಿದ ಪರಿಚಯ ಭಾಷಣದಲ್ಲಿ ಅದು ಇಂಗ್ಲೀಷ್‌ನಲ್ಲಿತ್ತು. ಅದು ಇಂಡಿಯನ್ ಇಂಗ್ಲೀಷ್ ಆಗಿತ್ತು. ಅವರು ನನ್ನ ವಿಷಯ ಹೆಚ್ಚು ಹೇಳಲಿಲ್ಲ. ಅವರು ಅಮೆರಿಕೆಯಲ್ಲಿ ನೆಲಸಿ ಬಹುವರ್ಷಗಳಾದ್ದರಿಂದ, ನನ್ನ ಕಾರ್ಯಕ್ಷೇತ್ರದ ವಿವರ ಅವರಿಗೆ ಗೊತ್ತಿಲ್ಲದಿರಬಹುದು. ಅದು ತಪ್ಪಲ್ಲ. ಅಜ್ಞಾನ ಮಹಾಪರಾಧವಲ್ಲ, ಇಂಥ ಸಂದರ್ಭದಲ್ಲಿ. ಆದರೆ ಇಲ್ಲದಿರುವುದನ್ನು ಉಂಟು ಎಂದು ಹೇಳಿದಾಗ ಮಹಾಪರಾಧವಾಗುತ್ತದೆ. ನನ್ನ ಬಗ್ಗೆ ಅವರು ಹೇಳಿದ ಒಂದು ಕತೆಯಿದು: 'ನಾನೆಂದೊ ಒಮ್ಮೆ ಶಿವಮೊಗ್ಗೆಯ ಕಡೆಗೆ ಹೋಗಿದ್ದೆನಂತೆ. ಆಗವರು ಅಲ್ಲೆಲ್ಲೊ ವೈದ್ಯರಾಗಿದ್ದರಂತೆ. ಕಾರಿನಲ್ಲಿ ನಾನೂ ಅವರೊಡನೆ ಎಲ್ಲಿಗೋ ಹೋದೆನಂತೆ. ದಾರಿಯಲ್ಲಿ ಕಾನೂರು ಹೆಗ್ಗಡತಿ ಬಗ್ಗೆ ಮಾತು ಬಂದು ನಾನೇನೋ ತಪ್ಪು ಹೇಳಿದೆನಂತೆ. ಅವರು ನನ್ನನ್ನು ತಿದ್ದಿದರಂತೆ'. ಇಷ್ಟು ಹೇಳಿದ್ದು ಸಾಲದೆಂಬಂತೆ 'ಇವರು ಮರೆತಿದ್ದರೂ ಸಾಧ್ಯ' ಎಂದು ನುಡಿದರು. ನಾನೆಂದೂ ಅವರ ಜತೆಯಲ್ಲಿ ಎಲ್ಲಿಯೂ ಹೋದದ್ದಿಲ್ಲ. ಆ ವೈದ್ಯರು ಕತೆಗಾರರಾಗುವ ಸಾಮರ್ಥ್ಯವುಳ್ಳವರು ಎಂದಿಷ್ಟು ಮಾತ್ರ ಹೇಳಬಹುದು.

ತನ್ನಲ್ಲಿ ಸಾಕಷ್ಟು ವಿದ್ವತ್ತು ಇಲ್ಲದಾಗ, ತಾನೊಬ್ಬ ವಿದ್ವಾಂಸನೆಂದು, ದೊಡ್ಡವನೆಂದು ಸಾಧಿಸಿಕೊಳ್ಳಬೇಕಾದಾಗ, ತನಗಿಂತ ಹೆಚ್ಚು ಪ್ರಖ್ಯಾತರಾದವರ ಮತ್ತು ದೊಡ್ಡವರ ತಪ್ಪನ್ನು- ಅದಿಲ್ಲದಿದ್ದರೂ ಸೃಷ್ಟಿಸಿ-ತಾನು ತಿದ್ದಿದೆನೆಂದು ಹೇಳಿಕೊಂಡರೆ ಮುಗ್ಧ ಜನ ಮೆಚ್ಚುತ್ತಾರೆಂಬ ವ್ಯವಹಾರ ಕುಶಲಿಗಳು ಸಮಾಜದಲ್ಲಿ ಸಾಕಷ್ಟು ಜನ ಇದ್ದಾರೆ. ಸ್ವಪ್ರಶಂಸೆಯ ಏಣಿಯನ್ನೇರಿಯೇ ಅವರು ಮೇಲಕ್ಕೆ ಬರುತ್ತಾರೆ. ಒಳಗೆ ಕೆಚ್ಚಿದ್ದರೆ ಈ ಸ್ವಪ್ರಶಂಸೆ ಅನಾವಶ್ಯಕ. ಆಲನಹಳ್ಳಿ ಕೃಷ್ಣ ಪ್ರತಿಭಾವಂತ ಸಮರ್ಥ ಸಾಹಿತಿ. ಅವನ ಸ್ವಪ್ರಶಂಸೆಯನ್ನು ಸಾರ್ವಜನಿಕ ಸಭೆಯಲ್ಲಿ ಕೇಳಿದಾಗ ಅವನಿಗೆ ಆತ್ಮ ವಿಶ್ವಾಸವಿಲ್ಲವೇನೊ ಎನಿಸುತ್ತಿತ್ತು. ಸ್ವಪ್ರಶಂಸೆ ಗರ್ವಿಗಳ, ಆತ್ಮವಿಶ್ವಾಸವಿಲ್ಲದವರ, ನಿರಾಶಾಪೀಡಿತರ ವಿದ್ಯುದ್‌ಯಾನ. 'ಕುವೆಂಪು ಅವರಿಗಿಂತ ನಾನು ಕವಿತೆ ಚೆನ್ನಾಗಿ ಬರೆಯಬಲ್ಲೆ, ಬರೆದಿದ್ದೇನೆ.

ಕಾನೂರು ಹೆಗ್ಗಡಿತಿಯನ್ನು ಮೀರಿಸಬಲ್ಲ ಕಾದಂಬರಿಯನ್ನು ಇಷ್ಟರಲ್ಲೇ ಹೊರತರುತ್ತೇನೆ. ಓ, ಆ, ಈ, ಊ, ... ಜನರಲ್ಲಿ ಏನು ವಿದ್ವತ್ತಿದೆ' ಎಂದು ನುಡಿದು ಕೃಷ್ಣ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿದ್ದ. ಅವನಂಥ ಪ್ರತಿಭಾವಂತನಿಗೆ ಉಪಮಾನದಿಂದೊಡಗೂಡಿ ಸ್ವಪ್ರಶಂಸೆ ಅನವಶ್ಯವಾಗಿತ್ತು.

ಮೇಲ್ಕಾಣಿಸಿದ ವೈದ್ಯರಿಗೆ ಸಭಾಮರ್ಯಾದೆಯಾದರೂ ಗೊತ್ತಿರಬೇಕಾಗಿತ್ತು. ಮುಖ್ಯ ಅತಿಥಿಯೆಂದು ಆಶಯ ಭಾಷಣಕ್ಕಾಗಿ ಒಬ್ಬ ವ್ಯಕ್ತಿ-ಅವನೆಂಥವನೆ ಆಗಿರಲಿ, ತಮಗಿಂತ ಕೀಳೇ ಆಗಿರಲಿ-ಯನ್ನು ಕರೆದ ಮೇಲೆ ಅವನ ಬಗ್ಗೆ ಎರಡು ಒಳ್ಳೆಯ ಮಾತು ಹೇಳಬೇಕೇ ಹೊರತು, ಸ್ವಪ್ರತಿಷ್ಠೆಗಾಗಿ ಅತಿಥಿಯ ಪ್ರತಿಮೆಯ ಮೇಲೆ ರಾಡಿ ಸೆಗಣಿಗಳನ್ನೆಸೆಯುವುದಲ್ಲ. ಇದು ಔಚಿತ್ಯಜ್ಞಾನ, ವಿದ್ಯಾವಂತನ ಲಕ್ಷಣವಲ್ಲ. ವಿನಯ ವಿದ್ಯಾವಂತನ ಸಲ್ಲಕ್ಷಣ. ನನ್ನ ಮೂದಲಿಕೆಯಿಂದ ಅವರ ಸ್ಥಾನ ಮಾನ ಅಥವಾ ವಿದ್ವತ್ತು ಹೆಚ್ಚುವುದಾದರೆ ಸಂತೋಷವೇ. ಇದೂ ಒಂದು ವಿಧವಾದ ಪರೋಪಕಾರವೇ - ನಿಂದಾ - ಸಹನಾ - ಪರೋಪಕಾರ. ಅವರ ಕನ್ನಡಾಭಿಮಾನದ ಬಗ್ಗೆ ಮಾತ್ರ ನನಗೆ ಪೂರ್ಣ ಸಹಾನುಭೂತಿಯಿದೆ ಮಾತ್ರವಲ್ಲ, ಅವರೆಷ್ಟು ಕತೆನೇಯ್ದು ನಿಂದಿಸಿದರೂ ನಾನು ಮಾತ್ರ ಅವರನ್ನ ವಿಶ್ವಾಸದಿಂದ ಕಾಣುತ್ತೇನೆ. ಅದು ವನಗೆ ಬದುಕಿನ ಗುರಿಗಳಲ್ಲೊಂದು.

ಕರ್ನಾಟಕದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಹೆಸರು ಕೇಳದವರಿಲ್ಲ. ಗಾಂಧಿ ಅನುಯಾಯಿಗಳೆಂದು, ಸ್ವಾತಂತ್ರ್ಯಕ್ಕಾಗಿ ಅಪಾರ ತ್ಯಾಗ ಮಾಡಿದವರೆಂದು, ಶ್ರೇಷ್ಠ ಸಾಹಿತಿಗಳೆಂದು ಅವರು ಪ್ರಸಿದ್ಧಿಯಾಗಿದ್ದಾರೆ. ಅವರು ಮದ್ರಾಸ್ ವಿಶ್ವವಿದ್ಯಾನಿಲಯ ನಡೆಸುತ್ತಿದ್ದ ವಿದ್ವಾನ್ ಪರೀಕ್ಷೆಗೆ ಕುಳಿತಿದ್ದಾಗ ಅವರ ಪುಸ್ತಕ 'ನಮ್ಮೂರಿನ ರಸಿಕರು' ಪಠ್ಯ ಗ್ರಂಥವಾಗಿತ್ತಂತೆ. ಬದುಕಿನ ಸಂತೃಪ್ತಿಗೆ ಅವರು ಸಾಧಿಸಿರುವ ಸಿದ್ಧಿಗಳೆ ಸಾಕು. ಆದರೂ ಅವರು ಬಿರುದು ಬಹುಮಾನಗಳಿಗಾಗಿ ಹಾತೊರೆಯುತ್ತಿದ್ದರೆಂಬುದು ಅವರ ಹಿರಿಯ ವ್ಯಕ್ತಿತ್ವಕ್ಕೆ ದೃಷ್ಟಿಬೊಟ್ಟಿನಂತಿದೆ. ಅವರು ಮೈಸೂರಿಗೆ ಬಂದಾಗಲೆಲ್ಲ ಕಲಾನಿಲಯಕ್ಕೆ ಬರುತ್ತಿದ್ದರು. ಬರುತ್ತಿದ್ದಂತೆಯೇ ಅವರು ಅಡುಗೆ ಮನೆಯತನಕ ಹೋಗಿ 'ಏನಾದ್ರೂ ತಿಂಡಿಯಿದೆಯೆ?' ಎಂದು ಆತ್ಮೀಯತೆಯಿಂದ ನಿಸ್ಸಂಕೋಚವಾಗಿ ನನ್ನ ಶ್ರೀಮತಿಯನ್ನು ಕೇಳುತ್ತಿದ್ದ ನಿಗರ್ವಿಗಳವರು.

ತಿಂಡಿ ತಿನ್ನುತ್ತ ಅವರು 'ನೋಡಿ ಸಾರ್, ಜೀವನದಲ್ಲಿ ನನಗೊಂದು ಆಸೆಯಿದೆ. ನನಗೊಂದು ಗೌರವ ಡಾಕ್ಟರೇಟ್ ಪದವಿ ಸಿಕ್ಕಿಬಿಟ್ಟರೆ, ನನಗೆ ತೃಪ್ತಿಯಾಗುತ್ತದೆ. ಅದು ಬಂದು ಬಿಟ್ಟರೆ ನನಗೇನೂ ಬೇರೆ ಆಸೆ ಉಳಿಯುವುದಿಲ್ಲ ಎಂದು ಹೇಳುತ್ತಿದ್ದರು. ನಾನಾಗ ಇನ್ನೂ ಪ್ರಾಧ್ಯಾಪಕ. ನಾನು ಕುಲಪತಿಯಾದ ಕೂಡಲೆ ಗುಬ್ಬಿ ವೀರಣ್ಣ, ಅನಕೃ ಮೊದಲಾದವರಿಗೆ ಡಾಕ್ಟರೇಟ್ ಪದವಿ ಕೊಡಿಸಿದೆ. ಒಡನೆಯೇ ಗೊರೂರರು ಬಂದು 'ಏನ್ ಸಾರ್, ನನ್ನನ್ನು ಮರೆತೇಬಿಟ್ಟಿರಾ. ನೀವು ಕುಲಪತಿಯಾಗಿರವಾಗಲೇ ನನಗೆ ಪದವಿ ಸಿಗಬೇಕು. ನಿಮ್ಮ ಕೈಯಿಂದಲೆ ಪಡೆಯಬೇಕು', ಎಂದು ತಮ್ಮ ಕಾತುರತೆ ವ್ಯಕ್ತ ಪಡಿಸುತ್ತಿದ್ದರು. ನನ್ನ ಶ್ರೀಮತಿಯ ಕಡೆಗೆ ನೋಡುತ್ತಾ 'ನೀವಾದರೂ ಯಜಮಾನರಿಗೆ

ಹೇಳಿ ' ಎನ್ನುತ್ತಿದ್ದರು. 'ಅದು ನನಗೆ ಬಂದದ್ದಾದರೆ ಆಮೇಲೆ ನಾನು ಏನನ್ನೂ ಆಶಿಸುವುದಿಲ್ಲ. ನಿಮ್ಮ ಉಪಕಾರವನ್ನು ಸದಾ ನೆನೆಯುತ್ತೇನೆ.' ಎಂದು ವಾಗ್ದಾನ ಮಾಡುವವರಂತೆ ಹೇಳುತ್ತಿದ್ದರು. ಹೇಗೋ ಅವರ ಆಶೆ ಈಡೇರಿತು.

ನಾನು ಕನ್ನಡ ಸಾಹಿತ್ಯದ ಪರಿಷತ್ತಿನ ಅಧ್ಯಕ್ಷ ಪದವಿಗೆ ಸ್ಪರ್ಧಿಸಿದ್ದುಂಟಷ್ಟೆ. ಅವರು ನನಗೆ ಬೆಂಬಲ ಕೊಟ್ಟೇಕೊಡುತ್ತಾರೆಂಬ ಪೂರ್ಣ ಭರವಸೆ ನನಗಿತ್ತು. ಮೊದಲೇ ಅವರ ಬಳಿ ಹೋಗೋಣವೆಂದು ನನ್ನ ಮಿತ್ರರು ಸಲಹೆ ಮಾಡಿದರು. ' ಅವರು ನನ್ನನ್ನು ಬಿಟ್ಟು ಹೋಗುವುದಿಲ್ಲ. ಬೇರೆಯವರನ್ನು- ಅಂದರೆ ಅಡ್ಡಗೋಡೆ ಮೇಲಿರುವವರನ್ನು-ಮೊದಲು ನೋಡೋಣ. ಕೊನೆಯಲ್ಲಿ ಅವರ ಬಳಿ ಹೋಗೋಣ' ಎಂದವರಿಗೆ ಹೇಳುತ್ತಿದ್ದೆ. ಆಮೇಲೆ ಅವರ ಮನೆಗೆ ನಾಲ್ಕೈದು ಮಂದಿ ಹೋದೆವು. ನಮ್ಮನ್ನು ನೋಡುತ್ತಿದ್ದಂತೆ ಅವರ ಮುಖ ಕೌರುತ್ತಿತ್ತು. ಸಿದ್ದಯ್ಯ ಪುರಾಣಿಕರು ನಾವು ಹೋಗಿದ್ದ ವಿಷಯವನ್ನೆತ್ತಿದರು.' ಆಗಲಿ, ನೋಡೋಣ, ಜವರೇಗೌಡರ ಬಗ್ಗೆ ನನಗೆ ಗೌರವವಿದೆ. ಅವರು ಗೆಲ್ಲಬೇಕು'ಎಂದರು ಗೊರೂರರು. ವಂದನೆ ಹೇಳಿ ಹೊರಗೆ ಬಂದೆವು. ಆ ಮೇಲೆ ನನಗೆ ತಿಳಿಯಿತು, ಅವರ ಪ್ರೋತ್ಸಾಹ ಆಶೀರ್ವಾದ ಹಂಪನಾ ಕಡೆಗಿದೆಯೆಂದು. ನನ್ನ ಗೆಳೆಯರೊಬ್ಬರು ಹೇಳಿದರಂತೆ'ಹಂಪನಾ ಮತ್ತು ಅವರ ಮಿತ್ರರು ನನ್ನನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಚುನಾಯಿಸಲು ವಾಗ್ದಾನ ಮಾಡಿದ್ದಾರೆ. ನನಗೆ ಅದೊಂದು ಆಗಬೇಕಲ್ಲ' ಎಂದು. ಅನಂತರ ನಾನೊಬ್ಬನೇ ಹೋದೆ. ' ಸ್ವಾಮಿ, ನಾನು ಅಧ್ಯಕ್ಷನಾದರೂ ನೀವು ಸಮ್ಮೇಳನಾಧ್ಯಕ್ಷರಾಗುತ್ತೀರಿ' ಎಂದೆ' ಇಲ್ಲವಾದರೆ, ನಾನವರಿಗೆ ವಾಗ್ದಾನ ಮಾಡಿದ್ದೇನೆ. ನಾನು ಕಷ್ಟದಲ್ಲಿದ್ದೇನೆ. ನನಗೆ ಅವರಿಂದ ಏನೇನೂ ಉಪಕಾರವಾಗಬೇಕಾಗಿದೆ' ಎಂದು ಮನ ಬಿಚ್ಚಿ ಹೇಳಿದ್ದು ಅವರ ನಿಷ್ಕಾಪಟ್ಯಕ್ಕೆ ಸಾಕ್ಷಿಯಾಗಿದೆ. ಆದರೆ ಅಂತವರನ್ನೇ ನೋಡಿದಾಗ ಮನುಷ್ಯತ್ವದ ಬಗ್ಗೆ ನನ್ನಂಥವನು ನಂಬಿಕೆ ಕಳೆದುಕೊಂಡರೆ ಆಶ್ಚರ್ಯವಿಲ್ಲ.

ಕರ್ನಾಟಕದ ಎಲ್ಲ ಮುಖ್ಯ ಮಂತ್ರಿಗಳನ್ನು ನಾನು ಬಲ್ಲೆ. ಕೆ. ಸಿ. ರೆಡ್ಡಿಯವರು ತುಂಬ ದೊಡ್ಡವರು; ಅವರ ಭಾಷಣ ಸಂಗೀತದಂತೆ ಮನೋಹರ; ಕೆ. ಹನುಮಂತಯ್ಯನವರು ತುಂಬ ಬುದ್ಧಿವಂತರು ; ಒಳ್ಳೆಯ ಮಾತುಗಾರರು. ಇವರಿಬ್ಬರಿಗೂ ನಾನು ' ಭೂತಲೇಖಕ'. ರೆಡ್ಡಿಯವರ ಹೆಸರಿನಲ್ಲಿ ಎರಡು ಪುಸ್ತಕಗಳಿಗೆ ಮುನ್ನುಡಿ, ಎರಡು ಭಾಷಣ ಬರೆದು ಕೊಟ್ಟದ್ದುಂಟು. ಅವರು ವಂದನೆ ಸಲ್ಲಿಸುವಾಗ ಮಾತು ನಗುತ್ತಿತ್ತು; ಸ್ನೇಹ ಸೂಸುತ್ತಿತ್ತು. ಹನುಮಂತಯ್ಯನವರಿಗೆ ನಾಲ್ಕಾರು ಭಾಷಣ ಬರೆದದ್ದುಂಟು. ನನ್ನ ಭಾಷೆ ಸಂಸ್ಕೃತಮಯವೆಂಬುದು ಅವರ ಟೀಕೆ. ' ಇದನ್ನು ಓದಿದರೆ ಹಲ್ಲು ಮುರಿಯುತ್ತದೆ' ಎಂದು ಹೇಳುತ್ತ ನಗುತ್ತಿದ್ದರು. ನನ್ನಲ್ಲವರಿಗೆ ಆತ್ಮೀಯತೆ ಧಾರಾಳ.

ನಾನು ಸಂಸಾರ ಹೂಡಿದಾಗ ನಮ್ಮ ಮನೆ ಹಾಸ್ಟಲಿನಂತಿತ್ತು. ನನಗೆ ಬರುತ್ತಿದ್ದ ಸಂಬಳ 75/- ನೂರು ರೂಪಾಯಿನ ನೋಟು ಕಂಡವನೇ ಅಲ್ಲ. ಆದ್ದರಿಂದ ಸಂಸಾರ ನಿರ್ವಹಣೆಗೆ ಸಾಲ ಮಾಡಬೇಕಿತ್ತು. ಸಾಲ ತೀರಿಸುವ ಒಕಮತ್ತು ನನಗೆ ದೊರೆತದ್ದು ನ. ಭದ್ರಯ್ಯನವರಿಂದ. 'ಬೆಂಗಳೂರು ಕೆಂಪೇಗೌಡ' ಬರೆದು, ಹಸ್ತಪ್ರತಿ ಧೂಳು

ಹಿಡಿಯುತ್ತಿತ್ತು. ಅದನ್ನು ಮುದ್ರಿಸಿ, ಪಠ್ಯ ಪುಸ್ತಕ ಸಮಿತಿಗೆ ಕಳಿಸುವಂತೆ ಪ್ರೇರಿಸಿದವರು ಅವರೇ. ನನ್ನ ಬದುಕಿನಲ್ಲಿಯೇ ಅಷ್ಟು ಹಣ ಕಂಡದ್ದಿಲ್ಲ. ಹಣ ಬಂದಷ್ಟೂ ಅತೃಪ್ತಿಯೂ ಹೆಚ್ಚುತ್ತದೆ. ಪ್ರಾಥಮಿಕ ತರಗತಿಗಳಿಗೆಂದು ಆರೋಗ್ಯ ಪಾಠಗಳನ್ನು ಬರೆಯುತ್ತಿದ್ದೆ. ನನ್ನ ಮನೆಯಲ್ಲಿಯೇ ಇದ್ದ ಹೆಚ್. ಎನ್. ಚಾಮಯ್ಯ 'ನಾನೇ ಆ ಪಾಠಗಳನ್ನು ಮುಂದುವರಿಸುತ್ತೇನೆ, ನೀನು ತಿದ್ದಿಕೊಡುವಿಯಂತೆ. ನಿನಗೆ ಈಗಾಗಲೇ ಸಾಕಷ್ಟು ಹಣ ಬಂದಿದೆಯಲ್ಲ' ಎಂದು ಕೇಳಲಾಗಿ ನಾನು ಆಗಲೆಂದೆ.

ಆಮೇಲೆ ನಾನು ಅದೇ ಪ್ರಾಥಮಿಕ ತರಗತಿಗಳಿಗೆ ಭೂಗೋಳ ಪಾಠಗಳನ್ನು ಬರೆಯಲು ಉಪಕ್ರಮಿಸಿದೆ. ಮೂರು ಭಾಗಗಳ ಪೈಕಿ ಒಂದನ್ನು ಬರೆದೂ ಇದ್ದೆ. ಎಂ. ಎನ್. ವಿಶ್ವನಾಥಯ್ಯ ಮತ್ತು ಎಲ್. ದೇಶಿಗೌಡರಿಬ್ಬರೂ ' ಆ ಯೋಜನೆಯನ್ನು ನಾವೇ ಮುಗಿಸುತ್ತೇವೆ, ನಮಗೆ ಬಿಟ್ಟು ಬಿಡಿ' ಎಂದರು, ಆಗಲೆಂದೆ. ಆರೋಗ್ಯಪಾಠ ಭೂಗೋಳ ಪಾಠಗಳೆರಡೂ ಪಠ್ಯಗಳಾಗಿ ನಾಲ್ಕೈದು ವರ್ಷ ನಡೆದುವು.

ಪಠ್ಯ ಪುಸ್ತಕಕ್ಕೆಂದೇ ನಾನು ಕುಮಾರವ್ಯಾಸನ ಕರ್ಣ' ನನ್ನು ಸಂಗ್ರಹಿಸಿದ್ದೆ, ಸಂಪಾದಿಸಿದ್ದೆ, ನಭರವರು ಧಾರಾಳಿಗಳಾದ್ದರಿಂದ, ಅವರನ್ನು ನಂಬಿದವರು ಬಹು ಜನರಿದ್ದದ್ದರಿಂದ, ಉಚಿತ ಸಮಾಜ ಸೇವೆಯೇ ಅವರ ಜೀವನದ ಮುಖ್ಯ ಗುರಿಯಾಗಿದ್ದುದರಿಂದ, ಅವರ ಕೈಯಲ್ಲಿ ಹಣ ನಿಲ್ಲುತ್ತಿರಲಿಲ್ಲ. ' ಕರ್ಣ' ನನಗಿರಲಿ ಎಂದಾಗ ಆಗಲೆಂದೆ.

ಎಚ್. ಎಲ್. ನಾಗೇಗೌಡರು ಕರ್ನಾಟಕದ ಮೇಧಾವಿ ದಕ್ಷ ಅಧಿಕಾರಿಗಳಲ್ಲೊಬ್ಬರು; ಆದಕ್ಕೆ ತಕ್ಕಂತೆ ದರ್ಪವೂ ಉಂಟು. ಆ ದರ್ಪದ ಬಿಸಿಯನ್ನನುಭವಿಸಿದವರಲ್ಲಿ ನಾನೂ ಒಬ್ಬ. ಸ್ಕಾಟ್ಸ್ ಕಾದಂಬರಿ ' ಕೆನಿಲ್‌ವರ್ತ್' ಅನ್ನು ಅವರು ಭಾಷಾಂತರಿಸಿದ್ದರು. ಪರಿಶೀಲನೆಗಾಗಿ ಆ ಹಸ್ತಪ್ರತಿಯನ್ನು ಕುವೆಂಪು ಅವರಿಗೆ ಕೊಟ್ಟಿದ್ದರು. ಅದನ್ನು ನೋಡಲು ಕುವೆಂಪು ಅವರಿಗೆ ಪುರುಸೊತ್ತೆಲ್ಲಿ? ನನಗದನ್ನು ಕೊಟ್ಟರು. ನೋಡಿದೆ, ಮೂರ್‍ನಾಲ್ಕು ಪುಟ ತಿದ್ದಿದೆ. ಕುವೆಂಪು ಅವರಿಗೆ ತೋರಿಸಿ, ಇಡೀ ಪುಸ್ತಕವನ್ನು ತಿದ್ದಬೇಕಾದರೆ ಬಹಳ ಕಾಲ ಹಿಡಿಯುತ್ತದೆ, ನನ್ನ ಕೆಲಸ ಕುಂಟುತ್ತದೆ ಎಂದವರಿಗೆ ತಿಳಿಸಿದೆ. ಹಾಗಾದರೆ ಹಸ್ತಪ್ರತಿಯನ್ನು ಗೌಡರಿಗೆ ತಲುಪಿಸಿ ಬಿಡಿ; ತಿದ್ದಬೇಕಾದ ರೀತಿಯನ್ನು ತಿಳಿಸಿ ಎಂದು ಕುವೆಂಪು ನನಗೆ ಹೇಳಿದರು. ಆಗ ನಾಗೇಗೌಡರು ಸರ್ಕಾರದ ಉಪಕಾರ್ಯದರ್ಶಿ, ಅಸಿಸ್ಟೆಂಟ್ ಕಮಿಷನರ್ ದರ್ಜೆಯವರು; ನಾನು ಕೇವಲ ನೂರು ರೂಪಾಯಿ ಸಂಬಳದ ಸಾಮಾನ್ಯ ಉಪನ್ಯಾಸಕ. ಬೆಂಗಳೂರಿನ ಶಂಕರಮಠದ ಬಡಾವಣೆಯಲ್ಲಿದ್ದ ಅವರ ಮನೆಯನ್ನು ಪತ್ತೆ ಹಚ್ಚಿ, ಒಳಗೆ ಹೋದೆ. ಕೈ ಮುಗಿದೆ' ಯಾರು ನೀವು?' ಎಂದವರು ಗರ್ಜನೆಯ ಧ್ವನಿಯಲ್ಲಿ ಕೇಳಿದರು. ಕುಳಿತುಕೊಳ್ಳಲು ಸಹ ಹೇಳಲಿಲ್ಲ. ನಿಂತುಕೊಂಡೇ, ಒಂದೇ ಸಣ್ಣ ವಾಕ್ಯದಲ್ಲಿ ನನ್ನ ವಿಳಾಸ ತಿಳಿಸಿದೆ, ಹೋದ ಉದ್ದೇಶ ಸೂಚಿಸಿದೆ. ' ಅಲ್ಲಿಡಿ' ಎಂದೊಂದು ಮೇಜನ್ನು ತೋರಿಸಿದರು. ನನ್ನ ಆತ್ಮಗೌರವ ಹೆಡೆ ಬಿಚ್ಚಿದರೂ ಅದುಮಿಕೊಂಡು ಹೊರಗೆ ನಡೆದೆ.

ಕೆಲವು ತಿಂಗಳೇ ಕಳೆದಿರಬಹುದು. ನಾನಾಗ ಪಡುವಾರ ಹಳ್ಳಿಯ ಕೊಳಚೆಯ ನಡುವಣ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದೆ. ನನ್ನ ಮನೆಯ ಇಕ್ಕಟ್ಟಿನ ವರಾಂಡದಲ್ಲಿ ಬೆಂಚೊಂದು ವಿನಾ ಕುರ್ಚಿಗಳಿರಲಿಲ್ಲ. ವರಾಂಡವೇಕೆ, ಮನೆಯಲ್ಲಿಯೇ ಕುರ್ಚಿಗಳಿರಲಿಲ್ಲ. ಕಾರಿನ ಕಹಳೆಯ ಸದ್ದು ಕೇಳಿ, 'ನನ್ನ ಮನೆಗೆ ಕಾರಿನಲ್ಲಿ ಬರುವವರೂ ಉಂಟೆ?' ಎಂದು ಆಶ್ಚರ್ಯಚಕಿತನಾಗಿ ಕಿಟಕಿಯಲ್ಲಿ ಬಗ್ಗಿ ನೋಡಿದೆ. ಡ್ರೈವರ್ ಗೇಟಿನಲ್ಲಿ ನಿಂತುಕೊಂಡು ಕೂಗುತ್ತಿದ್ದ. ಕಾರೊಳಗೆ ನಾಗೇಗೌಡರು ಕುಳಿತಿದ್ದರು. ಪ್ರಾಯಶಃ ತಪ್ಪಿ ಬಂದಿರಬೇಕು; ಯಾರದೋ ಮನೆ ಹುಡುಕುತ್ತಿರಬೇಕು ಎಂದು ಕೆಲವು ಸೆಕೆಂಡು ಸುಮ್ಮನಿದ್ದೆ. ಡ್ರೈವರ್‌ನ ಗಂಟಲು ಜೋರಾದ ಮೇಲೆ ಹೊರಗೆ ಹೋದೆ. ಗೌಡರ ದೇಹ ಗಂಭೀರವಾಗಿ ಭೂಮಿಗವತರಿಸಿತು. ನಮಸ್ಕಾರ ಪ್ರತಿನಮಸ್ಕಾರಗಳಾದವು. ಒಳಗಡೆ ಕರೆತಂದು ಬೆಂಚುತೋರಿಸಿ, ನಾನೂ ಒಂದು ಮೂಲೆಯಲ್ಲಿ ಕುಳಿತುಕೊಂಡೆ. ನನ್ನ ಮನೆಯ ಸ್ಥಿತಿ ನೋಡಿ ಅವರಿಗೆ ಕನಿಕರವಾಗಿರಬೇಕು. 'ನಾನು ಕವಿಗಳ ಮನೆಗೆ ಹೋಗಿದ್ದೆ. ನಿಮ್ಮ ಹತ್ತಿರ ಕಳಿಸಿದರು. ಕೆನಿಲ್‌ವರ್ತ್‌ಗೆ ಏನಾದರೂ ಗತಿ ಕಾಣಿಸಬೇಕಲ್ಲ' ಎಂದು ಅವರೇ ಮಾತು ತೆಗೆದರು. ಅವರಂಥ ದರ್ಪದ ಅಧಿಕಾರಿಗಳೊಂದಿಗೆ ನನ್ನಂಥ ಕ್ಷುದ್ರ ಜೀವಿಯ ನಡವಳಿಕೆ ಕಷ್ಟವಾದೀತೆಂಬ ಭಯದಿಂದ 'ನನಗೆ ಸಮಯವಿಲ್ಲ' ಎಂದೆ 'ಇದೂ ಕನ್ನಡದ ಕೆಲಸವೆ. ನನ್ನಿಂದಲೂ ಕನ್ನಡಕ್ಕೆ ಸೇವೆ ಸಲ್ಲುವಂತೆ ನನಗೆ ಸಹಾಯ ಮಾಡಿ ಎಂದರು. 'ನನ್ನ ಜತೆಗೆ ನೀವೂ ಕುಳಿತುಕೊಳ್ಳುವುದಾದರೆ ಆಗಲಿ' ಎಂದೆ. ಆ ಕೆಲಸ ಪೂರೈಸಲು ಹದಿನೈದು ಇಪ್ಪತ್ತು ಕೂರುಗಳಾಗಿರಬೇಕೆಂದು ತೋರುತ್ತದೆ. ಗೌಡರ ತಾಳ್ಮೆ, ಆಸಕ್ತಿ, ಸೂಕ್ಷ್ಮ ಗ್ರಹಣ ಶಕ್ತಿಗೆ ನಾನು ಮಾರು ಹೋದದ್ದುಂಟು. ಪ್ರಾಯಶಃ ಅದೇ ಅವರ ಮೊದಲ ಪುಸ್ತಕ. ಅದನ್ನು ಹೆರಿಗೆ ಮಾಡಿಸಿದ ದಾದಿಗೆ ಸಾಕುವ ಜವಾಬ್ದಾರಿಯನ್ನೂ ವಹಿಸಿದರು. ಸನ್ಮಿತ್ರ ಶಂಕರನಾರಾಯಣರನ್ನು ಹಿಡಿದೆ. ಮುದ್ರಣವಾಯಿತು. ಗೌಡರು ರಾಯರಿಬ್ಬರೂ ಸೇರಿ, ಅದು ಪಠ್ಯಪುಸ್ತಕವಾಗಬೇಕೆಂದು ಹಠ ಹಿಡಿದರು. ಆಯಿತು. ಆದ ಬಗೆ ಬೇರೆ ಸದ್ಯಕ್ಕೆ ವಿವರಣೆ ಅನಾವಶ್ಯಕ.

ಈ ಪ್ರಕರಣ ನಡೆದ ನಂತರ ಅವರು ಮೇಲಿಂದ ಮೇಲೆ ಮನೆಗೆ ಬರಲಾರಂಭಿಸಿದರು. ಬರಲಾಗದಿದ್ದರೆ ಹೇಳಿ ಕಳಿಸುತ್ತಿದ್ದರು. 'ನೋಡ್ರಿ, ನನ್ನ ಬರೆವಣಿಗೆ ಇಷ್ಟಕ್ಕೇ ನಿಲ್ಲಬಾರದು. ಆಡಳಿತದ ಚಕ್ರವಲ್ಲಿ ಕೈಮನ ಸಿಕ್ಕಿಸಿಕೊಂಡಿರುವುದರಿಂದ'ವಸ್ತು' ಹೊಳೆಯುವುದಿಲ್ಲ. ನೀವೇ ಒಂದು ವಸ್ತುವಿನ ಹೆಸರು ಸೂಚಿಸಿ ಎಂದೊಮ್ಮೆ ಅವರು ಕೇಳಿದರು. ನಾನಾಗ 'ಸರೋಜಿನಿ ನಾಯ್ಡು' ಜೀವನ ಚರಿತ್ರೆ ಬರೆಯಲು ಸಾಮಗ್ರಿಯನ್ನು ಹುಡುಕುತ್ತಿದ್ದೆ. ಆ ವಿಷಯ ತಿಳಿಸಿದಾಗ 'ಅದನ್ನು ನಾನೇ ಬರೆದು ಮುಗಿಸುತ್ತೇನೆ, ಬಿಡಿ' ಎಂದರು. ಅಷ್ಟರಲ್ಲಿ ನನ್ನ ಸೂಚನೆ ಮೇಲೆಯೇ 'ಮಾರ್ಕೊ ಪೋಲೋ ಪ್ರವಾಸ' ಬರೆದು ಮುಗಿಸಿದ್ದರೆಂದು ನೆನಪು. ಅಧಿಕಾರ ಸ್ಥಾನದಲ್ಲಿದ್ದುದರಿಂದ ಕಲ್ಕತ್ತೆ ಮೊದಲಾದ ಊರುಗಳಿಗೆ ಹೋಗಿ ಬರುವ ಸೌಲಭ್ಯ ಅವರಿಗಿತ್ತು. ಸಾಮಗ್ರಿಯನ್ನು ಶೇಖರಿಸಿ, ಪುಸ್ತಕವನ್ನು ಮುಗಿಸಿ ತಂದು ಕೊಟ್ಟರು.

ಅಷ್ಟು ಹೊತ್ತಿಗೆ ಅವರ ಕೈ ಪಳಗಿತ್ತು. ತಿದ್ದುವ ಕೆಲಸ ತ್ರಾಸದಾಯಕವಾಗಿರಲಿಲ್ಲ. ಅದೂ ಪಠ್ಯಪುಸ್ತಕವಾಯಿತು.

ಗೌಡರು ಪುನಃ ಬಂದರು 'ಮತ್ತೇನಾದರೂ ವಸ್ತು ಒದಗಿಸಿ' ಎಂದರು. 'ಪ್ರವಾಸಿಗಳು ಕಂಡ ಇಂಡಿಯಾ' ಬರೆಯಬೇಕೆಂದು ನಾನು ನಿರ್ಧರಿಸಿ, ಮೆಗಾಸ್ತನೀಸ್‌ನ ಪ್ರವಾಸ ಕಥೆಯನ್ನು ಭಾಷಾಂತರಿಸಿದ್ದೆ. 'ಬಿಡಿ ಸ್ವಾಮಿ, ಆ ಕೆಲಸ ನಾನೇ ಮಾಡುತ್ತೇನೆ. ನೀವು ಬೇರೇನಾದರೂ ಮಾಡಿ' ಎಂದರು. ನಾನು ಸಹ ಮೊದಲಿಂದ ಒಂದೇ ಸಮನೆ ಆಡಳಿತದಲ್ಲಿ ಚಳುವಳಿಯಲ್ಲಿ ತೊಡಗಿಸಿಕೊಂಡವನು. ಈ ಯೋಜನೆಯ ಪೂರೈಕೆಗೆ ಹತ್ತಾರು ವರ್ಷಗಳಾದರೂ ಬೇಕು. ಗೌಡರೇ ಮುಗಿಸಲಿ ಎಂದುಕೊಂಡು ಅವರಿಗೊಪ್ಪಿಸಿದೆ. ಮೊದಲ ಸಂಪುಟದ ಹಸ್ತಪ್ರತಿಯನ್ನು ಮಾತ್ರ ನೋಡಿದ್ದುಂಟು. ಅವರ ಕೈ ಪೂರ್ಣ ಪಳಗಿದ್ದನ್ನು ನೋಡಿ ನನಗೆ ಖುಷಿಯಾಯಿತು. ಅದು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಲು ಅನುವು ಮಾಡಿಕೊಟ್ಟವನು ನಾನೇ. ಈಚೆಗೆ ಅವರು ಕಾದಂಬರಿಗಳನ್ನು ರಚಿಸಿ, ಕನ್ನಡ ಸಾಹಿತ್ಯ ಇತಿಹಾಸದಲ್ಲಿ ದೊಡ್ಡ ಸ್ಥಾನವನ್ನು ಗಳಿಸಿ ಕೊಂಡಿದ್ದಾರೆ. ದುರದೃಷ್ಟವೇನೆಂದರೆ, ಅವರು ಜಾನಪದ ಕ್ಷೇತ್ರದಲ್ಲಿ ಸಾಧಿಸಿರುವ ಅದ್ಭುತ ಸಿದ್ಧಿ ಅವರ ಸಾಹಿತ್ಯ ಸಿದ್ಧಿಯನ್ನು ಮರೆಸಿದೆ. ಮರೆಸಿರಲಿಲ್ಲವಾದರೆ ಅವರು ಎಂದೋ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕಿತ್ತು. ಅವರಿಗಿಂತ ಅರ್ಹತೆಯುಳ್ಳವರು ಅಧ್ಯಕ್ಷರಾದದ್ದರಿಂದ ಈ ಮಾತು ಹೇಳಬೇಕಾಯಿತು. ಅದೇನೇ ಇರಲಿ. ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಿಸಿರುವ ಸಿದ್ಧಿಯನ್ನು ನೋಡಿ ಹರ್ಷಿಸುವವರಲ್ಲಿ ನಾನು ಒಬ್ಬನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಕರ್ನಾಟಕ ಲೋಕಸೇವಾ ಆಯೋಗ ನನ್ನ ಅಳಿಯ ಡಾ. ಚಂದ್ರಶೇಖರ್ ಅವರನ್ನು ಅಧ್ಯಾಪಕ ಹುದ್ದೆಗೆ ಆರಿಸಿತ್ತು. ಆ ಹುದ್ದೆ ತನಗೆ ಸಿಗಬೇಕೆಂದು ನ್ಯಾಯಾಧೀಶರ ಮಗನೊಬ್ಬ ಕ್ಯಾತೆ ತೆಗೆದ. ನ್ಯಾಯಾಧೀಶರ ಮಗನಾದ್ದರಿಂದ ಅವನು ಗೆಲ್ಲಬೇಕಷ್ಟೆ. ಚಂದ್ರಶೇಖರ್ ಮತ್ತೆ ಅರ್ಜಿ ಗುಜಾರಾಯಿಸಿಕೊಳ್ಳಬೇಕಾಯಿತು. ಆಗ ನಾಗೇಗೌಡರು ಆಯೋಗದ ಸದಸ್ಯರು. ಉಪಕಾರಕ್ಕೆಂದು ನಾನೆಂದೂ ಅವರ ಬಳಿಹೋದದ್ದಿಲ್ಲ. ಪ್ರಾಯಶಃ ಅದೇ ಮೊದಲು, ಅದೇ ಕೊನೆ. ಅವರ ಬಳಿ ಹೋಗಿ ಚಂದ್ರಶೇಖರ್‌ಗಾದ ಅನ್ಯಾಯವನ್ನು ವಿವರಿಸಿ, ಅದನ್ನು ಸರಿಪಡಿಸುವಂತೆ ಬಿನ್ನವಿಸಿಕೊಂಡೆ. 'ಅನ್ಯಾಯವಾಗಿದೆ, ನಿಜ. ಇದನ್ನು ಸರಿಪಡಿಸುವ ಜವಾಬ್ದಾರಿ ನನ್ನದು. ಒಬ್ಬೊಬ್ಬರು ಸದಸ್ಯರನ್ನು ನೋಡಿ. ನೀವು ನಿಶ್ಚಿಂತೆಯಿಂದ ಮನೆಗೆ ಹೋಗಿ' ಎಂದರು. ಕೆಲಸ ಆಗಿರಲೇಬೇಕೆಂದು ನಾನು ಯಾರನ್ನೂ ಕೇಳಲಿಲ್ಲ. ಮೂರ್ನಾಲ್ಕು ತಿಂಗಳ ನಂತರ ಚಂದ್ರಶೇಖರ್ ತಮ್ಮ ನೇಮಕ ರದ್ದಾಗಿದೆಯೆಂದು ತಿಳಿದಾಗ ನನಗೆ ಅತೀವ ನಿರಾಶೆಯಾಯಿತು. ಅಂಥ ತೀವ್ರ ನಿರಾಶೆ ನನ್ನ ಜೀವನದಲ್ಲೆಂದೂ ಆದದ್ದಿಲ್ಲ. ತಮ್ಮ ಮಾತು ನಡೆಯಲಿಲ್ಲವೆಂದಾದರೂ ಗೌಡರು ಮೊದಲೇ ಒಂದು ಮಾತು ಹೇಳದಿರಲು ಕಾರಣವೇನಿರಬಹುದು? ಅವರ ಮೌನವೇ ಸಂದೇಹಾಸ್ಪದವಾಗಿದೆ, ಇಂದಿಗೂ. ತಪ್ಪೋ ಸರಿಯೋ ಯಾವುದೋ ಕಾರಣ ನನ್ನ ಊಹೆಗೆ ಸಾಧ್ಯವಾಗಿದೆ. ಈಗ ಅವರ ಬಗ್ಗೆ ನನಗೆ ಕಹಿಯಿಲ್ಲ. ಭಗವಂತ ಕ್ಲೇಶ ರೂಪಿಯಾಗಿ ಬಂದು ಶುಭ

ಕೋರುತ್ತಾನೆಂಬ ಕುವೆಂಪು ತಾತ್ವಿಕ ಸಂದೇಶದ ಸತ್ಯ ನನಗರಿವಾಗಿದೆ. ಚಂದ್ರಶೇಖರ್ ಅಮೆರಿಕೆಯಲ್ಲಿ ಸಾಧಿಸುತ್ತಿರುವುದನ್ನು ಇಂಡಿಯಾದಲ್ಲಿ ಹತ್ತು ಜನ್ಮ ತಳೆದಿದ್ದರೂ ಸಾಧಿಸಲಾಗುತ್ತಿರಲಿಲ್ಲ. ನಾಗೇಗೌಡರು ಅಂಥವರಿಗೆ ಸಹಾಯ ಮಾಡಿ ಇಂಡಿಯಾದಲ್ಲಿಯೇ ಉಳಿಸಿದ್ದರೆ ಚಂದ್ರಶೇಖರ್ ಇಂದಿನ ಅದ್ಭುತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಗೌಡರನ್ನು ನಾನಿಂದು ವಂದಿಸಬೇಕಾಗಿದೆ.

ಎಚ್. ಎಚ್. ಅಣ್ಣಯ್ಯಗೌಡರು ನನ್ನ ವಿದ್ಯಾರ್ಥಿ. ಅವರ ಒಂದು ದೊಡ್ಡಗುಣವೆಂದರೆ ಸಿಕ್ಕಿದಾಗ ' ಗುರುಗಳು' ಎಂದೇ ಕರೆಯುತ್ತಾರೆ. ' ಮೃಗ ಪ್ರಭುತ್ವ' ಹೆಸರಿನ ಭಾಷಾಂತರ ಕೃತಿಯನ್ನು ನೋಡಿಕೊಡುವಂತೆ ನನಗೆ ತಂದು ಕೊಟ್ಟರು. ಆಗಿನ್ನೂ ಕನ್ನಡ ಭಾಷೆಯ ಮರ್ಜಿ ಅವರ ಹಿಡಿತಕ್ಕೆ ಸಿಕ್ಕಿರಲಿಲ್ಲ.' ಜತೆಯಲ್ಲಿ ಕುಳಿತುಕೊಂಡು ತಿದ್ದೋಣ' ಎಂದೆ. ಅವರು ಯಾವಾಗಲೂ ಸ್ವಲ್ಪ ಉಡಾಫಿ ಮನುಷ್ಯ. ಆದರೆ ಯಾರನ್ನೂ ಮೇಲೆ ಹಾಕಿಕೊಂಡವರಲ್ಲ. ಆಂಗ್ಲ ಮೂಲಗ್ರಂಥ (Animal farm)ವನ್ನು ತಂದುಕೊಟ್ಟು' ನೀವೇ ತಿದ್ದಿಬಿಡಿ, ಸಾರ್' ಎಂದರು. ಪದದೋಷ ವಾಕ್ಯ ಸರಣಿಗಳೆಲ್ಲವನ್ನೂ ಸರಿಪಡಿಸಬೇಕಾಗಿತ್ತು. ಕನ್ನಡ ಮೈನರ್ ವಿದ್ಯಾರ್ಥಿಯಾದರೂ, ಕನ್ನಡವನ್ನವರು ಸರಿಯಾಗಿ ಕೃಷಿ ಮಾಡಿಲ್ಲ. ಒಮ್ಮೊಮ್ಮೆ ಅವರನ್ನು ಕರೆದು ಕೆಲವು ವಾಕ್ಯಗಳನ್ನು ಚರ್ಚಿಸುವಾಗ, ಮೂಲ - ಭಾಷಾಂತರಗಳೆರಡೂ ಮರೆತು ಹೋಗಿರಬೇಕು, ಇಲ್ಲವೇ ಮತ್ತೇನೋ ಗೋಲ್‌ಮಾಲ್ ನಡೆದಿರಬೇಕೆನ್ನುವಷ್ಟರ ಮಟ್ಟಿಗೆ ಅವರು ಉತ್ತರ ನೀಡುತ್ತಿದ್ದರು. ನನ್ನ ಕೆಲಸದ ನಡುವೆ ಅದನ್ನು ತಿದ್ದಲು ತಿಂಗಳುಗಳೇ ಕಳೆದಿರಬೇಕು. ಅವರೀಗ ದ್ವಿಭಾಷಾ ವಿಶಾರದರಾಗಿ ಎರಡರಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಸಂತೋಷ. ಮುಂದೆ ಹೊಗಳುವ, ಹಿಂದೆ ಆಡಿಕೊಳ್ಳುವ ಅಥವಾ ಕಾಲು ಹಿಡಿದೆಳೆಯುವ ಸಣ್ಣತನ ಅವರ ಸ್ವಭಾವದಲ್ಲಿದೆ. ನನ್ನ ಕುಲಪತಿ ಹುದ್ದೆ ಎರಡನೆಯ ಸಲಕ್ಕೆ ವಿಸ್ತರಣೆಯಾಗಬೇಕಾಗಿದ್ದ ಸಮಯದಲ್ಲಿ ನನ್ನ ವಿರುದ್ಧವಾಗಿ ಕೆಲಸ ಮಾಡಿದರೆನ್ನುವುದನ್ನು ' ಹೋರಾಟದ ಬದುಕು' ಆತ್ಮಕಥೆಯ ಎರಡನೆಯ ಭಾಗದಲ್ಲಿ ವಿವರಿಸಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದ ಹೊರಗಿನಿಂದ ಅನೇಕ ಪ್ರಾಧ್ಯಾಪಕರು ಆಮದಾಗುತ್ತಿದ್ದಾರೆ. ಅವರು ಐದು ವರ್ಷದಿಂದ ಇಪ್ಪತ್ತೈದು-ಮೂವತ್ತೈದು ವರ್ಷಗಳ ತನಕ ಇದ್ದು ಉತ್ತಮ ರೀತಿಯಲ್ಲಿ ಬೋಧಿಸಿ ಹೆಸರು ಮಾಡಿಕೊಂಡು ಹೋಗಿದ್ದಾರೆ. ಇಲ್ಲಿಗೆ ಬಂದವರಲ್ಲಿ ಒಬ್ಬರಾದರೂ ಕನ್ನಡ ಕಲಿಯದಿದ್ದುದು, ಇಲ್ಲಿಯ ಸಂಸ್ಕೃತಿಯನ್ನರಿಯದಿದ್ದುದು ದುರ್ದೈವ. ಈ ದೊಡ್ಡ ಗುಂಪಿನಲ್ಲಿ ನಾ ಕಸ್ತೂರಿಯವರೊಬ್ಬರೇ ಅಪವಾದ. ಕನ್ನಡ ಕಲಿತದ್ದೊಂದೇ ಅಲ್ಲ, ಇಲ್ಲಿಯ ಜನಜೀವನದಲ್ಲಿ ಬೆರೆತು ಅನೇಕ ರೀತಿಯಲ್ಲಿ ಸಾಮಾಜಿಕ ಸೇವೆಯನ್ನು ಮಾಡಿದರಲ್ಲದೆ, ಉತ್ತಮ ಲೇಖಕರಾಗಿ ಹೆಸರು ಮಾಡಿದರೆಂಬುದು ಹೆಮ್ಮೆಯ ಸಂಗತಿ. ಪ್ರಾತಿನಿಧಿಕವಾಗಿಯಾದರೂ ಆ ಗುಂಪಿನಲ್ಲೊಬ್ಬರ ಮನೋಧರ್ಮವನ್ನು ಸೂಚಿಸುವ ಘಟನೆಯೊಂದನ್ನು ವಿವರಿಸಬೇಕಾಗಿದೆ. ಅವರ ಹೆಸರು ಆರ್. ಪಿ. ಸಿಂಗ್. ಡಾ.

ಶ್ರೀಮಾಲಿಯವರು ಉತ್ತರ ಪ್ರದೇಶದ ಈ ಪ್ರಾಧ್ಯಾಪಕರತ್ನವನ್ನು, ಅವರಂಥ ವಿದ್ವಾಂಸರು ಇಲ್ಲಿ ಯಾರೂ ಇಲ್ಲವೇನೋ ಎಂಬಂತೆ ಶಿಕ್ಷಣ ಇಲಾಖೆಗೆ ಕರೆತಂದರು.ತಮ್ಮಂತೆ ಚೆನ್ನಾಗಿ ಇಂಗ್ಲಿಷ್ ಮಾತಾಡಬಲ್ಲ ಅಧ್ಯಾಪಕರು ಮೈಸೂರಲ್ಲಿಲ್ಲವೆಂದೇ ಆ ಭೂಪತಿ ಆಗಾಗ ಸ್ವಪ್ರಶಂಸೆ ಮಾಡಿಕೊಳ್ಳುತ್ತಿದ್ದರು. ಬಿ. ಎಡ್. ತರಗತಿಯಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೊಳಿಸುವಲ್ಲಿ ಆ ಮಹನೀಯರು ನನಗೆ ಸಾಕಷ್ಟು ತೊಂದರೆ ಕೊಟ್ಟರು. ಆದರೂ ಅವರ ಬಾಜ ನಡೆಯುತ್ತಿರಲಿಲ್ಲ. ಎಲ್ಲರನ್ನು ಕೀಳಾಗಿ ಕಾಣುವುದೇ ಆ ಸರಸ್ವತೀ ಪುತ್ರರ ಸ್ವಭಾವ.

ಅವರೂ ನಿವೃತ್ತಿಯಾದರು! ಆ ಸಮಯದಲ್ಲಿ ಶಿಕ್ಷಣ ಇಲಾಖೆಯ ಮಿತ್ರರು ಬೀಳ್ಕೊಡಿಗೆಯ ಸಮಾರಂಭವೇರ್ಪಡಿಸಿದ್ದರು. ಸಮಾರಂಭದ ಅಧ್ಯಕ್ಷತೆಗೆ ಕುಲಪತಿಯಾಗಿದ್ದ ನನ್ನನ್ನೇ ಕರೆದರು. ಡಾ. ಸಿಂಗ್ ದೀರ್ಘವಾಗಿ ಭಾಷಣ ಮಾಡಿ ತಮ್ಮ ಸಾಧನೆ ಸಿದ್ಧಿ ಕೀರ್ತಿಗಳನ್ನೆಲ್ಲ ಘೋಷಿಸಿಕೊಂಡರು. ಅದು ತಪ್ಪಲ್ಲ. ನಿವೃತ್ತರಾದವರಿಗೆ ಅಷ್ಟಾದರೂ ಅವಕಾಶ ಬೇಡವೆ? ತಮ್ಮ ಭಾಷಣದ ಕೊನೆ ಕೊನೆಗೆ ಭಾವುಕರಾಗಿ ಅವರು ಆಡಿದ ಮಾತುಗಳ ಸಾರಾಂಶವಿಷ್ಟು: 'ನಾನು ಭರತಖಂಡದ ಎರಡು ಪವಿತ್ರ ನದಿಗಳು ಹರಿಯುವ ನೆಲದಿಂದ ಬಂದವನು; ಕಾಶಿ ಪ್ರಯಾಗಗಳಿರುವುದೇ ನನ್ನ ರಾಜ್ಯದಲ್ಲಿ. ಶ್ರೀರಾಮನ ಅಯೋಧ್ಯೆ, ಶ್ರೀ ಕೃಷ್ಣನ ಬೃಂದಾವನ ಇರುವುದೇ ಅಲ್ಲಿ. ದಶಾವತಾರ ಗಳಿಗೆ ಉತ್ತರ ಭಾರತವೇ ತಾಯಿ ನೆಲ.' ಉತ್ತರ ಭಾರತ ಪವಿತ್ರ ಭೂಮಿ, ದಕ್ಷಿಣ ಭಾರತದಲ್ಲಿ ಏನೇನೂ ಇಲ್ಲ ಎಂಬುದನ್ನು ಒತ್ತಿ ಹೇಳಬೇಕೆಂಬುದೇ ಅವರ ಈ ಮಾತುಗಳ ಗುರಿ. ಅವರ ಮಾತಿನ ವ್ಯಂಗ್ಯ ನನಗೆ ಪೂರ್ತಿ ಅರ್ಥವಾಯಿತು.

ಆದರೆ ಏನು ಮಾತಾಡಬೇಕೋ ನನಗೆ ತೋಚದಾಯಿತು. ಎರಡು ಒಳ್ಳೆಯ ಮಾತಾಡಿ ಮುಗಿಸಬೇಕೆಂದು ಹೋಗಿದ್ದೆ. ಕೊನೆಗೆ ಸರಿಯಾದ ಉತ್ತರವೇ ತಕ್ಷಣ ಹೊಳೆಯಿತು. 'ತಾವು ಪವಿತ್ರ ಭೂಮಿಯಿಂದ ಬಂದಿರುವುದಾಗಿ ಡಾ. ಸಿಂಗ್ ಘೋಷಿಸಿಕೊಂಡಿದ್ದಾರೆ. ಭಾರತ ಒಂದೇ ಹೊರತು, ಎರಡಲ್ಲವೆಂಬ ಸತ್ಯವನ್ನೇಕೆ ಮರೆತರೋ ಗೊತ್ತಿಲ್ಲ. ಅವರೇನಾದರೂ ಉತ್ತರ ಭಾರತದ ಮಾನಸಿಕ ಪ್ರತಿನಿಧಿಯೆಂಬಂತೆ ಮಾತಾಡಿದರೋ, ತಿಳಿಯದು. ಇರಲಿ, ಭಗವದ್ಗೀತೆಯಲ್ಲಿ ಅವರ ಶ್ರೀಕೃಷ್ಣ ಏನು ಹೇಳಿದ್ದಾನೆಂಬುದನ್ನು ಮರೆತಂತಿದೆ.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನ ಮಧರ್ಮಸ್ಯ ಸಂಭವಾಮಿ ಯುಗೇ ಯುಗೇ

ಯಾವಾಗ ಎಲ್ಲಿ ಅಧರ್ಮ ಹೆಚ್ಚುತ್ತದೆಯೊ ಆಗ ಅಲ್ಲಿ ತಾನು ದುಷ್ಟ ಸಂಹಾರಕ್ಕಾಗಿ ಅವತರಿಸುವುದಾಗಿ ಹೇಳಿಲ್ಲವೆ? ಆದ್ದರಿಂದ ಅವನ ಅವತಾರ ಉತ್ತರದಲ್ಲಿ ಅವಶ್ಯವಾಗಿತ್ತೇ ಹೊರತು, ದಕ್ಷಿಣದಲ್ಲಲ್ಲ. ಡಾ. ಸಿಂಗ್‌ರವರು ಖಿಲ್ಜಿಗಳು ತುರುಷ್ಕರು ಮೊಗಲರು ಆಳಿದ ವಿಷಯವನ್ನೇ ಎತ್ತಲಿಲ್ಲ. ಅವರ ಸಂಪರ್ಕದಿಂದ ಏನೇನಾಯಿತೆಂಬುದನ್ನು ವಿವರಿಸಲಿಲ್ಲ. ಈ ಹೊತ್ತು ಹಿಂದೂ ಧರ್ಮ ಭರತ ಖಂಡದಲ್ಲುಳಿದಿರುವುದಕ್ಕೆ ವಿಜಯನಗರ ಸಾಮ್ರಾಜ್ಯವೇ ಕಾರಣವೆಂಬುದನ್ನು

ಮರೆತಿದ್ದಾರೆ. ಅಥವಾ ಅದು ದಕ್ಷಿಣದ ಇತಿಹಾಸವೆಂದು ತಿಳಿದು ಓದಲಿಲ್ಲವೋ ಏನೋ? ಭಗವದ್ಗೀತೆ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದು, ಭರತ ಖಂಡದಲ್ಲೆಲ್ಲಾ ಅವುಗಳ ಕೀರ್ತಿಯನ್ನು ಮೆರೆಸಿದ ಶಂಕರಾಚಾರ್ಯರು ದಕ್ಷಿಣದವರಲ್ಲವೆ? ಈವೊತ್ತಿಗೂ ಶಂಕರರಂತೆ ಹಿಂದೂ ಧರ್ಮದ ರಕ್ಷಕರರಾಗಿ ಸಂತ ರಾಮಾನುಜಾಚಾರ್ಯರು ಮಧ್ವಾಚಾರ್ಯರು ಎಲ್ಲಿಯವರು? ಬುದ್ಧನಂತೆ ಹಿಂದೂಧರ್ಮದ ನಾಳನಾಳಗಳಲ್ಲಿ ಹೊಸರಕ್ತವನ್ನು ಹೊಸ ಚೈತನ್ಯವನ್ನು ತುಂಬಿದ ಬಸವೇಶ್ವರರೂ ದಕ್ಷಿಣದವರು, ಕರ್ನಾಟಕದವರು. ಈ ವಿಚಾರಗಳನ್ನು ಸಿಂಗರು ಉತ್ತರದಲ್ಲಿ ಪ್ರಸಾರ ಮಾಡಿದ್ದಾದರೆ ಭರತ ಖಂಡದ ಐಕ್ಯಕ್ಕೆ ದೊಡ್ಡ ಕಾಣಿಕೆ ಸಲ್ಲಿಸುವಂತಾಗುತ್ತದೆ. ಅವರಿಗೆ ಶುಭವಾಗಲಿ.

ಸಮಾರಂಭದ ಅಂತ್ಯದಲ್ಲಿ ಅವರು ' ನನ್ನನ್ನು ನೀವು ತಪ್ಪು ತಿಳಿದುಕೊಂಡಿರುವಂತೆ ತೋರುತ್ತದೆ' ಎಂದವರು ಸವಿನಯರಾಗಿ ನುಡಿದರು. 'ನಿಮ್ಮನ್ನು ತಪ್ಪಾಗಿ ತಿಳಿದುಕೊಂಡಿಲ್ಲ. ನಿಮ್ಮ ಭಾಷಣವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಂಬ ವಿಶ್ವಾಸ ನನಗಿದೆ. ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ. ನಿಮ್ಮ ಭಾಷಣವನ್ನು ಟೀಕಿಸುವ ಉದ್ದೇಶವೇ ಇಲ್ಲ. ನಾನು ಹೇಳಿದ್ದೆಲ್ಲ ನಿಮ್ಮ ಭಾಷಣದ ಮುಂದಿನ ಭಾಗ ನಿಮ್ಮ ಭಾಷಣಕ್ಕೆ ಸೇರಿಸಿದ ಭಾಷ್ಯ. ಮತ್ತೇನೂ ಅಲ್ಲ. ಮೈಸೂರು ವಿಶ್ವವಿದ್ಯಾನಿಲಯವನ್ನಾಗಲಿ ಕರ್ನಾಟಕವನ್ನಾಗಲಿ ಮರೆಯಬೇಡಿ. ನಿಮ್ಮ ನಿವೃತ್ತ ಜೀವನ ಯಶಸ್ವಿಯಾಗಲಿ, ಶುಭಮಯವಾಗಲಿ.' ಎಂದು ನಾನವರ ಕೈ ಕುಲುಕಿದೆ.

ನನ್ನ ಸ್ವಭಾವವನ್ನು ತಿಳಿಯದ, ವಸ್ತುಸ್ಥಿತಿಯನ್ನರಿಯದ ಜನ ನನ್ನ ಮೇಲೆ ಜಾತೀಯತೆಯನ್ನು ಆರೋಪಿಸಿದ್ದಾರಾದರೂ, ಬಂಧು ಪಕ್ಷಪಾತದ ಆಪಾದನೆಯನ್ನು ಮಾಡಿಲ್ಲ. ನನ್ನ ಸಮಕಾಲೀನ ಬಂಧುಗಳಾರೂ ವಿದ್ಯಾವಂತರಲ್ಲ. ನನ್ನೊತ್ತಿನ ಪೀಳಿಗೆಯಲ್ಲಿ ಮೂರ್ನಾಲ್ಕು ಮಂದಿ ವಿದ್ಯಾವಂತರಾದರೂ ಅವರು ಸರ್ಕಾರಿ ಹುದ್ದೆಗಳಲ್ಲಿದ್ದಾರೆ. ವಿಶ್ವವಿದ್ಯಾನಿಲಯದ ಸೇವೆಗೆ ಬಂದವನು ನನ್ನ ಮಗ ಮಾತ್ರ. ಅವನು ಉದ್ದಕ್ಕೂ ಪ್ರಥಮ ದರ್ಜೆಯ- ನನ್ನಂಥಲ್ಲ: ನಾನು ದ್ವಿತೀಯ ದರ್ಜೆಯವನು - ವಿದ್ಯಾರ್ಥಿ, ಪಿ. ಎಚ್. ಡಿ ಪದವೀಧರ. ಸರ್ವಾರ್ಹತೆಯುಳ್ಳವನಿಗೆ ಒಂದು ಅಧ್ಯಾಪಕ ಹುದ್ದೆಯಾದರೂ ಬೇಡವೆ? ಅವನ ನೇಮಕಾತಿಯ ಅಥವಾ ಬಡ್ತಿಯ ಸಮಯದಲ್ಲಿ ನಾನು ಆಯ್ಕೆ ಸಮಿತಿಯಲ್ಲಿ ಕೂರುತ್ತಿರಲಿಲ್ಲ. ಅವನು ಯಾವಾಗಲೂ ಸ್ವಂತ ಕಾಲ ಮೇಲೆ ನಿಂತವನೇ ಹೊರತು ನನ್ನ ಸಹಾಯ ಕೋರಿದವನಲ್ಲ, ಚುನಾವಣೆಯ ಸಮಯ ಬಿಟ್ಟರೆ. ಪಿಯುಸಿ ನಂತರ ಅವನು ವೈದ್ಯ ಕಾಲೇಜಿಗೆ ಸೇರಬೇಕೆಂಬುದು ನನ್ನ ಆಶಯ. ಆಗೋಲ್ಲ ಎಂದ. ಇಂಜಿನಿಯರಿಂಗ್-ಉಹ್ಞೂ ಎಂದ. ನಿನ್ನಿಷ್ಟ ಎಂದೆ. ನನಗೆ ಭೌತವಿಜ್ಞಾನದ ಅ ಆ ಇ ಈ ಯೂ ಗೊತ್ತಿಲ್ಲ. ಅದ್ದರಿಂದ ಅವನಿಗೆ ಮಾರ್ಗದರ್ಶನ ಮಾಡುವ ಯೋಗ್ಯತೆಯಾಗಲಿ ವ್ಯವಧಾನವಾಗಲಿ ನನಗಿರಲಿಲ್ಲ. ಕೆ. ಎಸ್. ಹೆಗ್ಡೆಯವರು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ದಿನ ನಮ್ಮ ಮನೆಗೆ ಸಪತ್ನೀಕರಾಗಿ ಬಂದು 'ನನಗೆ ನಿಮ್ಮ ಮಾರ್ಗದರ್ಶನ ಬೇಕು' ಎಂದರು ಅಗಲೆಂದೆ. ಅದರೆ 'ಅವರು ಫೋನಿನಲ್ಲಿಯೂ ನನ್ನನ್ನು ಸಂಪರ್ಕಿಸಲಿಲ್ಲ.

ಶಂಕರಗೌಡರೊಮ್ಮೆ ಯಾರಿಗೋ ಶಿಫಾರಸು ಮಾಡುವ ಸಲುವಾಗಿ ನನ್ನನ್ನೊಮ್ಮೆ ಅವರ ಬಳಿಗೆ ಕರೆದುಕೊಂಡು ಹೋದರು. ಶಂಕರ ಗೌಡರು ಮಾತು ಮುಗಿಸಿದ ನಂತರ ಹೆಗ್ಡೆಯವರು ನನ್ನ ಕಡೆ ತಿರುಗಿಕೊಂಡು ' ನಾನಿಲ್ಲಿಗೆ ಬಂದಾಗ ಜನ ನಿಮ್ಮ ಬಗ್ಗೆ ಏನೇನೋ ಹೇಳಿದರು. ಅದರಿಂದಾಗಿ ನಾನು ನಿಮ್ಮ ಬಳಿ ಮತ್ತೆ ಬರಲಿಲ್ಲ. ಕಾಲಕ್ರಮೇಣ ನಿಜಾಂಶ ಗೊತ್ತಾಯಿತು. ವಿಶ್ವವಿದ್ಯಾನಿಲಯಕ್ಕೆ ನೀವು ದುಡಿದಷ್ಟು ಮತ್ತಾರೂ ದುಡಿದಿಲ್ಲ. ನಿಮ್ಮ ಮಗನ ಸಂಶೋಧನಾಸಕ್ತಿಯನ್ನು ಅವರು ಸಾಧಿಸಿರುವ ಸಿದ್ಧಿಯನ್ನು ಕೇಳಿ ನಾನು ಸಂತೋಷ ಪಟ್ಟಿದ್ದೇನೆ. ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಸರಿಗಟ್ಟುವ ವಿದ್ವಾಂಸರು ಕಡಮೆ' ಎಂದು ನುಡಿದರು. ಶಂಕರ ಗೌಡರು ನನ್ನ ಕೈ ಕುಲುಕಿದರು. ಅವನು ನೊಬೆಲ್ ಪ್ರಶಸ್ತಿ ವಿಜೇತ ಕಿಟ್ಟೆಲ್‌ನ ಸಾವಿರ ಪುಟದ ಗ್ರಂಥವನ್ನು ಭಾಷಾಂತರಿಸಿದ್ದಾನೆ. ಅವನ ಸಂಶೋಧನಾ ಲೇಖನಗಳ ಸಂಖ್ಯೆ 250ಕ್ಕೂ ಹೆಚ್ಚಾಗಿದೆ. ಆದರೂ ಅವನ ಒಬ್ಬಿಬ್ಬರು ಹಿರಿಯ ಸಹೋದ್ಯೋಗಿಗಳಿಗೆ- ವಯಸ್ಸಿನಿಂದ ಮಾತ್ರವೇ ಹೊರತು ಸಾಧನೆ ಸಿದ್ಧಿಗಳಿಂದಲ್ಲ, ಸೇವಾ ಜ್ಯೇಷ್ಠತೆಯಿಂದಲೂ ಅಲ್ಲ-ಅವನನ್ನು ಕಂಡರಾಗದು. ಯಾರು ಕುಲಪತಿಯಾಗಿ ಬಂದರೂ ಅವನ ವಿದ್ವತ್ತನ್ನು ಪ್ರಸ್ತಾಪಿಸದೆ 'ಪ್ರಸಾದ್ ಅವರಪ್ಪನ ಬಲದಿಂದ ನಮಗಿಂತ ಸೀನಿಯರ್ ಆದ' ಎಂದವರು ಅಪಪ್ರಚಾರ ಮಾಡುತ್ತಾರೆ.

ಡಾ. ಸೆಲ್ವಿದಾಸರು ಕುಲಪತಿಯಾದ ನಂತರ ಸುಮಾರು ಎರಡೂವರೆ ವರ್ಷಕಾಲ -ಆ ಮಧ್ಯೆ ಒಮ್ಮೆ ಮಾತ್ರ ಒಂದೇ ವೇದಿಕೆಯ ಮೇಲೆ ಸೇರಿದ್ದೆವೆಂಬ ನೆನಪು -ನಮ್ಮಿಬ್ಬರ ನಡುವೆ ಯಾವ ವಿಧವಾದ ಸಂಪರ್ಕವೂ ಇರಲಿಲ್ಲ. ಒಂದು ದಿನ ಕ್ರಾಫರ್ಡ್ ಭವನದಲ್ಲಿ ನನ್ನ ಮಗನನ್ನು ಸಂಧಿಸಿದಾಗ ಅವರು ಅವನ ಕೈಕುಲುಕಿ'ನೀವು ಉತ್ತಮ ಸಂಶೋಧಕರೆಂದು ತಿಳಿಯಿತು. ನಿಮ್ಮ ತಂದೆಯನ್ನು ನೋಡಬೇಕಲ್ಲ' ಎಂದರಂತೆ. ಆ ವಿಷಯ ತಿಳಿದಾಗ ನಾನೇ ಅವರಿಗೆ ಫೋನುಮಾಡಿ, ಉಪಾಹಾರಕ್ಕೆ ಆಹ್ವಾನಿಸಿದೆ. ಬಂದರು. ಸ್ನೇಹವರ್ಷವನ್ನೇ ಕರೆದರು. ಸವಿದರು. ಮಾತಾಡಿದರು: 'ನೀವು ಜಾತಿಪಕ್ಷಪಾತಿಯಂತೆ, ಬಂಧು ಪಕ್ಷಪಾತಿಯಂತೆ. ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅರ್ಹರು ಅನರ್ಹರೆಂಬ ಭೇದವಿಲ್ಲದೆ ನಿಮ್ಮ ಜಾತಿಯವರನ್ನೆಲ್ಲ ವಿಶ್ವವಿದ್ಯಾನಿಲಯದಲ್ಲಿ ತುಂಬಿಬಿಟ್ಟಿರಂತೆ. ನಿಮ್ಮ ಬಲದಿಂದ, ನಿಮ್ಮ ಮೆಹನತ್ತಿನಿಂದ ನಿಮ್ಮ ಮಗ ತನ್ನ ಉಪಾಧ್ಯಾಯರನ್ನು ಕೆಳಗೆ ಹಾಕಿ ಮೇಲೆ ಬಂದು ಬಿಟ್ಟರಂತೆ. ಇದೆಲ್ಲ ಕೇಳಿ ನನ್ನ ಕಿವಿ ಕಿವುಡಾದುವು. ಹೇಳಿದವರು ಯಾರೆಂದು ತಿಳಿದಿದ್ದೀರಿ? ನನ್ನ ಬಳಿಯಿರುವ ಕುಲ ಸಚಿವರು' ಎಂದರು ' ನಿಮ್ಮ ಅವಧಿಯಲ್ಲಿ ಅದನ್ನೆಲ್ಲ ಪರಿಶೋಧಿಸಬಹುದಿತ್ತಲ್ಲ?' ಎಂದು ನಾನು ನಡುವೆ ಬಾಯಿಹಾಕಿದೆ. ' ಪರಿಶೋಧನೆ ನಡೆಸಿದೆ, ಸಾರ್. ಇಡೀ ವಿಶ್ವವಿದ್ಯಾನಿಲಯದಲ್ಲಿ ಗುಮಾಸ್ತರೂ ಜವಾನರೂ ಸೇರಿ ನಿಮ್ಮವರಾಗಿ ಹೆಚ್ಚೆಂದರೆ ಮೂವತ್ತು ಮೂವತ್ತೈದು ಜನರಿರಬಹುದು. ಈ ಸಂಖ್ಯೆಯಲ್ಲಿ ನಿಮಗಿಂತ ಹಿಂದಿನ ಕುಲಪತಿಗಳೂ ಮಾಡಿದ ನೇಮಕಗಳಿವೆ' ಎಂದರು. ' ಆ ಬಗ್ಗೆ ನನಗೆ ಯೋಚನೆಯಿಲ್ಲ. ನನ್ನ ಮಗ ....' ಕೂಡಲೇ ಡಾ. ಸೆಲ್ವಿದಾಸರು ನನ್ನ ಮಾತಿಗೆ ತಡೆಯೊಡ್ಡಿ ಅದನ್ನೇ ಹೇಳಬೇಕೆಂದು ಬಂದದ್ದು ಎಂದು ತಮ್ಮ

ಮಾತು ಮುಂದುವರಿಸಿದರು' ಮೊನ್ನೆ ಮಥುರೆಯ ಅಮೆರಿಕಾ ಕಾಲೇಜಿಗೆ ಹೋಗಿದ್ದೆ. ಅಲ್ಲಿ ಅಮೆರಿಕೆಯಿಂದ ಬಂದಿರುವ ಭೌತವಿಜ್ಞಾನದ ತಜ್ಞ ಡಾ. ರೀಜ್ ಅವರ ಪರಿಚಯವಾಯಿತು. ಅವರು ತಮ್ಮ ಪ್ರಯೋಗ ಮಂದಿರಕ್ಕೆ ನನ್ನನ್ನು ಕರೆದೊಯ್ದು ಜೋಡಣೆಯ ಹಂತದಲ್ಲಿದ್ದ ಒಂದು ಉಪಕರಣವನ್ನು ತೋರಿದರು. ಅದರ ಸ್ವರೂಪ ಪ್ರಯೋಜನ ಮೌಲ್ಯಗಳನ್ನು ವಿವರಿಸಿದರು. "ಇದರ ಯೋಜನೆಯ ಪ್ರವರ್ತಕರರಾರು ಗೊತ್ತೆ? ಅವರು ನಿಮ್ಮವರು. ನಿಮ್ಮ ಭೌತವಿಜ್ಞಾನ ಇಲಾಖೆಯಲ್ಲಿದ್ದಾರೆ. ಅವರೇ ಶಶಿಧರ ಪ್ರಸಾಥ್ ತುಂಬ ಬುದ್ಧಿವಂತರು. ಇದನ್ನು ರೂಪಿಸಿದವರೇ ಅವರು. ಅವರಿಗೆ ನಾನು ಸಹಾಯ ಮಾಡುತ್ತಿದ್ದೇನಷ್ಟೆ. ಇಷ್ಟರಲ್ಲೇ 50-60 ಲಕ್ಷ ಬೆಲೆ ಬಾಳುವ ಇದು ನಿಮ್ಮ ವಿಶ್ವವಿದ್ಯಾನಿಲಯಕ್ಕೆ ಬರುತ್ತದೆ' ಎಂದರು. ನನ್ನನ್ನು ನಾನು ನಂಬುವುದೆ ಕಷ್ಟವಾಯಿತು. ಜನ ಹರಡುವ ಚಾಡಿಗೂ ಮಿತಿ ಬೇಡವೆ?'. 'ಹೌದು ತಾಯಿ. ಜನರ ನಾಲಗೆಗೆ ಮೂಳೆಯಿಲ್ಲ. - ಯಾವ ಕಡೆಗೆ ಬೇಕಾದರೂ ಹೊರಳಬಹುದು. ನನಗೆ ಜಾತೀಯತೆಯ ಪಟ್ಟಕಟ್ಟುವ ಜನರೇ ಮಹಾಜಾತಿ ಸಾರ್ವಭೌಮರು. ಅವರು ಪೂರ್ವಗ್ರಹಪೀಡಿತರಾಗಿ, ಜಾತ್ಯಂಧರಾಗಿ ತಮಗಾಗದ ಜಾತಿಗಳನ್ನು ತುಳಿಯುತ್ತಿದ್ದಾರೆ. ಅರ್ಹರು ಅನ್ಯಜಾತಿಯವರಾದರೆ ಪಾತಾಳಕ್ಕೆ ತುಳಿಯುತ್ತಾರೆ. ಸ್ವಜಾತಿಯವನಾದರೆ ಅನರ್ಹರಾದರೂ ಪಟ್ಟ ಕಟ್ಟುತ್ತಾರೆ. ಸೇವಾ ಜ್ಯೇಷ್ಠತೆಯವಿಷಯ ಒಂದು ಮಾತು ಹೇಳಬೇಕು. ನನ್ನ ಮಗ ಮೊದಲೇ ಪಿ. ಎಚ್. ಡಿ. ಮಾಡಿಕೊಂಡಿದ್ದರಿಂದ ಇಲಾಖೆಗೆ ನೇರವಾಗಿ ನೇಮಕಗೊಂಡ. ಕೆಲವರು ಯುವ ರಾಜಾ ಕಾಲೇಜಿನಲ್ಲಿದ್ದವರು. ತಮಗಾಗಿ ಕಾಲ ಕಾಯುತ್ತದೆಂದುಕೊಂಡು ಪರಿಬರಿಯಿಲ್ಲದೆ ತೂಕಡಿಸುತ್ತ - ಅವರು ನನ್ನಂಥವರು - ನಿದಾನವಾಗಿ ಪಿ. ಎಚ್‌ಡಿ ಮಾಡಿಕೊಂಡು, ಅನಂತರ ಸ್ನಾತಕೋತ್ತರ ಇಲಾಖೆಗೆ ಬಂದವರು. ಸೇವಾಜ್ಯೇಷ್ಠತೆಯ ನಿಯಮಗಳನ್ನು ನಾನು ನಿಮ್ಮಂಥ ತಿಳಿದವರಿಗೆ ವಿವರಿಸಬೇಕಾಗಿಲ್ಲ'. ಎಂದು ನಾನು ಸತ್ಯವನ್ನು ಬಿಚ್ಚಿದಾಗ ' ಬಿಡಿ ಸಾರ್ ಚಾಡಿಗೂ ಒಂದು ಮಿತಿ ಇರಬೇಕು. ಚಾರಿತ್ರ್ಯಹನನದ ತನಕ ಅದನ್ನು ಬೆಳೆಸಬಾರದು' ಎಂದವರು ನುಡಿದರು. ' ಅಯ್ಯೋ ತಾಯಿ, ಇಂಥ ತಳಬುಡವಿಲ್ಲದ ಆಪಾದನೆಗಳನ್ನು ಹೊತ್ತು ತಲೆ ಬೋಳಾಗಿದೆ. ಮನಸ್ಸು ಜಡ್ಡುಗಟ್ಟಿದೆ. ಒಂದೊಮ್ಮೆ ಒಬ್ಬರು ವಯಸ್ಸಿನಲ್ಲಿ ಸೇವೆಯಲ್ಲಿ ಹಿರಿಯರು. ಮೂರನೆಯ ದರ್ಜೆ ಆನರ್ಸ್, ಎರಡನೆಯ ದರ್ಜೆಯ ಎಂಎ; ಮತ್ತೊಬ್ಬರು ವಯಸ್ಸು ಸೇವೆಗಳಲ್ಲಿ ತುಂಬ ಕಿರಿಯರು; ವಿದ್ಯಾರ್ಥಿದಶೆಯಲ್ಲಿ ಉದ್ದಕ್ಕೂ ಪ್ರಥಮ ದರ್ಜೆ. ಆದರೆ ಮೊದಲನೆಯವರು ಎರಡನೆಯವರಿಗಿಂತ ಪ್ರತಿಭಾವಂತರು, ಬುದ್ಧಿವಂತರು, ಶ್ರೇಷ್ಠ ವಿದ್ವಾಂಸರು, ಅವರಿಗೆ ಅರ್ಜಿ ಹಾಕಿದ ಹುದ್ದೆ ಸಿಗಲಿಲ್ಲ. ಕುಲಪತಿಗಳ ವಾದದ ಮುಂದೆ ನನ್ನ ವಾದ ನಡೆಯಲಿಲ್ಲ. ಒಳಗುಟ್ಟನ್ನರಿಯದ, ಅರಿತರೂ ನಂಬದ ಜನ ನನಗೆ ಜಾತೀಯತೆಯ ಆರೋಪ ಹೊರಿಸಿ ಬಯ್ದರು. ಬಿದ್ದವರು ಅಂದು ನಿಂದಿಸಿದರೆ, ಅಂದು ಗೆದ್ದವರು ಇಂದು ನನಗೆ ಶಾಪ ಹಾಕುತ್ತಿದ್ದಾರೆ' ಎಂದು ನನ್ನ ಕರ್ಮದ ಪಾಂಗನ್ನು ವಿವರಿಸಿದಾಗ 'ಅದೆಲ್ಲ ಸಮಾಜದಲ್ಲಿ ಇದ್ದದ್ದೆ. ಬಿಡಿ ಸಾರ್' ಎಂದವರು ನಮ್ಮನ್ನೆಲ್ಲ ಭೋಜನಕ್ಕೆ ಆಹ್ವಾನಿಸಿ ಮರಳಿದರು.

ಅವರೊಮ್ಮೆ ರಜೆ ತೆಗೆದುಕೊಂಡಿದ್ದರು. ನನ್ನ ಮಗನನ್ನು ಇನ್‌ಚಾರ್ಜ್ ಕುಲಪತಿ ಮಾಡಿಹೋಗಿದ್ದರು. ಸೇಡಿನ ಪುತ್ತವಾದ ನನ್ನ ಮಾಜಿ ಗೆಳೆಯರೊಬ್ಬರು ಅವರನ್ನು ಕಂಡು 'ನೋಡ್ರಮ್ಮ. ಒಂದು ತಪ್ಪು ಮಾಡಿದ್ದೀರಿ. ಪ್ರಸಾದ್‌ನನ್ನು ನಿಮ್ಮ ಸ್ಥಾನದಲ್ಲಿರಿಸಿ ಹೋಗಬಾರದಿತ್ತು' ಎಂದು ಕೇಳಿದರಂತೆ 'ಅವರನ್ನು ಕಾನೂನಿಗನುಸಾರವಾಗಿ ನೇಮಿಸಿದ್ದೇನೆ' ಎಂದು ಸೆಲ್ವಿಯವರು ಉತ್ತರಿಸಿದರಂತೆ. ಈ ವಿಷಯವನ್ನೂ ನನಗೆ ತಿಳಿಸಿದವರೂ ಅವರೇ

ಕನ್ನಡ ನಾಡಿನ ಚಳುವಳಿಗಾರರೆಲ್ಲರೂ ನಾಡು ನಾಡಿಗಳಿಗೆ ಅಪಾರ ಸೇವೆ ಸಲ್ಲಿಸಿದ್ದಾರೆಂಬುದರಲ್ಲಿ ಭಿನ್ನಾಭಿಪ್ರಾಯವೇ ಇರಲಾರದು. ಅವರಿಲ್ಲದಿದ್ದರೆ ಕನ್ನಡಕ್ಕೇನು ಇಂದು ಮನ್ನಣೆ ಸಂದಿದೆಯೋ ಅದು ಖಂಡಿತವಾಗಿಯೂ ಲಭಿಸುತ್ತಿರಲಿಲ್ಲ. ಆದರೆ ಅವರೆಲ್ಲರೂ ಒಟ್ಟುಗೂಡಿ ವ್ಯವಸ್ಥಿತವಾಗಿ ಸಂಘಟನೆ ಮಾಡಿಕೊಂಡಿದ್ದರೆ ಈ ದಿನ ಅವರೇ ರಾಜ್ಯಭಾರ ಮಾಡಬಹುದಿತ್ತು. ಅವರು ಒಟ್ಟುಗೂಡದಿದ್ದುದು ನಾಡಿನ ದುರ್ದೈವ. ಪ್ರತಿಯೊಬ್ಬರದೂ ಸರ್ವಾಧಿಕಾರೀ ಮನೋಭಾವನೆ.

ಕನ್ನಡ ಶಕ್ತಿ ಕೇಂದ್ರವೂ ಅದೇ ವರ್ಗಕ್ಕೆ ಸೇರಿದ್ದು. ಕೇಂದ್ರಕ್ಕಿಂತ ಮಿಗಿಲಾಗಿ ಅದರ ಅಧ್ಯಕ್ಷರಾಗಿರುವ ಡಾ. ಚಿದಾನಂದ ಮೂರ್ತಿಯವರದೂ ಅದೇ ಸ್ವಭಾವ. ಅವರು ನಮ್ಮ ಶ್ರೇಷ್ಠ ವಿದ್ವಾಂಸರಲ್ಲೊಬ್ಬರು. ಅವರ ಕನ್ನಡ ಅಭಿಮಾನದ ಬಗ್ಗೆ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಅವರು ಜನರನ್ನು ನಡೆಸಿಕೊಳ್ಳುವ ಬಗ್ಗೆ ಮಾನವೀಯತೆ ಇದ್ದಂತೆ ತೋರುವುದಿಲ್ಲ. ಪ್ರಜಾಸತ್ತೆಯಲ್ಲಿ ಅವರಿಗೆ ನಂಬಿಕೆಯಿಲ್ಲ. ವಿರೋಧಾಭಿಪ್ರಾಯವನ್ನು ಧಿಕ್ಕರಿಸುವುದು ಪ್ರಜಾಸತ್ತೆಯ ಲಕ್ಷಣವಲ್ಲ.

ಕನ್ನಡ ಶಕ್ತಿ ಕೇಂದ್ರದ ಸಭೆಗಳಿಗೆ ಆಗಾಗ್ಗೆ ಅವರು ನನ್ನನ್ನೂ ಕರೆಯುತ್ತಿದ್ದರು. ತಾವು ಹೇಳಿದ್ದೇ ಸರಿಯೆಂಬ, ಅದನ್ನು ಸರ್ವರೂ ಒಪ್ಪಿಕೊಳ್ಳಬೇಕೆಂದು ಬಲವಂತ ಮಾಡುತ್ತಾರೆಂಬ ವಿಷಯ ನನಗೆ ತಿಳಿದಿತ್ತು. ಅದರಿಂದಾಗಿ ನಾನು ಆ ಸಭೆಗಳಿಗೆ ಹೋಗುತ್ತಿರಲಿಲ್ಲ. 'ತನಗೆ ಮನ್ನಣೆ ದೊರೆಯದಲ್ಲಿಗೆ ಪೋಪವನು ಕಡುಮೂರ್ಖ ನೆನಿಸುವನು ಎಂಬ ಸೂತ್ರ ನನಗೆ ತುಂಬ ಮೆಚ್ಚುಗೆಯಾದದ್ದು.

ಹಳ್ಳಿಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆಯಲು ಸನ್ನಾಹ ನಡೆಯುತ್ತಿದ್ದ ಕಾಲದಲ್ಲಿ ಸಭೆ ಕರೆದು ನಾನು ಬರಲೇ ಬೇಕೆಂದು ಒತ್ತಾಯ ಮಾಡಿದ್ದರಿಂದ ನಾನು ಹೋದೆ, ಪ್ರಾಯಶಃ ಭಾರಿ ಚಳುವಳಿ ನಡೆಸಬೇಕಾದೀತೇನೋ ಎಂದು. ಇಂಗ್ಲಿಷ್ ಮಾಧ್ಯಮದ ಶಾಲೆಗಳ ಬಗ್ಗೆ ನಿರ್ಣಯ ಮಾಡಿದ ನಂತರ, ವೈದ್ಯ ವಿಜ್ಞಾನ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವಾಗುವಂತೆ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ನಾನು ಐದು ನಿಮಿಷ ಮಾತಾಡಿದೆ. ತಮ್ಮ ಅನುಮೋದನೆಯಿದೆ ಎಂಬಂತೆ ಸದಸ್ಯರು ಕೈಚಪ್ಪಾಳೆ ಕುಟ್ಟಿದರು. ತದ ನಂತರ ಚಿದಾನಂದ ಮೂರ್ತಿಗಳು, 'ವೈದ್ಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ಸದ್ಯಕ್ಕೆ ಸಾಧ್ಯವಿಲ್ಲ. ಇನ್ನೂ ಇಪ್ಪತ್ತೈದು ವರ್ಷ ಬೇಕು ಎಂದರು. ಅವರ ಮಾತಿಗೂ ಕೈ ಚಪ್ಪಾಳೆ ಮಸಗಿದುವು.

ಆ ಬಗ್ಗೆ ನಾನು ಮಂಡಿಸಿದ ವಾದವಿಷ್ಟು: ಕನ್ನಡ ಸರ್ವಮಾಧ್ಯಮವಾಗುವ ತನಕ ಕನ್ನಡದ ಸ್ಥಾನ ಭದ್ರವಾಗುವುದಿಲ್ಲ. ಹಿಂದಿ ತನ್ನ ಕೆನ್ನಾಲಗೆಯನ್ನು ಎಲ್ಲಾ ಕಡೆ ಚಾಚುವ ಹೊತ್ತಿಗೆ ಕನ್ನಡ ಪ್ರಬಲವಾಗಿ ಬೆಳೆಯಬೇಕಾಗಿದೆ. ಅದಕ್ಕೆ ಸರ್ವಮಾಧ್ಯಮವೊಂದೇ ರಾಮಬಾಣ. ಪಿಯುಸಿ ತರಗತಿಗಳಿಗೆ ಕನ್ನಡವನ್ನು ಕಡ್ಡಾಯಗೊಳಿಸಬೇಕಾದರೆ, ವೈದ್ಯ ವಿಜ್ಞಾನ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ಅನಿವಾರ್ಯವಾಗಿ ಜಾರಿಗೆ ತರಬೇಕಾಗುತ್ತದೆ. ಇಲ್ಲ, ಪಿಯುಸಿಯಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುವ ಹಕ್ಕು ನಮಗಿಲ್ಲ. ಈ ಹೊತ್ತು ನಾವು ಚಳುವಳಿ ಪ್ರಾರಂಭಿಸಿದ್ದಾದರೆ, ಹದಿನೈದು ವರ್ಷಗಳ ನಂತರ ಕನ್ನಡ ಮಾಧ್ಯಮ ಜಾರಿಗೆ ಬಂದೀತು. ಅದರಿಂದ ಹಲವು ಸಮಸ್ಯೆಗಳು ಬಗೆಹರಿದಾವು ? ಸದಸ್ಯರು ಕೈ ಚಪ್ಪಾಳೆ ತಟ್ಟುತ್ತಿದ್ದರೇ ಹೊರತು ವಾದಮಾಡುತ್ತಿರಲಿಲ್ಲ. ಆಬಗ್ಗೆ ನಿರ್ಣಯಮಾಡಿ ಸರ್ಕಾರಕ್ಕೆ ಕಳಿಸಿದ್ದರೆ ಆಕಾಶ ಕಳಚಿ ಬೀಳುತ್ತಿರಲಿಲ್ಲ.

ಆ ಮೇಲೆ ಅವರು ಮತ್ತು ಸದಸ್ಯರು, ' ನಾಳೆ ಮುಖ್ಯ ಮಂತ್ರಿಗಳ ಭೇಟಿಗಾಗಿ ಹೋಗುತ್ತೇವೆ. ನೀವು ಜತೆ ಬರಲೇಬೇಕು' ಎಂದು ನನ್ನನ್ನು ಒತ್ತಾಯ ಪಡಿಸಿದರು. ಮುಖ್ಯಮಂತ್ರಿಗಳ ಕಚೇರಿಯ ಮುಂದಣ ದಿವಾನಖಾನೆಯಲ್ಲಿ ಕುಳಿತಿದ್ದಾಗ ಮೂರ್ತಿಗಳು ಟೈಪಾಗಿದ್ದ ಮನವಿಯೊಂದನ್ನು ನನ್ನ ಮುಂದಿರಿಸಿ ' ಇದಕ್ಕೆ ರುಜು ಮಾಡಿ ಎಂದರು. ಅದರಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಯ ವಿಷಯವೇ ಮೊದಲನೆಯದಾಗಿತ್ತು. ಆ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯವಿದ್ದೇ ಇತ್ತು. ಒಂದು 1) ಎಲ್ಲಿಯೋ ಒಂದು ತಮಿಳು ವಿಶ್ವವಿದ್ಯಾನಿಲಯವಿದೆ ಎಂದು ಅದನ್ನು ಕಾಪಿ ಮಾಡಬೇಕಾಗಿಲ್ಲ; ಎರಡು 2) ಕನ್ನಡ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಕನ್ನಡದ ವಿಶ್ವವಿದ್ಯಾನಿಲಯಗಳಾಗಬೇಕು. ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ನನ್ನ ಅಭ್ಯಂತರವಿಲ್ಲ; ಆದರದನ್ನು ಕನ್ನಡ ವಿಶ್ವವಿದ್ಯಾನಿಲಯವೆಂದು ಕರೆಯಬಾರದು. ಆ ಕಾರಣಕ್ಕಾಗಿ ನಾನು ಆ ಮನವಿಗೆ ರುಜು ಮಾಡಲಾರೆನೆಂದೆ. ಸರಿ, ನನ್ನ ಕೈಯಿಂದ ಆ ಪತ್ರವನ್ನು ಕಿತ್ತುಕೊಂಡರು. ಮತ್ತೆ ಅವರು ನನ್ನ ಬಳಿ ಬಂದು, ' ಮುಖ್ಯ ಮಂತ್ರಿಗಳು ಕನ್ನಡ ವಿಶ್ವವಿದ್ಯಾನಿಲಯದ ಬಗ್ಗೆ ನಿಮ್ಮ ಅಭಿಪ್ರಾಯ ಕೇಳಿದರೆ ಏನು ಹೇಳುತ್ತೀರಿ? ' ಎಂದು ಕೇಳಿದರು. ನನ್ನ ನಿಲುವನ್ನು ಸ್ಪಷ್ಟಪಡಿಸುತ್ತೇನೆಂದೆ. ' ಹಾಗಾದರೆ ನೀವು ಮುಖ್ಯ ಮಂತ್ರಿಗಳಲ್ಲಿಗೆ ಬರಬೇಕಾಗಿಲ್ಲ 'ಎಂದರು. ಅವರ ಮಾತಿನಲ್ಲಿ ಸರ್ವಾಧಿಕಾರೀ ಮನೋಭಾವವಿತ್ತೇ ಹೊರತು ವಿನಯವಿರಲಿಲ್ಲ. ಇಪ್ಪತ್ತು ನಾಲ್ಕು ಗಂಟೆಗಿಂತಲೂ ಹೆಚ್ಚಾಗಿ ನನ್ನನ್ನು ಬೆಂಗಳೂರಿನಲ್ಲಿ ಕಾಯಿಸಿ ಅವರು ನನ್ನನ್ನು ಅವಮಾನ ಪಡಿಸಿದರು. ನನ್ನೊಬ್ಬನ ಮಾತಿಗೆ ಮುಖ್ಯಮಂತ್ರಿಗಳು ಹೆಚ್ಚು ಬೆಲೆ ಕೊಡುತ್ತಾರೆಂದು ಅವರು ಹೆದರಿದರೇನೊ ಎಂದು ನನಗನ್ನಿಸಿತು. ಆದರೂ ವಿದ್ಯಾವಂತರು ಸಭ್ಯತೆ ಮರೆಯಬಾರದು.

ಮೈಸೂರಿಗೆ ಹಿಂದಿರುಗಿದ ನಂತರ 21.9.90 ರಂದು ನಾನವರಿಗೊಂದು ಪತ್ರ ಬರೆದು, ಅವರ ಉದ್ಧಟತನವನ್ನು ವಿನಯ ಪೂರ್ವಕವಾಗಿಯೇ ಎತ್ತಿ ತೋರಿಸಿದೆ. 22.9.90 ರಂದು ಅವರು ನನಗೊಂದು ಪತ್ರ ಬರೆದು (ನನ್ನ ಕಾಗದ ಅವರಿಗಿನ್ನೂ

ತಲುಪಿರಲಿಲ್ಲವೆಂದು ತೋರುತ್ತದೆ) ಕನ್ನಡ ವಿಶ್ವವಿದ್ಯಾನಿಲಯದ ಅಗತ್ಯವನ್ನು ವಿವರಿಸಿ, ತಮ್ಮ ಸಂಘ ಬಿದರ್‌ನಲ್ಲಿ ನಡೆಸುವ ಸಮ್ಮೇಳನದ ಅಧ್ಯಕ್ಷತೆ ವಹಿಸುವಂತೆ ಕೇಳಿಕೊಂಡಿದ್ದರು. ಆದರೆ ನನ್ನ ಭಾಷಣದಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ವಿರೋಧಿಸಕೂಡದೆಂದು ಸ್ಪಷ್ಟಪಡಿಸಿದ್ದರು. 'ಇಷ್ಟನ್ನು ಮಾತ್ರ ಹೇಳಿ, ಮತ್ತೇನೂ ಹೇಳಬೇಡಿ' ಎಂದು ಪ್ರಧಾನಿ ಅಧ್ಯಕ್ಷನಿಗೆ ಆಜ್ಞೆ ಮಾಡುವಂತೆ, ಆತ್ಮ ಗೌರವವಿದ್ದವನು ಅಂಥ ಅಧ್ಯಕ್ಷ ಪದವಿಯನ್ನೊಪ್ಪಿಕೊಳ್ಳಲಾರ. ನಾನವರಿಗೆ ಸೂಕ್ತ ಉತ್ತರ ಬರೆದು, ಅವರ ಆಹ್ವಾನವನ್ನು ನಿರಾಕರಿಸಿದೆ.

ಈ ವಿಷಯದ ಬಗೆಗಾಗಲಿ, ಮೂರ್ತಿಯವರ ಬಗೆಗಾಗಲಿ ಹೆಚ್ಚು ಹೇಳಬೇಕಾಗಿಲ್ಲ. ಮುಂದೆ ಅಚ್ಚು ಮಾಡಿರುವ ಪತ್ರವ್ಯವಹಾರವೇ ನನ್ನ ಮತ್ತು ಅವರ ನಡತೆಗೆ ಕನ್ನಡಿ ಹಿಡಿಯುತ್ತವೆ. ಆ ಪತ್ರಗಳನ್ನೋದಿದವರಿಗೆ ನಮ್ಮಿಬ್ಬರ ಸ್ವಭಾವವೂ ಅರ್ಥವಾಗದಿರುವುದಿಲ್ಲ.

ಗೆ,

ಪ್ರೊ. ಎಂ. ಚಿದಾನಂದ ಮೂರ್ತಿಯವರು

ಬೆಂಗಳೂರು ವಿಶ್ವವಿದ್ಯಾನಿಲಯ

ಬೆಂಗಳೂರು 560 056

ಪ್ರಿಯ ಡಾ. ಚಿದಾನಂದ ಮೂರ್ತಿಯವರಲ್ಲಿ ಜವರೇಗೌಡನ ವಿಜ್ಞಾಪನೆಗಳು.

1948 ರಲ್ಲಿ ನಾನು ಕನ್ನಡ ಚಳುವಳಿಯಲ್ಲಿ ಧುಮುಕಿದ್ದು. ಆಗ ಕೆಲವು ದಿನ ಅ. ನ. ಕೃಷ್ಣರಾಯರ ಹಿಂದೆ ಓಡಾಡುತ್ತಿದ್ದೆ. 1949ರಲ್ಲಿ ಮೈಸೂರಿಗೆ ಬಂದ ನಂತರ ಕುವೆಂಪು ಅವರಿಂದ ಪ್ರೋತ್ಸಾಹಿತನಾಗಿ ನನಗೆ ತೋರಿದಂತೆ ಚಳುವಳಿಯನ್ನು ತೀವ್ರಗೊಳಿಸಿ, ಆಗಿನ ಸರ್ಕಾರದ ಅವಕೃಪೆಗೆ ಪಾತ್ರನಾದೆ. ಈ ಸಂದರ್ಭದಲ್ಲಿ ರಾಮಮೂರ್ತಿಯವರ ಹೆಸರನ್ನು ನೆನೆಯಬೇಕು. ವಾಟಾಳ್ ನಾಗರಾಜ್, ನಾರಾಯಣ ಕುಮಾರ್, ಪ್ರಭಾಕರ ರೆಡ್ಡಿ ಮೊದಲಾದವರು ಒಂದಾಗಿ ಕೆಲಸ ಮಾಡಿದ ಪಕ್ಷದಲ್ಲಿ ಕನ್ನಡಕ್ಕೆ ಎಂದೋ ಸಾರ್ವಭೌಮ ಪದವಿ ದೊರಕುತ್ತಿತ್ತು. ಈಚೆಗೆ ನೀವು ಮತ್ತು ಪಾಟೀಲ ಪುಟ್ಟಪ್ಪನವರು ಈ ಚಳುವಳಿಗೆ ಸಾಕಷ್ಟು ಚೈತನ್ಯವನ್ನೊದಗಿಸಿದ್ದೀರಿ. ಆದರೆ ಚಳುವಳಿಗಾರರೆಲ್ಲರೂ ಒಟ್ಟಾಗಿ ಕೆಲಸ ಮಾಡಲು ಈಗಲೂ ಸಿದ್ಧರಾಗಿಲ್ಲ. ಇದು ನನಗೆ ನಿರಾಶೆಯುಂಟು ಮಾಡಿದೆ.

ಇಂಗ್ಲಿಷ್‌ಗಿಂತ ಹಿಂದಿ ಅಪಾಯಕಾರಿ ಎಂದು ನಾನು ಬಲ್ಲೆ. ನಾನು 'ಹಿಂದಿ ಹಟಾವೋ' ಎನ್ನುವವನೇ ಹೊರತು 'ಅಂಗ್ರೇಜಿ ಹಟಾವೋ' ಎನ್ನುವವನಲ್ಲ. ಕನ್ನಡಕ್ಕೆ ಸಾರ್ವಭೌಮ ಸ್ಥಾನಮಾನಗಳು ದೊರಕಬೇಕೇ ಹೊರತು ಬೇರಾವ ಭಾಷೆಗೂ ಅಲ್ಲ. ಈ ಕಡೆಗೆ ಪಲವು ಚಳುವಳಿಗಾರರ ಗಮನ ಸಾಕಷ್ಟು ಹರಿದಿಲ್ಲ. ಇದರಿಂದಲೂ ನನಗೆ ನಿರಾಶೆಯಾಗಿದೆ.

ನಾನು ನಿಮ್ಮ ಕೇಂದ್ರದ ಸಭೆಗೆ ಹಿಂದೆ ಬಂದಿರಲಿಲ್ಲ. ಅದಕ್ಕಾಗಿ 16.9.90 ರಂದು ನಡೆದ ಸಭೆಗೆ ಬಂದದ್ದು. ಎರಡು ವಿಷಯಗಳನ್ನು ಮಂಡಿಸಲೆಂದು ನಾನಲ್ಲಿಗೆ ಬಂದದ್ದು. ಒಂದು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕೆಂಬುದು. ಇದನ್ನು ನಿಮ್ಮ ಸಭೆ ಒಪ್ಪಿಕೊಂಡಿತು. ಎರಡು. ಮೆಡಿಕಲ್ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬುದು. ನೀವು ಅದನ್ನು ವಿರೋಧಿಸಿದಿರಿ. ಸಕಾಲಿಕವಲ್ಲ ಎಂದು ನೀವು ಕೊಟ್ಟ ಕಾರಣ ಸರಿಯಲ್ಲ. ಈಗ ಆ ಕೂಗು ಪ್ರಾರಂಭಿಸಿದರೆ ಮುಂದಿನ ಶತಮಾನದ ಪ್ರಾರಂಭದಲ್ಲಾದರೂ ಅದು ಕಾರ್ಯಗತವಾಗಬಹುದೆಂಬ ಆಸೆ ನನ್ನದು. ಐಐಟಿಗಳಲ್ಲಿ ಪ್ರವೇಶ ಪರೀಕ್ಷೆಗಳಿಗೆ ಪ್ರಾದೇಶಿಕ ಭಾಷಾಮಾಧ್ಯಮ ಅಂಗೀಕೃತವಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಲೇ ಆ ಬಗ್ಗೆ ಚಳುವಳಿ ನಡೆಸದಿದ್ದರೆ. ಹಿಂದಿ ತೂರಿಕೊಳ್ಳುವ ಸಂಭವವುಂಟು.

17.9.90 ರಂದು ಮುಖ್ಯ ಮಂತ್ರಿಗಳ ಭೇಟಿಗೆ ನನ್ನನ್ನು ಕರೆದಿರಿ. ನಾನು ಬರಲಾಗದೆಂದು ತಿಳಿಸಿದೆ. ನಿಮ್ಮ ಮತ್ತು ಸಭೆಯ ಒತ್ತಾಯಕ್ಕೆ ಮಣಿದು ನಾನೂ ಬಂದೆ. ನಿಮ್ಮ ಮನವಿಯ ವಿವರ ನನಗೆ ಮೊದಲೇ ಗೊತ್ತಿರಲಿಲ್ಲ. ಕನ್ನಡ ವಿಶ್ವವಿದ್ಯಾನಿಲಯದ ಪ್ರಸ್ತಾಪ ಆ ಮನವಿಯಲ್ಲಿ ಸೇರಿರುತ್ತದೆಂದು ನನಗೆ ಮೊದಲು ತಿಳಿದಿರಲಿಲ್ಲ. ತಮಿಳು ವಿಶ್ವವಿದ್ಯಾನಿಲಯ ಮತ್ತು ತೆಲುಗು ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದಿವೆ ಎಂಬ ಕಾರಣಕ್ಕಾಗಿ ಕನ್ನಡದ ವಿಶ್ವವಿದ್ಯಾನಿಲಯ ಬೇಕೆಂದು ಹೇಳುವವ ನಾನಲ್ಲ. ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳೂ ಕನ್ನಡದ ವಿಶ್ವವಿದ್ಯಾನಿಲಯಗಳಾಗಬೇಕು. ಎಲ್ಲ ಕಡೆಯೂ ಕನ್ನಡದ ಮೂಲಕ ಬೋಧನೆ ಸಂಶೋಧನೆಗಳು ವಿಪುಲವಾಗಿ ನಡೆಯಬೇಕೆನ್ನುವವನು ನಾನು. ಅಲ್ಲೆಲ್ಲ ಕನ್ನಡದ ಕಂಪು ಸೂಸಬೇಕೆನ್ನುವವನು ನಾನು. ಅಷ್ಟೇ ಅಲ್ಲ. ನಾನು ಕೇಂದ್ರೀಕರಣ ವಿರೋಧಿ. ರಾಜ್ಯದ ನಾನಾ ಕಡೆಗಳಲ್ಲಿ, ಎಲ್ಲ ಕಡೆಯ ವಿದ್ವಾಂಸರಿಗೂ ಪೂರ್ಣಾವಕಾಶ ಕಲ್ಪಿಸಿದಾಗ ಮಾತ್ರ ಸಮಗ್ರ ಸಂಶೋಧನೆ ಸಾಧ್ಯ. ಕನ್ನಡದ ಸರ್ವಾಂಗೀಣ ಬೆಳವಣಿಗೆ ಸಾಧ್ಯ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿಯೂ ಕನ್ನಡ ಅಧ್ಯಯನ ಸಂಸ್ಥೆಗಳು ಪ್ರಬಲವಾದಾಗ ಮಾತ್ರ ಅವುಗಳ ಪ್ರಭಾವ ಅಲ್ಲಲ್ಲಿಯ ಎಲ್ಲ ಇಲಾಖೆಗಳ ಮೇಲೆ ಮುದ್ರೆಗೊಳ್ಳುತ್ತದೆ. ಕನ್ನಡದ ವಾತಾವರಣ ಚಿಮ್ಮುತ್ತದೆ. ಈ ಅಧ್ಯಯನ ಸಂಸ್ಥೆಗಳು ಕೃಶವಾದಾಗ ವಿಶ್ವವಿದ್ಯಾನಿಲಯಗಳು ಪರಕೀಯವಾಗುತ್ತವೆ.

ಕನ್ನಡ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದನಂತರ ಅಧ್ಯಯನ ಸಂಸ್ಥೆಗಳ ಯೋಜನೆಗಳು ವರ್ಗಾವಣೆಯಾಗುವುದು ಖಂಡಿತ. ಹೊಸ ಯೋಜನೆಗಳಿಗಂತು ಅವಕಾಶವೇ ಇರುವುದಿಲ್ಲ. ಆ ವಿಶ್ವವಿದ್ಯಾನಿಲಯದಲ್ಲಿರಬಹುದಾದ ಕೇವಲ ಕೆಲವರಿಂದ ಮಾತ್ರವೇ ಕನ್ನಡದ ಸರ್ವಸಾಧನೆ ಸಾಧ್ಯವಾಗದು. ಅಷ್ಟೇ ಅಲ್ಲ, ಎಲ್ಲ ಕಡೆಯ ಕನ್ನಡದ ವಿದ್ವಾಂಸರಿಗೆ ಅಲ್ಲಿ ಅವಕಾಶ ದೊರೆಯಲಾರದು; ವಿದ್ವತ್ತು ಸಹ ಸಂಕುಚಿತವಾಗುವ ಸಂಭವವುಂಟು. ಬೇರೆ ಕಡೆಯ ವಿದ್ವಾಂಸರ ಬೆಳವಣಿಗೆಗೆ ಪ್ರೋತ್ಸಾಹ ಕಡಿಮೆಯಾಗುತ್ತದೆ.

ನನಗೆ ಭಾವೀ, ವಿಶ್ವವಿದ್ಯಾನಿಲಯದ ರೂಪರೇಷೆಗಳು ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ವರದಿ ಯಾವ ಭಾಷೆಯಲ್ಲಿದೆ? ಆದರೆ ಕೇಂದ್ರೀಕರಣದ ಲೋಪದೋಷಗಳೆಲ್ಲ ಈ ಹೊಸ ಯೋಜನೆಯಲ್ಲಿರುತ್ತವೆಂಬ ಅಳುಕು ನನ್ನದು. ಇದರಿಂದ ಕನ್ನಡಕ್ಕೆ ನಷ್ಟವಾಗುತ್ತದೆಯೇ ಹೊರತು ಲಾಭವಾಗದು.

ಈ ಹಿನ್ನೆಲೆಯಲ್ಲಿ ನೀವು ಸಿದ್ಧಪಡಿಸಿದ ಮನವಿಗೆ ನಾನು ಸಹಿ ಹಾಕಲು ಸಿದ್ಧನಿರಲಿಲ್ಲ. ಸಹಿ ಹಾಕದೆಯೂ ನಾನು ನಿಮ್ಮೊಂದಿಗೆ ಮುಖ್ಯಮಂತ್ರಿಗಳ ಭೇಟಿಗೆ ಸಿದ್ಧನಾಗಿದ್ದೆ. ಕನ್ನಡ ವಿಶ್ವವಿದ್ಯಾನಿಲಯದ ವಿಷಯ ಚರ್ಚಿಸುವಾಗ ನಾನು ಬಾಯಿ ಹಾಕಕೂಡದೆಂದು ನೀವು ಕಟ್ಟಾಜ್ಞೆ ಮಾಡಿದಿರಿ. ಹೀಗೆ ಬಾಯಿ ಕಟ್ಟುವುದು, ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಪ್ರಜಾತಂತ್ರಕ್ಕೆ ತೀರ ವಿರುದ್ಧವಾದುದು. ಜತೆಗೆ ಆತ್ಮಗೌರವಕ್ಕೆ ಹಾನಿಕಾರಕವಾದದ್ದೆಂಬುದು ಸೂರ್ಯನ ಬೆಳಕಿನಂತೆ ಸುಸ್ಪಷ್ಟ.

ಇದೀಗ ನಾನು ಕನ್ನಡ ಚಳುವಳಿಯ ಬಗ್ಗೆ ಮರುಚಿಂತನೆ ನಡೆಸಬೇಕಾಗಿದೆ. ಏಕೆಂದರೆ ಎಲ್ಲ ಚಳುವಳಿಕಾರರೂ (ಕನ್ನಡಕ್ಕಾಗಿ ಕೆಲಸ ಮಾಡುವವರು) ಸರ್ವಾಧಿಕಾರ ಮನೋಭಾವದಿಂದ ಕೂಡಿದ್ದಾರೆಂಬ ಭಾವನೆ ದಿನೇ ದಿನೇ ಪ್ರಬಲವಾಗ ತೊಡಗಿದೆ.

ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಜನ ವಿರಳವಾಗಿದ್ದಾಗ ಗುರುಕೃಪೆಯಿಂದ ಒಂದಿಷ್ಟು ಕೆಲಸ ಮಾಡಿದೆನೆಂಬ ತೃಪ್ತಿ ನನಗಿದೆ. ಸಾರ್ವಜನಿಕ ಸೇವಾ ಆಯೋಗದ ಮುಂದೆ ಉಪವಾಸ ಸತ್ಯಾಗ್ರಹ ಹೂಡಿದಾಗ ನೀವು ಮಾಡಿದ ಸಹಾಯವನ್ನು ಎಂದಿಗೂ ಮರೆಯುವುದಿಲ್ಲ, ಎಂದಿಷ್ಟೇ ಹೇಳಿ, ಈ ಪತ್ರ ಮುಗಿಸುತ್ತೇನೆ.

ವಿಶ್ವಾಸದೊಂದಿಗೆ,
ಇಂತು ನಿಮ್ಮವ,
ದೇ ಜವರೇಗೌಡ

ಇಂದ,
ಪ್ರೊ. ಎಂ. ಚಿದಾನಂದ ಮೂರ್ತಿಯವರು
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು 560 056

ಪ್ರೊ. ದೇ. ಜವರೇಗೌಡ ಅವರಲ್ಲಿ ನಮಸ್ಕಾರಗಳು.

ಈಚಿಗೆ ಕನ್ನಡ ಶಕ್ತಿ ಕೇಂದ್ರದ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಸಿದ್ಧರಾಗಿದ್ದ ಸಮಯದಲ್ಲಿ ನಡೆದ ಘಟನೆಗೆ ನಾನು ವಿಷಾದಿಸುತ್ತೇನೆ. ಮುಖ್ಯಮಂತ್ರಿಗಳಿಗೆ ಒಪ್ಪಿಸಬೇಕೆಂದಿದ್ದ ಮನವಿಯ ಸಾರವನ್ನು ಕಾರ್ಯಕಾರಿ ಸಮಿತಿಯ ಮುಂದೆ ಓದಿದ್ದರೆ ಆಗ ನೀವು ನಿಮ್ಮ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದಿರಿ. ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆ

ವಿಷಯದಲ್ಲಿ ಕನ್ನಡ ಶಕ್ತಿ ಕೇಂದ್ರವು ಆರಂಭದಿಂದಲೂ ಶ್ರಮಿಸಿದೆ. ಹೆಜ್ಜೆ ಹೆಜ್ಜೆಗೆ ಅದರ ಪ್ರಗತಿಯ ಬಗ್ಗೆ ಆಸಕ್ತಿ ತಾಳಿದೆ. ಹೀಗಿರುವಾಗ ಮುಖ್ಯಮಂತ್ರಿಗಳ ಮುಂದೆ ನಿಮ್ಮ ವ್ಯಕ್ತಿಗತ ಅಭಿಪ್ರಾಯವನ್ನು ಹೇಳುವುದು ನಮಗೆ ಬಹಳ ಕಿರಿಕಿರಿಯಾಗುತ್ತಿತ್ತು. ಮತ್ತು ಸರ್ಕಾರ ಈಗಾಗಲೇ ನಿರ್ಧಾರ ತೆಗೆದುಕೊಂಡಿರುವುದರಿಂದ ಸರ್ಕಾರಕ್ಕೂ ಕಿರಿಕಿರಿ ಆಗುತ್ತಿತ್ತು. ಈ ಹಿನ್ನೆಲೆಯಲ್ಲಿ ನೀವು ನಮ್ಮ ನಿಯೋಗದ ಜೊತೆ ಬರಲಾಗಲಿಲ್ಲ.

ಕನ್ನಡ ಅಧ್ಯಯನ ಸಂಸ್ಥೆ (ಕೇಂದ್ರ- ಪೀಠ) ಗಳ ಪ್ರಾಧಾನ್ಯವನ್ನು ಕನ್ನಡ ವಿಶ್ವವಿದ್ಯಾನಿಲಯ ಕಡಿಮೆ ಮಾಡಕೂಡದೆಂಬುದಷ್ಟಕ್ಕೆ ನನ್ನ ಸಂಪೂರ್ಣ ಸಮ್ಮತಿ ಇದೆಯಾದರೂ, ಆ ಅಳುಕು ನಿಷ್ಕಾರಣವಾದುದು ಎಂದೂ ನಾನು ಹೇಳಬೇಕಾಗಿದೆ. ಕನ್ನಡ ವಿ. ವಿ. ವು. ಸ್ನಾತಕೋತ್ತರ ಕನ್ನಡ ವಿಭಾಗದ ವಿಸ್ತೃತ ರೂಪ ಅಲ್ಲ. ತಮಿಳು, ತೆಲುಗು ವಿಶ್ವವಿದ್ಯಾನಿಲಯಗಳನ್ನು ಬಲ್ಲ (ನೀವೂ ಬಲ್ಲಿರಿ) ಹಾಗೇ ಪ್ರೊ. ಒಡೆಯರ್ ವರದಿಯನ್ನು ಬಲ್ಲ ನಾನು ಅದನ್ನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಪ್ರೊ. ವಿ. ಐ. ಸುಬ್ರಹ್ಮಣ್ಯಂ, ಪ್ರೊ. ಕು. ಶಿ. ಹರಿದಾಸ ಭಟ್ ಮತ್ತು ನಾನು - ಪ್ರೊ. ಒಡೆಯರ್ ಅವರು ಬಯಸಿದ್ದರಿಂದ ಅವರೊಡನೆ ಬೆಂಗಳೂರಿನಲ್ಲಿ ಕುಳಿತು ಆ ವರದಿಗೆ ಅಂತಿಮ ರೂಪ ಕೊಡಲು ಸಹಾಯ ಮಾಡಿದೆವು. ಪ್ರೊ. ವಿ. ಐ. ಸು. ಅವರು ತಮ್ಮ ತಮಿಳು ವಿಶ್ವವಿದ್ಯಾನಿಲಯದ ರೂಪರೇಷೆಗಿಂತ ಕನ್ನಡ ವಿಶ್ವವಿದ್ಯಾನಿಲಯದ ಯೋಜನೆ - ರೂಪುರೇಷೆ - ಚೆನ್ನಾಗಿದೆ ಎಂದು ಹೊಗಳಿದರು.

ಆದರೂ, ನಿಮ್ಮ ಅಭಿಪ್ರಾಯವನ್ನು ನೀವು ಇಟ್ಟುಕೊಳ್ಳಲು ಸ್ವತಂತ್ರರು ಎಂದು ನಾನು ಹೇಳಬೇಕಾಗಿಲ್ಲ. ನಿಮ್ಮ ಕನ್ನಡದ ಪ್ರೀತಿಯನ್ನು ಬಲ್ಲ ನಾನು ನಿಮ್ಮ ಅಭಿಪ್ರಾಯವನ್ನು ಗೌರವಿಸುತ್ತೇನೆ.

ಈಗ ಪ್ರಸ್ತುತ ವಿಷಯಕ್ಕೆ ಬರುತ್ತೇನೆ. ಆ ದಿನ ಮುಖ್ಯಮಂತ್ರಿಗಳ ಸಂದರ್ಶನ ಮುಗಿದ ಮೇಲೆ ನಿಮ್ಮ ಜೊತೆ ಪ್ರಸ್ತಾಪಿಸಬೇಕೆಂದಿದ್ದ ವಿಷಯ: ಡಿಸೆಂಬರಿನ ಬೀದರಿನ ರಾಜ್ಯ ಮಟ್ಟದ ಅಧಿವೇಶನದ ವಿಷಯ. ಹಂಪೆಯಲ್ಲಿ ಮೊದಲ ಅಧಿವೇಶನ ಬಹು ಸಂಭ್ರಮದಿಂದ ನಡೆಯಿತು. ಅದರ ಅಧ್ಯಕ್ಷರು ಡಾ. ಸಿ. ಪಿ. ಲಿಂಗಣ್ಣ. ಎರಡನೆಯ ರಾಜ್ಯಮಟ್ಟದ ಬೀದರಿನ ಅಧಿವೇಶನಕ್ಕೆ ನೀವು ಅಧ್ಯಕ್ಷರಾಗಿರಬೇಕೆಂದು ನಾವೆಲ್ಲ ತೀರ್ಮಾನಿಸಿದ್ದೇವೆ. ಆ ದಿನ ಕಾರ್ಯಕಾರಿ ಸಮಿತಿಯ ಸಭೆಗೆ ನೀವು ಬಂದಾಗ, ನಿಮ್ಮ ಮುಂದೆ ಅದನ್ನು ಚರ್ಚಿಸ ಬಯಸಲಿಲ್ಲ. ದಯಮಾಡಿ ಒಪ್ಪಿಕೊಳ್ಳಿ. ಸದ್ಯಕ್ಕೆ ಡಿಸೆಂಬರಿನ 22-23 ರಂದು ಅಂದುಕೊಂಡಿದ್ದೇವೆ.(ನವಂಬರಿನಲ್ಲಿ ಎಂದು ನಾವು ಅಂದು ಕೊಂಡಿದ್ದೆವು - ಆದರೆ ಆ ತಿಂಗಳು ನಮಗೆ ಬೆಂಗಳೂರಲ್ಲಿ ಕೈ ತುಂಬ ಕೆಲಸವಿರುತ್ತದೆ) ನಿಮ್ಮನ್ನು ಬೆಂಗಳೂರಿಂದ ನಮ್ಮ ಜೊತೆಯಲ್ಲೇ ಕರೆದೊಯ್ದು, ಕರೆತರುತ್ತೇವೆ. ನಿಮಗೆ ಆಯಾಸವಾಗದಂತೆ ನೋಡಿಕೊಳ್ಳುತ್ತೇವೆ.

ಬೀದರ ಜಿಲ್ಲಾ ಘಟಕ ಅತ್ಯುತ್ಸಾಹದಿಂದ ಆ ಅಧಿವೇಶನದ ಆತಿಥ್ಯವನ್ನು ವಹಿಸಿಕೊಳ್ಳುತ್ತಿದೆ.

ಹಂಪೆಯಲ್ಲಿ ಸ್ವೀಕರಿಸಿದ ನಿರ್ಣಯಗಳಲ್ಲಿ- ಹಂಪೆಯ ಕನ್ನಡ ವಿ. ವಿ.ದ ಸ್ಥಾಪನೆಗೆ ಸಂಬಂಧಿಸಿದ್ದು ಇತ್ತು. ಇದನ್ನು ನಿಮಗೆ ಹೇಳಲು ಕಾರಣವೆಂದರೆ, ನೀವು ಒಪ್ಪಿಕೊಳ್ಳುವ ಮುನ್ನ ಅದನ್ನು ನಿಮ್ಮ ಗಮನಕ್ಕೆ ತರುವುದು ಅಗತ್ಯ. ನೀವು ಅಧ್ಯಕ್ಷ ಭಾಷಣದಲ್ಲಿ ಅದನ್ನು ವಿರೋಧಿಸುವ ಮಾತಾಡಿದರೆ ಮತ್ತು ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಗೆ ತಡವಾಗುತ್ತಿರುವುದನ್ನು ಖಂಡಿಸಿ ಅದನ್ನು ಬೇಗ ಕರ್ನಾಟಕ ಸರ್ಕಾರ ತನ್ನ ಮಾತಿನಂತೆ ಬೇಗ ಸ್ಥಾಪಿಸಬೇಕು ಎಂಬ ನಿರ್ಣಯ ಅಲ್ಲಿ ಅಂಗೀಕೃತವಾದರೆ ಎರಡಕ್ಕೂ ವಿರೋಧವಾಗುತ್ತದೆ. ಖಂಡಿತವಾಗಿಯೂ ಯಾರೇ ಅಧ್ಯಕ್ಷರ ಅಭಿಪ್ರಾಯವನ್ನು ನಾವು ನಿಯಂತ್ರಿಸುತ್ತಿಲ್ಲ, ಮತ್ತು ನನ್ನ ಮಾತನ್ನು ದಯಮಾಡಿ ತಪ್ಪು ತಿಳಿಯಬೇಡಿ. ಏಕೆಂದರೆ, ಅಪಾರ್ಥ ಮಾಡುವುದು ಸುಲಭ. ಮುಕ್ತ ಮತ್ತು ನೇರ ಮನಸ್ಸಿನ ನಿಮ್ಮ ಜೊತೆ ಅಷ್ಟೇ ಮುಕ್ತರಾಗಿ ವ್ಯವಹರಿಸುವುದು ಸುಲಭ ಎಂಬ ಸಂಗತಿ ನನಗೆ ತಿಳಿದಿದೆ. ಹಿರಿಯರಾದ ನಿಮಗೆ ಪ್ರೀತಿ, ಗೌರವಗಳಿವೆ.

ನಿಮ್ಮ ಉತ್ತರಕ್ಕಾಗಿ ಕಾಯುತ್ತಿರುತ್ತೇವೆ. ನಿಮ್ಮ ಕುಟುಂಬವರ್ಗವೂ ನೀವೂ ಸೌಖ್ಯವೆಂದು ನಂಬಿದ್ದೇನೆ. ನಾವೂ ಆರೋಗ್ಯವಾಗಿದ್ದೇವೆ. ಮಾತಿನಲ್ಲಿ ಎಲ್ಲಾದರೂ ನನಗೆ ತಿಳಿಯದೆ ಅವಿಚಾರ ನುಸುಳಿದ್ದರೆ ಕ್ಷಮಿಸಿ.

ಇಂತಿ ನಮಸ್ಕಾರಗಳೊಡನೆ

ಚಿದಾನಂದಮೂರ್ತಿ

1- 10- 1990ರಂದು ಡಾ. ಚಿದಾನಂದ ಮೂರ್ತಿಯವರಿಗೆ ಬರೆದ ಉತ್ತರ

22-9-90 ನೆಯ ದಿನಾಂಕದ ನಿಮ್ಮ ಪತ್ರಕ್ಕಾಗಿ, ಬೀದರಿನಲ್ಲಿ ನಡೆಯುವ ಎರಡನೆಯ ರಾಜ್ಯ ಮಟ್ಟದ ಸಮ್ಮೇಳನದ ಅಧ್ಯಕ್ಷತೆ ವಹಿಸುವಂತೆ ಆಹ್ವಾನಿಸಿದ್ದಕ್ಕಾಗಿ ನಿಮಗೆ ನನ್ನ ಹೃತ್ಪೂರ್ವಕ ವಂದನೆಗಳು. ತತ್ವ ಮತ್ತು ವಿಶ್ವಾಸಗಳ ನಡುವಣ ಮನಸ್ಸಿನ ಸಂಘರ್ಷದಿಂದಾಗಿ, ಉತ್ತರ ವಿಳಂಬವಾಯಿತು. ಕ್ಷಮಿಸಿ. ನೀವು ಶರತ್ತು ಹಾಕದೆ ನನ್ನನ್ನು ಆಹ್ವಾನಿಸಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆನೇನೋ. ಆಗ ಪ್ರಾಯಶಃ ಕನ್ನಡ ವಿಶ್ವವಿದ್ಯಾನಿಲಯದ ಬಗ್ಗೆ ಮಾತಾಡುವ ಅಗತ್ಯವಿರಲಿಲ್ಲ. ನೀವು ಬಹಿರಂಗ ಸಭೆಯಲ್ಲಿ ಆ ಬಗ್ಗೆ ಗೊತ್ತುವಳಿ ಮಂಡಿಸಿದ್ದರೆ, ನಾನು ತೆಪ್ಪಗಿರುತ್ತಿದ್ದೆನೆಂದು ಕಾಣುತ್ತದೆ. ಆತ್ಮಗೌರವ ವಿರುವ ಯಾವ ವ್ಯಕ್ತಿಯೂ ಶರತ್ತಿನ ಮೇಲೆ ಅಧ್ಯಕ್ಷ ಪದವಿಯನ್ನೊಪ್ಪಿ ಕೊಳ್ಳಲಾರ. 1936 ನೆಯ ಸಂವತ್ಸರದಲ್ಲಿ ಲಾಹೋರ್‌ನ ಜಾಟ್‌ಪಾಟ್‌ತೋಡಕ್ ಮಂಡಲ ತನ್ನ ವಾರ್ಷಿಕ ಅಧಿವೇಶನದ ಅಧ್ಯಕ್ಷತೆಗೆ ಡಾ. ಅಂಬೇಡ್ಕರ್ ಅವರನ್ನು ಶರತ್ತಿನೊಡನೆ ಆಹ್ವಾನಿಸಲಾಗಿ, ಅಂಬೇಡ್ಕರರು ಅಧ್ಯಕ್ಷ ಪದವಿಯನ್ನೇ ನಿರಾಕರಿಸುತ್ತಾರೆ. ನನಗೀಗ ಅವರೇ ಮಾರ್ಗದರ್ಶಿ.

ನಿಮ್ಮ ಮತ್ತು ನಿಮ್ಮ ಕೇಂದ್ರದ ವಿಶ್ವಾಸಕ್ಕೆ ನಾನು ಋಣಿ. ನಾನು ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳಲಾಗದ್ದಕ್ಕೆ ದಯವಿಟ್ಟು ಕ್ಷಮಿಸಿ. ನಿಮ್ಮ ವಿಶ್ವಾಸ ಮಾತ್ರ ಕುಂದದಿರಲಿ.

ಇಂತಿ ನಿಮ್ಮವ

ದೇಜಗೌ.

ಇಂದ,

ಪ್ರೊ. ಎಂ. ಚಿದಾನಂದ ಮೂರ್ತಿಯವರು

ಬೆಂಗಳೂರು ವಿಶ್ವವಿದ್ಯಾನಿಲಯ

ಬೆಂಗಳೂರು 560 056.

6 -10 - 1990

ಪ್ರೊ. ದೇ. ಜ. ಗೌ. ಅವರಲ್ಲಿ ವಂದನೆಗಳು;

ನೀವು ಬರೆದ ಪತ್ರ ತಲಪಿದೆ. ಅದಕ್ಕೆ ಎರಡು ದಿನ ಹಿಂದೆ ನಾನು ಬರೆದ ಪತ್ರವೂ ತಲುಪಿರಬಹುದು. ಬಹುಶಃ ನಿಮ್ಮ ಪತ್ರ ನನ್ನ ಪತ್ರ ದಾರಿಯಲ್ಲಿ ಎದುರಾಗಿರಬಹುದು. ಅಥವಾ ನನ್ನ ಪತ್ರ ಮೈಸೂರು ಅಂಚೆ ಕಛೇರಿಯಲ್ಲಿರುವಾಗ ನಿಮ್ಮ ಪತ್ರವೂ ಅಂಚೆ ಕಛೇರಿ ಸೇರಿರಬಹುದು.

ಆ ದಿನ ನಿಮ್ಮ ಮನಸ್ಸಿಗೆ ನೋವಾದುದನ್ನು ನಾನು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲೆ. ಇಡೀ ಪ್ರಸಂಗ ದುರದೃಷ್ಟಕರ. ಮುಖ್ಯ ಮಂತ್ರಿಗಳಿಗೆ ಕೊಡಬೇಕೆಂದಿದ್ದ ಮನವಿಯ ಕರಡು ನಮ್ಮ ಬಳಿ ಇತ್ತು; ಸಭೆಯಲ್ಲಿ ಅದನ್ನು ಓದಿ ಹೇಳಿದ್ದರೆ ನೀವು ನಿಮ್ಮ ನಿರ್ಧಾರವನ್ನು, ತೆಗೆದುಕೊಳ್ಳುತ್ತಿದ್ದಿರಿ. ಹಂಪೆಯ ವಿಶ್ವವಿದ್ಯಾನಿಲಯ ಆಗಲು ಕನ್ನಡ ಶಕ್ತಿ ಕೇಂದ್ರವು ಶ್ರಮಿಸಿದೆ. ಹೀಗಿರುವಾಗ, ಕೇಂದ್ರದ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿಮಾಡಿದಾಗ, ನಿಯೋಗದ ಒಬ್ಬ ಸದಸ್ಯರು ವಿ. ವಿ. ದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ, ನಿಯೋಗದಲ್ಲಿ ಒಗ್ಗಟ್ಟಿಲ್ಲವೆಂದು ಮುಖ್ಯಮಂತ್ರಿಗಳು ಹೇಳಬಹುದಿತ್ತು. ಏನಿದ್ದರೂ ಭಿನ್ನಾಭಿಪ್ರಾಯಗಳು ನಮ್ಮ ನಮ್ಮಲ್ಲಿ ಚರ್ಚಿತವಾಗಬೇಕೇ ಹೊರತು, ನಿಯೋಗ ಹೋದಾಗ ಅಲ್ಲವೆಂಬುದನ್ನು ಅನುಭವಿಗಳಾದ ನೀವೂ ಒಪ್ಪುತ್ತೀರಿ. ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮೆ ಇರಲಿ. ಇದನ್ನೂ ನನ್ನ ಮೊದಲಿನ ಪತ್ರದಲ್ಲೂ ವ್ಯಕ್ತಪಡಿಸಿದ್ದೇನೆ. ಈಗಲೂ ಅದೇ ನನ್ನ ಮಾತನ್ನೂ ಹೇಳುತ್ತಿದ್ದೇನೆ.

ನೀವು ನಿಮ್ಮ ಕುಟುಂಬವೂ ಆರೋಗ್ಯವೆಂದು ನಂಬಿದ್ದೇನೆ.

ಇತಿ ನಿಮ್ಮ ವಿಶ್ವಾಸಿ

ಎಂ. ಚಿದಾನಂದಮೂರ್ತಿ

ಮುಖ್ಯಮಂತ್ರಿಗಳ ಬಳಿ ಹೋಗುವ ಮುನ್ನ ಮನವಿಯ ವಿವರವನ್ನು ನನಗೆ ತಿಳಿಸದಿದ್ದುದು ಯಾರ ತಪ್ಪು? ನಾನೊಬ್ಬ ಗುಲಾಮಿ ಮನೋಭಾವದ ಯಾವುದಕ್ಕೂ ಕೈಯೆತ್ತುವ ನರಹೀನನೆಂದು ಮೂರ್ತಿ ತಿಳಿದುಕೊಂಡರೇನೋ. ಅದೂ ಇರಲಿ, ವೈದ್ಯ ವಿಜ್ಞಾನ ಮತ್ತು ತಾಂತ್ರಿಕ ಪರೀಕ್ಷೆಗಳಿಗೆ ಕನ್ನಡ ಶಿಕ್ಷಣ ಮಾಧ್ಯಮವಾಗುವ ಕಾಲ ಬಂದಿಲ್ಲವೆಂದು ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷರೇ ಹೇಳಿಬಿಟ್ಟರೆ ಕನ್ನಡ ಪಕ್ವವಾಗಿಲ್ಲವೆಂಬ

ಅರ್ಥಬರುತ್ತದೆ. ಆದರೆ ಈ ಬಗ್ಗೆ ಕನ್ನಡ ಮೇಷ್ಟರೊಬ್ಬರ ಅಭಿಪ್ರಾಯಕ್ಕಿಂತ ವೈದ್ಯ ವಿಜ್ಞಾನಿಯೊಬ್ಬರ ಅಭಿಪ್ರಾಯ ಹೆಚ್ಚು ಅಮೂಲ್ಯವಾದದ್ದೆಂದು ನಾನು ನಂಬಿದ್ದೇನೆ. Though there are many medical books in Hindi the standard is not high and Kannada is an ideal language to be introduced as medium of Instruction in the field (Hindu: 23.6.1994) ಇದನ್ನು ಹೇಳಿದವರು ಸುಪ್ರಸಿದ್ಧ ವೈದ್ಯ ವಿಜ್ಞಾನಿ ಡಾ. ಪಿ. ಎಸ್. ಶಂಕರ್ ಅವರು. ಅವರಿಗಿಂತ ದೊಡ್ಡ ತಜ್ಞರು ಇಂಡಿಯಾದಲ್ಲಿ ವಿರಳ. ಅವರ ಈ ಮಾತು ನನ್ನ ನಿಲುವನ್ನು ಸಮರ್ಥಿಸುತ್ತವೆ ಯೆಂಬುದರಲ್ಲಿ ಅನುಮಾನವಿಲ್ಲ.

ಎದ್ದರೆ ಕಾಲಿಗೆ ಬೀಳುವುದು, ಬಿದ್ದರೆ ಕಾಲಿನಿಂದ ಪಾತಾಳಕ್ಕೆ ತುಳಿಯುವುದು ಕೆಲವರ ಸ್ವಭಾವ. ನಾನು ಕುಲಪತಿಯ ಹುದ್ದೆಯಿಂದ ನಿರ್ಗಮಿಸುತ್ತಿದ್ದಂತೆ, ನನ್ನಿಂದ ದೂರ ಸರಿದ ಕೆಲವು ಮಿತ್ರರಲ್ಲಿ ಡಾ. ಹಾ. ಮಾ. ನಾಯಕ ಒಬ್ಬರು. ಆ ವ್ಯಥೆಯ ಕತೆಯನ್ನು ನನ್ನ 'ಹೋರಾಟದ ಬದುಕು' ಗ್ರಂಥದ ದ್ವಿತೀಯ ಭಾಗದಲ್ಲಿ ನಿರೂಪಿಸಿದ್ದೇನೆ. ಅಂಥ ಪ್ರಸಂಗವೊದಗಿದ್ದಕ್ಕಾಗಿ ನನಗೆ ತುಂಬ ವ್ಯಥೆಯಾಗಿದೆ. ಅವರು ಅಮೆರಿಕೆಯಲ್ಲಿದ್ದಾಗ ಹಾಗೂ ಅನಂತರ ಬರೆದ ಪತ್ರಗಳನ್ನು ಓದಿದಾಗ ಎಂಥ ಸಜ್ಜನರು ಹೇಗಾದರು ಅನಿಸುತ್ತದೆ. ಅದಕ್ಕೆ ಕಾಲಮಹಿಮೆ ಕಾರಣವೋ ನನ್ನದೇ ದೌರ್ಬಲ್ಯ ಕಾರಣವೋ ಕಾಣೆ. ಕೇವಲ ನಿದರ್ಶನಾರ್ಥವಾಗಿ ಮಾತ್ರ ಒಂದು ಪತ್ರವನ್ನು ಇಲ್ಲಿ ಪ್ರತಿ ಮಾಡಲಿದ್ದೇನೆ. ಅದಕ್ಕೆ ಮುನ್ನ ಅವರು ಪತ್ರಿಕೆಗಳಿಗೆ ನನ್ನನ್ನು ಹೀಯಾಳಿಸಿ ಕೊಟ್ಟ ಹೇಳಿಕೆಯನ್ನಿಲ್ಲಿ ಉಲ್ಲೇಖಿಸಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸಮಾರಂಭದಲ್ಲಿ ಜಾನಪದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತಾಡುತ್ತ ಜಾನಪದ ಅಕಾಡೆಮಿಯ ಅಗತ್ಯತೆಯನ್ನು ಕುರಿತು ಒತ್ತಿ ಹೇಳುವ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡಿದ್ದೆ. ಜಾನಪದ ಸಂಸ್ಥೆಗಳೆಷ್ಟಿದ್ದರೂ, ಅವುಗಳಲ್ಲಿ ಎಷ್ಟೇ ದಕ್ಷರಿದ್ದರೂ, ಎಲ್ಲ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಿಲ್ಲದ್ದರಿಂದ ಅಕಾಡೆಮಿಯ ಅವಶ್ಯಕತೆಯಿದೆ ಎಂದು ಹೇಳಿದ್ದೆ. ಆ ಸಂದರ್ಭದಲ್ಲಿ ಅವರು ಕೊಟ್ಟ ಹೇಳಿಕೆಯಿದು:

'ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸಮಾರಂಭಗಳಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಶ್ರೀ ದೇ ಜವರೇಗೌಡರು ಈ ಮಾತುಗಳನ್ನಾಡಿದ್ದಾರೆ.

'ಬೋಧನೆಯ ಜತೆಗೆ ಸಂಶೋಧನೆಯಾಗಲಿ ಸಂಗ್ರಹವಾಗಲಿ ಮ್ಯೂಜಿಯಂ ನಿರ್ವಹಣೆಯಾಗಲಿ ನಡೆಯಲಾರದು ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಉಲ್ಲೇಖಿಸಬಹುದು. ನಾನು ಕುಲಪತಿಸ್ಥಾನದಿಂದ ನಿರ್ಗಮಿಸುವ ಮುನ್ನ ಜಾನಪದಾಭಿವೃದ್ಧಿಗೆಂದು ಐವತ್ತು ಸಹಸ್ರ ರೂಪಾಯಿಗಳನ್ನು ವಿಶ್ವವಿದ್ಯಾನಿಲಯ ಮಂಜೂರು ಮಾಡಿತು. ಸಂಬಂಧಪಟ್ಟ ಇಲಾಖೆ ಬಿಡಿ ಕಾಸೂ ಖರ್ಚುಮಾಡಲಾಗದೆ ಎಲ್ಲ ಸೀದು ಹೋದದ್ದುಂಟು. ನಾಲ್ಕಾರು ಕೆಲಸಗಳನ್ನು ಒಬ್ಬರೇ ಹಚ್ಚಿಕೊಂಡಾಗ ಯಾವುದೂ ಸಮರ್ಪಕವಾಗಿ ನಡೆಯುವುದಿಲ್ಲ ಎನ್ನುವುದಕ್ಕೆ ಅನ್ಯ ನಿದರ್ಶನ ಅನಾವಶ್ಯಕ.

'ಈ ತಪ್ಪು ದಾಖಲೆಯನ್ನು ಸರಿಪಡಿಸಬೇಕಾದ್ದು ಸಂಬಂಧಪಟ್ಟ ಇಲಾಖೆಯ ಕರ್ತವ್ಯವಾಗಿದೆ. ಶ್ರೀ ಜವರೇಗೌಡರು ವಿಶ್ವವಿದ್ಯಾನಿಲಯದಿಂದ ಯಾವ ಕಾಲದಲ್ಲೂ ಐವತ್ತು ಸಾವಿರ ರೂಪಾಯಿಗಳನ್ನು ಜಾನಪದ ಅಭಿವೃದ್ಧಿಗೆಂದು ನೀಡಿಲ್ಲ. ನೀಡಿಲ್ಲದ ಹಣ ಖರ್ಚಾಗದೆ ಸೀದು ಹೋಗುವುದು ಹೇಗೆ? ಶ್ರೀ ಜವರೇಗೌಡರು ಕುಲಪತಿಗಳಾಗಿದ್ದ ಆರು ವರ್ಷಗಳು ಜಾನಪದಕ್ಕಾಗಿ ಎಷ್ಟೆಷ್ಟು ಹಣ ನೀಡಿದ್ದಾರೆಂಬುದು ವಿಶೇಷ ಪರಿಶೀಲನೆಗೆ ಅರ್ಹವಾಗಿದೆ. ಅದು ಈಗ ಬೇಡ. ವೇದಿಕೆ ಮೇಲಿಂದ ಇಂಥ ಮಾತುಗಳನ್ನಾಡಿ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವುದು ಶ್ರೀ ಜವರೇಗೌಡರಂಥ ಹಿರಿಯರ ಘನತೆಗೆ ತಕ್ಕದ್ದಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

'ಇನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯಾವ ಕೆಲಸವೂ ಸಮರ್ಪಕವಾಗಿ ನಡೆಯುವುದಿಲ್ಲ ಎಂಬ ಮಾತು. ಇದಕ್ಕೆ ಸಂಸ್ಥೆಯ ಚಟುವಟಿಕೆಗಳೇ ಸಾಕ್ಷಿಯಾಗಿವೆ. ಅನೇಕ ವಿಭಾಗಗಳ ಒಂದು ಸಂಸ್ಥೆ ಹೇಗೆ ಕೆಲಸಮಾಡುತ್ತಿದೆ ಎಂಬುದು ಜವರೇಗೌಡರಿಗೆ ಗೊತ್ತಿರಬೇಕು. ಅದು ಒಬ್ಬರನ್ನೇ ಅವಲಂಬಿಸಿರುವುದಿಲ್ಲ. ಅವರು ಕುಲಪತಿಯಾಗಿದ್ದಾಗ ವಿಶ್ವವಿದ್ಯಾನಿಲಯದ ಐವತ್ತು ಇಲಾಖೆಗಳ ಕೆಲಸವನ್ನೆಲ್ಲ ಅವರೊಬ್ಬರೆ ಮಾಡುತ್ತಿರಲಿಲ್ಲ, ತಾವಿದ್ದವರೆಗೆ ಎಲ್ಲವೂ ಸಮರ್ಪಕ, ಆಮೇಲೆ ಎಲ್ಲವೂ ಅಸಮರ್ಪಕ ಎಂಬ ನಿಲವು ಅವರಿಗೆ ಭೂಷಣವಾದುದಲ್ಲ. ಅವರನ್ನು ಬಲ್ಲ ಯಾರಿಗೂ ಈ ಧೋರಣೆಯಿಂದ ಆಶ್ಚರ್ಯವೆನಿಸುವುದಿಲ್ಲ' (ಸಂಯುಕ್ತ ಕರ್ನಾಟಕ, 5 - 5 - 1977)

ಅವರ ನಾಲ್ಕು ಮುಖ್ಯ ಆಪಾದನೆಗಳು ಪೂರ್ಣ ಸುಳ್ಳು ಎಂಬುದಕ್ಕೆ ಕೆಲವು ವಾಸ್ತವಾಂಶಗಳನ್ನಿಲ್ಲಿ ಉಲ್ಲೇಖಿಸಬಯಸುತ್ತೇನೆ. ಐವತ್ತು ಸಾವಿರವಲ್ಲದಿದ್ದರೂ ನಲವತ್ತಾರು ಸಾವಿರ ರೂಪಾಯಿಯನ್ನು ಮಂಜೂರು ಮಾಡಿದ ದಾಖಲೆಯನ್ನಿಲ್ಲಿ ನಮೂದಿಸುತ್ತೇನೆ. ಕುಲಸಚಿವರು ಸಹಿ ಮಾಡಿರುವ 16 - 10- 1975 ರ ದಿನ ಜಿ. 1.231.ಎ.75-76ನೇ ಕ್ರಮ ಸಂಖ್ಯೆಯ ಪತ್ರದ ವಿವರಗಳಿವು:

ವಿಷಯ : ಬಯಲು ವಸ್ತು ಸಂಗ್ರಹಾಲಯ

ಉಲ್ಲೇಖ : ನಿಮ್ಮ ಪತ್ರದ ಕ್ರಮಾಂಕ. ಕ ಅ ಸಂ. ಜಾನವಿ. ಎಫ್ ಎಲ್. 3380 - 75-76 ದಿನಾಂಕ 26-8-1975.

'ಬಯಲು ವಸ್ತು ಸಂಗ್ರಹಾಲಯದ ಕೆಲಸವನ್ನು ಪ್ರಾರಂಭಿಸಲು ಕರ್ನಾಟಕ ಸರ್ಕಾರದಿಂದ ಅಭಿವೃದ್ಧಿಗಾಗಿ ಕೊಟ್ಟಿರುವ ಹಣದ ಪೈಕಿ ಉಳಿದಿರುವ 45,809 ರೂಗಳನ್ನು ಮೇಲ್ಕಂಡ ಯೋಜನೆಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಈ ಯೋಜನೆಯಲ್ಲಿ ಬಯಲು ವಸ್ತುಸಂಗ್ರಹಾಲಯಕ್ಕೆ ಆದ್ಯತೆ ನೀಡಬೇಕು. ಉಳಿದವು ಅನಂತರ.'

ಬಯಲು ವಸ್ತು ಸಂಗ್ರಹಾಲಯ ನನ್ನದೇ ಯೋಜನೆ. ಅದನ್ನು ಜೀ. ಶಂ. ಪರಮಶಿವಯ್ಯ ನವರಿಗೆ ಮುಟ್ಟಿಸಿ ಆ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುವಂತೆ

ಹೇಳಿದವನೂ ನಾನೆ. ಅಷ್ಟೇ ಅಲ್ಲ, ಅವರನ್ನು ಜತೆಯಲ್ಲಿ ಕರೆದುಕೊಂಡು ಕೆಲವು ಕಡೆಗಳಿಗೆ ಹೋಗಿ ಏನೇನು ಸಂಗ್ರಹಿಸಬೇಕೆಂಬುದನ್ನು ತೋರಿಸಿದ್ದೆ. ಮಹಿಳಾ ವಿದ್ಯಾರ್ಥಿನಿಲಯದ ಹಿಂದಿನ ಭಾಗವನ್ನು ಅಳತೆ ಮಾಡಿಸಿ, ಗಡಿಗಳನ್ನು ಗುರುತಿಸಿ, ಅಲ್ಲೇ ಬಯಲು ಮ್ಯೂಜಿಯಮ್ ಅನ್ನು ಪ್ರಾರಂಭಿಸಬಹುದೆಂದೂ ಅವರಿಗೆ ತೋರಿಸಿದ್ದೆ. ಇದರಿಂದ ಅವರ ಜಾನಪದಾಭಿಮಾನ ಮತ್ತು ದಕ್ಷತೆಗಳು ಸುವ್ಯಕ್ತವಾಗುತ್ತವೆ.

'ಶ್ರೀ ಜವರೇಗೌಡರು ಕುಲಪತಿಯಾಗಿದ್ದ ಆರು ವರ್ಷಗಳು ಜಾನಪದಕ್ಕಾಗಿ ಎಷ್ಟೆಷ್ಟು ಹಣವನ್ನು ನೀಡಿದ್ದಾರೆಂಬುದು ವಿಶೇಷ ಪರಿಶೀಲನೆಗೆ ಅರ್ಹವಾಗಿದೆ 'ಎಂಬುದು ಅವರ ಮತ್ತೊಂದು ಆಪಾದನೆ. ಜಾನಪದ ವಿಭಾಗ ಮತ್ತು ಮ್ಯೂಜಿಯಂಗಳ ಬೆಳವಣಿಗೆಯೇ ನಾನೆಷ್ಟು ಹಣ ವಿಶ್ವವಿದ್ಯಾನಿಲಯದಿಂದ ಕೊಡಿಸಿದ್ದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ನಾನು ಕುಲಪತಿ ಸ್ಥಾನದಿಂದ ನಿರ್ಗಮಿಸಿದ ನಂತರ ಅಧ್ಯಯನ ಸಂಸ್ಥೆಯ ಹಾಗೂ ಪ್ರಸಾರಾಂಗದ ನಡೆ ಕುಂಟುತ್ತಿರುವುದನ್ನು ಯಾರಾದರೂ ಗಮನಿಸಬಹುದು.

ನಾನೊಬ್ಬನೇ ಮೇಧಾವಿ, ನನ್ನನ್ನು ಬಿಟ್ಟರೆ ಬೇರೆ ದಕ್ಷರಿಲ್ಲ ಎಂಬ ಅಹಂಭಾವ ಎಂದೂ ನನ್ನ ತಲೆಯನ್ನು ಹೊಕ್ಕಿದ್ದಿಲ್ಲ. ಮತ್ತೊಬ್ಬರನ್ನು ಕೀಳಾಗಿ ಕಾಣುವ ದುರ್ಬುದ್ಧಿಯಾಗಲಿ, ನಾನೇ ಸರ್ವಗುಣ ಸಂಪನ್ನನೆಂದು ಹೇಳಿಕೊಳ್ಳುವಷ್ಟು ಮದಾಂಧತೆಯಾಗಲಿ ನನ್ನಲ್ಲಿಲ್ಲ. ಕೊಟ್ಟ ಕುದುರೆಯನ್ನೇರಲಾರದೆ ಮತ್ತೊಂದು ಕುದುರೆಯನ್ನಪೇಕ್ಷಿಸಿದವನಲ್ಲ ನಾನು. ಎರಡಲ್ಲ, ಆರು ವರ್ಷ ಒಂದು ವಿಶ್ವವಿದ್ಯಾನಿಲಯದ ಆಡಳಿತವನ್ನು ನಡಸಿದ್ದೇ ಸಮರ್ಪಕತೆಗೆ ಸಾಕ್ಷಿ ಎಂದು ನಾನು ಅತ್ಯಂತ ವಿನಯದಿಂದ, ಆದರೆ ಆತ್ಮಪ್ರತ್ಯಯದಿಂದ ಹೇಳಿಕೊಳ್ಳುವ ನೈತಿಕ ಧೈರ್ಯ ನನ್ನಲ್ಲಿರುವಾಗ ಹಾಮಾನಾ ಅವರ ಪ್ರಮಾಣ ಪತ್ರ ಅನಾವಶ್ಯಕ. ಅಧಿಕಾರವಿದ್ದಾಗ ತಲೆ ತಗ್ಗಿಸುವ, ಅದು ಹೋದ ಕೂಡಲೇ ತುಳಿಯುವ ಉದ್ಧಟತನ ನನ್ನ ಸ್ವಭಾವಕ್ಕೆ ವಿರುದ್ಧವಾದದ್ದು. ನನ್ನಲ್ಲಿ ತುಸು ಮುಂಗೋಪವಿರಬಹುದೇ ಹೊರತು ಅಹಂಕಾರವಿಲ್ಲ, ಸರ್ವಮತ್ಸರವಂತು ಇಲ್ಲವೇ ಇಲ್ಲ.

ಈ ಹೇಳಿಕೆ ಪ್ರಕಟವಾದ ಕೂಡಲೇ ನನ್ನ ಮಿತ್ರರೊಬ್ಬರು-ಅನಂತರ ಅವರಿಗೂ ಮಿತ್ರರಾದವರು-ಹಾಮಾನಾ ಅವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡಬೇಕೆಂದೂ, ತಾವು ಅದಕ್ಕಾಗುವ ಖರ್ಚನ್ನು ಭರಿಸಲು ಸಿದ್ಧವೆಂದೂ ನನ್ನನ್ನು ಒತ್ತಾಯಿಸಿದರು. 'ಈ ಹೇಳಿಕೆಯನ್ನು ಯಾರು ನಂಬುತ್ತಾರೆ? ನನ್ನ ವಿಷಯ ಜಗತ್ತಿಗೆ ಗೊತ್ತಿದೆ' ಎಂದು ನಾನವರಿಗೆ ತಿಳಿಸಿದೆ. ಆ ಹೇಳಿಕೆಯನ್ನು ವಕೀಲರಿಗೆ ತೋರಿಸಲಾಗಿತ್ತು. ಮೊಕದ್ದಮೆ ಹೂಡಿದರೆ ಜಯಸಿದ್ಧ ಎಂದವರು ಹೇಳಿ ಕಳಿಸಿದರು. ನಾನು ಸೋತೇ ಗೆಲ್ಲುತ್ತೇನೆಂದು ನನ್ನ ಮಿತ್ರರಿಗೆ ತಿಳಿಸಿದೆ.

1989 ರ ಪ್ರಾರಂಭದಲ್ಲಿ ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯ ಅಧಿಕಾರಿಗಳು ನನ್ನಲ್ಲಿರುವ ಕೆಲವು ಪತ್ರಗಳನ್ನು ಆಯ್ಕೆ ಮಾಡಿಕೊಳ್ಳುವುದೆಂದು ಮನೆಗೆ

ಬಂದರು. ನನ್ನ ಪತ್ರವ್ಯವಹಾರಗಳ ಕಂತೆಯನ್ನವರ ವಶಕ್ಕೆ ಒಪ್ಪಿಸಿದೆ. ಆಕಸ್ಮಿಕವಾಗಿ ಒಂದು ದಿನ ಅವರ ಆಯ್ಕೆಯ ಪತ್ರಗಳ ಗುಂಪಿನಲ್ಲಿ ಹಾಮಾನಾ ಬರೆದ ಪತ್ರವೊಂದು ನನ್ನ ಕಣ್ಣಿಗೆ ಬಿತ್ತು. ಅದನ್ನೆತ್ತಿಕೊಂಡು ಓದಿದೆ. ಅದನ್ನೋದಿದಾಗ ನನ್ನ ಕಣ್ಣು ಮಡುಗಟ್ಟಿತು. 'ಅಲ್ಲಿದೆ ಎಮ್ಮ ಮನೆ, ಇಲ್ಲಿರುವುದು ಸುಮ್ಮನೆ' ಎಂಬ ದಾಸರಪದವೊಂದು ನೆನಪಿಗೆ ಬಂತು. ನಾವಂತು ಸುಮ್ಮನಿಲ್ಲವಲ್ಲ. ಮೂರು ದಿನ ಇದ್ದು ಹೋಗುತ್ತೇನೆನ್ನುವುದನ್ನು ಮರೆತು, ವೈರ ಮಾತ್ಸರ್ಯಾಹಂಕಾರಗಳಿಂದ ಮರೆಯುವುದು ತರವೆ, ಸಮಾಧಿಯ ತನಕ ವೈರವನ್ನುಳಿಸಿ ಕೊಂಡು ಹೋಗಬೇಕೆ ಎಂಬ ದುಃಖದಿಂದ ಅವರು ನನಗೆ 23-6-1972ರಂದು ಬರೆದಿದ್ದ ಪತ್ರವನ್ನು(ಅಮೆರಿಕೆಯಿಂದಲೂ ಇದಕ್ಕಿಂತ ಹೆಚ್ಚು ಭಾವುಕತೆಯಿಂದ ಪತ್ರ ಬರೆಯುತ್ತಿದ್ದರು. ಅವಿನ್ನೂ ನನ್ನ ಕೈಗೆ ಸಿಕ್ಕಿಲ್ಲ) ಅವರಿಗೆ ಕಳುಹಿಸಿ ಹಳೆಯದನ್ನೆಲ್ಲ ಮರೆಯುವ ಅಭಿಲಾಷೆಯನ್ನು ನನ್ನ 25 - 5 - 1989 ರ ಮೇಲ್ಪತ್ರದಲ್ಲಿ ತಿಳಿಸಿದ್ದೆ. ಆ ಪತ್ರವನ್ನು ಅಂಚೆಯಲ್ಲಿ ಕಳಿಸಲಿಲ್ಲ, ಎಲ್ಲಿಯಾದರೂ ಕಳೆದು ಹೋದೀತೆಂದು. ನನ್ನ ಗೆಳೆಯ ಶ್ರೀ ಸಿ. ವೈ. ಪಾರ್ಥಸಾರಥಿಯವರನ್ನು ಕರೆದು, ನನ್ನ ಪತ್ರವನ್ನವರಿಂದ ಓದಿಸಿ, ಅದನ್ನು ಮುದ್ದಾಂ ತಲುಪಿಸುವಂತೆ, ಹಾಮಾನಾ ಓದಿದ ನಂತರ ಅವರಿಂದ ಉತ್ತರ ತರುವಂತೆ ಹೇಳಿಕಳಿಸಿದೆ. ಅವರು ನನ್ನ ಪತ್ರವನ್ನು ಹಾಮಾನಾ ಅವರ ಕೈಗೆ ಕೊಟ್ಟು, ಅದನ್ನೋದುವ ತನಕ ಕುಳಿತಿದ್ದರಂತೆ. 'ಏನಾದರೂ ಉತ್ತರ ಕೊಡ್ತೀರಾ?' ಎಂದು ಪಾರ್ಥಸಾರಥಿ ಕೇಳಿದರಂತೆ.'ನೀವೀಗ ಹೋಗಬಹುದು' ಎಂದಷ್ಟೇ ಹಾಮಾನಾ ಹೇಳಿದರಂತೆ. ಮೊದಲು ಅವರು23-6-1972ರಲ್ಲಿ ಬರೆದಿದ್ದ ಪತ್ರವನ್ನು ಕೊಟ್ಟು, ಅನಂತರ 25-5-1989ರ ನನ್ನ ಪತ್ರವನ್ನು ಮುದ್ರಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ ಮೈಸೂರು-೬
ಜೂನ್ ೨೩, ೧೯೭೨

ನಿರ್ದೇಶಕ:ಡಾ. ಹಾ. ಮಾ. ನಾಯಕ
ಕನ್ನಡ ಮತ್ತು ಭಾಷಾವಿಜ್ಞಾನ ಪ್ರಾಧ್ಯಾಪಕ.

ಸನ್ಮಾನ್ಯ ಶ್ರೀ ಜವರೇಗೌಡರಲ್ಲಿ ವಿಜ್ಞಾಪನೆಗಳು

ಮೂರು ದಿನಗಳ ಕೆಳಗೆ ನಿಮ್ಮ ಪುಸ್ತಕ- 'ಸಾಹಿತಿಗಳ ಸಂಗದಲ್ಲಿ' ದ ಮುಖ ಚಿತ್ರ ಎಲ್ಲಿಯವರೆಗೆ ಬಂದಿದೆ ಎಂಬುದನ್ನು ನೋಡಲು ಉಷಾಪ್ರೆಸ್ಸಿಗೆ ಹೋಗಿದ್ದಾಗ ಆಕಸ್ಮಾತ್ತಾಗಿ ಆ ಪುಸ್ತಕದ ಕೊನೆಯ ಪುಟಗಳು ನನ್ನ ಗಮನಕ್ಕೆ ಬಂದವು. ಅವು ನನ್ನನ್ನು ಮೂಕ ವಿಸ್ಮಿತನನ್ನಾಗಿಸಿದವು. ಸಂತೋಷಕ್ಕಿಂತ ಹೆಚ್ಚಾಗಿ ಸಂಕೋಚವಾಯಿತು. ನೀವು ಅದನ್ನು ಬರೆಯಬಾರದಿತ್ತು ಎಂಬುದೇ ನನ್ನ ಖಚಿತವಾದ ಅಭಿಪ್ರಾಯ. ನನ್ನನ್ನು ಕುರಿತ ನಿಮ್ಮ ಪ್ರಶಂಸೆಯ ಮಾತುಗಳು ಅತಿಯಾದವೆಂದು ನನಗೆ ಗೊತ್ತಿದೆ. ನೀವು ಸದಾ ಉದಾರ ಹೃದಯರು; ನಿಮ್ಮ ವಿಮರ್ಶೆಗಳಲ್ಲಿ ಹೊಗಳಿಕೆಯ ಅಂಶ ಸ್ವಲ್ಪ ಹೆಚ್ಚಿರುತ್ತದೆಂದು ನಾನೇ

ಎಲ್ಲೋ ಬರೆದಿರುವ ನೆನಪು. ಆದರೆ ಇದೆಲ್ಲ ನನ್ನ ವಿಷಯದಲ್ಲಿ ಪರಮಾವಧಿಯನ್ನು ಮುಟ್ಟಿವೆ ಎಂದೇ ನನ್ನ ಭಾವನೆ.

ನೀವು ಬರೆದಿರುವ ಮಾತುಗಳೆಲ್ಲ ನೀವು ನನ್ನಲ್ಲಿರಿಸಿರುವ ಪ್ರೀತಿಯ ದ್ಯೋತಕವೆಂದೂ, ನೀವು ನನ್ನಿಂದ ಏನನ್ನು ಬಯಸುತ್ತೀರೆಂಬುದನ್ನು ಅವು ವ್ಯಕ್ತ ಪಡಿಸುತ್ತವೆಂದೂ ನನಗೆ ಗೊತ್ತು. ಅದೆಲ್ಲ ನನ್ನ ಯೋಗ್ಯತೆಯವಲ್ಲ ಎಂಬುದರ ಅರಿವು ನನಗೆ ಚೆನ್ನಾಗಿದೆ. ನಿಮ್ಮ ಪುಸ್ತಕದಲ್ಲಿ ನೀವು ವರ್ಣಿಸಿರುವ ವ್ಯಕ್ತಿಗಳೆಲ್ಲ ಕಾರಣ ಪುರುಷರು; ಸಿದ್ಧರು. ಅವರ ಮಾಲಿಕೆಯಲ್ಲಿ, ನಾನು ಕೊನೆಯವನಾದರೂ, ನನಗೆ ಜಾಗವಿಲ್ಲವೆಂದೇ ನನ್ನ ತಿಳಿವಳಿಕೆ. ನನ್ನ ಬಗ್ಗೆ ನೀವು ಬರೆದಿರುವ ಅಂತಃಕರಣದ ಮಾತುಗಳಿಗೆ ಏನು ಹೇಳಬೇಕೆಂಬುದೇ ತೋಚುತ್ತಿಲ್ಲ. ಆದರೆ ಈ ಸಾಲುಗಳನ್ನು ಬರೆಯುವಾಗ ನನ್ನ ಕಣ್ಣುಗಳಲ್ಲಿ ನೀರಾಡುತ್ತಿದೆ, ಗಂಟಲು ಒಣಗಿ ಬರುತ್ತಿದೆ.

ನಿಮ್ಮ ಪ್ರೋತ್ಸಾಹ ಮಾರ್ಗದರ್ಶನ ಬೆಂಬಲಗಳಿಲ್ಲದಿದ್ದರೆ ನನ್ನ ಬದುಕಿನ ತಿರುವೇ ಬೇರೆಯಾಗಿರುತ್ತಿತ್ತು. ನನ್ನ ಅಭ್ಯುದಯಕ್ಕೆಲ್ಲ ನೀವೇ ಕಾರಣರಾಗಿದ್ದೀರಿ. ಕನ್ನಡ ಅಧ್ಯಯನ ಸಂಸ್ಥೆಯ ಚಟುವಟಿಕೆಗಳನ್ನು ನಿಮ್ಮಷ್ಟು ದಕ್ಷತೆಯಿಂದ ನಡೆಸಿಕೊಂಡು ಹೋಗುವುದು ನನಗೆ ಸಾಧ್ಯವಾಗಲಿಲ್ಲ ಎಂಬ ಚಿಂತೆ ನನ್ನನ್ನು ಸದಾ ಕಾಡುತ್ತದೆ. ಆದರೆ ನಾನು ಯಾವಾಗಲೂ ಸೋಮಾರಿಯಾಗಿ ಕಾಲಹರಣ ಮಾಡಲಿಲ್ಲವೆಂಬುದು ನಿಮಗೆ ಗೊತ್ತಿದೆ. ನಿಮಗಿರುವ ವ್ಯವಹಾರ ಜ್ಞಾನ ನನಗಿಲ್ಲ. ಮೇಲಾಗಿ ಸಂಸ್ಥೆಯಲ್ಲಿ ನೀವಿದ್ದ ಕಾಲಕ್ಕಿಂತ ಸ್ವಲ್ಪ ಬೇರೆಯಾದ ಪರಿಸ್ಥಿತಿಯಿದೆ. ನನ್ನೆಲ್ಲ ಶಕ್ತಿಯನ್ನೂ ಸಂಸ್ಥೆಗಾಗಿ ವಿನಿಯೋಗಿಸಿದ್ದೇನೆ. ನೀವು ಕಟ್ಟಿದ ಸಂಸ್ಥೆ,ನಿಮ್ಮ ಆದರ್ಶದ ಸಂಸ್ಥೆ, ನಿಮ್ಮ ಆಡಳಿತ ಕಾಲದಲ್ಲಿಯೇ ಶಿಥಿಲಗೊಳ್ಳಬಾರದೆಂದು ಶಕ್ತಿ ಮೀರಿ ಶ್ರಮಿಸಿದ್ದೇನೆ. ಹೆಚ್ಚು ಕಾಲ ಈ ಕೆಲಸ ಮಾಡಲಾರೆನೆಂಬ ಭಾವನೆ ಈಗೀಗ ಹೆಚ್ಚಾಗುತ್ತಿದೆ. ನೀವೇ ನನ್ನ ಸ್ಥಾನದಲ್ಲಿದ್ದಿದ್ದರೆ ವಿಶ್ವವಿದ್ಯಾನಿಲಯದ ವ್ಯವಹಾರಗಳಲ್ಲಿ ಒಬ್ಬ ಕುಲಪತಿಗೆ ಎಷ್ಟು ಸಹಾಯಕರಾಗಿ ನಿಲ್ಲುತ್ತಿದ್ದಿರೋ, ಆ ಪ್ರಮಾಣದಲ್ಲಿ ನಾನು ನಿಮಗೆ ಸಹಾಯಕನಾಗಲಿಲ್ಲವೆಂಬುದೂ ನನಗೆ ಗೊತ್ತಿದೆ. ಅದಕ್ಕೆ ಕಾರಣ ನನ್ನ ಹಲವು ವೈಯಕ್ತಿಕ ಸೀಮಿತಗಳೇ ವಿನಾ ಬೇರೆಯಲ್ಲ. ನಿಮಗೂ ಇದು ತಿಳಿದಿದೆ. ಇಂಥ ವಿಷಯಗಳು ನನ್ನನ್ನು ಆಗಾಗ ಕಾಡುತ್ತಿರುತ್ತವೆ.

ನೀವಾದರೋ, ಇವೆಲ್ಲವನ್ನೂ ಮರೆತು ನನ್ನ ಮೇಲೆ ಪ್ರೀತಿಯ ಮಳೆಗರೆದಿದ್ದೀರಿ. ಈ ಋಣವನ್ನು ತೀರಿಸಲು ಎಷ್ಟು ಬದುಕುಗಳನ್ನು ನಾನು ಪಡೆಯಬೇಕೊ. ನಿಮ್ಮ ಪ್ರೀತಿಯನ್ನು ಬಳಸಿಕೊಳ್ಳುವ ಯೋಗ್ಯತೆ ಯಾವಾಗಲೂ ನನ್ನದಾಗಿರಲಿ ಎಂದು ಸದಾ ಪ್ರಾರ್ಥಿಸುತ್ತೇನೆ ಹಾಗೂ ಅದಕ್ಕಾಗಿ ಶ್ರಮಿಸುತ್ತೇನೆ.

ಈ ಕೆಲವು ಮಾತುಗಳನ್ನು ನಿಮ್ಮಲ್ಲಿ ಹೇಳಿಕೊಳ್ಳಬೇಕೆಂದು ಈ ಬೆಳಗ್ಗೆ ನಿಮ್ಮಲ್ಲಿಗೆ ಬಂದೆ. ಆದರೆ ಸನ್ನಿವೇಶ ಅದಕ್ಕೆ ಸರಿಯಾಗಿರಲಿಲ್ಲ. ಆದ್ದರಿಂದ ಆಡಳಿತಕ್ಕೆ ಸಂಬಂಧಿಸಿದ ಯಾವುದೋ ಎರಡು ಮಾತುಗಳನ್ನು ಆಡಿ ಹೊರಟು ಬಂದೆ. ಆದರೆ ನನ್ನ ಹೃದಯವನ್ನು

ತೋಡಿಕೊಳ್ಳದಿದ್ದರೆ ನನಗೆ ನೆಮ್ಮದಿಯಾಗುವುದಿಲ್ಲವೆಂದು ಈ ನಾಲ್ಕು ಮಾತುಗಳನ್ನು ಬರೆದಿದ್ದೇನೆ. ಹೊರಗೆ ಅನೇಕರು ನನ್ನನ್ನು ನೋಡಲು ಕಾಯುತ್ತಿರುವುದರಿಂದ ಇದನ್ನು ನಾನು ಮತ್ತೊಮ್ಮೆ ಓದಲೂ ಆಗಿಲ್ಲ. ಬರಹದಲ್ಲಿ ತಪ್ಪಿದ್ದರೆ ಕ್ಷಮಿಸಿ.

ಇದು ಭಾವುಕತೆ ಎಂದು ನಿಮಗೆ ಅನ್ನಿಸಬಹುದು. ಆದರೆ ಅದು ಹೃದಯ ಸಂಬಂಧಿಯಷ್ಟೆ? ಆದ್ದರಿಂದ ಇದರಲ್ಲಿ ತಪ್ಪಿಲ್ಲ. ಹೃದಯವಿಲ್ಲದ ಬುದ್ಧಿಗೆ ಏನು ಬೆಲೆ?

ಗೌರವಪೂರ್ವಕ ವಂದನೆಗಳೊಡನೆ

ನಿಮ್ಮ ವಿಶ್ವಾಸದ

ಹಾಮಾನಾಯಕ

ದೇ. ಜವರೇಗೌಡ

ಮೈಸೂರು ೧೨

೨೫. ೫. ೧೯೮೯

ಪ್ರಿಯ ಹಾಮಾ. ನಾಯಕ ಅವರಲ್ಲಿ ಜವರೇಗೌಡನ ವಿಜ್ಞಾಪನೆಗಳು

ನನ್ನಲ್ಲಿರುವ, ತಮಗೆ ಬೇಕಾದ, ಪತ್ರಗಳನ್ನು ಪತ್ರಾಗಾರ ಇಲಾಖೆಯವರು ನನ್ನ ಕಡತಗಳಿಂದ ಸೋಸಿ ತೆಗೆಯುತ್ತಿದ್ದರು. ಹಾಗೆ ತೆಗೆಯುವಾಗ ನೀವು 23 . 6. 1972ರಂದು ನನಗೆ ಬರೆದ ಕಾಗದವನ್ನು ನನಗೆ ತೋರಿಸಿದರು. ಅದನ್ನೋದಿದಾಗ ನನ್ನ ಮನಸ್ಸಿನಲ್ಲುದ್ಭವಿಸಿದ ಭಾವತರಂಗಗಳನ್ನು ನಾನಿಲ್ಲಿ ಬರೆಯಲಾರೆ. ಆದರೆ ಅದನ್ನೋದುತ್ತಿದ್ದಂತೆ ಈ ತನಕ ನಿಮ್ಮ ಬಗೆಗಿದ್ದ ಅಸಮಾಧಾನ ಮರೆಯಾಯಿತು. ಹಿಂದಿನ ನನ್ನ ನಿಮ್ಮ ಸಂಬಂಧಗಳ ಚಿತ್ರ ಮರುಕಳಿಸಿತು. ಅಂದಿನ ನಿಮ್ಮ ಪ್ರೀತಿ ನನ್ನ ಮನಸ್ಸನ್ನಪ್ಪಿಕೊಂಡಿತು. ಆ ಕಾಗದದ ನಕಲನ್ನಿದರೊಡನೆ ಲಗತ್ತಿಸಿದ್ದೇನೆ.

ನನಗೆ ನಾನಾ ಕಾರಣಗಳಿಂದ ನಿಮ್ಮ ಬಗ್ಗೆ ಅಸಮಾಧಾನವಿದ್ದರೂ, ನಿಮ್ಮ ಶ್ರೇಯಸ್ಸಿನ ಬಗ್ಗೆ ಯಾವಾಗಲೂ ನಾನು ಹಾರೈಸುತ್ತಿದ್ದೇನೇ ಹೊರತು, ದೂಷಿಸುತ್ತಿರಲಿಲ್ಲ. ಒಂದೇ ಒಂದು ಸಾರಿ ಮಾತ್ರ, ಸಿಂಡಿಕೇಟಿನ ಚುನಾವಣೆಗಳ ಸಂದರ್ಭದಲ್ಲಿ, ನೀವು ನಿಲ್ಲುವುದು ಗೊತ್ತಾಗದಿದ್ದಾಗ, ಬೇರೆಯವರಿಗೆ ಸಹಾಯ ಮಾಡುವುದಾಗಿ ಮೊದಲೇ ವಚನ ನೀಡಿದ್ದರಿಂದ, ಅನಿವಾರ್ಯವಾಗಿ ನಿಮ್ಮನ್ನು ವಿರೋಧಿಸಬೇಕಾಯಿತು. ಆದರೆ 5-5-77 ರಂದು ನೀವು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು 'ತಾವಿದ್ದಾಗ ಸಮರ್ಪಕ, ಇಲ್ಲದಿದ್ದಾಗ ಅಸಮರ್ಪಕ' ಎಂದೆಲ್ಲ ಬಯ್ದು ನನ್ನ ಘನತೆಯನ್ನು ಸಹ ಪ್ರಶ್ನಿಸಿದ ನಂತರ ನಿಮ್ಮ ಬಗ್ಗೆ ಅಸಮಧಾನ ಪ್ರಾರಂಭವಾಯಿತೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಇದೆಲ್ಲ ಹಳೆಯ ಕತೆ. ಮರೆವು ನನಗೆ ದೇವರು ಕರುಣಿಸಿರುವ ವರ. ಮೇಲ್ಕಾಣಿಸಿರುವ ನಿಮ್ಮ ಪತ್ರವನ್ನೆ ಮರೆತಿದ್ದೆ. ನನಗೆ ದಿನಚರಿ ಬರೆಯುವ ಅಭ್ಯಾಸವುಂಟು. ಆಯಾಯ ದಿನದ

ಅನುಭವಭಾವಗಳನ್ನು ಬರೆದನಂತರ ಮರೆಯುವುದು ನನ್ನ ವಾಡಿಕೆ. ವಿರಸ ವೈಷಮ್ಯಗಳನ್ನು ಸಮಾಧಿಯ ತನಕ ಕೊಂಡೊಯ್ಯುವ ಶಠತನ ನನ್ನದಲ್ಲ.

ನಿಮಗೆಲ್ಲ ಶುಭಗಳೊದಗಲೆಂದು ಹಾರೈಸಿ. ಈ ಪತ್ರ ಮುಗಿಸುತ್ತೇನೆ.

ಇಂತು ನಿಮ್ಮ ವಿಶ್ವಾಸಿ

ದೇ ಜವರೇಗೌಡ

ಡಾ. ಹಾ. ಮಾ. ನಾಯಕರು. ಪ್ರಾಧ್ಯಾಪಕರು

ಮಾನಸಗಂಗೋತ್ರಿ, ಮೈಸೂರು.

ಇನ್ನೂ ನನ್ನ ಪತ್ರಕ್ಕೆ ಉತ್ತರ ನಿರೀಕ್ಷಿಸುತ್ತಿದ್ದೇನೆ.“ಹೃದಯ ವಿಲ್ಲದ ಬುದ್ಧಿಗೆ ಏನು ಬೆಲೆ?" ಎಂಬ ಅವರ ಪತ್ರದ ಕೊನೆಯ ವಾಕ್ಯ ಮಾತ್ರ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದೆ.

ಸುಪ್ರಸಿದ್ಧ ಸಂಶೋಧಕ - ವಿದ್ವಾಂಸರಾದ ಡಾ. ಶಂಬಾ. ಜೋಶಿಯವರು ನನಗೆ ಪರಮ ಮಿತ್ರರು. ನನಗೂ ಅವರಿಗೂ ಪತ್ರವ್ಯವಹಾರ ಆಗಾಗ್ಗೆ ನಡೆಯುತ್ತಿತ್ತು. ಧಾರವಾಡದ ಕಡೆಗೆ ಹೋದಾಗ ಅವರನ್ನು ನೋಡದೆ ಬರುತ್ತಿರಲಿಲ್ಲ. ಅವರಲ್ಲಿ ನನಗೆ ಅಪಾರ ಗೌರವವಿದ್ದದ್ದರಿಂದಲೇ ಅವರಿಗೆ ಗೌರವ ಡಾಕ್ಟರೇಟ್ ಪದವಿ ಬರಲು ನಾನು ನೆರವಾದದ್ದು. ಅವರಂಥ ಪ್ರಾಜ್ಞರು ಸಹ ಹೇಗೆ ಚಾಡಿಕೋರರ ಮಾತಿಗೆ ಮರುಳಾಗುತ್ತಾರೆನ್ನುವುದಕ್ಕೆ ನನ್ನ ಅವರ ನಡುವೆ ನಡೆದ ಮೂರೇ ಮೂರು ಪತ್ರ ವ್ಯವಹಾರಗಳನ್ನಿಲ್ಲಿ ಪ್ರತಿ ಮಾಡುತ್ತೇನೆ.

ನಾನು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಡಾ. ಹಾವನೂರರ ಕೃಪೆಯಿಂದಾಗಿ ‘ಸ್ಥಳ ನಾಮಗಳ’ನ್ನು ಕುರಿತು ಭಾಷಣ ಮಾಡಿದ್ದೆ. ಅದೇ ವರ್ಷ ಸ್ಥಳನಾಮ ಸಂಘದ ವಾರ್ಷಿಕಾಧಿವೇಶನದ ಸಮಾರೋಪ ಸಮಾರಂಭದಲ್ಲಿಯೂ ಭಾಷಣ ಮಾಡಿದ್ದೆ. ಆ ಸಂದರ್ಭದಲ್ಲಿ ನಾನವರ ಹೆಸರೆತ್ತಲಿಲ್ಲವೆಂದು ಯಾರೋ ಹೇಳಲಾಗಿ ಜೋಶಿಯವರು ಪತ್ರ ಬರೆದಿದ್ದರು. ಪತ್ರ ವ್ಯವಹಾರಕ್ಕೆ ಅವರ ಪತ್ರವೇ ಕಾರಣವಾಯಿತು.

ಶಂಬಾ ಜೋಶಿ

ಸಾಧನ ಕೆರೆ, ಧಾರವಾಡ - 8

20- 1- 87

ಮಾನನೀಯ ಜವರೇಗೌಡ ಇವರಲ್ಲಿ ಸಾದರ ಸಪ್ರೇಮ ವಂದನೆ

ನನ್ನ ಹಿತಚಿಂತಕರಲ್ಲಿ ನಿಮಗೆ ಮೊದಲನೇ ಸ್ಥಾನ. ನಿಮ್ಮ ಬಗ್ಗೆ ನನಗೆ ಅಭಿಮಾನ.

ಆದರೆ. ನನಗೆ ಮುಂಬೈ ವಿಶ್ವವಿದ್ಯಾಲಯದ ಪ್ರೊ. ಶ್ರೀಮಾನ್ ಹಾವನೂರ ಅವರಿಂದ ತಿಳಿದ ಸಂಗತಿಯು ತುಂಬ ನಿಮ್ಮ ಮಟ್ಟಕ್ಕೆ ಕಳಂಕ ಹಚ್ಚುವಂತಹದ್ದಾಗಿದೆ.

ನೀವು ಅಲ್ಲಿ ‘ಸ್ಥಳನಾಮ’ಗಳ ಬಗೆಗೆ ಭಾಷಣ ಮಾಡುವಾಗ. ನನ್ನ ಕೆಲಸದ ಉಲ್ಲೇಖವನ್ನೇ ಮಾಡಿಲ್ಲವಂತೆ!

'ಎಡೆಗಳು ಹೇಳುವ ಕಂನಾಡ ಕತೆ' ಈ ಪುಸ್ತಕ ಸದೋಷವಿದೆ. ಎಂದಿದ್ದರೂ ಆಗ ಬಹುದಿತ್ತಲ್ಲ? ಆದರೆ ಅನುಲ್ಲೇಖವು ವಿಶ್ವವಿದ್ಯಾಲಯದ ಕುಲಪತಿ ಆದವರಿಗೆ ಅಶ್ರೇಯಸ್ಕರವಾಗಿದೆ ಎಂದರೆ ತಪ್ಪೇ?

ನಿಮ್ಮ ಈ ಬಗೆಯ ನಡವಳಿಯೇ ಡಾ. ಹಾ. ಮಾ. ನಾಯಕರನ್ನು ವಿರೋಧಿಯನ್ನಾಗಿಸಿರಲು ಸಾಧ್ಯವಿದೆ.

ಮುಂಬೈಯಿಂದ ನನಗೆ ತಿಳಿದ ಸುದ್ದಿಯೇ ಮೊನ್ನೆ ತಾನೆ ತಿರುಪತಿಯಲ್ಲೂ ಆಯಿತು ಎಂದು. ಆ ಸಭೆಗೆ ಬಂದಿದ್ದ ನನ್ನ ಮಿತ್ರ ಶ್ರೀ ಅ. ಬಾ. ಕುಲಕರ್ಣಿ ಅವರಿಂದಲೂ ಬಂದ ಕಾಗದದಿಂದ ಗೊತ್ತಾಗಿ ತುಂಬ ವಿಷಾದವಾಯ್ತು!

ಈ ಮೇಲಣ ಘಟನೆ ಸುಳ್ಳು ಆರೋಪವಿದ್ದರೆ ನಿಮ್ಮಿಂದ ತಿಳಿಯಬೇಕೆಂಬ ಉದ್ದೇಶದಿಂದ ಈ ಕಾಗದ. ಡಾ. ಎಸ್. ವಿ. ರಂಗಣ್ಣನವರಂಥವರು ನಿಮ್ಮನ್ನು ರೂಪಿಸಿದ್ದಾಗಿ ಕೇಳಿ ವಿಷಾದಪಟ್ಟಿದ್ದೆ. ಆದರೆ ನಿಮ್ಮ ಸ್ವಭಾವವೇ ಈ ಬಗೆಯವಾಗಿದೆಯೇ?

ನಿಮ್ಮಿಂದ ಅರಿಯುವ ಕುತೂಹಲವಿದೆ. ಉತ್ತರ ಬರೆಯಲು ಬೇಡುವ

ನಿಮ್ಮ ಹಿತೈಷಿ.

ಶಂಬಾ ಜೋಶಿ.

(ಅಂತರ್ದೇಶೀಯ ಪತ್ರದಲ್ಲಿದನ್ನು ಬರೆದಿದ್ದಾರೆ ಅವರ ಲಿಪಿ ಪೂರ್ಣವಾಗಿ ಸ್ಪಷ್ಟವಾಗುವುದಿಲ್ಲವಾದರೂ ಒಂದೆರಡು ಕಡೆ ನನಗೆ ತಿಳಿದ ಹಾಗೆ ಓದಿಕೊಂಡಿದ್ದೇನೆ. ನನ್ನ ಓದು ಸರಿಯೆಂದೇ ತಿಳಿದಿದ್ದೇನೆ.)

ಈ ಪತ್ರಕ್ಕುತ್ತರವಾಗಿ ನಾನು ದೀರ್ಘ ಪತ್ರವನ್ನೇ ಬರೆದೆ.

ದೇಜಗೌ

ಕಲಾನಿಲಯ, ಜಯಲಕ್ಷ್ಮೀಪುರ

ಮೈಸೂರು 12/ 28-1-87

ಮಾನ್ಯ ಡಾ. ಶಂಬಾ ಜೋಶಿಯವರಲ್ಲಿ ಜವರೇಗೌಡನ ವಿಜ್ಞಾಪನೆಗಳು

ಇಂದೇ ಕೈಸೇರಿದ 20-1-1987 ನೇ ದಿನಾಂಕದ ನಿಮ್ಮ ಪತ್ರವನ್ನೋದಿದಾಗ ಅಚ್ಚರಿಯಾಯಿತು. ನಗು ಬಂತು. ಅದಕ್ಕಾಗಿ ಧನ್ಯವಾದಗಳು.

ಮಂಬಯಿ ವಿಶ್ವವಿದ್ಯಾಲಯದ ಭಾಷಣಗಳನ್ನು ಸಿದ್ಧಪಡಿಸಿಕೊಂಡೇ ನಾನು ಹೋಗಿದ್ದೆ. ಆದರೆ ಅವನ್ನೋದದೆ. ಭಾಷಣ ಮಾಡಿದೆ. ಸ್ಥಳನಾಮಗಳ ಅಧ್ಯಯನದ ಇತಿಹಾಸವನ್ನು ನಿರೂಪಿಸುವಾಗ ಯಾರಾದರೂ ನಿಮ್ಮ ಹೆಸರನ್ನು ನೆನೆಯಲೇಬೇಕು. ಸಿದ್ಧವಾಗಿರುವ ಆ ನನ್ನ ಭಾಷಣಗಳಲ್ಲಿ ನಿಮ್ಮ ಹೆಸರಿದ್ದೇ ಇವೆ. ನನ್ನ

ಉಪನ್ಯಾಸದಲ್ಲಿಯೂ ನಿಮ್ಮ ಹೆಸರನ್ನುಲ್ಲೇಖಿಸಿದ್ದುಂಟು. ಡಾ. ಹಾವನೂರರಿಗೆ ನಾನು ಮಾಡಿದ ಉಲ್ಲೇಖ ನೆನಪಿರಲಾರದು.

ತಿರುಪತಿಯಲ್ಲಿ ನಾನು ಸ್ಥಳ ನಾಮಗಳ ಬಗ್ಗೆ ಮಾತಾಡಲೇ ಇಲ್ಲ. ನಾನು ಪ್ರಬಂಧವನ್ನು ಸಹ ಮಂಡಿಸಲಿಲ್ಲ. ನಾನು ಮಾಡಿದ್ದು ಸಮಾರೋಪ ಭಾಷಣ. ಆ ಭಾಷಣ ಮಾಡುವ ವಿಷಯವೂ ನನಗೆ ಮೊದಲೇ ಗೊತ್ತಿರಲಿಲ್ಲ ಆದ್ದರಿಂದ ನಾನು ಮಾತಾಡಿದ್ದು ಸ್ಥಳನಾಮ ಸಂಘದ ವಿಷಯ ಕುರಿತಷ್ಟೇ. ಈಕಾರಣಕ್ಕಾಗಿ ಯಾರ ಹೆಸರನ್ನೂ ನಾನು ಎತ್ತ ಬೇಕಾದ ಅಗತ್ಯವಿರಲಿಲ್ಲ, ಆ ನನ್ನ ಭಾಷಣದಲ್ಲಿ.

ನಾನೂ ಸಾಹಿತ್ಯಕ್ಷೇತ್ರದಲ್ಲಿ, ಜಾನಪದ ಕ್ಷೇತ್ರದಲ್ಲಿ, ಇನ್ನೂ ಇತರ ಕ್ಷೇತ್ರಗಳಲ್ಲಿ ಅಷ್ಟೋ ಇಷ್ಟೋ ಕೆಲಸ ಮಾಡಿದ್ದೇನೆ. ಆದರೆ ನನ್ನ ಹೆಸರನ್ನು ಎಲ್ಲರೂ ಎಲ್ಲ ಕಡೆಯೂ ಉಲ್ಲೇಖಿಸಬೇಕು, ಎಲ್ಲರೂ ನನ್ನ ಸಾಹಿತ್ಯವನ್ನು ಓದಬೇಕು ಎಂದು ನಾನು ನಿರೀಕ್ಷಿಸುವುದಿಲ್ಲ. ಆತ್ಮಸಂತೋಷಕ್ಕಾಗಿ ಬರೆಯುತ್ತೇನೆ, ಮರೆಯುತ್ತೇನೆ, ಕೆಲಸ ಮಾಡುತ್ತೇನೆ, ನನಗೆ ಯಾರ ಪ್ರಶಂಸೆಯೂ ಬೇಡ.

ಒಂದು ಪಕ್ಷ ನಾನು ನಿಮ್ಮ ಹೆಸರೆತ್ತದೆ, ಅಥವಾ ಹೆಸರೆತ್ತಿ ಖಂಡಿಸುವ ಅಪರಾಧವನ್ನೆಸಗಿ ಮೂರ್ಖತನವನ್ನು ಪ್ರದರ್ಶಿಸಿದ್ದರೆ, ನಿಮ್ಮಂಥ ಪ್ರಾಜ್ಞರು ಪ್ರಾಜ್ಞತೆಗೆ ಊನ ಬರುವ ರೀತಿಯಲ್ಲಿ ಪತ್ರ ಬರೆಯಬಾರದಿತ್ತು. ನಾನು ಚಾಡಿಕೋರರ ಮಾತಿಗೆ ಸೊಪ್ಪು ಹಾಕುವವನಲ್ಲ. 'ಡಾ. ಎಸ್. ವಿ. ರಂಗಣ್ಣನವರು ನಿಮ್ಮನ್ನು ರೂಪಿಸಿದ್ದಕ್ಕಾಗಿ ಕೇಳಿ ವಿಷಾದಪಟ್ಟಿದ್ದೇನೆ' ಎಂದು ಬರೆದಿದ್ದೀರಿ. ಈ ಮಾತು ನನಗೆ ಅರ್ಥವಾಗಿಲ್ಲ. ಕಾರಣ, ನನ್ನನ್ನು ರೂಪಿಸಿದವರು ಶ್ರೀಕುವೆಂಪು ಅವರೇ ಹೊರತು, ಬೇರೆಯಾರೂ ಅಲ್ಲ. ಮತ್ತೊಬ್ಬರು ಗುರು ತೀನಂಶ್ರೀ ಯವರ ಉಪಕಾರವನ್ನೂ ನಾನು ಮರೆಯಲಾರೆ. ಯಾವ ಅರ್ಥದಲ್ಲಿ ರಂಗಣ್ಣನವರ ಬಗೆಗಿನ ಈ ಮಾತು ಹೇಳಿದ್ದೀರೋ ಗೊತ್ತಿಲ್ಲಾ. ಆದರೆ ಅವರು ನನಗೆ ಸರ್ವವಿಧದಿಂದಲೂ ಮಾನ್ಯರು.

ನಿಮ್ಮ ವಿದ್ವತ್ತಿನ ಬಗ್ಗೆ ನನಗೆ ಗೌರವವಿರದಿದ್ದರೆ, ನಾನು ನಿಮ್ಮನ್ನು ಗೌರವ ಭಾವದಿಂದ ಕಾಣುತ್ತಿರಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯಕ್ಕೂ ನಿಮ್ಮನ್ನು ಆಹ್ವಾನಿಸುತ್ತಿರಲಿಲ್ಲ. ನಿಮ್ಮಲ್ಲಿ ನನಗೆ ಏಕ ರೀತಿಯಾದ ಅಭಿಮಾನವಿದೆಯೆಂಬುದಕ್ಕೆ ಪ್ರತ್ಯೇಕ ಅಂಚೆಯಲ್ಲಿ ಕಳಿಸಿರುವ 'ದಾರಿದೀಪಗಳು' ಎಂಬ ಗ್ರಂಥದಲ್ಲಿ ನಿಮ್ಮನ್ನು ಕುರಿತು ಅಚ್ಚಾಗಿರುವ ಪ್ರಬಂಧವೇ ಸಾಕ್ಷಿ. ನಾನು ಗೋಸುಂಬೆಯಲ್ಲ. ನಾನೆಂದೂ ಎಂಥ ಸಂದರ್ಭದಲ್ಲಿಯೂ ಬಣ್ಣ ಬದಲಾಯಿಸುವವನಲ್ಲ. ಪಿಸುಣತನವನ್ನು ಕಂಡರಾಗದು ನನಗೆ.

ಡಾ. ಹಾ. ಮಾ. ನಾಯಕರ ಹೆಸರು ಎತ್ತಿದ್ದೇ ಅನುಚಿತ. ನನ್ನ ಮತ್ತು ಅವರ ಸಂಬಂಧದ ವಿಷಯ ನಿಮಗೇನು ಗೊತ್ತಿದೆ? ಬೇಕಾದರೆ ಹೇಳಿ, ಪುಟಗಟ್ಟಳೆ ಅವರ ಬಗ್ಗೆ ಬರೆದು ಕಳಿಸುತ್ತೇನೆ. ನನ್ನಿಂದ ಅವರೇನು ಪಡೆದಿದ್ದಾರೆಂಬುದು ನಿಮಗೆ ಗೊತ್ತೆ? ನಾನು

ಅವರಿಗಿಂತ ವಯಸ್ಸಿನಲ್ಲಿಯೂ ತುಂಬ ಓರಿಯನೆನ್ನುವುದು ನಿಮಗೆ ತಿಳಿದಿದೆಯೇ? ನಾನು ಮುಂಬಯಿಗೆ ಹೋಗಿದ್ದಾಗ ಹಾವನೂರ ಅವರ ಮೇಲೆ ಏನೇನು ಚಾಡಿ ಹೇಳಿದರು. ಗೊತ್ತೇ? ಅಂಥವರಿಂದಲೇ ನಮ್ಮ ವಿಶ್ವಾಸಕ್ಕೆ ಭಂಗ ಬಂದಿರುವಂಥದು. ಈ ಸಂದರ್ಭದಲ್ಲಿ ನಿಮ್ಮ ಮತ್ತು ಬೇಂದ್ರೆಯವರ ಸಂಬಂಧದ ಬಗ್ಗೆ ಮಾತೆತ್ತಿದರೆ ನಿಮಗೇನು ಅನಿಸುತ್ತದೆ ? ನೀವೇ ಹೇಳಿ. ಅಂಥ ವಿಚಾರಗಳು ನನಗೆ ಬೇಡ. ನಮ್ಮ ದೇಶ ಕೆಟ್ಟಿರುವುದೇ ವಿದ್ಯಾವಂತರಿಂದ ಎಂಬ ನನ್ನ ಸಂದೇಹ ದಿನೇ ದಿನೇ ದೃಢವಾಗುತ್ತಿದೆ.

ನೀವು ಈ ರೀತಿ ಬರೆದಿರೆಂದು ನನಗೆ ಕೋಪವಿಲ್ಲ. ಆದರೆ ನಿಮ್ಮ ಕಿವಿ ಚಾಡಿ ಮಾತುಗಳಿಗೆ ಎರವಾಗಿದೆಯಲ್ಲ, ನಿಮ್ಮಂಥ ಪ್ರಾಜ್ಞರು ಹೀಗೆಲ್ಲ ಬರೆಯಬಹುದೇ ಎಂದು ವ್ಯಥೆಯಾಗುತ್ತಿದೆ.

ನಿಮ್ಮಂಥ ಪ್ರಾಜ್ಞರಿಗೆ ಮತ್ತೇನು ಬರೆಯಲಿ? ವಂದನೆಗಳೊಡನೆ

ತಮ್ಮ ವಿಶ್ವಾಸಿ

ದೇ. ಜವರೇಗೌಡರು

ಡಾ ಶಂಬಾ ಜೋಶಿಯವರು

ಸಾಧನಕೆರೆ,

ಧಾರವಾಡ 580 008

ಜೋಶಿಯವರು ನನ್ನ ಪತ್ರಕ್ಕೆ ನಾಲ್ಕೈದು ಪಂಕ್ತಿಗಳಲ್ಲಿ, ಒಂದು ಕಾರ್ಡಿನಲ್ಲಿ ಉತ್ತರ ಕೊಟ್ಟಿದ್ದಾರೆ

ಶಂಬಾ ಜೋಶಿ

ಸಾಧನಕೆರೆ, ಧಾರವಾಡ

೨೯. ೧. ೧೯೮೭

ಸಾಧುಮೃದು ಮನೋಭಾವದ ಮಾನಸೀಯ ಡಾ. ದೇಜಗೌ ಅವರಲ್ಲಿ, ಸಾದರ ಸಪ್ರೇಮ ವಂದನೆ. ನೀವು ನನಗೆ ಮಾಡಿರುವ ಉಪಕಾರಗಳ ನೆನಪು ಮಾಸಿವ. ಮಾನಸಿಕ ದೌರ್ಬಲ್ಯದ ಕ್ಷಣದಲ್ಲಿ ಬರೆದ ಕಾಗದ. ಅದನ್ನು - ಆ ಔದ್ಧತ್ಯವನ್ನು ಕ್ಷಮಿಸಿ. (ಮುಂದಿನ ಒಂದು ಪಂಕ್ತಿ ಸ್ಪಷ್ಟವಾಗುವುದಿಲ್ಲ. ನನ್ನ ಗ್ರಂಥಗಳ ಬಗ್ಗೆ ಏನೋ ಬರೆವಂತಿದೆ)

ನಮೋ ನಮಃ ದೀರ್ಘಾಯುಷ್ಯವು ನನ್ನ ಪಾಡಿಗೆ ಒಂದು ಶಾಪವಾಗಿ ಪರಿಣಮಿಸಿದೆ. ಈ ಮನೋದೌರ್ಬಲ್ಯ ನನ್ನನ್ನು ಹಿಸುಕುತ್ತಿದೆ. ಹೆಚ್ಚೇನು ಬರೆಯಲಿ? ಕ್ಷಮಿಸಲು ಕೋರುವ

ಅದನ್ನೋದಿದಾಗ ನನ್ನ ಕಣ್ಣಲ್ಲಿ ನೀರು ಮಿಡಿಯಿತು.

ಶಂಬಾಜೋಶಿ

ನಮ್ಮಲ್ಲಿ ಸಣ್ಣತನದ ದೊಡ್ಡವರೇ ಹೆಚ್ಚು. ತಮ್ಮ ತಪ್ಪನ್ನೊಪ್ಪಿಕೊಂಡು ಕ್ಷಮೆಕೇಳುವ ದೊಡ್ಡವರಿರಲಿ, ಸಣ್ಣವರು ಸಹ ಅಪರೂಪ. ಅವರು ತೋರಿದ ಔದಾರ್ಯದಿಂದ ನಾನು ಕುಬ್ಜನಾದೆ, ಭೂಮಿಗಿಳಿದು ಹೋದೆ. ತಮ್ಮ ದೊಡ್ಡತನಕ್ಕಾಗಿ ಶಿರಸಾಷ್ಟಾಂಗ ನಮಸ್ಕಾರಗಳು ನಮಸ್ಕಾರಗಳು ಎಂದು ಕಾರ್ಡಿನಲ್ಲಿ ಬರೆದೆ. ಆ ಮೇಲೆ ಅವರು ನನಗೊಂದು ಪುಸ್ತಕವನ್ನರ್ಪಿಸಿ ವಾತ್ಸಲ್ಯದ ಮಳೆಗರೆದರು.

ನಾನು ಯಾರನ್ನಾದರೂ ಮೆಚ್ಚಿದೆನೆಂದರೆ ಅಥವಾ ಹಚ್ಚಿಕೊಂಡೆನೆಂದರೆ ಪರರ ವಿರೋಧವನ್ನು ಲೆಕ್ಕಿಸದೆ ಒಂದು ರೀತಿಯ ನಿರ್ಲಜ್ಜೆಯಿಂದ, ಪಕ್ಷಪಾತ ಮನೋಭಾವದಿಂದ, ದಾರಿ ಬಿಟ್ಟು, ನನ್ನ ತೇಜಸ್ಸನ್ನು ಸಹ ಬಲಿಗೊಟ್ಟು ಸಹಾಯ ಮಾಡುತ್ತೇನೆ. ನಾನು ಹಚ್ಚಿಕೊಂಡ ಕೆಲವರ ವಿಷಯವನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ತಿಳಿಸುತ್ತೇನೆ. ನಾನು ಮೈಸೂರಿಗೆ ವರ್ಗವಾಗಿ ಬಂದ ಕೆಲವು ದಿನಗಳಲ್ಲಿ ಬ್ಯಾರಿಸ್ಟರ್ ಶ್ರೀಕಂಠಯ್ಯನವರ ಪರಿಚಯವಾಯಿತು. ಅವರು ಸಿಂಡಿಕೇಟ್ ಸೆನೆಟ್‌ಗಳಿಗೆ ಸ್ಪರ್ಧಿಸಿದಾಗ ಎರಡು ಸಲ ಅವರ ಎದುರಾಳಿಗಳ ವಿರೋಧ ಗಂಟು ಹಾಕಿಕೊಂಡು ಅವರ ಪರವಾಗಿ ಪ್ರಚಾರ ಮಾಡಿದ್ದುಂಟು. ಅವರು ಮೇಧಾವಿಗಳೂ ಹೌದು, ವಿದ್ವಾಂಸರೂ ಹೌದು. ಆ ಕಾರಣಕ್ಕಾಗಿಯೇ ನಾನವರ ಕಡೆಗೆ ವಾಲಿದ್ದು. ಆದರೆ ಅವರು ಆ ಮೇಲೆ ನನಗೆ ಅಪಕಾರವನ್ನೆಸಗಿದರು. ಆದರೂ ಸಹ ಕುಲಪತಿಯಾದ ಮೇಲೆ ಅವರನ್ನು ಗೌರವ ಪ್ರಾಧ್ಯಾಪಕರನ್ನಾಗಿ ನೇಮಿಸಿದೆ. ಅವರ ಮಡದಿ ಸೆನೆಟ್ ಚುನಾವಣೆಗೆ ನಿಂತಾಗ ಕೈಲಾದಷ್ಟು ಸಹಾಯ ಮಾಡಿದೆ. ಎಸ್. ಶಿವಪ್ಪನವರು ನನ್ನ ಪರಮ ಮಿತ್ರರು. ಅವರು ಚುನಾವಣೆಗೆ ನಿಂತಾಗಲೆಲ್ಲ, ಅವರು ಪ್ರಚಾರಕ್ಕೆ ಬರದಿದ್ದರೂ, ಅವರ ಪರವಾಗಿ ಕೆಲಸ ಮಾಡಿ, ಹಲವರ ವಿರೋಧವನ್ನು ಗಳಿಸಿದೆ. ಅವರು ನನಗೆ ಉಪಕಾರ ಮಾಡದಿದ್ದರೂ ಅಪಕಾರ ಮಾಡಿಲ್ಲ. ಕೆ. ಟಿ. ಚನ್ನಬಸವೇಗೌಡರಂತು ಸೆನೆಟ್‌ಗೆ ಸಿಂಡಿಕೇಟಿಗೆ ತಾವು ಗೆದ್ದರೂ, ಬೇರೆಯವರಿಗೂ ನಾನು ಸಹಾಯ ಮಾಡಿದೆನೆಂಬ ಕಾರಣಕ್ಕಾಗಿ ನನ್ನಿಂದ ದೂರವಾದರು.

ಪ್ರೊ ಕು. ಶಿ. ಹರಿದಾಸ ಭಟ್ಟರು ಅದೆಷ್ಟು ಮಂದಿಗೆ ಉಪಕಾರ ಮಾಡಿದ್ದಾರೋ ಕಾಣೆ, ಅವರಿಂದ ಉಪಕಾರ ಪಡೆದವರಲ್ಲಿ ನಾನೂ ಒಬ್ಬ. ಡಾ. ಸಿದ್ದಯ್ಯ ಪುರಾಣಿಕರು ಅದೇ ಗುಂಪಿಗೆ ಸೇರಿದವರು. ಅವರ ಸ್ನೇಹಿತನೆಂದು ಅವರ ವಿರೋಧಿಗಳು ನನ್ನ ಬಗ್ಗೆ ಸಂದೇಹಿಗಳಾಗಿದ್ದಾರೆ. ಹೆಚ್. ಆರ್. ದಾಸೇಗೌಡರು ಬುದ್ಧಿವಂತರು, ಒಳ್ಳೆಯ ಸಂಘಟನಕಾರರು, ಒಳ್ಳೆಯ ಸ್ನೇಹಿತರು. ಅವರಿಂದ ಸಾಕಷ್ಟು ಸಹಾಯ ಪಡೆದಿದ್ದೇನೆ.

ಅವರು ದೊಡ್ಡ ಹುದ್ದೆಗೇರಬೇಕಾಗಿತ್ತೆಂದು ನಾನು ನಿರೀಕ್ಷಿಸಿದ್ದೆ. ನಿರೀಕ್ಷೆ ಹುಸಿಯಾಯಿತು. ಅದಕ್ಕಾಗಿ ನನಗೆ ವ್ಯಥೆಯಾಗಿದೆ.

ನಾನು ವಿಶೇಷವಾಗಿ ಹಚ್ಚಿಕೊಂಡವರೆಂದರೆ ಕೆ. ವಿ. ಶಂಕರಗೌಡರು ಮತ್ತು ಮಾನಪ್ಪನಾಯಕರು. ಶಂಕರಗೌಡರು ಎಂದೂ ನನಗೆ ಅಪಕಾರ ಮಾಡಿದವರಲ್ಲ. ನನಗವರು ಮಾಡಿರುವ ಉಪಕಾರ ದೊಡ್ಡದು. ಆ ಕಾರಣಕ್ಕಾಗಿ ನಾನವರನ್ನನುಸರಿಸುತ್ತಿದ್ದುದು ನಿಜ. ಆದರೆ ಅವರ ವೈರಿಗಳು ನನಗೆ ವೈರಿಗಳಾದರು, ಆಗ ಬೇಕಾಗಿರಲಿಲ್ಲ, ಅದು ನನ್ನ ದುರ್ದೈವ. ಪ್ರಾಯಶಃ ನನ್ನ ಜೀವನದಲ್ಲಿ ಗಾಢವಾಗಿ ಹಚ್ಚಿಕೊಂಡ ವ್ಯಕ್ತಿ ನಾಯಕ್. ಅತಿ ಸರ್ವತ್ರವರ್ಜಯೇತ್ ಎಂಬ ಸೂತ್ರವನ್ನು ನಾನು ಪಾಲಿಸಲಿಲ್ಲ. ಮೇಧಾವಿಯೆಂಬ, ಕನ್ನಡ ರಕ್ಷಕರೆಂಬ ಕಾರಣಕ್ಕಾಗಿ ಅವರನ್ನು ಹಚ್ಚಿಕೊಂಡೆ. ಏನವಕಾಶ ದೊರೆತರೂ ನಾನವರನ್ನಲ್ಲಿಗೆ ನೂಕುತ್ತಿದ್ದೆ. ಅದರಿಂದಾಗಿ ನನಗೆ ಹಲವರು ಹಗೆಗಳಾದರು. ಅದರಿಂದ ನನಗೆ ಚಿಂತೆಯಾಗಲಿಲ್ಲ. ಇವರು ದೂರ ಹೋದದ್ದೇ ನನಗೆ ದೊಡ್ಡ ಆಘಾತವಾಯಿತು. ಆದರೆ ಅವರಿಂದಲೂ ನಾನು ಸಹಾಯ ಪಡೆದಿದ್ದೇನೆ. ಅವರು ನನಗೆ ಮಾಡಿದ ಸಹಾಯಕ್ಕಿಂತ ಎಸಗಿದ ಅಪರಾಧ ಅಗಾಧವಾದದ್ದು.

ಇತ್ತೀಚಿಗೆ ನಾನು ಸುಮಾರಾಗಿ ಹಚ್ಚಿಕೊಂಡವರಲ್ಲಿ ಡಾ. ಜಿ. ಎಸ್. ಗಾಯಿ ಒಬ್ಬರು. ಸ್ಥಳನಾಮ ಸಂಘವನ್ನು ಸ್ಥಾಪಿಸಿದಾಗ ಸಹಾಯ ಮಾಡಿದರೆಂಬ ಕಾರಣಕ್ಕಾಗಿ ಅವರು ನನಗೆ ಹತ್ತಿರವಾದರು. ಆದ್ದರಿಂದ ನಾನವರನ್ನು ಎಲ್ಡರ್ ಸಿಟಿಜನ್‌ಕೌನ್ಸಿಲ್‌ನ ಅಧ್ಯಕ್ಷರನ್ನಾಗಿ ಮಾಡಿದೆ. ನನ್ನ ಕಡೆಯವರೆಂಬ ಕಾರಣಕ್ಕಾಗಿ ಅವರೆಷ್ಟು ತಪ್ಪು ಮಾಡಿದರೂ, ಸಭೆಗಳಲ್ಲಿ ನಾನವರನ್ನು ವಹಿಸಿಕೊಳ್ಳುತ್ತಿದ್ದೆ. ಒಂದೇ ಒಂದು ಉದಾಹರಣೆ : ಕೌನ್ಸಿಲ್‌ನ ಆವರಣದಲ್ಲಿ ದೇವಸ್ಥಾನ ಕಟ್ಟಿಸಿದ್ದು. ಅದಿಲ್ಲಿ ಅಸಂಗತ. ದೇವಸ್ಥಾನ ನಿರ್ಮಾಣಕ್ಕವಕಾಶ ಮಾಡಿಕೊಡುವುದಾಗಿ ಅವರು ಯಾರಿಗೋ ವಾಗ್ದಾನ ಮಾಡಿದ್ದರಂತೆ. ಕೌನ್ಸಿಲ್ ಒಪ್ಪಲಿಲ್ಲ. ಅವರು ನನ್ನಲ್ಲಿಗೆ ಬಂದು ಕಣ್ಣೀರು ಹಾಕುವುದೊಂದು ಬಾಕಿ, ತಮ್ಮ ವಾಗ್ದಾನ ಭಂಗವಾಗದಂತೆ ಉಪಕರಿಸಬೇಕೆಂದು ಗೋಗರೆದರು. ಅವರ ಕೆಲಸವಾಯಿತು. ತಾವು ಸೋತಾಗಲೆಲ್ಲ ನಿಜಾಂಶವನ್ನು ಮುಚ್ಚಿ ಇತರರ ಮೇಲೆ ನನ್ನನ್ನೆತ್ತಿ ಕಟ್ಟುತ್ತಾರೆ. ಕೊನೆಗವರು ತಮ್ಮ ವಿರೋಧಿಗಳೊಡನೆ ಚೆನ್ನಾಗಿದ್ದು, 'ಜವರೇಗೌಡರು ದುಡುಕುತ್ತಾರೆ' ಎಂದು ಸುಲಭವಾಗಿ ಹೇಳಿ ಬಿಡುತ್ತಾರೆ. ಅವರಿಂದಾಗಿ ನಾನು ಹಲವರ ವಿರೋಧವನ್ನು ಗಳಿಸಿಕೊಂಡಂತಾಗುತ್ತದೆ.

ಕುಲಪತಿಯಾಗಿದ್ದಾಗಲಂತು ನಾನು ಅನೇಕರ ವಿರೋಧವನ್ನು ಕಟ್ಟಿಕೊಳ್ಳ ಬೇಕಾಗುತ್ತದೆ. ಒಂದು ಹುದ್ದೆ ಇದ್ದಾಗ ಹತ್ತು ಜನ ಅರ್ಜಿದಾರರ ಪೈಕಿ ಒಬ್ಬನನ್ನು ನೇಮಕ ಮಾಡಿದ್ದಾದರೆ, ಉಳಿದ ಒಂಬತ್ತು ಜನ ವೈರಿಗಳಾಗುತ್ತಾರೆ. ನೇಮಕ ಮಾಡಿಸಿಕೊಂಡಿರುವ ಒಬ್ಬ ಕಾಲ ಸರಿದಂತೆಲ್ಲ ದೂರ ಸರಿಯುತ್ತಾನೆ. ಇದು ಲೋಕವ್ಯವಹಾರ! ಲೋಕನೀತಿ!

ಹೀಗೆಯೇ ಪಟ್ಟಿಯನ್ನು ಬೆಳಸಿದರೆ ಸಂಪುಟ ದೊಡ್ಡದಾಗುತ್ತದೆ. ಪ್ರಾತಿನಿಧಿಕವಾಗಿ ಮಾತ್ರ ಕೆಲವೇ ಕೆಲವು ನಿದರ್ಶನಗಳನ್ನಿಲ್ಲಿ ಉದಾಹರಿಸಿದ್ದೇನೆ. ಪಟ್ಟಿ ಬೆಳೆದಷ್ಟು ನನ್ನ

ಅಹಂಕಾರದ ನೆರೆಯೇರುತ್ತದೆ. ಜನಕ್ಕೆ ನನ್ನಿಂದ ಸಹಾಯವಾಯಿತೆನ್ನುವುದರ ಬದಲು ಅವರ ಅದೃಷ್ಟದಿಂದ ಆಯಿತೆನ್ನುವುದೇ ಮೇಲು. ನನಗೆ ಆಗದವರೆಂದು ತೋರುವ ವ್ಯಕ್ತಿಗಳು ತೊಂಬತ್ತೊಂಬತ್ತು ಜನಕ್ಕೆ ಒಳ್ಳೆಯವರೆಂದು ತೋರಬಹುದು. ಆದರೆ ಅವರಂತೆಯೇ ನನ್ನಲ್ಲಿಯೂ ಹಲವು ದೌರ್ಬಲ್ಯಗಳಿವೆಯೆನ್ನುವುದಕ್ಕೆ ಈ ಪ್ರಕರಣವನ್ನು ಇಷ್ಟೊಂದು ಲಂಬಿಸಬೇಕಾಯಿತು. ವಿಷ ನಿಮಿಷಗಳಲ್ಲಿ ಉಂಟಾದ ಪ್ರಮಾದದಿಂದಾಗಿ ವಿರಸ ಮೊಳಕೆಯೊಡೆದು, ಮರವಾಗುತ್ತದೆಯೇ ಹೊರತು ಅವರು ಮೂಲತಃ ಕೆಟ್ಟವರೆಂದು ನಾನು ಹೇಳಲಾರೆ. ಅವರು ಕೆಟ್ಟವರಾದರೆ ನಾನೂ ಕೆಟ್ಟವನೇ! ಅದು ಪರಸ್ಪರವಷ್ಟೆ.

*****

ನಾನು - ನೆಂಟರು

ನಿಮ್ಮ ಸ್ವಭಾವ ನಿಮ್ಮ ನೆಂಟರಿಷ್ಟರಿಗೆ ಒಡಿಸಿದೆಯೇ? ಅವರು ನಿಮ್ಮೊಡನೆ ಹೊಂದಿಕೊಂಡಿದ್ದಾರೆಯೇ? ಎಂದು ಕೆಲವರು ನನ್ನನ್ನು ಪ್ರಶ್ನಿಸುವುದುಂಟು. ನನ್ನ ನೆಂಟರಿಷ್ಟರೊಡನೆ ನಾನು ಸಂಪರ್ಕವಿಟ್ಟುಕೊಂಡೇ ಇಲ್ಲ. ಎಷ್ಟೋ ಮಂದಿಯ ವಿಳಾಸವೂ ನನಗೆ ಗೊತ್ತಿಲ್ಲ. ಮೊದಲಿಂದಲೂ ನಾನು ಸಂಕೋಚ ಪ್ರವೃತ್ತಿಯವನಾದ್ದರಿಂದ ಶೇಕಡ 99 ಭಾಗ ನೆಂಟರ ಮನೆಗೆ ನಾನು ಹೋಗಿಲ್ಲ. ನನ್ನ ಮನೆಗೆ ಬಂದವರನ್ನು ಖಂಡಿತವಾಗಿಯೂ ಪ್ರೀತಿಸುತ್ತೇನೆ. ನನ್ನ ಮನಸ್ಸು ತುಂಬ ಸೂಕ್ಷ್ಮವಾದದ್ದು. ಎರಡೊ ಮೂರೋ ಮನೆಗಳಿಗೆ ಒಮ್ಮೊಮ್ಮೆ ಹೋಗುತ್ತೇನೆ. ಹೋದಾಗ ಅಲ್ಲಿಯ ಪ್ರತಿಯೊಬ್ಬರ ನಡೆ ನುಡಿಗಳನ್ನು ಗಮನಿಸುತ್ತೇನೆ. ಅವರ ಕಣ್ಣು ಮೋರೆಗಳಲ್ಲಿ ವ್ಯಕ್ತವಾಗುವ - ಅವು ಮನಸ್ಸನ್ನು ಪ್ರತಿಬಿಂಬಿಸಿ ಲೋಕಕ್ಕೆ ತೋರಿಸುವ ದರ್ಪಣಗಳಷ್ಟೆ - ಭಾವ ಚಹರೆಗಳನ್ನು ಪರಿವೀಕ್ಷಿಸುತ್ತೇನೆ. ಆ ಸಮಯದಲ್ಲಿ ಆ ಮನೆಯವರು ತಂತಮ್ಮೊಳಗಾಡಿಕೊಳ್ಳುವ ಮಾತಿನಲ್ಲಿ ಪ್ರದರ್ಶಿಸುವ ನಗೆಯಲ್ಲಿ ಏನಾದರೂ ಕೊರತೆ ಕಾಣಿಸುತ್ತವೆಯೇ ಎಂಬುದನ್ನೂ ಗ್ರಹಿಸಲು ಪ್ರಯತ್ನಿಸುತ್ತೇನೆ. ಅವುಗಳಲ್ಲಿ ಏನಾದರೂ ಸಂದೇಹ ಕಂಡದ್ದಾದರೆ, ನನ್ನ ಹೃದಯಕ್ಕೆ ಅಸಮಾಧಾನವುಂಟಾದರೆ - ನನಗೆ ಹೃದಯದ ಮಿಡಿತದಲ್ಲಿ ದನಿಯಲ್ಲಿ ಸೂಚನೆಗಳಲ್ಲಿ ನಂಬಿಕೆಯುಂಟು. - ಮತ್ತೆ ಆ ಕಡೆಗೆ ಮುಖ ತಿರುಗಿಸುವುದಿಲ್ಲ. ಇದರಿಂದ ಅವರು ಕೆಟ್ಟವರೆಂಬುದೂ ಅಲ್ಲ; ಅತಿಥಿ ಸತ್ಕಾರದ ಬಗ್ಗೆ ತಿರಸ್ಕಾರವಿದೆಯೆಂಬುದೂ ನನ್ನರ್ಥವಲ್ಲ. ಅವರಿಗೇನೋ ಅನಾನುಕೂಲವಿರಬೇಕು; ನಾನು ಹೋದ ಸಂದರ್ಭದಲ್ಲಿ ಅವರ ಮನೆಯಲ್ಲೇನೋ ತೊಂದರೆಯಿರಬೇಕು ಎಂದುಕೊಳ್ಳುತ್ತೇನೆ. ಆದರೆ ನಮ್ಮ ಮನೆಗೆ ಯಾರು ಬಂದರೂ ನಗುನಗುತ್ತ ಆದರಿಸಿ ಕಳಿಸಿ ಎಂದು ನಾನು ನನ್ನ ಮಕ್ಕಳಿಗೆ ಹೇಳಿದ್ದೇನೆ. ನನ್ನ ಸಂಕೋಚ ಪ್ರವೃತ್ತಿಯಿಂದಲೇ ನಾನು ನೆಂಟರಿಷ್ಟರಿಗೆ ಎರವಾಗಿದ್ದೇನೆಂದು ಒತ್ತಿ ಹೇಳಲೇಬೇಕು. 'ತನಗೆ ಮನ್ನಣೆ ದೊರೆಯದಲ್ಲಿಗೆ ಪೋಪವನು ಕಡುಮೂರ್ಖ ನೆನಿಸುವನು'ಎಂಬ ಕುಮಾರವ್ಯಾಸ ವಾಣಿಯಂತು ನನಗೆ ದಾರಿ ಬೆಳಕಾಗಿದೆ. ಮೇಲಾಗಿ 1949 ನೆಯ ಇಸವಿಯಿಂದ ಎಲ್ಲಿಗೆ ಹೋಗಬೇಕಾದರೂ ನನಗೆ ಪುರುಸೊತ್ತಿಲ್ಲವೆಂಬುದು ನಿಜವಾದ ಮುಖ್ಯ ಕಾರಣ.

ನೆಂಟರ ಮನೆಯ ಮದುವೆಗಳಿಗೆ ಹೋಗದಿರುವುದಕ್ಕೆ ಪ್ರಬಲ ಪ್ರಾಮಾಣಿಕ ಕಾರಣ ಉಂಟು. ಕುವೆಂಪು ಅವರು ಮಂತ್ರಮಾಂಗಲ್ಯ ಪದ್ಧತಿಯನ್ನು ಜಾರಿಗೆ ತಂದ ಮೇಲೆ, ಅದರ ಪ್ರಸಾರ ನನ್ನ ಕರ್ತವ್ಯವೆಂದು ಬಗೆದಿದ್ದೇನೆ. ಆ ಪದ್ಧತಿಯ ಪ್ರಕಾರ ನಾನೇ ಹಲವು ಮದುವೆಗಳನ್ನು ಮಾಡಿಸಿದ್ದೇನೆ. ಎರಡು ದಶಕಗಳ ಹಿಂದೆಯೇ ನಾನು ಮತ್ತು ನನ್ನ ಶ್ರೀಮತಿ ತೀರ್ಮಾನ ಮಾಡಿಕೊಂಡೆವು. ಹೊಸ ಪದ್ಧತಿ ಯಾರಿಗೆ ಬೇಡವೊ ಅಲ್ಲಿಗೆ ನಾವು ಹೋಗಬಾರದೆಂದು, ತಮ್ಮನ್ನು ಕಂಡರೆ ಆಗದುದರಿಂದ, ಅಹಂಕಾರದಿಂದ ತಮ್ಮ

ಮನೆಗಳ ಮದುವೆಗಳಿಗೆ ನಾವು ಹೋಗುತ್ತಿಲ್ಲವೆಂದು ಹಲವರು ಬಹುಕಾಲ ತಿಳಿದುಕೊಂಡಿದ್ದರು. ನಮ್ಮ ಗೈರುಹಾಜರಿಗೆ ಶಂಕರಲಿಂಗಯ್ಯನವರಂಥ ವಿದ್ವಾಂಸರೂ ತಮಗೆ ತೋಚಿದಂತೆ ಟೀಕೆ ಮಾಡಿದರೆಂದು ವದಂತಿಯಿದೆ. 'ನೀನು ಕರೆಯುವ ಪುರೋಹಿತ ನನಗಿಂತ ವಿದ್ಯಾವಂತನೆ? ನನಗೆ ನಿಮ್ಮ ಮೇಲಿರುವಷ್ಟು ಪ್ರೀತಿ ಅವನಿಗಿದೆಯೇ? ನಾನು ಹೃತ್ಪೂರ್ವಕವಾಗಿ ಹರಸುವಂತೆ ಅವನು ಹರಸುತ್ತಾನೆಯೇ? ಕೆಲವು ಸಮಾಜದವರು ತಮ್ಮವರನ್ನೇ ಪುರೋಹಿತರನ್ನಾಗಿ ನೇಮಿಸಿಕೊಳ್ಳುವುದಿಲ್ಲವೇ? ನಾನು ಬೇಡ, ಚುಂಚನಗಿರಿ ಮಠದ ಸ್ವಾಮಿಗಳನ್ನು ಕರೆಯಿರಿ ಎಂದು ವಾದ ಮಾಡಿದರೆ, ಅವರಿಗೆ ಉತ್ತರ ಕೊಡುವ ಸಾಮರ್ಥ್ಯವಿಲ್ಲದೆ ಬಾಯಿ ತೆರೆಯದೆ ಹೋಗುತ್ತಾರೆ. ಪುಣ್ಯಕ್ಕೆ ಈಗ ಯಾರೂ ನಮ್ಮ ಗೈರು ಹಾಜರಿಗಾಗಿ ತಪ್ಪು ತಿಳಿಯುವುದಿಲ್ಲ, ನಮ್ಮನ್ನು ಕರೆಯುವುದೂ ಇಲ್ಲ .

ಲೀಲಾದೇಶಿಗೌಡ ನನ್ನ ಹಲವು ನಾದಿನಿಯರಲ್ಲೊಬ್ಬಳು. ತನ್ನ ಹಿರಿಯ ಮಗ, ರವಿಶಂಕರನ ಮದುವೆಗೆ ನಮ್ಮನ್ನು ಆಹ್ವಾನಿಸುವ ಸಲುವಾಗಿ ಪತಿಯೊಡನೆ ಮನೆಗೆ ಬಂದಳು. 'ಮದುವೆಗೆ ಬನ್ನಿ ಮಾವಯ್ಯ'ಎಂದು ಕರೆದಳು. ಹಾಗೆ ಯಾರು ಕರೆದರೂ ಯಾವಾಗಲೂ'ಆಗಲಿ' ಎನ್ನುತ್ತೇನೆ. ಅವಳಿಗೆ ನಮ್ಮ ಗುಟ್ಟು ಗೊತ್ತಿತ್ತು. ಮತ್ತೆ ಕಣ್ಣಲ್ಲಿ ನೀರು ತುಂಬಿಕೊಂಡು ಒತ್ತಾಯಿಸಿದಳು. ನನ್ನ ಮನಸ್ಸನ್ನವಳಿಗೆ ತಿಳಿಸಿದೆ. 'ನಮ್ಮ ವ್ರತಕ್ಕೆ ಭಂಗಬರುವಂಥ ಉಪಕ್ರಮಕ್ಕೆ ನಮ್ಮನ್ನು ಬಲಾತ್ಕರಿಸಬೇಡಿ, ಇಲ್ಲಿಂದಲೇ ನಾನು ವಧೂವರರಿಗೆ ಆಶೀರ್ವದಿಸುತ್ತೇನೆ ' ಎಂದು ನಾನು ಗದ್ಗದಿಸಿದೆ. ಅವಳ ಕಣ್ಣಲ್ಲಿ ನೀರು ಬಳ ಬಳನೆ ಸುರಿಯಲಾರಂಭಿಸಿತು. 'ನೀವೇ ಪೌರೋಹಿತ್ಯ ವಹಿಸಿಕೊಳ್ಳಿ. ನನ್ನ ಮಗ ಸೊಸೆಯರನ್ನು ಹರಸಿ' ಎಂದು ಇಬ್ಬರೂ ಹೇಳಿದರು. 'ಆಗಲಿ' ಎಂದೆ. ಮದುವೆಗೆ ನಮ್ಮ ಮನೆಯವರೆಲ್ಲ ಹೋದೆವು. ಬಹುಜನ ಸೇರಿದ್ದರು. ನಾನು ನನ್ನ ಶ್ರೀಮತಿಯಿಬ್ಬರೂ ಕೂಡಿಕೊಂಡು ವಿವಾಹ ವಿಧಿಗಳನ್ನು ಪೂರೈಸಿದೆವು. ನನ್ನ ಶ್ರೀಮತಿ ಮತ್ತು ಅವಳ ತಂಗಿ ಉಮಾ ಇಬ್ಬರೂ ಕೆಲವು ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡಿದರು. ಹೆಣ್ಣಿನ ಮನೆಯಲ್ಲಿ ತುಂಬ ವಯಸ್ಸಾದ ಯಜಮಾನರಿದ್ದರೂ ಅವರಿಗೆ ಅಸಮಾಧಾನವಾಗಲಿಲ್ಲ. 'ಏನು ಸ್ವಾಮಿ, ಪುರೋಹಿತ ಇಷ್ಟು ಚೆನ್ನಾಗಿ ಈ ಕಾರ್ಯ ನಡಸುತ್ತಿದ್ದನೆ? ನಿಜಕ್ಕೂ ನನಗೆ ಆನಂದವಾಯಿತು'ಎಂದಾಗ ನನಗೆ ತೃಪ್ತಿಯಾಯಿತು. ಪೌರೋಹಿತ್ಯಕ್ಕಾಗಿ ಬೇರೆ ಕಡೆಗೆ ಕರೆದರೆ ನೀವು ಬರುತ್ತೀರಾ? ಎಂದು ನನಗೆ ಪರಿಚಯವಿಲ್ಲದ ಹಳ್ಳಿಗರು ನನ್ನ ಸುತ್ತಮುತ್ತ ಮುತ್ತಿಕೊಂಡು ಕೇಳಿದಾಗ 'ಇಲ್ಲ, ನನಗೆ ಬಿಡುವಿಲ್ಲ. ನಿಮಗೆ ಬೇಕಿದ್ದರೆ ಯಾರನ್ನಾದರೂ ಕಳಿಸಿಕೊಡುತ್ತೇನೆ' ಎಂದವರಿಗೆ ಉತ್ತರ ನೀಡಿದೆ. ಲೀಲಾದೇಶಿಗೌಡರ ಹಾಗೂ ಮದುಮಕ್ಕಳ ಧೈರ್ಯವನ್ನು, ಕ್ರಾಂತಿಕಾರಕ ಸ್ವತಂತ್ರ ಮನೋಧರ್ಮವನ್ನು ಕಂಡು ನನಗೆ ತುಂಬ ಮೆಚ್ಚುಗೆಯಾಯಿತು. ಹೆಸರಿಗೆ ತಕ್ಕಂತೆ ತಮ್ಮ ಸುತ್ತ ಮುತ್ತ ಆನಂದದ ಉತ್ಸಾಹದ ಬೆಳಕು ಚೆಲ್ಲುವ ರವಿ - ಶೋಭಾರ ಸುಂದರ ಜೀವನ ಆದರ್ಶಪ್ರಾಯವಾಗಿದೆ, ಸುರಲೋಕದವರೂ ಅಸೂಯೆ ಪಡುವಂತಿದೆ. ಅರುಣಶೋಭೆಯೇ ಸಾಕಾರವಾದಂತಿರುವ, ಮಿಂಚು ಮುಗುಳುಗೊಂಡಂತಿರುವ ಅವರಿಬ್ಬರ ಮಕ್ಕಳು ನೋಡಿದವರ ಕಣ್ಣಿಗೆ ಹಬ್ಬವಾಗಿದ್ದಾರೆ.

ಇದೇ ಸಂದರ್ಭದಲ್ಲಿ ಮಂತ್ರಮಾಂಗಲ್ಯದ ಬಗ್ಗೆ ಎರಡು ಮಾತು ಅಪ್ರಸ್ತುತವಾಗಲಾರದೆಂದು ನಂಬಿದ್ದೇನೆ. ಕುವೆಂಪು ಶ್ರೇಷ್ಠ ಕ್ರಾಂತಿಕಾರಕ ಸಮಾಜ ಸುಧಾರಕರೆಂಬ ಸಂಗತಿ ಅವರ ಕಣ್ಣುಕುಕ್ಕುವ ಕಾವ್ಯಜ್ಯೋತಿಯ ಜಾಜ್ವಲ್ಯಮಾನ ಪ್ರಭೆಯಿಂದಾಗಿ ಲೋಕದೃಷ್ಟಿಗಗೋಚರವಾಗಿದೆ. ಮಂತ್ರಮಾಂಗಲ್ಯ ಪದ್ಧತಿ ಪುರೋಹಿತ ಶಾಹಿಯ ಡೊಳ್ಳುಹೊಟ್ಟೆಗೆ, ಮೌಢ್ಯಸಂಪ್ರದಾಯದ ಮಹಾಕುಡ್ಯಕ್ಕೆ ಹೂಡಿದ ಮಹಾಸ್ತ್ರವಾಗಿದೆ. ಅದು ಮಂಡ್ಯಜಿಲ್ಲೆಯಲ್ಲಿ ವ್ಯಾಪಕವಾಗಿ, ಹಾಸನ ಮೈಸೂರು ಬೆಂಗಳೂರು ಜಿಲ್ಲೆಗಳಲ್ಲಿ ಮಿತ ಪ್ರಮಾಣದಲ್ಲಿ ಜಾರಿಯಲ್ಲಿದೆ. ಶಂಕರಗೌಡರು ಪಾದ್ರಿ ನಿಷ್ಠೆಯಿಂದ ಅದನ್ನು ಪ್ರಸಾರ ಮಾಡುತ್ತಿದ್ದರು. ಈಗ ಜವರಪ್ಪಗೌಡರು ಆ ಪ್ರಸಾರಕಾರ್ಯವನ್ನು ಮುಂದುವರಿಸಿದ್ದಾರೆ. ಆದರೆ ಕುವೆಂಪು ಅವರ ಸಾಹಿತ್ಯಶಿಷ್ಯರು 'ಆ ಪದ್ಧತಿಯಲ್ಲಿ ನಂಬಿಕೆ ಇಲ್ಲ' ವೆಂದು ಅವರ ಜೀವಿತ ಕಾಲದಲ್ಲಿಯೇ ಸಾರುತ್ತಿರುವುದು. ತಮ್ಮ ಮಕ್ಕಳ ಮದುವೆಯನ್ನು ಹಳೆಯ ಗೊಡ್ಡು ಪದ್ಧತಿಯಲ್ಲಿಯೇ ನಡಸಿದ್ದು ವಿಷಾದದ ಸಂಗತಿಯಾಗಿದೆ. ಅವರು ಅಡ್ಡಗೋಡೆಯ ಮೇಲೆ ಕುಳಿತ, ಕುಹಕ ಕಪಟ ಪ್ರವೃತ್ತಿಯ, ಗೋರಂದವಿಲ್ಲದ, ಬೆನ್ನು ಹುರಿನರವೇ ಇಲ್ಲದ ಪುರುಷವೇಷದ ಗುಳ್ಳೆನರಿಗಳು.

ನಿಮ್ಮ ಮನೆಯಲ್ಲಿ ವಾರಾನ್ನದ ಹುಡುಗರಲ್ಲದೆ, ಹಳ್ಳಿಯ ನೆಂಟರ ಮಕ್ಕಳು ಓದಿಕೊಂಡಿದ್ದರಲ್ಲ ಅವರು ನಿಮಗೆ ಸಿಗುತ್ತಾರೆಯೆ ಎಂದು ಬಲ್ಲವರು ಪ್ರಶ್ನಿಸುತ್ತಾರೆ. ಜನರ ಮರ್ಜಿ, ಸ್ವಭಾವ ಮನೋಧರ್ಮ ವರ್ತನೆಗಳನ್ನರಿಯುವ ದೃಷ್ಟಿಯಿಂದವರು ಅಂಥ ಪ್ರಶ್ನೆ ಕೇಳುತ್ತಾರೆ. ಅದು ತುಂಬ ಸೂಕ್ಷ್ಮದ ಪ್ರಶ್ನೆ. ಮುಚ್ಚುಮರೆ ನನ್ನ ಜಾತಕದಲ್ಲಿಲ್ಲವಾದ್ದರಿಂದ ಪೂರ್ತಿಯಲ್ಲದಿದ್ದರೂ ಅಷ್ಟಿಷ್ಟನ್ನಾದರೂ ಹೇಳಿ ಬಿಡುತ್ತೇನೆ. ಒಬ್ಬರುಳಿದು - ಅವರು ಮೈಸೂರಲ್ಲಿದ್ದಾರೆ - ಉಳಿದ ಏಳೆಂಟು ಜನ ಎಲ್ಲಿದ್ದಾರೋ ಗೊತ್ತಿಲ್ಲ. ಅವರ ಹೆಸರು ನೆನಪಿಲ್ಲ., ಎದುರಿಗೆ ಬಂದರೆ ಗುರುತು ಸಿಗುವುದಿಲ್ಲ. ಹಿರಿಯ ಭಾವಮೈದುನ ಸಿದ್ಧರಾಮಯ್ಯ ವಕೀಲಿ ಮಾಡುತ್ತಿದ್ದು ದಿವಂಗತನಾದ. ಅವನೊತ್ತಿನ ತಮ್ಮ ಡಾ. ಪ್ರಭು ವರ್ಷಕೊಮ್ಮೆ ಮನೆಗೆ ಬರುತ್ತಾನೆ. ಆರೋಗ್ಯ ಕುಸಿದಾಗ ಅವನಿರುವ ಆಸ್ಪತ್ರೆಗೆ ನಮ್ಮ ಮನೆಯವರೆಲ್ಲ ಹೋಗುತ್ತಾರೆ; ಅವನು ವಿನಯಶಾಲಿ, ಉದಾರಶೀಲ. ಕೊನೆಯ ಭಾವಮೈದುನ ನಾಮದೇವನ ಮನೆಗೆ ಆಗೊಮ್ಮೆ ಈಗೊಮ್ಮೆ ನಾವು ಸಲೀಸಾಗಿ ಹೋಗುವುದುಂಟು. ಅವನೂ ಅವನ ಮಡದಿಯೂ ಹಿಂದಿನಂತೆಯೇ ಏಕಪ್ರಕಾರವಾಗಿ ಗೌರವಾದರಗಳಿಂದ ಉಪಚರಿಸುತ್ತಾರೆ. ನನ್ನೊಬ್ಬ ಷಡ್ಡಕರ ಮಕ್ಕಳಿಬ್ಬರು ಚಂದ್ರಶೇಖರ ವನಜ ಅಮೆರಿಕೆಯಲ್ಲಿದ್ದಾರೆ; ಎಂದೋ ಒಮ್ಮೆ ಸಿಗುತ್ತಾರೆ. ಕಾಗದ ಬರೆಯುವ ಅಥವಾ ಫೋನು ಮಾಡುವ ರೂಢಿ ಅವರಲ್ಲಿಲ್ಲ. ನನ್ನ ತಂಗಿಯ ಕಡೆಯ ನೆಂಟ ಹೆಚ್. ಕೆ. ಚಂದಯ್ಯನವರು ಸರ್ಕಾರದ ದೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾಗಿದ್ದಾರೆ. ಅವರು ಸಿಗುವುದೆ ಅಪರೂಪ. ಸಿಕ್ಕಿದರೆ ಮಾತಾಡಿಸುತ್ತಾರೆ. ನಮ್ಮ ಮಾವಂದಿರ ಕಡೆಯವನೆಂದು ಹೇಳಿಕೊಳ್ಳುತ್ತಿದ್ದ ಕುನ್ನೇಗೌಡ ಜೂನಿಯರ್ ಕಾಲೇಜ್ ಪ್ರಿನ್ಸಿಪಾಲನಾಗಿದ್ದಾನೆ. ಎಂದಾದರು ಒಂದು ದಿನ ಅಪ್ಪಿತಪ್ಪಿ ಆಕಸ್ಮಾತ್ ಎದುರಾದಾಗ ದೇಶಾವರಿ ನಗುನಕ್ಕು

'ಚೆನ್ನಾಗಿದ್ದೀರಾ?' ಎಂದು ಕೇಳುತ್ತಾನೆ. ಹೆಚ್. ಎನ್. ಚಾಮಯ್ಯ ನೆಂಟರಲ್ಲದಿದರೂ ಗೆಳೆಯರು. ಯುವರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಈಗ ದಿವಂಗತರಾಗಿದ್ದಾರೆ. ಬದುಕಿದ್ದಾಗ ಎದುರಿಗೆ ಸಿಕ್ಕಿದರೆ ಎಷ್ಟು ಬೇಕೋ ಅಷ್ಟೇ ಮಾತು.

ಕಿರಿಯ ಷಡ್ಡಕರೊಬ್ಬರು ಓದುತ್ತಿದ್ದಾಗಲೇ ಮದುವೆ ಮಾಡಿಕೊಂಡಿದ್ದರು. ಇಬ್ಬರೂ ನಮ್ಮ ಮನೆಯಲ್ಲಿದ್ದರು. ಮನೆಯಿಂದ ಅಕ್ಕಿ ತರುತ್ತಿದ್ದರು. 'ಇವರ ಮನೆಯಲ್ಲಿದ್ದಾಗ ನಾನು ತಿಂಗಳಿಗೆ ನೂರೈವತ್ತು ರೂಪಾಯಿ ಖರ್ಚು ಮಾಡುತ್ತಿದ್ದೇ'ನೆಂದು ಹಿಂದೆ ಮುಂದೆ ಹೇಳಿಕೊಳ್ಳುತ್ತಾರೆ. ನನ್ನ ಮುಂದೆಯೂ ಒಮ್ಮೆ ಬೊಗಳೆ ಬಿಟ್ಟದ್ದುಂಟು. ಆಗ ನನಗೆ ಬರುತ್ತಿದ್ದ ಸಂಬಳವು ಅಷ್ಟಿರಲಿಲ್ಲ. ನೂರೈವತ್ತು ರೂಪಾಯಿ ಖರ್ಚುಮಾಡುವ ಸ್ಥಿತಿಯಲ್ಲಿದ್ದರೆ ಅವರು ಪ್ರತ್ಯೇಕವಾಗಿಯೇ ಸಂಸಾರ ಹೂಡಬಹುದಿತ್ತು. ನಮ್ಮ ಜೊತೆಯಲ್ಲಿ ಇರಬೇಕಾಗಿರಲಿಲ್ಲ. ಆ ಕಾಲದಲ್ಲಿ ಅಮಲ್ದಾರನಿಗೂ ಅಷ್ಟು ಸಂಬಳ ಬರುತ್ತಿತ್ತೋ ಇಲ್ಲವೋ ಕಾಣೆ. ಅವರ ಮಗನೊಬ್ಬ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಎರಡು ವರ್ಷ ನಮ್ಮ ಮನೆಯಲ್ಲಿದ್ದ. ಅವರಪ್ಪ ಆಗೆಷ್ಟು ಹಣ ಖರ್ಚು ಮಾಡುತ್ತಿದ್ದರೋ ಕಾಣೆ. ಅವರು ನಮ್ಮ ಮನೆಯಲ್ಲಿದ್ದಾಗ ನನ್ನಿಂದಲೇ ಸಾಲ ಪಡೆದಿದ್ದರೆಂದ ಮೇಲೆ ತಿಂಗಳಿಗಷ್ಟೊಂದು ಹಣ ಖರ್ಚು ಮಾಡುತ್ತಿದ್ದುದು ನಿಜವೆ?

ನನ್ನಣ್ಣನ ಮಕ್ಕಳಿಬ್ಬರು - ದೇಶಿರಾಜ, ದೇವಮ್ಮಣ್ಣಿ - ನಮ್ಮೊಡನಿದ್ದರು. ಈ ಮೊದಲೇ ದೇಶಿರಾಜನ ವಿಷಯ ಪ್ರಸ್ತಾಪಿಸಿದ್ದೇನೆ. ಅವನು ಸುಮಾರು ಇಪ್ಪತ್ತು ವರ್ಷ ನಮ್ಮ ಮನೆಯಲ್ಲಿದ್ದಿರಬೇಕು. ಓದನ್ನು ಅರ್ಧಕ್ಕೆ ನಿಲ್ಲಿಸಿದ ಮೇಲೆ, ಅವನು ದನ ಸಾಕುತ್ತಿದ್ದ. ನಾನು ಕುಲಪತಿ ಭವನಕ್ಕೆ ಹೋದಾಗ ನಾನವನಿಗೆ ಸ್ಪಷ್ಟಪಡಿಸಿದೆ 'ನೀನು ನಮ್ಮ ಜೊತೆಯಲ್ಲಿರಬೇಕಾದರೆ ದನಗಳನ್ನು ತರಬಾರದು. ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಹಾಲು ಮಾರಾಟಕ್ಕಾಗಿ ದನ ಕಟ್ಟಬಾರದು ' ಎಂದು. ತನಗೆ ಬಿಡುಗಡೆ ದೊರೆಯಿತೆಂದು ಅವನಿಗೆ ಖುಷಿಯಾಗಿರಬೇಕು. ಅಷ್ಟು ಹೊತ್ತಿಗೆ ಅವನಿಗೊಂದು ಕೆಲಸ ಕೊಡಿಸಿದ್ದೆ. ದೇವಮ್ಮಣ್ಣಿ ಮದುವೆಯಾದನಂತರ ಗಂಡನ ಮನೆಗೆ ಹೋದಳು. ಜಾಣ್ಮೆಯಿಂದ ಸಂಸಾರ ನಡೆಸಿದ್ದಾಳೆ. ಅವಳ ಮಕ್ಕಳು ವಿದ್ಯಾವಂತರು. ಅವರಲ್ಲೊಬ್ಬ ಅಮೆರಿಕೆಯಲ್ಲಿದ್ದಾನೆ. ತುಂಬ ಬುದ್ಧಿವಂತ. ಇಂಟರ್ ಮೀಡಿಯಟ್ ಓದಲಿಕ್ಕೆ ಬಂದ ನನ್ನ ಸೋದರಮಾವನ ಮಗ ಚನ್ನಂಕೇಗೌಡ ಬಿ. ಇ. ಪಾಸು ಮಾಡಿದ ಮೇಲೆ ಎಲ್ಲಿದ್ದನೋ ನನಗೆ ಗೊತ್ತಿರಲಿಲ್ಲ. ಒಂದು ವರ್ಷದಿಂದೀಚೆಗೆ, ವರ್ಗಾವಣೆ ಬೇಕಾದಾಗ ಸಿಕ್ಕುತ್ತಿದ್ದಾನೆ. ನನ್ನ ಮನೆಯಲ್ಲಿದ್ದ ಹುಡುಗರೆಲ್ಲರೂ ಸುಖವಾಗಿದ್ದಾರೆ. ನನಗದೇ ಸಂತೋಷ. ಅವರೆಲ್ಲರೂ ನನ್ನ ಮಡದಿಗೆ ಕೃತಜ್ಞರಾಗಿರಬೇಕಾಗಿದೆ. ಏಕೆಂದರೆ ಅವರಿಗಾಗಿ ಅವಳು ಕಷ್ಟಪಟ್ಟಷ್ಟು ನಾನು ಕಷ್ಟಪಟ್ಟಿಲ್ಲ.

* * * * *

ಹಿರಿಕೊಡಿಗೆ - ಕುಪ್ಪಳ್ಳಿ ಮತ್ತು ನಾನು

1951- 52 ರ ಸುಮಾರಿನಲ್ಲಿ ಕುವೆಂಪು ಅವರೊಡನೆ ಕುಪ್ಪಳ್ಳಿ, ದೇವಂಗಿ, ಇಂಗ್ಲಾದಿ, ಹಿರಿಕೊಡಿಗೆಗಳಿಗೆ ಹೋಗಿದ್ದೆ. ಹಿರಿಕೊಡಿಗೆಗೆ ಹೋದಾಗ ಸಜ್ಜನರೂ ಸುಸಂಸ್ಕೃತರೂ ಆದ ಆಳಿಗೆಪುಟ್ಟಯ್ಯ ನಾಯಕರು ಜತೆಯಲ್ಲಿದ್ದರು. ಅವರು ತಾಯಿ ಕಡೆಯಿಂದ ಕುವೆಂಪು ಅವರಿಗೆ ಬಂಧುಗಳಾಗಬೇಕು. ಹಿರಿಕೊಡಿಗೆ ಅವರ ತಾಯಿಯ ತವರು. ಅಲ್ಲಿಯ ಪರಿಸರದಲ್ಲಿ ಅಡ್ಡಾಡುವಾಗ ನಾಯಕರು ಒಂದು ಜಾಗದ ಕಡೆಗೆ ನಮ್ಮನ್ನು ಕರೆದೊಯ್ದು 'ಇದುನೀವು ಜನ್ಮ ತಾಳಿದಾಗ ಭೂಸ್ಪರ್ಶ ಮಾಡಿದ ತಾಣ'ಎಂದು ಕುವೆಂಪು ಅವರಿಗೆ ತೋರಿಸಿದರು.ಅದು ಭಟ್ಟರ ಮನೆಯ ತಿಪ್ಪೆಯಾಗಿತ್ತು. ಮಾತೋಶ್ರೀ ಸೀತಮ್ಮನವರ ತವರು ಮನೆಯ ಆಸ್ತಿಯೆಲ್ಲ ಖರೀದಿಯ ಮೂಲಕ ಭಟ್ಟರಿಗೆ ಸೇರಿತ್ತು. ಆ ಜಾಗವನ್ನು ನೋಡಿದಾಗ ಕುವೆಂಪು ಅವರ ಮುಖದ ಮೇಲೆ ವಿಷಾದದ ಛಾಯೆ ಸುಳಿದು ಮಾಯವಾಯಿತು. ನನಗಾಗ ಅನ್ನಿಸಿತು, ಕುಪ್ಪಳ್ಳಿ ಹಿರಿಕೊಡಿಗೆಗಳಲ್ಲಿ ಏನಾದರೂ ಸ್ಮಾರಕಗಳನ್ನು ನಿರ್ಮಿಸಬೇಕೆಂದು. 'ಈ ಜಮೀನನ್ನು ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಹೆಸರಿಗೆ ಬರೆಸಿಕೊಡುತ್ತೀರಾ?' ಎಂದು ನಾನು ಪುಟ್ಟಯ್ಯನಾಯಕರನ್ನು ಕೇಳಿದೆ. ಅವರು ಭಟ್ಟರನ್ನು ನನಗೆ ಭೇಟಿ ಮಾಡಿಸಿದರು. ಭಟ್ಟರು ತಿಣುಕದೆ ಕೊಸರದೆ ಆ ಜಾಗವನ್ನು ಉಚಿತವಾಗಿ ಟ್ರಸ್ಟಿನ ಹೆಸರಿಗೆ ಬರೆದು ಕೊಡಲೊಪ್ಪಿದರು. ಹಿಂದಿನಿಂದ ಕಾನೂನು ಪ್ರಕಾರ ಪತ್ರ ಬರೆಸಿ, ನೋಂದಾವಣೆ ಮಾಡಿಸಿದ್ದಾಯಿತು.

ಹಣದ ಒತ್ತಾಸೆ ಇಲ್ಲದ್ದರಿಂದ 1989 ರ ತನಕ ಹಿರಿಕೊಡಿಗೆಯಲ್ಲಿ ಏನೊಂದು ಯೋಜನೆಯನ್ನೂ ಹಾಕಿಕೊಳ್ಳಲು ಸಾಧ್ಯವಾಗಲಿಲ್ಲ. ನನ್ನ ಸೊಸೆಯ ಕಡೆಯ ಬಂಧುವೊಬ್ಬರು, ಮಂಜುನಾಥ್ ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಪರಿಷತ್ತಿನವತಿಯಿಂದ ಹಿರಿಕೊಡಿಗೆಯಲ್ಲಿ ಸಂದೇಶ ಮಂಟಪವೊಂದನ್ನು ನಿರ್ಮಿಸಲು ಸಾಧ್ಯವೆ ಎಂದು ಕೇಳಿ ಅವರಿಗೊಂದು ಪತ್ರ ಬರೆದೆ. ಅದೇಕಾಲಕ್ಕೆ ಸರಿಯಾಗಿ ನಾನು ಚೆನ್ನಾಗಿ ಬಲ್ಲ ಐ. ಎ. ಎಸ್. ಅಧಿಕಾರಿ ಚಂದ್ರಹಾಸಗುಪ್ತರು ಪರಿಷತ್ತಿನ ಮುಖ್ಯಕಾರ್ಯದರ್ಶಿಯಾಗಿ ಬಂದರು. ಅವರಿಗೂ ಪತ್ರ ಬರೆದೆ. ಇಬ್ಬರೂ ಒಪ್ಪಿಕೊಂಡು, ನನ್ನಿಂದ ಮಂಟಪದ ನಕ್ಷೆ ತರಿಸಿಕೊಂಡರು. ಅತ್ಯಂತ ಹರ್ಷೋತ್ಸಾಹದಿಂದ ನಿರ್ಮಾಣ ಕಾರ್ಯ ಪ್ರಾರಂಭಿಸಿದರು.

ಏತನ್ಮಧ್ಯೆ ಕೊಪ್ಪ ಗಡಿಕಲ್ಲುಗಳ ಕೆಲವು ಮಿತ್ರರು ಮಂಟಪ ನಿರ್ಮಾಣ ಕಾರ್ಯವನ್ನು ತಡೆಗಟ್ಟಲು ತಮ್ಮೆಲ್ಲ ಬುದ್ಧಿ ಶಕ್ತಿ ರಾಜಕೀಯ ಶಕ್ತಿಯನ್ನು ಬಳಸಿದರು. ಸ್ಥಳೀಯ ಪತ್ರಿಕೆಗಳಲ್ಲಿ ಕೆಲವು ದಿನ ನನ್ನ ಬಗ್ಗೆ ಟೀಕೆಗಳ ಸುರಿಮಳೆಯಾಯಿತು. ಮಂಟಪ ಗಡಿಕಲ್ಲಿನಲ್ಲಾಗಬೇಕಾಗಿತ್ತೆಂದು ಕೆಲವರು, ಕುಪ್ಪಳಿಯಲ್ಲಾಗಬೇಕಾಗಿತ್ತೆಂದು ಮತ್ತೆ ಕೆಲವರು ಔಚಿತ್ಯ ಪ್ರಜ್ಞೆಯಿಲ್ಲದೆ ಹಾರಾಡಿದರು. ಆ ಮಿತ್ರರ ಉತ್ಸಾಹಾಸಕ್ತಿ ಮೆಚ್ಚತಕ್ಕದ್ದೇ. ಆದರೆ

ಅವರ ಬೇಡಿಕೆ ಕಾರ್ಯಸಾಧ್ಯವಾಗುವಂತಿರಲಿಲ್ಲ. ಕುವೆಂಪು ಹುಟ್ಟಿದ್ದು ಹಿರಿಕೊಡಿಗೆಯಲ್ಲಿಯೇ ಹೊರತು, ಗಡಿಕಲ್ಲಿನಲ್ಲಲ್ಲ, ಕುಪ್ಪಳಿಯಲ್ಲಲ್ಲ. ಅವರು ಬೆಳೆದದ್ದು ಕುಪ್ಪಳಿಯಲ್ಲಿ, ತಂದೆಯ ಮನೆಯಲ್ಲಿ. ಕುಪ್ಪಳಿಯಲ್ಲಿ ಬೃಹತ್‌ಪ್ರಮಾಣದ ಸ್ಮಾರಕ ಆಗಬೇಕಾದ್ದೇ. ಕುಪ್ಪಳಿಯ ನೆರೆಯೂರಾದ ಗಡಿಕಲ್ಲಿನಲ್ಲೂ ಏನಾದರೂ ಯೋಜನೆ ಹಾಕಬಹುದು. ಆದರೆ ಚಿಕ್ಕಮಗಳೂರು ಜಿಲ್ಲಾ ಪರಿಷತ್ ತನ್ನ ಎಲ್ಲೆಯೊಳಗಿನ ಸ್ಥಳಗಳಲ್ಲಿ ಹಣ ಖರ್ಚು ಮಾಡಬಹುದಿತ್ತೇ ಹೊರತು ಹೊರಗಲ್ಲ. ಮೇಲಾಗಿ ಜಗತ್ತಿನಲ್ಲೆಲ್ಲಿಂದೆಲ್ಲಿಗೆ ಹೋದರೂ ಮಹಾಪುರುಷರು ಹುಟ್ಟಿದ ಊರುಗಳಲ್ಲಿ ಸ್ಮಾರಕಗಳನ್ನು ಸ್ಥಾಪಿಸುವುದು ರೂಢಿ. ಹಿಂದಿನ ಮಹಾಪುರುಷರು ಹುಟ್ಟಿದ ಸ್ಥಳಗಳನ್ನು ಸಂಶೋಧಿಸಲು ವಿಶ್ವವಿದ್ಯಾನಿಲಯಗಳು ಸಂಶೋಧನಸಂಸ್ಥೆಗಳು ಸಾಕಷ್ಟು ಹಣ ಸುರಿದಿರುವುದುಂಟು. ನಮ್ಮ ಕಣ್ಮುಂದಿರುವ ಕವಿಯೇ ತಾವು ಹುಟ್ಟಿದ ಜಾಗವನ್ನು ಗುರುತಿಸಿರುವಾಗ ಅಲ್ಲಿ ಸ್ಮಾರಕ ರಚನೆ ಬೇಡವೆನ್ನುವ ಜನರ ಅವಿವೇಕದ ಬಗ್ಗೆ ಅಳಬೇಕೋ ನಗಬೇಕೋ ಗೊತ್ತಿಲ್ಲ.

ಆ ಪ್ರಕರಣದಲ್ಲಿ ಹೆಚ್ಚು ಟೀಕೆ ಖಂಡನೆಗಳಿಗೆ ಅವಮಾನಕ್ಕೆ ಅಪಪ್ರಚಾರಕ್ಕೆ ಗುರಿಯಾದವನು ನಾನೊಬ್ಬನೇ. ಆ ಎಲ್ಲ ಯೋಜನೆಗಳ ಹಿಂದಿದ್ದ ದುಷ್ಟ ನಾನೆಂಬುದು ಅವರ ತೀರ್ಮಾನ. ಅದರಿಂದ ನನಗೆ ಸಂತೋಷವೇ ಹೊರತು ಯಾರ ಮೇಲೂ ಕೋಪವಿಲ್ಲ. ಸಮಾಜದ ಬಹು ಜನರ ಕಣ್ಣಾಯಿಗಳಿಗೆ ಬಿದ್ದಾಗಿನಿಂದ ಯಾವತ್ತೂ ಕಠಿನಘೋರ ಕಹಿ ಪ್ರಸಂಗಗಳನ್ನೆದುರಿಸಬೇಕಾದ್ದು ನನ್ನ ಪುಣ್ಯವೆಂದೇ ತಿಳಿದಿದ್ದೇನೆ. ನಡೆಯುವವರನ್ನು ಮಾತಾಡುವವರನ್ನು ಹೋರಾಟ ಮಾಡುವವರನ್ನು ಏನಾದರೂ ಕೆಲಸ ಮಾಡುವವರನ್ನು ಜನ ನಿಂದಿಸುತ್ತಾರೆಯೇ ಹೊರತು - ಹೊಗಳುವವರು, ಮೆಚ್ಚುವವರು ಸಾಕಷ್ಟು ಜನ ಇದ್ದೇ ಇದ್ದಾರೆ - ಕುಡಿದು ತಿಂದು ತೇಗಿ ಮಲಗಿರುವವರನ್ನಲ್ಲ. ಅದರ ಮೇಲೆ ಒಂದು ಮಹಾಕಾರಣದ ಯಶಸ್ಸಿಗಾಗಿ ದುಡಿಯುವಾಗ, ಬಯ್ಗುಳೇ ಪುರಸ್ಕಾರವೆಂದು, ಮರಣವೇ ಮಹಾನವಮಿಯೆಂದು ನಾನು ತಿಳಿದಿದ್ದೇನೆ. ಆ ಸ್ಮಾರಕ ವಿರೋಧೀ ಮಿತ್ರರು ನನ್ನ ಬಗ್ಗೆ ಖಂಡನೆಗಳು ಪ್ರಕಟವಾಗುತ್ತಿದ್ದ ಪತ್ರಿಕೆಗಳನ್ನು ಕುವೆಂಪು ಅವರಿಗೆ ರವಾನಿಸುತ್ತಿದ್ದರಲ್ಲದೆ ನನ್ನನ್ನು ನಿಂದಿಸಿ ಅವರಿಗೆ ಪತ್ರಗಳನ್ನು ಸಹ ಬರೆಯುತ್ತಿದ್ದರು. ನಾನವರ ಬಳಿ ಹೋದಾಗ ಕುವೆಂಪು ನಕ್ಕು, ಪತ್ರಗಳನ್ನು ಪತ್ರಿಕೆಗಳನ್ನು ನನ್ನ ಕೈಗೆ ಕೊಟ್ಟು 'ಅವರಿಗೆ ತಿಳಿವಳಿಕೆ ಇದ್ದರೆ ಇಷ್ಟೆಲ್ಲ ಬರೆಯುತ್ತಿರಲಿಲ್ಲ, ಹೀಗೆಲ್ಲ ಗಲಾಟೆ ಮಾಡುತ್ತಿರಲಿಲ್ಲ. ನೀವಂತು ವಿಚಲಿತರಾಗದೆ ತೆಪ್ಪಗೆ ನಿಮ್ಮ ಕೆಲಸ ಮುಂದುವರಿಸಿ', ಎಂದು ಹೇಳುತ್ತಿದ್ದರು. 'ನನಗಿಂತ ಮುಂಚೆಯೇ ಆ ಸಜ್ಜನರಿಗೆ, ಕುವೆಂಪು ಸಾಹಿತ್ಯಜ್ಞರಿಗೆ, ಆ ಬುದ್ಧಿವಂತರಿಗೆ ಸ್ಮಾರಕದ ವಿಷಯವೇಕೆ ಹೊಳೆಯಲಿಲ್ಲ? ಹೊಳೆದಿದ್ದರೆ ಈ ತನಕ ಸುಮ್ಮನಿದ್ದರೇಕೆ? ದೂರದೂರಿನ ಯಾರೋ ಒಬ್ಬ ಕುವೆಂಪು ಶಿಷ್ಯ ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಅವರು ಎಚ್ಚೆತ್ತು, ಇದನ್ನು ತಡೆಗಟ್ಟಬಹುದೆ?' ಎಂದು ನಾನು ಮನಸ್ಸಿನ ವ್ಯಥೆಯನ್ನು ತೋಡಿಕೊಂಡಾಗ 'ಕಾರ್ಯಸಮರ್ಥರು ಮತ್ತು ಕಾರಣನಿಷ್ಠರು ಇಂಥ ದನ್ನೆಲ್ಲ ತಲೆಗೆ ಹಚ್ಚಿಕೊಳ್ಳಬಾರದು' ಎಂದು ಕುವೆಂಪು ನನ್ನನ್ನಾಗ ಆಶೀರ್ವದಿಸಿದ್ದರು.

ದೇವಂಗಿ ಮಂಡಲ ಪಂಚಾಯಿತಿ ಪ್ರಧಾನರಾದ ಕೆ. ಟಿ. ನಾರಾಯಣಮೂರ್ತಿಯವರು ನನಗೊಮ್ಮೆ ಸಿಕ್ಕಿದಾಗ ಹೇಳಿದರು: 'ಹೌದು. ಓರಿಕೊಡಿಗೆ ಸ್ಮಾರಕದ ಬಗ್ಗೆ ನಾನೂ ನನ್ನ ಸ್ನೇಹಿತರೂ ಅಸಮಾಧಾನಪಟ್ಟುಕೊಂಡದ್ದುಂಟು. ಕುವೆಂಪು ಅವರ ಬಳಿಗೆ ಒಂದು ನಿಯೋಗವೇ ಹೋಯಿತು. ಅದರಲ್ಲಿ ನಾನೂ ಸೇರಿಕೊಂಡಿದ್ದೆ. ಯಾವಾಗಲೂ ಒಳ್ಳೆಯ ಕಾರ್ಯಗಳಿಗೆ ವಿಘ್ನಗಳಿದ್ದೇ ಇರುತ್ತವೆಯೆಂದು ಕುವೆಂಪು ನುಡಿದರು. ಆ ಮೇಲೆ ಆ ಸ್ಮಾರಕದ ವಿರುದ್ಧವಾಗಿ ನಾವು ಚಕಾರವೆತ್ತಲಿಲ್ಲ' ಇಷ್ಟೆಲ್ಲ ಗಲಿಬಿಲಿಯ ಮಧ್ಯೆ ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನ ಮಿತ್ರರು ಮನಸ್ಸು ಕೆಡಿಸಿಕೊಳ್ಳದೆ ಛಲದಿಂದ ಸ್ಮಾರಕ ನಿರ್ಮಾಣ ಕಾರ್ಯವನ್ನು ಮುಂದುವರಿಸಿದ್ದು ಶ್ಲಾಘನೀಯ ಸಂಗತಿ. ಅದು ಅವರ ಕರ್ತವ್ಯ ನಿಷ್ಠೆಗೆ ನಿದರ್ಶನವಾಗಿದೆ.

ಮಂಜುನಾಥರ ಅಧ್ಯಕ್ಷಾವಧಿ ಮುಗಿಯಿತು. ರಾಮದಾಸ್ ಅಧ್ಯಕ್ಷರಾದರು. ಅವರು ಕುವೆಂಪು ಅವರ ಬಂಧುಗಳು. ಹಾಗೂ ಅವರ ಸ್ತುತಿಕಾರರು. ಆ ಕಾರ್ಯ ಬೇಗ ಮುಗಿಯಬೇಕೆಂಬ ಬಯಕೆಯಿಂದ ಜರೂರು ಕ್ರಮಗಳನ್ನು ಕೈಕೊಂಡರು. ಮೈಸೂರಿಗೆ ಬಂದು ಕುವೆಂಪು ಸಂದೇಶ ಭವನದ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದು ತಮ್ಮನ್ನು ಆಶೀರ್ವದಿಸಬೇಕೆಂದು ಕುವೆಂಪು ಅವರನ್ನು ಕೇಳಿಕೊಂಡರು. ಕುವೆಂಪು ಒಪ್ಪಲಿಲ್ಲ. ಸಮಾರಂಭ ಅತ್ಯಂತ ವೈಭವದಿಂದ ಜರುಗಿತು.

ನಾನು ಸಮಾರಂಭದ ವರದಿಯನ್ನು ಕುವೆಂಪು ಅವರಿಗೆ ನಿವೇದಿಸಿದೆ: 'ನೀವು ಬಂದು ನೋಡಿದ್ದರೆ ಚೆನ್ನಾಗಿತ್ತು. ಆ ತಿಪ್ಪೆ ಈಗ ಏನಾಗಿದೆ ಯೆಂದು', 'ನಾನೆಲ್ಲಿಯೂ ಹೋಗುತ್ತಿಲ್ಲ. ನೀವು ಕಂಡ ಹಾಗೆ' ಆದರೊಮ್ಮೆ. ಕೊನೆಯ ಸಲ ಅಲ್ಲಿಗೆ ಹೋಗ ಬಹುದಿತ್ತೇನೋ? ನನ್ನಮ್ಮನ ಚೈತನ್ಯಕ್ಕೂ ತೃಪ್ತಿಯಾಗುತ್ತಿತ್ತೇನೊ?. ಆದರೆ ಅಲ್ಲಿಗೆ ಹೋಗುವುದು ಹೇಗೆ?' ಎಂದವರು ಉತ್ಸುಕತೆಯನ್ನು ವ್ಯಕ್ತಪಡಿಸಿದರು. ಹೆಲಿಕಾಪ್ಟರ್‌ಒದಗಿಸಿದರೆ ನೋಡೋಣ ರಾಮದಾಸ್‌ರಿಗೆ ಈ ಬಗ್ಗೆ ಪತ್ರ ಬರೆದೆ. ಅವರು ಮೈಸೂರಿಗೆ ಓಡೋಡಿ ಬಂದರು. ಕುವೆಂಪು ಅವರ ಬಯಕೆಯನ್ನರಿತಾಗ ಅವರಿಗೆ ಎಲ್ಲಿಲ್ಲದ ಹರ್ಷವಾಯಿತು. ಸರ್ಕಾರದಿಂದ ಹೆಲಿಕಾಪ್ಟರ್ ಪಡೆಯಲು ಪ್ರಯತ್ನ ನಡೆಸಿದರು. ಕುವೆಂಪು ಅವರ ಬಳಿ ನಾನು ಹೋದಾಗಲೆಲ್ಲ 'ಇನ್ನೂ ಹೆಲಿಕಾಪ್ಟರ್ ಬರಲಿಲ್ಲ? ಯಾವಾಗ ಬರುತ್ತೆ?' ಎಂದವರು ಕುತೂಹಲ ಕಾತರತೆಗಳನ್ನು ವ್ಯಕ್ತಪಡಿಸುತ್ತಿದ್ದರು.

'ಕುವೆಂಪು ಓರಿಕೊಡಿಗೆಗೆ ಹೋಗ್ತಾರಂತೆ. ಹೆಲಿಕಾಪ್ಟರ್ ಬೇಕಂತೆ' ಎಂಬ ಸಂಗತಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರಿಗೆ ತಿಳಿದಾಗ. ಅವರ ಸಂತೋಷಕ್ಕೆ ಪಾರವಿರಲಿಲ್ಲ. ಹೆಲಿಕಾಪ್ಟರ್ ಮೈಸೂರಿಗೆ ಬಂತು. ಸಂತೃಪ್ತಿಯ ಸಮಾಧಾನದ ಸಂತೋಷದ ಕಾಂತಿ ಕುವೆಂಪು ಅವರ ಮುಖದಲ್ಲಿ ಅಚ್ಚೊತ್ತಿದಂತಿತ್ತು. ಪೂರ್ವನಿಯೋಜಿತ ಕಾರ್ಯಕ್ರಮಗಳಿಂದ ನಾನು ಓರಿಕೊಡಿಗೆಗೆ ಹೋಗಲಾಗಲಿಲ್ಲ. ಅವರು ಭವನವನ್ನು ನೋಡಿ ಸಂತೋಷಪಟ್ಟರಂತೆ. ಭವನದೊಳಗೆ ತುಂಬ ಹೊತ್ತು ಕುಳಿತು

ಧ್ಯಾನಮಗ್ನರಾಗಿದ್ದರಂತೆ. ಸಂದರ್ಶಕರೊಡನೆ ಮಿತವಾಗಿ ಮಾತಾಡಿದರಂತೆ. ಮರುಪ್ರಯಾಣದಲ್ಲಿ ಚಾಲಕ 'ಕುವೆಂಪು ವಿಶ್ವವಿದ್ಯಾನಿಲಯದ ಪ್ರದೇಶವನ್ನು ವಾಯುಮಾರ್ಗದಿಂದಲೆ ನೋಡಬಹುದು. ಆ ಕಡೆಯಿಂದ ಹೋಗೋಣವೇ'? ಎಂದು ಕೇಳಿದನಂತೆ. 'ಆಗಲಿ' ಎಂದರಂತೆ. ಮಾರನೆಯ ಬೆಳಗ್ಗೆ ನಾನವರ ಮನೆಗೆ ಹೋಗಿದ್ದೆ. 'ನಾನು ಹೋದದ್ದು ಚೆನ್ನಾಯಿತು. ಭವನದ ರೂಪರೇಷೆ ನೋಡುವಂತಿದೆ. ಇದೇ ನನ್ನ ಕೊನೆಯ ಪ್ರವಾಸ' ಎಂದರು. ನಿಜಕ್ಕೂ ಅದೆ ಕೊನೆಯಾಯಿತು. ಅನಂತರ ಕುವೆಂಪು ಉದಯ ರವಿಯಿಂದ ಹೊರಗೆ ಬರಲಿಲ್ಲ.

ಟೀಕೆಯೇ ಕೆಲವು ಜನರ ಜೀವನ ಕರ್ಮವಾದ್ದರಿಂದ ಏನಾದರೂ ತೂತು ಹುಡುಕುತ್ತಿರುತ್ತಾರೆ. ತೂತು ಹುಡುಕಿ ಸರಿಮಾಡುವುದು ಸದ್ಧರ್ಮವೇ ಸರಿ. ಕಟ್ಟಡದ ಶಿಥಿಲತೆಗೆ ಯಾರು ಕಾರಣ? ಜಿಲ್ಲಾ ಪರಿಷತ್ತಿನ ಅಧಿಕಾರಿಗಳಲ್ಲವಷ್ಟೆ. ಜವರೇಗೌಡನೊ? ಗೊತ್ತಿಲ್ಲ. ಆ ಶಿಥಿಲತೆಗೆ ಕಾರಣರಾದವರನ್ನು ಬಯ್ದೂ ಫಲವಿಲ್ಲ. ಅಂಥ ಉತ್ಸಾಹವನ್ನು ಅದರ ದೋಷ ನಿವಾರಣೆಗೆ, ಸುಸ್ಥಿತಿಸ್ಥಾಪನೆಗೆ ಬಳಸಬಾರದೇಕೆ?

ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಸಾಹಿತಿಗಳಿಗೆ ಕನ್ನಡಿಗರಿಗೆ ಹಾಗೂ ಭಾರತೀಯರಿಗೆ ಮತ್ತು ಪ್ರವಾಸಿಗಳಿಗೆ ತೀರ್ಥಕ್ಷೇತ್ರವಾಗಬೇಕು. ಕುವೆಂಪು ಬೆಳೆದ ಮನೆಯನ್ನು ವಿಸ್ತರಿಸಿ, ಮೂಸಿಯಂ ಸ್ಥಾಪಿಸಬೇಕು. ಸಂಶೋಧನ ಗ್ರಂಥ ಭಂಡಾರ, ಮಿನಿರಂಗ ಮಂದಿರ, ಅತಿಥಿಗೃಹಗಳನ್ನು ನಿರ್ಮಿಸಬೇಕು. ತೌಲನಿಕ ಸಾಹಿತ್ಯದಲ್ಲಿ ಮತ್ತು ಕಲೆಗಳಲ್ಲಿ, ಸ್ನಾತಕೋತ್ತರ, ಡಿಗ್ರಿ, ಡಿಪ್ಲೊಮೊ ತರಗತಿಗಳನ್ನು ತೆರೆಯಬೇಕು - ಇದು ನನ್ನ ಬಹು ದಿನದ ಬಯಕೆ, ಕನಸು. ಆಗಾಗ್ಗೆ ರಾಜಕೀಯ ನಾಯಕರ ಮತ್ತು ಮಂತ್ರಿಗಳ ಮುಂದೆ ನನ್ನ ಕನಸಿನ ನೀಲಿನಕ್ಷೆಯನ್ನು ಹರಡಿ ಪ್ರದರ್ಶಿಸಿದ್ದುಂಟು. ಪಂಚಾಯತ್‌ರಾಜ್ ಸಚಿವರಾದ ನಜೀಬ್ ಸಾಹೇಬರಿಗೂ ನನ್ನ ನೀಲಿನಕ್ಷೆಯನ್ನು ತೋರಿಸಿ, ನನ್ನ ನಸೀಬನ್ನು ಪರೀಕ್ಷಿಸಲು ಪ್ರಯತ್ನಿಸಿದೆ. ಪಾಪ! ದಕ್ಷಿಣ ಕನ್ನಡ ಜಿಲ್ಲೆಯ ಭಾಷೆಯಲ್ಲಿ ಹೇಳುವುದಾದರೆ ಅವರು ಪಾಪದ ಮನುಷ್ಯ. ಭೋಳೇ ಸಚಿವ. ಶ್ರದ್ಧಾನಿಷ್ಠೆ ಉತ್ಸಾಹ ಪ್ರಾಮಾಣಿಕತೆಗಳಿಂದ ನನ್ನ ನಕ್ಷೆಗೆ ಅಸ್ತು ಎಂದರು.ಪ್ರಯತ್ನ ನಡಸಿದರು. ಸಭೆಗಳನ್ನು ನಡಸಿದರು. ಟ್ರಸ್ಟ್ ರಚಿಸಲು ಕ್ರಮ ಕೈಗೊಂಡರು. ಇನ್ನೇನು ಆಯ್ತು ಎನ್ನುವಷ್ಟರಲ್ಲಿ ಅವರಿಗಿಂತ ಮೇಲ್ಪಟ್ಟವರು ಕಲ್ಲು ಹಾಕಿದರು. ನಾನೊಂದು ದಿನ ನಜೀಬ್‌ಸಾಬ್‌ರನ್ನು ಭೇಟಿ ಮಾಡಿದಾಗ 'ಏನ್ ಮಾಡೋದು, ಸಾರ್. ಗುಟ್ಟಿನ ವಿಷಯ. ಸೂಕ್ಷ್ಮದ ಸಂಗತಿ. ನಾನೇನೂ ಹೇಳುವಂತಿಲ್ಲ. ಅದಕ್ಕೆ ಯಾರು ಹೊಣೆ ಎಂಬುದನ್ನು ಕೇಳಬೇಡಿ. ನೀವು ಸೂಕ್ಷ್ಮಜ್ಞರಾದ್ದರಿಂದ ನಿಮಗೆ ಅರ್ಥವಾಗುತ್ತದೆ. ಆದರೆ ಕುವೆಂಪು ಅವರಂಥ ಕವಿ ಗುರುಸಾರ್ವಭೌಮರಿಗೆ ನನ್ನ ಕಿಂಚಿತ್ತು ಕಾಣಿಕೆಯನ್ನು ಅರ್ಪಿಸಲಾಗಲಿಲ್ಲವಲ್ಲ ಎಂದು ನೊಂದಿದ್ದೇನೆ' ಎಂದು ವಿಷಾದದಿಂದ ನುಡಿದರು. ಅವರ ನೋವು ನನಗರ್ಥವಾಯಿತು. ಆ ಸ್ಮಾರಕದ ನಿಲುಗಡೆಗೆ ಕಾರಣವಾದ ಕೈ ಯಾವುದೆಂಬುದೂ ನನಗೆ ತಿಳಿಯಿತು. ಸಂಸ್ಕೃತಿ ಕರ್ನಾಟಕದಲ್ಲಿ, ಪ್ರಾಯಶಃ ಇಡೀ ಭರತ ಖಂಡದಲ್ಲಿಯೇ ಪ್ರಪ್ರಥಮವೂ ಅಪೂರ್ವವೂ ಆದರ್ಶಪ್ರಾಯವೂ ಮುಂದಿನವರಿಗೆ

ಮಾರ್ಗದರ್ಶಕವೂ ಆದ ಭವ್ಯಸ್ಮಾರಕವೊಂದನ್ನು ರಚಿಸುವ ಪುಣ್ಯಕಾರ್ಯದಲ್ಲಿ ಭಾಗಿಯಾಗುವ ಅದೃಷ್ಟದಿಂದ ಸದವಕಾಶದಿಂದ ಸರ್ಕಾರದ ಗಣ್ಯರು ವಂಚಿತರಾದರೆಂದೇ ನನ್ನ ನಂಬಿಕೆ.

ನಾನೊಮ್ಮೆ ಡಿ. ಬಿ. ಚಂದ್ರೇಗೌಡರನ್ನು ಕಂಡು ಕುಪ್ಪಳ್ಳಿಯ ಸ್ಮಾರಕದ ವಿಷಯ ಪ್ರಸ್ತಾಪಿಸಿ, ಇಬ್ಬರೂ ಮುಖ್ಯಮಂತ್ರಿ ಬಂಗಾರಪ್ಪನವರನ್ನು ಭೇಟಿ ಮಾಡಿ, ಆ ವಿಷಯ ಚರ್ಚಿಸುವುದೆಂದು ಸೂಚಿಸಿದೆ. ಚಂದ್ರೇಗೌಡರು ಸುಸಂಸ್ಕೃತರು, ಸಾಹಿತ್ಯ ಪ್ರೇಮಿಗಳು, ಕುವೆಂಪು ನಿಷ್ಠರು. ಬಂಗಾರಪ್ಪನವರಂತು ಶ್ರೇಷ್ಠ ಕಲಾವಿದರು. ಸಾಹಿತ್ಯ ವಿದ್ಯಾರ್ಥಿಗಳು, ಕುವೆಂಪು ಸಾಹಿತ್ಯಸಾಗರದಲ್ಲಿ ಈಜಾಡಿ ಅದರಿಂದ ಪ್ರಭಾವಿತರಾದವರು. ಗೌಡರು ಬಂಗಾರಪ್ಪನವರನ್ನು ಕಂಡು, ನಾನವರನ್ನು ನೋಡಬೇಕೆಂಬ ನನ್ನ ಇಷ್ಟಾರ್ಥವನ್ನು ತಿಳಿಸಿದಾಗ, ತಾವೇ ಮೈಸೂರಿನಲ್ಲಿ ನನ್ನನ್ನು ಭೇಟಿ ಮಾಡುವುದಾಗಿ ಗೌಡರಿಗೆ ಉತ್ತರವಿತ್ತರಂತೆ. ಬಂಗಾರಪ್ಪನವರು ಮನೆಗೆ ಬಂದರು. ಕುಚೇಲನ ಮನೆಗೆ ಕೃಷ್ಣ ಬರಿ ಕೈಯಲ್ಲಿ ಹೋಗುವುದುಂಟೆ? ಹೋಗುವುದಾದರೆ ಬಂಗಾರಪ್ಪ ಎಂಬ ಹೆಸರು ಸಾರ್ಥಕವಾಗುತ್ತದೆಯೇ? ಕುಪ್ಪಳಿಯ ಯೋಜನೆ ವಿವರಿಸಿದೆ. ಎಷ್ಟು ಹಣ ಬೇಕಾಗುತ್ತದೆಂದರು. ಇಪ್ಪತ್ತೈದು ಲಕ್ಷ ಎಂದೆ. ನನ್ನಂಥವನಿಗೆ ಅದೇ ದೊಡ್ಡದು. ಕೊಡುತ್ತೇನೆಂದು ಹೇಳಿ ಹೋದರು. 'ಎಂಥ ತಪ್ಪು ಮಾಡಿದೆ? ಐವತ್ತು ಲಕ್ಷ ಕೇಳ ಬಹುದಿತ್ತಲ್ಲ' ಎಂದು ನಾನು ಆ ಮೇಲೆ ಕೊರಗಿದೆ. ಕೇಳಿದ್ದರೆ ಕೊಡುತ್ತಿದ್ದರೆಂಬ ಸಂಗತಿ ಆ ಮೇಲಿನ ವಿದ್ಯಮಾನಗಳಿಂದ ನನಗೆ ಮನದಟ್ಟಾಯಿತು.

ಮುಂದೆ ನಡೆದ ಕತೆಯನ್ನು ಬಂಗಾರಪ್ಪನವರ ಜೀವನ ಚಿತ್ರದಲ್ಲಿ ನಿರೂಪಿಸಿದ್ದೇನಾದ್ದರಿಂದ ಇಲ್ಲದನ್ನು ಲಂಬಿಸುವುದಿಲ್ಲ. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ವೆಂಬ ಹೆಸರಿನಲ್ಲಿ ಟ್ರಸ್ಟು ನೋಂದಾವಣೆಯಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಬ್ಬರು ಹಿರಿಯ ಅಧಿಕಾರಿ ಮತ್ತು ಒಬ್ಬರು ಕಿರಿಯ ಅಧಿಕಾರಿ ಚೆಕ್ಕು ಕೊಡಲು ತುಂಬ ಸತಾಯಿಸಿದರು. ಎರಡು ಮೂರು ದಿನ ನಿದ್ದೆ ಪತ್ತದಂತೆ ಕಿರುಕುಳ ಕೊಟ್ಟರು. ಅವರು ಹೊಟ್ಟೆಕಿಚ್ಚಿನ ತತ್ತಿಗಳು. ಬಂಗಾರಪ್ಪ ಹೇಗೊ ಹೋಗ್ತಾರೆ, ವೀರಪ್ಪಮೊಯಿಲಿ ಬರ್ತಾರೆ, ಆಗ ಹೊಸಬರು ಈ ಯೋಜನೆಯನ್ನೇ ಸ್ಥಗಿತಗೊಳಿಸಬಹುದೆಂಬ ಪರವ್ಯಸನಗತ ಸಂತೋಷಲುಬ್ಧರವರು. ಹದಿನೈದು ದಿನ ಮಾತ್ರ ನಿರ್ದೇಶಕರಾಗಿದ್ದ ಹಂಪನಾ ಇರದಿದ್ದರೆ ಆ ಹಣ ನನಗೆ ದಕ್ಕುತ್ತಿರಲಿಲ್ಲ. ನನಗೆ ಪ್ರತಿಷ್ಠಾನದ ಅಧ್ಯಕ್ಷಗಿರಿ ಬೇಡವೆಂದು ಹಟಹಿಡಿದೆ. ಪ್ರತಿಷ್ಠಾನ ರಚನೆಗಾಗಿ ಕರೆದ ಪ್ರತಿಷ್ಠರ ಸಭೆಯಲ್ಲಿ 'ರಾಜಕಾರಣಿಗಳಾರೂ ಅಧ್ಯಕ್ಷರಾಗುವುದು ಬೇಡ. ನಾನು ಬರಿಯ ಸದಸ್ಯನಾಗಿರುತ್ತೇನೆ. ನೀವು ಅಧ್ಯಕ್ಷರಾಗಲೊಪ್ಪದಿದ್ದರೆ ನಾನು ಹಣ ಕೊಡಲಾರೆ' ಎಂದು ಬಂಗಾರಪ್ಪನವರು ಛಲ ತೊಟ್ಟರು. ಅನನ್ಯಮಾರ್ಗವಿಲ್ಲದೆ ಒಪ್ಪಿಕೊಂಡೆ. ಅಲ್ಲಿಯವರೆಗೆ ತೆಪ್ಪಗಿದ್ದ ಸಭಿಕರೊಬ್ಬರು 'ಜೇಎಸ್ಸೆಸ್ ಪವರ ಹೆಸರಿನಲ್ಲಿ ಒಂದು ಟ್ರಸ್ಟು ಆಗಬೇಕಾದ್ದು ನ್ಯಾಯವಲ್ಲವೆ?' ಎಂದರು. ಬಂಗಾರಪ್ಪನವರು ನನ್ನ ಕಡೆ ನೋಡಿದರು. 'ಎಷ್ಟು ಟ್ರಸ್ಟುಗಳಾದರೂ ನಾನು

ಆಕ್ಷೇಪಿಸುವುದಿಲ್ಲ. The more the merrier. ಅದೂ ಬೇಂದ್ರೆಯವರ ಹೆಸರಿನಲ್ಲಿ ಆಗಬೇಕಾದ್ದೇ. ಆದರೆ ಈ ಯೋಚನೆ ಇವರ ಮನಸ್ಸಿನಲ್ಲಿ ಮೊದಲೇ ಹೊಳೆಯಲಿಲ್ಲವೇಕೆ? ಸಂಧಿಯಲ್ಲಿ ಸಮಾರಾಧನೆಯೆ? ಯಾರೋ ದುಡಿದದ್ದನ್ನು ಕಾಯ್ದದ್ದವ ಅಪಹರಿಸಿದ ಎಂಬ ಗಾದೆಯಂತಾಗುವುದಿಲ್ಲವೆ ಇವರ ಹವಣು. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಸ್ಥಾಪನೆಯ ನೆಪದಲ್ಲಿ ನಡೆಯಲಿರುವ ಬೇಂದ್ರೆ ಪ್ರತಿಷ್ಠಾನದ ರಚನೆಯಲ್ಲಿಯೂ ಪಾಲ್ಗೊಂಡು ಪುಣ್ಯಕಟ್ಟಿಕೊಳ್ಳುವ ಸುವರ್ಣಾವಕಾಶ ದೊರೆತಿರಲಾಗಿ ನನಗೂ ಸಂತೋಷ' ಎಂದೆ

29 - 12 - 1992 ರಂದು ಬೆಳಗ್ಗೆ 10 ಗಂಟೆಗೆ ಕುಪ್ಪಳಿಯಲ್ಲಿ (ಸಮಾರಂಭದ ಜಾಗ ಗಡಿಕಲ್ಲಿನ ಕುವೆಂಪು ರಂಗಮಂದಿರದ ಮುಂಭಾಗ) ರಾಷ್ಟ್ರಕವಿ ಪ್ರತಿಷ್ಠಾನ ವಿಧ್ಯುಕ್ತವಾಗಿ ಉದ್ಘಾಟಿತವಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಬೇಕಾಗಿದ್ದ, ಹದಿನೈದು ದಿನಗಳ ಹಿಂದೆ ಮುಖ್ಯಮಂತ್ರಿಯಾದ ವೀರಪ್ಪಮೊಯಿಲಿ ಬರಲಿಲ್ಲ. ಆ ಮಲೆನಾಡಿನ ಮೂಲೆಯಲ್ಲಿ ಹತ್ತು ಹಬ್ಬಗಳು ಏಕಕಾಲದಲ್ಲಿ ನಡೆದುವೊ ಎನ್ನುವಷ್ಟರಮಟ್ಟಿಗೆ ಅದ್ದೂರಿಯಿಂದ ರಂಜಿಸುತ್ತಿದ್ದ ಮಹಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರು ಶುದ್ಧ ಹೃದಯದಿಂದ ನಿಷ್ಕಳಂಕ ಮನಸ್ಸಿನಿಂದ ಅತ್ಯುತ್ಸಾಹದಿಂದ ಹೆಮ್ಮೆಯಿಂದ ಪ್ರತಿಷ್ಠಾನವನ್ನು ಉದ್ಘಾಟಿಸಿದರು. ಮುಖ್ಯಮಂತ್ರಿಗಳ ಪರವಾಗಿ ಬಂದ ನಗರಾಭಿವೃದ್ಧಿ ಸಚಿವ ಚೌಡರೆಡ್ಡಿಯವರು, ಮಾಜಿ ಸಚಿವ ಹಾಗೂ ವಿರೋಧ ಪಕ್ಷದ ಮಾಜಿ ನಾಯಕ ಡಿ. ಬಿ. ಚಂದ್ರೇಗೌಡರು, ಕುಲಪತಿ ಉಪಾಧ್ಯಕ್ಷ ಡಾ. ಎಂ. ಆರ್. ಗಜೇಂದ್ರಗಡ್, ಶಿವಮೊಗ್ಗೆಯ ಜಿಲ್ಲಾಧಿಕಾರಿಗಳು, ಕುಲಸಚಿವ ಕಾರ್ಯದರ್ಶಿ ಡಾ. ಎಚ್. ಜೆ. ಲಕ್ಕಪ್ಪಗೌಡರು, ಪ್ರತಿಷ್ಠಾನದ ಹಲವು ಸದಸ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಪ್ರತಿಷ್ಠಾನದ ಖಜಾಂಚಿ ಕೆ. ಟಿ. ನಾರಾಯಣಮೂರ್ತಿಗಳು ಕೆಲವೇ ಕೆಲವು ಮಿತ್ರರ ಸಹಾಯದೊಂದಿಗೆ, ಏಕಾಕಿಯಾಗಿ ಎಂದು ಹೇಳಿದರೂ ತಪ್ಪಲ್ಲ, ಚಂದ್ರೇಗೌಡರ ಮಾರ್ಗದರ್ಶನದಲ್ಲಿ ಭರ್ಜರಿಯಾಗಿ ಸಮಾರಂಭ ವ್ಯವಸ್ಥೆ ಮಾಡಿದ್ದರೆಂಬುದನ್ನು ನಾನು ಕೃತಜ್ಞತೆಯಿಂದ ನೆನೆಯಬೇಕಾಗಿದೆ.

ಪ್ರತಿಷ್ಠಾನದ ಕಾರ್ಯಕ್ರಮಗಳ ನಿರ್ವಹಣೆಗೆ ಪೂರ್ವಭಾವಿಯಾಗಿ ಮೂರು ಸಿದ್ಧತೆಗಳು ಅನಿವಾರ್ಯವಾಗಿದ್ದವು. 1 ಮನೆಯ ಖರೀದಿ 2 ಪಂಚಾಯತ್ ರಾಜ್ಯ ಇಲಾಖೆಗೆ ಸೇರಿದ ಕುವೆಂಪು ರಂಗಮಂದಿರದ ಸಂಪಾದನೆ. 3 ಎರಡು ಕಡೆ 30 ಎಕರೆ ಜಮೀನನ್ನು ಸರ್ಕಾರದಿಂದ ಪಡೆದುಕೊಳ್ಳುವುದು, ಹತ್ತು ಹನ್ನೆರಡು ಸಲ ಕಂದಾಯ ಸಚಿವರಾದ ಎಂ. ರಾಜಶೇಖರಮೂರ್ತಿಯವರನ್ನು ಭೇಟಿಮಾಡಿದರೂ, ಜಮೀನನ್ನು ಮಂಜೂರು ಮಾಡಿಸಿಕೊಳ್ಳಲಾಗಲಿಲ್ಲ. ಪಂಚಾಯತ್‌ರಾಜ್ ಸಚಿವರಾದ ಎಂ. ಆರ್. ಘೋರ್ಪಡೆಯವರನ್ನು ಭೇಟಿಮಾಡದಿದ್ದರೂ ಪತ್ರವ್ಯವಹಾರವಷ್ಟರಿಂದಲೇ ಕುವೆಂಪು ರಂಗಮಂದಿರವನ್ನು ಪ್ರತಿಷ್ಠಾನಕ್ಕೆ ವಹಿಸಿಕೊಟ್ಟರು. ಈ ಯುಗದಲ್ಲಿ ಕರ್ನಾಟಕ ಸರ್ಕಾರದಲ್ಲಿ ಇಂಥೊಬ್ಬರು ಕರ್ತವ್ಯ ನಿಷ್ಠ ಶುದ್ಧ ಹಸ್ತ ದಕ್ಷ ಮಂತ್ರಿ ಇದ್ದಾರೆಂಬುದೇ

ಆಶ್ಚರ್ಯದ ಸಂಗತಿಯಾಗುತ್ತದೆ. ಹತ್ತು ಕಾಗದ ಬರೆದರೂ ಉತ್ತರ ಕೊಡದ, ಇಪ್ಪತ್ತು ಸಲ ಹೋದರೂ ಮರೆತು ಬಿಡುವ, ರಾಜಕೀಯ ಲಾಭ ಸ್ವಾರ್ಥ ಭ್ರಷ್ಟಾಚಾರಗಳಲ್ಲಿಯೆ ಸದಾ ಮಗ್ನರಾಗಿರುವ ಮಂತ್ರಿಗಳೇ ಶೇಕಡ 80 ಭಾಗ ಇರುವ, ಎಲ್ಲಿಯೂ ನುಂಗಣ್ಣಗಳೇ ಕಾಣಿಸುವ ಸರ್ಕಾರದಿಂದ ಜನೋಪಯೋಗಿ ಕೆಲಸಗಳು ಏನೇನೂ ಸಾಧ್ಯವಿಲ್ಲ.

ಮನೆ ಖರೀದಿಯದೇ ದೊಡ್ಡ ಕತೆ. ಕುಪ್ಪಳಿ ಮನೆಯ ಆಸ್ತಿಯಲ್ಲಿ ಕುವೆಂಪು ಅವರಿಗೂ ಒಂದು ದೊಡ್ಡ ಹಸುಗೆಯೇ ಬರಬೇಕಷ್ಟೆ. ಅದೆಲ್ಲ ಉಳುವವರ ಪಾಲಾಯಿತು. 'ಈ ಮನೆಯಲ್ಲಿ ಕುವೆಂಪು ಅವರ ಪಾಲಿದೆಯೆಂದರೆ, ನಾವದನ್ನು ನಿರ್ಲಕ್ಷಿಸಿದ್ದರೆ ಅದು ಬಿದ್ದು ಹೋಗುತ್ತಿತ್ತು'ಎಂದು ಅಲ್ಲಿರುವವರು ಹೇಳುತ್ತಾರೆ. ಅದು ನೂರನಲವತ್ತು ವರ್ಷಗಳ ಹಿಂದಿನ ಮನೆ. ಎರಡು ಮೂರು ಲಕ್ಷ ರೂಪಾಯಿ ಖರ್ಚುಮಾಡಿ ಅದನ್ನು ರಿಪೇರಿಸದಿದ್ದರೆ, ಅದು ಬಿದ್ದು ಹೋಗುವ ಸಂಭವವುಂಟು. ಅಲ್ಲಿ ವಾಸಮಾಡುವ ಎರಡು ಕುಳ ಕಷ್ಟದಲ್ಲಿದ್ದಾರೆ, ನಿಜ. ಚಂದ್ರೇಗೌಡರು ಸರ್ಕಾರದ ಪ್ರಧಾನ ಶಿಲ್ಪಿಯನ್ನು ಕರೆದುಕೊಂಡು ಹೋಗಿ ಬೆಲೆ ಕಟ್ಟಿಸಿದಾಗ, ಸರ್ಕಾರದ ನಿಯಮಗಳ ಪ್ರಕಾರ ಅದಕ್ಕೆ ಬಿಡಿಗಾಸೂ ಕೊಡಲು ಸಾಧ್ಯವಿಲ್ಲ, ಕೊಳ್ಳುವವರ ಅಗತ್ಯ, ನಿವಾಸಿಗಳ ಪರಿಸ್ಥಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಿಕರಧನ ನೀಡಬಹುದೆಂದು ಅವರು ಹೇಳಿದರು. ಬಂಗಾರಪ್ಪನವರು ಅದನ್ನು ನೋಡಿದಾಗ ಐದು ಲಕ್ಷಕ್ಕಿಂತ ಹೆಚ್ಚಾಗಿ ಕೊಡಲಾಗದು ಎಂದರು. ಮನೆಕೊಳ್ಳುವುದಕ್ಕೆಂದೇ ಸರ್ಕಾರ ಇಪ್ಪತ್ತೈದು ಲಕ್ಷ ಮಂಜೂರು ಮಾಡಿದೆ. ಈ ಮಧ್ಯೆ ಜವರೇಗೌಡ ಕಿತಾಪತಿ ನಡಸುತ್ತಿದ್ದಾನೆಂದು ವಿವೇಕವಿಲ್ಲದ, ಹುಡುಗು ಬುದ್ಧಿಯ ಜನ ಕಂಡ ಕಂಡವರ ಬಳಿ ನನ್ನ ಮೇಲೆ ಆಪಾದನೆ ಹೊರಿಸಿದರು. ಪತ್ರಿಕೆಗಳಿಗೆ ನನ್ನ ಮೇಲೆ ದೂರು ಹೇಳಿಕೆಕೊಟ್ಟರು. ನಾನು ಮತ್ತೊಮ್ಮೆ ಹಲವರ ಬಾಯಿಯ ಎಲೆಯಡಿಕೆಯಾದೆ, ಚಾಡಿಕೋರರ ಸಂಭಾಷಣೆಗೆ ಸುಗ್ರಾಸವಾದೆ, ಪತ್ರಿಕಾ ಕಲಂಗಳ ವಸ್ತುವಾದೆ. ನನ್ನನ್ನು ಸಮರ್ಥಿಸಿಕೊಳ್ಳುವ, ನನ್ನ ಬಗ್ಗೆ ಸಹಾನುಭೂತಿ ಇರುವ ಮಿತ್ರರೇ ಇಲ್ಲವಾದರು, ಪ್ರಾಯಶಃ ಲಕ್ಕಪ್ಪಗೌಡರು ಹೊರತಾಗಿ.

ಇಂಥ ಪರಿಸ್ಥಿತಿ ನನಗೊದಗುತ್ತದೆಂದು ನನ್ನ ಅಂತರಂಗ ಮೊದಲೇ ನನಗೆ ಸೂಚನೆ ನೀಡಿದ್ದುದರಿಂದ, ಅಧ್ಯಕ್ಷಗಿರಿ ಬೇಡವೆಂದಿದ್ದೆ. ಅದರ ಹೊರೆ ಅನಿವಾರ್ಯವಾದಾಗ, ಭಗವದಿಚ್ಛೆಯನ್ನು ಮೀರಲು ಸಾಧ್ಯವಾಗದೆಂದೂ, ಗುರು ಕೈಂಕರ್ಯಾವಸರದಲ್ಲಿ ಬೆನ್ನೇರುವ ನಿಂದಾಪಮಾನಗಳನ್ನು ಕರ್ತವ್ಯನಿಷ್ಠೆಯಿಂದ ಸಹಿಸಿಕೊಳ್ಳಬೇಕೆಂದೂ, ಹೋರಾಟವೇ ನನ್ನ ಬದುಕಿನ ಜಾಯಮಾನವಾಗಿರುವುದರಿಂದ ಪ್ರಸ್ತುತ ಸಂದರ್ಭದಲ್ಲಿ ತಲೆಯೊಗೆಯಬಾರದೆಂದೂ ನಾನು ನಿರ್ಧರಿಸಿಕೊಂಡಿದ್ದೆ. ಮನೆ ಖರೀದಿಗೆಂದೇ ಕುಲಪತಿ ಡಾ. ಎಂ. ಆರ್. ಗಜೇಂದ್ರಗಡ್ ಅವರ ಅಧ್ಯಕ್ಷತೆಯಲ್ಲಿ ಚಂದ್ರೇಗೌಡ, ಶಿವಮೊಗ್ಗೆಯ ಜಿಲ್ಲಾಧಿಕಾರಿ, ನಾರಾಯಣಮೂರ್ತಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಲಕ್ಕಪ್ಪಗೌಡರನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಿಸಲಾಗಿತ್ತು. ನಾನು ಆ ಉಪಸಮಿತಿಯ ಸಭೆಗೆ ಹೋಗುತ್ತಿರಲಿಲ್ಲ, ಅಕಸ್ಮಾತ್ ಹೋದರೂ ನಾನು ಬಾಯಿ ಬಿಡುತ್ತಿರಲಿಲ್ಲ. ನನಗೂ ಮನೆಯ ಖರೀದಿಗೂ ಏನೇನೂ ಸಂಬಂಧವಿಲ್ಲದಿದ್ದರೂ,

ಮಾರಿಯ ಕಣ್ಣು ಯಾವಾಗಲೂ ಹೋತನ ಮೇಲೆಂಬ ಗಾದೆಯಂತೆ ಆ ಮನೆಯ ಮಿತ್ರರ ಕಣ್ಣು ನನ್ನ ಮೇಲೆ ಕಿಡಿ ಕಾರುತ್ತಿತ್ತು. ಕೊನೆಗೆ ಮನೆಗೆ ಏಳು ಲಕ್ಷರೂಪಾಯಿ ಬೆಲೆ ಕಟ್ಟಲಾಯಿತಾದರೂ, ಶೇಷಪ್ಪ ಸುಬೋಧರರಿಬ್ಬರಿಗೂ ಅದನ್ನು ಹಂಚುವ ವಿಷಯದಲ್ಲಿ ತಕರಾರಿನ ಬಿರುಗಾಳಿ ಎದ್ದಿತು.

ಈ ತಕರಾರಿನ ಜತೆಗೆ ಮತ್ತೊಂದು ತಕರಾರು ಹೊಗೆಯಾಡಲಾರಂಭಿಸಿತು. ಪ್ರತಿಷ್ಠಾನದಲ್ಲಿ ಸ್ಥಳೀಯ ಸದಸ್ಯರಿಲ್ಲವೆಂದು ಮತ್ತೆ ಅಲ್ಲಿಯ ಜನ ನನ್ನನ್ನೇ ದೂರಲಾರಂಭಿಸಿದರು ಯಾವೊಂದು ಕಾರ್ಯಕ್ರಮ ಜರುಗಿಸಿದಾಗಲೂ ನಾರಾಯಣಮೂರ್ತಿಯವರಿಗೆ ಸ್ಥಳೀಯರಿಂದ ಸಹಕಾರ ದೊರೆಯುತ್ತಿರಲಿಲ್ಲ. ಚಂದ್ರೇಗೌಡ ನಾರಾಯಣಮೂರ್ತಿಯವರ ಶಿಫಾರಸ್ಸಿಲ್ಲದೆ ನಾನು ಸಮಿತಿಯನ್ನು ನೇಮಿಸುವಂತಿರಲಿಲ್ಲ. ಎಷ್ಟು ಒತ್ತಾಯಿಸಿದರೂ ಈ ಇಬ್ಬರು ಮಿತ್ರರೂ ಸಮಿತಿ ರಚನೆಯಲ್ಲಿ ಆಸಕ್ತಿವಹಿಸಲಿಲ್ಲ. ಒಮ್ಮೆ ಕುಪ್ಪಳ್ಳಿ ಮನೆಯಲ್ಲಿ ಪ್ರತಿಷ್ಠಾನದ ಸಭೆ ಸೇರಿದಾಗ ಕೆಲವು ಸ್ಥಳೀಯ ಗಣ್ಯರು ನಡುವೆ ಪ್ರವೇಶಿಸಿ ಸಮಿತಿ ರಚನೆಯಾಗದಿರುವುದಕ್ಕೆ ನಾನೇ ಕಾರಣವೆಂಬಂತೆ ರೇಗಾಡಿದರು. ಮತ್ತೊಮ್ಮೆ ಮಲೆನಾಡ ಅಭಿವೃದ್ಧಿ ಮಂಡಲಿಯ ಅಧ್ಯಕ್ಷಿಣಿ ಮೋಟಮ್ಮನವರನ್ನು ಆಹ್ವಾನಿಸಿದ್ದ ಸಂದರ್ಭದಲ್ಲಿ (10 - 12 - 1993) ಸಭೆಯಲ್ಲಿದ್ದ ಯಜಮಾನ ಗೌಡರೊಬ್ಬರು ಮೇಲೆದ್ದು ಸಮಿತಿ ರಚನೆಯಾಗದಿದ್ದುದಕ್ಕಾಗಿ ನನ್ನನ್ನು ತರಾಟೆಗೆ ತೆಗೆದುಕೊಂಡರು. ನಾನು ಯಾರ ಮೇಲೆಯೂ ಜವಾಬ್ದಾರಿ ಹೊರಿಸದೆ, ಯಾರ ಹೆಸರನ್ನೂ ಹೊರಗೆಳೆಯದೆ, ನಗುನಗುತ್ತಲೆ ಸಮಿತಿಯನ್ನು ರಚಿಸುವುದಾಗಿ ಅವರಿಗೆ ಭರವಸೆ ನೀಡಿದೆ. ಆ ಸಭೆ ಮುಗಿದ ನಂತರ ಸಮಿತಿ ರಚನೆ ಬಗ್ಗೆ ಕೂಗಾಡುತ್ತಿದ್ದ ಮಿತ್ರರನ್ನು ಭೇಟಿಮಾಡಿ ಕುವೆಂಪು ಸಾಧನೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ಮೌನವೇ ಅವರ ಉತ್ತರವಾಗಿತ್ತು. ಚಂದ್ರೇಗೌಡ ನಾರಾಯಣಮೂರ್ತಿಯವರ ಸಲಹೆಯ ಮೇರೆಗೆ ಸಮಿತಿಯನ್ನು ರಚಿಸಿದೆ. 1994 ರ ಮಾರ್ಚ್ ತಿಂಗಳ ಮೊದಲವಾರದಲ್ಲಿ ನಾರಾಯಣಮೂರ್ತಿ ಸಿಕ್ಕಿದ್ದರು. ಸಮಿತಿ ಹೇಗೆ ನಡೆಯುತ್ತಿದೆಯೆಂದು ಅವರನ್ನು ಕೇಳಿದೆ. ಸಭೆ ಕರೆದಾಗ ಒಬ್ಬಿಬ್ಬರು ಬಂದರು; ಕೋರಂ ಸಾಲದೆ ಸಭೆಯನ್ನು ಮುಂದೆ ಹಾಕಬೇಕಾಯಿತು. ಇಂಥ ಪ್ರಸಂಗದ ಬಗ್ಗೆ ವ್ಯಾಖ್ಯಾನ ಅನವಶ್ಯಕ.

ಗುರುಕೈಂಕರ್ಯಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದ್ದೇನೆಯೇ ಹೊರತು ನನ್ನ ಸ್ವಾರ್ಥ ಸಾಧನೆಗಲ್ಲ. ಈ ಸಂಸ್ಥೆಗಳ ಪ್ರಗತಿಯನ್ನು ಕಂಡರಾಗದ ಜನ ದುಷ್ಟ ಕೂಟವೆಂದು ಹಳಿಯುತ್ತಾರೆ. ಮೇಲೆ ಮೇಲೆ ಕುವೆಂಪು ಅವರನ್ನು ಹೊಗಳುವ ಈ ಶಿಷ್ಟಕೂಟ(?) ಕುವೆಂಪು ಅವರ ಬಗ್ಗೆ ಮಾಡಿದ್ದೇನು? ಮಾತ್ಸರ್ಯೂಹಂಕಾರ ನಿರಾಶೆ ಅಸಾಮರ್ಥ್ಯಗಳೇ ಈ ಕುಹಕಕ್ಕೆ ಕಾರಣವೆಂದು ಹೇಳಬೇಕಾಗಿದೆ. 'ನಿಂದಕರಿರಬೇಕಿರಬೇಕು. ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ' ಎಂಬ ಪುರಂದರ ದಾಸರ ಕೀರ್ತನೆ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ನಾನೇ ಸದಾ ಪ್ರತಿಷ್ಠಾನದ ಅಧ್ಯಕ್ಷನಾಗಿರಬೇಕೆಂಬ ಹಂಬಲ ನನಗಿಲ್ಲ. ಅದರ ನೆಪದಿಂದ ರಾಜಕೀಯ ಮಾಡುವ ಚಲವೂ ಇಲ್ಲ. ಇಂದೇ ಆ ಪದವಿಯನ್ನು ಬಿಟ್ಟುಕೊಡಲು ಸಿದ್ಧ. ನನ್ನ ಗುರುಗಳಿಗೆ ಸಂಬಂಧಿಸಿದ ಈ ಪವಿತ್ರ ಕಾರ್ಯದ ಜವಾಬ್ದಾರಿಯನ್ನು ಯಾರಾದರೂ ಹೊತ್ತುಕೊಂಡು ಯಶಸ್ವಿಯಾಗಿ ನಡಸಿದರೆ ನನಗದೇ ತೃಪ್ತಿ. ಅಲ್ಲಿ ಕಾರ್ಯಗತಗೊಳಿಸಬೇಕಾದ ಯೋಜನೆಗಳನ್ನು ಸಹ ಈಗಾಗಲೇ ಪ್ರಕಟಿಸಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಗುವಿಗಾಗಿ ಕಲಹವಾಡುತ್ತಿದ್ದ ಇಬ್ಬರು ಹೆಂಗಸರ ಪೈಕಿ ನಿಜ ತಾಯಿಯನ್ನು ಕಂಡು ಹಿಡಿದು ತೀರ್ಪಿತ್ತ ಸಾಲೊಮನ್ ಚಕ್ರವರ್ತಿಯ ನೆನಪಾಗುತ್ತದೆ. ಇದನ್ನು ಯಾರಾದರೂ ಸಾಕಲಿ. ಅದು ಆರೋಗ್ಯದಿಂದ ಪ್ರವರ್ಧಮಾನಕ್ಕೆ ಬಂದರೆ ಸಾಕು.

* * * * *

ತಪ್ಪೊಪ್ಪಿಗೆ

ನನ್ನಲ್ಲಿ ಮುಂಗೋಪವಿದೆ, ಕನಿಕರವಿದೆ, ಔದಾರ್ಯವಿದೆ, ಕಷ್ಟ ಸಹಿಷ್ಣುತೆಯಿದೆ. ನನ್ನ ಮುಂಗೋಪ ಕ್ಷಣ ಮಾತ್ರದಲ್ಲಿ ಆರಿಹೋಗುವುದರಿಂದ ಅದೊಂದು ಅಕ್ಷಮ್ಯ ದೌರ್ಬಲ್ಯವೆಂದು ನಾನು ತಿಳಿದಿಲ್ಲ. ಅನ್ಯಾಯವನ್ನು ಕಂಡಾಗ ನನಗೆ ಮುಂಗೋಪ ಬರುತ್ತದೆ. ಆದರೆ ತಪ್ಪು ನನ್ನದೆಂದು ತಿಳಿದಾಗ ಅತ್ತು ಬಿಡುತ್ತೇನೆ. ನನ್ನ ಮಹಾದೌರ್ಬಲ್ಯವೆಂದರೆ ಲೈಂಗಿಕತೆ. ನನ್ನ ಹೋರಾಟದ ಬದುಕು ಆತ್ಮಕಥೆಯಲ್ಲಿ ಈ ವಿಷಯವನ್ನು ಸೂಕ್ಷ್ಮವಾಗಿ ತೇಲಿಸಿ ಬರೆದಿರುವೆನಾದರೂ ಅದು ಸಾಲದು. ಆದರಿಂದ ನನ್ನ ನೆಡವಳಿ ಜಗತ್ತಿಗೆ ಸ್ಪಷ್ಟವಾಗಿ ಗೋಚರಿಸದು. ಅದನ್ನು ಸ್ಪಷ್ಟಪಡಿಸದಿದ್ದರೆ ನಾನು ನಿಷ್ಕಪಟಿಯೆಂದು ಹೇಳಿಕೊಳ್ಳುವ ನೈತಿಕ ಸಾಮರ್ಥ್ಯ ನನಗಿರುವುದಿಲ್ಲ. ನಾನು ಸತ್ಯವಂತನೆಂದು ಹೇಳಿಕೊಳ್ಳಲಾರೆ ಎನ್ನುವ ಕಾರಣದಿಂದಾಗಿ ಈ ನನ್ನ ಲೈಂಗಿಕ ಸಾಹಸದ ಕತೆಯನ್ನು ಸವಿವರವಾಗಿ ನೆನಪಿಗೆ ಬಂದಷ್ಟನ್ನು ನಿರೂಪಿಸುತ್ತೇನೆ. ಆನುವಂಶಿಕ ಗುಣದ ಜತೆಗೆ, ಪರಿಸರ ವಿಷಯಲಂಪಟತ್ವಕ್ಕೆ ಮೂಲ ಎಂಬುದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. 'ಪುಟ್ಟುವಾಗಳಿಯೆ ನಾಂ ನೆತ್ತರೊಳಿ ಪೆಣ್ಣೊಡಲಿನಾಸೆಯಾ ಬೇಟಮಂ ಪೊತ್ತು ಪುಟ್ಟಿದೆನ್ನಸ! ಜನ್ಮ ದೌರ್ಬಲ್ಯಮಂ ಜಯಿಸಲೆಂದಾನೆನಿತೆನಿತೂ ನಿಟ್ಟೆಯಂ ಪಟ್ಟು ಬೇಯಿಸಿದೆನಾತ್ಮಮಂ' ಎಂಬುದಾಗಿ ಮಾರೀಚನಿಗೆ ರಾವಣ ಹೇಳುವ ಮಾತು ನನಗೀಗ ನೆನಪಾಗುತ್ತದೆ.

ನನ್ನ ತಂದೆಯ ತಂದೆ ತಾತಂದಿರ ವಿಷಯ ನನಗೆ ಗೊತ್ತಿಲ್ಲ. ನನಗೆ ಬುದ್ಧಿ ತಿಳಿಯುವ ಹೊತ್ತಿಗೆ ನನ್ನ ತಂದೆ ಕಣ್ಣು ಕಳೆದುಕೊಂಡಿದ್ದರು. ಸೊಪ್ಪು ಕೀಳುವಾಗ ಒಂದು ಕಣ್ಣಿಗೆ ಹಿಪ್ಪಲಿನೇರಿಳೆ ಕಡ್ಡಿ, ಕಣದಲ್ಲಿ ಹುಲ್ಲು ಹರಡುವಾಗ ಮತ್ತೊಂದು ಕಣ್ಣಿಗೆ ರಾಗಿ ದಿಂಡು ತಗುಲಿ ಕ್ರಮೇಣ ದಿಟ್ಟಿ ಹೋಯಿತೆಂದು ಅವರು ಹೇಳುತ್ತಿದ್ದರು. ತಮ್ಮ ಕರ್ಮವೆ ತಮ್ಮ ಕುರುಡಿಗೆ ಕಾರಣವೆಂದು ಒಮ್ಮೊಮ್ಮೆ ಅವರು ತಮ್ಮ ಸ್ನೇಹಿತರೊಡನೆ ಹೇಳುತ್ತಿದ್ದುದನ್ನು ಕೇಳಿಸಿಕೊಂಡಿದ್ದೆ. ಒಂದು ಬೇಸಗೆಯ ಅಪರಾಹ್ನ. ಮಾಯಿಗೌಡ ಮತ್ತು ಅವರು ತಮ್ಮ ಯೌವ್ವನದ ಲೀಲೆಗಳನ್ನು ಕುರಿತು ಮಾತಾಡಿಕೊಳ್ಳುತ್ತಿದ್ದುದು ಬಳಿಯ ಕಿರುಕೋಣೆಯಲ್ಲಿದ್ದ ನನಗೆ ಕೇಳಿಸುತ್ತಿತ್ತು. 'ನೋಡು ಮಾಯಣ್ಣ, ನನ್ನ ಪಾಪದ ಫಲವನ್ನು ನಾನೀಗ ಅನುಭವಿಸುತ್ತಿದ್ದೇನೆ. ನಾನು ಒಬ್ಬರಾದ ಮೇಲೊಬ್ಬರಂತೆ ಮೂವರು ಹೆಂಗಸರನ್ನು ಕಟ್ಟಿಕೊಂಡೆ. ಅವರಿಂದ ನನಗೆ ಸಾಕಷ್ಟು ಸುಖ ದೊರೆಯದೆ, ಪರಸ್ತ್ರೀ ವ್ಯಸನದಲ್ಲಿ ಮುಳುಗಿರುತ್ತಿದ್ದೆ. ಹೊಲಗೆಲಸಕ್ಕೆ ಬರುತ್ತಿದ್ದ ಇಬ್ಬರು ಮೂವರು ಹೆಣ್ಣುಗಳ ಪಾತಿವ್ರತ್ಯವನ್ನು ಭಂಗಗೊಳಿಸಿದ್ದೆ. ಅನ್ಯ ಸ್ತ್ರೀ ದರ್ಶನದಿಂದ ನನ್ನ ಕಣ್ಣಿಗೆ ಈ ಗತಿ ಒದಗಿತೆಂದು ತೋರುತ್ತದೆ'. ಅವರು ಪಶ್ಚಾತ್ತಾಪದಿಂದ ಹೇಳಿಕೊಳ್ಳುತ್ತಿದ್ದ ಮಾತಿದು.

ನಾನು ಆರೇಳು ವರ್ಷದವನಾಗಿದ್ದಾಗ ಕತ್ತಲೆಯೆಂದರೆ ಹೆದರಿಕೆ. ನನ್ನ ತಾಯಿಯನ್ನಪ್ಪಿಕೊಂಡು ಮಲಗಿದರೆ ಮಾತ್ರ ನನಗೆ ನಿದ್ದೆ ಹತ್ತುತ್ತಿತ್ತು. ನನ್ನ ತಂದೆಗೂ ತಾಯಿಗೂ ಮಧ್ಯೆ ನಾನು. ತಾಯಿಯ ಮತ್ತೊಂದು ಪಕ್ಕದಲ್ಲಿ ಅಕ್ಕತಂಗಿಯರು ಈಚಲು ಚಾಪೆಯ ಮೇಲೆ ಮಲಗಿರುತ್ತಿದ್ದೆವು. ತಾಯಿಯನ್ನಪ್ಪಿಕೊಂಡಿದ್ದ ನನ್ನ ತೋಳನ್ನು ತಂದೆ ಸಡಿಲಿಸುವಾಗ ನನಗೆ ಎಚ್ಚರವಾಗುತ್ತಿತ್ತು. ನಾನು ನಿದ್ದೆಗಣ್ಣಿನಲ್ಲಿರುವಾಗ ತಂದೆ ತಾಯಿಯರ ಸರಸ ಸಲ್ಲಾಪಗಳು ನನ್ನ ಕಿವಿಯ ಮೇಲೆ ಬೀಳುತ್ತಿದ್ದುವು. ಆದರೆ ಅವುಗಳ ಅರ್ಥ ನನಗೆ ತಿಳಿಯುತ್ತಿರಲಿಲ್ಲ. ಅಷ್ಟೇ ಅಲ್ಲ, ಅವರ ಚೇಷ್ಟೆಗಳು ಸಹ ನನ್ನ ಕಣ್ಣಿಗೆ ಕನಸಿನಂತೆ ತೋರುತ್ತಿದ್ದುವು. ಆಗಲೂ ಅವು ನನ್ನ ಸುಪ್ತ ಪ್ರಜ್ಞೆಯಲ್ಲಿ ಸೇರಿಕೊಳ್ಳುತ್ತಿದ್ದುವೇ ಹೊರತು, ಜಾಗ್ರತ್ ಪ್ರಜ್ಞೆಯಲ್ಲಿ ಮೊಗದೋರುತ್ತಿರಲಿಲ್ಲ.

ನಾನು ಒಂಬತ್ತು ಹತ್ತು ವರ್ಷದವನಿದ್ದಾಗ ನನಗಿದ್ದ ಗೆಳೆಯರೆಂದರೆ ನನಗಿಂತ ಒಂದೆರಡು ವರ್ಷ ಹೆಚ್ಚು ವಯಸ್ಸಾದ ಹುಡುಗಿಯರು. ಅಂದ ಮೇಲೆ ನನ್ನ ಆಟಗಳೆಲ್ಲ ಹುಡುಗಿಯರ ಆಟಗಳೇ ಆಗಿದ್ದುವು. ಅವರಲ್ಲಿಬ್ಬರು ಒಕ್ಕಲಿಗ ಜಾತಿಯ ಹುಡುಗಿಯರು; ಗೌರಿ, ಚಿನ್ನಿ; ಮತ್ತೊಬ್ಬಳು ಬೆಸ್ತರವಳು-ಹೆಸರು ಮರೆತು ಹೋಗಿದೆ. ಚಂದ್ರಿಕೆಯಲ್ಲಿ ಮನೆ ಕಟ್ಟಿಕೊಂಡು, ಸಂಸಾರದ ಆಟ ಆಡುತ್ತಿದ್ದುದು ನನ್ನ ನೆನಪಿನಲ್ಲಿನ್ನೂ ಹಚ್ಚ ಹಸುರಾಗಿದೆ. ನಾನೊಬ್ಬನೇ ಗಂಡು ಹುಡುಗನಾದ್ದರಿಂದ ನಾನೇ ಅವರೆಲ್ಲರಿಗೂ ಗಂಡ. ದಿನ ತಪ್ಪಿ ದಿನ ನಾನು ಒಬ್ಬೊಬ್ಬ ಹುಡುಗಿಯ ಬಳಿ ಮಲಗಬೇಕಾಗುತ್ತಿತ್ತು. ಅವರ ಚೇಷ್ಟೆಗಳು ನನಗೆ ಆನಂದದಾಯಕವಾಗಿರದೆ, ತಾಪದಾಯಕವಾಗಿರುತ್ತಿದ್ದವು. ಸಂಸಾರದ ಒಡತಿಯಂತೆ ನನ್ನಕ್ಕನೂ ಒಮ್ಮೊಮ್ಮೆ ನಮ್ಮ ಆಟಗಳಲ್ಲಿ ಭಾಗವಹಿಸುತ್ತಿದ್ದಳು. ಶಾಲೆಯಲ್ಲಿಯೂ ನಾನು ಹುಡುಗಿಯರ ಬಳಿಯೇ ಕುಳಿತುಕೊಳ್ಳಬೇಕೆಂದು ಮೇಷ್ಟರು ಕಡ್ಡಾಯ ಮಾಡಿದ್ದುದರಿಂದ ಗೌರಿ ಸುಭದ್ರೆಯರನ್ನು ಬಿಟ್ಟು ನಾನು ಹುಡುಗರ ಬಳಿ ಸೇರುತ್ತಿರಲಿಲ್ಲ. ನಾನು ಇತರ ಎಲ್ಲ ಹುಡುಗರಿಗಿಂತ ಚಿಕ್ಕವನಾಗಿದ್ದುದೇ ಆ ಏರ್ಪಾಡಿಗೆ ಕಾರಣವಾಗಿತ್ತು. ಕೊನೆಗೆ ಮೂತ್ರ ವಿಸರ್ಜನೆಗೂ ಸಹ ನಾನು ಹುಡುಗಿಯರೊಡನೆ ಹೋಗುತ್ತಿದ್ದೆ ನಾನು ಮತ್ತು ಹುಡುಗಿಯರು ಎದುರುಬದುರಾಗಿ ಕುಳಿತುಕೊಂಡರೂ, ಲೈಂಗಿಕ ಪ್ರಜ್ಞೆಗೆ ತುಂಬ ದೂರದಲ್ಲಿದ್ದೆನೆಂದೇ ಹೇಳಬೇಕು.

ಕುರಿ ಮೇಯಿಸುವುದು ನನ್ನ ಪ್ರಿಯ ಹವ್ಯಾಸಗಳಲ್ಲೊಂದಷ್ಟೆ. ಅವು ತಮ್ಮ ಕಿರು ಬಾಯಿಗಳಲ್ಲಿ ಹುಲ್ಲು ಕಿತ್ತುಕೊಂಡು ಮೇಯುವಾಗ ನನಗೇಕೋ ಏನೋ ಅಪಾರ ಆನಂದವಾಗುತ್ತಿತ್ತು. ಅವುಗಳ ಕಿವಿ, ಕಣ್ಣು ಒಂದೊಂದೂ ನನ್ನ ಕಣ್ಣಿಗೆ ತೃಪ್ತಿ ನೀಡುತ್ತಿದ್ದುವು. ತಾಯಿ ಕುರಿ ತನ್ನ ಮರಿಗೆ ಹಾಲು ಕುಡಿಸುತ್ತಿದ್ದಾಗ ಅದರ ಮುಖದಲ್ಲಿ ಆನಂದ ಉದ್ದೀಪನಗೈಯುತ್ತಿದ್ದಂತೆ, ಅದರ ರೋಮ ರೋಮಗಳಲ್ಲಿ ವಾತ್ಸಲ್ಯ ಮುಕ್ಕುಳಿಸುತ್ತಿದ್ದಂತೆ ನನಗೆ ಭಾಸವಾಗುತ್ತಿತ್ತು. ಕರಗಿ ಬೆದೆಗೆ ಬಂದು, ಟಗರು ಕಟ್ಟುವಾಗ ಸೃಷ್ಟಿಯ ಅಭೇದ್ಯ ರಹಸ್ಯವೊಂದು ಬಯಲಾಗುತ್ತಿದ್ದಂತೆ ನನಗೆ ತೋರುತ್ತಿತ್ತು. ಒಮ್ಮೊಮ್ಮೆ ಬಾರಿಗೆ ಬರದಿದ್ದರೂ, ಕುರಿಯನ್ನು ಟಗರಿನ ಬಳಿ ಎಳೆದೊಯ್ದು ಅದನ್ನು

ಅಲುಗದಂತೆ ಬಿಗಿಯಾಗಿ ಹಿಡಿದುಕೊಂಡಾಗ, ಟಗರು ಅದರ ಮೇಲೆ ಹಾರುತ್ತಿದ್ದುದನ್ನು ನೋಡುತ್ತಿದ್ದೆ. ಟಗರು ಕುರಿಯ ಮೇಲೆ ಹತ್ತುವಂತೆ ಮೇಕೆಯ ಮೇಲೆ ಏಕೆ ಹತ್ತಬಾರದು?, ಹೋತ ಕುರಿಯ ಮೇಲೆ ಏಕೆ ಹತ್ತ ಬಾರದು ಎಂದು ನಾನು ಯೋಚಿಸುತ್ತಿದ್ದೆ. ಇಂತೆಯೇ ಕಪ್ಪೆ, ಕೋಳಿ, ಗುಬ್ಬಚ್ಚಿ, ದನ, ನಾಯಿ, ಹಂದಿ ಮೊದಲಾದ ಪ್ರಾಣಿಗಳ ಸಂಭೋಗವನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದೆ. ಗಂಡು ಹೆಣ್ಣು ನಾಯಿಗಳು ಏಕೆ ಗಂಟು ಹಾಕಿಕೊಳ್ಳುತ್ತಿದ್ದುವೆಂದು ಸಮ ವಯಸ್ಸಿನ ಹುಡುಗರು ಮಾತಾಡಿಕೊಳ್ಳುತ್ತಿದ್ದೆವು. ಆಕಸ್ಮಾತ್ ಆ ಬಗ್ಗೆ ದೊಡ್ಡವರನ್ನು ಪ್ರಶ್ನಿಸಿದರೆ, ಬಯ್ದು ನಮ್ಮನ್ನು ಸುಮ್ಮನಿರಿಸುತ್ತಿದ್ದರು. ಹಸಿವು ಕಾಮಗಳ ತೃಪ್ತಿಯೇ ಜೀವನೋದ್ದೇಶವೆಂಬ ಭಾವನೆ ನನ್ನ ಮನಸ್ಸಿನ ಅಂತರಾಳದಲ್ಲಿ ನನಗರಿವಿಲ್ಲದಂತೆ ಮೊಳೆಯುತ್ತಿತ್ತು.

ಕುರಿ ಮೇಕೆ ದನ ಮೇಯಿಸಾಣಿಕೆಯ ಕಾಲದಲ್ಲಿ-ಅದರಲ್ಲಿಯೂ ಬೇಸಗೆಯ ರಜಾದಿನಗಳಲ್ಲಿ-ಮರ ಕೋತಿಯಾಟ, ಜೂಟಾಟ, ಹರಳುಮಣೆ, ಗಜ್ಜುಗ, ಲಗ್ಗೆ ಚೆಂಡು ಮೊದಲಾದ ಆಟಗಳು ಜರುಗುತ್ತಿದ್ದುವು. ಹುಡುಗಿಯರು ಜೂಟಾಟ ಹರಳು ಮಣೆ ಆಟಗಳಲ್ಲಿ ಹುಡುಗರೊಡನೆ ಸೇರುತ್ತಿದ್ದರು. ಅವರವರ ಮನೆಗಳಿಂದ ಅಡುಗೆ ಪದಾರ್ಥಗಳನ್ನು ತಂದು ಅಟ್ಟುಗುಳಿ ಮಾಡಿ, ಊಟ ಮಾಡುತ್ತಿದ್ದುದೂ ಉಂಟು. ಆ ವಯಸ್ಸಿನ ಕುರಿ-ದನಗಾಹಿಗಳಲ್ಲಿ ಜಾತಿ ಭೇದವಿರಲಿಲ್ಲವೆಂಬುದು, ಒಕ್ಕಲಿಗ ಹೊಲೆಯ ಹುಡುಗ ಹುಡುಗಿಯರು ಸಮ ಸಮವಾಗಿ ಬೆರೆಯುತ್ತಿದ್ದರೆನ್ನುವುದು ಇಲ್ಲಿ ಸ್ಮರಿಸಬೇಕಾದ ಸಂಗತಿ. ಬೇಸಗೆ ಕಾಲದಲ್ಲಿ ದನಕುರಿಗಳನ್ನು ಎಚ್ಚರಿಕೆಯಿಂದ ಕಾಯಬೇಕಾದ ಅಗತ್ಯವಿಲ್ಲದ್ದರಿಂದ ಹುಡುಗ ಹುಡುಗಿಯರ ಆಟ ಪಾಟಗಳು ತೋಪುಗಳಲ್ಲಿ ಜರುಗುತ್ತಿದ್ದುವು. ಆಗವರು ಆಡಿಕೊಳ್ಳುತ್ತಿದ್ದ ಮಾತುಗಳಿಗೆ ಮಿತಿಯೇ ಇರುತ್ತಿರಲಿಲ್ಲ. ಅವರಿವರ ಮನೆಗಳ ಒಗೆತನ, ಅಣ್ಣ ತಮ್ಮಂದಿರ ಗಂಡ ಹೆಂಡಿರ ಜಗಳ, ಕೆಲವು ಗಂಡು ಬೀರಿಯರ ಚೆಲ್ಲಾಟ, ದಕ್ಕಡಿಕೆಯ ಗೌಡರ ಗುಪ್ತ ಪ್ರಣಯ- ಒಂದೇ ಎರಡೇ, ಹಲವಾರು ಸಂಗತಿಗಳು ಅವರ ಮಾತುಕತೆಗಳ ವಿಷಯವಾಗುತ್ತಿದ್ದುವು. ಏನೇನೋ ನೆವವೊಡ್ಡಿಕೊಂಡು ಪಡ್ಡೆ ಹುಡುಗರು ದುಂಡು ಹುಡುಗಿಯರ ಮೈಮೇಲೆ ಕೈಯಾಡಿಸುತ್ತಿದ್ದುದುಂಟು. ಆ ಸಮಯದಲ್ಲಿ ಅವರ ಬಾಯಿಗಳಿಂದ ಹೊರ ಬೀಳುತ್ತಿದ್ದ ಬಯ್ಗಳು ಅಶ್ಲೀಲವಾದರೂ, ಅರ್ಥವಿಲ್ಲದ ಮಾತುಗಳಂತೆ ಲೀಲಾ ಜಾಲವಾಗಿ ತೂರಾಡುತ್ತಿದ್ದುವು. ಅವು ನನ್ನ ಭಾವ ಕೋಶವನ್ನು ಹೊಕ್ಕು ಆಗಾಗ್ಗೆ ಮರುಕಳಿಸಿ, ನನ್ನ ಮನಸ್ಸಿನ ಪಾತಾಳದಲ್ಲಿ ಭೇತಾಳಗಳಂತೆ ಬೆಳೆಯುತ್ತಿದ್ದುವು.

ಚನ್ನಪಟ್ಟಣದ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಹನುಮಂತರಾವ್ ಎಂಬ ಮರಾಠಿಯೊಬ್ಬ ನನ್ನ ಸಹಪಾಠಿಯಾಗಿದ್ದನು. ಅವನಿಗೂ ನನಗೂ ಏಳೆಂಟು ವರ್ಷ ಅಂತರವಿದ್ದಿರಬಹುದೆಂದು ತೋರುತ್ತದೆ. ಅವನಿಗಾಗಲೆ ಮೀಸೆ ಗಡ್ಡ ಬಲಿತಿದ್ದವು. ಅವನು ಬಹು ಬೇಗ ನನ್ನ ಸ್ನೇಹ ಬೆಳೆಸಿದ್ದಲ್ಲದೆ, ನಾನು ಕುಳಿತೆಡೆ, ನಿಂತೆಡೆ, ಹೋದೆಡೆ ಹಾಜರಾಗುತ್ತಿದ್ದನು. ನನಗಾಗ ಉದ್ದವಾದ ಜಡೆ ಇತ್ತು. ಯಾರೂ ಕಾಣದಂತೆ ಅದನ್ನು

ಹಿಡಿದೆಳೆಯುವುದು, ಕೆನ್ನೆಗೆ ಮುತ್ತಿಡುವುದು, ನನ್ನ ಮೈಮೇಲೆ ಕೈಯಾಡಿಸುವುದು ಅವನ ಚಾಳಿಯಾಗಿತ್ತು. ಅವನು ನನಗಿಂತ ಬಲಶಾಲಿಯಾದ್ದರಿಂದ ಅವನ ಚೇಷ್ಟೆಯನ್ನು ಯಾರ ಗಮನಕ್ಕೂ ನಾನು ತರುತ್ತಿರಲಿಲ್ಲ. ಜತೆಗೆ ಅವನ ಚೇಷ್ಟೆಗಳಿಂದ ನನಗೇನೂ ಹಿಂಸೆಯಾದಂತೆ ತೋರುತ್ತಿರಲಿಲ್ಲ. ಅವನು ಒಮ್ಮೊಮ್ಮೆ ನನಗೆ ಕೊಡುತ್ತಿದ್ದ ಪೆಪ್ಪರಮೆಂಟು ಅದಕ್ಕೆ ಕಾರಣವಾಗಿದ್ದಿರಬಹುದು. ಪುಟ್ಟಶಾಸ್ತ್ರಿಗಳು ಆ ಶಾಲೆಯ ಮುಖ್ಯೋಪಾಧ್ಯಾಯರು ; ತುಂಬ ಖೈಡು ಆಸಾಮಿ. ಶಿಸ್ತಿನ ಸಿಪಾಯಿ. ಎಂದೋ ಒಮ್ಮೆ ಅವರು ಹನುಮಂತರಾಯನ ಚೇಷ್ಟೆಗಳನ್ನು ಗಮನಿಸಿದರೆಂದು ತೋರುತ್ತದೆ. ರೂಲು ದೊಣ್ಣೆಯಿಂದ ಅವನನ್ನು ಬಾರಿಸಿ, ಅವನು ನನ್ನ ಹತ್ತಿರ ಸುಳಿಯದಂತೆ ತಾಕೀತು ಮಾಡಿದರು. ಅವನು ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಬೇತೇರ್ಗಡೆಯಾದ್ದರಿಂದ, ಅನಂತರ ಈ ತನಕ ಅವನನ್ನು ನೋಡಿದ್ದಿಲ್ಲ.

ನಮ್ಮ ನೆರೆ ಮನೆಯಲ್ಲಿ ಮಂದ ಎಂಬ ಪೋಲಿ ಇದ್ದ. ಅವನು ಒಂದು ತಿಂಗಳು ಊರಲ್ಲಿದ್ದರೆ, ನಾಲ್ಕು ತಿಂಗಳು ಬೆಂಗಳೂರಲ್ಲಿರುತ್ತಿದ್ದ. ತಲೆ ಹಿಡುಕನೆಂದು ಹಳ್ಳಿಯವರು ಅವನನ್ನಾಗ ಕರೆಯುತ್ತಿದ್ದರು. ಆಗ ನನಗೆ ಆ ಪದದ ಅರ್ಥ ತಿಳಿದಿರಲಿಲ್ಲ. ಅವನೊಮ್ಮೆ ಬೆಂಗಳೂರಿಂದ ಸೂಳೆಯೊಬ್ಬಳನ್ನು ಊರಿಗೆ ಕರೆ ತಂದು, ಅವಳು ತನ್ನ ಹೆಂಡತಿಯೆಂದು ಎಲ್ಲರೊಡನೆ ಹೇಳುತ್ತಿದ್ದನು. ಅವನು ಧರಿಸುತ್ತಿದ್ದ ಮಲ್ಲು ಬಟ್ಟೆಯಿಂದ ಅವನೊಬ್ಬ ಶ್ರೀಮಂತನಿದ್ದಿರಬೇಕೆಂದು ಆ ಪ್ರೇಯಸಿ ಭ್ರಮಿಸಿದ್ದಳೆಂದು ತೋರುತ್ತದೆ. ಬೆಳುದಿಂಗಳ ಸಮಯದಲ್ಲೊಮ್ಮೆ ಅವಳನ್ನು ಹಳೆ ಕೆರೆಯ ಬಳಿ ಕರೆದೊಯ್ದು, ಸಮೃದ್ಧವಾಗಿ ಬೆಳೆದಿದ್ದ ವಡಕೆಯ ಕಡೆ ಕೈತೋರಿ, ಅದು ತನ್ನ ಗದ್ದೆಯೆಂದು ಹೇಳಿ ಅವನವಳನ್ನು ತೃಪ್ತಿಪಡಿಸಿದ್ದ. ಮತ್ತೆ ಆ ಕಡೆಗೆ ಅವಳನ್ನು ಕರೆದೊಯ್ಯಲಿಲ್ಲ. ಅವರಿವರ ಮಾತುಗಳಿಂದ, ಮನೆಯ ರಿಕ್ತತೆಯಿಂದ ಅವನ ಪೊಳ್ಳುತನ ಗೊತ್ತಾಗಿ, ಅವನನ್ನು ಬಯ್ದು, ಭಂಗಿಸಿ, ಒದ್ದು ಮತ್ತೆ ಬೆಂಗಳೂರಿಗೆ ನಡೆದಳು. ತನ್ನ ಮನೆಯ ಜಗಲಿಯ ಮೇಲೆ ಕುಳಿತು ದಾರಿಯಲ್ಲಿ ಹೋಗುವ ಹುಡುಗಿಯರ ಕಡೆಗೆ ಕಣ್ಣು ಹಾಯಿಸುವುದು, ತನ್ನ ಕಾಮ ವಿಕಾರ ತೃಪ್ತಿಗಾಗಿ ಎಳೆಯ ಹುಡುಗರನ್ನು ಕರೆದು, ಚೇಷ್ಟೆ ಮಾಡುವುದು ಅವನ ಹವ್ಯಾಸವಾಗಿತ್ತು. ಒಮ್ಮೆ ನಾನೂ ಅವನ ಕೈಗೆ ಸಿಕ್ಕು ಬಿದ್ದು, ಅವನ ಹಿಡಿತದಿಂದ ತಪ್ಪಿಸಿಕೊಳ್ಳುವುದೆ ಕಷ್ಟವಾಯಿತು.

ನನ್ನ ಚಿಕ್ಕಪ್ಪನ ಹಿರಿಯ ಮಗನ ನಿಜವಾದ ಹೆಸರು ಗೊತ್ತಿಲ್ಲ; ಜನ ಅವನನ್ನು ಕರೆಯುತ್ತಿದ್ದುದು ಮಾತ್ರ ದೊಡ್ಡೋನು ಅಥವಾ ಚಿನ್‌ಕುರುಳಿ ಎಂದು. ಅವನು ಎಳವೆಯಿಂದಲೇ ಕೆಟ್ಟ ಹಾದಿಗೆ ಬಿದ್ದವನು. ತುಂಬ ಒರಟ, ಲಂಪಟ. ಅವನನ್ನು ಕಂಡರೆ ಜನ ಹೆದರುತ್ತಿದ್ದರು, ದುಷ್ಟ ಅಂತ. ಅಪ್ಪ ಅಮ್ಮ ಸಹ ಹೆದರುತ್ತಿದ್ದರು. ಇಸ್ಪೀಟಾಟ ಅವನ ನಿತ್ಯದ ಹವ್ಯಾಸ. ಹಣಕ್ಕಾಗಿ ಸಣ್ಣ ಪುಟ್ಟ ಕಳ್ಳತನ ಮಾಡುತ್ತಿದ್ದ. ಹೊತ್ತಿಗೆ ಸರಿಯಾಗಿ ಊಟ ಹಾಕದಿದ್ದರೆ ತಾಯಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ. ಊಟ ಮುಗಿದ ಮೇಲೆ ಅವನು ಮನೆಯನ್ನೇ ಸೇರುತ್ತಿರಲಿಲ್ಲ. ಗೌರವಸ್ಥರ ಮನೆಯಿಂದ ಸುಂದರಿಯಾದ ಹುಡುಗಿಯನ್ನು ತಂದು ಮದುವೆ ಮಾಡಿದರೂ, ಅವನನ್ನು ಪಳಗಿಸುವ ಕಾರ್ಯದಲ್ಲಿ ತಂದೆ ತಾಯಿಯರು ಯಶಸ್ವಿಗಳಾಗಲಿಲ್ಲ. ಕೊಬ್ಬಿದ ಗೂಳಿಯಂತೆ ಊರ ಮಾಳದಲ್ಲೆಲ್ಲ ಮೇಯಲು ಅವನು

ಹವಣಿಸುತ್ತಿದ್ದ. ನಮ್ಮ ಕಣದ ಹೊಲದ ನೆರೆಯಲ್ಲಿ ಪೂಜಾರಿಯೊಬ್ಬನ ಹೊಲವಿತ್ತು. ಕಣಕ್ಕೆ ದಕ್ಷಿಣದಲ್ಲಿ ಕಲ್ಲೊಡ್ಡಿತ್ತು. ಒಂದು ದಿನ ಅಲ್ಲಿ ನಾನು ಕುರಿ ಮೇಯಿಸುತ್ತಿದ್ದೆ. ದೀಪಾವಳಿಯ ಕಾಲ. ಚಿನಕುರುಳಿ ನಾನಿದ್ದೆಡೆಗೆ ಬಂದ. ಪೂಜಾರಿಯ ಹೆಂಡತಿ ತನ್ನ ಹೊಲದ ತೆವರಿಯ ಮೇಲೆ ದನ ಮೇಯಿಸುತ್ತಿದ್ದಳು. ಮದುವೆಯಾಗಿ ಏಳೆಂಟು ವರ್ಷಗಳಾದರೂ ಅವಳಿಗೆ ಮಕ್ಕಳಾಗಲಿಲ್ಲ. ಕಟ್ಟುಮಸ್ತಾದ ಕಡಸಿನಂತಿದ್ದಳು. ನಮ್ಮ ಮನೆಯವರೊಡನೆ ಚಿನಕುರುಳಿ ಮಾತಾಡದಿದ್ದರೂ, ನನ್ನನ್ನು ಮಾತಾಡಿಸುತ್ತಿದ್ದ. 'ಲೋ ಮೊಗ ನಾನು ನಿನ್ನ ಕುರಿ ನೋಡ್ಕೋತೀನಿ. ನೋಡಲ್ಲಿ ಬಸಮ್ಮ (ಅವಳ ನಿಜವಾದ ಹೆಸರು ಬೇರೆ)ಅವಳನ್ನು ಮೆಣಸಿಕೆ ತೋಟಕ್ಕೆ ಬರಹೇಳು. ನಾನಿರುವ ವಿಷಯ ತಿಳಿಸು ಎಂದ. ನಾನು ಮುಗ್ಧನಂತೆ ಬಸಮ್ಮನಿಗೆ ಸುದ್ದಿ ತಿಳಿಸಿದೆ. ತುಸು ಹೊತ್ತು ಬಿಟ್ಟುಕೊಂಡು ಅವಳು ಬಂದಳು. 'ಯಾರಾದರೂ ಬಂದ್ರೆ ಸಿಳ್ಳೆ ಹಾಕು' ಎಂದು ಹೇಳಿ ಇಬ್ಬರೂ ಬೇಲಿಯ ಒಂದೆ ಮರೆಯಾದರು. ಕೆಲವು ನಿಮಿಷಗಳ ನಂತರ ಅವರು ಹೊರಗೆ ಬಂದರು. 'ಲೋ, ಮೊಗ ಇವ್ರು ನಿನ್ಗೂ ಬೇಕೇನೋ?' ಎಂದು ಚಿನಕುರುಳಿ ನಕ್ಕನು. 'ಸುಮ್ಮಿರಯ್ಯ. ಏನೂ ತಿಳಿಯದ ಮಕ್ಕಳಿಗೆ ಇದೆಲ್ಲ ಯಾಕೆ ಹೇಳ್ಕೊಡ್ತೀಯೆ' ಎಂದು ಬಸಮ್ಮ ಅವನನ್ನು ಗದರಿಸಿದಳು. ಚಿನಕುರುಳಿಯ ಮಾತಿನಿಂದ ನಾನು ತಬ್ಬಿಬ್ಬಾದೆ. ಬಹುದಿನಗಳ ತನಕ 'ನಿನ್ಗೂ ಬೇಕೇನೋ?' ಎಂಬ ಅವನ ಮಾತುಗಳು ನನ್ನ ಕಿವಿಗಳಲ್ಲಿ ಗುಯ್ಗುಡುತ್ತಿದ್ದುವು.

ನನ್ನ ವಯಸ್ಸಿನ ಹುಡುಗರು ಮಠಕ್ಕೆ ಹೋಗ್ತಾರೆ, ನಾನ್ಯಾಕೆ ಹೋಗ್ಬಾರದು? ಎಂಬೊಂದು ಕಾರಣದಿಂದಾಗಿ ನಾನು ಶಾಲೆಗೆ ಹೋಗುತ್ತಿದ್ದೆನೇ ಹೊರತು, ಪರೀಕ್ಷೆ ಕಟ್ಟಬೇಕು, ಪಾಸು ಮಾಡಬೇಕು, ಅದಾಗಬೇಕು, ಇದಾಗಬೇಕು ಎಂಬ ದೃಷ್ಟಿಯಿಂದಲ್ಲವೇ ಅಲ್ಲ. ಆ ಕಾಲದಲ್ಲೂ ಐದಾರೆಕರೆ ಜಮೀನಿದ್ದವನ ಬದುಕಿಗಿಂತ ಹದಿನೈದು ರೂಪಾಯಿ ಸಂಬಳ ತರುವವನ ಬದುಕು ಮೇಲೆಂಬ ಭಾವನೆ ಜನಮನದಲ್ಲಿ ಬೇರೂರಿತ್ತು; ರೈತನ ಸಮಸ್ಯೆ ಗುಮಾಸ್ತೆಗಾಗಲಿ, ಮೇಷ್ಟರಿಗಾಗಲಿ ಇಲ್ಲ; ನೌಕರನ ಜೀವನ ಸುಖ ಜೀವನ ಎಂಬ ಅಭಿಪ್ರಾಯ ಇದ್ದೇ ಇತ್ತು. ಅದು ಈಗಲೂ ಇದ್ದದ್ದೇ; ಅದು ನಿಜಕ್ಕೂ ನಿಜ. ನನಗಾಗ ಆ ಯೋಚನೆಯೂ ಇರಲಿಲ್ಲ. ವಿದ್ಯೆಯಿಂದ ಜ್ಞಾನ ಲಭಿಸುತ್ತದೆ. ಜ್ಞಾನವೇ ಶಕ್ತಿ ಎಂಬ ಸಂಗತಿಯಂತು ನನಗೆ ಗೊತ್ತೇ ಇರಲಿಲ್ಲ. ಅಂತು ಓದುತ್ತಿದ್ದೆ. ನಾನು ಹೈಸ್ಕೂಲು ಐದನೆಯ ತರಗತಿಯಲ್ಲಿದ್ದೆನೆಂದು ತೋರುತ್ತದೆ. ನಮ್ಮೂರಿನಲ್ಲಿ ಪ್ಲೇಗು. ಊರು ಬಿಟ್ಟು ಹೊರಗೆ ಗುಡಿಸಲು ಹಾಕಿಕೊಂಡು ಒಂದು ವರ್ಷ ಅಲ್ಲಿ ವಾಸ ಮಾಡಬೇಕಾಗಿತ್ತು. ನಾಲ್ಕೈದು ತಿಂಗಳು ಚನ್ನಪಟ್ಟಣದಲ್ಲಿಯೇ ನಾನು ಇರುವುದೊಳಿತೆಂದು ನಮ್ಮ ತಂದೆ ಯೋಚಿಸಿ, ನಮ್ಮೂರ ಶಾಲೆಯ ಜವಾನನ ನೆಂಟರೊಬ್ಬರ ಮನೆಯಲ್ಲಿ ನನ್ನನ್ನಿರಿಸಿದರು. ಅವರು ಮರಾಠಿಯವರು. ಮನೆಯ ಯಜಮಾನನೂ ಜವಾನನೇ. ತುಂಬ ಸಭ್ಯ. ಅವನಿಗೆ ಮಕ್ಕಳಿಲ್ಲ. ಅವನು ತನ್ನಣ್ಣನ ಮಕ್ಕಳಿಬ್ಬರನ್ನು ಸಾಕುತ್ತಿದ್ದನು. ಅವರಲ್ಲಿ ಒಬ್ಬಳು ಹುಡುಗಿ, ಮಂಜೂಬಾಯಿ(ಹೆಸರು ಬೇರೆ ಇತ್ತು); ಮತ್ತೊಬ್ಬ ಅವಳ ತಮ್ಮ. ಗಂಡನ ಮನೆಗೆ ಹೋಗದಿದ್ದ ಹುಡುಗಿಯ ವಯಸ್ಸು 17-18 ಇರಬಹುದು. ತುಂಬ ಚೆನ್ನಾಗಿದ್ದಳು.

ಚರಿತ್ರೆಯ ಕಡೆ ಒಲಿದೆ. ಕೊನೆಗೆ ಕನ್ನಡ ಆನರ್ಸ್ ಸೇರಿದೆ. ವಿಧಿಯೇ ನನ್ನನ್ನಲ್ಲಿಗೆ ನೂಕಿತೆಂಬ ನಂಬಿಕೆ ನನಗೀಗಲೂ ಇದೆ. ಎಂದೋ ಕನಸಿನಲ್ಲಿ ಕಂಡ ಗುರುವಿನ ಪಾದ ಸನ್ನಿಧಿಯಲ್ಲಿ ಓದುವ ಅವಕಾಶವನ್ನು ವಿಧಿಯೇ ನಿರ್ಮಿಸಿತ್ತು. ಶ್ರೀರಾಮಕೃಷ್ಣ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯವನ್ನು ವ್ಯವಸ್ಥೆ ಮಾಡಿಕೊಂಡೆ. ಅಲ್ಲಿಗೂ ಶ್ರೀ ರಾಮಕೃಷ್ಣರೇ ನನ್ನನ್ನಾಕರ್ಷಿದ್ದರು. ಆದರೆ ದುರ್ದೈವ, ಅಲ್ಲಿ ವಾರ್ಡನ್ ಆಗಿದ್ದ ಸ್ವಾಮಿ ವಿಷಯ ಲಂಪಟರು. ನನ್ನನ್ನು ತುಂಬ ಪ್ರೀತಿಸುತ್ತಿದ್ದರು. ವಿದ್ಯಾರ್ಥಿನಿಲಯಕ್ಕೆ ಹಾಲು ಕರೆಯಲು ಬರುತ್ತಿದ್ದ ಕೊಪ್ಪಲಿನ ಚೆಲುವೆಯನ್ನು ಮಾತಾಡಿಸುವುದು, ಹಾಲು ಕರೆದು ಮುಗಿಸುವತನಕ ಅವಳ ಮುಂದೆ ನಿಲ್ಲುವುದು, ಅದನ್ನು ನಾನು ನೋಡುವುದು, ಇದು ನಿತ್ಯದ ಪರಿಪಾಠ. ಕೊನೆಗೆ ಆ ಸ್ವಾಮಿ ಸನ್ಯಾಸಾಶ್ರಮವನ್ನು ವರ್ಜಿಸಿದರು. ಆ ಹಾಲಿನವಳ ಮಗಳೊಬ್ಬಳಿದ್ದಳು. ನಾನು ಕಾಲೇಜಿಗೆ ಹೋಗುವಾಗ ಬರುವಾಗ ರಸ್ತೆಯಲ್ಲಿ ನಿಂತಿದ್ದು ಮಾತಾಡಿಸುತ್ತಿದ್ದಳು. ಯಾರೊ ಅಧಿಕಾರಿಯ ಮಕ್ಕಳನ್ನವಳು ಸಂಜೆ ವೇಳೆ ಚೆಲುವಾಂಬ ಪಾರ್ಕಿಗೆ ಕರೆತರುತ್ತಿದ್ದಳು, ಆಡಿಸುವ ಸಲುವಾಗಿ. ನಾನೂ ತಿರುಗಾಟಕ್ಕೆ ಪಾರ್ಕಿಗೆ ಹೋಗುತ್ತಿದ್ದೆ. ಒಮ್ಮೆ ಆ ಮಕ್ಕಳಲ್ಲೊಬ್ಬಳು ನನ್ನ ಬಳಿ ಬಂದಳು. ಎತ್ತಿಕೋ ಅಂದಳು. ಎತ್ತಿಕೊಂಡೆ. ಇತರರನ್ನು ಆಡಿಸುತ್ತಿದ್ದಾಕೆ ಓಡಿಬಂದು, ಆ ಮಗುವನ್ನು ನನ್ನಿಂದ ಈಸಿಕೊಳ್ಳುವ ನೆಪದಲ್ಲಿ ನನಗೆ ಮುತ್ತಿಟ್ಟಳು. ವಿದ್ಯಾರ್ಥಿನಿಲಯದಲ್ಲಿ ಸಂಜೆ ಪ್ರಾರ್ಥನೆಯಾಗುವಾಗ 'ನಾನೆಂಥ ಪಾಪದ ಕೃತ್ಯ ಮಾಡಿದೆ, ನನ್ನನ್ನು ಕ್ಷಮಿಸು, ಗುರುದೇವ'ಎಂದು ಶ್ರೀ ರಾಮಕೃಷ್ಣರನ್ನು ಬೇಡಿಕೊಂಡೆ. ಅದೇ ಯಾತನೆಯಲ್ಲಿ ಮಲಗಿಕೊಂಡೆ. ಹೀಗಿರುವಾಗಲೇ ಒಮ್ಮೆ ಚನ್ನಪಟ್ಟಣಕ್ಕೆ ಹೋದಾಗ ಮಂಜೂಬಾಯಿಯ ಮನೆ ಹುಡುಕಿಕೊಂಡು ಹೋದೆ. ಅವಳನ್ನೊಮ್ಮೆ ಅಕ್ಕ ಎಂದು ಕರೆಯುವ ಉದ್ದೇಶದಿಂದ ಹೋಗಿದ್ದೆ. ಅವಳು ಗಂಡನ ಮನೆಯಲ್ಲಿದ್ದಳಂತೆ. ಆ ಮನೆ ಸಿಗಲಿಲ್ಲ. ವಿದ್ಯಾರ್ಥಿನಿಲಯದಲ್ಲಿರುವ ತನಕ ಶ್ರೀರಾಮಕೃಷ್ಣರ ರಕ್ಷೆ ನನಗಿತ್ತು.

ಸಾಧಾರಣವಾಗಿ ಎಂ. ಎ. ಪರೀಕ್ಷೆ ನಡೆಯುತ್ತಿದ್ದುದು ಜೂನ್ ತಿಂಗಳಲ್ಲಿ. ಅಷ್ಟು ಹೊತ್ತಿಗೆ ನನಗೆ ಮದುವೆಯಾಗಿತ್ತು. ಮದುವೆ ಮುಗಿಸಿಕೊಂಡು ಬಂದು ಕೃಷ್ಣಮೂರ್ತಿಪುರಂನಲ್ಲಿದ್ದ ಕುರುಬರ ವಿದ್ಯಾರ್ಥಿನಿಲಯದಲ್ಲುಳಿದೆ. ಅದರ ನೆರೆಯಲ್ಲೊಂದು ಅಯ್ಯಂಗಾರ್‌ರ ಮನೆಯಿತ್ತು. ಕೃಷ್ಣ ಎಂಬ ಸಣ್ಣ ಹುಡುಗ ಆ ಮನೆಯವನು. ಅವನು ಆಗಾಗ್ಗೆ ಕರೆಯದೆಯೆ ನನ್ನ ರೂಮಿಗೆ ಬರುತ್ತಿದ್ದ. ಒಮ್ಮೆ ಅವನು 'ನನ್ನಕ್ಕ ನಿಮ್ಮ ಜತೆ ಮಾತಾಡಬೇಕಂತೆ. ಪಾರ್ಕಿಗೆ ಕರೆದುಕೊಂಡು ಬರಲೆ?' ಎಂದ. ಆ ಹುಡುಗನ ಮುಗ್ಧತೆ ನೋಡಿ ನನಗಾಶ್ಚರ್ಯವಾಯಿತು.'ನಿನ್ನಕ್ಕನಿಗೆ ನಾನು ಹೇಗೆ ಗೊತ್ತು?' ಎಂದೆ. 'ನೀವು ಹಾಸ್ಟಲಿಗೆ ಬರುವಾಗ ನೋಡಿದ್ದಾಳೆ' ಎಂದ. ಪಾರ್ಕಿಗೆ ಅವಳನ್ನು ಕರೆತಂದ. ಅವಳಿಗೆ 16-17 ವರ್ಷವಿರಬಹುದು. 'ನೀವು ನನ್ನನ್ನು ಮದುವೆ ಮಾಡಿಕೊಳ್ಳಿ' ಎಂದು ಕೈಹಿಡಿದುಕೊಂಡಳು. 'ಮದುವೆಗೆ ಮುಂಚೆ.......' ಎನ್ನುವಷ್ಟರಲ್ಲಿ ನನ್ನ ಮಡದಿಯ ನೆನಪಾಯಿತು. ನನ್ನ ಹೃದಯದ ಚಲನೆ ನಿಂತಂತಾಯ್ತು.'ನನಗೆ ಮದುವೆಯಾಗಿದೆ. ಹೀಗೆಲ್ಲ ನೀನು ಕಂಡ ಕಂಡವರನ್ನು ಮಾತಾಡಿಸಬಾರದು. ನಿನ್ನ ತಂದೆತಾಯಿಯರೆ ನಿನಗೆ ಮದುವೆ

ಮಾಡಿಸುತ್ತಾರೆ ಎಂದೆ'. 'ತಾಯಿಯಿಲ್ಲ, ತಂದೆಗೆ ಎರಡನೆಯ ಮದುವೆಯಾಗಿದೆ. ನನ್ನ ಕಡೆ ಅವರ ಗಮನವಿಲ್ಲ'. 'ಬೇರೆ ದಾರಿಯೇ ಇಲ್ಲ'ಎಂದು ಹೇಳಿ ನಾನು ಹಾಸ್ಟಲಿಗೆ ಬಂದು ಬಿಟ್ಟೆ. ಬರುವಾಗ ನನ್ನ ಮನಸ್ಸಿನಲ್ಲಿ ಮೂಡಿದ ಭಾವನೆ: 'ಈ ಮದುವೆಯೆಂಬ ವ್ಯವಸ್ಥೆಯನ್ನು ಯಾರು ಮಾಡಿದರೊ, ಕಾಣೆ. ಅದು ಅನವಶ್ಯವಾಗಿತ್ತು, 'ಅದಿಲ್ಲದಿದ್ದರೆ ಸಮಾಜ ಅಸ್ತವ್ಯಸ್ತವಾಗುತ್ತಿತ್ತೇನೋ?' ಎಂಬ ಸಂದೇಹವೂ ಹಿಂದೆಯೇ ತಲೆಯೆತ್ತಿತ್ತು.

ನಾನು ಮೈಸೂರು ಮಹಾರಾಜಾ ಕಾಲೇಜಿಗೆ ವರ್ಗವಾಗಿ ಬಂದೆ. ಆ ಹೊತ್ತಿಗೆ ಅನಕೃ ಅವರ ಶನಿಸಂತಾನ ನಗ್ನ ಸತ್ಯಾದಿ ಕೃತಿಗಳನ್ನು ಓದಿದ್ದೆ. ನಾನೇಕೆ ಸೂಳೆಯರನ್ನು ಕುರಿತು ವ್ಯಾಸಂಗ ಮಾಡಬಾರದು?ಎಂಬ ಯೋಚನೆ ತಲೆಗೆ ಬಂತು. ಪ್ರಾಯಶಃ ವ್ಯಾಸಂಗಾಭಿಲಾಷೆಯ ಹಿನ್ನೆಲೆಯಲ್ಲಿ ನನ್ನ ಕಾಮ ವಿಕಾರದ ಪ್ರಾಬಲ್ಯವಿತ್ತೆಂದು ತೋರುತ್ತದೆ. ಇಬ್ಬರು ಪೋಲೀಸ್ ಸಬ್‌ಇನ್‌ಸ್ಪೆಕ್ಟರು ನನ್ನ ಗೆಳೆಯರಾಗಿದ್ದರು. ಅವರು ಸಿಕ್ಕಿದಾಗಲೆಲ್ಲ ಸೂಳೆಯರಿಗೆ ಸಂಬಂಧಿಸಿದ ತಮ್ಮ ಅನುಭವಗಳನ್ನು ವಿವರಿಸುತ್ತಿದ್ದರು. 'ನನ್ನನ್ನು ಒಮ್ಮೆ ಕರೆದುಕೊಂಡು ಹೋಗಿ' ಎಂದೆ. ಸಂತೋಷದಿಂದಲೆ ಮೂರ್‍ನಾಲ್ಕು ಕಡೆಗೆ ನನ್ನನ್ನು ಕರೆದೊಯ್ದರು. ಅಲ್ಲಿದ್ದ ಒಬ್ಬೊಬ್ಬರು ಹುಡುಗಿಯರೊಡನೆ ನಾನು ಹರಟೆ ಹೊಡೆಯುತ್ತಿದ್ದಾಗ, ಅವರ ಸಮಸ್ಯೆಗಳನ್ನು ವಿಚಾರಿಸುತ್ತಿದ್ದಾಗ, ನನ್ನ ಮಿತ್ರರು ಬೇರೆ ಕೋಣೆಯಲ್ಲಿರುತ್ತಿದ್ದರು. ಅವರು ಹೊರಗೆ ಬಂದು'ಏನ್ ಮಾಡಿದ್ರೀ ಗೌಡರೆ? ಹೇಗಿತ್ತು?' ಎಂದು ಕೇಳಿದಾಗ 'ಎಲ್ಲ ಭಯಂಕರವಾಗಿದೆ' ಎಂದೆ.'ಇವರನ್ನೇಕೆ ಕರೆತಂದಿರಿ?' ಎಂದೊಬ್ಬಾಕೆ ನನ್ನ ಮಿತ್ರರನ್ನು ಕೇಳಿಬಿಟ್ಟಳು. 'ನಿಮ್ಮ ಗೆಣೆಯ ಹೆಣ್ಣಿಗನಿದ್ದಂತೆ ತೋರ್‍ತದೆ' ಅಂದಳಂತೆ ನನ್ನ ಮಿತ್ರರೊಡನೆ ಮತ್ತೊಬ್ಬಾಕೆ. ಬಡತನದ ಬೇಗೆಯನ್ನು ಸಹಿಸಲಾರದೆ, ಆ ಕೆಲಸಕ್ಕೆ ಹುಡುಗಿಯರಿಳಿದಿದ್ದರು. ನನ್ನ ಮಗಳು ಭೂಮಿಗೆ ಬಂದು ಎರಡು ಮೂರು ತಿಂಗಳಾಗಿದ್ದಿರಬಹುದು. ಅವಳ ಮತ್ತು ಗುರುವಿನ ನೆನಪಿನಿಂದಾಗಿ ಮೂರ್‍ನಾಲ್ಕು ಸಲ ಬಚಾವಾದೆ - ಆದರೆ ನನ್ನ ಮನಸ್ಸನ್ನೆಲ್ಲ ಕಾಮ ರೋಗ ವ್ಯಾಪಿಸಿಕೊಂಡಿತು. ಮಡದಿ ಬಾಣಂತಿಯಾದ್ದರಿಂದ ಮಾತಾಡಿಸುವಂತಿಲ್ಲ; ನನಗೆ ನಿಗ್ರಹ ಸಾಮರ್ಥ್ಯವಿಲ್ಲ. ಆದರ ದುಷ್ಪರಿಣಾಮವಂತು ಇದ್ದೇ ಇತ್ತು. ಕಾಮದ ಕೆಸರಿನಲ್ಲಿ ಬೆಳೆದವರಿಗೆ ಇಂದ್ರಿಯ ನಿಗ್ರಹ ಸಾಧ್ಯವಿಲ್ಲ; ಸಾಧ್ಯವಿಲ್ಲದಾಗ ಅದು ವಿಕೃತ ವೇಷವನ್ನು ತಾಳುತ್ತದೆ. ಅಂಥ ಸಂದರ್ಭದಲ್ಲೊಮ್ಮೆ ನನ್ನ ಸಹೋದ್ಯೋಗಿ ಅಧ್ಯಾಪಕಿಯೊಬ್ಬಳ ಸ್ನೇಹ ಲಭಿಸುತ್ತದೆ. ಒಂದೇ ಒಂದು ಸಲ ಅವಳ ಮನೆಗೆ ಹೋಗಿ ಬಂದದ್ದೂ ಆಯಿತು. ಗುರು ದ್ರೋಹ, ಪತ್ನೀದ್ರೋಹ, ಪುತ್ರೀದ್ರೋಹ, ಈ ಮೂರು ದ್ರೋಹಗಳ ಭಯದಿಂದಾಗಿ ಅವಳ ಮನೆಗೆ ಹೋಗದಿದ್ದಾಗ ಅವಳು ತುಂಬ ಶಾಪ ಹಾಕಿರಬೇಕು.

ಪರೀಕ್ಷಾಧಿಕಾರಿಯಾದೆ. ಅಲ್ಲೊಬ್ಬಳು ಟೈಪಿಣಿ - ಇನ್ನೂ ಹಲವರಿದ್ದರು-ಅವಳು ಸುಪ್ರಸಿದ್ಧೆಯಾದ್ದರಿಂದ ಅವಳೊಬ್ಬಳನ್ನೆ ನಿರ್ದೇಶಿಸುವ ಸಲುವಾಗಿ ಹಾಗೆ ಕರೆದೆ. ದುರ್ಬಲ ಮನಸ್ಸಿನ ಅಧಿಕಾರಿಗಳೆಲ್ಲ ಅವಳ ಬಲೆಗೆ ಬಿದ್ದವರೆ? ನಾನು ಸಬಲ ಮನಸ್ಸಿನವನೇನಲ್ಲ? ಆದರೆ ಪುತ್ರೀವಾತ್ಸಲ್ಯ ಮತ್ತು ಗುರು ಕೃಪೆ ನನಗೆ ರಕ್ಷೆಯಾಗಿದ್ದುವು. ತಾನು ಕಲಿತ

ಬಿಟ್ಟುಕೊಟ್ಟಿದ್ದರು. ಅದು ಅವರು ಮಾಂಸ ಬೇಯಿಸಿಕೊಳ್ಳುತ್ತಿದ್ದ ಒಲೆ. ನಾನು ಒಂದು ಸಾರಿ ಅನ್ನ ಬೇಯಿಸಿಕೊಳ್ಳುತ್ತಿದ್ದೆ; ಮಾಡಿದರೆ ತಿಳಿಸಾರು; ಮಾಡದಿದ್ದರೆ ಮೆಣಸಿನಪುಡಿ ಬೆರೆಸಿಕೊಂಡು ಊಟ ಮುಗಿಸುತ್ತಿದ್ದೆ. ಮನೆಯ ಯಜಮಾನ ನನ್ನ ತಂದೆಯಂತೆ ಮುಪ್ಪಾಗಿದ್ದರು. ಯಜಮಾನಿ ಇನ್ನೂ ಹುಡುಗಿಯಂತಿದ್ದಳು. ಅವನಿಗೆ ಎರಡನೆಯ ಮದುವೆಯೋ ಮೂರನೆಯ ಮದುವೆಯೋ ಗೊತ್ತಿಲ್ಲ. ಅವರ ಒಬ್ಬನೇ ಮಗ ನನಗಿಂತ ...ಸು ಚಿಕ್ಕವನು. ಇಬ್ಬರೂ ಒಂದೇ ಚಾಪೆಯ ಮೇಲೆ ಮಲಗುತ್ತಿದ್ದೆವು. ಒಮ್ಮೊಮ್ಮೆ ನಾನೇ ಪಡಸಾಲೆ ಗುಡಿಸಬೇಕಾಗುತ್ತಿತ್ತು. ದನಗಳನ್ನು ತೋಟಕ್ಕೆ ಹೊಡೆಯಬೇಕಾಗುತ್ತಿತ್ತು. ...ಂದ ಸೌದೆ ಹೊತ್ತು ತರಬೇಕಾಗಿತ್ತು. ಗಂಡ ಪರವೂರಿಗೆ ಹೋದಾಗ ಅವಳು ನನ್ನ ... ತನ್ನ ಮಗನ ನಡುವೆ ಮಲಗುತ್ತಿದ್ದಳು. ಆಗಾಗ ಮೈಮೇಲೆ, ತೊಡೆಯ ನಡುವೆ ಕೈಯಾಡಿಸುತ್ತಿದ್ದಳು. ಅಲ್ಲಿ ಎರಡು ತಿಂಗಳಿಗಿಂತ ಹೆಚ್ಚಾಗಿ ಇರಲಿಲ್ಲ. 'ನಾನು ಊರಿಂದಲೇ ಶಾಲೆಗೆ ಹೋಗ್ತೇನೆ. ನಾನು ಯಾರ ಮನೆಯಲ್ಲೂ ಇರೋದಿಲ್ಲ. ಇರು ಅಂತ ಪೀಡಿಸಿದರೆ ಶಾಲೆ ಬಿಡುತ್ತೇನೆ' ಎಂದು ಪಟ್ಟು ಹಿಡಿದು ಹೆದರಿಸಿದ ಮೇಲೆ ಅಪ್ಪ ಸುಮ್ಮನಾದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಎರಡು ತಿಂಗಳಿದೆ ಎನ್ನುವಾಗ ನಾನು ನನ್ನ ಮಿತ್ರ ನರಸಿಂಗರಾವ್ ಮತ್ತು ಕೆ. ಲಿಂಗೇಗೌಡ ಮೂವರೂ ಮಂಗಳವಾರ ಪೇಟೆಯ ಗೌಡರೊಬ್ಬರ ಮನೆಯ ಜಗಲಿಯ ರೂಮೊಂದನ್ನು ಬಾಡಿಗೆಗೆ ಹಿಡಿದು, ಅಡುಗೆ ಮಾಡಿಕೊಂಡು, ಒಟ್ಟೋದು ನಡೆಸುತ್ತಿದ್ದೆವು. ನರಸಿಂಗರಾವ್ ನನಗಿಂತ ಎರಡು ಮೂರು ವರ್ಷ ದೊಡ್ಡವನು. ಸಭ್ಯ; ಆದರೆ ಆ ಹೊತ್ತಿಗಾಗಲೇ ಹೆಣ್ಣಿನ ರುಚಿ ಕಂಡಿದ್ದ. ಓದದಿದ್ದಾಗ ಅವನು ತನ್ನ ಕಾಮ ಸಾಹಸದ ಕತೆಗಳನ್ನು ಅದರ ರುಚಿ ಮಾಧುರ್ಯವನ್ನು ವರ್ಣಿಸುತ್ತಿದ್ದನು. ಆಗ ನನಗೆ ಪಾತಾಳ ಪ್ರಜ್ಞೆಯಲ್ಲಿ ಕಾವು ಕೂತಿದ್ದ ಕಾಮಾಭಿಲಾಷೆಗಳು ಎಚ್ಚರಗೊಳ್ಳುತ್ತಿದ್ದುವು. ನಾನು ಎಸ್ಸೆಸ್ಸೆಲ್ಸಿಯಲ್ಲಿ ಪಾಸಾದೆ; ಲಿಂಗೇಗೌಡನಿಗೆ ಇಪಿಎಸ್ ಬಂತು. ನರಸಿಂಗರಾವ್ ಫೇಲಾದ. ಒಂದು ಮಾತು ಮಾತ್ರ ನಿಜ. ಈ ಇಬ್ಬರೂ ನನ್ನ ಸನ್ಮಿತ್ರರು. ನಾನು ಅಧಿಕಾರದಲ್ಲಿದ್ದಾಗ ಒಬ್ಬರು ಮಾತ್ರ ನನ್ನ ಬಳಿ ಬಂದು ಸಹಾಯ ಪಡೆದರು.

ಬೇಸಗೆಯ ರಜಾದಿನಗಳಲ್ಲಿ ಹಿತ್ತಲಲ್ಲಿ ಗಿಂಡಗೆಂಡೆ ಬೆಳೆಸುತ್ತಿದ್ದೆ. ಅವುಗಳ ಬಳಿ ಕುಳಿತು ಎಲೆ ಮೊಗ್ಗು ಕಾಯಿ ಮೊದಲಾದುವನ್ನು ನೋಡುತ್ತ ನೋಡುತ್ತ ಅವಕ್ಕೆ ಮುತ್ತಿಡುತ್ತಿದ್ದೆ; ಬಾಚಿ ತಬ್ಬಿಕೊಳ್ಳುತ್ತಿದ್ದೆ. ಇದು ನನ್ನ ಬಾಳಿಗಂಟಿಕೊಂಡು ಬಂದಿರುವ ಪ್ರೀತಿಯ ಹವ್ಯಾಸ. ನಮ್ಮ ಹಿತ್ತಲಲ್ಲಿ ಬಾವಿಯಿರಲಿಲ್ಲ. ಮನೆಯೆದುರಿನ ಬೆಸ್ತರ ಗುಡಿಸಲು ಹಟ್ಟಿಯ ಬಾವಿಯಿಂದ ನೀರು ತರಬೇಕಿತ್ತು. ಆ ಗುಡಿಸಿಲಿನಲ್ಲಿದ್ದವರು ಇಬ್ಬರು: ಮುಪ್ಪಿನ ದಂಪತಿಗಳು. ಅವರ ಮಕ್ಕಳು ಬೆಂಗಳೂರಿನಲ್ಲಿದ್ದರು. ಅವರಲ್ಲೊಬ್ಬಳು ಮಹಾ ವ್ಯಭಿಚಾರಿಣಿ. ವಯಸ್ಸಿನಲ್ಲಿ ನನಗಿಂತ ಏಳೆಂಟು ವರ್ಷ ದೊಡ್ಡವಳಿರಬಹುದು. ಅವಳ ಗಂಡ ಯಾರು? ಮಿಂಡ ಯಾರು? ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಆಗಾಗ್ಗೆ ತವರಿಗೆ ಬಂದು, ಇದ್ದು ಹೋಗುತ್ತಿದ್ದಳು. ಜತೆಯಲ್ಲಿ ಒಮ್ಮೊಮ್ಮೆ ಯಾರನ್ನಾದರೂ ಕರೆತರುತ್ತಿದ್ದಳು. ನಾನು ನೀರು ಸೇದುವಾಗಲೆಲ್ಲ ಬಾವಿಯ ಬಳಿ ಬಂದು ಏನೇನೋ

ಆಟವಾಡುತ್ತಿದ್ದಳು; ತನ್ನ ಹಾವ ಭಾವ ವಿಲಾಸಗಳನ್ನೂ ತನ್ನ ಎದೆಯನ್ನೂ ಪ್ರದರ್ಶಿಸುತ್ತಿದ್ದಳು. ಆ ಆವರಣದಲ್ಲಿ ಎರಡು ಮೂರು ಗುಡಿಸಿಲಿದ್ದುವು. ಒಂದು ದಿನ ಬಾವಿಯ ಪಕ್ಕದ ಗುಡಿಸಿಲಿಗೆ ಕರೆದೊಯ್ದು 'ನಿನಗೆ ಗೊತ್ತಿಲ್ಲದ ಒಂದು ಕಲೆ ಕಲಿಸಿ ಕೊಡಲೆ?' ಎಂದು ಕೇಳುತ್ತಿದ್ದಂತೆ ನನ್ನನ್ನಾವರಿಸಿಬಿಟ್ಟಳು. ಸುದೈವವೂ ದುರ್ದೈವವೊ ಮೊದಲೇ ವೀರ್ಯಸ್ಖಲನೆಯಾದ್ದರಿಂದ ನನ್ನನ್ನು ತಳ್ಳಿಬಿಟ್ಟಳು. ಅಂದಿನಿಂದ ಅವಳು ನನ್ನ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ಅದೇನೇ ಇರಲಿ, ನನ್ನ ಮಿತ್ರ ನರಸಿಂಗರಾಯನ ಅನುಭವದ ಹೇಳಿಕೆ ಆಗ ನನಗೆ ಸರಿಯೆಂದೆನಿಸಿತು. ನಾನು ಬೆಂಗಳೂರಿನಲ್ಲಿದ್ದಾಗ ಅವಳೊಮ್ಮೆ ಮಾರ್ಕೆಟ್ ಬಳಿ ಸಿಕ್ಕಿ ನನ್ನನ್ನು ತನ್ನ ಮನೆಗೆ ಕರೆದಳು. ಅವಳ ವಿಳಾಸ ತಿಳಿದುಕೊಂಡರೂ ಆ ಕಡೆಗೆ ಹೋಗಲಿಲ್ಲ. ಆದರೆ ಅದೇ ಸಮಯದಲ್ಲಿ ನಮ್ಮೂರಿನ ನೆರೆಮನೆಯ ಗೌಡರ ಹುಡುಗಿಯ ಬಲೆಗೆ ಸಿಕ್ಕಿ ಪಾರಾದದ್ದುಂಟು.

ಬೆಂಗಳೂರಿನಲ್ಲಿ ಇಂಟರ್ ಮೀಡಿಯೆಟ್ ತರಗತಿಗೆ ಸೇರಿದ ನಂತರ ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಂಡಿದ್ದೆ. ಅಲ್ಲೊಬ್ಬ ಮಿತ್ರರಿಗೆ ಗಂಟುಬಿದ್ದೆ. ಅವರ ತಂದೆ ಶ್ರೀಮಂತರಾಗಿದ್ದರೆಂದು ತೋರುತ್ತದೆ. ಆ ನನ್ನ ಮಿತ್ರರು ಧಾರಾಳವಾಗಿ ಹಣ ಖರ್ಚು ಮಾಡುತ್ತಿದ್ದರು. ಅವರು ಆಗಾಗ್ಗೆ ನನಗೆ ಹೋಟಲಿನಲ್ಲಿ ತಿಂಡಿ ಕೊಡಿಸುತ್ತಿದ್ದರು. ತಿಂಡಿ ತಿಂದ ಮೇಲೆ ಅವರ ಜತೆ ಲಾಲಾಬಾಗ್‌ನ ಕಡೆ ಹೋಗುತ್ತಿದ್ದೆ. ಹೆಣ್ಣುಗಳ ಬಗ್ಗೆ ಅವರಿಗೆ ತುಂಬ ಖಯಾಲಿ. ದಾರಿಯುದ್ದಕ್ಕೂ ಅವರ ಅಂಗಾಂಗಗಳ ವರ್ಣನೆಯನ್ನು ನಾನು ಕೇಳಬೇಕು. ಕೇಳುತ್ತ ಕೇಳುತ್ತ ನನ್ನ ಮನಸ್ಸು ವಿಕಾರಗೊಳ್ಳುತ್ತಿತ್ತು. ಅದರ ಫಲವಾಗಿ ರಾತ್ರಿ ಹೊತ್ತು ವೀರ್ಯಸ್ಖಲನವಾಗುತ್ತಿತ್ತು. ತರಗತಿಯಲ್ಲಿ ಅವರ ಪರವಾಗಿ ನಾನು ಹಾಜರಿ ಹೇಳಬೇಕಾಗಿತ್ತು. ನಾನು ಮಾಡಿಕೊಂಡ ಪಾಠದ ಟಿಪ್ಪಣಿ ಅವರಿಗೆ ಕೊಡಬೇಕಾಗಿತ್ತು. ನಾನೆಂದೂ ಕೋಟಿನ ಮೋರೆ ಕಂಡವನಲ್ಲ. ಅವರ ಕೋಟನ್ನೇ ನಾನು ಹಾಕಿಕೊಳ್ಳುತ್ತಿದ್ದೆ. ಅವರು ನಿಜಕ್ಕೂ ಉದಾರರು, ಸಭ್ಯರು, ಬುದ್ಧಿವಂತರು ಆದರೆ ಈ ಒಂದು ವಿಷಯದಲ್ಲಿ ದಾರಿ ತಪ್ಪಿದ್ದರು. ಕಾಮವಿಕಾರವನ್ನು ಮರೆಸುವ ಸಲುವಾಗಿ, ಕನಸಿನಲ್ಲಾಗುತ್ತಿದ್ದ ವೀರ್ಯಸ್ಖಲನೆಯಿಂದ ಪಾರಾಗುವ ಇಚ್ಛೆಯಿಂದಾಗಿ ರಾತ್ರಿಯೆಲ್ಲ ಇಸ್ಪೀಟಾಟದಲ್ಲಿ ತೊಡಗಿರುತ್ತಿದ್ದೆ. ಇದೆಲ್ಲದರ ಪರಿಣಾಮ ನಾನು ಪರೀಕ್ಷೆಯಲ್ಲಿ ಫೇಲಾದದ್ದು, ಅವರು ಪಾಸಾದರು. 'ಏನು ಗೌಡ, ನಿನ್ನ ಟಿಪ್ಪಣಿ ಓದಿ ನಾನು ಪಾಸಾದೆ, ನೀನು ಫೇಲಾದೆ' ಎಂದು ಎಷ್ಟೋ ಸಲ ಅವರು ನನ್ನನ್ಣಕಿಸುತ್ತಿದ್ದರು. ಆಮೇಲೆ ನಾನು ಹಳ್ಳಿಯಲ್ಲಿಯೇ ಇದ್ದುಕೊಂಡು ಹೊಲದ ಕೆಲಸ ಮಾಡುತ್ತ ಓದಿಕೊಳ್ಳುತ್ತಿದ್ದೆ. ಆ ವರ್ಷ ಪಾಸಾದದ್ದು ಮಾತ್ರವಲ್ಲ, ಎರಡನೆಯ ದರ್ಜೆ ಪಡೆಯಲು ಕೇವಲ ಮೂರೇ ಮೂರು ನಂಬರು ಕಡಿಮೆಯಾಗಿದ್ದವು.

ಬಿ. ಎ. ಆನರ್ಸ್ ತರಗತಿ ಸೇರಲು 1938ರಲ್ಲಿ ಮೈಸೂರಿಗೆ ಬಂದೆ. ಇಂಗ್ಲೀಷ್, ಕನ್ನಡ, ಚರಿತ್ರೆ-ಈ ಮೂರೂ ವಿಷಯಗಳಲ್ಲಿ ಶೇಕಡ 50ಕ್ಕಿಂತಲೂ ಹೆಚ್ಚು ಅಂಕ ಬಂದಿದ್ದುದರಿಂದ ಯಾವುದರಲ್ಲಾದರೂ ಪ್ರವೇಶಗಳಿಸಬಹುದಿತ್ತು. ಏಕೊ ಏನೊ

ನನಗವರೇನೂ ಬಿಟ್ಟಿ ಊಟ ಹಾಕಬೇಕಾಗಿರಲಿಲ್ಲ. ಕಾರದ ಪುಡಿ ಮೊದಲ್ಗೊಂಡು ಅಡುಗೆ ಪದಾರ್ಥಗಳನ್ನು ನಮ್ಮ ಮನೆಯಿಂದ ಅಪ್ಪ ತಂದು ಕೊಡುತ್ತಿದ್ದಳು. ನಾನು ಶಾಲೆಗೆ ಹೋಗುವ ಹೊತ್ತಿಗೆ ಅವರ ಮನೆಯಲ್ಲಿ ಅಡುಗೆಯಾಗಿರುತ್ತಿತ್ತೋ ಇಲ್ಲವೋ ಕಾಣೆ. ದಿನಕ್ಕೆರಡು ಊಟ. ಬೆಳಗಿನ ಊಟಕ್ಕೆ ಯಾವಾಗಲೂ ತಂಗಳನ್ನ. ಹಳಸಿದ ಸಾರು. ನಾನೆಂದೂ ಅಲ್ಲಿರುವ ತನಕ ಬಿಸಿ ಊಟ ಉಂಡದ್ದಿಲ್ಲ. ಊಟಕ್ಕೆ ನಾನೊಬ್ಬನೇ ಪ್ರತ್ಯೇಕ ಸ್ಥಳದಲ್ಲಿ ಕೂರುತ್ತಿದ್ದೆ. ಮನೆಯವರ ಜತೆಯಲ್ಲೆಂದೂ ಊಟ ಮಾಡಿದ್ದಿಲ್ಲ. ಅವರ ಮನೆಯಲ್ಲಿರುವ ತನಕ ಒಂದು ದಿನವಾದರೂ ವಿಶೇಷ ತಿಂಡಿ ಸಿಗಲಿಲ್ಲ. ಮಾಡುತ್ತಿರಲಿಲ್ಲವೋ ಏನೋ ಕಾಣೆ ನನಗೆ ಯಾವಾಗಲೂ ಊಟ ಬಡಿಸುತ್ತಿದ್ದವಳು ಮಂಜೂ ಬಾಯಿ.

ಸಂಜೆ ಶಾಲೆ ಮುಗಿದ ನಂತರ ನಾನು ನೇರವಾಗಿ ಮನೆಗೆ ಬರುತ್ತಿರಲಿಲ್ಲ. ಯಾವುದಾದರೂ ಜಗಲಿಯ ಮೇಲೊ. ಮರದ ಕೆಳಗೊ ಕುಳಿತಿದ್ದು ಬರುತ್ತಿದ್ದೆ. ಏಕೆಂದರೆ ಮಂಜೂ ತಮ್ಮ ಒಬ್ಬ ಬಿಟ್ಟರೆ. ನನ್ನೊಡನೆ ಮಾತಾಡುವವರಿಲ್ಲ; ಅವನೂ ತನ್ನ ಜಾತಿ ಮಕ್ಕಳ ಜತೆಗೆ ಹೋಗುತ್ತಿದ್ದ. ರಾತ್ರಿ ಊಟವಾದ ಕೂಡಲೇ ಮಂಜೂ ತಮ್ಮನಿಗೆ- ಅವನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ-ನಾನು ಪಾಠ ಹೇಳಿಕೊಡಬೇಕಾಗಿತ್ತು. ಅಡುಗೆ ಮನೆಗೆ ಅಂಟಕೊಂಡಿದ್ದ ಪಡಸಾಲೆಯಲ್ಲಿ ಮಂಜು. ಅವಳ ತಮ್ಮ. ಅವಳತ್ತೆ ಮತ್ತು ನಾನು ಮಲಗುತ್ತಿದ್ದೆವು. ಓತ್ತಲುಕಡೆಗೊಂದು ಕೋಣೆಯೇನೊ ಇತ್ತು; ಅದು ಸರ್ವ ಸಾಮಗ್ರಿಗಳ ಉಗ್ರಾಣ. ಇಲಿ ಹೆಗ್ಗಣಗಳ ನಿಲ್ದಾಣ ಹಾಗೂ ತಂಗುದಾಣ. ಮಂಜೂ ಒಮ್ಮೊಮ್ಮೆ ಎಲ್ಲರೂ ಮಲಗಿದ ಮೇಲೆ ನನ್ನೊತ್ತಿಗೆ ಬಂದು ಮಲಗುತ್ತಿದ್ದಳು.

ಕೆಲವು ದಿನಗಳ ನಂತರ ನನ್ನ ಚಾಪೆ ಕೋಣೆಗೆ ವರ್ಗಾವಣೆಯಾಯಿತು. ಲಾಂದ್ರದ ಬೆಳಕಿನಲ್ಲಿ ಅವಳ ತಮ್ಮನಿಗೆ ಪಾಠ ಹೇಳಿಕೊಡುವಾಗ. ಅವನ ಪಾಠ ಪರಿಶೀಲಿಸುವಂತೆ ನನ್ನೊತ್ತಿನಲ್ಲಿ ಕುಳಿತು. ಒಮ್ಮೊಮ್ಮೆ ತನ್ನ ತಂಬುಲದ ತುಟಿಯನ್ನು ನನ್ನ ತುಟಿಗೊತ್ತುತ್ತಿದ್ದಳು. ಅದರರ್ಥ ನನಗಾಗ ಗೊತ್ತಿರಲಿಲ್ಲ. ಒಂದೆರಡು ಲೈಂಗಿಕ ಪುಸ್ತಕಗಳನ್ನು ನನಗೆ ಕೊಟ್ಟು ಓದಿಸುತ್ತಿದ್ದಳು. ಅವೂ ನನಗೆ ಓದಿಸುತ್ತಿರಲಿಲ್ಲ. ಸ್ತ್ರೀಯರ ಅಂಗಾಂಗ ವರ್ಣನೆಯೂ ನನಗರ್ಥವಾಗುತ್ತಿರಲಿಲ್ಲ. ದನದ ಕೊಟ್ಟಿಗೆಯಲ್ಲಿ ಸ್ನಾನದ ಬಚ್ಚಲು. ಒಂದು ಶನಿವಾರ ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ಅವಳು ಬಚ್ಚಲ ಕಡೆಗೆ ಹೋಗುತ್ತ- ನಾನಿದ್ದ ಕೋಣೆಯ ಮುಂದೆ ಹೋಗಬೇಕಾಗಿತ್ತು- ಜವರಪ್ಪ (ಹಳ್ಳಿ ಕಡೆ ಆ ಕಾಲಕ್ಕೆ ಜನ ನನ್ನನ್ನು ಕರೆಯುತ್ತಿದ್ದುದೇ ಹಾಗೆ - ಬಾಗಿಲು ಮುಚ್ಚಿಕೋ. ನಾನು ಸ್ನಾನಕ್ಕೆ ಹೋಗುತ್ತೇನೆ ಎಂದಳು. ಕಿಟಕಿಗೆ ಕದ ಇಲ್ಲವೆಂಬುದು ಅವಳಿಗೆ ಗೊತ್ತಿರಲಿಲ್ಲವೆ? ನಾನಂತು ಮುಚ್ಚಿಕೊಂಡು ಕತ್ತಲೆ ಕೋಣೆಯಲ್ಲಿ ಬಿದ್ದುಕೊಂಡಿದ್ದೆ. ಸ್ನಾನ ಮುಗಿದ ಮೇಲೆ ನೆಪಕ್ಕೆ ಸೀರೆ ಹೊದ್ದುಕೊಂಡು ಅಂಗಾಂಗಗಳನ್ನು ಪ್ರದರ್ಶಿಸುತ್ತ ನನ್ನ ಕೋಣೆಗೆ ಬಂದು 'ನಿನ್ನಪ್ಪ ಬಂದಿದ್ದಾಳೆ. ನೋಡು' ಎಂದಳು. ಅಪ್ಪ ಬಂದಿದ್ದು ನಿಜ. ನನ್ನವ್ವ ಮುಗ್ಧೆ ಸರಿ. ಆದರೆ ಸ್ತ್ರೀ ನಗ್ನತೆಯ ಅರ್ಥ ಅವ್ವನಿಗೆ ಹೊಳೆಯದಿರುತ್ತದೆಯೆ? ' ಹೆಂಗೊ ಇನ್ನಷ್ಟು ದಿನ ಇದ್ಬಿಡು ಮಗ' ಎಂದು ನನ್ನವ್ವೆ ಬುದ್ಧಿ ಹೇಳಿ. ತಂದಿದ್ದ ತಿಂಡಿಯನ್ನು ಗುಟ್ಟಾಗಿ ಕೊಟ್ಟು ಹೋದಳು.

ಒಂದು ದಿನ ಬೆಳಗ್ಗೆ ಒಂಬತ್ತು ಗಂಟೆಯ ಸಮಯ. ಮನೆಯ ಯಜಮಾನಿ ಬೀದಿಯ ನಲ್ಲಿಯಲ್ಲಿ ನೀರು ಹಿಡಿದು ತರಲು ಹೋಗಿದ್ದಳೆಂದು ತೋರುತ್ತದೆ. ನಾನು ಶಾಲೆಗೆ ಹೊರಡಲು ಸಿದ್ಧನಾಗುತ್ತಿದ್ದೆ. ಬಾಗಿಲಿಗೆ ಬಂದ ಕೂಡಲೇ ಅವಳು ನನ್ನ ಕೈ ಹಿಡಿದುಕೊಂಡು 'ನಾನು ದಿನಾ ನಿನಗೆ ಊಟ ಬಡಿಸ್ತೀನೀ. ನೀನು ನನಗೇನೂ ಉಪಕಾರ ಮಾಡುತ್ತಿಲ್ಲ' ಎಂದಳು. ಅವಳು ನಶ್ಯಸೇದುತ್ತಿದ್ದಳು. ಶಾಲೆಯಿಂದ ಬರುವಾಗ ಆಗಾಗ್ಗೆ ಒಂದು ಕಾಸಿನ ನಶ್ಯ ತಂದು ಕೊಡುತ್ತಿದ್ದೆ. 'ನಶ್ಯ ತಂದು ಕೊಡ್ತೀನಲ್ಲ' ಎಂದು ಉತ್ತರವಿತ್ತೆ. 'ನಾನು ಕಾಸು ಕೊಡ್ತೇನೆ. ತರ್ತೀಯಾ. ಅದೇನು ದೊಡ್ಡ ಉಪಕಾರವೆ?' ಎಂದು ಪ್ರಶ್ನಿಸಿದಳು. ಅಷ್ಟರಲ್ಲಿ ಮನೆಯಾಕೆ ಬಂದ ಸದ್ದಾದ್ದರಿಂದ ಕೈ ಬಿಟ್ಟಳು.

ಮತ್ತೊಂದು ದಿನ ಅವಳ ತಮ್ಮನಿಗೆ ಪಾಠ ಮುಗಿದಿತ್ತು. ಅವರ ಮನೆಯ ಹಾಸುಗೆಗಳೆಲ್ಲ ನಾನು ಮಲಗುತ್ತಿದ್ದ ಕೋಣೆಯಲ್ಲಿ ರಾಶಿಗೊಂಡಿದ್ದವು. ಅವನ್ನು ಪ್ರತಿ ರಾತ್ರಿ ತಾವು ಮಲಗುವಲ್ಲಿಗೆ ಮಂಜು ಕೊಂಡೊಯ್ಯುತ್ತಿದ್ದಳು. ನಾನಿನ್ನೂ ಮಲಗಿರಲಿಲ್ಲ. ನಾನು ಕುಳಿತಿದ್ದೆಡೆಗೆ ಬಂದು ತಬ್ಬಿಕೊಂಡು 'ಎಲ್ಲ ಮಲಗಿಕೊಂಡ ಮೇಲೆ ಬರ್ತೇನೆ; ಒಬ್ಬನೇ ಇದ್ದರೆ ನಿನಗೆ ಹೆದರಿಕೆಯಾಗುತ್ತದೆ' ಎಂದಳು. ಅದೇ ತೊಳಕೆಯಲ್ಲಿಯೇ ಮಲಗಿಕೊಂಡೆ. ಎಷ್ಟು ಹೊತ್ತಾಗಿತ್ತೊ ಗೊತ್ತಿಲ್ಲ. ಅವಳು ಬಂದು ನನ್ನ ಮೇಲೆ ಬಿದ್ದುಕೊಂಡಳು. ಮೈಗೆ ಮೈ ಅಂಟಿಕೊಂಡಂತಿತ್ತು. ನನ್ನ ಕೀಳುಡುಗೆಯನ್ನೂ ಅವಳೆ ಕಳಚಿದ್ದಾಳೆ. ಒಮ್ಮೆ ನನ್ನ ಮೇಲೆ ಮಲಗಿಕೊಂಡರೆ, ಒಮ್ಮೆ ನನ್ನನೆಳೆದುಕೊಂಡು ತನ್ನ ಮೇಲೆ ಮಲಗಿಸಿಕೊಳ್ಳುತ್ತಾಳೆ. ನನಗೆ ವಿಚಿತ್ರಾನುಭವವಾದಂತಾಗಿ ಕಿಟಾರನೆ ಕಿರಿಚಿಕೊಂಡೆ. ಅವಳು ಸರಸರನೆ ಎದ್ದು ಹೋದಳು. ನನಗಾಗ ಹಿಂದಿನ ಚಂದ್ರಿಕೆಯ ಮರೆಯ ಆಟಗಳು ನೆನಪಿಗೆ ಬರುತ್ತಿದ್ದವು. ಅದು ನನ್ನ ಜೀವನದ ಕರಾಳ ದಿನಗಳಲ್ಲೊಂದು. ಪುತ್ರಕ್ಷೇಮ ಕಾತರರಾದ ಮುಗ್ಧ ತಂದೆ ತಾಯಿಯರ ಕೂರ್ಮೆಯ ಕ್ರೂರ ಕೂರ್ಮೆಯ ಪರಿಣಾಮವಾಗಿ ನನಗೂ ಅವರಿಗೂ ಅರಿವಿಲ್ಲದಂತೆ ಅಂದು ಆಕಾರ್ಗತ್ತಲಲ್ಲಿ ನಡೆದ ಆ ಘಟನೆಯ ಘೋರ ಪ್ರಭಾವ ಮತ್ತು ಅದಮ್ಯ ಸ್ಮೃತಿ ನನ್ನ ಅನಂತರದ ಜೀವನವನ್ನೆಲ್ಲ ವ್ಯಾಪಿಸಿಕೊಂಡಿದೆ.

ಅನಂತರ ನನಗೆ ನಿದ್ದೆ ಬರಲಿಲ್ಲ. ನನ್ನ ಸಾಮಾನುಗಳನ್ನೆತ್ತಿಕೊಂಡು-ಒಂದು ಚಾಪೆ, ಒಂದೆರಡು ಪುಸ್ತಕ- ಬೆಳಕು ಹರಿಯುವ ಮುನ್ನವೇ ಹಿಂದಣ ಬಾಗಿಲಿಂದ ಹೊರಗೆ ಹೊರಟೆ. ಹೊಲದ ಗುಡಿಸಿಲಿನ ಬಾಗಿಲ ಮುಂದೆ ನಿಂತಾಗ ನನ್ನಪ್ಪ ರೇಗಾಡಿದರು; 'ಇಷ್ಟು ಹೊತ್ತಿನಲ್ಲೇಕೆ ಬಂದ್ಲ?' ಎಂದು. ಅವರಿಗೆ ನನ್ನ ಪ್ರಾಣರಕ್ಷಣೆಯ ಕಾತರತೆ. ನನ್ನವ್ವ 'ಬಂದ್ರೆ ಬರ್ಲಿ ಬುಡು ಮೊಗ ಅಲ್ಲಿರೋದೆ ನನಗಿಷ್ಟವಿಲ್ಲ. ಆ ಮನೆಯಲ್ಲೊಂದು ಹೋರಿಗೆ ಬಂದ ಕಡಸಿದೆ. ' ಎಂದಳು.

ಕೆಲವು ದಿನ ಊರಿಂದಲೆ ಶಾಲೆಗೆ ಹೋಗತೊಡಗಿದೆ. ಕೊನೆಗೆ ನನ್ನ ತಂದೆ ಎಲೆಕೇರಿಯಲ್ಲಿದ್ದೊಬ್ಬರ ಯಾವುದೋ ಬಾದರಾಯಣ ಸಂಬಂಧ ಹಿಡಿದು, ಅವರ ಮನೆಯಲ್ಲಿರುವಂತೆ ನನ್ನನ್ನು ಕಟ್ಟುಬಲ್ಮೆಯಿಂದ ಇರಿಸಿದರು. ಅಲ್ಲಿ ನಾನೇ ಅಡುಗೆ ಮಾಡಿಕೊಳ್ಳಬೇಕು. ಕೊಟ್ಟಿಗೆಯ ಕಡೆ ಒಂದು ಸಣ್ಣ ಒಲೆಯಿದ್ದ ಪುಟ್ಟ ಕೋಣೆಯನ್ನು

ವಿದ್ಯೆಯನ್ನೆಲ್ಲ ಖರ್ಚುಮಾಡಿದರೂ ನಾನು ಜಗ್ಗಲಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಹಾಗೆಯೇ ಇಬ್ಬರು ಉಪಾಧ್ಯಾಯಿನಿಯರು ಟ್ಯಾಬುಲೇಟರ್ ಆಗಿ ಕಚೇರಿಗೆ ಬಂದಾಗ ಮಧ್ಯಾಹ್ನದ ವೇಳೆ ನನ್ನ ಕೋಣೆಗೆ ಊಟಕ್ಕೆ ಬರುತ್ತಿದ್ದರು. ಮನೆಯಿಂದಲೇ ಅವರು ಊಟ ತರುತ್ತಿದ್ದರು. ಅವರ ಮೈಯಾರ ಮನಸ್ಸಿಗೆ ಇಷ್ಟವಾಗಿದ್ದರೂ, ನೈತಿಕ ಸೆಳೆತದಿಂದಾಗಿ ಅವರು ನನ್ನ ರೂಮಿಗೆ ಬರುವುದನ್ನೇ ತಪ್ಪಿಸಿದೆ. ನನ್ನ ಶಿಷ್ಯೆಯೊಬ್ಬಳು ನಿರುದ್ಯೋಗಿ. ಉದ್ಯೋಗ ಕೊಡಿಸಿ ಎಂದು ಆಗಾಗ್ಗೆ ನನ್ನನ್ನು ಕಾಡುತ್ತಿದ್ದಳು. ನಾನವಳೊಡನೆ ತಮಾಷೆಯಾಗಿ ಮಾತಾಡುತ್ತಿದ್ದೆ. ಅದು ಅವಳಿಗೂ ಇಷ್ಟವಾಯಿತು. ಆ ತಮಾಷೆ ಲೈಂಗಿಕ ಚೇಷ್ಟೆಯ ಕಡೆಗೆ ತಿರುಗಿತು. ಬಾಹ್ಯ ಚೇಷ್ಟೆಯಷ್ಟೆ! ಆ ಚೇಷ್ಟೆ ಮುಂದುವರಿಯುವಷ್ಟರಲ್ಲಿ ಗುರುಗಳು ಮತ್ತು ಮಗಳು ಎದುರಿಗೆ ಬಂದಂತಾಗಿ ನಾನು ಸಂಯಮಿಸಿ ಕೊಳ್ಳುವಂತಾಯಿತು. ಆ ಸಮಯದಲ್ಲಿ ನನ್ನ ಮಗ ಆಸ್ಪತ್ರೆಯಲ್ಲಿದ್ದ. ಮತ್ತೊಂದು ದಿನ ಹೋಟಲಲ್ಲಿ ಊಟಮಾಡೋಣವೆಂದವಳು ಕರೆದಳು. 'ಈ ಹೊತ್ತು ಆಗೋಲ್ಲ ಪುರಸತ್ತಿಲ್ಲ' ಎಂದೆ. 'ನಿಮಗೆ ಪುರಸತ್ತೂ ಇಲ್ಲ, ಪುರುಷತ್ವವೂ ಇಲ್ಲ'ಎಂದಳು. 'ನೀನು ಹೇಳಿದಂತೆಯೇ ಆಗಲಿ ತಾಯಿ' ಎಂದೆ. ಅನಂತರ ಅವಳು ನನ್ನ ಬಳಿ ಬರಲೇ ಇಲ್ಲ. ಅಕಸ್ಮಾತ್ ಸಿಕ್ಕಿದರೂ ನನ್ನ ಬಗ್ಗೆ ಅವಳಿಗೆ ತಿರಸ್ಕಾರ. ಬೆಳಕಿದ್ದ ಕಡೆ ಗಿಡದ ಕೊಂಬೆ ಬಾಗುವಂತೆ, ನೀರಿದ್ದ ಕಡೆಗೆ ಬೇರು ಹರಿಯುವಂತೆ, ಅಧಿಕಾರ ಹಣ ಇದ್ದ ಕಡೆ ಹೆಣ್ಣುಗಳು ವಾಲುತ್ತಾರೆ. ಅವರನ್ನು ನಿರಾಕರಿಸಿದ್ದಾದರೆ, ಅವರು ಹಗೆಗಳೇ ಆಗುತ್ತಾರೆ. ಸ್ತ್ರೀಸಮುದಾಯವೇ ಹೀಗೆ ಎಂದು ಹೇಳಿದರೆ ತಪ್ಪಾಗುತ್ತದೆ; ಅಂಥವರು ಸಾವಿರಕ್ಕೋ ಹತ್ತು ಸಾವಿರಕ್ಕೋ ಒಬ್ಬರಿರುತ್ತಾರೆ. ಅವರ ಅವನತಿಗೆ ಕೆಟ್ಟ ಗಂಡಸರೂ ಮನೆಯವರೂ ಕಾರಣರೆಂಬುದನ್ನು ಮರೆಯುವಂತಿಲ್ಲ.

ಏಕೊ ಏನೊ ಕಾಣೆ, ಕುಲಪತಿಯಾದ ನಂತರ ಒಂದು ಹೆಣ್ಣೂ ತಾನಾಗಿ ನನ್ನ ಬಳಿ ಬಂದದ್ದಿಲ್ಲ;ಬಂದರೂ ಕೆಟ್ಟ ಚಾಳಿಯನ್ನು ತೋರಿಸಿಕೊಳ್ಳಲಿಲ್ಲ. ಅವರಿಗೆ ನನ್ನ ಬಗ್ಗೆ ಹೆದರಿಕೆಯಿದ್ದಿರಬಹುದು. ಅವರಲ್ಲಿ ಕೆಲವರಲ್ಲಂತು ನಾನು ಮಾತೆಯನ್ನೆ ಗುರುತಿಸಿದ್ದೇನೆ. ಒಂದು ಸಲ ಮಾತ್ರ ನಡೆದೊಂದು ಕತೆ ಆಶ್ಚರ್ಯಕರವಾಗಿದೆ. ಯಾವುದೋ ಒಂದು ಸಮಾರಂಭ. ಆ ಸಮಾರಂಭದಲ್ಲಿ ಹುಡುಗಿಯರೂ ಪಾಲ್ಗೊಂಡಿದ್ದರು. ಸಮಾರಂಭ ಮುಗಿಯುವಾಗ ರಾತ್ರಿ ಎಂಟು ಗಂಟೆಯಾಯಿತು. ನನ್ನ ಸಹೋದ್ಯೋಗಿಯೊಬ್ಬರು 'ಈಕೆ ಮಹಾರಾಣಿ ಕಾಲೇಜು ಹಾಸ್ಟಲ್‌ನಲ್ಲಿದ್ದಾಳೆ, ಸಾರ್, ನಿಮ್ಮ ಕಾರಿನಲ್ಲೊಯ್ದು ಅಲ್ಲಿ ಬಿಟ್ಟುಬಿಡಿ. ಅಥವಾ ನಿಮ್ಮ ಮನೆಯಲ್ಲಿರಿಸಿಕೊಂಡಿದ್ದು ಬೆಳಿಗ್ಗೆ ಕಳಿಸಿ ಬಿಡಿ' ಎಂದು ನಕ್ಕರು. ನಾನವಳನ್ನು ಹಾಸ್ಟಲಿನ ಮುಂದೆ ಇಳಿಸಿ ಮನೆಗೆ ಹೋದೆ. ಬಹುದಿನಗಳ ತನಕ ಆ ಸಂಗತಿ ನನ್ನ ಮನಸ್ಸಿನಲ್ಲಿ ಕೊರೆಯುತ್ತಿತ್ತು.

ಒಮ್ಮೆ ಬೆಂಗಳೂರಿಗೆ ಹೋಗಿದ್ದಾಗ ನನ್ನ ಆಪ್ತ ಸಹಾಯಕರು ಬಂದಿರಲಿಲ್ಲ. ಹಳೆಯ ಕಾರು ಚಾಲಕ ಇರಲಿಲ್ಲ. ನಾನು ಬಲ್ಲ ಮತ್ತೊಬ್ಬ ಚಾಲಕ ಬಂದಿದ್ದ. ವಾಪಸಾಗುವಾಗ ಹೊತ್ತಾಗಿತ್ತು. ಕೆಲವು ವ್ಯಕ್ತಿಗಳ ಪ್ರಸ್ತಾಪ ಮಾಡಿದಾಗ 'ಅವರೇನು ಬಿಡಿ,

ಬುದ್ಧಿ, ನಾನವರ ಬಳಿಯಿದ್ದಾಗ ಸೂಳೆ ಮನೆ ಹತ್ತಿರ ಇಳಿಸಿದ್ದುಂಟು. ಸಾಹಿತಿಗಳ ಮಕ್ಕಳೂ ಅಲ್ಲಿಗೆ ಹೋಗುತ್ತಿದ್ದುದನ್ನು ಬಲ್ಲೆ' ಎಂದು ನುಡಿದ. ಚಾಪಲ್ಯಕ್ಕೊ ತಮಾಷೆಗೋ ನನಗೂ ತೋರಿಸ್ತೀಯಾ ಒಂದು ಮನೆ ಎಂದೆ. 'ಆಗಲಿ ಬುದ್ಧಿ' ಎಂದ. ಮೈಸೂರು ತಲುಪಿದಾಗ ನಾನು ನಿದ್ದೆ ಮಾಡುತ್ತಿದ್ದೆ. 'ಬುದ್ಧಿ, ನಾ ಹೇಳಿದ ಮನೆ ಹತ್ತಿರವಾಯ್ತು' ಅಂದ. 'ಈ ಹೊತ್ತು ಬೇಡ ಕಣೋ' ಎಂದೆ. ಮನೆಯಲ್ಲಿ ಮುಂದೆ ಕಾರಿನಿಂದಿಳಿದಾಗ 'ನೀನು ಅಧಿಕಾರಿಗಳಿಗೆ ದಾರಿ ತಪ್ಪಿಸ್ತೀಯಾ? ನಿನ್ನನ್ನು ವಜಾ ಮಾಡ್ತೀನಿ' ಎಂದೆ. 'ಕ್ಷಮಿಸಿ ಬುದ್ಧಿ, ಇನ್ನು ತಿದ್ದಿ ಕೊಳ್ತೀನೆ'ಎಂದ.

ಕುಲಪತಿಯಾಗಿದ್ದಾಗಲೇ ನಾನೊಮ್ಮೆ ವಿಯನ್ನಾಕ್ಕೆ ಹೋಗಿದ್ದೆ. ರಾತ್ರಿ ಯಾತ್ರೆಯ ಬಗ್ಗೆ ನನಗೆ ತುಂಬ ಕುತೂಹಲವಿತ್ತು. ನಾನು ಡಿ. ವಿ. ಅರಸು ಇಬ್ಬರೂ ಹೋಟಲಿನವರೇ ಒದಗಿಸಿದ ವಾಹನದಲ್ಲಿ ಕುಳಿತು ನಗರವನ್ನೆಲ್ಲ ಸುತ್ತಾಡಿದೆವು. ಅದಕ್ಕಿಂತ ಬೇರೆಯಾದ ಇಂದ್ರನಗರಿಯಿದೆಯೆಂದು ನನಗನಿಸದು. ನನ್ನ ಮನಸ್ಸಿನಲ್ಲಿಂದಿಗೂ ಹಸುರಾಗುಳಿದಿರುವ ಎರಡು ಸಂಗತಿಗಳನ್ನಿಲ್ಲಿ ದಾಖಲಿಸಬಹುದೆಂದು ತೋರುತ್ತದೆ. ಒಂದು, ವೈನ್ ಕುಡಿಯಲು ದ್ರಾಕ್ಷಿಧಾಮಕ್ಕೆ ಹೋದದ್ದು. ಅಲ್ಲಿ ತಿಂಡಿತೀರ್ಥಗಳನ್ನೊದಗಿಸುತ್ತಿದ್ದವರೆಲ್ಲ ಮಾನ ಮುಚ್ಚಿಕೊಂಡಿದ್ದು ಅರೆ ಎದೆ ತೆರೆದಿದ್ದ ಪ್ರಾಯದ ಸುಂದರಿಯರು. ಅವರನ್ನು ನೋಡಿದಾಗ ನಪುಂಸಕನಿಗೂ ಮೈನವಿರೇಳಬಹುದು. 'ಅರಸು, ನನಗೆ ವೈನ್ ಪಾನ ಬೇಡ, ಸೌಂದರ್ಯ ಪಾನವೇ ಸಾಕು. ನೀವು ನಿಧಾನವಾಗಿ ಹೀರಿ' ಎಂದೆ. 'ನನಗೆ ಎರಡು ಪಾನವೂ ಬೇಕು' ಎಂದರು ಅರಸು. 'ನೀವು ಪುಣ್ಯವಂತರು'ಎಂದೆ. ಡ್ರೈವರ್ ಕೊಟ್ಟಷ್ಟು ಕಾಲ ಮಾತ್ರ ನಾವಲ್ಲಿ ಕುಳಿತಿರಬಹುದು. ಅವನು ಆರ್ಡರ್ ಮಾಡಿದ ಕೂಡಲೇ ನಾವೆಲ್ಲರೂ ಹೊರಡಲೇ ಬೇಕು. ಅನಂತ ಕಾಲ ಅಲ್ಲೇ ಇರುವ ಆಸೆಯಿದ್ದರೂ, 'ನಿಮ್ಮನ್ನು ಇದಕ್ಕಿಂತಲೂ ಉತ್ತಮವಾದ ಮನ್ಮಥ ಲೋಕಕ್ಕೆ ಕರೆದೊಯ್ಯುತ್ತೇನೆ' ಎಂದವನು ನುಡಿದು, ಭವನವೊಂದರ ಮುಂದೆ ಕಾರು ನಿಲ್ಲಿಸಿ, ' ಒಳಗೆ ಹೋಗಿ ' ಎಂದ. ಅದೊಂದು ಪುಟ್ಟರಂಗಮಂದಿರ. ಒಳಗೆ ಕತ್ತಲು. ವೇದಿಕೆಯ ಮೇಲೆ ಆರಡಿಗೂ ಎತ್ತರದ ಒಳ್ಳೆಯ ಮೈಕಟ್ಟಿನ ರತಿ ನಿಂತಿದ್ದಾಳೆ. ಅವಳ ಮಾನದ ಮೇಲೆ ಮಾತ್ರ 'ಬ್ರಹ್ಮ' ಎಂಬ ವಿದ್ಯುತ್ ಲಿಖಿತವಿದ್ದ ಸಣ್ಣ ಫಲಕವಿದೆ. ಪದೇ ಪದೇ 'ವಾತ್ಸ್ಯಾಯನ ಕಾಮ ಸೂತ್ರದ ಪ್ರಯೋಗವನ್ನು ನೀವು ನೋಡುತ್ತೀರಿ' ಎಂಬ ಘೋಷಣೆ ಕೇಳಿಸುತ್ತದೆ. ಅವಳಿಗನುರೂಪನಾದ ತರುಣನೊಬ್ಬ ಮನ್ಮಥನ ಪಾತ್ರ ವಹಿಸುತ್ತಾನೆ.

ಅವನು ಕಾಚ ಕಟ್ಟಿದ್ದಾನೆ. ಮನ್ಮಥ ರತಿ ಯೋಗಾಸನಗಳ ಪ್ರದರ್ಶನವಾಗುತ್ತದೆ. ಮುದುಕ ಮುದುಕಿಯರು, ತರುಣ ತರುಣಿಯರು ಎವೆಯಿಕ್ಕದೆ ನೋಡುತ್ತಾರೆ. ನಾನು ಸಹ. ಮಧ್ಯೆ ವಿರಾಮ. ಆ ಸಮಯದಲ್ಲಿ ಅರೆ ನಗ್ನೆಯರು ವಿವಿಧ ಪಾನಕಗಳನ್ನು ತಂದು ಅತಿಥಿಗಳಿಗೆ ನೀಡುತ್ತಾರೆ. ಕರೆದರೆ ಬಂದು ಮೈಯೊತ್ತಿಕೊಂಡು ಕುಳಿತು ಅವರೇ ಅತಿಥಿಗಳ ತುಟಿಗೆ ಪಾನಪಾತ್ರೆಯನ್ನು ಹಿಡಿಯುತ್ತಾರೆ. ಒಂದೊಂದು ಸಲ ಅವರೂ ತಮ್ಮ ತುಟಿಯೆಡೆಗೊಯ್ಯುತ್ತಾರೆ. ಆ ಸಮಯದಲ್ಲಿ ಮುಪ್ಪಿನ ಜನ ಸಹ ಅವರ ಮೈಮೇಲೆಲ್ಲ ಕೈಯಾಡಿಸುತ್ತಾರೆ. ನನ್ನ ಮೇಜಿನ ಬಳಿಯೂ ಹುಡುಗಿಯೊಬ್ಬಳು ಬಂದಳು.

ಕೈಸನ್ನೆಯಿಂದಲೆ ಅವಳನ್ನು ನಿವಾರಿಸಿದೆ. ಕೈಯೇನೊ ನಿವಾರಿಸಿತು-ಮನವೋ? ಮನೋವಿಕಾರದ ಭಯದಿಂದಲೇ ಅರಸು ಅವರನ್ನೇಳಿಸಿಕೊಂಡು ಹೊರಗೆ ಹೊರಟೆ. 'ಈಗ ಅರ್ಧಪ್ರದರ್ಶನ ಮಾತ್ರ ಮುಗಿದಿದೆ. ಇನ್ನೂ ಅರ್ಧ ಇದೆ' ಎಂದು ಕಾರು ಚಾಲಕ ನುಡಿದ. 'ಅಯ್ಯ, ಒಳಗೆ ಧಗೆ ಸೆಕೆ' ಎಂದೆ. 'ಹವಾನಿಯಂತ್ರಣ'ವಿದೆಯಲ್ಲ ಎಂದ.'ಆದರಿಂದ ತಂಪಾಗಲಿಲ್ಲ. ನಮ್ಮ ಕೋಣೆಗೆ ನಮ್ಮನ್ನು ಬಿಟ್ಟು ಬಿಡು' ರಾತ್ರಿ ನಿದ್ದೆ ಹತ್ತಲಿಲ್ಲ.

ಇಷ್ಟಾದರೂ ಸ್ತ್ರೀಯರ ಬಗ್ಗೆ ನನಗೆ ಯಾವಾಗಲೂ ಸಂಕೋಚ ಲಜ್ಜೆ ಭಯ ಗೌರವ ಇದ್ದೇ ಇವೆ. ಆದ್ದರಿಂದಲೇ ನಾನು ಸಾಮಾನ್ಯವಾಗಿ ಚಿಕ್ಕಂದಿನಿಂದ ಸ್ತ್ರೀಯರ ಸಮೂಹವಿದ್ದ ಕಡೆಗೆ ಹೋಗುವುದಿಲ್ಲ. ಆ ಗುಣ ನನ್ನನ್ನು ಕಾಪಾಡಿದೆ. ನನ್ನ ಸುತ್ತ ಮುತ್ತ ಇರುವ ಅಥವಾ ಓಡಾಡುವ ಸ್ತ್ರೀಯರ ಬಗ್ಗೆ ನನಗೆ ಯಾವಾಗಲೂ ಮಾತೃ ಅಥವಾ ಸಹೋದರೀ ಭಾವವಿದೆಯೇ ಹೊರತು ಅನ್ಯ ಭಾವಕ್ಕೆ ನನ್ನ ಮನಸ್ಸಿನಲ್ಲಿ ಅವಕಾಶವೆ ಇಲ್ಲ. ಸ್ತ್ರೀ ಹೃದಯ ಸೌಂದರ್ಯದ, ವಾತ್ಸಲ್ಯದ, ಕರುಣೆಯ ಮತ್ತು ಔದಾರ್ಯದ ನೆಲೆಯೆಂದು ನಾನು ಬಲ್ಲೆ. ನನಗೆದುರಾದ, ಅಥವಾ ನನ್ನ ಬಳಿಗೆ ಬಂದ ಹೆಂಗಸರಲ್ಲಿ ನನ್ನ ತಾಯಿಯನ್ನೊ ನನ್ನ ಮಗಳನ್ನೊ ಕಾಣಲು ಪ್ರಯತ್ನಿಸಿದ್ದೇನೆ. ವೇಶ್ಯಾಗೃಹದರ್ಶನ ಮಾಡಿದ್ದರಿಂದಲೇ ಅವರ ಹೇಯ ಸ್ಥಿತಿಯನ್ನು ನೋಡಿದ್ದರಿಂದಲೇ ಇಡೀ ಸ್ತ್ರೀ ಸಮಾಜದ ಮೇಲೆ ಕನಿಕರ ಮೂಡುವಂತಾದ್ದು. 'ಮಗಳ್ ನಿನಗೆ ಪುಟ್ಟಿರ್ದಳಿರ್ಪೊಡೆಲ್ಲಿಯದೆಮಗೆ ಮೇಣೆಮ್ಮಲಂಕೆಗೀ ತೋರ್ಪ ದುರ್ಮಂಗಳಂ?' ಎಂದು ಅವಿಂಧ್ಯ ದಶಾನನನನ್ನು ನೆನೆಸಿಕೊಂಡು ಮನದೊಳಗೆ ಹೇಳಿಕೊಂಡ ಈ ಮಾತುಗಳ ಯಥಾರ್ಥತೆಯನ್ನು ನನ್ನ ಬದುಕಿನಲ್ಲಿಯೇ ಕಂಡು ಕೊಂಡಿದ್ದೇನೆ. ನನಗೊಬ್ಬಳು ಮಗಳಿಲ್ಲದಿದ್ದರೆ ನಾನೊಬ್ಬ ಪಶುವಾಗುತ್ತಿದ್ದೆನೆಂಬುದು ನಿಜ.

ಜತೆಗೆ ನನ್ನ ಪುಣ್ಯಸತಿ, ಸಾಧ್ವೀಶಿರೋಮಣಿಯ ತಪಃಶ್ಶಕ್ತಿಯಿಂದಾಗಿ ನಾನು ಉಳಿದಿದ್ದೇನೆ; ನನ್ನಲ್ಲಷ್ಟು ನೈತಿಕ ಧೈರ್ಯ ಉಳಿದಿದೆ; ಅವಳು ದುರ್ಬಲ ದೇಹಿಯಾದರೂ ನನ್ನ ಸಂಸಾರವನ್ನು ಅಚ್ಚುಕಟ್ಟಾಗಿ ನಡೆಸಿದ್ದಾಳೆ. ನನ್ನ ಮಾವ ಮನ್ಮಥ ಸುಂದರರು; ಅಷ್ಟೇ ರಸಿಕರು. ಅವರು ಹೆಣ್ಣುಗಳ ಹಿಂದೆ ಓಡಿದವರಲ್ಲ; ಹೆಣ್ಣುಗಳೇ ಅವರನ್ನಟ್ಟಿಸಿಕೊಂಡು ಬರುತ್ತಿದ್ದುದುಂಟು. ಹಳೆಯ ಮೈಸೂರಿನ ರಾಜಾ ಸರ್ಕಾರದ ಮಂತ್ರಿಯೊಬ್ಬರ ಮಡದಿ ಅವರನ್ನು ಬಲೆಗೆ ಹಾಕಿಕೊಂಡಿದ್ದೂ ಉಂಟು. ಅವರ ಔದಾರ್ಯಕ್ಕೆ, ಅವರ ಶ್ರೀಕಂಠಶಕ್ತಿಗೆ, ಅವರ ನಿಷ್ಠಾಪಟ್ಟಕ್ಕೆ, ರುಚಿ ಶುದ್ಧಿಗೆ ನಾನು ಮಾರು ಹೋದದ್ದುಂಟು. ಅವರ ಸಂತಾನ ದೊಡ್ಡದು. ಅವರಲ್ಲಿ ಒಬ್ಬ ಹೊರತು, ಉಳಿದವರೆಲ್ಲರೂ ಇಂದ್ರಿಯ ವಿಜಯಿಗಳು, ಸಚ್ಚರಿತ್ರರು, ನಿರ್ಮಲಾಂತಃಕರಣವುಳ್ಳವರು. ಇದು ನನ್ನ ಮಾವನವರ ಪುಣ್ಯ. ನನ್ನವೆಂಬ ಮಕ್ಕಳು ಮತ್ತು ಮೊಮ್ಮಕ್ಕಳು ನನ್ನಂತಾಗದೆ, ಜಿತೇಂದ್ರಿಯರಾಗಿ, ಶುದ್ಧಾತ್ಮರಾಗಿ, ನಿಷ್ಕಲ್ಮಷರಾಗಿ ಯಶಸ್ಸಿನ ಏಣಿಯನ್ನೇರಿದ್ದಾರೆ, ಏರುತ್ತಿದ್ದಾರೆ. ಇಷ್ಟಕ್ಕೆಲ್ಲ ನನ್ನಾಕೆಯ ತಪಸ್ಸೇ ಕಾರಣ. ಸದ್ಗುಣ ಸಂಪನ್ನೆಯಾದ ಆಕೆಗೆ ಆಶ್ರಮವೇ ಸರಿಯಾದ ನೆಲೆವನೆ; ಮನೆಯೇ ಅವಳ ತಪೋಮಂದಿರವಾಗಿದೆ. ಅವಳು ನನಗೆ ನಿಜಕ್ಕೂ ಸಾವಿತ್ರಿಯೆ ಆಗಿದ್ದಾಳೆ.

ಶ್ರೀರಾಮಕೃಷ್ಣರಿಗೆ ವಿವೇಕಾನಂದರಿದ್ದ ಹಾಗೆ ಕುವೆಂಪು ಅವರಿಗೆ ನಾನಿದ್ದೇನೆ ಎಂದು ಕೆಲವರು ಹೇಳುವುದುಂಟು. ಆ ಹೋಲಿಕೆ ಸರಿಯಲ್ಲ. ಗಿರೀಶ್ ಚಂದ್ರ ಘೋಷರಿಗೆ ಪರಮ ಹಂಸರಿದ್ದಂತೆ ನನಗೆ ಕುವೆಂಪು ಇದ್ದಾರೆಂದರೆ ಹೆಚ್ಚು ಸಮಂಜಸವಾದೀತು. ನಾನು ಗಿರೀಶ ಚಂದ್ರ ಘೋಷರಷ್ಟು ಲಂಪಟನೂ ಅಲ್ಲ, ಶಕ್ತನೂ ಅಲ್ಲ, ಭಕ್ತನೂ ಅಲ್ಲ, ನಿಜ. ಮಸಿ ಚುಕ್ಕಿಯಷ್ಟಿದ್ದರೂ ಮಸಿಯೇ. ಒಂದು ಚದರದಷ್ಟು ಹರಡಿದರೂ ಮಸಿಯೇ. ನನ್ನ ದೌರ್ಬಲ್ಯ ಗುರುಗಳಿಗೆ ಗೊತ್ತಿರಲಾರದು. ಅದನ್ನು ಅವರಿಂದ ಮುಚ್ಚಿಟ್ಟ ಪಾಪಿ ನಾನು. ಈ ಬಗ್ಗೆ ನಾನು ದಿನಾಲೂ ಒಂದೆರಡು ತೊಟ್ಟಾದ್ದರೂ ಅಶ್ರು ತರ್ಪಣದ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದೇನೆ. ಕ್ಷಣ ಕ್ಷಣವೂ ಈ ಗುರುಕೃಪೆ ನನ್ನನ್ನೆಂತು ರಕ್ಷಿಸಿದೆಯೆಂಬುದು ಮೇಲಿನ ಕಥನದಿಂದ ಸ್ಪಷ್ಟವಾಗುತ್ತದೆ. ಆ ಕೃಪೆ ನನ್ನ ಪಾಲಿಗಿಲ್ಲವಾಗಿದ್ದರೆ ನಾನು ಮಹಾ ವ್ಯಭಿಚಾರಿ, ಅತ್ಯಾಚಾರಿ, ಭ್ರಷ್ಟಾಚಾರಿ ಎಲ್ಲ ಆಗುತ್ತಿದ್ದೆ. ಈ ಮೂರು ಶಕ್ತಿಗಳು ಜನ್ಮ ಜನ್ಮಕ್ಕೂ ನನ್ನನ್ನುದ್ಧರಿಸಬೇಕೆಂದು ನನಗನಿಸುತ್ತದೆ. ನಾನು ಹೇಳಿಕೊಳ್ಳುವಂಥ ಪ್ರತಿಭಾಶಾಲಿಯಲ್ಲ. ವಿಧಿಯಿಚ್ಛೆಯಿಂದ ಮೇಲೆ ಬಂದವನು. ಇದು ಕಾಮಜೀವನ ಯಾತ್ರೆಯ ಕತೆಯಾದರೂ ವಿಧಿ ವಿಲಾಸದ ಕತೆಯೂ ಅಹುದು. ಗುರುಕೃಪಾ ರೂಪದ ವಿಧಿ ನನ್ನನ್ನು ಪಾಪದ ಪಾತಾಳದಿಂದ ಹೇಗೆ ಮೇಲೆತ್ತಿದೆಯೆನ್ನುವುದು ಮೇಲಣ ವಿವರಣೆಯಿಂದ ತಿಳಿಯುತ್ತದೆ.

ಈ ದೌರ್ಬಲ್ಯವನ್ನು ನನ್ನ ನೆಂಟರಿಷ್ಟರಿಂದ, ಮಕ್ಕಳುಮರಿಗಳಿಂದ, ಮಡದಿಯಿಂದ ಮುಚ್ಚಿಟ್ಟಿದ್ದೇನೆ. ನಾನೊಬ್ಬ ಸಜ್ಜನನೆಂದು ನನ್ನ ಮಿತ್ರರು ತಿಳಿದುಕೊಂಡಿದ್ದಾರೆ. ನಾನು ಮನುಷ್ಯರಿಗೆ ಮೋಸ ಮಾಡಬಹುದು; ದೇವರಿಗೆ ಮೋಸ ಮಾಡಲಾರೆ. ನನ್ನ ಆತ್ಮಕ್ಕೆ ಮೋಸ ಮಾಡಿಕೊಳ್ಳಲಾರೆ. ವಿಷಯ ಲಂಪಟತನವೊಂದಿಲ್ಲದಿದ್ದರೆ ನಾನು ಅನೇಕ ಸಾಹಿತಿಗಳನ್ನು ಮೀರಿಸುತ್ತಿದ್ದೆ. ಆ ನಂಬಿಕೆ ನನಗಿದೆ. ಆ ಬಗ್ಗೆ ಚಿಂತೆಯೂ ಇದೆ. ನನ್ನ ತಪ್ಪನ್ನು ದಿನವೂ ದೇವರ ಮುಂದೆ ತೋಡಿಕೊಳ್ಳುತ್ತೇನೆ. ಆದರೂ ಅದನ್ನು ಮುಚ್ಚಿಟ್ಟು ನಾನು ಜಗತ್ತಿಗೆ ಮೋಸ ಮಾಡಿದ್ದೇನೆ. ಈ ಮೋಸದಿಂದ ಪಾರಾಗಲು ಈ ಕತೆ ಬರೆದಿದ್ದೇನೆ. ಟಾಲ್‌ಸ್ಟಾಯ್ ಆಗಬೇಕೆಂದು ನಾನಿದನ್ನು ಬರೆದಿಲ್ಲ, ನನ್ನ ಮನಸ್ಸಿನ ನಿರಂತರ ಕುದಿಪವನ್ನು ತಂಪುಗೊಳಿಸಿ ತಡೆಗಟ್ಟಿ, ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಲೆಂದೇ ಈ ಹವಣಿಕೆಗೆ ತೊಡಗಿದ್ದೇನೆ. ಇದು ನನ್ನ ಮಕ್ಕಳ ಮತ್ತು ಮೊಮ್ಮಕ್ಕಳ ಹಾಗೂ ನೆಂಟರಿಷ್ಟರ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆಯೊ ಕಾಣೆ. ಅವರೆಲ್ಲರೂ ಪ್ರೌಢರಾದ್ದರಿಂದ ಜಿತೇಂದ್ರಿಯರಾದ್ದರಿಂದ ವಿವೇಕಿಗಳಾದ್ದರಿಂದ ಸತ್ಯ ನಿಷ್ಠರಾದ್ದರಿಂದ ಇದು ದುಷ್ಪರಿಣಾಮ ಬೀರಲಾರದೆಂದೇ ನನ್ನ ನಂಬಿಕೆ. ಹಾಗಾಗಬಾರದೆಂದೇ ನಾನು ಈ ತನಕ ನನ್ನ ಈ ಕೆಟ್ಟ ಮೋರೆಯನ್ನವರಿಗೆ ತೋರಿಸಿರಲಿಲ್ಲ. ಹಲ್ಲುಬಿದ್ದ ಮೇಲೆ ಮಾಂಸಾಹಾರ ಬಿಟ್ಟಂತೆ, ಶಕ್ತಿಯುಡುಗಿದ ಮೇಲೆ ಈತ ತನ್ನ ಕೆಟ್ಟ ಚಾಳಿಗಳನ್ನು ತ್ಯಜಿಸಿರುವಂತೆ ಕಾಣುತ್ತದೆಂದು ಜನ ಆಡಿಕೊಳ್ಳಬಹುದು. ಅಥವಾ ಬಂಧುಗಳು ದೂರ ಸರಿಯಬಹುದು. ಅಷ್ಟಕ್ಕೆಲ್ಲ ನಾನು ಸಿದ್ಧತೆ ಮಾಡಿಕೊಂಡು ನಾನಿದನ್ನು ಬರೆದಿದ್ದೇನೆ. ಈಗ ಬರೆಯದಿದ್ದರೆ

ಮುಂದೆ ಬರೆಯುತ್ತಿದ್ದೆನೋ ಇಲ್ಲವೋ ಕಾಣೆ. ಸಾರ್ವಜನಿಕ ತಪ್ಪೊಪ್ಪಿಗೆ ಸಾಧ್ಯವಾಗುತ್ತಿರಲಿಲ್ಲವೋ ಏನೋ. ಈ ಮತ್ತು ಇತರ ದೌರ್ಬಲ್ಯಗಳನ್ನು ನೆನೆದಾಗ ನನ್ನ ಮೊಮ್ಮಕ್ಕಳು ಮೊದಲುಗೊಂಡು ಇಡೀ ಕುಟುಂಬವೇ ನನಗೆ ಗುರು ಸ್ಥಾನದಲ್ಲಿದೆಯೆಂದು ಒಪ್ಪಿಕೊಳ್ಳಬೇಕಾಗಿದೆ.

ಗುರುಕೃಪೆ ವಿಧಿವಿಲಾಸಗಳನ್ನು ಹೆಸರಿಸಿರುವುದರಿಂದ ನಾನೇನೂ ಇಂದ್ರಿಯ ವಿಜಯದ ಬಗ್ಗೆ ಪ್ರಯತ್ನ ಮಾಡಿಲ್ಲವೆಂದು ಯಾರೂ ಭಾವಿಸಬಾರದು. ಕುವೆಂಪು ಅವರಂಥ ಗುರುವಿನ ಶಿಷ್ಯನಾಗಿ, ಸಾವಿತ್ರಿಯಂಥ ತಪಸ್ವಿನಿಯ ಪತಿಯಾಗಿ, ಶಶಿಕಲಾಳಂಥ ಸಾಧ್ವೀಶಿರೋಮಣಿಯ ಮತ್ತು ಶಶಿಧರ ಪ್ರಸಾದನಂಥ ಲಂಪಟದೂರನೂ ಏಕ ಪತ್ನೀವ್ರತ್ರನೂ ಆದ ಮೇಧಾವಿಯ ತಂದೆಯಾಗಿ ಇಂದ್ರಿಯ ಪ್ರಾಬಲ್ಯದ ವಿರುದ್ಧವಾಗಿ ಹೋರಾಟ ನಡೆಸದಿರಲು ಸಾಧ್ಯವೇ ಇಲ್ಲ. ನಾನು ಹೆಚ್ಚು ಹೆಚ್ಚು ಪ್ರಾರ್ಥನೆ ಮಾಡುತ್ತಿದ್ದುದು ಅದಕ್ಕಾಗಿಯೇ ಒಮ್ಮೊಮ್ಮೆ ಉಪವಾಸ ಮಾಡುತ್ತಿದ್ದುದು. ಅದಕ್ಕಾಗಿಯೇ ಅತ್ತು ಅತ್ತು ಕಣ್ಣೀರು ಕೋಡಿ ಹರಿಸುತ್ತಿದ್ದುದೂ ಅದಕ್ಕಾಗಿಯೇ. ಅದೊಂದು ನಿರಂತರ ಹೋರಾಟ. ನನ್ನ ಬದುಕೇ ಒಂದು ಹೋರಾಟವೆಂದು ಕರೆದುಕೊಂಡಿದ್ದು ಇದಕ್ಕಾಗಿಯೇ.

ಪರಿಸರ ಮಾಲಿನ್ಯದಿಂದ ಕಾಮ ರೋಗವಾಗಿ ಪರಿಣಮಿಸುತ್ತದೆಂಬುದೇ ಹೆಚ್ಚು ಸತ್ಯ. ಅಮೆರಿಕೆಯಲ್ಲಿ ಹೈಸ್ಕೂಲು ಹುಡುಗಿಯರ ಪೈಕಿ ಶೇ ೫೦ಭಾಗ ಬಸುರಿಯಾಗುತ್ತಾರೆಂದು ಹೇಳುತ್ತಾರೆ. ಹೈಸ್ಕೂಲಿನ ಕೆಲವು ಕಾರ್ಯಕ್ರಮಗಳನ್ನು ನೋಡುವಾಗ, ದೂರದರ್ಶನದ ಮುಂದೆ ಕುಳಿತಾಗ ಯುವಕ ಯುವತಿಯರ ರಾಗಗಳನ್ನು ಕೆರಳಿಸುವ, ಸಂಯಮವನ್ನು ಸಡಿಲಿಸುವ ಅನೇಕ ದೃಶ್ಯಗಳು ಎದುರಾಗುತ್ತವೆ. ಅವನ್ನು ನೋಡಿದ ಯುವಕ ಯುವತಿಯರು ಸುಮ್ಮನಿರಲಾಗುತ್ತದೆಯೆ? ನನ್ನೆಲ್ಲ ದುರ್ವ್ಯಸನಗಳಿಗೆ ಪರಿಸರ ಹಾಗೂ ನನ್ನ ದೌರ್ಬಲ್ಯಗಳೇ ಕಾರಣ. ಈ ವಿಪರೀತ ವಿಕಾರ ಕಾಮದಿಂದ ಅಪಾರ ನಷ್ಟವಾಗಿರುವಂತೆ ತುಸು ಲಾಭವೂ ಆಗಿದೆಯೆಂದರೆ ಯಾರಿಗಾದರೂ ಆಶ್ಚರ್ಯ ವಾಗದಿರಲಾರದು. ಜೀವನದಲ್ಲಿ ಬೇಸರವಾದಾಗ, ದುಃಖಗಳು ಮಾಲೆ ಮಾಲೆಯಾಗಿ ಎದುರಾದಾಗ, ಕಷ್ಟಗಳು ಸಂಭವಿಸಿದಾಗ, ಟೆನ್ಷನ್ ತೀವ್ರವಾದಾಗ ದುರ್ವ್ಯಸನಿ ಯಾದವನಿಗೆ ಹೆಣ್ಣಿನ ಸಂಗವೇ ಪರಮೌಷಧ. ಆ ಸಂಗಮದ ನಂತರ ಅವನಿಗೆ ಹೊಸ ಚೈತನ್ಯ ಬಂದಂತಾಗುತ್ತದೆ. ಬಾಲಕಾಮಿಗಳಿಗೆ ಹೊರತಾಗಿ ಪ್ರಾಪ್ತವಯಸ್ಸಿನ ತನಕ ಬ್ರಹ್ಮಚರ್ಯವನ್ನು ಕಟ್ಟು ನಿಟ್ಟಾಗಿ ಪಾಲಿಸಿದವರಿಗೆ ಈ ಮಾತು ಅನ್ವಯಿಸಲಾರದು. ಎರಡು ಕಡೆಗೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ಉದಾಹೃತ ವ್ಯಕ್ತಿಗಳು ಒಪ್ಪಬೇಕಲ್ಲ!

ವಿವಾಹದವರೆಗಾದರೂ ಸತಿ ಪತಿಗಳಿಬ್ಬರೂ ಸಂಯಮವನ್ನು ಸಾಧಿಸಿದ್ದರೆ, ಮುಂದೆಯೂ ಅದು ಅವರ ತಲೆ ಕಾಯುತ್ತದೆ. ಅವರಲ್ಲಿ ಪರಸ್ಪರ ಹೊಂದಾಣಿಕೆ ಸಾಧ್ಯವಾಗುತ್ತದೆ. ಅವಳು ಬಾಣಂತಿಯಾದಾಗ, ಅವನು ಕಾಯಿಲೆ ಬಿದ್ದಾಗ ದುರ್ವ್ಯಸನ

ಅವರನ್ನು ಕಾಡುವುದಿಲ್ಲ. ಆ ಸಂಯಮವೇ ಬದುಕಿನ ರೀತಿಯಾದವರಿಗೆ ಅಂಥ ಸಂದರ್ಭಗಳು ಅವರ ಸಹನೆಯನ್ನು ಪರೀಕ್ಷಿಸುತ್ತವೆ. ನನಗೆ ತಿಳಿದ ಹಾಗೆ ಹೆಂಗಸರಿಗಿಂತ ಗಂಡಸರಲ್ಲಿ ಅಂಥವರ ಸಂಖ್ಯೆ ಹೆಚ್ಚು. ಹೆಣ್ಣು ಗಂಡನ ಇಚ್ಛೆಯನ್ನರಿತು, ಗಂಡು ಹೆಂಡತಿಯ ಶಾರೀರಕ ಧರ್ಮವನ್ನರಿತು ಪರಸ್ಪರ ಸಹಕರಿಸಿದ್ದಾದರೆ, ಹೆಣ್ಣಿನಲ್ಲಿ ತ್ಯಾಗ ಕಷ್ಟ ಸಹಿಷ್ಣುತೆ (ಗಂಡ ಅಸಂಯಮಿಯಾದಾಗ)ಇದ್ದದ್ದಾದರೆ, ಸಂಸಾರ ಸಲೀಸಾಗಿ ಸಾಗುತ್ತದೆ. ಇಲ್ಲ ಗಂಡ ದಾರಿ ತಪ್ಪುತ್ತಾನೆ; ತನ್ನ ಕಾಮ ಸಂತೃಪ್ತಿಗಾಗಿ ವಾಮ ಮಾರ್ಗ (ಮುಷ್ಟಿ ಮೈಥುನ ಸೇರಿ)ಹಿಡಿಯುತ್ತಾನೆ. ಅದು ಅನಿವಾರ್ಯ. ಹೆಣ್ಣಿನ ಮನಸ್ಸಿಗೆ ವಿರುದ್ಧವಾಗಿ ಗಂಡು ವರ್ತಿಸಿದ್ದರೆ, ಅದು ಅತ್ಯಾಚಾರವಾಗುತ್ತದೆಂದು ಅಮೆರಿಕೆಯ ನ್ಯಾಯಾಲಯಗಳು ತೀರ್ಪು ನೀಡಿವೆ. ಗಂಡನ ಅತಿಯಾದ ಕಾಮ ಚೇಷ್ಟೆಯನ್ನು ಸಹಿಸದೆ ಮಡದಿ ಅವನ ಶಿಶ್ನವನ್ನು ಕತ್ತರಿಸಿದ ಪ್ರಸಂಗಗಳೂ ಅಲ್ಲಿ ಸಿಗುತ್ತವೆ. ಗಂಡು ಮಾತ್ರವಲ್ಲ, ಕೆಲವು ಹೆಣ್ಣು ಸಹ ಪರಿಸರ ದೋಷದಿಂದ ಅಥವಾ ಗಂಡನ ನಪುಂಸಕತ್ವದಿಂದ ದಾರಿ ತಪ್ಪುವುದುಂಟು. ಟಾಲ್‌ಸ್ಟಾಯ್ ಅವರ ಅನ್ನಕರೆನಿನ ಕಾದಂಬರಿಯ ಅನ್ನಾ ಕೆಟ್ಟದ್ದೇ ಹೀಗೆ. ಗಂಡ ಕರೆನಿನ್ ಹೆಂಡತಿಯ ಬೇಕು ಬೇಡಗಳ ಕಡೆಗೆ ಗಮನ ಕೊಡದಿದ್ದಾಗ ಅವಳು ಬೇರೆ ಕಡೆ ತೃಪ್ತಿ ಪಡೆದುಕೊಳ್ಳುತ್ತಾಳೆ. ಗಂಡಸೂ ಹೀಗೆಯೇ.

ನಿಜವಾದ ರಸಿಕ ಅಥವಾ ಭಗವದ್ಭಕ್ತ ಸಂಭೋಗದಲ್ಲಿ ಆತ್ಮ ಸಂಯೋಗವನ್ನು ಕಾಣುತ್ತಾನೆ. ಅದ್ವೈತ ದರ್ಶನವನ್ನನುಭವಿಸುತ್ತಾನೆಂದೇ ನನ್ನ ನಂಬಿಕೆ. ಸ್ತ್ರೀಗೂ ಅಂಥದೇ ಅನುಭವ ಸಾಧ್ಯ. ಅದು ಅವರ ಮನೋಧರ್ಮ ಸಂಸ್ಕಾರಗಳನ್ನವಲಂಬಿಸುತ್ತದೆ. ಆ ಸಂದರ್ಭದಲ್ಲಿ ಸತಿಪತಿಗಳನುಭವಿಸಿವ ಏಕಾಗ್ರತೆ ಅನನ್ಯವಾದದ್ದು. ತಮ್ಮ ಸಕಲ ಕ್ರಿಯೆಗಳಲ್ಲಿ ಅಂಥದೇ ಏಕಾಗ್ರತೆಯನ್ನು ಸಾಧಿಸುವುದಾದರೆ. ಶ್ರೇಷ್ಠಫಲವನ್ನು ನಿರೀಕ್ಷಿಸಬಹುದು. ಕುವೆಂಪು ಅವರ ಪ್ರೇಮೋಪನಿಷತ್ತು ನನ್ನ ಮೇಲೆ ಅಪಾರ ಪ್ರಭಾವ ಬೀರಿದೆಯೆಂಬುದನ್ನು ಈ ಸಂದರ್ಭದಲ್ಲಿ ನೆನೆದುಕೊಳ್ಳಬಹುದು. ಅವರ ಪ್ರೇಮಗೀತೆಗಳು ಇತರ ಪ್ರಣಯ ಕವನಗಳಂತೆ ಮನಸ್ಸನ್ನು ವಿಕಾರಗೊಳಿಸದೆ, ಪ್ರೇಮದ ದಾರ್ಶನಿಕತೆಯ ಕಡೆಗೆ ಅದನ್ನು ತಿರುಗಿಸುತ್ತದೆ. ಆ ಪ್ರೇಮ ಗೀತೆಗಳಲ್ಲಿ ಅದ್ವೈತದ ದರ್ಶನದ ಪರಾಕಾಷ್ಠೆಯನ್ನು ಕಾಣಬಹುದು. ಅವುಗಳನ್ನು ಅರ್ಥಮಾಡಿಕೊಂಡವನು ಎಂಥ ಲಂಪಟನಾದರೂ ದಾಂಪತ್ಯ ದರ್ಶನದ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಅನ್ಯ ವಿಷಯಾಸಕ್ತಿಯಿಂದ ಮುಕ್ತಿ ಪಡೆಯುತ್ತಾನೆ; ಸತಿಯಲ್ಲಿ ಜಗನ್ಮಾತೆಯನ್ನು ಕಾಣುತ್ತಾನೆ. ಈ ದಿಶೆಯಲ್ಲಿ ನನ್ನ ಸಾಧನೆ ಮುಂದುವರಿಯುತ್ತಿದೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಸ್ತ್ರೀ ಪುರುಷ ಪರಸ್ಪರಾಕರ್ಷಣೆ ಮಾನವ ಸಹಜವಾದದ್ದೇ. ಆದರೆ ಅದು ಅತಿರೇಕಕ್ಕೆ ಹೋದಾಗ ಮಾನವ ಪಶುವಾಗುತ್ತಾನೆ; ಆತ್ಮಹಾನಿಗೆ ಮಾತ್ರವಲ್ಲ, ಸಾಮಾಜಿಕ ಶಾಂತಿಗೂ ಅದು ಕಾರಣವಾಗುತ್ತದೆ. ಜಪತಪ ಪ್ರಾರ್ಥನೆ ಪ್ರಾಯಶ್ಚಿತ್ತಗಳಿಂದ ಶಮೆದಮೆಗಳಿಂದ ಇಂದ್ರಿಯ ಜಯ ಅಸಾಧ್ಯವಲ್ಲ. 'ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ ಪಶುವೇನ ಬಲ್ಲುದು, ಹಸುರೆಂದೆಳಸುವುದು. ವಿಷಯರಹಿತನ ಮಾಡಿ,

ಭಕ್ತಿ ರಸವ ದಣಿಯೆ ಮೇಯಿಸಿ, ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯ ಕೂಡಲ ಸಂಗಮ ದೇವಾ'ಎಂದು ಭಕ್ತಿಯಿಂದ ಪ್ರಾಮಾಣಿಕವಾಗಿ ಮೊರೆಯಿಟ್ಟವರಿಗೆ ಕಾಮದ ರೋಗ ಶಮನವಾಗುವುದರಲ್ಲಿ ಸಂದೇಹವಿಲ್ಲ.

ಕಾಮ ದಹನಕ್ಕೆ ಅತ್ಯಂತ ಶ್ರೇಷ್ಠ ಮಾರ್ಗ ದುಡಿಮೆ. ದುಡಿಮೆ ಬಲ್ಲವನಿಗೆ ರೋಗವೂ ಇಲ್ಲ, ಬಡತನವೂ ಇಲ್ಲವೆಂಬುದು ನನ್ನ ಸ್ವಾನುಭವ ಸಿದ್ಧಾಂತ. ಯಾವುದಾದರೊಂದು ಪುಸ್ತಕವನ್ನು ಬರೆಯಬೇಕೆಂದು ಸದಾ ಅದರ ಚಿಂತೆಯಲ್ಲಿಯೇ ತೊಡಗಿದಾಗ, ಸರಸ್ವತೀ ಶಕ್ತಿಯನ್ನು ಮನದಲ್ಲಿ ಧಾರಣೆ ಮಾಡಿಕೊಂಡಾಗ, ಮನದ ಮಾತ್ರವಲ್ಲ, ಪಂಚೇಂದ್ರಿಯಗಳ ಅತಿರೇಕಗಳು ಕಾಣೆಯಾಗುತ್ತವೆ. ಕೆಣಕಿದಲ್ಲದೆ ಸರ್ಪ ಕೆರಳದು; ಗೀಚಿದಲ್ಲದೆ ಬೆಂಕಿ ಕಿಡಿಗೆದರದು; ಅದೇ ರೀತಿ ಇಂದ್ರಿಯುಗಳನ್ನು ಕೆಣಕಿದಾಗ ಮಾತ್ರ ಅವು ಬುಸುಗುಡುತ್ತವೆ. ಹಗಲೆಲ್ಲ ತದೇಕಚಿತ್ತನಾಗಿ ದುಡಿಮೆಯಲ್ಲಿ - ಅಗೆತ, ಉಳುಮೆ, ಕಾಮಾಟಿ, ಅಡುಗೆ, ಓದು, ಬರಹ, ವ್ಯಾಯಾಮ ಯಾವುದಾದರೂ ಆಗಬಹುದು-ಅವುಗಳಲ್ಲಿ ತೊಡಗಿಸಿಕೊಂಡಾಗ ಮಾನವನ ರಾಗ ದ್ವೇಷಗಳು ಶಮನಗೊಳ್ಳುತ್ತವೆ. ವಿಷಯಾಸಕ್ತಿ ಸೊನ್ನೆಯಾಗುತ್ತದೆ. ಮಾನವನ ಸಂಯಮಕ್ಕೆ ಇದೊಂದೇ ರಾಜಮಾರ್ಗ.

ತಾಮಸಾಹಾರವೂ ಲೈಂಗಿಕತೃಷೆಗೆ ಆಸುರೀ ಪ್ರವೃತ್ತಿಗಳಿಗೆ ಕಾರಣವೆಂದು ಹೇಳುತ್ತಾರೆ. ಅದೆಷ್ಟರ ಮಟ್ಟಿಗೆ ನಿಜವೋ ನಾನು ಹೇಳಲಾರೆ. ಏಕೆಂದರೆ ಅಸಂಯಮಿಗಳಾದ ಶಾಕಾಹಾರಿಗಳನ್ನು ನಾನು ನೋಡಿದ್ದೇನೆ. ಉಪವಾಸಾದಿವ್ರತ ಈ ದಿಕ್ಕಿನಲ್ಲಿ ಪ್ರಯೋಜನವಾಗುತ್ತವೆಂದು ಹೇಳಬಲ್ಲೆ. ಇವೆಲ್ಲವೂ ನನ್ನ ಸ್ವಂತ ಅನುಭವಗಳಷ್ಟೆ.

ನನ್ನ ಮನಸ್ಸನ್ನು ಬಲ್ಲ ಗುರು ಮತ್ತು ದೇವರು ನನ್ನ ಈ ತಪ್ಪೊಪ್ಪಿಗೆಯನ್ನು ಮೆಚ್ಚಿ ಕ್ಷಮಿಸುತ್ತಾರೆಂಬ ಭರವಸೆ ನನಗಿದೆ. ಜಗತ್ತು ಮತ್ತು ಹತ್ತಿರದ ಬಂಧುಗಳಿಂದ ಇಂಥದೇ ಕ್ಷಮೆ ನಿರೀಕ್ಷಿಸುತ್ತೇನೆ. ಕ್ಷಮೆ ಸಿಗಲಿಲ್ಲ, ನನ್ನ ಪಾಲಿನ ದೈವವನ್ನು ಮರೆಹೊಗುತ್ತೇನೆ. ನನ್ನ ಮನಸ್ಸನ್ನು ಕೊರೆಯುತ್ತಿದ್ದ ಕಾಪಟ್ಯವನ್ನು ಹೊರಹಾಕಿದ ಹರ್ಷ ನನ್ನ ಮನಸ್ಸಿಗಾಗಿದೆ. ನಾನು ನನ್ನವರಿಗೆ ಕೆಟ್ಟವನಾದರೆ, ನಾನು ಸತ್ತಾಗ ಒಂದೆರಡು ದಿನವಾದರೂ ಅವರು ಅಳುವುದಿಲ್ಲವೆಂಬ ಸಂತೋಷವೂ ನನಗಾಗಿದೆ. ನಾನು ಸತ್ತಾಗ ಯಾರೂ ಅಳಬಾರದೆಂಬುದೇ ನನ್ನ ಅಪೇಕ್ಷೆ.

*****

ಮಠಗಳೊಡನೆ ನನ್ನ ಸಂಬಂಧ

ಕರ್ನಾಟಕ ಸಾಂಸ್ಕೃತಿಕ ಇತಿಹಾಸದ ಅದ್ಭುತ ವಿಕಾಸಕ್ಕೆ ಅಲ್ಲಿಯ ಮಠಗಳ ಕೊಡುಗೆ ಅತ್ಯಮೂಲ್ಯವಾದದ್ದೆಂಬ ಸಂಗತಿಯ ಬಗ್ಗೆ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ಬಹುಮಂದಿ ಸ್ವಾಮಿಗಳು ತಮ್ಮ ಮೂಲ ಆಚಾರ್ಯಪುರುಷರ ಜಾಡಿನಲ್ಲಿ ನಡೆಯುತ್ತಿಲ್ಲವೆಂಬುದು ಖೇದದ ವಿಷಯವಾಗಿದೆ. ಕೆಲವರಂತು ಕಾವಿ ಬಟ್ಟೆ ಧರಿಸಿದ ರಾಜಕಾರಣಿಗಳಾಗಿದ್ದಾರೆ. ಅವರೆಲ್ಲರೂ ಲೌಕಿಕ ಸ್ವಾಮಿಗಳೇ ಹೊರತು ಆಧ್ಯಾತ್ಮಿಕ ಸ್ವಾಮಿಗಳಲ್ಲ. ರಾಜರು ಚಕ್ರವರ್ತಿಗಳು ಕಣ್ಮರೆಯಾದ ನಂತರ ಅವರ ಸ್ಥಾನಮಾನಗಳನ್ನು ಈ ಯತಿ ಚಕ್ರವರ್ತಿಗಳು ಆಕ್ರಮಿಸಿಕೊಂಡಿದ್ದಾರೆ. ರಾಜಶಾಹಿ ಪುರೋಹಿತ ಶಾಹಿ ಮಠೀಯ ಶಾಹಿಯ ರೂಪದಲ್ಲಿ ಹೆಡೆಯೆತ್ತಿದೆ. ಇವರು ಸಿಂಹಾಸನಾರೋಹಣ ಮಾಡುತ್ತಾರೆ. 'ನಾವು' ಎಂದು ಕರೆದುಕೊಳ್ಳುತ್ತಾರೆ. ರಾಜರು ಮಾಡುತ್ತಿದ್ದುದನ್ನೆಲ್ಲ ತಪ್ಪದೆ ಆಚರಿಸುತ್ತಾರೆ. ಇವರಿಗೆ ಅಡ್ಡ ಪಲ್ಲಕ್ಕಿಯ ಉತ್ಸವ ಬೇಕು, ಆನೆಯ ಮೇಲಣ ಅಂಬಾರಿಯಲ್ಲಿ ಮೆರೆವಣಿಗೆಯಾಗಬೇಕು, ಇವರ ಪಾದ ತೊಳೆದ ನೀರನ್ನು ಭಕ್ತರು ಕುಡಿಯಬೇಕು. ಮೌಢ್ಯಾಚಾರ ನಂಬಿಕೆಗಳು ಹುಟ್ಟುವುದೇ ಈ ಮಠಗಳಲ್ಲಿ. ಅವನ್ನು ಹುಟ್ಟು ಹಾಕುವವರು ಸ್ವಾಮಿಗಳು ಮತ್ತು ಅವರ ಪಟ್ಟ ಶಿಷ್ಯರು. ಮುಂದೆ ಇಂಥ ಸ್ವಾಮಿಗಳ ದರ್ಬಾರು ನಡೆದೇ ನಡೆಯುತ್ತದೆಂದು ಊಹಿಸಿದ ಬಸವಣ್ಣನವರು ಈ ರೀತಿ ವಚನಿಸುತ್ತಾರೆ :

ಆನೆಯನೇರಿಕೊಂಡು ಹೋದಿರೇ ನೀವು,
ಕುದುರೆಯನೇರಿಕೊಂಡು ಹೋದಿರೇ ನೀವು ಕುಂಕುಮ
ಕಸ್ತೂರಿಯ ಪೂಸಿಕೊಂಡು ಹೋದಿರೇ, ಅಣ್ಣಾ!
ಸತ್ಯದ ನಿಲವನರಿಯದೆ ಹೋದಿರಲ್ಲಾ ಸದ್‌ಗುಣ
ವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!

ಎಲ್ಲ ಸ್ವಾಮಿಗಳು ಬಸವಣ್ಣನವರ ಈ ಉಪದೇಶಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಾರೆ.

ಕೆಲವು ಸ್ವಾಮಿಗಳು ತಮ್ಮ ಬಳಿ ತಲೆಹಿಡುಕರನ್ನಿಟ್ಟುಕೊಂಡಿದ್ದಾರಂತೆ, ಮತ್ತೆ ಕೆಲವರು ರಾಜಕೀಯ ನಾಯಕರಿಗೆ ತಲೆ ಹಿಡುಕರಾಗುವರಂತೆ. 22- 6- 1994 ನೆಯ ದಿನಾಂಕದ ಪ್ರಜಾವಾಣಿಯಲ್ಲಿ ಪ್ರಕಟವಾಗಿರುವ ಗುಜರಾತಿನ ದ್ವಾರಕಿಯ ಕೇಶವಾನಂದ ಸ್ವಾಮಿಯ ಕತೆಯನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಕೆಲವು ಸ್ವಾಮಿಗಳಂತು ನಿರ್ಲಜ್ಜರಾಗಿ ತಮ್ಮ ಮೌಢ್ಯಾಡಂಬರಗಳಿಗೆ ಕುವೆಂಪು ಅವರಂಥ ಮಹಾದಾರ್ಶನಿಕರ ಒಪ್ಪಿಗೆಯಿದೆಯೆಂದು ಸಾರ್ವಜನಿಕ ಸಭೆಯಲ್ಲಿ ಸಾರುತ್ತಾರೆ. ಇಂಥ ಸುಳ್ಳು ಹೇಳುವುದರಲ್ಲಿ ಕೆಲವು ಸ್ವಾಮಿಗಳು ನಿಸ್ಸೀಮರು. ಅವರು ಕಾವಿ ಬಟ್ಟೆ ತೊಟ್ಟಿರುವುದರಿಂದ ಸುಳ್ಳು ಹೇಳಲಿ, ವ್ಯಭಿಚಾರ ಮಾಡಲಿ, ಭ್ರಷ್ಟಾಚಾರ ನಡೆಸಲಿ,

ಎಲ್ಲವೂ ಮುಚ್ಚಿ ಹೋಗುತ್ತವೆ. ಸ್ವಾಮಿಗಳೊಬ್ಬರು ನಾನಿದ್ದ ಸಭೆಯಲ್ಲಿ ಹೇಳಿದರು: 'ಕುವೆಂಪು ನನ್ನನ್ನು ಕರೆಸಿಕೊಂಡು, ಕೆಲವು ವಿಷಯಗಳನ್ನು ಚರ್ಚಿಸುವಾಗ, ಅಂಬಾರಿ ಅಡ್ಡಪಲ್ಲಕ್ಕಿ ಕಿರೀಟ ಪಾದ ಪೂಜೆಗಳಿಲ್ಲದಿದ್ದರೆ ನಾವು ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಹೇಳಿದೆ. ಹಾಗಾದರೆ ಮುಂದುವರಿಸಿ ಎಂದು ಅವರು ಒಪ್ಪಿಗೆ ಕೊಟ್ಟರು' ಎಂದು. ಇದೆಲ್ಲ ಬರಿಬುರುಡೆ, ಬೊಗಳೆ. ಕುವೆಂಪು ಯಾವ ಸ್ವಾಮಿಗಳನ್ನೂ ಕರೆಸಿ ಪಾದಪೂಜೆ ಮಾಡುವುದಿಲ್ಲ. ಇಂಥ ಸ್ವಾಮಿಗಳಿಗೆ ಮಣೆ ಹಾಕುವುದೂ ಇಲ್ಲ. ಕುವೆಂಪು ಅವರನ್ನು ಹತ್ತಿರದಿಂದ ನೋಡಿದವರಿಗೆ, ಅವರ ಸಾಹಿತ್ಯ ಓದಿದವರಿಗೆ ಇದೆಲ್ಲ ಆತ್ಮ ಪ್ರಶಂಸೆಯ, ಸ್ವಾಪರಾಧ ಸಮರ್ಥನೆಯ ನಾಟಕವೆಂಬುದು ಸ್ಪಷ್ಟವಾಗುತ್ತದೆ. ಇಂಥ ಸ್ವಾಮಿಗಳ ನಾಟಕವನ್ನು ನೋಡಿ ಅವರು ನಕ್ಕಿದ್ದಾರೆ ಅಣಕವಾಡಿದ್ದಾರೆ, ಸಾತ್ವಿಕ ಕ್ರೋಧವನ್ನು ವ್ಯಕ್ತಪಡಿಸಿದ್ದಾರೆ. ಅಧ್ಯಾತ್ಮಶಕ್ತಿಯಿಲ್ಲದ ಈ ಬೂಟಾಟಿಕೆಯ ಜನ ತಮ್ಮ ಸ್ಥಾನವನ್ನು ಗಟ್ಟಿಗೊಳಿಸುವ ಸಲುವಾಗಿ ಏನೇನೊ ಅಲ್ಲದ ಸಲ್ಲದ ಆಟ ಹೂಡುತ್ತಾರೆಂಬುದಕ್ಕೆ ಈ ಒಂದು ನಿದರ್ಶನ ಸಾಕು.

ಕೆಲವು ಸ್ವಾಮಿಗಳು ರಾತ್ರಿ ಸಮಯದಲ್ಲಿ ವೇಷಾಂತರ ಮಾಡಿಕೊಂಡು ಸಿನಿಮಾ ಮಂದಿರಗಳಿಗೆ ವೇಶ್ಯಾಗೃಹಗಳಿಗೆ ಹೋಗುತ್ತಾರೆಂದು ದಿ. ಎಚ್. ಕೆ. ವೀರಣ್ಣಗೌಡರು ಅನೇಕ ನಿದರ್ಶನಗಳನ್ನು ನೀಡುತ್ತಿದ್ದರು. ಕೆಲವು ಸ್ವಾಮಿಗಳು ಲಂಚಕೋರರೆಂದು ವಜಾ ಆದ ಅಥವಾ ಸಸ್ಪೆಂಡ್ ಆದ ಅಧಿಕಾರಿಗಳನ್ನು ಲಂಡ ಭಂಡ ಪುಂಡರ ಸೈನ್ಯವನ್ನು ಕಟ್ಟಿಕೊಂಡು, ತಜ್ಞರನ್ನು ಬುದ್ಧಿ ಜೀವಿಗಳನ್ನು ದೂರವಿರಿಸುತ್ತಾರೆ. ಅಲ್ಪಜ್ಞರಾದ ಈ ಘೂಕ ಸನ್ಯಾಸಿಗಳಿಗೆ ಜ್ಞಾನ ಸೂರ್ಯರನ್ನು ಕಂಡರಾಗದು. ಒಂದೇ ತೆರನ ರೆಕ್ಕೆ ಪುಕ್ಕಗಳುಳ್ಳ ಹಕ್ಕಿಗಳು ಪರಸ್ಪರ ಗಂಟು ಹಾಕಿಕೊಳ್ಳುತ್ತವೆಂಬ ಗಾದೆಗೆ ಈ ಜನ ಲಕ್ಷ್ಯವಾಗಿದ್ದಾರೆ. ಕೆಲವು ಸ್ವಾಮಿಗಳು ಹರಿಜನೋದ್ಧಾರ ಮಾಡುತ್ತೇವೆಂದು ಅವರ ಕೇರಿ ಹೊಕ್ಕು ಬಂದು ಕೂಡಲೇ ಮೀಯುತ್ತಾರೆ. ಅಸಮಾನತೆಯನ್ನು ಪೋಷಿಸುವ, ಶೂದ್ರರನ್ನು ದೂಷಿಸುವ ಈ ದೇಶವನ್ನು ಪರರ ಪಾಲು ಮಾಡಿದ ಮನುವೆಂಬ ಧೂರ್ತನ ಕೂಸಾದ ಇವರು ಹಿಂದೂ ಮತದ ಹೆಸರಿನಲ್ಲಿ ಅನ್ಯಮತೀಯರ ಮೇಲೆ ಧಾಳಿ ನಡೆಸುತ್ತಾರೆ. ಸನ್ಯಾಸಿ ಧರ್ಮಕ್ಕೆ ವಿರೋಧವಾಗಿ ಅದ್ವೈತ ಪಂಥದ ಅಧಮ ಸನ್ಯಾಸಿಯೊಬ್ಬ, ಶೂದ್ರರಿಗೆ ವೇದಾಧ್ಯಯನದ ಹಕ್ಕಿಲ್ಲವೆಂದು ಕೂಗಾಡಿದರೂ, ನಾಚಿಕೆಯಿಲ್ಲದ ಆತ್ಮಗೌರವವಿಲ್ಲದ ಶೂದ್ರರು ಅವರ ಮಠಕ್ಕೆ ಹೋಗಿ, ಪಾಪ ಕಲ್ಮಷದಿಂದ ಹೊಲಸಾಗಿರುವ ಅವರ ಚರಣಗಳಿಗೆ ತಮ್ಮ ಹಣೆ ಮುಟ್ಟಿಸುತ್ತಾರೆ. ಅಂಥವರನ್ನು ಮಾರಿಮಸಣಿಯರಿಗೆ ಬಲಿಕೊಟ್ಟಾಗ ಮಾತ್ರ ದೇಶಕ್ಕೆ ಒಳಿತಾಗುತ್ತದೆ. ಇಷ್ಟಾದರೂ ನನ್ನಂಥ ಕೆಲವು ಮಂದಿ ವಿದ್ವಾಂಸರು ಒಮ್ಮೊಮ್ಮೆ ಸಮಾಜವನ್ನು ಮೇಲೆ ಹಾಕಿಕೊಳ್ಳಲಾರದೆ ನೀಚ ಸ್ವಾಮಿಗಳನ್ನು ಹೊಗಳಿದ್ದೂ ಹೊಗಳಿದ್ದೇ. ಇದಕ್ಕಾಗಿ ನಾನು ಹಲವು ಸಲ ಪಶ್ಚಾತ್ತಾಪ ಪಟ್ಟಿದ್ದೇನೆ.

ವ್ಯಾಘ್ರಾಜಿನವನ್ನು ಹೊದ್ದ ಗಾರ್ದಭಗಳಂತಿರುವ ಕೆಲವು ಕಾವಿ ಶಾಟಿಧಾರಿಗಳು ತಮ್ಮ ಬಳಿಗೆ ಬಂದ ಜನ ತಮ್ಮ ದಿವ್ಯ (?) ಚರಣಗಳಿಗೆ ಹಣೆ ತಗುಲಿಸಿ ನಮಸ್ಕಾರ

ಮಾಡಬೇಕೆಂದು ಅಪೇಕ್ಷಿಸುತ್ತಾರೆ. ಬಗ್ಗಿ ಕೈ ಜೋಡಿಸಿದರೆ ಸಾಲದು. ಕಾಲು ಮುಟ್ಟದಿದ್ದರೆ ಅವರ ಕೆಂಗಣ್ಣು ಕಿಡಿ ಕಾರುತ್ತದೆ. ಅವರ ಅಹಂಕಾರ ಕೋಪ ತಾಪಗಳು ಭುಗಿಲಾಗುತ್ತವೆ. ಅಹಂಕಾರ ಕೋಪ ತಾಪಗಳು ಸನ್ಯಾಸಿಧರ್ಮಕ್ಕೆ ತಕ್ಕುವಲ್ಲವೆಂಬುದನ್ನವರು ಅರಿತಿಲ್ಲ. ಪುಟ್ಟಣ್ಣಚೆಟ್ಟಿ ನಗರ ಭವನದಲ್ಲಿ ನಡೆದೊಂದು ಸಭೆಯಲ್ಲಿ ನಾನೂ ವೇದಿಕೆಯಲ್ಲಿದ್ದೆ. ಒಬ್ಬ ಸ್ವಾಮಿ ಆಗಮಿಸುತ್ತಿದ್ದಂತೆ ರಾಜಕೀಯ ನಾಯಕರು ಮತ್ತು ಮಂತ್ರಿಗಳು ನೂಕುನುಗ್ಗಲಾಗಿ ಅವರ ಪಾದಗಳ ಮೇಲೆ ದಿಂಡುರುಳಿದರು. ರಾಜಕೀಯ ಸ್ವಾಮಿಗಳಿಗೆ ರಾಜಕೀಯದ ಜನ ತಮ್ಮ ಸ್ವಾರ್ಥಕ್ಕಾಗಿ ಆತ್ಮಗೌರವವನ್ನು ಮರೆತು ಸಾಷ್ಟಾಂಗ ನಮಸ್ಕಾರ ಮಾಡುವುದು ಸರಿಯೆ. ನಾನೇಕೆ ಅವರ ಪಾದವನ್ನು ಮುಟ್ಟಬೇಕು? ನಾನು ಎದ್ದು ನಿಂತು ಕೈ ಜೋಡಿಸಿದೆ. ನನ್ನ ಕಡೆ ಅವರು ತಿರುಗಲೇ ಇಲ್ಲ. ಅಧ್ಯಾತ್ಮ ಸಾಧನೆಯಲ್ಲಿ ತೊಡಗಿರುವ ವ್ಯಕ್ತಿ ಯಾರೇ ಆಗಲಿ ಅವರ ಪಾದವನ್ನು ಮುಟ್ಟಲು ನಾನು ಸಿದ್ಧ. ಅಂಥ ಪಾದಗಳಿಗೆ ಮಾತ್ರ ನನ್ನ ಹಣೆ ಮೀಸಲು. ಅಂಥವರು ಸಾವಿರಕ್ಕೊಬ್ಬ ಇದ್ದರೆ ಹೆಚ್ಚು. ಅಧ್ಯಾತ್ಮ ಸಾಧಕರಾದ ಗುರು ಕುವೆಂಪು ಅವರ ಪಾದವನ್ನು ಮುಟ್ಟಿರುವ ಕೈಯನ್ನು ಹಣೆಯನ್ನು ಮೂರು ಹೊತ್ತೂ ಲೌಕಿಕ ವಿಷಯಗಳಲ್ಲಿ ತೊಡಗಿರುವ ಲಂಪಟ ಸನ್ಯಾಸಿಗಳ ಪಾದಗಳಿಗೆ ಸೋಂಕಿಸಲಾರೆ. ಗೌರವಾರ್ಹರಾದ ಸ್ವಾಮಿಗಳಾಗಲಿ ಸನ್ಯಾಸಿಗಳಾಗಲಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಅನಿಮಿಷಯ್ಯರಂಥ ಗುಪ್ತ ಸಾಧಕರು ಇದ್ದಾರೆ. ಆದರೆ ನೂರಾರು ಕಳ್ಳ ಸ್ವಾಮಿಗಳ ಮಧ್ಯೆ ಸೇರಿಕೊಂಡಿರುವ ಸಭ್ಯ ಸುಸಂಸ್ಕೃತ ಸಾಧಕವರೇಣ್ಯರನ್ನು ಹುಡುಕಿ ಹುಡುಕಿ ಅವರ ದರ್ಶನವನ್ನು ಪಡೆಯಬೇಕಾಗಿದೆ.

ನಾನೊಮ್ಮೆ ಕೂಡಲ ಸಂಗಮದಲ್ಲಿ ನಡೆದ ಬಸವ ಜಯಂತಿಗೆ ಹೋಗಿದ್ದೆ. ನನ್ನ ಭಾಷಣದ ಮಧ್ಯೆ ಲೆನಿನ್‌ನ ಒಂದೆರಡು ಮಾತು ಉದ್ಧರಿಸಿದೆ. ಸಂತಪಾಲರಂಥ ಮಹಾಪುರುಷರನ್ನು ನಾನೀಗ ಕಂಡದ್ದಾದರೆ ಕ್ರಿಶ್ಚಿಯನ್ ಮತ ಪ್ರಚಾರಕನಾದೇನು ಎಂದವನು ಹೇಳಿದ್ದುಂಟು. ಬಸವಣ್ಣನವರ ಮೇಲ್ಪಂಕ್ತಿಯನ್ನು ಚಾಚೂ ತಪ್ಪದೆ ಅನುಸರಿಸುವ ಜನ ನನ್ನ ಗಮನಕ್ಕೆ ಬಂದದ್ದಾದರೆ ನಾನು ಆ ಮತಕ್ಕೆ ಸೇರಿಕೊಳ್ಳುತ್ತೇನೆ ಎಂದು ಹೇಳಿದೆ. ಅಲ್ಲಿಗೆ ಬಂದಿದ್ದ, ಆ ಮೊದಲು ನನ್ನನ್ನು ಪ್ರೀತಿಸುತ್ತಿದ್ದ ಕೆಲವು ಮಂದಿ ಸನ್ಯಾಸಿಗಳು ನನ್ನ ಭಾಷಣ ಮುಗಿದ ಮೇಲೆ ನನ್ನ ಕಡೆ ತಿರುಗಿ ನೋಡಲಿಲ್ಲ.

ನನ್ನ ಬದುಕಿಗೆ ಬೆಳಕಾದವರು ಮೂವರು ಮಹಾ ಪುರುಷರು: ಬಸವೇಶ್ವರರು, ಸ್ವಾಮಿ ವಿವೇಕಾನಂದ ಅವರು, ಕುವೆಂಪು. ನನ್ನ ಧರ್ಮ ಪುರೋಹಿತಶಾಹಿಯ ಹಿಂದೂ ಧರ್ಮವಲ್ಲ, ಬಸವಧರ್ಮ, ಆದ್ದರಿಂದಲೇ ನಾನವರನ್ನು ಆರಾಧಿಸುತ್ತೇನೆ. ಅವರ ಬಗ್ಗೆ ಅವರ ಸಾಧನೆ ಸಿದ್ಧಿಗಳ ಬಗ್ಗೆ ಅನೇಕ ಗ್ರಂಥಗಳನ್ನು ರಚಿಸಿದ್ದೇನೆ. ಆ ಗ್ರಂಥಗಳನ್ನೋದಿದ ಕೆಲವು ಲಿಂಗಾಯತ ಮಿತ್ರರು ತಮ್ಮ ಮತಕ್ಕೆ ಸೇರಿಕೊಳ್ಳುವಂತೆ ನನ್ನನ್ನು ಒತ್ತಾಯಿಸಿದ್ದೂ ಉಂಟು. ಅವರಲ್ಲಿ ಮುಖ್ಯರಾದವರು ಧಾರವಾಡದ ಶ್ರೀ ಎಸ್. ಎಂ. ಅಂಗಡಿಯವರು. ನಾನು ಧಾರವಾಡಕ್ಕೆ ಹೋದಾಗಲೆಲ್ಲ ಅವರು ನನ್ನ ಬಳಿಗೆ ಬಂದು ಬಸವಣ್ಣನವರ ವಚನಗಳನ್ನು ಕುರಿತು ಚರ್ಚಿಸಿದ ನಂತರ ತಮ್ಮ ಅಭಿಲಾಷೆಯನ್ನು ಪ್ರೀತಿಯಿಂದ

ವ್ಯಕ್ತಪಡಿಸುತ್ತಿದ್ದರು. ನನಗೆ ದೀಕ್ಷೆ ಕೊಡಲು ಕೆಲವು ಸ್ವಾಮಿಗಳು ಸಿದ್ಧರಾಗಿದ್ದಾರೆಂದು ಹೇಳುತ್ತಿದ್ದರು. ಅವರು 5- 11- 1982 ರಂದು ಬರೆದ ಪತ್ರ ದೀರ್ಘವಾದ್ದರಿಂದ ಕೆಲವುವಾಕ್ಯಗಳನ್ನು ಮಾತ್ರ ನಾನಿಲ್ಲಿ ಉದ್ಧರಿಸುತ್ತೇನೆ :

'ನಿಮ್ಮ ಅಪೇಕ್ಷೆ ಇದ್ದರೆ ಬೀದರ ಜಿಲ್ಲೆಯ ಭಾಲ್ಕಿ ಪಟ್ಟದ್ದೇವರಿಂದ ಲಿಂಗದೀಕ್ಷೆ ಮಾಡಿಸುವೆ. ಅವರೇ ದೀಕ್ಷೆ ಕೊಟ್ಟ ಸಿದ್ದರಾಮ ಶರಣರು ಅತ್ಯಂತ ಶ್ರೇಷ್ಠ ಸಮಾಜ ಸೇವಕರು, ಶರಣಸಿದ್ಧಾಂತದ ತಜ್ಞರು... ತಮ್ಮಂಥವರಿಗೆ ಲಿಂಗದೀಕ್ಷೆಯ ಏರ್ಪಾಡು ಮಾಡಲು ಗೆಳೆಯರೆಲ್ಲರು ಏಕಮನದಿಂದ ಸಿದ್ಧರಾಗಿದ್ದೇವೆ. ನಿಮ್ಮ ಬಸವ ಸಂಹಿತೆಯ ಮುನ್ನುಡಿ ಓದಿದ ನಂತರ ಓದಿದ ಸರ್ವರೂ ನೀವೇ ಶ್ರೇಷ್ಠ ಬಸವಭಕ್ತರು ಎಂದು ತಮ್ಮನ್ನು ಪೂಜ್ಯ ಸ್ಥಾನದಲ್ಲಿಟ್ಟು ಕೊಂಡಾಡುತ್ತಾರೆ. ಆದ್ದರಿಂದ ಈ ವಿಷಯ ನಿಮಗೆ ಬಿಟ್ಟಿದೆ... ತಾವು ಬರೆದ ಮುನ್ನುಡಿಯನ್ನು ಯಾವ ಲಿಂಗವಂತ ಬರೆಯಬಲ್ಲ? ನಾನು ಆಹ್ವಾನವೀಯಲು ಸಿದ್ಧನಿದ್ದೇನೆ. ಬಸವಣ್ಣನವರ ನಿಜವಾದ ಮೂರ್ತಿ ಪ್ರಭೆಯನ್ನು ಕಂಡವರು ನೀವು. ಅದನ್ನುಇಂಗ್ಲೀಷಿನಲ್ಲಿಯೂ ಅನುವಾದಿಸಬೇಕೆಂದಿರುವೆ ' ಭಾಲ್ಕಿಯ ಪಟ್ಟ ದ್ದೇವರಲ್ಲಿ ನನಗೆ ಅಪಾರ ಗೌರವವಿದೆಯಾದರೂ ದೀಕ್ಷೆ ಅನಾವಶ್ಯಕವೆಂದು 24 - 11- 1982 ರಂದು ನಾನವರಿಗೆ ಉತ್ತರ ಬರೆದೆ :

'ನೀವು ನಿಮ್ಮ ಪತ್ರದಲ್ಲಿ ಉಲ್ಲೇಖಿಸಿರುವಂತೆ ಹಿಂದೆ ಜಾತೀಯತೆ, ಬಸವ ಧರ್ಮ, ಕನ್ನಡ ನುಡಿ, ಕನ್ನಡ ನಾಡುಗಳನ್ನು ಕುರಿತು ನನ್ನೊಡನೆ ಚರ್ಚಿಸಿದ್ದುಂಟು. ಆಹಾರಪಾನೀಯಗಳು ವೈಯಕ್ತಿಕ ವಿಷಯಗಳಾದ್ದರಿಂದ, ಈ ಯುಗಧರ್ಮಕ್ಕೆ ತಕ್ಕಂತೆ ಅವುಗಳಿಗೆ ಒತ್ತು ಕೊಡದೆ ಬಸವ ಧರ್ಮ ಪ್ರಸಾರ ನಡೆದರೆ ಒಳಿತೆಂದು ನಾನು ಹೇಳಿದ್ದುಂಟು.

'ನನ್ನ ದೃಷ್ಟಿಯಲ್ಲಿ ಬಸವಣ್ಣನವರು ವಿಶ್ವ ವಿಭೂತಿಗಳಲ್ಲೊಬ್ಬರು, ಅಗ್ರಗಣ್ಯರು. ಆ ಕಾಲಕ್ಕಾಗಲೇ ಅವರು ಕೈಕೊಂಡ ಸಮಾಜ ಸುಧಾರಣೆ ಹಾಗೂ ಸಮಗ್ರ ಕ್ರಾಂತಿಗಳು, ಅಂತೆಯೇ ಅವರ ಉಪದೇಶ ಇಂದಿನವರೆಗೂ ಅಸಾಧಾರಣವಾಗಿಯೇ ಕಾಣುತ್ತವೆ. ಕನ್ನಡ ನಾಡು ನುಡಿಗಳೆಂದರೆ ಬಸವಣ್ಣ. ಅವರ ಮಾತು ಕೇಳಿದ್ದರೆ ಅವರು ಹೇಳಿದಂತೆ ನಡೆದಿದ್ದರೆ ಕನ್ನಡ ನಾಡಿಗೆ, ಭಾರತದಲ್ಲಿಯೇಕೆ, ಇಡೀ ವಿಶ್ವದಲ್ಲಿಯೇ ಅಗ್ರಸ್ಥಾನ ದೊರಕುತ್ತಿತ್ತು. ಅವರು ಹೇಳಿದಂತೆ ವೀರಶೈವರಾದರೂ ನಡೆಯದಿದ್ದುದು ದುರ್ದೈವ. ಬಸವಣ್ಣ ಕನ್ನಡ ನಾಡಿನಲ್ಲಿ ಹುಟ್ಟದೆ ಬೇರೆ ನಾಡುಗಳಲ್ಲಿ ಹುಟ್ಟಿದ್ದರೆ ಅವರಿಗೆ ಪೂಜೆ ಸರ್ವತ್ರ ಸಲ್ಲುತ್ತಿತ್ತು.

'ಲಿಂಗದ ಬಗ್ಗೆ ನನಗೆ ತಿರಸ್ಕಾರವಿಲ್ಲ. ಲಿಂಗಧಾರಣೆಯ ಮೂಲಕವೇ ಲಿಂಗಾಂಗ ಸಾಮರಸ್ಯವಾಗಬೇಕಾಗಿಲ್ಲ. ಲಿಂಗದೇವರನ್ನು ಕರಡಗೆಯಲ್ಲಿ ಮಾತ್ರ ಕಾಣಬೇಕಾಗಿಲ್ಲ. ಬಟ್ಟಬಯಲಲ್ಲಿ, ಸಚರಾಚರ ವಸ್ತುಗಳಲ್ಲಿ, ಮಾನವನ ಹೃದಯದಲ್ಲಿ ಅವನನ್ನು ಗುರುತಿಸಬಲ್ಲವರಿಗೆ ಕುರುಹು ಅನಾವಶ್ಯಕ. ನಾನು ಯಾರಿಂದಲೂ ಹೇಳಿಸಿಕೊಳ್ಳದೆ ಬಸವ ಧರ್ಮಾನುಯಾಯಿ. ಬಸವಣ್ಣನವರು ಎಂದೋ ನನಗೆ ದೀಕ್ಷೆ ನೀಡಿದ್ದಾಗಿದೆ. ಅನುದಿನವೂ

ನಾನವರನ್ನು ಕಾಣುತ್ತಿದ್ದೇನೆ. ನೆನೆದಾಗ ಅವರು ನನ್ನ ಕಣ್ಮುಂದೆ ನಿಲ್ಲುತ್ತಾರೆ. ಅವರು ಸಹ ನನ್ನ ಬಾಳ ಬೆಳಕಾಗಿದ್ದಾರೆ. ಆದರೂ ಅವರ ನಿರೀಕ್ಷೆಗೆತಕ್ಕಂತೆ ದೋಷಗಳನ್ನು ತ್ಯಜಿಸದ, ಮೇಲೇರಲಾರದ ಪಶುವಾಗಿದ್ದೇನೆ. ಅನುಕ್ಷಣವೂ ಅನಂತ ಕೋಟಿ ತಪ್ಪುಗಳ ನ್ನೆಸಗುತ್ತಿದ್ದೇನೆ. ತಕ್ಷಣ ಅವರ ನೆನಪಾಗುತ್ತದೆ. ಮನಸ್ಸಿಗೆ ಶಾಂತಿ ದೊರೆಯುತ್ತದೆ.

'ನನಗೆ ಇಬ್ಬರು ಗುರುಗಳು: ಬಸವೇಶ್ವರರು, ಕುವೆಂಪು. ಈ ಜನ್ಮಕ್ಕೆ ಇವರಿಬ್ಬರೇ ಸಾಕು. ಇವರ ಆಶೀರ್ವಾದದಿಂದ ಜಾತಿಗಳನ್ನೊಂದು ಮಾಡಲು, ಜಾತೀಯತೆ ಯನ್ನುಳಿಸಲು ನಾನು ಸದಾ ಸಿದ್ಧ. ಬಸವಣ್ಣನವರಿಗೆ ನಾವು ಸಲ್ಲಿಸಬೇಕಾದ ಕೈಂಕರ್ಯವೆಂದು ಸಮಾಜ ಸುಧಾರಣೆಗೆ ತಯಾರಾಗಿದ್ದೇನೆ. ಯಾವುದಾದರೂ ಮುಷ್ಟಿಗೆ ಸಿಗಬಹುದಾದ ಯೋಜನೆಗಳನ್ನು ಸಿದ್ಧಪಡಿಸಿದ್ದಾದರೆ ಕಾರ್ಯಗತಗೊಳಿಸಲು ನಿಮ್ಮೊಡನೆ ಸೇರಿಕೊಳ್ಳುತ್ತೇನೆ.

'ಬಸವನಾಮವೆ ನನಗೆ ಲಿಂಗ, ಬಸವ ವಚನಗಳೇ ಲಿಂಗಕ್ಕಿಂತ ಮಿಗಿಲು - ಜ್ಯೋತಿರ್ಲಿಂಗಗಳು. ಅವನ್ನು ನಂಬದವರಿಗೆ ಮಾತ್ರ ಬೇರೆ ಲಿಂಗಬೇಕು. ಪ್ರತಿಯೊಬ್ಬನಿಗೂ ಒಂದು ಹಂತ ಮುಟ್ಟುವ ತನಕ ಯಾವುದಾದರೂ ಒಂದು ಕುರುಹು ಬೇಕಾಗುತ್ತದೆ. ಆದ್ದರಿಂದ ಇಷ್ಟಲಿಂಗದ ಅವಶ್ಯಕತೆ ಇದೆ. ನಾನಾದರೂ ವಚನಗಳನ್ನೇ ಲಿಂಗಗಳೆಂದು ನಂಬಿ ನಿತ್ಯ ಪೂಜೆ ಸಲ್ಲಿಸುತ್ತೇನೆ. ಈ ಬಗ್ಗೆ ಹೆಚ್ಚು ವಿವರಣೆ ಅನಾವಶ್ಯಕ.

'ಇವನಾರವ, ಇವನಾರವ, ಇವನಾರವನೆನ್ನದೆ, ಇವ ನಮ್ಮವ ಇವನಮ್ಮವ' ಎಂದು ನೀವು ಹೇಳುವುದಾದರೆ ನಾನೇ ಧನ್ಯನೆಂದು ಕೊಳ್ಳುತ್ತೇನೆ.

ನನ್ನ ಹೆಬ್ಬುಬ್ಬೆಗಾಗಿ ಈ ಪತ್ರದ ಉದ್ಧರಣೆಗಳನ್ನು ನಕಲು ಮಾಡಿಲ್ಲ. ಬಸವಣ್ಣ ನನ್ನ ಜೀವನದ ಮೇಲೆ ಎಂಥ ಪರಿಣಾಮ ಬೀರಿದ್ದಾರೆನ್ನುವುದಕ್ಕೆ ಮಾತ್ರವೇ ಈ ಮಾತುಗಳನ್ನು ಬರೆಯಬೇಕಾಯಿತು. ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಡಾ. ಶಿವಕುಮಾರಸ್ವಾಮಿಗಳೂ, ಶ್ರೀ ಸುತ್ತೂರು ಮಠದ ಕೈಲಾಸವಾಸಿ ಪೂಜ್ಯ ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳೂ, ಶ್ರೀ ಸಿರಿಗೆರೆ ಮಠದ ಕೈಲಾಸವಾಸಿ ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳೂ ಯಾವಾಗಲೂ ನನ್ನ ಮೇಲೆ ವಾತ್ಸಲ್ಯವರ್ಷವನ್ನು ಕರೆದಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬಹುದಾಗಿದೆ.

ಶ್ರೀ ಆದಿಚುಂಚನಗಿರಿ ಮಠದ ಪೂಜ್ಯ ಶ್ರೀ ಬಾಲಗಂಗಾಧರ ಸ್ವಾಮಿಗಳು ಒಕ್ಕಲಿಗರ ಇತಿಹಾಸವನ್ನು ಬರೆಸುವ ಉದ್ದೇಶದಿಂದ ಬೆಂಗಳೂರಲ್ಲೊಂದು ಸಭೆ ಕರೆದಿದ್ದರು. ನಾನು ಹೋಗಲಿಲ್ಲ. ಚುಂಚನಗಿರಿ ಮಠದಲ್ಲಿ ಮತ್ತೊಂದು ಸಲ ಸಭೆ ಕರೆದು, ವಾಹನ ಸೌಕರ್ಯ ಏರ್ಪಡಿಸಿದ್ದರಿಂದ ನಾನೂ ಹೋದೆ. ಶ್ರೀ ವೈ. ಕೆ. ರಾಮಯ್ಯ, ಶ್ರೀ ಸಿ. ಜಿ. ಪುರುಷೋತ್ತಮ ಮೊದಲಾದವರು ಇತಿಹಾಸ ರಚನೆಯ ಬಗ್ಗೆ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದರು. ವೇದಗಳ ಕಾಲದಿಂದ ಈವೊತ್ತಿನವರೆಗೆ ಇಂಡಿಯಾ ದೇಶದ ಎಲ್ಲ ರಾಜ್ಯಗಳಲ್ಲಿ ಕೃಷಿ ಸಂಸ್ಕೃತಿ ವಿಕಾಸಗೊಂಡಿರುವ ಬಗೆಯನ್ನೂ ಎಲ್ಲ ಕಡೆಯ ಕೃಷಿಕರ (ರೆಡ್ಡಿ ವೆಲ್ಲಾಳ ಕುಣಬಿ

ನಯರ್, ಪಟೇಲ, ಜಾಟ್ ಮೊದಲಾದವರು, ಬಾಂಧವ್ಯವನ್ನು ಕುರಿತ ಮಾಹಿತಿಗಳನ್ನು ಒಳಗೊಂಡಂತೆ ಏಳೆಂಟು ಸಂಪುಟಗಳಲ್ಲಿ ಇತಿಹಾಸವನ್ನು ರಚಿಸಬಹುದೆಂದು ನಾನು ನೀಡಿದ ಸಲಹೆಯನ್ನು ಸರ್ವರೂ ಮುಕ್ತಕಂಠದಿಂದ ಸ್ವಾಗತಿಸಿದರು. ನಾನೇ ಪ್ರಧಾನಸಂಪಾದಕನಾಗಬೇಕೆಂದು ವೈ. ಕೆ. ರಾಮಯ್ಯನವರೂ, ಪಿ. ಎನ್. ಜವರಪ್ಪಗೌಡರೂ ನನ್ನನ್ನು ಒತ್ತಾಯಿಸಿದರು. ಸ್ವಾಮಿಗಳು ಸಹ ನನ್ನ ಮಾರ್ಗದರ್ಶನದಲ್ಲಿ ಆ ಯೋಜನೆ ಕಾರ್ಯಗತಗೊಳ್ಳತಕ್ಕದ್ದೆಂದೂ, ಮೈಸೂರಿನಲ್ಲಿ ಸಂಪಾದಕ ಮಂಡಲಿಯ ಕಛೇರಿ ಇರಬಹುದೆಂದೂ, ನನ್ನ ಸಹಾಯಕ್ಕೆ ಶ್ರೀ. ಹ. ಕ. ರಾಜೇಗೌಡರನ್ನು ಪಡೆದುಕೊಳ್ಳಬಹುದೆಂದೂ ಅಂದೇ ತೀರ್ಮಾನವಾಯಿತು. ಸಂಪಾದಕ ಮಂಡಲಿಯ ಸದಸ್ಯರನ್ನು ಹೆಸರಿಸಲಾಯಿತು. ಆ ಹೆಸರುಗಳ ಪಟ್ಟಿಯಲ್ಲಿ ಶ್ರೀರಾಮಲಿಂಗಯ್ಯನವರ ಹೆಸರು ಸೇರಿರಲಿಲ್ಲ. ಆದರೂ ಅವರು ಎರಡು ಮೂರು ಸಭೆಗಳಲ್ಲಿ ಹಾಜರಾಗಿದ್ದುದರಿಂದ ಅವರನ್ನು ಮಂಡಲಿಗೆ ಸೇರಿಸಿಕೊಳ್ಳಲಾಯಿತು. ಆದರೆ ಪ್ರತಿ ಸಭೆಯಲ್ಲಿಯೂ ಅವರು ಮತ್ತು ಶಿವಣ್ಣ ಪ್ರಗತಿಗೆ ಅಡ್ಡಿ ಮಾಡುತ್ತಿದ್ದರು. ಆದರಿಂದಾಗಿ ಬೇಸರಗೊಂಡು, ನನಗೇಕೆ ಈ ರಾಮಾಯಣ ಎಂದು ನಿರ್ಧರಿಸಿ, ಸ್ವಾಮಿಗಳಿಗೊಂದು ಪತ್ರ ಬರೆದು, ಆ ಯೋಜನೆಯಿಂದ ನನ್ನನ್ನು ಮುಕ್ತಗೊಳಿಸಬೇಕೆಂದು ಕೇಳಿಕೊಂಡು ನಾನು ಅಮೆರಿಕೆಗೆ ಹೊರಟು ಹೋದೆ. ಆ ಪತ್ರದ ನಕಲನ್ನಿಲ್ಲಿ ಮುದ್ರಿಸಲಾಗಿದೆ.

ದೇಜಗೌ

ವಿಶ್ವಚೇತನ - ಕಲಾನಿಲಯ,
ಜಯಲಕ್ಷ್ಮೀ ಪುರಂ,
ಮೈಸೂರು-12
10 - 3 - 1994

ಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಲ್ಲಿ ಗೌರವ ಪೂರ್ವಕ ಪ್ರಣಾಮಗಳು.

ತಾವು ಶ್ರೀ ಶಿವಣ್ಣನವರ ಮೂಲಕ ಕಳಿಸಿದ 7 - 3- 94 ನೆಯ ದಿನಾಂಕದ ಪತ್ರ ಕೈ ಸೇರಿದೆ. ಆ ಪತ್ರದಲ್ಲಿ ಕಾಣಿಸಿರುವ ವಿಷಯವನ್ನು ಫೋನಿನ ಮೂಲಕ ಸಹ ಒಂದು ವಾರದ ಹಿಂದೆ ತಾವು ತಿಳಿಸಿದ್ದಿರಿ. ಶ್ರೀಮಾನ್ ರಾಜೇಗೌಡರು ಅಚ್ಚು ಮಾಡಿಸಿದ್ದ ಪತ್ರ ಶಿರೋನಾಮೆ ನನ್ನ ಗಮನಕ್ಕೆ ಬಂದಿರಲಿಲ್ಲ. ಶ್ರೀ ಮಠದ ಹೆಸರಿನಲ್ಲಿ, ತಮ್ಮ ನೇತೃತ್ವದಲ್ಲಿ ಎಲ್ಲ ಕೆಲಸಗಳು ನಡೆಯಬೇಕೆಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಇಂಥ ವಿಷಯಗಳಲ್ಲಿ ದಾರಿ ತಪ್ಪಿದಾಗ ತಿದ್ದಿಕೊಳ್ಳಲೂ ನಾನು ಸಿದ್ಧ.

ಶ್ರೀ ಹ. ಕ. ರಾಜೇಗೌಡರಲ್ಲಿ ಸ್ವಪ್ರತಿಷ್ಠೆ ಸ್ವಲ್ಪ ಜಾಸ್ತಿಯಿದೆ. ಆದರೆ ಅವರ ಸಂಶೋಧನ ಸಂಪಾದನ ಸಾಮರ್ಥ್ಯ ಶ್ಲಾಘನೀಯವಾದದ್ದು. ಒಕ್ಕಲಿಗ ಇತಿಹಾಸ

ಅಧ್ಯಯನದಂಥ ಮಹಾಯೋಜನೆಯನ್ನು ಕೈಗೆತ್ತಿಕೊಂಡಾಗ ಅಂಥವರ ನೆರವು ಅನಿವಾರ್ಯ.ಅಂಥ ಸಂದರ್ಭದಲ್ಲಿ ಅವರ ದೌರ್ಬಲ್ಯವನ್ನು ಮರೆತು ಸದ್ಗುಣಗಳನ್ನು ಪುರಸ್ಕರಿಸಬೇಕಾಗುತ್ತದೆ. ಇದು ಶ್ರೀ ಶಿವಣ್ಣನವರಿಗಾಗಲಿ, ಶ್ರೀ ರಾಮ ಲಿಂಗಯ್ಯನವರಿಗಾಗಲಿ ಇಷ್ಟವಿಲ್ಲ.

ಶ್ರೀ ಮಠದ ಮೇಲಣ ಅಭಿಮಾನದಿಂದ, ತಮ್ಮ ಮೇಲಣ ಗೌರವದಿಂದ, ಶ್ರೀ ವೈ. ಕೆ. ರಾಮಯ್ಯ ಮತ್ತು ಶ್ರೀ ಪಿ. ಎನ್. ಜವರಪ್ಪಗೌಡರ ಪ್ರೀತಿಯ ಒತ್ತಾಯದಿಂದ ಪ್ರಧಾನ ಸಂಪಾದಕನಾಗಿರಲು ಸಂಪಾದಕರ ಮಂಡಲಿಯ ಅಧ್ಯಕ್ಷನಾಗಿರಲು ಶ್ರೀ ಮಠದಲ್ಲಿ ನಡೆದ ಸಭೆಯಲ್ಲಿ ಒಪ್ಪಿಕೊಂಡೆ. ನನ್ನ ಸಹಾಯಕ್ಕೆ ರಾಜೇಗೌಡರಿರಬೇಕೆಂಬುದನ್ನೂ ಅಂದು ತಮ್ಮ ಗಮನಕ್ಕೆ ತಂದೆ.

ಈ ಯೋಜನೆಗೆ ಸಂಬಂಧಿಸಿದ ಕಾರ್ಯ ಸಂಘಟನಾ ಕಚೇರಿ ಮೈಸೂರಲ್ಲಿರಬೇಕೆಂದೂ, ಅದರ ನಿರ್ವಹಣೆ ನನ್ನ ಉಸ್ತುವಾರಿಯಲ್ಲಿ ರಾಜೇಗೌಡರ ಮೂಲಕ ನಡೆಯಬೇಕೆಂದೂ ಅಂದೇ ತೀರ್ಮಾನವಾಯಿತು. ತಮ್ಮ ಆದೇಶದ ಮೇರೆಗೆ ಸ್ಥಳೀಯ ಸ್ವಾಮಿಜೀಯವರು ಎಲ್ಲ ಅನುಕೂಲಗಳನ್ನು ಸಹ ಕಲ್ಪಿಸಿದ್ದಾರೆ. ಈಗಾಗಲೇ ಮೂರು ಸಭೆಗಳು ನಡೆದಿವೆ. ಪ್ರತಿ ಸಭೆಯ ನಡೆವಳಿಯನ್ನು ತಮ್ಮ ಗಮನಕ್ಕೆ ತರಬೇಕೆಂದು ರಾಜೇಗೌಡರಿಗೆ ಸ್ಪಷ್ಟ ಪಡಿಸಿದ್ದೇನೆ.

ಮೊದಲನೆಯ ಸಭೆಯಲ್ಲಿ ಯೋಜನೆಯ ಸ್ವರೂಪ ವಿಸ್ತಾರ ವ್ಯಾಪಕತೆಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾಯಿತು. ನಿಯೋಜಿತ ಗ್ರಂಥ ಆರು ಸಂಪುಟಗಳನ್ನೊಳಗೊಳ್ಳಬೇಕೆಂದೂ, ಒಂದೊಂದು ಸಂಪುಟಕ್ಕೆ ಒಬ್ಬೊಬ್ಬರು ಸಂಪಾದಕರಿರತಕ್ಕದ್ದೆಂದೂ ಅಂದು ತೀರ್ಮಾನವಾಯಿತು.

ಎರಡನೆ ಸಭೆಗೆ ಎಲ್ಲ ಸಂಪಾದಕರು ಬರಲಾಗಿ ಒಂದೊಂದು ಸಂಪುಟದಲ್ಲಿ ಸೇರಬೇಕಾದ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸಲಾಯಿತು. ಮತ್ತು ಆ ಬಗ್ಗೆ ತೀರ್ಮಾನ ತೆಗೆದುಕೊಂಡದ್ದೂ ಆಯಿತು. ಈ ಯೋಜನೆಯಲ್ಲಿ ತಮ್ಮ ಸ್ಥಾನವೇನೆಂದು ಶ್ರೀರಾಮಲಿಂಗಯ್ಯನವರು ಮಧ್ಯೆ ಎತ್ತಲಾಗಿ ಚರ್ಚೆ ಬಿಸಿ ಬಿಸಿಯಾಗಿಯೇ ನಡೆಯಿತು. ಕೊನೆಗೂ ಅವರೂ ಒಬ್ಬ ಸಂಪಾದಕರಾಗಿ ಒಂದು ಸಂಪುಟವನ್ನು ಸಂಪಾದಿಸಬಹುದೆಂದು ತೀರ್ಮಾನಿಸಲಾಯಿತು. ನಾನು ವಿದೇಶಕ್ಕೆ ಹೊರಡುವ ಮುನ್ನ ಒಂದು ಸಭೆಯನ್ನು ಕರೆದು ನಾನು ವಾಪಸ್ಸು ಬರುವುದರೊಳಗೆ ಎಷ್ಟೆಷ್ಟು ಕೆಲಸ ಸಾಗಬೇಕಾಗಿದೆಯೆಂಬುದರ ಬಗ್ಗೆ ಸಂಪಾದಕ ಮಿತ್ರರೊಡನೆ ಸಮಾಲೋಚನೆ ನಡೆಸಬೇಕೆಂದು ನಾನು ನಿರ್ಧರಿಸಿದೆ. ನನ್ನ ನಿರ್ಧಾರಕ್ಕೆ ತಮ್ಮ ಒಪ್ಪಿಗೆಯೂ ಇತ್ತು.

8-3-1994 ರಂದು ಮಧ್ಯಾಹ್ನ 3 ಗಂಟೆಗೆ ಸಭೆ ಸೇರಿ, ಐವರು ಸಂಪಾದಕರು ತಂದಿದ್ದ ಟಿಪ್ಪಣಿಗಳನ್ನು ಓದಿ ಚರ್ಚಿಸಲಾಯಿತು. ನನಗೆ ಬೇರೆ ಕೆಲಸವಿದ್ದದ್ದರಿಂದ ಸಭೆಯನ್ನು ಬೇಗ ಮುಗಿಸಬೇಕೆಂದಿದ್ದೆ. ಅಷ್ಟರಲ್ಲಿ ನಲವತ್ತು ನಿಮಿಷ ತಡವಾಗಿ - ಯಾವಾಗಲೂ

ಹಾಗೆಯೇ - ಶ್ರೀ ಶಿವಣ್ಣ ನವರೂ, ಶ್ರೀ ರಾಮಲಿಂಗಯ್ಯನವರೂ ಪ್ರತ್ಯಕ್ಷರಾದರು. ಅವರೆಂದೂ ಯೋಜನೆಯ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರಲ್ಲ. ಅವರ ಎರಡಂಶಗಳ ಕಾರ್ಯಕ್ರಮವೆಂದರೆ, ಹ. ಕ. ರಾಜೇಗೌಡರು ಕಾರ್ಯನಿರ್ವಾಹಕ ಸಂಪಾದಕರಾಗಿರಕೂಡದು, ಯೋಜನೆಗೆ ಸಂಬಂಧಿಸಿದ ಪತ್ರ ವ್ಯವಹಾರಗಳು ಬೆಂಗಳೂರಿನಿಂದ ಶ್ರೀ ಶಿವಣ್ಣನವರ ಮೂಲಕ ನಡೆಯಬೇಕು. ಈ ಸೂಚನೆಯನ್ನು ಉಳಿದ ಸಂಪಾದಕರು ಸಲ ಸಲವೂ ತಿರಸ್ಕರಿಸಿದ್ದುಂಟು. ತಮ್ಮ ಅಭಿಪ್ರಾಯವನ್ನು ಇತರ ಸಂಪಾದಕರು ಒಪ್ಪಿಕೊಳ್ಳಬೇಕೆಂಬುದು ಅವರ ಇಚ್ಛೆ. ನಾನು ಸಂಪಾದಕರ ಮಂಡಲಿಯ ಅಧ್ಯಕ್ಷನಲ್ಲವೆಂದೂ, ಸ್ವಾಮಿಜಿಯವರೇ ಅಧ್ಯಕ್ಷರೆಂದೂ, ನಾನು ಕೇವಲ ಪ್ರಧಾನ ಸಂಪಾದಕನೆಂದೂ ಶ್ರೀ ರಾಮಲಿಂಗಯ್ಯ ಹೊಸದಾಗಿ ಕ್ಯಾತೆ ತೆಗೆದರು. ಸ್ವಾಮಿಜೀಯವರ ಆದೇಶದಂತೆ ತಾವು ಸಲಹೆ ನೀಡುತ್ತಿರುವುದಾಗಿಯೂ ಅವರು ತಿಳಿಸಿದರು.ನನ್ನ ಸ್ಥಾನಮಾನಗಳೇ ಪ್ರಶ್ನಾರ್ಹವಾದಾಗ ನಾನಲ್ಲಿರಬಾರದೆಂದು ಸಭೆಯಿಂದ ನಿರ್ಗಮಿಸಿದೆ. ಒಟ್ಟಿನಲ್ಲಿ ಈ ಇಬ್ಬರು ಮಿತ್ರರೂ ಸಭೆಯಲ್ಲಿ ಸಹಕರಿಸುತ್ತಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಲು ವಿಷಾದವಾಗುತ್ತದೆ. ನನ್ನ ಐವತ್ತು ವರ್ಷಗಳ ಅನುಭವದಲ್ಲಿ ಇಂಥ ಪ್ರಸಂಗಗಳನ್ನು ನಾನು ಎದುರಿಸಿರಲಿಲ್ಲವೆಂದೂ ಅಕೆಡೆಮಿಕ್ ಸ್ವರೂಪದ ಈ ಮಹತ್ಕಾರ್ಯ ಇಂಥ ಅಸಹಕಾರದಿಂದ ಕುಂಠಿತವಾಗುತ್ತದೆಂದೂ ನಾನು ವಿಧಿಯಿಲ್ಲದೆ, ಸಂಕಟದಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಆ ಮಿತ್ರರ ಬಗ್ಗೆ ಯಾವ ದ್ವೇಷವಾಗಲಿ ಪೂರ್ವಗ್ರಹವಾಗಲಿ ಇಲ್ಲವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಕೆಲವು ದಿನಗಳ ಹಿಂದೆ ನನ್ನೊಡನೆ ಸಮಾಲೋಚಿಸದೆ ಶ್ರೀ ರಾಮಲಿಂಗಯ್ಯನವರು ಸಂಪಾದಕರಿಗೆ ಹಣ ಹಂಚಿದರು. ಪ್ರಧಾನ ಸಂಪಾದಕನಾಗಿದ್ದ ನನ್ನನ್ನು ಕೇಳದೆ ಹಾಗೆ ಮಾಡಬಹುದೆ? ನನಗೂ ಹಣದ ಅಮಿಷ ತೋರಿಸಿದರು. ನಾನು ಒಪ್ಪಲಿಲ್ಲ. ಆಗ ಒಪ್ಪದಿದ್ದದ್ದೇ ಸರಿಯಾಯಿತೆಂದು ನನ್ನ ಅಂತರಾತ್ಮ ನುಡಿಯುತ್ತಿದೆ [1].

ನಾನು ಪಲಾಯನವಾದಿಯಲ್ಲ. ಪ್ರಾರಂಭದಲ್ಲಿಯೇ ಯಾವ ಸಮಿತಿಗೂ ಈ ತನಕ ನಾನು ರಾಜೀನಾಮೆ ನೀಡಿದ್ದಿಲ್ಲ. ಅಂಥ ಸಂದರ್ಭವೂ ಒದಗಲಿಲ್ಲ. ನಾನು ನಿರುದ್ಯೋಗಿಯೂ ಅಲ್ಲ.ನನ್ನ ಕೈಯಲ್ಲಿ ನಾಲ್ಕು ಜನ್ಮಗಳಿಗಾಗುವಷ್ಟು ಕೆಲಸವಿದೆ. ಈ ಸಮಿತಿಯಿಂದ ನನ್ನನ್ನು ಮುಕ್ತಗೊಳಿಸುವ ಮೂಲಕ ನನಗೆ ಉಪಕಾರ ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ವಿನಯದಿಂದ ಬಿನ್ನವಿಸಿಕೊಳ್ಳುತ್ತೇನೆ. ನಾನು ಕೆಲಸದಲ್ಲಿ ವಿಫಲನಾಗಿದ್ದೇನೆಂದೂ ಒಪ್ಪಿಕೊಳ್ಳುತ್ತೇನೆ. ನಾನು ವಿದೇಶಕ್ಕೆ ಹೊರಟಿರುವ ಈ

1. ಇಂಥ ಸಂದರ್ಭಗಳಲ್ಲಿ ಭಗವಂತನೇ ಮಾರ್ಗದರ್ಶನ ಮಾಡುತ್ತಾನೆಂಬ ಅನುಭವ ಹಲವು ಸಲ ನನಗಾಗಿದೆ. ಸಂಪಾದಕರು ಈಗಾಗಲೇ ಮಾಡಿರುವ ಕೆಲಸಕ್ಕೆ ಅವರು ಪಡೆದಿರುವ ಹಣ ಸರಿಯಾಯಿತು. ಅದರ ಮೇಲೆ ತಮಗೆ ವಹಿಸಿದ ಕರ್ತವ್ಯಗಳನ್ನು ನಿರ್ವಂಚನೆಯಿಂದ ನೆರವೇರಿಸಲು ಅವರು ಸಿದ್ಧರಾಗಿದ್ದಾರೆಂಬುದನ್ನು ಅವರು ಮಾತ್ರ ಆ ಕೆಲಸಕ್ಕೆ ಸರ್ವಾರ್ಹರಾಗಿದ್ದ ವಿದ್ವಾಂಸರೆಂಬುದನ್ನು ಗ್ರಹಿಸಬೇಕಾಗಿದೆ.

ಸಂದರ್ಭದಲ್ಲಿ ತಮ್ಮ ಆಶೀರ್ವಾದವಿರಬೇಕೆಂದೂ, ತಮ್ಮ ವಿಶ್ವಾಸ ಏಕ ರೀತಿಯಾಗಿರಬೇಕೆಂದೂ, ವಿನಂತಿಸಿಕೊಳ್ಳುತ್ತೇನೆ.

ಪತ್ರ ದೀರ್ಘವಾಯಿತು. ದಯೆಯಿಟ್ಟು ಕ್ಷಮಿಸಿ. ತಮ್ಮನ್ನು, ಶ್ರೀ ವೈ. ಕೆ. ರಾಮಯ್ಯ ಮತ್ತು ಶ್ರೀ ಪಿ. ಎನ್. ಜವರಪ್ಪಗೌಡರನ್ನೂ ಸ್ಮರಿಸುತ್ತಾ ಲೇಖನಿಗೆ ವಿರಾಮ ಕೊಡುತ್ತೇನೆ.

ಗೌರವಾದರ ಪ್ರಣಾಮಗಳೊಡನೆ,
ಇಂತು ತಮ್ಮವ,
(ದೇಜಗೌ)

ಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು
ಪೀಠಾಧಿಪತಿಗಳು,. ಶ್ರೀ ಆದಿ ಚುಂಚನಗಿರಿ ಮಠ,
ನಾಗಮಂಗಲ ತಾಲ್ಲೂಕು.

ಈ ಪತ್ರದಲ್ಲಿ ನಾನು ವಿಫಲನಾಗಿದ್ದೇನೆಂದು ಹೇಳಿದ್ದೇನಷ್ಟೆ. ಅಷ್ಟಕ್ಕೆ ಸ್ವಾಮಿಗಳ'ಪ್ರಬುದ್ಧ' ಪಟ್ಟ ಶಿಷ್ಯರೇ ಕಾರಣವೆಂದು ಸ್ಪಷ್ಟಪಡಿಸಬೇಕಾಗಿದೆ. ಮುಳ್ಳು ಬೇಲಿಯ ಮೇಲೆ ಹರಡಿದ ವಸ್ತ್ರವನ್ನು ಉಪಾಯದಿಂದ ಬಿಡಿಸಿಕೊಳ್ಳುವುದು ಜಾಣ್ಮೆಯೆಂಬುದು ನನ್ನ ಅಭಿಮತ. ಪ್ರಾರಂಭದಲ್ಲಿಯೇ ತರವಲ್ಲದ ಪರಿಸರದಿಂದ ಹೊರಗೆ ಬಂದದ್ದರಿಂದ ನನ್ನ ಕೆಲಸಗಳನ್ನು ಸಲೀಸಾಗಿ ನೆರವೇರಿಸಲು ಸಾಧ್ಯವಾಗಿದೆ.

ಸಿರಿಗೆಯ ಶ್ರೀ ತರಳ ಬಾಳು ಜಗದ್ಗುರು ಬೃಹನ್ಮಠದ ಈಗಿನ ಸ್ವಾಮಿಗಳು ಪೂಜ್ಯ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಮಹಾವಿದ್ವಾಂಸರು, ವಾಗ್ಮಿಗಳು, ಪ್ರಗತಿ ಪರಧೋರಣೆಯುಳ್ಳವರು. ಅವರು ಕೈಗೊಂಡ ಮದ್ಯಪಾನ ನಿಷೇಧ ಆಂದೋಲನದಲ್ಲಿ ಅವರ ಮಾನವತಾ ಪ್ರೇಮ ಅಭಿವ್ಯಕ್ತವಾಗುತ್ತದೆ. ಅವರು 8-8-1989 ರಂದು ನನಗೊಂದು ಪತ್ರ ಬರೆದು ಮದ್ಯಪಾನ ವಿರುದ್ಧ ಜಾಗೃತಿ ಮೂಡಿಸಲು ತಾವು ಗ್ರಾಮಾಂತರ ಪ್ರದೇಶಗಳಲ್ಲಿ ಪಾದಯಾತ್ರೆ ಬಹಿರಂಗ ಸಭೆಗಳನ್ನು ನಡೆಸುತ್ತಿರುವ ಸಂಗತಿಯನ್ನು ಪ್ರಸ್ತಾಪಿಸಿ, ತಾವು ಕಳಿಸಿದ ಪ್ರಶ್ನಾವಳಿಗೆ ಖಚಿತವಾದ ಉತ್ತರಗಳನ್ನು ಬರೆದು ಕಳಿಸುವಂತೆ ತಿಳಿಸಿದ್ದರು. ಮದ್ಯಪಾನ ಕೆಟ್ಟದ್ದು, ಅದಕ್ಕಿಂತ ತಂಬಾಕು ಸೇವನೆ ಮತ್ತೂ ಕೆಟ್ಟದ್ದು ಎಂಬುದನ್ನು ಅವರ ಗಮನಕ್ಕೆ ತರುವುದರ ಜತೆಗೆ, ಆ ಚಳುವಳಿಯಲ್ಲಿ ನಾನು ಭಾಗವಹಿಸುವುದು ತರವಲ್ಲವೆಂದು ತಿಳಿಸಿ, ಅದಕ್ಕೆ ಕಾರಣಗಳನ್ನು ಸಹ ಬರೆದು ಕಳಿಸಿದೆ. ಅವರು ನನ್ನ ಉತ್ತರವನ್ನು 'ಮದ್ಯಪಾನ ಚಳುವಳಿ : ದೇಜಗೌ ದೃಷ್ಟಿ' ಎಂಬ ಶೀರ್ಷಿಕೆಯಡಿ 1989ರ ಅಕ್ಟೋಬರ್ ತಿಂಗಳ 'ತರಳ ಬಾಳು ವಾರ್ತಾಪತ್ರ'ದಲ್ಲಿ (ಪುಟ ೧೧) ಪ್ರಕಟಿಸಿದರು.

ನನ್ನ ಮನೋಧರ್ಮಕ್ಕೆ ಅದು ಕನ್ನಡಿ ಹಿಡಿಯುವುದರಿಂದ. ಅದನ್ನಿಲ್ಲಿ ಪುನರ್ಮುದ್ರಿಸಲಾಗಿದೆ.

ಮದ್ಯಪಾನ ನಿರೋಧ ಚಳುವಳಿಯಲ್ಲಿ ಪಾತ್ರವಹಿಸುವ ಅರ್ಹತೆ ನನಗಿಲ್ಲವೆಂದೇ ನನ್ನ ಪ್ರಾಮಾಣಿಕ ಅನಿಸಿಕೆ. ನನ್ನ ರಕ್ತದಲ್ಲಿ ಮದ್ಯದ ವಾಸನೆ ಇಲ್ಲವೇ ಇಲ್ಲವೆಂದು ಹೇಳಿಕೊಳ್ಳುವ ಧೈರ್ಯ ನನಗಿಲ್ಲ. 1958 ರಿಂದೀಚೆಗೆ ಸಂದರ್ಭದ ಒತ್ತಡಕ್ಕೋ ದಾಕ್ಷಿಣ್ಯಕ್ಕೋ ಕಟ್ಟುಬಿದ್ದು ಅಪರೂಪವಾಗಿ ಮದ್ಯವನ್ನು, ಮುಖ್ಯವಾಗಿ ಬೀರನ್ನು ಸೇವಿಸಿದ್ದೇನೆ. ಅದು ಅತ್ಯಲ್ಪ ಪ್ರಮಾಣದಲ್ಲೆಂಬುದು ನಿಜ. ಆದರೂ ಅದರ ರುಚಿ ನನ್ನ ನಾಲಿಗೆಗಿಳಿದಿಲ್ಲ. ಅದರ ಗುಣ ನನ್ನ ಮೈಗೊಗ್ಗಿಲ್ಲ. ಎಂದೂ ಅಮಲೇರುವ ತನಕ ಕುಡಿದಿಲ್ಲ. 'ನೀವು ಕನ್ನಡ ಪಂಡಿತರು. ನಿಮಗೆ ಲೌಕಿಕ ಸುಖದ ರಹಸ್ಯ ಗೊತ್ತಿದೆಯೇ? ಜಡ ಸಂಪ್ರದಾಯವಾದಿಗಳು. ಕುಡಿಯುವ ತಾಕತ್ತಾದರೂ ನಿಮಗಿದೆಯೇ?' ಎಂದು ಯಾರೋ ಸ್ನೇಹಿತರು ಸವಾಲೆಸೆದಾಗ ಮೊತ್ತ ಮೊದಲ ಬಾರಿಗೆ ಅವರಿಗೆ ಅಚ್ಚರಿಯಾಗುವಂತೆ ಬೀರು ಹೀರಿದ್ದುಂಟು. ಸುಮಾರು ಒಂದು ದಶಕದ ನಂತರ ವಿದೇಶೀಯರು ಸೇರುತ್ತಿದ್ದ ಭೋಜನ ಗೋಷ್ಠಿಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮದ್ಯ ತೆಗೆದುಕೊಳ್ಳುತ್ತಿದ್ದೆ. ವಿದೇಶಗಳಿಗೆ ಹೋದಾಗ ಅಲ್ಲಿಯ ಗೆಳೆಯರ ಒತ್ತಾಯದಿಂದಾಗಿ ಪ್ರಮಾಣ ತುಸು ಹೆಚ್ಚುತ್ತಿತ್ತು. ಆದರೂ ಅದು ನನ್ನ ನಾಲಿಗೆಗೆ ಒಗ್ಗಿರಲಿಲ್ಲವಾದ್ದರಿಂದ ಭಕ್ಷ್ಯಗಳನ್ನು ನಂಜಿಕೊಳ್ಳುತ್ತ ಕುಡಿಯುತ್ತಿದ್ದೆ. ನಾನು ನೌಕರಿಯಿಂದ ನಿವೃತ್ತನಾದ ನಂತರ ಕುಡಿತ ಇಲ್ಲವೆಂದರೂ ಸಲ್ಲುತ್ತದೆ. ಆದರೂ ವರ್ಷಕ್ಕೊಮ್ಮೆಯೋ ಇಮ್ಮೆಯೋ ಕುಡಿದಿದ್ದರೆ ಹೆಚ್ಚು.

ಮದ್ಯ ನನಗೆಂತು ಹಿಡಿಸುವುದಿಲ್ಲವೋ ಅಂತೆಯೇ ಹೊಗೆಸೊಪ್ಪು ಸಹ ಅಷ್ಟೆ. ನನ್ನ ಬದುಕಿನಲ್ಲೆಲ್ಲ ಒಂದೆರಡುದಿನ, ದಿನಕ್ಕೆ 20-25 ರಂತೆ ಸಿಗರೇಟು ಸೇದಿದ್ದರೆ ಹೆಚ್ಚು. ಅವೇನಾದರೂ ನನಗೆ ಒಗ್ಗಿಕೊಂಡಿದ್ದರೆ, ಜೀವನದಲ್ಲಿ ನಿರಾಶೆ ತಲೆ ಹಾಕಿದ್ದರೆ ನಾನು ಖಂಡಿತವಾಗಿಯೂ ಕುಡುಕನಾಗುತ್ತಿದ್ದೆ. ಹಾಗಾಗದಿದ್ದದ್ದು ನನ್ನ ಪುಣ್ಯವೆಂದುಕೊಂಡಿದ್ದೇನೆ. ಅದೇನೇ ಇರಲಿ, ಮದ್ಯಪಾನ ನಿರೋಧಾಂದೋಲನದಲ್ಲಿ ಭಾಗವಹಿಸುವ ನೈತಿಕ ಧೈರ್ಯ ನನಗಿಲ್ಲ.

ಮದ್ಯಪಾನದಿಂದ ಅನೇಕ ಅನಾಹುತಗಳಾಗುತ್ತಿವೆ ಎಂಬುದು ನಿಜ. ಆದರೆ ಅದೊಂದು ಸಾಮಾಜಿಕ ಅನಿಷ್ಟವೆಂದು ಹೇಳಬಹುದೇ ಹೊರತು. ಧರ್ಮ ಸಂಸ್ಕೃತಿಗಳಿಗೆ ಮಾರಕವೆಂದು ಹೇಳಲಾಗದು. ಮದ್ಯಪಾನ ಧಾರ್ಮಿಕ ಅಥವಾ ಸಾಂಸ್ಕೃತಿಕ ಅನಿಷ್ಟವಾಗುವುದಾದರೆ, ಮಾಂಸಾಹಾರವೂ ಅದಕ್ಕಿಂತಲೂ ಕ್ರೂರತರ ಅನಿಷ್ಟವಾಗುತ್ತದೆ. ಮಾಂಸಾಹಾರ ನಿಷೇಧದಿಂದಾಗುವ ಕಷ್ಟನಷ್ಟಗಳ ಕಲ್ಪನೆ ನನಗಿದೆ. ಮಾಂಸಾಹಾರ ನಿಷೇಧದ ಪರವಾಗಿರುವವರು ಮಾಂಸೋತ್ಪನ್ನವಾದ ಹಾಲನ್ನು ಕೂಡ ನಿಷೇಧಿಸ ಬೇಕಾಗುತ್ತದೆ. ಉಪಾಯ ವೇದಾಂತವಾಗಲಿ ಅನುಕೂಲ ಸಿಂಧುವಾಗಲಿ ಧರ್ಮವಾಗುವುದಿಲ್ಲ. ಅಧ್ಯಾತ್ಮ ಧರ್ಮದ ಒಂದು ಭಾಗ. ಮಾಂಸಾಹಾರದಿಂದಾಗಲಿ ಸೋಮಪಾನದಿಂದಾಗಲಿ ಅಧ್ಯಾತ್ಮ ಸಾಧನೆಗೆ ಕಂಟಕವೊದಗಲಾರದೆಂದು ಆರ್ಯರ

ಸಂಪ್ರದಾಯಗಳಿಂದ ಸಾಬೀತಾಗುತ್ತದೆ. ಮಾಂಸಾಹಾರದಿಂದ ತಮೋಗುಣ ಹೆಚ್ಚುತ್ತದೆಂಬುದು ಒಂದು ವಾದ. ನನಗೆ ತಿಳಿದಂತೆ ಮಾಂಸಾಹಾರಿಗಳಿಗಿಂತ ಶಾಕಾಹಾರಿಗಳೇ ಹೆಚ್ಚು ಕೋಪಿಷ್ಠರು. ಈ ದೇಶದಲ್ಲಿ ಅಹಿಂಸಾವಾದಿ ಶಾಕಾಹಾರಿಗಳಿಂದ - ಗಾಂಧಿ ಹೊರತಾಗಿ - ಆಗಿರುವಷ್ಟು ಅನ್ಯಾಯ ಅನಾಹುತಗಳು ಮಾಂಸಾಹಾರಿಗಳಿಂದ ಆಗಿಲ್ಲ ಎಂಬುದಕ್ಕೆ ಭಾರತೀಯ ಇತಿಹಾಸವೇ ಸಾಕ್ಷಿಯಾಗಿದೆ. ಶಾಕಾಹಾರಿಗಳಾದ ಕಾವಿಧಾರಿಗಳು ಅರಿಷಡ್ವರ್ಗಗಳಿಂದ ಮುಕ್ತ ರಾಗಿದ್ದಾರೆಯೇ? ನನ್ನ ಲೇಖನಿ ಎಲ್ಲೆಲ್ಲಿಗೋ ಹರಿಯುತ್ತಿದೆ. ಕ್ಷಮಿಸಿ.

ಈ ದೇಶದ ಅವನತಿಗೆ, ಇಲ್ಲಿಯ ಧರ್ಮಸಂಸ್ಕೃತಿಗಳ ವಿನಾಶಕ್ಕೆ ಜಾತೀಯತೆ ಮೂಲಭೂತ ಕಾರಣವೆಂಬುದನ್ನು ತಮ್ಮಂಥ ಪ್ರಾಜ್ಞರಿಗೆ ಹೇಳಬೇಕಾಗಿಲ್ಲ. ಅದು ತೊಲಗಿದಾಗ, ಅದು ಭೂಗತವಾದಾಗ ಧರ್ಮವುಳಿಯುತ್ತದೆ, ಸಂಸ್ಕೃತಿ ಉಳಿಯುತ್ತದೆ, ದೇಶ ಉಳಿಯುತ್ತದೆ.ಅದು ಉಲ್ಬಣವಾದಂತೆಲ್ಲ ಸರ್ವ ವಿನಾಶಕ್ಕೆ ದಾರಿಯಾಗುತ್ತದೆ. ತಮ್ಮಂಥವರ ದಿವ್ಯ ಲಕ್ಷ್ಯ ಈ ಕಡೆಗೆ ಹರಿಯಬಾರದೇಕೆ? ಜಾತಿ ವಿನಾಶದಿಂದ ಮಠಗಳಲ್ಲಿ ಕ್ರಾಂತಿ ಸಂಭವಿಸುತ್ತದೆಂಬುದೂ ನಿಜ.

ಮದ್ಯಪಾನ ನಿಷೇಧಕ್ಕಿರುವ ಮುಖ್ಯ ಅಡಚಣೆಗಳೆಂದರೆ, ದೇಶವನ್ನು ಆಳುವವರು. ಮೊದಲು ರಾಷ್ಟ್ರಪತಿ ಭವನ ಮತ್ತು ಪ್ರಧಾನಿ ಭವನಗಳು ಈ ಅನಿಷ್ಟದಿಂದ ಮುಕ್ತವಾಗಬೇಕು. ಅಲ್ಲಿರುವವರೇ ಮದ್ಯ ಬಳಸುವುದಾದರೆ ಉಳಿದವರನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಹಿಂದಿನ ರಾಷ್ಟ್ರಪತಿಯೊಬ್ಬರು ಮದ್ರಾಸ್ ರಾಜ ಭವನಕ್ಕೆ ಹೋಗಿದ್ದು, ಅಲ್ಲಿ ಮದ್ಯ ಸಿಗರೇಟುಗಳ ಬಳಕೆ ಇಲ್ಲವೆಂದು ತಿಳಿದಾಗ, ರೇಗಿಕೊಂಡು ಅಲ್ಲಿ ನಿಲ್ಲದೆ ಅವು ಸಿಗುವ ಕಡೆಗೆ ಹೋದ ಪ್ರಸಂಗ ನಿಮಗೆ ಗೊತ್ತಿರಬೇಕಲ್ಲವೇ? ಸರ್ಕಾರವೇ ಮದ್ಯ ಮಾರಾಟಕ್ಕೆ ಮುಂದೆ ಬಂದಿರುವಾಗ ಆಂದೋಳನ ಹೇಗೆ ಜಯಪ್ರದವಾದೀತು? ರಾಷ್ಟ್ರಪತಿ ಹಾಗೂ ರಾಜ್ಯಪಾಲರ ಮುಂದೆ ಮಂತ್ರಿಗಳು ಪ್ರತಿಜ್ಞೆ ಸ್ವೀಕರಿಸುವುದುಂಟಷ್ಟೆ. ಮದ್ಯಪಾನ ಮಾಡುವುದಿಲ್ಲವೆಂಬ ಅಂಶವನ್ನು ಸಹ ಪ್ರತಿಜ್ಞಾವಿಧಿಯಲ್ಲಿ ಸೇರಿಸಬಾರದೇಕೆ? ಅಂತೆಯೇ ಅಧಿಕಾರಿಗಳೂ ನೌಕರರಿಗೂ ಅಂಥ ಪ್ರತಿಜ್ಞಾವಿಧಿಯನ್ನು ಜಾರಿಗೆ ತರಬೇಕು. ನಂತರ ಮದ್ಯಪಾನ ನಿಷೇಧ ಪ್ರಸಾರ ಸುಲಭವಾಗುತ್ತದೆ. ಈಗ ದೇಶವನ್ನು ಆಳುತ್ತಿರುವವರು ಶಾಸಕರಲ್ಲ, ನೌಕರರು, ವರ್ತಕರು, ಉದ್ಯೋಗಪತಿಗಳು, ಕೋಟ್ಯಾಧೀಶರರು ಮತ್ತು ಹೆಂಡಮಾರಿಗಳೆಂಬುದನ್ನು ಮರೆಯುವಂತಿಲ್ಲ. ಇವರು ಮಂತ್ರಿಗಳನ್ನೇ ತಮ್ಮ ಜೇಬುಗಳಲ್ಲಿಟ್ಟುಕೊಂಡಿದ್ದಾರೆಂಬುದು ಸಾರ್ವಜನಿಕ ರಹಸ್ಯ.

ಕೊನೆಯದಾಗಿ ಮತ್ತೊಂದು ಬಹುಮುಖ್ಯವಾದ ಸಲಹೆಯುಂಟು. ಅದು ಮಠ ಮಸೀದಿ ಆಶ್ರಮಗಳಿಗೆ ಸಂಬಂಧಿಸಿದ್ದು. ಯಾರು ಕುಡಿಯುತ್ತಾರೋ ಅಂಥವರನ್ನು ಮಠ, ಮಸೀದಿ, ಆಶ್ರಮಗಳಿಗೆ, ದೇವಾಲಯಗಳಿಗೆ ಸೇರಿಸಬಾರದು. ಮದ್ಯಪಾನ ಧರ್ಮ ಸಂಸ್ಕೃತಿಗಳಿಗೆ ಮಾರಕವೆನ್ನುವುದಾದರೆ ಮೊದಲು ಕುಡುಕರನ್ನು ಹೊರಗೆ ಹಾಕಬೇಕು. ನಾನು ನೋಡಿದ್ದೇನೆ, ಲಾಂಛನಧಾರಿಗಳೇ ಸಕತ್ತಾಗಿ ಕುಡಿಯುವುದನ್ನು. ಅಂಥವರಿಗೆ ಮಠ

ಮನೆಯ ಸಾಧಾರಣ ಮಾತ್ರದ ಕೂಡೂಟವನ್ನು ನನ್ನ ನಾಲಗೆ ಸವಿದಿದೆ. ಅಮೆರಿಕೆಯ ಬಿಳಿ ಬ್ರಾಹ್ಮಣರ ಸೌಧದ ಭೂರಿ ಭೋಜನವನ್ನುಂಡು ಅಮು ತೇಗಿದೆ. ಜಗತ್ತಿನ ಸಕಲ ಪದಾರ್ಥಗಳ ಪರಬ್ರಹ್ಮ ಸೃಷ್ಟಿಯೆಂಬ ಅದ್ವೈತ ತತ್ತ್ವವನ್ನರಿತೋ ಏನೋ ನನ್ನ ನಾಲಗೆ ಅಲರ್ಜಿ ನಿಷೇಧಗಳೆಂಬ ಪದಗಳನ್ನೇ ಕಾಣದು. ನನ್ನ ನೆರೆಯವರು ತಿನ್ನುವ ಪದಾರ್ಥ ನನಗೇಕೆ ಅಹಿತವಾಗಬೇಕೆನ್ನುವ ಭ್ರಾತೃತ್ವ ಸಮತ್ವವಾದಿ ನಾನು. ನನಗೆ ಮೂವತ್ತೊಂದು ತುಂಬುವ ತನಕ ಮಾತ್ರ ನಾನು ಮಾಂಸಾಹಾರಕ್ಕೆ ಹೊರಬಿಗನಾಗಿದ್ದೆ. ನಾನು ಇಂದ್ರಿಯ ವಿಜಯಿಯಲ್ಲ. ಈ ನೆಪದಿಂದಲೂ ರಸನೇಂದ್ರಿಯವನ್ನು ಒಡಿತಕ್ಕೆ ತಂದುಕೊಳ್ಳಬಹುದೆಂದು ಕೃತಸಂಕಲ್ಪನಾದೆ.

1992 ನೆಯ ಡಿಸೆಂಬರ್ 29 ರಂದು ಶಿವಮೊಗ್ಗ ಕುಪ್ಪಳ್ಳಿಗಳ ಕಡೆಗೆ ಹೋಗಿದ್ದೆ. ತೀರ್ಥಹಳ್ಳಿಯ ಅತಿಥಿ ಗೃಹದಿಂದ ಬೆಳಗ್ಗೆ ತಿರುಗಾಟಕ್ಕೆ ಹೊರಟಾಗ ನನ್ನ ಮೂಗಿನ ಎಡ ತುದಿ ನೋಯುತ್ತಿತ್ತು. ಅದೊಂದು ಗುಳ್ಳೆಯಿರಬಹುದು, ಎರಡು ಮೂರು ದಿನ ಸತಾಯಿಸಿ ಒಡೆದು ಹೋಗುತ್ತದೆಂದು ಸುಮ್ಮನಿದ್ದೆ. ನಾನು ಯಾವಾಗಲೂ ನೋವು ತಲೆದೋರಿದ ಕೂಡಲೇ ವೈದ್ಯನ ಮನೆಗೆ ಓಡಿ ಹೋಗುವುದಿಲ್ಲ. ತಾಳಿದವ ಬಾಳಿಯಾನು ಎಂಬೊಂದು ಗ್ರಾಮ ಗಾದೆಯಿದೆಯಲ್ಲ, ಹಾಗೆ ನನ್ನ ಬಾಳು ಸಾಗುತ್ತಿದೆ. ಖಾಯಿಲೆ ತುಟಘಟ್ಟಕ್ಕೆ ಬಂದಾಗ ಮಾತ್ರ ವೈದ್ಯರ ಬಳಿ ಹೋಗುವುದು ನನ್ನ ಪರಿಪಾಠ. ಅಷ್ಟೇ ಅಲ್ಲ, ಯಾರಿಗೂ ನನ್ನಿಂದಾಗಿ ತೊಂದರೆಯಾಗಬಾರದೆಂದು ಆ ವಿಷಯವನ್ನು ಮನೆಯವರಿಗೂ ತೋರಿಸಿಕೊಳ್ಳದೆ ನಾನೇ ನುಂಗಿಕೊಳ್ಳುತ್ತೇನೆ. ಆ ನೋವು ಹಣೆಯ ತನಕ ಹರಿದು ನಡುನೆತ್ತಿ ತಲುಪಿದಾಗ ಯಾರಿಗೂ ತಿಳಿಸಲಾಗಿ - ಪ್ರಾಯಶಃ ಪ್ರಭು - ಅದು ಸರ್ಪಸುತ್ತು, ಏಳೆಂಟು ದಿನ ಅಸಾಧ್ಯನೋವು ಕೊಡುತ್ತದೆಂದು ಹೇಳಿ, ಚಿಕಿತ್ಸಾಕ್ರಮವನ್ನು ಸೂಚಿಸಿದ. ನನಗೆ ಇಬ್ಬರು ವೈದ್ಯರಲ್ಲಿ ಅಪಾರ ನಂಬಿಕೆ: ಸಿಂಧೆ, ಪ್ರಭು, ಈಚೆಗೆ ರಾಜಶೇಖರ್. ಈ ಮೂವರೂ ಮೃದುವಾಗಿ ಮಾತಾಡಿ, ಮುಖದಲ್ಲಿ ಮಂದಹಾಸ ಸೂಸಿದರೆ ಖಾಯಿಲೆ ಅರ್ಧ ಗುಣವಾಗುತ್ತದೆ. ಅನಂತರ ಬೆಂಗಳೂರಿಗೆ ಹೋಗಿ ಪ್ರಭುವನ್ನೇ ಕಂಡೆ. ಆ ಹೊತ್ತಿಗೆ ಆ ಹಾವು - ಅದು ಸಿಪುಬಿನ ದಾಯಾದಿಯಂತೆ - ಎಡಗಿವಿ ಬುಡದ ಮೂಲಕ ಎಡಗಣ್ಣಿನ ಹುಬ್ಬಿನ ಮೇಲೆ ಬುಸುಗುಟ್ಟಿ, ಹಣೆಯ ಮೇಲೆ ತನ್ನ ಮೂಲಪಥವನ್ನು ಸೇರಿತು. ಪ್ರಭು ತೋರಿಸಿದ ಚಿಕಿತ್ಸೆ ಮಾಡುತ್ತಲೇ ಇದ್ದೆ. ನೋವು ಅತಿಯಾಗಿಲ್ಲದಿದ್ದರೂ ನಾಲ್ಕೈದು ತಿಂಗಳು ಅದರ ಚೇಷ್ಟೆ ನಡೆದೇ ಇತ್ತು. ಮೂಗಿನ ಎಡತುದಿಯಲ್ಲದು ತನ್ನ ಚರಣ ಚಿಹ್ನೆಯನ್ನು - ನಿಜದ ಹಾವಿಗೆ ಕಾಲಿಲ್ಲ ನಿಜ- ಬಿಟ್ಟು ಹೋಗಿದೆ, ತನ್ನನ್ನು ನಾನು ಸದಾ ನೆನೆಯುತ್ತಿರಲೆಂದು.

ಸರ್ಪಸುತ್ತಿನಿಂದ ನರಳುತ್ತಿದ್ದಾಗ ಒಂದು ದಿನ, ಫೆಬ್ರವರಿ 11ರಂದು ಟ್ರಸ್ಟಿನ ಮುಂಭಾಗದಲ್ಲಿ ರಸ್ತೆ ದಾಟುವ ಸಲುವಾಗಿ, ಪೂರ್ವದಿಂದ ಭೂತದೋಪಾದಿ ಗರ್ಜಿಸುತ್ತ ಬರುತ್ತಿದ್ದ ಲಾರಿಗೆ ಹೆದರಿ ಕೆಲವು ಸ್ನೇಹಿತರೊಡನೆ ಪೂರ್ವಾಭಿಮುಖವಾಗಿ ತಿರುಗಿಕೊಂಡು ನಿಂತಿದ್ದೆ. ನನ್ನ ಬೆನ್ನ ಹಿಂದೆ ಬಂದು ಸ್ಕೂಟರ್ ಸವಾರ ನನಗೆ ಡಿಕ್ಕಿ ಹೊಡೆದ. ನಾನು ಮುಖವಡಿಯಾಗಿ ಬಿದ್ದೆ. ಒಂದು ನಿಮಿಷ ನನಗೆ ಪ್ರಜ್ಞೆ ಇರಲಿಲ್ಲ. ಪಕ್ಕದವರು ಅನಾಮತ್ತಾಗಿ

ಮೇಲೆತ್ತಿಕೊಂಡು ನನ್ನ ಕುಟೀರದ ಕಡೆಗೆ ಹೊರಟರು. ಮರೀಗೌಡರನ್ನು ನೋಡಿದ್ದ ನಾನು ನನ್ನ ಗತಿ ಮುಗಿಯಿತೆಂದುಕೊಂಡೆ ಮನಸ್ಸಿನಲ್ಲಿ. ಮೂಳೆ ಮುರಿದಿದ್ದರೆ ಯಾವುದೆನ್ನುವ ಸಲುವಾಗಿ ಕೆಳಗಿಳಿಸಿ ಎಂದು ಗೆಳೆಯರಿಗೆ ಹೇಳಿದೆ. ಬಲ ಭಾಗದ ರೊಂಡಿ ನೋಯುತ್ತಿತ್ತು. ತೋಳು ತೊಡೆ ಕಣಕಾಲುಗಳಲ್ಲಿ ರಕ್ತ ಸೋರುತ್ತಿತ್ತು. ಕುಟೀರದ ಜಗಲಿಯ ಮೇಲೆ ಕುಳಿತು ಕೊಂಡಾಗ ಭಾರಿ ಜಖಂ ಆಗಿರಲಾರದೆಂದು ಕೊಂಡೆ. ವರ್ತಮಾನ ತಲುಪಿದ ಕೂಡಲೆ ರಾಜಶೇಖರ್ ದಂಪತಿಗಳು ಬಂದರು. ಇಂಜಕ್ಷನ್ ಕೊಟ್ಟರು. ಗಾಯಗಳಿಗೆ ಮುಲಾಮು ಹಚ್ಚಿದರು. ನೇರವಾಗಿ ಡಾ. ಶರತ್‌ಕುಮಾರ್ ಅವರ ನರ್ಸಿಂಗ್ ಹೋಂಗೆ ಕರೆದೊಯ್ದರು. ಕ್ಷಕಿರಣ ತೆಗೆಸಿದರು. ತಾವೂ ನನ್ನ ತೊಡೆಯೊಳಗಿನ ಮೂಳೆಗಳ ಪರಿಸ್ಥಿತಿಯನ್ನು ಪರೀಕ್ಷಿಸಿದರು. ಪಕ್ಕದಲ್ಲಿ ತಜ್ಞರಿಗೂ ತೋರಿಸಿದರು. ನಿಮ್ಮ ಅದೃಷ್ಟ ಚೆನ್ನಾಗಿದೆ. ದೊಡ್ಡದಾಗಿ ಜಖಂ ಆಗಿಲ್ಲ. ರೊಂಡಿಯ ಮೂಳೆ ಮಾತ್ರ ಸೀಳಿದೆ. ಅದಕ್ಕಾಗಿ ಆತಂಕ ಪಡಬೇಕಾಗಿಲ್ಲ. ಪಟ್ಟಿಕಟ್ಟಬೇಕಾಗಿಲ್ಲ. ಆದರೆ ಒಂದೂವರೆ ತಿಂಗಳಾದರೂ ಮಂಚದಿಂದ ಕೆಳಗಿಳಿಯಬಾರದು ಎಂದು ತಾಕೀತು ಮಾಡಿದರು. ಆಂಟಿ ಬಯೋಟಿಕ್ಸಾದಿ ಮಾತ್ರೆಗಳನ್ನು ಕೊಟ್ಟರು. ತಿಂಗಳಾದ ನಂತರ ಊರೆಗೋಲಿನ ಸಹಾಯದಿಂದ ಸ್ವಲ್ಪ ಸ್ವಲ್ಪ ನಡೆಯ ಬಹುದೆಂದು ಅವರೇ ಕೋಲನ್ನು ಕೊಟ್ಟರು. ದಿನಕ್ಕೆ ಮೂರು ಸಲ ಮೂರು ಮೂರು ಮಾತ್ರೆ ತೆಗೆದುಕೊಳ್ಳುತ್ತಿದ್ದೆ. ಬೆಳಗ್ಗೆ ಮಾತ್ರ ವಿಶ್ವಚೇತನಕ್ಕೆ ಕಾರಿನಲ್ಲಿ ಬಿಡಿಸಿಕೊಂಡು ಅಲ್ಲಿಯೇ ಮಲಗಿರುತ್ತಿದ್ದೆ. ಉಳಿದಂತೆಲ್ಲ ಮಗನ ಮನೆಯಲ್ಲಿರುತ್ತಿದ್ದೆ. ಅದೊಂದು ಅಗ್ನಿ ಪರೀಕ್ಷೆ. ಮಲಗಿಕೊಂಡೇ ಎರಡು ಸಣ್ಣಗ್ರಂಥಗಳನ್ನು - ವಿಚಾರ ಕ್ರಾಂತಿಗೆ ಕುವೆಂಪು ಕರೆ, ವಿಶ್ವಮಾನವ ಸಂದೇಶದ ವ್ಯಾಖ್ಯಾನ- ರಚಿಸಿದೆ. ರಾಜಶೇಖರ್ ದಿನಾಲೂ ಬಂದು ನೋಡಿ ಕೊಳ್ಳುತ್ತಿದ್ದರು. ಆಗಾಗ್ಗೆ ತಜ್ಞರನ್ನು ಕರೆದುಕೊಂಡು ಬರುತ್ತಿದ್ದರು. ಒಂದೂವರೆ ತಿಂಗಳ ನಂತರ ನಾನು ನಿತ್ಯ ಕರ್ಮಗಳಲ್ಲಿ ತೊಡಗಿದೆ.

ಆದಷ್ಟು ಪ್ರವಾಸ ಕಡಿಮೆಮಾಡಬೇಕೆಂದೂ, ರೈಲು ಬಸ್ಸುಗಳಲ್ಲಿ ಹೆಚ್ಚು ಓಡಾಡಕೂಡದೆಂದೂ ರಾಜಶೇಖರ್ ಮೊದಲಾದ ಹಿತೈಷಿಗಳು ಆಗಾಗ ನನ್ನನ್ನು ಎಚ್ಚರಿಸುತ್ತಿದ್ದರು. ಎಷ್ಟು ಕಡಿಮೆ ಎಂದರೂ ಟ್ರಸ್ಟಿನ ಮತ್ತು ಪ್ರತಿಷ್ಠಾನದ ಕೆಲಸಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನಿವಾರ್ಯವಾಗಿ ಹೊರಗಿನ ಊರುಗಳಿಗೆ ಹೋಗಬೇಕಾಗುತ್ತಿತ್ತು. ಮಂಡ್ಯದಲ್ಲಿ ನಡೆದ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ತರಬೇಕಾಗಿದ್ದ ನೆನಪಿನ ಸಂಪುಟದ ಪ್ರಧಾನ ಸಂಪಾದಕತ್ವವನ್ನು ನನ್ನ ತಲೆಗೆ ಕಟ್ಟಿರಲಾಗಿ, ಓಡಾಟ ಕಾರ್ಯಭಾರಗಳೆರಡೂ ಶ್ರಮದಾಯಕವಾಗಿದ್ದುವು. ಯಾವುದಾದರೂ ಜವಾಬ್ದಾರಿಯನ್ನು ಹೊತ್ತು ಕೊಂಡೆನೆಂದರೆ ರೋಗ ಆಯಾಸ ಹಬ್ಬ ಹರಿದಿನ ಮನೆಮಠ ಎಲ್ಲವನ್ನೂ ಮರೆತು ದುಡಿಯುವ ಪರಿಪಾಠ ನನಗೆ ರಕ್ತಗತವಾಗಿದೆ.

ಕುವೆಂಪು ಅವರ 90ನೆಯ ಹುಟ್ಟು ಹಬ್ಬವನ್ನು ದೊಡ್ಡದಾಗಿ ಆಚರಿಸಬೇಕೆಂದು ನಾನು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ಬೇರೆ ಬೇರೆ ಕಡೆಗಳಿಗೆ ಹೋಗಬೇಕಾದೀತೆಂದು ಯೋಚಿಸಿ, ಶಿವಮೊಗ್ಗ ತೀರ್ಥಹಳ್ಳಿ

ಸಾಧ್ಯವಾಗದಿದ್ದರೆ ಜೀವನವನ್ನೇಕೆ ಉಳಿಸಿಕೊಂಡಿರಬೇಕು? ಸರಿ ಆದರ ರಿಪೇರಿಗಾಗಿ ಮದ್ರಾಸಿನ ಶಂಕರ ನೇತ್ರ ಚಿಕಿತ್ಸಾಲಯಕ್ಕೆ ಎರಡು ಸಲ ಹೋಗಿ, ಲೇಸರ್ ಕಿರಣಗಳಿಂದ ತೂತಿಸಿಕೊಂಡೆ. ಬೆಂಗಳೂರಿನ ಪ್ರಭಾ ಚಿಕಿತ್ಸಾಲಯಕ್ಕೆ ಪಲವು ಸಾರಿ ಯಾತ್ರೆ ಮಾಡಿದೆ. ನನ್ನ ದುರದೃಷ್ಟಕ್ಕೆ ಅವರೇನು ಮಾಡಿಯಾರು? ಅಮೆರಿಕೆಯ ಬಿಳಿಯರ ಹಸ್ತಗುಣದಿಂದ ಅದಕ್ಕೆ ಮುಕ್ತಿ ದೊರೆಯಬಹುದೆಂದು ಯೋಚಿಸಿದೆ. ನನ್ನ ಅಳಿಯ ಮತ್ತು ಮಗಳು ಐದಾರು ಸಾವಿರ ಡಾಲರುಗಳನ್ನು - ವೈದ್ಯರ ಕಡೆಯವರೆಂದು ರಿಯಾಯಿತಿ ಇದ್ದರೂ - ನನ್ನ ನೇತ್ರ ರಕ್ಷಣೆಗಾಗಿ ಖರ್ಚು ಮಾಡಿದರು. ಡಾ. ಧರ್ ಶಸ್ತ್ರ ಚಿಕಿತ್ಸೆ ಮಾಡಿ, ಒಳಗೆ ಲೆನ್ಸ್‌ಗಳನ್ನು ಸೇರಿಸಿದ್ದಲ್ಲದೆ ಫಿಲ್ಟರುಗಳನ್ನು ಸಹ ಅಳವಡಿಸಿದರು. ಗ್ಲಾಕೊಮ ಒಂದು ಸಾರಿ ಮನುಷ್ಯನ ನೇತ್ರವನ್ನು ಹೊಕ್ಕಿತೆಂದರೆ, ಸಾಯುವ ತನಕ ಅವನನ್ನು ಬಿಟ್ಟು ಹೋಗುವುದಿಲ್ಲವಂತೆ. ಪ್ರತಿನಿತ್ಯ ತಪ್ಪದೆ ಅವುಗಳಿಗೆ ಶುಶ್ರೂಷೆ ಮಾಡದಿದ್ದರೆ ಅದು ಕೋಪಿಸಿಕೊಳ್ಳುತ್ತದಂತೆ.

1992ನೆಯ ಸಂವತ್ಸರದ ಮಾರ್ಚಿ ತಿಂಗಳಲ್ಲಿರಬಹುದು[1] ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಚಂದ್ರಶೇಖರಕಂಬಾರ್ ಅವರ ಆಹ್ವಾನದ ಮೇರೆಗೆ ಹಂಪೆಗೆ ಹೋಗುತ್ತಿದ್ದೆ. ಜತೆಯಲ್ಲಿ ನನ್ನ ಶ್ರೀಮತಿಯೂ ಇದ್ದರು. ದಾರಿಯಲ್ಲಿ ಕಿಬ್ಬೊಟ್ಟೆಯ ಎಡ ಭಾಗದಲ್ಲಿ ನಡುವಿನ ಮೇಲುಗಡೆ ನೋವು ಶುರುವಾಯಿತು. ಚಿತ್ರದುರ್ಗ ತಲುಪುವ ವೇಳೆಗೆ ಅಸಾಧ್ಯ ನೋವು. ಮೂತ್ರವಿಸರ್ಜನೆಯ ಶಂಕೆ ತಲೆ ದೋರಿದಂತೆಲ್ಲ ಉದ್ದಕ್ಕೂ ಕಾರು ನಿಲ್ಲಿಸಿ, ವಿಸರ್ಜನೆ ಮಾಡಲಾರದೆ ಮಾಡುತ್ತ ಹಂಪೆ ತಲುಪಿದೆ. ಅಲ್ಲಲ್ಲಿ ಎಳನೀರು ಕುಡಿಯುತ್ತಿದ್ದುದರಿಂದಲೇ ಏನೋ ನೋವು ಶಮನವಾದಂತೆ ತೋರುತ್ತಿತ್ತು, ಮತ್ತೆ ತಲೆಯೆತ್ತುತ್ತಿತ್ತು. ಅಲ್ಲಿಯ ವೈದ್ಯರೊಬ್ಬರು ಪರೀಕ್ಷಿಸಿ ನೋವಳಿಕೆ ಮದ್ದು ಕೊಟ್ಟರು. ಆದರೂ ನೋವಿನ ಶಂಕೆ ನನ್ನ ಮನಸ್ಸನ್ನೆಲ್ಲಾ ಆವರಿಸಿಕೊಂಡಿತ್ತು. ಮೈಸೂರು ತಲುಪಿದ ಕೂಡಲೇ ಗೋಪಾಲಗೌಡ ನರ್ಸಿಂಗ್ ಹೋಂ ನಲ್ಲಿ ಕ್ಷಕಿರಣ ತೆಗೆಸಿದೆ. ಮೂತ್ರ ಕೋಶದಲ್ಲಿ ಕಲ್ಲಿದೆಯೆಂದೂ, ಅದು ಚಲಿಸುತ್ತಿದೆಯೆಂದೂ ಡಾ. ವಿಷ್ಣುಮೂರ್ತಿ ತಿಳಿಸಿದರು. ಪ್ರಾಯಶಃ ಮುಂದಿನ ಮೇ ತಿಂಗಳು ಬೆಂಗಳೂರಿಗೆ ಹೋಗಿ ಉಡುಪಿಯ ಮಣಿಪಾಲ್‌ನಿಂದ ನನ್ನ ನಾದಿನಿ ಮಗ ಮೂತ್ರ ಕೋಶ ತಜ್ಞ ಡಿ. ರಮೇಶನನ್ನು ಕರೆಸಿದೆನು. ಮಡಿನೋವದಲ್ಲಿ ಪ್ರಭು ರಮೇಶ್‌ರಿಬ್ಬರೂ ಸೇರಿಕೊಂಡು ಎರಡುಮೂರು ಗಂಟೆ ಪರೀಕ್ಷೆ ನಡೆಸಿದರು. ನಳಿಕೆ ತೂರಿಸಿ ಕಲ್ಲು ತೆಗೆಯಬೇಕೆಂದೂ, ತಳುವಿದರೆ ಅಪಾಯವೊದಗಬಹುದೆಂದೂ ಅವರು ಎಚ್ಚರಿಕೆ ಕೊಟ್ಟರು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಫೋನುಮಾಡಿ ವಿಚಾರಿಸಲಾಗಿ ನಳಿಕೆ ಚಿಕಿತ್ಸೆಗೆ ಹನ್ನೆರಡು ಸಾವಿರ ರೂಪಾಯಿ ತಗಲುತ್ತದೆಂದೂ ರಮೇಶನ ಕಡೆಯವರಾದ್ದರಿಂದ ವೆಚ್ಚ ಆರು ಸಾವಿರ ಮೀರಲಾರದೆಂದೂ ತಿಳಿಯಿತು. ಕಲ್ಲಿನ ಚಲನೆ ನನಗೆ ತಿಳಿಯುತ್ತಿದ್ದುದರಿಂದ ಎರಡು ಮೂರು ದಿನ ಬಿಟ್ಟುಕೊಂಡು ಲಗುಬಿಗು

1. ನಾನು ತಪ್ಪದೆ ಬರೆಯುತ್ತಿರುವ ದಿನಚರಿಯಲ್ಲಿ ಕರಾರುವಾಕ್ಕಾದ ದಿನಾಂಕಗಳು ದೊರೆಯುತ್ತವೆ.

ನೋಡಿಕೊಂಡು ಶಸ್ತ್ರ ಚಿಕಿತ್ಸೆ ಮಾಡಿಸಬಹುದೆಂದು ನಾನು ಸೂಚಿಸಿದೆ. ನನ್ನ ಸೂಚನೆ ತಮಗಿಷ್ಟವಿಲ್ಲದಿದ್ದರೂ ಅನ್ಯ ಮಾರ್ಗವಿಲ್ಲದೆ ಒಪ್ಪಿಕೊಂಡರು. ಹಣ ಖರ್ಚುಮಾಡಲಾರದ್ದಕ್ಕೆ ನಾನು ಶಸ್ತ್ರ ಚಿಕಿತ್ಸೆಯನ್ನು ವಿರೋಧಿಸಿರಬೇಕೆಂಬ ಸಂದೇಹ .ಆ ವೈದ್ಯ ಬಂಧುಗಳಿಬ್ಬರ ಮನಸ್ಸಿನಲ್ಲಿ ಮೂಡಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ.

ನಾನು ಮೈಸೂರಿಗೆ ವಾಪಸಾದೆ. ಎರಡು ಮೂರು ದಿನ ಮೂತ್ರ ಶಿಲೆಯದೇ ತೊಳಕೆ. ಶಿಲೆಯೆಂದ ಮೇಲೆ ಅದಕ್ಕೆ ಕನಿಕರವುಂಟೆ? ಅದು ಕೊಡುವ ನೋವನ್ನನುಭವಿಸುವುದಕ್ಕಿಂತ ಸಾವು ಮೇಲು. ಹೋರಾಟದಿಂದ ಸಹನೆಯಿಂದ ಮನಸ್ಸು ದೃಢವಾಗುತ್ತದೆಂಬ ನಿಜವೂ ನನಗೆ ತಿಳಿದಿತ್ತು. ಅದರ ಅವತರಣಕ್ಕಾಗಿ ನಾನು ಕಾತರಿಸಿದೆ. ಒಂದು ದಿನ ಬೆಳಗ್ಗೆ ಅದು ಹೆಚ್ಚು ನೋವು ಕೊಡದೆ ಹೊರಗೆ ಬಂತು. ಅದು ಹೊರಗೆ ಬಂದ ನಂತರ ದೇಹ ಮನಸ್ಸುಗಳಿಗಾದ ಸುಖ ಮತ್ತೆ ಮತ್ತೆ ನೆನೆಸಿಕೊಂಡು ಸವಿಯುವಂಥದು. ಸುಖಪ್ರಸವವಾಯಿತೆಂದು ಹಿಗ್ಗಿದೆ. ಅದು ತೊಗರಿಕಾಳು ಗಾತ್ರವಿತ್ತು. ದುಷ್ಟಮಾನವರ ಹೃದಯಕ್ಕಿಂತ ಕಲ್ಲಿನ ಹೃದಯ ಮೃದುವಾದದ್ದು, ಕನಿಕರ ಮಯವಾದದ್ದು ಎಂದು ನಾನಾಗ ಅರಿತೆ. ಹನ್ನೆರಡು ಸಾವಿರ ರೂಪಾಯಿ ಮೌಲ್ಯದ ಆ ರತ್ನವನ್ನು ಗಾಜಿನ ಕರಂಡಕದಲ್ಲಿ ರಕ್ಷಿಸಬೇಕೆಂದು ನಾನು ಇಚ್ಛಿಸಿದ್ದೆ. ಅದನ್ನು ಪರೀಕ್ಷಿಸಿದ ನಂತರ ಅದರ ರಚನೆಯ ಮೂಲ ತಿಳಿಯುತ್ತದೆ. ಯಾವ ಆಹಾರ ಪಥ್ಯ ಯಾವುದು ಅಪಥ್ಯವೆಂದು ಗುರುತಿಸಲು ಸಾಧ್ಯವಾಗುತ್ತದೆ. ಅಪಥ್ಯದ ಆಹಾರವನ್ನು ತ್ಯಜಿಸಿದರೆ ಮತ್ತೆ ಶಿಲಾರಚನೆಯಾಗದಿರಬಹುದು ಎಂದು ಪ್ರಭು ಹೇಳಿಕಳಿಸಿದ. 60 - 65 ವರ್ಷ ಕಳೆದನಂತರ ಸಾಮಾನ್ಯವಾಗಿ ಮೂತ್ರ ಹರಳುಗಟ್ಟುವುದಿಲ್ಲವಂತೆ. ಯಾವ ಪಾಪ ಕರ್ಮಕ್ಕೊ ಅದು ನನಗೊಲಿದಿದೆ. ಆ ಕಲ್ಲಿನ ಬಗ್ಗೆ ನನಗಷ್ಟು ಮೋಹವಿರಬೇಕಾದರೆ, ಹೊತ್ತು ಹೆತ್ತು ಸಾಕಿದ ಮಕ್ಕಳ ಬಗ್ಗೆ ತಾಯಂದಿರಿಗೆ ಅದೆಷ್ಟು ಮೋಹವಿರಬೇಡ? ಈ ಮಧ್ಯೆ ಅಮೆರಿಕೆಯಲ್ಲಿ.ಶಸ್ತ್ರ ಚಿಕಿತ್ಸೆಯ ಫಲವಾಗಿ ಹಾಸುಗೆ ಹಿಡಿದಿದ್ದ ಮಗಳ ಚಿಂತೆಯೂ ನನ್ನನ್ನು ಕಾಡುತ್ತಿತ್ತು.

ಶಿಲಾರತ್ನದ ಪರೀಕ್ಷೆಯ ಫಲಿತಾಂಶದ ಪ್ರಕಾರ ಕ್ಯಾಲ್ಸಿಯಂ ಇರುವ ಪದಾರ್ಥಗಳನ್ನು ನಾನು ತಿನ್ನಬಾರದೆಂದು ವೈದ್ಯಾಜ್ಞೆ ಹೊರಬಿದ್ದಿತು. ಗರ್ಭಾವತರಣ ಕಾಲದಿಂದ ದೇಹವನ್ನು ಹೊರೆದಿರುವ, ಕಾಮಧೇನುವಿನ ಕೊಡಗೆಚ್ಚಲಿಂದ ಬಂದ, ಪುಷ್ಟಿಕರವಾದ ಪೀಯೂಷವನ್ನು ಅದರ ಸಂಪರ್ಕ ಪಡೆದ ಪದಾರ್ಥಗಳನ್ನು ವರ್ಜಿಸಬೇಕಂತೆ! ಅನೇಕ ಆಹಾರ ಪದಾರ್ಥಗಳನ್ನು ವ್ಯಾಪಿಸಿಕೊಂಡು ರಸನೆಯ ರುಚಿಯನ್ನು ರಂಜಿಸುವ, ಇಂಗಿನೊಡನೆ ಸ್ನೇಹ ಬೆಳಸಿ, ದೇವತೆಗಳಿಗೂ ದುರ್ಲಭವಾದ ತಿಳಿಸಾರಿನ ಮಹತ್ವಕ್ಕೆ ಕಾರಣವಾದ, ಭೋಗ ರಸಿಕನಾದ ಇಂದ್ರನಿಗೂ ದಕ್ಕದ ಸೂಪಿನ ಲಸದ್ರುಚಿಗೆ ಏಕೈಕ ನಿಮಿತ್ತವಾದ ಟೊಮೊಟೊ ನನಗೆ ಶತ್ರುವಂತೆ! ಕೋಸು ಸೋದರರ ಸವಿಯನ್ನು ಬಲ್ಲವರು ಅದನ್ನು ಬಿಡಬೇಕಾದರೆ ಮಹಾತ್ಯಾಗವೇ ಆದೀತು. ಅದು ವಿಲಾಯಿತಿ ತರಕಾರಿಯಾದ್ದರಿಂದ ಸ್ವದೇಶೀ ಉನ್ಮಾದ ಗ್ರಸ್ತರಾದ ನನ್ನಂಥವರು ಬಿಟ್ಟರೂ ಬಿಡಬಹುದು. ಆಫ್ರಿಕಾದ ಕಪ್ಪು ಶೂದ್ರರ, ಅದರಲ್ಲಿಯೂ ಅಲ್ಲಿಯ ಮುಸಲ್ಮಾನರ

ದೇವಾಲಯಗಳಲ್ಲಿ ವಿಶೇಷ ಮನ್ನಣೆಯಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ಈ ಆಂದೋಲನ ಮಠಗಳಲ್ಲಿ ಆಶ್ರಮಗಳಲ್ಲಿ ಪ್ರಾರಂಭವಾಗಬೇಕೆಂದು ನನ್ನ ವಿನಮ್ರ ಮನವಿ.

ಇಂಥ ಪ್ರಶ್ನೆಗಳಿಗೆ ನಾನು ಸಾಮಾನ್ಯವಾಗಿ ಉತ್ತರ ಕಳಿಸುವುದಿಲ್ಲ. ಸಿರಿಗೆರೆ ಮಠದ ಮೇಲೆ ನಿಮ್ಮ ಬಗ್ಗೆ ಇರುವ ಗೌರವದಿಂದ ನನ್ನ ಕೆಲವು ಅಭಿಪ್ರಾಯಗಳನ್ನು ಮುಚ್ಚುಮರೆಯಿಲ್ಲದೆ ನಿವೇದಿಸಿಕೊಂಡಿದ್ದೇನೆ. ಹಿರಿಯ ಸ್ವಾಮಿಗಳು ನಿಷ್ಪಕ್ಷಪಾತಕ್ಕೆ, ಅಕೃತ್ರಿಮತೆಗೆ ಹೆಸರಾದ ಮಹಾನುಭಾವರು. ಅವರ ಹೆಜ್ಜೆಯನ್ನನುಸರಿಸಿ ತಮ್ಮ ಪ್ರಾಜ್ಞತೆಗೂ ವಿದ್ವತ್ತಿಗೂ ಮಣಿದು, ನನ್ನ ಅನಿಸಿಕೆಗಳನ್ನು ಇಲ್ಲಿ ದಾಖಲಿಸಿದ್ದೇನೆ. ತಮ್ಮ ಮನಸ್ಸಿಗೆ ಅಹಿತವಾಗುವ ವಿಷಯಗಳು ಈ ಪತ್ರದಲ್ಲಿ ನುಸುಳಿದ್ದರೆ ಔದಾರ್ಯದಿಂದ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ದೇ. ಜವರೇಗೌಡ
ವಿಶ್ರಾಂತ ಕುಲಪತಿಗಳು
ಜಯಲಕ್ಷ್ಮೀಪುರ
ಮೈಸೂರು

ಇನ್ನೂ ಹಲವು ಮಠಗಳ ಸಂಪರ್ಕ ನನಗುಂಟು. ನಾನು ಬಸವ ಭಕ್ತನೆಂಬ ಕಾರಣದಿಂದ ಡಾ. ಜಚನಿಯವರು ನನ್ನನ್ನು ಮರೆತರು. ಅವರು ಮರೆತದ್ದಕ್ಕಾಗಿ ನನಗೆ ದುಃಖವಿಲ್ಲ; ಕನಿಕರವುಂಟು. ಸದ್ಯ ಈ ಪ್ರಕರಣಕ್ಕೆ ವಿರಾಮ ಚಿಹ್ನೆಹಾಕುತ್ತೇನೆ.

* * * * *

ನಾನು - ನನ್ನ ಕಾಯಿಲೆ

ಮಗುತನದಲ್ಲಿ ದನಕುರಿ ಮೇಕೆಗಳ ಹಿಕ್ಕೆಸೆಗಣಿ ಉಚ್ಚೆಗಳ ಕೆಸರಿನಲ್ಲಿ ಮುಳುಗೆದ್ದದ್ದರಿಂದಲೋ ಏನೋ, ಎಳವೆಯಲ್ಲಿ ಹೇಲಿನ ತಿಪ್ಪೆಯಲ್ಲಿ ಗೊಬ್ಬರದ ಗುಂಡಿಯಲ್ಲಿ ಒದ್ದಾಡಿದ್ದರಿಂದಲೊ ಏನೋ, ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಬಟ್ಟೆಯೊಗೆಯುವಲ್ಲಿ ಹಂದಿ ಒದ್ದಾಡುವಲ್ಲಿ ಎಮ್ಮೆದನಗಳೊಡನೆ ನೀರು ಕುಡಿದದ್ದರಿಂದಲೇ ಏನೋ, ಎಷ್ಟೋ ಸಲ ಹಳಸಿದ ಸಾರಿನಲ್ಲಿ ಮುಗ್ಗಲಕ್ಕಿ ಅನ್ನವನ್ನು ಒಣಗಿದ ರೊಟ್ಟಿಯನ್ನು ತಿಂದದ್ದರಿಂದಲೋ ಏನೋ, ನನ್ನ ಇಪ್ಪತ್ತೆರಡನೆಯ ವಯಸ್ಸಿನ ತನಕ ಗಾಡಿ ಹೊಡೆದು ಉತ್ತು ಅಗೆದು ಸೌದೆ ಸೀಳಿ ದುಡಿಯುತ್ತಿದ್ದರಿಂದಲೋ ಏನೋ ನನ್ನ ಅರವತ್ತೊಂಬತ್ತನೆಯ ವಯಸ್ಸಿನ ತನಕ ಆಸ್ಪತ್ರೆಯ ಮೋರೆಯನ್ನೇ ಕಂಡವನಲ್ಲ. ನನ್ನ ಶರೀರ ದುಡಿಮೆಗೆ ಕೊಳಚೆಗೆ ಹೊಂದಿಕೊಂಡಿತೆಂದೇ ಹೇಳಬೇಕು. ತಲೆನೋವಂತು ನನ್ನ ಬಳಿ ಸುಳಿದಿಲ್ಲ. ನೆಗಡಿ ಕೆಮ್ಮು ಬಂದರೂ ಬಹು ದಿನ ಜವರಾಯನನ್ನು ಕಾಡುವ ಶಕ್ತಿ ಅವುಗಳಿಗಿರಲಿಲ್ಲ. ನನ್ನ ಹಲ್ಲುಗಳಿಗೆ ನಾನು ಕೊಟ್ಟಿರುವ ಕಾಟಗಳನ್ನು ನೆನೆದಾಗ ಮೈ ಜುಮ್ಮೆನ್ನುತ್ತದೆ; ಅವುಗಳ ಬಗ್ಗೆ ಅನುಕಂಪ ಮೂಡುತ್ತದೆ. ಚಿಕ್ಕಂದಿನಲ್ಲಿ ಆದಿವಾಸಿ ಜನರಂತೆ ಹಲ್ಲುಜ್ಜಲು ಮಣ್ಣು ಇಟ್ಟಿಗೆ ಹಿಟ್ಟಿಗಲ್ಲು ಇದ್ದಿಲುಗಳನ್ನು ಬಳಸುತ್ತಿದ್ದೆ; ಪ್ರಾಪ್ತವಯಸ್ಕನಾದ ಮೇಲೆ ನಗರದ ಗಮಾರನಂತೆ ನಂಜನಗೂಡು ಹಲ್ಲುಪುಡಿಯನ್ನು ಉಪಯೋಗಿಸುತ್ತಿದ್ದೆ. ಕನ್ನಡ ಪ್ರಾಧ್ಯಾಪಕನಾದ ನಂತರ ಕನ್ನಡಕ್ಕೆ , ಪ್ರಾಧ್ಯಾಪಕ ಪದವಿಗೆ ಅವಮಾನವಾಗಬಾರದೆಂದು ಆಧುನಿಕ ನಾಗರಿಕನಂತೆ ದಂತ ಧಾವನ(ಟೂತ್ ಪೇಸ್ಟ್) ವನ್ನು ಜಾರಿಗೊಳಿಸಿದೆ. ಶರೀರದ ಯಾವುದೇ ಅವಯವವಾಗಲಿ, - ಕೊನೆಗೆ ಹಾಸುಗೆಯಾಗಲಿ, ಪಾತ್ರೆಯಾಗಲಿ, ಆಡುವ ಚೆಂಡಾಗಲಿ, ಯಂತ್ರವಾಗಲಿ - ಅದರದರ ಸ್ವರೂಪವನ್ನು, ಮರ್ಜಿಯನ್ನು, ನೀತಿನಿಯಮಗಳನ್ನು, ಶಕ್ತಿಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳದೆ ಅವನ್ನು ಸಿಕ್ಕಾಬಟ್ಟೆ ಜಗ್ಗಾಡಿದರೆ, ಉಪಯೋಗಿಸಿದರೆ, ದುಡಿಸಿದರೆ ಬೇಗ ಸವೆದು ಮುಪ್ಪಡರಿ ಹಾಳಾಗುವುದು ಖಂಡಿತ. ತಮ್ಮನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ಸಿಟ್ಟುಗೊಂಡ ಹಲ್ಲುಗಳು ತಂತಮ್ಮೊಳಗೆ ಮಾತಾಡಿಕೊಂಡು ಒಂದೊಂದಾಗಿ ನನ್ನನ್ನು ಬಿಟ್ಟು ಹೋಗುತ್ತಿವೆ. ಇತರ ಅಂಗಾಂಗಗಳ ಬಗೆಯೂ ನಾನು ಎಚ್ಚರಿಕೆ ವಹಿಸಿಲ್ಲ. ನಂನಮ್ಮ ಆರೋಗ್ಯ ನಂನಮ್ಮ ಕೈಯಲ್ಲಿದೆ ಎಂದೇ ನನ್ನ ನಂಬಿಕೆ - ಪೂರ್ತಿಯಲ್ಲದಿದ್ದರೂ ಶೇಕಡ ಐವತ್ತು ಭಾಗ ಎಂದಿಟ್ಟುಕೊಳ್ಳಬಹುದು.

ಅರುವತ್ತೊಂಭತ್ತನೆಯ ವಯಸ್ಸಿನಲ್ಲಿ ಗ್ಲಾಕೋಮ ನನ್ನ ಕಣ್ಣುಗಳನ್ನು ಆಶ್ರಯಿಸಿಕೊಂಡಿತು. ಯಾವ ಅವಯವ ಊನವಾದರೂ ಸರಿಯೆ, ದೃಗಿಂದ್ರಿಯವನ್ನು ಕಳೆದುಕೊಂಡು ಜೀವಿಸಲಾರೆ. ಓದಲು ಬರೆಯಲು ಸುಂದರ ವಸ್ತುಗಳನ್ನು ನೋಡಲು

ಛುಪ್ಪಳ್ಳಿಗಳಲ್ಲಿ ಆ ತಿಂಗಳು ಎರಡನೆಯ ವಾರವೆ ಜನ್ಮೋತ್ಸವ ಕಾರ್ಯಕ್ರಮಗಳನ್ನು ನಡಸುವುದೆಂದು ನಿರ್ಧರಿಸಿದೆ. ಜತೆಯಲ್ಲಿ ನನ್ನ ಶ್ರೀಮತಿಯನ್ನೂ ಕೆ. ಎಸ್. ಭಗವಾನರನ್ನೂ ಕರೆದುಕೊಂಡು ಹೋದೆ. ಊಟದ ವ್ಯತ್ಯಾಸದಿಂದಾಗಿ ಅಲ್ಲಿಯೇ ನೆಗಡಿ ಕೆಮ್ಮುಗಳು ನನ್ನನ್ನಪ್ಪಿಕೊಂಡು ಮುತ್ತಿಟ್ಟುವು. ಊರಿಗೆ ಬರುವ ಹೊತ್ತಿಗವು ನನ್ನ ಪಾಲಿಗೆ ಮಾರಿ ಬೇನೆ (virus) ಯಾಗಿ ಪರಿಣಮಿಸಿದುವು. ನನ್ನ ಜೀವನದಲ್ಲೆಂದೂ ಕಾಣದ ನೆಗಡಿ ಕೆಮ್ಮುಗಳು. ಮೂಗಿನಲ್ಲಿ ಕಾವೇರಿ, ಗಂಟಲಲ್ಲಿ ಕಫದುಂಡೆ ಕಾಣಿಸಿಕೊಂಡುವು. ಕುಳಿತಿರಲಿ, ನಿಂತಿರಲಿ, ಮಲಗಿರಲಿ - ನಿದ್ದೆ ಮಾಡಲಿಕ್ಕೆ ಕೆಮ್ಮು ಅವಕಾಶ ಕೊಟ್ಟರೆ ತಾನೇ - ಶ್ವಾಸಕೋಶದಿಂದ ಹಿಡಿದು ಗಂಟಲ ತನಕ ಮೀಟಿದ ದನಿ ಸೀರುಗೂರು. ಅದೇನಾದರೂ ಕ್ಷಯವಿರಬಹುದೆ? ಅದು ಕೇವಲ ಭಯಗ್ರಸ್ತನಾದ ರೋಗಿಯ ಮಾನಸಿಕ ಭ್ರಾಂತಿಯ ಫಲರೂಪದ ಚಿಂತೆ. ವೈದ್ಯರು ಆ ವಿಷಯ ಎತ್ತಲೆ ಇಲ್ಲ. ಜ್ವರ ಬಂತು. ನಾಲ್ಕು ಕಂಬಳಿಹೊದ್ದರೂ ಚಳಿ. ಕುಳಿರ್ಚಳಿ. ನಾನಾಗ ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದೆ. ರಾಜ್‌ಶೇಖರ್ ಬಂದರು. ಕಾರ್ಟಿಜೋನ್ ಚುಚ್ಚುಮದ್ದು ತಂದರು. ನಗುನಗುತ್ತಲೆ, ನಗಿಸುತ್ತಲೆ ಒಂದಾದ ಮೇಲೊಂದು ಎರಡು ರೊಂಡಿಗಳಿಗೆ ಚುಚ್ಚಿದರು. ಸ್ವಲ್ಪ ಹೊತ್ತಿನಲ್ಲಿ ಜ್ವರ ಇಳಿಯಿತು. ವೈದ್ಯರ ಆ ಕೊಳವೆಯಲ್ಲಿ ಅದೆಂಥ ಮಂತ್ರ ಶಕ್ತಿ! ಅದೆಂಥ ಅದ್ಭುತ ಪ್ರಸಾದ!

ಲಕ್ಕಪ್ಪ ಗೌಡರು ಫೋನು ಮಾಡಿದರು. ಬಂದರು. ಮಂಡ್ಯ ಬೆಂಗಳೂರುಗಳಿಗೆ ಬರಬೇಕೆಂದರು. ನನ್ನ ಗೋಳನ್ನು ಕಂಡಿದ್ದ, ನನ್ನ ಉಪಚಾರದಿಂದ ಆಯಾಸಗೊಂಡಿದ್ದ ಮನೆಯವರ ಮುಖದ ಮೇಲೆ ಸಹಜವಾಗಿಯೇ ಬೆಂಕಿಮೋಡ. ನಾನವರ ಮುಖ ನೋಡದೆಯೇ ಕಾರಿನಲ್ಲಿ ಕುಳಿತೆ. ಸಂಜೆಯತನಕ ಊಟವಿಲ್ಲದೆ - ಬೆಳಗ್ಗೆ ಒಂದೇ ಒಂದು ಚೂರು ಬ್ರೆಡ್ ತಿಂದಿದ್ದೆ - ಒಂದೇ ಸಮನೆ ಅವರೊಡನೆ ಸುತ್ತಾಡಿದೆ. ರಾತ್ರಿ ನನ್ನನ್ನವರು ಕಾರಿನಿಂದ ಇಳಿಸಿದಾಗ ಹತ್ತು ಗಂಟೆ.

ಬೆಳಗಾಯಿತು ಸಣ್ಣ ಸಣ್ಣ ಜ್ವರ; ನೆಗಡಿ ಕೆಮ್ಮುಗಳ ದರ್ಬಾರು. ತಮ್ಮ ವೈಭವ ಪ್ರತಾಪ ಪ್ರದರ್ಶನಕ್ಕೆ ಗಟ್ಟಿಮುಟ್ಟಾದ ಜನ ಸಿಗಲಿಲ್ಲವೆ? ಶ್ರೀಮಂತರ ಶೋಷಣೆಗೆ ಬಡವರು ತಾನೆ ಬಲಿ! ಜ್ವರ ಕೆಮ್ಮುಗಳ ಪ್ರತಾಪವೆಲ್ಲ ದುರ್ಬಲರ ಮೇಲೆ ತಾನೆ! ಸರಿ, ವೈದ್ಯರು ಬಂದರು. 'ಸಾರ್ ಒಂದು ತಿಂಗಳಾದರೂ ನೀವು ಹೊರಗೆ ಹೋಗಬಾರದು' ಎಂದು ಆಂಟಿಬಯೋಟಿಕ್ಸ್ ಕೊಟ್ಟರು. ಒಂದು ತಿಂಗಳ ಕಾರಾ ಗೃಹವಾಸ ನನ್ನ ಜಾಯಮಾನಕ್ಕೆ ಹೆಚ್ಚೇ ಹೆಚ್ಚು. 'ಕಾರಾಗೃಹವಾಸದ ಅವಧಿಯನ್ನು ಕಡಿಮೆ ಮಾಡಲಾರಿರಾ, ಡಾಕ್ಟರೆ? ಸಮ್ಮೇಳನದ ಕೆಲಸವಿದೆಯಲ್ಲ?' 'ಸಾಧ್ಯವಿಲ್ಲ, ಸಾರ್' ಇದ್ದಕ್ಕಿದ್ದಂತೆ ನನ್ನ ಆರೋಗ್ಯದಲ್ಲಿ ಕೆಟ್ಟ ಬದಲಾವಣೆಗಳಾದುವು. ಪಕ್ಕದಲ್ಲಿ ಕುಳಿತುಕೊಂಡು ಮಾತಾಡುತ್ತಿದ್ದರೂ ನನಗೆ ಕೇಳಿಸುತ್ತಿರಲಿಲ್ಲ. ಮಡದಿ ಮಾತಾಡಿಸಿದರೂ ನನ್ನ ಪ್ರತಿಕ್ರಿಯೆ ಇಲ್ಲ, ಅವರು ಗಟ್ಟಿಯಾಗಿ ಮಾತಾಡುವುದಿಲ್ಲ. ಇಬ್ಬರಿಗೂ ಬೇಸರ. ಸಮ್ಮೇಳನದ ಗ್ರಂಥ ಸಂಪಾದನೆಯ ಕೆಲಸ ಮುಗಿಯಿತು. ಸಮ್ಮೇಳನದ ಮೊದಲ ದಿನ ಮಂಡ್ಯಕ್ಕೆ ಹೋದೆ. ಯಾರ ಬಳಿ

ಹೋಗುವುದಕ್ಕೂ ನನಗಿಷ್ಟವಿಲ್ಲ. ಏಕೆ? ನಾನೀಗ ಕಿವುಡ! ಎರಡು ಮೂರು ಗಂಟೆ ಮಾತ್ರ ದೂರದಿಂದಲೇ ಮೆರವಣಿಗೆ ಸಮ್ಮೇಳನಗಳನ್ನು ನೋಡಿಕೊಂಡು ಮನೆಗೆ ಹಿಂದಿರುಗಿದೆ.

ರಾಜಶೇಖರ್ ಮೂಗುಕಿವಿ ರೋಗತಜ್ಞರ ಬಳಿ ಕರೆದೊಯ್ದರು. ಅವರು ನಿಷ್ಠೆಯಿಂದ ನನ್ನ ಕಿವಿ ಮೂಗುಗಳನ್ನು ಪರೀಕ್ಷಿಸಿದರು. ಗಂಟಲು ಕಟ್ಟಿಕೊಳ್ಳುತ್ತಿದ್ದುದರಿಂದ ಮಾತು ಸಹ ಸರಿಯಾಗಿ ಹೊರಡುತ್ತಿರಲಿಲ್ಲ. ನೆಗಡಿಗೂ ಕಿವಿಗೂ ನಂಟಿದೆಯೆಂದೂ ಎರಡು ನಾಳಗಳಲ್ಲಿ ಕೆಟ್ಟ ನೀರು ತುಂಬಿಕೊಂಡಿರುವುದರಿಂದ ಹೀಗಾಗಿದೆ ಎಂದೂ ಹೇಳಿ ಆಂಟಿ ಬಯಟಿಕ್ಸ್ ಜತೆಗೆ ಬೇರೆ ಮಾತ್ರೆಗಳನ್ನು ಬರೆದುಕೊಟ್ಟರು. ಆಂಟಿ ಬಯೋಟಿಕ್ಸ್ ನನ್ನ ಪರಮ ಶತ್ರು. ಇಂಡಿಯಾದಲ್ಲಿದ್ದರೆ ನನ್ನ ಆರೋಗ್ಯ ಕುದುರಲಾರದೆಂದೆನಿಸಿತು. ಅಳಿಯ ಮಗಳು ಅಮೆರಿಕೆಗೆ ಬರಬೇಕೆಂದು ಒತ್ತಾಯ ಪಡಿಸುತ್ತಿದ್ದುದರಿಂದ ಹೋಗಲು ನಿರ್ಧರಿಸಿದೆ. ಮಡದಿ ಜತೆಗಿರಬೇಕಲ್ಲವೆ?

ವಿಮಾನ ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ದೊಡ್ಡಂಚಿ ಕಛೇರಿಯ ಬಳಿ ಡಿಕ್ಕಿಯ ಶಬ್ದವಾಯಿತು. ಕಣ್ಣುಮುಚ್ಚಿದ್ದವನು ಎವೆ ತೆರೆದೆ. ಕೆಳಗಿಳಿದು ನೋಡಿಕೊಳ್ಳುತ್ತೇನೆ. ಕಣಕಾಲಿನ ಮೂಳೆಗೆ ಮೀಟರ್ ಬೋರ್ಡಿನ ಹಲಗೆ ಬಡಿದದ್ದರಿಂದ ರಕ್ತ ಸುರಿಯುತ್ತಿದೆ. ಹಿಂದಕ್ಕೇಕೆ ವಾಪಸಾಗಬಾರದು? ತಲೆಯಲ್ಲಿ ಏನೇನೋ ಯೋಚನೆಗಳು. ವಿಚಾರವಂತನಾಗಿ ನಾನೇ ಶಕುನಗಳನ್ನು ಮಾನ್ಯ ಮಾಡಬಹುದೆ? ಕೂಡದು. ವಿಮಾನ ನಿಲ್ದಾಣದಲ್ಲಿ ಟಿಂಕ್ಚರ್ ಪಟ್ಟಿ ಅಂಟಿಸಲಾಯಿತು. ಗಂಟೆಕಳೆದಂತೆಲ್ಲ ನೋವು ಹೆಚ್ಚುತ್ತಿತ್ತು. ಅಂತರಾತ್ಮನಿಗೆ ಹೇಳಿಕೊಂಡು ಇತರರಿಗೆ ಕಾಣದಂತೆ ದುಕ್ಕಡಿಸುತ್ತಿದ್ದೆ. ಕಷ್ಟದಿಂದ ನಡೆಯುತ್ತಿದ್ದೆ. ಮೂಳೆಯಲ್ಲಿ ಕೂದಲು ಸೀಳುಗಳಾಗಿರಬೇಕೆಂದು ನಾನು ಊಹಿಸಿದೆ.

ಉದ್ದಕ್ಕೂ ಸಾಕಪ್ಪ, ಸಾಕು, ಈ ನೋವು. ಲಾಸ್‌ಏಂಜಲಿಸ್ ಎಷ್ಟು ಹೊತ್ತಿಗೆ ಸೇರುತ್ತೇನೊ ಎಂದು ಒಳಗೊಳಗೆ ಮಮ್ಮಲಮರುಗುತ್ತಿದ್ದೆ, ಮುಲುಕುತ್ತಿದ್ದೆ. ಅಳಿಯ ಮಗಳ ಮುಖಗಳನ್ನು ನೋಡಿದಾಗ ನೋವು ಮರೆಯಾಯಿತು. ಮನೆ ಸೇರಿದ ಕೂಡಲೇ ಪಟ್ಟಿ ತೆಗೆದರು. ಟಿಂಕ್ಚರ್ ಹಾಕಿದರು. ಅದೇನೊ ಮಾತ್ರೆ ನುಂಗಿಸಿದರು. ಸುಮಾರು ಒಂದೂವರೆ ತಿಂಗಳ ಕಾಲ ನೋಯುತ್ತಲೆ ಇತ್ತು. ಅದು ಗಾಯದ ನೋವಲ್ಲ, ಮೂಳೆಯ ನೋವೆಂದು ನನಗೆ ಮನದಟ್ಟಾಗಿತ್ತು. ಚಾಟನೂಗಿನ ಬಂಧು ಮೂಳೆಯ ವೈದ್ಯ ಚಂದ್ರಶೇಖರ್ ಬಂದಾಗ ಪರೀಕ್ಷಿಸಿ ಮೂಳೆಗೆ ಸ್ವಲ್ಪ ಜಖಂ ಆಗಿರಬೇಕು, ಆದರ ಸುತ್ತ ಮಜ್ಜೆಯ ಉಂಗುರ ಬೆಳೆದಿರುವುದರಿಂದ ಕೂದಲು ಸೀಳು ಸೇರಿಕೊಂಡಿವೆ ಎಂದು ಹೇಳಿದ.

ಸರಿ, ಎರಡನೆಯ ದಿನದಿಂದಲೇ ನನ್ನ ಶರೀರದ ತಪಾಸಣೆ ಪ್ರಾರಂಭವಾಯಿತು. ಕ್ಷಕಿರಣ ಯಂತ್ರವನ್ನು ನನ್ನ ಎದೆಯ ನಾನಾ ಭಾಗಗಳ ಮೇಲೆ ಹಾಯಿಸಿದ್ದಾಯಿತು. ಶ್ವಾಸಕೋಶದಲ್ಲಿ ರೋಗಾಣುಗಳ ಬಲೆ ನೇಯ್ದುಕೊಂಡಿದೆಯೆಂದು ಹೆಸರಿಗೆ ತಕ್ಕಂತೆ ಸ್ನೇಹ ಪ್ರೇಮಗಳೇ ಮೂರ್ತಿವೆತ್ತಂತಿರುವ ಚಂದ್ರು ಕೆಲವು ದಿನ ಆಗ್‌ಮೆಂಟಿನ್ ನುಂಗಿಸಿದರು. ಪೌಷ್ಟಿಕ ಮಾತ್ರೆಗಳನ್ನು ತಂದುಕೊಟ್ಟರು. ಔಷಧಿ ಮತ್ತು ಪ್ರೀತಿಯ ಸಮ್ಮಿಶ್ರಣದ

ಉಪಚಾರದಿಂದ ದಿನೇ ದಿನೇ ನನ್ನನ್ನು ಮೆಟ್ಟಿಕೊಂಡಿದ್ದ ದೆವ್ವ ರೋಗಗಳು ಕಂಬಿಕೀಳಲಾರಂಭಿಸಿದುವು. ಆದರೂ ಅವರ ಆತಂಕ ಇಳಿದಿರಲಿಲ್ಲ. ಅವರು ಮಾತಾಡಿಸಿದಾಗ ನಾನು ಉತ್ತರ ಕೊಡುತ್ತಿರಲಿಲ್ಲ. ದೂರದರ್ಶನದ ಕಾರ್ಯಕ್ರಮಗಳು ನನಗೆ ಕೇಳಿಸುತ್ತಿರಲಿಲ್ಲ. ಭೋಜನದ ಮೇಜಿನ ಮುಂದೆ ಕುಳಿತಾಗ ಅವರ ಸಂಭಾಷಣೆಯಲ್ಲಿ ನಾನು ಪಾಲ್ಗೊಳ್ಳುತ್ತಿರಲಿಲ್ಲ.

ಕಿವಿರೋಗ ವೈದ್ಯರ (ಶೇಖ್) ಬಳಿಗೆ ಕರೆದುಕೊಂಡು ಹೋದರು. ಶಬ್ದನಾಳಗಳಲ್ಲಿ ಕೀವು ತುಂಬಿದೆ. ಆಗ್‌ಮೆಂಟಿನ್ ಕೊಡಿ. ಅದರಿಂದ ವಾಸಿಯಾಗದಿದ್ದರೆ ತೂತು ಮಾಡಬೇಕಾಗುತ್ತದೆ ಎಂದರು. ಬಲಗಿವಿ ಸರಿಯಾಯಿತು. ಎಡಗಿವಿ ಮೊಂಡು ಹಿಡಿಯಿತು. ವೈದ್ಯರು ಅರಿವಳಿಕೆ ಮದ್ದು ಕೊಟ್ಟು ಕೊಳವೆಯಿಂದ ಕೀವನ್ನು ಹೊರಗೆತೆಗೆದು, ಹುರುಳಿಕಾಳು ಗಾತ್ರದ ನಳಿಕೆಯನ್ನು ತೂತು ಮಾಡಿದ ಜಾಗದಲ್ಲಿ ಜೋಡಿಸಿದರು. ಕೇವಲ ಮೂರ್‍ನಾಲ್ಕು ಗಂಟೆಗಳಲ್ಲಿ ಕಿವಿ ಸಹಕರಿಸಲಾರಂಭಿಸಿತು. ಕೆಲವು ತಿಂಗಳು ಸ್ನಾನಮಾಡುವಾಗ ಕಿವಿಗೆ ರಬ್ಬರ್ ಬಿರಡೆ ಹಾಕಿಕೊಳ್ಳಬೇಕು. ಅವನ್ನು ತಂದು ಕೊಟ್ಟಿದ್ದಾರೆ.

ಹಿಂದೆ ನನ್ನ ಕಣ್ಣಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದ ಧರ್ ಬಳಿ ಚಂದ್ರುಕಲಾ ನನ್ನನ್ನೂ ಶ್ರೀಮತಿಯನ್ನೂ ಕರೆದುಕೊಂಡು ಹೋದರು. ನಗೆಮೊಗದ, ಮಧುರ ಹಾಸ್ಯವಚನದ ಆ ವೈದ್ಯರ ಸನಿಹದಲ್ಲಿರುವುದೇ ತುಂಬ ಚೆಂದ. ಇಬ್ಬರದೂ ನೇತ್ರ ಪರೀಕ್ಷೆಯಾಯಿತು. ಕನ್ನಡಕ ಬದಲಾಯಿಸಬೇಕೆಂದರು. ತಾಯಿಯಂತಿರುವ ನನ್ನ ಆ ಮಗಳು ಸುಮ್ಮನಿದ್ದಾಳೆಯೇ? ಇಬ್ಬರಿಗೂ ಹೊಸ ಕನ್ನಡಕ ತಂದು ಕೊಟ್ಟು, ಎಲ್ಲ ವಿಧದಿಂದಲೂ ನಮ್ಮ ಕಣ್ಣುಗಳಿಗೆ ತಂಪನ್ನೆರೆದಿದ್ದಾಳೆ.

ಚಂದ್ರು ಪರೀಕ್ಷೆಗೆಂದು ರಕ್ತ ತೆಗೆದುಕೊಂಡು ಹೋದರು. ರಕ್ತದಲ್ಲಿ ಸಕ್ಕರೆಯಿದೆ ಎಂದು ಅವರ ಯಂತ್ರ ಹೇಳಿದೆಯಂತೆ. ಇಲ್ಲಿಯ ತನಕ ನಾನು ತಿಂದಷ್ಟು ಸಕ್ಕರೆಯನ್ನು ನನ್ನ ವಯಸ್ಸಿನವರಾರೂ ತಿಂದಿರಲಾರರು. ಜ್ವರ ಪರಿಹಾರಕ್ಕೆಂದು ಮೈಸೂರಿನಲ್ಲಿ ಡಾಕ್ಟರು ಕೊಟ್ಟ ಕಾರ್ಟಿಜಾನ್ ಇಂಜೆಕ್ಷನ್‌ನಿಂದ ಸಕ್ಕರೆ ಕಾಣಿಸಿಕೊಂಡಿರಬೇಕೆಂದು ಅಮೆರಿಕೆಯ ವೈದ್ಯರು ಊಹಿಸಿದ್ದಾರೆ. ಇದು ಅಲೋಪಥಿ ವೈದ್ಯದ ಪರಿಣಾಮ. ನನ್ನ ಸಕ್ಕರೆಯ ಹೊಟ್ಟೆಬಾಕತನವನ್ನು ನೋಡಿದವರು ಯಾರೋ ಕಣ್ಣಾಸರೆ ಮಾಡಿದ್ದಾರೆಯೋ ಅಥವಾ ಬಡವರು ಅಂಬಲಿಯಿಲ್ಲದೆ ನರಳುವಾಗ ನೀನು ಸಿಕ್ಕಾ ಬಟ್ಟೆ ಸಿಹಿ ತಿಂದು ಮಜಾಮಾಡುತ್ತಿರುವುದು ನ್ಯಾಯವಲ್ಲ ಎಂದು ಭಗವಂತ ಶಪಿಸಿದ್ದಾನೆಯೊ ಏನೊ ಗೊತ್ತಿಲ್ಲ. ನನ್ನ ಶರೀರವೇ ಸಕ್ಕರೆ ಕಾರ್ಖಾನೆಯಾಗಿರಬಹುದೆ? ನನ್ನ ಬಾಳು ಎಷ್ಟು ಜನಕ್ಕೆ ಪ್ರಾಣಿವೃಕ್ಷಗಳಿಗೆ ಅಂತೆಯೇ ಪಂಚಭೂತಗಳಿಗೆ, ಋಣಿಯೋ ಕಾಣೆ. ಗಗನದ ನಕ್ಷತ್ರಗಳನ್ನೆಂತು ಎಣಿಸಲಾಗದೊ ಅಂತೆಯೇ ಋಣದಾತರ ಸಂಖ್ಯೆಯನ್ನೆಣಿಸುವುದು ಕಷ್ಟ.

* * * * *

ನಾನು ಕಾರು ಕೊಂಡದ್ದು

ಈ ವಿಷಯ ಮೊದಲೇ ವಿವರಿಸಬೇಕಿತ್ತು. ಇರಲಿ.

ಐವತ್ತು ವರ್ಷಗಳಿಗೂ ಹಿಂದೆ ಕನ್ನಡ ಎಂದರೆ ಲೋಕದ ಜನ ಮೂಗುಮುರಿಯುತ್ತಿದ್ದ ಕಾಲ. ಕನ್ನಡವನ್ನು ಓದುವ ವಿದ್ಯಾರ್ಥಿ, ಕಲಿಸುವ ಮೇಷ್ಟ್ರು, ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕ - ಎಲ್ಲರೂ ಎಲ್ಲರ ಅವಜ್ಞೆಗೆ ಪಾತ್ರರಾಗಿದ್ದ ದುಷ್ಕಾಲ. ಕನ್ನಡದ ಎಂ. ಎ. ಪಾಸು ಮಾಡಿದವರು ಯಾವ ಕಛೇರಿಯ ಬಾಗಿಲಿಗೆ ತಲೆ ತಾಡಿಸಿದರೂ ತೆರೆಯದಿದ್ದ ದುಷ್ ದುಷ್ ಕಾಲ. ಕನ್ನಡವನ್ನು ಓದಿ ಕೆಟ್ಟೆನಲ್ಲಾ ಎಂದು ಪರಿತಪಿಸುತ್ತಿದ್ದ ನಿರಾಶೆಯಿಂದ ಕಂಗೆಟ್ಟಿದ್ದ ಬಡತನದಿಂದ ಪರದಾಡುತ್ತಿದ್ದ ದುರ್ದಿನ. ಅದೆ ತಾನೆ ಬಿ.ಎಂ.ಶ್ರೀ, ಕುವೆಂಪು, ಅನಕೃ, ಎಆರ್‌ಕೃ, ಡೆಪ್ಯೂಟಿ ಚೆನ್ನಬಸಪ್ಪ ಮೊದಲಾದವರು ಕನ್ನಡದ ಏಳ್ಗೆಗಾಗಿ, ಅದರ ಸ್ಥಾನಮಾನಗಳಿಗಾಗಿ ಸರ್ವಪ್ರಯತ್ನವನ್ನು ನಡೆಸಿದರೂ ಕನ್ನಡ ಓದಿದವರಿಗೆ ಉದ್ಯೋಗಾವಕಾಶಗಳು ವಿರಳವಾಗಿದ್ದ ಬರಗಾಲವದು. ಕನ್ನಡವನ್ನು ಬಯ್ ಬಯ್ಯುತ್ತಲೆ ನಾನು ಸರ್ಕಾರದ ಕಾರ್ಯಸೌಧದಲ್ಲಿ ಕರಣಿಕನಾದೆ. ಕರಣಿಕ ವೃತ್ತಿ ಬೇಸರವಾಗಿ, ಪ್ಲೀಡರ್ ಆಗಬೇಕೆಂದು ಬಯಸುತ್ತಿದ್ದಾಗ, ಅಂದರೆ ನಾಲ್ಕು ವರ್ಷದ ನಂತರ ನನ್ನ ದೈವ ನನ್ನನ್ನು ವಿಶ್ವವಿದ್ಯಾನಿಲಯಕ್ಕೆಳೆತಂದಿತು. ಗುರುಕೃಪೆಯಿಂದ ಕನ್ನಡ ಓದಿದವರಿಗೆ ಮತ್ತು ಕನ್ನಡದ ಹೋರಾಟಗಾರರಿಗೆ ಸೇವೆ ಸಲ್ಲಿಸುವ ಅವಕಾಶಗಳೂ ನನಗೆ ದೊರೆತದ್ದುಂಟು. ಆಗ ನನಗಿದ್ದ ಒಂದೇ ಒಂದು ಚಲವೆಂದರೆ ಕನ್ನಡ ಓದಿದವರಿಗೆ ನೌಕರಿ ದೊರೆಯಬೇಕು, ಪ್ರಕಾಶಕರಿಗೆ ಒಳ್ಳೆಯ ಅನುಕೂಲಗಳಾಗಬೇಕು, ಎಂಬುದು; ಜತೆಗೆ ಅವರೆಲ್ಲರೂ ಮನೆ ಕಟ್ಟಿಸಿಕೊಂಡು, ಕಾರಿಟ್ಟುಕೊಂಡು ಚೆನ್ನಾಗಿರಬೇಕೆಂಬುದು.

ಕನ್ನಡ ಪ್ರಾಧ್ಯಾಪಕರಲ್ಲಿ ಮೊತ್ತಮೊದಲು ಕಾರು ಕೊಂಡವರೆಂದರೆ - ಶ್ರೀಯವರು ಇಂಗ್ಲಿಷ್ ಪ್ರಾಧ್ಯಾಪಕರು ತಾನೆ- ಕುವೆಂಪು ಅವರು. ಉಳಿದ ಇಲಾಖೆಗಳ ಅಧ್ಯಾಪಕರಿಗೆ ಆಶ್ಚರ್ಯವೋ ಆಶ್ಚರ್ಯ - ಮಾತ್ಸರ್ಯವಲ್ಲ- ಕುವೆಂಪು ಕಾರುಕೊಂಡು ನಡೆಸುತ್ತಿದ್ದುದು. ಕನ್ನಡ ಪಂಡಿತ ಕುವೆಂಪು ಪ್ರಿನ್ಸಿಪಾಲರಾದಾಗಲಂತೂ ಏನೋ ಒಂದು ಕ್ರಾಂತಿಯಾದಂತೆ ಹಲವರು ಗಾಬರಿಗೊಂಡದ್ದೂ ಉಂಟು. ಈಗ ಅವೆಲ್ಲ ಸರ್ವಸಾಮಾನ್ಯ ವಾಗಿರುವುದರಿಂದ ಯಾರಿಗೂ ಆಶ್ಚರ್ಯವಾಗುವುದಿಲ್ಲ.

ಪ್ರಾಯಶಃ ಕಾರುಕೊಂಡ ಎರಡನೆಯ ಪ್ರಾಧ್ಯಾಪಕ ನಾನೇ ಎಂದು ತೋರುತ್ತದೆ. ನನಗೆ ಕಾರಿಗಿಂತ ಕಾಲಿನಲ್ಲಿ ನಂಬಿಕೆ- ಈಗಲ್ಲ, ಯೌವನದಲ್ಲಿ. ಕನ್ನಡದ ಹೆಬ್ಬುಬ್ಬೆಗಾಗಿ, ಪ್ರತಿಷ್ಠೆಗಾಗಿ ನಾನು ಕಾರುಕೊಂಡೆ. ಕೊಂಡ ಮೇಲೆ ಕಷ್ಟಪಟ್ಟು ಬಿಡುವ ಕಲೆ ಕಲಿತುಕೊಂಡೆ, ಸುಮಾರಾಗಿ ಮಾತ್ರ. ಕೊನೆಯ ತನಕ ಅದರ ಚಾಲನ ಕೌಶಲ ನನಗೆ ಸಿದ್ಧಿಸಲಿಲ್ಲ.ಗಂಗೋತ್ರಿಯಿಂದ ಮನೆಗೆ, ಮನೆಯಿಂದ ಗಂಗೋತ್ರಿಗೆ ಮಾತ್ರ ಸಲೀಸಾಗಿ - ಸಲೀಸೆನ್ನುವುದೂ ಸಂದೇಹಾಸ್ಪದವಾಗಿಯೇ ಉಳಿದಿದೆ ಇನ್ನೂ- ತೆಗೆದುಕೊಂಡು

ಹೋಗುತ್ತಿದ್ದೆ. ಪೇಟೆಗೂ ಮಾರ್ಕೆಟ್ಟಿಗೂ ಸಿನಿಮಾ ಮಂದಿರಕ್ಕೂ ಅದನ್ನು ನಡೆಸಿಕೊಂಡು ಹೋದರೆ ಅದಕ್ಕೆ ತೊಂದರೆಯಾದೀತೆಂಬ ಪರವೇದನಾ ವಿಸರ್ಜನ ಮನೋಭಾವವೂ ಇತ್ತು, ಹಲ್ಲು ಬಿದ್ದು ಹೋದ ಮೇಲೆ ಮಾಂಸಾಹಾರ ಬೇಡವೆನ್ನುವ ರೀತಿಯಲ್ಲಿ.

ಒಂದು ಸಲ ಕ್ರಾಫರ್ಡ್ ಭವನಕ್ಕೆ ಮೀಟಿಂಗಿಗೆಂದು ಹೋಗಿದ್ದೆ. ಸಂಜೆ ಮನೆಗೆ ಬೇಗ ವಾಪಸಾಗಿ, ಉಂಡು, ಧಾರವಾಡದ ರೈಲು ಹಿಡಿಯ ಬೇಕಾಗಿದ್ದುದರಿಂದ ಕಾರು ತೆಗೆದುಕೊಂಡು ಹೋಗಿದ್ದೆ. ನಾನು ಸ್ಟಿಯರಿಂಗ್ ಹಿಡಿದುಕೊಂಡ ಕೂಡಲೇ ಏನೇನೋ ಆಲೋಚನೆಗಳು ತಲೆಯ ಮೇಲೆ ದಾಳಿ ನಡೆಸುತ್ತಿದ್ದವು. ಸುಳಿ ಬೀಳುತ್ತಿತ್ತು. ರೈಲು ಸೇತುವೆ ಕಳೆದು ಹತ್ತಾರು ಗಜ ಹೋಗಿರಬೇಕು ನನ್ನ ಕಾರು - ನಾನಲ್ಲ - ತನ್ನ ಕಣ್ಣಿಗೆ ಕಾಣದಂತೆ ಬರುತ್ತಿದ್ದ ಜಟಕಾ ಗಾಡಿಗೆ ಡಿಕ್ಕಿ ಹೊಡೆಯಿತು. ಗಾಡಿಯ ಬಲಗಡೆಯ ಮೂತಿಯನ್ನು ಚಚ್ಚಿಕೊಂಡು, ಅದರ ಚಕ್ರಕ್ಕೆ ಸಶಬ್ದವಾಗಿ ತಾಕಿತು. ನಾನು ತಕ್ಷಣ ಎಚ್ಚೆತ್ತು ಬಿರಿ ಹಾಕಿದೆ. ಕಾರಿನ ಕನ್ನಡಕ ಚೂರು ಚೂರಾಯಿತು. ಕುದುರೆಗಾಡಿಗೆ ಏನೂ ತೊಂದರೆಯಾಗಲಿಲ್ಲ. ಗಾಡಿಯವನ ಕೈಯಲ್ಲಿ ಹತ್ತುರೂಪಾಯಿ ನೋಟಿಟ್ಟು ಮನೆಗೆ ಹೋದೆ.

ಮತ್ತೊಂದು ಸಲ ಬೆಳಗ್ಗೆ ಉಪಾಹಾರ ಸಭೆಗೆಂದು ಕ್ರಾಫರ್ಡ್ ಭವನಕ್ಕೆ ಹೋಗಿದ್ದೆ. ಕಾರಿನಲ್ಲಿ ಹೋಗದಿದ್ದರೆ ಯಾರಾದರೂ ನನ್ನನ್ನು ದೊಡ್ಡ ಪ್ರಾಧ್ಯಾಪಕನೆಂದು ಗೌರವಿಸುವುದುಂಟೆ? ಹಿಂದಿನ ದಿನ ಮಳೆ ಬಿದ್ದು ಭವನದೆದುರ್ಗಿ ಕ್ರೀಡಾಬಯಲು ಕೊಚ್ಚೆಯಾಗಿತ್ತು. ಸಣ್ಣ ಸಣ್ಣ ಕೊರಕಲುಗಳಲ್ಲಿ ನೀರೂ ತುಂಬಿತ್ತು. ಅದಾವುದನ್ನೂ ಕಾರಿಟ್ಟಿದ್ದೇನೆಂಬ ಗರ್ವದಿಂದ ಲೆಕ್ಕಿಸದೆ, ಒಂದು ಕೊರಕಲ ಮುಂದೆ ನಿಲ್ಲಿಸಿದೆ. ಸಭೆ ಮುಗಿದ ನಂತರ ಕಾರಿನ ಬಳಿಗೆ ನಡೆಯುವಾಗ ಕಣ್ಣು ತಿರ್ರಗಾದಂತಾಗಿ - ಬುದ್ಧಿ ತಿರ್ರಗಾಯಿತೊ ಏನೊ-ಕೊರಕಲಿಗೆ ಬಿದ್ದೆ. ಕೆಲವು ಕ್ಷಣ ನನ್ನ ಪ್ರಜ್ಞೆ ತಪ್ಪಿತು. ಯಾರೋ ಬಂದು ಎತ್ತಿದರು. ಕಾರಿನ ಬಂಪರಿಗೆ ತಲೆ ಬಡಿಯಬೇಕಾಗಿತ್ತು; ಬಡಿದಿದ್ದರೆ ಏನಾಗುತ್ತಿತ್ತೊ ಗೊತ್ತಿಲ್ಲ. ಕಣ್ಣು ಹೋಗಿದ್ದರೂ ಹೋಗಬಹುದಿತ್ತು. ನನ್ನ ಕಾರೇ ನನ್ನನ್ನು ರಕ್ಷಿಸಿತೆಂದುಕೊಂಡೆ.

ಬಲದೋಳಿಗೆ ಪಟ್ಟಿ ಕಟ್ಟಿಸಿಕೊಂಡು ಒಂದೂವರೆ ತಿಂಗಳು ಮಲಗಿದ್ದೆ. ಪಟ್ಟಿ ಬಿಚ್ಚಿದ ಮಾರನೆಯ ದಿನವೆ ಮಗನನ್ನು ಕೂರಿಸಿಕೊಂಡು ಗಂಗೋತ್ರಿಗೆ ಹೊರಟಿದ್ದೆ. ಆಗಿನ ನಮ್ಮ ಮನೆಯ ಬೀದಿ ಕಾಳಿದಾಸ ರಸ್ತೆಯ ಕಡೆಗೆ ತುಂಬ ಕಡಿದಾಗಿತ್ತು. ಕಾಳಿದಾಸ ರಸ್ತೆಯ ಆಸ್ಪತ್ರೆಯ ಕಡೆಯ ಆರೇಳು ಅಡಿ ಅಗಲದ ಆಳೆತ್ತರದ ಹಳ್ಳ ಮೂರು ಹೊತ್ತೂ ಬಾಯಿ ತೆರೆದುಕೊಂಡೇ ಇರುತ್ತಿತ್ತು. ನಮ್ಮ ಬೀದಿಯ ಕೊನೆಯಲ್ಲಿ ಎಡಗಡೆಗೆ ಸ್ಟಿಯರಿಂಗ್ ತಿರುಗಿಸಲು ಯತ್ನಿಸಿದೆ. ಬಲದೋಳು ಸಹಕರಿಸಲಿಲ್ಲ. ಹಳ್ಳದ ಕಡೆಗೆ ಕಾರು ವೇಗವಾಗಿ ಜಾರುತ್ತಿತ್ತು. 'ಕೆಟ್ಟೆ, ಕೆಟ್ಟೆ' ಎಂದು ಕೂಗಿಕೊಂಡೆ. ನನ್ನ ಗೋಳು ಭಗವಂತನಿಗೆ ತಲುಪಿರಬೇಕು. ಹಳ್ಳದ ದಡದಲ್ಲೊಂದು ನೀರು ತುಂಬಿದ ಕೊರಕಲಿತ್ತು. ಬಲಗಡೆ ಚಕ್ರ ಅದರಲ್ಲಿ ಹೂತುಕೊಂಡಿತು. ಕಾರು ನಿಂತಿತು. ಅದು ಹಳ್ಳಕ್ಕೆ ಬಿದ್ದಿದ್ದರೆ, ನಾನು

ಕುಲಪತಿಯಾಗುವಂತಿರಲಿಲ್ಲ; ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವಂತಿರಲಿಲ್ಲ. ನೋಡುವಂತಿರಲಿಲ್ಲ; ಕುವೆಂಪು ವಿದ್ಯಾವರ್ಧಕ ಟ್ರಸ್ಟನ್ನು ಕಟ್ಟುವಂತಿರಲಿಲ್ಲ; ನಾಲ್ಕಾರು ಸಾರಿ ವಿದೇಶೀ ಪ್ರವಾಸ ಮಾಡುವಂತಿರಲಿಲ್ಲ; ನನ್ನ ಪುಸ್ತಕಗಳ ಸಂಖ್ಯೆ ನೂರೈವತ್ತಕ್ಕೇರುತ್ತಿರಲಿಲ್ಲ. ಕಾರು ನಿಂತರೂ ನನ್ನ ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ನನಗೆ ಕೂಡಲೆ ಆದ ತೃಪ್ತಿಯೆಂದರೆ, ನನ್ನ ಮಗ ಉಳಿದನಲ್ಲ ಎಂಬುದೊಂದೆ. ಆ ಘೋರ ದುರಂತ ಏನಾದರೂ ಸಂಭವಿಸಿದ್ದರೆ, ನನ್ನ ಮಗ ಮುಂದೆ ಏನಾಗಬೇಕಾಗಿದೆಯೋ ಅದೆಲ್ಲವೂ ಇಲ್ಲವಾಗುತ್ತಿತ್ತು; ನನ್ನ ವಂಶಿಕ ಪರಂಪರೆಗೆ, ಬೌದ್ಧಿಕ ಪರಂಪರೆಗೆ ಅಡಚಣೆಯೊದಗುತ್ತಿತ್ತು. ಇಷ್ಟಕ್ಕೆಲ್ಲ ಗುರುಗಳ ಆಶೀರ್ವಾದವೇ, ಭಗವತ್ಕೃಪೆಯೇ ಕಾರಣವೆಂಬುದು ನನಗೆ ಖಚಿತವಾಗಿದೆ.

ಮಗುದೊಂದು ಸಲ. ಮಧ್ಯಾಹ್ನದ ಊಟಕ್ಕೆ ತುಸು ಮುಂಚಿತವಾಗಿ ಮನೆಗೆ ಹೊರಟಿದ್ದೆ. ಮಾನವಿಕ ವಿಭಾಗದ ಕಟ್ಟಡದ ಮುಂದಿನ ಮುಖ್ಯರಸ್ತೆಯಲ್ಲಿ ಎಡಕ್ಕೆ ಕಾರು ತಿರುಗಿಸಿದೆ, ತಿರುಗಿಸುವಾಗ ಆಕ್ಸಿಲೇಟರ್ ಜಾಸ್ತಿ ಒತ್ತಿದೆನೆಂದು ಕಾಣುತ್ತದೆ. ಕಾರು ರಸ್ತೆಯ ಕಲ್ಲಂಚಿನ ಮೇಲೆ ಹಾಯ್ದು ಎರಡಡಿ ಎತ್ತರದ ಗೊಬ್ಬರಗುಡ್ಡೆಯನ್ನು ಹತ್ತಿಳಿದು ಮತ್ತೊಂದು ಗೊಬ್ಬರಗುಡ್ಡೆಯನ್ನು ಹತ್ತುವುದರಲ್ಲಿತ್ತು - ಹತ್ತಲಿಲ್ಲ. ಕಾರಣ ಆಕ್ಸಿಲೇಟರ್ ಮೇಲಿಟ್ಟಿದ್ದ ಕಾಲು ತೆಗೆದಿದ್ದೆ. ಗಾಬರಿಯಿಂದಾಗಿ ಬ್ರೇಕ್ ಹಾಕುವುದೂ ಮರೆತು ಹೋಗಿತ್ತು. ಆ ಹೊತ್ತಿಗೆ ಅಲ್ಲಿಗೆ ಬಂದ ಚಾಲಕನೊಬ್ಬ ಕಾರನ್ನು ರಸ್ತೆಗೆ ತಂದ. ಪ್ರಾಯಶಃ ಇನ್ನೊಂದು ಗುಡ್ಡೆಯನ್ನದು ಹತ್ತಿ ಮಗುಚಿಕೊಂಡಿದ್ದರೆ ಈಗ ನಾನು ಈ ಕತೆಯನ್ನು ಬರೆಯುತ್ತಿರಲಿಲ್ಲ. ಕಾರು ಬಿಡುವಾಗ ಯಾವಾಗಲೂ ಆಕ್ಸಿಲೇಟರ್ ಬ್ರೇಕ್ ಸ್ವಿಚ್ ಸ್ಟಿಯರಿಂಗ್‌ಗಳ ಮೇಲೆ ನನಗೆ ಪರಿವೆಯೇ ಇರುತ್ತಿರಲಿಲ್ಲ; ನನ್ನ ದೃಷ್ಟಿ ನನ್ನ ಆಲೋಚನೆ ಎಲ್ಲೆಲ್ಲಿಯೋ ಅಲೆಯುತ್ತಿದ್ದವು. ಅದು ಪಾಪ ಮಾಡಿ ನನ್ನ ಕೈಗೆ ಸಿಕ್ಕಿತೆಂದು ತೋರುತ್ತದೆ. ಸಂಯಮವಿಲ್ಲದೆ ಕನಿಕರವಿಲ್ಲದೆ, ಅದರ ನೋವು ಬೇನೆಗಳನ್ನು ಲೆಕ್ಕಿಸದೆ ನಾನದನ್ನು ಬಳಸಿದ್ದೇನೆ.

1969ನೆಯ ಇಸವಿಯ ನಂತರ ನಾನು ಕಾರು ಚಾಲಿಸುವ ತಂಟೆಗೆ ಹೋಗಲಿಲ್ಲ. ಈಚೆಗೆ ಕಾರಿಗಿಂತ ಹೆಚ್ಚಾಗಿ ಕಾಲನ್ನೇ ಬಳಸುತ್ತಿದ್ದೇನೆ.

* * * * *

ನಾನು - ದೇಜಗೌ ಟ್ರಸ್ಟ್

ಕನ್ನಡ ಬರಹಗಾರರಿಗೆ ಸಿಗುವ ರಾಯಧನದಿಂದ ಜೀವನ ಹೊರೆಯಲು ಸಾಧ್ಯವೇ ಇಲ್ಲ. ಅಷ್ಟೋ ಇಷ್ಟೋ, ಯಾವಾಗಲೋ ಒಮ್ಮೆ ಲಭಿಸುವ ಹಣವನ್ನು ನಾನಾಗಲಿ ನನ್ನ ಮನೆಯವರಾಗಲಿ ಬಳಸಿಕೊಳ್ಳದೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬೆಳವಣಿಗೆಗೆ ಪ್ರಾರಂಭದಲ್ಲಿ ಖರ್ಚು ಮಾಡಲಾಯಿತು. ಈಗಲೂ ಆ ಸಂಸ್ಥೆಯಿಂದ ಪ್ರಕಟವಾಗುವ ನನ್ನ ಪುಸ್ತಕಗಳಿಗೆ ಸಂಭಾವನೆ ಸ್ವೀಕರಿಸುವುದಿಲ್ಲ. ಟ್ರಸ್ಟ್ ಒಂದು ಸ್ಥಿತಿಗೆ ಬಂದ ನಂತರ ನನ್ನ ರಾಯಧನವೆಲ್ಲ ದೇಜಗೌ ಟ್ರಸ್ಟಿಗೆ ಜಮಾವಣೆಯಾಗುತ್ತಿದೆ. ಅದರಿಂದ ಬರುವ ಬಡ್ಡಿಯನ್ನು ಬಹುಮಾನ ರೂಪವಾಗಿ ಲೇಖಕರಿಗೆ ವಿನಿಯೋಗಿಸಬಹುದೆಂದು ನನ್ನ ಮಡದಿ, ಮಗ, ಸೊಸೆ, ಮಗಳು ಎಲ್ಲರೂ ಒಪ್ಪಲಾಗಿ, ವಿಶ್ವಮಾನವ ಪ್ರಶಸ್ತಿಯನ್ನು ಪ್ರಾರಂಭಿಸಲಾಯಿತು. ನನ್ನ ಪಾಲಿಗೆ ಕುವೆಂಪು ವಿಶ್ವ ಮಾನವರು. ಅವರ ಹೆಸರಿನ ಪ್ರಶಸ್ತಿಯಿದು. ನನ್ನ ಮಗಳು ಮತ್ತು ಹತ್ತಿರದ ಬಂಧು ಚಂದ್ರಶೇಖರ್‌ನ ಕೊಡುಗೆಯನ್ನು ಸಾವಿತ್ರಮ್ಮ ದೇಜಗೌ ಮಹಿಳಾ ಪ್ರಶಸ್ತಿಗಾಗಿ ಬಳಸಲಾಗುತ್ತಿದೆ.

ನಾನು ದೇಜಗೌ ಟ್ರಸ್ಟಿನಿಂದ ಕಳಚಿಕೊಂಡಿದ್ದೇನೆ. ನನ್ನ ಮಡದಿ ಮಗ ಮತ್ತು ಸೊಸೆ ಅದನ್ನು ನಡೆಸುತ್ತಿದ್ದಾರೆ. ಅವರು ಸಹ ಬಹುಮಾನ ನಿರ್ಣಯದ ಹೊಣೆಗಾರಿಕೆಯನ್ನು ತಜ್ಞರ ಸಮಿತಿಗೊಪ್ಪಿಸಿದ್ದಾರೆ. ಈ ತನಕ ತಜ್ಞರ ಸಮಿತಿಯ ತೀರ್ಮಾನವನ್ನು ಟ್ರಸ್ಟ್ ಉಲಂಘಿಸಿದ್ದಿಲ್ಲ.ಆದರೂ ಕೆಲವು ಲೇಖಕ ಮಿತ್ರರು ಬಹುಮಾನಕ್ಕಾಗಿ ನನ್ನನ್ನು ಕಾಡುತ್ತಾರೆ. ಟ್ರಸ್ಟು ನನ್ನ ಹೆಸರಿನಲ್ಲಿರುವುದರಿಂದ ನನಗೆ ಬೇಕಾದವರಿಗೆ ಯಾವ ವಿಧಿವಿಧಾಯಕವನ್ನೂ ಗಮನಿಸದೆ ಬಹುಮಾನವನ್ನು ಕೊಟ್ಟು ಬಿಡಬಹುದೆಂಬ ಅನಿಸಿಕೆ ಮಿತ್ರರ ಮನಸ್ಸಿನಲ್ಲಿ ನಾಟಿ ಕೊಂಡಿರುವಂತೆ ತೋರುತ್ತದೆ. ಅದು ಸರಿಯಲ್ಲ.

ಹಲವು ಸಲ ಅರ್ಹತೆಯುಳ್ಳ ಗ್ರಂಥಗಳಿಗೆ ಅಥವಾ ಲೇಖಕರಿಗೆ ಬಹುಮಾನ ಬರದಿರಬಹುದು. ನೊಬೆಲ್ ಪಾರಿತೋಷಕ ಸಮಿತಿ, ಸಾಹಿತ್ಯ ಅಕಾಡೆಮಿ, ವಿಜ್ಞಾನ ಅಕಾಡೆಮಿಗಳಲ್ಲಿ ಸಹ ಅನೇಕ ಅರ್ಹರಿಗೆ ಪ್ರಶಸ್ತಿ ಬಹುಮಾನಗಳು ತಪ್ಪಿಹೋಗಿರುವುದುಂಟು.ಟಾಲ್‌ಸ್ಟಾಯ್ ಅಂಥ ಮಹಾಸಾಹಿತಿಗೆ ನೊಬೆಲ್ ಪಾರಿತೋಷಕ ಬರಲಿಲ್ಲವೆಂದರೆ ಅಲ್ಲೇನೋ ಹಿಕಮತ್ ನಡೆದಿರಬೇಕೆಂದ ನಿಸದಿರಲಾರದು. ವ್ಯಕ್ತಿ ರಾಜಕೀಯ, ಜಾತಿರಾಜಕೀಯ, ಮತೀಯ ರಾಜಕೀಯ, ತಾತ್ವಿಕ ರಾಜಕೀಯ, ಭೌಗೋಳಿಕ ರಾಜಕೀಯ, ದುಷ್ಟ ರಾಜಕೀಯಗಳು ಪಾರಿತೋಷಕ ನಿರ್ಣಯದಲ್ಲಿ ಪಾತ್ರ ವಹಿಸುತ್ತಿವೆಯೆಂಬುದು ಖಚಿತ. ಅಂಥ ರಾಜಕೀಯ ನಡೆಯುತ್ತಿಲ್ಲವೆಂದು ಪಾರಿತೋಷಕ ಪಡೆದವರು ವಾದಿಸಬಹುದು. ಆದರಿಲ್ಲಿ ಅಂಥ ರಾಜಕೀಯ ನಡೆಯಲು ಸಾಧ್ಯವಿಲ್ಲ, ತಜ್ಞರದೇ ಪೂರ್ಣ ಜವಾಬ್ದಾರಿಯಾದ್ದರಿಂದ; ಅವರು ನಿಷ್ಪಕ್ಷಪಾತ ದೃಷ್ಟಿಯವರಾದ್ದರಿಂದ ಇಲ್ಲಿ ಜಾತಿ ರಾಜಕೀಯಕ್ಕೆ ಅವಕಾಶವೇ ಇಲ್ಲವೆಂಬ ಸತ್ಯ ಸಂಗತಿಯನ್ನು ಈ ತನಕ ನೀಡಿರುವ ಪ್ರಶಸ್ತಿಗಳೇ ಘೋಷಿಸುತ್ತವೆ. ಪ್ರಶಸ್ತಿಗಾಗಿ ಬಂದ

ಕೃತಿಗಳಲ್ಲಿ ನಾಲ್ಕಾರು ಅರ್ಹ ಕೃತಿಗಳಿರುತ್ತವೆ. ಅವುಗಳಲ್ಲೊಂದನ್ನು ಸಮಿತಿ ಆರಿಸಬೇಕಾಗುತ್ತದೆ ಆರಿಸದೆ ಇರುವ ಪುಸ್ತಕಗಳು ಅನರ್ಹವಾದುವೆಂದು ಯಾರೂ ಭಾವಿಸಬಾರದು.

ಆದರೂ ಬಹುಮಾನ ಬರದ ಜನ ಬಾರದಿರುವುದಕ್ಕೆ ನಾನೇ ಕಾರಣನೆಂದು ಶಪಿಸುತ್ತಾರೆ. ಇದು ಮಾನವ ಸಹಜ ಗುಣ. ಅವರು ನನ್ನ ಮೇಲೆ ಅನೇಕ ಆಪಾದನೆಗಳನ್ನು ಹೊರಿಸಿ ಪ್ರಚಾರಮಾಡುತ್ತಾರೆ. ನನ್ನ ಮೇಲೆ ಮಾತ್ರವಲ್ಲ, ನನ್ನ ಸಂತಾನದ ಮೇಲೂ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. 'ನೀವು ಒಕ್ಕಲಿಗರಾಗಿ ಒಕ್ಕಲಿಗರಿಗೆ ಪ್ರಶಸ್ತಿ ಕೊಡದಿದ್ದರೆ ಹೇಗೆ?' ಎಂದು ಕೇಳುವವರೂ ಇದ್ದಾರೆ. ಒಕ್ಕಲಿಗರಿಗೆ ಕೊಡಬಾರದೆಂದಿಲ್ಲ. ಒಂದು ಸಾಲೊ ಎರಡು ಸಾಲೊ ತಡವಾದರೇನಂತೆ? ನನ್ನಿಂದ ನಾನಾ ರೀತಿಯ ಸಹಾಯ ಪಡೆದ ಗಣ್ಯ ಸಾಹಿತಿಯೊಬ್ಬರು ಎಷ್ಟು ದೂರ ಹೋದರೆಂದರೆ, ಪ್ರಶಸ್ತಿಗಾಗಿ ತಾವು ಕಳಿಸಿದ್ದ ಗ್ರಂಥಗಳನ್ನು ಹಿಂದಿರುಗಿಸಬೇಕೆಂದು ಪತ್ರ ಬರೆದರು. ಕುವೆಂಪು ವಿದ್ಯಾಪರಿಷತ್ತಿನ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು. ಅವರು ಪ್ರಶಸ್ತಿಗೆ ಸರ್ವರೀತಿಯಲ್ಲಿಯೂ ಅರ್ಹರು, ನಿಜ. ಸಹನೆಯಿಲ್ಲದಿದ್ದರೆ ಅವರ ವಿದ್ವತ್ತಿಗೇನು ಬೆಲೆ ಬಂದೀತು? ನನ್ನ ಕೃತಿಗಳ ಬಗ್ಗೆ ಅಧ್ಯಯನ - ಸಂಶೋಧನೆ ನಡೆಸಿ ಪಿಎಚ್‌ಡಿ ಪದವಿಗೆ ನಿಬಂಧವನ್ನು ಸಾದರ ಪಡಿಸಬೇಕೆಂದಿದ್ದ ವಿದ್ಯಾರ್ಥಿಯನ್ನು ಕರೆದು ನಿರುತ್ಸಾಹಗೊಳಿಸಿ, ಆ ವಿಷಯವನ್ನು ಕೈಬಿಡುವಂತೆ ಅವರು ಪ್ರೇರಿಸಿದ್ದುಂಟು.

ಡಾ. ಎಂ. ಎಂ. ಕಲಬುರ್ಗಿ ದೊಡ್ಡ ವಿದ್ವಾಂಸರು ಹಾಗೂ ನನ್ನ ಮಿತ್ರರು. ನನ್ನ ಪ್ರಯತ್ನವಿಲ್ಲದೆ ಅವರಿಗೆ ಒಂದು ಸಾಲಿನ ಪ್ರಶಸ್ತಿ ದೊರಕಿತು. ಆದರೆ ಆ ಕಾಲದಲ್ಲಿ ಅವರಿಗೆ ವಿರುದ್ಧವಾಗಿ ಬಂದ ಪತ್ರಗಳಿಗೆ ಉತ್ತರ ಕೊಡುವುದೇ ನನಗೆ ಕಷ್ಟವಾಗಿತ್ತು. ಈಗಲೂ ಅವರಿಂದಾಗಿ ನನ್ನ ಬಗ್ಗೆ ಕೆಲವರು ಅಸಮಾಧಾನ ಹೊಂದಿದ್ದಾರೆ. ಮನುಷ್ಯನಲ್ಲೊಮ್ಮೆ ಸೇಡಿನ ಮನೋಭಾವ ಕುಡಿಯಿಟ್ಟಿದ್ದಾದರೆ ಅದು ದಾಂಗುಡಿಯಾಗುತ್ತದೆಯೆ ಹೊರತು ಮುರುಟಿ ಹೋಗುವುದಿಲ್ಲ. ಇದು ಮಾನವನ ದುರ್ದೈವ.

ಇಂಥ ಸಮಯದಲ್ಲಿ ನನಗೆ ನಿರಾಶೆಯಾಗುವುದೂ ಉಂಟು. ಪ್ರತಿವರ್ಷ ನಲವತ್ತು ಸಾವಿರ ರೂಪಾಯಿ ಏಕೆ ಖರ್ಚುಮಾಡಬೇಕಿತ್ತು? ಅದನ್ನು ನಾನೇ ಉಳಿಸಿಕೊಂಡಿದ್ದರೆ ಮುಪ್ಪಿನಲ್ಲಿ ಬದುಕಿಗೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಬಹುದಿತ್ತಲ್ಲ ಎನಿಸುತ್ತದೆ. ಅತೃಪ್ತ ಕ್ಷುದ್ರವ್ಯಕ್ತಿಗಳ ನಿಂದೆಗೆ ಅಪಪ್ರಚಾರಕ್ಕೆ ನಾನೇಕೆ ಕಿವಿಗೊಡಬೇಕೆಂಬ, ಶೋಕಿಯಿಂದ ಆಗ ಬೇಕಾದ್ದೇನು, ಸುಖ ಎಂದರೆ ಬರಿಯ ಭೋಗವಿಲಾಸವಲ್ಲ, ಮನಸ್ತೃಪ್ತಿಯೇ ಸುಖ, ಸರಳತೆಯಲ್ಲಿಯೂ ವೈಭವವಿದೆಯೆಂಬ, ಸಮಾಜದಿಂದ ಬಂದ ಹಣವನ್ನು ನಾನು ಸ್ವಂತಕ್ಕಾಗಿ ಬಳಸಿಕೊಳ್ಳತಕ್ಕದ್ದು ಸಲ್ಲದೆಂಬ ತಾತ್ತ್ವಿಕ ಮೌಲ್ಯ ನನ್ನನ್ನು ಈ ಕೈಂಕರ್ಯಕ್ಕೆ ಪ್ರೇರಿಸಿದೆ.ಆದ್ದರಿಂದ ನಿರಾಶೆ ಕ್ಷಣಿಕವಾದದ್ದೇ. ಈ ಎರಡು ಪ್ರಶಸ್ತಿಗಳನ್ನು ಸಕ್ರಮವಾಗಿ ಪ್ರತಿವರ್ಷವೂ ತಪ್ಪದೆ ನನ್ನ ಮಕ್ಕಳು ಮತ್ತು ಮೊಮ್ಮಕ್ಕಳು ನಡೆಸಿಕೊಂಡು ಹೋದದ್ದೇ ಆದರೆ ನನಗೆ ಎಂದೆಂದಿಗೂ ಸಂತೋಷವಾಗುತ್ತದೆ.

ಏಕೀಕರಣ ಮತ್ತು ನಾನು

'ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ನಿಮ್ಮ ಪಾತ್ರವೇನು? ಎಂದು ಕೆಲವು ವರ್ಷಗಳ ಹಿಂದೆ ಮಿತ್ರರು ಪ್ರಶ್ನಿಸುತ್ತಿದ್ದುದುಂಟು. ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಸಂಶೋಧನ ವಿದ್ಯಾರ್ಥಿಯೊಬ್ಬರು ಅದೇ ಪ್ರಶ್ನೆಯನ್ನು ಕೇಳಿದರು. ನಾನವರಿಗೆ ಕೊಟ್ಟ ಉತ್ತರ 'ಸೊನ್ನೆ', 'ಕನ್ನಡದ ಸ್ಥಾನಮಾನಗಳಿಗಾಗಿ ಚಳುವಳಿ ಹೂಡಿದವರು ಏಕೀಕರಣದ ಪರವಾಗಿ ಏಕೆ ಹೋರಾಟ ನಡೆಸಲಿಲ್ಲ?' ಎಂಬುದು ಅವರ ಮುಂದಿನ ಪ್ರಶ್ನೆ. ಏಕೀಕರಣ ಚಳುವಳಿಯ ಹಿನ್ನೆಲೆಯಲ್ಲಿ ಜಾತೀಯ ರಾಜಕೀಯ ಒತ್ತಡಗಳು ಪ್ರಬಲವಾಗಿದ್ದುವೇ ಹೊರತು, ಸಾಂಸ್ಕೃತಿಕ ಪ್ರೇರಣೆಗಳು ಕನಿಷ್ಠ ಪ್ರಮಾಣದಲ್ಲಿದ್ದುವೆಂದೇ ಹೇಳಬೇಕು. ಸಾಂಸ್ಕೃತಿಕ ಪ್ರೇರಣೆಗಳಿಗೆ ಸಾಮಾನ್ಯವಾಗಿ ಸಾಹಿತಿಗಳೇ ಕಾರಣವೆನ್ನಬೇಕು. ರಾಜಕಾರಣಿಗಳಲ್ಲಿ ಸಾಂಸ್ಕೃತಿಕ ದೃಷ್ಟಿ ಇರಲಿಲ್ಲವೆನ್ನುವುದಕ್ಕೆ ಏಕೀಕರಣದನಂತರ ಕನ್ನಡ ಸ್ಥಾನಮಾನಗಳ ಬಗ್ಗೆ ಅವರು ತೋರಿದ ಉಪೇಕ್ಷೆಯೇ ಸಾಕ್ಷಿಯಾಗಿದೆ.

ಏಕೀಕರಣ ಚಳುವಳಿಗೆ ಸಂಬಂಧಿಸಿದಂತೆ ಪರ-ವಿರೋಧದ ಎರಡು ಗುಂಪುಗಳಿದ್ದುವು. ಲಿಂಗಾಯತರು ಪರವಾಗಿದ್ದರೆ ಒಕ್ಕಲಿಗರು ವಿರೋಧವಾಗಿದ್ದರು. ತುಂಗಭದ್ರಾ ನದಿಯ ಆಚೀಚೆ ಎರಡು ಕಡೆಯೂ ಲಿಂಗಾಯತರಿದ್ದಾರೆ; ಅದಕ್ಕೆ ದಕ್ಷಿಣದಲ್ಲಿ ಮಾತ್ರ ಒಕ್ಕಲಿಗರಿದ್ದಾರೆ. ಏಕೀಕರಣವಾದರೆ ಲಿಂಗಾಯತರು ಪ್ರಬಲರಾಗುತ್ತಾರೆ, ಮುಖ್ಯಮಂತ್ರಿ ಪದವಿ ಶಾಶ್ವತವಾಗಿ ಅವರಿಗೆದಕ್ಕುತ್ತದೆ. ಮೈಸೂರು ಸಂಸ್ಥಾನದಲ್ಲಿ ತಮಗಿದ್ದ ಸವಲತ್ತು ಸೌಲಭ್ಯಗಳು ಏಕೀಕರಣದ ನಂತರ ಇಲ್ಲವಾಗುತ್ತವೆಂಬುದು ಒಕ್ಕಲಿಗರ ವಿರೋಧಕ್ಕೆ ಕಾರಣ. ಏಕೀಕರಣದ ನಂತರ ಮುಖ್ಯಮಂತ್ರಿ ಪದವಿ ಯಾವಾಗಲೂ ತಮಗೆ ದೊರೆಯುತ್ತದೆ, ಸಕಲ ಸೌಲಭ್ಯಗಳೂ ತಮಗೆ ವಶವಾಗುತ್ತವೆನ್ನುವುದು ಲಿಂಗಾಯತರ ಹಂಚಿಕೆ. ಒಕ್ಕಲಿಗರ ಹಿತವನ್ನು ಕಾಪಾಡುವ ಸಲುವಾಗಿ ಶ್ರೀ ಎಚ್. ಕೆ. ವೀರಣ್ಣ ಗೌಡರು ಏಕೀಕರಣ ವಿರೋಧ ಚಳುವಳಿಯ ನಾಯಕತ್ವವನ್ನು ವಹಿಸಿಕೊಳ್ಳುತ್ತಾರೆ. ಅವರಿಗೆ ರಾಜಾಜಿಯವರ ಆಶೀರ್ವಾದವಿತ್ತೆಂದು ಕೇಳಿದ್ದೇನೆ. ಅವರು ಪಿ. ಎನ್. ಜವರಪ್ಪ ಗೌಡ ಮೊದಲಾದರೊಂದಿಗೆ ಪ್ರಧಾನಿ ನೆಹರೂ, ಉಪಪ್ರಧಾನಿ ಪಟೇಲ್ ಮೊದಲಾದವರನ್ನು ಭೇಟಿಮಾಡಿ ದ್ವಿಕರ್ನಾಟಕವಾದವನ್ನು ಮಂಡಿಸುತ್ತಾರೆ.

1955ರ ಆಗಸ್ಟ್ 15ಯ ದಿನಾಂಕ ಮೈಸೂರಿನ ಜಲದರ್ಶಿನಿಯಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೆಲವು ಶಾಸಕರಿಗೂ ರಾಜಕೀಯ ಮುಖಂಡರಿಗೂ ರಾತ್ರಿ ಭೋಜನ ಕೂಟ ಏರ್ಪಡಿಸಿದ್ದರು. ನನ್ನನ್ನೂ ಅವರು ಭೋಜನ ಕೂಟಕ್ಕೆಹ್ವಾನಿಸಿದ್ದರು. ಕೂಟದ ಅಗ್ರ ಭಾಗದಲ್ಲಿ (ಚಾಪೆಕೂರೂಟ) ನಟ್ರ ನಡುವೆ ಹನುಮಂತಯ್ಯನವರೂ, ಅವರ ಎಡಬಲ ಭಾಗಗಳಲ್ಲಿ ದೊಡ್ಡಬಳ್ಳಾಪುರದ ಸಿದ್ಧಲಿಂಗಯ್ಯನವರೂ, ಬಳ್ಳಾರಿ

ಸಿದ್ದಮ್ಮನವರೂ ವಿರಾಜ ಮಾನರಾಗಿದ್ದರು. ಅವರಿಗೆ ತುಸುದೂರದಲ್ಲಿ ನಾನೂ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಶ್ರೀ ಕೆ. ಸಿ. ವೀರೇಗೌಡರೂ ಕುಳಿತಿದ್ದೆವು. ಮಾತುಕತೆ ಏಕೀಕರಣಕ್ಕೆ ಸಂಬಂಧಿಸಿದ್ದು. ಸಿದ್ದಮ್ಮನವರು ಹನುಮಂತಯ್ಯನವರನ್ನುದ್ದೇಶಿಸಿ' ನೋಡಿ ಸಾರ್, ಇಂದಿನ ಕರ್ನಾಟಕದಲ್ಲಿ ನಿಮಗೆ ಸರಿಗಟ್ಟುವ ಧೀಮಂತ ನಾಯಕರು ಮತ್ತೊಬ್ಬರಿಲ್ಲ. ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿ ನೀವೇ ಆಗಬೇಕು." ಎಂದು ಮಾತು ತೆಗೆದರು ' ನಿಮ್ಮ ಘನತೆಗೆ, ಸಾಮರ್ಥ್ಯಕ್ಕೆ, ಮೇಧಾವಿತನಕ್ಕೆ ಮೈಸೂರು ಸಣ್ಣದು. ಉತ್ತರ ಕರ್ನಾಟಕದ ಜನ ನಿಮ್ಮ ನಾಯಕತ್ವಕ್ಕಾಗಿ ಹಾತೊರೆಯುತ್ತಿದ್ದಾರೆ. ಏಕೀಕರಣ ಸಾಧನೆ ಇದೀಗ ನಿಮ್ಮನ್ನವಲಂಬಿಸಿದೆ. ನೀವು ಆಗಲಿ ಎಂದೊಡನೆ ಕೇಂದ್ರ ಒಪ್ಪಿಕೊಳ್ಳುತ್ತದೆ. ಮಾರನೆಯ ದಿನವೆ ನೀವು ಸಮಗ್ರ ಕರ್ನಾಕಟಕದ ಮುಖ್ಯ ಮಂತ್ರಿಗಳು'ಎಂದು ಸಿದ್ಧಲಿಂಗಯ್ಯನವರು ಉದ್ಗಾರ ಎತ್ತಿದರು 'ಹೌದ್ಗೌದು. ಬಸವಣ್ಣನವರಾದ ನಂತರ ಕರ್ನಾಟಕದ ಹಿರಿಮೆಯನ್ನು ಸಾಧಿಸಬಲ್ಲವರು ನೀವು. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದು' ಎಂದು ಸಿದ್ದಮ್ಮ ಜೇನು ಮಳೆ ಸುರಿಸಿದರು. ಹೊಗಳಿಕೆಗೆ ಸುಲಭವಾಗಿ ಸೋಲುವ ದೌರ್ಬಲ್ಯವಿದ್ದ ಹನುಮಂತಯ್ಯನವರು ಎಲೆಯ ಮೇಲಿದ್ದ ಕಮ್ಮನೆಯ ಹೋಳಿಗೆಯನ್ನು ಸಹ ಮರೆತರು, ಜೇನ್ಮೊದೆಯ ನೆರೆಯಲ್ಲಿ ಅವರ ಸಕಲೇಂದ್ರಿಯಗಳೂ ತೇಲುತ್ತ ತೇಲಾಡುತ್ತ ಆನಂದಾಧಿಕ್ಯದಿಂದ ನಿಶ್ಚೇಷ್ಟ ಗೊಂಡಂತಿದ್ದವು. ಆ ಮೂವರು ಹಿರಿಯರ ನಾಟಕವನ್ನು ನೋಡುತ್ತ ನಾವಿಬ್ಬರೂ ನಗುತ್ತಿದ್ದೆವು.

ಏತನ್ಮಧ್ಯೆ ರಾಜನೀತಿ ಪ್ರವೀಣರಾದ ಡಿ. ವಿ. ಗುಂಡಪ್ಪನವರು ಆಡಳಿತದ ಹಾಗೂ ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಏಕೈಕ ವಿಶಾಲ ಕರ್ನಾಟಕಕ್ಕಿಂತ ಮಿತ ಪ್ರಮಾಣದ ಎರಡು ಕರ್ನಾಟಕಗಳು ಸೂಕ್ತವೆಂದು ವಾದವೊಡ್ಡಿದ್ದರು. ಅವರ ವಾದದ ಸಾರಾಂಶವಿಷ್ಟು:ಮೈಸೂರು ಮುಂದುವರಿದ ಸಂಸ್ಥಾನವಾದ್ದರಿಂದ, ಬ್ರಿಟಿಷ್ ಕರ್ನಾಟಕ ಮುಂದುವರಿದಿಲ್ಲವಾದ್ದರಿಂದ ಆರ್ಥಿಕ ಪ್ರಗತಿಯಲ್ಲಿ ಬಹ್ವಂತರವಿರುವ ಎರಡೂ ಭಾಗಗಳನ್ನೊಟ್ಟು ಮಾಡುವುದು ಸೂಕ್ತವಲ್ಲ. ಎರಡು ರಾಜ್ಯಗಳಿಗೂ ಸಾಕಾಗುವಷ್ಟು ಜನ ಸಂಖ್ಯೆ ಮತ್ತು ಭೌಗೋಳಿಕ ವಿಸ್ತಾರಗಳಿವೆ. ಎರಡು ಕಡೆಯೂ ಕೃಷ್ಣ ಕಾವೇರಿಗಳಿಂದಾಗಿ ಜಲಸಮೃದ್ಧಿಯಿಂದೆ. ದೀರ್ಘಕಾಲದಿಂದ ಆಂಗ್ಲರ ಆಡಳಿತಕ್ಕೊಗ್ಗಿಕೊಂಡಿದ್ದ ಜನರೂ, ರಾಜರ ಆಡಳಿತದ ರುಚಿಯನ್ನು ಕಂಡ ಜನರೂ ಪರಸ್ಪರ ಹೊಂದಿಕೊಳ್ಳುವುದು ಕಷ್ಟವಾಗಬಹುದು. ಒಂದು ಕಡೆ ಲಿಂಗಾಯತರು, ಮತ್ತೊಂದು ಕಡೆ ಒಕ್ಕಲಿಗರು ಪ್ರಬಲವಾಗಿರುವುದರಿಂದ, ಸೌಲಭ್ಯ ಸವಲತ್ತುಗಳಿಗೆ ಅವರೊಳಗೆ ಬಡಿದಾಟವಾಗಿ ರಾಜ್ಯದ ಪ್ರಗತಿ ಕುಂಠಿತವಾಗಬಹುದು. ಹಿಂದೀಯರಿಗೆ ನಾಲ್ಕಾರು ರಾಜ್ಯಗಳಿರುವಾಗ, ಕನ್ನಡಕ್ಕೆ ಎರಡು ರಾಜ್ಯಗಳಿರಬಾರದೆ? ಬೆಂಗಳೂರು ಏಕೀಕೃತ ಕರ್ನಾಟಕಕ್ಕೆ ರಾಜಧಾನಿಯಾಗುವುದಾದರೆ, ಬೀದರ್, ಬೆಳಗಾಂ, ಬಿಜಾಪುರಗಳ ಜನರಿಗೆ ಸರ್ಕಾರ ದೂರವಾಗುತ್ತದೆ. ರಾಜ್ಯ ದೊಡ್ಡದಾದಷ್ಟೂ ಸಮಸ್ಯೆಗಳು ಮತ್ತು ಗೊಂದಲಗಳು

5A

ಉಲ್ಬಣಗೊಳ್ಳುತ್ತವೆ. ಡಿವಿಜಿಯವರ ವಾದ ' ಸಣ್ಣದರಲ್ಲಿ ಸೊಗಸಿದೆ' ಎಂಬ ಪ್ರಸಿದ್ಧ ಅರ್ಥಶಾಸ್ತ್ರ ಷುಮೇಕರನ ಧೋರಣೆಗೆ ಹತ್ತಿರವಾಗಿದೆ. ಕರ್ನಾಟಕಗಳು ಎರಡಾದರೆ, ಇಬ್ಬರು ರಾಜ್ಯಪಾಲರು, ಎರಡು ಸಚಿವ ಸಂಪುಟ, ಎರಡು ಹೈಕೋರ್ಟುಗಳು, ಈಗಿರುವ ಎರಡರಷ್ಟು ಇಲಾಖೆಗಳು-ಹೀಗಾಗಿ ಖರ್ಚು ದುಬಾರಿಯಾಗಿ, ಎರಡು ರಾಜ್ಯಗಳೂ ಆರ್ಥಿಕ ಮುಗ್ಗಟ್ಟಿನಿಂದ ನರಳಬೇಕಾಗುತ್ತದೆಂಬ ಏಕೀಕರಣ ವಾದಿಗಳಿಗೂ ಅವರ ಬಳಿ ಸಿದ್ಧ ಉತ್ತರವಿತ್ತು. ಮೈಸೂರು ಸಂಸ್ಥಾನದ ಸಚಿವ ಸಂಪುಟದಲ್ಲಿ ಏಳೆಂಟು ಮಂದಿ ಸದಸ್ಯರು ಹೈಕೋರ್ಟಿನಲ್ಲಿ ಐವರು ನ್ಯಾಯಾಧೀಶರು, ಇಂಜಿನಿಯರಿಂಗ್ ಇಲಾಖೆಯಲ್ಲಿ ನಾಲ್ವರು ಮುಖ್ಯ ಇಂಜಿನಿಯರುಗಳುಂಟಷ್ಟೆ. ಏಕೀಕೃತ ಕರ್ನಾಟಕದಲ್ಲಿ ಆ ಸಂಖ್ಯೆ ದುಪ್ಪಟ್ಟಾಗುತ್ತದೆ. ಆ ದುಪ್ಪಟ್ಟು ಸಂಖ್ಯೆಯನ್ನು ಎರಡೂ ರಾಜ್ಯಗಳ ನಡುವೆ ಹಂಚಿಕೊಂಡರಾಯಿತು ಎಂಬುದೇ ಡಿವಿಜಿಯವರ ಉತ್ತರವಾಗಿತ್ತು. ಒಕ್ಕಲಿಗ ನಾಯಕರಿಗೆ ಡಿವಿಜಿಯವರ ವಾದ ಹಿಡಿಸಿತ್ತು. ಆದರೆ ಅವರಲ್ಲಿ ಒಗ್ಗಟ್ಟಿರಲಿಲ್ಲ.

ಕುವೆಂಪು ಅವರು ಉಗ್ರ ಏಕೀಕರಣವಾದಿ ಎನ್ನುವುದು ಎಲ್ಲರಿಗೂ ಗೊತ್ತಿದ್ದ ವಿಷಯ. ಅಖಂಡ ಕರ್ನಾಟಕವಾದಿ ಎಂಬ ಕಾರಣಕ್ಕಾಗಿ ರೆಡ್ಡಿಯವರ ಸರ್ಕಾರ ಅವರಿಗೆ ಎಚ್ಚರಿಕೆ ನೀಡಿತ್ತೆಂಬುದೂ ನಿಜ. ನನಗೆ ವೀರಣ್ಣಗೌಡ ಕುವೆಂಪು ಇಬ್ಬರೂ ಗುರುಸ್ಥಾನದಲ್ಲಿದ್ದವರು. ಅದರಿಂದಾಗಿ ನನ್ನ ಮನಸ್ಸು ತೂಗುಯ್ಯಾಲೆಯಾಗಿತ್ತು. ನಾನು ತಾಟಸ್ಥ್ಯವನ್ನು ವಹಿಸಬೇಕಾಯಿತು. ವೀರಣ್ಣ ಗೌಡರಾಗಲಿ ಜವರಪ್ಪ ಗೌಡರಾಗಲಿ ಮೈಸೂರನ್ನುಳಿದ ಕರ್ನಾಟಕ ರಚನೆಗೆ ವಿರೋಧವಾಗಿರಲಿಲ್ಲವೆಂಬುದು ಮರೆಯಲಾಗದ ಸಂಗತಿ.

ಈ ಮೂವತ್ತೆಂಟು ವರ್ಷಗಳಲ್ಲಿ ನಡೆದಿರುವ ವಿದ್ಯಮಾನಗಳನ್ನು ಸಿಂಹಾವಲೋಕನ ಕ್ರಮದಿಂದ ನೋಡುವಾಗ, ಡಿವಿಜಿಯವರ ವಾದವನ್ನೊಪ್ಪಿ ಕೊಂಡಿದ್ದರೆ ಎರಡು ರಾಜ್ಯಗಳೂ ಪ್ರವರ್ಧಮಾನ ಸ್ಥಿತಿಯಲ್ಲಿರುತ್ತಿದ್ದವೆಂದು ತೋರುತ್ತದೆ. ಸಿದ್ಧಲಿಂಗಯ್ಯ ಬಳ್ಳಾರಿ ಸಿದ್ಧಮ್ಮನವರ ಅಂದಿನ ಸ್ತುತಿ ನಿಜವಾಗಲಿಲ್ಲ: ತಾವು ನಿರ್ಮಿಸಿದ ವಿಧಾನಸೌಧದಲ್ಲಿ ಹನುಮಂತಯ್ಯನವರು ಒಂದು ದಿನವೂ ಕೂರಲಿಲ್ಲ. ಏಕೀಕರಣದನಂತರ ಐವರು ಲಿಂಗಾಯತ ನಾಯಕರು ಮುಖ್ಯಮಂತ್ರಿ ಪದವಿಯನ್ನು ಗಿಟ್ಟಿಸಿಕೊಂಡರು. ಒಕ್ಕಲಿಗರಿಗೊಂದೂ ಇಲ್ಲ. ಮುಖ್ಯಮಂತ್ರಿ ಪದವಿಗೆ ನಿಜಲಿಂಗಪ್ಪ ಬೇಡವಾದರೆ ಜತ್ತಿ ಜತ್ತಿ, ಬೇಡವಾದರೆ ವೀರೇಂದ್ರ ಪಾಟೀಲ್, ಅವರೂ ಬೇಡವಾದರೆ ಬ್ರಾಹ್ಮಣಹೆಗ್ಡೆ, ಒಕ್ಕಲಿಗರಂತು ಬೇಡ-ಇದು ರಾಜ್ಯದ ಪ್ರಬಲ ಕೋಮಿನ ರಾಜಕೀಯವೆಂಬುದು ಸ್ಪಷ್ಟ. ತಮಗೆ ಮುಖ್ಯಮಂತ್ರಿ ಪದವಿ ಗಗನ ಕುಸುಮವೆಂದು ತಿಳಿದು ಒಕ್ಕಲಿಗ ಮುಂಖಂಡರು ಬುದ್ಧಿವಂತಿಕೆಯಿಂದ ಪಗಡೆಯಾಟ ಆಡಬೇಕಾಗಿದೆ. ಹಿಂದೆ ಆರೇಳು ಜನ ಸಚಿವರಿದ್ದ ಕಡೆ ಈಗ ನಲವತ್ತಾರು ಜನ; ಮೂರು ಮುಖ್ಯ ಇಂಜಿನಿಯರ್ ಇದ್ದಕಡೆ ನಲವತ್ತೈದು ಮಂದಿ;ಹೀಗೆಯೇ ಉಳಿದ ಇಲಾಖೆಗಳಲ್ಲಿಯೂ ಒಂದಿದ್ದದ್ದು ಇಪ್ಪತ್ತಾಗಿದೆ ; ಎಂಟು ವಿಶ್ವವಿದ್ಯಾನಿಲಯಗಳು! ಹುಬ್ಬಳ್ಳಿ-ಧಾರವಾಡಕ್ಕೆ ಹೈಕೋರ್ಟ್ ಪೀಠ! ಡಿವಿಜಿಯವರ ಭವಿಷ್ಯ ನಿಜವಾಯಿತು!

ಲಿಂಗಾಯತರು ಎಂಟನೂರು ವರ್ಷಗಳಿಂದ ಸಾವಿರಾರು ಮಠಗಳ ಮೂಲಕ ಜಾಗೃತಿಯನ್ನು ಕಂಡು ಕೊಂಡಿದ್ದಾರೆ. ಹನ್ನೆರಡನೆಯ ಶತಮಾನದಿಂದ ಉದಾಮ ಸಾಹಿತಿಗಳು ಲಿಂಗವಂತ ಸಮಾಜದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ; ಒಕ್ಕಲಿಗರಲ್ಲೊಬ್ಬ ಮಹಾಕವಿ ಹುಟ್ಟಬೇಕಾದರೆ ಇಪ್ಪತ್ತನೆಯ ಶತಮಾನದ ತನಕ ಕಾಯಬೇಕಾಯಿತು. ಪ್ರಾಯಶಃ ಜೈನವೈಶ್ಯರನ್ನು ಬಿಟ್ಟರೆ ಈ ರಾಜ್ಯದಲ್ಲಿ ಲಿಂಗಾಯತರೇ ಶ್ರೀಮಂತರು. ಒಕ್ಕಲಿಗರಿಗೊಂದು ಮಠ ಇದೆ ಅಂತ ಗೊತ್ತಾದದ್ದು ಇತ್ತೀಚೆಗೆ. ಈ ತನಕ ಐಎಎಸ್ ಪಾಸುಮಾಡಬಲ್ಲ ಒಕ್ಕಲಿಗ ಒಬ್ಬನೂ ಹುಟ್ಟಿಲ್ಲ. ಸರ್ಕಾರದ ಎಷ್ಟು ಇಲಾಖೆಗಳಲ್ಲಿ ರಾಜ್ಯಮಟ್ಟದ ಒಕ್ಕಲಿಗ ಅಧಿಕಾರಿಗಳಿದ್ದಾರೆ?

ಭದ್ರಾಪ್ರಾಜೆಕ್ಟ್ ವಿಶ್ವವಿದ್ಯಾನಿಲಯಕ್ಕೆ ಕುವೆಂಪು ಹೆಸರಿಡುವ ಸಂದರ್ಭದಲ್ಲಿ ಕುವೆಂಪು ಅವರ ಆಪ್ತರೆಂದು ಹೇಳಿ ಕೊಳ್ಳುತ್ತಿದ್ದ ಲಿಂಗಾಯತ ವಕೀಲರೊಬ್ಬರು ಜೀವಂತ ವ್ಯಕ್ತಿಯ ಹೆಸರಿಡಬಾರದೆಂದು ಆಪ್ತವಲಯದಲ್ಲಿ ಪ್ರಚಾರ ನಡೆಸಿದರಂತೆ. ಅದೇ ಕೋಮಿಗೆ ಸೇರಿದ ಮತ್ತೊಬ್ಬರು ನಿವೃತ್ತ ನ್ಯಾಯಾಧೀಶರೊಬ್ಬರು ಕುವೆಂಪು ಅವರಿಗೆ ಪತ್ರ ಬರೆದು ತಮ್ಮ ಹೆಸರನ್ನು ಆರೀತಿ ಬಳಸಿಕೊಳ್ಳಬಾರದೆಂದು ಆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಒತ್ತಾಯಿಸಿದ್ದು, ಆ ಪತ್ರ ಈಗಲೂ ನನ್ನ ಬಳಿಯಿದೆ. ಕುವೆಂಪು ಯಾವ ಜಾತಿಗೂ ಸೇರಿದವರಲ್ಲವೆಂಬುದನ್ನು ಅವರು ಯಾವ ಆಚಾರ್ಯರಿಗೂ ಕಡಮೆಯಲ್ಲವೆಂಬುದನ್ನು ಆ ಮಹನೀಯರು ಯೋಚಿಸಬೇಕಾಗಿತ್ತು.

ವಾಸ್ತವವಾಗಿ ಲಿಂಗಾಯತ-ಒಕ್ಕಲಿಗರ ನಡುವೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಂತರ ಬಹಳಷ್ಟಿಲ್ಲ. ಒಕ್ಕಲಿಗರೇ ಆ ಮತದ ಜನಸಂಖ್ಯೆಯಲ್ಲಿ ಬಹು ಭಾಗವನ್ನಾಕ್ರಮಿಸಿಕೊಂಡಿದ್ದಾರೆನ್ನುವುದಂತು ನಿಜ. ಏಕೀಕರಣವಾಗಿ ನಾಲ್ಕು ದಶಕಗಳು ಮುಗಿಯುತ್ತಿದ್ದರೂ, ಆ ಎರಡು ಕೋಮುಗಳ ನಡುವೆ ಮಾನಸಾಂತರ ಹೆಚ್ಚುತ್ತಿದೆಯೆ ಹೊರತು, ಕಡಮೆಯಾಗುತ್ತಿಲ್ಲ. ಏಕೀಕರಣದಿಂದ ಹೆಚ್ಚು ಪ್ರಯೋಜನವಾಗಿರುವುದು ಲಿಂಗಾಯತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಎಂಬ ಪ್ರತೀತಿಯಂತು ಇದ್ದೇ ಇದೆ. ಮಠಗಳ ಮತ್ತು ಲಾಂಛನದ ಪ್ರಭಾವವೇ ಅವರ ಏಕತೆಗೆ ಮತ್ತು ಯಶಸ್ಸಿಗೆ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ. ಒಕ್ಕಲಿಗರಲ್ಲಿ ಏಕತೆಯೂ ಇಲ್ಲ, ಅದನ್ನು ರೂಪಿಸುವ ಶಕ್ತಿಗಳೂ ಇಲ್ಲ. ದಲಿತರಂತೆ ಒಕ್ಕಲಿಗರು ರಾಜಕೀಯ ಚಮತ್ಕಾರವನ್ನು ರೂಢಿಸಿಕೊಂಡದ್ದಾದರೆ ಅವರೂ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಾಧ್ಯ. ರೂಢಿಸಿಕೊಳ್ಳಲಿಲ್ಲ, ಅವರಿಗೆ ಭವಿಷ್ಯವಿಲ್ಲ. ಜಾತಿ ವೈಷಮ್ಯದಿಂದ ರಾಜ್ಯದ ಪ್ರಗತಿ ಕುಂಠಿತಗೊಂಡಿದೆ. ವಿರಸ ವೈಷಮ್ಯಗಳಿಂದ ಹಾಳಾಗುತ್ತಿರುವ ಅವಿಭಕ್ತ ಕುಟುಂಬದ ಪರಿಸ್ಥಿತಿಯನ್ನೀಗ ಕರ್ನಾಟಕದಲ್ಲಿ ಕಾಣಬಹುದಾಗಿದೆ. ಅಂದಿನ ದ್ವಿಕರ್ನಾಟಕವಾದಿಗಳ ಅಂಜಿಕೆಯ ಕಾರಣ ಇಂದು ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ವಿವರಣೆಯಿಂದ ಅಂದಿನ ನನ್ನ ನಿಲವೇನೆಂಬುದೂ ವೇದ್ಯವಾದೀತು. ಆದರೆ ಈಗಿನ ನನ್ನ ನಿಲವೇ ಬೇರೆ.

ಮೇಲಣ ನಿರೂಪಣೆಯಿಂದ ನಾನು ಲಿಂಗಾಯತರ ವಿರೋಧಿ ಎಂಬ ಭಾವನೆ ಮೂಡಲವಕಾಶವುಂಟಜಿ. ರಾಜಕೀಯದ ಹಿನ್ನೆಲೆಯಿಂದ ಪರಾಮರ್ಶಿಸುವಾಗ ಆ ತೆರನ ಭಾವನೆಗಳು ಮೂಡುವುದು ಸಹಜಫೆ. ಸಾಂಸ್ಕೃತಿಕವಾಗಿ ಹಿಂದೂ ಮತಕ್ಕಿಂತ ಲಿಂಗಾಯತ ಧರ್ಮವೇ ನನಗೆ ಸಮೀಪ. ಮನುಷ್ಯನಿಗೊಂದು ಧರ್ಮ ಬೇಕೆನ್ನುವುದಾದರೆ, ನಾನು ಜಗತ್ತಿನ ಧರ್ಮಗಳ ಪೈಕಿ ಬಸವಧರ್ಮವನ್ನಾರಿಸಿಕೊಳ್ಳುತ್ತೇನೆ. ಬಸವೇಶ್ವರ ನನ್ನ ಆರಾಧ್ಯ ದೈವ. ಅವರು ಲಿಂಗಾಯತರಿಗೆ ಮಾತ್ರ ಮೀಸಲೆಂದು ನಾನು ಭಾವಿಸಿಕೊಂಡಿಲ್ಲ. ಮೇಲಾಗಿ ಮೈಸೂರು ವಿಶ್ವವಿದ್ಯಾನಿಲಯವಲ್ಲ, ಬೇರಾವ ವಿಶ್ವವಿದ್ಯಾನಿಲಯವೂ ಅಲ್ಲ, ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟೊರೇಟ್ ಪದವಿ ನೀಡುವ ಮೂಲಕ ನನ್ನ ಸಾಧನೆಸಿದ್ಧಿಗಳನ್ನು ಗುರುತಿಸಿತೆನ್ನುವುದನ್ನು ನಾನು ಮರೆತಿಲ್ಲ. ನನ್ನ ನಿಜವಾದ ಸಾಹಿತ್ಯ ಮಿತ್ರರಿರುವುದೇ ಲಿಂಗಾಯತ ಬ್ರಾಹ್ಮಣರ ಕೋಮುಗಳಲ್ಲಿ, ನನ್ನನ್ನು ವಾತ್ಸಲ್ಯದಿಂದ ಕಂಡು, ಪ್ರೀತಿಯಿಂದ ಹರಸುತ್ತಿರುವವರೂ ಲಿಂಗಾಯತ ಸ್ವಾಮಿಗಳೇ! ಈಗಿನ ನನ್ನ ನಿಲವಿನ ರಹಸ್ಯ ಈ ಮಾತುಗಳಲ್ಲಿ ಅಡಕಗೊಂಡಿದೆ ಎಂದು ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

*****

ಬರಹ ನನ್ನ ಬದುಕಿನ ಅಣಿ ಭಾಗ

ನಾನು ಸಾಹಿತ್ಯ ಕ್ಷೇತ್ರಕ್ಕಿಳಿದದ್ದೇ ತುಂಬ ತಡವಾಗಿ. ನಾನು ಸರ್ಕಾರದ ಸಚಿವಾಲಯದಲ್ಲಿ ಗುಮಾಸ್ತನಾಗಿದ್ದು ಅಲ್ಲಿಯೇ ನನ್ನ ಬದುಕನ್ನು ಮುಗಿಸುತ್ತೇನೆಂದು ತಿಳಿದಿದ್ದೆ. ನಾನು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನೆಂದು ನೇಮಕಗೊಂಡಾಗ ನನ್ನ ವಯಸ್ಸು ಇಪ್ಪತ್ತೆಂಟು. ಹಿಂದಿನ ಹುದ್ದೆಗಿಂತ ಅಧ್ಯಾಪಕ ಹುದ್ದೆಯಲ್ಲಿ ಮೂವತ್ತು ರೂಪಾಯಿ ಜಾಸ್ತಿ ಬರುತ್ತದೆಂಬ ಏಕಮಾತ್ರ ಕಾರಣಕ್ಕಾಗಿ ಒಂದನ್ನು ಬಿಟ್ಟು ಮತ್ತೊಂದಕ್ಕೆ ಹಾರಿದೆ. ಆಳವಾಗಿ ಆಲೋಚಿಸಿದ್ದಾದರೆ, ಗುರುಕೃಪಾ ರೂಪದ ವಿಧಿ ಅಥವಾ ನನ್ನ ಭಾಗ್ಯದ ದೇವರು ನನಗರಿವಿಲ್ಲದಂತೆಯೇ ನನ್ನನ್ನಲ್ಲಿಂದ ಇಲ್ಲಿಗೆಳೆತಂದಿತೆಂದೇ ತೋರುತ್ತದೆ. ಮೂರ್‍ನಾಲ್ಕು ವರ್ಷ ನಾನು ಸಂಪೂರ್ಣವಾಗಿ ಸಾಹಿತ್ಯದಿಂದ ದೂರವಿದ್ದದ್ದರಿಂದ ಎರಡು ಮೂರು ವರ್ಷ ಅಧ್ಯಾಪಕ ಹುದ್ದೆಗೆ ಅರ್ಹತೆ ಸಂಪಾದಿಸುವುದರಲ್ಲಿ ಶ್ರಮಿಸಬೇಕಾಯಿತು, ಸಂಸಾರದ ತಾಪತ್ರಯದ ಮಧ್ಯೆಯೂ. ಕನ್ನಡ ಅಧ್ಯಾಪಕನಾದವನು ಅಷ್ಟಿಷ್ಟಾದರೂ ಬರೆಯದಿದ್ದರೆ, ಅವನು ಆ ಜಾಗದಲ್ಲಿರುವ ಅರ್ಹತೆ ಕಳೆದುಕೊಳ್ಳುತ್ತಾನೆಂಬ ನಂಬಿಕೆ-('ಮೂಢನಂಬಿಕೆ ಇರಬಹುದೆ?)-ಯೊಂದೇ ' ವಿತ್ ನೊ ರಿಗ್ರೆಟ್ಸ್' (ನೆನಪು ಕಹಿಯಲ್ಲ) ಎಂಬ ಗ್ರಂಥವನ್ನು ಭಾಷಾಂತರಿಸಲು ಕಾರಣವಾಯಿತು. ಅದೊಂದು ಪುಸ್ತಕ ಯಾವಾಗ ಪ್ರಕಟವಾಗಿ, ಕೆಲವು ಮಿತ್ರರ ಪ್ರೋತ್ಸಾಹಕ್ಕೊಳಗಾಯಿತೋ, ಆಗ ಮತ್ತೊಂದು ಪುಸ್ತಕ ಬರೆಯುವ ಪ್ರೇರಣೆ ನನಗೊದಗಿತು. ಜನ ಮೆಚ್ಚುಗೆಯೆ ಲೇಖಕನಿಗೆ ಚೈತನ್ಯ ನೀಡುವ ಸಕಲ ವಿಟಮೀನುಗಳ ತವ ನಿಧಿ.

ನನ್ನ ಚಿಕ್ಕ ಮಾವಂದಿರಾದ ಶ್ರೀ. ಟಿ. ಮಾದಯ್ಯಗೌಡರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ನನ್ನನ್ನು ಪುಸ್ತಕ ಪ್ರಪಂಚದ ಸಂಪಾದಕ ಮಂಡಲಿಗೆ ಸೇರಿಸಿದರು. ಲೇಖನಗಳು ಸಾಕಷ್ಟು ಬರದಿದ್ದಾಗ ಮಂಡಲಿಯ ಸದಸ್ಯರೇ ಬರೆದು ಆ ಮಾಸಪತ್ರಿಕೆಯನ್ನು ತುಂಬಬೇಕೆಂದು ಮಂಡಲಿಯಲ್ಲಿ ನಿರ್ಣಯವಾಗಿದ್ದ ಪ್ರಯುಕ್ತ ನಾನು ಲೇಖನಗಳನ್ನು ಬರೆಯಬೇಕಾಯಿತು. ಪ್ರಧಾನ ಸಂಪಾದಕರಾಗಿದ್ದ ಜಿ. ಹನುಮಂತರಾಯರ ಪ್ರೇರಣೆಯೂ ಇದ್ದೇ ಇತ್ತು. ಆಕಾಶವಾಣಿಯ ಉಪನಿರ್ದೇಶಕರಾಗಿದ್ದ ಗೆಳೆಯ ಡಿ. ರಾಜಗೋಪಾಲರು ಆಗಾಗ್ಗೆ ಭಾಷಣಕ್ಕೆ ಆಹ್ವಾನಿಸುತ್ತಿದ್ದುದರಿಂದ, ಆಗಿನ ಕಾಲಕ್ಕೆ ಕೊಡುತ್ತಿದ್ದ ಸಂಭಾವನೆ ಸಂಸಾರ ನಿರ್ವಹಣೆಗೆ ಅನುಕೂಲವಾಗಿತ್ತಾದ್ದರಿಂದ, ಲೇಖನ ಕಾರ್ಯ ಚುರುಕಾಗಿ ಸಾಗುತ್ತಿತ್ತು.

ಏತನ್ಮಧ್ಯೆ ಗುರುಕೃಪೆ ನನ್ನನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಮೈಸೂರಿನ ಮಹಾರಾಜಾ ಕಾಲೇಜಿಗೆ ಕರೆದುಕೊಂಡು ಬಂದು, ತನ್ನ ಕೈಂಕರ್ಯಕ್ಕೆ ನನ್ನನ್ನು ಬಳಸಿಕೊಳ್ಳುತ್ತಿದ್ದಾಗ ನನ್ನಲ್ಲಿ ಸಾಹಿತಿಯಾಗಬೇಕೆಂಬ ಚಪಲ ಮೊಳೆದೋರಿತು. ಆ ಚಪಲ ಕಾಲಕ್ರಮೇಣ ಕರ್ತವ್ಯವಾಗಿ, ನನ್ನ ಬದುಕಿನ ಒಂದು ಭಾಗವಾಗಿ ಪರಿಣಮಿಸಿತು. ಗುರುಗಳ

ಆಶೀರ್ವಾದದಿಂದ ನಾನು ಆಡಳಿತದ ಚಕ್ರಕ್ಕೆ ಹಲವು ಕಾಲ ಕೈ ಹಾಕಬೇಕಾಗಿ, ಜತೆಗೆ ದೊಡ್ಡ ಸಂಸಾರದ ನಿರ್ವಹಣೆಯ ಭಾರ ಹೆಗಲ ಮೇಲೆ ಹೇರಿ ಕೊಂಡಿರಲಾಗಿ (ನನ್ನ ಮಡದಿ ಆ ಹೊಣೆಯನ್ನು ಹೊರುವ ತನಕ) ಸಾಹಿತ್ಯ ಕೃಷಿ ಕುಂಟಿಕೊಂಡೇ ಮುಂದುವರಿಯುತ್ತಿತ್ತು. ಪರೀಕ್ಷಾಧಿಕಾರಿಯ ಹುದ್ದೆ ವಹಿಸಿಕೊಂಡನಂತರವಂತು ಜನಸಂಗ ದೂರವಾಗಿದ್ದ ನಾನು ಜನರ ಸಂತೆಯಲ್ಲಿರುವಂಥ ಪರಿಸ್ಥಿತಿಯೊದಗಿತು. 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ, ಸಮುದ್ರದ ತಡಿಯಲ್ಲಿ ಮನೆಯ ಮಾಡಿ, ನೊರೆತೊರೆಗಳಿಗಂಜಿದಡೆಂತಯ್ಯ; ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದಡೆಂತಯ್ಯ' ಎಂಬ ಮಹಾದೇವಿಯಕ್ಕನ ಸೂಕ್ತಿಯನ್ನು ನೆನೆದು, ಗುರುದೇವರ ಮೇಲೆ ಭಾರ ಹಾಕಿ ನಾನು ಗುರುಕರ್ತವ್ಯಗಳ ನಡುವೆಯೂ ಸಾಹಿತ್ಯ ಕೃಷಿ ಮುಂದುವರಿಸಿದೆ. ಶ್ರದ್ಧೆ ಗೌರವ ಪ್ರಾಮಾಣಿಕತೆಗಳಿದ್ದದ್ದಾದರೆ ಭಗವದಿಚ್ಛೆ ಹೇಗೋ ನನ್ನನ್ನುದ್ಧರಿಸುತ್ತದೆಂಬ ನಂಬಿಕೆ ನನ್ನದು. ಆಡಳಿತದ ಮಧ್ಯೆಯೂ, ಆಗದವರಿಂದ ನನಗೊದಗುತ್ತಿದ್ದ ಕಿರುಕುಳಗಳ ಇಕ್ಕಟ್ಟಿನಲ್ಲಿಯೂ, ಕನ್ನಡದ ಚಳುವಳಿಯ ಅಗ್ನಿಕುಂಡದ ನಡುವೆಯೂ ನೂರನಲವತ್ತೈದು ಪುಸ್ತಕಗಳಲ್ಲಿ ಇಪ್ಪತ್ತು ಸಾವಿರಕ್ಕೂ ಮೇಲ್ಪಟ್ಟ ಪುಟಗಳಷ್ಟು ಸಾಹಿತ್ಯವನ್ನು ನಿರ್ಮಿಸಿದ್ದು ನನಗೆ ಅಚ್ಚರಿಯುಂಟು ಮಾಡುತ್ತದೆ. ನಾನು ಹೆಚ್ಚಾಗಿ ಹಗಲು ಬರೆದದ್ದೇ ಇಲ್ಲ. ಮಿತ್ರರು ಬಿಡುವು ಕೊಡುವುದಿಲ್ಲ; ಜತೆಗೆ ಕಚೇರಿ ಟ್ರಸ್ಟಗಳ ಕೆಲಸ. ಮನೆಯವರೆಲ್ಲ ಮಲಗಿದ ಮೇಲೆ ನನ್ನ ಲೇಖನ ಕೃಷಿ ಪ್ರಾರಂಭವಾಗುತ್ತಿತ್ತು. ಆರು ದಿನಗಳಲ್ಲಿ ' ಕಡುಗಲಿ ಕುಮಾರ ರಾಮ' ಕಾದಂಬರಿಯನ್ನು ಬರೆದು, ಮುದ್ರಿಸಿದೆ. ರಾತ್ರಿಯೆಲ್ಲ ಬರೆಯುವುದು, ಹಗಲೆಲ್ಲ ಅಚ್ಚುಕೂಟದಲ್ಲಿ ಮುದ್ರಣಕಾರ್ಯ ನೋಡಿಕೊಳ್ಳುವುದು - ಹೀಗೆ. ಅದು ಪ್ರೌಢಶಾಲೆಯ ತರಗತಿಯೊಂದಕ್ಕೆ ಪಠ್ಯ ಗ್ರಂಥವಾಗಿ ಮೂರು ವರ್ಷ ನಡೆದು, ನನಗೆ ಸಾಕಷ್ಟು ಹಣ ಒದಗಿಸಿತು. ಆ ಮೊದಲೇ ಮೈಸೂರು ಸಂಸ್ಥಾನದ ಲೋಯರ್ ಸೆಕೆಂಡರಿ ಪರೀಕ್ಷೆಗೆ ಮತ್ತು ಹೈದರಾಬಾದು ರಾಜ್ಯದ ಅದೇ ತರಗತಿಗೆ ಪಠ್ಯಪುಸ್ತಕವಾಗಿದ್ದ ' ಬೆಂಗಳೂರು ಕೆಂಪೇಗೌಡ' ನನ್ನ ಹಣದ ಬರವನ್ನು ನೀಗಿತು, ಬಂಧುವೊಬ್ಬರ ಚುನಾವಣೆಗೆ ಹಣವನ್ನೊದಗಿಸಿದ ನಂತರವೂ.

ಅನಂತರ ಬರವಣಿಗೆ ನನಗೆ ಚಟವಾಗಿ ಪರಿಣಮಿಸಿತು. ನನ್ನ ಬದುಕಿನ ಒಂದು ಭಾಗವಾಯಿತು. ಅನ್ಯ ಕಾರ್ಯಗಳು ಇಲ್ಲವಾದಾಗ ಲೇಖನಿ ನನಗೆ ವರವಾಗಿ ಕೈಗೆ ಬರುತ್ತಿತ್ತು.ಕೆಲವು ವಾರ ದಿನಕ್ಕೆ ಹತ್ತುಗಂಟೆಯಷ್ಟು ದೀರ್ಘವಾಗಿ ಬರೆಯುತ್ತಿದ್ದುದುಂಟು. ಬಹು ದಿನ ಬರಹಕ್ಕೆ ವಿರಾಮ ಕೊಟ್ಟಾಗ ಮನಸ್ಸಿಗೆ ಮುಜುಗರವಾಗುತ್ತಿತ್ತು. ಮತ್ತೆ ಲೇಖನಿ ಹಿಡಿದುಕೊಂಡಾಗ ಮನಸ್ಸಿಗೆ ಸಮಾಧಾನವಾಗುತ್ತಿತ್ತು. ಆದರೆ ಎರಡು ಗಂಟೆ, ಅಥವಾ ಒಂದು ಗಂಟೆ ಕಾಲ ಯಾವ ಅಥವಾ ಯಾರ ತಂಟೆಯೂ ಇಲ್ಲದೆ ಏಕಾಗ್ರತೆಯಿಂದ- ಅಮೆರಿಕೆ ಹೋದಾಗ ಮಾತ್ರ ಸಾಧ್ಯ- ಬರೆಯುವ ಅವಕಾಶ ಈತನಕ ದೊರೆತಿಲ್ಲ. ಮನೆಯವರಾಗಿರಬಹುದು, ಹೊರಗಿನವರಾಗಿರಬಹುದು, ಏಕಾಗ್ರತೆಯಿಂದ ಅವಿಚ್ಛಿನ್ನವಾಗಿ ಆಲೋಚನೆ ಮತ್ತು ಲೇಖನಿ ಸಮಸ್ಪರ್ಧಿಗಳಾಗಿ ಹರಿಯುತ್ತಿರುವಾಗ,

ಕೂಗುತ್ತಾರೆ, ಕರೆಯುತ್ತಾರೆ; ಅಥವಾ ಏನೇನೋ ಹೇಳುತ್ತಾರೆ. ಅರ್ಧದಿನದ ನಂತರ ಹೇಳಿದರೂ ತೊಂದರೆಯಾಗದ ಸಂಗತಿಗಳನ್ನು ಕೂಡಲೇ ಹೇಳಿಬಿಡಬೇಕೆಂಬ ಆತುರ ಅವರದು. ಬರವಣಿಗೆಗೆ ಅತ್ಯವಶ್ಯವಾಗಿ ಬೇಕಾದ ಶಾಂತಿ ನೀರವತೆಗಳನ್ನು ಬರಹಗಾರರಿಗೆ ಒದಗಿಸಬೇಕಾದ್ದು ಸುತ್ತಮುತ್ತಣವರ ಕರ್ತವ್ಯ. ಆದರೂ ಸಂತೆಯ ಮಧ್ಯೆಯೇ ನನ್ನ ಸಾಹಿತ್ಯ ಕೃಷಿ ಸಾಗಿದೆ, ಸಾಗುತ್ತಿದೆ.

ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಹಾಗೂ ಸಾಹಿತ್ಯದ ಮಟ್ಟವನ್ನು ಎತ್ತರಿಸುವ ನಿಟ್ಟಿನಿಂದ ಭಾಷಾಂತರ ಭಾವಾನುವಾದ ಅತ್ಯಗತ್ಯವೆಂಬುದು ನನ್ನ ಸ್ಪಷ್ಟ ಮತ. ಜಗತ್ತಿನ ಶ್ರೇಷ್ಠ ಸಾಹಿತ್ಯ ಕೃತಿಗಳೆಲ್ಲ ಕನ್ನಡಕ್ಕೆ ಬಂದಾಗ ಕನ್ನಡ ಸಾಹಿತ್ಯ ಇಂಗ್ಲಿಷ್ ಸಾಹಿತ್ಯವನ್ನು ಮೀರಿಸುತ್ತದೆಂಬುದು ನನ್ನ ಅನಿಸಿಕೆ. ಆದ್ದರಿಂದ ಜೇನ್ ಆಸ್ಟಿನ್‌ಳ ಪ್ರೈಡ್ ಅಂಡ್ ಪ್ರಿಜುಡಿಸ್(ಹಮ್ಮು ಬಿಮ್ಮು) ಕಾದಂಬರಿಯನ್ನು ಭಾಷಾಂತರಿಸಿದೆ. ಟಾಲ್‌ಸ್ಟಾಯ್‌ರ ಎಲ್ಲ ಕೃತಿಗಳನ್ನು ಕನ್ನಡಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ 'ಪುನರುತ್ಥಾನ' ಮುಗಿಸಿದೆ. ಇತ್ತೀಚೆಗೆ ಅವರ ಕೆಲವು ನಾಟಕಗಳನ್ನೂ, ಉಳಿದೆರಡು ಮಹಾಕಾದಂಬರಿಗಳನ್ನೂ ಅನುವಾದಿಸಿದೆ. ಸುಮಾರು ಐದು ಸಾವಿರ ಪುಟಗಳ ಭಾಷಾಂತರ ಸಾಹಿತ್ಯ ನನ್ನ ಲೇಖನಿಯಿಂದ ಹೊರಬಂದಿದೆ. ಭಾಷಾಂತರಕ್ಕಿಂತ ಸ್ವತಂತ್ರ ಕೃತಿ ರಚನೆ ಸುಲಭ. ಯುದ್ಧ ಮತ್ತು ಶಾಂತಿಯಂಥ ಕೃತಿಯ ಒಂದು ಪುಟವನ್ನು ಭಾಷಾಂತರಿಸುವಷ್ಟರಲ್ಲಿ ಮೂರ್‍ನಾಲ್ಕು ಪುಟದಷ್ಟು ಸ್ವಂತ ಬರವಣಿಗೆಯನ್ನು ಮುಗಿಸಬಹುದು. ಭಾಷಾಂತರ ಕಾರ್ಯದಿಂದ ನರಮಂಡಲದ ಮೇಲೆ ದುಷ್ಪರಿಣಾಮವಾಗುವ ಸಂಭವವೂ ಉಂಟು. ಆದ್ದರಿಂದ ಅಷ್ಟಕ್ಕೇ ಆ ಕಾರ್ಯವನ್ನು ಸ್ಥಗಿತಗೊಳಿಸಿದ್ದೇನೆ.

ನನ್ನ ಮೆಚ್ಚಿನ ಸಾಹಿತ್ಯ ಪ್ರಕಾರವೆಂದರೆ ಜೀವನ ಚರಿತ್ರೆ. ಕತೆಯ ಹಾಗೆ, ಕಾದಂಬರಿಯಂತೆ ಅದು ಸೃಜನಾತ್ಮಕ ಕಲೆಯಲ್ಲವೆಂಬುದು ವಿಮರ್ಶಕವರೇಣ್ಯರ ಅಭಿಪ್ರಾಯ. ಜೀವನ ಚರಿತ್ರೆಯ ರಚನೆ ಕಾದಂಬರಿಯಷ್ಟು ಸುಲಭವಲ್ಲ. ಕಲ್ಪನಾ ಪ್ರತಿಭೆಯೊಂದಿದ್ದರೆ ವಸ್ತುವೊಂದು ದೊರೆತ ನಂತರ ಕಥನ ಕ್ರಿಯೆ ನಿರ್ವಿಘ್ನವಾಗಿ ಮುಂದುವರಿಯುತ್ತದೆ. ಅಂದರೆ ಕಾದಂಬರಿ ರಚನೆಗೆ ವಿದ್ವತ್ತಾಗಲಿ ಸಂಶೋಧನೆಯಾಗಲಿ ಅನಗತ್ಯವೆಂಬುದು ನನ್ನ ಅಭಿಪ್ರಾಯವಲ್ಲ; ಜೀವನ ಚರಿತ್ರೆಯ ರಚನೆಗೆಷ್ಟು ಬೇಕೋ ಅಷ್ಟು ಬೇಕಾಗುವುದಿಲ್ಲ. ಅನುಭವ ಸಾಮಗ್ರಿ ಕಾದಂಬರಿಯ ಜೀವಾಳವಾದರೆ, ಸಂಶೋಧನಸಾಮಗ್ರಿ ಜೀವನ ಚರಿತ್ರೆಯ ಹಂದರವಾಗುತ್ತದೆ. ಜೀವನ ಚರಿತ್ರಕಾರ ನೂತನ ಭೂಖಂಡಗಳ ಅನ್ವೇಷಕನಂತೆ ನೂರಾರು ಜನರನ್ನು ಸಂದರ್ಶಿಸಬೇಕಾಗುತ್ತದೆ, ಸಂಶೋಧಕ ವಿದ್ವಾಂಸನಂತೆ ಸಾವಿರಾರು ದಾಖಲೆಗಳನ್ನು ಹುಡುಕಿ, ಅಧ್ಯಯನ ಮಾಡಬೇಕಾಗುತ್ತದೆ, ಶಿಲ್ಪಿಯಂತೆ ನಾಯಕನ ವಿವಿಧ ಪಾರ್ಶ್ವ ಭಂಗಿ ಭಣಿತೆಗಳನ್ನು ಪರಿಶೀಲಿಸಬೇಕಾಗುತ್ತದೆ, ಕಟ್ಟಾಶಿಷ್ಯನಂತೆ ಅವನನ್ನು ಹಿಂಬಾಲಿಸುತ್ತ ಅವನ ರೀತಿ ನೀತಿ ಮಾರ್ಗಗಳನ್ನು ಗಮನಿಸಬೇಕಾಗುತ್ತದೆ ; ತಾನು ಸಂಗ್ರಹಿಸಿದ ಸಾಮಗ್ರಿಯನ್ನು

ವಾಸ್ತುಶಿಲ್ಪಿಯಂತೆ ಆರಿಸಿ, ಸೋಸಿ ಅಂಗಾಂಗಗಳ ಪರಸ್ಪರ ಸಾಮರಸ್ಯ ಪ್ರಮಾಣಗಳಿಗೆ ಭಂಗ ಬರದಂತೆ, ಉಚಿತವರಿತು ಜೋಡಿಸಬೇಕಾಗುತ್ತದೆ. ವರ್ಣ ಚಿತ್ರಕಾರನಂತೆ ತಾನು ನಿರ್ಮಿಸಿದ ರೇಖಾ ಚಿತ್ರಕ್ಕೆ ಬಣ್ಣಗಳನ್ನು ತುಂಬಿ, ಗಾರುಡಿಗನಂತೆ ಅದಕ್ಕೆ ಪ್ರಾಣದಾನ ಮಾಡಬೇಕಾಗುತ್ತದೆ. ವಾಸ್ತವತೆಯ ಆಧಾರದ ಮೇಲೆ ನಿರ್ಮಾಣಗೊಂಡ ಸುಂದರ ವಿಗ್ರಹ ಜೀವನ ಚರಿತ್ರೆ. ಜೀವನ ಚರಿತ್ರೆಗಳ ಸರಮಾಲೆಯೇ ಇತಿಹಾಸವೆಂದು, ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಯೇ ಶ್ರೇಷ್ಠವಾದದ್ದೆಂದು ಕಾರ್ಲೈಲ್ ಹೇಳುತ್ತಾನೆ. ಕಾದಂಬರಿಯಾಗಲಿ, ಮಹಾಕಾವ್ಯವಾಗಲಿ ಪ್ರಚ್ಛನ್ನ ಜೀವನ ಚರಿತ್ರೆಗಳೇ ಆಗಿವೆ. ಅವು ಶೈಲಿಯಲ್ಲಿ ಕಲ್ಪನೆಯಲ್ಲಿ ಜೀವನ ಚರಿತ್ರೆಗಳಿಗಿಂತ ಭಿನ್ನವಾಗುತ್ತವೆ. ಜೀವನ ಚರಿತ್ರೆ ವಾಸ್ತವಕ್ಕೆ ಹತ್ತಿರವಾದ್ದರಿಂದ ಅವು ಇತರ ಪ್ರಕಾರಗಳಿಗಿಂತ ಹೆಚ್ಚು ಆಸ್ವಾದ್ಯವಾಗುತ್ತವೆ. ಜೀವನ ಚರಿತ್ರೆಗಳ ರಚನೆಗೆ ಬೇಕಾದ ಸೌಲಭ್ಯಗಳು ಪೂರ್ಣಪ್ರಮಾಣದಲ್ಲಿ ನಮ್ಮ ಕಡೆ ದೊರೆಯುವುದಿಲ್ಲವಾದರೂ, ಇದ್ದಷ್ಟರಲ್ಲಿಯೇ ಹದಿನೆಂಟು ಜೀವನ ಚರಿತ್ರೆಗಳನ್ನೂ, ಹಲವಾರು ಜೀವನ ಚಿತ್ರಗಳನ್ನೂ ನಾನು ರಚಿಸಿದ್ದೇನೆ. ಪ್ರಾಯಶಃ ಇಷ್ಟೊಂದು ವೈವಿಧ್ಯಮಯ ಜೀವನಚರಿತ್ರೆಗಳನ್ನು ರಚಿಸಿದವರು ಕನ್ನಡದಲ್ಲಿ ಮಾತ್ರವಲ್ಲ, ಇತರ ಭಾಷೆಗಳಲ್ಲಿಯೂ ವಿರಳವೆಂದೇ ಹೇಳಬೇಕು.

ನನ್ನ ಹೃದಯಕ್ಕೆ ತೀರ ಹತ್ತಿರವಾಗಿರುವ ಮತ್ತೊಂದು ವಿಷಯ ಜಾನಪದ. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯವೇ ಅದಕ್ಕೆ ಸಾಕ್ಷಿ. ಇಡೀ ದೇಶದಲ್ಲಿಯೇ ಅದು ಮೊತ್ತ ಮೊದಲ ಪ್ರಯತ್ನ. ವಿದ್ವತ್ಸಂಶೋಧನೆಯ ಫಲವಾಗಿ ಜಾನಪದ ಸೌಂದರ್ಯ, ಜಾನಪದ ಅಧ್ಯಯನ, ಜಾನಪದ ವಾಹಿನಿ, ಜನಪದ ಗೀತಾಂಜಲಿ ಎಂಬ ಗ್ರಂಥಗಳು ಪ್ರಕಟಗೊಂಡಿವೆ. ನಾನು ಜಾನಪದ ಕ್ಷೇತ್ರಕ್ಕೆ ಕದ್ದು ಬರಲಿಲ್ಲ, ರಾಜಾರೋಷಾಗಿ ಪ್ರವೇಶ ಪಡೆದದ್ದುಂಟು. ಚಿತ್ತಭ್ರಮಣೆಯಿಂದ ಕುರುಡಾಗಿರುವವರಿಗೆ ಜಾನಪದಕ್ಕೆ ನಾನು ನೀಡಿರುವ ಕೊಡುಗೆ ಕಾಣಿಸುವುದಿಲ್ಲ.

ವ್ಯಾಖ್ಯಾನ ವಿಮರ್ಶೆ ಭಾಷ್ಯಗಳು ನನ್ನ ಸಾಹಿತ್ಯರಾಶಿಯಲ್ಲಿ ಬಹುಭಾಗವನ್ನಾ ಕ್ರಮಿಸಿಕೊಂಡಿವೆ. ಬಸವೇಶ್ವರ ಕುವೆಂಪು ನನ್ನ ಆರಾಧ್ಯ ವ್ಯಕ್ತಿಗಳಷ್ಟುದಷ್ಟೆ. ನಾವು ಪೂಜಿಸುವ ವಸ್ತುವಿನಂತಾಗಬೇಕೆಂಬ ಅಭೀಪ್ಸೆಯೇ ಆರಾಧನೆಯೆಂದು ಕುವೆಂಪು ಹೇಳುತ್ತಾರೆ.[1] ಜಗತ್ತಿನಲ್ಲಿ ಆರಾಧಕನಲ್ಲದ ವ್ಯಕ್ತಿಯೇ ಇಲ್ಲ. ಪ್ರತಿಯೊಬ್ಬನೂ ತಂತನ್ನ ಅಭಿರುಚಿ ಮನೋಧರ್ಮ ಪರಿಸರಗಳಿಗೆ ತಕ್ಕಂತೆ ಒಂದು ಮರವನ್ನೊ, ಒಂದು ಪ್ರಾಣಿಯನ್ನೊ, ಒಂದು ಮೂರ್ತಿಯನ್ನೊ, ಒಂದು ವಸ್ತುವನ್ನೊ, ಒಂದು ತತ್ವವನ್ನೊ ಆರಾಧಿಸುತ್ತಾನೆ. ತುಳಸಿದಾಸ್‌ನಿಂದ ಹಿಡಿದು ಪೆರಿಯಾರ್‌ವರೆಗೆ ಎಲ್ಲರೂ ಆರಾಧಕರೇ! ಮೂರ್ತಿ ಭಂಜಕರಿಗೂ ನಿರಾಕಾರವಾದಿಗಳಿಗೂ ಆರಾಧನೆ ತಪ್ಪಿದ್ದಲ್ಲ. ಈ ಆರಾಧಕರು ಪರಸ್ಪರ

1. ವಿಭೂತಿ ಪೂಜೆ (ಕುವೆಂಪು) ಯ ಮೊದಲನೆಯ ಪ್ರಬಂಧ 'ಕವಿಯಲ್ಲಿ ವಿಭೂತಿ' ಓದಿ.

ಭರ್ತ್ಸನೆಯಲ್ಲಿ ತೊಡಗುವುದೇ ಮೂರ್ಖತನ, ಅಸಭ್ಯತನ. ತನಗಾಗದ್ದೆಲ್ಲ ಕೆಟ್ಟದ್ದೆಂದು ದುಷ್ಟವೆಂದು ಘೋಷಿಸುವುದು ಅಜ್ಞಾನವೂ ಅಹುದು, ದೌಷ್ಟ್ಯವೂ ಅಹುದು. ಕ್ಷಯರೋಗಿಗಳಿಗೆ ಹಾಲು ಸೇರದು; ಸಕ್ಕರೆ ಕಾಯಿಲೆ ಇರುವವರಿಗೆ ಜಾಮೂನ್ ಜಿಲೇಬಿ ಅಪಥ್ಯ. ಕೆಲವರು ಹಾಲಿನ ಕೆನೆ ಎಂದರೆ ವಾಂತಿ ಮಾಡಿಕೊಳ್ಳುತ್ತಾರೆ. ಸ್ವಮೂತ್ರ ಪಾನದಿಂದ ಕೆಲವರು ಆರೋಗ್ಯ ರಕ್ಷಣೆ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರಿಗೆ ನಿಂದೆ ಬಯ್ಗುಳಗಳೆಂಬ ಅಮೇಧ್ಯವೇ ರುಚಿ. ರಸನೆಯಲ್ಲಿ ದೋಷವಿರುವವರಿಗೆ ಅಮೃತವೂ ಹಿಡಿಸುವುದಿಲ್ಲ. ಲೋಕೋ ಭಿನ್ನರುಚಿಃ ಕೆಲವರು ಹಾಲಿನಲ್ಲಿ ವಿಷ ಕಾಣುತ್ತಾರೆ; ಮತ್ತೆ ಕೆಲವರು ಮೊಸರಿನಲ್ಲಿ ಕಲ್ಲು ಆರಿಸುತ್ತಾರೆ. ನಮ್ಮ ಇಂದಿನ ವಿಮರ್ಶೆಯ ಪರಿಸ್ಥಿತಿ ಇಂಥದು. ಜಾತಿದ್ವೇಷ ವ್ಯಕ್ತಿ ಪಕ್ಷಪಾತ ಮತ್ತು ವೈಯಕ್ತಿಕ ರೋಗಗಳು ವಿಮರ್ಶೆಯಲ್ಲಿ ಭಾಗವಹಿಸುತ್ತವೆ.

ಕೆಲವರು ವಿಮರ್ಶೆಗೆ ತಾವು ಆರಿಸಿಕೊಂಡ ಕೃತಿಯಲ್ಲಿ ಜಳ್ಳು ಸಿಪ್ಪೆ ಕಸಕಡ್ಡಿಗಳನ್ನು ಪಕ್ಕಕ್ಕಿಟ್ಟು, ಒಳ್ಳೆಯದನ್ನಿರಿಸಿಕೊಂಡು ವ್ಯಾಖ್ಯಾನ ಮಾಡಬಹುದು. ಮತ್ತೆ ಕೆಲವರು ಕಾಳುಗಳನ್ನು ಬದಿಗಿಟ್ಟು, ಕಸಕಡ್ಡಿ ಜಳ್ಳುಗಳನ್ನು ಮಾತ್ರ ಎತ್ತಿಕೊಂಡು ರುಚಿನೋಡಬಹುದು. ಖಂಡನೆಯೊಂದೇ ವಿಮರ್ಶೆಯಲ್ಲ, ಮಂಡನೆಯೂ ವಿಮರ್ಶೆಯೇ. ಕೆಟ್ಟದ್ದನ್ನು ಒಳ್ಳೆಯದನ್ನು ಎತ್ತಿ ಹಿಡಿಯುವಲ್ಲಿ ವಿಮರ್ಶಕನ ಸದಭಿರುಚಿ ಮತ್ತು ತಾರತಮ್ಯ ವಿವೇಕ ಸ್ಪಷ್ಟವಾಗುತ್ತವೆ. ಪೂರ್ವಗ್ರಹಪಕ್ಷಪಾತದೂರವಾದ ಖಂಡನೆ ಗ್ರಾಹ್ಯವೇ ಸರಿ. ಏಕೆಂದರೆ ಸದ್ರುಚಿ ರಕ್ಷಣೆ ಹಾಗೂ ವಿಕಾಸಕ್ಕೆ ಖಂಡನೆ ಅತ್ಯಗತ್ಯ. ಕೊಳಕು ಕಸಗಳನ್ನು ಒಟ್ಟೈಸಿ ದಹಿಸದಿದ್ದರೆ ಪರಿಸರ ಮಾಲಿನ್ಯವನ್ನು ರಕ್ಷಿಸಿದಂತಾಗುವುದಿಲ್ಲ. ಆದ್ದರಿಂದ ಖಂಡನೆ ಮಂಡನೆಗಳೆರಡೂ ವಿಮರ್ಶೆಯ ಎರಡು ಕಣ್ಣುಗಳೆಂದು ಹೇಳಬಹುದು. ಇವೆರಡರೂ ಅಲ್ಲದ್ದು ರುಜಿನ ವಿಮರ್ಶೆಯಾಗುತ್ತದೆ. ಕೆಲವು ವರ್ಷಗಳ ಹಿಂದೆ ಮನೋಹರ ಗ್ರಂಥ ಮಾಲೆಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ಕುರಿತ ವಿಮರ್ಶೆ ಖಂಡನೆಯೂ ಅಲ್ಲ, ಮಂಡನೆಯಂತು ಅಲ್ಲ; ಮಾನಸರೋಗಿಯ ಕೊಳೆತ ಮನಸ್ಸಿನ ರೋಗಿಯ ಅಪಲಾಪ, ಹಂದಿಯ ಗೊಟೆ, ಕೋಳಿಯ ಬಗ್ಗಡ ಗೆದರಿಕೆ.

ಕುವೆಂಪು ಮತ್ತು ಅವರ ಸಾಹಿತ್ಯವನ್ನು ಕುರಿತು ಎರಡೂವರೆ ಸಾವಿರಕ್ಕೂ ಹೆಚ್ಚು ಪುಟಗಳ ಭಾಷ್ಯವನ್ನೂ, ಬಸವಣ್ಣನವರನ್ನು ಕುರಿತು ಸುಮಾರು ಒಂದು ಸಾವಿರ ಪುಟಗಳಷ್ಟು ವ್ಯಾಖ್ಯಾನವನ್ನೂ ಪ್ರಕಟಿಸಿದ್ದೇನೆ. ಪಂಪ, ಹರಿಹರ, ಕುಮಾರ ವ್ಯಾಸ, ಕನಕದಾಸ, ನಂಜುಂಡ, ಸರ್ವಜ್ಞ, ಷಡಕ್ಷರ ದೇವರನ್ನು ಕುರಿತು ವಿಮರ್ಶಾಗ್ರಂಥ ಮತ್ತು ಲೇಖನಗಳು ಪ್ರಕಾಶಗೊಂಡಿವೆ. ಕಬ್ಬಿಗರ ಕಾವ, ಧರ್ಮಾಮೃತ ಸಂಗ್ರಹ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಲೀಲಾವತಿ ಪ್ರಬಂಧ, ಪುಣ್ಯಾಸ್ರವ ಚಂಪೂ, ರುಕ್ಮಾಂಗದ ಚರಿತ್ರೆ, ಜೈಮಿನಿಭಾರತ ಸಂಗ್ರಹಗಳನ್ನು ಸಂಪಾದಿಸಿದ್ದಲ್ಲದೆ ಸಾವಿರಾರು ಪುಟಗಳ ವಿಮರ್ಶೆಯನ್ನು ಬರೆದಿದ್ದೇನೆ. 'ಗದ್ಯ ಶೈಲಿ'ಯನ್ನು ಕುರಿತ ವಿವೇಚನೆಯ ಗ್ರಂಥವೊಂದಿದೆ. ಇದೊಂದೇ ಕನ್ನಡದಲ್ಲಿ ಸದ್ಯಕ್ಕೆ.

ನನ್ನ ಸಾಹಿತ್ಯ ವ್ಯವಸಾಯದ ಪ್ರಾರಂಭದಲ್ಲಿ ರಚಿಸಿದ ಎರಡು ಐತಿಹಾಸಿಕ ಕಾದಂಬರಿಗಳು: ಬೆಂಗಳೂರು ಕೆಂಪೇಗೌಡ ಮತ್ತು ಕಡುಗಲಿ ಕುಮಾರ ರಾಮ. ಕಾದಂಬರಿಕಾರನಾಗಬೇಕೆಂಬ ನನ್ನ ಆಸೆ ಅಷ್ಟಕ್ಕೇ ಮುರುಟಿಹೋಯಿತೇನೊ? ಕೆನೆ ತೆನೆ - ನನ್ನ ಎರಡು ಪ್ರಬಂಧ ಸಂಕಲನಗಳು. ಆರೇಳು ಸಂಪುಟಗಳಲ್ಲಿ ಸಾವಿರಾರು ಪುಟಗಳಲ್ಲಿ ಹರಡಿಕೊಂಡಿರುವ ಭಾಷಣಗಳು ಮಿನಿ ವಿಶ್ವಕೋಶದಂತಿವೆ. ನೂರಾರು ಪುಸ್ತಕಗಳಿಗೆ ಬರೆದ ಮುನ್ನುಡಿಗಳು ಮೂರ್ನಾಲ್ಕು ಸಂಕಲನಗಳಲ್ಲಿ ಒಟ್ಟುಗೂಡಿವೆ. 'ಸ್ಥಳ ನಾಮ ವ್ಯಾಸಂಗ' ಸ್ಥಳನಾಮಗಳ ಅಧ್ಯಯನಕ್ಕೊಂದು ಪೀಠಿಕೆಯಂತಿದೆ. ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ರಾಷ್ಟ್ರೀಯ ಮೂಲ ಭೂತ ಸಮಸ್ಯೆಗಳು' ವಿಚಾರವಂತರು ಮತ್ತು ರಾಜಕೀಯ ನಾಯಕರು ಪರಿಶೀಲಿಸಬಹುದಾದ ಗ್ರಂಥ. ಋಷಿ ಕವಿ ರವೀಂದ್ರರು, ಮೇಡಂ ಕ್ಯೂರಿ, ಆಲ್ಬರ್ಟ್ ಐನ್‌ಸ್ಟೀನ್ ಮೊದಲಾದ ಮಕ್ಕಳ ಸಾಹಿತ್ಯವೂ ನನ್ನಿಂದ ರಚನೆಗೊಂಡಿದೆ. ಈಗಲೇ ಪ್ರಕಟಗೊಂಡಿರುವ ಇಂಗ್ಲೆಂಡು ಜರ್ಮನಿ ಆಸ್ಟ್ರಿಯ ಐರ್ಲೆಂಡು ಆಫ್ರಿಕಾಗಳ ಪ್ರವಾಸ ಕಥೆಗಳ ಜತೆಗೆ ಅಮೆರಿಕೆಯ ಪ್ರವಾಸವನ್ನು ಕುರಿತ ಕಾದಂಬರಿಯೊಂದು ಇಷ್ಟರಲ್ಲೇ ಹೊರಬರಲಿದೆ.

Culture, Education and society ಎಂಬ 210 ಪುಟಗಳ ಲೇಖನ ಸಂಗ್ರಹವೊಂದು 1974ರ ಹೊತ್ತಿಗೆ ಪ್ರಕಟವಾಯಿತು. Studies in Karnataka Culture ಎಂಬ ಮುನ್ನೂರು ಪುಟಗಳ ಗ್ರಂಥ ಇದೀಗ ಅಚ್ಚಿನಲ್ಲಿದೆ. A Study of Village names of Mysore district ಎಂಬ ಸ್ಥಳ ನಾಮ ಸಂಶೋಧನೆಯ ಗ್ರಂಥ ಅಚ್ಚಿಗೆ ಸಿದ್ಧವಾಗಿದೆ. ಇವು ಮೂರೂ ಆಂಗ್ಲಭಾಷೆಯಲ್ಲಿವೆ.

ಇದು ದೇಜಗೌ ಸಾಹಿತ್ಯದ ಒಂದು ಸಿಂಹಾವಲೋಕನ. ಈ ಅವಲೋಕನದಲ್ಲಿ ಅಚ್ಚಾಗಿರುವುದೆಲ್ಲವೂ ಸೇರ್ಪಡೆ ಗೊಂಡಿಲ್ಲ. ಹಸ್ತ ಪ್ರತಿಯ ರೂಪದಲ್ಲಿರುವ ಸಾಹಿತ್ಯವೂ ಸೇರಿಲ್ಲ. ನಾನು ಸಂಪಾದಿಸಿರುವ ನೂರಾರು ಗ್ರಂಥಗಳನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಇಷ್ಟಾದರೂ ನನಗೆ ತೃಪ್ತಿಯಿಲ್ಲ. ಏನೋ ಅರಕೆ ಕೊರತೆಗಳಿರುವಂತೆ ನನಗನಿಸುತ್ತದೆ. ಆಡಳಿತ ಚಕ್ರಕ್ಕೆ ಕೈ ಕೊಡದಿದ್ದರೆ, ಸಂಘಸಂಸ್ಥೆ ಟ್ರಸ್ಟ್ ಮೊದಲಾದ ಹವ್ಯಾಸಗಳನ್ನು ಅಂಟಿಸಿಕೊಳ್ಳದಿದ್ದರೆ, ನಾನು ಇನ್ನೂ ಮಜಬೂತಾಗಿ, ಪರಿಣಾಮಕಾರಿಯಾಗಿ ಬರೆಯುತ್ತಿದ್ದೆನೇನೋ ಎಂಬ ಸಂಶಯ ಕೀಟ, ಅತೃಪ್ತಿಯ ವ್ಯಸನ, ಆಗಾಗ್ಗೆ ನನ್ನನ್ನು ಕಾಡುವುದುಂಟು. ಆದರೆ ದೈವೇಚ್ಛೆ ಏನಿತ್ತೋ ಅದಾಗಿದೆಯೆಂದು ತೆಪ್ಪಗಾಗುತ್ತೇನೆ. ಇನ್ನೂ ನನ್ನ ಮಸ್ತಿಷ್ಕದಲ್ಲಿ ಹಲವು ಯೋಜನೆಗಳು, ಸಾಹಿತ್ಯವಸ್ತುಗಳು ಹುದುಗಿವೆ. ಅವಕ್ಕೆ ಏನು ಪ್ರಾಪ್ತಿ ಒದಗುತ್ತದೆಯೊ ಕಾಣೆ.

ನೀನು ಏಕೆ ಬರೆಯುತ್ತೀಯೆ ಎಂದು ಯಾರಾದರೂ ಕೇಳಿದರೆ, ನೀನು ದಿನಾಲೂ ಉಣ್ಣುವುದೇಕೆಂದು ಉಸಿರಾಡುವುದೇಕೆಂದು ನಾನು ಪ್ರಶ್ನಿಸುತ್ತೇನೆ. ಅದೇ ರೀತಿ ನಾನು ಬರೆಯಬೇಕು, ಬರೆಯುತ್ತೇನೆ. ಬಿರುದು ಬಾವಲಿ ಪ್ರಶಸ್ತಿ ಬಹುಮಾನಗಳಿಗಾಗಿ ನಾನೆಂದೂ ಹಾತೊರೆದವನಲ್ಲ; ಒಬ್ಬರ ಮುಂದೆ ಅಂಗಲಾಚಿದವನಲ್ಲ; ಹಲ್ಲು ಕಿರಿದವನಲ್ಲ;

ಕಿತಾಪತಿಯ ರಾಜಕೀಯ ಮಾಡಿದವನಲ್ಲ. ಅದಕ್ಕೂ ಅದೃಷ್ಟವಿರಬೇಕು ಬಂದರೆ ಉಬ್ಬುವುದಿಲ್ಲ, ಬರದಿದ್ದರೆ ಹಲುಬುವುದಿಲ್ಲ. ಕೆಲವರು ದೊಡ್ಡ-ಸಣ್ಣ ಸಾಹಿತಿಗಳು ನನ್ನ ಬಳಿ ಬಂದು ಅಥವಾ ಅವರ ಬಳಿ ನಾನು ಹೋದಾಗ ಆ ಪ್ರಶಸ್ತಿ ಕೊಡಿಸಿ, ಈ ಪದವಿಕೊಡಿಸಿ ಎಂದು ದುಂಬಾಲು ಬಿದ್ದದ್ದುಂಟು, ನನ್ನನ್ನು ಓಲೈಸುತ್ತಿದ್ದುದುಂಟು. ಈಗಲೂ ಅಂಥವರು ಬಹುಮಾನ ಸಮಿತಿಯ ಸದಸ್ಯರನ್ನು ಮತ್ತು ಅಂಕಣಕಾರರನ್ನು ಓಲೈಸುವುದುಂಟು. ಫೋಟುಗಳಿಗೆ ಸೀಸಿ ಅಥವಾ ಕ್ಯಾನ್ವಾಸ್ ಮಾಡುವಂತೆ, ಮಧ್ಯವರ್ತಿಗಳ ಮೂಲಕ ತಗಾದೆ ಮಾಡುವುದಂಟು. ಈ ದುಂಬಾಲಾಗಲಿ, ಓಲೈಕೆಯಾಗಲಿ, ತಗಾದೆಯಾಗಲಿ ಭಗವತ್ಕೃಪೆಯಿಂದ ನನ್ನ ಸ್ವಭಾವಕ್ಕೆ ವಿರುದ್ಧವಾದದ್ದು. ಇದೂ ಒಂದು ನನ್ನ ಭಾಗ್ಯವೆಂದೇ ಬಗೆದಿದ್ದೇನೆ.

ಸಾಹಿತ್ಯ ಕ್ಷೇತ್ರದಲ್ಲಿರುವಷ್ಟು ಗುಂಪುಗಾರಿಕೆ ರಾಜಕೀಯ ಕ್ಷೇತ್ರದಲ್ಲಿಲ್ಲ. ನನಗೆ ತಿಳಿದ ಮಟ್ಟಿಗೆ ಹಿರಿಯ ಪೀಳಿಗೆಯ ಪೈಕಿ ಅದರಿಂದ ಯಾವಾಗಲೂ ದೂರವಿದ್ದವರೆಂದರೆ ಬಿ.ಎಂ. ಶ್ರೀ., ಕುವೆಂಪು, ಕಾರಂತ, ಮಾಸ್ತಿ, ಪುತಿನ, ತೀನಂಶ್ರೀ, ಮಾಳವಾಡ; ಕಿರಿಯಪೀಳಿಗೆಯಲ್ಲಿ ಅರಸಿದರೆ ಏಳೆಂಟು ಮಂದಿ ಸಿಗಬಹುದು. ತಂತಮ್ಮ ಭುಜ ಬೆನ್ನುಗಳನ್ನು ತಟ್ಟಿಕೊಳ್ಳುತ್ತ, ಬೇರೆಯವರನ್ನು ನಿಂದಿಸುತ್ತ, ಹಿಂದಿನಿಂದ ಕಾಲು ಹಿಡಿದು ಕೆಳಗೆಳೆಯುವ ಹೂಟಹುನಾರುಗಳೇ ಈ ಗುಂಪುಗಾರಿಕೆಯ ಉದ್ದೇಶ. ನವೋದಯ ಸಾಹಿತ್ಯದ ಪ್ರಾರಂಭ ಕಾಲದಿಂದಲೂ ಇಂಥ ಹೀನ ಕಾರ್ಯ ಸಾಗುತ್ತ ಬಂದಿದೆ. ಬ್ರಾಹ್ಮಣನ ಹೆಗಲ ಮೇಲಿದ್ದ ಮೇಕೆ ನಾಯಿಯೆಂದು ಸಾಧಿಸಿ, ಅವನದನ್ನು ಬಿಸಾಡಿದ ಮೇಲೆ ನಾಲ್ಕು ಕಡೆ ಅವಿತಿದ್ದು ಹೊತ್ತುಕೊಂಡು ಓಡಿ ಹೋದ, ನಾಲ್ಕು ಜನ ಕಳ್ಳರಿಗೆ ಈ ಗುಂಪುಗಾರಿಕೆಯನ್ನು ಹೋಲಿಸಬಹುದು. ಕುವೆಂಪು ಕವಿಯಲ್ಲವೆಂದು ಒಂದು ಗುಂಪು ಸಾರುತ್ತ ಸಾರುತ್ತ ಸತ್ತೇಹೋಯಿತು; ಕುವೆಂಪು ಸುಭದ್ರವಾಗಿಯೇ ಉಳಿದರು. ನಾಲ್ಕು ಜನ ವಿದ್ವಾಂಸರು ಸೇರಿಕೊಂಡು ತಾವು ಮಾತ್ರ ಸುಪ್ರಸಿದ್ಧ ವಿಮರ್ಶಕರೆಂದು, ತಾವು ಬಿಟ್ಟರೆ ಅನ್ಯರಿಲ್ಲವೆಂದು ಡಂಗುರ ಡಿಂಡಿಮ ಬಾರಿಸುತ್ತಾರೆ, ಕಹಳೆ ವಾಲಗ ಊದುತ್ತಾರೆ. ಸಂಶೋಧಕ ವರ್ಗದಲ್ಲಿಯೂ ಇದೇ ಪರಿಪಾಠವುಂಟು. ಅಧಿಕಾರ ಸ್ಥಾನಮಾನಗಳನ್ನು ನೋಡಿಕೊಂಡು ಎದುರಿಗಿರುವ ಸಾಹಿತಿಗಳನ್ನು ಕೊಂಡು ಕೊನೆಯುವ, ತಾವು ಮಾತ್ರ ನಿಷ್ಪಕ್ಷಪಾತ ವಿಮರ್ಶಕರೆಂದು ಹೇಳಿಕೊಳ್ಳುವ ಸ್ತುತಿಪಾಠಕರೂ ಇದ್ದಾರೆ. ನನ್ನೆದುರಿಗೇ ವೇದಿಕೆಯ ಮೇಲೆ ನಿಂತು ಪ್ರವಾಸ ಸಾಹಿತ್ಯದ ಬಗ್ಗೆ ಮಾತಾಡುತ್ತ ಕಿರಿಯ ವಿದ್ವಾಂಸರೊಬ್ಬರು ನನ್ನ ಹೆಸರೇ ಎತ್ತಲಿಲ್ಲ. ನಿಜ, ಅವರ ನಿಷ್ಪಕ್ಷಪಾತ ಬುದ್ಧಿಯನ್ನು ಧೈರ್ಯವನ್ನು ಮೆಚ್ಚಬೇಕಲ್ಲವೆ? ನಾನವರಿಗೆ ಯಾವ ರೀತಿಯಲ್ಲಿಯೂ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲ ಈಗ. ಹೀಗಾಗಿ ಗುಂಪುಕಟ್ಟಲಾರದ ಸಾಹಿತಿಗಳ ಕೃತಿಗಳಿಗೆ ಸಾಕಷ್ಟು ಪ್ರಚಾರ ಸಿಗುವುದಿಲ್ಲ.

ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಕಿರಿಯರ ಕರ್ನಾಟಕ'ವೆಂಬ ವಿಶ್ವಕೋಶದಲ್ಲಿ ನನ್ನ ಹೆಸರಿನ ಉಲ್ಲೇಖವಿಲ್ಲವೆಂಬ ಸಂಗತಿಯ ಕಡೆಗೆ ತರಂಗದ 'ಸ್ವಗತ' ನನ್ನ ಗಮನ ಸೆಳೆದಿದೆ. ಗುಂಪುಗಾರಿಕೆಗೆ, ಜಾತಿದ್ವೇಷಕ್ಕೆ, ಸತ್ಯಹನನಕ್ಕೆ, ವಿಮರ್ಶಕಶಾಹಿಗೆ,

ಬೌದ್ಧಿಕ ಕುಬ್ಜತೆಗೆ ಇದಕ್ಕಿಂತ ಅನ್ಯ ನಿದರ್ಶನ ಬೇಕಿಲ್ಲ. ಇದು ಆ ವಿಶ್ವವಿದ್ಯಾನಿಲಯದ ವೈಖರಿ!

ಈ ಶತಮಾನದ ಪೂರ್ವಾರ್ಧದ ಕೊನೆಯುವರೆಗೆ ಪ್ರಕಟವಾಗುತ್ತಿದ್ದ ಗ್ರಂಥಗಳನ್ನೆಲ್ಲ ವಿದ್ವಾಂಸರಾಗಲಿ ಸಾಮಾನ್ಯರಾಗಲಿ ಎಲ್ಲರೂ ಓದಬಹುದಿತ್ತು, ಕೊಳ್ಳಬಹುದಿತ್ತು. ಅಲ್ಲಿಂದೀಚೆಗೆ ಬರೆಯುವವರ ಸಂಖ್ಯೆ, ಪ್ರಕಟವಾಗುತ್ತಿರುವ ಗ್ರಂಥಗಳ ಸಂಖ್ಯೆ ಅಭಿಮಾನ ಮೂಡಿಸುವಂತಹುದಾದರೂ, ಅವನ್ನೆಲ್ಲ ಓದಿಮುಗಿಸುವ ತಾಳ್ಮೆಯಾಗಲಿ, ಬಿಡುವಾಗಲಿ ಎಲ್ಲರಿಗೂ ಇರುವುದಿಲ್ಲ. ಕೊಳ್ಳುವುದಂತು ಸಾಧ್ಯವೇ ಇಲ್ಲ. ಆದ್ದರಿಂದ ಕೆಲವರು ಮಾತ್ರ - ಆದೂ ಓದುವ ಚಟವುಳ್ಳವರು - ಆಯ್ಕೆ ಮಾಡಿಕೊಂಡು ಕೊಂಡೋ ಎರವಲು ಪಡೆದೊ ಓದಬಹುದು. ಮಹಾ ಸಾಹಿತಿಗಳಂತು ಸಾಮಾನ್ಯ ಸಾಹಿತಿಗಳ ಗ್ರಂಥಗಳ ಕಡೆಗೆ ಕಣ್ಣೇ ಹಾಯಿಸುವುದಿಲ್ಲ. ಅವುಗಳಲ್ಲೇನಿದೆ ಎಂಬ ಅಸಡ್ಡೆಯೂ ಗರ್ವವೂ ಕಣ್ಣು ಹಾಯಿಸದಿರುವುದಕ್ಕಿರುವ ಕಾರಣಗಳಲ್ಲೊಂದು. ತಾವು ಬರೆದದ್ದೆಲ್ಲ ಸರ್ವಶ್ರೇಷ್ಠ, ಇತರರು ಬರೆದದ್ದೆಲ್ಲ ಕೀಳೆನ್ನುವ ತುಚ್ಛ ಭಾವನೆ ಅವರದು. ಅಂಥವರಲ್ಲಿ ಯಾರಾದರೂ 'ನನ್ನ ಆ ಪುಸ್ತಕ ಇದೆಯಲ್ಲ, ಅದನ್ನು ಓದಿದ್ದೀರಾ' ಎಂದು ಕೇಳಿದ್ದಾದರೆ ನಾನು ಕೂಡಲೆ 'ನೀವು ನನ್ನ ಈ ಪುಸ್ತಕ ಓದಿದ್ದೀಲಾ?' ಎಂದು ಪ್ರಶ್ನೆರೂಪದ ಉತ್ತರ ನೀಡುತ್ತೇನೆ. ಆಗವರು ತೆಪ್ಪಗಾಗುತ್ತಾರೆ. ಪ್ರತಿಯೊಬ್ಬ ಸಾಹಿತಿಯೂ ತನ್ನ ಪುಸ್ತಕವನ್ನೆಲ್ಲರೂ ಓದಬೇಕೆಂದ ಪೇಕ್ಷಿಸುತ್ತಾನೆಯೇ ಹೊರತು, ಬೇರೆಯವರ ಪುಸ್ತಕಗಳನ್ನೋದುವುದೇ ಇಲ್ಲ. ಈಚೀಚೆಗೆ ಪುಸ್ತಕಗಳನ್ನೋದುವಷ್ಟು ಪುರಸತ್ತು ನನಗಿಲ್ಲ, ತಾಳ್ಮೆಯೂ ಇಲ್ಲ. ಓದಬಾರದೆಂಬ ಚಲವಾಗಲಿ ಅವಜ್ಞೆಯಾಗಲಿ ಇಲ್ಲ. ' ಓದು ಬರಹಕ್ಕೆ ಶತ್ರು ಎಂಬ ನನ್ನ ಗುರು ತೀನಂಶ್ರೀಯವರು ಕಟ್ಟಿದ ಗಾದೆ ಅನುಭವಜನ್ಯ ಸತ್ಯವಾಗಿದೆ. ನಾನೇ ಬರೆದ ಹಸ್ತಪ್ರತಿಯ ಕಡೆಗೆ ಒಮ್ಮೆಯಾದರೂ ಕಣ್ಣು ಹಾಯಿಸುವ ಸಹನೆ ನನಗಿಲ್ಲ. ಅಚ್ಚಿನ ಕರಡು ತಿದ್ದುವಾಗ ಮಾತ್ರ ಒಮ್ಮೆ ಓದುತ್ತೇನೆ. ಆಮೇಲೆ ಅದನ್ನುಪಚರಿಸುವ ಗೋಜಿಗೆ ಹೋಗುವುದಿಲ್ಲ. ಹಲವು ಸಾಹಿತ್ಯೇತರ ಕಾರ್ಯಯೋಜನೆಗಳನ್ನಂಟಿಸಿಕೊಂಡಿರುವುದೇ ಇದಕ್ಕೆ ಮುಖ್ಯಕಾರಣ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಉತ್ತುಂಗ ಶಿಖರಕ್ಕೇರಿರುವ ಸಾಹಿತಿಯೊಬ್ಬರು ಯಾವ ವೇದಿಕೆಯ ಮೇಲೆ ನಿಂತರೂ ಹಲವು ಸಾಹಿತಿಗಳ ಬದುಕು ಎರವಲು ಅನುಭವಗಳಿಂದ ಸಾಗುತ್ತಿದೆ; ಸ್ವಂತ ಅನುಭವಗಳನ್ನು ಬಿತ್ತರಿಸುವ ಸಾಹಿತಿಗಳೇ ಇಲ್ಲವೆಂದು ಅಹಂಕಾರದ ಮಾತುಗಳನ್ನು ಮೇಲಿಂದ ಮೇಲೆ ಉದುರಿಸುತ್ತಾರೆ. ತಮ್ಮಂಥ ಸರ್ವಜ್ಞರಿಲ್ಲವೆಂಬ ಮನೋರೋಗವೊ, ತಮ್ಮ ಬದುಕಿನಲ್ಲಿರುವ ಯಾವುದೋ ಕೊರತೆಯ ಕೀಳರಿಮೆಯೊ ಅವರ ವರ್ತನೆಗೆ ಕಾರಣವಿರಬಹುದು. ತಮ್ಮ ಸಾಹಿತ್ಯದಲ್ಲಿ ಸಾಕಷ್ಟು ಎಂಜಲು ಅನುಭವಗಳಿವೆಯೆಂಬುದನ್ನವರು ಮರೆಯುತ್ತಾರೆ. ಶ್ರೀಸಾಮಾನ್ಯನ ಜ್ಞಾನ ಕೋಶದಲ್ಲಿಯೂ ಸ್ವಂತ ಅನುಭವಗಳಿವೆಯೆಂದು ತಿಳಿಯಬೇಕಾದರೆ ಕಣ್ಣನ್ನು ಕುರುಡುಗೊಳಿಸಿರುವ ಕೊಬ್ಬು ಕರಗಬೇಕು. ತಮ್ಮನ್ನುಳಿದೆಲ್ಲರೂ ದಡ್ಡರು, ಅನುಭವ

ಶೂನ್ಯರೆನ್ನುವುದು ಮಾನವತಾವಾದದ ಮುಖಕ್ಕೆಸೆದ ಕೆಸರಾಗಿದೆ. ಅವರ ಚಂಚ ಎನ್ನುವ ರೀತಿಯಲ್ಲಿ ಮತ್ತೊಬ್ಬ ಮರಿ ಸಾಹಿತಿ ಅವರ ಧಾಟಿಯಲ್ಲಿಯೇ 'ಕೋಟ್ಯಂತರ ರೂಪಾಯಿ ಖರ್ಚಿನಲ್ಲಿ ಅಚ್ಚಾಗುತ್ತಿರುವ ಕನ್ನಡದ ಮತ್ತು ಜಾನಪದದ ಪುಸ್ತಕಗಳನ್ನು ಕತ್ತೆಗಳೂ ಮೂಸುವುದಿಲ್ಲ; ಶೇಕಡ 99.5ಭಾಗ ಜಳ್ಳು, ಕಚಡ' ಎಂದು ಅಬ್ಬರಿಸಿದ್ದುಂಟು. 5 ಭಾಗ ಎಂದು ಏನು ರಿಯಾಯಿತಿ ತೋರಿದ್ದಾರೆಯೋ ಅದು ಅವರ ಗ್ರಂಥಗಳಿಗೆ ಮಾತ್ರ ಸಲ್ಲುತ್ತದೆಂಬ ಸೊಕ್ಕು ಅವರದಾಗಿದೆ. ಅವರೇ ಹೇಳಿರುವ ಹಾಗೆ 99.5 ಭಾಗದಷ್ಟು ಪುಸ್ತಕಗಳನ್ನು ಕತ್ತೆಗಳು ಮೂಸುವುದಿಲ್ಲ, ನಿಜ; ವಿದ್ವಜ್ಜನರು, ರಸಿಕರು, ಸಹೃದಯರು ಓದುತ್ತಾರೆ. ಅವನ್ನು ಮೂಸದಿರುವುದರಿಂದಲೇ ಅವುಗಳ ಯೋಗ್ಯತೆ ಅಂಥ ಸಾಹಿತಿಗೆ ಅರಿವಾಗುವುದಿಲ್ಲ. ಇವರು ಶೃಂಗೇರಿ ಮಠದ ಅಥವಾ ಉಡುಪಿ ಮಠದ ಸ್ವಾಮಿಗಳಂತೆ ಅಧಿಕಾರ ವಾಣಿಯಿಂದ ಮಾತಾಡುತ್ತಾರೆ. ನಮ್ಮ ಕೆಲವು ವಿಮರ್ಶಕರ ಹಣೆಬರಹವೇ ಇಂಥದು. ಈ ಸಂದರ್ಭದಲ್ಲಿ ನೆನಪಿಗೆ ಬರುವ ಅಕ್ಕ ಮಹಾದೇವಿಯ ವಚನವೊಂದನ್ನುದ್ಧರಿಸಿ, ಈ ಮುನ್ನ ಜ್ಞಾಪಿಸಿಕೊಂಡ ವಿಮರ್ಶಕವರೇಣ್ಯರ ವಿಚಾರವನ್ನು ಮರೆಯುತ್ತೇನೆ.

ಗಗನದ ಗುಣ್ಪ ಚಂದ್ರಮ ಬಲ್ಲನಲ್ಲದೆ
ಕಡೆಯ ಲೆದ್ದಾಡುವ ಹದ್ದು ಬಲ್ಲದೇನಯ್ಯ?
ನದಿಯ ಗುಣ್ಪ ತಾವರೆ ಬಲ್ಲುದಲ್ಲದೆ
ಕಡೆಯಲಿಪ್ಪ ಹೊನ್ನಾವರಿಕೆ ಬಲ್ಲುದೇನಯ್ಯ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೇನಯ್ಯ?
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ನಿಲವ
ನೀವೇ ಬಲ್ಲಿರಲ್ಲದೆ ಈ ಕೋಣನ ಮೈಮೇಲಿನ
ಸೊಳ್ಳೆಗಳೆತ್ತ ಬಲ್ಲವಯ್ಯ?

ನನ್ನನ್ನು ಚಂದ್ರಮ, ತಾವರೆ, ಪರಿಮಳ, ಚನ್ನಮಲ್ಲಿಕಾರ್ಜುನರೊಡನೆ ಹೋಲಿಸಿಕೊಳ್ಳುವ ಮೂರ್ಖ ನಾನಲ್ಲ. ಆದರೆ ನಮ್ಮ ಕೆಲವು ವಿಮರ್ಶಕ ಮಹಾಶಯರು ಹದ್ದು ಹೊನ್ನಾವರಿಕೆ ನೊರಜು ಕೋಣಗಳ ಸಾಲಿಗೆ ಸೇರಿದವರೆಂಬುದು ಅವರ ನಡತೆ ಅಭಿರುಚಿಗಳಿಂದ ವ್ಯಕ್ತವಾಗುತ್ತದೆ. ಪ್ರತಿಯೊಬ್ಬ ಸಾಹಿತಿಯೂ ಅವನವನ ಮಟ್ಟಕ್ಕನುಗುಣವಾಗಿ ಆಲೋಚಿಸುತ್ತಾನೆ, ಅನುಭವಿಸುತ್ತಾನೆ, ಅಭಿವ್ಯಕ್ತಗೊಳಿಸುತ್ತಾನೆ ಎಂದು ಬಗೆಯುವ ವಿನಯ ನಮ್ಮ ಹಿರಿಯ ಸಾಹಿತಿಗಳಿಗೂ ವಿಮರ್ಶಕರಿಗೂ ಇರಬೇಕಾಗುತ್ತದೆ. ತಮ್ಮ ಮುಖದ ಕಪ್ಪು ಪರರಿಗೆ ಗೋಚರಿಸುವಂತೆ ತಮಗೆ ಗೋಚರಿಸುವುದಿಲ್ಲವೆಂಬ ಸಾಮಾನ್ಯ ವಿವೇಕವಾದರೂ ಅವರಿಗೆ ಬೇಡವೆ?

ಗಂಧ ಮಾರುವವನೊಡನೆ ಗುದ್ದಾಡಬಹುದೇ ಹೊರತು, ಸಗಣಿಯವನೊಡನೆ ಗುದ್ದಾಡ ಬಾರದೆಂಬೊಂದು ಗಾದೆಯಿದೆ. ಸೆಗಣಿ ಕೆಟ್ಟದ್ದೆಂದು ನಾನು ಹೇಳೋಲ್ಲ. ಅದು

ಒತ್ತಟ್ಟಗಿರಲಿ. ಟೀಕಾಚಾರ್ಯರ ಅಪ್ರಬುದ್ಧ ಟೀಕೆಗಳಿಗೆ ಉತ್ತರ ಕೊಡಬಹುದು. ಪೂರ್ವಗ್ರಹ ದುರಾಗ್ರಹವಿಲ್ಲದ ಗಂಭೀರ ಸ್ವಭಾವದ ವಿದ್ವತ್ಸಂಪನ್ನ ವಿಮರ್ಶಕರಿಗೆ ಉತ್ತರಕೊಡಬಹುದೆ ಹೊರತು, ಖಾಲಿ ಚೀಲದ, ದುರಹಂಕಾರದ, ವಿದ್ವತ್ತಿನ ಗಂಧವಿಲ್ಲದ, ಅಮಲೇರಿದ, ವಿನಯ ಸಭ್ಯತೆಗಳು ಗೈರು ಹಾಜರಾದ ವಿಮರ್ಶಕ ಸಾರ್ವಭೌಮರ ಅಪಲಾಪ ಪ್ರಲಾಪಗಳಿಗೆ ನಾನು ಉತ್ತರ ಕೊಡಬಾರದೆಂದು ನನ್ನ ಸಾಹಿತ್ಯ ಕೃಷಿಯ ಪ್ರಾರಂಭದಲ್ಲಿಯೇ ನಿಶ್ಚಯಿಸಿಕೊಂಡೆ; ಆ ನಿಶ್ಚಯವೇ ಸರಿಯೆಂದು ಈಗಲೂ ನನಗನಿಸುತ್ತದೆ.

ನನ್ನ ಅನುಭವಗಳ ಅಭಿವ್ಯಕ್ತಿಗಾಗಿ, ನನ್ನ ಆತ್ಮತೃಪ್ತಿಗಾಗಿ ನಾನು ಬರೆಯುತ್ತೇನೆಯೇ ಹೊರತು ವಿಮರ್ಶಕ ವಿಧ್ವಂಸಕರನ್ನಾಗಲೀ, ಕುಬ್ಜ ವಿದ್ವಾಂಸರನ್ನಾಗಲಿ ತೃಪ್ತಿ ಪಡಿಸಲಲ್ಲ. ಸತ್ಯವನ್ನು ಮುಚ್ಚಿಡುವುದೂ ಭ್ರಷ್ಟಾಚಾರವೇ. ಇದು ಭ್ರಷ್ಟಾಚಾರದ ಭ್ರಷ್ಟಾಚಾರಿಗಳ ಯುಗ. ಭ್ರಷ್ಟಾಚಾರವನ್ನು ಸಂಹರಿಸಬೇಕಾದ ಸಾಹಿತ್ಯವೇ ಭ್ರಷ್ಟಾಚಾರದಿಂದ ತುಂಬಿರಬೇಕಾದರೆ, ರಾಜಕೀಯ ಭ್ರಷ್ಟಾಚಾರಿಗಳನ್ನು ಪ್ರಶ್ನಿಸುವ ಹಕ್ಕು ಸಾಹಿತಿಗಳಿಗಿದೆಯೇ?

ನನ್ನದೊಂದು ಪುಸ್ತಕ ಪ್ರಕಟಗೊಂಡ ನಂತರ ಅದರ ಬಗ್ಗೆ ನಿರ್ಲಿಪ್ತ ಮನೋಭಾವ ತಾಳುತ್ತೇನೆ . ಅದರ ಆವಹೇಳನದಿಂದ ನನಗೆ ಅನ್ಯಾಯವಾಗಿದೆಯೆಂಬ ದುಃಖ ಕ್ರೋಧ ಲವಲೇಶವೂ ಇಲ್ಲ. ಅಪ್ರಬುದ್ಧ ಅಸಭ್ಯ ಟೀಕೆಟಿಪ್ಪಣಿಗಳಿಗೆ ನಾನು ಸೊಪ್ಪು ಹಾಕಬೇಕಾಗಿಲ್ಲ. ಅಲ್ಲೊಬ್ಬ ರಾಯ, ಇಲ್ಲೊಬ್ಬ ಮೂರ್ತಿ, ಉಲ್ಲೊಬ್ಬ ಕೇಡಿ ನನ್ನ ಸಾಹಿತ್ಯವನ್ನಲ್ಲಗಳೆಯ ಬಹುದಾದರೂ ಕನ್ನಡದ ಬಂಧುಗಳು ನನ್ನನ್ನು ವಿಶ್ವಾಸದಿಂದ ಪ್ರೀತಿಯಿಂದ ಉದಾರದಿಂದ ಸದಾ ಹರಸುತ್ತಿದ್ದಾರೆ. ಅವರ ಹರಕೆಯೆ ನನ್ನ ಬಂಡವಾಳವಾಗಿದೆ, ಸ್ಫೂರ್ತಿಯಾಗಿದೆ, ಆಶಾನಿಶಾನೆಯಾಗಿದೆ, ವಜ್ರಕವಚವಾಗಿದೆ, ಸಂತೃಪ್ತಿಯ ಕಾಮಧೇನುವಾಗಿದೆ. ಗುರುಗಳ ಆಶೀರ್ವಾದಕ್ಕೆ, ಪುತಿನ ಅವರಂಥ ಕವಿಶ್ರೇಷ್ಠರ ನಿಷ್ಕಳಂಕ ಪ್ರೀತಿಗೆ, ಕಾವ್ಯಾನಂದರಂಥ ಸಜ್ಜನವರಿಷ್ಠರ ನಿರ್ವ್ಯಾಜ ಸ್ನೇಹಕ್ಕೆ, ಕಲಬುರ್ಗಿಯಂಥ ವಿದ್ವಾಂಸರ ವಿಶ್ವಾಸಕ್ಕೆ, ಚಿರಂಜೀವಿ ಅಳ್ಳರಂಥ' ಕನ್ನಡ ಪ್ರೇಮಿಗಳ ಗೌರವಕ್ಕೆ ಪಾತ್ರನಾದ ನಾನು ಮಹಾಧನಿಕನೇ ಹೊರತು, ಸದಾ ಸಂತೃಪ್ತನೇ ಹೊರತು ದೀನನೂ ಅಲ್ಲ, ರಿಕ್ತನೂ ಅಲ್ಲ. ಸಿದ್ಧಯ್ಯ ಪುರಾಣಿಕರು ನನ್ನನ್ನು ಯಾವತ್ತೂ ಆತ್ಮೀಯ ಬಂಧುವೆಂದು ಕರೆದಿದ್ದಾರೆಯೆ ಹೊರತು, ನನ್ನ ಬಗ್ಗೆ ಬೇರೆ ಮಾತುಗಳನ್ನು ಬಳಸಲೇ ಇಲ್ಲ. ಅಂಥವರ ಬಂಧುವಾಗುವ ಪುಣ್ಯ ಸಾಮಾನ್ಯವಾದದ್ದಲ್ಲ; ಅದೂ ಒಂದು ಯೋಗ. ಅವರೊಮ್ಮೆ ವಿಶ್ವಮಾನವ ಪ್ರಶಸ್ತಿಗಾಗಿ ತಮ್ಮ ಗ್ರಂಥವೊಂದನ್ನು ಕಳಿಸಿದ್ದರು. ಆ ಗ್ರಂಥಕ್ಕೆ ಪುರಸ್ಕಾರ ದೊರೆಯಲಿಲ್ಲ. ಆದರೂ ಕಿರುಕುಳಗಳಂತೆ ಅವರು ನನ್ನ ಬಗ್ಗೆ ತಪ್ಪು ತಿಳಿಯಲಿಲ್ಲ; ಎಂದೂ ಆ ವಿಷಯ ಎತ್ತಲಿಲ್ಲ; ಎಂದಿನಂತೆಯೇ ನನ್ನನ್ನು ಪ್ರೀತಿಸುತ್ತಿದ್ದಾರೆ. ಅವರ ದೊಡ್ಡತನವನ್ನು ನಾನಳೆಯಲಾರೆ. ಇಂಥ ಸತ್‌ಶಕ್ತಿಗಳ ರಕ್ಷೆಯಲ್ಲಿರುವ, ಅವರ ಅಪಾರ ಪ್ರೀತಿಯಿಂದ ಶ್ರೀಮಂತನಾಗಿರುವ ನನಗೆ ಬದುಕಿನಲ್ಲಿ ಅತೃಪ್ತಿಯೂ ಇಲ್ಲ, ಇತರರ ಬಗ್ಗೆ

ಅಸೂಯೆಯೂ ಇಲ್ಲ. ದೈವೇಚ್ಛೆಯಲ್ಲಿ ವಿಶ್ವಾಸವಿರುವವರ ಬಳಿ ಅಸೂಯೆ ಸುಳಿಯುವುದೇ ಇಲ್ಲ.

ನನಗೆ ಅತೃಪ್ತಿಯಿರುವ ಒಂದೆರಡು ವಿಷಯಗಳನ್ನು ತಿಳಿಸಿ ಬಿಡಬೇಕೆಂಬ ಕಾತರತೆಯನ್ನು ಇಲ್ಲಿಯೇ ವ್ಯಕ್ತಪಡಿಸಿ, ಸಾಧ್ಯವಾದರೆ ಅದನ್ನು ಮರೆತು ಬಿಡಬೇಕೆಂದು ನಿರ್ಧರಿಸಿದ್ದೇನೆ. ಒಂದು : ಆಫ್ರೊ-ದ್ರಾವಿಡ ಅಧ್ಯಯನಕ್ಕೆ ಸಂಬಂಧಿಸಿದ ವಿಷಯ. ಆ ಅಧ್ಯಯನ ಪೀಠವನ್ನು ಸ್ಥಾಪಿಸುವ ಸಲುವಾಗಿ ದೆಹಲಿಯಲ್ಲಿರುವ ಆಫ್ರಿಕಾ ಖಂಡದ ರಾಯಭಾರಿ ಕಚೇರಿಗಳೊಡನೆ ಸಂಪರ್ಕ ಬೆಳೆಸಿದ್ದೆ, ನಾನು ಕುಲಪತಿಯಾಗಿದ್ದಾಗ. ಅದನ್ನು ಕೊನೆ ಮುಟ್ಟಿಸಲಾಗಲಿಲ್ಲ.

ಎರಡು: ಅಂತರ್ಭಾರತಿ (ಅಥವಾ ಭಾಷಾಬಾಂಧವ್ಯ) ಎಂಬ ಭಾಷಾಂತರ ಅಕಾಡೆಮಿಯನ್ನು ಸಂಸ್ಥಾಪಿಸುವ ವಿಚಾರ. ಜನತಾದಳದ ಸರ್ಕಾರ ಬಂದಾಗಿನಿಂದ ಇತ್ತೀಚಿನವರೆಗೂ ಮುಖ್ಯಮಂತ್ರಿಗಳಿಗೆ, ವಿದ್ಯಾಮಂತ್ರಿಗಳಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಮಂತ್ರಿಗಳಿಗೆ ಆ ಸಂಬಂಧ ಯೋಜನೆ ಕಳಿಸುತ್ತಿದ್ದೆ. ಕೆ. ಸಿ. ರೆಡ್ಡಿಯವರ ಸರ್ಕಾರದಿಂದ ಹಿಡಿದು ವೀರೇಂದ್ರ ಪಾಟೀಲರ ಮೊದಲ ಸಲದ ಸರ್ಕಾರದ ತನಕ ಮತ್ತು ಗುಂಡೂರಾಯರ ಸರ್ಕಾರದಿಂದ ನಾನು ಬರೆದ ಪತ್ರಗಳಿಗೆ ಉತ್ತರ ಸಿಗುತ್ತಿತ್ತು. ಈಚೀಚೆಗೆ ನನ್ನ ಕಾಗದ ತಲುಪಿದ್ದಕ್ಕಾಗಿ ಪಾವತಿಯೂ ಇಲ್ಲ; ಅಷ್ಟೇ ಅಲ್ಲ, ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ನನ್ನ ಕಾಗದದ ವಿಷಯ ಪ್ರಸ್ತಾಪಿಸಿದರೆ ತುಂಬ ವಿನಯದಿಂದಲೇ, 'ನಿಮ್ಮ ಕಾಗದದ ನೋಡೇ ಇಲ್ಲ' ಎನ್ನುತ್ತಾರೆ. ಇದು ನಮ್ಮ ಸರ್ಕಾರದ ಆಡಳಿತ ವೈಖರಿ. ಈ ವೈಖರಿಗೆ ಶ್ರೀ. ಎಂ. ವೈ. ಘೋರ್ಪಡೆಯವರಂಥ ಸಭ್ಯತೆಯೆ ಸೌಜನ್ಯವೇ ಮೂರ್ತಿವೆತ್ತಂತಿರುವ ಒಬ್ಬಿಬ್ಬರು ಮಂತ್ರಿಗಳು ಅಪವಾದ. ಅದಿರಲಿ, ಭಾಷಾಂತರ ಅಕಾಡೆಮಿಯ ಪ್ರಾಮುಖ್ಯವನ್ನು ಒತ್ತಿ ಒತ್ತಿ ಮೇಲಿಂದ ಮೇಲೆ ಹೇಳುತ್ತಿದ್ದೇನೆ. ಭಾಷಾಂತರದ ಮೂಲಕ ನಮ್ಮ ಸಾಹಿತ್ಯ ಅದ್ಭುತವಾಗಿ ಬೆಳೆಯುತ್ತದೆಂದು, ನಮ್ಮ ಭಾಷೆ ಪುಷ್ಟವಾಗುತ್ತದೆಂದು, ಬೇರೆ ರಾಜ್ಯಗಳ ಮತ್ತು ಭಾಷೆಗಳ ಮಹತ್ತು ನಮ್ಮವರಿಗೆ ತಿಳಿಯುತ್ತದೆಂದು, ಮೇಲಾಗಿ ಭಾವೈಕ್ಯಕ್ಕೆ ಇದೊಂದು ಬಹುಮುಖ್ಯ ಮಾಧ್ಯಮವೆಂದೂ ಹಲವು ಸಲ ಸ್ಪಷ್ಟಪಡಿಸಿದ್ದೇನೆ. ನಾನು ಸೂಚಿಸಿರುವ ಅಕಾಡೆಮಿಯಲ್ಲಿ ಬೇರೆ ಬೇರೆ ರಾಜ್ಯಗಳು ಡೆಪ್ಯೂಟ್ ಮಾಡಬಹುದಾದ ತಜ್ಞರಿಂದ ಭಾಷಾಂತರ ಯೋಜನೆ ಕೈಗೊಳ್ಳಬಹುದೆಂದೂ, ಈ ಯೋಜನೆಗೆ ಬೇರೆ ರಾಜ್ಯಗಳ ಸಹಕಾರವನ್ನು ಪಡೆಯಬಹುದೆಂದೂ, ಎಲ್ಲ ನೊಬೆಲ್ ಪಾರಿತೋಷಕ ವಿಜೇತರ ಎಲ್ಲ ಕೃತಿಗಳನ್ನು, ವಿಜ್ಞಾನ ಹಾಗೂ ವೈಚಾರಿಕ ಗ್ರಂಥಗಳನ್ನು ಭಾಷಾಂತರಿಸಬೇಕೆಂದೂ, ನಾನು ಆ ಯೋಜನೆಯಲ್ಲಿ ಸ್ಪಷ್ಟಪಡಿಸಿದ್ದೇನೆ. ನಮ್ಮ ಸಂಸ್ಕೃತಿಯ ಮೇಲೆ, ಜ್ಞಾನ ಕ್ಷೇತ್ರದ ಮೇಲೆ, ಭಾಷಾ ಬಾಂಧವ್ಯದ ಮೇಲೆ ಅಪ್ರತಿಹತ ಹಿತಕರ ಪರಿಣಾಮವನ್ನು ಬೀರತಕ್ಕಂಥ ಯೋಜನೆ ಸರಕಾರಕ್ಕೆ ಬೇಡವಾಯಿತೆ ಎಂಬ ಕೊರಗು ಇದ್ದೇ ಇದೆ. ಖಾಸಗಿ ವಲಯದಲ್ಲಾದರೂ ಅಂಥದೊಂದು ಅಕಾಡೆಮಿಯನ್ನು ಪ್ರಾರಂಭಿಸಬೇಕೆಂದು ಪ್ರಯತ್ನಿಸಿ ವಿಫಲನಾದದ್ದೂ

ಉಂಟು. ಆ ವಿಫಲತೆಯಿಂದ ಅಸಮಾಧಾನವಾಗಿದೆಯೇ ಹೊರತು ನಿರಾಶೆಯಾಗಿಲ್ಲ, ವ್ಯಥೆಯಾಗಿಲ್ಲ./

ನನಗೆ ಐವತ್ತು ವರ್ಷತುಂಬಿದಾಗ ಕನ್ನಡ ನಾಡಿನ ಅನೇಕ ಭಾಗಗಳಲ್ಲಿ ಸತ್ಕಾರ ಸನ್ಮಾನ ಸಮಾರಂಭಗಳು ನಡೆದುವು. ಡಾ. ಹಾಮಾನಾ ಅವರು ' ದೇಜಗೌ- ಬದುಕು. ಬರಹ' ಎಂಬ ಅಭಿನಂದನ ಗ್ರಂಥವನ್ನು ತಂದು ನನ್ನ ಮೇಲೆ ಋಣ ಭಾರ ಹೇರಿದರು. ಅನಂತರ ದಿ. ಶ್ರೀ ಆಲನಹಳ್ಳಿ ಕೃಷ್ಣ ' ಅಂತಃಕರಣ ' ಎಂಬ ಗೌರವ ಗ್ರಂಥವನ್ನು ಪ್ರಕಟಿಸುವ ಮೂಲಕ ನನ್ನ ಮೇಲೆ ಪ್ರೀತಿಯ ಮಳೆಗರೆದರು. ನಾನು ಅರವತ್ತು ವಸಂತಗಳನ್ನು ದಾಟಿದ ಸಂದರ್ಭದಲ್ಲಿ ಶ್ರೀ ಕೆ. ವಿ. ಶಂಕರಗೌಡರು ಶ್ರೀ ಕೆ. ಸಚ್ಚಿದಾನಂದಯ್ಯ ಶ್ರೀ ಕಮಲೇಶ್ ಅವರ ಸಂಪೂರ್ಣ ಸಹಕಾರ ಸಹಾಯದೊಡನೆ ಬೃಹತ್ಪ್ರಮಾಣದ ' ರಸಷಷ್ಟಿ' ಎಂಬ ಸಂಭಾವನಾ ಗ್ರಂಥವನ್ನು ನನಗರ್ಪಿಸುವ ಮೂಲಕ ನನ್ನನ್ನು ಹೃತ್ಪೂರ್ವಕವಾಗಿ ಆಶೀರ್ವದಿಸಿದರು. ನಾನು ಎಪ್ಪತ್ತರ ಹೊಸ್ತಿಲಲ್ಲಿರುವಾಗ ನನ್ನ ಬಂಧು ಶ್ರೀ ಎಂ. ಆರ್ ಸಣ್ಣರಾಮೇಗೌಡರು ' ಎಪ್ಪತ್ತರ ಹೊಸ್ತಿಲಲ್ಲಿ ದೇಜಗೌ' ಎಂಬ ಪ್ರಶಸ್ತಿಗ್ರಂಥವನ್ನು ಪ್ರಕಾಶ ಪಡಿಸುವ ಮೂಲಕ ತಮ್ಮ ಅಭಿಮಾನವನ್ನು ಮೆರೆದರು. ಈ ಮಧ್ಯೆ ಸತ್ಯ ಪ್ರಿಯ. [1]. ಕೆ. ಆರ್. ಕಮಲೇಶ್, [2]. ಬೆಳಕೆರೆ ಲಿಂಗೇಗೌಡ, [3] ಕೊತ್ತಪಲ್ಲಿ ಶೇಖರ[4] ವಿದ್ವಾನ್ ಎಂ. ಶಿವಕುಮಾರ ಸ್ವಾಮಿಗಳು[5] ನನ್ನನ್ನು ಕುರಿತು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇದೀಗ ನನ್ನ ಎಪ್ಪತ್ತೈದು ವರ್ಷಗಳ ಬದುಕಿನ ನೆನಪಿಗಾಗಿ ಪ್ರತಿಷ್ಠಾನ ಅವರ ಹರಕೆಯ ರಕ್ಷೆಯಲ್ಲಿ ಡಾ. ಸಿದ್ದಯ್ಯ ಪುರಾಣಿಕರ ನೇತೃತ್ವದಲ್ಲಿ ಶ್ರೀ ಎಚ್. ಆರ್. ದಾಸೇಗೌಡರ ಮಾರ್ಗದರ್ಶನದಲ್ಲಿ ಶ್ರೀ. ಹ. ಕ. ರಾಜೇಗೌಡ ಮತ್ತು ಡಾ. ರಾಜೇಂದ್ರರ ಸಂಪಾದಕತ್ವದಲ್ಲಿ ಸರ್ವ ಶ್ರೀ ಕಲಬುರ್ಗಿ, ಕೃಷ್ಣಯ್ಯ, ಚಿರಂಜೀವಿ, ಜಿ. ಎಸ್. ಸಿದ್ದಲಿಂಗಯ್ಯ, ಬೋರಯ್ಯ ಮೊದಲಾದ ಹಲವು ಗೆಳೆಯರ ಸಹಕಾರ ಸಹಾಯದೊಡನೆ 'ಅಮೃತವರ್ಷ' ಎಂಬ ಈ ಗ್ರಂಥ ಹೊರಬರುತ್ತಿರುವುದು ನನ್ನ ಸುದೈವ.ಕನ್ನಡ ಬಂಧುಗಳ ಅಪಾರ ಪ್ರೀತಿಯ ನೆರೆಯಲ್ಲಿ ತೇಲಾಡುತ್ತಿರುವ ನಾನು ಧನ್ಯ. ಎಷ್ಟು ಜನ್ಮವೆತ್ತಿ ಬಂದರೂ ಅವರ ಋಣವನ್ನು ತೀರಿಸಲಾರೆ; ಅವರಿಗೆ ಋಣಿಯಾಗಿರುವುದೂ ಒಂದು ಭಾಗ್ಯವೇ!

*****

---

1 ಕುಲಪತಿಯ ಸಾಧನೆಗಳು 2.ಗುಡಿಸಲಿನಿಂದ ಗಂಗೋತ್ರಿಗೆ ಮತ್ತು ಕರ್ಮಯೋಗಿ 3. ಕನ್ನಡದ ಕಣ್ಮಣಿ. 4. ಕನ್ನಡ ಸೇನಾನಿ. 5. ದೇಜಗೌ ಎಪ್ಪತ್ತೈದು: ಒಂದು ಸಂದರ್ಶನ.

ಸದ್ಯಕ್ಕೆ ಮುಕ್ತಾಯ

ನಾನು ನಲವತ್ತೇಳನೆಯ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾದಾಗಿನಿಂದ ಶ್ರೀ ಚಿರಂಜೀವಿ ಆಳ್ಲರನ್ನು, ಅವರ ಕನ್ನಡ ಪ್ರೇಮವನ್ನು ಬಲ್ಲೆ, ಅವರ ಮನೆ ಮಾತು ತೆಲುಗು; ಅವರ ಬದುಕು ಕನ್ನಡಕ್ಕರ್ಪಿತ. ಪರಭಾಷೆಯ ಜನ ಅವರ ಆದರ್ಶವನ್ನನುಸರಿಸುವ ಪಕ್ಷಕ್ಕೆ ದೇಶದಲ್ಲಿ ಭಾಷಾ ಸಮಸ್ಯೆಯೇ ಇರುವುದಿಲ್ಲ. ನಿಜವಾದ ಕನ್ನಡಿಗರೆಂದರೆ, ನಿಷ್ಠಾವಂತ ಭಾರತೀಯರೆಂದರೆ ಅವರೇ. ಅವರಿಗೆ ಶರಣು! ಅವರೂ ಅವರ ಮಿತ್ರರಾದ ಶ್ರೀ ಬೋರಯ್ಯನವರು ಅಭಿನಂದನಾ ಗ್ರಂಥದ ವಿಷಯದಲ್ಲಿ ಪತ್ರ ಬರೆದರು.

'ಈಗಾಗಲೇ ಹಲವು ಗೆಳೆಯರು ನನ್ನ ಮೇಲೆ ತೀರಿಸಲಾಗದಷ್ಟು ಪ್ರೀತಿಯ ಋಣ ಹೇರಿದ್ದಾರೆ ; ನೀವು ಮತ್ತಷ್ಟು ಹೇರಿದ್ದಾದರೆ ನಾನು ತಡೆದುಕೊಳ್ಳಲಾರೆ. ಕ್ಷಮಿಸಿ' ಎಂದು ನಾನವರಿಗೆ ತಿಳಿಸಿದೆ. ಒಂದು ರಾತ್ರಿ 9 ಗಂಟೆಯ ಸಮಯಕ್ಕೆ ಈ ಮಿತ್ರರಿಬ್ಬರೂ ಡಾ. ಪುತಿನ ಮತ್ತು ಡಾ. ಸಿದ್ದಯ್ಯ ಪುರಾಣಿಕರ ಸಂದೇಶದೊಡನೆ ಮನೆಗೆ ಬಂದರು. ಆ ಇಬ್ಬರು ಸಜ್ಜನರ ಪತ್ರಗಳನ್ನೋದಿದನಂತರ ನನ್ನ ಕಣ್ಣು ಮಂಜಾಯಿತು. ಅವುಗಳನ್ನಿಲ್ಲಿ ಮುದ್ರಿಸಲಾಗಿದೆ.

ಡಾ. ಪು. ತಿ ನರಸಿಂಹಾಚಾರ್

578, 11ನೇ ಕ್ರಾಸ್

5ನೇ ಬ್ಲಾಕ್, ಜಯನಗರ.

ಬೆಂಗಳೂರು.

30 .10. 1992

ಸನ್ಮಾನ್ಯ ಮಿತ್ರರಾದ ಶ್ರೀ ದೇ. ಜ. ಗೌ ಅವರಿಗೆ ವಂದನೆಗಳು. ಮೊನ್ನೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ನಿಮ್ಮ ಸುಹೃತ್ ಸಹವಾಸದ ನೆನಪು ಮಾಡಿಕೊಂಡೆ. ಬೆಂಗಳೂರಿನಲ್ಲಿರುವ ನಿಮ್ಮ ಸ್ನೇಹಿತರು, ಅಭಿಮಾನಿಗಳು, ಶಿಷ್ಯರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇರಿದ್ದೆವು. ಮುಂದಿನ ವರ್ಷ ನಿಮಗೆ ಎಪ್ಪತ್ತೈದು ವಸಂತಗಳು ತುಂಬುವ ಸಂದರ್ಭದಲ್ಲಿ ಒಂದು ಗೌರವ ಸಮಾರಂಭವನ್ನು ಏರ್ಪಡಿಸಬೇಕೆಂಬುದು ಎಲ್ಲರ ಇಚ್ಛೆಯಾಗಿತ್ತು. ಎಲ್ಲರೂ ಕೂಡಿ, ನಿಮ್ಮೊಂದಿಗಿನ ಆತ್ಮೀಯ ರಸನಿಮಿಷಗಳನ್ನು ಸ್ಮರಣೆಗೆ ತರುವಂತೆ ನನ್ನನ್ನೇ ಗೌರವಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಸಹೃದಯ ಮಿತ್ರರರನ್ನು ಗೌರವಿಸುವ ಇಂತಹ ಸಮಾರಂಭದಲ್ಲಿ ಪಾಲ್ಗೊಳ್ಳುವುದಕ್ಕಿಂತ ಹರ್ಷದಾಯಕ ವಿಷಯವುಂಟೆ? ಡಾಃ ಸಿದ್ಧಯ್ಯ ಪುರಾಣಿಕರು ಕಾರ್ಯಾಧ್ಯಕ್ಷರಾಗಿದ್ದು

ಕಾರ್ಯಯೋಜನೆಯ ಮಾರ್ಗದರ್ಶನದ ಹೊಣೆ ಹೊತ್ತಿದ್ದಾರೆ. ಸಭೆಯಲ್ಲಿ ಸನ್ಮಾನ್ಯರಾದ ಪ್ರೊ. ಎಲ್. ಎಸ್. ಶೇಷಗಿರಿರಾವ್, ಶ್ರೀ ಗೊ. ರು. ಚನ್ನಬಸಪ್ಪ, ಶ್ರೀಮತಿ ಬಿ. ಟಿ. ಲಲಿತಾ ನಾಯಕ್, ಶ್ರೀ ಹೆಚ್. ಆರ್. ದಾಸೇಗೌಡ ಮೊದಲಾದವರು ಭಾಗವಹಿಸಿದ್ದರು. ಹಿರಿಯರೂ ವಿದ್ವಾಂಸರೂ ಕಾಗದ ಬರೆದು ಸಂತೋಷ ವ್ಯಕ್ತಪಡಿಸಿದ್ದಾರೆ.

ಕನ್ನಡದ ಕೈಂಕರ್ಯಕ್ಕೆ ಚೈತನ್ಯಸರ್ವಸ್ವವನ್ನೂ ಮೀಸಲಿಟ್ಟಿರುವ ವ್ಯಕ್ತಿಯನ್ನು ಗೌರವಿಸುವ ಸಂದರ್ಭ ಕನ್ನಡದ ಉತ್ಸವವೇ ಆಗುತ್ತದೆ. ನಮ್ಮೆಲ್ಲರ ಇಚ್ಛೆಗೆ ನಿಮ್ಮ ಒಪ್ಪಿಗೆ ಇದೆಯೆಂದು ಭಾವಿಸಿ ಈ ಸಂತೋಷದ ಕಾರ್ಯದಲ್ಲಿ ಮುಂದುವರಿಯುತ್ತಿದ್ದೇವೆ. ನಿಮ್ಮ ಶಿಷ್ಯರು ಸಮಾರಂಭದ ಹೊಣೆ ಹೊತ್ತು ಉತ್ಸಾಹದಿಂದ ಕಾರ್ಯಮಗ್ನರಾಗಿದ್ದಾರೆ. ಶ್ರೀ ಆಲ್ಲ ಚಿರಂಜೀವಿ ಮತ್ತು ಶ್ರೀ ಬೋರಯ್ಯ ಅವರು ತಮ್ಮನ್ನು ಭೇಟಿ ಮಾಡಿ ವಿವರಗಳನ್ನು ತಿಳಿಸುವರು. ಅವರ ಉತ್ಸಾಹಪೂರ್ಣ ಪ್ರಯತ್ನಕ್ಕೆ ನಿಮ್ಮ ಆಶೀರ್ವಾದ ಆಗತ್ಯ.

ಬೆಂಗಳೂರಿಗೆ ಬಂದಾಗ ಬಿಡುವು ಮಾಡಿಕೊಳ್ಳಿ. ವಿರಾಮವಾಗಿ ಮಾತನಾಡೋಣ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಪು. ತಿ. ನರಸಿಂಹಾಚಾರ್

ಡಾ. ಸಿದ್ದಯ್ಯ ಪುರಾಣಿಕ, ಬೆಂಗಳೂರು
'ಶ್ರೀಗಿರಿ', ಆಲಿಆಸ್ಕರ್ ರಸ್ತೆ
ಬೆಂಗಳೂರು.

30. 10. 1992

ಸನ್ಮಾನ್ಯರಾದ ಡಾ. ದೇ. ಜವರೇಗೌಡ ಅವರಿಗೆ,

ವಂದನೆಗಳು, ನನಗೆ ತುಂಬ ಸಂತೋಷಕೊಡುವ ಒಂದು ಸಂದರ್ಭ ಒದಗಿ ಬಂದಿದೆ. ನಿಮಗೆ ಎಪ್ಪತ್ತೈದು ವರ್ಷಗಳ ಸಾರ್ಥಕ, ಕ್ರಿಯಾಶೀಲ ವರ್ಷಗಳು ತುಂಬುವ ಸಂದರ್ಭದಲ್ಲಿ ಒಂದು ಗೌರವ ಸಮಾರಂಭವನ್ನು ಏರ್ಪಡಿಸಬೇಕೆಂದು ಗೆಳೆಯರು, ಶಿಷ್ಯರು, ಅಭಿಮಾನಿಗಳು ದಿನಾಂಕ 25-10-92 ರಂದು ಸಭೆ ಸೇರಿ ನಿರ್ಣಯ ಕೈಗೊಂಡಿದ್ದಾರೆ. ಇಂತಹ ಒಂದು ಉತ್ಸವದಲ್ಲಿ ಕಾರ್ಯಾಧ್ಯಕ್ಷನಾಗಿ ಭಾಗವಹಿಸುವ ಸದವಕಾಶವನ್ನೂ ಒದಗಿಸಿಕೊಟ್ಟಿದ್ದಾರೆ. ರಾಜ್ಯದ ಎಲ್ಲೆಡೆಗಳಿಂದ ಪ್ರಾತಿನಿಧಿಕವಾಗಿ ಭಾಗವಹಿಸಲು ಅಭಿಮಾನದಿಂದ ವಿದ್ವಾಂಸರು ಒಪ್ಪಿದ್ದಾರೆ. ಡಾ. ಪು. ತಿ. ನ. ಅವರು ಗೌರವಾಧ್ಯಕ್ಷರು. ನಿಮ್ಮ ಶಿಷ್ಯರೇ ಆದ ಶ್ರೀ ಎಂ: ಎಚ್. ಕೃಷ್ಣಯ್ಯನವರು ಕಾರ್ಯದರ್ಶಿ.

ಇನ್ನೂ ಹಲವರು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಹೀಗಾಗಿ ಕಾರ್ಯ ಸುಸೂತ್ರವಾಗಿ ನಡೆಯುವ ಭರವಸೆ ಮೂಡಿದೆ.

ಸಭೆಯಲ್ಲಿ ಎಲ್ಲರೂ ಒಮ್ಮತದಿಂದ ಕಾರ್ಯಕ್ರಮ ರೂಪಿಸುವಲ್ಲಿ ಮುಂದುವರೆಯೋಣ ಎಂದು ನಿರ್ಧರಿಸಿದರು. ತಮಗೆ ಈ ವಿಷಯ ತಿಳಿಸಲು ಶ್ರೀ ಅಲ್ಲ ಚಿರಂಜೀವಿಯವರು ಬರುತ್ತಿದ್ದಾರೆ. ಉತ್ಸಾಹೀವ್ಯಕ್ತಿ. ತುಂಬ ಕನ್ನಡದ ಕೆಲಸದ ಬಗ್ಗೆ ಅಭಿಮಾನ. ಇವರನ್ನೆಲ್ಲ ತಾವು ನಿರಾಶೆಗೊಳಿಸುವುದಿಲ್ಲ ಎಂದು ನಾನು ಭಾವಿಸಿದ್ದೇನೆ.

29 ರಂದು ಟ್ರಸ್ಟಿನ ಸಭೆಯಲ್ಲಿ ವಿವರ ತಿಳಿಸೋಣ ಎಂದಿದ್ದೆ. ಕಾರ್ಯಗೌರವದಿಂದ ತಾವು ಬರಲಾಗಲಿಲ್ಲ ಎಂದು ಭಾವಿಸಿದ್ದೇನೆ.

ವಂದನೆಗಳು.- ಅಕ್ಕನವರಿಗೂ. ನಿಮಗೂ.

ನಿಮ್ಮ ವಿಶ್ವಾಸಿ,
ಸಿದ್ಧಯ್ಯ ಪುರಾಣಿಕ

ಈ ನನ್ನ ಇಬ್ಬರು ಹಿತೈಷಿಗಳ ಮಾತನ್ನು ಮೀರುವ ಧಾರ್ಷ್ಟ್ಯ ನನ್ನಲ್ಲಿಲ್ಲ. ಅಭಿನಂದನಾ ಸಮಿತಿಯ ಪ್ರತಿಯೊಬ್ಬ ಸದಸ್ಯರಿಗೂ ನಾನು ಕೈ ಜೋಡಿಸಿ ನಮಸ್ಕರಿಸುತ್ತೇನೆ. ಈಗ ಮಾತ್ರವಲ್ಲ, ಹಿಂದೆಯೂ ನನ್ನ ಮೇಲಿನ ವಿಶ್ವಾಸದಿಂದ ಅಭಿಮಾನದಿಂದ ನನ್ನ ಬಗೆಗಿನ ಅಭಿನಂದನಾ ಗ್ರಂಥಗಳಿಗೆ ಲೇಖನಗಳನ್ನೊದಗಿಸಿ, ನನ್ನನ್ನು ಹರಸಿದ ಪ್ರತಿಯೊಬ್ಬ ಸಾಹಿತಿಗೂ ನನ್ನ ನೆನಕೆಗಳು ಸಲ್ಲುತ್ತವೆ. ನನಗೆ ಗುಂಪುಗಾರಿಕೆ ಕಂಡರಾಗದು. ಎಲ್ಲ ಕನ್ನಡ ಸಾಹಿತಿಗಳ ದೊಡ್ಡ ಬಳಗವನ್ನು ಬಿಟ್ಟು ಒಂದು ಸಣ್ಣ ಗುಂಪಿನಲ್ಲಿರುವ ಅಹಮಹಮಿಕೆ ನನ್ನ ಬಳಿ ಸಾರದಿರಲೆಂದು ಯಾವತ್ತೂ ಪ್ರಾರ್ಥಿಸುತ್ತೇನೆ. ಕನ್ನಡನಾಡಿಗೆ ನಾನಾ ವಿಧಗಳಲ್ಲಿ ಸೇವೆ ಸಲ್ಲಿಸುವವರೆಲ್ಲರೂ ನನ್ನ ಪ್ರಿಯ ಬಂಧುಗಳೇ ಹೌದು. ಈ ನನ್ನ ಸಂಕಲ್ಪದಲ್ಲಿ ಎಳ್ಳಷ್ಟೂ ಕಪಟವಿಲ್ಲ. ನನ್ನ ಈ ನೆನಪಿನ ಬುತ್ತಿಯ ಅಗಳುಗಳಿಂದ ಯಾರಿಗಾದರೂ ನೋವಾಗಿದ್ದರೆ ವಿನೀತನಾಗಿ ಅವರ ಕ್ಷಮೆಯಾಚಿಸುತ್ತೇನೆ. ಮಹಾಕವಿಯ ಮುಂದಿನ ಸಾಲುಗಳೇ ನನ್ನ ಬದುಕಿನ ದಾರಿದೀಪಗಳೆಂಬುದನ್ನು ಆ ಮಿತ್ರರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಗರ್ವದಿಂದೆನ್ನ ಶಿರ ನಿಮಿರಿನಿಲ್ಲಲು, ದೇವ,
ನಿನ್ನ ಗದೆಯಾಘಾತ ಬಂದೆರಗಲಿ
ದುಃಖದಿಂದೆನ್ನೆದೆಯು ನೊಂದು ಮೊರೆಯಿಡೆ, ಗುರುವೆ,
ನಿನ್ನೊಲ್ಮೆ ಬಂದದನು ಸಂತೈಸಲಿ.

ಗೋಲ್ಡನ ಈ ಗಾಯತ್ರಿಯೇ ನನ್ನ ಗಾಯತ್ರಿಯೂ ಅಹುದು.

ಈ ಕಿರು ಹೊತ್ತಿಗೆಯಲ್ಲಿ ನನಗೆ ಉಪಕಾರ ಮಾಡಿರುವವರ ಹೆಸರುಗಳು ಮರೆವಿನಿಂದಾಗಿ ಬಿಟ್ಟು ಹೋಗಿದ್ದರೆ ಅವರು ನನ್ನನ್ನು ಕ್ಷಮಿಸುವ ಕೃಪೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಾನಲ್ಲ ಬುದ್ಧ ಬಸವಣ್ಣ ಸಿದ್ಧನು ಅಲ್ಲ;
ಸಾಧಕಂ; ಸಾಧನೆಯ ಹಿಮಗಿರಿಯ ನೇರಿಲ್ಲ.
ಎನಿತನಿತೊ ತಪ್ಪುಗಳ ನೆಸಗಿಹೆನ್. ಪಶು ನಾನು
ಕನ್ನಡದ ಕಂದನೆಂಬಭಿಮಾನದಿಂ ನೀವು
ಕ್ಷಮಿಸಿ, ಓ ಗೆಳೆಯರಿರ. ಮಣಿವೆ ನಿಮ್ಮಡಿಯನಂ
ಸಾವಿತ್ರೀಧವನ್, ಗುರು ಪದಕಮಲ ಭೃಂಗನಂ.

* * * * *

ಭಾಗ - ಎರಡು

ವ್ಯಕ್ತಿತ್ವ- ಹಿರಿಮೆ

ಎಪ್ಪತ್ತೈದರ ದೇಜಗೌ

- ಹೆಜ್ಜಗೆ ಲಿಂಗಣ್ಣ

೧

ಎಪ್ಪತ್ತೈದು ತುಂಬಿದರು ಮುಪ್ಪು ತುಳಿದು ನಿಂದವ,
ಸಪ್ಪೆ ಮೋರೆಯನೆಂದು ಅಪ್ಪಿತಪ್ಪಿ ತೋರದವ!
ಉಪ್ಪುಂಡ ನಾಡಿಂಗೆ ಸಪುನದಲು ದುಡಿಯುವವ!
ಚಪ್ಪರ ಚಾಮರಕೆ ಒಪ್ಪ ಕುಪ್ಪಳಿಸದವ!

೨

ಕನ್ನಡದ ಕಲಿಕುವರ ಮನ್ನಣೆಗೆ ಮನಗೇಡದೆ
ಕನ್ನಡವು ವೆಗ್ಗಳಿಸೆ ಅನುದಿನವು ನೀದುಡಿದೆ!
ಕನ್ನಡದ ಕಲಿಗಳನೆ ಬೆನ್‌ತಟ್ಟಿ ಬೆಳಿಸಿದೆ!
ಕನ್ನಡದ ಜನಮನದಿ ಮನ್ ್ನಣೆಯ ಮಗುವಾದೆ!

೩

ರಾಷ್ಟ್ರಕವಿ ಕುವೆಂಪುಗೆ ಶ್ರೇಷ್ಠ ಶಿಷ್ಯನುಮಾದೆ
ಶ್ರೇಷ್ಠ ವೈಯಾಕರಣಿ ದಿಟ್ಟವಿಮರ್ಶಕನಾದೆ;
ರಾಷ್ಟ್ರವ್ಯಸನವ ಕಳೆದು ಅಷ್ಟಮದವನೆ ತುಳಿದೆ!
ನಿಷ್ಠೆಎಂಬಮೃತವ ದಿಟ್ಟರಿಗೆ ದಯೆಗೈದೆ!

೪

ಅನ್ಯನುಡಿ ನಮ್ಮನೆಗೆ ಕನ್ನವಿಕ್ಕಲು ಕನಲಿ
ಕನ್ನಡದ ಡಿಂಡಿಮವ ಬಾರಿಸಿದೆ ಛಲದಲಿ!
ಕನ್ನಡದ ಬಾಳಿಂಗೆ ಕನ್ನಡದ ಹಿರಿಮೆಗೆ
ಚಣಚಣವು ನೀದುಡಿದೆ ಇನ್ನಾರು ಸಾಟಿ ನಿನಗೆ!

೫

ಕಟ್ಬಾಳು ಕನ್ನಡಕೆ ದಿಟ್ಟನೊಲು ಕಲಿಆದೆ
ಅಟ್ಟಿಬಹ ಧಾಳಿಗಳ ಮೆಟ್ಟಿ ನೀ ಜಯಿಸಿದೆ
ಕನ್ನಡದ ಬಾವುಟವ ಔನ್ನತ್ಯಕ್ಕೇರಿಸಿದೆ
ಕನ್ನಡವೆ ಉಸಿರಾಗಿ ಸನ್ನುತನೆ ನೀಬೆಳೆದೆ!

೬

ಉಪಕುಲಪತಿ ಪದವು ಅಲ್ಪವೀ ಅಧಿಕಾರ !
ಅಪ್ಪಳಿಸಲಿ ನಿನ್ನ ಉಪ್ಪರಿಗೆ ಅಧಿಕಾರ !
ಹೆಪ್ಪುಗಟ್ಟಲು ಇಲ್ಲ ಸುಪ್ಪತ್ತಿಗೆ ಸುಖಸಾರ !
ನೆಪ್ಪುಗಟ್ಟಿತೊ ನಿನ್ನ ಸಫಲತೆಯ ಅಧಿಕಾರ !

೭

ಹಿರಿಯನು ನೀನಾದೊಡು ವರಗೆಳೆಯನೆಂದೆ ಬಗೆದೆ
ಪರಮ ಪಂಡಿತ ನಿನಗೆ ಹಿರಿ ಕಾಣಿಕೆ ಇದೆಂದೆ
ಬರೆದೆನೀ ನುಡಿಚಿತ್ರ:ಮರೆಯದೆ ಸಲಿಸಿಕೋ
ಕರುನಾಡ ಕಣ್ಮಣಿಯೆ ಹೃನ್ಮನಕ್ಕಿದ ಇಳಿಸಿಕೊ !

೮

ಶತವರುಷ ನೀಬಾಳು ಕನ್ನಡದ ಕಲಿ ಬಾಳು
ಗತ ವೈಭವದ ಬಾಳು ಮತ್ತೆ ತರಲಿಕೆ ಏಳು !
ಕನ್ನಡದ ಕಣಕಣದಿ ಕನ್ನಡತನ ದುಮ್ಮಿಕ್ಕಲಿ!
ಕನ್ನಡದ ನಾಡಿನಲಿ ಕನ್ನಡವೆ ನಿನದಿಸಲಿ!

* * * * *

ಕನ್ನಡದ ತ್ರಿವಿಕ್ರಮ

-ಡಾ. ಸೋಮಶೇಖರಗೌಡ

ಎಪ್ಪತ್ತೈದರ ಎತ್ತರದಲ್ಲೂ
ಹಸುಗೂಸಿನಂತೆ
ಬಿಕ್ಕಳಿಸಿ ಅಳುವ
ಮತ್ತೆ ಮಗುವಿನಂತೆ
ಮುಕ್ಕಳಿಸಿ ನಗುವ
ಇವರು
ಮುನಿದರೆ ದೂರ್ವಾಸಮುನಿ
ಒಲಿದರೆ ಅಕ್ಕರೆಯ ತನಿ

ಕೆಚ್ಚಲುಣಿಸುವ ಹಸು
ಕಕ್ಕುಲತೆಯಿಂದ
ಕರುವ ನೆಕ್ಕಿ ನೆಕ್ಕಿ
ಅಕ್ಕರೆಯ ಸೂಸುವ ಥರ
ಬಾಗಿ, ಆತ್ಮೀಯವಾಗಿ
ಹೆಗಲ ಮೇಲೆ ಆತುಕೊಂಡು
ಮೃದುವಾಗಿ ಮಾತನಾಡಿ
ಹಿತವಾಗಿ ಬೆನ್ನು ತಟ್ಟುವ ಕರ

ಆಗಾಗ ನಿಂತು, ನಡೆಯುತ್ತ ಸಾಗಿ
ಮಾತು ಮಾತಿಗೂ ನೆನೆಪ ಕೆದಕುತ್ತ
ಅನುಭವವ ಹದವಾಗಿ ಬೆರಸುತ್ತ
ಒಮ್ಮೆ ನಿರ್ಲಿಪ್ತವಾಗಿ ನೆಲವ
ಇನ್ನೊಮ್ಮೆ ಆಪ್ತವಾಗಿ ಮೊಗವ
ಅಳೆದು ತೂಗುವ ಯೋಗಿ

ಶಿರದಲಿ ಗುರುವಿನಾಣತಿ ಹೊತ್ತು
ದಾಟಿ ಎಲ್ಲ ಕಂದರ ಕುತ್ತು
ವರ್ಧಿಸಿ ತ್ರಿವಿಕ್ರಮನಂತೆ
ಕನ್ನಡ ಕಟ್ಟಿದ ಕಟ್ಟಾಳು

'ಗುಡಿಸಲಿನಿಂದ ಗಂಗೋತ್ರಿಗೆ'
ಗೋಲ ವಿಶ್ವದ ನಾನಾಕಡೆಗೆ
ಬೆರಗು ಬಡಿವಂತೆ ಬೆಳೆದು
ಇಟ್ಟ ಹೆಜ್ಜೆಯ ಗುರುತ ಬಿಟ್ಟ
ಕನ್ನಡಕೆ ಪಟ್ಟ ದೊರಕಿಸಿಕೊಟ್ಟ
ಅಪ್ರತಿಮ ಕನ್ನಡ ಸೇನಾನಿ

ಕೈ ಎತ್ತಿ ಕನ್ನಡಕೆ ಹೋರಾಡೆ
ಕೊರಳೆತ್ತಿ ಕನ್ನಡವ ಕೊಂಡಾಡೆ
ಚಿರ ಭಕ್ತಿಯಲಿ ಕನ್ನಡವ ಪಾಡೆ
ಕಟ್ಟೆಚ್ಚರದಿ ಕನ್ನಡವ ಕಾಪಾಡೆ
ಇವರು ಸವೆಸಿದ ದಾರಿ
ಕನ್ನಡದ ಏಳಿಗೆಯ ಸಿರಿ

ಬರೆದದ್ದೆಲ್ಲ ಪುಟವಿಟ್ಟ ಚಿನ್ನ
ಕನ್ನಡ ಗದ್ಯದ ರನ್ನ
ಬಳಸಿದ್ದು ಹಳ್ಳಿಗರ ನುಡಿಗಟ್ಟು
ಅದೇ ಇವರ ಚಪ್ಪೋದಿನ ಗುಟ್ಟು

ಇವರ ರಕ್ತದ ಕಣಕಣಗಳಲಿ
ನಾಡಿ ಧಮನಿಗಲ ಮಿಡಿತದಲಿ
ಉಸಿರಾಟದ ಏರಿಳಿತಗಳಲಿ
ಹಗಲ ದುಡಿಮೆಯ ಕ್ಷಣಗಳಲಿ
ಇರುಳ ನಿದ್ರೆಯ ಕನವರಿಕೆಯಲಿ
ಕನ್ನಡ ಕನ್ನಡ ಸಿರಿಗನ್ನಡ.

ಗುರುದೇವ ದೇಜಗೌ

- ನಾಸಿಕಾ

'ಕನ್ನಡಿಗರೇ' ನೀವು ಬೇಗ 'ಎಚ್ಚರಗೊಳ್ಳಿ'
ಎಂದೆನುತ ಕಣ್ಣೀರ ಮಿಡಿದ ನೀವು
ನನ್ನೆದೆಯ ತಾಮಸವ ದೂರ ದೂಡಿದ ತಂದೆ
ಶಿರಬಾಗಿ ವಂದಿಪೆನು ಋಣಿಯು-ನಾನು.

ಕತ್ತಲೆಯ ಕೊತ್ತಳದಿ ಕುಳಿತಿದ್ದ ಕ್ರಿಮಿಯೆನಗೆ
ಬೆಳಕ ಬೀರಿದಿರಲ್ತೆ ಹೊರಗೆ ತಂದು
ಆವ ಬಗೆಯಲಿ ನಿಮ್ಮ ಸೇವೆಗೈಯ್ಯಲಿ ದೇವ?
ಒಂದನರಿಯೆನು:ಕುರುಡು-ಹೆಳವನಿಂದು.

ವರ್ಷಗಳು ಉರುಳಿದವು ತಿಂಗಳದು ಹಾರುತಿವೆ
ವೇಗದಲಿ ಓಡುತಿವೆ ದಿನಗಳೆಲ್ಲ
ಕಾಲನಡಿಯಡಿಯಲ್ಲಿ ಕಲ್ಲಾಗಿ ನರಳುತಿಹೆ
ಚೇತನವೆ ನನಗಿಲ್ಲ, ಏನು ಬೇಕಿಲ್ಲ.

ಹರಟೆಯಲಿ ಹುಬ್ಬಾಗಿ ಕೆಳೆತನಕೆ ಮರುಳಾಗಿ
ಹಾಳಾಗಿ ಹೋದೆನಾ ಓದಲಿಲ್ಲ
ತಾಯ್ತಂದೆ ಗುರುಹಿರಿಯರೆಲ್ಲರಿಗು ಮೆಚ್ಚಾಗಿ
ಒಂದಿನಿತು ಕಾಣಿಕೆಯ ನೀಡಲಿಲ್ಲ.

ದಾರಿ ನೂರರ ನಡುವೆ ಎಲ್ಲಿ ಹೋಗುವುದೆಂದು
ಅರಿಯದೆಯೆ ಮುಗ್ಧ ಶಿಶು ಇರಲು ನಾನು
ಗುರುವಾಗಿ ಬೆಳಕಾಗಿ, ಚೈತನ್ಯ ಶಿವನಾಗಿ
ಕನ್ನಡದ ದಾರಿಯನು ತೋರಿದಿರಿ ನೀವು.

ಚಂದನದ ಬೀಡಾದ ಕನ್ನಡದ ವನದಲ್ಲಿ
ಮುಂದೆ ನಡೆದೆನು ತಂದೆ ನಿರ್ಭಯದಲಿ
ಕಣ್ ತುಂಬ ನೋಡಿದೆನು ನೋಡಿ ಗರಬಡಿದಂತೆ
ಒಂದೆಡೆಯೆ ಅಲುಗದೆಯೆ ನಿಂತಿರುವೆನು:

ಪಂಪ ಬಳಿದಿಹ ಜೇನು: ಇನಿದಾದ ಮಾವು
ಕುವರವ್ಯಾಸನು ಕಡೆದ ಕನ್ನಡದ ಕಲ್ಪತರು
ಹರಿಹರನು ನೀರೆರೆದ ಪರಿಮಳದ ಮಲ್ಲಿಗೆಯು
ರತ್ನಾಕರನು ತಂದ ಚೆಲುವಾದ ಸಂಪಿಗೆಯು
ಅಲ್ಲೆ ಕೊಳದಂಚಿನಲ್ಲಿ ಮಲೆನಾಡ ಮಾಮರದಿ,
ಮೆಲ್ಲುಲಿಯ ಕೊರಳಿನಲಿ, ಕನ್ನಡದ ಕಂಪೆಲ್ಲ
ಕರಗಿ ಕಂಡು ಇಂಪಾಗಿ ಬಂದಂತೆ ಹಾಡುತಿಹ
ಕಾಜಾಣ: ಕನ್ನಡದ ಕಲಿಮಲ್ಲ ಕವಿಕುವೆಂಪು.

ಇನಿತೆಲ್ಲ ಚೆಲುವನ್ನು ತಮ್ಮ ಕರುಣೆಯಲಿ,
ವಾತ್ಸಲ್ಯ ವೃಕ್ಷದಲಿ ಚಿಕ್ಕ ಹಕ್ಕಿಯ ತೆರದಿ
ಕಿರಿದು ಕಣ್ಣನು ತೆರೆದು ಬೆರಗಾದೆ ದೇವ
ಮರವಟ್ಟು ನಿಂತೆ.

ಅದಕೆಂದೆ ಅರ್ತಿಯಲಿ ಭಕ್ತಿಯಲಿ ದೈನ್ಯದಲಿ
ಕರಮುಗಿದು ಕಾಲ್ವಿಡಿದು ಗುರುವೆಂದು ಪೂಜಿಸುವೆ:
'ಗುರುಬೇರೆ ನನಗಿಲ್ಲ, ಶಿವನೆನಗೆ ಬೇಕಿಲ್ಲ,
ನನ್ನ ಕಂಗಳ ಮುಂದೆ ದೇಜಗೌ ಇರಲಿ',
ಒಮ್ಮೆ ಭಕ್ತಿಯಲಾನು 'ದೇಜಗೌ' ಎಂದೆನಲು
ನನ್ನೆದೆಯ ಗುಮ್ಮಟದಿ ಒಂದೆ ಸಮ ಮೊಳಗಲಿ;
'ಗುರುದೇವ ದೇಜಗೌ' 'ಗುರುದೇವ ದೇಜಗೌ'
'ಗುರುದೇವ ದೇಜಗೌ'..............................

* * * * *

ನುಡಿಬಾಗಿನ

- ಸಮೇತನಹಳ್ಳಿ ರಾಘುರಾಯ

ಸಿರಿಗಂಧದ ಮರ ಬೇರನ್ನಿಳಿಸುತ ನೆಲದಾಳದ ಕಂ
ಪನ್ನೆತ್ತುವ ಸವಿಹದ ವೇನ್ ಸೊಗಸೊ !
ಆಳ ಬಾಳಿನ ಕಾನೊಳು ಹುದುಗಿಹ ಕನ್ನಡ ತನವನ್ನೆತ್ತಿ
ತೊರೆ ಹರಿಸುವ ಜಾಣ್ಣನ ನಿನದಂತೆ.

ಪಿರಿದಾರುಂ ಕಟ್ಟದ ದಳಪಿರಿದಂ ನೀನೊಹೊ
ಕಟ್ಟಿದೆ ಕೈ ಕೈದುವ ಪಿಡಿದೆತ್ತಿ
ಗಂಗಡಿಕಾರರ ಪೆರ್ಮೆಯ ಪೀಳಿಗೆಯವ ನೀಂ ಬೀರವ
ಮೇಳವಿಸಿದೆ ಬಲ್‌ಪುರುಡಿಂ ಮತ್ತೆ

ಎಲ್ಲಿಯೋ ಮರೆಯೊಳು ನಿಂದಿರ್ದೆನ್ನನು ಗುರುತಿಸಿ ಸನಿಹಕೆ
ಕರೆದೆಯೊ ನೇಹಿಗ. ಇನಿನುಡಿಯಿಂದೆ
ಬಳಲುತ ಬೀಳತ ನನ್ನಂ ಬೋಳಯ್ಸಿದೆಯಯ್ ನಿನ್ನಾ
ತೋಳಿನ ಸೊಗದಾಸರೆಯೊಳಿಕ್ಕಿ

ಬುವಿಯೀ ನಂಜನ್ನುಣಲಾರದೆ ನಿಲ್ಲಲ್ ಕಂಬನಿಯಂ
ತೊಡೆದಯ್ ಪಾಗಿನ ಸೆರಗನ್ನೆತ್ತಿ
ಗೆಯ್ಸಿದೆ ಸಮಸಮಕೆನ್ನಿಂ ನಿಲಿಸುತೆ ಕನ್ನಡತಾಯಿಯ
ನೆಲದೊಳ್ ಪೂವುಂ ಪಣ್ಗಳು ಮುತ್ತೆ.

ಬದುಕೆನ್ನದು ತುಂಬುತೆ ನೆರೆನಿಲ್ಲಲ್ ನಲವಟ್ಟೈನೀಂ
ನಗುವಿನ ಸಿರಿಯಂ ತುಟಿಯೊಳ್ ತಂದು
ಆ ಪರಿಯುಂ, ಅರಿಕೆಯ ಪಿರಿದು, ಮೇಣ್ ನಿನ್ನೆದೆ ಸಿರಿಯುಂ
ನನದನೆ ನಲಿದೆಂ ಬಾಳೊಳ ಕೆಳೆಯ

ತೊಣೆಯಿಂ ನೆಲದೇವುದು ಸಿಲ್ಕುದು ಆ ಎಳ್ತರ ಕೇರುತೆ.
ಬದುಕಿನ ಪೂವೆನುತಲ್ಲದೆಬೇರೆ?
ಕುಲಪತಿ ಜವರೇಗವುಡಂ ನಿನಗಿದೊ ಬಾ ಕೊಳ್, ತಿರುಳುಂ
ಕರುಳುಂ ಬೆರತಿಹ ನುಡಿ ಬಾಗಿನವ.

* * * * *

ಕುಲಪತಿ ದೇಜಗೌ

- ಸಿದ ಬಟ್ಟೆ ಬಸವಣ್ಣ

ಸ್ವಾಗತವು ಸುಸ್ವಾಗತವು.
ಸ್ವಪ್ರತಿಭೆಯ ಸಂಕಲ್ಪ ಶಕ್ತಿಗೆ,
ಕನ್ನಡದ ಗುಡಿಯ ಗೋಪುರದ ಜ್ಯೋತಿಗೆ.
ಸ್ವಾಗತವು ಸುಸ್ವಾಗತವು ||೧||

ವರುಷ ಯಪ್ಪತ್ತೈದರ ಹಿಂದೆ,
ಬಡರೈತನ ಮಗನಾಗಿ ಹುಟ್ಟಿ ನೀ ಬಂದೆ,
ನಿರಂತರ ದುಡಿಮೆಯ ಫಲವಾಗಿ,
ಕುಲಪತಿಯ ಸ್ಥಾನವು ಬಂದಿತು ನಿನ್ನಲ್ಲಿಗೆ ಓ||೨|| ಪ||

ಋಷಿ ಕವಿ ಕುವೆಂಪುರವರ ಕರೆಗೆ ಓಗೊಟ್ಟು,
ಕನ್ನಡದ ದೀಕ್ಷೆಯನು ತೊಟ್ಟು,
ಕಂಡಿರುವೆ ಕನಸು ನೀ ನೂರಾರು,
ಕಟ್ಟಿರುವೆ ಸಂಸ್ಥೆಗಳು ಒಂದಲ್ಲ ಹಲವಾರು ||೩||

ನಿನ್ನ ಕಲ್ಪಕತೆ ಕರ್ತೃತ್ವ ಶಕ್ತಿಗೆ ಭವ್ಯ ಸಾಕ್ಷಿ
ಲಲಿತ ಕಲೆಗಳ ಕಾಲೇಜು ಕನ್ನಡ ಅಧ್ಯಯನ ಸಂಸ್ಥೆ ಇತ್ಯಾದಿ
ನೀಡುತ್ತಲಿವೆ ನಾಡಿನ ಕಂದಮ್ಮಗಳಿಗೆ ಕನ್ನಡದ ದೀಕ್ಷೆ
ಕನ್ನಡದ ಏಳಿಗೆಯಲ್ಲಿ ನಿನಗೆಲ್ಲಿಲ್ಲದ ಆಸ್ಥೆ ||೪||

ದಕ್ಷಿಣದಲ್ಲಿಯೆ ನಿನ್ನದೊಂದು ವಿಶಿಷ್ಟ ಸಾಧನೆ,
ನೀಡಿದೆ. ನೀ ಅಂಚೆ ತೆರ್ಪಿನ ಶಿಕ್ಷಣ ಯೋಜನೆ,
ಪತ್ರಿಕೋದ್ಯಮ, ಮದ್ರಣಾಲಯ ಒಂದೇ ಎರಡೇ,
ಕನ್ನಡಿಗರ ಅಭ್ಯುದಯಕ್ಕೆ ದುಡಿಯುವೆ ನೀ ಎಡೆ ಬಿಡದೆ ||೫|| ಪ||

ನಿನ್ನ ಬಾಳೊಂದು ಹೋರಾಟದ ಬದುಕು,
ಸಾಕ್ಷಿ ಹೇಳಲು ನಿನ್ನ ಮೇರು ಕೃತಿಗಳೆ ಸಾಕು,
ಹೆಣೆದಿರುವೆ ಆತ್ಮಕಥೆ, ಕಾದಂಬರಿ, ಸಂಸ್ಮರಣೆ,
ಮಾಡಿರುವೆ ಕಟು ಮಧುರ ಆಖ್ಯಾನ ಸಮಾಲೋಚನೆ ||೬||

ನಿನ್ನ ಸೇವೆಯ ಮುಖಗಳು ಅನಂತ ಅಪಾರ,
ನೀ ನುರಿತ ಅಧ್ಯಾಪಕ-ದಕ್ಷ ಆಡಳಿತಗಾರ,
ಆಧುನಿಕ ಕನ್ನಡದ ಗದ್ಯ ರುವಾರಿ ನೀನಾಗಿ,
ಎಳೆದಿರುವೆ ಕನ್ನಡದ ತೇರು ಬಲು ದೂರುಹೋಗಿ ||೭||

ಕನ್ನಡದ ಡಿಂಡಿಮವ ಬಾರಿಸುವ ನಿನಗೆ,
ಕನ್ನಡದ ಜನ ಬೆಂಬಲ ಯಾವತ್ತು ನಿನಗೆ,
ಕನ್ನಡಮ್ಮನ ಕರುಣೆಯ ನೀ ಮುದ್ದು ಕಂದ,
ಕನ್ನಡವೆಂದರೆ ನಿನಗೆಷ್ಟು ಆನಂದ ||೮|| ಪ||

ನೀನಲ್ಲ ಸರ್ವಥಾ ಕನ್ನಡದ ಅಂಧ ಪ್ರೇಮಿ,
ಭಾಷಾ ಬೆಳವಣಿಗೆಗೆ ನೀನಲ್ಲ ಪ್ರತಿಗಾಮಿ,
ಕನ್ನಡದ ಕಡಲಿಗೆ ಹಿಂದಿ, ಉರ್ದು, ಇಂಗ್ಲೀಷ್‌ಗಳೆಲ್ಲವೂ ಸೇರಲಿ,
ಕನ್ನಡವು ಭಾರತೀಯವಷ್ಟಲ್ಲ ವಿಶ್ವಸಾಹಿತ್ಯವಾಗಿ ಮೆರೆಯಲಿ ||೯||

ಭಾಷಾ ಪಂಡಿತರುಗಳಿಗೆ ನೀ ಮಾಡಿದ ಉಪಕಾರ,
ಅವರನ್ನು ಎತ್ತಿ ಹಿಡಿದಿರುವುದೇ ಒಂದು ಪವಾಡ,
ಪಂಡಿತರುಗಳಿಗೂ ಬರಲಿದೆ ಇನ್ನೇನು ಅಧಿಕಾರ,
ನೀ ಕಂಡ ಕನಸು ಅಲ್ಲಿಗೆ ಸಂಪೂರ್ಣ ಸಾಕಾರ ||೧೦||

ಭಾಷಾ ಶಾಸ್ತ್ರದ ಅಧ್ಯಾಪಕನಾಗಿ,
ಅನೇಕ ಭಾಷೆಗಳ ತಜ್ಞ ನೀನಾಗಿ,
ಸಾರಿರುವೆ ಮಂತ್ರ ಸರಸ್ವತಿ ಸರ್ವ ಭಾಷಾಮಯಳೆಂದು,
ವಂದಿಪೆವು ವಿನಯದಿ ನಾವೆಲ್ಲ ನಿನಗಿಂದು ||೧೨|| ಪ||

ನಿನ್ನಿಂದ ಇಂದಾಯಿತು ಗಂಗೋತ್ರಿ,
'ಶಿರುತೀರ್ಥ ಮಲ್ತು ವಿಶ್ವ ಭಾರತಿ'
ನಿನಗೆತ್ತುವೆ ನಾನಿಂದು ಆರತಿ,
ಬೆಳಗಲಿ ದಿಗ ದಿಗಂತ್ಯದವರೆಗೂ ನಿನ್ನ ಕೀರುತಿ||೧೨|| ಪ||

ನಿನ್ನದೊಂದು ಹಿರಿದಾಸೆ ಈಗ,
ಬೆಳೆಯಲಿ ಕುವೆಂಪು ವಿದ್ಯಾಸಂಸ್ಥೆ ಬಲುಬೇಗ,
ಅದಕ್ಕಾಗಿ ನಿನ್ನದನ್ನೆಲ್ಲ ಮಾಡಿರುವೆ ನೀ ತ್ಯಾಗ,
ಉಳಿದಿರುವುದು ನಿನ್ನಲ್ಲೀಗ 'ದೇಜಗೌ' ಎಂಬ ಭಾಗ||೧೩||

ನಿನ್ನಾಸೆ ಈಡೇರಲೆಂಬುದೇ ನಮ್ಮಗಳ ಬಯಕೆ
'ಕುವೆಂಪು' ರಾಷ್ಟ್ರದಲ್ಲಿಯ ಒಂದು ಮಾದರಿ ವಿದ್ಯಾಸಂಸ್ಥೆ
ಕೆಳಗಿನವರನ್ನು ಮೇಲೆತ್ತುವ ನಿನ್ನೀ ವಿಶಿಷ್ಟ ಪ್ರಯತ್ನ
ವಿಶ್ವಕ್ಕಾಗಲಿ ಮಾರ್ಗದರ್ಶನ||೧೪||

ಎರಡನೆ ಬಾರಿಗೆ ನೀನಿಂದು ಕುಲಪತಿ,
ಅತಿ ಶೀಘ್ರದಲ್ಲಿಯೆ ನೀನಾಗು ಕುಲಾಧಿಪತಿ,
ದೊರೆಯುವದಾಗ ಕನ್ನಡಕ್ಕೆ ಸಮಸ್ತ ಶಕ್ತಿ,
ಕನ್ನಡಿಗರೆಲ್ಲರಿಗು ಸಿಗುವುದಾಗ ವಾಸ್ತವಿಕ ಸದ್ಗತಿ||೧೫||

* * * * *

ಮೈಸೂರು ವಿಶ್ವವಿದ್ಯಾಲಯ ಕುಲಪತಿಭ್ಯ:
ಶ್ರೀ ಜವರೇಗೌಡ ಮಹೋದಯೇಭ್ಯ:
ನೂತನ ವರ್ಷಾರಂಭೇ ಪ್ರೇಷಿತಾ
ಪದ್ಯಮಾಲಿಕಾ

-ಟಿ. ಜಿ. ಸಿದ್ಧಪ್ಪಾರಾಧ್ಯ

ಶ್ರೀ ವಿಶ್ವವಿದ್ಯಾಲಯ ಮುಖ್ಯ ನೇತ: !
ಸುನಿರ್ಮಲಾತ್ಮನ್ ! ಪ್ರಭುಶಕ್ತಿಯುಕ್ತ!
ವಿಶ್ವಪ್ರಿಯ! ಶ್ರೀಯುತ! ದೇಜಗೌ! ತೇ
ಹ್ಯಾನಂದ ವರ್ಷೇಽಪಿ ಭವೇತ್ಸುಶಾಂತಿ : ||೧||

ಸೂರ್ಯಸ್ಸದಾ ಮಂಗಳ ಮಾಡನೋತು
ತುಭ್ಯಂ ನಿಶೇಶ: ಶುಭ ಚಿತ್ತದಾತಾ!
ತಥಾಕುಜ: ಕ್ಷೇಮ ಸುಖಂದದಾತು
ಸೌಮ್ಯೋ ಬುಧ ಸ್ಸೌಮ್ಯಧಿಯಂದದಾತು ||೨||

ತಥಾ ಗುರು: ಕೌಶಲ ಮಾವಹೇತ್ತೇ
ಸತ್ಕರ್ಮಣಿ ನ್ಯಾಯಸುಧಾಪ್ರಫುಲ್ಲೇ!
ಶುಕ್ರೋದದಾತ್ವದ್ಯ ಸುನಿರ್ಮಲಾಂ ಶ್ರಿಯಂ
ಶನೈಶ್ಚ ರಸ್ತೇ ಶುಭ ಮಾತನೋತು ||೩||

ಧೈರ್ಯಂಸುವರ್ಚ : ಪ್ರದದಾತು ರಾಹು:
ದದಾತುಕೇತು ಹೃದಯ ಪ್ರಸಾದಂ!
ಸರ್ವೇಗ್ರಹಾಸ್ಸಂತು ಶುಭಾಶಯಾಸ್ತೇ
ಕುರ್ವಂತು ನಿತ್ಯಂ ಶುಭಯೋಗಿನಂತ್ವಾಂ ||೪||

ಕರ್ಣಾಟಕ ಮಾತಾ ಶುಭಸಂತತಿಂ ತೇ
ಸುಸ್ವಾಗತಂ ಸರ್ವಜನಾನುರಾಗಂ !
ದತ್ವಾರ್ನುಗೃಹ್ಣಾತು ಮಹಾಮರ್ತೇದ್ಯ
ಯಥಾಕ್ರಮಂ ಶಕ್ತಿವಿವರ್ಧನೇನ ||೫||

ವಿಶ್ವೇಶ್ವರೋ ವಿಶ್ವಹಿತೇರತಂತ್ವಾಂ
ವಿಶ್ವಾತ್ಮಕತ್ವಾದಭಿರಕ್ಷತಾನ್ಮುದಾ!
ಶ್ರೀ ವಿಶ್ವವಿದ್ಯಾಲಯ ಕೀರ್ತಿವೃದ್ಧೇ:
ಸರ್ವಾವಕಾಶಂ ಪರಿಕಲ್ಪ್ಯ ಮೋದಾತ್||೬||

ದಯಾಮಯೀ ಭಕ್ತಿವಶಾ ಚ ದೇವೀ
ರಾಜ್ಯೇಶ್ವರೀ ತ್ವಾಂ ಕುಲಪತುನಪಾಹ್ವಂ!
ಯುನಕ್ತು ಬುದ್ಧ್ಯಾ ಶುಭಯಾಚಸ್ಮೃತ್ಯಾ
ಕರ್ಣಾಟ ದೇಶೀಯ ಸುಖಾಭಿವೃದ್ಧ್ಯೈ ||೭||

ತ್ವದ್ದರ್ಶನಾದಸ್ಮದನಾದಿ ದುಃಖಂ
ಶಾಮ್ಯೇತ ನಿತ್ಯಂ ಸಮದೃಷ್ಟಿಯೋಗಾತ್!
ಪುಣ್ಯಾತ್ಮಕಸ್ತ್ವಂ ಕೃತಿವರ್ಯಈಶ:
ಸುಖಂವಸೇ: ಸರ್ವಸುಖಂಪ್ರದಾತುಂ||೮||

ತ್ವದ್ದರ್ಶನಂ ನಿತ್ಯಸುಖಪ್ರದಾನಾತ್
ಚಿತ್ತಸ್ಸ ನಿಷ್ಕಲ್ಮಷತಾ ವಿಕಾಸಾತ್
ಧಿಯ:ಪ್ರಭಾವಂಪರಿವರ್ಧಯೇಚ್ಛ
ತಜ್ಜನ್ಮ ಸಾರ್ಥಕ್ಯಮಿತಿ ಪ್ರಪದ್ಯೆ||೯||

ಸಿದ್ಧಪ್ಪಾರಾಧ್ಯ ವಿದುಷಾ ರಚಿತಾ ಪದ್ಯ ಮಾಲಿಕಾ
ಕರೋತು ಸುಖಿನಂಶಾಂತಂ ದೇಜಗೌ ನಾಮಕಂ ವಿಭುಂ

* * * * *

ಹೆಪ್ಪು ಗಟ್ಟಿದ ತುಪ್ಪ

- ಪ್ರೊ. ಸಂಗಮೇಶ ಹಂಡಗಿ

ದೇವನೊಲ್ಮೆವಡೆದ ಜಯಶಾಲಿ ಗೌರವಾನ್ವಿತ ವ್ಯಕ್ತಿ
ಹೆಪ್ಪು ಗಟ್ಟಿ ಆಗಿರುವ ತುಪ್ಪವೀ 'ದೇಜಗೌ'ಶಕ್ತಿ!
ಸಾರಸ್ವತ ನಿಕ್ಷೇಪವೀ ಸಂಕ್ಷಿಪ್ತಾಕ್ಷರ 'ದೇಜಗೌ'
ಮೂರಕ್ಕರದ ಮಾನ್ಯರಲಿ ನೀನೊಬ್ಬನ್ಯೆ ದೇಜಗೌ.

ಕನ್ನಡ ಜನಮಾನಸ ಗಂಗೋತ್ರಿಯಲಿ
ವಿಹರಿಸುವ ರಾಜಹಂಸ ದೇಜಗೌ
'ಕನ್ನಡ' ನುಡಿಬಳ್ಳಿಯನು ದಶದಿಕ್ಕಿನಲಿ
ಕುಡಿವರಿಯೆ ಹಬ್ಬಿಸುವ 'ದಾಂಗುಡಿಗ'ದೇಜಗೌ!

ಕನ್ನಡದ ಸ್ಥಿತಿಗಾಗಿ ಕರಗಿ ಸೂರೆಯಾಗಿ
ಮನಮನಕೆ ಮನೆಮನೆಗೆ ಹರಿಯಿಸಿದೆ ಕೀರ್ತಿ.
ಕಷ್ಟಗಳ ಕುಲುಮೆಯಲಿ ಸುಟ್ಟು ಸುಣ್ಣವಾಗಿ
ನಿಷ್ಠೆಯಿಂದಲಿ ಗಟ್ಟಿಗೊಂಡ ಶುದ್ಧ ಸ್ವರ್ಣಮೂರ್ತಿ!

ಕೋಲಿನಾಸರೆಯಿಲ್ಲದೆ ಎತ್ತರದ ಸೋಪಾನಗಳನ್ನೇರಿ
ನಿಂದಿರುವೆ ವಿದ್ಯಾಗಿರಿಯ ಶಿಖರದ ಗುರಿಯ ಸೇರಿ.
ಗುರು ಕುವೆಂಪುವಿನ ವರ ಸಂಕಲ್ಪ ಸಿದ್ಧಿಗಾಗಿ
ಅನವರತ ಶ್ರಮಿಸುತಿಹ ಶಿಷ್ಯ ಸವ್ಯಸಾಚಿ.

ಕನ್ನಡದ ಕಾರ್ಯಕ್ಕಾಗಿ ಕೈಯೆತ್ತಿದ ಕಡುಗಲಿ
ಕನ್ನಡದ ಹಾಡಿಗಾಗಿ ಕೊರಲೆತ್ತಿದ ಕೋಗಿಲೆ
ಕನಸಿನಲಿ ಕೂಡ ನಿನಗೆ ಕನ್ನಡದ ಕನವರಿಕೆ
ನನಸಿನಲಿ ಮಾಡುತಿಹೆ ಕನ್ನಡದ ಬೆಳವಣಿಗೆ.

ಮಡಿಯಿಂದ ನುಡಿದಾಯ ಸಿರಿ ಬೆಳೆಯದೆಂದು
ಸರ್ವಭಾಷಾಮಯೀ ಸರಸ್ವತಿಯನ್ನಾಗಿಸಿದೆ ನೀನು.
ನಾಡದೇವಿಯ ನುಡಿದೇರನೆಳೆಯಲು ನೀನೆ ಮುಂದು
ಉಗ್ಗಡಿಸುತಿರೆ ಜನಸ್ತೋಮ 'ಸಿರಿಗನ್ನಡಂ ಗೆಲ್ಗೆ' ಎಂದು !

* * * * *

ದೇಜಗೌ

-ಲತಾ ರಾಜಶೇಖರ್

ಗುಡಿಸಿಲಿನಿಂದ ಗಂಗೋತ್ರಿಗೆ
ಗಂಗೋತ್ರಿಯಿಂದ ಗಗನದೆತ್ತರಕೆ
ಏರಿ, ಹೊಂಬೆಳಕ ಚೆಲ್ಲುತ್ತ ನಿಂತ
ಸಿರಿಗನ್ನಡದ ದಿವ್ಯ ಸೊಡರು
ಶ್ರೀ ಗುರು ಕುವೆಂಪುವಿನ ಅಡಿದಾವರೆಗೆ
ಬದುಕನ್ನೇ ಮುಡಿಪಾಗಿರಿಸಿ
ನಾಡದೇವಿಯ ಹೊತ್ತು ಮೆರೆಸಿ
ತುಂಬು ಧನ್ಯತೆಯ ಪಡೆದ
ಚೆಲು ಕನ್ನಡದ ಹೊನ್ನ ತೇರು.

ಹಗಲಿರುಳೆನ್ನದ ಕಣ್ತೆರೆದು
ಅಮೂಲ್ಯ ನುಡಿ ಭಂಡಾರವ ಕಾಯುತ್ತ
ಎದೆ ಸೆಟೆದು ನಿಂತು ಗರ್ಜಿಸಿ, ನ್ಯಾಯದ
ಕತ್ತಿ ಹಿಡಿದು ಹೋರಾಡುವ ವೀರ
ಪರಾಕ್ರಮಿ, ಅಪ್ರತಿಮ ಸೇನಾನಿ
ಸ್ವಾಭಿಮಾನದ ಪಾಂಚಜನ್ಯವನ್ನೂದಿ
ಅಜ್ಞಾನದಿರುಳ ತೆರೆ ಕವಿದ
ಜನತೆಯನ್ನೆಚ್ಚರಿಸಿ ಮುನ್ನಡೆಸಿದ
ದೀಪ್ತಿ, ಅಪ್ರಮೇಯ ಸಾರಥಿ

ಸಾಹಿತ್ಯ ಚಕ್ರವರ್ತಿ, ಸೇವಾಮೂರ್ತಿ
ಜಾತಿ, ಮತಗಳ ಎಲ್ಲೆಯಾಚೆಗಿನ
ಜ್ಯೋತಿಯಾಗಿ, ಮಾನವತೆಯ

ಸಂದೇಶ ಕಿರಣಗಳ ಹರಡುವ
ವಿಶಾಲ ಹೃದಯಿ ವಿಶ್ವಮಾನವ
ಪ್ರೀತಿಯಲಿ ನೇವರಿಸಿ, ಕ್ಷಮೆಯಿಂದ
ಸ್ಪರ್ಶಿಸಿ, ರಕ್ಷಿಸುವ ಕರುಣಾಳು
ಗುರುವಿನಿಂದ ದೇವರೆಡೆಗೆ ಸಾಗಿರುವ
ಮಂದಸ್ಮಿತವದನ ದೇವ ಮಾನವ.

ಈ ಪುಣ್ಯ ಭೂಮಿಯ ಕೈಂಕರ್ಯಕ್ಕಾಗಿ
ಕಂಕಣತೊಟ್ಟು, ಅನವರತ ಶ್ರಮಿಸಿ
ಅಸಂಖ್ಯ ಮಕ್ಕಳಿಗೆ ವಿದ್ಯೆಯ
ಕಣ್ಣು ನೀಡಿದ ಜ್ಞಾನ ಸಾಗರ
ಮೇಲೆ ಕಠಿಣ, ಒಳಗೆ ಕೋಮಲ
ತುಂಬಿ ತುಳುಕುವ ಅಮೃತ ಜಲ
ಧರೆಗಿಳಿದು ಬಂದ ಕಲ್ಪವೃಕ್ಷ.
ಚಿರಕಾಲ ಬೆಳಗುತ್ತಿರಲಿ
ಧವಳ ಕೀರ್ತಿ ಶಿಖರ ಗೌರಿಶಂಕರ
ಸವಿತಾರೆಯ ಈ ಚಂದ್ರ

* * * * *

ಸರಸ್ವತಿಯ ವರ ಪುತ್ರ

- ಎಸ್. ನಿಜಲಿಂಗಪ್ಪ

ಡಾ. ಜವರೇಗೌಡರರದು ಕನ್ನಡ ಜನತೆಗೆ ಅತ್ಯಂತ ಪ್ರಿಯವಾದ ಹೆಸರು. ಅದರಲ್ಲಿ ಜನತೆಗೆ, ಅದರಲ್ಲಿಯೂ ಕನ್ನಡಿಗರಿಗೆ ವಿಶ್ವಾಸವಿದೆ. ಪ್ರೀತಿ ಇದೆ, ನಂಬಿಕೆಯಿದೆ, ಗೌರವವಿದೆ. ಅದಕ್ಕೆ ಕಾರಣಗಳು ಯಥೇಚ್ಛ. ಜನತೆಗೆ ತಿಳಿದಂತೆ ದೇಜಗೌ ಅವರು ಉಚ್ಚಮಟ್ಟದ ಸಾಹಿತಿಗಳು. ವಿಶ್ವವಿದ್ಯಾನಿಲಯದ ಕುಲಪತಿಗಳು. ದಕ್ಷ ಆಡಳಿತಗಾರರು. ಕನ್ನಡಭಾಷೆ, ಅದರ ಚರಿತ್ರೆ, ಅದರ ಸಾಹಿತ್ಯದ ನಾನಾ ಮುಖಗಳನ್ನು ತಿಳಿದವರು ಮತ್ತು ಅನುಭವವುಳ್ಳವರು. ಮೇಲಾಗಿ ನಿಸ್ಸೀಮ ಕನ್ನಡಿಗರು, ಕನ್ನಡಕ್ಕಾಗಿ ದುಡಿದವರು, ದುಡಿಯುತ್ತಿರುವವರು ಮತ್ತು ದುಡಿಮೆಯನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಮುಂದುವರಿಸತಕ್ಕವರು.

ನಾನು ಮುಖ್ಯಮಂತ್ರಿಯಾಗಿದ್ದಾಗ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಿಸಬೇಕಾದ ಸಂದರ್ಭದಲ್ಲಿ, ನನ್ನ ಮಂತ್ರಿಮಂಡಲದಲ್ಲಿ ವಿದ್ಯಾ ಇಲಾಖೆಯ ಮಂತ್ರಿಗಳಾಗಿದ್ದ ದಿ. ಶಂಕರಗೌಡರು ನನ್ನಲ್ಲಿಗೆ ಬಂದು ದೇಜಗೌ ಅವರ ವಿಚಾರ ಮಾತನಾಡಿದರು. ಶ್ರೀ ಶಂಕರಗೌಡರಿಗೆ ಶ್ರೀ ದೇಜಗೌ ಅವರ ಬಗ್ಗೆ ಬಹಳ ಒಳ್ಳೆಯ ಅಭಿಪ್ರಾಯವಿದ್ದು, ನನಗೆ ಅವರ ಯೋಗ್ಯತೆ, ವಿದ್ವತ್ತು, ಕನ್ನಡದ ಅಭಿಮಾನ, ಆಡಳಿತ ನೈಪುಣ್ಯತೆ ಮುಂತಾದವುಗಳ ಬಗ್ಗೆ ತಿಳಿಸಿ ಹೇಳಿದರು. ಆ ಆಧಾರದ ಮೇಲೆ ಮತ್ತು ಅವರ ಬಗ್ಗೆ ನನಗೆ ಗೊತ್ತಿದ್ದ ವಿಷಯಗಳ ಆಧಾರದ ಮೇಲೆ ಅವರನ್ನು ಅತ್ಯಂತ ಸಂತೋಷದಿಂದ ಒಪ್ಪಿಕೊಂಡು ಕುಲಪತಿಗಳಾಗಿ ನೇಮಿಸಲಾಯಿತು. ಆ ನೇಮಕದ ಬಗೆಗೆ, ಇತ್ತೀಚೆಗೆ ಅವರು ಮಾಡಿದ ಕೆಲಸ, ಮೈಸೂರು ವಿಶ್ವವಿದ್ಯಾನಿಲಯದ ಅಂತಸ್ತನ್ನು ಮಹೌನ್ನತ್ಯಕ್ಕೆ ಹೆಚ್ಚಿಸಿದ ಬಗ್ಗೆ, ಹಾಗೂ ಎಲ್ಲಾ ದೃಷ್ಟಿಯಿಂದಲೂ ವಿಶ್ವವಿದ್ಯಾನಿಲಯವು ಹೇಗಿರಬೇಕೋ, ಅದರ ಉದ್ದೇಶಗಳು ಹೇಗೆ ನೆರವೇರಬೇಕೋ ಹಾಗೆ ಅದನ್ನು ಕಾರ್ಯರೂಪಕ್ಕೆ ತಂದು, ಸದರಿ ವಿಶ್ವವಿದ್ಯಾನಿಲಯದ ಬಗ್ಗೆ ಎಲ್ಲರೂ ಹೆಮ್ಮೆಪಡುವಂತೆ ಮಾಡಿದ್ದು ನನಗೆ ಸಮಾಧಾನ. ಅಲ್ಲಿ ಅವರ ಸಾಧನೆಗಳು ಅತಿ ಅಪಾರ. ಆ ಬಗ್ಗೆ ಮತ್ತು ಅನೇಕ ವಿಷಯಗಳಲ್ಲಿ, ರೀತಿಗಳಲ್ಲಿ ಅವರು ಹೊಸ ವಿಧಾನಗಳನ್ನು ಅಳವಡಿಸಿದುದು ಅತ್ಯಂತ ಸಂತೋಷ. ಸಮಾಧಾನದ ವಿಷಯ. ಇದನ್ನು ಎಲ್ಲರೂ ಒಪ್ಪಬೇಕು. ಅದರಲ್ಲೂ ಕನ್ನಡಕ್ಕೆ, ಕನ್ನಡ ಸಂಸ್ಕೃತಿಗೆ, ಕನ್ನಡ ಸಾಹಿತ್ಯಕ್ಕೆ ಅವರ ಪ್ರೋತ್ಸಾಹ ಪ್ರಶಂಸಿಸುವಂತಹ ಹೆಮ್ಮೆಯ ವಿಷಯ. ಅಲ್ಲದೆ ಇವರು ಕುಲಪತಿಗಳಾಗಿದ್ದಾಗ, ಕನ್ನಡಮಾಧ್ಯಮ ಶಿಕ್ಷಣವನ್ನು ಆರಂಭಿಸಿದ ಇವರ ದೃಢ ನಿಲುವು, ಮುನ್ನೋಟ, ಇವರ ವಿಚಾರವಂತಿಕೆಯನ್ನು ತೋರಿಸುತ್ತದೆ.

ಶ್ರೀ ದೇಜಗೌ ಅವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಕೆಲವನ್ನು ಓದಿದ್ದೇನೆ. ಅವರ ಬರವಣಿಗೆಯ ಶೈಲಿ ಅವರದೇ. ಸುಲಭ, ಸರಳ ಮತ್ತು ನೇರ. ಎಲ್ಲರಿಗೂ ಅದರಲ್ಲಿಯೂ ಹೆಚ್ಚು ವಿದ್ಯಾವಂತರಲ್ಲದ ಕನ್ನಡಿಗರೂ ಸಹ ಸುಲಭವಾಗಿ ಪ್ರಯೋಜನ ಪಡೆಯುವಂತಹವು. ಆ ಬರಹಗಳಲ್ಲಿ ಸಮಾಜದ ಬಗ್ಗೆ ತಪ್ಪು ತಿಳಿವಳಿಕೆಗಳನ್ನು, ಅವು ಎಷ್ಟೇ ಹಳೆಯವಾದರೂ, ಧೈರ್ಯದಿಂದ ಎದುರಿಸಿ, ಅವುಗಳ ಕೀಳುತನವನ್ನು ಜನಗಳ ಮನಸ್ಸಿನಿಂದ ಕಿತ್ತುಹಾಕಿ, ಹೊಸ ಅಭಿಪ್ರಾಯಗಳನ್ನು ಮೂಡಿಸುವ ಅವರ ಉದ್ದೇಶ ಸ್ಪಷ್ಟವಾಗಿದೆ. ಹಳೆಯ ಅಭಿಪ್ರಾಯಗಳು, ಮೂಢನಂಬಿಕೆಗಳು ಹೇಗೆ ಸಮಾಜದ ಐಕ್ಯತೆ, ಒಗ್ಗಟ್ಟು, ಮುನ್ನೋಟ, ಮಾನವತೆಯಲ್ಲಿನ ನಂಬಿಕೆ, ಹೆಮ್ಮೆ ಇವುಗಳಿಗೆ ಮಾರಕವಾಗಿವೆ ಎಂಬುದನ್ನು ಎತ್ತಿಹಿಡಿದಿದ್ದಾರೆ. ಅವು ನನ್ನ ಮನಸ್ಸಿನ ಮೇಲೆ ಅತ್ಯಂತ ಹೆಚ್ಚಿನ ಪರಿಣಾಮವನ್ನು ಉಂಟುಮಾಡಿದೆ.

ಯಾವ ವಿಷಯವನ್ನೇ ಆಗಲಿ, ಅದನ್ನು ಸಾಕಷ್ಟು ಪರಿಪೂರ್ಣವಾಗಿ ವಿಚಾರಿಸಿ ಬರೆಯುವುದು ಅವರ ಪದ್ಧತಿ. ಇದು ಸುಸ್ಪಷ್ಟ. ನನ್ನ ಬಗೆಗೆ ' ಕರ್ನಾಟಕದ ರೂವಾರಿ ' ಎಂಬ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಅದರಲ್ಲಿ ನನ್ನ ಬಗೆಗೆ ನನಗೇ ತಿಳಿಯದಿದ್ದ ವಿಷಯಗಳನ್ನು ಹೊರಗೆಡಹಿದ್ದಾರೆ. ನನ್ನ ಪೂರ್ವಜರು ಎಲ್ಲಿಂದ ಹಲುವಾಗಲಿಗೆ ಬಂದು ನೆಲಸಿದರು ಮುಂತಾದವುಗಳನ್ನು ಸಂಶೋಧಿಸಿದ್ದಾರೆ. ಅಲ್ಲದೆ ನನ್ನ ಬಗೆಗೆ ನನ್ನ ಮಕ್ಕಳು ಪಡೆದಿರುವ ಅಭಿಪ್ರಾಯಗಳಂತೂ ಹೊಸದು. ಅದನ್ನು ನನ್ನ ಗಮನಕ್ಕೆ ತಂದು ಉಪಕಾರ ಮಾಡಿದ್ದಾರೆ. ಹಾಗೆಯೇ ನನ್ನ ಇನ್ನೊಬ್ಬ ಮಾನ್ಯ ಸ್ನೇಹಿತ ಶ್ರೀ ಟಿ. ಎಸ್. ಕರಿಬಸಣ್ಣನವರ ಸಹಕಾರದಿಂದ ನಮ್ಮ ದೇಶದ ಅನೇಕ ಸ್ಥಳಗಳಿಗೆ ಭೇಟಿಕೊಟ್ಟು, ಎಲ್ಲೆಲ್ಲಿಯೋ ಇರುವ ನನ್ನ ಸ್ನೇಹಿತರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಅಂದರೆ ದೇ. ಜ. ಗೌಡರು ಏನನ್ನು ಬರೆದರೂ, ವಿಷಯಸಂಗ್ರಹ ಮಾಡಿ ಬರೆಯುತ್ತಾರೆ.

ದೇಜಗೌ ಅವರು ಬಸವಣ್ಣನವರ ವಿಚಾರದಲ್ಲಿ ಹಾಗೂ ಭಗವಾನ್ ಬುದ್ಧನ ವಿಚಾರಗಳಲ್ಲಿ, ಬಸವಣ್ಣ ಮತ್ತು ಅಂಬೇಡ್ಕರ್ ಇವರ ವಿಚಾರದಲ್ಲಿ ಬರೆದಿರುವ ಗ್ರಂಥಗಳು, ಅವರ ಮನೋವೈಶಾಲ್ಯ, ಸತ್ಯ ಪ್ರೇಮಗಳಿಗೆ ಸಾಕ್ಷಿ. ಸಾಮಾನ್ಯ ಜನತೆಯಲ್ಲಿ ಮೇಲುಕೀಳು ಮುಂತಾದ ಮೂಢನಂಬಿಕೆಗಳನ್ನು ತೆಗೆದುಹಾಕಿ, ಮಾನವರೆಲ್ಲರೂ ಒಂದೇ ಎಂಬ ತತ್ವವನ್ನು, ಮೇಲ್ಕಂಡ ಮಹನೀಯರುಗಳು ಮತ್ತು ಮಹಾತ್ಮಗಾಂಧಿಯವರ ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳನ್ನು ಜನತೆಯ ಮುಂದಿಟ್ಟು ಜನರ ವಿಚಾರವಂತಿಕೆಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ: ಬಹಳ ಮಟ್ಟಿಗೆ ಕೃತಕೃತ್ಯರೂ ಆಗಿರುತ್ತಾರೆ. ಇದಕ್ಕಾಗಿ ಸಮಾಜವು ದೇ. ಜ. ಗೌಡರಿಗೆ ಕೃತಜ್ಞವಾಗಿರಬೇಕು. ಈ ಬಗ್ಗೆ ಅವರು ಬರೆದಿರುವ ಗ್ರಂಥಗಳಲ್ಲಿ ಹಾಗು ಇತರರ ಬಗ್ಗೆ ಬರೆದ ಗ್ರಂಥಗಳಲ್ಲಿ, ಹಿಂದೂ ಸಮಾಜದಲ್ಲಿ ಪೂರ್ವದಿಂದಲೂ ಒಂದು ಸಣ್ಣ ಸಮಾಜವು, ಇತರ ಸಮಾಜದವರನ್ನೆಲ್ಲ ಜ್ಞಾನ ಸಂಪಾದನೆಗೆ ದೂರವಿಟ್ಟು, ತಮ್ಮ ಹಿರಿತನ, ಪೌರೋಹಿತ್ಯ, ಪೂಜಾರಿತನ ಇವುಗಳ ದುರುಪಯೋಗಗಳಿಂದ, ಹಿಂದೂ ಸಮಾಜವು ಅಜ್ಞಾನ ಕೂಪದಲ್ಲಿಯೇ ಶತಶತಮಾನಗಳಿಂದ ಕೊಳೆಯುವಂತೆ ಮಾಡಿರುವ ನಾನಾ ರೀತಿ

ಬುದ್ಧಿವಂತಿಕೆಯ ಪ್ರಯೋಗಗಳನ್ನು ಹೊರಗೆಡಹಿದ್ದಾರೆ. ಈ ಗ್ರಂಥಗಳನ್ನು ಸಮಾಜದ ಎಲ್ಲರೂ, ಯಾವ ಜಾತಿಯವರೇ ಆಗಲಿ, ಯಾವ ಕುಲದವರೇ ಆಗಲಿ, ಎಲ್ಲರೂ ಓದಲೇಬೇಕೆಂದು ನನ್ನ ಆಗ್ರಹ. ಬಸವೇಶ್ವರರ ಬಗ್ಗೆ ಶ್ರೀ ಗೌಡರು ಬರೆದಿರತಕ್ಕ ಒಂದು ಚಿಕ್ಕ ಪುಸ್ತಕ ನನ್ನ ಮನಸ್ಸಿಗೆ ಬಂದಿದೆ. ಬಸವೇಶ್ವರರ ಬಗೆಗೆ ಬರೆದಿರುವಂತಹ ಅನೇಕ ಗ್ರಂಥಗಳಲ್ಲಿ ನಾನು ಅದಕ್ಕೆ ಪ್ರಥಮಸ್ಥಾನ ಕೊಡುತ್ತೇನೆ. ಅಷ್ಟು ಚಿಕ್ಕಹೊತ್ತಿಗೆಯಲ್ಲಿ ಬಸವೇಶ್ವರರ ಬಗೆಗೆ ಎಲ್ಲ ವಿಚಾರಗಳನ್ನು ಪರಿಣಾಮಕಾರಿಯಾಗಿ, ಮನದಟ್ಟಾಗುವಂತೆ ಮಾಡಿದ್ದಾರೆ. ಅದನ್ನಂತೂ ಎಲ್ಲರೂ ಓದಲೇಬೇಕೆಂದು ನನ್ನ ಅಭಿಪ್ರಾಯ. ಮತ್ತೊಂದು ವಿಚಾರ : ನಮ್ಮ ದೇಶದ ಬೆಳವಣಿಗೆಗೆ ಕಂಟಕಪ್ರಾಯವಾಗಿರುವ, ಹಾಗೂ ಸಮಾಜವನ್ನೇ ನಾನಾ ತುಂಡುಗಳನ್ನಾಗಿ ಮಾಡಿ, ಆ ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸಿ, ಅದರ ಲಾಭ ಪಡೆದಿರುವ ವರ್ಗಗಳನ್ನು ಎತ್ತಿತೋರಿಸಿದ್ದಾರೆ. ಇದು ಅವರ ಜಾತ್ಯಾತೀತ ಹಾಗೂ ವಿಶಾಲ ಭಾವನೆಯನ್ನು ಎತ್ತಿತೋರಿಸುತ್ತದೆ. ಅವರ ಬಗೆಗೆ ಅಭಿಮಾನ, ಗೌರವ, ವಿಶ್ವಾಸ, ನಂಬಿಕೆಗಳು ಜನಸಾಮಾನ್ಯರಲ್ಲಿ ಬೆಳೆಯಲು ಇದೊಂದೇ ಸಾಕು.

ಶ್ರೀ ಜವರೇಗೌಡರು ಸಾಹಿತ್ಯ ಸಮಾಜಕ್ಕೆ ಮಾಡಿರುವ ಮತ್ತೊಂದು ಸೇವೆ ಎಂದರೆ ಜಗತ್ತಿಗೇ ಅತ್ಯಂತ ದೊಡ್ಡವರೂ, ಚರಿತ್ರಾರ್ಹರೂ, ಮೇಧಾವಿಗಳೂ, ಮಹಾತ್ಮ ಗಾಂಧಿಯಂತಹವರಿಗೆ ಮಾರ್ಗದರ್ಶಕರೂ ಆಗಿದ್ದ ರಷ್ಯದ ಮೇಧಾವಿ ಗ್ರಂಥಕರ್ತ ಲಿಯೋ ಟಾಲ್‌ಸ್ಟಾಯ್ ಅವರ ಜಗತ್ತನ್ನೇ ಪರಿವರ್ತನೆ ಮಾಡತಕ್ಕ ಗ್ರಂಥಗಳಾದ 'ಅನ್ನಾಕರೇನಿನ', 'ವಾರ್ ಅಂಡ್ ಪೀಸ್' ಈ ಮಹಾಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅದೊಂದು ದೊಡ್ಡ ಸಾಧನೆ ಮತ್ತು ಉಪಕಾರ.

ಶ್ರೀ ಜವರೇಗೌಡರು ಈಗಲೂ ಕನ್ನಡ ಸಾಹಿತ್ಯದ ಸೇವೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅದನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯಿಸಿ, ಕನ್ನಡಿಗರ ಸೇವೆ ಅವರಿಂದ ಬಹುಕಾಲ ಸಲ್ಲಲೆಂದು ನನ್ನ ಮನಃಪೂರ್ವಕ ಹಾರೈಕೆ.

ಇವೆಲ್ಲವುಗಳಷ್ಟೆ ಮುಖ್ಯವಾದ ನನ್ನ ದೃಷ್ಟಿಯಲ್ಲಿ, ನನ್ನ ಮನಸ್ಸಿಗೆ ಹಿಡಿಸಿರುವ ವಿಚಾರವೆಂದರೆ, ಅವರ ಸಂಸಾರದ ರೀತಿ. ಅನೇಕವೇಳೆ ಅವರ ಮನೆಗೆ ಹೋಗಿದ್ದೇನೆ, ಅವರ ಆತಿಥ್ಯ ಸ್ವೀಕರಿಸಿದ್ದೇನೆ. ಆ ಸಂಸಾರದಲ್ಲಿ ಹೊಂದಿಕೆ, ಪರಸ್ಪರ ಪ್ರೀತಿ, ಅಭಿಮಾನ, ಆತಿಥ್ಯ ಇವು ಅದ್ವಿತೀಯ. ಅವರ ಮನೆಯಲ್ಲಿ ಅವರ ಧರ್ಮಪತ್ನಿ, ಮಕ್ಕಳು, ಸೊಸೆಯರು, ಅಳಿಯಂದಿರು ಹೇಗೆ ಇರಬೇಕು ಎಂಬುದನ್ನು ನೋಡಬಹುದು. ಅವರ ಆತಿಥ್ಯವನ್ನು ಸ್ವೀಕರಿಸಿದ ನಾನು, ಇದು ಒಂದು ಆದರ್ಶ ಕುಟುಂಬ ಎಂಬುದನ್ನು ಕಂಡಿದ್ದೇನೆ.

ಶ್ರೀ ಗೌಡರಿಗೆ ಎಲ್ಲ ವಿಧದಲ್ಲಿಯೂ ಸಹಾನುಭೂತಿ, ಸಹಾಯ ಸಹಕಾರಗಳನ್ನು ದೊರಕಿಸಿಕೊಟ್ಟಿರುವ ಅವರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮನವರು ಬರೆದಿರುವ 'ನೆನಪಿನ ಸುಳಿ' ಎಂಬ ಗ್ರಂಥವು ಎಲ್ಲರೂ ಓದಬೇಕಾದುದು. ಅವರ ಆತಿಥ್ಯ ಸತ್ಕಾರ್ಯವನ್ನು ಅನುಭವಿಸಿದ್ದೇನೆ. ಪುನಃ ಪುನಃ ಅವರ ಮನೆಗೆ ಹೋಗಿ, ಅವರ

ಆತಿಥ್ಯವನ್ನು ಸ್ವೀಕರಿಸಬೇಕೆಂದು ನನ್ನ ಮನಸ್ಸು ಹಾತೊರೆಯುತ್ತಿದೆ. ಅದೊಂದು ಸಂತೋಷದ ಅನುಭವ. ಡಾಃ ದೇ. ಜ. ಗೌಡರು, ಅವರ ಕುಟುಂಬದವರು ಎಲ್ಲರೂ ಬಹುಕಾಲ ಇದೇ ರೀತಿ ಸುಖ ಸಂತೋಷಗಳಿಂದ ಇರಲೆಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀ ಜವರೇಗೌಡರ ೭೫ನೇ ಹುಟ್ಟುಹಬ್ಬದ ಸವಿನೆನಪಿಗಾಗಿ, ಅಭಿನಂದನ ಗ್ರಂಥವನ್ನು ಹೊರತರುತ್ತಿರುವುದು ಬಹಳ ಸಂತೋಷದ ಸಂಗತಿ.

ಕನ್ನಡ ಸರಸ್ವತಿಯ ವರಪುತ್ರರಲ್ಲಿ ಒಬ್ಬರಾದ ಶ್ರೀ ಗೌಡರಿಂದ, ಕನ್ನಡ ಸಾರಸ್ವತ ಲೋಕದಲ್ಲಿ, ಕನ್ನಡ ಸಾಹಿತ್ಯ ಸೇವೆಯು ಇನ್ನೂ ಬಹುಕಾಲ ನಡೆಯಲೆಂದೂ, ಕನ್ನಡ ಸಾಹಿತ್ಯ ದೇವಿಯ ಮುಕುಟದಲ್ಲಿ ಅವರ ಹೆಸರು ರತ್ನದೋಪಾದಿಯಲ್ಲಿ ಮೆರೆಯುತ್ತಿರಲೆಂದು ಹಾರೈಸುತ್ತೇನೆ.

* * * * *

ಪಂಚಮುಖದ ಪರಮೇಶ್ವರ

- ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ

ನಮ್ಮೆಲ್ಲರ ಕ್ಷೇಮಂಕರಮೂರ್ತಿಯಾದ ಡಾ. ದೇ ಜವರೇಗೌಡರು ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ವಿಶ್ವವಿದ್ಯಾನಿಲಯವನ್ನು ನಾನಾ ರೀತಿಯಲ್ಲಿ ಪ್ರಗತಿಪಥದಲ್ಲಿ ನಡೆಸಿಕೊಂಡು ಬಂದ ಮಹಾಭಾಗರು. ಶ್ರೀಯುತರು ತಮ್ಮ ಸಾರ್ಥಕ ಜೀವನದ ಎಪ್ಪತ್ತು ನಾಲ್ಕು ವರುಷಗಳನ್ನು ಮುಗಿಸಿ ಇಂದು ಎಪ್ಪತ್ತೈದನೆಯ ವರುಷಕ್ಕೆ ಅಡಿಯಿಟ್ಟಿದ್ದಾರೆ

ಇಂದು ಈ ಸುಪ್ರಭಾತದ ಶುಭಮುಹೂರ್ತದಲ್ಲಿ ಬೃಂದಾವನ ಪ್ರೌಢಶಾಲೆಯ ವಿದ್ಯಾರ್ಥಿವೃಂದದವರೂ ಬೋಧಕ ವೃಂದದವರೂ ಡಾ. ದೇ. ಜ. ಗೌ. ಅವರ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿದ್ದಾರೆ. ಈ ಮಹೋತ್ಸವಕ್ಕೆ ಅಧ್ಯಕ್ಷ ನನ್ನಾಗಿ ನನ್ನನ್ನು ಕರೆತಂದು ಕಾರ್ಯಕರ್ತರು ನನ್ನ ವಿಷಯದಲ್ಲಿ ಅತ್ಯಪೂರ್ವವಾದ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ಕಾರ್ಯಕರ್ತರಿಗೆ ಚಿರಕೃತಜ್ಞನಾಗಿದ್ದೇನೆ.

ಶಾಲೆಯ ಮಕ್ಕಳು ಡಾ. ದೇಜಗೌ ಅವರ ವ್ಯಕ್ತಿತ್ವವನ್ನು ಕುರಿತು ಮಾತನಾಡಿ ಭಗವಂತನು ಅವರಿಗೆದೀರ್ಘಾಯುಷ್ಯವನ್ನೂಐಶ್ವರ್ಯವನ್ನೂ ಸಮಸ್ತ ಮಂಗಳವನ್ನೂ ಅನುಗ್ರಹಿಸಲಿ ಎಂದೂ ಆ ದಯಾಮಯನನ್ನು ಪ್ರಾರ್ಥಿಸಿದ್ದಾರೆ. ಈ ಮಕ್ಕಳ ಭಾಷಣ ಚಿಕ್ಕದಾಗಿತ್ತು, ಚೊಕ್ಕವಾಗಿತ್ತು. ಇವರನ್ನು ನಾನು ಅಭಿನಂದಿಸುತ್ತೇನೆ. ವಿದ್ಯಾರ್ಥಿಗಳಿಗಾಗಿ ಶಾಲೆ ಏರ್ಪಡಿಸಿದ ಪ್ರತಿಭಾ ಪ್ರದರ್ಶನದ ಇಂಥ ಸ್ಪರ್ಧೆಗಳಲ್ಲಿ ಗೆದ್ದು ಬಂದವರು ಬಹುಮಾನಗಳನ್ನೂ ಪ್ರಶಸ್ತಿಪತ್ರಗಳನ್ನು ಇಂದು ಪಡೆದಿದ್ದಾರೆ. ಈ ಪ್ರತಿಭಾ ಸಂಪನ್ನರನ್ನು ನಾನು ಅಭಿನಂದಿಸುತ್ತೇನೆ. ಸರ್ವಶ್ರೀಗಳಾದ ಡಾ. ಸಿ. ಕೆ. ಎನ್. ರಾಜ, ರಾಮೇಗೌಡ, ಸುಬ್ಬರಾವ್ ಅವರು ಡಾ. ದೇ. ಜವರೇಗೌಡರ ವ್ಯಕ್ತಿತ್ವದ ಓರಿಮೆ ಗರಿಮೆಗಳನ್ನು ಕೊಂಡಾಡಿದ್ದು ಅವರಿಗೆ ಸರ್ವಶ್ರೇಯಸ್ಸನ್ನೂ ದೀರ್ಘಾಯುವನ್ನೂ ಕರುಣಿಸಲಿ ಎಂದು ಭಗವಂತನನ್ನು ಬೇಡಿಕೊಂಡಿದ್ದಾರೆ. ಶ್ರೀ 'ದೇಜಗೌ' ಅವರ ಅಭಿಮಾನಿಗಳನ್ನು ನಾನು ಅಭಿನಂದಿಸುತ್ತೇನೆ. ಈ ಶಾಲೆಯ ಸಂಸ್ಥಾಪಕರ ಎಪ್ಪತ್ತೈದನೆಯ ಹುಟ್ಟುಹಬ್ಬವನ್ನು ಇಷ್ಟು ಸಡಗರ ಸಂಭ್ರಮಗಳಿಂದ ನಡೆಸಿರುವ ಬೋಧಕ -ಪೋಷಕವರ್ಗದವರನ್ನು ನಾನು ಅಭಿನಂದಿಸುತ್ತೇನೆ.

ಮಹನೀಯರೆ, ಡಾ. ದೇ. ಜವರೇಗೌಡರನ್ನು ಸರಿಯಾಗಿ ಮತ್ತು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ ಎಂದು ನಾನು ಏನನ್ನೂ ಹೇಳುತ್ತಿಲ್ಲ. ನಿಮಗೆ ತಿಳಿದಿಲ್ಲವೆಂದೂ ನಾನು ಏನನ್ನೂ ಹೇಳುತ್ತಿಲ್ಲ. ನೀವು ತಿಳಿದಿರುವದನ್ನೇ ನಾನು ಹೇಗೆ ತಿಳಿದಿದ್ದೇನೆ

ಎಂಬುದನ್ನು ನಿಮಗೆ ಮನವರಿಕೆ ಮಾಡುವ ಸಲುವಾಗಿ ನಾಲ್ಕು ಮಾತುಗಳನ್ನು ಆಡಬೇಕೆಂದಿದ್ದೇನೆ.

ಶ್ರೀ ಜವರೇಗೌಡರನ್ನು ಪಂಚಮುಖದ ಪರಮೇಶ್ವರ ಎಂದು ನಾನು ಭಾವಿಸಿದ್ದೇನೆ. ಅವರ ವ್ಯಕ್ತಿತ್ವಕ್ಕೆ ಐದು ಮುಖಗಳು ಇವೆ ಎಂದು ನಾನು ಅರ್ಥೈಸಿದ್ದೇನೆ. ಆ ಮುಖಗಳು ಯಾವುವು ಎಂಬುದನ್ನು ವಿವರಿಸುತ್ತೇನೆ. ಮೊದಲನೆಯ ಮುಖ ರಸಋಷಿ ಕುವೆಂಪುವಿನ ಜೊತೆಯಲ್ಲಿ ಅವರು ಬೆಳಸಿಕೊಂಡ ಸಾಹಿತ್ಯ ಬಾಂಧವ್ಯವನ್ನು ಕುರಿತದ್ದಾಗಿದೆ. ಆ ರಸ ಋಷಿಯಲ್ಲಿ ಶ್ರೀ ದೇಜಗೌರವರಿಗೆ ಇದ್ದ ಶ್ರದ್ಧೆ, ನಿಷ್ಠೆ, ವಿಶ್ವಾಸ, ಭಕ್ತಿ, ಪ್ರೇಮ, ಗೌರವ ಇವು ಅಸಾಧಾರಣವಾದುವು. ದೇಶದ ಉದ್ದಗಲದಲ್ಲಿ ಅನೇಕಾನೇಕ ವೇದಿಕೆಗಳಲ್ಲಿ ಕುವೆಂಪುರವರನ್ನು ಕುರಿತು ಮಾತನಾಡಿದ್ದಾರೆ. ಕುವೆಂಪು ಅವರ ಜೀವನಚರಿತ್ರೆ ಬರೆದಿದ್ದಾರೆ. ಕುವೆಂಪು ಅವರ ಮಹಾಛಂದಸ್ಸಿನಲ್ಲಿ ರಚಿತವಾದ ಜಗದ್‌ಭವ್ಯ ಮೇರು ಕೃತಿಯಾದ ಶ್ರೀರಾಮಯಣ ದರ್ಶನಂ ಮಹಾಕಾವ್ಯವನ್ನು ಮೂಲದ ಶಕ್ತಿ ಸತ್ತ್ವಗಳೆರಡೂ ಕೆಡದ ರೀತಿಯಲ್ಲಿ ಸಂಗ್ರಹಿಸಿ ಸರಳವೂ ಸಮರ್ಪಕವೂ ಆದ ಗದ್ಯದಲ್ಲಿ ರಾಮಾಯಣ ವಚನ ಚಂದ್ರಿಕೆಯನ್ನು ಬರೆದಿದ್ದಾರೆ. ಅವರನ್ನು ಕುರಿತ ಬಿಡಿ ಲೇಖನಗಳೂ ಪುಸ್ತಕಗಳೂ ಬೇಕಾದಷ್ಟು ಶ್ರೀ ದೇಜಗೌ ಅವರಿಂದ ರಚಿತವಾಗಿ ಪ್ರಕಟಗೊಂಡಿವೆ. ಇಂತಹ ಕೃತಿರತ್ನಗಳನ್ನು ಬರೆದ ಶ್ರೀ ದೇಜಗೌ ಲೇಖಣಿ ಪವಿತ್ರವಾಗಿದೆ. ತಾವು ಬರೆದಿರುವುದಲ್ಲದೆ ಇತರರು ಬರೆದ ಕುವೆಂಪು ಸಾಹಿತ್ಯವನ್ನು ಕುರಿತ ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ. ಎಷ್ಟೋ ದಿನಗಳ ಕಾಲದ ಕತ್ತಲೆಯಲ್ಲೆಯೇ ಅಡಗಿದ್ದ ಕುವೆಂಪು ಕೃತಿಗಳನ್ನು ತಮ್ಮ ಮಾಲೆಯಲ್ಲಿ ಪ್ರಕಟಿಸಿದ್ದಾರೆ. ಪ್ರತಿವರ್ಷವೂ ಡಿಶಂಬರಿನಲ್ಲಿ ಬರುವ ಕುವೆಂಪು ಅವರ ಹುಟ್ಟುಹಬ್ಬವನ್ನು ಆಚರಿಸುತ್ತ ಬಂದಿದ್ದಾರೆ. ಕುವೆಂಪು ಅವರನ್ನು ಇಷ್ಟು ಆಳವಾಗಿ ಅಭ್ಯಾಸಮಾಡಿ ಅವರನ್ನು ಅತಿ ಹತ್ತಿರದಲ್ಲಿ ಕಂಡ ಅವರ ಕಾರ್ಯಗಳಲ್ಲಿ ಅವರ ಅಚ್ಚು ಮೆಚ್ಚಿನ ಬಂಟನಂತೆ ಇರುವ ಇನ್ನೊಬ್ಬ ವ್ಯಕ್ತಿ ಕನ್ನಡ ನಾಡಿನಲ್ಲಿ ದೊರೆಯುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಶ್ರೀ ಕುವೆಂಪುವಿನ ಸಾಹಿತ್ಯಬಾಂಧವ್ಯದ ಒಂದು ಮುಖ ಶ್ರೀ ಗೌಡರವರ ವ್ಯಕ್ತಿತ್ವದಲ್ಲಿ ಅಡಗಿರುವುದನ್ನು ನಾವು ಕಾಣಬಹುದಾಗಿದೆ.

ಶ್ರೀ ದೇಜಗೌ ಅವರ ವ್ಯಕ್ತಿತ್ವದ ಇನ್ನೊಂದು ಮುಖ ಅವರ ಕನ್ನಡ ಪ್ರೇಮವನ್ನು ಕುರಿತದ್ದಾಗಿದೆ. ದೇಜಗೌ = ಕನ್ನಡ, ಕನ್ನಡ =ದೇಜಗೌ ಹೀಗೆ ನಾವು ಹೇಳಬಹುದು. ಅವರ ಧಮನಿಯನ್ನು ಹಿಡಿದರೆ ಅಲ್ಲಿ ಮಿಡಿಯುವುದು ಕನ್ನಡದ ಪ್ರೇಮವೇ. ಅವರ ಉಸಿರನ್ನು ಆಲಿಸಿದರೆ ಅಲ್ಲಿ ಕೇಳಿಬರುವುದು ಕನ್ನಡದ ಪ್ರೇಮವೇ. ಅವರ ನಡೆ ಅವರ ನುಡಿಗಳಲ್ಲಿ ನಮಗೆ ದೊರೆಯುವುದು ಅವರ ಕನ್ನಡದ ಅಭಿಮಾನದ ಉತ್ಕಟತೆಯೇ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾಡಿದ ಕೆಲಸ ಕನ್ನಡದ ರಕ್ಷಣೆಯನ್ನು ಕುರಿತದ್ದೇ. ಕುಲಪತಿಯಾಗಿ ಅವರು ಮಾಡಿದ ಕೆಲಸವೂ ಇದೇ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ಮಾಪಕರಾಗಿ ಅವರು ಮಾಡಿದ ಕೆಲಸವೂ ಇದೇ. ಹೋದ ಹೋದ ಕಡೆಗಳಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಧರ್ಮ, ಕಲೆಗಳನ್ನು ಕುರಿತು

ಅವರು ಭಾಷಣ ಮಾಡಿದ್ದಾರೆ. ಕುವೆಂಪು ಕೊಟ್ಟ ಕನ್ನಡದ ಡಿಂಡಿಮೆಯನ್ನು ದೇಜಗೌ ದಶದಿಕ್ಕುಗಳಿಗೆ ಕೇಳಿಸುವಂತೆ ಬಾರಿಸಿದ್ದಾರೆ. ಶ್ರೀ ಅವರು ಕೊಟ್ಟ ಕನ್ನಡದ ಬಾವುಟವನ್ನು ಅವರು ಆಕಾಶದ ಎತ್ತರಕ್ಕೆ ಹಾರಿಸಿದ್ದಾರೆ. ಮಾಹೇಶ್ವರ ಸ್ಥಲದ ನಿಷ್ಠಾಭಕ್ತರಂತೆ ಶ್ರೀ ದೇ. ಜವರೇಗೌಡರು ಕೆಲಸ ಮಾಡಿದ್ದಾರೆ. ಇದು ಅವರ ವ್ಯಕ್ತಿತ್ವದ ಎರಡನೆಯ ಮುಖ.

ಶ್ರಿಯುತರು ದಕ್ಷವಾದ ಆಡಳಿತಗಾರರಾಗಿ ವಿಜೃಂಭಿಸಿದರು. ಇದು ಅವರ ಮೂರನೆಯ ಮುಖ. ವಿಶ್ವವಿದ್ಯಾನಿಲಯವನ್ನು ಅವರು ನಡೆಸಿಕೊಂಡುಬಂದ ರೀತಿ, ಕನ್ನಡ ಅಧ್ಯಯನ ಸಂಸ್ಥೆಯನ್ನು ಅವರು ಕಟ್ಟಿದ ರೀತಿ, ಮಂಗಳೂರಿನ ಸ್ನಾತಕೋತ್ತರ ಕೇಂದ್ರವನ್ನು ಅವರು ಅಭಿವೃದ್ಧಿಪಡಿಸಿದ ರೀತಿ ಇವೆಲ್ಲ ಅವರ ದಕ್ಷತೆಯನ್ನು ಸಾರಿ ಹೇಳುವ ಸಾಕ್ಷಿಗಳಾಗಿವೆ. ಅವರು ಒಮ್ಮೆ ಕುಸುಮದ ಹಾಗೆ ಮೃದುವಾಗಿರುತ್ತಾರೆ, ಒಮ್ಮೆ ವಜ್ರದ ಹಾಗೆ ಕಠಿಣವಾಗಿ ಇರುತ್ತಾರೆ. ಇದು ದಕ್ಷರಾದ ಆಡಳಿತಗಾರರಲ್ಲಿ ಇರಬೇಕಾದ ಮುಖ್ಯ ಲಕ್ಷಣ. ಅಶೋಕನ ಶಿಲಾಸ್ತಂಭ ಎಷ್ಟು ಕಠಿಣ, ಆದರೆ ಅದರಲ್ಲಿ ಕೊರೆದ ಅವನ ಮಾತು ಎಷ್ಟು ಮೃದು. ಜವರೇಗೌಡರೂ ಹಾಗೆಯೇ ಆಡಳಿತದ ವಿಷಯದಲ್ಲಿ ಅಶೋಕ ಸ್ತಂಭದಂತೆ, ದೃಢ ಕಠಿಣ ಎಂಬಂತೆ ಇದ್ದರೂ ಸ್ವಭಾವತಃ ಕರಗಿ ನೀರಾಗುವ ಹೃದಯದವರಾಗಿದ್ದರು. ಈ ಆಡಳಿತದಲ್ಲಿನ ದಕ್ಷತೆ ಎನ್ನುವುದು ಅವರ ವ್ಯಕ್ತಿತ್ವದ ಮೂರನೆಯ ಮುಖ.

ಶ್ರೀಯತರು ಅರಿತ ಬೋಧಕರು, ನುರಿತ ಸಂಶೋಧಕರು, ಚತುರ ವಾಗ್ಮಿಗಳು, ಓರಿಯ ಜಾನಪದ ತಜ್ಞರು, ಹಲವು ವಿದ್ಯಾಸಂಸ್ಥೆಗಳನ್ನು ಕಟ್ಟಿ ನಡೆಸುತ್ತಿರುವ ನೇತಾರರು, ಪ್ರತಿಭಾಸಂಪನ್ನರಾದ ಬರಹಗಾರರು. ಇವೆಲ್ಲದರ ಮಧುರ ಮಿಶ್ರಣದ ಸುಂದರ ಕಾಂತಿಯಿಂದ ಬೆಳಗುವ ಶ್ರೀಮಂತಿಕೆ ಅವರ ವ್ಯಕ್ತಿತ್ತ್ವದ ನಾಲ್ಕನೆಯ ಮುಖ. ಅವರ ಬರವಣಿಗೆಯಲ್ಲಿ ಕಾಣಬರುವ ದನಿ-ಧ್ವನಿ, ದ್ಯುತಿ-ದೃತಿ ಇವು ಅಸಾಧಾರಣವಾದುವು. ರಷ್ಯದ ಋಷಿ ಕಾದಂಬರಿಕಾರ ಟಾಲ್‌ಸ್ಟಾಯ್‌ಯವರ ‘ ಪುನರುತ್ಥಾನ’ ಮತ್ತು ‘ಯುದ್ಧ ಮತ್ತು ಶಾಂತಿ’ ಬೃಹತ್ ಕಾದಂಬರಿಗಳನ್ನು ಕನ್ನಡಿಸಿದ ಕೀರ್ತಿ ಅವರದು. ಕೆಲವೇ ಮಂದಿ ಹೊಸಗನ್ನಡದ ಲೇಖಕರಲ್ಲಿ ಶ್ರೀಯುತರು ಒಬ್ಬರು. ಗದ್ಯಬರಹಗಾರರ ಪಂಕ್ತಿಯಲ್ಲಿ ಶ್ರೀಯುತರಿಗೆ ವಿಶಿಷ್ಟವಾದ ಸ್ಥಾನವಿದೆ. ಜಾನಪದ ಭಾಷೆಯ ಒಗಚು, ನಾಗರಿಕ ಭಾಷೆಯ ನಯ ಇವೆರಡನ್ನೂ ಇವರ ಗದ್ಯದಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಇವರಿಗೆ ಗದ್ಯ ಲೇಖಕರ ಸಾಲಿನಲ್ಲಿ ಅಗ್ರಮಣೆ ಸಲ್ಲುತ್ತದೆ ಎಂದು ನಾನು ಭಾವಿಸಿದ್ದೇನೆ. ಸ್ನಾತಕೋತ್ತರ ತರಗತಿಯ ಕಲಿಕೆಯಲ್ಲಿ ಜಾನಪದ ಸಾಹಿತ್ಯವನ್ನು ಒಂದು ಅಧ್ಯಯನದ ವಿಷಯವನ್ನಾಗಿ ಸೇರಿಸಿದ ಇವರ ಔಚಿತ್ಯದ ಓರಿಮೆ ಮೆಚ್ಚುವಂತಹದು. ಹಲವು ವಿದ್ಯಾ ಸಂಸ್ಥೆಗಳನ್ನು ಕಟ್ಟುವುದರಲ್ಲಿ, ಪ್ರಸಾರಾಂಗದ ಕಾರ್ಯಕಲಾಪಗಳನ್ನು, ಪ್ರಬುದ್ಧ ಕರ್ಣಾಟಕ, ಪುಸ್ತಕಪ್ರಪಂಚ ಮಾಸ ಪತ್ರಿಕೆಗಳಲ್ಲಿ ಇವರ ಧೀಮಂತ ಪ್ರಜ್ಞೆ, ಕೆಲಸ ಮಾಡಿದೆ.

ಸ್ನೇಹಶೀಲತೆ ಅವರ ವ್ಯಕ್ತಿತ್ತ್ವದ ಐದನೆಯ ಮುಖ. ನನ್ನ ವೈಯುಕ್ತಿಕ ವಿಚಾರವನ್ನು ಇಲ್ಲಿ ಹೇಳುತ್ತಿದ್ದೇನೆ. ನನ್ನ ಬದುಕಿಗೆ ಕೈಗಂಬದ ಹಾಗೆ, ದಾರಿದೀಪದ ಹಾಗೆ, ಊರು

ಗೋಲಿನ ಹಾಗೆ, ಅರವಟಿಗೆಯ ಹಾಗೆ, ತಂಗಾಳಿಯ ಹಾಗೆ, ತಿಳಿಗೊಳದ ಹಾಗೆ, ಬೆಳದಿಂಗಳಿನ ಹಾಗೆ, ಫಲಪುಷ್ಪ ಫಲಭರಿತ ಪಾದಪದ ಹಾಗೆ ಶ್ರೀಯುತರು ನನಗೆ ಒದಗಿ ಬಂದಿದ್ದಾರೆ. ಅವರು ಕುಲಪತಿಗಳಾಗಿದ್ದ ಕಾಲದಲ್ಲಿ ಮಂಗಳೂರಿನಲ್ಲಿ ಸ್ನಾತಕೋತ್ತರ ಕೇಂದ್ರ ಪ್ರಾರಂಭವಾಯಿತು. ಅದರ ಪ್ರಥಮ ನಿರ್ದೇಶಕನನ್ನಾಗಿ ನನ್ನನ್ನು ಅಲ್ಲಿಗೆ ಕಳುಹಿಸಿ ಕೊಟ್ಟವರು ಜವರೇಗೌಡರೇ. ನನ್ನನ್ನು ಕನ್ನಡದ ಪ್ರಾಧ್ಯಾಪಕನನ್ನಾಗಿ ಮಾಡಿದವರೂ ಅವರೇ. ನಿರ್ದೇಶಕನಾಗಿದ್ದ ದಿನಗಳಲ್ಲಿ ನನ್ನ ಅರೆಕೊರೆಗಳನ್ನು ತಿದ್ದಿದವರೂ ಅವರೇ. ನಾನು ತೆರದ ನನ್ನ ಪುಸ್ತಕ ಮಾಲೆಯಲ್ಲಿ ತಮ್ಮ ' ನಂಜುಂಡ ಕವಿ' ಮತ್ತು 'ಸಾಹಿತ್ಯಮಾರ್ಗ' ಎಂಬ ಪುಸ್ತಕಗಳನ್ನು ಪ್ರಕಟಿಸಲು ಅನುಮತಿ ಇತ್ತವರು ಅವರೇ. ತಮ್ಮ ಮಾಲೆಯಲ್ಲಿ ಕುವೆಂಪು ಅವರನ್ನು ಕುರಿತು ಬರೆದ ಹೊತ್ತಗೆಯೊಂದಕ್ಕೆ 'ಕಾಣ್ಕೆ' ಎಂದು ಹೆಸರಿಟ್ಟವರೂ ಅವರೇ. ತಮ್ಮ ಮಾಲೆಯಲ್ಲಿ ಅದನ್ನು ಪ್ರಕಟಿಸಿದವರೂ ಅವರೆ.

ನಾನು ಇಲ್ಲಿ ಹೇಳಿರುವುದೆಲ್ಲ ಶ್ರೀಯುತರ ವ್ಯಕ್ತಿತ್ವದ ಗುರುತುಗೆರೆಗಳ ಒಂದು ರೇಖಾಚಿತ್ರ. ಈ ಪಂಚಮುಖೀ ಪರಮೇಶ್ವರನು ಬಹುಕಾಲ ನಮ್ಮೊಡನೆ ಬಾಳಲಿ. ನಿಮ್ಮ ಹಾಗೆ ನಾನೂ, ಇವರಹುಟ್ಟುಹಬ್ಬದದಿನ ಈ ಮಹಾಭಾಗರಿಗೆ ಆಯುರಾರೋಗ್ಯೈಶ್ವರ್ಯಾದಿ ಸಮಸ್ತ ಸನ್ಮಂಗಳಗಳನ್ನು ಭಗವಂತನು ನೀಡಲಿ ಎಂದು ಆ ದಯಾಮಯನನ್ನು ಪ್ರಾರ್ಥಿಸುತ್ತೇನೆ.

ಶ್ರೀ ದೇಜಗೌ ಅವರ ಲೆಕ್ಕಣಿಯ ಮಸಿ ಆರದಿರಲಿ. ಅವರ ಮನದ ಮನೆಯ ಹೂದೋಟದಲ್ಲಿ ನೂರು ನೂರು ಗುಲಾಬಿಗಳು ಅರಳುತ್ತಿರಲಿ. ನೋಡುವವರ ಕಣ್ಮನಗಳನ್ನು ಅವು ತಣಿಸುತ್ತಿರಲಿ. ಇದೂ ದೇವರಲ್ಲಿ ನಾನು ಸಲ್ಲಿಸುವ ಪ್ರಾರ್ಥನೆ.

ಬೃಂದಾವನ ಪ್ರೌಢಶಾಲೆ ಹಮ್ಮಿಕೊಂಡ ಈ ಉತ್ಸವ ಯಶಸ್ವಿಯಾಗಿದೆ. ವರುಷ ವರುಷವೂ ಈ ಉತ್ಸವ ನಡೆಯಲಿ ಎಂದು ಹೇಳಿ ಇದರಲ್ಲಿ ಭಾಗಿಯಾದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ ನಾನು ವಿರಮಿಸುತ್ತೇನೆ.

*****

ಸಾತ್ವಿಕ ಪ್ರೀತಿ

- ಪು. ತಿ. ನರಸಿಂಹಾಚಾರ್

ಪ್ರಿಯ ಮಿತ್ರರಾದ ಸನ್ಮಾನ್ಯ ಶ್ರೀಮಾನ್ ಡಾಃ ದೇಜಗೌ ಅವರಿಗೆ ಬೆಂಗಳೂರಿನಲ್ಲಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಬೇಕೆಂದು ಎಂ. ಹೆಚ್. ಕೃಷ್ಣಯ್ಯ, ಶ್ರೀ ಹೆಚ್. ಎಂ. ಬೋರಯ್ಯ, ಶ್ರೀ ನಾ. ಗೀತಾಚಾರ್ಯ ಮತ್ತು ಶ್ರೀ ಆಳ್ಲ ಚಿರಂಜೀವಿ ಮೊದಲಾದ ಅವರ ಅಭಿಮಾನಿಗಳು ಒಂದು ಸಭೆಯನ್ನು ಏರ್ಪಡಿಸಿದ್ದರು. ಆದಕ್ಕೆ ನಾನು ಹೋಗಿದ್ದೆ. ಅಲ್ಲಿ ಸೇರಿದವರೆಲ್ಲ ನಾಡಿನ ಶ್ರೇಷ್ಠ ವಿದ್ವಾಂಸರು. ಆ ಸಮಿತಿಯನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ಆ ಸಭೆಯಲ್ಲಿ ನಾನು ಈ ಸನ್ಮಾನ ಸಮಿತಿಯ ಗೌರವಾಧ್ಯಕ್ಷನಾಗಿರಬೇಕೆಂದು ಮತ್ತು ಡಾಃ ಸಿದ್ಧಯ್ಯಪುರಾಣಿಕ ಅವರು ಕಾರ್ಯಾಧ್ಯಕ್ಷರಾಗಿರಬೇಕೆಂದು ಸಮಿತಿಯವರು ಅಭಿಪ್ರಾಯಪಟ್ಟರು. ಡಾಃ ಸಿದ್ದಯ್ಯ ಪುರಾಣಿಕರು ಕಾರಾಧ್ಯಕ್ಷರಾಗಿರಲು ಒಪ್ಪಿದ್ದರಿಂದ ನಾನು ನಿರಾತಂಕವಾಗಿ ಹೆಸರಿಗೆ ಮಾತ್ರ ಸಮಿತಿಯಲ್ಲಿರಲು ಬಹು ಸಂತೋಷದಿಂದ ಒಪ್ಪಿಕೊಂಡೆ. ಏಕೆಂದರೆ ಕಣ್ಣು, ಕಿವಿ ಮೊದಲಾಗಿ ನನ್ನ ಮೈ ಶಿಥಿಲಗೊಳ್ಳುತ್ತಿದೆ. ಓದುವುದು, ಬರೆಯುವುದು ಹಳೆಯ ಮಾತಾಗಿಬಿಟ್ಟಿದೆ. ಆದರೆ ಪ್ರೊ: ಜವರೇಗೌಡರ ಮೇಲಿನ ಪ್ರೀತಿ ನನ್ನನ್ನು ಇದರಲ್ಲಿ ಭಾಗವಹಿಸಲು ಪ್ರೇರೇಪಿಸಿದೆ. ಅವರು ಮತ್ತು ಅವರ ಧರ್ಮಪತ್ನಿ ಸಾವಿತ್ರಮ್ಮನವರು ನನ್ನ ಮೇಲೂ ನನ್ನ ಧರ್ಮಪತ್ನಿ ಮತ್ತು ಮಕ್ಕಳ ಮೇಲೂ ಅಸಾಧಾರಣವಾದ ಪ್ರೀತಿಯನ್ನು ತೋರಿಸುತ್ತಿದ್ದಾರೆ. ನಾನು ನಿವೃತ್ತನಾದ ಮೇಲೆ ಸ್ವಲ್ಪ ಕಷ್ಟದ ದೆಸೆಯಲ್ಲಿದ್ದಾಗ ಅನಿರೀಕ್ಷಿತವಾಗಿ ನನ್ನ ಸಹಾಯಕ್ಕೆ ಮೈಸೂರಿನ ಜವರೇಗೌಡರೇ ಮೊದಲಾದ ಮಿತ್ರರು ನಾನು ಕೋರದೆಯೇ ಬಂದು ನನಗೆ ನೆರವನ್ನು ಕೊಟ್ಟದ್ದನ್ನು ನಾನು ಮರೆಯುವಂತಿಲ್ಲ. ಇದು ಅವರ ದೊಡ್ಡತನವನ್ನು ತೋರಿಸುತ್ತದೆ. ಈ ಸ್ನೇಹ ಹಸ್ತವನ್ನೂ, ನೆರವನ್ನೂ ನೀಡಿದ್ದರೂ ನನ್ನನ್ನು ತುಂಬ ಗೌರವದಿಂದಲೂ ಅಭಿಮಾನದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಇದು ಒಂದು ಆಶ್ಚರ್ಯಕರವಾದ ಸಂಗತಿ. ನನ್ನಿಂದ ಯಾವ ಪ್ರತ್ಯುಪಕಾರವನ್ನು ಬಯಸದೆ ಹೀಗೆ ಅತ್ಯಂತ ಸಾತ್ವಿಕವಾದ ಪ್ರೀತಿಯನ್ನು ತೋರಿಸಿರುವುದು ನನ್ನ ಮನಸ್ಸಿಗೆ ತುಂಬ ಸಂತೋಷವನ್ನೂ ಪ್ರಿಯವನ್ನೂ ಉಂಟುಮಾಡಿದೆ. ಡಾಃ ಜವರೇಗೌಡರು ದೊಡ್ಡವರು, ದೊಡ್ಡ ವಿದ್ವಾಂಸರು. ಅವರ ವೈದುಷ್ಯ ಇನ್ನೂ ಹೆಚ್ಚು ಪ್ರಚಾರವಿಲ್ಲದೆ ಗೂಢವಾಗೇ ಉಳಿದಿದೆ. ಅವರು ಡಾಃ ಕುವೆಂಪು ಅವರ ಬಲಗೈಯಾಗಿ ನಿಂತು ಮೈಸೂರು ವಿಶ್ವವಿದ್ಯಾನಿಲಯದ ನೆಲೆಯಾದ ಮಾನಸಗಂಗೋತ್ರಿಯಲ್ಲಿ ಕನ್ನಡ ಕಣ್ಗೆ ಅಡ್ಡವಾಗಿ ವಿಜೃಂಭಿಸುವಂತೆ ಮಾಡಿದರು.ಅನೇಕ ಸ್ನಾತಕೋತ್ತರ ವಿಭಾಗಗಳನ್ನು ತೆರೆದರು. ತಜ್ಞರನ್ನು ಆರಿಸಿ ಅದಕ್ಕೆ ನೇಮಿಸಿದರು. ಅಲ್ಲಿನ ಜಾನಪದ ವಿಭಾಗ ಪ್ರೊ : ಜವರೇಗೌಡರದೇ ಕೂಸು. ಅಲ್ಲದೆ ಬಿ. ಆರ್. ಪ್ರಾಜೆಕ್ಟ್‌ನ

ಸ್ನಾತಕೋತ್ತರ ಕೇಂದ್ರಕ್ಕೆ ಅವರೇ ಕಾರಣರು. ಈಗ ಅದು ಕುವೆಂಪು ವಿಶ್ವವಿದ್ಯಾನಿಲಯವಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. ಮಾನಸಗಂಗೋತ್ರಿ ಆವರಣದ ಸುತ್ತಲೂ ತೋಟಗಳಿಂದ ತುಂಬಿರುವುದಕ್ಕೆ ಇವರೇ ಕಾರಣರು. ದೂರದೃಷ್ಟಿಯುಳ್ಳ ದಕ್ಷ ಆಡಳಿತಗಾರರೂ, ಕನ್ನಡದ ವಿಷಯದಲ್ಲಿ ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುವವರೂ ಆದ ಡಾ : ದೇ. ಜವರೇಗೌಡರನ್ನು ನಾನು ಮರೆತಿಲ್ಲ; ಮರೆಯಲಾಗದು. ಅವರು ಅನೇಕ ಸತ್ಕಾರ್ಯಗಳಿಗೆ ಪಾತ್ರರಾಗಿದ್ದಾರೆ.

ಅವರನ್ನು ಬೆಂಗಳೂರಿನಲ್ಲಿ ಸತ್ಕರಿಸಬೇಕೆಂಬ ಈ ಪ್ರಯತ್ನವೂ ಕೂಡ ನಾಡಿನ ಉತ್ಸಾಹಸಂಪನ್ನರಾದ ಕನ್ನಡ ಪ್ರೇಮಿಗಳಿಂದ ನೆರವೇರಲಿದೆ. ಪ್ರೊ: ಜವರೇಗೌಡರು ಮತ್ತು ಅವರ ಕುಟುಂಬದ ವಿಚಾರದಲ್ಲಿ ನಾನು ಹಿಂದೆ ಪ್ರಕಟವಾಗಿರುವ ಅವರ ಅಭಿನಂದನ ಗ್ರಂಥದಲ್ಲಿ ವಿವರವಾದ ಲೇಖನವನ್ನು ಬರೆದಿದ್ದೇನೆ. ಈಗ ಪ್ರಾಯಶಃ ಅನಕ್ಷರಸ್ಥಾವಸ್ಥೆಗೆ ಸಂದಿರುವ ನಾನು ನನ್ನ ಈ ಎರಡು ಮಾತುಗಳಿಂದ ಹಾರ್ದಿಕವಾಗಿ, ಬಹು ಸಂತೋಷದಿಂದ ಮತ್ತು ಅಭಿಮಾನದಿಂದಲೂ ಕೂಡ ಅವರಿಗೆ ನನ್ನ ಅಭಿವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅವರಿಗೆ ದೇವರು ಆಯುರಾರೋಗ್ಯಭಾಗ್ಯಗಳನ್ನು ಕರುಣಿಸಿ ಅವರ ಕೀರ್ತಿ ನಾಡಿನಾದ್ಯಂತ ನೆಲೆಗೊಳಿಸಲಿ ಎಂದು ಹಾರೈಸುತ್ತೇನೆ.

* * * * *

ವಿದ್ಯಾರ್ಥಿಪ್ರಿಯ

- ಎಚ್. ಜೆ. ಲಕ್ಕಪ್ಪಗೌಡ.

-1-

"ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ. ಕನ್ನಡಕ್ಕಾಗಿ ಕಿರುಬೆರಳು ಎತ್ತಿದರೂ ಸಾಕು ಅದು ಗೋವರ್ಧನ ಗಿರಿಧಾರಿಯಾಗುತ್ತದೆ" ರಾಷ್ಟ್ರಕವಿ ಕುವೆಂಪು ಅವರ ಕನ್ನಡ ದೀಕ್ಷೆಯ ಈ ಸ್ಫೂರ್ತಿ ಮಂತ್ರದ ಸಾಕಾರಮೂರ್ತಿ ಪ್ರೊ. ದೇಜಗೌ. ಕನ್ನಡಿಗನ ನರ-ನಾಡಿಗಳಲ್ಲಿ ಕನ್ನಡತನದ, ಕನ್ನಡಾಭಿಮಾನದ, ಕನ್ನಡ ಪ್ರೇಮದ ಮಿಂಚು ಹೊಳೆಯನ್ನುಕ್ಕಿಸುವ ಈ ಸಾಲುಗಳು ತಮ್ಮ ಸಂಪೂರ್ಣ ಸಾರ್ಥಕತೆಯನ್ನು ಕಂಡುಕೊಂಡಿರುವುದು ಕುವೆಂಪು ಅವರ ಆತ್ಮಶಿಷ್ಯರಾದ ದೇಜಗೌ ಅವರಲ್ಲಿ. ದೇಜಗೌ ಸಾಮಾನ್ಯ ಹಳ್ಳಿಯಲ್ಲಿ, ಬಡ ಕುಟುಂಬದಲ್ಲಿ, ಅನಕ್ಷರಸ್ಥ ತಂದೆ ತಾಯಿಗಳ ಕಷ್ಟ-ಕಾರ್ಪಣ್ಯಗಳ ಒಡಲಲ್ಲಿ ನಮ್ಮೆಲ್ಲರಂತೆ ಅವತರಿಸಿದರು. ಹಳ್ಳಿಯ ಮುಗ್ಧ, ಅಶಿಕ್ಷಿತ, ಅಮಾಯಕ ವಾತಾವರಣವನ್ನೇ ಉಸಿರಾಗಿ ಪಡೆದ ದೇಜಗೌ ತಮ್ಮ ಬದುಕಿನಲ್ಲಿ ಕ್ರಮಿಸಿದ ಹಾದಿ ಭಾರತೀಯ ಗ್ರಾಮೀಣ ಯುವಕನೊಬ್ಬನ ಸಾಹಸ, ಸ್ವಪ್ರಯತ್ನಶೀಲತೆ, ಸ್ವಪ್ರತಿಭೆ, ಸ್ವಾಭಿಮಾನ, ಕಷ್ಟ ಸಹಿಷ್ಣುತೆಗಳ ಕತ್ತಲು-ಬೆಳಕುಗಳ ಸಾಹಸ ಪಥವಾಗಿದೆ. ಈ ಪಥದಲ್ಲಿ ಅಸಂಖ್ಯ ಹಿತಾಹಿತಗಳ ಅನುಭವಗಳ ಅಗ್ನಿಕುಂಡದಲ್ಲಿ ಮಿಂದೆದ್ದ ಈ ವ್ಯಕ್ತಿ ತಾನು ಲೌಕಿಕವಾಗಿ, ಸಾಹಿತ್ಯಿಕವಾಗಿ ಮೇಲೇರಿದಂತೆಲ್ಲಾ ಕಣ್ಣುಗಳನ್ನು ಮತ್ತು ಕೈಗಳನ್ನು ಮೇಲಕ್ಕೆ ಮಾತ್ರ ಚಾಚದೆ ಕೆಳಕ್ಕೂ ಚಾಚಿ ತನ್ನಂತೆ ನೊಂದುಬೆಂದವರನ್ನು, ಅವಕಾಶ ವಂಚಿತರನ್ನು, ಸಂಕೋಚ-ಕೀಳರಿಮೆಗಳ ಕೂಪದಲ್ಲಿ ಹೊರಳುವವರನ್ನು, ದಾರಿಗಾಣದೆ ತೊಳಲುತ್ತಿರುವವರನ್ನು, ಕಣ್ಣೆಟಕಿಸಿ ನೋಡಿ, ಕೈನೀಡಿ ಮೇಲೆತ್ತಿಕೊಂಡಿದ್ದಾರೆ; ಅವರನ್ನು ತನಗಿಂತಲೂ ಮಿಗಿಲಾಗಿ ರೂಪುಗೊಳಿಸಲು ವಿಶುದ್ಧಾಂತಃಕರಣದಿಂದ ಶ್ರಮಿಸಿದ್ದಾರೆ ಮತ್ತು ಶ್ರಮಿಸುತ್ತಿದ್ದಾರೆ ಕೂಡ. ಇಂತಹ ಸಾಧನಶೀಲ ವ್ಯಕ್ತಿತ್ವದ ಹತ್ತಾರು ಮುಖಗಳನ್ನು ಅವರ ಹಿರಿಯರು, ಗುರುಗಳು, ಶಿಷ್ಯರು, ಮಿತ್ರರು, ಬಂಧುಗಳು ಹಲವು ರೀತಿಯಲ್ಲಿ ಅನಾವರಣಗೊಳಿಸಿದ್ದಾರೆ. ಈ ಎಲ್ಲಾ ಅನಾವರಣಗಳಿಗೂ ಮೀರಿದ ವಿಸ್ತೃತವಾದ, ವೈವಿಧ್ಯಮಯವಾದ ವ್ಯಕ್ತಿತ್ವ ದೇಜಗೌ ಅವರದು. ಅವರ ಶಿಷ್ಯವಾತ್ಸಲ್ಯದ ಅಮೃತವಾಹಿನಿಯಲ್ಲಿ ಮಿಂದಿರುವ ನನಗೆ ಅವರ ಈ ವಾತ್ಸಲ್ಯದ ಹಲವು ಕ್ಷಣಗಳನ್ನು ಸ್ಮರಿಸಿಕೊಳ್ಳುವುದು ಅಪಾರ ಆನಂದದ ಮತ್ತು ಜೀವನಸಾರ್ಥಕ್ಯದ ಸಂಗತಿಯಾಗಿದೆ.

-2-

ಕನ್ನಡ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ಕಾರ್ಯದರ್ಶಿಗಳಾಗಿ, ಪರೀಕ್ಷಾಧಿಕಾರಿಗಳಾಗಿ, ಕುಲಪತಿಗಳಾಗಿ, ಕನ್ನಡದ ಸೇನಾನಿಯಾಗಿ 80ಕ್ಕೂ ಹೆಚ್ಚು ಸಾಹಿತ್ಯ

ಕೃತಿಗಳ ಕರ್ತೃಗಳಾಗಿ, ಸಾಹಿತಿ ಮಿತ್ರರಾಗಿ, ಅಸಾಮಾನ್ಯ ಸಂಘಟಕರಾಗಿ, ಹಲವು ಹತ್ತು ಸಂಸ್ಥೆಗಳ ಕರ್ಣಧಾರರಾಗಿ ಹಲವಾರು ವ್ಯಕ್ತಿಗಳ ಸುಸ್ಥಿರ ಜೀವನದ ರೂವಾರಿಗಳಾಗಿ ದೇಜಗೌ ಸಾಧನೆಗಳು ಕನ್ನಡ ಲೋಕದಲ್ಲಿ ಚಿರಪರಿಚಿತ. 77 ರ ಹೊಸ್ತಲಲ್ಲಿರುವ ದೇಜಗೌ ತಮ್ಮ ಸನಿಹಕ್ಕೆ ಬಂದವರ ಅಂತರಂಗದ ಆಳಕ್ಕಿಳಿದು ತಮ್ಮ ಸ್ನೇಹ, ಪ್ರೀತಿ, ವಾತ್ಸಲ್ಯಗಳ ಸುಗಂಧವನ್ನು ಸಿಂಪಡಿಸುವ ಅಪೂರ್ವ ವ್ಯಕ್ತಿತ್ವವನ್ನು ಇಂದಿಗೂ ಉಳಿಸಿಕೊಂಡಿದ್ದಾರೆ.

ಕನ್ನಡ ಶಿಕ್ಷಣ ಮತ್ತು ಸಾಹಿತ್ಯ ಲೋಕದಲ್ಲಿ ಮಹಾ ಮಹಾ ವಿದ್ವಾಂಸರು ಬಂದು ಹೋಗಿರಬಹುದು. ಆದರೆ ತಮ್ಮ ಶಿಷ್ಯರ ಗುಣಾವಗುಣಗಳನ್ನು, ದೌರ್ಬಲ್ಯಗಳನ್ನು, ಕಷ್ಟ-ಸುಖಗಳನ್ನು ತತ್‌ಕ್ಷಣವೇ ಅರಿತು ಅವರ ನೆರವಿಗೆ ಧಾವಿಸಿ ಅವರು ಅರಿತಂತೆ ಮತ್ತು ಅರಿಯದಂತೆ ಹತ್ತಾರು ರೀತಿಯ ಸಹಾಯವನ್ನುನೀಡಿ ಅವರ ವ್ಯಕ್ತಿತ್ವ ಹಲವು ಮುಖಗಳಲ್ಲಿ ವಿಜೃಂಭಿಸಲು ಪ್ರಕಟಾಪ್ರಕಟವಾಗಿ ಜೀವಸತ್ವದಂತೆ ಕೆಲಸ ಮಾಡಿದವರು ಮತ್ತು ಮಾಡುತ್ತಿರುವವರು ದೇಜಗೌ. ಇವರಿಂದ ಹಲವು ರೀತಿಗಳಿಂದ ಉಪಕೃತರಾದ ನೂರಾರು ಜನ ಇಂದು ಕನ್ನಡನಾಡಿನ ವಿವಿಧ ಕ್ಷೇತ್ರಗಳಲ್ಲಿ ಗುರುಸ್ಮರಣೆಯ ತವನಿಧಿಯನ್ನು ಹೊತ್ತು ಕಾಯಕ ನಿರತರಾಗಿದ್ದಾರೆ.

1958 ರಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ. ಎ. ಗೆ ದಾಖಲಾದ ನಾನು ನನ್ನ ಬಹು ವರ್ಷಗಳ ಕನಸಾಗಿದ್ದ ಕನ್ನಡ ಸಾಹಿತ್ಯವನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದೆ. ಎಳವೆಯಲ್ಲಿಯೇ ಕುವೆಂಪುರವರ ಕೃತಿಗಳಿಗೆ ಮಾರುಹೋಗಿ, ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನಾನು ಸಾಹಿತ್ಯದ ವಿದ್ಯಾರ್ಥಿಯಾಗಿ ಪರಿವರ್ತಿತನಾದೆ. ಕನ್ನಡ ಸಾಹಿತ್ಯದ ಮಹಾ ಮಹಾ ದಿಗ್ಗಜಗಳು ಮೈಸೂರಿನಲ್ಲಿ ನಡೆದಾಡುತ್ತಿದ್ದ ಕಾಲ ಅದು. ಕುವೆಂಪು ಅಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಲೋಕವನ್ನು ಬಲ್ಲವರೆಲ್ಲರಿಗೂ ಆರಾಧ್ಯದೈವವೂ ಚುಂಬಕ ಮಂತ್ರವೂ ಆಕರ್ಷಣೆಯ ಉಜ್ವಲ ಕೇಂದ್ರವೂ ಆಗಿದ್ದರು.

ಪ್ರೊ. ಡಿ. ಎಲ್. ನರಸಿಂಹಾಚಾರ್, ಪ್ರೊ. ತೀ. ನಂ. ಶ್ರೀ, ಪ್ರೊ. ಎಸ್. ವಿ. ಪರಮೇಶ್ವರಭಟ್ಟ, ಪ್ರೊ. ಜಿ. ಎಸ್. ಶಿವರುದ್ರಪ್ಪ, ಪ್ರೊ. ಕೆ. ವೆಂಕಟರಾಮಪ್ಪ, ಪ್ರೊ. ಎಸ್. ವಿ. ರಂಗಣ್ಣ-ಮುಂತಾದ ಸಾಹಿತ್ಯ ಜಗತ್ತಿನ ಹಸಿರು ಹೆಸರುಗಳು ನಮ್ಮ ಕಣ್ ಮನಸ್ಸನ್ನು ಕುಣಿಸುತ್ತಿದ್ದವು. ಅಂತಹ ಹೆಸರುಗಳ ನಡುವೆ ಪ್ರೊ. ದೇಜಗೌ ಅವರ ಹೆಸರು ಒಂದಾಗಿತ್ತು. ಅಂದು ಅವರು ಪರೀಕ್ಷಾ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರ 'ಬೆಂಗಳೂರು ಕೆಂಪೇಗೌಡ' ಕೃತಿಯನ್ನು ಆಗಲೇ ಓದಿದ್ದು, ಅವರ ಗಂಡು ಶೈಲಿ, ಮೈನವಿರೇಳಿಸುವ ನಿರೂಪಣೆ ಕಣ್ಣಿಗೆ ಕಟ್ಟುವ, ಮನಸ್ಸಿನಲ್ಲಿ ಎದ್ದು ನಿಲ್ಲುವ ಪಾತ್ರ ಚಿತ್ರಣ-ಇವು ನನ್ನ ಆಗಿನ ಭಾವುಕ ಮನಸ್ಸಿಗೆ ಹೆಚ್ಚು ಹಿಡಿಸಿದ್ದವು. ಕನ್ನಡ ಸಾಹಿತ್ಯದ ವೇದಿಕೆಗಳಲ್ಲಿ ಬಹುಮಟ್ಟಿಗೆ ಬ್ರಾಹ್ಮಣರೇ ತುಂಬಿಕೊಂಡಿದ್ದ ಮತ್ತು ಅವರಂತೆ ಸಾಹಿತ್ಯ ರಚನೆ ಮಾಡಲು ಉಳಿದವರಿಗೆ ಸಾಧ್ಯವಾಗದೆಂಬ ಭಾವನೆ ಇದ್ದ ಕಾಲದಲ್ಲಿ ಕುವೆಂಪು ಅವರೊಬ್ಬರು ದೇವದೂತರಾಗಿ ನಮಗೆ ಕಂಡಿದ್ದರು. ಆ ಹೆಸರಿನ ಜೊತೆಗೇ ಕೇಳಿಬಂದ ಈ ಗೌಡ ಯಾರು? ಎಂಬ ಕುತೂಹಲ ನನ್ನಲ್ಲಿ ಮೂಡಿತ್ತು. ಅವರ ಕುವೆಂಪು ಮತ್ತು

ಕುವೆಂಪು ಸಾಹಿತ್ಯ ಪ್ರೇಮ, ಸಾಹಿತಿಗಳಿಗೆ ಅವರು ನೆರವಾಗುತ್ತಿದ ರೀತಿ, ಕನ್ನಡದ ಸ್ಥಾನಮಾನಗಳನ್ನು ಎತ್ತರಿಸಲು ಅವರು ಛಲ ಬಿಡದೆ ಪ್ರಯತ್ನಿಸುತ್ತಿದ್ದ ಬಗೆ ಇವುಗಳೆಲ್ಲವನ್ನು ಕೇಳಿ ತಿಳಿದಿದ್ದೆನಾದರೂ, ನನ್ನ ಸಹಪಾಠಿಗಳನೇಕರು ಅವರ ಹೆಸರಿನ ನೆನಪಿನಲ್ಲಿ ಸಾಹಿತ್ಯಾಭ್ಯಾಸವನ್ನು ಮಾಡುತ್ತಿದುದನ್ನು ಬಲ್ಲೆನಾದರೂ, ಅವರ ನೇರ ಸಂಪರ್ಕ ನನಗಾಗಲಿಲ್ಲ. 1960 ರಲ್ಲಿ ಕನ್ನಡ ಎಂ. ಎ. ತರಗತಿಗೆ ಸೇರಿಕೊಂಡೆ. ಆ ವೇಳೆಗೆ ಕನ್ನಡ ಉಪಪ್ರಾಧ್ಯಾಪಕರಾಗಿ ದೇಜಗೌ ಅವರು ಮಾನಸಗಂಗೋತ್ರಿಗೆ ಕಾಲಿರಿಸಿದರು. ಪ್ರಥಮ ಎಂ. ಎ. ತರಗತಿಯಲ್ಲಿ ಶಬ್ದಮಣಿದರ್ಪಣವನ್ನು ತೆಗೆದುಕೊಳ್ಳುತ್ತಾರೆಂದು ತಿಳಿದು ನಾನು ಕುತೂಹಲದ ಕಣ್ಣಿನಿಂದ ನಿರೀಕ್ಷಿಸುತ್ತಿದ್ದೆ.

ಪ್ಯಾಂಟ್, ಅರ್ಧ ತೋಳಿನ ಬುಶ್ ಷರ್ಟ್ ಅನ್ನು ತೊಟ್ಟು, ನೀಟಾಗಿ ತಲೆಯನ್ನು ಬಾಚಿಕೊಂಡಿದ್ದ ಅತ್ಯಂತ ಸರಳ ವ್ಯಕ್ತಿಯೊಬ್ಬರು ಮಂದಗಮನದಿಂದ ನಮ್ಮ ತರಗತಿಯನ್ನು ಪ್ರವೇಶಿಸಿದರು. ಆ ವೇಳೆಗಾಗಲೆ ದೇಜಗೌ ಅವರು ಕನ್ನಡದ ಹರಿಕಾರರಾಗಿ, ಕನ್ನಡ ಪ್ರಚಾರದ ಮುಂಚೂಣಿಯ ನಾಯಕರಾಗಿ ಮತ್ತು ಕನ್ನಡ ವಿರೋಧಿಗಳಿಗೆ ದುಸ್ವಪ್ನರಾಗಿ ಕನ್ನಡನಾಡಿನಲ್ಲಿ ಸಾಕಷ್ಟು ಪರಿಚಿತರಾಗಿದ್ದರು. ಕುವೆಂಪು ಅವರ ಅಚ್ಚುಮೆಚ್ಚಿನ ಶಿಷ್ಯರಾಗಿ, ದಕ್ಷ ಪರೀಕ್ಷಾ ಅಧಿಕಾರಿಗಳಾಗಿ ಮತ್ತು ಪ್ರಸಾರಾಂಗದ ಕ್ರಿಯಾಶೀಲ ಸಂಚಾಲಕರಾಗಿ ಹೆಸರು ಮಾಡಿದ್ದ ವ್ಯಕ್ತಿ ಇವರೆಯೆ ? ಎಂದು ನಾನು ಅಚ್ಚರಿಯಿಂದ ನೋಡಿದೆ. ತರಗತಿಯ ಎಲ್ಲರನ್ನೂ ಪರಿಚಯ ಮಾಡಿಕೊಂಡ ದೇಜಗೌ ನಮ್ಮ ಓದಿನ ಬಗ್ಗೆ, ಎಂ. ಎ. ತರಗತಿಗಳ ವೈಶಿಷ್ಟ್ಯದ ಬಗ್ಗೆ ಕೆಲವು ನಿಮಿಷಗಳ ಕಾಲ ಅವರು ತಿಳುವಳಿಕೆ ನೀಡಿದರು. ಅನಂತರ ಕೇಶಿರಾಜನ ಬಗ್ಗೆ ವಿವರಗಳನ್ನು ನೀಡಿದರು. ಅವರ ಮಾತುಗಳಲ್ಲಿ ಗ್ರಾಮೀಣ ಸರಳತನವಿತ್ತು; ಸೌಜನ್ಯದ ಮೆಲುದನಿಯಿತ್ತು; ನಿರಹಂಕಾರದ ಮತ್ತು ಗತ್ತು ದರ್ಪಗಳಿಲ್ಲದ ಸಹಜ ಆತ್ಮೀಯತೆ ಇತ್ತು. ನದಿಯೊಂದು ಮೆಲ್ಲ ಮೆಲ್ಲಗೆ ಸರಿದಂತೆ, ನಮ್ಮ ಸ್ನೇಹಿತರೊಬ್ಬರು ಆತ್ಮೀಯವಾಗಿ ನಮ್ಮೊಡನೆ ಮಾತನಾಡಿದಂತೆ ಅವರ ಪಾಠಗಾರಿಕೆ ಇತ್ತು. ಆದರೆ ಆ ಸರಳ, ಮೃದು ಬೋಧನೆಯಲ್ಲಿ ಖಚಿತತೆ ಇತ್ತು. ಅಭ್ಯಾಸದ ಸಮತೋಲನವಿತ್ತು ಮತ್ತು ವಿಷಯದ ಬಗ್ಗೆ ಪೂರ್ಣ ಹಿಡಿತವಿತ್ತು. ವ್ಯಾಕರಣವೆಂದರೆ ತಲೆನೋವು ಬರಿಸುವ ವಿಷಯವೆಂಬುದು ಬಹುಜನರ ಅನಿಸಿಕೆ. ಇಂತಹ ವಿಷಯವನ್ನು ಹೃದಯಕ್ಕೆ ಹತ್ತಿರವಾಗುವಂತೆ, ಯಾವ ಕಾಠಿಣ್ಯಕ್ಕೂ, ಪಾಂಡಿತ್ಯ ಭಾರಕ್ಕೂ ಎಡೆಕೊಡದಂತೆ ಸುಲಭಗಮ್ಯವಾಗಿ ದೇಜಗೌ ಕೇಶಿರಾಜನನ್ನು ನಮ್ಮ ಮನಸ್ಸಿನೊಳಕ್ಕೆ ತಂದರು. ಪಾಠಗಳು ಮುಂದುವರೆದಂತೆಲ್ಲಾ ವಿಷಯವನ್ನು ಪುಷ್ಟೀಕರಿಸುವ, ಸ್ಪಷ್ಟಗೊಳಿಸುವ ವಿಪುಲವಾದ ಉದಾಹರಣೆಗಳೊಂದಿಗೆ ಮತ್ತು ನಾಗವರ್ಮ, ಪಾಣಿನಿ ಮುಂತಾದವರ ವಿಷಯವನ್ನು ಮಧ್ಯೆ ಮಧ್ಯೆ ಉದಾಹರಿಸುತ್ತಾ ನಮ್ಮನ್ನು ವ್ಯಾಕರಣವು ದುರವಗಾಹ್ಯ ಎಂಬ ಭಾವನೆಯಿಂದ ದೂರ ಮಾಡಿದರು. ತರಗತಿಗಳನ್ನು ಬಿಟ್ಟ ಕೂಡಲೇ ಅವರ ಕೊಠಡಿಯಲ್ಲಿ ಹತ್ತಾರು ಜನ ಮಿತ್ರರು ಅವರಿಗಾಗಿ ಕಾದಿರುತ್ತಿದ್ದರು; ವಿದ್ಯಾರ್ಥಿಗಳು ಸುತ್ತುವರಿಯುತ್ತಿದ್ದರು. ಅವರೆಲ್ಲರ ಕಷ್ಟ-ಸುಖಗಳನ್ನು ಆಲಿಸುತ್ತಾ ಅವರಿಗವರಿಗೆ ತಕ್ಕಂತೆ ಸಲಹೆ ಸೂಚನೆಗಳನ್ನು ನೀಡುತ್ತಾ ಮೆಲುದನಿ ಮತ್ತು ಮಂದಹಾಸದೊಡನೆ ದೇಜಗೌ ಅವರನ್ನುಸೆಳೆಯುತ್ತಿದ್ದ ರೀತಿ ಅಪೂರ್ವವಾಗಿತ್ತು.

ಎಂತಹ ಅಂಜುಬುರುಕು, ಅಳ್ಳೆದೆಯ ಮುಗ್ಧ ವಿದ್ಯಾರ್ಥಿಗಳು ಅವರ ಸರಳತೆಗೆ, ಸ್ನೇಹಪರತೆಗೆ ಮಾರು ಹೋಗಿ ಅವರತ್ತ ಸೆಳೆಯಲ್ಪಡುತ್ತಿದ್ದರು. ಅಂದಿನ ದಿನಗಳಲ್ಲಿ ಮಾನಸಗಂಗೋತ್ರಿಯ ಅರಮನೆ ನೂರಾರು ಕೋತಿಗಳ, ಹೆಗ್ಗಣಗಳ, ಹಾವುಗಳ ನೆಲೆಬೀಡಾಗಿತ್ತು. ಅದರ ಒಂದು ಭಾಗದಲ್ಲಿ ವಿದ್ಯಾರ್ಥಿನಿಲಯವನ್ನು ತೆರೆಯಲಾಗಿತ್ತು. ದೇಜಗೌ ಬೆಳಿಗ್ಗೆ ಅಥವಾ ಸಂಜೆ ಅಲ್ಲಿಗೆ ಬಂದು, ವಿದ್ಯಾರ್ಥಿಗಳ ಕ್ಷೇಮ ಸಮಾಚಾರಗಳನ್ನು ವಿಚಾರಿಸಿ, ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ದೂರದ ಊರುಗಳಿಂದ ಬಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಹತ್ತಿರದ ಬಂಧುವೆಂಬಂತೆ ವರ್ತಿಸುತ್ತಿದ್ದರು. ತಮ್ಮ ಮನಸ್ಸಿಗೆ ಒಗ್ಗದ ಘಟನೆಗಳು, ಪ್ರಕರಣಗಳು ವಿದ್ಯಾರ್ಥಿಗಳಿಂದ ನಡೆದವು ಎಂದರೆ ಅವರ ಕುಸುಮ ಕೋಮಲ ಆತ್ಮೀಯ ಧ್ವನಿ ರೋಷ ಕರ್ಕಶವಾಗಿ ಖಡ್ಗದಂತೆ ಹರಿತವಾಗುತ್ತಿತ್ತು. ಮುಖ ಮೂತಿ ನೋಡದೆ ತಮ್ಮ ಮನಸ್ಸಿನಲ್ಲಿದ್ದುದನ್ನು ಅವರು ಜಾಡಿಸಿ ಬಿಡುತ್ತಿದ್ದರು. ಆದರೆ ಅದೆಲ್ಲಾ ಕೆಲವು ಕ್ಷಣ ಮಾತ್ರ. ಸಿಡಿಲು ಗುಡುಗುಗಳ ನಂತರ ಹದವಾದ ಮಳೆ ಬೀಳುವಂತೆ ದೇಜಗೌ ಮತ್ತೆ ತಣ್ಣಗಾಗಿ ಆತ್ಮೀಯ, ಅಂತಃಕರಣದ ವಾಗ್ಧಾರೆಯನ್ನು ಹರಿಸಿ ಬೆದರಿದ ಮನಸ್ಸನ್ನು ತೋಯಿಸುತ್ತಿದ್ದರು. ಉಪಪ್ರಾಧ್ಯಾಪಕರಾಗಿ, ಲೇಖಕರಾಗಿ, ಆಡಳಿತಗಾರರಾಗಿ, ಖ್ಯಾತರಾಗಿದ್ದ ಅವರು ಹಿರಿಯರನ್ನು, ಗುರುಗಳನ್ನು ಕಂಡರೆ ಅತ್ಯಂತ ವಿನೀತರಾಗಿ, ಸ್ನೇಹಿತರನ್ನು ಕಂಡರೆ ಸ್ನೇಹದ ಪ್ರತಿಮೂರ್ತಿಯಾಗಿ ವರ್ತಿಸುತ್ತಿದ್ದರು. ಕನ್ನಡ ಲೋಕದ ದಿಗ್ಗಜಗಳಾಗಿದ್ದ ಪ್ರೊ. ತೀ. ನಂ. ಶ್ರೀಕಂಠಯ್ಯ, ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರು ದೇಜಗೌ ಗುರುಗಳು; ನನಗೂ ಗುರುಗಳು. ಅವರೊಡನೆ ದೇಜಗೌ ವರ್ತಿಸುತ್ತಿದ್ದ ರೀತಿ ಅತ್ಯಂತ ಆದರ್ಶಮಯವಾಗಿತ್ತು. ತಂದೆಯನ್ನು ಕಂಡರೆ ಮಕ್ಕಳು ಎಷ್ಟು ಪ್ರೀತಿ, ವಿಶ್ವಾಸ, ವಿನಯ, ವಿಧೇಯತೆಗಳಿಂದ ವರ್ತಿಸುತ್ತಾರೋ ಹಾಗೆಯೇ ದೇಜಗೌ ಅವರೆದುರು ತಲೆ ತಗ್ಗಿಸಿ ಪರಮಭಕ್ತಿಯಿಂದ ವರ್ತಿಸುತ್ತಿದ್ದರು. ಅವರೊಡನೆ ದೇಜಗೌ ಎಂದೂ ಕೂಡ ಗಟ್ಟಿಯಾಗಿ ಮಾತನಾಡಿದ್ದು ನನಗೆ ನೆನಪಿಲ್ಲ.

ಪಾಠ ಮಾಡುವುದಕ್ಕಾಗಿ ದೇಜಗೌ ಮಾಡಿಕೊಳ್ಳುತ್ತಿದ್ದ ಪೂರ್ವಸಿದ್ಧತೆ ಮತ್ತು ಅದರ ಫಲವಾಗಿ ತರಗತಿಗೆ ತರುತ್ತಿದ್ದ ಟಿಪ್ಪಣಿಗಳು ಅವರ ವೃತ್ತಿಶ್ರದ್ಧೆಯ ಸಂಶೋಧನಾಸಕ್ತಿಯ ದ್ಯೋತಕಗಳಾಗಿದ್ದವು. ಪಾಠ ಮಾಡಲು ಅವರು ಎಷ್ಟು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ಆ ಪಾಠಗಳನ್ನು ಕಲಿಯಲೆಂದು ಪರೀಕ್ಷೆಗಳಲ್ಲಿ ತೇರ್ಗಡೆಯಾಗಲೆಂದು ಬಂದ ವಿದ್ಯಾರ್ಥಿಗಳಾದ ನಾವು ಮತ್ತಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂಬ ಸೂಚನೆಯನ್ನು ನಮ್ಮಲ್ಲಿ ನೆಟ್ಟು ಬಿಡುತ್ತಿತ್ತು. ತಮ್ಮ ಬೋಧನಾ ಕಾರ್ಯದ ಮೂಲಕ ಅವರು ಧ್ವನಿಸುತ್ತಿದ್ದ ವಿದ್ವತ್ತು ಸುಲಭಸಾಧ್ಯವಾಗಿರಲಿಲ್ಲ. ಅವರ ಈ ವಿಧಾನ ನನ್ನ ಅಂತರಂಗದ ಕವಾಟವನ್ನು ತೆರೆಯಿತು. ಸತತ ಪರಿಶ್ರಮ, ಅನನ್ಯವಾದ ಶ್ರದ್ಧೆ, ನಿಶಿತವಾದ ಚಿಂತನೆ, ಅವಿರತ ಅಭ್ಯಾಸ- ಇವೇ ವಿದ್ವತ್ ಲೋಕದ ಅದೃಶ್ಯ ಸಂಪತ್ತನ್ನು ಅನಾವರಣಗೊಳಿಸುವ ಆಲಿಬಾಬಾ ಮಂತ್ರಗಳೆಂದು ಅವರು ತಮ್ಮ ಜೀವನ ವಿಧಾನದಲ್ಲಿ ನಮಗೆ ಪ್ರಕಟಪಡಿಸುತ್ತಿದ್ದರು. ಹಳ್ಳಿಯಿಂದ, ಅನಕ್ಷರಸ್ಥ ಕುಟುಂಬದಿಂದ ಬಂದ ಅವರಿಗೆ

ಸಾಹಿತ್ಯದ ಅಭ್ಯಾಸ, ಬರಹ ಮತ್ತು ಬೋಧನೆ ತಪಸ್ಸಿನಷ್ಟು ಗಂಭೀರವೂ ಪೂಜ್ಯವೂ ಆಗಿದ್ದವು. ಮೇಲ್ವರ್ಗದ, ವಿದ್ವತ್ತಿನ ಹಾಗೂ ಸುಶಿಕ್ಷಿತ ಕುಟುಂಬಗಳ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ತಮ್ಮ ಗುರಿ ಸಾಧನೆಗಾಗಿ ಪಡಬೇಕಾದ ಶ್ರಮಕ್ಕೂ ಅಕ್ಷರಸ್ಥ ಜ್ಞಾನವಂಚಿತ ಕೆಳವರ್ಗದ ಸಮಾಜದಿಂದ ಬಂದ ವಿದ್ಯಾರ್ಥಿಗಳು ಪಡಬೇಕಾದ ಶ್ರಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಅಂತರವನ್ನು ಕಡಿಮೆ ಮಾಡಲು ಆ ವಿದ್ಯಾರ್ಥಿಗಳಿಗಿಂತ ಹತ್ತು ಪಟ್ಟು ನೂರು ಪಟ್ಟು ಗ್ರಾಮೀಣ ವಿದ್ಯಾರ್ಥಿಗಳು ಕಠಿಣ ಅಭ್ಯಾಸದಲ್ಲಿ ಸತತ ನಿರತರಾಗಬೇಕೆಂಬ ಮಂತ್ರ ಅವರದಾಗಿತ್ತು.

ಶಿಕ್ಷಣದ ದಾರಿಯಲ್ಲಿ, ವ್ಯಕ್ತಿತ್ವದ ನಿರ್ಮಾಣದಲ್ಲಿ, ಚಾರಿತ್ರ್ಯ ಶಿಲ್ಪನೆಯಲ್ಲಿ, ಸಾಹಿತ್ಯ ರಚನಾ ಪಥದಲ್ಲಿ, ವೃತ್ತಿ ಗ್ರಹಣದ ಪ್ರಯತ್ನದಲ್ಲಿ, ವಾಕ್‌ರೂಪದಲ್ಲಿ, ಕ್ರಿಯಾರೂಪದಲ್ಲಿ, ಧನರೂಪದಲ್ಲಿ ಅವರಿಂದ ನೆರವು ಪಡೆದು ಸಮಾಜದಲ್ಲಿ ವಿಶಿಷ್ಟಸ್ಥಾನ ಗಳಿಸಿದ ಸಾವಿರಾರು ಜನ ವಿದ್ಯಾರ್ಥಿಗಳು ಕನ್ನಡ ನಾಡಿನ ಒಳ ಹೊರಗೆ ಇಂದು ಚೆಲ್ಲುವರಿದಿದ್ದಾರೆ. ಅವರೊಬ್ಬಬ್ಬರ ಮನದಲ್ಲೂ ದೇಜಗೌ ಅವರ ಕಟು ಮಧುರ ವ್ಯಕ್ತಿತ್ವದ ನೆನಪು ಸದಾ ಗರಿಬಿಚ್ಚಿ ಮೆರೆಯುತ್ತಿದೆ. ಅವರಿಂದ ಉಪಕೃತರಾದ ಎಷ್ಟೋ ಶಿಷ್ಯರು ಕೃತಘ್ನರಾಗಿ ಪರಿವರ್ತಿತರಾಗಿರುವುದೂ ಉಂಟು. ಕನ್ನಡವನ್ನು ಮುಖ್ಯ ವಿಷಯವನ್ನಾಗಿ ಆರಿಸಿಕೊಂಡು ಅಭ್ಯಾಸ ಮಾಡಿದ ವಿದ್ಯಾರ್ಥಿಗಳ ಬದುಕಿಗೆ ಒಂದು ಅರ್ಥವನ್ನೂ ಜೀವಂತಿಕೆಯನ್ನೂ ಗುರಿಯನ್ನೂ ತಂದುಕೊಟ್ಟು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅವರೆಲ್ಲರ ಬದುಕನ್ನು ಅರ್ಥಪೂರ್ಣವಾಗಿ ರೂಪಿಸಿದ ಅಸಾಧಾರಣ ಸರಳ ವ್ಯಕ್ತಿತ್ವ ದೇಜಗೌ ಅವರದು. ಅವರು ವಿದ್ಯಾರ್ಥಿಗಳೊಡನೆ ಇಟ್ಟುಕೊಂಡಿದ್ದ ಸಂಬಂಧದ ನೂರಾರು ಚಿತ್ರಗಳು ಚಿತ್ತದಲ್ಲಿ ರಿಂಗಣಿಸುತ್ತಿವೆ. ನನ್ನ ನಿದರ್ಶನವನ್ನು ನೀಡುವ ಮೂಲಕ ಅವರ ಈ ಮುಖದ ಕಿರು ಪರಿಚಯವನ್ನು ಮಾಡತೊಡಗುತ್ತೇನೆ.

-3-

ಅವರ ಪಾಠ-ಪ್ರವಚನಗಳು ಪಾಂಡಿತ್ಯದ ಶುಷ್ಕತೆಯಿಲ್ಲದ ಸರಳತೆ ಮತ್ತು ಖಚಿತತೆಗಳಿಂದ ನನ್ನ ಮನಸ್ಸನ್ನು ಸೆಳೆದರೆ, ಅವರ ಪರೇಂಗಿತಪ್ರಜ್ಞೆ, ಅಸಾಮಾನ್ಯ ಗುಣಗ್ರಾಹಿತ್ವ, ಕಷ್ಟ ಕಂಡಲ್ಲಿ ದಾಪಿಟ್ಟು ಕೈಚಾಚಿ ನೆರವು ನೀಡುವ ಹೃದಯೌದಾರ್ಯ-ನನ್ನನ್ನು ಸೂರೆಗೊಂಡು ಬಿಟ್ಟಿವೆ. ನಾನು ಪ್ರಥಮ ಎಂ.ಎ. ತರಗತಿಯಲ್ಲಿ ಓದುವ ಸಂದರ್ಭದಲ್ಲಿ ಫೀಸ್ ಕಟ್ಟಲು ಮನೆಯಲ್ಲಿ ಸಕಾಲಕ್ಕೆ ಹಣ ನೀಡದೆ ಹೋದ ಕಾರಣ ಸುಮಾರು ಒಂದು ತಿಂಗಳು ನಾನು ಗೈರು ಹಾಜರಾಗಬೇಕಾಯಿತು. ಗ್ರಾಮೀಣ ಒಡಲಿನಿಂದ ನಗರಕ್ಕೆ ಬಂದ ನಾನು ತರಗತಿಯಲ್ಲಿ ಹೆಚ್ಚು ಕಡಿಮೆ ಬಸವನ ಹುಳುವಿನಂತೆ ನನ್ನಲ್ಲಿ ನಾನೇ ಹುದುಗಿಕೊಳ್ಳುವ ಸಂಕೋಚ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೆ. ಹೀಗಾಗಿ ದೇಜಗೌ ಬಗ್ಗೆ ನನಗೆ ಮೆಚ್ಚುಗೆ - ಅಭಿಮಾನಗಳು ಇದ್ದವಾದರೂ ಅವರ ಹತ್ತಿರದ ಪರಿಚಯವನ್ನು ಪಡೆಯಲು ನಾನು ಮುಂದಾಗಿರಲಿಲ್ಲ. ಆದರೆ ನಾನು ಹಳ್ಳಿಯಿಂದ ಹಿಂದಿರುಗಿದ ಕೂಡಲೇ ದೇಜಗೌ ನನಗೆ ಹೇಳಿ ಕಳುಹಿಸಿದರು. ನನ್ನ ದೀರ್ಘ ಗೈರುಹಾಜರಿಯ ಕಾರಣವನ್ನು ಕೇಳಿದರು. ನಾನು ಅಂಜುತ್ತಾ ಅಳುಕುತ್ತಾ ಕಾರಣವನ್ನು

ಹೇಳಿದ ಕೂಡಲೇ ಅವರ ಮುಖ ಗಂಭೀರವಾಯಿತು. ಕಣ್ಣು ಮ್ಲಾನವಾದವು. ಒಂದು ಗಳಿಗೆ ಸುಮ್ಮನಿದ್ದು "ಈ ವಿಷಯವನ್ನು ನನಗೆ ಮೊದಲೇ ಏಕೆ ತಿಳಿಸಲಿಲ್ಲ? ಈ ವರ್ಷ ತರಗತಿಯಲ್ಲಿರುವ ಕೆಲವೇ ಬುದ್ಧಿವಂತ ವಿದ್ಯಾರ್ಥಿಗಳಲ್ಲಿ ನೀವೊಬ್ಬರು ಎಂದು ಭಾವಿಸಿದ್ದೇನೆ. ನಿಮ್ಮ ಟೆಸ್ಟ್‌ನ ಉತ್ತರಗಳನ್ನು ಕಂಡು ಸಂತೋಷಗೊಂಡಿದ್ದೇನೆ. ಮುಂದೆ ಬರುವ ಎಲ್ಲಾ ಸೂಚನೆಗಳಿರುವ ನೀವು ಈ ಕಾರಣದಿಂದ ತರಗತಿಗೆ ಗೈರುಹಾಜರಾದರೆ ಹೇಗೆ? ಇನ್ನು ಮುಂದೆ ಹೀಗೆ ಮಾಡಬೇಡಿ. ಏನಾದರೂ ತೊಂದರೆ ಇದ್ದರೆ ನನಗೆ ತಿಳಿಸಿ" ಎಂದರು. ಅವರ ಹೃದಯ ಕೋಮಲತೆಗೆ, ಕೇಳದೆ ಕಷ್ಟಕ್ಕಾಗುವ ಅಂತಃಕರಣಕ್ಕೆ ಸ್ತಬ್ಧನಾಗಿಬಿಟ್ಟೆ. ಕೆಲವು ದಿನಗಳ ನಂತರ ನನಗೆ ವಿದ್ಯಾರ್ಥಿವೇತನ ದೊರಕಿತ್ತು. ಅದು ದೇಜಗೌ ಅವರ ಶಿಫಾರಸ್ಸಿನಿಂದ ಎಂಬುದು ತಿಳಿಯಿತು. ನನ್ನನ್ನು ತಮ್ಮ ಜಾತಿಯವನೆಂದು ಭಾವಿಸಿಯೋ ಏನೋ ನನಗೆ ಸಹಾಯ ಮಾಡಿರಬಹುದೆಂಬ ಅನುಮಾನ ನನ್ನ ಆಗಿನ ಸಂಶಯಗ್ರಸ್ತ ಯುವ ಮನಸ್ಸಿನಲ್ಲಿ ಸುಳಿದು ಹೋಯಿತು. ಆದರೆ ಆ ನನ್ನ ಊಹೆ ತಪ್ಪು ಎಂಬುದು ಕೆಲವು ದಿನಗಳಲ್ಲೇ ನನಗೆ ಸ್ಪಷ್ಟವಾಯಿತು. ಜಾತಿ-ಮತ, ಪ್ರಾಂತ ಭೇದವನ್ನು ಪರಿಗಣಿಸದೆ, ಅರ್ಹತೆ ಇದೆಯೆಂದು ತಾವು ಭಾವಿಸಿಕೊಂಡ ಎಲ್ಲರಿಗೂ ಇದೇ ರೀತಿಯಲ್ಲಿ ತಮ್ಮ ಕೈಲಾದ ನೆರವನ್ನು ನೀಡಲು ದೇಜಗೌ ಧಾವಿಸುವರು ಎಂಬುದನ್ನು ನನ್ನ ಇತರ ಹಲವಾರು ಮಿತ್ರರ ಉದಾಹರಣೆಗಳಿಂದ ಕಂಡುಕೊಂಡೆ. ಆದರೂ ದೇಜಗೌ ಅವರ ಅತ್ಯಂತ ನಿಕಟ ವಲಯಕ್ಕೆ ನಾನು ಸೇರಲೇ ಇಲ್ಲ, ನನ್ನ ಮುಖೇಡಿತನದಿಂದಾಗಿ.

ಎಂ.ಎ. ಮುಗಿಸಿ ಯಾವ ಶಿಫಾರಸ್ಸನ್ನು ಕೇಳದೆ, ಕೇಳುವ ಧೈರ್ಯ ಸಾಹಸವೂ ಇಲ್ಲದೆ ಹೈಸ್ಕೂಲ್ ಒಂದರಲ್ಲಿ ಅಧ್ಯಾಪಕನಾಗಿ ಸೇರಿಕೊಂಡೆ. ಅಲ್ಲಿ ನಾನು ಕಲಿತದ್ದನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹೇಳುತ್ತಾ, ನಾನು ರಚಿಸಿದ ಕವನಗಳನ್ನು ಆ ವಿದ್ಯಾರ್ಥಿಗಳಿಗೆ ವಾಚಿಸುತ್ತಾ, ಅವರನ್ನು ವಿಧವಿಧ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸುತ್ತಾ ಕಾಲ ಕಳೆಯುತ್ತಿದ್ದೆ. ಕನ್ನಡಪ್ರಭದಲ್ಲಿ ವರದಿಗಾರರಾಗಿದ್ದು ಪ್ರಖ್ಯಾತರಾದ ಮಿತ್ರ ಶ್ರೀ ಎನ್.ಎಸ್. ರಾಮಪ್ರಸಾದ್ ಅವರ ಪ್ರೇರಣೆಯಿಂದ ಅವರು ನಡೆಸುತ್ತಿದ್ದ ಹಿಂದಿ ತರಗತಿಗಳಿಗೆ ನನ್ನ ಬಿಡುವಿನ ವೇಳೆಯಲ್ಲಿ ಕನ್ನಡ ಪಾಠಗಳನ್ನು ಬೋಧಿಸುತ್ತಿದ್ದೆ. ಹೊಳೆನರಸೀಪುರದ ನನ್ನ ಮಿತ್ರ ಅಧ್ಯಾಪಕರು, ಹಿರಿಯರು, ಸಾಹಿತ್ಯ ಪ್ರೇಮಿಗಳು ನನ್ನ ಬಗ್ಗೆ ಅತ್ಯಂತ ಪ್ರೀತಿ-ವಿಶ್ವಾಸಗಳನ್ನು ತಳೆದಿದ್ದರು. ಇಂತಹ ಒಂದು ಸಂದರ್ಭದಲ್ಲಿ ಪ್ರಾಧ್ಯಾಪಕ ದೇಜಗೌ ಅನಿರೀಕ್ಷಿತವಾಗಿ ಹೊಳೆನರಸೀಪುರಕ್ಕೆ ಬಂದರು. ಕನ್ನಡ ಅಧ್ಯಯನ ಸಂಸ್ಥೆ ಆಗ ವೃತ್ತಿಪದಕೋಶ ಒಂದನ್ನು ಸಿದ್ಧಪಡಿಸುವ ಯೋಜನೆಯೊಂದನ್ನು ಹಮ್ಮಿಕೊಂಡಿತ್ತು. ಈ ಯೋಜನೆಗಾಗಿ ವಿವಿಧ ವೃತ್ತಿಗಳ ಜನರನ್ನು ಭೇಟಿ ಮಾಡಿ, ಆ ವೃತ್ತಿಯ ಸಂದರ್ಭದಲ್ಲಿ ಅವರು ಬಳಸುವ ಪದಗಳನ್ನು ಸಂಗ್ರಹಿಸಲು ದೇಜಗೌ ಬಂದಿದ್ದರು. ಅತ್ಯಂತ ನಿಕಟ ಒಡನಾಟವನ್ನು ಇಟ್ಟುಕೊಳ್ಳದಿದ್ದರೂ ನನ್ನ ಪ್ರೀತಿಯ ಗುರುಗಳಲ್ಲಿ ಒಬ್ಬರಾಗಿದ್ದ ದೇಜಗೌ ಅವರನ್ನು ಕಂಡು ನನಗೆ ಅಪಾರ ಸಂತೋಷವಾಯಿತು. ರಾಮಪ್ರಸಾದ್ ಅವರ ನೆರವಿನೊಡನೆ ಕ್ಷೇತ್ರಕಾರ್ಯಕ್ಕೆ ಹೊಳೆನರಸೀಪುರದ ಸುತ್ತಲಿನ ಕೆಲವು ಹಳ್ಳಿಗಳನ್ನು ಆರಿಸಿಕೊಂಡೆವು. ಅಲ್ಲಿಗೆ ಹೋಗಲು

ಬಸ್ಸುಗಳಿಲ್ಲ. ವಾಹನದ ಅನುಕೂಲವೇ ಇಲ್ಲ. ಈ ಅನಾನುಕೂಲವನ್ನು ದೇಜಗೌ ಅವರೆದುರು ಹೇಳಿಕೊಂಡಾಗ ಸೈಕಲ್ಲೇರಿಕೊಂಡೇ ಹೋಗೋಣವೆಂದು ಸಲಹೆ ಮಾಡಿದರು. ಅದರಂತೆ ದೇಜಗೌ, ನಾನು ಮತ್ತು ನನ್ನ ಒಂದೆರಡು ಮಿತ್ರರು ಸೈಕಲನ್ನೇರಿ ಹಳ್ಳಿಗಳಿಗೆ ಹೊರಟೆವು. ಅಲ್ಲಿ ನಾವು ಭೇಟಿ ಮಾಡಿದ ಬೆಸ್ತರು, ಕುಂಬಾರರು, ನೇಯ್ಗೆಯವರು- ಮುಂತಾದವರೊಡನೆ ದೇಜಗೌ ನಡೆಸಿದ ಮಾತುಕತೆ, ವ್ಯವಹರಿಸಿದ ಸರಳ ರೀತಿ, ನಮ್ಮೆಲ್ಲರನ್ನು ಒಟ್ಟಿಗೆ ನಗುನಗಿಸುತ್ತಿದ್ದ ನಿಷ್ಕಲ್ಮಶ ಪ್ರೇಮದ ಸ್ವಭಾವ ನನ್ನನ್ನು ದಂಗುಬಡಿಸಿತು. ಕೆಲವು ನಿಮಿಷಗಳಲ್ಲಿಯೇ ಅವರು ವ್ಯಕ್ತಿಗರ ಹೃನ್ಮನಗಳನ್ನು ಸೆಳೆದುಕೊಂಡುಬಿಟ್ಟರು. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು, ಕರ್ನಾಟಕದಲ್ಲಿ ಕನ್ನಡದ ಪಾಂಚಜನ್ಯವನ್ನು ಮೊಳಗಿಸಿರುವ ಕನ್ನಡ ಸೇನಾನಿಯೊಬ್ಬರು, ಪ್ರತಿಷ್ಠಿತ ಲೇಖಕರೊಬ್ಬರು ಇಷ್ಟು ಸರಳವಾಗಿ, ನಿಷ್ಕಪಟವಾಗಿ ವರ್ತಿಸುವುದನ್ನು ಕಂಡು ನನ್ನ ಮಿತ್ರರಾದಿಯಾಗಿ ಸೋಜಿಗಪಟ್ಟರು. ಅವರನ್ನು ಅರಿಯದ ಎಷ್ಟೋ ಜನ ಅವರ ಜಾತಿಯ ಕಾರಣದಿಂದಾಗಿ ಮತ್ತು ಕುವೆಂಪು ಅವರ ನೆರವಿನಿಂದಾಗಿ ಅವರು ಮೇಲೆ ಬಂದಿರುವರೆಂದು ಭಾವಿಸಿದ್ದಾರೆ. ಈ ಭಾವನೆ ಸುಳ್ಳು ಎಂಬುದನ್ನು ತಮ್ಮ ನಡೆ-ನುಡಿಗಳಿಂದ, ವಿದ್ವತ್ತಿನಿಂದ ಅವರು ಅಲ್ಲಿ ರುಜುವಾತು ಮಾಡಿಬಿಟ್ಟರು. ಮಿತ್ರ ರಾಮಪ್ರಸಾದ್ ಹೇಳಿದರು :"ಏನು ಲಕ್ಕಪ್ಪ, ಈ ಮನುಷ್ಯ ಇಷ್ಟು ಸರಳವಾಗಿದ್ದಾರೆ. ತಮ್ಮ ಹುದ್ದೆಯ ದರ್ಪ, ಸಾಹಿತ್ಯದ ಗತ್ತು ಯಾವುದೂ ಇವರಿಗಿಲ್ಲವಲ್ಲ. ನಾವೆಲ್ಲಾ ಇವರನ್ನು ತಪ್ಪು ತಿಳಿದಿದ್ದೆವಲ್ಲ". ಎರಡು ದಿನ ಈ ಕ್ಷೇತ್ರ ಕಾರ್ಯ ಮಾಡಿದ ನಂತರ "ಇದೇ ರೀತಿ ಬೇರೆ ಬೇರೆ ಊರುಗಳಿಗೆ ಹೋಗಿ ಸಾಧ್ಯವಾದಷ್ಟು ಸಂಗ್ರಹಿಸಿ ಕಳಿಸಿ ಕೊಡಿ. ಕೇವಲ ಪಾಠ ಮಾಡುವುದರಲ್ಲಿ ಮಾತ್ರವೇ ನಿಮ್ಮ ಶಕ್ತಿಯನ್ನು ವಿನಿಯೋಗಿಸಬೇಡಿ" ಎಂದರು.ಆ ಸಂದರ್ಭದಲ್ಲಿ ರಾಮಪ್ರಸಾದ್ ದೇಜಗೌ ಅವರನ್ನು ಒಂದು ಪ್ರಶ್ನೆ ಕೇಳಿದರು:"ಲಕ್ಕಪ್ಪಗೌಡರು ಒಳ್ಳೆಯ ಅಧ್ಯಾಪಕರೆಂದು ಹೆಸರು ಪಡೆದಿದ್ದಾರೆ. ಅವರ ಮಾತು, ನಡವಳಿಕೆ ನಮಗೆ ತುಂಬಾ ಪ್ರಿಯವಾಗಿದೆ. ಇಂತಹವರು ಕಾಲೇಜು ಅಧ್ಯಾಪಕರಾಗಲು ಏನಾದರೂ ಅಡ್ಡಿ ಇದೆಯೇ?" ದೇಜಗೌ ಅವರು ತಡೆದು ಉತ್ತರಿಸಿದರು:"ನೇಮಕಾತಿ ನಿಯಮಗಳು ತುಂಬಾ ಕಠಿಣ. ಇವರಿಗಿಂತ ಹೆಚ್ಚು ಅಂಕಗಳು ಬಂದ ಎಷ್ಟೋ ಜನಕ್ಕೆ ಕೆಲಸ ಇಲ್ಲ. ಆದರೂ ನೋಡೋಣ' ಎಂದು ಸುಮ್ಮನಾದರು. ಅದೇ ದಿನ ಸಂಜೆ ಹಿಂದಿ ಪ್ರಚಾರ ಸಭಾ ಆಶ್ರಯದಲ್ಲಿ ದೇಜಗೌ ಅವರ ಒಂದು ಭಾಷಣವನ್ನು ಏರ್ಪಡಿಸಿದ್ದೆವು. ಸ್ವಾಗತ ಭಾಷಣ ಮಾಡುವ ಹೊಣೆ ನನ್ನದಾಗಿತ್ತು. ದೇಜಗೌ ಅವರು ಅರ್ಧ ಗಂಟೆ ಕಾಲ ಕನ್ನಡ ಮತ್ತು ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡಿದರು. ಕೊನೆಯಲ್ಲಿ "ಈ ಮೂಲೆಯ ಊರಿನಲ್ಲಿ ಲಕ್ಕಪ್ಪಗೌಡರಂಥ ವಾಗ್ಮಿಗಳು ಇರುವುದನ್ನು ಕಂಡು ನನಗೆ ತುಂಬಾ ಹೆಮ್ಮೆಯೆನಿಸಿದೆ, ಸಂತೋಷವೆನಿಸಿದೆ. ಅವರಿಗೆ ಎಲ್ಲಾ ಶುಭವನ್ನು ಕೋರುತ್ತೇನೆ" ಎಂದರು. ಸಭೆ ಮುಗಿದ ನಂತರ ನನ್ನ ಹೆಗಲ ಮೇಲೆ ಕೈ ಹಾಕಿ" ನೀವು ಇಷ್ಟು ಚೆನ್ನಾಗಿ ಮಾತನಾಡುತ್ತೀರೆಂದು ನನಗೆ ಗೊತ್ತೇ ಇರಲಿಲ್ಲ. ತರಗತಿಗಳಲ್ಲಿ ನೀವು ಎಂದೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಏನೇ ಆಗಲಿ ನನಗೆ ತುಂಬಾ ಸಂತೋಷ"ವೆಂದರು. ಆ ವೇಳೆಗೆ ನನಗೆ ಮದುವೆ ಆಗಿತ್ತು. ಆ ದಿನ

ಅವರನ್ನು ಊಟಕ್ಕೆಂದು ನನ್ನ ಮನೆಗೆ ಕರೆದೊಯ್ದೆ. ನಾನು ಅಳುಕುತ್ತಾ ಆಹ್ವಾನಿಸಿದೊಡನೆ ಯಾವ ಬಿಂಕ-ಬಿಗುಮಾನಗಳಿಲ್ಲದೆ ಅವರು ನನ್ನ ಮನೆಗೆ ಬಂದರು. ನಾನು ಅಭ್ಯಾಸಕ್ಕೆ ಇರಿಸಿಕೊಂಡಿದ್ದ ಪುಸ್ತಕಗಳ ರಾಶಿಯನ್ನು ಪರಿಶೀಲಿಸಿದರು. ನಾನು ಬರೆದು ಇಟ್ಟುಕೊಂಡಿದ್ದ ಕವನಗಳ ಮೇಲೆ ಕಣ್ಣಾಡಿಸಿದರು. ಅನಂತರ ಉದ್ಗರಿಸಿದರು :"ಇಷ್ಟೆಲ್ಲಾ ಶಕ್ತಿಯಿದ್ದೂ ನೀವೇಕೆ ಹಳ್ಳಿಯಲ್ಲಿ ಕೊಳೆಯುತ್ತಿದ್ದೀರಿ ?" ನನ್ನ ಮನಸ್ಸು ದುಗುಡದಿಂದ ತುಂಬಿತ್ತು. ನನ್ನನ್ನು ಮೇಲೆತ್ತುವವರು ಯಾರೂ ಇಲ್ಲವಲ್ಲ, ಪ್ರಭಾವಶಾಲಿಯಾದ ಕುಟುಂಬದ ಹಿನ್ನೆಲೆಯಾಗಲಿ, ಜಾತಿಯ ಹಿನ್ನೆಲೆಯಾಗಲಿ ನನಗೆ ಇಲ್ಲವಲ್ಲಾ ಎಂಬ ಆತಂಕ,ದುಃಖ ನನ್ನನ್ನು ಬಾಧಿಸುತ್ತಿತ್ತು. ಆ ಭಾವನೆಯಿಂದಲೇ ನಾನು ತುಸು ಒರಟೆನ್ನುವ ರೀತಿಯಲ್ಲಿ ಉತ್ತರಿಸಿದೆ :"ನಮ್ಮಂಥವರಿಗೆ ಹೇಳುವವರು ಕೇಳುವವರು ಯಾರಿದ್ದಾರೆ?ಸರ್". ದೇಜಗೌ ಒಂದು ಕ್ಷಣ ಅಪ್ರತಿಭರಾದರು. ಊಟ ಮಾಡಿ ಅತಿಥಿಗೃಹಕ್ಕೆ ಹೊರಟು ಹೋದರು. ಬೆಳಿಗ್ಗೆ ಅವರನ್ನು ಬೀಳ್ಕೊಡಲು ಹೋದಾಗ'ನೀವು ಒಮ್ಮೆ ಮೈಸೂರಿಗೆ ಬಂದು ನನ್ನನ್ನು ನೋಡಿ'ಎಂದರು. ಯಾವುದೇ ಆಸೆ-ಭರವಸೆಗಳನ್ನು ಇಟ್ಟುಕೊಳ್ಳದೆ ನಾನು ಮೈಸೂರಿನ ದಾರಿಯನ್ನು ಹಿಡಿದು ದೇಜಗೌ ಅವರನ್ನು ಕನ್ನಡ ವಿಭಾಗದಲ್ಲಿ ಕಂಡೆ. ಕಂಡಕೂಡಲೇ ಮಧುರ ಮಂದಸ್ಮಿತದಿಂದ ನನ್ನನ್ನು ಬರಮಾಡಿಕೊಂಡು ಕುಶಲ ಸಮಾಚಾರ ಕೇಳಿದರು.

ಹತ್ತಿರದಲ್ಲೇ ಇದ್ದ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಿಗೆ ಪರಿಚಯ ಮಾಡಿಸಿ, 'ಇವರಿಗೆ ಒಳ್ಳೆಯ ಶಕ್ತಿ ಇದೆ, ಆದರೂ ಯಾವುದೋ ಮೂಲೆಯ ಊರಿನಲ್ಲಿ ಹೈಸ್ಕೂಲ್‌ನಲ್ಲಿ ಪಾಠ ಹೇಳಿಕೊಂಡು ಕಾಲ ತಳ್ಳುತ್ತಿದಾರೆ. ಇವರಿಗೆ ಏನಾದರೂ ಅನುಕೂಲ ಮಾಡಬೇಕು' ಎಂದರು. ಡಾ. ಸ್ವಾಮಿ ಅವರು ಸಹಜ ನಗೆಯ ಕಣ್ಣಿನಿಂದ ನನ್ನನ್ನು ನೋಡಿ ಏನಾದರೂ ಮಾಡಿ ಸರ್ ಎಂದರು. ದೇಜಗೌ ಅವರ ಸಲಹೆ ಮೇರೆಗೆ ನಾನು ಶಾರದ ವಿಲಾಸ ಕಾಲೇಜಿಗೆ ಅಧ್ಯಾಪಕ ಹುದ್ದೆಗಾಗಿ ಅರ್ಜಿಯನ್ನು ಸಲ್ಲಿಸಿದೆ. ತಮ್ಮ ಕಾರಿನಲ್ಲಿಯೇ ನನ್ನನ್ನು ಕುಳ್ಳಿರಿಸಿಕೊಂಡು ಶಾರದಾ ವಿಲಾಸ ಕಾಲೇಜಿನ ಕನ್ನಡ ಮುಖ್ಯಸ್ಥರಾಗಿದ್ದ ಪ್ರೊ. ಎಚ್. ಎಂ. ಶಂಕರನಾರಾಯಣರಾವ್ ಅವರ ಬಳಿಗೆ ಕರೆದೊಯ್ದರು. ನನ್ನ ವಿಷಯವನ್ನೆಲ್ಲಾ ತಿಳಿಸಿ ಅವಕಾಶ ಸಿಕ್ಕರೆ ಇವರು ಒಳ್ಳೆಯ ಅಧ್ಯಾಪಕರಾಗುವ ಮತ್ತು ಬರಹಗಾರರಾಗುವ ಶಕ್ತಿಯನ್ನು ಪಡೆದಿದ್ದಾರೆ. ಇವರಿಗೆ ಸಹಾಯ ಮಾಡಿದರೆ ನನಗೆ ತುಂಬಾ ಸಂತೋಷವಾಗುತ್ತದೆ" ಎಂದರು. ಪ್ರೊ. ಎಚ್.ಎಂ. ಎಸ್ ಅವರು ನನ್ನ ಬೆನ್ನ ಮೇಲೆ ಕೈಯಾಡಿಸಿ" ಆಗಲಿ, ದೇವರಿದ್ದಾನೆ ನೋಡೋಣ ಎಂದರು. ಮತ್ತೆ ನನ್ನನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡರು. ಕಾರಿನ ಬಾಗಿಲು ಹಾಕಿಕೊಳ್ಳಲು ನನಗೆ ಬರಲಿಲ್ಲ. ಆಗ ದೇಜಗೌ ನುಡಿದ ಮಾತು ಇಂದೂ ನನ್ನ ಕಿವಿಯಲ್ಲಿನಿನದಿಸುತ್ತಿದೆ, " ನೀವು ಮುಂದೆ ಬೆಳೆದು, ಕೀರ್ತಿ ಪಡೆದು, ಹೀಗೆ ಕಾರು ಇಟ್ಟುಕೊಂಡು ತಿರುಗಾಡಬೇಕೆಂಬುದು ನನ್ನ ಆಸೆ"ಎಂದರು. ಇವೆಲ್ಲ ನನ್ನ ಬದುಕಿನಲ್ಲಿ ಕೇವಲ ಕನಸುಗಳು ಅಂದು ಕೊಂಡೆ. ಆದರೆ ಅವರ ಅಭಿಮಾನದ ಮಾತುಗಳನ್ನು ಕಂಡು ನನ್ನ ಹೃದಯ ತುಂಬಿ ಬಂತು. ಶಾರದಾ ವಿಲಾಸ ಕಾಲೇಜಿನಲ್ಲಿ ನನಗೆ ಕೆಲಸ ಸಿಕ್ಕಿತು. ನನ್ನ ಶಕ್ತಿಯನ್ನು ಭೂತಗನ್ನಡಿ ಹಿಡಿದು ದೇಜಗೌ ಪ್ರೊ. ಎಚ್. ಎಂ. ಎಸ್. ಅವರಿಗೆ

ಬಣ್ಣಿಸಿದರು. ಒಂದೆರಡು ದಿನಗಳಾದ ನಂತರ ನಾನು ದೇಜಗೌ ಅವರನ್ನು ಮತ್ತೆ ಕಂಡೆ. ಅವರ ಕಣ್ಣುಗಳಲ್ಲಿ ಸಂತೋಷದ ಬೆಳಕು ಚಿಮ್ಮುತ್ತಿತ್ತು. ಅವರು ಹೇಳಿದರು :" ನನಗೆ ತುಂಬಾ ಸಂತೋಷವಾಯಿತಪ್ಪ. ಶಂಕರನಾರಾಯಣರಾಯರು ನಿಮ್ಮ ವಿಷಯವಾಗಿ ಬಹಳ ಒಳ್ಳೆಯ ಮಾತುಗಳನ್ನು ಹೇಳಿದರು. ಒಂದೆರಡು ದಿನಗಳಲ್ಲಿ ನೀವು ಅವರ ಮನಸ್ಸನ್ನು ಗೆದ್ದುಬಿಟ್ಟಿದ್ದೀರಿ" ಎಂದರು. ಅವರ ಹತ್ತಿರ ಆಗ ಡಾ. ಸಿಂಧುವಳ್ಳಿ ಅನಂತಮೂರ್ತಿಯವರುಕುಳಿತಿದ್ದರು. ಅವರನ್ನು ಉದ್ದೇಶಿಸಿ ದೇಜಗೌ ಅವರು ಹೇಳಿದರು:" ಇವರು ಯಾರು ಗೊತ್ತೇನ್ರಿ ಅನಂತಮೂರ್ತಿ, ಬಹಳ ಒಳ್ಳೆಯ ಕವಿಗಳು. ಅಧ್ಯಾಪಕರು. ನೀವು ಮುಂದೆ ಇವರ ಪುಸ್ತಕಗಳನ್ನು ಪ್ರಕಟಿಸಬೇಕಾಗುತ್ತದೆ. ಇವರ ಪರಿಚಯ ಇಟ್ಟುಕೊಂಡಿರಿ". ನನ್ನಂತಹ ಚಿಕ್ಕವನನ್ನೂ ಇಷ್ಟು ದೊಡ್ಡದಾಗಿ ದೇಜಗೌ ಬಿಂಬಿಸುವುದನ್ನು ಕಂಡು ನನಗೆ ಅಪಾರ ಆಶ್ಚರ್ಯವಾಯಿತು. ಹಾಗೆಯೇ ನನ್ನ ದೌರ್ಬಲ್ಯಗಳ ಬಗ್ಗೆ ಭೀತಿ ಉಂಟಾಯಿತು. ಅವರ ದೊಡ್ಡತನದ ಚಿತ್ರ ನನ್ನ ಕಣ್‌ಮನಗಳಲ್ಲಿ ಕುಣಿಯತೊಡಗಿತು. ಆರು ತಿಂಗಳ ಕಾಲದ ನಂತರ ಮಹಾರಾಜ ಕಾಲೇಜಿನಲ್ಲಿ ತಾತ್ಕಲಿವಾಗಿ ಒಂದು ಅಧ್ಯಾಪಕ ಹುದ್ದೆ ಖಾಲಿ ಬಿತ್ತು. ದೇಜಗೌ ನನ್ನನ್ನು ಕರೆದು ಹೇಳಿದರು: "ನಿಮ್ಮ ಪಾಠ ಪ್ರವಚನದ ಬಗ್ಗೆ ಒಳ್ಳೆಯ ಮಾತುಗಳನ್ನುಕೇಳಿದ್ದೇನೆ. ನಿಮ್ಮಂತಹವರು ವಿಶ್ವವಿದ್ಯಾನಿಲಯದಲ್ಲಿ ಇರಬೇಕು. ಇದೊಂದು ಅವಕಾಶ ಇದೆ. ಇದು ಒಂದು ವರ್ಷ ಮಾತ್ರ ಖಾಲಿ ಇರುವ ಹಂಗಾಮಿ ಕೆಲಸ. ನೀವು ಈಗ ಇರುವುದು ಖಾಯಂ ಕೆಲಸ. ನೀವು ಈಗ ಧೈರ್ಯ ಮಾಡಿ ಖಾಯಂ ಕೆಲಸವನ್ನು ಬಿಟ್ಟು ಬರುವುದಾದರೆ ಈ ಕೆಲಸಕ್ಕೆ ಶಿಫಾರಸ್ಸು ಮಾಡುತ್ತೇನೆ. ಆದರೆ ಮುಂದೆ ಏನಾಗುವುದೊ ಹೇಳಲಾರೆ" ಎಂದರು. ಯಾವುದೋ ಅಜ್ಞಾತ ಮೂಲೆಯಲ್ಲಿ ಹೈಸ್ಕೂಲ್ ಹುಡುಗರಿಗೆ ಪಾಠ ಹೇಳಿಕೊಂಡು ಕಾಲ ತಳ್ಳುತ್ತಿದ್ದ ನನ್ನನ್ನು ನಗರಕ್ಕೆ ಕರೆದುಕೊಂಡು ಬಂದು ಕಾಲೇಜು ಅಧ್ಯಾಪಕನನ್ನಾಗಿ ಮಾಡಿದ ದೇಜಗೌ ಅವರ ವಾಕ್ಯ ದೇವರ ಅಭಯವಾಕ್ಯವಾಗಿತ್ತು. ಅವರು ಏನು ಮಾಡು ಎಂದರೂ ನಾನು ಮಾಡಲು ಸಿದ್ಧನಾಗಿದ್ದೆ. ಅವರ ಮಾತಿನಲ್ಲಿ ನನಗೆ ಅಪಾರ ನಂಬಿಕೆ, ವಿಶ್ವಾಸ, ಭಕ್ತಿ, ಗೌರವಗಳು ಮೂಡಿದ್ದವು. ನನ್ನ ಒಳಿತು-ಕೆಡಕುಗಳೆಲ್ಲವೂ ಅವರಿಗೆ ಸೇರಿದ್ದು ಎಂಬ ಭಾವನೆ ಬಲಿತಿತ್ತು. ಆದ್ದರಿಂದ ಒಂದು ಗಳಿಗೆಯೂ ಹಿಂದು ಮುಂದು ನೋಡದೆ "ನೀವು ಬಾ ಎಂದರೆ ನಾನು ಈಗಲೇ ಬಂದು ಬಿಡುತ್ತೇನೆ. ನೀವು ಇರುವಾಗ ನನಗೆ ಯಾವ ಭಯವೂ ಇಲ್ಲ. ಒಂದು ವೇಳೆ ಏನಾದರೂ ತೊಂದರೆಯಾದರೆ ಅದು ನನ್ನ ದುರದೃಷ್ಟ ಎಂದುಕೊಳ್ಳುತ್ತೇನೆ ' ಎಂದೆ. ಮಾರನೇ ದಿನ ಅಂದು ಕುಲಸಚಿವರಾಗಿದ್ದ ಡಾ. ಕೇಶವ ಹೆಗಡೆ ಅವರನ್ನು ನೋಡಲು ನನಗೆ ದೇಜಗೌ ತಿಳಿಸಿದ್ದರು. ನಾನು ಕುಲಸಚಿವರನ್ನು ಕಂಡೆ. ಅವರು ಪ್ರೀತಿಯಿಂದ ಮಾತನಾಡಿಸಿ ದೇಜಗೌ ಅವರೊಡನೆ ಮತ್ತೆ ಮಾತನಾಡುವುದಾಗಿ ತಿಳಿಸಿದರು. ಆವರು ಅನಂತರ ದೇಜಗೌ ಅವರಿಗೆ ಹೇಳಿದರಂತೆ: "ಜವರೇಗೌಡರೆ. ನೀವು ಜಾತಿವಾದಿ ಎಂದು ಜನ ದೂರುತ್ತಾರೆ. ಮತ್ತೆ ಈ ಒಕ್ಕಲಿಗರ ಹುಡುಗನನ್ನು ನೀವು ಶಿಫಾರಸ್ಸು ಮಾಡಿದ್ದೀರಿ. ಇದು ಸರಿಯೆ? ಇದರಿಂದ ನನಗೂ ಮುಜುಗರವಾಗುತ್ತದೆ". ದೇಜಗೌ ನಿಜಸಂಗತಿಯನ್ನು ತಿಳಿಸಿದ ಮೇಲೆ ಅವರಿಗೆ ಸಂತೋಷವಾಯಿತಂತೆ.

ಒಂದೆರಡು ವರ್ಷ ಮಹಾರಾಜ ಕಾಲೇಜಿನಲ್ಲಿ ಕೆಲಸ ಮಾಡಬಹುದೆಂದು ಆಶಿಸಿದ್ದ ನನಗೆ ಅನಿರೀಕ್ಷಿತ ಘಟನೆ ಢಿಕ್ಕಿಯಾಯಿತು. ಸಂಶೋಧನೆಗಾಗಿ ತೆರಳಿದ್ದ ಅಧ್ಯಾಪಕರು ಇದ್ದಕ್ಕಿದ್ದಂತೆ ವಾಪಸ್ಸು ಬಂದಿದ್ದರಿಂದ ಅವರ ಸ್ಥಾನದಲ್ಲಿದ್ದ ನಾನು ಸ್ಥಾನವನ್ನು ತೆರವು ಮಾಡಬೇಕಾಯಿತು. ದೊರಕಿದ್ದ ಖಾಯಂ ಹುದ್ದೆಯನ್ನು ಕಳೆದುಕೊಂಡಿದ್ದೆ. ತತ್‌ಕ್ಷಣದಲ್ಲಿ ಸೇರಲು ಬೇರೆ ಯಾವ ಕೆಲಸವೂ ಇರಲಿಲ್ಲ. ಮೈಸೂರಿನಲ್ಲಿ ಸಂಸಾರವನ್ನು ಬೇರೆ ಹೂಡಿದ್ದೆ. ಮನೆಯಿಂದಾಗಲಿ ಬೇರೆ ಕಡೆಯಿಂದಾಗಲಿ ನನಗೆ ಬೇರೆ ಯಾವ ಆರ್ಥಿಕ ನೆರವೂ ಇರಲಿಲ್ಲ. ಏನು ಮಾಡುವುದೆಂದು ತೋಚದೆ ಕಣ್ಣು ಕತ್ತಲೆ ಹಿಡಿಯಿತು. ದೇಜಗೌ ಆ ಸಂದರ್ಭದಲ್ಲಿ ಹೇಳಿ ಕಳಿಸಿದರು. ನನ್ನ ಮುಖಕ್ಕಿಂತ ಅವರ ಮುಖ ಮ್ಲಾನತರವಾಗಿತ್ತು. ಯಾವುದೋ ತಪ್ಪು ಮಾಡಿದ ಭಾವ ಅವರನ್ನು ಕಿತ್ತು ತಿನ್ನುತ್ತಿತ್ತು. ಅವರೆಂದರು: "ಏನು ಲಕ್ಕಪ್ಪಗೌಡರೆ, ನಾನು ಅಂದುಕೊಂಡಿದ್ದೇ ಒಂದು, ಆದದ್ದೇ ಮತ್ತೊಂದು. ನಿಮ್ಮಂಥವರು ವಿಶ್ವವಿದ್ಯಾನಿಲಯದಲ್ಲಿ ಇರಬೇಕೆಂದು ನಾನು ಬಯಸಿ ಈ ಏರ್ಪಾಡನ್ನು ಮಾಡಿದೆ. ಹೀಗಾಗುತ್ತದೆಂದು ನಾನು ಎಣಿಸಿರಲಿಲ್ಲ. ಇದ್ದ ಕೆಲಸವನ್ನು ಕಳೆದು ನಿಮ್ಮನ್ನು ಮನೆಯಲ್ಲಿ ಕೂರುವಂತೆ ಮಾಡಿದೆ. ಐಯಾಂ ಸಾರಿ" ಹೀಗೆ ಹೇಳುತ್ತಾ ಹೇಳುತ್ತಾ ಅವರು ತುಸು ತಲೆ ತಗ್ಗಿಸಿದರು. ಅವರ ಕಣ್ಣಿನಲ್ಲಿ ನೀರು ಬೊಟ್ಟಾಡಿತು. ಇಂತಹ ನೀರ ದಾಳಿಗೆ ತುತ್ತಾದ ನಾನೇ ಅಷ್ಟು ಅಧೀರನಾಗದೆ ಇರುವಾಗ, ತಮಗಾಗಿ ಎಂದೂ ಯಾರನ್ನೂ ಯಾಚಿಸದ, ಯಾರೆದುರೂ ವಿಷಣ್ಣತೆಯಿಂದ ತಲೆತಗ್ಗಿಸದ ಈ ಧೀರ ಪ್ರಾಧ್ಯಾಪಕ ಶಿಷ್ಯನಿಗಾದ ಈ ತೊಂದರೆಯ ದುಃಖಾನುಭವದಿಂದ ಮರಗಟ್ಟಿ ಹೋಗಿದ್ದರು. ನಾನೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಅನಂತರ ನನ್ನ ಮುಖವನ್ನು ನೋಡುತ್ತಾ ಹೇಳಿದರು: " ನನ್ನ ಮಾತನ್ನು ನಂಬಿ ನೀವು ಇದ್ದ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೀರಿ. ನಿಮ್ಮ ನಿಷ್ಠೆ, ಧೈರ್ಯಗಳಿಗೆ ನಾನು ಏನಾದರೂ ಮಾಡಲೇಬೇಕು. ನೋಡೋಣ ದೇವರಿದ್ದಾನೆ, ಹೆದರಬೇಡಿ. ನಿಮಗೆ ದುಡ್ಡುಕಾಸಿನ ತೊಂದರೆ ಇದ್ದರೆ ನನ್ನನ್ನು ಬಂದು ಕಾಣಿ. ಸಂಕೋಚ ಪಡಬೇಡಿ" ಎಂದು ಹೇಳಿ ತಮ್ಮ ಆಸನದಿಂದೆದ್ದು ಬೆನ್ನು ತಟ್ಟಿದರು. ಅವರ ಕರಸ್ಪರ್ಶ ಸಾವಿರ ಅಭಯ ಹಸ್ತಗಳಾಗಿ ನನ್ನನ್ನು ಆವರಿಸಿತು. ಅನಂತರ ಕೆಲವೇ ತಿಂಗಳುಗಳಲ್ಲಿ ಮಾನಸಗಂಗೋತ್ರಿಯಲ್ಲಿ ಸಂಶೋಧನಾ ಸಹಾಯಕ ಹುದ್ದೆ ದೊರೆಯಿತು. ಅದನ್ನು ದೊರಕಿಸುವುದಕ್ಕಾಗಿ ದೇಜಗೌ ಪಟ್ಟ ಪಾಡು ಅಷ್ಟಿಷ್ಟಲ್ಲ. ಇದರಿಂದ ಅವರ ಬಹುಕಾಲದ ಮಿತ್ರರೂ ಸಂಪಾದನಾ ವಿಭಾಗದ ನಿರ್ದೇಶಕರೂ ಆಗಿದ್ದವರೊಡನೆ ವೈಮನಸ್ಸು ಕಟ್ಟಿಕೊಂಡರು. ತಮ್ಮ ಶಿಷ್ಯನಿಗೆ ನೆರವು ನೀಡುವುದರೆದುರು ಅವರು ಯಾರ ಜೊತೆಗಾದರೂ ನಿಷ್ಠುರ ಕಟ್ಟಿಕೊಳ್ಳಲು ಸಿದ್ಧರಾಗಿದ್ದರು. ಅನಂತರ ಅವರು ಹೇಳಿದ ಮಾತು ಇಂದೂ ನನ್ನ ನೆನಪಿನಲ್ಲಿ ಹಸಿಯಾಗಿದೆ: " ಲಕ್ಕಪ್ಪಗೌಡರೆ, ನಿಮಗೆ ಕೆಲಸ ಹೋದಂದಿನಿಂದ ಇಂದಿನವರೆಗೆ ನಾನು ಸರಿಯಾಗಿ ನಿದ್ರೆ ಮಾಡಿಲ್ಲ. ನೀವು ಈ ಸ್ಥಾನದಲ್ಲಿ ನಿಷ್ಠೆ ಮತ್ತು ಶ್ರದ್ಧೆಯಿಂದ ಕೆಲಸ ಮಾಡಿ. ನಿರ್ದೇಶಕರ ಮನವೊಲಿಸಿ ಅವರನ್ನು ಸುಮುಖ ಮಾಡಿಕೊಳ್ಳಿ. ಮುಂದೆ ಅವಕಾಶ ಬಂದಾಗ ನೋಡೋಣ". ಮುಂದಿನ ಕೆಲ ತಿಂಗಳುಗಳಲ್ಲಿ ಅವರೇ ನನ್ನನ್ನು ತಮ್ಮ ಕೊಠಡಿಗೆ ಕರೆಸಿ "ಶ್ರೀ

ದೇಜೀರಪ್ಪನವರಿಗೆ ನಿಮ್ಮ ಬಗ್ಗೆ ತುಂಬಾ ಒಳ್ಳೆಯ ಅಭಿಪ್ರಾಯ ಮೂಡಿಬಿಟ್ಟಿದೆ. ನೀವು ನಿಮ್ಮ ಕೆಲಸದಿಂದ ಅವರ ಮನವನ್ನು ಗೆಲ್ಲುವಿರಿ ಎಂಬ ನಂಬಿಕೆ ನನಗೆ ಇತ್ತು. ಹಾಗೆ ಆದದ್ದಕ್ಕೆ ತುಂಬಾ ಸಂತೋಷವಾಗಿದೆ' ಎಂದರು. ಆದರೂ ಅವರಿವರೊಡನೆ ಒಳ್ಳೆಯ ಅಧ್ಯಾಪಕರೆಂದು, ಶಾರದಾವಿಲಾಸ ಕಾಲೇಜಿನಲ್ಲಿ, ಮಹಾರಾಜ ಕಾಲೇಜಿನಲ್ಲಿ ಹೆಸರು ಮಾಡಿದ್ದ ಲಕ್ಕಪ್ಪಗೌಡರನ್ನು ಅವರ ಶಕ್ತಿ ಸರಿಯಾಗಿ ಅಭಿವ್ಯಕ್ತವಾಗದ ಈ ಕುರ್ಚಿಯಲ್ಲಿ ಕಟ್ಟಿ ಹಾಕಿದ್ದೇನೆ ಎಂದೂ ಹೇಳುತ್ತಿದ್ದುದು ನನ್ನ ಕಿವಿಗೆ ಬೀಳುತ್ತಿತ್ತು. ನನ್ನ ಬದುಕಿನ ಯೋಗಕ್ಷೇಮದ ಬಗ್ಗೆ, ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಿದ್ದ ರೀತಿ ಯಾವ ಜನ್ಮದ ಅನುಬಂಧವೋ ಎಂದು ನನ್ನ ಮನಸ್ಸು ಭಕ್ತಿ ಕೃತಜ್ಞತೆಯಿಂದ ಬಾಗುತ್ತಿತ್ತು.

ಅದೇ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರಿಗೆ ಗಂಗೋತ್ರಿ ಎಂಬ ಅಭಿನಂದನಾ ಗ್ರಂಥವನ್ನರ್ಪಿಸಲು ದೇಜಗೌ, ಹಾಮಾನಾ ಅವರು ಯೋಚಿಸಿದ್ದರು. ಅದಕ್ಕಾಗಿ ಕುವೆಂಪು ಅವರ ಕತೆಗಳ ಮೇಲೆ ಒಂದು ಲೇಖನವನ್ನು ಬರೆದುಕೊಡುವಂತೆ

ಪ್ರೊ. ಹಾಮಾನಾ ನನಗೆ ತಿಳಿಸಿದರು. ಹೂಂ ಎಂದು ಒಪ್ಪಿಕೊಂಡ ನಾನು ನನ್ನ ಸ್ವಾಭಾವಿಕವಾದ ಆಲಸ್ಯದಿಂದ ಈಗ ಬರೆಯೋಣ, ಆಗ ಬರೆಯೋಣವೆಂದು ಕೆಲ ದಿನಗಳು ತಳ್ಳಿದೆ. ಒಮ್ಮೆ ನನಗೆ ಸಿಕ್ಕಿ ಹಾಮಾನಾ ಅವರು ನಿಮ್ಮಿಂದ ಲೇಖನ ಬರೆಸಲೇಬೇಕೆಂದು ದೇಜಗೌ ಪಟ್ಟು ಹಿಡಿದಿದ್ದಾರೆ ಎಂದರು. ದೇಜಗೌ ನನ್ನ ಬಗ್ಗೆ ತಳೆದಿರುವ ಪ್ರೀತಿ, ಅಭಿಮಾನ ಮತ್ತು ವಿಶ್ವಾಸಗಳಿಂದಾಗಿ ನನ್ನ ಮಾತು ಕಟ್ಟಿಹೋಯಿತು. ಮುಂದೆ ನಾಲ್ಕಾರು ದಿನಗಳಲ್ಲಿ ಲೇಖನ ಸಿದ್ಧ ಮಾಡಿಕೊಟ್ಟೆ. ಆ ದಿನಗಳಲ್ಲಿ ದೇಜಗೌ ಅವರು ಲೇಖಕರ ಸಮ್ಮೇಳನವೊಂದನ್ನು ಹಮ್ಮಿಕೊಂಡಿದ್ದರು. ಅಪಘಾತದಿಂದಾಗಿ ದೇಜಗೌ ಅವರ ಬಲಗೈ ಮುರಿದಿತ್ತು. ಆ ಸಂದರ್ಭದಲ್ಲಿ ಅವರ ಸುತ್ತ ಮುತ್ತಿಕೊಂಡಿದ್ದ ನೂರಾರು ಶಿಷ್ಯರನ್ನು, ಮಿತ್ರರನ್ನು ಕಂಡು, ದೇಜಗೌ ಅವರು ಸಂಪಾದಿಸಿರುವ ಅವಿಚ್ಛಿನ್ನ ಸ್ನೇಹ ವಿಶ್ವಾಸಗಳನ್ನು ಕಂಡು ಆನಂದ ವಿಸ್ಮಿತನಾದೆ. ಗಂಗೋತ್ರಿಯ ನೂರಾರು ಜನ ಕನ್ನಡ ಮತ್ತು ಕನ್ನಡೇತರ ವಿದ್ಯಾರ್ಥಿಗಳು ದೇಜಗೌ ಅವರ ಕಣ್ಸನ್ನೆ, ಕೈಸನ್ನೆಗಾಗಿ ಸಾಲು ಸಾಲು ನಿಂತಿದ್ದರು. ಯಾರನ್ನೂ ಗದರಿಸದೆ ಎಲ್ಲರನ್ನೂ ನಗುಮುಖದಿಂದ ಸ್ವಾಗತಿಸುತ್ತಾ ಎಲ್ಲಾ ಸೂಚನೆಗಳನ್ನು ನೀಡುತ್ತಾ ಪಾದರಸದಂತೆ ಪುಟಿಯುತ್ತಿದ್ದ ದೇಜಗೌ ಅವರ ಚಿತ್ರ ಇಂದೂ ನನ್ನ ಮನದಲ್ಲಿ ಅಚ್ಚೊತ್ತಿದೆ. ಇಷ್ಟೊಂದು ವಿಪುಲವಾದ, ವ್ಯಾಪಕವಾದ ಶಿಷ್ಯಸಮುದಾಯದ ಪ್ರೀತ್ಯಾದರಗಳಿಗೆ ಭಾಜನರಾದ ಇನ್ನೊಬ್ಬರನ್ನು ನಾನು ಕಂಡಿಲ್ಲ.

ಕುರ್ಚಿಗಂಟಿಕೊಂಡೇ ಕೆಲಸ ಮಾಡಬೇಕಾಗಿದ್ದ ಸಂಪಾದನಾ ವಿಭಾಗದಲ್ಲಿ ದೇಜಗೌ ನನ್ನನ್ನು ಬಿಡಲಿಲ್ಲ. ಅವರ ವಾತ್ಸಲ್ಯ ನನ್ನನ್ನು ಮಹಾರಾಜ ಸಂಜೆ ಕಾಲೇಜಿನ ಖಾಯಂ ಅಧ್ಯಾಪಕನಾಗುವಂತೆ ಮತ್ತು ಮುಖ್ಯಸ್ಥನಾಗುವಂತೆ ಮಾಡಿತು. ಅಲ್ಲಿಗೆ ವರದಿ ಮಾಡಿಕೊಳ್ಳುವಾಗ ದೇಜಗೌ ಅವರು ಹೇಳಿದರು: "ಸಂಜೆ ಕಾಲೇಜು ಹಗಲು ಕಾಲೇಜಿನಂತಲ್ಲ. ಅಲ್ಲಿ ವಯಸ್ಸು ಬೆಳೆದ ಬುದ್ಧಿ ಬೆಳೆದ, ಅನುಭವ ಮಾಗಿದ

ವಿದ್ಯಾರ್ಥಿಗಳು ಬರುತ್ತಾರೆ. ಅವರೆದುರು ನೀವು ಆತ್ಮವಿಶ್ವಾಸದಿಂದ ಪಾಠ ಮಾಡಬೇಕಾದರೆ ನೀವು ಸತತ ಅಧ್ಯಯನಶೀಲರಾಗಬೇಕು. ಹಾಗೆಯೇ ಹಿರಿಯರಾದ ಪ್ರೊ. ತ. ಸು. ಶಾಮರಾಯರು ಅಲ್ಲಿ ಪಾಠ ಹೇಳಲು ಬರುತ್ತಾರೆ. ಅವರಿಗೆ ನೋವಾಗದಂತೆ ವರ್ತಿಸಿ, ಅವರ ಪ್ರೀತ್ಯಾದರವನ್ನು ಸಂಪಾದಿಸಿಕೊಳ್ಳಿ. ಈ ಕಾಲೇಜಿನಲ್ಲಿ ಗೆದ್ದರೆ ನೀವು ಎಲ್ಲಾ ಕಡೆ ಗೆದ್ದಂತೆ.'' ಸಂಜೆ ಕಾಲೇಜು ನನಗೊಂದು ಅಪರೂಪದ ಅನುಭವವನ್ನು ತಂದುಕೊಟ್ಟಿತು. ನನಗಿಂತ ವಯಸ್ಸಾದವರಿಗೆ ಪಾಠ ಹೇಳುವಾಗ, ಅವರ ಅನುಭವವನ್ನು ಕೇಳುವಾಗ ನನ್ನ ಅಧ್ಯಯನ ಲೋಕ, ಚಿಂತನಲೋಕ ಗಮನಾರ್ಹವಾಗಿ ವಿಸ್ತಾರಗೊಂಡಿತು. ಅಲ್ಲಿಂದ ಮುಂದೆ ಮತ್ತೊಂದು ಜಗತ್ತಿಗೆ ದೇಜಗೌ ನನ್ನನ್ನು ಅಣಿಗೊಳಿಸಿದರು. 1968ರಲ್ಲಿ ಮಂಗಳೂರಿನ ಸ್ನಾತಕೋತ್ತರ ಕೇಂದ್ರ ಆರಂಭವಾಯಿತು. ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರ ಜೊತೆ ನೇಮಕಗೊಂಡ ಮಿತ್ರ ಅಧ್ಯಾಪಕರೊಬ್ಬರು ಕಾರಣಾಂತರಗಳಿಂದ ಅಲ್ಲಿಂದ ವಾಪಸ್ಸು ಬಂದು ಬಿಟ್ಟರು. ಅಲ್ಲಿಗೆ ಯಾರನ್ನು ಕಳಿಸಬೇಕೆಂಬ ಜಿಜ್ಞಾಸೆ ಪ್ರೊ. ದೇಜಗೌ, ಪ್ರೊ ಹಾಮಾನಾ ಅವರಲ್ಲಿ ಮೊದಲಾಯಿತು. ಕಾಲೇಜಿನಿಂದ ಕಾಲೇಜಿಗೆ ನನ್ನನ್ನು ಓಡಾಡಿಸುತ್ತಿದ್ದರೆ ನಾನು ಏನು ತಿಳಿದುಕೊಳ್ಳುವೆ ಎಂಬ ಭಾವನೆಯಿಂದಲೋ ಏನೋ ದೇಜಗೌ ಪ್ರೊ. ಹಾಮಾನಾ ಅವರ ಮೂಲಕ ನನ್ನನ್ನು ಮಾತನಾಡಿಸಿದರು. ''ನೀವು ಮಂಗಳೂರಿಗೆ ಹೋಗಲು ಸಿದ್ಧರಿದ್ದೀರಾ? ಅಲ್ಲಿಯ ಹವಾಮಾನ, ವಾತಾವರಣ-ಮುಂತಾದುವನ್ನು ಅರಗಿಸಿಕೊಳ್ಳಲು ನೀವು ಸ್ವಲ್ಪ ಕಷ್ಟಪಡಬೇಕಾಗುತ್ತದೆ. ದೇಜಗೌ ಅವರು ನಿಮ್ಮನ್ನು ಕೇಳಲು ಹೇಳಿದ್ದಾರೆ ಎಂದರು. ನನ್ನ ಗುರುವಿನ ಅಂತಃಕರಣ ಹಾಗೂ ಅಭೀಪ್ಸೆಗಳ ಅರಿವಿದ್ದ ನಾನು ಒಂದು ಗಳಿಗೆಯೂ ತಡ ಮಾಡದೆ ''ನೀವಿಬ್ಬರು ಎಲ್ಲಿಗೆ ಕಳಿಸಿದರೂ ಅಲ್ಲಿಗೆ ಹೋಗಲು ಸಿದ್ಧ'' ಎಂದೆ. ಅದೇ ಸಂದರ್ಭದಲ್ಲಿ ಮಾಸ್ತಿ ಅವರನ್ನು ಕುರಿತ ಮತ್ತು ಬಸವಣ್ಣನವರ 800ನೇ ವರ್ಷದ ಅಂಗವಾಗಿ ಎರಡು ದೊಡ್ಡ ವಿಚಾರ ಸಂಕಿರಣದಲ್ಲಿ ಕಿರಿಯವನಾದ ನನ್ನನ್ನು ಭಾಗವಹಿಸಲು ಅವಕಾಶ ಮಾಡಿಕೊಟ್ಟರು. ನನ್ನನ್ನೂ, ನನ್ನ ಪ್ರಬಂಧವನ್ನೂ ಕುರಿತಂತೆ ನಾನೇ ನಾಚಿಕೊಳ್ಳುವಂತೆ ವಿದ್ವಾಂಸರೆದುರು ಅಭಿಮಾನದ, ಮೆಚ್ಚುಗೆಯ ಮಾತುಗಳನ್ನಾಡಿದರು. ಅದೇ ಸಂದರ್ಭದಲ್ಲಿ ಕುವೆಂಪು ಕೃತಿಗಳ ಬಗ್ಗೆ ಸಂಶೋಧನೆ ಮಾಡುವಂತೆ ನನ್ನನ್ನು ಪ್ರೇರೇಪಿಸಿ, ನೋಂದಣಿ ಮಾಡಿಸಿದರು. ಹೀಗೆ ಹಳ್ಳಿಯ, ಮುಗ್ಧ ಅಮಾಯಕ ಪ್ರಭಾವ ವಲಯರಹಿತ ಹಾಗೂ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದ ನನ್ನ ಬುದ್ಧಿಯನ್ನೂ, ಅನುಭವವನ್ನೂ ವಿಸ್ತರಿಸುವ ಅವಕಾಶಗಳನ್ನು ಕಲ್ಪಿಸುತ್ತಾ ನನ್ನ ಅಳುಕು, ಅಂಜುಗುಳಿತನ ದೂರ ಮಾಡಿ ನನ್ನಲ್ಲಿ ಆತ್ಮಾಭಿಮಾನವನ್ನೂ, ಸಾಹಸಪ್ರಿಯತೆಯನ್ನೂ ಬೆಳೆಸಿದವರು ದೇಜಗೌ.

ನನ್ನ ಮತ್ತು ದೇಜಗೌ ಸಂಬಂಧ ಇಲ್ಲಿಗೇ ಮುಗಿಯಲಿಲ್ಲ. ಮಂಗಳೂರಿಗೆ ಬೀಳ್ಕೊಡುವಾಗ ಸಂತೋಷ ಮತ್ತು ದುಗುಡಗಳು ಅವರ ಮುಖಮಂಡಲದಲ್ಲಿ ಮನೆ ಮಾಡಿದ್ದವು.''ನಿಮ್ಮನ್ನು ಇಲ್ಲಿಯೇ ಇಟ್ಟುಕೊಳ್ಳಬೇಕೆಂದು ಬಯಸಿದ್ದೆ, ಆದರೆ ದೈವೇಚ್ಛೆ. ನೀವು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ತುಳುವನ್ನು ಕಲಿಯಿರಿ. ಕನ್ನಡ ನುಡಿ ಮತ್ತು

ಸಾಹಿತ್ಯಗಳ ಶಕ್ತಿ ಹಾಗೂ ಸೌಂದರ್ಯಗಳನ್ನು ಅಲ್ಲಿನ ಜನತೆಯಲ್ಲಿ ಪ್ರಸಾರ ಮಾಡಿ. ಪ್ರೊ. ಎಸ್. ವಿ. ಪರಮೇಶ್ವರಭಟ್ಟರು ನಿಮ್ಮ ಬೆಂಬಲಕ್ಕೆ ಇದ್ದಾರೆ. ನೀವಿಬ್ಬರೂ ಸೇರಿ ಅಲ್ಲಿ ಕನ್ನಡದ ವಾತಾವರಣವನ್ನು ಉಂಟು ಮಾಡಬೇಕು. ಹೀಗೆ ಮಾಡುತ್ತೀರೆಂಬ ಭರವಸೆಯಿಂದ ನಿಮ್ಮನ್ನು ಕಳಿಸಿಕೊಡುತ್ತಿದ್ದೇನೆ. ಓದು ಮತ್ತು ಕೆಲಸ ಇವೆರಡನ್ನು ಬಿಟ್ಟು ಬೇರೆ ಯೋಚಿಸಬೇಡಿ. ನೀವುಸಂಶೋಧನೆಯನ್ನು ಮುಗಿಸಿ ಪಿ. ಎಚ್. ಡಿ. ಪದವಿ ಪಡೆದಾಗ ಮತ್ತು ನೀವು ಅಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ನನ್ನ ಆಸೆ ಪೂರ್ಣವಾಗುತ್ತದೆ'' ಎಂದರು. ಹೆತ್ತ ತಂದೆಯೂ ವ್ಯಕ್ತ ಪಡಿಸಲಾಗದ ಪ್ರೀತಿ-ವಿಶ್ವಾಸ, ವಾತ್ಸಲ್ಯಗಳನ್ನು ಈ ಗುರು ನನ್ನ ಬಗ್ಗೆ ವ್ಯಕ್ತಪಡಿಸಿ ನನ್ನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿದರು. ದೇಜಗೌ ಅವರು ಹರಸಿದಂತೆ ನಾನು ಪ್ರೊ. ಭಟ್ಟರೊಡಗೂಡಿ ಯಥಾಶಕ್ತಿ ಕನ್ನಡಕ್ಕಾಗಿ ಕೆಲಸ ಮಾಡಿದೆ. ಆಗಾಗ ಗುರುಗಳಿಂದ ಪ್ರೀತಿಯ ಪರಿಮಳದ, ಸಾಂತ್ವನದ, ಬದುಕಿನ ಭರವಸೆಯ ಪತ್ರಗಳು ನನಗೆ ಬರುತ್ತಿದ್ದವು. ಆ ಪ್ರೋತ್ಸಾಹವೇ ನನ್ನ ಎಲ್ಲಾ ಚಟುವಟಿಕೆಗಳ ಮೂಲ ಕೇಂದ್ರವಾಗಿತ ಜೀವಧಾತುವಾಗಿತ್ತು.

ನನ್ನ ಸೋದರನೊಬ್ಬ ದಾಯಾದಿ ಮತ್ಸರದ ಕಾರಣದಿಂದಾಗಿ ಸಾವಿಗೀಡಾದಾಗ ನಾನು ತುಂಬಾ ಜರ್ಜರಿತನಾಗಿದ್ದೆ. ಆ ಸುದ್ದಿಯನ್ನು ತಿಳಿದ ಕೂಡಲೇ ದೇಜಗೌ ಮೈಸೂರಿನಿಂದ ಪತ್ರ ಬರೆದು ನನಗೆ ಧೈರ್ಯ ತುಂಬಿದರು. ಆ ವೇಳೆಗೆ ಪ್ರಾಧ್ಯಾಪಕರ ಹುದ್ದೆಯಿಂದ ದೇಜಗೌ ಕುಲಪತಿಗಳಾಗಿ ನೇಮಕಗೊಂಡಿದ್ದರು. ಅವರ ಕ್ರಿಯಾರಂಗ, ಪರಿಚಿತ ಬಳಗ ತುಂಬಾ ವಿಸ್ತಾರಗೊಂಡಿತ್ತು. ಅಂತಹ ಸಂದರ್ಭದಲ್ಲಿ ತಮ್ಮ ಸ್ಥಾನಮಾನವನ್ನು ಲೆಕ್ಕಿಸದೆ ಮಂಗಳೂರಿಗೆಬಂದ ಕೂಡಲೇ ನನ್ನ ಮನೆಗೇ ಧಾವಿಸಿ ಬಂದರು. ಕಾಲೇಜಿಗೆ ರಜೆ ಹಾಕಿ ಮನೆಯಲ್ಲಿ ಕುಳಿತಿದ್ದ ನನ್ನ ಬಳಿಗೆ ಬಂದು ''ಇವೆಲ್ಲಾ ಬದುಕಿನಲ್ಲಿ ಸಹಜ. ಇಂತಹ ಸವಾಲುಗಳನ್ನೆದುರಿಸಲು ನಾವು ಸಿದ್ಧರಾಗಿರಬೇಕು. ಧೈರ್ಯ ತಂದುಕೊಳ್ಳಿ. ನಿಮ್ಮ ಪಿಎಚ್. ಡಿ. ಸಂಶೋಧನೆಯನ್ನು ಪೂರ್ಣ ಮಾಡಿ. ಕುವೆಂಪು ಅವರು ಆಗಾಗ ಈ ಬಗ್ಗೆ ವಿಚಾರಿಸುತ್ತಿರುತ್ತಾರೆ'' ಎಂದರು. ಇಂತಹ ಶಿಷ್ಯವಾತ್ಸಲ್ಯದ ಪ್ರೀತಿಯ ಮೂರ್ತಿಯನ್ನು ನಿರಹಂಕಾರದ ಅಸಾಧಾರಣ ವ್ಯಕ್ತಿತ್ವವನ್ನು ನಾನೆಂದೂ ಮರೆಯುವಂತಿಲ್ಲ. ಮಂಗಳೂರಿನಲ್ಲಿ ಇರುವಾಗಲೇ ನನ್ನ ''ಜನಪದಕಥಾವಳಿ'' 'ಒಗಟುಗಳು'- ಕೃತಿಗಳನ್ನು ಕರ್ನಾಟಕ ಸಹಕಾರಿ ಪ್ರಕಾಶನದಿಂದ ಮತ್ತು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುವಂತೆ ಮಾಡಿದರು. ಮಂಗಳೂರಿನ ಕಾವಿನ ವಾತಾವರಣದಲ್ಲಿ, ಶಿಷ್ಯರ, ಮಿತ್ರರ, ಹಿರಿಯರ ಪ್ರೀತಿ, ಹಾರೈಕೆ, ಆಶೀರ್ವಾದಗಳ ತೊಟ್ಟಿಲಿನಲ್ಲಿ ತೂಗಾಡುತ್ತಿರುವಾಗಲೇ ನಡೆದ ಒಂದು ಅಹಿತಕರ ಘಟನೆಯಿಂದ ನಾನು ಮಂಗಳೂರನ್ನು ತೊರೆಯುವ ನಿರ್ಧಾರ ಮಾಡಿ ದೇಜಗೌ ಅವರಿಗೆ ಪತ್ರ ಬರೆದೆ. ನಾನು ಅಲ್ಲಿಯೇ ಇದ್ದು ಪ್ರಾಧ್ಯಾಪಕನಾಗಿ, ಮುಖ್ಯಸ್ಥನಾಗಿ, ಆ ವಿಭಾಗದ ಮತ್ತು ಕೇಂದ್ರದ ಕರ್ಣಾಧಾರನಾಗಬೇಕೆಂದು ಹಂಬಲಿಸುತ್ತಿದ್ದ ದೇಜಗೌ ಅವರಿಗೆ ಈ ಪ್ರಕರಣ ತುಂಬಾ ನೋವನ್ನು ಉಂಟು ಮಾಡಿತು. ಆದರೆ ನನ್ನ ನಿರ್ಧಾರದ ಬಗ್ಗೆ ಯಾವ ಆಕ್ಷೇಪಣೆಯನ್ನೂ ಅವರು ವ್ಯಕ್ತಪಡಿಸಲಿಲ್ಲ. ಅದೇ ಸಂದರ್ಭದಲ್ಲಿ ಶ್ರೀ ದೇವರಾಜ ಅರಸ್ ನೇತೃತ್ವದ ಕರ್ನಾಟಕ ಸರ್ಕಾರ ಕಾನೂನು ಗ್ರಂಥಗಳನ್ನು ಕನ್ನಡಕ್ಕೆ

ಭಾಷಾಂತರಿಸಲು, ಭಾಷಾಂತರ ಪರಿಷ್ಕರಣ ಮಾಡಲು ರಾಜ್ಯಭಾಷಾ ಆಯೋಗವೊಂದನ್ನು ರಚಿಸಿತು. ಆ ಆಯೋಗಕ್ಕೆ ಕನ್ನಡ ವಿದ್ವಾಂಸರೊಬ್ಬರು ಅಗತ್ಯವಾಗಿತ್ತು. ಅಂದು ಕಾನೂನು ಕಾರ್ಯದರ್ಶಿಗಳಾಗಿದ್ದ ನ್ಯಾಯಮೂರ್ತಿ ಶ್ರೀ ಎನ್. ಡಿ. ವೆಂಕಟೇಶ್ ಅವರು ಪ್ರೊ. ದೇಜಗೌ ಅವರನ್ನು ಒಬ್ಬರು ಕ್ರಿಯಾಶೀಲ ಕನ್ನಡ ವಿದ್ವಾಂಸರನ್ನು ಆಯೋಗದ ಸದಸ್ಯರನ್ನಾಗಿ ಕಳಿಸುವಂತೆ ಸೂಚಿಸಿದ್ದರಂತೆ. ದೇಜಗೌ ಅವರು ಸೂಚಿಸಿದ್ದ ಮೊದಲನೇ ಹೆಸರೆ ನನ್ನದಾಗಿತ್ತು ಎನ್ನುವುದು ನನ್ನ ಭಾಗ್ಯ. ಅದರ ಅಧ್ಯಕ್ಷರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರು, ಉಳಿದ ಸದಸ್ಯರು ನಿವೃತ್ತ ಪ್ರಾಧ್ಯಾಪಕರು, ಮತ್ತೊಬ್ಬರು ಕನ್ನಡದ ಹೆಸರಾಂತ ವಿದ್ವಾಂಸರಾಗಿದ್ದ ಪ್ರೊ. ಆರ್. ವೈ. ಧಾರವಾಡಕರ್. ವಯೋಮಾನದಿಂದ, ಸಾಧನೆಯಿಂದ ವಿದ್ವತ್ತಿನಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ದಿಗ್ಗಜರೆನಿಸಿದ್ದ ಈ ಮಹನೀಯರ ನಡುವೆ, ಈ ಎಲ್ಲಾ ದೃಷ್ಟಿಗಳಿಂದಲೂ ಕಿರಿಯವನಾಗಿದ್ದ ನನ್ನನ್ನು ದೇಜಗೌ ಸೇರಿಸಿಬಿಟ್ಟರು. ಗುರುಗಳ ಆಸೆ, ಅಭಿಮಾನಕ್ಕೆ ತಕ್ಕಂತೆ ನಾನು ಅರ್ಹತೆಯನ್ನೂ ಶಕ್ತಿಯನ್ನೂ ಗಳಿಸಬೇಕೆಂಬ ಉತ್ಸಾಹ ಮತ್ತು ಶ್ರದ್ಧೆ ನನ್ನಲ್ಲಿದ್ದವು. ಒಂದು ತಿಂಗಳ ನಂತರ ಬೆಂಗಳೂರಿಗೆ ಬಂದ ದೇಜಗೌ ನನ್ನನ್ನು ಕರೆದುಕೊಂಡು ಹೋಟೇಲ್‌ಗೆ ಹೋಗಿ ತಿಂಡಿ ತಿನ್ನಿಸುತ್ತಾ ಹೇಳಿದರು: " ನನಗೆ ಬಹಳ ಸಂತೋಷವಾಗಿದೆಯಪ್ಪ. ಶ್ರೀ ಎನ್. ಡಿ. ವೆಂಕಟೇಶ್ ಅವರು ನನಗೆ ಫೋನ್ ಮಾಡಿ ನೀವು ತುಂಬಾ ಒಳ್ಳೆಯ ಸಾಮರ್ಥ್ಯವಿರುವ ವ್ಯಕ್ತಿಯನ್ನು ನಮಗೆ ಕಳಿಸಿಕೊಟ್ಟಿದ್ದೀರಿ. ಈ ಹುಡುಗ ಇಂತಹವರ ಮಧ್ಯೆ ಹೇಗೆ ನಿಭಾಯಿಸುತ್ತಾನೆ ಎಂಬ ಆತಂಕ ನನಗೆ ಇತ್ತು. ಈ ಆತಂಕವನ್ನು ಲಕ್ಕಪ್ಪಗೌಡರು ನಿವಾರಿಸಿದ್ದಾರೆ. ಆಯೋಗದ ಎಲ್ಲರೂ ಅವರ ಬಗ್ಗೆ ಮತ್ತು ಅವರ ಕೆಲಸದ ಬಗ್ಗೆ ಸದಭಿಪ್ರಾಯ ಹೊಂದಿದ್ದಾರೆ ಅಂತ ಹೇಳಿದರು. ಇದು ನಿಮ್ಮ ಮನಸ್ಸಿನಲ್ಲಿರಲಿ" ಎಂದರು. ಈ ಎಲ್ಲಾ ಜನರ ಪ್ರೀತಿ-ಅಭಿಮಾನಗಳಿಗೆ ನಾನು ಹೇಗೆ ಬೆಲೆ ಕಟ್ಟಲಿ ಎಂದು ನನ್ನ ಮನಸ್ಸು ಯೋಚಿಸುತ್ತಿತ್ತು. ಇದರಲ್ಲಿ ನಾನು ಏನಾದರೂ ಒಳ್ಳೆಯ ಹೆಸರು ಪಡೆದಿದ್ದರೆ ಅದಕ್ಕೆಲ್ಲಾ ಗುರುಗಳ ಪ್ರೀತಿ ಅಭಿಮಾನಗಳ ವಿದ್ಯುತ್‌ಸ್ಪರ್ಶವೇ ಕಾರಣವೆಂದು ನನ್ನ ಒಳದನಿ ಪಿಸುನುಡಿಯುತ್ತಿತ್ತು.

ಈ ಮಧ್ಯೆ ನನ್ನ ಮೈಸೂರು, ಮಂಗಳೂರು, ಬೆಂಗಳೂರು ಓಡಾಟದಲ್ಲಿ ನನ್ನ ಸಂಶೋಧನೆ ಕುಂಟತೊಡಗಿತ್ತು. ರಾಮಾಯಣ ದರ್ಶನಂನಂಥ ಮಹಾಕೃತಿಯನ್ನು ನನ್ನ ಸಂಶೋಧನೆಗೆ ಆರಿಸಿಕೊಂಡಿದ್ದರಿಂದ ಅದರ ಎತ್ತರಕ್ಕೆ ಬಿತ್ತರಕ್ಕೆ, ಅಂತಃಸತ್ವಕ್ಕೆ ತಕ್ಕ ಸಂಶೋಧನೆ ನನ್ನದಾಗಬೇಕೆಂಬ ಒಳ ತುಡಿತವೂ ಈ ನಿಧಾನಗತಿಗೆ ಕಾರಣವಾಗಿತ್ತು. ನನ್ನ ಸಂಶೋಧನೆ ಮುಗಿಯದೇ ಇದ್ದರಿಂದ ನನಗೆ ಬರಬೇಕಾದ ಬಡ್ತಿ ದೂರವಾಗುತ್ತಿತ್ತು ಎಂಬ ನೋವು ನನಗಿಂತ ಹೆಚ್ಚಾಗಿ ದೇಜಗೌ ಅವರನ್ನು ಕಾಡುತ್ತಿತ್ತು. ಅವರು ಪದೇ ಪದೇ ನನ್ನನ್ನು ವಿಚಾರಿಸುತ್ತಿದ್ದರು. "ನಿಮ್ಮ ತೊಂದರೆ ಹಾಗೂ ಅಳುಕು ನನಗೆ ಅರ್ಥವಾಗುವುದಿಲ್ಲ. ನಿಮಗೆ ಒಳ್ಳೆಯ ಬರವಣಿಗೆ ಇದೆ, ಶಬ್ದಸಂಪತ್ತು ಇದೆ, ಆಲೋಚನಾ ಶಕ್ತಿ ಇದೆ. ಇಷ್ಟಿದ್ದೂ ಬರವಣಿಗೆಯನ್ನು ತಡಮಾಡುತ್ತಿದ್ದೀರಿ. ಸರಿಯಾಗಿ ಕಾಗುಣಿತ ಬಾರದ ಎಷ್ಟೋ ಜನ ಸಂಶೋಧನೆ ಮುಗಿಸಿ ಪಿಎಚ್. ಡಿ. ಯನ್ನು ಪಡೆಯುತ್ತಿದ್ದಾರೆ. ನೀವು ಸಂಶೋಧನೆ ಮುಗಿಸಿ ಪಿಎಚ್.ಡಿ. ಪಡೆದರೆ ನಾನೇ ಪಡೆದಷ್ಟು

ಸಂತೋಷವಾಗುತ್ತದೆ. ಅದೂ ಅಲ್ಲದೆ ನಾನು ಭೇಟಿಯಾದಾಗಲೆಲ್ಲಾ ನಿಮ್ಮ ಸಂಶೋಧನೆ ಬಗ್ಗೆ ಕುವೆಂಪು ಅವರು ವಿಚಾರಿಸುತ್ತಿರುತ್ತಾರೆ. ಅವರು ಆರೋಗ್ಯದಿಂದರುವಾಗಲೇ ನಿಮ್ಮ ಕೆಲಸ ಮುಗಿಯಬೇಕೆಂಬುದು ನನ್ನ ಅಪೇಕ್ಷೆ'' ಎಂದರು ದೇಜಗೌ ತಮ್ಮ ಸ್ವಂತ ಮಗನ ಬಗೆಗೂ ಇಷ್ಟು ಕಾಳಜಿ, ಎಚ್ಚರ ವಹಿಸಿ ಒತ್ತಾಯ ಮಾಡುತ್ತಿದ್ದರೆ? ಎಂಬ ಸಂದೇಹ ಇಂದೂ ನನಗೆ ಇದೆ. ನಾನು ಬಿ. ಆರ್. ಪ್ರಾಜೆಕ್ಟಿನ ಸ್ನಾತಕೋತ್ತರ ಕೇಂದ್ರಕ್ಕೆ ಮರಳಿ ಬಂದು ಮತ್ತೆ ಸಂಶೋಧನೆಯಲ್ಲಿ ಮಗ್ನನಾದೆ. ನಾನು ಬರೆದು ಕೊಟ್ಟಂತೆಲ್ಲಾ ದೇಜಗೌ ಸ್ವಲ್ಪವೂ ವಿಳಂಬ ಮಾಡದೆ ಆಗಿಂದಾಗಲೇ ಪರಿಶೀಲಿಸಿ ಕಳಿಸುತ್ತಿದ್ದರು. ಅವರ ಪರಿಶೀಲನಾ ಶಕ್ತಿಯ ವೇಗಕ್ಕೆ ತಕ್ಕಂತೆ ನನ್ನ ಬರವಣಿಗೆ ಸಾಗುತ್ತಿರಲಿಲ್ಲ. ಸ್ವಲ್ಪ ನಿಧಾನವಾಗಿ ನೋಡಿ ಕಳಿಸಬಾರದೆ ಎಂದು ನನಗೆ ನಾನೇ ಅಂದುಕೊಳ್ಳುತ್ತಿದ್ದೆ. ಪ್ರಬಂಧ ರಚನೆ ಮಾಡಿ ಒಪ್ಪಿಸಿ ವರ್ಷಗಳು ಉರುಳಿದರೂ ಎಷ್ಟೋ ಜನ ಮಾರ್ಗದರ್ಶಕರು ಆ ಪ್ರಬಂಧಗಳನ್ನು ಪರಿಶೀಲಿಸಿ ಕೊಡದೆ ತಮ್ಮ ಶಿಷ್ಯರನ್ನು ಕಾಡಿಸುತ್ತಿದ್ದ ಉದಾಹರಣೆಗಳೆಷ್ಟೋ ನನ್ನ ಮುಂದಿದ್ದವು. ಅಂತಹುದರಲ್ಲಿ ತಮ್ಮ ಆಡಳಿತ, ಕನ್ನಡ ಪ್ರಸಾರ, ಶಿಕ್ಷಣ ಪ್ರಸಾರ, ನಿರಂತರ ಬರವಣಿಗೆ-ಇವುಗಳ ನಡುವೆಯೂ ಗಡಿಯಾರದಂತೆ ಕೆಲಸ ಮಾಡುವ ದೇಜಗೌ ಅವರನ್ನು ಕಂಡು ಅವರ ಕ್ರಿಯಾಶೀಲತೆಯ ಅದ್ಭುತಕ್ಕೆ ಬೆರಗಾಗುತ್ತಿದ್ದೆ. ನಾನು ಪ್ರಬಂಧವನ್ನು ಮುಗಿಸಿ ಟೈಪ್ ಮಾಡಿಸಿ ತೋರಿಸಿದಾಗ ಅವರಿಗಾದ ಆನಂದ ಹೇಳತೀರದು. ಇಂತಹ ದಿನಕ್ಕಾಗಿ ಎಷ್ಟೋ ವರ್ಷಗಳಿಂದ ಕಾಯುತ್ತಿದ್ದೆನೆಂದು ಅವರು ಉದ್ಗರಿಸಿದರು. ಮಹಾಪ್ರಬಂಧ ಪ್ರಕಟಣೆಯ ಕತೆಯೇ ಬೇರೆ. ಆ ಸಂದರ್ಭವನ್ನು ನೆನೆದುಕೊಂಡಾಗಲೆಲ್ಲಾ ನನ್ನ ಸೋಮಾರಿತನ, ಕ್ರಮರಾಹಿತ್ಯ ಮತ್ತು ಬೇಜವಾಬ್ದಾರಿತನಗಳು ನನ್ನನ್ನು ಚುಚ್ಚುತ್ತವೆ. ಪುಸ್ತಕಗಳ ಪ್ರಕಟಣೆ ಅತ್ಯಂತ ಕಷ್ಟತಮವಾಗಿರುವ ಸಂದರ್ಭದಲ್ಲಿ ಕುವೆಂಪು ವಿದ್ಯಾವರ್ಧಕ ಪರಿಷತ್ತಿನಿಂದ ಸುಮಾರು ಸಾವಿರ ಪುಟಗಳಷ್ಟು ದೀರ್ಘವಾದ ಮಹಾಪ್ರಬಂಧವನ್ನು ಅಚ್ಚು ಹಾಕಿಸುವುದಾಗಿ ದೇಜಗೌ ಘೋಷಿಸಿದಾಗ ಸಮುದ್ರಕ್ಕಾದರು ಒಂದು ಮೇರೆ ಇರಬಹುದು ಆದರೆ ದೇಜಗೌ ಅವರ ನನ್ನ ಬಗೆಗಿನ ವಾತ್ಸಲ್ಯಕ್ಕೆ ಮೇರೆ ಇದೆಯೆ? ಎಂದು ಆಶ್ಚರ್ಯಗೊಂಡೆ. ಸಂಭ್ರಮಗೊಂಡೆ. ನನ್ನ ಪ್ರಬಂಧ ರಚನೆಗೆ ಸುದೀರ್ಘ ಕಾಲ ಹಿಡಿದಿದ್ದರಿಂದ ಕೆಲವು ಕಡೆ ಅಡಿಟಿಪ್ಪಣಿಗಳು ಬಿಟ್ಟು ಹೋಗಿದ್ದವು. ಒಂದೇ ಕೃತಿಯ ಬೇರೆ ಬೇರೆ ಮುದ್ರಣಗಳನ್ನು ನಾನು ಆಧರಿಸಿದೆನಾದ್ದರಿಂದ ಪುಟಸಂಖ್ಯೆಗಳು ವ್ಯತ್ಯಾಸಗೊಳ್ಳುತ್ತಿದ್ದವು. ಎಷ್ಟೋ ವೇಳೆ ಉದ್ಧರಣಗಳ ಕ್ರಮಸಂಖ್ಯೆ ಸರಿಯಾಗಿ ಇರುತ್ತಿರಲಿಲ್ಲ. ಇಂತಹ ತಪ್ಪುಗಳೆಲ್ಲಾ ಇದ್ದರೂ ದೇಜಗೌ ಮತ್ತು ಅವರ ಶ್ರೀಮತಿ ಸಾವಿತ್ರಮ್ಮನವರು ಈ ಲೋಪಗಳನ್ನು ತುಂಬಲು ನಾನು ಆಧರಿಸಿರಬಹುದಾದ ಮೂಲ ಆಕರಗಳನ್ನು ಊಹಿಸಿ, ಶೋಧಿಸಿ, ಭರ್ತಿ ಮಾಡಿ, ಕಣ್ಣಿನಲ್ಲಿ ಕಣ್ಣಿಟ್ಟು ಈ ಕರಡನ್ನು ತಿದ್ದಿದರು. ಈ ಕಾರ್ಯ ಅವರಿಗೆ ಪ್ರಿಯವಾಗಿದ್ದರೂ ಅವರ ತಾಳ್ಮೆಯನ್ನು ಪರೀಕ್ಷಿಸುತ್ತಿತ್ತು. ನಾನು ಭೇಟಿಯಾದಾಗ ''ನೀವು ಎಂತಹ ಕೆಲಸ ಮಾಡಿದ್ದೀರಿ? ಈ ವಿದ್ವಾಂಸರ ಕಾಟ ಸಾಕಪ್ಪ ಎನಿಸಿಬಿಟ್ಟಿದೆ. ಈ ಕರಡನ್ನು ತಿದ್ದುವ ಹೊತ್ತಿಗೆ ನನಗಾಗಿರುವ ಬೇಸರ ಹೇಳತೀರದು'' ಎಂದು ತಮ್ಮ ಅಸಮಾಧಾನವನ್ನು

ಮುಚ್ಚಿಟ್ಟುಕೊಳ್ಳದೆ ವ್ಯಕ್ತಪಡಿಸಿದ್ದುಂಟು. ಅವರಿಗೆ ಈ ವಯಸ್ಸಿನಲ್ಲಿ ಈ ತೊಂದರೆಯನ್ನು ಕೊಟ್ಟಿದ್ದಕ್ಕಾಗಿ ನನ್ನ ಮನಸ್ಸು ಪರಿತಪಿಸುತ್ತಿತ್ತಾದರೂ ಗತ್ಯಂತರವಿಲ್ಲವಾಗಿತ್ತು. ಈ ಮಹಾನಿಬಂಧಕ್ಕೆ ಅವರು ಬರೆದ ಮುನ್ನುಡಿಯು ನನ್ನ ಸಂಶೋಧನೆ ಸತ್ವ, ಮಹತ್ವಗಳಿಗಿಂತ ಅವರ ಹೃದಯದ ನಿರ್ಮಲತೆ, ಔದಾರ್ಯ ಮತ್ತು ಔನ್ನತ್ಯಗಳಿಗೆ ಸಾಕ್ಷಿಯಾಗಿದೆ. ತಾವು ಹೋದಲ್ಲಿ ಬಂದಲ್ಲೆಲ್ಲಾ ಕಂಡ ಕಂಡ ವಿದ್ವಾಂಸರೊಡನೆ ನನ್ನ ಈ ಕೃತಿಯ ಬಗೆಗೆ ಅಪಾರ ಪ್ರಶಂಸೆಯ ಮಳೆಯನ್ನು ಕರೆದು, ನನ್ನ ವ್ಯಕ್ತಿತ್ವವನ್ನು ನಾನು ಇರುವುದಕ್ಕಿಂತ ಹೆಚ್ಚಾಗಿ ಎತ್ತರಿಸಿಬಿಟ್ಟಿದ್ದರು. ಅವರ ಪ್ರೀತಿ ಮತ್ತು ಪ್ರಶಂಸೆಗಳ ಮೂಲಕ ಹಲವು ವಿದ್ವಾಂಸರ ಕಣ್ಣುಗಳಲ್ಲಿ ನಾನು ದೊಡ್ಡವನಾಗಿದ್ದೇನೆ. ಈ ಕೃತಿಯನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಮತ್ತು ಅದಕ್ಕೆ ವಿಶ್ವಮಾನವ ಪ್ರಶಸ್ತಿ ಬಂದ ಸಂದರ್ಭದಲ್ಲಿನ ದೇಜಗೌ ಮತ್ತು ಅವರ ಶ್ರೀಮತಿಯವರ ಓಡಾಟ, ಸಂತಸ ಹಾಗೂ ಸಡಗರಗಳನ್ನು ನಾನು ಮರೆಯುವಂತೆಯೇ ಇಲ್ಲ. ಇಷ್ಟಕ್ಕೂ ಅವರಿಗೆ ತೃಪ್ತಿ ಇಲ್ಲ. ನಾನು ನನ್ನ ಸ್ಥಾನದಲ್ಲಿ ಮತ್ತಷ್ಟು ಮೇಲೆ ಮೇಲೇರಬೇಕು ಎಂಬುದೇ ಅವರ ಕನಸು ಮತ್ತು ಪ್ರಯತ್ನ. ಇಂತಹ ಅನುಪಮ ಶಿಷ್ಯ ವಾತ್ಸಲ್ಯದ ಮಹಾಗಣಿಯನ್ನು ಪಡೆದ ನಾನು ಧನ್ಯ. ಎಷ್ಟು ಜನಕ್ಕೆ ಇಂತಹ ಭಾಗ್ಯ ಇದೆ?.

-4-

ನನ್ನ ಬದುಕಿನಲ್ಲಿ ಬೆಳಕನ್ನು, ಮಾರ್ಗವನ್ನು ದೇಜಗೌ ನಿರ್ಮಿಸಿದ ಉದಾಹರಣೆ ಒಂದು ಮಾತ್ರ. ನನ್ನಂತಹ ನೂರಾರು ಜನ ಶಿಷ್ಯರು ಅವರ ಬದುಕಿನ ಪಥದಲ್ಲಿ ಬಂದು ಹೋಗಿದ್ದಾರೆ. ಕನ್ನಡದ ಬಗ್ಗೆ ಆಸಕ್ತಿ ಇರುವ, ವಾಕ್‌ಶಕ್ತಿ ಇರುವ, ಬರವಣಿಗೆ ಇರುವ ಎಲ್ಲಾ ಶಿಷ್ಯರ ಬಗೆಗೂ ಕುಂದದ, ನಂದದ ವಾತ್ಸಲ್ಯವನ್ನು, ಸಂಬಂಧವನ್ನು ಅವರು ಪೋಷಿಸಿಕೊಂಡು ಬಂದಿದ್ದಾರೆ.

ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ, ಹಾ. ಮಾ. ನಾಯಕ, ಪ್ರೊ. ಸುಜನಾ, ಪ್ರೊ. ಪ. ವಿ. ಚಂದ್ರಶೇಖರ್, ಪ್ರೊ. ಜೀ. ಶಂ. ಪರಮಶಿವಯ್ಯ, ಪ್ರೊ. ಸಿ. ಪಿ. ಕೃಷ್ಣಕುಮಾರ್, ಪ್ರೊ. ರಾಮೇಗೌಡ, ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಸುಧಾಕರ, ಪ್ರೊ. ತೀ. ನಂ. ಶಂಕರನಾರಾಯಣ, ಶ್ರೀಮತಿ ರುಕ್ಕಮ್ಮ, ಪ್ರೊ. ಹಂಪನಾ, ಪ್ರೊ. ಟಿ. ವಿ. ವೆಂಕಟಾಚಲಶಾಸ್ತ್ರೀ, ಡಾ. ಪ್ರಧಾನ್ ಗುರುದತ್, ಶ್ರೀ ಕೃಷ್ಣ ಆಲನಹಳ್ಳಿ, ಶ್ರೀ ಹ. ಕ. ರಾಜೇಗೌಡ, ಪ್ರೊ. ಡಿ. ಕೆ. ರಾಜೇಂದ್ರ ಮುಂತಾದ ಅವರ ಅಚ್ಚುಮೆಚ್ಚಿನ ಶಿಷ್ಯ ಸಮುದಾಯ ತಮ್ಮ ಮತ್ತು ದೇಜಗೌ ಸಂಬಂಧದ ಬಗ್ಗೆ ಹೇಳಿರುವ ಮಾತುಗಳು ದೇಜಗೌ ಅವರು ಶಿಷ್ಯರ ಮೇಲೆ ಧಾರೆಯೆರೆದ ಪ್ರೀತಿಯ ಅಮೂಲ್ಯ ಪ್ರತೀಕಗಳಾಗಿವೆ.

ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಸಾಧನೆ ಮಾಡಿದ ದಿವಂಗತ ಆಲನಹಳ್ಳಿ ಕೃಷ್ಣ ಹೀಗೆ ಬರೆಯುತ್ತಾರೆ: " ದೇಜಗೌ ಅವರನ್ನು ಗುರುಗಳಾಗಿ, ಕುಲಪತಿಗಳಾಗಿ ಎಲ್ಲಕ್ಕೂ ಮಿಗಿಲಾಗಿ ನನ್ನ ಬದುಕಿನಲ್ಲಿ ಕಂಡ ಒಂದಿಬ್ಬರೇ ಅಂತಃಕರಣದ ವ್ಯಕ್ತಿಗಳಲ್ಲಿ ಒಬ್ಬರಾಗಿ ಕಂಡಿದ್ದೇನೆ. ಅವರನ್ನು ಅವರ ಎಲ್ಲಾ ಬಗೆಯ ಸ್ವರೂಪದಲ್ಲಿ ಕಂಡಿರುವ ನನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿದಿರುವ ಒಂದು ದೊಡ್ಡ ಗುಣವನ್ನಂತೂ ಹೇಳಲರುವುದು

ಸಾಧ್ಯವೇ ಇಲ್ಲ. ಅದೇ ಅವರ ಅತ್ಯುದಾತ್ತ ಮಾನವೀಯತೆ. ಅವರಲ್ಲಿ ನಾನು ಕಂಡ ಅನುಭವಿಸಿದ ಈ ಮಹತ್ವದ ಗುಣವನ್ನು ವಿವರಿಸಲು ಹಲವಾರು ಘಟನೆಗಳನ್ನೇ ಹೇಳಬೇಕಾಗುತ್ತದೆ. ಅವುಗಳ ನೆನಪೇ ನನ್ನನ್ನು ತೀವ್ರ ಭಾವಾತಿರೇಕಕ್ಕೆ ಒಳಪಡಿಸುತ್ತಿರುವಾಗ ಅವುಗಳನ್ನು ಬರೆಯುತ್ತಾ ಹೋದರೆ ತೀರ ಭಾವುಕನಾಗಿಬಿಡಬಹುದು."

ಪ್ರೊ. ಹಂಪನಾ ಹೇಳುತ್ತಾರೆ: " ಆಚಾರ್ಯ ದೇಜಗೌ ಮೊದಲನೆಯದಾಗಿ ವಿದ್ಯೆ ಕಲಿಸಿದ ಗುರು. ಎರಡನೆಯದಾಗಿ ಚೆನ್ನಾಗಿ ಬದುಕುವ ದಾರಿ ತೋರಿದ, ಜೀವನ ಕಲೆಯನ್ನು ತಿಳಿಸಿದ ಮಾರ್ಗದರ್ಶಕರು. ಮೂರನೆಯದಾಗಿ ಎಂಥ ಕಠಿಣ ಪ್ರಸಂಗ ಬಂದರೂ ಅದನ್ನು ನಗುತ್ತಾ ಎದುರಿಸುವ ಧೈರ್ಯ, ಸ್ಥೈರ್ಯಗಳನ್ನು ತುಂಬಿಕೊಟ್ಟ ಹೋರಾಟಗಾರರು. ನಾಲ್ಕನೆಯದಾಗಿ ಬರವಣಿಗೆಯಲ್ಲಿ ತೊಡಗಲೂ ನಿರತನಾಗಲೂ ಬೆನ್ನು ಚಪ್ಪರಿಸಿದ ಪ್ರೋತ್ಸಾಹಕರು. ಐದನೆಯದಾಗಿ ಹಾಗೂ ಮುಖ್ಯವಾಗಿ ಕನ್ನಡ ನಾಡು-ನುಡಿಗಳ ಪ್ರೇಮವನ್ನು ಬೆಳೆಸಿ ಕನ್ನಡ ದೀಕ್ಷೆ ಕೊಟ್ಟವರು."

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಆಧುನಿಕ ಕನ್ನಡ ಲೋಕದ ಶ್ರೇಷ್ಠ ವಿದ್ವಾಂಸರಲ್ಲೊಬ್ಬರು. ಶಾಸ್ತ್ರ ವಿಷಯಗಳಲ್ಲಿ ಅವರನ್ನು ಸರಿಗಟ್ಟಿಸುವವರ ಸಂಖ್ಯೆ ವಿರಳ. ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದ ಅವರನ್ನು ಕನ್ನಡ ಅಧ್ಯಯನ ಸಂಸ್ಥೆಗೆ ಕರೆತಂದವರು, ಅವರ ಬರಹ ಬದುಕಿಗೆ ದಿಕ್ಕಾದವರು ದೇಜಗೌ. ಅವರು ಅಧ್ಯಯನ ಸಂಸ್ಥೆಗೆ ಬಂದಾಗ ಅವರು ಬರುವ ಸೂಚನೆಯನ್ನು ಮೊದಲೇ ತಿಳಿಸಿದ್ದ ದೇಜಗೌ ಅನಂತರ ಶಾಸ್ತ್ರಿಗಳನ್ನು ನೋಡಲು ಬಂದರಂತೆ. ಯೋಗಕ್ಷೇಮವನ್ನು ವಿಚಾರಿಸಿದ ನಂತರ ಒಂದು ಕ್ಷಣ ಸುಮ್ಮನಿದ್ದು "ನಿಮ್ಮ ಕೆಲಸದ ಮೇಲೆ ನಿಗವಿರಲಿ, ಕೆಲಸವನ್ನು ಚೆನ್ನಾಗಿ ಮಾಡಿಕೊಂಡು ಹೋಗಿ,Work ಎಂದಿಷ್ಟೇ ಹೇಳಿ ಒಂದು ಕ್ಷಣವೂ ಅಲ್ಲಿ ನಿಲ್ಲದೆ ಹೋದರಂತೆ. ಕನ್ನಡ ಕಾಯಕವನ್ನು ಕೈಗೊಂಡಿದ್ದವರು ಯಾರೇ ಆಗಿರಲಿ ಹೊತ್ತು ಗೊತ್ತುಗಳೆನ್ನದೆ ದೇಜಗೌ ಅವರನ್ನು ಸಂದರ್ಶಿಬಹುದಾಗಿತ್ತು ಎಂಬ ಬಗ್ಗೆ ಅವರು ಹಲವು ಘಟನೆಗಳನ್ನು ಉಲ್ಲೇಖಿಸಿ ಹೀಗೆ ಬರೆಯುತ್ತಾರೆ: "ನಾನು ತುಂಬ ಅಲ್ಪ ಅಲಕ್ಷಿತ ಎಂದು ತನ್ನನ್ನು ಭಾವಿಸುವಾತನೇ ಗಣ್ಯ, ಸಂಭಾವಿತ ಎಂಬುದಾಗಿ ತಿಳಿಯುವಂತೆ ಆತನಲ್ಲಿ ನನ್ನ ಗುರುಗಳು ಆತ್ಮಪ್ರತ್ಯಯವನ್ನು ಹೊಮ್ಮಿಸುತ್ತಾರೆ; ಆತನಲ್ಲಿ ಸುಪ್ತವಾಗಿರುವ ಕಾರ್ಯ ಶಕ್ತಿಯನ್ನು ಗುಣಾಂಶವನ್ನೂ ಅಂತರಾಳದಿಂದ ಎತ್ತಿ ತೆಗೆದು ಕಾರ್ಯಶೀಲತೆಯ ಸೆಲೆಯನ್ನು ಚಿಮ್ಮಿಸುತ್ತಾರೆ.......ಗುಣಗ್ರಹಣ ಶಕ್ತಿ ಅನಸೂಯಾಶೀಲ ವ್ಯಕ್ತಿಗೆ ಮಾತ್ರ ಸಾಧ್ಯ; ಅಂತಹ ವ್ಯಕ್ತಿ ಲೋಕದಲ್ಲಿ ದುರ್ಲಭ. ಈ ದುರ್ಲಭವಾದ ಗುಣವಿಶೇಷ ನನ್ನ ಗುರುಗಳಲ್ಲಿ ಭೂಷಣಪ್ರಾಯವಾಗಿ ಶೋಭಿಸುತ್ತಿದೆ."

ಅವರ ಶಿಷ್ಯ ವರ್ಗದಲ್ಲಿ ಶ್ರೀಮತಿ ರುಕ್ಕಮ್ಮ ಒಬ್ಬರು. ಅವರು ಒಮ್ಮೆ ಭಾಷಣ ಮಾಡಿದಾಗ ದೇಜಗೌ "ನಿಮ್ಮ ಭಾಷಣವನ್ನು ಕೇಳಿ ಸಂತೋಷವಾಯಿತು" ಎಂದರಂತೆ. ಆಗ ರುಕ್ಕಮ್ಮನವರು "ನಿಮ್ಮನ್ನು ನೋಡಿ ಧೈರ್ಯ ತಂದುಕೊಂಡೆ" ಎಂದರು. ಆಗ ದೇಜಗೌ ಹೇಳಿದ ಮಾತು ಇದು: " ಇದೀಗ ನಾನು ಮೆಚ್ಚುವ ಬಹುಮಾನ. ನನ್ನನ್ನು

ನೋಡಿ ನನ್ನ ಶಿಷ್ಯರಿಗೆ ಧೈರ್ಯ ಬರುವುದಾದರೆ.... ಅದಕ್ಕಿಂತ ನನಗೇನು ಬೇಕು?" ಶ್ರೀಮತಿ ರುಕ್ಕಮ್ಮ ಮತ್ತೆ ಬರೆಯುತ್ತಾರೆ "ತರಗತಿಗಳಲ್ಲಿ, ಸಭೆ-ಸಮಾರಂಭಗಳಲ್ಲಿ, ಮನೆಯಲ್ಲಿ ನಾನು ಗುರುಗಳನ್ನು ಹತ್ತಾರು ವರ್ಷಗಳಿಂದ ಕಾಣುತ್ತಲೇ ಇದ್ದೇನೆ. ಎಲ್ಲ ಕಡೆಗಳಲ್ಲೂ ನಾನು ಕಂಡುದು ಅವರಲ್ಲಿ ಓತಪ್ರೋತವಾಗಿ ತುಂಬಿಕೊಂಡ ಸ್ನೇಹಪರತೆ. ಹತ್ತಾರು ಜನ ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಸೇರಿಸಿಕೊಂಡು ಅವರನ್ನು ತಿಂಡಿ-ತಿನಿಸುಗಳಿಂದ, ಸ್ನೇಹ ಉತ್ತೇಜನದ ಮಾತುಗಳಿಂದ ಉಪಚರಿಸುತ್ತ ಒಳಿತನ್ನು ಬೆಳೆಸುವ ಸನ್ನಾಹದಲ್ಲಿಯೇ ಮಗ್ನರಾಗಿರುತ್ತಾರೆ. ಇಂತಿಂತಹ ವಿಚಾರವಾಗಿ ನಮ್ಮಲ್ಲಿ ಪುಸ್ತಕಗಳಿಲ್ಲ, ಬರೆಯಿರಿ ಎಂದು ಪ್ರೇರೆಪಿಸುತ್ತಾರೆ.... ವಿದ್ಯಾರ್ಥಿಗಳೂ, ಸಹೋದ್ಯೋಗಿಗಳೂ ಅವರ ಪಾಲಿಗೆ ಮನೆಯ ಜನರಂತೆ, ಬಂಧುಗಳಂತೆ ಕಂಡು ಬರುತ್ತಾರೆ.

ದೇಜಗೌ ಅವರ ಬೋಧನ ಕಲೆಯ ಬಗ್ಗೆ ಪ್ರೊ. ಸುಧಾಕರ್ ಅವರ ಗ್ರಹಿಕೆ ಹೀಗೆ ಇದೆ: "ಅವರು ಪಾಠ ಮಾಡುವ ರೀತಿ ತುಂಬಾ ಸರಳ, ಸ್ಪಷ್ಟ. ಆಡುನುಡಿಯ ದನಿಯನ್ನು ಮೈಗೂಡಿಸಿಕೊಂಡ ಶೈಲಿ, ಜೊತೆಗೆ ಪರೇಂಗಿತ ಪ್ರಜ್ಞೆಯಿಂದ ಮೂಡುವ ಹಿತಮಿತ ವಿವರಣೆ: ಅಮೂರ್ತ ವಿಷಯಗಳನ್ನು ಮೂರ್ತ ನಿದರ್ಶನಗಳೊಡನೆ ಮುಷ್ಟಿಗ್ರಾಹ್ಯವನ್ನಾಗಿ ಮಾಡುವ ಗಾರುಡಿಗನ ಮೋಡಿ." ಅವರ ಗುರು ಸ್ಮರಣೆ ಮತ್ತೆ ಹೀಗೆ ಮುಂದುವರಿಯುತ್ತದೆ: "ತರುಣರೊಡನೆ ಕಲೆಯುವ, ಒಲಿಯುವ ಅವರ ಗುಣ ಪರಸ್ಪರ ಉತ್ತೇಜಕ; ಸ್ಫೂರ್ತಿದಾಯಕ. ತರುಣ ಲೇಖಕರ ಕೃತಿಗಳು ಹೊರಬರಲು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನೆರವು ನೀಡುವುದು; ಕೃತಿರಚನೆ ಮಾಡಲು ಸ್ಫೂರ್ತಿ ತುಂಬುವುದು; ಅಗತ್ಯ ಬಿದ್ದರೆ ಒತ್ತಾಯ ಮಾಡುವುದು ಅವರ ಸ್ವಭಾವ. ಕನ್ನಡ ನುಡಿಯ ಸೇವೆಯನ್ನು ಮಾಡದ ಮೈಗಳ್ಳರನ್ನು, ವೃಥಾ ಕಾಲಹರಣ ಮಾಡುವವರನ್ನು ಬೈದು ಛಲ ಮೂಡಿಸುವುದೂ ಉಂಟು... ಮತ್ತೊಂದು ಗುಣವೆಂದರೆ ನಂಬಿದವರ ಕೈ ಬಿಡದೆ ಇರುವುದು. ಒಮ್ಮೆ ಅವರ ಮಡಿಲಿಗೆ ಬಿದ್ದವರ ಹಿತರಕ್ಷಣೆಯನ್ನು ಕೊನೆತನಕ ಕಾಯದೆ ಇರುವುದಿಲ್ಲ. ಅನ್ಯಾಯಕ್ಕೆ ಮಣೆ ಹಾಕುವರಲ್ಲ. ನ್ಯಾಯಬಾಹಿರ ಮಾರ್ಗ ಹಿಡಿದವರಿಗೆ ಬುದ್ಧಿ ಕಲಿಸದೆ ಸುಮ್ಮನಿರುವುದೂ ಇಲ್ಲ. ಎಂದೂ ಆತ್ಮಗೌರವಕ್ಕೆ ಚ್ಯುತಿ ತಂದುಕೊಂಡು ತಲೆತಗ್ಗಿಸಿ ಬಾಳುವ ಪ್ರವೃತ್ತಿ ಅವರದಲ್ಲ."

ಪ್ರೊ. ಪ. ವಿ. ಚಂದ್ರಶೇಖರ ಅವರು ದೇಜಗೌ ಅವರನ್ನು "ಶಿಷ್ಯರ ರಕ್ಷಾಮಣಿ" ಎಂದು ಕರೆದಿದ್ದಾರೆ. ಗುರುಕರುಣೆ ತಮ್ಮ ಬದುಕಿಗೆ ಹಾದುಬಂದ ಬಗೆಯನ್ನು ಪ್ರಸ್ತಾಪಿಸುತ್ತಾ ಅವರು ಹೀಗೆ ಉಲ್ಲೇಖಿಸುತ್ತಾರೆ: "ದೇಜಗೌ ಅವರು ಒಂದು ಶಕ್ತಿ. ಅವರು ಇರುವ ಕಡೆ ಕೆಲಸ ನಡೆಯುತ್ತದೆ. ಕೆಲಸ ಮಾಡುವವರಿಗೆ ಸ್ಫೂರ್ತಿ ದೊರೆಯುತ್ತದೆ. ಕೆಲಸ ಮಾಡಿದವರಿಗೆ ಪುರಸ್ಕಾರ ಲಭಿಸುತ್ತದೆ. ಹೊರನೋಟಕ್ಕೆ ಕೆಲವು ವೇಳೆ ಅವರು ಪರಶುರಾಮರಾಗಿ ಕಂಡರೂ ಅಂತರಂಗ ಅತಿ ಕೋಮಲ. ಮನೆಯವರ ಮೇಲೆ, ಶಿಷ್ಯರ ಮೇಲೆ ಅವರಿಗೆ ಅತೀವವಾದ ಪ್ರೀತಿ. ಶಿಷ್ಯರಲ್ಲಿ ಯಾರಾದರೂ ಒಂದು ಒಳ್ಳೆಯ ಕೆಲಸ ಮಾಡಿದರೆ ಅದನ್ನು ಎತ್ತಿ ಹಾಡಿ ಪುರಸ್ಕರಿಸಿ, ಪ್ರೋತ್ಸಾಹಿಸುವ ಉದಾರ

ಗುಣ. ಹರಿಹರನ ಈಶ್ವರ ಭಕ್ತನ ಆಧಿಕ್ಯಕ್ಕೆ ತಾನೂ ಅಧಿಕಗೊಳ್ಳುವಂತೆ ದೇಜಗೌರವರು ಶಿಷ್ಯರ ಒಳಿತಿಗೆ ಮೋದಗೊಳ್ಳುವರು. ಅವರ ಕಣ್ಣು ಸದಾ ನಾಡಿನ ಪ್ರತಿಭೆಗಳನ್ನು ಹುಡುಕುತ್ತಾ ಇರುತ್ತದೆ. ಅದು ಕಂಡ ಕೂಡಲೇ ಅವರ ಹೃದಯ ಅವರ ನೆರವಿಗೆ, ಪ್ರೋತ್ಸಾಹಕ್ಕೆ, ವಿಕಾಸಕ್ಕೆ ಧಾವಿಸುತ್ತದೆ.

ಶ್ರೀ ಪರಶಿವಮೂರ್ತಿ ಅವರ ಅನುಭವವ ಇದು: ''....... ಗುಂಪಿನಲ್ಲಿ ತಿರಸ್ಕಾರಕ್ಕೆ ಗುರಿಯಾಗಿದ್ದ ನಮ್ಮನ್ನು ಹತ್ತಿರ ಸೆಳೆದುಕೊಂಡವರೆಂದರೆ ದೇಜಗೌ. ಶ್ರೀ ಕುವೆಂಪು ಪ್ರಾಧ್ಯಾಪಕರಾಗುವುದಕ್ಕೆ ಮುಂಚೆ ಕನ್ನಡಕ್ಕಾಗಲೀ, ಕನ್ನಡ ಅಧ್ಯಾಪಕ, ವಿದ್ಯಾರ್ಥಿಗಳಿಗಾಗಲೀ ಮಹಾರಾಜಾ ಕಾಲೇಜಿನಲ್ಲಿ ಕೊನೆಯ ಸ್ಥಾನವೇ ಮೀಸಲಿದ್ದದ್ದು. ಈ ಹೀನಸ್ಥಾನದಿಂದ ಮೇಲೇಳಬೇಕು. ನಾವು ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ಸೆಟೆದು ನಿಂತು ತೋರಿಸಬೇಕು; ಕನ್ನಡಕ್ಕಾಗಿ ಕೆಚ್ಚಿನಿಂದ ಹೋರಾಟ ಮಾಡಬೇಕು. ಕ್ರಾಂತಿ ಮಾಡಲು ಹಿಂಜರಿಯಬಾರದು ಎಂಬ ಪ್ರೋತ್ಸಾಹಕರ ವೀರನುಡಿಗಳು ಪಾಠದ ಮಧ್ಯೆ ಸಿಡಿದು ಬರುತ್ತಿದ್ದವು. ಅವರ ಈ ದಿಟ್ಟತನಕ್ಕೇ ನಾವು ಮಾರುಹೋದದ್ದು. ಅಂತೆಯೇ ಅವರು ನಮಗೆ ಆತ್ಮೀಯ ಗುರುಗಳು ಮಾರ್ಗದರ್ಶಿಗಳು ಆಗಿದ್ದರು''.

ಪ್ರೊ. ತಿಪ್ಪೇರುದ್ರಸ್ವಾಮಿಯವರು ತಮ್ಮ ಗುರುಗಳ ಬಗ್ಗೆ ಹೀಗೆ ಬರೆಯುತ್ತಾರೆ: ''ಯಾವುದೇವಿಷಯವನ್ನು ಅವರು ಎತ್ತಿಕೊಂಡರೂ ಆ ವಿಷಯವನ್ನು ಕುರಿತು ಅದುವರೆಗೆ ನಡೆದ ಚರ್ಚೆಯನ್ನೆಲ್ಲಾ ಸಂಗ್ರಹಿಸುತ್ತಿದ್ದರು. ಅದನ್ನೆಲ್ಲಾ ವ್ಯವಸ್ಥಿತವಾಗಿ ಜೋಡಿಸಿ, ವಿಮರ್ಶಾತ್ಮಕವಾಗಿ ಪರಶೀಲಿಸಿ, ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಿದ್ದರು. ಆ ವಿಷಯದ ಮೇಲೆ ಇನ್ನೂ ಹೆಚ್ಚಿನ ಅಧ್ಯಯನಕ್ಕೆ ತಮ್ಮನ್ನು ಪ್ರಚೋದಿಸುತ್ತಿದ್ದರು; ಮತ್ತು ಅದಕ್ಕೆ ಮಾರ್ಗದರ್ಶಕರಾಗಿ ನಿಲ್ಲುವಂತಹ ರೀತಿಯಲ್ಲಿ ಟಿಪ್ಪಣಿಗಳನ್ನು ಕೊಡುತ್ತಿದ್ದರು. ಅವರು ಕೊಟ್ಟ ಟಿಪ್ಪಣಿಗಳು ಇನ್ನೂ ನನ್ನ ಬಳಿಯಲ್ಲಿವೆ......... ಅವರು ನಮ್ಮ ಮೇಲೆ ತೋರುತ್ತಿದ್ದ ಪ್ರೀತಿ-ವಾತ್ಸಲ್ಯ ನಮಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು. ನಾವು ಅವರ ವಿದ್ಯಾರ್ಥಿಗಳಾಗಿದ್ದದು ಕೆಲವು ತಿಂಗಳುಗಳು ಮಾತ್ರ. ಆದರೆ ಅವರ ಶಿಷ್ಯವಾತ್ಸಲ್ಯ ಅಂದಿನಿಂದಲೂ ಏಕಪ್ರಕಾರವಾಗಿ ಉಳಿದುಕೊಂಡು ಬಂದಿದೆ; ಬೆಳೆದುಕೊಂಡು ಬಂದಿದೆ.''

ದೇಜಗೌ ಅವರನ್ನು ಪ್ರೊ. ಸಿ. ಪಿ. ಕೆ. ಅನ್ನದಾತನೆಂದು ಕರೆದು ಅವರು ತಮಗೆ ಮಾಡಿರುವ ವಿವಿಧ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿ, ''ನನಗೆ ಪ್ರೊ. ದೇಜಗೌ ಅವರು ಮಾಡಿದ ಒಳಿತು ಇಷ್ಟೇ ಅಲ್ಲ; ನನ್ನ ಬಾಳಿನ ಹೆಚ್ಚು ಭಾಗ ಅವರಿಗೆ ಋಣಿಯಾಗಿದೆ''
ಎಂದಿದ್ದಾರೆ.

ದೇಜಗೌ ಅವರನ್ನು 'ಕನ್ನಡದ ಪುಣ್ಯ' ಎಂದು ಕರೆದಿರುವ ಡಾ.ಪ್ರಧಾನ್ ಗುರುದತ್ ಅವರು ತಮ್ಮ ಅಧ್ಯಯನಕ್ಕೆ ತಮ್ಮ ಬದುಕಿಗೆ ದೇಜಗೌ ನೀಡಿದ ಹಲವು ಬಗೆಯ ನೆರವುಗಳನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಜಾತಿ-ಪಂಥಗಳನ್ನು

ಮೀರಿದ ಅವರ ವಿದ್ಯಾರ್ಥಿಪ್ರೇಮ ಎಷ್ಟು ನಿರ್ಮಲವಾದುದು, ಆದರ್ಶವಾದುದು ಎಂದು ಕೊಂಡಾಡುತ್ತಾರೆ. ಅವರ ಉಲ್ಲೇಖವೊಂದು ಹೀಗೆ ಇದೆ: "ದೇಜಗೌ ಅವರು ತರಗತಿಯ ಗುರು ಮಾತ್ರವಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಅಸಂಖ್ಯಾತ ಚೇತನಗಳು ತಮ್ಮ ಪಾಲಿನ ಧಾರೆಯನ್ನೆರೆದು ಕನ್ನಡವನ್ನು ಸಂಪುಷ್ಟವಾಗಿಸಬೇಕೆನ್ನುವುದು ಅವರ ಹಂಬಲ. ಹೀಗಾಗಿ ಯಾರೇ ಮಾಡಿದ ಅಲ್ಪ ಕೆಲಸವನ್ನೂ ಮನಸಾರೆ ಮೆಚ್ಚಿ, ಬಹಿರಂಗವಾಗಿಯೂ ಮೆಚ್ಚಿಗೆ ಸೂಚಿಸಿ ಮತ್ತಷ್ಟು ಕೆಲಸ ಮಾಡುವಂತೆ ಪ್ರೇರಣೆ, ಪ್ರೋತ್ಸಾಹ ನೀಡುವ ಅಪೂರ್ವ ಹಿರಿತನ ಅವರಲ್ಲಿದೆ..... ಅವರು ಕೊಟ್ಟ ಬೆಂಬಲ ಹಾಗೂ ಪ್ರೋತ್ಸಾಹ, ಸಮಾಧಾನಪೂರ್ವಕವಾಗಿ ನೀಡಿದ ತಿಳುವಳಿಕೆ, ಪ್ರೇಮಾಭಿಮಾನಗಳಿಂದ ವಾತ್ಸಲ್ಯದಪೂರದಲ್ಲಿ ಮುಳುಗಿಸಿದ್ದು ಇವುಗಳನ್ನು ....." ಹಲವು ಸಂದರ್ಭಗಳಲ್ಲಿ ನಮ್ಮನ್ನು ನಮ್ಮ ಪ್ರಗತಿಗಾಗಿಯೇ ಛೇಡಿಸಿದ ಪ್ರಸಂಗಗಳು ಮರೆಯಾಗುತ್ತವೆ.

ಪ್ರೊ. ರಾಮೇಗೌಡ ಅವರ ದೃಷ್ಟಿಯಲ್ಲಿ ದೇಜಗೌ 'ವಾತ್ಸಲ್ಯ ವೃಕ್ಷ'. ತಮ್ಮ ಬದುಕಿನಲ್ಲಿ ಅವರು ನೆರವಾದ ಬಗೆಗಳನ್ನು ಪ್ರಸ್ತಾಪಿಸುತ್ತಾ ಹೀಗೆ ಉದ್ಗರಿಸುತ್ತಾರೆ: "ಶಿಷ್ಯರ ಮೇಲಿನ ಅವರ ಮಮತೆಯನ್ನು ಚಿತ್ರಿಸುವ ಪ್ರಸಂಗಗಳು ಒಂದಲ್ಲ, ಹಲವಾರಿವೆ. ಅದರಲ್ಲಿ ಎಷ್ಟೋ ಸಾರಿ ಗುರು-ಶಿಷ್ಯ ಎಂಬ ಭೇದವಳಿದು ಒಂದಾಗಿ ಬಿಡುತ್ತಿದ್ದುದು ಸ್ಮರಣೀಯ. ಇಂತಹ ಒಂದೊಂದು ಪ್ರಸಂಗವೂ ಅವರ ಅಂತಃಕರಣವನ್ನು ಇನ್ನಿಲ್ಲದಂತೆ ಪರಿಚಯಿಸುತ್ತದೆ.......
ಉಪಕಾರ ಭಾವ ಅವರ ರಕ್ತಗತವಾದ ಗುಣ. ಅವರಿಂದ ಉಪಕೃತರಾದ ಜನ ನಾಡಿನಾದ್ಯಂತ ಇದ್ದಾರೆ. ಯಾರಿಗೆ ಏನು ಸಹಾಯ ಮಾಡಲಿ ಎಂದು ಸದಾ ಚಿಂತಿಸುತ್ತಿರುತ್ತಾರೆ. ಅವರು ಯಾರಿಗೇ ಆಗಲಿ ಕೇಡೆಣಿಸಿದ್ದನ್ನು ನಾನು ಕಂಡಿಲ್ಲ. ಅವರನ್ನು ದೂಷಿಸುವವರೂ ಅವರಿಂದ ಸಹಾಯ ಪಡೆದಿರುತ್ತಾರೆಂಬುದು ಒಂದು ವಿಶೇಷ ವಿಚಾರ...... ದೇಜಗೌ ಅವರು ತಮ್ಮ ಶಿಷ್ಯರ ಮೇಲಿನ ಪ್ರೀತಿಯನ್ನು ಎಂದೂ ಕಡಿಮೆಗೊಳಿಸಿದವರಲ್ಲ. ಅಧಿಕಾರದ ಯಾವ ಹಂತವನ್ನು ಹತ್ತಿದರೂ ಅವರ ಅಂತಃಕರಣ ಮಾತ್ರ ಬದಲಾವಣೆ ಹೊಂದಿಲ್ಲ. ಪರಿಚಯವಾದಂದಿನಿಂದ ಇಲ್ಲಿಯವರೆವಿಗೂ ಅವರ ಪ್ರೀತಿ, ವಾತ್ಸಲ್ಯ, ಮಾರ್ಗದರ್ಶನಗಳು ಒಂದೇ ಸಮನಾಗಿವೆ. ಒಮ್ಮೆ ಅವರ ವಾತ್ಸಲ್ಯದ ವಲಯಕ್ಕೆ ಬಂದೆವೆಂದರೆ, ಇನ್ನಿಲ್ಲದಂತೆ ತಮ್ಮ ಅಂತರಂಗಕ್ಕೆ ಅಡಕಿಕೊಳ್ಳುತ್ತಾರೆ. ಅಲ್ಲಿ ಹಿರಿಯ ಕಿರಿಯ ವ್ಯತ್ಯಾಸವಿಲ್ಲ, ಮೇಲು ಕೀಳೆಂಬ ಭೇದವಿಲ್ಲ. ಅದು ಯಾವಾಗಲೂ ಗಂಗೆಯಂತೆ ನಿರ್ಮಲ."

ದೇಜಗೌ ಅವರನ್ನು ಡಾ. ಜೀ. ಶಂ. ಪ. 'ರೂವಾರಿ' ಎಂದು ಕೈವಾರಿಸಿದ್ದಾರೆ. ಅವರ ಲೇಖನಿ ದೇಜಗೌ ಅವರ ಶಿಷ್ಯಪ್ರೇಮವನ್ನು ಅತ್ಯಂತ ಜ್ವಲಂತವಾಗಿ ಕನ್ನಡಿಸುತ್ತದೆ. "ದೇಜಗೌ ತಮ್ಮ ಸುಖವನ್ನಾದರೂ ಒತ್ತೆಯಿಟ್ಟು ಇತರರಿಗೆ ನೆರವಾಗುತ್ತಾರೆ, ಆಸರೆಯಾಗುತ್ತಾರೆ. ಅವರ ಬದುಕಿನಲ್ಲಿ ಆಸೆ ಭರವಸೆಗಳನ್ನು ತುಂಬಿ ಮೇಲೆತ್ತುತ್ತಾರೆ. ಒಂದು ನೆಲೆಗೆ ನಿಲ್ಲಿಸಿ ತಾವು ಬೆಳೆಸಿದ ಚೇತನವನ್ನು ಕಣ್ಣಲ್ಲಿ ತುಂಬಿಕೊಂಡು ಹಿಗ್ಗುತ್ತಾರೆ. ಇಂಥ ಶಿಷ್ಯರಿಂದ ಅವರು ಬಯಸುವ ಗುರುಕಾಣಿಕೆ ಕನ್ನಡದ ನಿಷ್ಠೆ."

-5-

ದೇಜಗೌ ಅವರ ಅಂತರಂಗದ ಸವಿಯನ್ನು, ಶಿಷ್ಯ ವಾತ್ಸಲ್ಯದ ಬಗೆ ಬಗೆಯ ಸ್ತರಗಳನ್ನು ಅವರ ಔದಾರ್ಯದ ಅಮೃತವನ್ನು ಸವಿದ, ಸವಿದು ಬದುಕನ್ನು ಧನ್ಯವಾಗಿಸಿಕೊಂಡ, ಮಾನ್ಯವಾಗಿಸಿಕೊಂಡ ಸಾವಿರಾರು ಶಿಷ್ಯರು ಅವರ ವ್ಯಕ್ತಿತ್ವದ ನೂರಾರು ಮುಖಗಳನ್ನು ತಮ್ಮ ಅಭಿಮಾನದ ಲೆಕ್ಕಣಿಗೆಯಲ್ಲಿ ಜೇವದುಂಬಿ ಬರೆದಿದ್ದಾರೆ. ಶಿಷ್ಯರ ಒಳಿತಿಗಾಗಿ ತಮಗೆ ಬರಬಹುದಾದ ಅಪವಾದವನ್ನೂ ಲೆಕ್ಕಿಸದೆ ಯಾವ ರೀತಿಯ ಸಹಾಯಕ್ಕೂ, ತ್ಯಾಗಕ್ಕೂ ದೇಜಗೌ ಸಿದ್ಧರಿದ್ದಾರೆ. ಪ್ರೀತಿಯ ತಂದೆಯಾಗಿ, ವಾತ್ಸಲ್ಯದ ತಾಯಿಯಾಗಿ, ಪ್ರೇಮದ ಸೋದರನಾಗಿ, ಆತ್ಮೀಯತೆಯ ಮಿತ್ರನಾಗಿ, ಮಾರ್ಗದರ್ಶಕ ಗುರುವಾಗಿ, ಕರುಣೆಯ ದೈವವಾಗಿ, ಬೆನ್ನಿಗೆ ಭೀಮರಕ್ಷೆಯಾಗಿ, ಸಣ್ಣತನ ಸೋಮಾರಿತನಗಳಿಗೆ ಸಿಂಹಸ್ವಪ್ನವಾಗಿ, ಧೈರ್ಯದ ಧ್ವಜಸ್ತಂಭವಾಗಿ, ಉತ್ಥಾನಪಥದ ನೇತಾರರಾಗಿ ದೇಜಗೌ ಶಿಷ್ಯರ ಮನೋಜಗತ್ತಿನಲ್ಲಿ ಧ್ರುವನಕ್ಷತ್ರವಾಗಿದ್ದಾರೆ.

ಇಂದಿನ ವ್ಯಾವಹಾರಿಕ ಜಗತ್ತಿನಲ್ಲಿ, ವ್ಯಕ್ತಿ ಸಂಬಂಧಗಳು ತೀರಾ ಕ್ಷಣಿಕವೂ ಕೃತಕವೂ ಸ್ವಾರ್ಥಪರವೂ ಆಗುತ್ತಿರುವ ದಿನಗಳಲ್ಲಿ, ಗುರು-ಶಿಷ್ಯರ ಸಂಬಂಧಗಳು ಹಳಸಿಕೊಳ್ಳುತ್ತಿರುವ ದುರಂತಮಯ ಸನ್ನಿವೇಶಗಳಲ್ಲಿ, ದೇಜಗೌ ಅವರಂಥ ಶಿಷ್ಯ ವಾತ್ಸಲ್ಯದ ಗಣಿ ನಮ್ಮ ಬಾಳಿಗೆ ದೊಡ್ಡ ಆದರ್ಶವಾಗಿ ಬೆಳಕಾಗಿ ನಿಲ್ಲುತ್ತಾರೆ. ಇಂತಹ ಗುರುಗಳನ್ನು ಪಡೆದ ನಾವು ಧನ್ಯರು.

* * * * *

ಕನ್ನಡದ ಸುಪುತ್ರ

- ಪ್ರೊ: ಹೆಚ್. ಆರ್. ದಾಸೇಗೌಡ

" ಕನ್ನಡದ ಕಾರ್ಯಕ್ಕಾಗಿ ಕೈಯೆತ್ತಿದ ಕಡ್ಡುಗಲಿ'

" ಕನ್ನಡದ ಹಾಡಿಗಾಗಿ ಕೊರಳೆತ್ತಿದ ಕೋಗಿಲೆ"

" ಕನಸಿನಲಿ ಕೂಡ ನಿನಗೆ ಕನ್ನಡದೆ ಕನವರಿಕೆ"

"ನನಸಿನಲಿ ಮಾಡುತಿಹೆ ಕನ್ನಡದ ಬೆಳವಣಿಗೆ"

ಇದೇ ದೇಜಗೌ ಅವರ ಬಗೆಗೆ ಪ್ರೊ: ಸಂಗಮೇಶ ಹಂಡಿಗಿ ಅವರು ಬರೆದ ಕವನದ ಒಂದು ಪಂಕ್ತಿ. ಕನ್ನಡದ ಸುಪುತ್ರ ಡಾ: ದೇಜಗೌ ಅವರ ವ್ಯಕ್ತಿತ್ವವನ್ನು ಮತ್ತು ಅವರು ಕನ್ನಡಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಅರ್ಥಪೂರ್ಣವಾಗಿ ಗುರುತಿಸುವಂತಿರುವ ಸಾಲುಗಳು.

'ದೇಜಗೌ' - ಎಂದಾಕ್ಷಣ ಎಲ್ಲರ ನೆನಪಿಗೆ ಬರುವುದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡಅಧ್ಯಯನಸಂಸ್ಥೆ ಮತ್ತು ಮೈಸೂರು ವಿಶ್ವವಿದ್ಯಾನಿಲಯವಿರುವ ಮಾನಸಗಂಗೋತ್ರಿ. ಅದನ್ನು ಕಟ್ಟಿ ಬೆಳಸುವಲ್ಲಿ ದುಡಿದವರು, ಅದಕ್ಕೊಂದು ಶಾಶ್ವತವಾದ ರೂಪವನ್ನು ನೀಡಿದವರು ದೇಜಗೌ. ಸಹಜ ಗಾಂಭೀರ್ಯದ ಜೊತೆಗೆ, ಕರ್ತೃತ್ವ ಶಕ್ತಿಯ ದ್ಯೋತಕದಂತಿರುವ ಅವರ ಮುಖದ ಕಳೆ, ಪಾಂಡಿತ್ಯದ ಪ್ರಖರತೆ; ಬೇರೆಯವರ ಬಗೆಗೆ ಅವರಿಗಿರುವ ಅಪಾರ ಮಮತೆ; ಕಿರಿಯರ ಬಗೆಗಿರುವ ಪ್ರೀತಿ, ಹಿರಿಯರ ಬಗೆಗಿನ ಗೌರವ ಹೀಗೆ ನಾನಾ ಬಗೆಯ ಅವರ ಸಹೃದಯತೆ ಇತರರಿಗೆ ಮಾರ್ಗದರ್ಶಿಯಾಗಿದೆ. ಡಾ: ದೇ. ಜವರೇಗೌಡರು ನಾಡಿನ ಭಾಷಾಲೋಕದ ಸಾಹಸಿಗಳು ಮತ್ತು ಅದರ ಪ್ರಗತಿಗಾಗಿ ಶ್ರಮಿಸುತ್ತಿರುವವರು. ಅವರದು ಉತ್ತಮ ಕೆಲಸಗಳಿಗಾಗಿ ಹೇಳಿ ಮಾಡಿಸಿದ ವ್ಯಕ್ತಿತ್ವ. ಅಂತೆಯೇ ಕನ್ನಡಕ್ಕಾಗಿ, ಕನ್ನಡಿಗರಿಗಾಗಿ, ಕನ್ನಡ ನೆಲ, ಜಲ, ಭಾಷೆಗಳಿಗಾಗಿ ಅವರ ದುಡಿಮೆ ಅಪಾರ ಹಾಗು ಅದ್ವಿತೀಯ.

ಡಾ : ದೇಜಗೌ ಅವರು ನಿಷ್ಠುರವಾದ ಮಾತುಗಾರರಾಗಿ, ತಮಗೆ ಸರಿ ಎನಿಸಿದ್ದನ್ನು ಹಠದಿಂದ ಸಾಧಿಸುವ ಖಂಡಿತವಾದಿ. ನ್ಯಾಯನಿಷ್ಠುರತೆಯೇ ಶ್ರೀರಕ್ಷೆ ಎಂದು ನಂಬಿರುವವರು. ಕನ್ನಡದ ವಿಚಾರದಲ್ಲಿ ಅವರು ಅತಿ ನಿಷ್ಠುರವಾದಿ. ಕಳೆದ ನಾಲ್ಕು ದಶಕಗಳಿಂದಲೂ ಅವರು ಕನ್ನಡದ ನೆಲ-ಜಲ-ಭಾಷೆಯ ವಿಷಯದಲ್ಲಿ ಎಂದೂ ಯಾರೊಂದಿಗೂ ರಾಜಿ ಮಾಡಿಕೊಂಡವರಲ್ಲ. ಶಿಕ್ಷಣ ಮಾಧ್ಯಮದ ವಿಷಯದಲ್ಲಂತೂ ಕನ್ನಡಕ್ಕೆ ಅನ್ಯಾಯವಾಗುವುದನ್ನು ಸಹಿಸಿದವರಲ್ಲ ; ಅವರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗಲೂ ತತ್ವರಹಿತವಾದ ಸರ್ಕಾರದ ನೀತಿಯನ್ನು

ಪ್ರತಿಭಟಿಸಿದವರು. ಅಧಿಕಾರದಲ್ಲಿದ್ದವರನ್ನು ಯಾವುದೇ ಕಾರಣಕ್ಕಾಗಿಯಾದರೂ ಆಶ್ರಯಿಸಿದವರಲ್ಲ, ಹಾಡಿ ಹೊಗಳಿದವರಲ್ಲ.

ಖ್ಯಾತ ಸಮಾಜ ಸೇವಕರೂ, ಮಾಜಿ ಶಿಕ್ಷಣ ಸಚಿವರೂ ಆದ ದಿವಂಗತ ಕೆ. ವಿ. ಶಂಕರೇಗೌಡರು ದೇಜಗೌ ಅವರ ಬಗೆಗೆ ಬಹು ಹಿಂದೆಯೇ ಹೇಳಿದ ಮಾತನ್ನಿಲ್ಲಿ ಉದಾಹರಿಸಿದರೆ ದೇಜಗೌ ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಬಹುದೆನಿಸುತ್ತದೆ : "ಜವರೇಗೌಡರವರು ಕಾರಖೂನರಾಗಿ ಸರಕಾರಿ ಸೇವೆಗೆ ಸೇರಿ, ಅದನ್ನು ಬಿಟ್ಟು ಅಧ್ಯಾಪಕರಾಗಿ ಸೇರಿಕೊಂಡುದು, ಉತ್ತಮ ಉಪಾಧ್ಯಾಯನಾಗಿ ಬೆಳೆದದ್ದು ....., ಜತೆಗೆ ಅವರ ಸಂಘಟನಾ ಸಾಮರ್ಥ್ಯವನ್ನು ಗಮನಿಸುತ್ತಿದ್ದ ನನಗೆ ಅವರಿಗೆ ಉಜ್ವಲ ಭವಿಷ್ಯವಿದೆ ಎಂಬುದರ ಬಗೆಗೆ ಅಚಲ ವಿಶ್ವಾಸವಿತ್ತು. ಹಿಡಿದ ಪಟ್ಟಿನಲ್ಲಿ ಯಾವುದೇ ಕಾರ್ಯವನ್ನಾಗಲಿ ಸಾಧಿಸುವ ಅವರ ಶಕ್ತಿಗೆ ನಾನು ಮಾರು ಹೋಗಿದ್ದೇನೆ.... ಅವರ ಕಾರ್ಯತತ್ಪರತೆ, ಕನ್ನಡ ಸಾಹಿತ್ಯದ ಬಗೆಗಿದ್ದ ಅವರ ಕಳಕಳಿ, ಅಕುಟಿಲ ಸ್ನೇಹತತ್ಪರತೆ ನನ್ನನ್ನು ದಂಗುಬಡಿಸಿದವು" ಎಂಬುದಾಗಿವೆ.

ಬೆಂಗಳೂರು ಜಿಲ್ಲೆಯ, ಚನ್ನಪಟ್ಟಣ ತಾಲ್ಲೂಕಿನ ಕುಗ್ರಾಮ ಒಂದರ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿದ ದೇಜಗೌ ಅವರು, ಅಂದಿನ ರೈತ ಜನಾಂಗ, ಹಳ್ಳಿಗಾಡಿನ ಜನರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಪಡುತ್ತಿದ್ದ ಕಷ್ಟಕಾರ್ಪಣ್ಯಗಳನ್ನು ಸ್ವಾನುಭವದಿಂದ ಮನಗಂಡವರು. ರೈತ ಮಕ್ಕಳು ರೈತರೇ ಆಗದೇ ಅವರೂ ಸಹ ವಿದ್ಯಾವಂತರಾಗಿ ಸುಸಂಸ್ಕೃತರಾಗಬೇಕೆಂಬ ಮಹದಾಸೆಯಿಂದ ಕುವೆಂಪು ಟ್ರಸ್ಟನ್ನು ಸ್ಥಾಪಿಸಿ, ಅದರ ವತಿಯಿಂದ ಶಾಲಾ ಕಾಲೇಜುಗಳನ್ನು ತೆರೆದು ಹಳ್ಳಿಯಿಂದ ಬಂದ ವಿದ್ಯಾರ್ಥಿಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಅವರನ್ನು ವಿದ್ಯಾವಂತರನ್ನಾಗಿಸುವ ಕೈಂಕರ್ಯವನ್ನು ಕೈಗೊಂಡರು ; ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ದಕ್ಷತೆಗೆ, ಕಾರ್ಯಕ್ಷಮತೆಗೆ ಹೆಸರಾದ ಇವರ ಸೇವಾ ಮನೋಭಾವಕ್ಕೆ ಇದೊಂದು ನಿದರ್ಶನವಾಗಿದೆ. ಇಂದು ಹಲವಾರು ಜನ ಆ ಟ್ರಸ್ಟಿನ ಸಹಾಯ ಸಹಕಾರದಿಂದ ದೊಡ್ಡವರಾಗಿದ್ದಾರೆ ಎಂದರೆ ಅದು ಕೇವಲ ಹೊಗಳಿಕೆಯ ಮಾತಾಗುವುದಿಲ್ಲ. ಟ್ರಸ್ಟಿನ ಮೂಲಕ ಸಂಶೋಧನೆ, ಗ್ರಂಥ ಪ್ರಚಾರ-ಪ್ರಕಾಶನ, ಶಿಕ್ಷಣದಲ್ಲಿ ನೂತನ ಪ್ರಯೋಗಗಳು ಮುಂತಾದ ಯೋಜನೆಗಳನ್ನು ಹಾಕಿಕೊಂಡು ಅನುಭವ-ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸುತ್ತಿದ್ದಾರೆ ಮತ್ತು ಈ ಎಲ್ಲಾ ಕಾರ್ಯಗಳಲ್ಲಿ ಅವರ ಮಾಧ್ಯಮ ಕನ್ನಡ ಮಾತ್ರವಾಗಿದೆ.

ದೇಜಗೌ ಅವರು ಅನೇಕ ಸಲ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಸುತ್ತಿಬಂದವರು. ಅನೇಕ ಜನಾಂಗಗಳ ಸಂಸ್ಕೃತಿಗಳನ್ನು ಕಂಡವರು. ಆಯಾ ದೇಶಗಳ ಸಾಂಸ್ಕೃತಿಕ ಪರಂಪರೆ ಜನಜೀವನದ ಬಗೆಗೆ ನಾಲ್ಕಾರು ಕೃತಿಗಳನ್ನು ಹೊರತಂದವರು. ಅದಾಗ್ಯೂ ಅವರಲ್ಲಿನ ಸ್ವದೇಶ ಪ್ರೇಮ, ಭಕ್ತಿ, ಗೌರವಗಳು ಅಪಾರ. ಅವರ ಮಾತುಗಳಲ್ಲಿ ನಡವಳಿಕೆಗಳಲ್ಲಿ ನಾವು ಕಾಣಬಹುದಾದದ್ದು ಅವರೊಬ್ಬ ನಿಜವಾದ ಈ ನೆಲದ ಮಗ, ಕನ್ನಡದ ಕಣ್ಮಣಿ ಎಂಬ ಅಂಶವನ್ನು. ಅವರು ವಿದೇಶಿ ಪದಾರ್ಥಗಳನ್ನು ಕೊಳ್ಳುವ ಬಗ್ಗೆ

ಒಮ್ಮೆ ವಿದೇಶದಲ್ಲಿ ಹೀಗೆ ಹೇಳಿದ್ದನ್ನಿಲ್ಲಿ ನೆನೆಯಬಹುದು: " ಇಲ್ಲಿಯ ಸಾಮಾನಿನ ಗುಣಮಟ್ಟ ಅತ್ಯುತ್ತಮವಾದದ್ದಿರಬಹುದು. ಪೆನ್ನು, ಗಡಿಯಾರ, ಕ್ಯಾಮರಾ ಮುಂತಾದ ಸಾಮಾನುಗಳು ನಮ್ಮೂರಿಗಿಂತ ಅಗ್ಗವಾಗಿ ಸಿಗಬಹುದು. ಆದರೆ ಅವುಗಳನ್ನು ಕೊಳ್ಳುವುದು ನನಗಿಷ್ಟವಿಲ್ಲ. ನೆಂಟರಿಷ್ಟರಿರುವ ಊರಿಗೆ ಬರಿಗೈಲಿ ಹಿಂದಿರುಗಬಾರದೆಂಬುದು ಸಂಪ್ರದಾಯ ಹಾಗೂ ಭಾವುಕತೆಯ ಮಾತು. ಆದರೆ ನೆಂಟರಿಷ್ಟರ ಮೇಲಿನ ಮಮತೆ ದೇಶಕಲ್ಯಾಣಕ್ಕೆ ವಿರುದ್ಧವಾಗಿರಬಾರದು. ಪರದೇಶದಿಂದ ಸಾಮಾನು ಕೊಂಡುಹೋದಾಗ ವಿಮಾನ ನಿಲ್ದಾಣದಲ್ಲಿಯೇ ಸುಂಕವನ್ನು ಹಿರಿಯುತ್ತಾರೆ. ಸುಂಕಕೊಡದಿರುವುದು ದೇಶದ್ರೋಹವಾಗುತ್ತದೆ. ಹಾಗೆಯೇ ನಮ್ಮ ದೇಶದಲ್ಲಿ ತಯಾರಾಗುವ ವಸ್ತುಗಳನ್ನು ಪರದೇಶದಲ್ಲಿ ಯಾಕೆ ಕೊಳ್ಳಬೇಕು. ನಮ್ಮ ಮಕ್ಕಳನ್ನು ನಾವು ಪ್ರೀತಿಸದಿದ್ದರೆ ಯಾರು ಪ್ರೀತಿಸಿಯಾರು ? ನಮ್ಮ ವಸ್ತುಗಳನ್ನು ನಾವು ಕೊಳ್ಳದಿದ್ದರೆ, ಜರ್ಮನಿಯ ಜನರು ಕೊಳ್ಳುತ್ತಾರೆಯೇ ? .... ನಮ್ಮ ಗಡಿಯಾರಗಳನ್ನು ನಾವು ಬಳಸುತ್ತಿದ್ದರೆ ಅವುಗಳ ಗುಣಮಟ್ಟ ಮೇಲೇರಲನುಕೂಲವಾದೀತು. ಇದು ದೇಶದಲ್ಲಿ ತಯಾರಾಗುವ ಎಲ್ಲ ವಸ್ತುಗಳಿಗೂ ಅನ್ವಯವಾಗುತ್ತದೆ. ನಮ್ಮಲ್ಲಿಯ ವಸ್ತುಗಳನ್ನು, ನಮ್ಮ ಜನರನ್ನು, ನಮ್ಮ ಪ್ರಾಣಿಗಳನ್ನು, ನಮ್ಮ ಕವಿಗಳನ್ನು, ನಮ್ಮ ಭಾಷೆಯನ್ನು, ನಮ್ಮೆಲ್ಲ ವ್ಯವಸ್ಥೆಯನ್ನು ತ್ರಿಕರಣಶುದ್ಧಿಯಾಗಿ ಮೆಚ್ಚುವತನಕ, ಪ್ರೀತಿಸುವ ತನಕ ನಮ್ಮ ದೇಶ ಮುಂದುವರಿಯಲಾರದೆನ್ನುವ ಅಂಶ ಇಲ್ಲಿಯ(ಜರ್ಮನಿಯ)ಜನರ ನಡವಳಿಕೆಯಿಂದ ಅರಿಯಬಹುದಾಗಿದೆ". ಇದರಿಂದ ಭಾರತದ ನೆಲ-ಜಲ-ಸಂಸ್ಕೃತಿ, ಉದ್ಯಮ, ಜನಜೀವನದ ಬಗೆಗೆ ದೇಜಗೌ ಅವರಿಗಿರುವ ಪ್ರೀತಿ, ಸ್ವದೇಶ ಭಾಷೆಯ ಮೇಲಿರುವ ಪ್ರೇಮ, ಕಳಕಳಿಯನ್ನು ಕಾಣಬಹುದು. ಎಂದೂ ಇವರು ಬೂಟಾಟಿಕೆಗಾಗಿ ವಿಚಾರಗಳನ್ನು ಹೇಳಿದವರಲ್ಲ. ಹೇಳಿದಂತೆ ಜೀವನದಲ್ಲಿ ಕಾರ್ಯರೂಪಕ್ಕೆ ತಂದು ನಡೆದುಕೊಂಡವರು. ಇಂದು ಇಂಥ ಮಹಾ ಮೇಧಾವಿಗಳು ನಮ್ಮ ನಡುವೆ ಇರುವುದೇ ನಮ್ಮ ಸೌಭಾಗ್ಯವಾಗಿದೆ.

ಎರಡು ಅವಧಿಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದಾಗಲೂ ಅವರು ವೈಭೋಗದ ಜೀವನಕ್ಕೆ ಬಲಿಯಾಗಿ ಜನಸಾಮಾನ್ಯರಿಂದ ದೂರಸರಿದವರಲ್ಲ. ತಮ್ಮ ವೈಯಕ್ತಿಕ ವಿಷಯವನ್ನು ಎಂದೂ ಗಂಭೀರವಾಗಿ ಪರಿಗಣಿಸಿದವರಲ್ಲವೆಂದೇ ಹೇಳಬಹುದು. ಅದಕ್ಕೆ ಒಂದು ಉದಾಹರಣೆಯನ್ನಿಲ್ಲಿ ಕೊಡಬಹುದು. ಕುಲಪತಿಗಳ ಭವನದಲ್ಲಿ ಅಂದು ಸಾವಿರಾರು ರೂಪಾಯಿ ಬೆಲೆಬಾಳುವ ರತ್ನಕಂಬಳಿಗಳಿದ್ದವು. ಅವರು ಆ ಭವನಕ್ಕೆ ಹೋದಕೂಡಲೇ ಅವೆಲ್ಲವುಗಳನ್ನು ವಿಶ್ವವಿದ್ಯಾನಿಲಯದ ಕಚೇರಿಗೆ ರವಾನಿಸಿದರು. ಕುಲಪತಿಯ ಹುದ್ದೆಯಿಂದ ಹೊರಬಂದ ನಂತರ ಅವರು ಅಧಿಕೃತ ಕಾರು ಬಳಸಿದ್ದಿಲ್ಲ. ಅಧಿಕಾರದ ಅತ್ಯುನ್ನತ ಸ್ಥಾನದಲ್ಲಿದ್ದಾಗಲೂ ಅವರ ಬದುಕಿನ ರೀತಿ ಬದಲಾವಣೆಯಾಗಲಿಲ್ಲ. ಸುತ್ತಮುತ್ತಲೂ ಬಡತನ ತಾಂಡವವಾಡುತ್ತಿರುವಾಗ ಕೆಲವು ಜನ ಶೋಕಿಯಿಂದ ಮೆರೆಯುವುದಾಗಲೀ, ದೇಶದ ಸಂಪತ್ತನ್ನು ಅಪವ್ಯಯಗೊಳಿಸುವುದಾಗಲೀ

ದೇಶದ್ರೋಹ ದೈವದ್ರೋಹವೆಂದೇ ಅವರು ಬಗೆದವರು ಮತ್ತು ಆ ಅನಿಸಿಕೆಗೆ ತಕ್ಕಂತೆ ಇಂದಿಗೂ ಜೀವನವನ್ನು ಸಾಗಿಸುತ್ತಿರುವವರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಗತಿಯಲ್ಲಿ ಡಾ: ಜವರೇಗೌಡರ ಸಾಧನೆಗಳು ಅನಂತ. ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಪ್ರಕಟಿಸಲು ಅದರದೇ ಆದ ಮುದ್ರಣಾಲಯ ಇರಬೇಕೆಂದು ಬಯಸಿ, ಹಗಲಿರುಳೆನ್ನದೆ ದುಡಿದು ಸುವ್ಯವಸ್ಥಿತವಾದ ಮುದ್ರಣಾಲಯವೊಂದನ್ನು ಸ್ಥಾಪಿಸಿದರು. ಅವರು ಸ್ಥಾಪಿಸಿದ ಜಾನಪದ ವಸ್ತು ಸಂಗ್ರಹಾಲಯವಂತೂ ಮೈಸೂರಿನ ಇಂದಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದೆಂಬಷ್ಟು ಖ್ಯಾತಿಯನ್ನು ಪಡೆದಿದೆ. 'ಕನ್ನಡ ವಿಶ್ವಕೋಶ' ಯೋಜನೆಯಂತೂ ಪ್ರಕಟಣಾ ಕ್ಷೇತ್ರದಲ್ಲಿಯೇ ಒಂದು ಅದ್ಭುತವೆನ್ನುವಷ್ಟು ಮಟ್ಟಿಗೆ ಹೆಸರುವಾಸಿಯಾಗಿದೆ. ಅದು ಹೊರಬರುವಲ್ಲಿ ಗೌಡರು ವಹಿಸಿದ ಪಾತ್ರವಂತೂ ಒಂದು ಸ್ಮರಣೀಯ ಘಟ್ಟವೇ ಸರಿ. ಆದರೆ ಸರಕಾರದ ಧೋರಣೆಯಿಂದ ಆ ಯೋಜನೆ ಇನ್ನೂ ಪೂರ್ಣವಾಗಲಿಲ್ಲ. ಮಂಗಳೂರು, ಶಿವಮೊಗ್ಗ ಸ್ನಾತಕೋತ್ತರ ಕೇಂದ್ರಗಳು(ಇಂದು ಮಂಗಳೂರುಮಂಗಳಗಂಗೋತ್ರಿ ವಿಶ್ವವಿದ್ಯಾನಿಲಯವೂ, ಶಿವಮೊಗ್ಗ-ಕುವೆಂಪು ವಿಶ್ವವಿದ್ಯಾನಿಲಯವೂ ಆಗಿವೆ) ಅವರ ದಣಿವರಿಯದ ಕರ್ತೃತ್ವ ಶಕ್ತಿಯ ಫಲಗಳು. ಕುಲಪತಿಗಳಾಗಿ ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯವನ್ನು ಮುನ್ನಡೆಸಿದ್ದು ಒಂದು ಐತಿಹಾಸಿಕ ಸತ್ಯ. ಅವರ ಅಧಿಕಾರವಧಿಯಲ್ಲಿ ಆದ ಸಾಧನೆಗಳ ಬಗೆಗೆ ವಿವರವಾಗಿ ಬರೆಯಲಿಚ್ಛಿಸಿದರೆ ಅದು ಒಂದು ಬೃಹತ್ ಗ್ರಂಥವೇ ಆಗಬಹುದು. ಮೂಡಿಬಂದ ಸ್ನಾತಕೋತ್ತರ ವಿಭಾಗಗಳು, ಎದ್ದುನಿಂತ ಭವ್ಯ ಸೌಧಗಳು, ಹಬ್ಬಿನಿಂತ ತೋಟ- ಒಂದೇ ಎರಡೇ-ಈ ಎಲ್ಲವೂ ಇಂದು ಇವರ ಸಾಧನೆಯ ಹೆಗ್ಗುರುತುಗಳಾಗಿ ಮಾನಸಗಂಗೋತ್ರಿಯಲ್ಲಿ ಕಂಗೊಳಿಸುತ್ತಿವೆ.

ಅವರೊಬ್ಬ ನಾಡಿನ ಹಿರಿಯ ವಿದ್ವಾಂಸರು, ಸಾಹಿತಿಗಳು ಮತ್ತು ಸಮರ್ಥ ಸಂಘಟಕರು. ಸಂಶೋಧನೆ, ಜೀವನಚರಿತ್ರೆ, ಭಾಷಾಂತರ, ವಿಮರ್ಶೆ, ಜಾನಪದ, ಪ್ರವಾಸ ಕಥನ, ಅನುವಾದ, ಸಂಪಾದನೆ- ಮುಂತಾದ ಕ್ಷೇತ್ರಗಳಲ್ಲಿ ದುಡಿದು ಸುಮಾರು 100 ರ ಹತ್ತಿರ ಮೌಲಿಕ ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾರಸ್ವತ ಲೋಕದ ಸಂಪತ್ತಿಗೆ ಕಾರಣರಾಗಿದ್ದಾರೆ.

ಅವರು ಸಾಹಿತಿಯಾದದ್ದನ್ನು, ಅವರು ಬರವಣಿಗೆ ಪ್ರಾರಂಭಿಸಿದ್ದನ್ನು ಅವರು ಮಾತಿನಿಂದಲೇ ಅರಿತರೆ ಒಳಿತು, " ಸಾಹಿತ್ಯ ಕ್ಷೇತ್ರಕ್ಕೆ ನಾನು ತಡವಾಗಿ ಬಂದವನು ಮಹಾಸಾಹಿತಿಯಾಗಬೇಕೆಂಬ ಮಹತ್ವಾಕಾಂಕ್ಷೆಯಂತೂ ಇ(ರಲಿ)ಲ್ಲ. ನನ್ನ ಸಾಹಿತ್ಯದಿಂದ ಲೋಕ ಕಲ್ಯಾಣವಾಗುತ್ತದೆಂಬ ಹೆಬ್ಬಾವನೆ ಕನಸಿನಲ್ಲಿಯೂ ಸುಳಿದಿಲ್ಲ. ಸಹವಾಸ ಮಹಿಮೆಯಿಂದ ಸನ್ನಿವೇಶ ಪ್ರಭಾವದಿಂದ ಬರಹದ ಕಡೆ ಮನಸ್ಸು ವಾಲಿತು" ಎಂದು ಹೇಳಿದ್ದಾರೆ. ಅಂದರೆ ಇವರು ತಮ್ಮ ಸಾಹಿತ್ಯದಿಂದ ಹೆಚ್ಚಿನದೇನನ್ನೂ ಸಾಧಿಸಲಾಗಲಿಲ್ಲ ಎಂಬುದನ್ನು ನಮ್ರತೆಯಿಂದ ತಿಳಿಸಿದ್ದಾರೆ. ಆದರೆ ಅವರ ಗದ್ಯಸಾಹಿತ್ಯ

ಸರಿಸಾಟಿಯಿಲ್ಲದ್ದಾಗಿದೆ ಎಂಬುದು ಕನ್ನಡ ನಾಡಿನ ಎಲ್ಲರ ಅಭಿಪ್ರಾಯವಾಗಿದೆ. ಸಂದರ್ಭಕ್ಕೆ ಅನುಸಾರವಾಗಿ ಒಲಿದ ಮನಸ್ಸು ನಿಷ್ಠೆಯಿಂದ ಕೂಡಿದ್ದರಿಂದಲೂ ಹೇಳಬೇಕಾದ ವಿಷಯಗಳಿದ್ದುದರಿಂದಲೂ ಸಾಹಿತ್ಯ ಅವರ ಮಾಧ್ಯಮವಾಯಿತೆನ್ನುವುದು ಅವರ ನಂಬಿಕೆ.

ಖ್ಯಾತ ಲೇಖಕರೂ, ಶಿಕ್ಷಣತಜ್ಞರೂ, ಜ್ಞಾನಪೀಠ ಪ್ರಶಸ್ತಿ ವಿಜೇತರೂ ಆದ ಡಾ: ವಿ. ಕೃ. ಗೋಕಾಕರು ಅವರ 'ಹೋರಾಟದ ಬದುಕು ಒಂದು ನೋಟ' ವನ್ನು ಕುರಿತು ಹೇಳಿದ ಮಾತುಗಳಿಂತಿವೆ.: "ಈ ಚರಿತ್ರೆಯು ಇಂತಹ ಸನ್ನಿವೇಶಗಳು ಅರಳಿದ ತೋಟವಾಗಿದೆ. ಅನೇಕ ಹೃದಯಸ್ಪರ್ಶಿ ಸತ್ವಗಳು ಸಹಜಾಭಿವ್ಯಕ್ತಿಯನ್ನು ಪಡೆದ ನೆಲವಾಗಿದೆ. ಸ್ವಭಾವ ಚಿತ್ರಗಳು ಅಂದವಾಗಿ ಚಿತ್ರಣಗೊಂಡ ಚಿತ್ರಶಾಲೆಯಾಗಿದೆ. ಆಗದೆ ಏನು ? ಇದನ್ನೆಲ್ಲ ಸಾಧ್ಯವಾಗಿಸುವ ಸತ್ವವಿದೆ ಜವರೇಗೌಡರ ವ್ಯಕ್ತಿತ್ವದಲ್ಲಿ." ಈ ಮಾತು ನೂರಕ್ಕೆ ನೂರರಷ್ಟು ಸತ್ಯವಾದದ್ದು. ಡಾ: ಜವರೇಗೌಡರು ಯಾವುದಕ್ಕೆ ಕೈ ಹಾಕಿದರೂ ಹೃದಯಸ್ಪರ್ಶಿಯಾಗಿ ಅದಿಕೃತವಾಗಿ ಬರೆಯುವವರು. ಹೀಗಾಗಿ ಅವರೊಬ್ಬ ಅಧಿಕೃತ ವಕ್ತಾರರಾಗಿ ನಮಗೆ ಮಾರ್ಗದರ್ಶಕರಾಗಿದ್ದಾರೆ.

ವಿಮರ್ಶಾ ಕ್ಷೇತ್ರದಲ್ಲಂತೂ ದೇಜಗೌ ಅವರ ಹೆಸರು ಬಹುದೊಡ್ಡದು. ಗೌಡರು ಭಾರತೀಯ ಹಾಗೂ ಪಾಶ್ಚಾತ್ಯ ವಿಮರ್ಶಾ ರೀತಿಗಳೆರಡನ್ನೂ ಜೀರ್ಣಿಸಿಕೊಂಡವರು. ವಿಮರ್ಶಾ ತತ್ವಗಳನ್ನು ಅಳವಡಿಸಿಕೊಂಡು ತಮ್ಮ ವಿಮರ್ಶೆಗಳಿಗೊಂದು ವಿಶಿಷ್ಟತೆಯನ್ನು ತಂದುಕೊಂಡವರು. ಅವರು ಬರೆದ ವಿಮರ್ಶೆಗಳನ್ನು ಗಮನಿಸಿದಾಗ ತುಂಬಾ ಸಹೃದಯಿ ವಿಮರ್ಶಕರೆಂಬುದು ಮೊದಲ ನೋಟಕ್ಕೆ ವ್ಯಕ್ತವಾಗುತ್ತದೆ. ಕವಿ ಮನೋಧರ್ಮ, ಸ್ವಭಾಷಾಪ್ರೇಮ, ಶೋಷಿತ ವರ್ಗಗಳ ಬಗೆಗಿನ ಅನುಕಂಪ, ಸಾಹಿತ್ಯದಲ್ಲಿನ ವಿಶೇಷ ಒಲವು- ಇವುಗಳನ್ನು ಅವರ ಬರಹಗಳಲ್ಲಿ ಕಾಣುತ್ತೇವೆ. ಜವರೇಗೌಡರ ಗದ್ಯ ಬರಹವು ಒಂದು ರೀತಿಯ ಕವಿತೆಗೆ ಹತ್ತಿರವಾದದ್ದು; ಅದರಲ್ಲಿ ಕವಿಯ ಕಲ್ಪನೆ ಇರುತ್ತದೆ; ಧ್ವನಿಯಲ್ಲಿ ರಮ್ಯತೆಯಿರುತ್ತದೆ ಎನ್ನುವ ಅನೇಕರ ಮಾತನ್ನು ನಾನು ಸಹ ಅನುಮೋದಿಸುತ್ತೇನೆ. ಇವರ ವಿಮರ್ಶೆಗಳು ಯಾರ ದಾಕ್ಷಿಣ್ಯ-ಮರ್ಜಿಗಳಿಗೂ ಒಳಗಾಗದೆ ನಿರ್ಭಿಡೆಯಿಂದ ನಿಷ್ಪಕ್ಷಪಾತವಾಗಿರುತ್ತದೆ.

ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಇತ್ತೀಚೆಗೆ ಅನೇಕರು ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ. ಇತ್ತೀಚಿನ ಯುವ ಪೀಳಿಗೆಯ ಬರಹಗಾರರಲ್ಲಂತೂ ಅನೇಕರು ಜಾನಪದ ಸಾಹಿತ್ಯ ಸಂಗ್ರಹಣೆ, ಕತೆ, ಹಾಡು, ಒಗಟು ಮುಂತಾದ ನಾನಾ ಪ್ರಕಾರಗಳಲ್ಲಿ ಪಿ.ಎಚ್.ಡಿ. ಪ್ರಬಂಧಗಳನ್ನು ಬರೆದು ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ. ಜಾನಪದ ಸಾಹಿತ್ಯ ಸಂಗ್ರಹ ಕಾರ್ಯವಂತೂ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. ಜಾನಪದ ಸಾಹಿತ್ಯವು ಒಂದು ಸಾಹಿತ್ಯ ಪ್ರಕಾರವೇ? ಎಂದು ಕೇಳುವ ಸ್ಥಿತಿ ಇದ್ದಾಗ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದವರು ಜವರೇಗೌಡರು. ಅವರಿಗೆ ಅತ್ಯಂತ ಪ್ರಿಯವಾದ ಸಾಹಿತ್ಯ ಪ್ರಕಾರ ಜಾನಪದ. ಕರ್ನಾಟಕದಲ್ಲಿ ಜಾನಪದ ಸಾಹಿತ್ಯಕ್ಕೆ ಒಂದು

ಗೌರವಯುತವಾದ ಸ್ಥಾನ ಲಭಿಸುವಂತೆ ಜಾನಪದ ಅಧ್ಯಯನ ಮತ್ತು ವ್ಯವಸ್ಥಿತ ಸಂಗ್ರಹ ಕಾರ್ಯಗಳಿಗೆ ಅಗತ್ಯವಿರುವ ಪ್ರೋತ್ಸಾಹ ಅವಕಾಶಗಳು ಸಿಗುವಂತೆ ಮಾಡಿದ ಹಿರಿಯ ತಲೆಮಾರಿನ ಲೇಖಕರಲ್ಲಿ ದೇ. ಜವರೇಗೌಡರು ಒಬ್ಬರು ಎಂದರೆ ಅಚ್ಚರಿಪಡಬೇಕಾಗಿಲ್ಲ. ಅವರು ಬರೆದ ಮುನ್ನುಡಿಗಳು, ಲೇಖನಗಳು ಹಲವಾರು. ಅವರ ಜಾನಪದ ಸೌಂದರ್ಯ, ಜನಪದ ಗೀತಾಂಜಲಿ, ಜಾನಪದ ಅಧ್ಯಯನ ಗ್ರಂಥಗಳು ಜಾನಪದ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳು. ಜನಪದ ಗೀತೆಗಳಲ್ಲಿ, ಶಿಶು, ಕಾವ್ಯಗಳಲ್ಲಿ ಜಾನಪದ ಯಕ್ಷಗಾನ ವಿಚಾರ, ಸ್ಥಳನಾಮಗಳು, ಮಂಡ್ಯ ಜಿಲ್ಲೆಯ ಜನಪದ ಕತೆಗಳು - ಮುಂತಾದ ವಿಷಯಗಳ ಬಗ್ಗೆ ವಿದ್ವತ್ಪೂರ್ಣ ಲೇಖನ, ವಿಮರ್ಶೆಗಳನ್ನು ಬರೆದಿದ್ದಾರೆ.

ಆಗಿನ ಮೈಸೂರು ಸರ್ಕಾರದಿಂದ ಅವರ ಒಂದು ಕೃತಿಗೆ ಬಹುಮಾನವಾಗಿ ಬಂದ 1000 ರೂ.ಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ದಾನವಾಗಿ ನೀಡಿ ಜಾನಪದ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸಲು ಅನುವು ಮಾಡಿಕೊಟ್ಟರು. ತೀರ ಇತ್ತೀಚಿನವರೆಗೆ ಭಾರತದಲ್ಲಿಯೇ ಇದನ್ನು ಸರಿಗಟ್ಟುವ ಇನ್ನೊಂದು ಜಾನಪದ ವಸ್ತುಸಂಗ್ರಹಾಲಯವಿಲ್ಲವೆನ್ನುವಷ್ಟರ ಮಟ್ಟಿಗೆ ಅದನ್ನು ಬೆಳೆಸಿದರು.

ದೇ. ಜವರೇಗೌಡರ ಸಾಹಿತ್ಯ ಕೃಷಿ "ಆಡು ಮುಟ್ಟಿಗೆ ಸೊಪ್ಪಿಲ್ಲ" ಎನ್ನುವ ಮಾತಿನಂತೆ ಬಹುಮುಖವಾದದ್ದು. ಅವರು ಪ್ರವೇಶಿಸದ ಸಾಹಿತ್ಯ ಕ್ಷೇತ್ರವಿಲ್ಲ. ಒಂದು ಲೇಖನದಲ್ಲಿ ಶ್ರೀಯುತರನ್ನು ಹಿಡಿದಿಡುತ್ತೇವೆ ಎನ್ನುವುದು ಸಮುದ್ರವನ್ನು ಒಂದು ಚಿಕ್ಕ ಬಟ್ಟಲಲ್ಲಿ ಹಿಡಿದಿಡಲು ಹೊರಟ ಮೂರ್ಖ ಪ್ರಯತ್ನದಂತೆ ಎಂದರೆ ಅತಿಶಯೋಕ್ತಿಯಾಗಲಾರದು. ಈಗಾಗಲೇ ಅವರಿಗೆ 'ರಸಷಷ್ಟಿ' ಎಂಬ ಷಷ್ಟ್ಯಾಭಿನಂದನ ಗ್ರಂಥವನ್ನು ಅವರ ಅಭಿಮಾನಿಗಳು ಅರ್ಪಿಸಿದ್ದಾರೆ. ಹಿಡಿದ ಕಾರ್ಯವನ್ನು ಬಿಡದೆ ಕಡೆತನಕ ಕೊನೆಮುಟ್ಟುವವರೆಗೆ ಪೂರೈಸುವ ಈ ಕನ್ನಡದ ಕಟ್ಟಾಳುವೂ, ಕನ್ನಡ ನೆಲದ ಈ ಸತ್ಪುತ್ರಗೆ ಮತ್ತೊಮ್ಮೆ ಅಭಿನಂದನ ಗ್ರಂಥವನ್ನರ್ಪಿಸುತ್ತಿರುವುದು ಸಂತೋಷದ ವಿಷಯ. ಈ ಹಿರಿಯರು ನನ್ನೊಂದಿಗೆ ಇನ್ನೂ ನೂರ್ಕಾಲ ಬದುಕಿ ಶತಮಾನೋತ್ಸವವನ್ನು ಆಚರಿಸಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

* * * * *

ಶೂದ್ರ ಜಗತ್ತಿನ ಮಹಾನ್ ಪ್ರತಿಭೆ

- ಡಾ. ಚಂದ್ರಶೇಖರ ಕಂಬಾರ

ದೇಜಗೌ ಅವರನ್ನು ನಾನು ಪ್ರೀತಿಸಲು ಕಾರಣಗಳಿವೆ. ಮೊದಲನೆಯದಾಗಿ, ಅವರು ನನ್ನಂತೆಯೇ ಗ್ರಾಮೀಣ ಪರಿಸರದಲ್ಲಿ ಹುಟ್ಟು ಬೆಳೆದವರು. ಎರಡನೆಯದಾಗಿ, ಬದುಕನ್ನು ಹೋರಾಟವನ್ನಾಗಿ ಸ್ವೀಕರಿಸಿ ಅದನ್ನು ಗೆದ್ದವರು. ಮೂರನೆಯದಾಗಿ, ಇಂದಿಗೂ ಆ ಗ್ರಾಮೀಣ ಸತ್ವದ ನೆಲೆಯನ್ನು ಜೀವಂತವಾಗಿ ಇಟ್ಟುಕೊಂಡವರು. ಇಂಥ ಒಬ್ಬ 'ಗ್ರಾಮೀಣ ಪ್ರತಿಭೆ' ಲೇಖಕನಾಗಿ, ಪ್ರಾಧ್ಯಾಪಕನಾಗಿ, ಕುಲಪತಿಯಾಗಿ, ಇವೆಲ್ಲವನ್ನೂ ಮೀರಿ ಕನ್ನಡ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡ ಚಿಂತಕನಾಗಿ ಬೆಳೆದದ್ದು ನಮ್ಮ ಸಾಂಸ್ಕೃತಿಕ ಬದುಕಿನ ಒಂದು ಮುಖ್ಯ ಸನ್ನಿವೇಶದಲ್ಲಿ. ಒಂದು ಕಾಲಕ್ಕೆ ಅಕ್ಷರ ಜ್ಞಾನದಿಂದಲೇ ವಂಚಿತರಾಗಿದ್ದ ಸಾವುಗಳು ಆಕಸ್ಮಿಕವಾಗಿ ವಿದ್ಯಾಭ್ಯಾಸ ಪಡೆದು ಹೇಗೆ ಹೇಗೋ ಬೆಳೆದು, ನಮ್ಮ ಸತ್ವವನ್ನು ಪ್ರಕಟಪಡಿಸಿಕೊಳ್ಳುವ ವ್ಯಕ್ತಿತ್ವವನ್ನು ರೂಪಿಸಿಕೊಂಡದ್ದೇ ಒಂದು ಸಾಂಸ್ಕೃತಿಕ ಮಹತ್ವ. ಈ ಪರಂಪರೆ ನಮ್ಮ ಮಹತ್ವದ ಲೇಖಕ ಕುವೆಂಪು ಅವರಿಂದ ಆರಂಭವಾಯಿತೆಂದೇ ಹೇಳಬಹುದು. ಶೂದ್ರ ಜಗತ್ತಿನ ಈ ಮಹಾನ್ ಪ್ರತಿಭೆ ಮುಂದಿನ ಅನೇಕ ವ್ಯಕ್ತಿತ್ವಗಳಿಗೆ ದಾರಿದೀವಿಗೆಯಾಗಿದ್ದಲ್ಲದೆ ಸ್ವಾಭಿಮಾನದ ಬದುಕಿಗೆ ಮಾರ್ಗದರ್ಶನ ನೀಡಿತು.

ಕುವೆಂಪು ಅವರ ಗಾಢ ಪ್ರಭಾವದಲ್ಲಿ ಬೆಳೆದ ದೇಜಗೌ ಸಹಜವಾಗಿಯೇ ಮೌಢ್ಯದ ವಿರುದ್ಧದ, ಸತ್ಯದ ಪರವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಗ್ರಾಮೀಣರ, ದುಡಿಯುವ ವರ್ಗದವರ, ಶೂದ್ರಾತಿಶೂದ್ರರ ಬದುಕನ್ನು ಹಸನುಗೊಳಿಸುವ ಹಂಬಲ ಹೊತ್ತು ಆ ವರ್ಗಗಳಿಂದ ಬಂದ ಪ್ರತಿಭಾವಂತರನ್ನು ಪ್ರೋತ್ಸಾಹಿಸಿದ ದೇಜಗೌ ಒಂದು ಸಂದರ್ಭದ ಸಾಂಸ್ಕೃತಿಕ ಹೀರೋ ಆಗಿ ಕೂಡ ಕಂಡವರು. ಈ ಹಿನ್ನೆಲೆಯಲ್ಲಿಯೇ, ಜನಪರವಾದ ಆಡಳಿತ ಹಾಗೂ ಶಿಕ್ಷಣ ನೀಡಬೇಕಾದರೆ ಕನ್ನಡ ಭಾಷೆಗೆ ಪ್ರಥಮಸ್ಥಾನ ಸಿಗಬೇಕೆಂಬ ವಾದವನ್ನು ಮತ್ತಷ್ಟು ಪುಷ್ಟೀಕರಿಸಿದ ದೇಜಗೌ ಒಬ್ಬ ಸೈದ್ಧಾಂತಿಕ ಹೋರಾಟಗಾರರಾಗಿಯೂ ಕಂಡವರು. ಒಟ್ಟು ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ದೇಜಗೌ ಬಗ್ಗೆ ಈ ಮಾತುಗಳನ್ನು ಹೇಳಲೇಬೇಕಾಗುತ್ತದೆ.

ಆದರೆ ಇದೆಲ್ಲವನ್ನೂ ಮೀರಿ ದೇಜಗೌ ನನಗೆ ಹಿಡಿಸಿದ್ದು ಒಬ್ಬ ಅತ್ಯುತ್ತಮ ಗದ್ಯ ಲೇಖಕರಾಗಿ. ಕಾವ್ಯ, ಕಥೆ, ಕಾದಂಬರಿ ಮುಂತಾದ ಸೃಜನಶೀಲ ಪ್ರಕಾರಗಳ ವ್ಯಾಮೋಹದಲ್ಲಿ ಬಡವಾಗಿ ಹೋಗಿದ್ದ ಇತರೆ ಪ್ರಕಾರಗಳಾದ ಜೀವನ ಚರಿತ್ರೆ, ಪ್ರವಾಸ ಕಥನ, ಪ್ರಬಂಧ ಮುಂತಾದ ಶಾಖೆಗಳಿಗೆ ಜೀವ ತುಂಬಿದವರು. ಟಾಲ್‌ಸ್ಟಾಯ್ ಅವರ ಎರಡು ಬೃಹತ್ ಕಾದಂಬರಿಗಳಾದ 'ಯುದ್ಧ ಮತ್ತು ಶಾಂತಿ' ಹಾಗೂ

ಅನ್ನಾಕರೇನಿನಾ'ಗಳನ್ನು ತಮ್ಮ ೭೦ನೇ ವಯಸ್ಸಿನಲ್ಲಿ ಅನುವಾದಿಸಿ ಪ್ರಕಟಿಸುವ ಮೂಲಕ ತಮ್ಮಲ್ಲಿ ಉಳಿದಿರುವ ಶಿಸ್ತು ಹಾಗೂ ಅಧ್ಯಯನಾಸಕ್ತಿಯನ್ನು ತೋರಿಸಿ ಕೊಟ್ಟಿದ್ದಾರೆ. ಅಂಬೇಡ್ಕರ್ ಮತ್ತು ಬಸವಣ್ಣನವರನ್ನು ಸಮೀಕರಿಸಿ ಬರೆದಿರುವ ಅವರ ಬರಹಗಳು ಅವರಿಗಿರುವ ಚಿಂತನಶೀಲತೆ ಹಾಗೂ ದಟ್ಟ ಮಾನವ ಪ್ರೀತಿಯನ್ನು ಎತ್ತಿ ತೋರಿಸುತ್ತವೆ.

ಇಂಥ ಸಂಕೀರ್ಣ ವ್ಯಕ್ತಿತ್ವದ ಜವರೇಗೌಡರು ನೇರ ನುಡಿಯ ನಿರ್ಮಲ ಪ್ರೇಮದ ಒಬ್ಬ ಸರಳ ಹಾಗೂ ನಿರಾಡಂಬರ ಜೀವಿಯೂ ಹೌದು. ವಯಸ್ಸಿನಲ್ಲಿ ಅವರಿಗಿಂತ ಕಿರಿಯರಾದ ನನ್ನಂಥವರ ಬಗ್ಗೆ ಅವರು ತೋರಿಸುತ್ತಿದ್ದ ವಾತ್ಸಲ್ಯಮಯ ಪ್ರೇಮ, ನಮ್ಮ ಬರವಣಿಗೆ ಹಾಗೂ ಅಭ್ಯುದಯಗಳ ಬಗೆಗಿನ ಅವರ ಕಾಳಜಿ ಎಂದಿಗೂ ಮರೆಯುವಂಥದ್ದಲ್ಲ

ಒಬ್ಬ ಮನುಷ್ಯನ ಸಾಧನೆ ಅಂದರೆ ಅವನು ಕೇವಲ ಉನ್ನತ ಸ್ಥಾನ ಏರಿ ನಿವೃತ್ತನಾಗುವುದಿಲ್ಲ. ಅವನ ಒಟ್ಟಾರೆ ಬದುಕು ಇನ್ನೊಬ್ಬರಿಗೆ ಏನನ್ನ ಕಲಿಸಿತು ಅನ್ನುವುದು. ಅವನ ಅಧಿಕಾರ ಆ ಕ್ಷೇತ್ರಕ್ಕೆ ಏನನ್ನ ಕೊಟ್ಟಿತು ಎನ್ನುವುದು. ಕುಲಪತಿಯಾಗಿ ತನ್ನ ನೆಚ್ಚಿನ 'ಜಾನಪದ'ವನ್ನು ವಿಶ್ವವಿದ್ಯಾಲಯದ ಒಂದು ವಿಷಯವನ್ನಾಗಿ ಅಳವಡಿಸುವ ಮೂಲಕ ನಿರ್ಲಕ್ಷಿಸಲ್ಪಟ್ಟ ಒಂದು ಸಂಸ್ಕೃತಿಯ ಮಹತ್ವವನ್ನು ಎತ್ತಿ ಹಿಡಿದವರು. ಇತರೆ ಮಾನವಿಕ ವಿಷಯಗಳ ನಡುವೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಸ್ಥಾನವನ್ನು ಔನ್ನತ್ಯಕ್ಕೆ ಏರಿಸುವ ಮೂಲಕ ಕನ್ನಡ ಲೇಖಕರ, ಸಂಶೋಧಕರ ಕೀಳರಿಮೆಯನ್ನು ತೊಡೆದವರು. ಸಮರ್ಥರಿಗೆ ಅಧಿಕಾರ ಸಿಕ್ಕರೆ ಅವರು ಏನೇನು ಮಾಡಬಲ್ಲರು ಎಂಬುದನ್ನು ವಸ್ತುಶಃ ತೋರಿಸಿ ಕೊಟ್ಟವರು.

ಇಂಥ ಒಂದು ಚೇತನ ತನ್ನ 75 ನೇ ವರ್ಷದ ವಸಂತದಲ್ಲಿ ಕಾಲಿರಿಸಿದೆ. ಅದು ಹಾಗೇ ನಳನಳಿಸುತ್ತಾ ನೂರು ವಸಂತಗಳನ್ನು ಕಾಣಲಿ ಎಂದು ಹಾರೈಸುತ್ತೇನೆ.

* * * * *

ವಜ್ರಾದಪಿ ಕಠೋರಾಣಿ.......

- ಡಾ. ಸಿ. ಕೆ. ಎನ್. ರಾಜ.

" ನನ್ನ ಬಾಳೇ ಒಂದು ಪವಾಡವೆಂದುಕೊಂಡಿದ್ದೇನೆ. ಆ ಮಾತು ಇಂದಿಗೂ ಸುಳ್ಳಾಗಿಲ್ಲ"

('ನನ್ನನ್ನು ನಾನೇ ಕಂಡಂತೆ' - ಶ್ರೀ ದೇಜಗೌ 'ರಸಷಷ್ಠಿ' ಗ್ರಂಥದಲ್ಲಿ)

1918 ನೆಯ ಇಸವಿ ಜುಲೈ ತಿಂಗಳ ಆರರಂದು ಜನಿಸಿದ ಪೂಜನೀಯ ಶ್ರೀ ದೇ. ಜ. ಗೌ. ಎಪ್ಪತ್ನಾಲ್ಕು ವರ್ಷಗಳ ಸಾರ್ಥಕ ಜೀವನವನ್ನು ನಡೆಸಿ ಎಪ್ಪತ್ತೈದನೆಯ ವರ್ಷಕ್ಕೆ ಕಾಲಿಟ್ಟಿದ್ದಾರೆ. ಇಂದಿಗೂ ಅವರು ಅವರ ಸಹಸ್ರಾರು ಅಭಿಮಾನಿಗಳಿಗೆ ಪವಾಡ ಪುರುಷರೇ ಆಗಿದ್ದಾರೆ. ಅದೇ ಹಸನ್ಮುಖಿ, ಅದೇ ದಿಟ್ಟ ನಿಲುವು, ಕನ್ನಡಭಾಷೆ ಹಾಗೂ ನಾಡಿನ ಬಗೆಗೆ ಲೇಶ ಮಾತ್ರವೂ ಕುಗ್ಗಿಲ್ಲದ ಕೆಚ್ಚಿನ ಒಲವು. ಅದೇ ಸ್ನೇಹಪರತೆ ಹಾಗೂ ಅಧ್ಯಯನಶೀಲತೆ, ಅದೇ ಚಿಂತನಶೀಲ ವ್ಯಕ್ತಿತ್ವ.

"ಕುರಿದೊಡ್ಡಿಯೊಳಗೆ ಭೂಸ್ಪರ್ಶಮಾಡಿದ" ಈ "ಕುರಿಗಾಹಿ" ಕನ್ನಡಿಗರ ಕಣ್ಮಣಿಯಾಗಿ, ಕನ್ನಡದ ಕೆಚ್ಚಿನ ಧೀರೋದಾತ್ತ ಸೇನಾನಿಯಾಗಿ, ಶಿಕ್ಷಣತಜ್ಞನಾಗಿ, ಚಿಂತನಶೀಲ ವ್ಯಕ್ತಿಯಾಗಿ, ಕನ್ನಡ ಅಧ್ಯಯನ ಸಂಸ್ಥೆಯ ರೂವಾರಿಯಾಗಿ, ತಮ್ಮ ಗುರು ಕುವೆಂಪು ರವರ ಹೆಸರಿನ ಟ್ರಸ್ಟ್‌ನ ಸ್ಥಾಪಕರಾಗಿ ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವ ಸೇವೆ ನಿಜಕ್ಕೂ ಪವಾಡವೇ ಸರಿ.

ನುಡಿದಂತೆ ನಡೆಯುವ ಹಾಗೂ ' ನಡೆದಂತೆ ನುಡಿಯುವ ಕೆಚ್ಚು ಅವರ ಧೀಮಂತ ವ್ಯಕ್ತಿತ್ವದ ಅವಿಭಾಜ್ಯ ಅಂಗ. ನನ್ನನ್ನು ಸ್ನಾತಕೋತ್ತರ ಕಾನೂನು ವಿಭಾಗದ ಮುಖ್ಯಸ್ಥನನ್ನಾಗಿ ನೇಮಕ ಮಾಡಿದಾಗ ಅವರಾಡಿದ ಮಾತುಗಳು ಈಗಲೂ ನನ್ನಲ್ಲಿ ಹಚ್ಚಹಸುರಾಗಿಯೇ ಉಳಿದಿವೆ. "ಈ ವಿಭಾಗದ ಸಂಪೂರ್ಣ ಜವಾಬ್ದಾರಿ ಇನ್ನು ಮೇಲೆ ನಿಮ್ಮದು. ನಿಮ್ಮ ವಿಭಾಗದ ಆಡಳಿತದಲ್ಲಾಗಲೀ ನೇಮಕಗಳಲ್ಲಾಗಲೀ ನಾನು ಮಧ್ಯೆ ಪ್ರವೇಶಿಸುವುದಿಲ್ಲ. ಆದರೊಂದು ಮಾತು, ನಿಮ್ಮ ವಿಭಾಗದಲ್ಲಿ ಏನೊಂದಾದರೂ ನೀವೇ ಅದಕ್ಕೆ ಹೊಣೆಗಾರರು' ಎಂಬ ಎಚ್ಚರಿಕೆಯ ನುಡಿಗಳನ್ನಾಡಿದವರು ಶ್ರೀ ದೇ. ಜ. ಗೌ. ಅವರು ಕುಲಪತಿಗಳಾಗಿದ್ದ ಅವಧಿಯಲ್ಲಿ ನುಡಿದಂತೆಯೇ ನಡೆದರು. ವಿಭಾಗದ ಪ್ರಗತಿಗೆ ಸಂಪೂರ್ಣ ನೆರವನ್ನು ನೀಡಿದರು. ಬೆನ್ನು ತಟ್ಟಿ ಪ್ರೋತ್ಸಾಹಿಸಿದರು.

ಶ್ರೀ ದೇ. ಜ. ಗೌ. ದಕ್ಷ ಆಡಳಿತಗಾರರು, ಹಿಡಿದ ಕಾರ್ಯವನ್ನು ಬಿಡದೇ ಸಾಧಿಸುವ ಛಲವಾದಿ. ಮಧ್ಯೆ ಮಧ್ಯೆಬರುವ ಅಡೆತಡೆಗಳಿಗೆ, ವಿರೋಧಗಳಿಗೆ ಅಂಜದೇ, ಮುನ್ನುಗ್ಗಿ ಗುರಿಸಾಧಿಸುವವರು. ಸವಾಲುಗಳನ್ನೆದುರಿಸುವಾಗ ವಜ್ರದಂತೆ ಕಠಿಣ ವಾಗಬಲ್ಲರು. ಸರಸ ಸನ್ನಿವೇಶಗಳಲ್ಲಿ ಸ್ನೇಹಮಯಿಯಾಗಿ ಸಹೃದಯರಾಗಿ

ಹೂವಿಗಿಂತಲೂ ಮೃದುವೂ ಆಗಬಲ್ಲರು. ಸಿಂಡಿಕೇಟ್ ಸಭೆಯೇ ಆಗಲೀ, ಸೆನೇಟ್ ಸಭೆಯೇ ಆಗಲೀ, ಇಲ್ಲವೇ ಶಿಕ್ಷಣ ಮಂಡಳಿಯ ಸಭೆಯೇ ಆಗಲೀ ಅವರ ನಿಲುವು ಸ್ಪಷ್ಟ ಹಾಗೂ ದೃಢವಾಗಿದ್ದು, ನಿಷ್ಠುರವಾಗಿ ಮಾತನಾಡುವುದು ಅವರ ವೈಶಿಷ್ಟ್ಯವಾಗಿತ್ತು. ಎಲ್ಲರನ್ನೂ ಸಂತೋಷಪಡಿಸುತ್ತೇನೆಂದು ಹೊರಡುವವರು ಎಂದಿಗೂ ದಕ್ಷ ಆಡಳಿತಗಾರರಾಗುವುದಿಲ್ಲ. ಉದಾತ್ತವಾದ ಧೈರ್ಯದಿಂದ ಪ್ರೇರಿತವಾದ ಗುರಿಯನ್ನು ಸಾಧಿಸುವಾಗ ಕೆಲವರು ಅತೃಪ್ತರಾಗುವುದು ಸಹಜ ಹಾಗೂ ಅನಿವಾರ್ಯ.

ಪ್ರಾರಂಭದ ವಿಧ್ಯಾರ್ಥಿದೆಸೆಯಲ್ಲಿ ಕಷ್ಟಗಳ ಸರಮಾಲೆಯನ್ನುಂಡ ಶ್ರೀ ದೇ. ಜ. ಗೌ. ಎಲ್ಲಾ ಸ್ತರಗಳಲ್ಲೂ ಅವರ ಗುರುಗಳ ಆಶೀರ್ವಾದ ಬಲದಿಂದ ಪ್ರವರ್ಧಮಾನಕ್ಕೆ ಬಂದರು. ಜವಾಬ್ದಾರಿಯುತ ಹಾಗೂ ಗೌರವಾನ್ವಿತ ಹುದ್ದೆಗಳನ್ನಲಂಕರಿಸಿದರು. ಕನ್ನಡ ಪ್ರಾಧ್ಯಾಪಕರಾಗಿ, ಕಲಾ ವಿಭಾಗದ ಡೀನರಾಗಿ, ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಯಾಗಿ, ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಯಶಸ್ವೀ ಕುಲಪತಿಯಾಗಿ, ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದವರಾಗಿ ಹಾಗೂ 'ಪುಸ್ತಕ ಪ್ರಪಂಚ' ದ ಪ್ರಧಾನ ಸಂಪಾದಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದವರು.

ಧೀರೋದಾತ್ತ ನಿಲುವಿಗೆ ದೇ. ಜ. ಗೌ. ಖ್ಯಾತರಾದವರು " ನಿಷ್ಠುರವಾದ ಮಾತುಗಾರರಾಗಿ ಯಾರನ್ನೂ ಲೆಕ್ಕಿಸದ ಜವರೇಗೌಡರಿಗೆ ಸತ್ಯ ಮತ್ತು ನ್ಯಾಯ ನಿಷ್ಠೆಗಳೆರಡೇ ರಕ್ಷಾಕವಚಗಳಾಗಿವೆ" ಎನ್ನುತ್ತಾರೆ, ಶಿಕ್ಷಣ ಸಚಿವರಾಗಿದ್ದ ಶ್ರೀಮಾನ್ ಶಂಕರೇಗೌಡರು. ಪ್ರಾಯಶಃ ನೀತಿ ಶತಕದ ಈ ಕೆಳಕಂಡ ಸಾಲುಗಳು ಶ್ರೀ ದೇ. ಜ. ಗೌ ರವರಂತಹವರನ್ನು ಕುರಿತು ಬರೆದವೇ ಆಗಿರಬೇಕು-

ನಿಂದಂತು ನೀತಿ ನಿಪುಣಾಃ ಯದಿವಾಸುವಂತ|
ಲಕ್ಷ್ಮೀ ಸಮಾವಿಶತು ಗಚ್ಛತು ವಾ ಯಥೇಷ್ಟಂ|
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ|
ನ್ಯಾಯಾತ್‌ಪಥಃ ಪ್ರವಿಚಲಂತಿ ನ ಧೀರಾಃ|

ಇದರ ಅರ್ಥ ಹೀಗಿದೆ. ನೀತಿ ವಿಶಾರದರು ಹೊಗಳಲಿ ಅಥವಾ ನಿಂದಿಸಲಿ ಅಪಾರ ಸಂಪತ್ತು ಇಂದೇ ಬರಲಿ ಅಥವಾ ಹೋಗಲಿ; ಈಗಲೇ ಸಾವು ಬರಲಿ ಅಥವ ಯುಗಾಂತರಗಳ ನಂತರ ಬರಲಿ:ಧೀರರಾದವರು ನ್ಯಾಯವಾದ ಮಾರ್ಗದಿಂದೆಂದಿಗೂ ವಿಚಲಿತರಾಗುವುದಿಲ್ಲ. ಶ್ರೀಮಾನ್ ದೇ. ಜ. ಗೌ. ರವರ ವ್ಯಕ್ತಿತ್ವವೂ ಇದಕ್ಕೇ ಅನು ಗುಣವಾಗಿಯೇ ಇದೆ.

ದೇ. ಜ. ಗೌ. ರವರ ಯಶಸ್ಸಿನ ಹಿಂದಿನ ಗುಟ್ಟೆಂದರೆ ಅವರು ತಮ್ಮಲ್ಲಿ ರೂಢಿಸಿಕೊಂಡ ಗುರುಭಕ್ತಿ ಹಾಗೂ ನಿರಂತರವಾಗಿ ಅವರಿಗೆ ಲಭ್ಯವಾಗಿರುವ ಅವರ ಗುರುಗಳ ಆಶೀರ್ವಾದ. ಈ ಆದರ್ಶ ಗುರುಶಿಷ್ಯ ಬಾಂಧವ್ಯಕ್ಕೆ ಜೀವಂತ ನಿದರ್ಶನ ಕುವೆಂಪು- ದೇ.ಜ.ಗೌ. ಸಂಬಂಧ. ಇದನ್ನು ನಾವು ಶ್ರೀ ರಾಮಕೃಷ್ಣ ಪರಮಹಂಸರ ಹಾಗೂ ಸ್ವಾಮಿ ವಿವೇಕಾನಂದರ ನಡುವಣ ಸಂಬಂಧಕ್ಕೆ ಹೋಲಿಸಬಹುದು. ಶ್ರೀಮಾನ್

ಶಂಕರೇಗೌಡರ ಮಾತಿನಲ್ಲೇ ಹೇಳುವುದಾದರೆ "ಆ ಗುರುಶಿಷ್ಯರದು(ಅಂದರೆ ರಾಮಕೃಷ್ಣ-ವಿವೇಕಾನಂದರದು) ಆಧ್ಯಾತ್ಮ ಶೃಂಖಲೆಯ ಬಂಧವಾದರೆ, ಇವರದು 'ಕನ್ನಡ 'ದ ಶಕ್ತಿಸೂತ್ರಬಂಧ. ವಿವೇಕಾನಂದರು ಗುರುವನ್ನು ಕಂಡುಕೊಂಡ ಬಗೆಗೂ ದೇ. ಜ. ಗೌ. ತನ್ನ ಗುರುವನ್ನು ಕಂಡುಕೊಂಡ ಬಗೆಗೂ ವಿಶೇಷ ಅಂತರವೇನೂ ಇಲ್ಲ. ಹಾಗೆಯೇ ವಿವೇಕಾನಂದರ ಹಿಂದಿರುವ ಅದೃಶ್ಯ ಶಕ್ತಿಯ ವಿಶ್ವಾಸಕ್ಕೂ ದೇಜಗೌ ನಂಬಿದ ಗುರುಕೃಪೆಯ ಭರವಸೆಗೂ ವ್ಯತ್ಯಾಸವೇನೂ ಇಲ್ಲ". ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮಾಡುತ್ತಿರುವ ಸಾಹಿತ್ಯಕ ಕಾರ್ಯಗಳನ್ನು ನೋಡಿದಾಗ ಈ ಮಾತು ನೂರಕ್ಕೆ ನೂರು ಸತ್ಯವೆಂಬುದು ವೇದ್ಯವಾಗುತ್ತದೆ.

ಕೊನೆಯದಾಗಿ, ಶ್ರೀಮಾನ್ ದೇ. ಜ. ಗೌ. ರವರ ಚಿಂತನಶೀಲ ವ್ಯಕ್ತಿತ್ವದ ಬಗೆಗೆ ಒಂದೆರಡು ಮಾತುಗಳನ್ನಿಲ್ಲಿ ಹೇಳಲೇಬೇಕು. ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಿಗೆ ಅವರ ಕೊಡುಗೆ ಅನನ್ಯ, ಅಪಾರ ಹಾಗೂ ಅಮೂಲ್ಯವಾದುದು. ಅವರೊಬ್ಬ ಚಿಂತನ ಶೀಲ ಭಾಷಣಕಾರ, ಬರಹಗಾರ, ಆಡಳಿತಪಟು ಹಾಗೂ ಕವಿ. ಅವರೊಡನೆ ಹತ್ತಾರು ನಿಮಿಷಗಳನ್ನು ಕಳೆಯುವ ಸೌಭಾಗ್ಯ ನನಗೆ ಅನೇಕ ಬಾರಿ ಒದಗಿತ್ತು. ಕಾಡುಹರಟೆ ಅಥವಾ ಕೆಲಸಕ್ಕೆ ಬಾರದ ಮಾತುಗಳನ್ನಾಡುವುದು ಅವರಿಗೆ ಸಲ್ಲದು. ಯಾವಾಗ ಹೋದರೂ ಅವರು ಅಧ್ಯಯನದಲ್ಲಿ ನಿರತರಾಗಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಅಮೂಲ್ಯ ಚಿಂತನೆಗಳನ್ನು ಕಿವಿಯಾರ ಕೇಳಿದ್ದೇನೆ. ಕೆಲವು ಸಮಾರಂಭಗಳಿಗೆ ಅವರೊಡನೆ ಪ್ರಯಾಣಮಾಡುವ ಸುಯೋಗ ನನಗೆ ಬಂದಿತ್ತು. ಪ್ರಯಾಣದುದ್ದಕ್ಕೂ ಮೆದುಳಿಗೆ ವ್ಯಾಯಾಮ ಕೊಡುವ ಮಾತುಗಳು. ತಲಕಾಡಿನ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಅವರಾಡಿದ ಮಾತುಗಳನ್ನು ನಾನಿನ್ನೂ ಮರೆತಿಲ್ಲ ಜೀವನಪರ್ಯಂತ ಮರೆಯಲಾರೆ, ಸುತ್ತಮುತ್ತಣ ಗದ್ದೆಗಳಲ್ಲಿ ತೆನೆಯ ಭಾರಕ್ಕೆ ಬಾಗಿ ಮಲಗಿದ್ದ ಹೊನ್ನಿನಂತಹ ಭತ್ತದ ಗಿಡಗಳ ಕಡೆ ಕೈ ತೋರುತ್ತಾ - " ನಾಟಿ ಹಾಕಿದ ಭತ್ತದ ಪೈರು ಆಗಸವನ್ನೇ ದಿಟ್ಟಿಸುತ್ತದೆ. ತೆಂಡೆಯೊಡೆದು ತನ್ನ ಸಂತತಿ ವೃದ್ಧಿಯಾದಾಗಲೂ ಅದೇ ದೃಷ್ಟಿ. ಆದರೆ ತೆನೆಯಲ್ಲಿ ಹಾಲು ಮೂಡಿ, ಪರಿಪಕ್ವವಾಗಿ, ಹೊನ್ನಿನ ಕಿರೀಟವನ್ನು ಧರಿಸಿದಾಗ, ತನ್ನ ಇಡಿ ಬೆಳವಣಿಗೆಗೆ ಸತ್ವವನ್ನು ನೀಡಿದ ಭೂ ಮಾತೆಗೆ ಕೃತಜ್ಞತೆಯಿಂದ ಶಿರಬಾಗಿ ವಂದಿಸುತ್ತದೆ. ಮಣ್ಣಿನ ಮಕ್ಕಳಾದ ನೀವು ಇದರಿಂದ ಪಾಠ ಕಲಿಯಬೇಕು. ನಿಮಗೆ ಜ್ಞಾನದಾನ ಮಾಡಿದ ಈ ಶಾಲೆ ಹಾಗೂ ಗುರುಗಳನ್ನೆಂದಿಗೂ ದೊಡ್ಡವರಾದ ಮೇಲೆ ನೀವು ಮರೆಯಬಾರದು", ಎಂಬ ಮಾತು ಗಳನ್ನು ಹೇಳಿದರು. ಅವರ ಚಿಂತನ ಶೀಲ ವ್ಯಕ್ತಿತ್ವಕ್ಕೆ ಇದೊಂದು ಜ್ವಲಂತ ನಿದರ್ಶನ.

ಕೊನೆಯದಾಗಿ, ಒಂದು ಮಾತು. ಸರಳ ಜೀವನ ಮತ್ತು ಉನ್ನತ ಚಿಂತನಕ್ಕೆ ದೇ. ಜ. ಗೌ. ಒಂದು ಉತ್ತಮ ಉದಾಹರಣೆ. ದೇ. ಜ. ಗೌ. ವ್ಯಕ್ತಿಯಲ್ಲ, ಅವರೊಂದು ಮಹಾನ್ ಶಕ್ತಿ. ಅಪೂರ್ವ ಹಾಗೂ ಅದ್ಭುತವಾದ ಚೇತನ. ಶ್ರೀ ಗುರುಗಳಾದ ಕುವೆಂಪುರವರ ಆಶೀರ್ವಾದವಿರುವುದರಿಂದ ಅದೆಂದಿಗೂ ಅನಿಕೇತನ. ಈ ಅಗಾಧವಾದ ಮಾನಸಿಕ ಚೈತನ್ಯಕ್ಕೆ ಮುಪ್ಪೆಂಬುದೇ ಇಲ್ಲ. ನಿರ್ಭಿಡೆಯ ಮಾತುಗಳು ಹಾಗೂ

ಪ್ರಖರವಾದ ಚಿಂತನಶೀಲತೆ ದೇ. ಜ. ಗೌ. ರವರಿಗೆ ದೈವದತ್ತವಾದ ವರಗಳು. ಸ್ಫೂರ್ತಿ ಉತ್ಸಾಹಗಳ ಚಿಲುಮೆಯಂತಿರುವ ಪೂಜನೀಯ ದೇ. ಜ. ಗೌ. ಎಪ್ಪತ್ತೈದರ ವಸಂತವನ್ನು ಮುಟ್ಟಿದ್ದಾರೆಂದು ಹೇಳುವುದೇ ಅತ್ಯಂತ ಸೂಕ್ತವಾದುದು. ಕನ್ನಡ ಮಾತೆಯ ಹಾಗೂ ಕನ್ನಡ ಕುಲಕೋಟಿಯ ಆಶೀರ್ವಾದವನ್ನು ಪಡೆದಿರುವ ದೇ. ಜ. ಗೌ. ನೂರು ವಸಂತಗಳನ್ನು ಕಾಣಲೆಂಬುದೇ ಕನ್ನಡ ಕುಲಕೋಟಿಯ ಪ್ರಾರ್ಥನೆ.

* * * * *

ಸಾಧಾರಣದಿಂದ ಅಸಾಧಾರಣಕ್ಕೆ

- ಡಾ. ಕೆ. ಎಸ್. ರಾಮೇಗೌಡ

ದೇಜಗೌ ನನಗೆ ಪರಿಚಯವಾದದ್ದು ಅವರು ಅಠಾರ ಕಛೇರಿಯಲ್ಲಿ ಸರ್ಕಾರಿ ಸೇವೆಯಲ್ಲಿದ್ದಾಗ. ಕನ್ನಡದಲ್ಲಿ ಎಂ. ಎ. ಪದವೀಧರರಾಗಿದ್ದು ಸಾಧಾರಣ ನೌಕರರಾಗಿ ಬೆಂಗಳೂರಿನಲ್ಲಿ ಅವರು ನೆಲೆಸಿದ್ದುದು ಬಸವನಗುಡಿಯಲ್ಲಿದ್ದ ಆಫೀಸರ್ಸ್ ಮೆಸ್‌ನಲ್ಲಿ. ನಾನು ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿ ವಾಸಿಸುತ್ತಿದ್ದಾಗ. ಸುಮಾರು1943 ರಲ್ಲಿರಬಹುದು - ಒಕ್ಕಲಿಗರ ಯೂತ್‌ಲೀಗ್‌ನ ಕಾರ್ಯದರ್ಶಿಯಾಗಿದ್ದೆ. ಅ ಸಂದರ್ಭದಲ್ಲಿ ಒಂದೆರಡು ಸಾರಿ ದೇಜಗೌ ಅವರನ್ನು (ಆಗಿನ್ನು ಡಿ. ಜವರೇಗೌಡ ಎಂದೇ ಕರೆಯುತ್ತಿದ್ದೆವು) ಅವರ ನಿವಾಸದಲ್ಲಿಯೂ ಮತ್ತು ಅಠಾರ ಕಛೇರಿಯಲ್ಲಿಯೂ (ಈಗಿನ ಹೈಕೋರ್ಟ್ ಕಟ್ಟಡದಲ್ಲಿ ಸೆಕ್ರೆಟೇರಿಯೆಟ್ ಕಾರ್ಯನಿರ್ವಹಿಸುತ್ತಿತ್ತು) ಭೇಟಿಮಾಡಿ ವಿವಿಧ ವಿಷಯಗಳನ್ನು ಚರ್ಚಿಸಿದ್ದೆವು. ಒಮ್ಮೆ ನಾನು ಅವರಿಗೆ ಒಂದು ನೇರ ಪ್ರಶ್ನೆಯನ್ನು ಹಾಕಿದ್ದೆ, "ನೀವು ಕನ್ನಡದಲ್ಲಿ ಎಂ. ಎ. ಪದವೀಧರರಾಗಿ ಸರ್ಕಾರದಲ್ಲಿ ಗುಮಾಸ್ತಗಿರಿ ಮಾಡುತ್ತಿದ್ದು, ನಿಮ್ಮ ಪ್ರತಿಭೆಯನ್ನು ಉಪಯೋಗಿಸಿಕೊಳ್ಳಲಿಲ್ಲವಲ್ಲಾ ಏತಕ್ಕೆ?" ಎಂದು ಪ್ರಶ್ನಿಸಿದಾಗ ಅವರು ಹೇಳಿದ್ದು "ಅವಕಾಶ ದೊರೆತಿಲ್ಲ. ಅಂತಹ ಅವಕಾಶ ಮುಂದೆ ಬರಬಹುದು ನೋಡೋಣ" ಹೀಗೆ ಸಾಧಾರಣವಾಗಿ ಪ್ರಾರಂಭವಾದ ಅವರ ಕಾರ್ಯ ಚಟುವಟಿಕೆ ಮುಂದೆ ಕನ್ನಡ ಅಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕನ್ನಡಕ್ಕೆ ಅಸಾಧಾರಣ ಸೇವೆ ಗೈದು ಕೀರ್ತಿಗಳಿಸುವಂತೆ ಮುಂದುವರಿದಿದೆ. ಈಗಲೂ ಕುವೆಂಪು ಟ್ರಸ್ಟ್ ಮತ್ತು ದೇಜಗೌ ಟ್ರಸ್ಟ್ ಮೂಲಕ ಕನ್ನಡದ ಸೇವೆಗೈಯುತ್ತಿದ್ದಾರೆ.

ಎಚ್. ಕೆ. ವೀರಣ್ಣಗೌಡರ ಆತ್ಮಚರಿತ್ರೆ "ಬದುಕು ಮೆಲಕು" ವಿನಲ್ಲಿ ಡಿ. ಜವರೇಗೌಡರ ಬಾಲ್ಯದ ಒಂದು ತುಣುಕು ಬಹಳ ಕುತೂಹಲಕಾರಿಯಾಗಿದೆ. ಅದನ್ನು ವೀರಣ್ಣ ಗೌಡರ ಮಾತಿನಲ್ಲೇ ಓದಿ ತಿಳಿದುಕೊಳ್ಳುವುದೊಳ್ಳೆಯದು. ಆಡು ಮೇಯಿಸುತ್ತಿದ್ದ ಚಿಕ್ಕರೆ ದೇವಗೌಡ ಮಗ ಅಕ್ಷರ ಕಲಿಯಲು ತವಕಿಸುತ್ತಿದ್ದುದನ್ನು ಕಂಡು ಶಾಲೆಗೆ ಸೇರಲು ಅವಕಾಶ ಮಾಡಿಕೊಟ್ಟ ಆಗ ಹೆಡ್ಮಾಸ್ಟರಾಗಿದ್ದ ಎಚ್. ಕೆ. ವೀರಣ್ಣಗೌಡರಿಗೆ ನಮ್ಮೆಲ್ಲರ ಅಭಿನಂದನೆಗಳು ಸಲ್ಲಬೇಕು. ಜವರೇಗೌಡರೇ ಈ ಘಟನೆಯನ್ನು ಅವರ "ಹೋರಾಟದ ಬದುಕು" ಎಂಬ ಆತ್ಮಕಥೆಯಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಅವರ ಜೀವನದ ವಿವರಗಳು ನಮಗೆಲ್ಲಾ ತಿಳಿದಿದ್ದರೂ, ನಾನು ಕಂಡ ಕೆಲವು ಅಂಶಗಳನ್ನು ತಿಳಿಸಲಿಚ್ಛಿಸುತ್ತೇನೆ.

ಕನ್ನಡ ವಿಭಾಗದಲ್ಲಿ ಅಧ್ಯಾಪಕ ವೃತ್ತಿಗೆ ಸೇರಲು ಕುವೆಂಪು ಪ್ರಭಾವ ದೇಜಗೌ ಮೇಲೆ ಹೆಚ್ಚಾಗಿತ್ತು. ಅವರ ಶಿಷ್ಯರಾಗಿ ಅವರ ಸಹಾಯಕರಾಗಿ ದೇಜಗೌ ಅಪಾರ ಸೇವೆಯನ್ನು ಕುವೆಂಪು ಅವರಿಗೂ ಆ ಮೂಲಕ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿದ್ದಾರೆ. ಕುವೆಂಪು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಿದ್ದಾಗ ದೇಜಗೌ ಅವರ ಆಪ್ತ ಸಹೋದ್ಯೋಗಿಯಾಗಿದ್ದರು. ಆ ವೇಳೆಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ(ಕ್ಯಾಂಪಸ್)ವನ್ನು ಸ್ಥಾಪಿಸಲು ತೀರ್ಮಾನವಾಗಿ ಅದಕ್ಕಾಗಿ ನಿವೇಶನ ಪಡೆಯಲು ಯತ್ನ ಪ್ರಾರಂಭವಾಯ್ತು. ದೇಜಗೌ ಅವರ ಮುಂದಾಲೋಚನೆ ಮತ್ತು ಸಮಯಸ್ಫೂರ್ತಿಯ ಪರಿಣಾಮವಾಗಿ ಕುಕ್ಕರಹಳ್ಳಿ ಕೆರೆಯ ಪಶ್ಚಿಮ ದಿಕ್ಕಿನಲ್ಲಿದ್ದ ಕರ್ನಲ್ ಬಸವರಾಜೇ ಅರಸರ ವಿಸ್ತಾರವಾದ ಜಮೀನನ್ನು ಕೇವಲ 6 ಲಕ್ಷ ರೂಪಾಯಿಗಳಿಗೆ (ಈಗ ಅದರ ಬೆಲೆ ಕೋಟ್ಯಂತರ ರೂಪಾಯಿಗಳು) ಕೊಳ್ಳಲು ವಿಶ್ವವಿದ್ಯಾನಿಲಯ ತೀರ್ಮಾನಿಸಿತ್ತು. ಆ ಪ್ರದೇಶಕ್ಕೆ ಕುವೆಂಪು ಅವರೇ "ಮಾನಸ ಗಂಗೋತ್ರಿ" ಎಂದು ನಾಮಕರಣ ಮಾಡಿದರು. ಅಲ್ಲಿ ವಿಶ್ವವಿದ್ಯಾನಿಲಯದ ಹೊಸ ಕಟ್ಟಡಗಳನ್ನು ನಿರ್ಮಿಸಲಾಯಿತು. ಈ ಬೃಹತ್ ಯೋಜನೆಯ ರೂವಾರಿಗಳು ಕುವೆಂಪು ಮತ್ತು ದೇಜಗೌ ಎಂದು ಜ್ಞಾಪಿಸಿಕೊಳ್ಳಬೇಕು. 1954 ರಿಂದ 1961 ರವರೆಗೆ. ನಾನು ಸರ್ಕಾರಿ ಆರ್ಕಿಟೆಕ್ಟ್‌ರ ಕಛೇರಿಯಲ್ಲಿ ಅಸಿಸ್ಟೆಂಟ್ ಆರ್ಕಿಟೆಕ್ಟ್ ಆಗಿದ್ದಾಗ ಅಂದಿನ ಮುಖ್ಯ ಶಿಲ್ಪಿ ದಿ: ಬಿ. ಆರ್. ಮಾಸೆಕ್ಕಂ ಮತ್ತು ಉಪ ಮುಖ್ಯ ಶಿಲ್ಪಿ ವಿ. ಎಚ್. ಆರ್. ನಾಯ್ಡು ಅವರು ಹೊಸ ಕ್ಯಾಂಪಸ್‌ನ ಮತ್ತು ಕಟ್ಟಡಗಳ ನಕ್ಷೆಗಳನ್ನು ತಯಾರಿಸಿ ಕೊಡುತ್ತಿದ್ದರು. ಆಗ ದೇಜಗೌ ಬಹಳ ಶ್ರಮವಹಿಸಿ ಆ ಉಪನಗರದ ನಿರ್ಮಾಣಕ್ಕೆ ಕಾರಣರಾದರು. ದೇಜಗೌ ಮುಂದೆ 6 ವರ್ಷ ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ ಈ ಸ್ನಾತಕೋತ್ತರ ಕೇಂದ್ರದ ಬೆಳವಣಿಗೆಗೆ ಬಹಳ ಶ್ರಮ ವಹಿಸಿದರು. ಬಸವರಾಜೇ ಅರಸರು ಬೆಳೆಸಿದ್ದ ತೆಂಗು ಮತ್ತು ಮಾವಿನ ತೋಟಗಳನ್ನು ಹಾಗೇ ಉಳಿಸಿದ್ದಲ್ಲದೆ ಅವುಗಳ ಅಭಿವೃದ್ಧಿಗಾಗಿ ವ್ಯವಸ್ಥೆ ಮಾಡಿದರು. ಹೊಸ ಕಟ್ಟಡಗಳ ಮುಂದೆ ವಿಶಾಲವಾದ ಬಯಲನ್ನು ಉಳಿಸಿದ್ದಲ್ಲದೆ ಕುಕ್ಕರಹಳ್ಳಿ ಕೆರೆಯ ಸುತ್ತಲೂ ತೋಟಗಳನ್ನು ಮತ್ತು ಮರಗಳ ತೋಪನ್ನು ನಿರ್ಮಿಸಿ, ಇಡೀ ಪರಿಸರಕ್ಕೆ ಒಂದು ನೈಸರ್ಗಿಕ ರೂಪವನ್ನು ಕೊಟ್ಟರು. ಜೊಂಡಿನಿಂದ ತುಂಬಿರುತ್ತಿದ್ದ ಕುಕ್ಕರಹಳ್ಳಿ ಕೆರೆಯನ್ನು ಆ ಕಳೆಗಳಿಂದ ಬಿಡಿಸಿ ನೀರಿನ ನೈರ್ಮಲ್ಯವನ್ನು ಕಾಪಾಡುವ ಜೊತೆಗೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ದೋಣಿಗಳನ್ನು ಕೆರೆಯಲ್ಲಿ ತೇಲಿ ಬಿಡಿಸಿದರು.

ವಿದ್ಯಾ ಸಂಸ್ಥೆಗಳ ಅಭಿವೃದ್ಧಿಗಾಗಿ ದೇಜಗೌ ಬಹಳ ಯತ್ನವೆಸಗಿದರು. ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದ್ದ ಬೋಧನಾ ವಿಷಯಗಳ ಜೊತೆಗೆ ಹೊಸ ಹೊಸ ಬೋಧನಾ ವಿಷಯಗಳನ್ನು ರೂಢಿಸಿದ ಕೀರ್ತಿ ದೇಜಗೌ ಅವರಿಗೆ ಸಲ್ಲಬೇಕು. ಕನ್ನಡ ಅಧ್ಯಯನ ಸಂಸ್ಥೆ, ಕರೆಸ್ಪಾಂಡೆನ್ಸ್ ಕೋರ್ಸ್, ಅಭಿವೃದ್ಧಿ ಅಧ್ಯಯನ ಸಂಸ್ಥೆ (ಐ. ಡಿ. ಎಸ್), ಪ್ರಸಾರಾಂಗ ಮುಂತಾದವನ್ನು ಹೆಸರಿಸಬಹುದು. ನಗರ ಯೋಜನಾ ವಿಷಯವನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಬೇಕೆಂದು ನಾವೆಲ್ಲರೂ

ಪ್ರಯತ್ನಿಸಿದರೂ ಸಾಧ್ಯವಾಗದಿದ್ದಾಗ 1971 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ನಗರ ಮತ್ತು ಪ್ರಾದೇಶಿಕ ಯೋಜನೆಯನ್ನು (ಅರ್ಬನ್ ಅಂಡ್ ರೀಜನಲ್ ಪ್ಲಾನಿಂಗ್) ಸ್ನಾತಕೋತ್ತರ ಬೋಧನೆಗೆ ಸೇರಿಸಿತು. ಆ ವಿಭಾಗದ ಬೋರ್ಡ್ ಆಫ್ ಸ್ಟಡೀಸ್‌ನ ಒಬ್ಬ ಸದಸ್ಯನಾಗಿ ನಾನು 6 ವರ್ಷ ಇದ್ದುದಲ್ಲದೆ (1971-77), ಮುಂದೆ ಆ ಸಂಸ್ಥೆಯ ಪುನರುಜ್ಜೀವನಕ್ಕಾಗಿ 1982ರಲ್ಲಿ ಕುಲಪತಿಗಳಾಗಿದ್ದ ಪ್ರೊ. ಕೆ. ಎಸ್. ಹೆಗಡೆಯವರಿಂದ ನಾನು ಸಂದರ್ಶಕ ಪ್ರಾಧ್ಯಾಪಕನಾಗಿ(ವಿಸಿಟಿಂಗ್ ಪ್ರೊಫೆಸರ್) ನೇಮಿಸಲ್ಪಟ್ಟು, ಐದು ವರ್ಷ ಸೇವೆ ಗೈದ ಅವಕಾಶ ದೊರಕಿತ್ತು. ಈ ಬೋಧನಾ ವಿಷಯವನ್ನು ಇನ್‌ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನರ್ಸ್ ಸಂಸ್ಥೆಯು ಮಾನ್ಯ ಮಾಡುವಂತೆ ಯತ್ನಿಸಿ 1984 ರಲ್ಲಿ ಸಫಲನಾಗುವ ಅವಕಾಶ ನನ್ನದಾಯಿತು. ಅಲ್ಲದೆ ನಗರ ಯೋಜನೆಯನ್ನು ಕಲಾ ವಿಭಾಗದಿಂದ ಇಂಜಿನಿಯರಿಂಗ್ ವಿಭಾಗಕ್ಕೆ ವರ್ಗಾಯಿಸುವಲ್ಲಿ ಸಂಸ್ಥೆಯಲ್ಲಿದ್ದ ಕೆಲವರ ಆಕ್ರೋಶಕ್ಕೆ ನಾನು ಒಳಗಾದರೂ ಅಖಿಲ ಭಾರತ ಕಾರ್ಯ ನೀತಿಯನ್ನು ಕರ್ನಾಟಕದಲ್ಲೂ ಜಾರಿಗೆ ತರಲು ಮಾಡಿದ ಯತ್ನ ಫಲಕಾರಿಯಾಯಿತು. ಇಂತಹ ಅವಕಾಶ ದೊರೆತಿದ್ದು ದೇಜಗೌ ಸ್ಥಾಪಿಸಿದ ಹೊಸ ಪಠ್ಯಕ್ರಮಗಳ ದೆಸೆಯಿಂದ ಎನ್ನಬೇಕು.

ದೇಜಗೌ ಕುಲಪತಿಯಾದದ್ದು

ಶ್ರೀ ಶ್ರೀಮಾಲಿಯಾದವರು ಕುಲಪತಿಗಳಾಗಿದ್ದಾಗ ಅವರು ವಿಶ್ವವಿದ್ಯಾನಿಲಯದ ಮುಖ್ಯ ಆಡಳಿತ ವಿಷಯವಾಗಿ ತೀರ್ಮಾನ ಕೈಗೊಳ್ಳುವ ಮೊದಲು ದೇಜಗೌ ಅವರ ಸಲಹೆಯನ್ನು ಪಡೆದೇ ಪಡೆಯುತ್ತಿದ್ದರೆಂದು ನಮಗೆಲ್ಲಾ ತಿಳಿದಿತ್ತು. ಆಗ ವಿಶ್ವವಿದ್ಯಾನಿಲಯದಲ್ಲಿ ದೇಜಗೌ, ಪ್ರೊ. ಎಂ. ಎನ್. ವಿಶ್ವನಾಥಯ್ಯ ಮತ್ತು ಪ್ರೊ. ತೋಟಪ್ಪ ಇವರುಗಳು ಅನ್ಯೋನ್ಯವಾಗಿದ್ದು ಹೊರಗಡೆಯವರಿಗೆ "ದಿ ಥ್ರೀಮಸ್ಕೆಟಿಯರ್ಸ್" ಎಂದೇ ಗುರುತಾಗಿದ್ದರು. ಶ್ರೀಮಾಲಿಯವರ ಅವಧಿಯ ನಂತರ ಅವರ ಸ್ಥಾನಕ್ಕೆ ಆಯ್ಕೆ ಮಾಡಲು ತಜ್ಞರ ಸಮಿತಿ ರಚಿತವಾಯಿತು. ಆ ಸಮಯದಲ್ಲಿ ದಿ. ಪ್ರೊ. ವಿಶ್ವನಾಥಯ್ಯ ರಷ್ಯ ದೇಶದ ಮಿಂಕ್ಸ್ ನಗರಕ್ಕೆ ಹೊರಡುವಾಗ ಬೆಂಗಳೂರಿನಲ್ಲಿ ಒಂದು ಕಡೆ ನಾವಿಬ್ಬರೂ ಮತ್ತು ಆರ್. ಸುಬ್ಬಣ್ಣನವರ ಅಳಿಯ ಇಂಜಿನಿಯರ್ ಕೃಷ್ಣಮೂರ್ತಿಯೂ ಸೇರಿದ್ದು ವಿಮಾನನಿಲ್ದಾಣಕ್ಕೆ ಜೊತೆಯಲ್ಲೇ ಹೋದೆವು. ನಾನೂ ವಿಶ್ವನಾಥಯ್ಯ 1939 ರಿಂದ ಜೊತೆಯಲ್ಲಿ ವ್ಯಾಸಂಗ ಮಾಡಿದವರು. ದೇಜಗೌರಂತೆಯೇ ಅವರೂ ಒಳ್ಳೆಯ ಸ್ನೇಹಿತರು. ನಾನು ವಿಶ್ವನಾಥಯ್ಯನಿಗೆ 'ಈಗ ಕುಲಪತಿಗಳು ನೇಮಕವಾಗುವ ಸಮಯ. ನೀವು ಹೊರ ದೇಶಕ್ಕೆ ಹೊರಟಿರುವಿರಲ್ಲಾ, ನೀವು ಪ್ರಯತ್ನಿಸುವುದಿಲ್ಲವೇ ?' ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ನನಗೆ ಬಹಳ ಸಂತಸವನ್ನುಂಟು ಮಾಡಿತು. ನೋಡಿ ನಾನು, "ದೇಜಗೌ ಮತ್ತು ತೋಟಪ್ಪ ಆಪ್ತ ಸ್ನೇಹಿತರು. ನಮ್ಮಲ್ಲಿ ದೇಜಗೌ ಹಿರಿಯರು, ಮೊದಲು ಅವರು ಕುಲಪತಿಗಳಾಗಲಿ ಆಮೇಲೆ ನೋಡೋಣ" ಎಂದರು. ಮಿಂಕ್ಸ್‌ನಲ್ಲಿ ಕಾರ್ಯಕ್ರಮಗಳನ್ನು ಮುಗಿಸಿ ಒಂದೆರಡು ತಿಂಗಳಾದ ಮೇಲೆ ಹಿಂದಿರುಗಿದರು. ಈ ವಿಷಯವನ್ನು ನಮ್ಮ ಸ್ನೇಹಿತರಾದ ದಿ: ಬಿ. ಜೆ. ಲಿಂಗೇಗೌಡರಿಗೆ ತಿಳಿಸಿ, ದೇಜಗೌ ಕುಲಪತಿಗಳಾಗಲು ಯತ್ನಿಸಬೇಕೆಂದು

ತಿಳಿಸಿದೆ. ಅವರ ಪ್ರಯತ್ನದ ಜೊತೆಗೆ ವಿದ್ಯಾ ಮಂತ್ರಿಗಳಾಗಿದ್ದ ದಿ: ಕೆ. ವಿ. ಶಂಕರೇಗೌಡರು. ಅಂದಿನ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಮತ್ತು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಎಸ್. ನಿಜಲಿಂಗಪ್ಪ ಮತ್ತಿತರರ ಬೆಂಬಲ ದೊರೆತು ದೇಜಗೌ ಕುಲಪತಿಗಳಾದರು. ಬಿ. ಜೆ. ಲಿಂಗೇಗೌಡರ ಮೂಲಕ ಪ್ರತಿ ವಿವರವೂ ನನಗೆ ತಿಳಿಯುತ್ತಿತ್ತು. ನಾನು ಯಾರಿಗೂ ತಿಳಿಸಿರಲಿಲ್ಲ. ಪ್ರೊ. ವಿಶ್ವನಾಥಯ್ಯನವರೂ ಸಂತೋಷಪಟ್ಟರು. ಆದರೆ ನಡೆಯಬಾರದ್ದೊಂದು ನಡೆದುಹೋಯಿತು. ಯಾರೋ ಚಾಡಿಕೋರರು ದೇಜಗೌ ಅವರಿಗೆ ವಿಶ್ವನಾಥಯ್ಯ ನಿಮಗೆ ವಿರುದ್ಧವಾಗಿ ಪ್ರಯತ್ನ ಮಾಡಿದರೆಂದು ತಿಳಿಸಿ ಇಬ್ಬರು ಸ್ನೇಹಿತರಲ್ಲಿ ಒಡಕನ್ನು ತಂದು ತಮ್ಮ ಬೇಳೆ ಬೇಯಿಸಿಕೊಂಡರೆಂದು ತೋರುತ್ತದೆ. ಈ ಘಟನೆ ವಿಶ್ವನಾಥಯ್ಯನವರಿಗೆ ಬಹಳ ದುಃಖ ತಂದಿತು. ಆದರೆ ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯಲ್ಲಿ, ಇದರಿಂದ ಯಾವ ಅಹಿತಕರ ಕಾರ್ಯವೂ ನಡೆಯದಂತೆ ದೇಜಗೌ ನಡೆದುಕೊಂಡರು. ಈ ವಿಷಯವನ್ನು ಬರೆಯುವ ಉದ್ದೇಶ, ಇನ್ನೂ ಏನಾದರೂ ದೇಜಗೌ ಮನಸ್ಸಿನಲ್ಲಿ ದಿವಂಗತ ವಿಶ್ವನಾಥಯ್ಯನವರ ವಿಷಯವಾಗಿ ಅನುಮಾನ ಉಳಿದಿದ್ದರೆ ಅದನ್ನು ನಿವಾರಿಸಲೆಂದು. ಮುಂದೆ ದೇಜಗೌ ಎರಡನೆ ಸಲ ಕುಲಪತಿಗಳಾಗುವ ಅವಕಾಶ ದೊರೆಯಿತು. ಹಾಗೆಯೇ ಎಂ. ಎನ್. ವಿಶ್ವನಾಥಯ್ಯ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಮೂರು ವರ್ಷ ಸೇವೆ ಸಲ್ಲಿಸುವ ಅವಕಾಶವೂ ಒದಗಿತು. ಸ್ಥಾನಗಳು ದೊರೆಯುತ್ತವೆ. ಹೋಗುತ್ತವೆ. ಆದರೆ ಮೂಲ ಮಾನವ ಮೌಲ್ಯಗಳ ಬದಲಾಗುವುದಿಲ್ಲ.

ಪ್ರಸಾರಾಂಗ : ಮೊದಲಿನಿಂದಲೂ ಮೈಸೂರು ವಿಶ್ವವಿದ್ಯಾನಿಲಯವು ಗ್ರಂಥ ರಚನೆ ಮತ್ತು ಪ್ರಕಾಶನದ ಕಡೆ ಹೆಚ್ಚು ಆಸ್ಥೆ ವಹಿಸುತ್ತಿತ್ತು. ಪ್ರೊ. ದೇ. ಜ. ಗೌ ಕುಲಪತಿಗಳಾದ ಮೇಲೆ ಇದು ಇನ್ನೂ ಚುರುಕುಗೊಂಡಿತು. ನಾನು ನಗರ ಯೋಜನೆಯ ಮೇಲೆ ಇಂಗ್ಲೀಷ್‌ನಲ್ಲಿ ಒಂದು ಪುಸ್ತಕ ರಚಿಸಿ ಅದರ ಪ್ರಕಟಣೆಗಾಗಿ ಕೆಲವು ಪ್ರಕಾಶಕರನ್ನು ಸಂಪರ್ಕಿಸಿದೆ. ಆದರೆ ಅವರಾರೂ ಆ ಪುಸ್ತಕವನ್ನು ಪ್ರಕಟಿಸಲು ಉತ್ಸಾಹ ತೋರಲಿಲ್ಲ. ಆಗ ಪ್ರಸಾರಾಂಗದ ನಿರ್ದೇಶಕರಾಗಿದ್ದ ಡಾ: ಪ್ರಭುಶಂಕರ ಅವರನ್ನು ಸಂಪರ್ಕಿಸಿ ಚರ್ಚಿಸಿದೆ. ಅವರು ದೇಜಗೌ ಅವರ ಸಲಹೆ ಮೇಲೆ 'ಅರ್ಬನ್ ಅಂಡ್ ರೀಜನಲ್ ಪ್ಲಾನಿಂಗ್'ಎಂಬ ಇಂಗ್ಲೀಷ್ ಗ್ರಂಥವನ್ನು ಪ್ರಕಟಿಸಲು ಒಪ್ಪಿದರು. ಪ್ರಭುಶಂಕರ್‌ರ ಅವರು ಇನ್ನೊಂದು ಸಲಹೆಯನ್ನಿತ್ತು ನಾನು ಕನ್ನಡದಲ್ಲಿ ಇದೇ ವಿಷಯವಾಗಿ ಒಂದು ಗ್ರಂಥವನ್ನು ರಚಿಸಿಕೊಡಬಾರದೇಕೆ ಎಂದು ಕೇಳಿದರು. ಅವರ ಸಲಹೆಯನ್ನು ಒಪ್ಪಿ ಇಂಗ್ಲೀಷ್ ಗ್ರಂಥದ ಸಾರಾಂಶವೋ ಎಂಬಂತಿರುವ 'ನಗರ ಯೋಜನೆ' ಎಂಬ ಪುಸ್ತಕವನ್ನು 'ಗೃಹಸರಸ್ವತಿ ಗ್ರಂಥಮಾಲಾ'' ಆಶ್ರಯದಲ್ಲಿ ಬರೆದುಕೊಟ್ಟೆ. ಕುವೆಂಪು ಅವರ ಮುನ್ನುಡಿಯೊಡನೆ ಆ ಗ್ರಂಥವು 1972 ರಲ್ಲಿ ಪ್ರಸಾರಾಂಗದಿಂದ ಪ್ರಕಟವಾಯಿತು. ಅದೇ ವರ್ಷ ಪ್ರಕಟವಾದ ಇಂಗ್ಲೀಷ್ ಗ್ರಂಥವನ್ನು ಬೆಂಗಳೂರಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜನಿಯರ್ಸ್ ಸಭಾಂಗಣದಲ್ಲಿ ಅಂದಿನ ವಿದ್ಯಾಮಂತ್ರಿ ಶ್ರೀ ಎ. ಆರ್. ಬದರಿನಾರಾಯಣ ದಿ: 25-11-72ರಂದು ಬಿಡುಗಡೆ

ಮಾಡಿದರಲ್ಲದೆ, ಕುಲಪತಿ ದೇಜಗೌ ಅಧ್ಯಕ್ಷತೆ ವಹಿಸಿ ಗ್ರಂಥದ ವಿಷಯಗಳಲ್ಲೂ ನನ್ನ ವಿಷಯದಲ್ಲೂ, ಕೆಲವು ಹಿತನುಡಿಗಳನ್ನಾಡಿದ್ದನ್ನು ನಾನು ಮರೆಯುವಂತಿಲ್ಲ. ಈ ಇಂಗ್ಲೀಷ್ ಗ್ರಂಥವು ಪುನರ್‌ವಿಮರ್ಶಿತವಾಗಿ 1986 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದಲೇ ಮರುಪ್ರಕಟಣೆಕೊಂಡಿತು. ಈ ಗ್ರಂಥವು ಇಂಜಿನಿಯರಿಂಗ್ ಕಾಲೇಜ್, ಪಾಲಿಟೆಕ್ನಿಕ್ ಕಾಲೇಜ್ ಮತ್ತು ನಗರ ಯೋಜಕರಿಗೆ ಬಹಳ ಉಪಯುಕ್ತವಾಗಿದೆಯೆಂದು ಅನೇಕರು ಪ್ರಶಂಸಿಸಿರುವುದು ಸಂತೋಷದಾಯಕ. ಈ ಸೇವೆಗೆ ಕಾರಣರಾದ ದೇ. ಜ. ಗೌ ಮತ್ತು ಡಾ: ಪ್ರಭುಶಂಕರ, ಅವರಿಗೆ ನಾನು ಆಭಾರಿಯಾಗಿದ್ದೇನೆ.

ಸಾಧಾರಣದಿಂದ ಅಸಾಧಾರಣಕ್ಕೆ :

ಪ್ರೊ. ಡಿ. ಜವರೇಗೌಡರು ಒಬ್ಬ ಸಾಮಾನ್ಯ ಹಳ್ಳಿಯ ಹುಡುಗನಾಗಿದ್ದು ಎಲ್ಲ ಹಳ್ಳಿಗರಂತೆ ಸಾರ್ವಜನಿಕ ಶಾಲೆ, ಕಾಲೇಜುಗಳಲ್ಲಿ ಓದಿ ಸಾಮಾನ್ಯ ವಿದ್ಯಾರ್ಥಿಯಾಗಿ ವಿಶ್ವವಿದ್ಯಾನಿಲಯದಿಂದ ಹೊರಬಂದರೂ ತಮ್ಮ ಸ್ವಅಧ್ಯಯನ, ಸ್ವಸಾಮರ್ಥ್ಯದಿಂದ ಒಂದೊಂದೇ ಮೆಟ್ಟಲೇರಿ ಹೆಸರಾಂತ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಆರು ವರ್ಷ ಸೇವೆ ಸಲ್ಲಿಸಿದ್ದಲ್ಲದೆ, ಕನ್ನಡ ನಾಡು ಮತ್ತು ನುಡಿಗೆ ಅಗಾಧ ಸೇವೆಗೈದಿರುವ ರೀತಿಯನ್ನು ಅವಲೋಕಿಸಿದವರಿಗೆ ದೇಜಗೌ ಅವರ ಜ್ಞಾನಪಿಪಾಸೆ, ಕಾರ್ಯದಕ್ಷತೆ ಮತ್ತು ಸಾಮರ್ಥ್ಯ ಅರಿವಾಗದಿರದು. ಅವರ ಗ್ರಂಥರಚನೆ, ಸಂಪಾದಕತ್ವ, ಲೇಖನಗಳು ಅಪಾರ ಮೆಚ್ಚುಗೆ ಗಳಿಸಿವೆ; ಅವರು ಕೈಯಾಡದ ವಿಷಯವಿಲ್ಲ. ಗುರುಕೃಪೆ ಮತ್ತು ಹಿತೈಷಿಗಳ ಪ್ರೋತ್ಸಾಹ ಅವರಿಗೆ ಬೆಂಬಲವಾದವು. ಕುವೆಂಪು ಅವರ ನೆರಳಿನಲ್ಲಿ ಅರಳಿದ ದೇಜಗೌ ಕುವೆಂಪು ಅವರ ಕವಿವಾಣಿ ಮತ್ತು ಋಷಿವಾಣಿಯನ್ನು ಕನ್ನಡ ನಾಡಿನ ಉದ್ದಗಲಕ್ಕೂ ಹರಡುವುದರಲ್ಲಿ ಮಂಚೂಣಿಯಲ್ಲಿ ನಿಂತು ದುಡಿದಿದ್ದಾರೆ. ಕುವೆಂಪು ಟ್ರಸ್ಟ್ ಮತ್ತು ದೇಜಗೌ ಟ್ರಸ್ಟ್‌ಗಳ ಮೂಲಕ ಕನ್ನಡ ನುಡಿಯ ಸೇವೆ ಮುಂದುವರಿಯುತ್ತಿದೆ. ಕುಲಪತಿಗಳಾಗಿದ್ದಾಗ ಕನ್ನಡ ಬೋಧನೆಗೆ ಹೆಚ್ಚು ಪ್ರಾಶಸ್ತ್ಯವಿತ್ತು. ಅನೇಕ ಪ್ರತಿಭಾವಂತ ಯುವಕರು ಕನ್ನಡ ಅಧ್ಯಯನವನ್ನು ಮುಗಿಸಿ ಶಾಲಾ ಕಾಲೇಜುಗಳಲ್ಲಿ ಬೋಧಕರಾಗಿ ದುಡಿಯಲು ಇವರು ಕಾರಣರೆಂದರೆ ಅತಿಶಯೋಕ್ತಿಯಾಗಲಾರದು.

ಸಾಧಾರಣದಿಂದ ಅಸಾಧಾರಣ ಸಾಧನೆ ಇವರಿಗೆ ಹೇಗೆ ಸಾಧ್ಯವಾಯಿತು ಎಂದು ನಾನು ಕೆಲವೊಮ್ಮೆ ಯೋಚಿಸಿದ್ದುಂಟು. ವಿಶ್ವವಿದ್ಯಾನಿಲಯಗಳಲ್ಲಿ ಅಂಕಗಳನ್ನು ಹೆಚ್ಚು ಪಡೆದು ಪ್ರಶಸ್ತಿ ಪಡೆಯುವುದಕ್ಕೂ ಜೀವನದಲ್ಲಿ ಮೇಲ್ಮೆ ಸಾಧಿಸುವುದಕ್ಕೂ ಬಹಳ ಅಂತರವಿದೆ. ಇಂದಿನ ಪರೀಕ್ಷಾ ಪದ್ಧತಿಯಲ್ಲಿ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಅಂದರೆ "ಉರು ಹೊಡೆದು" ಉತ್ತರ ಪತ್ರಿಕೆಗೆ ಇಳಿಸುವುದಕ್ಕೂ, ಜೀವನದಲ್ಲಿ ತನ್ನ ಬುದ್ಧಿಶಕ್ತಿ, ಕಾರ್ಯದಕ್ಷತೆಯಿಂದ ಎದ್ದು ಕಾಣುವಂತೆ ಕಾರ್ಯಗೈಯುವುದಕ್ಕೂ ವ್ಯತ್ಯಾಸವುಂಟು. ಆದರಿಂದಲೇ ನಮ್ಮ ಪರೀಕ್ಷಾ ವಿಧಾನವು ಬದಲಾಗಬೇಕೆಂದು ತಜ್ಞರು ಸಲಹೆ ಮಾಡುತ್ತಲೇ ಬಂದಿದ್ದಾರೆ. ಹಾಗೆ ಬದಲಿಸಿ ಕೊಂಡಿರುವ ಅಮೆರಿಕ ಮುಂತಾದ ದೇಶಗಳಲ್ಲಿ ಪ್ರತಿಭೆ ತಾನಾಗಿಯೇ ಹೊರ

ಹೊಮ್ಮುತ್ತಿದೆ. ಭಾರತದಲ್ಲಿಯೂ ಆ ಪದ್ಧತಿ ಬಂದರೆ ಇನ್ನೂ ಹೆಚ್ಚು ದೇಜಗೌ ತರಹ ವ್ಯಕ್ತಿಗಳು ಹೊರಹೊಮ್ಮಬಲ್ಲರು. ನಮ್ಮ ಯುವಕರು ದೇಜಗೌ ಸಾಧನೆಯನ್ನು ಅವಲೋಕಿಸಿ, ತಾವೂ ಸ್ವಸಾಮರ್ಥ್ಯದಿಂದ ಮೇಲೇರಿ ಭಾಷೆ, ಸಮಾಜ ಮತ್ತು ದೇಶದ ಪ್ರಗತಿಗಾಗಿ ದುಡಿಯುವಂತಾಗಲಿ. ದೇಜಗೌ ಇನ್ನೂ ಹೆಚ್ಚು ಕಾಲ ಕನ್ನಡ ಸೇವೆ ಮಾಡಿ ಸಂತೃಪ್ತ ಜೀವನವನ್ನು ಸಾಗಿಸಲೆಂದು ಹಾರೈಸುತ್ತೇನೆ.

*****

ನಡೆದು ಬಂದ ದಾರಿ

- ಆರಳುಮಲ್ಲಿಗೆ ಪಾರ್ಥಸಾರಥಿ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನಲಂಕರಿಸುವುದು ಒಬ್ಬ ಸಾಹಿತಿಯ ಜೀವನದಲ್ಲಿ ಮಹತ್ವದ ಘಟ್ಟ ಎನ್ನಬಹುದು. ಅಂಥ ಮಹತ್ವದ ಘಟ್ಟವನ್ನು ಇಂದು ಶ್ರೀ ದೇ. ಜವರೇಗೌಡರು ಮುಟ್ಟಿದ್ದಾರೆ. ಬೆಂಗಳೂರಿನಲ್ಲಿ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯಲಿರುವ ೪೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಆಯ್ಕೆಯಾಗಿದ್ದಾರೆ. ಇದರ ಹಿನ್ನೆಲೆಯಲ್ಲಿ ಅವರು ನಡೆದು ಬಂದ ದಾರಿ ದುರ್ಗಮ. ಅದನ್ನು ದಿಟ್ಟತನದಿಂದ ನಡೆದು ಸವೆಸಿ ಯಶಸ್ಸಿನ ಸೋಪಾನವನ್ನೇರಿರುವುದು ದೇಜಗೌ ಅವರ ಕರ್ತೃತ್ವಶೀಲತೆಯ ವೈಶಿಷ್ಟ್ಯ.

೧೯೧೮ ರ ಜುಲೈ ಆರರಂದು ಚನ್ನಪಟ್ಟಣ ತಾಲ್ಲೂಕಿನ ಚಿಕ್ಕರೆ ಗ್ರಾಮದಲ್ಲಿ ಜನಿಸಿದ ಜವರೇಗೌಡರು ಬಾಲ್ಯದಿಂದಲೂ ಬಡತನದ ಬವಣೆಯಲ್ಲಿ ಬೆಳೆದರು. ಹುಟ್ಟಿದ್ದು ಆಡಿನ ಕೊಟ್ಟಿಗೆಯಲ್ಲಿ. ಬೆಳೆದಿದ್ದು ಎಮ್ಮೆಗಳನ್ನು ಮೇಯಿಸಿಕೊಂಡು; ಅಂದಿನಿಂದಲೂ ನಿರಂತರವಾಗಿ ಸಾಗಿ ಬಂದಿದೆ ಅವರ ಹೋರಾಟದ ಬದುಕು. ಎಷ್ಟೇ ಅಡ್ಡಿ ಅಡಚಣೆಗಳು ಬಂದರೂ, ವಿದ್ಯಾಭೀಪ್ಸೆ ಕುಗ್ಗದೆ, ಇಮ್ಮಡಿ, ನೂರ್ಮಡಿಯಾಗಿ ೧೯೪೧ರಲ್ಲಿ ಬಿ. ಎ. ಆನರ್ಸ್ ಪದವಿಯನ್ನೂ, ೧೯೪೩ರಲ್ಲಿ ಎಂ. ಎ. ಪದವಿಯನ್ನೂ ಪಡೆದು ಮುಂದಿನ ನವೋದಯಕ್ಕೆ ನಾಂದಿ ಹಾಡಿದರು. ಸೆಕ್ರೆಟೇರಿಯೆಟ್‌ನ ಗುಮಾಸ್ತಗಿರಿಗೆ ಶರಣುಹೊಡೆದು, ತಾವು ಸೇರಬೇಕಾದ ದಿಕ್ಕನ್ನರಸಿ ಹೊರಟು ೧೯೪೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾದರು. ಇದುವರೆಗೆ, ಜವರೇಗೌಡರು ಯಾವ ಹೊಳೆಯಲ್ಲಿ ಯಾರಿಗೂ ಕಾಣದಂತೆ ತೇಲಿಹೋಗುತ್ತಿದ್ದರೋ ಏನೊ! ಆದರೆ ವಿಧಿ ಅವರನ್ನು ಅನಿರೀಕ್ಷಿತವಾಗಿ ಕನ್ನಡದ ದಂಡೆಯತ್ತ ನಾಡಿನ ಪುಣ್ಯದಿಂದ ತೇಲಿಸಿ ತಂದಿತು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಒಮ್ಮೆ "ತ್ರಿವೇಣಿ" ಎಂಬ ಆಂಗ್ಲ ತ್ರೈಮಾಸಿಕ ಸಂಚಿಕೆಯಲ್ಲಿದ್ದ "ಕುವೆಂಪು" ಎನ್ನುವ ಲೇಖನ ಜವರೇಗೌಡರನ್ನು ಕನ್ನಡ ಸಾಹಿತ್ಯ ದೇಗುಲದತ್ತ ಕರೆದೊಯ್ಯಲು ಅಣಿಯಾಯಿತು. ಅಂದೇ ಕುವೆಂಪು ಕೃತಿಗಳನ್ನು ಕೊಂಡು ಅತ್ಯಾಸಕ್ತಿಯಿಂದ ಅಭ್ಯಸಿಸಿ, ಕನ್ನಡದ ಕವಿಯನ್ನು ಕಾಣುವ, ಕವಿತನವೊಂದನ್ನು ಕಂಡುಕೊಳ್ಳುವ ಕನಸೊಂದನ್ನು ಕಂಡರು. ಅಂದಿನಿಂದ ಇಂದಿನವರೆಗೂ ಹರಿದುಬಂದಿದೆ, ನಿರಂತರ ಆತ್ಮೀಯತೆ. . . ಸಂಬಂಧಶ್ರೀ- ಕುವೆಂಪು ದೇಜಗೌ ಅವರಲ್ಲಿ. ವಿದ್ಯಾರ್ಥಿ ದೇಜಗೌರನ್ನು ಸಾಮಾನ್ಯತೆಯ ಕಾಲುದಾರಿಯಿಂದ ಸಾಹಿತ್ಯದ ರಾಜಮಾರ್ಗಕ್ಕೆಳೆದು ತರಲು ಕಾರಣ ಹಲವಾರು. ಕುವೆಂಪು ಅವರ ಸಾನ್ನಿಧ್ಯ. ತೀನಂಶ್ರೀಯವರ ಸಲುಗೆ, ರಾಮಕೃಷ್ಣಾಶ್ರಮದ ಸಂಪರ್ಕ, ಕನ್ನಡದ ಮೇಲಿನ ಅತೀವ ಅಭಿಮಾನ - ಮುಂತಾದವು. ಕುವೆಂಪು ಸಾಹಿತ್ಯದಿಂದ ಸ್ಫೂರ್ತಿಗೊಂಡು ತಾವೇ ಅನೇಕ ಕವಿತೆಗಳನ್ನು

ರಚಿಸತೊಡಗಿದರು. ಆಗ ಅದು ಪ್ರಯೋಗಶೀಲತೆಯ ಸಂಕೇತದಂತಿದ್ದರೂ, ಮುಂದಿನ ಭವ್ಯ ಭವಿತವ್ಯಕ್ಕೆ ಅದೇ ನಾಂದಿಯಾಗಿತ್ತು. ವೆಂಕಣ್ಣಯ್ಯನವರು, ಎ. ಆರ್. ಕೃಷ್ಣಶಾಸ್ತ್ರಿಗಳು, ತೀ. ನಂ. ಶ್ರೀಕಂಠಯ್ಯನವರು'' ಕುವೆಂಪು, ಡಿ.ಎಲ್. ನರಸಿಂಹಾಚಾರ್‌ರವರು ಇವರೆಲ್ಲರ ಹೃದಯವಂತಿಕೆ, ಪ್ರಾಜ್ಞತೆ, ಕವಿಪ್ರತಿಭೆ, ಅಭಿರುಚಿ, ನಿಲುವು, ನವೀನದೃಷ್ಟಿ, ವಚೋವಿಲಾಸ, ನಿರ್ದಾಕ್ಷಿಣ್ಯತೆ, ಪಾಂಡಿತ್ಯ ಎಲ್ಲಕ್ಕಿಂತ ಮಿಗಿಲಾಗಿ ಗುರುಕೃಪೆ, ಆಶೀರ್ವಾದ, ಜವರೇಗೌಡರ ತನುಮನಗಳಲ್ಲಿ ಒಂದಾಗಿ ದಿನದಿಂದ ದಿನಕ್ಕೆ ಪುಟಕ್ಕಿಟ್ಟ ಚಿನ್ನದಂತಾದರು. ೧೯೪೮ ರಲ್ಲಿ ಅವರ ಮೊದಲ ಕೃತಿ "ನೆನಪು ಕಹಿಯಲ್ಲ" ಪ್ರಕಟವಾಯಿತು. ಅದೇ ಸಮಯಕ್ಕೆ "ಪುಸ್ತಕ ಪ್ರಪಂಚ" ಪತ್ರಿಕೆಯಲ್ಲಿ ಹಲವಾರು ಲೇಖನಗಳನ್ನು ಬರೆದರು. ಮಹಾರಾಜಾ ಕಾಲೇಜಿನ ಕನ್ನಡ ಸಂಘದ ನೇತಾರರಾಗಿ"ಶ್ರೀರಾಮಾಯಣ ದರ್ಶನಂ ಉಪನ್ಯಾಸ ಮಾಲೆ " ಯನ್ನೇರ್ಪಡಿಸಿದರು. ೧೯೫೫ ರಲ್ಲಿ ಜವರೇಗೌಡರು ಉಪಪ್ರಾಧ್ಯಾಪಕರಾಗಿ ನೇಮಕಗೊಂಡರು. ಇಂದಿನ ಮೈಸೂರು ವಿಶ್ವವಿದ್ಯಾಲಯದ "ಪ್ರಸಾರಾಂಗ " ಕುವೆಂಪು ಕಂಡ ಕನಸು. ದೇಜಗೌ ಕಂಡ ಕನಸು. ಕುವೆಂಪು ಕಂಡ ಕನಸನ್ನೆಲ್ಲಾ ನನಸಾಗಿ ಮಾಡಬಲ್ಲಂಥ ಛಲ, ಬಲ, ಬೆಂಬಲವುಳ್ಳ ಧ್ಯೇಯಸಂಪನ್ನರು ದೇಜಗೌ. ೧೯೫೭ ರಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಗಳಾಗಿ ಹಲವಾರು ಸುಧಾರಣೆಗಳನ್ನು ತಂದರು. ೧೯೬೦ ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾದರು. ಮತ್ತೆ ಕೆಲವು ದಿನಗಳಲ್ಲೇ ಮಾನಸ ಗಂಗೋತ್ರಿಗೆ ಹಿಂತಿರುಗಿ ಬಂದು ತೀ. ನಂ. ಶ್ರೀಯರಿಗೆ, ಕನ್ನಡ ಸ್ನಾತಕೋತ್ತರ ತರಗತಿಗಳನ್ನು ವ್ಯವಸ್ಥೆಗೊಳಿಸುವುದರಲ್ಲಿ ನೆರವಾದರು. ೧೯೬೩ ರಲ್ಲಿ ನಡೆದ ೪೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಯನ್ನು ಉದ್ಘಾಟಿಸಿದರು. ೧೯೬೪ ರಲ್ಲಿ ಜವರೇಗೌಡರು ಪ್ರಾಧ್ಯಾಪಕರು ಹಾಗೂ ಕನ್ನಡ ಇಲಾಖೆಯ ಪ್ರಮುಖರೂ ಆದರು. ೧೯೬೫ ರಲ್ಲಿ ಕಲಾವಿಭಾಗದ ಡೀನ್ ಆಗಿ ಆಯ್ಕೆಯಾದರು. ಈ ವರುಷದಲ್ಲಿಯೇ ಅವರಿಗೆ "ಲೆನಿನ್" ಪ್ರಶಸ್ತಿಗಳಿಸಿಕೊಟ್ಟ"ಪುನರುತ್ಥಾನ" ಪ್ರಕಟವಾದದ್ದು. ಉಪಕುಲಪತಿಗಳಾಗಿದ್ದ ಶ್ರೀ ಮಾಲಿಯವರ ಮನವೊಲಿಸಿ ಕನ್ನಡದ ಮುನ್ನಡೆಗಾಗಿ ೧೯೬೬ ರಲ್ಲಿ "ಕನ್ನಡ ಅಧ್ಯಯನ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದರು. ಅವರೇ ಅದರ ಪ್ರಥಮ ನಿರ್ದೇಶಕರಾದರು. ಅಂದಿನ ಆ ಸಂಸ್ಥೆ ಇಂದು ಕನ್ನಡ ಸಂಸ್ಕೃತಿಯ ಕೇಂದ್ರವಾಗಿ ಬೆಳಿದು, ಬೆಳಗುತ್ತಿದೆ. ಅದರ ವ್ಯಾಪ್ತಿ, ಸ್ನಾತಕೋತ್ತರ ತರಗತಿ, ಕನ್ನಡೇತರರಿಗೆ ತರಗತಿ, ಸಂಶೋಧನೆ, ಉಪಭಾಷಾಸಮೀಕ್ಷೆ, ಗ್ರಂಥ ಸಂಪಾದನೆ, ಜಾನಪದ ಸಾಹಿತ್ಯ, ಭಾಷಾಂತರ ವಿಭಾಗ, ಪಠ್ಯಪುಸ್ತಕ ರಚನೆ- ಪ್ರಕಟಣೆ, ಹರಿದಾಸ ಸಾಹಿತ್ಯ ಕನ್ನಡ ಗ್ರಂಥ ಸೂಚಿ, ಇಂಗ್ಲೀಷ್- ಕನ್ನಡ ನಿಘಂಟು, ಕನ್ನಡ ವಿಶ್ವಕೋಶ . . . ಹೀಗೆಯೇ ಇನ್ನೆಷ್ಟೋ! ಈ ಸಂಸ್ಥೆಯಲ್ಲಿ ದೇಜಗೌ ಮುಟ್ಟಿದ್ದೆಲ್ಲ ಬಂಗಾರವಾಗುತ್ತಿದೆ. ಕನ್ನಡ ನಾಡಿನ ಹೆಮ್ಮೆಯ ಕುರುಹಾಗಿ, ದೇಜಗೌ ಅವರ ಉಸಿರಾಗಿ . . . ಮುನ್ನಡೆಯುತ್ತಿದೆ ಈ ಸಂಸ್ಥೆ. ಈ ಸಂಸ್ಥೆಯೇ ಏಕೆ, ಮಾನಸಗಂಗೋತ್ರಿಯ ಯಾವ ಸಾಧನೆಯನ್ನೇ ನೋಡಲಿ ಅಲ್ಲಿ . . . . ಜವರೇಗೌಡರ ಕೈ . . . . ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸರಸ್ವತಿಯನ್ನು ಸಾರ್ವಭೌಮ

ಸ್ಥಾನಕ್ಕೇರಿಸಿ ಕನ್ನಡದ ಹಿತ ಸಾಧನೆಗಾಗಿ ಸಹಸ್ರ ಕೈಯಾಗಿ, ಸಹಸ್ರ ಮೈಯಾಗಿ. . . . ಕನ್ನಡದ ಕಣ್ಣಾಗಿ ದುಡಿಯುತ್ತಿದ್ದಾರೆ. - ದೇಜಗೌ.

೧೯೬೯ ರಲ್ಲಿ ದೇಜಗೌರವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕಗೊಂಡು, ರಾಜ್ಯೋತ್ಸವ ದಿನದಂದೇ ಕನ್ನಡ ದೀಕ್ಷೆ ವಹಿಸಿಕೊಂಡರು. ವಿದ್ಯಾರ್ಥಿ ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನು ಅರಿತುಕೊಂಡು, ಎಲ್ಲ ಅಧ್ಯಾಪಕರ ಮನ್ನಣೆಗೆ ಪಾತ್ರರಾಗಿ, ದಕ್ಷ ಹಾಗೂ ಸಮರ್ಥ ಆಡಳಿತಗಾರರಾಗಿ, ಅನುಭವಶಾಲಿಗಳಾಗಿ ಅಂದಿನಿಂದ ಆ ಸ್ಥಾನದ ಪಾವಿತ್ರ್ಯವನ್ನೂ ಶ್ರೀಮಂತಿಕೆಯನ್ನೂ ಕಾಯ್ದಿರಿಸಿಕೊಂಡು ಬಂದಿದ್ದಾರೆ.

ದೇಜಗೌ ಎಂಬ ಕನ್ನಡದ ನಾಣ್ಯಕ್ಕೆ ಎರಡುಮುಖ. ಒಂದು ಹಂತಹಂತವಾಗಿ ತಮ್ಮ ದಕ್ಷತೆಯಿಂದ ಆಡಳಿತಾಂಗದಲ್ಲಿ ಮುಂದೆ ಮುಂದೆ ನಡೆದುಬಂದ ಅಧಿಕಾರಿಗಳಾಗಿ; ಇನ್ನೊಂದು : ಸರಸ್ವತಿಯ ಸ್ನೇಹಕ್ಕೆ ಮನಸೋತು ತಮ್ಮ ಪ್ರತಿಭೆಯಿಂದ ಸೃಷ್ಟಿಸಿದ ಭವ್ಯ ಕೃತಿಗಳ ಸಾಹಿತಿಯಾಗಿ; ಆಡಳಿತದೊಡನೆ ವಿಲೀನವಾಗಿದ್ದರೂ ಪ್ರಕೃತಿಯನ್ನು ಮರೆಯಲಿಲ್ಲ. ಸಾಹಿತ್ಯವನ್ನು ಬೀಳ್ಕೊಡಲಿಲ್ಲ; ಬದಲಾಗಿ. . . ಕೃತಿಯಿಂದ ಕೃತಿಗೆ, ಮಹತ್ತರ ಪಾಂಡಿತ್ಯ ಪ್ರತಿಭೆಗಳನ್ನು ಪ್ರದರ್ಶಿಸುತ್ತ ಕನ್ನಡ ಸಾಹಿತ್ಯದಲ್ಲಿ ತಮ್ಮದೂ ಒಂದು ಚಿರಂತನ ಸ್ಥಾನ ಎಂಬುದನ್ನು ಸ್ಪಷ್ಟೀಕರಿಸಿಕೊಂಡರು. ಅವರ ಪ್ರಪ್ರಥಮ ಕೃತಿ "ನೆನಪು ಕಹಿಯಲ್ಲ" ನೆಹರೂರವರ ಕಿರಿಯ ಸೋದರಿ ಶ್ರೀಮತಿ ಕೃಷ್ಣಾಹತೀಸಿಂಗರ ಆಂಗ್ಲ ಕೃತಿ "ವಿತ್ ನೋ ರಿಗ್ರೆಟ್ಸ್" (With no Regrets) ಎಂಬುದರ ಅನುವಾದ. ಲಾರೆನ್ಸ್ ಬಿನ್ಯನ್ ಬರೆದ ಐತಿಹಾಸಿಕ ಕಾವ್ಯಗುಣ ಸಂಪದ್ಭರಿತವಾದ 'ಅಕ್ಬರ್' ಎಂಬ ಆಂಗ್ಲ ಕೃತಿಯನ್ನು ಅತ್ಯುತ್ತಮ ಶೈಲಿಯಲ್ಲಿ ತಮ್ಮ ಪಳಗಿದ ಲೇಖನಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಂಗ್ಲೀಷ್ ಕಾದಂಬರಿಗಳ ಇತಿಹಾಸದಲ್ಲೊಂದು ಮೈಲಿಗಲ್ಲಾಗಿ ಪರಿಗಣಿಸಲ್ಪಟ್ಟಿರುವ ಜೇನ್ ಆಸ್ಟೀನ್ 'ಪ್ರೈಡ್ ಅಂಡ್ ಪ್ರಿಜುಡೀಸ್" (Pride & Prejudice) ಎಂಬ ವಿಶ್ವವಿಖ್ಯಾತ ಆಂಗ್ಲ ಕಾದಂಬರಿಯನ್ನು ಮೂಲದಷ್ಟೇ ಶ್ರದ್ಧೆವಹಿಸಿ, ಸಹಜವಾಗಿ ಅನುವಾದಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ, ಮೇರುವಾಗಿ ನಿಂತಿದೆ ಅವರ "ಪುನರುತ್ಥಾನ " ಇದರ ಮೂಲ, "Resurrection" ಎಂದು ಇಂಗ್ಲೀಷಿಗೆ ಅನುವಾದಿತವಾಗಿರುವ ಲೋಕವಿಖ್ಯಾತ ರಷ್ಯನ್ ಸಾಹಿತಿ ಲಿಯೋ ಟಾಲ್‌ಸ್ಟಾಯ್‌ರವರ ಬೃಹತ್ ಕಾದಂಬರಿ, ಭಾಷಾಂತರ ಕಾರ್ಯದಲ್ಲಿ ಸಿದ್ಧಹಸ್ತರಾದ ಜವರೇಗೌಡರು, ರಷ್ಯಾದ ಈ ಮಹತ್ಕಾದಂಬರಿಯನ್ನು ತಮ್ಮ ಉಜ್ವಲ ಪ್ರತಿಭಾಲೇಖನಿಯಿಂದ ಅನುವಾದಿಸಿ, ಕನ್ನಡ ಸಾಹಿತ್ಯಭಂಡಾರಕ್ಕೊಂದು ಸುವರ್ಣಾರ್ಪಣೆ ಮಾಡಿದ್ದಾರೆ. ಜವರೇಗೌಡರ ಭಾಷಾಂತರ ಕೃತಿಗಳು ಅನುವಾದದ ಅತ್ಯುತ್ತಮ ಮಾದರಿಗೆ ಎತ್ತಿ ತೋರಿಸಬಹುದಾದ ಉತ್ಕೃಷ್ಟ ಉದಾಹರಣೆಗಳಾಗಿವೆ.

ಎಲ್ಲ ದೇಶದ, ಎಲ್ಲ ಭಾಷೆಯ ಉತ್ಕೃಷ್ಟ ಗ್ರಂಥಗಳೂ, ಮಹಾ ಕಾವ್ಯಗಳೂ, ನಮ್ಮ ಭಾಷೆಯಲ್ಲೇ ದೊರೆಯುವ ಹಾಗಾಗಿ, ನಮ್ಮ ಸಾಹಿತ್ಯದ ಮೌಲ್ಯ ನಿರ್ಣಯ ಮಾಡುವ ಕೆಲಸ ಸುಲಭವಾಗಿ ಸಾಹಿತ್ಯ ಶ್ರೀಮಂತಿಕೆ ಸಿದ್ದಿಸುವುದಕ್ಕೆ ಜವರೇಗೌಡರ

ಅನುವಾದ ಕಾರ್ಯ. ಈ ದಿಸೆಯತ್ತ ಉಳಿದವರಿಗೆ ತೋರುದೀಪವಾಗಿದೆ. ಇವರ ಸಂಪಾದಿತ ಕೃತಿಗಳೇನೂ ಕಡಿಮೆಯವಲ್ಲ. "ಜೈಮಿನೀ ಭಾರತ ಸಂಗ್ರಹ", "ಧರ್ಮಾಮೃತ ಸಂಗ್ರಹ" ಇವೆರಡೂ ಕಾವ್ಯ ಸಂಪಾದನೆಗಿರಬೇಕಾದ ಸೂಕ್ಷ್ಮದೃಷ್ಟಿಯ ಪರಿಭಾವನೆ, ಸದಭಿರುಚಿ, ಸಹೃದಯತೆಗಳಿಗೆ ನಿದರ್ಶನವಾಗಿವೆ. ಕಾವ್ಯಕ್ಷೇತ್ರ, ಅಧ್ಯಾತ್ಮ ಕ್ಷೇತ್ರಗಳೆರಡರಲ್ಲೂ ಮಿಂದು ಪುನೀತರಾದ ಕನಕದಾಸರ "ನಳಚರಿತ್ರೆ" ಮತ್ತು "ರಾಮಧಾನ್ಯ ಚರಿತ್ರೆ"ಯನ್ನು ಜವರೇಗೌಡರು ಸಂಪಾದಿಸಿಕೊಟ್ಟಿದ್ದಾರೆ. "ಕನ್ನಡ ಮೆನಿಪ್ಪಾನಾಡು ಚೆಲ್ವಾಯ್ತು" ಎಂದು ಅಚ್ಚಗನ್ನಡದ ವೀರಸಂಕಲ್ಪದಿಂದ ಕಾವ್ಯೋದ್ಯುಕ್ತನಾದ ಅಂಡಯ್ಯನ ಪ್ರತಿಜ್ಞೆಯ ಫಲವಾದ "ಕಬ್ಬಿಗರ ಕಾವ"ವನ್ನು ಸಂಪಾದಿಸಿ ಕನ್ನಡತನದ ಸಾರ್ಥಕತೆಯನ್ನು ಸಾಧಿಸಿಕೊಂಡಿದ್ದಾರೆ. "ಕವಿದರ್ಶನ" ವೆಂಬ ಕೃತಿಯಲ್ಲಿ ವಿವಿಧ ಲೇಖಕರಿಂದ ಕುವೆಂಪು ಕೃತಿ ಪರಿಚಯಮಾಡಿಸಿಕೊಟ್ಟಿದ್ದಾರೆ. "ಹೊಸಗನ್ನಡ ಕಥಾಸಂಗ್ರಹ" ವಿವಿಧ ಲೇಖಕರ ಹದಿನಾಲ್ಕು ಸಣ್ಣ ಕಥೆಗಳುಳ್ಳ ಕೃತಿಯನ್ನು ಸಂಪಾದಿಸಿ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮತನವನ್ನು ಕಂಡುಕೊಂಡಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಹಾ. ಮಾ. ನಾಯಕರೊಡಗೂಡಿಕೊಂಡು ಒಂದು ಸಾವಿರದ ಮೂರು ಪುಟಗಳ "ಗಂಗೋತ್ರಿ" ನಮನಗ್ರಂಥವೊಂದನ್ನು ಕುವೆಂಪು ಸಾಹಿತ್ಯದ ಸಮಸ್ತ ಪ್ರಕಾರಗಳ ಸಮಗ್ರದರ್ಶನ ಮಾಡಿಸುವ ಭವ್ಯಕೃತಿಯೊಂದನ್ನು ಕನ್ನಡದ ಭೂಮಿಗೆ ತಂದಿರಿಸಿದ ಭಗೀರಥರಿವರು. " ರುಕ್ಮಾಂಗದ ಚರಿತ್ರೆ"ಯೂ ಸಹ ಜವರೇಗೌಡರ ಸಂಪಾದಿತ ಪ್ರಕಟನೆಗಳ ಸಾಲಿನಲ್ಲಿ ಬಂದು ಸೇರಲಿದೆ. ಇವರ ಸಂಪಾದನೆಗಳಲ್ಲಿರುವ ಸಮತೋಲನ ವಿಮರ್ಶಾದೃಷ್ಟಿ, ವಿಚಾರಶೀಲತೆ, ವಿವೇಚನೆ, ಸಂಸ್ಕಾರವಂತ ಹೃದಯವಂತಿಕೆ, ಸೂಕ್ಷ್ಮದೃಷ್ಟಿಗಳವೈಶಿಷ್ಟ್ಯದಿಂದಾಗಿ ಈ ಕೃತಿಗಳು ಕನ್ನಡ ಸಾಹಿತ್ಯದ ಆ ರಂಗಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಜವರೇಗೌಡರು ಇತಿಹಾಸಕಾರರೂ ಹೌದು; ಕನ್ನಡದ ಇಬ್ಬರು ಮಹಾವ್ಯಕ್ತಿಗಳ ಜೀವನ ಚಿತ್ರಣಗಳನ್ನು ಸತ್ವಪೂರ್ಣವಾದ ಗದ್ಯ ಶೈಲಿಯಲ್ಲಿ ಪ್ರಕಟಿಸಿ, ಬರಲಿರುವ ಆಧುನಿಕ ಕನ್ನಡಸಾಹಿತ್ಯ ಚರಿತ್ರೆಗೆ, ಸಂಶೋಧನೆಗೆ ಅಪಾರವಾದ ಸಹಾಯಕ ಸಾಹಿತ್ಯ ಸಾಮಗ್ರಿಯನ್ನೊದಗಿಸಿದ್ದಾರೆ.

"ರಾಷ್ಟ್ರಕವಿ ಕುವೆಂಪು" ಮತ್ತು "ತೀನಂಶ್ರೀ" ಇವರಿಬ್ಬರ ಬಾಳಿನಲ್ಲಿ ಬೆರೆತು, ಅವರ ಧ್ಯೇಯಧೋರಣೆಗಳನ್ನೂ, ಸಿದ್ಧಿಸಾಧನೆಗಳನ್ನೂ, ಅಡಿಯಿಂದ ಮುಡಿಯವರೆಗೂ ಅರಿತು,ಅದನ್ನು ಕನ್ನಡಿಸಿ, ಕನ್ನಡ ಸಾಹಿತ್ಯರಂಗಕ್ಕೆ ಸಲ್ಲಿಸಿದ್ದಾರೆ. "ಸಾಹಿತಿಗಳ ಸಂಗದಲ್ಲಿ" ಇವರ ವಿಶಿಷ್ಟವಾದ ಸಾಧನೆಗೊಂದು ನಿದರ್ಶನವಾಗಿದೆ. ತಮ್ಮ ಮೆಚ್ಚಿನ ಸಾಹಿತಿಗಳೊಡನೆ ಬೆರೆತಾಗ ಅರಿತ ಅನುಭವದ ಪರಿಪಕ್ವಪಾಕದ ಫಲವೇ ಈ ಕೃತಿ. ಇವರ ಐತಿಹಾಸಿಕ ಕಥಾನಕಗಳಾದ"ಕಡುಗಲಿ ಕುಮಾರರಾಮ" "ಬೆಂಗಳೂರು ಕೆಂಪೇಗೌಡ" ಮಹಾಪುರುಷ ರೀರ್ವರ ಜೀವನ ಚರಿತ್ರೆಗೆ ಸಂಬಂಧಪಟ್ಟ ಕೃತಿಗಳು. "ಮೋತಿಲಾಲ್ ನೆಹರೂ" ಮತ್ತು ಗೋಪಾಲಕೃಷ್ಣ ಗೋಖಲೆ" ದೇಜಗೌ ಅವರ ರಾಜಕೀಯ ಹಾಗೂ ಸಾಮಾಜಿಕ ದೃಷ್ಟಿಯ ಶುದ್ಧತೆಯತ್ತ ಒಂದು ತೋರು ಬೆರಳೆನ್ನಬಹುದಾದ ಕೃತಿಗಳು. ಈ

ಯುಗದ ಕನ್ನಡದ ಮಹಾಕೃತಿಯಾದ"ಶ್ರೀರಾಮಾಯಣ ದರ್ಶನಂ" ಕೃತಿಯು ಭವ್ಯತೇಜಸ್ಸನ್ನೂ, ಭಾವ ಭಾಷೆಗಳನ್ನೂ, ಬೀಸು ಹಾಸುಗಳನ್ನೂ, ಅಚ್ಚ ಕನ್ನಡದ ಸುಂದರ ಮನೋಜ್ಞ ಸರಳ ಗದ್ಯ ಶೈಲಿಯಲ್ಲಿ ಭಟ್ಟಿ ಇಳಿಸಿ"ವಚನ ಚಂದ್ರಿಕೆ"ಯಾಗಿ ಕನ್ನಡ ಜನಸಾಮಾನ್ಯಕೋಟಿಗರ್ಪಿಸಿದ್ದಾರೆ. ಮೂಲ ಕವಿಯ ಸಾಧನೆಯನ್ನು ಜೀವಂತ ಅಭಿವ್ಯಕ್ತಗೊಳಿಸಿದ್ದಾರೆ. ಈ ವಚನ "ಚಂದ್ರಿಕೆ"ಯಲ್ಲಿ. ಇಷ್ಟೇ ಅಲ್ಲದೆ ಶಿಶು ಸಾಹಿತ್ಯದತ್ತಲೂ ದೇಜಗೌ ತಮ್ಮ ದೃಷ್ಟಿ ಹರಿಸಿ ಮಕ್ಕಳಿಗಾಗಿ "ನಮ್ಮ ನೆಹರೂ" "ಋಷಿಕವಿ ರವೀಂದ್ರರು" , "ಆಲ್ಬರ್ಟ್ ಐನ್ ಸ್ಟೀನ್", "ಮೇಡಂ ಕ್ಯೂರಿ" ಮತ್ತು"ಕನ್ನಡನಾಡಿನ ಕಲೆ" ಎಂಬ ಐದು ಕಿರು ಪುಸ್ತಕಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯದ ವಿಮರ್ಶಾರಂಗಕ್ಕಂತೂ ದೇಜಗೌ ಅವರ ಕೊಡುಗೆ ಮಹತ್ವದನ್ನಬಹುದು. ಇವರ ಬಹುಜ್ಞತೆ, ಭಾವಶುದ್ಧಿ, ಸದಭಿರುಚಿ, ವಿಚಾರವಂತಿಕೆ, ನಿರ್ದಾಕ್ಷಿಣ್ಯ ಪ್ರವೃತ್ತಿ, ಸರ್ವತೋಮುಖಿ ವಿವೇಚನೆ, ಸಮರ್ಪಕ ನಿರ್ಣಯ, ಅಭಿಪ್ರಾಯದ ಪ್ರತಿಪಾದನೆಯಲ್ಲಿ ತೂಕ ತಪ್ಪದನಿಲುವು, ಇವು ಇವರ ಕಾವ್ಯ ಮೀಮಾಂಸೆಯಲ್ಲಿ ಹಾಗೂ ಕೃತಿ ವಿಮರ್ಶೆಗಳಲ್ಲಿ ಕಂಡುಬರುವ ವಿಶಿಷ್ಟಗುಣಗಳು. "ಷಡಕ್ಷರದೇವ", "ನಂಜುಂಡಕವಿ", "ಸಾಹಿತ್ಯಮಾರ್ಗ" ಇವು ಅವರ ವಿಮರ್ಶಾಗ್ರಂಥಗಳು. ಇವರ "ವಿದ್ಯಾಪೀಠಗಳು" ವಯಸ್ಕರ ವಿದ್ಯಾಪೀಠಗಳ ಇತಿಹಾಸ, ಸ್ವರೂಪಗಳನ್ನು ಕುರಿತು ಬರೆದ ಕೃತಿ. ಎಲ್ಲಕ್ಕೂ ಮಿಗಿಲಾಗಿ ಅಚ್ಚ ಗನ್ನಡದ ಗದ್ಯಶೈಲಿಯಲ್ಲಿ ತಮ್ಮ ಆತ್ಮವೃತ್ತವನ್ನೇ ಸುಂದರವಾಗಿ ನಿರೂಪಿಸಿಕೊಂಡಿರುವ "ಹೋರಾಟದ ಬದುಕು" ಅಮೂಲ್ಯ ಕೊಡುಗೆ. ಇಷ್ಟೇ ಅಲ್ಲದೆ ಹಲವಾರು ಲೇಖನಗಳೂ, ಬೇರೆ ಲೇಖಕರೊಡನೆ ಸೇರಿ ಸಂಪಾದಿಸಿದ ಕೃತಿಗಳು, ಭಾಷಣಗಳು, ಪ್ರಕಟವಾಗಿ, ದೇಜಗೌ ಅವರ ಸಾಹಿತ್ಯ ಸೃಷ್ಟಿಯ ಬಹು ಮುಖ್ಯತೆಗೆ ಸಾಕ್ಷಿಯಾಗಿವೆ.

ಇವರ ಬರಲಿರುವ ಕೃತಿಗಳಂತೂ ಬಹಳಷ್ಟೇ ಇವೆ. ಬಿಡುವಿಲ್ಲದೆ ದುಡಿಯುತ್ತಿರುವ ಈ ಅಧಿಕಾರಿ, ಮತ್ತೆ ಸಾಹಿತಿಯಾಗಿ "ಜನಪದ ಗೀತೆಗಳು" "ಪುಣ್ಯಾಸ್ರವ ಚಂಪೂ" (ಸಂಪಾದಿತ) "ಭಾಷಾಂತರ ಕಲೆ " "ಯುದ್ಧ ಮತ್ತು ಶಾಂತಿ" (War & peace by Tolstoy) " ವೃತ್ತಿಪದ ಕೋಶ" ಸಾಹಿತ್ಯ ಮಾರ್ಗ" ಮುಂತಾದ ಅನೇಕ ಕೃತಿಗಳನ್ನು ಕನ್ನಡ ಸಾಹಿತ್ಯ ಭಂಡಾರಕ್ಕೆ ನೀಡಲಿದ್ದಾರೆ.

ಹೀಗೆ ಸಾಹಿತ್ಯದ ನಾನಾ ಮುಖಗಳಲ್ಲಿ ಏಕಪ್ರಕಾರವಾಗಿ ಕೈಯಾಡಿಸಿ, ಸಾಹಿತ್ಯ ಧೀಮಂತಿಕೆಯೊಡನೆ, ಕನ್ನಡ ಶ್ರೀಮಂತಿಕೆಯನ್ನೂ ಮೈಗೂಡಿಸಿಕೊಂಡ ಸಾಹಿತ್ಯ ಪೊಂದನ್ನೇ ಸೃಷ್ಟಿಸದೇ, ಸಾಹಿತಿಗಳನ್ನೂ ಸೃಷ್ಟಿಸುತ್ತ, ಪ್ರತಿಭೆಗಳನ್ನು ಗುರುತಿಸುತ್ತಾ, ಭಾಷೆಯೊಂದನ್ನೇಬೆಳಸದೆ, ಅದರೊಡನೆ ಭಾವವನ್ನೂ ಬೆಳಗಿಸುತ್ತಾ, ಕನ್ನಡ ಸಾಹಿತ್ಯಸರಸ್ವತಿಗೆ ನಿತ್ಯೋತ್ಸವ ನಡೆಸುತ್ತಿದ್ದಾರೆ, ಕನ್ನಡದ ಪ್ರಾಚಾರ್ಯ ದೇಜಗೌರವರು. ಇದೀಗ ತಾನೇ, ತಮ್ಮ ವಿದೇಶಪ್ರವಾಸದಲ್ಲಿ ಪಡೆದ ಹೆಮ್ಮೆಯ ಉಡುಗೊರೆ "ಲೆನಿನ್ ಪ್ರಶಸ್ತಿ"ಯೊಡನೆ ಮತ್ತೆ ಮುಗಿಲೆತ್ತರಕ್ಕೇರಿದ್ದಾರೆ ಕನ್ನಡಸಾಹಿತ್ಯದ ಬಾನಿನಲ್ಲಿ . . . . ವಿದೇಶದಿಂದ ಬರುವಾಗ ಬರಿಗೈಲಿ ಬರಲಿಲ್ಲ; ಜರ್ಮನಿಯ ವಿಶ್ವವಿದ್ಯಾನಿಲಯ

ವೊಂದರಲ್ಲಿ "ಕನ್ನಡ ಪೀಠ" ದ ಸ್ಥಾಪನೆಗೆ ನಾಂದಿಹಾಡಿ, ಕನ್ನಡವನ್ನು ವಿಶ್ವದಾದ್ಯಂತ ಪ್ರಸರಿಸುವ ಕಾರ್ಯಕ್ಕೆ ಪೀಠಿಕೆ ಹಾಕಿಕೊಂಡೇ ಬಂದಿದ್ದಾರೆ. ಐವತ್ಮೂರರ ಹೊಸ್ತಿಲಲ್ಲಿರುವ ಇವರ ಬದುಕಿನ ಹಿಂದೆ ಕಾಣುವುದೆಲ್ಲಾ, ಹೋರಾಟ, ಸಾಧನೆ, ಸಿದ್ಧಿ! ಕನ್ನಡಕ್ಕಾಗಿ ತಮ್ಮ ಬದುಕನ್ನು ನಿವೇದಿಸಿಕೊಂಡಿರುವ ಕನ್ನಡಿಗ ಕುವೆಂಪು ಕನ್ನಡದ ಭವ್ಯ ದರ್ಶನವನ್ನು ಮೈಗೂಡಿಸಿಕೊಂಡು, ಕನ್ನಡತನವನ್ನು ಮೈತಾಳಿಕೊಂಡು, ಕನ್ನಡ ಭಾಷೆಗಾಗಿ, ಕನ್ನಡ ಸಾಹಿತ್ಯಕ್ಕಾಗಿ ತನುಮನಧನವನ್ನರ್ಪಿಸಿ ಶ್ರದ್ಧಾಭಕ್ತಿಯಿಂದ ದುಡಿಯುತ್ತಿರುವ ದೇಜಗೌ ಅವರಿಗೆ ನಾಡುನುಡಿಯ ಅಭಿಮಾನದ ಸಂಕೇತವಾಗಿ ನಿಂತಿರುವ ಕನ್ನಡ ಸಾಹಿತ್ಯ ಪರಿಷತ್ತು, ಈ ಬಾರಿ ಬೆಂಗಳೂರಿನಲ್ಲಿ ನಡೆಯಲಿರುವ ೪೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆಮಾಡಿರುವುದು, ಪರಿಷತ್ತಿಗೆ, ಆ ಮೂಲಕ ಕನ್ನಡಕ್ಕೆ ತಂದ ಗೌರವವಾಗಿದೆ. ಶ್ರೀ ಕುವೆಂಪುರವರೇ ಹೇಳಿರುವಂತೆ "ಜವರೇಗೌಡರ ಸಮರ್ಥ, ಸಬಲ, ದಕ್ಷ ಮತ್ತು ಸದೃಢ ನೇತೃತ್ವದಲ್ಲಿ ಜಾತ್ರೆ ಹೊರಟಿರುವ ಕನ್ನಡದ ತೇರು ಸರ್ವ ಭಾಷಾಮಯೀ ವಿಶ್ವಸರಸ್ವತಿಯ ಪ್ರಪಂಚವೇದಿಕೆಯ ಸಿರಿಗುಡಿಗೆ ನಿರಾತಂಕವಾಗಿ ಸೇರಲಿ ... ಏರಲಿ ಬಾವುಟ... ಹಾರಿಸಲಿ..

* * * * *

ವ್ಯಕ್ತಿ ವಿಷಯ

-ಎಚ್ಚೆಸ್ಕೆ

ಪ್ರೊ. ದೇ ಜವರೇಗೌಡ ಅವರದು ಕನ್ನಡದ ವಿಶಿಷ್ಟ ವ್ಯಕ್ತಿತ್ವ. ಬಹುಶಃ ಅವರಂಥವರು ಇನ್ನೊಬ್ಬರಿಲ್ಲ.

ಪ್ರೊ. ದೇಜಗೌ ಅವರಂತೆ ಬಡತನದ ಹೀನದೀನ ಪರಿಸರದಲ್ಲಿ ಹುಟ್ಟಿ, ಪರಿಸ್ಥಿತಿಯೊಂದಿಗೆ ಗುದ್ದಾಡಿ, ಸಣ್ಣತನ-ಪಿಶುನತ್ವಗಳನ್ನೆದುರಿಸಿ ಗೆದ್ದು ಎತ್ತರಕ್ಕೇರಿದವರು ಹಲವರಿರಬಹುದು. ಆದರೆ ಅವರಂತೆ ಪರಿಸ್ಥಿತಿ ಪ್ರತಿಕ್ರಿಯಿಸಿದವರೂ ರೂಪುಗೊಂಡವರೂ ಕಾಣಸಿಗುವುದಿಲ್ಲ.

ಜವರೇಗೌಡರ ತಂದೆ ತಾಯಿ ನಿರಕ್ಷರಕುಕ್ಷಿಗಳು, ಆದರೆ ಭಗವದ್ಭಕ್ತರು. ತಲತಲಾಂತರದಿಂದ ನಡೆದುಬಂದಿದ್ದಂತೆ ಆಡು, ಕುರಿ ಕಾಯುವ ಕೆಲಸ. ತಾವು ಬೆಳೆದು ದೊಡ್ಡವರಾದ ಮೇಲೆ ಒಂದು ದೊಡ್ಡ ಕುರಿಮಂದೆಯ ಒಡೆಯರಾಗಬೇಕು, ಇಲ್ಲವೇ ಪಟೇಲಿಕೆ ಮಾಡಬೇಕು ಎಂದೇ ಇವರು ಆಗ ಕನಸು ಕಾಣುತ್ತಿದ್ದರಂತೆ. ಆದರೆ ಕನ್ನಡವನ್ನು ಕಾಯುವ ಕೆಲಸ, ಆಡು ಕಾಯುವ ಬದಲು ಅಕ್ಷರ ವಿದ್ಯೆ ಅವರದಾಯಿತು.

ಎಲ್ಲ ಕಷ್ಟಗಳನ್ನೂ ಗೆದ್ದು ಇಂಟರ್ಮೀಡಿಯಟ್ ಮೆಟ್ಟಿಲೇರಿದ ಮೇಲೆ ಅವರು ಕನ್ನಡವನ್ನೇ ಅಧ್ಯಯನ ವಿಷಯವಾಗಿ ಆರಿಸಿಕೊಳ್ಳಲು ಮುಖ್ಯ ಕಾರಣವೆಂದರೆ ಕುವೆಂಪು ಅವರೂ ವೆಂಕಣ್ಣಯ್ಯನವರೂ ಗುರುಗಳಾಗುವರೆಂಬುದು. ದೇಜಗೌ ಅವರ ಮನೋಲೋಕವನ್ನೆಲ್ಲ ಕನ್ನಡತನ ಆವರಿಸಿಕೊಳ್ಳುವಂತೆ ಮಾಡಿದವರು ಕುವೆಂಪು, ವೆಂಕಣ್ಣಯ್ಯ, ತೀನಂಶ್ರೀ. ಈ ಮೂವರಲ್ಲಿ ಅವರಿಗೆ ಅಪಾರ ಭಕ್ತಿ.

ಕುವೆಂಪು ಅವರನ್ನು ದೇಜಗೌ ಅವರಂತೆ ಅರ್ಥಮಾಡಿಕೊಂಡವರೂ ವ್ಯಾಖ್ಯಾನಿಸಿದವರೂ ಅವರ ವಿಚಾರಗಳನ್ನು ಆಚರಣೆಗೆ ತಂದವರೂ ಇನ್ನೊಬ್ಬರಿಲ್ಲ. ದೇಜಗೌ ಅವರು ಕುವೆಂಪುವಿನ ಅಂತರಂಗದ ಶಿಷ್ಯರು. ಕುವೆಂಪು ಅವರ ಹೆಸರಿನಲ್ಲೊಂದು ದೊಡ್ಡ ವಿದ್ಯಾವರ್ಧಕ ಟ್ರಸ್ಟನ್ನೇ ದೇಜಗೌ ಸ್ಥಾಪಿಸಿ ಬೆಳಸಿದ್ದಾರೆ. ಶಿಕ್ಷಣ, ಸಂಶೋಧನೆ, ವೈಚಾರಿಕತೆಯ ಪ್ರಚಾರ, ಪುಸ್ತಕ ಪ್ರಕಟಣೆ-ಹೀಗೆ ನಾನಾ ತೆರನಾದ ಚಟುವಟಿಕೆಗಳಿಗೆ ಅದೊಂದು ಕೇಂದ್ರ. ತಮ್ಮ ವರಮಾನವನ್ನೆಲ್ಲ ಸೇರಿಸಿ ಅವರು ಟ್ರಸ್ಟ್ ಸ್ಥಾಪಿಸಿ ಅದರಿಂದ ಒಳ್ಳೆಯ ಕೃತಿಗಳಿಗೆ ಬಹುಮಾನ ನೀಡುತ್ತಿದ್ದಾರೆ.

ದೇಜಗೌ ಮಹಾ ಸಾಧಕರು. 'ಅವರದು ವಾಙ್ಮಯದಾಚೆಗೂ ಚಾಚಿದ ವಿರಾಟ್ ಸಾಧನೆ' ಎಂಬ ಸಿಪಿಕೆ ಅವರ ಮಾತು ನಿಜ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿಯೂ, ಅದಕ್ಕೆ ಮುಂಚೆ ಸ್ನಾತಕೋತ್ತರ ಕನ್ನಡ ವಿಭಾಗದ ಮುಖ್ಯರಾಗಿಯೂ ದೇಜಗೌ ಮಾಡಿದ ಕೆಲಸ ಅವರ ಕಾರ್ಯತತ್ಪರತೆಗೆ ಸಾಕ್ಷಿ. ಯಾರಲ್ಲಿ ಯಾವ ಶಕ್ತಿ ಅಡಗಿದೆಯೆಂಬುದನ್ನು ಗುರುತಿಸಿ, ನಾಡಿಗಾಗಿ ಅದನ್ನು

ಬಳಸಿಕೊಳ್ಳುವುದರಲ್ಲಿ ಅವರು ನಿಷ್ಣಾತರು. ಕನ್ನಡ ಅಧ್ಯಯನ ಸಂಸ್ಥೆಯನ್ನು ಆದರ್ಶ ರೀತಿಯಲ್ಲಿ ಕಟ್ಟಿ ಬೆಳೆಸಿದವರು ದೇಜಗೌ ಅವರು. ಜಾನಪದ ವಿಶ್ವಕೋಶ, ಎಪಿಗ್ರಫಿ, ಪಠ್ಯಪುಸ್ತಕ ರಚನೆ, ಭಾಷಾಂತರ-ಹೀಗೆ ಹಲವು ಚಟುವಟಿಕೆಗಳನ್ನು ಆ ಸಂಸ್ಥೆ ಬೆಳೆಸಿಕೊಂಡಿದ್ದು ದೇಜಗೌ ಅವರಿಂದಾಗಿ.

ಪ್ರೊ. ದೇಜಗೌ ಕನ್ನಡ ಗದ್ಯ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಕೆಲಸ ಅನನ್ಯವಾದದ್ದು. ವಿಮರ್ಶೆ, ಭಾಷಾಂತರ, ಜೀವನ ಚರಿತ್ರೆ, ಆತ್ಮಕತೆ, ಸಂಶೋಧನೆ, ಸಂಪಾದನೆ, ಮಕ್ಕಳ ಸಾಹಿತ್ಯ-ಹೀಗೆ ಹಲವು ಪ್ರಕಾರಗಳಲ್ಲಿ ಅವರು ನೂರೈವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳ ಸಮಗ್ರ ವಿಮರ್ಶೆ, ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಎಪ್ಪತ್ತೈದರಲ್ಲೂ ಇಪ್ಪತ್ತೈದರ ಹುರುಪಿನಿಂದ ಕಾರ್ಯಶೀಲ ರಾಗಿರುವ ದೇಜಗೌ ಅವರನ್ನು ಈಚೆಗೆ ಅಭಿನಂದಿಸಿ ಅವರಿಗೆ ಎಪ್ಪತ್ತೈದು ಸಾವಿರ ರೂಪಾಯಿ ಒಪ್ಪಿಸಲಾಯಿತು. ಇದು ಹೋಗುವುದು ಅವರ ಸಂಸ್ಥೆಗೇ.

* * * * *

ಶ್ರೀಮತಿ ಸಾವಿತ್ರಮ್ಮ ದೇಜಗೌ ದೃಷ್ಟಿಯಲ್ಲಿ

ಸಾವಿತ್ರಮ್ಮ ದೇಜಗೌ

"ಬೆಂಗಳೂರಿನ ಕಿಲಾರಿ ರಸ್ತೆಯಲ್ಲಿ ನಾವು ಸಂಸಾರ ಹೂಡಿದ್ದಾಗ ಮನೆಯೆಲ್ಲ ಬಣ ಬಣ. ಒಂದಾರು ಕಂಚಿನ ಲೋಟ, ತಟ್ಟೆಗಳು, ನಾಲ್ಕೈದು ಹಿತ್ತಾಳಿ ಪಾತ್ರೆಗಳು ಇವಿಷ್ಟೆ ಸಕಲ ಸಂಪತ್ತು. ಮನೆಯಲ್ಲಿ ಸದಾ ನೆಂಟರಿಷ್ಟರು, ಓದಲು ಬಂದಿದ್ದ ಹುಡುಗರು, ಊರಿಂದ ಬರುತ್ತಿದ್ದ ಅಷ್ಟೋ ಇಷ್ಟೋ ದವಸ ಧಾನ್ಯ. ಇದ್ದಷ್ಟು ಪಾತ್ರೆ ಪದಾರ್ಥಗಳ ಜತೆಗೆ ಹಾಗೂ ಹೀಗೂ ಒಂದಿಷ್ಟು ಮಣ್ಣಿನ ಕುಡಿಕೆ ಮಡಿಕೆಗಳನ್ನು ಸೇರಿಸಿಕೊಂಡು ನನ್ನ ಅಡಿಗೆ ಮನೆ ಆಸ್ತಿಯನ್ನು ಹಿಗ್ಗಿಸಿಕೊಂಡೆ. ಆವತ್ತಿನ ದಿನಗಳನ್ನು ನೆನೆಸಿಕೊಂಡರೆ ಹೇಗೆ ಜೀವನಾನ ನಿಭಾಯಿಸಿದೆವೋ ಎಂದು ಅಚ್ಚರಿಯಾಗುತ್ತೆ. . . ." ಸಾವಿತ್ರಮ್ಮ ವಿಶಾಲವಾದ ಸುಸಜ್ಜಿತ ದಿವಾನಖಾನೆಯಲ್ಲಿ ಕೂತು ತಾವು ದೇಜಗೌ ಅವರೊಂದಿಗೆ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದ ಸಂದರ್ಭವನ್ನು ವರ್ಣಿಸುತ್ತಾರೆ.

ಇಂದು ಸಾವಿತ್ರಮ್ಮ ಪರಮಸುಖಿ. ಕನ್ನಡದ ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪಕರಾಗಿ, ಅದೇ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಅತ್ಯುನ್ನತ ಸ್ಥಾನಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿ, ನಿವೃತ್ತಿಯ ನಂತರವೂ ಇಂದಿಗೂ ಶಿಕ್ಷಣತಜ್ಞರಾಗಿ, ಸಾಹಿತಿಯಾಗಿ ತಮ್ಮ ಪ್ರತಿಭೆಯನ್ನು ಮೆರೆಸುತ್ತಲೇ ಇರುವ ದೇ. ಜವರೇಗೌಡರ ಪತ್ನಿಯಾಗಿ ಐದು ದಶಕಗಳ ಕಾಲ ಬಾಳ್ವೆ ನಡೆಸಿರುವೆನೆಂಬ ಸಂತೃಪ್ತಿ. ಪ್ರತಿಭಾವಂತ ಮಕ್ಕಳು, ಅಪರೂಪ ಗುಣಗಳ ಸೊಸೆ. ಮುದ್ದಾದ ಮೊಮ್ಮಕ್ಕಳು. ಆದರೆ ಸಾವಿತ್ರಮ್ಮನವರನ್ನು ಕಂಡಕೂಡಲೆ ಮೇಲೆದ್ದು ಕಾಣುವುದು ಅವರಿಗೆ ಈ ಎಲ್ಲವೂ ಎಳ್ಳಷ್ಟೂ ಅಹಮಿಕೆಯನ್ನು ತಂದುಕೊಟ್ಟಿಲ್ಲ ಎನ್ನುವುದು. ಸರಳ ರೀತಿ ನೀತಿಯ, ನಿರಾಡಂಬರ ಉಡುಪಿನ ಸಾವಿತ್ರಮ್ಮನವರದ್ದೂ ದೇಜಗೌ ಅವರಂತೆಯೇ ಮುಕ್ತ ನಡವಳಿಕೆ. "ಹೋರಾಟದ ಬದುಕಿನ" ದೇಜಗೌ ಅವರಿಗೆ ಸದಾ ಭುಜಕೊಟ್ಟು ನಿಂತಂಥ ಅಪರೂಪ ವ್ಯಕ್ತಿತ್ವ.

ಚನ್ನಪಟ್ಟಣದ ತಾಲ್ಲೂಕಿನ ತಿಮ್ಮಸಂದ್ರದ ಬಳಿಯ ಸ್ಥಳವೊಂದರ ಇನ್ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲಾವಧಿಯ ಸ್ವಾರಸ್ಯಕರ ಇತಿಹಾಸವುಳ್ಳ ಮನೆತನಕ್ಕೆ ಸೇರಿದಾಕೆ ಸಾವಿತ್ರಮ್ಮ. ಸ್ವಂತ ಸುಖಕ್ಕೇ ಮನಸೋತು ಶೋಕಿವಾಲರಾಗೇ ಭೋಗ ಜೀವನವನ್ನು ನಡೆಸುತ್ತಿದ್ದ ತಂದೆ, ಹನ್ನೆರಡು ಜನ ಮಕ್ಕಳನ್ನು ಹೆತ್ತು ಬಸವಳಿದಿದ್ದ ತಾಯಿ ಇವರ ಎರಡನೇ ಮಗಳಾಗಿ ಹುಟ್ಟಿದ ಸಾವಿತ್ರಮ್ಮ ಪ್ರಾಪ್ತ ವಯಸ್ಸಿಗೆ ಬಂದ ಕೂಡಲೇ ಹಿರಿಯರ ಮುಂದಿಟ್ಟಿದ್ದು ಒಂದೇ ಕೋರಿಕೆ: "ನನ್ನನ್ನು ಮದುವೆಯಾಗುವಾತ ಬಡವನಾಗಿದ್ದರೂ ಚಿಂತೆಯಿಲ್ಲ; ವಿದ್ಯಾವಂತನಾಗಿರಬೇಕು" ಎಂದು.

"ನಾನು ಹೀಗೆ ಅನ್ನುತ್ತಿದ್ದುದಕ್ಕೆ ಪ್ರಾಯಶಃ ಪ್ರಬಲವಾದ ಕಾರಣ ನಾನು ನನ್ನ ಚಿಕ್ಕಪ್ಪನವರ ಪ್ರಭಾವಕ್ಕೆ ಗಾಢವಾಗಿ ಸಿಲುಕಿದ್ದುದು" ಸಾವಿತ್ರಮ್ಮ ವಿವರಿಸುತ್ತಾರೆ. "ಚಿಕ್ಕಪ್ಪ ಲಾಯರಾಗಿದ್ದರು. ನನ್ನ ತಂದೆ ನಾಟಕ ಕಂಪನಿ ಸೇರಿ ಯಾವ್ಯಾವುದೋ ವ್ಯವಹಾರ ಹಿಡಿದು ಆ ಊರು ಈ ಊರು ಅಂತ ತಿರುಗುತ್ತಾ ಮನೆ ಕಡೆ ನಿಗಾ ಕೊಡದೇ ಇದ್ದಾಗ ನಮಗೆ ಮಾರ್ಗದರ್ಶಿಯಾಗಿ ನಿಂತವರು ಚಿಕ್ಕಪ್ಪ. ಸಾಹಿತ್ಯದ ಮೇಲೆ ಅಪಾರವಾದ ಅಭಿರುಚಿ. ರಾಮಾಯಣ ಮಹಾಭಾರತವನ್ನು ಸುಂದರವಾಗಿ ವಾಚನ ಮಾಡಿ ನಮ್ಮನ್ನು ವಿಸ್ಮಯಗೊಳಿಸುತ್ತಿದ್ದರು. ಕುವೆಂಪು ಅವರ "ಯಮನ ಸೋಲು", "ವಾಲ್ಮೀಕಿಯ ಭಾಗ್ಯ", ಜಿ. ಪಿ. ರಾಜರತ್ನಂ, ಹೊಯಿಸಳರ ಪದ್ಯಗಳನ್ನು ರಸವತ್ತಾಗಿ ವರ್ಣಿಸುತ್ತಿದ್ದರು. ನಾನು ಎಲ್. ಎಸ್. ಗೆ ಕಟ್ಟಿದ್ದೆ. ಮುಂದೆ ಓದಿಗಾಗಿ ಚನ್ನಪಟ್ಟಣಕ್ಕೆ ಹೋಗಬೇಕಾದಾಗ ಹಿರಿಯರು ಒಪ್ಪಲಿಲ್ಲ. ಅಲ್ಲಿಗೆ ನನ್ನ ವಿದ್ಯಾಭ್ಯಾಸ ಮುಗೀತು. ನನ್ನ ತಾಯಿಗೆ ಸದಾ ಮಕ್ಕಳನ್ನು ಹೆರುವುದು ಅವುಗಳ ಪಾಲನೆ ಪೋಷಣೆಯೇ ದೊಡ್ಡ ಕೆಲಸವಾಗಿ ಅವರು ನಮ್ಮ ಕಡೆ ನಿಗಾ ಕೊಡಲೇ ಸಾಧ್ಯವಾಗದಿದ್ದಾಗ ನನ್ನ ನೆಚ್ಚಿನ ಸೋದರತ್ತೆ ಆ ಮಹಾತಾಯಿ ಗೌರಮ್ಮನನ್ನೇ ನಾನು ತಾಯಿಯೆಂದು ಅನೇಕ ವರ್ಷಗಳ ಕಾಲ ಭಾವಿಸಿಕೊಂಡಿದ್ದುಂಟು. ಮನೆಯಲ್ಲಿ ಕೂತ ನನಗೆ ಆಕೆಯಿಂದಲೇ ಮನೆಯ ನಿರ್ವಹಣೆಯ ಬಗ್ಗೆ ಮಾರ್ಗದರ್ಶನ. ನನ್ನ ಮದುವೆ ಸರದಿ ಬಂದಾಗ ನಂಗೆ ಅದರ ಬಗ್ಗೆ ಸ್ಪಷ್ಟ ತಿಳಿವಳಿಕೆ ಇಲ್ಲದಿದ್ದರೂ ಬಿ. ಎ., ಎಂ. ಎ. ಓದಿದವರು ಮಾತ್ರ ಪುಸ್ತಕ ಬರೀತಾರೆ, ಬರೆಯೋರನ್ನೇ ನಾನು ಮದುವೆಯಾಗಬೇಕು ಅಂತ ಆಸೆಯಿತ್ತು. ಬಂದ ವರಗಳು ನನ್ನ ಷರತ್ತುಗಳಿಗೆ ಅನುಗುಣವಾಗಿರಲಿಲ್ಲ. ರಾತ್ರಿ ಸಮಯದಲ್ಲಿ ನಂಗೆ ನಿದ್ರೆ ಬಂದಿದೆ ಅಂತ ಭಾವಿಸಿ ನನ್ನ ಸೋದರತ್ತೆ ಚಿಕ್ಕಪ್ಪ ಒಕ್ಕಲಿಗರಲ್ಲಿ ವಿದ್ಯಾವಂತ ತರುಣರು ಯಾರ್‍ಯಾರಿದಾರೆ ಅಂತ ಚರ್ಚಿಸುತ್ತಾ ಇದ್ದುದನ್ನು ಕೇಳುತ್ತಾ ನಾನು ಮುಸುಕಿನೊಳಗೇ ನಗುತ್ತಾ ಮಲಗಿರುತ್ತಿದ್ದೆ. ನಂಗೆ ತಕ್ಕನಾದ ವರನನ್ನು ಹುಡುಕುವಷ್ಟರಲ್ಲಿ ನಂಗೆ ಹದಿನೆಂಟು ವಯಸ್ಸು ದಾಟಿ ಬಿಟ್ಟಿತ್ತು. ತಂಗಿಯ ಮದುವೆಯೂ ಆಗಿಹೋಯಿತು. ಊರಿನ ಜನರೆಲ್ಲ ಆಡಿಕೊಳ್ಳಲು ಶುರು ಮಾಡಿದ್ದರು. ನನ್ನ ಮೊರೆ ದೇವರಿಗೆ ಕೇಳಿಸಿತೇನೋ. . . . ಯಾರದ್ದೋ ಮಧ್ಯಸ್ಥಿಕೆಯಿಂದಾಗಿ ಜವರೇಗೌಡರು ನನ್ನ ನೋಡೋಕ್ಕೆ ಬಂದರು. ಒಪ್ಪಿದರು.

ಜವರೇಗೌಡರು ಆಗ ಬಿ. ಎ. ಆನರ್ಸ್ ಮುಗಿಸಿ ಎಂ. ಎ. ಓದುತ್ತಿದ್ದರು. ನಿಶ್ಚಿತಾರ್ಥವಾದ ಹೊಸದರಲ್ಲೇ ನನ್ನ ಭಾವೀ ಯಜಮಾನರ ಎರಡು ಲೇಖನಗಳು "ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟವಾದ್ದನ್ನು ಕಂಡಾಗ ನನಗೆ ಅದೇನು ಆನಂದವೋ ! ಮದುವೆ ಹತ್ತಿರವಾಗುತ್ತಿದ್ದ ಹಾಗೇ ಚಿಕ್ಕಪ್ಪ ಗಂಡಿಗೆ ಬಟ್ಟೆ ಕೊಡಿಸಲು ಹೋದಾಗ ಜವರೇಗೌಡರು ತಾವು ಬರೀ ಖಾದಿಯನ್ನೇ ಹಾಕೋದು ಅಂತ ಹೇಳಿದ್ರಂತೆ. ಉಡುಪಿನಲ್ಲಿ ರಸಿಕತೆ ಇಲ್ಲದಿದ್ದರೂ ಲಗ್ನಪತ್ರಿಕೆಯ ಮುದ್ರಣದಲ್ಲಿ ಮಾತ್ರ ಭಾರೀ ರಸಿಕ! ಅದರ ಮೇಲ್ಭಾಗದಲ್ಲಿ ಕುವೆಂಪು ಅವರ "ಚಿತ್ರಾಂಗದಾ"ದಲ್ಲಿನ ಈ ಪದ್ಯ ಮುದ್ರಿತಗೊಂಡಿತ್ತು.

"ಒಲುಮೆಗಿಂತಲು ಬೇರೆ ಪರಮಾರ್ಥವಿನ್ನಿಲ್ಲ
ನರರ ಬದುಕಿನಲ್ಲಿ: ಮೇಣರ್ಥಹೀನಂ ಬಾಳ್ವೆ
ಒಲುಮೆಯಿಲ್ಲದಿರೆ; ಹೂವಿಂದೆ ಸಾರ್ಥಕವಹುದು
ಗಿಡದ ಬಾಳಂತೆ ಬಾಳ್ಗಿಡಕೆ ಒಲುಮೆಯ ಹೂವು"

ಹಿಂದೊಮ್ಮೆ ಬೆಂಗಳೂರಿನ ಒಕ್ಕಲಿಗರ ಸಂಘದಲ್ಲಿ ಕುವೆಂಪು ಅವರ ಭಾವಗೀತೆ ವಾಚನ ಕಾರ್ಯಕ್ರಮಕ್ಕೆ 12 ವಯಸ್ಸಿನ ನಾನು ಚಿಕ್ಕಪ್ಪನೊಂದಿಗೆ ಹೋಗಿದ್ದಾಗ ಇವರು ನನ್ನನ್ನು ನೋಡಿದ್ದರಂತೆ.

ತಿಮ್ಮಸಂದ್ರದಲ್ಲಿ 1943 ರ ಏಪ್ರಿಲ್ 26 ರಂದು ನಮ್ಮ ಮದುವೆಯಾದಾಗ ಇವರು ಒಳ್ಳೆಯ ರೇಷ್ಮೆ ಸೀರೇನೇ ತಂದಿದ್ದರು. ಅದರ ಜತೆ ಬರೀ ಮಾಂಗಲ್ಯ ಅಷ್ಟೆ. ನಂಗಾಗಲಿ ನಮ್ಮ ಮನೆಯವರಿಗಾಗಲಿ ಅಸಮಾಧಾನವಾಗದಿದ್ದರೂ ಅವರಿವರು ಆಡಿಕೊಂಡರು. ಜವರೇಗೌಡರ ಕಿವಿಗೂ ಇದು ಬಿದ್ದು ಅಸಮಾಧಾನ ಉಂಟಾದಾಗ ಅವರು ಚಿಕ್ಕಪ್ಪನಿಗೆ ಪತ್ರ ಬರೆದು,"ಲಕ್ಷ್ಮಿಯೊಲಿಯದಿದ್ದರೂ ಸರಸ್ವತಿಯ ಕೃಪಾವಲೋಕದಿಂದ ಕೆಲವರಿಗೆ ಬೇಕಾದವನಾದೆನು. . . ಒಲುಮೆಯಲ್ಲಿ ಪರ್ಣಕುಟಿ ದಿವ್ಯ ಭವನವಾಗುವುದು" ಅಂತ ತಿಳಿಸಿ ಹಣದ ಗೌಣತೆಯನ್ನು ಮನವರಿಕೆ ಮಾಡಿಕೊಟ್ಟರು. ಆಗಿನಿಂದಲೂ ಸ್ವಾಭಿಮಾನವನ್ನೆಂದೂ ಬಿಟ್ಟವರಲ್ಲ. ಇವರನ್ನು ಬಡವರು ಅಂತ ಹಂಗಿಸಿದ್ದ ನೆಂಟರ ಮನೆಗೆ ಇಂದಿನವರೆಗೂ ಕಾಲಿಟ್ಟಿಲ್ಲ. ನಂಗೆ ಈ ವಿಷಯ ತಿಳಿಯದೆ ಒಂದೆರಡು ಮನೆಗಳಿಗೆ ಹೋಗಿ ಇವರಿಂದ ಬೈಸಿಕೊಂಡಿರುವುದೂ ಉಂಟು. ಆದರೆ ಅದೇ ಜನ ಮನೆಗೆ ಬಂದಾಗ ಅವರಾಡಿದ ಕಟು ಮಾತುಗಳನ್ನು ಮರೆತು ಅವರನ್ನು ವಿಶ್ವಾಸದಿಂದ ಕಂಡಾಗ ನಮಗೇ ಆಶ್ಚರ್ಯವಾಗುತ್ತೆ.

ಮದುವೆಯಾದ ಮಾರನೆಯ ದಿನ ಅವರೊಂದಿಗೆ ಚಿಕ್ಕರೆಗೆ ಎತ್ತಿನ ಗಾಡಿಯಲ್ಲಿ ಹೊರಟಾಗ ಮನಸ್ಸಿನ ತುಂಬಾ ನನಗೆ ಬೇಕಾದವನನ್ನು ಪಡೆದಂಥ ಧನ್ಯತೆ. ದಾರೀಲಿ ಭಾರೀ ಬಿರುಗಾಳಿಗೆ ಸಿಕ್ಕಿ ಸಾಲು ಮರವೊಂದು ಗಾಡಿ ಮೇಲೆ ಬಿದ್ದು ನಾವು ಪ್ರಾಣವನ್ನೇ ಕಳೆದುಕೊಳ್ಳುವಂಥ ಸಂದರ್ಭವೊದಗಿತ್ತು. ಆದರೂ ಆನಂದದಲ್ಲೇ ಮುಳುಗಿದ್ದ ನನಗೆ ಅದರ ತೀವ್ರತೆಯ ಅನುಭವವಾಗಲೇ ಇಲ್ಲ.

ನನ್ನ ಪತಿಗೆ ಕೊನೆಗೂ ಬೆಂಗಳೂರಿನ ಅಠಾರಾ ಕಚೇರಿಯಲ್ಲಿ ಗುಮಾಸ್ತೆ ಕೆಲಸ ಸಿಕ್ಕಿತು. ಬರುತ್ತಿದ್ದ ವೇತನ ಕೇವಲ 45 ರೂಪಾಯಿ. ಇದರಲ್ಲಿ ಸಂಸಾರ ಹೂಡಲು ಸಾಧ್ಯವೇ. . . ಹೀಗಾಗಿ ನಾನು ಕೆಲಕಾಲ ತೌರಿನಲ್ಲೇ ಉಳಿದೆ. ಈ ಮಧ್ಯೆ ನಮಗೊಂದು ಮಗುವಾಗಿ ಅದು ನ್ಯುಮೋನಿಯಾದಿಂದ ತೀರಿಕೊಂಡ ಸಂಕಟ ಬೇರೆ. ಕೆಲವು ತಿಂಗಳುಗಳಲ್ಲೇ ನಾನು ಮತ್ತೆ ಗರ್ಭಿಣಿ. ನಾನು ತೌರಿನಲ್ಲೇ ಉಳಿದಿದ್ದರಿಂದ ಜನ ತಮ್ಮ ಬಗ್ಗೆ ಏನು ಮಾತನಾಡುತ್ತಾರೋ ಎಂಬ ಸಂಕೋಚದಿಂದ ಇವರೂ ಪದೇ ಪದೇ ಊರಿಗೆ ಬರುತ್ತಿರಲಿಲ್ಲ. ಮಗುವನ್ನು ಕಳೆದುಕೊಂಡಿದ್ದ ನೋವು, ಪತಿಯ ಸಾನ್ನಿಧ್ಯದ ಕೊರತೆ . . . . ನನ್ನೆದೆ, ಬೆಂದುಹೋಗುತ್ತಿತ್ತು. ಇವರಿಗೆ ಸೆಂಟ್ರಲ್ ಕಾಲೇಜಿನಲ್ಲಿ ಲೆಕ್ಚರರ್ ಕೆಲಸವಾದಾಗ ನನ್ನನ್ನು ಬೆಂಗಳೂರಿಗೆ ಕರೆಸಿಕೊಂಡರು. ಅಷ್ಟು ಹೊತ್ತಿಗೆ ನನ್ನ

ಎರಡನೇ ಮಗು ಶಶಿಧರ ಪ್ರಸಾದ್ ಹುಟ್ಟಿದ್ದ. ಮನೆಯಲ್ಲಿ ತುಂಬಾ ಜನರಲ್ಲದೆ ಆಗಾಗ್ಗೆ ನನ್ನ ಮಗನಿಗೆ ಕಾಹಿಲೆಗಳು. ದೊಡ್ಡ ಸಂಸಾರದಲ್ಲಿ ಹುಟ್ಟಿ ಅದರ ಅನಾನುಕೂಲ ದೇಹ ಶ್ರಮಗಳ ಅರಿವಿದ್ದಿದ್ದರಿಂದ ನಾನು ನಮ್ಮದು ಆದರ್ಶವಾದ ಚಿಕ್ಕದಾದ ಚೊಕ್ಕ ಸಂಸಾರವಾಗಬೇಕೆಂದು ಬಯಸಿದ್ದೆ. ಆದರೆ ಯಜಮಾನರಿಗೆ ನೆಂಟರಿಷ್ಟರ ಮಕ್ಕಳೂ ವಿದ್ಯಾವಂತರಾಗಬೇಕು, ನಮ್ಮ ಕೈಲಾದಷ್ಟು ಸಹಾಯ ಅವರಿಗೂ ದೊರೆಯಬೇಕು. ಎಂಬ ಆಸೆಯಿತ್ತು. ಹೀಗಾಗಿ ಸದಾ ನಮ್ಮನೆಯಲ್ಲಿ ಅದೆಷ್ಟೋ ಜನ ಓದುತ್ತಿದ್ದ ಹುಡುಗರು. ನನ್ನ ತಮ್ಮ ಟಿ. ಪ್ರಭು ಕೂಡ ನಮ್ಮನೆಯಲ್ಲಿ ಇದ್ದುಕೊಂಡೇ ಬಿ. ಎಸ್ಸಿ.. ಎಂ. ಬಿ. ಬಿ. ಎಸ್. ಮುಗಿಸಿ ಪ್ರಖ್ಯಾತ ವೈದ್ಯನಾದ. ಬರೋ ವರಮಾನ ಸಾಲದಾದಾಗ ನನ್ನ ಪತಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ವಿಭಾಗದಲ್ಲಿ ಸಂಜೆ ವೇಳೆ ಕೆಲಸ ಮಾಡಿ 25 ರೂಪಾಯಿ ದುಡೀತಿದ್ದರು. ನಾವು ಕಾಫಿ ಕುಡಿದರೆ ಮಗೂಗೆ ಹಾಲು ಹೊಂದಿಸೋದು ಹೇಗೆ ಅಂತ ನಾವಿಬ್ಬರೂ ಕಾಫಿ ಮುಟ್ಟುತ್ತಲೇ ಇರಲಿಲ್ಲ. ಆಗ ಪದಾರ್ಥ ಅಗ್ಗ, 1 ರೂಪಾಯಿಗೆ 8 ಸೇರು ತೊಗರೀಬೇಳೆ, 10 -12 ಸೇರು ಅಕ್ಕಿ. ಆದರೆ ಬಾಡಿಗೇನೇ 25 ರೂಪಾಯಿ. ಸಾಕಾಗಿಹೋಗ್ತಿತ್ತು. ಒಮ್ಮೊಮ್ಮೆ ಇಂಥ ಮುಗ್ಗಟ್ಟಿನಲ್ಲಿ ನಾನು ಸ್ಥೈರಣೆ ಕಳೆದುಕೊಂಡು ಮುನಿಸಿಕೊಂಡಾಗ ಇವರು ನನ್ನ ವರ್ತನೆ ಕಂಡು ಸಿಡಿಮಿಡಿಗೊಳ್ಳುತ್ತಿದ್ದುದುಂಟು. ಆದರೆ ರೇಗಿದ ನಂತರ ಇವರ ಮನಸ್ಸು ಸ್ಥಿಮಿತವಲ್ಲಿರುತ್ತಿತ್ತೇ? ತಾವೂ ನನ್ನೊಂದಿಗೆ ಅತ್ತು ದುಗುಡವನ್ನು ಪರಿಹರಿಸಿಕೊಳ್ಳುತ್ತಾ ಇದ್ದದ್ದೂ ಅಪರೂಪವೇನಾಗಿರಲಿಲ್ಲ. ತಾವೇ ಬಡತನದಲ್ಲಿ ಬೆಂದವರಾದ್ದರಿಂದ ಇವರಿಗೆ ಮನೆಯಲ್ಲಿ ಓದುತ್ತಿದ್ದ ಹುಡುಗರ ಪರಿಸ್ಥಿತಿಯು ಅರಿವಿತ್ತು. ಎಷ್ಟೋ ದಿನಗಳು ತಮಗೆ ಅಂಬಲಿ ಕುಡಿಸಿ ತಮ್ಮ ತಂದೆ -ತಾಯಿ ಉಣ್ಣದೇ ಮಲಗುತ್ತಾ ಇದ್ದುದನ್ನು ನೆನೆಸಿಕೊಂಡು ಇವರು ಈಗಲೂ ಕಣ್ಣೀರು ಹಾಕುವುದುಂಟು. ಬಡತನ ಇವರನ್ನು ಎಷ್ಟು ನೋಯಿಸಿದೆಯೆಂದರೆ ಉಪಕುಲಪತಿಯಾದಾಗಲೂ ಇವರು ತಮ್ಮ ಹಿನ್ನೆಲೆಯನ್ನು ಮರೆಯಲಿಲ್ಲ. ಇವರು ಮಲಗುತ್ತಾ ಇದ್ದದ್ದು "ಕುಲಪತಿ ಭವನ"ದ ಹಿಂದಿದ್ದ ಪಡಸಾಲೆಯಲ್ಲಿ. ಕೋಣೆಗಳಿಗೆ ಹಾಸಿದ್ದ ಸಾವಿರಾರು ರೂಪಾಯಿ ಬೆಲೆಬಾಳುವ ರತ್ನಗಂಬಳಿಗಳು ಸಹ್ಯವಾಗದೆ ಅವನ್ನೆಲ್ಲ ಕಚೇರಿಗೆ ರವಾನಿಸಿಬಿಟ್ಟರು! ಇವರ ಸ್ವಭಾವ ತಿಳಿಯದೆ ಇವರ ವೇಷಭೂಷಣ ಕಂಡು ಕೆಲವರು ಇವರನ್ನು ಜಿಪುಣರೆಂದು ಕರೆಯುವ ಸಾಧ್ಯತೆಯುಂಟು. ಬಡತನದ ಮುಜುಗರಗಳಿಂದ ಸಂಭವಿಸಿದ ಕೆಲವು ಘಟನೆಗಳನ್ನು ಬಿಟ್ಟರೆ, ನನ್ನನ್ನೆಂದೂ ತಮಗಿಂತಲೂ ಕೀಳು ಎಂಬುದಾಗಿ ಇವರೆಂದೂ ಭಾವಿಸಿಯೇ ಇಲ್ಲ. ಚಿಕ್ಕ ಹುಡುಗಿಯಾಗಿದ್ದಾಗ ನಾನು ಎಲ್ಲೋ ಪತಿಯಾದವನು ದೇವರಿಗೆ ಸಮಾನ ಎಂದು ಓದಿಕೊಂಡಿದ್ದೆ. ಮದುವೆಯಾದ ಹೊಸದರಲ್ಲಿ ಬೆಳಗಾದ ಕೂಡಲೇ ಇವರ ಪಾದಕ್ಕೆ ನಮಸ್ಕರಿಸಲು ಪ್ರಯತ್ನಿಸಿದಾಗ ನನ್ನನ್ನು ತಮ್ಮ ಸರಿಸಮಾನಳು ಎಂದು ಭಾವಿಸಿದ್ದ ಇವರಿಗೆ ಎಂಥ ಆಘಾತವಾಗಿತ್ತು. ಅಂತ ! ನನ್ನ ವರ್ತನೆಯಿಂದ ನೊಂದು ಇವರಾಗ ನನ್ನ ಕೆನ್ನೆಗೆ ಛಟೀರನೆ ಬಗಿದ ಏಟು ಈಗಲೂ ನೆನಪಿದೆ!

ಬೆಂಗಳೂರಿನಲ್ಲಿ ಹಾಗೂ ಹೀಗೂ ಎರಡು ವರ್ಷಗಳ ಕಾಲ ನಿಭಾಯಿಸಿದ ನಂತರ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇವರಿಗೆ ಅಧ್ಯಾಪಕರ ಹುದ್ದೆ ದೊರಕಿತು. ಆಗ

ವರ್ಷ ಪಡುವಾರಹಳ್ಳಿಯ ವಾಸ. ಆಗಿನಿಂದಲೂ ಇಲ್ಲಿಯವರೆಗೆ ನಾವು ಒಬ್ಬರನ್ನೊಬ್ಬರು ಬಿಟ್ಟವರೇ ಅಲ್ಲ. ಮಗಳು ದೊಡ್ಡವಳಾಗಿ ಮದುವೆಯಾಗಿ ಅಮೆರಿಕಾಗೆ ತೆರಳಿದ ನಂತರ ಅವಳ ಬಾಣಂತನಕ್ಕೆಂದು ನಾನು ಅಲ್ಲಿಗೆ ಹೋದಾಗಲೇ ಇವರನ್ನು ದೀರ್ಘಕಾಲ ಬಿಟ್ಟಿದ್ದು. ನನಗೆ ಈಗಲೂ ಅನ್ನಿಸುತ್ತೆ, ಪ್ರಾಯಶಃ ನಾನಿಲ್ಲದ ಏಕಾಕಿತನವೇ ಇವರ ಮನಸ್ಸನ್ನು ಆಗ ಗೊಂದಲಗೊಳಿಸಿ ಸ್ನೇಹಿತರ ಮಾತಿಗೆ ಮನಸೋತು ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿ ಚುನಾವಣೆಗೆ ನಿಂತರೇನೋ ಅಂತ. ನಾನಿದ್ದಿದ್ದರೆ ಇವರ ಮನಸ್ಸು ದುರ್ಬಲವಾಗಿ ಇವರ ಶಿಷ್ಯನೇ ಇವರ ಎದುರಾಳಿಯಾಗಿ ನಿಂತಂಥ ಚುನಾವಣೆಯನ್ನು ಇವರು ಎದುರಿಸೋ ಸಂದರ್ಭವೇ ಬರ್‍ತಿರಲಿಲ್ಲ. ಅದಿರಲಿ, ಈ ಘಟನೆ ನನ್ನ ಮನಸ್ಸಿಗೆ ತುಂಬಾ ಕಹಿಯನ್ನು ಉಂಟು ಮಾಡಿದ್ದರಿಂದ ಅದನ್ನು ಹೇಳಿ ಮುಗಿಸಿದ್ದೀನಿ ಅಷ್ಟೆ.

ನಮ್ಮ ಜೀವನಕ್ಕೆ ಹೊಸ ತಿರುವು ಸಿಕ್ಕಿದ್ದು ಇವರು ಬರೆದ "ಬೆಂಗಳೂರು ಕೆಂಪೇಗೌಡ" ಕೃತಿ ಇಡೀ ಮೈಸೂರು ರಾಜ್ಯದಲ್ಲಿ ಪಠ್ಯಪುಸ್ತಕವಾದಾಗ. ಅದರಿಂದ ಸುಮಾರು 30.000 ರೂಪಾಯಿ ಬಂದಾಗ ನಮಗೆ ನಮ್ಮೆಲ್ಲ ಕಷ್ಟಗಳೂ ಕೊನೆಗೊಂಡ ಹಾಗೆ ಭಾಸವಾಯಿತು. ನಾವು ಅಲ್ಲಿಯವರೆಗೂ ಅಷ್ಟೊಂದು ಹಣವನ್ನು ಕಣ್ಣಾರೆ ನೋಡಿಯೂ ಇರಲಿಲ್ಲ. ಬಂದ ಹಣದಲ್ಲಿ 10.000 ರೂಪಾಯಿಗೆ ಒಂಟಿಕೊಪ್ಪಲಿನಲ್ಲಿ ಮನೆ ಕೊಂಡೆವು. ಅಷ್ಟೇ ಅಲ್ಲ ನೆಂಟರಿಷ್ಟರಿಗೆ ಬೇಕಾದ ಹಾಗೆ ನೆರವು ನೀಡಿದೆವು. ಆಮೇಲೆ ಅದೇ ಮನೆಯಲ್ಲಿದ್ದಾಗಲೇ ಇವರು ಪ್ರೊಫೆಸರರಾದರು. ಏನೋ ಖುಷಿ! ಒಂದು ಸೆಕೆಂಡ್ ಹ್ಯಾಂಡ್ ಆಸ್ಟಿನ್ ಕಾರನ್ನೂ ಕೊಂಡದ್ದಾಯಿತು. ಆ ಮನೆಯಲ್ಲಿ ಶೆಡ್ ಇರಲಿಲ್ಲ. ಸೈಟ್ ತಗೊಂಡು ಮನೆಯೊಂದನ್ನು ಕಟ್ಟಿಸಿದೆವು. ಈಗ ಆ ಮನೆಯನ್ನು "ಗುರುಕೃಪಾ" ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ ದಾನ ಕೊಟ್ಟಿದ್ದೀವಿ ಅಂತಿಟ್ಕೊಳ್ಳಿ.

ಇವರ ಪಾಲಿಗೆ ತಮ್ಮನ್ನು ಬೆಳೆಸಿದ ಶಿಕ್ಷಣ ಸಂಸ್ಥೆಗಳೇ ದೇವಾಲಯಗಳು. ನಾವು ಈ ಮನೇನ ಕಟ್ಟೋ ಸಂದರ್ಭದಲ್ಲಿ ಕಂಟ್ರಾಕ್ಟರ್ ಮನೆ ಪೂರ್ವಕ್ಕೆ ಮುಖ ಮಾಡಬಾರದು. ದಕ್ಷಿಣದ ಕಡೆಗಿರಬೇಕು ಅಂದಾಗ ಒಂದೇ ಹಠ. "ಪೂರ್ವಕ್ಕೇ ಇರಲಿ ಹೀಗಿದ್ದರೆ ಮಾತ್ರ ನಾನು ಮನೆ ಮುಂಬಾಗಿಲಿನಲ್ಲಿ ನಿಂತಾಗ ನಂಗೆ ಗಂಗೋತ್ರಿ, ಕನ್ನಡ ಅಧ್ಯಯನ ಸಂಸ್ಥೆಯ ದರ್ಶನವಾಗುತ್ತೆ" ಅಂತ. ಆಗೆಲ್ಲ ಇಷ್ಟು ಕಟ್ಟಡಗಳಿರಲಿಲ್ಲ. ಮನೆಯಿಂದಲೇ ಇವರಿಗೆ ತಮ್ಮ ವಿದ್ಯಾದೇಗುಲಗಳ ದರ್ಶನವಾಗುತ್ತಿತ್ತು. ಕನ್ನಡದ ಕೆಲಸ, ವಿದ್ಯಾದಾನವೆಂದರೆ ಇವರಿಗೆ ಪರಮಪ್ರೀತಿ. ಚಿಕ್ಕಮಗಳೂರಿನಲ್ಲಿ ಪು. ತಿ. ನ. ಹಾಗೂ ಮಂಡ್ಯದಲ್ಲಿ ಜಯದೇವಿತಾಯಿ ಲಿಗಾಡೆಯವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಇವರೊಂದಿಗೆ ಹೋಗಿದ್ದಾಗ ಇವರಲ್ಲಿ ಮನೆ ಮಾಡಿದ್ದ ಉತ್ಸಾಹವನ್ನು ಹತ್ತಿರದಿಂದ ಕಂಡವಳು ನಾನು. ತೀ. ನಂ. ಶ್ರೀ, ಪು. ತಿ. ನ, ಸಿದ್ದಯ್ಯಪುರಾಣಿಕ, ಕು. ಶಿ. ಹರಿದಾಸಭಟ್ಟ ಇವರೊಂದಿಗೆಲ್ಲ ಕನ್ನಡದ ಬಗ್ಗೆ ಅತೀವ ಅಭಿಮಾನ ಉಕ್ಕಿಸುತ್ತ ಇವರು ಮಾತನಾಡಿದ್ದನ್ನು ಆಲಿಸಿದ್ದೇನೆ.

ಮೈಸೂರಿಗೆ ಬಂದ ನಂತರ ಇವರಿಗೆ ತುಂಬಾ ಅಪ್ಯಾಯಮಾನವೆನ್ನಿಸಿದ್ದು ಕುವೆಂಪು ಅವರ ಸನ್ನಿಧಿ. ಇಂಟರ್ ಮೀಡಿಯಟ್‌ನಲ್ಲಿದ್ದಾಗಲೇ ಒಮ್ಮೆ "ಪ್ರಬುದ್ಧ ಕರ್ನಾಟಕ"ದಲ್ಲಿ ಪುಟ್ಟಪ್ಪನವರ ಫೋಟೋ ಪ್ರಕಟವಾಗಿದ್ದಾಗ ಅವರ ಸೌಂದರ್ಯ ಪ್ರತಿಭೆಗೆ ಬೆರಗಾಗಿ ಅದಕ್ಕೆ ಕಟ್ಟು ಹಾಕಿಸಿ ತಮ್ಮ ಬಳಿಯಲ್ಲಿ ಇಟ್ಟುಕೊಂಡಿದ್ದರಂತೆ. ಈಗಲೂ ಅದು ನಮ್ಮ ಬಳಿಯಿದೆ. ಕುವೆಂಪು ಪ್ರವಾಸಕ್ಕೆ ಹೊರಟಾಗ ಹುಣಸೂರು ರಸ್ತೆಯಲ್ಲಿ ತಮ್ಮ ಕಾರನ್ನು ನಿಲ್ಲಿಸಿ ಹಾರ್ನ್ ಮಾಡಿದ ಕೂಡಲೇ ಇವರು ಧಾವಿಸಿ ಅವರೊಡನೆ ಸುತ್ತಾಡಿ ಬರುತ್ತಿದ್ದರು. ಪರಮಹಂಸ, ವಿವೇಕಾನಂದ, ಶಾರದಾದೇವಿಯ ಅವಿಚ್ಛಿನ್ನ ಭಕ್ತರಾದ ನನ್ನ ಪತಿಗೆ ಈ ಮಹಾಮಹಿಮರಷ್ಟೇ ಮಹತ್ತ್ವರೆನ್ನಿಸಿರುವವರು ಕೆ. ವಿ. ಪುಟ್ಟಪ್ಪನವರು. ಕುವೆಂಪು ಹಾಗೂ ಅವರ ದಿವಂಗತ ಪತ್ನಿ ಹೇಮಾವತಿಯವರ ಸ್ನೇಹದಲ್ಲಿ ನಾವು ಕಂಡುಕೊಂಡಿದ್ದ ಆನಂದವನ್ನು ವರ್ಣಿಸಲೇ ಸಾಧ್ಯವಿಲ್ಲ. ಕುವೆಂಪು ಉಪಕುಲಪತಿಗಳಾಗಿದ್ದಾಗ ನನ್ನ ಮಗ ಅನಾರೋಗ್ಯದಿಂದ ನರಳುತ್ತಿದ್ದಾಗಲೂ ಇವರು ಅನೇಕ ಸಂದರ್ಭಗಳಲ್ಲಿ ಪ್ರವಾಸ ಹೊರಡಬೇಕಾಗುತ್ತಿತ್ತು. ಒಂದು ಮಗುವನ್ನು ಕಳೆದುಕೊಂಡಿದ್ದ ನಾನು ಭಯದಿಂದ ಕಳವಳಗೊಂಡು "ನೀವೂ ಹೊರಟುಹೋದರೆ ನಂಗೆ ಭಯ". ಅಂದಾಗಲೆಲ್ಲ " ನನ್ನ ಗುರುಗಳ ಆಶೀರ್ವಾದದಿಂದ ನನ್ನ ಮಗನಿಗೇನೂ ಆಗೋದಿಲ್ಲ. ನೀನೂ ಧೈರ್ಯವಾಗಿರು" ಅಂತಲೇ ಉತ್ತರ. ನಮ್ಮ ಮನೆಯಲ್ಲಿ ಶುಭ ಸಮಾರಂಭಗಳಾದಾಗಲೂ ಇವರಾಡುತ್ತಿದ್ದ ಮಾತೆಂದರೆ " ಗುರುಗಳು ಬಂದು ಮಕ್ಕಳನ್ನು ಆಶೀರ್ವದಿಸಿದರೆ ಅಲ್ಲಿಗೆ ನನ್ನ ಪಾಲಿಗೆ ಮದುವೆ ಮುಗಿದಂತೆ. ಬೇರೆ ಯಾವ ಶಾಸ್ತ್ರಗಳ ಅಗತ್ಯವೂ ಇಲ್ಲ" ಎಂಬುದು. ಈಗಲೂ ಯಾವ ಕಾರಣದಿಂದಲೇ ಆಗಲಿ ಮನಸ್ಸಿಗೆ ಅಶಾಂತಿ ಅಥವಾ ಕಿರಿಕಿರಿಯುಂಟಾದರೆ ಗುರುಗಳ ಸಾನ್ನಿಧ್ಯದಲ್ಲಿ ಸ್ವಲ್ಪ ಹೊತ್ತು ಕಳೆದು ಬರುತ್ತಾರೆ. ತೀರಾ ಅನಾರೋಗ್ಯದಿಂದ ಜಗತ್ತಿನ ಪರಿವೆಯೇ ಇಲ್ಲದೆ ಗುರುಗಳು ಹಾಸಿಗೆ ಹಿಡಿದಿರುವ ಈ ಸಂದರ್ಭದಲ್ಲೂ ಇವರದ್ದು ಪರಮಹಂಸರಲ್ಲಿ ಮೂರು ಹೊತ್ತೂ ಒಂದೇ ಪ್ರಾರ್ಥನೆ: "ಗುರುಗಳು ಸಾಧ್ಯವಾದಷ್ಟೂ ಬೇಗ ಗುಣಮುಖರಾಗಲಿ ಎಂದು.

ಕುವೆಂಪುರವರನ್ನು ಇಷ್ಟರ ಮಟ್ಟಿಗೆ ಆರಾಧ್ಯದೈವವನ್ನಾಗಿಸಿಕೊಂಡಿರುವ ಇವರು ಅವರಂತೆಯೇ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ ಇವರಿಗೆ ಅದರ ಉನ್ನತಿಯೇ ದೊಡ್ಡ ಗೀಳಾಯಿತು. ಮಧ್ಯಾಹ್ನ ಅರ್ಧ ಗಂಟೆ ಮನೆಗೆ ಊಟಕ್ಕೆ ಬರುವುದು ಅಷ್ಟೆ. ನಿವೃತ್ತಿಯಾದ ಮೇಲೂ ಅತ್ಯಂತ ಚಟುವಟಿಕೆಯಿಂದ ಇದ್ದ ಇವರಿಗೆ ಬಿಡುವೆನ್ನುವುದು ದೊರೆಯಲೇ ಇಲ್ಲ. ನಿವೃತ್ತಿಯನ್ನು ಇವರು ಮನಸ್ಸಿಗೆ ತೆಗೆದುಕೊಳ್ಳಲೂ ಇಲ್ಲ. ಇವರು ಕುಲಪತಿಯಾಗಿ ರಿಟೈರಾದ ನಂತರ ಇವರು ಕಾರು ಬಳಸುವುದನ್ನೇ ಬಿಟ್ಟರು. ಮಗನ ಕಾರಿನಲ್ಲಿ ಕೆಲವೊಮ್ಮೆ ಹೊರಡುವುದನ್ನು ಬಿಟ್ಟರೆ ಪ್ರಯಾಣವೆಲ್ಲ ರೈಲು ಬಸ್‌ಗಳಲ್ಲಿ ಈಗ ಅವರಿಗೆ ವಯಸ್ಸೇನು ಕಡಿಮೆಯೇ? 75 ವರ್ಷಗಳಾಯಿತು. ಕಾರ್ಯಕ್ರಮಗಳು, ಸಾಹಿತ್ಯ ಸಮಾರಂಭಗಳು ಅಂತ ಓಡಾಡುತ್ತಲೇ ಇರ್ತಾರೆ. ಬಟ್ಟೆಯ ಶೋಕಿಯಂತೂ ಎಂದೂ ಇರಲಿಲ್ಲ. ಊಟಕ್ಕೆ ಒಂದಿಷ್ಟು ಮುದ್ದೆ, ಉಪ್ಪಿನ ಸಾರಿದ್ದರೆ ಆಯಿತು. ಚಿಕ್ಕಂದಿನಲ್ಲಿ ಮಾಂಸ ತಿಂದರೆ ಅಲರ್ಜಿಯಾಗಿ

ಒದ್ದಾಡುತ್ತಿದ್ದರಂತೆ. ಇವರಿಗೆ ಅದು ಅಭ್ಯಾಸವಾದ್ದು ತೀರಾ ತಡವಾಗಿ. ಊರಲ್ಲಿದ್ದಾಗ ಸಾಮಾನ್ಯವಾಗಿ ಒಟ್ಟಿಗೆ ಊಟಕ್ಕೆ ಕೂತು ಅನಂತರ ಕಳೆಯುವ ಕೆಲವು ನಿಮಿಷಗಳನ್ನು ಬಿಟ್ಟರೆ ಇವರು ಮನೆಯವರಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂದಿರುವ ತಮ್ಮ ಸಣ್ಣ ಶೆಡ್‌ಗೆ ಹೊರಡುತ್ತಾರೆ. ಗುರುವಿನ ಮೇಲಿನ ಅತೀವ ಭಕ್ತಿ ಗೌರವದಿಂದ ತಾವು ಪ್ರಾರಂಭಿಸಿದ ಈ ಟ್ರಸ್ಟ್ ಅಸ್ತಿತ್ವಕ್ಕೆ ಬಂದದ್ದೂ ತಮ್ಮಂತೆಯೇ ಬಡತನದ ಬೇಗೆಯನ್ನು ವಿದ್ಯಾರ್ಥಿ ದಿಸೆಯಲ್ಲಿ ಅನುಭವಿಸುತ್ತಿರುವವರಿಗೆ ವ್ಯಾಸಂಗದಲ್ಲಿ ನೆರವಾಗಬೇಕು ಎಂಬ ಉದ್ದೇಶದಿಂದ. ವಿದ್ಯಾರ್ಥಿಗಳಿಗೆ, ಹಣದ ಮುಗ್ಗಟ್ಟಿರುವ ಸಾಹಿತಿಗಳಿಗೆ, ಕಲಾವಿದರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಇದು ಹುಟ್ಟಿಕೊಂಡಿತು. ಟ್ರಸ್ಟ್‌ನ ಬಳಿಯ ಶೆಡ್‌ನಲ್ಲೇ ಇವರ ಬರವಣಿಗೆ, ವ್ಯಾಸಂಗ, ಚಿಂತನೆ ಎಲ್ಲವೂ. ಇವರ ಪುಸ್ತಕಗಳ ಸಂಗ್ರಹವೂ ಅಲ್ಲೇ. ಮನೆಗೆ ಬಂದು ಊಟ ಮುಗಿಸಿದರೆಂದರೆ ಮತ್ತೆ ಕಾಲ್ಗಳು ಟ್ರಸ್ಟ್‌ನತ್ತಲೆ ಸಾಗುತ್ತವೆ.

ಯಾವಾಗಲೋ ಒಮ್ಮೆ ಇವರಿಗೆ ವೇತನದ ಬಾಕಿಯೆಂದು ಸುಮಾರು 14,000 ರೂಪಾಯಿ ಬಂತು. ಬಂದ ಹಣವನ್ನು ನಮ್ಮ ಮುಂದಿಟ್ಟು ಮಕ್ಕಳಿಗೆ, "ನೋಡಿ, ಯಾವುದೋ ಬಾಕಿ ಅನಿರೀಕ್ಷಿತವಾಗಿ ಬಂದಿದೆ. ಏನಾದರೂ ಒಡವೆ ಮಾಡಿಸಿಕೋತೀರಾ ಬಟ್ಟೆ ಬರೆ ಕೊಂಡುಕೋತೀರಾ?" ಅಂತ ಕೇಳಿದರು. ಎಷ್ಟಾದರೂ ಇವರ ಮಕ್ಕಳಲ್ಲವೇ " ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಒಂದೇ ಏನೇನೂ ಸಾಲದು ಅಂತ ಹೇಳುತ್ತಿದ್ದಿರಲ್ಲಪ್ಪಾ ಈಗ ಈ ಹಣದಲ್ಲಿ ನಿಮ್ಮ ಹೆಸರಲ್ಲೂ ಒಂದು ಟ್ರಸ್ಟ್ ಪ್ರಾರಂಭಿಸೋಣ" ಅಂತ ಮಕ್ಕಳು ಸಲಹೆ ಕೊಟ್ಟರು. ಹೀಗೆ ದೇಜಗೌ ಟ್ರಸ್ಟ್ ಶುರುವಾಯಿತು. ನಾನೇ ಅದರ ನಿರ್ವಾಹಕಿ. ಹಣದಲ್ಲಿ 4,000 ರೂಪಾಯಿಯನ್ನು ವಿಶ್ವವಿದ್ಯಾನಿಲಯಕ್ಕೆ ಕೊಟ್ಟು ಇವರ ತಾಯಿಯ ಹೆಸರಿನಲ್ಲಿ ಬಹುಮಾನವೊಂದನ್ನು ನೀಡುವಂತೆ ಸೂಚಿಸಿದೆವು. ಟ್ರಸ್ಟ್‌ಗೆ ಹಣ ಕೂಡಿಸಬೇಕಾದಾಗ ಇವರಿಗೆ ಬರೋ ಪಿಂಚಣಿ ಹಣವೇ ನಮ್ಮಿಬ್ಬರ ಜೀವನ ನಿರ್ವಹಣೆಗೆ ಸಾಕು ಅಂತ ನಿರ್ಧರಿಸಿ ಇವರ ಗ್ರಂಥಗಳಿಂದ ಬರುವ ಸಂಭಾವನೆಯನ್ನು ಟ್ರಸ್ಟಿಗೇ ಬಿಟ್ಟುಕೊಟ್ಟೆವು. ಯಾರಿಂದಲೂ ಚಂದಾ ಹಣ ಬೇಡಲೇ ಇಲ್ಲ. ಈಗ ಮಗನಂತೂ ಪ್ರೊಫೆಸರಾಗಿ ಉತ್ತಮ ಸ್ಥಿತಿಯಲ್ಲಿದ್ದಾನೆ. ಮಗಳೂ ಪತಿಯೊಂದಿಗೆ ನೆಮ್ಮದಿಯಿಂದ ನೆಲೆಸಿದ್ದಾಳೆ. ನಂಗೆ ನನ್ನ ಪತಿಯ ಇಂಥ ಕೆಲಸಗಳಿಗಿಂತಲೂ ಉತ್ತಮ ಎನ್ನಿಸಬಹುದಾದ್ದು ಬೇರಾವುದಿದೆ?

ಮನೆಗೆ ಬಂದ ಸ್ನೇಹಿತರೊಬ್ಬರು ಇತ್ತೀಚೆಗೆ ನನ್ನನ್ನು ಕೇಳಿದರು. "ಏನಮ್ಮ . . ನಿಮ್ಮ ಯಜಮಾನರು, ಮಕ್ಕಳು ಎಲ್ಲರೂ ತುಂಬಾ ವಿದ್ಯಾವಂತರು. ಅವರ ನಡುವೆ ನೀವೇನು ಮಾಡ್ತೀರಿ? ನಿಮಗೆ ಬೇಜಾರಾಗೊಲ್ಲವೇ?" ಅಂತ. ನಾನು ಬಯಸಿದ್ದ ಪುಣ್ಯಗಳೆಲ್ಲ ನನ್ನವಾಗಿರುವಾಗ ನಂಗೆ ಕಾಲ ಕಳೆಯುವುದು ಕಷ್ಟವೇ ನೀವೇ ಹೇಳಿ. . . .

* * * * *

ಬದುಕು - ಬರಹ

-ಚಂದ್ರಯ್ಯನಾಯ್ಡು

'ದೇಜಗೌ' ಸಂಕ್ಷಿಪ್ತ ನಾಮದದೇವೇಗೌಡ ಜವರೇಗೌಡ ನಮ್ಮ ನಾಡಿನ ಸುಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರು. ಅವರು ವಿದ್ವಾಂಸರು; ಭಾಷಾಂತರಕಾರರು; ಅನುವಾದಕರು; ಜೀವನ ಚರಿತ್ರಕಾರರು' ಮಕ್ಕಳ ಸಾಹಿತಿಗಳು ವಿಮರ್ಶಕರು. ದೇಜಗೌ ಶಿಕ್ಷಣತಜ್ಞರು; ಜಾನಪದ ವಿದ್ವಾಂಸರು; ಪ್ರಬುದ್ಧ ಸಂಪಾದಕರು; ಕನ್ನಡದ ಕಣ್ಮಣಿಗಳು. ಹೀಗೆ ಏನೆಂದರೂ ದೇಜಗೌ ಅವರಿಗೆ ಒಪ್ಪುತ್ತದೆ;ಸಲ್ಲುತ್ತದೆ. ತಮ್ಮ ಬದುಕಿನ ಅಮೃತ ಮಹೋತ್ಸವಕ್ಕೆ ಕಾಲಿಡುತ್ತಿರುವ 'ದೇಜಗೌ'ಕನ್ನಡ ನಾಡು ನುಡಿ, ಸಾಹಿತ್ಯಕ್ಕೆ ಅಮೂಲ್ಯವಾದ ಕಾಣಿಕೆಗಳನ್ನೇ ನೀಡಿದ್ದಾರೆ. ಕನ್ನಡಿಗರ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ 'ಚಕ್ಕೆರೆ' ಒಂದು ಸಾಮಾನ್ಯ ಹಳ್ಳಿ. ಚೆನ್ನಮ್ಮ ಮತ್ತು ದೇವೇಗೌಡ ದಂಪತಿಗಳು. ಇಬ್ಬರೂ ಅವಿದ್ಯಾವಂತರು. ಆದರೆ ಮಹಾದೈವ ಭಕ್ತರು, ಶೀಲಸಂಪನ್ನರು; ಸುಸಂಸ್ಕೃತರು. ದೇವೇಗೌಡರ ಮೂರನೆಯ ಹೆಂಡತಿ ಚೆನ್ನಮ್ಮ, ಚೆನ್ನಮ್ಮನವರ ಊರು 'ಚಕ್ಕೆರೆ'ಯಿಂದ ಮೂರು ಮೈಲಿ ದೂರದ ಹಳ್ಳಿ 'ಮುದಿಗೆರೆ'. ೧೯೧೮ರ ಜುಲೈ ೬ ರಂದು ಮುದಿಗೆರೆಯಲ್ಲಿ ಜವರೇಗೌಡರು ಜನಿಸಿದರು. ಜವರೇಗೌಡರ ಬಾಲ್ಯ ಬಡತನದಲ್ಲಿಯೇ ಉದ್ಘಾಟನೆಯಾಯಿತು.

ದೇವೇಗೌಡರು ಮಗ ಜವರೇಗೌಡನನ್ನು ಶಾಲೆಗೆ ಕಳಿಸಲಿಲ್ಲ. ಬದಲಾಗಿ ಐದು ವರ್ಷದವನಿದ್ದಾಗ ಅವನನ್ನು ಕುರಿ, ಮೇಕೆ ಕಾಯಲು ಹಾಕಿದರು. ಊರಿನಲ್ಲಿ ಶಾಲೆಯಿದ್ದರೂ ಶಾಲೆಗೆ ಸೇರುವ ಅದೃಷ್ಟವನ್ನು ಜವರೇಗೌಡ ಪಡೆದಿರಲಿಲ್ಲ. ಆದರೆ ಮನಸ್ಸು ಶಾಲೆಯತ್ತ ಸೆಳೆಯುತ್ತಿತ್ತು. ಒಂದು ದಿನ ಕುರಿ - ಮೇಕೆಗಳನ್ನು ಎಲ್ಲೋ ಮೇಯಲು ಬಿಟ್ಟು ಶಾಲೆಗೆ ಹೋಗಿ ಕುಳಿತರು. ಸ್ಲೇಟು ಬಳಪ ಬೇರೆಯವರಿಂದ ಪಡೆದು ಅಕ್ಷರಾಭ್ಯಾಸ ಮಾಡಲು ಯತ್ನಿಸುತ್ತಿದ್ದರು. ಆ ಕಡೆ ಕುರಿ - ಮೇಕೆಗಳು ಬೇರೆಯವರ ಹೊಲವನ್ನು ಮೆಯ್ಯುತ್ತಿದ್ದವು. ದೂರು ದೇವೇಗೌಡರಿಗೆ ತಲುಪಿತು. ದೇವೇಗೌಡರು ದೊಣ್ಣೆ ಊರಿಕೊಂಡು ಬಂದು ಶಾಲೆಯೊಳಗಿದ್ದ ಮಗನನ್ನು ಹೊರ ಕರೆದು ಹೊಡೆದರು. ಇದನ್ನು ನೋಡುತ್ತಿದ್ದ ಅಧ್ಯಾಪಕ ವೆಂಕಟರಾಮ್ ಅಯ್ಯಂಗಾರ್ ಜವರೇಗೌಡರನ್ನು ಬಿಡಿಸಿಕೊಂಡರು. ಮುಖ್ಯೋಪಾಧ್ಯಾಯರಾದ ಎಚ್. ಕೆ. ವೀರಣ್ಣಗೌಡರ ಬಳಿ ಕರೆದುಕೊಂಡು ಹೋದರು.

ವಿಷಯವೆಲ್ಲವನ್ನೂ ತಿಳಿದ ಮುಖ್ಯೋಪಾಧ್ಯಾಯರು ದೇವೇಗೌಡರಿಗೆ ಹೇಳಿದರು: ''ಹುಡುಗನ ಬಟ್ಟೆ ಬರೆ, ಸ್ಲೇಟು ಪುಸ್ತಕಗಳ ಬಗ್ಗೆ ನೀನು ಯೋಚಿಸಬೇಡ. ಅದೆಲ್ಲವನ್ನೂ ನಾನು ನೋಡಿಕೊಳ್ಳುತ್ತೇನೆ. ಅವನನ್ನು ನಾಳೆಯಿಂದಲೇ ಶಾಲೆಗೆ ಕಳಿಸು. ಇಲ್ಲದಿದ್ದರೆ ಸರ್ಕಾರಕ್ಕೆ ಬರೆದು ನಿನ್ನ ಮೇಲೆ ಜುಲ್ಮಾನೆ ಹಾಕಿಸುತ್ತೇನೆ' ಎಂದರು.

ದೇವೇಗೌಡ ಜವರೇಗೌಡನನ್ನು ಶಾಲೆಗೆ ಕಳಿಸಿದರು. ವೀರಣ್ಣಗೌಡರು ಜವರೇಗೌಡರಿಗೆ ಉಪಕಾರ ಮಾಡಿದರು. ಪ್ರಾರಂಭದಲ್ಲಿಯೇ ಮೂರನೇ ತರಗತಿಗೆ ಸೇರಿಸಿಕೊಂಡರು. ಹೀಗೆ ದೇಜಗೌ ಶಾಲಾಜೀವನ ಆರಂಭಿಸಲ್ಪಟ್ಟಿತು. ಪ್ರತಿಭಾವಂತ ವಿದ್ಯಾರ್ಥಿಯೆಂದೇ ಹೆಸರುಗಳಿಸಿ ಎಲ್ಲರ ಗಮನ ಸೆಳೆದರು.

೧೯೩೦ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆ ಕಟ್ಟಿದರು. ಹೈಸ್ಕೂಲಿನಲ್ಲಿ ಸಂಸ್ಕೃತ ಬಯಸಿದ್ದರು. ಆದರೆ ದೊರೆಯಲಿಲ್ಲ. ಎಸ್. ಎಸ್. ಎಲ್. ಸಿ.ಯಲ್ಲಿ ಪಾಸಾಗಿ ಹಳ್ಳಿಯಲ್ಲಿ ಸುದ್ದಿ ಮಾಡಿದರು. ಇಂಟರ್ ಮೀಡಿಯೆಟ್ ಸೇರಲು ಬೆಂಗಳೂರಿಗೆ ಪಯಣ ಬೆಳೆಸಿದರು, ನಂತರ ಆನರ್ಸ್‌ಗೆ ಸೇರಿದರು. ಆನರ್ಸ್‌ನಲ್ಲಿ ಇಂಗ್ಲೀಷ್, ಚರಿತ್ರೆ ಆರಿಸಿಕೊಂಡಿದ್ದರು. ಸ್ನೇಹಿತರು ಕೇಳಿದರು: "ವೆಂಕಣ್ಣಯ್ಯ, ಕೆ.ವಿ. ಪುಟ್ಟಪ್ಪ ಅಂಥವರಿಂದ ಪಾಠ ಕೇಳುವಯೋಗ ಕಳೆದುಕೊಳ್ಳುತ್ತೀರಾ?." ಕೆ. ವಿ. ಪುಟ್ಟಪ್ಪನವರ ಹೆಸರು ಕೇಳಿದೊಡನೆಯೇ ರೋಮಾಂಚನಗೊಂಡ ಜವರೇಗೌಡರು ಕಾಲೇಜಿಗೆ ಹೋಗಿ ಅರ್ಜಿಯಲ್ಲಿ 'ಚರಿತ್ರೆ'ಗೆ ಬದಲಾಗಿ'ಕನ್ನಡ' ಎಂದು ತಿದ್ದಿ ಬರೆದರು. ಇದು ದೇಜಗೌ ಕನ್ನಡಕ್ಕೆ ಬಂದ ಬಗೆ.

ಆನರ್ಸ್‌ನಲ್ಲಿ ಪ್ರೊ|| ವೆಂಕಣ್ಣಯ್ಯ, ಎ. ಆರ್. ಕೃ, ತೀನಂಶ್ರೀ, ಕೆ.ವಿ. ಪುಟ್ಟಪ್ಪ ಮೊದಲಾದ ಕನ್ನಡ ದಿಗ್ಗಜರ ಪಾಠ ಕೇಳುವ ಯೋಗ ದೊರೆಯಿತು. ೧೯೪೧ ರಲ್ಲಿ ಬಿ. ಎ. ಆನರ್ಸ್ ಪದವಿಯನ್ನು ಪಡೆದರು. ಮುಂದೆ ಕೊಲ್ಹಾಪುರಕ್ಕೆ ಹೋಗಿ ಎಂ. ಎ. ಹಾಗೂ ಎಲ್. ಎಲ್. ಬಿ. ಪದವೀಧರರಾಗಬೇಕೆಂದು ಬಯಸಿ ಅರ್ಜಿ ಸಲ್ಲಿಸಿದರು. ಅರ್ಜಿ ಸಕಾಲಕ್ಕೆ ಕೊಲ್ಹಾಪುರ ತಲುಪಲಿಲ್ಲ. ಇದರಿಂದ ಕನ್ನಡಕ್ಕೆ ಲಾಭವೇ ಆಯಿತು. ವಿದ್ಯಾ ಇಲಾಖೆಯಲ್ಲಿ ಒಂದು ಗುಮಾಸ್ತಗಿರಿ ಕೆಲಸಕ್ಕೆ ಸೇರಿದರು, ಮರು ವರ್ಷ ಎಂ. ಎ. ಪದವಿಗೆ ಸೇರಿದರು. ಎಂ. ಎ. ಪರೀಕ್ಷೆಯಲ್ಲಿ ಪಾಸಾದರು. ಮುಂದೆ ಉದ್ಯೋಗಕ್ಕಾಗಿ ಹುಡುಕಾಡಿದರು. ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ 'ಕ್ಲರ್ಕ್' ಕೆಲಸಕ್ಕೆ ಸೇರಿದರು. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತರು. ಸಬ್-ರಿಜಿಸ್ಟ್ರಾರ್ ಹಾಗು ಕನ್ನಡ ಅಧ್ಯಾಪಕ ಹುದ್ದೆಗಳು ಒಟ್ಟಿಗೆ ಕರೆದವು. ದೇಜಗೌ ಕನ್ನಡ ಅಧ್ಯಾಪಕ ಹುದ್ದೆ ಅಪ್ಪಿಕೊಂಡರು. ೧೯೪೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿ ನೇಮಕಗೊಂಡು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು. ೪೮ರಲ್ಲಿ ಮೈಸೂರಿಗೆ ವರ್ಗವಾಗಿ ಬಂದರು.

೧೯೫೫ರಲ್ಲಿ ದೇಜಗೌ ಅಸಿಸ್ಟೆಂಟ್ ಪ್ರೊಫೆಸರರಾಗಿ ನೇಮಕಗೊಂಡರು. ೧೯೫೭ರಲ್ಲಿ ಮೈಸೂರು ವಿ.ವಿ. ಪರೀಕ್ಷಾಧಿಕಾರಿಗಳಾದರು. ೧೯೬೦ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾದರು. ಶಿವಮೊಗ್ಗೆಯಿಂದ ಮೈಸೂರಿಗೆ ಮರಳಿದರು. ಕನ್ನಡ ರೀಡರ್ ಆದರು. ೧೯೬೪ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಇಲಾಖೆಯ ಮುಖ್ಯಸ್ಥರಾಗಿ ನೇಮಕಗೊಂಡರು. ೧೯೬೬ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗ 'ದೇಜಗೌ'ಮೊದಲ ನಿರ್ದೇಶಕರಾದರು. ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾದರು. ೧೯೭೫ರಲ್ಲಿ ಕುಲಪತಿ ಸ್ಥಾನದಿಂದ

ಪ್ರಾಧ್ಯಾಪಕ ಹುದ್ದೆಗೆ ಮರಳಿದರು. ೧೯೭೭ರಲ್ಲಿ ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿದರು. ಈಗ ಮೈಸೂರಿನ ತಮ್ಮ ಮನೆ'ಕಲಾನಿಲಯ'ದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಇಂಟರ್ ಮೀಡಿಯೆಟ್ ಓದುತ್ತಿರುವಾಗಲೇ ಕೈಗೆ ಸಿಕ್ಕಿದ ಪುಸ್ತಕ, ಪತ್ರಿಕೆಗಳನ್ನು ದೇಜಗೌ ಓದುತ್ತಿದ್ದರು. ಒಂದು ದಿನ ವಾಚನಾಲಯದಲ್ಲಿ 'ತ್ರಿವೇಣಿ' ಎಂಬ ಇಂಗ್ಲೀಷ್ ತ್ರೈಮಾಸಿಕ ಕಣ್ಣಿಗೆ ಬಿತ್ತು. ಅದರಲ್ಲಿ ಟಿ. ಎನ್. ಶಾಮರಾವ್ ಎಂಬುವವರು 'ಕುವೆಂಪು' ಅವರನ್ನು ಕುರಿತು ಬರೆದಿದ್ದರು. ಆ ಲೇಖನಗೌಡರ ಮನಸೆಳೆಯಿತು. ಅಂದಿನಿಂದ ಗೌಡರ ಮನಸ್ಸು ಕುವೆಂಪು ಕೃತಿಗಳ ಕಡೆ ವಾಲಿತು; ಸೆಳೆಯಿತು. ಮತ್ತೊಂದು ದಿನ 'ಪ್ರಬುದ್ಧ ಕರ್ನಾಟಕ' ದ ಹಳೆಯ ಸಂಚಿಕೆಯಿಂದ ಕವಿವರ್ಯರ ಭಾವಚಿತ್ರವನ್ನೇ ಕಳ್ಳತನದಿಂದ ಕತ್ತರಿಸಿ ಜೇಬಿಗೆ ಸೇರಿಸಿಕೊಂಡು ಹೋದರು. ಕಟ್ಟು ಹಾಕಿಸಿ ತಂದು ತಮ್ಮ ಕೊಠಡಿಯಲ್ಲಿಟ್ಟುಕೊಂಡರು.

'ನೆನಪು ಕಹಿಯಲ್ಲ' ದೇಜಗೌ ಅವರ ಪ್ರಥಮ ಕೃತಿ. ೧೯೪೯ರಲ್ಲಿ ಪ್ರಕಟವಾಯಿತು. ಇದುವರೆವಿಗೂ ಸುಮಾರು ೧೨೦ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಗೌಡರು ಈಗಲೂ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಗೌಡರ ಲೇಖನಿ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿದೆ. ಅವರ ಕೃತಿ ರಾಶಿಯಲ್ಲಿ ವೈವಿಧ್ಯವಿದೆ, ಸಿರಿ ಸಂಪದವಿದೆ. ಪತ್ರ ಸಾಹಿತ್ಯ, ಭಾಷಣ, ಪ್ರವಾಸ, ಜನಪದ, ಜೀವನ ಚರಿತ್ರೆ, ಅನುವಾದ, ಪ್ರಬಂಧ, ವಿಮರ್ಶೆ, ಸಂಪಾದಿತ, ಸಂಕೀರ್ಣ ಎಲ್ಲ ಪ್ರಕಾರಗಳಲ್ಲೂ ಸಾಧನೆಯಿದೆ, ಸಿದ್ಧಿಯಿದೆ. 'ಹೋರಾಟದ ಬದುಕು' ಭಾಗ-1. ಭಾಗ-2 ಆತ್ಮಚರಿತ್ರೆ ಪ್ರಕಟವಾಗಿದೆ.

ತಮ್ಮ ಸಾಹಿತ್ಯದ ರಚನೆಯ ಬಗ್ಗೆ ಗೌಡರು ಹೋರಾಟದ ಬದುಕಿನಲ್ಲಿ ಹೀಗೆ ಹೇಳಿಕೊಂಡಿದ್ದಾರೆ: "ನಾಲ್ಕಾರು ಕವನಗಳನ್ನು ಗೀಚಿದ ನಂತರ ಆ ಪ್ರಕಾರ ನನಗಲ್ಲವೆಂದು ತೋರಿ ತೊರೆದದ್ದಾಯಿತು. ಒಂದೆರಡು ಕತೆ ಬರೆದೆ. ಅದೂ ಸರಿ ಬೀಳಲಿಲ್ಲ. ಸಾಹಿತ್ಯದ ಬೆಳವಣಿಗೆಗೆ ಭಾಷಾಂತರ ಕಾರ್ಯ ಅತ್ಯಗತ್ಯವೆಂದು ನಂಬಿಕೊಂಡಿದ್ದರಿಂದ ಆ ಕಡೆಗೆ ಗಮನ ಕೊಡಬೇಕಾಯಿತು. ಜೀವನ ಚರಿತ್ರೆ ನನಗೆ ಪ್ರಿಯವಾದ ಪ್ರಕಾರವಾಯಿತು, ವಿಮರ್ಶೆ ನನ್ನ ಮನಸ್ಸನ್ನು ಸೆರೆಹಿಡಿಯಿತು."

ಟಾಲಾಸ್ಟಾಯ್ ಅವರ ವಾರ್ ಮತ್ತು ಪೀಸ್ ಕಾದಂಬರಿಯನ್ನು ದೇಜಗೌ ಅವರು 'ಯುದ್ಧ ಮತ್ತು ಶಾಂತಿ' ಎಂಬ ಶೀರ್ಷಿಕೆಯಡಿ ಕನ್ನಡಕ್ಕೆ ತಂದಿದ್ದಾರೆ. 'ಪುನರುತ್ಥಾನ' ಟಾಲಾಸ್ಟಾಯ್‌ರವರ 'ರಿಸಿ ರೆಕ್ಷನ್' ಎಂಬ ಕಾದಂಬರಿಯ ಭಾಷಾಂತರ. ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ-ರಾಷ್ಟ್ರಕವಿ ಶ್ರೀಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಗದ್ಯಾನುವಾದ. ಭಾಷಾಂತರ ಕ್ಷೇತ್ರದಲ್ಲಿ 'ದೇಜಗೌ' ಅವರ ಹೆಸರು ಕನ್ನಡದಲ್ಲಿ ಮೊದಲನೆ ಸಾಲಿನದು. ಅವರು ಇನ್ನೂ ಹಲವಾರು ಕೃತಿಗಳನ್ನು ಭಾಷಾಂತರಿಸಿದ್ದಾರೆ.

'ಕೆನೆ' ಮತ್ತು 'ತೆನೆ' ಪ್ರಬಂಧ ಸಾಹಿತ್ಯಕ್ಕೆ ದೇಜಗೌ ಅವರ ಕೊಡುಗೆ. ಅಮೆರಿಕಾ ಗಾಂಧಿ, ಕರ್ನಾಟಕದ ರೂವಾರಿ, ಕ್ರಾಂತಿಕಾರಿ ಡಾ||ಅಂಬೇಡ್ಕರ್, ತೀನಂಶ್ರೀ, ದಾರಿದೀಪಗಳು ನಿತ್ಯಸಚಿವ, ಬಸವ ಬೆಳಕು, ರಾಷ್ಟ್ರಕವಿ ಕುವೆಂಪು, ಲೋಕದ ಬೆಳಕು ಲೋಕನಾಯಕ, ವ್ಯಾಕರಣದ ಮಲ್ಲಪ್ಪನವರು, ವಿಚಾರವಾದಿ ಪೆರಿಯಾರ್, ಸಾಹಿತಿಗಳ ಸಂಗದಲ್ಲಿ ದೇಜಗೌ ಅವರು ಬರೆದಿರುವ ಪ್ರಮುಖ ಜೀವನ ಚರಿತ್ರೆಗಳು.

ದೇಜಗೌ ಒಬ್ಬ ಜನಪ್ರಿಯ ಕನ್ನಡದ ಕೆಲಸಗಾರರು. ಕನ್ನಡ ಉಳಿದರೆ ಸಾಹಿತ್ಯ ಉಳಿದೀತು. ಅದು ಅಳಿದರೆ ಸಾಹಿತ್ಯ ಅಳಿದೀತು ಎಂದು ಬಹಳ ಹಿಂದೆಯೇ ಗೌಡರು ಹೇಳಿದರು! "ಕನ್ನಡದ ಹಗೆ ನನಗೆ ಹಗೆ ಅವನು ಬಂಧುವಾಗಲಿ, ಮಂತ್ರಿಯಾಗಲಿ ಯಾರೇ ಆಗಿರಲಿ, ಕನ್ನಡಕ್ಕೆ ವಿರೋಧವೊದಗಿದಾಗ ಕನ್ನಡದ ಆಚಾರ್ಯರ ಆಶೀರ್ವಾದದಿಂದ ಬುಲ್ ಡೋಜರ್‌ನಂತೆ ನುಗ್ಗುತ್ತೇನೆ. ಭಗವತ್ಕೃಪೆಯಿಂದ ನನ್ನ ಬಾಳಿನಲ್ಲಿ ಕೊರತೆಯಿಲ್ಲ. ಆಶೆ ಆಮಿಷಗಳಿಲ್ಲ. ಕನ್ನಡದ ಮೇಲ್ಮೆಯೆ ನನ್ನ ಗುರಿ" ಎಂದು ಗೌಡರು ಹೇಳಿದ್ದಾರೆ.

'ಕನ್ನಡಕ್ಕಾಗಿ ಕೈಯೆತ್ತು' ಮತ್ತು 'ಕನ್ನಡಕ್ಕೆ ನಮನ ಕನ್ನಡನಾಡು ನುಡಿಗಳಿಗೆ ಸಂಬಂಧಿಸಿದ ದೇಜಗೌ ಅವರ ಕೃತಿಗಳು. ಕನ್ನಡದ ಮೇಲ್ಮೈಗಾಗಿ ಗೌಡರು ಹಲವು ಹತ್ತು ರೀತಿಯಲ್ಲಿ ದುಡಿದಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆ ಕೊಟ್ಟಿದ್ದಾರೆ. 'ಕನ್ನಡ ಅಧ್ಯಯನ ಸಂಸ್ಥೆ'ಯ ನಿರ್ದೇಶಕರಾಗಿ ಅವರ ಸೇವೆ ಶ್ಲಾಘನೀಯ. ಲೇಖಕರಾಗಿ, ಕುಲಪತಿಯಾಗಿ ಅವರು ಕನ್ನಡದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕನ್ನಡ ಪುಸ್ತಕಗಳ ಪ್ರಕಟಣೆ, ಕನ್ನಡ ಕೆಲಸಗಾರರಿಗೆ ಪ್ರೋತ್ಸಾಹ, ಜನಪದ ವಿಭಾಗದ ಬೆಳವಣಿಗೆ. ಮೈಸೂರು ವಿಶ್ವವಿದ್ಯಾನಿಲಯದ 'ಪ್ರಸಾರಾಂಗದ' ಬೆಳವಣಿಗೆ, ಪ್ರಬುದ್ಧ ಕರ್ನಾಟಕ ಏಳಿಗೆ - ಹೀಗೆ ದೇಜಗೌ ಅವರ ಸಾಧನೆಯ ಪಟ್ಟಿ ಬೆಳೆಯುತ್ತದೆ.

ದೇಜಗೌ ಒಂದು ಭಾಷಣದಲ್ಲಿ ಹೇಳಿದ್ದಾರೆ. "ಕೆಲವರಿಗೆ ರಾಮನಿಂದ ಮುಕ್ತಿ, ಕೆಲವರಿಗೆ ಶಿವನಿಂದ ಮುಕ್ತಿ. ನನಗಾದರೋ ಕನ್ನಡದಿಂದಲೇ ಮುಕ್ತಿ". ಈ ಮಾತೇ ಅವರ ಬದುಕಿಗೆ ವ್ಯಾಖ್ಯಾನದಂತಿದೆ. ಕನ್ನಡ ಚಳವಳಿ ಅವರಿಗೆ ಪ್ರೀತಿಯ ಹವ್ಯಾಸ. ಅವರ ಬದುಕನ್ನು ಹಲವು ವಿದ್ವಾಂಸರು "ಗುಡಿಸಿಲಿನಿಂದ-ಗಂಗೋತ್ರಿಗೆ" ಎಂದು ಕರೆದಿದ್ದಾರೆ. ದೇಜಗೌ ಅವರು ತಮ್ಮ ಬದುಕನ್ನು "ಹೋರಾಟದ ಬದುಕು" ಎಂದೇ ಕರೆದುಕೊಂಡಿದ್ದಾರೆ.

೧೯೬೭ರಲ್ಲಿ ಟಾಲ್‌ಸ್ಟಾಯಿಯ ಕಾದಂಬರಿಯ ಅನುವಾದವಾದ 'ಪುನರುತ್ಥಾನ'ಕ್ಕೆ ಸೋವಿಯಟ್ ಲ್ಯಾಂಡ್ ಪ್ರಶಸ್ತಿ ದೊರಕಿತು. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಕನ್ನಡದ ಅಭಿವೃದ್ಧಿಗಾಗಿ ಶ್ರಮಿಸಿದ ದೇಜಗೌ ಅವರನ್ನು ಬೆಂಗಳೂರಿನಲ್ಲಿ ನಡೆದ ೪೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಕನ್ನಡ ಜನತೆ ತನ್ನ ಕೃತಜ್ಞತೆ ಸಲ್ಲಿಸಿತು. ೧೯೮೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ೧೯೮೫ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬಂತು. ದೇಜಗೌ ಅವರಿಗೆ "ದೇಜಗೌ: ವ್ಯಕ್ತಿ ಮತ್ತು ಸಾಹಿತ್ಯ",

"ಅಂತಃಕರಣ", "ರಸ ಷಷ್ಟಿ" ಹಾಗೂ "ದೇಜಗೌ ಎಪ್ಪತ್ತರ ಹೊಸ್ತಿಲಲ್ಲಿ" ಎಂಬ ಅಭಿನಂದನ ಗ್ರಂಥಗಳು ಅರ್ಪಿಸಲ್ಪಟ್ಟಿವೆ.

ದೇ ಜವರೇಗೌಡರೇ ಹೀಗೆ ಹೇಳಿಕೊಂಡಿದ್ದಾರೆ: "ನಾನು ಒಂದು ನಿಮಿಷವೂ ಕೆಲಸವಿಲ್ಲದೆ ಇರಲಾರೆ. ಜೀವನದಲ್ಲಿ ಸೋಮಾರಿಯಲ್ಲ. ಅಧ್ಯಾಪನ, ಸಾಹಿತ್ಯ, ಆಡಳಿತ ಈ ಮೂರನ್ನೂ ಯಶಸ್ವಿಯಾಗಿ ಪೂರೈಸಿಕೊಂಡು ಬಂದಿದ್ದೇನೆ. ಹೋರಾಟದ ಬದುಕಿನಲ್ಲಿ ಸೋಮಾರಿತನಕ್ಕೆ ಅವಕಾಶವೇ ಇಲ್ಲ. ಕುವೆಂಪು ನನ್ನನ್ನು ತಮ್ಮ ಪ್ರಯೋಗ ಶಾಲೆಯಲ್ಲಿ ಅರೆದು ಮಾರ್ಪಡಿಸಿದರು. ಮುಂದುವರಿದು ಗೌಡರು ಹೇಳುತ್ತಾರೆ: ನನ್ನ ಒಂದೇ ಒಂದು ಷೋಕಿ ಎಂದರೆ ಪುಸ್ತಕ ಕೊಳ್ಳುವುದು".

ದೇಜಗೌ ಆಫ್ರಿಕಾ, ಆಸ್ಟ್ರೀಯಾ, ಜಪಾನ್, ಜರ್ಮನಿ, ಇಟಲಿ, ಇಸ್ರೇಲ್, ಐರ್ಲೆಂಡ್, ಕೀನ್ಯಾ, ಗ್ರೇಟ್ ಬ್ರಿಟನ್, ಘಾನಾ, ನೈಜೀರಿಯಾ, ಫ್ರಾನ್ಸ್, ಶ್ರೀಲಂಕಾ ಹಾಗೂ ಸಿಂಗಪುರ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಅಲ್ಲಿನ ತಮ್ಮ ಅನುಭವಗಳನ್ನು ತಮ್ಮ ಪ್ರವಾಸ ಸಾಹಿತ್ಯ ಕೃತಿಗಳಾದ 'ಆಫ್ರಿಕಾ ಯಾತ್ರೆ', 'ಪ್ರವಾಸಿಯ ದಿನಚರಿ' 'ಯೇಸು-ವಿಭೀಷಣರ' ನಾಡಿನಲ್ಲಿ, 'ವಿದೇಶಗಳಲ್ಲಿ ನಾಲ್ಕು ವಾರ 'ದಕ್ಷಿಣೇಶ್ವರಕ್ಕೆ ನಮನ ಮೊದಲಾದ ಕೃತಿಗಳಲ್ಲಿ ಚಿತ್ರಿಸಿದ್ದಾರೆ.

ದೇಜಗೌ ಬದುಕು ಬರಹದಲ್ಲಿ ಭಿನ್ನತೆಯಿಲ್ಲ. ಆತ್ಮ ಚರಿತ್ರೆಯಲ್ಲಿ ತಮ್ಮ ಹೋರಾಟದ ಬದುಕಿನ ಹೆಜ್ಜೆಗಳನ್ನು ಅನಾವರಣಗೊಳಿಸಿದ್ದಾರೆ. ಗುಡಿಸಿಲಿನಿಂದ - ಗಂಗೋತ್ರಿಯವರೆಗಿನ ಅವರ ಸಾಧನೆ ಸಾಹಸಮಯವಾದದ್ದು. ಕುರಿ ಕಾಯುತ್ತಿದ್ದ ಹುಡುಗ ಕುಲಪತಿಯಾದದ್ದು ಒಂದು ದಾಖಲೆ;ಸಾಧನೆ. ದೇಜಗೌ ಒಬ್ಬ ಜನಪ್ರಿಯ ಕನ್ನಡದ ಕನಸುಗಾರರು. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರಿಗೆ ಅಗ್ರಸ್ಥಾನವಿದೆ, ಅಂತೆಯೇ ದೇಜಗೌ ಆಧುನಿಕ ಕನ್ನಡದ ಆಚಾರ್ಯರು.

ಕರ್ನಾಟಕದ ಉದ್ದಕ್ಕೂ ತಮ್ಮ ಶಿಷ್ಯ ಸಂಪತ್ತನ್ನು ಹೊಂದಿರುವ ಪ್ರೊ|| ಜವರೇಗೌಡರು ಕನ್ನಡಕ್ಕೆ ಡಾ|| ಹಾಮಾನಾಯಕ, ಡಾ|| ಹಂ.ಪ. ನಾಗರಾಜಯ್ಯ, ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರಿ, ಡಾ|| ಸಿ. ಪಿ. ಕೆ. ಜೆ. ಎಸ್. ಪರಶಿವಮೂರ್ತಿ, ಪ. ವಿ. ಚಂದ್ರಶೇಖರ್ ರಾವ್, ಡಾ|| ಎ. ಎಸ್. ವೇಣುಗೋಪಾಲ ರಾವ್-ಮುಂತಾದ ಕನ್ನಡ ಕೆಲಸಗಾರರ ಒಂದು ಪಡೆಯನ್ನೇ ನಿರ್ಮಿಸಿಕೊಟ್ಟಿದ್ದಾರೆ.

ಪ್ರೊ|| ಎಚ್ಚೆಸ್ಕೆ ಹೇಳಿರುವಂತೆ "ಈ ಪ್ರಪಂಚದಲ್ಲಿ ಯಾವ ಸಾಹಸವನ್ನು ಮಾಡಿಯಾದರೂ ಗೆಲ್ಲಬಹುದು. ಆದರೆ ಜವರೇಗೌಡರ ಮುಂದೆ ಕನ್ನಡವನ್ನು ಜರೆದು ಯಾರೂ ಬಚಾಯಿಸಿಕೊಂಡು ಬರಲಾರರು"

ಕನ್ನಡದ ಸೇನಾನಿ ದೇಜಗೌ ಅವರಿಗೆ ಜುಲೈ ೬ಕ್ಕೆ ೭೫ ತುಂಬಿದೆ. ಅವರಿಗೆ ಎಲ್ಲ ಬಗೆಯ ಶುಭಗಳನ್ನು ಕೋರುವುದು ಕನ್ನಡಗರೆಲ್ಲರ ಕರ್ತವ್ಯ. ಕನ್ನಡವನ್ನು ಎಲ್ಲ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸುವುದೇ ದೇಜಗೌ ಅವರಿಗೆ ನಾವು ಸಲ್ಲಿಸುವ ಗೌರವ.

* * * * *

ಕನ್ನಡದ ಕಟ್ಟಾ ಸೇನಾನಿ

-ಪಿ. ಆರ್. ತಿಪ್ಪೇಸ್ವಾಮಿ

ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ:ದೇ. ಜವರೇಗೌಡರು ಕನ್ನಡದ ಕಟ್ಟಾ ಸೇನಾನಿಗಳಲ್ಲೊಬ್ಬರು. ಅವರ ಹೋರಾಟದ ಬದುಕು ಇಲ್ಲಿದೆ.

ಆಡು ಮೇಯಿಸುವುದನ್ನು ಬಿಟ್ಟು ಶಾಲೆಗೆ ಸೇರಿದ ಹುಡುಗ ತನ್ನ ತಂದೆಯಿಂದ ಪೆಟ್ಟು ತಿಂದ. ಓದಿನ ಶ್ರದ್ಧೆ ಕಂಡ ಅಭಿಮಾನಿಗಳೊಬ್ಬರ ಪ್ರೋತ್ಸಾಹದಿಂದ ಶಾಲೆ ಸೇರಿದ. ಅಧ್ಯಾಪಕನಾದ. ಮುಂದೆ ಪ್ರಾಧ್ಯಾಪಕ ಪದವಿಗೇರಿ ಕುಲಪತಿಯೂ ಆದ.

ಈ ವ್ಯಕ್ತಿಯೇ ಪ್ರೊ: ದೇ. ಜವರೇಗೌಡ. ಜವರೇಗೌಡರದು ಚಕ್ಕರೆ ಗ್ರಾಮ. ರಂಗುರಂಗಿನ ಮಕ್ಕಳ ಆಟಿಕೆಗೆ ಹೆಸರಾದ ಚನ್ನಪಟ್ಟಣ ತಾಲ್ಲೂಕು ಮುದಿಗೆರೆಯ ಅಣ್ಣನ ಮನೆಯಲ್ಲಿ 9-7-1918 ರಲ್ಲಿ ಜನಿಸಿದರು.

ಮೈಸೂರಿನತ್ತ

ಪ್ರಾಥಮಿಕ ಓದು ಚಕ್ಕರೆಯಲ್ಲಿ. ಹೈಸ್ಕೂಲು ಚನ್ನಪಟ್ಟಣದಲ್ಲಿ. ಬೆಂಗಳೂರಲ್ಲಿ ಇಂಟರ್ ಮುಗಿಸಿ ಇಂಗ್ಲೀಷ್ ಆನರ್ಸಿಗಾಗಿ ಮೈಸೂರಿಗೆ ಬಂದರು. ದಿ. : ಪ್ರೊ: ವೆಂಕಣ್ಣಯ್ಯ, ಡಾ: ಕುವೆಂಪು ಅವರ ಹೆಸರು ಕೇಳಿ ಆಕರ್ಷಿತರಾದರು. ಕನ್ನಡ ಆನರ್ಸ್ ಸೇರಿದರು. ರಾಮಕೃಷ್ಣ ಆಶ್ರಮದಲ್ಲಿ ನೆಲೆಸಿದರು.

ಕನ್ನಡ ಆನರ್ಸ್ ಮುಗಿಸಿದ ನಂತರ ಕೊಲ್ಹಾಪುರಕ್ಕೆ ತೆರಳಿದರು. ಅಲ್ಲಿ ನ್ಯಾಯಶಾಸ್ತ್ರ ಕಲಿಕೆಯ ಆಸೆ ಕೈಗೂಡದೆ ಬೆಂಗಳೂರಿಗೆ ಬಂದರು. ವಿದ್ಯಾ ಇಲಾಖೆಯ ಪರೀಕ್ಷಾಶಾಖೆಯ ಗುಮಾಸ್ತರಾದರು. ಸ್ವಲ್ಪ ಕಾಲದ ನಂತರ ಮೈಸೂರಿನಲ್ಲಿ ಎಂ. ಎ. ವ್ಯಾಸಂಗ ಮಾಡಿ 1943 ರಲ್ಲಿ ಪದವಿ ಗಳಿಸಿದರು. ಸರ್ಕಾರಿ ಕಾರ್ಯಸೌಧ ಸೇರಿ ಅಕೌಂಟ್ಸ್ ಪರೀಕ್ಷೆ ಮುಗಿಸಿದರು. 1945 ರಲ್ಲಿ ಸೆಂಟ್ರಲ್ ಕಾಲೇಜಿನ ಅಧ್ಯಾಪಕ ವೃತ್ತಿ-ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಶಬ್ದಸಂಗ್ರಹದಲ್ಲಿ ಕೂಡಿಕೊಂಡರು.

ವಿವಿಧ ಹುದ್ದೆಗಳು

'ದೇಜಗೌ' ಅವರ ಕನ್ನಡ ನುಡಿ ಸೇವೆಯ ಆರಂಭ ಇಲ್ಲಿಂದಲೇ. 1945 ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿಗೆ ವರ್ಗ. ಇಲ್ಲಿ ಸಂಶೋಧನಾ ಶಾಖೆಯ ಸಂಪರ್ಕ ಹಾಗೂ 'ಪ್ರಬುದ್ಧ ಕರ್ನಾಟಕ' ದ ಸಂಪಾದಕತ್ವ. 1952 ರಲ್ಲಿ ಉಪ ಪ್ರಾಧ್ಯಾಪಕ. ಮೈಸೂರು ವಿಶ್ವವಿದ್ಯಾನಿಲಯದ 'ಪ್ರಕಟಣಾ' ಶಾಖೆಯ ಕಾರ್ಯದರ್ಶಿ. ನಂತರ ಪರೀಕ್ಷಾಧಿಕಾರಿ. ಮುಂದೆ ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿ, ಅನಂತರ ಮೈಸೂರಿಗೆ ಹಿಂತಿರುಗಿದರು.

ಹೋರಾಟ

ಮಾನಸಗಂಗೋತ್ರಿಯ ಕನ್ನಡ ಇಲಾಖೆ ರೀಡರ್ ಆಗಿದ್ದಾಗ ಪ್ರಾಧ್ಯಾಪಕ ಪ್ರೊ: ತೀ. ನಂ. ಶ್ರೀ ಅವರೊಡಗೂಡಿ ಆ ವಿಭಾಗಕ್ಕಾಗಿ ಶ್ರಮಿಸಿದರು. ಮಹಾರಾಜ ಕಾಲೇಜಿನಿಂದ ಗಂಗೋತ್ರಿಗೆ ಕೆಲವು ಇಲಾಖೆಗಳು ಬಂದು ಸೇರಲು 'ದೇಜಗೌ' ಅವರ ಹೋರಾಟ ಸ್ಮರಿಸುವಂತಹದು. ಕನ್ನಡ ಇಲಾಖೆ ಅಲ್ಲಿಗೆ ಮೊದಲು ಬಂದ ಮೇಲೆ ಇತರ ಇಲಾಖೆಗಳೂ ಬರಲು ಪ್ರೇರಕ ಶಕ್ತಿ ಇವರಾದರು.

ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಕನ್ನಡ ಸಂಪಾದನಾ ವಿಭಾಗವನ್ನು ಬೇರ್ಪಡಿಸಿ, ಅದನ್ನು ಕನ್ನಡ ಅಧ್ಯಯನ ಸಂಸ್ಥೆಯ ತೆಕ್ಕೆಗೆ ತಂದು ಹೆಚ್ಚು ಹೆಚ್ಚು ಪ್ರಾಚೀನ ಗ್ರಂಥಗಳು ಸಂಗ್ರಹವಾಗಿ ಸಂಪಾದಿತವಾಗಿ ಮುದ್ರಣ ಕಾಣುವಂತಾಯಿತು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಭಾಷಾಂತರ, ಜಾನಪದ ವಸ್ತು ಸಂಗ್ರಹಾಲಯ ಆರಂಭಿಸಿದರು. ವಿಶ್ವಕೋಶದ ಸಂಪುಟಗಳ ರಚನೆಯ ಜವಾಬ್ದಾರಿಯೂ ದೇಜಗೌ ಅವರದಾಯಿತು. 1969 ರಲ್ಲಿ ಕುಲಪತಿ ಸ್ಥಾನ. ಎಲ್ಲ ವಿಭಾಗಗಳನ್ನು ಬೆಳೆಸಲು ಅವಿಶ್ರಾಂತ ದುಡಿಮೆ.

1970 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ವೇಳೆ ಸಮ್ಮೇಳನದ ಅಧ್ಯಕ್ಷಗಿರಿ ದೇಜಗೌ ಅವರಿಗೆ ದೊರಕಿತು.

ಭಾಷಾ ಪ್ರಭುತ್ವ

ಕನ್ನಡದ ಗದ್ಯಲೇಖಕರಲ್ಲಿ 'ದೇಜಗೌ' ಅಗ್ರಗಣ್ಯರು. ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಭಾಷಾಪ್ರಭುತ್ವ ಉಳ್ಳವರು. ಇವರು ಕೆಲವಾರು ಜೀವನ ಚರಿತ್ರೆಗಳನ್ನು ವಿಮರ್ಶಾ ಗ್ರಂಥಗಳನ್ನು ರಚಿಸಿದ್ದಾರೆ. ಆಲ್ಬರ್ಟ್ ಐನ್‌ಸ್ಟೀನ್, ತೀ. ನಂ. ಶ್ರೀ, ಕುವೆಂಪು, ಬೆಂಗಳೂರು ಕೆಂಪೇಗೌಡ, ಕಡುಗಲಿ ಕುಮಾರರಾಮ, ಮೋತಿಲಾಲ್ ನೆಹರು, ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ, ಷಡಕ್ಷರದೇವ, ಸಾಹಿತಿಗಳ ಸಂಗದಲ್ಲಿ, ಕುಲಪತಿಯ ಭಾಷಣಗಳು, ಬೆರಕೆ ಸೊಪ್ಪು ಮೊದಲಾದ ಗ್ರಂಥಗಳು ಇವರಿಂದ ಹೊರಬಂದವು.

ಸೋವಿಯತ್ ಪ್ರಶಸ್ತಿ

ಕೃಷ್ಣಹತೀಸಿಂಗರ 'ನೆನೆಪು ಕಹಿಯಲ್ಲ', ಟಾಲ್‌ಸ್ಟಾಯರ 'ಪುನರುತ್ಥಾನ', (ಸೋವಿಯತ್ ದೇಶದ ಪ್ರಶಸ್ತಿ ಗಳಿಸಿದ ಕೃತಿ), ಜೇನ್ ಆಸ್ಟಿನ್‌ರ ಕೃತಿ 'ಹಮ್ಮು ಬಿಮ್ಮು' ಇವರಿಗೆ ಕೀರ್ತಿ ತಂದ ಭಾಷಾಂತರ ಕೃತಿಗಳು.

ಕಬ್ಬಿಗರ ಕಾವ, ಜೈಮಿನಿ ಭಾರತ ಸಂಗ್ರಹ, ಶ್ರೀ ರಾಮಾಯಣ ದರ್ಶನಂ, ಹೊಸಗನ್ನಡ ಕಥಾ ಸಂಗ್ರಹ, ದೇಜಗೌ ಅವರ ಸಂಪಾದಿತ ಗ್ರಂಥಗಳು. ತಮ್ಮ ಆತ್ಮಕಥೆ 'ಹೋರಾಟದ ಬದುಕು'ಮತ್ತೊಂದು ದೇಜಗೌ ಅವರ ಮೇರುಕೃತಿ. ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ.

ರಷ್ಯಾ, ಯುರೋಪ್ ಮತ್ತು ಆಫ್ರಿಕಾ ದೇಶಗಳ ಪ್ರವಾಸ ಸಾಹಿತ್ಯ ಕೃತಿಗಳಲ್ಲಿ ತೀವ್ರ ಶೈಕ್ಷಣಿಕ ಆಸಕ್ತಿ, ಉನ್ನತ ಶಿಕ್ಷಣದ ಬಗೆಗಿನ ಅವರ ಕಾಳಜಿ ಪ್ರಕಟಗೊಂಡಿದೆ.

ಕನ್ನಡ ಕಂಕಣ

ಕನ್ನಡ ನಾಡಿನ ಎಲ್ಲ ವ್ಯವಹಾರ ಕನ್ನಡದಲ್ಲೇ ನಡೆಯಬೇಕು; ಐ. ಎ. ಎಸ್. ಅಧಿಕಾರಿಗಳು ಇದಕ್ಕೆ ಅಡ್ಡಿ ಬರದಂತೆ ನೋಡಿಕೊಳ್ಳಬೇಕು. ಕನ್ನಡ ಭಾಷೆಯ ಹಿತಕ್ಕೆ ಧಕ್ಕೆ ಆಗಬಾರದೆಂಬುದೇ ದೇಜಗೌ ಅವರ ತಾರಕ ಮಂತ್ರವಾಗಿದೆ. ಇದರ ಸಲುವಾಗಿ ದಿಟ್ಟವಾಗಿ ಹೋರಾಡುತ್ತಾ ಬಂದವರಲ್ಲಿ ಅಗ್ರಗಣ್ಯರು ಇವರು.

'ದೇಜಗೌ' ಅವರು ಕುಲಪತಿಯಾಗಿ ಆರು ವರ್ಷಗಳ ಕಾಲ ಸಲ್ಲಿಸಿದ ಸೇವೆ ಯಾರೂ ಸ್ಮರಿಸುವಂತಹದು. ಜಾನಪದ ವಸ್ತು ಸಂಗ್ರಹಾಲಯದ ಪ್ರಮುಖ ಶಿಲ್ಪಿಗಳಿವರು. ನನ್ನನ್ನು ಈ ಒಂದು ಗುರುತರ ಕಾರ್ಯಕ್ಕೆ ನೇಮಿಸಿದರು. ಪೂರ್ವ ವಿಷ್ಕಾದಲ್ಲಿ ಅಪೂರ್ವ ಎನ್ನುವಷ್ಟು ಅದನ್ನು ಬೆಳೆಸಲು ಕಾರಣರಾದರು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಹತ್ತು ಸಂಪುಟಗಳ ಪ್ರಕಟಣೆಯ ಯೋಜನೆಯೂ ಇವರದೇ. ಜಾನಪದ, ಭಾಷಾಂತರ, ದಾಸಸಾಹಿತ್ಯ, ಮೊದಲಾದ ಡಿಪ್ಲೊಮಾ ತರಗತಿಗಳನ್ನು ಆರಂಭಿಸಿದ್ದೂ ಇವರೇ.

'ದೇಜಗೌ' ಕುಲಪತಿಯಾದ ಅವಧಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಬಹುಮುಖ ಪ್ರಗತಿಗೆ ಕಾರಣರಾದರು. ವಿಶ್ವವಿದ್ಯಾನಿಲಯದ ಆಯವ್ಯಯ ಎರಡೂವರೆ ಕೋಟಿ ರೂ. ಗಳಷ್ಟು ಇದ್ದುದನ್ನು ಐದೂವರೆ ಕೋಟಿಗೆ ಹೆಚ್ಚಿಸಿದರು. 24 ಕ್ಕೂ ಹೆಚ್ಚು ಹೊಸ ಸ್ನಾತಕೋತ್ತರ ಪದವಿ ತರಗತಿಗಳು ಆರಂಭವಾಗಿದ್ದು, 26 ಕ್ಕೂ ಹೆಚ್ಚು ಪ್ರಾಧ್ಯಾಪಕರು ನೇಮಕಗೊಂಡದ್ದು, ರೀಡರುಗಳ, ಅಧ್ಯಾಪಕರುಗಳ ಸಂಖ್ಯೆ ಎರಡು ಪಟ್ಟು ಹೆಚ್ಚಿತು. ಇವರು ಪರೀಕ್ಷೆಗಳ ಸುಧಾರಣೆ ಮಾಡಿದರಲ್ಲದೆ ವನಶ್ರೀ ಬೆಳೆಸಲು ಪ್ರೋತ್ಸಾಹಿಸಿ ಕಣ್ಣಿಗೆ ಹಬ್ಬ ತರಿಸಿದರು.

ಬಹುಮುಖ ಪ್ರತಿಭೆಯ 'ದೇಜಗೌ' ಅವರನ್ನು ಕರ್ನಾಟಕ ವಿಶ್ವವಿದ್ಯಾಲಯ 1978 ರಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ನಿವೃತ್ತರಾದ ಮೇಲೆ 'ಕುವೆಂಪು ವಿದ್ಯಾವರ್ಧಕ ಟ್ರಸ್ಟಿ'ನ ಪ್ರಗತಿಗಾಗಿ ತಮ್ಮ ವಾಸದ ಮನೆಯನ್ನೇ ದಾನ ಮಾಡಿದರು. ಈಗ ಅದರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಖದ್ದರ್ ಪ್ರೇಮಿ

'ದೇಜಗೌ' ಖದ್ದರ್‌ಧಾರಿಗಳು. ಸರಳ ಸುಂದರ ವ್ಯಕ್ತಿತ್ವ. ಒಮ್ಮೊಮ್ಮೆ ಯಾರನ್ನಾದರೂ ಮಾತಿನಲ್ಲಿ ದೂಷಿಸಿದರೆ ಅದು ಕೇವಲ ತಾತ್ಕಾಲಿಕ. ದೇಜಗೌ ಯಾವತ್ತೂ ವಿದ್ವತ್ತಿಗೆ ಬೆಲೆ ಕೊಡುತ್ತಾರೆ. ಅಂಥವರನ್ನು ಪ್ರೋತ್ಸಾಹಿಸುತ್ತಾರೆ. 'ಮಾತು ಕೆಲವು ಸಾರಿ ಕಠಿಣ ಎನಿಸಬಹುದು, ಆದರೆ ನಿಜಕ್ಕೂ ಅವರದು ಹೆಂಗರುಳು. ಪರಿಶುದ್ಧ, ಸ್ವಚ್ಛ ಸಂಸಾರಿ ಜೀವನ. ಯುವಪೀಳಿಗೆಗೆ ಆದರ್ಶಪ್ರಾಯ.'

ನಿವೃತ್ತಿಯ ಇಂದಿನ ವೇಳೆಯಲ್ಲೂ ಬರಹದ ದುಡಿಮೆ. ಅದೊಂದೇ ಬಾಳಿನಲ್ಲಿ ಸ್ಥಿರವಾದುದು ಎಂಬುದನ್ನು ಅವರು ತಿಳಿದಿದ್ದಾರೆ. ನನ್ನ ಅವರ ಪರಿಚಯ ನಲವತ್ತು ವರ್ಷಗಳ ಹಿಂದಿನದು. ಮಹಾರಾಜಾ ಕಾಲೇಜಿನಲ್ಲಿ ನನಗೆ ಗುರುಗಳಾಗಿದ್ದರು. ಗೆಳೆಯ ಡಾ: ಜೀ. ಶಂ. ಪರಮಶಿವಯ್ಯನವರಂಥ ಅನೇಕ ಮಿತ್ರರನ್ನು ಮೊದಲ ಬಾರಿಗೆ ಅವರಿಗೆ ಪರಿಚಯಿಸಿದವನು ನಾನೇ. ನಾನು ಮೈಸೂರಿನಲ್ಲಿ ಬಹುಕಾಲ ನೆಲೆ ನಿಲ್ಲುವಂತೆ ಮಾಡಿದವರು 'ದೇಜಗೌ' ಅವರೇ. ಅವರ ಪ್ರೀತಿ, ವಾತ್ಸಲ್ಯಗಳನ್ನು ನಾನೆಂದೂ ಮರೆಯಲಾರೆ. ಅವರ ಕನ್ನಡಾಭಿಮಾನ ನನ್ನಂಥ ಅನೇಕರಿಗೆ ಸ್ಫೂರ್ತಿ ನೀಡಿದೆ. ಮಾರ್ಗದರ್ಶನ ಮಾಡಿದೆ.

* * * * *

ಒಂದು ಕಲ್ಪಶಕ್ತಿ

-ಸಮೇತನಹಳ್ಳಿ ರಾಮರಾಯ

ದೇಜಗೌ ಅವರಲ್ಲಿ ಒಂದು ಕಲ್ಪಶಕ್ತಿಯುಂಟು. ಆಯಸ್ಕಾಂತ ಕಬ್ಬಿಣವನ್ನು ಆಕರ್ಷಿಸುವುದಾದರೆ, ಈ ಕಲ್ಪಶಕ್ತಿ ಹೊನ್ನನ್ನು ಮುತ್ತುರತ್ನಗಳನ್ನು ಮಾತ್ರ ತನ್ನತ್ತ ಸೆಳೆದುಕೊಳ್ಳುತ್ತದೆ; ಅವುಗಳ ಚೆಲುವು, ನಯ, ಮೆರುಗು, ಬೆರಗು, ಸೊಗಸು, ಹೊಳಹು ಮತ್ತು ಹೆಚ್ಚುಗಾರಿಕೆಗಳನ್ನು ಲೋಕಕ್ಕೆ ಎತ್ತಿ ತೋರಿಸುತ್ತದೆ. ದೇಜಗೌ ಕನ್ನಡದ ದೀಕ್ಷೆಯನ್ನು ಕಟ್ಟಿಕೊಂಡ ದಿನದಿಂದಲೇ ತಮ್ಮ ಸಹಜ ಗುಣದಿಂದ ಈ ಕಲ್ಪಶಕ್ತಿಯನ್ನು ಗಳಿಸಿಕೊಂಡರು. ನಾಡಿನ ಶ್ರೇಷ್ಠ ಬರಹಗಾರರನ್ನು ಅವರು ತಮ್ಮ ಈ ಕಲ್ಪಶಕ್ತಿಯ ಪ್ರತಿರೂಪಗಳಾದ ಪ್ರೇಮ, ವಿನಯ, ಸೌಜನ್ಯಗಳಿಂದ ತಮ್ಮತ್ತ ಸೆಳೆದುಕೊಂಡು ಕನ್ನಡದ ಸೇನೆಯನ್ನು ಕಟ್ಟಿದರು. ಅದರಲ್ಲಿ ಮತಾಂಧತೆಯ ಸುಳಿವನ್ನು ನಾನು ಕಂಡುದಿಲ್ಲ. ಅಂತಹವರನ್ನು ಆಯುವಾಗ ಅವರು ಕಂಡುದು ಕನ್ನಡ ತಾಯಿಯ ಅರ್ಚನೆಯನ್ನು ಶ್ರದ್ಧೆಯಿಂದ ಪರಿಶುದ್ಧವಾಗಿ ಪರಿಷ್ಕಾರವಾಗಿ ಧೀಮಂತಿಕೆಯಿಂದ ಮಾಡುವ ಏಕೈಕ ಗುಣವನ್ನು ಮಾತ್ರ ಅವರು ತಮ್ಮ ಸೂಕ್ಷ್ಮಮತಿಯ ಉಬ್ಬುಗನ್ನಡಿಯನ್ನು ಹಾಕುತ್ತ ಕಂಡರು; ಕನ್ನಡ ಸಾರಸ್ವತ ಲೋಕವನ್ನು ತುಂಬಿದರು; ದುಡಿಸಿದರು; ತಾವೂ ದುಡಿದರು.

ಕನ್ನಡದ ಉದ್ಧಾರಕ್ಕಾಗಿ ಹಿಂದಿನಿಂದ ದುಡಿದ ಹಿರಿಯ ತಪಸ್ವಿಗಳ ಸಾಲಿನಲ್ಲಿ ದೇಜಗೌ ಕೂಡ ಮೆರೆಯುತ್ತಾರೆ. ಕನ್ನಡವೆಂದರೆ ಸಾಕು, ದೇಜಗೌ ಉಬ್ಬಿಹೋಗುತ್ತಾರೆ; ಮೈಮರೆಯುತ್ತಾರೆ. ಅದರ ಒಂದು ಎಳೆಯಷ್ಟು ಬೆಳವಣಿಗೆ ಏರುವುದೆಂದಾದರೆ, ಅವರು ತಮ್ಮ ಸ್ವಾಭಿಮಾನವನ್ನು ಬೇಕಾದರೂ ಬದಿಗಿಟ್ಟು, ಆ ದಿವ್ಯಕೈಂಕರ್ಯದಲ್ಲಿ ತಲ್ಲೀನರಾಗುತ್ತಾರೆ. ಅವರು ಅಚ್ಚಗನ್ನಡದ ಗಂಗವಾಡಿಕಾರರ ಕುಲದವರು; ಅವರದು ಕನ್ನಡಾಂಬೆಯ ಗೋತ್ರ. ಅದರ ಪವಿತ್ರ ಸೂತ್ರಗಳೆಂದರೆ ಮನಸೇಂದ್ರಿಯಗಳನ್ನು ನಿಯಂತ್ರಿಸುವ ಅದರ ನರನಾಡಿಗಳೇ. ಅವರ ಉಸಿರಾಟದಲ್ಲಿ ಕನ್ನಡ ಮಂತ್ರಗಳ ಘೋಷ ಕೇಳಿಬರುತ್ತದೆ. ಇಂತಹ ಸಿದ್ಧಹಸ್ತರು ಎತ್ತಿಕೊಂಡ ಕನ್ನಡದ ಕೆಲಸ ತೇಜೋವಿರಾಜಿತವಾಗುತ್ತದೆ. ದೇಜಗೌ ಹೆಸರು ಕನ್ನಡ ಲೋಕದಲ್ಲಿ ಧ್ರುವತಾರೆಯಾಗಿ ನಿಲ್ಲುತ್ತದೆ.

ಇವರ ನಡೆ ನುಡಿಗಳಲ್ಲಿ ಅಗಾಧವಾದ ಒಂದು ಚುಂಬಕ ಶಕ್ತಿಯಿದೆ. ಪಾರಿಜಾತ ಸಂಪಗೆಗಳ ಸೊಗಸಾದ ಕಂಪು ದೂರದ ದುಂಬಿಗಳನ್ನು ಆಕರ್ಷಿಸುತ್ತದೆ. ಅಂತೆ ದೇಜಗೌ ವ್ಯಕ್ತಿಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತಾರೆ. ಅವರ ಮಾತು ಮಲ್ಲಿಗೆಯಂತೆಯೇ ಪರಿಮಳವನ್ನು ಬೀರುತ್ತದೆ. ಸರಿಯರ ಮನಸ್ಸನ್ನು ಹೃದಯವನ್ನು ಇವರು ಹೂವಿನ ಹೊಸದಲಗಳನ್ನು ಮುಟ್ಟುವ ಕೋಮಲತೆಯಿಂದ ಮುಟ್ಟುತ್ತಾರೆ; ತಟ್ಟಿ ಅವುಗಳ ನರುಗಂಪನ್ನು ಹೊರಹೊಮ್ಮಿಸುತ್ತಾರೆ. ಇದಲ್ಲವೆ ಜೀವನದ ಸಾರ ! ಇದಲ್ಲವೆ ಬದುಕಿನ ರಸಪಾಕ !

ಅವರ ಅಂತರಾಳದ ಈ ಮಧುರ ವೈಶಿಷ್ಟ್ಯವನ್ನು ನಾನು ನನ್ನ 'ಕೋಟೆಮನೆ' ಆತ್ಮ ಚರಿತೆಯಲ್ಲಿ ಒಂದೆರಡು ಸಂದರ್ಭಗಳಲ್ಲಿ ಕಂಡಂತೆ ಚಿತ್ರಿಸಿದ್ದೇನೆ. ಅವುಗಳಲ್ಲಿ ಅವರ ಹೃದಯ ವೈಶಾಲ್ಯ, ಔದಾರ್ಯ, ನಿಸ್ವಾರ್ಥಪ್ರೇಮ, ಗೆಳೆಯರ ಸುಖಸಂತೋಷಗಳಿಗಾಗಿ ನೆರವನ್ನು ನೀಡುವ ಅವರ ಆತ್ಮತೃಪ್ತಿಗಳು ಒಡಮೂಡುತ್ತದೆ.

ಈಗ ನೋಡೋಣ

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯೊಂದನ್ನು ರಾಮನಗರದ ಮಹಿಳಾ ಸಮಾಜದ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು. ನಾನು ಮೊದಲನೆಯ ದಿವಸದ ಕಾರ್ಯಕ್ರಮ ಆರಂಭವಾಗುವ ಹತ್ತು ನಿಮಿಷಗಳ ಮುಂಚೆಯೇ, ನಮ್ಮ ವಸತಿಗೃಹಗಳ ಎದುರಿಗೆ ಇದ್ದ ಆ ಸಭಾಭವನವನ್ನು ಹೊಕ್ಕೆನು. ಶುಭ್ರವಾದ ಕಚ್ಚೆ ಪಂಚೆಯನ್ನುಟ್ಟು, ಬಿಳಿಯ ಜುಬ್ಬವೊಂದನ್ನು ತೊಟ್ಟಿದ್ದ ಮಟ್ಟಸವಾದ ಆಕರ್ಷಕವಾದ ವ್ಯಕ್ತಿಯೊಬ್ಬರು ಬಾಗಿಲಿನಲ್ಲಿಯೇ ನಿಂತಿದ್ದು, ಆಜನ್ಮಮಿತ್ರನಂತೆ ನಕ್ಕು ' ಬನ್ನಿ, ಬನ್ನಿ ರಾಮರಾವ್ ' ಎಂದರು. ನಿಜವಾಗಿಯೂ ನನಗೆ ಸೋಜಿಗ ಎನಿಸಿತು. ನನಗೆ ಪರಿಚಯ ಇಲ್ಲದ ವ್ಯಕ್ತಿ ನನ್ನ ಹೆಸರನ್ನು ಹಿಡಿದು ಕರೆದು ಸ್ವಾಗತಿಸುತ್ತಿರುವಾಗ, ನಾನು ಏನೂ ತಿಳಿಯದ ಬೆಪ್ಪನಂತೆ ಆದೆನು. ನನಗೆ ಅವರು ತಿಳಿಯದವರೆಂದು ತೋರಿಸಿಕೊಳ್ಳಲು ಸಂಕೋಚವಾಯಿತು. ನಾನು ಪ್ರತಿ ನಮಸ್ಕಾರ ಮಾಡಿ, ಹೋಗಿ ವೇದಿಕೆಯ ಬಳಿ ಗೋಡೆ ಗೊರಗಿ ಕುಳಿತೆನು. ನನ್ನ ಪೇಚನ್ನು ತಮ್ಮ ಸೂಕ್ಷ್ಮಾವಲೋಕನದಿಂದ ಕಂಡುಕೊಂಡರು. ಅವರೇ ಮಾತನಾಡಿಸಿದರು.

" ನೀವು ಈಗ ಇಲ್ಲಿರುವ ವಿಷಯ ನನಗೆ ಗೊತ್ತು."

ನಾನು ಮತ್ತಷ್ಟು ಪೇಚಿಗೆ ಸಿಲುಕಿ ಹೋದೆನು. ಅದನ್ನೂ ಅವರು ಗಮನಿಸಿದರು, ಕೇಳಿದರು.

" ಏಕೆ ರಾಮರಾವ್ ? ನಾನು ಜವರೇಗೌಡ."

ಶ್ರೀ ದೇ. ಜವರೇಗೌಡರ ಒಂದೆರಡು ಪುಸ್ತಕಗಳನ್ನು ನಾನು ಈ ವೇಳೆಗೆ ಓದಿದ್ದೆನು. ಅವರ ಸೊಗಸಾದ ಕನ್ನಡ ಭಾಷೆಯನ್ನು ನಾನು ಮೆಚ್ಚಿಕೊಂಡಿದ್ದೆನು. ಅವರ ಹೆಸರನ್ನು ಇತ್ತೀಚೆಗೆ ಹಲವಾರು ಬಾರಿ ಕೇಳಿದ್ದೆನು. ರಾಮನಗರಕ್ಕೆ ಬಂದ ಮೇಲಂತೂ ಅವರ ಹೆಸರನ್ನು ಪದೇಪದೇ ಕೇಳುತ್ತಿದ್ದೆನು. ಚೆನ್ನಪಟ್ಟಣದ ಪಶ್ಚಿಮಕ್ಕೆ ನಾಲ್ಕೈದು ಮೈಲಿಗಳ ದೂರದಲ್ಲಿರುವ ಅವರ ಸ್ವಗ್ರಾಮ ಚಕ್ಕರೆಗೆ ನಾನು ಹೋಗಿರಲಿಲ್ಲವಾದರೂ, ಆ ಹಳ್ಳಿ ರಾಮನಗರದ ಆರೋಗ್ಯ ಶಿಕ್ಷಣ ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿದ್ದುದರಿಂದ ಆ ಊರ ಹೆಸರನ್ನು, ಅದರ ಅಂಕಿ-ಅಂಶಗಳನ್ನು ಕೂಡಿಸುವಾಗ, ವಿಶ್ಲೇಷಿಸುವಾಗ ನೋಡುತ್ತಿದ್ದೆನು. ಹಾಗೆ ನೋಡಿದಾಗ, ಕೇಳಿದಾಗ, ನನಗೆ ಜವರೇಗೌಡರ ನೆನಪು ಆಗುತ್ತಿದ್ದಿತು. ಹಾಗೆ ನೆನಪು ಆದಾಗಲೆಲ್ಲ, ಕನ್ನಡದ ದೀಕ್ಷೆಯನ್ನು ಹೊತ್ತ ನಮ್ಮ ಜಿಲ್ಲೆಯ ಸಾಹಿತಿಯೊಬ್ಬರೆಂಬ ಹೆಮ್ಮೆ ನನಗಾಗುತ್ತಿದ್ದಿತು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದ ನಿಘಂಟುವಿನ ಕೊಠಡಿಯಲ್ಲಿ ಒಮ್ಮೆ ಅವರನು ನೋಡಿದ್ದೆನು. ಹತ್ತು ವರುಷಗಳ ಹಿಂದೆ ಕಂಡಿದ್ದ ನೆನಪು ಮನಸ್ಸಿನ ಫಲಕದ ಮೇ

ಅಳಿಸಿಹೋಗಿತ್ತು. ಆದ್ದರಿಂದ ಅವರ ರೂಪ ನನ್ನ ಕಣ್ಣ ಮುಂದೆ ಸುಳಿಯುತ್ತಿರಲಿಲ್ಲ. ಈಗ ಅವರು ತಮ್ಮ ಹೆಸರನ್ನು ತಾವೇ ಹೇಳಿದ ಮೇಲೆ ನನ್ನ ಮಂಕು ಸ್ವಲ್ಪ ಸ್ವಲ್ಪವಾಗಿ ಕರಗತೊಡಗಿತು. ನಾನು ಕ್ಷಮೆಯನ್ನು ಕೇಳಿದೆನು :

" ಕ್ಷಮಿಸಬೇಕು ಸ್ವಾಮಿ, ನಾನು ನಿಮ್ಮನ್ನು ನೋಡಿರಲಿಲ್ಲ. ಇವೊತ್ತು ನೋಡಿದುದು ತುಂಬ ಸಂತೋಷ ಆಯಿತು."

"ಏಕೆ ನೋಡಿಲ್ಲ ರಾಮರಾವ್? ನಿಮ್ಮ ಪುಸ್ತಕ 'ಭೀಷ್ಮಸಂಕಲ್ಪ' ಅಚ್ಚಾಗುತ್ತಿದ್ದಾಗ, ವರದರಾಜರಾಯರನ್ನು ನೋಡಲು ಒಂದೆರಡು ಸಲ ಬಂದಿದ್ದಿರಿ. ನಾವು ಮಾತನಾಡಿಯೂ ಇದ್ದೇವೆ ."

ನನ್ನ ಮಂಕು ಈಗ ಪೂರ್ಣವಾಗಿ ಹರಿಯಿತು. ಹತ್ತು ವರುಷಗಳ ಹಿಂದೆ ಅವರು ಪರಿಷತ್ತಿನಲ್ಲಿ ಇದೇ ಪ್ರೇಮದಿಂದ ತಾವಾಗಿಯೇ ಮಾತನಾಡಿಸಿದ್ದ ನೆನಪಾಯಿತು. ನಾನು ಅಂದು ಅವರೊಡನೆ ಸರಿಯಾಗಿ ಮಾತನಾಡಿರಲಿಲ್ಲ. ಅವರು ಅದನ್ನು ಮನಸ್ಸಿನಲ್ಲಿಡದೆ ನನ್ನನ್ನು ಈಗ ಆಜನ್ಮ ಸ್ನೇಹಿತನಂತೆ ನಡೆಸಿಕೊಂಡಿದ್ದರು. ಇದರಿಂದ ನಾನೂ ಪಶ್ಚಾತ್ತಾಪದಿಂದ ಕರಗಿಹೋದೆನು. ನಾನು ಕ್ಷಮಾಯಾಚನೆಯನ್ನು ಮಾಡಿದೆನು:

"ನಿಜ. ನಿಜಸ್ವಾಮಿ, ನಾನು ಮರೆತಿದ್ದೆನು ಮನ್ನಿಸಬೇಕು."

ಎರಡೂ ಹೃದಯಗಳು ಒಂದಾದವು. ನಾನು ಮರೆತರೂ ತಾವು ಮರೆಯದೆ, ಕನ್ನಡಕ್ಕಾಗಿ ಕೆಲಸ ಮಾಡುವ ವ್ಯಕ್ತಿಯನ್ನು ಗುರುತಿಸಿಕೊಂಡು, ಆತನ ಅಭಿವೃದ್ಧಿಯನ್ನು ಗಮನಿಸುವ ಈ ಔದಾರ್ಯವನ್ನೆಷ್ಟು ದೊಡ್ಡದು ಎಂಬುದನ್ನು ನಾನು ಮರೆಯಲಾರೆ. ಸ್ವಲ್ಪ ಹೊತ್ತು ಮಾತನಾಡಿದ ಮೇಲೆ ಅವರು ಅಂದಿನ ಕಾರ್ಯಕ್ರಮದತ್ತ ಗಮನವನ್ನು ಕೊಟ್ಟರು. ಅವರು ಅಂದು ಆ ಪ್ರಚಾರೋಪನ್ಯಾಸಗಳ ಕಾರ್ಯದರ್ಶಿಗಳಾಗಿ ಅಲ್ಲಿಗೆ ಬಂದಿದ್ದರು ಎಂಬುದು ನನಗೆ ಆಗ ಗೊತ್ತಾಯಿತು. ಹೋಗುವಾಗ ಅವರು ನನ್ನನ್ನು ನೋಡಿ, ತಾವು ಇಳಿದುಕೊಂಡಿದ್ದ ಅರ್ಕಾವತೀ ನದಿಯ ದಂಡೆಯ ಮೇಲಣ ಅವರ ಸಂಬಂಧಿ ವಕೀಲರೊಬ್ಬರ ಮನೆಯ ಗುರುತನ್ನು ಹೇಳಿ "ಬನ್ನಿ, ವಿರಾಮವಾಗಿ ಮಾತನಾಡೋಣ" ಎಂದರು.

ಆ ಮರುದಿವಸ ರಾತ್ರಿ ಒಂಬತ್ತು ಗಂಟೆಯ ವೇಳೆಗೆ ನನ್ನ 'ಸವತಿ ಗಂಧವಾರಣೆ' ಹಸ್ತಪ್ರತಿಯೊಡನೆ ಹೋದೆನು. ಅವರು ಅದನ್ನು ನೋಡಿದರು; ತುಂಬ ಸಂತೋಷಪಟ್ಟರು. ಅದರ ಕೊನೆಯ ಪುಟಗಳನ್ನು ನೋಡಿ "ಇದು ಇನ್ನೂ ಮುಗಿದಂತೆ ಕಾಣುತ್ತಿಲ್ಲ" ಎಂದರು. ನಾನು "ಹೌದು, ಶಾಂತಲಾದೇವಿ ಶಿವಗಂಗೆಯಲ್ಲಿ ಮಡಿಯುತ್ತಾಳೆ. ನಾನು ಶಿವಗಂಗೆಯನ್ನು ನೋಡಿ ಬಂದ ಮೇಲೆ ಬರೆಯೋಣ ಎಂದಿದ್ದೇನೆ" ಎಂದೆನು.

ಅವರನ್ನು ನೋಡಿದರೆ ಸೆರೆ ಹಿಡಿಯುವಂತಹ ಆಕರ್ಷಕ ರೂಪ ಹೇಗೋ, ಹಾಗೆಯೇ ಹೃದಯದ ಸ್ನೇಹ ಸಜ್ಜನಿಕೆ ಮತ್ತು ಚೆಲುವಿಕೆಗಳೂ ಕೂಡ ಅಷ್ಟೇ ಮಧುರವಾದವುಗಳು ಎಂದು ನನಗೆ ಅನ್ನಿಸದೆ ಇರಲಿಲ್ಲ. ನನಗೆ ಸ್ನೇಹಿತರೇ ಇಲ್ಲವೆಂದು

ನನ್ನ ವಿರೋಧಿಗಳು ನನ್ನನ್ನು ಚುಚ್ಚಿ ಅಪಹಾಸ್ಯ ಮಾಡಿದುದು ಉಂಟು. ಆದರೆ ದೇಜಗೌರವರಂತಹ ಒಬ್ಬ ಮಿತ್ರರಿದ್ದರೂ ಸಾಕು. ಬಾಳು ಸಾರ್ಥಕ ಎಂದು ಅಂದುಕೊಂಡವನು ನಾನು. ನಮ್ಮ ಈ ಸಖ್ಯ ಹೆಚ್ಚು ನಿಕಟವಾಗಿ ಮತ್ತು ಗಾಢವಾಗಿ ಬೆಳೆಯಿತು. ಅದನ್ನು ಮುಂದೆ ಹೇಳುತ್ತೇನೆ.

ನನ್ನ ಒಂದು ಪುಸ್ತಕ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಿ. ಎ. ತರಗತಿಗೂ ಮತ್ತು ಅದೇ ಪುಸ್ತಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಟರ್ ಮೀಡಿಯಟ್ ತರಗತಿಗೂ ಪಠ್ಯಪುಸ್ತಕವನ್ನಾಗಿ ಅಂಗೀಕರಿಸಲಾಯಿತು. ಅವರೆಡಕ್ಕೂ ದೇಜಗೌರವರೇ ಕಾರಣ ಎಂಬುದು ನನಗೆ ತಿಳಿದಿತ್ತು.

ಧಾರವಾಡ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ವಿದ್ವಾಂಸರು ನನ್ನ ಒಂದು ಪುಸ್ತಕವನ್ನು ಹಿಡಿದೆತ್ತಿದುದರಿಂದ ನಾನು ತುಂಬ ಕೃತಜ್ಞತೆಯಿಂದ ತುಂಬಿಹೋಗಿದ್ದೆನು. ಅದನ್ನು ಆ ಮಹನೀಯರಿಗೆ ನಾನು ಅರ್ಪಿಸಬೇಕು. ಆದರೆ ನಾನು ಧಾರವಾಡಕ್ಕೆ ಹೋಗಲು ಆಗಲಿಲ್ಲ. ಮೈಸೂರಿಗೆ ಹೋದೆನು. ನಾನು ಮೊದಲು ಕಂಡುದು ಡಾ|| ದೇ.ಜವರೇಗೌಡರನ್ನು. ಮಾನಸಗಂಗೋತ್ರಿಯ ಹಳೆಯ ಸೌಧದ ಮಹಡಿಯ ಮೇಲೆ ಅವರು ತಮ್ಮ ಕೊಠಡಿಯಲ್ಲಿ ಇದ್ದರು. ನನ್ನನ್ನು ಕಂಡೊಡನೆ ಆಜನ್ಮಗೆಳೆಯನಂತೆ ಮಿದುಹಾಸದಿಂದ ಬರಮಾಡಿಕೊಂಡರು. ಅವರ ಸೌಜನ್ಯ ತಿಳಿಯಾದುದೂ ಮತ್ತು ನಿಷ್ಕಲ್ಮಷವೂ ಆದದ್ದು. ಆ ಕೆಳೆತನದ ಸವಿ. ಆತ್ಮೀಯವಾದ ಆ ನಯ ಮುಂತಾದವುಗಳು ಅವರಿಗೇ ವಿಶಿಷ್ಟವಾದವುಗಳು. ಅವರು ಕೇಳಿದರು:

"ನೀವು ಈಗ ಮಧುಗಿರಿಯಲ್ಲಿ ಇರುವಿರಂತೆ'?"

"ಹೌದು".

"ತುಂಬ ಸುಂದರವಾದ ಜಾಗಕ್ಕೆ ಹೋಗಿದ್ದೀರಿ. ಅದು ನಿಮ್ಮ ಲೇಖನ ವ್ಯವಸಾಯಕ್ಕೆ ಹೆಚ್ಚು ಸ್ಫೂರ್ತಿಯನ್ನು ಕೊಡುತ್ತಿರಬೇಕು. 'ತಲಕಾಡುಗೊಂಡ' ನಂತಹ ಹತ್ತಾರು ನಾಟಕಗಳನ್ನು ನಾನು ಅಲ್ಲಿ ನಿಮ್ಮಿಂದ ನಿರೀಕ್ಷಿಸುತ್ತೇನೆ"

"ಆದರೆ ಅಲ್ಲಿ ಮುನಿಸಿಪಾಲಿಟಿಯ ಕೆಲಸ ನನ್ನ ಬಹಳ ಸಮಯವನ್ನೇ ತೆಗೆದು ಕೊಂಡುಬಿಡುತ್ತದೆ. ಇಂತಹ ಕೆಲಸಕ್ಕೆ ಬಿಡುವು ಕಡಿಮೆ"

"ನಿಮ್ಮ ನಿಲುವು ಸರಿಯಾದುದು.-ನಮಗೆ ಅನ್ನವನ್ನು ಕೊಡುವ ವೃತ್ತಿಯನ್ನು ಕಡೆಗಣಿಸಬಾರದು. ಮೊದಲು ಅದು. ಆಮೇಲೆ ಇದು. ಕೇವಲ ಬರಹವನ್ನೇ ಅವಲಂಬಿಸಿ ಈ ದೇಶದಲ್ಲಿ ಜೀವನವನ್ನು ನಿರ್ವಹಿಸುತ್ತೇನೆ ಎಂಬುದು ಸಾಧ್ಯವಿಲ್ಲ. ಅದು ಬೇರೆಯ ರಾಷ್ಟ್ರಗಳಲ್ಲಿ ಸಾಧ್ಯ ಆಗಬಹುದು."

"ನಾನು ಈಗ ಬಂದದ್ದು-"

"ಏನು ಹೇಳಿ ?"

"ನನ್ನ ಒಂದು ನಾಟಕವನ್ನು ನೀವು ಪಠ್ಯಪುಸ್ತಕವನ್ನಾಗಿಸಲು ನೆರವು ನೀಡಿದಿರಿ. ಅದಕ್ಕೆ ನಾನು ತುಂಬ ಕೃತಜ್ಞನು. ಅದನ್ನು ತಮಗೆಲ್ಲರಿಗೂ ಅರ್ಪಿಸಿ ಹೋಗಲೆಂದು ಬಂದೆನು".

"ಅದಕ್ಕೆ ನಾನೊಬ್ಬನೇ ಅನ್ನುವುದೇನು ? ಸಮಿತಿಯ ಸದಸ್ಯರು ಒಪ್ಪಿದರು. ಆಯಿತು ಪುಸ್ತಕ ಚೆನ್ನಾಗಿದೆ. ನಮ್ಮ ಹುಡುಗರು ಅದನ್ನು ಅಭ್ಯಸಿಸಬೇಕು ಎಂಬುದು ಮಾತ್ರ ನನ್ನ ಆಶಯ. ಆದ್ದರಿಂದ ಅದಕ್ಕೆ ಬೇರೆ ಸದಸ್ಯರಿಂದ ಒಂದು ಅಡ್ಡಿಯ ಮಾತು ಬಂದಾಗ, ಅದನ್ನು ಪಕ್ಕಕ್ಕೆ ಸರಿಸಲು ನಾನು ಒಂದು ಮಾತನ್ನು ಹೆಚ್ಚಿಗೆ ಹೇಳಿರಬಹುದು."

"ಅದು ನನಗಾದ ಅನುಗ್ರಹ ಅಲ್ಲವೆ ?"

"ಅನುಗ್ರಹ ಎಂಬ ಮಾತು ತುಂಬ ದೊಡ್ಡದಾಯಿತು ರಾಮರಾಯರೆ. ಅದು ನನಗಲ್ಲ".

"ಇದರಲ್ಲಿ ನಾನು ಮಾಡಿದ್ದು ಏನಿದೆ ರಾಯರೇ ? ಸಹಾಯಹಸ್ತವನ್ನು ನೀಡಬಹುದಾದ ಶಕ್ತಿಯನ್ನು ದೇವರು ಕೊಟ್ಟಿರುವಾಗ, ಅರ್ಹರಿಗೆ ಅದನ್ನು ನೀಡುವ ಕರ್ತವ್ಯವೊಂದೇ ನನ್ನದು. ನಾನು ಮಾಡಲಿಲ್ಲ ಎನ್ನಿ. ಆಗ ನಾನು ಕರ್ತವ್ಯಚ್ಯುತನಾಗುತ್ತೇನೆ. ಅದಕ್ಕಿಂತ ಆತ್ಮವಂಚನೆ ಬೇರೆ ಏನುಂಟು ಹೇಳಿ?"

" ನನ್ನ ಪರಿಚಯ ನಿಮಗಿಲ್ಲ. ವೃತ್ತಿಬಾಂಧವ್ಯ ಎನ್ನೋಣವೆ ? ಅದು ಅಲ್ಲ. ಸ್ವಜನವೆ ? ಅದೂ ಅಲ್ಲ. ಒಂದೇ ಊರಿನವರಾಗಿದ್ದು ಹಳೆಯ ಗೆಳೆತನದವರೆ ? ಅದೂ ಅಲ್ಲ. ಒಂದೇ ಜಿಲ್ಲೆಗೆ ಸೇರಿದವರಿರಬಹುದು. ಆದರೆ ನಾನು ನಮ್ಮ ಜಿಲ್ಲೆಯ ಮೂಡಣದ ಕೊನೆಯವನಾದರೆ. ನೀವು ಪಡುವಣದ ಕೊನೆಯವರು. ಹೀಗೆ ಯಾವುದೇ ಸಂಪರ್ಕ ಇಲ್ಲದಿದ್ದರೂ ನನ್ನ ನೆರವಿಗೆ ನಿಂತಿರಲ್ಲ ? ಅದು ತುಂಬ ದೊಡ್ಡದು."

" ಲೇಖಕನ ವೃತ್ತಿಯಿಂದ ನೀವು ನನಗೆ ತುಂಬ ಹತ್ತಿರದವರಾದಿರಲ್ಲ ? ಅಷ್ಟು ಸಾಕು. ಈ ಕಟ್ಟು ಅದೆಲ್ಲಕ್ಕಿಂತಲೂ ಹೆಚ್ಚು ಭದ್ರತರವಾದುದು."

"ಅದು ನಿಮ್ಮ ಔದಾರ್ಯ ಆಯಿತು. ಹಿರಿಯರಾದ ತೀ. ನಂ. ಶ್ರೀಕಂಠಯ್ಯನವರನ್ನು ಕಂಡು ಅವರಿಗೆ ಹೇಳಿ ಬರುತ್ತೇನೆ."

"ಇಲ್ಲ ಅವರು ಈ ದಿವಸ ಬಂದಿಲ್ಲ. ಮನೆಯಲ್ಲಿಯೇ ಇರಬೇಕು."

"ಹಾಗಿದ್ದರೆ, ಅಲ್ಲಿಗೇ ಹೋಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ಬರುತ್ತೇನೆ".

"ಅವರನ್ನು ನಾನು ನೋಡಬೇಕಾಗಿದೆ. ಬನ್ನಿ ಹೋಗೋಣ."

ಇಬ್ಬರೂ ನಡೆದೇ ಕುಕ್ಕರಹಳ್ಳಿ ಕೆರೆಯ ಕೆಳಗೆ ಅದರ ಮೂಡಣ ಅಂಚಿನಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಿಗಾಗಿ ಇದ್ದ ಅವರ ನಿವಾಸಕ್ಕೆ ಹೋದೆವು. ಅಲ್ಲಿಂದ ಹೊರಕ್ಕೆ ಬಂದ ಮೇಲೆ ನಾನು ದೇಜಗೌ ಅವರಿಗೆ ಹೋಗಿ ಬರುತ್ತೇನೆ ಎಂದು ಹೇಳಿದೆನು. ಅವರು 'ಮನೆಗೆ ಬನ್ನಿ ಹೋಗೋಣ' ಎಂದರು. ಇಬ್ಬರೂ ಮಾತನಾಡುತ್ತ ಒಂಟಿ ಕೊಪ್ಪಲಿನ ಅವರ ಮನೆಗೆ ಹೋದೆವು. ಅವರು ನನಗೆ ಒಂದೆರಡು ಪುಸ್ತಕಗಳನ್ನು ಕೊಟ್ಟರು. ಸ್ವಲ್ಪ ಹೊತ್ತು ಮಾತನಾಡುತ್ತ ಕುಳಿತಿದ್ದು ಕಾಫಿಯನ್ನು ಕುಡಿದು, ಅವರಿಗೆ

ಹೇಳಿ ಬಂದೆನು. ದೇಜಗೌರವರ ಈ ಗೆಳೆತನ ಹೀಗೆ ಬೆಳೆದು ಬಂದಿತು. ಇದು ನಾನು ಸಂಪಾದಿಸಿರುವ ಪುಣ್ಯಗಳಲ್ಲಿ ಒಂದಾಗಿ ನಿಂತಿತು.

ನಾನು ಪಾಂಡವಪುರಕ್ಕೆ ಬಂದ ಮೇಲೆ ಒಮ್ಮೆ ಡಾ। ದೇಜಗೌರವರನ್ನು ಕಂಡಿದ್ದೆನು. ಕನ್ನಡದ ಮುನ್ನಡೆಗಾಗಿ, ಕನ್ನಡ ಗ್ರಂಥಕರ್ತರ ಹಿತಕ್ಕಾಗಿ ಅವರ ಹೃದಯ ಯಾವಾಗಲೂ ಹೇಗೆ ಕಾತರದಿಂದ ಕೂಡಿರುತ್ತಿತ್ತೆಂಬುದರ ಮೇಲೆ ಈ ಸನ್ನಿವೇಶ ತನ್ನ ಅಪ್ರತಿಮವಾದ ಬೆಳಕನ್ನು ಚೆಲ್ಲುತ್ತದೆ. ಮಾತಿನ ನಡುವೆ ಅವರೇ "ನೀವೇ ಪುಸ್ತಕಗಳನ್ನು ಅಚ್ಚು ಹಾಕಿಸುತ್ತಿರುವಿರಲ್ಲ ರಾಮರಾಯರೆ, ಮಾರಾಟಕ್ಕೆ ಏನು ಮಾಡಿದ್ದೀರಿ ?" ಎಂದರು. ನಾನು "ಪುಸ್ತಕದ ರಾಶಿಯನ್ನು ಮನೆಯಲ್ಲಿ ಒಟ್ಟಿಕೊಂಡಿದ್ದೇನೆ" ಎಂದೆನು. ಅವರು ಯಾವುದೋ ಒಂದು ದಿನವನ್ನು ಹೇಳಿ "ನೋಡಿ, ಆ ದಿವಸ ಯೂನಿವರ್ಸಿಟಿ ಸಿಂಡಿಕೇಟ್ ಸಭೆ ಸೇರುತ್ತದೆ. ವಿದ್ಯಾ ಇಲಾಖೆಯ ನಿರ್ದೇಶಕರು ಬರುತ್ತಾರೆ. ಅವರು ಮನಸ್ಸು ಮಾಡಿದರೆ ನಿಮಗೆ ಸಹಾಯ ಮಾಡಬಲ್ಲರು. ಅವರು ಎಲ್ಲಿ ಇಳಿದುಕೊಂಡಿರುತ್ತಾರೆ ಎಂಬುದನ್ನು ನಾನು ತಿಳಿದುಕೊಂಡಿರುತ್ತೇನೆ. ನೀವು ಬನ್ನಿ. ಅಲ್ಲಿಗೇ ಹೋಗಿ ನೋಡೋಣ" ಎಂದರು.

ನಾನು ಆ ದಿವಸ ವೇಳೆಗೆ ಸರಿಯಾಗಿ ಕ್ರಾಫರ್ಡ್ ಭವನಕ್ಕೆ ಪಾಂಡವಪುರದಿಂದ ಹೋದೆನು. ದೇಜಗೌ ಸಿಂಡಿಕೇಟ್ ಸಭೆಯನ್ನು ಮುಗಿಸಿಕೊಂಡ ತಕ್ಷಣ ಬಂದರು. ಅವರು ತಮ್ಮ ಕಾರ್ಯಗಳ ಒತ್ತಡದಲ್ಲಿಯೂ, ನಾನು ಹೊರಗೆ ಕಾದಿರುವುದನ್ನು ಮರೆತಿರಲಿಲ್ಲ. ಅವರು ಹೊರಕ್ಕೆ ಬಂದರು. ಯಾವುದೋ ಸಂದರ್ಶನಕ್ಕೆಂದು ಬಂದಿದ್ದ ಹಲವಾರು ಅಭ್ಯರ್ಥಿಗಳು ಅವರನ್ನು ಮುತ್ತಿದರು. ಅವರು ಎಲ್ಲರನ್ನೂ ನಗುನಗುತ್ತ ಅವರಿಗೆ ಅಸಂತುಷ್ಟಿ ಆಗದಂತೆ ಬೀಳ್ಕೊಟ್ಟರು. ನನ್ನನ್ನು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಂಡು ಆ ನಿರ್ದೇಶಕರು ಇಳಿದಿದ್ದ ಮನೆಗೆ ಕರೆದುಕೊಂಡು ಹೋದರು. ಅಲ್ಲಿನ ಯಾರೋ ಒಬ್ಬರು "ಕುಳಿತುಕೊಳ್ಳಿ ಬರುತ್ತಾರೆ" ಎಂದರು. ನಾವು ಇಬ್ಬರೂ ಮೊಗಸಾಲೆಯಲ್ಲಿ ಕುಳಿತೆವು. ಬಹಳ ಹೊತ್ತು ಕಾದೆವು. ಅವರು ಬರಲಿಲ್ಲ. ನನಗೆ ತುಂಬ ಮುಜಗರ ಆಯಿತು. ಅದು ನನಗಾಗಿ ಅಲ್ಲ; ನನಗಾಗಿ ಬಂದಿದ್ದ ದೇಜಗೌಗೆ ಅಪಚಾರವಾಯಿತಲ್ಲ ಎಂದು. ನನ್ನ ಅಸಹನೆ ಅವರಿಗೆ ತಿಳಿಯಿತು. ತಾಳ್ಮೆಯಿಂದ ನನ್ನನ್ನು ನೋಡಿ ನಕ್ಕರು. ಮತ್ತೆ ಕುಳಿತೇ ಕುಳಿತೆವು. ಎಷ್ಟೋ ಹೊತ್ತಿನ ಮೇಲೆ ಆ ಮನೆಯ ಮುಂಭಾಗದ ದೂರದ ಪೌಳಿಯ ಬಾಗಿಲಿನಲ್ಲಿ ಆ ಮಹನೀಯರು ನಿಂತರು; ಅಲ್ಲಿ ಆಟವಾಡುತ್ತಿದ್ದ ಮಕ್ಕಳೊಡನೆ ಮಾತನಾಡುತ್ತ ನಿಂತರು. ನಾವು ಕುಳಿತೇ ಇದ್ದೇವೆ. ಮತ್ತೆ ಬಹಳ ಹೊತ್ತಾದರೂ ಅವರು ಆ ಮಕ್ಕಳೊಡನೆ ಮಾತನಾಡುತ್ತಲೇ ನಿಂತರು. ನಾನು ಅಲ್ಲಿ ಓಡಿಯಾಡುತ್ತಿದ್ದಾತನನ್ನು ಕಂಡು "ಜವರೇಗೌಡರು ಕಾಯುತ್ತಿರುವ ಸಂಗತಿಯನ್ನು ನೀವು ಅವರಿಗೆ ಹೇಳಿದಿರಾ?" ಎಂದೆನು. ಆತನು "ಹೇಳಿದ್ದೇನೆ, ಇಲ್ಲಿಗೇ ಬರ್ತಾರೆ" ಎಂದನು. ನನಗೇನೋ ತುಂಬ ಬೇಸರ ಆಯಿತು. ದೇಜಗೌ ಮಾತ್ರ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳಲಿಲ್ಲ.

ಕಡೆಗೂ ಅವರು ಬಂದರು. ದೇಜಗೌ ಅವರಿಗೆ ನನ್ನ ಪರಿಚಯವನ್ನು ಸುದೀರ್ಘವಾಗಿ ಮಾಡಿಕೊಟ್ಟರು. "ಇವರಿಗೆ ನಿಮ್ಮ ಸಹಾಯ ಅಗತ್ಯವಾಗಿದೆ.

ಮಾಡಿಕೊಡಿ" ಎಂದರು. ಮುಂದೆ ಆತನು ಏನು ಹೇಳಿದನು, ನಾನು ಹೇಳಿದೆನು ಎಂಬುದು ಮುಖ್ಯವಲ್ಲ. ದೇಜಗೌ ಅವರ ಸಖ್ಯ ಏನೆಷ್ಟು ಸವಿಯಾದುದು, ಏನೆಂತಹ ಔದಾರ್ಯದಿಂದ ಕೂಡಿದುದು ಎಂಬುದು ಇಲ್ಲಿ ಮುಖ್ಯವಾದುದು. ನನ್ನಿಂದ ಅವರಿಗೆ ಆಗಬೇಕಾಗಿದ್ದುದಾದರೂ ಏನು? ನಾನು ವೃತ್ತಿಯಿಂದ ಒಬ್ಬ ಸಾಧಾರಣನಾದ ಆರೋಗ್ಯ ಪರೀಕ್ಷಕನು. ಅವರು ವಿಶ್ವವಿದ್ಯಾನಿಲಯದ ಒಂದು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು, ನಿರ್ದೇಶಕರು ಮತ್ತು ವಿದ್ವಾಂಸರು. ಅಂತಹವರು ತಾವಾಗಿಯೇ ಕೆಳಕ್ಕಿಳಿದು ಬಂದು, ನನ್ನನ್ನು ಎತ್ತಿ ಆದರದಿಂದ ತಮ್ಮ ಮಡಿಲಿಗೆ ಈ ಮಾನವೀಯ ದೃಷ್ಟಿ, ತಾಯ್ತನದ ಆ ದಿವ್ಯ ವಾತ್ಸಲ್ಯ, ಕೆಳೆತನದ ಪರಮೋಚ್ಚವಾದ ಆ ಸವಿ ಏನೆಷ್ಟು ಭವ್ಯವಾದುದು!

ನಾನು ಜಾತಿಯಿಂದ ಬ್ರಾಹ್ಮಣನು. ಅವರು ಒಕ್ಕಲಿಗರು. ಈ ಮಾತನ್ನು ನಾನು ಅವರು ಬ್ರಾಹ್ಮಣದ್ವೇಷಿ ಎಂದು ಅಪಪ್ರಚಾರ ಮಾಡಿದವರಿಗಾಗಿ ಹೇಳುತ್ತಿದ್ದೇನೆ. ನಾವು ಒಂದು ಊರಿನವರೆ? ಅಲ್ಲ. ಒಂದೇ ಜಿಲ್ಲೆಯವರಿರಬಹುದು. ಬೆಂಗಳೂರು ಜಿಲ್ಲೆಯ ಅವರ ಹಳ್ಳಿ ಮದ್ದೂರಿನ ಸಮೀಪದ ಪಡುವಣದ ಕೊನೆಯಾದರೆ, ನನ್ನದು ಹೊಸಕೋಟೆ ತಾಲ್ಲೂಕಿನ ಮೂಡಣದ ಕೊನೆ. ಅರವತ್ತು-ಎಪ್ಪತ್ತು ಮೈಲಿಗಳ ಅಂತರ. ಆದರೂ ನಮ್ಮಿಬ್ಬರನ್ನೂ ಬಂಧಿಸಿದ ಕೆಳೆತನದ ಈ ಮಾಳ್ಕೆ ಏನೆಷ್ಟು ಚೆನ್ನ! ಆದರೂ ದೇಜಗೌ ನನ್ನನ್ನು ಕನ್ನಡಕ್ಕೆ ಅಷ್ಟೋ ಇಷ್ಟೋ ಸೇವೆಯನ್ನು ಸಲ್ಲಿಸುವ ಒಬ್ಬ ಕಿಂಕರನೆಂದು ತುಂಬ ಸಮೀಪದಿಂದ ಕಂಡರು. ಕನ್ನಡಕ್ಕಾಗಿ ದುಡಿಯುವ ಇಂತಹ ಕ್ರಿಯಾಶೀಲ ಶಕ್ತಿಗಳನ್ನು ಗುರುತು ಹಿಡಿದು, ಎತ್ತಿ ತಂದಿರಿಸಿಕೊಂಡು, ತನ್ನ ಗೌರವ ಮರ್ಯಾದೆ ಅಂತಸ್ತುಗಳನ್ನು ಲೆಕ್ಕಿಸದೆ, ನೆಲದ ಮಟ್ಟಕ್ಕಿಳಿದು ಎಲ್ಲರೊಡನೆ ಒಂದಾಗಿ ಬಾಳುತ್ತಿರುವ ಒಂದು ಹಿರಿಯ ಚೇತನ ದೇಜಗೌ.

ಜಾತೀಯತೆಯ ಕಲಂಕದ ಬಣ್ಣವನ್ನು ಅವರಿಗೆ ಬಳಿದವರು ಅವರ ಈ ಹಿರಿಯ ಗುಣವನ್ನು ಮತ್ತು ಕಲ್ಯಾಣಕಾರಕ ಶಕ್ತಿಯನ್ನು ಮೆಚ್ಚಿಕೊಳ್ಳಬೇಕಾದುದನ್ನು ಮರೆಯಬಾರದು. ಅವರಿಂದ ಮಹೋಪಕಾರವನ್ನು ಪಡೆದು, ಅವರೆದುರು ಇಲಿಗಳಂತೆ ಓಡಿಯಾಡಿಕೊಂಡಿದ್ದು, ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯ ಅಧಿಕಾರದಿಂದ ಕೆಳಗಿಳಿದ ಮರುಚಣದಲ್ಲಿಯೇ ಕೃತಘ್ನತೆಯಿಂದ ಆಳ್ತಿನಿಯ ಹುಲಿಗಳಾದವರನ್ನು ನಾನೇ ಕಂಡಿದ್ದೇನೆ. ಈ ನೋವನ್ನು ಅವರು ನನ್ನೊಡನೆ ನಕ್ಕು ತೇಲಿಸಿದ್ದಾರೆ. ಅದು ದೇಜಗೌರವರ ದೊಡ್ಡ ಗುಣ ಆಯಿತು.

ಕನ್ನಡದ ಕೆಲಸವಾಗುವುದಾದರೆ, ದೇಜಗೌ ಬೆನ್ನಿನಲ್ಲಿ ಇರಿದ ಕ್ರೂರ ಶತ್ರುಗಳೊಡನೆಯಾದರೂ ಮೈತ್ರಿಯನ್ನು ಬೆಳೆಯಿಸಬಲ್ಲ ಹಿರಿತನವನ್ನು ತೋರಿಸಬಲ್ಲರು. ಆದರೆ ಹುಳು ತಿಂದ ಹೃದಯದ ಸಮಯಸಾಧಕರು ಅದನ್ನು ಅರಿಯಬೇಕಲ್ಲವೆ ? ಡಾ| ದೇ. ಜವರೇಗೌಡರ ಮಾನವೀಯತೆಯನ್ನು, ಬದುಕಿ ದೊರಕಿಸಿಕೊಂಡ ಉಚ್ಚ ಸಂಸ್ಕೃತಿಯನ್ನು ಕುರಿತ ನನ್ನ ಅನುಭವಗಳನೇಕವನ್ನು ನಾನು ನಿರವಿಸಬಲ್ಲೆ. ಈಗ ಇಷ್ಟು ಸಾಕು.

ಪ್ರೀತಿಯ ತಂದೆ

- ಡಾ. ಜೆ. ಶಶಿಧರ ಪ್ರಸಾದ್

ದೇಜಗೌ ಎಂಬ ಹೆಸರು ನಾಡಿನಲ್ಲೆಲ್ಲಾ ಗೊತ್ತಿರುವ ಹೆಸರು. ಕನ್ನಡ ನಾಡು-ನುಡಿಗಳಿಗೆ ಅಹರ್ನಿಶಿ ದುಡಿದು-ದುಡಿಯುತ್ತಿರುವ ಕನ್ನಡದ ಒಬ್ಬ ಅಗ್ರಗಣ್ಯ ಸೇನಾನಿ. ಕನ್ನಡದ ಒಬ್ಬ ಅತ್ಯಂತ ಸಮರ್ಥ ಗದ್ಯ ಸಾಹಿತಿ. ಹೆಸರಾಂತ ಭಾಷಾಂತರಕಾರ, ಅತ್ಯುತ್ತಮ ಜೀವನಚರಿತ್ರಕಾರ, ಜಾನಪದ ವಿದ್ವಾಂಸ ಹೀಗೆ ನಾನಾ ರೀತಿ ಸಾಹಿತಿಗಳಿಂದ -ಸಾಮಾನ್ಯ ಜನರವರೆಗೂ ಗುರುತಿಸಲ್ಪಟ್ಟಿದ್ದಾರೆ. ಆದರೆ ಇವರು ಕಲಾ, ರೇವು, ಚಂದ್ರು, ನನಗೆ ಪ್ರೀತಿಯ ಅಣ್ಣ, ಮೊಮ್ಮಕ್ಕಳಾದ ನರೇನ್, ಸತ್ಯೇನ್, ಅರವಿಂದ್, ಚೇತನಾರಿಗೆ ಮುದ್ದು ತಾತ. ಇದೀಗ ತಾನೆ ಐವತ್ತು ವರ್ಷಗಳ ಸುಂದರ ದಾಂಪತ್ಯ ಜೀವನವನ್ನು ನಡೆಸಿಕೊಂಡು ಬಂದಿರುವ ಪ್ರೀತಿಯ ಅಮ್ಮನ ಜೀವದ ಜೀವ.

ಅನ್ನವನ್ನು ಮನೆಯಲ್ಲಿ ಮಾಡಿದಾಗ ಹಬ್ಬವೋ ಎನ್ನುವಷ್ಟರ ಮಟ್ಟಿಗೆ ಕಡು ಬಡತನವಿದ್ದ ಮನೆಯಿಂದ ನನ್ನ ತಂದೆಯವರು ಬೆಳೆದು ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಯಾವ ಹಿತಕರ ವಾತಾವರಣವೂ ಇಲ್ಲದೇ, ಊರಿನ ಶ್ರೀಮಂತ ಕುಟುಂಬಗಳ ವಿರೋಧದೊಡನೆಯೂ ಇಷ್ಟು ಎತ್ತರಕ್ಕೆ ಬೆಳೆದು ಬಂದಿರುವುದು ಅದ್ಭುತವೇ ಸರಿ. ಇದೇನೂ ರಾತ್ರೋರಾತ್ರಿ ದಿಢೀರನೆ ನಡೆದದ್ದಲ್ಲ. ಹಗಲು ರಾತ್ರಿಯನ್ನದೇ, ಹಲವಾರು ರಾತ್ರಿಗಳನ್ನು ನಿದ್ದೆಗೆಟ್ಟು ಓದಿ - ಬರೆದು - ದುಡಿದು ಈ ಮಟ್ಟಕ್ಕೆ ಏರಿರುವುದನ್ನು ನಾನು ಸಣ್ಣ ಹುಡುಗನಾಗಿದ್ದ ಕಾಲದಿಂದಲೂ ಗಮನಿಸಿದ್ದೇನೆ. ಅವರನ್ನು ಯಾವ ದುರಭ್ಯಾಸಗಳು ಕಾಡಿಲ್ಲ. ನಮ್ಮ ಮನೆಯಲ್ಲಿ ಓದಲು ಹತ್ತಾರು ಮಂದಿ ಇದ್ದರು. ಊಟದ ಸಮಯದಲ್ಲಿ ಹಾಗು ನಂತರ ಸ್ವಲ್ಪ ಸಮಯ ಎಲ್ಲರೊಡನೆ ಇಂಗ್ಲೀಷ್ ಪದ ಜೋಡಣೆಮಾಡುತ್ತಾ, ಜೊತೆ ಜೊತೆಗೆ ವ್ಯಾಕರಣ ಹಾಗೂ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಾ ಕಾಲವನ್ನು ಕಳೆಯುವುದು ಅವರ ಹವ್ಯಾಸವಾಗಿತ್ತು. ಇನ್ನು ದಿನದ ಉಳಿದ ಭಾಗವನ್ನೆಲ್ಲಾ ಓದು - ಬರಹ - ಪಾಠ ಪ್ರವಚನಗಳ ತಯಾರಿಯಲ್ಲಿ ಕಳೆಯುತ್ತಿದ್ದರು. ತಮ್ಮ ಸಾಧನೆ ಹಾಗೂ ಶ್ರೀಗುರು ಕುವೆಂಪು ಅವರ ಆಶೀರ್ವಾದ ಶಕ್ತಿಗಳಿಂದ ಅವರು ಕುಲಪತಿಯ ಸ್ಥಾನವನ್ನು ಮುಟ್ಟಿದರು.

ಇತ್ತೀಚೆಗೆ ಕುಲಪತಿಯಾದವರು ಹೆಚ್ಚಿನ ಮಂದಿ ಭಾಷಣ - ಓಡಾಟಗಳಲ್ಲಿ ನಿರತರಾಗಿದ್ದುಕೊಂಡು, ಸಾಧನೆ ಏನೂ ಇಲ್ಲದಿದ್ದರೂ ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಾ ಬೆನ್ನು ತಟ್ಟಿಕೊಳ್ಳುವುದನ್ನು ಯಾರಾದರೂ ಗಮನಿಸಬಹುದು. ವಿಶ್ವವಿದ್ಯಾನಿಲಯದ ಭಾರವನ್ನೆಲ್ಲಾ ತಲೆಯ ಮೇಲೆ ಹೊತ್ತಂತೆ ಸಂದರ್ಶನಕ್ಕೆ ಬಂದ ಪ್ರಾಧ್ಯಾಪಕರನ್ನು ಕೂಡ

ಕಾಯಿಸುವ ಪರಿಯೇನು ! ಆದರೆ ನನ್ನ ಅಣ್ಣನವರು ಕುಲಪತಿಯಾಗಿದ್ದ ಸಮಯದಲ್ಲಿ ನಡೆದುಕೊಳ್ಳುತ್ತಿದ್ದ ರೀತಿ, ಕೆಲಸ ಮಾಡುತ್ತಿದ್ದ ಪರಿ ಯೋಚಿಸಿದರೆ ಆಶ್ಚರ್ಯವಾಗುತ್ತದೆ. ಮೈ ಜುಂ ಎನ್ನುತ್ತದೆ. ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟೊಂಬತ್ತು ಗಂಟೆಯವರೆಗೆ ವೇಳೆ - ಅವೇಳೆಯೆನ್ನದೆ ಯಾರು ಬೇಕಾದರೂ, ಯಾವ ಅಂತಸ್ತಿನವರಾದರೂ ಅವರನ್ನು ಸಂದರ್ಶಿಸಬಹುದಿತ್ತು.

ಅವರು ಸುಳ್ಳು ಆಶ್ವಾಸನೆಯನ್ನೆಂದೂ ನೀಡುತ್ತಿರಲಿಲ್ಲ. ಸಾಧ್ಯವಾದರೆ ಆಗುವುದೆಂದು ಇಲ್ಲದಿದ್ದರೆ ಇಲ್ಲವೆಂದು ಸ್ಪಷ್ಟಪಡಿಸುತ್ತಿದ್ದರು. ಪ್ರತಿದಿನ ತಪ್ಪದೇ ವಿಶ್ವವಿದ್ಯಾನಿಲಯದ ಆವರಣವಲ್ಲಿ ತೋಟಗಾರಿಕೆ-ಕಟ್ಟಡ ನಿರ್ಮಾಣಗಳಿಗೆ ಖುದ್ದಾಗಿ ಗಮನ ನೀಡುತ್ತಿದ್ದರು. ಆಫೀಸಿನಲ್ಲಿ ಕುಳಿತು ಶಾನುಭೋಗಿಕೆ ಮಾಡುತ್ತಿರಲಿಲ್ಲ. ಎಂಟ್ಹತ್ತು ಜಿಲ್ಲೆಗಳ ಎಲ್ಲಾ ವಿದ್ಯಾಭ್ಯಾಸ ಸಂಸ್ಥೆಗಳು ವಿಶ್ವವಿದ್ಯಾನಿಲಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದರೂ, ಈಗಿನಂತೆ ತಲೆಶಿರೋಭಾರವಾಗುವಷ್ಟು ಅಧಿಕಾರಗಳಿಲ್ಲದಿದ್ದರೂ ಯಾವ ಪ್ರಯಾಸವಿಲ್ಲದೆ ಸುಗಮವಾಗಿ ಆಡಳಿತವನ್ನು ನಡೆಸುತ್ತಿದ್ದರು. ಹೊಸ ಇಲಾಖೆಗಳ ಸೃಷ್ಟಿ, ಹೊಸ ಸ್ನಾತಕೋತ್ತರ ಕೇಂದ್ರಗಳ ಸ್ಥಾಪನೆ, ಧನಸಹಾಯ ಆಯೋಗದಿಂದ ಅನುದಾನದ ಸಂಗ್ರಹ-ಪ್ರತಿಯೊಂದನ್ನು ಲೀಲಾಜಾಲವಾಗಿ ಮಾಡುತ್ತಿದ್ದುದು ನೆನಪಿದೆ. ಇತ್ತೀಚಿನ ಮರಿ ವಿಶ್ವವಿದ್ಯಾನಿಲಯಗಳು ನಡೆಸಲ್ಪಡುತ್ತಿರುವ ರೀತಿಯನ್ನು ನೋಡಿದರೆ ಹಿಂದಿನ ಸ್ವರ್ಣಯುಗ ಮತ್ತೆ ಬರುವುದೇ ಎನ್ನಿಸುತ್ತದೆ. ಅವರು ಕುಲಪತಿಯಾಗಿದ್ದಾಗ ಎಲ್ಲರೂ ಒಟ್ಟಿಗೆ ಮನೆಯಲ್ಲಿ ಸೇರುವುದು ಕಷ್ಟವಾಗುತ್ತಿತ್ತು. ಆದರೂ ಅವರು ಊರಿನಲ್ಲಿದ್ದಾಗ ಸಾಧ್ಯವಾದಷ್ಟು ಮಟ್ಟಿಗೆ ಮನೆಯವರೆಲ್ಲ ಒಟ್ಟಿಗೆ ಊಟ ತಿಂಡಿಯ ವೇಳೆಯಲ್ಲಿ ಸೇರಲು ಪ್ರಯತ್ನಿಸುತ್ತಿದ್ದೆವು. ಆಡಳಿತ ಅವರ ಬರಹ ಓದಿಗೆ ಅಡಚಣೆ ಮಾಡಲಿಲ್ಲ. ರಾತ್ರಿಯ ವೇಳೆ ಕುಳಿತು ತಮ್ಮ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದರು. ಮೂರು ದಶಕಗಳಿಂದ ವಿಶ್ವವಿದ್ಯಾನಿಲಯಗಳ ಆಡಳಿತ ವೈಖರಿಯನ್ನು ಗಮನಿಸುತ್ತಾ ಬಂದಿರುವ ನನಗೆ ಕುಲಪತಿಯಾಗಿ ಅವರ ಸಾಧನೆಗಳನ್ನು ಯಾರಾದರೂ ಮೀರಿಸುವುದು ಅಸಾಧ್ಯವೆಂದೇ ನನ್ನ ಅನಿಸಿಕೆ.

ನಿವೃತ್ತಿ ಎಷ್ಟೋ ಜನ ಪ್ರಾಧ್ಯಾಪಕರನ್ನು ನೇರವಾಗಿ ಶ್ಮಶಾನಕ್ಕೆ ಕೊಂಡೊಯ್ದಿದೆ. ಸಾಹಿತ್ಯ, ವಿಜ್ಞಾನ, ಕಲೆ ಅಥವಾ ತಮ್ಮ ಅಧ್ಯಯನ ವಿಷಯವನ್ನು ಪ್ರವೃತ್ತಿಯಾಗುಳ್ಳ ಯಾವುದೇ ವ್ಯಕ್ತಿ ನಿವೃತ್ತಿಯಾಗುತ್ತಿದ್ದಂತೆ ಮಾನಸಿಕವಾಗಿ ಬಳಲುತ್ತಾನೆ, - ರೋಗಿಷ್ಠನಾಗುತ್ತಾನೆ. ಅಣ್ಣನವರಿಗೆ ನಿವೃತ್ತಿಯೇ ಇಲ್ಲ. ಕುಲಪತಿಯ ಸ್ಥಾನವನ್ನು ಬಿಟ್ಟಮೇಲೆ ಹೊಸ ಮಾರ್ಗವನ್ನು ತೋರಲೆಂದೇ ಪ್ರಾಧ್ಯಾಪಕರಾಗಿ ಇಲಾಖೆಗೆ ಹಿಂದಿರುಗಿದರು. ಆದರೆ ಕುಟಿಲ ಬುದ್ಧಿಯ, ಮಕ್ಕಳ ತೇರ್ಗಡೆಗೆ ಅಪ್ರಜ್ಞಾಪೂರ್ವಕವೋ ಎಂಬಂತೆ ಕುಟುಂಬದವರ ಮೂಲಕ ಪರೀಕ್ಷಕರ ಕೈ ಕಾಲು ಹಿಡಿಯುತ್ತಾ, ತಾನೇ ಅತ್ಯಂತ ಶಿಸ್ತಿನ ಸಿಪಾಯಿ ಎಂದು ಘೋಷಿಸಿಕೊಳ್ಳುತ್ತಾ, ಸಾತ್ವಿಕ ಪರದೆಯೊಳಗೆ ಕಾರ್ಕೋಟಕ ವಿಷವನ್ನುಳ್ಳ, ಸ್ಥಾನ, ಅಧಿಕಾರಗಳಿಂದ, ಶತಮಾನಗಳಿಂದ ಹೊಗಳುವಿಕೆಯನ್ನೇ ಕಸುವಾಗುಳ್ಳ ಕುನ್ನಿಗಳಿಗೆ ಆಮಿಷಗಳನ್ನೊಡ್ಡಿ ಸಜೀವ ಐತಿಹ್ಯವೆಂದು

ಹೊಗಳಿಸಿಕೊಳ್ಳುತ್ತಾ, ತನ್ನ ಏಳಿಗೆಗೆ ಅಂಗುಲಂಗುಲವೂ ಪಾತ್ರರಾಗಿರುವವರನ್ನು ಮರೆತು ಕೃತಘ್ನತೆಯ ಮೈವೆತ್ತಂತಿರುವ ದುಷ್ಟಬುದ್ಧಿಯ ದುರಹಂಕಾರಿ ವ್ಯಕ್ತಿಗಳ ನಡತೆಯಿಂದ ಬೇಸತ್ತು ಅವರು ಪೂರ್ಣಾವಧಿಯನ್ನು ಮುಗಿಸದೇ ನಿವೃತ್ತಿಯನ್ನು ಪಡೆದರು.

ನನ್ನ ತಂದೆಯವರು ನಾನು ಆತ್ಮಸಾಕ್ಷಿಯಾಗಿ ವಸ್ತುನಿಷ್ಠವಾಗಿ ಗಮನಿಸುತ್ತಾ ಬಂದಿರುವಂತೆ ತಮ್ಮ ಅಧಿಕಾರ ಬಲವನ್ನು ನೆಂಟರಿಷ್ಟರ ಮಕ್ಕಳಿಗಾಗಲೀ, ನನಗೆ ಹಾಗೂ ನನ್ನ ತಂಗಿಗಾಗಲಿ ಅಥವಾ ಇನ್ನಿತರ ಯಾರಿಗಾಗಲೀ ತೇರ್ಗಡೆ ಮಾಡಿಸಲಾಗಲೀ, ಕೆಲಸ ಕೊಡಿಸಲಾಗಲೀ ಬಳಸಿಲ್ಲ. ನಾನು-ನನ್ನತಂಗಿ ಏನು ಮಾಡುತ್ತಿದ್ದೇವೆ -ಏನು ಓದುತ್ತಿದ್ದೇವೆ ಎಂಬುದನ್ನು ಎಂದೂ ಕೇಳಿದವರಲ್ಲ. ನಮ್ಮ ಓದು ಚಟುವಟಿಕೆಗಳಲ್ಲಿ ಎಂದೂ ಮಧ್ಯೆ ಪ್ರವೇಶಿಸಿ ಹೀಗೇ ಮಾಡಬೇಕೆಂದು ಒತ್ತಾಯಿಸಿಲ್ಲ. ಯಾವ ಒತ್ತಾಯ -ಒತ್ತಡಕ್ಕೂ ಮಣಿಯದೇ ಪ್ರಾಮಾಣಿಕವಾಗಿ ನಡೆದುಕೊಂಡು ಬಂದಿದ್ದಾರೆ.

ಇಲಾಖೆಯಿಂದ ಬಿಡುಗಡೆ ಅವರ ಸೃಜನಾತ್ಮಕ ಶಕ್ತಿಗೆ - ಚಟುವಟಿಕೆಗೆ ಕುಂದನ್ನುಂಟು ಮಾಡಲಿಲ್ಲ. ಒಂದಿನಿತೂ ಅವರು ಅದರ ಬಗ್ಗೆ ಯೋಚನೆ ಮಾಡಲಿಲ್ಲ. ಇನ್ನೂ ಹೆಚ್ಚಿನ ಹುಮ್ಮಸ್ಸನ್ನು ಅವರ ಸೃಷ್ಟಿಕ್ರಿಯೆ ತುಂಬಿಕೊಂಡಿತು. ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಬೆಳವಣಿಗೆಯ ಕಡೆ ಹೆಚ್ಚಿನ ಗಮನ ನೀಡಿದರು. ಸ್ಥಳನಾಮ ಸಂಶೋಧನಾ ಪರಿಷತ್, ಹಿರಿಯ ನಾಗರಿಕ ಪರಿಷತ್ ಮುಂತಾಗಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು -ಸ್ಥಾಪಿಸಲು ನೆರವಾದರು. ಅವರ ಲೇಖಣಿ ಅದಮ್ಯ ಶಕ್ತಿಯನ್ನು ಪಡೆಯಿತು. ಮಹರ್ಷಿ ಟಾಲ್‌ಸ್ಟಾಯ್‌ನ ಮಹಾ ಕಾದಂಬರಿಗಳನ್ನು ಕನ್ನಡದ ಜನತೆಗೆ ಅನುವಾದಿಸಿಕೊಟ್ಟರು. ಲೇಖನದ ಮೇಲೆ ಲೇಖನಗಳು ಸೃಷ್ಟಿಗೊಂಡವು. ಈ ಮಧ್ಯೆ ಕನ್ನಡದ ಏಳಿಗೆಗೆ ದುಡಿದ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆದರ್ಶದಿಂದ ದುಡಿದು ಸಾಧನೆಯನ್ನು ಮಾಡಿದ ಮಹನೀಯರುಗಳ ಸನ್ಮಾನ ಸಮಾರಾಂಭಗಳನ್ನು ಮುಂಚೂಣಿಯಲ್ಲಿ ನಿಂತು ಏರ್ಪಡಿಸಿ ಸಮಾಜದ ಕೃತಜ್ಞತೆ ಸಲ್ಲುವಂತೆ ಮಾಡಿದರು. ಸಂಶೋಧನೆ, ಜೀವನ ಚರಿತ್ರೆ ಮುಂತಾಗಿ ಹಲವಾರು ಗ್ರಂಥಗಳನ್ನು ಹೊರತಂದರು. ಶ್ರೀ ಗುರು ಕುವೆಂಪು ಅವರ ಸಾಹಿತ್ಯ ಪ್ರಚಾರ,ಅವರ ಹೆಸರಿನ ಟ್ರಸ್ಟ್ ವತಿಯ ಶಾಲೆಗಳಿಂದ ಯಾವ ಸೌಕರ್ಯಗಳನ್ನು ಹೊಂದಿಲ್ಲದ ಹಿಂದುಳಿದ ಮಕ್ಕಳಿಗೆ ವಿದ್ಯಾಭ್ಯಾಸ ಮುಂತಾದ ಯೋಜನೆಗಳಿಗೆ ಹೆಚ್ಚಿನ ವೇಳೆಯನ್ನು ನೀಡುತ್ತಾ ಬಂದಿದ್ದಾರೆ. ಕನ್ನಡದ ಕೆಲಸಕ್ಕೆ ಯಾರು ಎಲ್ಲಿ ಕರೆದರೂ ಹೋಗುತ್ತಾರೆ. ಅದರಿಂದ ಚೈತನ್ಯ ಪಡೆಯುತ್ತಾರೆ.

ಇತ್ತೀಚೆಗೆ ಪ್ರೀತಿಯ ತಂಗಿ-ಚಂದ್ರು ಕಟ್ಟಿಸುತ್ತಿರುವ ಆಸ್ಪತ್ರೆಯ ಕೆಲಸವನ್ನು ಅಮ್ಮನೊಡನೆ ಕೂಡಿ ಕೆಲವು ಗಂಟೆ ಗಮನ ನೀಡುತ್ತಾರೆ. ಟ್ರಸ್ಟ್ ಕಟ್ಟಡದ ತಾರಸಿ, ಕಲಸುಮಣ್ಣು ಮುಂತಾದವನ್ನು ಮಾಡುವಾಗ ಛತ್ರಿ ಹಿಡಿದು ಬಿಸಿಲನ್ನು ಲೆಕ್ಕಿಸದೆ ಗಂಟೆಗಟ್ಟಲೆ ನಿಂತು ಗಮನಿಸುತ್ತಾರೆ.

ಅಣ್ಣನವರ ಆವಶ್ಯಕತೆಗಳು ಹೆಚ್ಚಿಲ್ಲ. ಅವರ ಕೃತಿಗಳ ಸಂಭಾವನೆಯ ಹಣ ಶ್ರೀಕುವೆಂಪು ಟ್ರಸ್ಟ್ ಹಾಗೂ ದೇಜಗೌ ಟ್ರಸ್ಟ್‌ಗೆ ಹಂಚಿಬಿಡುತ್ತಾರೆ. ಅಣ್ಣನವರು ಊಟ

ತಿಂಡಿಗಳನ್ನು ಮೆಚ್ಚಿ ಸಂತೋಷದಿಂದ ಊಟ ಮಾಡಿ ಆನಂದಿಸುತ್ತಾರೆ. ಅಣ್ಣನವರಂತೆ ಮೆಚ್ಚಿ ಊಟ ಮಾಡುವವರಿದ್ದರೆ ಅಡಿಗೆ ಮಾಡುವ ಕಾಯಕದ ಪ್ರಯಾಸ ಲಘುವಾಗುವುದೆಂದು ರೇಷ್ಮ ಹಲವೊಮ್ಮೆ ಹೇಳುವುದುಂಟು. ಇನ್ನು ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ವಿದೇಶದಿಂದ ತಂಗಿ, ಭಾವ ಮತ್ತು ಮುದ್ದುಮಕ್ಕಳು ಬಂದು ಒಂದೆರಡು ತಿಂಗಳು ಇದ್ದಾಗ ಅಣ್ಣನವರು ತಮ್ಮ ಕೆಲಸಕ್ಕೆ ಸ್ವಲ್ಪ ಮಿತಿಯನ್ನು ಹಾಕುತ್ತಾರೆ. ಆ ಸಮಯವನ್ನು ಮುದ್ದು ಮೊಮ್ಮಕ್ಕಳೊಡನೆ ನಲಿದು ಆನಂದಿಸುತ್ತಾರೆ. ಮಕ್ಕಳೊಡನೆ ಮಕ್ಕಳಂತೆ ಎಲ್ಲವನ್ನು ಮರೆತು ಚೇತನವನ್ನು ಗಳಿಸುತ್ತಾರೆ. ಎರಡು ತಿಂಗಳು ಎರಡು ಗಳಿಗೆಗಳಂತೆ ಕಳೆದು ಹೋಗುತ್ತದೆ.

ಮತ್ತೆ ಉಳಿದಂತೆ ಎಂದಿನ ದಿನಚರಿ. ದಿನಕ್ಕೆರಡು ಮೂರು ಬಾರಿ ಎಲ್ಲರೂ ಊಟ ತಿಂಡಿಗೆ ಒಟ್ಟಿಗೆ ಕುಳಿತು ಹಲವಾರು ವಿಷಯಗಳ ಮೇಲೆ ಚರ್ಚೆ, ಅವರವರು ಓದಿರುವ ವಿಚಾರಗಳ ಪರಾಮರ್ಶೆ ತಪ್ಪದೇ ನಡೆಯುತ್ತದೆ. ಈ ಮಧ್ಯೆ ಅಣ್ಣನವರು ಎಲ್ಲಾದರೂ ಪ್ರವಾಸ ಹೋಗಿ ಬಂದಿದ್ದರೆ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂತೆ ಪ್ರವಾಸದ ವಿವರ, ಸ್ವಾರಸ್ಯ, ಜನಗಳ ಭೇಟಿ-ಮಾತುಕತೆಗಳ ಬಗ್ಗೆ ವರ್ಣಿಸುತ್ತಾರೆ. ಅವರೊಡನೆ ಮಾತುಕತೆ-ಚರ್ಚೆಗಳನ್ನು ದೇಶವಿದೇಶಗಳಿಂದ ಬಂದ ನನ್ನ ಹಲವಾರು ಗೆಳೆಯರು ಮೆಚ್ಚಿ ಹೊಗಳಿದ್ದಾರೆ -ಆನಂದಿಸಿದ್ದಾರೆ. ಅಣ್ಣನವರು ಒಂದು ಕ್ಷಣವನ್ನು ಪೋಲು ಮಾಡದೇ ಸಾಹಿತ್ಯ ಕೃಷಿಯಲ್ಲಿ ನಿರತರಾಗಿರುತ್ತಾರೆ. ಅಣ್ಣನವರ ಪ್ರಕಾರ ನಿರಂತರ ಕಾಯಕವೇ ಜೀವ ಆಲಸ್ಯವೇ ಸಾವು.

* * * * *

ಗಂಗೋತ್ರಿ ಬೋಧಿವೃಕ್ಷದಡಿಯ ಜ್ಞಾನವೃದ್ಧ: ಬುದ್ಧ

- ಟಿ. ಗುರುರಾಜ್

ವಿಶ್ವಭೂಪಟದಲ್ಲಿ ಮೈಸೂರಿಗೆ ವಿಶಿಷ್ಟವಾದ ಸ್ಥಾನ. ಇದೊಂದು ಸಾಂಸ್ಕೃತಿಕ ಮಹಾದ್ವಾರ. ಇಲ್ಲಿನ ನೆಲ-ಜಲ, ಗಾಳಿ-ಬೆಳಕು, ಎಲ್ಲಕ್ಕೂ ಬೇರೆಲ್ಲೂ ಇಲ್ಲವಾದ ವಿಶೇಷತೆ. ಈ ಮಣ್ಣಿನಿಂದರಳಿದ ಹೂ, ಶ್ರೀಗಂಧಗಳ ಕಂಪಿಗಿಂತಲೂ ಮಿಗಿಲಾದುದು ಇಲ್ಲಿನ ಜ್ಞಾನದ ಪೆಂಪು. ಈ ನೆಲಕ್ಕೆ ಇಂಥ ನೆಲೆ ತಂದುಕೊಟ್ಟ ಮಹನೀಯರು ಹಲವರು. ಈ ಸಾಲಿನಲ್ಲಿ ಗುರುತಿಸಬಹುದಾದ ಒಂದು ವಿಶಿಷ್ಟ ವ್ಯಕ್ತಿತ್ವ ಡಾ. ದೇ. ಜವರೇಗೌಡರದು.

ಜವರೇಗೌಡರಿಗೀಗ ೭೭ರ ಹರೆಯ (ಜುಲೈ ೬, ೧೯೧೮) ಅವರನ್ನು ಕಂಡವರಿಗೆ ಈ ಮಾತು ಸುಳ್ಳೆನಿಸುತ್ತದೆ. ಗೌಡರ ಈಗಿನ ಹುರುಪು, ಉಲ್ಲಾಸ, ಲವಲವಿಕೆ, ಕ್ರಿಯಾಶೀಲತೆ ಇಂದಿನ ತರುಣರಲ್ಲಿ ಕಾಣಲೂ ಸಿಗದ ಅಪರೂಪದ ಸಂಗತಿಗಳು. ಸದಾ ಒಂದಿಲ್ಲೊಂದು ಚಟುವಟಿಕೆ, ಸಾಹಿತ್ಯ-ಸಂಸ್ಕೃತಿಗಳ ಸಂವರ್ಧನೆಯತ್ತ ಚಿಂತನೆ. ಆಡಿದ್ದನ್ನು, ಆಲೋಚಿಸಿದ್ದನ್ನು ಕೃತಿಗಿಳಿಸುವುದಕ್ಕೆ ಆದ್ಯತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟನ್ನು ಔನ್ನತ್ಯಕ್ಕೇರಿಸಬೇಕೆಂಬ ಅದಮ್ಯ ಬಯಕೆ ಇವೆಲ್ಲ ನಾವು ದೇಜಗೌರಲ್ಲಿ ನಿತ್ಯ ಕಾಣಬಹುದಾದ ಸಂಗತಿಗಳು. ಪ್ರೊ. ಎಚ್ಚೆಸ್ಕೆ ಹೇಳುವಂತೆ "ಗುಡಿಸಿಲಿನ ತಳದಿಂದ ಗಂಗೋತ್ರಿಯ ನೆತ್ತಿಗೇರಿದ" ನಮ್ಮ ನಡುವಿನ ಅಪರೂಪದ ವ್ಯಕ್ತಿ.

ಪುಣ್ಯಮಯಿ ತಾಯಿ ಚೆನ್ನಮ್ಮನವರ ತೌರು ಮುದಿಗೆರೆಯ ಆಡಿನ ಕೊಟ್ಟಿಗೆಯಲ್ಲಿ ಜವರೇಗೌಡರ ಜನನ. "ನನ್ನ ಬದುಕೇ ಒಂದು ಪವಾಡ" ಎನ್ನುವ ದೇಜಗೌ ಕಡುಬಡತನದ ನಡುವಿನಿಂದ ಬಂದು ಎತ್ತರಕ್ಕೇರಿದವರು.

ಬೆಂಗಳೂರು ಸಮೀಪದ ಚನ್ನಪಟ್ಟಣ ತಾಲ್ಲೂಕಿನ ಒಂದು ಕುಗ್ರಾಮ ಚಿಕ್ಕೆರೆ. ದಾರಿದ್ರ್ಯ, ಅಶುಚಿ, ಅವ್ಯವಸ್ಥೆಗಳ ತವರಿನಂತಿತ್ತು ಹಳ್ಳಿ. ಇಲ್ಲಿನ ಹಲವು ಅವಿದ್ಯಾವಂತ ಬಡಕುಟುಂಬಗಳಲ್ಲಿ ದೇವೇಗೌಡ, ಚೆನ್ನಮ್ಮ ದಂಪತಿಗಳದೂ ಒಂದು. ಇವರ ಎರಡನೆಯ ಮಗನಾಗಿ ಜನಿಸಿದವರು ಜವರೇಗೌಡರು.

ಬಡತನದ ಬೇಗೆಯಿಂದ ಕರುಳು ಹಿಂಡುವ ಪರಿಸರದಲ್ಲಿ ಬೆಳೆದ ಬಾಲಕ ಜವರೇಗೌಡರಿಗೆ ಆಡು ಕಾಯುವ ಕಾಯಕ. ತನ್ನ ಓರಗೆಯವರೆಲ್ಲ ಸ್ಲೇಟು, ಬಳಪ ಹಿಡಿದು ಕಲಿಯಲು ಹೋಗುತ್ತಿದ್ದುದನ್ನು ಕಾಣುತ್ತಿದ್ದ ಹುಡುಗನಿಗೆ ಮನದೊಳಗೆಲ್ಲ ತಳಮಳ. ತಾನೂ ಅವರಂತೆ ಶಾಲೆಗೆ ಹೋಗಿ ಕಲಿಯಬೇಕೆಂಬ ಹಂಬಲ. ಬದುಕುವುದಕ್ಕೇ ತ್ರಾಸ ಪಡುತ್ತಿದ್ದ ಮನೆಯ ದುಃಸ್ಥಿತಿಯಲ್ಲಿ ಓದು ತನ್ನ ಪಾಲಿಗೆ ಗಗನಕುಸುಮ ಎಂಬ ಅರಿವು ಬಾಲಕನಿಗೆ. ಆದರೆ ಇದೆಲ್ಲವನ್ನೂ ಮೀರಿದ ಅವನೊಳಗಿನ ತಹತಹ ಅವನನ್ನು ಓದಿನತ್ತ ಎಳೆದೊಯ್ಯುವಲ್ಲಿ ಸಫಲವಾಯಿತು.

ಒಮ್ಮೆ ಹೀಗಾಯಿತು-ಮೇಯಿಸುತ್ತಿದ್ದ ಆಡುಗಳನ್ನು ಇದ್ದಲ್ಲಿಯೇ ಬಿಟ್ಟ ಹುಡುಗ ಶಾಲೆಗೆ ಬಂದು ಪಾಠ ಕೇಳಲು ಕುಳಿತುಬಿಟ್ಟ. ಕಾಯುವವರಿಲ್ಲದ ಆಡುಗಳು ಸಿಕ್ಕ-ಸಿಕ್ಕ ಹೊಲಗಳಿಗೆಲ್ಲ ನುಗ್ಗಿ ದಾಂಧಲೆ ಎಬ್ಬಿಸಿದವು. ದೂರು ಹುಡುಗನಪ್ಪನವರೆಗೂ ಬಂತು. ಬೇಸರಗೊಂಡು ಸಿಟ್ಟಾದ ತಂದೆಯಿಂದ ಜವರೇಗೌಡರಿಗೆ ಶಾಲೆಯಲ್ಲಿ ಎಲ್ಲರೆದುರಿಗೇ ರಣ ಬಡಿತ. ಮುಖ್ಯೋಪಾಧ್ಯಾಯರಾಗಿದ್ದ ವೀರಣ್ಣಗೌಡರ ಮಧ್ಯ ಪ್ರವೇಶ. ಹುಡುಗನಿಗೆ ವಿದ್ಯಾಭ್ಯಾಸ ಕೊಡಿಸುವಂತೆ ತಂದೆಗೆ ತಿಳಿಹೇಳುವ ಯತ್ನ. ತಂದೆಯಿಂದ ಓದಿಸಲಾಗದ ಅಸಹಾಯಕತೆಯ ಮನವರಿಕೆ. ಹುಡುಗನ ಓದಿಗೆ ಮುಖ್ಯೋಪಾಧ್ಯಾಯರ ಸಹಕಾರ. ವೀರಣ್ಣಗೌಡರು ದೇಜಗೌ ಪಾಲಿನ ಬೆಳಕು. ಅವರ ಪ್ರೋತ್ಸಾಹದ ಹಾದಿಯಲ್ಲಿ ಮುಂದಡಿಯಿರಿಸಿದ ದೇಜಗೌ ಹಂತ-ಹಂತವಾಗಿ ಮೇಲೇರತೊಡಗಿದರು. ವೀರಣ್ಣಗೌಡರ ಮಾತು ಬಂದೊಡನೆ ಇಂದಿಗೂ ಜವರೇಗೌಡರ ಕಣ್ಣುಗಳು ಕೃತಜ್ಞತೆಯನ್ನು ಸ್ಫುರಿಸುತ್ತವೆ.

ಪ್ರೌಢಶಾಲಾ ವ್ಯಾಸಂಗದ ನಂತರ ಬೆಂಗಳೂರಿನಲ್ಲಿ ಇಂಟರ್ ಮೀಡಿಯಟ್‌ಗೆ ಸೇರ್ಪಡೆ. ಇದು ಇವರ ಪಾಲಿನ ಅಮೃತ ಘಳಿಗೆ. ಓದಿನೊಂದಿಗೆ ತೀವ್ರ ಒಡನಾಟ. ಗ್ರಂಥಾಲಯದ ನಿರಂತರ ಸಾನ್ನಿಧ್ಯ. ಗ್ರಂಥಾಲಯದಲ್ಲಿ ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ಕುವೆಂಪು ಬಗೆಗಿನ ಲೇಖನವನ್ನೋದಿದಾಗಿನಿಂದ ಅವರ ಬಗೆಗೆ ಸಾಧ್ಯ ಪ್ರೇಮ. ಹೃದಯದಲ್ಲಿ ಕವಿ ಪ್ರತಿಮೆಯ ಅನಾವರಣ. ಅಂದಿನಿಂದ ಇಂದಿನವರೆಗೂ ಅದಕ್ಕಲ್ಲಿ ಪೂಜನೀಯ ಸ್ಥಾನ.

ಕೆ. ವಿ. ಪುಟ್ಟಪ್ಪನವರಿಂದ ಪಾಠ ಕೇಳಬಹುದೆಂಬ ಏಕೈಕ ಕಾರಣದಿಂದಾಗಿ ಬಿ. ಎ. ಆನರ್ಸಿನಲ್ಲಿ ಕನ್ನಡದ ಆಯ್ಕೆ. ಟಿ. ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ. ಬಿ. ಎಂ. ಶ್ರೀ ಮೊದಲಾದ ದಿಗ್ಗಜಗಳ ಜ್ಞಾನವಾರಿಧಿಯಲ್ಲಿ ಮಿಂದೇಳುವ ಸದವಕಾಶ ದೇಜಗೌರ ಬದುಕಿಗೆ ಅರ್ಥಪೂರ್ಣ ನೆಲೆ-ಬೆಲೆ ತಂದುಕೊಟ್ಟ ದಿನಗಳವು.

ಬಿ. ಎ. ನಂತರ ವಿದ್ಯಾ ಇಲಾಖೆಯಲ್ಲಿ ಗುಮಾಸ್ತಗಿರಿ. ಆ ಕಾರ್ಯ ವೈಖರಿಯ ಬಗೆಗೆ ಜುಗುಪ್ಸೆ. ಓದು ಮುಂದುವರೆಸುವ ಹಂಬಲ. ಎಂ.,ಎ. ಪದವಿಯ ಗಳಿಕೆ. ಮತ್ತೆ ನೌಕರಿಯ ಚಿಂತೆ. ಉಪನ್ಯಾಸಕ ಹುದ್ದೆಗೆ ತೆಕ್ಕೆ. ಪಾಠಪ್ರವಚನಗಳ ನಡು-ನಡುವೆ ಓದು-ಬರಹ. 'ಪುಸ್ತಕ ಪ್ರಪಂಚ'ದಲ್ಲಿ ಸತ್ವಶಾಲಿ ಸಾಹಿತಿಗಳ ಬಗೆಗೆ ಲೇಖನಗಳ ಪ್ರಕಟಣೆ. ವಿನೂತನ ಶೈಲಿ, ಸರಳ ಭಾಷಾ ಪ್ರಯೋಗ ಮತ್ತದರ ಮೇಲಿನ ಅದ್ಭುತ ಹಿಡಿತ. ಇವುಗಳಿಂದಾಗಿ ದೇಜಗೌ ಬರಹಗಳ ಬಗೆಗೆ ಮೆಚ್ಚುಗೆಯ ಹೂಮಳೆ.

ಕನ್ನಡವೆಂದರೆ ಉಪೇಕ್ಷೆಯಿದ್ದ ಕಾಲ. ಕನ್ನಡತನಕ್ಕೆ ಬೆಲೆಯಿಲ್ಲದ ಪರಿಸ್ಥಿತಿ. ಇಂಥ ದುಃಸ್ಥಿತಿಯಲ್ಲಿ ಕನ್ನಡ ಉಳಿಸುವ, ಬೆಳೆಸುವ ಕಾತುರ ಹೊತ್ತವರು ದೇಜಗೌ. ಕನ್ನಡ ಗದ್ಯಸಾಹಿತ್ಯದ ಶಕ್ತ ಲೇಖಕರಲ್ಲೊಬ್ಬರಾದ ದೇಜಗೌರ ಸಾಹಿತ್ಯ ಬಹುಮುಖಿ ಯಾದುದು. ಶಾಸ್ತ್ರ ಸಾಹಿತ್ಯ, ಜಾನಪದ, ಆತ್ಮಕಥನ (ಹೋರಾಟದ ಬದುಕು-ಎರಡು ಸಂಪುಟಗಳು) ಪ್ರವಾಸ ಸಾಹಿತ್ಯ, ಶಿಶು ಸಾಹಿತ್ಯ, ಜೀವನ ಚರಿತ್ರೆಗಳು, ಭಾಷಾಂತರ, ಐತಿಹಾಸಿಕ, ಪ್ರಬಂಧ ಸಾಹಿತ್ಯ, ಕುವೆಂಪು ಸಾಹಿತ್ಯಾಧ್ಯಯನಗಳು, ಮುನ್ನುಡಿಗಳು,

ಉಪನ್ಯಾಸಗಳು, ಸಂಪಾದನೆಗಳು, ವಿಮರ್ಶಾ ಬರಹಗಳು ಮೊದಲಾದ ನೂರಕ್ಕೂ ಹೆಚ್ಚಿನ ಕೃತಿಗಳ ಪ್ರಕಟಣೆ. ಎರಡು ಅಂಶಗಳಲ್ಲಿ ದೇಜಗೌ ಭಿನ್ನರಾಗಿ, ವಿಶಿಷ್ಟರಾಗಿ ನಿಲ್ಲುತ್ತಾರೆ. ಒಂದು ತಮ್ಮ ಅತ್ಯದ್ಭುತ ಗದ್ಯಶೈಲಿಯಿಂದಾಗಿ, ಮತ್ತೊಂದು ಭಾಷಾಂತರದಲ್ಲಿ ಅವರು ನಡೆಸಿರುವ ಗಣನೀಯ ಸೇವೆ (ಕನ್ನಡಿಸಿದ ಕೀರ್ತಿ ಇವರದು).

ದೇಜಗೌ ಶ್ರೇಷ್ಠ ಸಾಹಿತಿ ಮಾತ್ರವಲ್ಲ; ಶ್ರೇಷ್ಠ ಆಡಳಿತಗಾರರೂ ಹೌದು. ಗಮಾಸ್ತಗಿರಿಯಿಂದ ಆರಂಭಗೊಂಡ ಅವರ ವೃತ್ತಿಜೀವನ ಉಪನ್ಯಾಸಕ, ಪ್ರಾಧ್ಯಾಪಕ, ಪ್ರಾಂಶುಪಾಲ, ವಿಭಾಗದ ಮುಖ್ಯಸ್ಥ, ನಿರ್ದೇಶಕ, 'ಕನ್ನಡ ನಿಘಂಟು' ಸಮಿತಿಯ ಉಪಾಧ್ಯಕ್ಷ ಸ್ಥಾನ, 'ಜ್ಞಾನ ಗಂಗೋತ್ರಿ' ಸಂಪಾದಕ ಸಮಿತಿಯ ಅಧ್ಯಕ್ಷ ಮೊದಲಾದ ಹಾದಿಗಳಲ್ಲಿ ಸಾಗಿ ಕೊನೆಗೆ ಮೈಸೂರು ವಿಶ್ವವಿದ್ಯಾನಿಲಯದ ಅತ್ಯುನ್ನತ ಪದವಿಯಾದ ಕುಲಪತಿಯ ಸ್ಥಾನವನ್ನೂ ಗಳಿಸಿಕೊಂಡಿತು.

ತಮ್ಮ ಸ್ವಂತ ಮನೆಯನ್ನೇ ಕುವೆಂಪು ಟ್ರಸ್ಟಿಗೆ ಧಾರೆ ಎರೆದಿರುವ ದೇಜಗೌ ತಮ್ಮ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನಡಿಯಲ್ಲಿ ಹೊಸಹೊಸ ಸಂಶೋಧನೆಗಳಿಗೆ ಅನುವು ಮಾಡಿಕೊಡುತ್ತಿದ್ದಾರೆ. ತಮ್ಮ ಬರವಣಿಗೆ ಹಾಗೂ ಗ್ರಂಥಗಳಿಂದ ಬರುವ ಗೌರವ ಧನದಿಂದ ದತ್ತಿನಿಧಿಯನ್ನು ಸ್ಥಾಪಿಸಿ ದೇಜಗೌ ಟ್ರಸ್ಟ್ ಮುಖಾಂತರ ಸಂಶೋಧನೆ, ಸೃಜನಶೀಲ ಕೆಲಸಗಳಿಗೆ ಪ್ರೋತ್ಸಾಹ ನೀಡುತ್ತಲಿದ್ದಾರೆ.

ಇವರಿಗೆ ಸಂದ ಮಾನ-ಸಂಮಾನಗಳು ಹಲವು. ಸೋವಿಯತ್ ಲ್ಯಾಂಡ್ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಮೊದಲಾದುವು ಇವರ ಬಳಿ ಬಂದು ತಮ್ಮನ್ನು ತಾವೇ ಗೌರವಿಸಿಕೊಂಡಿವೆ.

ಮಡದಿ, ಮಕ್ಕಳುಮೊಮ್ಮೊಕ್ಕಳೊಂದಿಗೆ ಸುಖೀ ಜೀವನ ನಡೆಸುತ್ತಿರುವ ದೇಜಗೌ ತಮ್ಮ ವಿಶ್ರಾಂತ ದಿನಗಳಲ್ಲಿಯೂ ಸದಾ ಒಂದಿಲ್ಲೊಂದು ಚಟುವಟಿಕೆಗಳನ್ನು ಹೆಗಲಲ್ಲಿರಿಸಿಕೊಂಡ ಕ್ರಿಯಾತ್ಮಕ ವ್ಯಕ್ತಿ.

ಕುವೆಂಪು ಸಾಹಿತ್ಯ ಪ್ರಸಾರವನ್ನು ಜೀವನದುಸಿರಾಗಿಸಿಕೊಂಡಿರುವ ಜವರೇಗೌಡರು ಪ್ರಸ್ತುತ ಕರ್ನಾಟಕ ಸರ್ಕಾರದ ಕುವೆಂಪು ಪ್ರತಿಷ್ಠಾನದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಲಿದ್ದಾರೆ.

ಈ ಹರೆಯದಲ್ಲೂ ಉತ್ಸಾಹದ ಚಿಲುಮೆಯಾಗಿರುವ ಡಾ. ದೇ ಜವರೇಗೌಡರ ಚೇತನ ಹೆಚ್ಚಿನ ಬೆಳಕು ಹೊಮ್ಮಿಸಲಿ ಎಂಬ ಹಾರೈಕೆ ಎಲ್ಲ ಕನ್ನಡಿಗರದು.

* * * * *

ನೆನಪಿನಂಗಳದಲ್ಲಿ

-ಪ್ರೊ. ಕೆ.ಎಸ್. ಭಗವಾನ್

' ಸಂಜೆ ಸಮಾಚಾರ' ದೈನಿಕೆಯ ಸಂಪಾದಕರ ಪರವಾಗಿ ಡಾ. ದೇಜಗೌ ಅವರನ್ನು ಸಂದರ್ಶಿಸಲು ಹೋದಾಗ ಇಳಿ ಹೊತ್ತಾಗಿತ್ತು. ಅವರು ' ವಿಶ್ವಚೇತನ ಕಲಾನಿಲಯ' ದ ಮೊಗಸಾಲೆಯಲ್ಲಿ ಆಸೀನರಾಗಿದ್ದು ನಗುಮೊಗದಿಂದ ಸ್ವಾಗತಿಸಿದರು. ಅತಿಥಿ ಸತ್ಕಾರಕ್ಕೆ ದೇಜಗೌ ದಂಪತಿಗಳು ಹೆಸರಾದವರು.

ತೆಂಗು, ಅಶೋಕ ಗಿಡಗಳು ಮುಂತಾದವುಗಳಿಂದ ಹಸುರನ್ನು ಧರಿಸಿರುವಂತಿದೆ ಅವರ 'ವಿಶ್ವಚೇತನ' ಪರ್ಣಕುಟಿ. ಇಲ್ಲಿ ಅವರ ಸಾರಸ್ವತ ತಪಸ್ಸು ನಿರಾತಂಕವಾಗಿ ಸಾಗುತ್ತಿದೆ. ಎಪ್ಪತ್ತು ಸಂವತ್ಸರಗಳನ್ನು ದಾಟಿರುವ ಅವರು ಬೆಳಗಿನಿಂದ ಸಂಜೆಯವರೆಗೆ ಓದು ಬರಹ ಮಾಡುವುದನ್ನು ನೋಡಿದರೆ ಯುವಜನತೆ ಅವರಿಂದ ಕಲಿಯುವುದು ಬಹಳವಿದೆ ಎನಿಸುತ್ತದೆ.

ಸೃಜನಶೀಲ ಸಾಹಿತ್ಯದಲ್ಲಿ ಉನ್ನತ ಶಿಖರವನ್ನು ಶ್ರೀ ಕುವೆಂಪು ಸಾಧಿಸಿದ್ದರೆ ಅಂಥದೇ ಉನ್ನತ ಸಾಧನೆಯನ್ನು ಅವರ ಪ್ರೀತಿಯ ಶಿಷ್ಯರಲ್ಲೊಬ್ಬರಾದ ಡಾ. ದೇಜಗೌ ಅನುವಾದ ಸಾಹಿತ್ಯದಲ್ಲಿ ಸಾಧಿಸಿದ್ದಾರೆ. ಅವರು ಮಾಡಿರುವ ರಷ್ಯಾದ ದೈತ್ಯಸಾಹಿತಿ ಲಿಯೋಟಾಲ್‌ಸ್ಟಾಯ್‌ನ ಮೂರು ಮಹಾನ್ ಕಾದಂಬರಿಗಳ ಶ್ರೇಷ್ಠ ಅನುವಾದ ಅವರನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಅಮರರನ್ನಾಗಿ ಮಾಡಿಬಿಟ್ಟಿವೆ. ಈ ಅನುಸೃಷ್ಟಿಗೊಂಡ ಅನುವಾದಗಳಿಂದ ಕನ್ನಡ ಭಾಷಾ ಸಾಹಿತ್ಯಗಳು ತುಂಬಾ ಶ್ರೀಮಂತವಾಗಿವೆ ಎಂದರೆ ಅದು ಹೊಗಳಿಕೆಯಾಗುವುದಿಲ್ಲ. ಉತ್ತಮ ಆಡಳಿತಗಾರರಾದ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಆರು ವರ್ಷಗಳಲ್ಲಿ ಮಾಡಿದ ಕೆಲಸ ಅರವತ್ತು ವರ್ಷಗಳಲ್ಲಿ ಸಾಧಿಸಿದ ಕಾರ್ಯಧಂತೆ ಕಾಣುತ್ತದೆ ಸೋಲುತ್ತದೆ.

ಡಾ. ದೇಜಗೌ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ೪೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅದೇ ನಾನು ನೋಡಿದ ಮೊಟ್ಟಮೊದಲ ಸಾಹಿತ್ಯ ಸಮ್ಮೇಳನ. ದಿವಂಗತ ಅ. ನ. ಕೃಷ್ಣರಾಯರು "ಇದುವರೆಗೆ ನಡೆದ ಸಮ್ಮೇಳನಗಳು ಸಾಹಿತ್ಯ ಸಮ್ಮೇಳನಗಳೇ ಅಲ್ಲ. ಇದು ನಿಜವಾಗಿಯೂ ಸಾಹಿತಿಗಳನ್ನು ಒಳಗೊಂಡ ಸಮ್ಮೇಳನ. ಕೇವಲ ಚಾಮರಾಜಪೇಟೆಗೆ ಸೀಮಿತವಾಗಿದ್ದ ಕನ್ನಡ ಸಾಹಿತ್ಯಪರಿಷತ್ತನ್ನು ಅಖಿಲ ಕರ್ನಾಟಕ ಮಟ್ಟದವರೆಗೆ ಬೆಳಸಿದ್ದು ಶ್ರೀ ಜಿ ನಾರಾಯಣರ ಹಿರಿಮೆ" ಎಂದು ಆಡಿದ ಮಾತುಗಳು ಇನ್ನೂ ನನ್ನ ನೆನಪಿನಲ್ಲಿ ನಿನದಿಸುತ್ತಿವೆ.

ಸುಮಾರು ಅರ್ಧ ಶತಮಾನದಿಂದ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸುತ್ತ ಬಂದಿರುವ ಹಿರಿಯ ಜೀವ ದೇಜಗೌ ಅವರನ್ನು ಕಂಡು ಸಮ್ಮೇಳನಗಳ ಬಗ್ಗೆ ಅವರ ಅನಿಸಿಕೆಗಳನ್ನು ತಿಳಿಯುವ ಬಯಕೆಯನ್ನು "ಸಂಜೆ ಸಮಾಚಾರ" ವ್ಯಕ್ತ ಪಡಿಸಿದರು.

ಸಂ. ಸ : ಕಳೆದ ವರ್ಷ ಬೆಂಗಳೂರಿನಲ್ಲಿ ಜಾಗೃತ ಸಮ್ಮೇಳನವನ್ನು ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಪರ್ಯಾಯವಾಗಿ ನಡೆಸಲಾಯಿತು. ಆ ಬಗ್ಗೆ ನಿಮ್ಮ ಅನಿಸಿಕೆಗಳೇನು?

ದೇಜಗೌ : ಧಾರವಾಡ ಸಮ್ಮೇಳನ ನಾನು ನೋಡಿದ ಸಮ್ಮೇಳನಗಳಲ್ಲೆಲ್ಲ ತುಂಬ ಸ್ಮರಣೀಯವಾಗಿದೆ. ಅದರ ಸಮ್ಮೇಳನಾಧ್ಯಕ್ಷರು ಶ್ರೀ ಕುವೆಂಪು ಅವರು. ಅವರನ್ನು ನೋಡಲೆಂದೇ ಜನರು ಹಳ್ಳಿ ಹಳ್ಳಿಗಳಿಂದ ಗಾಡಿಗಳನ್ನು ಕಟ್ಟಿಕೊಂಡು ಬಂದಿದ್ದರು. ಎಲ್ಲಿ ನೋಡಿದರೂ ಎತ್ತಿನ ಬಂಡಿಗಳ ಸಾಲು ಸಾಲು. ಭಾರೀ ಸಂಖ್ಯೆಯಲ್ಲಿ ನಾಗರಿಕರು ಬಂದಿದ್ದರು; ಆದರೆ ಜನಸಾಮಾನ್ಯರರು ಹಳ್ಳಿಗಾಡಿನ ಜನ ಸೇರಿದ್ದು ಅದರ ವಿಶೇಷತೆ. ಅದು ನಾನು ಕಂಡ ಹಾಗೆ ಅಭೂತಪೂರ್ವ ಸಮ್ಮೇಳನ. ಕುವೆಂಪು ಕಂಪು ಕನ್ನಡ ನಾಡಿನಲ್ಲಿ ಅಷ್ಟು ದಟ್ಟವಾಗಿ ಆಗಲೇ ಹಬ್ಬಿತ್ತು.

ಡಾ. ದೇಜಗೌ : ಯಾರಾದರೂ ಸ್ವತಂತ್ರವಾಗಿ ಸಮ್ಮೇಳನ ಮಾಡ್ತೀವಿ ಅಂದರೆ ಅದೇನೂ ತಪ್ಪಲ್ಲ. ಆದರೆ ಪರಿಷತ್ತಿನ ಸಮ್ಮೇಳನಕ್ಕೆ ಸಮಾನಾಂತರವಾಗಿ ಮಾಡೋದು ಸಮಂಜಸವಲ್ಲ.

ಪರಿಷತ್ತು, ಸಮ್ಮೇಳನ ಇವುಗಳೆಲ್ಲ ದೇವಸ್ಥಾನವಿದ್ದ ಹಾಗೆ. ಇಷ್ಟವಿದ್ದರೆ ಹೋಗಬಹುದು, ಇಲ್ಲದಿದ್ದರೆ ಬಿಡಬಹುದು. ಎಲ್ಲರೂ ಗಾಜಿನ ಮನೆಯಲ್ಲಿ ಇರುವವರೇ ಎಂಬುದನ್ನು ಮರೆಯಬಾರದು.

ಸಂ. ಸ : ಇದುವರೆಗೆ ನಡೆದಿರುವ ಸಮ್ಮೇಳನಗಳ ವೈಶಿಷ್ಟ್ಯಗಳೇನು ?

ದೇಜಗೌ : ನಾ ನಾಗೇ ಸಮ್ಮೇಳನಗಳಿಗೆ ಹೋಗಿಲ್ಲ. ಹಾಗೆ ಹೋದದ್ದೆಂದರೆ ಕಾಸರಗೋಡು ಸಮ್ಮೇಳನಕ್ಕೆ (೧೯೪೭). ಉಳಿದ ಸಮ್ಮೇಳನಗಳಿಗೆ ಆಹ್ವಾನಿತನಾಗಿ ಹೋಗಿದ್ದೀನಿ. ಪ್ರಬಂಧ ಮಂಡಿಸಲು, ಗೋಷ್ಠಿ ಅಧ್ಯಕ್ಷತೆ ವಹಿಸಲು, ಉದ್ಘಾಟನೆ ಮಾಡಲು, ಹೀಗೆ..... ಸಾಹಿತ್ಯ ಸಮ್ಮೇಳನಗಳನ್ನು ಸಾಮಾನ್ಯವಾಗಿ ಹಗುರವಾಗಿ ಕಾಣುವುದುಂಟು. ಅದೊಂದು ಪ್ರದರ್ಶನ ಇತ್ಯಾದಿಯಾಗಿ ಹೇಳುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಅದಕ್ಕೆ ಮಹತ್ವವಿದೆ.

ಅದರಿಂದ ವಿಚಾರ ವಿನಿಮಯವಾಗುತ್ತದೆ. ಸ್ನೇಹವರ್ಧನೆಗೆ ಕಾರಣವಾಗುತ್ತದೆ. ಹೊಸ ಹೊಸ ಸಾಹಿತಿಗಳ ವ್ಯಕ್ತಿಗಳ ಪರಿಚಯವಾಗುತ್ತದೆ. ಕೇವಲ ಭಾಷಣಗಳಿಂದ ಪ್ರಯೋಜನವಾಗಬೇಕಾಗಿಲ್ಲ.

ಒಂದು ಸಮ್ಮೇಳನ ನಡೆದನಂತರ ಇನ್ನೊಂದು ಸಮ್ಮೇಳನ ನಡೆಯುವ ಅವಧಿಯಲ್ಲಿ ಈಗ ಏನೂ ಆಗುತ್ತಿಲ್ಲ. ಈ ಸಮಯವನ್ನು ಸಮ್ಮೇಳನದಲ್ಲಿ ನಡೆದ ಸಂಗತಿಗಳ ಬಗ್ಗೆ, ತೆಗೆದುಕೊಂಡ ನಿರ್ಣಯಗಳ ಬಗ್ಗೆ, ಅವುಗಳನ್ನು ಹೇಗೆ ಜಾರಿಗೊಳಿಸಿ ಕನ್ನಡ ಸಂವರ್ಧನೆಗೆ ಕಾರಣವಾಗಬಹುದೆಂಬುದನ್ನು ಪರಿಷತ್ತು ತೀವ್ರವಾಗಿ ಯೋಚಿಸಬೇಕಾಗಿದೆ. ಇದಿಲ್ಲದೆ ಈಗ ಒಂದು ಕಾಲಹರಣವಾಗುತ್ತಿದೆ. ಇದಾಗಬಾರದೆಂದು ನನ್ನ ಆಸೆ.

ಸಾಂಸ್ಕೃತಿಕವಾದ ಸಮಸ್ಯೆಗಳು, ಭಾಷಾ ಸಮಸ್ಯೆ, ಗಡಿ ಸಮಸ್ಯೆ ಇವುಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಆಗ ಪರಿಷತ್ತಿನ ಅಸ್ತಿತ್ವಕ್ಕೆ ಅರ್ಥ ಬರುತ್ತೆ ಅಂತ ನನಗನ್ನಿಸುತ್ತದೆ.

ಈಗೇನಾಗಿ ಬಿಟ್ಟಿದೆ ಅಂದರೆ, ಎಲ್ಲಾ ಸಮ್ಮೇಳನಗಳು ಈಗ ಒಂದೇ ರೀತಿಯಾಗಿ ಬಿಟ್ಟಿವೆ. ಅಧ್ಯಕ್ಷ ಭಾಷಣ, ಕಾರ್ಯಕ್ರಮ ಒಂದೇ ಚೌಕಟ್ಟಿನಲ್ಲಿ ನಡೆಯುತ್ತಿವೆ.

ಉಡುಪಿ ಸಮ್ಮೇಳನದಲ್ಲಿ ನಡೆಯಿತೆನ್ನಲಾದ ಶ್ರೀ ಬಿ. ಶಿವಮೂರ್ತಿ ಅನಕೃ ಗಲಾಟೆಯ ಬಗ್ಗೆ 'ಸಂಜೆ ಸಮಾಚಾರ' ತಿಳಿಯಲೆತ್ನಿಸಿದಾಗ ಡಾ. ದೇಜಗೌ "ಅದೇನೋ ನನಗೆ ಗೊತ್ತಿಲ್ಲ. ನಾನು ಹೋಗಿರಲಿಲ್ಲ. ಆದರೆ ನನಗೆ ಗೊತ್ತಿರುವ ಹಾಗೆ ಅನಕೃ ತುಂಬ ಉದಾರ ಹೃದಯಿ. ಅವರಿಗೆ ಜಾತಿ ಇರಲಿಲ್ಲ, ಮತ ಇರಲಿಲ್ಲ" ಎಂದು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

ಪ್ರಶ್ನೆ : ಸಾಹಿತ್ಯ ಸಮ್ಮೇಳನಗಳಿಂದ ಸಾಹಿತ್ಯದ ಬೆಳವಣಿಗೆ ಆಗುತ್ತಿದೆಯೇ ?

ದೇಜಗೌ : ಸಾಹಿತ್ಯ ಸಮ್ಮೇಳನಗಳಿಂದ ಸಾಹಿತ್ಯದ ಬೆಳವಣಿಗೆ ನಡೆಯುವುದಿಲ್ಲ. ಆದರೆ ಅದರಿಂದ ಬೆಳೆಯುವ ಚೇತನಗಳ ಮೇಲೆ ದೊಡ್ಡ ಪರಿಣಾಮವಾಗುತ್ತದೆ.

ಅದರ ಪ್ರಭಾವ ಇದ್ದೇ ಇದೆ. ಈ ದೃಷ್ಟಿಯಿಂದ ಅದು ಪ್ರಯೋಜನಕಾರಿ. ಉದಾಹರಣೆಗೆ, ನಿಂಗಣ್ಣ ಸಣ್ಣಕ್ಕಿ ನಾಡಿನ ಒಂದು ತುದಿಯಲ್ಲಿದ್ದಾರೆ. ಅವರಿಗೆ ಈ ಕಡೆ ಬರಲು ಇದೊಂದು ಅವಕಾಶ. ಹಾಗೇನೇ ಎಲ್ಲರಿಗೂ ಅನ್ನಬಹುದು. ಹಿರಿಯರನ್ನು ದೊಡ್ಡ ಸಾಹಿತಿಗಳನ್ನು ನೋಡುವ ಅವಕಾಶವಿದೆ. ಇದೇ ಸಮ್ಮೇಳನಗಳ ಹೆಚ್ಚು ವೈಶಿಷ್ಟ್ಯವೆಂದು ಕಾಣುತ್ತದೆ.

ಮೈಸೂರು ಸಮ್ಮೇಳನದ ಒಂದು ವೈಶಿಷ್ಟ್ಯವೆಂದರೆ ಒಂದು ಸಂದರ್ಭ ಗ್ರಂಥವನ್ನು ಹೊರತಂದಿರುವುದು. ಹಿಂದೆ ಎಲ್ಲ ಸಮ್ಮೇಳನಗಳಲ್ಲಿ ಸ್ಮರಣ ಸಂಚಿಕೆಗಳನ್ನು ಮಾತ್ರ ತಂದಿದ್ದರು.ಈಗ ನೋಡಿ ಈ ಗ್ರಂಥದಲ್ಲಿ ಪತ್ತೇದಾರಿ ಸಾಹಿತ್ಯವನ್ನು ಕುರಿತು, ಅಂಕಣ ಸಾಹಿತ್ಯ ಕುರಿತು ಲೇಖನಗಳಿವೆ. ನನಗೆ ತಿಳಿದಂತೆ ಈ ಪ್ರಕರಣಗಳನ್ನು ಕುರಿತಂತೆ ಮೊಟ್ಟ ಮೊದಲಿಗೆ ಲೇಖನಗಳನ್ನು ಬರೆಸಲಾಗಿದೆ. ನಮ್ಮ ಗುರು ತೀ ನಂ. ಶ್ರೀ ಅವರು ಯಾವಾಗಲೂ ಪ್ರಯಾಣ ಮಾಡುವಾಗ ಅಗತಾಕ್ರಿಸ್ಟೀಯ ಒಂದು ಪತ್ತೇದಾರಿ ಕಾದಂಬರಿಯನ್ನು ತಮ್ಮ ಜೊತೆಗೊಯ್ಯುತ್ತಿದ್ದರು.

ಈ ನಿಟ್ಟಿನಲ್ಲಿ ಮಾತನಾಡುತ್ತಿದ್ದ ದೇಜಗೌ ಗ್ರಂಥ ಸಮ್ಮೇಳನಗಳಲ್ಲೂ ಪ್ರಸ್ತುತವಾದ ನೋಬೆಲ್ ಪ್ರಶಸ್ತಿ ವಿಜೇತ ಸಾಹಿತಿಯನ್ನು ಏಕೆ ಎಂಬುದು ಮಾಡಿಕೊಡಬಾರದು? ಎಂದು ಪ್ರಶ್ನಿಸಿ ಕುತೂಹಲ ಕೆರಳಿಸಿದ್ದಾರೆ.

ಪ್ರಶ್ನೆ : ಹಿಂದೆ ಸಾಹಿತಿಗಳಿಲ್ಲದವರೂ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷ ರಾಗಿದ್ದಾರೆ. ಅದೇ ರೀತಿ ಕನ್ನಡಕ್ಕೆ ದುಡಿದ ಸಂಘಟನಾಕಾರರನ್ನು ಯಾಕೆ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬಾರದು ?

ದೇಜಗೌ : ಸಾಹಿತಿಗಳೇ ಸಂಘಟನಾಕಾರರೂ ಆದರೆ ಒಳ್ಳೆಯದು. ಇದು ಸಾಹಿತ್ಯ ಸಮ್ಮೇಳನವಾದುದರಿಂದ ಸಾಹಿತಿಗಳೇ ಆಗುವುದು ಒಳ್ಳೆಯದು. ಸಂಘಟನಾಕಾರರಿಗೆ ಸನ್ಮಾನ ಆಗಬೇಕಾದದ್ದು ವಿಹಿತ. ಅವರ ಸೇವೆಯನ್ನು ಮಾತ್ರ ಸ್ಮರಿಸಬೇಕು. ಅದನ್ನು ಮಾಡಲು ಕನ್ನಡ ಸಮ್ಮೇಳನ ಮಾಡಿ. ಅಲ್ಲಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಬಹುದು. ಸಾಹಿತ್ಯ ಸಮ್ಮೇಳನಗಳಲ್ಲಿ ಅಲ್ಲ. ಕನ್ನಡ ಸಮ್ಮೇಳನ ಸಾಹಿತ್ಯ ಸಮ್ಮೇಳನ ಭಿನ್ನವಾದುದು. ಗಯಟೆ ಹೇಳಿದ ಮಾತು ಸ್ಮರಣೀಯ. ಸಾಹಿತಿ ರಾಜಕೀಯ ಪಕ್ಷಕ್ಕೆ ಸೇರಬಹುದು, ಆದರೆ ಆಗ ಅವನು ಸಾಹಿತಿಯಾಗಿ ಉಳಿಯಲಾರ.

ಪ್ರಶ್ನೆ : ಆದರೆ ಸಾಹಿತ್ಯ ರಾಜಕಾರಣ ಇದೆಯಲ್ಲ ಎಂದುದಕ್ಕೆ.

ದೇಜಗೌ : ಸಾಹಿತ್ಯ ರಾಜಕಾರಣ ಇದ್ದದ್ದಕ್ಕೆ ವಿಧಿಯಿಲ್ಲ. ಆದರೆ ಮೂಲತಃ ಅದು ಸಾಹಿತಿಗಳದು.

ಕನ್ನಡ ಪರಿಷತ್ತಿನ ಬೆಳವಣಿಗೆಯಲ್ಲಿ ಶ್ರಿ. ಜಿ. ನಾರಾಯಣ ಅವರ ಕೊಡುಗೆ ಮಹತ್ತರವಾದುದೆಂದು ನಾಡಿಗೇ ಗೊತ್ತಿರುವ ವಿಚಾರ. ಆ ಬಗ್ಗೆ ಕೇಳಿದಾಗ.

ದೇಜಗೌ : ಶ್ರೀ ಜಿ. ನಾರಾಯಣ ಅವರ ಕೊಡುಗೆ ದೊಡ್ಡದು. ಜಿಲ್ಲಾ ಘಟಕಗಳನ್ನು ತೆರೆದದ್ದು ಅವರ ದೂರದೃಷ್ಟಿಯಾಯಿತು. ಅದರಿಂದ ಸಾಹಿತ್ಯವನ್ನು ಜಿಲ್ಲೆಯಿಂದ ತಾಲ್ಲೂಕು ಹೋಬಳಿ ಮತ್ತು ಹಳ್ಳಿಗಳವರೆಗೆ ತಲುಪಿಸಲು ಸಾಧ್ಯವಾಯಿತು.

ಪ್ರಶ್ನೆ : ಕನ್ನಡಕ್ಕೆ ಹಿಂದೆ ಸಿಕ್ಕಿದ ರಾಜಾಶ್ರಯಕ್ಕೂ ಈಗಿನ ಪ್ರಜಾಶ್ರಯಕ್ಕೂ ಏನು ವ್ಯತ್ಯಾಸ ?

ದೇಜಗೌ : ರಾಜಾಶ್ರಯಕ್ಕಿಂತ ಈಗಿನ ಪ್ರಜಾಶ್ರಯದಲ್ಲಿ ಸಾಹಿತ್ಯ ಹೆಚ್ಚು ಸುಭದ್ರವಾಗಿದೆ. ಈಗ ಸಾಹಿತ್ಯ ನಿಜವಾಗಿಯೂ ಪ್ರಜಾಸಾಹಿತ್ಯವಾಗುತ್ತಿದೆ. ಆದ್ದರಿಂದ ಪ್ರಜಾಶ್ರಯದಲ್ಲಿ ಪ್ರತಿಕೂಲ ಏನು ಕಾಣುವುದಿಲ್ಲ. ಈಗ ಸಾಹಿತ್ಯ ಅಕಾಡೆಮಿಗಳಿವೆ. ಇವುಗಳಿಂದ ರಾಜಾಶ್ರಯಕ್ಕಿಂತಲೂ ಹೆಚ್ಚಿನ ಮನ್ನಣೆ ಪ್ರೋತ್ಸಾಹ ಸಾಹಿತಿಗಳಿಗೆ ದೊರಕುತ್ತಿರುವುದು ನಿಮಗೂ ಗೊತ್ತು.

ರಚನೆಯಾದ ಸಾಹಿತ್ಯ ಜನರಿಗೆ ತಲುಪಬೇಕಾದರೆ ಸಾಕ್ಷರತೆ ಹೆಚ್ಚಬೇಕು. ಅನ್ನ ಬಟ್ಟೆ ವಸತಿಗಳಂತೆ ಇಡೀ ರಾಷ್ಟ್ರದ ದೊಡ್ಡ ಸಮಸ್ಯೆಯಾಗಿದೆ.

ಪ್ರಶ್ನೆ : ನಾಳಿನ ಸಮ್ಮೇಳನಗಳು ಹೇಗಿರಬೇಕೆಂಬುದರ ನಿಮ್ಮ ಅನಿಸಿಕೆಗಳನ್ನು ತಿಳಿಯಬಹುದೆ?

ದೇಜಗೌ : ಸಮ್ಮೇಳನಗಳು ಜಾತ್ರೆಯಾಗುತ್ತಿವೆ ಅಂತಾರೆ. ಆದರೆ ಅವು ಜನ ಒಂದೆಡೆ ಸೇರಲು ಸಾಧನಗಳಾಗಿದೆ ಇವುಗಳನ್ನು ಜನಜಾಗೃತಿ ಉಂಟುಮಾಡಲು ಬಳಸಿಕೊಳ್ಳಬೇಕು. ಜನತೆಯನ್ನು ಬಂಧಿಸಿರುವ ಸಂಕೋಲೆಗಳಿಂದ ಅವರನ್ನು ಬಿಡಿಸುವ ಪ್ರಯತ್ನವಾಗಬೇಕು... ಸಮ್ಮೇಳನದಲ್ಲಿ ಮಂಡಿತವಾದ ವಿಚಾರಗಳ ಚರ್ಚೆ - ಪ್ರತಿ ಚರ್ಚೆಗಳನ್ನು ಪತ್ರಿಕೆಗಳು ಅಚ್ಚು ಹಾಕುವುದರಿಂದ ಎಲ್ಲರಿಗೂ ಅರಿವುಂಟಾಗಲು

ಸಹಾಯವಾಗುತ್ತದೆ. ಈ ಬಗ್ಗೆ ಸಾರ್ವಜನಿಕರಿಂದ ಕ್ರಿಯೆ ಪ್ರತಿಕ್ರಿಯೆ ನಡೆಯಬೇಕು. ಅವರು ಪರಿಷತ್ತಿನ ಚಟುವಟಿಕೆಗಳನ್ನು ಆಸಕ್ತಿಯಿಂದ ಗಮನಿಸಬೇಕು.

ಪ್ರಶ್ನೆ : ಸರ್, ಕೊನೆಯದಾಗಿ ಒಂದು ಪ್ರಶ್ನೆ. ನೀವು ಒಮ್ಮೆ ಸಮ್ಮೇಳನಾಧ್ಯಕ್ಷರಾಗಿದ್ದಿರಿ. ನಿಮಗೆ ಈ ಸಮ್ಮೇಳನಗಳು ತೃಪ್ತಿ ನೀಡಿವೆಯೆ?

ದೇಜಗೌ : ಬಹುಪಾಲು ಸಮ್ಮೇಳನಗಳು ನನಗೆ ತೃಪ್ತಿ ನೀಡಿವೆ. ಅವು ಇನ್ನೂ ಹೊಸ ರೂಪವನ್ನು ಹೊಸತನವನ್ನೂ ರೂಢಿಸಿಕೊಳ್ಳಬೇಕಾಗಿದೆ. ಈ ಸಮ್ಮೇಳನ "ವಜ್ರದೀಪ್ತಿ" ಎಂಬ ಸ್ಮರಣ ಸಂಪುಟವನ್ನು ತರುವುದರ ಮೂಲಕ " ಕವಿಗಳು ಕಂಡ ಮೈಸೂರು" (ಸಂ:ಗೌ) ಎಂಬ ಉಪಯುಕ್ತ ಕೃತಿಯನ್ನು ಪ್ರಕಟಿಸುವುದರ ಮೂಲಕ ತನ್ನ ನೆನಸನ್ನು ಶಾಶ್ವತಮಾಡಿದೆ ಎನ್ನಬಹುದು. ಪ್ರತಿಯೊಂದು ಸಮ್ಮೇಳನದ ಸಂದರ್ಭದಲ್ಲಿ ಇಂಥ ಕೆಲಸ ಆಗಬೇಕು.

ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ತು ಇದುವರೆಗೆ ಅದ್ಭುತ ಕೆಲಸ ಮಾಡಿದೆ. ತಾಲ್ಲೂಕು ಮಟ್ಟದಲ್ಲಿ ಅನೇಕ ಸಮ್ಮೇಳನಗಳನ್ನು ನಡೆಸಿದೆ. ಸ್ಥಳೀಯ ಸಾಹಿತಿಗಳನ್ನು ಗುರುತಿಸಿ ಗೌರವಿಸಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜಾರಿಗೊಳಿಸಲು ಒಂದು ಸ್ಥಾಯೀ ಸಮಿತಿ ರಚಿಸುವುದು ಒಳ್ಳೆಯದು. ಈ ಸ್ಥಾಯೀ ಸಮಿತಿಗೆ ಪರಿಷತ್ತಿನ ಅಧ್ಯಕ್ಷರೇ ಅಧ್ಯಕ್ಷರಾಗಿರಲಿ. ಇವರ ಕೆಲಸ ಸರ್ಕಾರದ ಮೇಲೆ ಒತ್ತಡ ತರುವುದು. ಶಾಲೆಗಳಲ್ಲಿ ಕನ್ನಡ, ಕನ್ನಡ ಭಾಷಾ ಮಾಧ್ಯಮವನ್ನು ಕಡ್ಡಾಯವಾಗಿ ತರುವ ಕೆಲಸವನ್ನು ಇದು ಮಾಡಬೇಕಾಗುತ್ತದೆ. ಗಡಿನಾಡ ಕನ್ನಡಿಗರ ಬಗ್ಗೆ ನಾವೇನೂ ಮಾಡುತ್ತಿಲ್ಲ. ಮಾತಿನಲ್ಲಿ ಸಹಾನುಭೂತಿ ತೋರುವುದನ್ನು ಬಿಟ್ಟರೆ ಇವುಗಳೆಲ್ಲದರ ಬಗ್ಗೆ ಸಕ್ರಿಯವಾಗಿ ಕಾಳಜಿ ತೋರಿದಾಗ ಮಾತ್ರ ಪರಿಷತ್ತು ನವಚೈತನ್ಯ ಪಡೆಯುತ್ತದೆ ಸಮ್ಮೇಳನಗಳಿಗೆ ಅರ್ಥ ಬರುತ್ತದೆ.

ಹಲವಾರು ವಿಷಯಗಳನ್ನು ಕುರಿತು ಮಾತನಾಡಿದ ದೇಜಗೌ ಅವರು ಕನ್ನಡ ನಾಡು ನುಡಿಯ ಬಗೆಗಿನ ತಮ್ಮ ಅಂತಃಕರಣವನ್ನು ಪಾರದರ್ಶಕವಾಗಿಸಿದರು.

* * * * *

ಎಪ್ಪತ್ತೈದರ ತರುಣ

- ಟಿ. ಎಸ್. ನಾಗರತ್ನ

ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು; ಆಡಳಿತ ಭಾಷೆಯಾಗಬೇಕು; ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೇ ಅಗ್ರಪೀಠ ಸಲ್ಲಬೇಕು-ಎಂದು ಭಾಷಣಗಳ ಮೂಲಕ, ಬರವಣಿಗೆಗಳ ಮೂಲಕ ಸಾರುತ್ತಾ ಕಳೆದ 30-35 ವರ್ಷಗಳಿಂದಲೂ ಕನ್ನಡಿಗರನ್ನು ಎಚ್ಚರಿಸುತ್ತಿರುವ ದೇ. ಜವರೇಗೌಡರು 'ದೇಜಗೌ' ಎಂದೇ ಜನರಿಗೆ ಪರಿಚಿತರು. ಈ ಧ್ಯೇಯೋದ್ದೇಶಗಳಿಂದ ಕನ್ನಡದ ಕಾಯಕವನ್ನು ಕೈಗೊಂಡ ದೇಜಗೌ ತಮ್ಮ ವೈಯಕ್ತಿಕ ಸಾಧನೆ ಸತತಾಭ್ಯಾಸ, ಬರವಣಿಗೆಗಳಿಂದ ಕನ್ನಡದ ಪ್ರಮುಖ ಗದ್ಯ ಲೇಖಕರಲ್ಲೊಬ್ಬರಾಗಿ ಬೆಳೆದಿದ್ದಾರೆ. ಮತ್ತೊಂದೆಡೆ ಕನ್ನಡದ ಕೆಲಸ ಮಾಡುವ ಶಕ್ತರನ್ನು ಸಂಘಟಿಸಿ ಕನ್ನಡದ ವಿಭಿನ್ನ ಪ್ರಕಾರಗಳಲ್ಲಿ ಗಮನಾರ್ಹ ಕೆಲಸ ಮಾಡಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಮಾನವೀಯ ಗುಣಗಳಿಂದ ಕನ್ನಡಿಗರ ಮನದಲ್ಲಿ ಸ್ಥಾನ ಪಡೆದಿದ್ದಾರೆ. ಕನ್ನಡದಲ್ಲಿ ಆಗಿರುವ ಎಲ್ಲ ರೀತಿಯ ಕೆಲಸಗಳೂ ಭಾಷಾಂತರಗಳ ಮೂಲಕ ಬೇರೆಬೇರೆ ದೇಶಭಾಷೆಯ ಜನರನ್ನು ತಲುಪಿ ಕನ್ನಡ ವಿಶ್ವಮಾನ್ಯತೆಯನ್ನು ಪಡೆಯಬೇಕೆಂದು ಹಂಬಲಿಸುವ ಅವರು ಯಾರೂ ನಿರೀಕ್ಷಿಸದಿದ್ದ ಮಟ್ಟದಲ್ಲಿ ಗುಡಿಸಿಲಿನಿಂದ ಗಂಗೋತ್ರಿಗೆ 'ಹನುಮಂತ ನೆಗೆತ' ನೆಗೆದರು. 1918 ರಲ್ಲಿ ಮುದಿಗೆರೆಯಲ್ಲಿ ಹುಟ್ಟಿ ಚನ್ನಪಟ್ಟಣದ ಚಕ್ಕೆರೆಯಲ್ಲಿ ಬೆಳೆದ ಈ ವಾಮನ ಸ್ವಸಾಮರ್ಥ್ಯದಿಂದ ತ್ರಿವಿಕ್ರಮರಾಗಿ ಬೆಳೆದ ಹೆಜ್ಜೆಗುರುತುಗಳಿವು.

1946 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿ ಸೇರಿದ ಅವರು ಕ್ರಮೇಣ ಉಪಪ್ರಾಧ್ಯಾಪಕರು, ಪರೀಕ್ಷಾ ನಿಯಂತ್ರಣಾಧಿಕಾರಿಗಳು, ಪ್ರಿನ್ಸಿಪಾಲರು, ರೀಡರು ಹಾಗೂ ಪ್ರೊಫೆಸರರಾಗಿ ಬಡ್ತಿ ಪಡೆದರು. ಕುವೆಂಪು, ತೀನಂಶ್ರೀ, ಡಿ.ಎಲ್.ಎನ್. ರವರಂಥ ವಿದ್ವಾಂಸರ ಬೆಂಬಲ ಗೌಡರಿಗಿತ್ತು. ಸಹೋದ್ಯೋಗಿಗಳಾಗಿದ್ದ ಎಲ್. ಬಸವರಾಜು, ಹಾ. ಮಾ. ನಾಯಕ, ಎಚ್. ತಿಪ್ಪೇರುದ್ರಸ್ವಾಮಿ, ಎಂ. ಚಿದಾನಂದ ಮೂರ್ತಿ, ಎಸ್. ವಿ. ಪರಮೇಶ್ವರ ಭಟ್ಟ, ಜಿ. ವರದರಾಜ ರಾವ್ ಮೊದಲಾದವರ ಒಂದು ವಿದ್ವತ್ಪಡೆಯೇ ಅವರ ಬೆಂಗಾವಲಿಗಿತ್ತು. ಇವರೆಲ್ಲರ ಸಹಭಾಗಿತ್ವ, ಮಾರ್ಗದರ್ಶನ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಗೌಡರ ಕನ್ನಡದ ಕೆಲಸ ಮಾಡಬೇಕೆಂಬ ಅದಮ್ಯ ಬಯಕೆ, ಸಾಮರ್ಥ್ಯಗಳು ಅವರನ್ನು ಕನ್ನಡದ ಒಂದು ಬೃಹತ್ ಶಕ್ತಿಯಾಗಿ ರೂಪಿಸಿದವು. ಚಕ್ಕೆರೆಯ ಗುಡಿಸಿಲಿನ ಬಡಬಾಲಕನಲ್ಲಿ ಹುದುಗಿದ್ದ ಕರ್ತೃತ್ವ ಶಕ್ತಿ ಸಹಜವಾಗಿ ಅರಳಿ ಪರಿಮಳಿಸಲಾರಂಭಿಸಿತು.

ಇದರ ಫಲವಾಗಿ 1968 ರಲ್ಲಿ 'ಕನ್ನಡ ಅಧ್ಯಯನ ಸಂಸ್ಥೆ' ಮೈತಾಳಿ ತನ್ನದೇ ಆದ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ಮಾನಸಗಂಗೋತ್ರಿಯ ಕನ್ನಡ ವಿಭಾಗದ

ಮುಖ್ಯಸ್ಥರಾಗಿದ್ದ ದೇ. ಜವರೇಗೌಡರು ಸಂಸ್ಥೆಯ ನಿರ್ದೇಶಕರೂ ಆದರು. ತಮ್ಮ ಆಡಳಿತಾವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವನ್ನು ವಿಸ್ತಾರವಾಗಿ ಬೆಳಸಿದರು. ಬೋಧನೆಯೊಂದಿಗೆ ಸಂಶೋಧನೆ ಹಾಗೂ ಪ್ರಕಟಣೆಯ ಕಾರ್ಯಗಳನ್ನೂ ಸಂಘಟಿಸಿದರು. ಪ್ರಾಚೀನ ಕನ್ನಡ ಕಾವ್ಯಗಳ ಶಾಸ್ತ್ರೀಯ ಸಂಪಾದನೆ, ಪಠ್ಯಪುಸ್ತಕಗಳ ಭಾಷಾಂತರ ಕಾರ್ಯ, ಹರಿದಾಸ ಸಾಹಿತ್ಯದ ಶಾಸ್ತ್ರೀಯ ಸಂಪಾದನಾ ಯೋಜನೆಗಳನ್ನು ಕೈಗೆತ್ತಿಕೊಂಡುದೇ ಅಲ್ಲದೆ ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳ ಪರಿಷ್ಕೃತ ಕನ್ನಡ ಆವೃತ್ತಿಗಳ ಪ್ರಕಟಣೆ ಮತ್ತು ಕನ್ನಡ ವಿಶ್ವಕೋಶಗಳ ರಚನೆ ಹಾಗೂ ಪ್ರಕಟಣೆಗಳ ಜವಾಬ್ದಾರಿಯನ್ನೂ ಹೊತ್ತರು. ಜೊತೆಗೆ ಕನ್ನಡೇತರರಿಗೆ ಕನ್ನಡ ಕಲಿಸುವ ಹೊಣೆಯನ್ನೂ ಕನ್ನಡ ಅಧ್ಯಯನ ಸಂಸ್ಥೆ ನಿರ್ವಹಿಸಿತು. ರಾಜ್ಯದ ವಿವಿಧ ಭಾಗಗಳಿಂದ ಆಯಾ ವಿಷಯಗಳಲ್ಲಿ ಪರಿಣತಿ ಪಡೆದವರನ್ನು ಕೆಲಸಮಾಡಬಲ್ಲ ಶಕ್ತರನ್ನು ಹೆಕ್ಕಿತಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರತಿಷ್ಠಾಪಿಸಿದರು. ಯಾರಿಂದ ಯಾವ ಕೆಲಸವನ್ನು ಸಮರ್ಪಕವಾಗಿ ಮಾಡಿಸಬಹುದು ಎಂಬ ದೇಜಗೌ ಲೆಕ್ಕಾಚಾರ ಎಲ್ಲಿಯೂ ತಪ್ಪಲಿಲ್ಲ. ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಇದುವರೆಗೆ ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬಂದಿರುವ ಪ್ರಕಟಣೆಗಳೇ ಈ ಮಾತಿಗೆ ಸಾಕ್ಷಿ. ಈಗ ಕನ್ನಡಿಗರ ಹಾಗೂ ವಿದೇಶೀಯರ ಗಮನವನ್ನೂ ಸೆಳೆದಿರುವ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯ ದೇಜಗೌರವರ ಆಸಕ್ತಿಯ ಫಲವೇ ಆಗಿದೆ. ವಿಶ್ವವಿದ್ಯಾಲಯದ ಪರಿಸರದಲ್ಲಿ ಅಂದು ಅವರು ನೆಡಿಸಿದ ನೂರಾರು ತೆಂಗಿನ ಸಸಿಗಳು, ಸಪೋಟ, ಸೀಬೆಗಿಡಗಳು ಈಗ ಸಮೃದ್ಧವಾಗಿ ಫಲಕೊಡುತ್ತಿವೆ. ಸಂಪಿಗೆ ಅರಳಿ ಕಂಪು ಸೂಸುತ್ತಿದೆ.

ಕನ್ನಡದ ಪ್ರಮುಖ ಸಾಹಿತಿಗಳು, ಕವಿಗಳು, ಕಲಾವಿದರು, ಹೋರಾಟಗಾರರು ಪತ್ರಕರ್ತರು ಎಲ್ಲರೂ ಕನ್ನಡ ಅಧ್ಯಯನ ಸಂಸ್ಥೆಯೊಂದಿಗೆ ಅರ್ಥಾತ್ ದೇಜಗೌ ಅವರೊಂದಿಗೆ ಸಂಬಂಧವಿಟ್ಟುಕೊಂಡಿದ್ದರು. ಕರ್ನಾಟಕದ ವಿವಿಧ ಭಾಗಗಳಲ್ಲಿದ್ದುಕೊಂಡು ಕನ್ನಡದ ಕೆಲಸ ಮಾಡುತ್ತಿದ್ದವರನ್ನು ಗುರುತಿಸಿ, ಅವರನ್ನು ಸಂಸ್ಥೆಗೆ ಆಹ್ವಾನಿಸಿ, ಸನ್ಮಾನಿಸಿ 'ತವರು' ನಡೆಸುವ ಸತ್ಸಂಪ್ರದಾಯವನ್ನು ಗೌಡರು ಬೆಳೆಸಿದ್ದರು. ಸಂಸ್ಥೆಯಲ್ಲಿ ಯಾವ ಸಮಾರಂಭ ನಡೆದರೂ ಮೈಸೂರಿನ ಎಲ್ಲ ಕಾಲೇಜುಗಳ ಕನ್ನಡ ಅಧ್ಯಾಪಕರಿಗೂ ಆಹ್ವಾನವಿರುತ್ತಿತ್ತು. ಅವರುಗಳೂ ಅಷ್ಟೇ ಅಭಿಮಾನದಿಂದ, ಉತ್ಸಾಹದಿಂದ ಬಂದು ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದರು. ಸಂಸ್ಥೆಯ ಸಭಾಂಗಣ ಕಿಕ್ಕಿರಿದು ತುಂಬಿರುತ್ತಿತ್ತು. ಹೀಗೆ ಎಲ್ಲರನ್ನೂ ಆತ್ಮೀಯತೆ ವಿಶ್ವಾಸಗಳಿಂದ ನಡೆಸಿಕೊಳ್ಳುತ್ತಿದ್ದ ದೇಜಗೌ ವ್ಯಕ್ತಿತ್ವ ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿತು.

ಕನ್ನಡದ ಕೆಲಸಮಾಡುವ ಅವರ ಧ್ಯೇಯೋದ್ದೇಶಗಳಿಗೆ ಪುಟವಿಟ್ಟಂತೆ ಹೆಚ್ಚಿನ ಅಧಿಕಾರವೂ ಅವರ ಕೈಗೆ ಬಂತು. 1969 ರಲ್ಲಿ ದೇಜಗೌ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡರು. ತಾವು ಕಟ್ಟಿ ಬೆಳೆಸಿದ ಅಧ್ಯಯನ ಸಂಸ್ಥೆಯ ಚುಕ್ಕಾಣಿಯನ್ನು ತುಂಬು ನಂಬಿಕೆ ಭರವಸೆ ತೃಪ್ತಿಗಳಿಂದ ಹಾ.ಮಾ.

ನಾಯಕರಿಗೆ ಒಪ್ಪಿಸಿದರು. ನಾಯಕರ ದಕ್ಷ ಆಡಳಿತದಲ್ಲಿ ಮತ್ತು ದೇಜಗೌ ಅವರ ಸಮರ್ಥ ನೇತೃತ್ವದಲ್ಲಿ ಕನ್ನಡದ ಕೆಲಸಗಳು ಅಬಾಧಿತವಾಗಿ ನಡೆದುಕೊಂಡು ಬಂದುವು. ಕನ್ನಡ ಅಧ್ಯಯನ ಸಂಸ್ಥೆಯ ಇತಿಹಾಸದಲ್ಲಿಯೇ ಸುವರ್ಣಕಾಲವದು.

ಎರಡು ಅವಧಿಗಳಿಗೆ (ಆರು ವರ್ಷಗಳು) ಕುಲಪತಿಗಳಾಗಿದ್ದ ದೇಜಗೌ ತಮ್ಮ ಅಧಿಕಾರಾವಧಿಯಲ್ಲಿ ಕೇವಲ ಕನ್ನಡ ವಿಭಾಗವನ್ನು ಮಾತ್ರವಲ್ಲ ; ಇಡೀ ವಿಶ್ವವಿದ್ಯಾನಿಲಯವನ್ನೇ ಮುನ್ನಡೆಸಿದರು. ಜಾನಪದ, ನ್ಯಾಯಶಾಸ್ತ್ರ, ಗ್ರಂಥಾಲಯ ವಿಜ್ಞಾನವೇ ಮೊದಲಾದ ಸುಮಾರು 24 ಹೊಸ ವಿಷಯಗಳನ್ನು ಬೋಧಿಸಲು ಏರ್ಪಾಡು ಮಾಡಿದರು. ಅದಕ್ಕೆ ತಕ್ಕಂತೆ ಹೆಚ್ಚಿನ ಬೋಧಕ ಹುದ್ದೆಗಳನ್ನು ಸೃಷ್ಟಿಸಿ, ಕಾಲಕಾಲಕ್ಕೆ ಅವುಗಳ ನೇಮಕಾತಿಯನ್ನೂ ಮಾಡಿದರು. ಪದವಿಯ ಹಂತದಲ್ಲಿ ಕೂಡ ಮೆರೀನ್ ಜಿಯಾಲಜಿ, ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಮೊದಲಾದ ಹೊಸವಿಷಯಗಳು ಸೇರ್ಪಡೆಯಾದುವು. ಒಂದು ಸ್ನಾತಕೋತ್ತರ ಕೇಂದ್ರವೂ ಕಾರ್ಯಾರಂಭ ಮಾಡಿತು.

'ಕುವೆಂಪು ವಿದ್ಯಾವರ್ಧಕ ಟ್ರಸ್ಟ್' ದೇಜಗೌ ಆಸಕ್ತಿಯ ಇನ್ನೊಂದು ಮಜಲು. ತಮ್ಮ ಮೆಚ್ಚಿನ ಗುರುಗಳಾದ ಕುವೆಂಪುರವರ ಹೆಸರಿನಲ್ಲಿ ಕಟ್ಟಿರುವ ಈ ಸಂಸ್ಥೆ ಒಂದು ಉತ್ತಮ ಸಂಶೋಧನ ಕೇಂದ್ರವಾಗಬೇಕು ಎಂಬುದು ಗೌಡರ ಆಕಾಂಕ್ಷೆ. ಇದಕ್ಕಾಗಿ ಅವರು ತಮ್ಮ ಸ್ವಂತ ಮನೆಯನ್ನೇ ಟ್ರಸ್ಟ್‌ಗೆ ಬಿಟ್ಟುಕೊಟ್ಟಿದ್ದಾರೆ. ಇಷ್ಟೆಲ್ಲ ಕಾರ್ಯಭಾರಗಳ ನಡುವೆಯೂ, ರಾತ್ರಿ ವೇಳೆಯಲ್ಲಾದರೂ ತಮ್ಮ ಓದು ಬರಹಗಳನ್ನು ಮಾಡಿಯೇ ಮಲಗಬೇಕು. ಹೀಗೆ ಕೆಲಸ ಬದಲಾಯಿಸುವುದೇ ಅವರಿಗೆ ವಿಶ್ರಾಂತಿ. ಕನ್ನಡ ಇಂಗ್ಲಿಷ್ ಎರಡು ಭಾಷೆಗಳೂ ಸೇರಿದಂತೆ ಸುಮೂರು 50 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಭಾಷಾಶಾಸ್ತ್ರ, ಕಾವ್ಯ, ಜಾನಪದ, ವ್ಯಾಕರಣ, ನಾಡು-ನುಡಿಯ ಸಮಸ್ಯೆಗಳು-ಹೀಗೆ ಗೌಡರ ಆಸಕ್ತಿ ಒಲವುಗಳು ವಿಭಿನ್ನ. 'ಹೋರಾಟದ ಬದುಕು' ಅವರ ಜೀವನ ಚರಿತ್ರೆಯೇ ಆಗಿದೆ. 'ಪುನರುತ್ಥಾನ' ಅವರ ಪ್ರಮುಖ ಭಾಷಾಂತರ ಕೃತಿ. 'ನಳಚರಿತ್ರೆ', 'ಕಬ್ಬಿಗರ ಕಾವ್ಯ' ಅವರು ಶಾಸ್ತ್ರೀಯವಾಗಿ ಸಂಪಾದಿಸಿ ಕೊಟ್ಟಿರುವ ಕೃತಿಗಳು. ಆರು ಸಂಪುಟಗಳಲ್ಲಿ ಪ್ರಕಟವಾಗಿರುವ ಕುಲಪತಿಯ ಭಾಷಣಗಳು, ಕುಲಪತಿಯ ದಿನಚರಿ, ಕುಲಪತಿಯ ಪತ್ರಗಳು ಗಮನಾರ್ಹ ಕೃತಿಗಳು. ಅವರ ರಷ್ಯ, ಯೂರೋಪ್, ಆಫ್ರಿಕಾಗಳ ಪ್ರವಾಸಗಳನ್ನು ಕುರಿತಂತೆ ಮೂರು ಪ್ರವಾಸಕಥನಗಳು ಹೊರಬಂದಿವೆ. ಕುವೆಂಪು, ತೀನಂಶ್ರೀ, ಮೋತಿಲಾಲ್ ನೆಹರೂ ಮೊದಲಾದವರ ಜೀವನ ಚರಿತ್ರೆಗಳನ್ನು ಬರೆದು ಪ್ರಕಟಿಸಿದ್ದಾರೆ. ಹಲವು ಬಿಡಿಲೇಖನಗಳು, ವಿಮರ್ಶೆಗಳು, ಶ್ರೀ ರಾಮಾಯಣದರ್ಶನ ವಚನ ಚಂದ್ರಿಕೆ ಅವರ ಇನ್ನಿತರ ಬರವಣಿಗೆಗಳು. ಈಗಲೂ ಅವರು ಮೈಸೂರು ಜಿಲ್ಲೆಯ ಸ್ಥಳನಾಮಗಳ ಬಗ್ಗೆ ಸಂಶೋಧನೆ ನಡೆಸಿ ಬರವಣಿಗೆಯಲ್ಲಿ ತೊಡಗಿದ್ದಾರೆ. ಅನೇಕ ಸಂಭಾವನಾಗ್ರಂಥಗಳು, ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು, ಕರ್ನಾಟಕ ಸಹಕಾರಿ ಪ್ರಕಾಶನ, ಜ್ಞಾನಗಂಗೋತ್ರಿಯ ಸಂಪುಟಗಳ ಪ್ರಕಟಣೆಯಲ್ಲಿ ದೇಜಗೌ ಅವರ ಸಹಭಾಗಿತ್ವವಿದೆ. ಹಲವು ವರ್ಷಗಳು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದರು. ಅವರ ಸಾಹಿತ್ಯಿಕ ದುಡಿಮೆ ಕ್ರತುಶಕ್ತಿಗಳನ್ನು ಗಮನಿಸಿ ಅನೇಕ ಪ್ರತಿಷ್ಠಿತ ಸಂಸ್ಥೆಗಳು

ಅವರಿಗೆ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿವೆ. 1965ರಲ್ಲಿ ಅವರ 'ಪುನರುತ್ಥಾನ'ಕ್ಕೆ ಲೆನಿನ್ ಪ್ರಶಸ್ತಿ ದೊರೆಯಿತು. 1970ರಲ್ಲಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ನಡೆದ 47ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು. 1975 ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿತು. ಮತ್ತು 1976ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ತನ್ನ ಮೂರನೆಯ ಜಾನಪದ ಸಮ್ಮೇಳನಕ್ಕೆ ದೇಜಗೌ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿತು.

ದೇಜಗೌ ಅವರ ಕನ್ನಡಪರ ಒಲವು ನಿಲುವುಗಳು ನಾಡಿನಾದ್ಯಂತ ಅವರಿಗೆ ಮನ್ನಣೆ ದೊರಕಿಸಿಕೊಟ್ಟಿವೆ. ಅವರಿಗೆ ಐವತ್ತು ವರ್ಷಗಳು ತುಂಬುತ್ತಿದ್ದಂತೆಯೇ ಅವರ ಅಭಿಮಾನಿಗಳು ಅದ್ಭುತವಾದ ಸನ್ಮಾನ ಸಮಾರಂಭವನ್ನೇರ್ಪಡಿಸಿ ನೂರಾರು ಹೂವಿನ ಹಾರಗಳಿಂದ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಸಾವಿರಾರು ಕನ್ನಡಿಗರ ಅಭಿಮಾನ ಅಭಿನಂದನ ಗ್ರಂಥಗಳ ರೂಪದಲ್ಲಿ ಅವರ ಕೈಸೇರಿತು. 'ದೇಜಗೌ ಐವತ್ತು' ಹಾ.ಮಾ. ನಾಯಕರು ಸಂಪಾದಿಸಿಕೊಟ್ಟ ಗ್ರಂಥ. 'ಅಂತಃಕರಣ' ಆಲನಹಳ್ಳಿ ಕೃಷ್ಣ ಸಂಪಾದಿಸಿದ್ದು.'ರಸಪಷ್ಟಿ' ಕೆ.ವಿ. ಶಂಕರೇಗೌಡರ ಪ್ರೀತಿಯ ವೃಷ್ಟಿ. 'ದೇಜಗೌ, ಎಪ್ಪತ್ತರ ಹೊಸ್ತಿಲಲ್ಲಿ' ಸಚ್ಚಿದಾನಂದಯ್ಯ, ಸಣ್ಣರಾಮೇಗೌಡರಂಥ ಸಹೃದಯರ ಹೃದಯ ಸ್ಪಂದನ - ಅಭಿನಂದನ ಗ್ರಂಥಗಳ ಈ ಸಂಖ್ಯೆಯೇ ಕನ್ನಡದ ಸಂದರ್ಭದಲ್ಲಿ ಅಪರೂಪ ; ಅಪೂರ್ವ.

ದೇಜಗೌ ಅವರು ತಮ್ಮ ಭಾಷಣಕಾರ್ಯಕ್ರಮಗಳು, ಪುಸ್ತಕಗಳು ಹಾಗೂ ಬರವಣಿಗೆಗಳಿಂದ ಬರುವ ಹಣವನ್ನೆಲ್ಲ 'ದೇಜಗೌ ಟ್ರಸ್ಟ್' ಹೆಸರಿನಲ್ಲಿ ಇಟ್ಟಿರುವ ಪುದುವಟ್ಟಿಗೆ ಸೇರಿಸುವುದಲ್ಲದೆ 'ಕೆರೆಯ ನೀರನು ಕೆರೆಗೆ ಚೆಲ್ಲಿ'ಎಂಬಂತೆ ಆ ಹಣವನ್ನೆಲ್ಲ ಮತ್ತೆ ಕನ್ನಡದ ಸಂಶೋಧನೆ ಹಾಗೂ ವಿಮರ್ಶೆಯ ಕೆಲಸಗಳಿಗೇ ವಿನಿಯೋಗಿಸುತ್ತಾರೆ. 75 ರ ಈ ಇಳಿವಯಸ್ಸಿನಲ್ಲೂ ಕನ್ನಡಪರ ಮಾತು, ಕನ್ನಡದ ಕೆಲಸ ಎಂದರೆ ದೇಜಗೌ ತೋರಿಸುವ ಉತ್ಸಾಹ 25ರ ತರುಣರನ್ನೂ ನಾಚಿಸುತ್ತದೆ. ಸುಮಾರು 45 ವರ್ಷಗಳ ಹಿಂದೆ ಸೆಕ್ರೆಟೇರಿಯಟ್‌ನಲ್ಲಿ ಕೇವಲ ಗುಮಾಸ್ತರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ದೇಜಗೌ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾದದ್ದು ಈ ಶತಮಾನದಲ್ಲಿ ಕನ್ನಡಿಗರು ಕಂಡ ಪವಾಡ.

ಸಾಹಿತ್ಯಿಕ ಸಾಧನೆ ಮಾತ್ರವಲ್ಲದೆ ದೈನಂದಿನ ಜೀವನದಲ್ಲೂ ದೇಜಗೌ ಅವರ ಅಂತಃಕರಣ ದೊಡ್ಡದು. ಹಳ್ಳಿಗಾಡಿನ ಹತ್ತಾರು ಬಡವಿದ್ಯಾರ್ಥಿಗಳು ಅವರ ಮನೆಯಲ್ಲಿದ್ದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿರುವರು. 1968 ರ ಸಮಯ; ನೆರೆರಾಜ್ಯದಿಂದ ಕನ್ನಡ ವಿಭಾಗಕ್ಕೆ ಬಂದಿದ್ದ ಸಂಶೋಧನ ವಿದ್ಯಾರ್ಥಿನಿಯೊಬ್ಬರಿಗೆ, ಬೇಸಿಗೆ ರಜೆ ಬಂದುದರಿಂದ ವಿದ್ಯಾರ್ಥಿನಿಲಯ ಮುಚ್ಚಿದ್ದು ಊಟಕ್ಕೆ ಪರದಾಟವಾಯಿತು. ಹೊಸಜಾಗ, ಹೊಸಭಾಷೆ, ಹೊಸ ಪರಿಸರದಲ್ಲಿ ಕಂಗಾಲಾಗಿದ್ದ ಆಕೆಯನ್ನು ಕರೆಸಿದ ದೇಜಗೌ "ನೋಡಿ...ಏನೂ ಯೋಚನೆ ಮಾಡಬೇಡಿ. ನಮ್ಮ ಮನೆಗೆ ಬನ್ನಿ. ನನ್ನ ಹೆಂಡತಿ ಮಗಳೊಂದಿಗೆ ನಮ್ಮ ಮನೆಯಲ್ಲಿರಿ. ನಿಮ್ಮ ತಂದೆಯವರಿಗೆ

ವಿಷಯ ತಿಳಿಸಿ ಒಂದು ಕಾಗದ ಬರೆಯಿರಿ" ಎಂದು ಹೇಳಿ, ಅವರ ಮನೆಗೆ ಕರೆದುಕೊಂಡು ಹೋಗಿ ಸುಮಾರು ಒಂದು ತಿಂಗಳು ಇರಿಸಿಕೊಂಡಿದ್ದ ಹೃದಯವಂತಿಕೆ ಅವರದು. ಕನ್ನಡ ಅಧ್ಯಯನ ಸಂಸ್ಥೆಯ ಸಮಾರಂಭಗಳು ಮುಗಿಯುವುದು ತಡವಾದರೆ ತಮ್ಮ ಕಾರಿನಲ್ಲೇ ತಮ್ಮ ಕುಟುಂಬದ ಸದಸ್ಯರೊಂದಿಗೇ ವಿದ್ಯಾರ್ಥಿನಿಯರನ್ನು ಅವರವರ ಮನೆ ತಲುಪಿಸಿದ ಬಳಿಕ ತಾವು ಮನೆಗೆ ಹೋದ ಎಷ್ಟೋ ನಿದರ್ಶನಗಳಿವೆ. ಅವರ ಒಂದು ಮಾತಿಗೆ, ವಿಶ್ವಾಸಕ್ಕೆ ಕಟ್ಟುಬಿದ್ದು ಗಂಗೋತ್ರಿಯ ಅಧ್ಯಯನ ಸಂಸ್ಥೆಗೇ ಪುನಃ ಬಂದು ತಮ್ಮ ವೃತ್ತಿಜೀವನವನ್ನಾರಂಭಿಸಿದ ಅನೇಕರು ಇಂದೂ ಸಂಸ್ಥೆಯಲ್ಲಿ ಕಾಣಸಿಗುತ್ತಾರೆ.

ಬಡತನದ ಅರಿವಿದ್ದ ಅವರಿಗೆ ಯಾವುದೂ ಪೋಲಾಗಬಾರದು; ಹಾಳಾಗಬಾರದು. ದೇಜಗೌ ಸಂಸ್ಥೆಯ ನಿರ್ದೇಶಕರಾಗಿದ್ದಾಗಿನ ಒಂದು ಮಧ್ಯಾಹ್ನ, ಸಂಸ್ಥೆಯ ಒಂದು ಭಾಗದ ತಾರಸಿಯಿಂದ ಮಳೆನೀರು ಒಳಗೆ ಇಳಿದಿದ್ದುದನ್ನು ಕಂಡು ಅವರ ಸಿಟ್ಟು ಸಿರ್ರನೆ ನೆತ್ತಿಗೇರಿತು."ನಿಮ್ಮಪ್ಪಂದೇನೋ ದುಡ್ಡು........ ಸಾರ್ವಜನಿಕರ ಹಣ ಇದು ....ಗೊತ್ತು ತಾನೇ" ಎಂದು ಹಿಗ್ಗಾಮುಗ್ಗ ಬೈದು ಕಂಟ್ರಾಕ್ಟರರ ಮುಖದ ನೀರಿಳಿಸಿದರು. ಅದನ್ನು ಕೇಳಿದ ಕಂಟ್ರಾಕ್ಟರಿಗಿರಲಿ ಅಲ್ಲಿದ್ದವರಿಗೆಲ್ಲ ಮೈನಡುಕ ! ಮತ್ತೊಮ್ಮೆ ಗಂಗೋತ್ರಿಯ ಆವರಣದಲ್ಲಿ ಅವರು ನೆಡಿಸಿದ್ದ ಮಾವಿನಸಸಿಗಳಿಗೆ ಹಸು ಬಾಯಿಹಾಕಿದ್ದನ್ನು ಕಂಡು ಕಿಡಿಕಿಡಿಯಾದ ದೇಜಗೌ ಕಾರಿನಿಂದಿಳಿದು ಸೀದ ಕಾವಲುಗಾರನಿದ್ದಲ್ಲಿಗೆ ಹೋಗಿ ಅವನಿಗೆ ಎರಡು ಬಿಟ್ಟರು. ಬೇಜವಾಬ್ದಾರಿತನ, ಸೋಂಬೇರಿತನ ಸುಳ್ಳು ತಟವಟಗಳನ್ನು ಸಹಿಸದ ಗೌಡರು ನಿಷ್ಠೆ ಪ್ರಾಮಾಣಿಕತೆಗಳಿಗೆ ಅಷ್ಟೇ ಬೆಲೆ ಕೊಡುತ್ತಿದ್ದರು. "ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್; ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್"-ಎಂಬ ಕನ್ನಡ ಶಾಸನ ಮಾತುಗಳು ದೇಜಗೌ ವ್ಯಕ್ತಿತ್ವದ ವ್ಯಾಖ್ಯಾನದಂತಿವೆ. ವ್ಯಕ್ತಿಗೆ ಅಧಿಕಾರ ಬರುತ್ತದೆ ಹೋಗುತ್ತದೆ. ಅಷ್ಟರಿಂದಲೇ ಯಾರೂ ದೊಡ್ಡವರಾಗುವುದಿಲ್ಲ. ಅವನಿಗೆ ಇತರರ ಬಗ್ಗೆ ಇರುವ ಅಂತಃಕರಣ, ತೋರುವ ಪ್ರೀತಿ ಅನುಕಂಪ, ಕಳಕಳಿಯಿಂದ ಕೂಡಿದ ನಡವಳಿಕೆಯೇ ಮೊದಲಾದ ಮಾನವೀಯ ಗುಣಗಳು ಅವನನ್ನು ಎತ್ತರಕ್ಕೇರಿಸುತ್ತವೆ. ದೇಜಗೌ ಉನ್ನತವ್ಯಕ್ತಿಯೆನಿಸಿಕೊಂಡದ್ದು ಹೀಗೆ.

ದೇಜಗೌ ಅವರ ಎಲ್ಲ ಸಾಧನೆ ಸನ್ಮಾನಗಳ ಹಿಂದಿರುವ ಪ್ರೇರಶಕ್ತಿ ಅವರ ಪತ್ನಿ ಸಾವಿತ್ರಮ್ಮನವರು. ಸರಳಜೀವನವನ್ನು ಪ್ರೀತಿಸುವ ಸಾತ್ತ್ವಿಕ ಮಹಿಳೆ. ಸ್ವತಃ ಲೇಖಕಿಯೂ ಹೌದು. ಜೆ. ಶಶಿಕಲಾ ಮತ್ತು ಜೆ. ಶಶಿಧರಪ್ರಸಾದ್ ದೇಜಗೌ ದಂಪತಿಗಳಿಗೆ ತೃಪ್ತಿಯಿತ್ತ ಎರಡು ಕುಡಿಗಳು. ದೇಜಗೌ ಟ್ರಸ್ಟ್ ಸ್ಥಾಪಿಸಿರುವ 'ಶ್ರೀಮತಿ ಸಾವಿತ್ರಮ್ಮ ದೇಜಗೌ ಮಹಿಳಾ ಪ್ರಶಸ್ತಿ'ಗೆ ಕೊಡುಗೈ ದಾನಿಗಳಾಗಿರುವ ತಮ್ಮ ಮಗಳು, ಅಳಿಯ ಜೆ.ಇ. ಚಂದ್ರಶೇಖರ್ ಹಾಗೂ ಸಮೀಪದ ಬಂಧುಗಳಾದ ಚಂದ್ರಶೇಖರ್ ಅವರನ್ನು ದೇಜಗೌ ಸಂತಸದಿಂದ ಸ್ಮರಿಸುತ್ತಾರೆ. ಮಕ್ಕಳು ಮೊಮ್ಮಕ್ಕಳ ನಗುವಿನಿಂದ ತುಂಬಿರುವ ಮನೆಯಲ್ಲಿ ನೆಮ್ಮದಿಯ ನಿವೃತ್ತಜೀವನ ನಡೆಸುತ್ತಿರುವ ದೇ ಜವರೇಗೌಡರಿಗೆ ದಿನಾಂಕ ಜುಲೈ 6, 1993ಕ್ಕೆ 75 ವರ್ಷಗಳು ತುಂಬಿವೆ. ದೇಜಗೌ ದಂಪತಿಗಳ ಔದಾರ್ಯವನ್ನು ಮನಗಂಡ ಅಭಿಮಾನಿಗಳು ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ಒಂದು ನಿಧಿ

ಕೂಡಿಸಿಕೊಡುವ ಸಂಕಲ್ಪಮಾಡಿರುವುದು ಸ್ವಾಗತಾರ್ಹ. ಈ ಶುಭಸಮಯದಲ್ಲಿ ದೇಜಗೌ ಟ್ರಸ್ಟ್ ಮೈತುಂಬಿಕೊಂಡು ಕನ್ನಡದ ಕೆಲಸಗಳನ್ನು ವಿಪುಲವಾಗಿ ಹಮ್ಮಿಕೊಂಡು ಯಶಸ್ವಿಯಾಗಲಿ ; ಕನ್ನಡಮ್ಮನ ಸುಪುತ್ರ ದೇಜಗೌ ನೂರ್ಕಾಲ ಬಾಳಲಿ ಎಂಬುದೇ ಕನ್ನಡಿಗರ ಹರಕೆ ;ಹಾರೈಕೆ.

* * * * *

ದೊಡ್ಡಗುಣ

- ಹೊ. ಶ್ರೀನಿವಾಸಯ್ಯ

' ನಾ ಕಂಡ ಜರ್ಮನಿ' ಪುಸ್ತಕವನ್ನು ಬರೆಯಲು, ಪ್ರಕಟಿಸಲು ಪ್ರೋತ್ಸಾಹಿಸಿದವರು, ನನ್ನ ಗುರುಗಳಾದ ಸಿದ್ದವನಹಳ್ಳಿ ಕೃಷ್ಣಶರ್ಮರು. ವಿದ್ಯಾರ್ಥಿಯಾದಾಗಿನಿಂದಲೂ ಲೇಖನಗಳನ್ನು ಬರೆಯಲು ಪ್ರೋತ್ಸಾಹಿಸುತ್ತಿದ್ದರು.

'ನಾ ಕಂಡ ಜರ್ಮನಿ' ನನ್ನ ಮೊದಲನೆಯ ಪುಸ್ತಕ. ಕಾರ್ಖಾನೆಯ ಇಂಜಿನಿಯರಾಗಿ ನನ್ನ ಹೆಸರಿನಲ್ಲಿ ಪುಸ್ತಕ ಹೊರಬಂದಿದ್ದು, ಮನಸ್ಸಿಗೆ ಆನಂದವಾಗುವುದು ಸಹಜ. ಇದನ್ನು ಎಲ್ಲರಿಗೂ ತಿಳಿಸುವುದು ಹೇಗೆ ? ಸ್ನೇಹಿತರಿಗೆ ಮತ್ತು ಕನ್ನಡ ಅಭಿಮಾನಿಗಳಿಗೆ ಪುಸ್ತಕವನ್ನು ಕಳಿಸಿ ಅಭಿಪ್ರಾಯಪಡೆಯಬೇಕೆಂಬ ಪ್ರಬಲವಾದ ಆಕಾಂಕ್ಷೆ ಹುಟ್ಟಿತು. ವಿಶ್ವವಿದ್ಯಾನಿಲಯದ ಕನ್ನಡದ ಉಪನ್ಯಾಸಕರಿಗೂ, ಪ್ರೊಫೆಸರಿಗೂ, ' ನಾ ಕಂಡ ಜರ್ಮನಿ' ಯ ಪ್ರತಿಯನ್ನು ಕಳುಹಿಸಿಕೊಟ್ಟೆ. ಒಂದು ಕಡೆ ಹೆದರಿಕೆ, ಇನ್ನೊಂದು ಕಡೆ ಉತ್ಸಾಹ. ಏನೇ ಆಗಲಿ ಪುಸ್ತಕ ಕಳುಹಿಸೋಣ ಎಂದು ಕಳುಹಿಸಿದೆ. ಮೈಸೂರಿನಲ್ಲಿ ಕನ್ನಡದ ಪ್ರೊಫೆಸರ್ ಆಗಿದ್ದ ದೇಜಗೌ ಅವರಿಗೂ ಒಂದು ಪ್ರತಿಯನ್ನು, ಬೆಂಗಳೂರಿನಲ್ಲಿದ್ದ ಡಾ.ಮುಗಳಿ, ವಿ.ಸಿ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಆಗಿದ್ದ ಡಾ. ವಿ. ಕೆ. ಗೋಕಾಕ್‌ಗೆ ಕಳುಹಿಸಿಕೊಟ್ಟೆ.

ಕಳುಹಿಸುವಾಗ ಹೆದರಿಕೆಯಿದ್ದರು, ಅವರುಗಳಿಂದ ಬಂದ ಅಭಿಪ್ರಾಯ, ಉತ್ತೇಜನ ಧೈರ್ಯವನ್ನು ತುಂಬಿತು. ಪುಸ್ತಕ ಕಳುಹಿಸಿದ ಐದಾರು ದಿನಗಳಲ್ಲಿ ಪ್ರೊ. ದೇಜಗೌ ರಿಂದ - ಒಂದು ಕಾಗದ ಬಂತು. ಅದರಲ್ಲಿ ಹೀಗೆ ಇತ್ತು- " ನಾನು ಹೊರದೇಶಕ್ಕೆ ಹೋಗಿಲ್ಲ, ಆದರೆ ನಿಮ್ಮ 'ನಾ ಕಂಡ ಜರ್ಮನಿ' ಪುಸ್ತಕದಿಂದ ಯುರೋಪ್ ದೇಶವನ್ನೇ ನೋಡಿದ ಹಾಗಾಯಿತು. ಬಹು ಸೊಗಸಾಗಿ ಬರೆದಿದ್ದೀರಿ. ಇನ್ನೂ ಹೆಚ್ಚು ಪುಸ್ತಕಗಳನ್ನು ನಿರೀಕ್ಷಿಸುತ್ತೇನೆ. " ಎಂದು ಕಾಗದ ಬರೆದರು. ಈ ಕಾಗದ ನೋಡಿದಾಗ ನನಗೆ ಆನಂದವೋ ಆನಂದ. ಒಬ್ಬ ಕಾರ್ಮಿಕ ವರ್ಗಕ್ಕೆ ಸೇರಿದವನು, ನಾನು. ವಿಶ್ವವಿದ್ಯಾನಿಲಯದ ಪ್ರೊಫೆಸರ್, ಕಾರ್ಮಿಕ ಬರೆದ ಪುಸ್ತಕದ ಬಗ್ಗೆ ಬರೆದಿದ್ದ ಇಂತಹ ಅಭಿಪ್ರಾಯವನ್ನು ಓದಿ ಯಾರಿಗೆ ತಾನೆ ಆನಂದ ಉಂಟು ಮಾಡಲ್ಲ.

ಇದೇ ದೇಜಗೌ ಅವರ ಮೊದಲ ಪರಿಚಯ. ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಮೇಲೆ, ಮಲ್ಲೇಶ್ವರದ ವಾಸವಿ ಕಲ್ಯಾಣ ಮಂಟಪದ ಒಂದು ಕಾರ್ಯಕ್ರಮಕ್ಕೆ ಬಂದಿದ್ದರು. ಆ ಭಾಷಣದಲ್ಲಿ ಕನ್ನಡ ಅಭಿವೃದ್ಧಿಗಾಗಿ ಏನು ಮಾಡಬೇಕು ಎಂದು ಕೆಲವು ಸೂಚನೆಗಳನ್ನು ಕೊಟ್ಟರು. ಕನ್ನಡ ಬೆಳೆಯಬೇಕಾದರೆ ರೂಢಿಯಲ್ಲಿರುವ ಎಲ್ಲ ಭಾಷೆಯ ಪದಗಳನ್ನು ಕನ್ನಡ ಪದಗಳನ್ನಾಗಿ ಮಾಡಿಕೊಳ್ಳಬೇಕು.

ಹೀಗೆ ಹೊಸ ವಿಚಾರಗಳನ್ನು ತಿಳಿಸಿದರು. ಕಾರ್ಯಕ್ರಮ ಮುಗಿದ ಮೇಲೆ ಅವರನ್ನು ಪರಿಚಯ ಮಾಡಿಕೊಂಡೆ. ಅವರು " ನಿಮ್ಮ ಪರಿಚಯ ಆಗಿದ್ದು ಬಹಳ ಸಂತೋಷ. ಮತ್ತೇನು ಬರೆದಿದ್ದೀರಿ. ಹೊಸ ಪುಸ್ತಕ ಯಾವುದು ? ಆಗ ನಾನು: " ನಾನು ಇಂಜಿನಿಯರ್, ಕಾರ್ಮಿಕ ವರ್ಗಕ್ಕೆ ಸೇರಿದವನು. ಪುಸ್ತಕಗಳು ಎಲ್ಲಿ ಬರೆಯುವುದು' ' ನಾ ಕಂಡ ಜರ್ಮನಿ'- ಮೊದಲ ಪುಸ್ತಕ. ಅದೂ ಶರ್ಮಾಜಿಯವರ ಪ್ರೋತ್ಸಾಹದಿಂದ ಬರೆದೆ. ಇದೇ ಮೊದಲನೆಯ ಮತ್ತು ಕೊನೆಯ ಪುಸ್ತಕ." ಅದಕ್ಕೆ ಅವರು " ಹಾಗೆ ಬಿಡಬೇಡಿ, ಬರವಣಿಗೆಯನ್ನು ಹವ್ಯಾಸವಾಗಿ ಇಟ್ಟುಕೊಳ್ಳಿ. ನಿಮ್ಮ ಶೈಲಿ ಚೆನ್ನಾಗಿದೆ. ಕೈಗಾರಿಕೆಯ ಜ್ಞಾನವನ್ನು ಕನ್ನಡ ಸಾಹಿತ್ಯಕ್ಕೆ ಪುಸ್ತಕ ಮತ್ತು ಲೇಖನಗಳ ಮೂಲಕ ಕೊಡುಗೆ ಕೊಡಿ" ಎಂದರು.

ಜಿ. ಪಿ. ರಾಜರತ್ನಂ ಮಧುಮೇಹ ರೋಗದಿಂದ ಮಲ್ಲೇಶ್ವರಂ ಆಸ್ಪತ್ರೆಯಲ್ಲಿದ್ದರು. ಆಗ ಶರ್ಮಾಜಿಯವರು, ನಾನು ನೋಡಲೆಂದು ಹೋಗಿ, ಮಾತಾನಾಡುತ್ತಾ ಕುಳಿತ್ತಿದ್ದೆವು. ಅದೇ ವೇಳೆಗೆ ದೇಜಗೌ ಅವರೂ ಆಸ್ಪತ್ರೆಗೆ ಬಂದರು. ಜಿ. ಪಿ. ರಾಜರತ್ನಂರವರ ಆರೋಗ್ಯದ ಬಗ್ಗೆ ವಿಚಾರಿಸಿದ ಮೇಲೆ, ಶರ್ಮಾಜಿಯವರು ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟರು. ಆದರೆ ದೇಜಗೌ ಅವರು " ಇಲ್ಲ, ಶ್ರೀನಿವಾಸಯ್ಯನವರ ; ಪರಿಚಯ ಇದೆ, ಅವರ ಪುಸ್ತಕದ ಮೂಲಕ. ಇನ್ನೂ ಹೆಚ್ಚು ಬರೆಯಲು ಪ್ರೋತ್ಸಾಹಿಸಿ" ಎಂದು ಉತ್ತೇಜನದ ಮಾತನ್ನು ಆಡಿದರು. ಶರ್ಮಾಜಿಗೂ ಸಂತೋಷವಾಯಿತು.

ನನಗೆ ದೇಜಗೌ ಅವರ ಹೆಚ್ಚು ಪರಿಚಯ ಇಲ್ಲದಿದ್ದರೂ, ಒಂದು ಪುಸ್ತಕ ಓದಿದ ಮೇಲೆ ಅಪರಿಚಿತ ಲೇಖಕನಾದ ನನ್ನ ಬಗ್ಗೆ ಎಷ್ಟು ಆಸಕ್ತಿ ಕನ್ನಡದಲ್ಲಿ ಉತ್ತಮವಾದ ಸಾಹಿತ್ಯ ಬರಲೆಂಬ ಅವರ ಹಂಬಲ ಎದ್ದು ಕಾಣುತ್ತದೆ.

' ಪ್ರಕೃತಿ ಜೀವನ' ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭವಾದಾಗ ಇತರರೆಲ್ಲರೂ ದೇಜಗೌ ಅವರನ್ನು ಕರೆಸಬೇಕೆಂದರು ಕಾಗದ ಬರೆದವು ಒಪ್ಪಿ ಬಂದರು. ಪ್ರಕೃತಿ ಜೀವನ ಕೇಂದ್ರದಲ್ಲಿ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಬಹು ಉತ್ತೇಜನವಾಗಿ ಮಾತಾಡಿದರು. ಆರೋಗ್ಯದ ಬಗ್ಗೆ ಹೆಚ್ಚು ಹೆಚ್ಚು ಲೇಖನಗಳು, ಪುಸ್ತಕಗಳು ಅವಶ್ಯಕ ಎಂದು ನಮ್ಮೆಲ್ಲರನ್ನು ಹುರಿದುಂಬಿಸಿದರು.

ಒಂದು ಸಾರಿ ಮೈಸೂರಿಗೆ ಹೋಗಿದ್ದಾಗ, ಕುಲಪತಿಗಳಾಗಿದ್ದ ದೇಜಗೌ ಅವರನ್ನು ನೋಡಲು ಹೋದೆ. ಜೀ. ಶಂ. ಪ. ಅವರು ಕಾರ್ಯದರ್ಶಿಗಳಾಗಿದ್ದರು. ಕುಲಪತಿಗಳನ್ನು ನೋಡಬೇಕೆಂದು ಕೇಳಿದ ಕೂಡಲೆ 'ನಾ ಕಂಡ ಜರ್ಮನಿ ಪುಸ್ತಕದ ಶ್ರೀನಿವಾಸಯ್ಯನವರಲ್ಲವೇ ನೀವು, ನಿಮ್ಮ ವಿಚಾರ ಕುಲಪತಿಗಳು ತಿಳಿಸಿದ್ದಾರೆ' ಎಂದು ಕುಲಪತಿಗಳ ಸಂದರ್ಶನಕ್ಕೆ ಕಳುಹಿಸಿದರು ನನಗೆ ಮನಸ್ಸಿನಲ್ಲಿ " ಇವರದು ಎಷ್ಟು ದೊಡ್ಡ ಗುಣ, ಒಬ್ಬ ಕನ್ನಡ ಲೇಖಕರ ಬಗ್ಗೆ ಎಷ್ಟು ಆಸಕ್ತಿ ತೋರಿಸುತ್ತಾರೆ" ಎಂದು ಸಂತೋಷವಾಯಿತು.

ಕುಲಪತಿಗಳ ಭೇಟಿಯಾದಾಗ ಪುಸ್ತಕಗಳ ಬಗ್ಗೆ ವಿಚಾರಿಸಿದರು. 'ನಾ ಕಂಡ ಜರ್ಮನಿ'ಯು ಒಳ್ಳೆಯ ಪುಸ್ತಕ ಎಂದು ಹೊಗಳಿದರು. ನಮ್ಮ ಮನೆಯ ಬಂಧುಗಳ ಕುಶಲ ವಿಚಾರಿಸಿದರು. ಕೊನೆಗೆ ಶರ್ಮಾಜಿ, ಜಿ. ಪಿ. ರಾಜರತ್ನಂ ಹೇಗೆ ನಂಟರು ಎಂದು ಕೇಳಿದರು. ನಾನು "ಅವರಿಬ್ಬರು ನನ್ನ ಗುರುಗಳು ಅಷ್ಟೆ, ಮಗನಂತೆ ಸಾಕಿದ್ದಾರೆ. ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ. 'ಬಳಗದ ಸದಸ್ಯ' ನಾನು ನಾಗಮಂಗಲದ ಹತ್ತಿರ ಚೌದರಿಕೊಪ್ಪಲದ ರೈತ ಕುಟುಂಬಕ್ಕೆ ಸೇರಿದವನು ಎಂದು ಹೇಳಿದ ಮೇಲೆ, "ನೀವು ಶರ್ಮಾಜಿಯವರ ಜೊತೆ ಇರುವುದರಿಂದ ಅವರ ಕುಟುಂಬದವರೆಂದು ತಿಳಿದಿದ್ದೆ. ಒಬ್ಬ ರೈತ ಕುಟುಂಬಕ್ಕೆ ಸೇರಿ ಒಳ್ಳೆಯ ಪುಸ್ತಕ ಬರೆದಿದ್ದೀರಿ. ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಪುಸ್ತಕ, ಲೇಖನಗಳನ್ನು ಬರೆಯಿರಿ, ನಿಮ್ಮ ಭಾಷೆ ಸರಳ, ವಿಶ್ವಕೋಶಕ್ಕೆ ಲೇಖನಗಳನ್ನು ಯಾಕೆ ಬರೆಯಬಾರದು" ತಕ್ಷಣ ವಿಳಾಸವನ್ನು ತೆಗೆದು ಶ್ರೀ ಕೆ. ಟಿ. ವೀರಪ್ಪನವರಿಗೆ ದೂರವಾಣಿ ಮೂಲಕ ನನ್ನನ್ನು ಲೇಖನಗಳಿಗಾಗಿ ಉಪಯೋಗಿಸಿಕೊಳ್ಳಬೇಕಾಗಿ ಹೇಳಿದರು.

2-3 ದಿನ ಬಿಟ್ಟು ಬೆಂಗಳೂರಿಗೆ ಬರುವಷ್ಟರಲ್ಲಿ ಲೇಖನಗಳನ್ನು ಕೋರಿ ಶ್ರೀ ಕೆ. ಟಿ. ವೀರಪ್ಪನವರ ಕಾಗದ ಬಂದಿತ್ತು. ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಲೇಖನಗಳನ್ನು ಬರೆಯಬೇಕೆಂಬ ಹಂಬಲ ಹುಟ್ಟಿತು. ಬರೆದು ಕಳುಹಿಸಿದೆ, ಮುದ್ರಣವು ಆಯಿತು.

' ನಾ ಕಂಡ ಜರ್ಮನಿ' ಪುಸ್ತಕ ಎರಡನೇ ಮುದ್ರಣವಾಗಬೇಕಾದರೆ ಪ್ರೊ. ದೇಜಗೌ ಅವರನ್ನು ಪ್ರಾರ್ಥಿಸಿಕೊಂಡಾಗ, ಸುಮಾರು ಎಂಟು ಪುಟಗಳ ಮುನ್ನುಡಿಯನ್ನು ಬರೆದು ಪುಸ್ತಕಕ್ಕೆ ಮೆರುಗನ್ನು ಕೊಟ್ಟಿರುವುದಲ್ಲದೆ, "ಇನ್ನೂ ಅಪಾರ ವೈಚಾರಿಕ, ವೈಜ್ಞಾನಿಕ ಸಾಹಿತ್ಯ ಶ್ರೀನಿವಾಸಯ್ಯನವರಿಂದ ನಿರೀಕ್ಷಿಸುತ್ತಿದ್ದೇನೆಂದು" ಮುನ್ನುಡಿಯಲ್ಲಿ ಬರೆದು ಆಶೀರ್ವದಿಸಿದ್ದಾರೆ.

ಡಾ. ಮರಿಗೌಡರು, ಕುವೆಂಪುರವರ ಮನೆಗೆ ಹೋಗುವಾಗ ದೇಜಗೌ ಅವರನ್ನು ಜೊತೆಗೆ ಕರೆದುಕೊಂಡು ಹೋಗುವುದು ರೂಢಿ, ನಾನೂ 2-3 ಬಾರಿ ಹೋಗಿದ್ದೆ. ಕುವೆಂಪುರವರ ಪರಿಚಯ ಅವರ ಮನೆಗೆ ಹೋಗಿ ಮಾಡಿಕೊಂಡೆ ಅದಕ್ಕೆ ಮುಂಚೆ " ನಾ ಕಂಡ ಜರ್ಮನಿ" ಪುಸ್ತಕ ಕಳುಹಿಸಿದ್ದೆ. ಕುವೆಂಪುರವರು ಪುಸ್ತಕದ ಬಗ್ಗೆ ದೇಜಗೌ ಅವರನ್ನು ಕೇಳಿದ್ದರು. ಅವರು ಪುಸ್ತಕದ ಬಗ್ಗೆ ವಿವರವಾಗಿ ತಿಳಿಸಿದ್ದರು. ನಾನು ದೇಜಗೌ-ಮರಿಗೌಡರ ಜೊತೆಗೆ ಕುವೆಂಪುರವರ ಮನೆಗೆ ಹೋದಾಗ ದೇಜಗೌ ಕುವೆಂಪುರವರಿಗೆ ಪರಿಚಯ ಮಾಡುತ್ತಾ " ಇವರೇ 'ನಾ ಕಂಡ ಜರ್ಮನಿ' ಶ್ರೀನಿವಾಸಯ್ಯ, ನೀವು ಕೇಳುತ್ತಿದ್ದಿರಲ್ಲ" ಎಂದರು. ಆಗ ಕುವೆಂಪುರವರು 'ನೀವೇನಾ ಜರ್ಮನಿ ಶ್ರೀನಿವಾಸಯ್ಯ' ನಿಮ್ಮ ಪುಸ್ತಕ ಓದಿದೆ. ಜರ್ಮನಿ ಊರುಗಳನ್ನು ಪರಿಚಯ ಮಾಡುವುದಕ್ಕಿಂತ ಅಲ್ಲಿಯ ಜನಗಳನ್ನ ಪರಿಚಯ ಮಾಡಿದ್ದೀರಾ. ಒಳ್ಳೆಯ ಚಿತ್ರವನ್ನ ಕೊಟ್ಟಿದ್ದೀರಾ. ಇನ್ನೂ ಹೆಚ್ಚು ಪುಸ್ತಕಗಳನ್ನು ಬರೆಯಿರಿ " ಎಂದರು. ದೇಜಗೌ ಕುವೆಂಪುರವರಿಗೆ ಕೂಡಾ ನನ್ನನ್ನ, ನನ್ನ ಪುಸ್ತಕವನ್ನು ಆಗಲೇ ಪರಿಚಯ ಮಾಡಿಕೊಟ್ಟಿದ್ದರು. ಲೇಖಕರನ್ನು ಉತ್ತೇಜಿಸಿ ಒಳ್ಳೆಯ

ಲೇಖಕರನ್ನಾಗಿ, ಗ್ರಂಥಕರ್ತಕರನ್ನಾಗಿ ಮಾಡಬೇಕೆಂಬ ಅವರ ಹಿರಿದಾಸೆ ಇದರಲ್ಲಿ ವ್ಯಕ್ತವಾಗುತ್ತದೆ. ಕುವೆಂಪು, ದೇಜಗೌ, ಮರಿಗೌಡರ ಸಂಭಾಷಣೆಯನ್ನು ಕೇಳುವುದೇ ಒಂದು ವೈಶಿಷ್ಟ್ಯ.

ದೇ.ಜ.ಗೌರವರು 'ಪ್ರಕೃತಿ ಚಿಕಿತ್ಸೆ ಹಾಗು ಜೀವನ'ದ ಬಗ್ಗೆ ಹೆಚ್ಚು ಪುಸ್ತಕಗಳು ಬಂದು, ಹೆಚ್ಚು ಪ್ರಚಾರವಾಗಬೇಕೆಂದು ಕಾಗದ ಬರೆದು ಮನೆಗೂ ಬಂದು, ಎರಡು ಗಂಟೆಗಳ ಕಾಲ ಚರ್ಚಿಸಿದರು. ಎಷ್ಟು ಆಸಕ್ತಿ. ಕನ್ನಡದಲ್ಲಿ ಎಲ್ಲ ವಿಷಯಗಳ ಲೇಖನಗಳು, ಪುಸ್ತಕಗಳೂ ಪ್ರಕಟವಾಗಿ ಸಾಹಿತ್ಯ ಬೆಳೆಯಬೇಕೆಂದು ಅವರ ಪ್ರಯತ್ನ.

೭೫ ವರ್ಷ, ಮೀರಿದ ವಯಸ್ಸಿನಲ್ಲೂ ಅತ್ಯಂತ ಚಟುವಟಿಕೆಯಿಂದ ಸಾಹಿತ್ಯ, ಜನ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಇನ್ನೂ ಹೆಚ್ಚು ಸೇವೆ ಮಾಡಲು, ಆ ದೇವರು ಆಯುಸ್ಸು, ಆರೋಗ್ಯ, ಐಶ್ವರ್ಯ ಕೊಟ್ಟು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ.

* * * * *

ಕಾಯಕ ನಿಷ್ಠ ದೇಜಗೌ

ಪ್ರೊ. ಡಿ. ಕೆ. ರಾಜೇಂದ್ರ

"ನನ್ನ ಬಾಳೇ ಒಂದು ಪವಾಡವೆಂದುಕೊಂಡಿದ್ದೇನೆ. ಆ ಮಾತು ಇಂದಿಗೂ ಸುಳ್ಳಾಗಿಲ್ಲ. ನಾನು ಹುಟ್ಟಿದ ಪರಿಸರವನ್ನೂ, ಇಂದಿನ ಪರಿಸ್ಥಿತಿಯನ್ನು ನೆನೆದಾಗ ಆ ಮಾತಿನ ಯಥಾರ್ಥತೆ ಸಿದ್ಧವಾಗುತ್ತದೆ"- ದೇಜಗೌ ಅವರೇ ಒಂದು ಕಡೆ ಹೀಗೆ ಹೇಳಿಕೊಂಡಿದ್ದಾರೆ. ಅವರ ಆತ್ಮಚರಿತ್ರೆಯನ್ನು ಓದಿದ ಯಾರಿಗಾದರೂ ಈ ಮಾತಿನ ಸತ್ಯಾಸತ್ಯತೆ ಅರ್ಥವಾಗುತ್ತದೆ. 'ಗುಡಿಸಲಿನಿಂದ ಗಂಗೋತ್ರಿ' ಯವರೆಗಿನ ದೇಜಗೌ ಅವರ ಸಾಧನೆ-ಸಿದ್ಧಿಗಳನ್ನು ಗಮನಿಸಿದಾಗ, ಅದರ ಹಿಂದೆ ತುಳುಕಾಡುವ ಅವರ ಜೀವನ ಶ್ರದ್ಧೆ, ಉತ್ಸಾಹ, ನಿಷ್ಠೆ, ಶ್ರಮ, ದುಡಿಮೆಯ ಮನೋಭಾವ, ನಾಡುನುಡಿಗಳ ಬಗೆಗೆ ಅವರು ಹೊಂದಿರುವ ದೃಷ್ಟಿ ಧೋರಣೆ, ಎಷ್ಟೆಂಬುದು ಸುಸ್ಪಷ್ಟವಾಗುತ್ತದೆ.

ದೇಜಗೌ ನಿಜಕ್ಕೂ ಒಬ್ಬ ಪವಾಡಪುರುಷರೇ. ಹಿಡಿದ ಕಾರ್ಯವನ್ನು ಬಿಡದೆ ಸಾಧಿಸುವ ಅವರ ಛಲಗಾರಿಕೆಯನ್ನು ಗಮನಿಸಿದಾಗ ಮೇಲಿನ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕುವೆಂಪು ಅವರು ಹೇಳಿದಂತೆ ಅವರು 'ಮುಂದೆ ಒಂದು ಗುರಿ ಹಿಂದೆ ಒಬ್ಬ ಗುರು'ವನ್ನು ಇಟ್ಟುಕೊಂಡು ಮುನ್ನಡೆದವರು. ತಮ್ಮ ಗುರು ಕುವೆಂಪು ಅವರ ಈ ತತ್ವವನ್ನು ದೀಕ್ಷೆಯಾಗಿ ಸ್ವೀಕರಿಸಿದ ದೇಜಗೌ ಅವರು ತಮ್ಮ ಕಾರ್ಯರಂಗದಲ್ಲಿ ಸಾಧಿಸಿದ್ದು ಅಪಾರ. ಸಾಹಿತ್ಯ ಕ್ಷೇತ್ರವಾಗಲಿ, ಸಾಮಾಜಿಕ ಕ್ಷೇತ್ರವಾಗಲಿ, ಶೈಕ್ಷಣಿಕ ಕ್ಷೇತ್ರವಾಗಲಿ, ಆಡಳಿಕ ಕ್ಷೇತ್ರವಾಗಲಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಅವರು ಉತ್ತಮವಾದುದನ್ನು ಸಾಧಿಸಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳಸುವುದರಲ್ಲಿ ಅವರು ಸಿದ್ಧಹಸ್ತರು. ಎಲ್ಲಾ ಕೆಲಸಗಳನ್ನೂ ದೂರದೃಷ್ಠಿಯಿಟ್ಟುಕೊಂಡೇ ಕೈಗೊಳ್ಳುವ ದೇಜಗೌ ಅಂತಹವುಗಳ ಬಗೆಗೆ ನಡೆಸುವ ಚಿಂತನೆ, ಮಾಡುವ ಪ್ರಯತ್ನ ಅಪೂರ್ವ ರೀತಿಯದು. ಅದಕ್ಕಾಗಿ ತೆಗೆದುಕೊಳ್ಳುವ ಶ್ರಮ ಅವರಿಗೆ ವಿಶಿಷ್ಟವಾದುದು. ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನದ ವಿಷಯದಲ್ಲಾಗಲಿ, ನೆಲ ಜಲದ ವಿಷಯಗಳಲ್ಲಾಗಲಿ ದೇಜಗೌ ಹೆಚ್ಚಿನ ಚಿಂತನೆಯನ್ನು ನಡೆಸಿದವರು. ಅವುಗಳ ವಿಷಯದಲ್ಲಿ ಏನಾದರೂ ಸಮಸ್ಯೆಗಳು ಉದ್ಭವಿಸಿದಾಗ ನಿಜವಾಗಿಯೂ 'ಜವರಾಯ' ನಂತೆಯೇ ಸಿಡಿದೆದ್ದಿದ್ದಾರೆ. ಕಾರ್ಯ ಸಾಧಿಸಿದ್ದಾರೆ.

ಶೈಕ್ಷಣಿಕ ವಿಷಯಗಳ ಬಗ್ಗೆ, ಸಾಮಾಜಿಕ ವಿಷಯಗಳ ಬಗ್ಗೆ ದೇಜಗೌ ನಡೆಸುತ್ತ ಬಂದಿರುವ ಕಾಳಜಿ ಅಪಾರ. ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಪರೀಕ್ಷಾಧಿಕಾರಿಗಳಾಗಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಕುಲಪತಿಗಳಾಗಿ ಅವರು ಮಾಡಿದ ಕಾರ್ಯಗಳು ಎಲ್ಲರಿಗೂ ಗೊತ್ತಿರುವ ವಿಷಯವೇ. ಈ ಸಂದರ್ಭದಲ್ಲಿ ಅವರು ತೆಗೆದುಕೊಂಡ ಶ್ರಮ, ಮಾಡಿದ ಸಾಧನೆ, ನಡೆಸಿದ ಹೋರಾಟ ಇವೆಲ್ಲವೂ ಶಿಕ್ಷಣ ಕ್ಷೇತ್ರದ ಇತಿಹಾಸ ಪುಟಗಳಲ್ಲಿ ದಾಖಲಾಗಿರುವಂತಹವು. ರಾಷ್ಟ್ರಕವಿ ಕುವೆಂಪು

ಮಾನಸಗಂಗೋತ್ರಿಯ ಕನಸನ್ನು ಕಂಡು ಅದನ್ನು ಹುಟ್ಟು ಹಾಕಿದರು. ಆದರೆ ಅದಕ್ಕೆ ನೀರೆರೆದು ಪೋಷಿಸಿ ಬೆಳೆಸಿದವರು ದೇಜಗೌ. ಅವರು ಕುಲಪತಿಗಳಾಗಿದ್ದ ಸಂದರ್ಭದಲ್ಲಿ ತಲೆ ಎತ್ತಿದ ಹಲವು ಹೊಸ ಅಧ್ಯಯನ ವಿಷಯಗಳು, ರೂಪುಗೊಂಡ ಕಟ್ಟಡಗಳು; ಮಾನಸಗಂಗೋತ್ರಿಯ ಮುಖ್ಯ ಕೇಂದ್ರಕ್ಕೆ ಹೊಂದಿಕೊಂಡಂತೆ ಮಂಗಳೂರು ಹಾಗೂ ಬಿ. ಆರ್. ಪ್ರಾಜೆಕ್ಟ್‌ಗಳಲ್ಲಿ ಆರಂಭಗೊಂಡ ಸ್ನಾತಕೋತ್ತರ ಕೇಂದ್ರಗಳು- ಇವೆಲ್ಲ ದೇಜಗೌ ಅವರ ದೂರದೃಷ್ಟಿಯ ಹಾಗೂ ಅಪಾರ ಶ್ರಮದ ಫಲ. ಇಂದು ಅವೆರಡೂ ಸ್ವತಂತ್ರ ಅಸ್ತಿತ್ವವನ್ನು ಹೊಂದಿ ರೂಪುಗೊಳ್ಳುವಷ್ಟು ಶಕ್ತವಾಗಿ ಅವನ್ನು ಹುಟ್ಟು ಹಾಕಿದ್ದು ಅವರ ಕಾರ್ಯ ಯೋಜನೆಯ ಪ್ರತಿಭಾದೃಷ್ಟಿಗೂ ಸಾಕ್ಷಿ.

ದೇಜಗೌ ಅವರಿಗೂ ಸೋಮಾರಿತನಕ್ಕೂ ಎಣ್ಣೆ ಸೀಗೆಕಾಯಿಯ ಸಂಬಂಧ. ಅವರೆಡೂ ಹತ್ತಿರ ಸೇರುವುದಿಲ್ಲ. ಸದಾ ಶ್ರಮದ ದುಡಿಮೆಯಲ್ಲಿ ತೊಡಗುವ ಅವರು ತಮ್ಮ ಕಾರ್ಯಕ್ಷೇತ್ರವಾಗಿ ಆರಿಸಿಕೊಳ್ಳುವ ವಿಷಯಗಳೂ ಅಷ್ಟೇ ಕ್ಲಿಷ್ಟವಾದುವು. ಸ್ಥಳನಾಮಗಳ ಅಧ್ಯಯನ ಅವರಿಗೊಂದು ಅತ್ಯಂತ ಪ್ರಿಯವಾದ ವಿಷಯ. ಭಾಷಾ ದೃಷ್ಟಿಯಿಂದ ಅಷ್ಟೇ ಅಲ್ಲದೆ, ಅವುಗಳ ಹಿಂದೆ ಹುದುಗಿರುವ ಹಲವು ಕುತೂಹಲದ ಸಂಗತಿಗಳನ್ನು ಹೆಕ್ಕಿ ತೆಗೆಯುವ ಆಸಕ್ತಿ ಕೂಡ. ಅದಕ್ಕಾಗಿ ಅವರು ಅಂತಹ ಸಂಘಟನೆಯನ್ನು ಮಾಡಿ ಅದರಲ್ಲಿ ಕಾರ್ಯ ಪ್ರವೃತ್ತರಾಗಿರುವುದೂ ಉಂಟು. ಇದೊಂದು ದೊಡ್ಡ ಕೆಲಸ. ಒಬ್ಬಿಬ್ಬರಿಂದ ಆಗಿ ಮುಗಿಯುವಂತಹುದಲ್ಲ. ಆದರೆ ಅವರ ಪ್ರಯತ್ನ ನಿಂತಿಲ್ಲ. ಯಾರು ಬರಲಿ ಬಿಡಲಿ, ಉತ್ಸಾಹ ತೋರಲಿ ತೋರದಿರಲಿ, ತಮ್ಮ ಪಾಡಿಗೆ ತಾವು ಕೈಗೊಂಡ ಕಾರ್ಯವನ್ನು ಪೂರೈಸುವ ಅಥವಾ ಮುಂದುವರಿಸುವ ಸಾಹಸ ಪ್ರವೃತ್ತಿಯನ್ನು ಬಿಟ್ಟವರಲ್ಲ. ಅವರ ಈ ಸಾಹಸ ಪ್ರವೃತ್ತಿ ಆರಂಭದಿಂದಲೂ ಅವರಲ್ಲಿ ಇದ್ದದ್ದು. ಇದು ಎಲ್ಲರಿಗೂ ಚೆನ್ನಾಗಿಯೇ ಗೊತ್ತಿದ್ದ ಸಂಗತಿ. ಶ್ರೀ ಕೆ. ವಿ. ಶಂಕರಗೌಡರು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ 'ಕನ್ನಡ ವಿಶ್ವಕೋಶ'ಕ್ಕೆ ಸಂಬಂಧಿಸಿದಂತೆ ಅವರಿಬ್ಬರ ನಡುವೆ ನಡೆದ ಸಂಭಾಷಣೆಯ ತುಣುಕನ್ನು ಇಲ್ಲಿ ಉದ್ಧರಿಸಬಹುದೆಂದು ತೋರುತ್ತದೆ. ಶಂಕರಗೌಡರೆ ಒಂದೆಡೆ ಇದನ್ನು ಬರೆದುಕೊಂಡಿದ್ದಾರೆ:

"ಅಂದೊಂದು ದಿನ ಜವರೇಗೌಡರು ಯಾವುದೋ ಕಾರಣಕ್ಕಾಗಿ ನನ್ನೆಡೆಗೆ ಬಂದರು. ಅಂದು ನನ್ನ ತಲೆಯಲ್ಲಿ ಕನ್ನಡ ವಿಶ್ವಕೋಶದ ಸಮಸ್ಯೆಗಳ ತಾಂಡವವಿತ್ತು. ಸಾವಿರಾರು ರೂಪಾಯಿಗಳ ಯೋಜನೆಯನ್ನೊಳಗೊಂಡು ರೂಪಿಸಲ್ಪಟ್ಟ ವಿಶ್ವಕೋಶದ ಕಾರ್ಯ ಕಲ್ಲುಗುಂಡಿಗಳಿಂದ ತುಂಬಿ ಹಳ್ಳಿಯ ರಸ್ತೆಯಲ್ಲಿ ಸಾಗುವ ಎತ್ತಿನ ಗಾಡಿಯಂತೆ ನಡೆಯುತ್ತಿತ್ತು. ತಾಯಿ ಇಲ್ಲದ ತಬ್ಬಲಿಯಂತೆ ಅದರ ದುಃಸ್ಥಿತಿಯಾಗಿತ್ತು. ವಿಶ್ವಕೋಶವು ಕೋಶಾವಸ್ಥೆಯನ್ನು ಮುಗಿಸುವ ಸ್ಥಿತಿಯೇ ಇಲ್ಲವೇನೋ ಎನ್ನುವ ಚಿಂತೆ ಎದ್ದಿತ್ತು. ಸದಸ್ಯರ ಪ್ರಶ್ನೆಗಳ ಪುರಿಗಣೆಗಳಿಗೆ ನಾನು ಪಕ್ಕಾಗಬೇಕಿತ್ತು. ಆದ್ದರಿಂದ ಏನಾದರೂ ಸರಿ, ನನ್ನ ಕಾಲದಲ್ಲಿದನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕೆಂಬ ಹಟ ನನಗೆ ಬಂದಿತ್ತು.

ಜವರೇಗೌಡರನ್ನು ಕಂಡೊಡನೆ ನನ್ನಲ್ಲಿ ಸುಳಿಯುತ್ತಿದ್ದ ಸಮಸ್ಯೆಯ ಚಕ್ರ ತನ್ನ ಗತಿಯನ್ನೊಮ್ಮೆ ಬದಲಿಸಿದಂತಾಯಿತು. ನಾನು ಅವರನ್ನು ಕೇಳಿದೆ:

"ಮೇಸ್ಟ್ರೇ, ನನಗೊಂದು ಉಪಕಾರ ಮಾಡುವಿರಾ?"

"ಹೇಳಿ, ನಿಮ್ಮ ಆಜ್ಞೆಯನ್ನು ಪಾಲಿಸುತ್ತೇನೆ"- ಅವರೆಂದರು.

ಕನ್ನಡ ವಿಶ್ವಕೋಶಕ್ಕೆ ಗಜೇಂದ್ರ ಮೋಕ್ಷ ಕೊಡಿಸುವಿರಾ? ನಾನು ಅವರನ್ನು ಕೇಳಿದೆ. ಜವರೇಗೌಡರು ಒಂದು ನಿಮಿಷ ಆಲೋಚಿಸಿದರು. ದೃಢ ನಿರ್ಧಾರಕ್ಕೆ ಬಂದು ಹೇಳಿದರು. "ಖಂಡಿತ ಮಾಡುತ್ತೇನೆ. ಆದರೆ ನನಗೆ, ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿಕೊಡಿ. ಸರ್ಕಾರದ ಹಣ ಒಂದಿಷ್ಟೂ ಪೋಲಾಗದಂತೆ ವಿಶ್ವಕೋಶದ ಬೃಹತ್ ಕಾರ್ಯವನ್ನು ಶೀಘ್ರವಾಗಿ ಮುಗಿಸುತ್ತೇನೆ".

ಇದು ಪ್ರೊ. ದೇಜಗೌ ಅವರ ಕಾರ್ಯ ವೈಖರಿ. ಯಾವುದನ್ನೇ ಆದರೂ ಸಂಕಲ್ಪವಾಗಿ ತೆಗೆದುಕೊಂಡು, ಮಾಡಿ ಮುಗಿಸುವ ಛಲಗಾರಿಕೆ. ಶಂಕರೇಗೌಡರಿಗೆ ಅವರ ಈ 'ಭೀಮ ಶಕ್ತಿ' ತಿಳಿದಿತ್ತು. ಆದಕ್ಕಾಗಿಯೇ ಅವರು ಈ ಮಹತ್ಕಾರ್ಯವನ್ನು ಅವರ ಮೂಲಕ ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿಕೊಟ್ಟು ಸಮಾಧಾನದ ಉಸಿರೆಳೆದರು. ಶಂಕರಗೌಡರ ಆ ಸಮಾಧಾನದ ನಿಟ್ಟುಸಿರು ವ್ಯರ್ಥವಾಗದಂತೆ, ಅದರ ಜವಾಬ್ದಾರಿಯನ್ನು ಪೂರ್ಣವಾಗಿ ಹೊತ್ತು ಜವರೇಗೌಡರು ಮಾತನ್ನು ಕೃತಿಗಿಳಿಸಿದರು.

ಪ್ರೊ. ದೇಜಗೌ ಅವರ ಸಾಧನೆಯ ಹಾಗೂ ಯಶಸ್ಸಿನ ಗುಟ್ಟು ಕಾಯಕ ನಿಷ್ಠೆ. ಶ್ರಮವಹಿಸಿ ದುಡಿಯುವುದು. ಕನ್ನಡದ ಬಹುದೊಡ್ಡ 'ಗದ್ಯ ಶಿಲ್ಪಿ' ಎಂದು ಅವರು ಹೆಸರಾಗಿರುವಂತೆಯೇ, ಅಷ್ಟೇ ಬಹುದೊಡ್ಡ ಭಾಷಾಂತರಕಾರರೂ ಕೂಡ. ಈ ಭಾಷಾಂತರ ಕಾರ್ಯ ಸುಲಭವಾದ ಕಾರ್ಯವೇನೂ ಅಲ್ಲ. ತಾಳ್ಮೆ, ಸಹನೆ, ಸಂಯಮಗಳ ಜೊತೆಗೆ ಎರಡೂ ಭಾಷಾ ಸಂಸ್ಕೃತಿಗಳ ಪೂರ್ಣ ಅರಿವೂ ಅಗತ್ಯ. ಅಷ್ಟೇ ಅಲ್ಲ, ಶಿಸ್ತಿನ ಜೊತೆಗೆ ಕುರ್ಚಿಗೆ ಅಂಟಿಕೂರುವ ಜಾಯಮಾನವನ್ನೂ ಬೆಳಿಸಿಕೊಂಡಿರಬೇಕು. ಟಾಲ್‌ಸ್ಟಾಯ್ ಅವರ ಎರಡು ಬೃಹದ್ ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟ ದೇಜಗೌ ಅವರಲ್ಲಿ ಇವೆಲ್ಲವೂ ಎಷ್ಟೊಂದು ಪ್ರಮಾಣದಲ್ಲಿವೆ ಎಂಬುದನ್ನು ಯಾರಾದರೂ ಊಹಿಸಬಹುದು. ಅವು ಕೇವಲ ಬರಡು ಭಾಷಾಂತರಗಳಲ್ಲ, 'ಭಾಷಾಂತರವೂ ಕೂಡ ಒಂದು ಕಲೆ, ಅದು ಒಂದು ಸೃಷ್ಟಿ ಕಾರ್ಯ' ಎಂಬುದನ್ನು ಅವುಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಸ್ವತಂತ್ರವಾಗಿ ಬರೆಯಬಲ್ಲ ಶಕ್ತಿಯುಳ್ಳ ದೇಜಗೌ ಸ್ವತಂತ್ರ, ಸೃಜನಶೀಲ ಬರವಣಿಗೆಯನ್ನೇ ಮಾಡಬಹುದಿತ್ತು. ಹೆಚ್ಚು ಶ್ರಮವಿಲ್ಲದೆ, ಕೃತಿಗಳನ್ನು ರಚಿಸಬಹುದಿತ್ತು. ಆದರೆ ಅವರು ಅಷ್ಟಕ್ಕೆ ತೃಪ್ತಿಹೊಂದಿದವರಲ್ಲ, ಭಯ ಹುಟ್ಟಿಸುವಂತಹ ಗಾತ್ರದ, ಸಮರ್ಥ ಬರಹಗಾರರ, ಪ್ರಸಿದ್ಧ ಗ್ರಂಥಗಳನ್ನು ಕೈಗೆತ್ತಿಕೊಂಡು ಭಾಷಾಂತರಿಸುವ ಅವರ ಮನೋಭಾವವನ್ನು ಗಮನಿಸಿದಾಗ, ಅವರ ಉದ್ದೇಶವೇನೆಂಬುದು ಸ್ಪಷ್ಟವಾಗುತ್ತದೆ. ಎಷ್ಟೇ ಶ್ರಮವಾದರೂ, ಶ್ರೇಷ್ಠ ಕೃತಿಗಳನ್ನು ಕನ್ನಡಿಗರೂ ಓದುವಂತಾಗಲಿ ಎಂಬ ಅವರ ಇಚ್ಛೆ ಅಲ್ಲಿ ಸುಸ್ಪಷ್ಟವಾಗಿ ಗೋಚರಿಸುತ್ತದೆ.

ದೇಜಗೌ ಅವರಿಗೆ ಈಗಾಗಲೇ ಸಾಕಷ್ಟು ಕೀರ್ತಿ, ಸ್ಥಾನಮಾನ ಹಾಗೂ ಗೌರವಗಳು ಸಂದಿವೆ. ಈಗ ಅವರಿಗೆ ಇದಾವೂ ಬೇಕಿಲ್ಲ. ನಿವೃತ್ತಿಯ ಬದುಕನ್ನು ನಿರಾಯಾಸವಾಗಿ, ನಿರಾತಂಕವಾಗಿ ಕಳೆಯಬಹುದಿತ್ತು. ಆದರೆ ಅದು ಅವರ ಜಾಯಮಾನಕ್ಕೆ ಬಂದದ್ದಲ್ಲ.

'ಒಗ್ಗಿದವರಿಗೆ ಸ್ಮಶಾಣವೇ ಸುಖ' ಎಂಬಂತೆ, ಅವರಿಗೆ ದುಡಿಮೆಯೇ ಸುಖದ ಸಾಗರ. ಕಾಯಕದಲ್ಲಿಯೇ ಕೈಲಾಸವನ್ನು ಕಂಡವರು ಅವರು. ಅವರಿಗೆ, ಎಲ್ಲಿಗಾದರೂ ಹೊರ ಹೊರಡಬೇಕೆಂದರೆ ಕಾರಿಗಿಂತ ಕಾಲೇ ಪ್ರಿಯ. ''ದೇವರು ಪ್ರತಿಯೊಬ್ಬರಿಗೂ ಅವರಿಗೆಂದೇ ಕೊಟ್ಟ ಈ ವಾಹನ ಇರುವಾಗ, ಕಾರೇಕೆ?'' ಎಂಬ ಪ್ರಶ್ನೆ ಅವರದ್ದು. ''ದೇವರೇ ದೇಹದಲ್ಲಿ ಕೊಟ್ಟಿರುವ ಪೆಟ್ರೋಲೂ ಇರುವಾಗ, ಅದು ಇರುವಷ್ಟು ದಿನವೂ ಓಡಿಸುವುದು. ಆಮೇಲೆ ಇದ್ದೇ ಇದೆ''- ಇದು ಅವರ ಧೋರಣೆ. ಇದು ಬಾಯಿ ಮಾತಲ್ಲ. ಹಲವು ಬಾರಿ ನಾನು ಇದನ್ನು ಕಂಡಿದ್ದೇನೆ. ಅನಿವಾರ್ಯವಿದ್ದಾಗ ಬೇರೊಂದನ್ನು ಅವಲಂಬಿಸಬೇಕೇ ಹೊರತು ಉಳಿದಂತೆ ಅಲ್ಲ ಎಂಬುದು ಅವರ ಅಭಿಪ್ರಾಯ. ಇವೆಲ್ಲಕ್ಕೂ ಅಡ್ಡಿಯಾಗುವುದು ಆಲಸ್ಯ ಮನೋಭಾವ, ಸೋಂಬೇರಿತನ. ಅವನ್ನು ದೂರ ಮಾಡದ ಹೊರತು ಗುರಿಯ ಸಾಧನೆ ಸಾಧ್ಯವಾಗುವುದಿಲ್ಲ.

ದೇಜಗೌ ಅವರಿಗೆ ಈಗ ಎಪ್ಪತ್ತೈದು ವರ್ಷಗಳು ತುಂಬಿವೆ. ಆದರೆ ಈ ಯಾವ ಉತ್ಸಾಹವೂ ಮನೋಭಾವವೂ ಕುಗ್ಗಿಲ್ಲ, ಕಡಿಮೆಯಾಗಿಲ್ಲ. ಅವರು ಯಾವುದಾದರೂ ದೊಡ್ಡ ಬರವಣಿಗೆಯಲ್ಲಿ ತೊಡಗಿದಾಗ ನಿರ್ದಾಕ್ಷಿಣ್ಯವಾಗಿ ಶಿಸ್ತನ್ನು, ಸಮಯವನ್ನು ಪಾಲಿಸುತ್ತಾರೆ. ಆ ಅವಧಿಯಲ್ಲಿ ಯಾರೊಬ್ಬರಿಗೂ ಸಂದರ್ಶನಾವಕಾಶವಿರುವುದಿಲ್ಲ. ಯಾರೇ ಬಂದರೂ ಆ ನಿಶ್ಚಿತ ಅವಧಿಯ ನಂತರವೇ ಭೇಟಿ. ಮಹತ್ಕಾರ್ಯದಲ್ಲಿ ತೊಡಗುವವರಿಗೆ ಈ ಶಿಸ್ತು ಅಗತ್ಯವೆನಿಸುತ್ತದೆ. ದೇಜಗೌ ಅವರ ಯಶಸ್ಸಿನ ಗುಟ್ಟೂ ಇದೇ. ಇಲ್ಲವಾದರೆ ಒಬ್ಬ ವ್ಯಕ್ತಿ ಹಲವು ರಂಗಗಳಲ್ಲಿ ಇಷ್ಟೆಲ್ಲ ಕೆಲಸಗಳನ್ನು ಫಲಪ್ರದವಾಗಿ ಮಾಡಿ ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಈ ವಯಸ್ಸಿನಲ್ಲಿಯೂ ಅವರು, ಸಾಮಾಜಿಕ ರಂಗದಲ್ಲಿ 'ಕೋಮು ಸೌಹಾರ್ದ' ಕಾರ್ಯಕ್ರಮದ ನೇತೃತ್ವವನ್ನು ವಹಿಸಿಕೊಂಡು ನಡೆಸುತ್ತಿರುವ ಚಟುವಟಿಕೆಗಳು, ಒಬ್ಬ ನಿಜವಾದ ಸಾಮಾಜಿಕ ಕಾಳಜಿಯುಳ್ಳ ವ್ಯಕ್ತಿಗೆ ಇರಬೇಕಾದ ಅಗತ್ಯವಾದ ಗುಣವಾಗಿದೆ. ದೇಜಗೌ ಅದರಲ್ಲಿ ದಾಪುಗಾಲು ಹಾಕಿ ಮುನ್ನಡೆದಿದ್ದಾರೆ.

ದೇಜಗೌ ಹಲವು ಶ್ರೇಷ್ಠ ವ್ಯಕ್ತಿಗಳ ದೃಷ್ಟಿಯಲ್ಲಿ ಹಲವು ತೆರನಾಗಿ ಕಂಡಿದ್ದಾರೆ- ಶ್ರೇಷ್ಠ ವ್ಯಕ್ತಿಯಾಗಿ, ಸೌಜನ್ಯಶೀಲರಾಗಿ, ಸ್ನೇಹದ ಸಾಕಾರ ಮೂರ್ತಿಯಾಗಿ, ಪುರುಷ ಸಿಂಹರಾಗಿ, ದೊಡ್ಡಮನಸ್ಸಿನ ದಿಟ್ಟ ವ್ಯಕ್ತಿಯಾಗಿ, ವಿನಯಶಾಲಿ ವೀರ ಕನ್ನಡಿಗರಾಗಿ, ಧೀರ ಸೇನಾನಿಯಾಗಿ, ಆಚಾರ್ಯ ದ್ರೋಣರಂತೆ, ವಿಶಾಲ ಹೃದಯಿಯಾಗಿ, ಕನ್ನಡದ ಹಿತರಕ್ಷಕರಾಗಿ, ಅಭಯ ಹಸ್ತರಾಗಿ ಚಾಣಾಕ್ಷ ಕಾರ್ಯಕರ್ತರಾಗಿ- ಹೀಗೆ ಅವರವರ ಭಾವಕ್ಕೆ ತಕ್ಕಂತೆ ತೋರಿದ್ದಾರೆ. ಇವೆಲ್ಲವೂ ನಿಜ. ಹೀಗೆ ನಿಜವಾಗಿಸಿಕೊಳ್ಳುವಲ್ಲಿ ಅವರು ಮಾಡಿರುವ ತ್ಯಾಗ ತೋರಿರುವ ಶ್ರದ್ಧೆ, ಪಟ್ಟಿರುವ ಶ್ರಮ- ಇವುಗಳು ಅನುಕರಣೀಯ. ಅವರಲ್ಲಿನ ಕಾಯಕ ನಿಷ್ಠೆ, ಅನುಕರಿಸಲು ಸಾಮಾನ್ಯರಿಗೆ ಕಷ್ಟವಾಗಬಹುದಾದ ದೊಡ್ಡ ಆದರ್ಶ.

* * * * *

ಭಾಗ ಮೂರು

ದೇಜಗೌ ಕೊಡುಗೆ

ದೇಜಗೌ ಮತ್ತು ಕನ್ನಡ

-ಡಾ. ಸೋಮಶೇಖರಗೌಡ

'ದೇಜಗೌ' ಮತ್ತು 'ಕನ್ನಡ' ಎರಡೂ ತ್ರ್ಯಕ್ಷರಿಗಳು. ಇವೆರಡಕ್ಕೂ ಸಂಬಂಧ ಕಲ್ಪಿಸುವ ಅಗತ್ಯವಿಲ್ಲ. ಏಕೆಂದರೆ 'ದೇಜಗೌ' ಎಂಬ ಮೂರಕ್ಷರದ ಪ್ರಣವ ಮಂತ್ರ 'ಕನ್ನಡ' ಗಾಯತ್ರಿಯೊಡನೆ ಲೀನವಾಗಿದೆ. ಕನ್ನಡದ ಬಗೆಗೆ ವಿಶೇಷವಾದ ಅಭಿಮಾನ ಹೊಂದಿದ ಜನ ಇದ್ದಾರೆ; ಕನ್ನಡಕ್ಕಾಗಿ ತ್ಯಾಗ ಬಲಿದಾನ ಮಾಡಿದವರೂ ಸಿಗುತ್ತಾರೆ ಕನ್ನಡದ ಏಳ್ಗೆಗಾಗಿ ದುಡಿಯುವವರ ಸಂಖ್ಯೆ ಕೂಡ ಕಡಿಮೆಯಾಗೇನೂ ಇಲ್ಲ; ಆದರೆ ದೇಜಗೌ ಅವರಂತೆ ಕನ್ನಡದೊಡನೆ ತ್ರಿಕರಣಪೂರ್ವಕವಾಗಿ ಐಕ್ಯಗೊಂಡವರು ಮಾತ್ರ ವಿರಳ. ಏಕೆಂದರೆ ದೇಜಗೌ ಅವರ ಜೀವನದ ಮೇಲ್ಮೆ, ಸಾಧನೆ ಸಿದ್ಧಿಗಳು ಕನ್ನಡದ ಅಭ್ಯುದಯದ ಭಾಗಗಳೇ ಆಗಿವೆ. ದೇಜಗೌ ಅವರನ್ನು ಬಲ್ಲ ಅನೇಕ ಗಣ್ಯರು ಮುಕ್ತಕಂಠದಿಂದ ಅವರ ಕನ್ನಡ ಅನನ್ಯತೆಯನ್ನು ಕೊಂಡಾಡಿದ್ದಾರೆ;

''ಕನ್ನಡಕ್ಕೆ, ಕನ್ನಡಸಾಹಿತ್ಯಕ್ಕೆ ನಿತ್ಯ ಚೇತೋಹಾರಿಯಾಗಿ ತನ್ನದೇ ಆದ ಅಪ್ರತಿಮ ವ್ಯಕ್ತಿತ್ವದಿಂದ ಮೆರೆಯುತ್ತಿರುವ ವ್ಯಕ್ತಿ ಜವರೇಗೌಡ" ಎಂಬುದು ಕುವೆಂಪು ಅವರಿಂದ ಕನ್ನಡದ ನಿತ್ಯಸಚಿವ ಎನಿಸಿಕೊಂಡ ಕೆ. ವಿ. ಶಂಕರಗೌಡ ಅವರ ಬಿಚ್ಚುನುಡಿ. ''ಕನ್ನಡ ಸಾಹಿತ್ಯ ಸರಸ್ವತಿಯ ಮಣಿಮುಕುಟದಲ್ಲಿ ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ವಜ್ರಗಳಲ್ಲಿ ಶ್ರೀ ದೇಜಗೌರವರೂ ಒಬ್ಬರು" ಇದು ಶ್ರೀ ಎಸ್. ಟಿ. ನಾಗರಾಜ ಅವರ ಅಭಿಮಾನದ ಮಾತು. ''ಅವರ ಚಿತ್ರ ಕಣ್ಣಮುಂದೆ ನಿಂತೊಡನೆಯೇ ಕನ್ನಡ ಮೈವೆತ್ತು ನಿಂತಂತೆ. ತನು ಕನ್ನಡ, ಮನ ಕನ್ನಡ, ಕನ್ನಡವು ಎನ್ನುಸಿರು-ಎಂದು ಮುಂತಾಗಿ ಕವಿಗಳು ಹಾಡಿದ ನಿರ್ವಚನಕ್ಕೆ ದೇಜಗೌ ಲಕ್ಷ್ಯವಾಗಿರುತ್ತಾರೆ" ಎಂದು ಪ್ರಖ್ಯಾತ ಭಾಷಾವಿಜ್ಞಾನಿ ದಿವಂಗತ ಪ್ರೊ. ಘರಿಯಪ್ಪಭಟ್ಟರು ಅಭಿನಂದಿಸಿದ್ದಾರೆ. ''ಕನ್ನಡ ನುಡಿಯ ಎಲ್ಲ ಪ್ರಭೇದಗಳನ್ನು ಅಕ್ಕರೆಯಿಂದ ಆಲಿಸಿ ಅದನ್ನು ಗೌರವಿಸುವ ದೊಡ್ಡಗುಣ ನಮ್ಮ ಪ್ರೊಫೆಸರ್ ಅವರಲ್ಲಿದೆ. ಸೊಲ್ಲಾಪುರ, ಬೀದರ, ಮಡಕಸಿರ ಮುಂತಾದ ಎಲ್ಲ ಭಾಗಗಳನ್ನು ಸಂಚರಿಸಿ ಕನ್ನಡ ತಾಯಿಯ ಮಡಿಲಿನಲ್ಲಿ ಪುನೀತರಾಗಿರುವರು; ನುಡಿಯನ್ನು ಲಾಲಿಸಿ ಆನಂದಪಟ್ಟಿರುವರು. ಎಲ್ಲವು ಬೆಳೆದು ದೊಡ್ಡದಾಗಲಿ ಎಂಬ ಆದರ್ಶವನ್ನಿಟ್ಟುಕೊಂಡ ಮಹಾ ಜೀವನವದು" ಎಂದು ಇನ್ನೊಬ್ಬ ಅಪ್ರತಿಮ ಕನ್ನಡ ಭಾಷಾವಿಜ್ಞಾನಿ ದೇಜಗೌ ಅವರ ಕನ್ನಡ ಉಪಭಾಷಾ ಪ್ರಿಯತೆಯನ್ನು ಎತ್ತಿ ತೋರಿದ್ದಾರೆ. ''ಪ್ರೊ. ಜವರೇಗೌಡರು ಕನ್ನಡ ಬೆಳೆಯಬೇಕು, ಸರ್ವಾಂಗ ಸುಂದರವಾಗಬೇಕು ಎಂಬ ವಿಚಾರದಲ್ಲಿ ವಿಶಾಲ ದೃಷ್ಟಿಯುಳ್ಳವರು. ಬೇರೆ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದವರು. ಸಂಪಾದಿತ ಗ್ರಂಥಗಳು, ಅನುವಾದ ಗ್ರಂಥಗಳು, ಸ್ವತಂತ್ರ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸುಪುಷ್ಟಗೊಳಿಸಿದವರು. ಮೂಲೆಮೂಲೆಯಿಂದ ಕರೆ ಬಂದಾಗಲೆಲ್ಲ ಹೋಗಿ ಕನ್ನಡದ ಪ್ರಚಾರವನ್ನು ಮಾಡುತ್ತಿದ್ದಾರೆ. ಇವರ ಕೈಯ್ಯಲ್ಲಿ ಕನ್ನಡ ಸುಭದ್ರವಾಗಿದೆ" ಎನ್ನುವವರು ಪ್ರೊ. ಡಿ. ಕೆ. ಭೀಮಸೇನರಾಯರು. ದೇಜಗೌ ಅವರು 'ಕನ್ನಡದ ಹಿತರಕ್ಷಕ' ಎಂಬುದು ಅವರ

ಅಂತರ್ಯದ ನಂಬಿಕೆ. "ಉತ್ತಮ ಪ್ರಾಧ್ಯಾಪಕರಾಗಿ, ಶ್ರೇಷ್ಠಗ್ರಂಥಕಾರರಾಗಿ, ಸುಸ್ಪಷ್ಟ ಭಾಷಣಕಾರರಾಗಿ ಇವರು ಕನ್ನಡ ನಾಡುನುಡಿಗಳಿಗಾಗಿ ಸಲ್ಲಿಸುತ್ತಿರುವ ಸೇವೆ ನಿಜಕ್ಕೂ ಶ್ಲಾಘ್ಯವಾದುದು. ನನ್ನ ಸಾರ್ವಜನಿಕ ಜೀವನದ ಅನುಭವಗಳಿಂದ ನಾನು ಮನದುಂಬಿ ಹೇಳಬಹುದಾದರೆ, ಪ್ರಾಧ್ಯಾಪಕ ದೇ.ಜವರೇಗೌಡರು ಕನ್ನಡದ ವಿನೂತನ ಶಕ್ತಿಯಾಗಿದ್ದಾರೆ" ಎನ್ನುತ್ತಾರೆ ಪಂಡಿತರತ್ನ ಶಿವಮೂರ್ತಿಶಾಸ್ತ್ರಿಗಳು. "ಕನ್ನಡ ಬೆಳೆಯಬೇಕು, ಅದಕ್ಕೆ ಸಲ್ಲಬೇಕಾದ ಸ್ಥಾನಮಾನ ಸಿಕ್ಕಬೇಕು, ಸಾಹಿತ್ಯ ಹಿರಿದಾಗಬೇಕು, ನುಡಿ ಶ್ರೀಮಂತವಾಗಬೇಕು ಎನ್ನುವ ಬಯಕೆಗೆ ಬೇರೊಂದು ಹೆಸರು ಜವರೇಗೌಡರು" ಎಂದಿದ್ದಾರೆ ಕನ್ನಡದ ಅದ್ವಿತೀಯ ಕಾದಂಬರಿಕಾರರಲ್ಲೊಬ್ಬರಾದ ವಿ. ಎಂ. ಇನಾಂದಾರ್. "ದೇಜಗೌ ಅವರನ್ನು ಯಾರು ಎಷ್ಟೇ ಹೇಗೇ ಬಯ್ಯಲಿ ಕೊನೆಯಲ್ಲಿ ಒಮ್ಮೆ 'ಕನ್ನಡ' ಎಂದು ಬಿಟ್ಟರೆ ಅವರಿಗೆ ಎಲ್ಲವೂ ಮರೆತುಹೋಗುತ್ತದೆ, ಸಮಾಧಿಸ್ಥರಾಗಿ ಬಿಡುತ್ತಾರೆ" ಎಂಬುದು ಗಣ್ಯ ಅಧ್ಯಾಪಕರಲ್ಲೊಬ್ಬರಾದ ಕೆ. ಶಿವರಾಮ ಐತಾಳರ ಬೆರಗುನುಡಿ. ಮಹಾಕವಿ ಕುವೆಂಪು ಅವರು "ಕನ್ನಡದ ಕೆಲಸ ನನಗೆ ಬಹಳ ಪ್ರಿಯವಾದದ್ದು; ಈ ವಿಚಾರದಲ್ಲಿ ನನಗೆ ಬರಿಯ ಉತ್ಸಾಹವಿತ್ತು ಆದರೆ ಅವರಲ್ಲಿ (ದೇಜಗೌ) ಉತ್ಸಾಹದ ಜತೆಗೆ ಕ್ರಿಯಾಶೀಲತೆಯೂ ಕೂಡಿಕೊಂಡಿದೆ" ಎಂದು ದೇಜಗೌ ಕರ್ತೃತ್ವಶಕ್ತಿಯನ್ನು ಗುರುತಿಸಿ ಸಂಭ್ರಮಿಸಿದ್ದಾರೆ. "ಕನ್ನಡ, ಉತ್ಸಾಹ, ಕ್ರಿಯಾಶೀಲತೆ ಇವು ಮೂರೂ ಅವರ ಯಶಸ್ಸಿನ ಗುಟ್ಟುಗಳು. . . . . ಕನ್ನಡದ ವಿಷಯದಲ್ಲಿ . . . . ಅವರ ಕಠೋರನಿಷ್ಠೆ, ಕಾರ್ಯಕೌಶಲ, ಕಲ್ಪನೆ, ಕಾರ್ಯಭಾರ, ಪ್ರವಾದಿತನ ಈ ಗುಣಗಳೆಲ್ಲ ಜವರೇಗೌಡರಲ್ಲಿ ಏಕೀಭವಿಸಿವೆ. . . . . ಕನ್ನಡದ ಕೆಲಸವೆಂದರೆ ಜವರೇಗೌಡರಿಗೆ ಶ್ರಮವಿಲ್ಲ, ಸೋಲಿಲ್ಲ. . . ಕವಿರಾಜಮಾರ್ಗಕಾರನ ಮಾತುಗಳನ್ನು ಬಳಸಿ ಹೇಳುವುದಾದರೆ ಕನ್ನಡದ ವಿಚಾರ ಬಂದಾಗ ಜವರೇಗೌಡರು ಸುಭಟರು, ಸುಪ್ರಭುಗಳು, ಅಭಿಮಾನಿಗಳು, ಅತ್ಯುಗ್ರರು, ಗಂಭೀರಚಿತ್ತರು, ವಿವೇಕಿಗಳು . . . . . . ಕನ್ನಡದ ಕಾರಣವನ್ನು ಜವರೇಗೌಡರ ಹಾಗೆ ಅಂಟಿಸಿಕೊಂಡವರು ಈ ನಾಡಿನಲ್ಲಿ ಇವತ್ತು ಇನ್ನೊಬ್ಬರಿಲ್ಲ" ಈ ಮಾತುಗಳೆಲ್ಲ ದೇಜಗೌ ಅವರೊಡನೆ ಬಹುಕಾಲ ಅಂತರಂಗದ ಒಡನಾಡಿಯಾಗಿದ್ದ ಡಾ. ಹಾ. ಮಾ. ನಾಯಕರು ಹೃದಯತುಂಬಿ ಆಡಿರುವಂಥವು. ಇನ್ನು ಪ್ರೊ. ಎಸ್. ವಿ. ರಂಗಣ್ಣನವರು ದೇಜಗೌ ಅವರ ಬಗೆಗೆ ಆಡಿರುವ ಮಾತುಗಳು ಅತ್ಯಂತ ಸ್ಮರಣಾರ್ಹವಾದವು. ಇಂಗ್ಲೀಷ್ ಪ್ರಾಚಾರ್ಯರಾಗಿದ್ದ ರಂಗಣ್ಣನವರು ದೇಜಗೌ ಮತ್ತು ಕನ್ನಡದ ನಂಟನ್ನು ನಾಡಿ ಹಿಡಿದು ಪರೀಕ್ಷಿಸಿದ್ದಾರೆ; "ಕನ್ನಡಕ್ಕೂ ಜವರೇಗೌಡರಿಗೂ ಇರುವ ನಂಟನ್ನು ಯಾವ ನುಡಿಗಟ್ಟಿನಿಂದ ಬಣ್ಣಿಸಲಿ? 'ಆವೇಶ' ಎನ್ನಕೂಡದು; ಅವರ ಭಾವ ಭಾವನೆಗಳೆಲ್ಲ ಬುದ್ಧಿ ವಿವೇಚನೆಯಿಂದ ಜರಡಿ ಆಡಿಸಿದವು. 'ವಾಂಛಿಲ್ಯ' ಎಂದರೂ ಸರಿಯಲ್ಲ; ಕನ್ನಡದ ಪ್ರೌಢಿಮೆಯನ್ನು, ಪುಷ್ಕಳತೆಯನ್ನು ಅವರಿಗಿಂತ ಮೇಲಾಗಿ ಮತ್ತಾರು ಬಲ್ಲರು? 'ಪ್ರೀತಿ' ಎನ್ನಬಹುದು; ಆದರೆ ಅದು ಸಪ್ಪೆಸಪ್ಪೆ. 'ಭಕ್ತಿ' ಎಂಬ ಶಿಷ್ಟ ಶಬ್ದವೇನೋ ಬಳಿಯಲ್ಲೇ ಕಾದಿದೆ;ಅದನ್ನು ನಾನು ಬಳಸಲೊಲ್ಲೆ, ಏತಕ್ಕೆಂದರೆ 'ಪರವಶತೆ' ಎಂಬ ಧ್ವನಿ ಅದಕ್ಕುಂಟು. 'ಐಕ್ಯ' ಎಂದರೆ ಸಮರ್ಪಕವಾದೀತೋ ಏನೋ! ನನ್ನ ದೃಷ್ಟಿಯಲ್ಲಿ ಜವರೇಗೌಡರೇ ಕನ್ನಡ, ಕನ್ನಡವೇ ಜವರೇಗೌಡರು".

ಹೀಗೆ ರಾಜಕಾರಣಿಗಳಿಂದ ಹಿಡಿದು ರಾಷ್ಟ್ರಕವಿಯಾದಿಯಾಗಿ, ಒಡನಾಡಿಗಳಿಂದ, ಸಾಹಿತಿಗಳಿಂದ, ಕವಿ ಕಾದಂಬರಿಕಾರರಿಂದ, ಪಂಡಿತ ಪೂಜನೀಯರಿಂದ, ನಾಡುನುಡಿ ಹಿತಚಿಂತಕರಿಂದ ಒಕ್ಕೊರಲಿನ ಪ್ರಶಂಸೆಗೆ ಪಾತ್ರರಾಗಿರುವ ದೇಜಗೌ, ಕನ್ನಡವೇ ಮೂರ್ತಿವೆತ್ತಂತಿದ್ದಾರೆ ಎಂದರೆ ಅತ್ಯುಕ್ತಿಯಾಗುವುದಿಲ್ಲ. ಏಕೆಂದರೆ ನಾನಾ ಕ್ಷೇತ್ರಗಳ, ನಾನಾ ಬಗೆಯ ಈ ಜನರೆಲ್ಲ ಆಡಿರುವ ಮಾತುಗಳು ಬರೀ ಪ್ರಶಂಸೆಯ ಪರಿಧಿಯಲ್ಲಿ ಉಳಿಯುವಂಥವಾಗಿಲ್ಲ; ಇವುಗಳ ಹಿಂದೆ ದೇಜಗೌ ಅವರ ಮಹತ್ ಸಾಧನೆಯ ಗುಟ್ಟು ಇದ್ದೇ ಇದೆ.

ಈವರೆಗೆ ಇತರರ ಮಾತುಗಳ ಆಧಾರದ ಮೇಲೆ ದೇಜಗೌ ಮತ್ತು ಕನ್ನಡದ ಸಂಬಂಧವನ್ನು ಕಂಡೆವು. ಈ ಸಂಬಂಧದ ನಿಜವಾದ ಗಾಢತೆ ನಮಗೆ ಮನದಟ್ಟಾಗಬೇಕಾದರೆ ಸ್ವತಃ ದೇಜಗೌ ಅವರು ಕನ್ನಡದ ಬಗೆಗೆ ವಿವಿಧ ಸಂದರ್ಭಗಳಲ್ಲಿ ಆಡಿರುವ ಮಾತುಗಳನ್ನು, ಮಾಡಿರುವ ಕೆಲಸಗಳನ್ನು ಪರಿಶೀಲಿಸುವುದಗತ್ಯ.

ಕನ್ನಡ ದೀಕ್ಷೆ

'ನನ್ನ ಬಾಳೇ ಒಂದು ಪವಾಡ' ಎನ್ನುವ ದೇಜಗೌ ಕನ್ನಡ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಆಕಸ್ಮಿಕವಾಗಿಯೇ. ಕುವೆಂಪು ಸಾಹಿತ್ಯದ ಅಧ್ಯಯನ ಹಾಗೂ ಕವಿಪುಂಗವರ ದರ್ಶನದಿಂದ ಇವರು ಕಟ್ಟಾ ಕನ್ನಡ ಭಕ್ತರಾದದ್ದು. ಇವರು ಹೇಳುತ್ತಾರೆ: " ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ" ಎಂದು ಗುರು ನೀಡಿದ ಮಂತ್ರದೀಕ್ಷೆಯನ್ನು ತ್ರಿಕರಣಶುದ್ಧಿಯಾಗಿ ಬಳಸಿದುದರಿಂದ, ನನ್ನೆಲ್ಲ ವ್ಯವಹಾರಗಳಿಗೂ ಅದೇ ಸ್ಫೂರ್ತಿಶಕ್ತಿಯಾದದ್ದರಿಂದ, ಅದೇ ನನ್ನ ಜೀವನಮಂತ್ರವಾದದ್ದರಿಂದ, ನನ್ನ ಸುತ್ತಮುತ್ತಣ ಗುರುಹಿರಿಯರಿಗೆ ಮತ್ತು ಕಿರಿಯರಿಗೆ ತಕ್ಕಮಟ್ಟಿಗಾದರೂ ತೃಪ್ತಿಯಾಗುವಂತೆ ಹಗಲಿರುಳು ದುಡಿದು, ನನ್ನ ಇತಿಮಿತಿಗಳಿಗೆ ಸಾಧ್ಯವಾದಷ್ಟು ಸೇವೆಯನ್ನು ಪ್ರಾಮಾಣಿಕವಾಗಿ ಸಲ್ಲಿಸಿದ್ದೇನೆ" ಎಂದು. ಕನ್ನಡ ಇವರಿಗೆ ಹೀಗೆ ಗುರು ಕೃಪೆಯಿಂದ ದೊರೆತ ದೀಕ್ಷಾ ಮಂತ್ರವಾಯಿತು; ಅದೇ ಮುಂದೆ ಅವರ ಜೀವನ ಮಂತ್ರವೂ ಆಯಿತು.

ದೇಜಗೌ, ಅನಂತರದಲ್ಲಿ ತ್ರಿಕರಣಪೂರ್ವಕವಾಗಿ ತಮ್ಮನ್ನು ತಾವು ಕನ್ನಡಕ್ಕೆ ಧಾರೆ ಎರೆದುಕೊಂಡರು. ಕನ್ನಡ ಅವರ ಉಚ್ಛ್ವಾಸ ನಿಶ್ವಾಸಗಳಲ್ಲಿ ನಾಡಿಮಿಡಿತಗಳಲ್ಲಿ ಮಿಳಿತವಾಯಿತು ; ಅವರ ಮಾತು ಕೃತಿಗಳನ್ನು ಆಲಂಗಿಸಿಕೊಂಡಿತು. ನೆಂಟರಿಷ್ಟರು ಬಂಧುಬಾಂಧವರು ಅವರಿಗೆ ಬೇಡವಾದರು; ಕನ್ನಡಕ್ಕಾಗಿ ದುಡಿಯುವವರೇ ಅವರಿಗೆ ಸರ್ವಸ್ವವಾದರು. ಹಬ್ಬಹರಿದಿನಗಳು ಅವರಿಗೆ ಬೇಡವಾದವು; ಕನ್ನಡದ ಹಿತಚಿಂತನೆಯ ಸಭೆ ಸಮಾರಂಭಗಳೇ ಅವರಿಗೆ ಹಬ್ಬಹರಿದಿನಗಳಾದವು.

ಕನ್ನಡದ ಕಡು ನಿಷ್ಠೆ

ಕನ್ನಡ ನಾಡಿನಲ್ಲಿ ಎಲ್ಲಕ್ಕಿಂತ ಮಿಗಿಲಾದುದು ಕನ್ನಡ. ಅದು ಅಳಿದರೆ ಸರ್ವನಾಶ ಎಂಬುದು ಜವರೇಗೌಡರ ಹುಟ್ಟರಿವು. ಈ ನಿಜದ ನೆಲೆಯನ್ನು ತಿಳಿಸಲು ಅವರು ತನು ತೆತ್ತಿದ್ದಾರೆ, ಮನತೆತ್ತಿದ್ದಾರೆ, ಧನತೆತ್ತಿದ್ದಾರೆ. "ಕನ್ನಡವೆಂಬ ತ್ರ್ಯಕ್ಷರಿಯೆ ನನ್ನ ಗಾಯತ್ರಿ; ಕನ್ನಡವೇ ನನ್ನ ತಾಯಿತಂದೆ, ಅದೆ ನನ್ನ ಬಂಧು ಬಳಗ, ಅದೆ ನನ್ನ ಜಾತಿ, ಅದೇ ನನ್ನ

ಗತಿಮತಿ. ಯಾವ ಸಭೆಯಲ್ಲೇ ಆಗಲಿ, ಯಾರ ಸಮ್ಮುಖದಲ್ಲಿಯೇ ಆಗಲಿ, ಕೀಳರು ಕನ್ನಡವನ್ನು ಹೀಗಳೆದರೆ ನಾನು ನನ್ನ ಹೆಸರನ್ನು ಸಾರ್ಥಕಪಡಿಸಿಕೊಂಡೇನು! ಕನ್ನಡವ ಗೆಲ್ಲಕ್ಕಾಗಿ ಎಂಥ ಅವಮಾನವನ್ನಾದರೂ ಸಹಿಸಿಯೇನು. ನನಗಾಗಿ ನಾನು ಸಾಧಿಸಬೇಕಾದ್ದೇನೂ ಇಲ್ಲ; ಮುಂದಿನ ಪೀಳಿಗೆಗಾಗಿ ನಾಡಿನ ಓತಕ್ಕಾಗಿ ಕನ್ನಡದ ಬಾವುಟವನ್ನೇರಿಸಿ ಹಾರಿಸಬೇಕಾಗಿದೆ. ಈ ಬಾವುಟದ ರಕ್ಷಣೆಗಾಗಿ ಪ್ರಾಣಕೊಡಲೂ ಸಿದ್ಧ. ಕನ್ನಡಕ್ಕೆ ವಿಪತ್ತೊದಗಿದಾಗ ಮಹಾಕಾಳಿ ಮೈದುಂಬಿದಂತಾಗುತ್ತದೆ, ನಾರಸಿಂಹ ಮೈಮೇಲೆ ಬಂದಂತಾಗುತ್ತದೆ. . . . . ಕನ್ನಡದ ಹಗೆ ನನಗೆ ಹಗೆ - ಅವನು ಬಂಧುವಾಗಲಿ ಮಂತ್ರಿಯಾಗಿರಲಿ ಯಾರೇ ಆಗಿರಲಿ. ಕನ್ನಡಕ್ಕೆ ವಿರೋಧ ಒದಗಿದಾಗ ಕನ್ನಡದ ಆಚಾರ್ಯರ ಆಶೀರ್ವಾದದಿಂದ ಬುಲ್‌ಡೋಜರಂತೆ ನುಗ್ಗುತ್ತೇನೆ. . . . ಕನ್ನಡವ ಮೇಲ್ಮೆಯೇ ನನ್ನ ಗುರಿ" ಎನ್ನುವ ದೇಜಗೌ ಅವರ ಮಾತುಗಳಲ್ಲಿ ಕನ್ನಡದ ಬಗೆಗಿನ ಅವರ ಕಡು ನಿಷ್ಠೆ ಅಚಲ ಪ್ರೇಮ ಸುವ್ಯಕ್ತವಾಗಿದೆ.

ಇಂಥ ಮಾತುಗಳನ್ನು ಕೇಳಿದ ವಿಚಾರವಂತರು ದೇಜಗೌ ಅವರನ್ನು ಭಾವುಕರೆಂದು, ಭಾಷಾಮರುಳರೆಂದು, ಕನ್ನಡಶಠರೆಂದು ದೂರುವುದುಂಟು. ಆದರೆ ವಾಸ್ತವವಾಗಿ ದೇಜಗೌ ಅವರ ಕನ್ನಡ ಪ್ರೇಮ ವೈಜ್ಞಾನಿಕ ತಳಹದಿಯ ಮೇಲೆ ರೂಪುಗೊಂಡಿರುವಂಥದು. ರಚನಾತ್ಮಕವಾಗಿ ಎಲ್ಲ ಹಂತಗಳಲ್ಲೂ ಕನ್ನಡವನ್ನು ಬೆಳೆಸಬೇಕು; ಅದು ಶಿಕ್ಷಣ ಮಾಧ್ಯಮವಾಗಬೇಕು; ಆಡಳಿತ ಭಾಷೆಯಾಗಬೇಕು; ರಾಜ್ಯದ ಏಕಮೇವಾದ್ವಿತೀಯ ಭಾಷೆ ಯಾಗಿ ಸ್ಥಾಪಿತವಾಗಬೇಕು ಎಂದು ಸದಾ ಹಂಬಲಿಸಿ ಜವರೇಗೌಡರು ಕನ್ನಡವನ್ನು ಬಿತ್ತಿಬೆಳೆಸಿದವರು. ಈ ನಿಟ್ಟಿನಲ್ಲಿ ಏನಾದರೂ ಪ್ರಗತಿ ಕನ್ನಡ ಭಾಷೆಯಲ್ಲಿ ಸಾಧಿತವಾಗಿದ್ದರೆ ಅದರ ಯಶಸ್ಸಿನ ಬಹುಪಾಲು ದೇಜಗೌ ಅವರ ದುಡಿಮೆಗೆ, ಶ್ರಮಕ್ಕೆ, ಮುಂದಾಲೋಚನೆಗೆ, ಕಾರ್ಯಪ್ರೇರಣೆಗೆ ಹಾಗೂ ಕಡುನಿಷ್ಠೆಗೆ ಸಲ್ಲಬೇಕು.

ಕನ್ನಡ ಕಾಯಕ

ಧರ್ಮವೀರ ಬಸವಣ್ಣನವರು 'ಕಾಯಕವೇ ಕೈಲಾಸ' ಎಂದರು ಎಂನೂರ ವರ್ಷಗಳ ಹಿಂದೆ. ಆದರೆ ನಮ್ಮ ಮಿತ್ರರ ವ್ರತ ಕನ್ನಡವೇಕಾಯಕ"ಎಂದುಪ್ರೊ.ಎಚ್.ಎಂ. ಶಂಕರನಾರಾಯಣರಾವ್ ಅವರು ದೇಜಗೌ ಅವರ ಕನ್ನಡ ಕಾಯಕವನ್ನು ಬಸವಣ್ಣನವರ ಭಕ್ತಿಕಾಯಕದೊಡನೆ ಸಮೀಕರಿಸಿದ್ದಾರೆ. ನಿಜಾ ಬಸವಣ್ಣನವರು ಭಕ್ತಿಭಂಡಾರಿ ನಮ್ಮ ದೇಜಗೌ ಅವರು ಕನ್ನಡದ ನಗಾರಿ.

ಜವರೇಗೌಡರು ತಾವು ಅಲಂಕರಿಸಿದ ಹುದ್ದೆಗಳನ್ನು, ದೊರೆತ ವೇದಿಕೆಗಳನ್ನು, ಬರೆದ ಕೃತಿಗಳನ್ನು ಕನ್ನಡದ ಪ್ರಗತಿಗಾಗಿ ದುಡಿಸಿಕೊಂಡವರು. ಕನ್ನಡದ ಏಳಿಗೆಗಾಗಿ ಅವರು ರೂಪಿಸಿದ ಯೋಜನೆಗಳು ಹಲವು; ಕಟ್ಟಿದ ಸಂಸ್ಥೆಗಳು ಹಲವು. ಅಷ್ಟೆ ಅಲ್ಲ, ಕನ್ನಡಾಭಿಮಾನವನ್ನು ವುದ್ಧಿಸುವಂಥ ನೂರಾರು ಭಾಷಣಗಳನ್ನು ಅವರು ಮಾಡಿದ್ದಾರೆ. ಕನ್ನಡ ಪ್ರೀತಿ ಮೈದಾಳಿದಂಥ ಸಾವಿರಾರು ಶಿಷ್ಯರನ್ನು ಅವರು ತಯಾರಿಸಿದ್ದಾರೆ.

ಕನ್ನಡದ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಇವುಗಳ ನಡುವೆ ಕೆಲವು ಕಾಲ ಪ್ರಾಂಶುಪಾಲರಾಗಿ, ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಯಾಗಿ, ಡೀನರಾಗಿ,

ಕಡೆಗೆ ಕುಲಪತಿಯಾಗಿ ಇವರು ಮಾಡಿದ ಕನ್ನಡ ಸೇವೆ ಅನ್ಯಾದೃಶವಾದುದು. ಕನ್ನಡಿಗರ ಹೃದಯ ಸಿಂಹಾಸನಕ್ಕೆ ಅಧಿಕಾರಯುತವಾಗಿ ಲಗ್ಗೆಇಟ್ಟ ಕನ್ನಡ ಅಧ್ಯಯನ ಸಂಸ್ಥೆ, ರಾಷ್ಟ್ರೀಯ ಅಂತರರಾಷ್ಟ್ರೀಯ ಖ್ಯಾತಿಯನ್ನು ಕನ್ನಡಿಗರಿಗೆ ತಂದುಕೊಟ್ಟ ಅದರ ಚಟುವಟಿಕೆಗಳು, ಅದರ ಯೋಜನೆಗಳು, ಅಧ್ಯಯನ ವಿಷಯಗಳು ದೇಜಗೌ ಅವರ ಕನ್ನಡ ಕಾಳಜಿಯ ಫಲವಾಗಿ ದೊರಕಿದಂಥವು.

ಕುವೆಂಪು ಅವರು ಕಲ್ಪಿಸಿದ ಕನ್ನಡದ ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗಗಳನ್ನು ಅವುಗಳ ನಿಜವಾದ ಅರ್ಥದಲ್ಲಿ ಅಸ್ತಿತ್ವಕ್ಕೆ ತಂದವರು ದೇ. ಜವರೇಗೌಡರು. ತಮ್ಮ ಆರುವರ್ಷಗಳ ಕುಲಪತಿಯ ಅವಧಿಯಲ್ಲಿ ಇವರು ಕನ್ನಡ ಬೋಧನ, ಸಂಶೋಧನ, ಸಂಪಾದನ ಮತ್ತು ವಿಸ್ತರಣಾಕಾರ್ಯಗಳಿಗೆ ಅಗತ್ಯಬಿದ್ದ ಸಾಧನ, ಸಲಕರಣಗಳು ಮತ್ತು ಸಿಬ್ಬಂದಿಯನ್ನು ಒದಗಿಸಿಕೊಟ್ಟವರಿವರು. ವಿಶ್ವವಿದ್ಯಾನಿಲಯದ ಧನಸಂಪತ್ತನ್ನು ಕನ್ನಡದ ಏಳ್ಗೆಗಾಗಿ ಹೆಚ್ಚಿನ ರೀತಿಯಲ್ಲಿ ಮೊದಲು ವ್ಯಯಿಸಿದ ಕೀರ್ತಿ ದೇಜಗೌ ಅವರದು. ಇದಕ್ಕಾಗಿ ಪಟ್ಟಭದ್ರ ಹಿತಾಸಕ್ತಿಗಳು ಇವರಿಗೆ ತೋರಿಸಿದ ಪ್ರತಿಭಟನೆ, ತಿರಸ್ಕಾರ, ಅಡಚಣೆಗಳನ್ನು ಇವರು ಸೊಪ್ಪುಹಾಕದೆ ಎದೆಸೆಟೆಸಿ ಎದುರಿಸಬೇಕಾಯ್ತು. ಒಂದರ್ಥದಲ್ಲಿ ದೇಜಗೌ ಅವರು ಪರೀಕ್ಷಾಧಿಕಾರಿಯಂಥ, ಕುಲಪತಿಯಂಥ ಆಡಳಿತಾತ್ಮಕವಾದ ಉನ್ನತ ಪದವಿಗಳನ್ನು ಒಪ್ಪಿಕೊಂಡಿದ್ದು ಕನ್ನಡದ ಕಾರಣಕ್ಕಾಗಿಯೇ ಎಂಬುದನ್ನು ಕನ್ನಡಿಗರು ಮರೆಯುವಂತಿಲ್ಲ.

ಕನ್ನಡ ಪರ ಒಲವು ನಿಲುವು

ಪ್ರೊ. ದೇಜಗೌ ಅವರು ಕನ್ನಡ ಭಾಷಾಸಾಹಿತ್ಯದ ಬಗೆಗೆ ಅಸದೃಶವಾದ ಪ್ರೇಮವುಳ್ಳವರು. ಕನ್ನಡ ಭಾಷೆ ಸಾಹಿತ್ಯದಂಥ ಪ್ರಜ್ವಲವೂ, ವೈವಿಧ್ಯಮಯವೂ, ಸಮೃದ್ಧವೂ, ರಮ್ಯವೂ, ಅವಿಚ್ಛಿನ್ನವೂ ಆದ ಸುದೀರ್ಘವಾದ ಇತಿಹಾಸವುಳ್ಳ ಭಾಷಾ ಸಾಹಿತ್ಯಗಳು ಜಗತ್ತಿನಲ್ಲಿಯೇ ಅತಿ ವಿರಳ ಎಂಬುದು ಅವರ ದೃಢವಾದ ನಂಬಿಕೆ. ಕನ್ನಡವು ನಾನಾಮುಖಿಯಾಗಿ ಬೆಳೆಯಬೇಕಾದರೆ ಕನ್ನಡಿಗರ ಲೋಕವ್ಯವಹಾರಗಳು ವಿಸ್ತೃತವಾಗಬೇಕು, ವಿಚಾರಶಕ್ತಿ ಪ್ರಖರವಾಗಬೇಕು, ಚಿಂತನಮಂಥನಗಳು ಪ್ರಜ್ವಲಿಸಬೇಕು, ಅನುಭವಾಲೋಚನೆಗಳ ಸಂಘರ್ಷಣೆ ತೀಕ್ಷ್ಣವಾಗಬೇಕು, ಒಟ್ಟಿನಲ್ಲಿ ಕನ್ನಡ ಜನಾಂಗ ದೊಡ್ಡದಾಗಬೇಕು ಎಂಬುದು ಅವರ ಖಚಿತ ಅಭಿಪ್ರಾಯ. "ನಮ್ಮ ತಾಯಿಗೆ ನಾವಲ್ಲದೆ ಹೊರಗಣ ಜನ ಗೌರವ ತೋರಿಸುವುದುಂಟೆ?" ಎಂಬುದು ಅವರು ಸಾಮಾನ್ಯವಾಗಿ ಕೇಳುವ ಪ್ರಶ್ನೆ. ನಮ್ಮ ಅಭಿಮಾನ ಶೂನ್ಯತೆಯಿಂದ ನಮಗೆ ಸಲ್ಲಬೇಕಾದ ಗೌರವಾದರಗಳು ನಮಗೆ ನಮ್ಮ ಭಾಷೆಗೆ ಲಭಿಸಿಲ್ಲ ಎಂದು ಪರಿತಪಿಸುವ ದೇಜಗೌ, ನಮ್ಮ ಭಾಷೆಗೆ ವಿದೇಶಗಳಲ್ಲಿರಲಿ, ಕೇಂದ್ರ ಸರಕಾರದಲ್ಲಿಯಾದರೂ ಮನ್ನಣೆ ಸಿಗಬೇಕಾದರೆ, ದಕ್ಷಿಣ ಎಂದರೆ ತಮಿಳುನಾಡು ಅಥವಾ ಆಂಧ್ರಪ್ರದೇಶ ಎಂಬ ತಪ್ಪು ಕಲ್ಪನೆ ಉತ್ತರದ ಜನರಿಗೆ ಹೋಗಬೇಕಾದರೆ ನಾವು ಮೊದಲು ಕನ್ನಡದ ಬಗೆಗೆ ಅಭಿಮಾನಧನರಾಗಬೇಕೆಂಬುದು ಅವರ ಕಳಕಳಿಯ ಒತ್ತಾಯ.

'ಕನ್ನಡದ ಕೆಲಸ ದೇವರ ಕೆಲಸ' ಎಂದು ಶ್ರದ್ಧಾಭಕ್ತಿಯಿಂದ ದುಡಿಯುತ್ತ ಬಂದಿರುವ ದೇಜಗೌ 'ಕನ್ನಡಕ್ಕೆ ಯೋಗ್ಯವಾದ ಸ್ಥಾನಮಾನಗಳು ದೊರಕುವ ತನಕ ನಾನು ಯಾವ

ಪುರಸ್ಕಾರಗಳನ್ನೂ ಸ್ವೀಕರಿಸಲಾರೆ' ಎಂಬಂಥ ವ್ರತವನ್ನು ಆಚರಿಸಿದುದುಂಟು. ಆದರೆ ಕನ್ನಡದ ಕಾರಣಕ್ಕಾಗಿ ಇತರರಿಗೆ ಬಂದ ಪ್ರಶಸ್ತಿಗೌರವಗಳನ್ನು ಅವರು ತಮಗೇ ಬಂದಷ್ಟು ಸಂತೋಷದಿಂದ ಸ್ವಾಗತಿಸಿದ್ದಾರೆ. ಈ ನಿಟ್ಟಿನಲ್ಲಿ ಅವರದೇ ಆದ ಮಾತುಗಳಿವು. "ನನಗೆ ಮುಖ್ಯವಾದದ್ದು ಕನ್ನಡದ ಕೆಲಸ. ಈ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದವರೆಲ್ಲ ನನಗೆ ಮಾನ್ಯರೇ . . . . ಕನ್ನಡದ ಕೆಲಸ ಎಲ್ಲಿಯೇ ಚೆನ್ನಾಗಿ ನಡೆಯಲಿ ನಾನು ಸಂತೋಷ ಪಡುವವನು. ನನಗೊಂದು ಗುಂಪಿದ್ದರೆ ಅದು ಕನ್ನಡದ ಗುಂಪು. . . ಜಾತೀಯತೆಯಿಂದ ಸದಾ ನಾನು ದೂರ. ನನಗಿರುವ ಜಾತಿ ಒಂದೇ ಅದು ಕನ್ನಡದ ಜಾತಿ".

ಕನ್ನಡದ ಬಗೆಗೆ, ಕನ್ನಡ ಅಧ್ಯಾಪಕರ ಬಗೆಗೆ, ಕನ್ನಡ ಸಾಹಿತಿಗಳ ಬಗೆಗೆ ಇದ್ದ ಅವ ಹೇಳನಕಾರಿ ಪರಿಸ್ಥಿತಿಯನ್ನು ತಮ್ಮ ಪ್ರತಿಭೆ, ವರ್ಚಸ್ಸು, ಮತ್ತು ಅಪ್ರತಿಮ ಪ್ರೌಢಿಮೆಯಿಂದ ದೂರಮಾಡಿದ ಕೀರ್ತಿ ಹೆಚ್ಚಾಗಿ ದೇಜಗೌ ಅವರಿಗೆ ಸಲ್ಲಬೇಕು. ಕನ್ನಡ ಸೊಲ್ಲು ಘಂಟಾಘೋಷವಾಗಿ ಮೊಳಗುವಂತೆ ಮಾಡುವಲ್ಲಿ, ಕನ್ನಡ ಮೇಷ್ಟ್ರು ಹಾಗೂ ಪದವೀಧರರಿಗೆ ಅಂಟಿಕೊಂಡು ಬಂದಿದ್ದ ಅಪಪ್ರಥೆಯನ್ನು ತೊಲಗಿಸುವಲ್ಲಿ ದೇಜಗೌ ಅವರ ಕೊಡುಗೆ ಅಪಾರವಾದದ್ದು. ಅವರು ಕನ್ನಡಕ್ಕಾಗಿ ಕೊರಳೆತ್ತದಿದ್ದರೆ ಕನ್ನಡಿಗರ ಏಳ್ಗೆಗಾಗಿ ಡಿಂಡಿಮ ಬಾರಿಸದಿದ್ದರೆ ನಮ್ಮ ಸ್ಥಿತಿ ಇನ್ನೂ ಹೀನಾಯವಾಗಿರುತ್ತಿತ್ತು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ದೇಜಗೌ ಅವರು ಅವಕಾಶ ಸಿಕ್ಕಿದಾಗಲೆಲ್ಲ ಯಾವ ಮುಲಾಜಿಗೂ ಒಳಗಾಗದೆ, ತಮ್ಮ ಸಹಪಾಠಿಗಳಿರಲಿ, ಅಧಿಕಾರಿಗಳಿರಲಿ, ಆಡಳಿತದವರಿರಲಿ, ಮಂತ್ರಿಗಳಿರಲಿ ಯಾರನ್ನೂ ಬಿಡದೆ ಕನ್ನಡದ ಕೀರ್ತಿಯನ್ನು ಹೆಚ್ಚಿಸುವಂಥ ಕೆಲಸ ಮಾಡುತ್ತಲೇ ಬಂದಿದ್ದಾರೆ. ಅದಕ್ಕಾಗಿ ಅವರು ಮೃದು ಮಾತುಗಳನ್ನು ಬಳಸಿರಬಹುದು ಇಲ್ಲವೇ ಗದಾ ಪ್ರಹಾರ ಮಾಡಿರಬಹುದು.

"ಕನ್ನಡ ಸ್ವೀಕರಣ ಭಾಷೆ. ಯಾವ ಭಾಷೆಯ ಮಾತನ್ನಾದರೂ ಜೀರ್ಣಿಸಿಕೊಳ್ಳುವ ಶಕ್ತಿ ಅದಕ್ಕಿದೆ. ತದ್ಭವೀಕರಣ ಕನ್ನಡದ ವೈಶಿಷ್ಟ್ಯ. ವೈಯಾಕರಣಿಗಳೆಲ್ಲ ಇದಕ್ಕೆ ಅನುಮತಿ ನೀಡಿದ್ದಾರೆ. ಮೃತ್ಯು > ಮಿತ್ತು, ಶ್ರೀ > ತಿರು, ಹೀಗೆ ಸಂಸ್ಕೃತ ಮಾತುಗಳನ್ನು ಕನ್ನಡಕ್ಕೆ ತಿರುಗಿಸಿಕೊಳ್ಳಬಹುದು. 'ಹಿಯರಿಂಗ್' ನಮ್ಮ ಕಡೆ 'ಇರಂಗು' ಆಗಿದೆ. ಸಾಮಾನ್ಯ ಜನ ಬಳಸುವ ಮಾತು ಮುಖ್ಯ. ಹತ್ತಾರು ಜನರ ಬಾಯಿಂದ ಬಿದ್ದ ಮೇಲೆ ಅದಕ್ಕೆ ಶಕ್ತಿ ಬರುತ್ತದೆ. ನಮ್ಮ ಧ್ವನಿಶಾಸ್ತ್ರದ ಜಾಯಮಾನಕ್ಕೂ ಇಂಥವು ಹೊಂದಿಕೊಳ್ಳುತ್ತವೆ. . . . 'ಇಂಗ್ಲಿಷ್' ಮಾತುಗಳಿಗೆ 'ಉ' ಕಾರ ಹಚ್ಚಿದರೆ ಕನ್ನಡ ಮಾತುಗಳಾಗುತ್ತವೆ. ಉದಾಹರಣೆಗೆ'ರೈಲ್' ಆಗುತ್ತದೆ. ಸ್ಪೂಟ್ನಿಕ್ - ಸ್ಪೂಟ್ನಿಕ್ಕು ಆಗುತ್ತದೆ. ಈ ಪದಗಳಿಗೆ ಇಂಗ್ಲಿಷ್ ನಿಘಂಟುಗಳಲ್ಲಿ ಜಾಗವಿಲ್ಲ. ಅವೆಲ್ಲಿ ಹೋಗಬೇಕು? ಅವು ನಮ್ಮ ನಿಘಂಟುಗಳಲ್ಲಿಯೇ ಉಳಿಯಬೇಕಾಗುತ್ತದೆ. ಆಗ ಅವೆಲ್ಲ ನಮ್ಮವು" ಇದು ಕನ್ನಡವನ್ನು ಬೆಳೆಸುವ ದೇಜಗೌ ಅವರ ವೈಜ್ಞಾನಿಕ ದೃಷ್ಟಿ. ಇದರಲ್ಲಿ ಅಂಧಾಭಿಮಾನವಿದೆಯೇ ?

ಕನ್ನಡ ಬೋಧನ ಮಾಧ್ಯಮವಾಗದಿದ್ದರೆ, ಆಡಳಿತ ಭಾಷೆಯಾಗದಿದ್ದರೆ, ರಾಜ್ಯಭಾಷೆಯಾಗದಿದ್ದರೆ ಕರ್ನಾಟಕ ಏಕೀಕರಣದ ಅಗತ್ಯವಾದರೂ ಏನಿತ್ತು? ಎಂಬ ಅವರ ಪ್ರಶ್ನೆಗೆ ಯಾವ ರಾಜಕಾರಣಿಯೂ ಧೈರ್ಯವಾಗಿ ಉತ್ತರಿಸಲಾರದವರಾಗಿದ್ದಾರೆ.

ಕನ್ನಡ ಬೆಳೆಯಬೇಕು ಎಂದರೆ ಅದು ಬೋಧನ. ಆಡಳಿತ ಮಾಧ್ಯಮವಾಗಬೇಕು. ಅದು ಉಳಿಯಬೇಕು ಎಂದರೆ ರಾಜ್ಯಭಾಷೆಯಾಗಬೇಕು. ಹಾಗಿಲ್ಲದಿದ್ದಲ್ಲಿ ಅಧ್ಯಾಪಕ-ವಿದ್ಯಾರ್ಥಿಗಳ ನಡುವೆ ಹೃದಯ ಸಂವಾದ ಏರ್ಪಡುವುದಿಲ್ಲ; ಕರ್ನಾಟಕದಲ್ಲಿ ವಾಸ ಮಾಡುವ ಜನಜನಗಳ ನಡುವೆ ಸಾಮರಸ್ಯ ಮೂಡುವುದಿಲ್ಲ". ಮಕ್ಕಳಿಗೆ ಅರ್ಥವಾಗುವ ಭಾಷೆಯಲ್ಲಿ ಬೋಧನೆ ಸಾಗಬೇಕು. ನಮಗೆ ಬೇಕಾಗಿರುವುದು ಭಾಷೆಯಲ್ಲ, ಜ್ಞಾನ. ಹಿಟ್ಟಿನ ಯಂತ್ರ ನಮಗೆ ಪರಮ ಗಂತವ್ಯವಲ್ಲ. ನಮಗೆ ಬೇಕಾದ್ದು ಹಿಟ್ಟು. ಏಣಿ ಹತ್ತಲಿಕ್ಕೆ ಒಂದು ಮಾಧ್ಯಮ. ಅದೇ ಮುಖ್ಯವಲ್ಲ. ಭಾಷೆಯ ವಿಷಯದಲ್ಲೂ ಈ ಮಾತು ಸತ್ಯ" ಈ ಮಾತುಗಳ ತಥ್ಯತೆಯನ್ನು ಒಪ್ಪದಿರುವುದು ಹೇಗೆ ?

ದೇಜಗೌ ಪರಭಾಷೆಗಳ ವಿರೋಧಿಯೇನಲ್ಲ. ಅವರು ಕೇಳುವುದು ಭಾಷಾ ಬಳಕೆಯಲ್ಲಿನ ಔಚಿತ್ಯವನ್ನಷ್ಟೆ. "ಹೆಣ್ಣು ಹಸೆಯ ಮೇಲೆ ಕೂರಬೇಕು; ಆದರೆ ಪರಿವಾರದ ಸ್ತ್ರೀಯರು ಹೆಣ್ಣನ್ನು ಹಿಂದೆ ತಳ್ಳಿ ತಾವೇ ಅಲ್ಲಿ ಕೂರುವುದಲ್ಲ. ಇಲ್ಲಿ ಕನ್ನಡ ಹಸೆಯ ಮೇಲೆ ಕೂರಬೇಕಾದ ಹೆಣ್ಣು. ಉಳಿದ ಭಾಷೆಗಳು ಅದಕ್ಕೆ ಪರಿವಾರವಾಗಬೇಕು. ಕಾವ್ಯ ಮೀಮಾಂಸೆಯಲ್ಲೆಂತೋ ಅಂತೆಯೇ ಜೀವನದಲ್ಲಿಯೂ ಔಚಿತ್ಯ ಸಿದ್ಧಾಂತ ಮುಖ್ಯ" ಎನ್ನುವ ದೇಜಗೌ ಅವರು 'ಇಂಗ್ಲಿಷ್‌ನಂಥ ಪರಭಾಷೆಯ ಮೂಲಕ ಕಲಿಯುವುದೆಂದರೆ ಮರಗಾಲು ಕಟ್ಟಿಕೊಂಡು ಹೋರಾಡಿದಂತೆ' ಎಂದು ಎಚ್ಚರಿಸಿದ್ದಾರೆ.

ಐಕ್ಯತೆ. ರಾಷ್ಟ್ರೀಯತೆಯ ನೆಪವೊಡ್ಡಿ ಹಿಂದಿಯನ್ನು ಹಿಂಬಾಗಿಲಿನಿಂದ ಕನ್ನಡದ ಮೇಲೆ ಹೇರುವ ಪ್ರಯತ್ನವನ್ನು ದೇಜಗೌ ಖಂಡತುಂಡವಾಗಿ ಖಂಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ಹಿಂದಿ ಇನ್ನೂ ಬೆಳೆಯಬೇಕಾದ ಭಾಷೆ. ಕನ್ನಡ. ತಮಿಳು. ತೆಲುಗು ಮುಂತಾದ ಭಾಷೆಗಳು ಅದಕ್ಕಿಂತ ಬೆಳೆದಿರುವ ಅತ್ಯಂತ ಪ್ರಾಚೀನ ಪ್ರಬುದ್ಧ ಭಾಷೆಗಳು. ಹಿಂದಿ ನವಾಬೀ ಮನೋಭಾವವನ್ನು ತೊರೆದು ಸುತ್ತಮುತ್ತಣ ಭಾಷೆಗಳ ಸಹಭಾಗಿತ್ವದಿಂದ ಬೆಳೆದು ಸಂಪರ್ಕಭಾಷೆಯಾಗಿ ರೂಪುಗೊಳ್ಳುವುದು ಅನಿವಾರ್ಯ ಹಾಗೂ ಆರೋಗ್ಯಕರ.

ಕನ್ನಡ ಜಗತ್ತಿನ ಯಾವ ಭಾಷೆಯೊಡನೆಯಾದರೂ ಸರಿಸಮನಾಗಿ ನಿಲ್ಲಬಲ್ಲ ಸಾಮರ್ಥ್ಯ ಪಡೆದಿದೆ ಎಂಬುದನ್ನು ಘಂಟಾಘೋಷವಾಗಿ ದೇಜಗೌ ಪ್ರಕಟಪಡಿಸಿದ್ದಾರೆ. ಏಕೆಂದರೆ ಕನ್ನಡ ಇಂಗ್ಲಿಷ್‌ನ ಹಾಗೆ ಸ್ವೀಕರಣಭಾಷೆ. ಅವರ ಮೂಲ ಅಕ್ಷಯ ನಿಧಿಗೆ ಸಂಸ್ಕೃತ. ಪ್ರಾಕೃತ, ಉರ್ದು, ಪೋರ್ಚುಗೀಸ್. ಇಂಗ್ಲಿಷ್ ಮೊದಲಾದ ಜಗತ್ತಿನ ನಾನಾ ಭಾಷೆಗಳ ಸಾಮಗ್ರಿ ಸೇರಿಕೊಂಡು ಅದು ಸುಸಂಮೃದ್ಧವಾಗಿದೆ ಎಂಬುದು ಅವರು ಕನ್ನಡದ ಸಾಮರ್ಥ್ಯಕ್ಕೆ ಕೊಡುವ ಕಾರಣ.

ಕನ್ನಡದಲ್ಲಿ ಪದಸಂಪತ್ತಿಲ್ಲ; ಮಾಧ್ಯಮವಾಗಿ ಶಿಕ್ಷಣಕ್ಕೆ ಬಳಸಿಕೊಳ್ಳುವಷ್ಟು ಅದು ಬೆಳೆದಿಲ್ಲ; ಎಂಬಿತ್ಯಾದಿ ಕೊಂಕು ನುಡಿಗಳನ್ನು ತಿಳಿವಳಿಕೆಯಿಲ್ಲದವರ, ಭಾಷಾವಿಜ್ಞಾನದ ಪರಿಜ್ಞಾನವಿಲ್ಲದವರ ಜಲ್ಪ ಎಂದು ಜರಿದು ಹಂಗಿಸಿದ್ದಾರೆ ದೇಜಗೌ. ಇನ್ನೂ ಮುಂದುವರಿದು ಹಾಗೊಂದು ವೇಳೆ ಅದು ಬೆಳೆದಿಲ್ಲ ಎಂದು ಒಪ್ಪಿಕೊಳ್ಳುವುದಾದರೆ ಅದಕ್ಕೆ, ವಿಜ್ಞಾನ ಸಾಹಿತ್ಯದ ಕೊರತೆ ಇರುವುದಕ್ಕೆ ಬೋಧಕರೇ ಕಾರಣ. ಬರೆಯಬೇಕಾದವರು ಅವರು. ಅವರು ಓದಿದ್ದನ್ನು ರಕ್ತಗತವಾಗಿಸಿಕೊಂಡಿದ್ದರೆ. ಸ್ವತಂತ್ರವಾಗಿ ಆಲೋಚನೆ

ನಡೆಸಿದ್ದಿದ್ದರೆ. ಬರೆಯುವ ಉತ್ಸಾಹ ತೋರಿದ್ದರೆ ಹೇಗಾದರೂ ವಿಜ್ಞಾನ ಸಾಹಿತ್ಯ ಗ್ರಂಥರೂಪದಲ್ಲಿ ಮೈದೋರುತ್ತಿತ್ತು-ಎಂದು ಛೇಡಿಸಿದ್ದಾರೆ. ಅಲ್ಲದೆ ಇನ್ನೆಷ್ಟುಕಾಲ ಪರಭಾಷಾಮಾಧ್ಯಮಕ್ಕೆ ಜೋತುಬಿದ್ದು ನೈಜ ಪ್ರತಿಭೆಯನ್ನು ಒಣಗಿಸಿ ಹೊಸಕಿಹಾಕಿ, ಕಲ್ಪನಾ ಸಾಮರ್ಥ್ಯವನ್ನು ಬಂಜೆಗೊಳಿಸಿ, ಬುದ್ಧಿಶಕ್ತಿಯನ್ನು ಕುಬ್ಜಗೊಳಿಸುವುದು? ಇನ್ನಾದರೂ ಎಚ್ಚೆತ್ತುಕೊಂಡು ಕನ್ನಡದಲ್ಲಿ ಆಲೋಚನೆಮಾಡಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡ ನಿಘಂಟುಗಳ ಕಡೆ ಬೆರಳುಮಾಡಿ ಶಬ್ದಗಳಿಲ್ಲ ಎನ್ನುವುದರ ಬದಲು ಬುದ್ಧಿಕೋಶಕ್ಕೆ ಕಸರತ್ತು ಕೊಟ್ಟು ನವಶಬ್ದಗಳನ್ನು ಟಂಕಿಸಿ ನಿಘಂಟುಗಳನ್ನು ತುಂಬಿ ಎಂದು ಕಿವಿಮಾತು ಹೇಳಿದ್ದಾರೆ.

ಕನ್ನಡಕ್ಕಾಗಿರುವ ಅನ್ಯಾಯ

ಶಿಕ್ಷಣ ಮಾಧ್ಯಮದ ಜತೆಜತೆಯಲ್ಲಿಯೇ ಆಡಳಿತ ಮಾಧ್ಯಮವೂ ಪ್ರಾದೇಶಿಕ ಭಾಷೆಯಲ್ಲಿ ಜರುಗುವುದು ಅನಿವಾರ್ಯ ಹಾಗೂ ಅಪೇಕ್ಷಣೀಯ. ಆದರೆ ಭಾಷಾವಾರು ಪ್ರಾಂತಗಳು ನಿರ್ಮಾಣವಾಗಿ ಹಲವಾರು ವರ್ಷಗಳೇ ಸಂದರೂ ದೇಶಭಾಷೆ ಆಡಳಿತ ಮಾಧ್ಯಮವಾಗದಿರುವುದು ದುರ್ದೈವದ ಸಂಗತಿ. ಇದು ಕನ್ನಡಕ್ಕೆ ಆಗಿರುವ ಘೋರ ಅನ್ಯಾಯ . ಆಡಳಿತದಲ್ಲಿ ಸಹಜ ದಕ್ಷತೆ. ಮಿತವ್ಯಯ ಹಾಗೂ ಮಾನಸ ಶಕ್ತಿ, ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕೇಂದ್ರೀಕೃತವಾಗಬೇಕಾದರೆ ಆಯಾ ದೇಶಭಾಷೆಯನ್ನು ಆಡಳಿತದಲ್ಲಿ ಜಾರಿಗೊಳಿಸಬೇಕು ಎಂಬುದನ್ನು ಜವರೇಗೌಡರು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಜೊತೆಗೆ ಹುಣ್ಣಿನ ಮೇಲೆ ಬರೆ ಎಳೆದಂತೆ ಹಿಂದಿ, ಇಂಗ್ಲಿಷ್ ಭಾಷೆಗಳ ದರಬಾರನ್ನು ಅವರು ಉಗ್ರವಾಗಿ ಪ್ರತಿಭಟಿಸಿದ್ದಾರೆ. ದೇಶಭಾಷೆಗಳು ಆಡಳಿತ ಮಾಧ್ಯಮಗಳಾದರೆ ರಾಜ್ಯ ರಾಜ್ಯಗಳ ನಡುವಣ ಸಂಪರ್ಕ ಕಡಿದು ಹೋಗುತ್ತದೆ, ರಾಷ್ಟ್ರೈಕ್ಯಕ್ಕೆ ಧಕ್ಕೆಯೊದಗುತ್ತದೆ ಎಂಬ ಪೊಳ್ಳು ವಾದವನ್ನು ಅವರು ಸುತರಾಂ ಒಪ್ಪುವುದಿಲ್ಲ.

ಭಾಷಾ ಸಂಬಂಧಿಯಾದ ತಿಕ್ಕಾಟಗಳು ಉಲ್ಬಣಗೊಂಡಿದ್ದರೆ ಅದಕ್ಕೆ ರಾಜಕಾರಣಿಗಳು, ಕೇಂದ್ರದ ಮಲತಾಯಿ ಧೋರಣೆ, ಏಕಪಕ್ಷೀಯವಾದ ಆಯೋಗಗಳು, ಸಂಪರ್ಕ ಭಾಷೆಯ ಬಗೆಗಿನ ತಪ್ಪು ತಿಳಿವಳಿಕೆ ಇವೆಲ್ಲ ಕಾರಣ ಎಂಬುದು ದೇಜಗೌ ಅವರ ಅಭಿಪ್ರಾಯ. ಬಹುತೇಕ ಈ ಕಾರಣಗಳಿಂದಾಗಿ ಕನ್ನಡ ನಾಡು ಹಾಗೂ ನುಡಿ ಅಪಾರ ಬೆಲೆ ತೆತ್ತಿದೆ. ತನ್ನ ನೆಲ. ಜಲವನ್ನು ಕಳೆದುಕೊಂಡಿದೆ. ಈಗಾಗಿರುವ ಅನ್ಯಾಯ ಹೋಗಲಿ ಮುಂದೆ ಆಗಬಹುದಾದ ಅನ್ಯಾಯಗಳನ್ನು ತಡೆಯಲೋಸುಗವಾದರೂ ಕನ್ನಡ ಜನ ಎಚ್ಚೆತ್ತುಕೊಳ್ಳಬೇಕು. ಈಗಾಗಲೇ ಆಗಿರುವ ಅನ್ಯಾಯಗಳನ್ನು ಸಾರ್ವಜನಿಕರ ಗಮನಕ್ಕೆ ತಂದು ಪರಿಚಯ ಮಾಡಿಕೊಡಬೇಕು. ಸಾರ್ವಜನಿಕಾಭಿಪ್ರಾಯವನ್ನು ಕನ್ನಡ ಪರವಾಗಿ ರೂಪಿಸಬೇಕು ಎಂಬ ಅಹವಾಲು ದೇಜಗೌ ಅವರದು.

ಕನ್ನಡದ ಉತ್ಸವಗಳು ಏಕೆ ಬೇಕು?

"ಕನ್ನಡದಿಂದಲೇ ಕನ್ನಡಿಗರಿಗೆ ಮುಕ್ತಿ". ಇದರ ಅರಿವು ಎಲ್ಲ ಕನ್ನಡಿಗರಿಗೂ ಆಗಬೇಕು. ಹಾಗಾಗಲು ಕನ್ನಡದ ಉತ್ಸವಗಳು ಜರುಗಬೇಕು. ಅವುಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಿ ಕನ್ನಡದ ಅಭಿಮಾನವನ್ನು ಜಾಗೃತಗೊಳಿಸಿಕೊಳ್ಳಬೇಕು ಎಂಬುದು ದೇಜಗೌ ಅವರ ಅಭಿಪ್ರಾಯ. ಆದರೆ ಈಗ "ಜನರಿಗೆ ಭಾಷೆ ಬೇಕಿಲ್ಲ, ಕರ್ನಾಟಕವೆಂಬ ಹೆಸರು

ಬೇಕಿಲ್ಲ. ಆತ್ಮಗೌರವ ಭಾವನೆಯಂತೂ ಮೊದಲೇ ಇಲ್ಲ" ಎಂದು ಛೇಡಿಸುವ ಜವರೇಗೌಡರು, "ಕನ್ನಡಿಗ ಯಾವ ಕ್ಷೇತ್ರದಲ್ಲಿಯೂ ಸೊನ್ನೆ, ಮುಂದ ನುಗ್ಗುವುದಿಲ್ಲ. ಅವನು ಮನೀಷಿಯಾದರೂ ಸಂಕೋಚ ಪ್ರವೃತ್ತಿಯವನು; ಜತೆಗೆ ದ್ವೇಷಾಸೂಯೆಗಳು ಅವನಿಗೆ ರಕ್ತಗತವಾಗಿ ಬಂದ ಗುಣಗಳು. ಇವು ಸಾಲದೆಂಬಂತೆ ಜಾತೀಯತೆಯ ವಿಷ ಬೇರೆ ಅವನನ್ನು ಷಂಡಗೊಳಿಸುತ್ತಿದೆ. ಈ ಜನಕ್ಕೆ ಐಕ್ಯವೆಂಬುದೇ ಗೊತ್ತಿಲ್ಲ. ಅದರ ಮಹತ್ತ್ವಂತು ಅರ್ಥವಾದೀತು" ಎಂದು ಮೂದಲಿಸಿ ಚಾಟಿ ಏಟನ್ನು ಹಾಕಿದ್ದಾರೆ.

'ಭಾಷೆ ಉಳಿದರೆ ಸಾಹಿತ್ಯ; ಭಾಷೆ ಉಳಿದರೆ ದೇಶ', ' ಮನೆಗೆ ಬೆಂಕಿ ಬದ್ದಿರುವಾಗ ವ್ಯಾಕರಣದ ಸೂತ್ರಗಳನ್ನು ಹುಡುಕಲು ಪ್ರಯತ್ನಿಸಬಾರದು' ಎಂದು ಎಚ್ಚರಿಸುವ ದೇಜಗೌ ಅವರು 'ನಮ್ಮ ಜನಕ್ಕಿನ್ನೂ ಭಾಷೆಯ ಶಕ್ತಿ ಸ್ವರೂಪ ಮನದಟ್ಟಾಗಿಲ್ಲ. ಅದು ಸಂಸ್ಕೃತಿಯ ಪ್ರತೀಕ, ವ್ಯಕ್ತಿತ್ವಾಭಿವ್ಯಕ್ತಿಯ ಮಾಧ್ಯಮ, ಪ್ರಜಾಪ್ರಭುತ್ವದ ಕ್ರತುಶಕ್ತಿ ಹಾಗೂ ಆಸರೆ' ಎಂಬುದನ್ನು ಮನದಟ್ಟು ಮಾಡಿಕೊಡಬೇಕಾದರೆ ಕನ್ನಡ ರಾಜ್ಯೋತ್ಸವದಂಥ, ಸಾಹಿತ್ಯ ಸಮ್ಮೇಳನಗಳಂಥ, ಉತ್ಸವಗಳು ಜರುಗಬೇಕು. ಕನ್ನಡ ಪ್ರಚಾರ ಮಾಡುವ ಯಾವ ಚಟುವಟಿಕೆಗೂ ಕಲ್ಲು ಬೀಳಬಾರದು. ಕನ್ನಡದ ಪ್ರಗತಿಯೇ ನಮ್ಮೆಲ್ಲರ ಪ್ರಗತಿ, ಕರ್ನಾಟಕದ ಪ್ರಗತಿ, ಹೀಗೆ ರಾಜ್ಯಗಳ ಪ್ರಗತಿಯಿಂದ ರಾಷ್ಟ್ರದ ಮುನ್ನಡೆ ಸಾಧ್ಯ ಎಂಬ ವೈಜ್ಞಾನಿಕ ಸತ್ಯವನ್ನು ತಮ್ಮ ಎಲ್ಲ ಕನ್ನಡೋತ್ಸವ ಕಾರ್ಯಕ್ರಮಗಳ ಭಾಷಣಗಳಲ್ಲಿ ದೇಜಗೌ ಅವರು ಪಡಿ ನುಡಿದಿದ್ದಾರೆ.

ಕನ್ನಡದ ಅಭ್ಯುದಯ ಹೇಗೆ ?

ಕನ್ನಡದ ಕೈಂಕರ್ಯ ಕೇವಲ ಕನ್ನಡ ಸಾಹಿತಿಗಳಿಗೆ ಸಂಬಂಧಿಸಿದ್ದು ಎಂಬ ಸಾರ್ವಜನಿಕ ಅಭಿಪ್ರಾಯ ತಪ್ಪು. ಬರೀ ಸಾಹಿತಿಗಳಿಂದ ಅದು ಉದ್ಧಾರವಾಗುವುದು ಸಾಧ್ಯವಿಲ್ಲ. ಎಲ್ಲ ವ್ಯಕ್ತಿಗಳ, ಎಲ್ಲ ಭಾಷೆಗಳ ಕರ್ನಾಟಕದ ಜನ ಅದನ್ನು ಕೈಗೆತ್ತಿಕೊಂಡಾಗ ಮಾತ್ರ ಅದರ ಸರ್ವತೋಮುಖ ಅಭ್ಯುದಯ ಸಾಧ್ಯ. ಇದನ್ನು ಅರಿತೇ ದೇಜಗೌ ಕನ್ನಡದ ತೇರನ್ನು ಎಳೆಯಲು, ಎಲ್ಲರನ್ನೂ ಕೈಜೋಡಿಸುವಂತೆ ಕಳಕಳಿಯಿಂದ ಕೇಳಿಕೊಳ್ಳುತ್ತ ಬಂದಿದ್ದಾರೆ. ಕನ್ನಡದ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ದಿಗ್ದರ್ಶಿಸಿದ್ದಾರೆ. ಅಂಥ ಕೆಲವನ್ನಿಲ್ಲಿ ಉಲ್ಲೇಖಿಸಬಹುದು:

೧. ಕನ್ನಡದ ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಕಲಿಸುವ ಸಂಸ್ಥೆಗಳಿಗೆ ಉದಾರವಾದ ಸಹಾಯಧನ ವಿತರಣೆ.

೨. ಕನ್ನಡದ ಶೀಘ್ರಲಿಪಿ ವಿದ್ಯಾರ್ಥಿಗಳಿಗೆ ಸಂಭಾವನೆ ಹಾಗೂ ಬಹುಮಾನಗಳ ನೀಡಿಕೆ.

೩. ಕನ್ನಡದಲ್ಲಿ ಚೆನ್ನಾಗಿ ಟಿಪ್ಪಣಿ ಬರೆಯುವ, ನಿರೂಪಗಳನ್ನು ರಚಿಸುವ ಗುಮಾಸ್ತರಿಗೆ ಹಾಗೂ ಅಧಿಕಾರಿಗಳಿಗೆ ಬಹುಮಾನ ವಿತರಣೆಯ ಮೂಲಕ ಪ್ರೋತ್ಸಾಹ.

೪. ನಾನಾ ಇಲಾಖೆಗಳಿಗೆ ಸಂಬಂಧಿಸಿದಂತೆ ಶಬ್ದಕೋಶ ತಯಾರಿಕೆ.

೫. ಶಾಸನ ಕಾನೂನು ನಿಯಮಗಳ ಭಾಷಾಂತರ

೬. ಮಾದರಿ ಆಡಳಿತ ಸಂಪುಟಗಳನ್ನು (Manual) ತಯಾರಿಸುವ ಗ್ರಂಥಕರ್ತರಿಗೆ ಸಹಾಯಧನ ನೀಡಿಕೆ.

೭. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಕರಣಿಕರಿಗೆ, ಉಪಕಾರ್ಯದರ್ಶಿ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕನ್ನಡ ಮಾಧ್ಯಮದಲ್ಲಿ ತರಬೇತಿ ಏರ್ಪಡಿಸುವುದು.

೮. ಕಾಲೇಜು ಅಧ್ಯಾಪಕರಿಗೆ ಕನ್ನಡ ಮಾಧ್ಯಮ ಬೋಧನೆಯಲ್ಲಿ ಪರಿಣತಿಯೊದಗುವಂತೆ ವಿಶೇಷ ತರಬೇತಿ ನೀಡುವುದು.

೯. ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕಗಳನ್ನು ಪಡೆಯುವವರಿಗೆ ವಿಶೇಷ ವಿದ್ಯಾರ್ಥಿವೇತನ ಮತ್ತು ಬಹುಮಾನಗಳನ್ನು ಹಂಚುವುದು.

೧೦. ಕನ್ನಡ ಮಾಧ್ಯಮದ ಪದವೀಧರರಿಗೆ ಉದ್ಯೋಗಾವಕಾಶ ಕಲ್ಪಿಸುವುದು, ಅದು ಸಾಧ್ಯವಾಗದಿದ್ದಾಗ ಉದ್ಯೋಗಪೂರ್ವ ವೇತನ ನೀಡುವುದು.

೧೧. ಕನ್ನಡ ಮಾಧ್ಯಮದ ತರಗತಿಗಳನ್ನು ತೆರೆಯುವ ಕಾಲೇಜುಗಳಿಗೆ ಸಹಾಯದ್ರವ್ಯವನ್ನು ಹೆಚ್ಚಿಸುವುದು.

೧೨. ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕೊಳ್ಳಲು ಕಾಲೇಜುಗಳಿಗೆ ವಿಶೇಷ ಧನಸಹಾಯ ನೀಡುವುದು.

೧೩. ಕನ್ನಡದಲ್ಲಿ ಪ್ರಕಟವಾಗುವ ಸಾಹಿತ್ಯೇತರ ಗ್ರಂಥಗಳಿಗೆ ಧನಸಹಾಯ ಮಾಡುವುದು.

೧೪. ವಿಜ್ಞಾನ ಲೋಕದಂಥ ಮಾಸಿಕಗಳಿಗೆ ಉದಾರವಾಗಿ ಸಹಾಯಧನ ನೀಡುವುದು.

೧೫. ಜಾನಪದ ಕಲೆಗಳಿಗೆ ನಾನಾ ರೀತಿಯಲ್ಲಿ ಪ್ರೋತ್ಸಾಹ ನೀಡುವುದು.

೧೬. ಗ್ರಂಥಾಲಯ ಚಳುವಳಿಯನ್ನು ತೀವ್ರಗೊಳಿಸಿ, ಅಚ್ಚಾದ ಪ್ರತಿಯೊಂದು ಕನ್ನಡ ಗ್ರಂಥದ ಮೂರು ಸಾವಿರ ಪ್ರತಿಗಳನ್ನು ಕೊಂಡು ಗ್ರಂಥಾಲಯಗಳಿಗೆ ಹಂಚುವಂತೆ ವ್ಯವಸ್ಥೆ ಮಾಡುವುದು.

೧೭. ಗ್ರಾಮಾಂತರ ಪ್ರದೇಶದಲ್ಲಿ ಶಬ್ದ ಸಂಗ್ರಹ

೧೮. ಪ್ರಾಚೀನ ಕವಿಗಳ ನಾಟಕ ರಚನೆ.

೧೯. ಮೈಸೂರಿನ ಅರಮನೆಯಲ್ಲಿ ಕರ್ನಾಟಕ ಇತಿಹಾಸದ ವಸ್ತುಸಂಗ್ರಹಾಲಯ ಸ್ಥಾಪನೆ.

೨೦. ನಾಟಕ ಮತ್ತು ಚಲನಚಿತ್ರಗಳಿಗೆ ಸಹಾಯಧನ ಕೊಡುವುದು.

೨೧. ಕನ್ನಡದ ಅಭಿವೃದ್ಧಿಗೆಂದೇ ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯಗಳಿಗೆ ವಿಶೇಷ ಸಹಾಯ ದ್ರವ್ಯ ನೀಡುವುದು.

ಇಂಥ ಹಲವಾರು ಕನ್ನಡ ಪ್ರಗತಿಯ ಪಥಗಳನ್ನು ದೇಜಗೌ ಅವರು ತೋರಿಸಿಕೊಟ್ಟಿದ್ದಾರೆ. ಸರ್ಕಾರ ಹಾಗೂ ಕನ್ನಡದ ಜನ ಕೃಚಿತ್ತಾಗಿಯಾದರೂ ಇವುಗಳನ್ನು ಅನುಸರಿಸುವ ಪ್ರಯತ್ನ ಮಾಡಿದ್ದಾರೆ. ಆದರೂ, ಇಂದಿಗೂ ಈ ದಾರಿಯಲ್ಲಿ ಕನ್ನಡ ಅಭ್ಯುದಯ ಸಾಧನೆಗಾಗಿ ನಡೆಯಬೇಕಾದ ಅನಿವಾರ್ಯ ಪರಿಸ್ಥಿತಿ ಇದ್ದೇ ಇದೆ. ಸರ್ಕಾರ

ಇತ್ತೀಚೆಗೆ ಸ್ಥಾಪಿಸಿರುವ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಹಾಗೂ ಬೆಂಗಳೂರಿನ ಕನ್ನಡ ಪ್ರಾಧಿಕಾರ ಈ ಕೆಲಸಗಳನ್ನು ಹೆಚ್ಚು ಆದ್ಯತೆಯಿಂದ ಕೈಗೆತ್ತಿಕೊಳ್ಳಬೇಕಿದೆ.

ಇವುಗಳ ಜತೆಗೆ, ಕನ್ನಡ ಸರ್ವಮಾಧ್ಯಮವಾಗುವತನಕ ಪ್ರತಿಯೊಬ್ಬ ಕನ್ನಡಿಗನು ಕೆಲವು ಮಹಾಸಂಕಲ್ಪಗಳನ್ನು ತೊಡಬೇಕೆಂದು ದೇಜಗೌ ಅವರು ಆಜ್ಞಾಪಿಸಿದ್ದಾರೆ:

ಕನ್ನಡಿಗ ತೊಡಬೇಕಾದ ಮಹಾಸಂಕಲ್ಪಗಳು

೧. ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ನೌಕರಿಯಲ್ಲಿ ಆದ್ಯತೆ ಸಿಗುವ ತನಕ, ಸ್ಥಾನಮಾನಗಳು ದೊರೆಯುವ ತನಕ ಹೋರಾಟ ನಡೆಸುತ್ತೇನೆ.

೨. ಕನ್ನಡ ಸರ್ವಮಾಧ್ಯಮವಾಗುವ ತನಕ ನಾನು ಸರ್ವತ್ಯಾಗಗಳಿಗೆ ಸಿದ್ಧನಾಗಿದ್ದೇನೆ.

೩. ಕನ್ನಡದ ಸೋಂಕಿಲ್ಲದ ಎಡೆಗಳಿಗೆ- ಮದುವೆಯೇ ಆಗಲಿ, ಸಭೆ ಸಮಾರಂಭಗಳೇ ಆಗಲಿ ಹೋಗುವುದಿಲ್ಲ.

೪. ಕರ್ನಾಟಕದ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡುವ ತನಕ ನನಗೆ ಶಾಂತಿಯಿರುವುದಿಲ್ಲ.

೫. ಕನ್ನಡವಿಲ್ಲದ ಬೋರ್ಡುಗಳನ್ನು ಕಿತ್ತು ಬಿಸಾಡುತ್ತೇನೆ.

೬. ವಿದೇಶೀಯರೊಂದಿಗಿದ್ದಾಗ ಅಥವಾ ಕನ್ನಡೇತರ ಜನರ ನಡುವೆಯಲ್ಲಲ್ಲದೆ ಅನ್ಯಭಾಷೆಯನ್ನು ಬಳಸುವುದಿಲ್ಲ.

೭. ಕನ್ನಡಿಗರಿಗೆ ಕನ್ನಡದಲ್ಲಿಯೇ ವ್ಯವಹಾರ ನಡೆಸುತ್ತೇನೆ; ಕನ್ನಡಿಗರಿಂದ ಬಂದ ಬೇರೆ ಭಾಷೆಯ ಪತ್ರಗಳಿಗೆ ಉತ್ತರ ಕೊಡುವುದಿಲ್ಲ.

೮. ಬೇರೆ ಭಾಷೆಗಳು ಕನ್ನಡದ ಸ್ಥಾನವನ್ನು ಆಕ್ರಮಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ.

೯. ಮರೆತೂ ಕನ್ನಡಕ್ಕೆ ವಿರೋಧವಾದ ಚಟುವಟಿಕೆಗಳಿಗೆ ಕೈ ಹಾಕುವುದಿಲ್ಲ; ಅವನ್ನು ಸಹಿಸುವುದಿಲ್ಲ.

೧೦. ಕನ್ನಡದ ಸರ್ವಾಂಗೀಣ ಪ್ರಗತಿಗೆ ಸರ್ವತೋಮುಖವಾದ ಏಳ್ಗೆಗೆ ಸದಾ ದುಡಿದರೂ ನೆರೆ ಭಾಷೆಗಳನ್ನು ದ್ವೇಷಿಸುವುದಿಲ್ಲ.

ಇವು ದೇಜಗೌ ಅವರು ಕನ್ನಡಿಗರಿಗೆ ಬೋಧಿಸುವ ದಶಸಂಕಲ್ಪಗಳು.

ಕನ್ನಡವಾಗಿ ಬದುಕಿದವರು

ದೇಜಗೌ ಹೀಗೆ ಕನ್ನಡವಾಗಿ ಬದುಕಿದವರು; ಅವರು ನಡೆಸಿದ ಜೀವನದ ಬಹುಭಾಗ ಕನ್ನಡದ ಕಾಯಕವಾಗಿತ್ತು; ಅಲಂಕರಿಸಿದ ಸ್ಥಾನಮಾನಗಳು ಕನ್ನಡದ ಕಾರಣಕ್ಕಾಗಿ ಬಂದವೆಂದು ಅವರಿಗೆ ಗೊತ್ತಿತ್ತು. ಸ್ಥಾನಮಾನಗಳಿಗಾಗಿ ಅವರೆಂದೂ ಬೇಗಲಿಲ್ಲ. ಆದರೆ ಕನ್ನಡವನ್ನೆಂದೂ ಅವರು ಮರೆಯಲಿಲ್ಲ. ಕನ್ನಡವನ್ನು ಹೊರತುಪಡಿಸಿ ದೇಜಗೌ ಅವರನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲ. ಅಂತೆಯೆ ದೇಜಗೌ ಅವರನ್ನು ಬಿಟ್ಟು ಕನ್ನಡದ ಆಧುನಿಕ ಅವಸ್ಥೆಯನ್ನು ನೆನಪಿಸಿಕೊಳ್ಳಲು ಬರುವುದಿಲ್ಲ. ಕನ್ನಡಕ್ಕೇನಾದರೂ ಇಂದು ಕೀರ್ತಿ ಗೌರವಗಳು ರಾಷ್ಟ್ರೀಯ ಅಂತರರಾಷ್ಟ್ರೀಯವಾಗಿ ಲಭಿಸಿದ್ದರೆ ಅದರ ಸಿಂಹಪಾಲು ಜವರೇಗೌಡರ ಖಾತೆಗೆ ಸಂದಾಯವಾಗುವಂಥದು. ಏಕೆಂದರೆ, ಅವರು ಕಟ್ಟಿದ ಸಂಸ್ಥೆಗಳು,

ಬೆಳೆಸಿದ ಶಿಷ್ಯಕೋಟಿ, ಅವರು ಗದ್ಯಶಿಲ್ಪಿಯಾಗಿ ಬರೆದದ್ದು, ವಾಚಾಳಿಯಾಗಿ ಮಾತಾಡಿದ್ದು, ಜ್ಞಾನಿಯಾಗಿ ಆಲೋಚಿಸಿದ್ದು, ಕುಶಲೋಪರಿಗೂ ಕನ್ನಡವೇ ಕಾರಣವಾದದ್ದು, 'ಎದೆಯ ಬಡಿತ, ನಾಡಿಯ ಮಿಡಿತ ಅಲ್ಲಿ ನುಡಿಯ ಹೊಡೆತ ಎಲ್ಲ ಕನ್ನಡ'ವೇ ಆದದ್ದು ಕನ್ನಡಕ್ಕೆ ಶ್ರೀ ರಕ್ಷೆಯಾಯಿತು. 'ಕನ್ನಡದ ಕಟ್ಟಾಳು', 'ಕನ್ನಡ ಯೋಧ', 'ಕನ್ನಡದ ಗಂಡುಗಲಿ', ಕನ್ನಡ ಸೀಮಾಪುರುಷ' ಎಂಬೆಲ್ಲ ಬಿರುದುಗಳು ದೇಜಗೌ ಅವರ ಕನ್ನಡ ಪ್ರೀತಿಗೆ ಸಂದ ಉಪಾದಿಗಳಷ್ಟೆ. ಆದರೆ ನಿಜವಾಗಿ ಹೇಳಬೇಕೆಂದರೆ ದೇಜಗೌ ಮತ್ತು ಕನ್ನಡ- ಎರಡೂ ವಿಭಿನ್ನವಲ್ಲ; ವ್ಯಕ್ತಿ ಮತ್ತು ಶಕ್ತಿ ಎಂದು ಬೇರ್ಪಡಿಸುವಂಥವಲ್ಲ; ಇವು ಒಂದನ್ನು ನೆನಪಿಸಿಕೊಂಡರೆ ಇನ್ನೊಂದು ತಾನೇ ತಾನಾಗಿ ಜೊತೆಗಿರುವಂಥ ಪದಯುಗ್ಮ. ದೇಜಗೌ ಕನ್ನಡಕ್ಕಾಗಿ ಬದುಕಿದವರಲ್ಲ ಕನ್ನಡವಾಗಿ ಬದುಕಿದವರು.

* * * * *

ದೇಜಗೌ ಶಿಕ್ಷಣ ವಿಚಾರಧಾರೆ

- ಎಸ್. ಮಂಚಯ್ಯ

ಶಿಷ್ಯವೃಂದದಲ್ಲಿ, ಆತ್ಮೀಯರಲ್ಲಿ ಮತ್ತು ಸಾಹಿತಿಗಳ ವೃಂದದಲ್ಲಿ 'ದೇಜಗೌ' ಎಂದೇ ಪರಿಚಿತರಾಗಿರುವ ದೇವೇಗೌಡ ಜವರೇಗೌಡರು ಜನ್ಮತಾಳಿದುದು ಮಧ್ಯಮ ವರ್ಗದ ರೈತ ಕುಟುಂಬವೊಂದರಲ್ಲಿ. ಅವರು ತಮ್ಮ ಜೀವನ, ಶಿಕ್ಷಣ ಪಡೆಯಲು ಮಾಡಿದ ಪ್ರಯತ್ನ, ಅಡ್ಡ ಬಂದ ಎಡರುತೊಡರುಗಳು ಮತ್ತು ಸಾಧನೆ ಕುರಿತಂತೆ ತಮ್ಮ ಆತ್ಮಕಥನ "ಹೋರಾಟದ ಬದುಕು" ಗ್ರಂಥದಲ್ಲಿ ಸುವಿಸ್ತಾರವಾಗಿ ಹೇಳಿದ್ದಾರೆ. ಅವರು " ಗುಡಿಸಲಿನಿಂದ ಗಂಗೋತ್ರಿಗೆ ಯಾತ್ರೆ ಬೆಳೆಸಿದ ಜಿಜ್ಞಾಸು, ಜ್ಞಾನ ಭಿಕ್ಷು, ಸಾಧಕ, ಬೋಧಕ, ಗುರು ಕೊಟ್ಟ ಡಿಂಡಿಮವನ್ನು ಬಾರಿಸುವುದರಲ್ಲಿ ಸಾರ್ಥಕತೆಯನ್ನು ಕಂಡುಕೊಂಡಿರುವ ಕನ್ನಡ ಭಕ್ತ " ಅದು ಕನ್ನಡ ಡಿಂಡಿಮ. "ಬಾರಿಸು ಕನ್ನಡ ಡಿಂಡಿಮವ" ಎಂಬ ಗುರು ಕೊಟ್ಟ ಡಿಂಡಿಮವನ್ನು ಸಮರ್ಥವಾಗಿಯೇ ಬಾರಿಸಿದ್ದಾರೆ. ಗುರು ನೀಡಿದ ಮತ್ತೊಂದು ಮಂತ್ರ ದೀಕ್ಷೆ " ಕನ್ನಡಕ್ಕಾಗಿ ಕೈಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂಬುದು. ಅವರ ಪಾಲಿಗೆ ಇದು ಕೇವಲ ಒಂದು ಮಂತ್ರವಾಗಿರಲಿಲ್ಲ; ಒಂದು ಘೋಷಣೆಯಾಗಿರಲಿಲ್ಲ. ಅದು ಅವರಲ್ಲಿ ಚಾಲಕ ಶಕ್ತಿಯಾಗಿ ನಿಂತು ಸದಾ ಅವರನ್ನು ಜಾಗೃತಾವಸ್ಥೆಯಲ್ಲಿಟ್ಟು ಕನ್ನಡಮ್ಮನ ತೇರನ್ನು ಸಮರ್ಥವಾಗಿ ನಡೆಸಬಲ್ಲ ಸಾರಥಿಯನ್ನಾಗಿ ಮಾಡಿತು.

ಈ ಗುರು ಶಿಷ್ಯರ ಸಂಬಂಧ ಮಾತಿಗೆ ಮೀರಿದದು. ನನ್ನ ಮತ್ತು ದೇಜಗೌ ಅವರ ಸಂಬಂಧ ಯಾವ ಪದಗಳಿಂದ ವರ್ಣಿಸಬಹುದೋ ನನಗೆ ಅರಿಯದು: ಪ್ರೀತಿ? ವಿಶ್ವಾಸ? ಸ್ನೇಹ? ಅಕ್ಕರೆ ? ಭಕ್ತಿ? ಗೌರವ? ಪೂಜ್ಯತೆ ? ಒಂದೊಂದೂ ಸಾಲದಾಗುತ್ತದೆ ಸೋಲುತ್ತದೆ; ಅತಿ ವ್ಯಾಪ್ತವಾಗುತ್ತದೆ ಅಥವಾ ಅವ್ಯಾಪ್ತವಾಗುತ್ತದೆ! ಅಹೇತುಕ ಮೈತ್ರಿ? ನಿಷ್ಕಾರಣವಾತ್ಸಲ್ಯ? ಜನ್ಮಾಂತರದ ಬಾಂಧವ್ಯ? ಮಾತುಗಳಿಗೇನು? ಬೇಕಾದಷ್ಟಿವೆ; ಮಾತಿಗೆ ಮೀರಿದ್ದನ್ನು ಹೇಳುವಾಗ ಮಾತಿಲ್ಲದಿರುವುದೇ ಲೇಸು! ಎಂದು ರಾಷ್ಟ್ರಕವಿ ಕುವೆಂಪು ಅವರೇ ಹೇಳಿದ್ದಾರೆ. ಅಂದರೆ ಒಬ್ಬರನ್ನೊಬ್ಬರು ಅರಿತು ಕೊಂಡ ಗುರುಶಿಷ್ಯರ ಸಂಬಂಧ ಇವೆಲ್ಲವನ್ನೂ ಒಳಗೊಂಡಿರುತ್ತದೆ.ಒಳಗೊಂಡಿರಬೇಕು. ಅಂದಮೇಲೆ ಆ ಮಹಾಗುರುವಿನ ದೈತ್ಯಪ್ರತಿಭೆಯ ಪ್ರಭಾವಳಿಯ ಬೆಳಕಿನಲ್ಲಿ ಕಣ್ತೆರೆದ ದೇಜಗೌ ಅವರು ಕನ್ನಡದ ಕಟ್ಟಾಸೇನಾನಿಯಾಗಿ ರೂಪುಗೊಂಡು ಕನ್ನಡದ ಸೇನೆಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಲು ಅಗತ್ಯವಾದ ಸಂಘಟನಾಶಕ್ತಿ, ಮಾರ್ಗದರ್ಶನ ಮಾಡುವ ಸಾಮರ್ಥ್ಯಗಳನ್ನು ಬೆಳೆಸಿಕೊಂಡಿರುವುದು ಆಶ್ಚರ್ಯವುಂಟು ಮಾಡಬೇಕಾಗಿಲ್ಲ.

ದೇಜಗೌ ಮತ್ತು ಕನ್ನಡ

" ಕನ್ನಡ ಶಿಕ್ಷಣದ ಯಾವುದೇ ಹಂತದಲ್ಲಿ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಂತೆ ಪ್ರಜ್ವಲವೂ ವೈವಿಧ್ಯಮಯವೂ

ಸಂಪತ್ ಸಮೃದ್ಧವೂ, ರಮ್ಯವೂ, ಅವಿಚ್ಛಿನ್ನವೂ ಆದ ಸುದೀರ್ಘ ಇತಿಹಾಸವುಳ್ಳ ಭಾಷಾ ಸಾಹಿತ್ಯಗಳು ಜಗತ್ತಿನಲ್ಲಿಯೇ ಅತಿವಿರಳವೆಂದು ಹೇಳಿದರೆ ಅದು ಅಂಧಾಭಿಮಾನದ ಅತಿಶಯೋಕ್ತಿಯ ಜಲ್ಪವೆಂದು ಯಾರೂ ತಳ್ಳಿಹಾಕಬಾರದು." ಕನ್ನಡದ ಕಣ್ವರೆಂದು ಖ್ಯಾತರಾಗಿರುವ ಬಿ. ಎಂ. ಶ್ರೀ ಅವರಿಂದ ಪ್ರಾರಂಭವಾಗಿ ಇಂದಿನವರೆಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕನ್ನಡ ಸುಪುಷ್ಟವಾಗಿ ಬೆಳೆದಿದೆ; ಬೆಳೆಯುತ್ತಿದೆ. ಕನ್ನಡದಲ್ಲಿ ಏನಿದೆ ಎಂಬ ಕಾಲ ಆಗಿಹೋಗಿದೆ. ಈಗ ಏನಿಲ್ಲ ಎಂಬುದನ್ನು ಹುಡುಕಿ ಅದನ್ನು ಸೃಷ್ಟಿಸುವುದಕ್ಕಾಗಿ ಶ್ರಮಿಸಬೇಕಾಗಿದೆ. ಅದು "ಗಾತ್ರ, ವಿಸ್ತಾರ, ವೈವಿಧ್ಯ ಶ್ರೀಮಂತಿಕೆಗಳಲ್ಲಿ ಪ್ರಪಂಚದ ಯಾವ ಭಾಷೆಯ ಸಾಹಿತ್ಯದೊಡನೆಯಾದರೂ ಹೆಗಲೆಣೆಯಾಗಿ ನಿಲ್ಲಬಲ್ಲದು. ವಿಜ್ಞಾನ ತಾಂತ್ರಿಕ ಜ್ಞಾನಗಳನ್ನು ಕುರಿತಂತೆ ಕನ್ನಡದಲ್ಲಿ ಸಾಹಿತ್ಯ ರಚನೆ ತ್ವರಿತಗತಿಯಲ್ಲಿ ಆಗಬೇಕಾಗಿದೆ. ಈ ವಿಷಯ ಬಂದಾಗಲೆಲ್ಲ ನಾವು ಮುಂದೊಡ್ಡುವ ಪ್ರಬಲ ಸಮಸ್ಯೆ ಸುಲಭವಾಗಿ ಅರ್ಥವಾಗುವ ಪಾರಿಭಾಷಿಕ ಪದಗಳ ಅಭಾವ. ಈ ತೊಂದರೆಯನ್ನು ನೀಗಲು ರಾಷ್ಟ್ರ ಮಟ್ಟದಲ್ಲಿ ಪ್ರಯತ್ನ ಆಗಬೇಕು. ದೇಶದ ಎಲ್ಲ ಪ್ರಾಂತ್ಯಗಳಲ್ಲೂ ಉಪಯೋಗಕ್ಕೆ ಬರುವ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತಹ ಪದಗಳನ್ನು ರೂಪಿಸಬೇಕು. ಸರಿಯಾದ ಪದಗಳನ್ನು ರೂಪಿಸುವುದು ಕಷ್ಟವಾದರೆ ಇಂಗ್ಲಿಷ್ ಪದಗಳನ್ನೇ ಬಳಸಬಹುದು. ಹೀಗೆ ಚಲಾವಣೆಗೆ ಬಂದ ಪದಗಳು ಕನ್ನಡ ಪದಗಳೇ ಆಗಿ ಕನ್ನಡದ ಶಬ್ದಸಂಪತ್ತನ್ನು ಹೆಚ್ಚಿಸುತ್ತವೆ. ಭಾಷೆ ಬೆಳೆಯುವುದೇ ಹೀಗೆ. ಸಮಾನಾರ್ಥಕೊಡುವ ಪಾರಿಭಾಷಿಕ ಪದಗಳಿಲ್ಲವೆಂದು ಆಗತ್ಯವಿರುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಹಿತ್ಯ ರಚಿಸದೆ ಕೈಕಟ್ಟಿ ಕುಳಿತರೆ ಈ ಕೊರತೆ ತುಂಬಲು ಸಾಧ್ಯವಿಲ್ಲ. ಆದುದರಿಂದ ವೈದ್ಯಕೀಯ, ಎಂಜಿನಿಯರಿಂಗ್ ಮತ್ತಿತರ ತಾಂತ್ರಿಕ ವಿಷಯಗಳನ್ನು ಬೋಧಿಸುತ್ತಿರುವವರು ಆಯಾ ವಿಷಯಗಳಲ್ಲಿ ಸಾಹಿತ್ಯ ರಚಿಸುವ ಸಾಹಸ ಮಾಡಿ ಇಂದು ಓದಿ ಮಂದಿ ಮುಂದಿಟ್ಟಿರುವ ಸವಾಲಿಗೆ ದಿಟ್ಟತನದಿಂದ ಉತ್ತರಿಸಬೇಕು.' ಇದು ದೇಜಗೌ ಅವರ ನಿಲುವು.

ದೇಜಗೌ ಕನ್ನಡ ಚಳುವಳಿಯ ನೇತಾರರು. ಯಾವುದೇ ಸಭೆ ಸಮಾರಂಭವಾಗಲಿ ಕನ್ನಡದ ಬಗ್ಗೆ ಮಾತನಾಡದೆ ವಿರಮಿಸುವುದಿಲ್ಲ. ಕರ್ನಾಟಕದಲ್ಲಿ ಕನ್ನಡ ಸರ್ವವ್ಯಾಪಿಯಾಗಬೇಕು. ಅದೇ ಪ್ರಥಮ ಭಾಷೆಯಾಗಬೇಕು; ಅದೇ ಶಿಕ್ಷಣ ಮಾಧ್ಯಮ ಆಗಬೇಕು; ಅದೇ ಆಡಳಿತ ಭಾಷೆಯಾಗಬೇಕು; ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳೆಲ್ಲವೂ ಕನ್ನಡದಲ್ಲಿಯೇ ನಡೆಯಬೇಕು ಎಂಬುದು ಅವರ ನಿಲುವು. ಅದಕ್ಕಾಗಿ ಸದಾ ಹೋರಾಟ.

ಗೋಕಾಕ್ ಸಮಿತಿಯ ವರದಿ ರಾಜ್ಯಾದ್ಯಂತ ಚಳುವಳಿಯನ್ನೇ ಪ್ರಾರಂಭಿಸುವಂತೆ ಮಾಡಿತು. ಆ ಸಮಿತಿಯ ಸಲಹೆಗಳನ್ನು ಭಾರತ ಒಕ್ಕೂಟದ ಎಲ್ಲ ರಾಜ್ಯಗಳಲ್ಲೂ ಅನುಷ್ಠಾನಕ್ಕೆ ತರಬಹುದಾದ ಮಾದರಿ ಸಲಹೆಗಳು. ಸರ್ಕಾರ ಆ ಸಲಹೆಗಳನ್ನು ಮಾರ್ಪಡಿಸಲು ಪ್ರಯತ್ನಿಸಿ ವಿಕೃತ ಮಾಡಿ ಗೊಂದಲವೆಬ್ಬಿಸಿತು. ಸಮಿತಿಯ ವರದಿಯಲ್ಲಿ ಮಾತೃಭಾಷೆಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದೆ. ಪ್ರಾಥಮಿಕ ಹಂತದಲ್ಲಿ ಅವರವರ ಮಾತೃಭಾಷೆಯೇ ಶಿಕ್ಷಣ ಮಾಧ್ಯಮ. ಕನ್ನಡವನ್ನು ಮೂರನೆ ತರಗತಿಯಿಂದ ಬೋಧಿಸ

ಬೇಕೆಂಬುದು ಸಲಹೆ. ಅದನ್ನು ಹಾಗೆಯೇ ಕಾರ್ಯರೂಪಕ್ಕೆ ತಂದಿದ್ದರೆ ಗೊಂದಲವೇನೂ ಇರುತ್ತಿರಲಿಲ್ಲ.

ನಮಗೆಂತಹ ಶಿಕ್ಷಣ ಬೇಕು ?

1854ರಲ್ಲಿ ಹೊರಡಿಸಿದ ವುಡ್‌ನ ಪರಿಪತ್ರವೇ ಭಾರತದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಪ್ರಾರಂಭಕ್ಕೆ ತಳಹದಿ. ಅಂದು ಪ್ರಾರಂಭವಾದ ಶಿಕ್ಷಣ ಪದ್ಧತಿಯಲ್ಲಿ ಮೂಲ ಭೂತ ಬದಲಾವಣೆಗಳನ್ನು ಮಾಡಲು ಮನಸ್ಸು ಮಾಡದೆ ಹಳೆಯ ಅಂಗಿಗೆ ತೇಪೆಹಾಕಿ ಉಪಯೋಗಿಸುವಂತೆ ಆಗಷ್ಟು ಈಗಷ್ಟು ಸುಧಾರಣೆ ಮಾಡಿ ಅದರಲ್ಲಿ ಹೊಸತನ ತುಂಬಲು ಪ್ರಯತ್ನಿಸಿ ತೇಪೆ ಕೆಲಸ ಮಾಡಿದ್ದೇವೆಯೇ ವಿನಹ ಸಂಪೂರ್ಣ ಸುಧಾರಣೆಗೆ ಪ್ರಯತ್ನಿಸಿಲ್ಲ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ರಚಿಸಿದ ಸಮಿತಿ ಮತ್ತು ಆಯೋಗಗಳ ವರದಿಗಳಲ್ಲಿ ಮಾಡಿರುವ ಸಲಹೆಗಳನ್ನು ಸ್ಥಿರ ಮನಸ್ಸಿನಿಂದ ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಿಲ್ಲ. ಅಲ್ಲೊಂದು ಇಲ್ಲೊಂದು ಸಲಹೆಗಳನ್ನು ಆಯ್ಕೆ ಮಾಡಿಕೊಂಡು ಅರೆಬರೆ ಮನಸ್ಸಿನಿಂದ ಅನುಷ್ಠಾನಕ್ಕೆ ತರಲು ನಿರ್ಧರಿಸಿದುದರ ಪರಿಣಾಮವಾಗಿ ಸುಧಾರಣೆ ಮಾತು ಹುಸಿಗೊಂಡಿದೆ.

" ಈಗಿನ ವ್ಯವಸ್ಥೆಯ ಪ್ರಕಾರ ಕೆಲವರಿಗೆ ಮಾತ್ರ ವಿದ್ಯಾಭ್ಯಾಸ ಮೀಸಲು. ಹಗಲಿರುಳೂ ದುಡಿಯುವ ಶ್ರಮಜೀವಿಗಳಿಗೆ ಅದರಿಂದ ಏನೇನೂ ಪ್ರಯೋಜನವಿಲ್ಲ. ಇತರರ ದುಡಿಮೆಯಿಂದ ಉತ್ಪತ್ತಿಯಾಗುವ ಸಂಪತ್ತಿನಲ್ಲಿ ಪಾಲುಪಡೆಯುವವರಿಗೆ ಮಾತ್ರ ಆ ಪ್ರಯೋಜನ. ಇದರ ಪರಿಣಾಮವಾಗಿ ರಾಷ್ಟ್ರದ ಸಂಪತ್ತು ಅಭಿವೃದ್ಧಿ ಹೊಂದುವಂತಿಲ್ಲ. ತಮ್ಮ ದುಡಿಮೆಯಿಂದ ಪಡೆದ ಸಂಪಾದನೆಯನ್ನು ಬೇರೆಯವರು ಕಸಿದುಕೊಳ್ಳುವಾಗ, ಉತ್ಪನ್ನ ಹೆಚ್ಚಿಸಲು ಅವರಿಗೆ ಆಸಕ್ತಿ ಹುಟ್ಟುವುದಿಲ್ಲ. ಹೀಗಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಕೆಡುತ್ತದೆ. ವಿದ್ಯಾವಂತರಿಗೆ ಶ್ರಮಜೀವಿಗಳಿಂದ ಪ್ರಯೋಜನ ದೊರಕುವಂತೆಯೇ ಶ್ರಮ ಜೀವಿಗೆ ವಿದ್ಯಾವಂತರಿಂದ ಪ್ರಯೋಜನ ಲಭಿಸಬೇಕು. ಇವರಿಬ್ಬರಿಂದ ರಾಷ್ಟ್ರದ ಆರ್ಥಿಕಾಭಿವೃದ್ಧಿ ಆಗಬೇಕು ಶಿಕ್ಷಣ ಯೋಜನೆಯಲ್ಲಿ ಇಬ್ಬರಿಗೂ ಅನುಕೂಲವಾಗುವ ಅವಕಾಶವನ್ನು ಕಲ್ಪಿಸಬೇಕು." ಇವರ ಈ ನಿಲುವು ಭಾಗಶಃ ಸತ್ಯ. ಐವತ್ತರ ದಶಕದಲ್ಲಿ ಶಿಕ್ಷಣ ಸೌಲಭ್ಯಗಳು ಮಿತವಾಗಿದ್ದುದರ ಕಾರಣ ಸಮಾಜದ ಎಲ್ಲ ವರ್ಗದವರೂ ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನಾದರೂ ಪಡೆಯಲು ಅಸಮರ್ಥರಾಗಿದ್ದರು. ಅದಕ್ಕೆ ಕಾರಣ ಎರಡು. ಒಂದು ಪೋಷಕರು ಬಡತನದಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಎಳೆಯ ವಯಸ್ಸಿನಲ್ಲಿ ದುಡಿಮೆಗೆ ತೊಡಗಿಸಿ ಕುಟುಂಬದ ಆದಾಯ ಹೆಚ್ಚಿಸಿಕೊಳ್ಳುತ್ತಿದ್ದುದು; ಎರಡು ಶಿಕ್ಷಣ ಸೌಲಭ್ಯಗಳಿಲ್ಲದ್ದಿದುದು. ಪ್ರಾಥಮಿಕ ಸೌಲಭ್ಯಗಳೇಕೆ ಪ್ರೌಢ ಶಾಲಾ ಶಿಕ್ಷಣ ಸೌಲಭ್ಯಗಳೂಮನೆಯ ಬಾಗಿಲಿನಲ್ಲಿಯೆ ದೊರೆಯುವಾಗಲೂ ಪರಿಸ್ಥಿತಿ ನಮ್ಮ ನಿರೀಕ್ಷೆಗೆ ತಕ್ಕಂತೆ ಉತ್ತಮಗೊಂಡಿಲ್ಲ ಪ್ರಾಥಮಿಕ ಶಿಕ್ಷಣದ ಪ್ರಥಮ ನಾಲ್ಕು ವರ್ಷಗಳನ್ನು ಮುಗಿಸುವ ಮೊದಲೇ ಅನೇಕ ಮಕ್ಕಳು ಶಾಲೆ ಬಿಡುವರು. ಈ ಅಪವ್ಯಯವನ್ನು ತಪ್ಪಿಸುವುದು ನಮಗಿನ್ನೂ ಸಾಧ್ಯವಾಗಿಲ್ಲ. ಮೇಲಾಗಿ ಈ ಶಾಲೆಗಳಲ್ಲಿ ಕನಿಷ್ಠ ಸೌಲಭ್ಯಗಳ ಕೊರತೆ ಇದ್ದೂ ಅವು ಮಕ್ಕಳನ್ನು ಆಕರ್ಷಿಸಲು ವಿಫಲವಾಗಿವೆ. ಈ

ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಸರ್ಕಾರ ಶಿಕ್ಷಣಕ್ಕಾಗಿ ಆಂದೋಲನ. ಮಕ್ಕಳಿಗೆ ಓದಲು ವಿಜ್ಞಾನ ಸಾಹಿತ್ಯ ಒದಗಿಸುವುದು. ಪ್ರಯೋಗಶಾಲೆಗಳಿಗೆ ಅಗತ್ಯ ಸಲಕರಣೆಗಳನ್ನು ಒದಗಿಸುವುದು. ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಾಲೆಗೆ ಬರುವಂತೆ ಮಾಡಲು ಮಧ್ಯಾಹ್ನದ ಉಪಾಹಾರ ವ್ಯವಸ್ಥೆ. ಮಕ್ಕಳಿಗೆ ಹಾಲು ಕೊಡುವ ವ್ಯವಸ್ಥೆ. ಇವೇ ಮುಂತಾದ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತರುತ್ತದೆ. ಇವು ಎಷ್ಟು ಪರಿಣಾಮಕಾರಿಯಾಗುವುವು ಎಂಬುದನ್ನು ಕಾದು ನೋಡಬೇಕು. ಸರ್ವರಿಗೂ ಸಮಾನ ಅವಕಾಶಗಳನ್ನು ಪ್ರತಿಪಾದಿಸುವ ನಮ್ಮ ರಾಜ್ಯಾಂಗ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಶೋಷಿತ ವರ್ಗದ ಮಕ್ಕಳಿಗೆ ಸಮಾನ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸದಿರುವುದು ನಮ್ಮ ಆಡಳಿತಶಾಹಿಯ ಅಲಕ್ಷ್ಯವೋ, ಔದಾಸೀನ್ಯವೋ ಅಥವಾ ಈ ವರ್ಗದ ಮಕ್ಕಳು ಸಮಾಜದಲ್ಲಿ ಮೇಲೇರಬಾರದು ಎಂಬ ದುರುದ್ದೇಶವೋ ತಿಳಿಯದು.

1993ರ ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಮಾದರಿ ಕನ್ನಡ ಶಾಲೆ ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಸುಮಾರು ಹತ್ತಿರ ಹತ್ತಿರ ನಲವತ್ತು ಸಾವಿರ ಶಾಲೆಗಳಿರುವ ಈ ನಾಡಿನಲ್ಲಿ ಪ್ರಾರಂಭಿಸಬೇಕೆಂದಿರುವ ಮಾದರಿ ಶಾಲೆಗಳು ಎಷ್ಟು ಜನ ಮಕ್ಕಳಿಗೆ ಅವಕಾಶ ಮಾಡಿಕೊಡಬಲ್ಲವು ? ಈ ಯೋಜನೆಯ ಫಲಾಫಲಗಳನ್ನು ಕಾದು ನೋಡಬೇಕಾಗಿದೆ

ಅವರು ಶ್ರಮಜೀವಿಗಳ ಮತ್ತು ಬಂಡವಾಳಶಾಹಿಗಳು ಮತ್ತು ಅವರ ನೆರವಿಗಿರುವ ಉನ್ನತ ತಾಂತ್ರಿಕ ವರ್ಗ, ಆಡಳಿತಶಾಹಿಗಳ ನಡುವಿನ ಸಂಬಂಧವನ್ನೂ ಟೀಕಿಸಿದ್ದಾರೆ. ದುಡಿಯುವವನು ಸಂಪತ್ತಿನ ಉತ್ಪಾದಕ. ತಾನು ಉತ್ಪಾದಿಸುವ ಸಂಪತ್ತಿನಲ್ಲಿ ತನಗೂ ಪಾಲಿಲ್ಲವೆಂದರಿತಾಗ ದುಡಿಮೆಯಲ್ಲಿ ಆತನಿಗೆ ಆಸಕ್ತಿಯಾದರೂ ಹೇಗೆ ಉಂಟಾಗಬೇಕು? ಆಸಕ್ತಿಯಿಲ್ಲದ ದುಡಿಮೆಯಿಂದ ಸಂಪತ್ತಿನ ಉತ್ಪಾದನೆ ಹೆಚ್ಚುವುದಾದರೂ ಹೇಗೆ ? ಇದಕ್ಕೆ ಕಾರಣ ಸಂಪತ್ತಿನ ಉತ್ಪಾದನೆಯಲ್ಲಿ ವಿದ್ಯಾವಂತರ ಪಾತ್ರ ಎಷ್ಟು ಮುಖ್ಯವೋ ದುಡಿಯುವವರ ಪಾತ್ರವೂ ಅಷ್ಟೇ ಮುಖ್ಯ। ಎಂದರಿತು ಅವರಿಬ್ಬರಲ್ಲಿ ಸಮರಸಭಾವನೆ ಉಂಟಾಗಿ ಇಬ್ಬರೂ ಒಗ್ಗೂಡಿ ನಡೆದಾಗ ಸಂಪತ್ತಿನ ಅಭಿವೃದ್ಧಿ ಸಾಧ್ಯ.

"ಆಧುನಿಕ ವೈಜ್ಞಾನಿಕ ಪ್ರಯೋಗದ ಪರಿಣಾಮವಾಗಿ ಕೈಗಾರಿಕಾಭಿವೃದ್ಧಿ ಹಿಮ್ಮಡಿವೇಗದಿಂದ ಸಾಗುತ್ತಿದೆ. ಆ ಕ್ಷೇತ್ರದಲ್ಲಿ ಭರತ ಖಂಡಕ್ಕೆ ಮಾನ್ಯವಾದ ಸ್ಥಾನ ಲಭಿಸಬೇಕಾದರೆ ಇಲ್ಲಿಯ ವಿದ್ಯಾಭ್ಯಾಸ ಕ್ರಮ ಸಂಪೂರ್ಣವಾಗಿ ಬದಲಾವಣೆ ಹೊಂದಬೇಕು. ಕೇವಲ ಜ್ಞಾನ ಸಂಪಾದನೆಯ ಕಡೆಗೆ ಗಮನ ಕೊಡುವುದಕ್ಕಿಂತ ಪಟ್ಟಣಿಗರ ಬಾಳಿಗೂ ಹಳ್ಳಿಗರ ಬಾಳಿಗೂ ನಡುವೆ ಅಗಲವಾಗುತ್ತಿರುವ ಅಂತರವನ್ನು ಮುಚ್ಚಲು ಯತ್ನಿಸಬೇಕು." ಮಾನವ ಶಕ್ತಿಯ ತರಬೇತು ಮತ್ತು ವಿನಿಯೋಗಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ರೂಪಿಸುವುದಕ್ಕೆ ಆದ್ಯತೆ ಕೊಡಬೇಕು. ದಿನೇ ದಿನೇ ಬೆಳೆಯುತ್ತಿರುವ ಕೈಗಾರಿಕೆಗಳ ಅವಶ್ಯಕತೆಗಳನ್ನು ಆಧರಿಸಿ ಶಿಕ್ಷಣ ವ್ಯವಸ್ಥೆ ಮಾಡಬೇಕಾಗಿದೆ. ಹೀಗೆ

ಮಾಡುವುದರಿಂದ ಮಾನವಶಕ್ತಿಯ ಅಪವ್ಯಯ ನಿಲ್ಲುತ್ತದೆ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿ ಶಿಕ್ಷಣ ಹಂತದಲ್ಲಿ ಮೇಲೇರಿದಂತೆಲ್ಲ ಹಳ್ಳಿಯಿಂದ ದೂರವಾಗುತ್ತ ಹೋಗುತ್ತಾನೆ. ಆತ ತಾನು ಹುಟ್ಟಿ ಬೆಳೆದ ಸಮಾಜದಿಂದ ದೂರವಾಗುತ್ತಾನೆ. ಇದಕ್ಕೆ ಕಾರಣ ಪಟ್ಟಣಗಳಲ್ಲಿ ದೊರೆಯುವ ಸೌಲಭ್ಯಗಳು ಮತ್ತು ಮನರಂಜನೆ. ಪಟ್ಟಣಗಳ ಅಭಿವೃದ್ಧಿಗಾಗಿ ವ್ಯಯ ಮಾಡುವ ಹಣದ ಸ್ವಲ್ಪ ಭಾಗವನ್ನಾದರೂ ಗ್ರಾಮೀಣ ಜನರ ಜೀವನಕ್ರಮ ಉತ್ತಮಪಡಿಸಲು ಉಪಯೋಗಿಸಿದರೆ, ಗ್ರಾಮೀಣಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣ ಕೈಗಾರಿಕೆಗಳನ್ನು ಪ್ರಾರಂಭಿಸಿದರೆ, ಗೃಹಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟರೆ (ಈಗೇನೋ ಈ ಉದ್ದೇಶ ದಿಂದಲೇ " ವಿಶ್ವಯೋಜನೆ " ಅಸ್ತಿತ್ವಕ್ಕೆ ಬಂದಿದೆ. ಅದರ ಯಶಸ್ಸನ್ನು ಕಾದು ನೋಡಬೇಕಾಗಿದೆ) ಗ್ರಾಮೀಣ ಪ್ರದೇಶದ ವಿದ್ಯಾವಂತರು ಅಲ್ಲಿಯೇ ನೆಲೆ ನಿಂತು ಗ್ರಾಮೀಣ ಪ್ರದೇಶದ ವಿಕಾಸಕ್ಕೆ ಕಾರಣರಾಗಬಹುದು. ಇದು ಪಟ್ಟಣಿಗರ ಜೀವನ ಮತ್ತು ಗ್ರಾಮೀಣ ಜನರ ಜೀವನದ ನಡುವಿನ ಅಂತರವನ್ನು ಕುಗ್ಗಿಸಿ ಪಟ್ಟಣಿಗರಿಗೆ ದೊರೆಯುವ ಸೌಲಭ್ಯಗಳು ಹಳ್ಳಿಗರಿಗೂ ದೊರೆಯುವಂತೆ ಮಾಡುವುದು.

ಮೂಲ ಶಿಕ್ಷಣಕ್ಕೆ ಅವರ ಪ್ರತಿಕ್ರಿಯೆ

ರಾಷ್ಟ್ರಪಿತ ಗಾಂಧೀಜಿ ಪ್ರತಿಪಾದಿಸಿ " ಜೀವನ ಶಿಕ್ಷಣ" ಅಥವಾ " ಮೂಲ ಶಿಕ್ಷಣ" ಕುರಿತ ತಮ್ಮ ಪ್ರತಿಕ್ರಿಯೆಯಲ್ಲಿ ಅದರ ಮೂಲತತ್ತ್ವಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಅವರು ಮೂಲ ಶಿಕ್ಷಣದ ಬೇರುಗಳನ್ನೇ ಜಗ್ಗಿಸಲು ಪ್ರಯತ್ನಿಸಿದಂತೆ ಕಾಣುತ್ತದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಗಳಿಸಿಕೊಡುವ ಹೋರಾಟ ಮಧ್ಯೆ ಶಿಕ್ಷಣಕ್ಕೆ ಗಾಂಧೀಜಿಯ ಕಾಣ್ಕೆ ಕಣ್ಣಾಗಿಣಲಿಲ್ಲ. ಅವರ ಶಿಕ್ಷಣ ಪದ್ಧತಿಯ ಮುಖ್ಯ ತತ್ತ್ವಗಳು:

1. 6-14 ವರ್ಷ ವಯೋಮಿತಿಯಲ್ಲಿರುವ ಎಲ್ಲ ಮಕ್ಕಳಿಗೂ ಉಚಿತವೂ ಕಡ್ಡಾಯವೂ ಆದ ಶಿಕ್ಷಣ ವ್ಯವಸ್ಥೆ ಮಾಡಬೇಕು;
2. ಮಾತೃಭಾಷೆಯೇ ಶಿಕ್ಷಣ ಮಾಧ್ಯಮ ಆಗಬೇಕು;
3. ಶಿಕ್ಷಣ ಉತ್ಪಾದನಾ ಸಾಮರ್ಥ್ಯವುಳ್ಳ ಚಟುವಟಿಕೆಗಳ ಮೂಲಕವೇ ಸಾಗಬೇಕು;
4. ಶಿಕ್ಷಣ ಸ್ವಪರಿಪೂರ್ಣವಾಗಿರಬೇಕು (Self sufficiency).

ಮೇಲಿನ ನಾಲ್ಕು ಮುಖ್ಯ ತತ್ತ್ವಗಳಲ್ಲಿ ಮೂರರ ಬಗ್ಗೆ ತಮ್ಮ ಸಂಶಯ ವ್ಯಕ್ತ ಪಡಿಸಿದ್ದಾರೆ. ಗಾಂಧೀಜಿ ನಿಂತ ನೀರಲ್ಲ; ಅವರೊಬ್ಬ ಸಂಚಲನಾತ್ಮಕ ಗುಣ ಹೊಂದಿದ್ದ ಮಹಾಸಾಧಕ. ಅವರು ಈ ಶಿಕ್ಷಣ ಪದ್ಧತಿಯನ್ನು ರೂಪಿಸಿದಾಗ ಅವರು ಕನಸು ಕಂಡಿದ್ದ ಭಾರತದ ಚಿತ್ರವೇ ಬೇರೆ. ಅದು ಗ್ರಾಮ ಸ್ವರಾಜ್ಯದ ಕನಸು. ಅಂತಹ ಒಂದು ವ್ಯವಸ್ಥೆಯಲ್ಲಿ ಗಾಂಧೀಜಿ ಪ್ರತಿಪಾದಿಸಿದ ಶಿಕ್ಷಣ ಪದ್ಧತಿ ಪೂರ್ಣ ಯಶಸ್ಸು ಪಡೆಯುತ್ತಿತ್ತೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಬಹುಶಃ ಅವರು ಸ್ವಾತಂತ್ರ್ಯ ಬಂದ ನಂತರ ಕೆಲವು ವರ್ಷಗಳು ಜೀವಂತರಾಗಿದ್ದರೆ ತಾವು ಪ್ರತಿಪಾದಿಸಿದ ಶಿಕ್ಷಣ ಪದ್ಧತಿಯನ್ನು ಮೂಲ ತತ್ತ್ವಗಳಿಗೆ ಧಕ್ಕೆ ಬರದಂತೆ ಬದಲಿಸಿ ರೂಪಿಸುತ್ತಿದ್ದರೇನೋ.

ರಾಷ್ಟ್ರದ ಎಲ್ಲ ಮಕ್ಕಳಿಗೂ ಎಂಟು ವರ್ಷಗಳ ಅವಧಿಯ ಉಚಿತವೂ ಕಡ್ಡಾಯವೂ ಆದ ಶಿಕ್ಷಣ ಒದಗಿಸುವುದು ರಾಜ್ಯಾಂಗ 45 ನೇ ವಿಧಿಯಂತೆ ನಮ್ಮ ಆದ್ಯ ಕರ್ತವ್ಯ. ರಾಜ್ಯಾಂಗ ಅನುಷ್ಠಾನಕ್ಕೆ ಬಂದು 43 ವರ್ಷಗಳಾದರೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಇನ್ನೂ ಮುಗಿಯದ ಕೆಲಸವಾಗಿಯೇ ಉಳಿದಿದೆ. 20ನೆಯ ಶತಮಾನದ ಅಂತ್ಯದ ವೇಳೆಗಾದರೂ ಈ ಗುರಿಮುಟ್ಟುತ್ತೇವೆಯೋ ಹೇಗೊ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಈಗಿನ ಅಂದಾಜಿನಂತೆ ರಾಷ್ಟ್ರದಲ್ಲಿ 1.29 ಕೋಟಿ ಮಕ್ಕಳು ಶಾಲೆಗೆ ಬರುತ್ತಿಲ್ಲ. ಈ ಸಂಖ್ಯೆ ಇನ್ನೂ ಹೆಚ್ಚಾಗಿದೆ; ಸಂಗ್ರಹಿಸಿರುವ ಮಾಹಿತಿ ತಪ್ಪು. ಕರ್ನಾಟಕದಲ್ಲಿಯೇ ಶಾಲೆಗೆ ಹೋಗದಿರುವ ಮಕ್ಕಳ ಸಂಖ್ಯೆ 10 ಲಕ್ಷದಷ್ಟಿದ್ದಾರೆ. ವಿಶ್ವದಲ್ಲಿ ಅತಿ ದೊಡ್ಡ ಚಕ್ರಾಧಿಪತ್ಯ ಕಟ್ಟಿದ್ದ ಬ್ರಿಟಿಷರು ಬ್ರಿಟನ್ನಿನಲ್ಲಿ 1872 ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನಕ್ಕೆ ತಂದು ಅಲ್ಲಿಂದ 30 ವರ್ಷಗಳ ದೀರ್ಘಕಾಲ ಆ ಹಂತದ ಶಿಕ್ಷಣದ ಮೇಲೆಯೇ ತಮ್ಮೆಲ್ಲ ಗಮನವನ್ನು ಕೇಂದ್ರೀಕರಿಸಿ ಅದು ಸುಭದ್ರ ತಳಹದಿಯ ಮೇಲೆ ವ್ಯವಸ್ಥೆಯಾಗಿದೆ ಎಂಬ ಅಂಶವನ್ನು ಖಚಿತಪಡಿಸಿಕೊಂಡ ನಂತರವೇ ಅವರು ಉನ್ನತ ಶಿಕ್ಷಣದ ಕಡೆ ತಮ್ಮ ಗಮನ ಹರಿಸಿದರು. ಆದರೆ ಭಾರತದಲ್ಲಿ ! ಒಂದೇ ಕಾಲದಲ್ಲಿ ಎಲ್ಲ ಹಂತದ ಶಿಕ್ಷಣ ಸೌಲಭ್ಯಗಳ ವಿಸ್ತರಣೆಗೆ ಗಮನ ಕೊಟ್ಟು ಪ್ರಾಥಮಿಕ ಶಿಕ್ಷಣವನ್ನು ಅಲಕ್ಷಿಸಿದೆವು. ಅದರ ಫಲವಾಗಿಯೇ ಇಂದು ಇಡೀ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಣ ‘ ಸಿಂಡ್ರೆಲಾ’ ಳಂತೆ ಉಳಿದಿದೆ. ಇದರಿಂದ ನಮ್ಮನ್ನು ನಾವೇ ವಂಚಿಸಿಕೊಂಡಿದ್ದೇವೆ.

ಅನೌಪಚಾರಿಕ ಶಿಕ್ಷಣ

ಶಾಲೆಗಳಲ್ಲಿ ಏಳು ವರ್ಷಗಳ ಪೂರ್ಣಾವಧಿ ಶಿಕ್ಷಣ ಕೊಡಲು ಸಂಪನ್ಮೂಲಗಳ ಕೊರತೆ ಇದೆ. ಹಾಗೆ ಮಾಡುವುದು ಸಾಧ್ಯವೂ ಇಲ್ಲ. ಏಕೆಂದರೆ ಬಡತನದ ರೇಖೆಯ ಅತಿ ಕೆಳಗಿರುವವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಆಶಿಸಿದರೂ ಅವರು ತಮ್ಮ ಆರ್ಥಿಕ ದುಃಸ್ಥಿತಿಯಿಂದಾಗಿ ಅವರನ್ನು ಶಾಲೆಗಳಿಗೆ ಕಳುಹಿಸಲು ಅಸಮರ್ಥರು. ಅವರಿಗೆ ಯಾವುದೇ ರೀತಿಯ ಪರಿಹಾರ ಕೊಟ್ಟು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡಲು ಸಂಪನ್ಮೂಲಗಳ ಕೊರತೆ. ಭಾರತ ಒಕ್ಕೂಟದ ಎಲ್ಲ ರಾಜ್ಯಗಳಲ್ಲೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನದಲ್ಲಿದ್ದರೂ ಅದು ಯಶಸ್ಸುಗಳಿಸಿಲ್ಲ. ಆದುದರಿಂದ ನಾವೇನಾದರೂ 20ನೇ ಶತಮಾನದ ಅಂತ್ಯದ ವೇಳೆಗೆ ಅನಕ್ಷರತೆಯನ್ನು ತೊಡೆದು ಹಾಕಬೇಕೆಂಬ ಬಗೆಗೆ ನಿಜವಾಗಿಯೂ ಆಸಕ್ತರಾಗಿದ್ದರೆ, ಅಸಾಂಪ್ರದಾಯಿಕ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತರಬೇಕು. ದೇಜಗೌ ಅವರು ಒಪ್ಪತ್ತಿನ ಶಾಲೆ, ರಾತ್ರಿಶಾಲೆಗಳ ಸ್ಥಾಪನೆ ಸಲಹೆ ಮಾಡಿದ್ದಾರೆ.

ಮೇಲಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆಲೋಚಿಸಿದಾಗ ದೇಜಗೌ ಅವರ ಸಲಹೆಗಳು ಸ್ವೀಕಾರಾರ್ಹ “ .....ಪ್ರಾಥಮಿಕ ಶಿಕ್ಷಣದ ಏಳು ವರ್ಷಗಳ ಅವಧಿಯನ್ನು ನಾಲ್ಕು ವರ್ಷಗಳಿಗೆ ಸದ್ಯಕ್ಕೆ ನಿಲ್ಲಿಸಿಕೊಳ್ಳಬಹುದು. ಈ ನಾಲ್ಕೂ ವರ್ಷಗಳ ನಂತರ ಕಲಿತ ಕಲ್ಕೆ ಮರೆಯದಂತೆ ಮುಂದುವರಿದ ಶಿಕ್ಷಣ (Continuation course) ವನ್ನು ಏರ್ಪಡಿಸಬಹುದು. ಈ ಮುಂದುವರಿದ ಶಿಕ್ಷಣಕ್ಕೂ ಹೆಚ್ಚು ಖರ್ಚುತಗಲದಂತೆ ನೋಡಿಕೊಳ್ಳಬಹುದು. ಹುಡುಗ ಒಂದೇ ಹೊತ್ತು ಮಾತ್ರ ಶಾಲೆಗೆ ಹೋಗುವ

ಏರ್ಪಾಡಿದ್ದರೆ ಈ ತೊಂದರೆ (ಅಂದರೆ ಮಕ್ಕಳನ್ನು ತಮ್ಮ ಸಹಾಯಕ್ಕೆ ಉಪಯೋಗಿಸಿಕೊಳ್ಳುವುದರಿಂದ ಆಗುವ ತೊಂದರೆ) ನಿವಾರಣೆ ಆಗಬಹುದು" ಈ ಸಲಹೆಯೇನೋ ಸಾಧುವಾದುದೆ; ಆದರೆ ಮುಂದುವರಿದ ಶಿಕ್ಷಣ ವ್ಯವಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡದೇ ಹೋದರೆ ಈ ಮಕ್ಕಳು ಮತ್ತೆ ಅನಕ್ಷರಸ್ಥರಾಗುವರು. ಈಗ ಶೈಕ್ಷಣಿಕ ಕ್ಷೇತ್ರದಲ್ಲಿ ಚಲಾವಣೆಯಲ್ಲಿರುವ ಅನೌಪಚಾರಿಕ ಶಿಕ್ಷಣ ಪದ್ಧತಿಯ ಅನುಷ್ಠಾನವನ್ನೇ ಅವರು ಒತ್ತಾಯಿಸುತ್ತಿರುವುದು. ನಾವು ವರ್ಗರಹಿತ ಶಾಲೆ, ಅನೌಪಚಾರಿಕ ಶಿಕ್ಷಣ, ಎಲ್ಲರಿಗೂ ಪ್ರಾಥಮಿಕ ಶಿಕ್ಷಣ ಮುಂತಾದ ಯೋಜನೆಗಳನ್ನು ರೂಪಿಸಿಕೊಂಡು ಯಾವುದನ್ನೂ ಸ್ಥಿರಸಂಕಲ್ಪದಿಂದ ಅನುಷ್ಠಾನಕ್ಕೆ ತರದೆ ನಮ್ಮನ್ನೇ ನಾವು ವಂಚಿಸಿಕೊಂಡಿದ್ದೇವೆ. ಈ ಸ್ಥಿತಿಗೆ ಪರಿಹಾರ ಅನೌಪಚಾರಿಕ ಶಿಕ್ಷಣ ಒಂದೆ. ಈ ಮಕ್ಕಳು ತಮ್ಮ, ಹೊಲಗದ್ದೆ, ತೋಟಗಳಲ್ಲಿ ದುಡಿಮೆ ಮಾಡುತ್ತಾರೆ. ಆಡು, ಕುರಿ, ಎಮ್ಮೆ, ದನಗಳನ್ನು ಮೇಯಿಸುತ್ತಾರೆ. ಇವರು ನಿಸರ್ಗದ ಮಧ್ಯೆಯೆ ಇಡೀ ದಿನವನ್ನು ಕಳೆಯುವುದರಿಂದ ಅವರಿಗೆ ಸಸ್ಯವರ್ಗ ಮತ್ತು ಪ್ರಾಣಿವರ್ಗದ ಹೆಸರುಗಳನ್ನು ಪರಿಚಯಿಸಿಕೊಂಡಿರುತ್ತಾರೆ. ನಮಗೆ ಪರಿಚಯವಿಲ್ಲದ ಅನೇಕ ವಿಷಯಗಳು ಅವರಿಗೆ ತಿಳಿದಿರುತ್ತವೆ. ಬೀಜಗಳು ಮೊಳಕೆಯೊಡೆಯುವುದು, ಅವುಗಳ ಬೆಳವಣಿಗೆ, ಅವುಗಳಿಗೆ ಗೊಬ್ಬರ ಹಾಕುವುದು, ನೀರು ಹಾಯಿಸುವುದು ಮುಂತಾದ ಪ್ರಕ್ರಿಯೆಗಳನ್ನು ನೋಡುತ್ತಾನೆ. ಅವರಿಗೆ ಕೋಗಿಲೆ, ಚಿಪಲೆ ಹಕ್ಕಿ, ಸೋರೆ ಹಕ್ಕಿ, ಗೊರವಂಕ, ಬೆಳ್ಳಕ್ಕಿ ಮುಂತಾದ ಹಕ್ಕಿಗಳ ಪರಿಚಯವಿರುತ್ತದೆ. ತಮ್ಮ ಪರಿಸರದಲ್ಲಿ ಗಿಡಮರಗಳ ಪರಿಚಯವಿದೆ ; ಅವುಗಳ ಪ್ರಯೋಜನದ ಪರಿಚಯವೂ ಇಷ್ಟು ಇಷ್ಟು ಜ್ಞಾನವನ್ನು ನಾವು ಶಾಲೆಯಲ್ಲಿ ಕೊಡುವುದು ಸಾಧ್ಯವಿಲ್ಲ. ಆದರಿಂದ ಅವರಿಗೆ ಕಾರ್ಯಾನುಭವದ ಅವಧಿಗಳ ಅಗತ್ಯವಾಗಲಿ, ಸಂಗೀತವಾಗಲಿ, ಮೌಲಿಕ ಶಿಕ್ಷಣವಾಗಲಿ, ದೈಹಿಕ ಶಿಕ್ಷಣವಾಗಲಿ ಅನಗತ್ಯ. ಈ ಎಲ್ಲ ವಿಷಯಗಳಿಗೆ ನಿಗದಿ ಮಾಡಿರುವ ಅವಧಿಗಳನ್ನು ಕೈ ಬಿಟ್ಟರೆ ಭಾಷೆ ಮತ್ತು ಮುಖ್ಯ ಅಧ್ಯಯನ ವಿಷಯಗಳನ್ನು ಕಲಿಯಲು ದೊರೆಯುವ ಕಾಲ ವಾರಕ್ಕೆ ಕೇವಲ(12 ½)ಗಂಟೆಗಳು. ಅಂದರೆ ಅವರಿಗೆ ದಿನಕ್ಕೆ ಎರಡು ಗಂಟೆಗಳ ಕಾಲ ಬೋಧನೆ ವ್ಯವಸ್ಥೆ ಮಾಡಿದರೆ ಸಾಕು. ಯಾವಾಗ ಅವರು ಕಲಿಕೆಯ ಕೇಂದ್ರಕ್ಕೆ ಬರಬೇಕು ಎಂಬುದನ್ನು ಪೋಷಕರೇ ನಿರ್ದರಿಸಬೇಕು. ಆಡಳಿತ ಕಾಲ ನಿಗದಿಮಾಡಲು ನಿರ್ಧರಿಸಬಾರದು. ಆ ಕಾಲ ಬೆಳಗಿನ ಹೊತ್ತಾಗಬಹುದು, ಮಧ್ಯಾಹ್ನವಾಗಬಹುದು, ಸಂಜೆಯಾಗಬಹುದು. ಕೇಂದ್ರ ನಡೆಯುವ ಕಾಲ ಊರಿಂದ ಊರಿಗೆ ಬದಲಾಗುತ್ತದೆ. ಕೇಂದ್ರವನ್ನು ವ್ಯವಸ್ಥೆ ಮಾಡುವ ವ್ಯವಸ್ಥಾಪಕರಿಗೆ ಪೂರ್ಣ ಸ್ವಾತಂತ್ರ್ಯ ಇರಬೇಕು. ಆಯಾ ಗ್ರಾಮದ ಪರಿಸ್ಥಿತಿಗೆ ಅನುಗುಣವಾಗಿ ಕಲಿಕೆಯ ಕಾಲವನ್ನು ಆತ/ಆಕೆ ಬದಲಿಸಬಹುದು.

ಈ ಕೇಂದ್ರದಲ್ಲಿ ಕಲಿಯಲು ಎರಡು ವರ್ಗದ ಮಕ್ಕಳು ಬರುವರು. ಅವರಲ್ಲಿ ಒಂದು ವರ್ಗ ಎರಡು ಅಥವಾ ಮೂರು ವರ್ಷಗಳ ಕಾಲ ಶಾಲೆಗೆ ಹೋಗಿ ಶಾಲೆ ಬಿಟ್ಟವರು; ಮತ್ತೊಂದು ವರ್ಗ ಶಾಲೆಗೆ ಹೋಗದೆ ಇದ್ದವರು. ಈ ಎರಡು

ವರ್ಗದವರನ್ನೂ ಒಟ್ಟಿಗೆ ಸೇರಿಸಿ ಕಲಿಸಬೇಕೆ, ಇಲ್ಲವೇ ಪ್ರತ್ಯೇಕ ಗುಂಪುಗಳಾಗಿ ಇಟ್ಟುಕೊಂಡು ಕಲಿಸಬೇಕೆ ಎಂಬುದನ್ನು ವಿದ್ಯಾರ್ಥಿಗಳನ್ನು ಪರೀಕ್ಷಿಸಿ ನಿರ್ಧರಿಸಬೇಕು.

ಅನೌಪಚಾರಿಕ ಕೇಂದ್ರಗಳ ಶಿಕ್ಷಣಾರ್ಥಿಗಳಿಗೆ ಕಲಿಕೆಯ ಸಾಮಗ್ರಿಗಳನ್ನು ರಚಿಸುವುದು ಕಷ್ಟದ ಕೆಲಸವೇ. ಸಾಮಾಜಿಕ ಮತ್ತು ನೈಸರ್ಗಿಕ ಪರಿಸರ, ಮಕ್ಕಳು ತೊಡಗಿರುವ ಉದ್ಯೋಗಗಳೇ ಪಠ್ಯಪುಸ್ತಕ ರಚನೆಗೆ ಆಧಾರವಾಗಬೇಕು. ಅವುಗಳನ್ನೇ ಕೇಂದ್ರ ಬಿಂದುಗಳನ್ನಾಗಿಟ್ಟುಕೊಂಡು ಪಾಠಗಳನ್ನು ರಚಿಸಬೇಕು ಈ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ ಕೆಲಸವನ್ನು ಒರೆಹಚ್ಚಿ ನೋಡಿದರೆ ತೃಪ್ತಿಗಿಂತ ಅತೃಪ್ತಿಯೇ ಎದ್ದು ಕಾಣುತ್ತದೆ. ಕರ್ನಾಟಕದ ಯಾವುದೊ ಮೂಲೆಯಲ್ಲಿರುವ ಒಂದು ಹಳ್ಳಿ ಕಲಿಕೆಯ ಕೇಂದ್ರಕ್ಕಿಂತ ಕಲಿಕೆಯ ಸಾಮಗ್ರಿಗಳ ರಚನೆಗೆ ದೆಹಲಿ ಪ್ರಭುಗಳ ಒಪ್ಪಿಗೆ ಬೇಕೆ! ಇದೆಷ್ಟು ಮೂರ್ಖತನದ ನಿಲವು. ಇದು ಬದಲಾವಣೆಯಾಗಿ ರಾಜ್ಯದಲ್ಲಿ ಆಯಾ ಪ್ರದೇಶಗಳ ವೈಶಿಷ್ಟ್ಯವನ್ನು ಗಣನೆಗೆ ತೆಗೆದುಕೊಂಡು ಕಲಿಕೆಯ ಸಾಮಗ್ರಿಗಳನ್ನು ರಚಿಸುವ ಸ್ವಾತಂತ್ರ್ಯ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತು ಸಂಸ್ಥೆಗೆ ಇರಬೇಕು. ಇಲ್ಲಿ ಶಿಕ್ಷಣ ಪಡೆದ ಮಕ್ಕಳು ಅವರಿಗೆ ಅನುಕೂಲವಾದಾಗ ಸಾಂಪ್ರದಾಯಿಕ ಶಾಲೆಗಳಲ್ಲಿ ಅವರು ಅರ್ಹರಾಗಿರುವ ತರಗತಿಗಳಿಗೆ ಸೇರಿ ತಮ್ಮ ಶಿಕ್ಷಣ ಮುಂದುವರಿಸಲು ಮುಕ್ತ ಅವಕಾಶವಿರಬೇಕು. ಹಾಗೆಯೇ ಈ ಅನೌಪಚಾರಿಕ ಕೇಂದ್ರಗಳಲ್ಲಿ ಕೊಡುವ ಶಿಕ್ಷಣ ಯಾವುದೇ ರೀತಿಯಲ್ಲೂ ಸಾಂಪ್ರದಾಯಿಕ ಶಾಲೆಗಳಲ್ಲಿ ಕೊಡುವ ಶಿಕ್ಷಣಕ್ಕಿಂತ ಕೀಳಲ್ಲ ಎಂಬ ನಂಬಿಕೆ ಪೋಷಕರಲ್ಲಿ ಬರುವಂತೆ ಮಾಡಲು ಎಚ್ಚರಿಕೆ ವಹಿಸಬೇಕು.

ಗಾಂಧೀಜಿ ಏಕೆ ಹತ್ತಿ ಮತ್ತು ಕೃಷಿ ಉದ್ಯೋಗಗಳನ್ನು ಆಯ್ಕೆ ಮಾಡಿದರು


ಎರಡನೆ ತತ್ತ್ವ ಶಿಕ್ಷಣ ಮಾಧ್ಯಮ ಮುಂದೆ ಚರ್ಚಿಸುತ್ತೇನೆ. ಈಗ ಜೀವನ ಶಿಕ್ಷಣದ ಅತಿ ಮುಖ್ಯವಾದ ಎರಡು ತತ್ವಗಳನ್ನು ಚರ್ಚಿಸಲು ಇಚ್ಛಿಸುತ್ತೇನೆ. ರಷ್ಯಾದ ಶಿಕ್ಷಣತಜ್ಞ ಸ್ಟ್ಯಾನಿಸ್ಲಾವ್ ಷಾಟಸ್ಕಿಯಂತೆ ಗಾಂಧೀಜಿಯೂ ಕೂಡ ಟಾಲ್‌ಸ್ಟಾಯಿಯವರ ಪ್ರಭಾವಕ್ಕೆ ಒಳಗಾಗಿರಬಹುದು. ಟಾಲ್‌ಸ್ಟಾಯ್ ಯಸ್ನಾಯ ಪೋಲ್ಯಾನದಲ್ಲಿ ನಡೆಸುತ್ತಿದ್ದ ಶಾಲೆ ಅವರ ಪ್ರಯೋಗಶಾಲೆಯಾಗಿತ್ತು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಗಾಂಧೀಜಿಯವರ ಪ್ರಯೋಗ ಟಾಲ್‌ಸ್ಟಾಯ್ ಫಾರಂನಿಂದಲೇ ಪ್ರಾರಂಭವಾಗಿ ಸೇವಾಗ್ರಾಮದಲ್ಲಿ ಸ್ಪಷ್ಟ ರೂಪ ತಳೆಯಿತು. ಅಮೆರಿಕದ ಶಿಕ್ಷಣತಜ್ಞ ಜಾನ್ ಡ್ಯೂಯಿ ಚಟುವಟಿಕೆ ಪ್ರಧಾನವಾದ ಪಠ್ಯವಸ್ತು ಪ್ರತಿಪಾದಿಸಿದ. ಮಕ್ಕಳು ಚಟುವಟಿಕೆಗಳಲ್ಲಿ ತೊಡಗಿ ಕೆಲಸ ಮಾಡುತ್ತ, ಆಲೋಚಿಸುತ್ತ ವಿದ್ಯೆ ಕಲಿಯಬೇಕೆಂಬುದು ಆತನ ಸಿದ್ಧಾಂತ. ಮಾನವ ಸೃಜನಶೀಲ ಗುಣವುಳ್ಳವನು. ಮಕ್ಕಳು ಚಟುವಟಿಕೆಗಳಲ್ಲಿ ತೊಡಗಿರುವಾಗ ಸೃಜನಶೀಲತೆ ವಿಕಾಸಗೊಳ್ಳುವುದು. ಹಾಗೆಯೇ ಮಕ್ಕಳು ಏಕೆ? ಏನು? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುವರು. ಈ ರೀತಿಯ ಆಲೋಚನೆಯ ಮೂಲಕವೇ ಜ್ಞಾನಾರ್ಜನೆ. ಈ ತತ್ತ್ವ ಪಾಶ್ಚಾತ್ಯ ಮತ್ತು ಪೌರಾತ್ಯ ದೇಶಗಳ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಪ್ರಿಯವಾಯಿತು.

ಗಾಂಧೀಜಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇವಲ ಚಟುವಟಿಕೆ ಮಾತ್ರ ಸಾಲದು; ಮಕ್ಕಳು ತೊಡಗುವ ಚಟುವಟಿಕೆಗಳು ಉತ್ಪಾದನಾ ಸಾಧ್ಯತೆಯಿಂದ

ಕೂಡಿರಬೇಕು; ಹಾಗೆ ಉತ್ಪಾದಿಸಿದ ಪದಾರ್ಥಗಳು ಉಪಯುಕ್ತವೂ ಆಗಿರಬೇಕು ಎಂದು ಹೇಳಿದರು. ಮಕ್ಕಳು ತಮ್ಮ ಕಾಲ ಮತ್ತು ಶಕ್ತಿಯನ್ನು ಉಪಯೋಗಿಸಿ ಸಾಮಾಜಿಕವಾಗಿ ಉಪಯುಕ್ತವಾದುದೇನನ್ನಾದರು ಉತ್ಪಾದಿಸಿದರೆ ಅವರಿಗೆ ಅದರಿಂದ ಮಾನಸಿಕ ತೃಪ್ತಿ ದೊರೆಯುವುದರ ಜೊತೆಗೆ ಸಂತೋಷವೂ ಆಗಿ ಅವರ ಸೃಜನಾತ್ಮಕ ಶಕ್ತಿಯ ವಿಕಾಸಕ್ಕೆ ಅವಕಾಶ ಮಾಡಿಕೊಡುವುದು. ಡ್ಯೂಯಿಗೆ ಅಮೆರಿಕಾದ ಇತಿಹಾಸ ಫಲಪ್ರಮಾಣವಾದ ಅಥವಾ ಫಲಾನುಮೇಯ ಪ್ರಾಮಾಣ್ಯವಾದ(Pragatism)ವನ್ನು ಶಿಕ್ಷಣದಲ್ಲಿ ಪ್ರತಿಪಾದಿಸಲು ಪ್ರೇರೇಪಿಸಿತು. ಹಾಗೆಯೇ ಗಾಂಧೀಜಿಜೀವನ ಶಿಕ್ಷಣ ಪ್ರತಿಪಾದಿಸಲು ಭಾರತದ ಇತಿಹಾಸ, ಸಂಸ್ಕೃತಿಪರಿಸರಗಳು ಸ್ಫೂರ್ತಿ ನೀಡುದುವು.

ಗಾಂಧೀಜಿ ಹತ್ತಿಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಕೃಷಿ ಚಟುವಟಿಕೆಗಳನ್ನು ಆಯ್ಕೆಮಾಡಿಕೊಳ್ಳಲು ಸಮಂಜಸವಾದ ಸಮರ್ಥನೀಯವಾದ ಕಾರಣಗಳಿವೆ. ಅವು : (1) ಈ ಎರಡೂ ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ಪೂರೈಕೆ ಮಾಡುತ್ತವೆ. (2) ಬೆಳೆಯುವ ಮಕ್ಕಳ ಬುದ್ಧಿಶಕ್ತಿ ಮತ್ತು ದೈಹಿಕಶಕ್ತಿಗಳಿಗೆ ಅನುಗುಣವಾಗಿ ಈ ಚಟುವಟಿಕೆಗಳನ್ನು ಅತಿ ಸರಳ ಕೆಲಸದಿಂದ ಪ್ರಾರಂಭಿಸಿ ಜಟಿಲ ಚಟುವಟಿಕೆಗಳವರೆಗೆ ಸಣ್ಣ ಸಣ್ಣ ಘಟಕಗಳಾಗಿ ವಿಂಗಡಿಸಿ ಹಂಚಬಹುದು. ಮಾನವ ಜೀವನದ ಉಳಿದೆಲ್ಲ ಚಟುವಟಿಕೆಗಳೂ ಮೇಲಿನ ಎರಡು ಪ್ರಮುಖ ಚಟುವಟಿಕೆಗಳಿಗೆ ಪೂರಕವಾಗಿವೆ.

ಜೀವನ ಶಿಕ್ಷಣ ಶಾಲೆಗಳಲ್ಲಿ ಉತ್ಪಾದನಾ ಸಾಮರ್ಥ್ಯವುಳ್ಳ ಚಟುವಟಿಕೆಗಳನ್ನು ಅಳವಡಿಸಿರುವುದು ಅವರಿಗೆ ಔದ್ಯೋಗಿಕ ಶಿಕ್ಷಣ ನೀಡುವ ಉದ್ದೇಶದಿಂದಲ್ಲ. ಇದು ಅವರು ತಮ್ಮ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಅರಿತುಕೊಂಡು ಉತ್ಪಾದನಾ ಚಟುವಟಿಕೆಗಳ ಸಾಮಾಜಿಕ ಮೌಲ್ಯವನ್ನು ಮೆಚ್ಚುವಂತೆ ಮಾಡುತ್ತದೆ. ಜೊತೆಗೆ ಮಕ್ಕಳು ಹಲವು ಚಟುವಟಿಕೆಗಳಲ್ಲಿ (ಉದ್ಯೋಗಗಳಲ್ಲಿ) ಭಾಗವಹಿಸುವುದರ ಮೂಲಕ ಉಪಕರಣಗಳು, ಯಂತ್ರಗಳು, ಮತ್ತು ಸಮಕಾಲೀನ ಜೀವನದ ದುಡಿಮೆಯ ವಿವಿಧ ಹಂತಗಳನ್ನು ಪ್ರಶಂಸೆ ಮಾಡುವುದನ್ನು ಬೆಳೆಸಿಕೊಳ್ಳುವುದಲ್ಲದೆ ಎಲ್ಲ ಕ್ಷೇತ್ರಗಳಲ್ಲೂ ಪ್ರತ್ಯೇಕ್ಷ ಅನುಭವ ಪಡೆಯುವರು. ಈ ಶಿಕ್ಷಣಪದ್ಧತಿ ದುಡಿಮೆ, ಸಹಕಾರ, ನಂಬಿಕೆ, ಉಪಾಯ, ಕಲ್ಪನಾಕುಶಲತೆ, ಜವಾಬ್ದಾರಿ ನಿರ್ವಹಣೆ ಇವೇ ಮೊದಲಾದ ಗುಣಗಳು ಮಕ್ಕಳಲ್ಲಿ ಬೆಳೆಯಲು ಸಹಕಾರಿ. ಇದು ಶಿಶುಕೇಂದ್ರ ಶಿಕ್ಷಣ. ಇದನ್ನು ಒಂದು ಚಿತ್ರದ ಮೂಲಕ ಸುಲಭವಾಗಿ ವಿವರಿಸಬಹುದು.



ಚಿತ್ರ
ಉತ್ಪಾದನಾ ಚಟುವಟಿಕೆಯ ಪ್ರಕ್ರಿಯೆಗಳು

ಮೇಲಿನ ದೊಡ್ಡ ತ್ರಿಭುಜದ ಮೂರು ಬಾಹುಗಳಲ್ಲಿ ಒಂದೊಂದು ಒಂದೊಂದು ಪ್ರಮುಖ ಅಂಶವನ್ನು ಪ್ರತಿನಿಧಿಸುತ್ತದೆ. ನೈಸರ್ಗಿಕ ಪರಿಸರ ಮತ್ತು ಸಾಮಾಜಿಕ ಪರಿಸರಗಳಲ್ಲಿ ನಡೆಯುವ ಘಟನೆಗಳನ್ನು ಮಗು ವೀಕ್ಷಿಸುವುದು; ಅವುಗಳಿಗೆ ಕಾರಣ ಹುಡುಕಲು ಇಚ್ಛಿಸುವುದು. ಉತ್ಪಾದನಾ ಚಟುವಟಿಕೆಗಳ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವುದರಿಂದ ಈ ಎರಡು ಪರಿಸರಗಳನ್ನೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು. ಈ ತ್ರಿಭುಜದೊಳಗೆ ತಲೆಕೆಳಗಾಗಿ ನಿಂತಿರುವ ಮತ್ತೊಂದು ತ್ರಿಭುಜ ಇದೆ. ಇದು ಶಾಲೆಯಲ್ಲಿನ ಕಾರ್ಯಕ್ರಮಗಳ ಸ್ಥೂಲಚಿತ್ರ. ಈ ತ್ರಿಭುಜದ ಮೂರೂ ಭುಜಗಳು ಒಂದೊಂದು ಕ್ಷೇತ್ರವನ್ನು ಪ್ರತಿನಿಧಿಸುತ್ತವೆ. ಅವು:(1)ಸಾಮೂಹಿಕ ಜೀವನ;(2)ಸ್ವಾವಲಂಬನೆ;(3)ಮಕ್ಕಳ ಸ್ವಯಂ ಆಡಳಿತ. ಈ ರೀತಿಯ ಶಾಲಾ ವ್ಯವಸ್ಥೆಯಿಂದ ಮಕ್ಕಳು ಉತ್ಪಾದನಾ ಚಟುವಟಿಕೆಗೆ ಸಂಬಂಧಿಸಿದ ಹಲವು ಕೌಶಲ್ಯಗಳನ್ನು ಸಂಪಾದಿಸುವರು. ಪುಸ್ತಕ ಜ್ಞಾನಕ್ಕಿಂತ ಮಿಗಿಲಾದ ಪ್ರಯೋಗರೂಪದಿಂದ ಬಂದ ಹೆಚ್ಚು ಅರ್ಥವತ್ತಾದ ಜ್ಞಾನಗಳಿಸುವರು. ಅಗತ್ಯ ಸಾಮಾಜಿಕ ವರ್ತನೆಗಳು ಮತ್ತು ಪೌರಪ್ರಜ್ಞೆ ಬೆಳೆಸಿಕೊಳ್ಳುವರು. ಇಷ್ಟು ಸಾಕಲ್ಲವೇ ? ಇದಕ್ಕಿಂತ ಹೆಚ್ಚಿನದೇನನ್ನು ನಾವು ಶಿಕ್ಷಣದಿಂದ ನಿರೀಕ್ಷಿಸಬಹುದು.

ಒಂದೇ ದಿನದಲ್ಲಿ ಶಿಕ್ಷಣ ಪದ್ಧತಿಯನ್ನು ಸುಧಾರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಸಾಕಷ್ಟು ಪೂರ್ವಸಿದ್ಧತೆಯಿಲ್ಲದೆ ರಾಷ್ಟ್ರದ ಎಲ್ಲ ಶಾಲೆಗಳನ್ನೂ ಮೂಲ ಶಿಕ್ಷಣ ಶಾಲೆಗಳೆಂದು ಪರಿವರ್ತಿಸಿದುದೇ ನಮ್ಮ ಮೂರ್ಖತನಕ್ಕೆ ಸಾಕ್ಷಿಯಾಗಿದೆ. ಜೀವನ ಶಿಕ್ಷಣ ಒಂದು ಶ್ರೇಷ್ಠ ಶಿಕ್ಷಣ ಪದ್ಧತಿ. ಆದುದರಿಂದಲೇ ಅದರ ಯಶಸ್ವೀ ಅನುಷ್ಠಾನಕ್ಕೆ ಹೆಚ್ಚು ಹಣ ಒದಗಿಸಬೇಕಾಗಿತ್ತು. ಆ ಶಾಲೆಗಳಲ್ಲಿ ಸಮರ್ಥವಾಗಿ ಬೋಧಿಸಬಲ್ಲ ಶಿಕ್ಷಕರನ್ನು ತಯಾರು ಮಾಡಬೇಕಾಗಿತ್ತು. ಈ ಪದ್ಧತಿಯನ್ನು ನಗರ ಮತ್ತು ಗ್ರಾಮೀಣ ಎರಡು ಪ್ರದೇಶದ ಜನರೂ ಸ್ವಾಗತಿಸುವಂತೆ ಭೂಮಿಕೆಯನ್ನು ಸಿದ್ಧಪಡಿಸಬೇಕಾಗಿತ್ತು. ಈ ಯಾವುದನ್ನೂ ಮಾಡದಿದ್ದುದರಿಂದ ಜೀವನ ಶಿಕ್ಷಣ ವಿಫಲವಾಯಿತು.

ಮೊತ್ತಮೊದಲನೆಯ ಸ್ಥಾನ ಕೊಡಬೇಕು.'' ಹಾಗೆ ಮಾಡದಿದ್ದರೆ ಪ್ರಜಾ ಪ್ರಭುತ್ವದ ಬುಡದ ಬೇರಿಗೆ ಬೆನ್ನೀರೆರೆದಂತಾಗುತ್ತದೆ ಎಂದು ಹೇಳಿದ್ದಾರೆ ಕುವೆಂಪು. ಅಂದರೆ ಆಯಾ ದೇಶ ಭಾಷೆ (ಪ್ರಾದೇಶಿಕ ಭಾಷೆ) ಆಯಾ ಪ್ರದೇಶದಲ್ಲಿ ಪ್ರಥಮ ಸ್ಥಾನದಲ್ಲಿರಬೇಕು. ಆಡಳಿತದಿಂದ ಹಿಡಿದು ಎಲ್ಲವೂ ಆ ಭಾಷೆಯಲ್ಲಿಯೇ ನಡೆಯಬೇಕು. ಆದುದರಿಂದ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ಸರ್ಕಾರಗಳು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವುಗಳ ಎಲ್ಲ ಪ್ರಕಾರಗಳನ್ನೂ ಸುಪುಷ್ಟವಾಗಿ ಬೆಳೆಸಬೇಕು.

ದೇಶಭಾಷೆ ಶಿಕ್ಷಣ ಮಾಧ್ಯಮ ಆಗದಿದ್ದರೆ ಆಗುವ ಅನಾಹುತ, ನಷ್ಟ ನಮ್ಮ ಊಹೆಗೂ ಮೀರಿದುದಾಗಿದೆ. ಕುವೆಂಪು ಅವರು ಮುಂದುವರಿದು ''ದೇಶದ ಮಕ್ಕಳು ತಾವರಿಯದ ಇತರ ಭಾಷೆಗಳ ಹೊರೆಹೊತ್ತು ಯಾವುದನ್ನೂ ಸರಿಯಾಗಿ ಅರಿಯಲಾರದೆ, ಏನನ್ನೂ ಚೆನ್ನಾಗಿ ಅರಗಿಸಿಕೊಳ್ಳಲಾರದೆ, ಈಗಿರುವಂತೆಯೇ ಕುಂಟುತ್ತಾ, ತಡವುತ್ತಾ, ನಿಂತವರು ನಿಲ್ಲಲಿ, ಬಿದ್ದವರು ಬೀಳಲಿ, ಸೋತವರು ಸೋಲಲಿ, ಪಯಣ ಹೊರಟ

ನೂರರಲ್ಲಿ ತೊಂಬತ್ತೊಂಬತ್ತು ಹಿಂದುಳಿದು, ಆ ಕೊನೆಯ ಅದೃಷ್ಟಶಾಲಿಯೂ ಅರ್ಧಮಾತ್ರನಾಗಿ, ಏರುತ್ತಾ, ಗುರಿಯ ಬಳಿ ಸಾರುತ್ತಿರುವ ಇಂದಿನ ದುರ್ಗತಿಯನ್ನೇ ನಾವು ಪ್ರಗತಿ ಎಂದು ಕರೆದುಕೊಳ್ಳುತ್ತಾ ಆತ್ಮವಂಚಕರಾಗಿ ಸಾಗಬೇಕಾಗುತ್ತದೆ ಎಂದು ಹೇಳಿದ್ದಾರೆ. ಪರಭಾಷೆ ಶಿಕ್ಷಣ ಮಾಧ್ಯಮವಾಗಿ ಮುಂದುವರಿದರೆ ಏನಾಗುವುದೆಂಬುದನ್ನು ಈ ಮಾತುಗಳು ನಮಗೆ ಪರಿಚಯಿಸಿಕೊಡುತ್ತವೆ. ಪರಭಾಷೆಯ ಮೂಲಕದ ಶಿಕ್ಷಣ ನಮ್ಮ ಮಕ್ಕಳ ಬುದ್ಧಿ ಶಕ್ತಿಯನ್ನು ಬೆಂಡುಮಾಡಿದೆ ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ; ಪ್ರತಿಭಾನ್ವಿತವಾದ ಸೃಷ್ಟಿಕಾರ್ಯಕ್ಕೆ ಅನರ್ಹರನ್ನಾಗಿ ಮಾಡಿದೆ' ಎಂಬುದು ಗಾಂಧೀಜಿಯ ಸ್ಪಷ್ಟ ನಿಲುವು. ಈ ಮಾತುಗಳು ಉತ್ಪ್ರೇಕ್ಷೆಯೂ ಅಲ್ಲ; ಅಂಧಾಭಿಮಾನದಿಂದ ಕೂಡಿಯೂ ಇಲ್ಲ, ಇವು ಕಟು ಸತ್ಯ.

ತಮ್ಮ ಗುರು ರಾಷ್ಟ್ರಕವಿ ಕುವೆಂಪು ಅವರ ಭಾವನೆಗಳು ಮತ್ತು ನಿಲುವನ್ನು ರಾಷ್ಟ್ರಪಿತ ಗಾಂಧೀಜಿಯವರ ನಿಲುವು ಮತ್ತು ಅನೇಕ ಶಿಕ್ಷಣತಜ್ಞರ ಮತ್ತು ರಾಜಕಾರಣಿಗಳ ಅಭಿಪ್ರಾಯಗಳಿಗೆ ದೇಜಗೌ ಕೂಡ ದನಿಗೂಡಿಸಿ ದೇಶ ಭಾಷೆಗಳೇ ಶಿಕ್ಷಣ ಮಾಧ್ಯಮ ಆಗಬೇಕೆಂದು ಒರಟು ಮಾತಿನಲ್ಲಿ ಹೇಳುವ ಕನ್ನಡದ ಸೇನಾನಿ "ಮಾತೃ ಭಾಷೆಯ ಮೂಲಕ ಮಕ್ಕಳ ಜ್ಞಾನಕೋಶ, ಭಾವಕೋಶಗಳು ವಿಕಾಸಗೊಳ್ಳುವಂತೆ ಅನ್ಯ ಭಾಷೆಯ ಮೂಲಕ ಸಾಧ್ಯವಿಲ್ಲವೆಂಬ ತತ್ವವನ್ನು ಪ್ರಪಂಚದ ಹಿರಿಯ ವಿದ್ವಾಂಸರೆಲ್ಲರೂ ಒಪ್ಪಿಕೊಂಡಿರುವರಲ್ಲದೆ ಅದು ಪ್ರತಿಯೊಬ್ಬನ ನಿತ್ಯಾನುಭವದ ಸಂಗತಿಯೂ ಆಗಿದೆ. ಈ ದೃಷ್ಟಿಯಿಂದ ಸ್ವತಂತ್ರ ಭರತ ಖಂಡದ ನೂತನ ಸನ್ನಿವೇಶಗಳಿಗೆ ತಕ್ಕಂತೆ ಜನತೆಯ ಆಶೆ ಆಕಾಂಕ್ಷೆಗಳು ನಾನಾ ಮುಖವಾಗಿ ಬೆಳೆದು ಅವರ ಶಕ್ತಿ ಸಾಮರ್ಥ್ಯಗಳು ವಿಕಾಸಗೊಂಡು ಅವರ ಜೀವನ ಉತ್ತಮಗೊಳ್ಳಲು ದೇಶ ಭಾಷೆಗಳ ಸ್ಥಾನಮಾನಗಳನ್ನು ಎತ್ತರಿಸಿ, ಅವುಗಳ ಮೂಲಕ ಶಿಕ್ಷಣವನ್ನು ಏರ್ಪಡಿಸಿ ಅವುಗಳ ವ್ಯಾಸಂಗ ಕ್ರಮವನ್ನೇ ನವೀನ ಸೃಷ್ಟಿಗೆ ಸರಿಹೊಂದುವಂತೆ ಸಂಪೂರ್ಣವಾಗಿ ಸುಧಾರಿಸಿ, ನೂತನ ವಾತಾವರಣವನ್ನು ಕಲ್ಪಿಸಬೇಕಾಗಿದೆ. ಹಾಗಾಗುವ ತನಕ ಜನತೆಯ ತಿಳಿವಿನ ಮಟ್ಟ ಮೇಲೇರುವಂತಿಲ್ಲ. ಅಲ್ಲಿಯತನಕ ಸ್ವಾತಂತ್ರ್ಯಕ್ಕೆ ಸಂಪೂರ್ಣ ಸಾರ್ಥಕತೆಯೂ ಲಭಿಸುವಂತಿಲ್ಲ" ಎಂಬುದು ಅವರ ನಿಲುವು. ಶಿಕ್ಷಣ ತತ್ವ, ಬೋಧನಾ ಕ್ರಮ ಮತ್ತು ಮಕ್ಕಳ ಆವಶ್ಯಕತೆಗಳನ್ನು ಅರ್ಥೈಸಿಕೊಂಡ ಯಾವ ವ್ಯಕ್ತಿಯೂ ಈ ನಿಲುವಿಗೆ ವಿರೋಧವಾದ ಅಭಿಪ್ರಾಯ ಹೊಂದಿರಲು ಸಾಧ್ಯವಿಲ್ಲ. ತನ್ನ ಗುರುವಿನ ಪ್ರಭಾವಕ್ಕೆ ಒಳಗಾಗಿ ನಮಗೆ ಬೇಕಾದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸದಾ ತೆರೆದ ಮನಸ್ಸಿನಿಂದ ಅಧ್ಯಯನಶೀಲರಾಗಿರುವ ಇವರು ಈ ನಿಲುವು ತಳೆದಿರುವುದು ಆಶ್ಚರ್ಯವೇನಲ್ಲ. ಶಿಕ್ಷಣದಲ್ಲಿ ದೇಶಭಾಷಾ ಮಾಧ್ಯಮ ಎಷ್ಟು ಪ್ರಾಮುಖ್ಯ ಎಂಬ ಸತ್ಯವನ್ನು ಅವರು ಕಂಡುಕೊಂಡಿದ್ದಾರೆ. ಆ ನಿಲುವನ್ನೇ ಆಡಳಿತ ಸೂತ್ರ ಹಿಡಿದಿರುವವರಿಗೆ ಹೇಳುತ್ತಿದ್ದಾರಲ್ಲದೆ ಸಾರ್ವಜನಿಕ ವೇದಿಕೆಗಳಿಂದಲೂ ಸಾರುತ್ತಿದ್ದಾರೆ. ನಾವು ಭೌತಿಕ ಸ್ವಾತಂತ್ರ್ಯವನ್ನು ಪಡೆದಿದ್ದೇವೆಯೇ ಹೊರತು ಮಾನಸಿಕ ದಾಸ್ಯದಿಂದ ನಾವಿನ್ನೂ ಮುಕ್ತರಾಗಿಲ್ಲ ಎಂದು ಹೇಳುವರು. ಇಂಗ್ಲಿಷ್ ಮಾಧ್ಯಮದ ಪರವಾಗಿ ವಾದಿಸುವವರನ್ನು, ಆ ಭಾಷೆಯನ್ನು ಬಿಟ್ಟರೆ ನಮಗೆ ಭವಿಷ್ಯವೇ ಇಲ್ಲ,

ನಾವೆಲ್ಲ ಮುಳುಗಿ ಹೋಗುತ್ತೇವೆ ಎಂದು ಅರ್ಥಶೂನ್ಯವಾಗಿ ಬೊಬ್ಬೆ ಹೊಡೆಯುವವರನ್ನು ಅವರು ಇಂಗ್ಲಿಷರ ಮಾನಸಪುತ್ರರೆಂದು ಕರೆದಿದ್ದಾರೆ.

ಇಂಗ್ಲಿಷ್ ಭಾಷೆ ಶಿಕ್ಷಣ ಮಾಧ್ಯಮವಾಗಿ ಮುಂದುವರಿಯಬೇಕು ಎಂದು ವಾದಿಸುವವರು ಮುಂದಿಡುವ ಕಾರಣಗಳು .

1. ನಮ್ಮ ಮಕ್ಕಳು ವಿಜ್ಞಾನ ವಿಷಯಗಳನ್ನು ಆಯ್ಕೆಮಾಡಿಕೊಂಡು ಅಭ್ಯಸಿಸಿ ಪರಿಶ್ರಮ ಪಡೆಯಬೇಕಾದರೆ ಅವರು ಇಂಗ್ಲಿಷ್ ಮಾಧ್ಯಮದ ಮೂಲಕವೇ ಶಿಕ್ಷಣ ಪಡೆಯಬೇಕು. ಇದರಿಂದ ಅವರು ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಪಡೆಯಲು ಸುಲಭವಾಗುವುದು;
2. ನಮ್ಮ ಮಕ್ಕಳು ಹೊರರಾಜ್ಯಗಳಲ್ಲಿ ಮತ್ತು ಹೊರದೇಶಗಳಲ್ಲಿ ಉದ್ಯೋಗ ದೊರಕಿಸಿಕೊಳ್ಳಬೇಕಾದರೆ ಇಂಗ್ಲಿಷಿನ ಜ್ಞಾನ ಅಗತ್ಯ. ಇಂಗ್ಲಿಷ್ ಮಾಧ್ಯಮದ ಮೂಲಕ ಶಿಕ್ಷಣಪಡೆದರೆ ಆ ಭಾಷೆಯ ಮೂಲಕ ವ್ಯವಹರಿಸಲು ಸಮರ್ಥರಾಗುತ್ತಾರೆ;
3. ಇಂಗ್ಲಿಷ್ ಮಾಧ್ಯಮದ ಮೂಲಕ ಶಿಕ್ಷಣ ಪಡೆದರೆ ಮಾತ್ರ ಆ ಭಾಷೆಯಲ್ಲಿ ಪ್ರೌಢಿಮೆಗಳಿಸುವರು. .

ಈ ಮೂರೂ ಕೇವಲ ಅಭಿಪ್ರಾಯಗಳಷ್ಟೆ. ಈ ನಿಲುವುಗಳನ್ನು ಯಾವುದೇ ಸಂಶೋಧನೆ ಪುಷ್ಟೀಕರಿಸಿಲ್ಲ. ಈ ಅಭಿಪ್ರಾಯಗಳನ್ನು ಹೊಂದಿರುವವರು ಒಂದು ಭಾಷೆಯನ್ನು ಭಾಷೆಯಾಗಿ ಕಲಿಯುವುದಕ್ಕೂ ಆ ಭಾಷಾ ಮಾಧ್ಯಮದ ಮೂಲಕ ಶಿಕ್ಷಣ ಪಡೆಯುವುದಕ್ಕೂ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಂಡಿಲ್ಲ; ಅರ್ಥಮಾಡಿಕೊಳ್ಳಲು ಪ್ರಯತ್ನವನ್ನೂ ಮಾಡಿಲ್ಲ. ಒಂದು ಭಾಷೆಯನ್ನು ಕಲಿತು ಅದನ್ನು ವ್ಯವಹಾರದಲ್ಲಿ ಉಪಯೋಗಿಸಲು ಅಗತ್ಯ ಸಾಮರ್ಥ್ಯ ಪಡೆಯಬೇಕಾದರೆ ಆ ಭಾಷಾ ಮಾಧ್ಯಮದ ಮೂಲಕ ಶಿಕ್ಷಣ ಪಡೆಯಬೇಕಾಗಿಲ್ಲ. ಒಂದು ಭಾಷೆಯನ್ನು ಕಲಿತು ಆ ಭಾಷೆಯಲ್ಲಿ ರಚಿತವಾಗಿರುವ ವಿಜ್ಞಾನ ಮತ್ತು ತಾಂತ್ರಿಕಜ್ಞಾನ ಕುರಿತ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳಲು ಮತ್ತು ಆ ಭಾಷೆಯ ಸಾಹಿತ್ಯದ ಸವಿಯನ್ನು ಅನುಭವಿಸಲು ಕಲಿಯುವಾತನಿಗೆ ಆ ಭಾಷೆಯ ಅಗತ್ಯ. ಆತನಿಗೆ ಅದರಲ್ಲಿರುವ ಆಸಕ್ತಿ ಮುಖ್ಯ. ಅಗತ್ಯವಿದ್ದರೆ ಯಾವುದೇ ಭಾಷೆಯನ್ನು ಕ್ಷಿಪ್ರಕಾಲದಲ್ಲಿಯೇ ಕಲಿಯಬಹುದು. ಆದರೆ ಪರಭಾಷೆಯ ಮೂಲಕ ಶಿಕ್ಷಣ ಪಡೆಯುವುದು ಬೇರೆ ವಿಷಯ. ಈ ಎರಡನ್ನೂ ಪ್ರತ್ಯೇಕವಾಗಿಯೇ ಪರಿಶೀಲಿಸಬೇಕು.

ಶಿಕ್ಷಣದ ಎಲ್ಲ ಹಂತದಲ್ಲೂ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯ ಮೂಲಕವೇ ಶಿಕ್ಷಣ ನೀಡಬೇಕು. ಹೀಗೆ ಮಾಡುವುದು ಸಹಜವಾದುದು. ಏಕೆಂದರೆ ಮಾತೃಭಾಷೆಯ ಮೂಲಕ ಕಲಿತ ವಿದ್ಯೆ ಮನಸ್ಸನ್ನು ನೇರವಾಗಿ ಮುಟ್ಟುತ್ತದೆ; ತಟ್ಟುತ್ತದೆ. ಸ್ವತಂತ್ರವಾಗಿ ಆ ಬಗ್ಗೆ ಆಲೋಚಿಸುವುದಕ್ಕೆ, ವಿಷಯವನ್ನು ಸಂಗ್ರಹಿಸುವುದಕ್ಕೆ ಸಹಾಯ ಮಾಡುತ್ತದೆ. ಆ ಎಳೆಯ ಮನಸ್ಸಿಗೆ ನೋವಾಗದಂತೆ, ಹೊರೆಯಾಗದಂತೆ ಮಾತೃಭಾಷೆ ವಿಷಯವನ್ನು ಮನದಟ್ಟು ಮಾಡಿಕೊಡುತ್ತದೆ. ಓದು ಕಲಿಯುವವರಿಗೆ ಭಾಷೆ ಒಂದು ಹೊರೆಯಾಗುವುದಿಲ್ಲ. ವಿಷಯಗ್ರಹಿಕೆ ಕಷ್ಟವಾಗುವುದಿಲ್ಲ. ಆದರೆ ಅನ್ಯ ಭಾಷೆಯ

ಮೂಲಕ ಕಲಿಯುವ ವಿದ್ಯೆ ಎಷ್ಟೇ ಸರಳವೆನಿಸಿದರೂ ಮಾತೃಭಾಷೆಯ ಮೂಲಕ ಕಲಿತಷ್ಟು ಹಿತವೆನಿಸುವುದಿಲ್ಲ. ಭಾಷೆಯನ್ನು ಕಲಿಯುವುದೇ ಕಷ್ಟವಾದಾಗ ವಿಷಯಗ್ರಹಣ ಹೇಗಾದೀತು. ವಿಷಯಪ್ರವೇಶವೇ ತೊಡಕಾದಾಗ ವಿಷಯಗ್ರಹಿಕೆ ಇನ್ನೆಲ್ಲಿ ಬಂತು. ಹಾಗಾದಾಗ ಅದು ಬಾಲಕರ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತದೆ.

ನಮ್ಮ ಮನಸ್ಸಿನ ಅನಿಸಿಕೆಗಳನ್ನು, ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಮಾತೃಭಾಷೆಯಲ್ಲಿ ಅಭಿವ್ಯಕ್ತಪಡಿಸಿದಾಗ ಅದರಲ್ಲಿ ಸಹಜತೆ ಇರುತ್ತದೆ; ಸಂಕೋಚ ಇರುವುದಿಲ್ಲ. ಆದರೆ ಅಷ್ಟೇ ಸಹಜ ಮತ್ತು ಸರಳ ರೀತಿಯಲ್ಲಿ ಪರಭಾಷೆಯಲ್ಲಿ ಅಭಿವ್ಯಕ್ತ ಪಡಿಸುವುದು ಸಾಧ್ಯವಿಲ್ಲ. ಮಾತೃಭಾಷೆಗೂ ಪರಭಾಷೆಗೂ ಇರುವ ವ್ಯತ್ಯಾಸ ತಾಯಿ ಹಾಲಿಗೂ ಸೀಸೆಯಲ್ಲಿ ತುಂಬಿಕುಡಿಸುವ ಹಾಲಿಗೂ ಇರುವಷ್ಟೇ ವ್ಯತ್ಯಾಸ. ಮಾತೃಭಾಷೆಯಲ್ಲಿ ವಿವಿಧ ವಿಷಯಗಳನ್ನು ಕುರಿತ ಗ್ರಂಥಗಳನ್ನು ಓದಿದಾಗ ವಿಷಯಗಳನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವುದು ಕಠಿಣವೆನಿಸುವುದಿಲ್ಲ. ಗ್ರಹಿಸಿದ ವಿಷಯವನ್ನು ನಮ್ಮದನ್ನಾಗಿಸಿಕೊಂಡು ನಮ್ಮ ಜ್ಞಾನದ ಆಳ ವಿಸ್ತಾರಗಳನ್ನು ಹೆಚ್ಚಿಸಿಕೊಳ್ಳಬಹುದು. ಅದನ್ನು ನಮ್ಮದೇ ಆದ ಭಾಷೆಯಲ್ಲಿ ಅಭಿವ್ಯಕ್ತ ಪಡಿಸಬಹುದು. ನಮ್ಮ ಭಾವಾವೇಶಗಳ ಪ್ರಕಾಶನದ ಕೀಲಿ ಕೈ ಒಂದೇ ಒಂದು ಭಾಷೆಯಲ್ಲಿದೆ: ಒಂದೇ ಒಂದು ಭಾಷೆ ತನ್ನ ಪದಪುಂಜಗಳಲ್ಲಿ ನಮ್ಮ ಸಹಜಶೀಲಸೂಕ್ಷ್ಮ ಬಿನುರಣಗಳನ್ನು ಖಚಿತವಾಗಿ(ನಿರ್ದುಷ್ಟವಾಗಿ) ತಿಳಿಸಬಲ್ಲದು. ಅದೇ ನಮ್ಮ ತಾಯಿ ಪದತಳದಲ್ಲಿ ಕುಳಿತು ಕಲಿತು ಆಡುವ ಭಾಷೆ:ನಮ್ಮ ಪ್ರಥಮ ಪ್ರಾರ್ಥನೆಯ ಭಾಷೆ ; ಮತ್ತು ನಮ್ಮ ಸಂತೋಷ, ದುಃಖ ಭಾವನೆಗಳ ಸ್ವಯಂಪ್ರೇರಿತ ಸ್ಫೋಟ. ಇನ್ನಾವುದೇ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದರೆ ಅದು ಮಕ್ಕಳ ಶ್ರಮವನ್ನು ಅಳತೆಗೆ ಸಿಲುಕದ ರೀತಿಯಲ್ಲಿ ಹೆಚ್ಚಿಸುವುದಲ್ಲದೆ ಅವರ ಮನಸ್ಸಿನ ಸ್ವತಂತ್ರ ಚಟುವಟಿಕೆಯನ್ನು ಕುಂಠಿತಗೊಳಿಸುತ್ತದೆ. ನಮ್ಮ ಮಕ್ಕಳ ಮೇಲೆ ನಮಗೇನಾದರೂ ಮರುಕ ಇದ್ದರೆ ಅವರ ಭವಿಷ್ಯ ಉತ್ತಮವಾಗಬೇಕೆಂಬ ಆಸೆ ಇದ್ದರೆ, ಅವರ ಸರ್ವಾಂಗೀಣ ವಿಕಾಸ ಆಗಬೇಕೆಂಬ ಬಯಕೆ ಇದ್ದರೆ "ಅವರ ಎದೆಯ ಮೇಲೆ ಪರಕೀಯರು ಹೇರಿಟ್ಟು ಹೋಗಿರುವ ಹೆಣಬಾರದ ಪರಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು. ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿನ ಖ್ಯಾತನಾಮರಾದ ಶಿಕ್ಷಣತಜ್ಞರ ಅಭಿಪ್ರಾಯಗಳನ್ನು ಉದಹರಿಸುತ್ತ ಹೋದರೆ ಅದು ಒಂದು ಬೃಹತ್ ಗ್ರಂಥವೇ ಆಗಬಹುದು. ಆದುದರಿಂದ ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆಯೇ ಶಿಕ್ಷಣ ಮಾಧ್ಯಮ ಆಗಬೇಕೆಂಬ ವಿಷಯದಲ್ಲಿ ಎರಡಭಿಪ್ರಾಯಗಳಿಲ್ಲ. ತಮ್ಮ ಮಕ್ಕಳ ಶಿಕ್ಷಣ ಹೇಗೆ ನಡೆಯಬೇಕು? ಶಿಕ್ಷಣ ಮಾಧ್ಯಮ ಯಾವ ಭಾಷೆಯಾಗಬೇಕು? ಎಂಬ ಇವುಗಳನ್ನು ನಿರ್ಧರಿಸಲು ಪಾಲಕರಿಗೆ ಸ್ವಾತಂತ್ರ್ಯ ಇರಬೇಕು ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸುತ್ತಿದ್ದಾರೆ. ನಮ್ಮದು ಪ್ರಜಾಪ್ರಭುತ್ವ. ನಮಗೆ ವ್ಯಕ್ತಿ ಸ್ವಾತಂತ್ರ್ಯ ಇದೆ. ನಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣಬೇಕೆಂದು ನಿರ್ಧರಿಸಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿದೆ ಎಂದು ಧ್ವನಿ ಎತ್ತುವವರೂ ಇದ್ದಾರೆ. ವ್ಯಕ್ತಿಗಿಂತ ರಾಷ್ಟ್ರ ಮಿಗಿಲಾದುದು. ರಾಷ್ಟ್ರ ಇದ್ದರೆ ತಾನೆ ವ್ಯಕ್ತಿ. ಅದಿಲ್ಲದಿದ್ದರೆ ವ್ಯಕ್ತಿ ಎಲ್ಲಿ ಉಳಿಯುವನು ? ರಾಷ್ಟ್ರ ಇಡೀ ಸಮಾಜದ ಅಭಿವೃದ್ಧಿಯನ್ನೇ

ತನ್ನ ಗುರಿಯಾಗಿ ಇಟ್ಟುಕೊಂಡಿದೆ. ರಾಜ್ಯಾಂಗದಲ್ಲಿ ಕೆಲವು ಉದ್ದೇಶಗಳನ್ನು ಉಲ್ಲೇಖಿಸಿದ್ದೇವೆ. ಅವುಗಳನ್ನು ಅನುಷ್ಠಾನಕ್ಕೆ ತರಲು ನಮಗೊಂದು ಸಾಮಾನ್ಯ ನೀತಿಬೇಕು. ಅದಕ್ಕನುಗುಣವಾಗಿ ರಾಷ್ಟ್ರವ್ಯಾಪಿಯಾಗಿ ಅನ್ವಯವಾಗುವ ಶಿಕ್ಷಣಪದ್ಧತಿ ರೂಪಿಸುವುದು ಅಗತ್ಯ. ಈ ಗುರಿಗಳು ಮತ್ತು ಧ್ಯೇಯಗಳು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸ್ಪಷ್ಟಗೊಂಡಿವೆ. ಎಲ್ಲರೂ ಅದಕ್ಕೆ ಬದ್ಧರು. ಆದರಿಂದ ಬೇರೆಯಾದ ಪದ್ಧತಿಯನ್ನು ಅಪೇಕ್ಷಿಸುವುದು ಸರಿಯಲ್ಲ. ರಾಷ್ಟ್ರೀಯ ನೀತಿಚೌಕಟ್ಟಿನಲ್ಲೇ ನಮ್ಮ ಮಕ್ಕಳ ಶಿಕ್ಷಣ ರೂಪಿಸಿಕೊಳ್ಳಬೇಕು. ನಮಗಿರುವ ಸ್ವಾತಂತ್ರ್ಯ ಅನಿರ್ಭಾದಿತವಲ್ಲ; ಅದಕ್ಕೆ ಇತಿಮಿತಿಗಳಿವೆ ಎಂಬುದನ್ನು ನಾವು ಮನಗಾಣಬೇಕು.

ದೇಶಭಾಷೆ ಅಥವಾ ಮಾತೃಭಾಷೆಯ ಮೂಲಕ ಶಿಕ್ಷಣ ನೀಡುವ ವ್ಯವಸ್ಥೆಗಾಗಿ ಬಲಪ್ರಯೋಗ ಅಗತ್ಯವೆಂದು ಕಂಡರೆ ಆ ದೇಶದ ಹಿತದೃಷ್ಟಿಯಿಂದ ಹಾಗೆ ಮಾಡಲು ಹಿಂಜರಿಯುವುದಿಲ್ಲ ಎಂಬುದು ಸರ್ದಾರ್ ಪಟೇಲರ ನಿಲುವಾಗಿತ್ತು. ಡಾ. ರಾಧಾಕೃಷ್ಣನ್‌ರವರೂ ಇದನ್ನು ಸಮರ್ಥಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾಡಬೇಕಾದ ತಿದ್ದುಪಡಿ

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬದಲಾವಣೆ ಅಗತ್ಯ. ಭಾರತ ಒಕ್ಕೂಟದ ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿನ ಪ್ರಾದೇಶಿಕ ಭಾಷೆಯೇ ಪ್ರಧಾನ ಭಾಷೆ; ಅದೇ ಆಡಳಿತ ಭಾಷೆ; ಅದೇ ವ್ಯವಹಾರ ಭಾಷೆ; ಅದೇ ಶಿಕ್ಷಣ ಮಾಧ್ಯಮ. ಹೀಗಾಗಬೇಕು ಮತ್ತು ದೇಶೀಯ ಭಾಷೆಗಳು ಅಭಿವೃದ್ಧಿ ಹೊಂದಬೇಕು ಎಂಬ ಉದ್ದೇಶದಿಂದಲೇ ಭಾಷಾವಾರು ಪ್ರಾಂತ್ಯಗಳ ರಚನೆ ಆಯಿತು. ಭಾಷಾವಾರು ಪ್ರಾಂತ್ಯ ರಚನೆ ಆದರೂ ಪ್ರತಿಯೊಂದು ರಾಜ್ಯದಲ್ಲೂ ಭಾಷಾ ಅಲ್ಪಸಂಖ್ಯಾತರಿರುವರೆಂಬ ಅಂಶ ಕೇಂದ್ರಕ್ಕೆ ತಿಳಿದ ವಿಷಯವೇ ಆಗಿತ್ತು. ಆದರೆ ಇದಕ್ಕೆ ಸಂಬಂಧಿಸಿದಂತೆ ಅವರು ಭಾಷಾ ಅಲ್ಪಸಂಖ್ಯಾತರು ಪ್ರಾಥಮಿಕ ಹಂತದಲ್ಲಿ ಅವರವರ ಮಾತೃಭಾಷೆಯ ಮೂಲಕ ಶಿಕ್ಷಣ ಪಡೆಯಲು ಸೌಲಭ್ಯಗಳನ್ನು ಹೊಂದಿದ್ದರೂ ಪ್ರಾಥಮಿಕ ಮೂರನೆ ತರಗತಿಯಿಂದ ಪ್ರಾದೇಶಿಕ ಭಾಷೆಯನ್ನು ಕಲಿಯಲು ಪ್ರಾರಂಭಿಸಿ ಪ್ರೌಢಶಾಲಾ ಹಂತದಲ್ಲಿ ಆ ಭಾಷೆಯ ಮಾಧ್ಯಮದ ಮೂಲಕ ಶಿಕ್ಷಣ ಪಡೆಯಲು ಸಮರ್ಥರಾಗಬೇಕು ಎಂಬ ನಿಲುವನ್ನು ತಳೆದಿದ್ದರು. 1966ರ ಶಿಕ್ಷಣ ಆಯೋಗವೂ ಇದೇ ಸಲಹೆ ಮಾಡಿದೆ. ಅದೇನು ಕಾರಣವೋ ಈ ಸಲಹೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಳವಡಿಸಿಲ್ಲ. ಇದು ರಾಷ್ಟ್ರೀಯ ಶಿಕ್ಷಣ ನೀತಿಯ ಅತಿಮುಖ್ಯ ಅಂಶವಾಗಬೇಕು. ಏಕೆಂದರೆ ದೊಡ್ಡ ನಗರಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರ ದ್ವೀಪಗಳನ್ನ ಮರೆತು ಗ್ರಾಮೀಣ ಪ್ರದೇಶದಲ್ಲಿ ನೆಲಸಿರುವ ಭಾಷಾ ಅಲ್ಪಸಂಖ್ಯಾತರಿಗೆ ಆಯಾ ಪ್ರಾದೇಶಿಕ ಭಾಷೆಗಳು ದ್ವಿತೀಯ ಮಾತೃಭಾಷೆಗಳು. ಇದು ಉತ್ಪ್ರೇಕ್ಷೆಯಲ್ಲ; ಸತ್ಯಸಂಗತಿ. ಅವರ ವ್ಯವಹಾರವೆಲ್ಲವೂ ಪ್ರಾದೇಶಿಕ ಭಾಷೆಯಲ್ಲಿಯೇ. ಆದುದರಿಂದ ಅವರ ಮಕ್ಕಳು ಪ್ರಾದೇಶಿಕ ಭಾಷೆ ಕಲಿಯುವುದು ಕಷ್ಟವಾಗುವುದಿಲ್ಲ. ಭಾಷಾ ಅಲ್ಪಸಂಖ್ಯಾತರ ಮಕ್ಕಳಿಗೆ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸದೆ ಪ್ರಾದೇಶಿಕ ಭಾಷಾ ಮಕ್ಕಳಿಗಾಗಿ ಪ್ರಾರಂಭಿಸಿರುವ ಶಾಲೆಗಳಲ್ಲಿಯೇ ವಿಭಾಗಗಳನ್ನು ತೆರೆದರೆ ಭಾಷಾ ಅಲ್ಪಸಂಖ್ಯಾತರ ಮಕ್ಕಳು ಪ್ರಾದೇಶಿಕ

ಭಾಷೆಯನ್ನು ಆಡುವವರ ಜೊತೆಗೆ ಬೆರೆಯುವುದರಿಂದ ಅವರಿಗೆ ಆ ಭಾಷೆ ಕಲಿಯುವುದು ಶ್ರಮವಾಗುವುದಿಲ್ಲ. ಭಾಷಾ ಅಲ್ಪಸಂಖ್ಯಾತರು ಪ್ರಾದೇಶಿಕ ಭಾಷೆಯನ್ನು ಕಲಿಯುವುದರಿಂದ ಕನ್ನಡ ಮಾತನಾಡುವ ಜನವಾಹಿನಿಯಲ್ಲಿ ಬೆರೆತು ಅವರ ನೋವು ನಲಿವುಗಳಲ್ಲಿ ಭಾಗಿಗಳಾಗಿ ಕರ್ನಾಟಕ ನಮ್ಮ ನಾಡು ಎಂಬ ಭಾವನೆ ಬೆಳಸಿಕೊಳ್ಳಲು ಸಾಧ್ಯವಾಗುವುದು. ಭಾವೈಕ್ಯತೆ ಬೆಳಿಸುವುದು, ಭಾವೈಕ್ಯತೆ ಮೂಡಿಸಲು ಇದಕ್ಕಿಂತಲೂ ಉತ್ತಮವಾದ ಮಾರ್ಗ ಇಲ್ಲ.

ಗದ್ಯ ಸಾಹಿತ್ಯ :

" ಕನ್ನಡ ಗದ್ಯ ಭಾವ ಸಾಹಿತ್ಯ ಕ್ಷೇತ್ರದಲ್ಲಿ ದಾಪುಗಾಲು ಹಾಕುತಿದ್ದರೂ, ವಿಚಾರ ಸಾಹಿತ್ಯ ಕ್ಷೇತ್ರದಲ್ಲಿ ತಿಪ್ಪೆ ತಿಪ್ಪೆ ಹೆಜ್ಜೆ ಹಾಕುತ್ತಿದೆ ಎಂದೇ ಹೇಳಬಹುದಾಗಿದೆ" ಇದಕ್ಕೆ ಮುಖ್ಯ ಕಾರಣ ನಮ್ಮ ಶಿಕ್ಷಣ ಪದ್ಧತಿ. ' ಕನ್ನಡ ಗದ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ '; ಇದು ದೇಜಗೌ ಅವರ ಅಭಿಪ್ರಾಯ. ಅವರು ಜನಪ್ರಿಯ ಗದ್ಯ ಲೇಖಕರು. ಅವರ ಗದ್ಯಲೇಖನದಲ್ಲಿ ಓಜಸ್ಸಿದೆ, ಬನಿಯಿದೆ, ಸತ್ವವಿದೆ. ಗದ್ಯ ಲೇಖನದಲ್ಲಿ ಸಿದ್ಧಹಸ್ತರು. ಹೊಸ ಹೊಸ ಪದಪುಂಜಗಳನ್ನು ಸೃಷ್ಟಿಸುವರು. ಸೃಷ್ಟಿಸುವರು ಅನ್ನುವುದಕ್ಕಿಂತಲೂ ಟಂಕಿಸುವರು ಎಂಬುದು ಹೆಚ್ಚು ಸಮಂಜಸ. "ಯಾವ ಕ್ಷೇತ್ರದಲ್ಲಾಗಲಿ ವ್ಯಾಸಂಗ ಬೋಧನೆ ಚರ್ಚೆ ಚಿಂತನ ಮಥನ ಭಾಷಣಗಳು ನಿರಂತರವಾಗಿ ನಡೆದವ್ವಾದರೆ ಅದಕ್ಕೆ ಸಂಬಂಧಿಸಿದ ಭಾಷೆ ಸಂಸ್ಕಾರಗೊಳ್ಳುತ್ತದೆ, ಮಾಗುತ್ತದೆ. ಅದಕ್ಕೆ ಬನಿ ಕನಿ ಚೀಗುಗಳು ಲಭಿಸುತ್ತವೆ" ಎಂಬುದು ಅವರ ನಿಲುವು. ಕನ್ನಡ ಗದ್ಯದ ಬೆಳವಣಿಗೆ ಶಿಕ್ಷಣದ ಮಾಧ್ಯಮವನ್ನವಲಂಬಿಸಿದೆ ಎಂಬುದು ಅವರ ಅಭಿಪ್ರಾಯ ಇದು ನಿಜಸಂಗತಿ. ಶಿಕ್ಷಣ ಎಲ್ಲ ಹಂತದಲ್ಲೂ ಬೋಧಿಸುವ ವಿವಿಧ ವಿಷಯಗಳನ್ನು ಕನ್ನಡದಲ್ಲಿಯೇ ಬೋಧಿಸಿದರೆ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥಗಳು ಹೊರಬರುತ್ತಿದ್ದವು. ಗದ್ಯ ಸಾಹಿತ್ಯ ಎಲ್ಲ ವಿಷಯಗಳಲ್ಲೂ ಬೆಳೆಯುತ್ತಿತ್ತು. ಉನ್ನತ ಶಿಕ್ಷಣ ಪಡೆದು ಹೊರಬರುವ ವಿದ್ಯಾರ್ಥಿಗಳ ಗದ್ಯರಚನೆಯೂ ಉತ್ತಮಗೊಳ್ಳುತ್ತಿತ್ತು. ಆದರೆ ಹಾಗಾಗಲಿಲ್ಲ. ಇನ್ನು ಮುಂದಾದರೂ ಈ ಪರಿಸ್ಥಿತಿ ಬದಲಾಗುವುದೆಂದು ಆಶಿಸೋಣ.

ಶಿಕ್ಷಕರು

" ಈಗಿನ ವಿದ್ಯಾಭ್ಯಾಸಗಳನ್ನು ವ್ಯಾಪಿಸಿರುವ ಸ್ವಾತಂತ್ರ್ಯ ಮತ್ತು ದೃಷ್ಟಿ ವೈಶಾಲ್ಯದಿಂದ ಕೂಡಿದ ಶಿಕ್ಷಣಗಳು ವಿಚಾರ ಪ್ರಚೋದಕ ಪ್ರಶ್ನೆಗಳಿಗೆ ಅವಕಾಶವನ್ನು ಕಲ್ಪಿಸುತ್ತವೆ. ನಿತ್ಯವಿಕಾಸಗೊಳ್ಳುತ್ತಿರುವ ರಾಷ್ಟ್ರೀಯ ಜೀವನದಷ್ಟೆ, ಕನ್ನಡವೂ ವ್ಯಾಪಕ ಶಕ್ತಿಯುಳ್ಳದಾಗಿರುವಾಗ ಕನ್ನಡ ತರಗತಿಯಲ್ಲಿಯೂ ಈ ಪ್ರಶ್ನೆಗಳು ಕೇವಲ ಶಬ್ದಾರ್ಥ ವೈಚಿತ್ರ್ಯಗಳ ಕೂದಲು ಸೀಳಿಕೆಯಲ್ಲಿಯೇ ಪರ್ಯವಸಾನಗೊಳ್ಳುವುದಿಲ್ಲ." ಪ್ರಾಥಮಿಕ ತರಗತಿಯ ಕನ್ನಡ ಬೋಧನ ಕ್ರಮದ ಸ್ವರೂಪ ಶ್ರೇಷ್ಠತೆಗಳು ಮಾಧ್ಯಮಿಕ ಶಾಲೆಯಲ್ಲಿ ತಯಾರಾದ ಉಪಾಧ್ಯಾಯರನ್ನೂ, ಮತ್ತೆ ಅವರ ಮಟ್ಟ, ಪ್ರೌಢ ವಿದ್ಯಾಶಾಲೆಗಳ ಉಪಾಧ್ಯಾಯರ ಸ್ವರೂಪ ಶ್ರೇಷ್ಠತೆಗಳು ಪದವೀಧರರನ್ನೂ ಅವಲಂಬಿಸಿರುತ್ತವೆ ಎಂಬ

ಡಾ. ಸಿ. ಆರ್. ರೆಡ್ಡಿಯವರ ವರದಿಯಲ್ಲಿನ ಮಾತುಗಳು ಸಂಪೂರ್ಣವಾಗಿ ಒಪ್ಪುತ್ತಾರೆ ದೇಜಗೌ ಅವರು)ಸತ್ಯ.

ಮೇಲಿನ ಸ್ಥಿತಿ ಕೇವಲ ಕನ್ನಡ ಬೋಧನೆಗೆ ಮಾತ್ರ ಸೀಮಿತವಾಗಿಲ್ಲ. ಶಾಲೆಗಳಲ್ಲಿ ಬೋಧಿಸುವ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆ. ಡಾ. ಸಿ. ಆರ್. ರೆಡ್ಡಿಯವರು ಪದವೀಧರರಲ್ಲಿ ವಿಶ್ವದೃಷ್ಟಿ, ಬಹುಮುಖಿ ಚತುರತೆ ಮತ್ತು ವಿಶಾಲ ಸಂಸ್ಕೃತಿ ಇರುವುದನ್ನು ಕಾಣಬಹುದು ಎಂಬ ಮಾತುಗಳು ಪ್ರಶ್ನಾರ್ಥಕವಾಗಿಯೇ ಇವೆ. ಇದರ ಅರ್ಥ ಇಷ್ಟೆ. ಪದವೀಧರ ಶಿಕ್ಷಕರೂ ಕೂಡ ವಿಶ್ವದೃಷ್ಟಿಯನ್ನು ಹೊಂದಿಲ್ಲ; ಬಹುಮುಖಿಚತುರತೆಯಾಗಲಿ, ವಿಶಾಲ ಸಂಸ್ಕೃತಿಯನ್ನಾಗಲಿ ಬೆಳೆಸಿಕೊಂಡಿಲ್ಲ. ಅದು ಅವರ ಬೋಧನೆಯ ಪ್ರಭಾವವನ್ನು ಕಡಿಮೆ ಮಾಡುವುದು. ಮೊದಲನೆಯದಾಗಿ ಅವರು ತಾವು ಕಲಿಸುವ ವಿಷಯಕ್ಕೆ ಪರಿಣಾಮಕಾರಿಯೂ ವ್ಯಾಕರಣಬದ್ಧವೂ ಆದ ಭಾಷೆ ಬೇಕೆಂಬುದನ್ನು ಅರಿಯರು. ಮಕ್ಕಳ ಭಾಷಾಜ್ಞಾನದ ಬೆಳವಣಿಗೆಗೆ ಶಾಲೆಯಲ್ಲಿ ಕಲಿಸುವ ಎಲ್ಲ ವಿಷಯಗಳ ಶಿಕ್ಷಕರೂ ತಮ್ಮ ಪಾಲನ್ನು ನೀಡಬೇಕು. ಅಂದರೆ ದಕ್ಷ ಉಪಾಧ್ಯಾಯ ವೃಂದವನ್ನು ತಯಾರು ಮಾಡಬೇಕು. ಇದು ಶಿಕ್ಷಕರ ತರಬೇತು ಸಂಸ್ಥೆಗಳ ಜವಾಬ್ದಾರಿ. ಇಂದು ಅತ್ಯಂತ ಅನಾದರಣೆಗೆ ಒಳಗಾಗಿರುವ ವಿಷಯ ಎಂದರೆ ಶಿಕ್ಷಕರ ತರಬೇತು.

“ಪ್ರೌಢಶಾಲೆಯ ವ್ಯಾಸಂಗ ಕ್ರಮದಲ್ಲಿ ಕನ್ನಡ ಮಟ್ಟವನ್ನು ಎತ್ತರಿಸುವ ಸಮಸ್ಯೆ ಕನ್ನಡ ಉಪಾಧ್ಯಾಯರ ಸ್ಥಾನಮಾನ ಶಕ್ತಿ ಸಾಮರ್ಥ್ಯಗಳನ್ನು ಎತ್ತರಿಸುವ ಸಮಸ್ಯೆಯನ್ನವಲಂಬಿಸಿದೆ. 1972ರಲ್ಲಿ ಕನ್ನಡ, ಸಂಸ್ಕೃತ ಪಂಡಿತರು, ಹಿಂದಿ ವಿದ್ವಾನ್ ಆದವರು ಮತ್ತು ಉರ್ದು ಮುನ್ಷಿಗಳು ಪ್ರೌಢಶಾಲೆಗಳ ಪದವೀಧರ ಶಿಕ್ಷಕರಿಗೆ ಎಲ್ಲ ರೀತಿಯಲ್ಲಿಯೂ ಸರಿಸಮಾನರು; ಅವರಿಗೆ ದೊರೆಯುವ ಬಡ್ತಿ ಮುಂತಾದ ಸೌಲಭ್ಯಗಳು ಭಾಷಾ ಪಂಡಿತರಿಗೂ ದೊರಕಬೇಕು ಎಂಬ ಅಂಶವನ್ನು ಸರ್ಕಾರ ಒಪ್ಪಿಕೊಂಡಿತು. ಅದರಂತೆ ಅವರಿಗೆ ಗೆಜೆಟೆಡ್ ಹುದ್ದೆಗಳಿಗೆ ಬಡ್ತಿಯೂ ದೊರೆಯಿತು. ಅವರು ಸಮರ್ಥವಾಗಿ ಅವರ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇದಕ್ಕೆ ಕಾರಣರು ದೇಜಗೌ ಅವರು. ಪಂಡಿತರಿಗೆ ಬಿ. ಎಡ್. ತರಗತಿಗಳಿಗೆ ಪ್ರವೇಶ ದೊರಕುವಂತೆ ಮಾಡಿ, ಅವರ ಸಂಘದ ಅಧ್ಯಕ್ಷರಾಗಿ ಅವರಿಗೆ ಅಲ್ಲಿಯವರೆಗೆ ಅಂಟಿದ್ದ ಮೈಲಿಗೆಯನ್ನು ತೊಡೆದು ಹಾಕಿದರು. ಆದರೆ ಮೈಸೂರಿನ ಶಿಕ್ಷಣ ಇತಿಹಾಸದ ಪರಿಚಯವೇ ಇಲ್ಲದ ಮತ್ತು ಭಾಷಾ ಶಿಕ್ಷಣದ ಪ್ರಾಮುಖ್ಯವನ್ನು ಅರಿಯದ ಅಧಿಕಾರಿಗಳ ನಿಲುವಿನಿಂದಾಗಿ ಭಾಷಾ ತರಗತಿಗಳನ್ನೇ ಮುಚ್ಚುವ ಸ್ಥಿತಿಗೆ ಬಂದಿದೆ. ಶತಮಾನೋತ್ಸವ ಆಚರಿಸಬೇಕಾದ ವರ್ಷದಲ್ಲಿ ಅದನ್ನು ಮುಚ್ಚುವುದು ಮೂರ್ಖತನದ ನಿಲುವಲ್ಲವೆ.

ಭಾಷೆ ನಮ್ಮ ನಮ್ಮ ಅಭಿಪ್ರಾಯಗಳ ಅಭಿವ್ಯಕ್ತಿಯ ಸಾಧನ. ನಾವು ಓದಿದ ವಿಷಯಗಳನ್ನು ತಿಳಿದುಕೊಳ್ಳಲು ನಮ್ಮ ಭಾಷಾಶಕ್ತಿ ಸಹಾಯಕ. ಬಹುಶಃ ನಮ್ಮ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಇಳಿದಿರುವುದಕ್ಕೆ ಇದೂ ಕಾರಣವಾಗಿದೆ. ಆದುದರಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನ್ನಡ ಬೋಧಿಸಲು ವಿಶೇಷ ತರಬೇತು ಪಡೆದ ಶಿಕ್ಷಕರನ್ನು ನೇಮಕ ಮಾಡಬೇಕು.

ಬೋಧನೆ

ದೇಜಗೌ ಬೋಧನೆಯ ಬಗ್ಗೆಯೂ ತಮ್ಮ ಗಮನ ಪರಿಷ್ಕಾರ. ಬೋದನೆ ಎಂದರೆ ವಿದ್ಯಾರ್ಥಿವೃಂದದ ಮುಂದೆ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಲು ಬೋಧಿಸಬೇಕಾದ ವಿಷಯವನ್ನು ಅವರಿಗೆ ಅರ್ಥವಾಗದ ರೀತಿಯಲ್ಲಿ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಅವರನ್ನು ಗೊಂದಲಕ್ಕೀಡು ಮಾಡುವುದಲ್ಲ. ಬೋಧನೆಯ ಉದ್ದೇಶ ತಾವು ಹಲವಾರು ಗ್ರಂಥಗಳನ್ನು ಓದಿ ಗ್ರಹಿಸಿ ಸಂಗ್ರಹಿಸಿ ಜೀರ್ಣಿಸಿಕೊಂಡಿರುವ ತಮ್ಮಲ್ಲಿ ಮಡುಗಟ್ಟಿರುವ ಜ್ಞಾನಸಂಪತ್ತನ್ನು ಸರಳ ರೀತಿಯಲ್ಲಿ ಸರಳ ಭಾಷೆಯಲ್ಲಿ ಅವರಿಗೆ ಸುಲಭವಾಗಿ ಅರ್ಥವಾಗುವಂತೆ ಹೇಳುವುದು. ಅವರು ತಮ್ಮ ಗುರುಗಳಾದ ಟಿ. ಎಸ್. ವೆಂಕಣ್ಣಯ್ಯನವರು ಮತ್ತು ತೀ. ನಂ. ಶ್ರೀಕಂಠಯ್ಯನವರನ್ನು ನೆನಪಿಸಿಕೊಳ್ಳುತ್ತಾರೆ. ವೆಂಕಣ್ಣಯ್ಯನವರ ವ್ಯಾಕರಣ ಪಾಠ ಎಂದೂ ಶುಷ್ಕವಾಗಿರಲಿಲ್ಲ. ಕತೆಗೆ ಕತೆ ಜೋಡಿಸಿ ಕೇಶಿರಾಜನ ಪ್ರತಿಭಾ ಸಾಮರ್ಥ್ಯವನ್ನು ವಿವರಿಸಿ, ಪಾಠ ಬೇಸರವಾಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ವ್ಯಾಕರಣದ ವಿಶೇಷಗಳನ್ನು ಬೋಧಿಸುವಾಗ ಅವರು ಕನ್ನಡ ಗಾದೆಗಳನ್ನೂ ಉಪಯೋಗಿಸಿಕೊಂಡು ವಿದ್ಯಾರ್ಥಿಗಳ ಕುತೂಹಲವನ್ನು ಅರಳಿಸುತ್ತಿದ್ದರುತದ್ಭವಗಳನ್ನು ಕುರಿತು ವಿವರಿಸುತ್ತ " ಕೊಟ್ಟ ಹೆಣ್ಣು ಕುಲಕ್ಕೆ ಹೊರಗು. ಗಂಡನ ಮನೆಯ ವಿಧಿ ನಿಷೇಧಗಳಿಗೆ ಮಾತ್ರ ಅವಳು ಬಾಧ್ಯಳು. ಹಾಗೆಯೇ ತದ್ಭವಗಳು ಹುಟ್ಟಿದ ಕುಲಕ್ಕೆ ಹೊರಗು ಸ್ವೀಕರಿಸಿದ ಕುಲಕ್ಕೆ ಒಳಗು' ಎಷ್ಟು ಸೊಗಸಾಗಿದೆ ಈ ಸಾಮ್ಯ-ವ್ಯಾಕರಣವನ್ನು ಜೀರ್ಣಿಸಿಕೊಂಡಿರುವ ಅಧ್ಯಾಪಕರು ಮಾತ್ರ ಇಂತಹ ಸರಳವಾದ ಎಲ್ಲರಿಗೂ ತಿಳಿದಿರುವ ಗಾದೆಗಳ ಮೂಲಕ ಎಷ್ಟೇ ಜಟಿಲವಾದ ವಿಷಯಗಳನ್ನೂ ಸರಳೀಕರಿಸಿ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡಬಲ್ಲರು. ಇಲ್ಲಿ ತಮ್ಮ ಪಾಂಡಿತ್ಯ ಪ್ರದರ್ಶನಕ್ಕಿಂತಲೂ ತಾವು ಹೇಳಬೇಕೆಂದಿರುವ ಅಂಶಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವಂತೆ ಮಾಡಲು ಯಶಸ್ವಿಯಾದ ಮಾರ್ಗ ಅನುಸರಿಸಿದ್ದಾರೆ.

ತೀನಂಶ್ರೀ ಅವರನ್ನು ಕುರಿತು " ಶ್ರೀ ತೀ. ನಂ. ಶ್ರೀಕಂಠಯ್ಯನವರು ಅಧ್ಯಾಪಕ ವೃತ್ತಿಗೆಂದೇ ಜನ್ಮತಾಳಿದವರೆಂದು ಕಾಣುತ್ತದೆ. ಅವರಂತೆ ಲೀಲಾಜಾಲವಾಗಿ, ಸಹಜ ಸ್ಫೂರ್ತಿಯಿಂದ ಆಕರ್ಷಕವಾಗಿ ಪಾಠ ಮಾಡುತ್ತಿದ್ದ ಅಧ್ಯಾಪಕರು ಅತಿ ವಿರಳ. ಒಮ್ಮೆಗೇ ವಿದ್ಯಾರ್ಥಿಗಳ ಮನಸ್ಸನ್ನು ಸೆಳೆಯುವ ಅಪೂರ್ವ ಮೋಹಕಶಕ್ತಿ ಅವರಿಗೆ ಅತಿವಶವಾಗಿತ್ತು. ಕುಮಾರವ್ಯಾಸ ಭಾರತವಾಗಲೀ ಶಬ್ದಮಣಿದರ್ಪಣವಾಗಲೀ ಅವರ ಬಾಯಿಂದ ಕೇಳಬೇಕು. ಅವರ ಮಾತಿನ ಮೋಡಿಗೆ, ಅವರ ದನಿಯ ಏರಿಳಿತಕ್ಕೆ, ವಿಷಯ ನಿರೂಪಣೆಯ ಗಾರುಡಿಗತನಕ್ಕೆ, ಅವರ ಘನ ಪಾಂಡಿತ್ಯದ ಗಂಭೀರತೆಗೆ ಮರುಳಾಗದವರಿಲ್ಲ. ಬೌದ್ಧಿಕ ಪ್ರಾಮಾಣಿಕತೆಗೆ ಮತ್ತೊಂದು ಹೆಸರು ತೀನಂಶ್ರೀ. ತರಗತಿಯಲ್ಲಿ ಅವರೆಂದೂ ಬುರುಡೆಬಿಟ್ಟವರಲ್ಲ ..... ಸಾಮಾನ್ಯವಾಗಿ ಸಿದ್ಧಮಾಡಿಕೊಳ್ಳದೆ ಅವರೆಂದೂ ತರಗತಿಯೊಳಗೆ ಕಾಲಿಟ್ಟವರಲ್ಲ" ಎಂದು ಹೇಳಿದ್ದಾರೆ. ದೇಜಗೌ. ಅವರು ಉಪಯೋಗಿಸಿರುವ ಒಂದೊಂದು ಪದವನ್ನೂ ಎಚ್ಚರಿಕೆಯಿಂದ ಮೆಲುಕು ಹಾಕಬೇಕು ಅಧ್ಯಾಪಕರಾದವರು. ಶ್ರೇಷ್ಠವರ್ಗದ ಅಧ್ಯಾಪಕರಿಗೆ ಈ ಗುಣಗಳೆಲ್ಲವೂ ಇರಲೇಬೇಕು. ಕೆಲವರ ಪಾಠಗಳು ಬೇಸರಿಕೆ ಉಂಟು ಮಾಡಿ ನಿದ್ರೆ

ಬರಿಸುತ್ತವೆ. ಪ್ರಾರಂಭದಿಂದ ಕೊನೆಯವರೆಗೂ ಯಾವುದೇ ಘಟನೆಯಿರಲಿ ಭಾವಪ್ರದರ್ಶನವಿಲ್ಲದೆ, ಧ್ವನಿಯಲ್ಲಿ ಏರಿಳಿತಗಳಿಲ್ಲದೆ ಒಂದೇ ಸ್ವರದಲ್ಲಿ ಸಾಗುವ ಶುಷ್ಕ ಪಾಠಗಳನ್ನೂ ಅನುಭವಿಸಿದ್ದೇವೆ. ತೀನಂಶ್ರೀ ಅವರ ವ್ಯಕ್ತಿತ್ವವೇ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿ ಮಾಡುತಿತ್ತು. ಅವರ ವಿದ್ಯಾರ್ಥಿಗಳನ್ನು ತಿಳಿಹಾಸ್ಯದಿಂದ ನಗುವಂತೆ ಮಾಡಿದರೂ ಅದು ಹೆಚ್ಚು ಶಬ್ದವಿಲ್ಲದ ನಗುವಾಗಿದ್ದು ತತ್‌ಕ್ಷಣದಲ್ಲಿಯೇ ತರಗತಿ ನಿಶ್ಶಬ್ದವಾಗಿ ಯಥಾಸ್ಥಿತಿಗೆ ಬರುತ್ತಿತ್ತು. ಆ ಬೋಧನೆಯ ಪ್ರಭಾವ ಅನುಭವಿಸಿದವರಿಗೆ ಮಾತ್ರ; ಬೇರೆಯವರಿಗೆ ವಿವರಿಸಿ ಹೇಳಲು ಸಾಧ್ಯವಿಲ್ಲ. ನನ್ನ ಅದೃಷ್ಟ ಎರಡು ವರ್ಷಗಳ ಕಾಲ ಅವರ ಬೋಧನೆಯ ಸವಿಯನ್ನು ಸವಿಯುವ ಸುಯೋಗ ದೊರಕಿತ್ತು. ಬೋಧನೆ ಒಂದು ಕಲೆ. ಅಧ್ಯಾಪಕ ತನ್ನ ಬೋಧನೆಯ ಉದ್ದಕ್ಕೂ ವಿದ್ಯಾರ್ಥಿಗಳ ನಾಡಿಯ ಮಿಡಿತವನ್ನು ನೋಡುತ್ತಲೆ ಇರಬೇಕು. ಸನ್ನಿವೇಶ, ವಿದ್ಯಾರ್ಥಿಗಳ ಮಾನಸಿಕ ಸ್ಥಿತಿ ಮೊದಲಾದವುಗಳಿಗನುಣವಾಗಿ ತನ್ನ ಬೋಧನಾ ಪದ್ಧತಿಯನ್ನು ಬದಲಾಯಿಸಿಕೊಳ್ಳಬೇಕು. ಈ ಮಟ್ಟ ಮುಟ್ಟಬೇಕಾದರೆ ಅಧ್ಯಾಪಕ ತನ್ನ ವೃತ್ತಿಯನ್ನು ಪ್ರೇಮಿಸಬೇಕು. ತಾನು ಕಲಿಸುವ ವಿಷಯವನ್ನು ಪ್ರೀತಿಸಬೇಕು; ತಾನು ಬೋಧಿಸುವ ವಿದ್ಯಾರ್ಥಿಗಳನ್ನು ಪ್ರೀತಿಸಬೇಕು. ಈ ಮೂರೂ ಗುಣಗಳು ಯಾರಲ್ಲಿ ಮುಪ್ಪುರಿಗೊಂಡಿವೆಯೋ ಆ ವ್ಯಕ್ತಿ ಶ್ರೇಷ್ಠ ಅಧ್ಯಾಪಕನಾಗಬಲ್ಲ. ಈ ಗುಣಗಳಿಲ್ಲದವರು ಪ್ರತಿ ದಿನವೂ ಬೋಧನೆಯ ಕೆಲಸ ಮಾಡುವರು. ಅವರ ಬೋಧನೆಯ ಪ್ರಯೋಜನ ವಿದ್ಯಾರ್ಥಿಗಳಿಗೆ ಆಗುವುದಿಲ್ಲ. ಅವರಿಗೂ ತೃಪ್ತಿಯಿಲ್ಲ; ವಿದ್ಯಾರ್ಥಿಗಳಿಗೂ ತೃಪ್ತಿಯಿಲ್ಲ. ಬೋಧನೆ ಯಾಂತ್ರಿಕವಾಗುತ್ತದೆ. ಗಾಣದ ಎತ್ತು ತಾನೇಕೆ ಸುತ್ತುತ್ತಿದ್ದೇನೆಂಬುದನ್ನು ಅರಿಯದೆ ದಿನವಿಡೀ ಸುತ್ತುತ್ತಲೇ ಇರುತ್ತದೆ. ಈ ವರ್ಗದ ಅಧ್ಯಾಪಕನೂ ಅದೇ ಸ್ಥಿತಿಯಲ್ಲಿರುತ್ತಾನೆ.

ನಮ್ಮ ವಿದ್ಯಾರ್ಥಿಗಳು

ಜ್ಞಾನವನ್ನು ಕುರಿತು ತಮ್ಮನ್ನೇ ಉದಾಹರಣೆಯಾಗಿಟ್ಟುಕೊಂಡು “ ನನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ನಾನು ವಿದ್ಯಾವಂತರ ಮನೆಯ ಸಮವಯಸ್ಸಿನ ವಿದ್ಯಾರ್ಥಿಗಳಿಗಿಂತ ಬುದ್ಧಿಶಕ್ತಿಯಲ್ಲಿ 15 ವರುಷ ಹಿಂದಿದ್ದೆನೆನ್ನಬಹುದು” ಎಂದು ಹೇಳಿಕೊಂಡಿದ್ದಾರೆ. ಅಂದು ಗ್ರಾಮೀಣ ಪ್ರದೇಶದಿಂದ ಬರುತ್ತಿದ್ದ ಎಲ್ಲ ವಿದ್ಯಾರ್ಥಿಗಳ ಸ್ಥಿತಿಯೂ ಇದಕ್ಕಿಂತ ಉತ್ತಮವಾಗಿರಲಿಲ್ಲ. ಮನೆಯಲ್ಲಿ ಓದುಬರಹ ಬಲ್ಲವರ ಸಂಪರ್ಕವೇ ಇಲ್ಲದಿದ್ದಾಗ, ಎಲ್ಲವನ್ನೂ ತಾನೇ ವ್ಯವಸ್ಥೆ ಮಾಡಿಕೊಳ್ಳಬೇಕಾದಾಗ ಉತ್ತಮ ಪರಿಸರದಿಂದ ಬರುವ ವಿದ್ಯಾರ್ಥಿಗಳಿಗೆ ಸರಿಸಮನಾಗಿ ನಿಲ್ಲುವುದು ಹೇಗೆ ಸಾಧ್ಯ. ವೃತ್ತಪತ್ರಿಕೆಗಳು ದೊರೆಯುತ್ತಿರಲಿಲ್ಲ; ಪುಸ್ತಕಗಳ ಸಂಪರ್ಕ ಇಲ್ಲ. ಅವುಗಳು ದೊರೆಯುತ್ತಿದ್ದುದು ಶಾಲೆಯಲ್ಲಿಯೇ.

“ವಿದೇಶಗಳಲ್ಲಿ ವಿದ್ಯಾರ್ಥಿಗಳ ಜ್ಞಾನದ ಮಟ್ಟ ನಮ್ಮವರಿಗಿಂತ ಮುಂದುವರಿದಿದೆ: ಇದಕ್ಕೆ ಕಾರಣ ಅವರು ಬೆಳೆದಿರುವ ವಾತಾವರಣ. ನಮ್ಮ ವಿದ್ಯಾರ್ಥಿಗಳು ವಿದೇಶೀ ಭಾಷೆಯಿಂದ ಕುಗ್ಗಿದ್ದಾರೆ. ಅವರ ಬುದ್ಧಿಶಕ್ತಿ ಇದರಿಂದ ಕುಂಠಿತವಾಗಿದೆ. ಸ್ವಂತ ಭಾಷೆಯಿಂದಲೇ ಕಲಿಯುವುದರಿಂದ ಆತ್ಮಪ್ರತ್ಯಯವುಂಟು. ಇದಕ್ಕೆ ಕಾರಣ ಸುಸ್ಪಷ್ಟ

ಬ್ರಿಟನ್‌ನಲ್ಲಿ ಹದಿನಾರು ವರುಷ ತುಂಬವವರೆಗೆ ಶಾಲೆಗೆ ಹೋಗುವುದು ಕಡ್ಡಾಯ. ಅನಂತರ ಅವರು ವಿವಿಧ ವೃತ್ತಿಗಳನ್ನು ಪ್ರಾರಂಭಿಸುವರು. ಉದ್ಯೋಗ ದೊರಕಿಸಿಕೊಳ್ಳುವ ಪ್ರಯತ್ನದಲ್ಲಿ ನೆರವಾಗಿ ಅವರವರ ಮನಸ್ಸಿಗೆ ನೆಮ್ಮದಿ ತರುವಂತಹ ಉದ್ಯೋಗಗಳಲ್ಲಿ ಯುವಕರನ್ನು ನಿಯೋಜಿಸಲು ಯುವಕ ಕೇಂದ್ರಗಳಿವೆ. ಮಾಹಿತಿ ಕೇಂದ್ರಗಳಿವೆ ಮತ್ತು ಮಾರ್ಗದರ್ಶನ ಕೇಂದ್ರಗಳಿವೆ. ಈ ವಯೋಮಿತಿಯ ಬಹು ಮಂದಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಪ್ರಯತ್ನಿಸುವುದಿಲ್ಲ. ಅವರು ಅಂಶಕಾಲಿಕ ಶಿಕ್ಷಣ (Part-time Education) ಮುಂದುವರಿದ ಶಿಕ್ಷಣ ಕೇಂದ್ರಗಳು. ಸಂಜೆ ಕಾಲೇಜುಗಳು ಮತ್ತಿತರ ಯೋಜನಗಳ ಮೂಲಕ ತಾವು ಆಯ್ಕೆ ಮಾಡಿಕೊಂಡಿರುವ ಉದ್ಯೋಗದಲ್ಲಿ ಹೆಚ್ಚಿನ ಪರಿಶ್ರಮ ಪಡೆಯಲು. ಇಲ್ಲವೆ ಉನ್ನತ ಶಿಕ್ಷಣ ಪಡೆಯಲು ಇರುವ ಅವಕಾಶಗಳ ಲಾಭ ಪಡೆದು ಮುಂದುವರಿಯುವರು. ಆದುದರಿಂದ ಸಾಂಪ್ರದಾಯಕ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಬಯಸುವವರು ಆ ಶಿಕ್ಷಣದಿಂದ ಪೂರ್ಣ ಲಾಭ ಪಡೆಯುವ ಅರ್ಹತೆ ಪಡೆದವರಾಗಿದ್ದೂ ಅಂತಹವರ ಸಂಖ್ಯೆ ಕಡಿಮೆ ಇದ್ದೂ ಪ್ರವೇಶಕ್ಕಾಗಿ ಪೈಪೋಟಿ ಇರುವುದಿಲ್ಲ. ಉನ್ನತ ಶಿಕ್ಷಣ ಪಡೆಯಲು ಬರುವ ವಿದ್ಯಾರ್ಥಿಗಳಲ್ಲಿ ಜ್ಞಾನದಾಹ ಸಾಕಷ್ಟಿದ್ದು ಅದನ್ನು ತಣಿಸುವುದೇ ಅವರ ಗುರಿಯಾಗಿರುವುದರಿಂದ ಸಹಜವಾಗಿಯೇ ಅವರ ಜ್ಞಾನದ ಮಟ್ಟ ಉತ್ತಮ ಮಟ್ಟದಲ್ಲಿರುತ್ತದೆ. ಎಲ್ಲ ಮುಂದುವರೆದ. ರಾಷ್ಟ್ರಗಳಲ್ಲೂ ಇದೇ ಸ್ಥಿತಿ ಕಾಣಬಹುದು.

ಆದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಪರಿಸ್ಥಿತಿಯೇ ಬೇರೆ. ಇಲ್ಲಿ ಸಾಮಾನ್ಯ ಶಿಕ್ಷಣ ಸಾರ್ವತ್ರಿಕವಾದಂತಿದೆ. ಎಸ್. ಎಸ್. ಎಲ್. ಸಿ. ಸಂತರ ಪಿಯುಸಿ ನಂತರ ವೈದ್ಯಕೀಯ ಮತ್ತಿತರ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಪ್ರಯತ್ನ; ಸಿಕ್ಕದಿದ್ದರೆ ಬಿ. ಎಸ್‌ಸ್ಸಿ, ಬಿ.ಎ. ಅಥವಾ ವಾಣಿಜ್ಯ ಶಿಕ್ಷಣ ಮುಂದುವರಿಕೆ. ಏಕೆ? ಪದಪಿಯನ್ನು ಗಳಿಸಿದರೆ ಸಮಾಜದಲ್ಲಿ ಮಾನ್ಯತೆ ಪಡೆಯಬಹುದು ಮತ್ತು ಉದ್ಯೋಗಾವಕಾಶ ಹೆಚ್ಚುವುದು ಎಂಬ ಭ್ರಮೆಯಿಂದ. ಈ ವೇಳೆಗಾಗಲೆ ಅವರ ಜೀವನ ಹಲವು ರೀತಿಯ ದೌರ್ಬಲ್ಯಗಳ ನೆಲೆಯಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸಲ್ಲದ ಅನೇಕ ರೀತಿಯ ದುರ್ವ್ಯಾಪಾರಗಳಲ್ಲಿ, ಮುಷ್ಕರ ಮುಂತಾದವುಗಳನ್ನು ವ್ಯವಸ್ಥೆ ಮಾಡುವುದರಲ್ಲಿ ತೊಡಗಿಸಿಕೊಂಡು ತಮ್ಮ ಮೂಲ ಗುರಿಯನ್ನು ಮರೆತಿರುತ್ತಾರೆ. ಅವರು ಅನೇಕ ವೇಳೆ ರಾಜಕಾರಣಿಗಳ ಕೈಗೊಂಬೆಗಳಾಗಿ ವರ್ತಿಸಿ ಅವರ ಜೀವನ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುವರು. ನಾವು ಕಾಣುತ್ತಿರುವ ಈ ಪರಿಸ್ಥಿತಿಯೇ ದೇಜಗೌ ಅವರು " ಜ್ಞಾನಾರ್ಜನೆಯಲ್ಲಿ ಆಸಕ್ತಿ ಇಲ್ಲದೆ ಇರುವುದು " ಅಶಿಸ್ತಿಗೆ ಕಾರಣ. ಸಮಾಜದಲ್ಲಿ ಏನು ಅಶಿಸ್ತಿದೆಯೋ ಅದು ವಿದ್ಯಾರ್ಥಿ ಜೀವನದಲ್ಲಿ ಪ್ರತಿ ಬಿಂಬಿತವಾಗುತ್ತದೆ" ಎಂದು ಉದ್ಗಾರ ಎತ್ತಲು ಕಾರಣವಾಗಿದೆ. ನಮ್ಮ ಮುಖಂಡರು ಹೇಳುವುದೊಂದು ಮಾಡುವುದೊಂದು. ಈ ರೀತಿಯ ಇಬ್ಬಗೆಯ ಜೀವನವೂ ಇವರ ಮೇಲೆ ದುಷ್ಪರಿಣಾಮ ಉಂಟು ಮಾಡಿದೆ. ನಮ್ಮ ಯುವ ಪೀಳಿಗೆಯ ಮುಂದೆ ಭವಿಷ್ಯದ ಆಶಾದಾಯಕ ಚಿತ್ರವನ್ನು ರೂಪಿಸಿ ಅವರಿಗೆ ಸರಿಮಾರ್ಗದಲ್ಲಿ ನಡೆಯುವಂತೆ ಉಪದೇಶಿಸುವವರನ್ನು ಅವರು ಗೇಲಿ ಮಾಡುವಂತೆ ಮಾಡಿದೆ. ಕಾಣದ್ದನ್ನು ಸವಿಯುವ ಆಶೆಗಿಂತಲೂ ಕಣ್ಣಿಗೆ ಕಾಣುವ ಸುಖ ಅದು ಸಲ್ಲದ ಮಾರ್ಗದಿಂದ

ದೊರೆತರೂ ಅದನ್ನು ಒಪ್ಪಿಕೊಳ್ಳುವ ಹಂತಕ್ಕೆ ಅವರು ಇಳಿದಿದ್ದಾರೆ. " ವಿದ್ಯಾರ್ಥಿಗಳು ಸಹಜವಾಗಿ ಒಳ್ಳೆಯವರು. ಆದರೆ ಆ ಒಳ್ಳೆಯತನಕ್ಕೆ ಹುಳಿಹಿಂಡುವವರು ದೊಡ್ಡವರು. ದೊಡ್ಡವರ ಸ್ವಾರ್ಥಕ್ಕೆ ಇವರು ಬಲಿಪಶುಗಳಾಗುತ್ತಾರೆ. ತಮ್ಮ ಭವಿಷ್ಯದ ಬಗ್ಗೆ ನಿರಾಶೆ ಇರುವುದರಿಂದಲೂ ವಿದ್ಯಾರ್ಥಿಗಳು ಹಿಂಸಾಪರರಾಗುವುದುಂಟು." ರಾಷ್ಟ್ರಾದ್ಯಂತ ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ (ಕ್ಯಾಂಪಸ್‌ಗಳಲ್ಲಿ) ನಡೆಯುತ್ತಿರುವ ಪರೀಕ್ಷೆಗಳಲ್ಲಿ ಕಾಪಿ ಮಾಡುವುದು, ಅಧ್ಯಾಪಕ ವರ್ಗದವರ ಮೇಲೆ ಹಲ್ಲೆ ಮಾಡುವುದು, ವಿವಿಧ ಕ್ಷುಲ್ಲಕ ಕಾರಣಗಳಿಗಾಗಿ ಮುಷ್ಕರ ಹೂಡುವುದು, ಗುಂಪುಗಾರಿಕೆ ಮುಂತಾದ ದುರ್ಘಟನೆಗಳು ಈ ಅಭಿಪ್ರಾಯಗಳನ್ನು ಪುಷ್ಟೀಕರಿಸುತ್ತವೆ. ಸರಿಯಾದ ಮಾರ್ಗದರ್ಶನ ಇದ್ದರೆ ಅವರನ್ನು ಆಶಾವಾದಿಗಳನ್ನಾಗಿ ಮಾಡಬಹುದು ಎಂಬ ನಂಬಿಕೆಯೂ ಅವರಿಗಿದೆ.

" ಜ್ಞಾನಾರ್ಜನೆಯಲ್ಲಿ ಆಸಕ್ತಿ ಇರುವವರು ಇಂದಿಗೂ ಮುಷ್ಕರ ಚಳುವಳಿಗಳಲ್ಲಿ ಭಾಗವಹಿಸುವುದಿಲ್ಲ. ವಿದ್ಯಾರ್ಥಿಗಳಲ್ಲಿ ಬಹು ಸಂಖ್ಯೆಯವರು ಸಹಜವಾಗಿಯೇ ಒಳ್ಳೆಯವರು. ಆದರೆ ಅಶಿಸ್ತಿನಿಂದ ವರ್ತಿಸಿ ಗದ್ದಲ ಮಾಡುವ ಕೆಲವೇ ಮಂದಿ ವಿದ್ಯಾರ್ಥಿಗಳನ್ನು ಎಮರಿಸಲು ಅವರು ಹಿಂಜರಿಯುವರು.

ವಿದ್ಯಾರ್ಥಿ ಮನಸ್ಸನ್ನ ಕಮಲದಂತೆ ಶುದ್ಧ, ಮೇಣದಂತೆ ಮೃದು, ವಜ್ರದಂತೆ ಕಠೋರ : ಪರಿಸರಣದಿಂದ ಅದು ವಿಕಾರಗೊಳ್ಳುತ್ತದೆ. ವೈಪರೀತ್ಯ ವಿರೋದಾಭಾಸಗಳ ಪೇಚಿನಲ್ಲಿ ಸಿಕ್ಕಿಕೊಂಡು ಅವನ ಮನಸ್ಸು ಅಲ್ಲೋಲಕಲ್ಲೋಲವಾಗಿದೆ. ಅವನಿಗೆ ಸರಿಯಾದ ಗುರುವೂ ಇಲ್ಲ, ಗುರಿಯೂ ಇಲ್ಲ, ನಾಯಕತ್ವವೂ ಇಲ್ಲ" ಇದು ವಿದ್ಯಾರ್ಥಿಗಳ ಅಶಿಸ್ತಿನ ವರ್ತನೆಯ ಬಗೆಗೆ ಅವರು ಮರುಕದಿಂದ ಆಡುವ ಮಾತುಗಳು. 1959ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಂತರ ವಿಶ್ವವಿದ್ಯಾಲಯಗಳ ಯುವಜನೋತ್ಸವ ಸಂದರ್ಭದಲ್ಲಿ ಘಟಿಸಿದ ಅಹಿತಕರ ಘಟನೆಗಳನ್ನು ಖಂಡಿಸಲು ಹೇಳಿದ ಮಾತುಗಳನ್ನು ಅವರು ನೆನಪಿಸಿಕೊಂಡಂತಿದೆ. ಅವು ಹೀಗಿವೆ.

" ಅಂದೊ
ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು
ನುಗ್ಗಿದುದು ಮುಂದೆ ಧೀರ ದಂಡು
ಇಂದೊ
ಹಿಂದಕ್ಕೆ ಗುರುವಿಲ್ಲ, ಮುಂದಕ್ಕೆ ಗುರಿಯಿಲ್ಲ
ಮುಗ್ಗುತಿದೆ ಮಧ್ಯೆ ಹೇಡಿ ಹಿಂಡು."

ರಾಷ್ಟ್ರಕವಿ ಕುವೆಂಪು ಅವರ ಈ ಮಾತುಗಳು ನಮ್ಮ ವಿಶ್ವವಿದ್ಯಾನಿಲಯಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಜವಾಬ್ದಾರಿ ಹೊರಲೂ ತರಬೇತು ಪಡೆದು ಸಿದ್ಧರಾಗಬೇಕಾದ ಯುವಜನರ ಸ್ಥಿತಿಯನ್ನು, ವರ್ತನೆಯನ್ನು ಚಿತ್ರಿಸುತ್ತವೆ.

ಇಂದು ಗುರು ಶಿಷ್ಯರ ನಡುವೆ ಸಂಪರ್ಕವೇ ಇಲ್ಲ. ಒಬ್ಬರೊಬ್ಬರಿಗೆ ಪರಿಚಯವೇ ಇಲ್ಲ. ಬೋಧಕರು ತರಗತಿಗಳಿಗೆ ಬಂದು ಒಂದು ಗಂಟೆ ಉಪನ್ಯಾಸ ಮಾಡಿ

ವಿದ್ಯಾರ್ಥಿಗಳು ತಾವು ಹೇಳಿದುದನ್ನು ಅರ್ಥಮಾಡಿಕೊಂಡರೂ ಇಲ್ಲವೊ ಎಂಬುದನ್ನು ತಿಳಿಯಲು ಯತ್ನಿಸದೆ. ಅವರ ಅನುಮಾನಗಳನ್ನು ಪರಿಹರಿಸಲು ಪ್ರಯತ್ನಿಸದೆ ಹೊರಹೊರಡುವರು. ಹೊರಗೆ ಹೋದ ಮೇಲೆ ವಿದ್ಯಾರ್ಥಿಗಳಾರೊ, ಶಿಕ್ಷಕರ್ಯಾರೊ, ಗುರುಶಿಷ್ಯರ ಮಧ್ಯೆ ಇರಬೇಕಾದ ಆತ್ಮೀಯತೆ ಮಧುರ ಬಾಂಧವ್ಯ ಕಾಣುವುದು ಸ್ವಪ್ನವಾಗಿದೆ. ಬೋಧನೆ ಯಾಂತ್ರಿಕವಾಗಿ ಸಾಗುತ್ತಿದೆ. ಈ ಪರಿಸ್ಥಿತಿ ಉದ್ಭವಿಸಿ ಬೆಳೆಯಲು ಶಿಕ್ಷಕರು, ಆಡಳಿತ, ನಮ್ಮ ನಾಯಕರೆನಿಸಿಕೊಂಡವರು ಮತ್ತು ಪೋಷಕರು ಎಲ್ಲರೂ ಜವಾಬ್ದಾರರು. ನಾವೆಲ್ಲ ಎಚ್ಚೆತ್ತು ಈ ಪರಿಸ್ಥಿತಿಯ ಮುಂದುವರಿಕೆಯನ್ನು ತಡೆಯದಿದ್ದರೆ ನಮ್ಮ ಯುವಪೀಳಿಗೆಯ ಭವಿಷ್ಯ ಗಾಳಿಗೊಡ್ಡಿದ ಸೊಡರಿನಂತಾಗುವುದು. ಇದನ್ನು ತಡೆಗಟ್ಟಲು ನಾವೆಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕು.

ಕೃಷಿ ಶಿಕ್ಷಣ

ಕೃಷಿ ಶಿಕ್ಷಣದ ಬಗ್ಗೆಯೂ ದೇಜಗೌ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತ ಕೃಷಿಪ್ರಧಾನವಾದ ದೇಶ. ಶೇಕಡ 75ಕ್ಕಿಂತಲೂ ಹೆಚ್ಚು ಜನರು ತಮ್ಮ ಜೀವನಕ್ಕಾಗಿ ವ್ಯವಸಾಯ ಅವಲಂಬಿಸಿದ್ದಾರೆ. ಬೃಹತ್ ಪ್ರಮಾಣದ, ಮಧ್ಯಮ ಪ್ರಮಾಣದ ಮತ್ತು, ಸಣ್ಣ ಕೈಗಾರಿಕೆಗಳನ್ನು ಎಷ್ಟೇ ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಿದರೂ ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗ ಒದಗಿಸಿಕೊಡಲಾರೆವು. ಈ ಎಲ್ಲ ಕೈಗಾರಿಕೆಗಳು ಅಭಿವೃದ್ಧಿಗೊಂಡರೂ ಕೃಷಿಯೇ ನಮ್ಮ ಜನರ ಮುಖ್ಯ ಉದ್ಯೋಗವಾಗಿ ಉಳಿಯುವುದು. "ನಮ್ಮ ಆರ್ಥಿಕವ್ಯೂಹಕ್ಕೆ ವ್ಯವಸಾಯ ತಳಹದಿಯಾಗಿರಬೇಕೆಂಬುದು ಎಲ್ಲರಿಗೂ ಗೊತ್ತೇ ಇದೆ. ನಮ್ಮ ದೇಶದಲ್ಲಿ ಔದ್ಯೋಗಿಕಕ್ರಾಂತಿ ಎಷ್ಟೇ ಮುಂದುವರಿದರೂ-ಅದು ಸರ್ವವ್ಯಾಪಿ ಆಗಬೇಕು ನಿಜ-ವ್ಯವಸಾಯಕ್ಕೆ ಮೊಟ್ಟಮೊದಲನೆ ಸ್ಥಾನ ಕೊಡಬೇಕೆಂಬುದೇ ನನ್ನ ಸಿದ್ಧಾಂತ ...... ನಮ್ಮ ಕೃಷಿ ಲಾಭದಾಯಕವಾಗದಿರಲು ಆಧುನಿಕ ರೀತಿಯ ಶಿಕ್ಷಣ ಇಲ್ಲದಿರುವುದೇ ಕಾರಣ. ಇರುವ ಅಲ್ಪಸ್ವಲ್ಪ ಶಿಕ್ಷಣವಾದರೂ ಆಡಳಿತ ಯಂತ್ರದಲ್ಲಿ ಖಾಲಿ ಇರುವ ಜಾಗವನ್ನು ತುಂಬಲು ಅನುಕೂಲವಾಗಿದೆಯೇ ಹೊರತು, ವಿದ್ಯಾರ್ಥಿಗಳಿಗೆ ವ್ಯವಸಾಯದಲ್ಲಿ ಆಸೆಯನ್ನು ಹುಟ್ಟಿಸುವಂತಹುದಲ್ಲ." ಕೃಷಿ ಶಿಕ್ಷಣ ರಂಗದಲ್ಲಿ ಈಗ ಬದಲಾವಣೆಗಳಾಗಿವೆ. ಅದರ ಕಕ್ಷೆಯಲ್ಲಿ ಕೋಳಿಸಾಕಾಣಿಕೆ, ಮೀನು ಕೃಷಿ, ತೋಟಗಾರಿಕೆ ಮುಂತಾದ ವಿಷಯಗಳ ಅಧ್ಯಯನ ಪ್ರಾರಂಭ ಆಗಿದೆ. ಈ ಶಿಕ್ಷಣ ಪಡೆದ ಎಲ್ಲರೂ ಸರ್ಕಾರಿ ಉದ್ಯೋಗಕ್ಕಾಗಿ ಪ್ರಯತ್ನಿಸುವರೇ ವಿನಾ ಸ್ವತಂತ್ರವಾಗಿ ಆಯಾ ಉದ್ಯೋಗಗಳನ್ನು ಅವಲಂಭಿಸಲು ಸಿದ್ಧರಿಲ್ಲ. ಈ ಸ್ಥಿತಿ ನಮ್ಮ ಕೃಷಿ ಶಿಕ್ಷಣದ ವ್ಯವಸ್ಥೆಯಲ್ಲಿಯೇ ಏನೊ ದೋಷ ಇದೆ; ಕೊರತೆ ಇದೆ ಎಂಬ ನಿರ್ಧಾರಕ್ಕೆ ಬರುವಂತೆ ಮಾಡುತ್ತದೆ.

ಈ ದೋಷ ಅಥವಾ ಲೋಪ ಏನಾಗಿರಬಹುದು? ಈ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು ಅವರು ಪಿ. ಯು. ಸಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ. ಅವರಿಗೆ ಅದರಲ್ಲಿ ಆಸಕ್ತಿ ಇದೆಯೊ, ಇಲ್ಲವೊ ಎಂಬುದನ್ನು ಒರೆ ಹಚ್ಚುವುದರಿಂದಲ್ಲ. ಶಿಕ್ಷಣ ಪಡೆದವರು ಕೃಷಿ ಕುಟುಂಬಕ್ಕೆ ಸೇರದವರಾಗಿರಬಹುದು. ಕೃಷಿಯನ್ನೇ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಳ್ಳಲು ಅಗತ್ಯ ಜಮೀನು ಇಲ್ಲದವರಾಗಿರಬಹುದು

ಇಲ್ಲವೇ ಮತ್ತೆಲ್ಲಿಯೂ ಅವಕಾಶವಿಲ್ಲದೆ ಏನು ಮಾಡಬೇಕೆಂಬುದು ತೋಚದೆ ವಿಧಿಯಿಲ್ಲದೆ ಮಾರ್ಗ ತಪ್ಪಿಬಂದವರಾಗಿರಬಹುದು. ಇಂತಹವರು ಕೃಷಿ ಶಿಕ್ಷಣ ಪಡೆದು ಆ ಕ್ಷೇತ್ರದಲ್ಲಿ ಎಂತಹ ಕ್ರಾಂತಿಕಾರಿ ಬದಲಾವಣೆ ಮಾಡಬಲ್ಲರು ? ಎಲ್ಲರೂ ಸಂಬಂಧಪಟ್ಟ ಇಲಾಖೆಗಳಲ್ಲಿ ಉದ್ಯೋಗ ಪಡೆಯುವುದಕ್ಕಾಗಿ ಪ್ರಯತ್ನಿಸುವರು. ಇದರಿಂದಾಗಿ ಅಲ್ಲೊಬ್ಬರು ಇಲ್ಲೊಬ್ಬರು ಅಪರೂಪವಾಗಿ ಕೃಷಿಯನ್ನು ಉದ್ಯೋಗವನ್ನಾಗಿ ಅವಲಂಬಿಸಿ ಕೃಷಿ ಕ್ಷೇತ್ರದಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಿದ್ದಾರೆ. ಇನ್ನೂ ಬಹುತೇಕಮಟ್ಟಿಗೆ ಹಳೆಯ ಪದ್ಧತಿಯನ್ನೇ ಅನುಸರಿಸುತ್ತಿರುವುದರಿಂದ ಅದೊಂದು ಲಾಭದಾಯಕ ಕೈಗಾರಿಕೆಯಾಗಿ ಬೆಳೆದಿಲ್ಲ. ರೈತರು ಬೆಳೆದ ಪದಾರ್ಥಗಳಿಗೆ ನ್ಯಾಯ ಬೆಲೆ ದೊರಕುವಂತೆ ಮಾಡಿ ಕೃಷಿ ಶಿಕ್ಷಣ ಪಡೆದವರು ಈ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವಂತೆ ಮಾಡಬೇಕು. ಅವರಿಗೆ ಉತ್ತೇಜನ ಕೊಡಬೇಕು. ಕೃಷಿಯನ್ನು ತಮ್ಮ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಂಡವರಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ಅವರನ್ನು ಸಂದರ್ಶಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಿ ಅವರಲ್ಲಿ ಆತ್ಮವಿಶ್ವಾಸ ಹುಟ್ಟುವಂತೆ ಮಾಡಬೇಕು. ಜೊತೆಗೆ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಯನ ನಡೆಸಲು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಕೃಷಿ ಕುಟುಂಬಗಳಿಂದ ಬರುವವರಿಗೆ ಆದ್ಯತೆ ಕೊಡಬೇಕು. ಈ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಬೋಧನೆಗೆ-ಅದೂ ಬೇಕು- ಆದ್ಯತೆ ಕೊಡುವುದಕ್ಕಿಂತ ಪ್ರಾಯೋಗಿಕ ವಿಷಯಗಳಿಗೆ ಹೆಚ್ಚು ಒತ್ತುಕೊಡಬೇಕು. ವ್ಯವಸಾಯ. ತೋಟಗಾರಿಕೆ. ಪಶುಸಂಗೋಪನೆ, ಮೀನುಗಾರಿಕೆ. ಕೋಳಿಸಾಕಾಣಿಕೆ ಇವೇ ಮುಂತಾದ ಉದ್ಯೋಗಗಳ ಹಲವು ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿ ನೇರವಾಗಿ ತೊಡಗಿ ಸ್ವಂತ ಅನುಭವಗಳಿಸುವುದಕ್ಕೆ ಹೆಚ್ಚು ಒತ್ತುಕೊಡಬೇಕು. ಅದೇ ಕ್ರಿಯಾತ್ಮಕ ಶಿಕ್ಷಣ

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ

ಔದ್ಯೋಗಿಕ ಕ್ರಾಂತಿಯ ಮೊದಲು ಇಂಗ್ಲೆಂಡ್ ದೇಶವೂ ಸಂಪತ್ಸಮೃದ್ಧಿಯ ನಾಡಾಗಿರಲಿಲ್ಲ. ಔದ್ಯೋಗಿಕ ಕ್ರಾಂತಿಯ ಫಲವಾಗಿ ಹೊಸ ಹೊಸ ಯಂತ್ರಗಳು ಬಳಕೆಗೆ ಬಂದವು. ಉತ್ಪಾದನಾ ವೆಚ್ಚ ಕಡಿಮೆ ಆಯಿತು. ಸಾಮಾನುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲು ಸಾಧ್ಯವಾಯಿತು. ಇದರಿಂದಾಗಿ ಇಂಗ್ಲಿಷ್ ವ್ಯಾಪಾರಗಾರರು ತಮ್ಮ ಕಾರ್ಖಾನೆಗಳಲ್ಲಿ ತಯಾರಾದ ಸಾಮಾನುಗಳಿಗೆ ಮಾರುಕಟ್ಟೆಗಳನ್ನು ಹುಡುಕಲು ಹೋಗಿ ಬೃಹತ್ ಸಾಮ್ರಾಜ್ಯ ಸ್ಥಾಪಿಸಿದರು. ನಾಡಿನಲ್ಲಿ ಹೊನ್ನಿನ ಹೊಳೆ ಹರಿಯಿತು. ಆದರೆ ಅವರು ನಮ್ಮ ನಾಡಿನಲ್ಲಿ ಅಂದು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕೈಗಾರಿಗಳನ್ನು ಸಂಪೂರ್ಣವಾಗಿ ನಾಶ ಮಾಡಿದರು "ಆಧುನಿಕ ವಿಜ್ಞಾನ. ಯಂತ್ರಶಿಲ್ಪ. ಔದ್ಯೋಗಿಕ ವಿಜ್ಞಾನ ಇವುಗಳ ಅಧ್ಯಯನಕ್ಕೂ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಅವಕಾಶವಿಲ್ಲ" ಎಂದು ಹೇಳುತ್ತಾರೆ. ಕಳೆದ ಎರಡೂವರೆ ಶತಮಾನಗಳ ಅವಧಿಯಲ್ಲಿ ವಿಜ್ಞಾನ. ತಂತ್ರಜ್ಞಾನಗಳು ನಮ್ಮ ಊಹೆಗೂ ಮೀರಿ ಬೆಳೆದಿವೆ. ಅಭಿವೃದ್ಧಿ ಹೊಂದಿರುವ ದೇಶಗಳು ಆ ಮಾರ್ಗದಲ್ಲಿ ದಾಪುಗಾಲು ಹಾಕುತ್ತಿವೆ. ನಾವೂ ಅವರೊಡನೆ ಸಮಸ್ಪರ್ಧಿಗಳಾಗಿ ನಿಂತು ಈ ವಿಶ್ವವ್ಯಾಪೀ ಸ್ಪರ್ಧೆಯಲ್ಲಿ ಓಡಬೇಕಾಗಿದೆ." ನಮ್ಮ

ವಿಜ್ಞಾನಿಗಳಿಲ್ಲ; ತಂತ್ರಜ್ಞಾನಿಗಳಿಲ್ಲ; ಉದ್ಯಮಿಗಳಿಲ್ಲ ಎಂದಲ್ಲ; ಇದ್ದಾರೆ. ಎಷ್ಟು ಜನರು? ಬೆರಳೆಣಿಕೆಯಷ್ಟು. ಈ ಬೃಹತ್ ರಾಷ್ಟ್ರಕ್ಕೆಷ್ಟು ಸಾಕು. ನಮ್ಮಲ್ಲಿ ಎಂಜಿನಿಯರಿಂಗ್ ಕಾಲೇಜುಗಳಿವೆ. ವೈದ್ಯಕೀಯ ಕಾಲೇಜುಗಳಿವೆ. ವಿಜ್ಞಾನ ಪ್ರಯೋಗಾಲಯಗಳಿವೆ; ನಿಜ. ಆದರೆ ಅವುಗಳಿಂದ ಹೊರಬರುತ್ತಿರುವ ಅಭ್ಯರ್ಥಿಗಳ ಶೈಕ್ಷಣಿಕ ಗುಣಮಟ್ಟ ನಮಗೆ ತೃಪ್ತಿತರುವುದೇ? ಇಲ್ಲಿಯೂ ಕೂಡ ಸೈದ್ಧಾಂತಿಕ ವಿಷಯಗಳ ಬೋಧನೆಗೆ ಹೆಚ್ಚು ಒತ್ತು ಕೊಟ್ಟು ಪ್ರಾಯೋಗಿಕ ವಿಷಯಗಳನ್ನು ಅಲಕ್ಷಿಸಿದ್ದಾರೆ. ಈ ರೀತಿಯ ತರಬೇತು ಪಡೆದವರು ಉದ್ಯೋಗದಲ್ಲಿ ತೊಡಗಿದಾಗ ಅವರು ನಿರ್ವಹಿಸಬೇಕಾದ ಜವಾಬ್ದಾರಿ ಅಲ್ಲಿನ ಯಂತ್ರಗಳು ಹೊಸದಾಗಿ ಕಾಣುತ್ತವೆ. ಎಲ್ಲವನ್ನೂ ಅನಂತರವೇ ಅವರು ಪರಿಚಯಿಸಿಕೊಳ್ಳಬೇಕು. ಅವರ ತರಬೇತಿನ ಅವಧಿಯಲ್ಲಿ ಯಂತ್ರಗಳೊಡನೆ ಸಂಪರ್ಕ ಬೆಳೆಸಿಕೊಳ್ಳಲು ಅವಕಾಶವೇ ಇರುವುದಿಲ್ಲ. ಈ ದೃಷ್ಟಿಯಿಂದ ಈ ಶಿಕ್ಷಣ ಸಂಸ್ಥೆಗಳು ಅವರಿಗೆ ಕೊಡುವ ತರಬೇತು ಅಪೂರ್ಣ. ಐ.ಐ.ಟಿ.ಗಳೇನೋ ಸಮರ್ಪಕವಾಗಿ ತರಬೇತು ಮಾಡುತ್ತಿವೆ. ಅಲ್ಲಿ ಶಿಕ್ಷಣ ಮುಗಿಸಿ ಹೊರಬರುವ ವಿದ್ಯಾರ್ಥಿಗಳಿಗೆ ಭಾರತದಲ್ಲಷ್ಟೇ ಅಲ್ಲ ವಿದೇಶಗಳಲ್ಲೂ ಮಾನ್ಯತೆ ಇದೆ

ಶಿಕ್ಷಣ ಸಂಸ್ಥೆಗಳಿಗೂ ಆ ಸಂಸ್ಥೆಗಳಲ್ಲಿ ತಯಾರಾದವರನ್ನು ಸ್ವೀಕರಿಸುವ ಉದ್ಯೋಗಿಕ ಸಂಸ್ಥೆಗಳಿಗೂ ನಿಕಟ ಸಂಬಂಧ ಇಲ್ಲ. ಪಠ್ಯಕ್ರಮ ರೂಪಿಸುವುದರಲ್ಲಿ ಅವರ ಪಾತ್ರವೇನೂ ಇರುವುದಿಲ್ಲ. ಆ ಉದ್ಯಮಗಳಲ್ಲಿ ಕೆಲಸ ಕಲ್ಪಿಸಬೇಕಾದವರಿಗೆ ಏನೇನು ಕೌಶಲಗಳು ಅಗತ್ಯ ಎಂಬುದು ತರಬೇತು ನೀಡುವವರಿಗೆ ತಿಳಿದಿರುವುದಿಲ್ಲ; ತಿಳಿದು ಕೊಳ್ಳುವುದಕ್ಕೆ ಪ್ರಯತ್ನಿಸುವುದೂ ಇಲ್ಲ. ತರಬೇತು ಕಾರ್ಯಕ್ರಮಕ್ಕೂ ಅವಶ್ಯಕತೆಗೂ ನಡುವೆ ಒಂದು ದೊಡ್ಡ ಕಂದರ ಏರ್ಪಟ್ಟು ಈ ಅಭ್ಯರ್ಥಿಗಳನ್ನೂ ಆಯ್ಕೆ ಮಾಡಿಕೊಳ್ಳುವವರು ಅವರು ಸೇವೆಗೆ ಸೇರಿದ ನಂತರವೇ ಅಗತ್ಯ ತರಬೇತು ನೀಡಬೇಕಾಗುವುದು. ಈಗೇನೋ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಸಕ್ತಕ್ಕೆ ಅವಶ್ಯಕವೆನಿಸುವ ಅನೇಕ ಹೊಸ ವಿಷಯಗಳನ್ನು ಪ್ರಾರಂಭಿಸಿದ್ದಾರೆ. ಆದರೆ ಈ ಹೊಸ ವಿಷಯಗಳಿಗೆ ಸಂಬಂಧಿಸಿದಂತೆಯೂ ಕೂಡ ಅನೇಕ ಸಂಸ್ಥೆಗಳಲ್ಲಿ ಪ್ರಾಯೋಗಿಕ ಶಿಕ್ಷಣವನ್ನು ಫಲಪ್ರದವಾಗಿ ನೀಡಲು ನೆರವಾಗುವಂತಹ ಸಲಕರಣೆಗಳಾಗಲಿ, ಯಂತ್ರ ಸಾಮಗ್ರಿಗಳಾಗಲಿ, ಕಡೆಯ ಪಕ್ಷ ಅಗತ್ಯ ಶಿಕ್ಷಣಾರ್ಹತೆಗಳನ್ನು ಹೊಂದಿರುವ ಶಿಕ್ಷಕರನ್ನು ಹೊಂದಿಲ್ಲ. ಈ ಪರಿಸ್ಥಿತಿ ಸುಧಾರಿಸಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕು.

ಅತಿ ಮುಖ್ಯವಾದ ಮತ್ತು ನಾವು ಇದುವರೆಗೆ ಅಲಕ್ಷಿಸಿರುವ ಮತ್ತೊಂದು ವಿಷಯ ಎಂದರೆ ಮಾನವಶಕ್ತಿಯ ತರಬೇತು ಮತ್ತು ವಿನಿಯೋಗ. ನಮ್ಮಲ್ಲಿ ವಿಶೇಷ ಪರಿಣತಿಯನ್ನು ಪಡೆದಿರುವ ವ್ಯಕ್ತಿಗಳು ಬೇಕಾಗುವ ಸ್ಥಾನಗಳಿವೆ. ಆದರೆ ಅರ್ಹ ಜನರಿಲ್ಲ. ಹಾಗೆಯೇ ಬೇರೆ ಬೇರೆ ವಿಷಯಗಳಲ್ಲಿ ವಿಶೇಷ ಪರಿಣತಿ ಪಡೆದಿರುವ ಜನರಿದ್ದಾರೆ: ಅವರಿಗೆ ಉದ್ಯೋಗವಿಲ್ಲ. ಮಾನವ ಶಕ್ತಿಯ ತರಬೇತು ಮತ್ತು ವಿನಿಯೋಗಕ್ಕೆ ಅಗತ್ಯವೂ ಅನುಷ್ಠಾನಸಾಧ್ಯವೂ ಆದ ಯೋಜನೆಯನ್ನು ಆದ್ಯತೆಯ ಮೇಲೆ ರೂಪಿಸಿ ದೇಶದಲ್ಲಿ ಈಗ ಅಸ್ತಿತ್ವದಲ್ಲಿರುವ ಈ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಣದಲ್ಲಿಟ್ಟು, ಪರಿಸ್ಥಿತಿಯನ್ನು ಸುಧಾರಿಸಬೇಕು.

ವಯಸ್ಕರ ಶಿಕ್ಷಣ

ವಿಶ್ವದ ಎಲ್ಲೆಡೆಯಲ್ಲೂ ಅದರಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲಿ ವಯಸ್ಕರ ಶಿಕ್ಷಣ ಎಲ್ಲರ ಗಮನವನ್ನೂ ಸೆಳೆದಿದೆ. ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೊ(UNESCO)ಶೈಕ್ಷಣಿಕವಾಗಿ ಹಿಂದುಳಿದಿರುವ ದೇಶಗಳಲ್ಲಿ ಅನಕ್ಷರತೆಯನ್ನು ನಿರ್ಮೂಲನ ಮಾಡುವುದರಲ್ಲಿ ನೇರವಾಗಿ ತೊಡಗಿಸಿಕೊಂಡಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಪ್ಪತ್ತನೆಯ ಶತಮಾನದ ಅಂತ್ಯದ ವೇಳೆಗೆ ಅನಕ್ಷರತೆಯನ್ನು ತೊಡೆದು ಹಾಕಬೇಕೆಂದು ನಿರ್ಧರಿಸಿದೆ.

ಭಾರತದಲ್ಲಿ ಕೆಲವು ಪ್ರಾಂತ್ಯಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಸಾಕ್ಷರತಾ ಪ್ರಚಾರ ಕಾರ್ಯ ಈ ಶತಮಾನದ ಆದಿಭಾಗದಿಂದಲೇ ಪ್ರಾರಂಭವಾಯಿತು. ಹಳೆಯ ಮೈಸೂರು ರಾಜ್ಯದಲ್ಲಿ 1913 ರಷ್ಟು ಹಿಂದೆಯೇ ಅನಕ್ಷರತೆಯ ನಿರ್ಮೂಲನ ಕಾರ್ಯಕ್ರಮ ಪ್ರಾರಂಭವಾಗಿತ್ತು. ಬ್ರಿಟಿಷ್ ಪ್ರಾಂತ್ಯಗಳಲ್ಲಿ 1935 ರಲ್ಲಿ ಜನಪ್ರಿಯ ಸರ್ಕಾರಗಳು ಅಧಿಕಾರ ವಹಿಸಿಕೊಂಡವು. ಆ ಅವಧಿಯಲ್ಲಿ ಅಕ್ಷರ ಪ್ರಚಾರ ಭರದಿಂದ ಸಾಗಿತು. ಆದರೆ ಈ ಉತ್ಸಾಹ ದೀರ್ಘಕಾಲ ಉಳಿಯಲಿಲ್ಲ. ಎರಡನೆಯ ಮಹಾಯುದ್ಧ ಪ್ರಾರಂಭವಾದುದರಿಂದ ಈ ಕಾರ್ಯಕ್ರಮ ತಾತ್ಕಾಲಿಕವಾಗಿ ಸ್ಥಗಿತಗೊಂಡಿತು.

ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ಕೆಲವು ಪ್ರಾಧ್ಯಾಪಕರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು 1939 ರಲ್ಲಿ ಮೈಸೂರು ನಗರದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ ಪ್ರಾರಂಭಿಸಿದರು. ಈ ಕಾರ್ಯಕ್ರಮ ಜನಪ್ರಿಯವಾಯಿತು. ಅನೇಕ ಮಹನೀಯರು ಈ ಸಂಸ್ಥೆಯ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡರು. 1942 ರಲ್ಲಿ ಇವರೆಲ್ಲರೂ ಒಟ್ಟುಗೂಡಿ ಆಚಾರ್ಯ ಬಿ.ಎಂ.ಶ್ರೀ ಅವರ ಮಾರ್ಗದರ್ಶನದಲ್ಲಿ "ಅಕ್ಷರ ಪ್ರಚಾರ ಸಮಿತಿ" ಪ್ರಾರಂಭಿಸಿದರು. ಇದೇ ಮೈಸೂರು ವಯಸ್ಕರ ಶಿಕ್ಷಣ ಸಮಿತಿ. ಈಗ ಇದರ ಹೆಸರು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಎಂದಾಗಿದೆ. ಈ ಸಮಿತಿ ಮಾಡಿದ ಕೆಲಸ ಸ್ತುತ್ಯರ್ಹ. ಅದು ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದರ ಜೊತೆಗೆ ಅವರಲ್ಲಿ ಅರಿವು ಮೂಡಿಸಿ ಅವರು ಕ್ರಿಯಾಶೀಲರಾಗುವಂತೆ ಮಾಡಲು ಓದುಬರಹ ಕಲಿಸುವುದರ ಜೊತೆಗೆ ನವಸಾಕ್ಷರರಿಗೆ ಅವರ ಅಭಿರುಚಿಗೆ ತಕ್ಕಂತೆ ಹಲವು ವಿಷಯಗಳನ್ನು ಕುರಿತು ರಚಿಸಿದ ಪುಸ್ತಕಗಳ ಪ್ರಕಟಣೆ, ಪ್ರಚಾರೋಪನ್ಯಾಸ, ಅವರಿಗಾಗಿಯೇ ಸಿದ್ಧಪಡಿಸಿದ ಚಲನಚಿತ್ರ ಪ್ರದರ್ಶನ, ಪುಸ್ತಕ ಭಂಡಾರಗಳ ಪ್ರಾರಂಭ, ಬೆಳಕು ಪತ್ರಿಕೆಯ ಮೂಲಕ ಸುದ್ದಿ ಪ್ರಚಾರ ಮತ್ತು 'ರೀಡರ್ಸ್ ಡೈಜೆಸ್ಟ್' ಮಾದರಿಯ 'ಪುಸ್ತಕ ಪ್ರಪಂಚ' ಪ್ರಕಟಣೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿತ್ತು. ಸಮಿತಿಯ ಮಹತ್ಸಾಧನೆ ಎಂದರೆ ಡೆನ್ಮಾರ್ಕಿನ ಜನತಾ ಕಾಲೇಜುಗಳ ಸಂಘಟನೆಯ ಸಹಯೋಗದೊಡನೆ ಪ್ರಾರಂಭಿಸಿದ ವಿದ್ಯಾಪೀಠಗಳು.

1978ರ ಅಕ್ಟೋಬರ್ ೨ ಭಾರತದ ಶಿಕ್ಷಣ ಇತಿಹಾಸದಲ್ಲೊಂದು ಮೈಲಿಗಲ್ಲು. ಬಹು ಸಂಖ್ಯೆಯ ಅನಕ್ಷರಸ್ಥರಿರುವುದು ಪ್ರಜಾಪ್ರಭುತ್ವದ ಯಶಸ್ಸಿಗೆ ಅಡ್ಡಿ ಎಂದು ಭಾವಿಸಿ ಕೇಂದ್ರ ಸರ್ಕಾರ ಆರು ವರ್ಷಗಳ ಅವಧಿಯಲ್ಲಿ 15 ರಿಂದ 35 ವರ್ಷ ವಯೋಮಿತಿಯಲ್ಲಿರುವ 10 ಕೋಟಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಯೋಜನೆ

ರೂಪಿಸಿ ರಾಷ್ಟ್ರಾದ್ಯಂತ ಆ ಯೋಜನೆಯನ್ನು ಅಂದು ಪ್ರಾರಂಭಿಸಿತು. ಪ್ರಾರಂಭದಲ್ಲಿ ಅತ್ಯುತ್ಸಾಹ ಕಂಡು ಬಂದಿತು. ಆದರೆ ಈ ಉತ್ಸಾಹ ದೀರ್ಘಕಾಲ ಉಳಿಯಲಿಲ್ಲ.

ಅನಕ್ಷರತೆ ನಮಗೊಂದು ಶಾಪವಾಗಿದೆ. 1991ರ ಜನಗಣತಿಯಂತೆ ದೇಶದಲ್ಲಿ ಅಕ್ಷರಸ್ಥರ ಪ್ರಮಾಣ ಶೇಕಡ.... ರಷ್ಟಿದ್ದೂ ಗಣನೀಯ ಪ್ರಮಾಣದಲ್ಲಿ ಹೆಚ್ಚಿದ್ದರೂ ಅನಕ್ಷರಸ್ಥರ ಸಂಖ್ಯಾದೃಷ್ಟಿಯಿಂದ ನೋಡಿದರೆ ಅದೊಂದು ಬೃಹತ್ ಸಮಸ್ಯೆಯಾಗಿಯೇ ಪರಿಣಮಿಸಿದೆ. ಪ್ರಾಥಮಿಕ ಶಿಕ್ಷಣವನ್ನು ಮುಗಿಸದೆ ಶಾಲೆಗೆ ಸೇರಿದ ಒಂದೆರಡು ವರ್ಷಗಳಲ್ಲಿಯೇ ಶಾಲೆ ಬಿಟ್ಟು ಅನಕ್ಷರಸ್ಥರಾಗಿ ಈಗಾಗಲೇ ಇರುವ ಅನಕ್ಷರಸ್ಥರ ದಂಡನ್ನು ಹೆಚ್ಚಿಸುತ್ತಿದ್ದಾರೆ. ಇವರ ಜೊತೆಗೆ ಶಾಲೆಗೆ ಹೋಗದಿರುವ ಮಕ್ಕಳೂ ಗಣನೀಯ ಪ್ರಮಾಣದಲ್ಲಿ ಇದ್ದಾರೆ. ಇವರೂ ಅನಕ್ಷರಸ್ಥರ ಸೈನ್ಯವನ್ನು ಹೆಚ್ಚಿಸುವರು. ಕಳೆದ ಎರಡು ವರ್ಷಗಳಿಂದ ಅನಕ್ಷರತೆಯನ್ನು ನಿರ್ಮೂಲ ಮಾಡಲು ಸ್ಥಿರ ಸಂಕಲ್ಪ ಮಾಡಿದಂತಿದೆ. ವಯಸ್ಕರ ಶಿಕ್ಷಣ ಯೋಜನೆಯ ಜೊತೆಗೆ ಶಾಲೆಯ ಹೊರಗೇ ಉಳಿದಿರುವ ಮತ್ತು ಕನಿಷ್ಠ ನಾಲ್ಕು ವರ್ಷದ ಪ್ರಾಥಮಿಕ ಶಿಕ್ಷಣವನ್ನಾದರೂ ಮುಗಿಸದೆ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣವನ್ನು ರೂಪಿಸಿ ಎರಡನ್ನೂ ಒಟ್ಟಿಗೆ ಕಾರ್ಯರೂಪಕ್ಕೆ ತಂದರರೆ ಮಾತ್ರ 20ನೇ ಶತಮಾನದ ಅಂತ್ಯದ ವೇಳೆಗೆ ಅನಕ್ಷರತೆಯನ್ನು ತೊಡೆದು ಹಾಕಲು ಸಾಧ್ಯ. ಇಲ್ಲದಿದ್ದರೆ 20ನೇ ಶತಮಾನದ ಅಂತ್ಯದ ವೇಳೆಗೆ ವಿಶ್ವದಲ್ಲಿ ಭಾರತವೊಂದೇ ಅತಿ ಹೆಚ್ಚಿನ ಸಂಖ್ಯೆಯ ಅನಕ್ಷರಸ್ಥರಿಂದ ಕೂಡಿದ ದೇಶವಾಗಿ ಉಳಿಯುವುದು. ಹಾಗಾಗಬಾರದೆಂದೇ ನಾವು ಶ್ರಮಿಸುತ್ತಿದ್ದೇವೆ.

" ಶಿಕ್ಷಣ ರಂಗದಲ್ಲಿ ಬಾಲ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಗಳು ತುಂಬ ಕಠಿಣವಾದ ಹಂತಗಳಾಗಿವೆ. ಎರಡರ ಸಮಸ್ಯೆಗಳು ಸ್ವರೂಪತಃ ಭಿನ್ನವಾದುವಾಗಿವೆ. ನಾದ ಮಾಧುರ್ಯದ ಮೂಲಕ, ಕಲ್ಪನಾತ್ಮಕ ಹಾಗೂ ವಿನೋದಾತ್ಮಕವಾದ ಭಾವಗೀತೆ, ಕಥೆ, ಚಿತ್ರ ಮೊದಲಾದ ಸಾಹಿತ್ಯ ಪ್ರಕಾರಗಳ ಮೂಲಕ ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ಹೊಗರುಗೊಳಿಸುವುದು ಬಾಲ ಶಿಕ್ಷಣದ ಗುರಿಯಾದರೆ, ಅಲಂಕಾರಗಳ ಧಾಳಿಯಿಂದ ವಿಮುಕ್ತವಾದ, ಗಡಸು ಶೈಲಿಯಿಂದ ದೂರವಾದ ಜಟಿಲವಲ್ಲದ ವಿಚಾರಸರಣಿಯಿಂದ ಕೂಡಿದ ಲೇಖನಗಳ ಮೂಲಕ ಬುದ್ಧಿ ಭಾವಗಳನ್ನು ಹರಿತಗೊಳಿಸುವುದೇ ವಯಸ್ಕ ಶಿಕ್ಷಣದ ಧ್ಯೇಯವಾಗಿರುತ್ತದೆ.... ವಯಸ್ಕನ ಬುದ್ಧಿ ಮನಸ್ಸುಗಳು ಪ್ರಸ್ಫುಟಗೊಂಡಿರುತ್ತವೆ. ವಯಸ್ಕ ಸಾಕ್ಷರನಲ್ಲದ ಲೋಕಾನುಭವಿ, ತಿಳುವಳಿಕಸ್ಥ. ಜೊತೆಗೆ ಜೀವನ ಜಂಜಾಟದಲ್ಲಿ ಸಂಸಾರದ ಸಂಕಷ್ಟದಲ್ಲಿ ಬೆಂದು ಬೇಗುದಿ ಗೊಂಡವನು. ಸಾಮಾನ್ಯವಾಗಿ ವಯಸ್ಕ ಶಿಕ್ಷಣಾರ್ಥಿಗಳು ಬಡವರು, ಹಳ್ಳಿಗರು, ಕಾರ್ಮಿಕರು ಎಂಬುದನ್ನು ಸಾಹಿತ್ಯ ನಿರ್ಮಾತೃಗಳು ಮರೆಯಬಾರದು" ಈ ಏಳು ವಾಕ್ಯದಲ್ಲಿ ದೇಜಗೌ ಅವರು ವಯಸ್ಕರ ಶಿಕ್ಷಣದಲ್ಲಿ ಅನುಸರಿಸಬೇಕಾದ ಪದ್ಧತಿ ಮತ್ತು ಅವರಿಗೆ ಎಂತಹ ಸಾಹಿತ್ಯ ರಚಿಸಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯೊಡನೆಯ ಅವರ ದೀರ್ಘಕಾಲದ ಸಂಪರ್ಕದಿಂದ ಪಡೆದ ಅನುಭವದ ಮಾತುಗಳು ಇವು.

ವಯಸ್ಕನಿಗೆ ಲೋಕಾನುಭವವಿದೆ ಶಬ್ದಸಂಪತ್ತಿದೆ. ಆತ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು, ತನ್ನ ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ತನ್ನದೇ ಆದ ಭಾಷೆಯಲ್ಲಿ ಹೇಳಬಹುದು. ಆ ಭಾಷೆ ನಮಗೆ ಒರಟಾಗಿ ಕಾಣಬಹುದು. ಆದರೆ ಆ ಮಾತುಗಳಲ್ಲಿ ಪೂರ್ಣ ಅರ್ಥವಿದೆ. ನಾಗರಿಕ ಸೌಕರ್ಯಗಳು, ಸೌಲಭ್ಯಗಳು, ಹಳ್ಳಿ ಹಳ್ಳಿಗೂ ಅತಿ ವೇಗದಿಂದ ಧಾವಿಸುತ್ತಿರುವ ಈ ಕಾಲದಲ್ಲಿ ಆಕಾಶವಾಣಿ, ಸಿನಿಮಾ ಮತ್ತು ದೂರದರ್ಶನ ಮೊದಲಾದ ಸಮೂಹ ಮಾಧ್ಯಮ ಕದು ಬಡವರನ್ನೂ ತಲುಪುತ್ತಿರುವಾಗ ಗ್ರಾಮೀಣ ಪ್ರದೇಶದ ಜನರ ಬುದ್ಧಿ ಮನಸ್ಸುಗಳು ವಿಕಾಸಗೊಂಡು, "ಅನುಭವ ಹುಲುಸಾಗಿ, ಅವನ ತಿಳಿವಳಿಕೆ ಅಗಲವಾಗಿ ಬೆಳೆದಿರುತ್ತದೆ. ರಾಜಕೀಯದ ಸೋಂಕು ಮನೆಮನೆಗೂ ಹರಡಿದ್ದರಿಂದ ಜನಸಮುದಾಯದ ಮನಸ್ಸು ಬಹಿರ್ಮುಖವಾಗಿ, ಹೊಸ ಸ್ಫೂರ್ತಿ ಪ್ರೇರಣೆಗಳಿಂದ ಉತ್ತೇಜನಗೊಂಡು, ಹೊಸದೃಷ್ಟಿ ಧೋರಣೆಗೆ ಬಾಯ್ದೆರೆದಿದೆ." ಇವುಗಳ ಫಲವಾಗಿ ಆತನ ಬುದ್ಧಿಯ ಮಟ್ಟ ಮೇಲೇರಿದೆ, ಆತ ವಿಷಯಗ್ರಹಿಕೆಯ ಶಕ್ತಿ ಚುರುಕು ಮಾಡಿಕೊಂಡಿದ್ದಾನೆ. ಆತನ ವಿವೇಚನಾ ಸಾಮರ್ಥ್ಯವನ್ನೂ ಬೆಳೆಸಿಕೊಂಡಿದ್ದಾನೆ. "ಆತನ ಆತ್ಮಗೌರವ ಪ್ರಜ್ಞೆ ಜಾಗ್ರತಗೊಂಡಿದೆ." ಪರಿಸ್ಥಿತಿಗನುಗುಣವಾಗಿ ಅವನೂ ಬದಲಾಗುತ್ತಿದ್ದಾನೆ ಎನ್ನುವುದನ್ನು ಮರೆತು ಅವನೊಬ್ಬ ಸಂಸ್ಕಾರ ಹೀನನಾದ ಕನಿಷ್ಠನೆಂಬ ಭಾವನೆಯಿಂದ ವಯಸ್ಕ ಶಿಕ್ಷಣ ರಂಗವನ್ನು ಪ್ರವೇಶಿಸುವುದಾದರೆ ಇಡೀ ಯೋಜನೆಯೇ ಕುಸಿದುಬೀಳುತ್ತದೆ." ಇದು ಅವರ ನಿಲುವು. ಇದು ವಸ್ತುಸ್ಥಿತಿ.

ಗ್ರಾಮೀಣ ಪ್ರದೇಶದ ಜನ ಅನಕ್ಷರಸ್ಥರಾದರೂ ಅಜ್ಞಾನಿಗಳಲ್ಲ. ಸಮೂಹ ಮಾಧ್ಯಮಗಳ ಮೂಲಕ ತಮ್ಮ ಬದುಕಿನ ಮೇಲೆ ಪ್ರಭಾವ ಬೀರುವ, ತಮ್ಮ ಬದುಕನ್ನು ಉತ್ತಮಪಡಿಸಲು ನೆರವಾಗಬಲ್ಲ ವಿಷಯಗಳನ್ನು ಕೇಳಿಯೋ, ಇತರರಿಂದ ಓದಿಸಿಕೇಳಿಯೋ ತಿಳಿದುಕೊಳ್ಳುವ ಆಸಕ್ತಿ ಅವರಲ್ಲಿ ಪ್ರಬಲವಾಗಿದೆ. "ಏನಪ್ಪ ಪೇಪರಿನಲ್ಲಿ ಹೊಸ ಸುದ್ದಿ? ನಾನೂ ತಿಳ್ಕೊತೀನಿ ನನಗೆ 'ಒಸಿ ಓದಿ ಹೇಳಪ್ಪ' ಎಂಬ ಸಾಮಾನ್ಯ ಮಾತುಗಳನ್ನು ಕೇಳುತ್ತೇವೆ. ಅಂದ ಮೇಲೆ ಅವನು ಜಾಗ್ರತಗೊಂಡಿದ್ದಾನೆ. ಆದುದರಿಂದ ಅವನಿಗೆ ಏನೂ ತಿಳಿಯದು; ಅವನು ದಡ್ಡ ಎಂಬ ಭಾವನೆಯಿಂದ ಅವನನ್ನು ಸಂಪರ್ಕಿಸಿ ಓದು ಬರಹ ಕಲಿಯುವಂತೆ ಅವನನ್ನು ಪ್ರಚೋದಿಸಲು ಪ್ರಯತ್ನಿಸಿದರೆ ನಾವು ಮೂರ್ಖರಾಗುತ್ತೇವೆ. ಅವನ ಉದ್ಧಾರಕ್ಕಾಗಿ ನಾವು ಪ್ರಯತ್ನಿಸುತ್ತಿದ್ದೇವೆ ಎಂಬ ಭಾವನೆಯಿಂದ ಅವನನ್ನು ಸಮೀಪಿಸಿದರೆ ಅವನು ನಮ್ಮಿಂದ ದೂರ ಸರಿಯುತ್ತಾನೆ. ಅವನ ಸ್ನೇಹಿತರಂತೆ ಅವನ ಸಮಾನಸ್ಕಂಧರಂತೆ ಹಳ್ಳಿಯ ವಾತಾವರಣ ಮತ್ತು ಜೀವನ ಕ್ರಮವನ್ನು ಅರಿತುಕೊಂಡು ಆತನೊಡನೆ ವ್ಯವಹರಿಸಿದರೆ ಮಾತ್ರ ನಮಗೆ ಗೆಲುವು. ನಾವು ಅವರೊಡನೆ ಸಂಭಾಷಿಸುವಾಗ ನಾವು ಮೇಲ್ಮಟ್ಟದ ಜನ. ಜಗಲಿಗಳ ಮೇಲೆ ಕುಳಿತರೆ ನಮ್ಮ ಬಟ್ಟೆಗಳು ಕೊಳೆಯಾಗುವುವು. ಎಂಬ ಭಾವನೆಗಳು ಇಣುಕು ಹಾಕಿದರೂ ನಾವು ನಮ್ಮ ಪ್ರಯತ್ನದಲ್ಲಿ ಸೋಲುವೆವು.

ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾವು ಗಮನಿಸಬೇಕಾದ ಮತ್ತೊಂದು ಅತಿ ಮುಖ್ಯವಾದ ಅಂಶ ಎಂದರೆ ಅವರು ಶಿಕ್ಷಣ ಕೇಂದ್ರಕ್ಕೆ ಬಂದ ಕೂಡಲೆ ಅವರನ್ನು ಓದಲು

ಅಥವಾ ಬರೆಯಲು ತೊಡಗಿಸುವುದು ಅವರಲ್ಲಿ ಬೇಸರಿಕೆ ಉಂಟುಮಾಡುತ್ತದೆ. ದಿನವೆಲ್ಲ ದುಡಿದು ಬೇಸತ್ತು ಬಂದವರಿಗೆ ಅವರ ಮನಸ್ಸನ್ನು ಉಲ್ಲಾಸಗೊಳಿಸದೆ, ಓದುಬರಹ ಕಲಿಯಲು ಸಿದ್ಧವಾಗುವಂತೆ ಅವರ ಮನಸ್ಸನ್ನು ಸಿದ್ಧಪಡಿಸದೆ ಹೋದರೆ ನಮ್ಮ ಪ್ರಯತ್ನದಲ್ಲಿ ನಾವು ಮುಗ್ಗರಿಸುತ್ತೇವೆ. ನಮ್ಮ ಉದ್ದೇಶ ಕೇವಲ ಓದುಬರಹ ಕಲಿಸುವುದಷ್ಟೇ ಅಲ್ಲ ಅವರಲ್ಲಿ ಅರಿವು ಮೂಡಿಸಬೇಕು; ಅವರನ್ನು ಕ್ರಿಯಾಶೀಲರನ್ನಾಗಿ ಮಾಡಬೇಕು. ಈ ಉದ್ದೇಶ ಸಾಧನೆಯಾಗಬೇಕಾದರೆ ನಾವು ಅನುಸರಿಸುವ ಮಾರ್ಗವು ಅರ್ಥಪೂರ್ಣವೂ ಪರಿಣಾಮಕಾರಿಯೂ ಆಗಿರಬೇಕು. ವಯಸ್ಕರ ಶಿಕ್ಷಣ ಕೇಂದ್ರ ಗ್ರಾಮದ ಸಾಂಸ್ಕೃತಿಕ ಕೇಂದ್ರವೂ ಆಗಬೇಕು. ಸರ್ಕಾರದ ಬೇರೆ ಬೇರೆ ಇಲಾಖೆಯ ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಅಧಿಕಾರಿಗಳು, ಮತ್ತು ಬ್ಯಾಂಕಿನ ಅಧಿಕಾರಿಗಳು ತಮ್ಮ ಪ್ರವಾಸ ಕಾಲದಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ತಪ್ಪದೆ ಭೇಟಿ ನೀಡಿ ತಮ್ಮ ತಮ್ಮ ಇಲಾಖೆಗಳು ಶ್ರೀಸಾಮಾನ್ಯನ ಕ್ಷೇಮಕ್ಕಾಗಿ ರೂಪಿಸಿಕೊಂಡಿರುವ ಯೋಜನೆಗಳು, ಅವುಗಳಿಂದ ಅವರಿಗೆ ದೊರಕುವ ಸೌಲಭ್ಯಗಳು, ಅವುಗಳನ್ನು ಪಡೆಯಬಹುದಾದ ರೀತಿ ಮುಂತಾದವುಗಳನ್ನು ಅವರೊಡನೆ ಮುಕ್ತವಾಗಿ ಚರ್ಚಿಸಿ ಅವರು ಅವುಗಳನ್ನು ಪಡೆದುಕೊಳ್ಳಲು ನೆರವು ನೀಡಬೇಕು. ಈ ರೀತಿಯಲ್ಲಿ ಅನಕ್ಷರಸ್ಥ ವಯಸ್ಕರೊಡನೆ ಮಧುರ ಬಾಂಧವ್ಯ ಬೆಳೆಸುವುದರ ಮೂಲಕ ಅವರಲ್ಲಿ ಓದು ಬರಹ ಕಲಿಯುವುದರ ಬಗ್ಗೆ ಆಸಕ್ತಿ ಹುಟ್ಟಿಸಬೇಕು. ಈ ಉದ್ದೇಶಕ್ಕಾಗಿ ಸಮೂಹ ಮಾಧ್ಯಮಗಳನ್ನೂ ಬಳಸಿಕೊಳ್ಳಬೇಕು. ಗ್ರಾಮಕಲೆಗಳು, ನಾಟಕಗಳು, ಕಾವ್ಯವಾಚನ, ಹರಿಕಥೆ ಮುಂತಾದವುಗಳನ್ನು ಬಳಸಿಕೊಳ್ಳಬೇಕು. ಹಿಂದೆ ಕುಮಾರವ್ಯಾಸಭಾರತ, ಜೈಮಿನಿ ಭಾರತ, ನಳಚರಿತ್ರೆ, ಅರ್ಜುನನ ಜೋಗಿ ಹಾಡುಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜನಪ್ರಿಯವಾಗಿದ್ದವು. ಇಂದೂ ಅವು ತಮ್ಮ ಜನಪ್ರಿಯತೆಯನ್ನು ಉಳಿಸಿಕೊಂಡಿವೆ. ಆದರೆ ಅವುಗಳನ್ನು ವಾಚನ ಮಾಡುವ ಜನರೇ ವಿರಳರಾಗಿದ್ದಾರೆ. ಅನಕ್ಷರಸ್ಥರನ್ನು ಆಕರ್ಷಿಸಲು ಕಾವ್ಯವಾಚನವನ್ನು ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳಬೇಕು.

ವಯಸ್ಕರ ಶಿಕ್ಷಣ ತರಗತಿಗಳಿಗೆ ಮತ್ತು ನವಸಾಕ್ಷರರಿಗೆ ಸಾಹಿತ್ಯ ನಿರ್ಮಾಣ

ವಯಸ್ಕರಿಗೆ ಕಲಿಕೆಯ ಸಾಮಗ್ರಿಗಳನ್ನು ರಚಿಸುವುದು ಕಷ್ಟದ ಕೆಲಸವೇ. ಅವರು ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಬಳಸುವ ಭಾಷೆಯನ್ನೇ, ಮಾತುಗಳನ್ನೇ ಉಪಯೋಗಿಸಬೇಕು. ಅವರಿಗೆ ತಮ್ಮ ಪರಿಸರದ ಪರಿಚಯ ಚೆನ್ನಾಗಿಯೇ ಇರುವುದರಿಂದ ಆ ಪರಿಸರವನ್ನೇ ಆಧಾರವಾಗಿಟ್ಟು ಕೊಂಡು ಪಾಠಗಳನ್ನು ರಚಿಸಬೇಕು. ಪದಗಳ ಪರಿಚಯದಿಂದ ಪ್ರಾರಂಭಿಸಿ ನಂತರ ಹಂತ ಹಂತವಾಗಿ ಎರಡು, ಮೂರು, ನಾಲ್ಕು ಪದಗಳಿಂದ ಕೂಡಿದ ವಾಕ್ಯಗಳನ್ನು ಹಂತ ಹಂತವಾಗಿ ಪರಿಚಯಿಸಬೇಕು. ಉದಾಹರಣೆಗೆ:

ಹಸು, ಕರು
ಈ ಹಸು ಬಿಳಿಯದು
ಆ ಕರು ಚುಂಚ

ಅದು ಮರಿಯಪ್ಪನ ಹಸು
ಅವನಿಗೆ ಅದನ್ನು ಕಂಡರೆ ತುಂಬ ಪ್ರೀತಿ.

ಹೀಗೆ ಹಸುವನ್ನೇ ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ನಾಲ್ಕಾರು ಪಾಠಗಳನ್ನು ಹೆಣೆಯಬಹುದು. ನಾವು ರಚಿಸುವ ಕಲಿಕೆಯ ಸಾಮಗ್ರಿಗಳು ಗ್ರಾಮೀಣ ಜನರ ಜೀವನದೊಡನೆ ಹೊಸೆದುಕೊಂಡಿರುವ ಪ್ರಾಣಿಗಳಿಗೆ, ಘಟನೆಗಳಿಗೆ ಸಂಬಂಧಿಸಿದವುಗಳಾಗಿದ್ದರೆ ಅವರಿಗೆ ಕಲಿಕೆಯಲ್ಲಿ ಆಸಕ್ತಿ ಹುಟ್ಟುತ್ತದೆ. ಕೃತಕತೆಯನ್ನು ನಿವಾರಿಸಬೇಕು.

ನವಸಾಕ್ಷರರಿಗೆ ಓದುವ ಸಾಮಗ್ರಿಗಳನ್ನು ರಚಿಸುವಾಗಲೂ ಅಷ್ಟೆ. ಅವರ ಆಸಕ್ತಿಯನ್ನು ಕೆರಳಿಸುವಂತಹ ಸಾಹಿತ್ಯವನ್ನು ರಚಿಸಬೇಕು. ಈ ಸಾಹಿತ್ಯದಲ್ಲಿ ಎರಡು ವಿಧ: (1) ಪೌರಾಣಿಕ ಕಥೆಗಳಿಗೆ ಸಂಬಂಧಿಸಿದುದು ; (2) ಲೌಕಿಕ ವಿಷಯಗಳಿಗೆ ಸಂಬಂಧಿಸಿದುದು. ಅಂದರೆ ವ್ಯವಸಾಯ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಕೋಳಿ ಸಾಕಣೆಕೆ, ಜೇನು ಸಾಕಣೆಕೆ ಮುಂತಾದವುಗಳನ್ನು ಕುರಿತ ಸುಲಭವೂ, ಸರಳವೂ ಆದ ಭಾಷೆಯಲ್ಲಿ ಓದುವ ಸಾಮಗ್ರಿಗಳನ್ನು ರಚಿಸಿ ಪ್ರಕಟಿಸಿ ನವಸಾಕ್ಷರರಿಗೆ ಸುಲಭವಾಗಿ ದೊರೆಯುವಂತೆ ಮಾಡುವುದು. ಸಾಕ್ಷರೋತ್ತರ ಕಾರ್ಯಕ್ರಮಗಳು ಅಕ್ಷರ ಪ್ರಚಾರ ಕಾರ್ಯಕ್ರಮಗಳಿಗಿಂತ ಮುಖ್ಯವಾದವು. ಆ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಡಬೇಕು.

ವಯಸ್ಕ ಶಿಕ್ಷಣ ಯೋಜನೆ ಒಮ್ಮೆ ಪ್ರಾರಂಭಿಸಿ ಮುಕ್ತಾಯ ಮಾಡುವಂತಹುದಲ್ಲ. ಅದು ನಿರಂತರವಾಗಿ ಸಾಗುವುದು. ಹುಟ್ಟಿದಂದಿನಿಂದ ಸಾಯುವವರೆಗೂ ವ್ಯಕ್ತಿ ಒಂದಲ್ಲ ಒಂದು ರೀತಿಯಲ್ಲಿ ಕಲಿಯುತ್ತ ತನ್ನ ಜ್ಞಾನದ ಆಳ ವಿಸ್ತಾರಗಳನ್ನು ಹೆಚ್ಚಿಸಿ ಕೊಳ್ಳುತ್ತಲೇ ಇರುತ್ತಾನೆ. ಈ ದೃಷ್ಟಿಯಿಂದ ಈ ಕೇಂದ್ರಗಳು ಮುಂದುವರಿದ ಶಿಕ್ಷಣದ ಕೇಂದ್ರಗಳಾಗಿ ಹೊಸ ಹೆಸರು ಪಡೆದು ಮುಂದುವರಿಯುವುವು.

ವಿದ್ಯಾಪೀಠಗಳು

ವಿದ್ಯಾಪೀಠಗಳು ಅಥವಾ ಜನತಾ ಕಾಲೇಜುಗಳ ಒಂದು ರೀತಿಯಲ್ಲಿ ವಿನೂತನ ಸಂಸ್ಥೆಗಳು. ಜನರಿಗೆ ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಒದಗಿಸಿ ತರಬೇತು ವ್ಯವಸ್ಥೆ ಮಾಡಿ ಅವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿಯುವಂತೆ ಮಾಡುವುದೇ ಇವುಗಳ ಗುರಿ.

ಹತ್ತೊಂಬತ್ತನೆ ಶತಮಾನದ ಆದಿಭಾಗದಲ್ಲಿ ಡೆನ್ಮಾರ್ಕ್ ಮತ್ತು ನಾರ್ವೆ ದೇಶಗಳು ಹಲವು ಸಂಕಷ್ಟಗಳಿಗೆ ಗುರಿಯಾದವು. ಅವುಗಳ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿತ್ತು. ಇಂತಹ ಪರಿಸ್ಥಿತಿಯಿಂದ ದೇಶವನ್ನು ಪಾರು ಮಾಡುವುದು ಹೇಗೆ ಎಂಬ ಚಿಂತೆ ಎಲ್ಲರನ್ನೂ ಆವರಿಸಿತು. ಆ ಕೆಲಸ ಮಾಡಲು ಡೆನ್ಮಾರ್ಕ್‌ನಲ್ಲಿ ಆಗೊಬ್ಬ ಪ್ರವಾದಿ ಎನ್. ಎಫ್. ಎಸ್. ಗ್ರುಂಟ್‌ವಿಗ್ ಎಂಬ ವ್ಯಕ್ತಿ ಮುಂದೆ ಬಂದ. "ಡೆನ್ಮಾರ್ಕಿನ ನವೋದಯಕ್ಕೆ ಅವನೇ ಮುಖ್ಯಕಾರಣ ......ವಯಸ್ಕರಿಗೆ ಉಚಿತವಾದ ಮತ್ತು ಪರಿಣಾಮಕಾರಿಯಾದ ಶಿಕ್ಷಣವನ್ನು ವ್ಯವಸ್ಥೆಗೊಳಿಸುವುದರಿಂದ ಮಾತ್ರ ನಾಡಿನ ಪ್ರಗತಿ ಸಾಧ್ಯವೆಂದು ಅವನು ಸಾರಿದನು. ಇದರ ಫಲವಾಗಿ ಆ ದೇಶದಲ್ಲಿ ಜನತಾ

ಕಾಲೇಜುಗಳು ಪ್ರಾರಂಭವಾದವು. ರೈತರು ವರ್ಷದಲ್ಲಿ ಐದು ತಿಂಗಳ ಕಾಲ ತಮ್ಮ ಹೊಲಗದ್ದೆಗಳನ್ನು ತೊರೆದು ಈ ಶಿಕ್ಷಣ ಕೇಂದ್ರದಲ್ಲಿ ವಿಶೇಷ ಸ್ಫೂರ್ತಿಯನ್ನು ಪಡೆಯಲವಕಾಶವಾಯಿತು.'' ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್‌ಗಳಲ್ಲಿ ಈ ರೀತಿಯ ಜನತಾ ಕಾಲೇಜುಗಳು ಅಸ್ತಿತ್ವದಲ್ಲಿವೆ. ಅವು ಜನತೆಯ ಮೇಲೆ ಶಾಶ್ವತವಾದ ಪ್ರಭಾವ ಬೀರಿವೆ. ಡೆನ್ಮಾರ್ಕ್ ಒಂದರಲ್ಲಿಯೇ 60 ಜನತಾ ಕಾಲೇಜುಗಳಿವೆ. ಈ ದೇಶಗಳಲ್ಲಿ ಜನರು ತಮ್ಮ ಜ್ಞಾನ ದಾಹವನ್ನು ತಣಿಸಿಕೊಳ್ಳಲು ಸ್ವಇಚ್ಛೆಯಿಂದ ಈ ಕಾಲೇಜುಗಳಲ್ಲಿ ಕೆಲವು ತಿಂಗಳು ಕಾಲ ಇರಲು ಬರುವರು. ಕೆಲವು ಸಂಸ್ಥೆಗಳಲ್ಲಿ ಶುಲ್ಕವನ್ನೂ ವಿಧಿಸುವರು. ವಿದೇಶಗಳಿಂದಲೂ ಶಿಕ್ಷಣಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುವರು. ಬೋಧಕರಿಗೆ ಆಡಳಿತ ಸೂತ್ರ ಹಿಡಿದಿರುವವರಿಗೆ ಪೂರ್ಣ ಸ್ವಾತಂತ್ರ್ಯ ಇದೆ.

ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿ ಡೆನ್ಮಾರ್ಕ್‌ನ ಜನತಾ ಕಾಲೇಜುಗಳ ಸಂಘಟನೆಯ ಸಹಯೋಗದೊಂದಿಗೆ ಹಳೆಮೈಸೂರು ಪ್ರದೇಶದಲ್ಲಿ ನಂಜನಗೂಡಿನ ಬಳಿ ಒಂದು ವಿದ್ಯಾಪೀಠ, ಮಂಡ್ಯದ ಹತ್ತಿರದ ಶಿವಾರಗುಡ್ಡದಲ್ಲಿ ಒಂದು, ಶಿವಮೊಗ್ಗದ ಗಾಜನೂರಿನಲ್ಲಿ ಒಂದು ಮತ್ತು ಕೆಂಗೇರಿಯ ಬಳಿ ಮಹಿಳೆಯರಿಗಾಗಿ ಒಂದು, ಒಟ್ಟು ಆರು ವಿದ್ಯಾಪೀಠಗಳನ್ನು ಪ್ರಾರಂಭಿಸಿತು. ಡೆನ್ಮಾರ್ಕ್‌ನ ವಿದ್ಯಾಪೀಠಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಹಿರಿಯ ಕಾರ್ಯಕರ್ತರು ಸ್ವಯಂಸೇವಕರಾಗಿ ಬಂದು ಇಲ್ಲಿನ ವಿದ್ಯಾಪೀಠಗಳ ರೂಪುರೇಷೆಗಳನ್ನು ನಿರ್ಧರಿಸಿದರು. ವಯಸ್ಕರ ಸಮಿತಿಯ ಕಾರ್ಯಕರ್ತರು ಡೆನ್ಮಾರ್ಕ್‌ಗೆ ಹೋಗಿ ತರಬೇತು ಪಡೆದು ಬಂದರು. ಈ ಶಿಕ್ಷಣ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಅಕ್ಷರಸ್ಥ ಯುವಕರಿಗೆ ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನ, ಕೋಳಿ ಸಾಕಣೆಕೆಗಳಲ್ಲಿ ತರಬೇತು ನೀಡುವುದರ ಜೊತೆಗೆ ಅವರಿಗೆ ಮುಖಂಡತ್ವದ ತರಬೇತನ್ನೂ ಕೊಡುತ್ತಿದ್ದವು. ವಿದ್ಯಾಪೀಠಗಳ ಕಾರ್ಯಕ್ರಮ ಜನ ಪ್ರಿಯವಾಗಿತ್ತು. ಇಂತಹ ವಿದ್ಯಾಪೀಠಗಳನ್ನು ಬೇರೆ ಜಿಲ್ಲೆಗಳಲ್ಲೂ ಪ್ರಾರಂಭಿಸುವ ಪ್ರಯತ್ನವೂ ಆಯಿತು. ಹೊಸ ವಿದ್ಯಾಪೀಠಗಳು ಅಸ್ತಿತ್ವಕ್ಕೆ ಬಂದು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವಷ್ಟರಲ್ಲಿಯೇ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕ್ರಮಗಳೇ ಸ್ಥಗಿತಗೊಂಡವು. ಇಂದು ಸಮಿತಿಯೂ ಅಸ್ತಿತ್ವದಲಿಲ್ಲ. ಅದರ ಕಾರ್ಯಕ್ರಮಗಳ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವವರು ಒಬ್ಬ ಸಾಮಾನ್ಯ ಆಡಳಿತಗಾರರು. ಅವರಿಗೆ ವಯಸ್ಕರ ಶಿಕ್ಷಣದ ರೂಪುರೇಷೆಗಳ ಬಗೆಗಾಗಲಿ, ಅದರ ಹಿಂದಿರುವ ಸೈದ್ಧಾಂತಿಕ ನಿಲುವಿನ ಹಿನ್ನೆಲೆಯಾಗಲಿ, ವಿದ್ಯಾಪೀಠಗಳ ತಾತ್ವಿಕ ವಿಷಯವಾಗಲಿ ಪರಿಚಯವಿಲ್ಲ. ಅಂತಹವರಿಂದ ನಾವೇನನ್ನು ನಿರೀಕ್ಷಿಸಬಹುದು. ವಯಸ್ಕರ ಶಿಕ್ಷಣ ಸಮಿತಿಯ ಗತವೈಭವವನ್ನು ನೆನಪಿಸಿಕೊಳ್ಳುತ್ತ ವರ್ತಮಾನದ ಸ್ಥಿತಿಯನ್ನು ಟೀಕಿಸುತ್ತ ಕಾಲ ಕಳೆಯಬೇಕಾಗಿದೆ. ಸರ್ಕಾರಕ್ಕೂ ಇದರ ಬಗ್ಗೆ ಆಸಕ್ತಿ ಇಲ್ಲ. ಸಮಿತಿಯ ಈ ದುರ್ದೆಶೆಗೆ ಕಾರಣ ಅತೃಪ್ತ ರಾಜಕಾರಣಿಗಳನ್ನು ತೃಪ್ತಿಪಡಿಸುವ ದೃಷ್ಟಿಯಿಂದ ಈ ಸಮಿತಿಯ ಕಾರ್ಯಕ್ರಮಗಳ ಪರಿಚಯವೇ ಇಲ್ಲದವರನ್ನು ಅಧ್ಯಕ್ಷರಾಗಿ ನೇಮಕ ಮಾಡಿದುದು. ಸರ್ಕಾರ ನಿಜಕ್ಕೂ ವಯಸ್ಕರ ಶಿಕ್ಷಣದಲ್ಲಿ ಮತ್ತು ವಿದ್ಯಾಪೀಠಗಳ ಕಾರ್ಯಕ್ರಮದಲ್ಲಿ

ಆಸಕ್ತಿ ಹೊಂದಿದ್ದರೆ ಕೂಡಲೆ ಸಮಿತಿಯನ್ನು ರಚಿಸಿ ಅದನ್ನು ಪುನಶ್ಚೇತನಗೊಳಿಸುವ ಪ್ರಯತ್ನಮಾಡಬೇಕು.

ಸಮಾಜ ಶಿಕ್ಷಣದ ಬಗ್ಗೆಯೂ ಅವರು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ವಯಸ್ಕರ ಶಿಕ್ಷಣಕ್ಕೂ ಸಮಾಜ ಶಿಕ್ಷಣಕ್ಕೂ ಹೆಚ್ಚು ವ್ಯತ್ಯಾಸ ಇಲ್ಲ. ವಯಸ್ಕರ ಶಿಕ್ಷಣ ಓದು ಬರಹ ಕಲಿಸುವುದಕ್ಕೆ ಹೆಚ್ಚು ಒತ್ತುಕೊಟ್ಟರೆ ಸಮಾಜ ಶಿಕ್ಷಣ ಶ್ರೀಸಾಮಾನ್ಯರಲ್ಲಿ ಸಾಮಾನ್ಯ ಪ್ರಜ್ಞೆಯನ್ನು ಬೆಳಸಿ ಚುರುಕುಗೊಳಿಸಲು ಪ್ರಯತ್ನಿಸುತ್ತದೆ. ಎರಡೂ ಪರಸ್ಪರ ಅವಲಂಬಿಗಳು. " ರಾಜಕೀಯ ಆರ್ಥಿಕ ವಿಚಾರಗಳನ್ನೊಳಗೊಂಡ ಸಮಾಜದ ಕ್ಷೇಮ ವಿಕಾಸೋನ್ನತಿಗಳು ಮೂಲತಃ ಅದರಲ್ಲಿನ ವ್ಯಕ್ತಿಗಳನ್ನವಲಂಬಿಸಿದೆ. ಮೂರ್‍ನಾಲ್ಕು ಮಂದಿ ಮುಂದೆ ಬಂದರೆ ಇಡೀ ಸಮಾಜ ಮುಂದೆ ಬಂದಂತಾಗುವುದಿಲ್ಲ. ಹಿಂದುಳಿದ ಜನತೆಯ ಪ್ರಮಾಣಾನುಸಾರವಾಗಿ ಸಮಾಜವೂ ಹಿಂದುಳಿಯುತ್ತದೆ. ವಿಜ್ಞಾನ ನಾಗಾಲೋಟದಲ್ಲಿ ಧಾವಿಸುತ್ತಿರುವಾಗ ಸಮಾಜ ಪರಿವರ್ತನೆ ಹೊಂದದೆ, ದಿನೇ ದಿನೇ ಹೊಸದಾಗದೆ, ನಿಂತಲ್ಲಿ ನಿಂತಿದ್ದಾದರೆ ಅದು ಶೀಘ್ರವಾಗಿ ಪತನ ಹೊಂದುತ್ತದೆ. " ದೇಜಗೌ ಅವರ ಸ್ವಾನುಭವದ ಮಾತುಗಳಿವು. ಶ್ರೀಸಾಮಾನ್ಯರು ಕ್ಷಣಕ್ಷಣದಲ್ಲೂ ಸಂಭವಿಸುತ್ತಿರುವ ಜ್ಞಾನದ ಸ್ಫೋಟವನ್ನು ಪರಿಚಯಿಸಿಕೊಂಡು ತಮ್ಮ ಮನಸ್ಸಿನ ಮೌಢ್ಯದಿಂದ, ಎಲ್ಲಾರೀತಿಯ ಕಂದಾಚಾರಗಳಿಂದ ಮುಕ್ತರಾಗಿ ವೈಚಾರಿಕತೆಯನ್ನು ಬೆಳೆಸಿಕೊಳ್ಳದಿದ್ದರೆ ಪ್ರಗತಿ ಸಾಧನೆ ಆಗುವುದಿಲ್ಲ. ತಮ್ಮ ದುರ್ದೆಶೆಗೆ ಕಾಣದ ದೈವವನ್ನು ಹೊಣೆಮಾಡಿ ತಮ್ಮನ್ನೆ ಶಪಿಸಿಕೊಳ್ಳುತ್ತ ಪಾಲಿಗೆ ಬಂದದ್ದು ಪರಮಾನ್ನ ಎಂದು ಭಾವಿಸಿ ತಮ್ಮ ಆ ದುರ್ದೆಶೆಯಿಂದ ಪಾರಾಗಲು ಪುರುಷ ಪ್ರಯತ್ನ ಅಗತ್ಯ, ನಾವು ನಮ್ಮ ಈ ದುಃಸ್ಥಿತಿಯಿಂದ ಮುಕ್ತರಾಗಲು ಹೋರಾಡಬೇಕು ಎಂಬುದನ್ನು ಆ ಜನರಲ್ಲಿ ಮೂಡಿಸಬೇಕು. ತಮ್ಮಲ್ಲಿರಬಹುದಾದ ನಿರ್ವೀಣ್ಯತೆಯನ್ನು ಹೊಡೆದೋಡಿಸಿ ವೀರ ಪುರುಷರಾಗಿ ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವಂತೆ ಅವರನ್ನು ಜಾಗೃತ ಗೊಳಿಸಬೇಕು. ಇದೇ ಸಮಾಜ ಶಿಕ್ಷಣದ ಗುರಿ. ಆದರೆ ಇಂದು ಸಮಾಜ ಶಿಕ್ಷಣಾಧಿಕಾರಿಗಳ ಹುದ್ದೆಗಳಿಲ್ಲ ಬಹುಶಃ ಸರ್ಕಾರದ ಭಾವನೆಯಲ್ಲಿ ಅವರ ಅವಶ್ಯಕತೆ ಇಲ್ಲವೆಂದಿರಬಹುದು.

ಹೀಗೆ ದೇಜಗೌ ಅವರ ವಿಚಾರಧಾರೆ ಭಾಷೆ, ಶಿಕ್ಷಣ ಮಾಧ್ಯಮ, ಶಿಕ್ಷಣ ಪದ್ಧತಿ, ಬೋಧನಾ ಕಲೆ, ಶಿಕ್ಷಣ ವೃತ್ತಿ, ವಿಜ್ಞಾನ ತಂತ್ರಜ್ಞಾನ ಶಿಕ್ಷಣ, ವಿದ್ಯಾರ್ಥಿಗಳಲ್ಲಿ ಅಶಿಸ್ತು, ವಯಸ್ಕರ ಶಿಕ್ಷಣ, ಸಮಾಜ ಶಿಕ್ಷಣ ಇವೆಲ್ಲವುಗಳನ್ನೂ ಆವರಿಸಿ ಓತಪ್ರೋತವಾಗಿ ಹರಿಯುತ್ತದೆ. ಯಾವ ವಿಷಯವೇ ಆಗಿರಲಿ ಅವರ ಮಾತು ಮೊನಚು, ನೇರವಾಗಿ ಹೃದಯಕ್ಕೆ ನಾಟುತ್ತದೆ. ಅವರು ರಚಿಸಿರುವ ಗ್ರಂಥಗಳನ್ನು ಓದಿದಾಗಲೇ ಈ ಮಾತಿನ ಸತ್ಯ ಅರಿವಾಗುವುದು.

* * * * *

ದೇಜಗೌ ಮತ್ತು ಸಂಘಸಂಸ್ಥೆಗಳು

ಡಾ. ಪದ್ಮಾಶೇಖರ್

"ನನ್ನೊಬ್ಬನಿಂದಲೇ ಕನ್ನಡದ ಕೆಲಸ ಆಗುತ್ತದೆ ಎಂದು ನಾನು ಖಂಡಿತ ನಂಬಿಕೊಂಡಿಲ್ಲ. ಎಲ್ಲ ಕಡೆಯ ಎಲ್ಲ ಕಾಲೇಜುಗಳಲ್ಲೂ ಇರುವ ಅಧ್ಯಾಪಕ ವರ್ಗ ಮಾತ್ರವಲ್ಲ, ಸಾರ್ವಜನಿಕರೂ ಸಹ ಕನ್ನಡದಲ್ಲಿ ಅಭಿಮಾನ ತಾಳಿ ಅದರ ಬಗ್ಗೆ ಒಂದಿಷ್ಟು ಚಿಂತೆ ಅಂಟಿಸಿಕೊಂಡಿದ್ದಾದರೆ ಕನ್ನಡದ ಕೆಲಸ ತೀವ್ರವಾಗಿ ಗುರಿ ಮುಟ್ಟುತ್ತದೆ"-ಇವು ದೇಜಗೌ ಅವರ ಮಾತುಗಳು. ಸಾಂಘಿಕವಾಗಿ ದುಡಿಯುವುದರಲ್ಲಿನ ಅವರ ನಂಬಿಕೆ ಇಲ್ಲಿ ನಿಚ್ಚಳವಾಗಿದೆ.

ಕನ್ನಡದ ಪ್ರಗತಿಗಾಗಿ ದೇಜಗೌ ಅವರು ಅನೇಕ ಸಂಘಸಂಸ್ಥೆಗಳನ್ನು ಕಟ್ಟಿದ್ದಾರೆ, ಅವುಗಳಲ್ಲಿ ದುಡಿದಿದ್ದಾರೆ, ಕೆಲವನ್ನಂತೂ ಪುನರುತ್ಥಾನಗೊಳಿಸಿದ್ದಾರೆ. ಅವರು ದುಡಿದ ಕಾರಣಕ್ಕಾಗಿ ಕೆಲವಕ್ಕೆ ಖ್ಯಾತಿ, ಗೌರವಗಳು ಲಭ್ಯವಾಗಿವೆ. ಕೆಲವಕ್ಕಂತೂ ಅವರೇ ಪ್ರೇರಕಶಕ್ತಿಯಾಗಿದ್ದಾರೆ. ಮತ್ತೆ ಕೆಲವರಲ್ಲಿ ಅವರು ಸಲಹಾಸೂಚನೆಗಳನ್ನು ಕೊಡುವ ಮಾರ್ಗದರ್ಶಕರಾಗಿದ್ದಾರೆ. ಹೀಗೆ ಹತ್ತು ಹಲವು ಬಗೆಯ ಸಂಘಸಂಸ್ಥೆಗಳಲ್ಲಿ ದೇಜಗೌ ಭಾಗಿಗಳಾಗಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಹೃದಯದಂತಿರುವ ಕನ್ನಡ ಅಧ್ಯಯನ ಸಂಸ್ಥೆ, ದೇಜಗೌ ಅವರು ಕನ್ನಡ ನಾಡುನುಡಿಗಳ ಏಳ್ಗೆಯ ಪ್ರತೀಕವಾಗಿ, ಏಕೀಕರಣದ ಸಂಕೇತವಾಗಿ, ಕರ್ನಾಟಕದ ಸಂಸ್ಕೃತಿಯ ಕೇಂದ್ರವಾಗಿ ಬೆಳೆಯಲೆಂದು ಕಟ್ಟಿದ ಕಾರಣ ಸಂಸ್ಥೆ. ದೇಜಗೌ ಅವರ ಕನ್ನಡದ ಸಾಧನೆಯ ಸಿದ್ಧಿಯ ಕಿರೀಟದಲ್ಲಿ ಇದೊಂದು ಚಿನ್ನದ ಗರಿ.

ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ನೆನಪಿಗಾಗಿ ಕನ್ನಡಕ್ಕೆ ಏನಾದರೂ ಮಾಡಬೇಕೆಂದು ಅಂದಿನ ಕುಲಪತಿ ಡಾ. ಶ್ರೀಮಾಲಿ ಅವರು ಹೇಳಿದಾಗ ದೇಜಗೌ ಅವರ ಮನಸ್ಸಿನಲ್ಲಿ ಅರಳಿದ ಕಲ್ಪನೆಯೇ ಕನ್ನಡ ಅಧ್ಯಯನ ಸಂಸ್ಥೆ. ಕೂಡಲೇ ಹಿಂದುಮುಂದು ನೋಡದೆ ತಮ್ಮ ಮನದಲ್ಲಿ ರೂಪು ತಳೆದ ಈ ಸಂಸ್ಥೆಯ ಯೋಜನೆಯನ್ನು, ಅದರ ವ್ಯಾಪ್ತಿಯನ್ನು ಹಾಗೂ ಅಗತ್ಯವನ್ನು ಅವರಿಗೆ ಮನದಟ್ಟು ಮಾಡಿಕೊಟ್ಟು ಅದನ್ನು ಕಾರ್ಯಗತಗೊಳಿಸಲು ಹಗಲಿರುಳು ದುಡಿಯುವುದಾಗಿ ಭರವಸೆ ಕೊಟ್ಟು, ಕುಲಪತಿಗಳು ನಿಂತಲ್ಲೆಲ್ಲ ಕುಳಿತಲ್ಲೆಲ್ಲ ಅವರನ್ನು ಕಾಡಿ, ಬಿಡದಂತೆ ಪಟ್ಟುಹಿಡಿದು, ಚತುರೋಪಾಯಗಳಿಂದ ಸಾಧಿಸಿದ ಹೆಮ್ಮೆಯ ಗುಡಿ ಈ ಕನ್ನಡ ಅಧ್ಯಯನ ಸಂಸ್ಥೆ.

ಅಧ್ಯಯನ ಸಂಸ್ಥೆಯ ಕೆಲಸ ಹಿಡಿದ ಮೇಲೆ "ನಾನು ಮನೆ ತೊರೆದೆ, ನೆಂಟರಿಷ್ಟರನ್ನು ತೊರೆದೆ, ಬರವಣಿಗೆಯೂ ಕುಂಠಿತವಾಯಿತು"ಎನ್ನುವ ಜವರೇಗೌಡರು " ಈ ಕಟ್ಟಡದ ತಳಹದಿಯಿಂದ ಹಿಡಿದು ತುದಿಯವರೆಗೆ ಇದರ ಉಸ್ತುವಾರಿ ನೋಡಿಕೊಂಡಿದ್ದೇನೆ.

ಇಲ್ಲಿಯ ಒಂದೊಂದು ಕಲ್ಲನ್ನೂ ಇಟ್ಟಿಗೆಯನ್ನೂ ಬಲ್ಲೆ; ಗಾರೆಗಚ್ಚು ಕಲೆಸಿದ್ದನ್ನು ಬಲ್ಲೆ; ಸಿಮೆಂಟು ಜಲ್ಲಿ ಹಾಕುವಾಗ ಆಳುಕಾಳುಗಳ ಜತೆ ಬಿಸಿಲಲ್ಲಿ ನಿಂತಿದ್ದೇನೆ. ಇದರ ಒಂದೊಂದು ಕಣದೊಡನೆ ಆತ್ಮೀಯತೆ ಬೆಳೆದಿದೆ" ಎಂದು ಭಾವನಾತ್ಮಕವಾಗಿ ವಾಸ್ತವವನ್ನು ಬಯಲುಮಾಡಿದ್ದಾರೆ. ಹೀಗಿದ್ದೂ, "ಕನ್ನಡ ಅಧ್ಯಯನ ಸಂಸ್ಥೆಯ ಉಗಮ ವಿಕಾಸಗಳಿಗೆ ನಾನು ಕಾರಣನೆಂಬುದು ವ್ಯಾವಹಾರಿಕ ಸತ್ಯ. ಆದರೆ ಪೂರ್ವಾಚಾರ್ಯರ ತಪಸ್ಸಾಧನೆಗಳು, ಹರಕೆ ಹಾರೈಕೆಗಳು ಅದರ ಪ್ರೋನ್ನತಿಗೆ ಅನಿವಾರ್ಯ ಕಾರಣವೆಂಬುದು ಆಧ್ಯಾತ್ಮಿಕ ಸತ್ಯ. ಶ್ರೀಯವರ ಕ್ರಿಯಾಶಕ್ತಿ, ಕುವೆಂಪು ಅವರ ತಪಶ್ಶಕ್ತಿ, ಮತ್ತು ಕನ್ನಡಿಗರ ಅಭೀಪ್ಸೆಯೇ ಸಾಕಾರತೆ ಪಡೆದಂತೆ ಈ ಭವ್ಯಸಂಸ್ಥೆ ರೂಪುಗೊಂಡಿದೆ" ಎಂಬಂಥ ಸೌಜನ್ಯವೂ ಅವರಲ್ಲಿದೆ.

ಕೇವಲ ಭವ್ಯವಾದ ಸಂಸ್ಥೆಯೊಂದನ್ನು ಭೌತಿಕವಾಗಿ ಕಟ್ಟಿ ನಿಲ್ಲಿಸುವಷ್ಟಕ್ಕೇ ಅವರು ತೃಪ್ತರಾಗಲಿಲ್ಲ. ಆಮೇಲೆ ಅದನ್ನು ಜ್ಞಾನದೇಗುಲವಾಗಿ ಬೆಳೆಸಿದ್ದು ಅದ್ಭುತ ಕಾರ್ಯ. ಪ್ರಾಚ್ಯ ಸಂಶೋಧನಾ ಸಂಸ್ಥೆಯ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಿದ್ದು, ಸಂಪಾದನಾ ಮತ್ತು ಬೋಧನಾ ವಿಭಾಗಗಳೆರಡೂ ಒಟ್ಟಾಗಿ ಕೆಲಸ ನಿರ್ವಹಿಸುವಂತೆ ಮಾಡಿದ್ದು ಅಪೂರ್ವವಾದ ಕೆಲಸ. ಅಂತೆಯೇ ಜಾನಪದ, ಭಾಷಾವಿಜ್ಞಾನ, ದಕ್ಷಿಣ ಭಾರತೀಯ ಅಧ್ಯಯನಗಳನ್ನು ಕನ್ನಡದಂತೆಯೇ ಎಂ. ಎ. ಪದವಿಗೆ ವ್ಯಾಸಂಗ ಮಾಡಲು ಅನುವು ಮಾಡಿಕೊಟ್ಟಿದ್ದು, ಭಾಷಾಂತರ, ತೌಲನಿಕ ಸಾಹಿತ್ಯ ಮೊದಲಾದ ಡಿಪ್ಲೊಮಾ ತರಗತಿಗಳನ್ನು ತೆರೆದದ್ದು, ಕನ್ನಡ ವಿಶ್ವಕೋಶವನ್ನು ಭಗೀರಥನಂತೆ ಬೆಂಗಳೂರಿನಿಂದ ಅಧ್ಯಯನಸಂಸ್ಥೆಗೆ ಸಾಗಿಸಿಕೊಂಡು ಬಂದದ್ದು ಇವೆಲ್ಲ ಇಂದು ಅಧ್ಯಯನ ಸಂಸ್ಥೆಯ ಇತಿಹಾಸದ ಭಾಗಗಳಾಗಿವೆ.

ಇದೆಲ್ಲದರ ಜೊತೆಗೆ ಈ ಅಧ್ಯಯನ ಸಂಸ್ಥೆಯ ಕಾರ್ಯಭಾರವನ್ನು ಹೊರುವಂಥ, ಅದರ ಏಳಿಗೆಗೆ ದುಡಿಯುವಂಥ ಧೀಮಂತರನ್ನು ಕಲೆಹಾಕಿದ್ದಂತೂ ಅನನ್ಯಾದೃಶವಾದ ಕೆಲಸ. ಅನಂತರದಲ್ಲಿ ಇಲ್ಲಿ ಇವರು ಮಾಡಿದ ಕೆಲಸಗಳು ನಾಡುನುಡಿಯ ಚರಿತ್ರೆಯಲ್ಲಿ ದಾಖಲಿತವಾಗಿವೆ. ಅಧ್ಯಯನ ಸಂಸ್ಥೆಯ ಒಬ್ಬೊಬ್ಬ ಪ್ರಾಧ್ಯಾಪಕರ ಹೆಸರೂ ಪೂಜನೀಯವೆನಿಸುವಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿ ಬೆಳೆದಿವೆ. ಇದಕ್ಕೆಲ್ಲ ದೇಜಗೌ ಅವರು ಹಾಕಿದ ಅಸ್ತಿಭಾರ ಮತ್ತು ನೀಡಿದ ಪ್ರೋತ್ಸಾಹವೇ ಕಾರಣ. ಜವರೇಗೌಡರು ಈ ಸಂಸ್ಥೆಯ ಮೊದಲ ನಿರ್ದೇಶಕರಾಗಿ ಹಾಕಿಕೊಟ್ಟ ಮಾರ್ಗದರ್ಶನ ಮುಂದೆ ಇದರ ಸರ್ವತೋಮುಖ ಬೆಳವಣಿಗೆಗೆ ಮುಖ್ಯ ಕಾರಣವಾಯಿತು. ಅಷ್ಟೇ ಅಲ್ಲ ಕುಲಪತಿಗಳಾದ ಮೇಲೂ ದೇಜಗೌ ಅವರಿಗೆ ಈ ಸಂಸ್ಥೆಯ ಮೇಲಣ ವ್ಯಾಮೋಹ ಕಿಂಚಿತ್ತೂ ಕುಗ್ಗದೇ ಹೋದದ್ದೇ ಅದರ ಕೀರ್ತಿಗೆ ಕುಂದಿಲ್ಲವಾಯಿತು.

ಮೈಸೂರು ವಿಶ್ವವಿದ್ಯಾನಿಲಯ

ಅಧ್ಯಯನ ಸಂಸ್ಥೆಯ ನಿರ್ದೇಶಕ ಹುದ್ದೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ದೇಜಗೌ ಅವರು ತಮ್ಮ ಕನ್ನಡ ಪ್ರೇಮದ ದಾಹವನ್ನು ಹಿಂಗಿಸುವತ್ತ ಅನೇಕ ರಚನಾತ್ಮಕ ಕೆಲಸಗಳನ್ನು ಯೋಜನೆಗಳನ್ನು ಹಮ್ಮಿಕೊಂಡು, ಅವುಗಳನ್ನು ಕಾರ್ಯಗತಗೊಳಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಅವರ ದೂರದೃಷ್ಟಿಯ ಫಲ. ವಿಶ್ವವಿದ್ಯಾನಿಲಯದ ಮುದ್ರಣಾಲಯ ವಿಭಾಗದ ಅಭಿವೃದ್ಧಿ ಅವರ ಪರಿಶ್ರಮದ ಕಾಣಿಕೆ. ಮಂಗಳೂರು, ಶಿವಮೊಗ್ಗ ಸ್ನಾತಕೋತ್ತರ ಕೇಂದ್ರಗಳು ಅವರ ಕನಸಿನ ಸಾಕಾರ. ಹೀಗೆ ಗುರುತರ ಶೈಕ್ಷಣಿಕ ಪ್ರಗತಿಯ ಹರಿಕಾರರಾದದ್ದೇ ಅಲ್ಲದೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳನ್ನು ಬಲಪಡಿಸಿ, ಹೊಸ ವಿಭಾಗಗಳನ್ನು ಪ್ರಾರಂಭಿಸಿ, ಹೊಸ ಕಾಲೇಜುಗಳನ್ನು ಅಸ್ತಿತ್ವಕ್ಕೆ ತಂದು, ಹೊಸ ಕಟ್ಟಡಗಳನ್ನು ಕಟ್ಟಿಸಿ, ತೋಟಗಳನ್ನು ಬೆಳೆಸಿ, ನಾನಾಬಗೆಯಲ್ಲಿ ತಮ್ಮ ಶಾಶ್ವತ ಮುದ್ರೆಯನ್ನೊತ್ತಿದ್ದಾರೆ.

ಇತರ ಅಂಗಸಂಸ್ಥೆಗಳು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ವಿ. ವಿ. ನಿಲಯದ ಕುಲಪತಿಯಾಗಿ ಕಾರ್ಯ ನಿರ್ವಹಿಸಿ ಜಯಭೇರಿ ಬಾರಿಸುವ ಮುನ್ನ ದೇಜಗೌ ವಿಶ್ವವಿದ್ಯಾನಿಲಯದ ಇತರ ಅಂಗಸಂಸ್ಥೆಗಳಲ್ಲೂ ಕೆಲಸ ಮಾಡಿ ಅವುಗಳಿಗೆ ಜೀವ ತುಂಬಿದ್ದಾರೆ. ಅವುಗಳಲ್ಲಿ ಮಹಾರಾಜಾ ಕಾಲೇಜಿನ ಕನ್ನಡ ಸಂಘ, ಪ್ರಬುದ್ಧ ಕರ್ನಾಟಕದ ಸಂಪಾದಕ, ಪ್ರಸಾರಾಂಗದ ಪ್ರಕಟಣಾಲಯ ಶಾಖೆಯ ಕಾರ್ಯದರ್ಶಿ, ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಹುದ್ದೆ, ಗಂಗೋತ್ರಿ ಹಾಸ್ಟೆಲ್‌ನ ವಾರ್ಡನ್ ಕೆಲಸ, ಹಾಗೂ ವಿಶ್ವವಿದ್ಯಾನಿಲಯದ ಪರೀಕ್ಷಣಾಧಿಕಾರಿ ಕೆಲಸಗಳು ಹೆಸರಿಸುವಂಥವು.

ಐದನೇ ದಶಕದ ಆರಂಭದ ವರ್ಷಗಳಲ್ಲಿ ಮಹಾರಾಜಾ ಕಾಲೇಜಿನ ಕನ್ನಡ ಸಂಘದ ಕಾರ್ಯಚಟುವಟಿಕೆಗಳಿಗೆ ಚಾಲನೆ ಕೊಟ್ಟವರು ದೇಜಗೌ. ಅನೇಕ ಉಪಯುಕ್ತ ಕನ್ನಡ ಪರ ಕಾರ್ಯಕ್ರಮಗಳನ್ನು ನಡೆಸುವುದರ ಜತೆಗೆ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯವನ್ನು ಕುರಿತು ಉಪನ್ಯಾಸ ಮಾಲೆ ಏರ್ಪಡಿಸಿದ್ದು, ಆ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದು ಉಲ್ಲೇಖನೀಯವಾದವು.

ಎಸ್. ವಿ. ಪರಮೇಶ್ವರಭಟ್ಟರೊಡನೆ ಸಹ ಸಂಪಾದಕರಾಗಿ 'ಪ್ರಬುದ್ಧ ಕರ್ನಾಟಕ' ಪತ್ರಿಕೆಯನ್ನು ಆಕರ್ಷಣೀಯವಾಗಿ ಮಾಡಿದ ಕೀರ್ತಿ ದೇಜಗೌ ಅವರದು. ಪ್ರಾಯಶಃ ಪತ್ರಿಕೆಯ ಗಾತ್ರ ಹಿಗ್ಗಿದ್ದೂ ಈ ಕಾಲದಲ್ಲಿಯೆ ಎಂದು ತೋರುತ್ತದೆ. ಪ್ರಬುದ್ಧ ಕರ್ನಾಟಕಕ್ಕೆ ದೇಜಗೌ ತಂದ ಈ ಬದಲಾವಣೆಗೆ ಎ. ಆರ್. ಕೃಷ್ಣಶಾಸ್ತ್ರಿಗಳ ಪ್ರಶಂಸೆಯನ್ನು ಪಡೆದದ್ದು ಹೆಮ್ಮೆ ಪಡುವಂಥ ವಿಚಾರ.

1955 ರಲ್ಲಿ ವಿಶ್ವವಿದ್ಯಾನಿಲಯದ 'ಪ್ರಕಟಣ ಶಾಖೆ'ಯ ಕಾರ್ಯದರ್ಶಿಯಾಗಿ ನೇಮಕಗೊಂಡ ಜವರೇಗೌಡರು ಕುವೆಂಪು ಅವರ ಪ್ರಸಾರಾಂಗದ ಕಲ್ಪನೆಗೆ ಕಾವು ಕೊಟ್ಟರು. ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿ, ಅವನ್ನು ಪ್ರಕಟಿಸಲು ನೆರವಾದರು. ಅಲ್ಲದೆ ಮುದ್ರಣಾಲಯದ ಅಗತ್ಯತೆಯನ್ನು ಗುರುತಿಸಿ ಅದನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ಆ ಕಾಲಕ್ಕೆ ಕಲ್ಕತ್ತ ವಿಶ್ವವಿದ್ಯಾನಿಲಯವನ್ನು ಬಿಟ್ಟರೆ ಭಾರತದ ಬೇರಾವ ವಿಶ್ವವಿದ್ಯಾನಿಲಯದಲ್ಲಿ ಇಂಥ ಸ್ವತಂತ್ರ ಮುದ್ರಣಾಲಯವಿರಲಿಲ್ಲ. ಒಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ ದೇಜಗೌ ಅವರ ದೂರದರ್ಶಿತ್ವ ಹಾಗೂ ಕಠಿಣ ಪರಿಶ್ರಮದ ಫಲ.

1960 ರಲ್ಲಿ ದೇಜಗೌ ಅವರು ಶಿವಮೊಗ್ಗೆಯ 'ಸಹ್ಯಾದ್ರಿ ಕಾಲೇಜು' ಸಂಸ್ಥೆಗೆ ಪ್ರಾಂಶುಪಾಲರಾಗಿ ಹೋದರು. ಅಲ್ಲಿ ಅವರು ವಿದ್ಯಾರ್ಥಿಗಳ, ಅಧ್ಯಾಪಕರ ಆದರ ವಿಶ್ವಾಸಗಳನ್ನು ಗಳಿಸಿಕೊಂಡು ಕಾರ್ಯೋನ್ಮುಖರಾದ ಬಗೆ ಅನುಕರಣೀಯವಾದುದು. ಹೆಚ್ಚುದಿನ ಅಲ್ಲಿ ನಿಲ್ಲದೆ ರೀಡರ್ ಆಗಿ ನೇಮಕಗೊಂಡು ಮೈಸೂರಿಗೆ ವಾಪಸ್ಸಾದರು.

'ಗಂಗೋತ್ರಿಯ ಹಾಸ್ಟೆಲ್' ವಾರ್ಡನ್ ಆಗಿ ಸೇವೆ ಸಲ್ಲಿಸಿದ ದೇಜಗೌ ಅವರ ಕಾರ್ಯವೈಖರಿ ಪ್ರಶಂಸನೀಯವಾದುದು. ಏಕೆಂದರೆ ಅವರು ವಿದ್ಯಾರ್ಥಿ ಸಮಸ್ಯೆಗಳನ್ನು ಬಗೆಹರಿಸುವುದಷ್ಟೇ ಅಲ್ಲ, ಹಾವು ಕೋತಿಗಳ ಕಾಟದಿಂದಲೂ ಅವರನ್ನು ರಕ್ಷಿಸಬೇಕಿತ್ತು.

'ಜಾನಪದ ವಸ್ತು ಸಂಗ್ರಹಾಲಯ' ದೇಜಗೌ ಅವರ ಕೊಡುಗೆಯಿಂದ ಪ್ರಾರಂಭವಾದದ್ದು. ತಮ್ಮ ಮನೆಯಿಂದ ತಂದ ಕೆಲವು ವಸ್ತುಗಳನ್ನು ಮೊದಲು ಇಟ್ಟು ಇದನ್ನು ಉದ್ಘಾಟಿಸಿದವರು ಜವರೇಗೌಡರು. ತಮ್ಮ 'ಪುನರುತ್ಥಾನ'ಕ್ಕೆ ಸೋವಿಯತ್ ಲ್ಯಾಂಡ್‌ಪತ್ರಿಕೆಯವರು ಕೊಟ್ಟ ಬಹುಮಾನದ ಒಂದು ಸಾವಿರ ರೂಪಾಯಿಗಳನ್ನು ಧಾರೆ ಎರೆದು ಕೊಟ್ಟವರು ದೇಜಗೌ.

'ಪರೀಕ್ಷಾಧಿಕಾರಿ'ಯಾಗಿ ದೇಜಗೌ ಅವರು ಕೆಲಸವಹಿಸಿಕೊಂಡಾಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಕ್ರಮಣ ಕಾಲ ಪ್ರಾರಂಭವಾಗಿತ್ತು. ಏಕೆಂದರೆ ಅಲ್ಲಿಯತನಕ ಸರ್ಕಾರಿ ಇಲಾಖೆಯಂತಿದ್ದ ವಿಶ್ವವಿದ್ಯಾನಿಲಯ ಸ್ವಯಮಾಡಳಿತ ಸಂಸ್ಥೆಯಾಗಿ ಪರಿವರ್ತನೆಗೊಂಡಿತು. ಈ ಸಮಯದಲ್ಲಿ ಸಹಜವಾಗಿ ಉಂಟಾದ ಸಮಸ್ಯೆಗಳನ್ನು ಪರೀಕ್ಷಾಧಿಕಾರಿಯಾಗಿ ದೇಜಗೌ ಎದುರಿಸಬೇಕಾಯಿತು. ಕಾಲೇಜುಗಳ ವರ್ಗಾವಣೆ, ಅಧ್ಯಾಪಕರ ವಿನಿಮಯ, ನೂತನ ಪಠ್ಯಕ್ರಮ ಯೋಜನೆ, ಕಾನೂನು ನಿಯಮ ನಿಬಂಧನೆಗಳ ರಚನೆ ಇತ್ಯಾದಿ ತಲೆತಿನ್ನುವ ಕೆಲಸಗಳನ್ನು ಅತ್ಯಂತ ದಕ್ಷತೆಯಿಂದ ದೇಜಗೌ ನಿರ್ವಹಿಸಿ ಹೆಸರು ಸಂಪಾದಿಸಿದರು.

ಇವೇ ಅಲ್ಲದೆ, ಕನ್ನಡ ಅಧ್ಯಯನ ಮಂಡಳಿ ಸದಸ್ಯರಾಗಿ ದೇಜಗೌ ಅನೇಕ ರೀತಿಗಳಿಂದ ಸಾಹಿತಿಗಳಿಗೂ, ಪ್ರಕಾಶಕರಿಗೂ ಸಹಾಯ ಮಾಡಿದ್ದಾರೆ. ಪಠ್ಯಪುಸ್ತಕ ನಿಯಾಮಕದಿಂದ ಪ್ರಕಾಶಕರಿಗೂ ಸಾಹಿತಿಗಳಿಗೂ ಪ್ರೋತ್ಸಾಹ ಕೊಡುವುದಾದರೆ ಕನ್ನಡದಲ್ಲಿ ಹೆಚ್ಚು ಹೆಚ್ಚು ಪುಸ್ತಕಗಳು ಹೊರಬಂದು ಕನ್ನಡದ ಕಣಜ ತುಂಬುತ್ತದೆಂಬುದು ದೇಜಗೌ ಅವರ ನಂಬಿಕೆಯಾಗಿತ್ತು. ಹೀಗೆಯೇ, ಕೇಂದ್ರ ಸಾಹಿತ್ಯ ಅಕಾಡೆಮಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕನ್ನಡ ವಿಶ್ವಕೋಶ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಾಹಿತ್ಯಪರಿಷತ್ತು ಮುಂತಾದ ಸಂಸ್ಥೆಗಳಲ್ಲಿ ಕನ್ನಡಿಗರ ಪರವಾಗಿ ಕೆಲಸ ಮಾಡುವ ಭಾಗ್ಯ ದೇಜಗೌ ಅವರದಾಗಿತ್ತು. ದಕ್ಷಿಣಭಾಷಾ ಪುಸ್ತಕ ಸಂಸ್ಥೆಯಲ್ಲಿ ಕೂಡ ಕೆಲವು ದಿನ ಇವರು ಕನ್ನಡ ವಿಭಾಗದ ಸದಸ್ಯರಾಗಿದ್ದರು. ತೀನಂಶ್ರೀ ಅವರ ಅಪೇಕ್ಷೆಯಂತೆ 'ಕನ್ನಡಕೋಶ'ದ ಸಂಪಾದಕ ಮಂಡಳಿಯಲ್ಲಿ ಇವರು ಕೆಲಸ ಮಾಡಿದ್ದಾರೆ. ಇದರ ಒಳ ರಾಜಕೀಯದಿಂದ ದೇಜಗೌ ಅವರಿಗೆ ಬೇಸರ ತಂದ ಏಕೈಕ ಸಮಿತಿ ಎಂದರೆ ಪಠ್ಯಪುಸ್ತಕಗಳ ಆಯ್ಕೆ ಸಮಿತಿ.

ದೇಜಗೌ ಟ್ರಸ್ಟ್

ಬಡವಿದ್ಯಾರ್ಥಿಗಳಿಗೆ, ಹಣದ ಮುಗ್ಗಟ್ಟಿನಿಂದ ಕುಗ್ಗಿರುವ ಸಾಹಿತಿಗಳಿಗೆ ಅಥವಾ ಕಲಾವಿದರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಹುಟ್ಟಿದ್ದು ದೇಜಗೌ ಟ್ರಸ್ಟ್. ಸಂಬಳದ ಬಾಕಿಯೆಂದು ದೇಜಗೌ ಅವರಿಗೆ ಬಂದ ಹದಿನಾಲ್ಕು ಸಾವಿರ ರೂಪಾಯಿ ಈ ಟ್ರಸ್ಟಿನ ಮೂಲಧನ. ಅಲ್ಲದೆ ದೇಜಗೌ ಅವರು ತಮ್ಮ ಪುಸ್ತಕಗಳಿಂದ ಬಂದ ಆದಾಯವನ್ನು ಈ ಟ್ರಸ್ಟಿಗೆ ಕೊಡುಗೆಯಿತ್ತಿದ್ದಾರೆ.

"ಕನ್ನಡ ನಾಡು ನುಡಿಗಳನ್ನು ಕುರಿತು ನಡೆಸುವ ಅಧ್ಯಯನ ಸಂಶೋಧನೆಗಳಿಗೆ ನೆರವು ನೀಡುವುದು, ಅರ್ಹತೆಯುಳ್ಳ ವಿದ್ಯಾರ್ಥಿ ಅಥವಾ ವಿದ್ವಾಂಸರಿಗೆ ವೇತನ ರೂಪದಲ್ಲಿಯೋ ಬಹುಮಾನ ರೂಪದಲ್ಲಿಯೋ ಧನಸಹಾಯ ಮಾಡುವುದು, ಶೈಕ್ಷಣಿಕ ಸಂಸ್ಥೆ ಅಥವಾ ಗ್ರಂಥಾಲಯಗಳನ್ನು ಸ್ಥಾಪಿಸುವುದು, ದೇಜಗೌ ಅವರ ಮತ್ತು ಇತರ ಲೇಖಕರ ಪುಸ್ತಕಗಳನ್ನು ಪ್ರಕಟಿಸುವುದು ಇವು ಸ್ಥೂಲವಾಗಿ ಟ್ರಸ್ಟಿನ ಮುಖ್ಯೋದ್ದೇಶಗಳು" ಎಂದು ಸಾವಿತ್ರಮ್ಮ ದೇಜಗೌ ಸ್ಪಷ್ಟಪಡಿಸಿದ್ದಾರೆ.

ಈ ಟ್ರಸ್ಟಿನ ವತಿಯಿಂದ ಪ್ರತೀವರ್ಷದ ಕೊನೆಯಲ್ಲಿ ಜರುಗುವ 'ಶ್ರೀರಾಮಾಯಣ ದರ್ಶನಂ' ಗಮಕ ಸ್ಪರ್ಧೆ ಹೆಚ್ಚು ಪ್ರಚಾರದಲ್ಲಿದೆ. ಅದಕ್ಕಾಗಿ ಪರ್ಯಾಯ ಪಾರಿತೋಷಕವನ್ನು ಇಟ್ಟಿದ್ದಾರೆ. ಕುವೆಂಪು ಸಾಹಿತ್ಯದ ಬಗೆಗೆ ಬಂದ ಪುಸ್ತಕಕ್ಕೆ ಒಂದು ಸಾವಿರ ರೂ ಗಳ ಬಹುಮಾನವನ್ನು ಪ್ರತೀವರ್ಷವೂ ಕೊಡುವ ಪರಿಪಾಠವಿದೆ. ಅಲ್ಲದೆ ಟ್ರಸ್ಟಿನ ಆಶ್ರಯದಲ್ಲಿ ಸಂಶೋಧನೆ ನಡೆಸುವವರಿಗೆ ವಿದ್ಯಾರ್ಥಿವೇತನ ಕೊಡುವ ವ್ಯವಸ್ಥೆ ಮಾಡಲಾಗಿದೆ.

ದೇಜಗೌ ಟ್ರಸ್ಟ್‌ನ ಇತ್ತೀಚಿನ ಪ್ರತಿಷ್ಠಿತವೆನಿಸಿರುವ ಎರಡು ಪ್ರಶಸ್ತಿಗಳು 'ವಿಶ್ವಮಾನವ ಪ್ರಶಸ್ತಿ' ಹಾಗೂ 'ಸಾವಿತ್ರಮ್ಮ ದೇಜಗೌ ಪ್ರಶಸ್ತಿ' ತಲಾ ಹದಿನೈದು ಸಾವಿರ ರೂಪಾಯಿಗಳ ನಗದನ್ನು ನೀಡುವ ಈ ಪ್ರಶಸ್ತಿಗಳು ನಾಡಿನಾದ್ಯಂತ ಸಾಹಿತಿಗಳ ಕುತೂಹಲಾಸಕ್ತಿಯನ್ನು ಸೆಳೆದಿವೆ. ಪುರುಷ ಹಾಗೂ ಮಹಿಳಾ ಸಾಹಿತಿಗಳಿಗೆ ಸಮಾನವಾಗಿ ಏಕಕಾಲಕ್ಕೆ ದಕ್ಕುವ ಈ ಪ್ರಶಸ್ತಿಗಳು ದೇಜಗೌ ಟ್ರಸ್ಟಿನ ಮೌಲ್ಯಿಕ ಕೊಡುಗೆಗಳಾಗಿವೆ.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ದೇಜಗೌ ಅವರ ಕನ್ನಡ ಪ್ರೀತಿಗೆ ಹಾಗೂ ಗುರುಭಕ್ತಿಗೆ ಸಾಕ್ಷೀಭೂತವಾಗಿ ಇರುವಂಥದು 'ಶ್ರೀಕುವೆಂಪು ವಿದ್ಯಾವರ್ಧಕ ಟ್ರಸ್ಟ್.' ಕನ್ನಡ ನುಡಿಯ ಸೇವೆಗಾಗಿ, ಅದರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವ ಉನ್ನತ ಧ್ಯೇಯವನ್ನು ಈ ಸಂಸ್ಥೆ ಇಟ್ಟುಕೊಂಡಿದೆ. ಇದರ ಜೀವನಾಡಿ ದೇಜಗೌ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ದೇಜಗೌ ಅವರ ಬೆನ್ನೆಲುಬಾಗಿ ಇದರ ಪ್ರಾರಂಭಿಕ ಅವಸ್ಥೆಯಲ್ಲಿ ನಿಂತವರು ನ್ಯಾಯಾಧೀಶರಾದ ಹೊಂಬೇಗೌಡರು ಮತ್ತು ನ. ಭದ್ರಯ್ಯನವರು.

ಈಗ ಕುವೆಂಪು ವಿದ್ಯಾವರ್ಧಕ ಟ್ರಸ್ಟಿಗೆ ತನ್ನದೇ ಆದ ಕಟ್ಟಡವಿದೆ. ಟ್ರಸ್ಟಿನದೇ ಆದ ಮುದ್ರಣಾಲಯವಿದೆ. ಅದರಲ್ಲಿ ನೂರಾರು ಗ್ರಂಥಗಳು ಅಚ್ಚಾಗಿವೆ. ಪುಸ್ತಕ ಭಂಡಾರವಿದೆ. ಕುವೆಂಪು ರಚಿತ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ರಚನಾತ್ಮಕ ಚಟುವಟಿಕೆಗಳು

ಪ್ರತಿವರ್ಷವೂ ಜರುಗುತ್ತವೆ. ರಾಮಾಯಣದರ್ಶನಂ ಗಮಕಸ್ಪರ್ಧೆ, ಕಾವ್ಯಗಳ ಪಠನ ಸ್ಪರ್ಧೆ, ಉಪನ್ಯಾಸ, ಚರ್ಚಾಕೂಟ ಮುಂತಾದುವು ಅವುಗಳಲ್ಲಿ ಮುಖ್ಯವಾದವು. ಶಿಶುವಿಹಾರ, ಪ್ರೌಢಶಾಲೆ, ಜೂನಿಯರ್ ಕಾಲೇಜುಗಳಂಥ ಶಿಕ್ಷಣ ಪ್ರಧಾನ ಸಂಸ್ಥೆಗಳು ಇದರ ಆಶ್ರಯದಲ್ಲಿ ತಲೆಎತ್ತಿವೆ.

ಇವೆಲ್ಲವುಗಳ ರೂವಾರಿ ದೇಜಗೌ ಆಗಿದ್ದಾರೆ. ಇಳಿವಯಸ್ಸಿನಲ್ಲಿ ಅವರು ಕನ್ನಡದ ಅಭ್ಯುದಯಕ್ಕಾಗಿ, ಕನ್ನಡಿಗರ ಪ್ರಗತಿಗಾಗಿ ಇಂಥ ಸಂಸ್ಥೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿರುವುದು ನಾಡವರ ಪುಣ್ಯವಿಶೇಷ. ಅವರ ಕರ್ತೃತ್ವ ಶಕ್ತಿ, ದೂರದೃಷ್ಟಿ, ಪರೋಪಕಾರ ಮನೋಭಾವ. ಎಂಥವರೂ ಮೆಚ್ಚುವಂಥ ಗುಣಲಕ್ಷಣಗಳಾಗಿವೆ.

ಅಧ್ಯಾಪಕ ಪರಿಷತ್ತು

"ದೇಜಗೌ ಅವರಿಗೂ ಕನ್ನಡ ಅಧ್ಯಾಪಕ ಪರಿಷತ್ತಿಗೂ ಅವಿನಾಭಾವ ಸಂಬಂಧವಿದೆ. ದೇಜಗೌ ಕನ್ನಡ ಅಧ್ಯಾಪಕ ಪರಿಷತ್ತಿನ ಒಂದು ಅವಿಭಾಜ್ಯ ಅಂಗ. ದೇಜಗೌ ಒಂದು ವ್ಯಕ್ತಿಯಲ್ಲ, ಶಕ್ತಿ, ಶಕ್ತಿಯಲ್ಲ ಒಂದು ಸಂಸ್ಥೆ. ಕನ್ನಡದ ಕಲ್ಪವೃಕ್ಷ. ಪಂಡಿತರ ಕಾಮಧೇನು" ಎಂಬುದು ಪಂಡಿತವರೇಣ್ಯ ನಂಜೇಗೌಡರ ಅಭಿಪ್ರಾಯ.

'ಕ್ರಾಂತಿಯನ್ನಾದರೂ ಮಾಡಿ ಕನ್ನಡ ಪಂಡಿತರ ಸ್ಥಾನಮಾನಗಳನ್ನು ರಕ್ಷಿಸುತ್ತೇನೆಂದು ಪ್ರತಿಜ್ಞೆ ಮಾಡಿದ್ದ ದೇಜಗೌ, ತಮ್ಮ ಮಾತನ್ನು ಉಳಿಸಿಕೊಳ್ಳಲು ಮೂರು ದಶಕಕ್ಕೂ ಹೆಚ್ಚು ಕಾಲ ಈ ಸಂಸ್ಥೆಯೊಡನೆ ಸಹಯೋಗವಿಟ್ಟುಕೊಂಡು ಅದರ ಹಿತರಕ್ಷಣೆಗಾಗಿ ಹೋರಾಡಿದ್ದಾರೆ. ಕನ್ನಡಪಂಡಿತ ಪದವಿಯನ್ನು ಪಡೆದುಕೊಂಡು ಕನ್ನಡ ಡಿಪ್ಲೊಮೊ ಅರ್ಹತೆಯನ್ನು ಪಡೆದವರಿಗೆ ಕನ್ನಡ ಎಂ. ಎ. ಸ್ನಾತಕೋತ್ತರ ಪದವಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟವರು ದೇಜಗೌ. ಇದರಿಂದಾಗಿ ಕನ್ನಡ ಪಂಡಿತರು ಸಮಾಜದಲ್ಲಿ ತಲೆ ಎತ್ತಿ ನಿಲ್ಲುವಂತಾಯಿತು. ದೇಜಗೌ ಅವರ ಕೃಪಾಕಟಾಕ್ಷದಿಂದ ಕನ್ನಡ ಅಧ್ಯಾಪಕ ಪರಿಷತ್ತು ಶಿಕ್ಷಣ ಸಂಸ್ಥೆಗಳ ಸಾಲಿನಲ್ಲಿ ಮನ್ನಣೆಗೆ ಪಾತ್ರವಾಯಿತು.

ಮಹಾಜನ ಸಭಾ

ವೃದ್ಧರ ಹಿತಾಸಕ್ತಿಯನ್ನು ಗಮನಿಸಲೆಂದು ದೇಜಗೌ ಅವರು ಡಾ. ಜಿ. ಎಸ್. ಗಾಯ್ ಅವರ ನೇತೃತ್ವದಲ್ಲಿ 'ಮಹಾಜನಸಭಾ' ಎಂಬ ಸಂಸ್ಥೆಯನ್ನು ಕಟ್ಟಿದ್ದಾರೆ. ಇಳಿ ವಯಸ್ಸಿನಲ್ಲಿ ಮಕ್ಕಳಿಗೆ ಬೇಡವಾಗಿ ಇಲ್ಲವೇ ಅವರ ಅವಕೃಪೆಗೆ ತುತ್ತಾಗಿ ಕೊರಗುವ ತಂದೆತಾಯಿಯರಿಗೆ ಆಸರೆಯಾಗಿ ನಿಲ್ಲಬೇಕೆಂಬ ದೇಜಗೌ ಅವರ ಸಾಮಾಜಿಕ ಕಳಕಳಿ, ಮಾನವೀಯ ಅನುಕಂಪ ಯಾರೂ ಮೆಚ್ಚುವಂಥದು.

ಅಖಿಲಭಾರತ ಸ್ಥಳನಾಮ ಸಂಸ್ಥೆ

ದೇಜಗೌ ಅವರ ಪ್ರತಿಭೆ ಏಕಮುಖಿಯಾದದ್ದಲ್ಲ; ಅನಂತಮುಖಿಯಾದದ್ದು. ಇದರ ಫಲವಾಗಿ ಅನೇಕ ಹೊಸ ಆವಿಷ್ಕಾರಗಳನ್ನು ಅವರು ಮಾಡುತ್ತಿರುತ್ತಾರೆ. ಇದಕ್ಕೆ ನಿದರ್ಶನವಾಗಿ 'ಸ್ಥಳನಾಮ' ಅಧ್ಯಯನ ಕೂಡ ಹೊರತಾಗಿ ಉಳಿಯುವುದಿಲ್ಲ. ಸ್ಥಳನಾಮ ವಿಶ್ಲೇಷಣೆ ದೇಜಗೌ ಅವರ ಅತ್ಯಂತ ಪ್ರಿಯವಾದ ವಿಷಯಗಳಲ್ಲಿ, ಅಧ್ಯಯನ ಶಾಖೆಗಳಲ್ಲಿ ಒಂದು. ಯಾವುದಾದರೂ ಒಂದು ಊರಿನ ಹೆಸರನ್ನು ಬಿಡಿಸುವುದಕ್ಕೆ ಅವರು ತೋರಿಸುವ

ಉತ್ಸಾಹ, ಶ್ರದ್ಧೆ ಕಿರಿಯ ಸಂಶೋಧಕರನ್ನು ನಾಚಿಸುವಂಥದು. ಅವರ ಇಂಥ ಉತ್ಸಾಹದ ಫಲವಾಗಿ ಅಖಿಲ ಭಾರತ ಸ್ಥಳನಾಮ ಸಂಸ್ಥೆ ತಲೆ ಎತ್ತಿ ನಿಂತಿದೆ.

ಅಂತರ ಜಾತೀಯ ವಿವಾಹ ವೇದಿಕೆ

ದೇಜಗೌ ಅವರು ಕುವೆಂಪು ಅವರ 'ಮಂತ್ರಮಾಂಗಲ್ಯ' ವಿವಾಹ ವಿಧಿಯನ್ನು ಜಾರಿಗೆ ತಂದು ಜನಪ್ರಿಯಗೊಳಿಸುತ್ತಿರುವುದೇ ಅಲ್ಲದೆ ಅಂತರ ಜಾತೀಯ ವಿವಾಹಗಳಿಗೆ ಪ್ರೋತ್ಸಾಹಿಸಲು ಒಂದು ಜಾಗೃತ ವೇದಿಕೆಯನ್ನು ತಮ್ಮ ಮುಂದಾಳತ್ವದಲ್ಲಿ ಸಂಸ್ಥಾಪಿಸಿದ್ದಾರೆ, ಈ ವೇದಿಕೆಯ ಗುರಿ ಅದರ ಹೆಸರೇ ಹೇಳುವಂತೆ ಅಂತರಜಾತೀಯ ವಿವಾಹಗಳನ್ನು ನಡೆಸುವುದು, ಅವುಗಳ ಸಮಸ್ಯೆಗಳನ್ನು ಎದುರಿಸಲು ನೆರವಾಗುವುದು, ಸರಳವಿವಾಹವನ್ನು ಪ್ರೋತ್ಸಾಹಿಸುವುದೇ ಆಗಿದೆ.

ಕೆ. ವಿ. ಶಂಕರಗೌಡ ಟ್ರಸ್ಟ್

ಮಂಡ್ಯದ ಹಿರಿಯ ರಾಜಕಾರಣಿ ಕೆ. ವಿ. ಶಂಕರಗೌಡರನ್ನು ಕಂಡರೆ ದೇಜಗೌ ಅವರಿಗೆ ಅಪಾರ ಪ್ರೀತಿ. ಆ ಪ್ರೀತಿಯ ಫಲವಾಗಿ ಶಂಕರಗೌಡರ ನೆನಪಿನ ಟ್ರಸ್ಟ್‌ನ ಪದಾಧಿಕಾರಿ ಹಾಗೂ ಸಲಹಾ ಸದಸ್ಯರಾಗಿ ಅದರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ಈ ಸಂಸ್ಥೆಯ ವತಿಯಿಂದ ಪ್ರತಿವರ್ಷ ಶಂಕರಗೌಡರ ಜನ್ಮದಿನ ಜುಲೈ 15 ರಂದು ನಾಟಕ, ಕಲೆಗೆ ಸೇವೆಗೈದ ಒಬ್ಬ ಅದ್ವಿತೀಯ ಕಲಾತಪಸ್ವಿಗೆ ಸನ್ಮಾನ ಮಾಡಿ ಫಲಕ ಹಾಗೂ ನಗದನ್ನು ಅರ್ಪಿಸುವ ಕಾರ್ಯಕ್ರಮವಿದೆ.

ವಚನ ಸಾಹಿತ್ಯ ಪರಿಷತ್

ಈ ಹೆಸರಿನ ಒಂದು ಸಂಸ್ಥೆಯನ್ನು ಇತ್ತೀಚೆಗೆ ದೇಜಗೌ ಅವರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಕನ್ನಡ ಸಾಹಿತ್ಯದ ಅಪೂರ್ವ ಆಸ್ತಿಯಾದ ವಚನ ಸಾಹಿತ್ಯದ ತಲಸ್ಪರ್ಶಿ ಅಧ್ಯಯನವನ್ನು ಈ ಸಂಸ್ಥೆ ಗುರಿಯಾಗಿ ಇಟ್ಟುಕೊಂಡಿದೆ. ಸಂಶೋಧನೆ, ಪ್ರಕಟಣೆ, ಪ್ರಚಾರವೇ ಮೊದಲಾದ ಕಾರ್ಯಗಳಿಗೆ ನೆರವು ನೀಡಿ ಪ್ರೋತ್ಸಾಹಿಸುವುದು ವಚನ ಸಾಹಿತ್ಯಪರಿಷತ್‌ನ ಮೂಲ ಉದ್ದೇಶ. ಸಿದ್ಧಗಂಗೆಯ ಮಹಾಸ್ವಾಮಿಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಈ ಸಂಸ್ಥೆಯ ಬಗಗೆ ಆಸಕ್ತಿ ತಳೆಯುವಂತೆ ಮಾಡಿರುವುದು ದೇಜಗೌ ಅವರ ಚತುರತೆ, ಕಾರ್ಯದಕ್ಷತೆಗೆ ಹಿಡಿದ ಕನ್ನಡಿಯಂತಿದೆ.

ನೃಪತುಂಗ ಸಾಂಸ್ಕೃತಿಕ ವೇದಿಕೆ

ತೀರಾ ಇತ್ತೀಚೆಗೆ ದೇಜಗೌ ಅವರನ್ನು ಅಧ್ಯಕ್ಷರೆಂದು ಘೋಷಿಸಿ ಕೆಲವು ಸಾಹಿತಿಗಳು ಈ ವೇದಿಕೆಯನ್ನು ನಿರ್ಮಿಸಿಕೊಂಡಿದ್ದಾರೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಜನಪರವಾಗಿ ಹಮ್ಮಿಕೊಳ್ಳುವುದು ಈ ವೇದಿಕೆಯ ಪರಮಗುರಿ. ಇದರ ಚಾಲನಶಕ್ತಿ ಕೂಡ ಜವರೇಗೌಡರೇ ಆಗಿದ್ದಾರೆ.

ಹೀಗೆ ನಿರಂತರವಾಗಿ ಕನ್ನಡದ ಏಳಿಗೆಗಾಗಿ ಸಂಘಸಂಸ್ಥೆಗಳನ್ನು ಕಟ್ಟಿ, ಬೆಳೆಸಿ, ಅಹರ್ನಿಶಿ ದುಡಿಯುತ್ತ ಬಂದಿರುವ ದೇಜಗೌ ಕೇವಲ ಇಂಥ ಸಂಸ್ಥೆಗಳಿಗಷ್ಟೇ ಸೀಮಿತವಾದವರಲ್ಲ. ಕನ್ನಡಕ್ಕಾಗಿ ಕೆಲಸ ಮಾಡುವ ಎಲ್ಲ ಬಗೆಯ ಚಟುವಟಿಕೆಗಳ ಹಿಂದೆಯೂ ಅವರ ಶಕ್ತಿ ಅಂತರ್ಗಾಮಿಯಾಗಿ ಪ್ರವಹಿಸುತ್ತಲೇ ಇದೆ. ಅವರಿಂದ

ಶುಭಾಶೀರ್ವಾದ ಪಡೆಯದ, ಅವರ ವಿಚಾರಧಾರೆಯನ್ನು ಶಿರದಲ್ಲಿ ಹೊತ್ತು ಮೆರೆಸದ ಸಂಘಸಂಸ್ಥೆಗಳು ವಿರಳ. ಹೆಸರಿಗಾಗಿ ಅವರು ಸಂಸ್ಥೆಗಳನ್ನು ಹುಟ್ಟುಹಾಕಿದವರಲ್ಲ. ಅವರು ಹುಟ್ಟುಹಾಕಿರುವ ಸಂಸ್ಥೆಗಳೆಲ್ಲ ಕನ್ನಡಿಗರ ಸಾರೋದ್ಧಾರ ಪ್ರಗತಿಗಾಗಿ ಅವಿರತವಾಗಿ ದುಡಿಯುತ್ತ ಬಂದಿವೆ. ನಾಡಿನ ಗಣ್ಯರು ಅವುಗಳಲ್ಲಿ ಪಾಲ್ಗೊಂಡು ಸುಪ್ರೀತರಾಗಿದ್ದಾರೆ. ಅವುಗಳ ಕೆಲಸವನ್ನು ಮೆಚ್ಚಿ ಕೊಂಡಾಡಿದ್ದಾರೆ. ಬರೀ ಈ ಸಂಸ್ಥೆಗಳಷ್ಟೇ ಬೆಳೆದರೆ ದೇಜಗೌ ಅವರ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ಈ ಮಾದರಿಯ ನೂರಾರು ಸಂಘಸಂಸ್ಥೆಗಳು ಕನ್ನಡದ ಕಾರಣಕ್ಕಾಗಿ ತಲೆಎತ್ತಿ ನಿಲ್ಲಬೇಕೆಂಬುದು ಅವರ ಅಭೀಪ್ಸೆ. ಹಾಗಾದಾಗಲೇ ಅವರಿಗೆ ನೆಮ್ಮದಿ.

* * * * *

ದೇಜಗೌ ಅವರ ಶೈಕ್ಷಣಿಕ ವಿಚಾರಗಳು

- ಕ್ಯಾತನಹಳ್ಳಿ ರಾಮಣ್ಣ

ಪ್ರೊಫೆಸರ್ ದೇ. ಜವರೇಗೌಡರು ಎಲ್ಲರಿಗೂ ತಿಳಿದಿರುವಂತೆ ವಿಶ್ರಾಂತ ಕುಲಪತಿಗಳು. ಆದರೆ ಒಂದು ಕಾಲದಲ್ಲಿ ಗುಮಾಸ್ತರಾಗಿದ್ದರಂತೆ ಅವರು. ಈ ಸಂಗತಿಯನ್ನು ಅವರು ಅನೇಕ ಸಲ ಬಹಿರಂಗವಾಗಿ ಹೇಳಿರುವುದುಂಟು.

ಗುಮಾಸ್ತರಾಗಿದ್ದ ಕಾಲದಿಂದ ಮೊದಲುಗೊಂಡು ಕುಲಪತಿಯಾಗಿ ನಿವೃತ್ತರಾಗುವ ತನಕ-ಅಷ್ಟೇ ಏಕೆ, ನಿವೃತ್ತರಾದ ಮೇಲೆಯೂ ಕನ್ನಡ ಕನ್ನಡ ಎಂದು ಹೋದಲ್ಲಿ ಬಂದಲ್ಲಿ ನಿಂತಲ್ಲಿ ಕುಳಿತಲ್ಲಿ ಹಗಲಿರುಳೂ ಕನ್ನಡದ ತಪಸ್ಸಿನಲ್ಲಿ ನಿರತರಾಗಿರುವರು. ಗುಮಾಸ್ತರಾಗಿದ್ದ ಸಂಗತಿಯನ್ನು ಹೇಳುವಂತೆ ಕನ್ನಡದ ಕೈಂಕರ್ಯಗಳನ್ನು ಹೇಳಿಕೊಳ್ಳಲಾರರು. ಅದು ಅವರ ಸೌಜನ್ಯ. ಇತಿಹಾಸಕಾರರೂ ಕನ್ನಡಿಗರೂ ಅಂಥವನ್ನೆಲ್ಲ ಗುರುತಿಸಿ ಪ್ರಚುರಗೊಳಿಸಬೇಕಾದುದು ಅವರವರ ಕರ್ತವ್ಯ.

ಪ್ರೊ. ಜವರೇಗೌಡರ ಕನ್ನಡದ ಕೆಲಸಗಳನ್ನು ಹೇಳಲು ಹೊರಟರೆ ಅದೇ ಒಂದು ಉದ್ಗ್ರಂಥವಾದೀತು. ಈ ಲೇಖನದ ಉದ್ದೇಶವೂ ಅದಲ್ಲ. ಅವರ ಶೈಕ್ಷಣಿಕ ವಿಚಾರಗಳಿಗಷ್ಟೇ ಈ ಲೇಖನ ಸೀಮಿತ.

ಯಾವುದೇ ಒಂದು ವ್ಯಕ್ತಿ ತನ್ನ ಬದುಕಿನಲ್ಲಿ ಏನೆಲ್ಲವನ್ನು ಸಾಧಿಸಬಹುದೋ ಅಂಥದಕ್ಕೆಲ್ಲ ಪೂರಕವಾಗಿ ಆತ ತನ್ನ ಹುಟ್ಟಿನಿಂದ, ಬಾಲ್ಯದಿಂದ, ಬೆಳೆದ ಪರಿಸರದಿಂದ ಶಕ್ತಿಯನ್ನು ಪಡೆದಿರಬೇಕಾಗುತ್ತದೆ. ಜಗತ್ತಿನ ಮೇರು ವ್ಯಕ್ತಿಗಳ ಬದುಕಿನಲ್ಲಿಯೂ ಈ ಮಾತಿನ ಸತ್ಯವನ್ನು ಕಾಣಬಹುದು. ಯಾರೊಬ್ಬರೂ ಇದ್ದಕ್ಕಿದ್ದಂತೆ ದೊಡ್ಡವರಾಗಲು ಸಾಧ್ಯವಿಲ್ಲ. ಹಾಗಾಗಲು ತಮ್ಮ ಬದುಕಿನ ಉದ್ದಕ್ಕೂ ದಾಟಿದ ಕಷ್ಟಪರಂಪರೆಗಳ ಗಿರಿಸಾಲು ಇರುತ್ತದೆ. ಲಿಂಕನ್ ಮುಂತಾದ ಅನೇಕ ಸಾಧಕರು ಬೆಳೆದು ಬಂದದ್ದು ಬಡತನದ ಹಿನ್ನೆಲೆಯಲ್ಲಿಯೆ.

ಪ್ರೊ. ದೇಜಗೌ ಅವರು ಕೂಡ ಚಿನ್ನದ ಚಮಚಿ ಕಚ್ಚಿಕೊಂಡು ಹುಟ್ಟಲಿಲ್ಲ. ಹಂಸತೂಲಿಕಾತಲ್ಪದಲ್ಲಿ ಸಖೀಮಣಿಯರ ನಡುವೆ ಬೆಳೆಯಲಿಲ್ಲ. ದನದ ಕೊಟ್ಟಿಗೆಯೇ ಅವರ ಹಂಸತೂಲಿಕಾತಲ್ಪ; ಕುರಿ ಮಂದೆಯೇ ಅವರ ಸಖಿಯರು; ಕರಿಚಿಕ್ಕೇ ಅವರ ಚಿನ್ನದ ಚಮಚಿ. ' ಹೋರಾಟದ ಬದುಕು' ಎಂಬ ಆತ್ಮಕಥೆ ಬಹುಶಃ ಜಗತ್ತಿನ ಒಂದು ದಿಟ್ಟ ಬರಹ. ಅಹಂಕಾರಿಗಳು, ಹುಸಿಯನ್ನೇ ಉಂಡುಟ್ಟು ಹಾಸಿ ಹೊದ್ದು ಮೆರೆಯುವ ಹುಂಬರು. ಕೃತಕ ಗೌರವವೇ ಬದುಕೆಂದು ನಂಬಿದ ಆತ್ಮಘಾತುಕರು, ಯಾವುದೋ ಒಂದು ಅತ್ಯುನ್ನತ ಸ್ತರವನ್ನು ಮುಟ್ಟಿದಾಕ್ಷಣ ಹೇಳಿಕೊಳ್ಳಲು ನಾಚುವ ಹೇಸುವ ಎಷ್ಟೋ ಸಂಗತಿಗಳನ್ನು ಗೌಡರು ತಮ್ಮ ಕಥೆಯಲ್ಲಿ ಹೇಳಿಕೊಳ್ಳುತ್ತಾರೆ.

ಆದ್ದರಿಂದಲೇ ಆ ಗ್ರಂಥ ಒಂದು ದಿಟ್ಟ ಬರಹ ಎಂದದ್ದು. ಯಾವ ಸಂಕೋಚವೂ ಇಲ್ಲದೆ ಬದುಕನ್ನು ಯಥಾರೀತಿ ಚಿತ್ರಿಸುವ ' ಹೋರಾಟದ ಬದುಕು' ಪ್ರಾರಂಭವಾಗುವ ರೀತಿ ಇದು: " ಹುಟ್ಟಿದ್ದು ಕುರಿ ಮಂದೆಯ ನಡುವೆ; ಬೆಳೆದದ್ದು ದನದ ಕೊಟ್ಟಿಗೆಯಲ್ಲಿ.

ತಂದೆ ತಾಯಿಯರೋ ನಿರಕ್ಷರಕುಕ್ಷಿಗಳು. ಆದರೆ ಭಗವದ್ಭಕ್ತರು. ಅವರ ಹಿಂದಿನ ತಲೆಮಾರಿನ ಹಿರಿಯ ಜನ ಅಂಥವರೆ. ಅವರೆಲ್ಲರೂ ಬಡತನದ ವಿರುದ್ಧ ಹೋರಾಡಿ ಸತ್ತಿದ್ದರು. ಸುತ್ತಮುತ್ತಣ ವಾತಾವರಣ ಮೌಢ್ಯದ ಕೊಚ್ಚೆಯಿಂದ ನಾರುತ್ತಿತ್ತು. ತಿಂದದ್ದು ಕರಿಚಿಕ್ಕು, ಕುಡಿದದ್ದು ಅಂಬಲಿ, ಉಟ್ಟದ್ದು ಚಿಂದಿ[1]".

ಮನೆಯೊಳಗಿನ ಅಂಥ ಪರಿಸ್ಥಿತಿ ಹೊಸದಲ್ಲ, ಹಳೆಯದೂ ಅಲ್ಲ. ಅದೊಂದು ನಿತ್ಯನೂತನ ಅನುಭವದ ಕುಲುಮೆ. ತನ್ನೊಳಗೆ ಪ್ರವೇಶ ಪಡೆದಂಥವನ್ನೆಲ್ಲ ಅಪ್ಪಟ ಗೊಳಿಸುವಿಕೆಯೇ ಕುಲುಮೆಯ ಕೆಲಸ. ಅವಿದ್ಯಾವಂತನೊಬ್ಬ ತನ್ನ ಭೂಮಿಯಲ್ಲಿ ತೆಗೆದ ಬೆಳೆಗಿಂತ, ವಿದ್ಯಾವಂತ ಅದಕ್ಕಿಂತ ಕಡಿಮೆ ಭೂಮಿಯಲ್ಲಿ ತೆಗೆದ ಬೆಳೆಯೇ ಅಧಿಕ ಪ್ರಮಾಣದಲ್ಲಿದ್ದದ್ದು; ಅಮಾಯಕರ ಸುಲಿಗೆ ಪ್ರಕರಣಗಳು; ಪಟೇಲ ಶಾನುಭೋಗರಿಂದ ಅನಕ್ಷರಸ್ಥ ಆಚಾರಿಯೊಬ್ಬನ ಸುಲಿಗೆಯ ಪ್ರಕರಣ; ಗಡಿಗೆಗಳಲ್ಲಿ ಹಾಲು ಮೊಸರು ತುಂಬಿಕೊಂಡು ಹೆಡಿಗೆಗಳಲ್ಲಿ ಹಳ್ಳಿಗಳಿಂದ ಹೊತ್ತುಕೊಂಡು ಬಂದು ಪಟ್ಟಣದಲ್ಲಿ ಮಾರುವ ಹಳ್ಳಿಯ ಮುಗ್ಧ ಹೆಂಗಸರಿಂದ ಸುಂಕದ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆಯ ಪ್ರಕರಣಗಳು- ಹೀಗೆ ನೂರಾರು ಪ್ರಕರಣಗಳು ಪ್ರೊ. ದೇಜಗೌ ಅವರ ವ್ಯಕ್ತಿತ್ವವನ್ನು ಬಾಲ್ಯದಲ್ಲಿಯೇ ಪಕ್ವಗೊಳಿಸಿದ್ದುವು.

ಅನಕ್ಷರತೆಯೇ ಹಳ್ಳಿಗಳಲ್ಲಿನ ಅಂಥ ಪ್ರಕರಣಗಳಿಗೆ ಕಾರಣ ಎಂಬ ಸತ್ಯ ಗೋಚರಿಸಿದ್ದು ಆ ಪಕ್ವತೆಯ ಲಕ್ಷಣ. ಹೀಗಾಗಿ ಪ್ರೊ. ದೇಜಗೌ ಅವರಲ್ಲಿ ಬಾಲ್ಯದಿಂದಲೂ ಶಿಕ್ಷಣದ ವಿಚಾರಗಳು ಚಿಂತನಾ ಮೂಸೆಯನ್ನು ಪ್ರವೇಶಿಸಿದ್ದುವು. ನನ್ನ ಹಳ್ಳಿಯ ಜನ ಅಕ್ಷರಸ್ಥರಾಗಬೇಕು. ಜ್ಞಾನವಂತರಾಗಬೇಕು, ಇತರರಿಂದ ವಂಚಿತರಾಗದ ಮಟ್ಟಿಗೆ ಅವರು ವಿದ್ಯಾವಂತರಾಗಬೇಕು ಎಂಬ ಹಂಬಲ ಅವರಲ್ಲಿ ತುಂಬಿಕೊಂಡು ಕಾಡತೊಡಗಿತು. ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಮೇಲೆ ಅವರ ಎಲ್ಲ ಆ ಚಿಂತನೆಗಳನ್ನೂ ಕುರಿತು ಮಾತನಾಡಿದ್ದಾರೆ. ಅದೇ ಅವರ ಚಿಂತನೆಗಳ ಮೊದಲ ಪ್ರಸ್ತಾಪವಲ್ಲ. ಅದಕ್ಕಿಂತ ಮುಂಚೆಯೂ ಅನೇಕ ಸಂದರ್ಭಗಳಲ್ಲಿ ಆ ಬಗ್ಗೆಯಲ್ಲ ಮಾತನಾಡಿದ್ದಾರೆ ; ಸಾಧ್ಯವಾದಷ್ಟನ್ನು ಅನುಷ್ಠಾನಕ್ಕೂ ತಂದಿದ್ದಾರೆ.

ಕುಲಪತಿಗಳಾದ ಮೇಲೆ ಪುನರಾವರ್ತಿತವಾದಾಗ ಅವರ ಎಲ್ಲ ಮಾತುಗಳೂ ದಾಖಲಾಗತೊಡಗಿದುವು. ಅಂಥ ದಾಖಲೆಗಳಿಂದಲೆ ಇಲ್ಲಿನ ಬಹುಪಾಲು ಉದ್ಧರಣೆಗಳನ್ನು ಎತ್ತಿಕೊಳ್ಳಲಾಗಿದೆ. ಪ್ರಾಥಮಿಕ ಶಿಕ್ಷಣದಿಂದ ಮೊದಲುಗೊಂಡು ಅತ್ಯುನ್ನತ ಸಂಶೋಧನಾ ಪದವಿಗಳವರೆಗೂ ಅವರ ಚಿಂತನೆಯ ವ್ಯಾಪ್ತಿ ವಿಸ್ತರಿಸಿಕೊಂಡಿದೆ.

'ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡದ ಸ್ಥಾನ' ಎಂಬ ವಿಷಯ ಕುರಿತು ಮಾತನಾಡುತ್ತ ಪ್ರೊ. ಜವರೇಗೌಡರು ಹರಿಸಿರುವ ಚಿಂತನೆ ಹೀಗಿದೆ

"ಮಗುವಿನ ಮನಸ್ಸು ಎಷ್ಟೇ ಚುರುಕಾಗಿದ್ದರೂ ಅದು ಎಳೆಯದೆಂಬುದನ್ನೂ, ಅದರ ಮೇಲೆ ಆಯಾಸವುಂಟುಮಾಡುವಂಥ ಹೊರೆಯನ್ನು ಹೇರಬಾರದೆಂಬ ಸಂಗತಿ ತಜ್ಞ"ರ ಗಮನದಲ್ಲಿರಬೇಕಾದ್ದು ಅತ್ಯವಶ್ಯ. ವಿಷಯಗ್ರಹಣಕ್ಕೆ ಭಾಷಾಪ್ರಭುತ್ವ

1. ಹೋರಾಟದ ಬದುಕು; ಪು. 1

ಅತ್ಯಗತ್ಯವಾದದ್ದರಿಂದ ಯಾವುದಾದರೂ ಒಂದು ಬಾಷೆಯಲ್ಲಿ ಅವನು ವಿಶೇಷ ಸಾಮರ್ಥ್ಯವನ್ನು ಪಡೆಯುವಂತೆ ಅವಕಾಶ ಕಲ್ಪಿಸಬೇಕು.

ಒಂದು ಬಾಷೆಯಲ್ಲಿ ಸಾಮರ್ಥ್ಯ ಪಡೆಯುವುದಕ್ಕೆ ಮುಂಚೆ ಬೇರೊಂದು ಭಾಷೆಯನ್ನು -ಅದರಲ್ಲಿಯೂ ಉಚ್ಚಾರಣೆ, ವರ್ಣಮಾಲೆ, ಕಾಗುಣಿತ, ಪದಸ್ವರೂಪ, ವಾಕ್ಯರಚನೆ ಮೊದಲಾದ ಒಂದೊಂದು ವಿಷಯದಲ್ಲಿಯೂ ತೀರ ಭಿನ್ನವಾದ ಪರಭಾಷೆಯನ್ನು-ಕಲಿಸಲು ಪ್ರಯತ್ನಿಸಿದರೆ ಅವನ ಮನಸ್ಸು ಗೊಂದಲಕ್ಕೀಡಾಗಿ ಮನಃಶಕ್ತಿ ನಿತ್ರಾಣವಾಗಿ, ಯಾವ ಭಾಷೆಯನ್ನೂ ಸಮರ್ಪಕವಾಗಿ ಕಲಿಯದಂತಾಗುತ್ತದೆ.

ಪ್ರಥಮವಾಗಿ ಯಾವುದಾದರೊಂದು ಭಾಷೆಯನ್ನು ಸಮರ್ಪಕವಾಗಿ ಕಲಿತನೆಂದರೆ ಅನಂತರ ಉಳಿದ ಭಾಷೆಗಳನ್ನು ಕಲಿಯುವುದು ಸುಲಭವಾಗುತ್ತದೆ. ಅರಿತ ವಿಷಯದ ಮೂಲಕ ಅರಿಯದ ವಿಷಯವನ್ನು ಕಲಿಯುವಂತೆ ರಕ್ತಗತವಾದ ಭಾಷೆಯ ಮೂಲಕ ಹೊಸ ಭಾಷೆಯನ್ನು ಸರಾಗವಾಗಿ ಕಲಿಯಬಹುದು. [2]

ಇದು ಭಾಷೆಯ ವಿಷಯವಾಯಿತು. ಅರಿತದ್ದರ ಮೂಲಕವೇ ಅರಿಯದ್ದರ ಪರಿಚಯ ಮಾಡಿಕೊಳ್ಳುವುದು ಯಾವುದೇ ಹಂತದಲ್ಲಿ ಅತ್ಯಂತ ಸಹಜ ಕ್ರಮವಾಗುತ್ತದೆ. ಭಾಷೆಯನ್ನಾಗಲಿ ಇತರ ಯಾವುದೇ ವಿಷಯವನ್ನಾಗಲಿ ಕಲಿಯಬೇಕಾದರೆ ಸೂಕ್ತ ಪರಿಸರ ಹಾಗೂ ಸೂಕ್ತ ಸೌಲಭ್ಯಗಳು ಮಕ್ಕಳಿಗೆ ಅಥವಾ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು.

ಹಾಗೆಯೇ ಪಠ್ಯ ವಿಷಯಗಳೂ, ಎಲ್ಲಿಯೂ ಅಡಚಣೆಯಾಗದಂತೆ, ವಿಷಯ, ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಬೆಳೆಯುತ್ತ ಆ ಮೂಲಕ ಜ್ಞಾನ ವಿಸ್ತರಿಸುತ್ತ ಹೋಗಬೇಕಾದ್ದು ಅತ್ಯಗತ್ಯ. ಈ ಮಾತುಗಳಿಗೆ ಸ್ಫೂರ್ತಿ ಸ್ಥಾನದಲ್ಲಿರುವ ಮುಂದಿನ ಎರಡು ಉದ್ಧರಣೆಗಳನ್ನು ನೋಡಬಹುದು.

"ವಿದ್ಯಾಭ್ಯಾಸದ ಸಂಪೂರ್ಣ ಸೌಧ ನಿಂತಿರುವುದು ಪ್ರಾಥಮಿಕ ಶಿಕ್ಷಣದ ತಳಹದಿಯ ಮೇಲೆ ಪ್ರಾಥಮಿಕ ಶಿಕ್ಷಣ ದುರ್ಬಲವಾಗಿದ್ದಲ್ಲಿ ತರುವಾಯದ ವಿದ್ಯಾಭ್ಯಾಸ ಕುಸಿಯುತ್ತದೆ.

"ಬಾಲ್ಯಾವಸ್ಥೆ ಶೀಘ್ರವಾಗಿ ಕಲಿಯುವ ಕಾಲ. ಅದು ಮಾನವ ಜೀವನ ರೂಪುಗೊಳ್ಳುವ ಕಾಲ. ಮಗುವಿನ ಪ್ರತಿಭೆ ವಿಕಾಸಗೊಳ್ಳವಂತಾಗಬೇಕಾದರೆ ಯೋಗ್ಯ ಪರಿಸರವನ್ನು ಸೃಷ್ಟಿಸಬೇಕು, ಸೂಕ್ತ ಸೌಲಭ್ಯಗಳನ್ನೊದಗಿಸಬೇಕು"[3]

"ಕೇವಲ ಅನುಕೂಲಕ್ಕೋಸ್ಕರ ಶೈಕ್ಷಣಿಕ ಕ್ರಮವನ್ನು ಹಂತ ಹಂತವಾಗಿ ವಿಂಗಡಿಸುತ್ತೇವೆಯೇ ಹೊರತು ಇಡೀ ಶಿಕ್ಷಣ ಸಾವಯವ ಘಟಕವೆಂದು ನಾವು ತಿಳಿಯಬೇಕಾಗಿದೆ. ಒಂದು ಹಂತ ಮತ್ತೊಂದರಲ್ಲಿ ವಿಲಯನವಾಗಬೇಕು, ಮುಂದಿನದು ಹಿಂದಿನದರ ಆಸರೆಯ ಮೇಲೆ ನಿಲ್ಲಬೇಕು, ಅವು ಪರಸ್ಪರ ಪೂರಕವಾಗಿಬೇಕು. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದ ಹಂತದವರೆಗಿನ ಶಿಕ್ಷಣವನ್ನು ಮಗುಚಿದ ಪಿರಮಿಡ್ಡಿಗೆ

2. ಕುಲಪತಿಯ ಭಾಷಣಗಳು -4,5; ಪು. 77
3. ಕುಲಪತಿಯ ಭಾಷಣಗಳು -1; ಪು. 192

ಪೋಲಿಸಬಹುದೆಂದು ತೋರುತ್ತದೆ. ಈ ಎಲ್ಲ ಹಂತಗಳನ್ನು ಒಟ್ಟಾಗಿ ಗ್ರಹಿಸಿದಾಗ ಮಾತ್ರ ಉತ್ತಮ ಶಿಕ್ಷಣ ವ್ಯವಸ್ಥೆ ಸಾಧ್ಯ".[4]

ಈ ಸಂದರ್ಭದಲ್ಲಿಯೇ ಪ್ರೊ. ದೇಜಗೌ ಅವರು ಒಂದು ಪ್ರಮುಖ ಸಂಗತಿಯನ್ನು ಪ್ರಸ್ತಾಪಿಸುತ್ತಾರೆ. ಎಲ್ಲ ಮಕ್ಕಳನ್ನೂ ಸಮಾನವಾಗಿ ಕಾಣಬೇಕು ಎಂಬ ತತ್ವಕ್ಕೆ ಕಟ್ಟುಬೀಳಬೇಕಾದ ಸರ್ಕಾರ ಹಾಗೂ ಸರ್ಕಾರದ ಅನುದಾನ ಪಡೆಯುವ ಸಂಸ್ಥೆಗಳು ತೋರಿಸುತ್ತಿರುವ ಮಲತಾಯಿ ಧೋರಣೆಯ ಬಗ್ಗೆ ಕಟುನುಡಿಗಳನ್ನಾಡುತ್ತಾರೆ. ಕೇಂದ್ರ ಸರ್ಕಾರದ ನೌಕರರ ಮಕ್ಕಳಿಗಾಗಿಯೇ ವಿಶಿಷ್ಟ ಪ್ರೌಢ ಶಾಲೆಗಳು ಏಕೆ ? ಅವರೂ ಸಾಮಾನ್ಯ ಶಾಲೆಗಳಲ್ಲೇಕೆ ವ್ಯಾಸಂಗ ಮಾಡಬಾರದು? ಎಂದು ಪ್ರಶ್ನಿಸುವ ಮೂಲಕ ಅಂಥ ನೀತಿಯನ್ನು ಖಂಡಿಸುತ್ತಾರೆ. ಅದರ ಜೊತೆಗೇ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ಪಕ್ಷಪಾತ ನೀತಿಯನ್ನೂ ಖಂಡಿಸುತ್ತಾರೆ.

ವಿದ್ಯೆ ಎಲ್ಲರಿಗೂ ಬೇಕು. ಅದನ್ನು ದೊರಕಿಸಿಕೊಡುವುದು ಸರ್ಕಾರದ ವಿಶ್ವವಿದ್ಯಾನಿಲಯಗಳ ಕರ್ತವ್ಯ, ನಿಜ. ಯಾವ ವಿಷಯವನ್ನು ಆರಿಸಿಕೊಂಡರೂ ವಿದ್ಯಾರ್ಥಿಯಾದವನು ವ್ಯವಸ್ಥಿತ ಚೌಕಟ್ಟಿನೊಳಗೇ ವ್ಯವಹರಿಸಬೇಕಾಗುತ್ತದೆ. ಒಂದು ಪದವಿ ಪಡೆದುಕೊಳ್ಳುವುದೆಂದರೆ ಅವನು ನಿರ್ದಿಷ್ಟ ಹುದ್ದೆಗೆ ಅರ್ಹತೆ ಪಡೆದುಕೊಂಡನೆಂದೇ ಅರ್ಥ. ಅಂಥ ಕಡೆ ಪದವಿಯೊಂದೇ ಅರ್ಹನತೆಯಾಗುತ್ತದೆ. ಮಾನದಂಡವೂ ಆಗುತ್ತವೆ. ಹಾಗಾಗಬಾರದು.

ನಿಜವಾದ ಅರ್ಹತೆ ಗಳಿಸಿಕೊಳ್ಳುವುದೇ ವಿದ್ಯಾರ್ಜನೆಯ ಗುರಿಯಾಗಬೇಕು. ಆದ್ದರಿಂದ" ಅವರವರ ಅಭಿರುಚಿಗೆ ಅವರವರ ಬುದ್ಧಿ ಸಾಮರ್ಥ್ಯಕ್ಕೆ ಅವರವರ ಆವಶ್ಯಕತೆಗೆ ತಕ್ಕಂಥ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸುವುದರಿಂದ ವಿದ್ಯಾರ್ಥಿವೃಂದಕ್ಕೂ ಕ್ಷೇಮ, ಇದರಿಂದ ಶಿಕ್ಷಣದ ಮಟ್ಟವನ್ನೆತ್ತರಿಸಲಿಕ್ಕೂ ಅನುಕೂಲವಾಗುತ್ತದೆ'.[5]

ನಮ್ಮ ಶಿಕ್ಷಣ ವ್ಯವಸ್ಥೆ ಅನರ್ಥಕಾರಿ ಯಾಕಾಗಿದೆಯೆಂಬುದನ್ನು ಪ್ರೊ. ಜವರೇಗೌಡರು ಮುಂದುವರಿದು ಹೀಗೆ ವಿಶ್ಲೇಷಿಸುತ್ತಾರೆ.

"ಗುರುಶಿಷ್ಯ ಸಂಬಂಧ ನಿಕಟವೂ ಗಾಢವೂ ಆಗಿಲ್ಲದಿರುವುದೇ ಈಗಿನ ಶಿಕ್ಷಣ ವ್ಯವಸ್ಥೆಯ ಮಹಾದೋಷ ಅವರಲ್ಲಿ ಪರಸ್ಪರ ಅರಿವು ಮೂಡಿರುವುದರಿಂದಲೇ ನಾನಾ ಸಮಸ್ಯೆಗಳು ಉದ್ಭವವಾಗುತ್ತವೆ."[6]

"ವಿದ್ಯಾರ್ಥಿಯಲ್ಲಿ ಆತ್ಮಪ್ರತ್ಯಯವನ್ನು ಬೆಳೆಸುವ, ಸಮಸ್ಯೆಗಳನ್ನೆದುರಿಸುವ, ಜ್ಞಾನಕುತೂಹಲವನ್ನು ಮೂಡಿಸುವ ಶಿಕ್ಷಣ ಇಲ್ಲವಾಗಿದೆ. ವಿಷಯಗಳನ್ನು ತಲೆಗೆ ಹಿಡಿಯುವುದರಲ್ಲಿ ಈಗಿನ ಪದ್ಧತಿ ಸಂತೃಪ್ತವಾಗಿದೆಯೇ ಹೊರತು ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುವ ವಿಮರ್ಶನ ಶಕ್ತಿಯನ್ನು ಬಲಪಡಿಸುವ ಮಾರ್ಗವನ್ನು ರೂಪಿಸಿಲ್ಲ".[7]

---

4. ಕುಲಪತಿಯ ಭಾಷಣಗಳು -4,5; ಪು. 83
5. ಕುಲಪತಿಯ ಭಾಷಣಗಳು -2; ಪು. 45
6. ಕುಲಪತಿಯ ಭಾಷಣಗಳು -4,5; ಪು. 99
7. ಅದೇ ಪುಟ. 101

ಒಂದು ವಿಶ್ವವಿದ್ಯಾನಿಲಯದ ಸೋಲು ಎಂದರೆ ಒಂದು ರಾಷ್ಟ್ರದ ಸೋಲು ಎಂಬ ಮಾತನ್ನೂ ದೇಜಗೌ ಅವರು ಪರೋಕ್ಷವಾಗಿ ಸೂಚಿಸುತ್ತಾರೆ.

ರೈತಕುಟುಂಬದಿಂದ ಬಂದವರಾದ ಪ್ರೊ. ಜವರೇಗೌಡರ ಮನಸ್ಸು ರೈತರ ಕಾಲಾನುಕೂಲಗಳಿಗೆ ಸ್ಪಂದಿಸುವುದು ತುಂಬ ಸಹಜವಾದ ವಿಚಾರ. ಹೆಣ್ಣುಮಕ್ಕಳು ಮೈನೆರೆದ ಕೂಡಲೆ ಶಾಲೆಬಿಡಿಸುವ ಹವ್ಯಾಸವನ್ನು ಬೆಳಸಿಕೊಂಡಿರುವ ರೈತಬಂಧುಗಳ ಸ್ವಭಾವಕ್ಕೆ ಪ್ರೊ. ಗೌಡರು ಮರುಗುತ್ತಾರೆ ಮಾರ್ಗದರ್ಶನವನ್ನು ನೀಡುತ್ತಾರೆ.

"ಈಗ ಕೊಡುತ್ತಿರುವ ದಸರೆ" 'ಕ್ರಿಸ್‌ಮಸ್, ಬೇಸಗೆ ರಜಾ' ದಿನಗಳನ್ನು ಅನುಕೂಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕು."[8]

"ಸ್ತ್ರೀ ಶಿಕ್ಷಣಕ್ಕೇ ಆದ್ಯತೆ ಇಲ್ಲದಿದ್ದದ್ದೇ ನಾಡಿನ ನಿರಕ್ಷರತೆಗೆ ಹಾಗೂ ಅದರ ದಾರಿದ್ರ್ಯಕ್ಕೆ ಕಾರಣವೆಂದು ಧಾರಾಳವಾಗಿ ಹೇಳಬಹುದು. ಕುಟುಂಬದಲ್ಲೊಬ್ಬ, ಗಂಡಸು ವಿದ್ಯಾವಂತನಾದರೆ ವಿದ್ಯೆಯ ಪ್ರಯೋಜನ ಮುಖ್ಯವಾಗಿ ಅವನೊಬ್ಬನಿಗೇ ದಕ್ಕುತ್ತದೆ. ಹೆಣ್ಣು ವಿದ್ಯಾವಂತಳಾದರೆ ಇಡೀ ಕುಟುಂಬವೇ ಆ ವಿದ್ಯೆಯ ಪ್ರಯೋಜನವನ್ನು ಪಡೆಯುವಂತಾಗುತ್ತದೆ."[9]

ಗಂಡಸು ಕಲಿಯಬಲ್ಲ ಎಲ್ಲ ಬಗೆಯ ವಿದ್ಯೆಗಳೂ ಹೆಂಗಸಿಗೆ ಹೊಂದಲಾರದೆ ಹೋಗಬಹುದು. ಆಸಕ್ತಿಯೇ ಮೊದಲಾಗಿ ಅನೇಕ ಕಾರಣಗಳು ಅದಕ್ಕೆ ಇರಬಹುದು. ಹೆಂಗಸರಿಗೆ ಹೆಚ್ಚು ಆಸಕ್ತಿ ಇರಬಹುದಾದ ಸಂಗೀತ, ಕಲೆ, ಗೃಹವಿಜ್ಞಾನ ಮುಂತಾದ ವಿಷಯಗಳಲ್ಲಿ ಅವರಿಗೆ ಜ್ಞಾನದಾನ ಮಾಡಬಹುದು. ಇಂಥ ವಿಚಾರಗಳಿಂದ ಪ್ರಚೋದಿತರಾದ ಪ್ರೊ. ದೇಜಗೌ ಅವರು ಅವುಗಳಿಗೇ ಮೀಸಲಾದ ಪ್ರತ್ಯೇಕ ಕಾಲೇಜನ್ನೂ ಇಲಾಖೆಯನ್ನೂ ಪ್ರಾರಂಭಿಸಿದರು.

ವಯಸ್ಕರ ಶಿಕ್ಷಣ ಮತ್ತು ರಾಷ್ಟ್ರಾಭಿವೃದ್ಧಿಯ ಬಗೆಗೆ ಅವರು ಪ್ರೌಢ ವಿಚಾರಧಾರೆಯನ್ನು ಹರಿಸುತ್ತಾರೆ. ಅವುಗಳ ಗೊತ್ತುಗುರಿಗಳನ್ನು ಆಗುಹೋಗುಗಳನ್ನು ವಿವರವಾಗಿ ಚರ್ಚಿಸುತ್ತಾರೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಸುಮಾರು ಇಪ್ಪತ್ತೈದು ವರ್ಷಗಳಿಂದ ಅವರ ಆಲೋಚನೆಗಳನ್ನು ಸಲಹೆಗಳನ್ನು ಪಡೆದುಕೊಳ್ಳುತ್ತಿದೆ.

ಕುಲಪತಿಗಳಾಗುವ ಬಹಳ ಮುಂಚೆಯೇ ಪ್ರೊ. ಗೌಡರು ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದ್ದರು. ಅಂತಹ ಯೋಜನೆಗಳಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣದ ಯೋಜನೆಯೂ ಒಂದು.

ಮುಂದೊಂದು ದಿನ ವಿಶ್ವವಿದ್ಯಾನಿಲಯದ ಕುಲಪತಿಯಾದೇನೆಂದು ಪ್ರೊ. ಜವರೇಗೌಡರು ಕನಸು ಕಂಡವರಲ್ಲ. ಸ್ಥಾನಮಾನಗಳನ್ನು ಕುರಿತ ಕನಸುಗಳು ಎಂದೂ ಅವರನ್ನು ಸೋಂಕಲಿಲ್ಲ. ಜ್ಞಾನಾಭಿವೃದ್ಧಿ ಹಾಗೂ ಆ ಮೂಲಕ ರಾಷ್ಟ್ರಾಭಿವೃದ್ಧಿ - ಇದು ಅವರನ್ನು ನಿರಂತರವಾಗಿ ಕಾಡಿದ ಕನಸು.

---

8. ಬೆರಕೆ ಸೊಪ್ಪು, ಪು. 103
9. ಕುಲಪತಿಯ ಭಾಷಣಗಳು -3; ಪು. 214

ಆದ್ದರಿಂದ, ಸ್ಥಾನಮಾನಗಳ ನಿರೀಕ್ಷೆಯಲ್ಲಿ ತೆಪ್ಪಗೆ ಕುಳಿತುಕೊಳ್ಳದೆ, ತಾವು ಇದ್ದಲ್ಲಿಂದಲೆ ತಮ್ಮ ಕನಸುಗಳನ್ನೆಲ್ಲ ನನಸು ಮಾಡಿಕೊಳ್ಳಲು ಶ್ರಮಿಸಿದ ಶ್ರಮ ಜೀವಿ ಅವರು. ತಾವು ಅಧಿಕಾರಕ್ಕೆ ಬರುವ ಬಹಳ ಮುಂಚೆಯೇ ನನಸಾದ ಅವರ ಪ್ರಮುಖ ಕನಸುಗಳಲ್ಲೊಂದೆಂದರೆ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ.

ಈ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗ ಕುಲಪತಿಗಳಾಗಿದ್ದವರು ಡಾ. ಕೆ. ಎಲ್. ಶ್ರೀಮಾಲಿ ಅವರು. ಈ ಬಗೆಯ ಶಿಕ್ಷಣ ಶ್ರೀಸಾಮಾನ್ಯನಿಗೆ ವರವಾಗಬಲ್ಲದು ಎಂಬ ಸತ್ಯವನ್ನು ಶ್ರೀಮಾಲಿಯವರ ಗಮನಕ್ಕೆ ತಂದವರು ಪ್ರೊ. ಗೌಡರು. ಇದು ಅಸ್ತಿತ್ವಕ್ಕೆ ಬರುವ ತನಕ ಹಗಲಿರುಳೂ ಅವರನ್ನು ಕಾಡಿದರು.

"ಅಂಚೆ ಶಿಕ್ಷಣದಷ್ಟೇ ಅದಕ್ಕಿಂತ ಮಿಗಿಲಾಗಿಯೆ ತೆರಪಿನ ಶಿಕ್ಷಣವೂ ಪ್ರಮುಖವಾದುದು. ಇದರ ಮೂಲಕ ವಿಶ್ವವಿದ್ಯಾನಿಲಯ ಶ್ರೀಸಾಮಾನ್ಯರನ್ನು ಸಹ ತನ್ನ ತೆಕ್ಕೆಗೆ ಸೇರಿಸಿಕೊಳ್ಳುತ್ತದೆ; ವಿಶ್ವವಿದ್ಯಾನಿಲಯ ಕೇವಲ ಕೆಲವರಿಗೆ ಮಾತ್ರವಲ್ಲ ಸರ್ವರಿಗೂ ಸೇರಿದ್ದು, ಸರ್ವೋದಯವೇ ಅದರ ಗುರಿ ಎನ್ನುವುದನ್ನು ತೋರಿಸಿಕೊಡುತ್ತದೆ."[10]

-ಇದು ಪ್ರೊ. ಜವರೇಗೌಡರು ಕುಲಪತಿಗಳಾದ ಮೇಲೆ ಬಹಿರಂಗವಾಗಿ ಆಡಿದ ಮಾತು. ಆದರೆ ಡಾ. ಶ್ರೀಮಾಲಿಯವರನ್ನು ಒಲಿಸಿಕೊಳ್ಳಬೇಕಾದಾಗ ಇಂಥ ಮಾತುಗಳೂ ಪ್ರಭಾವ ಬೀರಿದ್ದಾವು.

ಅಂಚೆ ಮತ್ತು ತೆರಪಿನ ಶಿಕ್ಷಣ ವ್ಯವಸ್ಥೆ ನಿಸ್ಸಂದೇಹವಾಗಿ ಪ್ರೊ. ಜವರೇಗೌಡರ ಬಹುದೊಡ್ಡ ಸಾಧನೆಗಳಲ್ಲಿ ಒಂದು. ಅದೀಗ ಹೆಮ್ಮರವಾಗಿ ಬೆಳೆದಿದೆ. ದೇಶದ ಮೂಲೆ ಮೂಲೆಗಳಿಂದ ಜ್ಞಾನದಾಹಿಗಳನ್ನು ಆಕರ್ಷಿಸುತ್ತ ಪ್ರತ್ಯೇಕ ವಿಶ್ವವಿದ್ಯಾನಿಲಯವಾಗುವಷ್ಟು ಎತ್ತರಕ್ಕೆ ಬೆಳೆದು ಬಂದಿದೆ.

ಇಷ್ಟಾದರೂ ಅಂಥ ಬೃಹತ್ ಸಂಸ್ಥೆಯ ಮೂಲಕಾರಣರು ತಾವೆಂಬುದನ್ನು, ಅದು ಸತ್ಯವೇ ಆಗಿದ್ದರೂ, ಪ್ರೊ. ಜವರೇಗೌಡರು ಎಲ್ಲಿಯೂ ಹೇಳಿಕೊಂಡದ್ದಿಲ್ಲ. ಆ ಬಗೆಯ ಸ್ವಭಾವಕ್ಕೆ ಅವರು ಎಂದೂ ಹೊರತು. ಅಂಚೆ ಶಿಕ್ಷಣವನ್ನು ಕುರಿತ ರಾಷ್ಟ್ರೀಯ ವಿಚಾರಗೋಷ್ಠಿಯೊಂದರಲ್ಲಿ ಅವರು ಆಡಿರುವ ಮಾತು ಈ ಸಂದರ್ಭದಲ್ಲಿ ಉಲ್ಲೇಖನೀಯ:

"ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಾಪೇಕ್ಷವಾಗಿ ಹೊಸ ಶಿಕ್ಷಣವಾದರೂ, ಒಂದು ದೃಷ್ಟಿಯಲ್ಲಿ ಅದು ಈ ವಿಶ್ವವಿದ್ಯಾನಿಲಯದ ಸ್ಥಾಪಕರ (ಕೃಷ್ಣರಾಜ ಒಡೆಯರ್ ಅವರ) ದೂರದೃಷ್ಟಿಯ ತಾರ್ಕಿಕ ಈಡೇರಿಕೆಯೇ ಆಗಿದೆ."[11]

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಥ ಯೋಜನೆಯೊಂದು ಹುಟ್ಟಿಕೊಳ್ಳುತ್ತಿರುವಾಗ, ಆ ಕೀರ್ತಿ ವಿಶ್ವವಿದ್ಯಾನಿಲಯಕ್ಕೆ, ಆ ಮೂಲಕ ಅದರ

---

10. ಕುಲಪತಿಯ ಭಾಷಣಗಳು -4,5; ಪು.313
11. ಕುಲಪತಿಯ ಭಾಷಣಗಳು -3; ಪು. 230

ಸ್ಥಾಪಕರಿಗೆ, ಸೇರಬೇಕೆಂಬುದು ತರ್ಕಬದ್ಧ ಮಾತು. ಅಂಥ ವಿನಯದ ಮಾತೊಂದನ್ನು ಆಡುವ ಮೂಲಕ ಪ್ರೊ. ಜವರೇಗೌಡರ ವ್ಯಕ್ತಿತ್ವ ಮತ್ತಷ್ಟು ವೃದ್ಧಿಸಿದಂತಾಗಿದೆ.

ಶಿಕ್ಷಣದ ಗುರಿ ಜ್ಞಾನಾರ್ಜನೆ. ಜ್ಞಾನಾರ್ಜನೆಗೆ ಅನೇಕ ಮಾರ್ಗಗಳು. ಪ್ರತ್ಯಕ್ಷ ಶಿಕ್ಷಣಕ್ಕೆ ಒಂದು ವ್ಯವಸ್ಥೆಯಿರುವಂತೆ ಪರೋಕ್ಷ ಶಿಕ್ಷಣಕ್ಕೂ ಒಂದು ವ್ಯವಸ್ಥೆ ಇರುತ್ತದೆ. ಆಕರ ಗ್ರಂಥಗಳು ಅಂಥ ಪರೋಕ್ಷ ಶಿಕ್ಷಣಕ್ಕೆ ಉದಾಹರಣೆಗಳಾಗುತ್ತವೆ. ವಿಶ್ವಕೋಶ ಎಂಬುದು ಯಾವುದೇ ಭಾಷೆಯ ಹೆಮ್ಮೆ. ಅದನ್ನುಳ್ಳ ಭಾಷೆ ಶ್ರೀಮಂತ ಭಾಷೆಯೆನಿಸುತ್ತದೆ. ಕನ್ನಡದಲ್ಲೊಂದು ವಿಶ್ವಕೋಶ ಇಲ್ಲದ್ದು ಪ್ರೊ. ದೇಜಗೌ ಅವರನ್ನು ಹಿಂದೊಮ್ಮೆ ಸದಾ ಕಾಡುತ್ತಿದ್ದ ಚಿಂತೆ.

1954 ರಷ್ಟು ಹಿಂದೆಯೇ ರಾಷ್ಟ್ರಕವಿ ಕುವೆಂಪು ಅವರು ಕನ್ನಡ ವಿಶ್ವಕೋಶದ ಯೋಜನೆಯನ್ನು ಸರ್ಕಾರದ ಮುಂದಿಟ್ಟಿದ್ದರು. ಮಹಾಕವಿಯ ಆ ಕನಸು ಕೇವಲ ಎರಡು ವರ್ಷಗಳಲ್ಲಿ ಜಾರಿಗೆ ಬಂದು 1956 ರಲ್ಲಿ ಕಾರ್ಯ ಪ್ರಾರಂಭವಾಯಿತು. ಸರ್ಕಾರೀ ವ್ಯವಸ್ಥೆಯ ನೆರಳಿನಲ್ಲಿ ಹನ್ನೆರಡು ವರ್ಷಗಳಾದರೂ ಒಂದೇ ಒಂದು ಸಂಪುಟವೂ ಪ್ರಕಟವಾಗಲಿಲ್ಲ. ಪ್ರೊ. ಜವರೇಗೌಡರಂಥ ಕನ್ನಡದ ಪ್ರಾಮಾಣಿಕ ಸೇವಕರಿಗೆ ಈ ವಿಳಂಬ ಸಹ್ಯವಾಗಲಿಲ್ಲ. ಸರ್ಕಾರದೊಡನೆ ಸಂಪರ್ಕ ಬೆಳೆಸಿದರು. ವಿಳಂಬ ನೀತಿಯನ್ನು ಕಟುವಾಗಿ ಟೀಕಿಸಿದರು. ಸತತವಾಗಿ ಒತ್ತಾಯಿಸತೊಡಗಿದರು. ಎಷ್ಟು ಶ್ರಮಪಟ್ಟರೂ ಆ ಗಜಗರ್ಭ ಕದಲಲಿಲ್ಲ.

ಕಡೆಗೆ ಅನ್ಯಮಾರ್ಗವಿಲ್ಲದೆ, ಆ ಯೋಜನೆಯನ್ನು ನಮಗೆ ವಹಿಸಿಕೊಟ್ಟರೆ ಆರು ತಿಂಗಳಿಗೊಂದರಂತೆ ಸಂಪುಟಗಳನ್ನು ಪ್ರಕಟಿಸುತ್ತೇವೆ ಎಂಬುದಾಗಿ ಸರ್ಕಾರಕ್ಕೆ ಸವಾಲೆಸೆದರು. ಆಗ ವಿದ್ಯಾಸಚಿವರಾಗಿದ್ದ ಶ್ರೀ ಕೆ. ವಿ. ಶಂಕರಗೌಡರು ಪ್ರೊ. ಜವರೇಗೌಡರ ನಿಷ್ಠೆಯನ್ನೂ ಪ್ರಾಮಾಣಿಕತೆಯನ್ನೂ ಛಲದಿಂದ ಕೆಲಸ ನಿರ್ವಹಿಸುವ ಸ್ವಭಾವವನ್ನೂ ಅರಿತವರಾಗಿದ್ದುದರಿಂದಲೋ ಏನೋ ಪ್ರೊ. ಗೌಡರ ಸವಾಲು ಫಲ ಕೊಟ್ಟಿತು.

ಆ ಇಡೀ ಯೋಜನೆ, ಅಲ್ಲಿನ ಸಿಬ್ಬಂದಿಸಮೇತ, ಬೆಂಗಳೂರಿನ ವಿಧಾನ ಸೌಧದಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟಿತು. ಹಾಗೆ ವಿಶ್ವಕೋಶದ ಯೋಜನೆ ವರ್ಗಾಯಿಸಲ್ಪಟ್ಟಾಗ ಅದು ಯಾವ ಸ್ಥಿತಿಯಲ್ಲಿತ್ತು ಎಂಬುದನ್ನು ಪ್ರೊ. ಜವರೇಗೌಡರ ಮಾತುಗಳಲ್ಲೇ ಹೇಳುವುದುಚಿತ:

“ವಿಶ್ವಕೋಶದ ಕಛೇರಿ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾವಣೆ ಆದನಂತರ ಅದರ ಅವ್ಯವಸ್ಥೆಯನ್ನು ಸರಿಪಡಿಸುವುದೇ ದೊಡ್ಡ ಕೆಲಸವಾಯಿತು. ವಿಷಯಗಳ ಪಟ್ಟಿಯನ್ನು ಪುನರ್ ಪರಿಶೀಲಿಸಿದಾಗ ಎಷ್ಟೋ ಸಂಗತಿಗಳು ಸರಿಯಾಗಿಲ್ಲವೆಂದು ತಿಳಿಯಿತು. ಪ್ರಕಟಣೆಗಾಗಿ ಬಂದಿದ್ದ ಅನೇಕ ಲೇಖನಗಳು ತದ್ರೂಪದಲ್ಲಿ ಮುದ್ರಣಕ್ಕೆ ಯೋಗ್ಯವಾಗಿರಲಿಲ್ಲವೆಂದು ಗೊತ್ತಾಯಿತು.

“ವಿಶ್ವಕೋಶದ ರೂಪುರೇಷೆಗಳಿಗೆ ಸುಗುಣವಾಗಿ ಅವನ್ನು ಸಿದ್ಧಪಡಿಸಿದಂತೆ ಕಂಡುಬರಲಿಲ್ಲ. ಕೆಲವು ಲೇಖನಗಳಲ್ಲಂತೂ ಕಾಗುಣಿತ, ವಾಕ್ಯರಚನೆ,

ವಿಷಯುಸಂಬಂಧವಾದ ದೋಷಗಳು ಸಾಕಷ್ಟಿದ್ದುವು. ಕೆಲವು ಇಂಗ್ಲಿಷ್ ಲೇಖನಗಳ ಅನುವಾದಗಳೆಂದು ತೋರಿದುವು. ಮತ್ತೆ ಕೆಲವು ಪ್ರಸಾರಾಂಗದ ನಾಲ್ಕಾಣೆ ಮಾಲೆ ಅಥವಾ ಪಠ್ಯಪುಸ್ತಕ ಮಾಲೆಗೆ ಯೋಗ್ಯವಾದುವೆಂದು ತಿಳಿಯಿತು. ಇವನ್ನೆಲ್ಲ ಸರಿಪಡಿಸದೆ ಅಚ್ಚುಕೂಟಕ್ಕೆ ಕಳಿಸುವಂತಿರಲಿಲ್ಲ. ಇದಕ್ಕೆ ದಕ್ಷರಾದ ಕುಶಾಗ್ರಮತಿಯ ಸಂಪಾದಕರು ಬೇಕು." [12]

ಇಷ್ಟಾದರೂ ಅವರು ಹಿಂದೆ ಮಾಡಿದವರನ್ನು ದೂಷಿಸುವುದಿಲ್ಲ. " ಆದರೆ ಕೆಲವು ಸಹಜ ಅನಿವಾರ್ಯ ಕಾರಣಗಳಿಂದಾಗಿ ಆ ಯೋಜನೆ ಮಂದಗತಿಯಲ್ಲಿ ಸಾಗುತ್ತಿತ್ತು" [13] ಎಂದು ಮಾತ್ರ ಹೇಳುತ್ತಾರೆ. ಪ್ರಾರಂಭಿಕ ಸಂತವಾದ ಭ್ರೂಣಾವಸ್ಥೆಯ ಹನ್ನೆರಡು ವರ್ಷಗಳಲ್ಲಿ ಆಗಿದ್ದ ಕೊರತೆಗಳನ್ನೆಲ್ಲ ತುಂಬಿಕೊಳ್ಳುವುದು ಅಗತ್ಯವಾಗಿತ್ತು.

ವಿಜ್ಞಾನ ಲೇಖನಗಳಿಗಾಗಿ ಒಬ್ಬರು ತಜ್ಞರು, ಮಾನವಿಕ ವಿಭಾಗಕ್ಕಾಗಿ ಒಬ್ಬರು ತಜ್ಞರು. ಭಾಷಾ ಸಂಯೋಜನೆಗಾಗಿ ಒಬ್ಬರು ತಜ್ಞರು ವಿವಿಧ ವಿಷಯಗಳನ್ನೂ ಭಾಷೆಯನ್ನೂ ಬಲ್ಲ ಸಹಾಯಕರು ತುರ್ತಾಗಿ ಬೇಕಾಗಿದ್ದರು. ಅಂಥ ತಜ್ಞರಿಲ್ಲದೆ ಕೆಲಸ ಮಾಡುವುದು ಅಸಾಧ್ಯವಾಗಿತ್ತು. ಆಗ ಪ್ರೊ. ದೇಜಗೌ ಅವರು ಕರ್ನಾಟಕದ ಉದ್ದಗಲಕ್ಕೂ ತಜ್ಞರಿಗಾಗಿ ಅನ್ವೇಷಣೆ ನಡೆಸಿದರು.

ಕಡೆಗೆ, ವಿಜ್ಞಾನ ಸಂಪಾದಕರನ್ನಾಗಿ ಪ್ರೊ. ಜಿ. ಟಿ. ನಾರಾಯಣರಾವ್, ಮಾನವಿಕ ವಿಭಾಗದ ಸಂಪಾದಕರನ್ನಾಗಿ ಪ್ರೊ. ಎಚ್ಚೆಸ್ಕೆ, ಸಂಯೋಜಕ ಸಂಪಾದಕರನ್ನಾಗಿ ಪ್ರೊ. ಎನ್. ಪ್ರಹ್ಲಾದರಾವ್ ಅವರುಗಳನ್ನು ಆಯ್ಕೆ ಮಾಡಿಕೊಂಡರು. ಇದು ಕನ್ನಡದ ಕೆಲಸ, ನೀವು ಬಂದು ಮಾಡಲೇಬೇಕಾದ ಅಗತ್ಯ ಕೆಲಸ ಇತ್ಯಾದಿ ಹೇಳಿ ಅವರ ಮನವೊಲಿಸಿ ಕರೆತಂದರು, ಒಬ್ಬೊಬ್ಬರು ಸೂಕ್ತ ಸಹಾಯಕರೂ ದೊರೆತರು.

ಅಲ್ಲಿಂದ ಕನ್ನಡ ವಿಶ್ವಕೋಶದ ಕೆಲಸ ಶೀಘ್ರಗತಿಯಲ್ಲಿ ಸಾಗಿತು. ಮಾತಿಗೆ ತಕ್ಕಂತೆ ಆರು ತಿಂಗಳಿಗೊಂದರಂತೆ ಅನೇಕ ಸಂಪುಟಗಳು ಪ್ರಕಟವಾದವು.

ಮೊದಲನೆಯ ಸಂಪುಟದ ಬಿಡುಗಡೆಯ ಸಂದರ್ಭದಲ್ಲಿ (೧೯೬೮) ಅಷ್ಟು ಹೊತ್ತಿಗಾಗಲೇ ಅವರು ಕುಲಪತಿಗಳಾಗಿ ನೇಮಕಗೊಂಡಿದ್ದರು- ಪ್ರೊ. ಜವರೇಗೌಡರು ಆಡಿದ ಮಾತುಗಳು, ಹದಿನೆಂಟು ವರ್ಷಗಳು ಸಂದರೂ ಪ್ರಸ್ತುತ ಎನಿಸುತ್ತವೆ.

"ಜ್ಞಾನಕ್ಕೆ ಆದಿ ಅಂತ್ಯವಿಲ್ಲ. ಈ ಅನಂತವಾದ ಜ್ಞಾನವನ್ನು ಒಂದು ಕಡೆ ಹಿಡಿದಿಡಲು ವಿಶ್ವಕೋಶ ಪ್ರಯತ್ನಿಸುತ್ತಿದೆ. ವ್ಯಾವಹಾರಿಕ ದೃಷ್ಟಿಯಿಂದ ಕನ್ನಡ ವಿಶ್ವಕೋಶಕ್ಕೆ ಮೊದಲಿದ್ದರೂ, ಅದಕ್ಕೆ ಕೊನೆಯಿಲ್ಲ. ಅದೊಂದು ನಿರಂತರ ಕ್ರಿಯೆ ವಿಜ್ಞಾನಗಳ ಬೆಳವಣಿಗೆ ನಿಂತಾಗ, ವಿಶ್ವಕೋಶದ ಕಾರ್ಯವು ಸ್ಥಗಿತವಾಗುತ್ತದೆ." [14]

"ಈಗ ವಿಶ್ವಕೋಶದ ಕಚೇರಿ ಒಂದು ನಿಯತ ಅವಧಿಯ ಯೋಜನೆಯ ಅಂಗವಾಗಿ ಕೆಲಸ ಮಾಡುತ್ತಿದೆ. ಅದರಿಂದಾಗಿ ಅಲ್ಲಿಯ ಕೆಲಸಗಾರರಿಗೆ ಖಾಯಂ

---

12. ಕುಲಪತಿಯ ಭಾಷಣಗಳು 1; ಪು.28
13. ಕುಲಪತಿಯ ಭಾಷಣಗಳು 1; ಪು. 27
14. ಕುಲಪತಿಯ ಭಾಷಣಗಳು 1; ಪು.29

ಇಲಾಖೆಯ ಕೆಲಸಗಾರರಿಗೆ ದೊರೆಯುವ ಸೌಲಭ್ಯ ಅನುಕೂಲಗಳು ಇರುವುದಿಲ್ಲ. ಇದು ಕೇವಲ ಒಂದು ಯೋಜನೆಗಾಗಿ ಉಳಿಯದೆ ಖಾಯಂ ವ್ಯವಸ್ಥೆ ಆಗಿ ಮಾರ್ಪಾಡಾಗುವುದರಿಂದ ಅಲ್ಲಿಯ ಪ್ರಾಮಾಣಿಕ ಗಣ್ಯ ವಿದ್ವಾಂಸರುಗಳಿಗೂ ಪ್ರಾಮಾಣಿಕತೆಯಿಂದ ದುಡಿಯುವ ಅವರ ಸಿಬ್ಬಂದಿವರ್ಗಕ್ಕೂ ಉಚಿತ ಪ್ರೋತ್ಸಾಹ ನೀಡಿದಂತಾಗುತ್ತದೆ. ಅದು ನಾವವರಿಗೆ ತೋರುವ ಅನುಗ್ರಹವಲ್ಲ; ನಾವು ಮಾಡಬೇಕಾದ ಕರ್ತವ್ಯ."[15]

ಇದು ಸಾಮಾನ್ಯ ವಿಶ್ವಕೋಶದ ಮಾತಾಯಿತು. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕ ವಿಸ್ತೃತ ವಿಶ್ವಕೋಶದ ಕಲ್ಪನೆ ಒಂದೆಯೇ ಪ್ರೊ. ದೇಜಗೌ ಅವರ ಆಲೋಚನೆಯಾಗಿತ್ತು. ಅವರು ಕುಲಪತಿಗಳಾದ ಮೇಲೆ ಈ ಯೋಜನೆಗೂ ಸರ್ಕಾರವನ್ನು ಒಪ್ಪಿಸಿ ಕಾರ್ಯಗತಗೊಳಿಸಿದರು. ಪರಿಣಾಮಕಾರಿ ಕರ್ನಾಟಕವನ್ನು ಕುರಿತ ಬೃಹತ್ ಗಾತ್ರದ 'ವಿಷಯ ವಿಶ್ವಕೋಶ'ದ ಒಂದು ಸಂಪುಟ ಈಗಾಗಲೇ ಪ್ರಕಟವಾಗಿದೆ.

'ನಮ್ಮ ಬಡತನ ನಮ್ಮ ಶಿಕ್ಷಣದಲ್ಲಿ ಪ್ರತಿಬಿಂಬಿತವಾಗುತ್ತದೆ' ಎಂದು ಒಂದು ಸಂದರ್ಭದಲ್ಲಿ ಪ್ರೊ. ಜವರೇಗೌಡರು ಹೇಳಿದ್ದು ನೂರಕ್ಕೆ ನೂರು ಸತ್ಯವಾದ ಮಾತು. ಹಾಗೆ ಹೇಳಿ ಅವರು ಕೇವಲ ತಾತ್ತ್ವಿಕ ಮಟ್ಟದಲ್ಲೇ ನಿಂತುಬಿಡುವುದಿಲ್ಲ. ಅದೇ ಅವರ ವೈಶಿಷ್ಟ್ಯ. ತಮಗೆ ಸರಿ ಎನಿಸಿದ್ದನ್ನು, ಬಡವರ ಹಳ್ಳಿಗರ ದೀನದಲಿತರ ಉದ್ಧಾರಕ್ಕೆ ಸುಲಭ ಮಾರ್ಗವಾಗಬಲ್ಲಂಥದನ್ನು ಪಟ್ಟು ಹಿಡಿದು ಸಾಧಿಸುವ ಛಲ ಅವರದು.

ಆ ನಿಟ್ಟಿನಲ್ಲಿ ಅವರ ನಿಷ್ಠೆ ಅಸದೃಶ. ಅನೇಕ ಸಂದರ್ಭಗಳಲ್ಲಿ ಅವರು ನಿರ್ಮಿಸಿದ ಕಾಲುದಾರಿಯೇ ರಾಜಮಾರ್ಗದ ರೂಪ ಮನ್ನಣೆ ಪಡೆದದ್ದುಂಟು. ಹಾಗಾಗಿ ಅವರ ಒಂದೊಂದು ಹೆಜ್ಜೆಯೂ ಒಂದೊಂದು ಯಶಸ್ವೀ ಪ್ರಯೋಗಗಳಾಗಿ ಇವತ್ತು ಕಂಗೊಳಿಸುತ್ತಿವೆ.

ಜಾನಪದವನ್ನು ಕನ್ನಡ ಎಂ. ಎ. ತರಗತಿಯ ಬೋಧನಾ ವಿಷಯವನ್ನಾಗಿ ಗೊತ್ತುಪಡಿಸಿ ಜಾರಿಗೆ ತಂದಾಗ ಪ್ರೊ. ಗೌಡರು ಅಸಂಖ್ಯ ಟೀಕೆಗಳನ್ನು, ವ್ಯಂಗ್ಯ ಅವಹೇಳನಗಳನ್ನೂ, ಎದುರಿಸಬೇಕಾಯಿತು. ಅದು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಕನ್ನಡದ ಅನಕ್ಷರಸ್ಥ ಹಳ್ಳಿಗರ ಸಾಹಿತ್ಯ ಸಂಸ್ಕೃತಿಗಳು ಇವತ್ತು ಜಗತ್ತಿನಾದ್ಯಂತ ಸಂಶೋಧನೆಯ ಸಾಮಗ್ರಿಗಳಾಗಿವೆ. ಹೀಯಾಳಿಸುತ್ತಿದ್ದವರೆಲ್ಲ ಮೂಕವಿಸ್ಮಿತರಾಗಿ ಮೌನಪ್ರೇಕ್ಷಕರಾಗಿದ್ದಾರೆ.

ಪ್ರೊ. ಜವರೇಗೌಡರು ಕುಲಪತಿಗಳಾಗಿ ನೇಮಕಗೊಂಡ ಮೇಲೆ ನಡೆದ ಮೊದಲ ಘಟಿಕೋತ್ಸವ ಒಂದು ಐತಿಹಾಸಿಕ ಸಂದರ್ಭ. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಎಂದೂ ಕಾಣಲಾಗದಿದ್ದ ಒಂದು ಬಗೆಯ ಅವರ್ಣನೀಯ ಆತ್ಮೀಯತೆಯನ್ನು ಆ ಘಟಿಕೋತ್ಸವ ಗಳಿಸಿಕೊಂಡಿತು. ಜನಸಾಮಾನ್ಯರ ಸಾಹಿತ್ಯ ಸಂಸ್ಕೃತಿಗಳನ್ನು ಅಷ್ಟು ಹೊತ್ತಿಗಾಗಲೇ ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಏರಿಸಿದ್ದ ಪ್ರೊ.

---

15. ಅದೇ; ಪು. 31

ಗೌಡರು ಆ ಘಟಿಕೋತ್ಸವದಲ್ಲಿ ಅದೇ ಜನಸಾಮಾನ್ಯರನ್ನು ಸುಲಭವಾಗಿ ಮುಟ್ಟುವ ಕನ್ನಡವನ್ನು ಮೆರೆಯಿಸಿದರು.

ಘಟಿಕೋತ್ಸವ ಕನ್ನಡದಲ್ಲಿ ನಡೆಯುತ್ತದೆ ಎಂಬ ಸುದ್ದಿ ಹರಡುತ್ತಿದ್ದಂತೆ ಹರಕುಮುರುಕು ಇಂಗ್ಲಿಷಿನಲ್ಲೆ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿಕೊಳ್ಳುತ್ತಿದ್ದ ವಿದ್ವಾಂಸ ಪ್ರಭೃತಿಗಳೆಲ್ಲ ಪಿತೂರಿಕೋರರಾಗಿ ದೊಡ್ಡದೊಂದು ಕೋಲಾಹಲವನ್ನೇ ಉಂಟುಮಾಡಿದರು. ಪತ್ರಿಕೆಗಳಲ್ಲಿ ದಿನವೂ ಈ ವಿಷಯ ಸುದ್ದಿಯಾಗುವಂತೆ ಮಾಡಿದರು. ವಾಚಕರ ವಾಣಿ ಕಾಲಂಗಳಲ್ಲಿ ಬೈಗುಳಗಳ ಟೀಕೆಗಳ ಸುರಿಮಳೆಯಾಯಿತು. ಎಲ್ಲಿ ನೋಡಿದರೂ ಪ್ರೊ. ಜವರೇಗೌಡರನ್ನು ಖಳನಾಯಕರಂತೆ ಚಿತ್ರಿಸತೊಡಗಿದರು.

ಕನ್ನಡದ ಬಗೆಗಿನ ಅವರ ಟೀಕೆಗಳೂ ಪರೋಕ್ಷವಾಗಿ ಕನ್ನಡಕ್ಕೆ ಒಳ್ಳೆಯದನ್ನೇ ಮಾಡಿದ್ದುವು. ಅದನ್ನು ಅರ್ಥಮಾಡಿಕೊಳ್ಳುವ ವಿವೇಕ ಮೂರ್ಖರಿಗೆ ಎಲ್ಲಿಂದ ಬರಬೇಕು? ಆ ಮೂರ್ಖರು ಕಾರಿದ ವಿಷವನ್ನೆಲ್ಲ ನುಂಗಿ ಪ್ರೊ| ಗೌಡರು ನಂಜುಂಡರಾಗಿ ನಿಂತು ಘಟಿಕೋತ್ಸವವನ್ನು ಕನ್ನಡದಲ್ಲೆ ಯಶಸ್ವಿಯಾಗಿ ನಿರ್ವಹಿಸಿ ಅಪಾರ ಪ್ರಶಂಸೆಗೆ ಪಾತ್ರರಾದಾಗ ಆ ಪಿತೂರಿಕೋರರೆಲ್ಲ ಸದ್ದಿಲ್ಲದೆ ತಮ್ಮ ತಮ್ಮ ಬಿಲ ಸೇರಿಕೊಂಡದ್ದುಂಟು.

ಕಟ್ಟಕಡೆಯ ಮನುಷ್ಯನಿಗೆ ಮೊಟ್ಟಮೊದಲ ಸ್ಥಾನ-ಇದು ಪ್ರೊ. ದೇಜಗೌ ಅವರ ಅಹರ್ನಿಶಿಯ ಕಳಕಳಿ. ಅದು ಅಂಥ ಮನುಷ್ಯನಿಗೆ ವಿದ್ಯೆಯ ಮೂಲಕವೇ ದೊರೆಯುವಂಥದು ಎಂಬ ಸತ್ಯವನ್ನು ಕಂಡುಕೊಂಡು ತಮ್ಮ ಬದುಕಿನುದ್ದಕ್ಕೂ ಅದಕ್ಕಾಗಿ ಶ್ರಮಿಸುತ್ತ ಬಂದವರು ಅವರು. ಎಪ್ಪತ್ತು ವರ್ಷ ವಯಸ್ಸು ದಾಟುತ್ತಿರುವ ಈ ಕ್ಷಣದಲ್ಲೂ ಪ್ರಯೋಗ ಶೀಲರಾಗಿಯೇ ಬದುಕುತ್ತಿರುವವರು.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಅಧ್ಯಕ್ಷರಾಗಿ ಅವರು ನಡೆಸುತ್ತಿರುವ ಮತ್ತು ಈಗಾಗಲೇ ಯಶಸ್ಸನ್ನು ಕಾಣತೊಡಗಿರುವ ಒಂದು ಪ್ರಮುಖ ಪ್ರಯೋಗವೆಂದರೆ ಫೇಲಾದ ಅಥವಾ ಕನಿಷ್ಠ ಅಂಕಗಳನ್ನು ಪಡೆದು ಹಿಂದುಳಿದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅವರಿಗೆ ಶಿಕ್ಷಣ ನೀಡಿ ಎಲ್ಲರಂತೆ ಮುಂದುವರಿಯಲು ಸಹಾಯಕವಾಗುವಂತೆ ಶ್ರಮಿಸುತ್ತಿರುವುದೇ ಆಗಿದೆ. ಈ ಪ್ರಯೋಗದಲ್ಲಿಯೂ ಪ್ರೊ. ಗೌಡರು ಸೋಲನ್ನು ಕಂಡಿಲ್ಲ ಎಂಬ ಸತ್ಯವೇ ಅವರೊಬ್ಬ ಮೇರುಶ್ರೇಣಿಯ ಶಿಕ್ಷಣ ತಜ್ಞರೆಂಬುದನ್ನು ಸಾರುತ್ತಿದೆ.

"ನಮ್ಮ ದೇಶದಲ್ಲಿ ನಾವು ಗ್ರಾಮಾಂತರ ಪ್ರದೇಶಗಳಲ್ಲಿನ ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಬೇಕು ; ಅದರಲ್ಲಿ ವಯಸ್ಕರ ಶಿಕ್ಷಣವೂ ಸೇರಿದೆ'[16] ಎಂಬುದಾಗಿ ಒಂದು ಸಂದರ್ಭದಲ್ಲಿ ಹೇಳುತ್ತಾರೆ. ಅವರ ಎಲ್ಲ ಪ್ರಯೋಗಗಳ ಹಿನ್ನಲೆಯಲ್ಲಿಯೂ ಬಹುಶಃ ಈ ಮಾತು ಇದ್ದಿರಬಹುದೆನಿಸುತ್ತದೆ. ಜೊತೆಗೆ, " ಜ್ಞಾನ ನಿಂತ ನೀರಲ್ಲ, ಹರಿಯುವ ಹೊಳೆ. ದಿನ ದಿನವೂ ಅದು ನವೋನವವಾಗುತ್ತಿದೆ" ಎಂಬ ಮಾತು ಕೂಡ ಅದಕ್ಕೆ ಒತ್ತಾಸೆಯಾಗಿದೆ.

16. ಕುಲಪತಿಯ ಭಾಷಣಗಳು 2; ಪು.238

ಪ್ರೊ. ದೇಜಗೌ ಅವರು ಕುಲಪತಿಗಳಾಗಿದ್ದಾಗ ಒಮ್ಮೆ ಒಂದು ಕ್ರಾಂತಿಕಾರಕ ಹೇಳಿಕೆ ನೀಡಿ ದೊಡ್ಡ ಸುದ್ದಿ ಮಾಡಿದರು. ಅವರ ಶೈಕ್ಷಣಿಕ ವಿಚಾರಗಳ ಸರಣಿಯಲ್ಲಿ ಅದೊಂದು ಮಹತ್ವದ ಘಟ್ಟ. ನಾಡಿನ ಬಹುಪಾಲು ಎಲ್ಲ ಶಿಕ್ಷಣತಜ್ಞರನ್ನೂ ಕೆಲಕಾಲ ದಿಗ್ಭ್ರಮೆಗೊಳಿಸಿದ ಆ ಹೇಳಿಕೆಯೆಂದರೆ ' ಎಲ್ಲ ವಿಶ್ವವಿದ್ಯಾನಿಲಯಗಳನ್ನೂ ಹತ್ತು ವರ್ಷ ಮುಚ್ಚಬೇಕು' ಎಂಬುದು ಶಿಕ್ಷಣವನ್ನೂ ಶಿಕ್ಷಣ ಕ್ಷೇತ್ರವನ್ನೂ ಕೇವಲ ವ್ಯಾವಹಾರಿಕವಾಗಿ ಪರಿಗಣಿಸುತ್ತಿದ್ದವರಿಗೆಲ್ಲ ಆ ಹೇಳಿಕೆಯ ಗೊತ್ತುಗುರಿಗಳು ಅರ್ಥವಾಗಲೇ ಇಲ್ಲ. ಈ ಮಾತಿಗೆ ಸರ್ಕಾರವೂ ಹೊರತಾಗಲಿಲ್ಲ.

ಮಾವೋ ತ್ಸೆ ತುಂಗ್ ಅವರು ಚೀನಾದ ಅಧ್ಯಕ್ಷರಾಗಿದ್ದಾಗ ಇಂಥದೇ ಹೇಳಿಕೆ ನೀಡಿದ್ದುಂಟು. ಭಾರತದಂತೆ ಚೀನಾ ಕೂಡ ಪರದೇಶಿಗಳ ಕೈಗೆ ಆಡಳಿತಕೊಟ್ಟು ಗುಲಾಮನಂತೆ ಬದುಕುತ್ತಿದ್ದ ಕಾಲದಲ್ಲೇ ಮಾವೋ ತಮ್ಮ ಗುಲಾಮತನಕ್ಕೆ ಮೂಲಕಾರಣ ಏನು ಎಂಬುದನ್ನು ವಿಚಾರ ಮಾಡಿದ್ದರು. ಜನರ ಅಜ್ಞಾನ, ಆ ಅಜ್ಞಾನಕ್ಕೆ ವೇದಿಕೆಯಾಗಿದ್ದ ಅನಕ್ಷರತೆ, ಇವೇ ತಮ್ಮ ಜನ ದಾಸ್ಯದಲ್ಲಿ ಬದುಕಲು ಕಾರಣ ಎಂಬ ಅಂಶವನ್ನು ಮಾವೋ ಸ್ವಾತಂತ್ರ್ಯಪೂರ್ವದಲ್ಲಿಯೇ ಕಂಡುಕೊಂಡಿದ್ದರು.

ಸ್ವಾತಂತ್ರ್ಯ ಬಂದ ಕೂಡಲೇ ತನ್ನ ಜನಗಳನ್ನು ಅಕ್ಷರಸ್ಥರನ್ನಾಗಿ ಮಾಡಲೇಬೇಕು ಎಂದು ನಿರ್ಧರಿಸಿದ್ದರು. 1945ರಲ್ಲಿ ಚೀನಾ ಸ್ವತಂತ್ರವಾದಾಗ ಮಾವೋ ಅಧ್ಯಕ್ಷ ಗಾದಿಯನ್ನೇರಿದರು.

ಚೀನಾ ಒಂದು ಕಮ್ಯೂನಿಸ್ಟ್ ರಾಷ್ಟ್ರ. ಒಂದು ದೇಶದಲ್ಲಿ ಯಾರೂ ಬಡವರಲ್ಲ ಯಾರೂ ಶ್ರೀಮಂತರಲ್ಲ, ಎಲ್ಲ ಆಸ್ತಿಪಾಸ್ತಿಗಳಲ್ಲೂ ಎಲ್ಲ ಉತ್ಪಾದನೆಗಳಲ್ಲೂ ಎಲ್ಲರಿಗೂ ಸಮಾನ ಹಕ್ಕು, ಒಬ್ಬ ಶ್ರಮ ಪಡುವುದು ಇನ್ನೊಬ್ಬ ಕುಳಿತು ತಿನ್ನುವುದು ಸಲ್ಲದು-ಹೀಗೆ ಕಮ್ಯೂನಿಸ್ಟ್ ತತ್ವಗಳು ಸಾಗುತ್ತವೆ. ಮಾವೋ ಒಂದು ಪುಸ್ತಕ ಬರೆದರು. ಅದಕ್ಕೆ ಕೆಂಪು ಪುಸ್ತಕ ಎಂದೇ ಹೆಸರು.

ಆ ಪುಸ್ತಕವಲ್ಲಿ ಕಮ್ಯುನಿಸಮ್ಮಿನ ಸಾರಸಂಗ್ರಹ ಇತ್ತು. ಬಡತನ ಸಿರಿತನಗಳೆಂದರೇನು, ದೇಶವನ್ನು ಸುಭದ್ರಸ್ಥಿತಿಗೆ ಒಯ್ಯುವುದು ಹೇಗೆ, ಇತ್ಯಾದಿ ವಿಷಯಗಳೂ ಆ ಪುಸ್ತಕದಲ್ಲಿ ಅಡಕವಾಗಿದ್ದುವು.

ಮಾವೋ ಅಧ್ಯಕ್ಷರಾದ ಕೂಡಲೆ ಒಂದು ಆಜ್ಞೆ ಹೊರಡಿಸಿದರು. ಎಲ್ಲ ಶಾಲೆ ಕಾಲೇಜುಗಳನ್ನು ಮುಚ್ಚಿ ಅಧ್ಯಾಪಕರೆಲ್ಲ ಹಾಗೂ ವಿದ್ಯಾವಂತ ಯುವಕರೆಲ್ಲ ಹಳ್ಳಿಗಳಿಗೆ ಹೋಗಬೇಕು, ನಮ್ಮ ಜನಕ್ಕೆ ಅಕ್ಷರ ಜ್ಞಾನ ಬೋಧಿಸಬೇಕು- ಎರಡು ವರ್ಷಗಳಲ್ಲಿ ಎಲ್ಲ ಜನರೂ ಕಡೆಯ ಪಕ್ಷ ಕೆಂಪು ಪುಸ್ತಕವನ್ನು ಓದುವಂತವರಾಗಬೇಕು-ಇದೇ ಆ ಆಜ್ಞೆ. ಆ ಆಜ್ಞೆಯನ್ನು ಹಿಂಬಾಲಿಸಿದ ಷರತ್ತುಗಳು ಮಾತ್ರ ತುಂಬ ಹರಿತವಾಗಿದ್ದುವು. ಹಾಗೆ ಮಾಡದಿದ್ದರೆ ಅಂಥವರನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ- ಎಂಬುದು ಒಂದು ಷರತ್ತು. ಅದೇ ಷರತ್ತನ್ನು ಮಾವೋ ಜನತೆಗೂ ವಿಧಿಸಿದರು.

ಎರಡು ವರ್ಷಗಳೊಳಗೆ ಎಲ್ಲ ಜನರೂ ಕೆಂಪು ಪುಸ್ತಕವನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಜ್ಞಾನವನ್ನು ಸಂಪಾದಿಸದಿದ್ದರೆ ಅಂಥವರನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ. ಇದೇ ಷರತ್ತು. ಕಮ್ಯೂನಿಸ್ಟ್ ಆಡಳಿತದಲ್ಲಿ ಹಾಗೆ ಗುಂಡಿಕ್ಕಿ

ಕೊಲ್ಲುವುದು ಒಂದು ಸಹಜ ಕ್ರಮವಾಗಿತ್ತು. ಯಾರೂ ಅದನ್ನು ಪ್ರಶ್ನಿಸುವಂತಿರಲಿಲ್ಲ. ಈ ಕ್ರಮ ಅಲ್ಲಿ ಆಶ್ಚರ್ಯಕರ ರೀತಿಯಲ್ಲಿ ಪರಿಣಾಮ ಬೀರಿತು. ಎರಡೇ ವರ್ಷಗಳಲ್ಲಿ ಚೀನಾದಲ್ಲಿ ಯಾರೂ ಅನಕ್ಷರಸ್ಥರಾಗಿ ಉಳಿಯಲಿಲ್ಲ. ಇದು ಮಾವೋ ಸಾಧಿಸಿದ ಒಂದು ಮಹಾಕ್ರಾಂತಿ; ಅಕ್ಷರಕ್ರಾಂತಿ.

ಅದೇ ಕಾಲದಲ್ಲಿ ರಷ್ಯವನ್ನು ಆಳುತ್ತಿದ್ದ ಸ್ಟಾಲಿನ್ ಆಗಲಿ, ಸ್ಟಾಲಿನ್‌ಗಿಂತ ಹಿಂದೆ ಇದ್ದ ಲೆನಿನ್ ಆಗಲಿ ಅಂಥ ಕ್ರಾಂತಿಕಾರಕ ಕ್ರಮವನ್ನು ಕೈಗೊಳ್ಳಲಿಲ್ಲ. ಆದ್ದರಿಂದಲೇ ಇವತ್ತಿಗೂ ರಷ್ಯದಲ್ಲಿ ಅನಕ್ಷರಸ್ಥರನ್ನು ಕಾಣಲು ಸಾಧ್ಯವಿದೆ. ಮಾವೋ ಅವರು ಸಾಧಿಸಿದ ಅಕ್ಷರಕ್ರಾಂತಿ ನಿಜಕ್ಕೂ ಒಂದು ನಿತ್ಯಾದರ್ಶ ಕ್ರಾಂತಿ.

ಭಾರತಕ್ಕೆ ಅಂಥ ಅದೃಷ್ಟವಿಲ್ಲ. ಅಂಥ ಕ್ರಾಂತಿಯೊಂದರಿಂದ ಜಾಗತಿಕ ದಾಖಲೆಗೆ ಸೇರಬಹುದಾದ ಒಂದು ಅತ್ಯಪೂರ್ವ ಅವಕಾಶವನ್ನು ಭಾರತ ಕಳೆದುಕೊಂಡಿತು ಅಂಥ ಅವಕಾಶವೊಂದನ್ನು ಕಲ್ಪಿಸಿಕೊಟ್ಟಿದ್ದವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ. ದೇ ಜವರೇಗೌಡರು ನಮ್ಮ ಅಧಿಕಾರಸ್ಥ ರಾಜಕಾರಣಿಗಳ ಜಡ ಚೇತನಗಳು ಪ್ರೊ. ದೇಜಗೌರಂಥ ವಿಶ್ವಮಟ್ಟದ ಶಿಕ್ಷಣತಜ್ಞರನ್ನು ಮೂಲೆ ಗುಂಪಾಗಿಸಬಲ್ಲ ಮಹಾನ್ ಶಕ್ತಿಯನ್ನು ಪಡೆದಿವೆ. ಇದು ಭಾರತದ ದಾಖಲೆ!

ವಾಸ್ತವವಾಗಿ, ವಿಶ್ವವಿದ್ಯಾನಿಲಯಗಳನ್ನು ಮುಚ್ಚುವ ಕ್ರಾಂತಿಕಾರಕ ಆಲೋಚನೆ 1951 ರಷ್ಟು ಹಿಂದೆಯೇ ಪ್ರೊ. ಜವರೇಗೌಡರಲ್ಲಿತ್ತು. ಆ ಆಲೋಚನೆಗೆ ಖಚಿತತೆ ಬಂದದ್ದು, ಅದೊಂದು ದೊಡ್ಡ ಸುದ್ದಿಯಾದದ್ದು, ಅವರು ಕುಲಪತಿಗಳಾದ ಮೇಲೆ. 1951ರಲ್ಲಿ ಅವರು ಬರೆದ ಲೇಖನವೊಂದರಲ್ಲಿ ಈ ಮಾತುಗಳಿವೆ:

"ನಮ್ಮ ವಿದ್ಯಾರ್ಥಿಗಳ ಹೃದಯವನ್ನು ಪರಿಪಕ್ವಗೊಳಿಸದ, ಅವರ ಬಾಳಿಗೆ ನೆರವಾಗದ ವಿದ್ಯೆಯನ್ನು ನೀಡುವುದಕ್ಕಿಂತ ವಿಶ್ವವಿದ್ಯಾನಿಲಯವನ್ನೇ ಕೆಲವು ವರ್ಷಗಳ ತನಕವಾದರೂ ನಿಲ್ಲಿಸಬಹುದೆಂದು ಕಾಣುತ್ತದೆ."[17]

ಒಂದು ಕ್ರಾಂತಿಕಾರಕ ಹೇಳಿಕೆ ಸುದ್ದಿಯಾಗಬೇಕಾದರೆ ಅಧಿಕಾರ ಸ್ಥಾನದಿಂದಲೆ ಉದುರಬೇಕು ಎಂಬ ವಾತಾವರಣ ಕೂಡ ಈ ದೇಶದ ದೌರ್ಭಾಗ್ಯಗಳಲ್ಲಿ ಒಂದು. ಮೇಲಿನ ಮಾತುಗಳನ್ನು ಆಡಿದಾಗ ಪ್ರೊ. ಜವರೇಗೌಡರು ಸಾಮಾನ್ಯ ಅಧ್ಯಾಪಕರಾಗಿದ್ದರೆಂದು ತೋರುತ್ತದೆ. ಆದರದು ಸುದ್ದಿಯಾದದ್ದು ಕುಲಪತಿಯಾಗಿ ಹೇಳಿದ ಮೇಲೆಯೆ.

ನಮ್ಮದು ಕಮ್ಯುನಿಸ್ಟ್ ರಾಷ್ಟ್ರವಲ್ಲ. ಆದ್ದರಿಂದ ಚೀನಾದಂಥ ಕ್ರಮವನ್ನು ಕೈಗೊಳ್ಳುವುದು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ನಮಗೆ ಸಾಧ್ಯವಾಗುವುದಿಲ್ಲ. ಕಮ್ಯೂನಿಸಮ್ಮಿನಿಂದ ಎರಡು ವರ್ಷಗಳಲ್ಲಿ ಸಾಧ್ಯವಾದದ್ದು ಪ್ರಜಾಪ್ರಭುತ್ವದಿಂದ ಹತ್ತು ವರ್ಷಗಳಲ್ಲಿ ಸಾಧ್ಯವಾಗಲಾರದೆ?-ಇದು ಬಹುಶಃ ' ಹತ್ತು ವರ್ಷ ಮುಚ್ಚಬೇಕು' ಎಂಬ ಕಾಲಮಿತಿಯ ಹಿನ್ನೆಲೆಯಿರುವಂತೆ ಕಾಣುತ್ತದೆ. ಜನತೆಯ ಮನವೊಲಿಸುವ ಮೂಲಕವೋ

17. ಬಿರಕೆ ಸೊಪ್ಪು, ಪು.104

ಅದಕ್ಕೆ ತಕ್ಕ ಸೂಕ್ತ ಶಾಸನಗಳನ್ನು ವಿಧಿಸುವ ಮೂಲಕವೋ ಪ್ರೊ. ದೇಜಗೌ ಅವರ ಆಲೋಚನೆಯನ್ನು ಕಾರ್ಯರೂಪಕ್ಕೆ ಇಳಿಸಿ ಅಕ್ಷರಕ್ರಾಂತಿಯನ್ನು ಸಾಧಿಸಲು ಸಾಧ್ಯವಿತ್ತು.

ಆದರೆ ನಮ್ಮ ಯಾವ ರಾಜಕಾರಣಿಯ ಗಮನವೂ ಇತ್ತ ಹರಿಯದೆ ಹೋದುದು, ನೂರಾರು ದೌರ್ಭಾಗ್ಯಗಳ ಪಟ್ಟಿಗೆ ಸೇರಿಹೋಯಿತು. ಜನರ ಅನಕ್ಷರತೆ ಹಾಗೂ ಅಜ್ಞಾನಗಳನ್ನೇ ಬಂಡವಾಳ ಮಾಡಿಕೊಂಡಿರುವ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಇದು ಸಹಜವೂ ಆಗುತ್ತದೆ.

ವಿಶ್ವವಿದ್ಯಾನಿಲಯದ ಎಲ್ಲ ಇಲಾಖೆಗಳಂತೆ ಕನ್ನಡವೂ ಒಂದು ಇಲಾಖೆಯಾಗಿತ್ತು. ಪ್ರೊ. ಜವರೇಗೌಡರು ಪ್ರಾಧ್ಯಾಪಕರೂ ಇಲಾಖೆಯ ಮುಖ್ಯಸ್ಥರೂ ಆದ ಮೇಲೆ ತೀವ್ರವಾಗಿ ಯೋಚಿಸತೊಡಗಿದರು ಕನ್ನಡ ಬೆಳೆಯಬೇಕು, ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳೆಲ್ಲ ಒಂದೇ ಸೂರಿನಡಿಯಲ್ಲಿ ನಡೆಯಬೇಕು, ಈ ಇಲಾಖೆ ಎಲ್ಲ ಇಲಾಖೆಗಳಿಗಿಂತ ಭಿನ್ನವಾಗಿ ಹೆಮ್ಮರವಾಗಿ ಬೆಳೆಯಬೇಕು-ಇತ್ಯಾದಿ ಆಲೋಚನೆಗಳು ಅವರನ್ನು ತೀವ್ರವಾಗಿ ಕಾಡತೊಡಗಿದುವು. ಕನ್ನಡದ ಸರ್ವಾಂಗ ಅಧ್ಯಯನವೂ ನಡೆಯುವ ಕೇಂದ್ರ ಸ್ಥಾನ ಇದಾಗಬೇಕು ಎಂಬುದು ಅವರ ಹಂಬಲವಾಗಿತ್ತು.

ಆಗ ಕುಲಪತಿಗಳಾಗಿದ್ದ ಡಾ. ಕೆ. ಎಲ್. ಶ್ರೀಮಾಲಿಯವರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಕನ್ನಡದಲ್ಲಿ ಏನಿದೆ ? ಕನ್ನಡಕ್ಕೇಕೆ ಪ್ರತ್ಯೇಕ ಕಟ್ಟಡ ? - ಎನ್ನುವ ಅಸಹಿಷ್ಣುಗಳು ಪ್ರೊ. ಗೌಡರ ಯೋಜನೆಗಳಿಗೆ ಕಲ್ಲುಹಾಕಲು ಸನ್ನದ್ಧರಾದರು. ಅವರ ವಿರೋಧಗಳನ್ನು ಮೆಟ್ಟಿ ಕುಲಪತಿಗಳು ಅನುಮೋದನೆ ನೀಡಿದಾಗ ಮಾನಸ ಗಂಗೋತ್ರಿಯ ಜನಸಂಚಾರವೇ ಇಲ್ಲದೆ ಹಳ್ಳಕೊಳ್ಳಗಳಿಂದ ತುಂಬಿದ್ದ ಕೊಂಪೆಯ ಮೂಲೆಯೊಂದನ್ನು ತೋರಿಸಿ 'ಅನುಮತಿ ಕೊಡುವುದಾದರೆ ಅಲ್ಲಿ ಕಟ್ಟಲು ಕೊಡಿ' ಎಂದು ವಿತಂಡವಾದಕ್ಕಿಳಿದರು.

ಪ್ರೊ. ಜವರೇಗೌಡರು ಇಂಥ ವಿಷಯದಲ್ಲಿ ಮಹಾ ಹಟವಾದಿ. 'ಕನ್ನಡದ ತವರಿನಲ್ಲಿ ಕನ್ನಡ ಕೊಂಪೆ ಸೇರಬೇಕೆ ? ಅದು ಸಾಧ್ಯವಿಲ್ಲ. ಕೇಂದ್ರ ಸ್ಥಾನದಲ್ಲಿಯೇ ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪನೆಯಾಗಬೇಕು' ಎಂದು ಪಟ್ಟುಹಿಡಿದು ಕುಳಿತರು. ಸ್ಥಳವನ್ನೂ ತಾವೇ ಆಯ್ಕೆಮಾಡಿದರು. ಒಪ್ಪಿಗೆ ಪಡೆದರು.

ಭಾಷಾಂತರ ಮತ್ತು ಪಠ್ಯ ಪುಸ್ತಕ ವಿಭಾಗ, ಪ್ರಾಚ್ಯ ಸಂಶೋಧನಾ ಸಂಸ್ಥೆಯಿಂದ ಸ್ಥಳಾಂತರಿಸಿದ ಕನ್ನಡದ ಸಂಶೋಧನಾ ವಿಭಾಗ, ಜಾನಪದ ವಿಭಾಗ ಹಾಗೂ ವಸ್ತು ಸಂಗ್ರಹಾಲಯ, ಕನ್ನಡ ವಿಶ್ವಕೋಶ- ಹೀಗೆ ಅನೇಕ ಹೆಮ್ಮೆಯ ರೆಕ್ಕೆ ಪುಕ್ಕಗಳೊಂದಿಗೆ ಕನ್ನಡ ಅಧ್ಯಯನ ಸಂಸ್ಥೆ ಗರಿಗೆದರಿ ಜಾಗರಾಗತೊಡಗಿತು. ಅಷ್ಟು ಹೊತ್ತಿಗಾಗಲೇ ಇಲಾಖೆಯಾಗಿದ್ದುದು ಸಂಸ್ಥೆಯಾಗಿತ್ತು.

'ಕನ್ನಡ ಅಧ್ಯಯನ ಸಂಸ್ಥೆ' ಎಂಬ ನಾಮಕರಣ ಕೂಡ ಪ್ರೊ. ದೇಜಗೌ. ಅವರ ಕಲ್ಪನೆಯೇ. ಕನ್ನಡಕ್ಕೆ ಸುಂದರವಾದ ಇಷ್ಟು ದೊಡ್ಡ ಕಟ್ಟಡ ಸಿಕ್ಕಿದ್ದು ಸಹಜವಾಗಿಯೇ ಇತರರಲ್ಲಿ ಅಸೂಯೆ ಹುಟ್ಟಿಸಿತು. ಆ ಅಸೂಯಾಪರರೆಲ್ಲ ಕನ್ನಡಿಗರೇ. ಹೆಮ್ಮೆ ಪಡಬೇಕಾದ್ದು ಅವರ ಕರ್ತವ್ಯವಾಗಿತ್ತು. ಆದರೆ ಹಾಗೆ ಮಾಡುವಷ್ಟು ಪ್ರಬುದ್ಧರಾಗಿರಲಿಲ್ಲ.

ಜೊತೆಗೆ ಪ್ರೊ. ಜವರೇಗೌಡರ ವೈಯಕ್ತಿಕ ಸಾಧನೆಯನ್ನು ಸಹಿಸಲಾರದ ಅಸಹಾಯಕತೆ ಅವರನ್ನು ಕುಬ್ಜರನ್ನಾಗಿಸಿ ಅಸೂಯೆ ದಳ್ಳುರಿಗೆ ತಳ್ಳಿತ್ತು.

ಟೀಕೆಗಳಿಗಾಗಲಿ ವಿರೋಧಗಳಿಗಾಗಲಿ ಪ್ರೊ. ಜವರೇಗೌಡರು ಎಂದು ಕುಗ್ಗಲಿಲ್ಲ, ಜಗ್ಗಲಿಲ್ಲ. ಅದು ಅವರ ಕನ್ನಡದ ನಿಷ್ಠೆ. ಕನ್ನಡವೆಂದರೆ ಅದೊಂದು ಮಂತ್ರ. ಅದೊಂದು ಶಕ್ತಿ. ಅದು ಗುರುಕೃಪೆ. ಕನ್ನಡಕ್ಕಾಗಿ ಕೈಯೆತ್ತಿದವರೆಲ್ಲ ಒಬ್ಬೊಬ್ಬರು ಒಂದೊಂದು ಧ್ರುವತಾರೆಯಾಗಿ ಬೆಳಗುತ್ತಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ಕಟ್ಟಡದ ಉದ್ಘಾಟನೆಯ ಸಂದರ್ಭದಲ್ಲಿ ಪ್ರೊ| ದೇಜಗೌ ಹೇಳಿದರು:

"ಈ ಕಟ್ಟಡದ ತಳಹದಿಯಿಂದ ಒಡಿದು ತುದಿಯವರೆಗೆ ಇದರ ಉಸ್ತುವಾರಿ ನೋಡಿಕೊಂಡಿದ್ದೇನೆ. ಇಲ್ಲಿಯ ಒಂದೊಂದು ಕಲ್ಲನ್ನೂ ಇಟ್ಟಿಗೆಯನ್ನೂ ಬಲ್ಲೆ; ಗಾರೆಗಚ್ಚು ಕಲಸಿದ್ದನ್ನು ಬಲ್ಲೆ; ಸಿಮೆಂಟು ಜಲ್ಲಿ ಹಾಕುವಾಗ ಆಳುಕಾಳುಗಳ ಜತೆ ಬಿಸಿಲಲ್ಲಿ ನಿಂತಿದ್ದೇನೆ ಇದರ ಒಂದೊಂದು ಕಣದೊಡನೆ ಆತ್ಮೀಯತೆ ಬೆಳೆದಿದೆ"[18]

"ಬರಿಯ ಕಲ್ಲು ಇಟ್ಟಿಗೆಗಳಿಂದ ಈ ಸಂಸ್ಥೆ ನಿರ್ಮಾಣವಾಗಿಲ್ಲ ; ಆ ಜಡ ವಸ್ತುಗಳ ಮೇಲೆ ಇದರ ಖ್ಯಾತಿ ನಿಂತಿಲ್ಲ ಆ ಜಡಕ್ಕೆ ಚೇತನವನ್ನು ನೀಡಬೇಕು. ಮೃಣ್ಮಯದಲ್ಲಿ ಚಿನ್ಮಯವನ್ನು ಕಾಣಬೇಕು"[19]

ಪ್ರೊ. ಜವರೇಗೌಡರು ಈ ಸಂಸ್ಥೆಯ ಬಗ್ಗೆ ಆತ್ಮೀಯತೆ ಇರಿಸಿ ಕೊಂಡಿದ್ದರೆಂಬುದು ಬಹಿರಂಗ ಸತ್ಯ. (ಮನೆತುಂಬ ಜನ ಇರುವ ತವರಿನಿಂದ ಏಕಾಂಗಿಯಾಗಿ ಹೊರ ಹೊರಟ ಹೆಣ್ಣುಮಗಳೊಬ್ಬಳ ಚಿತ್ರ ಯಾಕೋ ಈ ಸಂದರ್ಭದಲ್ಲಿ ಕಣ್ಮುಂದೆ ಮೂಡಿನಿಲ್ಲುತ್ತಿದೆ; ಹೃದಯ ಅಪಾರ ನೋವಿನಿಂದ ತತ್ತರಿಸುತ್ತಿದೆ.

ಕನ್ನಡ ಅಧ್ಯಯನ ಸಂಸ್ಥೆಯೆಂದರೆ ಅವರೆ ಹೇಳುವಂತೆ ಬರಿಯ ಕಟ್ಟಡವಲ್ಲ. ಅಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬರೂ ಅವರಿಗೆ ಆಪ್ಯಾಯಮಾನವಾಗುತ್ತಾರೆ. ಮುಂದೆ ಅವರು ಕುಲಪತಿಯಾಗಿ ನೇಮಕಗೊಂಡಾಗ ಸಂಸ್ಥೆಯನ್ನು ಬಿಟ್ಟುಹೋಗುವುದು ಅನಿವಾರ್ಯವಾಗುತ್ತದೆ. ಭೌತಿಕವಾಗಿ ಮಾತ್ರ ಅವರು ಹೋಗುತ್ತಾರೆಯೆ ಹೊರತು ಪ್ರತಿ ಕ್ಷಣದಲ್ಲೂ ಅವರ ಮನಸ್ಸು ಸಂಸ್ಥೆಯಲ್ಲೇ ಸುಳಿಯುತ್ತಿರುತ್ತದೆ. ಅವರ ಮುಗ್ಧತೆ ಸರಳತೆಗಳನ್ನು ಪರಿಚಯಿಸಲು ಅವರದೇ ಒಂದು ಮಾತನ್ನು ಉದಾಹರಿಸಬಹುದು.

ಕುಲಪತಿಯಾಗಿ ಹೊರಟ ಅವರಿಗೆ ಏರ್ಪಡಿಸಿದ್ದ ಆತ್ಮೀಯ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಹೇಳಿದ ಮಾತು ಇದು; "ನನ್ನ ಕೋಪ ಕೇವಲ ಕ್ಷಣಿಕವಾದದ್ದು ಅದು ಬಂದಾಗ ಬಯ್ದುಬಿಡುತ್ತೇನೆ. ಮರುಕ್ಷಣವೇ ಮರೆತುಬಿಡುತ್ತೇನೆ. ಮನಸ್ಸಿನಲ್ಲೆಂದೂ ಕಹಿ ಉಳಿಸಿಕೊಂಡು ಕೊಳಸುವ ಸ್ವಭಾವ ನನ್ನದಲ್ಲ. ನಾನು ಯಾರನ್ನೂ ದ್ವೇಷಿಸುವುದಿಲ್ಲ. ಎಲ್ಲರೂ ನನಗೆ ಪ್ರಿಯರು. ಸೇವಕರಾದಿಯಾಗಿ ಎಲ್ಲರೂ ನನ್ನನ್ನು ಕ್ಷಮಿಸಿ, ಶುಭ ಹಾರೈಸಿ ಕಳಿಸಿಕೊಡಬೇಕೆಂದು ಕೈ ಮುಗಿದು ಬೇಡಿಕೊಳ್ಳುತ್ತೇನೆ"[20]

---

18. ಕುಲಪತಿಯ ಭಾಷಣಗಳು 1; ಪು.23
19. ಅದೇ; ಪು. 25
20. ಅದೇ; ಪು. 26

ಕುಲಪತಿಯಾದ ಮೇಲಿನ ಅವರ ಸಾಧನೆಗಳು ಅಪಾರ ಒಳಹೊಕ್ಕು ನೋಡಲಾಗದವರು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದಬ್ಬರೆ ಅದೂ ಒಂದು ಅಭಿವೃದ್ಧಿ ಕಾರ್ಯವೇ? ವಿಶ್ವವಿದ್ಯಾನಿಲಯದಂತಹ ಸಂಸ್ಥೆಯ ಅಭಿವೃದ್ಧಿಯೆಂದರೆ ಬರಿಯ ನಿರ್ಜೀವ ಕಟ್ಟಡಗಳಲ್ಲ, ಕನ್ನಡದ ಮೇಷ್ಟರಿಂದ ಇನ್ನೇನು ಸಾಧನೆ ತಾನೆ ಸಾಧ್ಯ? ಇತ್ಯಾದಿ ಟೀಕೆಗಳು ಅಂತರರಾಷ್ಟ್ರೀಯ ಖ್ಯಾತಿ ಇದ್ದವರಿಂದಲೂ ಬಂದದ್ದುಂಟು. ಅಂಥ ವ್ಯಕ್ತಿಗಳಿಂದಲೇ ಪ್ರೊ. ದೇಜಗೌ ಪ್ರತಿಭಟನೆಗಳನ್ನು ಅಡಿ ಅಡಚಣೆಗಳನ್ನು ಎದುರಿಸಬೇಕಾಗಿತ್ತು.

ಪ್ರೊ. ಗೌಡರು ಬರೀ ಕಟ್ಟಡಗಳಿಂದಲೇ ತಮ್ಮ ಸಾಧನೆಗಳನ್ನು ತೋರಿಸಲಿಲ್ಲ. ಕಟ್ಟಡಗಳು ಏನಿದ್ದರೂ ಪೂರಕ ಸಾಧನಗಳು. ನಿಜವಾದ ಸಾಧನೆಗಳೆಂದರೆ ಶೈಕ್ಷಣಿಕ ಸಾಧನೆಗಳೇ.

ಅವರು ಅನೇಕ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಿದರು ರಸಾಯನ ವಿಜ್ಞಾನದ ಅಂಗವಾಗಿದ್ದು ಆ ವಿಭಾಗದಲ್ಲೆ ಒಂದು ಮೂಲೆಯಲ್ಲಿ ಕೆಲಸ ಮಾಡುತ್ತಿದ್ದ Bio-chemistryಯ ಅಗತ್ಯ ಎಷ್ಟು ಎಂಬುದು ಕೈಗಾರಿಕೆಗಳು ಬೆಳೆಯುತ್ತಿರುವ ಸಂದರ್ಭದಲ್ಲಿ ಪ್ರೊ. ದೇಜಗೌ ಅವರ ಗಮನಕ್ಕೆ ಬಂದಿತು. Bio-chemistry ಯನ್ನು ಪ್ರತ್ಯೇಕಿಸಿ ಸ್ವತಂತ್ರವನ್ನಾಗಿಸಿ ಬೆಳೆದರು. ಈ ಕೈಗಾರಿಕಾ ಯುಗದಲ್ಲಿ ಆ ವಿಭಾಗ ವಹಿಸುತ್ತಿರುವ ಪಾತ್ರ ತುಂಬ ಮಹತ್ವದ್ದೆಂದು ಹೇಳಲಾಗಿದೆ. ವಾಣಿಜ್ಯ ಕ್ಷೇತ್ರ ವಿಸ್ತಾರವಾಗಿ ಬೆಳೆಯುತ್ತಿರುವುದನ್ನು. ಗಮನಿಸಿ ಈಗಿರುವ M.Com ಏನೇನೂ ಸಾಲದೆಂಬ ಅಭಿಪ್ರಾಯಕ್ಕೆ ಬಂದರು. ಅದರ ಹೊಸ ಹೊಸ ಶಾಖೆಗಳಾದ ಅತ್ಯಾಧುನಿಕ ಬಿ. ಬಿ. ಎಂ. ಹಾಗು ಎಂ. ಬಿ. ಎ. ಕೋರ್ಸುಗಳನ್ನು ಪ್ರಾರಂಭಿಸಿ ಬೆಳೆಸಿದವರು ಪ್ರೊ. ಜವರೇಗೌಡರು. ಗೃಹವಿಜ್ಞಾನದಲ್ಲಿ ಹಾಗೂ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ವಿಭಾಗ, ಹತ್ತಾರು ಡಿಪ್ಲೊಮಾ ಕೋರ್ಸುಗಳು. ಕನ್ನಡೇತರರಿಗೆ ಕನ್ನಡ ಕಲಿಸಿಕೊಡುವ ' ಕನ್ನಡ ಸರ್ಟಿಫಿಕೇಟ್ ಕೋರ್ಸು' ಹೀಗೆ ಅನೇಕ ರೂಪಗಳಲ್ಲಿ ವಿಶ್ವವಿದ್ಯಾನಿಲಯವನ್ನು ಬೆಳೆಸಿದರು. ಲಲಿತಕಲೆಗಳಿಗಾಗಿಯೇ ಪ್ರತ್ಯೇಕ ಕಾಲೇಜನ್ನು ಪ್ರಾರಂಭಿಸಿ ಅನಂತರ ಅದಕ್ಕೊಂದು ಸುಂದರವಾದ ಕಟ್ಟಡವನ್ನೂ ರೂಪಿಸಿದರು.

ಕನ್ನಡ ಎಂ. ಎ. ತರಗತಿಯಲ್ಲಿ ಜಾನಪದವನ್ನು ಅಧ್ಯಯನ ವಿಷಯವನ್ನಾಗಿ ಅಳವಡಿಸಿದ ಸಂಗತಿ ಈ ಹಿಂದೆಯೇ ಪ್ರಸ್ತಾಪಿಸಲ್ಪಟ್ಟಿದೆ. ಅದರ ಜೊತೆಗೆ ಜಾನಪದ ಡಿಪ್ಲೊಮಾ ಮತ್ತು ಜಾನಪದಕ್ಕಾಗಿಯೇ ಪ್ರತ್ಯೇಕ ಎಂ. ಎ. ಕೋರ್ಸುಗಳನ್ನು ಪ್ರಾರಂಭಿಸಿದರು.

ಪ್ರಾಥಮಿಕ ಶಿಕ್ಷಣ ಮತ್ತು ಅದನ್ನು ಹೋಲುವ ವಯಸ್ಕರ ಶಿಕ್ಷಣಗಳಿಂದ ಪ್ರಾರಂಭಿಸಿ ಪಿ. ಯು. ಸಿ. ಪದವಿಪೂರ್ವ ಶಿಕ್ಷಣ, ಸ್ನಾತಕೋತ್ತರ ಹಾಗೂ ಅತ್ಯುನ್ನತ ಸಂಶೋಧನೆಗಳವರೆಗೆ ವಿವರ ವಿವರವಾಗಿ ಹಂತ ಹಂತವಾಗಿ ತಮ್ಮ ವಿಚಾರಗಳನ್ನು ವಿಶ್ಲೇಷಣೆಗಳನ್ನು ಚಿಂತನೆಗಳನ್ನು ಪ್ರೊ. ಜವರೇಗೌಡರು ಮಂಡಿಸಿದ್ದಾರೆ.

ಎಲ್ಲ ಮಟ್ಟದ ಶಿಕ್ಷಣವನ್ನು ಎಲ್ಲ ಕೋನಗಳಿಂದಲೂ ವಿಚಾರ ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ಜ್ಞಾನವೃದ್ಧಿಗಾಗಿ ಪಠ್ಯ ವಿಷಯಗಳನ್ನು ಹೇಗೆ

ಅಳವಡಿಸಬೇಕೆಂಬುದನ್ನು ಚಿಂತಿಸಿದ್ದಾರೆ. ಶೈಕ್ಷಣಿಕ ವಿಷಯವಾಗಲಿ ಅದಕ್ಕೆ ಪೂರಕವಾದ ವಿಷಯವಾಗಲಿ ಅವರ ಎಲ್ಲ ಹೆಜ್ಜೆಗಳಲ್ಲೂ ಸಾಮಾಜಿಕ ಕಳಕಳಿಯನ್ನು ಕಾಣಬಹುದು. ಅವರ ಶೈಕ್ಷಣಿಕ ವಿಚಾರಗಳ ಸಾರಸರ್ವಸ್ವದಂತಿರುವ ಅವರದೇ ಮತ್ತೊಂದನ್ನು ಉದ್ಧರಿಸಿ ಮುಗಿಸುತ್ತೇನೆ.

"ಒಟ್ಟಿನಲ್ಲಿ ಶಿಕ್ಷಣ ಕೆಲವು ಗುರಿಗಳನ್ನು ಕಣ್ಮುಂದಿರಿಸಿ ಕೊಂಡು ಮುಂದುವರಿಯುವುದು ಸೂಕ್ತ. ಆ ಗುರಿಯಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. ೧ ಆರ್ಥಿಕ ಪ್ರಗತಿ ೨. ಸಾಮಾಜಿಕ ನ್ಯಾಯ ೩. ಸ್ವಾವಲಂಬನೆ ೪. ಆತ್ಮಪತ್ಯಯ ೫. ದುಡಿಮೆಯ ಹಿರಿಮೆ ೬. ರಾಷ್ಟ್ರಪ್ರೇಮ ೭. ಸಾಮಾಜಿಕ ಹೊಣೆಗಾರಿಕೆ ೮. ನೈತಿಕ ಮೌಲ್ಯಗಳ ಸಂವರ್ಧನೆ ೯. ಜ್ಞಾನತೃಷೆ ಮತ್ತು ೧೦. ಸಂಸ್ಕೃತಿಯ ಬೆಳವಣಿಗೆ ಇವನ್ನು ಸಾಧಿಸದ ಶಿಕ್ಷಣ ನಿಜಕ್ಕೂ ಯೋಗ್ಯವಲ್ಲ. ಇವು ಕೈಗೂಡಬೇಕಾದರೆ ತಂದೆತಾಯಿಯರ, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಸಮರಸವಾದ ಈ ಮುಕ್ಕೂಟ ಅವಶ್ಯಕ. ಮುಕ್ಕೂಟ ಸಾಧ್ಯವಾಗಲಿಲ್ಲವೆಂದರೆ ಶಿಕ್ಷಣ ಮಣ್ಣು ಪಾಲಾಗುತ್ತದೆ."[21]

* * * * *

21. ಕುಲುತಿಯ ಭಾಷಣಗಳು 2; ಪು. 227

ದೇಜಗೌ ಮುನ್ನುಡಿಗಳು

"ಆರವತ್ತರ ಅಂಚನ್ನು ದಾಟಿರುವ ದೇಜಗೌ ಸುಮಾರು ಅರವತ್ತು ಗ್ರಂಥಗಳನ್ನು ರಚಿಸಿ ಸುಮಾರು ಅರವತ್ತು ಗ್ರಂಥಗಳಿಗೆ ಮುನ್ನುಡಿ ಬರೆದಿರುವುದು ಕೇವಲ ಕಾಕತಾಳೀಯವೆನಿಸುತ್ತದೆಯೆ("ಮುನ್ನುಡಿಗಳು"ಪುಸ್ತಕ ಆ ಮುನ್ನುಡಿಗಳ ಸಂಕಲನ)"

ಸಾಮಾನ್ಯವಾಗಿ ಚೊಚ್ಚಲು ಕೃತಿಯನ್ನು ರಚಿಸಿದ ಕೃತಿಕಾರ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಪ್ರವೇಶವನ್ನು ಪಡೆಯಲಿಕ್ಕಾಗಿ ಹಿರಿಯರಿಂದ ಸುಪ್ರಸಿದ್ಧ ಸಾಹಿತಿಗಳಿಂದ ಮುನ್ನುಡಿಯನ್ನು ಬರೆಸಿಕೊಳ್ಳುವುದು ಮನುಜ ಸಹಜವಾದ ಗುಣ. (ಕೆಲವೊಮ್ಮೆ ಮುಂದೆ ದೊರಕಲಿರುವ ಅಥವಾ ದೊರೆಯಬೇಕಾಗಿರುವ ಯಾವದೋ ಒಂದು ದೊಡ್ಡ ಆಸೆಯ ಕಾರಣದಿಂದಲೂ ಅಧಿಕಾರ ಸ್ಥಾನದಲ್ಲಿರುವವರಿಂದ ಮುನ್ನುಡಿಗಳನ್ನು ಬರೆಸಿಕೊಂಡು ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳುವವರಿಗೂ ಕಡಮೆಯೇನಿಲ್ಲ). ಇದರಿಂದಾಗಿ ಸಾಮಾನ್ಯವಾಗಿ ಮುನ್ನುಡಿಯೆಂದರೆ ಕೃತಿಕಾರನ ಕೃತಿಯ ಪ್ರಶಂಸೆ ಎಂದೆ ಸಾಮಾನ್ಯ ಭಾವನೆ. ಆದರೆ ಇಲ್ಲಿನ ಮುನ್ನುಡಿಗಳು ಬಹುಮಟ್ಟಿಗೆ ಇದಕ್ಕೆ ಅಪವಾದವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಮುನ್ನುಡಿಯಾಗಿದ್ದರೂ ಕೃತಿಯ ಗುಣಗಳನ್ನು ಎತ್ತಿ ತೋರುವುದರ ಜೊತೆಗೆ ದೇಜಗೌ ದೋಷಗಳನ್ನು ತೋರಿಸಿದ್ದಾರೆ. ಹಾಗೆ ಮಾಡುವಾಗ ವಿಮರ್ಶಕನ ಹದ ತೂಕಗಳನ್ನು ತಪ್ಪದೆ ಹಿತವಾಗಿ ವಿಮರ್ಶಿಸಿದ್ದಾರೆ. ಅದು ಅವರ ಮಾಗಿದ ಬುದ್ಧಿಗೆ ಕಳಶವನ್ನಿಟ್ಟಿದೆ. ಮುಂದೆ ಇದಕ್ಕೆ ನಿದರ್ಶನಗಳನ್ನು ಕಾಣಬಹುದು. ಬರೆದಿರುವ ಮುನ್ನುಡಿಗಳೂ ಅಸಂಬದ್ಧವಾಗಿರದೆ, ಗ್ರಂಥದಲ್ಲಿನ ವಿಷಯಕ್ಕೆ ಅನುಗುಣವಾಗಿ ಬಂದಿರುವುದು ಇವರ ಔಚಿತ್ಯಪ್ರಜ್ಞೆಯನ್ನು ಮಾತ್ರವಲ್ಲ, ಆಯಾ ವಿಷಯಗಳ ಬಗ್ಗೆ ಅವರಿಗಿರುವ ಮಾಹಿತಿ ಅಚ್ಚರಿಗೊಳಿಸುವಂತಿದೆ. ದೇಜಗೌ ಬರೆದಿರುವ ಮುನ್ನುಡಿಗಳ ಸಂಖ್ಯೆ ಬೆರಗು ಮೂಡಿಸುವುದರ ಜೊತೆಯಲ್ಲಿಯೇ ' ಮುನ್ನುಡಿ' ಸಾಹಿತ್ಯ ಪ್ರಕಾರ' ವೊಂದನ್ನೇ ಹೊಸದಾಗಿ ಸೃಷ್ಟಿಸುತ್ತಿದ್ದಾರೆಯೊ ಎಂದು ಅನ್ನಿಸಿಬಿಡುತ್ತದೆ.

'ಮುನ್ನುಡಿ'ಯ ನೈಜವಾದ ಅರ್ಥದಲ್ಲಿ ಪರಿಭಾವಿಸಿ ಮುನ್ನುಡಿ ಬರೆಯುವುದು ಅಷ್ಟು ಸುಲಭದ ಕೆಲಸವಲ್ಲ. ಮುನ್ನುಡಿ ಬರೆಯುವ ಮುನ್ನ ಬರೆಯಲಿರುವ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ವಿಷಯದ ಪೂರ್ಣ ಪರಿಚಯವಿರಬೇಕು. ಅದಾಗಬೇಕಾದರೆ ಆ ಗ್ರಂಥವನ್ನು ಆಮೂಲಾಗ್ರವಾಗಿ ಓದಬೇಕು. ಓದುವುದಕ್ಕೆ ಸಮಯ ಬೇಕು, ತಾಳ್ಮೆ ಬೇಕು, ಆಸಕ್ತಿ, ಅಭಿರುಚಿಗಳಿರಬೇಕು. ಆಗ ಮಾತ್ರ ಆ ಗ್ರಂಥದ ವಿಷಯ ಮನಸ್ಸಿನಲ್ಲಿ ಮೈದಳೆಯುತ್ತದೆ, ಬರೆಯಬೇಕಾಗಿರುವ ಅಂಶ ರೂಪುಗೊಳ್ಳುತ್ತದೆ. ಔಚಿತ್ಯಪೂರ್ಣವಾದ ಮುನ್ನುಡಿ ಹೊರಬರುತ್ತದೆ. ಮುನ್ನುಡಿಕಾರ ಕೃತಿಕಾರನ ಪ್ರಥಮ ಸಹೃದಯನಾಗುತ್ತಾನೆ. ಸಾಹಿತ್ಯ ಕ್ಷೇತ್ರದಲ್ಲಿ ಪ್ರಥಮಬಾರಿಗೆ ಅವನನ್ನು ಪ್ರತಿಷ್ಠಾಪಿಸುತ್ತಾನೆ. ಪ್ರೋತ್ಸಾಹದ ಸಿಹಿನೀರನ್ನೆರೆದು ಬೆಳೆಯಬಿಡುತ್ತಾನೆ. ಮುನ್ನುಡಿಕಾರರೇ ಹೇಳಿಕೊಂಡಿರುವಂತೆ "ಕೃತಿಕಾರನ ಮೊದಲ ಸಹೃದಯ ಮುನ್ನುಡಿಕಾರ: ಕೃತಿಯನ್ನು ಓದಿ ಮೆಚ್ಚಿ ಮೊದಲ

ಪೂಜೆ ಸಲ್ಲಿಸುವ ಹಕ್ಕು ಅವನದು."[1] ಕಟ್ಟಡಕ್ಕೆ ಅಸ್ತಿಭಾರ ಹಾಕುವಂತೆ, ಆರಂಭೋತ್ಸವ ಮಾಡುವಂತೆ, ಗ್ರಂಥ ಬಿಡುಗಡೆಯಂತೆ ಮುನ್ನುಡಿಯೂ ಸಂಭ್ರಮದ ಕಾರ್ಯವೇ.

'ಮೃಗಪ್ರಭುತ್ವ'ಕ್ಕೆ ಬರೆದಿರುವ ಮುನ್ನುಡಿಯಲ್ಲಿ ವಿಡಂಬನಕಾರನ ಜೀವನಚರಿತ್ರೆ, ಹಾಗು ವಿಡಂಬನ ಸಾಹಿತ್ಯದ ವಿಸ್ತಾರವಾದ ಚರಿತ್ರೆಯನ್ನು ಕೊಟ್ಟಿದ್ದಾರೆ. ಬಹುಶಃ ಆರ್ವೆಲ್ಲರು ಗಲಿವರನ ಕಥೆಯನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ 'ಅನಿಮಲ್ ಫಾರಂ' ಗ್ರಂಥವನ್ನು ಬರೆದಿರಬೇಕು. ಅಲ್ಲಿಯೂ ರಾಜಕೀಯವೇ ಸ್ವಿಫ್ಟನ್ನನ ಅಣಕದ ವಸ್ತು ಇಲ್ಲಿಯೂ ಅದೇ.[2] ಎಂಬ ಮಾತಿನಲ್ಲಿ ವಿಮರ್ಶೆಯ ಗುಣಗಳಲ್ಲೊಂದಾದ ತೌಲನಿಕ ದೃಷ್ಟಿಯನ್ನು ಗಮನಿಸಬಹುದು.

ಮುನ್ನುಡಿ ಕೇವಲ ಪ್ರಶಂಸೆಯಲ್ಲ, ವಿಮರ್ಶೆಯೂ ಹೌದು. ಇಷ್ಟು ಮಾತ್ರ ನಿಜ: ಅವುಗಳಲ್ಲಿ ಹಲವು ನನಗೆ ಮೆಚ್ಚುಗೆಯಾಗಿವೆ. ನನ್ನ ಹೃದಯವನ್ನು ಹೊಕ್ಕಿವೆ ವಿಚಾರವನ್ನು ಕೆರಳಿಸಿವೆ. ಇದು ಮಿತ್ರಪಕ್ಷಪಾತದ ಮಾತಲ್ಲ, ಕಾವ್ಯಪಕ್ಷಪಾತದ ಮಾತು. ಮೆಚ್ಚಿದ ಕೆಲವುಗಳಲ್ಲಿ ನೂತನ ಕಲ್ಪನಾವಿಲಾಸವಿದೆ. ನವೀನ ಭಾವವೀಚಿಗಳ ಮೆರವಣಿಗೆ ಇದೆ. ಸ್ವತಂತ್ರ ವಿಚಾರಸರಣಿ ಇದೆ ; ವಾಸ್ತವ ಜೀವನದ ಚಿತ್ರಣವಿದೆ ; ಮೇಲಾಗಿ ಇವೆಲ್ಲವುಗಳ ಸಮರಸತೆಯನ್ನು ಸಾಧಿಸಿದೆ"[3] ಎಂಬಲ್ಲಿ ಪ್ರಶಂಸೆಯಿದ್ದರೆ, " ಬೇರೆ ಬೇರೆ ಸಾಹಿತ್ಯಗಳ ವಿಭೂತ್ಯಾತ್ಮಕ ಅಂಶಗಳನ್ನೆತ್ತಿ ತೋರಿಸುವಾಗ, ಕನ್ನಡ ಸಾಹಿತ್ಯವನ್ನೇಕೆ ಮರೆತರೋ ಗೊತ್ತಿಲ್ಲ. ಗುಣದಲ್ಲಿ ಪ್ರಮಾಣದಲ್ಲಿ ಮಹಿಮಾ ವೈಶಿಷ್ಟ್ಯದಲ್ಲಿ ಕನ್ನಡ ಸಾಹಿತ್ಯ ಬೇರೆ ಯಾವ ಸಾಹಿತ್ಯಕ್ಕೂ ತಲೆ ತಗ್ಗಿಸುವ ಸ್ಥಿತಿಯಲ್ಲಿಲ್ಲ. ಇತ್ತ ದಕ್ಷಿಣದಲ್ಲಿ ತಮಿಳು ಭಾಷೆಯನ್ನು ಅತ್ತ ಉತ್ತರದಲ್ಲಿ ಉರ್ದು ಭಾಷೆಯನ್ನು ಬಿಟ್ಟರೆ ಬಹುಶಃ ಭರತಖಂಡದ ಉಳಿದ ಎಲ್ಲಾ ಭಾಷೆಗಳ ಜನ್ಮಕಾಲ ಹೆಚ್ಚು ಕಡಿಮೆ ಒಂದೇ ಆಗಿರುವಂತೆ ಕಂಡುಬರುತ್ತದೆ ಎಂದಿರುವಾಗ ಚಾರಿತ್ರಿಕ ಸತ್ಯಕ್ಕೆ ಊನವೊದಗುತ್ತದೆ. ಪ್ರಾಚೀನತೆಯಲ್ಲಿ ಕನ್ನಡ ತಮಿಳಿನ ಹತ್ತಿರಕ್ಕೆ ಬರುತ್ತದೆಯೆನ್ನುವುದಕ್ಕೆ ಗ್ರಾಂಥಿಕ ಸಾಕ್ಷ್ಯಗಳ ಜೊತೆಗೆ ಶಾಸನಾಧಾರಗಳಿವೆ. ಈ ವಾಸ್ತವಿಕ ಸತ್ಯದ ಕಡೆಗೆ ಲೇಖಕರ ಗಮನ ಹರಿದಿದ್ದರೆ ಚೆನ್ನಾಗಿರುತ್ತಿತ್ತು"[4] ಎಂಬಲ್ಲಿ ಲೋಪವನ್ನು ಎತ್ತಿ ತೋರಿಸಿದ್ದಾರೆ. ಆದರೆ ಲೋಪವನ್ನು ತೋರಿಸುವಾಗ ಒರಟಾಗಿ ಝುಂಕಿಸದೆ ನಯವಾಗಿ ಬಗ್ಗಿಸಿ ಭಾಷಾ ಸಾಹಿತ್ಯಾಭಿಮಾನವನ್ನು ತೋರುತ್ತ ವಿಮರ್ಶಕನ ಪ್ರಾಮಾಣಿಕ ಹಾಗು ಸಮತೋಲನ ಬುದ್ಧಿ ಕೌಶಲವನ್ನು ತೋರಿಸಿದ್ದಾರೆ. "ಈ ನನ್ನ ಮುನ್ನುಡಿಯಲ್ಲಿ ಗುಣಕ್ಕಿಂತ ದೋಷವನ್ನೇ ಎತ್ತಿತೋರಿಸಿದ್ದೇನೆ. ಇದರಿಂದ ಭಾಷಾಂತರಕಾರರಿಗೆ ಅಪಚಾರ ಮಾಡಿದ್ದೇನೆಂದು ಭಾವಿಸುವುದಿಲ್ಲ. ಗುಣ ಸಾಕಷ್ಟಿರುವುದರಿಂದಲೇ ಈ ಎರಡು ಮಾತು ಬರೆಯುವುದಕ್ಕೆ ತೊಡಗಿದ್ದು"[5] ಎಂಬ ಅವರ ಮಾತುಗಳೇ ಅವರ ಮುನ್ನುಡಿಯ

1. ದೇಜಗೌ ಮುನ್ನುಡಿಗಳು ಪುಟ 164.
2. ಅದೇ ಪುಟ 12
3. ಅದೇ ಪುಟ 15
4. ಅದೇ ಪುಟ 38
5. ದೇಜಗೌ ಮುನ್ನುಡಿಗಳು 25 - 26

ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ ಮಾತ್ರವಲ್ಲ ಆ ಮೂಲಕ ಗುಣವನ್ನು ಮುಕ್ತ ಮನಸ್ಸಿನಿಂದ ಮೆಚ್ಚುವ, ದೋಷವನ್ನು ಅಷ್ಟೇ ಮುಕ್ತ ಮನಸ್ಸಿನಿಂದ ನಯವಾಗಿ ಎತ್ತಿ ತೋರಿಸುವ ಪ್ರವೃತ್ತಿಯನ್ನೂ ಕಾಣುತ್ತೇವೆ. ವಿಪುಲವಾದ ಆದರೆ ಆರೋಗ್ಯಕರವಾದ ಸಾಹಿತ್ಯ ಬೆಳವಣಿಗೆಗೆ ಬೇಕಾಗಿರುವುದು ಇಂಥ ಪ್ರಾಮಾಣಿಕ ವಿಮರ್ಶೆಯೇ ತಾನೆ.

ಕಥಾ ಸಂಕಲನಗಳಿಗೆ ಬರೆದಿರುವ ಮುನ್ನುಡಿಗಳಲ್ಲಿ ಹಳ್ಳಿಯ ಜೀವನದ ಚಿತ್ರಣದ ಬಗೆಗಿರುವ ಅವರ ಒಲವು, ಮೆಚ್ಚುಗೆಗಳನ್ನು ಕಾಣುವುದಲ್ಲದೆ ಸಾಂದರ್ಭಿಕವಾಗಿ ಬಳಸುವ ದೇಸೀ ಶಬ್ದಗಳು ಅರ್ಥಪೂರ್ಣವೂ ಸಮರ್ಥವೂ ಆಗಿರುವುದನ್ನು ಕಾಣುತ್ತೇವೆ. “ ಕೈ ಹೊತ್ತಗೆ, ಕಿರು ಹೊತ್ತಗೆ, ಕಿಸೆ ಹೊತ್ತಗೆಗಳ ಪ್ರಚಾರ ಹೆಚ್ಚಿದಂತೆ ಅವುಗಳ ಸಂಖ್ಯೆ ತುಂಬ ಬೆಳೆದಿದೆ. ಹೆಗ್ಗುಂಟೆ, ಕಿರುಗುಂಟೆ ಹೊಡೆದು ಕಳೆಯನ್ನು ನಾಶಪಡಿಸದಿದ್ದರೆ ಕಳೆಯು ಪೊದೆಯೊಳಗೆ ಬೆಳೆ ಮರೆಯಾಗಿ ಹೋಗುವುದುಂಟು. ಹುಟ್ಟಿದ ಮಗು ಸೀಕಲಾಗಿರಲಿ, ಹರಕು ಮೂಗಾಗಲಿ, ಕಿವುಡನಾಗಲಿ, ಸೊತ್ತನಾಗಲಿ, ಎಬಡನಾಗಲಿ ತಂದೆ ತಾಯಂದಿರಿಗೆ ಅದೇ ಮುದ್ದು. ಹೆತ್ತವರಿಗೆ ಹೆಗ್ಗಣ, ಕೂಡಿದವರಿಗೆ ಕೋಡಗ ಮುದ್ದಾಗುವಂತೆ”[1] ಮುಂತಾದ ಮಾತುಗಳಲ್ಲಿ ಕಂಡುಬರುವ ಪದ ಜೋಡಣೆ, ಗ್ರಾಮ್ಯ ಶಬ್ದಗಳನ್ನು ಗದ್ಯದಲ್ಲಿ ಸಮರ್ಥವಾಗಿ ಚಲಾವಣೆಗೆ ತಂದಿರುವ ಮೋಡಿ, ಸಾಂದರ್ಭಿಕವಾಗಿ ಬಳಸುವ ನಾಣ್ಣುಡಿ ಇವು ಕನ್ನಡ ಗದ್ಯದ ಹದವಾದ ಬೆಳವಣಿಗೆಗೆ ಕೊಡುತ್ತಿರುವ ಮೆರಗು ಮಾತ್ರವಲ್ಲ ಸಾಜದೇಸಿಯ ಸೌಂದರ್ಯ ಕಂಪನ್ನು ಬೀರಿ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತವೆ. ಲಯಬದ್ಧವಾದ ಗದ್ಯ ಮಾಧುರ್ಯದ ಸೊಗಸು ಇದಲ್ಲವೆ ! ‘ಹೀಗೆಯೇ ಅವರು ಲೇಖನ ವ್ಯವಸಾಯವನ್ನು ಮುಂದುವರಿಸಿದರೆ ಅವರ ಸೃಜನಶಕ್ತಿ ಪ್ರಖರಗೊಂಡು, ಶೈಲಿ ನಾದಿಕೊಂಡು, ನಿರೂಪಣ ಶಕ್ತಿ ಹದಗೊಂಡು, ಔಚಿತ್ಯಪ್ರಜ್ಞೆ ವಿಕಸನಗೊಂಡು ಶ್ರೇಷ್ಠ ಕಥೆಗಾರರಲ್ಲೊಬ್ಬರಾಗಬಹುದೆಂಬ ನಂಬಿಕೆಯನ್ನು ಇಲ್ಲಿನ ಕಥೆಗಳು ಮೂಡಿಸುತ್ತವೆ”[2] ಎಂಬಲ್ಲಿ ಕಥೆಗಾರರ ಶಕ್ತಿ-ವ್ಯಕ್ತಿ ಚಿತ್ರವನ್ನು ಮಿತವಾದರೂ ಸಮಗ್ರವಾಗಿ ಎಷ್ಟು ಸುಂದರವಾಗಿ ನಿರೂಪಿಸಿದ್ದಾರೆ ಎಂಬುದನ್ನು ಮನಗಾಣಬಹುದು. ನಿರ್ಣಾಯಕವಾದ ಸಿದ್ಧಾಂತರೂಪೀ ಅಭಿಪ್ರಾಯಗಳನ್ನು ಇದೇ ರೀತಿ ಎಲ್ಲಾ ಮುನ್ನುಡಿಗಳಲ್ಲೂ ಅಭಿವ್ಯಕ್ತಪಡಿಸಿದ್ದಾರೆ.

ಜೀವನಚರಿತ್ರೆಗಳಿಗೆ ಮುನ್ನುಡಿ ಬರೆಯುವಾಗ ಕಥಾಪುರುಷನ ಬಗ್ಗೆ ಕೊಡುವ ಸಮಗ್ರ ವ್ಯಕ್ತಿತ್ವದ ಚಿತ್ರ ಸಂಕ್ಷಿಪ್ತವಾಗಿದ್ದರೂ ಬಂಧುರವೂ, ಸುಂದರವೂ, ಸ್ಫುಟವೂ ಆಗಿರುತ್ತದೆ.ಜೀವನ ಚರಿತ್ರೆಗಳಲ್ಲಿರುವ ವಿವಿಧ ಬಗೆಗಳನ್ನು ವ್ಯಕ್ತಪಡಿಸುತ್ತಾರೆ. ಜೀವನ ಚರಿತ್ರೆಗಳಲ್ಲಿ ಪೌರಾಣಿಕ ವ್ಯಕ್ತಿಗಳ ಚರಿತ್ರೆ, ಸಂತ ಜೀವನಚರಿತ್ರೆ, ಐತಿಹಾಸಿಕ ಜೀವನ ಚರಿತ್ರೆ, ಶುದ್ಧ ಜೀವನ ಚರಿತ್ರೆ[3] ಮುಂತಾಗಿ ವಿಭಾಗಿಸಿ ಆಯಾ ವರ್ಗಕ್ಕೆ ತಕ್ಕಂತೆ ಅದರ ವಿಸ್ತಾರವನ್ನು ನೀಡುತ್ತಾರೆ. ಆಯಾ ಚರಿತ್ರೆಗಳನ್ನು ಬರೆಯುವಾಗ ಜೀವನ ಚರಿತ್ರಕಾರ

---

1. ಅದೇ ಪುಟ 17
2. ಅದೇ ಪುಟ 124
3. ದೇಜಗೌ ಮುನ್ನುಡಿಗಳು 72, 92, 86

ಎಷ್ಟು ಎಚ್ಚರದಿಂದಿರಬೇಕು, ಸೂಕ್ಷ್ಮಗ್ರಾಹಿಯಾಗಿರಬೇಕು ಎಂಬುದರ ವಿವರವನ್ನು ಕೊಡುತ್ತಾರೆ. ತಮಗೆ ಸರಿಕಂಡ ವಿಷಯಗಳನ್ನು ಅಷ್ಟೇ ನೇರವಾಗಿ ಪ್ರತಿಪಾದಿಸುತ್ತಾರೆ. "ಆ ವಿಷಮಸಮಯದಲ್ಲಿ ಅವುಗಳೊಡನೆ(ವಿದೇಶೀ ಧರ್ಮಗಳೊಡನೆ) ಹೊಯ್‌ಕಯ್ಯಾಗಿ ನಿಲ್ಲಬಹುದಾಗಿದ್ದ ಒಂದೇ ಒಂದು ಮತವೆಂದರೆ ವೀರಶೈವ ಮತ. ಬಸವಣ್ಣನವರು ತೋರಿಸಿದ ದಾರಿಯಲ್ಲಿಯೇ ವೀರಶೈವ ಮತ ಮುಂದುವರಿದಿದ್ದರೆ ವಿದೇಶೀಯ ಮತಗಳ ಹಾನಿಕಾರಕ ಹಾಗೂ ವಿಚ್ಛಿದ್ರಕಾರಕ ಕೃತ್ಯಗಳಿಂದ ಪಾರುಮಾಡಬಹುದಿತ್ತು" ಎಂಬ ಮಾತಿನಲ್ಲಿ ಅವರ ನೇರ ಸ್ವಭಾವವನ್ನು ಕಾಣಬಹುದು.

"ಪವಾಡಗಳು ಸತ್ಯಭಾವವನ್ನು ಬೀರುವುದಾದರೆ ಅವು ಅಪೇಕ್ಷಣೀಯವೇ"[1] ಎಂಬ ಮಾತು ಗ್ರಂಥದ ವಿಮರ್ಶೆಯೇ ಆಗಿದೆ, ಪವಾಡಗಳ ಬಗ್ಗೆ ಅವರ ಅಭಿಪ್ರಾಯವೂ ಆಗಿದೆ.

ದೇಜಗೌ ಅವರು ಮುನ್ನುಡಿಯನ್ನು ಬರೆದಿರುವ ಕೃತಿಕಾರರಲ್ಲಿ ಕಿರಿಯರೂ ಇದ್ದಾರೆ, ಹಿರಿಯರೂ ಇದ್ದಾರೆ ; ನುರಿತ ಲೇಖಕರಿದ್ದಾರೆ. ಆಗತಾನೆ ಸಾಹಿತ್ಯಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿರುವವರೂ ಇದ್ದಾರೆ. ನುರಿತ ಹಿರಿಯ ಲೇಖಕರ ಗ್ರಂಥಗಳಿಗೆ ಬರೆಯುವಾಗ ತಮ್ಮ ವಿನಯವನ್ನು ವ್ಯಕ್ತಪಡಿಸಿರುವಂತೆ ಕಿರಿಯ ಆರಂಭದ ಲೇಖಕರ ಬಗೆಗೆ ಸೌಜನ್ಯವನ್ನು ತೋರಿರುವುದು ನೂತ್ರವಲ್ಲ, ಅವರ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಹಾಗೆ ಪ್ರೋತ್ಸಾಹಿಸಿದ ಲೇಖಕರಲ್ಲಿ ಈಗ ಎಷ್ಟೋ ಮಂದಿ ಸಾಹಿತಿಗಳೆಂದು ನಿಚ್ಚಳವಾಗಿ ಗುರುತಿಸಲ್ಪಟ್ಟಿರುವುದು ನಿಜಕ್ಕೂ ಸಂತಸದ ಸಂಗತಿ. ಈ ಕಾಲದಲ್ಲಿ ಮುನ್ನುಡಿ ಬರೆಯುವುದಿರಲಿ ಒಂದೆರಡು ಪ್ರೋತ್ಸಾಹದ ನುಡಿಗಳನ್ನಾಡುವವರೂ ಅಪರೂಪವಾಗಿರುವಾಗ (ಅದನ್ನು ನಾನು ಬಲ್ಲೆ) ಅವರಿವರೆನ್ನದೆ ಸರ್ವಸಮಾನ ಭಾವದಿಂದ ಹುರಿದುಂಬಿಸಿ ಪ್ರೋತ್ಸಾಹಿಸುವುದು ಉತ್ತಮ ಸಾಹಿತಿಯ ಸಾತ್ವಿಕ ಗುಣವಲ್ಲವೆ.

ಸಾಹಿತ್ಯ ಹುಲುಸಾಗಿ ಪರಿಪುಷ್ಟವಾಗಿ ಬೆಳೆಯಬೇಕಾದರೆ ಸಂಸ್ಕೃತಿ ಬೆರೆತು ಸುಗಂಧವನ್ನು ಬೀರಬೇಕಾದರೆ ಅನ್ಯಯ ಸಾಹಿತ್ಯಸಂಪರ್ಕವಾಗಲೇಬೇಕು. ಇದಾಗಬೇಕಾದರೆ, ಅನುವಾದ ಸಾಹಿತ್ಯ ಅನಿವಾರ್ಯ ಎಂಬುದನ್ನು ಚೆನ್ನಾಗಿ ಮನಗಂಡಿದ್ದಾರೆ. " ಆಧುನಿಕ ಯುಗದಲ್ಲಿಯೂ ಭಾಷಾಂತರ ಗ್ರಂಥಗಳಿಲ್ಲದ ಸಾಹಿತ್ಯ ಕೃಶವಾಗುತ್ತದೆ ; ಅಪೂರ್ಣವಾಗುತ್ತದೆ ; ಶಕ್ತಿಹೀನವಾಗುತ್ತದೆ.[2] ಮುಂತಾದ ಮಾತುಗಳಲ್ಲಿ ಅವರ ಈ ಭಾವ ವ್ಯಕ್ತವಾಗುತ್ತದೆ. ಅನುವಾದ ಗ್ರಂಥಗಳಿಗೆ ಮುನ್ನುಡಿ ಬರೆಯುವಾಗಲಂತೂ ಅನುವಾದ ಸಾಹಿತ್ಯದ ಸಮಗ್ರ ಇತಿಹಾಸವನ್ನು ಬರೆದಿರುವುದು ಮಾತ್ರವಲ್ಲದೆ, ಅನುವಾದ ಕಲೆಗೆ ಸಂಬಂಧಿಸಿದಂತೆ ಅದರ ದೀರ್ಘವೂ, ಸಾಧುವೂ ಆದ ನೀತಿ, ತತ್ವ, ಸಿದ್ಧಾಂತಗಳನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಗದ್ಯ ಪದ್ಯಗಳ ಅನುವಾದ ಕಾರ್ಯದಲ್ಲಿ ಉಂಟಾಗಬಹುದಾದ ತೊಡಕುಗಳ ಬಗೆಯನ್ನು, ಅಂಥ ಸಂದರ್ಭಗಳಲ್ಲಿ

1. ಅದೇ ಪುಟ 26
2. ದೇಜಗೌ ಮುನ್ನುಡಿಗಳು 66 - 63

ಅನುವಾದಕನು ಅನುಸರಿಸಬೇಕಾದ ನೀತಿ - ನಿಯಮಗಳನ್ನು ವಿಚಾರ ಮಾಡಿದ್ದಾರೆ. ಚರ್ಚೆ ಮಾಡಿದ್ದಾರೆ, ಭಾಷಾಂತರಕಾರನಿಗಿರಬೇಕಾದ ಯೋಗ್ಯತೆಗಳನ್ನೂ ನಿರೂಪಿಸಿದ್ದಾರೆ. ಭಾಷಾಂತರ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಭಾಷಾ ವಿಜ್ಞಾನಕ್ಕೆ ಮುನ್ನುಡಿ ಬರೆಯುವಾಗ ಭಾಷಾ ಅಧ್ಯಯನದ ಚರಿತ್ರೆಯನ್ನು ಸ್ಥೂಲವಾಗಿಯಾದರೂ, ಪಾಶ್ಚಾತ್ಯ ಪೌರ್ವಾತ್ಯ ಅಧ್ಯಯನದ ಚರಿತ್ರೆಯನ್ನು ಕೊಟ್ಟಿದ್ದಾರೆ. ವಿಷಯ ಪತ್ರಿಪಾದನೆಯಲ್ಲಿ ತಪ್ಪು ಕಂಡುಬಂದಲ್ಲಿ ಅದನ್ನು ತಪ್ಪೆಂದೋ, ಅನುಮಾನವಿದೆಯೆಂದೋ ಸೂಚಿಸುತ್ತಾರೆ.[1] ಕೆಲವು ಸಂದರ್ಭಗಳಲ್ಲಿ ಮುನ್ನುಡಿಗಳಲ್ಲಿ ತಾವು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು, ಆಕಾಂಕ್ಷೆಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಕೆಲಮಟ್ಟಿಗೆ ಕಾರ್ಯರೂಪಕ್ಕೆ ತಂದಿರುವುದು ಹೆಮ್ಮೆಯ ಸಂಗತಿ. ಅವರ ಕ್ರಿಯಾಶೀಲತೆಗೆ ಸಾಕ್ಷಿ.[2]

"ದುಂದುಗಾರಿಕೆಯಿಲ್ಲದ ಮಾತಿನಿಂದ, ತಿಳಿಯಾದ ಶೈಲಿಯಿಂದ, ವ್ಯವಸ್ಥಿತವಾದ ರೀತಿಯಿಂದ ಈ ಕೃತಿ ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗಿದೆ"[3] ಮುಂತಾದ ವಾಕ್ಯಮಾಲೆಗಳು ಆಯಾ ಕೃತಿಯ ಗುಣವನ್ನು ಸಂಗ್ರಹವಾಗಿ ಹೇಳುವಾಗ ತಮ್ಮ ಗದ್ಯ ಶೈಲಿಯ ಸಂಗ್ರಹವಾದ ಆದರೆ ಪರಿಣಾಮಕಾರಿಯಾದ ಪ್ರಭಾವ ಗುಣವನ್ನು ವ್ಯಕ್ತಪಡಿಸುವುದರ ಜೊತೆಗೆ ಆ ಗ್ರಂಥದಲ್ಲಿ ಓದುಗರಿಗೆ ಆಸಕ್ತಿಯನ್ನು ಕೆರಳಿಸುತ್ತವೆ. ಆದರ್ಶ ವಿಮರ್ಶಕನ ಕಾರ್ಯಗಳಲ್ಲೊಂದಂಶ ಇದಾಗಿದೆ. ಇವರ ಮುನ್ನುಡಿಗಳು ವಿಮರ್ಶೆಗಳೂ ಆಗಿರುವುದರಿಂದ ಇದು ಮುನ್ನುಡಿ ಸಾಹಿತ್ಯ ಪ್ರಕಾರವೇನೋ ಎಂಬ ಭ್ರಾಂತಿಯನ್ನುಂಟುಮಾಡುತ್ತದೆ.

ಪ್ರತಿಯೊಂದು ರಾಷ್ಟ್ರದಲ್ಲೂ ಶಿಷ್ಟ ಸಾಹಿತ್ಯದ ತಲಕಾವೇರಿಯಾಗಿ ಹರಿದಿರುವುದು ಜಾನಪದ ಸಾಹಿತ್ಯವೇ, ಎಂಬ ಮಾತು ಸಾಮಾನ್ಯ ಸತ್ಯ. ಆದುದರಿಂದಲೇ " ಜಾನಪದ ಸಂಪ್ರದಾಯದ ನೆಲಗಟ್ಟಿನ ಮೇಲೆ ಅನ್ಯದೇಶೀಯ ಪ್ರಕಾರಗಳು ಭದ್ರವಾಗಿ ನಿಂತಾಗ ಅವಕ್ಕೆ ಚ್ಯುತಿಯೊದಗುವುದಿಲ್ಲ."[4] ಜಾನಪದ ಸಾಹಿತ್ಯವನ್ನು ಕುರಿತಾದ ಅವರ ಆಳವಾದ ಜ್ಞಾನ, ವಸ್ತು ವೈವಿಧ್ಯಜ್ಞಾನ, ವಿಸ್ತಾರವಾದ ಅಧ್ಯಯನ-ಓದು ಅವರು ಜಾನಪದಕ್ಕೆ ಸಂಬಂಧಿಸಿದಂತೆ ಬರೆದಿರುವ ಮುನ್ನುಡಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಜಾನಪದ ಸಾಹಿತ್ಯ ಪ್ರಕಾರಗಳ ವಿಸ್ತಾರ ವೈವಿಧ್ಯಗಳನ್ನು ವಿವರ-ವಿವರವಾಗಿ ನೀಡಿದ್ದಾರೆ. ಜಾನಪದ ಸಾಹಿತ್ಯ ಸಂಗ್ರಹ ವಿಧಾನ, ಸಂಗ್ರಹಕಾರನ ಅರ್ಹತೆ ಹಾಗೂ ಅದರ ವಿಶ್ಲೇಷಣೆ, ವಿಮರ್ಶೆ ಮುಂತಾದುವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

" ಸತ್ಯಶೋಧನೆಯೇ ಸಂಶೋಧನೆ ಸತ್ಯಾನ್ವೇಷಣೆಯೆ ಸಕಲ ಜ್ಞಾನಶಾಖೆಗಳ ಲಕ್ಷ್ಯ. ಊಹೆ, ವೀಕ್ಷಣೆ, ಸಾಮಗ್ರಿ ಸಂಗ್ರಹ ಮತ್ತು ಪ್ರಯೋಗ ಸಂಶೋಧನೆಯ ತೇರಿನ

1. ಅದೇ ಪುಟ 70
2. ಅದೇ ಪುಟ 78
3. ಅದೇ ಪುಟ 98
4. ದೇಜಗೌ ಮುನ್ನುಡಿಗಳು 106 - 7

ಚಕ್ರಗಳು; ಪ್ರತಿಭೆ, ಕಲ್ಪನೆ, ಪಾಂಡಿತ್ಯ ಮತ್ತು ಸತತ ಪ್ರಯತ್ನಗಳು ಅದರ ಚಾಲಕಶಕ್ತಿ; ವಿಶ್ಲೇಷಣೆ ವಿವರಣೆಗಳು ಅದಕ್ಕೆ ಮಾಡುವ ಅಲಂಕಾರಗಳು'[1] ಈ ಮಾತುಗಳಲ್ಲಿ ಈ ಸಂಶೋಧನೆಯ ಸ್ವಭಾವ ಲಕ್ಷಣಗಳನ್ನು ಭಟ್ಟಿಯಿಳಿಸಿರುವರಲ್ಲದೆ ಇವರ ಗದ್ಯಶೈಲಿ ಯಾವ ದಿಕ್ಕಿನಲ್ಲಿ ಓಡುತ್ತಿದೆ ಎಂಬುದಕ್ಕೆ ನಿದರ್ಶನ ನೀಡಿದ್ದಾರೆ. ತನ್ನ ಸುತ್ತೆಲ್ಲ ಪ್ರಕೃತಿಯಲ್ಲಿ ಎರಚಾಡಿರುವ ಸೌಂದರ್ಯವನ್ನು ಕವಿಪ್ರತಿಭೆ ಸೆರೆ ಹಿಡಿದು ಕೇಂದ್ರೀಕರಿಸುವಂತೆ, ಒಂದು ಗ್ರಂಥದಲ್ಲಿ ಆದ್ಯಂತ ಚೆಲ್ಲಾಡಿರುವ ಭಾವ-ಲಕ್ಷಣಗಳನ್ನು ಇವರ ಸಂಗ್ರಹಶೈಲಿ ಸೆರೆ ಹಿಡಿದು ಕೇಂದ್ರೀಕರಿಸುವುದನ್ನು ಇಂಥ ಸಂದರ್ಭಗಳಲ್ಲಿ ಅನೇಕ ಕಡೆ ಗಮನಿಸಬಹುದು.

ಜೀವನ ಚರಿತ್ರೆ ಕೇವಲ ಘಟನಾವಳಿಗಳ ಜೋಡಣೆಯಲ್ಲ, ಪ್ರತಿಭಾತ್ಮಕವಾಗಿ ಮೂಡಿಬಂದ ಕಲಾತ್ಮಕ ಜೋಡಣೆಯಾಗಿರಬೇಕು! ಹಾಗಿದ್ದರೆ ಚೆನ್ನು ಎನ್ನುತ್ತಾರೆ. ಜೀವನಚರಿತ್ರೆಗೆ ಮುನ್ನುಡಿ ಬರೆಯುವಾಗ ಆ ವ್ಯಕ್ತಿಯ ಸಂಕ್ಷಿಪ್ತ ಚಿತ್ರ ಎಷ್ಟು ಮನೋಜ್ಞವಾಗಿದೆ, ನೋಡಿ;

" ಅಂಥ ಮಹಾವ್ಯಕ್ತಿಗಳ ಪಂಕ್ತಿಯಲ್ಲಿ ಅಗ್ರಗಣ್ಯರಾದವರು ಪ್ರಫುಲ್ಲಚಂದ್ರ ರಾಯ್. ಬೀಳು ಬಿದ್ದು ತಕ್ಕಲಾಗಿದ್ದ ಭಾರತೀಯ ವೈಜ್ಞಾನಿಕ ಭೂಮಿಯನ್ನು ಕರದೆ ಉತ್ತು ಹಸನಿಸಿ ಗೊಬ್ಬರ ಹಾಕಿ ಹಸಿರುಕ್ಕುವಂತೆ ಮಾಡಿದ ಕೀರ್ತಿ ಆ ಮಹಾವಿಜ್ಞಾನಿಗೆ ಸಲ್ಲಬೇಕಾಗಿದೆ. (ಮಾತೃಭಾಷೆಗೆ ಪ್ರಧಾನ್ಯ ಕೊಟ್ಟ ರಾಯ್ ಅವರನ್ನು ಹೊಗಳುತ್ತ) ನಾಡಿನ ಪ್ರಾಧ್ಯಾಪಕರೆಲ್ಲ ಇವರಂತೆ ನುಡಿದು ದುಡಿದಿದ್ದರೆ, ಮಾತೃಭಾಷೆಯಲ್ಲಿ ವಿದ್ಯಾದಾನ ಮಾಡಿದ್ದರೆ ಭರತಖಂಡ ಸರ್ವಾಂಶಗಳಲ್ಲಿಯೂ ಪ್ರಬುದ್ಧ ರಾಷ್ಟ್ರಗಳಿಗೆ ಹೆಗಲೆಣೆಯಾಗಿ ತಲೆಯೆತ್ತಿ ಮೆರೆಯಬಹುದಿತ್ತು ಎಂದು ಹೇಳಿ "ವಿವೇಕಕ್ಕೆ ಬೆಲೆಯಿಲ್ಲ ಅಧಿಕಾರಕ್ಕೆ ತಲೆಯಿಲ್ಲ"[2] ಎಂಬ ಸಾರ್ವತ್ರಿಕ ಸತ್ಯದ ಸ್ವಾನುಭವವನ್ನು ನುಡಿದಿದ್ದಾರೆ. ಮಾತೃಭಾಷೆಯೇ ಬೋಧನೆಯ ಆಡಳಿತದ ಮಾಧ್ಯಮವಾಗಬೇಕೆಂದು ನಿಂತ ವೇದಿಕೆಗಳಲ್ಲೆಲ್ಲ ಘೋಷಿಸಿದ್ದಾರೆ, ಬರೆದ ಲೇಖನಗಳಲ್ಲೆಲ್ಲ ಮಂಡಿಸಿದ್ದಾರೆ, ತಮ್ಮ ಅಧಿಕಾರದ ಮಿತಿಯಲ್ಲಿ ಸಾಧ್ಯವಾದಷ್ಟನ್ನು ಸಾಧಿಸಿದ್ದಾರೆ.

ಹೊರೇಸನ ಸಾಹಿತ್ಯ ವಿಮರ್ಶೆಗೆ ಬರೆದಿರುವ ಮುನ್ನುಡಿಯಲ್ಲಿ ಭಾರತೀಯ ಪಾಶ್ಚಾತ್ಯ ಕಾವ್ಯಮೀಮಾಂಸೆಯ ತೌಲನಿಕ ಚರಿತ್ರೆಯನ್ನು ಕೊಟ್ಟು ಭಾರತೀಯ ರಸಸಿದ್ಧಾಂತ ವಿಶ್ವ ಕಾವ್ಯಮಿಮಾಂಸೆಗೆ ನೀಡಿದ ಅಮೂಲ್ಯ ಕಾಣಿಕೆ ಎಂಬುದನ್ನು ವಿವರಿಸಿದ್ದಾರೆ. ಇಂಥ ಹಲವಾರು ಮುನ್ನುಡಿಗಳಲ್ಲಿ ಕೊಟ್ಟಿರುವ ಅಡಿಟಿಪ್ಪಣಿಗಳು ಅವರು ಬರೆಯುತ್ತಿರುವ ಗ್ರಂಥದ ವಸ್ತುವಿನ ಆಳ, ವೈವಿಧ್ಯ, ವ್ಯಾಪ್ತಿಗನುಸಾರವಾಗಿ ನೀಡುವ ತೌಲನಿಕ ವಿಮರ್ಶೆ, ಅದಕ್ಕಾಗಿ ಅವರು ನಡೆಸಿರುವ ಅಧ್ಯಯನ, ಪಾಂಡಿತ್ಯ, ವಿದ್ವತ್ತಿಗೆ ಸಾಕ್ಷಿ ನುಡಿಯುತ್ತವೆ. ಮುನ್ನುಡಿಗಳು ಕೇವಲ ದಾಕ್ಷಿಣ್ಯಕ್ಕೆ ಬರೆದುಕೊಡುವ ಔಪಚಾರಿಕ

---

1. ಅದೇ ಪುಟ 141
2. ದೇಜಗೌ ಮುನ್ನುಡಿಗಳು 134 - 6

ಮಾತುಗಳಲ್ಲ, ಆಳವಾದ ಅಧ್ಯಯನದಿಂದ ಮೂಡಿಬಂದ ಪ್ರೌಢ ಸಂಶೋಧನೆಯೂ ಹೌದು ಎಂಬುದನ್ನು ಸೂಚಿಸುತ್ತವೆ.

ಇದೊಂದು ಹೊಸದಾದ ಸಾಹಿತ್ಯ ಪ್ರಕಾರವೇನೋ (ಜೀವನ ಚರಿತ್ರೆಯಂತೆ) ಎಂಬಷ್ಟರ ಮಟ್ಟಿಗೆ 'ಗಂಗೋತ್ರಿಯ' ಮುನ್ನುಡಿಯಲ್ಲಿ ಅಭಿನಂದನ ಗ್ರಂಥಗಳ ಇತಿಹಾಸವನ್ನು ಕೊಟ್ಟಿದ್ದಾರೆ. ಅದುವರೆಗೆ ಕನ್ನಡದಲ್ಲಿ ಬಂದಿರುವ ಅಭಿನಂದನ ಗ್ರಂಥಗಳ ಸ್ಥೂಲ-ಸೂಕ್ಷ್ಮ ವಿಶ್ಲೇಷಣೆಯನ್ನು ಅಂಕಿ ಅಂಶಗಳೊಂದಿಗೆ ಕೊಟ್ಟಿದ್ದಾರೆ. ದೀರ್ಘವಾದ ಮುನ್ನುಡಿಗಳನ್ನು ಬರೆಯುವಾಗ ವಿಷಯಕ್ಕೆ ತಕ್ಕಂತೆ ಭಾಗ- ಭಾಗಗಳಾಗಿ ವಿಂಗಡಿಸಿ ಕೊಟ್ಟಿರುವುದು ಇವರ ಮುನ್ನುಡಿಗಳ ಮತ್ತೊಂದು ವೈಶಿಷ್ಟ್ಯ.

ಪಠ್ಯ ಪುಸ್ತಕಗಳಿಗೆ ಬರೆದಿರುವ ಮುನ್ನುಡಿಗಳಲ್ಲಿ ವಿದ್ಯಾರ್ಥಿಗಳ ಬುದ್ಧಿ ಮನಸ್ಸುಗಳು ಅರಳುವಂತೆ ಪಠ್ಯವನ್ನು ತಯಾರಿಸಬೇಕೆಂಬುದನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದ್ದಾರೆ.[1]

ತ್ರೈಮಾಸಿಕಗಳ ವಿಶೇಷ ಸಂಚಿಕೆಯಲ್ಲಿ (ಪ್ರ. ಕ) ಮಾಸಿಕ, ತ್ರೈಮಾಸಿಕ ಮುಂತಾದ ನಿಯತಕಾಲಿಕೆಗಳ ಹುಟ್ಟು, ಬೆಳವಣಿಗೆ, ವಿಕಾಸ, ಅವಸಾನಗಳ ವಿಶ್ವ ಇತಿಹಾಸವನ್ನೇ ಕೊಟ್ಟಿದ್ದಾರೆ. ಮುಂದೆ ಇಂಥ ವಿಷಯಗಳ ಬಗ್ಗೆ ಸಂಶೋಧನೆ ನಡೆಸುವವರಿಗೆ ಇಂಥ ಇವರ ಅನೇಕ ಮುನ್ನುಡಿಗಳು ಆಕರಗಳಾಗುತ್ತವೆ ಎನ್ನುವದರಲ್ಲಿ ಸಂಶಯವಿಲ್ಲ.

ಶಬ್ದಕೋಶಗಳಿಗೆ ಬರೆದಿರುವ ಮುನ್ನುಡಿಗಳಲ್ಲಿ ಶಬ್ದಕೋಶ ಬೆಳವಣಿಗೆ ಭಾಷಾ ಮಾಧ್ಯಮಕ್ಕೆ ಸಹಕಾರಿಯಾಗುವುದಲ್ಲದೆ ಪಾರಿಭಾಷಿಕ ಪದಕೋಶದ ಬೆಳವಣಿಗೆಗೂ ಸಹಕಾರಿ ಎಂಬುದನ್ನು ಪ್ರತಿಪಾದಿಸುತ್ತ " ಪಾರಿಭಾಷಿಕ ಶಬ್ದಗಳು ವಿಜ್ಞಾನದ ಬೆಳಕು ಕಿಂಡಿಗಳ; ವಿಜ್ಞಾನದ ರಹಸ್ಯವನ್ನು ತೆರೆದು ತೋರುವ ಕೀಲಿಕೈಗಳು"[2] ಎನ್ನುತ್ತಾರೆ. ವಿಶ್ವ ಕೋಶದ ಮುನ್ನುಡಿಯಲ್ಲಿ ಕನ್ನಡ ವಿಶ್ವಕೋಶದ ಯೋಜನೆ, ವಿಭಜನೆ ರೂಪರೇಖೆ, ಕೈಗೊಂಡ ನೀತಿ ನಿಯಮಗಳ ಇತಿಹಾಸವನ್ನೇ ಕೊಟ್ಟಿದ್ದಾರೆ. "ವಿದ್ಯುದಾಗಾರ ಮನೆಯನ್ನು ಬೆಳಗಿದರೆ, ವಿಶ್ವಕೋಶ ಮನವನ್ನೇ ಬೆಳಗುತ್ತದೆ." ಮುಂತಾದ ಮಿಂಚಿನ ಮಾತುಗಳು ಮನನೀಯವಾದವು.

"ನೆನಪಿನ ಕಡಲಿನಲ್ಲಿ ಸದಾ ಆವಿಯಾಗಿ ತೇಲಿ ಹೋಗುತ್ತಿರುವ ಕ್ಷಣಿಕಾನುಭವಗಳನ್ನು ಹಿಡಿದಿರುವ ಸಾಧನ ಈ ಚುಟುಕ. ದೀರ್ಘ ಕವನ ಕಾವ್ಯಗಳು ಹಬ್ಬದ ಹೆಚ್ಚುಗಟ್ಟಲೆಯಿದ್ದಂತೆ, ಅವನ್ನು ಸವಿಯಬೇಕಾದರೆ ವಿರಾಮಬೇಕು, ಚಿತ್ತೈಕಾಗ್ರತೆ ಬೇಕು; ಇವನ್ನಾದರೋ ನಿಂತಲ್ಲಿ ಕುಳಿತಲ್ಲಿ ಪೆಪ್ಪರಮೆಂಟಿನಂತೆ ಚಪ್ಪರಿಸಬಹುದು. ಇದು ಗಾತ್ರದಿಂದ ವಾಮನ, ಪರಿಣಾಮದಿಂದ ತ್ರಿವಿಕ್ರಮ. ಅದು ಚಾಟಿಯಾಗಬಲ್ಲುದು, ಅಂಕುಶವಾಗಬಲ್ಲುದು, ಮುಳುಗೋಲಾಗಬಲ್ಲದು, ಜಾಪಾಳ ಮಾತ್ರೆಯಾಗಬಲ್ಲದು, ರಾಮರಸವಾಗಬಲ್ಲದು, ಬೆಚ್ಚಾಗಬಲ್ಲದು, ಟಾನಿಕ್ಕಾಗಬಲ್ಲದು, ಪುಷ್ಟಿ ಭಸ್ಮವಾಗಬಲ್ಲದು"[3] ಎನ್ನುತ್ತಾರೆ ಚುಟುಕಗಳಿಗೆ ಬರೆದ ಮುನ್ನುಡಿಯಲ್ಲಿ.

1. ಅದೇ ಪುಟ 141
2. ದೇಜಗೌ ಮುನ್ನುಡಿಗಳು 164
3. ಅದೇ ಪುಟ 125

ಸಂಕ್ಷಿಪ್ತತೆ, ಸ್ಪಷ್ಟತೆ, ಸರಳತೆ, ಮಧುರತೆ ಶೈಲಿಯ ಅದರಲ್ಲೂ ಗದ್ಯ ಶೈಲಿಯ ಮುಖ್ಯಲಕ್ಷಣಗಳು. ಶೈಲಿ ಸಾಹಿತಿಯ ಆತ್ಮ. ಶೈಲಿಯಿಲ್ಲದ ಸಾಹಿತಿ ತನ್ನ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಲಾರ. ' Style expresses man' ಎಂದೇ ಹೇಳುತ್ತಾರೆ. ಪತ್ರಿಕೆಯಲ್ಲಿ ಸಾಹಿತಿಯು ತನ್ನದೇ ಆದ ಶೈಲಿಯನ್ನು ತನ್ನ ಸಂಸ್ಕಾರಕ್ಕನುಗುಣವಾಗಿ ಬೆಳೆಸಿಕೊಳ್ಳುತ್ತಾನೆ. ' ಶೀಲಸ್ಯ ಇಯಂ ಶೈಲಯ.' ಎಂದೂ ಹೇಳುತ್ತಾರೆ. ಪ್ರೊ. ದೇಜಗೌ ತಮ್ಮದೇ ಆದ ವಿಶಿಷ್ಟಗದ್ಯ ಶೈಲಿಯನ್ನು ರೂಪಿಸಿಕೊಂಡಿದ್ದಾರೆ, ರೂಢಿಸಿಕೊಂಡಿದ್ದಾರೆ ಎಂಬುದನ್ನು ಮೇಲೆ ನೀಡಿರುವ ಅನೇಕ ನಿದರ್ಶನಗಳು ಸ್ಪಷ್ಟಪಡಿಸುತ್ತವೆ. ನಿದರ್ಶನಕ್ಕಾಗಿ ಮತ್ತೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

" ಪರಾನುಕರಣೆ ಕಟ್ಟಿಸಿಕೊಂಡ ಹಲ್ಲಿನಂತೆ, ನಾಟಕದ ಮೀಸೆಯಂತೆ ಅಥವಾ ಪ್ಲಾಸ್ಟಿಕ್ ಹೂವಿನಂತೆ "[1]; " ಒಬ್ಬ ಸಾಹಿತಿ ದೇಶದ ಅಮೂಲ್ಯ ಆಸ್ತಿ, ಸಂಸ್ಕೃತಿಯ ಕಣ್ಣು, ಸಮಾಜದ ಕಲೆ, ರಾಷ್ಟ್ರದ ಅಗ್ರನಾಯಕ ಎಂಬ ಭಾವನೆ ಅಭಿನಂದನಾ ವಿಧಾನದಲ್ಲಿ ವ್ಯಕ್ತಗೊಳ್ಳುತ್ತದೆ ."[2] ಇಂಥ ಅನೇಕ ನಿದರ್ಶನಗಳನ್ನು ಕೊಡಬಹುದು. ದೇಜಗೌ ಅವರ ಈ ಲಯಬದ್ಧವಾದ ಗದ್ಯ ಮಾಧುರ್ಯ ವಿಷಯಗಳನ್ನು ಕೇಂದ್ರೀಕರಿಸಿ ಬುಗುರಿಯಂತೆ ಬೀಸಿ ಎಸೆಯುವುದರಲ್ಲಿ ಮತ್ತಷ್ಟು ಮಧುರವಾಗಿ ಕಂಗೊಳಿಸುತ್ತದೆ.

ಇವರ ದೀರ್ಘವಾದ ಕೆಲವು ಮುನ್ನುಡಿಗಳು ಒಂದೊಂದು ಗ್ರಂಥಕ್ಕೆ ಆಕರವಾಗಿವೆ. ಅವರೇ ಅನಂತರ ಅವ ನ್ನವಲಂಬಿಸಿ ಗ್ರಂಥಗಳನ್ನು ಬರೆದಿದ್ದಾರೆ. ಇನ್ನು ಕೆಲವು ಬರೆಯುವ ಸಿದ್ಧತೆಯಲ್ಲಿವೆ. ಹೀಗಾಗಿ ಈ 'ಮುನ್ನುಡಿಗಳು' ಆಕರ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ಈ ಎಲ್ಲ ಕಾರಣಗಳಿಂದ ದೇಜಗೌ ಅವರ "ಮುನ್ನುಡಿಗಳು" ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವ ಕಾಣಿಕೆ ಎಂದು ಹೇಳಬಹುದು.

* * * * *

1. ದೇಜಗೌ ಮುನ್ನುಡಿಗಳು 134
2. ಅದೇ ಪುಟ 1, ಪುಟ 139

ಅನುವಾದದ ಆಚಾರ್ಯ ಡಾ. ದೇಜಗೌ

- ಜ. ಹೊ. ನಾರಾಯಣಸ್ವಾಮಿ

ಚಾತುರ್ವರ್ಣದಲ್ಲಿ ನಲುಗಿಹೋದ ಈ ದೇಶದ ದುರಂತ ಇತಿಹಾಸದಲ್ಲಿ ಮಣ್ಣಿನ ಮಗನೊಬ್ಬ ನಿರಕ್ಷರಕುಕ್ಷಿಗಳ ಉದರದಲ್ಲಿ ಜನಿಸಿ ಮಹೋನ್ನತ ಹುದ್ದೆಗೆ ಏರಿ ಸಾಧನೆಗೈದಿದ್ದಾನೆ ಎಂದರೆ ಅದು ಪವಾಡಸದೃಶವೇ ಸರಿ. ಅಂತಹ ಅಪೂರ್ವ ಶಕ್ತಿಗಳಲ್ಲಿ 'ದೇಜಗೌ' ಎಂದೇ ಪ್ರಸಿದ್ಧವಾಗಿರುವ ಡಾ. ದೇ. ಜವರೇಗೌಡರು ಮುಖ್ಯರು.

ಸೃಷ್ಟಿಕ್ರಿಯೆಗಳಲ್ಲಿ ಮಾನಸಿಕ ಶಕ್ತಿಯೂ ಒಂದು. ಆದರೆ ಬರಿಯ ಮಾನಸಿಕ ಶಕ್ತಿ ಒಂದರಿಂದಲೇ ಬಿತ್ತಿ ಬೆಳೆಯಲಾಗುವುದಿಲ್ಲ. ಹಾಗೆ ಬಿತ್ತಿ ಬೆಳೆಯಲು ಮಣ್ಣಿನ ಸಂಪರ್ಕ, ಅದರ ಒಡನಾಟ ಅನಿವಾರ್ಯ. ಈ ದೇಶದ ಸಂಸ್ಕೃತಿ ಕಹಳೆಯನ್ನ ಕೇವಲ ಮಾನಸಿಕ ಭ್ರಮಾವಲಯದಲ್ಲೆ ಭ್ರಮಿಸಿ ಮೊಳಗಿಸಲು ಹೊರಟ ಕಾರಣ ಅದು ಬನಿ ಇಲ್ಲದೆ ಬರಡಾಗಿ ವಾಸ್ತವಕ್ಕೆ ವಿರುದ್ಧವಾಗಿದೆ. ಹೀಗಾಗಿ ಮಣ್ಣಿನ ವಾಸನೆ ಎಂಬ ಪದ ಋಷಿಗಳಿಂದ ನುಣುಚಿಕೊಂಡು ಅಂತರ್‌ದರ್ಶನದಿಂದ ದೂರವಾಗಿ ಮಾನಸಿಕ ಕಸರತ್ತಿಗಷ್ಟೇ ಸೀಮಿತವಾಗಿ ಉಳಿದು ಅದರ ಅರ್ಥವನ್ನು ಪೂರ್ಣವಾಗಿ ಕಳೆದುಕೊಂಡಿದೆ. ಮಣ್ಣಿನ ಸೊಗಡು, ಸೊಗಸು, ಸೌಂದರ್ಯಗಳನ್ನು ಅಭಿವ್ಯಕ್ತಿಸಲು ಮಣ್ಣಿನ ವಾಸನೆಯ ವಾಸ್ತವ ಅನುಭವವಿದ್ದವರಿಗೆ ಮಾತ್ರ ಸಾಧ್ಯ. ಅಂತಹ ಸಾಹಿತ್ಯ ತಾಯಿಯ ತೋಳ್‌ತಕ್ಕೆಯ ಸುಖವನ್ನೂ, ಸಂತೋಷವನ್ನೂ, ನೆಮ್ಮದಿಯನ್ನೂ ಅಮೃತದ ಸವಿಯನ್ನು ನೀಡಿದರೆ ಆ ಅನುಭವವಿಲ್ಲದ ಅಭಿವ್ಯಕ್ತಿ ಎಷ್ಟೇ ಸಮರ್ಥವಾಗಿದೆ ಎಂದೆನಿಸಿದರೂ ಅದು ಮಲತಾಯಿಯ ಆದರಣೆಯಂತಾಗುತ್ತದೆ. ಅಂತಹ ಅಪರೂಪದ ಹೊಸ ಸಾಹಿತ್ಯ ದಿಗಂತವನ್ನ ತೆರೆದ ಮಣ್ಣಿನ ಧೀಮಂತ ಶಕ್ತಿಯಾದ ಶ್ರೀ ಕುವೆಂಪು ಅವರ ಚಿದ್ವಲಯಕ್ಕೆ ಸೇರಿದ ವಿರಳರಲ್ಲಿ ಶ್ರೀ ದೇಜಗೌ ಮುಖ್ಯರು, ಪ್ರಮುಖರು.

ದೇಜಗೌ ಅವರ ಇತರ ಕೃತಿಗಳಂತಿರಲಿ ಬರಿಯ ಅನುವಾದವನ್ನೇ ತೆಗೆದುಕೊಂಡರೂ ಅವರು ಆ ಪ್ರಕಾರದ ಆಚಾರ್ಯರೆನಿಸಿದ್ದಾರೆ. ಕನ್ನಡ ಅನುವಾದ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಮೂಲ ಕೃತಿ ನಮ್ಮ ಕೃತಿ ಎಂದೆನಿಸುವುದು ಅನುವಾದಕನ ಅನುವಾದ ಶಕ್ತಿಯಿಂದ. ದೇಜಗೌ ಆ ಶಕ್ತಿಯನ್ನು ಪೂರ್ಣ ಪ್ರಮಾಣದಲ್ಲಿ ತಮ್ಮದನ್ನಾಗಿಸಿಕೊಂಡಿದ್ದಾರೆ. ಅನುವಾದದ ದೈತ್ಯಶಕ್ತಿ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಏಕೆಂದರೆ ಅವರು ಕನ್ನಡೀಕರಿಸಿರುವ ಕೃತಿಗಳೇ ಜಗತ್ತಿನ ದೈತ್ಯ ಕೃತಿಗಳಾಗಿವೆ. ಅವನ್ನು ಅಷ್ಟು ಸಮರ್ಥವಾಗಿ ದೇಜಗೌ ಅಲ್ಲದೆ ಮತ್ತಾರು ಮಾಡಲು ಸಾಧ್ಯ ? ಆದಕಾರಣ ಅವರನ್ನು ಅನುವಾದದ ಆಚಾರ್ಯ ಪಟ್ಟ ಅಲಂಕರಿಸಿದೆ. ಅನುವಾದದ ಆಚಾರ್ಯರಾಗಿದ್ದಾರೆ.

ಅವರು ಮೊದಲಿಗೆ ಶ್ರೀಮತಿ ಕೃಷ್ಣಹತೀಸಿಂಗ್ ಅವರ " With No Regrets" ಕೃತಿಯನ್ನು, 'ನೆನಪು ಕಹಿಯಲ್ಲ' (೧೯೪೮) ಎಂದು ಅನುವಾದಿಸಿದರು. ದೇಜಗೌ ಅನುವಾದ ಕ್ಷೇತ್ರಕ್ಕೆಪಾದಾರ್ಪಣೆ ಮಾಡಿದ ಮೊದಲ ಕೃತಿ ಅದು. ಅವರಿಗೆ ಅನುವಾದದಲ್ಲಿ

ಹೆಸರು ತಂದ ಕೃತಿ ಎಂದರೆ ಜೇನ್ ಆಸ್ಟಿನ್‌ರ "PRIDE AND PREJUDICE" ಹಮ್ಮು-ಬಿಮ್ಮು(೧೯೫೧) ಆಗಿ ಕನ್ನಡದಲ್ಲಿ ಅವತರಿಸಿ. ಅನಂತರ 'ಅಕ್ಬರ್ (೧೯೫೩),ಗುರುನಾನಕ್ (೧೯೫೩) ಕೃತಿಗಳನ್ನು ಅನುವಾದ ಮಾಡಿದ್ದರೂ ಅವರಿಗೆ ಕೀರ್ತಿ ಕಳಸವಿಟ್ಟ ಕೃತಿ ಎಂದರೆ ಜಗದ್ವಿಖ್ಯಾತ ಕಾದಂಬರಿಕಾರನಾದ ಲಿಯೋ ಟಾಲ್‌ಸ್ಟಾಯ್ ಅವರ 'ರಿಸರಕ್ಷನ್' ಕಾದಂಬರಿಯ ಕನ್ನಡ ಅನುವಾದ 'ಪುನರುತ್ಥಾನ"(೧೯೬೫). ಇದು ಅಂತರಂಗ ಶೋಧನೆ, ತನ್ಮೂಲಕ ನೈತಿಕ ನೆಲೆಗಟ್ಟಿಗೆ ಬಂದು ನಿಲ್ಲುವ ವ್ಯಕ್ತಿಯ ಕತೆ. ಈ ಅನುವಾದದ ನಂತರ ಟಾಲ್‌ಸ್ಟಾಯ್ ಅವರ ಎರಡು ನಾಟಕಗಳನ್ನು ಅನುವಾದಿಸಿದ್ದಾರೆ. ೧. LIGHT SHINES IN DARKNESS' - 'ಕತ್ತಲಲ್ಲಿ ಬೆಳಕು ೨. 'THE CAUSE OF IT ALL' - 'ಇದೇ ಇಷ್ಟಕ್ಕೆಲ್ಲಾ ಕಾರಣ (೧೯೭೮). ಇದಲ್ಲದೆ ಬಂಕಿಮಚಂದ್ರರ ಕೃತಿಯನ್ನು ಅಧರಿಸಿ ವಿಷವೃಕ್ಷ ನಾಟಕವನ್ನು ೧೯೭೬ರಲ್ಲಿ ರಚಿಸಿದ್ದಾರೆ. ೧೯೭೯ರಲ್ಲಿ ಭಾರತದ ಜಾನಪದ ಕಥೆಗಳನ್ನು ಅನುವಾದಿಸಿದ್ದಾರೆ. ದೇಜಗೌ ಅವರನ್ನು ಅನುವಾದದ ಆಚಾರ್ಯ ಸ್ಥಾನಕ್ಕೆ ಏರಿಸಿದ ಕೃತಿಗಳೆಂದರೆ ಟಾಲ್‌ಸ್ಟಾಯ್ ಅವರ 'WAR AND PEACE', "ಯುದ್ಧ ಮತ್ತು ಶಾಂತಿ' (೧೯೮೮) ಮತ್ತು ' ಅನ್ನಾಕರೆನಿನಾ (೧೯೯೧)', 'ಪುನರುತ್ಥಾನ'.

'ಯುದ್ಧ ಮತ್ತು ಶಾಂತಿ' ಹಾಗೂ 'ಅನ್ನಾಕರೆನಿನಾ' ಕೃತಿಗಳ ಅನುವಾದದ ಮೂಲಕ ಜಗತ್ತಿನ ಶ್ರೇಷ್ಠ ಕಾದಂಬರಿಕಾರನಾದ ಲಿಯೋ ಟಾಲ್‌ಸ್ಟಾಯ್‌ನನ್ನು ಕನ್ನಡದಲ್ಲಿ ಅವತರಿಸಿ ಕನ್ನಡದ ಟಾಲ್‌ಸ್ಟಾಯ್ ಆಗಿದ್ದಾರೆ.

ಅಕ್ಟೋಬರ್ ೧೯೮೮ ರ ವಿಜಯದಶಮಿಯಂದು ಗೆಳೆಯರಾದ ಭಗವಾನ್ ಜೊತೆ ದೇಜಗೌ ಅವರ ಮನೆಗೆ ಹೋದಾಗ ದೇಜಗೌ ಔಷಧಿ ಹಾಕಿಕೊಂಡು 'ಕಣ್ಣಿಗೆ' ವಿಶ್ರಾಂತಿ ಕೊಡುತ್ತಿದ್ದರು. ಟಾಲ್‌ಸ್ಟಾಯ್ ಕೃತಿಗಳು ಮತ್ತು ನಿಘಂಟು ತೆರೆದುಕೊಂಡಿದ್ದವು. ಅನುವಾದಕಾರ್ಯ ಸಾಗುತ್ತಿತ್ತು. ಇತ್ತೀಚೆಗೆ ಕಣ್ಣಿನ ನೋವಿನ ತೊಂದರೆಯಲ್ಲಿಯೂ ದೇಜಗೌ ಅಸೀಮನಾದ ಅನುವಾದದ ಕಾರ್ಯವನ್ನು ಕೈಬಿಡದೆ ಮುನ್ನಡೆಸುತ್ತಿದ್ದಾರೆ. ಔಷಧಿ ಹಾಕಿಕೊಂಡು ಕಣ್ಣು ಮುಚ್ಚಿಕೊಂಡಿದ್ದರೂ ಹಾಗೆಯೆ ಮಾತು ಮುಂದುವರೆಸಿದರು. ಹೊರಗಿನ ಕಣ್ಣು ಮುಚ್ಚಿಕೊಂಡಿದ್ದರೂ ಅನುವಾದದ ಬಗ್ಗೆ ಅಂತರಂಗದ ಕಣ್ಣು ಜಾಗೃತವಾಗಿ ಮಾತನಾಡುತ್ತಿತ್ತು. ಪ್ರಶ್ನೋತ್ತರ ಆಯ್ತು.

ಜಹೊನಾ: ಅನುವಾದ ಕಾರ್ಯದಲ್ಲಿ ಬಹಳಷ್ಟು ಮೈಲಿಗಳನ್ನು ಕ್ರಮಿಸಿದ್ದೀರಿ. ಅನುವಾದದ ಸಾಂಸ್ಕೃತಿಕ ಕೊಳ್‌ಕೊಡುಗೆಗಳ ಬಗ್ಗೆ ನಿಮ್ಮ ಅನಿಸಿಕೆ ಏನು ?

ದೇಜಗೌ: ಅನುವಾದ ತುಂಬ ಕಷ್ಟದ ಕೆಲಸ. ನನಗೆ ಅನುವಾದದ ಬಗ್ಗೆ ಹಿಂದಿನಿಂದಲೂ ಆಸಕ್ತಿ. ಅದಕ್ಕೆ ಮುಖ್ಯ ಕಾರಣ ಕನ್ನಡ ಭಾಷೆ ಮತ್ತು ಸಾಹಿತ್ಯ ಸಮೃದ್ಧವಾಗಬೇಕು ಎನ್ನುವಂಥದ್ದು. ನಿಮಗೆ ಗೊತ್ತು, ಸಾಹಿತ್ಯ ಸಂಸ್ಕೃತಿಯ ಪ್ರತಿಬಿಂಬ. ಅನುವಾದದ ಮೂಲಕ ಅನ್ಯ ಸಂಸ್ಕೃತಿಯಿಂದ ಆ ಜನರ ರುಚಿ-ಅರುಚಿಗಳು, ಒಲವು-ನಿಲವುಗಳು ನಮ್ಮ ಜನರಿಗೆ ತಿಳಿಯುವಂತಾಗುತ್ತದೆ. ಅವರ ಸಂಸ್ಕೃತಿಯನ್ನು ತಿಳಿದಾಗ ನಮ್ಮವರಿಗೂ ಅವರಿಗೂ ಹೃದಯ ಸಂವಾದ ಸಂಭವಿಸುತ್ತದೆ. ಅವರ ಸಂಸ್ಕೃತಿ ಮತ್ತು ನಮ್ಮ ಸಂಸ್ಕೃತಿ ಸಮ್ಮಿಳನಗೊಂಡು ಅಥವಾ ಸಂಗಮಗೊಂಡು

ಮಾನವ ಸಂಸ್ಕೃತಿಯ ಬೆಳವಣಿಗೆಗೆ ಅವಕಾಶವಾಗುತ್ತದೆ. ಜಾಗತಿಕ ಪ್ರಗತಿಯ ದೃಷ್ಟಿಯಿಂದ ಇದು ಅತ್ಯಗತ್ಯ. ಜಗತ್ತಿನಲ್ಲಿ ಶಾಂತಿ ನೆಲಸಲು ಸಹ ಈ ಹೃದಯ ಸಂವಾದ ಅನಿವಾರ್ಯ. ಬೇರೆ ಭಾಷೆ ಕೃತಿಗಳನ್ನು ನಮ್ಮ ಭಾಷೆಗೆ ತರ್ಜುಮೆ ಮಾಡುವಾಗ ನಮ್ಮ ಭಾಷೆಗೆ ಹೊಸ ಕಸುವು, ಹೊಸ ಚೇಗುಗಳು ಸಮ ನಿಸುತ್ತವೆ. ಅನೇಕ ಹೊಸ ನಲುಗು ಪಲುಕುಗಳು ದೊರೆಕೊಳ್ಳುತ್ತವೆ. ಭಾಷಾ ವೈವಿಧ್ಯ ಸಂಪತ್ತುಗಳು ಹೊರವಾಗಿ ಪ್ರಾಪ್ತವಾಗುತ್ತವೆ. ಹಾರ್ಡಿ, ಟಾಲ್‌ಸ್ಟಾಯ್‌ರಲ್ಲಿರುವಂಥ ಮಹಾ ಮೇಧಾವಿಗಳ ಕೃತಿಗಳು ಕನ್ನಡ ಭಾಷೆಗೆ ಇಳಿದಾಗ ಅವು ನಮ್ಮ ಸಾಹಿತಿಗಳಿಗೆ ಮಾದರಿಗಳಾಗುವುದಲ್ಲದೆ ಕನ್ನಡದ ಸಾಹಿತ್ಯ ವಿಶ್ವವಿಶಾಲವಾಗಿ ವಿಜೃಂಭಿಸು ವಂತಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದ ಸಮೃದ್ಧಿಗೆ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕವೇ ಪ್ರಬಲ ಕಾರಣ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಭಗವಾನ್:ಅನುವಾದದ ಸಾಧಕ ಬಾಧಕಗಳ ಬಗ್ಗೆ ಕೊಂಚ ವಿವರಿಸಿ.

ದೇಜಗೌ: ಅನುವಾದ ಕಷ್ಟಕರವಾದ ಪುನರ್‌ಸೃಷ್ಟಿ. ಪರಕಾಯಪ್ರವೇಶ ಸಾಮರ್ಥ್ಯವಿಲ್ಲದವರಿಗೆ ಈ ಪುನರ್‌ಸೃಷ್ಟಿ ಕಾರ್ಯ ಸುಲಭವೇನೂ ಅಲ್ಲ. ಅನುವಾದಕನನ್ನು ಮಹಾಸಾಹಸಿಗನೆನ್ನಬಹುದಾದರೂ ಅವನು ಅನೇಕ ಅಪವಾದಗಳಿಂದ ಮುಕ್ತನಾಗಿಲ್ಲ. ಎಂಥ ಪ್ರತಿಭಾವಂತನಾದರೂ, ಭಾಷಿಕ ಮತ್ತು ಸಾಂಸ್ಕೃತಿಕ ಇತಿಮಿತಿಗಳಿಂದಾಗಿ ಮೂಲಕ್ಕೆ ಸಮನಾಗಿ ಭಾಷಾಂತರ ಮಾಡುವುದು ಕಷ್ಟವಾಗುತ್ತದೆ. ಸಾಂಸ್ಕೃತಿಕ ಸಮಾನತೆ ಇರುವ ಜ್ಞಾತಿ ಅಥವಾ ಸಹಭಾಷೆಗಳಿಂದ (ಸಂಸ್ಕೃತ ಇತ್ಯಾದಿ ಭಾರತೀಯ ಭಾಷೆಗಳು) ಭಾಷಾಂತರ ಅಷ್ಟು ಶ್ರಮದಾಯಕವಾಗುವುದಿಲ್ಲ. ಆದರೆ ವಿಭಿನ್ನ ಸಂಸ್ಕೃತಿಗಳಿಂದ ಪೋಷಿತವಾಗಿರುವ ರಷ್ಯನ್, ಇಂಗ್ಲೀಷ್ ಮೊದಲಾದ ಭಾಷೆಗಳಿಂದ ಭಾಷಾಂತರಿಸುವ ಕಾರ್ಯ ಅನುವಾದಕನಿಗೆ ಸಹಾಯವಾಗುತ್ತದೆ. ಭಾಷಾಂತರದಲ್ಲಿಯು ಭಾವಾನುವಾದ ಮತ್ತು ಸಂಗ್ರಹಾನುವಾದಗಳು ಸುಲಭವಾದರೆ ಸಮಗ್ರ ಅನುವಾದ ಅನುವಾದಕನ ಸರ್ವಶಕ್ತಿಗಳನ್ನು ಪರೀಕ್ಷೆಗೆ ಈಡು ಮಾಡುತ್ತವೆ. ಸ್ವತಂತ್ರ ಕೃತಿ ರಚನೆ ಎಷ್ಟು ಸುಲಭವೋ ಭಾಷಾಂತರ ಕಾರ್ಯ ಅಷ್ಟು ಕಷ್ಟ. ಅದಕ್ಕಾಗಿ ಕೆಲವರು ಗೂಢವಾಗಿ ಚೌರ್ಯಕ್ಕೆ ಜೋತು ಬೀಳುತ್ತಾರೆ. ಮೂಲ ಪದಕ್ಕೆ ಸಮಧ್ವನಿ, ಲಯ, ಭಾವಾರ್ಥಗಳ ದೃಷ್ಟಿಯಿಂದ ಪದಸಿಕ್ಕುವುದು ಉದ್ದಿಷ್ಟ ಭಾಷೆಯಲ್ಲಿ ದುರ್ಲಭ. ಅನುವಾದಕ ಈ ಅಂಶಗಳಲ್ಲಿ ಒಂದೆರಡನ್ನಾದರೂ ಉಳಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಅವನು ಹೊಸ ಮಾತುಗಳನ್ನು ಟಂಕಿಸಬೇಕಾಗುತ್ತದೆ. ಇಲ್ಲವೆ ಜಾನಪದ ಭಾಷೆಗೆ ಶರಣುಹೋಗಬೇಕಾಗುತ್ತದೆ. ಪದಗಳ ಸಮಸ್ಯೆ ಬಗೆಹರಿದಮೇಲೂ ಮೂಲಭಾಷೆಯ ಸಮತೋಲನವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇವುಗಳ ಜೊತೆಗೆ ನುಡಿಗಟ್ಟು, ಜಾಣ್ನುಡಿ, ಅಡಕನುಡಿಗಳ ಸಮಸ್ಯೆಯಂತೂ ಇದ್ದೇ ಇರುತ್ತದೆ. ಒಟ್ಟಿನಲ್ಲಿ ಮೂಲ ಕೃತಿಕಾರನ ಆಶಯಕ್ಕೆ ಭಂಗ ಬರದಂತೆ ಭಾಷಾಂತರ ಕಾರ್ಯ ನಡೆಸಬೇಕಾದರೆ ಅನುವಾದಕ ತುಂಬಾ ಶ್ರಮಪಡಬೇಕಾಗುತ್ತದೆ.

ಕಣ್ಣಿಗೆ ಹಾಕಿಕೊಂಡ ಔಷಧಿಯ ವೇಳೆ ಮುಗಿದ ಕಾರಣ ಕಣ್ಣು ತೆರೆದು ಕುಳಿತುಕೊಂಡ ದೇಜಗೌ ಅವರ ಮುಖದಲ್ಲಿ ಸರಳತೆಯ ನಗು ಸುಳಿದಾಡುತ್ತಿತ್ತು.

ಜಹೊನಾ: ಜನಸಾಮಾನ್ಯರಿರಲಿ ಅನುವಾದದ ಬಗ್ಗೆ ಸಾಹಿತಿಗಳಲ್ಲೂ ಹಗುರವಾದ ಅಭಿಪ್ರಾಯವಿದೆಯಲ್ಲ ಏಕೆ ?

ದೇಜಗೌ: ತನ್ನಲ್ಲಿ ಯಾವ ಗುಣವಿಲ್ಲವೋ, ಯಾವ ಶಕ್ತಿ ಇಲ್ಲವೋ ಅವನ್ನು ಬೇರೆ ವ್ಯಕ್ತಿಯಲ್ಲಿ ಕಂಡಾಗ ಯಾವ ಮನುಷ್ಯನಿಗಾದರೂ ಈರ್ಷ್ಯೆ ಮತ್ತು ಸಂಕಟಗಳು ಉದ್ಭವಿಸುವುದು ಸಹಜ. ಮಹತ್ತನ್ನು ಕಂಡಾಗ ಅಲ್ಪರು ಹೊಟ್ಟೆಕಿಚ್ಚುಪಡುವುದು ನಿತ್ಯಾನುಭವದ ಸಂಗತಿ. ಇದು ಕೇವಲ ಕಲಾ ಕ್ಷೇತ್ರದಲ್ಲಿ ಮಾತ್ರವಲ್ಲ, ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಪಸರಿಸಿಕೊಂಡಿದೆ. ವಿದ್ವಾಂಸರನ್ನು ಕಂಡು ಅಲ್ಪವಿದ್ಯಾವಂತ, ಚೆಲುವೆಯನ್ನು ಕಂಡು ಮಂಥರೆಯಂಥ ಹೆಣ್ಣು, ವಿಜ್ಞಾನಿಯನ್ನು ಕಂಡು ಅಜ್ಞಾನಿ ಪರಿತಾಪಗೊಳ್ಳುವುದನ್ನು ನಾವು ನಿತ್ಯವೂ ನೋಡುತ್ತೇವೆ. ಸಾಮಾನ್ಯವಾಗಿ ಸಾಹಿತಿ ತಾನು ಒಬ್ಬ ಪ್ರತಿಭಾವಂತನೆಂದು ತಿಳಿದುಕೊಂಡಿರುತ್ತಾನೆ. ಬಾವಿ ಕಪ್ಪೆಯಂತೆ. ನಿಜವಾದ ಸಾಹಿತಿ ಜಗತ್ತಿನ ಶ್ರೇಷ್ಠ ಸಾಹಿತ್ಯ ಕೃತಿಗಳೆಲ್ಲವನ್ನೂ ರಕ್ತಗತ ಮಾಡಿಕೊಂಡಿರುತ್ತಾನೆ. ಅದು ಪಲವರಿಗೆ ಕಷ್ಟವಾಗುತ್ತದೆ. ಆಂಗ್ಲ ಭಾಷೆಯ ಬಗ್ಗೆ ಇರುವ ದ್ವೇಷಕ್ಕೆ ಇದೂ ಒಂದು ಕಾರಣವೆಂದು ಕಾಣುತ್ತದೆ. ಜಗತ್ತಿನ ಶ್ರೇಷ್ಠ ಕೃತಿಗಳು ಕನ್ನಡಕ್ಕೆ ಬಂದಾಗ ನಮ್ಮವರ ರಿಕ್ತತೆ ಸರ್ವವೇದವಾಗುತ್ತದೆ. ಅನುವಾದದ ಬಗೆಗಿನ ಅವಜ್ಞತೆಗೆ ಅಜ್ಞಾನವೇ ಪ್ರಮುಖ ಕಾರಣ. ಅಷ್ಟೇ ಅಲ್ಲ ಸ್ವತಂತ್ರವೆನಿಸಿಕೊಡಿರುವ ಅನೇಕ ಕೃತಿಗಳಲ್ಲಿ ಅನೇಕ ಅನುಮಾನಗಳು ತೇಪೆಗೊಂಡಿವೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಭಗವಾನ್ : ಟಾಲ್‌ಸ್ಟಾಯ್ ಅವರ ಮೂರೂ ಕಾದಂಬರಿಗಳನ್ನು ಅನುವಾದಿಸಿದ್ದೀರಿ. ನೀವು ಅವುಗಳನ್ನು ಆರಿಸಿಕೊಳ್ಳುವುದಕ್ಕೆ ಕಾರಣವೇನಾದರೂ ಇದೆಯೇ ?

ದೇಜಗೌ : ನಾನು ಆನರ್ಸ್ ತರಗತಿಯನ್ನು ಸೇರಿದಾಗ ಶ್ರೀ ಕುವೆಂಪು ಅವರು ಹಾರ್ಡಿ ಮತ್ತು ಟಾಲ್‌ಸ್ಟಾಯ್ ಅವರ ಕೃತಿಗಳನ್ನು ಓದಿ ಜೀರ್ಣಿಸಿಕೊಳ್ಳುವಂತೆ ಮೇಲಿಂದ ಮೇಲೆ ಹೇಳುತ್ತಿದ್ದರು. ಸ್ವಯಂಪರೀಕ್ಷೆಯಾಗಿ ನಾನು ಮೊದಲು 'ಹಮ್ಮು-ಬಿಮ್ಮು' ಭಾಷಾಂತರಿಸಿದಾಗ ಮಿತ್ರರು ಮೆಚ್ಚಿದರು. 'ಪುನರುತ್ಥಾನ ಭಾಷಾಂತರಿಸಿದಾಗ ಕುವೆಂಪು ಅವರು ಅದನ್ನೋದಿ ಮೆಚ್ಚಿಕೊಂಡು " ಟಾಲ್‌ಸ್ಟಾಯ್ ಅವರ ಉಳಿದ ಕೃತಿಗಳನ್ನು ನೀವೇಕೆ ಭಾಷಾಂತರಿಸಬಾರದು ? ಅದೊಂದು ಸಾಹಸಕಾರ್ಯ ನಿಜ. ಆ ಕಾರ್ಯ ನಿರ್ವಹಿಸಿದಾಗ ನಿಮ್ಮ ಜನ್ಮ ಸಾರ್ಥಕವಾಗುತ್ತದೆ ". ಎಂಬುದಾಗಿ ಅವರು ಪ್ರೋತ್ಸಾಹಿಸಿದರು. ಹಾರ್ಡಿ ಮತ್ತು ಟಾಲ್‌ಸ್ಟಾಯ್ ಓದಿದ ನಂತರ ಕನ್ನಡದ ಹಲವು ಕಾದಂಬರಿಗಳ ಬಗ್ಗೆ ನನಗೆ ರುಚಿ ಕಾಣಲಿಲ್ಲ. ಟಾಲ್‌ಸ್ಟಾಯ್ ಅವರ ಕೃತಿಗಳನ್ನು ಕನ್ನಡಕ್ಕೆ ತರಬೇಕೆಂಬ ಸಂಕಲ್ಪ ಎಂದೋ ನನ್ನ ಮನಸ್ಸಿನಲ್ಲಿ ನೆಲೆಯೂರಿತು.

ಜಹೊನಾ : ಮಾಡಿರುವ ಅನುವಾದಗಳಲ್ಲಿ ನಿಮಗೆ ಪ್ರಿಯವಾದ, ಮೆಚ್ಚಿಗೆಯಾದ ಕೃತಿ ಯಾವುದು?

ದೇಜಗೌ : ನಾನು ಭಾಷಾಂತರ ಮಾಡಿರುವ ಎಲ್ಲ ಕೃತಿಗಳು ಉತ್ತಮವಾದುವೆ. ಆದರೆ 'ಯುದ್ಧ ಮತ್ತು ಶಾಂತಿ' ಜಗತ್ತಿನ ಅಗ್ರಗಣ್ಯ ಮಹಾಕಾವ್ಯಗಳ ಮಟ್ಟಕ್ಕೆ ನಿಲ್ಲುವಂಥ

ಕೃತಿಯಾದ್ದರಿಂದ, ಇಡೀ ಜನಜೀವನವೇ ಅದರ ವಸ್ತುವಾಗಿರುವುದರಿಂದ, ಕಾಲಾತೀತ ಸತ್ವ ಅದರಲ್ಲಿ ಸಮಾವೇಶಗೊಂಡಿರುವುದರಿಂದ ಅದು ನನಗೆ ಆಶ್ಚರ್ಯಕರವಾದ ಆನಂದವನ್ನುಂಟುಮಾಡಿದೆ. ಭಾರತೀಯ ದರ್ಶನವೂ ಅಗರಲ್ಲಿ ಅಲ್ಲಲ್ಲೆ ಮಿಂಚುವುದರಿಂದ ಅದು ಭಾರತೀಯ ಎನ್ನುವಷ್ಟರ ಮಟ್ಟಿಗೆ ಅದಕ್ಕೆ ನಾನು ಮಾರುಹೋಗಿದ್ದೇನೆ. ಅಲ್ಲಿ ಬರುವ ಹೆಸರುಗಳನ್ನು ಮತ್ತು ಕೆಲವು ಭೌಗೋಳಿಕ ಸನ್ನಿವೇಶಗಳನ್ನು ಮರೆತದ್ದಾದರೆ ಅದೊಂದು ಜಾಗತಿಕ ಕಾದಂಬರಿ ಎಂದೇ ಹೇಳಬಹುದು.

ಜಹೊನಾ : ಹಾಗಾದರೆ ಅದರ ವೈಶಿಷ್ಟ್ಯವೇನು?

ದೇಜಗೌ: ಅಲ್ಲಿರುವ ವಸ್ತು ನಿರೂಪಣೆ, ಪಾತ್ರರಚನೆ, ವರ್ಣನೆ, ಸೌಂದರ್ಯ ದೃಷ್ಟಿ, ತತ್ವನಿರೂಪಣೆ, ಸಂಭಾಷಣೆ ಈ ಒಂದೊಂದರಲ್ಲಿಯೂ ಪರಿಪೂರ್ಣತೆಯ ಶಿಖರವನ್ನು ಕಾಣಬಹುದು. ಈ ಮಹಾಕಾದಂಬರಿಯ ಕುಕ್ಷಿಯಲ್ಲಿ ಒಂದಲ್ಲ ಎರಡಲ್ಲಾ ನೂರಾರು ಕಥೆಗಳು ಹುದುಗಿವೆ. ಇಲ್ಲಿ ಅಭಿವ್ಯಕ್ತಿಗೊಂಡಿರುವ ಭಾವಾಲೋಚನೆ, ಅನುಭವಗಳಿಗೆ ಮಿತಿಯೇ ಇಲ್ಲ. ಅದಕ್ಕಾಗಿಯೇ ಟಾಲ್‌ಸ್ಟಾಯ್ ನೂರಾರು ಪಾತ್ರಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಯಾವ ಮಹಾಕವಿಯೂ ಟಾಲ್‌ಸ್ಟಾಯ್‌ಗಿಂತ ಮಿಗಿಲಾಗಿ ಯುದ್ಧದ ಅನುಭವವನ್ನು ವರ್ಣಿಸಲಾರ. ಯುದ್ಧದ ನಿಶ್ಫಲತೆ ಮತ್ತು ಶಾಂತಿಯ ಅನಿವಾರ್ಯತೆಯನ್ನು ಕಾದಂಬರಿಕಾರ ಉದ್ದಕ್ಕೂ ಸೂಚಿಸುತ್ತಾನೆ. ಯುದ್ಧ ನಡೆಯುವಾಗ ಜನಜೀವನ ಹೇಗೆ ಸಾಗುತ್ತಿತ್ತೆಂಬುದನ್ನು ಯುದ್ಧಾ ನಂತರ ಸಾಮಾನ್ಯ ಜೀವನ ಹೇಗೆ ಶಾಂತಿಯ ಆಗರವಾಗಿತ್ತೆಂಬುದನ್ನು ಅವರು ಎತ್ತಿಹಿಡಿದಿದ್ದಾರೆ.

ಜಹೊನಾ: ಕಥೆಗಳ ಗಣಿ ಎಂದಿರಿ. ಮಹಾ ಭಾರತದಲ್ಲಿ ಬರುವ ಉಪಕಥೆಗಳಿಗೆ ಹೋಲಿಸಿದರೆ ಇಲ್ಲಿ ಯಾವ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ ?

ದೇಜಗೌ: ಮಹಾಭಾರತದಲ್ಲಿ ಬರುವ ಉಪಕಥೆಗಳು 'Disjointed'. ಆದರೆ 'ಯುದ್ಧ ಮತ್ತು ಶಾಂತಿ 'ಯಲ್ಲಿ ಹಾಗಾಗಿಲ್ಲ.

ಇಷ್ಟಾಗುವಷ್ಟರಲ್ಲಿ ಇಳಿಹೊತ್ತಾದ್ದರಿಂದ ಮೂವರೂ ಗಂಗೋತ್ರಿಯ ಕಡೆಗೆ ವಿಹಾರ ಹೊರಟೆವು. ಚರ್ಚೆ ಸಾಗುತ್ತಲೇ ಇತ್ತು. ದೇಜಗೌ ಅನುವಾದಕರಿಗೆ ಬರುವ ಸವಾಲುಗಳನ್ನು ಹೇಳುತ್ತಾ 'ನೋಡಿ, ಟಾಲ್‌ಸ್ಟಾಯ್ 'Yello Stipule' ಎಂದು ಪದ ಪ್ರಯೋಗಿಸಿದ್ದಾನೆ. ಅದನ್ನು ಕನ್ನಡದಲ್ಲಿ ನಾನು ' ಪೀತವರ್ಣದ ವೃಂದಪರ್ಣಗಳು' ಎಂದು ಅನುವಾದಿಸಿದ್ದೇನೆ. ಆದರೆ ಅದು ನನಗೆ ಸಮಾಧಾನಕರವಾಗಿಲ್ಲ 'Stipule' ಎಂದರೆ ಕನ್ನಡದಲ್ಲಿ ಏನೆಂದು ಹೇಳಬಹುದು?" ಎಂದರು. ಅಷ್ಟೊತ್ತಿಗಾಗಲೇ ಗಂಗೋತ್ರಿಯ ಮುಂಭಾಗದಲ್ಲಿ ಇರುವ ಹಸಿರು ತುಂಬಿದ ವನದ ಬಳಿ ಬಂದಿದ್ದೆವು. ದೇಜಗೌ ಅವರ ಮುಖದಲ್ಲಿ ಸಂತೃಪ್ತಿಯ ಬೆಳಕು ಸೂಸುತ್ತಿತ್ತು. ಅವರು ಕುಲಪತಿಗಳಾಗಿದ್ದಾಗ ನೆಡಿಸಿದ್ದ ಗಿಡಮರಗಳು ಇಂದು ಬೆಳೆದು ಬಲಗೊಂಡು ನಿಂತಿದ್ದುವು. ಮಣ್ಣಿನ ಮಗನದು ದೂರದೃಷ್ಟಿಯ ಕೃತಿ. ಹಸಿರು ಹೊಮ್ಮಿ ಅಂತರಂಗಕ್ಕೆ ಆನಂದವನ್ನು ತಂದಿತ್ತು. ಮರಗಳ ಕೆಳಗೆ ಎಲೆಗಳುದುರಿ ಕಸವಾಗುತ್ತಿದ್ದುದನ್ನು ಗಮನಿಸಿದ ಭಗವಾನ್ ಅದನ್ನು ಕುರಿತು " ಸಾರ್, ನಮ್ಮ ಕಡೆ ಇದಕ್ಕೆ 'ಎಲೆಗಸ'

ಎನ್ನುತ್ತೇವೆ ಎಂದರು. ಪದ ಎಷ್ಟು ಚನ್ನಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಆ ಕ್ಷಣವಲ್ಲಿ ದೇಜಗೌ ಅವರಿಗೆ 'Stipula' ಎಂದರೆ 'ಕಂಕಳಿಲೆ' ಎಂದೆ ಆಗುವುದಿಲ್ಲವೇ? ಹೌದು ಅದೇ ಸೂಕ್ತಪದ 'Yellow Stipule' 'ಹಳದಿ ಬಣ್ಣದ ಕಂಕಳಿಲೆಗಳು' ಎಂದು ಬರೆಯುತ್ತೇನೆ" ಎಂದು ಹೆರಿಗೆಯಾದ ಸಂತಸ ವ್ಯಕ್ತಪಡಿಸಿದರು.

ಅರ್ಥವಾಗದ ಅನುವಾದದ ಇತಿಹಾಸ ಚಕ್ರಗಳ ನಡುವೆ ಕನ್ನಡದಲ್ಲಿ ಟಾಲ್ಸ್‌ಟಾಯ್ ಕೃತಿಗಳು ಒಡಮೂಡಿದಂತೆ ಅನುವಾದಿಸಿರುವ ದೇಜಗೌ ಅಪೂರ್ವ ಶಕ್ತಿಯ ಕೇಂದ್ರವಾಗಿದ್ದಾರೆ. ತನ್ಮೂಲಕ ಮಣ್ಣಿನ ಶಕ್ತಿಯ ಸಂಕೇತವಾಗಿದ್ದಾರೆ. ಅವರ ಅನುವಾದವ ಕೈ ಅಳಿಯದೆ ಚಿರಾಯುವಾಗಲಿ.

* * * * *

ದೇಜಗೌ ವಿಮರ್ಶೆ

- ಸಿ. ಪಿ. ಕೆ.

ದೇಜಗೌ ಅವರ ಸಾರಸ್ವತ ಸಾಧನೆಯ ಬಣ್ಣನೆಗೆ, ಅದ್ಭುತ ಎನ್ನುವುದನ್ನು ಬಿಟ್ಟು ಅನ್ಯ ವಿಶೇಷಣ ಸಾಧ್ಯವಿಲ್ಲ. ಸೃಜನಶೀಲ, ಸೃಜನೇತರ ಎರಡು ಭೂಮಿಕೆಗಳಲ್ಲೂ ಶ್ರೇಣಿಗೊಂಡಿರುವ ಅವರ ಕೃತಿ ಸಮೂಹದ ಗಾತ್ರ, ಗರಿಮೆಗಳು ಅಂತಹವು. ಅದನ್ನು ನೋಡಿದಾಗ ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಕೆಲಸ ಮಾಡಬಲ್ಲನೇ ಎಂಬ ವಿಸ್ಮಯಪೂರ್ವಕ ಪ್ರಶ್ನೆ ಅನಿವಾರ್ಯವಾಗಿ ಮೂಡದಿರದು.

ವೈವಿಧ್ಯ ವೈಶಿಷ್ಟ್ಯಗಳಿಂದ ಸುಸಂಪನ್ನವಾದ ದೇಜಗೌ ಅವರ ಸಾಹಿತ್ಯದ ಒಂದು ಮುಖ, ವಿಮರ್ಶೆ. ಅದು ಅವರ ಸ್ವತಂತ್ರ ವಿಮರ್ಶ ಕೃತಿಗಳಲ್ಲಿ ರೂಪುಗೊಂಡಿದೆ ಮಾತ್ರವಲ್ಲದೆ ಅವರ ಸಂಪಾದಿತ ಕೃತಿಗಳ ಸುದೀರ್ಘ ಪೀಠಿಕೆಗಳಲ್ಲೂ ಪುಂಜೀಭೂತವವಾಗಿದೆ. 'ನಂಜುಂಡ ಕವಿ','ಸಾಹಿತ್ಯಮಾರ್ಗ', 'ಸಾಹಿತಿಗಳ ಸಂಗದಲ್ಲಿ', [1]ಮುನ್ನುಡಿಗಳು', 'ಕುವೆಂಪು ಸಾಹಿತ್ಯ', 'ಕೆಲವು ಅಧ್ಯಯನಗಳು', 'ಜಾನಪದ ಸೌಂದರ್ಯ', 'ಗದ್ಯಶೈಲಿ' ಮುಂತಾದವು ವಿಮರ್ಶಕೃತಿಗಳು.'ಲೀಲಾವತಿ ಪ್ರಬಂಧ', 'ಧರ್ಮಾಮೃತ ಸಂಗ್ರಹ', ಗಿರಿಜಾ ಕಲ್ಯಾಣ ಸಂಗ್ರಹ, 'ಕಬ್ಬಿಗರ ಕಾವ', 'ರುಕ್ಮಾಂಗದ ಚರಿತೆ', 'ಪುಣ್ಯಾಸ್ರವ ಸಂಪು' ಮೊದಲಾದವು ಸಂಪಾದಿತ ಗ್ರಂಥಗಳು; ಇವುಗಳ ಪೀಠಿಕೆಗಳನ್ನು ಬೇರ್ಪಡಿಸಿದರೆ, ಅವು ಕೂಡ ಸ್ವತಂತ್ರ ಪುಸ್ತಕಗಳಾಗಿ ಪರಿಣಮಿಸುತ್ತವೆ. ಹೀಗೆ ಪೀಠಿಕೆ ಬರೆಯುವ ಪರಿಪಾಠ ಕೆಲವೇ ಕೆಲವರು ವಿದ್ವಾಂಸರದು.

ದೇಜಗೌ ಮಿವರ್ಶೆಯ ಹರಹು ದೊಡ್ಡದು: ಅದು ತನ್ನ ತೆಕ್ಕೆಯಲ್ಲಿ ಪ್ರಾಚೀನ ಕೃತಿಗಳನ್ನೆಂತೂ ಅಂತೆ ಅರ್ವಾಚೀನ ಕೃತಿಗಳನ್ನು ಎತ್ತಿಕೊಂಡಿದೆ; ಶಿಷ್ಟ ಸಾಹಿತ್ಯವನ್ನೆಂತೂ ಅಂತೆ ಜನಪದ ಸಾಹಿತ್ಯವನ್ನು ಅಳವಡಿಸಿಕೊಂಡಿದೆ. ಪ್ರಾಚ್ಯ, ಪಾಶ್ಚಾತ್ಯ ಎರಡೂ ಮಾನದಂಡಗಳಿಂದ, ತಕ್ಕಡಿಗಳಿಂದ ದೇಜಗೌ ಅವರು ಸಾಹಿತ್ಯವನ್ನು ಅಳೆದಿದ್ದಾರೆ, ತೂಗಿದ್ದಾರೆ. ಪ್ರಾಯೋಗಿಕ, ತಾತ್ತ್ವಿಕ ಎರಡೂ ನಿಟ್ಟುಗಳಲ್ಲಿ ಅವರ ಚಿಂತನ ಮಂಥನಗಳು ನಡೆದಿವೆ. ಸಾಹಿತ್ಯ ಮೌಲ್ಯಗಳಂತೆ ಜೀವನ ಮೌಲ್ಯಗಳೂ ಅಲ್ಲಿ ಸ್ಥಾನ ಪಡೆದುಕೊಂಡಿವೆ. ಇದ್ದರಿಂದ ಅವರ ವಿಮರ್ಶೆಗೆ ಒಂದು ಬಗೆಯ ಸಮಗ್ರತೆ ಲಭ್ಯವಾಗಿದೆ ಎನ್ನಬೇಕು.

ದೇಜಗೌ ವಿಮರ್ಶೆಯ ಒಂದು ವಿಶಿಷ್ಟತೆಯೆಂದರೆ, ಅದರ ಸಂಕೀರ್ಣ ಸ್ವರೂಪ, ಅದು ಒಂದು ಕಡೆ ಸಂಶೋಧನೆಯೊಂದಿಗೆ, ಇನ್ನೊಂದು ಕಡೆ ತೌಲನಿಕ ಅಧ್ಯಯನದೊಡನೆ ತಳಕುಹಾಕಿಕೊಂಡಿದೆ. (ಇದಕ್ಕೆ ಅಪವಾದಗಳುಂಟು). ಹೀಗಾಗಿ ದೇಜಗೌ ವಿಮರ್ಶೆ ವಿದ್ವತ್ ಪರಿಪ್ಲುತವಾಗಿದೆ, ಅಧ್ಯಯನ ಪೂರ್ಣವಾಗಿದೆ.

ಯಾವುದೇ ಕೃತಿಯನ್ನು ತೆಗೆದುಕೊಂಡರೆ, ಅದರ ಸಕಲ ಮುಖಗಳನ್ನೂ ಸಂದರ್ಶಿಸುವುದು, ಮೂಲ ಚೂಲಗಳನ್ನು ಜಾಲಾಡುವುದು ದೇಜಗೌ ಅವರ ಪ್ರವೃತ್ತಿ. ಅವರು ಅಲ್ಪಸಂತೃಪ್ತರಲ್ಲ ಎಂಬುದು ಮೂಲಭೂತ ಸಂಗತಿ. ವಿವರಣೆ, ವಿಶ್ಲೇಷಣೆ,

ಗುಣದೋಷ ವಿವೇಚನೆ, ಸ್ಥಾನ ನಿರ್ದೇಶ ಎಲ್ಲವನ್ನೂ ಅವರು ಸಮರ್ಥವಾಗಿ, ಸಮರ್ಪಕವಾಗಿ ಕೈಕೊಂಡು ನಿರ್ವಹಿಸುತ್ತಾರೆ. ವಿಮರ್ಶೆಯ ಬಹುತೇಕ ಪ್ರಕಾರಗಳು ಅವರಿಂದ ಪುರಸ್ಕೃತವಾಗಿವೆ ಎಂಬುದು ತುಂಬ ಗಮನಾರ್ಹ. ಮತ್ತೂ ಒಂದು ಮಹತ್ವದ ಮಾತೆಂದರೆ, ಅವರು ಸಾಹಿತ್ಯಕ ವಿಮರ್ಶೆಯಂತೆ ಸಾಂಸ್ಕೃತಿಕ ವಿಮರ್ಶೆಯನ್ನು ಕೊಟ್ಟಿದ್ದಾರೆ.

ಸಾಹಿತ್ಯ ವಿಮರ್ಶೆಯೊಂದು ಶುಷ್ಕ ಯಾಂತ್ರಿಕ ವ್ಯಾಪಾರವಲ್ಲ; ಅಪ್ರತಿಭರ ಅನಿಸಿಕೆಗಳ ಅಭಿವ್ಯಕ್ತಿಯಲ್ಲ. ಅದು ಕೂಡ ಕಾವ್ಯ ರಚನೆಯಂತೆ ಪ್ರತಿಭೆ, ವ್ಯುತ್ಪತ್ತಿಗಳ ಫಲ; ಜೊತೆಗೆ ಸಹೃದಯತೆಯನ್ನು ವಿಶೇಷವಾಗಿ ಕೋರುವಂಥದು. ದೇಜಗೌ ಅವರಲ್ಲಿ ಇವುಗಳ ಮುಪ್ಪುರಿ ಸಿಪ್ಪಿಸಿರುವುದರಿಂದ, ಅವರ ವಿಮರ್ಶೆಗೆ ಸೃಜನ ಶೀಲತೆಯ ಗಾಢ ಸಂಸರ್ಗವಿದೆ. ಅದು ವಸ್ತು ನಿಷ್ಠ ಮಾತ್ರವಾಗದೆ, ವ್ಯಕ್ತಿ ನಿಷ್ಠತೆಯ ಛಾಪನ್ನೂ ಪಡೆದುಕೊಂಡು ರೋಚಕವಾಗುತ್ತದೆ. ದೇಜಗೌ ಒಬ್ಬ ಶ್ರೇಷ್ಠ ಗದ್ಯಕವಿಯಾದುದರಿಂದ, ಅವರ ವಿಮರ್ಶೆಗೂ ಕಾವ್ಯದ ವರ್ಚಸ್ಸು ಪ್ರಾಪ್ತವಾಗಿದೆ. ಶುದ್ಧ ಶಾಸ್ತ್ರದ ಶಿಸ್ತಿಗೆ ಬದ್ಧರಾದ ಬುದ್ಧಿವಂತರು ಅದನ್ನು ಆಕ್ಷೇಪಿಸಿಲೂಬಹುದು. ಅವರಿಗೆ ಉತ್ತರ ಕೊಡುವುದು ಕಷ್ಟವಲ್ಲ.

ದೇಜಗೌ ವಿಮರ್ಶೆಯಲ್ಲಿ ದರ್ಪವಿಲ್ಲ, ಕಾರ್ಪಣ್ಯವಿಲ್ಲ; ಅದು ಬಹಳ ಉದಾರವೂ ದಾಕ್ಷಿಣ್ಯ ಸಮನ್ವಿತವೂ ಆದದ್ದು. ಅದು ಕೃತಿದೋಷಗಳನ್ನು, ಲೋಪಗಳನ್ನು ತಪ್ಪದೆ ಗುರುತಿಸುತ್ತದೆ. ಆದರೆ ಅವುಗಳಲ್ಲೆ ಕೇಂದ್ರೀಕೃತವಾಗಿ ನಿಲ್ಲುವುದಿಲ್ಲ. ದೇಜಗೌ ದೃಷ್ಟಿ ಮುಖ್ಯವಾಗಿ ಹರಿಯುವುದು ಗುಣಗೌರವದ ಕಡೆಗೆ ಎಂಬುದನ್ನು ಲಕ್ಷಿಸಬೇಕು. ಈ ದಿಶೆಯಲ್ಲಿ ಅವರ ವಿಮರ್ಶೆ ಎಷ್ಟೋ ಕಡೆ ಉತ್ಪ್ರೇಕ್ಷೆ, ಅತಿಶಯೋಕ್ತಿಗಳ ದಾಟಿಯನ್ನು ಹಿಡಿಯುವುದೂ ಸುಲಭಗೋಚರವಾಗುತ್ತದೆ. ವಾಸ್ತವವಾಗಿ, ವೈಭವೀಕರಣ ದೇಜಗೌ ಅವರ ಸ್ವಭಾವ. ಆದರೆ ಇದು ಗುಣಮಾನಕ್ಕಿಂತ, ದೋಷೈಕರತಿಗಿಂತ ನಿಸ್ಸಂದೇಹವಾಗಿ ನೂರು ಪಾಲು ಮೇಲು.

ಶಕ್ತಿ ಅತಿಯಾದರೆ ದೌರ್ಬಲ್ಯವೂ ಆಗಿಬಿಡಬಹುದು. ಇದಕ್ಕೆ ದೇಜಗೌ ಬರವಣಿಗೆ ಅನೇಕ ಕಡೆ ನಿದರ್ಶನಗಳನ್ನೊದಗಿಸುತ್ತದೆ. ಅವರೊಬ್ಬ ಶಬ್ದಬ್ರಹ್ಮ, 'ವಶ್ಯವಾಕ್'; ಅವರ ಲೇಖನಿ ಸಹಜನಿರರ್ಗಳ ಓಟವುಳ್ಳದ್ದು. ಅವರ ವಾಗ್ಮಿತೆಯ ವಿಜೃಂಭಣೆ ವಿಮರ್ಶೆ, ವಿಚಾರಗಳ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅನವಶ್ಯಕ ಎನಿಸಬಹುದು;ಇನ್ನಷ್ಟು ಸಂಯಮಕ್ಕೆ ಒಳಪಡಬೇಕಿತ್ತು ಎನಿಸಬಹುದು. ಆದರೆ ದೇಜಗೌ ಎಲ್ಲಿಯೂ ಸ್ವಧರ್ಮವನ್ನು ತೊರೆಯುವುದು ಶಕ್ಯವಿಲ್ಲ. ವಾಗ್ದೇವಿಯ ಅಪರೂಪದ ವರ ಎನ್ನಬಹುದಾದ ಅವರ ವಚೋವಿಲಾಸ, ಥಳಥಳಿಸುವ ಉದಾತ್ತ ಶೈಲಿ ಸರ್ವತ್ರ ತನ್ನ ಅಸ್ತಿತ್ವವನ್ನು ಸ್ಥಾಪಿಸಿ, ರಕ್ಷಿಸಿಕೊಳ್ಳುತ್ತದೆ. ಅದರಲ್ಲಿ ಸಂಸ್ಕೃತ ಭೂಯಿಷ್ಠತೆಯಿರುವಂತೆ ದೇಸಿಯ ಸಮೃದ್ಧಿಯೂ ಇದೆ. ದೇಜಗೌ ಶೈಲಿ ಅವರದೇ; ಇನ್ನೊಬ್ಬರದಲ್ಲ. ಶೀಲದಂತೆ ಶೈಲಿ; ವ್ಯಕ್ತಿಯಂತೆ ಅಭಿವ್ಯಕ್ತಿ.

ಇದುವರೆಗೆ ಹೇಳಿದ ಮಾತುಗಳಿಗೆ ದೇಜಗೌ ವಿಮರ್ಶವಾಙ್ಮದಿಂದ ಉದಾಹರಣೆಗಳನ್ನೆತ್ತಿ ಕೊಡುವುದು ಈ ಟಿಪ್ಪಣಿಯಲ್ಲಿ ಉದ್ದಿಷ್ಟವಲ್ಲ. ಯಾವುದನ್ನು

ಕೊಡುವುದು, ಯಾವುದನ್ನು ಬಿಡುವುದು ? ಒಂದಕ್ಕಿಂತ ಒಂದು ಪ್ರಲೋಭನಕಾರಿ. ಆದರೆ 'ನಂಜುಂಡಕವಿ'ಯನ್ನು ಪ್ರಮುಖವಾಗಿ ಹೆಸರಿಸಬೇಕು. ಅಂಥ ಪುಸ್ತಕಗಳು ಕನ್ನಡದಲ್ಲಿ ಕಡಿಮೆ. ಒಬ್ಬ ಕವಿಯನ್ನು ಒಂದು ಕಾವ್ಯವನ್ನು ಹೇಗೆ ಕೂಲಂಕಷವಾಗಿ, ತಲಸ್ಪರ್ಶಿಯಾಗಿ ಪರಿಶೀಲಿಸಬಹುದು, ವ್ಯಾಸಂಗ ಮಾಡಬಹುದು ಎಂಬುದಕ್ಕೆ ಅದೊಂದು ಸಮೀಚೀನ ದೃಷ್ಟಾಂತ; ಮಾದರಿ. ಚಾರಿತ್ರಿಕ, ತೌಲನಿಕ, ಮನೋವೈಜ್ಞಾನಿಕ, ವರ್ಣನಾತ್ಮಕ [illegible]ಯಾತ್ಮಕ ಇತ್ಯಾದಿ ವಿಮರ್ಶ ವಿಧಾನಗಳೆಲ್ಲ ಅಲ್ಲಿ ಬಳಕೆಗೊಂಡಿವೆ; ಎಳೆಎಳೆಯಾಗಿ ನಂಜುಂಡನ ಕೃತಿಯನ್ನು ಬಿಡಿಸಿ ನೋಡುತ್ತಾರೆ. ತೋರುತ್ತಾರೆ ದೇಜಗೌ. ಅಲ್ಲಿ ವಿರಳವರ್ಗದ ವಿಮರ್ಶೆಯಿದೆ; ವಿಭಾವನೆಯಿದೆ. ನಂಜುಂಡಕವಿಯನ್ನು ಒಂದರ್ಥದಲ್ಲಿ ಪುನರುತ್ಥಾನಗೊಳಿಸಿದ್ದಾರೆ, ದೇಜಗೌ. ಹಾಗೆ ನೋಡಿದರೆ ವಿಮರ್ಶೆಯ ಕೆಲಸವೇ ಅದು: ನೂತನ ವ್ಯಾಖ್ಯಾನದ ಮೂಲಕ ಪುನರುಜ್ಜೀವನ. ಕವಿಯಂತೆ ವಿಮರ್ಶಕನೂ ಭಾಷೆ, ಸಾಹಿತ್ಯಗಳನ್ನು ಬೆಳಗುತ್ತಾನೆ; ಬೆಳೆಸುತ್ತಾನೆ.

ಇನ್ನೊಂದು ಮುಖ್ಯ ವಿಚಾರವನ್ನು ಪ್ರಾತಿನಿಧಿಕವಾಗಿ ಪ್ರಸ್ತಾಪಿಸಲೇಬೇಕು. ಕನಕದಾಸರ'ರಾಮಧಾನ್ಯ ಚರಿತೆ'ಯೊಂದು ವಿಡಂಬನ ಕೃತಿ, ಅದರಲ್ಲಿ ಸಾಮಾಜಿಕ ಪ್ರಜ್ಞೆ ಧ್ವನಿತವಾಗುತ್ತದೆ, ಎಂಬುದನ್ನು ಮೊದಲ ಬಾರಿಗೆ ಹೇಳಿದ ಒಳನೋಟ ದೇಜಗೌ ಅವರದು.

'ನಂಜುಂಡಕವಿ'ಯ ಒಂದು ಭಾಗವನ್ನು ಇಲ್ಲಿ ಉದ್ಧರಿಸಬಹುದು. ದೇಜಗೌ ಅವರ ಬರವಣಿಗೆಯ ಬಗೆಯನ್ನು ನಿದರ್ಶಿಸುವುದಕ್ಕಾಗಿ

"ಭೂಲೋಕದ ನೆಲಗಟ್ಟಿನಲ್ಲಿ ನಿಂತು ಸಕಲ ಲೋಕಗಳನ್ನಳೆಯುವ ವಾಮನ ಶಕ್ತಿಯಲ್ಲಿ 'ಭೂಲೋಕದಿಂದ ಸ್ವರ್ಗಲೋಕದವರೆಗೆ ಸೋಪಾನ ನಿರ್ಮಿಸಿ ಸ್ವರ್ಗಲೋಕದ ವಸ್ತುಗಳನ್ನು ಭೂಲೋಕಕ್ಕೆ ತರುವ ಪಲ್ಗುಣ ಶೌರ್ಯದಲ್ಲಿ, ದೇವಗಂಗೆಯನ್ನು ತಿರೆಯ ಮೇಲೆ ಹರಿಸುವ ಭಗೀರಥ ಸಾಹಸದಲ್ಲಿ, ಯಮಲೋಕದಿಂದ ಅಗ್ನಿಶಕ್ತಿಯನ್ನು ಕಸಿದುಕೊಂಡು ಬರುವ ನಚಿಕೇತ ಸಾಮರ್ಥ್ಯದಲ್ಲಿ ಪ್ರಾಚೀನ ಗ್ರೀಕರಿಗೆ ಅಪಾರ ಗೌರವವಿತ್ತು ....

"..................." ಯಾವುದೋ ಒಂದು ಜನಾಂಗಕ್ಕೆ ಸೇರಿದ ಸಹಸ್ರ ಸಹಸ್ರ ಜನರಲ್ಲಿ ಯಾವನೋ ಒಬ್ಬ ವ್ಯಕ್ತಿ ಮಾತ್ರ ಸ್ವಶಕ್ತಿ ಸ್ವಸಾಮರ್ಥ್ಯಗಳಿಂದ ಸ್ವಯಂಭೂತವಾಗಿ ವಿಜೃಂಭಿಸುತ್ತಾನೆ. ತಾನು ಸಂಭವಿಸಿದ ಸಮಾಜವನ್ನೇ ಕುಬ್ಜಗೊಳಿಸಿ ಹಿಮಾಚಲ ಸ್ಪರ್ಧಿಯಾಗಿ, ಮೇರುಸದೃಶನಾಗಿ ನಿಲ್ಲುತ್ತಾನೆ. ಅಂಥವನಿಗೆ ವಾರಿಧಿಯೆಲ್ಲ ಗೋಷ್ಪದ ಜಲವಾಗಿ, ಹಿಮಾಚಲವೊಂದು ಗುಡ್ಡವಾಗಿ, ಬ್ರಹ್ಮಾಂಡವೆಲ್ಲ ಕ್ರೀಡಾಂಗಣವಾಗಿ, ನಭೋಮಂಡಲವೆಲ್ಲ ಮುಷ್ಟಿಗ್ರಾಹ್ಯವಾಗಿ ಕಾಣುತ್ತವೆ. ಬ್ರಹ್ಮ ಸೃಷ್ಟಿಗೆ ಬದಲಾಗಿ ಮತ್ತೊಂದು ಲೋಕವನ್ನೆ ಸೃಷ್ಟಿಸುವ ವಿಶ್ವಾಮಿತ್ರ ಶಕ್ತಿ ಅವನದು; ತನ್ನ ಶಕ್ತಿ ಅಕ್ಷೂಣವಾದದ್ದು, ಅಪ್ರತಿಹತವಾದದ್ದು, ನಿರುಪಮವಾದದ್ದು ಎಂಬ ಆತ್ಮ ಪ್ರತ್ಯಯದಿಂದ ಅದ್ಭುತ ಕಾರ್ಯಗಳನ್ನೆಸಗಿ ಅವನು ಜನ ಮನಸ್ಸಿನಲ್ಲಿ ಆಶ್ಚರ್ಯ ಚಿಹ್ನೆಯಾಗಿ ನಿಲ್ಲುತ್ತಾನೆ. "

ದೇಜಗೌ ಕೂಡ ನಾಡಿನ ಚಿತ್ತದಲ್ಲಿ ಆಶ್ಚರ್ಯಚಿಹ್ನೆಯಾಗಿ ಒತ್ತಿ ನಿಲ್ಲುತ್ತಾರೆ. ವ್ಯಕ್ತಿಯಾಗಿ ಮತ್ತು ಶಕ್ತಿಯಾಗಿ ತಮ್ಮ ಅನನ್ಯ ಕಾರ್ಯಬಾಹುಳ್ಯದಿಂದ ಇದು ಇಂದಲ್ಲದಿದ್ದರೆ, ಮುಂದಾಗುತ್ತದೆ. ವರ್ತಮಾನಕ್ಕಿಂತ ಭವಿಷ್ಯಕ್ಕೆ ಸತ್ಯ ಹೆಚ್ಚು ನಿಚ್ಚಳವಾಗಿ ಗೋಚರಿಸುತ್ತದೆ.*

* * * * *

* ದೇಜಗೌ ವಿಮರ್ಶೆಯನ್ನು, ಒಟ್ಟಿನ ಬರವಣಿಗೆಯನ್ನು ಕುರಿತು 'ದೇಜಗೌ: ವ್ಯಕ್ತಿ ಮತ್ತು ಸಾಹಿತ್ಯ' ಹಾಗೂ 'ರಸಪಙ್ಕ್ತಿ'ಗಳಲ್ಲಿರುವ ಈ ಲೇಖಕನ ಎರಡು ಬರಹಗಳನ್ನು (' ಮೂರು ವಿಮರ್ಶನ ಗ್ರಂಥಗಳು' ಮತ್ತು 'ಪೂರ್ಣತೆಯ ವಿನ್ಯಾಸ') ಆಸಕ್ತರು ನೋಡಬಹುದು.

ಸ್ಥಳನಾಮ ಅಧ್ಯಯನಕ್ಕೆ, ದೇಜಗೌ ಅವರ ಕೊಡುಗೆ.

-ಮುತ್ತುರಾಜು

ಪ್ರಪಂಚದ ಪ್ರತಿಯೊಂದು ಸ್ಥಳನಾಮಗಳಿಗೂ ವ್ಯಕ್ತಿನಾಮಗಳಿಗೂ ಒಂದು ನಿರ್ದಿಷ್ಟ ಅರ್ಥವಿದೆ. ಅರ್ಥವಿಲ್ಲದ ಹೆಸರುಗಳು ಹೆಸರುಗಳೇ ಅಲ್ಲ. ಎಷ್ಟೋ ಸ್ಥಳನಾಮಗಳ ನಿಜವಾದ ಅರ್ಥವನ್ನು ಅರಿತಾಗ ನಾವು ಮೂಕರಾಗಬೇಕಾಗುತ್ತದೆ. ಮಾನವನ ನಾಗರೀಕತೆಯ ಜೊತೆ. ಜೊತೆಗೆ ನಡೆದು ಬಂದ ಸ್ಥಳನಾಮಗಳ ಅಧ್ಯಯನ ಕ್ರಮವು ಆರಂಭವಾದದ್ದು ಕಳೆದ ಎರಡು ಶತಮಾನದಿಂದ .

ಭಾರತದ ಋಗ್ವೇದ ಸಂಹಿತೆಯಲ್ಲಿ ವ್ಯಕ್ತಿಗಳಿಗೆ, ಊರುಗಳಿಗೆ ಹೆಸರನ್ನಿಡುವ ಉಲ್ಲೇಖ, ಹೆಸರುಗಳಿಗೆ ಅರ್ಥ. (ಉದಾಹರಣೆಗೆ, ಗಂಗೆ, ಪುರುರವ, ಊರ್ವಶಿ, ದಶರಥ ಇತ್ಯಾದಿ)ಗಳನ್ನು ಕೊಟ್ಟಿದ್ದರೂ ಕ್ವಚಿತ್ತುಮಾತ್ರವಾಗಿದೆ. ನಂತರ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲೂ ಇದೇ ರೀತಿಯಾಗಿ ಹೆಸರುಗಳಿಗೆ ಅರ್ಥಗಳನ್ನು ಹೇಳಿದ್ದಾರೆ. ನಂತರ ವಿಪುಲವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಸ್ಥಳನಾಮ, ವ್ಯಕ್ತಿನಾಮಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಮನುಷ್ಯ, ಕಣಿವೆ, ಬೆಟ್ಟ, ಗುಡ್ಡ, ಹಳ್ಳ, ತೊರೆ, ಕುಂಟೆ, ನದಿ, ಇವೇ ಮೊದಲಾದುವುಗಳಿಗೆ ಒಂದೊಂದು ಹೆಸರುಗಳನ್ನು ಕೊಟ್ಟನು, ಊರುಗಳು ನಿರ್ಮಾಣವಾದಾಗ ಪರಿಸರಕ್ಕೆ ತಕ್ಕಹಾಗೆ, ಸಂದರ್ಭಕ್ಕೆ ಅನುಗುಣವಾಗಿ ಹೆಸರುಗಳನ್ನಿಡುತ್ತಾ ಬಂದನು. ಹೀಗೆ ಇಟ್ಟ ಕಿರಿದಾದ ಹೆಸರುಗಳು ಹಿರಿದಾದ ಅರ್ಥಗಳನ್ನು ಉಳ್ಳವಾಗಿವೆ.

ಐರೋಪ್ಯ ರಾಷ್ಟ್ರಗಳಲ್ಲಿ ಇದರ ಅಧ್ಯಯನ ಕ್ರಮಬದ್ಧವಾಗಿ ನಡೆಯುತ್ತಿದ್ದು, ಭಾರತದಲ್ಲೂ ಸಾಗಿದೆ, ಬಂಗಾಳ, ಮಹಾರಾಷ್ಟ್ರ, ನೆರೆಯಕೇರಳ ಆಂದ್ರಪ್ರದೇಶ, ಮತ್ತು ತಮಿಳುನಾಡುಗಳಲ್ಲಿ ಇದರ ವ್ಯವಸ್ಥಿತ ಅಧ್ಯಯನ ನಡೆದಿದೆ. ಕರ್ನಾಟಕದಲ್ಲಿ ಕೆಲವೇ ಪುಸ್ತಕಗಳು, ಹಲವು ಬಿಡಿ ಲೇಖನಗಳು, ಮತ್ತು ಸಂಶೋಧನಾ ಲೇಖನಗಳ ಸಂಕಲನಗಳು ಹೊರಬಂದಿದ್ದರೂ ಕರ್ನಾಟಕದ ವ್ಯವಸ್ಥಿತ ಸ್ಥಳನಾಮಗಳ ಅಧ್ಯಯನಕ್ಕೆ ಸಾಲದಾಗಿವೆ.

ಈ ನಿಟ್ಟಿನಲ್ಲಿ ಡಾ. ಎಂ. ಚಿದಾನಂದ ಮೂರ್ತಿ, ಎಂ.ಎಂ. ಕಲ್ಬುರ್ಗಿ, ಕೆಮ್ಮಾರು ರಘುಪತಿಭಟ್ಟ, ವಿ.ಗೋಪಾಲಕೃಷ್ಣ, ಆರ್ಕೆಮಣಿಪಾಲ, ಸೆಡಿದೂಪುಕೃಷ್ಣಭಟ್ಟ, ಹಾಗೂ ಡಾಕ್ಟರ್ ದೇವರ ಕೊಂಡಾ ರೆಡ್ಡಿಯವರು ಸೇವೆಸಲ್ಲಿಸಿರುವವರಾದರು ಡಾ. ದೇ.ಜ.ಗೌ ರವರ ದೃಷ್ಟಿ ವಿಭಿನ್ನವಾಗಿದ್ದು ಅದು ನೈಜವೂ, ಸರಳವೂ, ಮತ್ತು ಪರಿಪೂರ್ಣವಾದ ಅರ್ಥವೂ ಉಳ್ಳದ್ದಾಗಿದೆ.

ಆಂಗ್ಲರ ರಾಯಭಾರದಲ್ಲಿ ಖನಿಜಗಳ ಹೆಸರಿನಿಂದ ರೂಪುಗೊಂಡ ಸ್ಥಳಗಳಲ್ಲಿ, ಖನಿಜನಿಕ್ಷೇಪಗಳನ್ನು ಕರ್ನಾಟಕದಲ್ಲಿ ಪತ್ತೆಹಚ್ಚಿದರು ಎಂದಾಗ ಕರ್ನಾಟಕದ ಸ್ಥಳನಾಮಗಳು ಎಷ್ಟೊಂದು ಅಭೂತಪೂರ್ವ ಅರ್ಥಗಳನ್ನು ತಮ್ಮಲ್ಲಿ ಅಡಗಿಸಿಕೊಂಡಿವೆ ಎಂಬುದನ್ನು ಅರಿಯಬಹುದು. ಸ್ಥಳನಾಮ ಶಾಸ್ತ್ರಕ್ಕೆ, ಪುರಾತತ್ವ ಶಾಸ್ತ್ರಜ್ಞರ, ಇತಿಹಾಸತಜ್ಞರ ಜಾನಪದ, ಭಾಷಾತಜ್ಞರ, ಶಾಸನತಜ್ಞರ ಗಮನ ಹರಿದು ಹೆಚ್ಚಿನ ಬೆಳಕು ಚೆಲ್ಲಬೇಕಾಗಿದೆ. ಜಾನಪದ ವಿದ್ವಾಂಸರೂ, ವಿಮರ್ಶಕರೂ, ತಜ್ಞರೂ ಆಗಿರುವ ದೇ.ಜ.ಗೌರವರ ವೈಚಾರಿಕತೆಯ ಒಂದು ಮೂಲೆಯಲ್ಲಿ ಯಾವಾಗಲೂ ಸ್ಥಳನಾಮಗಳ ಅಧ್ಯಯನದ ಕಡೆಯಲ್ಲಿ ಯೋಚನೆ ಹರಿದಿರುವುದನ್ನು ಅವರು ಸ್ಥಳನಾಮಶಾಸ್ತ್ರಕ್ಕೆ ಕೊಟ್ಟ ಕೊಡುಗೆಗಳಾದ ಲೇಖನಗಳು, ಪುಸ್ತಕವಲ್ಲದೆ ಅವರ ಭಾಷಣಗಳಿಂದಲೂ ತಿಳಿಯಬಹುದಾಗಿದೆ.

ಅಪ್ಪಟ ಜಾನಪದ ಪರಿಸರದಲ್ಲಿ ಹುಟ್ಟಿ ಬೆಳೆದ ಡಾ. ದೇ.ಜ.ಗೌರವರು 1947ಕ್ಕೂ ಮೊದಲಿನಿಂದಲೂ ಊರುಗಳ ಹೆಸರುಗಳ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿರುವವರಾಗಿದ್ದಾರೆ, ಇವರ ಹಲವಾರು ವರ್ಷಗಳ ಆಸಕ್ತಿ, ಚಿಂತನೆ, ಮಹದಾಸೆಯ ಪರಿಣಾಮವಾಗಿ ಕರ್ನಾಟಕದಲ್ಲಿ 1978 ರಲ್ಲಿ Place Name Society of India ಹುಟ್ಟಿಕೊಂಡಿದು ಕೆಲವು ವರ್ಷಗಳು ತಾವೇ ಅಧ್ಯಕ್ಷರಾಗಿ ದುಡಿದು ಮತ್ತೊಬ್ಬ ವಿದ್ವಾಂಸರಾದ ಡಾ. ಕೆ.ವಿ. ರಮೇಶ್‌ರವರಿಗೆ ಅದರ ಜವಾಬ್ದಾರಿಯನ್ನು ವಹಿಸಿದ್ದಾರೆ. ಇಂತಹ ರಾಷ್ಟ್ರಮಟ್ಟದ ಒಂದು ಸಂಸ್ಥೆ ಕರ್ನಾಟಕದಲ್ಲಿ ನಿರ್ಮಾಣವಾಗಿರುವುದು ಆಶಾದಾಯಕವಾದರೂ ಅದು, ವಿದ್ಯಾರ್ಥಿಗಳು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳ ಮೂಲಕ ಅಭ್ಯಾಸ ಮಾಡುವಂತಾಗ ಬೇಕು ಎಂಬುದೇ ದೇ .ಜ.ಗೌ. ರವರ ಮಹದಾಸೆ ಆಗಿದೆ. ಅದಕ್ಕಾಗಿಯೇ ಸ್ಥಳನಾಮ ವ್ಯಾಸಂಗ ಪುಸ್ತಕವನ್ನು ಪ್ರಕಟಿಸಿದ್ದು ಎಂಬುದಾಗಿ ಹೇಳಿದ್ದಾರೆ. ಹಲವು ಉಪನ್ಯಾಸಗಳ ಒತ್ತಗೆಯಾಗಿ ಈ ಪುಸ್ತಕವನ್ನು ಹೊರತಂದಿದ್ದಾರೆ. ಈ ಪುಸ್ತಕದಲ್ಲಿ ಶಾಸನಧ್ಯಾಯನದ ಸಂಶೋಧನೆ ಇದ್ದರೂ ಅವರು ಸ್ಥಳನಾಮಗಳ ಬಗ್ಗೆ ಅಧ್ಯಯನ ಮಾಡಿರುವ ಪಾಶ್ಚಾತ್ಯ, ಪೌರಾತ್ಯ, ಮತ್ತು ಭಾರತೀಯ ಪುಸ್ತಕಗಳು ಹಲವು.

ತಮ್ಮ ಪುಸ್ತಕದಲ್ಲಿ ಹೊಲ, ಕಾಡು, ಬೆಟ್ಟ, ನದಿ, ತೋಪು, ಉದ್ಯಾನ, ವೃತ್ತ, ಮನೆ, ಶಾಲೆ, ಕಾಲೇಜು, ಗಿರಣಿ, ಕೆರೆ, ಇವೇ ಮೊದಲಾದ ನಾಮಗಳ ಮೇಲೆ ವ್ಯಾಪಕಾಧ್ಯಾಯನವನ್ನು ಮಾಡಲು ಒಂದೊಂದು ಬೇರೆ, ಬೇರೆಯ ವಸ್ತುವಾಗುತ್ತದೆ ಎಂದು ಹೇಳಿದ್ದಾರೆ. ಇದರಲ್ಲಿ ಸ್ಥಳನಾಮ ಅಧ್ಯಯನ ಮಾತ್ರವೇ ಅಲ್ಲದೆ, ಸ್ಥಳನಾಮಶಾಸ್ತ್ರಜ್ಞ, ಎದುರಿಸುವ ಕ್ಷೇತ್ರಕಾರ್ಯದ, ಎಡರು ತೊಡರುಗಳು ಸಂಶೋಧನೆಗೆ ಮಾಡಿಕೊಳ್ಳಬೇಕಾದ ಸಿದ್ದತೆ, ಎದುರಾಗುವ ಸಮಸ್ಯೆಗಳು ನಿವಾರಣೆಗಳು, ಇವುಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಪುಸ್ತಕದ ಪ್ರವೇಶದಲ್ಲಿ ಅಂಕಿತ ಅಥವಾ ಅನ್ವರ್ತನಾಮಗಳು ಹೇಗೆ ರೂಢನಾಮಗಳಾದವು ಪ್ರಾರಂಭದ ದೆಸೆಯಲ್ಲಿ ಎಂಬುದನ್ನು ತಿಳಿಸಿ ಸಂಜ್ಞಾವಾಚಕ ಅಥವಾ ಅಂಕಿತನಾಮಗಳ ಅನಿವಾರ್ಯತೆಯನ್ನು ತಿಳಿಸುತ್ತಾರೆ, ವ್ಯವಸಾಯಕ್ಕೆ ಸಂಬಂಧ

ಪಟ್ಟಿ ನಾಮಗಳನ್ನು ಹೇಳುತ್ತಾ ಇಂಗ್ಲೆಂಡಿನಲ್ಲಿ ಆಕರ ಭೇದವಿಲ್ಲದ ಕೃಷಿ ಭೂವಿಗೆ ಎಕರೆ ಎನ್ನುತ್ತಿದ್ದು ನಂತರ ನೆಲದ ಮಾನಕವಾದದ್ದನ್ನು ಸೂಚಿಸುತ್ತಾರೆ. ಅದೇ ರೀತಿ ನೇಗಿಲ ಗೆರೆಗೆ ಫರ್ಲ್ಲಾಂಗ್ ಎಂದು ಕರೆಯುತ್ತಿದ್ದುದ್ದನ್ನು ಉದಾಹರಿಸುತ್ತಾರೆ. ಕರ್ನಾಟಕದ ನೆಲದ ಗುಣ ರೇಖೆಗಳನ್ನು ಪ್ರತಿಬಿಂಬಿಸುವ ಪರಿಸರದ ನೈಸರ್ಗಿಕ ಲಕ್ಷಣವನ್ನು ತಿಳಿಸುತ್ತಾರೆ. ಬೆಟ್ಟಗಳಿಗೆ ಹೆಸರುಗಳು ಬಂದ ಬಗೆಯನ್ನು ವಿವರಿಸುತ್ತಾ ಕೈಲಾಸ ಪರ್ವತ ಮತ್ತು ಇಟಲಿಯ ಮಾಂಟೆರೊಸದ ಉದಾಹರಣೆಯನ್ನು ನೀಡುತ್ತಾರೆ. ಮುಂದೆ ಕೆರೆ, ಕಟ್ಟೆಗಳು, ಕಡಲು ನದಿಗಳ ವಿಷಯಕ್ಕೆ ಬರುತ್ತಾರೆ ಅಲ್ಲಿ Kenneth Cameron ಅವರ English Place names' ಎಂಬ ಗ್ರಥದಲ್ಲಿನ Hills and Valley's ಎಂಬ ಅಧ್ಯಯದ ನೆರವನ್ನು ಪಡೆದಿದ್ದಾರೆ. ತದನಂತರ ಖಂಡ ದೇಶಗಳ ಹೆಸರು ಬಂದ ಬಗೆಯನ್ನು ವಿವರಿಸುತ್ತಾರೆ. ಇಲ್ಲಿ ಆಸ್ಟ್ರೇಲಿಯವು Auster ನಿಂದ ಬಂದ ಬಗೆಯನ್ನು Mexico ಎಂಬ ಪದವುMexitl ಎಂಬ ಯುದ್ಧದೇವತೆಯಿಂದ ಬಂದದ್ದನ್ನು ಮೆಸಪೊಟೊಮಿಯವು ಎರಡು ಪ್ರದೇಶಗಳ ನಡುವಣ ಭೂಮಿಯಿಂದ ಬಂದದ್ದನ್ನು ತಿಳಿಸುವುದಲ್ಲದೆ Sharghai ಎಂದರೆ ಕುಸುಮಗಳ ನಗರ ಎಂಬ ಮೂಲಾರ್ಥವನ್ನು ಕೊಡುತ್ತಾರೆ.

ಈ ಬಗೆಯ ತುಲನಾತ್ಮಕ, ವ್ಯವಸ್ಥಾಪಕವಾದ ಅಧ್ಯಯನವನ್ನು ಕನ್ನಡದಲ್ಲಿ ನಡೆಸಿದ ಅಗ್ರಗಣ್ಯರು ದೇ.ಜ.ಗೌ. ರವರಾಗಿದ್ದಾರೆ.

ಸ್ಥಳನಾಮಗಳ ಉಗಮ ಎಂಬ ಅಧ್ಯಯನದಲ್ಲಿ ಚೀನಾ ದೇಶದ ಗಾದೆ ಮಾತು ಮತ್ತು ಷೇಕ್ಸ್‌ಪಿಯರ್‌ನ ಉದ್ಧೃತ ವಾಕ್ಯದಿಂದ ಹೆಸರಿನ ಮಹತ್ತನ್ನು ತಿಳಿಸುವ ಅಂಶವನ್ನು ಒತ್ತಿ ಹೇಳಿದ್ದಾರೆ. ಇದೇ ಅಧ್ಯಯದಲ್ಲಿ ಸ್ತಳನಾಮಗಳ ಉಗಮವನ್ನು ವಿವರಿಸುತ್ತಾ ವ್ಯಕ್ತಿನಾಮಗಳಿಗಿಂತ ಸ್ಥಳನಾಮಗಳು ಈಚೀನವೆಂದೇ ಹೇಳಬೇಕಾಗುತ್ತದೆ ಎಂದು ತಿಳಿಸುತ್ತಾರೆ. Onomastics. ಅಭಿದಾನ ವಿಜ್ಞಾನ ಎಂದು ಕರೆಯುವ ವ್ಯಕ್ತಿನಾಮಗಳು, ಕುಲನಾಮ, ಜಾತಿನಾಮ, ಇತ್ಯಾದಿಗಳನ್ನು ಹೆಸರಿಸುತ್ತಾರೆ. ಮುಂದೆ ಇವುಗಳ ಬೆಳವಣಿಗೆಯನ್ನು ಸೂಚಿಸುತ್ತಾರೆ.

ಸ್ಥಳನಾಮ ವಿಜ್ಞಾನದ ವ್ಯಾಪ್ತಿ-ಪ್ರಭಾವ ಎಂಬ ಅಧ್ಯಯದಲ್ಲಿ ಸ್ಥಳನಾಮ ಅಧ್ಯಯನದಲ್ಲಿ ಇರುವ ಕೊರತೆಯನ್ನು ಹೇಸರಿಸುತ್ತಾ ಲಿಖಿತ ದಾಖಲೆಗಳಲ್ಲಿ ಕಾಣ ಸಿಗದ ಎಷ್ಟೋ ಶಬ್ದಗಳು ಸ್ಥಳನಾಮಗಳ ಅಧ್ಯಯನದಿಂದ ಬೆಳಕಿಗೆ ಬರುತ್ತವೆ ಎಂಬುದನ್ನು ಸೂಚಿಸುತ್ತಾರೆ.

ಊರಿನ ಪ್ರಾಚೀನತೆ, ರೂಪ ಪರಿವರ್ತನೆಯನ್ನು ಗ್ರಹಿಸಲು ಸಾಹಿತ್ಯ ಕೃತಿಗಳಿಗೆ ಅವಲಂಬಿಸಬೇಕಾಗುತ್ತದೆ ಎಂಬ ಅಂಶವನ್ನು ಹೇಳುತ್ತಾ ಶಾಸನಗಳು, ಸ್ಥಳನಾಮ ಕೋಶವು ಹೌದು ಎಂದು ತಿಳಿಸುತ್ತಾರೆ. ಇದು ಅಕ್ಷರಶ ನಿಜವಾದ ಅಂಶವಾಗಿದೆ. ಕೆಲವು ಜನಾಂಗಗಳು ಕಟ್ಟಿದ ಊರುಗಳನ್ನು ಹೆಸರಿಸುತ್ತಾ ಎಮ್ಮೆಯಿಂದ ಎಮ್ಮಿಗನೂರು ಎಮ್ಮೆ ಹಟ್ಟಿ, ಎಮ್ಮೆ ದೊಡ್ಡಿ, ಕೋಣನೂರು ಹೆಸರುಗಳ ಉಲ್ಲೇಖಗಳನ್ನು ಬರೆಯುತ್ತಾರೆ.

ಮುಂದೆ ದೇವತೆಗಳ ಮೇಲಿನ ಪೂಜ್ಯಭಾವನೆಯಿಂದ ನಿರ್ಮಾಣವಾದ ಸ್ಥಳನಾಮಗಳನ್ನು ತಿಳಿಸುತ್ತಾರೆ.

ಭೂಗುಣವನ್ನು ತಿಳಿಸುವ ವಿವಿಧ ಬಗೆಯ ಹೆಸರುಗಳನ್ನು ಉದಾಹರಿಸುವುದಲ್ಲದೆ, ಲೋಹಗಳ ಹೆಸರನ್ನು ತಿಳಿಸುವ ಬಂಗಾರ ಪೇಟೆ, ಹೊನ್ನಾವರ, ಸೊನ್ನಲಿಗೆ, ರತ್ನ ಪುರಗಳನ್ನು ಉದಾಹರಿಸುತ್ತಾರೆ. ಸಸ್ಯಗಳ ಮೇಲೆ ಸ್ಥಳಗಳಿಗೆ ಹೆಸರುಗಳನ್ನಿಡುವ ಬಗೆಗಳನ್ನು ನೀಡುತ್ತಾರೆ. ಅಷ್ಟೆ ಅಲ್ಲದೆ ವಾಸ್ತುಶಿಲ್ಪ ಮತ್ತು ರಚನಾ ಸಾಮಾಗ್ರಿಗಳ ಮೇಲೆ ಬೆಳಕು ಚೆಲ್ಲುವ Bradkirk ಮತ್ತು Felkirk ಹೆಸರುಗಳ ಉದಾಹರಣೆ ಕೊಡುತ್ತಾರೆ. ಆರ್ಥಿಕ, ಇತಿಹಾಸದ ಮೇಲೆ ಬೆಳಕು ಚೆಲ್ಲುವ ಬಗ್ಗೆ ವಿವರಣೆಯನ್ನು ಕೊಡುತ್ತಾರೆ.

ಈ ಅಧ್ಯಯದ ಕೊನೆಯಲ್ಲಿ ಗ್ರಾಮನಾಮಗಳು ಬೆಳಕು ಬೀರುವ ಬಗೆಗಳನ್ನು ತಿಳಿಸುತ್ತಾರೆ.

ಸ್ಥಳನಾಮ ವಿಜ್ಞಾನದ ಇತಿಹಾಸ ಎಂಬ ಅಧ್ಯಯದಲ್ಲಿ ಸ್ಥಳನಾಮ ಶಾಸ್ತ್ರವು ವ್ಯವಸ್ಥಿತವಾಗಿ ಬೆಳೆದು ಬಂದ ಬಗೆಯನ್ನು ವಿವರಿಸುತ್ತಾರೆ. ಅದಕ್ಕೆ ಐರೋಪ್ಯ ರಾಷ್ಟ್ರಗಳಲ್ಲಿ ನಡೆದ ಸಿದ್ಧತೆ, ಶಾಸ್ತ್ರೀಯವಾಗಿ ಅಧ್ಯಯನ ನಡೆದು ಬಂದ ಬಗೆಯನ್ನು ವಿವರಿಸುತ್ತಾ, ಹಾಗೆಯೆ ಭಾರತದಲ್ಲೂ ಅದ್ಯಯನ ನಡೆದು ಬರುತ್ತಿರುವ ಬಗೆಯನ್ನು ವಿವರಿಸುತ್ತಾರೆ.

ಸಂಶೋದನಾ-ವಿಧಾನ-ಸಾಧನ ಎಂಬ ಅಧ್ಯಾಯದಲ್ಲಿ ಸ್ಥಳಗಳಿಗೆ ವಿವಿಧ ಬಗೆಯಾಗಿ ಘಟನೆಗಳ ಹಿನ್ನೆಲೆಯಲ್ಲಿ ಹೊರಹೊಮ್ಮುವ ಸ್ಥಳನಾಮಗಳನ್ನು ಕೊಡುತ್ತಾರೆ. ಸ್ಥಳನಾಮ ಶಾಸ್ತ್ರಜ್ಞನು ಸ್ಥಳನಾಮಗಳ ರೂಪಗಳನ್ನು ಕರಾರುವಾಕ್ಕಾಗಿ ನಿರ್ಣಯಿಸಲು ಅನ್ಯ ಜ್ಞಾನಶಿಸ್ತುಗಳ ಅವಲಂಬನೆಯ ಅಗತ್ಯಗಳು, ಸಹಾಯಗಳು ನೆರವಾಗುವ ಕ್ರಿಯೆಯನ್ನು ಸೂಚಿಸುತ್ತಾರೆ. ಅಷ್ಟೆ ಅಲ್ಲದೆ ಸ್ಥಳನಾಮಗಳ ನಿಜಸ್ಥಿತಿ ಅರಿಯಲು ಅನ್ಯ ಭಾಷೆಗಳ, ಜಾತಿ ಭಾಷೆಗಳ ಸಹಾಯತೆ ಹೇಗೆ ನೆರವಾಗುತ್ತವೆ ಎಂಬುದರ ಬಗೆ ಹೇಳುತ್ತಾರೆ.

ಸ್ಥಳನಾಮಗಳ ವಿದಗಳನ್ನು ಪರಿಚಯಿಸುತ್ತಾ ಕ್ಷೇತ್ರಕಾರ್ಯದ ಅನಿವಾರ್ಯತೆಯ, ಅಗತ್ಯವನ್ನು ಒತ್ತಿಹೇಳುತ್ತಾರೆ.

ವರ್ಗೀಕರಣ ಎಂಬ ಅಧ್ಯಯದಲ್ಲಿ ಸ್ಥಳನಾಮ ಅಧ್ಯಯನದ ಮುಖ್ಯ ಸಂಗತಿಯನ್ನು ತಿಳಿಸುತ್ತಾರೆ. ವಿವಿಧ ವಿದ್ವಾಂಸರು ಸ್ಥಳನಾಮಗಳನ್ನು ವಿವಿಧ ಘಟಕಗಳನ್ನಾಗಿ ವಿಭಜಿಸುವ ವಿವರಣೆಗಳನ್ನು ನಿಡುತ್ತಾರೆ ದೇ.ಜ.ಗೌ. ರವರು ಮುಖ್ಯವಾಗಿ 10 ಘಟಕಗಳನ್ನು ಉದಾಹರಣೆಗಳ ಸಮೇತ ವಿವರಿಸುತ್ತಾರೆ ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ ಎಂಬ ಅಧ್ಯಯದಲ್ಲಿ ಕೆಲವು ಊರುಗಳು ಕೆಲವು ವಸ್ತುಗಳಿಗೆ ಪ್ರಸಿದ್ಧವಾಗಿರುವ ಬಗೆಯನ್ನು ತಿಳಿಸುತ್ತಾರೆ ಮುಂದೆ ಸ್ಥಳನಾಮ ಶಾಸ್ತ್ರದ ಸಂಶೋಧಕ ಮಾಡಬೇಕಾದ ಕ್ಷೇತ್ರಕಾರ್ಯದ ಅನಿವಾರ್ಯತೆ, ಅಗತ್ಯತೆಯನ್ನು, ಉಪಾಯಗಳನ್ನು ಎಡರು ತೊಡರುಗಳನ್ನು ಸ್ವಾರಸ್ಯಕರವಾದ ಉದಾಹರಣೆಗಳನ್ನು ಕೊಟ್ಟು ಕ್ಷೇತ್ರಕಾರ್ಯದ ಮಹತ್ವವನ್ನು ತಿಳಿಸುತ್ತಾರೆ.

ಗ್ರಾಮನಾಮ ಜಾನಪದ ಎಂಬ ಅಧ್ಯಾಯದಲ್ಲಿ ಶಾಸನದಲ್ಲಿ ಬಂದದ್ದೆಲ್ಲ ನಿಜವಾಗಿರಲಾರದು ಎಂಬುದನ್ನು ಉದಾಹರಣೆಗಳ ಮೂಲಕ ತಿಳಿಸುತ್ತಾ ಜಾನಪದ

ಕಥೆಗಳೂ ಶಾಸನಗಳೊಂದಿಗೆ ನುಸುಳಿಕೊಂಡಿರುವುದನ್ನು ಸೂಚಿಸುತ್ತಾರೆ. ಮುಂದೆ ಮೈಸೂರು ನಗರದ ಬೀದಿ ಹೆಸರುಗಳು ಎಂಬ ಲೇಖನವು ಅವರೇ ಹಿಂದೆ ಬರೆದಿದ್ದ ಆಂಗ್ಲ ಭಾಷೆಯ ಲೇಖನದ ಅನುವಾದವಾಗಿದೆ. ಈ ಲೇಖನದಲ್ಲಿ ಮೈಸೂರಿನ ಬೀದಿಗಳಿಗೆ, ಕೇರಿಗಳಿಗೆ. ಹೆಸರು ಬಂದ ಬಗೆಯನ್ನು ಉದಾಹರಣೆಗಳ ಮೂಲಕ ವಿವರಿಸುತ್ತಾರೆ.

ಮುಂದೆ ಅನುಬಂದಗಳಲ್ಲಿ ಕೊಡವರ ಕುಟುಂಬ ನಾಮಗಳು ಎಂಬ ಶೀರ್ಷಿಕೆಯಡಿಯಲ್ಲಿ ಕೊಡವರ ವಿವಿಧ ಕುಟುಂಬ ನಾಮಗಳನ್ನು ಕೊಡುತ್ತಾರೆ. ಈ ರೀತಿಯಾಗಿ ಬೇರೆ ಬೇರೆ ಜನಾಂಗಗಳ ಕುಟುಂಬಗಳ ನಾಮಗಳ ವ್ಯವಸ್ಥೆ ಅತ್ಯಗತ್ಯವಾಗಿ ನಡೆಯಬೇಕಾಗಿದೆ. ಆದರಿಂದ ಎಷ್ಟೊ ಮೂಲಭೂತ ವಿಷಯಗಳೂ, ಸಂಸ್ಕೃತಿ, ರೀತಿ, ನೀತಿಗಳು ಬೆಳಕಿಗೆ ಬರಲು ಸಹಾಯಕವಾಗುತ್ತದೆ.

ಅನುಬಂಧ ಎರಡರಲ್ಲಿ ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಜರೂರು ಅಗತ್ಯವನ್ನು ತಿಳಿಸುತ್ತಾರೆ. ಇಂತಹ ನಿಘಂಟನ್ನು ರಚಿಸುವಾಗ ಭಾರತದಂತಹ ಬಹುಭಾಷ ರಾಷ್ಟ್ರದಲ್ಲಿ ನಡೆಸಬೇಕಾದ ಸಿದ್ಧತೆಗಳನ್ನು ತಿಳಿಸಿದ್ದಾರೆ. ಮುಂದೆ ಹೆಸರು ಬದಲಾವಣೆಯ ಬಗೆಗೊಂದು ಟಿಪ್ಪಣಿ ಎಂಬ ಅನುಬಂಧದಲ್ಲಿ ಹೆಸರು ಬದಲಾವಣೆಗೆ ಕಾರಣಗಳೂ, ಪ್ರೇರಣೆ, ಪ್ರಭಾವಗಳನ್ನು ಉದಾಹರಣೆಗಳ ಮೂಲಕ ವಿಸ್ತಾರವಾಗಿ ವಿವರಿಸಿದ್ದಾರೆ. ಈ ನಿಟ್ಟಿನಲ್ಲಿ ಎಂ.ಎಂ. ಕಲ್ಬುರ್ಗಿಯವರು ಗಮನಾರ್ಹ ಕೆಲಸವನ್ನು ಮಾಡಿದ್ದಾರೆ.

ಹೀಗೆ ಸ್ಥಳನಾಮಗಳ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವ ಡಾ\\ದೇ.ಜ.ಗೌ. ರವರು ತಮ್ಮ ಲೇಖನಗಳೂ, ಪುಸ್ತಕಗಳೂ, ಅಲ್ಲದೆ ಭಾಷಣಗಳಿಂದ ಕರ್ನಾಟಕದ ಸ್ಥಳನಾಮಗಳಿಗೆ ಅಪಾರ ಕಾಣಿಕೆಯನ್ನು ಕೊಟ್ಟಿದ್ದಾರೆ. ಕರ್ನಾಟಕದ ಸ್ಥಳನಾಮಗಳ ಅಧ್ಯಯನವು ಅವರ ಆಸೆಯಂತೆ ಕಾಲೇಜು ವಿದ್ಯಾರ್ಥಿಗಳೂ, ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಧ್ಯಯನದ ಆಕರವಾಗಿ ಜನಪ್ರಿಯವಾದಾಗ ಅವರ ಆಸೆ ಪೂರೈಸಿದಂತಾಗುತ್ತದೆ.

ಇಂಥ ವಿದ್ವಾಂಸರಿಗೆ ತಿರುವಾಂಕೂರಿನ ದ್ರಾವಿಡ ಭಾಷಾ ಸಂಸ್ಥೆ ಸೀನಿಯರ್ ಫೆಲೋ ಹುದ್ದೆಯನ್ನು ನೀಡಿರುವುದು ಕರ್ನಾಟಕಕ್ಕೆ ಹೆಮ್ಮೆಯ ವಿಷಯವೇ ಸರಿ.

ಈ ಲೇಖನವನ್ನು ಬರೆಯಲು ಸಲಹೆ, ಸೂಚನೆಗಳನ್ನಿತ್ತ ಮಿತ್ರ ಶಿ. ರಾಜೇಂದ್ರಪ್ಪರವರಿಗೂ ಗುರುಗಳಾದ ದೇವರಕೊಂಡ ರೆಡ್ಡಿಯವರಿಗು ಕೃತಜ್ಞತೆಗಳು.

* * * * *

ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ಡಾ. ದೇಜಗೌ ಕೊಡುಗೆ

- ಜಿ.ಜಿ. ಮಂಜುನಾಥನ್

ಗ್ರಂಥಸಂಪಾದನೆ ಎನ್ನುವ ಶಬ್ದ ಇಂದಿನ Textual criticism ಎನ್ನುವ ಅರ್ಥದಲ್ಲಿ ಬಳಕೆಗೆ ಬಂದದ್ದು ಸುಮಾರು 30 ವರ್ಷಗಳಹಿಂದೆ. ಡಾ.ಡಿ.ಎಲ್. ನರಸಿಂಹಾಚಾರ್ಯರು ಎಂ.ಎ. ತರಗತಿಗಳಿಗೆ ಪಾಠ ಹೇಳುವಾಗ ಈ ಶಾಸ್ತ್ರ ರೂಪುಗೊಂಡಿತು.

ಆದರೆ ಕನ್ನಡ ಗ್ರಂಥಸಂಪಾದನೆಗೆ ಒಂದು ನೂರು ವರ್ಷಗಳ ಇತಿಹಾಸವಿದೆ. ಮಂಗಳೂರಿನಲ್ಲಿ ಮೊಗ್ಲಿಂಗ್ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಬಸವಪುರಾಣ, ಚೆನ್ನಬಸವಪುರಾಣ, ದಾಸರ ಕೀರ್ತನೆಗಳನ್ನು ಕಲ್ಲಚ್ಚಿನಲ್ಲಿ ಪ್ರಕಟಿಸುವ ಮೂಲಕ ಈ ಕ್ಷೇತ್ರಕ್ಕೆ ಬುನಾದಿ ಹಾಕಿದರು. ಜಿ. ಗ್ಯಾರೆಟ್ ಅವರು ಶಬ್ದಮಣಿದರ್ಪಣವನ್ನು ಸಂಪಾದಿಸುವಾಗ, ರೆವರೆಂಡ್ ಫಾದರ್ ಕಿಟ್ಟೆಲ್ ಅವರು ಛಂದೋಂಬುಧಿ ಮತ್ತು ಶಬ್ದಮಣಿದರ್ಪಣಗಳನ್ನು ಸಂಪಾದಿಸುವಾಗ ಮುಂದೆ ಬೆಂಜಮಿನ್ ಲೂಯಿರೈಸ್ ಅವರು ಪಂಪ ಭಾರತ ಮತ್ತು ಪಂಪರಾಮಾಯಣಗಳನ್ನು ಸಂಪಾದಿಸುವಾಗ ಕನ್ನಡ ಗ್ರಂಥಸಂಪಾದನ ಶಾಸ್ತ್ರಒಂದು ಖಚಿತರೂಪವನ್ನು ಪಡೆಯಿತು.

ಲೂಯಿರೈಸ್ ಅವರ ನೇತೃತ್ವದಲ್ಲಿ ಆರ್.ನರಸಿಂಹಾಚಾರ್, ಎಸ್.ಜಿ. ನರಸಿಂಹಾಚಾರ್, ಕೆ.ಬಿ.ಪಾಠಕ ಮುಂತಾದ ಮಹನೀಯರು ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಬಿಬಿಲಿಯೋಥಿಕ ಕರ್ನಾಟಕ ಮಾಲೆಯಲ್ಲಿ ಆದಿಪುರಾಣ, ಕವಿರಾಜಮಾರ್ಗ, ಕಾವ್ಯವಲೋಕನ ಮುಂತಾದ ಕೃತಿಗಳನ್ನು ಹೊರತಂದರು.

ಎಂ.ಎ. ರಾಮಾನುಜ ಅಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಅವರು ಕರ್ನಾಟಕ ಕಾವ್ಯ ಮಂಜರಿ ಮತ್ತು ಕರ್ನಾಟಕ ಕಾವ್ಯಕಲಾನಿಧಿಗಳ ಮೂಲಕ ಹಳಗನ್ನಡ ಗ್ರಂಥಗಳನ್ನು ಪ್ರಕಟಿಸಿದರು, ಒಂದು ಸಂಸ್ಥೆ ಮಾಡಬಹುದಾದ ಕೆಲಸವನ್ನು ಈ ಮಹನೀಯರು ಮಾಡಿದರು.

ಬಿ.ಎಂ. ಶ್ರೀಕಂಠಯ್ಯನವರ ನೇತೃತ್ವದಲ್ಲಿ ಕುಮಾರವ್ಯಾಸ ಭಾರತ ಪರಿಷ್ಕರಣ ಯೋಜನೆಯಡಿ ಪ್ರೊ. ತೀ.ನಂ. ಶ್ರೀಕಂಠಯ್ಯ, ಡಾ.ಡಿ.ಎಲ್. ನರಸಿಂಹಾಚಾರ್ ಮತ್ತು ಡಾ.ಎನ್. ಅನಂತರಂಗಾಚಾರ್ ದುಡಿದಿದ್ದಾರೆ. ಎಂ.ಎಸ್. ಬಸವಲಿಂಗಪ್ಪ, ಎಂ.ಆರ್. ರಂಗಸ್ವಾಮಿ ಅಯ್ಯಂಗಾರ್, ಎಚ್. ದೇವೀರಪ್ಪ, ಶಿ.ಶಿ. ಬಸವನಾಳ, ಶಿ.ಟಿ. ನಂದೀಮಠ, ಡಾ.ಆರ್.ಸಿ. ಹಿರೇಮಠ, ಡಾ..ಎಂ.ಎಸ್. ಸುಂಕಾಪುರ ಅವರ ಮಾರ್ಗದರ್ಶನದಲ್ಲಿ ಒಂದು ಹೊಸ ಗುಂಪು ರೂಪುಗೊಂಡು ಗ್ರಂಥಸಂಪಾದನ ಕ್ಷೇತ್ರದಲ್ಲಿ ತೊಡಗಿದೆ.

ಕನ್ನಡ ಗ್ರಂಥಸಂಪಾದನಕ್ಷೇತ್ರಕ್ಕೆ ಮಹತ್ತರವಾದಸೇವೆ ಸಲ್ಲಿಸಿದವರಲ್ಲಿ ಡಾ. ದೇ. ಜವರೇಗೌಡರೂ ಒಬ್ಬರು. ಶ್ರೀಯುತರು ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ

ಕುಲಪತಿಗಳಾಗಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ನೀಡಿದ ಪೋಷಣೆ ದೊಡ್ಡದು.

ಕವಿಚಕ್ರವರ್ತಿ ರನ್ನ ಮಹಾಕವಿ ವಿರಚಿತ ಅಜಿತ ಪುರಾಣ ತಿಲಕಂ ಎನ್ನುವ ಕೃತಿಯನ್ನು ರಸಿಕ ಚಕ್ರಿ ಹರಿಹರದೇವಕೃತ ಗಿರಿಜಾಕಲ್ಯಾಣ ಮಹಾ ಪ್ರಬಂಧಂ (ಸಂಗ್ರಹ)ಎನ್ನುವ ಕೃತಿಯನ್ನು 1959ರಲ್ಲಿ ಶ್ರೀಮಾನ್ ಎಚ್. ದೇವೀರಪ್ಪನವರೊಡಗೊಡಿ ಸಂಪಾದಿಸಿದ್ದಾರೆ. ನೇಮಿ ಚಂದ್ರನ ಲೀಲಾವತೀ ಪ್ರಬಂಧಂ ಎನ್ನುವ ಕೃತಿಯನ್ನು ಪ್ರೊ.\\ಕೆ. ವೆಂಕಟರಾಮಪ್ಪನವರೊಡಗೂಡಿ 1966ರಲ್ಲಿ ಸಂಪಾದಿಸಿದ್ದಾರೆ.

ಸ್ವತಂತ್ರವಾಗಿ ಆಂಡಯ್ಯ ವಿರಚಿತ ಕಬ್ಬಿಗರಕಾವಂ(1964) ನಯಸೇನನ ಧರ್ಮಾಮೃತ ಸಂಗ್ರಹಂ (1957)ಕನಕದಾಸರ ನಳಚರಿತ್ರೆ ಮತ್ತು ರಾಮ ಧಾನ್ಯ ಚರಿತ್ರೆ(1965)ಚಿಕುಪಾಧ್ಯಾಯನ ರುಕ್ಮಾಂಗದ ಚರಿತ್ರೆ ನಾಗರಾಜನ ಪುಣ್ಯಾಶ್ರವ ಚಂಪು (1977)ಗಳನ್ನು ಸಂಪಾದಿಸಿದ್ದಾರೆ. ಇವಲ್ಲದೆ ಪ್ರಾಚೀನ ಕವಿಗಳಾದ ಷಡಕ್ಷರದೇವ (1959) ನಂಜುಂಡಕವಿ (1964)ಗಳ ಇತಿವೃತ್ತವನ್ನು ರಚಿಸಿದ್ದಾರೆ.

ಅಜಿತಪುರಾಣ, ಲೀಲಾವತಿ ಮತ್ತು ಕಬ್ಬಿಗರಕಾವಂ ಕೃತಿಗಳು ಪುನರ್ ಪರಿಷ್ಕರಣಗಳು. ಕರ್ನಾಟಕ ಕಾವ್ಯ ಕಲಾನಿಧಿಯಲ್ಲಿ ಪ್ರಕಟವಾಗಿದ್ದುವು. ಅಮುದ್ರಿತ ಪ್ರತಿಗಳ ಜೊತೆಗೆ ಹೆಚ್ಚಿನ ತಾಡ ಓಲೆಯ ಪ್ರತಿಗಳನ್ನು ಬಳಸಿಕೊಂಡು ಪಾಠಪರಿಷ್ಕರಣವನ್ನು ನಡೆಸಿದ್ದಾರೆ. ಪಾಠಪರಿಷ್ಕರಣದಲ್ಲಿ ಅವರು ಸಾಧಿಸಿರುವ ಖಚಿತ್ವತೆ ಅವರ ಅಗಾಧ ಪಾಂಡಿತ್ಯದ ಕುರುಹಾಗಿದೆ. ಕವಿಯ ಮೂಲಪಾಠಕ್ಕೆ ಸರಿ ದೊರೆಯಾಗುವ ಸಮೀಪಸ್ತಪಾಠಗಳನ್ನು ನಿಯೋಜಿಸುವಲ್ಲಿಅವರು ಗ್ರಂಥ ಸಂಪಾದನೆಯ ಬಗೆಗೆ ಹೊಂದಿದ್ದ ನಿಷ್ಠೆ ಎದ್ದು ಕಾಣುತ್ತದೆ.

ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅತ್ಯಗತ್ಯವಾಗಿ ಬೇಕಾದದ್ದು ಸಂಸ್ಕೃತ ಮತ್ತು ಪ್ರಾಕೃತಭಾಷೆಗಳ ಜ್ಞಾನ. ರನ್ನ, ನೇಮಿಚಂದ್ರ, ಹರಿಹರ ಮೊದಲಾದವರು ಉಭಯ ಭಾಷಾ ಕವಿಗಳಾಗಿದ್ದು ಕೃತಿರಚನಾಸಮರ್ಥರಾಗಿದ್ದಾರೆ. ಹಾಗಾಗಿ ಅವರ ಕೃತಿಗಳಲ್ಲಿ ಕನ್ನಡ ಮತ್ತು ಸಂಸ್ಕೃತದ ಸೊಗಸಾದ ಹೊಂದಾಣಿಕೆ ಕಂಡು ಬರುವಂತೆಯೆ ಸಂಸ್ಕೃತ ಮತ್ತು ಪ್ರಾಕೃತದ ಪೃಥಕ್ ರಚನೆಗಳೂ ಕಂಡುಬರುತ್ತವೆ. ಈ ಮಾತಿಗೆ ಉದಾಹರಣೆಯಾಗಿ ಲೀಲಾವತಿಕಾವ್ಯದಿಂದ ಒಂದೊಂದು ಉದಾಹರಣೆಯನ್ನು ಕೊಡಬಹುದು -ಸಂಸ್ಕೃತ-

ಯಜ್ಜನ್ಮ ಶ್ರೀ ವಿವೇಕ ಪ್ರಣಯಗುಣಲಸತ್ತ್ರೋಕ ಯೋಸ್ಸುಪ್ರಭಾತಂ
ಯತ್ಕೀರ್ತಿಸ್ಸೂರಿ ಚೇತೋಮ್ಮದುಕರ ಮಣಿ ಸೌಖ್ಯ ಶ್ರುತೇಶ್ಚಂದ್ರಮೂರ್ತಿಃ
ಯದ್ಭಾಗಂ ಬೋಧನಾಥಸ್ಸು ಕವಿಮಣಿ ಜನೇಃ ಕಾವ್ಯ ವೈಡೂರ್ಯಸೂತಿಃ
ಸೋಯಂ ಸ್ಯೆಜನ್ಮ ಸಿಂಧೂರ್ಜಯತಿ ವಿಜಯತೇ ಕಾವ್ಯಕರ್ಣಾವತಂಸ ||

ಪ್ರಾಕೃತಕ್ಕೆ

ಅಗಾಸೇಣೆಂದ ಮಾಹಿಂದ ಸಿವಿ ಸಸಿಯಣಂ ಮೇ
ರಣೋಪಿಯರಂಭಂ
ಕಿಂಭೇದಂ ಬಂಧ ಕಂಪಂ ಪಸವಸಿಹಿಯಯೇ
ರಾವಣೋ ಹೋಸಿದಂಕೋ
ಯೆಂಕೀ ಹಿಂಸೋ ಜಸೇಹಿಂಣಯವಯಣಸುತಾ
ಸಂಭಮೋ ಹಿಂಗುಣೇಹಿ
ಝೀಣಂ ಜಾಯಂ ಪಿಜಾಯೇ ಜಯಯಿ ಜಯಯಿ
ವಣ್ಣೇಪಿಚಂದೋಕವೀಂದೋ

ಈ ಪದ್ಯಗಳಲ್ಲಿ ಕೂಡ ಪಾಠ ಸಮಸ್ಯೆಗಳಿವೆ. ಗೊಂದಲಗಳಿವೆ. ಅವುಗಳನ್ನು ಸಮರ್ಥರೀತಿಯಲ್ಲಿ ಪರಿಷ್ಕರಿಸಲು ಬೇಕಾದ ಭಾಷಾ ಪ್ರಭುತ್ವವನ್ನು ಅವರಲ್ಲಿ ನಾವು ಕಾಣಬಹುದಾಗಿದೆ. 'ವಣ್ಣೇಪಿ ಚಂದೋಕವೀಂದೋ' ಎನ್ನುವಉದ್ಧೃತ ಎರಡನೆಯ ಪದ್ಯ ಪಾಠಕ್ಕೆ ಬದಲಾಗಿ ದೊರೆಯುವ 'ವಣ್ಣೇಮಿ ಚಂದೋಕವೀಂದೋ' ಎನ್ನುವುದು ಅಂಗೀಕಾರರ್ಹ ನೇಮಿಚಂದ್ರ, ಕವೀಂದ್ರ ಎಂದು ಅರ್ಥವಾಗಿ ಲೀಲಾವತಿ ಕೃತಿಕಾರ ನೇಮಿಚಂದ್ರನ ಹೆಸರನ್ನು ಇಲ್ಲಿ ಗುರುತಿಸಬಹುದು. ಇಂತಹ ಹಲವು ಹನ್ನೊಂದು ಸಮಸ್ಯೆಗಳನ್ನು ನಿಭಾಯಿಸುವುದೇ ಗ್ರಂಥ ಸಂಪಾದಕನ ಹೊಣೆ. ಅಂಥಲ್ಲಿ ಡಾ. ದೇಜಗೌ ಅವರು ಯಶಸ್ವಿಯಾಗಿರುವುದು ಸ್ತುತ್ಯರ್ಹವಾದ ಸಂಗತಿ.

ರನ್ನ, ನೇಮಿಚಂದ್ರ, ನಾಗರಾಜ ಮುಂತಾದ ಚಂಪೂ ಕವಿಗಳ ಧೋರಣೆ ಭಾಷೆಗೆ ಸಂಬಂಧಿಸಿದಂತೆ ಒಂದು ರೀತಿಯದಾದರೆ ಆಂಡಯ್ಯನದು ಮತ್ತೊಂದು ಬಗೆಯದು. ಆತ-

ಕನ್ನಡದೊಳ್ಪಿನ ನುಡಿಯಂ
ಮುನ್ನಿದಜೊಳೆ ನೋಡಿ ತಿಳಿದು ಕೊಳ್ವುದು ಚ'ದು'ರಂ
ರನ್ನದ ಕನ್ನಡಿಯಂನಲ
ವಿನ್ನೋಡಿದವಂಗೆ ಕುಂದದೇನಾದಪುದೇ||೧-೭
ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇವಿಲಾರಿನಿತುಂಸಲೆ ಪೆಂಪನಾಳ್ವಕ
ಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಪೇಪೇಜ್ಜಿ ಬಲ್ಲುನೆ
ಟ್ಟಗೆ ದೊರೆಕೊಂಡು ದಿಂತಿವನೊಳಲ್ಲದೆ ಕೇಳ್‌ದೊರೆಕೊಳ್ಳ
-ದಾರೊಳಂ ||೧೧೬

ಎನ್ನುವ ಧೋರಣೆಯವನು. ಆತ ಅನೇಕ ಶಬ್ದಗಳನ್ನು ಬೇಕೆಂದೇ ಸೃಷ್ಟಿಸಿ ಚಲಾವಣೆಗೆ ಬಿಟ್ಟಿದ್ದಾನೆ. ಉದಾಹರಣೆಗೆ-

ಕರ್ವುವಿಲ್ಲ, ಪೂವಿಲ್ಲ =ಮನ್ಮಥ, ಆನೆ ಮೆಯ್ಯಾತ=ಗಣಪತಿ. ಗಾಳಿವಟ್ಟೆಯೆಳ್ ನಡೆವಂ-ಆಕಾಶಮಾರ್ಗದಲ್ಲಿ ನಡೆಯುವವನು ದೇವತೆ. ಬಿಸುಣ್ಣೊಳೊಗೆದ ಬೀರಂ =

ವೀರಭದ್ರ, ಮೂಱಡಿಯಿಟ್ಟಂ =ವಾಮನಾವತಾರದಲ್ಲಿ ಬಲಿಯನ್ನು ಮೂರು ಹೆಜ್ಜೆಯಲ್ಲಿ ಅಳೆದವನು,-ವಿಷ್ಣು, ಮೆಯ್ಗಣ್ಣ=ಇಂದ್ರ, ಪೊಡೆಯಲರ=ಹೊಕ್ಕುಳಲ್ಲಿ ಹೂವುಳ್ಳವನು, ಬ್ರಹ್ಮ. ಮೇಲೂರ್=ಮೇಲುಗಡೆ ಇರುವ ಊರು, ಸ್ವರ್ಗ. ಪಲವುಂನಾಲಗೆಯುಳ್ಳವಂ =ಹಲವು ನಾಲಿಗೆಯೆಂದರೆ ಸಾವಿರನಾಲಿಗೆಯುಳ್ಳ ಆದಿಶೇಷ ಮುಂತಾದ ರೂಪಗಳನ್ನು ನೋಡಬಹುದು.

ಅಜಿತ ಪುರಾಣದಂತಹ ಧಾರ್ಮಿಕ ಕೃತಿಗಳಲ್ಲಿ ಜೈನಧರ್ಮದ ಪಾರಿಭಾಷಿಕ ಪದಗಳ ಪ್ರಾಚುರ್ಯ ಬಹಳ. ಕವಿರತ್ನನ ಹಾಗೆ ಜೈನ ಮತಾಂಬೋಧಿಯನ್ನು ಪ್ರವೇಶಿಸುವುದು ಇತರರಿಗೆ ಸಾಧ್ಯವೆ? ಜಿನನಿಗೆ ಸಂಬಂಧಿಸಿದ ಪಂಚಕಲ್ಯಾಣಗಳು ಇಲ್ಲಿರುವುದರಿಂದ ಭವ್ಯಾಂಗವು ಒಪ್ಪುವುದಿಲ್ಲವೆ? ಕವಿಚತುರ್ಮುಖ ಎನ್ನಿಸಿದ ತಾನು ಆಗಮವೇದಿಯಾಗಿರುವುದರಿಂದ ಇತರ ಪುರಾಣಗಳಲ್ಲಿ ಹೇಳಿರುವ ವಿಷಯಗಳಲ್ಲದೆ ಮತ್ತುಷ್ಟು ವಿಶೇಷ ಅಂಶಗಳಿವೆಯೆಂದು ರನ್ನ ಹೇಳಿಕೊಂಡಿದ್ದಾನೆ. ಇದಕ್ಕೆ ಉದಾಹರಣೆಯಾಗಿ-'ಅದೆಂತೆಂದೊಡೀ ಮಹೀತಳದಿಂತೊ'ಟ್ಟು ಮೇಲೆ ಪಂಚಸಹಸ್ರ ಚಾಪೋತ್ಸೇಧದಿಂ ಗಗನತಲದೊಳು ದ್ವಾದಶಯೋಜನ ಸಮವೃತ್ತ ಸಂಸ್ಥಾನಮುಮೇಕ ಖಂಡಾಖಂಡ ನೀಲೋಪಲ ವಿನಿರ್ಮಿತ'ಮುಂ.... 'ಮುಂತಾಗಿ ಐದು ಪುಟಗಳವರೆಗೆ ಸಾಗುವ ೭-೩೦ ವಚನದ ಗದ್ಯಭಾಗ ಜಿನನಸಮವಸ'ರಣ ಮಂಟಪದ ಗಂಧ ಕುಟಿಯ ವರ್ಣನೆಯಾಗಿದೆ. ಅಂತಹ ಕಠಿಣತರ ಭಾಗಗಳನ್ನು ಸಂಪಾದಿಸುವಲ್ಲಿ ಸಂಪಾದಕರು ಯಶಸ್ವಿಯಾಗಿದ್ದಾರೆ.

ಕಾವ್ಯ ಮತ್ತು ಇತಿಹಾಸಗಳ ಸಮೀಕರಣ ಕನ್ನಡಸಾಹಿತ್ಯದಲ್ಲಿ ಮೊದಲಿನಿಂದಲೂ ನಡೆದು ಬಂದಿದೆ. ಪಂಪ ತನ್ನ ವಿಕ್ರಮಾರ್ಜುನವಿಜಯದಲ್ಲಿ ಅರ್ಜುನನೊಡನೆ ಅರಿಕೇಸರಿಯನ್ನು ಸಮೀಕರಿಸಿದಗಂತೆ ರನ್ನ ತನ್ನ ಸಾಹಸಭೀಮ ವಿಜಯದಲ್ಲಿ ಚಾಲುಕ್ಯ ಚಕ್ರವರ್ತಿ ತೈಲಪನನ್ನು ಭೀಮನೊಡನೆ ಸಮೀಕರಿಸಿದ್ದಾನೆ. ರನ್ನನ ಕೃತಿಗಳಲ್ಲಿ ಅತ್ತಿಮಬ್ಬೆ ಮುಂತಾದ ಐತಿಹಾಸಿಕ ವ್ಯಕ್ತಿಗಳ ದಾನಿಗಳ, ಆಶ್ರಯದಾತರ ಉಲ್ಲೇಖಗಳು ಕಂಡುಬಂದಿವೆ. ನೇಮಿಚಂದ್ರನು ಹೊಯ್ಸಳದೊರೆ ವೀರಬಲ್ಲಾಳನನ್ನು ಲೀಲಾವತಿಯ ಕಾವ್ಯನಾಯಕನೊಂದಿಗೆ ಸಮೀಕರಿಸಿರುವಂತಿದೆ. ಕದಂಬ ಕಾಮದೇವನನ್ನು ಆಂಡಯ್ಯ ತನ್ನಕಾವ್ಯದ ಕಥಾನಾಯಕ ಕಾಮನೊಂದಿಗೆ ಹಾಸುಹೊಕ್ಕಾಗಿಸಿದ್ದಾನೆಂದು ದಿ. ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಎಲ್ಲ ಐತಿಹಾಸಿಕ ಅಂಶಗಳನ್ನು ಡಾ. ದೇಜಗೌ ಅವರು ಸಮರ್ಥವಾಗಿ ವಿಮರ್ಶಿಸಿದ್ದಾರೆ.

ಡಾ.ದೇಜಗೌ ಸಂಪಾದಿತ ಕೃತಿಗಳ ಮಹತ್ವ ವಿರುವುದು ಆ ಕೃತಿಗಳಿಗೆ ಅವರು ಬರೆದಿರುವ ಪೀಠಿಕೆಗಳಲ್ಲಿ. ಬಹುಶಃ ಅವರಷ್ಟು ದೀರ್ಘವಾದ ಮುನ್ನುಡಿಗಳನ್ನು ಪ್ರಾಚೀನ ಕಾವ್ಯಗಳಿಗೆ ಬರೆದವರು ವಿರಳವೆನ್ನಬಹುದು. ಲೀಲಾವತಿಯ ಕವಿಕಾವ್ಯ ವಿಮರ್ಶೆ 95ಪುಟ. ಪುಣ್ಯಾಸ್ರವದ ಪೀಠಿಕೆ 209ಪುಟ. 82ಪುಟದ ಕಬ್ಬಿಗರಕಾವಕ್ಕೆ ಪೀಠಿಕೆ72ಪುಟಗಳು. ಇವುಗಳ ಜೊತೆಗೆ ಸಮೃದ್ಧವಾದ ಪರಿಶಿಷ್ಟಗಳು ಬೇರೆ.

ಯಾವುದೇ ಪೀಠಿಕೆಯನ್ನು ತೆಗೆದುಕೊಂಡರು ಸಂಪಾದನೆಗೆ ತೆಗೆದುಕೊಂಡ ಕೃತಿಯ ಕವಿ ವಿಷಯ, ಆ ಗ್ರಂಥದ ಕಥಾಸಾರ, ಆ ಕೃತಿಗೆ ಆಕರಗಳಾದ ಕೃತಿಗಳ ಪರಿಚಯ, ಮೂಲ

ಮತ್ತು ಸಂಪಾದಿತ ಕೃತಿಯ ತುಲನಾತ್ಮಕ ಅಧ್ಯಯನ, ಪ್ರಸ್ತುತ ಕವಿ ರಚಿಸಿರುವ ಇತರ ಕೃಕತಿಗಳ ವಿವೇಚನೆ, ವರ್ಣನೆಗಳು, ಶೈಲಿ, ಕಾವ್ಯಗಗಳಲ್ಲಿ ಜನಜೀವನ, ಪೂರ್ವಕವಿ ಋಣ, ಕವಿಯ ಕಾವ್ಯಮಾರ್ಗ, ಕವಿಯ ಪ್ರಭಾವಮುದ್ರೆ ಮತ್ತಿತರ ವಿವರಗಳಿಂದೊಡಗೂಡಿದ್ದು ತಲಸ್ಪರ್ಶಿ ವಿವೇಚನೆಯಿಂದ ಕೂಡಿರುತ್ತದೆ. ಪ್ರಾಚೀನ ಕನ್ನಡ ಕಾವ್ಯವಿಮರ್ಶೆಯ ಜಾಡನ್ನು ಸವೆದವರು ಡಾ. ದೇಜಗೌ ಎಂದರೆ ಅದು ಅತಿಶಯೋಕ್ತಿಯ ಮಾತಲ್ಲ. ಡಾ. ಎ.ಎನ್. ಉಪಾಧ್ಯೆಯ ಅವರು ಪ್ರಾಕೃತ ಗ್ರಂಥಗಳ ಸಂಪಾದನೆಯಲ್ಲಿ , ವಿಮರ್ಶೆಯಲ್ಲಿ ಯಾವ ಜಾಡನ್ನು ಹಿಡಿದರೋ ಅದೇ ಜಾಡಿನಲ್ಲಿ ಡಾ. ದೇಜಗೌ ನಡೆದಿರುವುದು' ಕಂಡುಬರುತ್ತದೆ.

ಲೀಲಾವತೀ ಕಾವ್ಯದ ಪಾತ್ರರಚನೆ ಕುರಿತು ಅವರು ಹೇಳುವ ಮಾತುಗಳು ಹೀಗಿವೆ-

1) ಅವನ ಪಾತ್ರಗಳೆಲ್ಲ ಒಂದೆ ಅಚ್ಚಿನಲ್ಲಿ ಎರಕಹೊಯ್ದಂತಿವೆ, ಲೆಪ್ಪದ ಬೊಂಬೆಗಳಂತಿವೆ, ರಕ್ತ ಚಲನೆಯೊಡುಗಿ ಮರಗಟ್ಟಿಕೊಂಡಂತೆ ಕಾಣುತ್ತವೆ. ಅವುಗಳಲ್ಲಿ ತ್ರಾಣವಿಲ್ಲ, ವ್ಯಕ್ತಿವೈಶಿಷ್ಟ್ಯವಿಲ್ಲ, ಉಪ್ಪು ಹುಳಿ ಕಾರಗಳಿಲ್ಲ (XIV)

2) ಲೀಲಾವತಿ ಎರಡೇ ಎರಡು ಪಾತ್ರಗಳುಳ್ಳ ಡೊಳ್ಳು ಕಾವ್ಯ(XIV)

ಕೆಲವು ಕಥೆಗಳಂತು ಶಾಲಾವರದಿಗಳಂತೆ ನಿಸ್ಸಾರವಾಗಿದ್ದು ಅಲ್ಲಿಯ ಪಾತ್ರಗಳು ವಿವಿಧ ವೇಷ ಸ್ಪರ್ಧೆಗಾಗಿ ಒಂದೆರಡು ಕ್ಷಣ ರಂಗ ಮಂಚದ ಮೇಲೆ ಬಂದು ಹೋಗುವ ವ್ಯಕ್ತಿಗಳಂತೆ ಕಾಣುತ್ತಾರೆ(1)

ವೈಜ್ಞಾನಿಕವಾಗಿ ಹೊಸ ಆವಿಷ್ಕಾರಗಳು ಆದಂತೆಲ್ಲ ಅದನ್ನು ಕಾವ್ಯವಿಮರ್ಶೆಯಲ್ಲಿ ಬಳಸಿಕೊಳ್ಳುವುದನ್ನು ಅವರ-

ಕವಿ ಕಲ್ಪನೆಯ ಸ್ಪುಟ್ನಿಕ್ ಯುಗದಲ್ಲಿ ಗಗನಯಾತ್ರಿಯಾಗುವ ಕೆಚ್ಚೆದೆಯ ವೀರನಿಗೆ ಮಾತ್ರ ಈ ಅದ್ಭುತ ರಸದರ್ಶನವಾಗುತ್ತದೆ(IXVI)

2) ಹೊಸಹೊಸತಳಿಗಳ ಅಭಿವೃದ್ಧಿಯಿಲ್ಲದೆ ಜೀವಸಂತಾನ ಹೇಗೆ ನಿರ್ವೀರ್ಯವಾಗುತ್ತದೆಯೋ ಹಾಗೆಯೇ ಹೊಸ ಹೊಸ ಸಂಸ್ಕಾರಗಳ ಗಾಢ ಸಂಪರ್ಕವಿಲ್ಲದಿದ್ದರೆ ಭಾಷೆ ನಿರ್ಜೀವವಾಗುತ್ತದೆ ಶೈಲಿ ನಿರ್ಜೀವವಾಗುತ್ತದೆ(IXViii)

ಹೀಗೆಯೇ ಕುಶಲ ಕರ್ಮಿನೆಯ್ದ ಜಾರ್ಜೆಟ್ ಕಣ, ಕ್ಷ-ಕಿರಣಸಾಮರ್ಥ್ಯವುಳ್ಳ ಪ್ರತಿಭಾಚಕ್ಷು, ಸ್ವಂತನಾಣ್ಯಗಳಲ್ಲಿ ಅಷ್ಟೊ ಇಷ್ಟೊ ಹದಿನಾಲ್ಕು ಕ್ಯಾರೆಟ್ ಚಿನ್ನದಲ್ಲಿ ತಯಾರಾದುವು, ಸಹೃದಯನ ಭಾವಕೋಶವನ್ನು ಪ್ರವೇಶಿಸಲು ಅತ್ಯವಶ್ಯವಾದ ಪಾಸ್‌ಪೋರ್ಟ್ ಮುಂತಾದ ಅವರ ಮಾತುಗಳು ಅವರ ಮುನ್ನಡಿಯನ್ನು ಜೀವಂತವಾಗಿಡುತ್ತವೆ. ವಿಮರ್ಶಾ ಪ್ರಪಂಚಕ್ಕೆ ಹೊಸ ಆಯಾಮವನ್ನು ತಂದು ಕೊಡುತ್ತವೆ.

ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ವರ್ಗಸಂಘರ್ಷವನ್ನು ಮೊದಲಬಾರಿಗೆ ಕಂಡವರು ಡಾ. ದೇಜಗೌ. ಭತ್ತ ಮತ್ತು ರಾಗಿಗಳ ಜಗಳದ ಸಂದರ್ಭದಲ್ಲು ಪೌರಾಣಿಕ ಮತ್ತು ಸಾಮಾಜಿಕ ಸಂಗತಿಗಳು ರೂಪಕವಿಧಾನದಲ್ಲಿ ಓತ ಪ್ರೋತವಾಗಿ

ಹೆಣಿಗೆಗೊಂಡಿರುವುದನ್ನು ಡಾ. ದೇಜಗೌ ಕಂಡಿದ್ದಾರೆ. ಅಲ್ಲದೆ ಮುಂದುವರೆದು-ಈ ಕಥೆಯ ಪ್ರಮುಖ ಪಾತ್ರಗಳು ಪ್ರಾಣಿಗಳಲ್ಲ ಧಾನ್ಯಗಳು. ಇದು ಈ ಕೃತಿಯ ವೈಶಿಷ್ಟ್ಯ. ಪ್ರಾಯಶಃ ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ಧಾನ್ಯಗಳನ್ನು ಕಾವ್ಯಪಾತ್ರಗಳ ಮಟ್ಟಕ್ಕೆ ಏರಿಸಿದ್ದಿಲ್ಲ. ಇದು ವರ್ಗಜಾತಿಗಳ ಹೋರಾಟದ ಕತೆಯಾಗಿದ್ದು, ಆ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಪ್ರತಿಹಿಂಬಿಸುತ್ತದೆ. ತಾನು ಹುಟ್ಟಿದ ಜಾತಿಯೇ ಕಾರಣವಾಗಿ ತಾನನುಭವಿಸಿದ ಮಾನಸಿಕ ಯಾತನೆಗಿಲ್ಲಿ ಅಭಿವ್ಯಕ್ತಿಯ ಇಂಬು ದೊರೆತಿದೆ (ಜನಪ್ರಿಯ ಕನಕ ಸಂಪುಟ XVII)ಎಂದು ಮುಂತಾಗಿ ಹೇಳಿ ಕನಕದಾಸರ ರಾಮಧಾನ್ಯ ಚರಿತ್ರೆಯನ್ನು ಅಣಕು ಮಹಾಕಾವ್ಯ ಎಂಬುದಾಗಿ ಗುರುತಿಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಡಾ. ದೇಜಗೌ ಅವರು ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ಮಹತ್ತರ ಸೇವೆಸಲ್ಲಿಸಿದ ಮಹನೀಯರಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದಾರೆ. ಮುಂದಿನ ಗ್ರಂಥ ಸಂಪಾದನಕಾರರಿಗೆ ಕೃತಿ ಪರಿಷ್ಕರಣ ಮತ್ತು ಸಮೀಕ್ಷೆಗಳಿಗೆ ದಾರಿದೀಪವಾಗಿದ್ದಾರೆ.

*****

ಕನ್ನಡ ಪ್ರವಾಸ ಸಾಹಿತ್ಯ ಮತ್ತು ದೇಜಗೌ

ಡಾ. ತಿಪ್ಪೇಸ್ವಾಮಿ

-1-

ಪ್ರವಾಸ, ಯಾತ್ರೆ, ಭ್ರಮಣೆ -ಮನುಷ್ಯನು ಅಲೆಯುವ ಪ್ರವೃತ್ತಿಗೆ ಇರುವ ನಾನಾ ಹೆಸರುಗಳು. ಅಲೆಯುವ ಮನಸ್ಸು ಹಾಗೂ ಜಂಗಮ ಸ್ವಭಾವ ಮನುಷ್ಯನಿಗೆ ಒಂದು ವರದಾನ. ಈ ವರದಾನದಿಂದಾಗಿಯೇ ಜಗತ್ತಿನ ಚಕ್ರಗಳಿಗೆ ಚಾಲನೆ ದೊರೆತಿರುವುದು. ದೇಶಗಳ ಆವಿಷ್ಕಾರ, ಜ್ಞಾನಕ್ಷೇತ್ರದ ವಿಸ್ತಾರ ಮತ್ತು ಸಂಸ್ಕೃತಿಗಳ ಪ್ರಸಾರಕ್ಕೆಲ್ಲ ಮನುಷ್ಯನ ಅಲೆಯುವ ಪ್ರವೃತ್ತಿ, ಯಾತ್ರೆ ಮಾಡಬೇಕೆಂಬ ಅವನ ಹಂಬಲವೇ ಪೂರಕವಾಗಿ ಪರಿಣಮಿಸಿದ್ದು, ಜಗತ್ತಿನ ಇಂದಿನ ಬಹಳಷ್ಟು ಉಪಲಬ್ಧಿಗಳು ಸಿದ್ಧಿ-ಸಾಧನೆಗಳಿಗೆ ಮೂಲಕಾರವಾಗಿದೆ ಎಂದರೆ ತಪ್ಪಾಗಲಾರದು.

ಜಗತ್ತಿನ ಹುಟ್ಟಿನಿಂದಲೇ ಮನುಷ್ಯನ ಅಲೆಯುವಿಕೆ, ಯಾತ್ರೆ, ಪ್ರವಾಸದ ಹವ್ಯಾಸವೂ ಬೆಳೆದಿರುವಂತೆ ಈ ಶಬ್ದಗಳ ಅರ್ಥಗಳು ಸಹ ಸಂಕೋಚಗೊಳ್ಳುತ್ತ-ವಿಸ್ತಾರಗೊಳ್ಳುತ್ತ ಬಂದಿರುವುದನ್ನು ಕಾಣಬಹುದಾಗಿದೆ. ಆದಿಯುಗದಲ್ಲಿ ಮನುಷ್ಯ ತನ್ನ ಜೀವನೋಪಾಯಕ್ಕಾಗಿ ಗೆಡ್ಡೆ ಗೆಣಸುಗಳನ್ನು ಅರಸಿಕೊಳ್ಳಲು, ವನ್ಯ ಮೃಗಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಪಡಬಾರದ ಪಾಡು ಪಡುತ್ತ ಸ್ಥಳದಿಂದ ಸ್ಥಳಕ್ಕೆ, ಪ್ರದೇಶದಿಂದ ಪ್ರದೇಶಕ್ಕೆಯಾತ್ರೆ ಬೆಳೆಸುತ್ತಿದ್ದ, ಅಲೆಯುತ್ತಿದ್ದ. ಆದರೆ ನಾಗರೀಕತೆ ಬೆಳೆದಂತೆ, ಅನ್ನ ಬಟ್ಟೆ-ಬರೆಗಳ ಸಮಸ್ಯೆಗಳು ನೀಗುತ್ತ ಬಂದು ಆತ ಒಂದು ನೆಲೆಯನ್ನು ಕಂಡುಕೊಂಡ ಮೇಲೆ, ಸಾಮೂಹಿಕ ಬದುಕನ್ನು ಆರಂಭಿಸಿದ ಮೇಲೆ ಅವನ ಈ ನಿರಂತರ ಅಲೆಯುವಿಕೆ ನಿಂತಿತಾದರೂ, ಅದು ಬೇರೊಂದು ರೀತಿಯಲ್ಲಿ ರೂಪಪಡೆದುಕೊಂಡು ಆತನ ಅಲೆಯುವ ಮನಕ್ಕೊಂದು ಸ್ವರೂಪ ನೀಡಿತು. ಅದನ್ನೇ ಆಗ 'ಯಾತ್ರೆ' ಎಂದು ಕರೆದರೆಂದು ತೋರುತ್ತದೆ. ಈ ಯಾತ್ರೆ ಬರಬರುತ್ತ ಭಾರತೀಯರ ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಪರಿಣಮಿಸಿ ಅನಿವಾರ್ಯವೆನ್ನಬಹುದಾದಂಥ ರೂಪವನ್ನು ಪಡೆದುಕೊಂಡಿತು. ಈ ಯಾತ್ರೆಗಳಿಗೆ ಆಧ್ಯಾತ್ಮಿಕವಾದ, ಧಾರ್ಮಿಕವಾದ ಹಿನ್ನೆಲೆಯ ವಿಶಾಲವಾದ ಹಂದರವೊಂದನ್ನು ನೀಡಿ ಇಡೀ ಭರತಖಂಡದ ಪ್ರದಕ್ಷಿಣೆ ಮಾಡುವಂತಹ, ಆ ಮೂಲಕ ತೀರ್ಥಸ್ಥಾನಗಳನ್ನು ಸಂದರ್ಶಿಸುವುದರ ಜೊತೆ ಜೊತೆಗೆ ವಿಭಿನ್ನ ಸಂಸ್ಕೃತಿಗಳ, ವಿಭಿನ್ನ ಭಾಷೆಗಳನ್ನಾಡುವ, ವಿಭಿನ್ನ ಉಡುಗೆ-ತೊಡುಗೆಗಳನ್ನು ತೊಡುವ, ವಿಭಿನ್ನ ಆಚಾರ-ವಿಚಾರಗಳನ್ನು ಹೊಂದಿರುವ, ವಿಭಿನ್ನ ಪ್ರದೇಶಗಳ ಜನರೊಂದಿಗೆ ಬೆರೆಯುವ ಆ ಮೂಲಕ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಅವಕಾಶವನ್ನು ಯಾತ್ರೆಯ ನೆಪದಲ್ಲಿ ಕಲ್ಪಿಸಲಾಗಿದ್ದಿತು. ಭರತಖಂಡದಂತಹ ವಿಶಾಲವಾದ ರಾಷ್ಟ್ರದ ಸಂದರ್ಭದಲ್ಲಿ ಈ ತೆರನಾದ ವ್ಯವಸ್ಥೆಯನ್ನು, ದೇಶದ ಸಂಪೂರ್ಣ ಭ್ರಮಣೆಗೆ ನಮ್ಮ ಹಿರಿಯರು ನೀಡಿದ ಮಹತ್ವವನ್ನು ಈ ದೃಷ್ಟಿಯಿಂದ ನೋಡಿದಾಗ ಬಹಳ ಆಶ್ಚರ್ಯವಾಗುತ್ತದೆ. ಭಾವಾತ್ಮಕ ಏಕತೆಗೆ ಬಹುಶಃ ಈ ಬಗೆಯ ಯಾತ್ರೆಗಳಿಗಿನ್ನ

ಬೇರೆಯಾದ ಮತ್ತೊಂದು ವ್ಯವಸ್ಥೆಯೊಂದು ಇರಲಾರದು ಎಂದೇ ನನಗನ್ನಿಸುತ್ತದೆ. ಅದರಲ್ಲೂ ನಮ್ಮ ದೇಶದ ಹಿನ್ನೆಲೆಯಲ್ಲಿ ಹೇಳಬೇಕೆಂದರೆ ಈ ಭರತ ಭೂಮಿಯ ಪ್ರತಿಹೆಜ್ಜೆಯೂ ಮಂದಿರವೇ. ಮಣ್ಣಿನ ಪ್ರತಿ ಕಣವೂ ಪವಿತ್ರವೇ. ಹರಿಯುವ ಪ್ರತಿ ಝುರಿಯು ಗಂಗೆಯೇ. ಅಂದರೆ ಅಷ್ಟು ದೇವಾಲಯಗಳು, ಅಷ್ಟು ತೀರ್ಥಸ್ಥಾನಗಳು, ಅಷ್ಟು ಮೋಹಕವಾದ ರಮಣೀಯವಾದ ಸ್ವರ್ಗ ಸದೃಶವಾದ ತಾಣಗಳಿಗೆ ಇಲ್ಲಿನ ಪ್ರತಿ ಪ್ರದೇಶವೂ ತಾಮುಂದು ನಾ ಮುಂದು ಎಂದು ಪೈಪೋಟಿ ಮಾಡುತ್ತಿರುವವೇನೋ ಎಂಬಂತಹ ಅನುಭವವಾಗುತ್ತದೆ. ಕಾಶ್ಮೀರ, ಸಿಮ್ಲಾ, ಉದಕ ಮಂಡಲ ಮುಂತಾದ ವಿಹಾರ ಕೇಂದ್ರಗಳು ಒಂದೆಡೆಯಾದರೆ, ಕಾಶಿ, ರಾಮೇಶ್ವರ, ಹರಿದ್ವಾರ, ಪುರಿ, ಗಯೆ ಕನ್ಯಾಕುಮಾರಿ ಪವಿತ್ರ ತೀರ್ಥಕ್ಷೇತ್ರಗಳು ಇನ್ನೊಂದೆಡೆ, ಗಂಗೆ, ಯಮುನೆ, ಕಾವೇರಿ, ಕೃಷ್ಣೆಗೋದಾವರಿಯೇ ಮುಂತಾದ ಪವಿತ್ರ ನದಿಗಳು ಮತ್ತೊಂದೆಡೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿದ್ದು ಇವೆಲ್ಲದರ ಭ್ರಮಣೆ, ಯಾತ್ರೆ ಕೈಗೊಳ್ಳುವುದರ ಮೂಲಕ ಭಾರತೀಯ ಧನ್ಯಭಾವವನ್ನು ಪಡೆದುಕೊಳ್ಳಬಲ್ಲವನಾಗಿರುತ್ತಾನೆ ಹೀಗಾಗಿ ಭಾರತದ ಪವಿತ್ರ ಸ್ಥಳಗಳ ದರ್ಶನವೆಂದರೆ ಭರತಖಂಡದ ಅಖಂಡ ದರ್ಶನವಾಗಿರುವಂತೆ ಪುಣ್ಯಫಲಗಳ ಹಾಗೂ ಮುಕ್ತಿದಾಯಕವಾದ ಸ್ಥಳಗಳೂ ಆಗಿವೆ. ಈ ತೀರ್ಥಯಾತ್ರೆಗಳಿಗೆ ಹೋಗುತ್ತಿದ್ದ ಜನರು ಹಿಂದಿನ ಕಾಲದಲ್ಲಿ ಪಾದಯಾತ್ರೆಯ ಮೂಲಕ ಪ್ರಯಾಣಿಸುತ್ತಿದ್ದರು. ಆ ಮೂಲಕ ನಡೆದು ಹೋಗುತ್ತಿದ್ದಾಗ ಸಿಗುತ್ತಿದ್ದ ಅಸಂಖ್ಯ ನಗರಗಳ ದರ್ಶನವಾಗುತ್ತಿದ್ದಂತೆ, ಇವರಿಗೆ ಯಾತ್ರೆ ಕಷ್ಟದಾಯಕವೆಂಬುದರ ಅರಿವೂ ಆಗುತ್ತಿತ್ತು. ಅಂದಿನ ಯಾತ್ರೆಗಳು ಶಕ್ತಿಯ ಒರೆಗಲ್ಲುಗಳಾಗಿದ್ದುವು ಈ ಒರೆಗಲ್ಲಿನಲ್ಲಿ ಗೆದ್ದವರು ಪುಣ್ಯಪ್ರಾಪ್ತಿಗೆ, ಮೋಕ್ಷಕ್ಕೆ ತಮ್ಮನ್ನು ತಾವು ಯೋಗ್ಯರೆಂದು ಭಾವಿಸುತ್ತಿದ್ದರೇ ಹೊರತಾಗಿ ತಮ್ಮ ಮನೆಗೆ ತಾವು ಹಿಂತಿರುಗಿ ಬರುವುದರತ್ತ ಯೋಚಿಸುತ್ತಿರಲಿಲ್ಲ, ತೀರ್ಥಯಾತ್ರೆ ಅತನ ಅಂತವ್ಯ, ಗುರಿಯಾಗಿದ್ದಿತು. ಈ ದೃಷ್ಟಿಯಿಂದಲೇ ಬಹಿರ್ಮುಖಿ, ಯಾತ್ರಿ ಅಂತರ್ಮುಖಿ, ಪ್ರವಾಸ, ವಿಲಾಸ ಪೂರ್ಣ, ಯಾತ್ರೆ ಭಕ್ತಿ ಪೂರ್ಣ. ಪ್ರವಾಸ ಮನರಂಜನೆಗಾಗಿ, ಯಾತ್ರೆ ಮನೋವಿಕಾಸಕ್ಕಾಗಿ ಪ್ರವಾಸಿಯೊಬ್ಬ ವಿಲಾಸವಿಹಾರಿ, ಯಾತ್ರಿಕನೊಬ್ಬ ದೇವ ಸಾಕ್ಷಾತ್ಕಾರಿ, ಪ್ರವಾಸಿಯು ಗಿರಿಗಹ್ವರ, ವಿವಿಧ ಜನಗಳು, ನಾಟಕರಂಗಗಳು, ಕೋಟೆ ಕೊತ್ತಲು ಇತ್ಯಾದಿಗಳನ್ನು ನೋಡಿ ಆನಂದಿಸುವನು, ಯಾತ್ರಿಕ ಪ್ರತಿಕ್ಷಣದಲ್ಲಿಯೂ ದೈವನ ಬಲವನ್ನೂ ಪ್ರತಿಯೊಂದರಲ್ಲಿಯೂ ಕಾಣುವನು. ದೇಗುಲದ ಶಿಲೆಯಲ್ಲಿ, ತೀರ್ಥದ ಜಲದಲ್ಲಿ, ಹೂವಿನ ಸೋಂಪಿನಲ್ಲಿ, ಗುಡಿಯ ಗೋಪುರದಲ್ಲಿ, ಪ್ರಾಣದ ಸ್ಪಂದನದಲ್ಲಿ ಪರ್ವತದ ರೌದ್ರರಮಣೀಯತೆಯಲ್ಲಿ ಚಲಿಸುವ ಗಾಳಿಯಲ್ಲಿ, ಹರಿಯುವ ನದಿಯಲ್ಲಿ ವಿರುಕಿಸುವನು.[1] ಈ ಮಾತುಗಳಿಂದ ಯಾತ್ರೆ ಹೇಗೆ ಪ್ರವಾಸದಿಂದ ದೂರ ಸರಿದುನಿಲ್ಲುತ್ತದೆ ಎಂಬುದು ಗೊತ್ತಾಗುತ್ತದೆ. ಒಂದು ಕಾಲದಲ್ಲಿ ಯಾತ್ರೆ ಭೀಮ ಪ್ರಯಾಸವಾಗಿದ್ದು, ಇಂದಿನ ಆಧುನಿಕ ಯುಗದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಯಾತ್ರೆಯೂ ಪ್ರವಾಸದ ಒಂದು ಅಂಗವಾಗಿ ಪರಿಣಮಿಸಿದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಯಾತ್ರೆ ಪ್ರವಾಸದ ಒಂಉದ ಅಂಗವಾಗಿ ಪರಿಣಮಿಸಿ

1 ಭಾರತಯಾತ್ರೆ, ಡಿ. ಟಿ. ರಂಗಸ್ವಾಮಿ ಪುಟ ೯.

ಭಗವಂತನ ' ಸಾಕ್ಷಾತ್ಕಾರವಷ್ಟೇ ಇದರ ಉದ್ದೇಶವಾಗಿ ಉಳಿಯದೆ ಹತ್ತು ಹಲವಾರು ಉದ್ದೇಶಗಳ ಸಂಗಮವಾಗಿದೆ ಪ್ರವಾಸ. ಹೀಗಾಗಿ ಪ್ರವಾಸ ಯಾತ್ರೆಯನ್ನು ತನ್ನಲ್ಲಿ ಆತ್ಮೀಕರಿಸಿಕೊಂಡಿದೆ.

' ಪ್ರವಾಸ' - ಇಂದಿನ ದಿನಗಳಲ್ಲಿ ಮನುಷ್ಯನ ಅಲೆಯುವ ಭ್ರಮಣೆಯ, ಯಾತ್ರೆಯ ಸಮಾನಾಂತರ ಶಬ್ದವಾಗಿ ಬಳಕೆಯಾಗುತ್ತಿದೆ. ನೂರು ಅರ್ಥಗಳನ್ನು ತನ್ನ ಗರ್ಭದಲ್ಲಡಗಿಸಿಕೊಂಡಿದೆ. ಇಂದಿನ ' ಪ್ರವಾಸ' ಅನಂತ ಮುಖಿಯಾದುದು, ಅನಂತ ಉದ್ದೇಶಗಳನ್ನೊಳಗೊಂಡಿರುವಂಥಾದ್ದು. ಈ ಕಾರಣದಿಂದಾಗಿಯು ಪ್ರವಾಸಿಗನ ಉದ್ದೇಶ, ಮನೋವೃತ್ತಿ ಹಾಗೂ ಪ್ರವೃತ್ತಿಗಳನ್ನವಲಂಬಿಸಿ ಪ್ರವಾಸದ ' ಸುಖ' ನಿಂತಿರುತ್ತದೆ. ಪ್ರವಾಸದ ಲಾಭಗಳನ್ನು ಗಮನದಲ್ಲಿರಿಸಿಕೊಂಡೇ ನಮ್ಮಲ್ಲಿ ' ಕೋಶ ಓದು, ದೇಶ ನೋಡು' ಪ್ರವಾಸವೂ ಶಿಕ್ಷಣದ ಒಂದು ಅಂಗ ಎಂಬೆಲ್ಲ ಮಾತುಗಳು ಪ್ರಚಲಿತವಾಗಿರುವಂತೆ ತೋರುತ್ತದೆ. ಗ್ರಂಥಾಭ್ಯಾಸದಿಂದ ಲಭ್ಯವಾಗುವ ಜ್ಞಾನಕೆ ಪೂರ್ಣತ್ವ ಬರುವುದು ಪ್ರವಾಸದಿಂದ ಎಂಬ ಮಾತು ನಿತ್ಯ ಸತ್ಯವಾಗಿದೆ. ಇನ್ನೂ ಮುಂದುವರಿದು ಹೇಳಬೇಕೆಂದರೆ ದೇಶ ಸುತ್ತುವಂಥ ವ್ಯಾಪಕ ಪ್ರವಾಸದಿಂದ ಲಭ್ಯವಾಗುವ ಲೋಕಜ್ಞಾನ, ಪ್ರಾಪಂಚಿಕ ಅರಿವು ನೂರು ಪುಸ್ತಕಗಳ ಪಠಿನದಿಂದಲೂ ಬರಲಾರದೆಂದರೂ ತಪ್ಪಾಗುವುದಿಲ್ಲ. ಪುಸ್ತಕದ ಜ್ಞಾನ, ಪ್ರವಾಸದ ಲೋಕಾನುಭವ ಬದುಕಿನ ಅನಂತತೆಯನ್ನು ಸಾಕ್ಷಾತ್ಕರಿಸಿಕೊಡುವ ದೀವಟಿಗೆಗಳೆಂದರೂ ತಪ್ಪಾಗುವುದಿಲ್ಲವೆಂದು ನನಗನ್ನಿಸುತ್ತದೆ.

ವಿದೇಶಿಯರಲ್ಲಿ ಪ್ರವಾಸ ಒಂದು ವಿಶಿಷ್ಟ ಹವ್ಯಾಸವಾಗಿ ಬೆಳೆದು ಬಂದಿದ್ದು, ಅವರ ಈ ಹವ್ಯಾಸದ ಫಲವಾಗಿ ಮಾನವ ಜನಾಂಗಕ್ಕೆ ಆಗಿರುವ ಮಹದುಪಕಾರಗಳನ್ನು ಸುಲಭವಾಗಿ ಮರೆಯಲಾಗುವುದಿಲ್ಲ. ಕೊಲಂಬಸ್, ವಾಸ್ಕೋಡಿಗಾಮ, ಫಾಹಿಯಾನ್, ಮೆಗಾಸ್ತನೀಸ್-ಮಂತಾದ ಪ್ರವಾಸಿಗರ ಸಾಹಸಮಯ ಪ್ರವಾಸಗಳಿಂದಾಗಿ ಜಗತ್ತಿನ ಎಷ್ಟೋ ದೇಶಗಳ ಬಾಗಿಲುಗಳು ತೆರೆಯಲ್ಪಟ್ಟುವಲ್ಲದೆ ದೇಶ ದೇಶಗಳ ಸಂಬಂಧಗಳು ವೃದ್ಧಿಯಾದುವು. ಒಂದು ಸಂಸ್ಕೃತಿ ಮತ್ತು ಇನ್ನೊಂದು ಸಂಸ್ಕೃತಿಯ ನಡುವಿನ ನಿಕಟತ್ವಕ್ಕೆ ಈ ಪ್ರವಾಸಗಳು ನಾಂದಿಯಾದುವು. ಅಂತೆಯೇ ನಮ್ಮ ದೇಶದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ರಾಜರುಗಳು ಯುದ್ಧ, ಧರ್ಮ ಪ್ರಚಾರ, ಕೀರ್ತಿಕಾಮನೆ, ರಾಜ್ಯ ಸ್ಥಾಪನೆ ಹಾಗು ಸ್ತ್ರೀ ಪ್ರೇಮಕ್ಕಾಗಿ ತಮ್ಮ ತಮ್ಮ ರಾಜ್ಯಗಳ ಗಡಿದಾಟಿ ಹೊರ ಪ್ರದೇಶಗಳತ್ತ ಹೋಗಿರುವ ಅಸಂಖ್ಯ ಉದಾಹರಣೆಗಳು ನಮ್ಮಲ್ಲಿವೆ. ಏನಿಲ್ಲವೆಂದರೂ, ಇತ್ತೀಚಿನ ವರ್ಷಗಳಲ್ಲಿ ಪ್ರವಾಸ ಒಂದು ಹವ್ಯಾಸ ಮಾತ್ರವಾಗಷ್ಟೇ ಉಳಿಯದೆ ಒಂದು ಉದ್ಯಮವಾಗಿಯೂ ರೂಪ ಪಡೆದುಕೊಂಡಿರುವುದರಿಂದ ಲಾಭದಾಯಕವಾದ ಮಾಧ್ಯಮವಾಗಿದೆ. ವ್ಯಕ್ತಿ ಪ್ರವಾಸದ ಹವ್ಯಾಸದಿಂದ ಹಿಡಿದು ಅಂತರರಾಷ್ಟ್ರೀಯ ಪ್ರವಾಸೋದ್ಯಮದವರೆಗೂ ಇದರ ಬಿತ್ತರ ವಿಕಸಿತಗೊಂಡಿದೆ. ಇದರಿಂದಾಗಿ ರಾಷ್ಟ್ರಗಳ ನಡುವಿನ ಸೇತುವೆಯಾಗಿ ಪ್ರವಾಸೋದ್ಯಮ ಬೆಳೆದುಕೊಂಡಿದೆ.

ಪ್ರವಾಸಕ್ಕೆ ನೂರು ಉದ್ದೇಶಗಳುಂಟು, ಧ್ಯೇಯಗಳುಂಟು. ಅಧ್ಯಯನ, ಅಧ್ಯಾಪನ, ವ್ಯಾಪಾರ, ರಾಜಕೀಯ, ವಿಹಾರ- ಇವೇ ಮುಂತಾದುವುಗಳಲ್ಲಿ ಯಾವುದು ಬೇಕಾದರೂ

ಪ್ರವಾಸಿಗನ ಧ್ಯೇಯವಾಗಿರಬಹುದು. ಪ್ರವಾಸ ಉದ್ದೇಶಯುಕ್ತವೂ, ನಿಯೋಜಿತವೂ ಆಗಿದ್ದ ಪಕ್ಷದಲ್ಲಿ ಅದು ಆನಂದದಾಯಕವಾಗುತ್ತದೆ ಎಂದು ಹೇಳಬಹುದಾದರೂ ಉದ್ದೇಶರಹಿತವಾದ ಪ್ರವಾಸವೇ ಹೆಚ್ಚು ಆನಂದದಾಯಕವಾದುದೆಂದು ಅಭಿಪ್ರಾಯ ಪಡುವವರೂ ಇಲ್ಲದಿಲ್ಲ. ಜಾನ್ ಮಾಸ್‌ಫೀಲ್ಡ್ ಹೇಳುವಂತೆ - It is good to be out on the rond and going one knows not where ಅಂದರೆ ಗೊತ್ತು ಗುರಿಯಿಲ್ಲದೆ ಹೊರಡುವುದರಲ್ಲಿ ಅಭೂತಪೂರ್ವವಾದ ಖುಷಿ ಇರುತ್ತದೆ. ನಮ್ಮಲ್ಲಿ ಉದ್ದೇಶಯುತ ಹಾಗೂ ಉದ್ದೇಶರಹಿತ ಪ್ರವಾಸಿಗರಿಬ್ಬರನ್ನೂ ನಾವು ಗುರುತಿಸಬಹುದಾಗಿದೆ. ಈ ದೃಷ್ಟಿಯಿಂದ ಪ್ರವಾಸಿಗರನ್ನು ಹಲವಾರು ಬಗೆಗಳಲ್ಲಿ ವಿಭಜಿಸಲವಕಾಶವುಂಟು - ಒಂದು, ನಿಶ್ಚಿತವಾದ ಕಾರ್ಯಕ್ರಮಗಳನ್ನು ರೂಪಿಸಿ ಅಂದರೆ ದಿನ, ರೈಲು, ಸಮಯ ಗೊತ್ತುಪಡಿಸಿ, ಆಗುವ ಖರ್ಚು-ವೆಚ್ಚಗಳನ್ನು ಅಂದಾಜು ಮಾಡಿಕೊಂಡು ಹೊರಡುವ ವ್ಯವಸ್ಥಿತ, ಪೂರ್ವಯೋಜಿತ ಕಾರ್ಯಕ್ರಮ. ಈ ಬಗೆಯ ಪ್ರವಾಸದಲ್ಲಿ ನೀವು ಯೋಚಿಸಿದ್ದೆಲ್ಲವನ್ನೂ ನೋಡಬಹುದಾದರೂ ಇದರಲ್ಲಿ ಪ್ರವಾಸದ 'ನಿಜ'ವಾದ ಮಜ ಹಾಗೂ ಅನುಭವಗಳು ಬರುವುದಿಲ್ಲವೆಂದು ಹವ್ಯಾಸಿ ಪ್ರವಾಸಿಗಳನೇಕರು ಅಭಿಪ್ರಾಯ ಪಡುತ್ತಾರೆ. ಇನ್ನೊಂದು , ಇದಕ್ಕೆ ತದ್ವಿರುದ್ಧವಾದುದು, ನಿಯೋಜಿಸಿಕೊಂಡಂಥ ಕಾರ್ಯಕ್ರಮಕ್ಕಿನ್ನ ಭಿನ್ನವಾದುದು. ಇಂಥ ಪ್ರವಾಸ ಅನುಭವಗಳ ಹೊಸ ಲೋಕವೊಂದನ್ನೇ ತೆರೆಯುತ್ತ, ತೆರೆಸಿಕೊಳ್ಳುತ್ತ ಹೋಗುತ್ತದೆ. ಮೊದಲದರಲ್ಲಿ ಸುಖ-ಸೌಲಭ್ಯಗಳು, ಎಲ್ಲ ಬಗೆಯ ಸುಖ-ಸೌಲಭ್ಯಗಳಿಗೆ ವ್ಯವಸ್ಥೆ ಮಾಡಿಕೊಳ್ಳಬಹುದಾದಂಥ ಸಂಬಾವ್ಯತೆಗಳಿದ್ದು ಎರಡನೆಯ ಬಗೆಯ ಪ್ರವಾಸದಲ್ಲಿ ಈ ಯಾವುದಕ್ಕೂ ಅವಕಾಶವಿರುವುದಿಲ್ಲ. ಒಂದು ದೃಷ್ಟಿಯಿಂದ ಮೊದಲ ಬಗೆಯ ಪ್ರವಾಸಗಳಲ್ಲಿ, ಅದರಲ್ಲೂ ವಿದೇಶಗಳಿಗೆ-ನಿಯೋಗದ ಸದಸ್ಯರಾಗಿ, ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಯಾಗಿ, ಸರಕಾರದ ಪ್ರತಿನಿಧಿಯಾಗಿ, ಅಧಿಕೃತ ಪ್ರವಾಸಕ್ಕೆಂದು ಹೊರಟಾಗ (ಕೆಲವೊಮ್ಮೆ) ತೀರ ಒಳ್ಳೆಯ ಅಂಶಗಳನ್ನೇ, ಆತಿಥೇಯರು ತೋರಿಸಿದ್ದಷ್ಟನ್ನೆ ನೋಡಿಕೊಂಡು, ಅವರು ತೋರುವ, ತೋರಿಸುವ ದೃಶ್ಯಗಳನ್ನು, ಸಂಸ್ಕೃತಿಯನ್ನು ಬೆರಗುಗಣ್ಣಲ್ಲಿ ನೋಡಿ ಅವುಗಳ ಬಗೆಗೆ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವ ಸಂಭಾವ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಉದಾಹರಣೆಗೆ ವಿದೇಶಗಳಿಂದ ನಮ್ಮದೇಶಕ್ಕೆ ಬರುವಂಥ ಅಧಿಕೃತ ಪ್ರವಾಸಿಗಳಿಗೆ ನಾವು ನಮ್ಮ ದೇಶದ ಅಂತರಂಗವನ್ನು ತೋರಿಸುತ್ತೇವೆಯೆ? ದೆಹಲಿ ಮತ್ತಿತರ ಪ್ರದೇಶಗಳ ಪಂಚತಾರಾ ಹೋಟೆಲ್‌ಗಳಲ್ಲಿ ಇಳಿದುಕೊಳ್ಳುವ ಅವರಿಗೆ ಆಗ್ರಾದ ತಾಜ್‌ನ್ನು, ಕಾಶ್ಮೀರದ ನಿಸರ್ಗವನ್ನು, ಬೃಂದಾವನದ ಕಾರಂಜಿಗಳನ್ನು ಸರಕಾರಿ ಬಂಧನದ ಹಲವಾರು ನಂದನಗಳನ್ನು ತೋರಿಸುವ ನಾವು ಅವರಿಗೆ ಇಲ್ಲಿನ ಬಿಕ್ಷುಕರನ್ನು, ಸ್ಲಂಗಗಳನ್ನು ದರಿದ್ರರನ್ನು, ಮನೆಮಠವಿಹೀನರನ್ನು, ಅನಕ್ಷರಸ್ಥರನ್ನು ತೋರಿಸುತ್ತೇವೆಯೇ? ಈ ಕೃತ್ರಿಮತೆ ಎಲ್ಲಿಯವರೆಗೆ ಅಂದರೆ ಹರಕಲು ಅಂಗಿಯ, ಎಂಜಲು ತಿನ್ನುವ ಒಬ್ಬನ ಚಿತ್ರ ವಿದೇಶಿಗಳಲ್ಲಿ ಪ್ರಕಟವಾದರೆ, ಚಲನಚಿತ್ರಗಳಲ್ಲಿ ತೋರಿಸಿದ್ದಾದರೆ ದೇಶದ ಗೌರವಕ್ಕೆ ಕುಂದು ಎಂದು ನಾವು ಹೇಗೆ ಭಾವಿಸುತ್ತೇವೆಯೋ ಹಾಗೆಯೇ ನಮ್ಮಲ್ಲಿನ ಅಧಿಕೃತ ಪ್ರವಾಸಿಗಳಿಗೆ ವಿದೇಶಗಳ ನಿಜವಾದ ಚಿತ್ರಗಳ ಅಂತರಂಗ-ಬಹಿರಂಗಗಳ ದರ್ಶನವಾಗುವ

ಸಂಭಾವ್ಯತೆಗಳು ಎಷ್ಟರ ಮಟ್ಟಿಗೆ ಇರುತ್ತವೆ ಎಂಬುದರ ಬಗೆಗೆ ಯೋಚಿಸಬೇಕಾಗುತ್ತದೆ. ಈ ಮಾತುಗಳನ್ನು ಬರೆಯುತ್ತಿರುವ ಉದ್ದೇಶ, ಮುಕ್ತವಾಗಿ ವಿಹರಿಸಬಲ್ಲ, ವಿಚಾರಿಸಬಲ್ಲ ಸ್ವತಂತ್ರ ಪ್ರವಾಸಿಗನಿಗೆ ಪ್ರವಾಸದ ನಿಜವಾದ ಆನಂದ, ಅನುಭವ, ಆ ದೇಶಗಳ ಸ್ಪಷ್ಟವಾದ, ಅಕೃತ್ರಿಮವಾದ ಜನಜೀವನದ ಪರಿಚಯವಾಗುತ್ತದೆ ಹಾಗೂ ಇಂಥ ಪ್ರವಾಸಿಗನ ಅನುಭವದ ಮೂಸೆಯಲ್ಲಿ ಮೂಡಿದ ವಿಚಾರಗಳು ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತವೆ ಎಂಬುದನ್ನು ಸ್ಪಷ್ಟ ಪಡಿಸುವುದಕ್ಕಾಗಿ.

ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ, ಪ್ರವಾಸ ಮನುಷ್ಯನ ಜಡತ್ವಕ್ಕೆ ಚಾಲನೆ ನೀಡುವ ಕ್ರಿಯಾಶೀಲತೆಯನ್ನು ತಂದುಕೊಂಡುವ, ವ್ಯಕ್ತಿಯ, ಸಮಾಜದ, ದೇಶದ ಅರಿವನ್ನು, ಅನುಭವವನ್ನು, ಅನಂತಗೊಳಿಸುವ, ಪರಸ್ಪರ ತಿಳುವಳಿಕೆಯನ್ನು ವೃದ್ಧಿಪಡಿಸುವುದರ ಮೂಲಕ ಮಾನವೀಯ ಸಂಬಂಧಗಳನ್ನು ಪುಷ್ಟಗೊಳಿಸುವ, ಅನಂತಗೊಳಿಸುವ ಒಂದು ಸಂಜೀವಿನಿ ಶಕ್ತಿ. ನಮ್ಮ ಜಗತ್ತಿನ ಎಲ್ಲ ರಾಷ್ಟ್ರಗಳ ಪೂರ್ವ ಪರಂಪರೆ, ಸಂಸ್ಕೃತಿಯಿಂದ, ನಾಗರೀಕತೆಗಳಿಂದ, ವರ್ತಮಾನದಲ್ಲಿ ಆಗುತ್ತಿರುವ ವಿಕಸನದಿಂದ ಅದಮ್ಯ ಸ್ಫೂರ್ತಿಯನ್ನು ಪಡೆದುಕೊಂಡು ಮುನ್ನಡೆಯಲು ಪ್ರವಾಸಿಗಳು ವಿಪುಲವಾದ ನೆಲಗಟ್ಟನ್ನು ಒದಗಿಸಿಕೊಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ' ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ, ಅನುಭವ ಸಂಪಾದನೆಯ ಕೋನದಿಂದ, ರಾಷ್ಟ್ರ ಪ್ರಗತಿಯ ನಿಮಿತ್ತದಿಂದ ಪ್ರವಾಸ ಅತ್ಯಗತ್ಯ. ನಮ್ಮ ಜನ ಪ್ರಪಂಚದ ಮುಂದುವರಿದ ರಾಷ್ಟ್ರಗಳಿಗೆ ಮೇಲಿಂದ ಮೇಲೆ ಹೋಗಬೇಕು, ಅಲ್ಲಿಯ ವಿದ್ಯಮಾನಗಳನ್ನು ಗ್ರಹಿಸಬೇಕು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಗಮನಿಸಬೇಕು. ಅಲ್ಲಿಯ ಪ್ರತಿಭಾವಂತ ತಜ್ಞರೊಡನೆ ವಿಚಾರ ವಿನಿಮಯ ಮಾಡಬೇಕು, ಸ್ವದೇಶಕ್ಕೆ ಹಿಂದಿರುಗಿದ ಮೇಲೆ ತಾವು ಕಲಿತದ್ದನ್ನು, ಕಂಡದ್ದನ್ನು ದೇಶದ ಆರೋಗ್ಯಕ್ಕೆ ಅನುಕೂಲವಾದದ್ದನ್ನು ಕಾರ್ಯರೂಪಕ್ಕೆ ತರಬೇಕು. ಈಗಂತು ಜಗತ್ತೆಲ್ಲ ಒಂದಾಗಿರುವಾಗ ಕೂಪಮಂಡೂಕ ನ್ಯಾಯದಂತೆ ತನ್ನ ದೇಶಕ್ಕೆ ಸೀಮಿತವಾಗಿ ಯಾರೂ ತೆಪ್ಪಗಿರುವಂತಿಲ್ಲ; ಇತರ ದೇಶಗಳಿಂದ ಸಹಾಯ ಪಡೆಯದೆ ಅವುಗಳ ಪ್ರಭಾವದಿಂದ ದೂರ ಸರಿದು ಯಾರು ಬಾಳುವೆ ನಡೆಸುವಂತಿಲ್ಲ.[2] ಪ್ರವಾಸಪ್ರವೃತ್ತಿ ಜಗತ್ತನ್ನು ಕಿರಿದು ಮಾಡಿರುವ ಇಂದಿನ ಸಂದರ್ಭದಲ್ಲಿ ಪ್ರವಾಸ ಕೈಗೊಳ್ಳುವ ವ್ಯಕ್ತಿ ತೆರೆದ ಮನಸ್ಸಿನವನಾಗಿರಬೇಕಾಗುತ್ತದೆ. ತನ್ನದೆಲ್ಲ ಉತ್ತಮ, ಸರ್ವ ಶ್ರೇಷ್ಠ ಎಂಬ ಅಹಮಿಕೆನ್ನು, ಪೂರ್ವಗ್ರಹವನ್ನು ದೂರವಿಟ್ಟು ಅವನು 'ಉತ್ತಮತಮ'ದ ಅನ್ವೇಷಕನಾಗಬೇಕು, ಜೊತೆಗೆ ವಸ್ತುನಿಷ್ಠತೆಗೆ ಹೆಚ್ಚು ಒತ್ತು ಕೊಡಬೇಕು. ಆ ಉತ್ತಮಿಕೆಯೊಡನೆ ತನ್ನದನ್ನು ತೌಲನಿಕವಾಗಿ ವಿಮರ್ಶಿಸಿಕೊಳ್ಳುವ ಮನೋವೃತ್ತಿ ರೂಢಿಸಿಕೊಂಡು ತನ್ನ ಗಳಿಸಿದ್ದರ ಅನುಭವಗಳಿಂದ ತಾನು ಬೆಳೆಯುವುದರ ಜೊತೆಗೆ ತನ್ನ ಸಮಾಜ ಮತ್ತು ದೇಶವನ್ನು ಬೆಳೆಸುವುದರತ್ತ ಗಮನ ಕೊಟ್ಟಾಗ ಮಾತ್ರ ಒಬ್ಬ ಕೈಗೊಂಡ ಪ್ರವಾಸಕ್ಕೆ ಗರಿ ಬರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಪ್ರವಾಸಕಥನವನ್ನು ಬರೆಯಲಿಕ್ಕೆ ದೇಶ ಸುತ್ತುವ, ಪ್ರವಾಸ ಕೈಗೊಳ್ಳುವುದಷ್ಟೇ ಪ್ರಮುಖ ಅಂಶವಾಗುವುದಿಲ್ಲ. ಪ್ರವಾಸ ಬೇರೆ ಪ್ರವಾಸ ಕಥನ ಅಥವಾ ಬರವಣಿಗೆ ಬೇರೆ. ಲೇಖನ ವೈಚಾರಿಕ ಪ್ರಜ್ಞೆಗೆ,

2 ವಿದೇಶಗಳಲ್ಲಿ ನಾಲ್ಕುವಾರ, ದೇಜಗೌ ಪುಟ. ೪

ಸಂತುಲನ ದೃಷ್ಟಿಗೆ ಸವಾಲನ್ನಾಕುವಂಥ ಕೆಲಸ ಬರವಣಿಗೆ. ಡಾ. ಹಾ. ಮಾ. ನಾಯಕರು ಅಭಿಪ್ರಾಯ ಪಡುವಂತೆ " ಪ್ರವಾಸ ಕಥನಗಳನ್ನು ಬರೆಯುವವನಿಗೆ ಎದುರಾಗುವ ಕೆಲವು ತೊಡಕುಗಳಲ್ಲಿ ಮುಖ್ಯವಾದುದೆಂದರೆ ತನ್ನದರ ಬಗೆಗೆ ಹಳಹಳಿಕೆ ಹಾಗೂ ಹೊಸದರ ಬಗ್ಗೆ ಅತ್ಯುತ್ಸಾಹ. ತಾನು ಕುರಿತು ಬರೆಯುತ್ತಿರುವ ದೇಶ, ಪರಿಸರಗಳನ್ನು ಅವನ ಮನಸ್ಸು ಅವನಿಗೆ ಅರಿವಿಲ್ಲದೆಯೇ ಅವನ ದೇಶ-ಪರಿಸರಗಳೊಡನೆ ಹೋಲಿಸುತ್ತಿರುತ್ತದೆ. ಇದರಿಂದ ಹಿರಿಮೆಯ ಹೊಗಳಿಕೆಯೊ, ಕೀಳ್ಮೆಯ ತೆಗಳಿಕೆಯೊ ಅನಿವಾರ್ಯವಾಗಿ ತಲೆ ಹಾಕುತ್ತದೆ. ಹೆಜ್ಜೆ ಹೆಜ್ಜೆಗೂ ತಿರುಗಿ ನೋಡುವುದು ಒಂದು ಚಟವಾಗುತ್ತದೆ. ಲೇಖಕ ಆತ್ಮ ನಿಷ್ಠೆಯನ್ನು ಬದಿಸರಿಸಿ ವಸ್ತು ನಿಷ್ಠೆಯನ್ನು ಪ್ರದರ್ಶಿಸಲು ತುಂಬ ಎಚ್ಚರ ವಹಿಸಬೇಕಾಗುತ್ತದೆ. ಅದು ಒಂದು ಸಾಧನೆ.[3] ಪ್ರವಾಸವನ್ನು ಕುರಿತಂಥ ಬರವಣಿಗೆಯಲ್ಲಿನ ಇತಿಮಿತಿಗಳನ್ನು ಈ ಮಾತುಗಳ ಸ್ಪಷ್ಟಪಡಿಸಿವೆ. ಭೂಪಟಗಳಲ್ಲಿ ದೇಶಗಳನ್ನು ಗುರುತಿಸುವಷ್ಟು ಸುಲಭವಾಗಿ ಹೇಗೆ ಪ್ರವಾಸವನ್ನು ಕೈಗೊಳ್ಳುವ, ದೇಶಗಳನ್ನು ಸುತ್ತುವುದು ಸಾಧ್ಯವಿಲ್ಲವೋ ಹಾಗೆಯೇ ಪ್ರವಾಸ ಮಾಡುವಷ್ಟು ಸುಲಭವಾಗಿ ಪ್ರವಾಸವನ್ನು ಕುರಿತು ಬರೆಯುವುದು ಸುಲಭವಲ್ಲ. ಪ್ರವಾಸವನ್ನು ಹವ್ಯಾಸವಾಗಿ ರೂಢಿಸಿಕೊಳ್ಳುವ ಸಾಧ್ಯವಾದರೆ ಬರವಣಿಗೆ ಆತನ ಪ್ರವೃತ್ತಿಯಾಗಿರದೇ ಹೋದಲ್ಲಿ ಅಂಥ ಪ್ರವಾಸಕಥನಗಳು ಆಪ್ಯಾಯಮಾನವಾಗದೆ ಹೋಗಿ ಓದುವರಿಗೆ ಒಂದು ಹೊರೆಯಾಗಿ ಬಿಡುವ ಸಾಧ್ಯತೆಗಳು ಹೆಚ್ಚಿವೆ. ಆಗ ಅದು ಗೈಡಾಗಿ, ನೋಟ್ಸಾಗಿ ಮಾರ್ಪಟ್ಟು ಸಾಹಿತ್ಯಿಕ ಮಹತ್ವವನ್ನು ಪಡೆದುಕೊಳ್ಳದೆ ಸೊರಗಿಬಿಡುತ್ತದೆ.

-2-

ಸಾಹಿತ್ಯದ ಇತರೆ ಪ್ರಕಾರಗಳಂತೆ ಪ್ರವಾಸ ಸಾಹಿತ್ಯವೂ ಕೂಡ ಭಾರತೀಯ ಸಾಹಿತ್ಯಕ್ಕೆ ಪಾಶ್ಚಾತ್ಯರ ಕೊಡುಗೆ. ಆದರೆ ಬೇರೆ ಪ್ರಕಾರಗಳಂತೆ ಹುಲುಸಾಗಿ ಬೆಳೆಯದಿರುವ ಪ್ರಕಾರ, ಪಾಶ್ಚಿಮಾತ್ಯರಲ್ಲೂ ಪ್ರವಾಸ ಸಾಹಿತ್ಯ ಬೆಳೆದದ್ದು ೧೭-೧೮ನೇ ಶತಮಾನದಲ್ಲಿ. ಆಂಗ್ಲ ಸಾಹಿತ್ಯಕಾರ ರಾಬರ್ಟ್ ಸ್ಟೀವ್‌ನ್‌ಸನ್‌ನ ' ಕತ್ತೆಯೊಡನೆ ಪ್ರವಾಸಗಳು 'ಕಳೆದ ಶತಮಾನದ ಉತ್ತರಾರ್ಧದಲ್ಲಿ ಫ್ರಾನ್ಸಿನಲ್ಲಿ ಆತ ಕೈಗೊಂಡ ಪ್ರವಾಸವನ್ನು ಬಣ್ಣಿಸುವ ಮಹತ್ವದ ಕೃತಿ. ಇದೇ ರೀತಿಯಾಗಿ ' ಗಲಿವರನ ಪ್ರವಾಸಗಳು' ' ಡಾನ್ ಕ್ವಿಕ್ಸೋಟ್' ಮುಂತಾದ ಕೃತಿಗಳೂ ಸಹ ಪ್ರವಾಸಿಗರ ಅನುಭವಗಳನ್ನು ತಮ್ಮಲ್ಲಿ ಸಶಕ್ತವಾಗಿ ದುಡಿಸಿಕೊಂಡಿರುವ ಕೃತಿಗಳು.

ಭಾರತೀಯರು ತಾವು ಕೈಗೊಂಡ ಪ್ರವಾಸಗಳಿಗೆ ಅಭಿವ್ಯಕ್ತ ನೀಡುವ ಕ್ರಿಯೆಗೆ ಪ್ರೇರಣೆಯನ್ನು ಪಾಶ್ಚಾತ್ಯದಿಂದ ಪಡೆದುಕೊಂಡರೆಂದು ಹೇಳುವರಾದರೂ ಇಲ್ಲಿನ ಪ್ರವಾಸ ಕಥನ ಶೈಲಿ, ನಿರೂಪಣಾವಿಧಾನಗಳಲ್ಲಿ ಮತ್ತು ಅನುಭಗಳಲ್ಲಿ ತಮ್ಮವೇ ಆದ ಸ್ವಂತಿಕೆಗಳಿವೆ. ಪ್ರಾಚೀನ ಭಾರತೀಯ ಸಾಹಿತ್ಯದಲ್ಲೂ ಸಹ ದೇಶದ ಭೌಗೋಳಿಕ, ಐತಿಹಾಸಿಕ, ರಾಜಕೀಯ ಸ್ಥಿತಿಗತಿಗಳನ್ನು ನಿರೂಪಿಸುವಂಥ ಕೃತಿಗಳು ರಚಿತವಾಗಿದ್ದು ಅವುಗಳಲ್ಲಿ ಪ್ರವಾಸಸಾಹಿತ್ಯದ ಸ್ಥೂಲ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಆದರೂ ಭಾರತೀಯ ಸಾಹಿತ್ಯದಲ್ಲಿ ಪ್ರವಾಸ ಸಾಹಿತ್ಯವೆಂಬ ಸಾಹಿತ್ಯ ಪ್ರಕಾರ ಜನ್ಮ ಪಡೆದು

3 ಗ್ರಂಥಲೋಕದಲ್ಲಿನ ಲೇಖನ, ಡಾ. ಹಾ. ಮಾ. ನಾಯಕ, ಪುಟ. ೬ ೪

ಸ್ವತಂತ್ರ ಅಸ್ತಿತ್ವವನ್ನು ಪಡೆಯುವಂಥ ಸ್ಥಿತಿಗೆ ಬಂದದ್ದು ಈ ಶತಮಾನದ ಪೂರ್ವಾರ್ಧದಲ್ಲಿ, ವಿಕಸಿತಗೊಂಡಿದ್ದು ಉತ್ತರಾರ್ಧದಲ್ಲಿ ಈ ದಶಕಗಳಲ್ಲಿ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿರುವ ಪ್ರವಾಸ ಸಾಹಿತ್ಯ ತನ್ನ ಸ್ವಂತ ಅಸ್ತಿತ್ವವನ್ನು ಮೆರೆಯಬಲ್ಲಷ್ಟು ಬೆಳೆದಿದೆ ಎಂದು ಹೇಳಬಹುದಾಗಿದೆ. ಪ್ರವಾಸಕ್ಕೆ ಜ್ಞಾನ ವಿಜ್ಞಾನಗಳು ನೀಡಿದ ಇಂಬುಗಳು ಹೆಚ್ಚಾದಂತೆ ಜನಗಳ ಪ್ರವಾಸಿ ಪ್ರವೃತ್ತಿಯೂ ದಿನೇ ದಿನೇ ಗಣನೀಯವಾಗಿ ಏರುತ್ತ ಬಂದು ಪ್ರವಾಸಿಗರ ಪ್ರವಾಸಾನುಭವಗಳು ವರ್ಣನೆಗಳಾಗಿ, ಪರಿಚಯಾತ್ಮಕ ಪ್ರಬಂಧಗಳಾಗಿ, ತಮ್ಮ ಅನುಭವಗಳ ಕೇಂದ್ರ ಬಿಂದುಗಳಾಗಿ ಹೀಗೆ ವೈವಿಧ್ಯಮಯ ರೂಪದಲ್ಲಿ ಪ್ರವಾಸ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ವಿಕಸಿತಗೊಂಡಿರುವುದನ್ನು ಕಾಣಬಹುದಾಗಿದೆ.

ಕನ್ನಡದ ಸಂದರ್ಭದಲ್ಲಿ ಸಹ ಅಷ್ಟೆ. ಇಲ್ಲೂ ಈ ಶತಮಾನದ ಉತ್ತರಾರ್ಧದಲ್ಲಿ ಈ ಪ್ರಕಾರಕ್ಕೆ ನಿಶ್ಚಿತವಾದಂಥ ಒಂದು ನೆಲೆಗಟ್ಟು ದೊರೆಯಿತೆಂದು ಹೇಳಬಹುದು. ಈ ಶತಮಾನದ ಪೂರ್ವಾರ್ಧದಲ್ಲಿ ಅಂದರೆ ೧೯೨೫ರಲ್ಲಿ ಪ್ರಕಟವಾದ ವೀ. ಸಿಯವರ 'ಪಂಪಾಯಾತ್ರೆ' ಯನ್ನು ಕನ್ನಡದ ಮೊಟ್ಟ ಮೊದಲ ಪ್ರವಾಸ ಕಥನ ಎಂದು ಹೇಳಲಾಗುವುದಾದರೂ, ೧೮೯೦ರಷ್ಟು ಹಿಂದೆಯೇ ಉತ್ತರ ಕನ್ನಡದ ಕೆ. ವೆಂಕಟರಮಣ, ಶಾಸ್ತ್ರಿ, ಸೂರಿ ಇವರು ಬರೆದ ' ದಕ್ಷಿಣ ಭಾರತಯಾತ್ರೆ' ಕನ್ನಡದಲ್ಲಿ ಪ್ರಕಟವಾದ ಮೊಟ್ಟ ಮೊದಲ ಪ್ರವಾಸ ಕಥನ ಎಂದು ಸ್ಥೂಲ ಅರ್ಥದಲ್ಲಿ ಹೇಳಬಹುದು. ಈ ಗ್ರಂಥ ಮತ್ತು ಅನಂತರ ಕನ್ನಡದಲ್ಲಿ ಪ್ರಕಟವಾದ ಬಹಳಷ್ಟು ಗ್ರಂಥಗಳು ಅವುಗಳ ಹೆಸರುಗಳೇ ಸೂಚಿಸುವಂತೆ ಯಾತ್ರಾಸ್ಥಾನಗಳ ಹಾಗೂ ಪ್ರಸಿದ್ಧ ಪರಿಚಯಾತ್ಮಕ ಗ್ರಂಥಗಳಾಗಿದ್ದು, ಇತಿವೃತ್ತಾತ್ಮಕತೆಯಿಂದೊಡಗೂಡಿವೆ. ಭಾರದ್ವಜರ ' ಸಚಿತ್ರ ಭಾರತ ಯಾತ್ರೆ' ನ. ರಾ. ಗಲಗಲಿಯವರ ' ಬದರೀನಾರಾಯಣದರ್ಶನ' ಜೀ. ವೆಂಕಟಯ್ಯನವರ ' ಚಿನ್ನದ ಗಿರಿಯಾತ್ರೆ ' 'ಬನದ ಸೆರಗು', ಬಿ. ಶಿವಮೂರ್ತಿ ಶಾಸ್ತ್ರಿಯವರ ' ಕರ್ನಾಟಕ ಸಂದರ್ಶನ', ಡಿ. ಟಿ. ರಂಗಸ್ವಾಮಿಯವರ ' ಭಾರತ ಯಾತ್ರೆ ' ಮ ನ ಮೂರ್ತಿಯವರ'' ನಮ್ಮ ಪ್ರವಾಸ ಮತ್ತು ನಾವು ಕಂಡ ಬೆಂಗಳೂರು', ಎಚ್. ಆರ್. ನಾಗರಾಜರ '' ಹಿಮಾಚಲ ಪ್ರದೇಶ' ಎಂ. ವೆಂಕಟಾಚಲ ಭಟ್ಟರ ' ಕಾಶ್ಮೀರ ಅಮರನಾಥಯಾತ್ರೆ', ಕೆ. ಚೆನ್ನಬಸಪ್ಪ ನವರ ದಕ್ಷೀಣೇಶ್ವರ ದರ್ಶನ, ಗುರುನಾಥ ಜೌಶಿಯವರ ' ಕಾಶ್ಮೀರ ಪ್ರವಾಸ ' ಶಾಂತಾದೇವಿ ಮಾಳವಾಡರ 'ಶ್ರೀಗಿರಿಯಿಂದ ಹಿಮಗಿರಿಗೆ' ಮುಂತಾದ ಇನ್ನೂ ಹತ್ತು ಹಲವಾರು ಗ್ರಂಥಗಳು ಆಯಾಯಾ ಸ್ಥಳ ಪರಿಚಯಗಳಿಗೆ ಪ್ರಾಧಾನ್ಯತೆಯನ್ನು ಕೊಡುವ ಗ್ರಂಥಗಳಾಗಿದ್ದು ಸಾಹಿತ್ಯಕ ಮೌಲ್ಯಗಳ ಕೊರತೆ ಇಲ್ಲಿನ ಪ್ರಮುಖ ಅಂಶವಾಗಿದೆ. ಇಂಥ ಕೆಲವು ಪರಿಚಯಾತ್ಮಕ ಗ್ರಂಥಗಳ ಮಧ್ಯೆಯೂ ಕೆಲವು ಇದೇ ಬಗೆಯ ಕೃತಿಗಳು ತಮ್ಮ ಅಪೂರ್ವ ಕಥನಕಲೆಯಿಂದಾಗಿ ಗಮನ ಸೆಳೆಯುವಂಥವಿವೆ. ಎಸ್. ವಿ. ಕೃಷ್ಣಮೂರ್ತಿರಾಯರ ' ದಿಲ್ಲಿ ಪತ್ರಗಳು' ಗೋರೂರು ರಾಮಸ್ವಾಮಿಅಯ್ಯಂಗಾರರ ' ಸೌಂದರ್ಯದ ಸಾನ್ನಿಧ್ಯದಲ್ಲಿ', ವೆಂ. ಮು. ಜೋಶಿಯವರ ' ಸೈನಿಕ ಉವಾಚ', ಎನ್. ಎಸ್. ಗದಗಕರ ಅವರ ' ಗೋವಾಯಾತ್ರೆ' ಹಿರೇಮಲ್ಲೂರು ಈಶ್ವರನ್ ಅವರ' ಕವಿ ಕಂಡ ನಾಡು' ಕೆ. ಬಿ. ಪ್ರಭುಪ್ರಸಾದರ '

ದೇಗುಲಗಳ ದಾರಿಯಲ್ಲಿ' , ಹಾ. ರಾ. ಪುರೋಹಿತರ 'ರಾಮೇಶ್ವರ ಕನ್ಯಕುಮಾರಿ ದರ್ಶನ', ಮಾಸ್ತಿ ನರಸಿಂಹರಾಯರ 'ಕನ್ನಡಯಾತ್ರೆ ', ಸಿದ್ದವ್ವನಹಳ್ಳಿ ಕೃಷ್ಣಶರ್ಮರ ' ವರ್ಧಾಯಾತ್ರೆ', ' ಭೂದಾನಯಜ್ಞ ಯಾತ್ರೆ ಈ ಬಗೆಯ ಕೃತಿಗಳಾಗಿದ್ದು ಇಲ್ಲಿನ ಕೆಲವು ಪುಸ್ತಕಗಳನ್ನು ಓದುವುದಂತೂ ನಿಜಕ್ಕೂ ಆಪ್ಯಾಯಮಾನವಾದ ಖುಷಿಯನ್ನು ಕೊಡುತ್ತದೆ.

ಕನ್ನಡ ಪ್ರವಾಸ ಸಾಹಿತ್ಯ ಇತ್ತೀಚಿನ ವರ್ಷಗಳಲ್ಲಿ ತನ್ನೆಲ್ಲ ಸೊಗಸು-ಸೌಂದರ್ಯಗಳೊಂದಿಗೆ ಅರಳಿರುವುದಕ್ಕೆ ಇದೊಂದು ಗಂಭೀರ ಪ್ರಕಾರವೆಂದು ಪರಿಭಾವಿಸಿ ನಮ್ಮ ಹಿರಿಯ ಹಾಗೂ ಮಹತ್ವದ ಲೇಖಕರು ಈ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿರುವುದು ಕಾರಣವಾಗಿದೆ. ಪ್ರವಾಸ ಸಾಹಿತ್ಯದ ಆರಂಭಿಕ ಹೆಜ್ಜೆಗಳು ದೇಶದ ಮೂಲೆ ಮೂಲೆಯಲ್ಲಿನ ಯಾತ್ರಾಕ್ಷೇತ್ರಗಳ ಪರಿಭ್ರಮಣೆಯ ವೃತ್ತಾಂತಗಳಾದರೆ ಇತ್ತೀಚಿನ ದಶಕಗಳಲ್ಲಿನ ನಮ್ಮ ಕನ್ನಡ ಪ್ರವಾಸ ಸಾಹಿತ್ಯ ದೇಶದ ಗಡಿದಾಟಿ ವಿದೇಶಗಳ ವಿಶಿಷ್ಟ ಅನುಭವಗಳನ್ನು ಆತ್ಮೀಕರಿಸಿಕೊಳ್ಳುವುದಕ್ಕಾಗಿ ಅತ್ತ ಹಾರಿರುವುದನ್ನು ಗಮನಿಸಬೇಕಾಗಿದೆ. ವಿಭಿನ್ನ ವಿದೇಶಗಳ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಅಲ್ಲಿನ ಜೀವನ ವಿಧಾನಗಳನ್ನು ಕುರಿತಂತೆ ಬಂದಿರುವ, ಬರುತ್ತಿರುವ ಈ ಪ್ರವಾಸ ಸಾಹಿತ್ಯ ನಾಡಿನ ಬದುಕಿಗೆ ಹೊಸದಾದ ಹಾಗೂ ತೌಲನಿಕ ದೃಷ್ಟಿಯನ್ನು ದಯಪಾಲಿಸಿದೆ. ಈ ದಿಕ್ಕಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾಗಿರುವ ಕೆಲವು ಮಹತ್ವದ ಗ್ರಂಥಗಳಲ್ಲಿ ವಿ. ಕೃ. ಗೋಕಾಕರ ' ಸಮುದ್ರಾದಾಚೆಯಿಂದ ' 'ಇಂದಿಲ್ಲ ನಾಳೆ', 'ಸಮುದ್ರದೀಚೆಯಿಂದ', ಶಿವರಾಮ ಕಾರಂತರ ' ಅಪೂರ್ವ ಪಶ್ಚಿಮ', ಅಬೂವಿಂದ ಬರಾಮಕ್ಕೆ', 'ಪತಾಳಕ್ಕೆ ಪಯಣ ಕೃಷ್ಣಾನಂದ ಕಾಮತರ ' ನಾನೂ ಅಮೆರಿಕೆಗೆ ಹೋಗಿದ್ದೆ', ಬಿ. ಜಿ. ಎಲ್. ಸ್ವಾಮಿಯವರ ' ಅಮೆರಿಕೆಯಲ್ಲಿ ನಾನು', ಕಾಶಿ ಹರಿದಾಸ ಭಟ್ಟರ' ಇತಾಲಿಯಾ ನಾನು ಕಂಡಂತೆ', ರಾಶಿಯವರ ' ಕೊರವಂಜಿಯ ಪಡುವಣಯಾತ್ರೆ' ಎಂ. ವೀರಪ್ಪನವರ ' ಸಯೇನರ ಜಪಾನ್", ದೇಜಗೌರವರ ' ವಿದೇಶದಲ್ಲಿ ನಾಲ್ಕುವಾರ 'ಏಸುವಿಭೀಷಣರ ನಾಡಿನಲ್ಲಿ', ಪ್ರವಾಸಿಯ ದಿನಚರಿ ಆಫ್ರಿಕಾ ಯಾತ್ರೆ, ಜಿ. ಎಸ್. ಶಿವರುದ್ರಪ್ಪನವರ ' ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಬಸವರಾಜ ಕಟ್ಟೀಮನಿಯವರ 'ನಾನು ಕಂಡ ರಶೀಯಾ, ಕೆ. ಅನಂತರಾಮು ಅವರ ' ಉದಯ ರವಿಯ ನಾಡಿನಲ್ಲಿ', ಡಾ. ಹಿ. ಎಸ್. ಶಂಕರ ಅವರ ' ನೆನಪಿನ ಸುಳಿಯಲ್ಲಿ ಲಂಡನ್", ಎಚ್. ಶ್ರೀನಿವಾಸಯ್ಯನವರ 'ನಾಕಂಡ ಜರ್ಮನ್", ಕೆ. ವಿಶ್ವನಾಥ ರೈ ಅವರ ' ಲಂಕಾದರ್ಶನ', ಎನ್. ಲಕ್ಷ್ಮೀನಾರಾಯಣರ ' ನಿರ್ದೇಶಕನ ವಿದೇಶ ಯಾತ್ರೆ ', ಚಲನ ಚಿತ್ರ ಮಹಾನೌಕೆ, ಎಚ್. ವಿ. ಶ್ರೀರಂಗರಾಜು ಅವರ 'ಸೋವಿಯತ್ ದಿನಚರಿ', ಗೊರೂರರ 'ಅಮೆರಿಕೆಯಲ್ಲಿ ಗೊರೂರು', ಎ. ಎನ್. ಮೂರ್ತಿರಾಯರ ' ಅಪರವಯಸ್ಕನ ಅಮೆರಿಕಾಯಾತ್ರೆ - ಮುಂತಾದ ಕೃತಿಗಳು ಕನ್ನಡದ ಕಣ್ಣುಗಳಿಂದ ವಿದೇಶಗಳನ್ನು ಕಂಡಿದ್ದು ಆಯಾಯಾ ದೇಶಗಳ ಒಳಿತು-ಕೆಡಕುಗಳ ನಲಿವಿನ ನಂದನಗಳ, ನೋವಿನ ಅಂತರಂಗಗಳ ಪರಿಚಯವನ್ನು ಸಾಕಷ್ಟು ವಿಸ್ತೃತವಾಗಿಯೇ ಮಾಡಿಕೊಡುತ್ತದೆ. ನಮ್ಮ ಪ್ರವಾಸ ಸಾಹಿತ್ಯವನ್ನು ಸಮೃದ್ಧಗೊಳಿಸುವುದರಲ್ಲಿ ಮೇಲೆ ಉಲ್ಲೇಖಿಸಿರುವ ಗ್ರಂಥಗಳು ಉಲ್ಲೇಖನಾರ್ಹ ಸಹಕಾರ ನೀಡಿದೆ. ಆದರಲ್ಲೂ ಕೆಲವು ಗ್ರಂಥಗಳಂತೂ ಈ ಪ್ರಕಾರದ ಬರವಣಿಗೆಯ ಆದರ್ಶಗಳಾಗಿ ನಿಲ್ಲುತ್ತವೆ. ಇದೇ

ಸಂದರ್ಭದಲ್ಲಿ ಓದುಗರ ಮನಸೆಳೆಯುವ ರಸಿಕ ಪುತ್ತಿಗೆಯವರ ' ಕನ್ನಡದ ಕಣ್ಣು ಉತ್ತರದ ಮಣ್ಣು' ರಾವ್ ಬಹದ್ದೂರರ ' ನಾನು ಕಂಡ ಬಂಗ್ಲಾದೇಶ', ' ಕೃಷ್ಣಾದರ್ಶನ ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯುವಂಥ ಕೃತಿಗಳು ಇಲ್ಲಿ ಉಲ್ಲೇಖಿಸಿರುವ ಕೆಲ ಮಹತ್ವದ ಪ್ರವಾಸಗ್ರಂಥಗಳ ಲೇಖಕರು ಪ್ರಸಿದ್ಧರಾದವರು ಹಾಗೂ ತಮ್ಮ ತಮ್ಮ ಕ್ಷೇತ್ರಗಳ ಅಧಿಕಾರಿ ವಿದ್ವಾಂಸರುಗಳು ಈ ಪ್ರವಾಸ ಲೇಖಕರಲ್ಲಿ ಕವಿಗಳಿದ್ದಾರೆ, ಕಾದಂಬರಿಕಾರರಿದ್ದಾರೆ, ವಿಜ್ಞಾನಿಗಳಿದ್ದಾರೆ, ಶಿಕ್ಷಣವತ್ತರಿದ್ದಾರೆ, ವೈದ್ಯರಿದ್ದಾರೆ, ಅಧ್ಯಾಪಕರಿದ್ದಾರೆ. ಇವರೆಲ್ಲ ವಿದೇಶಗಳಿಗೆ ಹಾಗೂ ದೇಶದ ಇತರೆ ಭಾಗಗಳಿಗೆ ನಾನಾ ಕಾರ್ಯಗಳ ನಿಮಿತ್ತ ಹೋಗಿಬಂದಿದ್ದು ತಮ್ಮ ಸೂಕ್ಷ್ಮ ವಿವೇಚನಾ ದೃಷ್ಟಿಯಿಂದ ತಾವಿದ್ದ ದಿನಗಳಲ್ಲಿ ಕಂಡ ಅಲ್ಲಿನ ಜೀವನವನ್ನು ವಿವೇಚಿಸಿ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ.

ಈ ಮಧ್ಯೆ ವಿಶ್ವ ಪ್ರವಾಸಿಗರ ಕೆಲವು ಪ್ರಸಿದ್ಧ ಪ್ರವಾಸ ಕಥನಗಳು ವಿಶಿಷ್ಟವಾದುವುಗಳಾಗಿದ್ದು ಅವುಗಳನ್ನು ಕನ್ನಡಕ್ಕೆ ಅನುವಾದಿಸುವದರ ಮೂಲಕ ನಮ್ಮ ಅನುವಾದಕರು ಕನ್ನಡ ಪ್ರವಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಇವುಗಳಲ್ಲಿ ಎಚ್. ಎಲ್. ನಾಗೇಗೌಡರ ಮಾರ್ಕೋಪೋಲೋನ ಪ್ರವಾಸಗ್ರಂಥ', 'ಪ್ರವಾಸಿ ಕಂಡ ಇಂಡಿಯಾ'ದ ನಾಲ್ಕು ಸಂಪುಟಗಳು ಜಿ. ಪಿ. ರಾಜರತ್ನಂರವರ ' ಚೀನಾದೇಶದ ಬೌದ್ಧ ಯಾತ್ರಿಕರು' 'ಫಾಹಿಯಾನನ ಕ್ಷೇತ್ರಯಾತ್ರೆ' ಪ್ರಬೇಧ ಕುಮಾರ್ ಸನ್ಯಾಲ್‌ರವರ ಕೃತಿ ಮಹಾಪ್ರಸ್ಥಾನದ ಪಥದಲ್ಲಿ ' ಯ ಬಂ. ಕೆ. ಭಾರತೀರಮಾಣಾಚಾರ್ಯರ ' ಕನ್ನಡ ಅನುವಾದ ಕೆ. ಪಿ. ಎಸ್. ಮೆನನ್‌ರವರ ಪ್ರಸಾನುಭವಗಳ ಕನ್ನಡ ಅನುವಾದ ' ವಿಶ್ವಪರ್ಯಟನ ಇ. ಪಿ. ಮೆನನ್ ಹಾಗೂ ಸತೀಶ್ ಕುಮಾರರ ' ಫುಟ್ ಪ್ರಿಂಟ್ಸ್ ಆನ್ ಫ್ರೆಂಡ್ಲಿ ರೋಡ್ಸ್' ತಿ. ತಾ.ಶರ್ಮರ 'ಪ್ರಪಂಚ ಪರ್ಯಟನೆ- ಪಾದಯಾತ್ರೆಯಲ್ಲಿ' ಎಂಬ ಹೆಸರಿನ ಅನುವಾದ ಕೆಲವು ಮಹತ್ವದ ಗ್ರಂಥಗಳಾಗಿವೆ.

ಈ ಹಿನ್ನಲೆಯಲ್ಲಿ ಕನ್ನಡ ಪ್ರವಾಸ ಸಾಹಿತ್ಯ ಅನುಭವಗಳ ಶ್ರೀಮಂತಿಕೆಯಿಂದ, ಸೂಕ್ಷ್ಮ, ಆಲೋಚನಾ ದೃಷ್ಟಿಯಿಂದ ಹುಲುಸಾಗಿ ಬೆಳೆದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

-3-

ಕನ್ನಡದ ಮಹತ್ವಪೂರ್ಣ ಹಿರಿಯ ಲೇಖಕರಲ್ಲೊಬ್ಬರಾದ ಡಾ. ದೇಜಗೌ ಕನ್ನಡ ಪ್ರವಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಒಬ್ಬರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾಗ ಕೈಗೊಂಡ ಹೊರದೇಶಗಳ ಪ್ರವಾಸ ವೃತ್ತಾಂತಗಳನ್ನು ತಮ್ಮ 'ವಿದೇಶಗಳಲ್ಲಿ ನಾಲ್ಕು ವಾರ, 'ಪ್ರವಾಸಿಯ ದಿನಚರಿ', 'ವಿಸುವಿಭೀಷಣರ ನಾಡಿನಲ್ಲಿ' ಮತ್ತು 'ಆಫ್ರಿಕಾಯಾತ್ರೆ' ಗ್ರಂಥಗಳಲ್ಲಿ ಬಹಳ ಆತ್ಮೀಯತೆ ಹಾಗೂ ವಸ್ತುನಿಷ್ಠವಾಗಿ ವರ್ಣಿಸಿದ್ದು, ಇವುಗಳಲ್ಲಿ ಆಯಾಯಾ ದೇಶಗಳ ಬಗೆಗೆ ಶ್ರೀಸಾಮಾನ್ಯನಿಗೆಂತೋ ಅಂತೆಯೇ ಬುದ್ಧಿಜೀವಿಗಳೂ ಚಿಂತನ ಮಂಥನ ಮಾಡಬೇಕಾದಂಥ ವೈಚಾರಿಕ ಸಾಮಗ್ರಿಯನ್ನು ನೀಡಿದ್ದಾರೆ. ವಿಭಿನ್ನ ದೇಶಗಳ, ಜೀವನ ವಿಧಾನಗಳನ್ನು ವಿವೇಚನೆಯ ನಿಕಷಕ್ಕೆ ಒಳಗುಪಡಿಸುತ್ತ ತೌಲನಿಕ ದೃಷ್ಟಿಯಿಂದ ಸಮೀಕ್ಷಿಸುವ ಈ ಗ್ರಂಥಗಳು ಅವುಗಳ ಸಮಗ್ರ ದರ್ಶನವನ್ನು ಮೂಡಿಸುತ್ತವೆ. ಅಲ್ಲಿನ

ಒಳಿತು-ಕೆಡಕು, ರೀತಿ ರಿವಾಜುಗಳು, ಕಲೆ, ಸಾಹಿತ್ಯ, ಸಂಸ್ಕೃತಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರದ ಸಿದ್ಧಿ- ಸಾಧನೆಗಳನ್ನು ಕುರಿತು ಬಹಳಷ್ಟು ಜ್ಞಾನಾತ್ಮಕವಾದಂಥ ಮಾಹಿತಿ ವಿಶ್ಲೇಷಣೆಗಳನ್ನು ಮುಂದಿರಿಸುವಂತೆ, ಸ್ವಂತಃ ಗುಡಿಸಿಲಿನಿಂದ ಬಂದ ದೇಜಗೌ ಕುಲಪತಿಯ ಸ್ಥಾನದ ಮರ್ಯಾದಿಗೆ, ಶಿಷ್ಟತೆಗೆ ಅಂಟಿಕೊಂಡು ದೇಶಗಳ ಹೊಸ ಮೆರಗು-ತಳಕು- ಬಿನ್ನಾಣಗಳನ್ನು ಮಾತ್ರವೇ ಕಂಡು ಬೆಕ್ಕಸಬೆರಗಾಗಿ ಬಿಡದೆ ಬಹಳಷ್ಟು ಕಡೆ ಆ ದೇಶಗಳ ಹಳ್ಳಿಗಾಡು ಪ್ರದೇಶಗಳಿಗೂ ಸ್ವಇಚ್ಛೆಯಿಂದ ಭೇಟಿಕೊಟ್ಟು ಅಲ್ಲಿನ ಶ್ರೀಸಾಮಾನ್ಯನ ಬದುಕನ್ನು ಕಾಣುತ್ತ ರೈತರ ದುಡಿಮೆಯನ್ನು, ಕಾರ್ಮಿಕರ ಬವಣೆಯನ್ನು, ಬೆವರಿಗೆ ಅವರು ನೀಡುವ ಮಹತ್ವವನ್ನು ಪರಿಶೀಲಿಸುತ್ತ ಅವುಗಳನ್ನು ತೀವ್ರವಾಗಿ ಮೆಚ್ಚುವ ದೇಜಗೌ ಅವುಗಳಿಲ್ಲದರ ಹಿನ್ನೆಲೆಯಲ್ಲಿ ಭಾರತದ ವಾಸ್ತವ ಪರಿಸ್ಥಿತಿಯನ್ನೂ ಹೋಲಿಸುತ್ತ ಸಾಗುವ ರೀತಿ ಅವರ ಬರವಣಿಗೆಯ ಮೌಲ್ಯವನ್ನು ಹೆಚ್ಚಿಸುತ್ತ ಹೋಗುತ್ತದೆ. ಜೊತೆಗೆ ದೇಜಗೌರವರ ಈ ಪ್ರವಾಸದ ಬರವಣಿಗೆಗಳಲ್ಲಿ ನಾವು 'ಅದೊಂದು ಸಮಸ್ಯೆಯೇ' ಎಂದು ಭಾವಿಸುವ ಅಂಶಗಳೂ ಇತರ ಅಂಶಗಳಂತೆಯೇ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಹೀಗೆ ಅವರು ಭೇಟಿ ಕೊಟ್ಟ ದೇಶಗಳ ಬದುಕಿನಲ್ಲಿ ಒಬ್ಬ ಸಾಮಾನ್ಯ ಪ್ರವಾಸಿಗ ಕಾಣಬಹುದಾದಕ್ಕಿನ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಲು ಹವಣಿಸುವ ಕುತೂಹಲ ಪೂರ್ಣ ದೃಷ್ಟಿಯ ಪರಿಣಾಮದಿಂದಾಗಿ ಓದುಗರಿಗೆ ಆ ದೇಶಗಳನ್ನು ಕುರಿತಂತೆ ಒಂದು ವಿಶಾಲ ಹಂದರವನ್ನು ನೀಡುವುದರಲ್ಲಿ ದೇಜಗೌ ಯಶಸ್ವಿಯಾಗಿದ್ದಾರೆ ಎಂದು ಒಟ್ಟಾರೆ ಹೇಳಬಹುದಾಗಿದೆ.

ದೇಜಗೌ ವಿದೇಶ ಪ್ರವಾಸ ಕೈಗೊಳ್ಳುವರೆಂಬ ಸುದ್ದಿಯೊಡನೆಯೇ ದೇಜಗೌ ಕರ್ನಾಟಕದಲ್ಲಿ ವಾದ-ವಿವಾದಗಳೆದ್ದು ಸುದ್ದಿಯ ಕೇಂದ್ರಬಿಂದುವಾಗಿದ್ದವರು. ತಮಗೆ ವಿದೇಶ ಪ್ರವಾಸಬೇಕೆ? ಬೇಡವೆ? ಎಂಬ ವಿಷಯಗಳ ಬಗ್ಗೆ ದೇಜಗೌ ಆಡಿದರೆನ್ನಲಾದ ಮಾತುಗಳು ಸಾಕಷ್ಟು ಚರ್ಚೆಗೆ ಕಾರಣವಾಗಿದ್ದುವು, ಪತ್ರಿಕೆಗಳಲ್ಲಿ ಚರ್ಚಿತವಾದುವು. ಬರಿ ಹೊರತುವಾಗಷ್ಟ ಅಲ್ಲ ವಿದೇಶ ಪ್ರವಾಸದಿಂದ ಬಂದ ಮೇಲೂ ಪ್ರವಾಸ ಕಥನದ ವಿಚಾರಗಳು ಸಾಕಷ್ಟು ಚರ್ಚಿತವಾದುವು. ಹೀಗೆ ಕರ್ನಾಟಕದಲ್ಲಿ ದೇಜಗೌರವರ ಪ್ರವಾಸ ಬಿಸಿಬಿಸಿ ಸುದ್ದಿಯಾದಷ್ಟು ಬೇರಾವ ಪ್ರವಾಸವೂ ಆಗಲಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣ ದೇಜಗೌ ವಿದೇಶ ಪ್ರವಾಸವನ್ನು ಅಲ್ಲಗೆಳೆದಿದ್ದಾರೆಂದು ಹೇಳಲಾಗುವ ಮಾತುಗಳೇ ಆಗಿವೆ. ಆದರೆ ತಾವು ಈ ಬಗೆಯ ಮಾತುಗಳನ್ನಾಡಿಲ್ಲವೆಂದು ತಮ್ಮ ಮೊದಲ ಪುಸ್ತಕದ ಆರಂಭದಲ್ಲಿ ಈ ಸಂಬಂಧದ ಚರ್ಚೆಮಾಡುತ್ತ ಹೇಳಿದ್ದಾರೆ. " ಪ್ರವಾಸದ ಅಥವಾ ವಿದೇಶಯಾತ್ರೆಯ ಪ್ರಯೋಜನವನ್ನು ನಾನೆಂದೂ ಅಲ್ಲಗೆಳೆದಿಲ್ಲ ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ, ಅನುಭವ ಸಂಪಾದನೆಯ ಕೋನದಿಂದ, ರಾಷ್ಟ್ರಪ್ರಗತಿಯ ನಿಮಿತ್ತದಿಂದ ಪ್ರವಾಸ ಅತ್ಯಗತ್ಯ. ಉದ್ದೇಶ ರಹಿತವಾದ ಹಾಗೂ ದೇಶ ಕಲ್ಯಾಣ ಸಾಧಕವಲ್ಲದ ಪ್ರವಾಸ ವರ್ಜ್ಯ".[4] ಒಂದು ವೇಳೆ ಈ ಬಗೆಯ ಮಾತುಗಳನ್ನು ದೇಜಗೌರವರು ಆಡಿದ್ದರೆಂದೇ ಇಟ್ಟುಕೊಂಡರೂ ಸಹ ಆ ಮಾತುಗಳ ಹಿಂದಿರುವ ಆಶಯವನ್ನು ಗಮನಿಸಬೇಕಾಗುತ್ತದೆ. ಅವರೇ ಹೇಳುವಂತೆ ಉದ್ದೇಶರಹಿತವಾದ, ಗೊತ್ತು ಗುರಿಯಿಲ್ಲದ ಹಾಗೂ ಪ್ರವಾಸಕ್ಕಾಗಿ

4 ವಿದೇಶದಲ್ಲಿ ನಾಲ್ಕು ವಾರ- ದೇಜಗೌ ಪುಟ . ೪

ಪ್ರವಾಸವನ್ನು ರಾಷ್ಟ್ರೀಯ ದೃಷ್ಟಿಯಿಂದ ಅಪವ್ಯಯವೆಂದೇ ಭಾವಿಸುವ ದೇಜಗೌರವರ ಮಾತಿಗೆ ದೂಸರಾ ಮಾತಿಲ್ಲವಾದರೂ, ವಿದೇಶಗಳಿಗೆ ಹೋಗುವವರ ಬಗ್ಗೆ ದೇಜಗೌ ಮನಸ್ಸಿನಲ್ಲಿ ಇದ್ದಂಥ ಭಾವನೆ, ಅಭಿಪ್ರಾಯ, ಅನಂತರ ಟೀಕೆಗಳು ಬಂದಾಗ ಹೇಳಿದಂಥ, ಬರೆದಂಥ ಹೇಳಿಕೆಗಳು ವಿರೋಧಾಭಾವಗಳಿಂದ ಕೂಡಿವೆ ಎಂಬುದು ಅಷ್ಟೇ ಸತ್ಯ. ಹಾಗೂ ಜಾರಿಕೊಳ್ಳಲು ಹೇಳಿದ ವಾಕ್ಯಗಳಂತೆ ಇವುಗಳು ಕಂಡು ಬಂದರೆ ವಿಸ್ಮಯವಾಗುವುದಿಲ್ಲ. ಹಾಗೆ ನೋಡಿದರೆ ಪ್ರವಾಸ, ಅಧ್ಯಾತ್ಮ, ಕೊನೆಗೆ ಕಲಿಕೆಯ ಕ್ಷೇತ್ರದಲ್ಲಿ ' ಸಾಧನೆ' ಮಹತ್ವದ ಸ್ಥಾನ ಪಡೆಯುತ್ತದೆ. ಆದರೆ ಈ ಕ್ಷೇತ್ರಗಳಲ್ಲಿ 'ಪ್ರಯೋಜನ' ವನ್ನು ಕುರಿತು ಮಾತನಾಡುವಾಗ ತೀವ್ರ ಎಚ್ಚರಿಕೆ ವಹಿಸಬೇಕಾಗುತ್ತದೆ. ಪ್ರವಾಸವನ್ನು ಕುರಿತಂತೆ ಹೇಳಬೇಕೆಂದರೆ ವ್ಯಕ್ತಿಯ ಸ್ವಂತ ಕ್ರಿಯಾಶಕ್ತಿಯ ಮೇಲೆ ಆತನ ಪ್ರವಾಸದ ಉಪಯುಕ್ತತೆ ಅವಲಂಬಿಸಿರುತ್ತದೆ. ಈವರೆಗೆ ದೇಜಗೌರವರನ್ನೂ ಸೇರಿಸಿದಂತೆ ಸಾವಿರಾರು ಮಂದಿ ವಿದೇಶಗಳಿಗೆ ಹೋಗಿದ್ದಾರೆ, ಹೋಗಿ ಅಲ್ಲಿಯೇ ನೆಲೆಸಿದ್ದಾರೆ, ಹೋಗಿ ಬಂದಿದ್ದಾರೆ, ಇಲ್ಲಿ ಕಲಿತದ್ದನ್ನು ಅಲ್ಲಿನವರಿಗೆ ಧಾರೆಯರೆದಿದ್ದಾರೆ, ಅಂತೆಯೇ, ಅಲ್ಲಿ ಕಲಿತದ್ದನ್ನ ಇಲ್ಲಿನವರಿಗೆ ಧಾರೆ ಎರೆದವರೂ, ಧಾರೆ ಎರೆಯಲು ಅವಕಾಶವಾಗದವರೂ ಇದ್ದಾರೆ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ವಿದೇಶ ಪ್ರವಾಸವನ್ನು ಕುರಿತಂತೆ ದೇಜಗೌರವರ ಅಭಿಪ್ರಾಯಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಮುಷ್ಯನಿಗಿರುವ ಮಿತಿಗಳು, ಹಾಗೂ ಆ ಮಿತಿಗಳಲ್ಲಿನ ಸಾಧನೆಗಳ ಮೇಲೆ ಉಪಯುಕ್ತತೆಗೆ ಹೆಚ್ಚಿನ ಮಹತ್ವ ಬರುತ್ತದೆ ಎಂದು ಹೇಳಬಹುದಾಗಿದೆ.

-4-

ವಿದೇಶಗಳಲ್ಲಿ ನಾಲ್ಕುವಾರ ದೇಜಗೌ ಬರೆದಿರುವ ಪ್ರವಾಸ ಸಾಹಿತ್ಯದಲ್ಲಿ ಉತ್ತಮವಾದದ್ದು ಎಂಬುದಾಗಿ ನಾನು ಭಾವಿಸಿದ್ದೇನೆ. ಈ ಪುಸ್ತಕದಲ್ಲಿ ರಷ್ಯಾ, ಆಸ್ಟ್ರಿಯಾ, ಜರ್ಮನಿ, ಇಂಗ್ಲೇಂಡ್ ದೇಶಗಳ ಪ್ರವಾಸ ಕಥನವಿದ್ದು, ಈ ದೇಶಗಳಲ್ಲಿ ಸುತ್ತಾಡಿದ ೪ ವಾರಗಳಷ್ಟು ಅಲ್ಪ ಅವಧಿಯಲ್ಲಿ ದೇಜಗೌರವರು ಆಯಾಯಾ ದೇಶಗಳ ಬಗೆಗೆ ಅಪೂರ್ವ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಅವರು ಹೋದೆಡೆ, ಸ್ಥಳಗಳನ್ನು ನೋಡುತ್ತಿರುವೆಡೆ ಅಲ್ಲಿನ ಸಕಲ ವಿಶಿಷ್ಟವನ್ನು, ಅವುಗಳ ಭೂತ, ವರ್ತಮಾನವನ್ನು ಕೆದಕಿ ಕೆದಕಿ ಚಿಕಿತ್ಸಕ ಮನಸ್ಸಿನಿಂದ ಪರಿಶೀಲಿಸುವ ವಿಮರ್ಶಕ ದೃಷ್ಟಿಯಿಂದಾಗಿ ಅವುಗಳ ಮಾತ್ರ ವಿವರಣೆಗಳಾಗಷ್ಟೆ ಉಳಿಯದೆ ಭಾರತೀಯ ಓದುಗರಿಗೆ ಒಂದು ಜೀವನದೃಷ್ಟಿಯನ್ನು ದಯಪಾಲಿಸುತ್ತವೆ. ಇದರ ಜೊತೆಗೆ ದೇಜಗೌರವರ ನಿರೂಪಣಾ ವಿಧಾನ ಆಕರ್ಷಕವಾಗಿದ್ದು ಓದುಗರನ್ನು ಬೇಸರದ ಪ್ರಪಾತಕ್ಕೆ ತಳ್ಳದೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ತಮ್ಮದು ' ಅವಸರದ ಪ್ರವಾಸ' ವೆಂದು ಸ್ವಂತಃ ದೇಜಗೌರವರೇ ಹೇಳಿಕೊಂಡಿರುವ ಈ ಪ್ರವಾಸ ಕಥನದಲ್ಲಿ ತಾವು ಕಂಡ ದೇಶಗಳ ಇತಿಹಾಸ, ಅಲ್ಲಿನ ದಂತ ಕತೆಗಳು, ಪಟ್ಟಣಗಳನ್ನು ಕುರಿತಂಥ ವಿಸ್ತಾರವಾದ ವಿವರಗಳು, ಸಂಸ್ಕೃತಿಯ ನಾನಾ ಮುಖಗಳು, ಅಲ್ಲಿನ ಗ್ರಾಮೀಣ ಬದುಕು, ಸಂಗ್ರಹಾಲಯಗಳು, ಸಾಮಾಜಿಕ ಜೀವನ, ಶಿಕ್ಷಣ, ಹೋಟೆಲ್ ವ್ಯವಸ್ಥೆ, ಆ ದೇಶಗಳಲ್ಲಿನ ರಾಷ್ಟ್ರನಾಯಕರುಗಳನ್ನು ಕುರಿತಂತೆ ಅವರ ಆರಾಧನಾ ಭಾವ, ಯಾಂತ್ರಿಕ ಬದುಕು, ಇತಿಹಾಸ, ಕವಿಗಳು

ಲೇಖಕರಿಗಿರುವ ಸ್ಥಾನಮಾನಗಳು ಕಛೇರಿ ವ್ಯವಸ್ಥೆ, ರಾಜಕೀಯ ವಿಚಾರಗಳು, ತಮ್ಮ ದೇಶವನ್ನು ಕುರಿತಂತೆ ಅವರ ಅಭಿಮಾನ, ಧರ್ಮ- ಇವೇ ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿರುವ ಮಾಹಿತಿಗಳು ಮಾತ್ರ ಎಂಥವರನ್ನೂ ಬೆರಗು ಗೊಳಿಸುತ್ತವೆ. ಈ ದೃಷ್ಟಿಯಿಂದ ಈ ದೇಶಗಳನ್ನು ನೋಡದ ನಮ್ಮಂಥ ಓದುಗರಿಗೆ ಅನೇಕ ಉಪಯುಕ್ತವಾದ ಮಾಹಿತಿಗಳನ್ನು ಈ ಪುಸ್ತಕ ಒದಗಿಸುತ್ತದೆ.

ದೇಜಗೌರವರ ಇಲ್ಲಿನ ಬರವಣಿಗೆಯಲ್ಲಿ ಮಾನವೀಯ ಅಂಶಗಳ ಒತ್ತು ಹೆಚ್ಚಾಗಿದ್ದು ಯಾವುದೇ ದೇಶದ ಇತಿಹಾಸದ ಪುಟಗಳನ್ನು ತಿರುಗಿಹಾಕುವಾಗಲಾಗಲಿ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ನಿರೂಪಿಸುವಾಗಲಾಗಲಿ ಈ ಅಂಶ ಗಾಢವಾಗುತ್ತ ಹೋಗುವುದರಿಂದಾಗಿ ಇವರ ಬರವಣಿಗೆ ಭಾರತೀಯ ಮೌಲ್ಯಗಳನ್ನು ವಿದೇಶಗಳ ಹಿನ್ನೆಲೆಯನ್ನು ತನಗರಿವಿಲ್ಲದಂತೆಯೇ ಪ್ರತಿಪಾದಿಸುತ್ತ ಹೋಗುವುದನ್ನು ಓದುಗ ಗುರುತಿಸಬಹುದಾಗಿದೆ. ಇದು ದೇಜಗೌ ಬರವಣಿಗೆಯಲ್ಲಿ ಕಾಣುವ ಒಂದು ಪ್ರಮುಖ ಪ್ರವೃತ್ತಿಯಾಗಿದೆಯಾದರೆ ತೀವ್ರ ವೈಚಾರಿಕ ನೆಲಗಟ್ಟು ಇಲ್ಲಿಯ ಮತ್ತೊಂದು ಪ್ರಮುಖ ಪ್ರವೃತ್ತಿಯಾಗಿದೆ ಇವೆರಡರ ಅಪೂರ್ವ ಸಂಯೋಗದಿಂದ ಈ ಪ್ರವಾಸ ಕಥನ ಕನ್ನಡ ಪ್ರವಾಸ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಳ್ಳುತ್ತದೆ.

ದೇಜಗೌ ಯುದ್ಧವನ್ನು ಮಾನವ ಜನಾಂಗಕ್ಕೆ ಅಭಿಶಾಪವೆಂದು ಭಾವಿಸುತ್ತಾರೆ. ಈ ಯುದ್ಧಗಳ ವಿಕಟ ವರ್ತನದಿಂದ ಮಾನವ ಜನಾಂಗ ಪಟ್ಟಿರುವ ಪಾಡುಗಳನ್ನು ಹಾಗೂ ಈ ಯುದ್ಧಗಳ ಕಾಲ್ತುಳಿತಕ್ಕೆ ಸಿಕ್ಕಿ ಹೊಸಕಿ ಹೋಗಿ ಪುನಃ ಚೇತರಿಸಿಕೊಂಡು ಬೆಳೆದಿರುವ ರೀತಿ ದೇಜಗೌರವರನ್ನು ವಿಷಾದ ಹಾಗೂ ದಿಗ್ಭ್ರಮೆಗೆ ಒಳಪಡಿಸುತ್ತವೆ ಎಂಬುದನ್ನು ಈ ಪ್ರವಾಸ ಕಥನದಲ್ಲಿ ಬರುವ ಯುದ್ಧದ ಪ್ರಸಂಗಗಳಲ್ಲೆಲ್ಲ ಗಮನಿಸಬಹುದಾಗಿದೆ. ಉದಾಹರಣೆಗೆ ಜರ್ಮನಿಯ ಪ್ರಸಂಗವನ್ನು ನೋಡಬಹುದಾಗಿದೆ. ಈಗಿನ ಜರ್ಮನಿಯನ್ನು ನೋಡುವ ಲೇಖಕರ ಕಣ್ಣು ಕೇವಲ ವರ್ತಮಾನದತ್ತಲೇ ಇರದೆ ಅದರ ಭೂತವನ್ನು ಅರಸುತ್ತ ಹೋಗಿ ಭೂತದ ಗರ್ಭದಿಂದ ಅನೇಕ ಮಹತ್ವದ ಅಂಶಗಳನ್ನು ಹೊರಗೆಡಹುತ್ತಾರೆ- "ಜರ್ಮನಿ! ಜರ್ಮನಿಯನ್ನು ನೆನೆದಾಗ ಪುಳಕವಾಗುತ್ತದೆ, ಮರುಕ್ಷಣದಲ್ಲಿಯೇ ಅಂಜಿಕೆಯಾಗುತ್ತದೆ. ದೇಶದ ವಿಸ್ತೀರ್ಣ ದೊಡ್ಡದಲ್ಲ; ಈ ಜನರ ಸಾಹಸ ಬುದ್ಧಿಗಳು ಲೋಕವ್ಯಾಪಿ ಈ ಜನ ಸಹಿಸಿದ ಕಷ್ಟ ನಷ್ಟಗಳನ್ನು ಜಗತ್ತಿನ ಯಾವ ರಾಷ್ಟ್ರದ ಜನರೂ ಅನುಭವಿಸಿದಂತೆ ಕಾಣುವುದಿಲ್ಲ. ರೋಮನ್ನರು, ಫ್ರೆಂಚರು, ರಷ್ಯನರು, ಅಮೆರಿಕನ್ನರು- ಇನ್ನೂ ಎಷ್ಟೆಷ್ಟೋ ರಾಷ್ಟ್ರಗಳು ಇವರ ಮೇಲೆ ಯುದ್ಧ ಹೂಡಿದ್ದುಂಟು. ಪ್ರಪಂಚದ ಜನರೆಲ್ಲ ಇವರನ್ನು ಶಪಿಸಿದ್ದುಂಟು. ಮೂವತ್ತು ವರ್ಷಗಳ ಯುದ್ಧ, ಏಳು ವರ್ಷಗಳ ಯುದ್ಧ, ಎರಡು ಮಹಾಯುದ್ಧಗಳು- ಇಷ್ಟು ಯುದ್ಧಗಳ ಬೇಗೆಯನ್ನು ಈ ಜನ ಸಹಿಸಿದೆ, ಇಷ್ಟೇನಾದರೂ ಬೇರೆ ಕಡೆ ಆಗಿದ್ದರೆ ಅಲ್ಲಿಯ ಜನಾಂಗ ನಿರ್ನಾಮವಾಗುತ್ತಿತ್ತು." "ಹಿಟ್ಲರ್! ಅವನ ಜನ್ಮಧಾರಣೆಯೇ ಮಾನವ ಕುಲಕ್ಕೆ ಅಭಿಶಾಪವಾಯಿತು. ಶುದ್ಧ ರಕ್ತದ ಹೆಸರಿನಲ್ಲಿ ಅನಾಂಕಕ್ಯದ ಪ್ರತಿಷ್ಠೆಯಿಂದ ಆರ್ಯನೆಂಬ ಗರ್ವದಿಂದ ಆರ್ಯರಿಗೆ ಸಲ್ಲದ ಹೇಯ ಕಾರ್ಯವನ್ನೆಸಗಿ ಅನಾರ್ಯನಾದನು" -' ಈ ಭಾಗಗಳು ಯುದ್ಧದ ಪರಿಣಾಮವನ್ನು ಹೇಳಿದರೆ ಇಡೀ ಸಂದರ್ಭದಲ್ಲಿ ಜರ್ಮನರ ಅಪ್ರತಿಮ

ಸಾಹಸಬುದ್ಧಿಯನ್ನು ಮೆಚ್ಚಿಕೊಳ್ಳುತ್ತಾರೆ - ' ಈ ಜನ ಕಷ್ಟ ಪಡಲಿಕ್ಕಾಗಿಯೇ, ಬುದ್ಧಿ ಸಾಹಸಗಳ ವಿಕ್ರಮ ಪ್ರದರ್ಶನಕ್ಕಾಗಿಯೇ ಹುಟ್ಟಿದವರೆಂದು ತೋರುತ್ತದೆ. ಇನ್ನೇನು ಈ ಜನ ಮಾತ್ರ ತಲೆ ಎತ್ತಲಾರರು ಎನ್ನುವಷ್ಟರ ಮಟ್ಟಿಗೆ ವಿನಾಶದ ಮಹಾ ಪಾತಾಳಕ್ಕೆ ಧುಮುಕಿದರೂ, ಗರುಕೆಯಂತೆ ಎಲ್ಲವೂ ತಲೆಯೆತ್ತಿ, ವೈಜ್ಞಾನಿಕ ಸಂಶೋಧನೆ ಮತ್ತು ಯಂತ್ರ ಸೃಷ್ಟಿಯ ಮಹತ್ವದಲ್ಲಿ ಜಗತ್ತನ್ನೇ ಬೆರಗುಗೊಳಿಸಿದ್ದಾರೆ"

ವಿಷಾದ ಹಾಗೂ ದಿಗ್ಭ್ರಮೆಯನ್ನು ಸೂಸುವ ಈ ಮತ್ತು ಇಂಥ ಪ್ರಸಂಗಗಳನ್ನು ದೇಜಗೌ ನೋಡುವ ದೃಷ್ಟಿಯೇ ಬೇರೆಯದಾಗಿದೆ. ಹಿಟ್ಲರ್‌ನ ಭಯಾನಕ ವ್ಯಕ್ತಿತ್ವವನ್ನು ಖಂಡಿಸುವ ಲೇಖಕರು ನವಸೃಷ್ಟಿಗೆ ಹಿಟ್ಲರನನ್ನೂ ಕಾರಣಕರ್ತನೆಂದು ಹೇಳುತ್ತ ಅಂಥವನ ಬಗ್ಗೆ ಪರಿತಾಪ ವ್ಯಕ್ತ ಪಡಿಸುತ್ತ ಅವನ ನೆನಪಿಗೆ ಸ್ಮಾರಕವೂ ಇಲ್ಲದ್ದರ ಬಗೆ ಅನುಕಂಪ ವ್ಯಕ್ತ ಪಡಿಸುತ್ತಾರೆ. ಜೊತೆಗೆ ಹಿಟ್ಲರ್‌ನ ವಿವೇಚನಾ ಶೂನ್ಯ ಬುದ್ಧಿಯನ್ನು ದೈವಕ್ಕೆ ಹೊಣೆ ಮಾಡುತ್ತ " ಪಾಪ! ಅವನೇನು ಮಾಡಿಯಾನು? ಅವನೊಬ್ಬ ಹುಲು ಮನುಜ; ವಿಧಿಯ ಕೈಕೂಸು, ಕೂಸಲ್ಲ ಕತ್ತಿ! ಎಂದು ತಮ್ಮ ಮಾನವ ಸಹಜವಾದ ಸಹಾನುಭೂತಿಯನ್ನೂ ವ್ಯಕ್ತ ಪಡಿಸಿ, ಈವರೆಗೆ ಹಿಟ್ಲರನ ಬಗೆಗೆ ವ್ಯಕ್ತ ಪಡಿಸಿದ ಅವರ ಕೋಪ-ತಾಪಗಳಿಂದ ಯುಕ್ತವಾದ ತೀವ್ರತೆಯ ಅನುಭವ ಒಮ್ಮೆಗೆ ತಣ್ಣಗಾಗುವಂತೆ ಮಾಡುತ್ತಾರೆ.

ಸಂಸ್ಕೃತಿ ಮತ್ತು ನಾಗರೀಕತೆ - ಒಂದು ದೇಶದ ಅಂತರಂಗ- ಬಹಿರಂಗವನ್ನು ಪ್ರತಿಬಿಂಬಿಸುವ ಎರಡು ಮುಖ್ಯ ಧ್ರುವಗಳು ಎಂದು ದೇಜಗೌ ಭಾವಿಸಿದ್ದು ತಾವು ಭೇಟಿಕೊಟ್ಟ ದೇಶಗಳ ಈ ಎರಡೂ ಮುಖಗಳನ್ನು ಆತ್ಮೀಯವಾಗಿ ಪರಿಚಯ ಮಾಡಿಕೊಳ್ಳುವ, ಅಷ್ಟೇ ಅಲ್ಲ ಅವುಗಳೊಂದಿಗೆ ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಆ ದೇಶಗಳು ನಗರ ರಚನೆಗೆ, ಆ ಮೂಲಕ ತಮ್ಮ ನಗರ ನೈರ್ಮಲ್ಯಕ್ಕೆ, ಸೌಂದರ್ಯಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ದೇಜಗೌ ತುಂಬ ತನ್ಮಯರಾಗಿ ವಿವರಿಸುತ್ತಾರೆ. ಉದಾಹರಣೆಗೆ ಮಾಸ್ಕೋನಗರದ ವರ್ಣನೆಯನ್ನು ನೋಡಿ ' ಮಾಸ್ಕೂ ನಗರದ ಬೀದಿಗಳು ತುಂಬ ವಿಶಾಲವಾಗಿದ್ದು ಚೊಕ್ಕಟವಾಗಿವೆ. ಎಲ್ಲಿಯೂ ಧೂಳಾಗಲಿ, ಕಸವಾಗಲಿ ಕಾಣುವುದಿಲ್ಲ. ಎಲ್ಲಿ ನೋಡಿದರೂ ಬೃಹತ್ತಾದ ಸೌಧಗಳು ಪ್ರಾಯಶಃ ಒಂದೊಂದು ಕಟ್ಟಡದಲ್ಲಿ ೫೦-೧೦೦ ಸಂಸಾರಗಳು ವಾಸಿಸುತ್ತಿರಬಹುದೆಂದು ತೋರುತ್ತದೆ. ಕಟ್ಟಡಗಳ ರಚನೆ ಸರಳವಾದರೂ ಚೆಲುವಾಗಿದೆ. ಅವುಗಳನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿರುವುದರಿಂದ ನಿನ್ನೆಯೋ ಮೊನ್ನೆಯೋ ಕಟ್ಟಿದಂತೆ ಕಾಣುತ್ತವೆ." ಇಂಥ ವ್ಯವಸ್ಥೆಯೊಂದಿಗೆ, ಅಚ್ಚುಕಟ್ಟನೊಡನೆ ತನ್ನ ದೇಶದ ಬೀದಿಗಳಲ್ಲಿನ ಕೊಳಕು, ಗಲೀಜು ಅವ್ಯವಸ್ಥೆಯ ನಿರ್ಮಾಣ ವ್ಯವಸ್ಥೆಯನ್ನು ಹೋಲಿಸುವ ದೇಜಗೌ ಆಶ್ಚರ್ಯಚಕಿತರಾಗುತ್ತಾರೆ - " ಬೀದಿಗಳು ಇಷ್ಟುಹಸನಾಗಿರಲುಹೇಗೆ ಸಾಧ್ಯ ಎಂದು. ಇಲ್ಲಿ ಧೂಳೂ ಕಡಿಮೆ. ಈ ಕಾಲದಲ್ಲಿ ಬೇಸಗೆಯಲ್ಲಿ ಸ್ವಲ್ಪ ಧೂಳು ಬರುತ್ತದೆ. ಆಗಾಗ್ಗೆ ಬೀದಿಗೆ ಮುನಿಸಿಪಾಲಿಟಿಯವರು ನೀರು ಹಾಕುತ್ತಾರೆ. ಬೇಸಿಗೆಯಲ್ಲಂತೂ ಪ್ರತಿದಿನ ನೀರು ಹಾಕುವ ಯಂತ್ರಕ್ಕೆ ಗುಡಿಸುವ ಯಂತ್ರವನ್ನು ಅಡಿಯಲ್ಲಿ ತಗುಲಿಸಿರುತ್ತಾರೆ

ಸಿಗರೇಟ್ ತುಂಡಾಗಲಿ, ಹಣ್ಣಿನ ಸಿಪ್ಪೆಯಾಗಲಿ, ಕಾಗದ ಚೂರಾಗಲಿ ಕಾಣುವಂತಿಲ್ಲ ... ಬೀದಿಯಲ್ಲಿ ದನಗಳನ್ನು ಕಾಣಲಿಲ್ಲ, ನಮ್ಮಂತೆ ಕಸಕಡ್ಡಿ ಒಣಗಿದ ಕಾಗದಗಳನ್ನು ಮೇಯಲು ಬಿಡುವುದಿಲ್ಲ.... ದನಗಳಿರಲಿ ನಾಯಿಗಳೂ ನನ್ನ ಕಣ್ಣಿಗೆ ಬೀಳಲಿಲ್ಲ.'' ಹೀಗೆ ಅಲ್ಲಿನ ಜನ ಅಚ್ಚುಕಟ್ಟಿಗೆ, ನಗರ ನೈರ್ಮಲ್ಯಕ್ಕೆ ನೀಡಿರುವ ಮಹತ್ವ ಎಷ್ಟರ ಮಟ್ಟಿಗೆ ಅನುಕರಣೀಯವಾದುದು ಎಂಬುದರತ್ತ ಇಲ್ಲಿನ ಓದುಗರ ಮನಸ್ಸನ್ನು ಸೆಳೆಯುತ್ತಾರೆ. ಇದು ಅಲ್ಲಿನ ಸಾಮಾನ್ಯ ಜನಜೀವನದ ಒಂದು ಮುಖವಾದರೆ ಇನ್ನೊಂದು ಮುಖವನ್ನು ಅಲ್ಲಿನ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲೂ ಇರುವ ಶಿಸ್ತಿನಲ್ಲಿ ಕಾಣಬಹುದಾಗಿದೆ. ಜಾತ್ರೆಗಳನ್ನೂ ನೆನಪಿಗೆ ತರುವ ಆ ಪ್ರದೇಶದಲ್ಲಿ ಆ ನಾಗರೀಕ ಶಿಸ್ತು ಹಾಗೂ ಪೌರ ಪ್ರಜ್ಞೆಯನ್ನು ದೇಜಗೌ ತೌಲನಿಕವಾಗಿ ವಿವೇಚಿಸುತ್ತ ಹೋಗುವ ರೀತಿ ಎರಡು ರಾಷ್ಟ್ರಗಳ ನಡುವೆ ಇರುವ ನಾಗರೀಕ ಬದುಕಿನ ಎರಡು ವೈದೃಶ್ಯಗಳನ್ನು ಸ್ಪಷ್ಟಪಡಿಸುತ್ತದೆ - ' ಜನತಾ ಬಜಾರೇ ಒಂದು ದೊಡ್ಡ ನಗರ. ಅದು ಹಳೆಯದು ಜಾರನ ಕಾಲದ್ದು. ಪ್ರಪಂಚದ ವಸ್ತುಗಳೆಲ್ಲ ಅಲ್ಲಿ ದೊರೆಯುತ್ತವೆ. ಬೆಲೆಯೂ ತುಸು ಅಗ್ಗವೆಂದು ಹೇಳುತ್ತಾರೆ. ಆದರೆ ಜನರ ನೂಕು ನುಗ್ಗುಲಲ್ಲಿ ಉಸಿರು ಕಟ್ಟಿದಂತಾಯಿತು. ಹಿಂದೊಮ್ಮೆ ಚಾಮುಂಡೇಶ್ವರಿಯ ತೆಪ್ಪೋತ್ಸವಕ್ಕೆ ಹೋಗಿ ಉಸಿರು ಕಟ್ಟಿ ಸತ್ತು ಹೋಗುತ್ತೇನೆಂದು ಹೆದರಿದ್ದೆ. ಅದೇ ಅನುಭವ ಈಗಲೂ ಆಯಿತು. ಅಲ್ಲಿಯ ಮತ್ತು ಇಲ್ಲಿಯ ಜನಜಂಗುಳಿಗೆ ಇರುವ ವ್ಯತ್ಯಾಸವೊಂದುಂಟು - ಅಲ್ಲಿ ಶಿಸ್ತಿರಲಿಲ್ಲ, ಇಲ್ಲಿ ಶಿಸ್ತುಂಟು. ಇಷ್ಟು ಜನ ಬಂದು ಹೋಗುತ್ತಿದ್ದರೂ ಇಲ್ಲಿಯೂ ಕಸ ಕಡ್ಡಿ ಹರಡಿರಲಿಲ್ಲ. ಇಲ್ಲಿ ಚೊಕ್ಕಟವನ್ನು ಕಂಡು ನನಗೆ ಆಶ್ಚರ್ಯವಾಯಿತು. ಜನರು ಬಚೆಯಲ್ಲಿ ತಿಂಡಿಕೊಂಡು ತಿನ್ನುತ್ತಾರೆ ನಿಜ. ಆದರೆ ಸಿಪ್ಪೆಕಾಗದಗಳನ್ನು ಜೇಬಿನಲ್ಲಿಟ್ಟುಕೊಳ್ಳುತ್ತಾರೆ ಅಥವಾ ಡಬ್ಬಿಯನ್ನು ಹುಡುಕಿಕೊಂಡು ಹೋಗಿ ಹಾಕುತ್ತಾರೆ. ನಿಲ್ದಾಣದಲ್ಲಾಗಲಿ, ಹೋಟೆಲ್‌ನಲ್ಲಾಗಲಿ ಕಕ್ಕಸು ಎಲ್ಲಿದೇ ಎಂಬುದೇ ಗೊತ್ತಾಗುವುದಿಲ್ಲ. ನಮ್ಮ ಊರುಗಳಲ್ಲಂತೂ ಕಕ್ಕಸು ಎಲ್ಲಿದೆ ಎಂಬುದನ್ನೂ ದೂರದಿಂದಲೇ ವಾಸನೆಯಿಂದ ಗುರುತಿಸಬಹುದು.''

ಇದೇ ನಾಗರೀಕ ಪ್ರಜ್ಞೆ ಉದ್ಯಾನಗಳಲ್ಲಿ, ವಿಹಾರಕೇಂದ್ರಗಳಲ್ಲಿ ದೇಜಗೌ ಕಾಣುತ್ತಾರೆ. ಕಂಡು ತನ್ಮಯರಾಗುತ್ತಾರೆ. ಅಲ್ಲಿಯ ಜನ ಭವ್ಯವಾದ ಕಾರ್ಖಾನೆಗಳ ಸ್ಥಾಪನೆಗೆ, ಎತ್ತರ-ಎತ್ತರವಾದ ಸೌಧಗಳ ನಿರ್ಮಾಣಕ್ಕೆ ಕೊಟ್ಟಿರುವಂಥ ಮಹತ್ವವನ್ನೇ ಅವುಗಳ ನೈರ್ಮಲ್ಯಕ್ಕೂ ಹೇಗೆ ಕೊಟ್ಟಿದ್ದಾರೆ ಎಂಬುದನ್ನು ದೇಜಗೌ ತಾವು ಭೇಟಿಕೊಟ್ಟ ದೇಶಗಳ ಸಂದರ್ಭದಲ್ಲಿ ಸಮಯ ಸಿಕ್ಕಾಗಲೆಲ್ಲ ಬೇಸರವಿಲ್ಲದೆ ವರ್ಣಿಸುತ್ತಾರೆ. ಒಂದು ರಾಷ್ಟ್ರದ ಮುನ್ನಡೆಗೆ ಆ ದೇಶವಾಸಿಗಳ ಸ್ವದೇಶ ಪ್ರೇಮ ಎಷ್ಟರ ಮಟ್ಟಿಗೆ ಕಾರಣೀಭೂತವಾಗಬಲ್ಲದು ಎಂಬುದನ್ನು ದೇಜಗೌ ತಾವು ಸಂದರ್ಶಿಸಿದ ನಾಡುಗಳಲ್ಲಿ ಸ್ಪಷ್ಟವಾಗಿ ಗುರುತಿಸಿರುವುದನ್ನು ಕಾಣಬಹುದಾಗಿದೆ. ರಶ್ಯಾ, ಜರ್ಮನಿ, ಇಂಗ್ಲೆಂಡ್ ಎಲ್ಲೆಲ್ಲೂ ಈ ಅನನ್ಯವಾದ ರಾಷ್ಟ್ರಪ್ರೇಮವನ್ನು ಇವರು ಕಾಣುತ್ತಾರೆ. ಅಂತೆಯೇ ಅಲ್ಲಿನ ಜನರ ಐತಿಹಾಸಿಕ ಪ್ರಜ್ಞೆ. ತಮ್ಮ ಹುಟ್ಟುನಾಡಿನ ಬಗೆಗಿನ ಅವರ ಪ್ರೇಮ, ತಮ್ಮ ನಾಡಿನ ನೆಲ, ಜನ, ಕಾನು, ಬಾನು, ಕಲೆ, ಸಂಸ್ಕೃತಿಗಳ ಬಗೆಗೆ ಅವರ ಆತ್ಮೀಯ ಒಲವುಗಳಿಂದ

ಪ್ರಭಾವಿತರಾಗುತ್ತಾರೆ. ಈ ಪ್ರಜ್ಞೆಯೇ ಆ ದೇಶಗಳಲ್ಲಿನ ತೀವ್ರ ಪ್ರಗತಿಗೆ ಕಾರಣ ಹೇಗೆ ಆಗಿದೆ ಎಂಬ ಮಾತನ್ನು ತಮ್ಮ ಪುಸ್ತಕದುದ್ದಕ್ಕೂ ಒತ್ತಿ ಒತ್ತಿ ಹೇಳುತ್ತಾರೆ. ಉದಾಹರಣೆಗೆ ಸ್ವಾತಂತ್ರ್ಯ ಪಡೆದ ರಷ್ಯಾ ಹಾಗೂ ಭಾರತದ ವಯಸ್ಸು ಸರಿಸುಮಾರು ಒಂದೇ ಆಗಿದ್ದರೂ ಆ ರಾಷ್ಟ್ರದ ಪ್ರಗತಿಗೆ ನಮ್ಮ ದೇಶದ ಈ ಪ್ರಗತಿಯನ್ನುಹೋಲಿಸಿದರೆ ತೀವ್ರ ನಿರಾಶೆಯನ್ನುಂಟು ಮಾಡುವ ಸಂದರ್ಭಗಳೇ ಹೆಚ್ಚಾಗಿದ್ದು ಸಂದರ್ಭದ ವರ್ಣನಾ ಪ್ರಸಂಗದಲ್ಲಿ ಖಿನ್ನರಾಗುವ ದೇಜಗೌ ಮನಸ್ಸನ್ನು ಗಮನಿಸಬಹುದಾಗಿದೆ. " ಇಲ್ಲಿಯ ಜನ ತಮ್ಮ ಇತಿಹಾಸವನ್ನು ಹೇಳುವಾಗ ಕೇಳುವ ಜನಕ್ಕೆ ಅದು ಟೀಕೆ, ಬೇಡವೆ ಎಂಬುದನ್ನು ಗಮನಿಸದೆಯೇ ಮಾತಿನ ನೆಲೆ ಹರಿಸುವ ಆ ಜನರ ನಿಷ್ಕಪಟ ದೇಶಾಭಿಮಾನ, ಬೇರೆ ಮಾತುಗಳಲ್ಲಿ ಅವರ ಬದುಕನ್ನು ರೂಪಿಸಿಕೊಂಡ ಸಾಹಸದ ಕತೆಯೇ ಆಗಿದೆ."ಎಂದು ಅಭಿಪ್ರಾಯ ಪಡುತ್ತಾರೆ. ಭಾರತದ ಮಕ್ಕಳಿಲ್ಲ ತನ್ನ ದೇಶದ ಕೊನೆಗೆ ತನ್ನ ರಾಜ್ಯದಯಾವೊಂದು ವಿಶಿಷ್ಟತೆಯ ಅರಿವನ್ನೂ ಪಡೆದುಕೊಳ್ಳುವ ಪ್ರಯತ್ನ ಮಾಡದ ಪ್ರವೃತ್ತಿಯೇ ಹೆಚ್ಚಾಗಿರುವಾಗ ರಷ್ಯಾ ದೇಶದಂಥ ಅತೀವ ಸಾಹಸಮಯ ಜನಗಳ ಮಧ್ಯೆ ನಿಂತಾಗ, ನಿಂತು ಅವರ ಮಾತುಗಳನ್ನು ಕೇಳಿದಾಗ ನಮಗೆ ಅವರದ್ದು ತೀವ್ರ ಆತ್ಮ ಪ್ರಶಂಸೆ ಏನೋ ಎಂಬಂಥ ಭಾವನೆ ಬರುವುದು ಸಹಜವಾದರೂ ಅವರ ಸಾಧನೆ ಹಾಗೂ ದೇಶದ ಬಗೆಗಿನ ಪ್ರೀತಿ ಎರಡೂ ಅನುಕರಣೀಯ ಅಂಶಗಳೇ ಎಂಬುದನ್ನು ಮರೆಯಲಾರದಾಗಿದೆ. ಯೋಗಾಯೋಗವೆಂಬಂತೆ ಇವರು ವರ್ಣಿಸುವ ಎಲ್ಲ ದೇಶಗಳಲ್ಲೂ ಈ ಸ್ವದೇಶಾಭಿಮಾನ ತನ್ನ ಔನ್ನತ್ಯವನ್ನು ಮುಟ್ಟಿದೆ. ಈ ಎಲ್ಲವೂ ದೇಜಗೌರವರನ್ನು ತನ್ನ ದೇಶದ ಬಗೆಗೆ ಚಿಂತೆ ಮಾಡುವಂತೆ ಪ್ರೇರೆಪಿಸುತ್ತದೆ. ಈ ಬರವಣಿಗೆಯ ವೈಶಿಷ್ಟ್ಯವೆಂದರೆ ದೇಜಗೌ ಅವರ ಈ ಗುಣಗಳನ್ನು ಮೆಚ್ಚಿಕೊಂಡಿರುವಂತೆ ತಮ್ಮ ನಾಡಿನ ವಸ್ತು ಸ್ಥಿತಿಯನ್ನೂ, ದೌರ್ಬಲ್ಯಗಳನ್ನು ಮುಚ್ಚುಮರೆಯಿಲ್ಲದೆ ಅನಾವರಣಗೊಳಿಸುತ್ತ ಹೋಗಿದ್ದಾರೆ.

ಈ ಸಂದರ್ಭಗಳಲ್ಲಿ ಅರಿವಿಲ್ಲದಂತೆಯೇ ದೇಜಗೌರವರ ಭಾಷಾಪ್ರಜ್ಞೆ ಗರಿಗೆದರಿರುವುದನ್ನೂ ಸ್ಪಷ್ಟನೋಡಬಹುದಾಗಿದೆ.ದೇಜಗೌ ಮನಸ್ಸು ಈ ಎಲ್ಲ ಪ್ರಗತಿಗೆ ಅಲ್ಲಿನ ಭಾಷಾ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಕಾರಣೀಭೂತವನ್ನಾಗಿ ಮಾಡುತ್ತದೆ. ಏಕೆಂದರೆ ದೇಜಗೌ ಒಂದು ದೇಶದ ಪ್ರಗತಿಗೆ ಶಿಕ್ಷಣವನ್ನು ಪ್ರಾಥಮಿಕ ಷರತ್ತನ್ನಾಗಿ ಸ್ವೀಕರಿಸುತ್ತಾರೆ. ಈ ದೃಷ್ಟಿಯಿಂದ ಆ ದೇಶಗಳಲ್ಲಿನ ಶಿಕ್ಷಣ ಕ್ರಮ ನಿಜಕ್ಕೂ ಅನುಕರಣೀಯವಾದುದ್ದೆಂದೇ ಇವರು ಅಭಿಪ್ರಾಯ ಪಡುತ್ತಾರೆ. ಹೇಗೆಂದರೆ ರಷ್ಯಾದಲ್ಲಿ ವಿದ್ಯಾರ್ಥಿ ಸಂಖ್ಯೆಗೆ ತಕ್ಕಂತೆ ಅಧ್ಯಾಪಕರು, ಪ್ರಯೋಗಶಾಲೆಗಳು, ಕಲಿಕೆಗೆ ಅಗತ್ಯವಾದ ಉಪಕರಣಗಳು, ಎಲ್ಲಕ್ಕಿಂತ ಮಿಗಿಲಾಗಿ ವಿದ್ಯಾರ್ಥಿ ಅಧ್ಯಾಪಕರುಗಳ ನಡುವಣ ಅನ್ಯೋನ್ಯ ಸಂಬಂಧ ಅನನ್ಯವಾಗಿದೆ ಎಂದು ಹೇಳುತ್ತಾರೆ. ರಶ್ಯನ್ ಭಾಷೆ ಬೋಧನಾ ಮಾಧ್ಯಮವಾಗಿದ್ದು ಆ ದೇಶದಲ್ಲಿನ ಮಕ್ಕಳ ಮನಸ್ಸಿನಲ್ಲಿ ನಾಗರೀಕ ಹಾಗೂ ದೇಶ ಪ್ರಜ್ಞೆಯ ಬೀಜಗಳು ಮೊದಲಿನಿಂದಲೇ ಹೇಗೆ ಕೆಲಸ ಮಾಡತೊಡಗುತ್ತವೆ ಎಂಬುದಕ್ಕೆ ಅವರು ಕಲ್ಪಿಸಿರುವ ಅವಕಾಶಗಳು ಕಾರಣವೆನ್ನಿಸುತ್ತವೆ ಎಂದು ದೇಜಗೌ ಅಲ್ಲಿನ ಶಿಕ್ಷಣ ಪದ್ಧತಿಯನ್ನು ವಿಶ್ಲೇಷಿಸುತ್ತಾರೆ - " ತಮ್ಮ ರಾಜ್ಯದ ವೈಭವ ಹಾಗೂ ಅದರ ಚರಿತ್ರೆ

ವಿದ್ಯಾರ್ಥಿಗಳ ಕಣ್ಮುಂದೆ ಸದಾ ನಿಂತಿರಲೆಂಬ ಆಶಯದಿಂದ ವರಾಂಡಗಳ ಗೋಡೆಗಳ ಮೇಲೆಲ್ಲ ಚಿತ್ರಪಟಗಳನ್ನು ನೇತುಹಾಕಿದ್ದರು. ಅವುಗಳ ಮೇಲೊಮ್ಮೆ ಕಣ್ಣಾಡಿಸಿದಾಗ ದೇಶದ ಚರಿತ್ರೆ ಕಣ್ಣಿಗೆ ಕಟ್ಟಿದಂತಾಗುತ್ತಿತ್ತು. ಆ ದೇಶದ ಜನರ ದೇಶಪ್ರೇಮ, ಆತ್ಮ ಪ್ರತ್ಯಯ ಹಾಗೂ ಆತ್ಮಗೌರವಗಳು ಅನ್ಯಾದೃಶವಾದುವು.''

ಜಗತ್ತಿನ ಇತಿಹಾಸದಲ್ಲಿ ರಷ್ಯಾದೇಶದ ಪ್ರಗತಿ ದಿಗ್ಭ್ರಮೆಯನ್ನು ಹುಟ್ಟಿಸುವಂತಹುದು. ಯುದ್ಧ-ನಾಶ- ಮರುಹುಟ್ಟುಗಳ ಚಕ್ರದಲ್ಲಿ ರಷ್ಯಾ ಇಂದು ಹೀಗೆ ತಲೆಎತ್ತಿ ನಿಂತಿರುವುದಕ್ಕೆ ಅಲ್ಲಿನ ಶಿಕ್ಷಣ ವ್ಯವಸ್ಥೆಯೇ ಕಾರಣವೆಂದೆನ್ನಬೇಕು. ಅಶಿಕ್ಷಿತ ಜನಾಂಗ ಮನುಕುಲಕ್ಕೆ ಒಂದು ಹೊರೆ ಎಂಬುದನ್ನು ರಷ್ಯನ್ನರು ಬಹಳ ಬೇಗ ಅರ್ಥ ಮಾಡಿಕೊಂಡು ದೇಶದ ನಿರ್ಮಾಣದ ಮೊದಲ ಹಂತವಾದ ಶಿಕ್ಷಣವನ್ನು ರಾಷ್ಟ್ರೀಯ ಆಗತ್ಯವನ್ನಾಗಿ ಸ್ವೀಕರಿಸಿದರು. ಶಿಕ್ಷಣ ಆ ದೇಶದಲ್ಲಿ ತಂದಿರುವ ಪ್ರಗತಿಯನ್ನು ದೇಜಗೌ ಪ್ರೀತಿಯಿಂದ ವರ್ಣಿಸುತ್ತಾರೆ - 'ಕ್ರಾಂತಿ ಸಂಭವಿಸಿದ ನಂತರ ನಿರಕ್ಷರತಾ ನಿವಾರಣೆಗಾಗಿ ಸರಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿತು. ನಾಡಿನ ಪುನರುಜ್ಜೀವನಕ್ಕೆ ಇದು ನಾಂದಿ ಎಂದು ಅವರು ಬಗೆದರು. ಮೊದಲ ಹಂತದಲ್ಲಿ ದೇಶದಲ್ಲಿ ಹುಟ್ಟಿದ ಪ್ರತಿಯೊಂದು ಮಗುವು ೪ ವರ್ಷದ ತನಕವಾದರೂ ಓದಬೇಕೆಂದೂ, ಎರಡನೆಯ ಹಂತದಲ್ಲಿ ೭ ವರ್ಷಗಳ ತನಕವಾದರೂ ವ್ಯಾಸಂಗ ಮಾಡಬೇಕೆಂದೂ, ಮೂರನೆಯ ಹಂತದಲ್ಲಿ ೧೦ ವರ್ಷವಾದರೂ ಶಿಕ್ಷಣ ಮಾಡಬೇಕೆಂದೂ ಸರ್ಕಾರ ಕಡ್ಡಾಯ ಮಾಡಿತು. ಈ ಯೋಜನೆಯಿಂದಾಗಿ ೧೯೩೦ರ ನಂತರ ದೇಶದ ಮಕ್ಕಳೆಲ್ಲ ಸಾಕ್ಷರರಾಗಿದ್ದಾರೆ. ಈಗಂತೂ ತಮ್ಮ ಮಕ್ಕಳ ಭವಿಷ್ಯಕ್ಕೆ ವಿದ್ಯಾಭ್ಯಾಸ ಅನಿವಾರ್ಯವೆಂದು ಎಲ್ಲ ತಂದೆ ತಾಯಿಗಳು ಅರಿತಿದ್ದಾರೆ.''

ಶಿಕ್ಷಣದ ಅವಧಿ ಭಾರತದಲ್ಲಿದ್ದಂತೆ ಅಲ್ಲಿಯೂ ಹೆಚ್ಚು ಕಡಿಮೆ ಒಂದೇ ಬಗೆಯದಾಗಿದ್ದರೂ ಅಲ್ಲಿನ ಶಿಕ್ಷಣದಲ್ಲಿನ ಉಪಯುಕ್ತತೆ ಹಾಗೂ ವಿದ್ಯಾರ್ಥಿಗಳನ್ನು ಸ್ವಾವಲಂಭಿಗಳನ್ನಾಗಿಸುವಲ್ಲಿ ಅಲ್ಲಿನ ಶಿಕ್ಷಣ ಪದ್ಧತಿ ತೋರಿಸುವ ಕಾಳಜಿ ಇತ್ಯಾದಿ ಎಷ್ಟೋ ವಿಷಯಗಳನ್ನು ದೇಜಗೌ ಬಹಳ ತನ್ಮಯತೆಯಿಂದ ವರ್ಣಿಸುತ್ತಾರೆ. ವರ್ಣಿಸುತ್ತ, ಆ ದೇಶದ ಪ್ರಗತಿಯೊಡನೆ ತಮ್ಮ ದೇಶದ ನಿರಕ್ಷರತೆ ಕಾಲೇಜು ಶಿಕ್ಷಣ, ಸ್ವಾಲಂಭಿಗಳನ್ನಾಗಿ ಸದ ಕಲಿಕೆ ಮುಂತಾದ ಹತ್ತು ಹಲವಾರು ವಿಷಯಗಳನ್ನು ಕುರಿತು ಚಿಂತಿಸುತ್ತ ಹೋಗುತ್ತಾರೆ.

ದೇಜಗೌ ತಮ್ಮ ಈ ಗ್ರಂಥದಲ್ಲಿ ಭಾರತದ ಭಾಷಾ ಸಮಸ್ಯೆಯನ್ನು ಕುರಿತಂತೆ ಹಲವಾರು ಸಾರಿ ವ್ಯಾಪಕವಾಗಿ ಚರ್ಚಿಸುತ್ತಾರೆ. ಇವರು ಭೇಟಿಕೊಟ್ಟ ದೇಶಗಳಲ್ಲಿನ ಭಾಷಾ ವ್ಯವಸ್ಥೆ, ಭಾಷಾಮಾಧ್ಯಮಗಳ ಹಿನ್ನೆಲೆಯಲ್ಲಿ ನಮ್ಮ ದೇಶದಂಥ ಬಹು ಭಾಷಾ ವ್ಯವಸ್ಥೆಯ ದೇಶದ ಸಮಸ್ಯೆಗಳನ್ನು ಪದರ ಪದರವಾಗಿ ಚರ್ಚಿಸುತ್ತ ಹೋಗುತ್ತಾರೆ. ಭಾಷಾ ಸಮಸ್ಯೆಯನ್ನೂ ಒಟ್ಟಾರೆ ಚರ್ಚಿಸುವುದು ಇವರ ವಿಚಾರ ಸರಣಿಯ ಒಂದು ಮುಖವಾದರೆ ಕನ್ನಡ ಭಾಷೀಯ ಕನ್ನಡ ಲೇಖಕ ಹಾಗೂ ಕನ್ನಡ ನಾಡಿನ ಪ್ರತಿನಿಧಿಯಾಗಿ ಕನ್ನಡದ ಹಿತ ಚಿಂತನೆ ಪ್ರಚಾರ-ಪ್ರಸಾರಕ್ಕಾಗಿ ಯೋಚಿಸುವ, ದುಡಿಯುವ ಮನಸ್ಸು ಇನ್ನೊಂದು ಮುಖ. ರಷ್ಯಾದೇಶಕ್ಕೆ ಹಾಗೂ ಇತರ ಕಡೆಗಳಿಗೆ ಭೇಟಿಕೊಟ್ಟ ದೇಜಗೌ

ಅಲ್ಲಿನ ವ್ಯವಸ್ಥೆಯಲ್ಲಿ ಭಾರತದ ಉತ್ತರ ಹಾಗೂ ದಕ್ಷಿಣದ ಹಲವಾರು ಭಾಷೆಗಳ ಕಲಿಕೆಗೆ ಅವಕಾಶ ಕಲ್ಪಿಸಿರುವುದನ್ನು ನೋಡಿ ಸಂತೋಷಪಡುವುದಕ್ಕಿನ್ನ ಹೆಚ್ಚಾಗಿ ಕನ್ನಡವನ್ನು ಕಲಿಸುತ್ತಿಲ್ಲವಲ್ಲ ಎಂದು ಮರುಗುತ್ತಾರೆ. ವ್ಯವಸ್ಥೆ ಮಾಡಿ ಎನ್ನುತ್ತಾರೆ. ಅವರೂ ವಾಗ್ದಾನ ಮಾಡುತ್ತಾರೆ. ಆದರೆ ಆ ಎಲ್ಲವೂ ಎಷ್ಟರ ಮಟ್ಟಿಗೆ ಕ್ರಿಯಾನ್ವಿತವಾದುವು ಎಂಬುದನ್ನು ದೇಜಗೌರವರು ಗಮನಿಸಿದಂತೆ ಕಾಣುವುದಿಲ್ಲ (ಇದೇ ಸಂದರ್ಭದಲ್ಲಿ ಮತ್ತೊಂದು ಅಂಶವನ್ನು ಹೇಳಬೇಕು. ತಮ್ಮ ಪ್ರವಾಸದ ಅವಧಿಯಲ್ಲಿ ದೇಜಗೌ ಅನೇಕ ಕವಿಗಳನ್ನು, ಸಮಾಧಿಗಳನ್ನು, ಸಂಸ್ಥೆಗಳನ್ನು ಸಂದರ್ಶಿಸುತ್ತಾರೆ. ಆಗ ಚರ್ಚೆಗೆ ಬಂದ ಕವಿಯನ್ನು ಭಕ್ತಿಭಾವದಿಂದ ನೆನೆದು ಇವನನ್ನು ಕನ್ನಡಕ್ಕೆ ಅನುವಾದಿಸುತ್ತೇನೆ ಎನ್ನುತ್ತಾರೆ. ಆದರೆ ಆ ಅನುವಾದಗಳು ಇನ್ನು ಕನ್ನಡಕ್ಕೆ ಬಂದಂತೆ ಕಾಣುವುದಿಲ್ಲ.)

ಒಮ್ಮೆ ದೇಜಗೌ ಮಾಸ್ಕೋ ವಿಶ್ವವಿದ್ಯಾನಿಲಯದ ಭಾರತೀಯ ಅಧ್ಯಯನ ಸಂಸ್ಥೆಗೆ ಹೋಗಿದ್ದಾಗ ಅಲ್ಲಿನ ಅಧ್ಯಕ್ಷರಾದ ಡಾ. ಎ. ಟಿ. ಆಕ್ಸಿನೋವ್ ಅವರೊಡನೆ ಅನಿರೀಕ್ಷಿತವಾಗಿ ಭಾಷೆಗೆ ಸಂಬಂಧಿಸಿದಂತೆ ನಡೆದ ಚರ್ಚೆಯಿಂದ ಭಾರತದ ಭಾಷಾ ಸಮಸ್ಯೆಯನ್ನು ಕುರಿತಂತೆ ವಿದೇಶಿ ವಿದ್ವಾಂಸನೊಬ್ಬನ ದೃಷ್ಟಿ ಹಾಗೂ ಭಾರತೀಯ ದೃಷ್ಟಿ ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ದೇಜಗೌ ಸಂಶೋಧನೆ ಏನೇನು ನಡೆಯುತ್ತದೆ ಎಂದು ಕೇಳಿದ ಪ್ರಶ್ನೆಗೆ ಅವರು ವಿಷಯಾಂತರ ಮಾಡಿ ಭಾಷಾ ಸಮಸ್ಯೆಯನ್ನು ಒಬ್ಬ ಭಾಷಾವಿದಗೊಂದಿಗೆ ಚರ್ಚೆಗೆ ಎತ್ತಿಕೊಂಡ ರೀತಿ, ಅವರು ತಮ್ಮ' ವಿಚಾರಗಳನ್ನು ಪ್ರತಿಪಾದಿಸಿದ ಬಗೆ ಏಕೋ ದೇಜಗೌರವರಿಗೆ ಹಿಡಿಸುವುದಿಲ್ಲ. ದೇಜಗೌ ತಮ್ಮ ಆತ್ಮ ಪ್ರತ್ಯಯದಿಂದ ತಮ್ಮವಾದ ಸರಿ ಎಂದರೆ, ಈ ವಿದೇಶಿ ವಿದ್ವಾಂಸನ ವಿಶ್ಲೇಷಣೆಯನ್ನು ತಪ್ಪೆಂದು ಒಮ್ಮೆಗೆ ಹೇಳಲು ಬರುವುದಿಲ್ಲ. ಆತನ ಪ್ರಶ್ನೆಗಳಿಗೆ ದೇಜಗೌ ನೀಡುವ ಉತ್ತರಗಳು ಅವನಿಗೆ ತೃಪ್ತಿತಂದಂತೆ ಕಾಣುವುದಿಲ್ಲ. ಮುಂದೆ ದೇಜಗೌ ಉತ್ತರದಿಂದ ಮತ್ತೆ ಉತ್ತರಿಸುವ ರೀತಿಯಲ್ಲಿ ಅತಿಥಿಗಳ ಮನನೊಂದಾತು ಎಂಬ ಪ್ರಜ್ಞೆಯೇ ಆಕ್ಸಿನೋವ್‌ರಲ್ಲಿ ಇದ್ದಂತೆ ತೋರುತ್ತದೆ. ಈ ಕಾರಣದಿಂದಾಗಿಯೇ ದೇಜಗೌರವರಿಗೆ ಅವರ ಉತ್ತರಗಳಲ್ಲಿ ಪೂರ್ವಭಾಗದಲ್ಲೊಂದು ಉತ್ತರ ಭಾಗದಲ್ಲೊಂದು ಅಭಿಪ್ರಾಯ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಇವರಿಬ್ಬರ ಸಂಭಾಷಣೆಯ ವಿಸ್ತೃತ ಚರ್ಚೆಯ ಅಗತ್ಯವಿಲ್ಲವೆಂದು ಭಾವಿಸಿ ಆಕ್ಸಿನೋವ್ ಕೆಲವು ಮೂಲಭೂತ ಸಮಸ್ಯೆಗಳನ್ನೇ ಎತ್ತಿದ್ದು, ಅವು ಚರ್ಚಾರ್ಹವಾಗಿದ್ದು ದೇಜಗೌ ಮತ್ತು ವಿಚಾರ ಮಾಡಬಹುದಿತ್ತು. ಆದರೆ ಇಂಥ ಸಂದರ್ಭಗಳಲ್ಲಿ ದೇಜಗೌರವರ ಕನ್ನಡಾಭಿಮಾನ ಸಹಜವಾಗಿಯೇ ಗರಿಗೆದರಿಕೊಂಡು ಬಿಡುತ್ತದೆ. ಕನ್ನಡದ ದುರ್ಗತಿಯ ಬಗ್ಗೆ ಚಿಂತಿಸಲಾರಂಭಿಸುತ್ತದೆ. ಹೇಗೆಂದರೆ ಹೀಗೆ - " ಜರ್ಮನಿ ಸಣ್ಣ ರಾಷ್ಟ್ರ ಹಾಗೆಯೇ ಯೂರೋಪಿನ ಇತರ ರಾಷ್ಟ್ರಗಳು ಅವರ ಭಾಷೆಗಳು ಜಗತ್ತಿನ ಜನರಿಗೆಲ್ಲ ಗೊತ್ತಿರುವಾಗ ನಮ್ಮ ಭಾಷೆಗಳೇ? ಅದಕ್ಕೆ ನಾವೇ ಕಾರಣ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ, ನಮ್ಮ ಸರ್ಕಾರದಲ್ಲಿ ಕನ್ನಡ ಭಾಷೆಗೆ ಸರಿಯಾಗಿ ಮನ್ನಣೆ ಸಿಕ್ಕಿದ್ದರೆ ಅದರ ಹೆಸರು ಎಲ್ಲ ಕಡೆಯು ವಿಜೃಂಭಿಸುತ್ತಿತ್ತು. ಎಲ್ಲಿ ಹೋದರೂ ತಮಿಳಿನ ಹೆಸರು ಕೇಳಿ ಬರುತ್ತದೆ. ಇದಕ್ಕೆ

ಕಾರಣವೇನು? ' ಇತ್ಯಾದಿ ಒಮ್ಮೆಗೆ ಬರುವ ಕನ್ನಡಅಭಿಮಾನ ದೇಜಗೌರವರ ವೈಜ್ಞಾನಿಕ ಸರಣಿಯನ್ನು ಒಮ್ಮೆಗೆ ಕಡಿದು ಚರ್ಚಿಸುತ್ತಿದ್ದ ಅಂಶಗಳ ಮಹತ್ವವನ್ನು ಲಘುವಾಗಿಸಿಬಿಡುತ್ತದೆ ಎಂದು ನನಗನ್ನಿಸುತ್ತದೆ.

' ವಿದೇಶಗಳಲ್ಲಿ ನಾಲ್ಕು ವಾರ ಶೈಕ್ಷಣಿಕ ಮಹತ್ವವುಳ್ಳ ಪುಸ್ತಕವೆಂದು ನಾನು ಪರಿಗಣಿಸುತ್ತೇನೆ. ಏಕೆಂದರೆ ಇದರಲ್ಲಿ ಮೋಜಿನ ಪ್ರವಾಸದ ವಿವರಗಳಿರದೆ ಓರ್ವ ವಿದ್ವಾಂಸ, ಶಿಕ್ಷಣತಜ್ಞನ ಪ್ರವಾಸದ ವರದಿಯಿರುವಂತೆ, ಅವುಗಳ ವಿಶ್ಲೇಷಣೆಯೂ ಇದೆ. ನಮ್ಮ ತಜ್ಞರಿಗೆ ದಾರಿದೀಪಗಳಾಗುವಂಥ ವಿಚಾರಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಉದಾಹರಣೆಗೆ ಡಿಗ್ರಿಗಳ ಬಗೆಗೆ ನಮ್ಮಲ್ಲಿರುವ ಮೋಹವನ್ನೇ ತೆಗೆದುಕೊಳ್ಳಬಹುದು. ಡಿಗ್ರಿಗಳು, ಭಾರತದಲ್ಲಿ ಮಾತಾ ಪಿತೃಗಳ ವಿದ್ಯಾರ್ಥಿಗಳ ಆಕರ್ಷಣೆಯ ಕೇಂದ್ರಬಿಂದುಗಳಾಗಿದ್ದು, ಇವುಗಳಿಂದಲೇ ಮನುಷ್ಯನ ಅಂತಸ್ತು ಎಂಬ ಭ್ರಮೆ ನಮ್ಮಲ್ಲಿದ್ದರೆ, ಆ ದೇಶಗಳಲ್ಲಿನ ಮಕ್ಕಳಿಗೆತಂದೆ ತಾಯಿಗಳಿಗೆ ಈ ಡಿಗ್ರಿಗಳ ಬಗೆಗೆ ಯಾವ ದೃಷ್ಟಿಯನ್ನು ಹೊಂದಿದ್ದಾರೆ ಎಂಬುದರ ಬಗೆಗೆ ಅನೇಕ ಉದಾಹರಣೆಗಳೊಡನೆ ವಿವರಿಸುತ್ತಾರೆ. ಡಿಗ್ರಿಗಳಿಗೆ ಸಂಬಂಧಿಸಿದಂತೆ ಅವರ ದೃಷ್ಟಿ ನಮ್ಮಲ್ಲೂ ಬಂದಾಗ ಯುವಶಕ್ತಿ, ಸಮಯ, ಹಣದ ಸದುಪಯೋಗ ಎಷ್ಟರಮಟ್ಟಿಗೆ ಆಗಬಲ್ಲುದು ಎಂಬುದನ್ನು ಕುರಿತು ತೀವ್ರವಾಗಿ ಆಲೋಚಿಸಲು ನಮ್ಮ ದೇಶದವರಿಗೆ ಅವಕಾಶ ಮಾಡಿಕೊಡುತ್ತಾರೆ.

ರಷ್ಯನ್ ಶಿಕ್ಷಣಕ್ರಮ ದೇಜಗೌರವರ ಮನಸ್ಸನ್ನ ಪ್ರಭಾವಿತಗೊಳಿಸಿದಂತೆ ಜರ್ಮನ್ ಶಿಕ್ಷಣಕ್ರಮವೂ ಇವರನ್ನು ಆಶ್ಚರ್ಯಚಕಿತಗೊಳಿಸುತ್ತದೆ. ಹೇಗೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಆ ಜನರನ್ನು ಬುದ್ಧಿವಂತರನ್ನಾಗಿ, ಸ್ವಾವಲಂಭಿಗಳನ್ನಾಗಿ, ದೇಶಾಭಿಮಾನಿಗಳನ್ನಾಗಿ ಮಾಡುವಂತೆ ರೂಪಿತವಾಗಿದೆ ಎಂಬುದರ ಬಗೆಗೆ ವಿಸ್ತಾರವಾಗಿ ಪರಿಶೀಲಿಸಿ, ಇದಕ್ಕೆಲ್ಲ ಭಾಷಾ ಮಾಧ್ಯಮ ಹಾಗೂ ಪರಿಸರವೇ ಕಾರಣವೆಂದು ಹೇಳಿ ಅಂಥ ಸ್ಥಿತಿ ನಮ್ಮಲ್ಲಿಲ್ಲದ್ದಕ್ಕೆ ಪರಿತಪಿಸುತ್ತಾರೆ. ಒಮ್ಮೆ ದೇಜಗೌರವರು ಅಲ್ಲಿನ ೭ ನೇ ತರಗತಿಗೆ ಭೇಟಿ ಕೊಟ್ಟಾಗ ಅಲ್ಲಿನ ವಿದ್ಯಾರ್ಥಿಗಳಲ್ಲಿ ಕಂಡು ಬಂದ ಶಿಸ್ತು, ಕಾರ್ಯ ಮುನ್ನಡೆಯ ಬಗೆಗೆ ಪ್ರೀತಿ ಹುಟ್ಟಿದಂತೆ. ಅವರು ಭಾರತಕ್ಕೆ ಸಂಬಂಧಿಸಿದ್ದಂತೆ ಕೇಳಿದ ಪ್ರಶ್ನೆಗಳು, ಇಲ್ಲಿನ ಆರ್ಥಿಕ, ಸಾಮಾಜಿಕ, ಸಂಸ್ಕೃತಿ ಬದುಕಿನ ಬಗೆಗೆ ಅವರು ಪಡೆದಿರುವ ಮಾಹಿತಿಗಳು - ಅವು ತಪ್ಪಾಗಿರಬಹುದು. ಆದು ಬೇರೆ ಮಾತು- ಬೆರಗನ್ನುಂಟುಮಾಡುವ ಅಂಶಗಳೇ ಆಗಿವೆ. ನಮ್ಮಲ್ಲಿನ ಅದೇ ೭ನೇ ತರಗತಿಯ ವಿದ್ಯಾರ್ಥಿಗಳು ರಷ್ಟಾ ಲವಲವಿಕೆಯಿಂದಿರುವುದಿಲ್ಲವೆಂಬುದನು ದೇಜಗೌ ನೆನಸಿಕೊಂಡು ಕಾರಣಗಳನ್ನು ಹುಡುಕತ್ತ ಯೋಚಿಸಲಾರಂಭಿಸುತ್ತಾರೆ.

ಹೀಗೆ ಶೈಕ್ಷಣಿಕ ವಿಚಾರಗಳು ತಲೆಗೆ ಬಂದಾಗ ದೇಜಗೌರವರ ಮನಸ್ಸು ತನ್ನ ತಾಯ್ನಾಡಿನ ನೆನಪಿನ ಗುಂಗಿನಲ್ಲಿ ಸರಿಪಡಿಸುವುದನ್ನು ಉದ್ದಕ್ಕೂ ಗಮನಿಸಬಹುದಾಗಿದೆ. ಅದರಲ್ಲೂ ವಿಶ್ವವಿದ್ಯಾನಿಲಯಗಳ ಮಾತು ಬಂದಾಗ ಅಲ್ಲಿನ ವೈಶಿಷ್ಟ್ಯಗಳನ್ನು ಮರೆಯುವಂಥ ಅನೇಕ ಪ್ರಸಂಗಗಳನ್ನು ಉದ್ಧರಿಸುತ್ತಾರೆ. ವಿಶ್ವವಿದ್ಯಾನಿಲಯದ ಶಿಕ್ಷಣದ ಉನ್ನತ ಮಟ್ಟ ಉಳಿದುಕೊಂಡು ಬರಲು ಕಾರಣಗಳನ್ನು ಪರಿಶೀಲಿಸುತ್ತ ' ಇಲ್ಲಿಯ

7996

ವಿಶ್ವವಿದ್ಯಾನಿಲಯಗಳೆಲ್ಲ ಸ್ವಯಮಾಡಳಿತ ಸಂಸ್ಥೆಗಳು ರಾಜ್ಯ ಸರ್ಕಾರದಿಂದ ದ್ರವ್ಯ ಸಹಾಯವೊದಗುತ್ತದೆ. ಆದರೆ ಅದು ವಿಶ್ವವಿದ್ಯಾನಿಲಯಗಳ ವ್ಯವಹಾರದಲ್ಲಿ ತಲೆ ಹಾಕುವುದಿಲ್ಲ. ಅಧ್ಯಾಪಕ ಪ್ರಾಧ್ಯಾಪಕರೆಲ್ಲರೂ ಸರ್ಕಾರಿ ನೌಕರರೆಂದು ಲೆಕ್ಕಗೊಳುತ್ತಾರೆ. ಆದರೆ ಅವರು ಸರ್ವ ಸ್ವತಂತ್ರರು ತಮಗೆ ಅಧಿಕಾರವಿರುವ ವಿಷಯಗಳಲ್ಲಿ ನಿರ್ಭಯವಾಗಿ ಅಭಿಪ್ರಾಯ ವ್ಯಕ್ತಪಡಿಸಬಹುದು. ಆ ಅಭಿಪ್ರಾಯ ಸರ್ಕಾರದ ನೀತಿಗೆ ವಿರುದ್ಧವಾಗಿದ್ದರೂ ಅವರು ದಂತಾತೀತರಾಗುತ್ತಾರೆ" "ನಮ್ಮಲ್ಲಿಯಂತೆ ಜಳ್ಳುಗಳು ವಿಶ್ವವಿದ್ಯಾನಿಲಯದ ಶಿಕ್ಷಣಕ್ಕಾಗಿ ಹಾತೊರೆಯುವುದಿಲ್ಲ; ಸೀಟಿಗಾಗಿ ಪರದಾಡುವುದಿಲ್ಲ; ಮಂತ್ರಿ ಮಾನ್ಯರಿಂದ ಶಿಫಾರಸ್ಸು ಪತ್ರಗಳು ಬರುವುದಿಲ್ಲ. ಪ್ರಥಮ ದರ್ಜೆಯ ವಿದ್ಯಾರ್ಥಿಗಳಲ್ಲಿ ಕೆಲವರು ಮಾತ್ರ ಉನ್ನತ ಶಿಕ್ಷಣಕ್ಕೆ ಹೋಗುತ್ತಾರೆ." ಹೀಗೆ ಅಲ್ಲಿನ ವ್ಯವಸ್ಥೆಯಲ್ಲಿ ನೌಕರಿ ಹಾಗೂ ವಿ. ವಿ. ನಿಲಯಗಳಿಗೆ ಇರುವಂಥ ಸಂಬಂಧಗಳು ಹಾಗೂ ನಿರ್ಬಂಧಗಳು ಆ ದೇಶದಲ್ಲಿನ ಉನ್ನತ ಶಿಕ್ಷಣದ ಬಗೆಗೆ ಗೌರವ ಭಾವ ಮೂಡಿಸುತ್ತದೆ. ಅಂತೆಯೇ ವಿಶ್ವವಿದ್ಯಾನಿಲಯಗಳ ಆಡಳಿತ ವ್ಯವಸ್ಥೆ, ಸ್ವಾತಂತ್ರ್ಯವನ್ನೂ ಕುರಿತಂತೆ ಓದುವಾಗಲಂತೂ ಅಭಿಮಾನವೆನ್ನಿಸುತ್ತದೆ. ಅಭಿವ್ಯಕ್ತಿಗೆ ಅವರು ನೀಡುವ ಮಹತ್ವ ದಂಗುಬಡಿಸುತ್ತದೆ. ಅದಕ್ಕೆ ತದ್ವಿರುದ್ಧವಾದ ಪರಿಸ್ಥಿತಿಯಲ್ಲಿ ಬದುಕುವ ದೇಜಗೌ ಈ ಎಲ್ಲ ವ್ಯವಸ್ಥೆಗಳಿಂದ ಆಶ್ಚರ್ಯಚಕಿತರಾಗುವುದು ಕೂಡ ಸಹಜವೇ.

ಈಗಾಗಲೇ ಹೇಳಿರುವಂತೆ ಶಿಕ್ಷಣ ದೇಜಗೌ ಮನಸ್ಸನ್ನು ಆಕರ್ಷಿಸಿರುವ ಪ್ರಮುಖ ಬಿಂದು ' ಲಂಡನ್ನಿನಲ್ಲಿ ರಾಮಚಂದ್ರ ಶರ್ಮ ಅವರನ್ನು ಭೇಟಿಯಾದಾಗ ಅವರೊಂದಿಗೆ ನಡೆಸಿದ ಸಂಭಾಷಣೆಯಲ್ಲೂ ಶಿಕ್ಷಣ ಜಗತ್ತಿನ ಮೂಲಭೂತ ಸಮಸ್ಯೆಗಳು ಮುಂದೆ ಬರುವುದನ್ನು ಗಮನಿಸಬಹುದಾಗಿದೆ. ಶರ್ಮರವರು ದೇಜಗೌರೊಡನೆ ಭಾರತದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಮಾತನಾಡುತ್ತ ಬೌದ್ಧಿಕ ವಯಸ್ಸಿನಲ್ಲಿ ಭಾರತೀಯ ವಿದ್ಯಾರ್ಥಿಗಳು ಇಲ್ಲಿಯ ವಿದ್ಯಾರ್ಥಿಗಳಿಗಿಂತ ಮೂರುವರ್ಷ ಹಿಂದಿದ್ದಾರೆಂದು ಹೇಳಿ ಇದಕ್ಕೆ ಆಂಗ್ಲ ಭಾಷಾ ಮಾಧ್ಯಮದ ಹೊರೆ, ಸರಿಯಾದ ಆವರಣ (ಪರಿಸರ) ವಿಲ್ಲದಿರುವಿಕೆ. ಶಿಕ್ಷಣ ವಿಧಾನದ ನ್ಯೂನತೆಯನ್ನು ಕಾರಣಗಳೆಂದು ಹೇಳುತ್ತಾರೆ. ಹೀಗೆ ಕಾರಣಗಳನ್ನು ಪಟ್ಟಿ ಮಾಡುವ, ಭಾರತದ ಶಿಕ್ಷಣ ವ್ಯವಸ್ಥೆಯನ್ನು ಕುರಿತಂತೆ ಟೀಕಿಸುವ ಅವರು ಅದಕ್ಕೆ ಪರಿಹಾರವನ್ನೂ ಸೂಚಿಸುವ ರೀತಿ ತುಂಬ ವಿಚಿತ್ರದ್ದಾಗಿ ಕಾಣುತ್ತದೆ. ಭಾರತದಲ್ಲಿರುವ ಮಕ್ಕಳನ್ನು ಅವರ ವಾತಾವರಣದಲ್ಲಿಯೇ ಬೆಳಸಿ, ಯೋಗ್ಯ ಶಿಕ್ಷಣ ನೀಡಿ ಅಲ್ಲಿನ ಮಕ್ಕಳನ್ನೂ ಇಂಗ್ಲೆಂಡ್ ಮಕ್ಕಳ ಮಟ್ಟಕ್ಕೆ ತರಬೇಕಾದ ದಿಕ್ಕಿನಲ್ಲಿ ಯೋಚಿಸುವ ಬದಲು ಭಾರತದ ಮಕ್ಕಳನ್ನೆಲ್ಲ ಇಂಗ್ಲೆಂಡಿಗೆ ತಂದು ಇಲ್ಲಿನ ಶಿಕ್ಷಣ ನೀಡಬೇಕೆನ್ನುವ ರೀತಿ ತುಂಬ ವಿಚಿತ್ರದ್ದಾಗಿ ಕಾಣುತ್ತದೆ. ಆಂಗ್ಲ ಭಾಷಾವಾದಿಯಾಗಿದ್ದ ಶರ್ಮರು, ಇಲ್ಲಿಯ ಬಿ. ಎ. ಬಿ. ಎಡ್., ಪಾಸು ಮಾಡಿ ತಾನು ಇಂಗ್ಲೀಷಿನಲ್ಲಿ ಚೆನ್ನಾಗಿ ಮಾತನಾಡಬಲ್ಲನೆಂಬ ಹೆಮ್ಮೆಯಿಂದಿದ್ದರೂ ಲಂಡನ್ನಿನಲ್ಲಿ ಎದುರಾದ ಪರಿಸ್ಥಿತಿಯಿಂದಾಗಿ ತಮಗಾದ ಮೋಹಭಂಗವನ್ನು ನಿಸ್ಸಂಕೋಚವಾಗಿ ಹೇಳುವ ರೀತಿ ಮೆಚ್ಚತಕ್ಕದ್ದಾಗಿದೆ. ಹಾಗೂ ಭಾರತೀಯ ಇಂಗ್ಲಿಷ್ ಹಾಗೂ ಭಾರತೀಯರ ಇಂಗ್ಲಿಷ್ ಬರವಣಿಗೆಯ ಬಗೆಗೆ ಅವರು ತೋರುವ ನಿರಾಸಕ್ತಭಾವ ಮಾತೃಭಾಷೆಯ ಮಹತ್ವವನ್ನು

ಹೆಚ್ಚು ಮಾಡುತ್ತದೆ. ಬಹುಶಃ ಈ ಹಿನ್ನೆಲೆಯಲ್ಲಿ ಶರ್ಮರವರು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಕನ್ನಡವನ್ನು ಆರಿಸಿಕೊಳ್ಳಲು ಇದೇ ಕಾರಣವೆಂಬುದೂ ಸ್ಪಷ್ಟವಾಗುತ್ತದೆ. ಇಂಥ ಅನೇಕ ಸಂದರ್ಭಗಳು ಬಂದಾಗ ದೇಜಗೌ ಕನ್ನಡವನ್ನು ಸಮೃದ್ಧವಾಗಿ ಸಮರ್ಥಿಸುತ್ತ ನಮ್ಮ ರಾಜಕೀಯ ನೇತಾರರ ದೂರದೃಷ್ಟಿ ರಹಿತ ಶಿಕ್ಷಣ ನೀತಿಯನ್ನು ಅಪಾರವಾಗಿ ಟೀಕಿಸುತ್ತಾರೆ.

ವಿದೇಶ ಪ್ರವಾಸದ ಅವಧಿಯಲ್ಲಿ ದೇಜಗೌ ನಮ್ಮಲ್ಲಿಲ್ಲದ, ಆದರೆ, ಅವರುಗಳಲ್ಲಿ ಸಮೃದ್ಧವಾಗಿ ಕಾಣುವ ಆರಾಧನಾಭಾವವನ್ನು ವಿಶೇಷ ಮಹತ್ವಕೊಟ್ಟು ಗುರುತಿಸುತ್ತಾರೆ. ಆ ದೇಶಗಳಲ್ಲಿ ಈ ಆರಾಧನಾ ಭಾವ ಏಷ್ಟಿದೆ ಎಂದರೆ ತಮ್ಮ ತಮ್ಮ ನಾಡಿನ ಪುನರುತ್ಥಾನಕ್ಕೆ ಕಾರಣರಾದವರೆಲ್ಲ ಅವರಿಗೆ ಪರಮಪೂಜ್ಯರು. ಆತ ಕವಿಯಿರಬಹುದು ಈ ಎಲ್ಲರ ಬಗೆಗೂ ಪೂಜ್ಯತೆ. ಹಾಗೂ ಅವರಲ್ಲಿ ಪೂಜ್ಯತೆಯನ್ನು ಗುರುತಿಸುವುದರಲ್ಲಿ ಕಂಡುಕೊಳ್ಳುವ ಧನ್ಯತಾಭಾವ ದೇಜಗೌರವರನ್ನು ಮುಗ್ಧರನ್ನಾಗಿಸುತ್ತದೆ. ಅದರಲ್ಲೂ ರಾಷ್ಟ್ರನಾಯಕರುಗಳನ್ನು ಅವರು ತಮ್ಮ ಸ್ಫೂರ್ತಿಯ ಸೇವೆಯನ್ನೂ ಸ್ವೀಕರಿಸಿರುವ ಅಂಶವನ್ನು ದೇಜಗೌ ವಿಶೇಷವಾಗಿ ಗುರುತಿಸುತ್ತಾರೆ.

ಇನ್ನೂ ಕವಿಗಳ ಬಗೆಗೆ ಆ ದೇಶಗಳ ಜನರ ಮನೋಭಾವವನ್ನು ದೇಜಗೌ ಈ ಗ್ರಂಥದಲ್ಲಿ ಸಾಕಷ್ಟು ವಿವರವಾಗಿಯೇ ಪ್ರಸ್ತಾಪಿಸುತ್ತಾರೆ. ಷೆವ್‌ಚೆಂಕೋ, ಕಿಟ್ಟಲ್ ಮುಂತಾದ ಕವಿಗಳ, ಲೇಖಕರ ಪ್ರಸಂಗ ಬಂದಾಗ ಪುಳಕಿತರಾಗುತ್ತಾರೆ. ಭಾವುಕರಾಗಿ ಬಿಡುತ್ತಾರೆ. ತಮ್ಮನ್ನು ಭಾರತದ ಸಾಂಸ್ಕೃತಿಕ ರಾಯಭಾರಿ ಎಂದು ಹೇಳಿಕೊಳ್ಳುವ ಇವರು ನಿಜವಾದ ಕಾಳಜಿಯಿಂದ ತಮ್ಮ ಪ್ರವಾಸದುದ್ದಕ್ಕೂ ಈ ಪದದ ವ್ಯಾಪ್ತಿಗೆ ಅರ್ಥ ತಂದಿದ್ದಾರೆ. ಭಾರತದ, ಅದರಲ್ಲೂ ಕನ್ನಡದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಹೋದ ದೇಜಗೌ ತಮ್ಮ ಪ್ರವಾಸೋದ್ದೇಶವನ್ನು ಹೀಗೆ ಹೇಳುತ್ತಾರೆ- ' ನಾನು ಬಂದದ್ದು ಕಾರ್ಖಾನೆಗಳನ್ನು ನೋಡಲಿಕ್ಕಲ್ಲ. ಜಾಗತಿಕ ಸಂಸ್ಕೃತಿಯನ್ನು ನಿರ್ಮಿಸಿದ ಮಹಾವಿಭೂತಿಗಳು ಜನಿಸಿದ ಹಾಗೂ ವಾಸಿಸಿದ ಸ್ಥಳಗಳನ್ನು ನೋಡುವ ಸಲುವಾಗಿ. ಈ ಉದ್ದೇಶವನ್ನು ಸಹಾ ತಮ್ಮ ಮನಸ್ಸಿನಲ್ಲಿಟ್ಟುಕೊಂಡು ದಾರಿತುಳಿಯುವ ದೇಜಗೌರವರ ಮುಂದೆ ದಾರಿಯಲ್ಲಿ ಯಾರಾದರೂ ಯಾವೊಬ್ಬ ಕವಿಯ ಮಾತ್ತೆತ್ತಿದರೆ ಸಾಕು, ತಟಕ್ಕನೆ ಅತ್ತ ಗಮನ ಹೊರಳಿಸಿ ಅವರ ಬಗ್ಗೆ ತಮ್ಮ ಗೌರವಾಂಜಲಿಯನ್ನು ಭಕ್ತಿಯಿಂದ ಹರಿಸಿಬಿಡುತ್ತಾರೆ. ಒಮ್ಮೊಮ್ಮೆ ಇದು ಅತಿ ಎಂದು ಅನ್ನಿಸಿದರೂ ಆಶ್ಚರ್ಯವಿಲ್ಲ. ಇಂಥ ಒಂದು ಅತಿವೆನ್ನಿಸುವ ಪ್ರಸಂಗಕ್ಕೆ ಕಿಟ್ಟಲ್‌ನ ಸಂದರ್ಭ ಉತ್ತಮ ಉದಾಹರಣೆಯಾಗಿದೆ. ಕಿಟ್ಟಲ್‌ನನ್ನು ಬಾಯಿತುಂಬ ಹೊಗಳುವ, ಕನ್ನಡಕ್ಕೆ ಸಲ್ಲಿಸಿರುವ ಮಹತ್ವದ ಸೇವೆ ಸಲ್ಲಿಸಿರುವ ಆತನ ವಂಶದವರನ್ನು, ಕೊನೆಗೆ ಆತನ ಸಮಾಧಿಯನ್ನಾದರೂ ಹುಡುಕಲು ಪಡುವ ಇವರ ಹಾರ್ದಿಕ ಪ್ರಯಾಸ ಕನ್ನಡಕ್ಕೆ ಸೇವೆ ಗೈದವರ ಬಗ್ಗೆ ದೇಜಗೌರವರ ಮನಸ್ಸಿನಲ್ಲಿರುವ ಅಭಿಮಾನ, ಗೌರವವನ್ನು ಜಾಹಿರುಪಡಿಸುತ್ತದೆ. ದೇಜಗೌರವರ ಕನ್ನಡ ಪ್ರೇಮದ ಬಗೆಗೆ ಅಭಿಮಾನವೆನ್ನಿಸುತ್ತದೆ. ಹೀಗೆ ದೇಜಗೌರವರ ಹೃದಯ ಕನ್ನಡಕ್ಕಾಗಿ ಅಡಿಗಡಿಗೂ ಮಿಡಿಯುವುದನ್ನು ಈ ಗ್ರಂಥದ ಉದ್ದಕ್ಕೂ ಕಾಣಬಹುದಾಗಿದೆ.

ದೇಜಗೌರವರ ಬರವಣಿಗೆಯಲ್ಲಿ ಉದ್ದಕ್ಕೂ ಅವರ ಸರಳ ಸಹಜ ನಿರಾಡಂಬರ ವ್ಯಕ್ತಿತ್ವವನ್ನು ಕಾಣುತ್ತೇವೆ. ವಿಶ್ವವಿದ್ಯಾನಿಲಯದ ಕುಲಪತಿಯ ಸ್ಥಾನದಿಂದ ಅವರು ವಿದೇಶಕ್ಕೆ ಹೋಗಿದ್ದರೂ ಎಲ್ಲೂ ಅವರ ಕುಲಪತಿತನ ಅಹಮ್ಮಿನಿಂದ ಪರರನ್ನು ತನಗಿಂತ ಕಡಿಮೆ ಎಂದು ಭಾವಿಸಿಲ್ಲ. ಬದಲಾಗಿ ಹಳ್ಳಿಯ ಸೊಗಡು, ಅಲ್ಲಿನ ಸರಳತೆಯಿಂದ ಎಲ್ಲರೊಡನೆಯೂ ಲೀಲಾಜಾಲವಾಗಿ ವ್ಯವಹರಿಸುವ ಲೇಖಕರು ತಮ್ಮನ್ನು 'ಕುರಿಕಾಯುತ್ತಿದ್ದವನು' ಎಂದು ಪರಿಚಯಿಸಿಕೊಳ್ಳಲು ಹಿಂಜರಿಯುವುದಿಲ್ಲ. ಬಹುತೀಕ ವಿಚಾರಗಳಲ್ಲಿ ತೆರೆದ ಮನಸ್ಸಿನಿಂದ ವಿಚಾರಿಸುವ, ತಿಳಿದುಕೊಳ್ಳುವುದಕ್ಕೆ ದುಡಿಯುವ ಪ್ರವೃತ್ತಿ ಮೆಚ್ಚುಗೆಗೆ ಪಾತ್ರವಾಗುತ್ತದೆ. ಈ ಗುಣಗಳಿಂದಾಗಿಯೇ ದೇಜಗೌ ಡಾ. ಲೂಟ್ಸೆಯಿಂದ ಆಕರ್ಷಿತರಾಗುತ್ತಾರೆ, ಮನ ಬಿಚ್ಚಿ ಮಾತನಾಡಲಾರಂಭಿಸುತ್ತಾರೆ. ಲೂಟ್ಸೆಯವರೊಡನೆ ಅಲ್ಲಿನ ಗ್ರಾಮೀಣ ಬದುಕಿನ ಬಗೆಗೆ ದೇಜಗೌ ಸಂಗ್ರಹಿಸಿರುವ ಮಾಹಿತಿಗಳು ನಮ್ಮ ಹಳ್ಳಿಗರಿಗೆ ಮಾರ್ಗದರ್ಶಕವಾಗಿವೆ.

ಹಿಂದಿ ಮತ್ತು ಕನ್ನಡ ದೇಜಗೌರವರ ಪ್ರವಾಸದ ಸಂಗಡಿಗರು. ಒಂದು ಚರ್ಚೆಯನ್ನಾರಂಭಿಸಲು ಸಹಕಾರಿಯಾದರೆ ಮತ್ತೊಂದು ತಮ್ಮ ವಾದವನ್ನು ಮಂಡಿಸಲು ಸಹಾಯಕವಾಗಿ ಬರುತ್ತದೆ. ಹಿಂದಿಯನ್ನು ಕುರಿತು ಸಾಕಷ್ಟು ವಾದ-ವಿವಾದಗಳು ಓದುಗರಿಗೆ ಬೋರ್ ಎನ್ನಿಸಿದರೂ ಆಶ್ಚರ್ಯವಿಲ್ಲ. ಲೂಟ್ಸೆಯವರೊಡನೆ ಹಿಂದಿಯನ್ನು ಕುರಿತಾದಂಥ ಚರ್ಚೆ ಇದೇ ಬಗೆಯದಾಗಿದೆ. ಇನ್ನು ಹಿಂದೀ ಸಾಹಿತ್ಯ ಹಾಗೂ ಇಂಡಿಯನ್ ಇಂಗ್ಲಿಷ್ ಲೇಖಕರನ್ನು ಕುರಿತಂತೆ ಇಪರೀರ್ವರ ಅಭಿಪ್ರಾಯಗಳ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿಗೆ ಅವಕಾಶವಾದರೂ ಧೀರ್ಘವಾಗಿ ಚರ್ಚೆಮಾಡಲು ಈ ಅಭಿಪ್ರಾಯಗಳು ನಿಶ್ಚಿತವಾಗಿ ಸಹಾಯಮಾಡುತ್ತವೆ. ಅಂತೆಯೇ ಲೂಟ್ಸೆ ಭಾರತವನ್ನು ಕಾಣುವ ರೀತಿ ಹಾಗೂ ಭಾರತವನ್ನು ತಮ್ಮ ದೇಶದೊಂದಿಗೆ ಹೋಲಿಸಿಕೊಂಡು ಅಭ್ಯುದಯದ ವಿಭಿನ್ನ ಸೋಪಾನಗಳನ್ನು ಗುರುತಿಸುವ ರೀತಿಯೂ ಯಥಾರ್ಥವಾಗಿದ್ದು ಓದುಗರನ್ನು ವಿಚಾರಮಾಡಲು ಪ್ರೇರೇಪಿಸುತ್ತದೆ. ಹೀಗೆ ಲೂಟ್ಸೆ-ದೇಜಗೌರವರ ಸಂಭಾಷಣೆ ನಾನಾ ದೃಷ್ಟಿಯಿಂದ ಮಹತ್ವದಾಗಿದೆ.

ದೇಜಗೌ ಅವರ ಪ್ರವಾಸಗಳು ಮೋಜಗಾಗಿ, ಕಾಲಹರಣಕ್ಕಾಗಿ ಮಾಡಿದ ಪ್ರವಾಸಗಳಲ್ಲ. ಬೇರೆಯವರ ಸಂಸ್ಕೃತಿಗಳನ್ನು ತಿಳಿಯುವ, ಅವರ ಉತ್ತಮಾಂಶಗಳನ್ನು ಆತ್ಮೀಕರಿಸಿಕೊಳ್ಳುವ ತೆರೆದ ಮನಸ್ಸೊಂದನ್ನು ಉದ್ದಕ್ಕೂ ಕಾಣಬಹುದಾಗಿದೆ. ದೇಜಗೌ ಅವರ ಪ್ರವಾಸ ಉದ್ದೇಶ ಬದ್ಧವಾಗಿರುವುದರಿಂದ ಇವನ್ನು ಓದುವ ಓದುಗರೂ ಬೆಳೆಯಲು ಅವಕಾಶವಾಗಿದೆ. ಇದು ದೇಜಗೌ ಅವರ ಪ್ರವಾಸಗಳ ಉಪಲಬ್ಧಿಯೂ ಆಗಿದೆ.

* * * * *

ಡಾ. ದೇಜಗೌ ಅವರ "ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ"- ಒಂದು ಸಮೀಕ್ಷೆ

- ಡಾ. ಕೆ ವೈ ಶಿವಕುಮಾರ

ಹತ್ತನೆ ಶತಮಾನದಲ್ಲಿ ಕರ್ನಾಟಕದಲ್ಲಿ ಜೈನಧರ್ಮ ಮತ್ತು ಜೈನಸಾಹಿತ್ಯದ ಪ್ರಾಬಲ್ಯವಿತ್ತು. ಜೈನಕವಿಗಳು ರಾಜಾಶ್ರಯದಲ್ಲಿದ್ದು, ಅರಮನೆಯ ಪಂಡಿತರನ್ನೆ ಉದ್ದೇಶವಾಗಿಟ್ಟುಕೊಂಡು, ಬಹುತೇಕ ಸಂಸ್ಕೃತ ಭೂಯಿಷ್ಠವಾಗಿ ಕಾವ್ಯಗಳನ್ನು ರಚಿಸಿದುದರಿಂದ ಅವು ಶ್ರೇಷ್ಠಕಾವ್ಯಗಳಾಗಿದ್ದರೂ ಸಾಮಾನ್ಯ ಜನರ ಮನಸ್ಸನ್ನು ಸೂರೆಗೊಳ್ಳುವುದಿರಲಿ ಸ್ಪರ್ಶಮಾತ್ರವನ್ನು ಮಾಡದೆ ದೂರದಲ್ಲೆ ತನ್ನ ಅತಿ ಕಟ್ಟುನಿಟ್ಟನಿಂದಾಗಿಯೊ ಏನೊ ಸಾಮಾನ್ಯ ಜನರನ್ನು ತನ್ನೆಡೆಗೆ ಸೆಳೆಯಲಿಲ್ಲ. ತನ್ನ ಅನುವಂಶೀಯರ ಹೊರತಾಗಿ ಅನ್ಯರಿಗೆ ಪ್ರವೇಶಾವಕಾಶವಿರಲಿಲ್ಲ ವೈದಿಕ ಧರ್ಮದಲ್ಲಿ. ಧರ್ಮವೆ ಜೀವನದ ಗುರಿ, ಧರ್ಮಾಶ್ರಯವಿಲ್ಲದೆ ಬದುಕು ಅಸಾಧ್ಯವೆಂಬುದು ಮೈಗೂಡಿದ್ದುದರಿಂದ ಅಂದಿನ ನಮ್ಮ ಶ್ರೀಸಾಮಾನ್ಯರು ದಿಗ್ಭ್ರಮಾಧೀನರಾದರು. ಹಿಂದಿನ ಧರ್ಮಗಳು ಒಗ್ಗಲಿಲ್ಲ, ನವೀನ ಧರ್ಮವೊಂದು ಇನ್ನು ಉದಿಸಿರಲಿಲ್ಲ. ಹೀಗಾಗಿ ಹನ್ನೊಂದೇ ಶತಮಾನ ಒಂದು ಸಂಕೀರ್ಣ ಯುಗವಾಯಿತು. ಜೀವನದ ಗುರಿಯನ್ನು ಕಾಣಿಸುವ ಧರ್ಮಾಶ್ರಯ ನಮ್ಮ ಜನರಿಗೆ ಅತ್ಯವಶ್ಯಕವಾಗಿದ್ದುದರ ಅರಿವು ಬಸವಣ್ಣನವರಿಗೆ ಉಂಟಾಯಿತು. ತತ್ಕಾಲದಲ್ಲಿದ್ದೂ ಸಾಮಾನ್ಯ ಜನಕ್ಕೆ ಒಗ್ಗದಿದ್ದ ಧರ್ಮಗಳ ಸ್ವರೂಪವೂ ಬಸವಣ್ಣನವರಿಗೆ ತಿಳಿದಿದ್ದುದರಿಂದ, ಅವುಗಳಲ್ಲಿದ್ದ ಲೋಪದೋಷರಹಿತವಾದ, ಸಾಮಾನ್ಯ ಜನರು ಅನುಸರಿಸಲು ಸಾಧ್ಯವಾಗುವ ಆದರೆ ಯೋಗ್ಯವಾದ, ಸಾಮಾನ್ಯ ಜನರಿಂದಲೆ ಸೃಷ್ಟಿತವಾಗಬಹುದಾದ ಅಥವಾ ಪೂರ್ಣರೂಪವನ್ನು ಪಡೆಯಬಹುದಾದ ಧರ್ಮವೊಂದು ಅವರ ಚಿತ್ರದಲ್ಲಿ ಮೂರ್ತರೂಪವನ್ನು ಪಡೆದಿದ್ದರ ಗುರಿಯಾಗಿದ್ದುದರಿಂದ, ತಮಗೆ ಅವಶ್ಯವಾದ ಯೋಗ್ಯಧರ್ಮವೊಂದನ್ನು ತಾವೆ ಸೃಷ್ಟಿಸಿಕೊಳ್ಳುವಂತೆ ಸಾಮಾನ್ಯ ಜನರನ್ನು ರೂವಾರಿಗಳನ್ನಾಗಿ ರೂಪಿಸಬೇಕೆಂಬುದೂ ಅವರ ಗುರಿಯಾಗಿದ್ದಿರಬಹುದು.

ಸಾಹಿತ್ಯ, ಶಿಕ್ಷಣ, ಸಂಗೀತ, ಚಿತ್ರ, ನೃತ್ಯ, ಅಭಿನಯ ಮೊದಲಾದ ಸಂಸ್ಕರಿಸುವ ಎಲ್ಲ ಕಲೆಗಳೂ ಸಂಸ್ಕೃತಿಯ ಅಂಗಗಳೆ ಆದರೂ ಅವುಗಳಷ್ಟೆ ಸಂಸ್ಕೃತಿಯಲ್ಲ. ಮತ್ತೊಬ್ಬ ಮಾನವನಿಗೆ ದೈಹಿಕವಾಗಿಯಲ್ಲದೆ ತ್ರಿಕರಣಪೂರ್ವಕವಾಗಿ ಮಾನಸಿಕವಾಗಿಯೂ ನೋವುಂಟು ಮಾಡದಿರುವುದಲ್ಲದೆ, ತನಗೆ ಅಪಕಾರಾದಿ ನೋವುಂಟುಮಾಡಿಯೂ -ಮತ್ತೆ ಸಹಾಯಕ್ಕಾಗಿ ತನ್ನ ಬಳಿಗೇನೆ ಬಂದಾಗಲೂ - ಸಹಾಯ ಯಾಚನೆಗೆ ಅವನಿಗೆಬಾಯಿಲ್ಲದಾಗಲೂ- ಅವನ ಮನಸ್ಸನ್ನರಿತೆ ತಾನಾಗಿಯೆ ತತ್ಸಹಾಯದ ಭರವಸೆಯನ್ನು ನೀಡುವುದು ಮತ್ತು ಈಡೇರಿಸುವುದರ ಜೊತೆಗೆ ಹೊರಗೂ ಒಳಗೂ ಸಂಯಮವನ್ನು ರಕ್ತಗತ ಮಾಡಿಕೊಳ್ಳುವುದೆ ನಿಜವಾದ ಸಂಸ್ಕೃತಿ.

ಕ್ರಾಂತಿಕಾರಿ ಶಿವಶರಣರ 'ಕಾಯಕವೆ ಕೈಲಾಸ' ಮತ್ತು 'ದಯವೆ ಧರ್ಮದ ಮೂಲವಯ್ಯ' ಎಂಬ ತತ್ವಗಳಲ್ಲಿ ಅಗಾಧ ವಿಶ್ವಾಸವುಳ್ಳ ಸತತ ಕ್ರಿಯಾಶಾಲಿ ಹಾಗೂ ದಯಾಳು ದೇಜಗೌ ಅವರ "ವಿಶ್ವ ಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ" ಎಂಬ ಪುಸ್ತಕದಲ್ಲಿ ಅದೇ ಶೀರ್ಷಿಕೆಯ ಮೊದಲನೆ ಒಂದು ದೀರ್ಘ ಹಾಗೂ ಪ್ರಧಾನ ಲೇಖನವೂ ಸೇರಿ ಒಟ್ಟು ಏಳು ಲೇಖನಗಳಿವೆ. 'ವಚನಗಳಲ್ಲಿ ವೈಚಾರಿಕತೆ' 'ಶರಣ ವಿಚಾರ ಧಾರೆ' ಎಂಬ ಎರಡು ಮತ್ತು ಮೂರನೆ ಲೇಖನಗಳು ಮೊದಲನೆ ಲೇಖನಕ್ಕೆ ಪೂರಕವಾದವೆ ಆಗಿವೆ.

ಮೊದಲನೆ ಲೇಖನದ ಆರಂಭದಲ್ಲಿ, ಪರಸ್ಪರಾವಲಂಬಿತ ಮತ್ತು ಸಂಸ್ಕೃತಿಗಳಿಗಿರುವ ವ್ಯತ್ಯಾಸಗಳನ್ನು ಗುರುತಿಸಿರುವುದಲ್ಲದೆ ಸಂಸ್ಕೃತಿಯನ್ನು ವ್ಯಾಖ್ಯಾನಿಸಲಾಗಿದೆ. ನಗರದಿಂದ ನಾಗರಿಕತೆಯಾದಂತೆ, ಸಂಸ್ಕಾರದಿಂದ ಸಂಸ್ಕೃತಿಯಾಯಿತು. ಹೃದಯ ಮತ್ತು ಮನಸ್ಸುಗಳು ನಿಸರ್ಗ ಮಾನವನಿಗೆ ನೀಡಿರುವ ಅತ್ಯದ್ಭುತ ವರಗಳು ಅವುಗಳಿಂದಾಗಿ ಅವನು ಸೃಷ್ಟಿಯ ಏಕಮೇವಾದ್ಭುತವಾಗಿ ಕಾಣಿಸಿಕೊಳ್ಳುತ್ತಾನೆ. ಅವುಗಳ ವಿಕಾಸವೆ ಸಂಸ್ಕೃತಿ. ಆ ಸಂಸ್ಕೃತಿಯ ಪ್ರತಿಫಲನ ಅಥವಾ ಬಾಹ್ಯರೂಪವೆ ನಾಗರಿಕತೆ. "ಅಸಂಖ್ಯ ಮನಸ್ಸುಗಳ ಸಮಷ್ಟಿಯಲ್ಲಿ ಸಂಭವಿಸಿ, ಪ್ರಕಟವಾಗಿ, ಸಿದ್ಧವಾಗುವ ಒಂದು ದೇಶದ ಸಮಷ್ಟಿ ಮನಸ್ಸಿನ ಚಿತ್‌ಶಕ್ತಿಯ ರಸಗಂಗೆಯೆ ಆ ದೇಶದ ಸಂಸ್ಕೃತಿ......... ಮನುಷ್ಯಚೇತನದ ಸರ್ವತೋಮುಖವೂ ವಿಕಾಸಮಾನವೂ ಆದ ಆತ್ಮಶ್ರೀಯನ್ನು ಸಂಸ್ಕೃತಿ ಎಂದು ಸಂಕೇತಿಸಬಹುದು" ಎಂಬ ಮಹಾಕವಿ ಕುವೆಂಪುರವರ ಮಾತುಗಳನ್ನು ಉದ್ಧರಿಸಿದನಂತರ ಅವರದೇ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯದ ಶ್ರೀರಾಮಚಂದ್ರನ ಸ್ವಭಾವದ ಚಿತ್ರಣದ ಸಾಲುಗಳನ್ನು ಉದ್ಧರಿಸಿ; ಸಕಲ ಸದ್ಗುಣ ಭರಿತನೆ ಸುಸಂಸ್ಕೃತ, ಅವನೆ ಕಲ್ಯಾಣಪುರುಷ, ಅವನೆ ವಿಶ್ವಸಂಸ್ಕೃತಿಯ ಪ್ರತೀಕನೆಂಬ ನಿಲುವಿಗೆ ಬರಲಾಗಿದೆ. ಭಗವದ್ಗೀತೆಯ 'ದುಃಖೇಷು ಅನುದ್ವಿಗ್ನ ಮನಾಃ...............' ಎಂಬ ಶ್ಲೋಕವನ್ನು ಉದ್ಧರಿಸಿ, ಅದರಲ್ಲಿ ಉಕ್ತವಾಗಿರುವುದು ಸುಸಂಸ್ಕೃತನ ಲಕ್ಷಣವೆಂಬುದನ್ನು ಹೇಳಿದನಂತರ ಷಿಂಟೋಧರ್ಮ, ಜೊರಾಸ್ಟ್ರಿಯನ್ ಧರ್ಮ, ಬೌದ್ಧಧರ್ಮ, ಕ್ರೈಸ್ತಧರ್ಮ, ಇಸ್ಲಾಂಧರ್ಮದ ಮೂಲತತ್ವಗಳನ್ನು ಹಾಗೂ ಅವುಗಳ ಆಚರಣೆಯಲ್ಲಿ ಸಂಸ್ಕೃತಿಯ ಕುಸುಮವು ಅರಳಿ ಪರಾಗಬೀರುವುದನ್ನು ನಿರೂಪಿಸಲಾಗಿದೆ. ಮತಕ್ಕೆ ನೀತಿ ಅಗತ್ಯ, ಇವೆರಡರ ಸಂಗಮಸ್ಥಾನವೆ ಸಂಸ್ಕೃತಿಯೆಂಬ ಗಾಂಧೀಜಿ ಅವರ ಅಭಿಪ್ರಾಯವನ್ನೂ ಲೇಖಕರು ಇಲ್ಲಿ ಮರೆತಿಲ್ಲ. " ಇಂದ್ರಿಯಾನುಭವವಿಲ್ಲದ ಜ್ಞಾನವೇ ಇಲ್ಲ. "ಭಾವನೆಗಳ ಸತ್ಯತೆ ಬಾಹ್ಯವಸ್ತುಗಳ ಪ್ರಮಾಣದಿಂದ ದೃಢೀಕರಣಗೊಳ್ಳಬೇಕು" ಎಂಬ ಲಾಕ್, ಹ್ಯೂಮ್ ಮೊದಲಾದ ಅನುಭವ ಪ್ರಾಧಾನ್ಯವಾದಿಗಳ ವಾದವನ್ನು ಮಂಡಿಸದೆ ಬಿಟ್ಟಿಲ್ಲ. "ಮನುಷ್ಯನ ಬದುಕನ್ನು, ಅವನ ದೇಹ ಮನಸ್ಸು ಹೃದಯಗಳನ್ನು ತಿದ್ದಿ, ರೂಪಿಸಿ, ಹಸನುಗೊಳಿಸುವುದೆ ಪ್ರತಿಯೊಂದು ಧರ್ಮದ ಪ್ರಧಾನೋದ್ದೇಶ" ಎಂಬ ಕ್ರೋಢೀಕರಣದೊಡನೆ "ಬೆಳಕಿನ ಕಡೆಗೆ, ಒಳತಿನ ಕಡೆಗೆ, ಪರಹಿತದ ಕಡೆಗೆ, ವಿಶ್ವಪ್ರಜ್ಞೆಯ ಕಡೆಗೆ ಮನುಷ್ಯನನ್ನು ತಿರುಗಿಸುವ ಮತವೆ ಶ್ರೇಷ್ಠಮತ". " ಅರಿಷಡ್ವರ್ಗಗಳಂತು

ಮಾನವರ ಅವನತಿಗೆ ಕಾರಣವಾಗುತ್ತವೆಯೊ ಅಂತೆಯೆ ಸತ್ಯ ಧರ್ಮ ಪ್ರೇಮ ಅಹಿಂಸೆ ಸಂಯಮ ಮೊದಲಾದ ದೈವಿಗುಣಗಳು ಅವರ ಆಧ್ಯಾತ್ಮವಿಕಾಸಕ್ಕೆ ಆಧಾರವಾಗುತ್ತವೆ. ಆದ್ದರಿಂದ ಸಕಲ ಮಾನವರ ಶ್ರೇಯಸ್ಸಿಗೆ ಕಾರಣವಾಗಬಹುದಾದ ಎಲ್ಲ ನೀತಿಸೂತ್ರ ಆಚರಣೆಗಳು ಸಂಸ್ಕೃತಿಯ ತೆಕ್ಕೆಯಲ್ಲಿ ಬರುತ್ತವೆ. ಇಂಥ ಸಂಸ್ಕೃತಿಯನ್ನು ವಿಶ್ವಸಂಸ್ಕೃತಿಯೆಂದು ಕರೆಯುತ್ತೇವೆ" ಎಂಬ ಅಭಿಪ್ರಾಯಗಳಿಗೆ ಬರಲಾಗಿದೆ.

"ಅನ್ ಟು ದಿ ಲಾಸ್ಟ್ ಎಂಬ ಗ್ರಂಥವನ್ನು ರಚಿಸಿದ ರಸ್ಕಿನ್‌ಗಿಂತ ಏಳುನೂರು ವರ್ಷ ಹಿಂದೆ ಬದುಕಿದ್ದ ಬಸವಣ್ಣನವರು ದುಡಿಮೆಯ ಹಿರಿಮೆಯನ್ನು ಎತ್ತಿ ಹಿಡಿದರೆಂಬುದನ್ನು ಮರೆಯುವಂತಿಲ್ಲ....... ಹನ್ನೆರಡನೆಯ ಶತಮಾನದಲ್ಲಿಯೆ ಅಸ್ಪೃಶ್ಯತಾ ನಿರ್ಮೂಲನಕ್ಕೆ ಕೃತಸಂಕಲ್ಪರಾದದ್ದು ಅದ್ಭುತವೆಂದೆ ಹೇಳಬೇಕು. ಮಾನವೀಯತೆಗೆ ಅಗ್ರಪಟ್ಟ ದೊರೆಯಬೇಕೆಂಬುದೆ ವೀರಶೈವಧರ್ಮದ ಪ್ರಧಾನ ಧ್ಯೇಯ. ಮಾನವನ ಸಕಲ ಕರ್ಮಗಳಲ್ಲಿ ಮಾನವೀಯತೆ ತಲೆದೋರಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲಸುವಂತಾಗುತ್ತದೆಂಬುದು ಆಗಿನ ಕಾಲದ ಶರಣರ ತಿಳುವಳಿಕೆಯಾಗಿತ್ತು".

"ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಜಗತ್ತಿನಲ್ಲಿ ಮೊತ್ತಮೊದಲು ಹೋರಾಟ ನಡೆಸಿದ ಯಶಸ್ಸು ಬಸವೇಶ್ವರರಿಗೆ ಹಾಗೂ ಅಂದಿನ ಶಿವಶರಣರಿಗೆ ಸಲ್ಲಬೇಕು. ಹೆಣ್ಣು ಗಂಡಿಗೆ ಸಮಾನವೆಂದು ಘೋಷಿಸಿ, ಅವಳಿಗೂ ಸಾಮಾಜಿಕ ಧಾರ್ಮಿಕ ಆರ್ಥಿಕ ವೈಚಾರಿಕ ಸ್ವಾತಂತ್ರ್ಯವನ್ನು ಮಾತ್ರವಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ ಗೌರವ ವೀರಶೈವಧರ್ಮಕ್ಕೆ ಸೇರಬೇಕು. ಆಧ್ಯಾತ್ಮಿಕ ಸಾಧನೆ ಸಿದ್ಧಿಗಳಿಗೆ ಅವರೂ ಅರ್ಹರೆಂದೂ ಘೋಷಿಸಿ, ಸಾಧನೆಗನುಕೂಲವಾಗುವಂತೆ ಶೂನ್ಯದ ಹಾಗೂ ಸಮಾನತೆಯ ಸಂಕೇತವಾದ ಲಿಂಗವನ್ನು ಧರಿಸಿಕೊಳ್ಳಲು ಅವಕಾಶ ಕೊಟ್ಟದ್ದು ವೀರಶೈವ ಸಂಸ್ಕೃತಿ. ಅನುಭವ ಮಂಟಪದಲ್ಲಿ ಶರಣರಿಗೆ ಸರಿಸಮನಾಗಿ ಕುಳಿತು, ಅವರಿಗೆ ಹೊಯ್‌ಕಯ್ಯಾಗಿ ಅನೇಕ ಧಾರ್ಮಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದ ಶರಣೆಯರ ನಿದರ್ಶನ ಜಗತ್ತಿನಲ್ಲಿ ಮತ್ತೆಲ್ಲಿದೆ?............ ಸಮಾಜದ ಪರಿಪೂರ್ಣಾಭಿವೃದ್ಧಿಗೆ, ಸಂಸ್ಕೃತಿಯ ಸಂವರ್ಧನೆಗೆ, ನಾಡಿನ ಸರ್ವಂಕಷಾಭ್ಯುದಯಕ್ಕೆ ಸ್ತ್ರೀಶಕ್ತಿಯೂ ಅನಿವಾರ್ಯವೆಂದು ಮೊದಲು ಮನಗಂಡದ್ದು ವೀರಶೈವ ಸಂಸ್ಕೃತಿ".

"ಜಗತ್ತಿನ ಸಕಲ ಧರ್ಮಗಳು ಕರ್ಮಸಿದ್ಧಾಂತವನ್ನು ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿಕೊಂಡಿವೆ". "ಕಾರ್ಯಕವೆನ್ನುವುದು ಬರಿಯ ತತ್ವವಲ್ಲ, ಅದೊಂದು ಕಠಿನ ಶಿಸ್ತು, ಕಟೋರ ವ್ರತ; ಅದು ಬದುಕಿನ ಉಸಿರು, ನೆಲೆ; ಇಹಪರ ಸಾಧನ. ಶರಣರು ಈ ಸಿದ್ಧಾಂತವನ್ನು ಚರ್ಚೆ ಪ್ರಯೋಗಗಳ ಮೂಲಕ ಒರೆದು ಅರೆದು, ಕಾಯಕವೆ ಕೈಲಾಸವೆನ್ನುವಷ್ಟರಮಟ್ಟಿಗೆ ಅದನ್ನು ಪರಿಪೂರ್ಣಗೊಳಿಸಿದ್ದಾರೆ".

"ಕಾಯಕದ ಜತೆಜತೆಗೆ ಬರುವ........ ಅದ್ಭುತ ಸತ್ವವುಳ್ಳ ಮತ್ತೊಂದು ಪದ ದಾಸೋಹ. ಅದರ ನಿಷ್ಪತ್ತಿ ಏನೇ ಇರಲಿ, ಈಗ ಅದು ತ್ಯಾಗ ಅಪರಿಗ್ರಹ ಅಸಂಗ್ರಹ ಮೊದಲಾದ ಬದುಕಿನ ಅಮೂಲ್ಯ ಮೌಲ್ಯಗಳನ್ನು ಸಂಕೇತಿಸುತ್ತದೆ........ ದಾಸೋಹದಿಂದಲೆ ಕಾಯಕಕ್ಕೆ ಸಾರ್ಥಕತೆ. ಈ ಎರಡರಲ್ಲಿಯೂ ಸ್ವಾರ್ಥಕ್ಕಿಂತ ಪರಾರ್ಥಕ್ಕೆ ಹೆಚ್ಚು ಒತ್ತು. ಕಾಯಕದಿಂದ ಬಂದದ್ದರಲ್ಲಿ ಸರಳ ಜೀವನಕ್ಕೆಷ್ಟು ಅತ್ಯಗತ್ಯವೊ

ಅಷ್ಟನ್ನುಳಿಸಿಕೊಂಡು. ಉಳಿದದ್ದನ್ನು ಸಮಷ್ಟಿಗರ್ಪಿಸಬೇಕಾದ್ದು ಪ್ರತಿಯೊಬ್ಬ ಮಾನವನ ಗುರಿ. ಜಗತ್ತಿನ ಇಂದಿನ ಆರ್ಥಿಕ ಹಾಗೂ ಸಾಮಾಜಿಕ ವ್ಯಾಧಿಗಳಿಗೆ ಹೊಟ್ಟೆಬಾಕತನ ಹಾಗೂ ಸಂಗ್ರಹಗಳೆ ಕಾರಣವೆಂಬುದನ್ನು ಆಗಿನ ಕಾಲದ ಶರಣರು ಅರಿತಿದ್ದರು". "ವಚನಕಾರರು ಜಗತ್ತಿಗೆ ನೀಡಿದ ಎರಡು ವಿಶಿಷ್ಟ ಚಿಂತನ ಪರಿಣಾಮಕಾರಿ ಆರ್ಥಿಕ ಮೌಲ್ಯಗಳೆಂದರೆ ಕಾಯಕ ಮತ್ತು ದಾಸೋಹ ಸಿದ್ಧಾಂತಗಳು".

"ವೀರಶೈವ ಸಂಸ್ಕೃತಿಗೆ ಭಾರತೀಯ ಪರಂಪರೆಯ ಆಧಾರವೆಂಬ ಮಾತಿನಲ್ಲಿ ಕವಲಿಲ್ಲ; ಆದರದು ಅಷ್ಟಕ್ಕೇ ನಿಲ್ಲದೆ, ಆ ಪರಂಪರೆಯನ್ನು ಕ್ರಾಂತಿಪಥದಲ್ಲಿ ಮುನ್ನಡೆಸಿ ಆ ಪರಂಪರೆಯ ಪ್ರವರ್ತಕರಿಗೂ ದಿಗ್ಭ್ರಮೆಯಾಗುವಷ್ಟು ಪ್ರಮಾಣದಲ್ಲಿ ಅದನ್ನು ಬೆಳೆಸಿ, ಆದಕ್ಕೆ ಲೋಕೋತ್ತರ ಮಹತ್ವವನ್ನು, ಕಣ್ಕೋರೈಸುವ ಜ್ವಾಜಲ್ಯವನ್ನು, ಮನುಕುಲೋದ್ಧಾರ ಪರವಾದ ವಿನೂತನ ವೈಶಿಷ್ಟ್ಯವನ್ನು ತಂದುಕೊಟ್ಟದ್ದು ಶಿವಶಕ್ತಿಯೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ; ಅದು ವಿಶ್ವಸಂಸ್ಕೃತಿಗೆ ಸಲ್ಲಿಸಿದ ಕಾಣಿಕೆ ಗುಣ ಗಾತ್ರಗಳೆರಡರಲ್ಲಿಯೂ ಅಪಾರ ಹಾಗೂ ಅನನ್ಯ ಸಾಧಾರಣ".

"ಶರಣ ವಿಚಾರಧಾರೆ" ಎಂಬ ಲೇಖನ ಅಖಿಲ ಭಾರತೀಯ ಶರಣ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ದೇಜಗೌ ಮಾಡಿದ ಭಾಷಣ. ಇದು ಭಾಷಣದ ಧಾಟಿಯಲ್ಲಿಯೆ ಇದೆ. ಈ ಲೇಖನವನ್ನು ಓದುತ್ತಿದ್ದರೆ ದೇಜಗೌ ಅವರ ಪ್ರತ್ಯೇಕ್ಷ ಭಾಷಣವನ್ನೆ ಕೇಳಿದಂತಾಗುತ್ತದೆ. "ಒಂದು ಮಹತ್ತರವಾದ ಗ್ರಂಥವೊಂದನ್ನು ಇತ್ತೀಚೆಗೆ ಓದುತ್ತಾ ಇದ್ದೆ. ಅದು ಹಿಂದಿಯಲ್ಲಿದೆ. ಭಾರತೀಯ ಸಾಮಾಜಿಕ ವಿಶ್ಲೇಷಣೆಯನ್ನು ಅದರಲ್ಲಿ ಮಾಡಿದ್ದಾರೆ. ಅದನ್ನು ಓದುವಾಗ ನನಗೆ ದುಃಖವಾಗುತ್ತದೆ. ಏಕೆ ಅಂತ ಹೇಳಿದರೆ, ನಾವು ದಾಸಗುಪ್ತನ ವೇದಾಂತದ ತತ್ವಶಾಸ್ತ್ರವನ್ನು ತೆಗೆದುಕೊಳ್ಳಲಿ, ಅಥವಾ ರಾಧಾಕೃಷ್ಣ ಅವರ ಇಂಡಿಯನ್ ಫಿಲೋಸಫಿ ಓದುವಾಗ ಅಥವಾ ಇನ್ನು ಯಾವುದೇ ಭಾರತೀಯ ಸಂಸ್ಕೃತಿ ಇತಿಹಾಸವನ್ನು ನೋಡುವಾಗ ಕರ್ನಾಟಕದಲ್ಲಿ ಇಂತಹ ಮಹತ್ವಪೂರ್ಣವಾದಂತಹ ಆಂದೋಲನ, ಕ್ರಾಂತಿ ೧೨ ನೇ ಶತಮಾನದಲ್ಲಿ ನಡೆದಿದೆ ಎಂಬುದನ್ನು ಸಂಪೂರ್ಣವಾಗಿ ಗಮನಿಸದೆ ಇರತಕ್ಕಂಥದ್ದು. ವೀರಶೈವದ ಬಗ್ಗೆ ಅಲ್ಲಿ ಇಲ್ಲಿ ಒಂದೆರಡು ಮಾತನ್ನು ಹೇಳಿರಬಹುದು ಇಲ್ಲ ಅಂತ ಅಲ್ಲ. ಆದರೆ ಭಾರತೀಯ ಇತಿಹಾಸದಲ್ಲಿ ಇಂತಹ ಆಂದೋಲನ ಎಂದೆಂದೂ ನಡೆದಿಲ್ಲ. ಅಷ್ಟೇ ಅಲ್ಲ, ಪ್ರಪಂಚದಲ್ಲೂ ಬೇರೆ ಕಡೆ ನಡೆದ ಹಾಗೆ ನನಗೆ ಗೊತ್ತಿಲ್ಲ........ ಇಂತಹ ಅಹಿಂಸಾತ್ಮಕವಾದ ರಕ್ತಪಾತವಿಲ್ಲದ ಕ್ರಾಂತಿ ಮತ್ತೆಲ್ಲಿಯೂ ಇರಲಿಲ್ಲ." ೧೨ ನೇ ಶತಮಾನದ ಶಿವಶರಣರ ಕ್ರಾಂತಿಗೆ ಸಿಗಬೇಕಾಗಿದ್ದ ಐತಿಹಾಸಿಕ ಮಹತ್ವ ಲಭಿಸದಿದ್ದುದಕ್ಕಾಗಿ ಲೇಖಕರ ಕೊರಗು ಇಲ್ಲಿ ಎದ್ದುಕಾಣುವ ಅಂಶವಾಗಿದೆ.

ಶಂಕರಾಚಾರ್ಯರು ಸಂಸ್ಕೃತದಲ್ಲಿ ಬೋಧಿಸಿದರು, ಬುದ್ಧ ಬೋಧಿಸಿದ್ದು ಪಾಲಿಯಲ್ಲಿ ಬಸವಣ್ಣನವರು ಸಂಸ್ಕೃತವನ್ನು ಪಾರಂಗತರೆನ್ನುವಷ್ಟು -ಚೆನ್ನಾಗಿ ಕಲಿತಿದ್ದಿರಬಹುದಾದರೂ ಶ್ರೀಸಾಮಾನ್ಯರಿಗೆ ಅರ್ಥವಾಗಲೆಂದು ಕನ್ನಡದಲ್ಲಿ ಬೋಧಿಸಿದರೆಂಬುದು ಲೇಖಕರ ದೃಷ್ಟಿಯಲ್ಲಿ ಬಸವಣ್ಣನವರ ಬಗೆಗಿನ ಮೆಚ್ಚಿಕೆಯ ಅಂಶವಾಗಿದೆ.

"ಶರಣ ವಿಚಾರಧಾರೆ"ಎಂಬ ಪ್ರಬಂಧದ ಮುಕ್ತಾಯದಲ್ಲಿ ಒಂದು ಅತ್ಯಮೂಲ್ಯ ಸಲಹೆಯಿದೆ: "ಈ ಪರಿಷತ್ತಿನ ಆಶ್ರಯದಲ್ಲಿ ಇಡೀ ಜಗತ್ತೆ ಕಣ್ಣು ತೆರೆಯುವಂತಹ ಒಂದು ಭವ್ಯ ಶರಣ ಮ್ಯೂಸಿಯಂ ಈ ಜಗದ್ಗುರುಗಳವರ ನೇತೃತ್ವದಲ್ಲಿ ಆಗಬೇಕು. ಈ ಕೆಲಸ ವಿಧಾನಸೌಧಕ್ಕಿಂತಲೂ ತುಂಬಾ ಮಿಗಿಲಾದದ್ದು. ಬಸವಣ್ಣನವರ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಆಂದೋಲನವನ್ನು ಮೂರ್ತೀಕರಿಸುವ, ಚಿತ್ರಿಸುವ ಒಂದು ಮ್ಯೂಸಿಯಂ ಆದಷ್ಟು ಶೀಘ್ರದಲ್ಲಿ ಪ್ರಾರಂಭವಾಗಲಿ, ಇದರ ಜೊತೆಗೆ ಶಿವಶರಣರ ಸಾಹಿತ್ಯವನ್ನು ಕುರಿತ ಸಂಶೋಧನೆಗೆ, ಭಾಷಾಂತರಕ್ಕೆ ನೆರವಾಗುವಂತಹ ಒಂದು ಅಧ್ಯಯನ ಕೇಂದ್ರ ರೂಪುಗೊಳ್ಳಲಿ".

"ಇಸ್ಲಾಂ ಹಾಗೂ ವೀರಶೈವ ಸಂಸ್ಕೃತಿ" ಎಂಬ ಲೇಖನದಲ್ಲಿ, ಮಹಮದ್ ಮತ್ತು ಬಸವೇಶ್ವರರ ಸ್ವಭಾವ ಹಾಗೂ ಅವರಿಬ್ಬರ ತತ್ವಗಳಲ್ಲಿರುವ ಸಾಮ್ಯವನ್ನು ಉದ್ದಕ್ಕೂ ಗುರುತಿಸಲಾಗಿದೆ. ಇದರ ಜೊತೆಗೆ ಅವೆರಡೂ ಧರ್ಮಗಳಲ್ಲಿರುವ ಸಮಾನಾಂಶಗಳನ್ನೂ ವಿವರಿಸಲಾಗಿದೆ: "ಜಗತ್ತಿನ ಎಲ್ಲ ಧರ್ಮಗಳ ಚಾಲಕ ಶಕ್ತಿಯೆಂದರೆ ನೈತಿಕತೆ. ಇಸ್ಲಾಂ ಮತ್ತು ವೀರಶೈವ ಧರ್ಮಗಳ ಶ್ರೇಷ್ಠತೆಗೆ ಅವು ಉಳಿಸಿಕೊಂಡು ಬಂದಿರುವ ನೀತ್ಯಾದರ್ಶವೇ ಕಾರಣವೆನ್ನಲಡ್ಡಿಯಿಲ್ಲ. ಆಶ್ಚರ್ಯವೆನಿಸುವಷ್ಟು ಪ್ರಮಾಣದಲ್ಲಿ ಆ ಎರಡು ಧರ್ಮಗಳ ನೀತಿಮೀಮಾಂಸೆಯಲ್ಲಿ ಸಾಮ್ಯಗಳು ಎದ್ದುಕಾಣುತ್ತವೆ". " ತನ್ನ ಆದಾಯದಲ್ಲೊಂದು ಭಾಗವನ್ನು ಬಡವರಿಗೆ ನೀಡದವನು ಮುಸ್ಲಿಂ ಎನಿಸಿಕೊಳ್ಳುವುದಿಲ್ಲ, ಅಂತೆಯೆ ದಾಸೋಹವಿಲ್ಲದ ವೀರಶೈವಧರ್ಮವನ್ನು ಊಹಿಸಿಕೊಳ್ಳುವುದೆ ಕಷ್ಟ". " ವೀರಶೈವಧರ್ಮದ ಮತ್ತೊಂದು ಅನಿವಾರ್ಯಾಂಗ ಕಾಯಕ ಸಿದ್ಧಾಂತ. ಕಾಯಕ ಮತ್ತು ದಾಸೋಹಗಳು ಅವಳಿ ಜವಳಿಗಳು, ಪರಸ್ಪರಾವಲಂಬಿಗಳು. ಪರಾವಲಂಬಿಯಲ್ಲದ, ನ್ಯಾಯಬದ್ಧವಾದ ಸತ್ಯನಿಷ್ಠೆಯ, ಪ್ರಾಮಾಣಿಕವಾದ ಪರಿಶುದ್ಧಜೀವನಕ್ಕೆ ವೀರಶೈವ ಧರ್ಮ ಒತ್ತುಕೊಡುತ್ತದೆ. ಸಂಗ್ರಹಬುದ್ಧಿಯಿಂದ ದೂರವಾದ, ಆತ್ಮಸಮರ್ಪಣ ಮನೋಬಾವದಿಂದ, ಕರ್ತವ್ಯ ಪ್ರಜ್ಞೆಯಿಂದ, ಸಮಾಜಕಲ್ಯಾಣದ ದೃಷ್ಟಿಯಿಂದ ಆಚರಿಸಿದ ದುಡಿಮೆಯೆ ಕಾಯಕ. ಆತ್ಮ ಸ್ವಾತಂತ್ರ್ಯದ ಆತ್ಮಾಭಿಮಾನದ ಆತ್ಮತೇಜಸ್ಸಿನ ಸಂಕೇತವೆ ಅದು. ಭಿಕ್ಷೆಗಿಂತ ಲಜ್ಜಾಸ್ಪದವಾದ ಕ್ರಿಯೆ ಮತ್ತೊಂದಿಲ್ಲವೆಂದು, ಅದಕ್ಕಿಂತ ಕಟ್ಟಿಗೆಯನ್ನು ಮಾರಿ ಜೀವನ ಸಂಪಾದನೆ ಮಾಡುವುದು ಶ್ರೇಷ್ಠಮಾರ್ಗವೆಂದು ಇಸ್ಲಾಂಧರ್ಮಬೋಧಿಸುತ್ತದೆ". "ಕರುಣೆ ಭಗವತಂನ ವಿಶಿಷ್ಟ ಗುಣವೆಂದು ಎರಡು ಧರ್ಮಗಳು ಒಪ್ಪಿಕೊಳ್ಳುತ್ತವೆ".

"ವಿಗ್ರಾಹಾರಾಧನೆ ಮೂಲತಃ ಈ ಎರಡು ಧರ್ಮಗಳಿಗೂ ಬೇಡವಾದ ಸಂಗತಿ ತಾನೆ, ಆದರೆ ವೀರಶೈವಧರ್ಮ ವಿಗ್ರಹಾರಾಧನೆಯನ್ನು ದ್ವೇಷಿಸುವುದಿಲ್ಲ; ಇಸ್ಲಾಂ ಧರ್ಮ ದ್ವೇಷಿಸುತ್ತದೆ". ಹೀಗೆ ಅವೆರಡೂ ಧರ್ಮಗಳಲ್ಲಿರುವ ಕೆಲವು ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಈ ಪ್ರಬಂಧದ ಮುಕ್ತಾಯ ಸಂದರ್ಭದಲ್ಲಿ "ಏಕರೀತಿಯ, ಸಮಾನಸ್ವರೂಪದ ತಾತ್ವಿಕಾಂಶಗಳನ್ನು ಮತ್ತು ಜೀವನನೀತಿಸೂತ್ರಗಳನ್ನು ಗರ್ಭೀಕರಿಸಿಕೊಂಡಿರುವ ಇಸ್ಲಾಂ ಮತ್ತು ಆದಿ ವೀರ ಶೈವ ಸಂಸ್ಕೃತಿಗಳು ಮಾತ್ರ ಈ ರಾಷ್ಟ್ರಕ್ಕೆ ಆಶಾದೀಪಗಳಾಗಬಹುದೆಂಬ ಭರವಸೆಯನ್ನು ತಾಳಬಹುದಾಗಿದೆ". ಈ

ಅಭಿಪ್ರಾಯದ ಪ್ರತಿಯೊಂದು ಅಂಶವೂ ಸಂಪೂರ್ಣ ಸತ್ಯವೆ ಆಗಿದ್ದರೂ ಈ ಅಭಿಪ್ರಾಯವನ್ನು ವ್ಯಕ್ತಿಸುವಾಗ 'ಮಾತ್ರ' ಎಂಬ ಪದವನ್ನು ನಾವು ತೆಗೆಯುವುದು ಸೂಕ್ತವೆಂದು ತೋರುತ್ತದೆ.

'ಕಾಲಜ್ಞಾನ ಸಾಹಿತ್ಯ' ಎಂಬ ಪ್ರಬಂಧದಲ್ಲಿ "ಕಲ್ಯಾಣಕ್ರಾಂತಿ ವಿಫಲವಾದ ನಂತರ ಶಿವಶರಣರುಚೆಲ್ಲಾಪಿಲ್ಲಿಯಾಗಿ ಚೆದರಿಹೋಗಿ, ವೀರಶೈವಧರ್ಮದ ಬುಡ ತತ್ತರಿಸುತ್ತಿದ್ದಾಗ, ಎಲ್ಲೆಲ್ಲೂ ಅಸತ್ಯ, ಅನ್ಯಾಯ, ಅಧರ್ಮಗಳು ವಿಜೃಂಭಿಸುತ್ತಿದ್ದಾಗ, ವೀರಶೈವ ಧರ್ಮದ ಪುನರುಜ್ಜೀವನಕ್ಕಾಗಿ, ಧರ್ಮದ ಪುನರುತ್ಥಾನಕ್ಕಾಗಿ ಕೆಲವು ಶರಣ ಕವಿಗಳು ಈ ಸಾಹಿತ್ಯವನ್ನು ಪ್ರಚಾರ ಸಾಧನವನ್ನಾಗಿ ಬಳಸಿಕೊಂಡರೆಂದು ತೋರುತ್ತದೆ". " ಕಾಲಜ್ಞಾನ ಸಾಹಿತ್ಯ ಜನಪದ ಸಾಹಿತ್ಯದ ಒಂದು ರೂಪವೆಂದು ಕೆಲವರು ಭಾವಿಸಿದಂತಿದೆ. ಪ್ರಾರಂಭದಲ್ಲಿ ಜನಪದ ಸಾಹಿತ್ಯವಾಗಿಯೆ ಅದು ಹೊಮ್ಮಿರಬೇಕು. ಬಸವಾದಿ ಪ್ರಮಥರ ಹೆಸರಿನಲ್ಲಿರುವ ಸಾಹಿತ್ಯದ ಕರ್ತೃಗಳಾರೆಂಬುದು ತಿಳಿದಿಲ್ಲ". "ಅಜ್ಞಾತ ಕವಿಗಳು ರಚಿಸಿದ ಸಾಹಿತ್ಯಕ್ಕೆ ಗೌರವ ದೊರಕಿಸಿಕೊಡುವ ಸಲುವಾಗಿ ಅನಂತರ ಅವನ್ನು ಸಂಕಲಿಸಿದ ಸಂಕಲನಕಾರರು ಪುರಾತನ ವಚನಕಾರರ ಹೆಸರಿಗೆ ಜಮಾಮಾಡಿರಬೇಕು. ಹದಿನೈದನೆಯ ಶತಮಾನದಲ್ಲಿ ವೀರಶೈವಮತ ಪುನರುಜ್ಜೀವನಗೊಂಡಿತಷ್ಟೆ. ಸುಮಾರು ಆ ಸಮಯದಲ್ಲಿಯೆ, ಅಲ್ಲಿಯತನಕ ಜನರ ನಾಲಿಗೆಯಲ್ಲಿ ನರ್ತಿಸುತ್ತಿದ್ದ ಈ ಹಾಡುಗಳನ್ನು ಬಲ್ಲವರು ಸಂಕಲಿಸಿರಬೇಕೆಂದು ತೋರುತ್ತದೆ"ಎಂದು ಊಹಿಸಿದ ನಂತರ ಆ ಸಾಹಿತ್ಯದ ಒಂದು ದೀರ್ಘ ಚರಿತ್ರೆಯೆ ಇದೆ. ಇದರ ನಡುವೆಯೆ "ಈ ಸಾಹಿತ್ಯವನ್ನು ಪರೀಕ್ಷಿಸಿದಾಗ, ಬಸವ ಪ್ರಭು ಚೆನ್ನಬಸವ ಮಹಾದೇವಿಯಕ್ಕರ ಹೆಸರಿಗೆ ಗೌರವ ತರುವಂಥವಲ್ಲವೆಂಬುದು ಮಾತ್ರ ಸ್ಪಷ್ಟ. ತುರುಕರ ಕಿರುಕುಳದಿಂದ ಜನ ಕಂಗೆಟ್ಟದ್ದನ್ನು ಅವರಿಂದ ವೀರಶೈವ ಮತಕ್ಕೆ ಧಕ್ಕೆಯುಂಟಾದದ್ದನ್ನು ಕಣ್ಣಾರೆ ಕಂಡವರು ಇದನ್ನು ರಚಿಸಿರಬೇಕೆಂಬುದರಲ್ಲಿ ಸಂದೇಹವಿಲ್ಲ....... ತುರುಕರ ಸಂಬಂಧವಾದ ಕಾಲಜ್ಞಾನ ಸಾಹಿತ್ಯ ಮಲ್ಲಿಕಾಫರನ ದಂಡಯಾತ್ರೆಯ ನಂತರ ಸೃಷ್ಟಿಯಾದದ್ದಿರಬೇಕು." "ಪ್ರಾರಂಭದಲ್ಲಿ ಕಾಲಜ್ಞಾನ ಸಾಹಿತ್ಯ ಜಾನಪದೀಯವೆ ಆಗಿರಬೇಕೆಂಬುದಕ್ಕೆ ಅವುಗಳ ಛಂದಸ್ಸು ಮತ್ತು ಹಾಡಿವ ಧಾಟಿಯೆ ನಿದರ್ಶನವೆನ್ನಬಹುದು....... ಜಾನಪದ ಸಾಹಿತ್ಯದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ಛಂದೋಪ್ರಕಾರಗಳ ಅಬ್ಬರವನ್ನೇ ಇಲ್ಲಿಯೂ ಕಾಣಬಹುದು. ಇವು ಸಾಮಾನ್ಯವಾಗಿ ಅಂಶಗಣ ಘಟಿತವಾದ ಬಂಧಗಳೆಂಬುದನ್ನು ಮರೆಯಲಾಗದು" ಎಂಬ ಅಭಿಪ್ರಾಯಗಳಿಗೆ ಬರಲಾಗಿದೆ.

ಮುಕ್ತಾಯ ಸಂದರ್ಭದಲ್ಲಿ "ಸೋಮವ್ವರಂಥ ಮಹಿಳೆಯರು, ಕೃಷ್ಣಮಾಚಾರ್ಯರಂಥ ಬ್ರಾಹ್ಮಣರು ಈ ಸಾಹಿತ್ಯಕ್ಷೇತ್ರದಲ್ಲಿ ಕೃಷಿ ನಡೆಸಿದ್ದಾರೆ. ಆದರೆ ಇದರಲ್ಲಿ ವೀರಶೈವ ಕವಿಗಳದೇ ಸಿಂಹಪಾಲೆಂಬುದಂತು ನಿಜ. ಪುನರಾವರ್ತನೆ ಈ ಸಾಹಿತ್ಯದ ದೊಡ್ಡ ದೋಷ. ಅನೇಕ ಸಂಗತಿಗಳು ಬೇರೆ ಬೇರೆ ಕವಿಗಳ ಕೃತಿಗಳಲ್ಲಿ ಪುನರಾವೃತ್ತಿಗೊಂಡು ಓದುಗರಿಗೆ ಅಥವಾ ಕೇಳುಗರಿಗೆ ಬೇಸರವಾಗುತ್ತದೆ. ಆದರೆ ಸಾರುವಯ್ಯಗಳು ಹಾಡುವಾಗ ಈ ದೋಷ ಎದ್ದು ಕಾಣಲಾರದು". "ಮಹಾಕವಿಗಳ

ಕಾವ್ಯಪ್ರಚಾರಕ್ಕೆಂತು ಗಮಕಿಗಳು ಕಾರಣರೊ ಅಂತೆಯೆ ಕಾಲಜ್ಞಾನ ಸಾಹಿತ್ಯದ ಪ್ರಚಾರಕ್ಕೆ ಸಾರುವಯ್ಯಗಳು ಕಾರಣರಾಗಿದ್ದಾರೆ. ಸಾರುವಿಕೆಯೆ ಅವರ ನಿತ್ಯ ಕಾಯಕ. ಆ ಕಾಯಕದಿಂದಲೆ ಅವರ ಜೀವನಯಾಪನೆ ಸಾಗಬೇಕು. ಅವರು ಊರಿಂದೂರಿಗೆ ಹೋಗುತ್ತ, ಕಾಲಜ್ಞಾನವನ್ನು ಸಾರುತ್ತ, ಭಕ್ತರು ನೀಡುವ ಕಾಣಿಕೆಯಿಂದ ಜೀವನ ಸಾಗಿಸುತ್ತಾರೆ". " ಕಾಲಜ್ಞಾನ ಸಾಹಿತ್ಯವೂ ಸಮರ್ಥವಾದ ಒಂದು ಶಿಕ್ಷಣ ಮಾಧ್ಯಮ. ಶ್ರೀಸಾಮಾನ್ಯರ ನೀತಿಯ ಮಟ್ಟ ಎತ್ತರವಾಗಿರಲು ಇಂಥ ಶಿಕ್ಷಣ ವಿಧಾನಗಳು ಸಹಾಯಕವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಜನಸಾಮಾನ್ಯರ ಆಧ್ಯಾತ್ಮಿಕ ಕ್ಷುಧೆಯನ್ನು ಹಿಂಗಿಸುವಲ್ಲಿ, ಅವರಿಗೆ ಮನರಂಜನೆ ನೀಡುವಲ್ಲಿ, ಅವರ ಬದುಕನ್ನು ಶುದ್ಧಿಗೊಳಿಸುವಲ್ಲಿ, ಅವರನ್ನು ನೀತಿಯ ಹಾಗೂ ಧರ್ಮದ ಕಡೆಗೆ ತಿರುಗಿಸುವಲ್ಲಿ ಕಾಲಜ್ಞಾನ ಸಾಹಿತ್ಯದ ಪಾತ್ರ ಅಮೋಘವಾದುದೆಂದು ಹೇಳಬೇಕು" ಎಂಬ ತೀರ್ಮಾನಗಳಿಗೆ ಬರಲಾಗಿದೆ.

"ಕನ್ನಡದ ನುಡಿಯೊಮ್ಮೆ ಕನ್ನಡಿಯ ತೆರದಿಂದ, ಚೆನ್ನಾಗಿ ಬೆಳೆದು ಹೊಳೆಯುವುದು ಜಗದೊಳಗೆ" ಎಂಬ ನುಡಿಯ ಬಗೆಗೆ ಕನ್ನಡದತ್ಯಭಿಮಾನಿ ದೇಜಗೌ "ಕನ್ನಡದ ಬಗ್ಗೆ ಹೇಳಿರುವ ಮಾತು ಕನ್ನಡಿಗರ ಹೆಮ್ಮೆಗೆ ಕೋಡು ಮೂಡಿಸದಿರಲಾರದು" ಎಂದು ಹೆಮ್ಮೆಪಟ್ಟಿದ್ದಾರೆ.

"ತೋಂಟದ ಸಿದ್ದಲಿಂಗೇಶ್ವರರು" ಎಂಬ ಪ್ರಬಂಧದಲ್ಲಿ ತೋಂಟದ ಸಿದ್ದಲಿಂಗೇಶ್ವರರ ಹಲವು ವಚನಗಳನ್ನು ವ್ಯಾಖ್ಯಾನಿಸಿದ ನಂತರ "ಭಾಷೆ ಸರಳವಾದರೂ ಭಾವಾರ್ಥಗಳು ಸರಳವಲ್ಲ, ಒಂದೊಂದು ಮಾತೂ ಭವದ ಭಾರದಿಂದ ಬೀಗುತ್ತವೆ. ಅರ್ಥಗೌರವದಿಂದ ಹಿಗ್ಗುತ್ತವೆ. ಅಷ್ಟೇ ಅಲ್ಲ, ಒಂದೊಂದು ಮಾತಿಗೂ ಪುಟಗಟ್ಟಳೆ ವ್ಯಾಖ್ಯಾನ ಬೇಕಾದೀತು. ಆ ಮಾತುಗಳ ಭಾವ ಊಹಿಸಿಕೊಂಡಷ್ಟೂ ವಿಸ್ತಾರವಾಗುತ್ತದೆ. ಅರ್ಥ ವಿಚಾರಿಸಿದಷ್ಟೂ ವ್ಯಾಪಕವಾಗುತ್ತದೆ. ಒಂದೊಂದು ಪದವೂ ಬೀಜಮಂತ್ರ. ಹೀಗೆ ಮಾತುಗಳನ್ನು ಬಳಸುವ ಶಕ್ತಿ ಅಂತರ್ದೃಷ್ಟಿಯಿಂದ ಬರಬೇಕು, ಯೋಗಮತಿಯಿಂದಿಳಿಯಬೇಕು. ಈಶ್ವರ ಕೃಪೆಯಿಂದ ಸಮನಿಸಬೇಕು". "ಸಿದ್ದಲಿಂಗೇಶ್ವರರು ಮುಖ್ಯವಾಗಿ ಶರಣರು; ಶಿವಸಾಕ್ಷಾತ್ಕಾರ ಪಡೆದ ಮಹಾಸಂತರು. ಷಟ್ಸ್ಥಲ ಸಿದ್ಧಾಂತ ನಿರೂಪಣೆ ಅವರ ಬಾಳಿನ ಗುರಿಯಾಗಿದ್ದುದೂ ನಿಜ. ಆದರೆ ಈ ದಾರ್ಶನಿಕ ವ್ಯಕ್ತಿ ಕವಿ ಹೃದಯವನ್ನು ಹೊಂದಿದ್ದರೆಂಬುದನ್ನು ಮರೆಯುವಂತಿಲ್ಲ. ಆದ್ದರಿಂದಲೆ ಅವರ ವಚನಗಳು ಚೆಲುವಿನಾಗರವಾಗಿ, ಶಿವಸಾಕ್ಷಾತ್ಕಾರದ ಸೋಪಾನಗಳಾದುವು, ಭವಸಾಗರವನ್ನು ದಾಟುವ ಹರಿಗೋಲಾದುವು. ಈ ವಚನ ವಾಙ್ಮಯರೂಪವನ್ನು ಧರಿಸಿದ ಶಿವಕೃಪೆ ಅಂದಿನಿಂದ ಇಂದಿನತನಕ ಅನೇಕ ಜೀವಕೋಟಿಗಳನ್ನುದ್ಧರಿಸಿದೆ, ಮುಂದೆಯೂ ಉದ್ಧರಿಸಲಿದೆ. ಅಲ್ಲಮಪ್ರಭು ಬಸವೇಶ್ವರರ ನಂತರ ಕನ್ನಡ ನಾಡಿನಲ್ಲಿ ಅಗಾಧ ಪ್ರಭಾವ ಬೀರಿದ ಬಸವೇಶ್ವರರ ನಂತರ ಕನ್ನಡ ನಾಡಿನಲ್ಲಿ ಅಗಾಧ ಪ್ರಭಾವ ಬೀರಿದ ಶಿವಯೋಗಿಗಳಲ್ಲಿ ಸಿದ್ಧಲಿಂಗಯತಿಗಳು ಅಗ್ರಗಣ್ಯರು. ಸಮಕಾಲೀನ ವ್ಯಕ್ತಿಗಳ ಮೇಲಾಗಲಿ, ಮರಣೋತ್ತರ ಸಮಾಜದ ಮೇಲಾಗಲಿ ಅವರು ಬೀರಿದ ಪ್ರಭಾವ ಅಸ್ವಾದೃಶವಾದುದು" ಎಂಬ ತುಂಬ ಸಮರ್ಪಕ

ತೀರ್ಮಾನಗಳಿಗೆ ಬರಲಾಗಿದೆ. ಇವುಗಳಿಗೆ ಮೊದಲು ವ್ಯಕ್ತವಾಗಿರುವ ಒಂದು ಅಭಿಪ್ರಾಯ ನಿಜಕ್ಕೂ ವಿಚಾರಪೂರಿತವಾದುದು : "ನವ್ಯ ಸಾಹಿತ್ಯದ ಮೂಲವನ್ನು ಸಾಮಾನ್ಯವಾಗಿ ಪಾಶ್ಚಾತ್ಯದೇಶಗಳಲ್ಲಿ ಅರಸುವುದುಂಟು. ಇಂದು ನಮ್ಮ ಸುತ್ತಮುತ್ತ ಬೆಳೆಯುತ್ತಿರುವ ನವ್ಯ ಸಾಹಿತ್ಯ ಪಾಶ್ಚಾತ್ಯರಿಂದ ಎರವಲು ಪಡೆದದ್ದು ನಿಜ. ಆದರೆ ಐತಿಹಾಸಿಕ ಪ್ರಜ್ಞೆಯುಳ್ಳ ಜನ ಇದರ ಮೂಲವನ್ನೂ ನಮ್ಮ ಹಿಂದಿನ ಸಾಹಿತ್ಯದಲ್ಲಿ ಗುರುತಿಸಬಹುದು. ಸಾಹಿತ್ಯದಲ್ಲಿ ನೆಲದ ಸೊಗಡು ಎರಚುತ್ತಿರಬೇಕು. ಭಾಷೆ ಆಡುಮಾತಿಗೆ ಹತ್ತಿರವಾಗಿರಬೇಕು. ಭಾವಾರ್ಥಾನುಸಾರಿಯಾದ ಲಯವೆ ಜೀವಾಳವಾದ ಸ್ವಚ್ಛಂದ ಛಂದಸ್ಸು ಸರ್ವತ್ರ ತಾಂಡವಾಡಬೇಕು. ಪ್ರತಿಮೆಗಳ ಹಂಜರದ ಮೇಲೆ ಕಾವ್ಯದ ಬಳ್ಳಿ ಹರಡಬೇಕು -ಇತ್ಯಾದಿ ನವ್ಯಕಾವ್ಯದ ಲಕ್ಷಣಗಳನ್ನು ಯಥೇಚ್ಛವಾಗಿ ವಚನ ಸಾಹಿತ್ಯದಲ್ಲಿ ಕಾಣಬಹುದು. ಬಸವೇಶ್ವರ ಮಹಾದೇವಿಯಕ್ಕರಿರಲಿ, ದೇವರ ದಾಸಿಮಯ್ಯ ಅಂಬಿಗರ ಚೌಡಯ್ಯ ಮೊದಲಾದ ಕಾಯಕ ಪ್ರತಿಷ್ಠೆಯ ವಚನಕಾರರ ವಚನಗಳಲ್ಲಿ ನೆಲದ ವಾಸನೆ ಮೂಗಿಗೆ ಬಡಿಯುತ್ತದೆ. ಅವರು ಬಳಸುವುದೆಲ್ಲಾ ಆಡು ಮಾತು. ಲಯಕ್ಕನುಸಾರವಾಗಿ ವಚನದ ಸಾಲುಗಳನ್ನು ಜೋಡಿಸಿದಾಗ ಸ್ವಚ್ಛಂದ ಛಂದಸ್ಸಾಗುತ್ತದೆ. ಈ ಮಾತುಗಳು ಸಿದ್ಧಲಿಂಗೇಶ್ವರರ ವಚನಗಳಿಗೂ ಅನ್ವಯಿಸುತ್ತವೆ. ಬೆಡಗಿನ ವಚನಗಳಂತು ನವ್ಯಕಾವ್ಯದೊಡನೆ ಸ್ಪರ್ಧೆಹೂಡುವಂತಿವೆ".

"ಮರುಳ ಸಿದ್ಧೇಶ್ವರ" ಎಂಬ ಕಡೆಯ ಪ್ರಬಂಧದಲ್ಲಿ, ದೇವಕವಿಯಿಂದ ಚಿತ್ರಿತವಾಗುವ ಮರುಳ ಸಿದ್ಧೇಶ್ವರನ ಪವಾಡಗಳ ಬಗೆಗೆ ನಿರ್ಭಿಡೆಯ ಪ್ರತಿಭಟನೆ ವ್ಯಕ್ತವಾಗಿರುವುದಲ್ಲದೆ ಅವನ ಜೀವನ ಹೇಗಿದ್ದಿರಬಹುದೆಂಬುದನ್ನು ಸಮರ್ಥವಾಗಿ ಊಹಿಸಲಾಗಿದೆ: "ದೇವಕವಿಯೂ ಈ ಸುಳ್ಳಿನಿಂದ ಪಾರಾಗಲಾರದೆ ಮಾದಿಗನ ಮರುಳನ ಸುತ್ತ ಪವಾಡಗಳ ಬಲೆಯನ್ನು ನೆಯ್ಯಲು ಯತ್ನಿಸಿದ್ದಾನೆ....... ಸ್ವಜಾತಿಯಲ್ಲಿದ್ದ ಮೂಢಸಂಪ್ರದಾಯಗಳನ್ನು, ಹಿಂಸಾತ್ಮಕ ಕಾರ್ಯಗಳನ್ನು ಪ್ರತಿಭಟಿಸಿ ಅವರ ವಿರೋಧವನ್ನು ಕೂಡ ಕಟ್ಟಿಕೊಂಡು ಕೊನೆಗೆ ಅವರಿವರಿಗೆ ಮಾತ್ರವಲ್ಲ, ಅಂತ್ಯಜರಿಗೆ ಮಾತ್ರವಲ್ಲ, ಇಡೀ ಮಾನವ ಕುಟುಂಬದ ಗೌರವಕ್ಕೆ ಪಾತ್ರನಾಗಿರಬೇಕು..........ದೇವಕವಿ ಚಿತ್ರಿಸಿರುವ ಮರುಳ ಸಿದ್ಧನ ವ್ಯಕ್ತಿತ್ವ ಅಪೂರ್ಣವೆಂದೆ ಹೇಳಬೇಕಾಗುತ್ತದೆ. ಹುಟ್ಟಿದಾಗಲೆ ಮೈಯೊಡನೆ ಬೆಳೆದು ಬಂದ ಶಿವಕರುಣೆಯ ವಜ್ರಕವಚವನ್ನುಳ್ಳ ಆ ಭವ್ಯ ವ್ಯಕ್ತಿಗೆ ದೇವಕವಿಯ ಪವಾಡದ ಅರಿವೆಯೇಕೆ? ಸಂಪ್ರದಾಯಗಳ ಹೊದಿಕೆಯೇಕೆ ? ಮಹಾತ್ಮರ ಹಿರಿಮೆಯನ್ನಳೆಯುವ ಅಳವು ಸಾಮಾನ್ಯರಿಗೆ ನಿಲುಕದು. ಮಾನವನ ಬಾಳಿನಲ್ಲಿ ಮೂಡುವ ಒಗಟುಗಳಿಗೆ ಉತ್ತರಕೊಟ್ಟು ಸಂಸ್ಕೃತಿಯ ಕಣ್ಣಾಗಿ, ತವರಾಗಿ, ವಿಜ್ಞಾನಿ ಮಾನವನಿಗೆ ಗುರುಸ್ಥಾನದಲ್ಲಿ ನಿಲ್ಲಬಲ್ಲ ವ್ಯಕ್ತಿಯವನು".

ಹೀಗೆ ಈ ಹೊತ್ತಿಗೆಯಲ್ಲಿರುವ ಪ್ರಬಂಧಗಳೆಲ್ಲ ಹುರುಳಿಲ್ಲದ, ದುರಭಿಮಾನದ, ಹುಂಬತನದ ಲೇಖನಗಳಾಗಿಲ್ಲದೆ ಸಾಧಾರವಾಗಿ ನಿರೂಪಿಸಿದಂತಹುಗಳಾಗಿವೆ. "ಸಂಸ್ಕೃತಿಯ ಒರೆಗಲ್ಲಾದ, ಸಂಸ್ಕೃತಿಯ ಸಾರಸರ್ವಸ್ವವಾದ ವಿಶ್ವಪ್ರೇಮ ವಿಶ್ವೌದಾರ್ಯಗಳು ಕೇವಲ ಒಬ್ಬಿಬ್ಬರು ಮತಾಚಾರ್ಯರ, ಒಬ್ಬಿಬ್ಬರು ಮಹಾತ್ಮರ ಸ್ವತ್ತಾಗಿ,

ದ್ವೇಷ ಮಾತ್ಸರ್ಯಗಳ ಹಾಲಾಹಲ ದಿನೇ ದಿನೇ ವೃದ್ಧಿಗೊಂಡು ಮಾನವ ಜೀವನವೆಲ್ಲ ಸಂಕ್ಷೋಭೋಗೀಡಾಗಿದೆ........ ಆಧುನಿಕ ಯುಗದಲ್ಲಿ ಸ್ವಪ್ರತಿಷ್ಠೆಯಿಂದ ಕೂಡಿದ ಮತೀಯ ದ್ವೇಷ ಇವೇ ಕಾರಣವಾಗಿ ಪ್ರಪಂಚ ಮೃತ್ಯುವಿನ ಕ್ರೀಡಾರಂಗವಾಗಿ ಪರಿಣಮಿಸಿದೆ. ನಾನಾ ರಾಷ್ಟ್ರಗಳ ಸಂಬಂಧ ವಿಚ್ಛೇದನಕ್ಕೆ ಇವು ಕಾರಣವಾಗಿರುವಂತೆ ಪ್ರತಿಯೊಂದು ರಾಷ್ಟ್ರದ ಅಂತಃಕಲಹಗಳಿಗೂ ಇವೇ ಕಾರಣ. ವಿಶ್ವ ಸಂಸ್ಕೃತಿಯ ಕೇಂದ್ರಸ್ಥಾನವೆನಿಸಿಕೊಂಡಿರುವ ಭರತಖಂಡದ ಅನೇಕ ಜಯಾಪಜಯಗಳಿಗೆ, ಉನ್ನತಿ ಅವನತಿಗಳಿಗೆ ಮುಖ್ಯವಾಗಿ ಹಿಂದೂ ಸಮಾಜದ ಲೋಪದೋಷಗಳೂ ಕಾರಣವೆಂಬುದನ್ನು ಇತಿಹಾಸಜ್ಞರು ಮರೆಯಲಾರರು"- ಹೀಗೆ ಸಮಾಜಗಳ, ರಾಷ್ಟ್ರಗಳ, ವಿಶ್ವದ ದುಷ್ಟಶಕ್ತಿಗಳ ಬಗೆಗಿನ ಲೇಖಕರ ನೊಂದ ಮನಸ್ಸಿನ ಪ್ರತಿಕ್ರಿಯೆಗಳು ಈ ಎಲ್ಲ ಲೇಖನಗಳಲ್ಲಿ ಅಲ್ಲಲ್ಲೆ ವ್ಯಕ್ತವಾಗಿವೆ.

* * * * *

ಕುಲಪತಿಯ ಮೂರು ವರ್ಷದ ಸಾಧನೆಗಳು

-ಹ. ಕ. ರಾಜೇಗೌಡ

ಶ್ರೀ ದೇ. ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾಗಿ ಅಧಿಕಾರ ವಹಿಸಿಕೊಂಡಾಗ ಇಡೀ ಕನ್ನಡನಾಡೇ ಕಣ್ಣಾಗಿ, ಅವರತ್ತ ನೋಡಿತು. ಇನ್ನು ಮುಂದಾದರೂ ಕನ್ನಡ ತನ್ನ ಸ್ಥಾನಮಾನಗಳನ್ನು ಪಡೆಯಬಹುದೆಂಬ ದೂರದ ಆಸೆಯೊಂದು ಕನ್ನಡಿಗರ ಹೃದಯದಲ್ಲಿ ಮೂಡಿತು. ಏಕೆಂದರೆ ಕನ್ನಡದ ಏಳಿಗೆಯ ಬಗ್ಗೆ, ಅದರ ಸ್ಥಾನ ಮಾನಗಳ ಬಗ್ಗೆ ಅವರಷ್ಟು ಕಳಕಳಿಯಿಂದ ಚಿಂತೆಮಾಡುವವರು ಅಪರೂಪವೆಂದೇ ಹೇಳಬೇಕು. ದೇ.ಜ.ಗೌ ಅವರ ಭಾಷಾಪ್ರೇಮ ಭಾವೋಪ್ರೇತವಾದುದಲ್ಲ; ವೈಜ್ಞಾನಿಕವಾದುದು. ಕನ್ನಡನಾಡು ನುಡಿಗಳಿಗೆ ಕುಂದುಂಟಾಗುವ ಸೂಚನೆಗಳು ಕಂಡಕೂಡಲೆ ಅವರು ಸಿಡಿದೇಳುವುದುಂಟು. ಮೊನ್ನೆ ಮೊನ್ನೆ ಅವರು ಕಾಸರಗೋಡಿನ ಹೊರನಾಡು ಕನ್ನಡಿಗರ ಸಮ್ಮೇಳನ ಮತ್ತು ಬೆಂಗಳೂರಿನಲ್ಲಿ ನಡೆದ ಗಡಿ ಹಿತರಕ್ಷಕ ಸಮಿತಿಗಳಲ್ಲಿ ಮಾಡಿದ ಭಾಷಣಗಳು ಇನ್ನೂ ಕನ್ನಡಿಗರ ಹೃದಯದಲ್ಲಿ ಮೊರೆಯುತ್ತಿವೆ. ನಾಡು ನುಡಿಗಳ ಹಿತರಕ್ಷಣೆಗೆ ಅವರು ತಮ್ಮ ಸ್ಥಾನಮಾನಗಳನ್ನೂ ಲೆಕ್ಕಿಸದೆ ಚಳುವಳಿಯ ಹಾದಿ ಹಿಡಿಯಲೂ ತಯಾರು. ಕನ್ನಡದ ಮೇಲಿನ ಅವರ ಈ ಅವ್ಯಾಜ ಪ್ರೀತಿ ಕಟ್ಟಿದ್ದಲ್ಲ, ಹುಟ್ಟಿದ್ದು. "ಕನ್ನಡದ ಪ್ರಗತಿಗಾಗಿ ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡರೆಂದರೆ ಅದು ಕೈಗೂಡುವತನಕ ನಿಷ್ಠೆಯಿಂದ ಅಹರ್ನಿಶಿ ತಾನೂ ದುಡಿದು ತನ್ನ ಸಹೋದ್ಯೋಗಿಗಳನ್ನೂ ಪ್ರೋತ್ಸಾಹಿಸುವರು. ಕನ್ನಡದ ಏಳಿಗೆಯ ಬಗ್ಗೆ ಅನೇಕ ವೇಳೆ ತುಂಬ ನೊಂದುಕೊಂಡು ಪರಿಸ್ಥಿತಿ ಹದಗೆಡುವಂತಿದ್ದರೆ ನಿಷ್ಠುರವಾಗಿಯೆ ಆಡುವರು. ಕನ್ನಡದ ವೈರಿಗಳಿಗೆ ಜವರೇಗೌಡರು ನಿಜವಾಗಿಯೂ ಪ್ರತ್ಯಕ್ಷ ಜವರಾಯನೆ ಆಗುತ್ತಾರೆ. ಹಾಗೆಯೆ ಅವರು ಮಾರ್ದವ ಮೂರ್ತಿಯೂ ಹೌದು.

ಚನ್ನಪಟ್ಟಣ ತಾಲ್ಲೂಕು ಚಕ್ಕರೆ ಗ್ರಾಮದ ದೇವೇಗೌಡರ ಕಿರಿಯ ಮಗನಾಗಿ 1918 ರಲ್ಲಿ ಇವರು ಜನ್ಮ ತಳೆದರು. ಬಾಲ್ಯವೆಲ್ಲಾ ಮೈ ಮುಚ್ಚಲು ಒಂದು ಅಂಗಿಯೂ ಇಲ್ಲದಂಥ ಬಡತನದ ಬವಣೆಯಲ್ಲಿ ಕಳೆಯಿತು. ಆಡು ಕಾಯುತ್ತಿದ್ದ ಬಾಲಕ ದೇಜಗೌ ಶಾಲೆ ಪ್ರವೇಶಿಸಿದುದೂ ಒಂದು ವಿಚಿತ್ರ ಸನ್ನಿವೇಶದಲ್ಲಿಯೆ. ಕುತೂಹಲಕ್ಕಾಗಿ ಮೇಯಿಸುತ್ತಿದ್ದ ಆಡುಗಳನ್ನು ಬಿಟ್ಟು ಶಾಲೆಯ ತರಗತಿಯಲ್ಲಿ ಬಂದು ಕುಳಿತ ಈ ಬಾಲಕನ ಭವಿಷ್ಯವನ್ನು ಕಂಡವರು ಅಧ್ಯಾಪಕ ಶಾಮಾಚಾರ್. ಆದರೆ ಬಿಟ್ಟು ಬಂದ ಆಡುಗಳು ಯಾರದೊ ಹೊಲ ಮೇದು ಆದ ಗಲಾಟೆಯಿಂದಾಗಿ ತಂದೆಯ ಕೈಯಲ್ಲಿ ಛಡಿ ಏಟುಗಳು ಬಿದ್ದುವು. ಈಗಾಗಲೇ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಹಿರಿಯ ಮಗನಿಗೇ ಪುಸ್ತಕ

ಡಾ. ದೇಜಗೌ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯ ಮೊದಲ ಮೂರು ವರ್ಷಗಳ ಅವಧಿ ಮುಗಿಸಿದಾಗ ಬರೆದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಸಂದರ್ಶನ ಲೇಖನ.

ಬಟ್ಟೆ ಒದಗಿಸಲಾರೆ ಇವನಿಗೆಲ್ಲಿ ತರಲಿ ಎಂಬ ಬಡತನದ ಅಸಹಾಯಕತೆ ತಂದೆಯದು. ಆದರೆ ಈ ಅಸಹಾಯಕತೆಯನ್ನು ನಿವಾರಿಸಿ ದೇಜಗೌ ಅವರನ್ನು ಕನ್ನಡಕ್ಕೆ ಉಳಿಸಿ ಕೊಟ್ಟ ಪ್ರಸಿದ್ಧ ರಾಜಕಾರಣಿ ಎಚ್. ಕೆ. ವೀರಣ್ಣಗೌಡರು. "ನಾನು ಅವರಿಗೆ ಬಟ್ಟೆ ಮತ್ತು ಪುಸ್ತಕಗಳನ್ನು ಕೊಟ್ಟು ಸಹಾಯಮಾಡಿದೆ ಎನ್ನುವುದಕ್ಕಿಂತ ಅಂಥ ಪ್ರತಿಭಾಶಾಲಿಯೊಬ್ಬರಿಗೆ ಅಲ್ಪ ಸಹಾಯ ಮಾಡುವ ಅವಕಾಶ ದೊರೆತುದು ನನ್ನ ಪುಣ್ಯ ವಿಶೇಷ" ಎಂದು ಇಂದಿಗೂ ನೆನೆಯುತ್ತಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಓದನ್ನು ತಮ್ಮ ಹುಟ್ಟಿದ ಹಳ್ಳಿಯಲ್ಲಿ ಮುಗಿಸಿದ ದೇಜಗೌ ಪ್ರೌಢಶಾಲೆಯ ಓದಿಗಾಗಿ ಚನ್ನಪಟ್ಟಣ ಸೇರಿದರು. ಇವರು ತಮ್ಮ ಓದಿನ ಹಾದಿಯಲ್ಲಿ ನಿರಂತರವಾಗಿ ಅನೇಕ ದುಷ್ಟ ಶಕ್ತಿಗಳನ್ನು ಎದುರಿಸಿದವರು. ಬಡ ಹುಡುಗನೊಬ್ಬ ಕಾಲೇಜು ಮೆಟ್ಟಲು ಹತ್ತಿ ಊರಿಗೆ ಮಡಿಬಟ್ಟೆಯಲ್ಲಿ ಬಂದರೆ ಊರಿನ ಐಶ್ವರ್ಯವಂತರು ಸಹಿಸುವುದೆಂತು? ಸರಿ ಮಗನ ಓದನ್ನು ಅಲ್ಲಿಗೇ ನಿಲ್ಲಿಸುವಂತೆ ದೇವೇಗೌಡರಿಗೆ ಒತ್ತಾಯ. ಆದರೆ ದೇಜಗೌ ಅವರ ಓದನ್ನು ಯಾವ ಅಸುರೀ ಶಕ್ತಿಯೂ ತಡೆಯದಾಯಿತು.

ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ. ಎ., ಪದವಿ ಪಡೆದ ನಂತರ ಅವರಿಗೆ ದೊರೆತದ್ದು ಅಠಾರ ಕಛೇರಿಯಲ್ಲಿ ಗುಮಾಸ್ತಗಿರಿ. ಅಲ್ಲಿನ ಕೆಂಪು ಪಟ್ಟಿ, ಲಂಚ ರುಸುವತ್ತುಗಳ ಹಾವಳಿಗೆ ಬೇಸತ್ತ ದೇಜಗೌ ಜಮೀನು ಮಾಡಿ ಸ್ವತಂತ್ರವಾಗಿ ಬದುಕಲೂ ಪ್ರಯತ್ನಿಸಿದರಂತೆ. ವ್ಯವಸಾಯದ ಬಗ್ಗೆ ಅವರಿಗೆ ಅಪಾರ ಆಸಕ್ತಿ ಮತ್ತು ಪ್ರೀತಿ. ಏನೇ ಆದರೂ ದೇಜಗೌ ಅವರದು ತುಂಬಾ ಸ್ವತಂತ್ರವಾದ ವ್ಯಕ್ತಿತ್ವ. ಯಾರ ಹಂಗಿಗೂ, ಅಧಿಕಾರಕ್ಕೂ ತಲೆಭಾಗುವಂಥದ್ದಲ್ಲ. ಆದರೆ ಹಳ್ಳಿಯಲ್ಲಿ ನಿಂತು ಸ್ವತಂತ್ರವಾಗಿ ಬದುಕುವ ಅವರ ಆಸೆಯನ್ನು ಕಾಲದೇವ ನೆರವೇರಿಸಲೊಪ್ಪಲಿಲ್ಲ. ಅವರ ಜೀವನವನ್ನು ಅರಿತವರು ಅವರ ಸೇವೆ ಕನ್ನಡದಿಂದ ಬೇರೆ ಕಡೆ ಸಿಡಿದುಹೋಗದಂತೆ ವಿಧಿ ತಡೆದಿರುವುದನ್ನು ಕಾಣಬಹುದು. ಆಗ ಅಧ್ಯಾಪಕ ಹುದ್ದೆಯೊಂದು ಬೇಗ ದೊರೆಯದಿದ್ದರೆ ಅವರೊಬ್ಬ 'ಪ್ರಗತಿಪರ' ರೈತರಾಗುತ್ತಿದ್ದರೆಂದು ತೋರುತ್ತದೆ. ಇಂದಿಗೂ ದೇಜಗೌ ಅವರಿಗೆ ವ್ಯವಸಾಯದ ಬಗೆಗಿನ ಗೀಳು ಬಿಟ್ಟು ಹೋಗಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ತೋಟಗಳನ್ನು ನೋಡಿದ ಯಾರಿಗಾದರೂ ಈ ಮಾತಿನ ಯತಾರ್ಥ ಹೊಳೆದೀತು. ಅನೇಕರು ಇವರನ್ನು ಮೇಸ್ತ್ರೀ ರೈತ ಎಂದೆಲ್ಲ ಕರೆದು ಹಾಸ್ಯಮಾಡುವುದುಂಟು. ಒಂದು ಅರ್ಥದಲ್ಲಿ ಆ ಮಾತುಗಳು ಸತ್ಯವೂ ಹೌದು. ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಈ ಕುಲಪತಿ. ಕನ್ನಡ ಅಧ್ಯಯನ ಸಂಸ್ಥೆಯ ಈ ಪ್ರಾಧ್ಯಾಪಕ ಕಟ್ಟಡ ನಿರ್ಮಾಣಗಳ ಪರಿಶೀಲನೆಯಲ್ಲಿ ಅಪ್ಪಟ ಮೇಸ್ತ್ರಿ, ತೋಟದೊಳಗೆ ಕಾಲಿಕ್ಕುವಾಗ ಹದಿನಾರಾಣೆ ರೈತ ಎಂಬುದನ್ನು ನೆನೆದಾಗ ಆಶ್ಚರ್ಯವಾಗುತ್ತದೆ.

ಇದು ದೇಜಗೌ ಅವರ ಒಂದು ವಿಶಿಷ್ಟ ಗುಣ. ಯಾವುದೇ ಕೆಲಸ ಎತ್ತಿಕೊಂಡರೆ ಹಗಲುರಾತ್ರಿ ಅದರ ಬಗ್ಗೆ ಚಿಂತಿಸುತ್ತಾರೆ. ಹತ್ತಾರು ಬಾರಿ ಹೋಗಿ ಅದನ್ನು ನೋಡುತ್ತಾರೆ. ಹಿಂದಿನ ಕುಲಪತಿಗಳ ಕಾಲದಂತೆ ಅಗೆಯುವುದೆಂದರೆ ಇಷ್ಟೆ ಎಂದು ಕೆತ್ತಿ ತೋರಿಸಿ ಕಾಲಹಾಕುವಂತಿಲ್ಲ. ಕುರ್ಚಿಗೆ ಕೋಟು ತಗುಲಿಸಿ ಕ್ಯಾಂಟೀನಿನಲ್ಲಿ ಗುಮಾಸ್ತ ಕಾಲಹಾಕುವಂತಿಲ್ಲ. ಬೇರೆಲ್ಲಿ ಇರಲಿ ಮಾನಸಗಂಗೋತ್ರಿಯಲ್ಲಿನ ರಾತ್ರಿಯ

ಕಾವಲುಗಾರರಿಗೆ ಈ ಕುಲಪತಿ ಯಾವಾಗ ಬಂದುಬಿಡುತ್ತಾರೋ ಎಂಬ ಭಯ. "ಎರಡೇ ಕೈಗಳಿದ್ದರೂ ಹನ್ನೆರಡು ಕೈಗಳ ಕರ್ತವ್ಯ ಬಹುತ್ವವನ್ನು ಉತ್ಸಾಹದಿಂದ ತೆಗೆದುಕೊಂಡು ನಿರ್ವಹಿಸುವ ಅಪೂರ್ವ ಜವರೇಗೌಡರ ಸ್ವಂತ ಸ್ವತ್ತು. ನಾನಾ ವಿಧದ ಭಾರವನ್ನು ಅವರೊಬ್ಬರೇ ಹೊರಬಲ್ಲರು. ಹೀಗಿದ್ದರೂ ಸ್ನೇಹಪರರಾದುದರಿಂದ ಗುಣ ಪಕ್ಷಪಾತಿಗಳಾದ್ದರಿಂದ ವಿನಯಶೀಲರಾದ್ದರಿಂದ ಇತರರಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಗುರ್ತು ಹಚ್ಚಿ ಅವರನ್ನು ಹೊಗಳಿ ಹುರಿದುಂಬಿಸಿ ಅವರಿಂದ ಕೃಷಿ ಮಾಡಿಸುವ ಔದಾರ್ಯವೂ ಜಾಣ್ಮೆಯೂ ಜವರೇಗೌಡರ ವಿಶೇಷ ಲಕ್ಷಣ". ಹೀಗೆ ಗುಮಾಸ್ತೆಯ ಕೆಲಸದಿಂದ ಕುಲಪತಿಯ ಸ್ಥಾನದವರೆಗೆ ಅವರಿಗೆ ಎಲ್ಲಾ ಕೆಲಸಗಳೂ ಕರಗತವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೇಜಗೌ ಅಧ್ಯಾಪಕರಾಗಿ ಸೇರಿದುದೇ ಒಂದು ಮಹತ್ವದ ಘಟನೆಯೆಂದು ಹೇಳಬಹುದು. ಅವರು ಸರ್ಕಾರಿ ಅಧಿಕಾರಿಯಾಗಿಯೋ, ಜಮೀನುದಾರರಾಗಿಯೋ ಉಳಿದಿದ್ದರೆ ಕನ್ನಡನಾಡು ನುಡಿಗಳಿಗೆ ಅಪಾರ ನಷ್ಟವಾಗುತ್ತಿತ್ತು. ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿ ದೇಜಗೌ ಬಹುಜನಾನುರಾಗಿ. ವಿದ್ಯಾರ್ಥಿಗಳ ಮನಸ್ಸನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲ ಶಕ್ತರು. ಈ ಎಲ್ಲಕ್ಕಿಂತ ಮಿಗಿಲಾಗಿ ಬಡವಿದ್ಯಾರ್ಥಿಗಳ ಬಗ್ಗೆ ಅವರಿಗೆ ಅಪಾರ ಅನುಕಂಪ. ಗ್ರಾಮಾಂತರ ಪ್ರದೇಶಗಳಿಂದ ಬಂದವರು, ಬಡವರಾದ ವಿದ್ಯಾರ್ಥಿಗಳು ಅವರಿಂದ ವಿಶೇಷ ನೆರವನ್ನು ಪಡೆದಿದ್ದಾರೆ, ಪಡೆಯುತ್ತಿದ್ದಾರೆ. ಕಾಲೇಜುಗಳಲ್ಲಿ ಜಾಗ ಕೊಡಿಸಿ, ಊಟ ವಸತಿಗೆ ಎಲ್ಲಿಯಾದರೂ ಅನುಕೂಲ ಮಾಡಿಕೊಡಿ, ಇಲ್ಲವಾದರೆ ನಾನು ಓದುವಂತೆಯೆ ಇಲ್ಲ ಎಂದು ಅವರ ಹತ್ತಿರ ಬರುವ ಜನ ಇಂದೂ ತಪ್ಪಿಲ್ಲ. ಆದರೆ ಹೀಗೆ ಬರುವವರ ಬಗ್ಗೆ ದೇಜಗೌ ಎಂದೂ ಬೇಸರಮಾಡಿಕೊಂಡವರಲ್ಲ. ಏನೂ ಮಾಡಲು ಸಾಧ್ಯವಿಲ್ಲವೆಂದು ತಿಳಿದಾಗ ಕೈಯಿಂದ ನೂರು ರೂಪಾಯಿಗಳನ್ನಾದರೂ ಕೊಟ್ಟು "ಏನಾದರೂ ಏರ್ಪಾಟು ಮಾಡಿಕೊ. ಆದರೆ ಓದು ನಿಲ್ಲಿಸಬೇಡ. ಮತ್ತೆ ತೊಂದರೆಯಾದಾಗ ಬಾ" ಎಂದು ಹೇಳುವ ಔದಾರ್ಯ ಅವರದು. ಇಷ್ಟಾದರೂ ಆ ಹುಡುಗನಿಗೆ ಏನೂ ಸಹಾಯ ಮಾಡಲಾಗಲಿಲ್ಲವಲ್ಲಾ ಎಂದು ಅವರು ಕೊರಗುವುದುಂಟು. ಅವರ ಮನೆಯಲ್ಲಿ ಬೇರೆ ಬೇರೆ ಜಾತಿಯ ನಾಲ್ಕೈದು ಜನ ವಿದ್ಯಾರ್ಥಿಗಳು ಊಟ ಮಾಡುತ್ತಿದ್ದುದುಂಟು. ಪರೀಕ್ಷೆ ಕಟ್ಟಲು ಹಣವಿಲ್ಲ ಎಂದವರಿಗೆ ಅವರು ಹಣಕೊಟ್ಟುದುಂಟು. ಹೀಗೆ ಇಂದು ಯಾವುದು ಸಮಾಜವಾದ ಜಾತ್ಯಾತೀತ ಭಾವನೆ ಎಂದು ರಾಜಕೀಯದಲ್ಲಿ ಪ್ರಚಲಿತವಾಗಿದೆಯೋ ಅದನ್ನು ದೇಜಗೌ ಅನೇಕ ವರ್ಷಗಳಿಂದ ಮೌನವಾಗಿ ಮಾಡುತ್ತಾ ಬಂದಿದ್ದಾರೆ.

ದೇಜಗೌ ಒಬ್ಬ ದಕ್ಷ ಆಡಳಿತಗಾರರು. ಈ ದಿಸೆಯಲ್ಲಿ ಅವರ ವ್ಯವಹಾರ ಚತುರತೆ ವಿಶಿಷ್ಟವಾದುದು. ಅವರಿಗೆ ಗುಮಾಸ್ತೆಯ ಸಮಸ್ಯೆ, ಕಂಪೋಜಿಟರ ಸಮಸ್ಯೆಗಳಿಂದ ಪ್ರಾಧ್ಯಾಪಕರ ಸಮಸ್ಯೆಗಳವರೆಗಿನ ಎಲ್ಲಾ ಸ್ಥರದ ಅನುಭವಗಳಿವೆ. ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಕಾರ್ಯದರ್ಶಿಯಾಗಿ ಅದನ್ನು ಕಟ್ಟಿ ಬೆಳೆಯಿಸಿದವರು. ಇಂದು ಬೃಹದಾಕಾರವಾಗಿ ಬೆಳೆಯುತ್ತಿರುವ ವಿಶ್ವವಿದ್ಯಾನಿಲಯದ ಮುದ್ರಣಾಲಯ ಅವರ ಮಾನಸ ಶಿಶುವೆಂದೇ ಹೇಳಬೇಕು. ಅವರು ಅಧಿಕಾರಿಯಾಗಿದ್ದ ಕಡೆ ಸೋಮಾರಿತನಕ್ಕೆ ಎಡೆಯಿಲ್ಲ. ಹೊಸ ಹೊಸ ಯೋಜನೆಗಳಿಗೆ ಬರಗಾಲವಿಲ್ಲ. ಅವರು

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಂತ್ರಣಾಧಿಕಾರಿಯಾಗಿ ಸಲ್ಲಿಸಿದ ಸೇವೆಯಂತೂ ಅತ್ಯಪೂರ್ವವಾದುದೆಂದು ಅನೇಕರು ಇಂದಿಗೂ ಹೊಗಳುತ್ತಿದ್ದಾರೆ. "ಪರೀಕ್ಷಾ ನಿಯಂತ್ರಣಾಧಿಕಾರಿಗಳಾಗಿ ಅವರು ಮಾಡಿದ ಕೆಲಸ ಭಾರತದ ಪರೀಕ್ಷಾ ಪದ್ಧತಿಗೆ ಅಪೂರ್ವಕಾಣಿಕೆಯಾಗಿದೆ". ಅವರು ಕುಲಪತಿಯಾದ ನಂತರವಂತೂ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಯಂತ್ರ ಯಾವ ಅಡೆತಡೆಯೂ ಇಲ್ಲದ ಸುಸೂತ್ರವಾಗಿ ನಡೆಯುತ್ತಿದೆ. ವಿಶ್ವವಿದ್ಯಾನಿಲಯದ ಕಛೇರಿಯಲ್ಲಿ ವಾರಗಟ್ಟಲೆ ಕಾಯಬೇಕಾಗಿದ್ದ ಒಂದು ಮಾರ್ಕ್ಸ್ ಕಾರ್ಡು ಇಂದು ಹಣ ಕಟ್ಟಿದ ಸಂಜೆಯೇ ದೊರೆಯುತ್ತದೆ. ಬರೆದ ಯಾವುದೇ ಕಾಗದಗಳಿಗೆ ಕೂಡಲೇ ಉತ್ತರ ಬರುತ್ತದೆ. ಪರೀಕ್ಷೆಗಳಲ್ಲಿ ಆಗುತ್ತಿದ್ದ ಅಕ್ರಮಗಳಿಗಂತೂ ದೇಜಗೌ ಸಾಕ್ಷತ್ ಜವರಾಯರೇ ಆಗಿದ್ದಾರೆ. ಕೇವಲ ಖರ್ಚಿನ ಬಾಬತ್ತಾಗಿ ಸೋಮಾರಿಯಾಗಿ ಕುಳಿತಿದ್ದ ತೋಟಗಾರಿಕೆ ಇಲಾಖೆ ಇಂದು ಚಿಗುರಿ ಪಲ್ಲವಿಸಿ ಫಲಭರಿತವಾಗಿದೆ. ಬೆಳಗಿನಿಂದ ಸಂಜೆಯವರೆಗೂ ಎಲ್ಲಾ ಸಮಸ್ಯೆಗಳಿಗೂ ದೇಜಗೌ ಸ್ವತಃ ಗಮನಕೊಡುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದ ಒಂದೊಂದು ಇಟ್ಟಿಗೆಯೊಂದಿಗೆ, ಒಂದೊಂದು ಗಿಡದೊಂದಿಗೆ, ಪ್ರತಿಯೊಬ್ಬ ವಿದ್ಯಾರ್ಥಿ ಪ್ರಾಧ್ಯಾಪಕನೊಂದಿಗೆ ದೇಜಗೌ ಮಾತನಾಡುತ್ತಾರೆ. ಅವರ ದೃಷ್ಟಿಯಲ್ಲಿ ಯಾವುದೂ ಮೇಲಲ್ಲ ಯಾವುದೂ ಕೀಳಲ್ಲ. ಆದುದರಿಂದಲೇ ಆಡಳಿತ ಅವರ ಹಸ್ತಗತವಾಗಿದೆ. ಯಾವ ತೊಂದರೆಯೂ ಇಲ್ಲ ಸುಸೂತ್ರವಾಗಿ ನಡೆಯುತ್ತಿದೆ. ಯಾರಿಂದ ಯಾವ ಕೆಲಸವನ್ನು ಹೇಗೆ ಮಾಡಿಸಬೇಕೆಂದು ದೇಜಗೌ ಚೆನ್ನಾಗಿ ಅರಿತವರು.

ಕನ್ನಡ ಏಳಿಗೆಯ ಬಗ್ಗೆ, ಅದರ ಸ್ಥಾನಮಾನದ ಬಗ್ಗೆ ದೇಜಗೌ ಅವರಷ್ಟು ಹಚ್ಚಿಕೊಂಡವರು ಅಪರೂಪವೆಂದೇ ಹೇಳಬೇಕು. ಈ ಬಗ್ಗೆ ಅವರು ಭಾವೋದ್ವೇಗಿಯಲ್ಲ ವಾಸ್ತವಾಂಶಿ. ಅವರದು ಬರಿಯ ಬಾಯಿ ಮಾತಿನ ಭಾಷಾಪ್ರೇಮವಲ್ಲ. ನಾಡು, ನುಡಿಯ ಏಳಿಗೆಗಾಗಿ ಅವರು ತಮ್ಮ ಸ್ವಂತ ಸುಖವನ್ನು ಮರೆಯುವರು. ಅವರು ಕನ್ನಡ ಪ್ರಾಧ್ಯಾಪಕರಾದ ತರುಣದಲ್ಲೊಮ್ಮೆ ಎನ್. ಸಿ. ಸಿ. ಯನ್ನು ತೆಗೆದುಕೊಂಡು ವಿದ್ಯಾರ್ಥಿ ಕನ್ನಡವನ್ನು ಬೇಕಾದರೆ ಬಿಡಬಹುದೆಂದು. ಆಗಿನ ಕುಲಪತಿ ಆಜ್ಞೆಯೊಂದನ್ನು ಹೊರಡಿಸಲಿದ್ದರು; ಆದರೆ ದೇಜಗೌ ತಮ್ಮ ಪ್ರಾಧ್ಯಾಪಕರ ಹುದ್ದೆಗೆ ರಾಜೀನಾಮೆ ನೀಡಿ ತಾವೂ ವಿದ್ಯಾರ್ಥಿಗಳೊಂದಿಗೆ ಚಳುವಳಿ ಹೂಡುವುದಾಗಿ ಅವರಿಗೆ ಬಹಿರಂಗ ಎಚ್ಚರಿಕೆ ನೀಡಿದ ಮೇಲೆ ಆ ನಿರ್ಣಯ ಹಾಗೆಯ ಮಾಯವಾಯಿತು. ಶ್ರೀ ಕುವೆಂಪು ಆರಂಭಿಸಿದ ಕನ್ನಡ ಮಾಧ್ಯಮ ತರಗತಿಗಳು ಇಂದು ಬಹುಜನಪ್ರಿಯವಾಗಿವೆ. ದೇಜಗೌ ಇಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಕನ್ನಡ ಭಾಷಾ ಸಾಹಿತ್ಯಗಳಿಗೆ ಅಪಾರವಾದ ಶಕ್ತಿಯನ್ನು ತಂದು ಕೊಟ್ಟಿದ್ದಾರೆ. ಅನೇಕ ವರ್ಷಗಳಿಂದ ತೂಕಡಿಸುತ್ತಿದ್ದ ಕನ್ನಡ ವಿಶ್ವಕೋಶದ ಯೋಜನೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದ ನಾಲ್ಕೈದು ವರ್ಷಗಳಲ್ಲಿ ಐದನೆಯ ಸಂಪುಟವನ್ನು ಹೊರ ತರುತ್ತಿದೆ. ಕನ್ನಡ ಮಾಧ್ಯಮ ತರಗತಿಗಳಿಗೆ ಬೇಕಾದ ಪಠ್ಯಪುಸ್ತಕಗಳಂತೂ ವಿಫುಲವಾಗಿ ಹೊರಬರುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯ ಕನ್ನಡವನ್ನು ತನ್ನ ಆಡಳಿತ ಭಾಷೆಯನ್ನಾಗಿ ಅಂಗೀಕರಿಸಿದೆ. ಇಂದು ಬಹುತೇಕ ವ್ಯವಹಾರಗಳು ಕನ್ನಡ ಭಾಷೆಯಲ್ಲಿ ನಡೆಯುತ್ತಿವೆ. ಈ ಎಲ್ಲದರ ಜೊತೆಗೆ

ದೇಜಗೌ ನಾಡಿನಾದ್ಯಂತ ಸಂಚರಿಸಿ ಜನರಲ್ಲಿ ಕನ್ನಡಾಭಿಮಾನ ಮೂಡಿಸಿ ಅವರನ್ನು ಆಗಾಗ ಎಚ್ಚರಿಸುತ್ತಿರುತ್ತಾರೆ.

ಈ ನಾಡಿನ ಸಂಸ್ಕೃತಿಯ ಬಗ್ಗೆ ದೇಜಗೌ ಅವರಿಗೆ ಅಪಾರ ಗೌರವ. ಅದರ ಧ್ಯೋತಕ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯ. ನಾಲ್ಕು ವರ್ಷಗಳ ಹಿಂದೆ ತಮ್ಮ ಧರ್ಮಪತ್ನಿಯವರ ಒಡವೆಗಳನ್ನೇ ಮೊದಲ ಕಾಣಿಕೆಯಾಗಿ ಕೊಟ್ಟು ಆರಂಭಿಸಿದ ಈ ಪ್ರದರ್ಶನಾಲಯ ಇಂದು ಲೋಕ ವಿಖ್ಯಾತವಾಗುತ್ತಿದೆ. ಅನೇಕ ಮಂದಿ ದೇಶ ವಿದೇಶಗಳ ಶಿಕ್ಷಣತಜ್ಞರು, ಸಾಹಿತಿಗಳು, ಅಧಿಕಾರಿಗಳು, ರಾಜಕಾರಣಿಗಳು, ಪ್ರವಾಸಿಗರು ಪ್ರತಿನಿತ್ಯ ಈ ಸಂಗ್ರಹಾಲಯಕ್ಕೆ ಭೇಟಿ ಕೊಡುತ್ತಾರೆ. ದೇಜಗೌ ಹೋದ ಕಡೆ ತಾವು ಕುಲಪತಿ ಎಂಬುದನ್ನು ಮರೆತು ಇದಕ್ಕೆ ವಸ್ತುಗಳನ್ನು ಸಂಗ್ರಹಿಸಿ ತರುತ್ತಾರೆ. ಅವರು ಒಮ್ಮೊಮ್ಮೆ ಭಾಷಣಗಳಿಗೆ ಬರಲೊಪ್ಪುವುದಿಲ್ಲ. ಅಂತಹ ಸಮಯದಲ್ಲಿ ನಾವೊಂದು ಹತ್ತಿಪ್ಪತ್ತು ಜನಪದ ವಸ್ತುಗಳನ್ನು ಆ ಸಭೆಯಲ್ಲಿ ನಿಮಗೆ ಕೊಡುವುದಿದೆಯೆಂದರೆ ಏನೇ ತೊಂದರೆಗಳಿದ್ದರೂ ಅವರು ಬರಲೊಪ್ಪಿ ಬಿಡುತ್ತಾರೆ. ಈ ಸಂಗ್ರಹಾಲಯದ ಬಗ್ಗೆ ಅವರಿಗೆ ಅಷ್ಟೊಂದು ಅಭಿಮಾನ ಅಷ್ಟೊಂದು ಆಸಕ್ತಿ. ಕನ್ನಡದ ಪ್ರಸಿದ್ಧ ಜನಪದ ವಿದ್ವಾಂಸರಾದ ಶ್ರೀ ಜೀ. ಶಂ. ಪರಮಶಿವಯ್ಯ ಮತ್ತು ಕಲಾವಿದ ಪಿ. ಆರ್. ತಿಪ್ಪೇಸ್ವಾಮಿಯವರ ಸತತ ದುಡಿಮೆ ಮತ್ತು ಡಾ. ಹಾ. ಮಾ. ನಾಯಕರ ದಕ್ಷ ಮಾರ್ಗದರ್ಶನದಲ್ಲಿ ಇದೊಂದು ಲೋಕವಿಖ್ಯಾತ ವಸ್ತು ಸಂಗ್ರಹಾಲಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗೆ ದೇಜಗೌ "ಕನ್ನಡಕ್ಕೆ ಕೈಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂಬ ಗುರುಮಂತ್ರ, ದೀಕ್ಷಾ ಬದ್ಧರಾಗಿ ಕನ್ನಡ ನಾಡು, ನುಡಿಗಳ ಏಳಿಗೆಗೆ ದುಡಿಯುತ್ತಿದ್ದಾರೆ.

ದೇಜಗೌ ಕುಲಪತಿಯಾದ ನಂತರ ಮೈಸೂರು ವಿಶ್ವವಿದ್ಯಾನಿಲಯ ಅನೇಕ ಬೃಹದ್ಯೋಜನೆಗಳನ್ನು ಪಡೆದುಕೊಂಡಿತು. ಅದರಲ್ಲಿ ಪ್ರಮುಖವಾದುದು ಮುದ್ರಣಾಲಯ ಮತ್ತು ಲಲಿತ ಕಲೆಗಳ ಕಾಲೇಜು. ಮುದ್ರಣಾಲಯದ ಕಟ್ಟಡ ಒಂದು ಪವಾಡವೋ ಎಂಬಂತೆ ನಿರ್ಮಾಣಗೊಂಡುದು. ಇಂದಿಗೂ ವಿಶ್ವವಿದ್ಯಾನಿಲಯದ ಹೆಚ್ಚು ಮುದ್ರಣದ ಕೆಲಸ ಖಾಸಗಿ ಮುದ್ರಣಾಲಯಗಳಲ್ಲಿ ನಡೆಯುತ್ತಿದೆ. ಅದನ್ನೆಲ್ಲಾ ಇಲ್ಲಿ ಕೇಂದ್ರೀಕರಿಸುವುದೇ ದೇಜಗೌ ಉದ್ದೇಶ. ಅವರು ಜರ್ಮನಿ ದೇಶದಲ್ಲಿ ಪ್ರವಾಸ ಮಾಡಿ ಬಂದ ತರುಣದಲ್ಲಿ ಅಲ್ಲಿನ ಬೃಹತ್‌ಪ್ರಮಾಣದ ಮುದ್ರಣಾಲಯಗಳ ಬಗ್ಗೆ ಮಾತನಾಡುತ್ತಾ ಅಂತಹದೊಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬೇಕೆಂದು ಹೇಳಿದ್ದರು. ಆದರೆ ಒಂದೇ ವರ್ಷದಲ್ಲಿ ಆ ಕನಸು ನನಸಾದುದರಲ್ಲಿ ದೇಜಗೌ ಅವರ ಕಾರ್ಯದಕ್ಷತೆ ಅಡಗಿದೆ. ಇಂದು ಮುದ್ರಣಾಲಯ ಕೋಟ್ಯಾಂತರ ರೂಪಾಯಿಗಳ ಯೋಜನೆ. ಕುಲಪತಿ ದೇಜಗೌ ಇದನ್ನು ಬರಿಯ ವ್ಯಾಪಾರಿ ದೃಷ್ಟಿಯಿಂದ ಯೋಚಿಸಿಲ್ಲ. ಇದರ ಮೂಲಕ ಮುದ್ರಣದಲ್ಲಿ ತಾಂತ್ರಿಕ ಶಿಕ್ಷಣ ಕೊಡುವುದು ಅವರ ಉದ್ದೇಶ. ಆಗ ಈ ಯೋಜನೆಯ ಮಹತ್ತು ಮತ್ತೂ ಏರುತ್ತದೆ.

ತೋಟಗಾರಿಕೆ ದೇಜಗೌ ಅಭಿವೃದ್ಧಿ ಪಡಿಸಿದ ಮತ್ತೊಂದು ವಿಭಾಗ. ವಿಶ್ವವಿದ್ಯಾನಿಲಯಕ್ಕೂ, ತೋಟಕ್ಕೂ ಏನು ಸಂಬಂಧ ಎಂದು ಹಲವರಿಗೆ ಅನ್ನಿಸಬಹುದು. ಆದರೆ ನಮ್ಮ ಯುವಕರನ್ನು, ಅವರ ಮನೋಭಾವಗಳನ್ನು ನೋಡಿದಾಗ ಇಂಥವುಗಳ

ಆವಶ್ಯಕತೆಯು ಅರಿವಾಗದಿರದು. ಭಾರತ ವ್ಯವಸಾಯ ಪ್ರಧಾನವಾದ ದೇಶ. ನ್ಯಾಯವಾಗಿ ಈ ದೇಶದ ಶಿಕ್ಷಣವೇ ವ್ಯವಸಾಯ ಪ್ರಧಾನವಾದುದಾಗಿರಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಹೊಲದಲ್ಲಿ, ತೋಟ, ಗದ್ದೆಗಳಲ್ಲಿ ಕೆಲಸ ಮಾಡುವುದು. ತಮ್ಮ ಘನತೆಗೆ ತಕ್ಕುದಲ್ಲ ಎಂದು ನಮ್ಮ ವಿದ್ಯಾವಂತ ಯುವಕರು ಚಿಂತಿಸುವಷ್ಟರ ಮಟ್ಟಿಗೆ ಕೃತಕವಾಗಿದೆ ನಮ್ಮ ಶಿಕ್ಷಣ. ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆಯ ಯೋಜನೆ ನಮ್ಮ ವಿದ್ಯಾರ್ಥಿಗಳ ಮೇಲೆ ಎರಡು ಪ್ರಬಲವಾದ ಪರಿಣಾಮ ಉಂಟುಮಾಡುತ್ತದೆ. ಒಂದು ಐದಾರು ಎಕರೆ ಜಮೀನಿದ್ದರೆ ಜೀವನ ಮಾಡಬಹುದು ಎಂಬ ಭವಿಷತ್ತಿನಲ್ಲಿ ಭರವಸೆ, ಮತ್ತೊಂದು ದುಡಿಮೆಯ ಪಾವಿತ್ರ್ಯ. ಈ ಯೋಜನೆಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಗಳಿಕೆಯ ಅನುಕೂಲ ಕಲ್ಪಿಸಲಾಗಿದೆ. ಇದರ ಜೊತೆಗೆ ಪ್ರಕೃತಿ ಸುಂದರವಾಗಿದ್ದರೆ ಅದು ಯುವಕರ ಮನಸ್ಸಿನ ಮೇಲೆ ಪರಿಣಾಮ ಬೀರಿ ಅವರ ಮನಸ್ಸನ್ನು ಹರ್ಷದಾಯಕವಾಗಿಟ್ಟಿರುತ್ತದೆ. ಮದರಾಸು ವಿಶ್ವವಿದ್ಯಾನಿಲಯದ ಕುಲಪತಿ ಸುಂದರವಡೀವೇಲು ಅವರು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುತ್ತಾ, "ನಿಮ್ಮ ವಿಶ್ವವಿದ್ಯಾನಿಲಯದ ತೋಟಗಳು ನನ್ನನ್ನು ದಂಗು ಬಡಿಸಿವೆ. ಅದಕ್ಕಾಗಿ ಕುಲಪತಿಗಳಿಗೆ ನಾನು ವಂದಿಸುತ್ತೇನೆ" ಎಂದರು. ಇಂದು ಸರ್ಕಾರ ಪದವೀಧರರಿಗೆ ನಿಗದಿ ಮಾಡಲಿರುವ ಕಡ್ಡಾಯ ಗ್ರಾಮಾಂತರ ಪ್ರದೇಶದ ಸೇವೆ ಇತ್ಯಾದಿಗಳನ್ನೆಲ್ಲಾ ದೇಜಗೌ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೂರು ವರ್ಷಗಳ ಹಿಂದೆಯೇ ಮೌನವಾಗಿ ಜಾರಿಗೆ ತಂದಿದ್ದಾರೆ. ಮಾನಸ ಗಂಗೋತ್ರಿ ಮತ್ತು ಕುಕ್ಕರ ಹಳ್ಳಿಯ ಪ್ರದೇಶಗಳಲ್ಲಿ ಅಂಜೂರದಿಂದ ಹಲಸಿನವರೆಗೆ ಸಾವಿರಾರು ಹಣ್ಣು ಮತ್ತು ಅಲಂಕಾರದ ಮರಗಿಡಗಳನ್ನು ನೆಡಿಸಿದ್ದಾರೆ. ಆ ಒಂದೊಂದು ಗಿಡಕ್ಕೂ ಕುಲಪತಿಯ ಪರಿಚಯವಿದೆ. ಹೀಗೆ ಅವರ ಯೋಜನೆ ಕಣ್ಣಿಗೆ ಆನಂದ ವಿಶ್ವವಿದ್ಯಾನಿಲಯಕ್ಕೆ ಆದಾಯ ಎರಡನ್ನೂ ತರುವಂತಾಗಿದೆ.

ದೇಜಗೌ ಕುಲಪತಿಯಾದ ಮೇಲೆ ಆದ ಮತ್ತೊಂದು ಪ್ರಮುಖ ಯೋಜನೆ ಶಿಕ್ಷಣ ರಂಗದಲ್ಲಿ ಹೊಸ ಹೊಸ ತರಗತಿಗಳನ್ನು ತೆಗೆದುದು ಮತ್ತು ಅಂಚೆ ಮತ್ತು ತೆರಪಿನ ಶಿಕ್ಷಣ. ದೇಜಗೌ ಒಬ್ಬ ಉತ್ತಮ ಶಿಕ್ಷಣ ತಜ್ಞರು ಎನ್ನುವುದನ್ನು ಮರೆಯುವಂತಿಲ್ಲ. ಅವರು ಕುಲಪತಿಯಾದನಂತರ ಅನೇಕ ಸ್ನಾನಕೋತ್ತರ ಪದವಿತರಗತಿಗಳು ಮತ್ತು ಡಿಪ್ಲೊಮೋ ತರಗತಿಗಳು ಆರಂಭವಾಗಿವೆ. ಪತ್ರಿಕೋದ್ಯಮ, ಭಾಷಾಶಾಸ್ತ್ರ, ದಕ್ಷಿಣ ಭಾರತ ಅಧ್ಯಯನದಲ್ಲಿ ಎಂ. ಎ. ತರಗತಿಗಳನ್ನು ತೆರೆಯಲಾಗಿದೆ. ಕನ್ನಡ, ಭಾರತೀಯ ಸಾಹಿತ್ಯ, ಭಾಷಾಂತರ, ಜಾನಪದ, ಜೈನಧರ್ಮ, ಪ್ರಾಕೃತ, ರಷ್ಯನ್ ಜರ್ಮನ್ ಮುಂತಾದ ಅನೇಕ ಡಿಪ್ಲೊಮೋಗಳನ್ನು ತೆರೆಯಲಾಗಿದೆ. ದೇಜಗೌ ಬಹಳ ದೂರ ದೃಷ್ಟಿಯುಳ್ಳವರು. ಯಾವುದು ಆವಶ್ಯಕವೋ, ಯಾವ ವಿಭಾಗದಲ್ಲಿ ತಜ್ಞರ ಕೊರತೆ ಬೀಳುತ್ತದೆಯೋ ಅಂತಹ ವಿಷಯಗಳಲ್ಲಿ ಹೊಸ ಹೊಸ ಶಿಕ್ಷಣ ಆರಂಭಿಸುವುದು ಅವರ ಯೋಜನೆ. ಅಂಚೆ ಮತ್ತು ತೆರಪಿನ ಶಿಕ್ಷಣವಂತು ಸಮಾಜವಾದದ ಪ್ರತೀಕವೆಂದೇ ಹೇಳಬೇಕು. ಸಾವಿರಾರು ಮಂದಿ ಜನಸಾಮಾನ್ಯರು, ಆರ್ಥಿಕವಾಗಿ ಹಿಂದುಳಿದವರು, ಕಾಲೇಜುಗಳಿಗೆ ಸೇರಿ, ಹಾಸ್ಟಲುಗಳಲ್ಲಿ ನಿಂತು ಹಣ ಖರ್ಚು ಮಾಡಲು ಶಕ್ತಿಯಿಲ್ಲದವರು ಈ ಯೋಜನೆಯ ಮೂಲಕ ಉನ್ನತ ಶಿಕ್ಷಣ ಪಡೆಯಬಹುದಾಗಿದೆ. ಈ ಯೋಜನೆಯಲ್ಲಿ ಅಭ್ಯಸಿಸುವರೆಲ್ಲ ಸಾಮಾನ್ಯವಾಗಿ

ದುಡಿಮೆಯಲ್ಲಿರುವವರೇ. ಆದುದರಿಂದ ಇದರಿಂದ ಅಪಾರವಾದ ಕಾಲ ಮತ್ತು ಹಣ ಉಳಿತಾಯವಾಗುತ್ತದೆ. ಪದವಿಯವರೆಗಿನ ಶಿಕ್ಷಣವೆಲ್ಲಾ ಈ ಯೋಜನೆಯ ಮೂಲಕವೇ ನಡೆಯುವುದು ಸೂಕ್ತವೆಂದು ತೋರುತ್ತದೆ. ಇದರಿಂದ ಕೇವಲ ಶೋಕಿಗಾಗಿ ಕಾಲೇಜುಗಳಿಗೆ ಸೇರಿ ಸಮಸ್ಯೆಗಳನ್ನು ಉಂಟುಮಾಡುವವರನ್ನು ತಡೆದಂತಾಗುತ್ತದೆ. ಆರ್ಥಿಕವಾಗಿ ಹಿಂದುಳಿದವರು, ಓದಲು ಅಶಕ್ತರಾದವರಿಗೆ ಹೆಚ್ಚು ಅನುಕೂಲ ಕಲ್ಪಿಸಿದಂತೆಯೂ ಆಗುತ್ತದೆ. ಹೀಗೆ ದೇಜಗೌ ಹಾಕಿರುವ ಶಿಕ್ಷಣ ಯೋಜನೆಗಳು ಇಂದಿನ ಅನೇಕ ಗೊಂದಲಗಳಿಗೆ ಪರಿಹಾರವನ್ನೊದಗಿಸುತ್ತವೆ.

ಇವಿಷ್ಟೆ ಅವರ ಯೋಜನೆಗಳು ಎಂದು ಹೇಳವಂತಿಲ್ಲ. ಈ ಹಿಂದೆ ಅಪೂರ್ಣವಾಗಿದ್ದ ಮಾನವಿಕ ವಿಭಾಗ, ಮಹಿಳಾ ವಿದ್ಯಾರ್ಥಿನಿಲಯ, ಅಧ್ಯಾಪಕರ ಮತ್ತು ರೀಡರುಗಳ ವಸತಿ ವಿಶ್ವವಿದ್ಯಾನಿಲಯ ಮಾರಾಟ ಕೇಂದ್ರ, ಗ್ರಂಥಾಲಯ, ಯುವರಾಜ ಕಾಲೇಜು ಮುಂತಾದ ಅನೇಕ ಹೊಸ ಕಟ್ಟಡಗಳು ಪೂರ್ಣಗೊಂಡಿವೆ. ಅಥವಾ ಪೂರ್ಣಗೊಳ್ಳುತ್ತಿವೆ. ಈ ಪ್ರತಿ ಕಟ್ಟಡದ ಜಲ್ಲಿ ಕಲ್ಲಿನಿಂದ ಹಿಡಿದು ಸಿಮೆಂಟು ಕಬ್ಬಿಣದವರೆಗೆ ಮೇಲ್ವಿಚಾರಣೆ ನೋಡುತ್ತಾರೆ ದೇಜಗೌ.

ಕುಲಪತಿಯಾಗಿ ಇಷ್ಟೆಲ್ಲಾ ಕಾರ್ಯಭಾರಗಳನ್ನೂ ಹೊತ್ತಿರುವ ದೇಜಗೌ ವ್ಯಾಸಂಗ ಮತ್ತು ಬರವಣಿಗೆಯನ್ನು ತಮ್ಮ ಜೀವನದ ಉಸಿರು ಎಂದು ನಂಬಿರುವುದು ಆಶ್ಚರ್ಯದ ಸಂಗತಿ. ಈವರೆಗೆ ಅವರು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಕುಲಪತಿಯಾದ ಮೇಲೆ ಸುಮಾರು ಹತ್ತು ಕೃತಿಗಳು ಪ್ರಕಟವಾಗಿವೆ. ಅವರು ಕುಲಪತಿಯಾಗಿ ಸಂಘಸಂಸ್ಥೆಗಳಲ್ಲಿ ಮಾಡಿದ ಭಾಷಣಗಳು ಕಾಡು ಹರಟೆಯಾಗದೆ ಅಭ್ಯಸನದ ಲೇಖನಗಳಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಅವರ ವಿದೇಶ ಪ್ರವಾಸ ಕಥನ "ವಿದೇಶದಲ್ಲಿ ನಾಲ್ಕು ವಾರಗಳು ಕನ್ನಡ ಪ್ರವಾಸ ಸಾಹಿತ್ಯಕ್ಕೊಂದು ಅಪೂರ್ವ ಕೊಡುಗೆ. ಅವರು ವಿರಾಮವಿದ್ದಾಗಲೆಲ್ಲಾ ಓದುವುದು, ಬರೆಯುವುದು ಮಾಡುತ್ತಲೆ ಇರುತ್ತಾರೆ. ಅಚ್ಚಾಗುವ ತಮ್ಮ ಪುಸ್ತಕದ ಕರಡನ್ನು ತಾವೆ ತಿದ್ದಿದರೆ ಮಾತ್ರ ಅವರಿಗೆ ಸಮಾಧಾನ". ಜವರೇಗೌಡರ ಸಾಹಿತ್ಯ ನಿಷ್ಠೆ ಅಚಲವಾದುದು. ಇಷ್ಟೆಲ್ಲಾ ಸಂಘಟನಾ ಕಾರ್ಯಗಳ ನಡುವೆಯೂ ಅವರು ಸ್ವಂತ ಪರಿಶ್ರಮವನ್ನು ಬಿಟ್ಟಿಲ್ಲ. ಅವರ ಪುನರುತ್ಥಾನದ ಗಾತ್ರವನ್ನು ಕಂಡು ನಾನು ಬೆಚ್ಚಿ ಬೀಳುವಂತಾಯಿತು. ಕನ್ನಡ ವಿಭಾಗದ ಕೆಲಸ ಕಾರ್ಯಗಳ ನಡುವೆ ಇಷ್ಟು ಶ್ರದ್ಧೆಯಿಂದ ವ್ಯವಸಾಯ ತತ್ಪರರಾಗಿದ್ದಾರೆಂದರೆ ನಿಕಟವರ್ತಿಯಾದ ನನಗೂ ಆಶ್ಚರ್ಯವೇ. ಅನುವಾದವೇ ಆಗಲಿ ವಿಮರ್ಶೆಯೇ ಆಗಲಿ, ಸಂಶೋಧನಾ ಗ್ರಂಥವೇ ಆಗಲಿ ಗೌಡರ ಗದ್ಯಶೈಲಿ ಕನ್ನಡದ ಕಸುವನ್ನು ನವುರನ್ನು ಒಳಗೊಂಡ ಉತ್ತಮ ಪಾಕವಾಗಿದೆ. ಹೆಚ್ಚು ಕೃಷಿಯಿಲ್ಲದ ಈ ಕ್ಷೇತ್ರದಲ್ಲಿ ಜವರೇಗೌಡರ ಗದ್ಯವು ಕನ್ನಡ ಬರಹಗಾರರಿಗೆ ಆದರ್ಶನೀಯವಾಗಿ ನಿಂತೀತು" ಎಂದು ಸಾಹಿತಿಯೊಬ್ಬರು ಐದು ವರ್ಷಗಳ ಹಿಂದೆ ಹೇಳಿದ ಮಾತು ಇಂದಿಗೂ ಸತ್ಯವಾಗಿದೆ.

ದೇಜಗೌ ಬಹು ಸರಳ ವ್ಯಕ್ತಿ. ಕುಲಪತಿಯಾದರೂ ಅಹಂ ಇನಿತಿಲ್ಲದ ಈ ವ್ಯಕ್ತಿಯನ್ನು ಕಂಡಾಗ ಅಧಿಕಾರ, ದರ್ಪಗಳೆ ಪ್ರಧಾನವಾಗಿರುವ ಈ ಜಗತ್ತಿನಲ್ಲಿ ಕೆಲವರಿಗೆ ವಿಚಿತ್ರವೆನ್ನಿಸಬಹುದು. ಅವನು ಪ್ರಾಧ್ಯಾಪಕನಿರಲಿ ಸಹಾಯಕ ಸಂಶೋಧಕನಿರಲಿ, "ನಿಮ್ಮ

ಕೆಲಸ ಹೇಗೆ ನಡೆಯುತ್ತದೆ? ಈಚೆಗೆ ಏನು ಬರೆದಿರಿ? ಏನೊ ತೊಂದರೆ ಇಲ್ಲ ತಾನೆ" ಮುಂತಾಗಿ ವಿಚಾರಿಸುವ ವಾತ್ಸಲ್ಯ ಕಂಡಾಗ ಮನೆಯ ಹಿರಿಯಣ್ಣನ ನೆನಪಾಗುತ್ತದೆ. ಅವರು ಯಾರನ್ನೂ ನಿಕೃಷ್ಟವಾಗಿ ಕಾಣುವುದಿಲ್ಲ. ಕೆಲಸವಿಲ್ಲದೆ ಹೋದವರನ್ನು ನಗುನಗುತ್ತಾ ಮಾತನಾಡಿ ಕಳಿಸುವುದುಂಟು. "ಜವರೇಗೌಡರ ಈ ಆದರ ಕಳಿಕಳಿ ಸಹಾನುಭೂತಿ ಕೇವಲ ಕೆಲವು ವ್ಯಕ್ತಿಗಳಿಗೆ ಸೀಮಿತವಾದುದಲ್ಲ. ಹಾಗೆಂದು ಕೆಲವರು ಆಡಿ ಕೊಂಡಿದ್ದನ್ನು ನಾನು ಕೇಳಿದ್ದೇನೆ. ಆದರೆ ಜವರೇಗೌಡರನ್ನು ಅರಿತವರು ಯಾರು ಅದನ್ನು ನಂಬಲಾರರು. ಕನ್ನಡದ ಪಾಂಚಜನ್ಯವನ್ನು ಮೊಳಗಿಸಿ ಕನ್ನಡ ಡಿಂಡಿಮವನ್ನು ಭಾರಿಸಿ ಕನ್ನಡಿಗರ ಕನ್ನಡತನವನ್ನು ಸದಾ ಜಾಗ್ರತವನ್ನಾಗಿಡಲು ಶ್ರಮಿಸುತ್ತಿರುವ ಮಹಾಕವಿ ಕುವೆಂಪು ಅವರ ಗರಡಿಯಲ್ಲಿ ತರಬೇತಾದ ಜವರೇಗೌಡರ ಪ್ರೇಮ ಕನ್ನಡಿಗರೆಲ್ಲರಿಗೂ ಮೀಸಲಾಗಿದೆ" ಎಂಬ ಹಿರಿಯರೊಬ್ಬರ ಮಾತುಗಳು ನೂರಕ್ಕೆ ನೂರು ಸತ್ಯವಾದುವು.

ಕನ್ನಡನಾಡು ನುಡಿಯ ಏಳಿಗೆಗಾಗಿ ಅಹರ್ನಿಶಿ ದುಡಿಯುತ್ತಿರುವ ಈ ಮಹಾವ್ಯಕ್ತಿ ಕುಲಪತಿಯಾಗಿ ಈ ಮೂರು ವರ್ಷಗಳಲ್ಲಿ ಅವರ ಸಾಧನೆ ಮತ್ತು ಸಿದ್ಧಿಗಳ ಬಗೆಗಿನ ನನ್ನ ಕೆಲವು ಪ್ರಶ್ನೆಗಳಿಗೆ ನೀಡಿರುವ ಸರಳವೂ, ನೇರವೂ ಆದ ಉತ್ತರಗಳು ಅವರ ನಿಷ್ಕಲ್ಮಶ ಹೃದಯಕ್ಕೆ ಹಿಡಿದ ಕನ್ನಡಿಯಾಗಿವೆ. ಕುಲಪತಿ ಭವನದಲ್ಲಿ ಅವರನ್ನು ಸಂದರ್ಶಿಸಿದಾಗ ಅದೇ ನಗು ಮುಖದಿಂದ ಸ್ವಾಗತಿಸಿ ಹಲವು ಹತ್ತು ಸಮಸ್ಯೆಗಳ ಬಗ್ಗೆ ನೇರವಾಗಿ ಸರಳವಾಗಿ ವಿವರಿಸಿ ಹೇಳಿದರು.

೧. **ಕುಲಪತಿಗಳಾಗಿ ನಿಮ್ಮ ಅನುಭವಗಳು:**

ಕುಲಪತಿಯ ಹುದ್ದೆ ಬಹಳ ಕಠಿನವಾದುದು. ಕಾರಣ ಸಿಂಡಿಕೇಟು, ಸೆನೆಟ್ಟು, ಅಕ್ಯಾಡಮಿಕ್ ಕೌನ್ಸಿಲ್ಲುಗಳ ಸದಸ್ಯರ ಮನೋಭಾವ ಅರಿತು, ಅವರ ಒಲವನ್ನು ನೋಡಿ ಕೆಲಸ ಮಾಡಬೇಕಾಗುತ್ತದೆ. ಯಾವುದೇ ಕೆಲಸವನ್ನು ಮನಸ್ಸಿಗೆ ತೋರಿದಂತೆ ಮಾಡವಂತಿಲ್ಲ. ಅದು ಏನೇ ಇರಲಿ, ಪರಿಣಾಮ ಎಂಥದಿರಲಿ ಬಹುಮತಕ್ಕೆ ಗೌರವ ಕೊಡಬೇಕಾಗುತ್ತದೆ. ನಾನಂತೂ ಸರ್ವಾಧಿಕಾರಕ್ಕೆ ವಿರೋಧಿ. ಆದುದರಿಂದ ಯಾವುದೇ ಕೆಲಸ ಮಾಡಿದರೂ, ಪ್ರಾಧ್ಯಾಪಕರ, ಸಿಂಡಿಕೇಟ್ ಸದಸ್ಯರ, ಸೆನೆಟ್ ಸದಸ್ಯರ ಜೊತೆ ಸಮಾಲೋಚಿಸಿಯೇ ಮಾಡುತ್ತೇನೆ. ಉದಾಹರಣೆಗೆ ಗಂಗೋತ್ರಿಯ ಕ್ಯಾಂಟೀನು ಕಟ್ಟುವ ಸ್ಥಳ. ನಾನು ಎರಡು ಮೂರು ಜಾಗಗಳನ್ನು ಪರಿಶೀಲಿಸಿದೆ. ನನ್ನ ಅಭಿಪ್ರಾಯದಂತೆ ಬಟಾನಿಕಲ್‌ಗಾರ್ಡನ್ ಇರುವ ಸ್ಥಳ ಅತ್ಯುತ್ತಮ. ಆದರೆ ಅನೇಕ ಪ್ರಾಧ್ಯಾಪಕರಿಗೆ ಅದು ಗ್ರಂಥಾಲಯದ ಪಕ್ಕದಲ್ಲೆ ಇರಬೇಕು. ದಿನಕ್ಕೆ ಐದುನೂರು ವಿದ್ಯಾರ್ಥಿಗಳು ಓದಲು ಗ್ರಂಥಾಲಯಕ್ಕೆ ಬರುತ್ತಾರೆ. ಅವರಿಗೆ ಕಾಫಿ ಬೇಕಾಗುತ್ತದೆ. ಕ್ಯಾಂಟೀನು ದೂರವಿದ್ದರೆ ಅನಾನುಕೂಲ ಎಂದೆಲ್ಲಾ ವಾದ ಬಂದಿತು. ಅದೇನೂ ನಾನೊಬ್ಬನೇ ತೀರ್ಮಾನಿಸುವ ವಿಷಯವಲ್ಲ. ಇಂಜನಿಯರ್ ಇದ್ದಾರೆ. ಆರ್ಕಿಟೆಕ್ಟ್ ಇದ್ದಾರೆ. ಇಷ್ಟೆಲ್ಲಾ ಮಾಡಿದ ಮೇಲೆಯೂ ಅದನ್ನು ಕಟ್ಟುವ ಸ್ಥಳದ ಬಗ್ಗೆ ಯಾರೋ ಒಬ್ಬಿಬ್ಬರು ಆಕ್ಷೇಪಣೆ ಎತ್ತಿದರೆ, ಹಿಂದೆ ಮಾತನಾಡಿಕೊಂಡರೆ ಮನಸ್ಸಿಗೆ ಬೇಸರವಾಗುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದಂತಹ ದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಸಮಸ್ಯೆಗಳಿರುತ್ತವೆ. ಎಲ್ಲವೂ ಜೀವಂತ ಸಮಸ್ಯೆಗಳೇ. ಅಧ್ಯಾಪಕರು ಪ್ರಾಧ್ಯಾಪಕರುಗಳ

ಸಮಸ್ಯೆ, ವಿದ್ಯಾರ್ಥಿಗಳ ಸಮಸ್ಯೆಗಳಿವೆ. ಕುಲಪತಿಯಾದವನು ಎಲ್ಲದಕ್ಕೂ, ಎಲ್ಲ ಕಾಲದಲ್ಲಿಯೂ ನೇರ ಗಮನ ಕೊಡಲಾಗುವುದಿಲ್ಲ. ಒಂದು ಉದಾಹರಣೆ ಪ್ರಾಧ್ಯಾಪಕರೊಬ್ಬರ ಮನೆ ಸೋರುತ್ತಿದೆಯೆಂಬ ದೂರು ಬಂತು. ನನಗೆ ಕೂಡಲೇ ಇಂಜನಿಯರಿಂಗ್ ಇಲಾಖೆಯ ಮೇಲೆ ಕೋಪ ಬಂತು. ಹೊರಗಿನ ಇಂಜಿನಿಯರುಗಳನ್ನು ಕರೆಸಿ ಅವರಿಂದ ಪರಿಶೀಲನೆ ನಡೆಸಲಾಯಿತು. ಅವರು ಮನೆಯ ಮೇಲೆ ಒಣಹುಲ್ಲಿನ ಮದೆ ಹಾಕಿರುವುದರಿಂದ ಹಾಗಾಗಿದೆ ಎಂದು ವರದಿ ಮಾಡಿದ್ದಾರೆ. ಯಾರದು ತಪ್ಪು? ಇಂಥ ಸಮಯಗಳಲ್ಲಿ ಕುಲಪತಿಯದು ಧರ್ಮಸಂಕಟದ ಪರಿಸ್ಥಿತಿ. ಇಂತಹ ಇನ್ನೂ ಒಂದೆರಡು ಘಟನೆಗಳನ್ನು ಹೇಳಿದರೆ ಕುಲಪತಿಯ ಅನುಭವ ವಿಷದವಾಗುತ್ತದೆ ಎಂದುಕೊಂಡಿದ್ದೇನೆ. ನಮ್ಮ ತೋಟಗಾರಿಕೆ ಇಲಾಖೆಗೆ ಒಮ್ಮೆ ಮಂಗಳೂರಿನಿಂದ ಗಿಡಗಳನ್ನು ತಂದು, ನಾನು ರಾತ್ರಿ ತಲುಪಿದರೂ ಅವು ಒಣಗಿ ಹೋದಾವೆಂದು ಆಗಲೆ ನೆಡೆಸಿದೆ. ಆ ಗಿಡಗಳು ಬಹಳ ಸೂಕ್ಷ್ಮವಾದವುಗಳಾದುದರಿಂದ ನೆರಳು ಹಾಕಬೇಕೆಂದು ತಿಳಿಸಲಾಗಿತ್ತು. ತೋಟಗಾರಿಕೆಯ ಅಧಿಕಾರಿ ನೆರಳು ಹಾಕಿದೆ ಎಂದರು. ಹೋಗಿ ನೋಡಿದರೆ ನೆರಳೇ ಹಾಕಿಲ್ಲ. ಏನು ಮಾಡುವುದು? ನಾನೂ ಮನುಷ್ಯ ಕೋಪ ಬರುತ್ತದೆ. ರೇಗುತ್ತೇನೆ. ಜನ ಕೆಟ್ಟವನು ಅನ್ನುತ್ತಾರೆ. ಹಾಗಾದರೆ ಏನೂ ಕಾಣದ ಹಾಗೆ ಸುಮ್ಮನಿರಲೆ? ಅದಂತೂ ನನ್ನಿಂದ ಸಾಧ್ಯವಿಲ್ಲ.

ವಿಶ್ವವಿದ್ಯಾನಿಲಯದ ಕಛೇರಿಯಲ್ಲಿ ಆದಷ್ಟು ಬೇಗ ಬಂದವರಿಗೆ ಕೆಲಸ ಮಾಡಿಕೊಡುವಂತೆ ಹೇಳುತ್ತಿರುತ್ತೇನೆ. ಮಾರ್ಕ್ಸ್‌ಕಾರ್ಡು, ಪ್ರಾವಿಜನಲ್ ಸರ್ಟಿಫಿಕೇಟು, ಮೈಗ್ರೇಷನ್ ಸರ್ಟಿಫಿಕೇಟುಗಳನ್ನು ಹಣಕಟ್ಟಿದ ದಿನವೇ ಕೊಡುವಂತೆ ತಿಳಿಸಲಾಗಿದೆ. ಆದರೆ ಸಮಸ್ಯೆಗಳು ಬಂದಾಗ ಕಾಲ ವಿಳಂಬವಾಗುತ್ತದೆ. ಒಂದು ದಿನ ಒಂದು ಗುಂಪು ಹುಡುಗರು ನನ್ನ ಕೊಠಡಿಗೆ ಬಂದರು. ಬೇಗ ಮಾರ್ಕ್ಸ್‌ಕಾರ್ಡು ಕೊಡುತ್ತಿಲ್ಲವೆಂದು ದೂರಿದರು. ನಾನು ಸಂಬಂಧಿಸಿದ ಅಧಿಕಾರಿಗೆ ಫೋನು ಮಾಡಿದೆ. ಅವರು ಇನ್ನೊಂದೆರಡು ಗಂಟೆಯಲ್ಲಿ ಕೊಡುವುದಾಗಿ ಹೇಳಿದೆ ಅಷ್ಟೆ ಅಂದರು. ಆ ಹುಡುಗರನ್ನು ಕೇಳಿದರೆ ಇನ್ನೂ ಬೇಗ ಕೊಡಿಸಿ ಅಂದರು. ಹೀಗೆ ಮಾತನಾಡಿಸಿದರೆ ಕುತ್ತಿಗೆಯ ಮೇಲೆಯೇ ಕೂರುತ್ತಾರೆ.

ಇಂತಹ ಅನುಭವಗಳು ಬರಿಯ ವಿದ್ಯಾರ್ಥಿಗಳಿಂದಲೇ ಅಲ್ಲ, ಪ್ರಾಧ್ಯಾಪಕರಿಂದಲೂ ಆಗುತ್ತವೆ. ಎಂ.ಎ.ಗೆ ಓದಲು ಡಿಪ್ಲೊಮೋಗಳನ್ನು ಹೆಚ್ಚಿಸಬೇಕೆಂಬುದು ನನ್ನ ಅಭಿಪ್ರಾಯ. ಹಾಗೆ ಮೂರು ಡಿಪ್ಲೊಮೋ ಮಾಡಿದವರಿಗೆ ಒಂದು ಎಂ. ಎ. ಪದವಿ ನೀಡುವುದು ಕಷ್ಟವೇನಲ್ಲ. ಆದರೆ ಇದಕ್ಕೆ ಯಾರೂ ಒಪ್ಪುವುದಿಲ್ಲ. ಹೊಸ ಪಿ. ಯು. ಸಿ. ಯ ನಂತರ ಎಲ್ಲರಿಗೂ ಮೂರು ವರ್ಷದ ಪದವಿ ಶಿಕ್ಷಣ ಬೇಡ. ಆಯಾ ವಿಷಯದಲ್ಲಿ ಆಸಕ್ತಿ ಇರುವವರು, ಸ್ನಾತಕೋತ್ತರ ಪದವಿಗೆ ಓದಲು ಆಸೆಯುಳ್ಳವರು ಮೂರು ವರ್ಷ ಓದಲಿ. ಮಿಕ್ಕವರಿಗೆ ಎರಡನೆಯ ವರ್ಷಕ್ಕೆ ಒಂದು ಡಿಗ್ರಿ ಕೊಡೋಣ ಎಂದು ನಾನು ಸೂಚಿಸಿದೆ. ಅದನ್ನು ಯಾರೂ ಒಪ್ಪಲಿಲ್ಲ. ಸುಮ್ಮನಾದೆ. ಮೊನ್ನೆ ಡಾ. ಕೊಠಾರಿಯವರು ಬಂದಾಗ ಈ ವಿಷಯ ಅವರ ಹತ್ತಿರ ಪ್ರಸ್ತಾಪಿಸಿದೆ. ಅದಕ್ಕವರು "ಎಂತಹ ಒಳ್ಳೆಯ ಯೋಜನೆ. ಇಷ್ಟವಿಲ್ಲದವರನ್ನೆಲ್ಲಾ ಮೂರು ವರ್ಷ ಕೊಳೆ ಹಾಕಿ ಕಾಲ ಹರಣ ಮಾಡಿಸುವುದು ತಪ್ಪುತ್ತಿತ್ತು. ನೀವು ಅದನ್ನು ಜಾರಿಗೆ ತಂದಿದ್ದರೆ ಇಡೀ ರಾಜ್ಯಕ್ಕೆ

ಮಾದರಿಯಾಗುತ್ತಿತ್ತು" ಎಂದರು. ಆದರೆ ನಮ್ಮ ಪ್ರಾಧ್ಯಾಪಕರ ಮನಸ್ಸು ಸಂಪ್ರದಾಯಬದ್ಧವಾದುದು. ಅನೇಕ ವೇಳೆ. ಅದು ಸಾಧ್ಯವಾಗಲಿಲ್ಲ. ಮನಸ್ಸಿಗೆ ವ್ಯಸನವಾಯಿತು.

ಮನಸ್ಸು ಮಾಡಿದ್ದರೆ ಯಾರಾದರೂ ನಾಲ್ಕು ಜನ ಪ್ರಾಧ್ಯಾಪಕರನ್ನು ಕರೆಸಿಕೊಂಡು ಮಾತನಾಡಿದ್ದರೆ ಅದು ಆಗಿಬಿಡುತ್ತಿತ್ತು. ಆದರೆ ಅಂತಹ ರಾಜಕೀಯ ನನಗೆ ಸೇರದು. ಎಲ್ಲರೂ ಒಪ್ಪಿ ಸಂತಸದಿಂದ ಮಾಡಬೇಕೆಂಬುದೇ ನನ್ನ ಆಸೆ. ನಾನು ಮೊದಲೇ ಹೇಳಿದ್ದೇನೆ. ಕುಲಪತಿಯ ಹುದ್ದೆ ಸರ್ವಾಧಿಕಾರಿ ಗದ್ದುಗೆಯೂ ಅಲ್ಲ, ಹೂವಿನ ಹಾಸಿಗೆಯೂ ಅಲ್ಲ. ಮಿಗಿಲಾಗಿ ಸ್ವಾಯತ್ತತೆಯ ಸಂಸ್ಥೆಗಳಲ್ಲಿ ಕೆಲಸ ಮಾಡುವುದು ಬಹು ಕಷ್ಟ. ಅವನಿಗೆ ಸೆನ್ಸಿಟಿವಿಟಿ ಇರುವುದರಿಂದ ಲೋಪಗಳನ್ನು ಕಂಡಾಗ ಮನಸ್ಸಿಗೆ ಕಿರಿಕಿರಿಯಾಗುತ್ತದೆ ತೃಪ್ತಿಯಿರುವುದಿಲ್ಲ. ಬಿಡುವಿಲ್ಲದ ಕಾರ್ಯಕ್ರಮಗಳು. ಯೋಜನೆ ಮಾಡಲೂ ಅವಕಾಶವಿರುವುದಿಲ್ಲ. ಇದೆಲ್ಲದರ ಜೊತೆಗೆ ಒಳ್ಳೆಯದು, ಒಳ್ಳೆಯವರೂ ಇದ್ದಾರೆಂದೇ ನನಗೆ ತೃಪ್ತಿ.

೨. ಕುಲಪತಿಯಾದ ನಂತರ ಹಾಕಿಕೊಂಡ ಯೋಜನೆಗಳು:

ನಾನು ಕುಲಪತಿಯಾದ ಮೇಲೆ ಯೋಜನೆಗಳನ್ನು ರೂಪಿಸಿದೆ ಎಂದು ಹೇಳುವಂತಿಲ್ಲ. ಮೊದಲಿಂದಲೂ ನನ್ನ ತಲೆಯಲ್ಲಿ ಅನೇಕ ಯೋಜನೆಗಳಿದ್ದವು. ಅಂತಹವುಗಳಲ್ಲಿ ಪ್ರಮುಖವಾದುದು ಕನ್ನಡ ಅಧ್ಯಯನ ಸಂಸ್ಥೆ. ಆದರ ಯೋಜನೆ ನನ್ನದು ಎಂಬುದು ಮೇಲಿನ ಅಂಶ. ಅದಕ್ಕಾಗಿ ಡಾ. ಹಾ. ಮಾ. ನಾಯಕರು ಮತ್ತಿತರ ಸಹೋದ್ಯೋಗಿ ಮಿತ್ರರು ಬಹುವಾಗಿ ಶ್ರಮಿಸಿದ್ದಾರೆಂಬುದನ್ನು ನಾನು ಮರೆಯುವಂತಿಲ್ಲ. ಅಲ್ಲಿ ಈಗ ಅನೇಕ ಬೃಹದ್ಯೋಜನೆಗಳಿವೆ. ಕನ್ನಡ ವಿಶ್ವಕೋಶ, ಎಪಿಗ್ರಾಫಿಕ ಕರ್ನಾಟಕ, ಪಠ್ಯಪುಸ್ತಕ ನಿರ್ಮಾಣ ವಿಭಾಗ ಈ ಒಂದೊಂದೂ ನಾಡಿನ ಏಳಿಗೆಯ ದ್ಯೋತಕವಾದುವು ಎಂಬುದನ್ನು ಮರೆಯುವಂತಿಲ್ಲ.

ಜಾನಪದ ವಸ್ತು ಪ್ರದರ್ಶನಾಲಯವಂತೂ ಭಾರತದಲ್ಲಿಯೇ ಅಪೂರ್ವವಾದುದು. ನಾನು ಹೊರದೇಶಗಳಲ್ಲಿ ನೋಡಿ ಬಂದ ಮೇಲೆ ನಮ್ಮದು ಅವುಗಳಿಗಿಂತ ಭವ್ಯತೆಯಲ್ಲಿಲ್ಲದಿದ್ದರೂ, ಸಂಗ್ರಹದ ದೃಷ್ಟಿಯಿಂದ ಉತ್ತಮವಾಗಿದೆ ಎಂಬ ಧೈರ್ಯ ನನಗುಂಟಾಗಿದೆ. ಆದರ ಆಂತರಿಕ ಮೆರಗಿಗೆ ನಾವು ಬಹಳ ಹಣ ವ್ಯಯ ಮಾಡುತ್ತಿದ್ದೇವೆಂಬ ಟೀಕೆಯೂ ಅಲ್ಲಲ್ಲಿ ಕೇಳಿಬರುತ್ತಿದೆ. ಆದರೆ ವಿದೇಶಗಳ ಮಾತಿರಲಿ ಭಾರತದ ಇತರ ಕಡೆಗಳಲ್ಲಿರುವ ವಸ್ತು ಪ್ರದರ್ಶನಗಳಿಗಿಂತ ಅದ್ದೂರಿಯಾಗೇನೂ ಇಲ್ಲಿ ಖರ್ಚು ಮಾಡುತ್ತಿಲ್ಲ. ಅಲ್ಲದೆ ಅಲ್ಲಿ ಖರ್ಚಾಗುತ್ತಿರುವ ಹಣದಲ್ಲಿ ಹೆಚ್ಚು ಪಾಲು ಸರ್ಕಾರದಿಂದ ನೇರವಾಗಿ ಬರುವ ಧನಸಹಾಯ. ನಾಗರೀಕತೆಯ ಬಿರುಗಾಳಿಯಲ್ಲಿ ಜನಪದ ಸಂಸ್ಕೃತಿ ಕೊಚ್ಚಿಹೋಗುವ ಮುನ್ನ ಜನಪದ ಸಮಸ್ತವೂ ಸಂಗ್ರಹವಾಗಬೇಕಾಗಿದೆ. ಸಂಗ್ರಹ, ಸಂಶೋಧನೆ, ಸಂಪಾದನೆ, ಪ್ರಕಟಣೆ ಈ ಮೂರೂ ತ್ವರಿತವಾಗಿ ಆಗಬೇಕಾಗಿದೆ. ಇದರ ಜೊತೆಗೆ ನಾಡಿನ ಜನಪದ ವಸ್ತು ಸಮಸ್ತವೂ ಸಂಗ್ರಹವಾಗಬೇಕಾಗಿದೆ. ಆಗ ಅದೊಂದು ಪ್ರಪಂಚದಲ್ಲಿಯೇ ಅತ್ಯಪೂರ್ವವಾದ ವಸ್ತು ಸಂಗ್ರಹಾಲಯವಾಗುತ್ತದೆ.

ನಾನು ಕುಲಪತಿಯಾದ ತರುಣದಲ್ಲಿಯೇ ಕೈಗೆತ್ತಿಕೊಂಡ ಯೋಜನೆ ಲಲಿತ ಕಲಾ ಕಾಲೇಜು. ನಮ್ಮ ಸಂಗೀತಗಾರರು ಬರಿಯ ದಾಸರ ಕೀರ್ತನೆಗಳನ್ನೇ ಹಾಡುತ್ತಾ ಕುಳಿತರೆ ಸಾಲದು. ಹೊಸ ಹೊಸ ಸಂಶೋಧನೆಗಳಾಗಬೇಕು. ಆಧುನಿಕ ಕವಿಗಳ ಕಾವ್ಯಕ್ಕೆ ರಾಗ ಜೋಡಣೆ ಮಾಡಬೇಕು. ಕವಿಗಳು ತಮ್ಮ ಕಾವ್ಯಗಳನ್ನು ತಾವೇ ವಾಚಿಸಿದ ಧ್ವನಿಮುದ್ರಿಕೆಗಳ ಸಂಗ್ರಹ, ಉತ್ತಮವಾಗಿ ಹಾಡುವವರ ಧ್ವನಿ ಮುದ್ರಿಕೆಗಳ ಒಂದು ಸಂಗ್ರಹವೇ ಆಗಬೇಕೆಂಬುದು ನನ್ನ ಆಸೆ. ಸಂಗೀತದಲ್ಲಿ ಸ್ನಾತಕೋತ್ತರ ತರಗತಿಗಳು ಆರಂಭವಾಗಬೇಕು. ಅಂದರೆ ಅವೆಲ್ಲಾ ಬರಿಯ ಈಗಿರುವಂತಹ ಪದವಿಗಳಾಗಬಾರದು. ನಮ್ಮ ಕಲಿಕೆ ಜೀವಂತವಾಗಿರಬೇಕು. ಆದರೆ ಏನು ಮಾಡುವುದು ಅದು ನಾನು ನಿರೀಕ್ಷಿಸಿದಂತೆ ಆಗಲಿಲ್ಲ. ಹಾಗಾಗಿದ್ದರೆ ಲಲಿತ ಕಲಾ ಕಾಲೇಜು ಈ ಹೊತ್ತಿಗೆ ಪ್ರಥಮ ದರ್ಜೆಯ ಕಾಲೇಜಾಗುತ್ತಿತ್ತು.

ಮುದ್ರಣಾಲಯದ ಹೊಸ ಭವನ. ನಾನು ವಿದೇಶಗಳಿಗೆ ಹೋಗಿ ಬಂದನಂತರ, ಅದರಲ್ಲೂ ಜರ್ಮನಿಯಲ್ಲಿ ಮುದ್ರಣಾಲಯಗಳನ್ನು ನೋಡಿ ಬಂದ ಮೇಲೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತಹ ಒಂದು ಅತ್ಯಾಧುನಿಕವಾದ ಮುದ್ರಣಾಲಯವಾಗಬೇಕೆಂದು ಯೋಚಿಸಿದೆ. ಅದರಂತೆ ಆ ಭವನ ನಿರ್ಮಾಣವಾಗುತ್ತಿದೆ. ಅದರ ಹೆಚ್ಚು ವಿವರಗಳೆಲ್ಲಾ ನಿಮಗೇ ಗೊತ್ತಿದೆ. ಅಲ್ಲದೆ ಇವನ್ನೆಲ್ಲಾ ನಾನು ಕುಲಪತಿಯಾದ ಮೇಲೆ ಕೈಗೆತ್ತಿಕೊಂಡ ಯೋಜನೆಗಳು ಎಂದು ಮಾತ್ರ ಹೇಳಬಲ್ಲೆ. ನಾನೇ ಎಲ್ಲವನ್ನೂ ಮಾಡಿದೆ ಎಂಬ ಅಹಂಕಾರ ನನಗಿಲ್ಲ. ನಾನು ಏನು ಮಾಡಿದೆನೆಂಬುದು ಜನರಿಗೆ ಗೊತ್ತಿದೆ. ಹೀಗಾಗಿ ಅನೇಕ ವೇಳೆ ನನ್ನ ಯೋಜನೆ, ನಾನು ಮಾಡಿದೆ ಎಂದು ಹೇಳಿಕೊಳ್ಳುವುದೇ ಸರಿಯಲ್ಲವೆಂದು ತೋರುತ್ತದೆ. ಮುದ್ರಣಾಲಯಕ್ಕೆ ಈಗಾಗಲೇ ಭವನ ನಿರ್ಮಾಣಕಾರ್ಯ ಮುಗಿಯುತ್ತಾ ಬಂದಿದ್ದು ಯಂತ್ರಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ. ಆಧುನಿಕ ಯಂತ್ರಗಳನ್ನು ತರಿಸುತ್ತಿದ್ದೇನೆ. ಆದರೂ ವಿಶ್ವವಿದ್ಯಾನಿಲಯದ ಬಹುಪಾಲು ಕೆಲಸ ಖಾಸಗಿ ಮುದ್ರಣಾಲಯಗಳಲ್ಲಿ ನಡೆಯುತ್ತಿದೆ.

ಗಿಡಗೆಂಡೆಗಳನ್ನು ನೋಡುವುದು ನನಗೊಂದು ಸಂತೋಷದ ಹವ್ಯಾಸ. ಅವುಗಳಿಂದ ವಾತಾವರಣ ಚೆನ್ನಾಗಿರುತ್ತದೆ. ಮನಸ್ಸಿಗೆ ಹರ್ಷವಾಗುತ್ತದೆ. ನಾನು ಕುಲಪತಿಯಾದ ಕೂಡಲೆ ಸೋಮಾರಿಯಾಗಿ ಕುಳಿತಿದ್ದ ತೋಟಗಾರಿಕೆ ಇಲಾಖೆಯನ್ನು ಚುರುಕುಗೊಳಿಸಿದೆ. ಅದಕ್ಕಾಗಿ ಅಂತಹ ಯೋಜನೆಯನ್ನೇನೂ ಹಾಕಿಕೊಳ್ಳಲಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಎರಡು ಮೂರು ರೀತಿಯಲ್ಲಿ ಅನುಕೂಲವಾಗಬೇಕೆಂಬುದು ನನ್ನ ಆಸೆಯಾಗಿತ್ತು. ಒಂದು ಮರಗಿಡಗಳಿಂದ ಕೂಡಿದ ರಮ್ಯವಾಗಿರುವ ಪ್ರಕೃತಿ ನಮ್ಮ ಯುವಕರ ಮನಸ್ಸನ್ನು ತಿಳಿಯಾಗಿಡುತ್ತದೆ. ಮತ್ತೊಂದು ನಮ್ಮ ಬಾಳೆತೋಟ ನೋಡಿದ ವಿದ್ಯಾರ್ಥಿ ಪರವಾಗಿಲ್ಲ ನಾಲ್ಕು ಎಕರೆ ಜಮೀನಿದ್ದರೆ ಜೀವನವನ್ನು ಚೆನ್ನಾಗಿ ಸಾಗಿಸಬಹುದೆಂಬ ನಂಬಿಕೆ ಮೂಡುತ್ತದೆ. ಇನ್ನೊಂದು ವಿದ್ಯಾರ್ಥಿಗಳಿಗೆ ಗಳಿಕೆ ಮತ್ತು ವ್ಯಾಸಂಗ ಯೋಜನೆಯಂತೆ ಇಲ್ಲಿ ಕೆಲಸ ಒದಗಿಸಲಾಗಿದೆ. ಈಗಾಗಲೇ ಮೂರುಸಾವಿರ ತೆಂಗು, ಒಂದು ಸಾವಿರ ಸಪೋಟ, ಮೂರು ಸಾವಿರ ಬಾಳೆಗಿಡಗಳನ್ನು ಹಾಕಲಾಗುತ್ತಿದೆ. ಕುಕ್ಕರಹಳ್ಳಿಯ ಕೆರೆಯ ಕೋಡಿಯಲ್ಲಿ ದ್ರಾಕ್ಷಿ ಮತ್ತಿತರ ಹಣ್ಣಿನ ಗಿಡಗಳನ್ನು ಹಾಕಿಸಲಾಗಿದೆ. ಕೆರೆಯ

ಒಳಾಂಗಣದಲ್ಲಿ ಅರಣ್ಯ ಸಸ್ಯಗಳನ್ನು ಹಾಕಲಾಗುತ್ತಿದೆ. ಮುಂದೆ ಇದೆಲ್ಲಾ ವಿಶ್ವವಿದ್ಯಾನಿಲಯಕ್ಕೆ ತಕ್ಕಷ್ಟು ಆದಾಯ ತರುತ್ತದೆಂದುಕೊಂಡಿದ್ದೇನೆ. ಈ ತೋಟಗಾರಿಕೆಯ ಖರ್ಚಿನಲ್ಲಿ ಶೇಕಡ ಎಂಬತ್ತು ಭಾಗ ಸರ್ಕಾರದ 'ಲ್ಯಾಂಡ್ ಆರ್ಮಿ' ಯೋಜನೆಯಿಂದ ಬರುತ್ತಿದೆ.

ಹೊಸ ಹೊಸ ಶಿಕ್ಷಣ ತರಗತಿಗಳನ್ನು ಆರಂಭಿಸಬೇಕೆಂಬುದು ನನ್ನ ಆಸೆ. ಅದರಂತೆ ಈಗಾಗಲೇ ಅನೇಕ ಡಿಪ್ಲೊಮಾಗಳು ಮತ್ತು ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಲಾಗಿದೆ. ಉದಾಹರಣೆಗೆ ಪತ್ರಿಕೋದ್ಯಮದಲ್ಲಿ ಎಂ. ಎ. ಭಾಷಾಶಾಸ್ತ್ರ ಎಂ. ಎ. ದಕ್ಷಿಣ ಭಾರತ ಅಧ್ಯಯನ ಎಂ. ಎ. ಇತ್ಯಾದಿ. ಈಗ ಗ್ರಂಥಾಲಯ, ಸಹಕಾರ, ಶಾಸ್ತ್ರೀಯ ಸಂಗೀತ, ಗೃಹ ವಿಜ್ಞಾನದಲ್ಲಿ ಸಾಧ್ಯವಾದಷ್ಟು ಉಪಯುಕ್ತವಾದ ವಿಷಯಗಳ ಅಧ್ಯಯನಕ್ಕೆ ಅನುವು ಮಾಡಿಕೊಡಬೇಕೆಂಬುದೇ ನನ್ನ ಬಯಕೆ. ಆದರೆ ಅನೇಕ ವೇಳೆ ಎಲ್ಲವೂ ನಿರೀಕ್ಷಿಸಿದ್ದಂತೆ ಆಗುವುದಿಲ್ಲ. ಹಲವಾರು ಅಡೆತಡೆಗಳು ವಿರೋಧಗಳು ಬರುತ್ತವೆ. ಈ ಎಲ್ಲವನ್ನೂ ದಾಟಿ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಯತ್ನಿಸುತ್ತಿದ್ದೇನೆ.

ಈ ಯೋಜನೆಯ ವಿಷಯದಲ್ಲಿಯೆ ನೀವು ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು ಸೇರಿಸಿಕೊಳ್ಳಬಹುದು. ಇದು ಶ್ರೀಮಾಲಿಯವರ ಕಾಲದಲ್ಲಿಯೇ ಯೋಜಿತವಾಯಿತಾದರೂ ಅದರಲ್ಲಿ ನನ್ನ ಪಾಲು ಬಹಳವಿದೆ. ಅದನ್ನೆಲ್ಲಾ ಯೋಜಿಸಿ ಒಂದು ರೂಪಕ್ಕೆ ತರಲು ನಾನು ಕೆಲಸ ಮಾಡಿದೆ. ಈ ಯೋಜನೆಗೆ ಅಪಾರವಾದ ನೆರವು ನೀಡಿದವರು. ಶ್ರೀ ಡಿ. ವಿ. ಅರಸು ಅವರು. ಇದು ನಿಜವಾಗಿಯೂ ಬಹು ಉಪಯುಕ್ತವಾದ ಯೋಜನೆ. ಕಡೆಯ ಪಕ್ಷ ಪದವಿಯವರೆಗೆ ನಮ್ಮ ಎಲ್ಲಾ ವಿದ್ಯಾರ್ಥಿಗಳೂ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಓದಿದರೆ ಉತ್ತಮ ಎಂದು ತೋರುತ್ತದೆ. ಇದರಿಂದ ಅಪಾರವಾದ ಕಾಲ ಮತ್ತು ಹಣದ ಉಳಿತಾಯವಾಗುತ್ತದೆ. ಒಟ್ಟಿನಲ್ಲಿ ಅನೇಕ ಸಮಸ್ಯೆಗಳು ಈ ಯೋಜನೆಯಿಂದ ಪರಿಹಾರವಾಗುತ್ತದೆ ಎಂದು ನಾನಂದು ಕೊಂಡಿದ್ದೇನೆ.

ಯೋಜನೆಗಳು ಅಂದರೆ ಅನೇಕವಿವೆ. ನಾನಿಲ್ಲಿ ಕೆಲವು ಮುಖ್ಯವಾದವನ್ನು ಮಾತ್ರ ಹೆಸರಿಸಿದ್ದೇನೆ. ಅಷ್ಟೆ. ಇಂತಹ ಪ್ರಮುಖ ಯೋಜನೆಗಳ ಜೊತೆ ಜೊತೆಗೇ ಆಗಬೇಕಾಗ ಸಣ್ಣಪುಟ್ಟ ಕೆಲಸಗಳಿಗಂತೂ ಮಿತಿಯೇ ಇಲ್ಲವೆಂದು ತೋರುತ್ತದೆ.

೩. ಹಾಕಿಕೊಂಡ ಯೋಜನೆಗಳ ಸಾಧನೆ ಮತ್ತು ಸಿದ್ಧಿ:

ನಾನು ಯಾವಾಗಲೂ ಅತಿಯಾಸೆಯವನಲ್ಲ. ಎಲ್ಲವನ್ನೂ ನಾನೇ ಮಾಡಬೇಕು ಅದರ ಕೀರ್ತಿಯೆಲ್ಲಾ ನನಗೆ ಬರಬೇಕೆಂಬ ದುರಾಸೆಯಂತೂ ನನಗಿಲ್ಲ. ನಾನು ಕುಲಪತಿಯಾದ ನಂತರ ಹಾಕಿಕೊಂಡ ಯೋಜನೆಗಳಲ್ಲಿ ಬಹುಪಾಲು ಚೆನ್ನಾಗಿ ಆಗಿವೆ ಎಂದು ಹೊರಗಿನಿಂದ ಬಂದು ನೋಡಿದವರು ಹೇಳಿದ್ದಾರೆ. ನಾನು ಯಾವಾಗಲೂ ತೃಪ್ತ. ಅತಿಯಾದ ಆಸೆ ನನಗಿಲ್ಲ. ತೃಪ್ತಿಯಿಲ್ಲದವನು ಸಂತೋಷಪಡಲಾರ. ಎಲ್ಲವನ್ನು ನಾನೇ ಸಾಧಿಸಬೇಕೆಂಬ ಹಠವಿಲ್ಲ. ಮುದ್ರಣಾಲಯ ಕಟ್ಟಡದ ಕಾರ್ಯ ಮುಗಿಯುತ್ತಾ ಬಂದಿದೆ. ತೋಟಗಾರಿಕೆಯ ವಿಭಾಗ ಚೆನ್ನಾಗಿ ಕೆಲಸ ಮಾಡುತ್ತಿದೆ. ಮಾನಸಗಂಗೋತ್ರಿಯ ಬಹುತೇಕ ಇಲಾಖೆಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ. ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಯಲು ಸಾಧ್ಯವಾದಷ್ಟು ಬಿಗಿಯ ಕ್ರಮ ಕೈಗೊಳ್ಳಲಾಗಿದೆ. ಅಂದರೆ ಎಲ್ಲವೂ ಸರಿಯಾಗಿದೆ ಎಂದು

ಅರ್ಥವಲ್ಲ. ನಮಗೆ ಸಮರ್ಥರಾದ ಉನ್ನತಾಧಿಕಾರಿಗಳ ಅಭಾವವಿದೆ. ಹಾಗೆಂದು ಹೇಳಿ ಹೊಸ ಹೊಸ ಹುದ್ದೆಗಳನ್ನು ನಿರ್ಮಿಸುವಂತೆಯೂ ಇಲ್ಲ. ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದರೆ ಆಡಳಿತಕ್ಕೆ ಸಂಬಂಧಿಸಿದ ಹಾಗೆ ನಮ್ಮಲ್ಲಿ ಬಹಳ ಕಡಿಮೆ ಸಂಖ್ಯೆಯ ಅಧಿಕಾರಿಗಳಿದ್ದಾರೆ. ಆದರೂ ಕಷ್ಟದಿಂದ ಎಲ್ಲವನ್ನೂ ನಿಭಾಯಿಸಬೇಕಾಗಿದೆ. ಸಾಧಿಸಬೇಕಾದುದೇನೂ ಕಡಿಮೆಯಿಲ್ಲ. ಅಧ್ಯಾಪಕರಿಗೆ ವಸತಿಗಳಾಗಬೇಕು, ಆಡಳಿತ ವಿಭಾಗದ ನೌಕರರಿಗೆ ವಸತಿಗಳಾಗಬೇಕು. ಅನೇಕ ವಿದ್ಯಾರ್ಥಿನಿಲಯಗಳಾಗಬೇಕು. ಆದರೆ ಎರಡೂವರೆ ವರ್ಷದ ನನ್ನ ಅಧಿಕಾರ ಕಾಲದಲ್ಲಿ ನಡೆದಿರುವ ಕೆಲಸಗಳ ಬಗ್ಗೆ ನನಗೆ ಸಾಕಷ್ಟು ತೃಪ್ತಿಯಾಗಿದೆ. ಕೈಗೆತ್ತಿಕೊಂಡ ಕೆಲಸಗಳನ್ನು ಸರಿಯಾಗಿ ಮಾಡಿ ಮುಗಿಸಿದ್ದೇನೆಂಬ ಸಂತೃಪ್ತಿ ನನಗಿದೆ. ಇದನ್ನು ಬೇಕಾದರೆ ನೀವು ಸಿದ್ಧಿ ಎಂದು ಕರೆದುಕೊಳ್ಳಬಹುದು.

೪. ಕನ್ನಡ ಆಡಳಿತ ಭಾಷೆ ಮತ್ತು ಶಿಕ್ಷಣ ಮಾಧ್ಯಮವಾಗುವ ಬಗ್ಗೆ ನೀವು ಕೈಗೊಂಡ ಕ್ರಮಗಳು:

ನೋಡಿ ಇದು ಬಹು ಸೂಕ್ಷ್ಮವಾದ ಸಮಸ್ಯೆ. ಈ ಕೂಡಲೇ ಕನ್ನಡ ಶಿಕ್ಷಣ ಮಾಧ್ಯಮವಾಗಿಬಿಟ್ಟರೆ ನನಗಿಂತ ಸಂತೋಷಪಡುವವರು ಬೇರಾರೂ ಇರಲಾರರು. ಆದರೆ ನಾವು ವಿದ್ಯಾರ್ಥಿಯ ಭವಿಷ್ಯದ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಕನ್ನಡದಲ್ಲೇ ಎಲ್ಲವನ್ನೂ ಕಲಿತರೆಂದಿಟ್ಟುಕೊಳ್ಳಿ. ಅವರಿಗೆ ಕೆಲಸ ಕೊಡುವವರು ಯಾರು? ಆದುದರಿಂದ ಮೊದಲು ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕು. ಆಗ ಏನೂ ಮಾಡದಿದ್ದರೂ ಕನ್ನಡ ಶಿಕ್ಷಣ ಮಾಧ್ಯಮವಾಗುತ್ತದೆ. ಹಾಗೆಂದು ವಿಶ್ವವಿದ್ಯಾನಿಲಯ ಈ ಬಗ್ಗೆ ತಟಸ್ಥವಾಗಿಲ್ಲ. ಶ್ರೀ ಕುವೆಂಪು ಅವರು ಕುಲಪತಿಗಳಾಗಿದ್ದಾಗಲೇ ಕನ್ನಡ ಮಾಧ್ಯಮವನ್ನು ಇಷ್ಟವುಳ್ಳವರು ಆರಿಸಿಕೊಳ್ಳಲು ಅವಕಾಶ ಮಾಡಿದೆ. ಅದು ಈಗ ಸಾಕಷ್ಟು ಬೆಳೆದೂ ಇದೆ. ಎಂ. ಎ., ಎಂ. ಎಸ್‌ಸಿ., ಯಂತಹ ಸ್ನಾತಕೋತ್ತರ ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಉತ್ತರ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಲಾಗಿದೆ. ಅಷ್ಟೇ ಅಲ್ಲ, ಪಿ. ಎಚ್. ಡಿ. ಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡಲಾಗಿದೆ. ಈ ವರ್ಷ ವಿಜ್ಞಾನದ ಸ್ನಾತಕೋತ್ತರ ವಿದ್ಯಾರ್ಥಿಗಳು ಕೆಲವರು ಕನ್ನಡದಲ್ಲಿ ಉತ್ತರ ಬರೆದಿದ್ದಾರೆಂದು ಕೇಳಿದ್ದೇನೆ. ಪಠ್ಯಪುಸ್ತಕಗಳಿಲ್ಲ ಎಂಬ ನೆಪವನ್ನು ಈಗ ಹೇಳುವಂತಿಲ್ಲ. ಈಗಾಗಲೇ ಅನೇಕ ಪುಸ್ತಕಗಳು ಹೊರಬಂದಿವೆ. ನಮಗಿರುವ ತೊಡಕು ಎಂದರೆ ನಮ್ಮ ವಿದ್ಯಾರ್ಥಿಗಳು ಮನಸ್ಸು ಮಾಡದಿರುವುದು ಅಷ್ಟೆ. ಅವರು ಮನಸ್ಸು ಮಾಡಿದರೆ ಇದು ಎಷ್ಟು ಹೊತ್ತಿನ ಕೆಲಸ?

ಆಡಳಿತ ಭಾಷೆಯ ಬಗ್ಗೆ ಹೇಳುವುದಾದರೆ ಮೈಸೂರು ವಿಶ್ವವಿದ್ಯಾನಿಲಯ ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಿದೆ. ಈಗ ಸಾಧ್ಯವಿರುವ ಎಲ್ಲಾ ವ್ಯವಹಾರಗಳೂ ಕನ್ನಡದಲ್ಲಿಯೆ ನಡೆಯುತ್ತಿವೆ. ಕನ್ನಡದಲ್ಲೂ ಬರುವ ಅರ್ಜಿಗಳನ್ನು ಕನ್ನಡದಲ್ಲಿಯೆ ಉತ್ತರಿಸುವುದು, ಅವುಗಳ ಮೇಲೆ ಟಿಪ್ಪಣಿ ಬರೆಯುವುದೆಲ್ಲ ಕನ್ನಡದಲ್ಲಿಯೆ ಇರಬೇಕೆಂದು ಆದೇಶ ನೀಡಲಾಗಿದೆ. ಈಗಾಗಲೇ ಇಲಾಖೆಗಳಿಂದಲೂ ಕನ್ನಡದಲ್ಲಿ ಕಾಗದಗಳು ಬರುತ್ತಿವೆ. ಈ ಬಗ್ಗೆ ನನ್ನ ಶಕ್ತಿ ಮೀರಿ ಕೆಲಸ ಮಾಡಿದ್ದೇನೆ. ಅಂದುಕೊಂಡಿದ್ದೇನೆ.

೫. ವಿದ್ಯಾರ್ಥಿ ಸಮಸ್ಯೆಗಳ ಬಗ್ಗೆ ನಿಮ್ಮ ನಿಲುವು?

ವಾಸ್ತವವಾಗಿ ಇದೊಂದು ಸಮಸ್ಯೆಯೇ ಅಲ್ಲ. ಯುವಕರು ಸಾಮಾನ್ಯವಾಗಿ ಕಾಲಗತಿಯನ್ನನುಸರಿಸಿ ನಡೆಯುತ್ತಾರೆ. ಹುರುಪು, ಬಿಸಿರಕ್ತಗಳಿಂದಾಗಿ ಕೊಂಚ ಒರಟಾಗಿಯೂ ನಡೆದುಕೊಳ್ಳಬಹುದು. ಆದರೆ ವಿದ್ಯಾರ್ಥಿಗಳು ನಾವು ಅಂದುಕೊಳ್ಳುವಷ್ಟು ಕೆಟ್ಟವರಾಗಿಲ್ಲ. ಅಧ್ಯಾಪಕರು ನಿಷ್ಠೆಯಿಂದ ಕಷ್ಟಪಟ್ಟು ಚೆನ್ನಾಗಿ ಪಾಠಹೇಳಬೇಕು. ಮನೆಯಲ್ಲಿ ತಂದೆತಾಯಿಗಳು ತಮ್ಮ ಮಕ್ಕಳ ಬಗ್ಗೆ ಗಮನವಿಟ್ಟಿರಬೇಕು. ಅವರ ಬೇಕು ಬೇಡಗಳನ್ನು ಕೇಳಬೇಕು. ತಪ್ಪುದಾರಿಯತ್ತ ಹೋದರೆ ಬುದ್ಧಿ ಹೇಳಬೇಕು. ಆದರೆ ನಮ್ಮಲ್ಲಿ ಹಾಗಿದೆಯೆ? ಕಾಲೇಜಿಗೆ ಕಳುಹಿಸಿಬಿಟ್ಟರೆ ತಮ್ಮ ಜವಾಬ್ದಾರಿ ಕಳೆದು ಹೋದಂತೆ ತಂದೆತಾಯಿಗಳು ಭಾವಿಸುತ್ತಾರೆ. ತಮ್ಮ ಪಾಠದಲ್ಲಿರುವ ಕೊರೆಗಳನ್ನು ಮುಚ್ಚಿಹಾಕಲು ಕೆಲವು ಅಧ್ಯಾಪಕರೇ ವಿದ್ಯಾರ್ಥಿಗಳನ್ನು ಎತ್ತಿ ಕಟ್ಟುತ್ತಾರೆ.

ಮತ್ತೊಂದು ತೊಂದರೆ ವಿದ್ಯಾರ್ಥಿಯ ಅನಿಶ್ಚಯ ಪರಿಸ್ಥಿತಿ. ಅವನ ಭವಿಷ್ಯ ಅಂಧಕಾರ; ವರ್ತಮಾನ ಗೊಂದಲಮಯ. ಇದಕ್ಕೆ ಎರಡು ಕಾರಣಗಳಿವೆ. ಒಂದು ಶಿಕ್ಷಣ ಮಾಧ್ಯಮ ಪರಭಾಷೆಯಲ್ಲಿದ್ದು ವಿದ್ಯಾರ್ಥಿಗೆ ಅಧ್ಯಾಪಕ ಏನು ಹೇಳುತ್ತಾನೆಂದು ಅರ್ಥವಾಗದಿರುವುದು. ಮತ್ತೊಂದು ಸಮಾಜದಲ್ಲಿ ಉಂಟಾಗಿರುವ ಒಂದು ರೀತಿಯ ಗೊಂದಲದ ವಾತಾವರಣ. ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಹಾಸ್ಟಲುಗಳಿಲ್ಲ. ವಿದ್ಯಾರ್ಥಿಯ ಮೈ, ಮನಗಳಿಗೆ ಸರಿಯಾದ ಮಾರ್ಗದರ್ಶನ, ಭವಿಷ್ಯದ ಬಗ್ಗೆ ಆಸೆ, ಸ್ವಂತ ಕಾಲಮೇಲೆ ಬದುಕಬಲ್ಲೆನೆಂಬ ನಿಷ್ಠೆ ಬರುವಂತೆ ಮಾಡಿದರೆ ಈ ಸಮಸ್ಯೆ ತಾನಾಗಿಯೆ ಪರಿಹಾರವಾಗುತ್ತದೆ.

೬. ನಿಮ್ಮ ಮುಂದಿನ ಯೋಜನೆಗಳು:

ನಾನು ಅಧಿಕಾರದಲ್ಲಿರುವ ಕಡೆಯ ಗಳಿಗೆಯವರೆಗೆ ದುಡಿಯುತ್ತಿರುವವನೆ. ನನಗೆ ಅಂಥ ಇಂಥ ಕೆಲಸಗಳೆಂದೇನೂ ಇಲ್ಲ. ನಾನು ಹಿಂದೆಯೆ ಹೇಳಿದಂತೆ ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ಅದು ನನ್ನ ಅಧಿಕಾರಾವಧಿಗೇ ಏನೂ ಮುಗಿದು ಹೋಗುವಂಥದಲ್ಲ. ಉದಾಹರಣೆಗೆ, ಅಧ್ಯಾಪಕರು ಮತ್ತು ಆಡಳಿತ ವಿಭಾಗದವರಿಗೆ ವಸತಿ ಸೌಕರ್ಯ ಕಲ್ಪಿಸಿ ಕೊಡಬೇಕಾಗಿದೆ. ಕಡೆಯಪಕ್ಷ ಒಂದು ಸಾವಿರ ಮಂದಿ ಜನಸಾಮಾನ್ಯರಿಂದ ಬರುವ ವಿದ್ಯಾರ್ಥಿಗಳಿಗೆ ಒಂದು ವಿದ್ಯಾರ್ಥಿನಿಲಯ ಆಗಬೇಕಾಗಿದೆ. ಕಾಲಕ್ಕನುಗುಣವಾಗಿ, ಬೇಡಿಕೆಗಳಿಗನುಗುಣವಾಗಿ ಹೊಸ ಹೊಸ ವ್ಯಾಸಂಗಗಳನ್ನು, ಡಿಪ್ಲೊಮೋಗಳನ್ನು ತೆರೆಯ ಬೇಕಾಗುತ್ತದೆ. ಕಾಲಕಾಲಕ್ಕೆ ಶಿಕ್ಷಣ ಕ್ರಮದಲ್ಲಿ ಸೂಕ್ತ ಬದಲಾವಣೆಗಳನ್ನು ಅಳವಡಿಸಿಬೇಕಾಗುತ್ತದೆ. ಇವೆಲ್ಲಾ ನನ್ನ ಅಧಿಕಾರಾವಧಿಯಲ್ಲೇ ಆಗಬೇಕು ಎಂದರೆ ನನಗೆ ಇನ್ನೂ ಹೆಚ್ಚು ಕಾಲ ಕುಲಪತಿಯಾಗಿ ಉಳಿಯುವ ಆಸೆ ಎಂದು ಯಾರಾದರೂ ಅಂದಾರು. ಯಾರೇ ಕುಲಪತಿಯಾಗಿ ಬರಲಿ ಈ ಕೆಲಸಗಳು ಆಗಬೇಕು ಎಂಬುದು ನನ್ನ ನಿಲುವು.

೭. ಸಾಹಿತಿಯಾಗಿ ಕುಲಪತಿಯ ಹುದ್ದೆ ನಿಮಗೆ ಹೇಗೆ ಕಂಡಿದೆ?

ಪ್ರಾಧ್ಯಾಪಕನೊಬ್ಬ ಕುಲಪತಿಯಾಗುವುದರಿಂದ ಒದಗುವ ಲೌಕಿಕವಾದ ತೊಂದರೆಗಳನ್ನು ನಿಮ್ಮ ಮೊದಲ ಪ್ರಶ್ನೆಯ ಉತ್ತರದಲ್ಲಿಯೇ ಹೇಳಿದ್ದೇನೆ. ಕುಲಪತಿ

ಸಾಹಿತಿಯೂ ಆದಾಗ ಅವನಿಗೆ ಇನ್ನೂ ತೊಂದರೆಗಳು ಹೆಚ್ಚು. ಮೊದಲನೆಯದಾಗಿ ಅವನ ಬರವಣಿಗೆಗೆ ಬಿಡುವಿರುವುದಿಲ್ಲ. ಇದರಿಂದ ವೈಯಕ್ತಿಕವಾಗಿ ತುಂಬಾ ಅನ್ಯಾಯವಾಗುತ್ತದೆಂದು ನನ್ನ ಭಾವನೆ. ನಾನು ಕುಲಪತಿಯಾದ ಮೇಲೆ ಓದಲು, ಬರೆಯಲು ಸಮಯವೇ ದೊರೆಯುವುದಿಲ್ಲ. ದಿನವಿಡೀ ಆಡಳಿತ, ಶೈಕ್ಷಣಿಕ ಸಮಸ್ಯೆಗಳು ತಲೆತಿನ್ನುತ್ತವೆ. ಏನೋ ಅಷ್ಟಿಷ್ಟು ಅವಕಾಶ ಸಿಕ್ಕಿದರೆ ಜನ ಸಾಲುಗಟ್ಟಿ ಭೇಟಿಗೆ ಬರುತ್ತಾರೆ. ಎಷ್ಟೋ ವೇಳೆ ವಿನಾಕಾರಣ ಕಾಲಾ ಪರಿಜ್ಞಾನವಿಲ್ಲದೆ ಬರುತ್ತಾರೆ. ಆದರೆ ಅವರನ್ನು ನಿರಾಸೆಗೊಳಿಸುವಂತಿಲ್ಲ. ಹಿಂದಿನ ಕುಲಪತಿಗಳ ಹತ್ತಿರ ಇಷ್ಟು ಜನವಿರುತ್ತಿರಲಿಲ್ಲವಂತೆ. ಅವರು ಸೇರಿಸುತ್ತಲೂ ಇರಲಿಲ್ಲವಂತೆ. ಭಾಷೆಯದೂ ಒಂದು ತೊಡಕಿತ್ತು ಎಂದು ಕೆಲವರು ಹೇಳುತ್ತಾರೆ. ನಿಜವಿರಬಹುದು. ನಾನು ಬಂದವರ ಜೊತೆ ಕನ್ನಡದಲ್ಲಿ ಮಾತನಾಡುತ್ತೇನಾಗಿ ರೈತರು, ಕಾರ್ಮಿಕರು, ಪುರೋಹಿರಾದಿಯಾಗಿ ಬರುತ್ತಾರೆ. ಅನೇಕ ಸಮಸ್ಯೆ ತರುತ್ತಾರೆ. ಆಂಜನೇಯನ ಪ್ರಸಾದ ತಂದಿದ್ದೇನೆಂದು ಪ್ರವೇಶ ದೊರಕಿಸಿಕೊಂಡು ಮಗನಿಗೆ ಕೆಲಸ ಕೇಳುವವರು ಉಂಟು. ಇಷ್ಟೇ ಅಲ್ಲ. ಅನೇಕರು ತಮ್ಮ ಗೋಳನ್ನು ತೋಡಿಕೊಂಡು ಕಾಗದ ಬರೆಯುತ್ತಾರೆ. ಅನಾಮಿಕ ಕಾಗದಗಳಿಗೂ ಬರಗಾಲವಿಲ್ಲ. ಇದೆಲ್ಲದರ ಮಧ್ಯೆ ಬರವಣಿಗೆ ಹೇಗೆ ಸಾಗೀತು? ಆದರೂ ಬರವಣಿಗೆ ನನ್ನ ಜೀವದ ಉಸಿರು. ಹಾಗಾಗಿ ಎಷ್ಟೋ ವೇಳೆ ಬರೆಯಬೇಕಾದಾಗ ನಿದ್ರೆಗೆಟ್ಟು ಬರೆಯುತ್ತೇನೆ. ಇದರಿಂದ ಶ್ರಮವಾಗುತ್ತದ ನಿಜ. ಆದರೆ ಕುಲಪತಿಯಂತಹ ಜವಾಬ್ದಾರಿಯುತ ಸ್ಥಾನಗಳಿಸಿದ ವ್ಯಕ್ತಿ ಜನತೆಯ ಹಿತದೃಷ್ಟಿಯಿಂದ ತನ್ನ ಹಿತವನ್ನು ಮರೆಯಬೇಕಾಗುತ್ತದೆ.

ದೇಜಗೌ ಎಂಥದೆ ಸಮಸ್ಯೆ ಎದುರಿಸಬಲ್ಲರು. ಜನ ಸಾಮಾನ್ಯರ ಬಗ್ಗೆ, ಬಡವರ ಬಗ್ಗೆ ಅವರದು ಬಹು ಮೃದು ಅಂತಃಕರಣ. ಯಾರನ್ನೂ ಹೀನಾಯವಾಗಿ ಕಾಣುವ ಸ್ವಭಾವ ಅವರದಲ್ಲ. ಹೋರಾಟದ ಬದುಕಿನ ಈ ಧೀರವ್ಯಕ್ತಿಯು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕಳೆದ ಮೂರು ವರ್ಷಗಳ ಸಾಧನೆ ಮತ್ತು ಸಿದ್ಧಿಗಳು ಎಂಥವರನ್ನಾದರೂ ದಂಗು ಬಡಿಸುವಂಥವು.

* * * * *

ದೇಜಗೌ ಮತ್ತು ಸಂಘಸಂಸ್ಥೆಗಳು

-ಎಂ. ಎಸ್. ಲಿಂಗಪ್ಪ

ಮನುಷ್ಯ ಪ್ರಾಣಿಗಳೆಲ್ಲೆಲ್ಲಾ ಶ್ರೇಷ್ಠನಾದವನು. ಈ ಶ್ರೇಷ್ಠತೆಗೆ ಅವನಿಗೆ ದೇವರು ಕೊಟ್ಟಿರುವ ಬುದ್ಧಿಶಕ್ತಿಯೇ ಕಾರಣ. ಆತ ತನ್ನ ಬುದ್ಧಿಶಕ್ತಿ ಹಾಗೂ ಕ್ರಿಯಾಶಕ್ತಿಗಳಿಂದ ಅಗಾಧವಾದುದನ್ನು ಸಾಧಿಸಬಲ್ಲ. ಶಾಶ್ವತವಾದ ಸ್ಥಾನವನ್ನು ಗಳಿಸಬಲ್ಲ. ಆದರೆ ಇದು ಹುಟ್ಟಿದ ಪ್ರತಿಯೊಬ್ಬನಿಂದಲೂ ಸಾಧ್ಯವಿಲ್ಲ. ಇದಕ್ಕೆ ಅವನ ಕರ್ತವ್ಯನಿಷ್ಠೆ. ದೂರಗಾಮಿತನ ಮತ್ತು ಛಲ ಮುಖ್ಯವಾಗುತ್ತದೆ. ಅಚಲವಾದ ಶ್ರದ್ಧಾನಿಷ್ಠೆಗಳಿದ್ದರೆ ಅವನ ದೂರಗಾಮಿತನಕ್ಕೆ ಹೊಸದೊಂದು ರೂಪ ಬರುತ್ತದೆ. ನಾಡಿನಿಂದ ತಾನು ಪಡೆದ ಋಣವನ್ನು ತೀರಿಸಲು ಸಾಧ್ಯವಾಗುತ್ತದೆ.

ಈ ರೀತಿಯ ಬದುಕನ್ನು ನಡೆಸಿದವರು, ನಡೆಸುತ್ತಿರುವವರು ಪ್ರೊ. ದೇಜಗೌ ಅವರು. ಅವರೇ ಹೇಳಿಕೊಂಡಿರುವಂತೆ ಅವರ ಬದುಕೇ ಒಂದು ಹೋರಾಟ. ಶಿವಾಜಿಯ ಸಾಮ್ರಾಜ್ಯ ಸ್ಥಾಪನೆಗೆ ಅವನ ಬದುಕು ಪ್ರೋತ್ಸಾಹ ಕೊಟ್ಟಂತೆ, ದೇಜಗೌ ಅವರ ಕಾರ್ಯಕ್ಕೆ ಅವರ ಜೀವನವೇ ಪ್ರೇರಕ ಎನ್ನಬಹುದು. ದೇಜಗೌ ಅವರ ಸಾಧನೆ ಅಪಾರ, ಕ್ಷೇತ್ರವಿಸ್ತಾರ, ಪಡೆದ ಸಿದ್ಧಿ ಅಪೂರ್ವ. ಪ್ರಸ್ತುತ ಲೇಖನದಲ್ಲಿ ಅವರು ಸ್ಥಾಪಿಸಿರುವ ಹಾಗೂ ಸ್ಥಾಪಿಸಲು ಪ್ರೇರಕರಾಗಿರುವ ಸಂಘಸಂಸ್ಥೆಗಳ ಬಗ್ಗೆ ಕಿರು ಪರಿಚಯವನ್ನು ಮಾಡಿಕೊಡಲಾಗಿದೆ.

ಮರಗಳಲ್ಲೆ ಶ್ರೇಷ್ಠವಾದುದು ತೆಂಗಿನ ಮರ, ಅದು ಭೂಲೋಕದ ಕಲ್ಪವೃಕ್ಷ. ಅದರ ಉಪಯೋಗ ಅಪಾರ, ದೇವರ ಪೂಜೆಯಿಂದ ಅಡುಗೆಯ ಎಣ್ಣೆಯವರೆಗೆ. ವ್ಯರ್ಥವಾಗುವ ಭಾಗವೇ ಇಲ್ಲ. ಸರ್ವವೂ ಉಪಯೋಗ, ತಾನು ಮಾತ್ರ ಬೆಳೆಯದೆ ತನ್ನಡಿಯಲ್ಲಿ ಬಾಳೆ, ಅಡಿಕೆ ಬೆಳೆಯಲು ಸಹಾಯಕ. ತಾನೆಷ್ಟು ಎತ್ತರ ಬೆಳೆದರೂ ತನ್ನ ಸಂಗಾತಿಗಳಿಗೆ ತೊಡಕಾಗದು. ಇಂಥ ಗುಣ ದೇಜಗೌ ಅವರದು. ಇದು ಉತ್ಪ್ರೇಕ್ಷೆಯ ಮಾತಲ್ಲ. ನಾಡಿನ ಜನತೆಗೆ ತಿಳಿದ ವಿಚಾರ.

' ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಪ್ರಸಿದ್ಧವಾದ ಮಾತೊಂದಿದೆ. ಪೈರಿನ ಸದೃಢತೆಯೆ ಅದು ಮುಂದೆ ಬೆಳೆಯಬಹುದಾದ ಆಕಾರವನ್ನು ಸೂಚಿಸುತ್ತದೆ. ಹಾಗೆ ಇಂದು ನಿಂತು ನಾವು ದೇಜಗೌ ಅವರ ಅಪಾರವಾದ ಸಾಧನೆಗಳನ್ನು ನೋಡುವಾಗ ಅವರ ಸಾಧನೆಗಳ ಬೀಜಾಂಕುರವಾದದ್ದು ಅವರು ಜನಿಸಿದ ಸ್ವಗ್ರಾಮದಲ್ಲಿ ಸ್ಥಾಪಿಸಿದ 'ಜ್ಞಾನೋದಯ ಸಂಘ' ಎಂಬುದು ಗೊತ್ತಾಗುತ್ತದೆ.

ಗ್ರಾಮೀಣ ಕುಟುಂಬದಲ್ಲಿ ಜನಿಸಿದ ಶ್ರೀಯುತರಿಗೆ ಗ್ರಾಮವಾಸಿಗಳ ಕಷ್ಟ-ಸುಖಗಳ ಪರಿಚಯ ಚೆನ್ನಾಗಿ ಇದೆ. ಸ್ವತಃಅನುಭವ ಕೂಡ, ತೊಪ್ಪೆ ನೆಲದಲ್ಲಿ ಮಲಗಿ ಕುರಿಕಾದವರು, ಗಂಜಿ ಕುಡಿದು ಬೆಳೆದವರು, ಅದೃಷ್ಟ ಒಲಿದಾಗಲೂ, ಶ್ರೀಮಂತಿಗೆ ಬಂದಾಗಲೂ ಸರಳ ಜೀವನವನ್ನೇ ಅನುಸರಿಸುತ್ತಿರುವವರು. ಸಣ್ಣದೊಂದು ಕುಟೀರವೇ ವಾಸಸ್ಥಾನ. ಜುಬ್ಬ ಪಂಚೆಯೇ ಆಭರಣ. ಇದಕ್ಕೆಲ್ಲ ಅವರು ಬೆಳೆದು ಬಂದ ಹಳ್ಳಿಯ ವಾತಾವರಣವೇ ಕಾರಣ ಎನ್ನಬಹುದಾದರೂ ಇಂಥವರು ಅಪರೂಪ. ಇಂದಿಗೂ ಗ್ರಾಮೀಣ ಜನರನ್ನು ಕಂಡರೇ,

ಬಡವರನ್ನು ಕಂಡರೆ ಮರುಕಪಡುತ್ತಾರೆ. ಅವರಿಗಾಗಿ, ಅವರ ಶ್ರೇಯಸ್ಸಿಗಾಗಿ ಏನನ್ನಾದರೂ ಮಾಡಲು ತವಕಿಸುತ್ತಾರೆ. ಅಂಥ ಕಡುಬಡವರ ಮಕ್ಕಳ ಉದ್ಧಾರಕ್ಕಾಗಿಯೇ ಶಾಲಾ ಕಾಲೇಜುಗಳನ್ನು ತೆರದಿದ್ದಾರೆ.

ವಿದ್ಯಾರ್ಥಿ ದೆಶೆಯಲ್ಲೆ ಹಳ್ಳಿಗರ ಉದ್ಧಾರಕ್ಕಾಗಿ ಶ್ರಮಿಸಿದರು. ತಮ್ಮ ಊರಿನ ಸುತ್ತಲಿನ ಪ್ರಾಥಮಿಕ ಶಾಲೆಯ ಅಧ್ಯಾಪಕರನ್ನೆಲ್ಲ ಒಟ್ಟಿಗೆ ಸೇರಿಸಿ 'ಜ್ಞಾನೋದಯ ಸಂಘ'ವನ್ನು ಸ್ಥಾಪಿಸಿದರು. ಸಂಘದ ಕಾರ್ಯಚಟುವಟಿಕೆಗಳಿಗಾಗಿ ಕೊಠಡಿಯೊಂದನ್ನು ನಿರ್ಮಿಸಲು ತಾವೇ ಅಡಿಪಾಯ ಕಿತ್ತರು, ಮಣ್ಣು ತುಳಿದರು. ಗೋಡೆ ಕಟ್ಟಿದರು. ಕೊನೆಗೂ ಹಂಚಿನ ಕೊಠಡಿಯೊಂದು ರೂಪುಗೊಂಡಿತು. ಕೊಠಡಿ ಸಿದ್ಧವಾದ ಕೂಡಲೇ ತಮ್ಮಲ್ಲಿದ್ದ ಕೆಲವು ಪುಸ್ತಕಗಳನ್ನು ಅಲ್ಲಿಗೆ ರವಾನಿಸಿ ವಾಚನಾಲಯವನ್ನಾಗಿ ಮಾಡಿದರು. ರಾಮಕೃಷ್ಣಾಶ್ರಮದ ಸ್ವಾಮಿ ಪ್ರಣವೇಶಾನಂದರಿಂದ ಸಂಘದ ಉದ್ಘಾಟನೆಯಾಯಿತು. ಶ್ರೀಯುತ ನಾ. ಕಸ್ತೂರಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರೊ. ದೇಜಗೌ ಅವರ ಜೀವನದ ಧೋರಣೆ ಏನಾಗಿತ್ತು. ಎಂಬುದನ್ನು ಈ 'ಜ್ಞಾನೋದಯ ಸಂಘ' ಪ್ರತಿಬಿಂಬಿಸುತ್ತದೆ. ಈ ಧೋರಣೆ ಅವರಲ್ಲಿ ಇಂದಿಗೂ ಜೀವಂತವಾಗಿದೆ. ಎಪ್ಪತ್ತೈದು ವಸಂತಗಳನ್ನು ದಾಟಿದ್ದರೂ ಈ ಉತ್ಸಾಹ ಮಾಸಿಲ್ಲ. ನಾಡಿನ ಶ್ರೇಯೋಭಿವೃದ್ಧಿಗಾಗಿ ಇಂದಿಗೂ ದುಡಿಯುತ್ತಿದ್ದಾರೆ.

ದೇಜಗೌ ಅವರು ಕಾರಕೂನ ಹುದ್ದೆಯಿಂದ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಆದರೆ ಅವರ ವ್ಯಕ್ತಿತ್ವವಿಕಾಸಕ್ಕೆ ಅದು ಸರಿಯಾದ ಜಾಗವಾಗಿರಲಿಲ್ಲ. ಕೊನೆಗೆ ಇಷ್ಟವಾದ ಅಧ್ಯಾಪಕ ಹುದ್ದೆ ದೊರೆತಾಗ ಅವರಲ್ಲಿ ಸುಪ್ತವಾಗಿ ಅಡಗಿದ್ದ ಅನೇಕ ಯೋಜನೆಗಳು ಒಂದೊಂದಾಗಿ ಹೊರಸೂಸಲಾರಂಭಿಸುತ್ತವೆ. ಹೊಸ ಹೊಸ ಯೋಜನೆಗಳು ಅಂಕುರಿಸಿದಂತೆಲ್ಲ ಅವುಗಳನ್ನು ಕಾರ್ಯಗತಗೊಳಿಸಲು ಹಗಲಿರುಳು ದುಡಿಯುತ್ತಾರೆ. ಮನೆ, ಮಕ್ಕಳ ವ್ಯವಹಾರಗಳನ್ನೆಲ್ಲ ತಮ್ಮ ಶ್ರೀಮತಿಯವರಿಗೆ ಬಿಟ್ಟು, ಸಮಾಜದ ಏಳಿಗೆಗೆ, ಸಾಹಿತ್ಯ ನಿರ್ಮಾಣಕ್ಕೆ ಕಂಕಣ ತೊಡುತ್ತಾರೆ.

ದೇಜಗೌ ಅವರಿಗೆ ಕವಿ ಕುವೆಂಪು ಅವರ ಸಂಗ ದೊರೆಯುತ್ತದೆ. ಇದುವರೆಗೆ ಗುರಿ ಮಾತ್ರ ಇದ್ದವರಿಗೆ ಗುರುವು ದೊರೆಯುತ್ತಾರೆ. ಕುವೆಂಪು ಅವರ ಸಂಪರ್ಕ ದೊರೆತ ಮೇಲೆ ತಾವು ಹಾಕಿಕೊಂಡಿದ್ದ ಯೋಜನೆಗಳಿಗೆ, ಮಾಡಿಕೊಂಡಿದ್ದ ಸಂಕಲ್ಪಗಳಿಗೆ ಜೀವಕಳೆ ತುಂಬುತ್ತದೆ. ಗುರುಗಳ ಪ್ರೋತ್ಸಾಹ ಇವರನ್ನು ಉತ್ಸಾಹದ ಚಿಲುಮೆಯನ್ನಾಗಿಸುತ್ತದೆ. ಪರೀಕ್ಷಾಂಗದ ಮುಖ್ಯಸ್ಥರಾಗಿ ಅನೇಕ ಸುಧಾರಣೆಗಳನ್ನು ತರುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಕೀರ್ತಿಬರಬೇಕಾದರೆ, ಅದರ ಜ್ಞಾನ ಶಾಖೆಗಳು ಹೆಚ್ಚಬೇಕೆನ್ನುವುದು ದೇಜಗೌ ಅವರ ಅಭಿಮತ. ಅದಕ್ಕಾಗಿ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಹೊಸ ಹೊಸ ಶಾಖೆಗಳನ್ನು ಪ್ರಾರಂಭಿಸುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಮುದ್ರಣಾಲಯ ದೇಜಗೌ ಅವರು ಸಾಕಿಸಲಹಿದ ಕೂಸುಗಳು. ಪ್ರಸಾರಾಂಗದ ಪೂರ್ಣ ವೇಳೆಯ ಕಾರ್ಯದರ್ಶಿಗಳಾಗಿ ನೇಮಕಗೊಂಡ ಮೇಲೆ ಕಛೇರಿಯನ್ನು ಹೊಸದಾಗಿ ವ್ಯವಸ್ಥೆಗೊಳಿಸಿದರು. ಹೊಸ ಇಲಾಖೆಗೆ ಸಾಕಷ್ಟು ಹಣವನ್ನು ಶ್ರಮಪಟ್ಟು ಪಡೆದುಕೊಂಡರು. ಇವರ ಕಾಲದಲ್ಲಿ

ಸಪ್ತಾಹಗಳು ಮತ್ತು ವಿಶೇಷ ಉಪನ್ಯಾಸಗಳ ಸಂಖ್ಯೆ ಹೆಚ್ಚಿದವು. ತಾವು ಹೋದೆಡೆಯಲ್ಲೆಲ್ಲಾ ಪ್ರಬುದ್ಧ ಕರ್ನಾಟಕಕ್ಕೆ ಚಂದಾದಾರರನ್ನು ಸಂಪಾದಿಸಿದರು. ಪ್ರಕಟಣಾ ಶಾಖೆಯ ಕಾರ್ಯವ್ಯಾಪ್ತಿಯನ್ನು ವಿಸ್ತೃತಗೊಳಿಸುವ ಸಲುವಾಗಿ ಬೃಹತ್‌ಯೋಜನೆ ಹಾಕಿಕೊಂಡರು. ಸುಸಜ್ಜಿತವಾದ ಅಚ್ಚುಕೂಟ, ಸಾಮಗ್ರಿಭರಿತ ಸ್ಟೇಷನರಿ ಡಿಪೊ ಮತ್ತು ಸುವ್ಯವಸ್ಥಿತವಾದ ಮಾರಾಟ ಶಾಖೆಯನ್ನು ಯೋಜನೆಯಲ್ಲಿ ಸೇರಿಸಿದರು. ಹಗಲಿರುಳು ಅದಕ್ಕಾಗಿ ದುಡಿದರು. ಇಂದು ಅದು ಬೃಹದಾಕಾರವಾಗಿ ಬೆಳೆದು ನಿಂತಿರಲು ದೇಜಗೌ ಅವರ ಅವಿರತ ಶ್ರಮವೆ ಕಾರಣ. ಪ್ರಸಾರಾಂಗದ ಕಲ್ಪನೆ ಕುವೆಂಪು ಅವರದ್ದಾದರೂ ಅದಕ್ಕೊಂದು ಹೊಸ ರೂಪ ಕೊಟ್ಟವರು ದೇಜಗೌ. ಡಾ. ಹಾಮಾನಾ ಅವರ ಮಾತಿನಲ್ಲಿ ಹೇಳುವುದಾದರೆ "ಪ್ರಸಾರಾಂಗ ಕುವೆಂಪು ಅವರ ಶಿಶುವಾದರೂ ದೇಜಗೌ ಅದರ ಸಾಕು ತಾಯಿ."

ಮಹಾರಾಜ ಕಾಲೇಜಿನ 'ಕರ್ನಾಟಕ ಸಂಘ' ಅವನತಿಯ ಹಾದಿಯಲ್ಲಿದ್ದಾಗ ದೇಜಗೌ ಅವರು ಅಲ್ಲಿಗೆ ಅಧ್ಯಾಪಕರಾಗಿ ಬಂದರು. 'ಕರ್ನಾಟಕ ಸಂಘ' 'ಕನ್ನಡ ಸಂಘ' ಎಂಬ ಹೊಸ ಹೆಸರನ್ನು ಪಡೆದುಕೊಂಡಿತು. ಅದಕ್ಕೊಂದು ಜೀವಕೊಟ್ಟು, ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೇ ಅದರ ಹೊರಗೂ ಕನ್ನಡ ತಲೆ ಎತ್ತುವಂತೆ ಮಾಡಿದರು. ಅದಕ್ಕಾಗಿ ಹೋರಾಟವನ್ನೆ ಮಾಡಿ, ಪತ್ರಿಕೆಗಳಿಗೆ ಉಗ್ರವಾದ ಲೇಖನಗಳನ್ನು ಬರೆದರು. ಕನ್ನಡಕ್ಕೆ ಇಂದು ಒಂದು ಸ್ಥಾನ ಸಿಕ್ಕಿದ್ದರೆ ಅದಕ್ಕೆ ದೇಜಗೌ ಅವರ ಕೊಡುಗೆ ಅಪಾರವಾದದ್ದು.

ಕನ್ನಡ ಅಧ್ಯಯನ ಸಂಸ್ಥೆಯ ಶ್ರೇಯೋಭಿವೃದ್ಧಿಯೆಲ್ಲ ದೇಜಗೌ ಅವರಿಗೆ ಸೇರಬೇಕಾದ್ದು. ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪನೆಯ ಹೋರಾಟದ ಕಥೆಯನ್ನು ಓದಿದರೆ ಬೇರೆ ಯಾರಾದರೂ ಆಗಿದ್ದರೆ ಅಲ್ಲಿಗೆ ನಿಲ್ಲಿಸಿಬಿಡುತ್ತಿದ್ದರು. ಅಷ್ಟೊಂದು ತೊಡಕುಗಳು ಎದುರಾದವು. ಮೂರು ಕೋಣೆಗಳಲ್ಲಿ ಅಜ್ಞಾತವಾಗಿದ್ದ ಕನ್ನಡ ಇಲಾಖೆಯನ್ನು ಒಂದು ಪ್ರತ್ಯೇಕ ಸಂಸ್ಥೆಯನ್ನಾಗಿ ಕಟ್ಟಿ ಬೆಳಸಬೇಕಾದರೆ ಅವರು ಪಟ್ಟಶ್ರಮ ಅಷ್ಟಿಷ್ಟಲ್ಲ. ಒಂದು ಭಾಷೆ ಬೆಳೆಯಬೇಕಾದರೆ ಎಲ್ಲಾ ಜ್ಞಾನಶಾಖೆಗಳು ಬೇಕೆಂದರಿತ ಅವರು ಸಂಸ್ಥೆಯನ್ನು ಬಹುಮುಖವಾಗಿ ಬೆಳೆಸಿದರು. ಇಷ್ಟೆಲ್ಲ ಸಾಹಸ ಹೋರಾಟಗಳನ್ನು ನಡೆಸಿದರೂ ದೇಜಗೌ ಎಂದೂ ಅಧ್ಯಯನ ಸಂಸ್ಥೆ ತಮ್ಮಿಂದಲೇ ನಡೆಯಿತೆಂಬ ಒಣಜಂಬ ಪ್ರದರ್ಶಿಸಲಿಲ್ಲ. ಆದರೆ ಕನ್ನಡಿಗರು ಮಾತ್ರ "**ಕನ್ನಡ ಅಧ್ಯಯನ ಸಂಸ್ಥೆ ಸಂಸ್ಥಾಪಕರು ದೇಜಗೌ**" ಎಂಬುದನ್ನು ಎಂದೋ ಘೋಷಿಸಿದ್ದಾರೆ. ಇಂದಿಗೂ ಕನ್ನಡ ಅಧ್ಯಯನ ಸಂಸ್ಥೆಯ ಬಗ್ಗೆ ಮಾತನಾಡುವಾಗ ಅವರ ಮುಖ ಅರಳುತ್ತದೆ.

ದೇಜಗೌ ಮತ್ತು ಕನ್ನಡ ಅಧ್ಯಾಪಕ ಪರಿಷತ್ತಿಗೂ ಅವಿನಾಭಾವ ಸಂಬಂಧವಿದೆ. ದೇಜಗೌ ಕನ್ನಡ ಅಧ್ಯಾಪಕ ಪರಿಷತ್ತಿನ ಅವಿಭಾಜ್ಯ ಅಂಗವಾಗಿದ್ದವರು ಕನ್ನಡ ಅಧ್ಯಾಪಕರು ಯಾವುದೇ ಹಂತದಲ್ಲಿ ಕೆಲಸಮಾಡುತ್ತಿದ್ದರೂ, ಅವರು ಯಾವ ಸೌಕರ್ಯಗಳಿಂದಲೂ ವಂಚಿತರಾಗಬಾರದು. ಅವರಿಗೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ, 1968 ರಲ್ಲಿ "ಮೈಸೂರು ರಾಜ್ಯ

ಕನ್ನಡ ಅಧ್ಯಾಪಕ ಪರಿಷತ್"ನ್ನು ಸ್ಥಾಪಿಸಿದರು. ತಾವೇ ಸಂಸ್ಥೆಯ ಮೊದಲ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು. 1970 ರಲ್ಲಿ ಮೊದಲ ಬಾರಿಗೆ ಮೈಸೂರು ನಗರದಲ್ಲಿ ಮೂರು ದಿವಸಗಳ ಕನ್ನಡ ಅಧ್ಯಾಪಕರ ಸಮ್ಮೇಳನವನ್ನು ನಡೆಸಿದರು. ಕನ್ನಡ ಅಧ್ಯಾಪಕರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬರುವಂತೆ ಮಾಡಿದರು. ಇದರಿಂದಾಗಿ ಕನ್ನಡ ಪಂಡಿತರ ಸ್ಥಿತಿಗತಿಗಳು ಉತ್ತಮಗೊಂಡವು. ಕನ್ನಡ ಪಂಡಿತರೆಂದರೆ ಕೂಪಮಂಡೂಕಗಳೆಂದೆಣಿಸಿದ್ದ ಕಾಲದಲ್ಲಿ ಅವರೂ ಬೇರೆಯ ವಿಷಯಗಳ ಅಧ್ಯಾಪಕರಂತೆ ಸರಿಸಾಟಿಯಾಗಿ ನಿಲ್ಲುವಂತೆ ಮಾಡಿದವರು ದೇಜಗೌ. ಕೇವಲ ಅಧ್ಯಾಪಕರಾಗಿ ನಿವೃತ್ತರಾಗುತ್ತಿದ್ದ ಕನ್ನಡ ಪಂಡಿತರನ್ನು ಮುಖ್ಯೋಪಾಧ್ಯಾಯರಾಗಿ, ತಾಲ್ಲೂಕು ವಿದ್ಯಾಧಿಕಾರಿಗಳಾಗಿ, ಜಿಲ್ಲಾ ವಿದ್ಯಾಧಿಕಾರಿಗಳಾಗಿ ಇಲ್ಲವೇ ನಿರ್ದೇಶಕರಾಗಿ ಬಡ್ತಿಹೊಂದಲು ಸೌಲಭ್ಯವನ್ನು ಒದಗಿಸಿಕೊಟ್ಟವರು ದೇಜಗೌ. ಒಟ್ಟಿನಲ್ಲಿ ಕನ್ನಡ ಅಧ್ಯಾಪಕರ ಸರ್ವತೋಮುಖವಾದ ಅಭಿವೃದ್ಧಿಗಾಗಿ ಶ್ರೀಯುತರು ಶ್ರಮಿಸಿದ್ದಾರೆ. ಅವರ ಹೆಸರು ಕನ್ನಡ ಪಂಡಿತ ವರ್ಗದಲ್ಲಿ ಚಿರಸ್ಮರಣೀಯ. ಶ್ರೀಯುತರನ್ನು ಪಡೆದ ಪಂಡಿತವರ್ಗ ಧನ್ಯ.

ಕನ್ನಡ ನುಡಿಯ ಸೇವೆಗಾಗಿ, ಅದರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳಲ್ಲಿ "ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್" ಒಂದೆಂಬುದರಲ್ಲಿ ಸಂಶಯವಿಲ್ಲ. ಈ ಯುಗದ ಕವಿ, ಜಗದ ಕವಿಯಾದ ರಸಋಷಿಗಳ ಹೆಸರುಳ್ಳ ಇದು ನಾಡಿನ ಕಲ್ಯಾಣಕ್ಕೆ ಕಾರಣವಾಗಿದೆ. ಇದರ ಬೃಹತ್ ಯೋಜನೆಯ ಸೂತ್ರದಾರರು ವರಕವಿಗಳ ಪರಮಶಿಷ್ಯರಾದ ದೇಜಗೌ ಅವರು.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಇಂದು ಬೃಹದಾಕಾರವಾಗಿ ಬೆಳೆದಿದೆ. ಮೈಸೂರು ನಗರದ ಮಧ್ಯಭಾಗದಲ್ಲಿ ಮೂವತ್ತೆರಡು ಎಕರೆ ವಿಸ್ತೀರ್ಣದ ನಿವೇಶನವನ್ನು ಹೊಂದಿದೆ. ನಿವೇಶನದ ಬೆಲೆಯೆ ಇಂದು ಕೋಟಿಗಳನ್ನು ಮೀರುತ್ತದೆ. ಲಕ್ಷಾಂತರ ರೂಪಾಯಿಗಳ ಬೃಹತ್ ಕಟ್ಟಡಗಳು ತಲೆಯೆತ್ತಿವೆ. ನಾಲ್ಕು ಪ್ರೌಢಶಾಲೆಗಳು ಮತ್ತು ಒಂದು ಕಿರಿಯ ಕಾಲೇಜುಗಳು ಪ್ರಾರಂಭವಾಗಿವೆ. ತನ್ನದೇ ಆದ ಮುದ್ರಣಾಲಯ, ಪ್ರಕಟಣ ವಿಭಾಗ, ಸುಸಜ್ಜಿತ ಗ್ರಂಥಾಲಯ, ಶ್ರೀ ಕುವೆಂಪು ಮ್ಯೂಸಿಯಂ, ಶ್ರೀ ಕುವೆಂಪು ಮಾಹಿತಿ ಕೇಂದ್ರಗಳನ್ನು ಹೊಂದಿದೆ. ವಾಣಿಜ್ಯ ಸಂಕೀರ್ಣದಿಂದ ಸಾಕಷ್ಟು ಆದಾಯವು ಬರುತ್ತಿದೆ. ಇಷ್ಟೆಲ್ಲಾ ಆಗಬೇಕಿದ್ದರೆ ಅದರ ಹಿಂದೆ ಇರುವ ಶಕ್ತಿ ದೇಜಗೌ ಎಂಬುದನ್ನು ಮರೆಯಬಾರದು. ಶಿಲ್ಪಿ ಕಲ್ಲಿನಲ್ಲಿ ವಿಗ್ರಹವನ್ನು ಕೆತ್ತಲು ಎಷ್ಟು ಶ್ರಮಪಡುತ್ತಾನೋ ಅಷ್ಟೇ ಶ್ರಮವನ್ನು ಈ ಸಂಸ್ಥೆ ಕಟ್ಟಿ ಬೆಳೆಸುವಲ್ಲಿ ದೇಜಗೌ ಶ್ರಮಪಟ್ಟಿದ್ದಾರೆ. ತಮ್ಮ ಸ್ವಂತ ಮನೆಯನ್ನೇ ಸಂಸ್ಥೆಗಾಗಿ ಬಿಟ್ಟುಕೊಡುತ್ತಾರೆ. ಸಂಸ್ಥೆ ಸ್ವಂತ ಕಟ್ಟಡವನ್ನು ಹೊಂದಿದಾಗ ಸಂಸ್ಥೆಗೆ ನೀಡಿದ್ದ ಮನೆಯನ್ನು ಮಾರಿ ಬಂದ ಹಣವನ್ನೆಲ್ಲ ಸಂಸ್ಥೆಗೆ ನೀಡುತ್ತಾರೆ. ಮಡದಿ, ಮಕ್ಕಳೆಲ್ಲಾ ಇಂದಿಗೂ ಸಂಸ್ಥೆಯ ಶ್ರೇಯಸ್ಸಿಗಾಗಿ ದುಡಿಯುತ್ತಿದ್ದಾರೆ. ದೇಜಗೌ ಅವರಿಗೆ ತಮ್ಮ ಗುರುಗಳ ಹೆಸರಿನ ಸಂಸ್ಥೆಯನ್ನು ಬೆಳೆಸುವುದೆ ತಪಸ್ಸಾಗಿದೆ.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಸ್ಥಾಪಿಸಿರುವ ವಿದ್ಯಾಸಂಸ್ಥೆಗಳ ವೈಶಿಷ್ಟ್ಯತೆಯೆ ಬೇರೆ ಕಡಿಮೆ ಅಂಕಗಳನ್ನು ಪಡೆದು ಎಲ್ಲೂ ಓದಲು ಅವಕಾಶ ಸಿಗದೆ ಬೀದಿಪಾಲಾಗುತ್ತಿದ್ದ ಮಕ್ಕಳನ್ನೆಲ್ಲಾ ಒಂದೆಡೆ ಕಲೆಹಾಕಿ ಅವರಿಗೆ ಉತ್ತಮ ಅವಕಾಶವನ್ನು ಕಲ್ಪಿಸಿ, ಅವರನ್ನು

ಉತ್ತಮ ಪ್ರಜೆಗಳನ್ನಾಗಿ ತಯಾರು ಮಾಡಲು ಶ್ರಮಿಸುತ್ತಿದೆ. ಇಲ್ಲಿ ಓದಿದ ಮಕ್ಕಳು, ಇಂಜಿನಿಯರ್ ಮುಂತಾದ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಮುಂದೆ ವಸತಿ ಶಾಲೆಯನ್ನು ಪ್ರಾರಂಭಿಸುವ ಯೋಜನೆಯೂ ಟ್ರಸ್ಟ್‌ಗೆ ಇದೆ. ದೇಜಗೌ ಅದಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ದೇಜಗೌ ಅವರ ಪರಿಶ್ರಮದ ಫಲವಾಗಿ 1978 ನೆಯ ಇಸವಿಯಲ್ಲಿ ಮೈಸೂರಿನಲ್ಲಿ 'ಭಾರತೀಯ ಸ್ಥಳನಾಮ ಪರಿಷತ್' ಹುಟ್ಟಿಕೊಂಡಿತು. ಭಾರತದ ಸ್ಥಲನಾಮಗಳು ಹಾಗೂ ವ್ಯಕ್ತಿಗಳ ನಾಮೋಪನಾಮಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದಾದರೆ ನಮ್ಮ ನಾಡಿನ ಸಾಂಸ್ಕೃತಿಕ, ಇತಿಹಾಸದ ಬಗೆಗೆ ಸಾಕಷ್ಟು ಹೊಸ ಬೆಳಕು ಚೆಲ್ಲಬಹುದು. ಈ ನಿಟ್ಟಿನಲ್ಲಿ ಕೆಲಸ ನಿರ್ವಹಿಸಲು ಪ್ರಾರಂಭವಾಗಿರುವುದು ಭಾರತೀಯ ಸ್ಥಲನಾಮ ಪರಿಷತ್. ಅಂದಿನಿಂದ ಇಂದಿನವರೆಗೆ ಸ್ಥಲನಾಮ ಪರಿಷತ್ತಿಗೂ ದೇಜಗೌ ಅವರಿಗೂ ಬಿಡಿಸಲಾರದ ಸಂಬಂಧವೇರ್ಪಟ್ಟಿದೆ. ಅವರ ಜೀವನದ ಒಂದು ಭಾಗವೇ ಆಗಿದೆ. ಶ್ರೀಯುತರ ಸತತ ಪರಿಶ್ರಮದಿಂದಾಗಿ ಪರಿಷತ್ತು ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಹಲವಾರು ದತ್ತಿಗಳನ್ನು ಪ್ರಾರಂಭಿಸಿದೆ. ಹಲವಾರು ವರ್ಷಗಳು ಪರಿಷತ್ತಿನ ಅಧ್ಯಕ್ಷರಾಗಿದ್ದ ದೇಜಗೌ ಅವರು ಹೊಸ ಪೀಳಿಗೆಯನ್ನು ತಯಾರು ಮಾಡುವ ದೃಷ್ಟಿಯಿಂದ ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ವಹಿಸಿದ್ದಾರೆ. ಆದರೂ ಸಂಸ್ಥೆಯ ಪೋಷಕರಾಗಿದ್ದುಕೊಂಡು ಅದರ ಎಲ್ಲಾ ಕೆಲಸಕಾರ್ಯಗಳಲ್ಲಿ ಭಾಗವಹಿಸುತ್ತಿದ್ದಾರೆ.

ಕ್ರಿಯಾಶೀಲವಾದ ವ್ಯಕ್ತಿತ್ವ ಸುಮ್ಮನೇ ಕೂರುವುದಿಲ್ಲ. ಏನನ್ನಾದರೂ ಮಾಡಲು ತವಕಿಸುತ್ತಿರುತ್ತದೆ. ಅಂಥ ಕ್ರಿಯಾಶೀಲ ವ್ಯಕ್ತಿತ್ವ ಉಳ್ಳವರಲ್ಲಿ ದೇಜಗೌ ಒಬ್ಬರು. ವಿಶ್ವವಿದ್ಯಾನಿಲಯದಿಂದ ನಿವೃತ್ತಿಯಾದನಂತರ ಸುಮ್ಮನೇ ಕೂರುವುದಿಲ್ಲ. ಶ್ರೀ ಕುವೆಂಪು ಟ್ರಸ್ಟಿನ ಜೊತೆಗೆ ಇನ್ನೂ .ಹಲವಾರು ಯೋಜನೆಗಳನ್ನು ಹಾಕಿಕೊಂಡರು. ವೃದ್ಧರ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು 'ಹಿರಿಯ ನಾಗರಿಕರ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಡಾ. ಜಿ. ಎಸ್. ಗಾಯ್ ಅವರು ಶ್ರೀಯುತರಿಗೆ ನೆರವಾದರು. ಆ ಸಂಸ್ಥೆ ಇಂದು ಸ್ವಂತ ನಿವೇಶನ, ಸ್ವಂತ ಕಟ್ಟಡವನ್ನು ಹೊಂದಿ, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವೃದ್ಧರಿಗಾಗಿ ಸೇವಾಶ್ರಮವನ್ನು ಸ್ಥಾಪಿಸುವ ಉದ್ದೇಶವು ಇದೆ. ಈ ಕಾರ್ಯಗಳಿಗೂ ಇಂದೂ ದೇಜಗೌ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ, ಎಲ್ಲಾ ಕಾರ್ಯಗಳ ಬೆನ್ನೆಲುಬಾಗಿದ್ದಾರೆ.

ದೇಜಗೌ ಅವರು ಪುಣ್ಯವಂತರು. ಅವರಿಗೆ ತಕ್ಕ ಮಡದಿ, ಅನುರೂಪರಾದ ಇಬ್ಬರೇ ಮಕ್ಕಳು, ನಿರ್ಮಲ ಹೃದಯದ ಅಳಿಯ ಸೊಸೆ. ದೇಜಗೌ ಅವರ ಎಲ್ಲ ಸಾಧನೆಯ ಹಿಂದೆ ಇವರುಗಳ ಸ್ಥಾನವನ್ನು ಮರೆಯಬಾರದು. ಎಲ್ಲರೂ ಸರಳ ಜೀವನಕ್ಕೆ ಒಗ್ಗಿಕೊಂಡವರು. ದೇಜಗೌ ಅವರ ಗ್ರಂಥಗಳಿಂದ ಸಾಕಷ್ಟು ಹಣ ಬರುತ್ತದೆ. ಒಂದು ಟ್ರಸ್ಟ್ ಮಾಡಿ ಆ ಹಣವನ್ನೆಲ್ಲಾ ಅಲ್ಲಿಗೇಕೆ ಕೊಡಬಾರದು ಎಂದು ದೇಜಗೌ ಸಲಹೆ ನೀಡುತ್ತಾರೆ. ಎಲ್ಲರೂ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ದಿನಾಂಕ 03-07-1971ರಲ್ಲಿ " ದೇಜಗೌ ಟ್ರಸ್ಟು" ರೂಪ ಪಡೆಯುತ್ತದೆ. ಈ ಸಂಸ್ಥೆಯ ಕೆಲಸಗಳಿಗೆ ಯಾರಿಂದಲೂ ಚಂದಾ ವಸೂಲಿ ಮಾಡುವುದಿಲ್ಲ. ದೇಜಗೌ ಅವರ ಗ್ರಂಥಗಳಿಂದ ಬರುವ ಹಣವೇ ಆಸ್ತಿ.

ಕನ್ನಡ ನಾಡು ನುಡಿಗಳನ್ನು ಕುರಿತು ನಡೆಸುವ ಅಧ್ಯಯನ ಸಂಶೋಧನೆಗಳಿಗೆ ನೆರವು ನೀಡುವುದು, ಅರ್ಹತೆಯುಳ್ಳ ವಿದ್ಯಾರ್ಥಿ ಅಥವಾ ವಿದ್ವಾಂಸರಿಗೆ ವೇತನ ರೂಪದಲ್ಲಿಯೊ ಬಹುಮಾನ ರೂಪದಲ್ಲಿಯೊ ಧನಸಹಾಯ ಮಾಡುವುದು, ಶೈಕ್ಷಣಿಕ ಸಂಸ್ಥೆ ಅಥವಾ ಗ್ರಂಥಾಲಯಗಳನ್ನು ಸ್ಥಾಪಿಸುವುದು, ದೇಜಗೌ ಮತ್ತು ಇತರ ಲೇಖಕರ ಪುಸ್ತಕಗಳನ್ನು ಪ್ರಕಟಿಸುವುದು- ಇವು ಸ್ಥೂಲವಾಗಿ ದೇಜಗೌ ಟ್ರಸ್ಟಿನ ಮುಖ್ಯೋದ್ದೇಶಗಳು. ಇಷ್ಟೇ ಅಲ್ಲದೆ ಟ್ರಸ್ಟು ಎರಡು ಅತ್ಯುನ್ನತ ಪ್ರಶಸ್ತಿಗಳನ್ನು ಸ್ಥಾಪಿಸಿದೆ. 'ವಿಶ್ವಮಾನವ ಪ್ರಶಸ್ತಿ' ಹಾಗೂ 'ಸಾವಿತ್ರಮ್ಮ ದೇಜಗೌ ಮಹಿಳಾ ಪ್ರಶಸ್ತಿ'. ಈ ಪ್ರಶಸ್ತಿಗಳ ಮೊತ್ತ ತಲಾ ಹದಿನೈದು ಸಾವಿರ ರೂಪಾಯಿಗಳು. ಇಷ್ಟು ಮೊತ್ತದ ಬಹುಮಾನವನ್ನು ಮೊದಲು ನೀಡಿದ್ದು ದೇಜಗೌ ಟ್ರಸ್ಟು ಎಂಬುದೊಂದು ಮುಖ್ಯವಾದದ್ದು.

ಒಟ್ಟಿನಲ್ಲಿ ದೇಜಗೌ ಟ್ರಸ್ಟು ಹಣ ಕೂಡಿದಂತೆಲ್ಲ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದೆ. ಅಳಿಲು ಸೇವೆಯೇ ಟ್ರಸ್ಟಿನ ಗುರಿ ಎಂದು ವಿನಯದಿಂದ ತಿಳಿಸುತ್ತಾರೆ ಟ್ರಸ್ಟಿನ ಅಧ್ಯಕ್ಷರಾದ ಶ್ರೀಮತಿ ಸಾವಿತ್ರಮ್ಮ ದೇಜಗೌ ಅವರು.

ಕರ್ನಾಟಕ ಸರ್ಕಾರ ಕುವೆಂಪು ಮತ್ತು ಬೇಂದ್ರೆಯವರ ಹೆಸರಿನಲ್ಲಿ ಪ್ರತಿಷ್ಠಾನಗಳನ್ನು ಸ್ಥಾಪಿಸುವ ಉದ್ದೇಶವನ್ನು ವ್ಯಕ್ತಪಡಿಸಿದಾಗ ಶ್ರೀ ಕುವೆಂಪು ಅವರ ಪರಮಶಿಷ್ಯರಾದ ದೇಜಗೌ ಅವರಿಗೆ ಆದ ಆನಂದ ಅಪಾರವಾದದ್ದು. ಪತ್ರಿಕೆಗಳಲ್ಲಿ ಸುದ್ದಿ ಬಂದದ್ದೇ ತಡ ಅಂದಿನ ಮುಖ್ಯಮಂತ್ರಿಗಳಾದ ಶ್ರೀಯುತ ಬಂಗಾರಪ್ಪನವರನ್ನು ಭೇಟಿಮಾಡಿದರು. ದುರದೃಷ್ಟವಶಾತ್ ಬಂಗಾರಪ್ಪನವರು ಅಧಿಕಾರದ ಅವನತಿಯ ಅಂಚಿನಲ್ಲಿದ್ದರು. ದೇಜಗೌ ಅವರಿಗೆ ಏನಾಗುತ್ತದೊ ಎಂಬ ತವಕ. ಆದರೆ ಭಗೀರಥ ಪ್ರಯತ್ನಮಾಡಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಪಡೆದು ಸಂಸ್ಥೆಯನ್ನು ಪ್ರಾರಂಭಿಸಿಯೇಬಿಟ್ಟರು. ಸರ್ಕಾರ ದೇಜಗೌ ಅವರನ್ನೇ ಪ್ರತಿಷ್ಠಾನದ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ' ಎಂಬ ಹೆಸರಿನಲ್ಲಿ ಸ್ಥಾಪನೆಗೊಂಡಿರುವ ಈ ಸಂಸ್ಥೆ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ನಡೆಸಿದೆ. ಕವಿಗಳು ಹುಟ್ಟಿದ ಮನೆಯನ್ನು ಪಡೆದು ಅಲ್ಲಿ ಕುವೆಂಪು ಮ್ಯೂಸಿಯಂ ನಿರ್ಮಿಸುವುದು, ರಂಗಮಂದಿರ, ಉದ್ಯಾನವನ, ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸುವುದು, ಕುವೆಂಪು ಸಾಹಿತ್ಯದಲ್ಲಿ ಡಿಪ್ಲೊಮಾ ತರಗತಿಗಳ ಪ್ರಾರಂಭ- ಇವೇ ಮೊದಲಾದ ಯೋಜನೆಗಳು ಪ್ರತಿಷ್ಠಾನದ ಮುಂದಿವೆ. ದೇಜಗೌ ಅವರು ಪ್ರತಿಷ್ಠಾನದ ಕೆಲಸ ಕಾರ್ಯಗಳಿಗೆ ಪ್ರಾರಂಭದಲ್ಲಿ ಸ್ವಂತ ಹಣವನ್ನು ಖರ್ಚು ಮಾಡುತ್ತಾರೆ. ಇಂದಿಗೂ ಸಭೆಗಳಿಗೆ ಹೋದಾಗ ಪ್ರಯಾಣ ಭತ್ಯೆಯನ್ನು ಪಡೆಯುವುದಿಲ್ಲ. ಶ್ರೀ ಕುವೆಂಪು ದೇಜಗೌ ಅಂಥ ಶಿಷ್ಯರನ್ನು ಪಡೆದದ್ದು ಪುಣ್ಯ.

ಮಂಡ್ಯದ 'ಕೆ. ವಿ. ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ'ದ ಸಂಸ್ಥಾಪಕ ಅಧ್ಯಕ್ಷರೂ ದೇಜಗೌ ಅವರೆ. ಈ ಸಂಸ್ಥೆಯ ಸ್ಥಾಪನೆಯ ಬೇರು ಹೊರಟದ್ದು ದೇಜಗೌ ಮೂಲಕವೆ. ಪ್ರತಿಷ್ಠಾನ ಪ್ರತಿವರ್ಷ ರಂಗಭೂಮಿಯಲ್ಲಿ ದುಡಿದವರಿಗೆ ನಗದು ಬಹುಮಾನವನ್ನು ನೀಡುತ್ತಿದೆ. ಶ್ರೀ ಶಂಕರಗೌಡರ ಮಗ ಶ್ರೀಯುತ ಕೆ. ಎಸ್. ಸಚ್ಚಿದಾನಂದ ಅವರು ಹೆಚ್ಚು ಆಸಕ್ತಿಯಿಂದ ಪ್ರತಿಷ್ಠಾನದ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ದೇಜಗೌ ಮಾರ್ಗದರ್ಶಕರಾಗಿ, ಸಂಸ್ಥೆಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಕೆಲವು ಸಂಸ್ಥೆಗಳನ್ನು ದೇಜಗೌ ಪ್ರಾರಂಭಿಸದಿದ್ದರೂ ಆ ಸಂಸ್ಥೆಗಳ ಸ್ಥಾಪನೆಗೆ ದೇಜಗೌ ಪ್ರೇರಕ ಶಕ್ತಿಯಾಗಿದ್ದಾರೆ. ಅಂಥ ಸಂಸ್ಥೆಗಳಲ್ಲಿ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಕೆಂಗಲ್ ಬಳಿಯಲ್ಲಿ ನಲವತ್ತು ಎಕರೆ ವಿಸ್ತೀರ್ಣದಲ್ಲಿ ವನಸಿರಿಯ ನಡುವೆ ದಾನಿ ರಾಮಲಿಂಗಯ್ಯನವರ ನೇತೃತ್ವದಲ್ಲಿ ನಿರ್ಮಾಣಗೊಂಡಿರುವ 'ಹೊಂಬೇಗೌಡ ಶಿಕ್ಷಣ ಸಂಸ್ಥೆಗಳು' ಕುವೆಂಪು ಮಹಾ ವಿದ್ಯಾಲಯಗಳು. ಶ್ರೀಯುತ ರಾಮಲಿಂಗಯ್ಯನವರಿಗೆ ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡಿಕೊಟ್ಟು, ಪ್ರೋತ್ಸಾಹಿಸಿದವರು ದೇಜಗೌ.

ಸಿದ್ಧಯ್ಯ ಪುರಾಣಿಕರು ಸ್ಥಾಪಿಸಿರುವ 'ಸಾಹಿತ್ಯ ಸಂವರ್ಧಕ ಟ್ರಸ್ಟಿನ' ಸಕ್ರಿಯ ಸದಸ್ಯರಲ್ಲಿ ದೇಜಗೌ ಒಬ್ಬರು. ಹಂಸಲೇಖ ಮುಂತಾದ ಗೆಳೆಯರು ಸೇರಿ ಪ್ರಾರಂಭಿಸಿರುವ 'ನಾಟಕ ಚಾವಡಿ' ಎಂಬ ಸಂಸ್ಥೆಯ ಅಧ್ಯಕ್ಷರೂ ದೇಜಗೌ ಅವರೆ.

ಯಾವುದೇ ಒಂದು ಭಾಷೆ, ಸಾಹಿತ್ಯ ಬೆಳೆಯಬೇಕಾದರೆ ಅನ್ಯಭಾಷೆ, ಸಾಹಿತ್ಯಗಳ ಸಂಪರ್ಕ ಅಗತ್ಯ. ಈ ರೀತಿಯ ಸಂಪರ್ಕ ಒದಗುವುದು ಭಾಷಾಂತರ ಕಾರ್ಯದ ಮೂಲಕ. ದೈತ್ಯ ಭಾಷಾಂತರಕಾರರಾದ ದೇಜಗೌ ಅವರಿಗೆ ಈ ಸತ್ಯ ಗೊತ್ತು. ಭಾಷಾಂತರ ಕಾರ್ಯ ನಿರಂತರವಾಗಿ ನಡೆಯಬೇಕಾದರೆ ಒಂದು ಸಂಸ್ಥೆ ಅಗತ್ಯವೆಂದರಿತ ದೇಜಗೌ ಅವರು 'ಭಾರತೀಯ ಭಾಷಾಂತರ ಅಕಾಡೆಮಿ'ಯನ್ನು ಪ್ರಾರಂಭಿಸಲು ಪ್ರಯತ್ನಿಸಿದರು. ಪೂರ್ವಭಾವಿ ಸಿದ್ಧತೆಗಳನ್ನು ತಾವೇ ಮಾಡಿಕೊಟ್ಟರು. ಆದರೂ ಇಂದಿಗೂ ಆ ಸಂಸ್ಥೆ ಪೂರ್ಣರೂಪ ತಾಳಲು ಸಾಧ್ಯವಾಗಿಲ್ಲ. ಆ ಕೊರಗು ಅವರ ಮನಸ್ಸಿನಲ್ಲಿ ಇಂದಿಗೂ ಇದೆ. ಆದಷ್ಟು ಬೇಗ ಆ ಸಂಸ್ಥೆ ಕಾರ್ಯಗತಗೊಂಡರೆ ತುಂಬಾ ಒಳ್ಳೆಯದು.

ಬೆಂಗಳೂರಿನ 'ಬಸವ ಸಮಿತಿ' ಸನ್ಮಾನ್ಯ ಬಿ. ಡಿ. ಜತ್ತಿಯವರ ಶ್ರಮದ ಫಲವಾಗಿ ಜನಿಸಿದ ಸಂಸ್ಥೆ. ಇಂದು ಅದು ಬೃಹದಾಕಾರವಾಗಿ ಬೆಳೆದಿದೆ. ಸಂಸ್ಥೆ ಪ್ರಾರಂಭವಾದಂದಿನಿಂದ ಇಂದಿನವರೆಗೂ ಅದರ ಆಡಳಿತ ಮಂಡಲಿಯಲ್ಲಿದ್ದಾರೆ. ಇತ್ತೀಚೆಗೆ ಬಸವ ಸಮಿತಿಯ ಕಾರ್ಯಗೌರವದಿಂದ ತಮ್ಮನ್ನು ಬಿಡುಗಡೆ ಮಾಡಿಕೊಡಲು ವಿನಂತಿಸಿಕೊಂಡರೂ ಶ್ರೀ ಜತ್ತಿಯವರು ದೇಜಗೌ ಅವರನ್ನು ಬಿಡಲು ಸಿದ್ಧವಿಲ್ಲ. ಬಸವ ಸಮಿತಿಯ ಗೌರವಕ್ಕೆ ದೇಜಗೌ ಅಂಥವರ ಹಾಜರಿ ಎಷ್ಟೆಂಬುದು ಅರಿವಾಗುತ್ತದೆ.

ಉಡುಪಿಯಲ್ಲಿ ಶ್ರೀಯುತ ಕು. ಶಿ. ಹರಿದಾಸ ಭಟ್ಟರ ನೇತೃತ್ವದ ತುಳು ನಿಘಂಟುವಿನ ರಚನಾ ಸಮಿತಿಯಲ್ಲೂ ದೇಜಗೌ ಅವರದು ಸಕ್ರಿಯವಾದ ಪಾತ್ರ. ಈ ಇಳಿವಯಸ್ಸಿನಲ್ಲೂ ಅಷ್ಟು ದೂರದ ಉಡುಪಿಗೂ ಸಭೆಗಳಿಗೆ ಹೋಗಿ ಬರುತ್ತಾರೆ.

ಶ್ರೀ ರಜತಾದ್ರಿಯವರ ನೇತೃತ್ವದಲ್ಲಿ ಪ್ರಾರಂಭವಾಗಿರುವ 'ಇಂಡೋ-ಡೆನ್ಮಾರ್ಕ್ ಸಾಂಸ್ಕೃತಿಕ ಸಂಘ' ದಲ್ಲೂ ದೇಜಗೌ ಅವರ ಪಾತ್ರ ಉಂಟು. ಅದರ ಮಾರ್ಗದರ್ಶಕರೂ, ಪೋಷಕರೂ ದೇಜಗೌ ಅವರೆ. ಇಲ್ಲೆಲ್ಲ ದೇಜಗೌ ಎಂಬ ಮೂರಕ್ಷರದ ನಾಮಬಲವೇ ಶ್ರೀರಕ್ಷೆ.

ಯುವ ಸಂಘಟನಾಕಾರ, ಸಂಸ್ಕೃತ ವಿದ್ವಾಂಸ ವಿದ್ವಾನ್ ಎಂ. ಶಿವಕುಮಾರ ಸ್ವಾಮಿ ಅವರು ಪ್ರಧಾನ ಕಾರ್ಯದರ್ಶಿಯಾಗಿರುವ 'ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿ'ನ ಅಧ್ಯಕ್ಷ ಪದವಿಯನ್ನು ಅಲಂಕರಿಸಿರುವವರು ದೇಜಗೌ ಅವರೆ. ಈ ಸಂಸ್ಥೆಯ ಸಂಸ್ಥಾಪಕ

ಅಧ್ಯಕ್ಷರಾಗಿರುವ ದೇಜಗೌ ಅವರು ಸಂಸ್ಥೆಗಾಗಿ ಅವಿರತ ದುಡಿಯುತ್ತಿದ್ದಾರೆ. ಉತ್ಸಾಹಿ ತರುಣರಾದ ಶಿವಕುಮಾರಸ್ವಾಮಿಗಳ ನೇತೃತ್ವದಲ್ಲಿ, ಶ್ರೀಯುತ ದೇಜಗೌ ಅವರ ಮಾರ್ಗದರ್ಶನವಿರುವ ಈ ಸಂಸ್ಥೆ ಬಹುಬೇಗ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

ಇತ್ತೀಚೆಗೆ ಮೈಸೂರಿನಲ್ಲಿ 'ಅಖಿಲ ಕರ್ನಾಟಕ ಕವಿರಾಜಮಾರ್ಗ ಸಾಹಿತ್ಯ ಸಂಘ' ಎಂಬೊಂದು ಸಂಸ್ಥೆ ಜನ್ಮ ತಾಳಿತು. ಇದರ ಕಾರ್ಯದರ್ಶಿಗಳಾದ ಪ್ರೊ. ಕೆ. ಭೈರವಮೂರ್ತಿಯವರಿಗೂ ದೇಜಗೌ ಅವರದೆ ಮಾರ್ಗದರ್ಶನ. ದೇಜಗೌ ಅವರೇ ಸಂಸ್ಥೆ ಅಧ್ಯಕ್ಷರು.

ಇಷ್ಟೆಲ್ಲಾ ಸಂಸ್ಥೆಗಳಲ್ಲದೆ ಇನ್ನೂ ಹಲವಾರು ಸಂಸ್ಥೆಗಳು ಇವರ ಮಾರ್ಗದರ್ಶನವನ್ನು ಪಡೆದುಕೊಂಡಿವೆ. ಹಲವಾರು ಅಭಿನಂದನಾ ಸಮಿತಿಗಳು, ಸಂಸ್ಥೆಗಳ ಬೆಳ್ಳಿಹಬ್ಬ, ವಜ್ರಮಹೋತ್ಸವ ಸಮಿತಿಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ನಿರ್ವಹಿಸುತ್ತಿದ್ದಾರೆ, ಮಾರ್ಗದರ್ಶನ ನೀಡುತ್ತಿದ್ದಾರೆ. ಕೆಲವು ಕಡೆ ಸಕ್ರಿಯವಾಗಿ ಭಾಗವಹಿಸಿದರೆ, ಇನ್ನಲವೆಡೆ ಅವರ ಹೆಸರೆ ಶ್ರೀರಕ್ಷೆಯಾಗಿದೆ.

ಇಷ್ಟೆಲ್ಲಾ ಕಾರ್ಯನಿರ್ವಹಿಸಿರುವ, ಇನ್ನೂ ನಿರ್ವಹಿಸುತ್ತಿರುವ ಕನ್ನಡ ನಾಡಿನ ಅಭಿವೃದ್ಧಿಗಾಗಿ ದುಡಿಯುತ್ತಿರುವ ದೇಜಗೌ ಅವರಿಗೆ ನಾಡಿನ ಜನ ಕೂಡ ತಮ್ಮ ಕೃತಜ್ಞತೆಯನ್ನು ಅರ್ಪಿಸಿ ಧನ್ಯತೆಯನ್ನು ಪಡೆದಿದ್ದಾರೆ. ಐವತ್ತು ವರ್ಷ ತುಂಬಿದಂದಿನಿಂದ ಇಂದಿನವರೆಗೂ ಹಲವಾರು, ಅಭಿನಂದನಾ ಗ್ರಂಥಗಳನ್ನು ಅರ್ಪಿಸಿದ್ದಾರೆ. ಮೈಸೂರಿನಲ್ಲಿ ಏರ್ಪಡಿಸಲಾಗಿದ್ದ 'ದೇಜಗೌ ಎಪ್ಪತ್ತೈದು' ಸಮಾರಂಭವನ್ನು ನೋಡಿದವರಿಗೆ ಜನತೆಗೆ ದೇಜಗೌ ಅವರ ಮೇಲಿರುವ ಪ್ರೀತಿ ಎಷ್ಟೆಂಬುದು ಗೊತ್ತಾಗುತ್ತದೆ. ಬೆಂಗಳೂರಿನ ಮಹಾಜನ 'ಅಮೃತ ವರ್ಷ' ಎಂಬ ಅಭಿನಂದನಾ ಗ್ರಂಥವನ್ನು ಹೊರತರುತ್ತಿದೆ. ಸೌಜನ್ಯಶೀಲ, ಸ್ನೇಹದ ಸಾಕಾರಮೂರ್ತಿ, ಪುರುಷಸಿಂಹ, ಗುರುವರೇಣ್ಯ, ಕನ್ನಡದ ಕುಲಪತಿ, ಕನ್ನಡದ ಧೀರಸೇನಾನಿ, ಸಮರ್ಥ ಇಂಜನಿಯರ್, ಮಾನವಕುಲಪತಿ, ಆಚಾರ್ಯದ್ರೋಣ, ಅಚಲಗಾಂಧೀವಾದಿ, ಕನ್ನಡ ಹಿತರಕ್ಷಕ- ಎಂದೆಲ್ಲಾ ಹೊಗಳಿ ಕನ್ನಡ ಕುಲಕೋಟಿ ಧನ್ಯತೆಯನ್ನು ಪಡೆದುಕೊಂಡಿದೆ.

* * * * *

ಭಾಗ - ನಾಲ್ಕು

ಸಂಸ್ಕೃತಿ - ಕರ್ನಾಟಕ

ಕರ್ನಾಟಕದ ಪ್ರಧಾನ ಸಂಸ್ಕೃತಿಗಳು

- ಡಾ. ಎಂ. ಬಿ. ನೇಗಿನಹಾಳ

ಕರ್ನಾಟಕದಲ್ಲಿ ದೊರೆತಿರುವ ಪ್ರಾಕ್ತನ ಸಾಕ್ಷ್ಯಾಧಾರಗಳ ದೃಷ್ಟಿಯಿಂದ ವೈದಿಕ ಮತ ದ್ವಿತೀಯ ಸ್ಥಾನದಲ್ಲಿ ನಿಲ್ಲುವುದಾದರೂ ಒಟ್ಟು ಪ್ರಭಾವ ಮತ್ತು ಪ್ರಸಾರಗಳ ದೃಷ್ಟಿಯಿಂದ ಈ ಸಂಪ್ರದಾಯಕ್ಕೆ ಅತ್ಯುಚ್ಚ ಸ್ಥಾನ ನೀಡಬೇಕಾಗಿದೆ. ಕರ್ನಾಟಕದಲ್ಲಿ ಅದು ಬಹು ಸಹಜವೆಂಬಂತೆ ನೆಲೆಯೂರಿದೆ. ಈ ಸಂಸ್ಕೃತಿಯ ಯಜ್ಞ ಯಾಗಾದಿಗಳ ಆಚರಣೆ ಮತ್ತು ವರ್ಣ-ಜಾತಿ ಪ್ರಧಾನವಾದ ಸಾಮಾಜಿಕ ಸ್ವರೂಪ ಬಹು ಹಿಂದೆಯೇ ಕರ್ನಾಟಕದಲ್ಲಿ ಸ್ಥಾನಗಳಿಸಿದ್ದವು. ಕರ್ನಾಟಕದ ಸಮಾಜ ಹದಿನೆಂಟು ಜಾತಿಗಳಾಗಿ ವಿಂಗಡಣೆಗೊಂಡಿದ್ದ ಬಗ್ಗೆ ಗಂಗ ದೊರೆ ಅವಿನೀತನ ಮಲ್ಲೋಹಳ್ಳಿಯ ಶಾಸನ ದಲ್ಲಿಯೇ ಉಲ್ಲೇಖವಿದೆ. ಅದೇ ರೀತಿ ಬಾದಾಮಿ ಚಾಲುಕ್ಯ ದೊರೆ (ಯುವರಾಜ) ಇಮ್ಮಡಿ ವಿಕ್ರಮಾದಿತ್ಯನ ಕ್ರಿ. ಶ. ೭೨೫ ರ ಲಕ್ಷ್ಮೇಶ್ವರ ಶಾಸನದಲ್ಲಿಯೂ ಹದಿನೆಂಟು ಜಾತಿಗಳ ಪ್ರಸಕ್ತಿಯಿದೆ. ಇದರಿಂದ ಗಂಗ-ಕದಂಬರ ಉದಯ ಕಾಲಕ್ಕಾಗಲೇ ವರ್ಣ-ಜಾತಿಗಳ ವ್ಯವಸ್ಥೆ ಕರ್ನಾಟಕದಲ್ಲಿ ಬಲವಾಗಿ ನೆಲೆಯೂರಿತ್ತೆಂದು ಭಾವಿಸಬಹುದಾಗಿದೆ.

ಆಚರಣೆಗಳ ದೃಷ್ಟಿಯಿಂದ ಕರ್ನಾಟಕದ ಎಲ್ಲ ಜನತೆ ವೈದಿಕ ಕರ್ಮಕಾಂಡವನ್ನು ಅವಲಂಬಿಸಿರಲಿಲ್ಲವಾದರೂ ಕರ್ಮಕಾಂಡದ ಬಹಳಷ್ಟು ಕುರುಹುಗಳು ನಮ್ಮಲ್ಲಿ ಲಭ್ಯವಾಗಿವೆ. ಕ್ರಿ. ಶ. ಪೂ. ಒಂದನೆಯ ಶತಮಾನದ ಮಾಧವಪೂರ-ವಡಗಾವಿಯ ನಗರಾವಶೇಷಗಳಲ್ಲಿ ಸಾತವಾಹನರ ಸಾಂಸ್ಕೃತಿಕ ವಸ್ತುಗಳು ಲಭ್ಯವಾಗಿದ್ದು ಅವುಗಳ ಪೈಕಿ ಒಂದು ಶಿಲಾಲೇಖ ತುಂಬ ಮಹತ್ವದ್ದಾಗಿದೆ. ಅದರಲ್ಲಿ 'ಧಸ' ಎಂಬ ವ್ಯಕ್ತಿ ಹಲವು ಯಜ್ಞಗಳನ್ನು ಆಚರಿಸಿದನೆಂದು ಹೇಳಲಾಗಿದೆ. ಇದರಿಂದ ಶಾತವಾಹನರ ಕಾಲಕ್ಕಾಗಲೇ ಕರ್ನಾಟಕದಲ್ಲಿ ವೈದಿಕ ಕರ್ಮಕಾಂಡ ಪ್ರವೇಶಿಸಿದ್ದು ಎತ್ತಿ ಹೇಳಬೇಕಾದ ಅಂಶ. ಸಂಸ್ಕೃತ ಸಾಹಿತ್ಯದಲ್ಲಿ ಕರ್ನಾಟಕವನ್ನು ಕುರಿತ ಉಲ್ಲೇಖಗಳು ಅಷ್ಟಾಗಿ ಇಲ್ಲವಾದರೂ ಮಹಾಭಾರತದಲ್ಲಿ ಇಂದಿನ ಕರ್ನಾಟಕದ ಬನವಾಸಿ, ಸತಿಯ ಪುತ್ರ (ಸತೀನರ) ಗೋಕರ್ಣಾ ಮೊದಲಾದ ಪ್ರದೇಶಗಳ ಪ್ರಸಕ್ತಿಯಿದೆ. ಒಟ್ಟಿನಲ್ಲಿ ಕ್ರಿ. ಶ. ಪೂ. ಒಂದೆರಡು ಶತಮಾನಗಳ ಕಾಲಾವಧಿಯಲ್ಲಿ ಈ ವೈದಿಕ ಮತವು ನಮ್ಮ ನಾಡಿನಲ್ಲಿ ಪ್ರವೇಶ ಪಡೆದು ತನ್ನ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿತ್ತು. ಆ ಕಾಲದಲ್ಲಿ ಇಲ್ಲಿ ನೆಲೆಯೂರಿದ್ದ ಸರ್ವಚೇತನವಾದಿಗಳ (Animists) ಮೇಲೆ ತನ್ನ ಹತೋಟಿ ಸಾಧಿಸುವಲ್ಲಿ ಪ್ರಾರಂಭದ ವಿರೋಧ ಎದುರಿಸಿದ್ದರೂ ಅದರ ಪ್ರಗತಿಯನ್ನು ತಡೆಯುವಷ್ಟು ಆ ವಿರೋಧ ಪ್ರಬಲವಾಗಿರಲಿಲ್ಲವೆಂದೇ ಹೇಳಬೇಕು. ವಾತಾಪಿ-ಇಲ್ವಲ ಸಹೋದರರನ್ನು ಅಗಸ್ತ್ಯ ಋಷಿ ನಿಗ್ರಹಿಸಿದನೆಂದು ಹೇಳುವ ಆಖ್ಯಾಯಿಕೆಯಲ್ಲಿ ಈ ಧ್ವನಿ ಸ್ಪಷ್ಟವಾಗಿದೆ. ಕ್ರಿ. ಶ. ೨-೩ನೆಯ ಶತಮಾನಗಳ ಅವಧಿಯಲ್ಲಿ ಇವರಿಗೆ ಬ್ರಹ್ಮದೇಯದಂತಹ ದತ್ತಿಗಳು

ದೊರೆತಿದ್ದು ಅವರು ಅಗ್ರಹಾರದಂಥ ವಿಶೇಷ ನೆಲೆಗಳನ್ನು ಪಡೆಯುವಲ್ಲಿ ಸಫಲರಾದರು. ೨ ನೆಯ ಶ.ದ. ಮಳವಳ್ಳಿಯ ಪ್ರಾಕೃತ ಶಾಸನವು ಕೊಂಡಮಾನನೆಂಬ ಬ್ರಾಹ್ಮಣನಿಗೆ ಬಿಟ್ಟ ದತ್ತಿಯನ್ನು ಸೂಚಿಸಿದರೆ ಅದೇ ಊರಿನ ನಾಲ್ಕನೆಯ ಶ. ದ. ಮತ್ತೊಂದು ಶಾಸನದಲ್ಲಿ ಪ್ರಸ್ತುತ ಕೊಂಡಮಾನನ ವಂಶದ ಸಿರಿನಾಗದತ್ತನೆಂಬ ಬ್ರಾಹ್ಮಣನಿಗೆ ಮಟ್ಟ ಪಟ್ಟಿ, ಮರಿಯಸಾ, ಕೊಂಗಿನಗರ ಮೊದಲಾದ ಹದಿಮೂರು ಊರುಗಳನ್ನು ದತ್ತಿಯಾಗಿ ಬಿಟ್ಟ ವಿಷಯ ಉಲ್ಲೇಖಗೊಂಡಿದೆ. ಮುಂದೆ ಸ್ವಲ್ಪ ಕಾಲಾಂತರದಲ್ಲಿ ಹುಟ್ಟಿಕೊಂಡ ಹಿರೇಹಡಗಲಿಯ ಪಲವ ಶಾಸನದಲ್ಲಿ ವೈದಿಕ ಬ್ರಾಹ್ಮಣರ ದತ್ತಿ ಉಲ್ಲೇಖಗಳಿವೆ. ಮೃಗಥಣಿಕಾಹಾರ ಅಹಿಚ್ಛತ್ರಾದಿ ಉತ್ತರದ ಪ್ರದೇಶಗಳಿಂದ ಬಂದ ಬ್ರಾಹ್ಮಣರು ತಾಳಗುಂದದಂಥ ಕರ್ನಾಟಕದ ಹಲವಾರು ಅಗ್ರಹಾರಗಳಲ್ಲಿ ನೆಲೆಸಿದ್ದರೆಂಬುದು ವಾಸ್ತವ ಸಂಗತಿ. ಬರಬರುತ್ತ ಈ ಅಗ್ರಹಾರಗಳ ಸಂಸ್ಕೃತಿ ಬೆಳೆಯುತ್ತ ಇಡೀ ಕರ್ನಾಟಕದ ಉದ್ದಗಲಗಳಿಗೆ ವ್ಯಾಪಿಸುವುದನ್ನು ನಾವು ಕಾಣುತ್ತೇವೆ. ಕ್ರಿ. ಶ. ದ ೧೧ನೆಯ ಶತಮಾನಕ್ಕೆಂದರೆ ಪ್ರತಿ ಹತ್ತು-ಹದಿನೈದು ಊರುಗಳಿಗೆ ಒಂದರಂತೆ ಅಗ್ರಹಾರ, ಘಟಿಕಾಸ್ಥಾನ ಅಥವಾ ಬ್ರಹ್ಮಪುರಿಗಳು ಅಸ್ತಿತ್ವಕ್ಕೆ ಬಂದುದನ್ನು ನಮ್ಮ ಶಾಸನಗಳ ಪರಿವೀಕ್ಷಣೆಯಿಂದ ಕಂಡುಕೊಳ್ಳಬಹುದಾಗಿದೆ. ಪ್ರಾಚೀನಕಾಲದ ಬಹುತೇಕ ರಾಜಮನೆತನಗಳು ಅಗ್ರಹಾರ ಸಂಸ್ಕೃತಿಯನ್ನು ಹುಟ್ಟು ಹಾಕಿ ಪೋಷಿಸಿಕೊಂಡು ಬಂದುವು.

ಕ್ರಿ. ಶ. ಮೂರನೆಯ ಶತಮಾನದ ಹಿರೇಮಗಳೂರಿನ ಅಶ್ವಯೂಪ ಶಾಸನವು ಕರ್ನಾಟಕದಲ್ಲಿ ಅಶ್ವಮೇಧದ ಮೊದಲ ಕುರುಹಾಗಿದೆ. ಅದೇ ರೀತಿ ಕದಂಬ ಮತ್ತು ಗಂಗರ ಶಾಸನಗಳಲ್ಲಿ ಕದಂಬ ದೊರೆ ಒಂದನೆಯ ಕೃಷ್ಣವರ್ಮನು (ಕ್ರಿ. ಶ. ೫ನೇ ಯ.ಶ.) ಒಂದು ಅಶ್ವಮೇಧಯಾಗ ಮಾಡಿದನೆಂದು ಅಭಿಮಾನದಿಂದ ಉಲ್ಲೇಖಿಸಲಾಗಿದೆ. ಬಾದಾಮಿ ಚಾಲುಕ್ಯ ದೊರೆ ಒಂದನೆಯ ಪುಲಿಕೇಶಿ ಕೂಡ ಅಶ್ವಮೇಧ ಯಾಗ ಮಾಡಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಇತರ ಹಲವು ಪ್ರಕಾರದ ಯಜ್ಞಯಾಗ, ಇಷ್ಟಿಗಳು ಮೇಲಿಂದ ಮೇಲೆ ಕರ್ನಾಟಕದಲ್ಲಿ ನಡೆಯುತ್ತ ಬಂದಿವೆ. ಈ ಸಂಸ್ಕೃತಿ ಕ್ರಿ. ಶ. ೧೨ನೆಯ ಶತಮಾನದವರೆಗೂ ಬಹು ಉಚ್ಛ್ರಾಯ ಸ್ಥಿತಿಯಲ್ಲಿದ್ದಂತೆ ಕಂಡುಬರುತ್ತದೆ. ವಚನಕಾರರು ತಮ್ಮ ಕಾಲದಲ್ಲಿ ನಡೆಯುತ್ತಿದ್ದ ಯಜ್ಞದ ಹೆಸರಿನಲ್ಲಿ ಬ್ರಾಹ್ಮಣರು ಆಚರಿಸುತ್ತಿದ್ದ ಪಶುವಧೆಯನ್ನು ಖಂಡಿಸಿದ್ದಾರೆ.

ಯಜ್ಞಯಾಗಾದಿಗಳ ಕರ್ಮಕಾಂಡ ಬರಬರುತ್ತ ಕ್ಷೀಣಗೊಂಡು ಶಿವ, ವಿಷ್ಣು ಮತ್ತು ದುರ್ಗೆ-ಮಹಿಷ ಮಹಿಷಮರ್ದಿನಿಯರ ಪೂಜೆಯಲ್ಲಿ ಪರ್ಯವಸಾನ ಹೊಂದಿತು. ಇಂದ್ರಾದಿ ದೇವತೆಗಳು ಒಟ್ಟು ಭಾರತೀಯ ಮಟ್ಟದಲ್ಲಿ ಕುಸಿದು ಹೋಗಿ ಈ ಮೂವರು ದೇವತೆಗಳ ಆರಾಧನೆ ಬ್ರಾಹ್ಮಣ ವರ್ಗದಲ್ಲಿ ರೂಢಗೊಂಡಿತು. ತ್ರಿಕಾಲ ಸಂಧ್ಯೆಯ ರೂಪದಲ್ಲಿನ ಸೂರ್ಯ ಪೂಜೆ, ಅಗ್ನಿಪೂಜೆ ತನ್ಮೂಲಕ ನಡೆಯುತ್ತಿದ್ದ ಇಷ್ಟಿ, ಯಾಗಗಳ ಪರಂಪರೆ ಹೆಸರಿಗೆ ಮಾತ್ರ ನಡೆದುಬರುತ್ತಿತ್ತು. ಬದಲು ದೇವತಾ ಮಂದಿರಗಳನ್ನೂ, ಶಿವಲಿಂಗ ಸ್ಥಾಪನೆಯನ್ನೂ ಹೆಚ್ಚುಹೆಚ್ಚಾಗಿ ಅವಲಂಬಿಸುವುದು

ವೈದಿಕರಲ್ಲಿ ಕಂಡುಬರತೊಡಗಿತು. ಗುಪ್ತ, ಕದಂಬ, ಬಾದಾಮಿ ಚಾಲುಕ್ಯರ (ಪ್ರಾಥಮಿಕ) ಶಾಸನಗಳಲ್ಲಿ ಸ್ಕಂದನ ಪೂಜೆಯ ಪ್ರಾಬಲ್ಯವನ್ನು ನಾವು ಕಾಣುತ್ತೇವೆ. ತರುವಾಯದಲ್ಲಿ ಈ ದೇವತೆಯ ಪೂಜೆ ಅಷ್ಟೊಂದು ಪ್ರಬಲವಾಗಿ ಕರ್ನಾಟಕದಲ್ಲಿ ಕಂಡು ಬರುವುದಿಲ್ಲವಾದರೂ ಈ ರಾಜಮನೆತನಗಳು ಮತ್ತು ಇವರ ಸಮಕಾಲೀನರು ಮಂದಿರಗಳ ನಿರ್ಮಾಣ ಶಿವಲಿಂಗ ಮತ್ತು ಇತರ ದೇವತೆಗಳ ಪೂಜೆಯನ್ನು ಬಹುವಾಗಿ ಪುರಸ್ಕರಿಸಿದರು. ಇದರಿಂದಾಗಿ ಪುರಾಣ ಮತ್ತು ಆಗಮ ಸಾಹಿತ್ಯ ಸೃಷ್ಟಿಗೊಂಡು ದಶಾವತಾರಗಳು, ಪಂಚವಿಂಶಿತಿ -ಲೀಲೆಗಳು ಜನಮನದಲ್ಲಿ ನೆಲೆಯೂರಿ ನಿಂತು ಹೊಸದೊಂದು ಸಂಸ್ಕೃತಿಯೇ ರೂಪಗೊಂಡಿತು. ಪ್ರಾರಂಭದ ಗಂಗ ಶಾಸನಗಳು ಗಗನಾಭನಾದ ಪದ್ಮನಾಭ(ವಿಷ್ಣು) ನ ಸ್ತುತಿಯಿಂದಲೂ ಕದಂಬ ಶಾಸನಗಳು ವಿಷ್ಣು, ಶಿವಸ್ತುತಿಗಳಿಂದಲೂ ಪ್ರಾರಂಭವಾಗುವುದನ್ನು ಇಲ್ಲಿ ಸ್ಮರಿಸಬಹುದು. ತಾಳಗುಂದದ ಪ್ರಣವೇಶ್ವರ ಲಿಂಗವು ಬಹುಶಃ ಶಾತವಾಹನರ ಕಾಲದಲ್ಲೂ ಅಸ್ತಿತ್ವದಲ್ಲಿದ್ದು ಅವರ ಸಾಮಂತರಾಗಿದ್ದ ಚುಟುಗಳು ಆ ಲಿಂಗವನ್ನು ಆರಾಧಿಸುತ್ತಿದ್ದರು. ಕದಂಬರು ಪ್ರಣವೇಶ್ವರನ ಜತೆಗೆ ಬನವಾಸಿಯ ಮಧುಕೇಶ್ವರ ಲಿಂಗವನ್ನು ಕೂಡ ಪೂಜಿಸುತ್ತ ಬಂದರು. ಅಂದಿನಿಂದ ಇಂದಿನವರೆಗೂ ಇವೆರಡು ಶಿವಲಿಂಗಗಳು ಅನೂಚಾನವಾಗಿ ಪೂಜೆಗೊಳ್ಳುತ್ತ ಬಂದಿವೆ. ತರುವಾಯದಲ್ಲಿ ಸ್ಥಾಪನೆಗೊಂಡ ಶಿವಲಿಂಗಗಳಿಗೂ ದೇವಾಲಯಗಳಿಗೂ ಲೆಕ್ಕವಿಲ್ಲ. ಕರ್ನಾಟಕದ ಮೂಲೆಮೂಲೆಯಲ್ಲಿ ಶೈವದೇವಾಲಯಗಳಿವೆ.

ಶಕ್ತಿದೇವತೆಯ ಆರಾಧನೆ ಕೂಡ ಕರ್ನಾಟಕದಲ್ಲಿ ಅತ್ಯಂತ ಪ್ರಬಲವಾಗಿದ್ದು ಇಂದು ಹಳ್ಳಿ ಹಳ್ಳಿಗಳಲ್ಲಿ ಶಕ್ತಿ ಮಂದಿರಗಳು ಅಸ್ತಿತ್ವದಲ್ಲಿವೆ. ಬಾದಾಮಿ ಚಾಲುಕ್ಯರಲ್ಲಿ ಈ ದೇವಿಯ ಪೂಜೆ ತುಂಬ ಮಹತ್ವದ ಸ್ಥಾನ ಪಡೆದಿತ್ತೆಂದು ಕಂಡು ಬರುತ್ತದೆ. ಬಾದಾಮಿ, ಐಹೊಳೆ ಪಟ್ಟದಕಲ್ಲುಗಳ ಶಿಲ್ಪಗಳಲ್ಲಿ ಈ ದೇವಿಯ ಅಸಂಖ್ಯ ಮೂರ್ತಿಗಳಿರುವುದನ್ನು ನಾವು ಈಗಲೂ ಗುರುತಿಸಬಹುದು.

ಶಾಸನಗಳಲ್ಲಿ ವಿಷ್ಣು ಪೂಜೆಯ ಉಲ್ಲೇಖಗಳು ಹಲವಾರು ಕಂಡು ಬರುವವಾದರೂ ಮಂಗಲೇಶನ ಪೂರ್ವದ ವಿಷ್ಣು ಮಂದಿರಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಬಾದಾಮಿಯಲ್ಲಿ ಈ ಚಾಲುಕ್ಯ ದೊರೆ ಕೊರೆಯಿಸಿದ ವಿಷ್ಣು ಗುಹೆ ನಮ್ಮಲ್ಲಿ ದೊರೆಯುವ ಅತೀ ಪ್ರಾಚೀನವಾದ ವೈಷ್ಣವ ಮಂದಿರ. ಬಹುತೇಕ ಅಗ್ರಹಾರಗಳಿದ್ದ ಪ್ರದೇಶಗಳಲ್ಲಿ ಒಂದಾದರೂ ವೈಷ್ಣವ ದೇವಾಲಯವಿರುವುದನ್ನು ನಾವು ಈಗಲೂ ಕಾಣಬಹುದು. ಒಟ್ಟು ಕರ್ನಾಟಕದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ, ದೇವಗಿರಿ ಯಾದವ ಮತ್ತು ವಿಜಯನಗರ ಈ ಸಾಮ್ರಾಜ್ಯಗಳಲ್ಲಿ ಈ ತ್ರಿಮೂರ್ತಿಗಳ ಪೂಜೆ ಅನೂಚಾನವಾಗಿ ನಡೆದು ಬಂದಿದೆ. ಉಚ್ಚರಾದ ಬ್ರಾಹ್ಮಣರಾದಿಯಾಗಿ ಅತ್ಯಂತ ನಿಮ್ನ ವರ್ಗದವರೂ ಈ ದೇವತೆಗಳ ಪ್ರಭಾವಕ್ಕೆ ಹೊರತಾಗಿಲ್ಲ. ಬಾದಾಮಿ ಐಹೊಳೆ, ಪಟ್ಟದಕಲ್ಲುಗಳಂತೆ ತಲಕಾಡು, ಬೇಲೂರು, ಹಳೇಬೀಡು ಅಲಂಪೂರು, ಅಜಂತ, ಎಲ್ಲೋರ, ಹಂಪಿ, ಬನವಾಸಿ

ಮೊದಲಾದ ದೊಡ್ಡ ರಾಜಧಾನಿ ಪಟ್ಟಣಗಳಲ್ಲಿನ ದೇವಾಲಯಗಳು ಮಾಂಡಲಿಕ, ಸಾಮಂತರಾಜರು ಕಟ್ಟಿಸಿದ ಅಸಂಖ್ಯ ದೇವಾಲಯಗಳು ಈಗಲೂ ತಮ್ಮ ಕಲಾತ್ಮಕ ವೈಶಿಷ್ಟ್ಯಗಳಿಗೆ ಪ್ರಖ್ಯಾತವಾಗಿವೆ.

ವೈದಿಕ ಪರಂಪರೆಯಲ್ಲಿ ಬಂದ ಆಚಾರ್ಯತ್ರಯರಲ್ಲಿ ಶಂಕರ ಮತ್ತು ಮಾಧ್ವರು ಕರ್ನಾಟಕದ ಸಂಸ್ಕೃತಿಯಯ ಮೇಲೆ ಒಳ್ಳೆಯ ಪ್ರಭಾವ ಬೀರಿರುವರು. ಆದರೆ ಇವರ ಪ್ರಭಾವ ಬ್ರಾಹ್ಮಣ ವರ್ಗದಲ್ಲಿ ಮಾತ್ರ ಸೀಮಿತ. ಇತರ ೯೦% ರಷ್ಟು ಜನ ಸಮುದಾಯದ ಜೀವನ ವಿಧಾನಗಳ ಮೇಲೆ ಇವರ ಪ್ರಭಾವ ಅಷ್ಟಕ್ಕಷ್ಟೆ. ರಾಮಾನುಜ ಮತ ಒಂದು ಹೆಜ್ಜೆ ಮುಂದೆ ಹೋಗಿ ಪಂಚಮರಾದಿಯಾಗಿ ಎಲ್ಲರನ್ನೂ ಒಂದು ಮಿತಿಯ ಒಳಗೆ ತನ್ನ ಕಕ್ಷೆಗೆ ತೆಗೆದುಕೊಳ್ಳುವ ಪ್ರಯತ್ನ ಮಾಡಿತು. ಒಟ್ಟಿನಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಈ ಮೂರು ಮತಗಳ ಪ್ರಭಾವ ಬ್ರಾಹ್ಮಣ ವರ್ಗಕ್ಕೆ ಮಾತ್ರ ಸೀಮಿತವಾಗಿದ್ದು ಆಳುವ ವರ್ಗದವರನ್ನು ಆಕರ್ಷಿಸುವ ಕೆಲಮಟ್ಟಿನ ಪ್ರಯತ್ನ ಮಾಡಿದ್ದು ಆಗೀಗ ಕಂಡು ಬರುತ್ತದೆ. ಕರ್ನಾಟಕದ ಒಟ್ಟು ಜನ ಸಮುದಾಯವನ್ನು ಕಂಡು ಚಿಂತಿಸುವ ಗೊಡವೆಗೆ ಇವರು ಹೋಗಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ಕೂಡ ಈ ಮಾತುಗಳು (ಎಂದರೆ ಬ್ರಾಹ್ಮಣ ಲೇಖಕರು) ತಡವಾಗಿ ಕೃತಿರಚನೆಗೆ ತೊಡಗಿದ್ದು ಕಂಡುಬರುತ್ತದೆ. ಒಂದನೆಯ ನಾಗವರ್ಮ, ರುದ್ರಭಟ್ಟ, ದುರ್ಗಸಿಂಹ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಮಹಲಿಂಗರಂಗ, ತಿರುಮಲಾರ್ಯ, ಚಿಕುಪಾಧ್ಯಾಯ ಮೊದಲಾದ ಲೇಖಕರು ಕನ್ನಡದಲ್ಲಿ ಕೃತಿ ರಚನೆ ಮಾಡಿ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವರು. ಇವರಲ್ಲಿ ಕನ್ನಡದ ಎಲ್ಲ ವರ್ಗದವರನ್ನು ಮುಟ್ಟಿದ ಕಾವ್ಯವೆಂದರೆ ಕುಮಾರವ್ಯಾಸ ಭಾರತವೊಂದೇ. ದಾಸ ಸಾಹಿತ್ಯ ಜನಸಾಮಾನ್ಯರವರೆಗೆ ಮುಟ್ಟಿತಾದರೂ ಅವರಲ್ಲಿ ಕನಕದಾಸರನ್ನು ಹೊರತು ಪಡಿಸಿ ಇತರರೆಲ್ಲ ಬ್ರಾಹ್ಮಣರೇ. ಹೀಗಾಗಿ ದಾಸಸಾಹಿತ್ಯದಲ್ಲಿ ಜನಪದ ಸತ್ವ ಬೇಕಾದಷ್ಟಿದ್ದರೂ ಅದರಿಂದ ಜನಸಾಮಾನ್ಯಕ್ಕೆ ಸಂದ ಲಾಭಾಂಶ ತೀರ ಕಡಿಮೆ ಎಂದೇ ಹೇಳಬೇಕು.

ಬೌದ್ಧ ಧರ್ಮ

ನಮ್ಮ ನಾಡಿನ ನೆಲದಲ್ಲಿ ಈಗ ದೊರೆಯುತ್ತಿರುವ ಪ್ರಾಕ್ತನ ಸಾಕ್ಷ್ಯಾಧಾರಗಳು ಬೌದ್ಧಧರ್ಮ ಇಲ್ಲಿ ತುಂಬಾ ಪ್ರಭಾವಶಾಲಿಯಾಗಿದ್ದ ಬಗ್ಗೆ ನಿಶ್ಚಿತ ಮಾಹಿತಿ ಒದಗಿಸುತ್ತವೆ. ಕರ್ನಾಟಕದಲ್ಲಿ ನೆರೆಯ ಆಂಧ್ರದಲ್ಲಿ ಕಂಡುಬಂದಿರುವಂತೆ ಭಟ್ಟಿಪ್ರೋಲು, ನಾಗಾರ್ಜುನಕೊಂಡದಂಥ ಅಥವಾ ಈಗಿನ ಮಹಾರಾಷ್ಟ್ರದ ಅಮರಾವತಿ ಅಜಂತಾ ಕಾರ್ಲೆ ಕಾನ್ಹೇರಿಗಳಂಥ ನೆಲೆಗಳು ಪತ್ತೆಯಾಗಿರಲಿಲ್ಲ. ಆದರೆ ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ಬೌದ್ಧಧರ್ಮಕ್ಕೆ ಸೇರಿದ ದೊಡ್ಡ ನೆಲೆಯೊಂದು ಪತ್ತೆಯಾಗಿದೆ. ಜೊತೆಗೆ ಅಲ್ಲಿನ ಚಂದ್ರಲಾ ಪರಮೇಶ್ವರಿ ದೇವಾಲಯದಲ್ಲಿ ಅಶೋಕನ ಮೂರು ಲಘು ಶಿಲಾಲೇಖನಗಳು ಕೂಡ ಇದ್ದುದು ಬೆಳಕಿಗೆ ಬಂದಿದೆ. ಸನ್ನತಿಯ ಈ ಕೇಂದ್ರ ಕ್ರಿ. ಪೂರ್ವ ಮೂರನೆಯ ಶತಮಾನದಿಂದ

ಕ್ರಿ. ಶ. ಎರಡನೆಯ. ಶತಮಾನದವರೆಗೂ ಬೌದ್ಧಧರ್ಮದ ದೊಡ್ಡ ನೆಲೆಯಾಗಿತ್ತೆಂದು ಅಲ್ಲಿ ದೊರೆಯುವ ಅಸಂಖ್ಯ ಪ್ರಾಚ್ಯವಸ್ತುಗಳ ಬಲದಿಂದ ಹೇಳಬಹುದಾಗಿದೆ. ಇದಲ್ಲದೆ ಕೊಪ್ಪಳ, ಮಸ್ಕಿ, ನಿಟ್ಟೂರು, ಉದೇಗಲ್ಲು, ಬ್ರಹ್ಮಗಿರಿ, ಜಟಿಂಗ ರಾಮೇಶ್ವರ, ಸಿದ್ಧಾಪುರ ಗವಿಮಠ ಮತ್ತು ಪಾಲ್ಕಿಗುಂಡುಗಳಲ್ಲಿಯೂ ಅಶೋಕನ ಶಿಲಾಲಿಪಿಗಳಿರುವುದರಿಂದ ಬೌದ್ಧ ಧರ್ಮದ ಪ್ರಭಾವ ಈ ಭಾಗಗಳಲ್ಲೆಲ್ಲ ಆ ಕಾಲಕ್ಕಾಗಲೇ ತಕ್ಕಷ್ಟು ಪ್ರಮಾಣದಲ್ಲಿ ಉಂಟಾಗಿರಬಹುದೆಂದು ಊಹಿಸಬಹುದಾಗಿದೆ. ಇವಲ್ಲದೆ ಶಾತವಾಹನರ ಕಾಲದ ನೆಲೆಗಳಾದ ಬನವಾಸಿ ಮತ್ತು ಬಹುಶಃ ಹಂಪೆಯಲ್ಲಿಯೂ ಬೌದ್ಧರ ನೆಲೆಗಳಿದ್ದವು. ತರುವಾಯದ ಕಾಲದಲ್ಲೂ ಕೂಡ ಐಹೊಳೆಯಲ್ಲಿ ಕಂಡುಬಂದಿರುವ ಬೌದ್ಧ ವಿಹಾರ, ಕೋಳಿವಾಡ ಹಾಗೂ ಬಳ್ಳಿಗಾವೆಯಲ್ಲಿ ಕಂಡುಬಂದಿರುವ ತಾರಾ ಭಗವತಿಯ ಶಿಲ್ಪಾವಶೇಷಗಳು, ಡಂಬಳದಲ್ಲಿದ್ದ ಪ್ರಸಿದ್ಧ ಬೌದ್ಧವಿಹಾರ ಮೊದಲಾದ ಎಡೆಗಳು ಬೌದ್ಧರ ಪ್ರಬಾವಗಳಿಗೆ ತಕ್ಕಷ್ಟು ಆಧಾರವನ್ನು ಒದಗಿಸುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಕೂಡ ಜಂಕೆವನದಂತಹ ಬೌದ್ಧರ ಪವಿತ್ರ ಅವಶೇಷಗಳು ಪತ್ತೆಯಾಗಿವೆ. ಹಾಗೆಯೇ ದಕ್ಷಿಣ ಕನ್ನಡದಲ್ಲಿರುವ ಕದರಿ, ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಮೊದಲಾದ ನೆಲೆಗಳಲ್ಲಿಯೂ ಇತ್ತಿತ್ತಲಾಗಿ ನಡೆಯುತ್ತಿರುವ ಸಂಶೋಧನೆಗಳಲ್ಲಿಯೂ ಬೌದ್ಧಧರ್ಮಸಂಬಂಧಿಯಾದ ಪುರಾತನ ವಸ್ತುಗಳು ಹೆಚ್ಚು ಹೆಚ್ಚಾಗಿ ದೊರೆಯುತ್ತಿರುವುದು ಕಂಡುಬರುತ್ತಿದೆ. ಇದರಿಂದ ಬೌದ್ಧ ಧರ್ಮದ ಈ ನಾಡಿನ ಜನಸಾಮಾನ್ಯರ ಸಂಸ್ಕೃತಿಯನ್ನು ರೂಪಿಸುವಲ್ಲಿ ಬಹು ದೊಡ್ಡ ಪಾತ್ರ ವಹಿಸಿದೆ ಎನ್ನಬೇಕಾಗಿದೆ. ಈ ಎಲ್ಲ ಅಂಶಗಳು ಒಂದು ಕಾಲಕ್ಕೆ ಕರ್ನಾಟಕದಲ್ಲಿ ಬೌದ್ಧ ಧರ್ಮ ತುಂಬಾ ಪ್ರಭಾವಶಾಲಿಯಾಗಿತ್ತೆಂಬುದನ್ನು ಖಚಿತಗೊಳಿಸುತ್ತದೆ.

ಕರ್ನಾಟಕದಲ್ಲಿ ಮಹಾಯಾನ ಬೌದ್ಧಧರ್ಮ ಜನಪ್ರಿಯವಾಗಿದ್ದ ಬಗ್ಗೆ ಖಚಿತ ಪುರಾವೆಗಳಿವೆ. ಇತರ ಪ್ರಕಾರಗಳ ಪ್ರಭಾವವೂ ಕೂಡ ಕರ್ನಾಟಕದಲ್ಲಿ ಇದೆ. ಆದರೆ ಅವುಗಳ ಹೆಚ್ಚಿನ ವಿವರಗಳನ್ನು ತಿಳಿಯುವುದು ಕಷ್ಟ. ಆದರೂ 'ಹ್ಯೂ- ಯೆನ್- ತ್ಸಾಂಗ್'ನ ಬರಹಗಳು ಮತ್ತು 'ಲಲಿತ ವಿಸ್ತರ'ದಂಥ ಗ್ರಂಥಾಧಾರಗಳಿಂದ ಕ್ರಿ. ಶ. ೬-೭ ನೆಯ ಶತಮಾನದವರೆಗೂ ಕರ್ನಾಟಕದಲ್ಲಿ ಬೌದ್ಧಧರ್ಮ ಸಾಕಷ್ಟು ಪ್ರಭಾವ ಶಾಲಿಯಾಗಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ನಾಡಿಗೆ ಅಹಿಂಸಾ ತತ್ವವನ್ನು ಬೌದ್ಧಧರ್ಮವೇ ಮೊದಲು ತಂದಂತೆ ಕಾಣುತ್ತದೆ. ಜೈನ ಪರಂಪರೆಯಂತೆ ಅಶೋಕನ ಅಜ್ಜ ಚಂದ್ರಗುಪ್ತನ ಕಾಲಕ್ಕೆ ಅಹಿಂಸಾ ಪ್ರತಿಪಾದಕವಾದ ಜೈನಧರ್ಮ ಕರ್ನಾಟಕಕ್ಕೆ ಬಂತೆಂಬ ಆಖ್ಯಾಯಿಕೆ ಪ್ರಸಿದ್ಧವಾಗಿದ್ದರೂ ಅದನ್ನು ಸಮರ್ಥಿಸುವ ಸಮಕಾಲೀನ ಆಧಾರಗಳು ದೊರೆಯುವುದಿಲ್ಲ. ಆದ್ದರಿಂದ ಈ ಒಂದು ಧಾರ್ಮಿಕ ಪ್ರಕ್ರಿಯೆಯ ಹೆಗ್ಗಳಿಕೆಯನ್ನು ನಾವು ಬೌದ್ಧಧರ್ಮಕ್ಕೆ ನೀಡಬೇಕಾಗುತ್ತದೆ.

ಕರ್ನಾಟಕದ ವಾಸ್ತುಶಿಲ್ಪಕ್ಕೆ ಬೌದ್ಧಧರ್ಮದ ಕಾಣಿಕೆ ಗಮನಾರ್ಹವಾಗಿದೆ. ಸಾತವಾಹನರ ಕಾಲದ ಇಟ್ಟಿಗೆಯ ಕಟ್ಟಡಗಳು ಮತ್ತು ಗೋವೆ ಪ್ರದೇಶ, ಬಾದಾಮಿ, ಐಹೊಳೆ ಮೊದಲಾದೆಡೆಗಳಲ್ಲಿ ಕಂಡುಬರುವ ಗುಹಾ ದೇವಾಲಯಗಳ ಪರಂಪರೆಯಲ್ಲಿ

ಬೌದ್ಧ ಧರ್ಮದ ಪ್ರಭಾವವನ್ನು ಗುರುತಿಸಬಹುದು. ಐಹೊಳೆಯ ಬೌದ್ಧವಿಹಾರದಂತೆ ಇಲ್ಲಿನ ಪ್ರಸಿದ್ಧ ವಾಸ್ತುಗಳಲ್ಲೊಂದಾದ ದುರ್ಗಾದೇವಾಲಯದ ಗಜ ಪೃಷ್ಠಾಕಾರದ ರಚನೆ ಬೌದ್ಧ ಧರ್ಮದ ನೇರ ಪ್ರೇರಣೆಗೆ ಸಾಕ್ಷಿಯಾಗಿವೆ.

ಕನ್ನಡ ಸಾಹಿತ್ಯಕ್ಕೆ ಬೌದ್ಧರೇ ಆದಿಕವಿಗಳು ಎಂಬ ವಿಚಾರವನ್ನು ಟಿ. ಎಸ್. ವೆಂಕಣ್ಣಯ್ಯನವರು ವ್ಯಕ್ತ ಪಡಿಸಿದ್ದಾರೆ. ಆದರೆ ಈ ಊಹೆಗೆ ಆಧಾರಗಳಿಲ್ಲದೆ ನಂಬಲು ಕಷ್ಟದಾಯಕವಾಗಿ ಪರಿಣಮಿಸಿದೆ. ೧೧ ನೆಯ ಶತಮಾನದ ಇಮ್ಮಡಿ ನಾಗವರ್ಮನಲ್ಲಿ ಗೇಯವೃತ್ತವೊಂದನ್ನು ಕೊಡಲಾಗಿದೆ. ಅದು ;

ಇದ್ಧಂ
ಶುದ್ಧಂ
ಸಿದ್ಧಂ
ಬುದ್ಧಂ

ಎಂದಿದೆ ಸುಪ್ರಸಿದ್ಧ ಡಂಬಳ ಶಾಸನದಲ್ಲಿ ಅಲ್ಲಿನ ಸಂಗವ ಸೆಟ್ಟಿ ನಿರ್ಮಿಸಿದ ಬೌದ್ಧವಿಹಾರಕ್ಕೆ ಅಲ್ಲಿನ ತೆಲ್ಲಿಗರೈವತ್ತೊಕ್ಕಲು ನೀಡಿದ ದಾನವನ್ನು ಹೊಗಳುವ ಭರದಲ್ಲಿ ಎರಡು ಚಂಪಕಮಾಲೆ ಮತ್ತು ಮೂರು ಕಂದಗಳು ಬಂದಿವೆ. ಈ ಎಣ್ಣೆ ವ್ಯಾಪಾರಿಗಳು ಬಹುಶಃ ಬೌದ್ಧರು. ಅವರನ್ನು ಸ್ತುತಿಸಿರುವ ಆ ಐದು ಪದ್ಯಗಳೂ ಬೌದ್ಧಪದವೆಂದು ಹೇಳಬಹುದು. ಕನ್ನಡ ಸಾಹಿತ್ಯದಲ್ಲಿ ನನ್ನ ಗಮನಕ್ಕೆ ಬಂದ ಬೌದ್ಧ ಪರ ಪದ್ಯಗಳೆಂದರೆ ಇವಿಷ್ಟು ಮಾತ್ರ. ಇದರಿಂದ ಬೌದ್ಧರೂ ಕನ್ನಡದಲ್ಲಿ ಕೃತಿರಚನೆ ಮಾಡಿರಬಹುದೇ? ಎಂಬ ಬಲವಾದ ಅನುಮಾನ ಉಂಟಾಗುತ್ತದೆ. ಆದರೆ ಕನ್ನಡದಲ್ಲಿ ಸಾಹಿತ್ಯಿಕವಾಗಿ ಅವರ ಪ್ರಭಾವವನ್ನು ಗುರುತಿಸುವುದು ಸದ್ಯಕ್ಕಂತೂ ಸಾಧ್ಯವಿಲ್ಲ. ಅವರ ಸಮಗ್ರ ಕೃತಿಗಳು ಉಳಿದು ಬಂದಿಲ್ಲ. ಕವಿರಾಜಮಾರ್ಗಕಾರ ಹೇಳುವ ಗದ್ಯ ಪದ್ಯ ಕವಿಗಳಲ್ಲಿ ಕೆಲವರಾದರೂ ಬೌದ್ಧರಾಗಿರಬಹುದಾದ ಸಾಧ್ಯತೆಯನ್ನು ಪೂರ್ಣ ತಳ್ಳಿ ಹಾಕುವಂತಿಲ್ಲ.

ಬೌದ್ಧಧರ್ಮ ಮಡಿವಂತಿಕೆಯಿಂದ ದೂರ ಸರಿದು ಬಹುಜನ ಸಮುದಾಯವನ್ನು ದೂರಿಡುವ ಪ್ರವೃತ್ತಿಯದಲ್ಲ. ಆದ್ದರಿಂದ ಅದರ ಪ್ರಭಾವ ಕರ್ನಾಟಕದ ಮೇಲೆ ಸಾಕಷ್ಟು ಆಗಿರುವ ಸಾಧ್ಯತೆಯಿದೆ. ಕರ್ನಾಟಕದ ಸಾಹಿತ್ಯ ಶಾಸನಗಳಲ್ಲಿ ಇನ್ನೂ ಹಲವು ಕಡೆ ಅದರ ಉಲ್ಲೇಖಗಳಿವೆ. ಬುದ್ಧಯ್ಯ, ಬುದ್ಧಣ್ಣ, ಬುದ್ಧವ್ವ ಇತ್ಯಾದಿಯಾಗಿ ವ್ಯಕ್ತಿನಾಮಗಳು ಉತ್ತರ ಕರ್ನಾಟಕದಲ್ಲಿ ಈಗಲೂ ಕಂಡು ಬರುತ್ತವೆ. ಅದೇ ರೀತಿ ಕದರಿ ಎಂಬ ಹಲವು ಊರುಗಳಿವೆ. ಇದರಿಂದ ಬೌದ್ಧಧರ್ಮ ಕರ್ನಾಟಕ ಸಂಸ್ಕೃತಿಯನ್ನು ತಿದ್ದುವಲ್ಲಿ ಸಾಕಷ್ಟು ಶ್ರಮ ವಹಿಸಿದೆಯೆಂದು ಧಾರಳವಾಗಿ ಹೇಳಬಹುದು.

ಜೈನ ಸಂಸ್ಕೃತಿ

ದಾಖಲೆಗಳ ದೃಷ್ಟಿಯಿಂದ ಕರ್ನಾಟಕದಲ್ಲಿ ಜೈನಧರ್ಮ ದ್ವಿತೀಯ ಸ್ಥಾನದಲ್ಲಿ ನಿಲ್ಲುತ್ತದೆ. ಪ್ರಾಕೃತ ಶಾಸನಗಳ ಕಾಲದಲ್ಲಿ ಈ ಧರ್ಮದ ಸುಳಿವು ಕರ್ನಾಟಕದಲ್ಲಿ ಕಂಡು ಬರುವುದಿಲ್ಲ. ಕ್ರಿ. ಶ. ಸು. ೪೦೦ ರ ವೇಳೆಗೆ ಪ್ರಾರಂಭವಾಗುವ ಸಂಸ್ಕೃತ ಶಾಸನಗಳಲ್ಲಿ ಜೈನಪರ ಅಂಶಗಳು ಗೋಚರವಾಗುತ್ತವೆ. ಕಾಕುಸ್ಥವರ್ಮನು ಯುವರಾಜನಾಗಿದ್ದಾಗ

ಹೊರಡಿಸಿದ ಹಲಸಿಗೆಯ ತಾಮ್ರಪಟ ಇವುಗಳಲ್ಲಿ ಬಹುಶಃ ಮೊದಲಿನದು, (E-T-VI-P.23). ಆದಿ ಕದಂಬರು ಹೊರಡಿಸಿದ ತರುವಾಯದ ಹಲವಾರು ಶಾಸನಗಳಲ್ಲಿ ಜೈನಪರ ಅಂಶಗಳು ಕಂಡುಬರುತ್ತವೆ. ಅವರ ಪ್ರಾಂತೀಯ ರಾಜಧಾನಿಗಳಾದ ಬನವಾಸಿ, ಹಲಸಿಗೆ, ದೇವಗಿರಿ ಮತ್ತು ಉಚ್ಛಂಗಿಗಳಲ್ಲಿ ಮತ್ತು ಸಮೀಪದ ಪ್ರದೇಶಗಳಲ್ಲಿ ಹಲವು ಪಂಗಡಗಳ ಜೈನಾಚಾರ್ಯರು ಮತ್ತು ಅಧಿಕಾರಿಗಳಾದ ಅವರ ಅನುಯಾಯಿಗಳು ಜಿನಾಲಯಗಳನ್ನು ನಿರ್ಮಿಸಿ ಅವುಗಳ ನಿರ್ವಹಣೆಗಾಗಿ ಹಲವಾರು ದತ್ತಿ ದಾನಗಳನ್ನು ಬಿಡಿಸಿದ್ದಾರೆ. ಕಾಕುಸ್ಥವರ್ಮನಿಂದ ಖೇಟಗ್ರಾಮವನ್ನು ಬಿಡಿಸಿದ ಶ್ರುತಕೀರ್ತಿ ಸೇನಾಪತಿ, ದಾಮಕೀರ್ತಿ ಭೋಜಕ, ಅವನ ಮಗ ಜಯಕೀರ್ತಿ ಪ್ರತೀಹಾರ, ಶ್ರೀಕೀರ್ತಿ ಮುಂತಾದ ಜೈನ ಅಧಿಕಾರಿಗಳು, ರವಿವರ್ಮನಂಥ ಮಹಾರಾಜರು ಜೈನ ಧರ್ಮಕ್ಕೆ ವಿಶೇಷ ರೀತಿಯಲ್ಲಿ ಪ್ರೋತ್ಸಾಹವಿತ್ತಿದ್ದಾರೆ. ನಿಮಿತ್ತಜ್ಞಾನ ಪಾರಂಗತರಾದ ಬಂದು ಷೇಣಾಚಾರ್ಯ, ವಸುಂತವಾಟಕ ಗ್ರಾಮದ ವಾರಿಷೇಣಾಚಾರ್ಯ, ಕೂರ್ಚಕ ಸಂಘದ ಚಂದ್ರಕ್ಷಾಂತಾಚಾರ್ಯ, ಅಹರಿಷ್ಟಿ ಶ್ರಮಣ ಸಂಘದ ಧರ್ಮನಂದ್ಯಾಚಾರ್ಯ ಮುಂತಾದ ಹಲವು ಜನ ಜೈನಾಚಾರ್ಯರು ಆದಿ ಕದಂಬರ ಶಾಸನಗಳಲ್ಲಿ ಕಂಡು ಬರುತ್ತಾರೆ. ಕ್ರಿ. ಶ. ಸು. ೪೭೫ಕ್ಕಾಗಲೇ ಕರ್ನಾಟಕದ ಜೈನಧರ್ಮದಲ್ಲಿ ನಿರ್ಗ್ರಂಥ(ದಿಗಂಬರ) ಶ್ವೇತ ಪಟ (ಶ್ವೇತಾಂಬರ) ಯಾಪನೀಯ, ಕೂರ್ಚಕ, ಅಹರಿಷ್ಟಿ ಮುಂತಾದ ಪಂಗಡಗಳು ತಲೆದೋರಿದ್ದು ಮಹತ್ವದ ಸಂಗತಿ.

ತಮಿಳುನಾಡಿನ ಮಧುರೆಯ ಸಮೀಪದ ಗುಹೆಗಳಲ್ಲಿ ಕಂಡು ಬರುವ ಬಿಡಿಬರಹಗಳನ್ನು ಹೊರತುಪಡಿಸಿದರೆ ಕದಂಬರ ಈ ಲಿಪಿಗಳು ಜೈನಧರ್ಮದ ಅಸ್ತಿತ್ವವನ್ನು ಸಾರುವ ಮಹತ್ವದ ದಾಖಲೆಗಳೆನಿಸಿವೆ. ಹಲಸಿಗೆಯಲ್ಲಿ ಗರ್ಭಗೃಹ ಮತ್ತು ಸುಕನಾಸಿ ಭಾಗ ಮಾತ್ರ ಉಳಿದಿರುವ ಪ್ರಾಚೀನ ಜಿನಾಲಯ ಕರ್ನಾಟಕದಲ್ಲಿ ದೊರೆಯುವ ಅತಿ ಪುರಾತನವಾದ ಜೈನ ವಾಸ್ತುವೆನಿಸಿದೆ.

ಮೇಲೆ ತಿಳಿಸಿದ ಉತ್ತರ ಕರ್ನಾಟಕದ ಪ್ರಸಿದ್ಧ ಪ್ರದೇಶಗಳಲ್ಲದೆ ದಕ್ಷಿಣ ಕರ್ನಾಟಕದ(ಮೈಸೂರು ಜಿಲ್ಲೆಯ) ಕಿತ್ತೂರು ಅಥವಾ ಕೀರ್ತಿಪುರ (ಈ ಮೂಲದ ಪುನ್ನಾಟ ಸಂಘ), ಪೂರ್ವಭಾಗದ ಕೊಪ್ಪಳ, ದಕ್ಷಿಣ ಮಹಾರಾಷ್ಟ್ರದ ಕರಹಾಟ ಮತ್ತು ಕೊಲ್ಹಾಪುರಗಳು ಜೈನಧರ್ಮದ ಪ್ರಾಚೀನ ನೆಲೆಗಳಾಗಿದ್ದು ಅದರ ಅಭಿವೃದ್ಧಿಯ ಆಧಾರ ಸ್ತಂಭಗಳಾಗಿ ನಿಂತಿವೆ. ಕೊಪ್ಪಳ ಮಹಾತೀರ್ಥವೆಂದು ಶ್ರವಣಬೆಳ್ಗೊಳದ ಶಾಸನಗಳಲ್ಲಿಯೇ ಕೀರ್ತಿತವಾಗಿದೆ.

ಮೂರನೆಯ ಹಂತದಲ್ಲಿ ಶ್ರವಣಬೆಳ್ಗೊಳ, ಹುಮ್ಮಚ, ನರಸಿಂಹರಾಜಪುರ, ಲಕ್ಷ್ಮೇಶ್ವರ, ಆಡೂರು, ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಂಥ ಕೇಂದ್ರಗಳು ಸಮಾವಿಷ್ಟವಾಗುತ್ತವೆ. ಇವಲ್ಲದೆ ನಮ್ಮ ಕಾವ್ಯ-ಶಾಸನಗಳಲ್ಲಿ ಮೈಲಾಪಜಿನ, ಕುರುಳ ಪಾವೆಯ ಜಿನ ಮುಂತಾದ ಪ್ರಸಿದ್ಧ ಕ್ಷೇತ್ರಗಳ ಉಲ್ಲೇಖಗಳು ಬಂದಿವೆಯಾದರೂ ಇವು ಯಾವುವೆಂದು ನಿರ್ಧಾರವಾಗಬೇಕಿದೆ. ಶ್ರವಣಬೆಳ್ಗೊಳದ ಶಾಸನಗಳಲ್ಲಿ ಕಲ್ಲಂಗೆರೆ

ಆದಿತೀರ್ಥವೆಂದು ಹೇಳಿದೆ! ಇದೊಂದು ಬಹು ಪ್ರಾಚೀನವಾದ ಕರ್ನಾಟಕದ ಜೈನ ಕ್ಷೇತ್ರವೆಂದು ಕಾಣುತ್ತದೆ. ಇದಾವುದೆಂದು ಈಗ ನಿರ್ಧರಿಸಿ ಹೇಳುವುದು ಕಷ್ಟ.

ಹೀಗೆ ಕರ್ನಾಟಕದ ಬಹುಭಾಗದಲ್ಲಿ ವ್ಯಾಪಿಸಿದ ಜೈನ ಪಂಗಡಗಳು ಇಲ್ಲಿನ ಸಾಂಸ್ಕೃತಿಕ ಉನ್ನಯನಕ್ಕೆ ಬಹುದೊಡ್ಡ ಕಾಣಿಕೆಯಿತ್ತಿವೆ. ಆದರೆ ಈಗ ಗ್ರಾಂಥಿಕ ದಾಖಲೆಗಳು ದೊರೆಯುತ್ತಿರುವುದು ನಿರ್ಗ್ರಂಥ ಅಥವಾ ದಿಗಂಬರ ಸಂಪ್ರದಾಯದಲ್ಲಿ ಮಾತ್ರ. ನಮ್ಮಲ್ಲಿ ತುಂಬ ಪ್ರಭಾವಶಾಲಿಗಳಾಗಿದ್ದ ಯಾಪನೀಯರ ಯಾವ ಕೃತಿಯೂ ಈಗ ದೊರೆಯುತ್ತಿಲ್ಲ. ಭ್ರಾಜಿಷ್ಣು ಎಂಬ ಪ್ರಸಿದ್ಧ ಯಾಪನೀಯ ಲೇಖಕ 'ಆರಾಧನಾ ಕರ್ನಾಟ ಟೀಕಾ' ಎಂಬ ಗ್ರಂಥ ರಚಿಸಿದ್ದಾಗಿ ತಿಳಿದುಬರುತ್ತದೆ. ಈಗ ಉಳಿದು ಬಂದಿರುವ ವಡ್ಡಾರಾಧನೆ ಆತನ ಗ್ರಂಥದ ಪರಿವರ್ತಿತ ಭಾಗವಾಗಿರುವ ಸಾಧ್ಯತೆ ಹೆಚ್ಚಾಗಿದೆ. ಕುಂದಕುಂದ, ಸಮಂತಭದ್ರ ಮುಂತಾದ ಪ್ರಸಿದ್ಧ ಜೈನಾಚಾರ್ಯರು ಕರ್ನಾಟಕದವರು. ಅಥವಾ ಈ ನೆಲದೊಡನೆ ಗಾಢವಾದ ಸಂಬಂಧ ಪಡೆದವರು. ಇವರು ಪ್ರಾರಂಭದಲ್ಲಿ ಪ್ರಾಕೃತ, ಸಂಸ್ಕೃತಗಳಲ್ಲಿ ಕೃತಿರಚನೆ ಮಾಡಿದರೂ ತರುವಾಯದಲ್ಲಿ ಕನ್ನಡವನ್ನೂ ಗ್ರಾಂಥಿಕ ರೂಪಕ್ಕೆ ತಿರುಗಿಸಿದರು. ತೆಂಬಳೂರಾಚಾರ್ಯ, ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾತೃ, ಶಾಮಕುಂದ ಮುಂತಾದ ಜೈನಾಚಾರ್ಯರು ತಮ್ಮ ಕೃತಿಗಳಿಗೆ ಕನ್ನಡವನ್ನು ಬಳಸಿದ್ದ ಬಗ್ಗೆ ಖಚಿತ ದಾಖಲೆಗಳಿವೆ. ಈ ಮೂವರು ಬಹುಶಃ ಕ್ರಿ. ಶ. ಆರನೆಯ ಶತಮಾನದ ಹಿಂದಿನವರೆಂದು ಕಾಣುತ್ತದೆ.

ವಡ್ಡಾರಾಧನೆಯಂತೆ ಕನ್ನಡದ ಆದಿಕೃತಿಯೆನಿಸಿದ ಕವಿರಾಜಮಾರ್ಗ ಕೂಡ ಜೈನ ಪ್ರಭಾವದಿಂದ ಹೊರತಾಗಿಲ್ಲ. ಹತ್ತನೆಯ ಶತಮಾನದ ರತ್ನತ್ರಯರು ಕನ್ನಡ ಸಾಹಿತ್ಯಕ್ಕೆ ಅಮರ ಕಾಣಿಕೆಯಿತ್ತರು. ಶ್ರೀ ವಿಜಯ ಜಯಕೀರ್ತಿ, ನಾಗವರ್ಮ, ನಯಸೇನ ರನ್ನರಂಥ ವಿದ್ವಾಂಸರು ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ ನಿಘಂಟುಗಳಂಥ ಮೂಲಭೂತ ಶಾಸ್ತ್ರಗಳನ್ನು ರಚಿಸಿ ಕನ್ನಡವನ್ನು ಸರ್ವಾಂಗಸುಂದರಗೊಳಿಸಿದರು. ಈಗ ಲಭ್ಯವಾಗಿರುವ ಜೈನ ಗ್ರಂಥ ಸಮುದಾಯದಲ್ಲಿ ಕನ್ನಡ ಭಾಷೆಯ ಗ್ರಂಥಗಳದ್ದೇ ಅತಿ ದೊಡ್ಡ ಸಂಖ್ಯೆಯಾಗಿದೆ. ಇದು ಕನ್ನಡಕ್ಕೆ ಹೆಮ್ಮೆ ತರುವ ವಿಷಯ. ಶ್ರವಣಬೆಳಗೊಳ ಮತ್ತು ಕೊಪ್ಪಳಗಳಲ್ಲಿ ಕ್ರಿ. ಶ. ೬-೭ನೆಯ ಶತಮಾನದಿಂದಲೇ ಕನ್ನಡ ಶಾಸನಗಳು ಕಂಡು ಬರತೊಡಗುತ್ತವೆ. ೭ನೆಯ ಶತಮಾನದಲ್ಲಿ ಕಂಡು ಬರುವ ಶ್ರ. ಬೆ. ದ ಪದ್ಯ ಶಾಸನಗಳು ಉತ್ತಮ ಸಾಹಿತ್ಯಿಕ ಗುಣದಿಂದ ಕೂಡಿದ್ದು ಕನ್ನಡ ಸಾಹಿತ್ಯದ ಅಪೂರ್ವ ಸಂಪದವಾಗಿ ಕಂಗೊಳಿಸುತ್ತವೆ.

ಈ ಮೊದಲು ಹೇಳಿರುವಂತೆ ಹಲಸಿಗೆಯ ಜಿನಾಲಯ ಕರ್ನಾಟಕದಲ್ಲಿ ದೊರೆಯುತ್ತಿರುವ ಶಿಲೆಯ ಕಟ್ಟಡಗಳ ಪ್ರಾಚೀನ ಮಾದರಿಗಳಲ್ಲಿ ಒಂದು. ಐಹೊಳೆಯ ಪಾರ್ಶ್ವನಾಥ ಬಾಹುಬಲಿ ಶಿಲ್ಪವನ್ನೊಳಗೊಂಡ ಗುಹಾದೇವಾಲಯ, ಮೇಗುಟಿ ಜಿನಾಲಯ, ಬಾದಾಮಿಯ ಜೈನ ಮೇಗಾ ಬಸದಿ. ತರುವಾಯ ಹಳ್ಳೂರು (ಬಾಗಲಕೋಟೆ) ಲಕ್ಷ್ಮೇಶ್ವರ ಮೊದಲಾದೆಡೆಗಳಲ್ಲಿ ಕಂಡು ಬರುವ ಅಸಂಖ್ಯ ಬಸದಿಗಳು

ಕರ್ನಾಟಕದ ವಾಸ್ತುಶಿಲ್ಪಕ್ಕೆ ಸಂದ ಗಮನಾರ್ಹ ಕಾಣಿಕೆಗಳಾಗಿವೆ. ಶ್ರವಣಬೆಳ್ಗೊಳದ ಬಾಹುಬಲಿಯ ಮೂರ್ತಿ ಜಾಗತಿಕ ಮಟ್ಟದ ಕಲಾಕೃತಿಯಾಗಿ ಮೆರೆಯುತ್ತಿದೆ.

ಕದಂಬರ ರಾಜ್ಯ ವಿಸ್ತಾರದಲ್ಲಿ ಜೈನ ಸೇನಾಪತಿಗಳ ಪಾತ್ರ ಗಮನಾರ್ಹವಾಗಿದೆ. ಗಂಗರು, ತರುವಾಯ ಜೈನಧರ್ಮವನ್ನು ಸಂಪೂರ್ಣವಾಗಿ ಆಲಿಂಗಿಸಿಕೊಂಡರು. ಬಾದಾಮಿ, ಚಾಲುಕ್ಯ ಮತ್ತು ರಾಷ್ಟ್ರಕೂಟರ ಆಡಳಿತದಲ್ಲಿ ಜೈನ ಸೇನಾಪತಿಗಳು ಅಧಿಕಾರಿಗಳು ಬಹುಮುಖ್ಯ ಪಾತ್ರ ವಹಿಸಿದ್ದು ಕಂಡುಬರುತ್ತದೆ. ಬಂಕೆಯನಂಥ ಬಂಟರು, ಧಲ್ಲಪನಂಥ (ಕ. ಚಾ. ದೊರೆ ತೈಲಪನ ಸೇನಾನಿ) ಮಂತ್ರಿಮಾನ್ಯರು, ಚಾವುಂಡರಾಯ, ಗಂಗರಾಜರಂಥ ರಾಜಕಾರಣನಿಪುಣರು ಕರ್ನಾಟಕದಲ್ಲಿ ತೋರಿಬಂದ ೫-೬ ಸಾಮ್ರಾಜ್ಯಗಳ ಆಧಾರಸ್ತಂಭರಂತೆ ಕಂಗೊಳಿಸುತ್ತಾರೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ.

ಜೈನರಿಂದ ಪ್ರಾಚೀನ ಕರ್ನಾಟಕದ ವಾಣಿಜ್ಯ-ವ್ಯಾಪಾರಗಳಿಗೆ ಕೂಡ ಅಪಾರವಾದ ಸೇವೆ ಸಂದಿದೆ. ಕರ್ನಾಟಕದ ಸಂಪದಭಿವೃದ್ಧಿಗೆ ಅವರ ಕೊಡುಗೆ ಗಣನಾತೀತ.

ಒಟ್ಟಿನಲ್ಲಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಜೈನಧರ್ಮದ ಏಳಿಗೆಯ ಕಾಲವನ್ನು ಒಂದು ಸುವರ್ಣಯುಗವೆಂದೇ ಕರೆಯಬಹುದು.

ವೀರಶೈವ : ವೈದಿಕ ಮತ್ತು ಜೈನ ಸಂಸ್ಕೃತಿಗಳಿಗಿಂತ ಹೆಚ್ಚು ವಾಸ್ತವಿಕವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸವನ್ನು ತರಬಯಸಿದ್ದು ವೀರಶೈವ ಧರ್ಮ. ವೀರಶೈವವು ಈ ನಾಡಿಗೆ ಹೊರಗಿನಿಂದ ಆಮದಾಗಿ ಬರದೆ ಇಲ್ಲಿಂದಲೇ ಉದ್ಭವ ಗೊಂಡುದರಿಂದ ಸಹಜವಾಗಿ ಇವರಲ್ಲಿ ಕನ್ನಡತನದ ಕೆಚ್ಚು ಮೈದೋರಿತು. ಅರ್ಥಾತ್ ಈ ನೆಲದ ಬಹಳಷ್ಟು ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಮುನ್ನಡೆಯಬೇಕೆಂಬ ಹವಣಿಕೆಯನ್ನು ವೀರಶೈವವು ತೋರ್ಪಡಿಸಿತು.

ವೀರಶೈವದ ಸೈದ್ಧಾಂತಿಕ ಅಂಶಗಳು ಪ್ರಾಚೀನ ಭಾರತೀಯ ಧರ್ಮಗ್ರಂಥಗಳಲ್ಲಿ ಅಷ್ಟಿಷ್ಟು ಕಂಡು ಬರುತ್ತಿರಬಹುದಾದರೂ ಅವುಗಳಿಗೊಂದು ಸಾಮಾಜಿಕ ಸಂಘಟನೆಯ ಮೂರ್ತರೂಪ ಪ್ರಾಪ್ತವಾದದ್ದು ೧೨ನೆಯ ಶತಮಾನದಲ್ಲಿಯೇ ಎಂದು ಧಾರಾಳವಾಗಿ ಹೇಳಬಹುದು. ೧೧ನೆಯ ಶತಮಾನದ ಉತ್ತರಾರ್ಧದಿಂದ ಇತರ ಶೈವ ಮತಗಳ ಪರಿಸರದಿಂದ ದೂರಗೊಳ್ಳುತ್ತ ನಡೆದು ಬಸವಣ್ಣನ ಮುಂದಾಳತ್ವದಲ್ಲಿ ಒಂದು ಸಮಗ್ರ ಸಮಾಜೋದ್ಧಾರಕ. ಸಂಘಟನೆಯಾಗಿ ಪ್ರಕಟಗೊಂಡಿತು. ಹೀಗೆ ಹೊಸತೊಂದು ಸಂಘಟನೆಯಾಗಿ ಆವಿರ್ಭವಿಸಿದ ವೀರಶೈವಕ್ಕೆ ಹಲವಾರು ಅಂಶಗಳು ಪ್ರೇರಣೆ ನೀಡಿದವು. ಅವುಗಳಲ್ಲಿ ತಮಿಳುನಾಡಿನ ಶೈವ ಭಕ್ತಿ ಪಂಥ ಬಹುಮುಖ್ಯವಾದುದು. ಶಿವಪಾರಮ್ಯ ಮತ್ತು ಶಿವಭಕ್ತಿಗಳು ವೀರಶೈವಕ್ಕೆ ಮೂಲ ಸೊತ್ತಾಗಿ ದೊರೆತುದು ಅಲ್ಲಿಂದಲ್ಲೇ. ವೈದಿಕ ಕರ್ಮಕಾಂಡ ಮತ್ತು ವರ್ಣ ಹಾಗೂ ಆಶ್ರಮಗಳ ನಿರಾಕರಣೆ ವೀರಶೈವದ ಮೂಲ ಲಕ್ಷಣಗಳಲ್ಲಿ ಕೆಲವು. ಈ ಲಕ್ಷಣಗಳು ವೀರಶೈವಕ್ಕೆ ಜೈನ ಬೌದ್ಧಧರ್ಮಗಳಿಂದ ದೊರೆತ ಬಳುವಳಿ ಎನ್ನಬಹುದು. ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಇವೆರಡು ಮತಗಳ ಪ್ರೇರಣೆ ವೀರಶೈವಕ್ಕೆ ಇದ್ದೇ ಇದೆ. ವೀರಶೈವವು ಅಳವಡಿಸಿಕೊಂಡ

ಅಹಿಂಸಾತತ್ವದಲ್ಲಂತೂ ಇದನ್ನು ಸ್ಪಷ್ಟವಾಗಿ ಕಾಣಬಹುದು. ಇದೇ ರೀತಿಯಲ್ಲಿ ದ್ವೈತ ಅದ್ವೈತಗಳ ಸೈದ್ಧಾಂತಿಕ ಪ್ರಭಾವವನ್ನು ಕೂಡ ವೀರಶೈವದಲ್ಲಿ ಗುರ್ತಿಸಬಹುದಾಗಿದೆ.

ಮೇಲುನೋಟಕ್ಕೆ ೧೧, ೧೨ನೆ ಶತಮಾನಗಳ ಊಳಿಗಮಾನ್ಯ ಪದ್ಧತಿ ಪ್ರಾರಂಭದ ಹಂತದಲ್ಲಿ ವೀರಶೈವವನ್ನು ವಿರೋಧಿಸಿದಂತೆ ಕಂಡುಬಂದರೂ ಪರೋಕ್ಷವಾಗಿ ವೀರಶೈವ ಚಳವಳಿಗೆ ಆ ಪದ್ಧತಿಯ ಕಾಣಿಕೆಯೂ ಸಂದಿದೆ ಎನ್ನಬಹುದು. ಕೊಂಡಗುಳಿ ಕೇಶಿರಾಜ, ತೆಲುಗು ಜೊಮ್ಮಯ್ಯ, ಬಸವಣ್ಣರಂಥ ಉಚ್ಚಾಧಿಕಾರಿಗಳ ಬಲ ಒಂದು ಕಡೆಗಾದರೆ ಅಂದಿನ ಸಮಾಜದಲ್ಲಿನ ಅಗಾಧವಾದ ಸಮೃದ್ಧಿ ಇನ್ನೊಂದು ಕಡೆ ವೀರಶೈವದ ಆವಿರ್ಭಾವದ ಮೇಲೆ ಪ್ರಭಾವ ಬೀರಿದೆ. ಅಂದಿನ ಕರ್ನಾಟಕದ ಬಹು ವಿಸ್ತೃತವಾದ ರಾಜಕೀಯ ಮತ್ತು ವಾಣಿಜ್ಯ ಸಂಬಂಧಗಳು ಕೂಡ ವೀರಶೈವದ ಮೇಲೆ ತಮ್ಮ ಅಚ್ಚೊತ್ತಿವೆ.

ಒಟ್ಟಿನಲ್ಲಿ ಹನ್ನೆರಡನೆಯ ಶತಮಾನದ ಪೂರ್ವಾರ್ಧದಿಂದ ನಿಶ್ಚಿತ ಸ್ವರೂಪ ಪಡೆದುಕೊಂಡ ಈ ಚಳವಳಿಯಲ್ಲಿ ಮೇಲೆ ತಿಳಿಸಿದ ಹಲವಾರು ಪ್ರಭಾವಗಳನ್ನು ಗುರುತಿಸಿಕೊಳ್ಳುವುದಲ್ಲದೆ ಅಂದಿನ ವೀರಶೈವ ಸಮಾಜಕ್ಕೆ ಬೇರೆ ಮತಗಳಿಂದ ವಲಸೆ ಬಂದ ಜನರ ಪಾಲು ಕೂಡ ಹಿರಿದಾಗಿದೆ. ಪರಂಪರಾಗತ ಶೈವರಲ್ಲದೆ ಲಕುಲೀಶಪಾಶುಪತರು ನಾಥ ಪಂಥಿಯರು, ಅಳಿದುಳಿದ ಬೌದ್ಧಧರ್ಮೀಯರು ಮೊದಲಾದವರು ಹೊಸತಾಗಿ ರೂಪಗೊಳ್ಳುತ್ತಿದ್ದ ಸಮಾಜದಲ್ಲಿ ಸೇರಿಹೋದರು. ಈ ಪ್ರಕ್ರಿಯೆಯಲ್ಲಿ ಅಂದಿನ ಕರ್ನಾಟಕದ ಕೆಳವರ್ಗಗಳ ಪಾತ್ರ ಕೂಡ ತುಂಬಾ ಗಮನಾರ್ಹವಾಗಿತ್ತು. ಬಹಳಷ್ಟು ಕೆಳಜಾತಿಗಳು ವೀರಶೈವದಲ್ಲಿ ಸಮಾವೇಶಗೊಂಡವು. ಇದರಿಂದಾಗಿ ಮೂಲ ಹಿಂದೂ ಧರ್ಮದಲ್ಲಿದ್ದ ಸಾಮಾಜಿಕವಾದ ಅತಿ ವ್ಯಾಪಕತೆ ವೀರಶೈವದಲ್ಲಿಯೂ ಸಮಾವೇಶಗೊಂಡು ಹೊಸದೊಂದು ಸಮಾಜ ಸೃಷ್ಟಿಯ ಮಹತ್ಕಾರ್ಯದ ಉದ್ಘಾಟನೆಯಾಯಿತು. ಈ ಮಹತ್ಕಾರ್ಯದ ನೇತಾರ ಬಸವಣ್ಣನೆ. ಬಸವಣ್ಣನ ಮುಂದಾಳತ್ವದಲ್ಲಿ ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಅಲ್ಲಮರಂಥ ಸುಮಾರು ಇನ್ನೂರರಷ್ಟು ಮುಂದಾಳುಗಳು ಈ ಸಂಧಿಕಾಲದಲ್ಲಿ ಕಂಡುಬಂದಿದ್ದಾರೆ. ಸಾಮಾಜಿಕ ಸಮಾನತೆಯ ಆದರ್ಶದೊಂದಿಗೆ ಷಟ್ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳಂಥ ತಾತ್ವಿಕ ನೆಲಗಟ್ಟಿನ ಮೇಲೆ ಇವರು ತಮ್ಮ ಹೊಸ ಸಮಾಜದ ಕಲ್ಪನೆಗಳಿಗೆ ರೂಪಕೊಡುವ ಪ್ರಯತ್ನ ಮಾಡಿದರು. ಈಗಾಗಲೆ ಹೇಳಿದಂತೆ ಜಾತಿವರ್ಣಗಳ ನಿರಾಕರಣೆ ಕರ್ಮಸಿದ್ಧಾಂತ ಮಾಯಾವಾದಗಳ ಖಂಡನೆ ಭವಾಂತರ, ಸ್ವರ್ಗ, ನರಕಗಳ, ಉಚ್ಚಾಟನೆ, ಸ್ತ್ರೀಪುರುಷ ಸಮಾನತೆ, ಅಹಿಂಸಾ ತತ್ವ ಇವೆಲ್ಲವುಗಳಿಗಿಂತ ಮೇಲಾಗಿ ಸಾಮಾಜಿಕ ಸಮಾನತೆಯನ್ನು ಪೋಷಿಸುವ ಕಾಯಕ ತತ್ವ ಇತ್ಯಾದಿಗಳಿಂದಾಗಿ ಅಂದಿನ ವೀರಶೈವವು ಕಣ್ಣು ಕೋರೈಸುವ ಕಾರ್ಯ ಮಾಡಿತು.

ವೀರಶೈವವು ೧೨ ನೆಯ ಶತಮಾನದಲ್ಲಿ ಪ್ರಾರಂಭಗೊಳಿಸಿದ ಚಳವಳಿಯ ಇನ್ನೊಂದು ಮುಖ ಎಂದರೆ ವಚನ ಸಾಹಿತ್ಯ. ವಚನ ಸಾಹಿತ್ಯದ ಅನೇಕ ವೈಶಿಷ್ಟ್ಯಗಳಲ್ಲಿ ವೈಚಾರಿಕ ಸ್ವಾತಂತ್ರ್ಯ ಕೂಡ ಮೆಚ್ಚುವಂತಹದು ಈ ಸ್ವತಂತ್ರ ವೃತ್ತಿಯ

ಕಾರಣದಿಂದಾಗಿಯೇ ವಚನ ಸಾಹಿತ್ಯದಲ್ಲಿ ಕೆಲವೊಮ್ಮೆ ವಿರೋಧಾಭಾಸದ ಅಂಶಗಳು ಹಣಿಕಿಕ್ಕುವುದುಂಟು. ಒಟ್ಟಿನಲ್ಲಿ ವಚನ ಸಾಹಿತ್ಯ ಕನ್ನಡವು ಜಾಗತಿಕ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯಾಗಿ ಮೆರೆದಿದೆ.

ವಚನ ಸಾಹಿತ್ಯದ ಪ್ರೇರಣೆಯಿಂದ ತರುವಾಯದ ಕನ್ನಡ ಸಾಹಿತ್ಯ ಹೊಸ ತಿರುವೊಂದನ್ನು ಪಡೆದುದಲ್ಲದೆ ಜನಜಾಗೃತಿಯ ಮಹತ್ತರ ಮಣಿಹವನ್ನು ಅದು ಪೂರೈಸಿತು. ಹರಿಹರ, ರಾಘವಾಂಕ, ಭೀಮಕವಿ, ಲಕ್ಕಣ್ಣದಂಡೇಶ, ಚಾಮರಸ, ಸಿಂಗಿರಾಜ, ಗುಬ್ಬಿಯ ಮಲ್ಲಣಾರ್ಯ, ಶಾಂತೇಶ, ವಿರೂಪಾಕ್ಷಪಂಡಿತ, ಸಿದ್ಧನಂಜೇಶರಂತಹ ಕವಿಗಳು, ಪ್ರಸಾದಿ ಮಹಾದೇವಯ್ಯ, ಕಲ್ಲುಮಠದ ಪ್ರಭುದೇವ, ಹುಲಿಗೆರೆಯ ಮಾಯಿದೇವ, ಗುಮ್ಮಳಾಪುರದ ಸಿದ್ಧಲಿಂಗ, ಗುಳೂರಿನ ಸಿದ್ಧ ವೀರಣಾರ್ಯರಂಥ ತತ್ವವೇತ್ತರು ವೀರಶೈವದ ಆಧಾರ ಸ್ತಂಭಗಳಂತೆ ಎದ್ದು ಕಾಣುತ್ತಾರೆ. ತೋಂಟದ ಸಿದ್ಧಲಿಂಗಯತಿಗಳ ಮುಖಂಡತ್ವದಲ್ಲಿ ೧೬ನೆ ಶತಮಾನದ ತರುವಾಯ ಕಂಡುಬರುವ ಯತಿಗಳ ಪರಂಪರೆಯನ್ನು ಕೂಡ ಇಲ್ಲಿ ಸ್ಮರಿಸಲೇಬೇಕಾಗುತ್ತದೆ.

ಕೂಡಲಸಂಗಮ, ಮಂಗಳವಾಡ ಮತ್ತು ಕಲ್ಯಾಣದಂತಹ ಪಟ್ಟಣಗಳು ವೀರಶೈವದ ಪ್ರಾರಂಭಿಕ ಕ್ಷೇತ್ರಗಳಾಗಿ ಗೋಚರಿಸುತ್ತವೆ. ತರುವಾಯದಲ್ಲಿ ಸೊಲ್ಲಾಪುರ, ಶ್ರೀಶೈಲ, ಹಂಪಿ ಮೊದಲಾದ ಕಡೆಗೆ ವೀರಶೈವರು ವ್ಯಾಪಿಸತೊಡಗಿದ್ದು ಕಂಡುಬರುತ್ತದೆ. ಹದಿಮೂರನೆಯ ಶತಮಾನಕ್ಕಾಗಲೇ ಅರ್ಜುನವಾಡ, ಚೌಡದಾನಪುರ, ದ್ವಾರಸಮುದ್ರ ಹಂಪಿ ಮೊದಲಾದೆಡೆಗಳಲ್ಲಿ ವೀರಶೈವವು ನೆಲೆಗಳನ್ನು ನಿರ್ಮಿಸಿಕೊಂಡಿದೆ ಕಲ್ಯಾಣ ಕ್ರಾಂತಿಯ ತರುವಾಯ ಅಲ್ಲಿದ್ದ ಲಕ್ಷದ ತೊಂಬತ್ತಾರು ಸಾವಿರ ವೀರಶೈವರು ಮೇಲೆ ಹೇಳಿದ ಪ್ರದೇಶಗಳ ಕಡೆಗೆ ವಲಸೆ ಹೋಗುವುದರೊಂದಿಗೆ ಅದರ ಹಬ್ಬುಗೆಗೂ ಕಾರಣರಾದರು. ೧೫-೧೬ನೆಯ ಶತಮಾನಗಳಷ್ಟೊತ್ತಿಗೆ ಹಂಪಿ, ಗುಮ್ಮಳಾಪುರ, ಗುಬ್ಬಿ, ಎಡೆಯೂರು ಮೊದಲಾದವು ವೀರಶೈವರ ಚಟುವಟಿಕೆಯ ಕೇಂದ್ರಗಳಾದವು. ಇಷ್ಟು ಹೊತ್ತಿಗಾಗಲೇ ಅದು ದಕ್ಷಿಣ ಮಹಾರಾಷ್ಟ್ರ, ಮರಾಠವಾಡಾ ಮತ್ತು ವಿದರ್ಭ, ಆಂಧ್ರ, ಕೆಲಮಟ್ಟಿಗೆ, ತಮಿಳುನಾಡಿನಲ್ಲಿ ಕೂಡ ವೀರಶೈವವು ಪಸರಿಸಿಬಿಟ್ಟಿತ್ತು. ವಿಜಯನಗರ ಸಾಮ್ರಾಜ್ಯದ ಲಕ್ಕಣ್ಣ ದಂಡೇಶರಂಥ ಅಧಿಕಾರಿಗಳ ಆಶ್ರಯದಿಂದಾಗಿ ರಾಜಮನೆತನಗಳಲ್ಲಿ ಕೂಡ ವೀರಶೈವವು ಪ್ರಭಾವ ಬೀರತೊಡಗಿತು. ಕೆಳದಿ, ಸ್ವಾದಿ, ಹರಪನಹಳ್ಳಿ, ಬಿಜ್ಜಾವರ ಮೊದಲಾದ ಸಂಸ್ಥಾನಗಳು, ಪಾಳೆಯಪಟ್ಟುಗಳು ವೀರಶೈವ ಮತವನ್ನು ಸ್ವೀಕರಿಸಿದವು. ಚಿತ್ರದುರ್ಗ, ಬನವಾಸಿ, ತುಮಕೂರು ಮೊದಲಾದ ಪ್ರದೇಶಗಳಲ್ಲಿ ವೀರಶೈವವು ಪ್ರಸಾರಗೊಳ್ಳುತ್ತ ನಡೆಯಿತು. ಜೈನರು, ತುರುಕಾರಪಂಚಮರು, ರೆಡ್ಡಿಗಳು, ಕುಡ ಒಕ್ಕಲಿಗರು ಮುಂತಾದ ಚಿಕ್ಕಪುಟ್ಟ ಸಂಸ್ಥಾನಿಕರು ದೇಸಾಯರು ವೀರಶೈವವನ್ನು ಅಪ್ಪಿಕೊಂಡರು. ಹೀಗಾಗಿ ಕರ್ನಾಟಕದ ತುಂಬ ವೀರಶೈವವು ಪ್ರಬಲ ಮತವಾಗಿ ಬೆಳೆದು ಬಂದಿತು. ಇವರ ಬೆಳವಣಿಗೆಯಲ್ಲಿ ದೊಡ್ಡ ವಿದ್ವಾಂಸರು ಮತ್ತು ಆಚಾರ್ಯಪುರುಷರಂತೆ ಸೂಫಿ ಸಂತರಂತಹ ಅಖಂಡ

ಮಾನವತಾವಾದಿಗಳಾದ ಅನುಭಾವಿ ಸತ್ಪುರುಷರ ಕೊಡುಗೆ ಕೂಡ ಬಹುದೊಡ್ಡ ಕಾರಣವಾಗಿದೆ.

ಇಂದಿನ ಕರ್ನಾಟಕದ ಪ್ರಧಾನ ಸಂಸ್ಕೃತಿಗಳಲ್ಲಿ ವೀರಶೈವವು ಪ್ರಥಮ ಸ್ಥಾನದಲ್ಲಿ ನಿಲ್ಲುವುದೆಂದರೂ ತಪ್ಪಾಗಲಾರದು. ರಾಜಕೀಯವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ವೀರಶೈವ ಸಮಾಜ ಕರ್ನಾಟಕದಲ್ಲಿ ಒಳ್ಳೆಯ ಸುಭದ್ರ ಸ್ಥಿತಿಯಲ್ಲಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಅದರ ಪ್ರಭಾವ ಅತ್ಯಧಿಕವಾಗಿದೆ.

ಈವರೆಗೆ ನೋಡಿದಂತೆ ಕರ್ನಾಟಕದಲ್ಲಿ ವೈದಿಕ ಬೌದ್ಧ ಜೈನ ಮತ್ತು ವೀರಶೈವ ಪರಂಪರೆಗಳು ತುಂಬಾ ಮಹತ್ವದ ಪಾತ್ರ ವಹಿಸಿರುವುದು ಸ್ಪಷ್ಟ. ಬೌದ್ಧ ಧರ್ಮವು ಇಂದಿನ ಪರಿಸರದಲ್ಲಿ ಅಪ್ರಸ್ತುತವೆನಿಸುತ್ತದೆ. ಇದರ ಬದಲು ಇಸ್ಲಾಂ ಧರ್ಮ ಸಾಕಷ್ಟು ಪ್ರಭಾವಶಾಲಿಯಾಗಿ ಕನ್ನಡ ಸಂಸ್ಕೃತಿಯ ಮೇಲೆ ತನ್ನ ವಾಸ್ತುಶಿಲ್ಪ ಸಾಹಿತ್ಯ ಕಲೆಗಳ ಮುಖಾಂತರ ಬೀರಿರುವ ಪ್ರಭಾವದಿಂದಾಗಿ ಗಮನಾರ್ಹವೆನಿಸುತ್ತದೆ. ಕ್ರೈಸ್ತ ಧರ್ಮೀಯರು ಸಂಖ್ಯೆಯಲ್ಲಿ ಕಡಿಮೆಯಾಗಿದ್ದರೂ ಕೂಡ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕಾಣಿಕೆಯಿಂದಾಗಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಹೀಗೆ ಕರ್ನಾಟಕದ ಆಗುಹೋಗುಗಳಿಗೆ, ಅದರ ಸಂವರ್ಧನೆಯ ವಿವಿಧ ಹಂತಗಳಿಗೆ ಮೇಲೆ ತಿಳಿಸಿದ ಈ ಪ್ರಧಾನ ಸಂಸ್ಕೃತಿಗಳು ಮಹಾ ಪಾತ್ರವನ್ನಾಡಿವೆ ಎಂದು ಹೇಳಬಹುದು.

* * * * *

ಸಾಂಸ್ಕೃತಿಕ ಅನನ್ಯತೆ

- ಪುರುಷೋತ್ತಮ ಬಿಳಿಮಲೆ

I - ಅನನ್ಯತೆಯ ಬಗೆಗೆ

ಸಂಸ್ಕೃತಿಯೊಂದರ ಕನಿಷ್ಠತಮ ಘಟಕಗಳೆಂದರೆ ಗಂಡು ಮತ್ತು ಹೆಣ್ಣು. ಈ ಮೂಲಭೂತ ಸಾಂಸ್ಕೃತಿಕ ಘಟಕಗಳು ಪರಸ್ಪರ ವಿರುದ್ಧವಾದ ಮತ್ತು ಪೂರಕವಾದ ದೇಹರಚನೆ ಮತ್ತು ಸ್ವಭಾವಗಳನ್ನು ಹೊಂದಿದ್ದು, ಒಂದು ಬಗೆಯ ಸಮನ್ವಯವನ್ನು ಉದ್ದಕ್ಕೂ ಕಾಪಾಡಿಕೊಂಡು ಬರುತ್ತವೆ. ಮದುವೆ ಮತ್ತು ಸಂತಾನದ ಮೂಲಕ ಈ ಘಟಕಗಳು ವಿಸ್ತರಣೆ ಹೊಂದುತ್ತವೆ. ಅಂಥ ವಿಸ್ತರಣೆಯ ಒಂದು ಪ್ರಮುಖ ಹಂತವೇ ಕುಟುಂಬ ರಚನೆ. ಕುಟುಂಬವು 'ಕೂಡಿ ಉಣ್ಣುವ' ವ್ಯವಸ್ಥೆಯನ್ನು ಸಂಕೇತಿಸುತ್ತವೆ ಮತ್ತು 'ಒಂದು ಸೂರಿನ ಅಡಿಯಲ್ಲಿ' ಬದುಕುವುದನ್ನು ಪ್ರತೀತಗೊಳಿಸುತ್ತದೆ. 'ಕೂಡಿ ಉಣ್ಣುವ' ಮತ್ತು 'ಒಂದು ಸೂರಿನ ಅಡಿಯಲ್ಲಿ ಬದುಕುವ' ಜನಗಳಲ್ಲಿ 'ಗಂಡಿನ ಕಡೆ' ಮತ್ತು 'ಹೆಣ್ಣಿನ ಕಡೆ' ಎಂಬೆರಡು ಪ್ರಧಾನ ಗುಂಪುಗಳಿರುತ್ತವೆ. ಕುಟುಂಬವು ಪಿತೃ ಪ್ರಧಾನವಾಗಿದ್ದರೆ ಅಲ್ಲಿ ಗಂಡಿನ ಕಡೆಯವರು ಮೇಲ್ಮೈ ಸಾಧಿಸುತ್ತಾರೆ ಮತ್ತು ಕುಟುಂಬವು ಮಾತೃಪ್ರಧಾನವಾಗಿದ್ದರೆ ಅಲ್ಲಿ ಹೆಣ್ಣಿನ ಕಡೆಯವರು ಮೇಲ್ಮೈ ಸಾಧಿಸುತ್ತಾರೆ. ಸದ್ಯದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಇವೆರಡೂ ಗುಂಪುಗಳು ಕ್ರಿಯಾಶೀಲವಾಗಿವೆ.

ಇಂಥ ಕುಟುಂಬಗಳು ವಿಸ್ತಾರವಾಗುತ್ತವೆ. ಸಂತಾನದ ಸಮೃದ್ಧತೆ ಅದಕ್ಕೆ ಕಾರಣ. ಕುಟುಂಬಗಳನ್ನು 'ಬಳಿ'ಗಳು ಒಳಗೊಳ್ಳುತ್ತವೆ. ಕುಟುಂಬ ವ್ಯವಸ್ಥೆಗೆ ಅನುಗುಣವಾಗಿ 'ಬಳಿ'ಗಳು ಪುನರ್‌ಸೃಷ್ಟಿಯಾಗುತ್ತಿರುತ್ತವೆ. ಈ 'ಬಳಿ'ಗಳ ಸಮಾವೇಶದಿಂದ 'ಜಾತಿ' ರೂಪುದಳೆಯುತ್ತದೆ. ಅನೇಕ ಜಾತಿಗಳಿಂದ ಸಮಾಜ ವ್ಯವಸ್ಥೆ ಮೂರ್ತವಾಗುತ್ತದೆ.

ಇಲ್ಲಿ ಗಂಡು-ಹೆಣ್ಣುಗಳ ಕನಿಷ್ಠತಮ ಘಟಕ, ಕುಟುಂಬ, ಬಳಿ, ಜಾತಿ ಮತ್ತು ಸಮಾಜವು ಪುನರ್-ಸೃಷ್ಟಿಯ ಮೂಲಕ ವಿಸ್ತರಿಸಿಕೊಳ್ಳುತ್ತಾ ಹೋಗುವಾಗ ಕೆಲವು ಅಂಶಗಳನ್ನು ಸಮಾನವಾಗಿ ಉಳಿಸಿಕೊಳ್ಳಲು ಹೆಣಗಾಡುತ್ತದೆ. ಈ ಸಮಾನ ಅಂಶವು ವ್ಯಕ್ತಿ, ಕಾಲ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಗೋಚರವಾಗುತ್ತದೆ. ಜನರ ಭಾಷೆ, ಆಹಾರ, ಉಡುಪು, ತೊಡುಗೆ, ಅಲಂಕಾರ, ಜೀವನಾವರ್ತನದ ಆಚರಣೆಗಳು, ವಾರ್ಷಿಕಾವರ್ತನದ ಆಚರಣೆಗಳು, ಬಂಧುತ್ವ, ವಾಸ್ತು ಮೊದಲಾದ ವಿಷಯಗಳಲ್ಲಿ ಇದನ್ನು ನಾವು ಬೆರಳಿಟ್ಟು ತೋರಿಸಲು ಸಾಧ್ಯವಿದೆ. ಹಾಗೆಯೇ ಭಯ, ಕರುಣೆ, ದ್ವೇಷ, ಭಕ್ತಿ, ವಿನಯ, ಗೌರವ, ಪ್ರೇಮ ಮೊದಲಾದ ಭಾವನಾತ್ಮಕ ವಿಚಾರಗಳ ಮೂಲಕವೂ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಕೈಮುಗಿಯುವುದು, ಕಾಲು ಹಿಡಿಯುವುದು,

ಸ್ವಾಗತಿಸುವುದು, ಬೀಳ್ಕೊಡುವುದು, ಕೈಕುಲುಕುವುದು ಮೊದಲಾದ ಸಂಸ್ಕೃತಿಬದ್ಧ ಚಟುವಟಿಕೆಗಳಲ್ಲಿ ಅಂಥ ಸಮಾನ ಅಂಶಗಳು ತಾನೇ ತಾನಾಗಿ ಪ್ರತೀತವಾಗುತ್ತವೆ. ಯಾರಲ್ಲಿ ಅಂಥ ಸಮಾನ ಅಂಶಗಳಿರುತ್ತವೆಯೋ, ಆ ಜನರಿಗೆ ಅಂಥ ಚರ್ಯೆ ಅಥವಾ ನಡಾವಳಿಗಳೆಲ್ಲ ಅತ್ಯಂತ ಸಹಜವೆಂಬಂತೆ ತೋರುತ್ತದೆ. ಅವರ ನೆಲೆಯಲ್ಲಿ ನಿಂತು ನೋಡಿದಾಗ ಅವೆಲ್ಲ ತರ್ಕಬದ್ಧವೂ, ನ್ಯಾಯೋಚಿತವೂ ಆಗಿರುತ್ತದೆ. ಅಂಥ ಜನರಿಗೆ ಅವರದೇ ಆದ ಪರಂಪರೆಯಿರುತ್ತದೆ ಮತ್ತು ಅವರಲ್ಲಿ ಅವರ ಪರಂಪರೆಯಿಂದ ದತ್ತವಾದ ಮೌಲ್ಯಗಳೂ ಇರುತ್ತವೆ. ಅವುಗಳು ಅಪರಿಚಿತ ಲೋಕದ ಬಳುವಳಿಯಂತಿರದೆ, ಪರಿಚಿತವೂ, ಅನುಭವಜನ್ಯವೂ ಆಗಿದ್ದು ಸಹ್ಯವಾಗಿರುತ್ತದೆ. ಇದನ್ನು ಆ ಜನವರ್ಗದ 'ಶಿಷ್ಟ' ಎಂದು ಕರೆಯಬಹುದಾದರೆ, ಶಿಷ್ಟವು ನಿರ್ದಿಷ್ಟ ಜನರ ಅಂಗೀಕೃತ ವ್ಯವಸ್ಥೆಯನ್ನು ಸೂಚಿಸುತ್ತದೆ. ಅದಕ್ಕಿಂತ ಹೊರತಾದ ಅಸಮಾನ ವಿವರಗಳೆಲ್ಲವೂ ಆ ಜನರ ಮಟ್ಟಿಗೆ 'ಪರಿಶಿಷ್ಟ' ಆಗುತ್ತದೆ. ಭಾರತದ ವರ್ಣವ್ಯವಸ್ಥೆಯಲ್ಲಿ ಸವರ್ಣೀಯರೆಲ್ಲ 'ಶಿಷ್ಟ'ರೂ ಅಸ್ಪೃಶ್ಯರೆಲ್ಲ 'ಪರಿಶಿಷ್ಟ'ರೂ ಆಗಿರುವುದನ್ನು ಗಮನಿಸಬೇಕು. ಇಂದಿನ ರಾಜಕೀಯ ಪರಿಭಾಷೆಯಲ್ಲಿ ಆ ಪದಗಳು ಹಾಗೆಯೇ ಉಳಿದು ಬಂದಿವೆ. ಆದರೆ ನಮ್ಮ ಸಾಂಸ್ಕೃತಿಕ ಪರಿಕಲ್ಪನೆಗಳಲ್ಲಿ ಅದನ್ನು ಹಾಗೆಯೇ ಉಳಿಸಿಕೊಳ್ಳಲಾಗುವುದಿಲ್ಲ. ಏಕೆಂದರೆ ಅಸ್ಪೃಶ್ಯರನ್ನು ಅವರ ಸಾಂಸ್ಕೃತಿಕ ತರ್ಕಗಳ ಮೂಲಕವೇ ನೋಡಿದಾಗ ಅವರದೂ ಶಿಷ್ಟ ವ್ಯವಸ್ಥೆಯೇ ಆಗಿರುತ್ತದೆ ಮತ್ತು ದಲಿತ ಶಿಷ್ಟದ ದೃಷ್ಟಿಯಿಂದ ನೋಡಿದಾಗ ಸವರ್ಣೀಯರು ಪರಿಶಿಷ್ಟರೇ ಆಗಿಬಿಡುತ್ತಾರೆ.

ಒಂದು ಸಂಸ್ಕೃತಿಯ ಶಿಷ್ಟ ಮತ್ತು ಪರಿಶಿಷ್ಟಗಳು ಆ ಸಂಸ್ಕೃತಿಯು ಎದುರಿಸುತ್ತಿರುವ ಬಿಕ್ಕಟ್ಟುಗಳ ಮೂಲಕ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಬಿಕ್ಕಟ್ಟುಗಳು ಸಾಮಾನ್ಯವಾಗಿ ಅನ್ಯಸಂಸ್ಕೃತಿಯ ಪ್ರಭಾವದಿಂದ ಕಾಣಿಸಿಕೊಳ್ಳುತ್ತದೆ. ಅಥವಾ ಅದರ ಒಳಗಿನ ಜನರ ಭಿನ್ನ ನಡಾವಳಿಗಳ ಮೂಲಕ ಪ್ರಕಟವಾಗುತ್ತದೆ. ಅಂಥ ಬಿಕ್ಕಟ್ಟಿನ ಅಥವಾ ಸಂಘರ್ಷದ ಸಂದರ್ಭಗಳಲ್ಲಿ ಸಂಸ್ಕೃತಿಯು ತನ್ನ ಬಿರುಕುಗಳನ್ನು ಮುಚ್ಚಿಕೊಳ್ಳಲು ಗರಿಷ್ಠಮಟ್ಟದಲ್ಲಿ ಪ್ರಯತ್ನಿಸುತ್ತದೆ. 'ತನ್ನದು' ಎಂಬುದನ್ನು ಉಳಿಸಿಕೊಳ್ಳಲು ಬಗೆಬಗೆಯ ತಂತ್ರಗಳನ್ನು ಪ್ರಯೋಗಿಸುತ್ತ ಹೆಣಗಾಡುತ್ತದೆ. ಅಂತರ್ಜಾತೀಯ ಮದುವೆಗಳ ಸಂದರ್ಭದಲ್ಲಿ ಮತ್ತು ಸಾವಿನ ಸಂದರ್ಭದಲ್ಲಿ ಸಂಸ್ಕೃತಿ ತತ್ತರಿಸುವುದನ್ನು ನೋಡಬೇಕು. ಅಂತರ್ಜಾತೀಯ ಮದುವೆಯಲ್ಲಿ ಹೊರಗಿನ ಜಾತಿಯ ವ್ಯಕ್ತಿಯ ಒಳಪ್ರವೇಶದಿಂದ ಸಾಂಸ್ಕೃತಿಕ ಅಸಮತೋಲನ ಕಾಣಿಸಿಕೊಂಡರೆ, ಸಾವಿನ ಸಂದರ್ಭದಲ್ಲಿ ಒಳಗಿನ ವ್ಯಕ್ತಿಯ ನಿರ್ಗಮನದಿಂದ ಅಸಮತೋಲನ ಉಂಟಾಗುತ್ತದೆ. ಇಂಥ ಅನಿರೀಕ್ಷಿತ ಅಸಮತೋಲನದ ನಿವಾರಣೆಗಾಗಿ ಅಂತರ್ಜಾತಿ ವಿವಾಹವನ್ನು ಸಾಧ್ಯವಾದಷ್ಟೂ ನಿರ್ಬಂಧಿಸಲಾಗುತ್ತದೆ. ಆದರೆ ಸಾವನ್ನು ನಿರ್ಬಂಧಿಸಲಾಗುವುದಿಲ್ಲ. ಆದಕ್ಕಾಗಿ ಸಾವು ಸಂಭವಿಸಿದ ಅನಂತರದ 16 ದಿನಗಳ ಕಾಲವನ್ನು 'ಮಧ್ಯಂತರ ಜಗತ್ತಿಗೇರಿಸಿ' ಅಸಮತೋಲವನ್ನು ನಿವಾರಿಸಿಕೊಳ್ಳಲು

ಮಾನಸಿಕವಾಗಿ ಮತ್ತು ಕೃತಕವಾಗಿ ಪ್ರಯತ್ನಿಸಲಾಗುವುದು. ಆ ದಿನಗಳಲ್ಲಿ ಇಲ್ಲದವನನ್ನು ಇದ್ದ ಹಾಗೆ ಭಾವಿಸಿಕೊಳ್ಳಲಾಗುವುದು. ಎಡಗೈಯಲ್ಲಿ ಅವನಿಗೆ ಊಟವಿಡಲಾಗುವುದು. 16 ನೇ ದಿವಸದಂದು ಸತ್ತವನನ್ನು ಆಗಲೇ ಸತ್ತುಹೋದ ಇತರ ಹಿರಿಯರೊಂದಿಗೆ ಸೇರಿಸಲಾಗುವುದು. ಹೀಗೆ ಜನರು ತಮ್ಮ 'ಸಾಂಸ್ಕೃತಿಕ ಶಿಷ್ಟ'ವನ್ನು ಅತ್ಯಂತ ಜತನದಿಂದ ಕಾಪಾಡಿಕೊಳ್ಳುತ್ತಾರೆ. ಆ ಶಿಷ್ಟದಿಂದ ಹೊರಗೆ ಇರುವ ಜನರಿಗೆ ಅಂಥ ಪ್ರಯತ್ನಗಳು ಹಾಸ್ಯಾಸ್ಪದವಾಗಿಯೋ ಮೂಢನಂಬಿಕೆಯಂತೆಯೋ ಕಾಣಿಸುವುದುಂಟು.

ಯಾವುದೇ ಒಂದು ಸಂಸ್ಕೃತಿಯ ಶಿಷ್ಟವು ಸಾರ್ವತ್ರಿಕವಾದ ಗುಣಲಕ್ಷಣಗಳನ್ನು ಹೊಂದಿರುವುದಿಲ್ಲ. ಅದು ವ್ಯಕ್ತಿ, ಸ್ಥಳ ಮತ್ತು ಕಾಲದೊಂದಿಗೆ ಗಾಢ ಸಂಬಂಧ ಹೊಂದಿರುತ್ತದೆ. ಭಾರತೀಯ ಸಂದರ್ಭದಲ್ಲಿ ವ್ಯಕ್ತಿಯ ವೈಯಕ್ತಿಕ ಅಸ್ತಿತ್ವಕ್ಕೆ ಅಷ್ಟೇನೂ ಮಾನ್ಯತೆಯಿಲ್ಲ. ಬದಲು ಸಮುದಾಯಕ್ಕೆ ಬೆಲೆಯಿದೆ. ಈ ನಿಟ್ಟಿನಲ್ಲಿ ಕರ್ನಾಟಕದ ಜನ ಸಮುದಾಯವು 'ಸುಗ್ಗಿ' ತಿಂಗಳನ್ನು ಸಂಭ್ರಮದಿಂದ ಬರಮಾಡಿಕೊಳ್ಳುವುದನ್ನು ಗಮನಿಸಬೇಕು. ಕಾಲ ಮತ್ತು ಜನ ಸಮುದಾಯ ಅಭಿನ್ನವಾಗುವ ಸುಗ್ಗಿ ತಿಂಗಳಿನಲ್ಲಿ ಭೂಮಿ ಸಮೃದ್ಧವಾಗಿರುತ್ತದೆ. ಅದರ ಪರಿಣಾಮವಾಗಿ ಸಮುದಾಯವೂ ಸಮೃದ್ಧಿಯನ್ನು ಬೇರೆ ಬೇರೆ ರೂಪಕಗಳಲ್ಲಿ ಹಿಡಿದಿಡುತ್ತದೆ. 'ಸುಗ್ಗಿ' ಎಲ್ಲದಕ್ಕೂ ಒಳ್ಳೆಯ ಕಾಲವಾಗುವುದೇ ಹೀಗೆ. ಆ ತಿಂಗಳಿನಲ್ಲಿ ಮಗು ಹುಟ್ಟಿದರೆ ಮಗುವಿಗೂ, ತಂದೆ ತಾಯಿಗಳಿಗೂ, ಕುಟುಂಬದವರಿಗೂ ಒಳ್ಳೆಯದು, ಹುಡುಗಿ ಮೈನೆರೆದರೆ ಶುಭ, ಮದುವೆಗೆ ಸುಗ್ಗಿ ತಿಂಗಳೇ ಸರಿಯಾದ ಕಾಲ, ಸುಗ್ಗಿಯಲ್ಲಿ ಸತ್ತವರಿಗೆ ಸ್ವರ್ಗ-ಹೀಗೆ ಸಕಲ ಒಳಿತುಗಳೂ ಸುಗ್ಗಿಗೆ ಸಂದುಬಿಡುತ್ತವೆ. ಇದಕ್ಕೆ ಪೂರ್ತಿಯಾಗಿ ವಿರುದ್ಧವಾಗಿರುವುದು ಆಷಾಢ ಮಾಸ. ಆಷಾಢದಲ್ಲಿ ಭೂಮಿ ಬರಡಾಗಿರುತ್ತದೆ. ಮೊದಲ ಬೆಳೆಯ ಕೊಡುಗೆ ಮುಗಿದಿದೆ, ಎರಡನೆಯದು ಇನ್ನೂ ಬಂದಿಲ್ಲ. ಮಳೆಗಾಲ ನಿಂತಿದೆ - ಬೇಸಗೆ ಇನ್ನು ಆರಂಭವಾಗಬೇಕಾಗಿದೆ. ಇಂಥ ಸಂದಿಗ್ಧದ ಕಾಲ ಜನರ ದೃಷ್ಟಿಯಲ್ಲಿ'ಬರಡುಕಾಲ'. ಹಾಗಾಗಿ ಆಷಾಢದಲ್ಲಿ ಮಗು ಹುಟ್ಟಿದರೆ, ಮಗುವಿಗೂ ಹಾಳು, ತಂದೆ ತಾಯಿಗಳಿಗೂ ಹಾಳು, ಹುಡುಗಿ ಮೈನೆರೆದರೆ ಆಕೆಗೆ ಗಂಡ ಸಿಗಲಾರದು, ಮದುವೆಯಂತೂ ನಡೆಯಕೂಡದು, ಸತ್ತವರಿಗೆ ಸ್ವರ್ಗದೊರಕದು - ಹೀಗೆ ಸಕಲ ಕೆಡುಕುಗಳು ಆಷಾಢಕ್ಕೆ ಸಂದುಬಿಡುತ್ತವೆ. ತುಳುನಾಡಿನಲ್ಲಿ ಆಷಾಢ ತಿಂಗಳ ಅನಿಷ್ಟವನ್ನು ಕಳೆಯಲು ಮನೆ ಮನೆಗೆ 'ಆಟಿ ಕಳೆಂಜ' ಬರುತ್ತಾನೆ. ಆತ ಅನಿಷ್ಟವನ್ನು ಕಡಲತ್ತ ಕೊಂಡೊಯ್ಯುತ್ತಾನೆ.

ಕೃಷಿಕ ಸಮುದಾಯದ ಈ ಶಿಷ್ಟವು ಉದ್ಯೋಗಸ್ಥ ಸಮುದಾಯದ ಶಿಷ್ಟ ಅಲ್ಲ. ಹಳ್ಳಿಯಲ್ಲಿ ವಾಸಿಸುತ್ತಿರುವ ತನ್ನ ತಂದೆ-ತಾಯಿಯವರಿಗೆ ಮೇಲಿನ 'ಸುಗ್ಗಿ-ಆಷಾಢ'ಗಳ ತರ್ಕ ಅನ್ವಯವಾಗುತ್ತದೆ. ಆದರೆ ಪ್ರತಿ ತಿಂಗಳೂ ಸಂಬಳ ಪಡೆಯುವ ನನಗೆ ಅನ್ವಯ ಆಗುವುದಿಲ್ಲ. ನನ್ನ ಜೀವನ ಶಿಷ್ಟದಲ್ಲಿ ಸುಗ್ಗಿ ಸಮೃದ್ಧತೆಯನ್ನು ಸಂಕೇತಿಸುವುದೂ ಇಲ್ಲ, ಆಷಾಢ ಬರಡೂ ಅಲ್ಲ ಅಥವಾ ಇದನ್ನು ಸ್ವಲ್ಪ ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಯಾವ ತಿಂಗಳಿನಲ್ಲಿ ನನಗೆ ಸಂಬಳ ನೀಡುವುದಿಲ್ಲವೋ ಆ ತಿಂಗಳು ನನ್ನ ಮಟ್ಟಿಗೆ

ಆಷಾಢ. ಯಾವ ತಿಂಗಳಿನಲ್ಲಿ ನನಗೆ ಬೇರೆ ಬೇರೆ ಕಾರಣಗಳಿಂದ ಹೆಚ್ಚು ಹಣ ದೊರಕಿತೋ ಆ ತಿಂಗಳು ನನಗೆ 'ಸುಗ್ಗಿ'. ಸಂಸ್ಕೃತಿಯ ಸಂದರ್ಭದಲ್ಲಿ ಉತ್ಪಾದನಾ ವಿಧಾನಗಳನ್ನು ಅನುಸರಿಸಿಕೊಂಡು ನಿರ್ಗುಣವಾದ ಕಾಲವನ್ನು 'ಸಗುಣ'ವನ್ನಾಗಿ ಮಾರ್ಪಡಿಸಲಾಗುತ್ತಿದೆ. ಏರುತಗ್ಗುಗಳೇ ಇಲ್ಲದೆ, ನಿಯಮಿತವಾದ ಸಂಬಳ ಪಡೆಯುವ ಮಂದಿಗೆ 'ಕಾಲ' ವೈವಿಧ್ಯ ಪೂರ್ಣ ಅಲ್ಲ, ಬದಲು'ಸಮರೂಪಿ'.

ಸಂಸ್ಕೃತಿಯ ಶಿಷ್ಟವು ಕಾಲಕ್ಕೆ ಬದ್ಧವಾದಂತೆ ಸ್ಥಳಕ್ಕೆ ಬದ್ಧವೂ ಹೌದು. ಹಿಂದೂಗಳ ಪವಿತ್ರ'ಸ್ಥಳ' ಮುಸ್ಲಿಮರಿಗೆ ಪವಿತ್ರ ಅಲ್ಲ. ಕ್ರಿಶ್ಚಿಯನ್ನರ ಚರ್ಚುಗಳ ಆವರಣ ಹಿಂದೂಗಳಿಗೆ ಯಾವ ಅರ್ಥವನ್ನೂ ನೀಡುವುದಿಲ್ಲ. ಸತ್ತವರನ್ನು ಹೂಳುವ ಸ್ಥಳಗಳಲ್ಲಿ ಕ್ರಿಶ್ಚಿಯನರು ಉದ್ಯಾನಗಳನ್ನು ಬೆಳೆಸುತ್ತಾರೆ. ಮುಸ್ಲಿಮರು ತಾಜಮಹಲಿನಂಥ ಸುಂದರ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಹಿಂದೂಗಳು ಭೂತ-ಪ್ರೇತಗಳ ಭಯದಲ್ಲಿ ಶ್ಮಶಾನದತ್ತ ತಲೆ ಕೂಡ ಹಾಕಿ ಮಲಗುವುದಿಲ್ಲ. 'ಕರ್ನಾಟಕ ಮಾತೆ' ತಮಿಳರಲ್ಲಿ ಭಾವೋತ್ಕಟತೆಯನ್ನು ಉಂಟುಮಾಡದು. ಇಂಥ ಸ್ಥೂಲ ವಿವರಗಳು ನಿಜವಾಗಿರುವಂತೆ, ಸಂಸ್ಕೃತಿಯ ಸೂಕ್ಷ್ಮ ಸ್ತರದಲ್ಲೂ ಸ್ಥಳಬದ್ಧತೆ ಕಂಡುಬರುತ್ತದೆ. ಮನೆಯ ಎದುರಿನ ಅಂಗಳವು ಮನೆಯ ಜನಗಳ ಒಡೆತನಕ್ಕೆ ಸಂಬಂಧಿಸಿದರೆ, ಮದುವೆಯ ದಿನ ಅಂಗಳವು ಸಾರ್ವಜನಿಕ ಪ್ರದೇಶವಾಗುತ್ತದೆ. ಅಂಥ ಜಾಗದಲ್ಲಿ ಕಂಬಗಳ ಮೂಲಕ ಪ್ರತ್ಯೇಕವಾದ 'ಧಾರಾಮಂಟಪ'ವು ಮದುವೆಯ ದೃಷ್ಟಿಯಿಂದ ಪವಿತ್ರ ಸ್ಥಳವಾಗುತ್ತದೆ. ಮದುವೆಯಾದ ನಂತರ ಅದು ಅಂಗಳದ ಭಾಗವೇ ಆಗಿಬಿಡುತ್ತದೆ. ಇಲ್ಲಿ ಸ್ಥಳವು ತಾತ್ಕಾಲಿಕವಾಗಿ ಬೇರ್ಪಟ್ಟು ಅಗತ್ಯವಾದ ಕಾರ್ಯವನ್ನು ನೆರವೇರಿಸುತ್ತದೆ. ಸ್ಥಳಕ್ಕೆ ಸಂಬಂಧಿಸಿದಂತೆ ಸಂಸ್ಕೃತಿಯು ನಿಯತವಾದ ಒಂದು ನಿಲುವನ್ನು ಸದಾ ಹೊಂದಿರುತ್ತದೆ. ಇಲ್ಲಿ ಸ್ಥಳವನ್ನೇ ಒಂದು ಪರಿಕಲ್ಪನೆಯಾಗಿ ಪರಿಭಾವಿಸಿ, ಏಕ ಘಟಕ ರೂಪದಲ್ಲಿ ಅಸ್ತಿತ್ವವನ್ನು ಪ್ರದರ್ಶಿಸಲಾಗುವುದು.

ಕಾಲ ಮತ್ತು ಸ್ಥಳವು ವ್ಯಕ್ತಿ ಅಥವಾ ಸಮುದಾಯದ ಆಶೋತ್ತರಗಳಿಗೆ ಅನುಗುಣವಾಗಿಯೇ ಮೈ ಪಡೆಯುವ ಹಾಗೆ, ಸಮುದಾಯದ ಆಶೋತ್ತರಗಳೂ, ಕಾಲ ಮತ್ತು ಸ್ಥಳದಿಂದ ಪ್ರೇರಣೆ ಪಡೆಯುತ್ತವೆ. 'ಗಡ್ಡ' ಒಂದು ಸಂಸ್ಕೃತಿಯನ್ನು, ಒಂದು ನಿರ್ದಿಷ್ಟ ಸ್ಥಳದ, ನಿರ್ದಿಷ್ಟ ಕಾಲದ ನೆಲೆಗಳಲ್ಲಿ ಪ್ರತಿನಿಧಿಸಬಹುದು. ಹಾಗೆಯೇ ಜುಟ್ಟು ಕೂಡಾ. ಇದೇ ರೀತಿ ವ್ಯಕ್ತಿಯ ಮುಂಡಾಸು, ಕಾಲ್ಗಡಗ, ಕಿವಿಯ ಆಭರಣಗಳು, ಸೀರೆಯ ಸೆರಗು, ಮುಸುಕು ಇತ್ಯಾದಿಗಳ ಸಂಸ್ಕೃತಿಯ ಮೂರ್ತರೂಪಗಳಾಗಬಹುದು.

ಒಟ್ಟಿನಿಂದ ಕಾಲ, ಸ್ಥಳ ಮತ್ತು ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಂಬಂಧಿಸಿದಂತೆ ಸಂಸ್ಕೃತಿಯು ಮೈಪಡೆಯುತ್ತದೆ.

ಜಗತ್ತಿನಲ್ಲಿ ಇಂಥ ಹಲವು ನೂರು ಸಂಸ್ಕೃತಿಗಳಿವೆ. ಕರ್ನಾಟಕದಲ್ಲಿಯೂ ಇಂಥ ಹಲವು ಸಂಸ್ಕೃತಿಗಳಿವೆ. ಇಲ್ಲಿ 'ಕನ್ನಡ ಸಂಸ್ಕೃತಿ' ಎಂಬ ಏಕರೂಪೀ ರಚನೆ ಅಸ್ತಿತ್ವದಲ್ಲಿ

ಇಲ್ಲ. ಬದಲು ಕನ್ನಡ ಸಂಸ್ಕೃತಿಗಳು ಎನ್ನಬಹುದಾದ ಬಹುರೂಪೀ ರಚನೆಗಳಿವೆ. ನಮ್ಮದು ತುಂಬ ಖಚಿತವಾದ 'ಬಹುಸಂಸ್ಕೃತಿಗಳ'ನಾಡು.

ಇದುವರೆಗಿನ ಚರ್ಚೆಯಿಂದ ಈ ಕೆಳಗಿನ ಅಂಶಗಳು ನಿಷ್ಪನ್ನವಾಗುತ್ತವೆ.

1. ಸಂಸ್ಕೃತಿಯೊಂದಕ್ಕೆ ಪ್ರತ್ಯೇಕ ಅಸ್ತಿತ್ವವಿರುತ್ತದೆ. ಅಂಥ ಅಸ್ತಿತ್ವಕ್ಕೆ ಕಾರಣಗಳು ಹಲವಿರುತ್ತವೆ.
2. ಪ್ರತ್ಯೇಕ ಅಸ್ತಿತ್ವವಿರುವುದರಿಂದಲೇ ಅದು ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿರುತ್ತದೆ.
3. ಈ ಭಿನ್ನತೆಯು ಸಂಸ್ಕೃತಿಯೊಂದರ ವಿಶಿಷ್ಟಾಂಶಗಳ ಪ್ರಕಟಣೆಯಲ್ಲಿ ಎದ್ದು ಕಾಣುತ್ತದೆ.

ಇದನ್ನೇ ನಾವು 'ಸಾಂಸ್ಕೃತಿಕ ಅನನ್ಯತೆ' (cultural Identity) ಎಂದು ಕರೆಯುವುದು. ಅಂಬಳಿಕೆ ಹಿರಿಯಣ್ಣನವರು ಸರಿಯಾಗಿ ವಿವರಿಸುವಂತೆ "ಯಾವುದೇ ಒಂದು ಸಂಸ್ಕೃತಿಗೆ ಪ್ರತ್ಯೇಕ ಅಸ್ತಿತ್ವವಿದ್ದು, ಅದು ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿ, ತನ್ನದೇ ಆದ ವಿಶಿಷ್ಟಾಂಶಗಳನ್ನು ಪ್ರಕಟಪಡಿಸಿದರೆ, ಅದನ್ನು 'ಆಯಾ ಸಂಸ್ಕೃತಿಯ ಅನನ್ಯತೆ' ಎಂದು ಕರೆಯಬಹುದು. ತಮ್ಮನ್ನು ತಾವು ಗುರುತಿಸಿಕೊಳ್ಳುವ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆಯೇ 'ಸಾಂಸ್ಕೃತಿಕ ಅನನ್ಯತೆ'. ವಾಸ್ತವಿಕತೆಯನ್ನು ಮೀರುವ ತನ್ನನ್ನು ತಾನು ಕಂಡುಕೊಳ್ಳುವ ನಿಜದ ನೆಲೆಯನ್ನು ಹುಡುಕುವ ಪ್ರಯತ್ನವೇ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದ ಪ್ರಧಾನ ಗುರಿ. ಆದರೆ ಆ ಅನನ್ಯ ಅಂಶಗಳು ಆ ಗೊತ್ತಾದ ಸಮೂಹಕ್ಕೆ ಮಾತ್ರ ವಿಶಿಷ್ಟವಾಗಿರುತ್ತವೆ " (1992:2).

'ಒಂದು ನಿರ್ದಿಷ್ಟ ಸಂಸ್ಕೃತಿಯು ಅನನ್ಯವಾಗಿರಬೇಕಾದರೆ, ಅದಕ್ಕೆ ಕನಿಷ್ಠ ಮೂರು ಗುಣಗಳು ಬೇಕಾಗುತ್ತವೆ ' ಎಂದು ಉಲ್ಲಾ ಬ್ರೂಕ್ ಅವರು ಸ್ವೀಡಿಷ್ ಅಕಾಡೆಮಿಯನ್ನು ಉಲ್ಲೇಖಿಸಿ ಹೇಳುತ್ತಾರೆ. ಅವುಗಳೆಂದರೆ-

1. ಆ ಸಂಸ್ಕೃತಿಯಲ್ಲಿ ಸಮಾನ ಅನ್ನಬಹುದಾದ ಕೆಲವು ವಸ್ತು, ವ್ಯಕ್ತಿ ಅಥವಾ ಪರಿಕಲ್ಪನೆಗಳು ಬೇಕಾಗುತ್ತವೆ. ಇದನ್ನು ಸಾಮ್ಯ (Similarity) ಎಂದು ಕರೆಯಲಾಗಿದೆ.
2. ಬೇರೆ ಬೇರೆ ಕಾಲ ಮತ್ತು ಸಂದರ್ಭಗಳಲ್ಲಿ ನಿರಂತರವಾಗಿ ಉಳಿದು ಬಂದಿರುವ ಕೆಲವು ಅಂಶಗಳು ಇರಬೇಕಾಗುತ್ತವೆ. ಇದನ್ನು 'ನಿರಂತರತೆ' (Continuity) ಎಂದು ಕರೆಯಲಾಗಿದೆ.

3. ವ್ಯಕ್ತಿಯ ಅಥವಾ ಸಮುದಾಯದ ನಡವಳಿಯನ್ನು ನ್ಯಾಯ ಸಮ್ಮತಗೊಳಿಸಿಕೊಳ್ಳುವ ಬಗೆ ಇರಬೇಕಾಗುತ್ತದೆ. ಇದನ್ನು 'ನ್ಯಾಯ ಸಮ್ಮತ ಬಗೆ' (Legitimising Aspect) ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಜಾತಿ, ಒಂದು ಭಾಷೆಯನ್ನಾಡುವ ಜನವರ್ಗ, ಒಂದು ಪ್ರದೇಶದಲ್ಲಿ ವಾಸಿಸುವ ಜನರ ಗುಂಪು, ಒಂದೇ ನಮೂನೆಯ ಉದ್ಯೋಗವನ್ನು ಮಾಡುವ ಜನಗಳ ಗುಂಪು- ಇವರಿಗೆಲ್ಲ ಸಾಂಸ್ಕೃತಿಕ ಅನನ್ಯತೆ ಇದೆ ಎಂದು ಹೇಳಿದಂತಾಗುತ್ತದೆ. ಸಾಮಾನ್ಯವಾಗಿ ನಾವು 'ಜನಪದ' (FOLK) ಎಂದು ಯಾವುದನ್ನು ಗುರುತಿಸುತ್ತೇವೆಯೋ ಅದು ಸಾಂಸ್ಕೃತಿಕವಾಗಿಯೂ ಅನನ್ಯವಾಗಿರುವ ಸಾಧ್ಯತೆಗಳಿವೆ.

II. ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದ ಸಮಸ್ಯೆಗಳು

ಭಾರತದಂಥ ಬಹುಸಂಖ್ಯೆಯ ಜನರಿರುವ ಮತ್ತು ವಿಸ್ತಾರವಾದ ನಾಡಿನಲ್ಲಿ ಅನೇಕ ಸಂಸ್ಕೃತಿಗಳಿವೆ. ಈ ದೇಶದ ದೀರ್ಘ ಇತಿಹಾಸವೂ ನಾಡಿನ ಸಂಸ್ಕೃತಿಯನ್ನು ಉಜ್ವಲಗೊಳಿಸಿದೆ. ಆಧುನಿಕ ರಾಜಕಾರಣ ಮತ್ತು ಮಾರುಕಟ್ಟೆಯ ಜಾಲವು ನಾಡಿಗೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಅನ್ನಬಹುದಾದ ಕೆಲವು ಗುಣಗಳನ್ನು ತಂದಿತ್ತಿದೆ. ಕೇಸರಿ, ಬಿಳಿ, ಹಸುರು ಬಣ್ಣಗಳ ಧ್ವಜವು ಭಾರತವನ್ನು ಸಂಕೇತಿಸುತ್ತದೆ ಮತ್ತು ಅದಕ್ಕೆ ಅತಂರ ರಾಷ್ಟ್ರೀಯ ಮಟ್ಟದ ಅರ್ಥಗ್ರಹಿಕೆಯೂ ಇದೆ. ನಮ್ಮಲ್ಲಿ ರೂಪುಗೊಂಡ ಭಾಷಾವಾರು ವಿಂಗಡನೆಯ ರಾಜ್ಯ ಕಲ್ಪನೆಯೂ ಭಾಷೆಯ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಿರಗೊಳಿಸುವ ಪ್ರಯತ್ನದ ಒಂದು ಭಾಗವೇ ಆಗಿದೆ. ಇಂಥ ಪ್ರಾದೇಶಿಕ ಸಂಸ್ಕೃತಿಯನ್ನು ಸರಿಸಿ ಒಳಬಂದರೆ ಸ್ಥಳೀಯ ಸಂಸ್ಕೃತಿಗಳಿವೆ. ಕರ್ನಾಟಕದ ಒಳಗೇ ಉತ್ತರ ಕರ್ನಾಟಕ, ದಕ್ಷಿಣಕರ್ನಾಟಕ, ಕರಾವಳಿ ಕರ್ನಾಟಕ ಎಂಬ ಪ್ರಾದೇಶಿಕ ರೂಪಗಳಿರುವುದು ಸ್ಪಷ್ಟ. ಸ್ಥಳೀಯ ಸಂಸ್ಕೃತಿಯ ತೆಕ್ಕೆಯಲ್ಲಿ ಮತ್ತೆ ಸ್ಥಳೀಯ ಸಮುದಾಯಗಳ ಭಿನ್ನ ಸಾಂಸ್ಕೃತಿಕ ನೆಲೆಗಳಿವೆ. ಆಯಾ ಸಮುದಾಯದ ಒಳಗಡೆಗೆ ಶ್ರೀಮಂತ-ಬಡವ ವ್ಯತ್ಯಾಸವಂತೂ ಇದ್ದೇ ಇರುತ್ತದೆ.

ಇಲ್ಲಿರುವ ಸಮಸ್ಯೆಯೂ ಅತ್ಯಂತ ಗಂಭೀರವಾದ ಪರಿಗಣನೆಗೆ ಅರ್ಹವಾದುದು. ಈ ಸಂಸ್ಕೃತಿಗಳು ಒಂದರ ತೆಕ್ಕೆಯಲ್ಲಿ ಇನ್ನೊಂದು ಇದ್ದಂತೆ ತೋರಿದರೂ, ವಾಸ್ತವವಾಗಿ ಅವು ಹಾಗಿರದೆ, ಸದಾ ಸಂಘರ್ಷದಲ್ಲಿ ಪರ್ಯಾಪ್ತವಾಗಿರುತ್ತವೆ. ಭಾವನಾತ್ಮಕವಾಗಿ ನೋಡಿದಾಗ ಅಂಥ ಸಂಘರ್ಷದ ನೆಲೆಗಳು ಗೋಚರವಾಗದೇ ಹೋಗಬಹುದು. ಆದರೆ ಸಾಂಸ್ಕೃತಿಕ ನೆಲೆಗಳಲ್ಲಿ ಮಾತ್ರ ಅದು ಎದ್ದುತೋರುತ್ತದೆ. ಸುಳ್ಯದ ತುಳು ಮಂಗಳೂರಿನ ತುಳುವಿನೊಂದಿಗೆ ಸಂಘರ್ಷಿಸುತ್ತಿದ್ದರೆ, ಇಡೀ ತುಳುನಾಡು ಕನ್ನಡದೊಂದಿಗೆ ಸಂಘರ್ಷಸುತ್ತಿರುತ್ತದೆ ಮತ್ತು ಕರ್ನಾಟಕವು ಭಾರತದೊಂದಿಗೆ ಸಂಘರ್ಷಿಸುತ್ತಿರುತ್ತದೆ. ಇಲ್ಲಿ ಯಾರು ಗೆಲ್ಲುತ್ತಾರೆ, ಯಾರು

ಸೋಲುತ್ತಾರೆ ಎಂಬುದು ಶಕ್ತ ರಾಜಕಾರಣವನ್ನು ಅವಲಂಬಿಸಿಕೊಂಡಿರುತ್ತದೆ. ಪ್ರತಿಯೊಂದು ಸೋಲು ಕೂಡಾ ಸಂಸ್ಕೃತಿಯೊಂದರ ಅನನ್ಯತೆಯನ್ನು ನಾಶಮಾಡುವುದರಿಂದಾಗಿ ಈ ವಿಷಯದಲ್ಲಿ ನಾವು ಹೆಚ್ಚು ಗಂಭೀರರಾಗಬೇಕಾದ ಅವಶ್ಯಕತೆಯಿದೆ. ಈಗ ರಾಷ್ಟ್ರದ ಆಯ್ಕೆಯನ್ನು ತನ್ನಾಯ್ಕೆಯೆಂದು ಪ್ರಚಾರ ಮಾಡಲಾಗುತ್ತಿದೆ. ಆದರೆ ಆಗಬೇಕಾದ್ದು ಇದಕ್ಕೆ ವಿರುದ್ಧವಾಗಿ - ನನ್ನ ಆಯ್ಕೆ ರಾಷ್ಟ್ರದ ಆಯ್ಕೆಯಾಗಬೇಕು. ಇದು ಸಂಸ್ಕೃತಿ ಕೇಳುವ ಪ್ರಶ್ನೆ ಮಾತ್ರವಲ್ಲ ಸಂಸ್ಕೃತಿಯ ಅನನ್ಯತೆ ಉಳಿಯುವ ಪ್ರಶ್ನೆ ಕೂಡಾ ಹೌದು.

ಇದು ಒಂದು ಸಮಸ್ಯೆಯಾದರೆ, ಸಂಸ್ಕೃತಿಯ ಬಗೆಗಿನ ನಿರ್ವಚನೆ ಎರಡನೇ ಸಮಸ್ಯೆಯಾಗಿದೆ. ಭಾರತದಲ್ಲಿರುವ ಅನೇಕ ಸಂಸ್ಕೃತಿಗಳನ್ನು ಶ್ರೇಣೀಕರಣಕ್ಕೆ-ಒಳಪಡಿಸಲಾಗಿದೆ. ಶ್ರೇಣೀಕರಣವು ಒಂದು ಬಗೆಯ ಮೌಲ್ಯೀಕರಣವನ್ನು ಹೇಳುತ್ತದೆ. ಇದರಲ್ಲಿ ಶ್ರೇಣೀಕರಣದ ಮೇಲ್ತುದಿಯಲ್ಲಿರುವ 'ವೈದಿಕ ಸಂಸ್ಕೃತಿ'ಯನ್ನು ಅತ್ಯಂತ ಶ್ರೇಷ್ಠವಾದದ್ದು ಎಂದು ಭಾವಿಸಿ ಅದನ್ನು ಪೂರ್ತಿಯಾಗಿ 'ಶುದ್ಧ' (Pure) ಎಂದು ಪರಿಗಣಿಸಲಾಗಿದೆ. ಶ್ರೇಣೀಕರಣದ ಕೆಳತುದಿಯಲ್ಲಿ 'ದಲಿತ ಸಂಸ್ಕೃತಿ'ಇದ್ದು ಅದನ್ನು ಪೂರ್ತಿಯಾಗಿ 'ಮೈಲಿಗೆ' (Impure) ಎಂದು ಪರಿಗಣಿಸಿ, ಊರಿನಿಂದ ಹೊರಗಿಡಲಾಗಿದೆ. ಚಾರಿತ್ರಿಕವಾದ ಈ ಬೆಳವಣಿಗೆ ವರ್ತಮಾನದಲ್ಲೂ ಮುಂದುವರೆದುಕೊಂಡು ಬಂದಿದೆ ಮಾತ್ರವಲ್ಲ ಆಧುನಿಕ ಸಮಾಜದಲ್ಲಿ ಬಗೆ ಬಗೆಯಾಗಿ ಪುನರ್-ಸೃಷ್ಟಿ ಹೊಂದಿದೆ. ಇಂಥ ಸಂದರ್ಭದಲ್ಲಿ ವೈದಿಕ ಸಂಸ್ಕೃತಿಗೆ ರಾಜಾಶ್ರಯ ದೊರೆತು, ಅಕ್ಷರ ಸಂಸ್ಕೃತಿಯಲ್ಲಿ ಅದು ದಾಖಲಾಯಿತು. ಲಿಖಿತ ದಾಖಲೆಗಳ ಮೂಲಕ ಚರಿತ್ರೆಯನ್ನು ಬರೆದವರಿಗೆ ಸಂಸ್ಕೃತಿಯ ಮೇಲ್ತುದಿಯ ಜನರ ಆಕರಗಳೇ ಆಧಾರವಾಯಿತು. ಪರಿಣಾಮ ಸ್ಪಷ್ಟವೇ ಇದೆ. ಇಡೀ ಚರಿತ್ರೆ ಪಾರ್ಶ್ವಿಕವಾಯಿತು, ಆಂಶಿಕವಾಯಿತು. 'ಭಾರತೀಯ ಸಂಸ್ಕೃತಿ' ಎಂದರೆ ವೈದಿಕ ಸಂಸ್ಕೃತಿ ಎಂಬ ಧೋರಣೆ ಬಲಿಯಿತು. ಶತಮಾನಗಳಿಂದ ಕಾಣಿಸಿಕೊಂಡ ಈ ಸಂಕುಚಿತ ಧೋರಣೆಯೇ ಇಂದಿನ ಮಂದಿರ - ಮಸೀದಿ ವಿವಾದವನ್ನು ಹುಟ್ಟುಹಾಕಿದೆ. ಆರ್. ಎಸ್. ಎಸ್ ಮತ್ತು ವಿಶ್ವಹಿಂದೂ ಪರಿಷತ್ತು ಪ್ರತಿಪಾದಿಸುತ್ತಿರುವ ಸಂಸ್ಕೃತಿಯೂ ಇಂಥ ಸಂಕುಚಿತ ಧೋರಣೆಯಿಂದ ಕೂಡಿದೆ. ಇಂಥಲ್ಲಿ ಸಂಸ್ಕೃತಿಯ ನೇತಾರರಾಗಿ ಕಾವಿ ಬಟ್ಟೆ ಧರಿಸಿದ, ಜುಟ್ಟು ಬಿಟ್ಟ, ಗಡ್ಡಧಾರಿಗಳು ಕಾಣಿಸಿಕೊಳ್ಳುತ್ತಾರೆ.

ಆದರೆ ಇದಕ್ಕಿಂತ ಹೊರತಾದ ಸಾಂಸ್ಕೃತಿಕ ನಿಲುವುಗಳಿರುವ 'ಜನ ಸಂಸ್ಕೃತಿ' ನಮ್ಮ ಮಧ್ಯೆಯೇ ಇದೆ. ಅವರು ಶ್ರೇಣೀಕರಣದ ಕೆಳತುದಿಯಲ್ಲಿದ್ದಾರಾದರೂ ಸಾಂಸ್ಕೃತಿಕವಾಗಿ ಕೆಳಗಿನವರಲ್ಲ. ಈ ಸಂಸ್ಕೃತಿಗಳನ್ನು 'ಬ್ರಾಹ್ಮಣ ಕೇಂದ್ರಿತ' ನೆಲೆಯಿಂದ ನೋಡದೆ, ಆಯಾ ಸಂಸ್ಕೃತಿಯ ಒಳಗಿನ ತರ್ಕದಿಂದಲೇ ನೋಡಬೇಕು. ವೈದಿಕರು ವಸು-ರುದ್ರ-ಆದಿತ್ಯರನ್ನು ಪಿತೃಗಳೆಂದು ಕರೆದರೆ ಈ ಜನರು '16 ಕಾರಣವರ್'ಗಳನ್ನು ಪಿತೃಗಳೆಂದು ಹೇಳುತ್ತಾರೆ. ಅಲ್ಲಿ ರಾಮಾಯಣ-ಮಹಾಭಾರತಗಳಿದ್ದರೆ ಇಲ್ಲಿ ಜನಪದ ಮಹಾಕಾವ್ಯಗಳಿರುತ್ತವೆ.

ಅಲ್ಲಿ ಸುಖಾಂತವಿದ್ದರೆ - ಇಲ್ಲಿ ದುಃಖಾಂತವಿರುತ್ತದೆ. ಇದುವರೆಗೆ ನಾವು ಸಂಸ್ಕೃತಿಯೆಂದು ಏನನ್ನು ಗುರುತಿಸಿದ್ದೇವೆಯೋ ಅದಕ್ಕಿಂತ ಭಿನ್ನವಾದ ಮತ್ತು ಅದಕ್ಕಿಂತ ಮುಖ್ಯವಾದ ಸಾಂಸ್ಕೃತಿಕ ಪರಿಕಲ್ಪನೆಗಳು ಜನರ ಮಧ್ಯೆ ಇದೆ. ಆದರೆ ಅದನ್ನು ಸೂಕ್ತವಾಗಿ ಇನ್ನು ಅನಾವರಣ ಮಾಡಿಲ್ಲ. ಅನಾವರಣ ಮಾಡಲು ಪ್ರಯತ್ನಿಸಿದ ಕೆಲವರು ಸಂಸ್ಕೃತಿಯ ಹೊರಗಿನ ತರ್ಕಗಳನ್ನು ಅನ್ವಯಿಸಿ ನೋಡುವ ವಿಧಾನವನ್ನು ಅನುಸರಿಸಿದ್ದರಿಂದ ನಿರೀಕ್ಷಿತ ಫಲ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಹೊಸ ವಿಧಾನಗಳ ಮೂಲಕ ನಾವು ವೈದಿಕೇತರ ಸಂಸ್ಕೃತಿಗಳ ಅನನ್ಯತೆಯನ್ನು ಅಧ್ಯಯನ ಮಾಡಬೇಕಾಗಿದೆ.

ಮೂರನೇ ಸಮಸ್ಯೆಯು 'ಅನನ್ಯತೆ'ಯನ್ನು ಪತ್ತೆ ಮಾಡುವುದಕ್ಕೆ ಸಂಬಂಧಿಸಿದೆ. ರಾಷ್ಟ್ರ, ರಾಜ್ಯ, ಪ್ರದೇಶ, ಸ್ಥಳ, ಜಾತಿ, ವರ್ಗಕ್ಕೆ ಸಂಬಂಧಿಸಿದಂತೆ ಅನನ್ಯತೆಯ ವಿವರಗಳನ್ನು ಕಲೆ ಹಾಕುವುದು ಸುಲಭ. ಆದರೆ ಈ ಬಗೆಯ ಹುಡುಕಾಟಗಳು ತುಂಬ ಸ್ಥೂಲವಾಗಿದ್ದು ಬಹಳ ಬಾರಿ ರಾಜಕೀಯವೇ ಆಗಿದೆ. ರಾಷ್ಟ್ರ- ರಾಜ್ಯದ ಕಲ್ಪನೆಗಳಂತೂ ಪೂರ್ಣ ರಾಜಕೀಯವೇ ಆಗಿದೆ. ಇಂಥಲ್ಲಿ ರಾಜಕೀಯ ನೋಟಗಳಿಂದ ಸಂಸ್ಕೃತಿಯನ್ನು ವಿವರಿಸಲಾಗುತ್ತದೆ. ಸಮಕಾಲೀನ ಒತ್ತಡಗಳೂ ಹಾಗೆ ಮಾಡಲು ನಮ್ಮನ್ನು ಪ್ರೇರೇಪಿಸುತ್ತವೆ. ಇದನ್ನು ಅಲ್ಲಗಳೆದು ಸಾಂಸ್ಕೃತಿಕ ತರ್ಕಗಳ ಮೂಲಕವೇ ಜನ ಸಂಸ್ಕೃತಿಯನ್ನು ವಿವೇಚಿಸುವ, ಆ ಮೂಲಕ ಅದಕ್ಕೆ ರಾಜಕೀಯ ಶಕ್ತಿಯನ್ನು ತಂದುಕೊಡುವ ಅಧ್ಯಯನ ಕ್ರಮ ನಮಗೀಗ ಬೇಕಾಗಿದೆ. ಒಂದು ಪುಟ್ಟ ಉದಾಹರಣೆಯನ್ನು ಇಲ್ಲಿ ನೀಡಬಹುದು.

ಭಾರತದಲ್ಲಿ ಅನೇಕ ಜಾತಿಗಳಿವೆ. ಆ ಜಾತಿಗಳ ಒಳಗೆ ಮತ್ತೆ ಗೋತ್ರ ವ್ಯವಸ್ಥೆ ಅಥವಾ ಬಳಿ ವ್ಯವಸ್ಥೆ ಇದೆ. ಜಾತಿಗಳು ಶ್ರೇಣೀಕರಣಕ್ಕೆ ಒಳಗಾದ ಹಾಗೆ ಈ 'ಬಳಿ'ಗಳೂ ಶ್ರೇಣೀಕರಣಕ್ಕೆ ಒಳಗಾಗಿರುವುದರಿಂದ ಜಾತಿಯನ್ನು 'ಒಂದು' ಎಂದು ಪರಿಗಣಿಸಲಾಗುವುದಿಲ್ಲ. 'ಬ್ರಾಹ್ಮಣರು' ಉಚ್ಚ ಜಾತಿಯವರು ಹೌದು. ಆದರೆ ಬ್ರಾಹ್ಮಣರಲ್ಲಿರುವ 'ಗೋತ್ರ ವ್ಯವಸ್ಥೆ'ಯ ಶ್ರೇಣೀಕರಣದಲ್ಲಿ ಎಲ್ಲರೂ ಉಚ್ಚರಲ್ಲ. ಕೆಲವು ಗೋತ್ರದವರಂತೂ ಬ್ರಾಹ್ಮಣರಲ್ಲಿಯೇ 'ದಲಿತರು'. 'ಮದುವೆ'ಯ ಸಂದರ್ಭದಲ್ಲಿ ಈ 'ಬಿಕ್ಕಟ್ಟು'ಗಳು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತವೆ. ಸುಳ್ಯ ಪರಿಸರದ ಗೌಡ ಜನಾಂಗದಲ್ಲಿ 18 ಬಳಿಗಳಿವೆ ಎಂಬ ಪ್ರತೀತಿ ಇದ್ದು, ಅದರಲ್ಲಿ ಈಗ 12 ಬಳಿಗಳು ಅಸ್ತಿತ್ವದಲ್ಲಿವೆ. ಇದರಲ್ಲಿ ನಂದರ ಬಳಿಯನ್ನು ಅತ್ಯಂತ ಶ್ರೇಷ್ಠ ಬಳಿ ಎಂದು ಹೇಳಲಾಗಿದೆ. ಇದಾದ ಅನಂತರ ಬಂಗಾರ, ಅದರ ಅನಂತರ ಹೆಮ್ಮನ, ಅನಂತರ ಮೂಲರ 12 ಬಳಿಗಳಲ್ಲಿ ಮೇಲಿನ ನಾಲ್ಕು ಬಳಿಗಳು ಪ್ರಧಾನವಾಗಿದ್ದು ಉಳಿದವು ಅಪ್ರಧಾನವಾಗಿವೆ. ಗುಂಡನ ಬಳಿಯನ್ನು ಅತ್ಯಂತ ಕನಿಷ್ಠ ಎಂದು ಹೇಳಲಾಗಿದೆ. ಇದನ್ನು ಬೇರೆ ರೀತಿಯಲ್ಲಿ ಹೇಳಬೇಕೆಂದರೆ-ಗೌಡರಲ್ಲಿ ನಂದರ ಬಳಿಯವರು 'ಬ್ರಾಹ್ಮಣರು' ಮತ್ತು ಗುಂಡನ ಬಳಿಯವರು 'ದಲಿತರು'. ಮದುವೆಯಲ್ಲಿ ಹೆಣ್ಣು ತರುವ ಮತ್ತು ಹೆಣ್ಣು ಕೊಡುವ ಸಂದರ್ಭದಲ್ಲಿ ಇದು ಬಹಳ ಸ್ಪಷ್ಟವಾಗುತ್ತದೆ. ಹಾಗಾದರೆ ಈ 'ಬಳಿ'ಗಳನ್ನು

ಅನನ್ಯವಾಗಿಸಿದ ಅಂಶಗಳು ಯಾವುವು? ಈ ನಿಟ್ಟಿನಲ್ಲಿ ನಮ್ಮ ಅಧ್ಯಯನಗಳು ಸಾಗಿದ ಮೇಲಷ್ಟೇ ಇದಕ್ಕೆ ಉತ್ತರ ದೊರತೀತು.

ಇಂಥ ಸಮಸ್ಯೆಗಳು ಹಲವಿವೆ. ಮೇಲಿನವು ಕೆಲವು ಉದಾಹರಣೆಗಳು ಮಾತ್ರ. ವಿಷಯದ ಜಟಿಲತೆಯನ್ನು ಮನಗಾಣಿಸಲು ಮುಂದಿಡಲಾಗಿದೆ.

III. ನಮ್ಮ ಮುಂದಿರುವ ಸವಾಲುಗಳು

ಬ್ರಿಟಿಷ ಪೂರ್ವ ಭಾರತದಲ್ಲಿ ಸಂಸ್ಕೃತಿಗೆ ವ್ಯಾಖ್ಯೆ ಬರೆದವರು ವೈದಿಕರು. ಬ್ರಿಟಿಷರು ಈ ದೇಶವನ್ನು ಆಳತೊಡಗಿದ ಮೇಲೆ ಆ ಕೆಲಸವನ್ನು ಬ್ರಿಟಿಷರೇ ಮಾಡತೊಡಗಿದರು. "ಬಂಡವಾಳಶಾಹೀ ಇಂಗ್ಲಂಡಿನ ವಸಾಹತು ದೇಶವಾಗಿ ವಸಾಹತೀಕರಣದ ಕ್ರಿಯೆ ಪ್ರಕ್ರಿಯೆಗಳಿಗೆ ಭಾರತ ಒಳಗಾಯಿತು. ವಸಾಹತು ದೇಶದ ಆರ್ಥಿಕತೆ ಸಂಪೂರ್ಣವಾಗಿ ಮೂಲ ದೇಶಕ್ಕೆ ಸೋರಿ ಹೋಗುತ್ತಿದ್ದುದರಿಂದ ಬ್ರಿಟನ್‌ನೊಂದಿಗೆ ಬಹುಪಾಲು ವಿರೋಧಾತ್ಮಕ, ಭಿನ್ನ ಮತ್ತು ಅಸದೃಶ ಪರಿಣಾಮಗಳನ್ನು ಮತ್ತು ಸಂಬಂಧವನ್ನು ಇಲ್ಲಿ ನಾವು ಕಾಣಬಹುದು. (ಶಿವರಾಮ ಪಡಿಕ್ಕಲ್ 1987:41) ಬ್ರಿಟಿಷ್ ಪ್ರಭುತ್ವವು ಭಾರತದ ಹಳೆಯ ರಚನೆಗಳ ಮುಂದೆ ಹೊಸ ಸವಾಲನ್ನು ಇರಿಸಿತು. 19 ನೆಯ ಶತಮಾನದಲ್ಲಿ ಭಾರತೀಯ ಸಂಸ್ಕೃತಿಯ ಬಗೆಗೆ ಮಾತಾಡಿದ ಮತ್ತು ಬರೆದ ಬುದ್ಧಿಜೀವಿಗಳಲ್ಲಿ ಈ ಸ್ಥಿತ್ಯಂತರದ ಪರಿಣಾಮಗಳನ್ನು ನಾವು ಕಾಣಬಹುದು.

ಈ ಪರಿಣಾಮದ ಮೊದಲ ಹಂತದಲ್ಲಿ ಬ್ರಿಟಿಷರ ಸಜ್ಜನಿಕತೆಯ ಮತ್ತು ಮಾನವತಾವಾದಿ ನಿಲುವುಗಳಿಂದ ಭಾರತೀಯ ವಿದ್ಯಾವಂತರು ಮೋಸಗೊಂಡರು. ರವೀಂದ್ರನಾಥ ಠಾಗೋರ್ ಬರೆಯುತ್ತಾರೆ-" Though the west came to our shores as cunning tradesmen, it brought with it also the voice and a literature which claimed justice for all humanity." (ಉದ್ಧೃತ-ಶಿವರಾಮ ಪಡಿಕ್ಕಲ್ 1987:44). ಪಶ್ಚಿಮವನ್ನು ಕುರಿತು ಈ ಬಗೆಯ ಅಭಿಪ್ರಾಯಗಳು ವಸಾಹತು ಶಾಹೀ ಆಡಳಿತದ ಮೊದಲ ಘಟ್ಟದಲ್ಲಿ ಸಹಜವಾದುದು. ಇಂಗ್ಲಿಷ್ ವಿದ್ಯಾಭ್ಯಾಸವು ತಮಗೆ ಮತ್ತು ಇತರರಿಗೆ ಅಗತ್ಯವಾದ ಮೌಲ್ಯ ಸರಣಿಯನ್ನು ನೀಡುತ್ತದೆ ಎಂದು ಈ ಉದೀಯಮಾನ ವಿದ್ಯಾವಂತರು ಭಾವಿಸಿದರು. ಇಂಥ ನಿಲುವುಗಳು ಭಾರತದಲ್ಲಿ ಮೊದಲೇ ಇದ್ದಿದ್ದ ಪರಂಪರೆಗಳೊಡನೆ ಸಂಘರ್ಷಿಸಬೇಕಾದ್ದು ಚಾರಿತ್ರಿಕ ಅನಿವಾರ್ಯ. ಈ ಸಂಘರ್ಷದಲ್ಲಿ ದೇಸಿ ಸಂಸ್ಕೃತಿ ಸೋತು ಪಾಶ್ಚಾತ್ಯ ಸಂಸ್ಕೃತಿ ಮೇಲುಗೈ ಸಾಧಿಸುವುದೂ ಸಾಮಾನ್ಯ ಸಂಗತಿ. ಅಂದರೆ ಇದರ ಅರ್ಥ ಇಷ್ಟೆ: ಆ ಕಾಲದ ವಿದ್ಯಾವಂತರು ದೇಸೀ ಸಂಸ್ಕೃತಿಯನ್ನೇ ಪಾಶ್ಚಿಮಾತ್ಯ ವಿಚಾರಧಾರೆಯ ಮೂಲಕ ನೋಡಿದರು. ರಾಜಾರಾಮ್‌ಮೋಹನ್‌ರಾಯ್, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಮೊದಲಾದ

ಧೀಮಂತರ ನೆಲೆಗಳು ಇವೇ ಆಗಿವೆ. ಲಾಲಾ ಲಜಪತರಾಯರು"ಇಂಥಹ ಅಧ್ಯಯನಗಳು ಭಾರತೀಯರನ್ನು ಪಾಶ್ಚಾತ್ಯೀಕರಣಕ್ಕೆ ಒಳಗು ಮಾಡುವುದಿಲ್ಲ, ಬದಲಾಗಿ ಇಂತಹ ವಿದ್ಯಾವಂತರು ಆಧುನಿಕ ಭಾರತೀಯರಾಗುತ್ತಾರೆ" ಎಂದು ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಈ ಜನಗಳು ಪೂರ್ತಿಯಾಗಿ ಪಾಶ್ಚಾತ್ಯೀಕರಣಕ್ಕೆ ಒಳಗಾಗಲು ರಾಷ್ಟ್ರೀಯತೆ ಅಡ್ಡ ಬಂತು. ಭಾರತದ ರಾಷ್ಟ್ರೀಯತೆಯ ಬಗೆಗೆ ಮಾತಾಡುತ್ತಲೇ ಇವರು ಪಾಶ್ಚಿಮಾತ್ಯ ಸಂಸ್ಕೃತಿಯಿಂದ ದೂರ ಸರಿಯಬೇಕಾಯಿತು, ಮತ್ತು ಪಾಶ್ಚಿಮಾತ್ಯ ವೈಚಾರಿಕತೆಯ ಪ್ರೇರಣೆ ಪಡೆದದ್ದರಿಂದ ದೇಸೀ ಜೀವನ ಕ್ರಮದಿಂದಲೂ ಬೇರ್ಪಡಬೇಕಾಯಿತು. ಶಿವರಾಮ್ ಪಡಿಕ್ಕಲ್ ಬರೆಯುತ್ತಾರೆ: "ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ ನಡುವೆ 19 ನೆಯ ಶತಮಾನದ ಇಂಗ್ಲಿಷ್ ವಿದ್ಯಾವಂತ ವರ್ಗ ತ್ರಿಶಂಕುವಾಗಿ ಉದ್ಭವಿಸಿತು ಮತ್ತು ತ್ರಿಶಂಕು ಸ್ಥಿತಿಯನ್ನು ಅನುಭವಿಸಿತು. ಈ ವರ್ಗ 'ಪರಕೀಯ' ಆಯಿತು. ಅಂದರೆ ತನ್ನ ಕೀಳರಿಮೆಯ ಕಾರಣದಿಂದ ಪಾಶ್ಚಿಮಾತ್ಯ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳಲಾರದ, ವ್ಯಕ್ತಿ ವಿಶಿಷ್ಟ ಪಾಶ್ಚಿಮಾತ್ಯ ತಾತ್ವಿಕತೆಯನ್ನು ಒಪ್ಪಿಕೊಂಡುದರಿಂದ ದೇಸೀಯ ಸಂಸ್ಕೃತಿಯೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಲಾರದ ಸ್ಥಿತಿಯಿಂದಾಗಿ ಭಾರತೀಯ ಧೀಮಂತ ವರ್ಗ ತನ್ನ ಸಾಮಾಜಿಕ ಅನನ್ಯತೆಗಾಗಿ ತಡಕಾಡಬೇಕಾಗಿ ಬಂತು." (1987:48) ಬ್ರಹ್ಮ ಸಮಾಜ, ಆರ್ಯ ಸಮಾಜ ಮತ್ತು ಥಿಯೋಸಾಫಿಕಲ್ ಸೊಸೈಟಿಯ ಕೆಲಸಗಳು ಈ ಬಗೆಯ ತಡಕಾಟದ ಪರಿಣಾಮಗಳಾಗಿವೆ.

ಆದರೆ ಈ ಸಂಸ್ಥೆಗಳು ಪಶ್ಚಿಮದ ವೈಚಾರಿಕ ನೆಲೆಯಿಂದ ವ್ಯಾಖ್ಯಾನಿಸಲು ಆಯ್ದುಕೊಂಡದ್ದು ಮತ್ತೆ ವೇದೋಪನಿಷತ್ತುಗಳನ್ನೇ ಹೊರತು ಜನಸಂಸ್ಕೃತಿಯನ್ನಲ್ಲ. ಇದರಿಂದ ಹಿಂದೂ ಪುನರುತ್ಥಾನವೇ ಸಾಧಿತವಾಯಿತು. ಅಂದರೆ ಬ್ರಿಟಿಷ್‌ಪೂರ್ವದ ಸಂಸ್ಕೃತಿ ವ್ಯಾಖ್ಯೆಗಳು ಬ್ರಿಟಿಷರ ಕಾಲದಲ್ಲಿ ಹೊಸ ರೆಕ್ಕೆ - ಪುಕ್ಕಗಳೊಂದಿಗೆ ಪ್ರತ್ಯಕ್ಷವಾಯಿತು. ಆಶ್ಚರ್ಯವೆಂದರೆ ಹಿಂದೂ ಪುನರುತ್ಥಾನವನ್ನು ಬ್ರಿಟಿಷರು ಬೆಂಬಲಿಸಿದ್ದು, ವೆಲ್ಲೆಸ್ಲಿಯು ಬಂಗಾಳದ ವೈವಿಧ್ಯಮಯ ಜನಪದ ಪರಂಪರೆಗಳನ್ನು ಕೈಬಿಟ್ಟು ಬ್ರಿಟಿಷ ಸಾಮ್ರಾಜ್ಯಶಾಹಿಗೆ ಅನುಕೂಲಕರವಾದ, ಬ್ರಾಹ್ಮಣರ ಹಳೆಯ ಗ್ರಂಥಗಳ ಬಗ್ಗೆ, ವೇದಾಂತಗಳ ಬಗ್ಗೆ ಒತ್ತು ನೀಡಿದ. ವೇದಾಂತದ ನಿಲುವುಗಳು - ಭಾರತದಲ್ಲಿ ಒಂದು ಬಗೆಯ ಏಕರೂಪತೆಯನ್ನು ತರಲು ಮಾಡುತ್ತಿದ್ದ ಬ್ರಿಟಿಷರ ಪ್ರಯತ್ನಗಳಿಗೆ ಪೂರಕವಾಗಿತ್ತು. ಅಧಿಕಾರ ರಾಜಕಾರಣದೊಂದಿಗೆ ಬೆಳೆದು ಬಂದಿದ್ದ ಬ್ರಾಹ್ಮಣ ಸಮುದಾಯ ಬ್ರಿಟಿಷ್ ಸಾಮ್ರಾಜ್ಯಶಾಹಿಯ ದೂರಗಾಮಿ ಧೋರಣೆಯನ್ನು ಅರ್ಥಮಾಡಿ ಕೊಳ್ಳದೆ, ಪಾಶ್ಚಿಮಾತ್ಯ ವೈಚಾರಿಕತೆಯ ಫಲಗಳನ್ನು ತಿಂದು-ತೇಗುವುದರತ್ತಲೇ ತನ್ನ ಗಮನ ಹರಿಸಿತು. ಆದರಲ್ಲಿ ಸಾಕಷ್ಟು ಯಶಸ್ಸು ಗಳಿಸಿತು. ಕೂಡಾ.

19 ನೆಯ ಶತಮಾನದ ಕೊನೆಯ ಭಾಗ ಮತ್ತು 20 ನೆಯ ಶತಮಾನದ ಮೊದಲ ಭಾಗದಲ್ಲಿ ಕಾಣಿಸಿಕೊಂಡ ಈ ಹಿಂದೂ ಪುನರುತ್ಥಾನವು 1925 ರಷ್ಟರ ಹೊತ್ತಿಗೆ ಆರ್. ಎಸ್.ಎಸ್. ರೂಪವನ್ನು ಪಡೆದುಕೊಂಡಿತು. ಮತ್ತು ಸಂಸ್ಕೃತಿಯ ಗುತ್ತಿಗೆ ಹಿಡಿದವರಂತೆ ಮಾತಾಡುತ್ತಾ, ಮತ್ತೆ ಬ್ರಿಟಿಷರ ಹಾಗೆ ಭಾರತೀಯ ಸಂಸ್ಕೃತಿಗೆ ಏಕರೂಪ ಕೊಡುವ ಕೆಲಸವನ್ನು ಮಾಡಲು ಆರಂಭಿಸಿತು. ತೋರಿಕೆಗೆ ರಾಜಕೀಯವಲ್ಲದ, ಆದರೆ ತನ್ನ ಸಂಸ್ಕೃತಿ ಚಿಂತನೆಗಳಲ್ಲಿ ಶಕ್ತ ರಾಜಕಾರಣದ ಎಲ್ಲ ಲಕ್ಷಣಗಳನ್ನು ತೋರಿಸುವ ಆರ್. ಎಸ್. ಎಸ್. ಮಧ್ಯಮವರ್ಗದ ಬ್ರಾಹ್ಮಣರ ಸಂಘಟನೆಯಾಗಿ ಬೆಳೆದು, ಈಗ ಅನೇಕ ಮರಿಗಳನ್ನು ಇಕ್ಕಿದೆ. ಅಖಿಲಭಾರತೀಯ ವಿದ್ಯಾರ್ಥಿ ಪರಿಷತ್ತು, ಭಾರತೀಯ ಮಜದೂರ ಸಂಘ, ರಾಷ್ಟ್ರ ಸೇವಿಕಾ ಸಮಿತಿ, ಶಿಶು ಶಿಕ್ಷಾ ಸಮಿತಿ, ಮಾತೃಮಂಡಳಿ, ಇತಿಹಾಸ ಮತ್ತು ಸಂಸ್ಕೃತಿ ಪರಿಷದ್- ಅಂಥ ಕೆಲವು ಹೆಸರುಗಳು. ಅವನ್ನು ಕೇಳಿದಾಗಲೇ ಅವುಗಳ ಸಾಂಸ್ಕೃತಿಕ ಅನನ್ಯತೆಯ ಬಗೆಗೆ ಒಂದು ರೀತಿಯ ಅರಿವು ಮೂಡುತ್ತದೆ. 'ಹಿಂದೂ ರಾಷ್ಟ್ರದ ಸರ್ವತೋಮುಖ ವೈಭವವನ್ನು ಜೀವಂತಗೊಳಿಸುವುದೇ ನಮ್ಮ ಗುರಿ' ಎಂದು ಗೋಳವಲಕರ ಹೇಳಿದ್ದಾರೆ (1966:33). ಅಯೋಧ್ಯೆಯ ಪ್ರಕರಣದಲ್ಲಿ ಇವರು ನಿರ್ಣಾಯಕ ಸ್ಥಾನ ನಿರ್ವಹಿಸಿದ್ದಾರೆ.

ಇವರ ಒಟ್ಟು ವಾದ ಭಾರತೀಯ ಸಂಸ್ಕೃತಿಯ ಒಂದು ಪುಟ್ಟ ಭಾಗವನ್ನು, ಇಡೀ ರಾಷ್ಟ್ರಕ್ಕೆ ಅನ್ವಯಿಸುವುದಕ್ಕೆ ಸೀಮಿತವಾಗಿದೆ. ಚರಿತ್ರೆಯಲ್ಲಿ ಅಂಥ ಕೆಲಸಗಳ ಅಗತ್ಯ ಇವರಿಗೆ ಬದ್ದಿರಲಿಲ್ಲ. ಏಕೆಂದರೆ, ರಾಜಾಶ್ರಯದಲ್ಲಿ ಅದು ಅವರಿಗೆ ಸುಲಭವಾಗಿ ದಕ್ಕಿ ಬಿಡುತ್ತಿತ್ತು. ಆದರೆ ಈ ಶತಮಾನದ ಮಧ್ಯಭಾಗದಿಂದ ಕೆಳಜಾತಿಯ ಸುಧಾರಣಾ ವಾದಿಗಳು ಬ್ರಾಹ್ಮಣ್ಯವನ್ನು ಪ್ರಶ್ನಿಸಲು ಆರಂಭಿಸಿದರು. ಕೆಳಜಾತಿಯ ಜನರು ವಿದ್ಯಾವಂತರಾಗುತ್ತಾ ಬರುತ್ತಿದ್ದಂತೆ ಇವರಿಗೆ ಸಮಾಜದ ಮೇಲಿನ ಹಿಡಿತ ಕಡಿಮೆಯಾಯಿತು. ಬದಲಾಗುತ್ತಿರುವ ಐತಿಹಾಸಿಕ ಸನ್ನಿವೇಶವನ್ನು ಅವರು ಇದಿರಿಸಲೇಬೇಕಾಯಿತು. ಅದಕ್ಕಾಗಿ ಮಂದಿರಮಸೀದಿ ಸಮಸ್ಯೆಯನ್ನು ಎತ್ತಿಕೊಳ್ಳಲಾಯಿತು. ಅದನ್ನು ರಾಷ್ಟ್ರವ್ಯಾಪಿ ಮಾಡಲಾಯಿತು. ಆ ಮೂಲಕ ಹಿಂದೂ ಪುನರುತ್ಥಾನವಾದಿಗಳು ತಮ್ಮ ನೆಲೆಯನ್ನು ಗಮನಾರ್ಹವಾಗಿ ವಿಸ್ತರಿಸಿಕೊಂಡರು. ಅಯೋಧ್ಯೆ ಪ್ರಕರಣ ಹಿಂದೂಗಳಿಗೆ ನಿಜವಾದ 'ಸಮಸ್ಯೆ' ಅಲ್ಲ, ಅವರ ಉದ್ದೇಶ ತಮ್ಮ ರಾಜ್ಯವನ್ನು ಸ್ಥಾಪಿಸಿಕೊಳ್ಳುವುದು.

'ಸಂಸ್ಕೃತಿಯ ಅನನ್ಯತೆ' ಹೀಗೆ ಸಾಂಸ್ಕೃತಿಕ ಆಕ್ರಮಣ ಆಗಿಬಿಟ್ಟಿದೆ. ಈ ನಾಡಿನಲ್ಲಿ ನಿಜವಾಗಲೂ ಅನೇಕ ಸಂಸ್ಕೃತಿಗಳು ಇಂಥ ಆಕ್ರಮಣಕ್ಕೆ ಒಳಗಾಗಿವೆ. ತಮ್ಮದಲ್ಲದ ಸಂಸ್ಕೃತಿಯತ್ತ ವಾಲಿಕೊಳ್ಳುವ ಮೂಲಕ ಅನೇಕ ಸಂಸ್ಕೃತಿಗಳು ತಮ್ಮ ಸೃಜನಶೀಲತೆಯನ್ನು ಕಳಕೊಂಡುಬಿಡುತ್ತಿವೆ. ದಲಿತರ ಸಂಸ್ಕೃತಿಯಂತೂ ತನ್ನದಲ್ಲದ ಸಂಸ್ಕೃತಿಯತ್ತ ದಾಪುಗಾಲು ಹಾಕುತ್ತಾ ಹೊರಟಿದೆ. ಇದು ಸವರ್ಣೀಯರ ನೆಲೆ ತಲುಪುವಷ್ಟರಲ್ಲಿ ಸವರ್ಣೀಯರು ಇನ್ನಷ್ಟೋ ಮುಂದೆ ಸಾಗಿರುತ್ತಾರೆ. ಪರಿಣಾಮ

ತಮ್ಮದೂ ಇಲ್ಲ-ಇತರರದ್ದೂ ಇಲ್ಲದಂಥ ಸ್ಥಿತಿ. ಇಂಥದ್ದನ್ನು 'ಅನನ್ಯತೆಯ ವೈಫಲ್ಯ'ಎಂದು ಕರೆಯಬಹುದು.

ಈಗ ನಮ್ಮ ಮುಂದಿರುವ ಸವಾಲುಗಳು ಸ್ಪಷ್ಟ. ಜಾನಪದದ ಮೂಲಕ ನಮ್ಮ ಜನರ ಸಾಂಸ್ಕೃತಿಕ ಅನನ್ಯತೆಯನ್ನು ನಾವು ಪರಿಶೀಲಿಸಿಕೊಳ್ಳಬೇಕು. ಅದರ ವೈವಿಧ್ಯತೆಯ ಮೂಲಕ ಏಕರೂಪಿ ಆಕ್ರಮಣವನ್ನು ತಡೆಯಬೇಕು ಮತ್ತು ಸಂಸ್ಕೃತಿಯ ಸೃಜನಶೀಲ ಸಾಮರ್ಥ್ಯ ನಾಶವಾಗದಂತೆ ಎಚ್ಚರ ವಹಿಸಬೇಕು. ರಾಷ್ಟ್ರ ಸಂಸ್ಕೃತಿಯನ್ನು ಜನ ಸಂಸ್ಕೃತಿಯ ಮೇಲೆ ಹೇರಿ ಅಧಿಕಾರ ಸ್ಥಾಪಿಸಬಯಸುವ ಶಕ್ತ ರಾಜಕಾರಣವನ್ನು ತಿರಸ್ಕರಿಸಿ. ಜನಸಂಸ್ಕೃತಿಯ ಮೂಲಕ ರಾಷ್ಟ್ರ ಕಲ್ಪನೆಯನ್ನು ಮಾಡಿಕೊಳ್ಳಲು ಪ್ರಚೋದನೆ ನೀಡಬೇಕಾಗಿದೆ. ಜಾನಪದವು ಅಧಿಕಾರ ರಾಜಕಾರಣದ ವಿವಿಧ ರೂಪಗಳಲ್ಲಿ ಜೀರ್ಣವಾಗಕೂಡದು.

ಗ್ರಂಥ ಋಣ

1. ವಿವೇಕ ರೈ 1985, ಅನ್ವಯಿಕ ಜಾನಪದ, ಮಂಗಳ ಗಂಗೋತ್ರಿ.
2. ಶಿವರಾಮ ಭಟ್ ಪಡಿಕ್ಕಲ್ 1987. ಕನ್ನಡ ಕಾದಂಬರಿಯ ಮೊದಲ ಘಟ್ಟ, ಮಂಗಳೂರು ವಿ.ವಿ.ನಿ.ಕ್ಕೆ ಒಪ್ಪಿಸಿದ ಪಿಎಚ್. ಡಿ. ಮಹಾಪ್ರಬಂಧ ಅಪ್ರಕಟಿತ. ಮಂಗಳೂರು ವಿಶ್ವವಿದ್ಯಾಲಯ: ಕನ್ನಡ ವಿಭಾಗ.
3. ಹಿರಿಯಣ್ಣ ಅಂಬಳಿಕೆ. 1992, ಸೈದ್ಧಾಂತಿಕ ಜಾನಪದ; ಮೈಸೂರು. ಪ್ರಜ್ವಲ ಪ್ರಕಾಶನ.
4. BRUCK ULLA 1988, Identity, Local Community and Local Identity (In Tradition and Cultural Identity (Ed) Lauri Honko) Turku: Nordic Institute of Folklore.
5. HONKU LAURI 1988, Studies on Tradition and Cultural identity- An introduction (In Tradition and Culttural Identity (ed) Lauri Honko) Turku Nordic Institute of Folklore

* * * * *

ಕರ್ನಾಟಕ ಸಂಸ್ಕೃತಿಯ ಮೇಲೆ ಹೊಸಬೆಳಕು

- ಡಾ: ಎ. ವಿ. ನರಸಿಂಹಮೂರ್ತಿ

- ಡಾ: ಡಿ. ವಿ. ದೇವರಾಜ್

ಕರ್ನಾಟಕದಲ್ಲಿ ಹತ್ತಾರು ಪುರಾತತ್ವ ಉತ್ಖನನಗಳು ನಡೆದಿದ್ದರೂ ಕೂಡ, ಅವುಗಳು ವಿಶೇಷವಾಗಿ ಇತಿಹಾಸಪೂರ್ವ ಕಾಲ ಮತ್ತು ಇತಿಹಾಸ ಆರಂಭ ಕಾಲದ ಮಾನವನ ಜನಜೀವನದ ಬಗೆಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಅಂದರೆ ಶಾತವಾಹನರ ಕಾಲದ ಅನಂತರದ ಇತಿಹಾಸದ ವಿಷಯದಲ್ಲಿ ಆಸಕ್ತಿ ಹೊಂದಿರುವವರಿಗೆ ಪುರಾತತ್ವ ಆಕರಗಳು ಏನು ಮಾಹಿತಿಯನ್ನೂ ಒದಗಿಸುವುದಿಲ್ಲ. ಏಕೆಂದರೆ, ಈ ಕಾಲದ, ಅಂದರೆ ಬನವಾಸಿ, ಕದಂಬ, ತಲಕಾಡಿನ ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಮುಂತಾದ ರಾಜ ಮನೆತನಗಳ ನೆಲೆಗಳಲ್ಲಿ ಪುರಾತತ್ವ ಉತ್ಖನನಗಳು ನಡೆದೇ ಇಲ್ಲ. ಈ ಕಾಲದ ಇತಿಹಾಸವನ್ನು ರಚಿಸುವಲ್ಲಿ ಶಾಸನಗಳ ಪಾತ್ರವೇ ಅತಿ ಮುಖ್ಯವಾದುದು. ಆದರೆ ಶಾಸನಗಳು ಸಾಮಾನ್ಯ ಜನಗಳ ಜೀವನದ ಬಗೆಗೆ ಹೆಚ್ಚಿನ ಮಾಹಿತಿಯನ್ನು ನೀಡುವುದಿಲ್ಲ. ಮನೆಗಳು, ಕಟ್ಟಡಗಳು, ಪಾತ್ರೆಗಳು, ಮಡಿಕೆಗಳು ಮುಂತಾದ ವಿಷಯವನ್ನು ತಿಳಿಯಲು ಉತ್ಖನನಗಳು ನಡೆಯಲೇಬೇಕು. ಕರ್ನಾಟಕದ ನೆಲೆಗಳಲ್ಲಿ ಇದು ನಡೆಯದೇ ಇರುವುದರಿಂದ, ಐತಿಹಾಸಿಕ ಪುರಾತತ್ವ ಇಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಇದನ್ನು ಮನಗಂಡು ಗಂಗರ ರಾಜಧಾನಿಯಾದ ತಲಕಾಡಿನಲ್ಲಿ ಉತ್ಖನನ ನಡೆಸಲು ತೀರ್ಮಾನಿಸಲಾಯಿತು.[1] ಈ ಉತ್ಖನನದ ಮುಖ್ಯ ಉದ್ದೇಶ, ತಲಕಾಡಿನ ಗಂಗರ ಕಾಲದ ಜನಜೀವನ, ಮನೆ, ಅರಮನೆ, ಪಾತ್ರೆಗಳು, ಮಡಕೆಗಳು, ಆಯುಧಗಳು ಮುಂತಾದ ವಿಷಯಗಳಲ್ಲಿ ನಿರ್ದಿಷ್ಟವಾದ ಮಾಹಿತಿಯನ್ನು ಪಡೆಯುವುದೇ ಆಗಿದ್ದಿತು.[2] ಈ ದಿಶೆಯಲ್ಲಿ 1993 ರ ಫೆಬ್ರವರಿಯಿಂದ ಆಗಸ್ಟ್ ಕೊನೆಯವರೆಗೆ ನಡೆದ ಈ ಉತ್ಖನನ ನಿರೀಕ್ಷೆಗೂ ಮೀರಿ ಫಲವನ್ನು ಕೊಟ್ಟಿತು ಎನ್ನುವುದು ಅತ್ಯಂತ ಸಮಾಧಾನದ ಸಂಗತಿ. ಇದರಿಂದ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಏನು ಹೊಸಬೆಳಕು ಬಿದ್ದಿದೆ ಎನ್ನುವುದನ್ನು ಗಮನಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ತಲಕಾಡಿನ ಪ್ರಾಚೀನತೆ

ಕ್ರಿ. ಶ. ನಾಲ್ಕನೆಯ ಶತಮಾನದ ಮೊದಲ ದಶಕದಲ್ಲಿ ಗಂಗರಾಜರು ತಲಕಾಡಿನಲ್ಲಿ ಆಳುತ್ತಿದ್ದರು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಇದಕ್ಕೆ ತಳವನಪುರ ಎಂಬ ಹೆಸರೂ ಇದ್ದಿತು. ಅದಕ್ಕೆ ಮುಂಚೆ ತಲಕಾಡಿನಲ್ಲಿ ಮಾನವ ವಸತಿ ಇದ್ದಿತೆ? ಅಥವಾ ಗಂಗರೇ ಇಲ್ಲಿ ಮೊಟ್ಟಮೊದಲಿಗೆ ನಾಗರಿಕತೆಯನ್ನು ಸ್ಥಾಪಿಸಿದರೇ ಎನ್ನುವ ಪ್ರಶ್ನೆಗಳಿಗೆ

ಉತ್ತರವನ್ನು ಹುಡುಕುವುದು ಉತ್ಖನನದ ಉದ್ದೇಶಗಳಲ್ಲಿ ಒಂದಾಗಿದ್ದಿತು. ಹೊಯ್ಸಳ ವಿಷ್ಣುವರ್ಧನನಿಂದ ಕ್ರಿ. ಶ. 1117 ರಲ್ಲಿ ನಿರ್ಮಾಣಗೊಂಡ ಕೀರ್ತಿನಾರಾಯಣ ದೇವಾಲಯದ ಹಿಂಭಾಗದಲ್ಲಿ ಒಂದು ಗುಳಿಯನ್ನು ಅಗೆಯಲಾಯಿತು. ಈ ಗುಳಿಯಲ್ಲಿ ಶಾತವಾಹನರ ಕಾಲದ ರಸೆಟ್ ಕೋಟೆಡ್ ಕಯೊಲಿನ್ ಮಡಿಕೆ ಚೂರುಗಳು ಹೇರಳವಾಗಿ ದೊರಕಿದವು. ಈ ರೀತಿಯ ಮಡಿಕೆಗಳು ಚಂದ್ರವಳ್ಳಿ, ಮಾಸ್ಕಿ, ಬನವಾಸಿ, ವಡಗಾಂವ್ ಮುಂತಾದ ನೆಲೆಗಳಲ್ಲಿ ದೊರಕಿದ್ದು, ಅವುಗಳು ಇತಿಹಾಸ ಆರಂಭಕಾಲದ ಸಂಸ್ಕೃತಿಗೆ ಸೇರಿದ್ದುದೆಂದು ತಿಳಿದುಬಂದಿದೆ.[3] ಇದರ ಕಾಲಮಾನ ಸುಮಾರು ಕ್ರಿ. ಶ. ಒಂದನೆಯ ಶತಮಾನದಿಂದ ಮೂರನೆಯ ಶತಮಾನ. ಈ ಮಡಿಕೆಗಳ ಮೇಲೆ ಬಿಳಿ ಬಣ್ಣದ ವಿವಿಧ ಚಿತ್ರಗಳಿವೆ ; ಈ ಚಿತ್ರಗಳು ವಿಶೇಷವಾಗಿ ಜ್ಯಾಮಿತಿಯ ಚಿಹ್ನೆಗಳು ಮತ್ತು ಸರಳರೇಖೆಗಳು, ಚುಕ್ಕೆಗಳು ಮತ್ತು ಇವುಗಳ ವಿವಿಧ ವಿನ್ಯಾಸಗಳನ್ನು ಒಳಗೊಂಡಿವೆ. ವಿಶೇಷವಾಗಿ ಕೆಂಪು ಮತ್ತು ಕಪ್ಪು ಮಡಕೆಗಳು ಈ ಸಂಸ್ಕೃತಿಯಲ್ಲಿ ಜಾಸ್ತಿಯಾಗಿ ಕಾಣಬರುತ್ತವೆ. ನುಣ್ಣನೆಯ ಉತ್ತಮವಾದ ಜೇಡಿಮಣ್ಣಿನಿಂದ ತಯಾರಾದ ಈ ಮಡಿಕೆಗಳಲ್ಲಿ ತಾಂತ್ರಿಕ ಶ್ರೇಷ್ಠತೆ ಎದ್ದು ಕಾಣಬರುತ್ತದೆ. ಕಂಚಿನ ಶಬ್ಧ ಬರುವ ತೆಳ್ಳನೆಯ ಮಡಕೆಗಳು, ಇಲ್ಲಿ ಕಾಣಬರುತ್ತವೆ. ಇವು ಅಗಲವಾದ ಬೊಗುಣಿಗಳು, ಚಟ್ಟಿಗಳು, ಎತ್ತರದ ಮಡಕೆಗಳು, ಊಟದ ತಟ್ಟೆಗಳು, ಚಿಕ್ಕ ಚಿಕ್ಕ ಪ್ರಮಾಣದ ಕೆಳಗೆ ಕಿರಿದಾದ ಮೇಲೆ ಅಗಲವಾದ ಪಾತ್ರೆಗಳು ಮುಂತಾದ ರೂಪಗಳಲ್ಲಿ ದೊರಕಿವೆ. ಮುಖನಾಳಗಳುಳ್ಳ ಮಡಕೆಗಳು ಈ ಕಾಲದ ವಿಶೇಷ. ಹತ್ತಾರು ಮುಖನಾಳಗಳು ಬಿಡಿಯಾಗಿಯೂ ದೊರಕಿವೆ. ಈ ಕಾಲದ ವೈಶಿಷ್ಟ್ಯಗಳಲ್ಲಿ ವಿವಿಧ ರೂಪದ ಮಣಿಗಳನ್ನು ಹೆಸರಿಸಬೇಕು. ಅಗೇಟ್, ಚಾಲ್ಸಡನಿ, ಕಾರ್ನೀಲಿಯನ್ ಮುಂತಾದ ಪ್ರಶಸ್ತ ಶಿಲೆಗಳಿಂದ ಮಾಡಿದ ಮಣಿಗಳು ನೂರಾರು ದೊರಕಿವೆ. ಇವುಗಳ ಜೊತೆಗೆ ದಂತದಿಂದ ಮಾಡಿದ ಬಳೆಗಳೂ ದೊರಕಿವೆ. ಈ ಎಲ್ಲ ಅವಶೇಷಗಳೂ ಶಾತವಾಹನ ಕಾಲದ ಅವಶೇಷಗಳಾಗಿದ್ದು, ತಲಕಾಡಿನಲ್ಲಿ ಈ ಇತಿಹಾಸ ಆರಂಭದಲ್ಲಿ ಸಂಸ್ಕೃತಿಯು ಸುವ್ಯವಸ್ಥಿತವಾಗಿ ನೆಲಸಿದ್ದಿತೆಂದು ಖಚಿತಪಡುತ್ತದೆ. ಇದರ ಕಾಲ ಕ್ರಿ. ಶ. ಒಂದನೆಯ ಶತಮಾನದಿಂದ ಮೂರನೆಯ ಶತಮಾನ. ಆದುದರಿಂದ ಗಂಗರು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವುದಕ್ಕಿಂತ ಮುಂಚೆಯೇ, ಇಲ್ಲಿ ಇತಿಹಾಸ ಆರಂಭ ಕಾಲದ ಸಂಸ್ಕೃತಿಯಿದ್ದಿತೆಂದು ಈ ಉತ್ಖನನದಿಂದ ತಿಳಿದುಬರುತ್ತದೆ.

ಇದೇ ಗುಳಿಯಲ್ಲಿ, ಈ ಶಾತವಾಹನ ಕಾಲದ ಸಂಸ್ಕೃತಿಯ ಪದರಗಳ ಕೆಳಗೆ ಬೃಹತ್ ಶಿಲಾ ಸಮಾಧಿ (ಮೆಗಾಲಿತಿಕ್) ಸಂಸ್ಕೃತಿಗೆ ಸೇರಿದ ಕಪ್ಪು-ಕೆಂಪು ಮಡಕೆಯ ಚೂರುಗಳು ಹೇರಳವಾಗಿ ದೊರಕಿವೆ. ಜೊತೆಗೆ ಮನುಷ್ಯರ ಮತ್ತು ಪ್ರಾಣಿಗಳ ಎಲುಬುಗಳೂ ದೊರಕಿವೆ. ಇದೇ ಸಮಯಕ್ಕೆ ಸೇರಬಹುದಾದ ಇತರ ಅವಶೇಷಗಳಾದ ಮಣಿಗಳೂ, ಬಳೆಗಳೂ ದೊರಕಿವೆ. ಆದುದರಿಂದ ಇಲ್ಲಿ ಮೆಗಾಲಿತಿಕ್ ಸಂಸ್ಕೃತಿಯ ಜನಗಳು ವಾಸವಾಗಿದ್ದರೆಂದು ಗೊತ್ತಾಗುತ್ತದೆ. ಇತರ ಪುರಾತತ್ವ ನೆಲೆಗಳ ಆಧಾರದ

ಮೇಲೆ ಹೇಳುವುದಾದರೆ ಇದು ಕೊನೆಯ ಪಕ್ಷ ಕ್ರಿ. ಪೂ. ಐದನೆಯ ಶತಮಾನಕ್ಕೆ ಸೇರಬೇಕಾಗುತ್ತದೆ.

ತಲಕಾಡಿನ ಪ್ರಾಚೀನತೆ ಇಷ್ಟಕ್ಕೇ ನಿಲ್ಲುವುದಿಲ್ಲ. ಅದು ಶಿಲಾಯುಗಕ್ಕೂ ಸೇರುತ್ತದೆ ಎಂಬುವುದು ಗಮನಾರ್ಹ ಅಂಶ. ಕೋಟೆಯ ಗೋಡೆ ಎಂದು ತರ್ಕಿಸಲಾದ ಒಂದು ಗುಳಿಯಲ್ಲಿ ನವಶಿಲಾಯುಗದ ಸಂಸ್ಕೃತಿಗೆ ಸೇರಿದ ಬೂದುಬಣ್ಣದ ಮಡಕೆಯ ಚೂರುಗಳು ಸಿಕ್ಕಿವೆ. ಬ್ರಹ್ಮಗಿರಿ ಮತ್ತು ಟಿ. ನರಸೀಪುರಗಳಲ್ಲಿ ದೊರೆತ ನವಶಿಲಾಯುಗ ಮಡಕೆ ಚೂರುಗಳನ್ನು ವಿಶೇಷವಾಗಿ ಹೋಲುವ, ಈ ಮಡಕೆಯ ಚೂರುಗಳು ಬಲು ಮುಖ್ಯವಾದವು. ಕಲ್ಲಿನ ಆಯುಧಗಳು ದೊರಕಿಲ್ಲವಾದರೂ, ಅವುಗಳು ದೊರಕುವ ಸಾಧ್ಯತೆಯಿದೆ.[3] ಒಟ್ಟಿನಲ್ಲಿ ಕ್ರಿ. ಪೂ. ಒಂದು ಸಾವಿರ ವರ್ಷಕ್ಕೆ ಸೇರಬಹುದಾದ ನವಶಿಲಾಯುಗ ಸಂಸ್ಕೃತಿಯು ತಲಕಾಡಿನಲ್ಲಿದ್ದಿತು ಎಂಬುದು ಗಮನಾರ್ಹವಾದ ಅಂಶ.

ಈ ಸಂಸ್ಕೃತಿಗೂ ಪ್ರಾಚೀನವಾದ ಸೂಕ್ಷ್ಮಶಿಲಾಯುಗದ, ಒಂದು ಅಲಗು ಮತ್ತು ಒಂದು ಕೋರೆ ದೊರಕಿರುವುದು ಕುತೂಹಲಕರವಾದ ವಿಷಯ. ಇವುಗಳ ಸ್ತರವಿನ್ಯಾಸ ಇನ್ನೂ ಸ್ಪಷ್ಟವಾಗಬೇಕಾಗಿದೆ. ಇವು ಹೆಚ್ಚಿನ ಸಂಖ್ಯೆಯಲ್ಲಿ ದೊರೆತರೆ, ತಲಕಾಡಿನ ಪ್ರಾಚೀನತೆಯನ್ನು ಸೂಕ್ಷ್ಮಶಿಲಾಯುಗ (ಮೈಕ್ರೊಲಿತಿಕ್)ಕ್ಕೆ ಕೊಂಡೊಯ್ಯಬಹುದು.

ಇತರ ಒಂದು ಗುಳಿಯಲ್ಲಿ ಸುಮಾರು ಹದಿನೇಳನೆಯ ಶತಮಾನಕ್ಕೆ ಸೇರಬಹುದಾದ ಸ್ತರಗಳಲ್ಲಿ ತಂಬಾಕು ಸೇವನೆಯ ಹುಕ್ಕದ ಚೂರುಗಳು ಹೇರಳವಾಗಿ ದೊರಕಿವೆ. ಅದರ ಕೆಳಭಾಗದಲ್ಲಿ ವಿಜಯನಗರ ಕಾಲದ ಅವಶೇಷಗಳು ದೊರಕಿವೆ. ಅದಕ್ಕೆ ಹಿಂದೆ ಹೊಯ್ಸಳರು ಇಲ್ಲಿ ದೇವಾಲಯವನ್ನು ಕಟ್ಟಿದ ವಿಷಯ ಶಾಸನಗಳಿಂದ ತಿಳಿದು ಬಂದಿದೆ. ಈ ಎಲ್ಲ ಮಾಹಿತಿಗಳನ್ನೂ ಕ್ರೋಡೀಕರಿಸಿದರೆ, ತಲಕಾಡಿನ ಪ್ರಾಚೀನತೆ ಹಾಗೂ ಅದರ ಸಾಂಸ್ಕೃತಿಕ ಇತಿಹಾಸ ಸ್ಪಷ್ಟಪಡುತ್ತದೆ. ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗಗಳು ಮಾನವನು ಮೊಟ್ಟಮೊದಲಿಗೆ ತಲಕಾಡಿನಲ್ಲಿ ಕಾಲಿಟ್ಟು ತನ್ನ ಚಟುವಟಿಕೆಗಳನ್ನು ಆರಂಭಿಸಿದನು. ಇದರ ಕಾಲ ಸುಮಾರು ಕ್ರಿ. ಪೂ. ಒಂದು ಸಾವಿರ ವರ್ಷ. ಇದಾದ ನಂತರ ಮೆಗಾಲಿತಿಕ್ ಸಂಸ್ಕೃತಿಯು ಕ್ರಿ. ಪೂ. ಐದುನೂರರಿಂದ ಕ್ರಿ. ಶ. ಒಂದನೆಯ ಶತಮಾನದವರೆಗೆ ಪ್ರಸರಿಸಿದ್ದಿತು. ಅನಂತರ ಇಲ್ಲಿ ಶಾತವಾಹನ ಸಂಸ್ಕೃತಿಯು ಹರಡಿದ್ದಿತು. ಅದಾದ ಮೇಲೆ ಗಂಗರು ಈ ಸ್ಥಳವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಹನ್ನೊಂದನೆಯ ಶತಮಾನದಲ್ಲಿ ಗಂಗರನ್ನು ಸೋಲಿಸಿ ಚೋಳರು ಇದನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ಸೋಲಿಸಿ 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸಿದನು.[4] ಹೊಯ್ಸಳರ ಪತನಾನಂತರ ಇದು ವಿಜಯನಗರ ಅರಸರ ಸಾಮಂತರ ಕೈ ಸೇರಿತು. ಕೊನೆಗೆ ಇದರ ಆಡಳಿತ ಮೈಸೂರು ಒಡೆಯರ ಕೈಗೆ ಸೇರಿತು. ಈ ರೀತಿ ಕ್ರಿ. ಪೂ. ಒಂದು ಸಾವಿರ ವರ್ಷದಿಂದ ಇಂದಿನವರೆಗೆ ಅವಿಚ್ಛಿನ್ನವಾದ ಸಂಸ್ಕೃತಿಯನ್ನು ಹೊಂದಿದ ತಲಕಾಡಿನ

ಇತಿಹಾಸ ಈ ಉತ್ಖನನದಿಂದ ಸ್ಪಷ್ಟಪಡುತ್ತದೆ. ಅಂದರೆ ಇಂದಿಗೆ ಮೂರು ಸಾವಿರ ವರ್ಷಗಳಿಂದಲೂ ಅವ್ಯಾಹತವಾದ ಜನವಸತಿಯ ನಗರವಾಗಿದ್ದಿತು ಎನ್ನುವುದು ಗಮನಿಸಬೇಕಾದ ವಿಷಯ. ಇಂತಹ ನೆಲೆಗಳು ಅಷ್ಟಾಗಿ ಸಿಗುವುದಿಲ್ಲ. ಇಂತಹ ವಿರಳ ಅವ್ಯಾಹತ ಜನವಸತಿಯ ನೆಲೆಗಳ ಸಾಲಿಗೆ ಈಗ ತಲಕಾಡು ಸೇರ್ಪಡೆಯಾಗುತ್ತದೆ.

ಇತಿಹಾಸ ಆರಂಭ ಕಾಲದ ಕುಲುಮೆ

ಇತಿಹಾಸ ಆರಂಭಕಾಲದ ಅಂದರೆ ಕ್ರಿಸ್ತಶಕದ ಆರಂಭದ ಶತಮಾನಗಳಿಗೆ ಸೇರಿದ ಅನೇಕ ನೆಲೆಗಳು ಕರ್ನಾಟಕದಲ್ಲಿ ದೊರಕಿವೆ. ಅವುಗಳಲ್ಲಿ ಮುಖ್ಯವಾದವು ಚಂದ್ರವಳ್ಳಿ, ಬನವಾಸಿ, ವಡಗಾಂವ್ ಮುಂತಾದವು. ಈ ಎಲ್ಲ ನೆಲೆಗಳಲ್ಲಿ ಆ ಕಾಲದ ಮಡಕೆ-ಕುಡಕೆಗಳು ದೊರಕಿವೆ. ಆದರೆ ತಲಕಾಡಿನಲ್ಲಿ ಆ ಕಾಲದ ಕುಲುಮೆಯು ದೊರಕಿರುವುದು ಬಲು ಮುಖ್ಯವಾದುದು. ಸುಮಾರು ಎಂಟು ಅಂಗುಲ ಅಗಲವಿರುವ ಮಣ್ಣಿನ ಕುಲುಮೆಯ ಪಕ್ಕದಲ್ಲಿ ತಿದಿಯನ್ನು ಅಳವಡಿಸಲು ರಂಧ್ರವಿದೆ. ಇದರ ಸಮೀಪದಲ್ಲಿ ಒಂದು ತಾಮ್ರದ ನಳಿಕೆ ಅಥವಾ ಕೊಳವೆಯು ದೊರಕಿದ್ದು, ಇದು ತಿದಿಯ ಭಾಗವಿರಬೇಕೆಂದು ತಿಳಿಯಬಹುದು. ಕುಲುಮೆಯಲ್ಲಿ ಸಾಕಷ್ಟು ಬೂದಿಯಿದ್ದಿತು. ಅದನ್ನು ಆಟಾಮಿಕ್ ಅಬ್ಸಾರ್ಷನ್ ಪರೀಕ್ಷೆಗೆ ಕಳುಹಿಸಲಾಗಿದೆ. ಅದರ ವಿವರಗಳು ಬಂದರೆ, ಈ ಕುಲುಮೆಯಲ್ಲಿ ಯಾವ ಲೋಹವನ್ನು ಕರಗಿಸುತ್ತಿದ್ದರು ಎಂಬುದು ಖಚಿತವಾಗುತ್ತದೆ. ಕುಲುಮೆಯ ಗಾತ್ರ, ಮೂಸೆಗಳ ಗಾತ್ರ ಮತ್ತು ಇತರ ಸಾಂದರ್ಭಿಕ ಮಾಹಿತಿಗಳನ್ನು ಗಮನಿಸಿದರೆ, ಇದೊಂದು ಚಿನ್ನವನ್ನು ಕರಗಿಸುತ್ತಿದ್ದ ಕುಲುಮೆಯೆಂದು ತರ್ಕಿಸಬಹುದಾಗಿದೆ. ಕರ್ನಾಟಕದಲ್ಲಿ ಈ ರೀತಿಯ ಕುಲುಮೆಯು ದೊರಕಿರುವುದು ತಲಕಾಡಿನಲ್ಲಿ ಮೊಟ್ಟಮೊದಲನೆಯದು ಎಂಬುದು ಗಮನಾರ್ಹ ಅಂಶ. ಇತಿಹಾಸ ಆರಂಭ ಕಾಲದ ತಾಂತ್ರಿಕ ಕಲೆಯ ಬಗೆಗೆ, ಅದರಲ್ಲಿಯೂ ವಿಶೇಷವಾಗಿ ಲೋಹಗಾರಿಕೆಯ ಬಗೆಗೆ ಈ ಉತ್ಖನನ ವಿಶಿಷ್ಟಪೂರ್ಣ ಮಾಹಿತಿಯನ್ನು ಒದಗಿಸುತ್ತದೆ.

ಪ್ರಥಮ ಟಂಕಶಾಲೆ ಹಾಗೂ ರೋಮನ್ ನಾಣ್ಯ ಮುದ್ರೆ

ಈ ಕುಲುಮೆಯ ಪಕ್ಕದಲ್ಲಿ ಸುಟ್ಟ ಮಣ್ಣಿನ ರೋಮನ್ ನಾಣ್ಯದ ಮುದ್ರೆಯೊಂದು ದೊರಕಿರುವುದು ಅತ್ಯಂತ ಮುಖ್ಯವಾದ ಸಂಗತಿ. ಈ ಮುದ್ರೆಯು ಅಗಸ್ಟಸ್ ಮತ್ತು ಟೈಬೀರಿಯಸ್ ರೋಮನ್ ದೊರೆಗಳ ನಾಣ್ಯದ ಹಿಮ್ಮುಖವನ್ನು ತೋರಿಸುತ್ತದೆ. ಇದರಲ್ಲಿ ಒಬ್ಬ ಸ್ತ್ರೀ (ಲಿವಿಯ) ಚಿತ್ರವಿದೆ. ಆಕೆ ಎತ್ತರವಾದ ಆಸನದಲ್ಲಿ ಕುಳಿತ್ತಿದ್ದಾಳೆ ಆಕೆಯ ಬಲಗೈಯಲ್ಲಿ ರಾಜದಂಡವಿದೆ. ಎಡಗೈಯಲ್ಲಿ ಗಿಡದ ಕೊಂಬೆಯಿದೆ. ಚಿತ್ರದ ಬಲಗಡೆ ಮ್ಯಾಕ್ಸಿಂ ಎನ್ನುವ ಹಾಗೂ ಎಡಗಡೆ ಪಾಂಟಿಫ್ ಎನ್ನುವ ರೋಮನ್ ಲಿಪಿಯ ಬರಹವಿದೆ. ವೃತ್ತಾಕಾರದ ಈ ವಿನ್ಯಾಸ, ಈ ದೊರೆಗಳ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳ ಅಳತೆ ಮತ್ತು ಪ್ರಮಾಣಗಳಿಗೆ ಸಮನಾಗಿರುವುದು ಗಮನಾರ್ಹ ಅಂಶ. ಈ ಎಲ್ಲ ಅಂಶಗಳನ್ನೂ ಗಮನಿಸಿ, ಅದರಲ್ಲಿಯೂ ಈ ಮುದ್ರೆಯು ಕುಲುಮೆಯ

ಸಮೀಪದಲ್ಲಿಯೇ ದೊರಕಿರುವುದನ್ನು ಗಮನಿಸಿದಾಗ, ಈ ಕುಲುಮೆಯು ಒಂದು ಟಂಕಶಾಲೆಯ ಭಾಗವಿರಬೇಕೆಂದು ಹೇಳಬೇಕಾಗುತ್ತದೆ. ಅದು ನಿಜವಾದರೆ, ಇದು ಕರ್ನಾಟಕದಲ್ಲಿಯೇ ಮಾತ್ರವಲ್ಲ, ಇಡೀ ಭಾರತದಲ್ಲಿಯೇ ಅತ್ಯಂತ ಪ್ರಾಚೀನವಾದ ಟಂಕಶಾಲೆಯ ಅವಶೇಷವಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಇನ್ನು ರೋಮನ್ ನಾಣ್ಯ ಮುದ್ರೆಯ ವಿಷಯ. ಕರ್ನಾಟಕಕ್ಕೂ ರೋಂ ದೇಶಕ್ಕೂ ಪ್ರಾಚೀನಕಾಲದಲ್ಲಿ (ಕ್ರಿ. ಶ. ಒಂದನೆಯ ಶತಮಾನದಿಂದ ಆರನೆಯ ಶತಮಾನದವರೆಗೆ) ವ್ಯಾಪಾರ ಸಂಬಂಧಗಳಿದ್ದವು ಎಂಬುದು ತಿಳಿದಿರುವ ವಿಷಯ. ಇದರ ಕುರುಹಾಗಿ ಬೆಂಗಳೂರಿನ ಎಚ್. ಎ. ಎಲ್. ವಿಮಾನ ನಿಲ್ದಾಣ, ಯಶವಂತಪುರ, ಚಂದ್ರವಳ್ಳಿ, ಬನವಾಸಿ, ಅಕ್ಕಿ ಆಲೂರು ಮುಂತಾದ ಕಡೆಗಳಲ್ಲಿ ರೋಮನ್ ದೊರೆಗಳ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ವಿಶೇಷವಾಗಿ ದೊರಕಿವೆ. ರೋಮಿನ ವ್ಯಾಪಾರಿಗಳು ಕರ್ನಾಟಕಕ್ಕೆ ಬಂದು ಚಿನ್ನದ ನಾಣ್ಯಗಳನ್ನು ಹೇರಳವಾಗಿ ಖರ್ಚುಮಾಡಿ ಇಲ್ಲಿ ವಿಶೇಷವಾಗಿ ದೊರೆಯುತ್ತಿದ್ದ ಮೆಣಸು, ಸಂಬಾರ ಪದಾರ್ಥಗಳು, ಚಂದನ ಮತ್ತು ಪಚ್ಚೆ (ಎಳೆಹಸಿರು, ನಸುನೀಲಿ, ಹಳದಿ, ಬಿಳುಪು ಈ ಬಣ್ಣದ ಛಾಯೆಗಳ ಪಾರದರ್ಶಕ ಪ್ರಶಸ್ತಶಿಲೆ)ಗಳನ್ನು ಖರೀದಿಸುತ್ತಿದ್ದರು. ಈ ವ್ಯಾಪಾರ ಎಷ್ಟರಮಟ್ಟಿಗೆ ನಡೆಯುತ್ತಿದ್ದಿತೆಂದರೆ, ರೋಮಿನ ಆರ್ಥಿಕ ಪರಿಸ್ಥಿತಿ ಹದಗೆಡುವಷ್ಟು ಎಂದು ರೋಮಿನ ಸೆನೆಟ್‌ನಲ್ಲಿ ಅಧಿಕೃತವಾಗಿ ತಿಳಿಸಲಾಗಿದ್ದಿತು. ಇಂತಹ ಪರಿಸ್ಥಿತಿಯಿಂದಾಗಿ ರೋಮಿನ ಚಿನ್ನದ ನಾಣ್ಯಗಳು ದಕ್ಷಿಣಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಜನಾನುರಾಗಿಯಾಗಿದ್ದವು. ಈ ರೋಮಿನ ಚಿನ್ನದ ನಾಣ್ಯಗಳನ್ನು ಕಂಠಹಾರಕ್ಕಾಗಿ ಜನಗಳು ಬಳಸುತ್ತಿದ್ದರೆಂದು ತಿಳಿದುಬಂದಿದೆ. ಈ ಕೆಲವು ನಾಣ್ಯಗಳಿಗೆ ದಾರವನ್ನು ಪೋಣಿಸಲು ರಂಧ್ರಗಳಿದ್ದರೆ, ಮತ್ತೆ ಕೆಲವು ನಾಣ್ಯಗಳಲ್ಲಿ ತೂಬುಗಳಿರುವುದು ಕಂಡುಬಂದಿದೆ. ಆದುದರಿಂದ ಈ ನಾಣ್ಯಗಳಿಗೆ ಬೇಡಿಕೆಯಿದ್ದಿತು ಎಂಬುದು ಖಚಿತವಾಗುತ್ತದೆ.

ರೋಮಿನ ನಾಣ್ಯಗಳು ರೋಮ್ ನಗರದಲ್ಲಿ ಟಂಕಿಸಲ್ಪಡಬೇಕೇ ಹೊರತು ಕರ್ನಾಟಕದಲ್ಲಿ ಅಲ್ಲ. ಅನಧೀಕೃತವಾಗಿ ಬೇರೆ ಕಡೆ ಟಂಕಿಸಲ್ಪಟ್ಟರೆ, ಅದನ್ನು ನಾವು ಕೂಟ ನಾಣ್ಯವೆಂದೇ ಕರೆಯಬೇಕು. ಆದುದರಿಂದ ತಲಕಾಡಿನಲ್ಲಿ ದೊರಕಿರುವ ನಾಣ್ಯಮುದ್ರೆಯಿಂದ ನಾಣ್ಯ ಟಂಕಿಸಲ್ಪಟ್ಟಿದ್ದರೆ, ಅದು ಕೂಟ ನಾಣ್ಯವಾಗುತ್ತದೆ. ಬಹುಶಃ ಆ ನಾಣ್ಯಗಳಿಗೆ ಹೆಚ್ಚಿನ ಮೌಲ್ಯವಿದ್ದುದರಿಂದ ಸ್ಥಳೀಯ ಅಕ್ಕಸಾಲಿಯು ಈ ನಾಣ್ಯಗಳನ್ನು ತಯಾರು ಮಾಡಲು ಮನಸ್ಸು ಮಾಡಿರಬೇಕು. ಹಾಗಾದಲ್ಲಿ ಇದು ಕ್ರಿ. ಶ. ಒಂದನೆಯ ಶತಮಾನದಲ್ಲಿ ಅಂದರೆ ಸಮಕಾಲೀನ ಕೂಟ ಅಥವಾ ಖೋಟ ನಾಣ್ಯ ತಯಾರಿಕೆಯ ಮೊದಲನೆಯ ಉದಾಹರಣೆಯೆಂದು ಹೇಳಬೇಕಾಗುತ್ತದೆ. ಪ್ರಸಿದ್ಧ ನಾಣ್ಯಶಾಸ್ತ್ರಜ್ಞ ಪೀಟರ್ ಬರ್ಗೆಸ್ ಎಂಬ ಜರ್ಮನ್ ವಿದ್ವಾಂಸನ ಪ್ರಕಾರ ದಕ್ಷಿಣ ಭಾರತದಲ್ಲಿ ದೊರಕಿರುವ ಶೇಕಡ ಅರುವತ್ತು ರೋಮನ್ ಚಿನ್ನದ ನಾಣ್ಯಗಳು ಖೋಟ ನಾಣ್ಯಗಳು. ಆದುದರಿಂದ ಈ ನಾಣ್ಯಗಳು ಆಭರಣಕ್ಕಾಗಿ ತಯಾರಾದ ನಾಣ್ಯಗಳೇ ಹೊರತು

ವ್ಯಾಪಾರಕ್ಕಾಗಿ ಅಲ್ಲವೆಂದೂ ತಿಳಿಯಬೇಕಾಗುತ್ತದೆ. ಒಟ್ಟಿನಲ್ಲಿ ಉದ್ದೇಶ ಏನೇ ಇದ್ದರೂ ಈ ನಾಣ್ಯಮುದ್ರೆ ಕುತೂಹಲಕಾರಿ ಸಂಗತಿ. ತಲಕಾಡಿನಲ್ಲಿ ಇದುವರೆವಿಗೆ ರೋಮನ್ ನಾಣ್ಯ ದೊರೆಯದೇ ಇದ್ದರೂ, ಈ ನಾಣ್ಯಮುದ್ರೆ ರೋಮಿಗೂ ತಲಕಾಡಿಗೂ ಸಂಪರ್ಕವಿದ್ದಿತೆಂಬುದನ್ನು ಖಚಿತಪಡಿಸುತ್ತದೆ. ಇದು ಮೈಸೂರು ಜಿಲ್ಲೆಯಲ್ಲಿ ದೊರಕಿರುವ ರೋಮನ್ ಸಂಬಂಧವನ್ನು ತಿಳಿಸುವ ಮೊಟ್ಟಮೊದಲನೆಯ ಅವಶೇಷ.

ಈ ರೀತಿಯ ರೋಮನ್ ನಾಣ್ಯ ಮುದ್ರೆ ಕರ್ನಾಟಕದಲ್ಲಿ ದೊರಕಿರುವುದು ಇದು ಎರಡನೆಯದು. ಮೊದಲನೆಯ ಮುದ್ರೆ ಬನವಾಸಿಯಲ್ಲಿ ದೊರಕಿದೆ.[6] ಅದರಲ್ಲಿಯೂ ಇದೇ ಸ್ತ್ರೀ ಚಿತ್ರವಿದೆ. ಅದು ಅಗೇಟ್ ಕಲ್ಲಿನಿಂದ ತಯಾರಾದ ಮುದ್ರೆ. ಈಗ ಆ ಮುದ್ರೆ ಬನವಾಸಿಯ ಮ್ಯೂಸಿಯಂನಲ್ಲಿದೆ. ಆದರೆ ಅದು ಉತ್ಖನನದಲ್ಲಿ ದೊರಕಲಿಲ್ಲ; ನೆಲದ ಮೇಲೆ ದೊರಕಿದ್ದು, ಅದಕ್ಕೆ ಸಾಂಸ್ಕೃತಿಕ ಸ್ತರದ ಸಂಪರ್ಕವಿಲ್ಲ. ಆದರೆ ತಲಕಾಡಿನ ಮುದ್ರೆ ಕ್ರಿ. ಶ. ಒಂದನೆಯ ಶತಮಾನದ ಸಾಂಸ್ಕೃತಿಕ ಸ್ತರದಲ್ಲಿ ದೊರಕಿರುವುದು ಮಹತ್ವದ ಸಂಗತಿ. ಈ ಮುದ್ರೆಗಳು ಕುತೂಹಲಕಾರಿಯಾದ ಹೊಸ ಸಂಶೋಧನೆಗೆ ಎಡೆ ಮಾಡಿಕೊಟ್ಟಿವೆ ಎನ್ನುವುದರಲ್ಲಿ ಸಂಶಯವಿಲ್ಲ.

ಗಂಗರ ಕಾಲದ ಮೊದಲನೆಯ ಇಟ್ಟಿಗೆಯ ಬಸದಿ

ತಲಕಾಡಿನ ಗಂಗರು ಜೈನ ಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟರು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಶ್ರವಣಬೆಳಗೊಳದಂತಹ ಶ್ರೇಷ್ಠ ಜೈನ ಕೇಂದ್ರ ಸೃಷ್ಟಿಯಾದುದೂ ಗಂಗರ ಕಾಲದಲ್ಲಿ ಎನ್ನುವುದನ್ನು ಮರೆಯುವಂತಿಲ್ಲ. ಆದರೆ ತಲಕಾಡಿನಲ್ಲಿ ಜೈನ ಧರ್ಮದ ಯಾವ ಅವಶೇಷಗಳೂ ಇದುವರೆವಿಗೂ ದೊರಕದೇ ಇದ್ದುದು ಒಂದು ಸೋಜಿಗದ ಸಂಗತಿಯಾಗಿದ್ದಿತು. ಇದನ್ನು ಈ ಉತ್ಖನನ ನಿವಾರಿಸುತ್ತದೆ. ಕಲ್ಲನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ವ್ಯಾಪಕವಾಗಿ ಬಳಸುವ ಪದ್ಧತಿ ಇತ್ತೀಚಿನದೆಂದೂ, ಅದಕ್ಕೂ ಮುಂಚೆ ಇಟ್ಟಿಗೆ ಮತ್ತು ಮರಗಳಿಂದ ದೇವಾಲಯಗಳೇ ಆದಿಯಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದರೆಂಬುದು ಈಗ ಖಚಿತಗೊಳ್ಳುತ್ತದೆ.[7] ಶಾತವಾಹನರ ಕಾಲದಲ್ಲಿ ಕಟ್ಟಡ ನಿರ್ಮಾಣಗಳು ವಿಶೇಷವಾಗಿ ಇಟ್ಟಿಗೆಯಿಂದ ಮಾಡಲ್ಪಡುತ್ತಿದ್ದವು. ಅದೇ ಪದ್ಧತಿಯು ಗಂಗರ ಕಾಲದಲ್ಲಿಯೂ ಮುಂದುವರೆಯಿತು ಎಂಬುದು ಈಗ ಗೊತ್ತಾಗುತ್ತದೆ.

ಈಗ ಉತ್ಖನನದಲ್ಲಿ ಪತ್ತೆಯಾದ ಜೈನ ಬಸದಿ ಬಹಳಷ್ಟು ಹಾಳಾಗಿದ್ದು, ಕೆಳಗಿನ ಭಾಗಗಳು ಮಾತ್ರ ಉಳಿದಿವೆ. ಮೇಲ್ಛಾವಣಿ, ಕಂಬಗಳು ಮುಂತಾದವು ಕಂಡುಬಂದಿಲ್ಲ. ಕೀರ್ತಿನಾರಾಯಣ ದೇವಾಲಯದ ಹಿಂಭಾಗದಲ್ಲಿ ಸುಮಾರು ಒಂದು ಕಿ. ಮೀ. ದೂರದಲ್ಲಿ ಒಂದು ದಿಬ್ಬವಿದ್ದಿತು. ಇದನ್ನು ಜನಗಳು ಬಸ್ತಿಮಾಳ ಎಂದು ಕರೆಯುತ್ತಿದ್ದರು. ಅಲ್ಲಿಯೇ ಒಂದು ಮರದ ಕೆಳಗೆ ಕಲ್ಲಿನ ಪಾರ್ಶ್ವನಾಥ ತೀರ್ಥಂಕರನ

ವಿಗ್ರಹವನ್ನು ನಿಲ್ಲಿಸಿದ್ದರು. ಅದು ಈ ಬಸ್ತಿಮಾಳದಲ್ಲಿ ಸಿಕ್ಕಿತೆಂದು ಊರಿನವರ ಅಂಬೋಣ. ಇದೆಲ್ಲವನ್ನೂ ಗಮನಿಸಿ ಇಲ್ಲಿ ಉತ್ಖನನ ಮಾಡಲಾಯಿತು. ಈ ಜೈನಬಸದಿ 80 ಅಡಿ ಉದ್ದ ಮತ್ತು 65 ಅಗಲದ ವಿಶಾಲವಾದ ಪ್ರಾಂಗಣದಲ್ಲಿದೆ. ಕಟ್ಟಡ ಪೂರ್ಣವಾಗಿ ಇಟ್ಟಿಗೆಯ ನಿರ್ಮಾಣ. ಪೂರ್ವಾಭಿಮುಖವಾದ ಇದರ ಹಿಂಭಾಗದಲ್ಲಿ 10 ಅಡಿ ಉದ್ದ ಹಾಗೂ 6 ಅಡಿ ಅಗಲದ ಗರ್ಭಗೃಹವಿದೆ. ಇದರ ಎರಡೂ ಕಡೆಗಳಲ್ಲಿ ಇನ್ನೆರಡು ಕೋಣೆಗಳಿವೆ. ಇವುಗಳಲ್ಲಿ ಜೈನ ಯಕ್ಷ-ಯಕ್ಷಿಯರ ವಿಗ್ರಹಗಳಿದ್ದಿರಬೇಕು. ಇಲ್ಲವೇ ಜೈನ ಮುನಿಗಳು ತಪಸ್ಸಿಗೆ ಉಪಯೋಗಿಸುತ್ತಿದ್ದ ಸ್ಥಳವಾಗಿರಬೇಕು. ಮಧ್ಯದ ಗರ್ಭಗೃಹದಲ್ಲಿ ಒಂದು ಕಲ್ಲಿನ ಪೀಠವಿದೆ. ಈ ಪೀಠದ ಕುಳಿ ಹಾಗೂ ಮರದ ಕೆಳಗಿರುವ ಪಾರ್ಶ್ವನಾಥ ವಿಗ್ರಹದ ಕೆಳತುದಿ ಒಂದೇ ಅಳತೆಯದಾಗಿದ್ದು, ಒಂದಕ್ಕೊಂದು ಸರಿಹೊಂದುತ್ತವೆ. ಎರಡೂ ಒಂದು ರೀತಿಯ ಕಗ್ಗಲ್ಲಿನಿಂದ ಮಾಡಿದವು. ಆದುದರಿಂದ ಈ ಪಾರ್ಶ್ವನಾಥನ ವಿಗ್ರಹ ಈ ಜೈನ ಬಸದಿಯ ಶಿಲ್ಪ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಗರ್ಭಗೃಹದ ಮುಂಭಾಗದಲ್ಲಿ ಚೌಕಾಕಾರದ ಇಟ್ಟಿಗೆಯ ಮಂಟಪವಿದೆ. ಇದರ ಉದ್ದ 12 ಅಡಿ. ಇದು ಗರ್ಭಗೃಹಕ್ಕೆ ಸೇರಿಲ್ಲ. ಈ ಎರಡೂ ಭಾಗಗಳನ್ನು ಒಳಗೊಂಡಂತೆ ಒಂದು ಹೊರಗೋಡೆಯಿದೆ. ಇದರಿಂದ ಗರ್ಭಗೃಹದ ಸುತ್ತಲೂ 2 ಅಡಿ ವಿಶಾಲವಾದ ಪ್ರದಕ್ಷಿಣ ಪಥವಿದೆ. ಈ ಹೊರಗೋಡೆಯನ್ನು ಕಟ್ಟಲು ಸುಣ್ಣದ ಗಾರೆಯನ್ನು ಬಳಸಲಾಗಿದೆ. ಆದರೆ ಒಳಗಿನ ಗರ್ಭಗೃಹ ಮತ್ತು ಮಂಟಪದ ರಚನೆಯಲ್ಲಿ ಗಾರೆಯನ್ನು ಬಳಸಿಲ್ಲ. ಇಲ್ಲಿ ಬಳಸಲಾಗಿರುವ ಇಟ್ಟಿಗೆಗಳು ಚೆನ್ನಾಗಿ ಸುಡಲ್ಪಟ್ಟು 7 ರಿಂದ 8 ಅಂಗುಲ ಉದ್ದ, 6-7 ಅಂಗುಲ ಅಗಲ, 2 ಅಂಗುಲ ದಪ್ಪವಾಗಿವೆ. ಈ ಬಸದಿಯ ಸುತ್ತಮುತ್ತ ನಯಮಾಡಿದ ಗುಂಡನೆಯ ದಿಂಡನ್ನು ಹೊಂದಿದ ಕುಮುದ ಶಿಲೆಗಳು ಬಿದ್ದಿವೆ. ಮರಳೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ಕಾಣಬರುವ ಕಾಲ್ಪನಿಕ ಪ್ರಾಣಿಗಳ ಶಿಲ್ಪಗಳನ್ನುಳ್ಳ ಅಧಿಷ್ಠಾನದ ಕಲ್ಲಿನ ಭಾಗಗಳು ಇಲ್ಲಿಯೂ ಕಂಡುಬರುತ್ತವೆ. ಈ ಎಲ್ಲ ಅಂಶಗಳಿಂದ ಇದು ಗಂಗರ ಕಾಲದ ಇಟ್ಟಿಗೆಯ ಕಟ್ಟಡವೆನ್ನುವುದು ಖಚಿತವಾಗುತ್ತದೆ.

ಈ ಬಸದಿಗೆ ಸೇರಿದ ಪಾರ್ಶ್ವನಾಥನ ವಿಗ್ರಹ ಕಗ್ಗಲ್ಲಿನಿಂದ ರಚಿತವಾಗಿದೆ. ಅದರ ಎತ್ತರ ನಾಲ್ಕು ಅಡಿ ; ಉತ್ತಮವಾದ ಉಬ್ಬುಶಿಲ್ಪ. ಸಮಭಂಗ ಮುದ್ರೆಯಲ್ಲಿ ನಿಂತಿರುವ ಪಾರ್ಶ್ವನಾಥನ ತಲೆಯ ಮೇಲೆ ಐದು ಹೆಡೆಗಳ ಸರ್ಪವಿದೆ. ಎಡಭಾಗದಲ್ಲಿ ಅರ್ಧ ಪ್ರಮಾಣದ ಯಕ್ಷಿಯ ಉಬ್ಬು ಚಿತ್ರವಿದೆ. ಆಕೆಯ ಕೈಯಲ್ಲಿ ಉದ್ದವಾದ ಛತ್ರಿಯಿದ್ದು, ಹಾವಿನ ಹೆಡೆಗಳನ್ನು ಸೇರಿಸಿ, ಅದರ ಮೇಲೆ, ಛತ್ರಿಯನ್ನು ಹಿಡಿದುಕೊಂಡಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಯಕ್ಷಿಯ ಉಡುಗೆ ಜಾಣ್ಮೆಯಿಂದ ಕಡೆಯಲಾಗಿದ್ದು, ಅದು ಆರು-ಏಳನೆಯ ಶತಮಾನದ ಶಿಲ್ಪ ಶೈಲಿಗೆ ಸೇರುತ್ತದೆ.

ಮಡಕೇರಿಯ ತಾಮ್ರ ಶಾಸನದ ಪ್ರಕಾರ (ಇದು ಕೂಟ ಶಾಸನವೆಂದು ಕೆಲವರ ಅಭಿಪ್ರಾಯ) ಗಂಗ ದೊರೆ ಅವಿನೀತನು (ಕ್ರಿ. ಶ. 469-529) ತಲಕಾಡಿನಲ್ಲಿದ್ದ ,ಶ್ರೀ

ವಿಜಯ ಜಿನಾಲಯಕ್ಕೆ ಅನೇಕ ದತ್ತಿಗಳನ್ನು ಕೊಟ್ಟನು ಎಂದು ತಿಳಿದುಬರುತ್ತದೆ.[8] ಹಾಗಾದರೆ ಈಗ ಉತ್ಖನನದಲ್ಲಿ ದೊರೆತಿರುವ ಜೈನ ಬಸದಿ, ಇದೇ ಜಿನಾಲಯವೇ ಎನ್ನುವ ಪ್ರಶ್ನೆಯೂ ಏಳುತ್ತದೆ. ಹಾಗಾದರೆ ಈ ಜೈನ ಬಸದಿಯ ಕಾಲ ಕ್ರಿ. ಶ. ಆರನೆಯ ಶತಮಾನ ಎನ್ನುವುದು ಖಚಿತವಾಗುವುದು ಮಾತ್ರವಲ್ಲದೆ, ನಮಗೆ ತಲಕಾಡಿನಲ್ಲಿ ಮಾತ್ರವಲ್ಲ, ಗಂಗರ ಕಾಲದಲ್ಲಿ ನಿರ್ಮಾಣಗೊಂಡ ಪ್ರಾಚೀನತಮ ಇಟ್ಟಿಗೆಯ ಬಸದಿ ಎನ್ನುವ ಹೆಚ್ಚಳಿಕ್ಕೂ ಈ ಬಸದಿ ಪಾತ್ರವಾಗುತ್ತದೆ. ಇನ್ನೂ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ದೊರಕಬೇಕಾಗಿದೆ.[9]

ಬಳಿಬಾವಿ (ರಿಂಗ್ ವೆಲ್)

ಕೀರ್ತಿನಾರಾಯಣ ದೇವಾಲಯದ ಮುಂಭಾಗದಲ್ಲಿ ಒಂದು ಗುಳಿಯನ್ನು ತೆಗೆಯಲಾಯಿತು. ಈ ಗುಳಿಯಲ್ಲಿ ಇಟ್ಟಿಗೆಯಿಂದ ಕಟ್ಟಲಾದ ಮನೆಯ ಭಾಗವೊಂದು ದೊರಕಿತು. ಅಲ್ಲಿ ಕೆಲವು ತಾಮ್ರದ ವಸ್ತುಗಳೂ ದೊರಕಿದವು. ಈ ಮನೆಯ ಹಿಂಭಾಗದಲ್ಲಿ, ಮನೆಗೆ ಸೇರಿದಂತೆ ಎರಡು ಬಾವಿಗಳು ಪತ್ತೆಯಾದವು. ಇವುಗಳನ್ನು ಪುರಾತತ್ವಜ್ಞರು ರಿಂಗ್‌ವೆಲ್(ಬಳಿಬಾವಿ) ಎಂದು ವ್ಯವಹರಿಸುತ್ತಾರೆ.[10] ಇವು ಹರಪ್ಪ ಸಂಸ್ಕೃತಿಯಿಂದ ಹಿಡಿದು ಅನೇಕ ಪುರಾತನ ನೆಲೆಗಳಲ್ಲಿ ಕಂಡುಬಂದಿವೆ. ಆದರೆ ಕರ್ನಾಟಕದಲ್ಲಿ ಇದುವರೆವಿಗೂ ಈ ರೀತಿಯ ಬಾವಿಗಳು ದೊರಕಿರಲಿಲ್ಲ; ಇದೇ ಮೊಟ್ಟಮೊದಲನೆಯ ರಿಂಗ್ ವೆಲ್ ಕರ್ನಾಟಕದಲ್ಲಿ ಎನ್ನುವುದು ಗಮನಾರ್ಹ ಸಂಗತಿ.

ಸುಟ್ಟಮಣ್ಣಿನಿಂದ ತಯಾರಾದ ಸಿಂಬಿಯಂತಿರುವ ಈ ಬಳಿಗಳನ್ನು ಬಾವಿಯಲ್ಲಿ ಒಂದರ ಮೇಲೆ ಒಂದರಂತೆ ಜೋಡಿಸುವುದೇ ಇದರ ರಚನಾ ಕೌಶಲ. ಈ ಬಳಿಗಳ ವ್ಯಾಸ ಎರಡೂವರೆ ಅಡಿ; ಅಗಲ 8 ಅಂಗುಲ; ದಪ್ಪ ಸುಮಾರು ಒಂದು ಅಂಗುಲ. ಈ ರೀತಿಯ ಇಪ್ಪತ್ತನಾಲ್ಕು ಬಳಿಗಳನ್ನು ಹೊಂದಿರುವ ಬಾವಿಯು ಇಲ್ಲಿ ಪತ್ತೆಯಾಗಿದೆ. ಪ್ರಾಕೃತಿಕ ಮಣ್ಣಿನ ಸ್ತರವನ್ನೂ ಮೀರಿ ಕೆಳಗೆ ಹೋಗಿರುವ ಈ ಬಾವಿಯ ಕೆಳಗಿನ ಬಳಿಗಳನ್ನು ಇನ್ನೂ ಬೇರ್ಪಡಿಸಿಲ್ಲ. ಇದರ ಪಕ್ಕದಲ್ಲೇ ಇದೇ ರೀತಿಯ ಇನ್ನೊಂದು ಬಾವಿಯಿದೆ. ಬಹುಶಃ ಇದು ಹಾಳಾದುದರಿಂದ ಇದನ್ನು ಮಧ್ಯದಲ್ಲಿಯೇ ಕೈಬಿಟ್ಟು, ಇನ್ನೊಂದು ಬಾವಿಯನ್ನು ತೋಡಿರಬೇಕು. ಹೀಗಾಗಿ ಎರಡು ಬಾವಿಗಳು ಸಮೀಪದಲ್ಲಿಯೇ ಕಂಡು ಬಂದಿವೆ. ಇವುಗಳ ಕಾಲಮಾನ ಇನ್ನೂ ಖಚಿತವಾಗಿ ನಿಗದಿಪಡಿಸಬೇಕಾಗಿದೆ. ಒಟ್ಟಿನಲ್ಲಿ ಇದೊಂದು ಕುತೂಹಲಕಾರಿಯಾದ ಹಾಗೂ ಮುಖ್ಯವಾದ ಶೋಧನೆ; ಇದರ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕು.

ಮತ್ತೊಂದು ಗುಳಿಯಲ್ಲಿ ನೂರು ಅಡಿಗಳನ್ನೂ ಮೀರಿದ ಇಟ್ಟಿಗೆಯ ಗೋಡೆಯು ಪತ್ತೆಯಾಗಿದೆ. ಇದರ ಪ್ರಾರಂಭ ಮತ್ತು ಕೊನೆ ಇನ್ನೂ ಕಂಡುಬಂದಿಲ್ಲ. ಕೆಲವು ಕಡೆಗಳಲ್ಲಿ ಈ ಗೋಡೆಯ ದಪ್ಪ ಎಂಟರಿಂದ ಹತ್ತು ಅಡಿಗಳವರೆಗೆ ಇದೆ. ಇಷ್ಟು ದಪ್ಪದ

ಗೋಡೆಯು ವಾಸದ ಮನೆಯ ಗೋಡೆಯಲ್ಲ; ಬಹುಶಃ ಇದು ಕೋಟೆಯ ಗೋಡೆಯಿರಬೇಕು. ಹಾಗೂ ಇದು ಕಾವೇರಿ ನದಿಯ ತೀರದಲ್ಲಿರುವುದರಿಂದ, ಪ್ರವಾಹವನ್ನು ನಿಯಂತ್ರಿಸಲು ಗಂಗರ ಕಾಲದಲ್ಲಿ ಈ ಬೃಹದಾಕಾರದ ಗೋಡೆಯನ್ನು ಕಟ್ಟಿರಬೇಕು ಎಂದು ಊಹಿಸಲು ಅವಕಾಶವಿದೆ. ಈ ಗೋಡೆಯ ಒಳಭಾಗದಲ್ಲಿ ಅನೇಕ ಸಣ್ಣ ಸಣ್ಣ ಇಟ್ಟಿಗೆಯ ಕಟ್ಟಡಗಳು ಕಂಡು ಬಂದಿವೆ. ಇವುಗಳ ಪೂರ್ಣ ಉತ್ಖನನ ಆದಾಗ ಈ ಬೃಹತ್ ಗೋಡೆ ಹಾಗೂ ಈ ಕಟ್ಟಡಗಳ ವಿಷಯ ಪೂರ್ಣವಾಗಿ ತಿಳಿಯುತ್ತದೆ. ಸದ್ಯಕ್ಕೆ ಈ ಸ್ಥಳ ಪುರಾತತ್ವಜ್ಞರಲ್ಲಿ ಆಸಕ್ತಿಯನ್ನು ಕೆರಳಿಸುತ್ತಿದೆ.

ತಲಕಾಡು ಮರಳಿನ ಉಗಮ

ಕೊನೆಯದಾಗಿ, ಈಗ ತಲಕಾಡಿನ ಮರಳಿನ ವಿಷಯವನ್ನು ಪ್ರಸ್ತಾಪಿಸಬೇಕು. ತಲಕಾಡಿಗೂ ಮರಳಿಗೂ ಅವಿಭಾಜ್ಯ ಸಂಬಂಧವಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈ ಮರಳಿನ ಉಗಮದ ಬಗೆಗೆ ಇತಿಹಾಸಕಾರರಲ್ಲಿ ಹಾಗೂ ಭೂಗರ್ಭಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯವಿದೆ. ಇಲ್ಲಿನ ಮರಳು ದಿಣ್ಣೆ ತಲಕಾಡಿನಷ್ಟೇ ಹಳೆಯದು ಎಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು ಅದು ಇತ್ತೀಚಿನದು ಎಂದು ಹೇಳುತ್ತಾರೆ. ಅದು ಇತಿಹಾಸ ಪೂರ್ವಕಾಲದ್ದು (ಪ್ರಿಹಿಸ್ಟಾರಿಕ್) ಎಂದೂ ಹೇಳುವವರೂ ಇದ್ದಾರೆ. ಉತ್ಖನನ ಇದಕ್ಕೆ ಒಂದು ಉತ್ತರವನ್ನು ಕಲ್ಪಿಸಿಕೊಟ್ಟಿದೆ ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ.

ಉತ್ಖನನ ಸಮಯದಲ್ಲಿ ಹಾಕಿದ ನಾಲ್ಕಾರು ಗುಳಿಗಳಲ್ಲಿ ಇಂದಿನ ಭೂಮಿಯ ಮೇಲ್ಮಟ್ಟದಿಂದ ಹಿಡಿದು ಸುಮಾರು ಇಪ್ಪತ್ತು ಅಡಿಗಳ ಕೆಳಗಿರುವ ಪ್ರಾಕೃತಿಕ ಮಣ್ಣಿನ ಸ್ತರಗಳೂ ಕಂಡುಬಂದಿವೆ. ಬಳೆಬಾವಿ ದೊರಕಿದ ಗುಳಿಯಲ್ಲಿ ಬಹಳ ಮೇಲ್ಮಟ್ಟದಲ್ಲಿ ತಲಕಾಡು ಮರಳಿನ ಸ್ತರವೊಂದು ಗುರುತಿಸಲ್ಪಟ್ಟಿದೆ. ಈ ಸ್ತರದ ಮೇಲಿನ ಪದರಗಳಲ್ಲಿ ತಂಬಾಕು ಸೇವನೆಯ 'ಹುಕ್ಕ' ಚೂರುಗಳು ಹೇರಳವಾಗಿ ದೊರೆತಿದ್ದು, ಇದು ವಿಜಯನಗರದ ಅಂತ್ಯ ಕಾಲಕ್ಕೆ ಸೇರುತ್ತದೆಯೆಂದು ತಿಳಿದು ಬಂದಿದೆ. ಅಂದರೆ ಇದು ಹದಿನೇಳನೆಯ ಶತಮಾನಕ್ಕೆ ಸೇರುತ್ತದೆ. ಆದುದರಿಂದ ಇಲ್ಲಿ ಕಂಡುಬಂದಿರುವ ಮರಳಿನ ಸ್ತರವು ಕ್ರಿ. ಶ. ಹದಿನೇಳನೆಯ ಶತಮಾನಕ್ಕೆ ಸೇರುತ್ತದೆ ಎಂದು ಖಚಿತವಾಗುತ್ತದೆ. ಇದೇ ರೀತಿ ಜೈನ ಬಸದಿಯ ನೆಲೆಯಲ್ಲಿ ಗಂಗರ ಕಾಲದ ನಂತರ ಯಾವ ಜನವಸತಿಯ ಗುರುತೂ ಇಲ್ಲ. ಅದರ ನಂತರ ಇಲ್ಲಿ ಮರಳಿನ ಪದರವಿದೆ. ಇದೂ ಕೂಡ ಹದಿನೇಳನೆಯ ಶತಮಾನವನ್ನೇ ಸೂಚಿಸುತ್ತದೆ. ಆದುದರಿಂದ ಪುರಾತಾತ್ವಿಕ ಪದರಶಾಸ್ತ್ರದ ಆಧಾರದ ಮೇಲೆ ಈ ತಲಕಾಡು ಮರಳಿನ ಪ್ರಾಚೀನತೆಯನ್ನು ಹದಿನೇಳನೆಯ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯುವುದು ಸಾಧ್ಯವಿಲ್ಲ ಎಂದು ಖಚಿತವಾಗಿ ಹೇಳಲೇಬೇಕು. ಇದೊಂದು ಬಲು ಮುಖ್ಯವಾದ ಸಿದ್ಧಾಂತ.

ಜನಜನಿತವಾಗಿರುವ ಒಂದು ಐತಿಹ್ಯದ ಪ್ರಕಾರ ವಿಜಯನಗರ ಸಾಮಂತನಾದ ಶ್ರೀ ರಂಗರಾಯನ ರಾಣಿ ಅಲಮೇಲಮ್ಮನ ಶಾಪದಿಂದ ಹೀಗಾಯಿತು. ರಾಜ ಒಡೆಯರ್ ಅವರಿಂದ ಅವಮಾನಿತಳಾದ ಈಕೆಯು ತಲಕಾಡಿನ ಪಕ್ಕದ ದಂಡೆಯಲ್ಲಿರುವ ಮಾಲಂಗಿಯಲ್ಲಿ ಹಾರಿ ಪ್ರಾಣತ್ಯಾಗ ಮಾಡಿದಳೆಂದೂ; ಹಾಗೆ ಮಾಡುವಾಗ ಮೂರು ಶಾಪಗಳನ್ನು ಕೊಟ್ಟಳೆಂದೂ ಐತಿಹ್ಯ ತಿಳಿಸುತ್ತದೆ.[11] ಮಾಲಂಗಿಯು ಮಡುವಾಯಿತು, ತಲಕಾಡಿನಲ್ಲಿ ಮರಳಾಯಿತು ಹಾಗೂ ಮೈಸೂರು ಅರಸರಿಗೆ ಮಕ್ಕಳೇ ಇಲ್ಲದೆ ಹೋಯಿತು ಎನ್ನುವುದೇ ಈ ಶಾಪದ ತಾತ್ಪರ್ಯ. ರಾಜ ಒಡೆಯರ ಕಾಲ ಕ್ರಿ. ಶ. ಹದಿನೇಳನೆಯ ಶತಮಾನ. ಆ ಸಮಯದಲ್ಲಿ ಘೋರ ಪ್ರವಾಹವೊಂದು ಉಂಟಾಗಿ ಮರಳಿನ ಪಾತ್ರವನ್ನು ಕೊರೆದು ಹಾಕಿ, ಪ್ರವಾಹ ಇಳಿದ ನಂತರ ಗಾಳಿಯಲ್ಲಿ ತೂರಿ ಮರಳು ದಿಣ್ಣೆಯಾಯಿತೆಂದು ಭೂಗರ್ಭಶಾಸ್ತ್ರಜ್ಞರು ಹೇಳುತ್ತಾರೆ. ಈ ವೈಜ್ಞಾನಿಕ ಸತ್ಯವನ್ನೇ ಐತಿಹ್ಯ ಜಾನಪದ ರೂಪದಲ್ಲಿ ಹಿಡಿದಿಟ್ಟು ಇತಿಹಾಸದ ಕಡೆ ಬೆಟ್ಟು ಮಾಡಿ ತೋರಿಸುತ್ತಿದೆ ಎಂದು ನಂಬಲೇಬೇಕು. ಒಟ್ಟಿನಲ್ಲಿ ಉತ್ಖನನದ ಮಾಹಿತಿ ಹಾಗೂ ಈ ಐತಿಹ್ಯದ ಮಾಹಿತಿ ಕಾಲಮಾನ ದೃಷ್ಟಿಯಿಂದ ಕ್ರಿ. ಶ. ಹದಿನೇಳನೆಯ ಶತಮಾನದಲ್ಲಿ ಸಂಧಿಸುತ್ತವೆ ಎಂದು ನಂಬಲೇಬೇಕು. ಇದೊಂದು ಉತ್ಖನನದ ಮುಖ್ಯ ಕೊಡುಗೆ.

ಈ ರೀತಿ ತಲಕಾಡಿನ ಈ ಒಂದು ವರ್ಷದ ಉತ್ಖನನ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಗಮನಾರ್ಹವಾದ ಬೆಳಕನ್ನು ಚೆಲ್ಲಿದೆ. ಇತಿಹಾಸಪೂರ್ವ ಕಾಲದಿಂದ ಪ್ರಾರಂಭವಾಗಿ (ಕ್ರಿ. ಪೂ. 1000) ಇತ್ತೀಚಿನವರೆಗಿನ (ಕ್ರಿ. ಶ. 17ನೆ ಶತಮಾನ) ವಿವಿಧ ಐತಿಹಾಸಿಕ ಘಟನೆಗಳನ್ನು ಹಾಗೂ ಮಾಹಿತಿಗಳನ್ನು ಇದು ಕರ್ನಾಟಕ ಇತಿಹಾಸಕಾರನಿಗೆ ಒದಗಿಸಿಕೊಟ್ಟಿದೆ. ಉತ್ಖನ್ನಗಳನ್ನು ಇನ್ನೂ ಐದು ವರ್ಷಗಳು ಮುಂದುವರಿಸಿ ಇಡೀ ಪ್ರಾಚೀನ ತಲಕಾಡನ್ನು ಭೂಗರ್ಭದಿಂದ ಹೊರ ತೆಗೆಯುವ ಪ್ರಯತ್ನಗಳನ್ನು ಮಾಡುವ ದಿಶೆಯಲ್ಲಿ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಕಾರ್ಯ ಪ್ರವೃತ್ತವಾಗುತ್ತಲಿದೆ ಎನ್ನುವುದು ಸಂಸ್ಕೃತಿಪ್ರಿಯರಿಗೆ ಸಂತಸದ ಸುದ್ದಿ.

ಟಿಪ್ಪಣಿಗಳು:

1. ಈ ಉತ್ಖನನಕ್ಕೆ ವಿಶೇಷ ಪ್ರೇರಕ ಶಕ್ತಿಯಾಗಿ ನಿಂತವರು ಕರ್ನಾಟಕ ಸರ್ಕಾರದ ಕಾರ್ಯದರ್ಶಿಯಾಗಿರುವ ಶ್ರೀ ಚಿರಂಜೀವಿಸಿಂಗ್, ಐ.ಎ.ಎಸ್. ಅವರು ತಲಕಾಡಿನಲ್ಲಿ ಮಾತ್ರವಲ್ಲದೆ ದ್ವಾರಸಮುದ್ರ, ಮಾಳಖೇಡ, ಸನ್ನತಿ ಮುಂತಾದ ನೆಲೆಗಳಲ್ಲಿ ಉತ್ಖನನ ನಡೆಯಬೇಕು ಎನ್ನುವುದು ಇವರ ಅಭಿಪ್ರಾಯ. ತಲಕಾಡಿನ ಉತ್ಖನನಕ್ಕೆ ಬೇಕಾದ ಎಲ್ಲ ರೀತಿಯ ಸಹಾಯವನ್ನು ಒದಗಿಸಿದ ಇವರಿಗೆ ಕೃತಜ್ಞತೆಗಳು ಸಲ್ಲುತ್ತವೆ.
2. ಈ ಉತ್ಖನನದಲ್ಲಿ ಸಹಭಾಗಿತ್ವ ವಹಿಸಿದ ಡಾ: ಎಂ. ಎಸ್. ಕೃಷ್ಣಮೂರ್ತಿ, ಶ್ರೀ ಸ್ವಾಮಿ, ಡಾ:ಎನ್. ಎಸ್. ರಂಗರಾಜು ಹಾಗೂ ಛಾಯಾಚಿತ್ರಗಳನ್ನು ತೆಗೆದ ಶ್ರೀ ಹೂಗಾರ್ ಮತ್ತು ಬಾಲರಾಜನಾಯ್ಡು ಮತ್ತು ರೇಖಾಚಿತ್ರಗಳನ್ನು ತಯಾರಿಸಿದ ಶ್ರೀನಿವಾಸ ಅವರನ್ನು ನೆನೆಯಬೇಕು.

3. ಎ. ವಿ. ನರಸಿಂಹಮೂರ್ತಿ: ಅರ್ಲಿ ಹಿಸ್ಟಾರಿಕ್ ಆರ್ಕಿಯಾಲಜಿ ಆಫ್ ಕರ್ನಾಟಕ, ಮದರಾಸು, ಪು. 1-29.

4. ವಿಷ್ಣುವರ್ಧನನ ನಾಣ್ಯಗಳ ಮೇಲೆ 'ತಲಕಾಡು ಗೊಂಡ' ಎಂಬ ಬಿರುದನ್ನು ಕನ್ನಡ ಲಿಪಿಯಲ್ಲಿ ಕಾಣಬಹುದು. ನೋಡಿ ಎ. ವಿ. ನರಸಿಂಹಮೂರ್ತಿ: ಕಾಯಿನ್ಸ್ ಆಫ್ ಕರ್ನಾಟಕ, ಪು.98-99.

5. ಕಾಯಿನ್ಸ್ ಆಫ್ ಕರ್ನಾಟಕ, ಪು.53-59 ಮತ್ತು ಎ. ವಿ. ನರಸಿಂಹಮೂರ್ತಿ (ಸಂ.): ಸ್ಟಡೀಸ್ ಇನ್ ಸೌತ್ ಇಂಡಿಯನ್ ಕಾಯಿನ್ಸ್, ಸಂ.2, ಪು.51-60.

6. ಎ. ವಿ. ನರಸಿಂಹಮೂರ್ತಿ: ಎ ರೋಮನ್ ಕಾಯಿನ್ ಮೌಲ್ಡ್ ಫ್ರಂ ಬನವಾಸಿ; ಜರ್ನಲ್ ಆಫ್ ದಿ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಅಫ್ ಇಂಡಿಯ, ಸಂ. 1984, ಪು.45.

7. ಅರ್ಲಿ ಬ್ರಿಕ್ ಸ್ಟ್ರಕ್ಚರ್ಸ್ ಆಫ್ ಕರ್ನಾಟಕ, ಆರ್ಕಿಯೋಲಾಜಿಕಲ್ ಸ್ಟಡೀಸ್, ಸಂ.4, ಪು.68.

8. ಎಪಿಗ್ರಾಫಿಯ ಕರ್ನಾಟಕ, ಸಂ.1, ಶಾಸನ ಸಂ.1.

9. ಇತ್ತೀಚೆಗೆ ಪ್ರಕಟವಾದ ಐ.ಕೆ. ಶರ್ಮ ಅವರ 'ಟೆಂಪಲ್ಸ್ ಆಫ್ ದಿ ಗಂಗಾಸ್ ಅಫ್ ಕರ್ನಾಟಕ' ಎಂಬ ಗ್ರಂಥದಲ್ಲಿ ತಲಕಾಡು ಗಂಗರ ವಾಸ್ತುಶಿಲ್ಪ ಕೃತಿಗಳನ್ನು ವಿವರವಾಗಿ ವಿವೇಚಿಸಿದ್ದಾರೆ. ಗಂಗರ ಕಾಲದ ಬಸದಿಗಳು ತಲಕಾಡಿನಲ್ಲಿ ದೊರಕದೇ ಇರುವುದರ ಬಗೆಗೆ ಅವರೂ ಚಿಂತೆಯನ್ನು ವ್ಯಕ್ತಪಡಿಸಿದ್ದಾರೆ.

10. ಉಜ್ಜಯಿನಿಯ ಉತ್ಖನನದಲ್ಲಿ ಈ ರೀತಿಯ ಬಳೆಬಾವಿಯು ಪತ್ತೆಯಾಗಿದೆ. ಇಂಡಿಯನ್ ಆರ್ಕಿಯಾಲಜಿ, 1955-1956. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನಲ್ಲಿ ಇದೇ ರೀತಿಯ ಬಳೆ ದೊರಕಿದೆಯೆಂದು ತಿಳಿದುಬಂದಿದೆ. ಆದರೆ ವಿವರಗಳು ತಿಳಿದಿಲ್ಲ.

11. ಈಕೆಯ ಹೆಸರು ಮಂಗಮ್ಮ ಎಂದೂ ಕೆಲವರು ಹೇಳುತ್ತಾರೆ. ಈ ಐತಿಹ್ಯದಲ್ಲಿ ಅನೇಕ ಭಿನ್ನ ಭಿನ್ನ ಘಟನೆಗಳು ಕಾಣಬರುತ್ತವೆ. ಈಗಲೂ ಮೈಸೂರಿನ ಅರಮನೆಯಲ್ಲಿ ನವರಾತ್ರಿಯ ನವಮಿಯ ರಾತ್ರಿ, ಅಲಮೇಲಮ್ಮನ ವಿಗ್ರಹಕ್ಕೆ ಎಲ್ಲ ಆಭರಣಗಳನ್ನು ತೊಡಿಸಿ, ಆಕೆಗೆ ಪೂಜೆ ಮಾಡುತ್ತಾರೆಂದು ತಿಳಿಯುತ್ತದೆ. ಬಹುಶಃ ಇದು ಶಾಪವಿಮೋಚನೆಗಾಗಿ ಇರಬೇಕು.

* * * * *

ಭಾಷೆ ಮತ್ತು ಉಪಸಂಸ್ಕೃತಿ

- ಶಾಲಿನಿ ರಘುನಾಥ್

ಭಾಷೆಗೂ ಸಂಸ್ಕೃತಿಗೂ ಅವಿನಾಭಾವ ಸಂಬಂಧ ಉಪಭಾಷೆಗಳನ್ನಾಡುವ 'ಉಪಸಂಸ್ಕೃತಿ'ಗಳ ಪೂರಕ ಅಧ್ಯಯನಗಳಿಂದಲೇ ಒಂದು ಸಂಸ್ಕೃತಿಯ ಸಮಗ್ರ ಅಧ್ಯಯನ ಸಾಧ್ಯ. ಈ ಹಿನ್ನೆಲೆಯಲ್ಲಿ ಇತ್ತೀಚಿಗೆ 'ಉಪಸಂಸ್ಕೃತಿ' ಅಧ್ಯಯನ ವಿದ್ವಾಂಸರ ಗಮನ ಹೆಚ್ಚಾಗಿ ಸೆಳೆಯತೊಡಗಿದೆ.

ಭಾಷೆ ಸಂಸ್ಕೃತಿಯ ವಾಹಕ. ಒಂದು ಸಂಸ್ಕೃತಿಯ ಶಾಬ್ದಿಕ ಹಾಗೂ ಕ್ರಿಯಾತ್ಮಕ ಬಗೆಗಳನ್ನು ವಿವರಿಸಲು ಮತ್ತೆ ನಾವು ಭಾಷೆಯನ್ನೇ ಮರೆಹೋಗುತ್ತೇವೆ. ವಿವಿಧ ರೀತಿಯ ಶಬ್ದಗಳನ್ನು ಹೊಂದಿದ ಶಬ್ದಕೋಶ, ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯ ವಿಶಿಷ್ಟ ಅಂಶಗಳನ್ನೂ ತನ್ನಲ್ಲಿ ಹುದುಗಿಸಿಟ್ಟುಕೊಂಡಿರುತ್ತದೆ. ಕಾಲನ ಆಘಾತಕ್ಕೆ ಒಳಗಾಗಿ ಶಬ್ದದರೂಪ, ಆಚರಣೆಯ ಕ್ರಿಯಾ ವಿಧಾನಗಳು ಬದಲಾದರೂ ಕೂಡ, ಆಳವಾದ ಅಧ್ಯಯನದಿಂದ ಮೂಲ ಅರ್ಥವನ್ನು ಅನಾವರಣಗೊಳಿಸಿಕೊಂಡರೆ ಆ ಸಂಸ್ಕೃತಿಯ ಅನೇಕ ವಿಷಯಗಳು ನಮಗೆ ಅರಿವಾಗಬಲ್ಲವು. ಈ ಮಾತಿಗೆ ನಿದರ್ಶನವೆನ್ನುವಂತೆ ಹವ್ಯಕರ ಭಾಷೆಯಿಂದ ಅವರ ಸಂಸ್ಕೃತಿಯನ್ನು ಗುರುತಿಸಿಕೊಡುವ ಪ್ರಯತ್ನವಾಗಿದೆ ಈ ಲೇಖನ.

'ಹವ್ಯಕ'ಇದು 'ಹೈಗ' ಶಬ್ದದ ಸಂಸ್ಕೃತೀಕರಣ. 'ಹೈಗ' ಶಬ್ದದಿಂದ 'ಹವ್ಯಕ' ಸಮಾಜವಾಚಿ ಹುಟ್ಟಿಕೊಂಡಿದೆ. (ವಿವರಗಳಿಗೆ ನೋಡಿ: 'ಹವ್ಯಕರ ಮೂಲ' ಸಾಧನೆ ಸಂಪುಟ-8, ಸಂ-2,1979) ಈ ಸಮಾಜದ ಜನರು ಉತ್ತರ ಕನ್ನಡ, ದಕ್ಷಿಣಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ, ಕಾಸರಗೋಡು ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇವರು ಮಾತನಾಡುವ ಭಾಷೆಯನ್ನು 'ಹವ್ಯಕ ಕನ್ನಡ'ವೆಂದು ಕರೆಯಲಾಗುತ್ತದೆ. ಇದರಲ್ಲಿ ಹಳಗನ್ನಡದ ಅನೇಕ ಶಬ್ದಗಳು ಯಥಾವತ್ತಾಗಿ ಅಥವಾ ಅಲ್ಪಬದಲಾವಣೆಯೊಂದಿಗೆ ಜೀವಂತವಾಗಿವೆ. ಅನೇಕ ಹಳಗನ್ನಡ ಶಬ್ದಗಳ ಅರ್ಥ ಬಿಡಿಸುವಲ್ಲಿ, ಅವುಗಳ ಸಾಂಸ್ಕೃತಿಕ ಮಹತ್ವ ತಿಳಿಯುವಲ್ಲಿ, ಒಟ್ಟಾರೆ ಕನ್ನಡ ಶಬ್ದಗಳ ಇತಿಹಾಸ ತಿಳಿಯುವಲ್ಲಿ ಈ ಉಪಭಾಷೆಯ ಅಧ್ಯಯನ ತುಂಬಾ ಸಹಾಯಕಾರಿ. ದಿ|| ತೀ.ನಂ. ಶ್ರೀಕಂಠಯ್ಯನವರೂ "ಹವ್ಯಕ" ಕನ್ನಡದ ಮಹತ್ವವನ್ನು ಮನಗಂಡಿದ್ದರು. ಈ ಭಾಷೆ ಬದಲಾಗುವ ಮುನ್ನ, ಬಳಕೆಯಲ್ಲಿರುವ ಶಬ್ದಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ ಎಂದೂ ಹೇಳಿದ್ದರು. (ತೀ. ನಂ. ಶ್ರೀಕಂಠಯ್ಯ, 1955, ಪುಟ-180-81). ಟಿ. ಕೇಶವ ಭಟ್ಟರ ಹವ್ಯಕ

ಪದಸಂಚಯ ಮತ್ತು ಮರಿಯಪ್ಪ ಭಟ್ಟರ ಹವ್ಯಕ-ಇಂಗ್ಲೀಷ್ ನಿಘಂಟು ಈ ದಿಶೆಯಲ್ಲಿ ಕೈಕೊಂಡ ಅಧ್ಯಯನಗಳ ಫಲಗಳಾಗಿದ್ದು, ಸಮಗ್ರ ಹವ್ಯಕ ನಿಘಂಟೊಂದು ತಯಾರಾಗಬೇಕಾಗಿದೆ. ಪ್ರಸ್ತುತ ಲೇಖನದಲ್ಲಿ ಕೆಲವು ಹವ್ಯಕ ಶಬ್ದಗಳ ಸಾಂಸ್ಕೃತಿಕ ಅಧ್ಯಯನ ಕೈಕೊಳ್ಳಲಾಗಿದ್ದು, ಒಂದು ಉಪಸಂಸ್ಕೃತಿಯ ಭಾಷಿಕ ಅಧ್ಯಯನ, ಮುಖ್ಯ ಸಂಸ್ಕೃತಿಯ ಅಧ್ಯಯನಕ್ಕೆ ಎಷ್ಟರಮಟ್ಟಿಗೆ ಸಹಕಾರಿ ಎಂಬುದನ್ನು ಬಿಂಬಿಸುವ ಪ್ರಯತ್ನವಿದೆ.

ಯಾವುದೇ ಹವ್ಯಕನ ಮನೆ ಪ್ರವೇಶಿಸಿದರೂ ನಿಮಗೆ ಮೊದಲು ಸ್ವಾಗತ ಬಯಸುವುದು, ಹಾಸಿದ ಕಂಬಳಿಯ ಮೇಲಿದ್ದ ಕವ್ಳದ ತಬಕು. 'ಕವ್ಳ' ಇದು ತುತ್ತಲ್ಲ; ತಾಂಬೂಲ! ಊಟ ತಿಂಡಿ ಮತ್ತು ನಿದ್ರೆ ಈ ಸಮಯವನ್ನುಳಿದ ದಿನದ ಇತರ ಕಾಲದಲ್ಲಿ ಹವ್ಯಕನ ಬಾಯಲ್ಲಿ ರಾರಾಜಿಸುವ ಎಲೆಯಡಿಕೆ! ಬಂದ ಅತಿಥಿ(ಗೃಹಸ್ಥ)ಗಳಿಗೆ ಊಟೋಪಚಾರಕ್ಕಿಂತ ಮುನ್ನ ಕವ್ಳದ ಆತಿಥ್ಯ ಅವಶ್ಯವಾಗಿ ಆಗಬೇಕು. ಅಷ್ಟರಮಟ್ಟಿಗೆ ಈ ಸಂಸ್ಕೃತಿಯಲ್ಲಿ ಅದಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಹವ್ಯಕ ಹೆಂಗಳೆಯರೂ ಕವ್ಳ ಪ್ರಿಯರೇ. ಕೆಲವೊಮ್ಮೆ ಮನೆಯ ಜಗುಲಿಯಲ್ಲೊಂದು (ಗಂಡಸರಿಗೆ), ಹಿಂದುಗಡೆಯ ಕೈಸಾಲೆಯಲ್ಲೊಂದು (ಹೆಂಗಸರಿಗಾಗಿ)- ಹೀಗೆ ಎರಡೆರಡು ಕವ್ಳದ ತಬಕುಗಳು ಇರುತ್ತವೆ. ಆದರೆ ಮದುವೆಯಾದವರಿಗೆ ಮಾತ್ರ ವೀಳ್ಯ ಮೆಲ್ಲುವ ಅಧಿಕಾರವಿರುತ್ತದೆ. (ಈ ಕುರಿತು ಮುಂದೆ ವಿವರಣೆ ಬರುತ್ತದೆ).

ಹವ್ಯಕರು ವೈದಿಕ ಸಂಪ್ರದಾಯಕ್ಕೆ ಸೇರಿದವರಾಗಿದ್ದರೂ ತೋಟಗದ್ದೆಗಳ ಬೇಸಾಯ ಕ್ರಮದಿಂದ ಅವರು ಕೃಷಿಕರು ಎನ್ನಿಸಿಕೊಂಡಿದ್ದಾರೆ. ಅನೇಕ ಸ್ಥಳೀಯ ಆಚರಣೆಗಳೂ ಅವರಲ್ಲಿವೆ. ವಿವಾಹ ಮುಂತಾದ ಧಾರ್ಮಿಕ ವಿಧಿ-ವಿಧಾನಗಳಲ್ಲೂ ಈ ಅಂಶವನ್ನು ನಾವು ಗುರುತಿಸಬಹುದಾಗಿದೆ. ಈ ಸಂದರ್ಭದಲ್ಲಿ ಅವರು ಬಳಸುವ ಕೆಲವು ಶಬ್ದಗಳ ಹಾಗೂ ಕ್ರಿಯಾವಿಧಾನಗಳ ಅಧ್ಯಯನ- ಒಟ್ಟು ಕನ್ನಡ ಸಂಸ್ಕೃತಿಯ ಇತಿಹಾಸದ ಮೇಲೆ ಹೊಸಬೆಳಕು ಬೀರಬಹುದಾಗಿದೆ.

'ಸಟ್ಮುಡಿ' ಎಂಬುದು ವಧೂಗೃಹ ಪ್ರವೇಶಕ್ಕೆ ಹವ್ಯಕರಲ್ಲಿದ್ದ ಹೆಸರು. ವಧುವು ವರನ ಗೃಹದಲ್ಲಿ ಮನೆವಾರ್ತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಕಾರ್ಯಕ್ರಮವೇ ಈ 'ಸಟ್ಮುಡಿ' ಶಾಸ್ತ್ರ. ಸೊಸೆಯಾದವಳು ಅಡಿಗೆ ಕೆಲಸ ಪ್ರಾರಂಭಿಸುವ ಅಂದರೆ ಅತ್ತೆಯ ಮನೆಯಲ್ಲಿ'ಸಟ್ಟುಗಮುಡಿ' ಒಡಿಯುವ ಮಹತ್ವದ ಸನ್ನಿವೇಶವನ್ನು ಈ ಶಬ್ದ ಅರುಹುತ್ತದೆ. ನಮಗೀಗ ಈ ಶಬ್ದ ರನ್ನ ನಿಘಂಟಿನಲ್ಲಿ ಮಾತ್ರ ಉಪಲಬ್ಧವಿದೆ. ಅಲ್ಲಿ ರನ್ನ 'ಕೈವಟ್ಟಲ್' ಮತ್ತು'ಸಟ್ಟುಗ ಮುಡಿ' ಇವು ಸಮಾನಾರ್ಥಗಳೆಂದಿದ್ದಾನೆ (ಕಲಬುರ್ಗಿ ಎಂ. ಎಂ. 1988, ಪುಟ-473). ಹವ್ಯಕರಲ್ಲಿ ಸಟ್ಟುಗಮುಡಿ>ಸಟ್ಟುಮುಡಿ>ಸಟ್ಮುಡಿ ಎಂದಾಗಿ ಬಳಕೆಯಲ್ಲಿದೆ. 'ಸಟ್ಮುಡಿಶಾಸ್ತ್ರ' ದಲ್ಲಿ ವಧುವು ಬಡಿಸುವ ಸಟ್ಟುಗಕ್ಕೆ ಹೂಮುಡಿಸಿ, ಪೂಜಿಸಿ, ವರನಿಗೆ ನಮಸ್ಕರಿಸಿ ಆತನಿಂದ ಸಟ್ಟುಗವನ್ನು ಪಡೆಯುತ್ತಾಳೆ.

(ಭಟ್ಟ, ಕೇಶವ. 1986, ಪುಟ-596). ಜೊತೆಗೆ, ಈ ಸಂದರ್ಭದಲ್ಲಿಯೇ ವರನು ಒಂದು ಬುಟ್ಟಿಯಲ್ಲಿ ತರಕಾರಿಯನ್ನು ತಂದುಕೊಡುತ್ತಾನೆ. ಅದನ್ನು ವಧು ಹೆಚ್ಚಿ, ಅಡಿಗೆ ತಯಾರಿಸುತ್ತಾಳೆ. ಈ ಶಾಸ್ತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸಮಾಜಶಾಸ್ತ್ರಜ್ಞರು ಈಗಾಗಲೇ ಗುರುತಿಸಿರುವಂತೆ ಪ್ರಾಚೀನ ಕೌಟುಂಬಿಕ ಪದ್ಧತಿಗಳು-ಕೆಲಸಕಾರ್ಯಗಳು ಶ್ರಮ ವಿಭಜನಾತತ್ವದ ಮೇಲೆ ಆಧರಿತವಾದವು ಎಂಬುದನ್ನು ಈ ಆಚರಣೆಯಲ್ಲೂ ಗುರುತಿಸಬಹುದು. ಆದರೂ ವಧೂ ಗೃಹಪ್ರವೇಶದಿಂದ ಹೆಣ್ಣಿನ ಜೀವನದಲ್ಲಿ ಆಗುವ ಮಹತ್ತರ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಹವ್ಯಕರು ಈ ಶಾಸ್ತ್ರವನ್ನು 'ಸಟ್ಟುಮುಡಿ' ಎಂದು ಕರೆದಿದ್ದಾರೆ. ಹವ್ಯಕ ಸಂಸ್ಕೃತಿಯ ಅಸ್ತಿತ್ವ ಕ್ರಿ. ಶ.10ನೆಯ ಶತಮಾನಕ್ಕಿಂತ ಹಿಂದೆ ಹೋಗುವುದೆಂದು ರನ್ನ ನಿಘಂಟಿನಲ್ಲಿ ಕಾಣಿಸಿಕೊಂಡ ಈ ಶಬ್ದದ ಮೂಲರೂಪದ ಉಲ್ಲೇಖ (ಸಟ್ಟುಗಮುಡಿ)ದಿಂದ ತಿಳಿದುಬರುತ್ತದೆ.

'ಸಟ್ಟುಮುಡಿ'ಯ ಸಂದರ್ಭದಲ್ಲಿಯೇ 'ಚಟ್ಟುಹೊಯ್ಯುವ' ಮತ್ತೊಂದು ಆಚರಣೆ ಇದೆ. ದೇವರ ಮುಂದಿನ ಗೋಡೆಯಮೇಲೆ ಅರಿಶಿಣದ ನೀರಿನಲ್ಲಿ ಅದ್ದಿದ ವಧುವಿನ ಎರಡೂ ಕೈ ಗುರುತುಗಳನ್ನು ಗೋಪುರಾಕಾರದಲ್ಲಿ ಮೂಡಿಸುವ ಶಾಸ್ತ್ರವಿದು. 'ಚಟ್ಟು' ಎನ್ನುವುದಕ್ಕೆ ನಿಘಂಟಿನಲ್ಲಿ 'ಪ್ರಥಮ ಋತುಮತಿಯಾದವಳು ಗೋಡೆಗೆ ಒತ್ತುವ ಅರಿಸಿನದಿಂದ ಅಂಕಿತವಾದ ಹಸ್ತದ ಗುರುತು' ಎಂದಿದೆ. ಜೊತೆಗೆ 'ಚಟ್ಟು' ಎಂದರೆ 'ಹುಡುಗಿಯು ಪ್ರಥಮ ಋತುಮತಿಯಾದಾಗ ಮಾಡುವ ಸಮಾರಂಭ' (ತಮಿಳು ಶಬ್ದ) ಎನ್ನಲಾಗಿದೆ. ಚಟ್ಟುಹೊಯ್ದ ವಧು ತನ್ನ ಅರಿಶಿಣದ ಕೈಗಳನ್ನು ಅತ್ತೆಯ ಸೀರೆಗೆ ಒರೆಸುತ್ತಾಳೆ. ಆಗ ಅತ್ತೆ ತನ್ನ ಮಡಿಲ ಮೇಲೆ, ಸೊಸೆಯನ್ನು ಕೂಡಿಸಿಕೊಂಡು, ತಾನು ಉಡುವ ಸೀರೆಯೊಂದನ್ನು ಸೊಸೆಗೆ ಕೊಡಬೇಕು. ಈ ಆಚರಣೆಯ ಹಿಂದಿರುವ ಉದ್ದೇಶ ಮತ್ತು ಸಾಂಸ್ಕೃತಿಕ ಮಹತ್ವ ನಮಗೆ ಮುಖ್ಯವೆನಿಸುತ್ತದೆ. ಅತ್ತೆಯೊಂದಿಗೆ ಸಲುಗೆ ಗೌರವ ಬೆಳೆಸಿಕೊಳ್ಳಲು ಈ ಶಾಸ್ತ್ರ ನೆರವಾಗುತ್ತದೆ. ಹಿಂದಿನ ಕಾಲದಲ್ಲಿ ಮೈನೆರೆಯುವ ಮೊದಲೇ ಬಾಲ್ಯವಿವಾಹ ಮಾಡಿಸುತ್ತಿದ್ದು, ಮೈನೆರೆಯುತ್ತಲೇ ಗಂಡನ ಮನೆಗೆ ಕರೆದೊಯ್ದು ಚಟ್ಟುಹೊಯ್ಯುವುದು, ಸಟ್ಮುಡಿ ಇತ್ಯಾದಿ ಕಾರ್ಯಕ್ರಮಗಳನ್ನು ಜರುಗಿಸುತ್ತಿದ್ದರೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿಯೇ ಹಿಂದಿನ ಆಚರಣೆಗಳ ಪಳಿಯುಳಿಕೆಯಾಗಿ ಈಗ ಈ 'ಚಟ್ಟುಹೊಯ್ಯುವುದು' ಹವ್ಯಕರಲ್ಲಿದೆ. ಟಿ. ಕೇಶವಭಟ್ಟರು ಗುರುತಿಸಿರುವಂತೆ, ಇದು ಅಮಂಗಲಪರಿಹಾರಕವೂ ಕರ್ಮಯೋಗ ದ್ಯೋತಕವೂ ಆಗಿರುತ್ತದೆ. (ಕೇಶವಭಟ್ಟ, 1986, ಪುಟ-596) ಒಟ್ಟಿನಲ್ಲಿ ವಧುವಾದವಳು, ವರನ ಮನೆಯ ಗೋಡೆಯ ಮೇಲೆ 'ಚಟ್ಟುಹೊಯ್ದು' ಆ ಮನೆಯಲ್ಲಿ ಅಸ್ತಿತ್ವವನ್ನು ಗುರುತಿಸಿಕೊಟ್ಟು, 'ಸಟ್ಮುಡಿ'ಯ ಮೂಲಕ ಆ ಮನೆಯ ಜವಾಬ್ದಾರಿಯನ್ನು ಹೊರಲು ಅಣಿಯಾಗುತ್ತಾಳೆ.

ವಿವಾಹ ಕಾರ್ಯಕ್ರಮದಲ್ಲಿಯೇ ಸೇರಬೇಕಾದ್ದು, 'ನಾಗೋಲಿ'ಶಾಸ್ತ್ರ. ನಾಲ್ಕು ದಿನಗಳ ಮದುವೆಯಲ್ಲಿ ಕೊನೆಯದಿನ ಈ ಶಾಸ್ತ್ರವಿರುತ್ತಿತ್ತು. ಚತುರ್ಥದಿನದ ಈ

ಕಾರ್ಯಕ್ರಮ ಅತ್ಯಂತ ವೈಭವದಿಂದ ಜರುಗುತ್ತಿತ್ತೆಂದು ತೋರುತ್ತದೆ. ಅಂದು 'ಚತುರ್ಥಿಯ ದಿಬ್ಬಣ' ಬರುವುದು. ಅರಿಶಿಣ್ಣ-ಎಣ್ಣೆ-ಓಕುಳಿ, ಭೂರಿಬೋಜನ ಇತ್ಯಾದಿ ಇರುತ್ತಿದ್ದವು. ವರ್ಧಮಾನ ಪುರಾಣದಲ್ಲಿಯೂ 'ಅಂತು ಬೀಯಮಂ ಮೆರೆದು ನಾಲ್ಕನೆಯ ದೆವಸದೊಳ್ ನಾಗವಲಿಯಂ ಮಾಡಿ, ನಿರ್ವರ್ತಿತ ವಿವಾಹೋತ್ಸವಂ......' ಎಂದು ಮುಂತಾಗಿ ವರ್ಣನೆ ಇದೆ. (ಮರಿಯಪ್ಪ ಭಟ್ಟ [ಸಂ], 1953). ಬಿಳಗಿ ಅರಸರುಗಳ ವಂಶಾವಳಿಯಲ್ಲಿಯೂ ವೆಂಕಟರಾಯನ ಮಗಳು ರಾಮಾದೇವಿ, ಬಿಳಗಿ ಘಂಟೆ ಭೂಪಾಲನನ್ನು ಮದುವೆಯಾದಾಗ ನಾಲ್ಕನೆಯ ದಿನ 'ನಾಗವಲ್ಲಿ'ಯನ್ನು ರಚಿಸಿದುದಾಗಿ ವರ್ಣಿಸಲಾಗಿದೆ. (ನೋಡಿ ಬಿ. ರಾಮರಾವ್ 1933,ಪುಟ-21). ಈ ಶಬ್ದವನ್ನು ಕೆಲವರು ನಾಕ+ ಬಲಿ> ನಾಗಬಲಿ>ನಾಗವಲಿ>ನಾಗೋಲಿ ಎಂದು ಅರ್ಥೈಸಲು ಪ್ರಯತ್ನಿಸುತ್ತಾರೆ. ಆದರೆ ನಾಕಬಲಿಗೂ ನಾಗೋಲಿಗೂ ಸಂಬಂಧವಿರಲಿಕ್ಕಿಲ್ಲವೆಂದು ತೋರುತ್ತದೆ. ಬದಲಾಗಿ ನಾಗವಲ್ಲಿ >ನಾಗವಲಿ> ನಾಗೋಲಿಯಾಗಿರುವ ಸಾಧ್ಯತೆ ಇದೆ. ಹವ್ಯಕರಲ್ಲಿ ಮದುವೆಯ ಕೊನೆಯ ಶಾಸ್ತ್ರವಾಗಿ ವಧೂವರರು ನಾಗವಲ್ಲಿ 'ಎಲೆ ಸಕುವ' (ಎಲೆಯನ್ನು ಜೋಡಿಸುವ),ಹಾಗೂ ಹಿರಿಯರಿಂದ ತಾಂಬೂಲ ಮೆಲ್ಲುವ ಅಧಿಕಾರ ಪಡೆಯುವ ಕಾರ್ಯಕ್ರಮವಿರುತ್ತದೆ. ಊಟವೆಲ್ಲ ಆದಮೇಲೆ ಒಂದು ಬುಟ್ಟಿ ವೀಳ್ಯದೆಲೆಯನ್ನು ತಂದು ಜೊತೆಯಾಗಿ ಕುಳಿತ ವಧೂ-ವರರ ಮುಂದೆ ರಾಶಿಹಾಕುತ್ತಾರೆ. ಹೆಂಗಳೆಯರೆಲ್ಲರ ತಮಾಷೆ, ವಿನೋದಗಳು ನಡೆಯುತ್ತಿದ್ದಂತೆ, ಅವರಿಬ್ಬರಿಗೂ ಪ್ರತ್ಯೇಕವಾಗಿ ವೀಳಿಯದೆಲೆಯನ್ನು ಸಾಕಲು (ಜೋಡಿಸಲು) ಹೇಳುತ್ತಾರೆ. ಯಾರು ಚೆನ್ನಾಗಿ ಹಾಗೂ ಹೆಚ್ಚು ಜೋಡಿಸುವರೋ ಅವರು ಗೆದ್ದಂತೆ. ಇದು ಸಲಿಗೆ ಬೆಳೆಸುವ ಆಟದಂತೆ ನಡೆದುಹೋಗುತ್ತದೆ. (ಎಲೆ ಸಾಕುವ ಹಾಡುಗಳಿಗಾಗಿ ನೋಡಿ. ಟಿ. ಕೇಶವಭಟ್ಟ,1988,ಪುಟ-170-171). ಆದರೆ ನಮಗೆ ಮುಖ್ಯವಾದುದು ಕಾರ್ಯಕ್ರಮದ ಮುಂದಿನ ಭಾಗ. ವಧುವು, ಹಿರಿಯರ ಆದೇಶದಂತೆ ಎಲೆ, ಸುಣ್ಣ, ಅಡಿಕೆ, ಲವಂಗ ಇತ್ಯಾದಿ ಬಳಸಿಕೊಂಡು, ಐದು ವೀಳಿಯಪಟ್ಟಿ (ಪಾನಪಟ್ಟಿ)ಗಳನ್ನು ತಯಾರಿಸಬೇಕು. ಅವನ್ನು ವರನಿಗೆ ಒಂದು ಬಟ್ಟಲಿನಲ್ಲಿಟ್ಟು ಕೊಡಬೇಕು. ಅವನು ತನಗೆ ಬೇಕಾದಷ್ಟನ್ನು ಸ್ವೀಕರಿಸಿ, ಉಳಿದುವನ್ನು ಮತ್ತೆ ವಧುವಿಗೆ ಕೊಡಬೇಕು. ಮದುವೆಗಿಂತ ಮೊದಲು ಗಂಡು-ಹೆಣ್ಣುಗಳಿಗೆ ತಾಂಬೂಲ ಸೇವನೆಗೆ ಅಧಿಕಾರವಿಲ್ಲ; ಅದು ನಿಷಿದ್ಧ. ನಾಗೋಲಿಶಾಸ್ತ್ರದ ನಂತರ ಅವರಿಗೆ ವೀಳ್ಯ ಮೆಲ್ಲುವುದಕ್ಕೆ ಅಧಿಕಾರ (ಪರವಾನಿಗೆ) ದೊರೆಯುತ್ತದೆ. ಆದುದರಿಂದ ಈ ಆಚರಣೆಯಲ್ಲಿ ವಿನೋದ-ಸಲಿಗೆಗಳನ್ನು ಬೆಳೆಯಿಸಿಕೊಳ್ಳುತ್ತಲೇ ವಧೂವರರು ತಮ್ಮ ಜೀವನದಲ್ಲಿ, ಹವ್ಯಕ ಸಂಸ್ಕೃತಿಯ ವೈಶಿಷ್ಟ್ಯವೂ, ದಾಂಪತ್ಯಜೀವನಕ್ಕೆ ಉತ್ತೇಜನ ಹಾಗೂ ಮಧುರತೆಯನ್ನು ನೀಡುವಂತಹುದೂ, ಜೀರ್ಣಶಕ್ತಿಯನ್ನು ವರ್ಧಿಸುವಂತಹದೂ ಆದ ತಾಂಬೂಲ ಸೇವನೆಯನ್ನು ಪ್ರಾರಂಭಿಸುತ್ತಾರೆ. ಈ ಶಾಸ್ತ್ರದಿಂದ ಇದಕ್ಕಿರುವ ಪಾವಿತ್ರ್ಯವು

ನಮ್ಮ ಅರಿವಿಗೆ ಬರುತ್ತದೆ. ಇವನ್ನೆಲ್ಲ ಗಮನಿಸಿದಾಗ 'ನಾಗವಲ್ಲಿ'ಯಿಂದಲೇ 'ನಾಗೋಲಿ' ಬಂದಿರಬೇಕೆಂದೆನ್ನಿಸುತ್ತದೆ.

ಕಿಟ್ಟೆಲ್, 'ನಾಗೋಲಿನಿಷ್ಪೂರ'ವನ್ನು ಹೆಸರಿಸಿದ್ದಾರೆ. ಇದು ನಾಗೋಲಿಯ ದಿನ ಬೀಗರು ಒಬ್ಬರನ್ನೊಬ್ಬರು ಜರಿದುಕೊಳ್ಳುವ ಪದ್ಧತಿಯನ್ನು ತಿಳಿಸುತ್ತದೆ. ಜರಿಯುವ ಹಾಡುಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಜೊತೆಗೆ 'ನಾಗವಲ್ಲೀ ಪಚ್ಚಡ'ವು ನಾಗೋಲಿಯ ದಿನ ಮಾವ, ಅಳಿಯನಿಗೆ ಕೊಡುವ ಉಡುಗೊರೆಯಾಗಿದೆ. ಒಟ್ಟಿನಲ್ಲಿ 'ನಾಗೋಲಿ' ಯ ಬಗ್ಗೆ ಇನ್ನಷ್ಟು ಸಂಶೋಧನೆಯಾಗಬೇಕಾದ ಅಗತ್ಯವಿದೆ.

'ಸಟ್ಮುಡಿ'ಯ ದಿನವೇ ಉಡುಗೆಗೆ ಸಂಬಂಧಿಸಿದ ಇನ್ನೊಂದು ಶಾಸ್ತ್ರವೂ ನಡೆಯುತ್ತದೆ. ಅದೇ, 'ಮೇಗ್ಲ ಮುಹೂರ್ತ'. ಇದು ವರನಾದವನು ವಧುವಿಗೆ ನೀಡುವ ಗೌರವ ಹಾಗೂ ಅಧಿಕಾರ ಎಂದೂ ಭಾವಿಸಬಹುದು. ಹೆಣ್ಣು ಮದುವೆಯಾಗಿದ್ದರ ಗುರುತಾಗಿ 'ಸರಿಗೆ' ಅಥವಾ 'ಬಂದಿ' ಧರಿಸುತ್ತಾಳೆ. ಇದು ಬೆಳ್ಳಿ ಅಥವಾ ಬಂಗಾರದಲ್ಲಿ ಮಾಡಿದ ದಪ್ಪ ತಂತಿಯಾಗಿದ್ದು, ಒಂದು ಕೊರಳ ಆಭರಣ; ಹೆಣ್ಣು ಮದುವೆಯಾಗಿದ್ದರ ಗುರುತು; ಅದು ಅವಳಿಗೆ ಅವಶ್ಯಕವೂ ಹೌದು. ಮೊದಲು ದುಪ್ಪಟಿಯನ್ನು ಸುತ್ತಿಕೊಳ್ಳುತ್ತಿದ್ದ ಅವಳು, ಮದುವೆಯಾದ ಮೇಲೆ ಸೀರೆಯನ್ನು ಸುತ್ತುಡಲು ಪ್ರಾರಂಭಿಸುತ್ತಾಳೆ. ಈ 'ಸುತ್ತುಡುವ ಪದ್ಧತಿ' ವೈಶಿಷ್ಟ್ಯಪೂರ್ಣವಾಗಿದೆ. 18 ಮೊಳದ ಸೀರೆಯಲ್ಲಿ ಮೊದಲು ಸೆರಗು ಹೊದ್ದು, ಉಳಿದ ಭಾಗವನ್ನು ಬಲಗಡೆಯ ಹಿಂಬದಿಯಿಂದ ಎಡಗಡೆಗೆ ತಂದು 'ನೆರಿಗೆ'ಹಿಡಿಯುತ್ತಾರೆ. ನೆರಿಗೆ ಹಿಡಿಯುವಾಗ ಸೀರೆಯ ಮತ್ತೊಂದು ತುದಿಯಲ್ಲಿಯೂ ಸಾಕಷ್ಟು ಉದ್ದದ ಭಾಗವನ್ನು ಬಿಟ್ಟಿರುತ್ತಿದ್ದು, ನಂತರ ಉಳಿದ ಭಾಗವನ್ನು ಮತ್ತೆ ಬಲಗಡೆಯ ಹಿಂಬದಿಯಿಂದ ಎಡಗಡೆಗೆ ತಂದು 'ನೆರಿಗೆ'ಗಳಿಗೂ, ಸೊಂಟಕ್ಕೂ ಒಂದು ಕಟ್ಟಿನಂತೆ ಬಿಗಿದು, ಬಲಸೊಂಟಕ್ಕಿರುವ ಸೀರೆಯೊಳಗೆ ಸಿಕ್ಕಿಸುತ್ತಾರೆ. ಈ ಪದ್ಧತಿಯಲ್ಲಿ ಸೀರೆಯ ನೆರಿಗೆಗಳ ಮೇಲ್ತುದಿ ಹೊರಗೆ ಕಾಣುತ್ತಿರುತ್ತದೆ. ಸೀರೆ, ಮೊಳಕಾಲ ಗಂಟಿನವರೆಗೆ ಬಂದಿರುತ್ತದೆ. ಸಟ್ಮುಡಿಯ ದಿನ ವರನಾದವನು 'ವಧು'ವಿನ ಸೀರೆಯ ಸೆರಗನ್ನು ಅವಳ ಕೊರಳಲ್ಲಿರುವ 'ಬಂದಿ' ಅಥವಾ ಸರಿಗೆಗೆ ಸಿಕ್ಕಿಸುತ್ತಾನೆ. ಇದನ್ನೇ 'ಮೇಗ್ಲ ಮುಹೂರ್ತ'ಎಂದು ಕರೆಯುತ್ತಾರೆ. ಪ್ರಾಯಶಃ ಮೇಲುದ > ಮೇಲ್ದ > ಮೇಗ್ಲ (ತಪ್ಪುಉಚ್ಚಾರ) ಎಂದು ಬದಲಾಗಿರಬೇಕು. ಈಗ, ಹೀಗೆ ಸುತ್ತುಡುವ ಪದ್ಧತಿ ಸಾರ್ವತ್ರಿಕವಾಗಿ ಇಲ್ಲ; ವಿಧವೆಯರು ಮಾತ್ರ ಹಾಗೆ ಉಟ್ಟು ಸೆರಗನ್ನು ತಲೆಯ ಮೇಲೆ ಹೊದೆಯುತ್ತಾರೆ. ಹಿಂದೆ ಸೆರಗಿನ ಭಾರವನ್ನು ಸಹಿಸಲು ಕುತ್ತಿಗೆಯ ಸರಿಗೆ ಸಾಕಷ್ಟು ಗಟ್ಟಿಯೇ ಇರಬೇಕಿತ್ತು. ಈಗ ಸರಿಗೆ, ಬಂದಿಗಳೂ ಮಾಯವಾಗುತ್ತಿವೆ. ಈ ಶಾಸ್ತ್ರದಲ್ಲಿ ಗಂಡ-ಹೆಂಡಿರಲ್ಲಿ ಅನ್ಯೋನ್ಯತೆ ಹಾಗೂ ಎಲ್ಲ ಕರ್ಮಗಳಲ್ಲೂ ಸಹಭಾಗಿತ್ವವನ್ನು ಪಡಿಮೂಡಿಸುವ ಉದ್ದೇಶವಿದೆ. ಮೇಗ್ಲ ಸಿಕ್ಕಿಸಿಕೊಂಡ ನಂತರವೇ ಹೋಮ, ಸಟ್ಮುಡಿ, ಚಟ್ಟುಹೊಯ್ಯುವುದು ಇತ್ಯಾದಿ ಶಾಸ್ತ್ರಗಳು ನೆರವೇರುವುದರಿಂದ ವರನ ಮನೆಯಲ್ಲಿ ಹೆಣ್ಣಿಗೆ ನೀಡುವ ವಿಶಿಷ್ಟ ಸ್ಥಾನ-ಗೌರವಗಳು

ಇದರಿಂದ ಲಭ್ಯವೆಂದು ಭಾವಿಸುವಂತಿದೆ. ಈಗ ಹಿಂದಿನ ಈ ಪದ್ಧತಿಯ ಪಳೆಯುಳಿಕೆಯೆಂಬಂತೆ ಮದುವೆಯ ಸಂದರ್ಭದಲ್ಲಿ ದೇವರಿಗೆ ಹಾಗೂ ಗುರು-ಹಿರಿಯರಿಗೆ ನಮಸ್ಕರಿಸುವಾಗ, ಹೋಮಮಾಡುವಾಗ, ಸೀರೆಯ ಸೆರಗನ್ನು ಮೇಗ್ಲ ಸಿಕ್ಕಿಸಿಕೊಳ್ಳುತ್ತಾರೆ. (ಬಂದಿ ಇಲ್ಲದಿದ್ರೆ, ರವಿಕೆಗಾದರೂ ಸಿಕ್ಕಿಸಿಕೊಳ್ಳುತ್ತಾರೆ).

ಹವ್ಯಕರಲ್ಲಿ 'ಶೋಭನ' ಶಾಸ್ತ್ರವನ್ನು 'ದಿಂಡು' ಎಂದು ಕರೆಯಲಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ 'ದಿಂಡಲ್' ಎಂಬುದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ 'ಪ್ರಸ್ತ'ಕ್ಕೆ ಇರುವ ಹೆಸರು ಎನ್ನಲಾಗಿದೆ. 'ಕಾವ್ಯಪದಮಂಜರಿ'ಯಲ್ಲಿ ದಿಂಡು ಎನ್ನುವುದಕ್ಕೆ 'ಗರ್ಭ', ಗರ್ಭಾದಾನವೆಂಬ ಸಂಸ್ಕಾರ ಎಂದಿದೆ. ಆದುದರಿಂದ 'ಶೋಭನ'ಶಾಸ್ತ್ರದಲ್ಲಿ'ಗರ್ಭಾದಾನ'ವೇ ಅತಿ ಮಹತ್ವದ ವಿಧಿಯಾದ್ದರಿಂದ ಆ ಅರ್ಥದ ಹಳಗನ್ನಡದ ಶಬ್ದವೊಂದು ಇನ್ನೂ ಹವ್ಯಕ ಭಾಷೆಯಲ್ಲಿ ಉಳಿದುಕೊಂಡಿದೆ ಎನ್ನಬಹುದು.

ಹವ್ಯಕರ ಆಹಾರ-ಪಾನೀಯಗಳು ವಿಶಿಷ್ಟವಾದವು ಹಾಗೂ ವೈವಿಧ್ಯಮಯವಾದವು. ಅವರು ಕುಡಿಯುವ ತಂಪು ಪಾನೀಯಗಳು 'ಹಣಿ'ಗಳಾಗಿವೆ. ಉದಾ: ಎಳ್ಳಹಣಿ, ಹೆಸ್ರಹಣಿ, ಮಜ್ಜಿಗೆ ಹಣಿ ಇತ್ಯಾದಿ. ಆಯಾ ವಸ್ತುಗಳ ಸಾರದಿಂದ ತಯಾರಾದ ಪಾನೀಯಗಳು ಇವು. ಕೇಶಿರಾಜನಲ್ಲಿಯೂ'ಹಣಿ' ಎಂಬುದಕ್ಕೆ 'ರಸದಾನ' ಎಂಬ ಅರ್ಥವಿದೆ. ಅಲ್ಲದೆ ಶಬ್ದಮಣಿದರ್ಪಣದಲ್ಲಿ 297 ನೇ ಸೂತ್ರದ ವೃತ್ತಿಯಲ್ಲಿ 'ಪೂರ್ವಪದಾಂತ್ಯ ದೀರ್ಘ ಉತ್ತರಪದಾದಿಗೆ ಲೋಪವಾಗಿ ಧರ್ಮಪಾನೀಯಕ್ಕೆ ದಮ್ಮಾಣಿಯಾಯ್ತು'ಎಂದು ಉದಾಹಾರಣೆ ನೀಡಲಾಗಿದೆ.(ಶ.ಮ.ದ.ಪುಟ-286). ಆದುದರಿಂದ 'ಪಾನೀಯ' ಶಬ್ದ ತದ್ಭವವಾಗಿ 'ಹಣಿ'ಯಾಗಿರಬಹುದು; ಅಥವಾ 'ಹಣಿ' ಮೂಲ ಕನ್ನಡದ್ದೇ ಇರಬಹುದು. ಹವ್ಯಕರಲ್ಲಿ 'ಹಣಿ'ಯನ್ನು ಹೆಚ್ಚಾಗಿ ಆಯಾ ವಸ್ತುಗಳನ್ನು ನೀರಿನಲ್ಲಿ ನೆನೆಯಿಸಿಯೋ ಹುರಿದೋ ನಂತರ ರುಬ್ಬಿ, ಅವುಗಳ ಸಾರ ತೆಗೆದು ಬೆಲ್ಲ, ನೀರುಗಳೊಂದಿಗೆ ಸೇರಿಸಿ ತಯಾರಿಸುತ್ತಾರೆ. ಈಗ ಚಹಾ, ಕಾಫಿಗಳ ಹಾವಳಿಯಲ್ಲಿ'ಹಣಿ'ಗಳು ಮೂಲೆ ಗುಂಪಾಗುತ್ತಿವೆ.

ಹವ್ಯಕರ ಅನೇಕ ತಿಂಡಿಗಳಿಗೆ ಅಪ್ಪ, ಅವ್ವ, ಅಣ್ಣ ಎಂಬ ಹೆಸರುಗಳು ಜೋಡಿಸಲ್ಪಟ್ಟಿವೆ. ಸಿಹಿತಿಂಡಿಗಳ ಬಗೆಯನ್ನೇ ಅವರು 'ಅಪ್ಪಚ್ಚಿ'ಎಂದು ಕರೆಯುತ್ತಾರೆ. ಇಲ್ಲಿ ಅಪ್ಪ+ಅಚ್ಚಿ ಎಂದರೂ ಮತ್ತೆ ಅಪ್ಪ+ಅವ್ವ ಎಂಬ ಅರ್ಥವೇ (ಅಚ್ಚಿ ಎಂದರೆ ತಾಯಿ ಎಂಬ ಅರ್ಥ). ಎರೆಯಪ್ಪ ಅಪ್ಪಾಲು, ತೆಳ್ಳವ್ವು, ತೊಡದೇವು, ದೊಡ್ಡ, ಸುಟ್ಟೇವು ಮುಂತಾದ ಹೆಸರುಗಳನ್ನು ಗಮನಿಸಿದಾಗ ಈ ಅಂಶ ಮನದಟ್ಟಾಗುತ್ತದೆ. ರಕ್ತ ಸಂಬಂಧಿಗಳಂತೆ ಇವೂ ಅವರಿಗೆ ಪ್ರಿಯವಾದವು. ಅವುಗಳೊಂದಿಗಿನ ಆತ್ಮೀಯತೆ, ಪ್ರೀತಿ ಇದರಿಂದ ಸುವ್ಯಕ್ತ. ತೊಡದೇವು (ತೊಡೆದ+ಅವ್ವ) ಅಂತೂ ಹವ್ಯಕರ ಪ್ರೀತಿಯ ವಿಶಿಷ್ಟ ತಿಂಡಿ. ನೆನೆಸಿದ ಅಕ್ಕಿಯನ್ನು ಬಸಿದು, ಕಬ್ಬಿನ ಹಾಲಿನಲ್ಲಿ ರುಬ್ಬಿ, ಅದಕ್ಕಾಗಿಯೇ

ವಿಶೇಷವಾಗಿ ಮಾಡಿಸಿದ ಮಡಿಕೆಯನ್ನು ಬೋರಲು ಹಾಕಿ. ಓಟ್ಟನ್ನು ತೆಳ್ಳಗಿನ ಬಟ್ಟೆಯ ಸಹಾಯದಿಂದ ಅದರ ಮೇಲೆ ತೊಡೆದು ಬೇಯಿಸಿ, ಕಾಗದದಷ್ಟು ತೆಳ್ಳಗೆ ಮಾಡಿ ಎಬ್ಬಿಸುವುದರಿಂದ ಅದು ತೊಡೆದ+ಅವ್ವ. ಹವ್ಯಕರ ಅಡಿಗೆ ಪದಾರ್ಥಗಳ ಹೆಸರನ್ನು ಸುಮ್ಮನೆ ಗಮನಿಸುತ್ತ ಹೋದರೂ ಆಹಾರ ತಯಾರಿಕೆಯಲ್ಲಿ ಮತ್ತು ಅವುಗಳಿಗಿಡುವ ಹೆಸರುಗಳಲ್ಲಿ ಗೋಚರವಾಗಿರುವ ಬಗೆ ಅಚ್ಚರಿಯನ್ನು ಹುಟ್ಟಿಸುತ್ತದೆ. ಮಕ್ಕಳು ಆಗಾಗ ತಾಯಿಯನ್ನು ಕಾಡಿ-ಬೇಡಿ ತಿನ್ನುವ ತಿಂಡಿ ಬಾಯ್ಬಡಿಗೆ. ಇದು ಬಾಯಿ +ಬೇಡಿಕೆಯಿಂದ ಬಂದಿದೆ. ಇಂತಹ ಅದೆಷ್ಟು ಸುಂದರ ಕನ್ನಡ ಶಬ್ದಗಳು ಅವರಲ್ಲಿ ಬಳಕೆಯಲ್ಲಿದ್ದವು. ಗೊಜ್ಜು ಎನ್ನುವ ಒಂದೇ ಪ್ರಕಾರದಲ್ಲಿ ಬೇರೆ ಬೇರೆ ವಸ್ತುಗಳ ಗೊಜ್ಜಿನ ಜೊತೆಗೆ, ಹತ್ತನ್ನ ಗೊಜ್ಜು, ಕಟ್ಟನ್ನ ಗೊಜ್ಜು, ಸಾಗೋಜ್ಜು, ನೀರ್‌ಗೊಜ್ಜು, ಬೂತಗೊಜ್ಜು ಇತ್ಯಾದಿಗಳನ್ನು ಅವುಗಳ ಸ್ವರೂಪವನ್ನು ಅರಿಯಬಹುದಾಗಿದೆ. ಇದರಂತೆ ಹವ್ಯಕರ ತಂಬುಳಿ (ತಂಬ್ಳಿ)ಯಲ್ಲಿಯೂ ಅದೆಷ್ಟು ರೀತಿ ಹಾಗೂ ರುಚಿ!

ಹಬ್ಬಗಳ ವಿಷಯಕ್ಕೆ ಬಂದರೆ, ಹಿಂದುಗಳ ಎಲ್ಲ ಹಬ್ಬವನ್ನು ಹವ್ಯಕರು ಆಚರಿಸುವ ದಾದರೂ 'ದೀಪಾವಳಿ'ಅವರಿಗೇ' ದೊಡ್ಡಬ್ಬ'ವಾಗಿದೆ. ಕೃಷಿಕರೂ ಆಗಿರುವ ಅವರು ದನ-ಕರುಗಳನ್ನು ಪೂಜಿಸುವುದೂ, ಕೃಷಿ ಸಲಕರಣೆಗಳನ್ನು ಪೂಜಿಸುವುದೂ ದೊಡ್ಡಬ್ಬದಲ್ಲಿಯೇ. ಯುಗಾದಿ ಅವರಿಗೆ 'ವರ್ಷತೊಡಕಿನ ಹಬ್ಬ'. ಇದು ವರ್ಷ ತೊಡಗಿನ ಅಂದರೆ ವರ್ಷ ಪ್ರಾರಂಭವಾಗುವ ಹಬ್ಬ. ಅಂದು ಹೊಸಬಟ್ಟೆಯನ್ನು ತೊಡುತ್ತಾರೆ. ಅಂದಿನಿಂದ ಹೊಸವರ್ಷದ ಲೆಕ್ಕ ಆರಂಭ. ಕೃಷಿ ಮತ್ತು ಭೂಮಿ ಇವುಗಳಿಗೆ ಸಂಬಂಧಿಸಿದಂತೆ ಗೆಡಿಹಬ್ಬ, ಗಂಟೆಹುಣ್ಣಿಮೆ, ಭೂಮಿ ಹುಣ್ಣಿಮೆ, ಕಣದ ಹಬ್ಬ, ಹುಲಿದೇವರ ಹಬ್ಬ ಇತ್ಯಾದಿ ಆಚರಿಸುತ್ತಾರೆ. ಹೊಸಮನೆ 'ಗೃಹಪ್ರವೇಶ'ವನ್ನು ಹವ್ಯಕರು ಮನೆ 'ಇರುವಾಣ'ವೆನ್ನುತ್ತಾರೆ. ಇದು 'ಇರುವಿಕೆ' ಅಥವಾ(ಇರುವ+ಓಣ (ಹಬ್ಬ)ದಿಂದ ಬಂದಿರಬೇಕು.

ಶಬ್ದಗಳ ಜೊತೆಗೆ ಭಾಷೆಯ ನಿಜವಾದ ಶಕ್ತಿ ವ್ಯಕ್ತವಾಗುವುದು ನುಡಿಕಟ್ಟುಗಳಲ್ಲಿ. ಹವ್ಯಕರ ಅನುಭವ ಹಾಗೂ ಭಾಷಾಸಾಮರ್ಥ್ಯಕ್ಕೆ ನಿದರ್ಶನವಾಗಿ ನೂರಾರು ನುಡಿಕಟ್ಟುಗಳನ್ನು ನೋಡಬಹುದು. ಅವು, ಅವರು ಬದುಕಿ ಬಾಳುತ್ತಿರುವ ಸಂಸ್ಕೃತಿಯ ಸ್ವರೂಪವನ್ನು ನಿಚ್ಚಳವಾಗಿ ಗುರುತಿಸಿಕೊಡಬಲ್ಲವು. ಅಂಥವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು. ಉದಾ: ಗೊಜ್ಜುಬೀಸು (ಅಸಂಬದ್ಧವಾಗಿ ಗಳಹು), ವಗ್ಗರಣೆಕೊಡು (ವ್ಯಂಗ್ಯವಾಗಿ ಮಾತನಾಡು), ದಂಟಕಡಿ (ನಿರುದ್ಯೋಗತನ), ಸೊಳೆಪೊಳದ್ಯ (ವಾಚಾಳಿತನ), ತೊಳಸು (ಅನಾವಶ್ಯಕವಾಗಿ ಅಧಿಕಾರ ಚಲಾಯಿಸು), ಕಡ್ಡಿ ಹಂದದಿರು (ಕೆಲಸ ಮಾಡದಿರು), ದಿಡಹತ್ತು (ಉದ್ಧಾರವಾಗು), ಮಂಗಹರಿ (ನಿಷ್ಪ್ರಯೋಜಕವಾದ ಹರಟೆ), ಹಳ್ಳಹುಳ್ಳಗ ಆಗು (ತಪ್ಪಿನ ಅರಿವಾಗು), ಹಾನಸುಳಿ (ಛೀಮಾರಿಹಾಕು), ದಂಟುರು (ವಾಸ್ತವ್ಯಮಾಡು), ಬ್ಯಾರೇರ್ ತೊಡೆ ಮೇಲೆ ಕತ್ತಹೊಸಿ (ಬೇರೆಯವರ ಸಾಧನದಲ್ಲಿ ತನ್ನ ಕೆಲಸ ಮಾಡಿಕೊಳ್ಳುವುದು), ಬಾಳೆಕಾಯಿ

ಸಂಬಂಧ(ಬಾದರಾಯಣ ಸಂಬಂಧ), ಬಾಳಿಮ್ಯಾಲಿನ ಕೂಳು (ಅಷ್ಟು ಸುಲಭವಾದದ್ದು), ಸೊಳಿರಾಗ (ಬೇಸರ ತರಿಸುವ ಮಾತು) ಇತ್ಯಾದಿ ಉದ್ಧರಿಸುತ್ತಲೇ ಹೋಗಬಹುದು. 'ಕಕ್ಕರಹರಿ ಎನ್ನುವ ಶಬ್ದವನ್ನು ಅಸಂಬದ್ಧವಾಗಿ ಮಾತನಾಡುವುದಕ್ಕೆ ಹವ್ಯಕರಲ್ಲಿ ಬಳಸುತ್ತಾರೆ. 'ಕಕ್ಕರ ಎನ್ನುವ ಶಬ್ದ, ಮದ್ಯದ ಒಂದು ಪ್ರಕಾರಕ್ಕೆ ಸೇರಿದುದು. ಪಂಪಭಾರತದಲ್ಲಿ 'ಕಕ್ಕರ 'ದ ಸೇವನೆಯಿಂದ 'ತುದಿನಾಲಗೆಯೊಳ್ ತೊದಳಿಬರಸು ನುಡಿವ' ಸನ್ನಿವೇಶದ ವರ್ಣನೆ ಇದೆ. ಇದನ್ನು ಕಕ್ಕರಗೆಯ್ತುವೆನ್ನಲಾಗಿದೆ. (ಪಂಪಭಾರತ, 4-88 ವಚನ). ಬಹುತೇಕ ಈ ಅರ್ಥದಿಂದಲೇ'ಹವ್ಯಕ'ರಲ್ಲಿ 'ಕಕ್ಕರಹರಿ ಎಂಬ ಮಾತು, ಅಸಂಬದ್ಧವಾಗಿ ನುಡಿಯುವುದಕ್ಕೆ ಬಂದಿರಬೇಕು. ಹಳಗನ್ನಡ ಕಾವ್ಯಗಳಲ್ಲಿ ಮಾತ್ರ ಕಂಡುಬರುವ ವುಂತೆ (ಸುಮ್ಮನೆ), ಅನ್ನರ (ಅಲ್ಲಿಯವರೆಗೆ), ಸೂಕಾಗಿ (ಸುಮ್ಮನೆ) ಮುಂತಾದ ಶಬ್ದಗಳು ಹವ್ಯಕರಲ್ಲಿ ಸಹಜವಾಗಿ ಬಳಕೆಯಲ್ಲಿವೆ.

ಈ ಮೇಲಿನ ಉದಾಹರಣೆಗಳ ಮೇಲಿಂದ ಒಂದು ಉಪಸಂಸ್ಕೃತಿಯ ಅಧ್ಯಯನ, ಮುಖ್ಯ ಸಂಸ್ಕೃತಿಗೆ ಹಾಗೂ ಭಾಷೆಗೆ ಎಂತಹ ಕೊಡುಗೆಯನ್ನು ನೀಡಬಲ್ಲುದು, ಐತಿಹಾಸಿಕವಾಗಿ ಒಂದು ಭಾಷೆಯನ್ನು ಅರ್ಥಮಾಡಿಕೊಳ್ಳಲು ಅವು ಹೇಗೆ ಸಹಾಯಕವಾಗಬಲ್ಲವು ಎಂಬುದು ಮನದಟ್ಟಾಗಿರಲು ಸಾಕು: ದೇ. ಜವರೇಗೌಡರು ಹವ್ಯಕ-ಇಂಗ್ಲೀಷ್ ನಿಘಂಟಿನ ಮುನ್ನುಡಿಯಲ್ಲಿ ಹೇಳಿರುವಂತೆ 'ಕನ್ನಡದಲ್ಲಿಲ್ಲದ, ಹವ್ಯಕದಲ್ಲಿ ಮಾತ್ರ ಕಂಡುಬರುವ ಅನೇಕ ಪದಗಳು ಸ್ವಾರಸ್ಯಕರವಾಗಿ, ಅರ್ಥಪೂರ್ಣವಾಗಿ, ಅಮೂಲ್ಯವಾಗಿ, ಹಿತವಾಗಿ ಇರೋಣವಾದ್ದರಿಂದ ಅವುಗಳನ್ನು ಕನ್ನಡ ಪದಗಳೊಡನೆ ಬೆರಸಿ ಬಳಸಿದಲ್ಲಿ ಕನ್ನಡದ ಸಂಪತ್ತು ಹಿಗ್ಗುತ್ತದೆ. ಅದರ ತೇಜಸ್ಸು ಉಕ್ಕುತ್ತದೆ, (ಹವ್ಯಕ-ಇಂಗ್ಲೀಷ್ ನಿಘಂಟು, 1983,ಮುನ್ನುಡಿ). ಕನ್ನಡ ಜಾಗೃತಿ ವರ್ಷದಲ್ಲಾದರೂ ಇಂತಹ ಪ್ರಯತ್ನಗಳು ನಡೆದು 'ಸಮಗ್ರ ಹವ್ಯಕ ನಿಘಂಟಿ'ಗೆ ನಾಂದಿಯಾದರೆ ಒಳಿತು.

ಆಧಾರ ಗ್ರಂಥಗಳು

ಕಲಬುರ್ಗಿ ಎಂ. ಎಂ: ಮಾರ್ಗ ಸಂಪುಟ-1,ಬೆಂಗಳೂರು, 1988.

ಭಟ್ಟ ಕೇಶವ ಟಿ : ಹವ್ಯಕಪದ ಸಂಚಯ, ಬೆಂಗಳೂರು 1972, ದ್ವಿ. ಮು. 1982.

ಭಟ್ಟ ಕೇಶವ ಟಿ : ಹವ್ಯಕರ ಶೋಭಾನೆಗಳು, ಬೆಂಗಳೂರು, 1986.

ಭಟ್ಟ ಮರಿಯಪ್ಪ ಎಂ. (ಸಂ). ವರ್ಧಮಾನ ಪುರಾಣಂ, ಮದ್ರಾಸು ವಿ ವಿ, ಮದ್ರಾಸು, 1953.

ಭಟ್ಟ ಮರಿಯಪ್ಪ ಎಂ. (ಸಂ), ಹವ್ಯಕ-ಇಂಗ್ಲೀಷ್ ನಿಘಂಟು, ಮೈಸೂರು, 1983.

ಮಾಳವಾಡ ಸ.ಸ. (ಸಂ)ಕಾವ್ಯಪದ ಮಂಜರಿ, ಬೆಂಗಳೂರು, 1970.

ರಾಮರಾವ್, ಬಿ: (ಸಂ) ಬಳಗಿ ಅರಸರ ವಂಶಾವಳಿ, 1933.

ವೆಂಕಟರಾವ್ ಎ. ಪಂಡಿತ ಎಚ್. ಶೇಷಯ್ಯಂಗಾರ್ (ಸಂ) ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ, ಮದ್ರಾಸು, ದ್ವಿ. ಮು. 1973.

ಭಾರತೀಯ ಚಿತ್ರಕಲೆಯಲ್ಲಿ ಮೈಸೂರು ಶೈಲಿ

- ಎನ್. ಮರಿಶಾಮಚಾರ್

ಭಾರತೀಯ ಚಿತ್ರಕಲೆಗೆ ಒಂದು ಭವ್ಯ ಇತಿಹಾಸವಿದ್ದು, ಅನೇಕ ವರುಷಗಳಿಂದ ಕಲೆ ಬೆಳೆದು ಬಂದಿದೆ. ಚಿತ್ರಕಲೆಯ ತತ್ವ ಮತ್ತು ನಿಯಮಗಳನ್ನು ರೂಪಿಸಿ ವಿವರಿಸುವ ಸುಮಾರು ಕಿ. ಶ. 7 ನೆಯ ಶತಮಾನದಲ್ಲಿ ರಚಿತವಾದ ವಿಷ್ಣುಧರ್ಮೋತ್ತರ ಪುರಾಣ ಮತ್ತು ಕಿ. ಶ. 12 ನೆಯ ಶತಮಾನದಲ್ಲಿ ರಚಿತವಾದ ಮಾನಸೋಲ್ಲಾಸ ಮುಂತಾದ ಆಧಾರ ಗ್ರಂಥಗಳಿವೆ ಭಾರತೀಯ ಕಲೆಯ ಸ್ವರೂಪ, ಸೌಂದರ್ಯ, ಅದರ ಅಂತರ್ಭಾವ, ಆಧ್ಯಾತ್ಮಿಕ ಮೌಲ್ಯ ಮುಖ್ಯವಾಗಿದ್ದು, ಭಾರತೀಯ ಕಲೆಯ ವಿಶೇಷ ಆಧ್ಯಾತ್ಮ ಮೌಲ್ಯಗಳಿಗೆ ಹಾಗೂ ಧಾರ್ಮಿಕ ಹಿನ್ನೆಲೆಗೆ ಹೆಚ್ಚು ಪ್ರಾಮುಖ್ಯತೆ ದೊರೆಯಿತು. ಭಿತ್ತಿ ಚಿತ್ರಗಳಾಗಲೀ, ತೂಗು ಚಿತ್ರಗಳಾಗಲೀ, ಅವು ಕೇವಲ ಭಾರತದ ಧರ್ಮವನ್ನು ಚಿತ್ರಿಸುವ ಮಾಧ್ಯಮವಲ್ಲ ಅಥವಾ ಒಂದೇ ದೇವ ದೇವತೆಗಳ ಮೂರ್ತಿ ಲಕ್ಷಣಗಳ ಚಿತ್ರಣವಾಗಲೀ ಪುರಾಣ ಪುಣ್ಯ ಕಥೆಗಳ ನಿರೂಪಣವಾಗಲೀ ಅಲ್ಲ. ಈ ಚಿತ್ರಗಳು ರಸ ಮತ್ತು ಭಾವಗಳನ್ನು ಉತ್ಪಾದಿಸುವಂತಹವು. ಸಾಮಾಜಿಕ ಪರಿಸರ, ವ್ಯಕ್ತಿಗಳು ಮುಂತಾದುವನ್ನು ಪ್ರತಿಬಿಂಬಿಸುತ್ತವೆ. ಈ ಚಿತ್ರಗಳ ಆಕೃತಿಗಳ ಲಯ, ಪ್ರಮಾಣ, ಚೆಲುವು, ಭಾವ, ಭಂಗಿ ಮುಂತಾದ ಅಂಶಗಳಲ್ಲಿ ಬಹು ಉತ್ತಮಮಟ್ಟದ ವಿಚಾರ ಪ್ರಜ್ಞೆಯನ್ನು ಎತ್ತಿ ತೋರುತ್ತದೆ.

ಕರ್ನಾಟಕದ ಚಿತ್ರ ಕಲೆಯು ಭಾರತೀಯ ಚಿತ್ರಕಲಾ ಸಂಪ್ರದಾಯದ ಒಂದು ಅವಿಭಾಜ್ಯ ಅಂಗವಾಗಿದೆ. ಅದರ ಮೂಲವನ್ನು ಭಾರತೀಯ ಚಿತ್ರಕಲಾ ಸಂಪ್ರದಾಯದ ತಾಯಿ ಬೇರಿನಂತಿರುವ ಅಜಂತಾ ಗುಹಾ ಭಿತ್ತಿ ಚಿತ್ರಗಳಲ್ಲಿ ಕಾಣಬಹುದು. ಹಾಗೆಯೇ ಅಜಂತಾ ಶೈಲಿಯನ್ನೇ ಅನುಸರಿಸಿದ ಸುಮಾರು ಕ್ರಿ. ಶ. 6 ನೆಯ ಶತಮಾನ ಕಾಲದ ಬಾದಾಮಿಯ 3 ನೆಯ ಗುಹೆಯ ಭಿತ್ತಿ ಚಿತ್ರಗಳಲ್ಲಿಯೂ ಕಾಣಬಹುದು. ರಾಷ್ಟ್ರಕೂಟರ ಕಾಲದ ಅನಂತರ ಬೆಳೆದು ಬಂದ ಚಿತ್ರಕಲೆಯಲ್ಲಿ ಸ್ವಾಭಾವಿಕ ಶೈಲಿಯಿಂದ ಸಾಂಪ್ರದಾಯಕ ಶೈಲಿಗೆ ಬದಲಾವಣೆ ಆದುದು ಕಾಣಬರುತ್ತದೆ. ಕ್ರಿ. ಶ. 1336 ರಿಂದ 1565 ರವರೆಗೆ ಬೆಳಗಿದ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲೆಲ್ಲಾ ತನ್ನ ಸ್ವಾಮ್ಯವನ್ನು ಸ್ಥಾಪಿಸಿತು. ಕಲೆಯಲ್ಲಿ ಅದರದೇ ವಿಶಿಷ್ಟ ಸಂಪ್ರದಾಯ ಬೆಳೆದು ಬಂದು ಮುಂದೆ ಭಾರತೀಯ ಚಿತ್ರಕಲೆಯ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆಯಾಯಿತು.

ಕಿರುಚಿತ್ರಗಳ ರಚನೆಯಲ್ಲಿ ವಿಜಯನಗರದ ಕಲಾವಿದರು ಪ್ರತಿಭಾಶಾಲಿಗಳಾಗಿದ್ದರು. ಚಿತ್ರಕಲೆಗೆ ಸಂಬಂಧಪಟ್ಟಂತೆ ನೋಡಿದಲ್ಲಿ ಚೆನ್ನಾಗಿ ಮನನ ಮಾಡಿದ ಆಕೃತಿಗಳನ್ನು ರೇಖಾವಿನ್ಯಾಸದ ಮೂಲಕ ಅವುಗಳ ಸ್ವಾಭಾವಿಕ ರೀತಿಯಲ್ಲಿ ಚಿತ್ರಿಸುವ ಕ್ರಮ ವಿಜಯನಗರದ ಚಿತ್ರಕಲೆಯ ಮೊದಲ ಭಾಗದಲ್ಲಿ ಪ್ರಾರಂಭವಾಯಿತು.

ವಿಜಯನಗರದ ಆರಂಭ ದೆಸೆಯಲ್ಲಿದ್ದ ಕಲಾವಿದರು ಸಹಜ ರೀತಿಯಲ್ಲಿ ಆಕೃತಿಗಳನ್ನು ಚಿತ್ರಿಸಲು ಯತ್ನಿಸಿದರು. ವಿಜಯನಗರದ ಉತ್ತರಾರ್ಧದಲ್ಲಿ ಮೂರು ಚಿತ್ರ ಶೈಲಿಗಳು ರೂಪಿತವಾಗಲು ವಿಜಯನಗರದ ಕಲಾವಿದರು ಬಹುಮಟ್ಟಿಗೆ ಕಾರಣರಾದರು. ಸುಲ್ತಾನರಿಂದ ಪೋಷಿತವಾದ ದಖ್ಖನಿ, ಮೈಸೂರು ಮತ್ತು ತಂಜಾವೂರು ಶೈಲಿಗಳು 16 ರಿಂದ 19 ನೆಯ ಶತಮಾನಗಳಲ್ಲಿ ವೃದ್ಧಿಯಾದ ಮೈಸೂರು ಶೈಲಿಯ ಚಿತ್ರಪಟಗಳಿಗೆ ಸಂಬಂಧ ಪಟ್ಟಿದೆ.

ಮೈಸೂರು ಶೈಲಿಯ ಚಿತ್ರಕಲೆಯನ್ನು ಬೆಳೆಯಿಸಿದ ಕೀರ್ತಿ ಕ್ರಿ. ಶ. 1578 ರಿಂದ 1617 ರ ವರೆಗೆ ರಾಜ್ಯವಾಳಿದ ರಾಜ ಒಡೆಯರಿಗೆ ಸಲ್ಲಬೇಕು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಆಶ್ರಯ ಕಳೆದುಕೊಂಡ ಅನೇಕ ಚಿತ್ರಗಾರ ಕುಟುಂಬಗಳಿಗೆ ಒಡೆಯರು ಶ್ರೀರಂಗಪಟ್ಟಣದಲ್ಲಿ ಆಶ್ರಯವಿತ್ತರು. ಈ ರೀತಿಯ ರಾಜಾಶ್ರಯದ ಫಲವಾಗಿ ಮೈಸೂರು ಶೈಲಿ ಬೆಳೆದು ಕ್ರಿ. ಶ. 1799 - 1868 ರ ಮಧ್ಯೆ ರಾಜ್ಯವಾಳಿದ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಅತ್ಯುನ್ನತ ದೆಸೆ ಮುಟ್ಟಿತು. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಬೆಳೆದು ಬಂದ ಚಿತ್ರಕಲೆ ಬಹುಮುಖ್ಯವಾದುದು. ಅದರಲ್ಲಿ ಹಿಂದೂಧರ್ಮಕ್ಕೆ ಸೇರಿದ ವಿವಿಧ ದೇವತಾ ಮೂರ್ತಿಗಳ ಚಿತ್ರಗಳು ಮತ್ತು ಪುರಾಣ ಕಥಾ ಪ್ರಸಂಗಗಳ ನಿರೂಪಣಾ ಚಿತ್ರಗಳಿವೆ. ಅಲ್ಲದೆ ಮೈಸೂರು ರಾಜ್ಯವಾಳಿದ ರಾಜರ ಹಾಗೂ ರಾಜ ಮನೆತನದವರ ಭಾವಚಿತ್ರಗಳಿವೆ. ಮಹಾರಾಜರ ಈ ಮೇಲ್ಪಂಕ್ತಿಯನ್ನು ಅನುಸರಿಸಿ ರಾಜಮನೆತನಕ್ಕೆ ಸಂಬಂಧಪಟ್ಟ, ಇತರರೂ ಹಾಗೂ ಶ್ರೀಮಂತ ವರ್ಗದವರೂ ಚಿತ್ರ ಹಾಗೂ ಲಲಿತಕಲೆಗಳಿಗೆ ಪ್ರೋತ್ಸಾಹವಿತ್ತರು. ಕೊನೆಗೆ ಸಾಧಾರಣ ಕುಟುಂಬಗಳಲ್ಲಿಯೂ ಒಂದೆರಡು ಚಿತ್ರ ಅಥವಾ ತಮ್ಮ ಕುಲದೇವತೆಯ ಚಿತ್ರವನ್ನು ರಚಿಸಿ ಗೋಡೆಗೆ ತೂಗು ಹಾಕುವ ಪದ್ಧತಿ ಇದ್ದಿತು. ಅವರಿಗೆ ಈ ಚಿತ್ರಗಳ ಬಗೆಗೆ ಭಕ್ತಿ ಹಾಗೂ ಹೆಮ್ಮೆಯಿತ್ತು.

ಮೈಸೂರು ರಾಜ್ಯದ ಚಿತ್ರಕಲಾವಿದರ ಕಾರ್ಯವ್ಯಾಪ್ತಿ ಎಲ್ಲಾ ಬಗೆಯ ಚಿತ್ರರಚನೆಗಳಿಂದ ಕೂಡಿತ್ತು. ಇದರಲ್ಲಿ ಕೈಬರಹದ ಪುರಾಣ ಮುಂತಾದ ಗ್ರಂಥಗಳ ಪುಟಗಳಲ್ಲಿ ಸೂಕ್ಷ್ಮವಾದ ವರ್ಣಮಯ ಚಿತ್ರರಚನೆ, ದೇವಾಲಯ ಮತ್ತು ಅರಮನೆಗಳ ವಿಸ್ತಾರವಾದ ಗೋಡೆಗಳ ಮೇಲೆ ಚಿತ್ರಗಳ ನಿರ್ಮಾಣ ಅಲ್ಲದೆ ರಾಜರ ಮತ್ತು ರಾಜ ಮನೆತನದವರ ಭಾವಚಿತ್ರಗಳ ರಚನೆ ಮುಂತಾದವು ಸೇರಿದ್ದವು. ಈ ಚಿತ್ರಕಾರರಲ್ಲಿ ಕಲೆ ಅನುವಂಶಿಕವಾದುದು, ತಂದೆಯಿಂದ ಮಗನಿಗೆ ಕಲಿಸುತ್ತಿದ್ದರು. ಚಿತ್ರಕಲೆಯ ಪ್ರಾರಂಭ ಕ್ರಮವು ಅಕ್ಷರಾಭ್ಯಾಸದ ವಿಧಿಯಂತೆಯೇ ನಡೆಯುತ್ತಿತ್ತು. ಕಲಾವಿದನು ಮೂಲ ಧಾತುಗಳನ್ನು ತಂದು ತನಗೆ ಅವಶ್ಯಕವಾದ ಬಣ್ಣಗಳನ್ನು ತಾನೇ ತಯಾರಿಸಿ ಕೊಳ್ಳುತ್ತಿದ್ದನು. ಕುಂಚಗಳನ್ನು ಅಷ್ಟೇ. ಪುರಾತನ ಗ್ರಂಥಗಳಲ್ಲಿ ಹೇಳಲಾದ ವಿಧಾನವನ್ನೇ ಅನುಸರಿಸುತ್ತಿದ್ದರು ಮತ್ತು ತಾನು ಉಪಯೋಗಿಸುವ ಬಣ್ಣಗಳ ಮೂಲ ಧಾತುಗಳ ಗುಣ, ಧರ್ಮ ಮತ್ತು ಸ್ವಭಾವದ ಪರಿಚಯ ಅವನಿಗಿದ್ದಿತು. ಹಿಂದೆ ಕರ್ನಾಟಕದ ಕಲಾವಿದರು ತಮ್ಮ ಬಣ್ಣಗಳನ್ನು ತಾವೇ ತಯಾರಿಸಿಕೊಳ್ಳಲು ಮೂಲ ಧಾತುಗಳನ್ನು ಭೂ

ಮೂಲ ಮತ್ತು ಸಸ್ಯ ಮೂಲದಿಂದ ಪಡೆಯುತ್ತಿದ್ದರು. ಅಲ್ಲದೆ ಖನಿಜ ಮೂಲವೇ ಅಲ್ಲದೆ ಕಲಾವಿದರು ಕೆಲವು ಬಣ್ಣಗಳ ತಯಾರಿಕೆಗೆ ಸಸ್ಯಗಳ ಹೂಗಳನ್ನು ಉಪಯೋಗಿಸುತ್ತಿದ್ದರು.

ಕಲಾವಿದರು ಮೊದಲು ಓನ್ನೆಲೆಯನ್ನು ಸಿದ್ಧಮಾಡಿದ ನಂತರ ಚಿತ್ರರಚನೆ ಪ್ರಾರಂಭವಾಗುತ್ತಿತ್ತು. ಇದು ಕಾಗದ, ಮರ, ಬಟ್ಟೆ ಮುಂತಾದವುಗಳಿಂದ ತಯಾರಾಗುತ್ತಿತ್ತು. ಕಾಗದದ ಬದಲು ಬಟ್ಟೆಯನ್ನು ಉಪಯೋಗಿಸಿದಾಗ ಅದನ್ನು ಮರದ ತೆಳು ಹಲಗೆಯ ಮೇಲೆ ಅಂಟಿಸುತ್ತಿದ್ದರು. ಎಳೆದ ರೇಖೆಯಲ್ಲಿ ಬಣ್ಣವು ಒಂದೇ ಪ್ರಮಾಣದಲ್ಲಿರುತ್ತಿತ್ತು. ಕುಂಚಗಳನ್ನು ಅಳಿಲಿನ ಕೂದಲಿನಿಂದ ಸಿದ್ಧಪಡಿಸುತ್ತಿದ್ದರು. ಈ ಕೂದಲುಗಳನ್ನು ಸರಿಯಾಗಿ ಜೋಡಿಸಿ ಅನಂತರ ರೇಷ್ಮೆದಾರದಿಂದ ಕಟ್ಟುತ್ತಿದ್ದರು. ಅಗಲವಾದ ರೇಖೆ ಅಥವಾ ವರ್ಣ ಸಂಯೋಜನೆಗೆ ಒಂಟೆ ಅಥವಾ ಆಡಿನ ಕೂದಲಿಂದ ಮಾಡಿದ ಕುಂಚಗಳನ್ನು ಉಪಯೋಗಿಸುತ್ತಿದ್ದರು. ಹಂದಿಯ ಕೂದಲಿಂದ ಮಾಡಿದ ಕುಂಚಗಳನ್ನು ಕರಡು ಕೆಲಸಗಳಿಗೆ ಉಪಯೋಗಿಸುತ್ತಿದ್ದರು. ಫಲಕವು ಸಿದ್ಧವಾದ ನಂತರ ರೂಪಿಸಬೇಕಾದ ಚಿತ್ರದ ಸ್ಥೂಲ ರೇಖೆಗಳನ್ನು ಅದರ ಮೇಲೆ ಎಳೆಯುತ್ತಿದ್ದರು. ಅನಂತರ ಚಿತ್ರದ ಇತರ ಭಾಗಗಳನ್ನು ರಚಿಸಿ, ಗೆಸ್ಸೋ ಚಿನ್ನದ ರೇಕಿನ ಕೆಲಸ ಮಾಡುತ್ತಿದ್ದರು.

ಮೈಸೂರು ಶೈಲಿಯ ಚಿತ್ರಗಳಲ್ಲಿ ಸೂಕ್ಷ್ಮವಾದ ರೇಖಾ ವಿನ್ಯಾಸ ಆಕೃತಿಗಳ ಅಂದವಾದ ರಚನೆ ಮತ್ತು ಸಂಯೋಜನೆ, ಪ್ರಕಾಶಮಾನವಾದ ಬಣ್ಣಗಳಿದ್ದರೂ ಅವುಗಳ ವಿವೇಚನಾಯುತ ವಿನ್ಯಾಸ ಮತ್ತು ಹೊಳೆವ ಚಿನ್ನದ ಪದರಗಳಿಂದ ಅಲಂಕಾರವಿರುವುದು ಪ್ರಧಾನಗುಣಗಳಾಗಿವೆ. ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಪ್ರಾಚೀನ ಕಲ್ಪನೆ, ಕಥಾವಸ್ತು ಚಿತ್ರಕಲಾ ನಿಯಮಗಳ ಆಧಾರದ ಮೇಲೆ ರೂಪುಗೊಂಡಿರುವ ಚಿತ್ರ ರಚನಾ ಪದ್ಧತಿ. ಈ ಚಿತ್ರಗಳಲ್ಲಿ ನಿರೂಪಿಸಲು ಆರಿಸಿರುವ ವಸ್ತುಗಳು ಪುರಾಣದ ಕತೆಗಳು, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪ್ರಾಚೀನ ಕೃತಿಗಳಿಂದ ಆರಿಸಿದ ಸನ್ನಿವೇಶಗಳು, ಅಲ್ಲದೆ ಪ್ರತ್ಯೇಕವಾಗಿ ದೇವತಾ ಮೂರ್ತಿಗಳು, ಪುರಾಣ ಪ್ರಸಿದ್ಧ ಪುರುಷರು ಹಾಗೂ ಅವರ ಸಾಧನೆಗೆ ಸಂಬಂಧಿಸಿದ ಕತೆಗಳು ಮತ್ತು ಯುದ್ಧದ ದೃಶ್ಯಗಳು ಮುಂತಾದವು ಚಿತ್ರದ ಕಥಾವಸ್ತುಗಳಾಗಿದ್ದವು. ಅಲ್ಲದೆ ಕೆಲವು ಚಿತ್ರಕಾರರ ಭಾವಚಿತ್ರಗಳೂ ಇರುವುದು ಒಂದು ವಿಶೇಷ.

ಮೈಸೂರು ಸಾಂಪ್ರದಾಯಿಕ ಚಿತ್ರಗಳಲ್ಲಿ ಬಹು ಪ್ರಿಯವಾದ ಕಥಾ ವಸ್ತುಗಳೆಂದರೆ-ರಾಜರಾಜೇಶ್ವರಿ ಮತ್ತು ಶ್ರೀರಾಮ ಪಟ್ಟಾಭಿಷೇಕ. ರಾಜರಾಜೇಶ್ವರಿಯ ಪಟಗಳನ್ನು ಮನೆಗಳಲ್ಲಿಯೂ, ಶ್ರೀರಾಮಪಟ್ಟಾಭಿಷೇಕದ ಪಟಗಳನ್ನು ಭಜನೆ ಮಂದಿರಗಳಲ್ಲಿ ಅಲಂಕಾರಕ್ಕೆ ಮತ್ತು ಪೂಜೆಗೂ ಉಪಯೋಗಿಸುತ್ತಿದ್ದರು. ಶಿವಪುರಾಣ, ಭಾಗವತ, ರಾಮಾಯಣ, ಮಹಾಭಾರತದ ಆಯ್ದ ಕಥಾವಸ್ತುಗಳು ಮತ್ತು ದೇವತಾ

ಮೂರ್ತಿಗಳ ಪಟಗಳು ಅವುಗಳ ವರ್ಣವೈಭವ ಮತ್ತು ರಚನಾ ಕೌಶಲ್ಯದಿಂದ ಜನಪ್ರಿಯವಾಗಿದ್ದವು. ಇಂತಹ ಪಟಗಳಲ್ಲಿ ವಿಷ್ಣು, ದಶಾವತಾರ, ನಾಟ್ಯ ಮಾಡುವ ಶಿವ, ಅಂಬೆಗಾಲು ಕೃಷ್ಣ, ಸರಸ್ವತಿ, ಚಾಮುಂಡೇಶ್ವರಿ, ಲಕ್ಷ್ಮೀ ಮತ್ತು ಭಗವದ್ಗೀತೆಯಲ್ಲಿ ವರ್ಣಿಸಲಾದ ವಿಶ್ವರೂಪದರ್ಶನ ಹಾಗೂ ಭಾಗವತದಲ್ಲಿ ಬರುವ ಸಮುದ್ರ ಮಥನದ ಸನ್ನಿವೇಶಗಳು ಜನಪ್ರಿಯವಾಗಿದ್ದವು.

ಚಿತ್ರಕಲೆಯ ಇತಿಹಾಸ ದೃಷ್ಟಿಯಿಂದ ಶ್ರೀತತ್ವನಿಧಿ ಎಂಬ ಗ್ರಂಥ ಗಮನಾರ್ಹವಾಗಿದೆ. ಸಾಂಪ್ರದಾಯಿಕ ಚಿತ್ರಕಲೆ ಉಳಿಯಲು ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಒಂದು ಮಹತ್ತರ ಉಪಕಾರವಾಗಿದೆ. ಅದು ಶ್ರೀ ತತ್ವನಿಧಿ ಗ್ರಂಥ ರಚನೆಗೆ ಮುಮ್ಮಡಿಯವರು ತಮ್ಮಲ್ಲಿದ್ದ ಸಾಂಪ್ರದಾಯಿಕ ಚಿತ್ರಕಾರರ ಕೌಶಲ್ಯವನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ, ಇದರಲ್ಲಿ ಒಂಬತ್ತು ವಿಭಾಗಗಳಿದ್ದು, ಅವು ಶಕ್ತಿನಿಧಿ, ವಿಷ್ಣುನಿಧಿ, ಬ್ರಹ್ಮ ತತ್ವನಿಧಿ, ಶಿವ ತತ್ವನಿಧಿ. ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮ ನಿಧಿ ಮತ್ತು ಕೌತುಕ ನಿಧಿ. ಪುರಾಣ, ಇತಿಹಾಸ, ತಂತ್ರ, ಆಗಮ, ಶಿಲ್ಪ, ಜ್ಯೋತಿಷ್ಯ ಮುಂತಾದುವುಗಳ ಪ್ರಾಚೀನ ಗ್ರಂಥ ಮೂಲಗಳಿಂದ ಆರಿಸಿದ ವಸ್ತು ಸಂಗ್ರಹವಿದು. ಶ್ರೀ ತತ್ವನಿಧಿಯ ಸ್ವಾರಸ್ಯವಾದ ಅಂಶಗಳೆಂದರೇ, ಆಕರ್ಷಣೀಯವಾದ ಚಿತ್ರಗಳು ಮತ್ತು ರೇಖಾಚಿತ್ರಗಳು, ಇವು ಗಮನಾರ್ಹವಾದವು. ಪ್ರಾಚೀನ ಗ್ರಂಥಗಳಲ್ಲಿ ವಿವರಿಸಿದಂತೆ ಒಂದೊಂದು ದೇವತಾಮೂರ್ತಿಯ ಲಕ್ಷಣಗಳನ್ನೂ ಇಲ್ಲಿ ಧ್ಯಾನ ಶ್ಲೋಕ ಸಹಿತವಾಗಿ ಚಿತ್ರಗಳಲ್ಲಿ ನಿರೂಪಿಸಲಾಗಿದೆ ಒಂದೊಂದು ಚಿತ್ರವೂ ಒಂದು ಕಲಾತ್ಮಕ ಕೃತಿಯೇ ಆಗಿದೆ. ದ್ವಾದಶ ರಾಶಿಗಳೇ ಮುಂತಾದ ಅನೇಕ ವಸ್ತು ಸಮೂಹದಿಂದ ಕೂಡಿದ ಚಿತ್ರಗಳಲ್ಲಿಯೂ ಒಂದೊಂದು ವಸ್ತುವಿನ ವಿವರಗಳನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಶ್ರೀ ತತ್ವನಿಧಿ ಒಂದು ಅಪೂರ್ವ ಹಾಗೂ ಅತಿಶಯ ಗ್ರಂಥವಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದ ಚಿತ್ರಮಯ ಹಸ್ತ ಲಿಖಿತ ಗ್ರಂಥಗಳು, ಅರಮನೆ, ದೇವಾಲಯ ಮುಂತಾದ ಕಟ್ಟಡಗಳಲ್ಲಿ ಮೂಡಿಸಿದ ಭಿತ್ತಿಚಿತ್ರಗಳು ಬಿಡಿ ಬಿಡಿಯಾಗಿ ರಚಿತವಾದ ಚಿತ್ರ ಪಟಗಳನ್ನು ಒಟ್ಟು ಪರಿಶೀಲಿಸಿದಾಗ, ಈ ಕಲಾ ಕಾರ್ಯ ಅಗಾಧ ಪ್ರಮಾಣದಲ್ಲಿ ನಡೆದ್ದಿತ್ತು. 19 ನೆಯ ಶತಮಾನದಿಂದ ಮೈಸೂರಿನ ಚಿತ್ರಕಲೆಯ ಮೇಲೆ ಪಾಶ್ಚಾತ್ಯ ಚಿತ್ರಕಲೆಯ ಪರೋಕ್ಷ ಪ್ರಭಾವವು ಪ್ರಾರಂಭವಾಯಿತು. ಇಷ್ಟಾದರೂ ಈ ಮೈಸೂರು ಶೈಲಿಯ ಪುನರುದ್ಧಾರಕ್ಕೆ ಅನೇಕ ಪ್ರಯತ್ನಗಳು ನಡೆಯುತ್ತಿರುವುದು ಸಂತೋಷದ ವಿಷಯವಾಗಿದೆ.

ಆಧಾರ ಗ್ರಂಥಗಳು

1. ಚಿತ್ರ ಕಲಾ ಪ್ರಪಂಚ
2. Karnataka Traditional Painting

* * * * *

ದಕ್ಷಿಣ ಕರ್ನಾಟಕದ ಗ್ರಾಮದೇವತೆಗಳು

- ಡಾ. ಅಂಬಳಿಕೆ ಹಿರಿಯಣ್ಣ

೧

ಜಾನಪದ ವಿಶ್ವವ್ಯಾಪಕವಾದ ದೇಶ ಭಾಷೆ ಕಾಲಗಳನ್ನು ಮೀರಿನಿಂತ ಮಾನವನ ಮೂಲ ಸಂಸ್ಕೃತಿಯನ್ನು ದಟ್ಟವಾಗಿ ಮೈಗೂಡಿಸಿಕೊಂಡಿರುವ ಒಂದು ಸಂಕೀರ್ಣ ವಿಷಯ. ಇಂದು, ಅದನ್ನು ಜಾಗತಿಕ ನೆಲೆಯಲ್ಲಿ ಹೇಗೆ ಅಭ್ಯಸಿಸಲಾಗುತ್ತಿದೆಯೊ ಹಾಗೆಯೇ ಪ್ರಾದೇಶಿಕ ಚೌಕಟ್ಟಿನಲ್ಲಿ ನೋಡುವುದು ಕೂಡ ಅಗತ್ಯವಾಗಿ ಆಗಬೇಕಾದ ಕಾರ್ಯ. ವಿಶ್ವಸಾಮಾನ್ಯವಾದ(Universals) ಹಲವು ಅಂಶಗಳನ್ನು ಜಾನಪದ ಒಳಗೊಂಡಿರುವಂತೆಯೇ ಆಯಾ ಪ್ರದೇಶ ಸಮುದಾಯ ಭಾಷೆಯ ಹಲವು ವಿಶಿಷ್ಟತೆಗಳನ್ನು ಕೂಡ ಅದು ಧಾರಣ ಮಾಡಿರುತ್ತದೆ. ಈ ದೃಷ್ಟಿಯಿಂದ ಜಾನಪದದ ಪ್ರಾದೇಶಿಕ ಅಧ್ಯಯನ ಅರ್ಥಪೂರ್ಣ.

ಯಾವುದೇ ಪ್ರದೇಶದ ಜಾನಪದ ಆ ಪ್ರದೇಶದ ಭಾಷಿಕ ಸಾಂಸ್ಕೃತಿಕ ಜನವರ್ಗದ ಅಂತರ್ವಾಣಿಯಾಗಿ ಹೊಮ್ಮುವುದರಿಂದ ಆ ಜನರ ಆಲೋಚನಾ ಕ್ರಮ, ನಂಬಿಕೆ ಆದರ್ಶಗಳ ಸಂಸ್ಕಾರಗಳ ಹೂರಣ ಅದರಲ್ಲಿ ತುಂಬಿರುತ್ತದೆ, ನಿಜ. ಆದರೂ ಅವರ ಸಾಮಾಜಿಕ ಸಂಪ್ರದಾಯಗಳು, ವಿಧಿ ಆಚರಣೆಗಳಲ್ಲಿ ಕಂಡು ಬರುವ ಪ್ರಾದೇಶಿಕ ಹಾಗೂ ಸಾಮಾಜಿಕ ವೈಶಿಷ್ಟ್ಯಗಳು ನಾವು ಎಣಿಸಿರುವ ಪ್ರಮಾಣದಲ್ಲಿ ಒಡೆದು ಕಾಣುವುದಿಲ್ಲ ಎಂಬುದೂ ಅಷ್ಟೇ ನಿಜ.

ಇಂದಿನ ಚಲನಶೀಲ ಜಗತ್ತಿನ ಚಲನಶೀಲ ಜಾನಪದದಲ್ಲಿ ಪ್ರಾದೇಶಿಕ ವೈಶಿಷ್ಟ್ಯಗಳ ಪ್ರಮಾಣ ಕಾಲಕಳೆದಂತೆಲ್ಲ ತಗ್ಗುತ್ತ ಹೋಗಿ ಸರ್ವಸಾಮಾನ್ಯತೆಯ ಸ್ತರ ಗೋಚರಿಸುತ್ತಿದೆ. ಈ ಕಾರಣದಿಂದ ದಕ್ಷಿಣ ಕರ್ನಾಟಕದ ಗ್ರಾಮದೇವತೆಗಳ ಬಗೆಗಿನ ವಿವರಗಳು ಕರ್ನಾಟಕದ ಉಳಿದ ಪ್ರದೇಶಗಳಲ್ಲಿ ದೊರಕುವ ವಿವರಗಳಿಗಿಂತ ಹೆಚ್ಚು ಭಿನ್ನವಾಗಿ ಕಾಣುವ ಸಂಭವ ಕಡಿಮೆ. ಅಲ್ಲದೆ ಸದ್ಯ ಲಭ್ಯ ಇರುವ ವಿವರಗಳಿಂದ ದಕ್ಷಿಣ ಕರ್ನಾಟಕದ ಗ್ರಾಮದೇವತೆಗಳ ವಿಶಿಷ್ಟತೆಯನ್ನು ಪ್ರತಿಪಾದಿಸುವುದು ಕಷ್ಟವೆಂದೇ ಹೇಳಬೇಕಾಗಿದೆ. ಇದುವರೆಗೆ ಸುಮಾರು ಹತ್ತು ಕೃತಿಗಳು ಮತ್ತು ಏಳೆಂಟು ಬಿಡಿಬರಹಗಳಲ್ಲಿ ಗ್ರಾಮದೇವತೆಗಳ ಬಗೆಗಿನ ಮಾಹಿತಿ ಸಂಗ್ರಹಗೊಂಡಿದೆ[1]. ಈ ಪ್ರದೇಶದಲ್ಲಿ ಇನ್ನೂ ವ್ಯಾಪಕವಾದ ಕ್ಷೇತ್ರಕಾರ್ಯ ನಡೆಯಬೇಕಾಗಿದೆ. ಆದುದರಿಂದ ಸದ್ಯದ ಅಧ್ಯಯನ ಸಮಗ್ರಎನಿಸುವುದಿಲ್ಲ. ಹೀಗಾಗಿ ಅಸಮಗ್ರ ವಿವರಗಳಿಂದಲೇ ನಾವು ಸಮಾಧಾನಪಟ್ಟುಕೊಳ್ಳುವುದು ಅನಿವಾರ್ಯ ಎನಿಸಿದೆ.

---

1. ಬರಹದ ಕೊನೆಯಲ್ಲಿ ಪ್ರಕಟಿತ ಕೃತಿ ಮತ್ತು ಬರಹಗಳ ಸೂಚಿಯೊಂದನ್ನು ಕೊಟ್ಟಿದೆ.

೨

ದೈವಾರಾಧನೆ ಎಲ್ಲ ಮಾನವ ಸಮುದಾಯಗಳಲ್ಲೂ ಕಂಡು ಬರುತ್ತದೆ. ಆರಂಭದಲ್ಲಿ ಮಾನವ ಪ್ರಕೃತಿಯನ್ನು ಆರಾಧಿಸುತ್ತಿದ್ದ. ಪ್ರಕೃತಿ ಆರಾಧನೆಯ ಮುಂದಿನ ಘಟ್ಟವೇ ಗ್ರಾಮದೇವತಾರಾಧನೆ (ಗ್ರಾಮದ ಅಧಿಸೂಚನೆಗೆ ಗ್ರಾಮ ದೇವತೆ ಎಂದು ಹೆಸರು). ದೇವತೆಗೆಮಾನವ ಅಲೆಮಾರಿತನವನ್ನು ಬಿಟ್ಟು ಒಂದೆಡೆ ನೆಲೆ ನಿಂತು ವ್ಯವಸಾಯ ಮಾಡತೊಡಗಿದಂದಿನಿಂದ ಅವನಿಗೆ ತನ್ನನ್ನು, ತನ್ನ ಕುಟುಂಬದವರನ್ನು ತನ್ನ ಊರುಕೇರಿಗಳನ್ನು ಪ್ರಾಣಿ ಫಸಲುಗಳನ್ನು ಸಂರಕ್ಷಿಸಿಕೊಳ್ಳುವುದು ಅನಿವಾರ್ಯವಾಯಿತು (ಪ್ರಕೃತಿ ವೈಚಿತ್ರ್ಯಗಳಿಗೆ ಹೆದರಿದ ಅವನು ತನ್ನ ಬದುಕನ್ನು ಯಾವುದೋ ಕಾಣದ ಕೈ ನಿಯಂತ್ರಿಸುತ್ತದೆ ಎಂದು ತಿಳಿದ. ಆ ನಿಯಾಮಕ ಶಕ್ತಿಯ ಅನುಗ್ರಹವನ್ನು ದೊರಕಿಸಿಕೊಳ್ಳಲು ಅವನು ದೈವದ ಕಲ್ಪನೆ ಮಾಡಿಕೊಂಡ). ಹೀಗೆ ದೈವಾರಾಧನೆಗೆ ಸಂರಕ್ಷಣಾಭಾವನೆಯೇ ಮೂಲ. ದೈವದ ನೆರವಿಲ್ಲದೆ ತನ್ನ ರಕ್ಷಣೆ, ತನ್ನ ಆಸ್ತಿಪಾಸ್ತಿಯ ಸಂರಕ್ಷಣೆ ಸಾಧ್ಯವಲ್ಲವೆಂದು ತಿಳಿದ ಮಾನವ ಸೃಷ್ಟಿಯ ಸಕಲಕ್ಕೂ ದೈವತ್ವವನ್ನು ಆರೋಪಿಸಿದ, ಮೊದಮೊದಲು ಕ್ರೂರ ಮತ್ತು ವಿನಾಶಕಾರಿ ಪ್ರವೃತ್ತಿಗಳುಮಾತ್ರ ಅವನ ಗಮನ ಸೆಳೆದವು. ಕ್ರಮೇಣ ಸಾತ್ವಿಕ ಮತ್ತು ಉಪಕಾರಿ ಶಕ್ತಿಗಳು ಅವನಿಗೆ ಹತ್ತಿರವಾದವು. ಹೀಗಾಗಿ ಮೊದಲಿನಿಂದಲೂ ಮಾನವ ಈ ಎರಡೂ ಬಗೆಯ ಪ್ರವೃತ್ತಿಗಳಿಗೆ ಪ್ರತಿಕ್ರಿಯಿಸುತ್ತಾ ಬಂದ (ಫಲವಾಗಿ ಆರಾಧನೆಯ ಎರಡು ವರ್ಗಗಳು ಸ್ಥಾಪಿತವಾದವು).

ಕೃಷಿಯ ಕಾರಣಕ್ಕಾಗಿ ನೆಲೆ ಹೊಂದಲಾರಂಭಿಸಿದ ಮೇಲೆ ಮಾನವನಿಗೆ ತನ್ನಂತೆ ತನ್ನ ದೇವರಿಗೂ ಖಾಯಂ ಆದ ನೆಲೆ ಬೆಲೆ ಅಗತ್ಯ ಎನಿಸಿತು. ಗುಡಿಗೋಪುರಗಳ ಕಲ್ಪನೆ ಮೊಳೆಯಿತು. ಮುಂದೆ ಗ್ರಾಮ ಘಟಕಗಳು ಸ್ಥಾಪನೆಗೊಂಡಾಗ ಗ್ರಾಮ ದೇವತೆಗಳಿಗೂ ನಿಶ್ಚಿತ ನೆಲೆಗಳು ಕಲ್ಪಿತವಾದವು. ಅಂತೆಯೇ ದೇವರ ಆರಾಧನಾ ಪದ್ಧತಿಗಳಲ್ಲಿ ಕ್ರಮಬದ್ಧತೆ ಪ್ರಾಪ್ತವಾಯಿತು.

ಒಟ್ಟಿನಲ್ಲಿ ಗ್ರಾಮದೇವತೆಯ ಕಲ್ಪನೆ ಪುರಾತನವಾದುದು. ಅದಕ್ಕೆ ಸುದೀರ್ಘವಾದ ಇತಿಹಾಸ ಮತ್ತು ಪರಂಪರೆ ಇದೆ. ಇದು ಮನುಷ್ಯನಷ್ಟೇ ಹಳೆಯದು ಎಂಬ ವಾದವಿದೆ. ನಮ್ಮ ವೇದ, ಉಪನಿಷತ್ತು, ಪುರಾಣಗಳಿಗೂ ಹಿಂದಿನದು ಎಂದು ಹೇಳಲಾಗಿದೆ. ಸಿಂಧು, ಹರಪ್ಪ, ಮೊಹೆಂಜೊದಾರೊ ಸಂಸ್ಕೃತಿಯಲ್ಲಿ ಕ್ರಿ. ಪೂ. ೪ ರಿಂದ ೨ ನೇ ಶತಮಾನದ ನಾಗರಿಕತೆಯಲ್ಲಿ ದೇವತಾ ವಿಗ್ರಹಗಳ ದಾಖಲೆ ಇದೆ ಎಂದು ತಿಳಿದುಬರುತ್ತದೆ. (ಲಿಂಗಯ್ಯ: 1984: 9)

೩

ಸ್ಥಳೀಯವಾಗಿ ಪ್ರಭಾವಿಯಾದ ಶಕ್ತಿಯನ್ನು ಆರಾಧಿಸುವುದೇ ನಮ್ಮ ಗ್ರಾಮಜೀವನದ ವೈಶಿಷ್ಟ್ಯ. ಗ್ರಾಮೀಣರ ಕಲ್ಪನೆಯಂತೆ ಪ್ರಕೃತಿ ಹೆಣ್ಣು. ಆದಿಶಕ್ತಿ ಎಲ್ಲ ಹೆಣ್ಣು ಶಕ್ತಿಗೂ ಮೂಲ. ಈ ಮೂಲ ಶಕ್ತಿಯ ವಿವಿಧ ರೂಪಗಳು ಗ್ರಾಮದೇವತೆಗಳು. ಇವಕ್ಕೆಲ್ಲ ಪ್ರೇರಣೆ ತಾಯಿಯ ಕಲ್ಪನೆ. ತಾಯಿ, ಸಂತಾನದ ಪೋಷಣೆಯ ಮೂಲಾಧಾ

ಇದರಿಂದಾಗಿ ಹೆತ್ತತಾಯಿ ಹೇಗೆ ಪೂಜಾರ್ಹಳೊ ಹಾಗೆಯೇ ಗ್ರಾಮದೇವತೆ. ಹೆಣ್ಣಿನ ಸ್ಥಾನಮಾನ ಪುರುಷಗಿಂತ ಉನ್ನತವಾದುದು; ಆಕೆ ಪವಿತ್ರಳು ಎಂಬ ನಂಬಿಕೆಯ ಹಿನ್ನೆಲೆಯೇ ಆ ಪ್ರಾಧಾನ್ಯತೆಗೆ ಅವಕಾಶವಾಯಿತು. ಈ ಶಕ್ತಿದೇವತೆಯ ಅಧೀನದಲ್ಲಿ ಪುರುಷದೈವಗಳಿರುತ್ತವೆ. ಅವು ಕೂಡ ಮಾನವನಿಗೆ ಎದುರಾಗುವ ಎಲ್ಲ ಪ್ರತಿಕೂಲಗಳನ್ನು ನಿವಾರಿಸುವ, ಅನಾಹುತ ಆಘಾತಗಳಿಂದ ಅವನನ್ನು ಪಾರು ಮಾಡುವ ಹೊಣೆ ಹೊತ್ತಿರುತ್ತವೆ. ಆದರೂ ಆರಾಧನೆಯಲ್ಲಿ ಸಂತಾನದ ಅಪೇಕ್ಷೆಯೇ ಪ್ರಧಾನವಾದುದರಿಂದ ಶಕ್ತಿದೇವತೆಗೇ ಅಗ್ರಸ್ಥಾನ. ಪ್ರಾರ್ಥನೆ, ಬಲಿ, ಮುಖಸ್ತುತಿಗಳಿಂದ ಸಂಪ್ರೀತಳಾಗುವವಳು ಅವಳು. ಉಪೇಕ್ಷಿಸಿದರೆ ರೋಗರುಜಿನಗಳ ಮೂಲಕ ಪ್ರಣತಗೊಳ್ಳುವವಳು. ಇದು ಶಕ್ತಿ ಆರಾಧನೆಗೆ ಮೂಲವಾಯಿತು. ಶಕ್ತಿದೇವತಾರಾಧನೆ ಮೂಲತಃ ದ್ರಾವಿಡ ಕಲ್ಪನೆಯಾದರೂ ಇದರ ಮೂಲಬೇರುಗಳು ಆರ್ಯನ್ ಕುಟುಂಬ ಜೀವನಪದ್ಧತಿಯಲ್ಲೇ ಇದ್ದಂತೆ ಕಾಣುತ್ತದೆ[2]. ಈ ಶಕ್ತಿದೇವತೆಗಳಲ್ಲಿ ಕೇಡುಂಟು ಮಾಡುವ ದೇವತೆಗಳು, ದ್ವೇಷ ಮತ್ತು ಮತ್ಸರ ಸಾಧಿಸುವ ದೇವತೆಗಳು, ಸೇಡು ತೀರಿಸಿಕೊಳ್ಳುವ ದೇವತೆಗಳು -ಹೀಗೆ ಅನೇಕ ಸ್ವಭಾವದ ದೇವತೆಗಳನ್ನು ಗಮನಿಸಿದಾಗ ಶಕ್ತಿಯಾರಾಧನೆ ಎಂದು ಆರಂಭವಾಯಿತು ಎಂದು ಹೇಳುವುದು ಕಷ್ಟ. ಈ ದೇವತೆಗಳನ್ನು ಉನ್ನತ ಸ್ತರದಲ್ಲಿ ತಾಯಂದಿರು, ದೇವಿಯರು ಎಂದು ಕರೆಯುವುದು ವಾಡಿಕೆಯಾದರೂ ವಾಸ್ತವ ನೆಲೆಯಲ್ಲಿ ಇವು ಕೇವಲ ಗ್ರಾಮದೇವತೆಗಳು ಎನಿಸಿವೆ. ಅನಿಶ್ಚಿತ ಮನಸ್ಥಿತಿಯ ಉಗ್ರ ಸ್ವಭಾವದ ದೈವೀಶಕ್ತಿಗಳು ಎಂದೇ ಪರಿಗಣಿತವಾಗಿವೆ.

ಗ್ರಾಮದೇವತೆಗಳ ಸೃಷ್ಟಿಗೆ ನಾನಾ ಕಾರಣಗಳಿವೆ. ಆರಂಭದ ಹಂತದಲ್ಲಿ ಪ್ರಕೃತಿ ವೈಚಿತ್ರ್ಯಗಳ ಕಾರಣದಿಂದ ಸೃಷ್ಟಿಗೆ ಮೂಲವಾದ ಆದಿಶಕ್ತಿ ಪೂಜಾರ್ಹಳಾದ್ದರಿಂದ ಕ್ರಮೇಣ ಆದಿಶಕ್ತಿಯ ವಿವಿಧರೂಪಗಳೂ ಪೂಜೆಗೆ ಪಾತ್ರವಾದವು (ಈ ಹೆಣ್ಣು ದೇವತೆಗಳಿಗೆ ಪೂರಕವಾಗಿ ಪುರುಷದೈವಗಳೂ ಸೃಷ್ಟಿಯಾದವು). ಗ್ರಾಮದೇವತೆಗಳಲ್ಲಿ ಹೆಚ್ಚಿನವು ಸ್ಥಳದ ಮಹತ್ವದಿಂದ ಹುಟ್ಟಿದವು. ಗ್ರಾಮವೊಂದರ ಧೀರ, ಚಾರಿತ್ರಿಕ ವ್ಯಕ್ತಿ, ಪವಾಡಪುರುಷ, ಜನಾನುರಾಗಿ ಮುಂತಾದವರು ದೇವತೆಗಳಾಗಿ ಸ್ಥಾಪನೆಗೊಂಡಿರುವುದುಂಟು.

ತಪ್ಪುಗ್ರಹಿಕೆ, ಅನುಕರಣೆ ಮತ್ತು ಮೂಢನಂಬಿಕೆಗಳಿಂದಲೂ ಕೆಲವು ಗ್ರಾಮದೇವತೆಗಳು ಸೃಷ್ಟಿಯಾಗಿವೆ. ನಮ್ಮ ಜನಪದರ ನಂಬಿಕೆಯಂತೆ ಕಾಯಿಲೆ ಕಸಾಯಿಲೆಗಳು ಬರುವುದು ನೈಸರ್ಗಿಕ ಕಾರಣದಿಂದಲ್ಲ- ನಿಯಾಮಕ ಶಕ್ತಿಯ ಕೈವಾಡದಿಂದ, ದೆವ್ವಭೂತಗಳ ಚೇಷ್ಟೆಯಿಂದ, ಮಾಟಮಂತ್ರಗಳ ಪ್ರಯೋಗಗಳಿಂದ, ಕೆಟ್ಟ ಕಣ್ಣಿನಿಂದ ಜ್ವರದಿಂದಾಗುವ ಚಿತ್ತಭ್ರಮೆ, ಮೂರ್ಛೆರೋಗ, ಮಲರೋಗ, ಸೆಳವು ಮತ್ತು ಗರ್ಭೋನ್ಮಾದ ದೈವ ಆವಾಹನೆಯ ಗುರುತನ್ನು ಹೊಂದಿವೆ. ಕೆಲವು ಆಕಸ್ಮಿಕವಾಗಿ

2. ತನ್ನನ್ನು ಅವಲಂಬಿಸಿದ ಎಲ್ಲರಿಗೂ ಆಹಾರ ಒದಗಿಸಿ ಅವರ ರಕ್ಷಣೆಯ ಜವಾಬ್ದಾರಿ ಹೊತ್ತದ್ದಕ್ಕಾಗಿ ತಂದೆ ಗೌರವಾನ್ವಿತನಾದ. ಗೃಹಕೃತ್ಯದ ಜವಾಬ್ದಾರಿಯ ಜೊತೆಗೆ ಮಕ್ಕಳ ಪಾಲನೆ ಪೋಷಣೆಯ ಹೊಣೆ ಹೊತ್ತದ್ದಕ್ಕಾಗಿ ತಾಯಿ ಪೂಜ್ಯಳಾದಳು. ಹೀಗೆ ಆರ್ಯನ್ ಕುಟುಂಬ ವ್ಯವಸ್ಥೆಯಲ್ಲಿ ತಾಯಿ

ಬರುವಂಥವು. ಉದಾ. ಕಾಲರಾ, ಮತ್ತೆ ಕೆಲವು ರೋಗಗಳು ರೋಗಿಯ ರೂಪ ಆಕಾರವನ್ನೇ ಕೆಡಿಸುವಂಥವು ಉದಾ. ಸಿಡುಬು, ಮೈಲಿ. ಹಿಂದಣ ಜನ್ಮದಲ್ಲಿ ಪಾಪಕೃತ್ಯಗಳನ್ನು ಎಸಗಿದ್ದರೆ ಮಾನವ ಜನ್ಮದಲ್ಲಿ ರೋಗಗಳು ಕಾಣಿಸಿಕೊಳ್ಳುತ್ತವೆ ಎಂಬುದು ಒಂದು ನಂಬಿಕೆಯಾದರೆ ಇನ್ನೊಂದು ಈಗಿನ ಜನ್ಮದ ಪಾಪಕೃತ್ಯಗಳಿಗಾಗಿ ರೋಗ ಅಂಟಿಕೊಳ್ಳುತ್ತದೆ ಎಂಬುದು ಸಾಂದರ್ಭಿಕವಾಗಿ ದೇಹಕ್ಕೆ ಅಂಟಿಕೊಳ್ಳುವ ರೋಗಗಳನ್ನು ಮಾತ್ರ ವೈದ್ಯಗುಣಪಡಿಸಬಲ್ಲುದು. ಹೀಗೆ ಮೂರು ಸ್ತರದ ರೋಗಗಳು ಮಾನವನನ್ನು ಬಾಧಿಸುತ್ತವೆ. ಸಾಂಕ್ರಾಮಿಕ ರೋಗಗಳು ಎರಡನೆಯ ಸ್ತರಕ್ಕೆ ಸೇರುತ್ತವೆ. ಆ ರೋಗಗಳಿಂದ ಮುಕ್ತರಾಗಬೇಕಾದರೆ ಗ್ರಾಮದೇವತೆಗಳನ್ನು ಸಂಪ್ರೀತಗೊಳಿಸಬೇಕು.

ಜನರಿಗೆ ಸಿಡುಬನ್ನು ತರುವವಳು ಸಿಡುಬಿನ ಮಾರಿ. ಅವಳನ್ನು ನಯವಾದ ರೀತಿಯಲ್ಲಿ'ಸೀತಾಳಮ್ಮ' ಎಂದು ಸಂಬೋಧಿಸಿದರೆ ಸಿಡುಬು ದೂರಾಗುವುದೆಂಬ ನಂಬಿಕೆ ಇದೆ. 'ಸೀತಾಳ' ಎಂಬ ಉಚ್ಚಾರಣೆಯೇ ರೋಗಿಗೆ ಏರಿದ ಜ್ವರವನ್ನು ಇಳಿಸುತ್ತದೆ ಎಂದು ನಂಬಿಕೆ. ದೇವಿ ಮುನಿದುಕೊಂಡು ಸಿಡುಬಿನ ರೂಪದಲ್ಲಿ ಮೈದೋರಿದ್ದಾಳೆಂದೆಣಿಸಿ ರೋಗಿಯನ್ನು ಬಹು ಭಯ ಭಕ್ತಿಯಿಂದ ಕಾಣುವುದು ವಾಡಿಕೆ. ರೋಗ ಉಲ್ಬಣಿಸಿ ವ್ಯಕ್ತಿ ತೀರಿಕೊಂಡರೆ ಶವವನ್ನು ದಹನ ಕ್ರಿಯೆಗೂ ಗುರಿ ಮಾಡದಿರುವುದುಂಟು.[3] ಶವವನ್ನು ಸುಟ್ಟರೆ ದೇವಿಯನ್ನು ಸುಟ್ಟಂತೆ ಆಗುತ್ತದೆ ಎಂದು ನಂಬಿಕೆ.

ಮಾನವನಿಗೆ ಎದುರಾಗುವ ಸಣ್ಣ ಪುಟ್ಟ ತೊಂದರೆ ತೊಡಕುಗಳ ನಿವಾರಣೆಗೂ ಕೆಲವು ದೇವತೆಗಳು ಸೃಷ್ಟಿಯಾಗಿರುವುದುಂಟು. ಕಾಲು ಉಳುಕಿದರೆ ಅದನ್ನು ವಾಸಿಮಾಡುವ ದೇವತೆಯೂ ಇದೆ. ಆ ದೇವತೆಗೆ ಎಣ್ಣೆಮಜ್ಜನ ಮಾಡಿಸಿ ಆ ಎಣ್ಣೆಯನ್ನು ಉಳುಕಿರುವ ಭಾಗಕ್ಕೆ ಸವರಿದರೆ ಉಳುಕು ನಿವಾರಣೆಯಾಗುತ್ತದೆ ಎಂದು ನಂಬಿಕೆ. ಹಾವು ಕಡಿದಾಗ ಗುಡಿಗೆ ಪೂಜೆ ಸಲ್ಲಿಸಿ ಗಂಧವನ್ನು ಕಡಿದ ಭಾಗಕ್ಕೆ ಸವರಿದರೆ ವಿಷ ಪರಿಹಾರವಾಗುತ್ತದೆ ಎಂದು ನಂಬುವವರೂ ಇದ್ದಾರೆ. ಕಿವಿ ಮೂಗು ಸೋರುವುದಕ್ಕೆ, ಬಾಯಿ ಹುಣ್ಣಾಗುವುದಕ್ಕೆ ವಾಸಿಯಾಗದ ಮೂಲ ವ್ಯಾಧಿಗೆ, ಮೆಟ್ಟಿರುವ ದೆವ್ವ ಬಿಡಿಸುವುದಕ್ಕೆ, ಎಮ್ಮೆ ಹಾಲು ಕರೆಯುದಿರುವುದಕ್ಕೆ, ಮಕ್ಕಳಾಗದಿರುವುದಕ್ಕೆ, ಸಂಸಾರದಲ್ಲಿ ಜಗಳವಾಗುವುದಕ್ಕೆ - ಹೀಗೆ ನಾನಾ ರೀತಿಯ ದೈಹಿಕ, ಮಾನಸಿಕ ತೊಂದರೆಗಳ ನಿವಾರಣೆಯ ದೇವತೆಗಳು ಹುಟ್ಟಿಕೊಂಡಿವೆ(ಲಿಂಗಯ್ಯ: 1984:7) ಒಂದು ದೇವರು ವಿಫಲವಾದಾಗ ಮಾನವ ಮತ್ತೊಂದನ್ನು ಸೃಷ್ಟಿಸಿ ಅದಕ್ಕೆ ಶರಣಾದ. ಒಟ್ಟಿನಲ್ಲಿ ಮನುಷ್ಯ ತನಗೆ ಎದುರಾದ ಎಲ್ಲ ಬಗೆಯ ಕಷ್ಟಗಳ ನಿವಾರಣೆಗೂ ಒಂದೊಂದು ದೇವರನ್ನು ಸೃಷ್ಟಿಸಿಕೊಂಡ. ಇದರಿಂದ ಗ್ರಾಮ ದೇವತೆಗಳ ಸಂಖ್ಯೆ ಏರಿತು. ಸಂಖ್ಯೆ ಏರಿಕೆಗೆ ಇದ್ದಿರಬಹುದಾದ ನಿಜವಾದ ಕಾರಣ ಎಂದು ಹೇಳಲಾಗುವ ಪುರಾಣವೊಂದು ಹೀಗಿದೆ.

---

3. ಸಿಡುಬು ಮೈಲಿ ಬಂದಾಗ ಬಲಿ ಪ್ರಾರ್ಥನೆ ನಡೆಸುವುದು ಕ್ರಮ. ರೋಗ ಮೊಟ್ಟಮೊದಲು ಯಾವ ಕುಟುಂಬದಲ್ಲಿ ಕಾಣಿಸಿಕೊಳ್ಳುತ್ತದೆ ಆ ಕುಟುಂಬದಲ್ಲಿ ಬದುಕುಳಿದವರ ಸಮ್ಮುಖದಲ್ಲಿ ಮತಾಚರಣೆಗಳು ಜರುಗುತ್ತವೆ.

ಪರುಶುರಾಮ ತನ್ನ ತಂದೆ ಜಮದಗ್ನಿಯ ಆಜ್ಞೆಯಂತೆ ಸ್ವಂತ ತಾಯಿ ರೇಣುಕೆಯ ತಲೆಯನ್ನು ಕಡಿದು ಹಾಕುವ ಪ್ರಸಂಗ ಎದುರಾಯಿತು. ಇತ್ತ ತಂದೆಯ ಅಪ್ಪಣೆಯನ್ನು ಮೀರುವಂತಿಲ್ಲ, ಅತ್ತ ತಾಯಿಯನ್ನು ಉಳಿಸುವಂತಿಲ್ಲ. ಉದ್ವೇಗಕ್ಕೊಳಗಾದ ಪರಶುರಾಮ ಇಬ್ಬಾಯಿ ಕತ್ತಿ ಹಿಡಿದು ಅತೀವ ಆವೇಶದಿಂದ ತಾಯಿ ರೇಣುಕೆಯ ತಲೆ ಕಡಿದ. ರುಂಡ ಬಿದ್ದ ಕಡೆ ಒಂದಕ್ಕೆ ಎರಡರಂತೆ ಹೊಸರುಂಡಗಳು ಸೃಷ್ಟಿಯಾದವು. ಅವನ್ನೂ ಕಡಿದು ಹಾಕಿದ. ಅವು ಬಿದ್ದ ಕಡೆ ಎರಡಕ್ಕೆ ನಾಲ್ಕು ರುಂಡಗಳು ಗೋಚರಿಸಿದವು. ಹೀಗೆ ಅಸಂಖ್ಯಾತ ರುಂಡಗಳು ಹರಡಿ ಬಿದ್ದವು.

ಕೊನೆಗೂ ಹೇಗೂ ಜಮದಗ್ನಿಯ ಅನುಗ್ರಹದಿಂದ ರೇಣುಕೆಗೆ ಜೀವದಾನ ವಾಯಿತು. ಆದರೆ ಚದುರಿ ಬಿದ್ದಿದ್ದ ಉಳಿದ ರುಂಡಗಳ ಗತಿಯೇನು? ಅವು ಗ್ರಾಮದೇವತೆಗಳಾಗಲಿ ಎಂದು ಪರಶುರಾಮ ವರ ನೀಡಿದ.

ಆದರಂತೆ ರೇಣುಕೆಯ ರುಂಡದಿಂದ ಹುಟ್ಟಿದ ಅಸಂಖ್ಯಾತ ರುಂಡಗಳು ಗ್ರಾಮದೇವತೆಗಳಾದವು ಎಂದು ಪ್ರತೀತ. ಅವು ರೇಣುಕೆಯ ರುಂಡದ ಸಂಕೇತಗಳು. ಕೇವಲ ರುಂಡವಾದ್ದರಿಂದಲೇ ಇಡೀ ದೇಹ ಕಾಣದೆ ರುಂಡದ ಭಾಗವನ್ನು ಮಾತ್ರ ಪೂಜಿಸುವುದು ಪದ್ಧತಿಯಾಯಿತು ಎಂದು ಕೆಲವರ ಸಮರ್ಥನೆ. ಗ್ರಾಮದೇವತೆಗಳ ಸೃಷ್ಟಿಯ ಬಗೆಗೆ ಕಲಾಂತರದಲ್ಲಿ ಹುಟ್ಟಿಕೊಂಡಿರುವ ಪುರಾಣಗಳಲ್ಲಿ ಇದೂ ಒಂದು ಎನ್ನಬಹುದು.

ಗ್ರಾಮದೇವತೆಯರೆಂದು ಪರಿಗಣಿತರಾಗಿರುವ ಸಪ್ತ ಮಾತೃಕೆಯರು ಅಥವಾ ಏಳುಮಂದಿ ಅಕ್ಕತಂಗಿಯರಲ್ಲಿ ಮಾರಿ ಅತ್ಯಂತ ಪ್ರಬಲ ದೇವತೆ. ಎಲ್ಲ ದೇವತೆಗಳ ಸೃಷ್ಟಿಯ ಬಗೆಗೂ ಇರುವಂತೆ ಮಾರಮ್ಮನ ಮೂಲ ಕುರಿತಂತೆಯೂ ಪುರಾಣವೊಂದು ಪ್ರಚಲಿತವಿದೆ.

ಮಾರಮ್ಮ ಜಾತಿಯಲ್ಲಿ ಬ್ರಾಹ್ಮಣರವಳಂತೆ. ಬ್ರಾಹ್ಮಣರಲ್ಲಿ ಹಿಂದೆ ಮದುವೆಗೆ ಮೊದಲು ಹೆಣ್ಣುಮಕ್ಕಳು ಋತುಮತಿ ಹೊಂದಿದರೆ ಅವರನ್ನು ಕಣ್ಣುಕಟ್ಟಿ ಕಾಡಿಗೆ ಬಿಟ್ಟು ಬರುತ್ತಿದ್ದರಂತೆ. ಮದುವೆಗೆ ಮೊದಲೇ ಋತುಮತಿ ಆದ ಮಾರಮ್ಮನನ್ನು ಸಂಪ್ರದಾಯದಂತೆ ಕಣ್ಣುಕಟ್ಟಿ ಕಾಡಿಗೆ ಬಿಟ್ಟು ಬಂದ್ರಂತೆ. ಕಾಡಿನಲ್ಲೇ ಅಲೆಯುತ್ತಿದ್ದ ಒಬ್ಬ ಸೊಮ್ಮುಗಾರ(ಚಮ್ಮಾರ) ತಾನು ಬ್ರಾಹ್ಮಣ ಕುಲದವನು ಎಂದು ಸುಳ್ಳು ಹೇಳಿ ಅವಳನ್ನು ನಂಬಿಸಿ ಮದುವೆ ಮಾಡಿಕೊಂಡನಂತೆ. ಗಂಡ ದಿನವೂ ಕಾಡಿಗೆ ಹೋಗಿ ಚಪ್ಪಲಿ ಹೊಲಿದು ಮಾರಿ ಬಂದ ಹಣದಿಂದ ಜೀವನ ನಿರ್ವಹಣೆ ಮಾಡುತ್ತಿದ್ದ. ವರ್ಷಗಳು ಉರುಳಿದವು. ಅವರಿಗೆ ಒಬ್ಬ ಮಗ ಹುಟ್ಟಿದ. ಅವನು ಬೆಳೆದು ಓಡಾಡುವಂತಾದ. ಒಂದು ದಿನ ಅವನು ಹಠ ಹಿಡಿದು ತಂದೆಯೊಡನೆ ಕಾಡಿಗೆ ಹೋದ. ಅಲ್ಲಿ ತಂದೆ ಒಂದೆಡೆ ಕುಳಿತು ಚಪ್ಪಲಿ ಹೊಲೆಯುವುದನ್ನು ಕಂಡು ಅವನೂ ಅನುಕರಣೆ ಮಾಡಿದ. ಮನೆಗೆ ಹಿಂತಿರುಗಿದ ಮೇಲೆ ಹಿತ್ತಲಿನಲ್ಲಿ ಬಿದ್ದಿದ್ದ 'ಕೌಲು ಎಲೆ'ಗೆ ಕಡ್ಡಿ ಚುಚ್ಚಿ ಚಪ್ಪಲಿ ಹೊಲಿಯ ತೊಡಗಿದ. ಮಗನನ್ನು ಅರಸುತ್ತಾ ಬಂದ ಮಾರಮ್ಮ ಮಗ ಮಾಡುತ್ತಿದ್ದ ಕಸಬನ್ನು ಕಂಡು ಬೆರಗಾದಳು. 'ಎಲ್ಲಿ ಕಲಿತೆ ಇದನ್ನ?' ಎಂದು ಮಗನನ್ನು ಗದರಿದಳು.

ಏನೂ ಅರಿಯದ ಮಗು 'ಅಪ್ಪ ಮಾಡ್ತಿದ್ದ. ನಾನೂ ಕಲಿತೀನಿ' ಎಂದಿತಂತೆ. ವಿಷಯ ತಿಳಿದ ಮಾರಮ್ಮ ರೌದ್ರಾವತಾರ ತಾಳಿದಳು. ಗಂಡ ಮನೆಗೆ ಬಂದದ್ದೇ ತಡ ಕೈಯಲ್ಲಿ ಮಚ್ಚು ಹಿಡಿದು ಅಟ್ಟಿಸಿಕೊಂಡು ಹೋದಳಂತೆ. ಅವನೂ ಹೆದರಿಕೊಂಡು ಓಡ ಹತ್ತಿದ. ಹೀಗೆ ಓಡ್ತಿರುವಾಗ ಒಂದು ಹೊಳೆದಂಡೆ ಮೇಲೆ ಕೋಣವೊಂದು ಮೇಯುತ್ತಾ ಇತ್ತಂತೆ. ಭಯದಿಂದ ಅದರ ಗುದದೊಳಗೆ ನುಸುಳಿ ಬಿಟ್ಟನಂತೆ. ಗಂಡನ ಮೇಲಿನ ಮುನಿಸಿನಿಂದ [3] ಸಿಡುಬು ಮೈಲಿ ಬಂದಾಗ ಬಲಿ ಪ್ರಾರ್ಥನೆ ನಡೆಸುವುದು ಕ್ರಮ. ರೋಗ ಮೊಟ್ಟ ಮೊದಲು ಯಾವ ಕುಟುಂಬದಲ್ಲಿ ಕಾಣಿಸಿಕೊಳ್ಳುತ್ತದೊ ಆ ಕುಟುಂಬದಲ್ಲಿ ಬದುಕುಳಿದವರ ಸಮ್ಮುಖದಲ್ಲಿ ಮತಾಚರಣೆಗಳು ಜರುಗುತ್ತವೆ

ಮಾರಮ್ಮ ಕೋಣನ ತಲೆಯನ್ನು ಕಡಿದು ಹಾಕಿದಳಂತೆ. ಅವಳ ಸಿಟ್ಟು ಅಷ್ಟಕ್ಕೂ ಇಳಿಯಲಿಲ್ಲ.'ನೀನು ಕೋಣನ ಒಳಗೆ ಹೋದ್ರೇನು? ನಿನ್ನ ಶಿರ ಹೊಡೆಸಿ ಖಂಡ ಕಿತ್ತು ದೀಪ ಹಚ್ಚಂಡ್ ಮೆರೀದ್ರಿದ್ರೆ ನಾನು ಮಾರೀನೇ ಅಲ್ಲ' ಎಂದು ಪ್ರತಿಜ್ಞೆಗೈದು ಅಲ್ಲಿ ನಿಲ್ಲದೆ ಊರನ್ನೂ ಸೇರದೆ ಕಾಡಿಗೆ ನಡೆದುಬಿಟ್ಟಳಂತೆ.

ಈ ಪುರಾಣದ ಮತ್ತೊಂದು ಪಾಠದಲ್ಲಿ ಮಾರಮ್ಮನಿಗೆ ನಿಜ ಸಂಗತಿ ತಿಳಿದ ಮೇಲೆ ಅವಳು ಚಂಡಿರೂಪತಾಳಿ ಆತನ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿ ಅಗ್ನಿಪ್ರವೇಶ (ಕೊಂಡ ಹಾಯುವುದು) ಮಾಡುತ್ತಾಳೆ. ಸುಳ್ಳು ಹೇಳಿ ವಂಚಿಸಿದ ಗಂಡನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರತೀಕವಾಗಿ ಅಂದಿನಿಂದ ಇಂದಿಗೂ ಮಾರಿಗೆ ಕೋಣವನ್ನು ಬಲಿ ಕೊಡುವ ಪದ್ಧತಿ ಉಳಿದು ಬಂದಿದೆ ಎಂದು ಜನರ ನಂಬಿಕೆ.

೭

ದಕ್ಷಿಣ ಕರ್ನಾಟಕದ ಜನತೆಯ ದೈವ ಪರಿಕಲ್ಪನೆಯು, ಕರಾವಳಿ ಪ್ರದೇಶದಲ್ಲಿನಂತೆ, ದೇವರುಗಳು (ಆರ್ಯ) ಹಾಗೂ ಗ್ರಾಮದೇವತೆಗಳು (ದ್ರಾವಿಡ) ಎಂಬೆರಡು ಪ್ರಮುಖ ಬಗೆಗಳನ್ನು ಒಳಗೊಂಡಿದೆ. ಅಖಿಲಭಾರತ ಮಟ್ಟದ ದೈವಗಳಾದ ಬ್ರಹ್ಮ, ವಿಷ್ಣು, ಶಿವ ಹಾಗೂ ಅವರ ಮಡದಿಯರು, ಮಕ್ಕಳು ಹಾಗೂ ಅಧೀನ ದೇವತೆಗಳನ್ನು ದೇವರು ಎನ್ನುತ್ತಾರೆ. ವಾಸ್ತವವಾಗಿ ಈ ದೇವತೆಗಳು ಪುರಾಣ ಕತೆಗಳಲ್ಲಿ ಚಿತ್ರಿತರಾದ ಉಚ್ಚವರ್ಗದ ದೇವತೆಗಳಾಗಿದ್ದು ಜನಸಾಮಾನ್ಯರ ಬದುಕಿಗಿಂತ ಭಿನ್ನವಾದ ಬದುಕನ್ನು ಪ್ರದರ್ಶಿಸುತ್ತವೆ. ಗ್ರಾಮೀಣ ಜನತೆಯ ಜೀವನವನ್ನು ನಿರಂತರವಾಗಿ ಪ್ರಭಾವಿತಗೊಳಿಸುವ ಸ್ಥಾನಿಕದೇವರುಗಳನ್ನು ಗ್ರಾಮದೇವತೆಗಳು ಎಂದು ಕರೆಯುತ್ತಾರೆ. ಹೆಚ್ಚು ಜಾತಿ ಸಮಾಜಗಳಿರುವ ನಮ್ಮ ರಾಜ್ಯದ ಗ್ರಾಮ ಸಮುದಾಯದ ದೇವತೆಗಳಲ್ಲಿ ಸ್ಪಷ್ಟ ವ್ಯತ್ಯಾಸಗಳು ಕಂಡು ಬರುತ್ತಿರುವುದು ಅವುಗಳ ಗುಣಧರ್ಮಗಳಲ್ಲಿ ಎಂಬುದು ಗಮನಾರ್ಹ. ಹೀಗಿದ್ದರೂ ಗ್ರಾಮದೇವತೆಗಳ ನಡುವಿನ ಭಿನ್ನತೆ ಮತ್ತು ವೈರುಧ್ಯಗಳು ಅವುಗಳು ಪ್ರತಿನಿಧಿಸುವ ಸಾಮಾಜಿಕ ರಚನೆಯಿಂದ ಉಂಟಾದುದಲ್ಲದೆ ಆ ದೇವತೆಗಳ ಆಂತರಿಕ ಗುಣಧರ್ಮದಿಂದಲ್ಲ ಎಂಬುದನ್ನು ಮನಗಾಣಬೇಕಾಗಿದೆ. ದೇವತೆಯೊಂದು ನಿಶ್ಚಿತ ಕಾಲದಲ್ಲಿ ಪೀಡನ - ದಂಡನಕಾರಿ ಗುಣಧರ್ಮವನ್ನು ಅಥವಾ ಸಂರಕ್ಷಕ

ವರದಾಯಕ ಗುಣಧರ್ಮವನ್ನು ಹೊಂದುವುದು ಸಾಮಾಜಿಕ ರಚನೆಯೊಳಗಣ ಮಾನವ ಸಂಬಂಧಗಳನ್ನು ಅವಲಂಬಿಸಿದೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದ ಗ್ರಾಮದೇವತೆಗಳ ಸಮುದಾಯವನ್ನು ಎರಡು ನೆಲೆಗಳಲ್ಲಿ ವರ್ಗೀಕರಿಸಬಹುದು.

1. ಮೂರ್ತಿ ಶಿಲ್ಪವನ್ನು ಆಧರಿಸಿ ಸಾಂಕೇತಿಕ ವರ್ಗೀಕರಣ
2. ಭಾಷಿಕ ನಿರೂಪಣೆಯನ್ನು ಆಧರಿಸಿ ವ್ಯಕ್ತವರ್ಗೀಕರಣ

ಮೂರ್ತಿಶಿಲ್ಪದ ದೃಷ್ಟಿಯಿಂದ ಗ್ರಾಮದೇವತೆಗಳನ್ನು ಮತ್ತೆ ಎರಡು ಬಗೆಯಲ್ಲಿ ಗುಂಪಾಗಿಸಬಹುದು: ಪ್ರಾಣಿರೂಪಿ ದೈವ ಹಾಗೂ ಮಾನವ ರೂಪಿ ದೈವ.

ವ್ಯಕ್ತ ಭಾಷಿಕ ವರ್ಗೀಕರಣದಂತೆ ಮನೆ ದೇವತೆ, ಸ್ಥಾನಿಕ ದೇವತೆ ಮತ್ತು ಗ್ರಾಮದೇವತೆ ಎಂದು ಗುಂಪುಗೊಳಿಸಬಹುದು.

ಪೀಟರ್ ಜೆ. ಕ್ಲಾಸ್ ಅವರು ಸ್ಪಷ್ಟಪಡಿಸಿರುವಂತೆ, ಮಾನವ ರೂಪಿ ಗ್ರಾಮದೇವತೆಗಳು ಗ್ರಾಮ ಸಮಾಜ ರಚನೆಯ ನೇರ, ಯಥಾವತ್ತಾದ ಚಿತ್ರವನ್ನು ಬಿಂಬಿಸುತ್ತವೆ. ಒಂದೊಂದಕ್ಕೂ ಖಚಿತವಾದ ಜಾತಿನಾಮಸೂಚಕವಿದೆ. ಉದಾಹರಣೆಗೆ ಮಲೆನಾಡಿನ'ಬರ್ಮದೇವರು' (ಬ್ರಹ್ಮ)ಹೆಚ್ಚಾಗಿ ಗೌಡಸಾರಸ್ವತ ಜಾತಿಯನ್ನು ಪ್ರತಿನಿಧಿಸುತ್ತದೆ. 'ಸರಳದ ಚೌಡಮ್ಮ' ಒಕ್ಕಲಿಗ ಜಾತಿಯನ್ನು ಪ್ರತಿನಿಧಿಸುತ್ತದೆ. 'ಪಂಜ್ರೋಳ್ಳಿ' ಈಡಿಗ ಸಮಾಜವನ್ನು ಪ್ರತಿನಿಧಿಸುತ್ತದೆ. ಈ ಪ್ರತಿಯೊಂದು ದೇವತೆಯೂ ತಾನು ಪ್ರತಿನಿಧಿಸುವ ಜಾತಿಯ ಜನರ ಸಾಂಸ್ಕೃತಿಕ ವೀರರಾಗಿದ್ದು ಆ ಜಾತಿಯ ಜನರು ಸಮಾಜದಲ್ಲಿ ನಿರ್ವಹಿಸುವ ಆದರ್ಶ ಕರ್ತವ್ಯಗಳನ್ನು ಆಧ್ಯಾತ್ಮಿಕ ನೆಲೆಗೇರಿಸುತ್ತದೆ. ಯಾವುದೇ ಒಂದು ಜಾತಿಯ ಜನ ತಮ್ಮದೈವವನ್ನು ಅಪಾಯಕಾರಿ, ಕೇಡಿನ ಅಥವಾ ದುಷ್ಟದೈವವೆಂದು ಭಾವಿಸುವುದಿಲ್ಲ. ಬದಲಾಗಿ ಅದಕ್ಕೆ ಪೋಷಣೆಯನ್ನು ನೀಡಿ ಕಾಲಕಾಲಕ್ಕೆ ಮತಾಚಾರಗಳ ಸಂದರ್ಭದಲ್ಲಿ ಅದನ್ನು ಗೌರವಿಸಿ ಅದರ ಮಾಧ್ಯಮವಾಗಿರುವ ಜಾತಿ ಪರಿಣತನನ್ನು ಉದಾತ್ತೀಕರಿಸುತ್ತದೆ. ಉಚ್ಚವರ್ಗದ ಜಾತಿಯವನೊಬ್ಬನು ಕೆಳವರ್ಗದ ಜಾತಿಯ ದೈವದಿಂದ ಅವಾಹಿತನಾಗುವುದು ಅನಿಷ್ಟ ಎಂದು ಪರಿಗಣಿತವಾಗಿದ್ದು ಆ ಬಗೆಯ ಆವಾಹಿತನವನ್ನು ಹೊಲೆ / ಉಪದ್ರವ ಎಂದು ತಿಳಿಯಲಾಗುತ್ತದೆ. ಆದರೆ ಉಚ್ಚ ಜಾತಿಯ ದೈವವು ಕೀಳುಜಾತಿಯ ವ್ಯಕ್ತಿಯ ಮೇಲೆ ಆವಾಹಿತಗೊಂಡರೆ ಅದನ್ನು ಉಪದ್ರವ/ಅಶುದ್ಧ ಎಂದು ಭಾವಿಸಲಾಗುವುದಿಲ್ಲ.(ಕ್ಲಾಸ್: 1988:೧೮೮)

ಕೆಳ ಜಾತಿಯ ದೈವದ ಸಂಪರ್ಕದಿಂದ ಉಚ್ಚ ಜಾತಿಯವರು (ಅಶುದ್ಧ) ಹೊಲೆಗೊಳ್ಳುವುದು ಏಕಮುಖವಾಗಿದ್ದು ಇದು ಸಮಾಜದ ಇತರ ಕ್ಷೇತ್ರಗಳಲ್ಲಿ ಏರ್ಪಡುವ ಅಂತರ್ಜಾತೀಯ ಸಂಬಂಧಗಳನ್ನು ಬಹಳಷ್ಟು ಹೋಲುತ್ತದೆ. ಇಲ್ಲಿ ವ್ಯಕ್ತವಾಗುವ ಒಂದು ಅಂಶವೆಂದರೆ ದೈವಸಮೂಹದ ಹೊಲೆ ತರುವ ಅಥವಾ ಪವಿತ್ರೀಕರಿಸುವ ಗುಣಧರ್ಮಗಳು ಅವುಗಳು ಆವಾಹನೆಗೊಳ್ಳುವ ವ್ಯಕ್ತಿಯ ಸಾಮಾಜಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ.

ಮನುಷ್ಯ ಸೃಷ್ಟಿಯ ಆರಂಭದ ದಿನಗಳಲ್ಲಿ ಜಾತಿ ಮತ ಮೇಲುಕೀಳು ಭಾವನೆಗಳಿರಲಿಲ್ಲ. ಎಲ್ಲರೂ ಒಟ್ಟಿಗೆ ಜೀವಿಸುತ್ತಿದ್ದರು. ಒಟ್ಟಿಗೆ ದೇವರನ್ನು ಪೂಜಿಸುತ್ತಿದ್ದರು. ಕಸುಬಿಗೊಂದು ಜಾತಿಯಂತೆ ಜಾತಿಗಳು ಹುಟ್ಟಿಕೊಂಡಂತೆ ದೇವತೆಗಳೂ ಹೆಚ್ಚಾದವು. ಪರಿಣಾಮವಾಗಿ ಒಂದೇ ದೇವರನ್ನು ಅದೇ ಹೆಸರು ಅಥವಾ ಬೇರೆ ಬೇರೆ ಹೆಸರಿನಲ್ಲಿ ಹಲವು ಸ್ಥಳಗಳಲ್ಲಿ ಪೂಜಿಸುವುದು ರೂಢಿಗೆ ಬಂದಿತು. ಉದಾಹರಣೆಗೆ. ಶಿವನಿಗೆ ಸಂಬಂಧಿಸಿದ ದೇವರನ್ನು ಒಟ್ಟಿಗೆ ಪೂಜಿಸುತ್ತಿದ್ದವರು ಕ್ರಮೇಣ ಬೇರೆ ಬೇರೆ ಕಡೆಗಳಲ್ಲಿ ಪೂಜಿಸುವಂತಾಯಿತು. ಲಿಂಗಾಯಿತರು, ಒಕ್ಕಲಿಗರು, ಹರಿಜನರು ಬೇರೆ ಬೇರೆಯಾಗಿ ಶಿವನನ್ನು ಅಥವಾ ಶಿವನಿಗೆ ಸಂಬಂಧಿಸಿದ ದೇವತೆಯನ್ನು ಪೂಜಿಸಿದರು. ಜಾತಿ ಸಮಾಜಗಳಿಗೆ ಅನುಗುಣವಾಗಿ ಆಯಾ ಜಾತಿಯ ದೇವತೆಗೆ ಅದರದೇ ಆದ ಕಟ್ಟುಪಾಡುಗಳು ಆರಂಭವಾದವು. ಜನರ ಮನೋಧರ್ಮದಂತೆ ದೇವತೆಯ ಸ್ಥಾನಮಾನವೂ ವ್ಯತ್ಯಾಸವಾಯಿತು. ಜಾತಿಗಳು ದೈವಗಳ ಮೇಲೆ ಅಥವಾ ದೈವ ಜಾತಿಗಳ ಮೇಲೆ ಪ್ರಭಾವ ಬೀರುವುದು ಸಾಮಾನ್ಯವಾಯಿತು. ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರಿದವರ ದೇವರು ಹಿಂದುಳಿದವರ ದೇವರಿಗಿಂತ ಮೇಲು ಎಂದು ತಿಳಿಯುವುದು ಪ್ರಚಲಿತ ಶ್ರೇಣೀಕರಣ ವ್ಯವಸ್ಥೆಗೆ ಸಂಗತ ಎನಿಸಿತು. ಮುಂದುವರಿದವರು ಹಿಂದುಳಿದವರ ಮೇಲೆ ಮುಂದುವರಿದವರ ದೇವರು ಹಿಂದುಳಿದವರ ದೇವರುಗಳ ಮೇಲೆ ದಬ್ಬಾಳಿಕೆ ನಡೆಸುವುದು ಜಾಯಮಾನವಾಯಿತು. ಆಧುನೀಕರಣದ ಪ್ರಭಾವದಿಂದಾಗಿ ಹಿಂದುಳಿದವರು ವಿಚಾರಶಕ್ತಿಯನ್ನು ಬಲಗೊಳಿಸಿಕೊಳ್ಳುತ್ತಿರುವುದರ ಪರಿಣಾಮದಿಂದಾಗಿ ಮಾನವ ಗುಂಪುಗಳಲ್ಲಂತೂ ದೈವ ಸಮೂಹಗಳಲ್ಲೂ ಸಮಾನತೆಯನ್ನು ಸ್ಥಾಪಿಸುವುದಕ್ಕಾಗಿ ಹೋರಾಟ ನಡೆದಿದೆ.

ದಕ್ಷಿಣ ಕರ್ನಾಟಕದ ಪ್ರತಿಯೊಂದು ಗ್ರಾಮವೂ ಅಸಂಖ್ಯ ದೇವತೆಗಳ ತವರು. ಈ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಕೆಲವು ಗ್ರಾಮದೇವತೆಗಳ ಹೆಸರುಗಳು ಹೀಗಿವೆ: ಮಾರಮ್ಮ, ಹಾಲ್ಕೋತೆ ಮಾರಮ್ಮ, ಉರಿಮಾರಮ್ಮ, ಆರಕೆರೆ ಬಿಸಿಲುಮಾರಮ್ಮ, ಕ್ಯಾತಮ್ಮ, ದೇವಮ್ಮ, ಸಿದ್ದಮ್ಮ, ಚೌಡಮ್ಮ, ನೇಯಳ್ಳಿ ಕಾಳಮ್ಮ, ಹುಂತೂರಮ್ಮ, ಬ್ಯಾಲಕಮ್ಮ, ಮುದ್ದಮ್ಮ, ಹೊಂಬಾಳಮ್ಮ, ಚಿಕ್ಕಮ್ಮ, ದೊಡ್ಡಮ್ಮ, ಮಾಸ್ತಮ್ಮ, ಗಂಗಮ್ಮ, ದೇವೀರಮ್ಮ, ಮಹದೇವಮ್ಮ, ಮುತ್ತಮ್ಮ, ಹುಚ್ಚಮ್ಮ, ಮಾಯಮ್ಮ, ಮಸಣಕಮ್ಮ, ಮದ್ದೂರಮ್ಮ, ಕೆಂಚಮ್ಮ, ಮಂಚಮ್ಮ ಲಕ್ಕವ್ವ, ಕಗ್ಗಲಿಯಮ್ಮ, ಅಲಕಮ್ಮ, ರಾಕಾಸಮ್ಮ, ಮರುಗಮ್ಮ, ಮೂಗೂರು ತಿಬ್ಬಾದೇವಿ, ಯಾಚೇನಹಳ್ಳಿ ದಂಡಿನ ಮಾರಮ್ಮ, ಹುಚ್ಚನಹಳ್ಳಿ, ಉರಿಕಾತಿ, ಭುವನೇಶ್ವರಿ, ಅಣ್ಣಮ್ಮ, ಉಳ್ಳೇನಹಳ್ಳಿ ಮಾರಮ್ಮ, ಬಂಡಿ ಮಾಕಾಳಿ, ಚಂಪಕವಲ್ಲಿ, ಏಕನಾಥೇಶ್ವರಿ, ಮುತ್ಯಾಲಮ್ಮ, ಉಡಸಲಮ್ಮ, ಕಬ್ಬಾಳಮ್ಮ, ಪಟ್ಟಲದಮ್ಮ, ಚಾಮುಂಡೇಶ್ವರಿ, ಹುದಿಕೇರಮ್ಮ, ಕಾಳಗಟ್ಟಮ್ಮ, ಮುಳುಕಟ್ಟಮ್ಮ, ಕುದೂರಮ್ಮ, ದುಂಡಮ್ಮ, ಸೂಗುಜಾಲಮ್ಮ, ಸೀತಾಳಮ್ಮ, ಪ್ಲೇಗಮ್ಮ, ಕೋಲಾರದಮ್ಮ, ನಾಣ್ಯಾರಮ್ಮ, ಕರಗಮ್ಮ, ಚೀಳೂರಮ್ಮ, ಉಜ್ಜಯಿನಿ ಚೌಡಮ್ಮ, ಬಂಡಳಮ್ಮ, ಹುಲಿಯೂರಮ್ಮ, ಹಳೆಮಾರಮ್ಮ, ಜೆನ್ನಾಗರದಮ್ಮ, ಸಿಡುಬಿನಮ್ಮ ಹಣ್ಣುಳ್ಳಿ ಅಮ್ಮ, ಆಲದಮರದಮ್ಮ, ಗಿಡದಮ್ಮ,

ಕೆರೆಚೌಡಮ್ಮ, ಸುಂಕನಮ್ಮ, ಪುತ್ತಮ್ಮ, ತಿಪ್ಪಗಟ್ಟಮ್ಮ, ಸತ್ಯಮ್ಮ, ನಲ್ಲೂರು ದೊರೆಕಾಳಿ, ಮಳಲಿಗಿಡ್ಡಮ್ಮ, ಮಾಳವ್ವ, ಬಲ್ಲಿಕಮ್ಮ, ಗಂಗಮಾಳಮ್ಮ, ಮಲ್ಲಿಗೆಮ್ಮ, ಕೊಲ್ಲೂರು ಮೂಕಾಂಬಿಕಮ್ಮ, ಗುಳೇಲಕ್ಕವ್ವ, ಪದ್ಮಾವತಿ, ಲಕ್ಷ್ಮೀದೇವಿ, ಕಂಬದಮ್ಮ, ಬಿಸಿಲಮ್ಮ ಬೆಸ್ತರಗಂಗಮ್ಮ, ಬನ್ನಿಕಾಳಮ್ಮ, ಗಂಗಾ ಪರಮೇಶ್ವರಿ, ಮಹಾಚೌಡೇಶ್ವರಿ, ಅಂಬಾಭವಾನಿ, ಬರಗೇರಮ್ಮ, ಬಂಡೆಚೌಡಮ್ಮ, ಬುಡ್ಡಮ್ಮ, ಕವುಲೇದುರ್ಗದಮ್ಮ, ಆರಗದಮ್ಮ, ವಡ್ಡಗೆರೆನಾಗಮ್ಮ ಏಳುಕೊಳದ ಎಲ್ಲಮ್ಮ, ಮಾಯಸಂದ್ರದ ಕರಿಯಮ್ಮ, ಯಮನಾಳುದೇವಮ್ಮ, ಚಾಮನಹಳ್ಳಿ ಕ್ಯಾತಮ್ಮ, ಹೆರಗನಹಳ್ಳಿ ಲಕ್ಕಮ್ಮ, ಚಾಮಾಯಿ, ಕಾಳಮ್ಮ ಅಂತರಗಟ್ಟೆಮ್ಮ, ಹೊರಬಿಟ್ಟಮ್ಮ, ಶೆಟ್ಟಿಕೆರೆ ಕೆಂಪಮ್ಮ, ಮಸಳಿಕಮ್ಮ, ಚಿಕ್ಕರೆ ಪಟ್ಟಲದಮ್ಮ ಮುಂತಾಗಿ. ಹೀಗೆ ಗ್ರಾಮದೇವತೆಗಳಲ್ಲಿ ಹೆಣ್ಣು ದೇವತೆಗಳ ಸಂಖ್ಯೆ ದೊಡ್ಡದು. ಈ ಹೆಣ್ಣು ದೇವತೆಗಳ ಜೊತೆಯಲ್ಲೇ ಗಂಡು ದೇವತೆಗಳ ಸೃಷ್ಟಿಯೂ ನಡೆದಿದೆ. ಹೆಣ್ಣುದೇವತೆಗೆ ಗಂಡ, ಅಣ್ಣ, ತಮ್ಮ ಮೊದಲಾದ ಸಂಬಂಧ ಕಲ್ಪಿತವಾಗಿದೆ. ಹೆಂಡತಿಯಿಲ್ಲದ ಗಂಡುದೇವತೆಯೂ ಇದೆ. ಗಂಡನಿಲ್ಲದ ಹೆಣ್ಣು ದೇವತೆಯೂ ಇದೆ. ಆದರೆ ತಂಗಿ ಇಲ್ಲದ ಗಂಡು ದೇವತೆಗಳು ಕಡಿಮೆ. ಕೆಲವು ಗಂಡು ದೇವತೆಗಳ ಹೆಸರುಗಳು ಹೀಗಿವೆ: ಬೋರೇದೇವರು, ಸಿದ್ದೇದೇವರು, ಮುತ್ತಪ್ಪ, ಬೀರಪ್ಪ, ತಿಮ್ಮಪ್ಪ, ಬೈರವೇಶ್ವರ, ಜೋಗಪ್ಪ, ಸಿಡೇರಪ್ಪ, ಈರಬದ್ರ, ಮತ್ತಿಕಾಳೇಶ್ವರ, ಮುತ್ತುರಾಯ, ಮುನೇಶ್ವರ, ಚನ್ನಬೈರವೇಶ್ವರ, ಕೊಟ್ರೇಶ್ವರ, ಬಿಸಲಪ್ಪ, ಅಂಪುಳ್ಳಿಯಪ್ಪ, ಒಕ್ಕಲೇರಿ ರಾವಣ, ಹೊಸದೇವರು, ಬಂಡಿದೇವರು, ಭೀಮೇಶ್ವರ, ನಂಜುಂಡೇಶ್ವರ, ವಾಡೇ ಬೈರವ, ಮಲ್ಲಿಕಾರ್ಜುನ, ಬೂದೇಶ್ವರ, ಹಾಲಸ್ವಾಮಿ, ಶನೀಸ್ವರ, ಭೂತರಾಯ, ಬ್ಯಾಟರಾಯಸ್ವಾಮಿ, ಹಿಡಿಂಬೇಶ್ವರ, ನೆಲ್ಲಿಕಾಯಿ ಸಿದ್ದೇಶ್ವರ, ಧವಳೇಶ್ವರ, ಚೋಳೇಶ್ವರ, ಪಾತಾಳೇಶ್ವರ, ಯಗ್ಗಪ್ಪಸ್ವಾಮಿ, ಕೆಂಚೇಶ್ವರ, ಬಾಳೆಕಾಯೇಶ್ವರ, ಅಣ್ಣಪ್ಪದೈವ, ಮುಡುಕುತೊರೆ ಮಲ್ಲಿಕಾರ್ಜುನ, ಆಂಜನೇಯಸ್ವಾಮಿ ಮುಂತಾಗಿ.

ಮೇಲೆ ಪಟ್ಟಿ ಮಾಡಿದ ಗ್ರಾಮದೇವತೆಗಳಲ್ಲಿ ಪ್ರಧಾನವಾಗಿ ಎರಡು ಮನೋಧರ್ಮದ ದೇವತೆಗಳನ್ನು ಕಾಣಬಹುದು! ೧. ಕೇಡುಂಟು ಮಾಡುವ ಉಗ್ರ /ಕ್ಷುದ್ರ ದೇವತೆಗಳು ೨. ಉಪಕಾರ ಮಾಡುವ ಸೌಮ್ಯ ದೇವತೆಗಳು. ರೋಗ ರುಜಿನಗಳ ಬೆದರಿಕೆ ಒಡ್ಡಿ ಜನರನ್ನು ಮಣಿಸುವಂಥವು ಮೊದಲ ಗುಂಪಿನವು. ಅವು ಶಿಕ್ಷಕ ಪ್ರವೃತ್ತಿಯವು. ಇನ್ನು ಎರಡನೆಯ ಗುಂಪಿನವು ಜನರ ಬೇಕು ಬೇಡಗಳನ್ನು ಸರಳ ಕೋರಿಕೆಯ ಮೇರೆಗೆ ಈಡೇರಿಸುವಂಥವು. ಇವು ರಕ್ಷಕ ಪ್ರವೃತ್ತಿಯವು. ವಿನಾಶಕಾರಿ ಮತ್ತು ಉಪಕಾರಿ-ಎರಡೂ ಮನೋಭಾವಗಳನ್ನು ಒಟ್ಟಿಗೆ ಮೈಗೂಡಿಸಿಕೊಂಡ ದೇವತೆಗಳದೇ ಒಂದು ಪ್ರತ್ಯೇಕ ವರ್ಗ. ಬೇಕಾದರೆ ಅದನ್ನು ಮೂರನೆಯ ಗುಂಪು ಎಂದು ಪರಿಗಣಿಸಬಹುದು. ಸಂರಕ್ಷಕ-ದಂಡನಕಾರಿ ಪ್ರವೃತ್ತಿ, ಭಾಗ್ಯ-ದೌರ್ಭಾಗ್ಯ, ಆರೋಗ್ಯಭಾಗ್ಯ ಮತ್ತು ಪೀಡನೆ ಇವೇ ಮುಂತಾದ ಗುಣಧರ್ಮಗಳು ಬೇರ್ಪಡಿಸಲಾಗದ ರೀತಿಯಲ್ಲಿ ಒಂದೇ ದೇವತೆಯಲ್ಲಿ ಅಡಕವಾಗಿರುವುದು ಇಲ್ಲಿನ ವಿಶೇಷ.

ಗ್ರಾಮದೇವತೆಗಳಲ್ಲಿ ಹೆಚ್ಚಿನವು ಶಕ್ತಿದೇವತೆಗಳಾದ್ದರಿಂದ ಅವುಗಳಲ್ಲಿ ಉಗ್ರತೆ ಹೆಚ್ಚು. ಅಂತೆಯೇ ಅವು ಬಲಿ ಬೇಡುವುದು ಸಾಮಾನ್ಯ. ಆದಿಯಲ್ಲಿ ಮನುಷ್ಯ

ಸಂಪೂರ್ಣ ಮಾಂಸಾಹಾರಿಯಾಗಿದ್ದ. ಬೇಸಾಯ ತಿಳಿದಿರದಿದ್ದ ಕಾಲದಲ್ಲಿ ಅದು ಅನಿವಾರ್ಯವೂ ಆಗಿತ್ತು. ಫಲವಾಗಿ ಆತ ತಾನು ಸೃಷ್ಟಿಸಿದ ದೇವತೆಗೂ ತಾನು ತಿನ್ನುವ ಆಹಾರವನ್ನೇ ಅರ್ಪಿಸುತ್ತಿದ್ದ. ಬಲಿಕೊಡುವುದರಿಂದ ಉಗ್ರ ದೇವತೆಯನ್ನು ಸುಲಭವಾಗಿ ಸಂಪ್ರೀತಗೊಳಿಸಬಹುದು ಎಂದು ನಂಬಿದ್ದ. ದೇವತೆಯನ್ನು ಸಂಪ್ರೀತಗೊಳಿಸಲು ಯಾವ ಜೀವಿಯ ಬಲಿಕೊಡಲೂ ಅವನು ಹಿಂಜರಿಯುತ್ತಿರಲಿಲ್ಲ. ಸುಲಭವಾಗಿ ಹಿಡಿದು ಪಳಗಿಸಬಹುದಾದ ಕೋಣ, ಕುರಿ, ಮೇಕೆ, ಕೋಳಿ ಮುಂತಾದವುಗಳನ್ನು ಬಲಿ ಕೊಡುವುದು ಸ್ವಾಭಾವಿಕವಾಗಿತ್ತು.

ಸಸ್ಯಾಹಾರದಿಂದಲೂ ಮನುಷ್ಯ ಜೀವಿಸಬಲ್ಲ ಎಂಬ ತಿಳಿವಳಿಕೆ ಮೂಡಿದ ಮೇಲೆ ಬಲಿ ಕೇಳುವ ದೇವತೆಗಳಲ್ಲಿ ಕೆಲವನ್ನು ಚೊಕ್ಕ ಭೋಜನದವನ್ನಾಗಿ ಪರಿವರ್ತಿಸಿದ. ಹೊಸದಾಗಿ ಚೊಕ್ಕ ಭೋಜನದ ದೇವತೆಗಳೂ ಸೃಷ್ಟಿಯಾದವು. ಉಗ್ರ ಸ್ವರೂಪದ ಆರಾಧನೆಯೊಡನೆ ಸಾತ್ವಿಕ ಸ್ವರೂಪದ ಆರಾಧನೆಯೂ ಚಲಾವಣೆಗೆ ಬಂದಿತು. ಹೀಗೆ ಮಾನವನ ಮನಸ್ಸಿನಂತೆ ಗ್ರಾಮದೇವತೆಗಳು ಸೃಷ್ಟಿಯಾಗಿರುವುದಲ್ಲದೆ ಮಾನವ ಆಹಾರ ಪದ್ಧತಿಯಂತೆ ದೇವತೆಗಳ ಆಹಾರ ಪದ್ಧತಿಯೂ ವಿನ್ಯಾಸಗೊಂಡಿತು.

ಸದ್ಯ ರೂಢಿಯಲ್ಲಿರುವ ಆಹಾರ ಪದ್ಧತಿಯ ಹಿನ್ನಲೆಯಲ್ಲಿ ದಕ್ಷಿಣ ಕರ್ನಾಟಕದ ಗ್ರಾಮದೇವತೆಗಳನ್ನು ಈ ಕೆಳಗೆ ಕಾಣಿಸಿದಂತೆ ಮೂರು ಗುಂಪುಗಳಲ್ಲಿ ನೋಡಬಹುದು:

1. ಚೊಕ್ಕ ಭೋಜನ ಸಾಕೆನ್ನುವ ದೇವತೆಗಳು
2. ಹಾಲು, ತುಪ್ಪ, ಹಣ್ಣು ಹಂಪಲುಗಳಿಂದ ಸಂಪ್ರೀತಗೊಳ್ಳುವ ದೈವಗಳು
3. ಬಲಿ ಕೇಳುವ ದೇವತೆಗಳು.

ಚೊಕ್ಕ ಭೋಜನ ಬಯಸುವ ದೈವಗಳಿಗೆ ಹಣ್ಣು ಕಾಯಿಗಳ ನೈವೇದ್ಯದೊಂದಿಗೆ ಸಣ್ಣಕ್ಕಿ ಅನ್ನ, ಕೆಸುವಿನಸೊಪ್ಪಿನ ಸಾರು, ಪಾಯಸ ಮುಂತಾದ ಭಕ್ಷ್ಯಭೋಜ್ಯಗಳ ಎಡೆ ಅರ್ಪಿಸುವುದು ಕ್ರಮ. ಈ ಭೋಜನವನ್ನು ಬಯಸುವ ದೈವಗಳು ಸಾತ್ವಿಕ ಆಹಾರ ಸೇವಿಸಿದರೂ ಬಲಿಕೇಳುವ ದೈವಗಳಂತೆ ಉಪದ್ರವಿಗಳು. ಹರಕೆ ಪೂಜೆಗಳು ಸಕಾಲದಲ್ಲಿ ನೆರವೇರದಿದ್ದರೆ ಅವು ತಮ್ಮ ಅಸಮಧಾನವನ್ನೂ ಉಗ್ರ ಕೋಪವನ್ನೂ ಜನಜಾನುವಾರುಗಳಿಗೆ ರೋಗ ರುಜಿನಗಳನ್ನು ತರುವುದರ ಮೂಲಕ ಪ್ರದರ್ಶಿಸುತ್ತವೆ ಎಂದು ನಂಬಿಕೆ ಉದಾ. ಗೆ ಮಲೆನಾಡಿನ ಯಕ್ಷಿ, ಚೌಡಮ್ಮ ಮುಂತಾದವು.

ಹಾಲು ತುಪ್ಪ ಹಣ್ಣು ಹಂಪಲುಗಳ ಫಲಾಹಾರದಿಂದ ಸಂಪ್ರೀತಗೊಳ್ಳುವ ದೈವಗಳು ಬಲಿ ಕೇಳುವುದಿಲ್ಲ. ಆದ್ದರಿಂದ ಈ ಗುಂಪಿನ ದೇವತೆಗಳನ್ನು ಸೌಮ್ಯ/ಸಾತ್ವಿಕ ದೇವತೆಗಳೆಂದು ಗುರುತಿಸಲಾಗಿದೆ. ಹಣ್ಣುಕಾಯಿ, ತುಪ್ಪದ ದೀಪ ಸೇವೆ ನಡೆಸಿದರೆ ಸಾಕೆನ್ನುವ ಈ ದೇವತೆಗಳನ್ನು ಉಚ್ಚವರ್ಗದ ದೇವತೆಗಳೆಂದೂ ಪರಿಗಣಿಸಿದ್ದಾರೆ. ಮುಂದುವರಿದ ಜಾತಿ ಸಮಾಜಗಳ ಅನುಕರಣೆಯ ಫಲದಿಂದಾಗಿ ಹಿಂದುಳಿದ ಜಾತಿ ಸಮೂಹಗಳಲ್ಲಿ ಈ ಗುಂಪಿನ ದೈವಗಳು ಜನಪ್ರಿಯವಾಗಿವೆ. ಉದಾ. ಗೆ. ಮನೆನಾಡಿನ ಬರ್ಮದೇವರು (ಬ್ರಹ್ಮ) ನಾಗರು, ಜಟಗ ಮುಂತಾಗಿ.

ಬಲಿ ಕೇಳುವ ದೈವಗಳನ್ನು ಕ್ಷುದ್ರ/ ಉಗ್ರ ದೇವತೆಗಳೆಂದು ಕರೆಯುವುದು ವಾಡಿಕೆ. ಇವಕ್ಕೆ ಗುಡಿ ಗುಡಾರಗಳಿರುವುದಿಲ್ಲ. ಕೃಷಿಕರ ಜಮೀನು ಮನೆಗಳನ್ನು ಸಂರಕ್ಷಿಸುವ ಇವು ಸದಾ ಇವರ ಬೆನ್ನ ಹಿಂದೆ ರಕ್ಷಕರಾಗಿ ಇರುವಂಥವು. ಇವರ ರಕ್ಷಣೆಗೆ, ಇವರ ಜಾನುವಾರು ಸಂಪತ್ತುಗಳ ಸಂರಕ್ಷಣೆಗೆ ಈ ದೈವಗಳು ಬೇಕು. ಈ ದೈವಗಳಲ್ಲಿ ರೋಗ ರುಜಿನಗಳನ್ನು ತರುವ ದೇವತೆಗಳ ಬಗೆಗೆ ಜನರಿಗೆ ಭಯ ಹೆಚ್ಚು. ಮಳೆ ಬಾರದಿದ್ದರೆ, ಪೈರಿಗೆ ಕೀಟಗಳ ತೊಂದರೆಯಾದರೆ, ಜಾನುವಾರು ಕಳೆದುಹೋದರೆ ಸಂಪತ್ತು ಲೂಟಿಯಾದರೆ ಇವರು ಹರಕೆ ಹೊರುವುದು ಈ ದೈವಗಳಿಗೇ. ಉದಾ. ಚೌಡಿ, ಭೂತ, ರಣ, ಪಂಜ್ರೊಳ್ಳಿ, ಮಾರಿ, ದುರ್ಗಿ ಮುಂತಾಗಿ.

ದೇವರು ಮತ್ತು ದೈವ ಸಮುದಾಯದಿಂದ ದೈವಗಳನ್ನು ಬೇರ್ಪಡಿಸುವ ಏಕಮಾತ್ರ ಅಂಶವೆಂದರೆ ಗ್ರಾಮದೇವತೆಯು ಮನುಷ್ಯರ ವ್ಯವಹಾರಗಳಲ್ಲಿ ನಡೆಸುವ ನೇರ ಹಾಗೂ ಪ್ರತ್ಯಕ್ಷ ಕಾರ್ಯಾಚರಣೆಯಾಗಿರುತ್ತದೆ. ಗ್ರಾಮದೇವತೆಗಳ ವಿಧ್ಯುಕ್ತ ಉತ್ಸವಾಚರಣೆಗಳಲ್ಲಿ ಈ ಅಂಶವನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಗಮನಿಸಬೇಕಾದ ಒಂದು ಮುಖ್ಯ ಸಂಗತಿ ಎಂದರೆ ಉತ್ಸವ ಸಂದರ್ಭಗಳಲ್ಲಿ ದೇವತೆಗಳಲ್ಲಿನ ಜಾತಿ ವ್ಯವಸ್ಥೆಯ ನಿಯಮಾವಳಿಗಳು ಅಮೂರ್ತ ಬಗೆಯಲ್ಲಿ ಸೂಚಿತಗೊಳ್ಳುವುದು.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಉಜ್ಜಯನಿಯಲ್ಲಿ ಜರುಗುವ ಚೌಡಮ್ಮನ ಹಬ್ಬ ಈ ದೃಷ್ಟಿಯಿಂದ ಗಮನಾರ್ಹ. ಚೌಡಮ್ಮನ ಪ್ರತಿಷ್ಠಾಪನೆ, ಹೆಬ್ಬಾರೆ ಗುಡ್ಡರಿಗೆ ಜನಿವಾರ ಹಾಕುವುದು ಇಲ್ಲಿನ ಮುಖ್ಯ ವಿಧಿಗಳು. ಹರಿಜನರು ನಿರ್ದಿಷ್ಟ ಅವಧಿಯವರೆಗೆ ಜನಿವಾರ ಧರಿಸುವುದರ ಮೂಲಕ ಬ್ರಾಹ್ಮಣರಾಗುವುದು ಒಂದು ವಿಶಿಷ್ಟ ಸನ್ನಿವೇಶ. ಮಾರಮ್ಮನಂತೆ ಚೌಡಮ್ಮ ಕೂಡ ಬ್ರಾಹ್ಮಣರವಳು. ಅವಳು ಕೂಡ ಮದುವೆಯಾದದ್ದು ಕೀಳು ಜಾತಿಯವನನ್ನು. ಆಮೇಲೆ ತನ್ನಿಂದಾದ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿ ಕೆಂಡಕೊಂಡವಾಗುವಳು. ಹಬ್ಬ ಸಂದರ್ಭದಲ್ಲಿ ಚೌಡಮ್ಮ ತನ್ನ ಗಂಡನ ಮೇಲೆ ಸೇಡು ತೀರಿಸಿಕೊಳ್ಳುವ ಬಗೆಯನ್ನು ಮತಾಚಾರಗಳ ಮೂಲಕ ಅಭಿನಯಿಸಿ ತೋರಿಸಲಾಗುವುದು. ಮೇಲ್ಜಾತಿಯ ಹೆಣ್ಣನ್ನು ನಂಬಿಸಿ ಮದುವೆಯಾದ ತಪ್ಪಿಗಾಗಿ ಕೀಳು ಜಾತಿಗೆ ಸೇರಿದವನು ಪ್ರತಿವರ್ಷವೂ ಜಾತ್ರೆಯ ಸಂದರ್ಭದಲ್ಲಿ ಬಹಿರಂಗವಾಗಿ ಅಪಮಾನಕ್ಕೆ ಗುರಿಯಾಗುತ್ತಾನೆ. ಜನಿವಾರ ಧರಿಸಿ ಕೊಂಡ ಹಾಯುವ ವಿಧಿಯನ್ನು ನಿರ್ವಹಿಸುವುದು ಕಟ್ಟಳೆ. ಇದನ್ನು ನಿಶ್ಚಿತ ಕುಟುಂಬದ ಹರಿಜನರು ನಡೆಸಿಕೊಡಬೇಕೆಂಬುದು ನಿಯಮ. ಅವರು ಜಾತ್ರೆಯ ಅವಧಿಯಲ್ಲಿ ಜನಿವಾರ ಧರಿಸಿದ್ದರೂ ಅವರನ್ನು ಯಾರೂ ಬ್ರಾಹ್ಮಣರೆಂದು ಗುರುತಿಸುವುದಿಲ್ಲ. ಅವರು ಗುಡಿಯ ಒಳಗೂ ಹೋಗುವಂತಿಲ್ಲ. ಇನ್ನೂ ಸ್ವಾರಸ್ಯದ ಸಂಗತಿ ಎಂದರೆ ಜನಿವಾರ ಧರಿಸಿದ ಅವರೆಲ್ಲರೂ ಸ್ವಯಂ ಹರಿಜನ ಜಾತಿಗೇ ಸೇರಿದ್ದರೂ ಆ ಅವಧಿಯಲ್ಲಿ ಅವರು ತಮ್ಮ ಜಾತಿಯ ಮನೆಗಳ ಹೊಸ್ತಿಲನ್ನು ತುಳಿಯುವಂತಿಲ್ಲ. ಹೀಗೆ ಇಲ್ಲಿಯ 'ಹೆಬ್ಬಾರೆ ಗುಡ್ಡರು' ಇಡೀ ಸಮಾಜದ ಸೇಡಿಗೆ ಬಲಿಯಾಗುತ್ತಾರೆ. ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿ ಉಚ್ಚ ಮತ್ತು ಕೆಳ ಜಾತಿಯ ಜನರ ವೈವಾಹಿಕ ಸಂಬಂಧ ಕೆಳವರ್ಗದ ಜನರ ಬದುಕಿನಲ್ಲಿ

ಯಾವ ಬಗೆಯ ವಿಷಮ ಪರಿಸ್ಥಿತಿಯನ್ನು ತಂದೊಡ್ಡುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಬಹುತೇಕ ಎಲ್ಲ ಗ್ರಾಮದೇವತೆಗಳ ಆರಾಧನೆಯಲ್ಲೂ ಈ ಸಂಘರ್ಷವನ್ನು ಗುರುತಿಸಬಹುದು.

ಗ್ರಾಮದೇವರ ಹಬ್ಬದ ಮತಾಚಾರಗಳಲ್ಲಿ ಎದ್ದು ಕಾಣುವ ಒಂದು ಇತ್ಯಾತ್ಮಕ ಅಂಶವೆಂದರೆ ಹನ್ನೆರಡೂ ಕೈವಾಡದವರ ಸೇವೆಗೆ ಅವಕಾಶ ಇರುವುದು. ಒಂದೊಂದು ಕೈವಾಡದವರಿಗೂ ಒಂದೊಂದೂ ಗುರುತರವಾದ ಹೊಣೆ ಇರುತ್ತದೆ. ಗೌಡರು ಇಡೀ ಹಬ್ಬದ ಉಸ್ತುವಾರಿಯ ಹೊಣೆ ಹೊತ್ತಿದ್ದರೆ ತೋಟಿ ತಳವಾರರು ಜಾತ್ರೆ ಸಾರುವ ಕೆಲಸ ನಿರ್ವಹಿಸುತ್ತಾರೆ. ಚಲುವಾದಿಗಳು ವಾದ್ಯ ನುಡಿಸಿದರೆ ಹರಿಜನರಲ್ಲಿ ಬಲಗೈನವರು ಕಾಡಿಗೆ ಹೋಗಿ ಕಕ್ಕೆ ಮರ ತಂದು ಕೊಡುತ್ತಾರೆ. ಬಡಗಿ ಮಾರಿಯ ಮೂರ್ತಿಯನ್ನು ಕೆತ್ತಿದರೆ ಬಣ್ಣಗಾರರು ಬೆಂಡಿನ ಬಾಸಿಂಗವನ್ನು ತರುತ್ತಾರೆ. ಅಗಸ ಮಾರಮ್ಮನಿಗೆ ಮಡಿಲಕ್ಕಿ ತುಂಬಿ ನಡೆಮಡಿ ಹಾಸಿದರೆ ಪುರೋಹಿತ ಪೂಜಾಕಾರ್ಯ ನಿರ್ವಹಿಸುತ್ತಾನೆ. ಹೀಗೆ ಹಬ್ಬ /ಜಾತ್ರೆ ಯಶಸ್ವಿ ಆಗಬೇಕಾದರೆ ಹನ್ನೆರಡೂ ಕೈವಾಡದವರ ಸೇವೆ ಅಗತ್ಯ. ಹರಿಜನರು ಅಗಸರು, ದೀವಟಿಗೆಯವರು, ಕುಂಬಾರರು, ವಾಜರ ಸೇವೆ ಬಹು ಜರೂರಾದದ್ದು. ಈ ದೃಷ್ಟಿಯಿಂದ ಗ್ರಾಮದೇವತೆಯ ಹಬ್ಬ ಊರೊಟ್ಟಿನ ಸಾಮೂಹಿಕ ಕ್ರಿಯೆಯೂ ಹೌದು ಒಂದು ಸಾಂಸ್ಕೃತಿಕ ಮೇಳವೂ ಹೌದು. ಆದ್ದರಿಂದ ಅದಕ್ಕೆ ಯಾರ ಒಬ್ಬರ ಸಹಕಾರ ತಪ್ಪಿದರೂ ತೊಂದರೆ ನಿಶ್ಚಯ.

೬

ಗ್ರಾಮದೇವತೆಗಳಿಗೂ ಜನಪದ ಜೀವನಕ್ಕೂ ನಿಕಟ ಸಂಬಂಧವಿದೆ. ಈ ಸಂಬಂಧ ಎಷ್ಟು ಗಾಢವಾದದ್ದು ಎಂಬುದು ಅವರು ಗ್ರಾಮದೇವತೆಗಳಿಗೆ ಒದಗಿಸಿರುವ ಸವಲತ್ತುಗಳಲ್ಲಿ ಸ್ಪಷ್ಟಗೊಳ್ಳುತ್ತದೆ. ಗುಡಿ, ಗುಡ್ಡ, ತಮ್ಮಡಿ, ಬಸವ, ಒಡವೆ, ವಸ್ತ್ರ, ಕೊಂಡ, ಕೊಂಡಬಂಡಿ, ವಾಹನ, ವಾದ್ಯ ಸಮೂಹ, ಈರರು, ಲಿಂಗ್ಬೀರಯ್ಯ, ಒಕ್ಕಲುಮಕ್ಕಳು, ಲಾಂಛನ, ಹರಕೆ ಮುಂತಾದ ಸವಲತ್ತುಗಳನ್ನು ಕಲ್ಪಿಸಲಾಗಿದೆ.

ಎಲ್ಲ ಗ್ರಾಮದೇವತೆಗಳಿಗೂ ಗುಡಿಗಳಿರುವುದಿಲ್ಲ. ಇದು ಆಯಾ ಗ್ರಾಮದ ಜಾತಿ ಸಮಾಜದ ಜನರ ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ. ಎಷ್ಟೋ ದೇವತೆಗಳು ಒರಟಾಗಿ ಕಾಡುಕಲ್ಲುಗಳಲ್ಲಿ ಕೆತ್ತಿದ ವಿಗ್ರಹಗಳಲ್ಲಿ, ಮತ್ತೆ ಕೆಲವೊಮ್ಮೆ ಕೆಲವು ಸಂಕೇತಗಳಲ್ಲಿ, ಇನ್ನು ಕೆಲವೊಮ್ಮೆ ಯಾವ ಸ್ಪಷ್ಟ ದೃಗ್ಗೋಚರ ವಸ್ತುವೂ ಇಲ್ಲದೆ ಬರಿಯ ಆರಾಧನ ಸ್ಥಳಗಳಿಂದ ಪ್ರತಿನಿಧಿಸಲ್ಪಡಬಹುದು. ಕಲಾಹೀನವಾಗಿ ನಾಗರಿಕತೆಯ ಅನುಕೂಲವಿಲ್ಲದೆ ಬಿಸಿಲು ಮಳೆ ಬಿರುಗಾಳಿಗೆ ಮೈ ಒಡ್ಡಿರುತ್ತವೆ. ಕೆಲವಕ್ಕಂತೂ ಮರದ ಬುಡವೆ ಗತಿ. ಅದೇ ಹೆಸರುಗಳಿಂದ ಅವುಗಳ ನಿರ್ದೇಶನ ಮಾಡುವುದುಂಟು:ಉದಾ: ಆಲದ ಮರದಮ್ಮ, ಬೇವಿನ ಮರದಮ್ಮ, ದೊಡ್ಡಿಕಾಯಿ ಮರದಮ್ಮ ಇತ್ಯಾದಿಯಾಗಿ ಮಣ್ಣಿನ ತುಂಡು ಗೋಡೆಯ ಮೇಲೆ ಕಲ್ಲು ಚಪ್ಪಡಿ ಹಾಸಿರುವುದು, ಬೇಯಿಸಿದ ದೊಡ್ಡ ಬೋಗುಣಿಯನ್ನು ಬೋರಲು ಹಾಕಿರುವುದು, ಯಾವ ರಕ್ಷಣೆಯೂ ಇಲ್ಲದೆ ಬಟ್ಟ ಬಯಲಿನಲ್ಲಿರುವುದು - ಅನೇಕ ದೇವತೆಗಳ ಸ್ಥಿತಿ. ಗ್ರಾಮ ಘಟಕಗಳು ಸ್ಥಾಪಿತವಾದ

ಮೇಲೆ ದೇವತೆಗೆ ಗುಡಿಕಟ್ಟಿ ಗುಡಿಯಲ್ಲಿಟ್ಟು ಪೂಜಿಸುವುದು ರೂಢಿಯಾದರೂ[4] ಅಧಿದೇವತೆಯ ಹೊರತು ಉಳಿದ ದೈವಗಳಿಗೆ ಈ ಭಾಗ್ಯ ಇರುವುದಿಲ್ಲ.

ಗ್ರಾಮದೇವತೆಗೂ ಗ್ರಾಮಸ್ಥರಿಗೂ ನಡುವೆ ಇರುವ ವ್ಯಕ್ತಿ ಗುಡ್ಡ. ಇವನನ್ನು 'ದೇವರ ಗುಡ್ಡ' ಎಂದು ಕರೆಯುವುದು ವಾಡಿಕೆ. ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸುವ ಈತ ದೇವರ ಕಟ್ಟ ಭಕ್ತನೂ ಶಿಷ್ಯನೂ ಆಗಿರುತ್ತಾನೆ. ಸಾಮಾನ್ಯವಾಗಿ ಆಯಾ ಜಾತಿಯ ದೇವತೆಗಳಿಗೆ ಆಯಾ ಜಾತಿಯ ಜನರೇ ಗುಡ್ಡರಾಗಿರುತ್ತಾರೆ. ಗ್ರಾಮಸ್ಥರ ಸಮ್ಮತಿ ಮೇರೆಗೆ ಮತಾಚಾರ ನಿಯಮಗಳಿಗನುಸಾರವಾಗಿ ಅವನ ಆಯ್ಕೆ ನಡೆಯುತ್ತದೆ. ವಾರ್ಷಿಕ ಮತ್ತು ಮಾಸಿಕ ಉತ್ಸವ ಆಚರಣೆಗಳಲ್ಲಿ ಗುಡ್ಡನಿಗೆ ದೇವರು ಮೈದುಂಬಿದಾಗ ಅವನು ಗ್ರಾಮಸ್ಥರಿಗೆ ವರ ನೀಡುತ್ತಾನೆ.[5] ಜನರ ಕಷ್ಟ ನಿವಾರಣೆಗೆ ದಾರಿ ತೋರುತ್ತಾನೆ. ಎಷ್ಟೋ ವೇಳೆ ದೇವರ ಪ್ರತಿನಿಧಿಯಾಗಿ ಅವನು ಜನರ ಕಷ್ಟಗಳ ಹೊರೆ ಹೊರುತ್ತಾನೆ. ಈ ಅರ್ಥದಲ್ಲಿ ವಾರ್ಷಿಕ ಉತ್ಸವಾಚರಣೆಗಳು ಗ್ರಾಮ ಸಮಾಜ ವ್ಯವಸ್ಥೆಯ ಪಡಿಯಚ್ಚು ಮಾತ್ರವಾಗಿರದೆ ಗ್ರಾಮದ ಮಹತ್ವದ ಆಗುಹೋಗುಗಳನ್ನು ನಿಯಂತ್ರಿಸುವ ಒಂದು ಸಾಧನವಾಗಿರುತ್ತವೆ. ಎಷ್ಟೋ ಸಲ ಈ ಉತ್ಸವ ಆಚರಣೆಗಳು ಒಂದು ಪವಿತ್ರ ನ್ಯಾಯಸ್ಥಾನವಾಗಿ ಪರಿಣಮಿಸಿ ಇಲ್ಲಿ ಎಲ್ಲ ಬಗೆಯ ಸಾಂಪ್ರದಾಯಿಕ ಮೌಲ್ಯಗಳನ್ನು ಬಳಸಿ ಬದುಕಿನ ಕ್ಲಿಷ್ಟಕರ ಬಿಕ್ಕಟ್ಟಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು. ಉತ್ಸವದ ವಿಧಿ ಆಚರಣೆಗಳು ಮೇಲುನೋಟಕ್ಕೆ ನಾಟಕದಂತೆ ಕಂಡರೂ ಅದು ಕೇವಲ ನಾಟಕ ಆಗಿರುವುದಿಲ್ಲ. ಅದರಲ್ಲಿ ಪಾಲ್ಗೊಳ್ಳುವ ಎಲ್ಲ ವರ್ಗಗಳು ಅಲೌಕಿಕ ಪ್ರಭಾವದ ನಂಬಿಕೆಯಿಂದ ಬದ್ಧವಾಗಿದ್ದು ಗುಡ್ಡನ ಮೈದುಂಬಿರುವ ಗ್ರಾಮದೇವತೆ ತನ್ನ ದಿವ್ಯಕಟಾಕ್ಷಗಳನ್ನು ಹಿಂತೆಗೆದುಕೊಂಡಲ್ಲಿ ಬದುಕು ದಾರುಣವಾಗುತ್ತದೆ ಎಂಬ ನಂಬಿಕೆ ವ್ಯಾಪಕವಾಗಿದೆ.

ಗ್ರಾಮದೇವತೆಯ ಉತ್ಸವಾಚರಣೆಗಳಲ್ಲಿ ದೇವರಗುಡ್ಡ ಕೇಂದ್ರ ವ್ಯಕ್ತಿ. ದೇವತೆಯ ಕೋಪತಾಪಗಳು ಪ್ರದರ್ಶನಗೊಳ್ಳುವುದು ಆತನ ಮೂಲಕವೇ. ಆಚರಣೆಯ ಸಂದರ್ಭದಲ್ಲಿ ದೈವ ಮೈದುಂಬಿದಾಗ ಅವನು ಬರಿಗಾಲಿನಲ್ಲಿ ಬೆಂಕಿಯ ಮೇಲೆ

---

4. ಒರಟಾದ ಕಲ್ಲು ಕಂಬಗಳನ್ನು ನೆಟ್ಟು ಆ ಕಂಬಗಳ ಮೇಲೆ ಅಗಲವಾದ ಚಪ್ಪಡಿಯನ್ನು ಹಾಸಿರುತ್ತಾರೆ. ಇದು ಗರ್ಭಗುಡಿ. ಆ ಗುಡಿಯ ಒಳಗೆ ಗ್ರಾಮದ ಅಧಿದೇವತೆಯನ್ನು ಸಣ್ಣ ಕಲ್ಲಿನಲ್ಲಿ ಸ್ಥಾಪನೆ ಮಾಡಲಾಗಿರುತ್ತದೆ.

5. ಗ್ರಾಮದೇವತೆಗಳು ಆರಾಧಕ ಕಣ್ಣನಲ್ಲಿ ತಮ್ಮ ಪಾಲಕರು ಬಯಸಿದ್ದನ್ನು ನೇರವಾಗಿ ಪಡೆಯುವ ತಂತ್ರ ದೈವ ಆವಾಹನೆಯದು. ಗ್ರಾಮದೇವತೆಗಳು ಉಚ್ಚ ಆದರ್ಶವನ್ನು ಪ್ರತಿನಿಧಿಸುತ್ತವೆ ಎಂಬ ಕಾರಣಕ್ಕಾಗಿ ಮೈದುಂಬುವಿಕೆಯನ್ನು ಅಸಲಿಯಾದದ್ದು ಎಂದು ಒಪ್ಪಿಕೊಳ್ಳುತ್ತಾರೆ. ವಿಧಿ ಆಚರಣೆಗಳೊಡನೆ ದೈವ ಪ್ರಕಟಗೊಂಡಾಗ ವಾತಾವರಣವು ಲೌಕಿಕದಿಂದ ಅಲೌಕಿಕ ಸ್ತರಕ್ಕೇರುತ್ತದೆ. ಈ ಕಾರಣದಿಂದಾಗಿ ಎಲ್ಲ ವಿವಾದಗಳೂ ದೈವಗಳ ಸಮಕ್ಷಮದಲ್ಲೇಸೂಕ್ತ ರೀತಿಯಲ್ಲಿ ತೀರ್ಮಾನಗೊಳ್ಳುತ್ತವೆ ಎಂದು ನಂಬಿಕೆ. ಅಂತಹ ನಂಬಿಕೆಗಳು ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಮಹತ್ವ ಪೂರ್ಣವಾದವು.

ನಡೆಯುತ್ತಾನೆ, ಪಾಪಾಸುಕಳ್ಳಿ, ನೆಗ್ಗಿಲುಮುಳ್ಳುಗಳ ಮೇಲೆ ಮಲಗುತ್ತಾನೆ, ಬೆನ್ನಿನ ನರಕ್ಕೆ ಕಬ್ಬಿಣದ ಕೊಂಡಿ ಚುಚ್ಚಿಸಿಕೊಂಡ ಸಿಡಿಯಾಡುತ್ತಾನೆ, ಹರಿತವಾದ ಬಾಕುವಿನಿಂದ ಇರಿದುಕೊಳ್ಳುತ್ತಾನೆ, ದೇವರ ಉತ್ಸವ ಮೂರ್ತಿಗಳನ್ನು ಹೊತ್ತು ಕುಣಿದು ಮೆರೆಸುತ್ತಾನೆ, ಬೇವಿನಸೊಪ್ಪು ಜಗಿದು ತಿಂದು ಕಳ್ಳಿ ಹಾಲು ಕುಡಿಯುತ್ತಾನೆ, ಕಲ್ಲು ಕಡಿದು ಪುಡಿ ಮಾಡುತ್ತಾನೆ- ಹೀಗೆ ಗುಡ್ಡನು ಪವಾಡ ಸದೃಶವಾದ ಅನೇಕ ಚಟುವಟಿಕೆಗಳನ್ನು ಕೈಕೊಳ್ಳುತ್ತಾನೆ. ಈ ಸಾಹಸ ಪ್ರದರ್ಶನಗಳು ನೆರೆದ ಜನರಲ್ಲಿ ವಿಸ್ಮಯ ಮೂಡಿಸುವುದಷ್ಟೇ ಅಲ್ಲ ಅವನ ಸಾಮರ್ಥ್ಯದ ಬಗೆಗೆ ಅಪಾರ ನಂಬುಗೆ ಹುಟ್ಟಿಸುತ್ತವೆ.

ಉತ್ಸವಾಚರಣೆಗಳಲ್ಲಿ ಗ್ರಾಮದೇವತೆ ಹೆಚ್ಚು ವೈಭವವಾಗಿ ಕಂಗೊಳಿಸುವಂತೆ ಮಾಡಬೇಕೆನ್ನುವುದು ಗ್ರಾಮಸ್ಥರಿಗೆ ಪ್ರತಿಷ್ಠೆಯ ಸಂಗತಿ ಆಗಿರುತ್ತದೆ. ಅವರು ತಾವು ಬಡವರಾದರೂ ತಮ್ಮ ದೇವತೆಗೆ ಮಾತ್ರ ಆದರ ಸ್ಪರ್ಶವಾಗದಂತೆ ನೋಡಿಕೊಳ್ಳುತ್ತಾರೆ. ವೈವಿಧ್ಯಪೂರ್ಣವೂ ಬೆಲೆ ಬಾಳುವಂಥವೂ ಆದ ಒಡವೆ ವಸ್ತ್ರಗಳನ್ನು ದೊರಕಿಸಿಕೊಳ್ಳುತ್ತಾರೆ: ಅವುಗಳಲ್ಲಿ ಚಿನ್ನದ ವಾಲೆ, ಬುಗುಡಿ, ಬೆಳ್ಳಿ ಬಾಸಿಂಗ, ಜಡೆಕುಚ್ಚು, ಜಡೆಬಿಲ್ಲೆ, ಮಾಂಗಲ್ಯ, ಹುಲಿಯುಗುರು, ಹಿಂಬಳೆ, ಕೋಣನ ಗೆಜ್ಜೆ ಮುಂತಾದವುಗಳಿಂದ ಸಿಂಗರಿಸುವುದು ರೂಢಿ.

ಗ್ರಾಮದೇವತೆಯ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ತಮಟೆ, ಕಹಳೆ, ಡೊಳ್ಳು, ಹೆಬ್ಬರೆ ಮೊದಲಾದ ವಾದ್ಯಗಳ ಮೊಳಗು ವಿಶೇಷವಾಗಿ ಕೇಳುತ್ತದೆ. ಹಬ್ಬ ಕಳೆಗಟ್ಟಲು ಈ ವಾದ್ಯಗಳು ಆರಂಭದಿಂದ ಕೊನೆಯುವರೆಗೂ ಮೊಳಗಲೇಬೇಕು. ಈ ವಾದ್ಯಗಳನ್ನು ನುಡಿಸುವ ನೆಪದಲ್ಲಿ ಹತ್ತು ಹಲವು ಜಾತಿಗೆ ಸೇರಿದ ಜನ ಒಂದೆಡೆ ಕಲೆತು ಹಬ್ಬಾಚರಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶ ಕಲ್ಪಿತವಾಗುತ್ತದೆ. ಇದು ಗ್ರಾಮದ ಮತ್ತು ಗ್ರಾಮಸ್ಥರ ಸುಮಧುರ ಬಾಂಧವ್ಯಕ್ಕಾಗಿ ಗ್ರಾಮದ ಏಕತೆಯನ್ನು ಸ್ಥಾಪಿಸುವುದಕ್ಕಾಗಿ ಅಪೇಕ್ಷಣೀಯ.

ದಕ್ಷಿಣ ಕರ್ನಾಟಕ ಪ್ರದೇಶದ ಒಂದು ವಿಶೇಷ ಎಂದರೆ ಹಬ್ಬಕ್ಕೆ ಎರಡುವಾರ ಮೊದಲೇ ಗುಡಿಯ ಮುಂದೆ ರಂಗ ಕಟ್ಟುವ ಪದ್ಧತಿ. ಉತ್ಸವಾಚರಣೆಗಳಲ್ಲಿ ಪ್ರದರ್ಶಿಸಲಾಗುವ ಎಲ್ಲ ಕಲೆಗಳ ತಾಲೀಮು ಅಂದಿನಿಂದಲೇ ಆರಂಭವಾಗುತ್ತದೆ. ಗ್ರಾಮದ ಸಮಸ್ತರೂ ಗುಡಿಯ ಮುಂದೆ ನೆರೆದು ಸಂತೋಷ ಸಂಭ್ರಮದಿಂದ ತಾಲೀಮು ನಡೆಸುವ ಆ ಸಂದರ್ಭ ಬಹು ಮೋಜಿನದಾಗಿರುತ್ತದೆ. ದೊಣ್ಣೆವರಸೆ, ಕುಸ್ತಿ, ಕೋಲಾಟ, ಪಂಜಿನ ಆಟ, ಹಾಡುಗಾರಿಕೆ ಮುಂತಾದ ಪ್ರತಿಭಾ ಪ್ರದರ್ಶನ ಜರುಗುವುದು. ಹೀಗೆ ಗ್ರಾಮದೇವತೆಯ ಉತ್ಸವಾಚರಣೆಗಳು ಕೇವಲ ಒಣ ಮತಾಚಾರಗಳಿಗಷ್ಟೇ ಸೀಮಿತವಾಗದೆ ಬದುಕಿನ ಸಮಸ್ತ ಚಟುವಟಿಕೆಗಳೂ ಜೀವ ತಾಳಲು ಅವಕಾಶ ಮಾಡಿಕೊಡುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಗ್ರಾಮದೇವತೆಗಳ ಅಧ್ಯಯನ ಎಂದರೆ ಗ್ರಾಮ ಜಾನಪದದ ಸಮಗ್ರ ಅಧ್ಯಯನವೇ ಆಗಿ ಪರಿಣಮಿಸುತ್ತದೆ.

ಒಟ್ಟಿನಲ್ಲಿ ಗ್ರಾಮದೇವತಾರಾಧನ ಪದ್ಧತಿ ಸಾಮೂಹಿಕ ಹಾಗೂ ಗ್ರಾಮ ಮಟ್ಟದಲ್ಲೇ ಜರುಗುವ ಆರಾಧನೆ ಉತ್ಸವವಾದ್ದರಿಂದ ನಿಶ್ಚಿತವಾಗಿಯೂ ಅದು ಗ್ರಾಮಸ್ಥರ ಬದುಕಿನ ಮೇಲೆ ನೇರ ಪರಿಣಾಮವನ್ನು ಉಂಟುಮಾಡುತ್ತದೆ. ಸಮಷ್ಟಿ ಹಿತ

ದೃಷ್ಟಿಯಿಂದ ಜರುಗುವ ಸಾಮೂಹಿಕವಾಗಿ ಸಕ್ರಿಯವಾಗಿ ಸಮಸ್ತರೂ ಪಾಲ್ಗೊಳ್ಳುವ ಹರಕೆ [6] ಉತ್ಸವಗಳು ಗ್ರಾಮಸ್ಥರ ನಡುವಿನ ಬಾಂಧವ್ಯವನ್ನು ಸ್ಥಿರೀಕರಿಸುತ್ತವೆ. ಅಷ್ಟೆ ಅಲ್ಲ; ಅವರಿಗೆ ಆತ್ಮವಿಶ್ವಾಸ ತುಂಬಿ ಇನ್ನೂ ಯಶಸ್ವಿಯಾದ ಬದುಕು ನಡೆಸುವಂತೆ ಪ್ರೇರೇಪಣೆ ನೀಡುತ್ತವೆ. ಇಲ್ಲಿ ಉಲ್ಲೇಖಿಸಬೇಕಾದ ಮತ್ತೊಂದು ಸಂಗತಿಯೆಂದರೆ ಸಾಮೂಹಿಕ ಸ್ವರೂಪದ ಈ ಕಾರ್ಯಗಳು ಸಾಮಾಜಿಕ ಆಚರಣೆಯಾಗಿ ನಿರ್ವಹಣೆಗೊಳ್ಳುವುದರಿಂದ ಸಾಮಾಜಿಕ ಸಂಘಟನೆ, ಐಕಮತ್ಯವೂ ಅವುಗಳಿಂದ ಸಾಧಿತವಾಗುತ್ತದೆ. ಇನ್ನು ಗ್ರಾಮಮಟ್ಟದಲ್ಲಿ ನಡೆಯುವ ಹರಕೆಗಳಂತೂ ಗ್ರಾಮಸ್ಥರನ್ನೇ ಅಲ್ಲದೆ ನೆರೆಹೊರೆಯವರನ್ನೂ ಆಕರ್ಷಿಸುತ್ತವೆ. ಗ್ರಾಮಸ್ಥರು ಅದೆಷ್ಟೇ ಭಿನ್ನಾಭಿಪ್ರಾಯವಿದ್ದರೂ ಮರೆತು ಒಂದೆಡೆ ಕಲೆತು ಉಣ್ಣಲು ಅವಕಾಶ ಮಾಡಿಕೊಡುತ್ತವೆ; ಕಷ್ಟಸುಖಗಳನ್ನು ಹಂಚಿಕೊಂಡು ಬಾಳುವೆ ನಡೆಸಲು ಅನುವು ಮಾಡಿಕೊಡುತ್ತವೆ. ಒಟ್ಟಿನಲ್ಲಿ ಅವು ಜನಜೀವನದಲ್ಲಿ ಅಪರೂಪ ಆಗುತ್ತಿರುವ ಸ್ನೇಹ ಸೌಹಾರ್ದ ಸಂಬಂಧಗಳಿಗೆ ಸಹಕಾರಿಯಾಗಿವೆ. (ವೈಜ್ಞಾನಿಕ ಪ್ರಗತಿ ಮತ್ತು ಮಾನವನ ಬೌದ್ಧಿಕ ಮಟ್ಟ ವಿಕಸಿದ್ದಂತೆಲ್ಲಾ ಈ ಗ್ರಾಮದೇವತಾರಾಧನೆ ತನ್ನ ಪ್ರಾಮುಖ್ಯತೆ ಮತ್ತು ಅರ್ಥಗಳನ್ನು ಕಳೆದುಕೊಳ್ಳುತ್ತಾ ಹೋಗಿ ಮುಂದೊಂದು ದಿನ ಪೂಜೆ ಉತ್ಸವ ಹರಕೆಗಳು ಇಲ್ಲವಾಗಬಹುದು.

ಇದುವರೆಗೆ ನಡೆಸಿದ ಚರ್ಚೆಯನ್ನು ಈ ಕೆಳಗಿನಂತೆ ಸಂಗ್ರಹಿಸಿಕೊಡಬಹುದು:

1. ಗ್ರಾಮದೇವತಾರಾಧನೆಗೆ ಸಂರಕ್ಷಣಾ ಭಾವನೆಯೇ ಮೂಲ.
2. ಗ್ರಾಮದೇವತೆಗಳ ನಡುವಿನ ಭಿನ್ನತೆ ಮತ್ತು ವೈರುಧ್ಯಗಳು ಅವುಗಳು ಪ್ರತಿನಿಧಿಸುವ ಸಾಮಾಜಿಕ ರಚನೆಯಿಂದ ಉಂಟಾದವೇ ಹೊರತು ಆ ದೇವತೆಗಳ ಆಂತರಿಕ ಗುಣಧರ್ಮದಿಂದಲ್ಲ.
3. ಗ್ರಾಮದೇವತೆಯ ಉತ್ಸವ ಆಚರಣೆಗಳಲ್ಲಿ ದೇವತೆಗಳಲ್ಲಿನ ಜಾತಿ ವ್ಯವಸ್ಥೆಯ ನಿಯಮಾವಳಿಗಳು ಅಮೂರ್ತ ಬಗೆಯಲ್ಲಿ ಸೂಚಿತವಾಗುತ್ತವೆ.
4. ವಾರ್ಷಿಕ ಉತ್ಸವಾಚರಣೆಗಳು ಗ್ರಾಮ ಸಮಾಜ ವ್ಯವಸ್ಥೆಯ ಪಡಿಯಚ್ಚು ಮಾತ್ರವಾಗಿರದೆ ಗ್ರಾಮದ ಮಹತ್ವದ ಆಗುಹೋಗುಗಳನ್ನು ನಿಯಂತ್ರಿಸುವ ಸಾಧನಗಳೂ ಆಗಿರುತ್ತವೆ.

---

6. ತಮ್ಮನ್ನು ಕಾಪಾಡುವ ದೇವತೆಗಳಿಗಾಗಿ ಜನತೆ ಏನು ಬೇಕಾದರೂ ಹರಕೆ ಸಲ್ಲಿಸಲು ಸಿದ್ಧ. ಮುಡಿಕೊಡುವುದು, ಬಾಯಿಬೀಗ ಚುಚ್ಚಿಸಿಕೊಳ್ಳುವುದು, ಕೊಂಡಕ್ಕೆ ಹರಳುಹಾಕುವುದು, ಕೊಂಡಹಾಯುವುದು, ಹೆಜ್ಜೆ ನಮಸ್ಕಾರ ಮಾಡುವುದು, ಉರುಳುಸೇವೆ, ಪತ್ತಿನ ಸೇವೆ, ವಾರದ ಸೇವೆ, ತಿಂಗಳಸೇವೆ ಮಾಡುವುದು, ಅಭಿಷೇಕ, ಪರ, ಮೆರವಣಿಗೆ ನಡೆಸುವುದು, ಬಲಿ ಅರ್ಪಿಸುವುದು, ಒಡವೆ ವಸ್ತ್ರ ಮಾಡಿಸುವುದು, ನಗನಾಣ್ಯ ಸಲ್ಲಿಸುವುದು, ತಲೆಮುಡಿಕೊಡುವುದು, ಬೆರಳನ್ನು ಕತ್ತರಿಸಿ ದೇವರಿಗೆ ಒಪ್ಪಿಸುವುದು ಮುಂತಾದ ಹರಕೆಗಳು ರೂಢಿಯಲ್ಲಿವೆ.

5. ಗ್ರಾಮದೇವತೆಯ ಉತ್ಸವಾಚಾರಗಳು ಕೇವಲ ಒಣ ಮತಾಚರಣೆಗಳಿಗಷ್ಟೇ ಸೀಮಿತಗೊಳ್ಳದೆ ಗ್ರಾಮೀಣ ಬದುಕಿನ ಸಮಸ್ತ ಚಟುವಟಿಕೆಗಳೂ ಜೀವ ತಾಳಲು ಅವಕಾಶ ಮಾಡಿಕೊಡುತ್ತವೆ.

ಗ್ರಂಥಸೂಚಿ

ಕೃಷ್ಣಮೂರ್ತಿ ಮತಿಘಟ್ಟ (ಸಂ) ಏಳುಕೊಳ್ಳದ ಎಲ್ಲಮ್ಮ, ಗುರುಮೂರ್ತಿ ಪ್ರಕಾಶನ ಬೆಂಗಳೂರು 1965

ಜವರೇಗೌಡ ದೇ. ಜಾನಪದ ಸೌಂದರ್ಯ, ಸಹ್ಯಾದ್ರಿ ಪ್ರಕಾಶನ, 1989

ನಾಗೇಗೌಡ ಎಚ್. ಎಲ್. (ಸಂ) ಹೆಳವರು ಮತ್ತು ಅದರ ಕಾವ್ಯಗಳು, ಸಾಹಿತ್ಯ, ಸದನ, 1982

ಸಂ) ಜಾನಪದ ಜಗತ್ತು, ವಿಶೇಷ ಸಂಚಿಕೆ, 1990,ಸಂ. 11ಸಂ. 1-2

ನಿಂಗಣ್ಣ ಸಣ್ಣಕ್ಕಿ, ಎಲ್ಲಮ್ಮ ಜೋಗಿಗಳು, ಐ ಬಿ ಎಚ್ ಪ್ರಕಾಶನ, 1981

ಪರಮಶಿವಯ್ಯ ಜೀ. ಶಂ. (ಸಂ) ಮುಡುಕುತೊರೆ ಮಲ್ಲಿಕಾರ್ಜುನ, ತವೆಂಸ್ಮಾರಕ ಗ್ರಂಥಮಾಲೆ, ಮೈಸೂರು, 1974

ಪ್ರಸಾದ್ ನಲ್ಲೂರು (ಸಂ) ನಲ್ಲೂರು ದೊರೆ ಕಾಳಿ,

ಪೀಟರ್ ಜೆ. ಕ್ಲಾಸ್ (ಲೇ). ಅನು: ಎ. ವಿ. ನಾವಡ, ಶುಭಾಶ್ಚಂದ್ರ, 'ತುಳುವ ದರ್ಶನ' ಪ್ರಾದೇಶಿಕ ವ್ಯಾಸಂಗ, ದ. ಕ. 1988

ಬಸವರಾಜ್ ನೆಲ್ಲೀಸರ, ಜಾನಪದ ಸಂಕಲನ, ಯಕ್ಷಪ್ರಕಾಶನ, 1978

ಬೋರಲಿಂಗಯ್ಯ ಹಿ. ಚಿ. (ಸಂ) ಉಜ್ಜಯಿನಿ ಚೌಡಮ್ಮ, ದಿನಕರ ಪ್ರಕಾಶನ(1979)

ರತ್ನ ಪಿ. ನಗುವನಹಳ್ಳಿ., ಜಾನಪದ ವಿವೇಚನೆ, ಪ್ರಶಾಂತಿ ಪ್ರಕಾಶನ, 1978

ರಾಮಚಂದ್ರರಾವ್ ಎಸ್. ಕೆ., ಅಣ್ಣಪ್ಪದೈವ, ಶಾರದಾ ಪ್ರಕಾಶನ, 1983

ರಾಮೇಗೌಡ (ಸಂ) ಚಾಮಾಯಿ, ಸಾಧನ ಸಾಹಿತ್ಯ ಮಂದಿರ, 1981

ಲಕ್ಕಪ್ಪಗೌಡ ಎಚ್. ಜೆ. (ಸಂ) ಮಲೆನಾಡು ಜಾನಪದ, ಬಿ. ಆರ್. ಪ್ರಾಜೆಕ್ಟ್ ಮೈಸೂರು ವಿಶ್ವವಿದ್ಯಾನಿಲಯ, 1983

ಲಠ್ಠೆ ಎಂ. ಎಸ್. (ಸಂ) ಧರ್ಮದೇವತೆ, ಕನ್ನಡ ಸಾಹಿತ್ಯ ಪರಿಷತ್ತು, 1981

ಲಿಂಗಯ್ಯ ಡಿ. ಕರ್ನಾಟಕ ಗ್ರಾಮದೇವತೆಗಳು, ಐ ಬಿ ಎಚ್ ಪ್ರಕಾಶನ, 1984

ವಂಸಂತಕುಮಾರ್ ಎಂ. ಸಿ. (ಸಂ) ಮಳಲಿ ಗಿಡ್ಡಮ್ಮ, ಕನ್ನಡ ಅಧ್ಯಯನ ಸಂಸ್ಥೆ 1970

ವಿಶ್ವನಾಥ್ ಕೋ. ಶ. ಲಿಂಗಣ್ಣ ಕೆ. ಎಸ್. (ಸಂ) ಮಾರಿಮಹೇಶ್ವರಿ, ದೇವಿ ಪ್ರಕಾಶನ 1972

ಹಿರಿಯಣ್ಣ ಅಂಬಳಿಕೆ, ಮಲೆನಾಡ ಒಕ್ಕಲಿಗರ ಜಾನಪದ, ಮೈಸೂರು ವಿಶ್ವವಿದ್ಯಾನಿಲಯಕ್ಕೆ1982ರಲ್ಲಿ ಪಿ ಎಚ್ ಡಿ ಗಾಗಿ ಒಪ್ಪಿಸಿದ ನಿಬಂಧ (ಅಪ್ರಕಟಿತ) (ಸಂ) ಕಾಡುಗೊಲ್ಲರ ಜನಪದಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈವಿವಿ 1978

ಬಿಡಿ ಬರಹಗಳು

ತಿಪ್ಪೇಸ್ವಾಮಿ ಜೆ. ಆರ್. -ಗ್ರಾಮದೇವತೆಗಳು- ಕರ್ನಾಟಕ ಜಾನಪದ ಸಮೀಕ್ಷೆ, ಬೆಂಗಳೂರು,1982

ದೇವೇಂದ್ರ ಕುಮಾರ ಹಕಾರಿ-ಹಬ್ಬ ಮತ್ತು ಆಚರಣೆಗಳು:ಸ್ವರೂಪ ಮತ್ತು ವ್ಯಾಪ್ತಿ- ಜಾನಪದ ಸಾಹಿತ್ಯ ದರ್ಶನ, ಭಾಗ -೧೦, ಕ ಅಪೀ, ಕವಿವಿ ಧಾರವಾಡ

ರಾಜಪ್ಪ ಟಿ. ಎಸ್. - ಗ್ರಾಮಾಂತರ ಕೆಲವು ಹಬ್ಬಗಳು- ಗ್ರಾಮಜ್ಯೋತಿ ಗೊ. ರು. ಚ.(ಸಂ)1979 ಪು 269-280

ರಾಮೇಗೌಡ ಬೈರಮಂಗಲ, -ಮಾರಿಹಬ್ಬದ ಸ್ವರೂಪ: ಒಂದು ವಿಶ್ಲೇಷಣೆ.- ಗ್ರಾಮಜ್ಯೋತಿ.1979 ಪು. 289-298

ಸುಶೀಲಾ ಸೊಂಡೂರು- ಮಸರೂರು ಮಾರಿಜಾತ್ರೆ -ಗ್ರಾಮಜ್ಯೋತಿ, ಪು. 307 - 317 1979

ಶಿವರಾಮೇಗೌಡ ನಾಗವಾರ- ಹಬ್ಬಹರಿದಿನಗಳು: ಕೆಲವು ತಾತ್ವಿಕ ಅನಿಸಿಕೆಗಳು, ಗ್ರಾಮಜ್ಯೋತಿ 1979 ಪು. 301-306

ಅಬ್ದುಲ್ ಹಮೀದ್- ಹಂದನಕೆರೆ ಮಾರಮ್ಮ- ಜಾನಪದ ಜಗತ್ತು, ವಿಶೇಷ ಸಂಚಿಕೆ, 1990ಸಂ.11ಸಂ. 1-2 ಪು. 3-13

ಪ್ರಮೀಳ ಎಚ್. ಬಿ- ಗಡಿಮಾರಿ- ಜಾನಪದ ಜಗತ್ತು. ಪು 82-85

ಬಸವರಾಜ್ ಕುರುವ-ಒಡೆಯರ ಹತ್ತೂರು ಮಾರಿಹಬ್ಬ, ಜಾನಪದ ಜಗತ್ತು ಪು. 78-81

ಮಂಜುನಾಥನ್ ಜಿ. ಜಿ. -ಗುಂಡ್ಲುಪೇಟೆ ಸುತ್ತಿನಲ್ಲಿ ಮಾರಮ್ಮ, ಜಾನಪದ ಜಗತ್ತುಗಳು, ಪು36-40

ರತ್ನ ಪಿ. ನಗುವನಹಳ್ಳಿ- ನಗುವನಹಳ್ಳಿಯ ಮಾರಿಹಬ್ಬ, ಜಾನಪದ ಜಗತ್ತು, ಪು. 57-60

ವಾದಿರಾಜಭಟ್ಟ ಕನರಾಡಿ- ಬಸ್ರೂರಿನ ದೊಡ್ಡ ಮಾರಿಹಬ್ಬ, ಜಾನಪದ ಜಗತ್ತು, ಪು. 61-69

ಸಿದ್ದ ಹನುಮಯ್ಯ. ಆರ್. -ಮಾಗಡಿ ಸುತ್ತಿನಲ್ಲಿ ಮಾರಮ್ಮ, ಜಾನಪದ ಜಗತ್ತು, ಪು. 32-35

ಸೈಯದ್ ಜಮೀರುಲ್ಲಾ ಷರೀಫ್ -ಭಟ್ಕಳದ ಮಾರಮ್ಮ, ಜಾನಪದ ಜಗತ್ತು, ಪು. 26-31

ಶ್ರೀ ಹರಿಲಾಲ್ ಕೆ. ಪವಾರ್- ರಾಜನಾಳದ ಮರಗಮ್ಮ (ಮಾರಮ್ಮ) ಜಾನಪದ ಜಗತ್ತು, 70-75

ಹನುಮಂತಪ್ಪ ಬಳ್ಳಿಕೆರೆ- ಹಿಂಸೆಯಿಂದ ಅಹಿಂಸೆಯೆಡೆಗೆ ಸಾಗಿದ ಶಿರಸಿ ಮಾರಕಾಂಬೆಯಗಾಥೆ ಜಾನಪದ ಜಗತ್ತು ಸಂ.11ಸಂ.1-2, 50-56

*****

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳ ನಾಶ

- ಡಾ. ಎಂ. ಎಂ. ಕಲಬುರ್ಗಿ

ಧರ್ಮವೆನ್ನುವುದು ಆತ್ಮ-ಪರಮಾತ್ಮರ ವಿಷಯದಲ್ಲಿ ಒಂದು ಜನಸಮೂಹ ತಾಳಿದ ಅಪೇಕ್ಷಿತ ಇಲ್ಲವೆ ನಿರಪೇಕ್ಷಿತ ಮನೋಧರ್ಮವೆನಿಸಿದೆ. ವೈದಿಕ ಮೊದಲಾದ ಧರ್ಮಗಳು ಪರಮಾತ್ಮನನ್ನು ಸಾಕಾರರೂಪದಲ್ಲಿ ಮೂರ್ತೀಕರಿಸಿ 'ದೇವಾಲಯ' ಕಟ್ಟುತ್ತವೆ. ಬೌದ್ಧ, ಜೈನ ಧರ್ಮಗಳು ಪರಮಾತ್ಮನನ್ನು ನಿರಾಕರಿಸಿದರೂ ಜಿನ, ಬುದ್ಧರಂಥ ಮಹಾತ್ಮರನ್ನು ಪರಮಾತ್ಮ ಸ್ಥಾನದಲ್ಲಿ ಗೌರವಿಸಿ, ಅವರ ಹೆಸರಿನಲ್ಲಿ 'ಸ್ಮಾರಕ'ಗಳನ್ನು ನಿರ್ಮಿಸುತ್ತವೆ. ಪರಮಾತ್ಮನನ್ನು ನಿರಾಕಾರ ರೂಪದಲ್ಲಿ ಸ್ವೀಕರಿಸಿದ ಮತ್ತು ಮಹಾತ್ಮರನ್ನು ಪರಮಾತ್ಮರೆಂದು ಭಾವಿಸಿದ ಕ್ರೈಸ್ತ, ಮುಸಲ್ಮಾನ ಮತ್ತು ವೀರಶೈವ ಧರ್ಮಗಳು ಸಮೂಹ ಸಂಸ್ಕೃತಿಗಾಗಿ ಚರ್ಚು, ಮಸೀದಿ ಮತ್ತು ಅನುಭವಮಂಟಪಗಳಂಥ 'ಮಂದಿರ'ಗಳನ್ನು ನಿರ್ಮಿಸುತ್ತವೆ. ಜಗತ್ತಿನಲ್ಲಿ, ಅದೇ ರೀತಿ ಕರ್ನಾಟಕದಲ್ಲಿ ಈ ಮೂರು ಬಗೆಯ 'ನಿರ್ಮಾಣ'ಗಳು, ಇವುಗಳಿಗೆ ಹೊಂದಿಕೊಂಡು ಪೂರಕ ನಿರ್ಮಾಣಗಳು ಬೆಳೆಯುತ್ತ, ಘರ್ಷಣೆಯಲ್ಲಿ ಅಳಿಯುತ್ತ ಬಂದಿವೆ.

ಮೇಲೆ ಹೇಳಿದ ಯಾವುದೇ ಬಗೆಯ ಧರ್ಮಗಳು ತಮ್ಮನ್ನು ರಕ್ಷಿಸಿ ಕೊಳ್ಳುವುದರೊಂದಿಗೆ ತಮ್ಮ ವಲಯವನ್ನೂ ವಿಸ್ತರಿಸಿಕೊಳ್ಳುವ ಕೆಲಸದಲ್ಲಿಯೂ ನಿರತವಾಗುತ್ತ ಬಂದಿವೆ. ಈ ವಿಸ್ತರಿಸಿಕೊಳ್ಳುವಿಕೆ ಎನ್ನುವುದು ತಾನು ಸಬಲವಾಗುವುದು, ಇನ್ನೊಂದನ್ನು ದುರ್ಬಲಗೊಳಿಸುವುದು - ಎಂಬ ಎರಡು ಕವಲುಗಳಲ್ಲಿ ಕಾಣಿಸಿ ಕೊಳ್ಳುತ್ತದೆ. ಅನ್ಯಧರ್ಮೀಯರನ್ನು ತನ್ನ ವಲಯಕ್ಕೆ ಮತಾಂತರಿಸಿಕೊಳ್ಳುವುದು, ತನ್ನನ್ನು 'ಸಬಲ' ಮಾಡಿಕೊಳ್ಳುವುದಾದರೆ ಹಾಗೆ ಒಳಗೆ ಬರದೆ ಹೊರಗೆ ಉಳಿದವರಲ್ಲಿ ತನ್ನ ಸಂಸ್ಕೃತಿಯನ್ನು ಬೆರೆಯಿಸುವುದು ಮತ್ತು ಅವರ ನಿರ್ಮಾಣಗಳನ್ನು ನಾಶಮಾಡುವುದೂ ಅನ್ಯವನ್ನು 'ದುರ್ಬಲ'ಗೊಳಿಸುವುದಾಗಿದೆ. ಇವುಗಳಲ್ಲಿ ನಾಶವೆನ್ನುವುದು ದೇವಾಲಯಗಳ ರೂಪಾಂತರ ಕ್ರಿಯೆ, ನಾಶಪ್ರಯತ್ನ, ಸಮೂಲ ನಾಶಕ್ರಿಯೆ ಎಂದು ಮೂರು ಬಗೆಗಳಲ್ಲಿ ಜರುಗಬಹುದಾಗಿದೆ. ರೂಪಾಂತರ ಕ್ರಿಯೆ ವಿರೋಧಿಗಳಿಂದ ಘಟಿಸಿರಬಹುದು. ಇಲ್ಲವೆ ಯಾವುದೋ ಕಾರಣಕ್ಕಾಗಿ ಸಾಮೂಹಿಕ ಮತಾಂತರಗೊಂಡ ಒಂದು ಗ್ರಾಮದ ಒಂದು ಮತೀಯ ಸಮೂಹ ತಮ್ಮ ದೇವಾಲಯ ನಿಷ್ಪ್ರಯೋಜಕವಾಗಿ ಉಳಿಯಬಾರದೆಂದು ತಾವೇ ಅದನ್ನು ರೂಪಾಂತರಿಸಿರಬಹುದು. ಮೇಲೆ ಹೇಳಿದ ಮೂರು ಬಗೆಯ ನಾಶ ಕ್ರಿಯೆಗಳಿಗೆ ಮತದ್ವೇಷ ಕಾರಣವಾಗಿದ್ದರೂ ಕೆಲವೊಮ್ಮೆ ವಾದಸ್ಪರ್ಧೆಯ ಸೋಲು ಕಾರಣವಾಗಿರುತ್ತದೆ. ಹೀಗೆ ಹಲವಾರು ಕಾರಣ, ಹಲವಾರು

ರೀತಿಗಳಲ್ಲಿ ದೇವಾಲಯಗಳ ರೂಪಾಂತರ, ನಾಶಪ್ರಯತ್ನ, ಸಮೂಲನಾಶ ಕ್ರಿಯೆಗಳು ಇತಿಹಾಸದುದ್ದಕ್ಕೂ ಸಾಗಿಬಂದಿವೆ.

ಬೌದ್ಧ- ಜೈನ -ವೈಷ್ಣವ -ಶೈವ

ಕರ್ನಾಟಕದ ಪ್ರಧಾನಧರ್ಮಗಳಲ್ಲಿ ಬೌದ್ಧಧರ್ಮ ಅತಿ ಪ್ರಾಚೀನವಾದುದು. ಅದು ಈ ನಾಡಿನಲ್ಲಿ ವ್ಯಾಪಕವಾಗಿ ಹರಡಿದ್ದಿತೆಂದು ಕಾವ್ಯ, ಶಾಸನ, ಪ್ರವಾಸಿ ದಿನಚರಿಗಳು ತಿಳಿಸುತ್ತವೆ. ಈ ಮಾತಿಗೆ ಸನ್ನತಿ, ಬಾದಾಮಿ, ಬನವಾಸಿ, ಮಂಗಳೂರಿನ ಕದ್ರಿ ಮೊದಲಾದ ದೊಡ್ಡ ನೆಲೆಗಳು ಮತ್ತು ಅಲ್ಲಿಯ ಅವಶೇಷಗಳು ಸಾಕ್ಷಿ ನೀಡುತ್ತವೆ. ಇವುಗಳಲ್ಲದೆ ಬಳ್ಳಿಗಾವಿ, ಡಂಬಳ, ಚಂದ್ರವಳ್ಳಿ, ಕಲ್ಲೆ, ಇಂಡಿ ಮೊದಲಾದವು ಬೌದ್ಧ ಕೇಂದ್ರಗಳಾಗಿದ್ದು, ಇವೆಲ್ಲ ಧಾರ್ಮಿಕ ಸಂಘರ್ಷ ಕಾರಣವಾಗಿ ಹೇಳಹೆಸರಿಲ್ಲದಂತೆ ನಾಶವಾಗಿರಬಹುದು.

ನೆರೆಯ ತಮಿಳುನಾಡಿನಲ್ಲಿ ಅಕಲಂಕನು ಬೌದ್ಧರನ್ನು ವಾದದಲ್ಲಿ ಸೋಲಿಸಿ ಶ್ರೀಲಂಕೆಗೆ ಅಟ್ಟಿದುದನ್ನು ಗಮನಿಸಿದರೆ, ಕರ್ನಾಟಕದಲ್ಲಿಯೂ ಬೌದ್ಧ-ಜೈನ ಘರ್ಷಣೆ ಜರುಗಿರಬಹುದೆನಿಸುತ್ತದೆ. ಶಾಸನಗಳಲ್ಲಿ ಜೈನ ಗುರುವೊಬ್ಬನನ್ನು 'ಬೌದ್ಧವಾದಿ ತಿಮಿರ ಪತಂಗರುಂ'[1] (1990)ಯೆಂದು ಕರೆದುದನ್ನು, ಡಂಬಳದ ಬೌದ್ಧವಿಹಾರ ಜೈನ ಬಸದಿಯಾಗಿರುವುದನ್ನು, ಧರ್ಮಾಮೃತದ ಎರಡು ಕಥೆಗಳಲ್ಲಿ ಬರುವ ಬೌದ್ಧ-ಜೈನ ಘರ್ಷಣೆಯ ಸಂದರ್ಭಗಳನ್ನು ಇಲ್ಲಿ ನೆನೆಯಬಹುದು.

ನಾರಾಯಣಸ್ವಾಮಿ ದೇವಾಲಯದ ಸನ್ಯಾಸಿಯನ್ನು ಮುಳಗುಂದ ಶಾಸನ "ಬೌದ್ಧಮದೇಬ ಪಂಚಾನನಂ"[2] (1104)ಯೆಂದೂ, ಶೈವ ಆಚಾರ್ಯನನ್ನು ಶಿರೂರು ಶಾಸನ "ಬೌದ್ಧಧ್ವಾಂತ ಭಾನವೇ"[3] (1063) ಯೆಂದೂ, ಶೈವ ನೂತನ ಪುರಾತರನ್ನು ತಾಳಿಕೋಟಿ ಶಾಸನ "ಬೌದ್ಧ ಧರ್ಮವಿಧ್ವಂಸನಪ್ರವೀಣರುಂ"[*] (1184) ಯೆಂದೂ ಕರೆದುದು ಬೌದ್ಧದೊಂದಿಗೆ ವೈಷ್ಣವ ಶೈವಗಳು ನಡೆಸಿದ ಹೋರಾಟದ ಸೂಚನೆ ಆಗಿದೆ. ಹೀಗೆ ಜೈನ, ವೈಷ್ಣವ, ಶೈವ- ಈ ಮೂರೂ ಧರ್ಮಗಳು ಬೌದ್ಧನಿರ್ಮಾಣಗಳ ನಾಶಕ್ಕೆ ಪ್ರತ್ಯೇಕ-ಪರೋಕ್ಷ ಕಾರಣವಾಗಿರಬಹುದೆನಿಸುತ್ತದೆ.

ಜೈನ-ವೈಷ್ಣವ

ಮೇಲೆ ಹೇಳಿದಂತೆ ಒಂದು ಘಟ್ಟದಲ್ಲಿ ಬೌದ್ಧರೊಂದಿಗೆ ಹೋರಾಟಕ್ಕಿಳಿದ ಜೈನಧರ್ಮ ಮುಂದಿನ ದಿನಗಳಲ್ಲಿ ತಾನು ವೈಷ್ಣವದ ಆಕ್ರಮಣಕ್ಕೆ ಗುರಿಯಾದಂತಿದೆ.

---

1. ಎಂ. ಎ. ಆರ್., 1923, p. 114(ಕ್ರಿ. ಶ 990) , ಈಚ ವಾಡಿ, ಶಿವ ಮೊಗ್ಗ ತಾ. ಜ
2. ಎಸ್. ಆಯ್. ಆಯ್., X-X-ii, 157 (ಕ್ರಿ. ಶ. 1104) . ಮುಳಗುಂಧ,ಗದಗತಾ,ಧಾರವಾಡ.ಜ.
3. ಎಸ್. ಆಯ್. ಆಯ್., X-X-ii, 157 (ಕ್ರಿ. ಶ. 1063). ಶಿರೂರ, ಬಾಗಿಲಕೋಟೆ, ತಾ. ವಿಜಾಪುರ ಜಿ.

* ಎಸ್. ಆಯ್. ಆಯ್., ನಂ. ೫೬. ತಾಳಿಕೋಟೆ ಶಾಸನ (1184)

ವಡ್ಡಾರಾಧನೆ, ಧರ್ಮಾಮೃತಗಳಲ್ಲಿ ಇದರ ಒಂದು ಚಿತ್ರವನ್ನು ಕಾಣಬಹುದು. ಇದೇ ಸಮಯಕ್ಕೆ ರಾಷ್ಟ್ರಕೂಟ, ಗಂಗರ ಪತನ ಕಾರಣವಾಗಿ ಜೈನಧರ್ಮಕ್ಕೆ ಅರಸರ ಆಶ್ರಯ ತಪ್ಪಿ, ಅದರ ಬೇರು ಸಡಿಲಗೊಳ್ಳಲಾರಂಭಿಸಿದವು. ಈ ಕಾಲದಲ್ಲಿ ಜೈನರು ಅನ್ಯಧರ್ಮಗಳಿಗೆ ಮತಾಂತರ ಹೊಂದುವುದು ತೀವ್ರಗೊಳ್ಳುತ್ತಿದ್ದುದಕ್ಕೆ 1055ರ ಕೋಗಳಿ ಶಾಸನ 'ತೊಲಗದೆ ಜೈನಮಾರ್ಗದೊಳಿ ನಿಶ್ಚಳರಪ್ಪುದು'[4] ಎಂದು ತನ್ನ ಧರ್ಮೀಯರಿಗೆ ಕೂಗಿ ಹೇಳುತ್ತಿರುವುದು ನಿದರ್ಶನವೆನಿಸಿದೆ. ಈಗ ಜೈನರು ತಮ್ಮ ಬಸದಿಗಳನ್ನು ವೈಷ್ಣವರ ರಕ್ಷಣೆಗೆ ಒಳಪಡಿಸುವುದು ಅನಿವಾರ್ಯವಾಯಿತು. "ವೈಷ್ಣವ ಗೀತಿ ಮನೋಹರರ್" ಎನಿಸಿದ ಬ್ರಾಹ್ಮಣರಿಂದ ಕೂಡಿದ ಲಕ್ಕುಂಡಿ ಒಂದು ಸುಪ್ರಸಿದ್ಧ ವೈಷ್ಣವ ಅಗ್ರಹಾರ. 1007ರಲ್ಲಿ ಅತ್ತಿಮಬ್ಬೆ ಅಲ್ಲಿ ಜಿನದೇವಾಲಯ ಕಟ್ಟಿಸಿ ಆಹವಮಲ್ಲ ತೈಲಪನಿಂದ 'ಸುರುಕಿ' ಹೆಸರಿನ ಗ್ರಾಮವನ್ನು ಪಡೆದು ಶಾಸನ ನಿಲ್ಲಿಸಿದ್ದಳು.[5] ಅವಳು ಜೀವಿಸಿರುವಾಗಲೇ ಸಿದ್ಧಪಡಿಸಿದ ಈ ಶಾಸನದ ಇನ್ನೊಂದು ಪ್ರತಿಯಲ್ಲಿ ಆ ಬಸದಿಗೆ 'ಬ್ರಹ್ಮಜಿನಾಲಯ'ವೆಂದೂ ಮರುನಾಮಕರಣ ಮಾಡಲಾಯಿತೆಂಬ, ಹೆಚ್ಚಿನ ವಾಕ್ಯವನ್ನು ಸೇರಿಸಲಾಗಿದೆ.[6] ಇದರಿಂದ ಈ ಹೊತ್ತಿಗೆ ಜೈನಧರ್ಮ ದುರ್ಬಲಗೊಂಡಿದ್ದಿತೆಂದೂ, ಅತ್ತಿಮಬ್ಬೆ ತನ್ನ ಜೀವಮಾನದಲ್ಲಿ ತನ್ನ ಧರ್ಮದ ಉನ್ನತಿ, ಅವನತಿ ಎರಡನ್ನೂ ಕಂಡಳೆಂದೂ ಸ್ಪಷ್ಟವಾಗುತ್ತದೆ. ಇದೇ ರೀತಿ ಬನವಾಸಿಯ ಕದಂಬ ಮನೆತನದ ಮಾಳಲದೇವಿ ಕುಪ್ಪಟೂರಿನಲ್ಲಿ ಬಸದಿ ನಿರ್ಮಿಸಿ, ಅಲ್ಲಿಯ 'ಅಶೇಷ ಮಹಾಜನಂಗಳಂ ಯಥೋಕ್ತವಿಧಿಯಿಂ ಪೂಜಿಸಿಯವರಿಂ ಬ್ರಹ್ಮಜಿನಾಲಯವೆಂದು ಪೆಸರಿಟ್ಟು' ಅದನ್ನು ಜೈನಾಚಾರ್ಯರಿಗೆ ನೀಡುತ್ತಾಳೆ (1075)[7]. ಇದನ್ನು ನೋಡಿದರೆ ಬಸದಿಗಳನ್ನು ವೈಷ್ಣವರ ರಕ್ಷಣೆಗೆ ಒಳಪಡಿಸುತ್ತಿದ್ದ ಒಂದು ಸಂಪ್ರದಾಯವೇ ಅಂದು ಬೆಳೆದು ಬರುತ್ತಿದ್ದಿತೆಂದು ಸ್ಪಷ್ಟವಾಗುತ್ತದೆ. ಹೂಲಿಯ ಶಾಸನವೊಂದು "ಅಗ್ರಹಾರ ಹೂಲಿಯೂರೊಡೆಯ ಪ್ರಮುಖ ಸಾಸಿರ್ವರ ಮಹಾಜನಂಗಳ ದಿವ್ಯ ಶ್ರೀಪಾದಪದ್ಮಗಳನ್ನು ಸಹಿರಣ್ಯಪೂರ್ವಕ ಆರಾಧಿಸಿ"[8] ಅಲ್ಲಿಯ ಬಸದಿಗೆ ದಾನಬಿಟ್ಟುದನ್ನು ಉಲ್ಲೇಖಿಸುತ್ತದೆ(1044). ಬ್ರಾಹ್ಮಣರ ಗೌರವ ಸೂಚಕವೆನಿಸುವ ಫಲಶ್ರುತಿವಾಕ್ಯಗಳು ಅತ್ತಿಮಬ್ಬೆ ಶಾಸನ ಮೊದಲುಮಾಡಿ ಅನೇಕ ಜೈನಶಾಸನಗಳ ಅಂತ್ಯದಲ್ಲಿ ಬರುವುದು ಅಂದು ಜೈನರಿಗಿದ್ದ ವೈದಿಕರ ಸಹಕಾರದ ಅನಿವಾರ್ಯತೆಯನ್ನು ಸೂಚಿಸುತ್ತದೆ.

---

4. ಎಸ್. ಯನ್. ಆಯ್., ix-ii, 157 (ಕ್ರಿ. ಶ. 1055). ಕೋಗಳಿ. ಹಡಗಲಿ ತಾ. ಬಳ್ಳಾರಿ ಜಿ.
5. ಎಸ್. ಆಯ್. ಆಯ್., xi-i, 53 (?), ಲಕ್ಕುಂಡಿ, ಗದಗ ತಾ. ಧಾರವಾಡ. ಜಿ.
6. ಅದೇ., 52(1007 ಕ್ರಿ.ಶ.), ಅದೇ.
7. ಎಕ. VIII (ಹ), ಸೊ. 262 (ಕ್ರಿ.ಶ.1075), ಕುಪ್ಪಟೂರು, ಸೊರಬ ತಾ.ಶಿವಮೊಗ್ಗ ಜಿ.
8. ಎ ಇಂ. XVIII. 22 (ಕ್ರಿ. ಶ. 1044), ಹೂಲಿ, ಸವದತ್ತಿ, ತಾ. ಬೆಳಗಾವಿ ಜಿ.

ಹೀಗೆ ಒಪ್ಪಂದ ಜೀವನ ಸಾಧ್ಯವಾಗದೆ ಕೆಲವೊಮ್ಮೆ ಜಿನಾಲಯ ನಾಶಪ್ರಯತ್ನ (Attempt)ಗಳೂ ಜರುಗಿವೆ. ಇದಕ್ಕೆ ಮತ್ತೆ ಲಕ್ಕುಂಡಿ ಶಾಸನವೇ ಉದಾಹರಣೆಯಾಗಿದೆ. ಅತ್ತಿಮಬ್ಬೆ ಕ್ರಿ. ಶ.1007ರಲ್ಲಿ ಈ ಜಿನಾಲಯವನ್ನು ಕಟ್ಟಿಸಿದಳು. ಇದು ಒಮ್ಮೆ ಹಾಳಾಗುತ್ತದೆ. ದೆಯ್ವ ಭರತಾರ್ಯ ಕಟ್ಟಿಸುತ್ತಾನೆ. ಮತ್ತೊಮ್ಮೆ ಸುಟ್ಟುಹೋಗುತ್ತದೆ. ನಾಕಿಯೆಂಬವ ಕಟ್ಟಿಸುತ್ತಾನೆ. ಬಹುಶಃ ಮಗದೊಮ್ಮೆ ಹಾಳಾಗಲು ಸಿರಿಪಾಳನೆಂಬವನು ಕಟ್ಟಿಸುತ್ತಾನೆ.[9] ಹೀಗೆ ಎರಡೋ ಮೂರು ಸಲ ಜೀರ್ಣೋದ್ಧಾರವಾದುದಕ್ಕೆ ಬಹುಶಃ ಅನ್ಯಧರ್ಮೀಯರು ನಾಶಮಾಡಲು ಪ್ರಯತ್ನಿಸಿದುದೇ ಕಾರಣವಾಗಿರಬೇಕು. ಸ್ಥಳೀಯ ಜೈನ ವೈಷ್ಣವರ ಘರ್ಷಣೆ ಈಗಲೂ ಮುಂದುವರೆದಂತಿದೆ. ಹಿಂದೆ ಹೇಳಿದಂತೆ ಅತ್ತಿಮಬ್ಬೆ ತಾನು ಕಟ್ಟಿಸಿದ ಜಿನಾಲಯದ ಹೆಸರನ್ನು 'ಬ್ರಹ್ಮಜಿನಾಲಯ'ವೆಂದು ಪರಿವರ್ತನೆ ಮಾಡಿದುದು ಜೈನರ ಅವನತಿಯ ಒಂದು ಹಂತವಾದರೆ, ಬಸದಿಯ ಈ ವಿಘಟನ ಪ್ರಯತ್ನಗಳು ಎರಡನೆಯ ಹಂತವೆಂದು ತೋರುತ್ತದೆ. ಬಹುಶಃ ಇಂಥ ಘರ್ಷಣೆಯ ಪ್ರಥಮ ಹಂತದಲ್ಲಿ ಮೊದಲಿನ ಶಾಸನ ಒಡೆದುಹೋಗಿರಬಹುದು.[10] ಆಗ ಬ್ರಹ್ಮಜಿನಾಲಯ ಮೊದಲಾದ ಹೊಸ ವಿಷಯ ಸೇರಿಸಿ ಅತ್ತಿಮಬ್ಬೆಯ ಕಾಲದಲ್ಲಿಯೇ ಎರಡನೆಯ ಶಾಸನ ಬರೆಯಲ್ಪಟ್ಟಿರಬಹುದು.[11] ಇಲ್ಲಿ ಜಿನಾಲಯ ಇಡಿಯಾಗಿ ನಾಶವಾಗದೆ ರೂಪಾಂತರವೂ ಆಗದೆ ಅನೇಕ ಸಲ ನಾಶಪ್ರಯತ್ನಕ್ಕೆ ಗುರಿಯಾಯಿತೆಂದು ಹೇಳಬಹುದು. ಇಂಥ ಕ್ರಿಯೆಗಳು ಇನ್ನೂ ಮುಂದುವರಿದು ಕೆಲವು ಜಿನಾಲಯಗಳು ವೈಷ್ಣವ ದೇವಾಲಯಗಳಾದವು. ಉದಾ - ಹಾಸನ ತಾಲ್ಲೂಕಿನ ಮುತ್ತತ್ತಿ ಗ್ರಾಮದ ವಿನಯಾದಿತ್ಯ ಜಿನಾಲಯ (1120) ಇಂದು ಮಾಧವ ದೇವಾಲಯವಾಗಿದೆ.[12] ಮೂಲತಃ ಜೈನ ಬಸದಿಯಾಗಿದ್ದುದು ಇಂದು ಕೊಲ್ಲಾಪುರ ಲಕ್ಷ್ಮೀ ದೇವಾಲಯವಾಗಿದೆಯೆಂಬ ಬ್ರಹ್ಮಶಿವನ ಹೇಳಿಕೆ ಇಲ್ಲಿ ನಮ್ಮ ಗಮನಸೆಳೆಯುತ್ತದೆ.[13]

ಜೈನ-ಶೈವ

ದುರ್ಬಲಗೊಳ್ಳುತ್ತ ನಡೆದ ಜೈನಧರ್ಮವನ್ನು ವೈಷ್ಣವಕ್ಕಿಂತ ಶೈವರು ಹೆಚ್ಚು ನಾಶಗೊಳಿಸಿದಂತಿದೆ ಪದ್ಮಾವತಿ ಲಬ್ಧವರ ಪ್ರಸಾದನಾಗಿದ್ದ ಬಾಸವೂರ 140 ರ ಹೆಮ್ಮಾಡಿ ಹೆಸರಿನ ಜೈನ ಅರಸನು"ಮಾಹೇಶ್ವರ ದೀಕ್ಷೆಯಂ ಕೊಂಡು" ತ್ರಿಭುವನೇಶ್ವರ ದೇವರಿಗಾಗಿ ಗುರು ತ್ರಿಭುವನಸಿಂಗಿ ಪಂಡಿತರಿಗೆ ದಾನ ನೀಡಿದ ವಿಷಯ ಹಾವೇರಿ ತಾಲ್ಲೂಕಿನ ದೇವಗೇರಿ ಶಾಸನ[14] (1121) ರಲ್ಲಿ ಬರುತ್ತದೆ. ಇದರಿಂದ ಅರಸರಂಥ

9. ಎಸ್. ಆಯ್. ಆಯ್., xl-i, 52, (ಕ್ರಿ. ಶ .1007), ಲಕ್ಕುಂಡಿ, ಗದಗ ತಾ. ಧಾರವಾಡ, ಜಿ.

10. ಅದೇ., 53(?), -ಅದೇ-.

11. ಅದೇ., 52 (ಕ್ರಿ. ಶ .1007), -ಅದೇ-.

12. ಎಕ., VIII (ಹೊ), Eo.85 (ಕ್ರಿ. ಶ. 1120), ಮುತ್ತತ್ತಿ, ಹಾಸನ ತಾ.. ಜಿ.

13. ಬ್ರಹ್ಮ, ಶಿವ, ಸಪ್ತ., ಸಂ. ಕುಲಕರ್ಣಿ. ಬಿ. ಎಸ್., ಧಾರವಾಡ, 1975, ಆ. 3, ಪ.69

14. ಎಇಂ. XIX, P-(ಕ್ರಿ. ಶ. 1121), ದೇವಗೇರಿ, ಹಾವೇರಿ ತಾ. ಧಾರವಾಡ ಜಿ.

ಮುಖ್ಯರೂ ಜೈನ ಧರ್ಮದಿಂದ ಕಾಲ್ತೆಗೆಯತೊಡಗಿದ್ದರೆಂದು ಸ್ಪಷ್ಟವಾಗುತ್ತದೆ. ಜೈನರು ತಮ್ಮ ಬಸದಿಗಳನ್ನು ವೈಷ್ಣವರ ವಶಕ್ಕೆ ಒಪ್ಪಿಸುತ್ತಿದ್ದಂತೆ, ಈ ಸಂದರ್ಭದಲ್ಲಿ ಶೈವ ರಕ್ಷಣೆಗೂ ಒಪ್ಪಿಸಿದುದಕ್ಕೆ ಕೆಲವು ಉದಾಹರಣೆಗಳು ಸಿಗುತ್ತವೆ. ಈ ಬಗೆಯ ಸನ್ನಿವೇಶಗಳಲ್ಲಿ ಜೈನರು ಶೈವರಿಂದ ಜೋಗವಟ್ಟಿಗೆ, ನಂದೀಕೋಲುಗಳನ್ನು ಪಡೆದು ತಮ್ಮ ಬಸದಿಯಲ್ಲಿಟ್ಟುಕೊಂಡು ಅವುಗಳಿಗೆ ''ಎಕ್ಕೋಟಿ ಜಿನಾಲಯ'ವೆಂದು ತಾವೇ ನಾಮಕರಣ ಮಾಡುತ್ತಿದ್ದರು. ಅರಸಿಕೆರೆ (1168),[15] ಕುಪ್ಪಟೂರು(1075),[16] ಮಲ್ಕನಕೊಪ್ಪ(1104),[17] ಶಿವಮೊಗ್ಗ (12ನೆಯ ಶತಮಾನ) ,[18] ಕಲಸಗೆರೆ (12ನೆಯ ಶತಮಾನ),[19] ಸೊರಬ (1208),[20] ಅಮರಾಪುರ (1278),[21] ವರಾಂಗ (13ನೆಯ ಶತಮಾನ),[22] ಕಂಬದಹಳ್ಳಿ (13ನೆಯ ಶತಮಾನ),[23] ಶಾಸನಗಳಲ್ಲಿ ಈ ವಿಷಯ ದಾಖಲಾಗಿದೆ. ಇಲ್ಲಿಯ ಅರಸೀಕೆರೆ ಶಾಸನದಲ್ಲಿ ಸಹಸ್ರ ಕೂಟ ಜಿನಾಲಯವನ್ನು ''ಕಾಳಾಮುಖ ಪ್ರತಿಬದ್ಧ''ವೆಂದು ಕರೆಯಲಾಗಿದೆ. ಇದಲ್ಲದೆ ಮೂಲತಃ ಕೊಲ್ಲಾಪುರದ ರೂಪನಾರಾಯಣ ಬಸದಿಗೆ ಪ್ರತಿಬದ್ಧವಾಗಿದ್ದ ತೇರಿದಾಳ ನೇಮಿತೀರ್ಥಂಕರ ಬಸದಿಯನ್ನು ಅದೇ ಗ್ರಾಮದ ಶೈವ ಕಲಿದೇವರ ದೇವಾಲಯಕ್ಕೆ ಪ್ರತಿಬದ್ಧ ಮಾಡಿದ ವಿಷಯ, ಅಲ್ಲಿಯ ಶಾಸನ (1181)[24]ದಲ್ಲಿದೆ. ಹೀಗೆ ಮಾಡುವಾಗ 'ಇಗ್ಗಳಿಯ ಜೋಗವಟ್ಟಿಗೆ' ಸ್ಥಳವೆಂದು ಹೆಸರಿಸಿ, ಬಸದಿಯಲ್ಲಿ ಜೋಗವಟ್ಟಿಗೆಯನ್ನು ಇಟ್ಟರೆಂದೂ, ಬಸದಿಯ ಮೇಲೆ ಶೂದ್ರಕ, ಸಿಂಹ, ಛತ್ರ- ಈ ಚಿಹ್ನೆಗಳನ್ನು ಸ್ಥಾಪಿಸಿದರೆಂದೂ, ಈ

---

15. ಶೆಟ್ಟರ್, ಎಸ್., " ಅರಸಿಕೆರೆಯಲ್ಲಿ ದೊರೆತ ಜೈನದರ್ಮದ ಮಾಪನೀಯ ಸಂಘದ ಶಿಲಾಶಾಸನಗಳು" (ಕ್ರಿ. ಶ. 1168 ಜಿಕೆಯು 10(ಕ್ರಿ. ಶ .1966) ವ" 159- 71
16. ಎಕ., VIII (ಹೆ); ಸೊ.262 (ಕ್ರಿ. ಶ. 1077), ಕುಪ್ಪಟ್ಯೂರು, ಸೊರಬ ತಾ. ಶಿವಮೊಗ್ಗ ಜಿ.
17. ಎ ಆರ್. ಆಯ್. ಇ., 1965-66, 404 (ಕ್ರಿ. ಶ. 1104), ಮಲ್ಕನಕೊಪ್ಪ, ಕಲಘಟಗಿ ತಾ.ಧಾರವಾಡ ಜಿ.
18. ರಘುನಾಥ್ ಭಟ್, ಎಚ್.ಆರ್. "ಶಿವಮೊಗ್ಗದ ಕೋಟೆ ಆಂಜನೇಯ ದೇವಾಲಯದ ಶಾಸನ" ಮಾ ನವಿಕ ಕರ್ನಾಟಕ, XIV, ಪುಟ. 58 .
19. ಎಕ., VII (ಹೊ); ನಾಮಂ. 171 (12 ನೆಯ ಶತಮಾನ), ಕಸಲಗೆರೆ , ನಾಗಮಂಗಲ ತಾ. ಮಂಡ್ಯ ಜಿ.
20. ಎಕ., VIII (ಹ.), ಸೊ.28 (ಕ್ರಿ. ಶ. 1208); ಸೊರಬ, ಶಿವಮೊಗ್ಗ ಜಿ.
21. ಎಕ., XII (ಹ.), ಶಿರಾ, 32 (ಕ್ರಿ. ಶ. 1278), ಅಮರಾಪುರ, ಶಿರಾ ತಾ. ತುಮಕೂರು ಜಿ.
22 ತುಳುನಾಡ ಶಾಸನಗಳು, ಸಂ, I, ಸಂ. ರಮೇಶ, ಕೆ.ವಿ. ಕಾರ್ಕಳ, 39 (ಕ್ರಿ. ಶ. 13ನೆಯ ಶತಮಾನ)
23. ಎಕ., VII (ಹೊ); ನಾಮಂ.31 (13ನೆಯ ಶತಮಾನ), ಕಂಬದಹಳ್ಳಿ, ನಾಗಮಂಗಲ ತಾ. ಮಂಡ್ಯ ಜಿ.
24. ಕೆ. ಆಯ್., V,98 (ಕ್ರಿ. ಶ. 1181), ತೇರದಾಳ ಜಮಖಂಡಿ ತಾ. ವಿಜಾಪುರ ಜಿ.

ದೇವರಿಗೆ ತ್ರಿಶೂಲದ ಘಂಟೆ, ಪರೆಗಳ ಮರ್ಯಾದೆಯಿದೆಯೆಂದು ನಿರ್ಣಯಿಸಿದರೆಂದೂ ಈ ಶಾಸನ ತಿಳಿಸುತ್ತದೆ. ಮೇಲೆ ಹೇಳಿದ ಕುಪ್ಪಟೂರು ಜಿನಾಲಯ, ಬ್ರಾಹ್ಮಣರೊಂದಿಗಿನ ಒಪ್ಪಂದ ಸೂಚಕವಾಗಿ 'ಬ್ರಹ್ಮಜಿನಾಲಯ'ವೆಂದು ಕರೆಯಿಸಿಕೊಳ್ಳುತ್ತ ಶೈವರೊಂದಿಗಿನ ಒಪ್ಪಂದಸೂಚಕವಾಗಿ ಜೋಗವಟ್ಟಿಗೆಯನ್ನೂ ಇಟ್ಟುಕೊಂಡ ವಿಷಯ ಅಲ್ಲಿಯ ಶಾಸನದಲ್ಲಿದೆ. ಇದೆಲ್ಲವನ್ನು ನೋಡಿದರೆ 11-12 ನೆಯ ಶತಮಾನದಲ್ಲಿ ಜೈನ ಬಸದಿಗಳು ಕೇವಲ ವೈಷ್ಣವರ ಆಶ್ರಯದಲ್ಲಲ್ಲ, ಶೈವರ ಆಶ್ರಯದಲ್ಲಿಯೂ ಬದುಕುತ್ತಿದ್ದುದು ಸ್ಪಷ್ಟವಾಗುತ್ತದೆ. ಶೈವದ ಜೋಗವಟ್ಟಿಗೆಯನ್ನು ಬಸದಿಗಳಲ್ಲಿ ಇಟ್ಟುಕೊಳ್ಳುವ ಸಂಪ್ರದಾಯ ಕಾಲದ ದೃಷ್ಟಿಯಿಂದ 1104 ರಿಂದ 13ನೆಯ ಶತಮಾನದವರೆಗೂ ಪ್ರದೇಶ ದೃಷ್ಟಿಯಿಂದ ವಿಜಾಪುರ ಜಿಲ್ಲೆ ಮೊದಲು ಮಾಡಿ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಹಾಸನ ಜಿಲ್ಲೆ, ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆಗಳವರೆಗೂ ವ್ಯಾಪಿಸಿದ್ದಿತೆಂದು ತಿಳಿದುಬರುತ್ತದೆ. ಹೀಗೆ ಶೈವರ ಆಶ್ರಯ ಪಡೆದು ಬದುಕುತ್ತಿದ್ದರೂ ಕೆಲವೊಮ್ಮೆ ಈ ಜೈನ ಬಸದಿಗಳು ಶೈವರಿಂದ ನಾಶಕ್ರಿಯೆ ರೂಪಾಂತರ ಕ್ರಿಯೆಗಳಿಗೆ ಗುರಿಯಾಗಿವೆ. ಐಹೊಳೆಯ ಮೇಗೂತಿ ದೇವಾಲಯ ಮೂಲತಃ ಜೈನ ಬಸದಿಯಾಗಿದ್ದು, ಯಾವುದೋ ಕಾಲದಲ್ಲಿ ಶೈವರೂಪಕ್ಕೆ ತಿರುಗಿದೆಯೆಂದು ವಿದ್ವಾಂಸರು ಊಹಿಸುತ್ತಾರೆ. ಹಾವೇರಿ ತಾಲ್ಲೂಕಿನ ಹತ್ತೀಮತ್ತೂರು ಗ್ರಾಮದ ಒಂದು ಶಾಸನದ ಮೇಲ್ಭಾಗ ಮತ್ತು ಕೆಳಭಾಗ ಜೈನಶಿಲ್ಪಗಳನ್ನೊಳಗೊಂಡಿದ್ದು ಮಧ್ಯಭಾಗವನ್ನು ಅಳಿಸಿ ಅಲ್ಲಿ ಭೋಗೇಶ್ವರ ದೇವರಿಗೆ ದತ್ತಿ ನೀಡಿದ ವಿಷಯವನ್ನು ಬರೆಯಲಾಗಿದೆ.[25] ನರಗುಂದ ತಾಲ್ಲೂಕಿನ ಕೊಣ್ಣೂರು ಗ್ರಾಮದ ಜಿನಾಲಯ ಪರಮೇಶ್ವರ ದೇವಾಲಯವಾಗಿದೆ. ಹಾವೇರಿಯ ಜಿನಾಲಯ ಇಂದು ವೀರಭದ್ರ ದೇವಾಲಯವಾಗಿದೆ. ಹೂಲಿಯ ಪಂಚಕೂಟ ಬಸದಿ ಇಂದು ಪಂಚಲಿಂಗ ದೇವಾಲಯವಾದುದು ಸರ್ವಶ್ರುತ. ಇವಲ್ಲದೆ ಸ್ಥಳೀಯ ಯಾವುದೋ ಘರ್ಷಣೆ ಕಾರಣವಾಗಿ ಜಿನಾಲಯಗಳು ಅನ್ಯಧರ್ಮೀಯರಿಂದ ರೂಪಾಂತರಗೊಂಡ ಅನೇಕ ಉದಾಹರಣೆಗಳು ಅಲ್ಲಲ್ಲಿ ಸಿಗುತ್ತವೆ.

ಕೆಲವೊಮ್ಮೆ ಪ್ರಾಚೀನ ಕಾಲದಲ್ಲಿ ತಮ್ಮ ದೇವಾಲಯಗಳನ್ನು ಪಣಕ್ಕೆ ಒಡ್ಡಿ ವಾದಕ್ಕೆ ನಿಲ್ಲುತ್ತಿದ್ದರು. ಆಗ ಸೋತವರ ದೇವಾಲಯಗಳು ನಾಶ ಇಲ್ಲವೆ ರೂಪಾಂತರಗೊಳ್ಳುತ್ತಿದ್ದವು. ಕರ್ನಾಟಕದಲ್ಲಿ ಇದಕ್ಕೆ ಒಳ್ಳೆಯ ನಿದರ್ಶನ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಯಸಿಂಹನ (1040) ಆಸ್ಥಾನದಲ್ಲಿ ಜರುಗಿದ ದೇವರ ದಾಸಿಮಯ್ಯನ ಘಟಸರ್ಪ ಪವಾಡ ಸ್ಪರ್ಧೆ. ಈ ಸ್ಪರ್ಧೆಯಲ್ಲಿ ಸೋತ ಜೈನರ 700 ಬಸದಿಗಳು ನಾಶ ಇಲ್ಲವೆ ರೂಪಾಂತರಗೊಂಡ ವಿಷಯ ವೀರಶೈವ ಪುರಾಣಗಳಲ್ಲಿ ಬರುತ್ತದೆ. ಇದೇ ರೀತಿ ವಾದಕ್ಕೆ ಬಂದ ಜೈನರನ್ನು 'ಶಿರಸ್ಸು ಪವಾಡ'ದ ಮೂಲಕ ಸೋಲಿಸಿದ ಏಕಾಂತ ರಾಮಯ್ಯ ಜೈನರು ಪಣಕ್ಕೆ ಒಡ್ಡಿದ ಅಬ್ಬಲೂರು ಬಸದಿಯ ಜಿನ

---

25. ಇಂ. ಆ್ಯಂ., XII, ಪು.224 (ಕ್ರಿ. ಶ. 916-17), ಹತ್ತಿಮತ್ತೂರ, ಹಾವೇರಿ ತಾ. ಧಾರವಾಡ ಜಿ.

ವಿಗ್ರಹವನ್ನು ಭಗ್ನಗೊಳಿಸಿ ಅಲ್ಲಿ ಸೋಮೇಶ್ವರನನ್ನು ಸ್ಥಾಪಿಸುತ್ತಾನೆ. ಈ ವಿಷಯ ವೀರಶೈವ ಪುರಾಣಗಳಲ್ಲಲ್ಲದೆ ಹೀಗೆ ಶಾಸನೋಕ್ತವಾದುದೂ ವಿಶೇಷ.[26]

ಬಡಿಗೊಂಡುರ್ಬನ ಸೂಕ್ಕ ಬಾಳವನಮಂ ಕಾಡಾನೆ ಪೊಕ್ಕಂತಿರಿ
ಕ್ಕಡಗಲ್ ಕಾಪಿನ ವೀರರಂ ತುರಗಮಂ ಸಾಮಂತರಂ ತೂಳ್ದು ಮಾ
ಪರ್ಡಡೆಗಳ್ ಜೈನರ ಮಾರಿಬಂದುದೆನುತುಂ ಬೆ(0)ಗೊಟ್ಟು ಪೋಗಲ್ ಜಿನಂ
ಕೆಡೆವನ್ನಂ ಬಡಿದಲ್ಲಿ ಕೈಕೊಳಿಸಿದಂ ಶ್ರೀವೀರ ಸೋಮೇಶ್ವರನಂ ॥

ಎಂದು ಅಲ್ಲಿಯ ಶಾಸನ ಈ ಘಟನೆಯನ್ನು ಚಿತ್ರಿಸಿದೆ. ಈ ಸಂದರ್ಭದಲ್ಲಿ ಜೈನರು ರಾಜ ಬಿಜ್ಜಳನಿಗೆ ದೂರು ಒಯ್ದರು. ರಾಮಯ್ಯನು ಸ್ಪರ್ಧೆಗೆ ಜೈನರು ಬರೆದುಕೊಟ್ಟಿದ್ದ ಓಲೆ ತೋರಿಸಿ ಬಿಜ್ಜಳನಿಗೆ ಸತ್ಯ ಸಂಗತಿಯನ್ನು ವಿವರಿಸಿದನಲ್ಲದೆ, ಬೇಕಿದ್ದರೆ ಇನ್ನೊಮ್ಮೆ ತಲೆಯನರಿದವರ ·ಕೈಯ್ಯೊಳೊಡ್ಡುವೆನವರದಂ ಸುಟ್ಟಿಂ ಬಳಿಕ್ಕವಾಂ ಪಡೆವೆನೆನ ಗಾನೆಸಜ್ಜೆಯ ಬಸದಿ ಮುಖ್ಯವಾಗಿ ಯೆಣ್ನೂರು ಬಸದಿಯ ಜಿನರಂ ಪಲರನೊಡ್ಡುವುದು" ಎಂದು ಮರುವಾದ ಹೂಡಿದುದು ಆ ಸಂದರ್ಭದ ಭೀಕರತೆಯನ್ನು ಸೂಚಿಸುತ್ತದೆ.

ಇದಲ್ಲದೆ, "ಶ್ರೀ ಮದ್ ಏಕಾಂತರಾಮಯ್ಯಂಗೆ ಸಂಕಗೌಂಡನೋಲೆಯ ಕುಡುವ ಠಾವು"[27]. "ಯೆ ಏಕಾಂತರಾಮಯ್ಯಂಗಳು ಜಿನನ ಒಡೆದು ಲಿಂಗಪ್ರತಿಷ್ಠೆಯಂ ಮಾಡಿದ ಠಾವು"[28], "ಶ್ರೀ ಬ್ರಹ್ಮೇಶ್ವರ ದೇವರಲ್ಲ ಏಕಾಂತದ ರಾಮಯ್ಯ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಠಾವು.॥ ಸಂ.. ಗಾವುಂಡ ಬಸದಿಯನೊಡೆಯಲೀಯದೆ ಆಳು ಕುದುರೆಯನೊಡ್ಡಿರಲು ಏಕಾಂತದ ರಾಮಯ್ಯ ಕಾದಿ ಗೆಲ್ದು ಜಿನನೊಡೆದು ಲಿಂಗ ಪ್ರತಿಷ್ಠೆಯಂ ಮಾಡಿದ ಠಾವು"[29] ಎಂಬ ಶೀರ್ಷಿಕೆಗಳೊಂದಿಗೆ ಈ ಎಲ್ಲ ಘಟನೆಗಳ ಚಿತ್ರವನ್ನು ಸೋಮೇಶ್ವರ ದೇವಾಲಯದ ಕಲ್ಲಿನಲ್ಲಿ ಬಿಡಿಸಲಾಗಿದೆ. ಇದು ದೇವಾಲಯ ನಾಶದ ವಿಶೇಷ ದಾಖಲೆಯಾಗಿದೆ.

ಮಾವನಾದ ಪಾರಿಸಶೆಟ್ಟಿಯೊಡನೆ ಸ್ಪರ್ಧಿಸಿ, ಪುಲಿಗೆರೆಯ ಸುರಹೊನ್ನೆ ಬಸದಿಯ ಜಿನನ ಸ್ಥಾನದಲ್ಲಿ ಸೋಮೇಶ್ವರನನ್ನು ಆದಯ್ಯ ಸ್ಥಾಪಿಸಿದ ಘಟನೆ, ರಾಘವಾಂಕನ ಸೋಮನಾಥ ಚಾರಿತ್ರ ಮತ್ತು ವೀರಶೈವಪುರಾಣಗಳಲ್ಲಿ ಬರುತ್ತದೆ.

ಹೀಗೆ ಬಸವ ಪೂರ್ವಕಾಲದಿಂದಲೂ ದೇವಾಲಯ ಸಂಸ್ಕೃತಿಯ ಶೈವ ಸಂಪ್ರದಾಯವೊಂದು(ಕಾಳಾಮುಖ) ದೇವರ ದಾಸಿಮಯ್ಯ, ಆದಯ್ಯ, ಏಕಾಂತ

---

26. ಎ. ಇಂ., V, ಪು.237-60 (ಕ್ರಿ. ಶ. 1200), ಅಬ್ಬಲೂರು, ಹಿರೇಕೆರೂರ ತಾ. ಧಾರವಾಡ ಜಿ.
27. ಎ. ಇಂ., XXIX, ಪು. 141, ಅಬ್ಬಲೂರು, ಹಿರೇಕೆರೂರ ತಾ. ಧಾರವಾಢ ಜಿ.
28. ಅದೇ, ಅಲ್ಲೇ
29. ಅದೇ, ಅಲ್ಲೇ

ರಾಮಯ್ಯ ಮೊದಲಾದವರ ಮೂಲಕ ಮುಂದುವರಿದುದು ಎದ್ದು ಕಾಣುವ ವಿಷಯವಾಗಿದೆ. ಈ ಬಿಡಿ ಘಟನೆಗಳು ಒಂದು ಸಂಘಟನೆಯಾಗಿ ಅನ್ಯದೇವಾಲಯಗಳ ನಾಶಕಾರ್ಯ ವ್ಯವಸ್ಥಿತ ಚಳುವಳಿ ರೂಪದಲ್ಲಿ ಅಂದು ಮುಂದುವರಿದಿರಬಹುದೆನಿಸುತ್ತದೆ. ಇಂಗಳಗಿ, ಕುಡತಿನಿ ಶಾಸನಗಳಲ್ಲಿ ಈ ಧರ್ಮವೀರರ ವರ್ಣನೆ ಹೀಗೆ ಬರುತ್ತದೆ.

ಕರಕರನಂ ಸೆಂಡಾಡುವ।
ರುರಗಪನಂ ಕೀರಲಿಟ್ಟು ಬಿಟ್ಟಿಕ್ಕುವರಾ
ಗಿರಿಕುಳಮಂ ಕಿತ್ತೆತ್ತುವ ।
ರುರಿಯೊಳು ಪರಿಮರಿಯಾಡುತಿರ್ಪರು ಸರಣರು॥
[ಇಂಗಳಗಿ ಶಾಸನ ಕ್ರಿ. ಶ. ೧೨೧೯][30]
ಕ್ರೂರ ವಿಷಂಗಳಂ ಕುಡಿವರಂತಕನಂ ಬರೆವರ್ಮಹೋಗ್ರ ಕಾ ।
ಳೋರಗನಂ ಕಡಂಗಿ ಕಿಡಿವರ್ಸಿಡಿಲಂ ಪೊಡೆವರ್ಗ [ಜಾ]ರಿಯಂ।
[ಯಾ]ರಿಗೆ ತಪ್ಪ[ಿ]ಳ್ಳ ಶಿವದೂಷಕರೆಂಬವನೊಕ್ಕಲಿಕ್ಕುವ
ರ್ವೀರಗಣಂಗಳೆಂದೊಡಿದಿರಾರ್ ಪ್ರಮಥರ್ಗೆ ಜಗತ್ರಯಂಗಳೊಳ್॥
ಕರಕಮಲಂಗಳಂ ಮುರಿದುಮಾಪತಿಗೇರಿಸಿ ಮೀಂಟಿಕಣ್ಣಳಂ।
ಹರನ ಶಿಖಾಗ್ರದೊ [ಳ್] ರಿಸಿ ದಂಡೆಗರುಳ್ಗಳೊ[ಳ]ಡೆಯಂ ಭಯಂ।
ಕರಮೆನೆ ಮಾಡಿ ಶಂಕರನನರ್ಚ್ಚಿಸಿ ಪಂದಲೆಯಿಂ ನಿವಾಳಿಯಂ
ಪುರಮಥನಂಗೆ ಕೊಟ್ಟು ಮಗುಳ್ವಂ ಪಡೆವರ್ಪ್ರಮಥರ್ಕಳದ್ಭುತಂ॥
[ಕುಡುತಿನಿ ಶಾಸನ ಕ್ರಿ. ಶ. ೧೨೧೦] [31]

ಇತ್ಯಾದಿ ಪದ್ಯಗಳಲ್ಲಿ ಉಗ್ರ ಶಿವೋಪಾಸಕರ ವರ್ಣನೆಯನ್ನು ನೋಡಬಹುದು. ಈ ಸಂದರ್ಭದಲ್ಲಿ ತಾಳಿಕೋಟೆ ಶಾಸನ (1184) [32]ಬಹು ಮುಖ್ಯವೆನಿಸುತ್ತದೆ.

ದಿಂ ಮುರಿವರುಂ ಪರಸಮಯಗಿರಿವಜ್ರದಂಡರುಂ ಜಗದಲುದ್ದಂ
ಡರುಂ ಜಿನಸಮಯವನದಹನದಾವಾನಳರುಂ ಮುನಿದರ್ಗ್ಗೆ
ಹಾಳಾಹಳರುಂ ಬೌದ್ಧಸಮಯವಿಧ್ವಂಸನ ಪ್ರವೀಣರಂ ಬಗೆ
ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರನೆತ್ತುವರುಂ
ಸೆಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ ಪರಸಮಯ
ಘರಟ್ಟರುಂ ವೀರಕು [ಪ್ರ]ರವಟ್ಟರುಂ ಕಾಲನ ನಾಲಗೆಯಂ ಕೀಳ್ವರುಂ
[ಬಾ]ರಿಯಂ ಕೂರದರ್ಗ್ಗೀವರುಂ ನಂಜನಂಜದುಂಬರುಂ
. . . ರಸಿ ಮಾರ್ಕೊಳ್ವರುಂ ಬಹುವಿಧ ನಿಷ್ಠಾವಶೀಕೃತ ಜ
. . . [ರುಂ] ಅಸಂಖ್ಯಾತ ಸಂಖ್ಯಾಭಿಧೇಯ ಮಹಾ

30. ಸರಮ ಸಾಹಿತ್ಯ..21-1, ಇಂಗಳಗಿ (ಕ್ರಿ. ಶ. 1210),
31. ಎಸ್. ಆಯ್. ಆಯ್..XVII, (ಕ್ರಿ. ಶ. 1210), ಕುಡುತಿನಿ, ಬಳ್ಳಾರಿ ಜಿ.
32. ಎಸ್. ಆಯ್. ಆಯ್.. XV, 56 (ಕ್ರಿ. ಶ. 1184), ತಾಳಿಕೋಟೆ, ಮುದ್ದೇಬಿಹಾಳ ತಾ. ವಿಜಾಪುರ ಜಿ.

. . . ಪರಸಮಯ ಸರಸಿಜಾತ ಸಮೂಹ ಮದಕರಿಗಳಂ
. . . [ಹು] ವಿಧನಿಷ್ಠೆಯಿಂ ಹರನಂ ಪರಿಕ್ಸಿ ಭವಮನಂತರ್ಪ್ಸಿ ಪರಸಮ
. . . ಮಂ ಸಂಹರ್ಪ್ಸಿ ಜರಮಂ ಮಾಂಕರಿಸುವುದ್ದಂಡರುಂ
. . . ಲೆ ಗಂಡರುಂ ಪರಿಯಳಿಗೆ ಅಣಿಲಿವಾಡ ಊಣಕಲ್ಲು ಸಂ
ಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕಿಂ
ಬಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶದೇಶಾನ್ತರದಲಿದಿ
ರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾ ಕಂಪಂಗೊ
ಳ್ಳಿ ಬಸದಿಗಳಂ ಹೊಸದುಮುಕ್ಕಿ ಶಿವಲಿಂಗಸಿಂಹಾಸನಮಂ [ಕ]
ಣ್ಗೊಳ್ಳಿ ಚಲಮಂ ಮೆರೆದು ಧೀರರೊಳು ನೆರೆದು ಸ್ವರ್ಗ್ಗ ಮರ್ತ್ಯ
ಪಾತಾಳದೊಳನಂಗಾರಿಯ ಹೆಮ್ಮೆಯಂ ತಮ್ಮ ಭ
ತ್ಕಾಚಾರದ ತೋಮ್ಮ್ರಯಂ ತಳದಲಿಕ್ಕಿ ತೋರ್ಪ್ಪ ನ್ತಂ ತೋರಿದ ಪುರಾತ
ನ ನೂತನರೆನಿಸಿದ ಅಸಂಖ್ಯಾತಗಣಂಗಳ ನಾಮಾದಿ ಸ
ಮಸ್ತ ಪ್ರಶಸ್ತಿಸಹಿತಂ||..................||

ಈ ಶಾಸನದಲ್ಲಿ ಬರುವ 'ಜಿನಸಮಯವನದಹನದಾವಾನಳರುಂ' ಎಂಬ ವಾಕ್ಯ ಶೈವದಿಂದ ಜೈನರಿಗಾದ ಅನ್ಯಾಯವನ್ನು ತಿಳಿಸಿಕೊಡುತ್ತದೆ. ಇಲ್ಲಿ ಬ... "ಅಬ್ಬಲೂರು" ಎಂಬುದು ಏಕಾಂತ ರಾಮಯ್ಯನು ಬಸದಿ ನಾಶಪಡಿಸಿದುದ... "ಮಾರುಡಿಗೆ"ಎಂಬುದು ಶಿವಭಕ್ತರನ್ನು ಹಿಂಸಿಸಿದ ಜೈನರನ್ನು ನಾ... ನಾಶಗೊಳಿಸಿದುದನ್ನು, "ಪರಿಯಳಿಗೆ" ಎಂಬುದು ವೈಜಕವ್ವೆ ಜಿನಭಕ್ತನಾದ ಗಂಡ... ತ್ಯಜಿಸಿ ಜಿನಬಿಂಬದ ಸ್ಥಾನದಲ್ಲಿ ಶಿವಲಿಂಗ ಸ್ಥಾಪಿಸಿದುದನ್ನು ಸೂಚಿಸುತ್ತವೆ. ಮಿಕ್ಕ ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಕರಹಾಡ, ಬಮ್ಮಕೂರುಗಳಲ್ಲಿ ಜರುಗಿದ ಧರ್ಮಸಂಘರ್ಷಗಳ ವಿವರಗಳನ್ನು ಶೋಧಿಸಬೇಕಾಗಿದೆ.

ಇದೇ ರೀತಿ ವೀರಗೊಗ್ಗಿದೇವನು ಜೈನ ಬಸದಿಗಳನ್ನು ನಿರ್ಮೂಲನ ಮಾಡಿದ ವಿಷಯ ಅಣ್ಣಿಗೇರಿ ಶಾಸನದಲ್ಲಿ ಹೀಗೆ ಬರುತ್ತದೆ :[33]

ಜೈನಮೃಗಬೇಂಟೆಕಾರಂ|
ಜೈನಾಗಮಧೂಮಕೇತು ಜೈನಕುಠಾರಂ|
ಜೈನಫಣಿವೈನತೇಯಂ|
ಜೈನಾಂತಕನೆನಿಸಿ ನೆಗಳ್ದನೀ ಗೊಗ್ಗರಸಂ||
ಅಗ್ಗದ ಘಟಾಂತಿಕೆಯುಂ ಅದೆ |
ನುರ್ಗ್ಗಾಗಿರೆಯೊಡೆದು ಕಳೆದು ಜಿನನಂ ತಾಗಲೆ |
ದುರ್ಗ್ಗತಿಯೊಳಕ್ಕೆ ಮೆಟ್ಟಿದ|
ಗೊಗ್ಗರಸನಾಗ್ರಣಿ ಕೊಮಾರನಾಹವಧೀರಂ ||

33. ಎಸ್. ಐ. ಐ.,XV, 59 (ಕ್ರಿ. ಶ. 1184), ಅಣ್ಣಿಗೇರಿ.ನವಲಗುಂದತಾ.ಧಾರವಾಡ.ಜಿ

ಇಲ್ಲಿ ಗೊಗ್ಗರಸ ನಾಶ ಮಾಡಿದ ಘಟಾಂತಿಕೆ ದೇವತೆ ಯಾರು ? ಜಿನಬಿಂಬ ಯಾವುದು ? ಈ ಘಟನೆ ಯಾವ ಊರಿನಲ್ಲಿ (ಅಣ್ಣಿಗೆರೆ ಲಕ್ಕುಂಡಿ?) ಜರುಗಿತು ?- ಈ ಯಾವೊಂದು ವಿಷಯ ಗೊತ್ತಾಗದಿದ್ದರೂ ಇಲ್ಲಿಯ ವಿವರಗಳು ಜೈನದ ತೀವ್ರನಾಶವನ್ನು ತಿಳಿಸುತ್ತವೆ. ಹೀಗೆ ಬಸವಪೂರ್ವಯುಗದಿಂದಲೂ ದೇವರ ದಾಸಿಮಯ್ಯ, ಆದಯ್ಯ, ಏಕಾಂತದ ರಾಮಯ್ಯ, ಹಗರಟಗೆಯ ವಿರುಪರಸ, ಅಣ್ಣಿಗೆರೆಯ ವೀರಗೊಗ್ಗಿದೇವ ಇತ್ಯಾದಿ ಶೈವರು ಜೈನ ಸಂಸ್ಕೃತಿಯ ನಾಶ ಕಾರ್ಯವನ್ನು ಮುಂದುವರಿಸಿಕೊಂಡು ಬಂದುದನ್ನು ಇಲ್ಲಿ ಗಮನಿಸಬಹುದು. ಇದಲ್ಲದೆ,"ಹುರಮೆಂಬ ಗ್ರಾಮದೊಳು ಹಂಪೆಯಿಂದ ಬಂದ ದೇವರಾಜಯ್ಯನೆಂಬರಸಂ ಜಂಗಮನುಪದೇಶದಿಂದಲ್ಲಿಯ ಬಸ್ತಿಯೊಳು ಮಲ್ಲಿಕಾರ್ಜುನ ಸ್ಥಾಪನೆಯಂ ಮಾಡಿಸಿ, ಜೈನಿಕೆ ಬಿಟ್ಟು, ಆ ಮಲ್ಲಿಕಾರ್ಜುನಗೆ ಒಕ್ಕಲಾದರು. ಅತ್ತಲು ಬೆಟ್ಟದಪುರದ ಬೆಟ್ಟದೊಳು ಮಲ್ಲಿಭಟ್ಟಾರಕನೆಂಬ ಜೈನಿಮುನಿಯು ಮಲ್ಲಿತೀರ್ಥಕರ ಪ್ರತಿಷ್ಠೆಯಂ ಮಾಡಲೆಂದು ಬಸ್ತಿಯಂ ಕಟ್ಟಿಸಿ" ಜಿನಬಿಂಬ ಸ್ಥಾಪಿಸಬೇಕೆಂಬ ಹಂಬಲ ತಪ್ಪಿಹೋಗಿ, ಅನ್ನದಾನ ಮಲ್ಲೇಶ್ವರ ಹೆಸರಿನ ಶಿವಲಿಂಗ ಸ್ಥಾಪಿತವಾಯಿತೆಂದು ಹೇಳುವ ರಾಜಾವಳಿ ಕಥೆ (ಪು.208,209)ಯ ವಿವರಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಇಲ್ಲಿ ದೇವರಸಯ್ಯನು ತಾನು ಮತಾಂತರಗೊಳ್ಳುವುದರೊಂದಿಗೆ ತನ್ನ ಬಸದಿಯನ್ನು ತಾನೇ ರೂಪಾಂತರಗೊಳಿಸಿದುದನ್ನು ನೋಡಬಹುದು.

ಹೀಗೆ ಶೈವರಿಂದ ಆಕ್ರಮಣಕ್ಕೆ ಗುರಿಯಾದ ಜೈನರೂ ಕೆಲವೊಮ್ಮೆ ಶೈವರ ಮೇಲೆ ಆಕ್ರಮಣ ನಡೆಸಿದಂತಿದೆ. "ಪರವಾದಿ ಶರಭಭೇರುಂಡ"[34] "ಸಾಂಖ್ಯ ಕುಲಾದ್ರಿವಜ್ರಧರ[35]","ವಾಜಿವಜ್ರಾಂಕುಶ[36]", "ವಾದಿ ವಿಷೋರಗ ತಾರ್ಕ್ಷ್ಯ[37]" ಎಂಬ ಜೈನ ಆಚಾರ್ಯರ ಬಿರುದುಗಳು ಅನ್ಯಮತದ ಬಗೆಗಿನ ಅವರ ಸಿಟ್ಟನ್ನು, ಅನ್ಯಮತಗಳನ್ನು ವಾದದಲ್ಲಿ ಸೋಲಿಸುವ ಸಾಮರ್ಥ್ಯವನ್ನು ಸೂಚಿಸುತ್ತವೆ. ಇದು ಇನ್ನೂ ಮುಂದುವರಿದು, ಶೈವಸಮಾಜವನ್ನು ಹಿಂಸಿಸುವ, ಶೈವಸ್ಮಾರಕಗಳನ್ನು ನಾಶಪಡಿಸುವ ಕಾರ್ಯಕ್ಕಿಳಿದಂತೆ ತೋರುತ್ತದೆ. ಮೇಲೆ ಹೇಳಿದ ಮಾರುಡಿಗೆ ಗ್ರಾಮದ ನಾಚಯ್ಯನು ಜೈನರನ್ನು ಧ್ವಂಸಗೊಳಿಸಲು ಕಾರಣ, ಅವರು ಶಿವಭಕ್ತರನ್ನು ಹಿಂಸಿಸಿದುದು. ಪರಿಯಳಿಗೆ ಗ್ರಾಮದ ವೈಜಕವ್ವೆ ಜಿನಬಿಂಬ ಸ್ಥಾನದಲ್ಲಿ ಶಿವಲಿಂಗ ಸ್ಥಾಪನೆ ಮಾಡಿದುದಕ್ಕೆ ಕಾರಣ

---

34. ಎಸ್. ಆಯ್ ಆಯ್., XX, 46 (ಕ್ರಿ. ಶ. 1076), ಗುಡಿಗೆರೆ, ಕುಂದಗೋಳ ತಾ. ಧಾರವಾಡ ಜಿ.
35. ಎಂ. ಎ. ಆರ್., 1923, ಪು. 114 (ಕ್ರಿ. ಶ. 190), ಈಚವಾಡಿ, ಶಿವಮೊಗ್ಗಾ ತಾ. ಜಿ.
36. ಎ. ಕ. (ಹೊ.), ಶ್ರ. ಬೆ. 81 (ಕ್ರಿ. ಶ. 12ನೆಯ ಶತಮಾನ), ಶ್ರವಣಬೆಳ್ಗೊಳ, ಚೆನ್ನರಾಯಪಟ್ಟಣ ತಾ. ಹಾಸನ ಜಿ.
37. ಇಂ. ಆಂ., XIV, ಪು. 17 (ಕ್ರಿ. ಶ. 1123-24), ತೇರದಾಳ, ಜಮಖಂಡಿ ತಾ. ವಿಜಾಪುರ ಜಿ.

ಜೈನನಾದ ಗಂಡನು ಶೈವಳೆಂಬ ಕಾರಣಕ್ಕಾಗಿ ಅವಳನ್ನು ಹಿಂಸಿಸುತ್ತಿದ್ದುದು. ಮಲೆನಾಡಿನಲ್ಲಿ ಜೈನರು ವೀರಭದ್ರನ ವಿಗ್ರಹವನ್ನು ಕಿತ್ತಿಹಾಕಿದರೆಂದೂ, ಆಗ ರುದ್ರಮುನಿಯ ಶಿಷ್ಯನಾದ ಮುಕ್ತಿಮುನಿಯ ಶಿಷ್ಯ ದಿಗಂಬರ ಸುಮುಕ್ತಿಮುನಿಯ ಜೈನರನ್ನು ಖಾಂಡ್ಯ ಹೆಸರಿನ ಗ್ರಾಮದಲ್ಲಿ ನಾಶಪಡಿಸಿ, ಆ ವೀರಭದ್ರ ವಿಗ್ರಹವನ್ನು ಹೊನ್ನೂರಿನಲ್ಲಿ ಸ್ಥಾಪಿಸಿದನೆಂದೂ ಚೆನ್ನಬಸವಪುರಾಣ ಹೇಳುತ್ತದೆ.[38] ಸಮಂತಭದ್ರ ಯತಿಯು ಕಂಚಿಯ ಭೀಮೇಶ್ವರ ಲಿಂಗವನ್ನು ತೀರ್ಥಂಕರನನ್ನಾಗಿಸಿದ ಘಟನೆಯನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಜೈನರು ಕೆಲಮಟ್ಟಿಗಾದರೂ ಶೈವ ವ್ಯಕ್ತಿ-ವಿಗ್ರಹ-ದೇವಾಲಯಗಳ ನಾಶಕಾರ್ಯಕ್ಕಿಳಿದ ಉದಾಹರಣೆಗಳು ಸಿಗುತ್ತವೆ.

ಶ್ರೀವೈಷ್ಣವ-ಜೈನ

ಕರ್ನಾಟಕವನ್ನು ಹನ್ನೆರಡನೆಯ ಶತಮಾನದ ಸುಮಾರಿಗೆ ಪ್ರವೇಶಿಸಿದುದು ಶ್ರೀವೈಷ್ಣವ ಧರ್ಮ. ತಮಿಳುನಾಡಿನಿಂದ ಬಂದ ಶ್ರೀವೈಷ್ಣವ ರಾಮಾನುಜಾಚಾರ್ಯರಿಂದಾಗಿ ಹೊಯ್ಸಳನಾಡಿನಲ್ಲಿ ಜೈನಧರ್ಮ ಕುಂದುತ್ತ ನಡೆಯಿತು. ಈಗ ಹೊಯ್ಸಳ ಬಿಟ್ಟಿದೇವ ಜೈನದಿಂದ ಶ್ರೀ ವೈಷ್ಣವಕ್ಕೆ ಮತಾಂತರಗೊಂಡು ವಿಷ್ಣುವರ್ಧನನಾದನೆಂದು ವದಂತಿಗಳಿವೆ. ಈತನು "ಕೊಂಡನೂರು ಸ್ಥಳದಲ್ಲಿದ್ದ ಏಳುನೂರೆಂಬತ್ತು ಬಸ್ತಿಯಂ ಕೀಳಿಸಿ, ಸಿಂಧುಬಲ್ಲಾಳಂ ಕೆರೆಯಂ ಕಟ್ಟಿಸಿ, ಕಲಶ ಶತವಾಡಿಯೊಳ್ ನೂರು ಜಿನಾಲಯಂಗಳಂ ತೆಗೆದು ಹೆಡತಲೆಯ ಪದಿನಾರು ಬಸದಿಯಂ ಕೀಳಿಸಿ, ಪಂಚಪರಮೇಷ್ಠಿಗಳಂ ಸ್ಥಾಪಿಸಲೆಂದಿರ್ದ ಐದು ದೇವಸ್ಥಾನಕ್ಕೆ ಪಂಚನಾರಾಯಣರಂ" ಸ್ಥಾಪಿಸಿದನೆಂದು ರಾಜಾವಳಿ ಕಥೆ (ಪು.180) ಹೇಳುತ್ತದೆ. "ಮೇಲುಕೋಟೆಯೆಂದು ಮಧ್ಯದೇಶದೊಳಿರ್ದ ಜಿನಾಲಯಮಂ ಮ (ಮು)ರಿಸಿ ಚಲುವರಾಯನೆಂದು ಸ್ಥಾಪಿಸಿ" ಎಂದು ಇದೇ ಕೃತಿ (ಪು.180) ತಿಳಿಸುತ್ತದೆ. ಆಗ ಜೈನರೆಲ್ಲ ಎಣ್ಣೆಯ ಗಾಣಗಳಲ್ಲಿ ಅರೆಯಲ್ಪಟ್ಟರೆಂದು ವದಂತಿಗಳಿವೆ. ಬಹುಶಃ ಈ ಕಿರುಕಾಟದ ಮುಂದುವರಿಕೆಯೆಂಬಂತೆ ಶ್ರೀವೈಷ್ಣವರು ಬೆಳ್ಗೊಳದ ಬಸದಿಗಳನ್ನು ನಾಶಗೊಳಿಸಲು ಪ್ರಯತ್ನಿಸಲಾಗಿ, ಈ ಜಗಳವನ್ನು ಬುಕ್ಕರಾಯ ಬಗೆಹರಿಸಿದನೆಂದು ಕಲ್ಯ ಮತ್ತು ಶ್ರವಣಬೆಳ್ಗೊಳ ಶಾಸನಗಳು ತಿಳಿಸುತ್ತವೆ.[39] ಜೈನರನ್ನು "ಭಕ್ತರು ಅನ್ಯಾಯದಲು ಕೊಲ್ಲುವದನು ಬಿನ್ನಹಂ ಮಾಡೆ" ಬುಕ್ಕರಾಯ ಪಂಚಮಹಾವಾದ್ಯ ಕಲಶಗಳ ಮರ್ಯಾದೆ ಬಸದಿಗಳಿಗೂ ಮುಂದುವರಿಯಬೇಕೆಂದು ತೀರ್ಪುನೀಡಿ, ನ್ಯಾಯ ಬಗೆಹರಿಸಿದನೆಂದು ಕಲ್ಯ ಶಾಸನ ತಿಳಿಸುತ್ತದೆ. ಶ್ರವಣಬೆಳ್ಗೊಳದಲ್ಲಿ ವೈಷ್ಣವ ಅಂಗರಕ್ಷೆಗೋಸುಗ ಜೈನರು ಮನೆಗೊಂದು ಹಣ ನೀಡಿದರೆಂದೂ, ಆ ಹಣದಲ್ಲಿ "ದೇವರ ಅಂಗರಕ್ಷೆ"ಗೆ ಇಪ್ಪತ್ತು

38. ಚೆನ್ನ ಬಸವ ಪುರಾಣ (ವಿರೂಪಾಕ್ಷ ಪಂಡಿತ), ಸಂ. 62, ಪ.38-41

39. ಎ. ಕ. (ಹೊ.), ಶ್ರ. ಬೆ. 475 (ಕ್ರಿ. ಶ. 1368), ಶ್ರವಣಬೆಳ್ಗೊಳ, ಚೆನ್ನರಾಯಪಟ್ಟಣ. ತಾ. ಹಾಸನ ಜಿ.

ಆಳುಗಳನ್ನಿಡಲಾಯಿತೆಂದೂ, ಮಿಕ್ಕ ಹಣದಲ್ಲಿ ಬಹುಶಃ ಘರ್ಷಣೆಗೆ ತುತ್ತಾದ ಜೀರ್ಣ ಜಿನಾಲಯಗಳನ್ನು ಉದ್ಧಾರ ಮಾಡಲಾಯಿತೆಂದೂ ಇಲ್ಲಿ ಹೇಳಲಾಗಿದೆ. ಬೆಳ್ಗೊಳದ ಈ ಶಾಸನದ ಮೇಲ್ಭಾಗದಲ್ಲಿ ಶ್ರೀವೈಷ್ಣವರ ಶಂಖ ಚಕ್ರ ತಿರುನಾಮ ಚಿಹ್ನೆಗಳ ಜೊತೆ ಜೈನ ಲಾಂಛನಗಳನ್ನೂ ಕೆತ್ತಲಾಗಿದೆ. ಈ ವಿಷಯ ರಾಜಾವಳಿ ಕಥೆಯಲ್ಲಿ (ಪು.197) ಜೈನ ಬಸವಿಶೆಟ್ಟಿಯು ದಿವ್ಯವನ್ನು ಮೆರೆದ ಘಟನೆಯೊಂದಿಗೆ ಇನ್ನಷ್ಟು ವಿವರವಾಗಿ ದಾಖಲುಗೊಂಡಿದೆ. ಒಟ್ಟಾರೆ, ಈ ಸಂದರ್ಭದಲ್ಲಿ ಜೈನರು ಶ್ರೀವೈಷ್ಣವರ ವ್ಯಾಪಕ ಅತಿಕ್ರಮಣಕ್ಕೆ ತುತ್ತಾದರೆಂದು ತೋರುತ್ತದೆ. ದ್ವಿಪ್ರತಿಯಲ್ಲಿ ಸಿಗುವ ಲಕ್ಕುಂಡಿಯ ಶಾಸನಗಳು ವೈಷ್ಣವ-ಜೈನ ಘರ್ಷಣೆಯನ್ನು ದಾಖಲಿಸಿದರೆ, ದ್ವಿಪ್ರತಿಯಲ್ಲಿ ಸಿಗುವ ಕಲ್ಯ ಮತ್ತು ಬೆಳ್ಗೊಳ ಶಾಸನಗಳು ಶ್ರೀವೈಷ್ಣವ ಜೈನ ಘರ್ಷಣೆಯನ್ನು ದಾಖಲಿಸುತ್ತವೆ ಮತ್ತು ಇಲ್ಲೆಲ್ಲ ನಾಶಕ್ಕೆ ಗುರಿಯಾದವರು ಜೈನರೆಂದು ತಿಳಿಸುತ್ತವೆ. ಕಲ್ಯ ಮತ್ತು ಬೆಳ್ಗೊಳ ಶಾಸನಗಳಲ್ಲಿ ಬರುವ 'ವೈಷ್ಣವ ಅಂಗರಕ್ಷೆ', ಸೊರಬ ಶಾಸನದಲ್ಲಿ ಬರುವ 'ವಜ್ರಪಂಜರ'[40] ಪದಗಳು ಧರ್ಮರಕ್ಷಣಾ ವ್ಯವಸ್ಥೆಯನ್ನು ಸೂಚಿಸುವ ಪಾರಿಭಾಷಿಕ ಪದಗಳೆಂಬಂತಿವೆ. ಬಹುಶಃ ಈ ಸಂದರ್ಭಗಳಲ್ಲಿ ಲಕ್ಕುಂಡಿ ಪ್ರದೇಶ ಮತ್ತು ಬೆಳ್ಗೊಳ ಪ್ರದೇಶಗಳಲ್ಲಿ ಬಹುಸಂಖ್ಯೆಯ ಬಸದಿಗಳು ನಾಶವಾಗಿರುವ ಸಾಧ್ಯತೆಯಿದೆ.

ಇಲ್ಲಿ ನೆನೆಯಬೇಕಾದ ಒಂದು ಬಿಡಿ ಉದಾಹರಣೆಯಾಗಿದೆ, ಸವದತ್ತಿ ಎಲ್ಲಮ್ಮನ ದೇವಾಲಯ. ಇದು ಮೂಲತಃ ಜೈನ ಬಸದಿ. ಎಲ್ಲ ಜೈನ ಕುರುಹುಗಳನ್ನು ಒಡೆದುಹಾಕಿದ್ದರೂ ಈ ದೇವಾಲಯದ ಹೊರಗೋಡೆಯ ಹಿಂದೆ ಮತ್ತು ಎಡಮಗ್ಗಲು-ಹೀಗೆ ಎರಡು ಸಣ್ಣ ಜಿನ ವಿಗ್ರಹಗಳು ಉಳಿದುಕೊಂಡಿವೆ. ಶಿಖರದ ಗೂಡಿನಲ್ಲಿಯೂ ಒಂದು ಜಿನಬಿಂಬವನ್ನು ಕಾಣಬಹುದು. ಗರ್ಭಗುಡಿಯ ಬಾಗಿಲು ಚೌಕಟ್ಟಿಗೆ ಇಂದು ಬೆಳ್ಳಿಯ ಕವಚ ಹೊದಿಸಿದ್ದು, ಅದರ ಹಿಂದೆ ಇದ್ದ ಜಿನವಿಗ್ರಹವನ್ನು ಈ ಮೊದಲು ತೆಗೆದ ಫೋಟೋದಲ್ಲಿ ಕಾಣಬಹುದು. ಗರ್ಭಗುಡಿಯ ಬಾಗಿಲು ತಲೆಪಟ್ಟಿಯ ಮೇಲೆ ಹಚ್ಚಲಾಗಿದ್ದ ಬಣ್ಣವನ್ನು ಇತ್ತೀಚೆಗೆ ತೆಗೆದುಹಾಕಲಾಗಿ, ಅಲ್ಲಿ "ರಟ್ಟಪಟ್ಟ ಜಿನಾಲಯ" ಎಂಬ ಬರವಣಿಗೆ ಕಾಣಿಸಿಕೊಂಡಿದ್ದು,[41] ಇದು ಜೈನಬಸದಿಯೆಂದು ಅಂತಿಮವಾಗಿ ಖಚಿತವಾಗಿದೆ. ಈ ಬಸದಿಯಲ್ಲಿಯ ಜಿನಬಿಂಬವನ್ನು ಒಡೆದು, ಅಲ್ಲಿಯ ಜೈನಯಕ್ಷಿ, ಬಹುಶಃ ಪದ್ಮಾವತಿಯನ್ನು ಯಲ್ಲಮ್ಮ ಹೆಸರಿನಿಂದ ಸ್ಥಾಪಿಸಿದಂತಿದೆ. ಈ ಗ್ರಾಮದವನಾದ ಪಾರ್ಶ್ವಕವಿಯ ಪಾರ್ಶ್ವಪುರಾಣ ಹುಟ್ಟಿದ (1205) ಬಳಿಕ ಈ ರೂಪಾಂತರ ಕ್ರಿಯೆ ಜರುಗಿರಬಹುದು. ಇದಕ್ಕೆ ಯಾರು ಕಾರಣ ? ಏನು ಕಾರಣ ? ಇತ್ಯಾದಿ ಅಂಶಗಳು ಸ್ಪಷ್ಟವಾಗಿ ತಿಳಿದುಬರುವುದಿಲ್ಲ.

---

40. ಅದೇ. ಮತ್ತು ಎ. ಕ. VIII (ಹ.ಎ. ಸೊ. 28 (ಕ್ರಿ. ಶ. 1208), ಸೊರಬ, ಶಿವಮೊಗ್ಗ ಜಿ.

41. ಇದನ್ನು ಶೋಧಿಸಿದವರು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಅಧ್ಯಾಪಕರಾದ ಡಾ. ಎಚ್. ಆರ್. ರಘುನಾಥ ಭಟ್ ಅವರು.

ಹಿಂದೆ ಹೇಳಿದಂತೆ ವೈಷ್ಣವ, ಶೈವ, ಶ್ರೀವೈಷ್ಣವ ದಾಳಿಗಳಿಗೆ ತುತ್ತಾಗುತ್ತ ನಡೆದ ಜೈನಧರ್ಮ ಹೊಯ್ಸಳ ಮಂತ್ರಿಗಳಾದ ಗಂಗರಾಜ, ಹುಳ್ಳರಿಂದ ಸ್ವಲ್ಪ ಮರುಜೀವ ಪಡೆಯಿತೆಂದು ತೋರುತ್ತದೆ.

ಸ್ಥಿರಜಿನಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲಭೂ।
ವರವರಮಂತ್ರಿ ರಾಯನೆ, ಬಳಿಕ್ಕೆ ಬುಧಸ್ತುತನಪ್ಪ ವಿಷ್ಣುಭೂ
ವರವರಮಂತ್ರಿ ಗಂಗಣನೆ, ಮತ್ತೆ ಬಳಿಕ್ಕೆ ನೃಸಿಂಹಭೂ
ವರವರಮಂತ್ರಿ ಹುಳ್ಳನೆ ಪೆಱಂಗಿನಿತುಳ್ಳಡೆ ಪೇಳಲಾಗದೇ[42] ॥

ಎಂಬ ಪದ್ಯ ಈ ಮಂತ್ರಿಗಳ ಜೈನ ಪುನರುಜ್ಜೀವನ ಕಾರ್ಯವನ್ನು ಎತ್ತಿಹೇಳುತ್ತದೆ. ಇದಲ್ಲದೆ ಗೋಪಣಂದಿ ಮುನಿಗಳು "ಗಂಗನೃಪಾಳರಂದಿನ ವಿಭೂತಿಯ ರೂಢಿಯನೆಯ್ದೆ ಮಾಡಿದರ"[43] (1094) ಎಂಬಂತೆ ಈ ಧರ್ಮವನ್ನು ಜೀರ್ಣೋದ್ಧಾರ ಮಾಡಿದರು. ಗಂಗರಾಜನ ಚಟುವಟಿಕೆಯಿಂದಾಗಿ ಜೈನಧರ್ಮ "ಪಳಿಯ ಮಾಳ್ಕೆವೊಲಾದುದು'[44] ಎಂದು ಶಾಸನವೊಂದು(1118) ತಿಳಿಸುತ್ತದೆ. ಅದೆಷ್ಟೇ ಪುನರುಜ್ಜೀವನ ಪ್ರಯತ್ನ ನಡೆದರೂ, ಅನ್ಯಧರ್ಮಗಳ ದಾಳಿಯಿಂದಾಗಿ ಬಸದಿಗಳು ನಾಶವಾಗುತ್ತ, ರೂಪಾಂತರಗೊಳ್ಳುತ್ತ ಮುನ್ನಡೆದವು. ವಿಜಯನಗರದವರ ಆಳಿಕೆಯ ಸಂದರ್ಭದಲ್ಲಿ "ಕಳಲೆಯೊಳಿರ್ದರಸು ಜಿನಮತಮಂ ಬಿಟ್ಟು ರಾಮಾನುಜರ ಕಾಲದೊಳಿ ವಿಷ್ಣುಮತಮನಾಚರಿಸುತಿರ್ದು, ಕಾರ್ಯಾರ್ಥಮಾಗೆ ನಂಜುಂಡದೇವರಂ ಪ್ರಾರ್ಥಿಸಿಯಾ ದೇವರಿ ಗೊಕ್ಕಲಾಗಿ ಶಿವಭಕ್ತರಾಗಿಯವರೊಳು ವೀರರಾಜಂ ಕೊಡಗಿನರಸಿಗೆ ದಳಪತಿಯಾಗಿರ್ದಂ" ಎಂಬ ರಾಜಾವಳಿ ಕಥೆಯ (ಪು.209) ಹೇಳಿಕೆ ಪರಿಶೀಲನಾರ್ಹವೆನಿಸಿದೆ.

ಶೈವ-ವೈಷ್ಣವ

ಮೇಲೆ ಹೇಳಿದ ವೈಷ್ಣವ-ಜೈನ, ಶೈವ-ಜೈನ, ಶ್ರೀವೈಷ್ಣವ-ಜೈನಗಳಂತೆ, ಶೈವ-ವೈಷ್ಣವ ಸಂಘರ್ಷಗಳು ಜರುಗಿದುದಕ್ಕೆ ನಿದರ್ಶನಗಳು ಅಲ್ಲಲ್ಲಿ ಸಿಗುತ್ತವೆ. ಶಂಕರ ದಾಸಿಮಯ್ಯ ಕಲ್ಯಾಣದಲ್ಲಿಯ ವಿಷ್ಣುವಿಗ್ರಹವನ್ನು ತನ್ನ ಉರಿಗಣ್ಣಿನಿಂದ ಸುಟ್ಟುಹಾಕಿದ ವಿಷಯ ಶಂಕರದಾಸಿಮಯ್ಯನ ರಗಳೆ ಮತ್ತು ವೀರಶೈವ ಪುರಾಣಗಳಲ್ಲಿ ಕಂಡುಬರುತ್ತದೆ. ಅಣಂಪೂರಿನಲ್ಲಿ ವೈಷ್ಣವರು ಕಿತ್ತೊಗೆದ ಬಾಲಬ್ರಹ್ಮೇಶ್ವರ ಲಿಂಗವನ್ನು ಗುಡ್ಡವ್ವೆ ಮತ್ತೆ ಸ್ಥಾಪಿಸುತ್ತಾಳೆ. ಇದೇ ರೀತಿ ಕೆಂಭಾವಿ ಭೋಗಣ್ಣ ವೈಷ್ಣವರನ್ನು ಬಂಗಿಸಿ, ಅವರ ದೇವಾಲಯಗಳ ಲಿಂಗಗಳೆಲ್ಲ ಪಲ್ಲಟವಾಗುವಂತೆ ಮಾಡಿದ ಘಟನೆ ವೀರಶೈವ

---

42. ಎ. ಕ. (ಹೊ.), ಶ್ರ. ಬೆ. 476 (ಕ್ರಿ. ಶ. 1159), ಶ್ರವಣಬೆಳ್ಗೊಳ, ಚೆನ್ನರಾಯಪಟ್ಟಣ, ತಾ. ಹಾಸನ ಜಿ.

43. ಎ. ಕ. V(ಹ.), ಚ. ಪ. 143 (ಕ್ರಿ. ಶ. 1094), ಹಳೆಬೆಳ್ಗುಳ, ಚೆನ್ನರಾಯಪಟ್ಟಣ ತಾ. ಹಾಸನ ಜಿ.

44. ಎ. ಕ. !! (ಹೊ.), ಶ್ರ. ಬೆ. 32 (ಕ್ರಿ. ಶ. 1118), ಶ್ರವಣಬೆಳ್ಗೊಳ.

ಪುರಾಣಗಳಲ್ಲಿ ಕಾಣಸಿಗುತ್ತದೆ. ಈ ಅಣಂಪೂರು, ಕೆಂಭಾವಿಗಳ ಉಲ್ಲೇಖ ಮೇಲೆ ಹೇಳಿದ ತಾಳಿಕೋಟೆ ಶಾಸನದಲ್ಲಿಯೂ ಬರುವುದನ್ನು ಇಲ್ಲಿ ನೆನೆಯಬಹುದು.

ಇವೆಲ್ಲ ಪ್ರಧಾನವಾಗಿ ಮುಸಲ್ಮಾನರ ಆಗಮನ ಪೂರ್ವದ ಘಟನೆಗಳು. ಈ ಅವಧಿಯಲ್ಲಿ ಬೌದ್ಧ, ಜೈನ, ವೈಷ್ಣವ, ಶೈವ, ಶ್ರೀವೈಷ್ಣವ ಧರ್ಮಗಳು ಪರಸ್ಪರರ ದೇವಾಲಯಗಳ ಮೇಲೆ ದಾಳಿ ಮಾಡಿವೆ. ಈ ಹೋರಾಟದಲ್ಲಿ ಬೌದ್ಧ ಸ್ಮಾರಕ ಇಡಿಯಾಗಿ ನಾಶವಾಗಿವೆ. ಇದರಂತೆ ಹೊರಗಿನಿಂದ ಬಂದ ಜೈನಧರ್ಮವೂ ಬಹಳ ದೊಡ್ಡ ನಾಶವನ್ನು ಅನುಭವಿಸಿದೆ.

ಹೊರಗಿನಿಂದ ಬಂದರೂ ವೈದಿಕಮೂಲದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳು ಹಿಂದೂಧರ್ಮದ ಹೆಸರನ್ನು ಮುಂದುಮಾಡಿಕೊಂಡು ಸ್ಥಳೀಯ ಶೈವದೊಂದಿಗೆ ಹೊಂದಿಕೊಳ್ಳುವ ಮೂಲಕ ಅದರೊಂದಿಗೆ ಘರ್ಷಣೆಯನ್ನು ಕಡಿಮೆ ಮಾಡಿಕೊಂಡಂತಿದೆ. ಇದರಿಂದಾಗಿ ಬೌದ್ಧರ ತರುವಾಯ ಜೈನ ಒಂದನ್ನೇ ಪರಕೀಯವಾಗಿ ನಿಲ್ಲಿಸಿ, ಈ ನಾಲ್ಕೂ ಧರ್ಮಗಳು ದಾಳಿ ಮಾಡುತ್ತಾ ನಡೆದ ಕಾರಣ, ಅದರ ಬಸದಿಗಳು ಹೆಚ್ಚು ಸಂಖ್ಯೆಯಲ್ಲಿ ನಾಶವಾದುವು. ಹೀಗಾಗಿ ಕರ್ನಾಟಕದಲ್ಲಿ ತೀವ್ರನಾಶಕ್ಕೆ ಗುರಿಯಾದ ಧರ್ಮಗಳೆಂದರೆ ಬೌದ್ಧ ಮತ್ತು ಜೈನಗಳೆಂದು ಹೇಳಬಹುದು.

ಇಂಥ ಧ್ವಂಸಕಾರ್ಯಗಳಲ್ಲದೆ, ಕೆಲವೊಮ್ಮೆ ಸಣ್ಣಪುಟ್ಟ ಘರ್ಷಣೆಗಳು ಸಂಭವಿಸಿರುವುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಆನೆಕಲ್ಲು ಗ್ರಾಮದಲ್ಲಿ ದೇಶಪೇಟೆ, ನಗರ್ತಪೇಟೆಗಳು, ನಂದಿಕೋಲು ಮೆರವಣಿಗೆ, ಕಾಳಿಕಾದೇವಿ ಮೆರವಣಿಗೆ ಬಗ್ಗೆ ಜಗಳಕಾಯ್ದ ಘಟನೆ ಶಾಸನದಲ್ಲಿ ಉಕ್ತವಾಗಿದೆ.[45] ಮಲ್ಲಿಗೆ ಹೂವುಗಳನ್ನು ನಾವಿದರು ಉಪಯೋಗಿಸಬಾರದು ಎಂಬ ವಿಷಯವಾಗಿ ಜರುಗಿದ ಘರ್ಷಣೆಯನ್ನು ಕಾನಕಾನಹಳ್ಳಿ ಶಾಸನ ದಾಖಲಿಸಿದೆ.[46] ಇತ್ತೀಚಿನವರೆಗೂ ವ್ಯಾಸನತೋಳು ಮೆರವಣಿಗೆ ಧಾರ್ಮಿಕ ತಿಕ್ಕಾಟಕ್ಕೆ ಕಾರಣವಾಗುತ್ತಿತ್ತು. ಮಸೀದಿಯ ಮುಂದೆ ವಾದ್ಯ ಬಾರಿಸುತ್ತ ಹೋಗುವುದನ್ನು ಮುಸ್ಲೀಮರು ವಿರೋಧಿಸುವಲ್ಲಿ ಘರ್ಷಣೆಗಳು ಈಗಲೂ ಸಂಭವಿಸುತ್ತವೆ.

ಮೇಲೆ ಹೇಳಿದಂತೆ ಸ್ಥಳೀಯರಾದ ಬೌದ್ಧ, ಜೈನ, ಶೈವ, ವೈಷ್ಣವ ಮತ್ತು ಶ್ರೀವೈಷ್ಣವ ಧರ್ಮೀಯರು 13ನೆಯ ಶತಮಾನದವರೆಗೆ ಉದ್ದಕ್ಕೂ ದೇವಾಲಯಗಳನ್ನು ಪರಸ್ಪರ ನಾಶಮಾಡುತ್ತ ಬಂದರು. ಇಲ್ಲಿಂದ ಮುಂದೆ ಹೊರಗಿನಿಂದ ಪ್ರವೇಶಿಸಿದ ಮುಸಲ್ಮಾನರಿಂದಾಗಿ ಇವರೆಲ್ಲರ ದೇವಾಲಯಗಳು ಹೊಸಬಗೆಯ ದುರಂತಕ್ಕೆ ಗುರಿಯಾದವು. ಅಂದರೆ, ಈವರೆಗೆ ದೇವಾಲಯ ಧ್ವಂಸಕಾರ್ಯ ಮತ್ತು ಒತ್ತಾಯದ ಮತಾಂತರ ಕಾರ್ಯದಿಂದ ದೂರವಿದ್ದ ಆಡಳಿತವರ್ಗವು ಈಗ ನೇರವಾಗಿ ಈ ಕಾರ್ಯದಲ್ಲಿ

---

45. ಎ. ಕ. IX (ಹ.) ಹೊಕೋ. 105 (ಕ್ರಿ. ಶ. 1693), ಹೊಸಕೋಟೆ, ಬೆಂಗಳೂರು ಜಿ.

46. ಎ. ಕ. IX (ಹ.) ಕಾಕಾಹ. 90 (ಕ್ರಿ. ಶ. 1700), ಕಾನಕಾನಹಳ್ಳಿ, ಬೆಂಗಳೂರು ಜಿ.

ಕೈಹಾಕಿತು. ರಾಜಕೀಯ ದಾಳಿಯೆಂದರೆ ಧಾರ್ಮಿಕ ದಾಳಿ ಒತ್ತಾಯದ ಮತಾಂತರವೆಂಬಂಥ ಪರಿಸ್ಥಿತಿ ಈಗ ನಿರ್ಮಾಣವಾಯಿತು. ಯಾವುದೇ ಹಿಂದೂ ವಿಗ್ರಹವನ್ನು ಯಾರೇ ಭಗ್ನಗೊಳಿಸಿರಲಿ, ಅಥವಾ ತಾನೇ ಸ್ವಾಭಾವಿಕ ಭಗ್ನಗೊಂಡಿರಲಿ, 'ಕೊಡಲಿ ಮಹಮ್ಮದ ಭಗ್ನಗೊಳಿಸಿದ'ನೆಂಬುದು ಮನೆಮಾತಾಗುವಂತೆ ಈ ಕಾರ್ಯ ನಮ್ಮ ನಾಡಿನಲ್ಲಿ ಘಟಿಸಿತು. ಕನ್ನಡ ಕಾಲಜ್ಞಾನ ಸಾಹಿತ್ಯ ಈ ಭೀಕರತೆಯನ್ನು ದಟ್ಟವಾಗಿ ಚಿತ್ರಿಸಿದುದನ್ನು ಇಲ್ಲಿ ನೆನೆಯಬಹುದು.

ಉತ್ತರದಿಂದ ಕರ್ನಾಟಕದ ಮೇಲೆ ದಾಳಿಮಾಡಿದ ಮೊದಮೊದಲಿನ ಮುಸಲ್ಮಾನರು ಈ ರಾಜ್ಯವನ್ನು ಸುಲಿದುಕೊಂಡು ಮರಳುತ್ತಲಿದ್ದರು. ಇವರಲ್ಲಿ ಶಾಶ್ವತವಾಗಿ ಇಲ್ಲಿಯೇ ನಿಂತವರು ಹಸನ ಗಂಗೂ ಬಹಮನಿ. ಈ ಮನೆತನದ ಶಾಖೆಗಳಾದ ವಿಜಾಪುರದ ಆದಿಲ್‌ಶಾಹಿ, ಬೀದರದ ಬರೀದ್‌ಶಾಹಿ, ಗೋವಳಕೊಂಡದ ಕುತುಬಶಾಹಿ, ಅಹ್ಮದನಗರದ ನಿಜಾಮಶಾಹಿ ಮತ್ತು ಅಲ್ಲಿ ನೆಲೆನಿಂತ ಇವರ ಸರದಾರರೂ ಸುಲಿಗೆಗಾಗಿ ಸಂಚರಿಸುತ್ತಿದ್ದ ಇವರ ಸೇನಾಪತಿಗಳೂ ನೂರಾರು ಹಿಂದೂ ದೇವಾಲಯಗಳನ್ನು ನಾಶಮಾಡಿದರು. ಕೆಲವನ್ನು ಮಸೀದಿಗಳನ್ನಾಗಿಸಿದರು. ದಕ್ಷಿಣದ ಹೈದರ-ಟೀಪು ಕಾಲದಲ್ಲಿಯೂ ಈ ಕ್ರಿಯೆ ಮುಂದುವರಿಯಿತೆಂದು ಕಾಣುತ್ತದೆ. ಕೆಲವು ಉದಾಹರಣೆಗಳನ್ನು ಹೇಳುವುದಾದರೆ, ವಿಜಾಪುರದಲ್ಲಿ ಕವಿ ನಾಗಚಂದ್ರ ''ವಿಜಯಪುರಕ್ಕಲಂಕರಣ'[47] ವೆನ್ನುವಂತೆ ಕಟ್ಟಿಸಿದ್ದ ಮಲ್ಲಿನಾಥ ಜಿನಾಲಯ ಕಾಲಕ್ರಮದಲ್ಲಿ ಕರೀಮುದ್ದೀನ ಮಸೀದೆಯಾಗಿದೆ. ಬೆಳಗಾವಿ ಕಿಲ್ಲಾ ಪ್ರದೇಶದ ಒಂದು ಮಸೀದೆ ಮೂಲತಃ ಹಿಂದೂ ದೇವಾಲಯವಾಗಿದ್ದುದಕ್ಕೆ ಸ್ಪಷ್ಟ ಕುರುಹುಗಳಿವೆ. ಹೊಯ್ಸಳ ಪತನಾನಂತರ ದಿಲ್ಲಿಯ ಬಾದಶಹನು "ಜಿನಗೃಹ ಶಿವಾಲಯ ವಿಷ್ಣುವಿನಾಲಯ ಮುಂತಾಗಿ ಸಕಲ ದೇವಸ್ಥಾನಂಗಳಂ ಇಪ್ಪತ್ತು ವರ್ಷದಿಂ ತೊಡಗಿ ಎಂಬತ್ತು ವರ್ಷದವರೆಗೂ ದಿನಂಪ್ರತಿ ತಪ್ಪದೆ ಉತ್ತರದೇಶ ಪೂರ್ವ ಪಶ್ಚಿಮದೇಶಂಗಳೊಳಿರ್ದವಂ ಹೆಸರಿಲ್ಲದಂತೆ ಪಾಳುಮಾಡಿ ಅಲ್ಲಲ್ಲಿ ಮಸೀತಿಗಳಂ ಮಾಡಿಸಿ, ಫಕೀರರಂ ನಿಲಿಸಿ" (ಪು.188) ಎಂಬ ವಿವರ ರಾಜಾವಳಿ ಕಥೆಯಲ್ಲಿದೆ. ಈತ ಕಳಿಸಿಕೊಟ್ಟ ಖಾದಿರಲಿಂಗನೆಂಬವನು ದಕ್ಷಿಣಕ್ಕೆ ಬಂದು, "ಪಂಪಾ ಲಕ್ಷ್ಮೀಶ್ವರದೊಳ್ ಅಗ್ಗವಣೆ ಹೊನ್ನಯ್ಯ ಮಾಡಿಸಿದ್ದ ಶಿವಾಲಯಂಗಳಂ ತೆಗೆದು ಕಲ್ಯಾಣಪಟ್ಟಣಮಂ ಕಟ್ಟಿಗೆಗೇರಿಯಂ ಮಾಡಿ, ದೊಡ್ಡ ದೊಡ್ಡ ವೀರಶೈವ ಮಠಮಂ ಮುರಿದು" ಹಾಕಿದನೆಂದು ಇದೇ ಕೃತಿ (ಪು. 190) ತಿಳಿಸುತ್ತದೆ.

ಈ ಅವಧಿಯ ಬಹುದೊಡ್ಡ ನಾಶವೆಂದರೆ ವಿಜಯನಗರ ಸಾಮ್ರಾಜ್ಯದ ಪತನ ಕಾಲಕ್ಕೆ ಸಂಬಂಧಿಸಿದುದು. ರಕ್ಕಸತಂಗಡಗಿ ಯುದ್ಧಸಂದರ್ಭದಲ್ಲಿ "ಪಟ್ಟಣದ

---

47. ನಾಗಚಂದ್ರ, ಮಲ್ಲಿನಾಥಪುರಾಣಂ, ಸಂ. ಹೆಂಡಿ. ಬಿ. ಬಿ., ಧಾರವಾಡ, 1974, ಆ. 14, ಪ. 211

ಯಾವತ್ತೂ ದೇವಸ್ಥಾನಗಳು, ದಿವಾಣಗಳು, ಮಹಲುಗಳು, ದಿವಾನಖಾನಗಳು ಮತ್ತು ದೇವಸ್ಥಾನ ಗೋಪುರಗಳು ಮುಂತಾದವು ಯಾವತ್ತೂ ಬೆಂಕೀ ಹಾಕಿ ಸುಟ್ಟುಬಿಟ್ಟರು'' ಎಂದು ಕಮಲಾಪುರ ಕೈಫಿಯತ್ತು[48] ತಿಳಿಸುತ್ತದೆ. ಈ ಸಂದರ್ಭದಲ್ಲಿ ಹಂಪೆಯ ಶೈವ ದೇವಾಲಯಗಳು ಮಾತ್ರ ಉಳಿದು, ಉಗ್ರನರಸಿಂಹ ಮೊದಲಾದ ವೈಷ್ಣವ ದೇವಾಲಯಗಳು ಹಾಳಾದುದರ ಒಂದೆ ವಿಶಿಷ್ಟ ಧಾರ್ಮಿಕ ವಿರೋಧ ಕೆಲಸ ಮಾಡಿದೆಯೆಂದು ತೋರುತ್ತದೆ.

ಬಸವಾಪಟ್ಟಣದಲ್ಲಿ ಆಳುತ್ತಲಿದ್ದ ಓರೆ ಕೆಂಗೆ ಹನುಮಪ್ಪನಾಯಕನನ್ನು ಸೆರೆಹಿಡಿದುಕೊಂಡು ಹೋಗುವಾಗ ರಣದುಲ್ಲಾಖಾನನು ನೇಮಿಸಿದ್ದ ಮುಸಲ್ಮಾನ ಅಧಿಕಾರಿ ಕೈಕೊಂಡ ದೇವಾಲಯ ನಾಶದ ವಿವರ ಉತ್ಸಂಗಿ ವೇಂಟೆಕೆ ಸಲ್ಲುವ ಸಂತೇಬೆನ್ನೂರ ಸೀಮೆ ಕೈಫಿಯತ್ತಿನಲ್ಲಿ ಹೀಗೆ ಬರುತ್ತದೆ: ''ವರುರ್ಷ ಪರಿಯಂತ್ರ ಸಂತೇಬೆನ್ನೂರ ಠಾಣ್ಯ ಹಾಕಿಕೊಂಡು ಯಿದ್ದು, ಅಲ್ಲಿ ಯಿದ್ದಾ ರಾಮಚಂದ್ರದೇವರ ದೇವಸ್ಥಾನವನ್ನು ಮುರಿದು, ಮಸೂದಿಯನ್ನು ಕಟ್ಟಿಸುವುದಕ್ಕೆ ಆರಂಭವನ್ನು ಮಾಡಿ, ಅದಕೆ ಮಾ (>ಮು)ರುಸಿದ ದೇವಸ್ಥಾನಗಳು

3 ಹಿರೆ ಕೂಗಲ್ಲೂರಲ್ಲು   2 ಸಂತೆಬೆನ್ನೂರಲ್ಲು

1 ಸಂಖನೇಶ್ವರ ದೇವಸ್ಥಾನ 1 ರಾವಂಚಂದ್ರ ದೇವಸ್ಥಾನ

1 ಕಲ್ಲೇಶ್ವರ ದೇವಸ್ಥಾನ 1 ಕಲ್ಲೇಶ್ವರ ದೇವಸ್ಥಾನ

1 ಮಲ್ಲೇಶ್ವರ ದೇವಸ್ಥಾನ 2

3

ಸಿದ್ಧನಮಠದಲ್ಲು ರಾಮೇಶ್ವರ ದೇವಸ್ಥಾನ

ತಳಿಗೆರೆಯಲ್ಲು ಕಲ್ಲೇಶ್ವರ ದೇವಸ್ಥಾನ

ಯೀ ದೇವಸ್ಥಾನಂಗಳ ಮುರಿದು, ಉಡುಮರೂಪಿ ರಂಗನಾಥ ದೇವಸ್ಥಾನವನ್ನು ಮುರಿದ ಬಗ್ಗೆ ಬಂದಲ್ಲಿ ದೇವಸ್ಥಾನಕ್ಕೆ ಜೇನುಯಿಟ್ಟು, ಈ ಹುಳುವು ಯೀ ಜನರನ್ನು ಹೋಗಗೊಡದೆ ಯಿದ್ದದರಿಂದ, ಯೀ ದೇವಸ್ಥಾನವನ್ನು ಮುರವದುಬಿಟ್ಟು, ಯೀ ದೇವರಿಗೆ ಹಾಕಿಕೊಟ್ಟ ಉತ್ತರದಾ ಶಾಸನದ ಕಲ್ಲನು ತೆಗೆದುಕೊಂಡು ಹೋಗಿ ಮಸೂದಿಗೆ ಹಾಕಿದರು.''[49]

ಸೆರೆ ಹೋಗಿದ್ದ ಓರೇ ಕೆಂಗೆ ಹನುಮಪ್ಪನಾಯಕನು ತಿರುಗಿಬಂದು ''ಸಂತೆಬೆನ್ನೂರಲ್ಲು ಯಿದ್ಧ ತನ್ನ ಕುಲದೇವರು ರಾಮಚಂದ್ರದೇವರ ದೇವಸ್ಥಾನವನ್ನು ಮುರಿದು ಮಸೂತಿಯನ್ನು ಕಟ್ಟಿದ ವಾಂಚಲ್ಯಕ್ಕೆ ಯೀ ಮಸೂತಿಯ ಅರಗೆಲಸವಾಯಿತ್ತು. ಅಷ್ಟರಲ್ಲಿ ಯೀತನ್ನು ಮಸೂತಿಯಲ್ಲು ಹಂದಿಯನ್ನು ಕೊಯಿಸಿ, ಅಂಕಣಕೆ ವಂದು ವಂದು ಕಲ್ಲು ಕೀಳಿಸಿ, ಅಲ್ಲಿ ಇದ್ದ ರಣದುಲ್ಲಾಖಾನ ಕಡೆ ಫರೀದಖಾನ ಪಠಾಣ, ಫಖೀರರು ಮುಸಲಮಾನರು ಯಾವತ್ತರ ಬಾಯಿವಳಗ ಹಂದಿ ಮಾಂಸವನ್ನು ತಿನ್ನಿಸಿ, ಆ

---

48. ಕರ್ನಾಟಕದ ಕೈಫಿಯತ್ತುಗಳು, ಪು. 435

49. ಕರ್ನಾಟಕದ ಕೈಫಿಯೆತ್ತುಗಳು ಪು. 26-27

ಅಂಕಣದ ಕಂಬಿಗಳಿಗೆ ವಂದು ವಂದು ರಕುತದ ಚಟ್ಟ ಬಿಡಿಸಿ, ಯೀ ಪ್ರಕಾರ ಮಾಡುವದರೊಳಗೆ ಯಿದರ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿ ತಾನು, ಬಸವಾಪಟ್ಟಣದಲ್ಲೂ ರಾಜ್ಯವನ್ನಾಳಿಸಿಕೊಂಡು ಇದ್ದರು'' ಎಂಬ ವಿವರಗಳು ದೇವಾಲಯ ನಾಶದಂಥ ಕಾರ್ಯದಲ್ಲಿ ಆಡಳಿತವರ್ಗ ತೋರಿಸುತ್ತಲಿದ್ದ ಆಸಕ್ತಿಯನ್ನು ತಿಳಿಸುತ್ತವೆ.

ಚಿತ್ರದುರ್ಗ ಜಿಲ್ಲೆಯ ನೀರತಡಿ ಗ್ರಾಮದ ರಂಗನಾಥ ದೇವಾಲಯದ ಶಾಸನದಲ್ಲಿ (1697)[50] ''ಡಿಳ್ಳಿ ಪಾತಶಹರ ದಂಡು ಬಂದು ದೇವರ ದೇವಸ್ಥಾನ ಮುಂತಾಗಿ ಬಿಂನ ಮಡಿ ಹೋದಲ್ಲಿ'' ಚಿತ್ರದುರ್ಗದ ಪಾಳೆಯಗಾರ ಬರಮಣ್ಣನಾಯಕನು ''ಯೀ ನೀರತಡಿ ಅಹುಬಲ ನಾರಸಿಂಹದೇವರ ಪುನಃ ಪ್ರತಿಷ್ಟೆಯಂ ಮಾಡಿಸಿ''ದನೆಂದು ಹೇಳಲಾಗಿದೆ. ಹೀಗೆ ಈ ಅವಧಿಯಲ್ಲಿ ಅನೇಕ ಹಿಂದೂ ದೇವಾಲಯಗಳು ಮುಸಲ್ಮಾನರ ದಾಳಿಯಿಂದ ಹಾಳಾದವು ಮತ್ತು ರೂಪಾಂತರಗೊಂಡವು.

ಮುಸಲ್ಮಾನರ ತರುವಾಯ ಕರ್ನಾಟಕ ಭಾಗಶಃ ಮರಾಠಾ ಮತ್ತು ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟಿತು. ಇವರಲ್ಲಿ ಪೇಶ್ವೆ ಕಾಲದ ಒಂದು ಘಟನೆ ಸಾಗರ ಕೈಫಿಯತ್ತಿನಲ್ಲಿ[51] ಹೀಗೆ ಬರುತ್ತದೆ: ಕೆಳದಿಯ ಸೋಮಶೇಖರನಾಯಕನು ''ರಾಜ್ಯಭಾರಮಾಡುವ ಕಾಲಕ್ಕೆ ಯೀತನ ಮಾವ ನಿರ್ವಾಣಯ್ಯನು ಯಂಬವನು ಶೃಂಗೇರಿಯಲ್ಲಿ ಮಠಾವನ್ನು ಕಟ್ಟಿಸಿದ್ದರಿಂದ ಶೃಂಗೇರಿಸ್ವಾಮಿಗಳಿಗೂ ಜಂಗಮರಿಗೂ ನ್ಯಾಯಬಂದದರಿಂದ ಯೀ ಶೃಂಗೇರಿ ಸ್ವಾಮಿಗಳು, ಯಿಲ್ಲಿ ಮಠವನ್ನು ಕಟ್ಟಿಸಬೇಡಿ, ಯಿದು ಕಟ್ಟಿದರೂ ಕಿತ್ತಿಹಾಕಿಬಿಡುತ್ತೇವೆ ಯಂಬುದಾಗಿ ಹೇಳಿ, ಪುನಹಾದ ಬಾಜೇರಾಯರಿಗೆ ಹೇಳಿ ಕಳುಹಿಸಿ, ಯಿಲ್ಲಿ ಜಂಗಮರ ಉಪದ್ರವ ಬಹಳವಾಗಿ ಯಿದೆ, ಯಿವರಿಗೆ ಯಿಕ್ಕೇರಿಯವರ ಬಲವಿದೆ, ಯಂದು ಹೇಳಿದರಿಂದಾ, ಆ ಕ್ಷಣವೇ ಬಾಜೇರಾಯರು ಬಂದು, ಫಉಜು ಸಹಾ ತೆಗೆದುಕೊಂಡು ಬಂದು ಮೇಲೆ, ಸೋಮಶೇಖರನಾಯಕರು ಸಲ್ಲಾ ಮಾಡಿಕೊಂಡು, ಶೃಂಗೇರಿ ವಳಗೆ ತಮ್ಮ ಮಠ ಕೀಳುತ್ತಯಿದ್ದೇವೆ ಯಂಬುದಾಗಿ'' ಭರವಸೆ ಕೊಟ್ಟು, 3 ಲಕ್ಷ ವರಹಾ ಕಾಣಿಕೆ ನೀಡಲು ಬಾಜಿರಾಯನು ಮರಳಿಹೋದನು. ಈಗ ''ಶೃಂಗೇರಿಯವರು ತಮ್ಮ ಸ್ಥಳದಲ್ಲಿ ಯಿದ್ದು(ದ್ದ) ಜಂಗಮರ ಮಠವನ್ನು ಅಲ್ಲಿ ಯಿರುವ ಭೂಮಿ ವಳಗಣ ಮಣ್ಣನ್ನು ಸಹಿತವಾಗಿ ಕಿತ್ತು ಹಾಕಿದರು'' ಎಂಬ ವಿವರವನ್ನು ಗಮನಿಸಬಹುದು.

ಇದೇ ಶೃಂಗೇರಿ ಮಠವನ್ನು ರಘುನಾಥರಾವ ಪಟವರ್ಧನನ ನಾಯಕತ್ವದಲ್ಲಿ ಪಿಂಡಾರಿ ಮತ್ತು ಇತರ ಪುಂಡರು 1791ರಲ್ಲಿ ಕೊಳ್ಳೆಹೊಡೆದುದಲ್ಲದೆ, ಶಾರದಾಂಬೆಯ ವಿಗ್ರಹವನ್ನು ಅಪವಿತ್ರಗೊಳಿಸಿದರು. ಈ ಕಾದಾಟದಲ್ಲಿ ಅನೇಕ ಜನ ಬ್ರಾಹ್ಮಣ ಅರ್ಚಕರು

---

50. ಎ. ಕ XI(ಹ.), ದಾಗೆ. 164(ಕ್ರಿ. ಶ. 1697), ನಿರತಡಿ, ದಾವಣಗೆರೆ ತಾ. ಚಿತ್ರದುರ್ಗ ಜಿ.

51. ಕರ್ನಾಟಕದ ಕೈಫಿಯತ್ತುಗಳು, ಪು. 150

ಕೊಲ್ಲಲ್ಪಟ್ಟರು. ಸುಮಾರು 60 ಲಕ್ಷ ರೂಪಾಯಿ ಬೆಲೆ ಬಾಳುವ ವಸ್ತುಗಳು ಅಪಹರಿಸಲ್ಪಟ್ಟವು. ಶ್ರೀಮಠದ ಚಂದ್ರಮೌಳೀಶ್ವರಲಿಂಗ, ರತ್ನಗರ್ಭ ಗಣಪತಿ, ಬಂಗಾರ ಮತ್ತು ತಾಮ್ರದ ಪ್ರತಿಮೆಗಳು, ಪಾತ್ರೆಗಳು, ಆನೆ ಕುದುರೆಗಳು ಲೂಟಿಗೆ ಒಳಪಟ್ಟವು. ಶೃಂಗೇರಿ ಮಠ ಟೀಪು ಸುಲ್ತಾನನ ಹತೋಟಿಯಲ್ಲಿದ್ದ ಕಾರಣ ಅವನ ವೈರಿಗಳಾದ ಮರಾಠರು ಈ ಲೂಟಿ ಮಾಡಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ.[52]

ಚಿತ್ರದುರ್ಗದ ಕಿಲ್ಲೇದಾರ ಅಚ್ಚೀಸಖಾನನು ಕಾಟಮಲಿಂಗದೇವರ ದೊಣ್ಣೆಯ ಬಂಗಾರ ಕವಚ ಬೇರ್ಪಡಿಸಿ, ಅದನ್ನು ದೌಲತಖಾನನಿಗೆ ಕಳಿಸಿದ ವಿಷಯ ಕಣಕುಪ್ಪೆಕೋಟೆ ಕಟ್ಟದ ಕೈಫಿಯತ್ತಿನಲ್ಲಿ [53]ಹೀಗೆ ಬರುತ್ತದೆ: ದೌಲತಖಾನ ಜಮಾದಾರನಿಂದ ಅಚ್ಚೀಸಖಾನನಿಗೆ "ನಿಮ್ಮ ಕಿಲ್ಲೇದಲ್ಲಿ ಮೆದಕೇರಿನಾಯಕರ ದೇವರು ಕಾಟಮಲಿಂಗನ ದೊಣ್ಣೆ ಇದ್ದೀತಂತೆ, ಅದಕ್ಕೆ ಬಂಗಾರದ ಕವಚ ತೊಡಿಸಿ ಇದ್ದಿತಂತೆ, ಅದರ ಕವಚ ಕಡೆಗೆ ತೆಗಿಸಿ ಆ ಬಂಗಾರ ಎಷ್ಟು ಇದೆಯೋ ತೂಕ ಮಾಡಿಸಿ, ಆ ವಿವರಕ್ಕೆ ಪಟ್ಟಿ ಸಹಾ ಬರೆಸಿ ಕಳುಹಿಸಿಕೊಡಿ" ಎಂಬ ಆದೇಶ ಬರುತ್ತದೆ. ಆಗ ಅಚ್ಚೀಸಖಾನ "ತೆಗೆಸಿ ತೂಕ ನೋಡಿದರು, ಎಂಬತ್ತು ವರಹಾದ ತೂಕ ಇತ್ತು........ಇಲ್ಲಿ ನಾವು ಏನು ಕಾರಣ ಇಟ್ಟುಕೊಂಬೇವು ? ಎಂದು ವಿಚಾರಿಸಿ ದೌಲತಖಾನನಿಗೆ ಕಳಿಸಿಕೊಟ್ಟನು" ಎಂಬ ವಿಷಯಗಳನ್ನು ನೋಡಿದರೆ ಈ ಮೊದಲು ದೇವಾಲಯ ನಾಶಕ್ಕೆ ಧರ್ಮದ ಮೇಲಿನ ದ್ವೇಷ ಒಂದೇ ಕಾರಣವಾಗಿದ್ದರೆ, ಮುಸಲ್ಮಾನರ ಕಾಲದಲ್ಲಿ ದ್ರವ್ಯದ ಮೇಲಿನ ಆಶೆಯೂ ಅದರೊಂದಿಗೆ ಸೇರಿಕೊಂಡಿತೆಂದೂ ತೋರುತ್ತದೆ. ಬಲಾತ್ಕಾರದ ಮತಾಂತರವೂ ಇದಕ್ಕೆ ಜೊತೆಗೂಡಿತೆಂದು ತಿಳಿದುಬರುತ್ತದೆ.

* * *

ಮುಸಲ್ಮಾನ-ಮರಾಠಾ ಅಂತ್ಯದಲ್ಲಿ ನಮ್ಮ ನಾಡಿನಲ್ಲಿ ಕಾಣಿಸಿಕೊಂಡವರು ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲೀಷರು. ಈ ಕ್ರೈಸ್ತ ಧರ್ಮೀಯರು ವ್ಯಾಪಾರ-ರಾಜಕೀಯ, ರಾಜಕೀಯ-ಧರ್ಮಪ್ರಸಾರ ಕಾರ್ಯಗಳನ್ನು ಜೊತೆಜೊತೆಯಾಗಿ ನಿರ್ವಹಿಸಿದರು. ಕನ್ನಡಗರಿಗೆ ಮುಸಲ್ಮಾನರದು ಒಂದು ಬಗೆಯ ಅನುಭವವಾದರೆ, ಈ ಕ್ರೈಸ್ತರದು ಇನ್ನೊಂದು ಬಗೆಯ ಅನುಭವವೆನಿಸಿತು. ಇವರ ಕಾಲದಲ್ಲಿ ಹಿಂದೂ ದೇವಾಲಯಗಳ ನಾಶಕಾರ್ಯ ಜರುಗಿರಬಹುದಾದರೂ ಇದರ ವಿವರಗಳು ಬೆಳಕಿಗೆ ಬಂದಿಲ್ಲ. ಗೋವೆಯಲ್ಲಿ 1567 ರಲ್ಲಿ ಸುಮಾರು 280, ಇನ್ನೊಮ್ಮೆ ಸುಮಾರು 200 ಹಿಂದೂ ದೇವಾಲಯ-ವಿಗ್ರಹಗಳನ್ನು ನಾಶಮಾಡಿ ಅವುಗಳ ಕಲ್ಲು ಮಣ್ಣಿನಿಂದಲೇ ಪೋರ್ಚುಗೀಸರು ಚರ್ಚು ಕಟ್ಟಿಸಿದರೆಂದು ತಿಳಿದುಬರುತ್ತದೆ. ಈ ದೇವಾಲಯಗಳ

52. ಶಾಸ್ತ್ರಿ, ಎ. ಕೆ. ಶೃಂಗೇರಿ ಧರ್ಮಸಂಸ್ಥಾನ, ಪು. 53-54
53. ಕರ್ನಾಟಕದ ಕೈಫಿಯತ್ತುಗಳು, ಪು. 32
54. ದೀವಿಗೆ (ಗೋವಿಂದ ಪೈ ಸ್ಮಾರಕ ಗ್ರಂಥ) ಭಾಗ II, ಪು. 43-44

ಆರಾಧಕರಾದ ಬಹುಸಂಖ್ಯೆ ಕೊಂಕಣಿಗರು ಅನಿವಾರ್ಯವಾಗಿ ಮತಾಂತರಗೊಂಡರೆಂದು ಅಲ್ಲಿಯೇ ಹೇಳಲಾಗಿದೆ.[54] ಈ ಬಗೆಯ ಘಟನೆಗಳು ಗೋವೆಯ ನೆರೆಯ ರಾಜ್ಯವಾದ ಕರ್ನಾಟಕದ ಗಡಿಯಲ್ಲಿಯೂ ಜರುಗಿರುವ ಸಾಧ್ಯತೆಯಿದೆ. ಬಿದನೂರಿನ ಒಂದು ಚರ್ಚ್ ಮೂಲತಃ ಹಿಂದೂ ಕಟ್ಟಡವಾಗಿದ್ದಿತೆಂದು ಅಲ್ಲಿಯ ಕುರುಹುಗಳು ತಿಳಿಸುತ್ತವೆ. ಇಂಥ ವಿವರಗಳನ್ನು ಶ್ರೀ ವಿ. ಎನ್. ಪಾಲೇಕರ ಅವರ 'ಭಯಂಕರ ಧರ್ಮ ಕ್ರಾಂತಿ' ಎಂಬ ಮರಾಠಿ ಪುಸ್ತಕದಲ್ಲಿ ಕಾಣಬಹುದು.[55]

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ವಿವರಿಸಬಹುದು. ರಾಜಕೀಯ-ಧಾರ್ಮಿಕ ದಾಳಿ ಸಂಭವಿಸಿದಲ್ಲಿ ಭೌತಿಕ ಆಸ್ತಿಯನ್ನು ಹೊತ್ತುಕೊಂಡು ಊರು ಬಿಡುತ್ತಿದ್ದವರು, ತಿರುಗಿ ಬಂದು ತೆಗೆದುಕೊಳ್ಳಬಹುದೆಂಬ ಆಸೆಯಿಂದ ತಮ್ಮ ಮನೆದೇವರನ್ನೋ, ಊರದೇವರನ್ನೋ ಹೂಳಿ ಹೋಗುತ್ತಿದ್ದರೆಂದು ಕಾಣುತ್ತದೆ. "ಅಂಜಿಕೆ ಬಂದರೆ ಹೂಳುವ ದೈವ" ಎಂಬ ಬಸವಣ್ಣನವರ ಅಪಹಾಸ್ಯದಲ್ಲಿ ಈ ಸೂಚನೆಯನ್ನು ಕಾಣಬಹುದು. ಈಗಲೂ ನೆಲ ಅಗಿಯುವಾಗ ಅಲ್ಲಲ್ಲಿ ಲೋಹ-ಶಿಲಾ ವಿಗ್ರಹಗಳು ಸಿಗುವುದೂ, ಎಷ್ಟೋ ಮುಕ್ಕಾಗದೆ ಮಣ್ಣಿನಲ್ಲಿ ಮುಚ್ಚಿಹೋಗಿರುವ ದೇವಾಲಯಗಳು ಬೆಳಕಿಗೆ ಬರುತ್ತಿರುವುದೂ ಈ ಮಾತಿಗೆ ನಿದರ್ಶನವೆನಿಸಿದೆ.

ಒಟ್ಟು ಇತಿಹಾಸದ ಮೇಲೆ ಕಣ್ಣಾಡಿಸಿದರೆ ದೇವಾಲಯ ನಾಶಕ್ರಿಯೆಯಲ್ಲಿ ಕೆಳಗಿನ ಘಟ್ಟಗಳು ಕಂಡುಬರುತ್ತವೆ :

(1) ಬೌದ್ಧಧರ್ಮಸ್ಮಾರಕಗಳನ್ನು ವೈಷ್ಣವ (ವೈದಿಕ), ಜೈನ ಶೈವಗಳು ನಾಶಮಾಡಿದ ಘಟ್ಟ

(2) ಜೈನಧರ್ಮಸ್ಮಾರಕಗಳನ್ನು ವೈಷ್ಣವ, ಶೈವ, ಶ್ರೀವೈಷ್ಣವಗಳು ನಾಶಮಾಡಿದ ಘಟ್ಟ

(3) ಆಂತರಿಕ ಘರ್ಷಣೆಯಿಂದಾಗಿ ವೈಷ್ಣವ, ಶೈವ, ಶ್ರೀವೈಷ್ಣವ ಸ್ಮಾರಕಗಳು ಪರಸ್ಪರ ನಾಶವಾಗುತ್ತ ಬಂದ ಘಟ್ಟ

(4) ಜೈನ, ವೈಷ್ಣವ, ಶೈವ, ಶ್ರೀವೈಷ್ಣವ ಸ್ಮಾರಕಗಳನ್ನು ಮುಸಲ್ಮಾನರು ನಾಶಮಾಡಿದ ಘಟ್ಟ

(5) ಹಿಂದೂದೇವಾಲಯಗಳನ್ನು ಕ್ರೈಸ್ತರು ನಾಶಮಾಡಿರಬಹುದಾದ ಘಟ್ಟ.

ಹೀಗೆ "ದೇವಾಲಯ ಸಂಸ್ಕೃತಿ"ಯನ್ನು ನಂಬಿದ ಕರ್ನಾಟಕದ ಎಲ್ಲ ಸಮಾಜಗಳೂ ದೇವಾಲಯಗಳ ನಿರ್ಮಾಣ ಮತ್ತು ನಾಶಕಾರ್ಯಗಳಲ್ಲಿ ನಿರತವಾದರೆ, "ದೇಹದೇವಾಲಯ ಸಂಸ್ಕೃತಿ"ಯನ್ನು ಅಸ್ತಿತ್ವಕ್ಕೆ ತಂದ ವೀರಶೈವಸಮಾಜ ಮಾತ್ರ ದೇವಾಲಯಗಳನ್ನು ನಿರಾಕರಿಸುತ್ತ ಬಂದಿತು. ಇದರಿಂದಾಗಿ ಹಳೆಯ ದೇವಾಲಯಗಳು ಉಪೇಕ್ಷೆಗೆ ಗುರಿಯಾದವು. ಹೊಸ ದೇವಾಲಯಗಳು ಹುಟ್ಟಲಿಲ್ಲ-ಎಂಬಂಥ "ದೇವಾಲಯ ನಿರಾಕರಣ ಸಂಸ್ಕೃತಿ" ಕರ್ನಾಟಕದಲ್ಲಿ ತೆರೆದುಕೊಂಡಿತು.

---

54. ದೀವಿಗೆ (ಗೋವಿಂದ ಪೈ ಸ್ಮಾರಕ ಗ್ರಂಥ) ಭಾಗ II, ಪು. 43-44

55. ಅದೇ ಭಾಗ II, ಪು. 43-44

ಸ್ಥಳನಾಮ ವ್ಯಾಸಂಗ: ಒಂದು ಪರಿಚಯ

-ಬಿ. ಜಿ. ಕನಕೇಶಮೂರ್ತಿ

ಮಾನವ ಸಮಾಜ ಜೀವಿ. ಸಮಾಜದಿಂದ ಹೊರತಾದ ಅವನ ಬದುಕು ಕಲ್ಪನೆಗೂ ಮೀರಿದುದು. ಅವನು ತನ್ನ ಸುತ್ತಮುತ್ತಣ ಪರಿಸರ, ನೆರೆಹೊರೆಯೊಂದಿಗೆ ಬದುಕಬೇಕಾಗುತ್ತದೆ, ಅವರೊಂದಿಗೆ ವ್ಯವಹರಿಸಬೇಕಾಗುತ್ತದೆ, ಸಹಕರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅವನು ತನ್ನ ಅಕ್ಕಪಕ್ಕದ ವ್ಯಕ್ತಿಗಳಿಗೆ, ವಸ್ತುಗಳಿಗೆ, ಪ್ರಾಣಿಪಕ್ಷಿಗಳಿಗೆ, ನದಿಕೊಳ್ಳಗಳಿಗೆ, ಊರುಕೇರಿಗಳಿಗೆ ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತಹ ಸಾಂಕೇತಿವಾದ ಕೆಲವು ಹೆಸರುಗಳನ್ನು ಕೊಟ್ಟುಕೊಂಡಿರುತ್ತಾನೆ. ಈ ಹೆಸರುಗಳು ಕೇವಲ ಹೆಸರುಗಳಾಗದೆ ಆಯಾ ವ್ಯಕ್ತಿವಸ್ತುಗಳನ್ನು ಕುರಿತ ಅರ್ಥಗರ್ಭಿತ ಹೆಸರುಗಳಾಗಿರುವುದಲ್ಲದೆ ಅವು ಮನುಷ್ಯನ (ಹೆಸರಿಟ್ಟವನ) ವಿವೇಚನಾಶಕ್ತಿಯನ್ನು, ಬುದ್ಧಿಕುಶಲತೆಯನ್ನು, ಭಾಷಾಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತವೆ. ಜೊತೆಗೆ ಮಾನವನ ಜೀವನೇತಿಹಾಸವನ್ನು, ನಿಷ್ಪಕ್ಷ ಮನೋಭಾವದ ನಿಲುವುಗಳನ್ನು ಅರಿಯುವಲ್ಲಿ ಸಹಕಾರಿಯಾಗುತ್ತವೆ.

ಹೆಸರುಗಳ ಅಧ್ಯಯನ ತುಂಬ ಕುತೂಹಲಕಾರಿಯಾದುದು. ಸಮಾಜಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ, ಭಾಷಾವಿಜ್ಞಾನ, ಜಾನಪದ, ಸಾಹಿತ್ಯ ಮುಂತಾದ ಅಧ್ಯಯನ ವಸ್ತುಗಳಂತೆ "ಅಭಿಧಾನ ವಿಜ್ಞಾನ" (Onomastics) ಕೂಡ ಒಂದು ಅಧ್ಯಯನ ವಸ್ತು. ಅದು ಇತರ ಜ್ಞಾನಶಾಖೆಗಳೊಂದಿಗೆ ಪರಸ್ಪರ ಸಂಬಂಧವನ್ನು ಹೊಂದಿದೆ. ಆದರ ವ್ಯಾಪ್ತಿ ತುಂಬ ವಿಶಾಲವಾದುದು. ಅಭಿಧಾನ ವಿಜ್ಞಾನದ ಒಂದು ಭಾಗವಾದ "ಸ್ಥಳನಾಮ ಅಧ್ಯಯನ" (Toponymy/Study of place names) ವೆಂದರೆ ಸ್ಥಳಗಳ ಹೆಸರುಗಳನ್ನು ಕುರಿತ ವೈಜ್ಞಾನಿಕ ಅಧ್ಯಯನ. ಇದನ್ನು ಕನ್ನಡದಲ್ಲಿ ಸ್ಥಳನಾಮಶಾಸ್ತ್ರ, ಸ್ಥಳನಾಮ ವಿಜ್ಞಾನ ಮುಂತಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಇದರಲ್ಲಿ ಸ್ಥಳಗಳ ಹೆಸರುಗಳ ಉಗಮ, ವಿಕಾಸ ಮತ್ತು ಬೆಳವಣಿಗೆಗಳನ್ನು ಅಧ್ಯಯನ ಮಾಡಲಾಗುತ್ತದೆ. ಹೆಸರುಗಳ ಹುಟ್ಟಿಗೆ ಮತ್ತು ಬದಲಾವಣೆಗೆ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಭೌಗೋಳಿಕ, ಭಾಷಿಕ ಕಾರಣಗಳನ್ನು ಗುರುತಿಸಿ ವಿಶ್ಲೇಷಿಸುವುದು ಇದರ ಮುಖ್ಯ ಉದ್ದೇಶ.

ಸ್ಥಳನಾಮಗಳನ್ನು ಕುರಿತು ದೇಶದ ನಾನಾ ಭಾಗಗಳಲ್ಲಿ ಹಾಗೂ ಹೊರದೇಶಗಳಲ್ಲೂ ಸಾಕಷ್ಟು ಗಮನಾರ್ಹವಾದ ಕೆಲಸ ನಡೆದಿದೆ. ಹಲವು ಲೇಖನ, ಕೃತಿ, ಸಂಶೋಧನಾ ಪ್ರಬಂಧಗಳು ಬಂದಿವೆ. ಸ್ಥಳನಾಮ ಸಂಘಗಳೂ ಸ್ಥಾಪನೆಗೊಂಡಿವೆ. 'ಅಖಿಲ ಭಾರತೀಯ ಸ್ಥಳನಾಮ ಸಂಘ' ಮೈಸೂರಿನಲ್ಲಿ 1978 ರಲ್ಲಿ ಸ್ಥಾಪಿತವಾಗಿ ಈ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕನ್ನಡದಲ್ಲಿ ಸ್ಥಳನಾಮಗಳನ್ನು ಕುರಿತು ಶಂಬಾ ಜೋಷಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸೇಡಿಯಾಪು ಕೃಷ್ಣಭಟ್ಟ, ಕೆಮ್ತೂರು ರಘುಪತಿ ಭಟ್, ಶ್ರೀನಿವಾಸ ರಿತ್ತಿ, ವಿ. ಗೋಪಾಲಕೃಷ್ಣ, ಡಾ. ದೇಜಗೌ ಡಾ. ಕೆ. ವಿ. ರಮೇಶ್ ಮುಂತಾದ ವಿದ್ವಾಂಸರು ಲೇಖನ, ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ವಿಷಯ ಪ್ರವೇಶಕ್ಕೆ ಮುನ್ನ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಪ್ರಸ್ತಾವನೆಯಾಗಿ ಕೊಡುವುದು ಉಚಿತವೆಂದು ಈ ಮೇಲಿನ ಮಾತುಗಳನ್ನು ಬರೆದಿದ್ದೇನಷ್ಟೆ.

ಡಾ. ದೇಜಗೌ ಸಾಹಿತ್ಯ, ವಿಮರ್ಶೆ, ಜಾನಪದ, ಭಾಷಾವಿಜ್ಞಾನ, ಸಂಪಾದನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಸಾಕಷ್ಟು ಕೃಷಿ ಮಾಡಿದವರು. ಅವರ ಬರವಣಿಗೆಗಳಲ್ಲಿ ಅವರದೇ ಆದ ವಿಶಿಷ್ಟ ಭಾಷಾ ಶೈಲಿಯನ್ನು' ನಿರೂಪಣಾ ವಿಧಾನವನ್ನು ಕಾಣುತ್ತೇವೆ. ಎಲ್ಲೂ ವಿಷಯ ತೊಡಕಾಗದ ರೀತಿಯಲ್ಲಿ, ಗೋಜಲು ಗೋಜಲಾಗಿ ಗೊಂದಲಕ್ಕೊಳಗಾಗದ ಹಾಗೆ ವಿಷಯವನ್ನು ಪ್ರತಿಪಾದಿಸುವುದರಲ್ಲಿ ಅವರು ಸಿದ್ಧಹಸ್ತರು. ಈ ಮಾತುಗಳಿಗೆ ಅವರ ' ಸ್ಥಳನಾಮ ವ್ಯಾಸಂಗ'ವೂ (1990, ಸಹ್ಯಾದ್ರಿ ಪ್ರಕಾಶನ, ಮೈಸೂರು; ಕಿರೀಟ ಆಕಾರದ 8 + 160 ಪುಟಗಳು; ಬೆಲೆ:ರೂ. 18-00 (ಸಾದಾ), ರೂ. 27-00 (ಉತ್ತಮ) ಒಂದು ಉತ್ತಮ ನಿದರ್ಶನ. ಈ ಕೃತಿ ಅವರು ಸ್ಥಳನಾಮ ಕ್ಷೇತ್ರದಲ್ಲಿ ನಡೆಸಿದ ಬೇಸಾಯದ ಫಸಲು. ಇದು ಸ್ಥಳನಾಮಗಳ ಬಗ್ಗೆ ಕ್ಷೇತ್ರಕಾರ್ಯ ಮಾಡುವವರಿಗೆ ಮಾರ್ಗದರ್ಶಕ ಕೈಪಿಡಿಯಂತಿದೆ.

ಸಾಂಸ್ಕೃತಿಕ ಹಾಗೂ ಭಾಷಿಕ ದೃಷ್ಟಿಗಳಿಂದ ಸ್ಥಳನಾಮಗಳ ಅಧ್ಯಯನದ ಅವಶ್ಯಕತೆ ಹಾಗೂ ಅದಕ್ಕೆ ಬೇಕಾದ ಸೈದ್ಧಾಂತಿಕ ವಿಚಾರಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿ ತಿಳಿಸಿಕೊಡುವ, ಆ ನಿಟ್ಟಿನಲ್ಲಿ ಇತರರನ್ನು ಪ್ರೇರೇಪಿಸುವ ಕನ್ನಡದ ಕೆಲವೇ ಪುಸ್ತಕಗಳಲ್ಲಿ ಒಂದೆಂದರೆ "ಸ್ಥಳನಾಮ ವ್ಯಾಸಂಗ" ಎನ್ನಬಹುದು. ಇದರಲ್ಲಿ ಪ್ರವೇಶ, ಸ್ಥಳನಾಮಗಳ ಉಗಮ, ಸ್ಥಳನಾಮ ವಿಜ್ಞಾನದ ವ್ಯಾಪ್ತಿ, ಪ್ರಭಾವ; ಸ್ಥಳನಾಮ ವಿಜ್ಞಾನದ ಇತಿಹಾಸ, ಸಂಶೋಧನಾ ವಿಧಾನ-ಸಾಧನ, ವರ್ಗೀಕರಣ, ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ, ಕ್ಷೇತ್ರಕಾರ್ಯ, ಗ್ರಾಮನಾಮ ಜಾನಪದ, ಮೈಸೂರು ನಗರದ ಬೀದಿ ಹೆಸರುಗಳು ಎಂಬ ಹತ್ತು ಅಧ್ಯಾಯಗಳು ಮತ್ತು ಕೊಡವರ ಕುಟುಂಬ ನಾಮಗಳು, ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಜರೂರು ಅಗತ್ಯ, ಹೆಸರು ಬದಲಾವಣೆಯ ಬಗೆಗೊಂದು ಟಿಪ್ಪಣಿ ಹಾಗೂ ಗ್ರಂಥಋಣ ಎಂಬ ನಾಲ್ಕು ಅನುಬಂಧಗಳು ಇವೆ. ಲೇಖಕರು " ಈ ಕೃತಿ ಒಂದೇ ಸಮನೆ ಕುಳಿತು ಬರೆದದ್ದಲ್ಲ; ಆಗಾಗಿನ ಅಗತ್ಯಕ್ಕೆ ತಕ್ಕಂತೆ ಬರೆದದ್ದು, ಆದ್ದರಿಂದ ಇದು ಲೋಪದೋಷ, ನ್ಯೂನತೆಗಳಿಂದ ಮುಕ್ತವಾಗಿಲ್ಲವೆಂದು ಹೇಳಬೇಕಾಗಿದೆ" ಎಂದಿದ್ದರೂ ವಿಷಯ ಪ್ರವೇಶಕರಿಗೆ ಇದೊಂದು ಅತ್ಯುತ್ತಮ ಹಾಗೂ ತೀರಾ ಅಗತ್ಯವಾದ ಪುಸ್ತಕ ಎನ್ನಬಹುದು.

ಮೊದಲನೆಯ ಅಧ್ಯಾಯ-ಪ್ರವೇಶ-ದಲ್ಲಿ ಸ್ಥಳನಾಮಗಳ ಸ್ಥೂಲ ರೂಪರೇಷೆಗಳನ್ನು ಕೊಡಲಾಗಿದೆ. ಭಾಷೆಯ ಆರಂಭಿಕ ಅವಸ್ಥೆಯಲ್ಲಿ ಅಂಕಿತನಾಮಗಳು ಹೇಗೆ ರೂಢನಾಮಗಳಾಗಿ ಪರಿವರ್ತನೆಯಾಗಿರಬಹುದು, ವ್ಯಕ್ತಿನಾಮ, ಜಾತಿನಾಮ, ವಾಣಿಜ್ಯನಾಮ, ವಸ್ತುನಾಮ, ಸಂಕೀರ್ಣನಾಮ ಮುಂತಾದವುಗಳ ಸ್ವರೂಪ ಮತ್ತು ವ್ಯಾಪ್ತಿ ಹೇಗೆ ವಿಸ್ತಾರವಾದುದು ಎಂಬುದನ್ನು ಉದಾಹರಣೆಗಳ ಮೂಲಕ ಮನವರಿಕೆ ಮಾಡಿಕೊಡಲಾಗಿದೆ.

'ಸ್ಥಳನಾಮಗಳ ಉಗಮ' ಎಂಬ ಎರಡನೆಯ ಅಧ್ಯಾಯದಲ್ಲಿ "ಒಂದು ವಸ್ತುವಿನ ಅಥವಾ ಪ್ರಾಣಿಯ ಸ್ವರೂಪವೋ ಸ್ವಭಾವವೋ ಸಂವೇದನಾಶೀಲ ಮಾನವನ ಭಾವಕೋಶದಲ್ಲಿ ಪ್ರತಿಧ್ವನಿಗೈದ ಪರಿಣಾಮವಾಗಿ ಅವನ ಉಚ್ಚಾರಣಾವಯವಗಳಲ್ಲಿ ಮೂಡಿದ ಉದ್ಗಾರವೇ ಹೆಸರಾಗುತ್ತದೆ" ಎಂದು ಹೆಸರಿಡುವ ವಿಧಾನದ ಪ್ರೇರಣೆಯನ್ನು ಗುರುತಿಸಲಾಗಿದೆ. ಮಾನವನ ಅಂತಃಸ್ಫುರಣದ ಜೊತೆಗೆ ಅವನ ವಿಚಾರವಂತಿಕೆಯೂ ಭಾಗಿಯಾದಾಗ ಒಂದು ಹೆಸರು ಹತ್ತಾಗಿ, ಹಲವಾಗಿ, ಅನಂತವಾಗಿ ಬೆಳೆದಿದೆ. ಶಬ್ದಕ್ಕೂ ಅದು ಸಂಕೇತಿಸುವ ವಸ್ತುವಿಗೂ ಸಾವಯವ ಅಥವಾ ಅವಿನಾ ಸಂಬಂಧವಿರದಿದ್ದರೂ ಅನೇಕ ಶತಮಾನಗಳ ಬಳಕೆಯಿಂದಾಗಿ, ಜನಾಂಗದ ಉಸಿರಿಗಾಗಿ, ಅದರ ರಕ್ತದಲ್ಲಿ ರಕ್ತವಾಗಿ ಬೆಳೆಸಿಕೊಂಡದ್ದರ ಪರಿಣಾಮವಾಗಿ, ಅವುಗಳ ಸಂಬಂಧ ನಿಸರ್ಗ ಸಿದ್ಧವೆಂಬಂತೆ ಪ್ರಗಾಢವಾಗಿ ತೋರುತ್ತದೆ" ಎಂಬುಬನ್ನು ಸೂಕ್ತ ಉದಾಹರಣೆಗಳ ಮೂಲಕ ನಿರೂಪಿಸಲಾಗಿದೆ. ವ್ಯಕ್ತಿನಾಮ, ಕುಲನಾಮ, ಜಾತಿನಾಮಗಳಂತೆ ಸ್ಥಳನಾಮಗಳೂ ಕೂಡ ಹಲವು ವಿಶಿಷ್ಟತೆಗಳಿಂದ ಕೂಡಿವೆ. ಕಾಲಗಣನೆಯ ದೃಷ್ಟಿಯಿಂದ ವ್ಯಕ್ತಿನಾಮಗಳಿಗಿಂತ ಸ್ಥಳನಾಮಗಳು ಈಚಿನವಾಗಿರಬೇಕೆಂಬುದನ್ನು ಸಕಾರಣಗಳ ಮೂಲಕ ವಿವರಿಸಲಾಗಿದೆ.

'ಸ್ಥಳನಾಮ ವಿಜ್ಞಾನದ ವ್ಯಾಪ್ತಿ-ಪ್ರಭಾವ' ಎಂಬ ಮೂರನೆಯ ಅಧ್ಯಾಯ ಅದರ ವ್ಯಾಪ್ತಿ ಎಷ್ಟು ವಿಶಾಲವಾದುದು ಹಾಗೂ ಅದರ ಅಧ್ಯಯನ ಇತರ ಜ್ಞಾನಶಾಖೆಗಳಿಗೆ ಎಷ್ಟು ಪ್ರಯೋಜನಕಾರಿಯೆಂಬುದನ್ನು ತಿಳಿಸಿಕೊಡುತ್ತದೆ. ಭಾಷೆ ಕಾಲಕಾಲಕ್ಕೆ ಬೆಳೆದುಬಂದ ರೀತಿ ಮತ್ತು ಮೂಲ ಭಾಷೆಯ ರೂಪಗಳ ಪುನರ್‌ರಚನೆಗೆ, ಉಪಭಾಷಾ ಸಮೀಕ್ಷಣೆಗೆ, ನಿಘಂಟು ರಚನೆಗೆ ಸ್ಥಳನಾಮಗಳ ಅಧ್ಯಯನ ವಿಪುಲವಾದ ಸಾಮಗ್ರಿಯನ್ನು ಒದಗಿಸುತ್ತದಲ್ಲದೆ ಒಂದು ಭಾಷೆಯ ಮೇಲೆ ಅನ್ಯಭಾಷೆಯ ಪ್ರಭಾವ, ಸಂಪರ್ಕವನ್ನರಿಯಲೂ ಸಹಾಯಕವಾಗುತ್ತದೆ. ಸಾಹಿತ್ಯ ಕೃತಿಗಳಲ್ಲಿ ಬಳಕೆಗೊಂಡಿದ್ದು ರೂಪಾರ್ಥ ವ್ಯುತ್ಪತ್ತಿಗಳಲ್ಲಿ ಸಂದೇಹವಿರುವ ಶಬ್ದಗಳ ಅಂತರಾಳವನ್ನು ಸ್ಥಳನಾಮ ವಿಶ್ಲೇಷಣೆಯಿಂದ ಪ್ರಕಾಶನಗೊಳಿಸಬಹುದಾದುದರಿಂದ ಸಾಹಿತ್ಯಕ್ಕೂ ಹೆಚ್ಚಿನ ಲಾಭವೊದಗುತ್ತದೆ. ಶಾಸನಗಳಲ್ಲಿ ಉಕ್ತವಾಗಿರುವ ಹೆಸರುಗಳ ವಿಶ್ಲೇಷಣೆಗೆ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ತಿಳಿಯಲು, ಮಾನವನ ನಾಗರಿಕತೆಯ ವಿಕಾಸವನ್ನರಿಯಲು ಸ್ಥಳನಾಮಗಳ ಅಧ್ಯಯನ ತುಂಬಾ ಸಹಾಯವೊದಗಿಸುತ್ತಾದ್ದರಿಂದ ಅದರ ವ್ಯಾಪ್ತಿ ವಿಶಾಲವಾದುದು ಎಂಬುದನ್ನು ಈ ಅಧ್ಯಾಯದಲ್ಲಿ ತಿಳಿಯಬಹುದು.

ನಾಲ್ಕನೆಯ ಅಧ್ಯಾಯದಲ್ಲಿ 'ಸ್ಥಳನಾಮ ವಿಜ್ಞಾನದ ಇತಿಹಾಸ'ವನ್ನು ಕೊಡಲಾಗಿದೆ. ಊರುಗಳ ಬಗೆಗಿನ ದಂತಕಥೆಗಳು, ಸ್ಥಳಪುರಾಣಗಳು, ಸಾಹಿತ್ಯಕೃತಿಗಳು, ಸರ್ಕಾರಿ ಕಡತಗಳಲ್ಲಿ ಉಲ್ಲೇಖಿತಗೊಂಡ ಸ್ಥಳನಾಮಗಳು ಇವುಗಳ ಬಗೆಗೆ ಸರಿಯಾದ ವೈಜ್ಞಾನಿಕ ದೃಷ್ಟಿಕೋನ ಹರಿದಿಲ್ಲದ ಸಂದರ್ಭದಲ್ಲಿ ಪಾಶ್ಚಾತ್ಯ ವಿದ್ವಾಂಸರು ಅವುಗಳ ಮಹತ್ವವನ್ನರಿತು ಹೇಗೆ ಆ ಕ್ಷೇತ್ರದಲ್ಲಿ ಕೃಷಿಗೆ ತೊಡಗಿದರು, ಸ್ಥಳನಾಮ ಅಧ್ಯಯನಕ್ಕೆ ಸಂಘ-ಸಂಸ್ಥೆಗಳು, ಸಂಶೋಧನ ಮಂಡಲಿಗಳು ಹೇಗೆ ಸ್ಥಾಪಿತಗೊಂಡವು, ಅವುಗಳ ಸ್ವರೂಪವೇನು ಕನ್ನಡದಲ್ಲಿ ಹಾಗೂ ಭಾರತೀಯ ಭಾಷೆಗಳಲ್ಲಿ ಈ ನಿಟ್ಟಿನಲ್ಲಿ ಎಷ್ಟರಮಟ್ಟಿನ ಕೆಲಸ ನಡೆದಿದೆ ಎಂಬುದನ್ನು ಸ್ಥೂಲವಾಗಿ ನಿರೂಪಿಸಲಾಗಿದೆ.

'ಸಂಶೋಧನಾ ವಿಧಾನ-ಸಾಧನ' ಎಂಬ ಐದನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ಸಂಶೋಧನೆ ಮಾಡಹೊರಟ ವ್ಯಕ್ತಿಗೆ ಕೇವಲ ಪ್ರಾಮಾಣಿಕ ಶ್ರದ್ಧೆ ಮಾತ್ರವಲ್ಲದೆ ಭಾಷಾ ವಿಜ್ಞಾನ, ಪುರಾತತ್ತ್ವಶಾಸ್ತ್ರ, ಇತಿಹಾಸ, ಜಾನಪದ, ಸಾಂಸ್ಕೃತಿಕ ಹಿನ್ನೆಲೆ, ಜನಾಂಗಿಕ ಹಾಗೂ ಭೌಗೋಳಿಕ, ಸಂಗತಿಗಳ ಸವಿವರ ಪರಿಚಯ ಅತ್ಯಗತ್ಯ. ಕ್ಷೇತ್ರಕಾರ್ಯ ಕೈಗೊಳ್ಳುವ ಮುನ್ನ ನಾಮಕರಣ ಸಂಪ್ರದಾಯ ವಿಧಾನ ಹಾಗೂ ನಾಮಾಂತರ ಕಾರಣಗಳನ್ನು ನಿಖರವಾಗಿ ಗುರುತಿಸಿಕೊಳ್ಳಬೇಕಾಗುತ್ತದೆ. ಅನಂತರವೇ ಅವನು ಕ್ಷೇತ್ರಕಾರ್ಯಕ್ಕೆ ಕೈಹಾಕಬೇಕು ಎಂಬಿವೇ ಅಂಶಗಳನ್ನು ಹಲವು ಉದಾಹರಣೆಗಳ ಸಹಿತ ವಿವರಿಸಲಾಗಿದೆ.

ಆರನೆಯ 'ವರ್ಗೀಕರಣ' ಅಧ್ಯಾಯದಲ್ಲಿ ಸಂಶೋಧಕ ತಾನು ಸಂಗ್ರಹಿಸಿದ ಮಾಹಿತಿಗಳನ್ನು ಯಾವ ಯಾವ ಕ್ರಮಗಳಲ್ಲಿ ವರ್ಗೀಕರಿಸಿಕೊಳ್ಳಬೇಕು. ಬೇರೆ ಬೇರೆ ವಿದ್ವಾಂಸರು ಮಾಡಿಕೊಂಡಿರುವ ವರ್ಗೀಕರಣಗಳು ಎಷ್ಟು ಮತ್ತು ಯಾವುವು ಎಂಬುದನ್ನು ನಿರೂಪಿಸಲಾಗಿದೆ.

'ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ' ಎಂಬ ಅಧ್ಯಾಯ ಹಲವು ಕುತೂಹಲದ ಸಂಗತಿಗಳನ್ನು ನಮ್ಮ ಮುಂದಿಡುತ್ತದೆ. ಇದರಲ್ಲಿ ಕನ್ನಡದ ಹೆಸರುಗಳ ಜೊತೆಗೆ ಬೇರೆ ಬೇರೆ ದೇಶಗಳ ಹೆಸರುಗಳ ವಿಶಿಷ್ಟತೆಗಳನ್ನೂ ಲೇಖಕರು ಸಂಗ್ರಹಿಸಿಕೊಟ್ಟಿದ್ದಾರೆ.

ಪ್ರಮುಖವಾದ 'ಕ್ಷೇತ್ರಕಾರ್ಯ' ಅಧ್ಯಾಯದಲ್ಲಿ ಸಂಶೋಧಕನು ಕ್ಷೇತ್ರಕಾರ್ಯ ಕೈಗೊಳ್ಳಲು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳನ್ನು ವಿವರಿಸಲಾಗಿದೆ. ಸ್ಥಳನಾಮ ಮಾಹಿತಿಯನ್ನು ಸಂಗ್ರಹಿಸಲು ರೂಪಿಸಿಕೊಳ್ಳಬೇಕಾದ ಪ್ರಶ್ನಾವಳಿಯ ಸ್ಥೂಲರೂಪವನ್ನು ಕೊಡಲಾಗಿದೆ. ಕ್ಷೇತ್ರಕಾರ್ಯದ ಬಳಿಕ ಸಿದ್ಧಪಡಿಸಬೇಕಾದ ನಿಬಂಧದ ರೂಪುರೇಷೆಯನ್ನೂ ಕೊಟ್ಟಿರುವುದು ಸಹಾಯಕಾರಿಯಾಗಿದೆ.

'ಗ್ರಾಮನಾಮ ಜಾನಪದ (ಐತಿಹ್ಯಗಳು)' ಅಧ್ಯಾಯ ಕರ್ನಾಟಕದಲ್ಲಿನ ಎಡತೊರೆ, ಚುಂಚನಕಟ್ಟೆ, ಶಿವಮೊಗ್ಗ, ಅತ್ತಿಗೋಡು ಮುಂತಾದ ಹದಿನೆಂಟು ಊರುಗಳ ಹೆಸರುಗಳ ಬಗೆಗಿರುವ ಸ್ವಾರಸ್ಯಕರ ಕತೆಗಳನ್ನೊಳಗೊಂಡಿದೆ.

'ಮೈಸೂರು ನಗರದ ಬೀದಿ ಹೆಸರುಗಳು' ಆಂಗ್ಲ ಪತ್ರಿಕೆಯೊಂದರಲ್ಲಿ ಪ್ರಕಟಗೊಂಡ ಲೇಖನದ ಕನ್ನಡಾನುವಾದ. ಲೇಖಕರೇ ಹೇಳುವಂತೆ ಇಂದೊಂದು ನೇರವಾದ ವರ್ಣನಾತ್ಮಕ ಅಧ್ಯಯನ. ಇದಕ್ಕೆ ಕೆಲವು ಮಿತಿಗಳೂ ಇವೆ. ಇಲ್ಲಿ ಮೈಸೂರು ನಗರದ ವಿವಿಧ ಮೊಹಲ್ಲಾಗಳ ಬೀದಿ ಹೆಸರುಗಳನ್ನು, ಅವುಗಳ ಸ್ವರೂಪ ಹಾಗೂ ಹಿನ್ನೆಲೆಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಅನುಬಂಧದಲ್ಲಿ 'ಕೊಡವರ ಕುಟುಂಬ ನಾಮಗಳು' ಎಂಬ ಕಿರುಲೇಖನದಲ್ಲಿ ಕೊಡವರ ಕುಟುಂಬನಾಮಗಳು ಹಿಂದೆ ಗ್ರಾಮನಾಮಗಳಾಗಿರಬೇಕೆಂದು, ಅವು ಕಾಶ್ಮೀರದ ಊರುಗಳ ಹೆಸರುಗಳೊಂದಿಗೆ ಹೊಂದಿಕೆಯಾಗುತ್ತವೆಯಾದ್ದರಿಂದ ಕೊಡವರು ಆ ಮೂಲದಿಂದ ಬಂದಿರಬೇಕೆಂಬ ಸಂಶೋಧನೆಯ ಜೊತೆಗೆ ದ್ರಾವಿಡ ಮೂಲವೇ ಯಾಕಾಗಿರಬಾರದು ಎಂಬ ಬಗ್ಗೆ ಸಂಶೋಧನೆ ನಡೆಸಲು ಪ್ರಚೋದನೆಯನ್ನು ನೀಡುತ್ತಾರೆ.

'ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಜರೂರು ಅಗತ್ಯ' ಎಂಬ ಲೇಖನ ಸ್ಥಳನಾಮ ನಿಘಂಟಿನ ಅಗತ್ಯತೆ ಹಾಗೂ ಅದನ್ನು ಸಿದ್ಧಪಡಿಸುವ ವಿಧಾನವನ್ನು ತಿಳಿಸಿಕೊಡುತ್ತದೆ. 'ಹೆಸರು ಬದಲಾವಣೆಯ ಬಗೆಗೊಂದು ಟಿಪ್ಪಣಿ' ಎಂಬ ಇನ್ನೊಂದು ಅನುಬಂಧ ಲೇಖನ ಮೊದಲಿನಿಂದ ಬಂದ ಹೆಸರನ್ನು ಬದಲಾಯಿಸಲು ಕಾರಣಗಳೇನು. ಅದರ ಹಿಂದಿನ ಮನೋಧರ್ಮವೇನು ಎಂಬುದನ್ನು ಕೆಲವು ಉದಾಹರಣೆಗಳೊಂದಿಗೆ ವಿವರಿಸುತ್ತದೆ.

ಸರಳ ಹಾಗೂ ನೇರ ನಿರೂಪಣೆ. ಪುಸ್ತಕದುದ್ದಕ್ಕೂ ಇಡಿಕಿರಿದ ಸೂಕ್ತ ವಿಪುಲ ಇಂಗ್ಲೀಷ್ ಹಾಗೂ ಕನ್ನಡದ ಉದಾಹರಣೆಗಳು. ಸರಳ ಭಾಷೆಗಳಿಂದ ಈ ಪುಸ್ತಕ ಸ್ಥಳನಾಮಗಳನು ಕುರಿತು ಸಂಶೋಧನೆ ನಡೆಸುವವರಿಗೆ. ವಿದ್ಯಾರ್ಥಿಗಳಿಗೆ ಒಂದು ಅತ್ಯುತ್ತಮ ಕೈಪಿಡಿಯಾಗಿದೆ.

* * * * *

ಜಾನಪದ ವಿಜ್ಞಾನದ ಈಚಿನ ಸಿದ್ಧಾಂತ : ಪ್ರದರ್ಶನ ಸಿದ್ಧಾಂತ

- ಎ. ವಿ. ನಾವಡ

ಪ್ರದರ್ಶನ ಸಿದ್ಧಾಂತ (Performance Theory) ಜಾನಪದ ವಿಜ್ಞಾನ ಕಂಡುಕೊಂಡ ಇತ್ತೀಚಿನ ವೈಧಾನಿಕತೆಗಳಲ್ಲಿ ಒಂದು. 70ರ ದಶಕದ ಈಚೆಗೆ ಜಾನಪದವನ್ನು ಗ್ರಹಿಸುವ ನಿಟ್ಟಿನಲ್ಲಿ ಮಹತ್ವದ ಬದಲಾವಣೆ ಉಂಟಾಯಿತು. ಹಳೆಯ-ಪಳೆಯ ಮಾಹಿತಿಗಳ ಶೋಧನೆ, ಶುದ್ಧ ಮೂಲರೂಪಗಳ ಅನ್ವೇಷಣೆ, ಯಾರೂ ಕೇಳದ ಮಾಹಿತಿಗಳನ್ನು ಬಿಡುಗಡೆ ಮಾಡುವ ತನಕ ಇಂದಿನ ಜಾನಪದ ವಿದ್ವಾಂಸರ ಆಸಕ್ತಿಯ ವಿಷಯವಾಗದೆ ಜಾನಪದವನ್ನು ವಾಸ್ತವ ಬದುಕಿನ ಉತ್ಪನ್ನವೆಂದು ಪರಿಭಾವಿಸಿ, ಅದರ ಘಟನೆಗಳನ್ನು ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪರಿಭಾವಿಸುವ ಒಂದು ನೂತನ ಸಮೀಪನ ಅಥವಾ ಸಿದ್ಧಾಂತವೇ ಪ್ರದರ್ಶನ ಸಿದ್ಧಾಂತ. ಜಾನಪದವನ್ನು ಅಂತರಶಿಸ್ತೀಯವಾಗಿ ಅಧ್ಯಯನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಮಾನವಕುಲಶಾಸ್ತ್ರ, ಸಾಹಿತ್ಯ, ಭಾಷಾವಿಜ್ಞಾನ ವಿದ್ಯಾರ್ಥಿಗಳು ಒಂದಾಗಿ ವಿಚಾರ ಮಾಡಿ ಈ ಸಿದ್ಧಾಂತಕ್ಕೆ ವಿದ್ವಾಂಸರ ನಡುವೆ ಗೌರವ ತಂದುಕೊಟ್ಟರು. ಡಾನ್ ಬೆನ್ ಅಮಾಸ್ (1972, 1975) ಹೈಮ್ಸ್ (1975), ಬೌಮನ್ ರಿಚರ್ಡ್ (1977) ಮುಂತಾದವರು ಜಾನಪದ (ಅವರು ಹೇಳುವಂತೆ Verbal Art) ಸಾಮಗ್ರಿಯೊಂದನ್ನು ಪ್ರದರ್ಶನದ ದೃಷ್ಟಿಯಲ್ಲಿ ನೋಡಿ ವಿಶ್ಲೇಷಿಸಿದರು. ಅದೇ ಕಾಲಾವಧಿಯಲ್ಲಿ ವಾಡ್ಲಿ ಸುಸಾನ್ (1978, 1986), ಕ್ಲಾಸ್ ಪೀಟರ್(1975, 1989), ಸ್ಮಿಡ್ (1977), ಬ್ರೆಂಡಾ ಬೆಕ್(1982), ಬ್ಲಾಕ್‌ಬರ್ನ್ (1981, 1989) ಮುಂತಾದ ಮಾನವಶಾಸ್ತ್ರಜ್ಞರು ಪ್ರದರ್ಶನ ಸಂದರ್ಭದಲ್ಲಿ ಜನಪದ ಪದ್ಯಕಾವ್ಯಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಿದರು. ಕನ್ನಡದ ಸಂದರ್ಭದಲ್ಲಿ ಪ್ರದರ್ಶನ ಸಿದ್ಧಾಂತದ ತಾತ್ತ್ವಿಕ ನೆಲೆಗಳನ್ನು ಕುರಿತು ನಂದಾವರ (1991), ಹಿರಿಯಣ್ಣ (1992) ಮೊದಲಬಾರಿಗೆ ವಿಚಾರ ಮಾಡಿದ್ದಾರೆ. ಪ್ರದರ್ಶನ ಸಿದ್ಧಾಂತವನ್ನು ಕರ್ನಾಟಕದ ಕನ್ನಡ, ತುಳು ಸಾಮಗ್ರಿಗಳಿಗೆ ಅನ್ವಯಿಸಿ ಬರೆದವರು ಅಭಯಕುಮಾರ್ (1991) ಹಾಗೂ ನಾವಡ (1993).

ಪ್ರದರ್ಶನ ಸಿದ್ಧಾಂತ ಬೆಳೆದು ಬಂದ ಐತಿಹಾಸಿಕ ಹಿನ್ನೆಲೆಯನ್ನು ಸಮೀಕ್ಷಿಸಬೇಕಾಗಿದೆ. ಜಗತ್ತಿನಾದ್ಯಂತ ಜಾನಪದ ಅಧ್ಯಯನವು ಜನಪದ ಸಾಹಿತ್ಯ ಕೇಂದ್ರಿತ ಅಥವಾ ಶಾಬ್ದಿಕ ಪಠ್ಯ ಕೇಂದ್ರಿತವಾಗಿತ್ತು. 'ಜನಪ್ರಿಯ ಪಳೆಯುಳಿಕೆಗಳು' ಎಂಬ ಆಲೋಚನಾ ವಿಧಾನದಿಂದ ಮೂಡಿಬಂದ ಜಾನಪದ ಗತಕಾಲವನ್ನು ವೈಭವೀಕರಿಸುತ್ತಾ, ಜಾನಪದ ನಾಶವಾಗುತ್ತಿದೆ, ಅದರ ಮೂಲ ಸ್ವರೂಪವನ್ನು ಉಳಿಸಬೇಕು, ಪುನರ್ರಚಿಸಬೇಕು ಎನ್ನುವ ಮಾತು ಕೇಳಿ ಬರತೊಡಗಿತು. ಅಂದರೆ ಜಾನಪದದ ಚಲನಶೀಲತೆಯ ಅರಿವೇ ಅವರಿಗೆ ಇದ್ದಂತಿರಲಿಲ್ಲ. ಜಾನಪದ ಜೀವಕೇಂದ್ರವಾದ ಭಿನ್ನಪಾಠಗಳನ್ನು ಸ್ವೀಕರಿಸುವ

ದೃಷ್ಟಿಕೋನ ಇನ್ನೂ ಅನೇಕರಿಗೆ ಬಂದಿರಲಿಲ್ಲ. 1930ರ ಹೊತ್ತಿಗೆ ಹೋಮರನ ಕಾವ್ಯ ಸಂಯೋಜನ ಪ್ರಕ್ರಿಯೆಯನ್ನು ಅಭ್ಯಸಿಸುವ, ಜೊತೆಗೆ ಯುಗೋಸ್ಲೇವಿಯಾದ ದೀರ್ಘ ಮಹಾಕಾವ್ಯಗಳ ಭಿನ್ನಪಾಠಗಳ ಲಭ್ಯತೆಯ ರಹಸ್ಯವನ್ನು ಅರ್ಥೈಸುವ ಸಂದರ್ಭದಲ್ಲಿ ಕೆನೆಕಟ್ಟಿದ ಮೌಖಿಕ ಸೂತ್ರಾತ್ಮಕ ಸಿದ್ಧಾಂತ ಅಥವಾ ಪ್ಯಾರಿಲಾರ್ಡ್ ಸಿದ್ಧಾಂತ ಪ್ರದರ್ಶನ ಸಿದ್ದಾಂತಕ್ಕೆ ಮುನ್‌ಸೂಚಕವಾಯಿತು. (ಡಂಡಸ್ 1988) ಮೂಲಭೂತವಾಗಿ ಮೌಖಿಕ ಸೂತ್ರಾತ್ಮಕ ಸಿದ್ಧಾಂತ ಪಠ್ಯಕೇಂದ್ರಿತವಾದುದು ಎಂಬ ಅಭಿಪ್ರಾಯ ಉಂಟು. ಆದರೆ ಈ ಸಿದ್ಧಾಂತದಲ್ಲಿ ಪಠ್ಯಕ್ಕಿಂತ ಪ್ರದರ್ಶನದ ಮೇಲೆ ಹೆಚ್ಚಿನ ಒತ್ತು ಬೀಳುತ್ತದೆ. ಒಂದು ವಿಶಿಷ್ಟವಾದ ಮುಹೂರ್ತದಲ್ಲಿ ಪ್ರದರ್ಶಕ (performer) ಹಾಗೂ ಶ್ರೋತೃ ಅಥವಾ ಪ್ರೇಕ್ಷಕರ (Audience) ಸಹಯೋಗದಿಂದ ಪಠ್ಯ ಹೊಮ್ಮುತ್ತದೆ. ಸಂದರ್ಭ ಬೇರೆಯಾದಂತೆ ಇಡಿಯ ಜಾನಪದ ಸಂಗತಿ (Item) ಯ ಶರೀರವೇ (Corpse)ಬದಲಾಗುವುದಲ್ಲದೆ ಶಾಬ್ದಿಕ ಪಠ್ಯದ ಶರೀರದಲ್ಲೂ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಅನೇಕ ಜಾನಪದ ವಿದ್ವಾಂಸರು ಮೌಖಿಕ ಸೂತ್ರಾತ್ಮಕ ಸಿದ್ದಾಂತ (oral Formulaic theory)ವನ್ನು ಪಠ್ಯಕೇಂದ್ರಿತ ಸಿದ್ಧಾಂತ ಎಂದುದಕ್ಕೆ ಕಾರಣ ಈ ಸಿದ್ದಾಂತ ಮೂಲಭೂತವಾಗಿ ಜಾನಪದ ಘಟನೆಯೊಂದರೆ ಪಠ್ಯ ಹಾಗೂ ಸಂದರ್ಭವನ್ನು ಅರ್ಥೈಸಲು ಹುಟ್ಟಿಕೊಂಡುದಾಗಿರಲಿಲ್ಲ. ಗಾಯಕನೊಬ್ಬನಲ್ಲಿ ಮೌಖಿಕ ಕಾವ್ಯವೊಂದು ಸಂಯೋಜನೆಗೊಳ್ಳುವ ಹಾಗೂ ಪ್ರಸರಣವನ್ನು ಕುರಿತಂತೆ ಹೇಳುವ ಸಿದ್ಧಾಂತ ಅದು. ಗಾಯಕನೊಬ್ಬನ ಮಾನಸಭಂಡಾರ(Repertoire)ದೊಳಗೆ ಸ್ಥಿರಪಾಠವೊಂದು ಕೊಳಗೊಂಡಿಲ್ಲ. ಅದು ಆಯಾ ಮೂಹೂರ್ತದಲ್ಲಿ ಶ್ರೋತೃಗಳ ಪ್ರತಿಕ್ರಿಯೆ. ಒದಗಿದ ಸಾಮಾಜಿಕ, ಸಾಂಸ್ಕೃತಿಕ, ಸ್ಥಾನಿಕ ಆವರಣದ ಹಿನ್ನೆಲೆಯಲ್ಲಿ ನಿರ್ದಿಷ್ಟ ಪಾಠವೊಂದು ಹೊಮ್ಮುತ್ತದೆ. ಒಂದೊಂದು ಪ್ರದರ್ಶನದಲ್ಲೂ ಹೊಮ್ಮಿದ ಪಾಠವು ವಿಶಿಷ್ಟವಾದುದು ಎನ್ನುವ ಪರಿಕಲ್ಪನೆ ಪ್ರದರ್ಶನ ಸಿದ್ಧಾಂತಕ್ಕೆ ಮೀಟುಗೋಲಾಯಿತು.

1960 ರ ಹೊತ್ತಿಗೆ ಯುರೋಪ್‌ನಲ್ಲಿ ಸಾಂದರ್ಭಿಕ ಸಿದ್ಧಾಂತ (Contextual theory) ಬಳಕೆಗೆ ಬಂದಿತು. ಪಠ್ಯಕೇಂದ್ರಿತ ದೃಷ್ಟಿ ಕೊನೆಗೊಂಡು ಅವುಗಳ ಸಾಂಸ್ಕೃತಿಕ-ಸಾಮಾಜಿಕ ಹಿನ್ನೆಲೆಯೊಂದಿಗೆ ಪರಿಭಾವಿಸುವ ವಿಧಾನ ಬಳಕೆಗೆ ಬಂದಿತು (ಅಮಾನ್ 1982, ಡಂಡಸ್ 1975)ಜಾನಪದ ಸಂಗತಿಯೊಂದನ್ನು ಸಮಾಜಶಾಸ್ತ್ರೀಯ, ಬಾಷಾ ವೈಜ್ಞಾನಿಕ ಮಾನವಶಾಸ್ತ್ರೀಯ ಹಿನ್ನೆಲೆಯೊಂದಿಗೆ ಪರಿಭಾವಿಸುವ ಜೊತೆಗೆ ಪರಂಪರೆ, ವಕ್ತ್ಯ ಅಥವಾ ಪ್ರದರ್ಶನಕಾರ ಹಾಗೂ ಶ್ರೋತೃ ಇವರ ಪರಸ್ಪರ ಸಹಯೋಗದ ಫಲವಾಗಿ ಸಂಗತಿ (item)ಯೊಂದು ಪ್ರದರ್ಶನದ ಸಂದರ್ಭದಲ್ಲಿ ಮೈದಾಳುತ್ತದೆ ಎನ್ನುವ ಅಭಿಪ್ರಾಯ ಬಂದಿತು. ಡಾರ್ಸನ್ ಅವರು ಸಾಂದರ್ಭಿಕ ಪಂಥದ ಆಶಯವನ್ನು ಕತೆಯ ಹಿನ್ನೆಲೆಯಲ್ಲಿ ಹೀಗೆ ಹೇಳುತ್ತಾರೆ (ಡಾರ್ಸನ್1972:45)

> ''.......ಜಾನಪದ ಸಾಮಗ್ರಿಯ ಹಿನ್ನೆಲೆಯಲ್ಲಿರುವ ಭಾಷಿಕ, ಮಾನಸಿಕ ಸಾಮಾಜಿಕ ಪರಿಸರಗಳನ್ನು ಇವರು ವಿಶೇಷವಾಗಿ ಲಕ್ಷಿಸುತ್ತಿದ್ದಾರೆ. ಕತೆಯ ನಿರೂಪಣೆಯನ್ನು ಆದರ ಭಾಷಿಕ, ಸಾಮುದಾಯಿಕ ಮತ್ತು ಅಭಿವ್ಯಕ್ತಿಯ

ರೀತಿಗಳ ಸಂದರ್ಭದಿಂದ ಬೇರ್ಪಡಿಸಿ ನೋಡುವುದನ್ನು ಅವರು ಪ್ರಬಲವಾಗಿ ವಿರೋಧಿಸುತ್ತಾರೆ. ಇವರ ಪ್ರಕಾರ ಜಾನಪದ ಕೇವಲ ಒಂದು ಪದ ಸಮೂಹವಲ್ಲ. ಒಂದು ಪರಂಪರೆಯನ್ನು ನಿರೂಪಿಸುವ ಅಥವಾ ಸಂವಹಿಸುವ ಒಂದು ಘಟನೆ. ಆದ್ದರಿಂದ ನಿರೂಪಣೆಯ ಅಥವಾ ಸಂವಹನೆಯ ಪ್ರತಿಯೊಂದು ಅಂಶವನ್ನು ದಾಖಲಿಸಿಕೊಳ್ಳುವುದು ಅಗತ್ಯ ಇಂಥ ಸನ್ನಿವೇಶದಲ್ಲಿ ಕತೆಯ ಪಠ್ಯ ಅದರ ಕೇವಲ ಒಂದು ಅಂಶ ಎಂಬುದು ಈ ಪಠ್ಯದ ಅಭಿಪ್ರಾಯ.'' (ಉದ್ಧೃತ: ಹಿರಿಯಣ್ಣ 1992 ಪು 117-118)

ಅಂದರೆ ನಿರ್ದಿಷ್ಟವಾದ ಪಠ್ಯವೊಂದು ನಿರ್ದಿಷ್ಟ ಸನ್ನಿವೇಶದಲ್ಲಿ ಏಕೆ ಬಳಕೆಯಾಗುತ್ತದೆ ಎನ್ನುವುದನ್ನು ಈ ಸಂದರ್ಭ ಸಿದ್ಧಾಂತ ಹೇಳುತ್ತದೆ. ಕತೆಯ ನಿರೂಪಣೆಯನ್ನು ಗಮನಿಸಿದರೆ ನಮ್ಮ ಕಿವಿ ಗ್ರಹಿಸುವ ಶಾಬ್ದಿಕ ಪಠ್ಯವಷ್ಟೇ ನಮಗೆ ಮುಖ್ಯವಾಗುವುದಿಲ್ಲ. ಕತೆಗಾರ, ಅವರ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ, ಕತೆ ಹೇಳುವ ಭೌತಿಕ-ಸಾಮಾಜಿಕ ಸಂದರ್ಭ, ನಿರೂಪಣೆಯ ಶೈಲಿ, ಶ್ರೋತೃವಿಗೂ ಕತೆಗಾರನಿಗೂ ಇರುವ ಸಂಬಂಧ, ಶ್ರೋತೃಗಳ ಸಾಮಾಜಿಕ, ಬೌದ್ಧಿಕ ಮಟ್ಟ ಎಲ್ಲವನ್ನೂ ಗಮನಿಸಬೇಕಾಗುತ್ತದೆ. ಸಂಪೂರ್ಣ ದಾಖಲಾತಿಗೆ ಟೇಪ್‌ರೆಕಾರ್ಡರ್ ಮಾತ್ರ ಸಾಕಾಗುವುದಿಲ್ಲ. ವೀಡಿಯೊ, ಕಪ್ಪು ಬಿಳುಪಿನ ಚಿತ್ರ, ಬಣ್ಣದ ಚಿತ್ರ ಎಲ್ಲವೂ ಬೇಕಾಗುತ್ತದೆ. ಒಟ್ಟಿನಲ್ಲಿ ಸಂದರ್ಭ ಸಿದ್ಧಾಂತವು ಪಠ್ಯಕೇಂದ್ರಿತ ಜಾನಪದ ಅಧ್ಯಯನವನ್ನು ಅರ್ಥಪೂರ್ಣ ಮುಂದುವರಿಕೆಗೆ ಅನುವು ಮಾಡಿಕೊಟ್ಟಿತಲ್ಲದೆ ಪ್ರದರ್ಶಕ ಕಲೆಗಳ ಅಧ್ಯಯನ, ವಿಶ್ಲೇಷಣೆಗೆ ಹೊಸ ಯಾಮ ಒದಗಿಸಿತು.

ಪ್ರದರ್ಶನ ಸಿದ್ಧಾಂತವು ಅಧ್ಯಯನದ ದಿಗಂತವನ್ನು ವಿಸ್ತರಿಸುವುದರಲ್ಲಿ ಯಶಸ್ವಿಯಾಯಿತು. ಹೆಚ್ಚಿನ ಪ್ರದರ್ಶನ ಅಧ್ಯಯನಗಳು ಮೌಖಿಕ ಸಂಪ್ರದಾಯ (ಶಾಬ್ದಿಕ ಸಂಪ್ರದಾಯ)ವನ್ನು ಗಮನದಲ್ಲಿರಿಸಿಕೊಂಡೇ ನಡೆದುವು. ಅಂದರೆ ಗತಿಶೀಲ ಸ್ವರೂಪದ ಶಾಬ್ದಿಕ ಕಲೆಗಳನ್ನೇ ಕುರಿತಾಗಿದ್ದುವು. ಜಾನಪದ ಘಟನೆಯೊಂದನ್ನು ಪರಿಶೀಲಿಸುತ್ತಾ ಅದಕ್ಕೆ ಸಂಬಂಧಿಸಿದ ಆವರಣ, ಸಾಮಾಜಿಕ ಸಂದರ್ಭ, ಪ್ರದರ್ಶನಕಾರ ಹಾಗೂ ಪ್ರೇಕ್ಷಕ ಎಲ್ಲವನ್ನೂ ಅಧ್ಯಯನದ ತೆಕ್ಕೆಗೆ ಒಳಪಡಿಸುತ್ತದೆ. ಶಾಬ್ದಿಕ ಕಲೆಯು ಸಂಗೀತ ಅಥವಾ ರಂಗಭೂಮಿಯಂತಹ ಪ್ರದರ್ಶಕ ಮಾಧ್ಯಮಗಳನ್ನು ಒಳಗೊಂಡಿದ್ದರೆ ಶಾಬ್ದಿಕ ಕಲೆ ಹಾಗೂ ಇತರ ಮಾಧ್ಯಮಗಳ ನಡುವಣ ಪರಸ್ಪರ ಸಂಬಂಧವನ್ನು ಪರಿಕಲ್ಪಿಸುವುದು ಅಧ್ಯಯನದ ಭಾಗವಾಗುತ್ತದೆ.

'ಒಂದು ಜಾನಪದ ಪ್ರಕಾರದ ನಿರೂಪಣಾ ವಿಧಾನ ಹಾಗೂ ಶೈಲೀಕರಣವು ಒಂದು ಸಂದರ್ಭದಲ್ಲಿ ತಳೆಯುವ ಸ್ವರೂಪವೇ ಪ್ರದರ್ಶನ. ಅದು ಏನು ಎಂಬುದನ್ನು ಹೇಳುವುದಿಲ್ಲ, ಬದಲು ಹೇಗೆ ಎಂಬುದನ್ನು ಹೇಳುತ್ತದೆ. ಅಂದರೆ ಸಂದರ್ಭ ಒಂದರಲ್ಲಿ ಪಠ್ಯವು ತಳೆಯುವ ರೂಪ (Black Burn 1986 ಪು 167-194) ಇಲ್ಲಿ ಪ್ರದರ್ಶನವೆಂದರೆ ಜೀವಂತ ನಿರೂಪಣ ವಿಧಾನ. ಅದು ಇನ್ನೊಮ್ಮೆ ಯಥಾವತ್ತಾದ ಪುನರಾವರ್ತನೆಯನ್ನು ಪಡೆಯಲಾರದು. ನಿರಂತರ ಹರಿಯುವಿಕೆಯಲ್ಲೇ ಅದರ ಅಸ್ತಿತ್ವ. ಸಮಾಜದಲ್ಲಿ ಪ್ರದರ್ಶಕ

ಹಾಗೂ ವ್ಯಕ್ತಿಯೊಬ್ಬನ ಉತ್ಪನ್ನ. ಜಾನಪದದ ಬಗೆಗೆ ನಮ್ಮಲ್ಲಿ ಅನೇಕರಿಗೆ ಕೆಲವೊಂದು ಆದರ್ಶೀಕೃತ ಕಲ್ಪನೆಗಳಿವೆ "ಜಾನಪದ ಎನ್ನುವುದು ಬದಲಾಗದ ಸ್ಥಾಯೀ ಹಾಗೂ ಆದರ್ಶೀಕೃತ ಪ್ರಕ್ರಿಯೆ. ಅದು ಕೆಲವೊಂದು ಜನಪದೀಯರ ಸಮಷ್ಟಿ ಉತ್ಪನ್ನ ಸಾಮೂಹಿಕ ಪ್ರಜ್ಞೆಯ ಫಲ. ಆದರೆ ಇಂತಹ ಪೂರ್ವಗ್ರಹೀತ ಆದರ್ಶೀಕೃತ ಆಲೋಚನೆಗಳನ್ನು ಪ್ರದರ್ಶನ ಅಧ್ಯಯನ ಬಳಸಿಕೊಳ್ಳುವುದಿಲ್ಲ."

ಪ್ರದರ್ಶನ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಕೆಲವೊಂದು ಪದಗಳನ್ನು ನಿರ್ವಚಿಸಬೇಕಾಗಿದೆ. ಮೌಖಿಕ ಕಾವ್ಯ ಸಂಪ್ರದಾಯವೆಂದರೆ ಮೌಖಿಕ ರೂಪದಲ್ಲಿ ಸಂಗ್ರಹಿಸಿರುವ ಕಾವ್ಯ ಪಠ್ಯವೆಂದಷ್ಟೆ ತಿಳಿಯದೆ ಕಾವ್ಯ ಪ್ರದರ್ಶನ ಸಂಪ್ರದಾಯ ಎಂದು ತಿಳಿಯಬೇಕು. ಮೌಖಿಕ ರೂಪದಲ್ಲಿ ಪ್ರಕಟವಾದ ಕಾವ್ಯದ ನೈಜ ರೂಪವೇ ನಮಗೆ ಮುಖ್ಯವಾಗುತ್ತದೆ. ಇದರ ಜತೆಗೆ ಅದು ಪ್ರದರ್ಶನಗೊಂಡ ಸಂದರ್ಭವನ್ನು ಗಮನಿಸಿ ದಾಖಲಿಸಿಕೊಳ್ಳಬೇಕಾಗಿದೆ. ಜನಪದ ಕಥಾ ನಿರೂಪಣಾ ಸಂಪ್ರದಾಯವೆಂದರೆ ಕತೆಯಷ್ಟೇ ಆಗಿರದೆ ಒಂದು ವಿಶಿಷ್ಟ ಸಂದರ್ಭದಲ್ಲಿ ಮೌಖಿಕ ರೂಪದಲ್ಲಿ ಪ್ರಕಟವಾದ ಯಥಾರೂಪ ಎಂಬುದನ್ನು ಗ್ರಹಿಸಬೇಕು. ಪ್ರದರ್ಶನ ಸಂಪ್ರದಾಯದೊಳಗೆ ಪ್ರತಿ ಪ್ರದರ್ಶನವೂ ಒಂದು ಪ್ರದರ್ಶನ ಘಟನೆ. ಪ್ರದರ್ಶನಕಾರರು ಪ್ರದರ್ಶನದ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ವಿನ್ಯಾಸವನ್ನು ಪ್ರದರ್ಶನ ವಿನ್ಯಾಸ (Performance configuration) ಎಂದು ಹೇಳಬಹುದು. ಪ್ರದರ್ಶನ ಸಂದರ್ಭ (Performance context)ವೆಂದರೆ ಭೌತಿಕ ಸಂದರ್ಭ ಹಾಗೂ ಸಾಮಾಜಿಕ ಸಂದರ್ಭ ಎರಡನ್ನು ಗಮನಿಸಬೇಕಾಗುತ್ತದೆ. ಪ್ರದರ್ಶನ ಸಿದ್ಧಾಂತದ ಪ್ರಕಾರ ಒಂದು ಪ್ರದರ್ಶನ ಬರಿಯ ನಿರೂಪಕನನ್ನು ಹೊಂದಿಲ್ಲ. ನಿರೂಪಣೆಯ ಸಂದರ್ಭ ಹಾಗೂ ಶ್ರೋತೃ ಬಳಗದಿಂದ ನಿಯಂತ್ರಿತವಾಗಿರುತ್ತದೆ. ಒಂದು ಪಠ್ಯ ಬರಿಯ ಶಾಬ್ದಿಕ ಪಠ್ಯದಲ್ಲಿ ಉಳಿದಾಗ ಪ್ರದರ್ಶನ ಸಂದರ್ಭದಲ್ಲಿ ಪಡೆಯಬಹುದಾದ ಅನೇಕ ಗುಣಾಂಶಗಳನ್ನು ಕಳೆದುಕೊಂಡಿರುತ್ತದೆ. "ಕಥೆ ಹೇಳುವ ಪ್ರದರ್ಶನಕಾರನ ಹಾವಭಾವಗಳು, ಧ್ವನಿಯ ಏರಿಳಿತಗಳು, ಪ್ರದರ್ಶನದ ಸಂದರ್ಭದಲ್ಲಿಯೇ ಆತ ಸೃಷ್ಟಿಸುವ ಅನೇಕ ಹೊಸ ಅಂಶಗಳು ಪಠ್ಯದಲ್ಲಿ ಕಾಣಿಸುವುದಿಲ್ಲ. ಶ್ರೋತೃಗಳೂ ಕೂಡಾ ಪ್ರದರ್ಶನಕಾರನ ಮೇಲೆ ಪರಿಣಾಮ ಉಂಟುಮಾಡಿ ಅವನ ಬೃಹತ್ ಪಠ್ಯ (Larges Text)ದಲ್ಲಿ ಬದಲಾವಣೆ ಮಾಡಿಕೊಳ್ಳಲು ಕಾರಣವಾಗುತ್ತದೆ. ಈ ದೃಷ್ಟಿಯಲ್ಲಿ ವಿಚಾರ ಮಾಡಿದಾಗ ಪ್ರದರ್ಶಕ ಸಿದ್ಧಾಂತವು ಜಾನಪದ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ ಎನ್ನಬಹುದು. "(ಶಂಕರನಾರಾಯಣ 1989"ಪು 87-103)

ಪ್ರದರ್ಶನ ಸಮೀಪನದ ವಿಶಿಷ್ಟತೆಯನ್ನು ಒಂದು ದೃಷ್ಟಾಂತದ ಮೂಲಕ ಸ್ಪಷ್ಟೀಕರಿಸಬಹುದು. ಸಾಮಾನ್ಯವಾಗಿ ಜನಪದ ಕತೆಯೊಂದರ ಅಧ್ಯಯನವೆಂದರೆ ಕತೆಯನ್ನು ನಿರೂಪಕನೊಬ್ಬನಿಂದ ಹೇಳಿಸಿ ಬರೆಯಿಸಿಕೊಂಡು ಅದಕ್ಕೊಂದು ತಲೆಬರಹ ಕೊಡುವುದು, ವರ್ಗಸೂಚಿ, ಆಶಯಸೂಚಿ ಗುರುತಿಸುವುದು-ಭೌಗೋಳಿಕವಾಗಿ ಕತೆಯ ಪಾಠಭೇದವನ್ನು ಗುರುತಿಸುವುದು- ವಿದ್ವಾಂಸನ ಕೆಲಸ. ಆದರೆ ಜನಪದ ಕತೆಯ ಆಧುನಿಕ

ಅಧ್ಯಯನ ಇಷ್ಟಕ್ಕೇ ಸೀಮಿತವಾಗುವುದಿಲ್ಲ. ಒಂದು ಕತೆಯನ್ನು ಅದು ಉತ್ಪನ್ನಗೊಂಡ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇರಿಸಿ ನೋಡಬೇಕಾಗುತ್ತದೆ. ಅದು ಮೂಡಿಬಂದ ಸಂದರ್ಭವನ್ನು ಗಮನಿಸಬೇಕಾಗುತ್ತದೆ.

ಜನಪದ ಕತೆಯನ್ನು ಪ್ರದರ್ಶನ ಪ್ರಕ್ರಿಯೆಯ ಎಲ್ಲ ವಿವರಗಳನ್ನು ಒಳಗೊಂಡಂತೆ ಹೀಗೆ ಅಧ್ಯಯನ ಮಾಡಬಹುದು:

1. ಕತೆ ಹೇಳುವವನ/ಳ ಸಾಮಾಜಿಕ, ಕೌಟುಂಬಿಕ, ವೃತ್ತಿ ಸಂಬಂಧಿ ಸನ್ನಿವೇಶಗಳ ವಿವರ. ಆಕೆ/ಆತ ಇತರರಿಂದ ಆ ಕತೆಯನ್ನು ಕೇಳಿಸಿಕೊಂಡುದರ ವಿವರ. ಸಂಗ್ರಾಹಕನು ನಿರೂಪಕನಿಂದ ಕತೆಯನ್ನು ದಾಖಲಿಸಿಕೊಂಡುದರ ಸಂದರ್ಭ, ಆಗ ಹಾಜರಿದ್ದ ಪ್ರೇಕ್ಷಕರ ವಿವರ, ಕತೆಯ ನಿರೂಪಕ ಹಾಗೂ ಕೇಳಿಸಿಕೊಂಡವರ ಸಂಬಂಧ ಅವರ ಪ್ರಾಯ, ಲಿಂಗಭೇದ, ಕತೆಯನ್ನು ಹೇಳಿಸಿದ ಕಾಲ, ಸನ್ನಿವೇಶ, ಸ್ಥಳಗಳ ವಿವರ ಇತ್ಯಾದಿ. ನಮಗಿಲ್ಲಿ ನಮ್ಮ ಸಾಮಾಜಿಕ ಕೌಟುಂಬಿಕ ಆವರಣದಲ್ಲಿ ಕತೆಯನ್ನು ಎಲ್ಲಿ ಹೇಗೆ ಹೇಳಲಾಗುತ್ತದೆ ಎನ್ನುವುದರ ತಾತ್ತ್ವಿಕ ವಿವರಣೆ ಬೇಕಾಗಿಲ್ಲ. ವಾಸ್ತವಿಕವಾಗಿ, ನಿರ್ದಿಷ್ಟ ಕತೆಯೊಂದು ಪ್ರವರ್ಶನಗೊಂಡ ವಿವರ ಬೇಕಾಗಿದೆ.

2. ಕತೆ ಹೇಳುವವರ ಮತ್ತು ಕೇಳುವವರ ಪರಸ್ಪರ ಸಂಬಂಧವನ್ನು ದಾಖಲಿಸಬೇಕು. ಕತೆ ಹೇಳುವವರನ್ನು ಪ್ರದರ್ಶಕನೆಂದೂ ಕತೆ ಕೇಳುವವರನ್ನು ಶ್ರೋತೃವೆಂದೂ ಹೇಳಬಹುದು. ಕತೆ ಹೇಳುವವರು ಮತ್ತು ಕೇಳುವವರು ಒಂದೇ ಮನೆಯವರೇ, ಹೊರಗಿನವರೇ, ಭಿನ್ನ ಜಾತಿಗೆ ಸೇರಿದವರೇ, ಅವರ ವಯಸ್ಸು, ಲಿಂಗ, ಆವರಣ ಎಲ್ಲವೂ ಪರಿಣಾಮ ಬೀರುತ್ತದೆ.

3. ಬೇರೆ ಬೇರೆ ಪ್ರದರ್ಶನಗಳ ಸಂದರ್ಭ, ಎದುರಿದ್ದ ಪ್ರೇಕ್ಷಕರಿಗೆ ಅನುಸರಿಸಿ ಪಠ್ಯದ ವಸ್ತುವಿವರ (Content) ಹಾಗೂ ಬಂಧ (Textuse)ಗಳಲ್ಲಿ ಸಾಕಷ್ಟು ಬದಲಾವಣೆ ಕಾಣಿಸುತ್ತದೆ. ಆದರೆ ಕತೆ ಉದ್ದೇಶ, ಆಶಯಗಳಲ್ಲಿ ಮಾರ್ಪಾಟು ಏರ್ಪಡುವುದಿಲ್ಲ.

4. ಕಥಾಕ್ರಿಯೆಯ ಚಾಲನೆಯ ಮೇಲೆ ಹೂಂಗುಟ್ಟುವ ಪ್ರಕ್ರಿಯೆ ಬೀರುವ ಪರಿಣಾಮವನ್ನು ವಿಶ್ಲೇಷಿಸಬಹುದು. ಕತೆ ಕೇಳುವವರು ಎಲ್ಲಿ ಹೂಂಗುಟ್ಟುತ್ತಾರೆ. ಎಲ್ಲಿ ಹೂಂಗುಟ್ಟಬೇಕು ಕತೆಯ ಹರಿವಿನಲ್ಲಿ ಅದರ ಪಾತ್ರ ಏನು ಎಂಬುದು ಗಮನಿಸತಕ್ಕ ಅಂಶ. ಸಾಮಾನ್ಯವಾಗಿ ಕಥಾನಿರೂಪಣೆಯ ಸಂದರ್ಭದಲ್ಲಿ ವಾಕ್ಯ ಅಥವಾ ವಾಕ್ಯಾರ್ಥ ಎಲ್ಲಿ ಕೊನೆಗೊಳ್ಳುತ್ತದೆ ಅಥವಾ ನಿರೂಪಕ/ಕಿ ತಾನು ಉಸಿರು ತೆಗೆದುಕೊಳ್ಳಲು ಸಣ್ಣ ವಿರಾಮವನ್ನು ಎಲ್ಲಿ ಕೊಡುತ್ತಾರೋ ಅಲ್ಲಿ ಹೂಂಗುಟ್ಟಲಾಗುತ್ತದೆ. ಈ ಉಸಿರ್ದಾಣದಲ್ಲಿ ಏರ್ಪಡುವ ಕಾಲ ವಿರಾಮ (time gap)ವನ್ನು ತುಂಬಿ ನಿರೂಪಣೆಯ ಗತಿ (rhythm) ಮುಂದುವರಿಯಲು ಇದು ಸಹಾಯವಾಗುತ್ತದೆ. ಸಂಗೀತದಲ್ಲಿ ಏಕತಾರಿ ಅಥವಾ ತಂಬೂರಿಯಂತಹ ಶ್ರುತಿವಾದ್ಯ ಈ ಕೆಲಸವನ್ನು ಮಾಡುತ್ತದೆ. ಇನ್ನು ಕೆಲವೊಮ್ಮೆ ಶ್ರಾವಕವರ್ಗ ಹಾಕುವ ಕೈಚಪ್ಪಾಳೆ, ತಾಳ ಹಾಕುವಿಕೆಯೂ, ಗಾಯಕನಲ್ಲಿ ಈ ಮೌನವನ್ನು

ತುಂಬುವುದುಂಟು. ಕಥಾ ನಿರೂಪಕರಿಗೆ ಈ ಹೊಂಗುಟ್ಟುವಿಕೆ ಕೇಳುಗರು ಎಚ್ಚರದಿಂದ ಕೇಳುತ್ತಿದ್ದಾರೆ ಎಂಬ ವಿಶ್ವಾಸವನ್ನು ಹುಟ್ಟಿಸುವುದರಿಂದ ಕಥಾಜಾಲನೆ ಸುಸೂತ್ರಗೊಳ್ಳುತ್ತದೆ.

ಪ್ರದರ್ಶನ ಸಿದ್ಧಾಂತವು ಸಂಪ್ರದಾಯದೊಳಗಿನ ಪ್ರದರ್ಶನ ಸಂಗತಿಯ ಒಂದು ಪಠ್ಯವನ್ನು ಸಂಗ್ರಹಿಸುವುದರಲ್ಲೇ ವಿರಮಿಸುವುದಿಲ್ಲ. ಜನಪದ ಕತೆಯಾದರೆ ಒಬ್ಬ ನಿರೂಪಕನಿಂದ ಒಂದು ಕತೆ ಹೇಳಿಸಿಕೊಂಡ ಕೂಡಲೇ ಕೆಲಸ ಮುಗಿಯಲಿಲ್ಲ. ಪ್ರದರ್ಶನ ಕಲೆ (Performing Arts) ಯಾದರೆ ಒಮ್ಮೆ ನೋಡಿದ ಮಾತ್ರಕ್ಕೆ ಅಥವಾ ದಾಖಲಿಸಿಕೊಂಡ ಕೂಡಲೇ ವಿದ್ವಾಂಸನೊಬ್ಬನ ಕೆಲಸ ಮುಗಿಯಲಿಲ್ಲ. ಪ್ರದರ್ಶನವೊಂದನ್ನು ಅದೇ ಸಂದರ್ಭದಲ್ಲಿ, ಅಥವಾ ಭಿನ್ನ ಸಂದರ್ಭದಲ್ಲಿ ಮತ್ತೆ ಮತ್ತೆ ನೋಡಿ ಪ್ರದರ್ಶನದಿಂದ ಪ್ರದರ್ಶನಕ್ಕೆ ಕಂಡುಬರುವ ವ್ಯತ್ಯಾಸವನ್ನು ಅರಿತುಕೊಳ್ಳುತ್ತದೆ.

ಸಾಮಾನ್ಯವಾಗಿ ಪ್ರದರ್ಶನವೊಂದರ ಮೇಲೆ ಪ್ರಭಾವ ಬೀರುವ ಕೆಲವೊಂದು ಸಂಗತಿಗಳನ್ನು ಹೀಗೆ ಅಡಕಗೊಳಿಸಬಹುದು:

1. ಭೌಗೋಳಿಕ ಸಂದರ್ಭ (Geographical context)

ಜನಪದ ಸಂಗತಿಯೊಂದರ ಪ್ರದರ್ಶನ ನಡೆದ ಭೌಗೋಳಿಕ ಪರಿಸರವೇ ಭೌಗೋಳಿಕ ಸಂದರ್ಭ. ಇಲ್ಲಿ ಬರಿಯ ಊರಿನ ಹೆಸರು ಹೇಳಿದರೆ ಸಾಕಾಗುವುದಿಲ್ಲ. ಊರು ಕೇರಿಗಳ ವಿವರ ನಗರಕ್ಕೆ ಇರುವ ದೂರ, ಕತೆ ಹೇಳುವ ಪ್ರದರ್ಶನವಾದರೆ ಅದು ಎಲ್ಲಿ ನಡೆಯಿತು. ಮನೆಯ ಒಳಗೆಯೇ, ಹೊರಗೆಯೇ, ಹೊರಗಾದರೆ ಅಂಗಳದಲ್ಲೇ, ಹೊಲ, ಹಾದಿಯಲ್ಲೇ, ದಾರಿಯಲ್ಲೇ ಇತ್ಯಾದಿ ಆವರಣದ ವಿವರಗಳಿರಬೇಕು.

2. ಸಾಮಾಜಿಕ ಸಂದರ್ಭ (Social context)

ಪ್ರದರ್ಶನಕಾರರ ಜಾತಿ, ವರ್ಗ ಬುಡಕಟ್ಟುಗಳ ವಿವರ, ಅವರ ಬಂಧುತ್ವ ವ್ಯವಸ್ಥೆಯ ವಿವರಣೆ ಇಲ್ಲಿ ಬಹಳ ಮುಖ್ಯವಾಗುತ್ತದೆ.

3. ಆರ್ಥಿಕ ಸಂದರ್ಭ (Economical context)

ಪ್ರದರ್ಶನದ ಎಲ್ಲ ಭಾಗಾಳುಗಳ ಆರ್ಥಿಕ ಸ್ಥಿತಿಗತಿ, ಪ್ರದರ್ಶನಕಾರರಿಗೆ ದೊರೆವ ಆರ್ಥಿಕ ಸವಲತ್ತುಗಳ, ಸಂಭಾವನೆ, ಪ್ರೇಕ್ಷಕ ವರ್ಗದವರಿಗೆ ಪ್ರವೇಶಕ್ಕೆ ಹಣ ವಸೂಲಿ ಮಾಡಿದ್ದಾರೆಯೇ, ಉಚಿತ ಪ್ರವೇಶವೇ ಇತ್ಯಾದಿ.

4. ಕಾಲದ ಸಂದರ್ಭ (Time and seasonal context)

ವಾರ್ಷಿಕ ಆವರ್ತನ - ಸುಗ್ಗಿಯ ಕಾಲ, ಮಳೆಗಾಲ, ಬೇಸಗೆ ಕಾಲ ಇತ್ಯಾದಿ. ದೈನಿಕ ಆವರ್ತನವಾದಲ್ಲಿ ರಾತ್ರೆ, ಹಗಲು, ಸಂಜೆ, ಮುಂಜಾವ ಇತ್ಯಾದಿ.

5. ಪ್ರೇಕ್ಷಕರು (Audience)

ಪ್ರದರ್ಶನವೊಂದನ್ನು ನೋಡುವ, ಕೇಳುವ, ವರ್ಗ, ಅವರ ಮನೋಧರ್ಮ, ಅವರ ಪ್ರತಿಕ್ರಿಯೆಯ ಸ್ವರೂಪ ಇತ್ಯಾದಿ.

6. ಪ್ರದರ್ಶನಕಾರ (Performer)

ಕಥಾ ನಿರೂಪಕ, ಗಾಯಕ, ನರ್ತಕ ವೇಷಧಾರಿ, ಆರಾಧನಾ ಪ್ರದರ್ಶನವಾದರೆ ದೈವಮಾಧ್ಯಮ, ಪೂಜಾರಿ ಇತ್ಯಾದಿ.

7. ಮಾಧ್ಯಮ (medium)

ಗದ್ಯ, ಪದ್ಯ ನಾಟಕ, ಗಪದ್ಯ ಇತ್ಯಾದಿ


8. ಪಠ್ಯ (Text)

ಪ್ರದರ್ಶನದ ಸಂದರ್ಭದಲ್ಲಿ ನಿರೂಪಣೆಗೊಂಡ ಶಾಬ್ದಿಕ ಪಠ್ಯವಷ್ಟೇ ಅಲ್ಲ ಬೃಹತ್ ಪಠ್ಯ (Larger Text)

9. ಅರ್ಥದ ಪದರು (Code of reference)

ಅರ್ಥದ ಸಂಕೇತಗಳು, ವ್ಯಂಗ್ಯಾರ್ಥ ಇತ್ಯಾದಿ.

ಮೇಲಿನ ಸಂಗತಿಗಳನ್ನು ಕೆಳಗಿನ ರೇಖಾ ಚಿತ್ರದಲ್ಲಿ ಹೀಗೆ ಅಡಕಗೊಳಿಸಬಹುದು.



ಮೇಲೆ ಹೇಳಿದ ಒಂಬತ್ತು ಅಂಶಗಳು ಪ್ರದರ್ಶನವೊಂದನ್ನು ನಿರ್ಧರಿಸುತ್ತದೆ. ಒಂದರಲ್ಲಿ ಬದಲಾವಣೆ ಕಾಣಿಸಿಕೊಂಡಾಗಲೂ ಅದರ ಪರಿಣಾಮ ಇಡಿಯ ಪ್ರದರ್ಶನದ ಮೇಲೆ ಆಗುತ್ತದೆ. ಪ್ರದರ್ಶನವೊಂದರ ರೂಪ ವಿನ್ಯಾಸದ ಮೇಲಷ್ಟೇ ಅಲ್ಲ, ಅದರ ಅರ್ಥ ಹಾಗೂ ಕಾರ್ಯದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಆದುದರಿಂದ ಪ್ರದರ್ಶನವೊಂದನ್ನು ಮತ್ತೆ ಮತ್ತೆ ನೋಡಿ ದಾಖಲಿಸಿಕೊಳ್ಳಬೇಕು. ಅಂದರೆ ಸಂದರ್ಭದ ಆವರ್ತನವನ್ನು ಗಮನಿಸಬೇಕು. ಈ ದೃಷ್ಟಿಯಿಂದಲೇ ಪ್ರದರ್ಶನ ಸಿದ್ಧಾಂತ ವಿಶಿಷ್ಟವೆನಿಸುತ್ತದೆ. ದಾಖಲಾತಿಕಾರ ತಾನು ಕಂಡುದನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ವಿವಿಧ ಮಾಧ್ಯಮಗಳ ಮೂಲಕ ದಾಖಲಿಸಿಕೊಳ್ಳಬೇಕು. ಅಥವಾ ಬಹುಮಂದಿ ಒಂದು ಪ್ರದರ್ಶನವನ್ನು ವಿಭಿನ್ನ ಮಾಧ್ಯಮಗಳಲ್ಲಿ ದಾಖಲಿಸಿಕೊಳ್ಳುವ ಪ್ರಯತ್ನ ನಡೆಸಬಹುದು.

ಪ್ರದರ್ಶನದ ಪೂರಕ ಅಂಶಗಳು

ಪಠ್ಯ:

ಪ್ರದರ್ಶನವೊಂದರ ಹಿಂದೆ ಕೆಲಸ ಮಾಡಿದ ಒಟ್ಟು ವ್ಯವಸ್ಥೆಯನ್ನೇ ಸಂದರ್ಭವೆಂದು ಪರಿಗಣಿಸಿ ಇಲ್ಲಿ ಪಠ್ಯ ಯಾವುದು? ಪಠ್ಯವೆಂದರೆ ನಾವು ಹಿಂದೆ ತಿಳಿದುಕೊಂಡಿದ್ದಂತೆ ಬರೆದಿರಿಸಿಕೊಂಡ, ಅಥವಾ ಕಿವಿಯಲ್ಲಿ ಕೇಳಿಸಿಕೊಂಡ ಹಾಡು, ಕಥೆ ಮಾತ್ರ ಅಲ್ಲ, ಅದು ಪ್ರದರ್ಶನವೊಂದರ ಭಾಗ ಅಷ್ಟೆ. ಇಡಿಯ ಪ್ರದರ್ಶನದ ಸ್ವರೂಪವನ್ನೇ ಪಠ್ಯ ಎಂದು ಸ್ವೀಕರಿಸಬೇಕಾಗುತ್ತದೆ. ಅದನ್ನೇ ಪ್ರದರ್ಶನವೊಂದರ ಬೃಹತ್ ಪಠ್ಯ ಅಥವಾ ಬೃಹತ್ ಶರೀರ ಎಂದು ಪರಿಗಣಿಸಬೇಕಾಗುತ್ತದೆ. ಅಂದರೆ ನಿರ್ದಿಷ್ಟ ಸಂದರ್ಭವೇ ಪ್ರದರ್ಶನ ಸಂದರ್ಭ ಆಗಿ ರೂಪುಗೊಳ್ಳುತ್ತದೆ. ಇಂತಹ ಹಲವು ಆವೃತ್ತಿಗಳ ಮೂಲಕ ಒಂದು ಪ್ರದರ್ಶನ ಘಟನೆಯ ಅರ್ಥವು ಹೊಮ್ಮುತ್ತದೆ. ಕ್ಷೇತ್ರಕಾರ್ಯಕರ್ತನೊಬ್ಬನು ಪ್ರದರ್ಶನವನ್ನು ನೋಡುತ್ತಾ ದಾಖಲಿಸಿಕೊಳ್ಳುತ್ತಾ ಹೋಗುತ್ತಿದ್ದಂತೆ ಪ್ರತಿಯೊಂದನ್ನು ಏಕೆ, ಏನು, ಯಾವಾಗ, ಎಲ್ಲಿ, ಯಾರು ಮತ್ತು ಹೇಗೆ ಎಂದು ತನ್ನನ್ನು ಪ್ರಶ್ನಿಸಿಕೊಳ್ಳುತ್ತಲೇ ಇರಬೇಕು.

ಈ ಹಿಂದೆ ಹೇಳಿದಂತೆ ಇಡಿಯ ಪ್ರದರ್ಶನ ಘಟನೆಯೇ ಪಠ್ಯವಾಗುತ್ತದೆ. ಇದು ಸಾಂಪ್ರದಾಯಕ ಪಠ್ಯ ಅಲ್ಲ. ಟೇಪ್ ರೆಕಾರ್ಡರ್ ಅಥವಾ ವಿಡಿಯೋ ಮೂಲಕ ದಾಖಲಿಸಿಕೊಂಡ ವಾಸ್ತವಿಕ ಪಠ್ಯ. ಹಾಗೆಂದು ಶಾಬ್ದಿಕ ಮಾಧ್ಯಮದಲ್ಲಿ ಪ್ರಸರಣಗೊಳ್ಳುವ ಲಿಖಿತರೂಪದಲ್ಲಿ ದೊರೆವ ಯಕ್ಷಗಾನ ಪ್ರಸಂಗದ ಹಾಡುಗಳು, ಮುದ್ರಣಗೊಂಡ ಸಂಪ್ರದಾಯದ ಹಾಡುಗಳು, ದೊಡ್ಡಾಟದ ಪ್ರಸಂಗಗಳು ಪಠ್ಯಗಳೇ ಆಗುತ್ತದೆ. ಆದರೆ ಇಂತಹ ಪಠ್ಯಗಳು ಅರ್ಥಪೂರ್ಣವೂ ಕ್ರಿಯಾತ್ಮಕವೂ ಆಗುವಂತಹದು ಪ್ರದರ್ಶನದ ಸಂದರ್ಭದಲ್ಲಿ ದಾಖಲಾದಾಗ, ಪ್ರದರ್ಶನವನ್ನು ಗಮನಿಸದೆ, ಪ್ರದರ್ಶನದಿಂದ ಬೇರ್ಪಡಿಸಿ ಬರೆದುಕೊಂಡ ಪಠ್ಯ ಜೀವಚ್ಛವ. ಏಕೆಂದರೆ ಜಾನಪದ ಘಟನೆಯ ಅರ್ಥ ಹುದುಗಿರುವುದೇ ಪ್ರದರ್ಶನದಲ್ಲಿ ಅಂದ ಮಾತ್ರಕ್ಕೆ ಪ್ರದರ್ಶನ ಅಧ್ಯಯನವು ಶಾಬ್ದಿಕ ಪಠ್ಯವನ್ನು ನಿರಾಕರಿಸುವುದಿಲ್ಲ. ವಿಭಿನ್ನ ದೃಷ್ಟಿಕೋನದಿಂದ ನೋಡುತ್ತದೆ.

ಸಂದರ್ಭ

ಸಂದರ್ಭವೆಂದರೆ ಕಾಲದ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವ ಮುಹೂರ್ತ ಎಂದಷ್ಟೇ ಅರ್ಥ ಅಲ್ಲ. ಪ್ರದರ್ಶನವೊಂದು ಅಸ್ತಿತ್ವ ಪಡೆಯುವ, ಸೂಕ್ತ ಸಾಮಾಜಿಕ ಸನ್ನಿವೇಶಗಳಿಗೆ ಸಂಬಂಧಿಸಿದ ವ್ಯಾಪಕ ವೀಕ್ಷಣೆಗಳ ಮೊತ್ತವೇ ಸಂದರ್ಭ. ಅದು ನಿರ್ದಿಷ್ಟ ಪ್ರಕಾರವು ನಿಜವಾಗಿ ಬಳಕೆಗೊಳ್ಳುವ ವಿಶಿಷ್ಟ ಸಾಮಾಜಿಕ ಸನ್ನಿವೇಶ (ರೈ.1985:84) ಪ್ರದರ್ಶನವೊಂದು ಅಸ್ತಿತ್ವ ಪಡೆದಿರುವ ಸಾಮಾಜಿಕ ಸನ್ನಿವೇಶ, ಪ್ರದರ್ಶನಕಾರರ ಆರ್ಥಿಕ, ಸಾಮಾಜಿಕ ಸಂಬಂಧ ಹಾಗೂ ಪ್ರದರ್ಶನದ ಭಾಗಾಳುಗಳಿಗೂ ಪ್ರೇಕ್ಷಕರಿಗೂ ಇರುವ ಸಂಬಂಧವನ್ನು ಹೇಳುತ್ತದೆ. ಪ್ರದರ್ಶನವೊಂದರ ಆವರಣಾತ್ಮಕ (Spatial) ಹಾಗೂ ಕಾಲಿಕ (temporal) ಸಂದರ್ಭವನ್ನು ಕುರಿತ ಅಧ್ಯಯನಕಾರನ ತಿಳುವಳಿಕೆಯು ಇದರಲ್ಲಿ ಒಳಗೊಳ್ಳುತ್ತದೆ.

ಬಂಧ

ನಿರ್ದಿಷ್ಟ ಪ್ರಕಾರವೊಂದರ ರಚನಾವಿನ್ಯಾಸದಲ್ಲಿ ಹಾಗೂ ರಂಗಭೂಮಿ ಮತ್ತು ಹಿಮ್ಮೇಳ ಮುಂತಾದ ವಿವಿಧ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಈ ಪದ ಬಳಕೆಯಾಗುತ್ತದೆ. ಮೌಖಿಕ ಪಠ್ಯ, ಸಂಗೀತ ಮಾಧ್ಯಮಗಳ ವಿಶ್ಲೇಷಣೆ, ಗುಣಧರ್ಮಗಳ ವಿವರಣೆ ಇದರಲ್ಲಿ ಅಡಕಗೊಳ್ಳುತ್ತದೆ. ಪಠ್ಯದ ಬಾಷೆ, ಭಾಷಾ ಬಳಕೆಯ ಸ್ವರೂಪವನ್ನು ಈ ಅಧ್ಯಯನ ಒಳಗೊಳ್ಳುತ್ತದೆ.

ಪ್ರದರ್ಶನಾವೃತ್ತ

ನಿರ್ದಿಷ್ಟ ಸಂಪ್ರದಾಯಕ್ಕೆ ಸೇರಿದ ಜಾನಪದ ಘಟನೆಯೊಂದರ ಹಲವಾರು ಪ್ರದರ್ಶನಗಳ ದಾಖಲಾತಿ ಹಾಗೂ ಅಧ್ಯಯನದ ಮೂಲಕ ಜಾನಪದ ಪ್ರಕಾರ (Genre)ದ ರೂಪವನ್ನು ನಿರ್ಧರಿಸಬಹುದು. ಪ್ರೇಕ್ಷಕರ ಗಮನ ಸೆಳೆಯುವುದರಲ್ಲಿ ಸಫಲ ಅಥವಾ, ವಿಫುಲವಾದುದರ ಮಾನದಂಡದಲ್ಲಿ 'ಉತ್ತಮ ಅಥವಾ ಕೆಟ್ಟ' ಪ್ರದರ್ಶನವೆಂಬ ನಿರ್ಧಾರಕ್ಕೆ ಬರಬಹುದಾಗುತ್ತದೆ.

ಪ್ರದರ್ಶನ ಸಿದ್ಧಾಂತ ಮತ್ತು ಪ್ರಕಾರ ವಿಮರ್ಶೆ

ಜಾನಪದದ ವಿವಿಧ ಪ್ರಕಾರಗಳ ಸ್ವರೂಪ, ಒಂದು ಪ್ರಕಾರಕ್ಕೂ ಇನ್ನೊಂದಕ್ಕೂ ಇರುವ ಸಂಬಂಧಗಳನ್ನು ತಿಳಿಯ ಹೇಳುವ ವಿಮರ್ಶೆಯೇ ಪ್ರಕಾರ ವಿಮರ್ಶೆ(Genre criticism).ಪ್ರಕಾರವೊಂದು ಪ್ರದರ್ಶನಗೊಂಡಾಗ ಸ್ಥಿರ ಪಠ್ಯ ರೂಪದ ಪ್ರಕಾರಗಳು ಯಾವ ಬಗೆಯ ಸ್ವರೂಪವನ್ನು ಪಡೆಯುತ್ತವೆ ಎನ್ನುವುದನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ಪ್ರದರ್ಶನ ಸಿದ್ಧಾಂತದ ಆಧಾರದ ಮೇಲೆ ಪ್ರದರ್ಶನ ಹಾಗೂ ಶ್ರೋತೃಗಳನ್ನು ಗಮನದಲ್ಲಿರಿಸಿಕೊಂಡು ರೋಜರ್ ಡಿ. ಅಬ್ರಹಾಂಸ್ ಅವರು ಜಾನಪದ ಪ್ರಕಾರಗಳನ್ನು ನಾಲ್ಕು ಬಗೆಗಳಲ್ಲಿ ವರ್ಗೀಕರಿಸಿದ್ದಾರೆ

1. ಸಂಭಾಷಣಾ ಪ್ರಕಾರಗಳು.
2. ಆಟ ಪ್ರಕಾರಗಳು
3. ಕಾಲ್ಪನಿಕ ಪ್ರಕಾರಗಳು
4. ಸ್ತಬ್ಧ ಪ್ರಕಾರಗಳು.

ಜನಪದ ಪ್ರಕಾರವೊಂದು ಭಿನ್ನ ಬಿನ್ನ ಸಂದರ್ಭದಲ್ಲಿ ಪ್ರದರ್ಶನಗೊಂಡಾಗ ಅದರ ರೂಪದಲ್ಲಿ ಬಹುರೂಪತೆ ಏರ್ಪಡುತ್ತದೆ. ಉದಾಹರಣೆಗೆ ತುಳುಪಾಡ್ದನವೊಂದು ನಾಟಿಗದ್ದೆಯಲ್ಲಿ ಪ್ರದರ್ಶನಗೊಂಡಾಗ ರೂಪುಗೊಳ್ಳುವ ಪಾಡ್ದನ ಪಠ್ಯಕ್ಕೂ, ಭೂತಕೋಲದ ಕಳದಲ್ಲಿ ದೈವಮಾಧ್ಯಮನಿಂದ ಮೂಡಿ ಬರುವ ಅದೇ ಪಾಡ್ದನದ ಪಠ್ಯಕ್ಕೂ ಸಾಕಷ್ಟು ವ್ಯತ್ಯಾಸ ಇದ್ದೇ ಇರುತ್ತದೆ. ಪ್ರದರ್ಶಕ ಹಾಗೂ ಶ್ರೋತೃ ಪ್ರೇಕ್ಷಕರ ನಡುವಣ ಸಂಬಂಧ ಹೆಚ್ಚಿದಷ್ಟೂ ಪ್ರದರ್ಶನದ ರೂಪದಲ್ಲಿ ಬದಲಾವಣೆ ಹೆಚ್ಚಾಗುತ್ತದೆ.

ಪ್ರದರ್ಶನ ಸಿದ್ಧಾಂತದ ಸವಾಲುಗಳು - ಮಿತಿಗಳು

ಜನಪದ ಪ್ರಕಾರ ಅಥವಾ ಘಟನೆಯು ಹೇಳುವ ಅರ್ಥವನ್ನು ಪ್ರದರ್ಶನದ ಮೂಲಕ ತಿಳಿಯುವ ಪ್ರಯತ್ನದಲ್ಲಿ ಒಂದು ಪ್ರದರ್ಶನವನ್ನು ನೋಡಿದರೆ ಅಥವಾ ದಾಖಲಿಸಿಕೊಂಡರೆ ಸಾಕಾಗುವುದಿಲ್ಲ. ಒಂದೇ ಪರಂಪರೆಗೆ ಸೇರಿದ ಪ್ರಕಾರವನ್ನು ಭಿನ್ನ ಭಿನ್ನ ಸಂದರ್ಭದಲ್ಲಿ ಮತ್ತೆ ಮತ್ತೆ ಗಮನಿಸಬೇಕಾಗುತ್ತದೆ. ಈ ತತ್ತ್ವದ ಪ್ರಕಾರ ಒಂದು ಪ್ರದರ್ಶನವನ್ನು ಕನಿಷ್ಟ ಎರಡು ಬಾರಿಯಾದರೂ ನೋಡಬೇಕಾಗುತ್ತದೆ. ಇಂದಿನ ಆಧುನಿಕ ತಾಂತ್ರಿಕ ಸೌಲಭ್ಯಗಳು ಲಭ್ಯವಿರುವ ಹಿನ್ನೆಲೆಯಲ್ಲಿ ಒಂದು ಜನಪದ ಪ್ರದರ್ಶನವನ್ನು ಬಹು ಮಾಧ್ಯಮಗಳಲ್ಲಿ ಕ್ಷೇತ್ರ ಕಾರ್ಯಕರ್ತರು ಗುಂಪಾಗಿ ಕಾರ್ಯ ನಿರ್ವಹಿಸುತ್ತಾರೆ. ಇದರಿಂದಾಗಿ ಒಬ್ಬನ ಕಣ್ಣಿಂದ ತಪ್ಪಿಹೋದ ಒಂದು ಮಾಹಿತಿ ಇನ್ನೊಬ್ಬನಲ್ಲಿ ದಾಖಲಾಗುವ ಸಾಧ್ಯತೆಯಿದೆ. ಆದರೆ ಇಂತಹ ಗುಂಪು ದಾಖಲಾತಿಯಲ್ಲಿ ತೀರಾ ವೈರುಧ್ಯದ ಮಾಹಿತಿಗಳು ಸೇರ್ಪಡೆಗೊಂಡು ವಿಶ್ಲೇಷಣೆಯಲ್ಲಿ ತೊಡಕಾಗುವ ಸಾಧ್ಯತೆಯೂ ಉಂಟು. ಹೀಗಾಗಿ ಈ ತತ್ತ್ವವನ್ನು ಒಪ್ಪಿಕೊಂಡ ಕ್ಷೇತ್ರಕಾರ್ಯಕರ್ತನೊಬ್ಬನು ಜನಪದ ಘಟನೆಯೊಂದರ ಬಗೆಗೆ ಧಿಡೀರ್ ತೀರ್ಮಾನ ಪ್ರಕಟಿಸುವಂತಿಲ್ಲ. ಬಹುದಿನಗಳ ಶ್ರಮ, ತಾಳ್ಮೆಯಲ್ಲಿ ಈ ಬಗೆಯ ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯ ಅಧ್ಯಯನ ಸಾಗಿ ಬರಬೇಕಾಗುತ್ತದೆ. ಇಲ್ಲವಾದರೆ ಪ್ರದರ್ಶನಕ್ಕೂ ಪ್ರಕಾರಕ್ಕೂ ಇರುವ ಸಂಬಂಧವನ್ನು ನಿರ್ಧರಿಸುವಲ್ಲಿ ತಪ್ಪು ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ.

ಇಷ್ಟೆಲ್ಲ ಗುಣ ವಿಶೇಷಗಳನ್ನು ಹೊಂದಿಯೂ ಈ ಪ್ರದರ್ಶನ ಸಿದ್ಧಾಂತ ಕೆಲವೊಂದು ಮಿತಿಯನ್ನು ಹೊಂದಿದೆ. ಈ ಸಿದ್ಧಾಂತ ಪ್ರದರ್ಶನವೊಂದರ ಅರ್ಥ ಹಾಗೂ ಕಾರ್ಯವನ್ನು ವಿವರಿಸುವುದಿಲ್ಲ. ಪ್ರತಿ ಸಂದರ್ಭದಲ್ಲೂ ಮೂಡಿ ಬರುವ ಪಠ್ಯವು ಒಂದು ಸ್ವತಂತ್ರ ಪಠ್ಯವಾಗಿರುತ್ತದೆ. ಇದು ಅಧ್ಯಯನದಲ್ಲಿ ಬಹಳ ಮಹತ್ವವಾಗಬಹುದು. ಈ ಧನಾತ್ಮಕ ಅಂಶವೇ ಕೆಲವೊಂದು ಸಂದರ್ಭದಲ್ಲಿ ಪ್ರದರ್ಶನದ ಮಿತಿಯೂ ಆಗುವ ಸಾಧ್ಯತೆ ಇದೆ.

ಪ್ರದರ್ಶನ ಅಧ್ಯಯನ ಒಂದು ಪ್ರದರ್ಶನದ ಮಾಹಿತಿಯನ್ನು ಹೇಳುವುದರಲ್ಲಿ ಸೋಲುತ್ತದೆ. ಭಾರತೀಯ ಸಂದರ್ಭದಲ್ಲಿ ಒಂದು ಪ್ರಕಾರಕ್ಕೆ ಸುದೀರ್ಘ ಪರಂಪರೆ ಇರುವುದರಿಂದ ಶುದ್ಧಾಂಗವಾಗಿ ಪ್ರದರ್ಶನ ತತ್ತ್ವವನ್ನು ಅನುಸರಿಸಿದಾಗ ಅನೇಕ ಮಾಹಿತಿಗಳು ಕೈಜಾರಿ ಹೋಗುವ ಸಾಧ್ಯತೆ ಇದೆ. ಅಮೇರಿಕದಂತಹ ದೇಶಕ್ಕೆ ಈ ಸಮೀಪನ ಸರಿಹೋಗಬಹುದು. ಆದರೆ ನಮ್ಮ ದೇಶಕ್ಕಲ್ಲ. ವಾಸ್ತವಿಕ ನೆಲೆಯಲ್ಲಿ ಜನಪದ ಪ್ರಕಾರವೊಂದರ ವರ್ತಮಾನದ ಅಧ್ಯಯನಕ್ಕೆ ಈ ಸಮೀಪನ ಅತ್ಯಂತ ಸೂಕ್ತವಾದುದು. ಆಗಿ ಹೋದ ಭೂತವನ್ನು ವೈಭವೀಕರಿಸದೆ ವರ್ತಮಾನ ಬದುಕನ್ನು ಪರಿಭಾವಿಸಿ ಅಧ್ಯಯನ ಮಾಡಬೇಕು ಎನ್ನುವ ಆಧುನಿಕ ಸಿದ್ಧಾಂತವಾದಿಗಳಿಗೆ ಪ್ರದರ್ಶನ ಸಿದ್ಧಾಂತ ಸೂಕ್ತವಾಗಬಹುದು. ಜಾನಪದ ಸಾಯುವುದಿಲ್ಲ, ಬದಲಾಗುತ್ತದೆ ಎನ್ನುವುದನ್ನು ಒಪ್ಪುವಂತಿದ್ದರೆ ಪ್ರದರ್ಶನ ಸಿದ್ಧಾಂತ ಅವರಿಗೆ ಅರ್ಥಪೂರ್ಣ ತಿಳಿವಳಿಕೆ ನೀಡುವುದು ಸಾಧ್ಯ.

ಟಿಪ್ಪಣಿ

1. ಜನಪದ ಕಥೆಯೊಂದನ್ನು ಭಿನ್ನ ಭಿನ್ನ ಸಂದರ್ಭದಲ್ಲಿ ದಾಖಲಿಸಿಕೊಂಡು ಏರ್ಪಡುವ ವಿವಿಧ ಪಠ್ಯವನ್ನು ವಿಶ್ಲೇಷಿಸಿದ ಮಾದರಿಗಾಗಿ ನೋಡಿ "ಪ್ರದರ್ಶನ ಸಿದ್ಧಾಂತದ ದೃಷ್ಟಿಯಿಂದ ಜನಪದ ಕತೆಯೊಂದರ ಅಧ್ಯಯನ" ಎ. ವಿ. ನಾವಡ ಪ್ರ. ಸಂಶೋಧನ ಡಾ. ಚಿದಾನಂದಮೂರ್ತಿ ಅಭಿನಂದನ ಗ್ರಂಥ ಬೆಂಗಳೂರು. 1991
2. ಒಂದು ಜಾನಪದ ಘಟನೆಯನ್ನು ಸಂಶೋಧನ ತಂಡವೊಂದು ಬಹುಮಾಧ್ಯಮಗಳ ಮೂಲಕ ದಾಖಲಿಸಿಕೊಂಡ ಬಗ್ಗೆ ವಿವರಗಳಿಗೆ ನೋಡಿ " ಕಾಡ್ಯ ನಾಟ:ಪಠ್ಯ ಮತ್ತು ಪ್ರದರ್ಶನ" ಎ. ವಿ. ನಾವಡ ಮತ್ತು ಗಾಯತ್ರಿ ನಾವಡ ಪ್ರ: ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಎಂ.ಜಿ.ಎಂ. ಕಾಲೇಜು ಆವರಣ ಉಡುಪಿ 1992.

ಪರಾಮರ್ಶನ ಗ್ರಂಥಗಳು

ಕನ್ನಡ

ಅಭಯ ಕುಮಾರ್1991

ಪ್ರದರ್ಶಕ ದೃಷ್ಟಿಕೋನದಲ್ಲಿ ಮುಗ್ಗೇರರ ಕೋಲತಿ

ಪ್ರ: 'ರಾಶಿ' ಜಾನಪದವನ್ನು ಕುರಿತ ಮಾಸಪ್ರತಿಕೆ ಸಂ:ಗಣನಾಥ ಎಕ್ಕಾರು ಅಂಚೆ ಎಕ್ಕಾರು ದ. ಕ.

ನಾವಡ :ಎ. ವಿ. 1991

ಪ್ರದರ್ಶನ ಸಿದ್ಧಾಂತದ ದೃಷ್ಟಿಯಲ್ಲಿ ಜನಪದ ಕತೆಯೊಂದರ ಅಧ್ಯಯನ:

ಸಂಶೋಧನೆ ಡಾ: ಚಿದಾನಂದಮೂರ್ತಿ ಅಭಿನಂದನ ಗ್ರಂಥ ಸಂಪಾದಕರು ಲಕ್ಷ್ಮಣ ತೆಲಗಾವಿ ಬೆಂಗಳೂರು.

ನಾವಡ ಎ. ವಿ. 1993

ನಾಗಮಂಡಲ:ಪ್ರದರ್ಶನ ಸಿದ್ಧಾಂತದ ದೃಷ್ಟಿಯಲ್ಲಿ

(ಜಾನಪದ ಸಮಾಲೋಚನ) ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.

ವಾಮನ ನಂದಾವರ 1992

ಪ್ರದರ್ಶನ ಸಿದ್ಧಾಂತ:-ಪ್ರ ಕವಿಮಾರ್ಗ ಸಂ:ವೀರಣ್ಣ ದಂಡೆ ಸರಸ್ವತಿ ಪುರಂ ಗುಲ್ಬರ್ಗಾ-5

ವಿವೇಕರೈ (ಡಾ) 1985

ಅನ್ವಯಿಕ ಜಾನಪದ :

ಮಂಗಳ ಗಂಗೋತ್ರಿ ಪ್ರಕಾಶನ ಮಂಗಳೂರು.

ಹಿರಿಯಣ್ಣ ಅಂಬಳಿಕೆ -1992

ಸೈದ್ಧಾಂತಿಕ ಜಾನಪದ:

ಪ್ರ : ಪ್ರಜ್ವಲ ಪ್ರಕಾಶನ ಮೈಸೂರು.

ಶಂಕರ ನಾರಾಯಣ ತೀ ನಂ ಡಾ 1989

ರಾಜಕೀಯ ಭಾಷಣಗಳು ಜಾನಪದ ಒಂದು ಪ್ರಕಾರವೆ?

ಪ್ರ: ಜಾನಪದ ಗಂಗೋತ್ರಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

BIBLIOGRAPHY

Beck, Brenda E. F. 1982. The Three Twins: The Telling of a South Indian Folk Epic. Bloomingtion: Indiana University Press.

Ben-Amos, Dan. '1972. "Toward A Definition of Folklore in Context". In A. Paredes & Richard Bauman (eds): Toward New Perspectives in Folklore. Austin: University of Texas press, pp. 2-15

Ben Amos, Dan, and Kenneth Goldstein. 1975. Folklore: Performance and Communication. The Hague:Mouton

Blackburn, Stuart H. 1981. "Oral performance: Narrative and Ritual in a Tamil Tradition. "Journal of American Folklore. 94:207-27

Blackburn, Stuart H. 1986. "Performance Markers in the interpretation of an Indian Story Type. " In Stuart H. Blackburn and A. K. Ramanujan, eds., Another Harmony: New Essays on the Folklore of India, Berkeley: University of California Press. pp 167-94

Blackburn, Stuart H. 1988. Birth Stories, Death Stories: Oral Performances in a Tamil Folk Tradition. Philadelphia: University of Pennsylvania Press.

Blackburn, Stuart H.; Peter J. Claus, Joyce Fleuckiger and Susan S. Wadley, 1989. Oral Epics in India. Berkely: University of California Press.

Claus, Peter J. 1975 " The Sirl Myth and Ritual: A mass possession Ritual of South India " Ethnology 14, 1:47-58

Claus, Peter J. 1989. " Behind the Text Performance and Ideology in a Tulu Oral Tradition". In Stuart Blackburn, Peter J. Claus, Joyce Fleuckiger and Susan Wadely, eds., Oral Epics in India. Berkeley: University of California Press. pp. 55-74

Dorson, Richard M. (ed)1972. Folklore and Folklife. Chicago: University of Chicago Press.

Dundes, Alan. '1975 Analytic Essays in Folklore. The Hague: Mouton.

Hymes, Dell. '1975. " Breakthrough into performance," In Folklore: Performance and Communication, ed. by Dan Ben-Amos and K. S. Goldstein. The Hegue:Mouton.

Wadley, Susan S. 1986. "The Katha of Sakat: Two Tellings". In Stuart H. Blackburn and A. K. Ramanujan (eds.) Another Harmony: New Essays on the Folklore of India Berkeley:University of California Press. pp. 195-232.

ಸೀತಿ ಬೆಟ್ಟದ ಭೈರವ ದೇವರು -ಒಂದು ಅಧ್ಯಯನ

- ಪಿ. ವಿ. ಕೃಷ್ಣಮೂರ್ತಿ

ಕೋಲಾರ ಜಿಲ್ಲೆಯಲ್ಲಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಒಂದು ವಿಶಿಷ್ಟಸ್ಥಳ ಸೀತಿಬೆಟ್ಟ. ಕೋಲಾರದ ವಾಯುವ್ಯಕ್ಕೆ ಸುಮಾರು 20 ಕಿ. ಮೀ. ಅಂತರದಲ್ಲಿರುವ ಈ ಸ್ಥಳದಲ್ಲಿ ಸುಮಾರು 60 ಕ್ಕೂ ಹೆಚ್ಚು ಶಿಲಾಶಾಸನಗಳಿದ್ದು ಅವುಗಳಲ್ಲಿ ಬಹಳಷ್ಟು ಶಾಸನಗಳು ಅಲ್ಲಿನ ಭೈರವದೇವರಿಗೇ ಸಂಬಂಧಿಸಿದವಾಗಿವೆ 'ಕ್ಷೇತ್ರಪಾಲ', 'ತ್ರಿಭುವನವಿಡಂಗ ಕ್ಷೇತ್ರಪಾಲ ಪಿಳ್ಳೆಯಾರ್', 'ತ್ರಿಭುವನ ಕ್ಷೇತ್ರಪಾಲ', 'ಭೈರವನಾಯನಾರ್', 'ಸೀಪತಿನಾಯನಾರ್', 'ಶ್ರೀಪತಿವೈರವ' - ಎಂದು ತಮಿಳು ಶಾಸನಗಳಲ್ಲೂ, 'ಭಯಿರವದೇವರು', 'ಬಯಿರೇದೇವರು' - ಎಂದು ಕನ್ನಡ ಶಾಸನಗಳಲ್ಲೂ, ಈ ದೈವವನ್ನು ಉಲ್ಲೇಖಿಸಲಾಗಿದೆ. ಸಾಮಾನ್ಯವಾಗಿ ಕ್ಷೇತ್ರಪಾಲ ಎಂಬ ಅಂಕಿತದಲ್ಲಿ ಶೈವದೇವಾಲಯಗಳ ಪರಿವಾರ ದೇವತೆಯಾಗಿ ಕಾಣಸಿಕೊಳ್ಳುವ ಹಾಗೂ ಕೆಲವು ಜೈನಕ್ಷೇತ್ರಗಳಲ್ಲಿ 'ಕ್ಷೇತ್ರಪಾಲ' ದೇವತೆಯೆಂದು ಹೆಸರನ್ನು ಪಡೆದಿರುವ ಭೈರವ ಬಿಂಬವು ಇಲ್ಲಿ ಪ್ರತ್ಯೇಕ ದೇಗುಲವನ್ನೇ ಪಡೆದು ಹೆಚ್ಚು ಪ್ರಖ್ಯಾತಿಯನ್ನು ಪಡೆದಿದೆ.

ಈ ಸ್ಥಳದ ಬಗ್ಗೆ ಕ್ರಿ. ಶ. 1874 ರಷ್ಟು ಹಿಂದೆಯೇ ಲೂಯಿರೈಸ್‌ರವರು ತಮ್ಮ ಮೈಸೂರು ಗೆಝೆಟಿಯರ್‌ನಲ್ಲಿ ಪ್ರಸ್ತಾಪಿಸಿರುತ್ತಾರೆ. ಕ್ರಿ. ಶ. 1910 ರ ಮೈಸೂರು ಪುರರಾತತ್ವ ಇಲಾಖೆಯ ವಾರ್ಷಿಕವರದಿಯಲ್ಲಿ ಮಾನ್ಯ ಆರ್. ನರಸಿಂಹಾಚಾರ್ಯರು ಮೊದಲಬಾರಿಗೆ ಈ ಸ್ಥಳದ ಬಗ್ಗೆ ಹಲವು ವಿವರಗಳನ್ನು ದಾಖಲಿಸಿದರು. ಅಲ್ಲದೆ ಅಲ್ಲಿನ ಸುಮಾರು 40 ಅಪ್ರಕಟಿತ ತಮಿಳು ಶಾಸನಗಳನ್ನು ಶೋಧಿಸಿದರು. ಅನಂತರದಲ್ಲಿ ಮಾನ್ಯ ಸಿ. ಹಯವದನರಾಯರು ತಾವು ಸಂಪಾದಿಸಿದ 'ಮೈಸೂರು ಗೆಝೆಟಿಯರ್' ಸಂಪುಟದಲ್ಲಿ ಆ ವಿವರಗಳನ್ನು ಬರೆದರು. ಆ ಮಾಹಿತಿಗಳೇ ಈವರೆಗೂ ಸೀತಿಬೆಟ್ಟದ ಬಗ್ಗೆ ಬಂದಿರುವ ಬರಹಗಳಲ್ಲಿ, ಅಂದರೆ ಕನ್ನಡ ವಿಶ್ವಕೋಶ, ಕರ್ನಾಟಕ ವಿಷಯ ವಿಶ್ವಕೋಶ, ಕೋಲಾರ ಜಿಲ್ಲೆಯ ಗೆಝೆಟಿಯರ್(1968), ಹಾಗೂ ಕ್ರಿ. ಶ. 1983ರಲ್ಲಿ ಪ್ರಕಟವಾದ ಕರ್ನಾಟಕ ರಾಜ್ಯ ಗೆಝೆಟಿಯರ್ ಸಂಪುಟಗಳು ಅಲ್ಲದೆ ಕ್ರಿ. ಶ. 1988ರಲ್ಲಿ ಪ್ರಕಟವಾಗಿರುವ ಸೀತಿ ಸ್ಥಳದ ಕ್ಷೇತ್ರ ಮಹಾತ್ಮೆಯ ಪುಸ್ತಿಕೆಯಲ್ಲಿಯೂ ಪುನರುಕ್ತವಾಗುತ್ತಾ ಬಂದಿದೆ. ಕ್ರಿ. ಶ. 1927 ಮತ್ತು 1935 ರ ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಈ ಬೆಟ್ಟದ ಬಗ್ಗೆ ಹೆಚ್ಚಿನ ವಿವರಗಳು ಪ್ರಕಟವಾಗಿದ್ದಾಗ್ಯೂ ಆ ವಿವರಗಳು ಮೇಲ್ಕಂಡ ಕೃತಿಗಳಲ್ಲಿ ಸೇರ್ಪಡೆಯಾಗಿರುವುದಿಲ್ಲ. ಕೋಲಾರ ಜಿಲ್ಲೆಯ ಎ. ಕ. ಸಂಪುಟ XVII (ಸಪ್ಲಿಮೆಂಟರಿ) ಕ್ರಿ. ಶ. 1965ರಲ್ಲಿ ಪ್ರಕಟವಾಗಿದ್ದು ಆ ಸಂಪುಟದಲ್ಲಿ ಹಿಂದೆ ಆರ್. ನರಸಿಂಹಾಚಾರ್ಯರು ಶೋಧಿಸಿದ್ದ ಸೀತಿ ಸ್ಥಳಕ್ಕೆ ಸೇರಿದ ಶಾಸನಗಳು ಪ್ರಕಟವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಈ ಕ್ಷೇತ್ರದ ಪರಿವೀಕ್ಷಣೆ ಮತ್ತು ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುವ ದೇವಾಲಯದ

ನಿರ್ಮಾಣ, ಪೂಜಾ ಕೈಂಕರ್ಯ, ಸ್ಥಾನಿಕರ ಪಾತ್ರ, ಹಿಂದೆ ಪ್ರಚಲಿತವಿದ್ದ ಆಚರಣೆ ಹಾಗೂ ಅದಕ್ಕೆ ಸಂಬಂಧಿಸಿದ ಐತಿಹ್ಯ ಪುರಾಣ ಇತ್ಯಾದಿಗಳ ಅವಲೋಕನ ಈ ಬರಹದ ಉದ್ದೇಶವಾಗಿದೆ.

ಅಷ್ಟೇನು ಎತ್ತರವಿಲ್ಲದ ಈ ಬೆಟ್ಟದ ತಪ್ಪಲಿನಲ್ಲಿ 'ಸೀತಿ' ಎಂಬ ಸಣ್ಣ ಗ್ರಾಮ ಹಾಗೂ ಜೀರ್ಣಸ್ಥಿತಿಯಲ್ಲಿರುವ ಹಲವು ಗುಡಿಗಳು, ಮಂಟಪಗಳು ಇವೆ. ಅವುಗಳಲ್ಲಿ ಒಂದಾದ ಜೋಗಿಗುಡಿಯ ಮುಂದೆ ಎರಡು ಸುಂದರವಾದ ವೀರಗಲ್ಲುಗಳಿವೆ. ಮತ್ತೊಂದು ವೀರಭದ್ರ ದೇವರಿಗೆ ಸೇರಿದ ಗುಡಿಯಾಗಿದ್ದು, ಅದರ ಮುಂದೆ ಒಂದು ದೀಪಸ್ತಂಭವಿದೆ. ಗರ್ಭಗೃಹದಲ್ಲಿ ವೀರಭದ್ರನ ಉಬ್ಬುಶಿಲ್ಪವು ಗುಡಿಯ ಅವಶೇಷಗಳ ಮಧ್ಯೆ ಸಿಕ್ಕಿಕೊಂಡಿದೆ. ಇವು ಬೆಟ್ಟದ ತಪ್ಪಲಿನಲ್ಲಿರುವ ಮುಖ್ಯ ಅವಶೇಷಗಳಾಗಿವೆ. ಬೆಟ್ಟದ ಮೇಲ್ಗಡೆ ಒಂದು ಕಾಲದಲ್ಲಿ ಕೋಟೆಯನ್ನೊಳಗೊಂಡ ಜನವಸತಿಯಿಂದ ಕೂಡಿದ್ದ ಗ್ರಾಮವೊಂದು ಇದ್ದುದರ ಕುರುಹುಗಳಿವೆ. ಅಂದರೆ ಶಾಸನೋಕ್ತವಾಗಿರುವಂತೆ 'ಸೀತಿ' ಗ್ರಾಮ ಬೆಟ್ಟದ ಮೇಲೆಯೇ ಇದ್ದಿತೆಂದು ಹೇಳಬಹುದಾಗಿದೆ. ಅಲ್ಲಿಗೆ ಹೋಗಲು ಅಲ್ಲಲ್ಲೇ ಮೆಟ್ಟಿಲುಗಳೂ, ತೋರಣಗಂಭಗಳೂ ಇವೆ . ಅಲ್ಲಿಯೇ ಸನಿಹದಲ್ಲಿ 10.5 ಮೀ x 3.6 ಮೀ ನಷ್ಟು ವಿಶಾಲವಾಗಿರುವ ಕಲ್ಲಾಸರೆಯಂತಹ ಗುಹಾರಚನೆಯಿದೆ. ಅದನ್ನು ಜನರು ಭೂಪತಮ್ಮನ ಗುಡಿಯೆಂದು ಕರೆಯುತ್ತಾರೆ. ಆ ಗುಹೆಯಲ್ಲಿ ವಿರೂಪಗೊಂಡಿರುವ ಮಣ್ಣಿನ ವಿಗ್ರಹಗಳಿವೆ.

[illegible]ಲ್ಲಿಯೇ ಈ ಸ್ಥಳದ ಮುಖ್ಯ ದೇ[illegible] ಶ್ರೀಪತೀಶ್ವರ ಮತ್ತು ಭೈರವರ ಗುಡಿಗಳು ದಕ್ಷಿಣಾಭಿಮುಖವಾಗಿವೆ. ಶ್ರೀಪತೀಶ್ವರ ದೇವಾಲಯದ ಗರ್ಭಗೃಹವು ಮೂಲತಃ ನೈಸರ್ಗಿಕ ಕಲ್ಲಾಸರೆಯ ತೆರನಾದ ಗುಹೆಯಾಗಿದ್ದು ಅದರ ಅಕ್ಕಪಕ್ಕಗಳಲ್ಲಿ ಗೋಡೆಗಳನ್ನು ಸೇರಿಸಿ ಗುಡಿಕಟ್ಟಿದ್ದಾರೆ. ಈ ಗುಹಾಲಯದ ಪೂರ್ವಕ್ಕೆ ಸುಂದರವಾದ ಭೈರವ ದೇವಾಲಯವನ್ನು ಶಿಲೆಯಿಂದ ಕಟ್ಟಿರುತ್ತಾರೆ. ಶ್ರೀಪತೀಶ್ವರ ದೇವಾಲಯದ ಎಡಕ್ಕೆ ಅಂದರೆ ಶ್ರೀಪತಿ ಮತ್ತು ಭೈರವ ದೇವಾಲಯಗಳ ಮಧ್ಯೆ ದೇವಿಯ ಚಿಕ್ಕಗುಡಿಯಿದ್ದು, ಚತುರ್ಭುಜವುಳ್ಳ ದೇವಿಯ ಮುಂದಿನ ಕೈಗಳು ಅಭಯ ಮತ್ತು ವರದ ಹಸ್ತಗಳಾಗಿವೆ. ಹಿಂದಿನ ಎರಡೂ ಕೈಗಳಲ್ಲಿ ಕಮಲಗಳನ್ನು ಬಿಡಿಸಲಾಗಿದೆ. ಶ್ರೀಪತೀಶ್ವರ ಗುಡಿಯ ಬಲಭಾಗದಲ್ಲಿ ಮಹಿಷಾಸುರಮರ್ದಿನಿ, ಗಣಪತಿಯರ ಚಿಕ್ಕ ಚಿಕ್ಕಗುಡಿಗಳಿವೆ. ಎಡಕ್ಕೆ ಷಣ್ಮುಖನ ಗುಡಿಯೂ ಇದೆ. ಭೈರವ ಗುಡಿಯ ಸೂರನ್ನೂ ಸೇರಿಸಿಕೊಂಡು, ಈ ಎಲ್ಲ ಸಣ್ಣ ಗುಡಿಗಳನ್ನು ಒಳಗೊಂಡಂತೆ ಒಂದು ವಿಶಾಲವಾದ ಪಾತಾಳಾಂಕಣವನ್ನು ಕಟ್ಟಲಾಗಿದ್ದು ಅದರ ಬದಿಯಲ್ಲಿ ವಸಂತ ಮಂಟಪವನ್ನು ಕಟ್ಟಲಾಗಿದೆ. ಇವುಗಳ ಮುಂದೆ 2 ಮೀx 5ಮೀ ಎತ್ತರದ ಮಹಾದ್ವಾರವಿದ್ದು ಅದು ವಿಜಯನಗರ ಕಾಲಕ್ಕೆ ಸೇರಿದುದಾಗಿದೆ.

---

* 'ಸೀತಿ' ಸ್ಥಳದ ನಾಮ ನಿಷ್ಪತ್ತಿಯ ಬಗ್ಗೆ ಇದೇ ಲೇಖಕರ ಲೇಖನ 'ಸೀತಿ': ಸೀತಿ ಬೆಟ್ಟದ ಭೂಸ್ಥಿತಿ ಮತ್ತು ಶಾಸನಗಳ ಹಿನ್ನೆಲೆಯಲ್ಲಿ-ಒಂದು ಅಧ್ಯಯನ, ಇತಿಹಾಸ ದರ್ಶನ, ಸಂ- 8 (1993) ಅನ್ನು ನೋಡಿ.

ಭೈರವ ದೇವಾಲಯದ ಎಡಕ್ಕೆ, ಅಂದರೆ ಪೂರ್ವಕ್ಕೆ ಸುಮಾರು 4 ಮೀಟರ್ ಚದರಳತೆಯ ಮಂಟಪ ರೀತಿಯ ರಚನೆಯಿದ್ದು ಅದು ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಅದರ ಬಹುಭಾಗ ಬಿದ್ದುಹೋಗಿದೆ. ಉಳಿದಿರುವ ಹೊರಗೋಡೆಯ ಫಲಕಗಳಲ್ಲಿ ಹಲವು ರೇಖಾಚಿತ್ರಗಳ ಕೆತ್ತನೆಗಳನ್ನು ಕಾಣಬಹುದು. ಆ ಮಂಟಪದ ಬಾಗಿಲಿನ ಬಲಗಡೆಗೆ ಹೊಂದಿಕೊಂಡಂತಿರುವ ಫಲಕದಲ್ಲಿ ಶಿವಲಿಂಗದ ಮೇಲೆ ಹಸುವೊಂದು ಹಾಲನ್ನು ಸುರಿಸುತ್ತಿರುವಂತೆ ಬಿಡಿಸಲಾಗಿದೆ. ಪಕ್ಕದಲ್ಲಿಯೇ ಕೌಪೀನಧಾರಿಯಾದ ಭೈರಾಗಿಯು ಕಿವಿಯುಂಗುರಗಳನ್ನು ಧರಿಸಿ ಬಲಗೈಯಲ್ಲಿ ದಂಡ, ಎಡಗಡೆ ಎಡತೋಳಿನಲ್ಲಿ ಜೋಳಿಗೆಯೊಂದು ನೇತಾಡುತ್ತಿದೆ. ತೃಟಿತವಾಗಿರುವ ತಮಿಳು ಶಾಸನ ಆ ಫಲಕದ ಮೇಲಿದೆ. ಬಾಗಿಲಿನ ಎಡಗಡೆಯ ಫಲಕದಲ್ಲಿ ಆನೆಯ ಚಿತ್ರವಿದ್ದು ಅದರ ಮೇಲೆ ಮಾವುತನೊಬ್ಬನು ಕುಳಿತಿದ್ದಾನೆ. ಈ ಚಿತ್ರಗಳ ಹೊರರೇಖೆ ಮನೋಹರವಾಗಿದ್ದು ಅವು ಒಂದು ವಿಶಿಷ್ಟ ರೀತಿಯ ಜೀವಕಳೆ ಮತ್ತು ಚಲನೆಯಿಂದ ಕೂಡಿವೆ. ಈ ಮಂಟಪದ ಛಾವಣಿಯ ಮೇಲ್ಭಾಗವು 22 ಸೆಂ. ಮೀ. x 15 ಸೆಂ. ಮೀ. x 5 ಸೆಂ. ಮೀ. ಅಳತೆಯ ಇಟ್ಟಿಗೆಗಳಿಂದ ಕೂಡಿದೆ. ಈ ವಾಸ್ತುರಚನೆಯು ಬಹುಮಟ್ಟಿಗೆ ಯತಿಗಳು ತಂಗುತ್ತಿದ್ದ ಸ್ಥಳ ಇಲ್ಲವೆ ಯಾಗಶಾಲೆ ಆಗಿರಬೇಕು ಎಂದು ತೋರುತ್ತದೆ.

ಭೈರವ ಆರಾಧನೆ : ಮೊದಲಿಗೆ ಭೈರವ ಆರಾಧನೆಗೆ ಕಾರಣವಾದ ಪೌರಾಣಿಕ ಹಿನ್ನೆಲೆಯನ್ನು ಅವಲೋಕಿಸಬಹುದಾಗಿದೆ.

ಸೀತಿಬೆಟ್ಟದಲ್ಲಿ ಬಹು ಪ್ರಾಚೀನ ಕಾಲದಲ್ಲೇ 'ಕ್ಷೇತ್ರಪಾಲ' ಎಂಬ ಹೆಸರಿನಲ್ಲಿ ಭೈರವನ ಉಪಾಸಕರು ಭೈರವ ಆರಾಧನೆಯನ್ನು ನಡೆಯಿಸುತ್ತಾ ಬಂದಿದ್ದಾರೆ. ಭೈರವನ ಉಪಾಸನೆ ಪುರಾತನ ಕಾಲದಿಂದಲೂ ನಡೆದು ಬಂದಿದೆ. ಇದಕ್ಕೆ ಪುರಾಣಗಳ ಆಧಾರ, ಉಪಾಸನೆಯ ಇತಿಹಾಸ, ಕೂಡ ಉಂಟು. ಶಿವನ ಪಂಚವಿಂಶತಿ ಲೀಲೆಗಳಲ್ಲೊಂದು ಕಾಲಭೈರವನ ಲೀಲೆ. ಶಿವನೇ ನಿತ್ಯಕರ್ತೃ, ಸರ್ವತಂತ್ರ ಸ್ವತಂತ್ರನೆಂದು ಸಾರಿದ ವೇದ ಮಹತ್ವ ಸ್ಥಾಪಿಸಲು ತಳೆದ ಭೈರವ ಸ್ವರೂಪ, ಈಶ್ವರನ ಲೀಲೆಗಳಲ್ಲೊಂದು. ಬ್ರಹ್ಮ ಪಂಚ ಮುಖನಾದ ಪರಮೇಶ್ವರನಿಗೆ ತಾನೇನು ಕಡಿಮೆ ಎಂಬಂತೆ ತನ್ನ ನಾಲ್ಕು ಮುಖಗಳ ಜೊತೆಗೆ ಮತ್ತೊಂದು ಮುಖವನ್ನು ಕಲ್ಪಿಸಿಕೊಂಡು ಶಿವನಿಗಿಂತ ಮಿಗಿಲೆಂದು ವಿಜೃಂಭಿಸುತ್ತಾನೆ. ಬ್ರಹ್ಮನ ಗರ್ವದ ನುಡಿಗಳನ್ನಾಲಿಸಿದ ಶಿವ, ಕಾಲಭೈರವನ ಆಕಾರ ತಳೆದು (ಕಪಾಲ ಧಾರಿಯಾಗಿ) ಅಹಂಕರಿಸಿ ನುಡಿದ ಬ್ರಹ್ಮನ ಶಿರವನ್ನು ತನ್ನ ಉಗುರಿನ ಕೊನೆಯಿಂದಲೇ ಚಿವುಟಿಹಾಕುತ್ತಾನೆ. ಮುಂದೆ ಭೈರವ ಸ್ವರೂಪಿಯಾದ ಶಿವ ಅಜ ಕಪಾಲವನ್ನು ಹಿಡಿದು ಗರ್ವಿತರ ನೆತ್ತರಿನಿಂದ ಅದನ್ನು ತೃಪ್ತಿಪಡಿಸುವುದಕ್ಕಾಗಿ ಪಣತೊಟ್ಟು ಭಿಕ್ಷೆಗೆ ಹೊರಡುತ್ತಾನೆ. ಶಿವ ವೈಕುಂಠಕ್ಕೆ ಬಂದಾಗ ವಿಷ್ಣು ಚಕ್ರದಿಂದ ತನ್ನ ಹಣೆಯನ್ನು ಸೀಳಿಕೊಂಡು, ಸುರಿದ ರಕ್ತದಿಂದ ಕಪಾಲವನ್ನು ತೃಪ್ತಿಪಡಿಸಲು ಪ್ರಯತ್ನಿಸಿದ, ಅದೆಲ್ಲವನ್ನು ಹೀರಿತು ಪಾತ್ರೆ. ವಿಷ್ಣು ನಿಶ್ಶಕ್ತನಾಗಿ ಕೆಳಕ್ಕೆ ಉರುಳಿಬಿದ್ದುಬಿಟ್ಟನು. ಶಿವನ ಕೃಪಾಕಟಾಕ್ಷದಿಂದ ವಿಷ್ಣು ಎಚ್ಚೆತ್ತು ಪರಶಿವನನ್ನು ಸ್ತುತಿಸುತ್ತಾನೆ. ಹೀಗೆ ಪರಮೇಶ್ವರ ಇಂದ್ರಾದಿ ಎಲ್ಲ ಅಮರರಿಗೂ ತಕ್ಕ ಅರಿವು ವಿವೇಕವನ್ನು ಕರುಣಿಸುತ್ತಾನೆ. ಈ ವಿವರ

ಕಾಲಬೈರವ ಲೀಲೆ, ಭಿಕ್ಷಾಟನ ಲೀಲೆಗಳಲ್ಲಿ ಕಂಡುಬರುವುದಲ್ಲದೆ ಶಿವಾಗಮ ಮತ್ತು ಶಿವಪುರಾಣಗಳಲ್ಲೂ ಈ ಲೀಲೆಯ ವರ್ಣನೆಗಳಿವೆ.

ಶಂಕರಚಾರ್ಯರ ಕಾಲಭೈರವಾಷ್ಟಕ ಕೃತಿಯಲ್ಲೂ, ಭೈರವನನ್ನು ವಿವಿಧವಾಗಿ ಸುತ್ತಿಸಿರುವುದು ಕಂಡುಬರುತ್ತದೆ.

ಈ ರೀತಿಯಾಗಿ ಪುರಾಣಾದಿಗಳಲ್ಲಿ ಭೈರವ ಭವ್ಯತೆ ಬಿಂಬಿತವಾಗಿರುವುದರಿಂದ ಕಾಲಾಂತರದಲ್ಲಿ ಭೈರವನ ಆರಾಧನೆಗೆ ಪ್ರಾಶಸ್ತ್ಯ ದೊರೆತು ಅಲ್ಲಲ್ಲೆ, ಪ್ರತ್ಯೇಕ ಆಲಯಗಳನ್ನೇ ಪಡೆದು ಪೂಜೆಗೊಳ್ಳುವುದಕ್ಕೆ ಕಾರಣವಾಗಿರಬೇಕೆಂದು ತೋರುತ್ತದೆ. ಸೀತಿಬೆಟ್ಟದಲ್ಲಿ ಸುಮಾರು ಕ್ರಿಸ್ತಶಕ ಹತ್ತನೆಯ ಶತಮಾನಕ್ಕೂ ಹಿಂದಿನಿಂದಲೂ ಭೈರವ ಆರಾಧನೆ ಅಸ್ತಿತ್ವದಲ್ಲಿದ್ದಿತೆಂದು ಹೇಳಲು ಅಲ್ಲಿನ ವಾಸ್ತುರಚನೆಗಳು ಹಾಗೂ ಶಾಸನಗಳು ಸಹಾಯಕವಾಗಿವೆ.

ಭೈರವ ದೇವಾಲಯ ಮತ್ತು ಭೈರವ ಮೂರ್ತಿ

ಸೀತಿಬೆಟ್ಟದ ಪ್ರಧಾನ ದೈವವಾದ ಭೈರವನ ದೇವಾಲಯವು ಶಿಲೆಯಿಂದ ನಿರ್ಮಿಸಿದ ಸುಂದರವಾದ ವಾಸ್ತುರಚನೆಯಾಗಿದೆ. ಹೊಯ್ಸಳರ ಅಂತಿಮ ಅವಧಿಗೆ ಸೇರಿದ ರಚನೆ ಇದೆಂದು ಡಾ. ಎಂ. ಹೆಚ್. ಕೃಷ್ಣರವರು ಅಭಿಪ್ರಾಯಪಟ್ಟಿರುತ್ತಾರೆ. ಈ ದೇವಾಲಯವು ಎರಡು ಅಡಿ ಎತ್ತರವುಳ್ಳ ಅಧಿಷ್ಠಾನದ ಮೇಲೆ ಕಟ್ಟಲಾಗಿದ್ದು ನಾಲ್ಕು ಕಪೋತುಗಳಿಂದ ಕೂಡಿದೆ. ಇದರ ಮೇಲಿನ ಭಿತ್ತಿಯ ಸುಂದರವಾಗಿ ಆಕಾರಗೊಳಿಸಿರುವ ಅಷ್ಟಭುಜಾಕೃತಿಯ ಗೋಡೆಗಂಭಗಳು ಕಮಲಾಕೃತಿಯ ಬೋದಿಗೆಗಳನ್ನು ಒಳಗೊಂಡಿವೆ. ಛಾವಣಿಯು ಚೂಪಾದ 'S' ಆಕಾರದ ಬಳಕುಗಳನ್ನು ಒಳಗೊಂಡಿದ್ದು ಕೀರ್ತಿಮುಖಗಳಿಂದ ಅಲಂಕೃತವಾಗಿದೆ. ಸೋಮಸೂತ್ರದ ಮೇಲಿನ ಗೂಡುಗಳು ಹಾಗೂ ಅವುಗಳ ಅಲಂಕಾರ ಅಚ್ಚು ಕಟ್ಟಾಗಿ ಆಕಾರಗೊಳಿಸಿದ್ದು, ಉತ್ತರ ಮತ್ತು ಪೂರ್ವಗೋಡೆಗಳಲ್ಲಿ ಭೈರವ, ಕಾರ್ತಿಕೇಯ, ದ್ವಾರದ ಸಮೀಪ, ಅಂದರೆ ದಕ್ಷಿಣ ಗೋಡೆಯಲ್ಲಿ ಪ್ರಾಯಶಃ ದೇವಾಲಯವನ್ನು ಕಟ್ಟಿಸಿದ ವ್ಯಕ್ತಿ ಮತ್ತು ಆತನ ಪತ್ನಿ ಹಾಗೂ ಗಣೇಶ ಮುಂತಾದ ಉಬ್ಬು ಶಿಲ್ಪಗಳಿಂದ ಅಲಂಕೃತವಾಗಿದೆ. ಗರ್ಭಗೃಹದ ಮೇಲೆ ಅಷ್ಟೇನು ಮಹತ್ವವಲ್ಲದ ಇಟ್ಟಿಗೆ ಮತ್ತು ಗಾರೆಗಳಿಂದ ರಚಿತವಾಗಿರುವ ಶಿಖರವಿದೆ. 6' X 4' ಪ್ರಮಾಣದ ನವರಂಗದ ಪ್ರವೇಶದ್ವಾರವು ಕರಿಯ ಕಲ್ಲಿನಿಂದ ರಚಿತವಾಗಿದೆ. ಇದು ಆವರ್ತರೇಖ ವಿನ್ಯಾಸ ಮತ್ತು ಹೂಗಳ ಅಲಂಕಾರಿಕ ಪಟ್ಟಿಕೆಗಳಿಂದ ಕೂಡಿದ್ದು, ಮೇಲ್ಪಟ್ಟಿಕೆಯ ಮಧ್ಯದಲ್ಲಿ ಸಿಂಹಮುಖವಿದೆ. ನವರಂಗದ ಕಂಭಗಳು ಕೂಡ ಕರಿಯ ಕಲ್ಲಿನವಾಗಿವೆ. ಅವುಗಳ ಕಾರ್ಯಕುಶಲತೆ ಉತ್ಕೃಷ್ಟವಾದುದಾಗಿದೆ. ನವರಂಗದ ಮೇಲ್ಛಾವಣಿ, ಮಟ್ಟಸವಾಗಿದ್ದು ಕೇಂದ್ರದಲ್ಲಿ ಉಮಾಮಹೇಶ್ವರ, ಸುತ್ತಲೂ ಅಷ್ಟ ದಿಕ್ಪಾಲಕರಿಂದ ಅಲಂಕೃತವಾಗಿರುವಂತೆ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ.

ನವರಂಗದಲ್ಲಿನ ಗೋಡೆಕಂಭಗಳು ಸ್ವಲ್ಪವೇ ಹೊರ ಚಾಚಿದ್ದು ಸಿಂಹದ ಬೆನ್ನಿನ ಮೇಲೆ ನಿಂತಿರುವಂತೆ ಬಿಡಿಸಲಾಗಿದೆ. ನಾಲ್ಕು ಗುಂಡಗಿರುವ ಗೋಡೆಕಂಭಗಳ ಹೊರತು ಶುಕನಾಶಿಯ ಬಗ್ಗೆ ಹೆಚ್ಚಿಗೆ ಹೇಳುವುದೇನೂ ಇಲ್ಲ. ಒಂದು ಚಿಕ್ಕ ಅಂತರಾಳ 5 X 5' ಪ್ರಮಾಣದ್ದಾಗಿದೆ. ಸುಮಾರು ಇಷ್ಟೇ ಅಳತೆಯ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ

ಉಬ್ಬುಶಿಲ್ಪವು ಭೈರವ ಮೂರ್ತಿಯದಾಗಿದೆ. ಈ ಬಿಂಬವು ನಾಲ್ಕು ಕೈಗಳನ್ನು ಹೊಂದಿದ್ದು, ತ್ರಿಶೂಲ, ಡಮರು, ಸರ್ಪ ಮತ್ತು ಭಿಕ್ಷಾಪಾತ್ರೆಗಳನ್ನು ಹೊಂದಿರುವಂತೆ ಬಿಡಿಸಲಾಗಿದೆ. ರುಂಡಮಾಲೆ ಕೊರಳಲ್ಲಿದೆ. ಸ್ಪಷ್ಟ ಹಾಗೂ ಸರಳವಾಗಿರುವ ಈ ಬಿಂಬವು ಮೂಲತಃ ಗಂಗರ ರಚನೆಯಾಗಿರುವಂತೆ ತೋರುತ್ತವೆ.

ಶಾಸನಗಳು ಮತ್ತು ದೇವಾಲಯದ ಪ್ರಾಚೀನತೆ

ಸೀತಿಬೆಟ್ಟವು ಕೈವಾರನಾಡಿನ ಸ್ಥಳವಾಗಿದ್ದಿತು. ಕೈವಾರನಾಡು ನೊಳಂಬವಾಡಿಯ ಭಾಗವಾಗಿದ್ದಿತು. ಚೋಳರ ಆಳ್ವಿಕೆಯ ಕಾಲದಲ್ಲಿ ಕೋಲಾರ ಜಿಲ್ಲೆಯ ನೊಳಂಬವಾಡಿ ಪ್ರದೇಶವನ್ನು ನಿಗರಿಲಿ ಚೋಳಮಂಡಲ ಎಂದು ಶಾಸನಗಳಲ್ಲಿ ಕರೆದಿದೆ. ಈ ಮಂಡಲದಲ್ಲಿ ಅಂತರ್ಗತವಾಗಿದ್ದ ಸೀತಿಬೆಟ್ಟಕ್ಕೆ, ದಕ್ಷಿಣದಲ್ಲಿ ಕುವಲಾಳನಾಡು, ಪಶ್ಚಿಮಕ್ಕೆ ನೊಣ್ಣುಂಗುಳಿ ನಾಡುಗಳಿದ್ದವು. ಭೌಗೋಳಿಕವಾಗಿ ಆಯಕಟ್ಟಿನ, ನೈಸರ್ಗಿಕ ಸೌಂದರ್ಯದ ಪರಿಸರದಲ್ಲಿದ್ದ ಸೀತಿಬೆಟ್ಟದ ಭೈರವದೇವರಿಗೆ ಈ ಮೊದಲೇ ಉಲ್ಲೇಖಿಸಿರುವಂತೆ ಸುಮಾರು 60ಕ್ಕೂ ಹೆಚ್ಚು ಶಿಲಾಶಾಸನಗಳು ನೇರ ಸಂಬಂಧವನ್ನು ಹೊಂದಿದ್ದು ಆ ದೇವರಿಗೆ ಸಂದ ಅನೇಕ ದಾನದತ್ತಿಗಳನ್ನು ಪ್ರಸ್ತಾಪಿಸುತ್ತವೆ. ಕ್ರಿ. ಶ. 1005ರ ರಾಜೇಂದ್ರ ಚೋಳನ ಶಾಸನವು ಶ್ರೀಪತೀಶ್ವರ ಗುಹೆಯ ಮುಂಚಾಚಿರುವ ಮೇಲ್ಚಾವಣಿಯ ಬಂಡೆಗಲ್ಲಿನ ಮೇಲೆ ಲಿಖಿತವಾಗಿದ್ದು ಕ್ಷೇತ್ರಪಾಲ ದೇವರಿಗೆ 1000 ಕುಳಿ ಪ್ರಮಾಣದ ಭೂಮಿಯನ್ನು ಅಧಿಕಾರಿಗಳಾದ ಗಂಡರಮಾಣಿಕ್ಯ ಬ್ರಹ್ಮಾಧಿರಾಜನ್, [illegible] ಮಾರಾಯನ್ ಮೊದಲಾದವರ ಸಮ್ಮುಖದಲ್ಲಿ ದತ್ತಿಬಿಟ್ಟ ವಿವರವನ್ನು ತಿಳಿಸುತ್ತದೆ. ಅನಂತರದಲ್ಲಿ ಕುಲತ್ತುಂಗ ಚೋಳನ ಕ್ರಿ. ಶ. 1071 ರ ಶಾಸನವು ಈಗಿನ ಭೈರವ ದೇವಾಲಯದ ಹಿಂಬದಿಯಲ್ಲಿರುವ ಬಂಡಿಗಲ್ಲಿನ ಮೇಲೆ ಕೊರೆದಿದ್ದು, ಸಾಕಷ್ಟು ತ್ರುಟಿತವಾಗಿದೆ. ಅದೇ ಕುಳತ್ತುಂಗ ಚೋಳನ ಇನ್ನೊಂದು ಶಾಸನದಲ್ಲಿ ಕುವಲಾಳ ನಾಡಿಗೆ ಸೇರಿದ ಸಾತ್ತನೂರಿನ ಒಡೆಯನಾದ ಶಾಂಡಿಲ್ಯಗೋತ್ರದ ವೀರಚೋಳ ಬ್ರಹ್ಮರಾಯನ್ ಎಂಬ ವೈಶ್ಯನು ಕ್ಷೇತ್ರಪಾಲದೇವರ ಪೀಠ ಮತ್ತು ಮಂಟಪಗಳನ್ನು ಜೀರ್ಣೋದ್ಧಾರ ಮಾಡಿಸಿದನೆಂದು ವಿವರ ಬಂದಿದೆ. ಅಂದರೆ ಆ ವೇಳೆಗಾಗಲೇ ಅಲ್ಲಿ ವಾಸ್ತುರಚನೆಯಿದ್ದು, ಅದು ಜೀರ್ಣಸ್ಥಿತಿಯಲ್ಲಿದ್ದಿರಬೇಕು. ಬಹುಶಃ ಆ ರಚನೆಗಳು ಇಟ್ಟಿಗೆ ಮತ್ತು ಮರದಿಂದ ನಿರ್ಮಿತವಾದುವಾಗಿರಬೇಕು. ಅಂದರೆ ಭೈರವದೇವರಿಗೆ ಶಿಲಾಮಯವಾದ ದೇಗುಲ ಆಗ್ಗೆ ರಚನೆಯಾಗಿರಲಿಕ್ಕಿಲ್ಲವೆಂದು ತೋರುತ್ತದೆ.

ಭೈರವ ದೇವಾಲಯದ ಯಾಗಶಾಲೆಯ ಪೂರ್ವದ ಹೊರಗೋಡೆಯ ಮೇಲಿರುವ ಕ್ರಿ.ಶ.1120 ರ ಶಾಸನವು ಹೊಯ್ಸಳ ವಿಷ್ಣುವರ್ಧನನದಾಗಿದ್ದು ಕೈವಾರದ ಚೋಳಗಾವುಂಡ ಮತ್ತು ಸೆಟ್ಟಿಗಾವುಂಡರು ಕ್ಷೇತ್ರಪಾಲದೇವರಿಗೆ ದತ್ತಿಯೊಂದನ್ನು ಬಿಟ್ಟಿರುತ್ತಾರೆ. ಕ್ರಿ. ಶ. 1177ರ ಶಾಸನವು ಮರೆಪುಕ್ಕರಾಮನ್‌ಸೆಟ್ಟಿ ಎಂಬುವನನ್ನು ಉಲ್ಲೇಖಿಸುತ್ತದೆ. ಅವನ ಮಗನು ಅಮೃತಪಡಿಗಾಗಿ ದತ್ತಿಬಿಟ್ಟಿದ್ದಾನೆ. ಅನಂತರ ಸುಮಾರು ಒಂದು ಶತಮಾನದವರೆಗೂ ಯಾವುದೇ ಶಾಸನ ಈ ಬೆಟ್ಟದಲ್ಲಿ ಕಂಡುಬರುತ್ತಿಲ್ಲ. ಇದಕ್ಕೆ ಕಾರಣವೇನು ಎಂಬುದು ಸ್ಪಷ್ಟವಾಗದಿದ್ದರೂ, ಈ

ಪ್ರದೇಶದಿಂದ ಚೋಳರನ್ನು ಹಿಮ್ಮೆಟ್ಟಿಸಿದ ಹೊಯ್ಸಳರು ವಾಸ್ತವವಾಗಿ ತಮ್ಮ ಆಳಿಕೆಯನ್ನು ಈ ಪ್ರದೇಶದಲ್ಲಿ ಸರಿಯಾಗಿ ಜಾರಿಗೊಳಿಸಿರಲಿಲ್ಲ. ಪ್ರಾಯಶಃ ಈ ಅರಾಜಕತೆಯ ಲಾಭವನ್ನು ಪಡದೇ 'ದುಷ್ಟರಾಧಿತ್ಯ' 'ರಾಜನಾರಾಯಣ' 'ಬ್ರಹ್ಮಾಧಿರಾಯ' ಮುಂತಾದ ಬಿರುದುಗಳನ್ನು ಪಡೆದಿದ್ದ ಗಂಗಪೆರುಮಾಳನು ಈ ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡಿದ್ದನೆಂದು ತೋರುತ್ತದೆ. ಮೂಲತಃ ಗಂಗ ಅರಸು ಮನೆತನಕ್ಕೆ ಸೇರಿರದವನಿರಬಹುದಾದ ಇವನ ಪೂರ್ವಜರಾದ ಗಂಡ ಮಾಣಿಕ್ಯಬ್ರಹ್ಮಾಧಿರಾಜ ಮುಂತಾದವರು ಚೋಳರ ಅಧಿಕಾರಗಳಾಗಿದ್ದರು.

ಕ್ರಿ. ಶ. 1275 ರಲ್ಲಿ ಶೆಲ್ವ ಗಂಗನ ಮಗ ಅಣ್ಣನ ಅಂಕಕಾರ, ದುಷ್ಟರಾಧಿತ್ಯ, ರಾಜನಾರಾಯಣ, ಬ್ರಹ್ಮಾಧಿರಾಜ ಎಂಬಿವೇ ಮೊದಲಾದ ಬಿರುದುಗಳನ್ನು ಹೊಂದಿದ್ದ ಕರಿಯಗಂಗ ಪೆರುಮಾಳ್ ಎಂಬುವವನು ಕ್ಷೇತ್ರಪಾಲ ದೇವರಿಗೆ ಮಂಟಪವನ್ನು ನಿರ್ಮಿಸಿ ಅದರ ನಿರ್ವಹಣೆಗೆ ಕೂಡ ದತ್ತಿಯನ್ನು ಬಿಟ್ಟಿರುವ ವಿವರ ಶಾಸನವೊಂದರಲ್ಲಿ ಬಂದಿದೆ. ಬಹುಮಟ್ಟಿಗೆ ಈ ಉಲ್ಲೇಖ ಈಗ ಇರುವ ಸುಂದರವಾದ ಭೈರವ ದೇವರ ಕಲ್ಲುದೇಗುಲದ ರಚನೆಯನ್ನು ಕುರಿತದ್ದೆ ಆಗಿರಬೇಕು. ವಾಸ್ತವವಾಗಿ ಇವರು ಹೊಯ್ಸಳರ ಅಧೀನರಾಗಿದ್ದರೂ ಕೂಡ ತಮ್ಮ ಶಾಸನಗಳಲ್ಲಿ ತಮ್ಮ ಮೇಲಿನ ಅಧಿರಾಜನ ಉಲ್ಲೇಖವಿಲ್ಲದೆಯೇ ಸರ್ವಸ್ವತಂತ್ರರೆಂಬಂತೆಯೇ ಆಡಳಿತ ನಡೆಯಿಸಿರುತ್ತಾರೆ. ವಿದ್ವಾಂಸರು ಇವರನ್ನು ತಮಿಳು ಗಂಗರೆಂದು ಗುರುತಿಸಿರುತ್ತಾರೆ. ಇವರಲ್ಲಿ ದುಷ್ಟರಾಧಿತ್ಯ, ರಾಜನಾರಾಯಣ ಬ್ರಹ್ಮಾಧಿರಾಯನ್, ಕೂತಾಣ್ಣುದೇವ, ಇಳವಂಜಿರಾಯನ ಮಗ ವಾಸುದೇವ, ಧರ್ಮಜಯನ್, ಶೆಲ್ವಗಂಗನ್, ಕರಿಯಗಂಗ ಪೆರುಮಾಳ್ ಮುಂತಾದವರು ಸೀತಿಯ ಭೈರವದೇವರಿಗೆ ತಮ್ಮ ಅಧೀನದಲ್ಲಿದ್ದ ಕೈವಾರನಾಡು, ಕುವಲಾಳನಾಡು ಮತ್ತು ನೊಣ್ಣುಂಗುಳಿನಾಡುಗಳಲ್ಲಿನ ಅನೇಕ ಗ್ರಾಮಗಳ ಭೂಮಿಕಾಣಿಗಳನ್ನೂ, ತೆರಿಗೆ ಸುಂಕಗಳನ್ನೂ ವಿಪುಲವಾಗಿ ದತ್ತಿನೀಡಿರುವ ಅಂಶ ಶಾಸನಗಳಿಂದ ತಿಳಿದು ಬರುತ್ತದೆ.

ಕ್ರಿ. ಶ. 1345 ರ ಶಾಸನವೊಂದು ಶರಣಪಿಳ್ಳೆಯ ಮಗ ಆದಿಮೂಲನೆಂಬುವವನು ಸೀಪತಿಯಲ್ಲಿನ ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೆಯಾರರ ದೇವಾಲಯದ ದಕ್ಷಿಣಕ್ಕೆ ಮೆಟ್ಟಿಲುಗಳನ್ನು ಮಾಡಿಸಿದನೆಂದು ತಿಳಿಸುತ್ತದೆ. ಮುಂದೆ ಈ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದ ವಿಜಯನಗರದ ಕರ್ಣಾಟಕಾಧೀಶರು ಈ ಪರಂಪರೆಯನ್ನು ಮುಂದುವರೆಸಿರುತ್ತಾರೆ.

ಸ್ಥಾನಿಕರ ಪಾತ್ರ

ಯಾವುದೇ ದೇವಾಲಯದ ಪ್ರಸಿದ್ಧಿಯ ಹಿಂದೆ ಸ್ಥಾನಿಕರ ಪಾತ್ರ ಮಹತ್ವದ್ದಾಗಿರುತ್ತದೆ. ಪ್ರಸ್ತುತ ಸೀತಿಬೆಟ್ಟದ ಭೈರವ ದೇವಾಲಯದಲ್ಲೂ ಕ್ರಿ. ಶ 14ನೇ ಶತಮಾನದ ಆಧಿಭಾಗದಿಂದ, ಶಾಸನಗಳಲ್ಲಿ ಸ್ಥಾನಿಕರ ಉಲ್ಲೇಖಗಳು ಕಂಡುಬರುತ್ತವೆ. ಉಮ್ಮೆಪಿಳ್ಳೆ, ಕರಿಯಪಿಳ್ಳೆ, ಶೆನ್ನಭಟ್ಟರ್, ನಾರಶನ್ನ ಕಾಳಶಿಯರ್ , ಸೊಣ್ಣಮತ್ತಿಯಣ್ಣ, ಸೋಮಾಣ್ಣೆ, ವೆಯ್ಯಣ್ಣ, ಅವ್ವಯಾಣ್ಣೆ, ಬಯಿರಯ್ಯ, ಗೂಳಯ್ಯ, ಚಂದವಟ್ಟ ನಂಜಪಜೀಯರ ಮಗ ಕಾಳಚಂಪಜೀಯ, ಏಚಂಣ, ಚೋಮಯ ಮುಂತಾದವರು

ಕಾಲದಿಂದ ಕಾಲಕ್ಕೆ ಸ್ಥಾನಿಕರಾಗಿ ಕಾರ್ಯ ನಿರ್ವಹಿಸಿರುವ ಅಂಶ ಶಾಸನಗಳಿಂದ ವ್ಯಕ್ತವಾಗುತ್ತದೆ. ಕ್ರಿ. ಶ 15 ನೇ ಶತಮಾನದ ಶಾಸನವೊಂದರಲ್ಲಿ 8 ಮಂದಿ ಸ್ಥಾನಿಕರಿದ್ದ, 16 ನೇ ಶತಮಾನದ ಇನ್ನೊಂದು ಶಾಸನದಲ್ಲಿ 28 ಮಂದಿ ಸ್ಥಾನಿಕರಿದ್ದ ವಿವರ ಬಂದಿದೆ.

ದೇವಸ್ಥಾನದ ಪರವಾಗಿ ದಾನಿಗಳಿಂದ ದಾನಗಳನ್ನು ಸ್ವೀಕರಿಸುವುದು ಸ್ಥಾನಿಕರ ಮುಖ್ಯ ಕಾರ್ಯಗಳಲ್ಲಿ ಒಂದಾಗಿದ್ದಿತು. ಹಣದ ಸ್ವರೂಪದ ದಾನವನ್ನು ಸ್ವೀಕರಿಸಿ ಶ್ರೀ ಭಂಡಾರದಲ್ಲಿ ಭದ್ರಪಡಿಸುವುದು. ಹೊಲಗದ್ದೆಗಳಾದರೆ ಅವುಗಳನ್ನು ಕೃಷಿಕರಿಗೆ ಗುತ್ತಿಗೆಯ ಆಧಾರದ ಮೇಲೆ ನೀಡಿ ಅವರಿಂದ ದೇವರ ಪಾಲನ್ನು ಹಣ ಇಲ್ಲವೆ ಉತ್ಪನ್ನ ರೂಪದಲ್ಲಿ ಸಂಗ್ರಹಿಸುವುದು. ತೆರಿಗೆಗಳಾದರೆ, ಅವನ್ನು ವಸೂಲು ಮಾಡಿ ಶ್ರೀಭಂಡಾರಕ್ಕೆ ಸೇರಿಸುವುದು ಇತ್ಯಾದಿ ಗುರುತರ ಕಾರ್ಯಗಳಲ್ಲದೆ, ದಾನಿಯು ಅಪೇಕ್ಷೆಪಟ್ಟಿರುವಂತೆ ಕಾಲಕಾಲಕ್ಕೆ ದೇವರಿಗೆ ಸಲ್ಲಬೇಕಾದ ಪೂಜಾಕೈಂಕರ್ಯಗಳನ್ನು ಕಟ್ಟುನಿಟ್ಟಾಗಿ ನಡೆಯಿಸಲು ಅಗತ್ಯವಾದ ಎಲ್ಲ ವ್ಯವಸ್ಥೆ ಮತ್ತು ಜವಾಬ್ದಾರಿ ಅವನ ಮೇಲೆ ಇರುತ್ತಿತ್ತು. ಸ್ಥಾನಿಕರ ಮೂಲಕ ದೇವಾಲಯದಲ್ಲಿ ನಡೆಯಬೇಕಾಗಿದ್ದ ತಿರುಪ್ಪಣಿ, ನಂದಾದೀವಿಗೆ, ಅಮೃತಪಡಿ, ಶಾತ್ತುಪಡಿ, ಉಚ್ಚಿ ಸನ್ನಿಯ ಪೂಜೆ (ಮಧ್ಯಾಹ್ನದ ಪೂಜೆ) ಅಧಿಕ ಪೂಜೆ, ಮಹಾನೈವೇದ್ಯ, ಜಾಗಟೆ, ಬಜಾವಣೆ, ಯಾಗಶಾಲೆಯ ನಿರ್ವಹಣೆ, ರಥೋತ್ಸವ ಮುಂತಾದ ಕೈಂಕರ್ಯಗಳ ಉಲ್ಲೇಖಗಳು ಇಲ್ಲಿನ ಶಾಸನಗಳಲ್ಲಿ ಉಕ್ತವಾಗಿದೆ.

ತಮ್ಮ ಅಧಿರಾಜ ಬಲ್ಲಾಳದೇವನ ಖಡ್ಗ ಮತ್ತು ತೋಳು ಹಾಗೂ ನಾಡಿಗೆ ಜಯವಾಗಲೆಂದೂ, ಮಹಾರಾಜ ನರಸಿಂಗರಾಯ ಹಾಗೂ ಮಹಾಮಂಡಲೇಶ್ವರ ತಿಮ್ಮಯ್ಯ ದೇವ ಅರಸುಗಳ ತಂದೆ ಚಿಕ್ಕತಿಮ್ಮರಾಜರಿಗೆ ಧರ್ಮವಾಗಬೇಕೆಂದೂ, ಆಚಾರ ಕಾಣಿಕೆಯಾಗಿ ಗದ್ದೆ ಖುಷ್ಕಿ ಭೂಮಿಗಳನ್ನು ಸರ್ವಮಾನ್ಯವಾಗಿಯೋ, ಸ್ಥಾನಮಾನ್ಯವಾಗಿಯೋ ಇಲ್ಲವೆ ಮಡಪುರಧರ್ಮವಾಗಿಯೋ ವಿಪುಲ ದತ್ತಿಗಳನ್ನು ಇಲ್ಲಿಯ ಸ್ಥಾನಿಕರು ಸ್ವೀಕರಿಸಿರುವುದು ಕಂಡುಬರುತ್ತದೆ.

ಸ್ಥಾನಿಕರು ದೇವಸ್ಥಾನದ ಪರವಾಗಿ ದಾನ ಸ್ವೀಕರಿಸುವುದಷ್ಟೇ ಅಲ್ಲದೆ ರಾಜ್ಯದ ಬೊಕ್ಕಸಕ್ಕೆ ಕಾವಲಕೂಲಿ, ಬೇಡಿಗೆ, ಕಾಣಿಕೆಗಳ ಮೇಲಿನ 28 ಹೊನ್ನು ಆದಾಯವನ್ನು ಸಲ್ಲಿಸುತ್ತಿದ್ದರೆಂಬ ಅಂಶ ಶಾಸನವೊಂದರಿಂದ ತಿಳಿದುಬರುತ್ತದೆ. ದತ್ತಿಯಾಗಿ ಬಂದಿದ್ದ ಸುತ್ತಮುತ್ತಲ ಅನೇಕ ಗ್ರಾಮಗಳಿಗೆ ಸೇರಿದ ಭೂಮಿಕಾಣೆಗಳನ್ನು ಅಭಿವೃದ್ಧಿಪಡಿಸಿ, ದೇವಾಲಯಕ್ಕೆ ಅಧಿಕ ಲಾಭ ಬರುವಂತೆ ಯೋಜಿಸುವ ಹೊಣೆಗಾರಿಕೆ ಸ್ಥಾನಿಕರ ಮೇಲೆ ಇರುತ್ತಿತ್ತು. ಅಂತಹ ಒಂದು ಸ್ಪಷ್ಟ ಉಲ್ಲೇಖ ಈ ಸ್ಥಳದ ಕ್ರಿ. ಶ. 1500 ರ ಶಾಸನವೊಂದರಲ್ಲಿ ಬಂದಿದೆ. ಚಿಂಜಿಮಲೆಯ ಗವುಂಡ ಚಿಮಿಜೀಯನ ಮಗ ಬಯಿಚಣ್ಣ, ತಮ್ಮ ಚೊಕ್ಕು ಮತ್ತು ಬಯಿಚು ಎಂಬುವ ಮೂವರಿಗೆ8 ಮಂದಿ ಸ್ಥಾನಿಕರು ಸೇರಿಸಿಹತ್ತಿಯ(ಸೀತಿಯ) ಓರಿಯ ಮುಳ್ಳುಕುಂಟೆಯ ಕೆಳಗೆ ಹೊಸದಾಗಿ ಕೆರೆಕಟ್ಟಿಸಿ, ತೂಬನಿಕ್ಕಿ, ಶೀಳೇರಿಯಲ್ಲಿ ಅಚ್ಚುಕಟ್ಟನ್ನು ಕಟ್ಟಿ, ತಿದ್ದಿದ ಗದ್ದೆಯ ಒಳಗೆ ದೇವರ ಭಂಡಾರಕ್ಕೆ ಎರಡು ಭಾಗ ಕೊಡುವುದು, ಉತ್ತಮ, ಮಧ್ಯಮ, ಅಧಮ ನೆಲನೆಲ್ಲ ಹಂಚಿಕೊಳ್ಳುವುದು, ಮಳೆ ಬಹಳವಾಗಿ ಕೆರೆತುಂಬಿ ಒಡೆದರೂ ಅದನ್ನು ಸರಿಪಡಿಸಿಕೊಂಡು ಮಾನ್ಯದ ಗದ್ದೆಗಳನ್ನು ಬಿತ್ತಿ ಬೆಳೆದುಕೊಂಬುದು ಎಂದು ಸ್ಥಾನಮಾನ್ಯ

ಪೂರ್ವಮರ್ಯಾದೆಯಲ್ಲಿ ಸ್ವಹಸ್ತದ ಒಪ್ಪ 'ಶ್ರೀ ಬಯಿರವ ದೇವರು ' ಎಂದು ದೇವರು ಹೆಸರಿನಲ್ಲಿಯೇ ದತ್ತಿ ಬಿಡಲಾಗಿರುವ ವಿಷಯ ಆ ಶಾಸನದಲ್ಲಿ ಬಂದಿದೆ.

ಕ್ರಿ. ಶ. 1393 ರ ಶಾಸನವು ಪ್ರಧಾನಿ, ನಾಡಗಾವುಂಡರು ಮುಂತಾದ ಅಧಿಕಾರಿಗಳು ಸೇರಿ ಶ್ರೀಪತಿಯ ಸ್ಥಾನತ್ತಾರರಾದ ಶೆನ್ನಭಟ್ಟಾರ್, ನಾರಶನ್ನ ಮೊದಲಾದವರ ಮೂಲಕ ಸೀತಿಯ ದೊಡ್ಡ ಕೆರೆಯ ದಕ್ಷಿಣ ಕೋಡಿಯಲ್ಲಿ ಎರಡು ಖಂಡುಗ ಭೂಮಿಯನ್ನು 8 ವರ್ಷಗಳ ಕಾಲ 13 ಹೊನ್ನಿಗೆ ಸರ್ವಮಾನ್ಯವಾಗಿ ಗುತ್ತುಗೆಗೆ ನೀಡಿರುವುದು ಕಂಡುಬರುತ್ತದೆ.

ದೇವಾಲಯದ ಅಭಿವೃದ್ಧಿ ಹಾಗೂ ದುರಸ್ತಿಯ ಕಾರ್ಯವನ್ನು ಸ್ಥಾನಿಕರು ನಿರ್ವಹಿಸುತ್ತಿದ್ದರು. ಅಧಿಕಾರಿ ತಿಪ್ಪರಸರ ಆಳಿಕೆಯ ಕಾಲದಲ್ಲಿ 28 ಮಂದಿ ಸ್ಥಾನಿಕರು ಸೇರಿ ಭೀಮೋಜ, ಕೆಂಪೋಜ, , ಭೈರೋಜ, ಕೂತೋಜ, ಭೈರು ಮುಂತಾದವರಿಗೆ ಪುತ್ರ ಪೌತ್ರ ಪಾರಂಪರ್ಯವಾಗಿ ಅನುಭವಿಸಲು ಹಲವು ದತ್ತಿಗಳನ್ನು ಬಿಟ್ಟಿರುವುದನ್ನು ಗಮನಿಸಿದರೆ, ಈ ಅಂಶ ದೃಢವಾಗುತ್ತದೆ. ಈ ರೀತಿಯಾಗಿ ಸ್ಥಾನಿಕರು ಇಡೀ ದೇವಾಲಯದ ಆಗುಹೋಗುಗಳಲ್ಲಿ ಗಮನಾರ್ಹ ಪಾತ್ರವಹಿಸುತ್ತಿದ್ದ ಅಂಶ ಈ ಸ್ಥಳದ ಶಾಸನಗಳಿಂದ ಮನಗಾಣಬಹುದಾಗಿದೆ.

ವಿಜಯನಗರದ ಅರಸರ ಸೇವೆ

ಕ್ರಿ. ಶ. 1466ರ ವೇಳೆಗೆ ಈ ದೇವರಿಗೆ ಸೇರಿದ್ದ ಅನೇಕ ದತ್ತಿಗಳು ಕೈತಪ್ಪಿ ಹೋಗಿದ್ದವೆಂದು ಕಾಣುತ್ತದೆ. ಆಗ ವಿಜಯನಗರದ ಅರಸು ಕಠಾರಿ ಸಾಳುವ ನರಸಿಂಹರಾಯನು 'ಪ್ರಾಕು ಪೂರ್ವದಲ್ಲಿ ರಾಜೇಂದ್ರ ಚೋಳನು ವೀರಬಲ್ಲಾಳನು ದೇವರ ನೈವೇದ್ಯ ಅಂಗರಂಗಭೋಗಗಳಿಗೆ ನೀಡಿದ್ದ, ದತ್ತಿಗಳು ಹಾವಳಿಕಾರರಿಂದ ತಪ್ಪಿಹೋಗಿದ್ದ ಗ್ರಾಮಗಳನ್ನು ಗ್ರಾಮಗಳಲ್ಲಿನ ಭೂಮಿಗಳನ್ನೂ ಮತ್ತೆ ಬಿಡಿಸಿ ಹಿಂದಿನಂತೆ ಪೂಜಾಕೈಂಕರ್ಯಗಳು ಕ್ರಮವಾಗಿ ಮುಂದುವರೆಯುವಂತೆ ಪುನಃ ಪ್ರತಿಷ್ಠಿಸಿದ ವಿವರ ಶಾಸನವೊಂದರಲ್ಲಿ ಬಂದಿದೆ. ಕ್ರಿ. ಶ. 1492 ರ ಅದೇ ಅರಸನ ಶಾಸನವೊಂದು 'ಬಯಿರವ ದೇವರ' ಫಾಲ್ಗುಣಕೋಸರ ತಿರುನಾಳನು ಹೊಸದಾಗಿ ಒಂಬತ್ತು ದಿನಗಳ ಕಾಲ ರಥೋತ್ಸವವನ್ನು ನಡೆಯಿಸಲು ವ್ಯವಸ್ಥೆ ಮಾಡಿರುವುದು ಕಂಡುಬರುತ್ತದೆ.

ವಿಜಯನಗರ ಕಾಲದ ಶಾಸನಗಳಲ್ಲಿ, ಮಧ್ಯಾಹ್ನದ ಅವಸರ (ಉಚ್ಚಿಸನ್ಧಿ)ಕ್ಕಾಗಿ ನಾಲ್ಕು ಹರಿವಾಣ ನೈವೇದ್ಯ, ಒಂದು ಹರಿವಾಣ ಪಾಯಸ, ಒಂದು ಹರಿವಾಣ ಅಪ್ಪ ಅಲ್ಲದೆ 212 ಜನ ಬ್ರಾಹ್ಮಣರಿಗೆ ಭೋಜನ ವ್ಯವಸ್ಥೆಗಾಗಿ ಛತ್ರವನ್ನು ಏರ್ಪಡಿಸಿದ್ದ ವಿವರ ಬಂದಿದೆ. ಅರ್ಚಕ, ದೇವಾಲಯದಲ್ಲಿ ಕೆಲಸಮಾಡುವ ಹೆಂಗಸು (ತೇವಾರಡಿಯಾಳ್ಕು) ದೇವದಾಸಿ (ವೆಳ್ಳಾಟ್ಟಿ) ಅವರುಗಳ ಪ್ರಸ್ತಾಪ ಅದೇ ಶಾಸನದಲ್ಲಿ ಬಂದಿದೆ.

ಹೀಗೆ ಈ ಬೆಟ್ಟದ ಭೈರವದೇವರು ಕ್ರಿ. ಶ. 10ನೇ ಶತಮಾನದಿಂದಲೂ ಕೈವಾರನಾಡು, ಕುವಲಾಳನಾಡು, ನೊಣ್ಬುಂಗಳಿ ನಾಡುಗಳಲ್ಲಿ ಹಚ್ಚು ಜನಪ್ರಿಯವಾಗಿದ್ದ ಅಂಶ ಖಚಿತಪಡುತ್ತದೆ. ಇಂದಿಗೂ ಈ ಪ್ರದೇಶದ ಜನರು ಭಯಭಕ್ತಿಗಳಿಂದ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಬಹುತೇಕ ಎಲ್ಲಾ ಜಾತಿಯ ಜನರೂ ಈ ದೇವರ

ಭಕ್ತರಿದ್ದಾರೆ. ವಿಶೇಷವಾಗಿ ಈ ಪ್ರದೇಶದ ಒಕ್ಕಲು ಮಕ್ಕಳಾದ ಮೊರಸು-ಒಕ್ಕಲಿಗ- ರೆಡ್ಡಿ ಜನಾಂಗದವರು ಹಿಂದೆ ಈ ದೇವರಿಗೆ ಬೆರಳನ್ನು ಕೊಡುತ್ತಿದ್ದ ಪದ್ಧತಿ ಇದ್ದಿತು. ಈ ರೀತಿ ಬೆರಳು ಕೊಡುವ ಪದ್ಧತಿಯನ್ನು ಈಗಲೂ ಸಾಂಪ್ರದಾಯಿಕವಾಗಿ ಆಚರಿಸಿ ಕೊಂಡುಬರುವವರನ್ನು ಬೆರಳುಕೊಡುವ ಒಕ್ಕಲಿಗರೆಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಕ್ರಿ. ಶ. 14 ನೇ ಶತಮಾನದ ಶಾಸನವೊಂದು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆಯೆಂಬ 1910 ರ ಎಂ. ಎ. ಆರ್. ಮುಂತಾದ ಕಡೆ ದಾಖಲಾಗಿರುವ ಹೇಳಿಕೆಗೆ ಸ್ಪಷ್ಟ ಆಧಾರವಿದ್ದಂತೆ ಕಾಣುತ್ತಿಲ್ಲ. KL 325 ನೇ ನಂಬರಿನ ಶಾಸನವು ತಚ್ಚನ್, ಕರುಮಾನ್, ತಟ್ಟಾನ್ ಅಂದರೆ ಚಿನ್ನದ ಕೆಲಸಗಾರ, ಕಬ್ಬಿಣದ ಕೆಲಸಗಾರ ಹಾಗೂ ಬಡಗಿಯರು 'ಸೀಪದಿ ನಾಯಸಾರ್ ತಿರುವಾಶಲಿಲ್ ವಿರಲ್ ಆರಿಸಿ'ಯನ್ನು ಈ ಮೂವರು ಮೂರು ಭಾಗಗಳಾಗಿ ಹಂಚಿಕೊಳ್ಳಬೇಕೆಂದು ಅದು ತಿಳಿಸುತ್ತದೆ. ಆದರೆ ಇದರ ಖಚಿತ ಅರ್ಥ ಸ್ಪಷ್ಟವಾಗುವುದಿಲ್ಲ. ಈ ಶಾಸನದ ಸಂಪಾದಕರು ಈ ಶಾಸನಕ್ಕೆ ಅರ್ಥ ಅಥವಾ ವಿವರಣೆ ನೀಡಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪ್ರಚಲಿತವಿರುವ ಮೋಹಿನಿ ಭಸ್ಮಾಸುರನ ಕತೆ ಈ ರೀತಿ ಇದೆ.

ಭಸ್ಮಾಸುರನು ಘೋರತಪಸ್ಸನ್ನು ಮಾಡಿ ಶಿವನನ್ನು ಮೆಚ್ಚಿಸಿ ತಾನು ಯಾರ ತಲೆಯ ಮೇಲೆ ಕೈಯಿಟ್ಟರೂ ಅವರು ತಕ್ಷಣ ಸುಟ್ಟು ಭಸ್ಮವಾಗಬೇಕೆಂಬ ವರವನ್ನು ಪಡೆದುಕೊಂಡನು. ಅದನ್ನು ಮೊದಲಿಗೆ ಶಿವನ ಮೇಲೆಯೇ ಪ್ರಯೋಗಿಸಲು ಮುಂದಾದಾಗ ಶಿವ ತಪ್ಪಿಸಿಕೊಂಡು ಹೊರಟು ಸೀತಿಬೆಟ್ಟದ ಸಮೀಪದ ಗೌತಮಮಹರ್ಷಿಗಳ ಆಶ್ರಮವನ್ನು ತಲುಪಿದನು. ಗೌತಮರ ಸಲಹೆಯಂತೆ ಶಿವನು ಅಲ್ಲಿಯೇ ಇದ್ದ ಗರ್ಭಗುಡಿಯಲ್ಲಿ ಅಡಗಿಕೊಂಡನು. ದಾರಿತಪ್ಪಿದ ಭಸ್ಮಾಸುರ, ಅಲ್ಲಿಯೇ ಸಮೀಪದಲ್ಲಿ ಹೊಲವನ್ನು ಉಳುತ್ತಿದ್ದ ರೈತನನ್ನು ವಿಚಾರಿಸಲಾಗಿ ಶಿವನು ಓಡಿಹೋದ ದಿಕ್ಕನ್ನು ಆತನು ತನ್ನ ತೋರುಬೆರಳಿನಿಂದ ತೋರಿಸಿದನು. ಅದೇ ಸಮಯಕ್ಕೆ ಸರಿಯಾಗಿ, ಶ್ರೀವಿಷ್ಣುವು ಮೋಹಿನಿ ರೂಪವನ್ನು ತಾಳಿ ಭಸ್ಮಾಸುರನ ಎದುರಿನಲ್ಲಿ ಕಾಣಿಸಿಕೊಂಡನು. ಮೋಹಿನಿಯ ರೂಪಕ್ಕೆ ಮಾರುಹೋದ ಭಸ್ಮಾಸುರನು ತನ್ನನ್ನು ವರಿಸುವಂತೆ ಬೇಡಿಕೊಂಡನು. ಅದಕ್ಕೆ ಮೋಹಿನಿ ತನ್ನಂತೆ ಅಸುರನೂ ನರ್ತಿಸುವಂತೆ ಷರತ್ತು ಹಾಕಿದಳು. ಅಂತೆಯೇ ಅವನು ಮೋಹಿನಿ ನರ್ತಿಸುವಂತೆಯೇ ನರ್ತಿಸುತ್ತಾ, ಮೋಹಿನಿ ತನ್ನ ತಲೆಯ ಮೇಲೆ ತನ್ನ ಕೈಯನಿಟ್ಟುಕೊಂಡಾಗ, ಅವನೂ ಹಾಗೇ ಮಾಡಿ ಸುಟ್ಟು ಭಸ್ಮವಾದ. ಈ ಸುದ್ದಿಯನ್ನು ವಿಷ್ಣು ಶಿವನಿಗೆ ತಿಳಿಸಲು, ಶಿವನಿಗೆ ಮೋಹಿನಿಯ ರೂಪವನ್ನು ನೋಡಬೇಕೆಂಬ ಆಸೆಯಾಗಿ ವಿಷ್ಣುವನ್ನು ಆ ರೂಪದಲ್ಲಿ ತನಗೆ ಕಾಣಿಸಿಕೊಳ್ಳಲು ಬೇಡಿಕೊಂಡನು. ಅಂತೆಯೆ ವಿಷ್ಣು ಮತ್ತೆ ಮೋಹಿನಿ ರೂಪವನ್ನು ತಾಳಿದನು. ಆಗ ಆ ರೂಪಕ್ಕೆ ಬೆರಗಾದ ಶಿವನು ಮೋಹಿನಿಯನ್ನು ಅಪ್ಪಿಕೊಂಡನು. ಈ ಅಪ್ಪುಗೆಯ ಪರಿಣಾಮವಾಗಿ ಕಾಲಭೈರವ ಅವತರಿಸಿದ. ಹೀಗೆ ಅವತರಿಸಿದ ಕಾಲಭೈರವನನ್ನು, ಶಿವ ಸೀತಿಬೆಟ್ಟದಲ್ಲಿ ನೆಲಸುವಂತೆ ಆಜ್ಞೆ ಮಾಡಿದನು. ಹಾಗೇ ಭಸ್ಮಾಸುರನಿಗೆ ತಾನು ಅವಿತುಕೊಂಡ ಎಡೆಯನ್ನು ತೋರಿಸಿದ ರೈತನ ಕೃತ್ಯಕ್ಕೆ ಅವನ

ತೋರಬೆರಳಿನ ಕೊನೆಯ ಭಾಗವನ್ನು ಅವನಿಂದ ಹಾಗೂ ಅವನ ಸಂತತಿಯವರಿಂದ ಪೂಜಾ ರೂಪವಾಗಿ ಸ್ವೀಕರಿಸುವಂತೆ ಆಜ್ಞೆಮಾಡಿದನು.

ಕೃಷಿಕಾರ್ಯಕ್ಕೆ ತೊಂದರೆಯಾಗುತ್ತಿದ್ದುದರಿಂದ ತೋರ ಬೆರಳಿಗೆ ಬದಲಾಗಿ ಕಿರುಬೆರಳು, ಕಾಲಾಂತರದಲ್ಲಿ ಗಂಡಸರಿಗೆ ಬದಲಾಗಿ ಹೆಂಗಸರ ಬೆರಳನ್ನು ದೇವರಿಗೆ ಅರ್ಪಿಸುವ ಪದ್ಧತಿ ಹತ್ತೊಂಬತ್ತನೆಯ ಶತಮಾನದ ಕೊನೆಕೊನೆಯವರೆಗೂ ಪ್ರಚಲಿತವಿದ್ದಿತಂತೆ. ಈ ರೀತಿ ಬೆರಳು ಕೊಡುವ ಪದ್ಧತಿಯನ್ನು ಈಗಲೂ ಸಾಂಪ್ರದಾಯಿಕವಾಗಿ ಕೈ ಬೆರಳಿಗೆ ಹೂವನ್ನು ಸುತ್ತಿ ಆ ಹೂವನ್ನು ಕೊಡುವುದರ ಮೂಲಕ ಸಾಂಕೇತಿಕವಾಗಿ ಆಚರಿಸಿಕೊಂಡು ಬರುವವರನ್ನು ಬೆರಳುಕೊಡುವ ಒಕ್ಕಲಿಗರೆಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತಿದೆ.

ಇನ್ನೊಂದು ದಂತ ಕಥೆಯ ಪ್ರಕಾರ: ಕಾಶೀವಾಸಿಯಾದ ಶಿವನು ಭಸ್ಮಾಸುರನಿಂದ ತಪ್ಪಿಸಿಕೊಂಡು ಸೀತಿಬೆಟ್ಟಕ್ಕೆ ಬಂದು ಸೇರಿಕೊಂಡನು. ಕ್ಷೇತ್ರಪಾಲನಾದ ಕಾಲಭೈರವಸ್ವಾಮಿಗೆ ಈ ವಿಷಯ ತಿಳಿದು ಆತನು ಕೂಡಲೆ ಸೀತಿಬೆಟ್ಟಕ್ಕೆ ಬಂದನು. ಕ್ಷೇತ್ರ ಪಾಲನನ್ನು ಕಂಡು ಶಿವನಿಗೆ ಸಂತೋಷವಾಯಿತು. ಆಗ ಶಿವನು ಕಾಲಭೈರವನನ್ನು ಸೀತಿಬೆಟ್ಟದಲ್ಲಿ ನೆಲಸುವಂತೆ ಮಾಡಿ ರೈತರ ಕುಲದೇವತೆಯಾಗಿ ಅವರನ್ನು ಕಾಪಾಡಿಕೊಂಡು ಬರಬೇಕೆಂದೂ ಹಾಗೇ ಮೊರಸು ಒಕ್ಕಲಿಗರ ಹಿರಿಯ ಮಗಳ ತೋರುಬೆರಳನ್ನು ಆಕೆಯ ಮದುವೆಯ ಸಂದರ್ಭದಲ್ಲಿ ಕಾಣಿಕೆಯಾಗಿ ಸ್ವೀಕರಿಸಬೇಕೆಂದೂ, ನನ್ನ ಅಂಶದಿಂದ ಅವತರಿಸಿದ ನಿನ್ನನ್ನು ಯಾರು ಅನನ್ಯ ಭಕ್ತಿಯಿಂದ ಪೂಜಿಸುತ್ತಾರೋ ಅವರ ಇಷ್ಟಾರ್ಥಗಳನ್ನು ತಪ್ಪದೆ ಈಡೇರಿಸುವಂತೆ ನಿಗದಿಪಡಿಸಿದನಂತೆ.

ಹೀಗೆ ಸೀತಿ ಬೆಟ್ಟದ ಭೈರವನೆಲೆಯು ಸುಮಾರು ಹತ್ತು ಶತಮಾನಕ್ಕೂ ಮಿಗಿಲಾದ ಪೌರಾಣಿಕ ಮತ್ತು ಚಾರಿತ್ರಕ ಹಿನ್ನಲೆಯನ್ನು ಪಡೆದು ಮಾನ್ಯವಾಗಿರುವುದು ಕಂಡುಬರುತ್ತದೆ.

* * * * *

ಜೈನ ಹಸ್ತಪ್ರತಿಕಾರರು

· ವೈ. ಸಿ. ಭಾನುಮತಿ.

ಕೈಬರಹದ ಪ್ರತಿಗಳನ್ನು ಹಸ್ತಪ್ರತಿಗಳೆಂದು, ಪ್ರತಿಯನ್ನು ಸಿದ್ಧಪಡಿಸಿದವರನ್ನು ಹಸ್ತಪ್ರತಿಕಾರರೆಂದು ಕರೆಯುವುದು ರೂಢಿ. ಮುದ್ರಣ ಪೂರ್ವದ ಸಾಹಿತ್ಯ ಸಂದರ್ಭದಲ್ಲಿ ಹಸ್ತಪ್ರತಿಗಳಿಗೆ ಮತ್ತು ಹಸ್ತಪ್ರತಿಕಾರರಿಗೆ ಮಹತ್ವದ ಸ್ಥಾನವಿದ್ದಿತು. ಪ್ರಾಚೀನ ಸಾಹಿತ್ಯದ ಅಮೂಲ್ಯ ಗ್ರಂಥರಾಶಿ ಉಳಿದುಬಂದಿರುವುದೆ ಹಸ್ತಪ್ರತಿಕಾರರಿಂದ. ಕವಿ ಕಾವ್ಯವನ್ನು ಸೃಷ್ಟಿಸಿದರ ಲಿಪಿಕಾರರು ಆ ಕಾವ್ಯವನ್ನು ಪ್ರತಿಮಾಡಿ ಪೋಷಿಸಿದರು. ಆ ಕಾರಣವಾಗಿಯೆ ಪ್ರತಿಗಳ ಪ್ರತಿಗಳನ್ನು ಪುತ್ರಿಕೆಗಳೆಂದು ಕರೆದಿರುವುದು. ಎಚ್. ದೇವೀರಪ್ಪ ಅವರ ಮಾತಿನಲ್ಲಿ ಹೇಳುವುದಾದರೆ "ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು." ಹೀಗೆ ಒಂದು ಪ್ರತಿಯಿಂದ ಮತ್ತೊಂದು ಪ್ರತಿ ಹುಟ್ಟಿಕೊಳ್ಳುತ್ತ ಕಾಲ ದೇಶಗಳನ್ನು ದಾಟಿ ಒಂದು ಕೃತಿ ಜೀವಂತವಾಗಿ ಉಳಿದುಬರಲು ಸಾಧ್ಯವಾದದ್ದು ಹಸ್ತಪ್ರತಿಕಾರರಿಂದ ಎಂಬುದು ನಿಸ್ಸಂಶಯ.

ಪ್ರಾಚೀನ ಭಾರತೀಯ ಸಾಹಿತ್ಯವೆಲ್ಲ ಧಾರ್ಮಿಕ ಸಾಹಿತ್ಯವೆಂಬುದು ಸರ್ವವಿದಿತ. ಧರ್ಮ ಮತ್ತು ಸಾಹಿತ್ಯಕ್ಕೆ ಗಾಢವಾದ ಸಂಬಂಧವಿದ್ದಂಥ ಕಾಲದಲ್ಲಿ ಹಸ್ತಪ್ರತಿಕಾರರು ತಾವು ನಂಬಿದ ನೆಚ್ಚಿದ ಅನುಸರಿಸಿದ ಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ಮಾತ್ರ ಪ್ರತಿಮಾಡುತ್ತಿದ್ದ ಸಂಗತಿ ಸಾಮಾನ್ಯವೂ ಸಹಜವೂ ಆಗಿತ್ತು. ವೀರಶೈವ ಹಸ್ತಪ್ರತಿಕಾರರು ವೀರಶೈವ ಕೃತಿಗಳನ್ನು ವೈದಿಕ ಹಸ್ತಪ್ರತಿಕಾರರು ವೈದಿಕ ಕೃತಿಗಳನ್ನು ಮಾಡಿದಂತೆ ಜೈನಹಸ್ತ ಪ್ರತಿಕಾರರು ಜೈನಧರ್ಮದ ಕೃತಿಗಳನ್ನು ಪ್ರತಿಮಾಡಿದ್ದಾರೆ. ಈ ಮಾತಿಗೆ ಅಪವಾದಗಳು ಇಲ್ಲದಿಲ್ಲ. ಪ್ರಸ್ತುತ ಜೈನ ಹಸ್ತಪ್ರತಿಕಾರರು ಪ್ರತಿ ಮಾಡಿದ ಹಸ್ತಪ್ರತಿಗಳು ಮತ್ತು ಅವುಗಳನ್ನು ನಕಲು ಮಾಡುವ ಹಿಂದಿದ್ದ ಅವರ ಮನೋಧರ್ಮ ಆಶಯಗಳನ್ನು ಕುರಿತು ವಿವೇಚಿಸಿದೆ.

ಪ್ರತಿಯೊಬ್ಬ ಲಿಪಿಕಾರನೂ ತಾನು ಕೈಗೆತ್ತಿಕೊಂಡ ಗ್ರಂಥವನ್ನು ಪ್ರತಿಮಾಡುವ ಮೊದಲು ಇಷ್ಟದೈವ ಆರಾಧ್ಯದೈವ ಮತ್ತು ಗುರುಗಳನ್ನು ಸ್ತುತಿಸುವುದು ವಾಡಿಕೆ. "ಶ್ರೀಮತ್ಪಂಚ ಪರಮೇಷ್ಟಿಭ್ಯೋ ನಮಃ" "ಶ್ರೀ ಮತ್ಪಂಚ ಗುರುಭ್ಯೋ ನಮಃ" "ಶ್ರೀ ವೀತರಾಗಾಯ ನಮಃ" ಇವುಗಳಲ್ಲಿ ಯಾವೊಂದು ಸ್ತುತಿ ಇದ್ದರೂ ಅದೊಂದು ಜೈನಗ್ರಂಥವೆಂಬುದು ಖಚಿತ. ಕೆ. ಎ. 210 ಸಂಖ್ಯೆಯ ಹಸ್ತಪ್ರತಿಯಲ್ಲಿ "ಶ್ರೀಮತ್ಕನಕಾಚಲದ ಗುಂಡಿನ ಬ್ರಹ್ಮದೇವಾಯ ನಮಃ" ಎಂದಿದೆ. ಇದು ಮಲಯೂರಿನ ಕನಕಗಿರಿಯ ಗುಂಡಿನ ಬ್ರಹ್ಮದೇವರನ್ನು ಕುರಿತದ್ದಾಗಿದೆ. ಕೆ 8 ಸಂಖ್ಯೆಯ ಪ್ರತಿಯಲ್ಲಿ "ಶ್ರೀ

ಈ ಲೇಖನವನ್ನು ಸಿದ್ಧಪಡಿಸಲು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಪ್ರತಿಗಳನ್ನು ಮಾತ್ರ ಬಳಸಿಕೊಂಡಿದೆ.

ವಾಸುಪೂಜ್ಯಾಯ ನಮಃ ಶ್ರೀ ಮದ್ವಿಜಯಕೀರ್ತಿ ಮುನಯೇ ನಮಃ" ಎಂಬ ಸ್ತುತಿಗಳು ಕಂಡುಬರುತ್ತವೆ. ವೈದ್ಯ ಸಂಗ್ರಹದ ಕೆ 1727 ಸಂಖ್ಯೆಯ ಪ್ರತಿಯಲ್ಲಿ "ಅರಿಕುಠಾರದ ಪದ್ಮಾವತಮ್ಮನವರ ಚರಣಾರವಿಂದವೇ ಶರಣು ನಾಸಿಕರಿ ಪುರದ ತ್ರಿಪುರಾಂಬಾಯ ನಮಃ" ಎಂಬ ಪ್ರಾರ್ಥನೆಯಿದ್ದು ಚಾಮರಾಜನಗರ ಮತ್ತು ಮೂಗೂರುಗಳ ಪೂರ್ವದ ಸ್ಥಳನಾಮಗಳೂ ಅಲ್ಲಿನ ದೇವತೆಗಳ ಬಗ್ಗೆ ಬೆಳಕು ಚೆಲ್ಲುವುದಲ್ಲದೆ ಇವು ಪ್ರತಿಕಾರನ ಆರಾಧ್ಯ ದೇವತೆಗಳೆಂಬುದನ್ನೂ ಅರುಹುತ್ತದೆ.

ಪುಷ್ಪದಂತ ಪುರಾಣದ ಕೆ ಎ 141 ಸಂಖ್ಯೆಯ ಕಾಗದದ ಪ್ರತಿಯಲ್ಲಿ "ಸರ್ವ ಸಿದ್ಧಿಪ್ರದಾಯಕ ವಿನಾಯಕಾಯ ನಮಃ ಶ್ರೀ ಶಾರದಾಂಬಾಯ ನಮಃ ಶುಭಮಸ್ತು" ಎಂದು ವೈದಿಕ ದೇವತೆಗಳ ಸ್ತುತಿಗಳಿದ್ದು ಹಸ್ತಪ್ರತಿಕಾರನ ವಿಶಾಲ ಮನೋಭಾವಕ್ಕೆ ಸಾಕ್ಷಿಯಾಗಿವೆ.

ಈಗ ದೊರೆತಿರುವ ಸಹಸ್ರಾರು ಪ್ರಾಚೀನ ಗ್ರಂಥಗಳಲ್ಲಿ ಕವಿಯ ಸ್ವಹಸ್ತಾಕ್ಷರ ಪ್ರತಿಗಳು ಲಭ್ಯವಾಗಿರುವುದು ಕೇವಲ ಬೆರಳೆಣಿಕೆಯಷ್ಟು. ಕನ್ನಡ ಅಧ್ಯಯನ ಸಂಸ್ಥೆಯ ಭಂಡಾರದಲ್ಲಿರುವ ಭುಜಬಲಿಚರಿತೆಯ ಕೆ 1483 ಸಂಖ್ಯೆಯ ಪ್ರತಿಯಲ್ಲಿ ಹೀಗೆ ಬರೆಯಲಾಗಿದೆ-"ಶ್ರೀಆನಂದ ಸಂವತ್ಸರದ ಮಾರ್ಗಸಿರ ಶು ೫ಮಿಯ ಬುಧುವಾರ ಬೆಳುಗುಳದ ಸ್ಥಾನಿಕ ಚೆನ್ನಪೈಯನ ಮಗ ಪಂಚಬಾಣನು ಕವಿತ್ವವ ಹೇಳಿ ತನ್ನ ಸ್ವಹಸ್ತದಲ್ಲಿ ಬರದ ಪುಸ್ತಕಕ್ಕೆ ಮಂಗಳ" ಈ ವಿವರಗಳು ಕವಿ. ಪಂಚಬಾಣನು ಶ್ರವಣಬೆಳಗೊಳದ ಸ್ಥಾನಿಕ ಚೆನ್ನಪ್ಪಯ್ಯನ ಪುತ್ರನೆಂದೂ ಆತನೇ ಕಾವ್ಯವನ್ನು ರಚಿಸಿ ಖುದ್ದಾಗಿ ಬರೆದನೆಂದೂ ಇದೊಂದು ಸ್ವಹಸ್ತಾಕ್ಷರ ಪ್ರತಿಯೆಂದೂ ದೃಢವಾಗುತ್ತದೆ. ಇದೇ ರೀತಿ ಕವಿಯ ಕೈಬರಹದ ಪ್ರತಿಗಳನ್ನು ಮತ್ತೊಮ್ಮೆ ನೋಡಬೇಕಾದರೆ ಚಂದ್ರಸಾಗರವರ್ಣಿಯ ಕೃತಿಗಳಿಗೆ ಮೊರೆಹೋಗಬೇಕು.

ಚಂದ್ರಸಾಗರ ವರ್ಣಿ ಸ್ವತಃ ಕವಿಯಾಗಿದ್ದುದಲ್ಲದೆ ಕೆಲವು ಪ್ರತಿಗಳನ್ನೂ ಸಿದ್ಧಪಡಿಸಿದ್ದನು. ವಾಸುದೇವ ಪಾರಿಜಾತ ಎಂಬ ಯಕ್ಷಗಾನ ಕಾವ್ಯದ ಎರಡು ಪ್ರತಿಗಳು ಅಧ್ಯಯನ ಸಂಸ್ಥೆಯ ಭಂಡಾರದಲ್ಲಿವೆ. ಕೆ. 58/1 ಸಂಖ್ಯೆಯ ಹಸ್ತಪ್ರತಿಯ ಅಂತ್ಯದ "ಶ್ರೀ ಸಂ|| ನಿಜ ಶ್ರಾವಣ ಶು. ೧೦ವರಗೆ ಚಂದ್ರಸಾಗರವರ್ಣಿ ನರಸಿಂಹಪುರದ ಕುಮ್ಮಜ್ಜಗೆ ಬರಕೊಟ್ಟ ವಾಸುದೇವ ಪಾರಿಜಾತಂ೦೦ ಹಾಗೂ ಕೆ 43/2 ಪ್ರತಿಯ "ಶ್ರೀ ಚಂದ್ರಸಾಗರವರ್ಣಿ ವಿರಚಿತಮಪ್ಪ ವಸುದೇವ ಪಾರಿಜಾತದೊಳು ರೋಹಿಣಿ ಸ್ವಯಂವರ ಲಸಂಪೂರ್ಣ ಮಂಗಳ ಮಹಾ ಸರ್ವಜಿತು ಸಂವತ್ಸರದ ಮಾಘಲಲ್ಲು ಚಂದ್ರಸಾಗರವರ್ಣಿಯು ನಮ್ಮ ಪುಟ್ಟ ತಿಮ್ಮಪ್ಪಗೆ ಬರಕೊಟ್ಟು ಚಂದನೆಯ ಕಥೆ ವಸುದೇವ ಪಾರಿಜಾತ ಮಂಗಳ ಮಹಾಶ್ರೀ" ಎಂಬ ಬರಹಗಳು ಇವೆರಡೂ ಪ್ರತಿಯ ಕರ್ತೃ ಮತ್ತು ಲಿಪಿಕಾರ ಚಂದ್ರಸಾಗರ ವರ್ಣಿ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅಂತೆಯೆ ಜಿನಭಕ್ತಿ ಸಾರವನ್ನು ರಚಿಸಿರುವ ಚಂದ್ರಸಾಗರವರ್ಣಿ ಇತರರಿಗೂ ಪ್ರತಿಮಾ ಟ್ಟಿದ್ದಾನೆ. ಕೆ 1631/3 ಸಂಖ್ಯೆಯ ಜಿನಭಕ್ತಿ ಸಾರದ ಪ್ರತಿಯಲ್ಲಿ "ಚಂದ್ರಸಾಗರವರ್ಣಿ ಬಸ್ತಿ ಪಾಯಣ್ಣಗೆ ಬರಕೊಟ್ಟ ಭಕ್ತಿಸಾರ ಸಂಪೂರ್ಣ ಮಂಗಳ ಮಹಾಶ್ರೀ" ಎಂದು ಬಸ್ತಿ ಪಾಯಣ್ಣನಿಗೂ ಕೆ 1803/2 ಸಂಖ್ಯೆಯ ಪ್ರತಿಯಲ್ಲಿ "ಧಾತು ಸಂವತ್ಸರದ ಮಾಗ ಶು ೬ ವರಿಗೆ

ಚಂದ್ರಸಾಗರವರ್ಣಿ ರತ್ನಗಿರಿ ಚಿಕ್ಕಣ್ಣನ ಮಗ ಪಾಯಣ್ಣಗೆ ಬರಕೊಟ್ಟ ಭಕ್ತಿಸಾರ ಸಂಪೂರ್ಣ" ಎಂದು ರತ್ನಗಿರಿ ಚಿಕಣ್ಣನಿಗೂ ನಕಲು ಮಾಡಿಕೊಟ್ಟ ಸಂಗತಿಯನ್ನು ತಿಳಿಸಿದ್ದಾನೆ.

ಲಿಪಿಕಾರರಲ್ಲಿ ಹವ್ಯಾಸಿ ಲಿಪಿಕಾರರು, ವೃತ್ತಿನಿರತ ಲಿಪಿಕಾರರು ಎಂಬ ಪ್ರಭೇದಗಳನ್ನು ಗ್ರಂಥಸಂಪಾದನಶಾಸ್ತ್ರಕಾರರು ನಿರೂಪಿಸಿದ್ದಾರೆ. ಲಿಪಿಕಾರರು ತಾವು ಪ್ರತಿ ಮಾಡಬೇಕಾದ ಕಾರಣವನ್ನು ಪ್ರತಿ ಮಾಡಿದ ಕಾಲ ಮತ್ತು ಸ್ಥಳಗಳನು ಕುರಿತು ಹೇಳಿಕೊಳ್ಳುವುದುಂಟು. ಕೆ 602/1 ಸಂಖ್ಯೆಯ ಅಬ್ಧಿಕಲ್ಪ ಎಂಬ ಕೃತಿಯ ಕಡೆಯಲ್ಲಿ "ಶ್ರೀ ಶಾಲಿವಾಹನ ಶಕ ೧೬೩೭ನೆಯ ರಾಕ್ಷಸ ಸಂವತ್ಸರದ ಕಾರ್ತಿಕ ಬ ೧೦ ಬುಧವಾರ ಸೂರ್ಯನು ಪೂರ್ವಪ್ರತಿಷ್ಠೆಯೊಂದ ಧನುರ್ಲಗ್ನದಲ್ಲು ಉಮ್ಮತ್ತೂರು ಹಳೇಬಸದಿಯ ಕಳಿಲೆ ಸೂರಿಪಂಡಿತರ ಮಗನು ಪಂಡಿತನು ತನಗೆ ಬೇಕಾಗಿ ಬರೆದ ಅಬ್ಧಿಕಲ್ಪಕ್ಕೆ ಮಂಗಳ ಮಹಾಶ್ರೀ ಹರದನ ಹಳ್ಳಿಯಲ್ಲಿ ಬರದು ಸಂಪೂರ್ಣವಾಯಿತು" ಎಂದಿದೆ. ಈ ವಿವರದಿಂದ ಉಮ್ಮತ್ತೂರಿನ ಹಳೆಬಸದಿಯ ಕಳಿಲೆಸೂರಿಪಂಡಿತರ ಮಗ ಪಂಡಿತನು ತನ್ನ ಅಧ್ಯಯನಕ್ಕಾಗಿ ಈ ಗ್ರಂಥವನ್ನು ಕ್ರಿ. ಶ.1735ರಲ್ಲಿ ಹರದನಹಳ್ಳಿಯಲ್ಲಿ ಪ್ರತಿಮಾಡಿರುವ ಸಂಗತಿ ತಿಳಿದುಬರುತ್ತದೆ. ಹೀಗೆ ಅಕ್ಷರಸ್ಥರೂ ಸಾಹಿತ್ಯಾಸಕ್ತರೂ ಆದ ವ್ಯಕ್ತಿಗಳು ತಮ್ಮ ಜ್ಞಾನದಾಹವನ್ನು ಪೂರೈಸಿಕೊಳ್ಳಲು ತಮ್ಮ ಅಭಿರುಚಿಗೆ ಅನುಗುಣವಾದ ಕೃತಿಗಳನ್ನು ಬರೆದುಕೊಳ್ಳುತ್ತಿದ್ದರು.

ಇನ್ನೂ ಕೆಲವು ಕಾವ್ಯಗಳನ್ನು ಸ್ವಂತಕ್ಕಾಗಿ ಗ್ರಂಥದ ಮೇಲಿನ ಪ್ರೀತಿಯಿಂದ ಬರೆದುಕೊಂಡ ನಿದರ್ಶನಗಳಿವೆ. ಜಿನದತ್ತರಾಯಚರಿತೆಯ ಕೆ 577 ಕ್ರಮಸಂಖ್ಯೆಯ ಹಸ್ತಪ್ರತಿಯನ್ನು"ರುಧಿರೋದ್ಗಾರಿ ಸಂವತ್ಸರದ ಶ್ರಾವಣ ಶುದ್ಧ ೫ಲ್ಲು ಹಾಸನದ ಹೊನ್ನಪ್ಪಸೆಟ್ಟರ ಪ್ರಪೌತ್ರ ಪಾಯಪ್ಪಸೆಟ್ಟರ ಪೌತ್ರ ಅಪ್ಪುಸೆಟ್ಟರ ಪುತ್ರ ಪಾಯಪ್ಪನು ತನ್ನ ಮನೋಪ್ರೀತಿಯಿಂದ ಶ್ರೀ ಪದ್ಮಾವತಿ ಚರಿತೆ ಬರೆದು ಸಂಪೂರ್ಣ ಮಂಗಳ ಮಹಾಶ್ರೀ" ಎಂದು ಪ್ರತಿ ಮಾಡಿದ ಸಂಗತಿ ವ್ಯಕ್ತವಾಗಿದೆ.

ಲಿಪಿಕಾರರು ಧರ್ಮದ ಕಾರಣವಾಗಿ ಪುಣ್ಯಪ್ರಾಪ್ತಿಗಾಗಿ ಪ್ರಾಚೀನ ಕಾವ್ಯಗಳನ್ನು ಪ್ರತಿಮಾಡುತ್ತಿದ್ದುದಕ್ಕೆ ಅನೇಕ ದೃಷ್ಟಾಂತಗಳು ಸಿಕ್ಕುತ್ತವೆ. ಆದಿಪರಮೇಶ್ವರ ಪುರಾಣದ ಕೆ ೫೭೩ ಸಂಖ್ಯೆಯ ಪ್ರತಿಯಲ್ಲಿ "ಚಿಕ್ಕ ಬಸ್ತಿ ಉಪಾಧ್ಯ ಪುಟ್ಟಣ್ಣನವರಿಗೆ ಅಜ್ಜಪ್ಪನವರ ಮಗ ಪುಟ್ಟಯ್ಯನು ಧರ್ಮಾರ್ಥಕಾರಣವಾಗಿ ಬರದುಕೊಟ್ಟ ಯಕ್ಷಗಾನ ಪುಣ್ಯಾರ್ಥವಾಗಿ ಬರಕೊಟ್ಟದ್ದು ಆಯುರಾರೋಗ್ಯ ಐಶ್ವರ್ಯ ಇಹಪರ ವೃದ್ಧಿರಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೭೬೯ನೇ ವರ್ತಮಾನಕ್ಕೆ ಸಲು ಪ್ಲವಂಗ ಸಂವತ್ಸರದ ಮಾರ್ಗಿಶರ ಸು ೫ ವರಿಗೆ ಸಂಪೂರ್ಣ ಮಂಗಲ ಮಹಾಶ್ರೀ" ಎಂದು ಧಾರ್ಮಿಕ ಆಶಯವನ್ನಿಟ್ಟುಕೊಂಡು ಬರೆದಿರುವುದು ಕಂಡುಬರುತ್ತದೆ.

ಹಸ್ತಪ್ರತಿಕಾರರು ನೀಡುವ ಸೂಚನೆಗಳು ಕೆಲವೊಮ್ಮೆ ಕವಿಕಾಲ ಹಾಗೂ ಸ್ಥಳವನ್ನು ನಿರ್ಧರಿಸಲು ನೆರವಿಗೆ ಬರುತ್ತವೆ. ಪದ್ಮಾವತಿ ಚರಿತೆಯ ಕೆ. ಎ. 139 ಸಂಖ್ಯೆಯ ಪ್ರತಿಯ ಅಂತ್ಯದಲ್ಲಿ ಬರುವ "ತುಳು ದೇಶದ ಮೂಲಿಕೆ ಜೈನ ಪದ್ಮನಾಭವಿರಚಿತ" ಎಂಬ

ಮಾತಿನಿಂದ ಕವಿ ಪದ್ಮನಾಭನ ಸ್ಥಳ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಎಂಬುದು ವಿದಿತವಾಗುತ್ತದೆ. ರತ್ನಕರಂಡಕದ ಕೆ. ಎ. 209 ನೆಯ ಹಸ್ತಪ್ರತಿಯು ಈ ಕೃತಿಯ ಏಕೈಕ ಹಸ್ತಪ್ರತಿಯಾಗಿದ್ದು ಪ್ರತಿ ಮಾಡಿದ ಕಾಲ "ಶಾಲಿವಾಹನ ಶಕಾಬ್ದಾ: ೧೭೯೭ ಯುವ ಸಂವತ್ಸರ ಭಾದ್ರಪದ ಕೃಷ್ಣ ದಶಮಿ ಭಾರ್ಗವ ವಾಸರೆ ರತ್ನಕರಂಡಕಮಿದಂ ಗ್ರಂಥ ಪರಿಸಮಾಪ್ತೋಭೂತ್" ಎಂದು ನಮೂದಿತವಾಗಿದೆ. ಈ ಆಧಾರದಿಂದ ಕವಿಕೃತಿಯ ಕಾಲವನ್ನು ಊಹಿಸಲು ಸಾಧ್ಯವಾಗಿದೆ.

ಹಸ್ತಪ್ರತಿಗಳನ್ನು ಪ್ರತಿ ಮಾಡಲು ದೇವಾಲಯ. ಚೈತ್ಯಾಲಯ ಮತ್ತು ಮಠಗಳು ಬಹುಮುಖ್ಯ ಕೇಂದ್ರವಾಗಿದ್ದವು. ಪ್ರಾಚೀನ ಗ್ರಂಥಗಳ ಮೇಲಿನ ಅತುಳವಾದ ಗೌರವ ಭಾವನೆಯಿಂದಾಗಿ ಪ್ರತಿಮಾಡುವುದನ್ನು ಪವಿತ್ರಕಾರ್ಯವೆಂದು ತಿಳಿದಿದ್ದರು. ಆದುದರಿಂದ ಪವಿತ್ರ ಸ್ಥಳದಲ್ಲಿ, ದೈವ ಸನ್ನಿಧಿಯಲ್ಲಿ ಕುಳಿತು ಬರೆಯುತ್ತಿದ್ದರು. ರಾಜಾದಿತ್ಯನ ವ್ಯವಹಾರಗಣಿತದ ಕೆ. ಎ. 14 ಸಂಖ್ಯೆಯ ಪ್ರತಿಯ ಅಂತ್ಯದ ಪುಷ್ಪಿಕೆಯಲ್ಲಿ "ಪ್ರಮಾದಿ ಸಂವತ್ಸರದ ಆಶ್ವೀಜ ಸುದ್ಧ ಗುರುವಾರ ಸೂರ್ಯೋದಯವಾದ ಘಳಿಗೆ ೧೦ ಮಲೆಯೂರು ಆದೀಶ್ವರನ ಪಾದಸನ್ನಿಧಿಯಲ್ಲಿ ಆದಪ್ಪಯ್ಯನು ಹರವೆ ವಿಜಯಣಯ್ಯಗೆ ಬರೆದ ಪುಸ್ತಕಕ್ಕೆ ಮಂಗಳ ಮಹಾಶ್ರೀ ಎಂದಿದ್ದು ಮಲೆಯೂರು ಆದೀಶ್ವರ ಬಸದಿಯಲ್ಲಿ ಪ್ರತಿಯಾಗಿರುವುದನ್ನು ತಿಳಿಯಬಹುದು. ಯೋಗೀಂದ್ರದೇವ ವಿರಚಿತ ಪರಮಾತ್ಮ ಪ್ರಕಾಶ ಎಂಬ ಕೃತಿಯ ಕೆ 1586/1 ಸಂಖ್ಯೆಯ ಪ್ರತಿಯು ಕ್ರಿ. ಶ. 1828 ರಲ್ಲಿ ಆದಿಪರಮೇಶ್ವರ ಚೈತ್ಯಾಲಯದಲ್ಲಿ ಪ್ರತಿಯಾಗಿದೆ-"ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು ೧೭೫೦ನೇ ಸರ್ವಧಾರಿ ಸಂವತ್ಸರದ ಪುಷ್ಯ ತತ್ಕಾದಾರ್ಚಕ ಬ್ರಹ್ಮಸೂರಿ ಸಿದ್ಧಾಂತಿಯ ಜ್ಯೇಷ್ಠಕುಮಾರನು ಚಂದೋಪಾಧ್ಯ ಸಿದ್ಧಾಂತಿಯಂ ಪರಮಾತ್ಮ ಪ್ರಕಾಶಯೆಂಬ ಗ್ರಂಥ ವ್ಯಾಖ್ಯಾನ ಸಹಾ ಸಂಪೂರ್ಣವಾಗಿ ಬರೆದುದಕ್ಕೆ ಭದ್ರಂ ಶುಭನ್ಮಂಗಲಂ ಈ ಗ್ರಂಥ ಭವ್ಯರಿಗೆ ಅಮೃತವಾಗಿ ತೋರುವದು ಅಭವ್ಯರಿಗೆ ಕಾಳಕೂಟ ವಿಷವಾಗಿ ಕಾಣ್ಬುದು ಈ ಗ್ರಂಥ ಪರಮಾಗಮ ನಂಬಿ ಧ್ಯಾನಿಸಿದ ಭವ್ಯರಿಗೆ ಮುಕ್ತಿ ತಪ್ಪದೆವಹುದು ಯಿದಂತು ಹುಸಿಯಲ್ಲಾ ಭವ್ಯರು ನಂಬುವದು ಶ್ರೀ". ವಿಜಕುಮಾರಿ ಚರಿತೆಯ ಕೆ 884 ಸಂಖ್ಯೆಯ ಪ್ರತಿ ಕೂಡ ಕ್ರಿ. ಶ. 1651 ರಲ್ಲಿ ಮಲೆಯೂರಿನ ಆದೀಶ್ವರ ಬಸದಿಯಲ್ಲಿ ಬರೆಯಲಾಗಿದೆ-"ಸ್ವಸ್ತಿ ಶ್ರೀಶಕವರುಷ 1573 ಸಂದ ಖರ ಸಂವತ್ಸರದ ಫಾಲ್ಗುನ ಶು ೫ಮಿಯೂ ಬುಧುವಾರ ಸೂರ್ಯೋದಯವಾದ ಮಲೆಯೂರ ಆದಿಪರಮೇಶ್ವರರ ಪಾದಸನ್ನಿಧಿಯಲ್ಲಿ ಕನಕಗಿರಿಯ ವಿಜಯನಾಥಸ್ವಾಮಿಯ ಪಾದ ಸೇವಕರಾದ ಮೈಸೂರು ಪದ್ಮನಾಭಯ್ಯನವರಿಗೆ ಕನಕಗಿರಿಯ ಆದಪ್ಪನು ಬರದಂಥಾ ವಿಜಯಕುಮಾರಿ ಚರಿತಕ್ಕೆ ಮಂಗಲ ಮಹಾಶ್ರೀ' ಎಂಬ ವಿವರಗಳಿಂದ ಸ್ಪಷ್ಟವಾಗುತ್ತದೆ.

ಕರ್ಣಾಟಕದ ಗಡಿಭಾಗದಲ್ಲಿರುವ ನೆರೆರಾಜ್ಯದ ಊರುಗಳಲ್ಲಿಯೂ ಕನ್ನಡದ ಕಂಪು ಬೀರಿರುವುದು ಹಸ್ತಪ್ರತಿಯ ಬರಹಗಳಿಂದ ಗೋಚರವಾಗುತ್ತದೆ. ಮಂಗರಸನ ಸಮ್ಯಕ್ತ್ವಕೌಮುದಿಯ ಕೆ 1799 ಹಸ್ತಪ್ರತಿ ಮಲೆಯಾಳದೇಶದ ಪುತ್ತಂಗಡಿಯ ಚಂದ್ರನಾಥನ ಬಸ್ತಿಯಲ್ಲಿ ಪ್ರತಿಯಾಗಿದೆ-"ಪದುಮಣ ಸದ್ವಿರಲ್ಲ ಭುಜಬಲಿಯ

ರಾಕ್ಷಸಸಂವತ್ಸರದ ಕಾರ್ತಿಕ ಬಹುಳ ೧೦ಲ್ಲು ಮಲೆಯಾಳ ದೇಶದ ಪುತ್ತಂಗಡಿ ಚಂದ್ರನಾಥನ ಬಸ್ತಿಯಲ್ಲಿ ಚಂದ್ರಪ್ರಭ ತೀರ್ಥಂಕರ ಪಾದ ಸನ್ನಿಧಿಯಲ್ಲಿ ಬರೆದುಕೊಟ್ಟ ಕೌಮುದಿ ಗ್ರಂಥಕ್ಕೆ ಮಂಗಲ ಮಹಾಶ್ರೀ" ಇದೇ ಕೃತಿಯ ಕೆ 1803/1ಹಸ್ತಪ್ರತಿ ಕೂಡ ಹೊರನಾಡಿನಲ್ಲಿ ಪ್ರತಿಯಾಗಿರುವುದು ಆಕಸ್ಮಿಕ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಗಳು 1741ನೆಯ ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೨ ಭೌಮ್ಯವಾರ ಮಘಾನಕ್ಷತ್ರ ಪೂರ್ವಾರ್ಣದಲ್ಲಿ ಘಳಿ ೫ರಲ್ಲಿ ರತ್ನಗಿರಿ ಬಸ್ತಿಯಮಠದಧಿಪತಿ ಮಹಾಶಾರದಾ ದೇವಿಯವರ ದಿವ್ಯ ಶ್ರೀ ಪದ್ಮಾರಾಧಕನಾದಂಥಚಿಕ್ಕೆಯ್ಯಾತ್ಮಜ ಪಾಯಂಣನು ಶಾಲಾಪುರದ ಅನಂತಪದ್ಮನಾಭಸ್ವಾಮಿಯವರ ಪಾದದ ಸಂನಿಧಾನದಲ್ಲಿ ಜ್ಞಾನವರಣೀಯ ಕರ್ಮೋಪಶಮನ ನಿಮಿತ್ಯವಾಗಿ ಬರದಂಥಾ ಕೌಮುದಿ ಪುಸ್ತಕ್ಕೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿರಸ್ತು, ಸಿದ್ಧಿರಸ್ತು." ಇಲ್ಲಿ ಉಕ್ತವಾಗಿರುವ ಶಾಲಾಪುರವು ಮಹಾರಾಷ್ಟ್ರದ ಈಗಿನ ಶೋಲಾಪುರವಾಗಿದೆ.

ಚಂದ್ರಸಾಗರವರ್ಣಿಕೃತ ಜಿನರಾಮಾಯಣದ ಕೆ. ಬಿ. 426 ಹಸ್ತಪ್ರತಿಯನ್ನು ರಾಯಣ್ಣನು' ಸ್ವಂತ ಬಳಕೆಗಾಗಿ ಬರೆದುಕೊಂಡರೂ ಪ್ರತಿ ಮಾಡಿದ ಸ್ಥಳ ಚಂದ್ರನಾಥಸ್ವಾಮಿಯ ಚೈತ್ಯಾಲಯವೆಂಬುದು ಗಮನಾರ್ಹ-"ಶಾಲಿವಾಹನ ಶಕಾಬ್ದಾ ೧೭೯೭ನೆ ಭಾವನಾಮ ಸಂವತ್ಸರೆ ಶರದ್ರುತು ಕಾಲಯುಕ್ತಾಯಾಂ ಕಾರ್ತಿಕಮಾಸೆ ಕೃಷ್ಣಪಕ್ಷೆ ಅಮಾವಾಸ್ಯಾಂ ತಿಥೌ ಬೌಮ್ಯವಾಸರ ಯುಕ್ತಾಯಾಂ ಮಧ್ಯಾಹ್ನಕಾಲೇ ಗೌತಮಗೋತ್ರೇ ಆದಿಸೂತ್ರೇ ಅಮರಪ್ರವರನಾದ ತೋಪಿನಕೆರೆ ಬಸ್ತಿ ಇಂದ್ರವರ್ಗದ ನಾಗಪ್ಪನ ಕುಮಾರ ಪದ್ಮಣ್ಣ ಇವರ ಮಗ ರಾಯಣ್ಣನು ತನ್ನ ಸ್ವಂತಕ್ಯೋಸ್ಕರವಾಗಿ ಶ್ರೀ ಚಂದ್ರನಾಥಸ್ವಾಮಿ ಚೈತ್ಯಾಲಯದಲ್ಲಿ ಬರೆದು ಸಂಪೂರ್ಣ ಮಾಡಿದಂತಾ ಜಿನರಾಮಾಯಣ ಭದ್ರಂ ಶುಭಂ ಮಂಗಳಂ ಶ್ರೀ" ಎಂಬ ವಿವರದಿಂದ ಪ್ರತಿಮಾಡಿದ ಕಾಲ ಕಿ. ಶ. 1875 ಎಂಬುದು ಖಚಿತ. ಆ ವೇಳೆಗಾಗಲೆ ಕನ್ನಡದಲ್ಲಿ ಕೆಲವು ಕೃತಿಗಳ ಪರಿಷ್ಕೃತ ಮುದ್ರಣಗಳು ಹೊರಬಂದಿದ್ದವು. ಆದರೂ ನಕಲು ಮಾಡುವ ಕಾರ್ಯ ಮುಂದುವರೆಯುತ್ತಿತ್ತು.

ಬಾಹುಬಲಿವರ್ಧಮಾನ ಕವಿಯ ನಾಗಕುಮಾರ ಚರಿತೆಯ ಕೆ 688 ಸಂಖ್ಯೆಯ ಪ್ರತಿಯನ್ನು ಬೆಳಗುಲಿ ಹುಚ್ಚಯ್ಯನವರ ಎರಡನೆಯ ಮಗನಾದ ಬೊಮ್ಮರಸಯ್ಯನು ಕ್ರಿ. ಶ. 1829 ರಲ್ಲಿ 'ಶ್ವೇತಪುರದ ಶ್ರೀ ಆದೀಶ್ವರ ಸ್ವಾಮಿಯವರ ಮುಖಮಂಟಪದಲ್ಲಿ ಎಂದರೆ ಬೆಳ್ಳೂರಿನ ಬಸ್ತಿಯಲ್ಲಿ ಬರೆದನೆಂದು ತಿಳಿದುಬರುತ್ತದೆ. ನೇಮಿಜಿನೇಶ ಸಂಗತಿಯ ಕೆ 1829 ಹಸ್ತಪ್ರತಿಯು "ಯೆನಕ್ಕಲ್ಲಾ ಶ್ರೀಮದನಂತನಾಥ ಸ್ವಾಮಿಯವರ ಚೈತ್ಯಾಲಯದಲ್ಲಿ" ಪ್ರತಿಯಾಗಿದೆ. ಇಲ್ಲಿ ಉಕ್ತವಾಗಿರುವ ಸ್ಥಳ ಆನೆಕಲ್ಲು ಇರಬಹುದು. ಪದುಮಣ್ಣನೆಂಬ ಲಿಪಿಕಾರ ನಯಸೇನನ ಧರ್ಮಾಮೃತದ ಕೆ 1769 ಹಸ್ತಪ್ರತಿಯನ್ನು "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖಾಬ್ದ ೧೬೮೫ನೆಯ ಸ್ವಭಾನುಸಂವತ್ಸರ ಜೇಷ್ಟ ಶು 5 ಗುರುವಾರ ಸಂಕಿಗಟ್ಟದ ವರ್ಧಮಾನಸ್ವಾಮಿಯವರ ದಿವ್ಯ ಚೈತ್ಯಾಲಯದಲ್ಲಿ ಪದುಮಣ್ಣ ಬರೆದಂಥ ಶ್ರೀ ಮದ್ಧರ್ಮಾಮೃತ ಪುರಾಣ ಸಂಪೂರ್ಣ ಮಂಗಳ ಮಹಾಶ್ರೀ" ಎಂದು ಸಂಕಿಗಟ್ಟದ ವರ್ಧಮಾನ ಸ್ವಾಮಿ ಬಸ್ತಿಯಲ್ಲಿ ಬರೆಯಲಾಗಿದೆ.

ಗೀತವೀತರಾಗದ ಕೆ 45 ಸಂಖ್ಯೆಯ ಹಸ್ತಪ್ರತಿಯು ಕ್ರಿ. ಶ. 1781 ರಲ್ಲಿ ಹಳೇಬೀಡಿನ ವಿಜಯಪಾರಿಶ್ವನಾಥನ ಬಸದಿಯಲ್ಲಿ ಪ್ರತಿಯಾಗಿದೆ. ಜಿನದತ್ತ ರಾಯಚರಿತೆಯ ಕೆ 19 ಸಂಖ್ಯೆಯ ಪ್ರತಿಯನ್ನು ಸಂಕಿಗಟ್ಟದ ಬಸ್ತಿಯ ರಾಯಪ್ಪನ ಕುಮಾರ ಅನಂತಯ್ಯನು ನರಸಿಂಹಪುರದ ಪದ್ಮಯ್ಯನಿಗೆ ಪ್ರತಿಮಾಡಿದ್ದು ಸಂಕಿಗಟ್ಟದ ವೀರವರ್ಧಮಾನ ಸ್ವಾಮಿಯ ಬಸದಿಯಲ್ಲಿಯೆ ಎಂಬುದು ಗಮನಾರ್ಹ. ಬಲ್ಲಾಳಪುರದ ಬಸ್ತಿಯಲ್ಲಿ ಪ್ರತಿಯಾದ ನೋಂಪಿ ಕಥೆಗಳ ಕೆ 23/2 ಸಂಖ್ಯೆಯ ಪ್ರತಿಯ ಲಿಪಿಕಾರ ಲಕ್ಷ್ಮೀ ಸೇನ ದೇವರು ಮಠಾಧೀಶರಿರಬೇಕು.

ದೇವಚಂದ್ರಕವಿ ಚಾಮರಾಜನಗರ ತಾಲ್ಲೂಕು ಮಲೆಯೂರಿನವರು. ಈತನ ರಾಮಕಥಾವತಾರದ ಹಸ್ತಪ್ರತಿ ಕೆ ಎ 55 ಇದೇ ಊರಿನಲ್ಲಿ ಸಿದ್ಧವಾಗಿದೆ. ವಿಶೇಷವೆಂದರೆ ಇದು ಚೈತ್ಯಾಲಯದಲ್ಲಿ ಪ್ರತಿಯಾಗದೆ ಮನೆಯಲ್ಲಿಯೇ ಬರೆಯಲಾಗಿದೆ-"ಶಕವರ್ಷ ೧೭೨೯ ಪ್ರಭವ ಸಂವತ್ಸರದ ಮಾಘ ಬ ೫ ಮಂಗಳವಾರ ಘಳಿಗೆ ೨೮ನೆಯಲ್ಲಿ ಬಡಗ ಬಾಗಿಲ ಮನೆ ಪಡಸಾಲೆಯಲ್ಲಿ ಶ್ರೀ ಮಲೆಯೂರಾದೀಶ್ವರ ಸ್ವಾಮಿ ಪಾದಸ್ಮರಣೆಯಿಂ ರಾಮಕಥಾವತಾರಮಂ ಬರೆದು ಪೂರ್ಣವಾದುದಕ್ಕೆ ಮಂಗಳ ಮಹಾಶ್ರೀ ಶ್ರೀ ರಾಮಕಥಾವತಾರ ಗ್ರಂಥ ಪ್ರಮಾಣ 6800 ಕ್ಕ ಮಂಗಳ ಮಹಾಶ್ರೀ'.

ಜೈನರಲ್ಲಿ ಶಾಸ್ತ್ರದಾನ ಮಾಡುವ ಸಂಪ್ರದಾಯವಿದೆ. ಮುದ್ರಣ ಸೌಲಭ್ಯವಿಲ್ಲದಿದ್ದ ಆ ಕಾಲದಲ್ಲಿ ಧಾರ್ಮಿಕ ಗ್ರಂಥಗಳನ್ನು ನಕಲು ಮಾಡಿಸಿ ಸತ್ಪಾತ್ರರಿಗೆ ದಾನ ನೀಡುತ್ತಿದ್ದರು. ಅತ್ತಿಮಬ್ಬೆ ಪೊನ್ನನ ಶಾಂತಿ ಪುರಾಣದ ಸಹಸ್ರ ಪ್ರತಿಯನ್ನು ಶಾಸ್ತ್ರದಾನವಾಗಿ ಕೊಟ್ಟದ್ದು ಪ್ರಸಿದ್ಧವಾಗಿದೆ. ಹಾಗೆ ಚಂದನಾಂಬಿಕೆ ಕಥೆಯ ಹಸ್ತಪ್ರತಿಯೊಂದು ಶಾಸ್ತ್ರದಾನದ ಕಾರಣವಾಗಿ ಪ್ರತಿಯಾಗಿರುವುದು ಕೆ 59/2 ಸಂಖ್ಯೆಯ ಓಲೆಪ್ರತಿಯಿಂದ ಬೆಳಕಿಗೆ ಬಂದಿದೆ- "ಅಗಳಿ ಪಾಯಣ್ಣಗಳು ಬರೆದ ಚಂದನೆ ಕಥೆ ಪ್ರತಿ ಇದ್ದಹಾಗೆ ಬರೆದೆನು... ಶ್ರೀ ಹೇವಿಳಂಬಿ ಸಂವತ್ಸರ ಭಾದ್ರಪದ ಶು ೧೩ಲ್ಲು ದೊಡಸಾಮಿಗೆ ಶಾಸ್ತ್ರದಾನವಾಗಿ ಬರದು ಕೊಟ್ಟರ ಅಗಳೀ ಪಾಯಣ್ಣಗಳೂ ಲಕ್ಷ್ಮೀಸೇನ ದೇವರ ಶಿಷ್ಯರು ಅಗಳಿ ಲಕ್ಷ್ಮೀಸೇನ ದೇವ."

ಜನಾಂಗದ ಸಿರಿವಂತರು ತಮಗೆ ಕೇವಲಜ್ಞಾನ ಪ್ರಾಪ್ತಿಯಾಗಲೆಂದು ತೀರ್ಥಂಕರ ಚರಿತೆಗಳನ್ನು ಪ್ರತಿಮಾಡಿಸಿ ಬಸದಿಗಳಿಗೆ ಕೊಡುತ್ತಿದ್ದ ಸಂಪ್ರದಾಯ ಕಂಡು ಬರುತ್ತದೆ. ಧರ್ಮನಾಥಪುರಾಣದ ಕೆ ಎ 296 ಸಂಖ್ಯೆಯ ಹಸ್ತಪ್ರತಿಯು ಕೇವಲಜ್ಞಾನ ಪರಿಪ್ರಾಪ್ತಿ ನಿಮಿತ್ತವಾಗಿ ಪ್ರತಿ ಮಾಡಿಸಿ ಕಾರ್ಕಳದ ಶಾಂತಿನಾಥಸ್ವಾಮಿ ಬಸದಿಗೆ ಅರ್ಪಿಸಿದ ಪ್ರತಿಯಾಗಿದೆ-"ಸ್ವಸ್ತಿ ಶ್ರೀಮತ್ ಶಕವರ್ಷ ಶನಿವಾರದಂದು ಸ್ವಸ್ತಿಯನವರತ... ಕಲಿಕಾಲಗಣಧರರುಮಪ್ಪ ಶ್ರೀಮಲ್ಲಲಿತಕೀರ್ತಿ ಮಲಧಾರಿದೇವರ ಪ್ರಿಯಗುಡ್ಡ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನ ದತ್ತಾವಧಾನನುಂ ಜಿನಗಂಧೋಧಕ ಪವಿತ್ರೀಕೃತೋತ್ತಮಾಂಗನುಂ ಜಿನಮುನಿ ಪದಾಂಭೋಜಾತಭೃಂಗನುಮಪ್ಪ ಭಂಡಾರಿದೇವರು ಸೆಟ್ಟಿ ತನಗೆ ಕೇವಲಜ್ಞಾನ ಪರಿಪ್ರಾಪ್ತಿ ನಿಮಿತ್ತವಾಗಿ ಕಾರಕಳದ ಶಾಂತಿನಾಥಸ್ವಾಮಿಗಳ ಬಸ್ತಿಗೆ ಬರಕೊಟ್ಟ ಧರ್ಮನಾಥ ಪುರಾಣಕ್ಕೆ ಮಂಗಳ ಮಹಾ'. ಕೇಶವವರ್ಣಿ ವಿರಚಿತ ಗೊಮ್ಮಟಸಾರ ಕೃತಿಯ ಕೆ. 1424 ಸಂಖ್ಯೆಯ ಹಸ್ತಪ್ರತಿಯಲ್ಲಿಯೂ

ಆಣಿರಿಮಯಿಂದ ಸೆಟ್ಟಿ ಎಂಬಾತ ಕೇವಲಜ್ಞಾನ ಪ್ರಾಪ್ತಿಗಾಗಿ ಗೊಮ್ಮಟನಾಥನ ಇಂದ್ರ ಆದಿಶಾಂತಯ್ಯನಿಂದ ಗೊಮ್ಮಟಸಾರದ ವ್ಯಾಖ್ಯಾನವನ್ನು ಕ್ರಿ. ಶ. 1599 ರಲ್ಲಿ ಬರೆಸಿಕೊಟ್ಟುದಾಗಿ ತಿಳಿದು ಬರುತ್ತದೆ.

ಆಳುವ ಮಹಾರಾಜರಿಗೆ ಸಿರಿವಂತರಿಗೆ ಒತ್ತೈಷಿಗಳಿಗೆ ಆಯುರಾರೋಗ್ಯ ಐಶ್ವರ್ಯ ಅಭ್ಯುದಯಗಳನ್ನು ಹಾರೈಸಿ ಹಸ್ತಪ್ರತಿಗಳನ್ನು ಪ್ರತಿಮಾಡಿಕೊಡುತ್ತಿದ್ದರು. ಹಾಗೆ ದೇವರಾಯನೆಂಬ ಲಿಪಿಕಾರ ಕಂಠೀರವ ನರಸರಾಜ ಒಡೆಯರ ಅಭ್ಯುದಯವನ್ನು ಬಯಸಿ ಕೆ. ಎ. 25 ಸಂಖ್ಯೆಯ ಲೀಲಾವತಿ ಕಾವ್ಯದ ಹಸ್ತಪ್ರತಿಯನ್ನು ಬರೆದಿರುವುದು ಕಂಡುಬರುತ್ತದೆ -''ಸ್ವಸ್ತಿಶೀ ಸಕಲ ಕಲ್ಯಾಣಾಭ್ಯುದಯ ಶಾಲಿವಾಹನ ಶಕವರ್ಷ ೧೫೮೦ನೆಯ ವಿಳಂಬಿ ಸಂವತ್ಸರದ ಫಾಲ್ಗುಣ ಶುದ್ಧ 12 ಆದಿತ್ಯವಾರದಲ್ಲು ಶ್ರೀಮದ್ರಾಜಾಧಿರಾಜರಾದ ಬೆಟ್ಟದ ಚಾಮರಸುವೊಡೆಯರವರ ಕುಮಾರಕರಾದ ಕಂಠೀರವ ನರಸರಾಜೇಂದ್ರಂಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗಲಿಯೆಂದು ಪುತ್ರ ಪೌತ್ರ ಪರಂಪರೆ ಆಗಲಿಯೆಂದು ಮೊಲುಕಂಡಿ ಚಿಟ್ಟೆಯನ ಕುಮಾರನು ಭಾರತಿ ಅಯಣ್ಣನು ಬರೆದುಕೊಟ್ಟಂಥಾ ಲೀಲಾವತಿಯ ಪುಸ್ತಕ ಮಂಗಳಮಹಾಶ್ರೀ ಬಹುಧ್ಯಾನ ಸಂವತ್ಸರದ ಫಾಲ್ಗುಣ ಶುದ್ಧ 5 ಶುಕ್ರವಾರದಲ್ಲೂ ಉಗ್ರಾಣದ ಸಿದ್ಧೈಯನ ಮಗ ದೇವರಾಯನು ಬರೆದ ಲೀಲಾವತಿಯ ಪುಸ್ತಕಕ್ಕೆ ಮಂಗಳ ಮಹಾ' ಎಂದಿದೆ. ಇದೇ ಮನೋಧರ್ಮ ಮಂಗರಸನ ಶ್ರೀಪಾಲಚರಿತೆಯ ಕೆ 576 ಸಂಖ್ಯೆಯ ಹಸ್ತಪ್ರತಿಯಲ್ಲಿ ''ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ 1639ನೆಯ ಜಯನಾಮ ಸಂವತ್ಸರದ ಜ್ಯೇಷ್ಠ ಶುದ್ಧ 5 ಯಿಂದುವಾರದಲ್ಲು ಹಾಸನದ ಶ್ರೀ ಪಾರಿಶ್ವನಾಥಸ್ವಾಮಿಯ ಸನ್ನಿಧಿಯಲ್ಲಿ ದೊಡು ಪೊನ್ನಣ್ಣಸೆಟ್ಟರಿಗೆ ಉಪಾಧ್ಯ ಚಿಕ್ಕಣ್ಣನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗಲೆಂದು ಬರಕೊಟ್ಟಂಥಾ ಶ್ರೀಪಾಲನ ಚರಿತೆ ಪುಸ್ತಕಕ್ಕೆ ಮಂಗಲ' ಎಂದು ವ್ಯಕ್ತವಾಗಿದ್ದು ಆ ಮೂಲಕ ಈ ಹಸ್ತಪ್ರತಿಕಾರರು ಪ್ರಾಚೀನ ಕಾವ್ಯಗಳ ಸಂರಕ್ಷಣೆಯಲ್ಲಿ ಶ್ರಮಿಸಿದ್ದಾರೆ.

ಧಾರ್ಮಿಕ ಕಾವ್ಯಗಳ ಪಠನದಿಂದ ಕರ್ಮನಿವಾರಣೆಯಾಗುವುದೆಂಬ ಭಾವನೆ ಬಹಳ ಹಿಂದಿನಿಂದಲೂ ಬೇರೂರಿದೆ. ಅಂತೆಯೆ ಅಕ್ಷರ ಬಲ್ಲವರು 'ಜ್ಞಾನಾವರ್ಣೀಯ ಕರ್ಮೋಪಶಮನ' ನಿಮಿತ್ತವಾಗಿಯೂ ಪ್ರಾಚೀನ ಕೃತಿಗಳನ್ನು ಬರೆದುಕೊಡುತ್ತಿದ್ದರು. ನೇಮಿಜಿನೇಶಸಂಗತಿಯ1806 ಸಂಖ್ಯೆಯ ಓಲೆಪ್ರತಿಯು ಪ್ರತಿಯಾದ ಹಿನ್ನೆಲೆಯಲ್ಲಿ ಇದೇ ಭಾವನೆ ಪ್ರಕಟವಾಗಿದೆ-''ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ: 1773ನೆಯ ವಿರೋದಿಕ್ರತುನಾಮಸಂವತ್ಸರದ ಶ್ರಾವಣ ಬಹುಳ ೩ ವರಿಗೆ ಸಂಕಿಘಟ್ಟ ಪುರವರಾಧೀಶ ಶ್ರೀಮನ್ಮಹಾವೀರ ವರ್ಧಮಾನ ಸ್ವಾಮಿಯವರ ಪದ್ಮಾರಾಧಕನಾದಂತ ನಳಿನಾಕ್ಷನ ಕುಮಾರ ನರಸಿಂಹಪುರದ ಶ್ರೀ ಚಂದ್ರನಾಥಸ್ವಾಮಿ ಪಾದಪಯೋಜ ದ್ವಂದ್ವಾರಾಧಕನಾದಂತ ಪಾಯಂಣನು ಶ್ರೀ ಸ್ವಾಮಿ ಸನ್ನಿಧಿಯಲ್ಲಿ ಜ್ಞಾನಾವರ್ಣೀಯ ಕರ್ಮೋಪಶಮನ ನಿಮಿತ್ಯವಾಗಿ ಬರದಂತಾ ಹರಿವಂಶದ ಪುಸ್ತಕಕ್ಕೆ ಭದ್ರಂಭೂಯಾತ್''.

ಪುರಾಣ ಪುಣ್ಯಕಥೆಗಳ ವಾಚನ ಜೈನ ಮಹಿಳೆಯರ ಸಂಸ್ಕೃತಿಯ ಅಂಗವಾಗಿತ್ತೆಂದು ಹೇಳಬಹುದು. ಸ್ತ್ರೀ ಶಿಕ್ಷಣ ಶೂನ್ಯವಾಗಿದ್ದ ಕಾಲದಲ್ಲಿ ಕೂಡ ಈ ಮಹಿಳೆಯರು ತಮ್ಮ ಧರ್ಮಗ್ರಂಥಗಳ ಅಭ್ಯಾಸದಲ್ಲಿ ತೋರಿದ ಆಸಕ್ತಿ ದೊಡ್ಡದು. ದೊಡ್ಡಯ್ಯನ ಚಂದ್ರಪ್ರಭಚರಿತೆಯ ಕೆ 1519 ಸಂಖ್ಯೆಯ ಪ್ರತಿ ಅಕ್ಕಮ್ಮ ಎಂಬ ಮಹಿಳೆಗಾಗಿ ಸಿದ್ಧಪಡಿಸಿದುದಾಗಿದೆ-" ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೨೧ ನೆಯ ಪ್ರಮಾತಿ ಸಂವತ್ಸರದ ಪುಷ್ಯ ಶು 13 ಲ್ಲು ಶುಭದಿವಸದಲ್ಲು ಮೈಸೂರ ಬಸ್ತಿಯ ದೊಡ್ಡೈಯನವರ ಮಗನು ಶಾಂತೈಯನು ಯಳವಂದೂರ ಮುದ್ದೈಯ್ಯ ಪಂಡಿತರ ಮಗಳು ಅಕ್ಕಮ್ಮನವರಿಗೆ ಬರದುಕೊಟ್ಟಂಥ ಶ್ರೀ ಚಂದ್ರಪ್ರಭ ಚರಿತ್ರಕ್ಕೆ ಭದ್ರಂ ಶುಭಂ ಮಂಗಲಂ'.' ವಡ್ಡಾರಾಧನೆಯ ಕೆ ಎ 297 ಸಂಖ್ಯೆಯ ಹಸ್ತಪ್ರತಿಯನ್ನು ಕಮಳಶ್ರೀ ಅವ್ವೆಗಳಿಗಾಗಿ ಭಾನುಮುನಿಗಳ ಆದೇಶದ ಮೇಲೆ ಬರೆಯಲಾಗಿದೆ. ಬರೆಸಿಕೊಟ್ಟವರು ಓಜಣ್ಣಸೆಟ್ಟಿಯರ ಮಗ ಕಲ್ಲಣ್ಣಸೆಟ್ಟಿ. ಹೀಗೆ ಕಥಾಕೋಶಗಳು ಮಹಿಳಾಲೋಕದಲ್ಲಿ ಬಹು ಜನಪ್ರಿಯವಾಗಿದ್ದವೆಂದು ಭಾವಿಸಬಹುದು. ಆದಿದೇವನ ಸುಕುಮಾರಚರಿತ್ರೆಯ ಕೆ ಎ 267 ಸಂಖ್ಯೆಯ ಹಸ್ತಪ್ರತಿಯಲ್ಲಿ ಮೂಲಪ್ರತಿಕಾರನ ಸ್ವವಿವರವುಳ್ಳ ಪದ್ಯ ಹಾಗೂ ಪ್ರಸ್ತುತ ಪ್ರತಿಕಾರ ನೀಡಿರುವ ಪುಷ್ಪಿಕೆಯಿಂದ ಇದು ಮಹಿಳೆಯರಿಗೆ ಸಿದ್ಧವಾದ ಪ್ರತಿಯೆಂಬುದು ವೇದ್ಯವಾಗುತ್ತದೆ. ಮೂಲ ಪ್ರತಿಕಾರ "ತನ್ನ ಪುತ್ರಿತ್ರಯುಗಳನೋದಿಸಲೆಂದು ಬರೆದನು" ಈ ಪ್ರತಿಕಾರ ನೀಡಿರುವ "ಸ್ವಸ್ತಿ ಶ್ರೀ ಶಕವರ್ಷ 1468ನೆಯ ಪರಾಭವ ಸಂವತ್ಸರದ ವೈಶಾಖ ಸುದ ೧೬ ಶುಕ್ರವಾರದಲ್ಲಿ ಯೆದಲಾಪುರದ ಚಿನ್ನಪಾರ್ಶ್ವನಾಥನ ಶ್ರೀಪಾದ ಸನ್ನಿಧಾನದಲ್ಲಿ ಅಕ್ಕನೂರ ಸಿರಗಪನು ಮಂಡಿಗೆಯ ಪಾಯಣನ ಮಗಳು ಪದುಮಾಯಿಗೆ ಬರದುಕೊಟ್ಟ ಸುಕುಮಾರ ಚರಿತ್ರೆಯು ಪುಸ್ತಕಕ್ಕೆ ಮಂಗಳ ಮಹಾಶ್ರೀ' ಎಂಬ ವಿವರಗಳಿಂದ ಆದಿದೇವನ ಸುಕುಮಾರ ಚರಿತ್ರೆ ಹೆಣ್ಣುಮಕ್ಕಳ ಕಲಿಕೆಯ ಭಾಗವಾಗಿದ್ದಿತೆಂದು ಊಹಿಸಬಹುದು. ಪುಣ್ಯಾಸ್ರವ ಕಥಾಕೋಶದ ಕೆ ಎ 604 ಹಸ್ತಪ್ರತಿಯನ್ನು ಧರಣೇಂದ್ರನೆಂಬ ಲಿಪಿಕಾರ ಕ್ರಿ. ಶ. 1842 ರಲ್ಲಿ "ಸತಿ ಸಹ ಸ್ವಪಠನಾರ್ಥವಾಗಿಯುಂ ಜ್ಞಾನೋದಯ ನಿಮಿತ್ತವಾಗಿಯುಂ " ಬರೆದಿರುವುದು ತಿಳಿದುಬರುತ್ತದೆ. ಪ್ರಾಚೀನ ಜೈನಗ್ರಂಥಗಳು ಇಲ್ಲಿಯವರೆಗೂ ಉಸಿರಾಡುತ್ತ ಉಳಿದು ಬಂದಿರುವುದಕ್ಕೆ ಜೈನ ಮಹಿಳೆಯರೂ ಕಾರಣರಾಗಿದ್ದಾರೆ.

ತೀರ್ಥಂಕರ ಪುರಾಣಗಳನ್ನು ಪ್ರತಿಮಾಡುವ ಲಿಪಿಕಾರ ತಾನು ನಕಲು ಮಾಡುತ್ತಿರುವುದು ಒಂದು ಸಾಹಿತ್ಯ ಕೃತಿ ಎನ್ನುವುದಕ್ಕಿಂತ ಮೇಲಾಗಿ ಪುಣ್ಯಪುಂಜವೆಂದು ಭಕ್ತಿಭಾವವನ್ನು ತೋರಿರುವುದು ಕಂಡುಬರುತ್ತದೆ. ನೇಮಿಚಂದ್ರನ ನೇಮಿನಾಥಪುರಾಣದ ಕೆ ಎ 59ನೇ ಸಂಖ್ಯೆ ಹಸ್ತಪ್ರತಿಯ ಕಡೆಯಲ್ಲಿ

"ಬರೆ ಶಾಲಿವಾಹನಂ ಬೇಗದೆ ಶಕವರುಷಂ ಸಾರೆ ಸಂವತ್ಸರಂ ಸಾ
ಸಿರದಾಜ್ಯೂಟಾಲು ಸಂದೋಪ್ಪುವ ಕಲಿಯುಗ ರಕ್ತಾಕ್ಷಿಯೂ ಮಾಘ ಮಾಸಾ
ಪರ ಪಕ್ಷಂ ಸಚ್ಚತುರ್ದಸ್ಯ ಹಿಮಕಿರಣವಾರಂ ಬರಲ್ ಪದ್ಮರಾಜಂ

ಬರೆದತ್ಯಂತಕ್ಕಟಿಂದತ್ಯಧಿಕ ಭಕತಿಯಿಂದೀ ನೇಮಿಸತ್ಕಾವ್ಯರ' ಜಂಬಲ್ಲಿ ಕಾವ್ಯದ ಬಗೆಗೆ ಲಿಪಿಕಾರನ ಭಕ್ತಿಭಾವ ಹೊರಹೊಮ್ಮಿದೆ. ಮಹಾಬಲನ ನೇಮಿನಾಥಪುರಾಣದ ಕೆ

595ನೆಯ ಸಂಖ್ಯೆ ಪ್ರತಿಯ ಲಿಪಿಕಾರ ಕೂಡ ಪದ್ಮರಾಜ. ಪೂರ್ವೋಕ್ತ ಪ್ರತಿಕಾರ ಈತ ಏಕವ್ಯಕ್ತಿಗಳಾಗಿರಬಹುದು.

ರಾಮಾಯಣ ಕಾವ್ಯ ಯಾವುದೇ ಧರ್ಮದ ಚೌಕಟ್ಟಿನಲ್ಲಿ ಅರಳಿರಲಿ ಭಾರತೀಯರಿಗೆ ಪರಮಪೂಜ್ಯವಾದುದು. ರಾಮಾಯಣ ಪಾರಾಯಣ ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ತಂದೆಯೊಬ್ಬ ತನ್ನ ಮಕ್ಕಳು ಓದಲೆಂದು ಪ್ರತಿಮಾಡಿರುವುದು ನಾಗಚಂದ್ರನ ರಾಮಾಯಣದ ಕೆ 1291 ಸಂಖ್ಯೆಯ ಪ್ರತಿಯ ಅಂತ್ಯದ ವಿವರದಿಂದ ಸ್ಪಷ್ಟವಾಗುತ್ತದೆ. "ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕಾಬ್ದ ೧೭೬೮ನೆ ಪರಾಭವನಾಮ ಸಂವತ್ಸರದ ಶ್ರಾವಣ ಶುದ್ಧ ೮ ಮೀ ಗುರುವಾರ ದಿವಸದಲ್ಲು ಬೆಳುಗಲಿ ದೇವಯ್ಯ ಉಪಾಧ್ಯರ ಮಗ ದೇವರಸಯ್ಯ ಉಪಾಧ್ಯನು ತನ್ನ ಮಕ್ಕಳಾದ ನಾಗಚಂದ್ರಯ್ಯ ದೇವಚಂದ್ರಯ್ಯ ಸಹಾ ಓದಿಕೊಳ್ಳು ನಿಮಿತ್ತವಾಗಿ ಬರೆದುಕೊಟ್ಟ ರಾಮಚರಿತ್ರೆಯ ಪುಸ್ತಕಕ್ಕೆ ಭದ್ರಂ ಶುಭಂ ಮಂಗಲಂ." ಇದೇ ಕೃತಿಯ ಕೆ 144 ಸಂಖ್ಯೆಯ ಹಸ್ತಪ್ರತಿಯನ್ನು ನಾಗರಾಜಯ್ಯ ಎಂಬ ಪ್ರತಿಕಾರ ಮೈಸೂರಿನ ಶಾಂತೀಶ್ವರಸ್ವಾಮಿ ಬಸದಿಯಲ್ಲಿ ಪಾರಾಯಣ ಮಾಡಲೋಸುಗ ಪ್ರತಿಮಾಡಿದ್ದಾನೆ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾ: ೧೭೭೩ನೇ ವಿರೋಧಿ ಕೃತು ನಾಮಸಂವತ್ಸರದ ಶ್ರಾವಣ ಬಹುಳ ೧೪ ಚಂದ್ರವಾರ ಸೂರ್ಯನು ಪೂರ್ವಪ್ರತಿಷ್ಠೆಯಾದ ಘಳಿಗೆ ೧೨ ಕ್ಕೆ ಸಲುವ ತುಲಾಲಗ್ನದಲ್ಲಿ ಶಾಂತೀಶ್ವರಸ್ವಾಮಿಯವರ ದೇವಸ್ಥನದ ಮುಖಮಂಟಪದಲ್ಲಿ ನಾಗರಾಜಯ್ಯನು ತನಗೆ ಬೇಕಾಗಿ ಪಾರಾಯಣ ಮಾಡು ಬಗ್ಗೆ ಶ್ರೀರಾಮಕಥಾವತಾರವನ್ನು ಸಂಪೂರ್ಣವಾಗಿ ಪರಾಭವ ಸಂವತ್ಸರದ ಭಾದ್ರಪದ ಶ್ಧು 1 ಲಾಗಾಯಿತ್ತು ಯಿದರಿಗೆ ಸಂಪೂರ್ಣವಾಗಿ ಬರದ್ದಕ್ಕೆ ಭದ್ರ ಶುಭಂ ಮಂಗಸ್ಯಾ." ಇದೇ ಶಾಂತೀಶ್ವರಸ್ವಾಮಿ ಬಸದಿಯಲ್ಲಿ ಭಟ್ಟಾಕಳಂಕನ ಶಬ್ದಾನುಶಾಸನದ ಕೆ 281 ಸಂಖ್ಯೆಯ ಪ್ರತಿಯನ್ನು ಕ್ರಿ. ಶ 1782 ರಲ್ಲಿ ನಕಲು ಮಾಡಿದುದಾಗಿ ತಿಳಿದು ಬರುತ್ತದೆ. ಭಾಸ್ಕರನ ಜೀವಂಧರ ಚರಿತೆಯ ಕೆ 753 ಸಂಖ್ಯೆಯ ಹಸ್ತಪ್ರತಿಯನ್ನು ಮೈಸೂರು ದೇವಸ್ಥಾನದ ರಾತ್ರಿ ಅರ್ಚಕ ನಾಗರಾಜಯ್ಯನು ಜಿನಚಂದ್ರಯ್ಯನಿಗೆ ಬರೆದುಕೊಟ್ಟ ಸಂಗತಿ ಪುಷ್ಟಿಕೆಯಲ್ಲಿ ಉಕ್ತವಾಗಿದೆ. ಇದೇ ಕೃತಿಯ ಕೆ 762 ಹಸ್ತಪ್ರತಿಯನ್ನು ಪುಟ್ಟಯ್ಯನು ವಿಜಯಣ್ಣ ಪಂಡಿತರಿಗೆ ಪ್ರತಿಮಾಡಿ ಕೊಟ್ಟದ್ದು ಕೂಡ ಮೈಸೂರಿನಲ್ಲಿಯೆ ಎಂಬುದು ಗಮನಾರ್ಹ.

ಪ್ರತಿಕಾರರು ತಾವು ಮಾತೃಕೆಯಾಗಿಟ್ಟುಕೊಂಡು ಹಸ್ತಪ್ರತಿಗೆ ನಿಷ್ಠರಾಗಿರುವುದು ಅಪೇಕ್ಷಣೀಯ ಮತ್ತು ಅತ್ಯಂತ ಅಗತ್ಯ. ಒಂದು ಹಸ್ತಪ್ರತಿ ಮೂಲಪ್ರತಿಯ ತದ್ರೂಪು ಅಥವಾ ಛಾಯಾಪ್ರತಿಯಾದಾಗ ಮಾತ್ರ ಕವಿಪಾಠ ಮಲಿನವಾಗದೆ ಶುದ್ಧವಾಗಿ ಉಳಿದು ಬರಲು ಸಾಧ್ಯವಾಗುತ್ತದೆ. ಬಹಳಷ್ಟು ಅಪಪಾಠಗಳು ಹಸ್ತಪ್ರತಿಕಾರರಿಂದ ಸಂಭವಿಸುವುದೆಂಬ ಅರಿವು ಲಿಪಿಕಾರರಿಗಿತ್ತು. ಆದುದರಿಂದ ಪ್ರತಿಯಲ್ಲಿ ದೋಷಗಳು ಕಂಡುಬಂದರೆ ತಾವು ಹೊಣೆಗಾರರಲ್ಲವೆಂಬುದನ್ನು ಅರುಹಲು ಮೂಲಪ್ರತಿಗೆ ಸಮಾನವಾಗಿ ಬರೆದಿರುವೆವೆಂದು ನಿವೇದಿಸುವುದುಂಟು. ನಾಗರಾಜಕವಿಯ ಪುಣ್ಯಾಸ್ರವದ ಕೆ 1789 ಸಂಖ್ಯೆಯ ಹಸ್ತಪ್ರತಿಯ ಅಂತ್ಯದಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ

ಶಕಾಬ್ದ ೧೬೬೧ನೆಯ ಸಿದ್ಧಾರ್ಥಿ ಸಂವತ್ಸರದ ಜೇಷ್ಟ ಶು ೧೩ ಗುರುವಾರ ಶ್ರೀರಂಗಪಟ್ಟಣದ ಅಣ್ಣಯ್ಯನವರ ಕುಮಾರರು ಗೋಮಟಯ್ಯನವರಿಗೆ ತಂಮಡಹಳ್ಳಿ ಬೊಮ್ಮರಸಯ್ಯನ ಮಗನು ದ್ಯಾವಯ್ಯನ ದ್ವಿತೀಯಪುತ್ರ ಬೊಮ್ಮರಸಯ್ಯನು ಪ್ರತಿಸಮಾನವಾಗಿ ಬರೆಮಕೊಟ್ಟ ಪುಣ್ಯಾಸ್ರವದ ಪೊಸ್ತುಕಕ್ಕೆ ಭದ್ರಂ ಶುಭಂ ಮಂಗಲಂ' ಎಂದು ಹೇಳಿದೆ. ಏಚಿಗನಹಳ್ಳಿ ದೇವರಸಯ್ಯನ ಮಗನು ಬೊಮ್ಮರಸಯ್ಯನು ಮಂಗರಸನ ಶ್ರೀಪಾಲಚರಿತೆಯ ಕೆ 1495/1 ಸಂಖ್ಯೆಯ ಪ್ರತಿಯನ್ನು ನಕಲು ಮಾಡುವಾಗ ಪ್ರತಿಸಮಾನ ಬರೆದಿರುವೆನೆಂದಿದ್ದಾನೆ. ಕುಮುದ ಚಂದ್ರನ ಪ್ರತಿಷ್ಠಾಕಲ್ಪದ ಕನ್ನಡ ಟೀಕಿನ ಕೆ 506 ಸಂಖ್ಯೆಯ ಪ್ರತಿಯು ಬಂಗವಾಡಿಪುರದ ಶಾಂತಿತೀರ್ಥೇಶ್ವರನ ಸನ್ನಿಧಿಯಲ್ಲಿ ಪ್ರತಿಸಮಾನವಾಗಿ ಬರೆದದ್ದಾಗಿದೆ. ಹರವೆಯ ಪರರಾಜಯ್ಯನು ಚಂದ್ರಸಾಗರವರ್ಣಿಯ ಮುಲ್ಲಾಶಾಸ್ತ್ರದ 1716 ಹಸ್ತಪ್ರತಿಯನ್ನು ಪ್ರತಿ ಮಾಡುವಾಗ ಇದೇ ಆಶಯವನ್ನು ವ್ಯಕ್ತಪಡಿಸಲಾಗಿದೆ. ಕೆ 368 ಸಂಖ್ಯೆಯ ಪದ್ಮಾವತಿ ಚರಿತೆಯನ್ನು ಪ್ರತಿಮಾಡಿದಾತ ಕೂಡ 'ಹೊಂಬುಚದ ಅಮ್ಮನವರ ಮೂಲಾಪ್ರತಿ ನೋಡಿಕೊಂಡೆ' ಬರೆದುದಾಗಿ ಹೇಳಿದ್ದಾನೆ.

ಹಸ್ತಪ್ರತಿಕಾರ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಅಕ್ಷರಜ್ಞಾನವಿದ್ದರೆ ಮಾತ್ರ ಸಾಲದು. ಪ್ರಾಚೀನ ಕಾವ್ಯಾಭ್ಯಾಸ, ಸತತ ಅಧ್ಯಯನಶೀಲತೆಯ ಬೆಂಬಲವಿದ್ದರೆ ಸ್ಖಾಲಿತ್ಯಗಳನ್ನು ನಿವಾರಿಸಬಹುದು. ಸಾಮಾನ್ಯವಾಗಿ ಜೈನ ಹಸ್ತಪ್ರತಿಕಾರರು ಬಸದಿಯ ಸ್ಥಾನಿಕರೇ, ಪಂಡಿತ ಕುಟುಂಬದ ಹಿನ್ನೆಲೆಯಿಂದ ಬಂದವರೆ ಆದುದರಿಂದ ಸ್ಖಾಲಿತ್ಯಗಳು ಕಡಿಮೆ. ಕೆಲವು ಪ್ರತಿಕಾರರು ಕಾವ್ಯರಚನಾ ಶಕ್ತಿಯನ್ನು ಪಡೆದಿದ್ದರು. ಅಂಥವರಲ್ಲಿ ರಾಯಸದ ಲಕ್ಷ್ಮೀಪತಿಯ ಹೆಸರು ಎದ್ದು ಕಾಣುವಂಥದ್ದು. ಈತ ಅಜಿತನಾಥಪುರಾಣದ ಕೆ ಎ 53 ಸಂಖ್ಯೆಯ ಹಸ್ತ ಪ್ರತಿಯನ್ನು ಪ್ರತಿ ಮಾಡಿರುವನಲ್ಲದೆ ಗ್ರಂಥಾಂತ್ಯದಲ್ಲಿ ವೃತ್ತಕಂದಗಳನ್ನು ರಚಿಸಿ ಪ್ರತಿಯ ಕಾಲ, ಪ್ರತಿಮಾಡಿಸಿಕೊಂಡ ಮೈಸೂರು ದೊರೆ ಚಿಕ್ಕ ದೇವರಾಜನ ವರ್ಣನೆ ನೀಡಿದ್ದಾನೆ:

ಶಾಲೀವಾಹನ ಶಕಾಬ್ದ ಸಾವಿರದಯ್ನೆನೂರೆಂಭತ್ತೈದ ಮೆ
ವಿಲೋಕೃತಿ ಸೌಖ್ಯಮಂ ಕುಡುವ ಶೋಭಕೃತ್ಸಮಾಭಾದ್ರದೋ
ಳ್ಬಾಲೇಂದ್ರಾತ್ಮಜ ಶುಕ್ಲಪಕ್ಷ ತ್ರಿತಯೊಳ್ಚಿಕ್ಕೇಂದ್ರ ಭೂಮಿಶಂಗೆಂ
ದಾ ಲಕ್ಷ್ಮಾಖ್ಯ ಬುಧೋತ್ತಮಂ ಬರೆದುಕೊಟ್ಟಂ ಜೈನಕೃತ್ಯಾಖ್ಯಮಂ''

ಸಿರಿಯೊಳ್ ಗರ್ವಿಸಿ ಬೇಳ್ಪವರ್ಗೆ ಕುಡನ್ಯಾಯತ್ನದಿಂ ಜೀವಮಂ
ಪೊರೆವೃತ್ತಂ ರಣಮೆಂದೊಡಂಜಿ ಭಯದಿಂ ಕಾಲ್ಗೆಟ್ಟು ಚಿಂತಿಪ್ಪ ಭೂ
ವರರಂ ಪುಟ್ಟಿಸಿ ಪದ್ಮಜಂ ಧರಣಿಯೊಳ್ ಹಾಸ್ಯಕ್ಕೆ ಪಕ್ಕಾದನೆಂ
ದೊರೆವಂ ಮೈಸೂರ ಚಿಕ್ಕಭೂರಮಣ ತಾನೇಂ ಚಾಗಿಯೋ ಧೀರನೋ''

ಶ್ರೀರಂಗೇಶ ತ್ರಿಣೇಶಸ್ಸಿರಿಗಿರಿ ತನುಜಾನಾರಿ ಮುಖ್ಯಾಮರರ್ಮೈ
ಸೂರ ಶ್ರೀ ಚಿಕ್ಕದೇವರಾಜಾವನಿಪ್ರತಿಗಖಿಳೋರ್ವಿ ಸಮಾಜಸ್ಸು
ಶೌರ್ಯೋದ್ದಾರಾಯುಃ ಪುತ್ರಮಿತ್ರಾವಳಿಯನೊಲಿಪಿಸಂದಿತ್ತು ರಕ್ಷಿಕ್ಕೆ ಧಾತ್ರಿ
ನಾರಿಂದು ಸೂರ್ಯತಾರಾನಿಲರುದಧಿ ಮಹಾಮೇರುಮಿರ್ಪನ್ನಮೀಗಳ್''

ಶ್ರೀಯುತ ಮೈಸೂರ ಚಿಕ್ಕಯ
ರಾಯನ ರಾಯಸದ ಲಕ್ಷ್ಮೀಪತಿ ಹರ್ಷದಿ ನಾ
ತ್ರೇಯ ಸುಗೋತ್ರನೆನಿಪ ತ
ದ್ರಾಯಗೆ ಬರೆದಿತ್ತನಜಿತನಾಥನ ಕೃತಿಯಂ"

ಈ ಪದ್ಯಗಳು ಲಕ್ಷ್ಮೀಪತಿಯ ಕಾವ್ಯರಚನಾ ಸಾಮರ್ಥ್ಯದ ಮೇಲೆ ಬೆಳಕು ಚೆಲ್ಲುತ್ತವೆ. ಈತ ಚಿಕ್ಕದೇವರಾಜನ ಆಶ್ರಯದಲ್ಲಿದ್ದನೆಂದು ತೋರುತ್ತದೆ. ಪ್ರಾಚೀನ ಕಾವ್ಯಗಳನ್ನು ಪ್ರತಿಮಾಡಿಸುವ, ಸಂರಕ್ಷಿಸುವ ಕಾರ್ಯದಲ್ಲಿ ಅನೇಕ ರಾಜಮಹಾರಾಜರು ಆಸಕ್ತಿ ತಳೆದಿದ್ದರು. ನೇಮಿಚಂದ್ರನ ಲೀಲಾವತಿ ಕಾವ್ಯದ ಕೆ 172 ಸಂಖ್ಯೆಯ ಹಸ್ತಪತಿಯನ್ನು ತಳಕಾಡದೇವರ ಉಪಾಧ್ಯಾಯರು ಹದಿನಾಡ ಅರಸರಿಗೆ ಪ್ರತಿ ಮಾಡಿಸಿಕೊಟ್ಟಿದ್ದರು: "ಶ್ರೀ ವಿಕೃತಿ ಸಂವತ್ಸರದ ಚಯಿತ್ರ ಶುದ್ಧ ತ್ರಯೋದಶಿಯೂ ಸೋಮವಾರ ಹದಿನಾಡ ಇಮ್ಮಡಿ ರಾಮರಾಜನಾಯಕರಿಗೆ ತಳಕಾಡದೇವರಸ ಉಪಾಧ್ಯಾಯರು ಬರೆದ ಲೀಲಾವತಿಗಂ ಮಂಗಲ ಮಹಾಶ್ರೀ ಶುಭಮಸ್ತು."

ನೇಮಿನಾಥಪುರಾಣದ ಕೆ ಎ 67 ಸಂಖ್ಯೆಯ ಹಸ್ತಪ್ರತಿಯ ಪ್ರತಿಕಾರ ಒಬ್ಬ ನಾದರೆ ಪ್ರತಿಮಾಡಿದ ವಿವರಗಳನ್ನೊಳಗೊಂಡ ಪದ್ಯರಚಿಸಿದಾತ ಮತ್ತೊಬ್ಬ. ಹಸ್ತಪ್ರತಿಯ ಅಂತ್ಯದಲ್ಲಿ ದೊರೆಯುವ ಪದ್ಯಗಳು ಹೀಗಿವೆ:

ವರಸತ್ವಂ ಶತದುಂದುಭಾಬ್ದದ ಸಭಾದ್ರಾಪೂರ್ವದ ದ್ವಾದಶೀ
ಬರೆ ಹೇಮಾದ್ರಿ ಜಿನೇಂದ್ರ ಪಾರ್ಶ್ವದ ಲಸತ್ ಶ್ರೀಪಾದ ಮೂಲಾಗ್ರದೊಳ್
ದುರಿತಾರಾತಿ ವಿನಾಶ ನೇಮಿಜಿನಪೌರಾಣಂ ಜಗತ್ಪಾವನಂ
ಬರಸಲ್ ಸದ್ಗುಣಿ ಪದ್ಮರಾಜನಿದು ಪೂರ್ಣಂ ನೇಮಿಚಂದ್ರಾಖ್ಯನಿಂ"

ಅತ್ಯಂತಾದರದಿಂ ಶುಭ
ಚಿತ್ತಂ ಮಲೆಯೂರ ಪದ್ಮರಾಜ ಲಿಖಿಸೆಂ
ದಿತ್ತಡೆ ತ್ರಿಕದಂಬ ಪುರಾ
ಶ್ರಿತ್ಯಂ ಗುಣಿ ನೇಮಿಚಂದ್ರ ನಾನಿದ ಬರೆದಂ"

ಜಯಬಲ ನಾರಾಯಣನುತ
ಜಯ ನಿರುಪಮ ನಿತ್ಯಸೌಖ್ಯನಿರ್ಮಲ ಚರಿತಾ
ಜಯತ್ರಿಭುವನ ಪೂರ್ಣಚಂದ್ರಾ
ಜಯಜಯಗುಣರುಂದ್ರ ಸಾಂದ್ರ ನೇಮಿಜಿನೇಂದ್ರಾ
ಏತತ್ಪದ್ಯತ್ರಯಂ ದೇವಚಂದ್ರಕೃತಂ"

ಮೇಲಿನ ಪದ್ಯಗಳನ್ನು ಕವಿ ದೇವಚಂದ್ರ ರಚಿಸಿರುವುದು ಪದ್ಯಭಾಗದ ಬಳಿಕ ಬರುವ ಸಣ್ಣ ಸೂಚನೆಯಿಂದ ಸ್ಪಷ್ಟವಾಗುತ್ತದೆ. ಈ ಪ್ರತಿಯನ್ನು ಬರೆಸಿದಾತ ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕು ಮಲೆಯೂರಿನ ಪದ್ಮರಾಜ. ಪ್ರತಿಕಾರ ತೆರಕಣಾಂಬಿ ವಾಸಿಯಾದ ನೇಮಿಚಂದ್ರ. ಹೀಗೆ ಈ ಪ್ರತಿ ವಿಶಿಷ್ಟವಾಗಿದೆ.

ಶಾಲಾ ಉಪಾಧ್ಯಾಯರಾಗಿದ್ದ ಮಲೆಯೂರಿನ ಪದ್ಮರಾಜ ಪಂಡಿತರೂ ಕೂಡ ಸಮ್ಯಕ್ತ್ವಕೌಮುದಿಯ ಕೆ. ಬಿ. 22 ಸಂಖ್ಯೆಯ ಪ್ರತಿಯನ್ನು ಕ್ರಿ. ಶ. 1889 ರಲ್ಲಿ ಸಿದ್ಧಪಡಿಸುವಾಗ ಪದ್ಯ ರಚಿಸಿದ್ದಾರೆ:

ಶ್ರೀಮತ್ಕನ್ನಡ ಸಮ್ಯ
ತ್ಕೌಮುದಿ ಕಥೆಯಂ ಪರಿಷ್ಕರಿಸಿ ಲಿಖಿಸಿದೆ ನಾಂ
ಆ ಮುತ್ರೈಹಿಕ ಫಲಮಂ
ಕಾಮಿಸಿ ಮಲೆಯೂರು ಪದ್ಮರಾಜೋಪಾಧ್ಯಂ''

ಬಿ. ಎಲ್. ರೈಸ್‌ರವರ ಕಟಾಕ್ಷ ಸಂಪಾದನಾರ್ಥಂ ಪುಸ್ತಕಮಿದಂ ಪದ್ಮರಾಜ ಪಂಡಿತೇನ ವಿಲಿಖ್ಯದತ್ತಂ ಚಿರಂ ಜೀಯಾತ್ ಎಂಬ ವಿವರದಿಂದ ಈ ಪ್ರತಿ ಬಿ. ಎಲ್. ರೈಸ್ ಅವರ ಪ್ರೇರಣೆಯಿಂದ ಸಿದ್ಧಪಡಿಸಿದ ಸಂರಕ್ಷಣ ಪ್ರತಿಯಾಗಿರಬಹುದೆಂದು ಊಹಿಸಬಹುದು.

ಹಸ್ತ ಪ್ರತಿಯನ್ನು ನಕಲು ಮಾಡುವ ಕಾರ್ಯ ಶ್ರಮಸಾಧ್ಯವಾದುದು. ಆದರೂ ಅನೇಕ ಪ್ರತಿಕಾರರು ತಮ್ಮ ಹೆಸರನ್ನು ಹೇಳಿಕೊಳ್ಳದೆಯೆ ಅಚ್ಚುಕಟ್ಟಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಕೆಲವರು ತಮ್ಮ ಹೆಸರನ್ನು ಕೈ ಬಿಟ್ಟು ಬರೆಯಲು ಉತ್ತೇಜಿಸಿದ ವ್ಯಕ್ತಿಯನ್ನು ಮಾತ್ರ ಸ್ಮರಿಸಿದ್ದಾರೆ. ಶಾಂತೀಶ್ವರ ಪುರಾಣದ ಕೆ 1486 ಸಂಖ್ಯೆಯ ಪ್ರತಿಯಲ್ಲಿ "ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ 1490 ಸಂದು ವರ್ತಮಾನಕ್ಕೆ ಸಲುವ ಯುವ ಸಂವತ್ಸರದ ಶ್ರಾವಣ ಶು. ೫ ಸಿಂಗೇರಿಯ ಸಣ್ಣ ಸೆಟ್ಟಿಯ ಮಗ ಭುಜಬಲಿ ಶೆಟ್ಟಿಯ ಬರೆಸಿದ ಶಾಂತಿನಾಥ ಪುರಾಣದ ಪುಸ್ತಕಕ್ಕೆ ಶುಭಮಸ್ತು ಮಂಗಳ ಮಹಾಶ್ರೀ ಎಂದು ಭುಜಬಲಿಶೆಟ್ಟಿಯನ್ನು ಮಾತ್ರ ಉಲ್ಲೇಖಿಸಿದೆ. ಅಜಿತನಾಥ ಪುರಾಣದ ಕೆ 8 ಹಸ್ತಪ್ರತಿಯಲ್ಲಿ ಕೂಡ "ಅರಸಮ್ಮರಸರು ಬರೆಸಿದ ಪುಸ್ತಕ" ಎಂದಷ್ಟೆ ಹೇಳಿದೆ.

ಜೈನಕೃತಿಗಳನ್ನು ಬಹುಪಾಲು ಜೈನರೆ ಪ್ರತಿಮಾಡಿದ್ದರೂ ಅಪವಾದವೆಂಬಂತೆ ಪಂಪನ ಆದಿಪುರಾಣದ ಕೆ. ಎ 7 ಹಸ್ತಪ್ರತಿಯನ್ನು ವೈದಿಕನೊಬ್ಬ ಪ್ರತಿಮಾಡಿರುವುದು ಗಮನಾರ್ಹವಾಗಿದೆ-"ಕಾಳಯುಕ್ತಿ ಸಂವತ್ಸರದ ಕಾರ್ತೀಕ ಬಹುಳ ೧೪ ಆದಿವಾರದಲ್ಲು ನಾಗಮಂಗಲದ ಸ್ಥಳದ ಶಾನುಭಾಗ ಕುಕ್ಕೆ ಲಿಂಗರಸರ ವೆಂಕಪ್ಪಯ್ಯನವರ ಮಗ ತಿರುಮಲಯ್ಯ ಬರೆದ ಆದಿಪುರಾಣದ ಪುಸ್ತಕಕ್ಕೆ ಶುಭಮಸ್ತು ಶ್ರೀ ಶ್ರೀ ಶ್ರೀ ಆಶ್ವಾಸ ೧೬ಕ್ಕ ಮಂಗಳಂ ಶಾಲೀವಾಹನ ಶಕ 863 ನೇ ಪ್ಲವನಾಮ ಸಂವತ್ಸರ ಕಾರ್ತೀಕ ಶುದ್ಧ ಪಂಚಮೀ ಭಾನುವಾರ ಮೂಲಾನಕ್ಷತ್ರದಲ್ಲಿಯೂ ಆದಿಪುರಾಣ ಮುಗಿಯಿತೆಂಬುದಾಗಿ ಹೇಳಲ್ಪಟ್ಟಿದೆ. ಹಾಗೆ ಆದರೆ 1795ನೇ ಶಾಲಿವಾಹನ ಶಕವರ್ಷವುಳ್ಳ ಈ ಶ್ರೀಮುಖನಾಮ ಸಂವತ್ಸರಕ್ಕೆ 932 ಸಂವತ್ಸರಂಗಳಾಯಿತ್ತು."

ಭಾಸ್ಕರನ ಜೀವಂಧರ ಚರಿತೆಯ ಕೆ 311 ಸಂಖ್ಯೆಯ ಹಸ್ತಪ್ರತಿಯಲ್ಲಿ "ಶ್ರೀ ಮತ್ಪಂಡಿತಯ್ಯನು ಬರೆದುಕೊಟ್ಟ ಜೀವಂಧರ ಷಟ್ಪದಿಗೆ ಭದ್ರಂ ಭೂಯಾತ್ ಸನ್ 1891 ಖರನಾಮ ಸಂವತ್ಸದ ಆಶ್ವೀಜ ಬಹುಳ 5 ಗುರುವಾರದಲು. . . . . . ." ಎಂಬ ಬರಹವಿದ್ದು

ಮುದ್ರಣಯಂತ್ರ ಬಳಕೆಗೆ ಬಂದ ಮೇಲೂ ತಾಳೆಗರಿಯ ಮೇಲೆ ಕಂಡರಿಸಿರುವುದನ್ನು ಕಾಣಬಹುದು.

ಧನ್ಯಕುಮಾರ ಚರಿತೆಯ ಕೆ ಎ 256/1ಹಸ್ತಪ್ರತಿಯ ಅಂತ್ಯದಲ್ಲಿ "ಕೊಲ್ಲಸಲುರದ್ಮನೆ ಸಿಚಿ ಮಾರ ೨೦ ಸದು ಸುಕ್ರವರ ಕರಸಂಹತ್ಸರದಲ್ಲಿ ಬರದು ಪೂರುತಿ ಆಯ್ತು ಕೊಳುಕೊಟ್ಟೆ ಅಣ್ಣೆಯ್ಯವಸ್ಯನ ಚಂದ್ರಣ್ಣ ಬರದ ಧನ್ನಕುಮಾರಚರಿತೆಗೆ ಮಂಗಳ ಮಹಾಶ್ರೀ ಬುದ್ಧಿವಿವೇಕಿಗಳಾದಂತವರ ಅಡಿಗಳಿಗೆ ತ್ರಿಕಾಲದಲ್ಲು ಭಕ್ತಿಯಿಂದ ಯೆರಗುತ್ತಯಿದ್ದೇನೆ ಶ್ರೀ" ಎಂಬ ಬರಹದಿಂದ ಲಿಪಿಕಾರ ಅಷ್ಟು ವಿದ್ಯಾವಂತನಲ್ಲವೆಂಬುದು ಅಶುದ್ಧವಾದ ಬರವಣಿಗೆಯಿಂದ ವ್ಯಕ್ತವಾಗುತ್ತದೆ. ಆದರೆ ಬುದ್ಧಿವಂತರೂ ವಿವೇಕಿಗಳೂ ಆದ ವಿದ್ವಾಂಸರ ಬಗೆಗೆ ಆತ ತೋರುವ ಗೌರವಾದರಗಳು ಮೆಚ್ಚುವಂಥಹುದು.

ಮೈಸೂರು ಪದ್ಮಣಯ್ಯನು ಒಬ್ಬ ವೃತ್ತಿನಿರತ ಲಿಪಿಕಾರನಿದ್ದು ವೃತ್ತವಿಳಾಸನ ಧರ್ಮಪರೀಕ್ಷೆಯ ಕೆ 133 ಸಂಖ್ಯೆಯ ಹಸ್ತಪ್ರತಿಯನ್ನು ಪ್ರತಿಮಾಡಿ ಕಡೆಯಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ 1676ನೆ ಭಾವ ನಾಮ ಸಂವತ್ಸರದ ವೈಶಾಖ ಶುದ್ಧ ೧೫ ಸೋಮವಾರ ದಿವಸದಲ್ಲು ಮಹಿಶೂರ ಆಠವಣೇ ಚಾವಡಿಯ ಕರಣಿಕ ದೇವರಸಯ್ಯನವರ ಮಗ ಪದುಮಣ್ಣೆಯನು ಧರ್ಮಪರೀಕ್ಷೆಯು ಬರೆನುಕೊಟ್ಟುಯಿರುವಂತಾ ಪುಸ್ತುಕವನೋದಿದವರ್ಗೆ ಮನಮುಟ್ಟಿ ಕೇಳಿದವರ್ಗೆ ಪ್ರೋದಿಸಿ ಕೇಳಿದವರ್ಗೆ ಸದ್ಧರ್ಮಾಭಿವೃದ್ಧಿರಸ್ತು" ಎಂದು ಗ್ರಂಥವನ್ನು ಸ್ವತಃ ಓದಿದವರಿಗೆ ಕೇಳಿದವರಿಗೆ ಅನ್ಯರಿಂದ ಓದಿಸಿದವರಿಗೆ ಶುಭ ಕೋರಿದ್ದಾನೆ. ಅಧ್ಯಯನ ಸಂಸ್ಥೆಯಲ್ಲಿರುವ ಕೆ ಎ 47 ಮತ್ತು ಕೆ ಎ 217 ಹಸ್ತಪ್ರತಿಗಳು ಮೇಲೆ ತಿಳಿಸಿದ ಕೆ 133 ಸಂಖ್ಯೆ ಹಸ್ತಪ್ರತಿಯ ನಕಲುಗಳಾಗಿವೆ.

ಕೆಲವು ಹಸ್ತಪ್ರತಿಕಾರರು ತಾವು ಪ್ರತಿಮಾಡಲು ಆರಂಭಿಸಿದ ಮತ್ತು ಮುಕ್ತಾಯ ಮಾಡಿದ ದಿನ ಕಾಲವನ್ನು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಚಂದ್ರಸಾಗರವರ್ಣಿಯ ಪರಶುರಾಮಭಾರತದ ಕೆ. ಎ 60 ಸಂಖ್ಯೆಯ ಕಾಗದದ ಪ್ರತಿಯನ್ನು ಪಿರಿಯಾಪಟ್ಟಣದ ವೀರಣ್ಣನು ಪ್ರತಿಮಾಡಲು ತೆಗೆದುಕೊಂಡ ಕಾಲ ಆರು ತಿಂಗಳೆಂಬುದು ಗ್ರಂಥಾಂತ್ಯದ ಬರಹದಿಂದ ತಿಳಿದುಬರುತ್ತದೆ. ಹಸ್ತಪ್ರತಿ ಇರುವಲ್ಲಿಗೆ ಹೋಗಿ ಪ್ರತಿಕಾರರು ತಮಗೆ ಬೇಕಾದ ಅಥವಾ ಅನ್ಯರಿಗೆ ಅಗತ್ಯವಿರುವ ಕೃತಿಗಳನ್ನು ಪ್ರತಿ ಮಾಡುತ್ತಿದ್ದರೆಂದು ತೋರುತ್ತದೆ. ತೋವಿನಕೆರೆ ವೀರಭದ್ರಪ್ಪನವರ ಪುಟ್ಟಣ್ಣನು ಉರುಡುಗೆರೆಯಲ್ಲಿ ಭವ್ಯಾಮೃತ ಮಹಾಪುರಾಣವನ್ನು ಎರಡು ತಿಂಗಳ ಅವಧಿಯಲ್ಲಿ ಪ್ರತಿಮಾಡಿದನೆಂಬುದು ಕೆ. 594 ಹಸ್ತಪ್ರತಿಯಿಂದ ವಿದಿತವಾಗುತ್ತದೆ. ಶಿಶುಮಾಯಣನ ಅಂಜನಾಚರಿತೆಯ ಕೆ 854 ಹಸ್ತಪ್ರತಿಯನ್ನು ಬರೆದ ಬೊಮ್ಮರಸ ಪ್ರತಿ ಮಾಡಿದ ಕಾಲವನ್ನು ನಿರ್ದೇಶಿಸಿದ್ದಾರೆ.

ಲಿಪಿಕಾರರು ಗ್ರಂಥಾಂತ್ಯದಲ್ಲಿ ಪ್ರತಿ ಮಾಡಿದ ಕಾಲ, ಸ್ಥಳಗಳ ವಿವರಗಳೇ ಅಲ್ಲದೆ ತಮ್ಮ ವಂಶದ ಬಗೆಗೂ ಹೇಳಿಕೊಳ್ಳುವುದುಂಟು. ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ನಾಗಚಂದ್ರನ ಮಲ್ಲಿನಾಥಪುರಾಣದ ಕೆ 15 ಹಸ್ತಪ್ರತಿ. ಇದರ ಅಂತ್ಯದಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ 1639 ಸಂದಾ ವರ್ತಮಾನ ವಿಳಂಬಿ ಸಂವತ್ಸರೇ

ಉತ್ತರಾಯಣೇ ವಸಂತರುತೌ ಮಧುಮಾಸಪ್ರಯುಕ್ತೆ ಬಲಕ್ಷಪಕ್ಷೆ ಸಂತಾಸಸಪ್ತಮಿ ಸತ್ತಿಥೌ ವಾಚಸ್ಪತಿ ವಾಸರಸ್ಯ ದಿನಮಣಿದುದಯೆ ದೂರ್ಧ್ವರ್ಮೇಕ ಪಿಂಶತಿ ಘಟಿಕಾ ನಂತರೆ ಪಂಚಾಸ್ಯಲಗ್ನದಲ್ಲಿ ಮತ್ತಿತ್ತಾಲೂನಗರಿತಿಯಕೃತ್ರಿಮ ಚೈತ್ಯಾಲಯದೊಳೊಪ್ಪುತಿರ್ಪ ಸಕಲ ಗುಣನಿಧಾನಂ ಸರ್ವಗೀರ್ವಾಣನಾಥಂ ಕುವಲಯ ಸಖಮಿತ್ರಂ ಭಾರತಿ ಭಾಳನೇತ್ರಂ ತುಹಿನ ಗಗನ ಮೂರ್ತಿಂಭಾನುಕಲ್ಪಾಂತ ಕೀರ್ತಿಂ ತ್ರಿಭುವನ ನಮತಾಖ್ಯಂ ದೇವ ಪಾರಿಶ್ವನಾಥಂ ಇಂತತಿಶಯ ಗುಣನಿಳಯನಪ್ಪ ಕಮಠೋಪಸರ್ಗ ಪಾರಿಶ್ವನಾಥ ತೀರ್ಥಂಕರ ಪಾದಪಯೋಜ ಸಮೀಪದೊಳು ತತ್ಪುರ ವಾಸಿಗಳಪ್ಪ ಜೈನ ವಿಪ್ರೋತ್ತಮ ಜನಯಾಜನಾದ್ಯಯನಾದ್ಯ ಪನದಾನಪ್ರತಿ ಗ್ರಹಾನುಗ್ರಹ ಪ್ರಶಸ್ತ ತ್ರಿಕಾಲ ಸಂಧ್ಯೋಪಾಸನ ಜಪ ದೇವಋಷಿ ಪಿತೃತರ್ಪಣಾದಿ ನಿತ್ಯಾನುಷ್ಠಾನ ತೀರ್ಥಯಾತ್ರಾ ಪ್ರತಿಷ್ಠಾಷ್ಟಮಿ ಚತುರ್ದಶ್ಯಾಷ್ಟಾಹ್ನಿಕಾದಿ ಪರ್ವ ವಿಶಿಷ್ಟಾದಾನ ಧೃತಾದಿ ನೈಮಿತ್ತಕನಪ್ಪ ಶ್ರೀವತ್ಸಗೋತ್ರ ಔಪಸಕ ಸೂತ್ರ ಕಾಶ್ಯಪ್ರವರ ವೃತ್ತಾನುಯೋಗ ಶಾಖೋದಯನಾದ ದೇವರಸಯ್ಯನ ಸೇವ್ಯಶೃಂಗಾರ ಪ್ರವರ್ತನ ದೇವ ಗುರುಭಕ್ತಿಬಂಧುಜನಾಬ್ಜಮಿತ್ರೋದಯ ಸ್ವಧರ್ಮ ಕಾವ್ಯಾನುಸೇವ್ಯನಾದ ಬೊಮ್ಮರಸಯ್ಯನಿಗೆ ತದ್ಗೋತ್ರಜ ತದ್ವಿರುದಾವಳಿ ವಿರಾಜಮಾನನಾದ ಪಡಣದಣದ ಪುರಿವಾಸ ಅಮರಚಂದ್ರನ ಗರ್ಭಜನಪ್ಪ ಸ್ನೇಹಗುಣಪ್ರಶಸ್ತನಾದ ವಿಜೈಯ್ಯನೂ ಮಲ್ಲಿನಾಥ ಪುರಾಣಮ ಮನವೊಲ್ದು ಲಿಖಿಸಿದೆ" ಎಂಬ ಭಾಗವ ಲಿಪಿಕಾರನ ಶೈಲಿಯನ್ನು ಗಮನಿಸಿದಾಗ ಈತನಿಗೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಪರಿಶ್ರಮವಿದ್ದಂತೆ ತೋರುತ್ತದೆ.

ಮಾತೃದೇವೋಭವ, ಪಿತೃದೇವೋಭವ ಆಚಾರ್ಯದೇವೋಭವ ಎಂಬ ಮಾತಿನಂತೆ ಲಿಪಿಕಾರರು ಹಸ್ತಪ್ರತಿಯಲ್ಲಿ ತಮ್ಮ ತಂದೆ ತಾಯಿ ಅಥವಾ ಗುರುವಿನ ಹೆಸರು ಹೇಳುವುದುಂಟು. ನಾಗರಾಜಕವಿಯ ಪುಣ್ಯಾಸ್ರವದ ಕೆ 153 ಹಸ್ತಪ್ರತಿಯನ್ನು ಸಿದ್ಧಪಡಿಸಿದ ಪಂಡಿತ ಶ್ಯಾಮಣ್ಣನು ತಾನು "ಶ್ರೀಮದಭಿನವ ಲಕ್ಷ್ಮೀಸೇನಾಚಾರ್ಯ ಶ್ರೀಮದಭಿನಂದನ ದೇವ ನಿರ್ಗಂಥಚಾರ್ಯರ ಶಿಷ್ಯ" ಎಂದು ಹೇಳಿಕೊಂಡಿದ್ದಾನೆ. ಪಂಚಬಾಣನ ಭುಜಬಲಿ ಚರಿತೆಯ ಕೆ ಎ 239 ಸಂಖ್ಯೆಯ ಪ್ರತಿಯಲ್ಲಿ "ವಿದ್ಯಾಗುರು ಬೆಳುಗುಳದ ಸ್ಥಾನಿಕ ಚನ್ನಪ್ಪಯ್ಯನ ಪಾದಕ್ಕೆ ನಮಸ್ಕಾರ ಎಂದು ಗುರುಭಕ್ತಿ ಪ್ರಕಟಿಸಲಾಗಿದೆ. ಜೈನಾಚಾರ ಕೃತಿಯ ಕೆ 1641 ಹಸ್ತಪ್ರತಿಯಲ್ಲಿ ಕೂಡ "ಧರೆನುತ ಬೆಳ್ಗುಳ ಗ್ರಾಮದೊಳೊಪ್ಪುವ ಶ್ರೀಗೊಮ್ಮಟೇಶಲಾಯಳೂ ಗುರು ಪ್ರಭಾ ಚಂದ್ರಸ್ವಾಮಿಯವರ ಶಿಷ್ಯ ಪಾರಿಶ್ವ ಅಜ್ಜಿಗಳು"ಎಂದು ಗುರುವನ್ನು ನೆನೆಯಲಾಗಿದೆ.

ಪುಷ್ಪದಂತ ಪುರಾಣದ ಕೆ 51 ಸಂಖ್ಯೆಯ ಹಸ್ತಪ್ರತಿ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಪ್ರಾಚೀನ ಹಸ್ತಪ್ರತಿಗಳಲ್ಲಿ ಒಂದೆನಿಸಿದೆ. ಪ್ರತಿಕಾರ ತನ್ನ ಹೆಸರನ್ನು ಹೇಳದಿದ್ದರೂ "ಶಕವರ್ಷ 1358 ರಾಕ್ಷಸ ಸಂವತ್ಸರ ಚೈತ್ರ ಶು 3 ಬುಧವಾರ " ಎಂದು ಕಾಲವನ್ನು ಸೂಚಿಸಿರುವುದರಿಂದ ಕ್ರಿ. ಶ. 1436 ರಲ್ಲಿ ಪ್ರತಿಯಾಯಿತೆಂದು ಖಚಿತವಾಗಿ ತಿಳಿದುಬರುತ್ತದೆ.

ಚಾರುಕೀರ್ತಿ ಪಂಡಿತಾಚಾರ್ಯರ ಭವ್ಯ ಚಿಂತಾಮಣಿ ಎಂಬ ಗ್ರಂಥದ ಕೆ ಬಿ 26 ಜನಸಂಖ್ಯೆಯ ಪ್ರತಿಯ ಕಡೆಯಲ್ಲಿ "ಯುವ ಸಂವತ್ಸರದ ಕಾರ್ತೀಕ ಶುದ್ಧ ಪಂಚಮೀ ಸೋಮವಾರ ಚಂದ್ರಸಾಗರವರ್ಣಿ ಬರೆದು ಬೆಳ್ಗುಳದ ಮಠಕ್ಕೆ ಒಪ್ಪಿಸಿದ ಭವ್ಯಜನ ಚಿಂತಾಮಣಿ ಸಂಪೂರ್ಣಂ ಮಂಗಲ ಮಹ" ಎಂಬ ಬರಹವಿದ್ದು ಈ ಪ್ರತಿಗೆ ಮೂಲವಾಗಿದ್ದ ಪ್ರತಿಯ ಬಗ್ಗೆ ಬೆಳಕುಚೆಲ್ಲುತ್ತದೆ. ಇಲ್ಲಿ ಉಕ್ತವಾಗಿರುವ ಚಂದ್ರಸಾಗರವರ್ಣಿ ಭವ್ಯಾಮೃತ ಮೊದಲಾದ ಕೃತಿಗಳ ಕರ್ತೃ. ಈತನ ಪ್ರತಿಯನ್ನು ಆಧರಿಸಿ ಮೈಸೂರು ಅರಮನೆ ಭಂಡಾರಕ್ಕೆಂದು ಶ್ರೀನಿವಾಸ ಎಂಬವರು 1895ರಲ್ಲಿ ಲಿಖಿಸಿದರೆಂಬುದನ್ನು "ಮಹೀಶೂರ ಮಹಾರಾಜ ಭಾಗದೇಯ ಪ್ರಕಾಶಿನೆ/ ವಾಣಿವಿಲಾಸ ರೂಪಾಯ ಭಾಂಡಾಗಾರಾಯ ಸುಂದರಂ/ ಲಿಖಿತಂ ಶ್ರೀನಿವಾಸೇನ ಗೀತಾಕಾಸಾರ ವಾಸಿನಾ/ಭಾರತೀ ಭಾಗ್ಯಭವನ ಶಾಲಾಧ್ಯಕ್ಷೇಣ ಸಾದರಂ/ಮಾನ್ಮಥಾಶ್ವಯು ಜೇ ಮಾಸಿ ಪೂರ್ಣಿಮಾ ಗುರುವಾಸರೇ / ಪೂರ್ಣೋಭವದ್ಭವ್ಯಜನ ಚಿನ್ತಾಮಣಿ ರಯಂ ಶುಭಃ ಎಂದು ಸಂಸ್ಕೃತದಲ್ಲಿ ಹೇಳಿಕೊಂಡಿದ್ದಾರೆ. ಅಂತೆಯೆ ಲೀಲಾವತಿ ಕಾವ್ಯದ ಕೆ ಬಿ 68 ಹಸ್ತಪ್ರತಿ ಮತ್ತು ಲೋಕೋಪಕಾರದ ಕೆ ಬಿ 441 ಹಸ್ತಪ್ರತಿಗಳೂಕೂಡ ಮೂಲಕೃತಿಯ ಬಗ್ಗೆ ಉಲ್ಲೇಖಿಸಿವೆ. ಇಂಥ ವಿವರಗಳಿಂದ ಪ್ರತಿಯಿಂದ ಪ್ರತಿಗಳು ಮರುಹುಟ್ಟು ಪಡೆಯುತ್ತ ಸಾಗುವುದನ್ನು ಅರಿಯಬಹುದು.

ಪಾಯಣ್ಣ ಪ್ರತಿಯ ಸಮ್ಯಕ್ತ ಕೌಮುದಿಯ ಕೆ 9 ಹಸ್ತಪ್ರತಿಯನ್ನು ವಿಚಾರದ ನೇಮಿಚಂದ್ರವರ್ಣಿಯವರಿಗೆಂದು ಮೂರುಬಸ್ತಿನಾಗಪ್ಪನು ಬರೆದು ಒಪ್ಪಿಸಿದನೆಂದು ತಿಳಿದುಬರುತ್ತದೆ. ಶಾಸ್ತ್ರಸಾರ ಸಮುಚ್ಚಯ ಟೀಕು ಇರುವ ಕೆ 310 ಹಸ್ತಪ್ರತಿಯನ್ನು ತೆರಕಣಾಂಬಿಯ ಬ್ರಹ್ಮಸೂರೋಪಾಧ್ಯಾಯರು ಶಕ 1780 ಅಂದರೆ ಕ್ರಿ. ಶ 1858 ರಲ್ಲಿ ಪ್ರತಿ ಮಾಡಿದ್ದಾರೆ. ಜನ್ನನ ಅನಂತನಾಥ ಪುರಾಣದ ಕೆ 1015 ಸಂಖ್ಯೆಯ ಪ್ರತಿಯನ್ನು ಕ್ರಿ. ಶ. 1716 ರಲ್ಲಿ ವಿಜಯ್ಯನೆಂಬ ಪ್ರತಿಕಾರ ಬೊಮ್ಮರಸಯ್ಯ ಎಂಬವರಿಗೆಂದು ಬರೆಯಲಾಗಿದೆ. ನಾಗಕುಮಾರಚರಿತೆಯ ಕೆ 1215 ಹಸ್ತ ಪ್ರತಿಯ ಅಂತ್ಯದಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ 1701ನೇ ವಿಕಾರಿನಾಮ ಸಂವತ್ಸರದ ಮಾರ್ಗಶಿರ ಬ 5 ಚಂದ್ರವಾರ ಶುಭದಿವಸದಲ್ಲಿ ಶ್ರೀರಂಗಪಟ್ಟಣದಲ್ಲು ಯಿಹ ಆರಿಕುಠಾರದ ಸೂರಿಪಂಡಿತರ ತನೂಭವ ಬೊಮ್ಮರಸಪಂಡಿತರಿಗೆ ನಗರಿಲೆ ದೇವರಸಯ್ಯನು ಬರೆದುಕೊಟ್ಟ ನಾಗಕುಮಾರ ಚರಿತೆ ಪುಸ್ತಕಕ್ಕೆ ಶುಭಮಸ್ತು" ಎಂದಿದ್ದು ನಗರ್ಲೆಯ ದೇವರಸಯ್ಯನು ಶ್ರೀರಂಗಪಟ್ಟಣದಲ್ಲಿರುವ ಚಾಮರಾಜ ನಗರದ ಸೂರಿಪಂಡಿತರ ಮಗ ಬೊಮ್ಮರಸ ಪಂಡಿತರಿಗೆಂದು ಕ್ರಿ. ಶ 1779 ರಲ್ಲಿ ಪ್ರತಿಮಾಡಿರುವುದು ವ್ಯಕ್ತವಾಗುತ್ತದೆ.

ಕೃತಿಕಾರನ ಬಂಧುಗಳೆ ಪ್ರತಿಮಾಡಿರುವಂಥ ವಿರಳ ಸಂದರ್ಭಗಳು ಕಂಡು ಬರುತ್ತವೆ. ಪದ್ಮಣಪಂಡಿತನ ಹಯಶಾಸ್ತ್ರದ ಕೆ 424 ಹಸ್ತಪ್ರತಿಯಲ್ಲಿ "ಬರೆದಾತಂ ಪದ್ಮಣ

ಪಂಡಿತಾರ್ಯನಳಿಯ ಪದ್ಮರಸ"ಎಂಬ ಉಲ್ಲೇಖವಿದ್ದು ಕವಿಯ ಅಳಿಯನೆ ಪ್ರತಿಮಾಡಿರುವುದು ಗೋಚರಿಸುತ್ತದೆ.

ಖಗೇಂದ್ರ ಮಣಿ ದರ್ಪಣದ ಕೆ 1814 ಸಂಖ್ಯೆಯ ಪ್ರತಿಯಲ್ಲಿರುವ "ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ 1516 ಸಂದ ವರ್ತಮಾನ ಜಯಸಂವತ್ಸರದ ಶ್ರಾವಣ ಶು 12 ಲ್ಲು ಮುಕ್ಕೊಡೆಹಳ್ಳಿಯರ ಮಗ ಪದ್ಮರಸಯ್ಯನು ತಮ್ಮ ಹಿರಿಯಣ್ಣಾಜಿಗೆ ಬರೆದಂಥ ಖಗೇಂದ್ರ ಮಣಿದರ್ಪಣಕ್ಕೆ ಆಚಂದ್ರಪ್ರಭಂ ಶುಭ....." ಎಂಬ ವಿವರಗಳಿಂದ ಪದ್ಮರಸಯ್ಯನೆಂಬ ಪ್ರತಿಕಾರ ತನ್ನ ತಮ್ಮನಿಗಾಗಿ ಈ ಕೃತಿಯನ್ನು ನಕಲು ಮಾಡಿದ ಸಂಗತಿ ವೇದ್ಯವಾಗುತ್ತದೆ.

ಜೈನ ಹಸ್ತಪ್ರತಿಕಾರರು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಪ್ರತಿಮಾಡಿದ್ದಾರೆ. ಮಲೆಯೂರ ವಿಜಯಪ್ಪಯ್ಯನು ಶ್ರೀಧರಾಚಾರ್ಯನ ಜಾತಕ ತಿಲಕದ ಕೆ 1582 ಪ್ರತಿಯನ್ನೂ ಚಂದ್ರಸಾಗರವರ್ಣಿ ಮಾಧವನ ನರಪಿಂಗಲಿಯ ಕೆ 1792/2 ಪ್ರತಿಯನ್ನು ಬರೆದಿದ್ದಾರೆ.

ವಿಜಯಣ್ಣನ ದ್ವಾದಶಾನುಪ್ರೇಕ್ಷೆಯ ಕೆ 1840 ಸಂಖ್ಯೆ ಪ್ರತಿಯ ಹಸ್ತಪ್ರತಿಕಾರ ತನ್ನ ತಾಯಿಯ ಹೆಸರನ್ನೂ ದಾಖಲಿಸಿರುವುದು ಉಲ್ಲೇಖಾರ್ಹವಾಗಿದೆ: "ಶ್ರೀ ನಂದನಸಂವತ್ಸರದ ಮಾರ್ಗಿಶರ ಶುದ್ಧಿ 10ಲು ಶುಂಕರವಾರ ಬೇಳೂರ ದೊಡ್ಡ ಶಾಮಣ್ಣನ ವಲ್ಲಭೆಯರು ಯಿಬ್ಬರು ಹೆಸರು ಪಾಯಮ್ಮ ಯಂಬವರು ಅವರೊಳಗೆ ಹಿರಿಯಮ್ಮ ಪಾಯಮ್ಮನವರ ಗರ್ಭದಲ್ಲಿ ಹುಟ್ಟಿದವನು. ನಾನು ಬ್ರಹ್ಮಪ್ಪ ಬರದಂಥ ದ್ವಾದಶಾನುಪೇಕ್ಷೆ ಸಮಾಪ್ತಮಂಗಲ ಮಹಾಶ್ರೀ". ಇದೇ ಕೃತಿಯಕೆಬಿ 756 ಸಂಖ್ಯೆಯ ಕಾಗದದ ಪ್ರತಿಯನ್ನು ಹೊಳೆನರಸೀಪುರದ ಪೂಜೆ ಬಸದಿ ಚಂದ್ರನಾಥಸ್ವಾಮಿ ಸೇವಕನಾದ ರಾಯಣ್ಣನ ಕುಮಾರ ಪಾರ್ಶ್ವನಾಥಯ್ಯನು ಕ್ರಿ.ಶ.1885 ರಲ್ಲಿ ಪ್ರತಿ ಮಾಡಿರುವುದು ತಿಳಿದು ಬರುತ್ತದೆ.

ವೃತ್ತವಿಲಾಸನ ಧರ್ಮಪರೀಕ್ಷೆಯ ಕೆ 1309 ಸಂಖ್ಯೆಯ ಪ್ರತಿಯಲ್ಲಿ ಲಿಪಿಕಾರನು ಶ್ರವಣಬೆಳಗೊಳದ ಚಾರುಕೀರ್ತಿ ಪಂಡಿತಾಚಾರ್ಯರಿಗೆ ಸಂಬಂಧಿಸಿದ ಕೆಲವು ಪ್ರಶಸ್ತಿಗಳನ್ನು ದಾಖಲಿಸಿದ್ದಾನೆ -ಸ್ವಸ್ತಿ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯ ವರ್ಯ ಮಹಾವಾದ ವಾದೀಶ್ವರರಾದ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರ ತತ್ಶಿಷ್ಯನಾದ ಹಾಸನದ ಅಳ್ಳಿ ತಾಯಪ್ಪನವರ ಮಗ ಪದುಮಯ್ಯನವರಿಗೆ ಆದಿರಾಜಯ್ಯನು ಬರಕೊಟ್ಟ ಧರ್ಮಪರೀಕ್ಷೆಗೆ ಶುಭಮಸ್ತು. ಇದೇ ಕಾವ್ಯದ ಕೆ 1512 ಸಂಖ್ಯೆಯ ಹಸ್ತಪ್ರತಿ ಹರವೆಯಲ್ಲಿ ಪ್ರತಿಯಾಗಿದೆ. ಮತ್ತೊಂದು ಕೆ 1643 ಪ್ರತಿಯನ್ನು ಬೊಮ್ಮರಸಯ್ಯನು ಲಿಖಿಸಿದ್ದಾನೆ.

ಮಂಗರಸನ ನೇಮಿಜಿನೇಶ ಸಂಗತಿಯ ಕೆ 1481 ಸಂಖ್ಯೆಯ ಪ್ರತಿಕಾರ ಕನಕಗಿರಿಯ ವಿಜಯಪಾರ್ಶ್ವನಾಥ, ಉದ್ಯೋಗಪುರದ (ಕೆಲಸೂರು) ಚಂದ್ರನಾಥ ಇವರನ್ನು ಸ್ತುತಿಸಿ ಕಡೆಯಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಶ ೧೭೫೩ನೆ

ಖರಸಂವತ್ಸರದ ಮಾಘ ಶುದ್ಧ ೧೧ ರವಿವಾರದ ದಿವಸ ಮಲೆಯೂರ ದೇವಚಂದ್ರಯ್ಯಗಳ ದ್ವಿತೀಯ ಪುತ್ರ ಧರ್ಮಚಂದ್ರಯ್ಯನು ಬರೆದು ಸಂಪೂರ್ಣವಾಯ್ತು ಮಂಗಳ ಮಹಾಶ್ರೀ"ಎಂಬ ವಿವರಣೆ ನೀಡಿದ್ದಾನೆ. ಇಲ್ಲಿ ಉಕ್ತವಾಗಿರುವ ದೇವಚಂದ್ರನು ರಾಜಾವಳಿ ಕಥಾಸಾರದ ಕರ್ತೃವೇ ಇರಬೇಕು. ಇದೇ ಕೃತಿಯ ಕೆ 1644 ಸಂಖ್ಯೆಯ ಪ್ರತಿಯನ್ನು ಆದಿರಾಜಯ್ಯನು, ಕೆ. 1791 ಸಂಖ್ಯೆಯ ಪ್ರತಿಯನ್ನು ಬ್ರಹ್ಮಯ್ಯನು ನಕಲು ಮಾಡಿದ್ದಾರೆ. ಮೇಲೆ ಉಲ್ಲೇಖಿಸಿದ ಮಲೆಯೂರಿನಲ್ಲಿಯೆ ಪ್ರತಿಯಾದ ಕೆ 1608 ಸಂಖ್ಯೆಯ ಸ್ವರೂಪ ಸಂಬೋಧನ ಗ್ರಂಥದ ಪುಷ್ಪಿಕೆಯಿಂದ ಗ್ರಂಥಕರ್ತೃ ಪದ್ಮಣಯ್ಯನು ಮಲೆಯೂರು ವಿಜಯರಾಜಯ್ಯನವರ ದ್ವಿತೀಯ ಪುತ್ರನೆಂಬ ಅಂಶ ವಿದಿತವಾಗುತ್ತದೆ.

ಪಂಚಬಾಣನ ಭುಜಬಲಿಚರಿತೆಯ ಕೆ 1528 ಸಂಖ್ಯೆಯ ಪ್ರತಿಯನ್ನು ಲಿಪಿಕಾರ ಮರಿಯಣ್ಣನು ಕ್ರಿ.ಶ. 1759ರಲ್ಲಿ ಸಿದ್ಧಪಡಿಸಿದ ಸಂಗತಿ ಗ್ರಂಥಾಂತ್ಯದ "ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ಸಾವಿರದ ೬೭೧ನೆಯ ಶುಕ್ಲ ಸಂವತ್ಸರದ ಭಾದ್ರ ಶು 15ಲ್ಲು ಶ್ರೀಮದ್ಬೆಳಗುಳ ವಿದ್ಯಾದ್ರಿ ಮಸ್ತಕವಿರಾಜಮಾನ ಶ್ರೀ ಮದ್ಬೆಳಗುಳ ವಿದ್ಯಾದ್ರಿ ಮಸ್ತಕ ವಿರಾಜಮಾನ ಶ್ರೀದೋರ್ಬಲಿಜಿನರ ಪಾದಪಯೋರುಹಂಗಳ ಸನ್ನಿಧಾನದಲ್ಲಿ ಪಾಯಿಸೆಟ್ಟರ ಮಗ ಮರಿಯಣ್ಣನು ಮುದ್ದೇನಹಳ್ಳಿಯ ಚಿಕ್ಕಣ್ಣಸೆಟ್ಟರಿಗೆ ಬರದುಕೊಟ್ಟ ಶ್ರೀ ಭುಜಬಲಿ ಚರಿತ್ರಕ್ಕೆ ಮಂಗಲಂ ಶುಭಂ ಭವತು" ಎಂಬ ವಿವರದಿಂದ ಶ್ರುತಪಡುತ್ತದೆ.

ಈವರೆಗಿನ ಸಮೀಕ್ಷೆಯಿಂದ ಜೈನ ಹಸ್ತಪ್ರತಿಗಳು ಮತ್ತು ಹಸ್ತಪ್ರತಿಕಾರರಿಗೆ ಸಂಬಂಧಿಸಿದಂತೆ ಕೆಲವು ತೀರ್ಮಾನಗಳಿಗೆ ಬರಬಹುದು. ಜೈನ ಪ್ರತಿಕಾರರು ಪ್ರಾಚೀನ ಕಾವ್ಯಗಳ ಮೇಲೆ ಇಟ್ಟಿರುವ ಶ್ರದ್ಧೆ ಗೌರವ ಭಾವನೆಗಳು ಪ್ರಶಂಸಾರ್ಹವಾದುವು. ಇತರ ಧರ್ಮದ ಹಸ್ತಪ್ರತಿಕಾರರಂತೆ ಜೈನ ಹಸ್ತಪ್ರತಿಕಾರರು ತಮ್ಮ ಧರ್ಮದ ಕೃತಿಗಳಿಗೆ ಪ್ರಾಧಾನ್ಯತೆ ನೀಡಿ ಪ್ರತಿ ಮಾಡಿ ಧಾರ್ಮಿಕ ಪ್ರೀತಿಯನ್ನು ಮೆರೆದಿದ್ದಾರೆ. ದೃಷ್ಟಿ ಧಾರ್ಮಿಕವಾದರೂ ಆ ಮೂಲಕ ಶ್ರೀಮಂತವಾದ ಸಾಹಿತ್ಯ ರಾಶಿಯನ್ನು ಪ್ರತಿಮಾಡಿ ಉಳಿಸಿರುವುದು ಮಹತ್ವದ ವಿಷಯವಾಗಿದೆ. ಅದಕ್ಕಾಗಿ ಕನ್ನಡಿಗರು ಋಣಿಯಾಗಿದ್ದಾರೆ. ಜೈನ ಹಸ್ತಪ್ರತಿಕಾರರು ಗ್ರಂಥಾಂತ್ಯದಲ್ಲಿ ವೈಯಕ್ತಿಕ ಸಂಗತಿಗಳನ್ನು ಬಿತ್ತರಿಸಿರುವುದರಿಂದ ಕೃತಿಯೊಂದು ಯಾವ ಊರಿನಲ್ಲಿ ಯಾವಾಗ ಪ್ರತಿಯಾಯಿತೆಂಬುದು ತಿಳಿಯುತ್ತದೆ. ಹಿಂದೆ ಇದ್ದ ಎಷ್ಟೋ ಬಸದಿಗಳು ಇಂದು ಕರ್ನಾಟಕದಲ್ಲಿ ನಾಶವಾಗಿವೆ. ಅಂಥ ಹೊತ್ತಿನಲ್ಲಿ ಜೈನ ಹಸ್ತಪ್ರತಿಕಾರರು ನೀಡಿರುವ ವಿಶೇಷ ಸೂಚನೆಗಳ ನೆರವಿನಿಂದ ಜಿನ ಬಸ್ತಿಗಳಿದ್ದ ತಾಣವನ್ನು ಗುರುತಿಸಬಹುದಾಗಿದೆ. ಇತರ ಕೆಲವು ಅಂಶಗಳಿಂದ ಅಂದಿನ ಸಮಾಜ ಸಂಸ್ಕೃತಿಗೆ ಸಂಬಂಧಿಸಿದ ಸಂಗತಿಗಳನ್ನು ಮನವರಿಕೆ ಮಾಡಿಕೊಳ್ಳಲು ಸಾಧ್ಯವಾಗಿದೆ. ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಬಹಳಷ್ಟು ಪ್ರತಿಕಾರರು ಮೈಸೂರು ಜಿಲ್ಲೆಗೆ ಸೇರಿದವರೆಂಬ ಸಂಗತಿ ಕೂಡ ಗಮನಾರ್ಹವಾಗಿದೆ.

* * * * *

ಸ್ತ್ರೀವಾದದ ಸಾಂಸ್ಕೃತಿಕ ನೆಲೆಗಳು

-ಗಾಯತ್ರೀ ನಾವಡ

ಶ್ರೇಣೀಕೃತವಾದ ನಮ್ಮ ಸಾಮಾಜಿಕ- ಸಾಂಸ್ಕೃತಿಕ ಸಂರಚನೆಯು ಜಾತಿ, ವರ್ಗ ವರ್ಣ ಆಧಾರಿತ ಅಸಮಾನತೆಗಳಂತೆ ಇನ್ನೊಂದು ಮುಖ್ಯವಾದ ಅಸಮಾನತೆ ಲಿಂಗಾಧಾರಿತವಾದದ್ದು. ಈ ಅಸಮಾನತೆಯ ನೆಲೆಯಲ್ಲಿ ಹೆಣ್ಣನ್ನು ಗ್ರಹಿಸುವ ಮತ್ತು ಅರ್ಥೈಸುವ ಮೌಲ್ಯಗಳು ಪುರುಷಕೇಂದ್ರಿತ ನೆಲೆಯಿಂದ ಬಂದವುಗಳಾಗಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹಿಡಿತಗಳನ್ನು ಸಾಧಿಸಿದ ಪುರುಷವರ್ಗದ ಮೌಲ್ಯಗಳೇ ಒಟ್ಟು ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳಾದವು. ಸಮಾಜದ ಮುಖ್ಯ ಅಂಗವಾಗಿರುವ ಸ್ತ್ರೀ ಸಂಸ್ಕೃತಿ ನಿರಾಕರಿಸಲ್ಪಟ್ಟಿತು. ಸ್ತ್ರೀಯರ ಸ್ವಭಾವ, ಅನನ್ಯತೆ ಉಪೇಕ್ಷಿತವಾಗಿವೆ ಅಪಮೌ[illegible]ಹೊಂದಿವೆ.

ಈ [illegible]ಧಿಗತ ಅಸಮಾನತೆಯನ್ನು ಪ್ರಶ್ನಿಸುವುದು, ಸಮಾನತೆಯನ್ನು ಸ್ಥಾಪಿಸುವುದು, ಕೆಲಸದ ಹಂಚಿಕೆ, ಜವಾಬ್ದಾರಿಯ ಸಮಾನ ಹೊಣೆಗಾರಿಕೆ, ಆಯ್ಕೆಯ ಸ್ವಾತಂತ್ರ್ಯ ಪಡೆಯುವುದು, ಸ್ತ್ರೀವಾದದ ಪ್ರಧಾನ ನೆಲೆಗಳು, ಮುಖ್ಯ ಕಾಳಜಿಯಾಗಿದೆ. ಸ್ತ್ರೀವಾದಿ ಚಳುವಳಿ ಹೆಚ್ಚು ಶ್ರದ್ಧೆಯನ್ನು ಅಪೇಕ್ಷಿಸುತ್ತದೆ. ಈ ಹೋರಾಟ ವರ್ಗ ಹೋರಾಟ, ಜಾತಿ ಹೋರಾಟಕ್ಕಿಂತ ಭಿನ್ನವಾದುದು ಮತ್ತು ಹೆಚ್ಚು ಸಂಕೀರ್ಣವಾದುದು. ಸ್ತ್ರೀವಾದಿ ಪ್ರಜ್ಞೆಯ ಚಳುವಳಿ ಕುಟುಂಬ ಘಟಕದಲ್ಲಿ ಆರಂಭಗೊಳ್ಳುತ್ತದೆ. ಮತ್ತು ಸಾಮಾಜಿಕ , ಆರ್ಥಿಕ, ಧಾರ್ಮಿಕ ಮೌಲ್ಯಗಳನ್ನು ಪ್ರಶ್ನಿಸುವಲ್ಲಿ ಗುರುತಿಸಿಕೊಳ್ಳುತ್ತದೆ. ಅಂದರೆ ತನ್ನವರೆಂದು ಪರಿಗಣಿಸುವ ಖಾಸಗೀ ಬದುಕಿನಲ್ಲಿ ಗಂಡಿನ ಪ್ರಾಧಾನ್ಯವನ್ನು ಪ್ರಶ್ನಿಸುವುದು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನಲ್ಲಿ ತನ್ನ ಅನನ್ಯತೆಯನ್ನು ಗುರುತಿಸಿಕೊಳ್ಳುವುದು- ಹೀಗೆ ಎರಡು ನೆಲೆಗಳಲ್ಲಿ ಹೋರಾಟ ನಡೆಯುತ್ತದೆ. ಈ ಎರಡು ನೆಲೆಗಳಲ್ಲೂ ಪುರುಷಕೇಂದ್ರಿತ ಗ್ರಹಿಕೆಯ ಮಿತಿ ಮತ್ತು ಅಪಾಯಗಳನ್ನು ತೆರೆದು ತೋರುತ್ತದೆ.

ಪ್ರಸ್ತುತ ಪ್ರಬಂಧದಲ್ಲಿ ಸಾಂಸ್ಕೃತಿಕ ಸ್ತ್ರೀವಾದದ ಸಾಧ್ಯತೆಗಳು ಮತ್ತು ಸಮಸ್ಯೆಗಳ ಕುರಿತು ಕೆಲವು ಮುಖ್ಯಗ್ರಹಿಕೆಗಳನ್ನು ಇಲ್ಲಿ ನಿಮ್ಮ ಮುಂದಿಡುತ್ತೇನೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಅದೃಶ್ಯಳು. ಅಲ್ಲಿ ಇಲ್ಲಿ ಸ್ವಲ್ಪ ದೃಶ್ಯಗೊಂಡಿದ್ದರು ಅದು ಅಸ್ಪೃಶ್ಯ ಹಾಗೂ ಅಧೀನ ನೆಲೆಗಳಲ್ಲಿ. ಋಗ್ವೇದದಲ್ಲಿರುವ ಪ್ರಾರ್ಥನೆ, ಬೇಡಿಕೆಗಳೆಲ್ಲವೂ ಗಂಡು ಮಗುವಿನ ಜನನವನ್ನು ಕುರಿತಾಗಿವೆಯೇ ಹೊರತು ಹೆಣ್ಣು ಮಗುವಿನ ಜನನದ ಕುರಿತು ಪ್ರಸ್ತಾಪಿಸಲಾಗಿಲ್ಲ. ಗರ್ಭಿಣಿಗೆ ಮಾಡುವ ಎಲ್ಲ ಆಚರಣೆಗಳು ಕೂಡಾ ಗಂಡು ಮಗುವನ್ನು ಕುರಿತ ಆಶಯವನ್ನೇ ಹೊಂದಿವೆ. ಆಯುರ್ವೇದ ಶಾಸ್ತ್ರದಲ್ಲಿ ಹೆಣ್ಣಿಗೆ ಯಾವ ಔಷಧವೂ ಚಿಕಿತ್ಸಾ ಪದ್ಧತಿಯನ್ನು ಹೇಳಿಲ್ಲ. ಇದ್ದರೆ ಅದು ಹೆಣ್ಣೊಬ್ಬಳು ಗರ್ಭಿಣಿ ಮತ್ತು ಬಾಣಂತಿಯಾದ ಸಂದರ್ಭಗಳಿಗೆ ಮಾತ್ರ. ಇಂದಿಗೂ ಗಂಡುಮಗು ಹಡೆದಾಗ ಜಾಗಟೆ ಬಾರಿಸಿ ವೀರತ್ವದ ಸಂಕೇತವನ್ನು ಸಾರಿದರೆ ಹೆಣ್ಣುಮಗು ಹುಟ್ಟಿದಾಗ ಆ ಸಂದರ್ಭ ಖಾಲಿಯಾಗಿದ್ದು ಹೆಣ್ಣಿನ ಅದೃಶ್ಯತೆಯನ್ನು ಹೇಳುತ್ತದೆ. ಗಂಡಿನ ಸಂಬಂಧದೊಂದಿಗೆ-

ತಂದೆಯೊಂದಿಗೆ, ಗಂಡನೊಂದಿಗೆ ಮತ್ತು ಮಗನೊಂದಿಗೆ ಹೆಣ್ಣನ್ನು ಗುರುತಿಸಲಾಗುತ್ತದೆ. ಈ ಎಲ್ಲಾ ಸಂದರ್ಭಗಳಲ್ಲಿಯೂ ಹೆಣ್ಣನ್ನು ಅದೃಶ್ಯಳಾಗಿ ಪರಿಗಣಿಸಲಾಗುತ್ತದೆ. ಹೆಣ್ಣಿನ ಹುಟ್ಟು-ಬದುಕು - ಸಾವು ಯಾವುದೂ ಮಹತ್ವವಾಗಿ ಕಂಡಿಲ್ಲ. ಈ ಸಂಸ್ಕೃತಿಯಲ್ಲಿ ಹೆಣ್ಣಿನ ಸಾವಿಗೆ ಮಹತ್ವ ಬಂದಿದ್ದರೆ ಅದು ಗಂಡಿನ ಸಾವಿನೊಂದಿಗೆ ಸಂಬಂಧವನ್ನು ಕಂಡುಕೊಂಡಾಗ- ಸತಿಯಾದಾಗ. ಇತಿಹಾಸದ ಪುಟಗಳಲ್ಲಿ ಗಂಡಿನ ವೀರ, ಶೌರ್ಯವನ್ನು ಸಾಬೀತುಪಡಿಸಿದಂತೆ ಆತನ ಸಾವನ್ನೂ ಯುದ್ಧದಲ್ಲಿ ವೀರರೊಂದಿಗೆ ಸಮೀಕರಿಸಲಾಗಿದೆ. ಹೀಗೆ ಬದುಕಿರಲಿ, ಸಾವಿರಲಿ, ಮುಕ್ತಿ ಇರಲಿ ಈ ಸಂಸ್ಕೃತಿಯಲ್ಲಿ 'ಯುಗಪುರುಷ'ನ ಪ್ರತ್ಯಕ್ಷದಿಂದಲೆ ಅದು ಸಾಧ್ಯವಾಗುವುದು.

ಪುರುಷಪ್ರಧಾನ ಸಾಮಾಜಿಕ ಸಂರಚನೆಯಲ್ಲಿ ಹೆಣ್ಣು ಆಸ್ತಿಯ ಒಡೆತನ ಪಡೆಯುವುದಿಲ್ಲ. ಪಡೆಯುವುದಿದ್ದರೆ ಅದು ಗಂಡನ ಸಾವಿನೊಂದಿಗೆ. ಗಂಡ ಸತ್ತ ಸಂದರ್ಭದಲ್ಲಿ ಆಕೆಗೆ ಗಂಡು ಮಗು ಇದ್ದಲ್ಲಿ ತಂದೆಯ ಆಸ್ತಿಯನ್ನು ಮಗನಿಗೆ ವರ್ಗಾಯಿಸುವ ಮಾಧ್ಯಮವಾಗಿ ಅಷ್ಟೆ ಆಕೆಯ ಕಾರ್ಯನಿರ್ವಹಣೆ. ಆಸ್ತಿಯ ಒಡೆತನದ ಅಥವಾ ಮಾರಾಟದ ಹಕ್ಕು ಈ ' ಅದೃಶ್ಯ' ಪರಂಪರೆಯಲ್ಲಿ ಹೆಣ್ಣಿಗೆ ದೊರೆತಿಲ್ಲ. ಹೆತ್ತವರ ಅಪರಕರ್ಮಗಳಲ್ಲಿ, ಹೆಣ್ಣುಮಕ್ಕಳ ಉದ್ಧಾರವಿಲ್ಲ. ಪುತ್ರನಾದವನನ್ನಷ್ಟೆ ಸಂತತಿಯಾಗಿ ಪರಿಗಣಿಸಲಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿನ ಅಸ್ಪೃಶ್ಯತೆ ಎರಡು ಬಗೆಯದು. ಒಂದು ಜಾತಿ ಅಸ್ಪೃಶ್ಯತೆ, ಇಲ್ಲಿ ಹರಿಜನರು ಮತ್ತು ಕೆಳವರ್ಗದವರು ಈ ಅಸ್ಪೃಶ್ಯತೆಗೆ ಒಳಗಾದವರು. ಇನ್ನೊಂದು ಅಸ್ಪೃಶ್ಯತೆ ಲಿಂಗ ಅಸ್ಪೃಶ್ಯತೆ. ಇಲ್ಲಿ ಇಡಿಯ ಸ್ತ್ರೀ ಸಮುದಾಯವೇ ಈ ಅಸ್ಪೃಶ್ಯತೆಗೆ, ಶೋಷಣೆಗೆ ಒಳಗಾಗಿದೆ. ಮೇಲುವರ್ಗದ ಹೆಣ್ಣುಗಳು ಇಲ್ಲಿ 'ದಲಿತ'ರಾಗುತ್ತಾರೆ. ಹೆಚ್ಚು ಕಟ್ಟುನಿಟ್ಟಾದ ಪುರುಷ ಅಂಕಿತಕ್ಕೆ ಒಳಗಾದವರಾಗಿ ಶೋಷಣೆಗೆ ತುತ್ತಾದವರಾಗಿ ಕಂಡು ಬರುತ್ತಾರೆ.

ಗಂಡಿನ ಖಾಸಗಿ ಒಡೆತನದ ಮೊದಲ ಆಸ್ತಿಯಾಗಿ ಹೆಣ್ಣು ಸೇರ್ಪಡೆಯಾಗಿರಬೇಕು. ಬೇಟೆಯಿಂದ ಬೇಸಾಯದ ಸಂಸ್ಕೃತಿಗೆ ಬಂದಾಗ ಹೆಣ್ಣಿನಲ್ಲಿರುವ ಪ್ರಜನನ ಶಕ್ತಿಯೇ ಈ ಒಡೆತನದ ಹಕ್ಕಿನ ಮೂಲ ಕಾರಣವಾಯಿತು. ಗುಂಪಿನ ಕಲ್ಪನೆ ಒಡೆದು, ಕುಟುಂಬದ ಕಲ್ಪನೆ ಚಿಗುರಿದ ಹಿನ್ನೆಲೆಯಲ್ಲಿ ತನ್ನ ಕೃಷಿಕರ್ಮಗಳಿಗೆ ಅಗತ್ಯವಾದ ' ಶಕ್ತಿ' (ಶ್ರಮಶಕ್ತಿ) ಪೂರೈಕೆಗೆ ಹೆಣ್ಣಿನ ಮೇಲಿನ ಒಡೆತನ ಸ್ಥಾಪಿಸುವುದು ಕಾಣುತ್ತದೆ. ಆಕೆಯ ಲೈಂಗಿಕ ಬದುಕಿನ ಮೇಲೆ ಹತೋಟಿ ತರುವುದು, ಆಕೆ ಹಡೆಯುವ ಮಕ್ಕಳ ಮೇಲೆ ತನ್ನ ಪಿತೃತ್ವವನ್ನು ದಾಖಲಿಸುವುದು ಕಂಡುಬರುತ್ತದೆ. ಇಂಥ ಸಂಸ್ಕೃತಿಯಲ್ಲಿ ಹೆಣ್ಣನ್ನು ಹೆಣ್ಣಾಗಿ, ಮನುಷ್ಯಳಾಗಿ ಯಾವತ್ತೂ ಕಂಡಿಲ್ಲ. ಈ ಎಲ್ಲ ಸಂದರ್ಭದಲ್ಲಿ ದೇವತೆಯಾಗಿ, ಅಥವಾ ರಾಕ್ಷಸಿಯಾಗಿ, ಪತಿವ್ರತೆಯಾಗಿ ಅಥವಾ ವೇಶ್ಯೆಯಾಗಿ -ಈ ಎರಡು ನೆಲೆಗಳಲ್ಲಿ ಮಾತ್ರ ಕಾಣಲಾಗಿದೆ. ರಾಚನಿಕವಾಗಿ ಈ ಎರಡು ಸ್ಥಿತಿಗಳಲ್ಲಿ ಯಾವುದೇ ಅಂತರ ಅಥವಾ ವ್ಯತ್ಯಾಸವಿಲ್ಲ. ಈ ಎರಡು ಸಂದರ್ಭಗಳಲ್ಲೂ ಹೆಣ್ಣು ಅಸ್ಪೃಶ್ಯಳಾಗುತ್ತಾಳೆ. ಈ ನಿರ್ಲಕ್ಷ್ಯ ವೈಭವೀಕರಣ ಎರಡನ್ನೂ ತಿರಸ್ಕರಿಸುತ್ತ ಈ ಎರಡರ ಮಧ್ಯದ ವಾಸ್ತವ ಹೆಣ್ಣಾಗಿ ಬೆಳೆಯುವುದನ್ನು ಮಹಿಳಾವಾದ ಬಯಸುತ್ತದೆ. ಇದನ್ನು ತನ್ನ ಹೋರಾಟದ ಮೂಲಭೂತ ಪ್ರಶ್ನೆಯಾಗಿ ಮುಂದಿಡುತ್ತದೆ.

ಈ ಸಂಸ್ಕೃತಿಯಲ್ಲಿ ಹೆಣ್ಣಿನ ಲೈಂಗಿಕ ಶಕ್ತಿಯನ್ನು ಕೇವಲ ಜನನ ಸಾಮರ್ಥ್ಯಕ್ಕಾಗಿ ಅಷ್ಟೇ ಉಪಯೋಗಿಸಿಕೊಳ್ಳಲಾಗಿದೆ. ಅದೂ ಗಂಡು ಸಂತಾನಕ್ಕಾಗಿ ಮಾತ್ರ ಸ್ತ್ರೀ ಎಂದರೆ ಹೆರುವವಳು; ಸೂತ್ರಿ (ಹೆಣ್ಣು ಪ್ರಾಣಿಗಳಿಗೂ ಸ್ತ್ರೀ ಎನ್ನಲಾಗುತ್ತದೆ). ಗರ್ಭದ ಅಸ್ತಿತ್ವದಿಂದಲೇ ವ್ಯಕ್ತಿತ್ವವನ್ನು ಪಡೆದುಕೊಂಡವಳು. ಹೆಣ್ಣಿನ ಗರ್ಭಧಾರಣೆಯನ್ನು ಜೈವಿಕ ಕ್ರಿಯೆಯಾಗಿ ಪರಿಗಣಿಸಲಾಗಿದೆಯಾದರೂ ಗರ್ಭಧರಿಸಲಾಗದ ಸಂದರ್ಭವನ್ನು (ಬಂಜೆತನ) ಮತ್ತು ಗರ್ಭಪಾತವನ್ನು ಸಾಂಸ್ಕೃತಿಕಗೊಳಿಸಿ ಹೆಣ್ಣಿನ ಪ್ರಜನನ ಶಕ್ತಿಯ ಮೇಲೆ ಹತೋಟಿ ಸಾಧಿಸಲಾಗಿದೆ. ಪುರುಷ ಪುರ ಮತ್ತು ಸ್ತ್ರೀ - ಧಾತುಗಳು ಸೂಚಿಸುವಂತೆ ಸ್ವಯಂಪೂರ್ಣ - ಇಡಿಯಾದ ವ್ಯಕ್ತಿ. ಹೆಣ್ಣಿನ ಲೈಂಗಿಕ ಬದುಕಿನ ಮೇಲಿನ ಪುರುಷ ಸಂಸ್ಕೃತಿಯ ಮಾಲಿಕ ಹಕ್ಕು ಎಷ್ಟು ಗಾಢವಾಗಿದೆ ಎಂದರೆ ಏಕಪತಿತ್ವದ ಹೆಸರಿನಡಿಯಲ್ಲಿ ವಿವಾಹಿತ ಹೆಣ್ಣೊಬ್ಬಳು ಇನ್ನೊಂದು ಗಂಡನ್ನು ಕುರಿತು ಯೋಚಿಸುವುದು ಕೂಡಾ ಅಪರಾಧವಾಗುತ್ತದೆ. ವಿವಾಹದ ಮೂಲಕ ಹೆಣ್ಣಿನ ಲೈಂಗಿಕತೆಯ ಹಕ್ಕನ್ನು ಪಡೆಯುವ ಗಂಡಿಗೆ ಆ ಹಕ್ಕು - ಅಧಿಕಾರ ಅವನ ಸಾವಿನಲ್ಲೂ ಮುಂದುವರಿಯುತ್ತದೆ. ಕುಟುಂಬ ಸಂಸ್ಥೆಯು ಹೇರಿದ ಸ್ತ್ರೀಯ ಲೈಂಗಿಕತೆಯ ಮೇಲಿನ ಈ ನಿರ್ಬಂಧಗಳ ಕಾರಣಗಳಿಂದ ಶೀಲಕ್ಕೆ ವಿಶಿಷ್ಟ ಮಹತ್ವ ಸಂದಿತು. ಬಾಲ್ಯವಿವಾಹ, ವೈಧವ್ಯ, ಸತಿ, ವೇಶ್ಯಾ ಸಂಪ್ರದಾಯಗಳ ಹುಟ್ಟನ್ನು ಇಲ್ಲಿ ಗುರುತಿಸಬಹುದು. ತನಗಿಂತಲೂ ಕಿರಿಯವಳಾದ ಹೆಣ್ಣನ್ನು ಹೆಂಡತಿಯಾಗಿ ಸ್ವೀಕರಿಸುವುದು, ತನಗಿಂತ ಬೇಗನೇ ಆಕೆಯ ಸಾವನ್ನು ಅಪೇಕ್ಷಿಸುವುದು-ಮುತ್ತೈದೆ ಸಾವಿನ ವೈಭವೀಕರಣ ಪುರುಷ ಸ್ವಭಾವವನ್ನು ಬಯಲಿಗೆಳೆಯುತ್ತದೆ. ಪಾವಿತ್ರ್ಯದ ಈ ಒಮ್ಮುಖ ಹೇರಿಕೆಯನ್ನು ಸ್ತ್ರೀವಾದಿ ಪ್ರಜ್ಞೆ ವಿರೋಧಿಸುತ್ತದೆ.

ಕೌಟುಂಬಿಕ ಘಟಕದೊಳಗೆ ಹೆಣ್ಣು-ಗಂಡುಗಳ ನಡುವೆ ಶ್ರಮ ವಿಭಜನೆ ಎನ್ನುವುದು ಒಂದು ಸಾಮಾನ್ಯ ಸಂಗತಿ. ಆದರೆ ಗಂಡು- ಹೆಣ್ಣು ಮಾಡುವ ಕೆಲಸಗಳನ್ನು ಲಿಂಗಧಾರಿತ ನೆಲೆಯಲ್ಲಿ ನಿರ್ಧರಿಸುವುದನ್ನು ಸಾಮಾನ್ಯ ಸಂಗತಿಯೆಂದು ಒಪ್ಪಿಕೊಳ್ಳಲಾಗದು. ಯಾಕೆಂದರೆ ಆ ಕೆಲಸಗಳು ಒಂದು ನಿರ್ದಿಷ್ಟ ಯೋಚನಾ ಕ್ರಮಕ್ಕೆ ಅನುಗುಣವಾಗಿ ನಿರ್ಧರಿಸಲ್ಪಟ್ಟು ಗಂಡು ಮಾಡುವ ಕೆಲಸ, ಹೆಣ್ಣು ಮಾಡುವ ಕೆಲಸ ಎಂದು ವಿಭಜನೆಯಾಗಿರುತ್ತದೆ. ಆದುದರಿಂದ ಕೆಲಸದ ವಿಭಜನೆಯು ನಮ್ಮ ಬದುಕಿನಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಚಿಂತನೆಗಳೊಂದಿಗೆ ಸಂಬಂಧಪಡೆದುಕೊಳ್ಳುವ ಒಂದು ವ್ಯವಸ್ಥೆಯೂ ಹೌದು. ಆದುದರಿಂದಲೇ ಈ ವ್ಯವಸ್ಥೆಯಲ್ಲಿನ ಶ್ರಮ ವಿಭಜನೆಯನ್ನು ಸ್ತ್ರೀವಾದದ ತಾತ್ತ್ವಿಕ ನೆಲೆಯಾಗಿ ಸ್ವೀಕರಿಸಬೇಕಾಗುತ್ತದೆ.

ಮನೆ ಅಥವಾ ಕುಟುಂಬಕ್ಕೆ ಸಂಬಂಧಪಟ್ಟಂತೆ ಒಂದು ಸಂಸ್ಕೃತಿಯಲ್ಲಿ ಹೆಣ್ಣಿನ ಪಾತ್ರಗಳು, ಗಂಡಿನ ಪಾತ್ರಗಳು ಏನು ಎನ್ನುವುದು. ಇದನ್ನು ಸಾಮಾನ್ಯವಾಗಿ ಎರಡು ಜಗತ್ತುಗಳು ಎಂದು ಪರಿಗಣಿಸಲಾಗುವುದು. ಒಂದು ಹೆಣ್ಣಿನ ಜಗತ್ತು, ಇನ್ನೊಂದು ಗಂಡಿನ ಜಗತ್ತು, ಒಂದು ಸಾರ್ವಜನಿಕ ಜಗತ್ತು, ಇನ್ನೊಂದು ಖಾಸಗೀ ಜಗತ್ತು. ಒಂದು ಶಕ್ತಿ ಜಗತ್ತು, ಇನ್ನೊಂದು ಶಕ್ತಿಹೀನ ಜಗತ್ತು. ಇದು ನಮ್ಮ ಅಧ್ಯಯನಕ್ಕೆ ಬಳಸುವ ಒಂದು ತಾತ್ತ್ವಿಕ ಗ್ರಹಿಕೆ. ಮನೆಯ ಘಟಕದ ಒಳಗೆ ಅಡುಗೆಯ ಕೆಲಸವನ್ನು ಹೆಣ್ಣು ಮಾಡುತ್ತಾಳೆ.

ಬಡಿಸುವ ಕೆಲಸವನ್ನು ಹೆಣ್ಣು ಮಾಡುತ್ತಾಳೆ. ಶುಚಿತ್ವದ ಕೆಲಸವನ್ನು ಹೆಣ್ಣು ಮಾಡುತ್ತಾಳೆ. ಗಂಡ ಮಕ್ಕಳನ್ನು ಲಾಲನೆ ಮಾಡುವ ಕೆಲಸವನ್ನು ಹೆಣ್ಣು ಮಾಡುತಾಳೆ. ನಮ್ಮ ಸಾಂಸ್ಕೃತಿಕ ಗ್ರಹಿಕೆಗಳು ಹೆಣ್ಣು ಮಾಡುವ ಕೆಲಸಗಳನ್ನು 'ಖಾಸಗಿ' ಎಂದು ಭಾವಿಸುತ್ತವೆ. ಮತ್ತು ಗಂಡು ಮಾಡುವ ಕೆಲಸಗಳನ್ನು ' ಸಾರ್ವಜನಿಕ' ಎಂದು ಭಾವಿಸುತ್ತವೆ. ಮತ್ತು ಕೆಲವು ಕೆಲಸಗಳನ್ನು ಪವರ್‌ಫುಲ್(Powerfull) ಎಂದೂ ಕೆಲವನ್ನು ಬಹಳ ಪವರ್‌ಲೆಸ್(Powerless) ಎಂದೂ ಪರಿಭಾವಿಸಲಾಗುತ್ತದೆ. ಆದಕಾರಣವೇ ಸ್ತ್ರೀವಾದದ ಮುಖ್ಯ ಕಾಳಜಿಯಿರುವುದು ಈ 'ಪವರ್' ಎನ್ನುವ ಪರಿಕಲ್ಪನೆಯನ್ನು ಬದಲು ಮಾಡುವುದು. ಇಲ್ಲಿ ಖಾಸಗೀ ಕೆಲಸಗಳು ಕಸುಬಾಗದೆ ಕರ್ತವ್ಯವಾಗುತ್ತವೆ ಮತ್ತು ಆ ಕೆಲಸಗಳಿಗೆ ಮೌಲ್ಯ ನಿರ್ಧಾರ ಮಾಡಲಾಗುವುದಿಲ್ಲ. ಸಾರ್ವಜನಿಕ ಕೆಲಸಗಳು ಕಸಬುಗಳಾಗುತ್ತವೆ. ಗೌರವ ಮತ್ತು ಮೌಲ್ಯಗಳನ್ನು ಪಡೆಯುತ್ತವೆ. ಉದಾಹರಣೆಗೆ ಹೆಣ್ಣು ದಿನನಿತ್ಯವೂ ಮನೆಯಲ್ಲಿ ಅಡುಗೆ ಮಾಡುವುದು ಆಕೆಯ ಕರ್ತವ್ಯವಾದರೆ ವಿಶೇಷ ಸಮಾರಂಭದಲ್ಲಿ ಅಡುಗೆ ಮಾಡುವ ಗಂಡಿಗೆ ಅದೊಂದು ವೃತ್ತಿಯಾಗುತ್ತದೆ. Public performance ಗಳಲ್ಲಿ ಗಂಡು ಕಾಣುತ್ತಾನೆ. ಹೆಣ್ಣು ಅದೃಶ್ಯಳಾಗುತ್ತಾಳೆ. ಹೆಣ್ಣಿನ ಎಲ್ಲ ವ್ಯವಹಾರವನ್ನು, ನಡವಳಿಯನ್ನು ಖಾಸಗೀಕರಣಗೊಳಿಸಿ ಅವಳ 'ಪವರ್' ನ್ನು ಕಸಿಯಲಾಯಿತು. ಒಂದು ಮನೆಯ ಅಧ್ಯಯನದ ಮೂಲಕ ಕಂಡುಕೊಳ್ಳುವ ಸತ್ಯಗಳು ಆ ಇಡಿಯ ಸಮುದಾಯದ ಸಮಾಜದ ರಚನೆಗೆ ರೂಪಕವಾಗುತ್ತವೆ. ಇದನ್ನೇ ಮಹಿಳಾವಾದಿಗಳು " So to understand male and female roles in the community one must understand the metaphoric nature of the idea of the house. " ಇಲ್ಲಿ ಮನೆಯಲ್ಲಿ ಕೆಲಸ ಇಂತಿಂಥವರು ಮಾಡುತ್ತಾರೆ ಎನ್ನುವುದು ಅಷ್ಟೇ ಅಲ್ಲ. ಆ ಕೆಲಸಗಳಿಗೆ ಇರುವಂತಹ ಆರ್ಥಿಕ ಸಂಬಂಧಗಳು ಅಥವಾ ಉತ್ಪಾದನೆಯ ಸಂಬಂಧಗಳು ಯಾವುದಿರುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಯಾಕೆಂದರೆ ಶಕ್ತಿ ಎನ್ನುವುದು ಎಲ್ಲಿರುತ್ತದೆ ಎಂದರೆ ಒಂದು ಉತ್ಪಾದನೆಯನ್ನು ನೀವು ಇನ್ನೊಬ್ಬರಿಗೆ ಕೊಟ್ಟು ಅವರಿಂದ ಅದಕ್ಕಿಂತ ಹೆಚ್ಚಿನದನ್ನು ಪಡೆಯಲಿಕ್ಕೆ ಸಾಧ್ಯವಾದಾಗ. ಹೆಣ್ಣಿನ Carrying or Feeding ಅಥವಾ ತಾಳ್ಮೆ, ಸಹನೆ ಎನ್ನುವುದೂ ಒಂದು ಶಕ್ತಿಯಾಗುವಂತಹದು Feminine ಸಂಸ್ಕೃತಿಯಲ್ಲಿ ಮುಖ್ಯವಾಗುತ್ತದೆ. ಆಗ ಹೆಣ್ಣಿನ identity ಸಾಧ್ಯವಾಗುತ್ತದೆ. ಗಂಡ ಹೆಂಡಿರ ಈ Positions ಗಳನ್ನು ಬದಲಾವಣೆ ಮಾಡುವುದು ಸ್ತ್ರೀವಾದಿ ಅಧ್ಯಯನದಲ್ಲಿ ಮುಖ್ಯ ಎಂದು ಭಾವಿಸಲಾಗುತ್ತದೆ. ಈ ತರದ ಪಾತ್ರಗಳು ಸ್ವಲ್ಪ ಪಲ್ಲಟವಾದಾಗಲೂ ಇಡಿಯ ಸಾಮಾಜಿಕ ರಚನೆಯ ಬದಲಾವಣೆಯಾಗುತ್ತದೆ. ಇದರಿಂದ ಮನೆ- ಕುಟುಂಬ ಒಡೆಯುತ್ತದೆ. ಅಶಾಂತಿ ಒದಗುತ್ತದೆ ಎನ್ನಬಹುದು. ಆದರೆ ಇವು ತೀರಾ ಸರಳೀಕೃತ ಹೇಳಿಕೆಗಳು. ಇಲ್ಲಿ ಮುಖ್ಯವಾದುದು ಮನೆ ಕೆಲಸಗಳ ಪ್ರತಿ ಹಂತದಲೂ ಹಂಚಿಕೆ ಇರಬೇಕು ಎನ್ನುವುದು. ಅದು ಅಸಮಾನತೆಯ ಸ್ಥಿತಿಗಳನ್ನು ನಿವಾರಣೆ Sharing ಮಾಡುವಂತಹ ಒಂದು ಪ್ರಕ್ರಿಯಾತ್ಮಕ ಪ್ರಯತ್ನ.

ಸ್ತ್ರೀವಾದಿ ಸಾಂಸ್ಕೃತಿಕ ನೆಲೆಯಲ್ಲಿ ಇನ್ನೊಂದು ಮುಖ್ಯವಾದ ಅಂಶ ಪರಂಪರೆ. ಪರಂಪರೆಯನ್ನು ಅಧ್ಯಯನ ಮಾಡುವ ಮೂಲಕ ಪರಂಪರೆಯನ್ನು ಪ್ರಶ್ನಿಸುವುದು ಅಥವಾ ವಿರೋಧವನ್ನು ಪ್ರಕಟಿಸುವುದು. ಇನ್ನೊಂದು, ಪರಂಪರೆಗೆ ಹೊಂದಿರುಗುವುದು ಒಪ್ಪಿಗೆಯನ್ನು ಕೊಡುವಂತಹುದು. ಪರಂಪರೆಯನ್ನು ಪ್ರಶ್ನಿಸುವುದು ಯಾವುದೇ ಒಂದು ಬದಲಾವಣೆಯ ಸಾಧ್ಯತೆಯಲ್ಲಿ ಬಹಳ ಮುಖ್ಯವಾಗುತ್ತದೆ. ಉದಾಹರಣೆಗೆ, ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ, " "ಹೆಣ್ಣು ತಿರುಗಿ ಕೆಟ್ಟಳು, ಗಂಡು ಕೂತು ಕೆಟ್ಟ", " ಗಂಡು ಒಲೆ ಮುಂದೆ ಕೂತ, ಬೂರಿ ಇಳಿತ್ತ್" - ಇಂತಹ ನಂಬಿಕೆಗಳಾಗಲಿ, ಗಾದೆ ಮಾತಾಗಲಿ, ಅಥವಾ ಒಂದು ಹಾಡು ಕತೆಯಾಗಲಿ, ಇವು ಯಾವ ಸಮಾಜದಲ್ಲಿ ಹುಟ್ಟಿಕೊಂಡವು ಇದನ್ನು ಪ್ರಶ್ನಿಸುವಂತಹದು. ಇನ್ನೊಂದು ಪರಂಪರೆಗೆ ಹೊಂದಿರುಗುವುದು ಒಂದು ಸಂಸ್ಕೃತಿಯಲ್ಲಿ ಹೆಣ್ಣಿನ ಬಗೆಗಿರುವ ತಿಳುವಳಿಕೆಗಳು ಆಕೆಯ ಕೆಲಸದ ಮಹತ್ವವನ್ನು ಒಪ್ಪಿಕೊಳ್ಳುವಂತಹ ರಚನೆಗಳು ಇದ್ದಿದ್ದು ಕ್ರಮೇಣ ಇತರ ಸಂಸ್ಕೃತಿಗಳ ಪ್ರಬಾವದಿಂದ ಅವು ಬದಲಾವಣೆಗೊಂಡಿರಬಹುದು. ಆ ತರದ ದಾಖಲೆಗಳು ನಮಗೆ ಅವರ ಆಚರಣೆಗಳಲ್ಲಿ, ಅವರ ನಡವಳಿಗಳಲ್ಲಿ, ಅವರ ಜನಪದ ಸಾಹಿತ್ಯದಲ್ಲಿ ಕಾಣಿಸಿಕೊಂಡರೆ ಅಂತಹ ಜೀವನ ವ್ಯವಸ್ಥೆಗೆ ಹೊಂದಿರುಗುವ ಪ್ರಯತ್ನ. ಜನಪದ ಸಮಾಜ ಅಥವಾ ಧರ್ಮದೊಳಗೆ ಹೆಣ್ಣಿಗಿರುವ ಸಮಾನತೆ, ಪ್ರಾಮುಖ್ಯ ಅಪೇಕ್ಷಣೀಯವಾದುದು. ಉದಾಹರಣೆಗೆ ಸಿರಿಪಾಡ್ದನವನ್ನು ನೋಡಿದರೆ ಅಲ್ಲಿ ಸಿರಿ ಗಂಡನ ಶೋಷಣೆಗೆ ಒಳಗಾದ ಹೆಣ್ಣು, ಗಂಡ ವ್ಯಭಚಾರಿಯಾಗಿರುತ್ತಾನೆ. ಆಕೆ ಗಂಡನಿಗೆ ವಿಚ್ಛೇದನ ಹೇಳುತ್ತಾಳೆ. ಬಂಡಾಯಗಾರ್ತಿ ಹೆಣ್ಣಾಗಿ ಕಾಣುತ್ತಾಳೆ. ಆದರೆ ಸಿರಿಯ ಆಚರಣೆಯಲ್ಲಿ ಕಾಣುವಾಗ ಅಲ್ಲಿ ಎಂಟು ಹತ್ತು ಸಿರಿಗಳಿಗೆ ಒಬ್ಬ ಕುಮಾರ (ಸಿರಿಯಮಗ) - ಇರುತ್ತಾನೆ. ಮತ್ತು ಆ ಸಿರಿಗಳನ್ನು ಆತ ನಿಯಂತ್ರಿಸಿರುತ್ತಾನೆ. ಪಾಡ್ದನ ಸಾಹಿತ್ಯದಲ್ಲಿ ಕುಮಾರ ಚಿಕ್ಕ ಮಗುವಾಗಿದ್ದು ಸಿರಿ ಆತನನ್ನು ತನ್ನೊಂದಿಗೆ ಮಾಯ ಮಾಡುತ್ತಾಳೆ. ಅದೇ ರೀತಿ ನಮ್ಮ ಕರಾವಳಿಯ ಮಾತೃ ಪ್ರಧಾನ ಕುಟುಂಬಗಳಲ್ಲಿ ಮನೆತನದ ವಂಶ, ಆಸ್ತಿಯ ಎಲ್ಲ ಹಕ್ಕು, ಅಧಿಕಾರಗಳು ತಾಯಿಯಿಂದ ಮಗಳಿಗೆ ಬರುತ್ತವೆ. ಇಲ್ಲಿ ಮನೆತನದ ಆರಾಧನೆಗಳಲ್ಲಿ ಮನೆತನದ ಅಧಿಕಾರ ಹಿಡಿದಿರುವವನು ಅವಳ ಪ್ರತಿನಿಧಿಯಾಗಿ ಆಕೆಯ ಮಗ. ಆದರೆ ಪರೀಕ್ಷೆಗೊಡ್ಡುವ ಆರಾಧನೆಗಳಲ್ಲಿ ಗಂಡ ತುಳಿಯುವುದು, ಸಿಡಿಯಾಡುವುದು- ಆ ಮನೆಯ ಹೆಣ್ಣುಮಗಳು. ಅಂದರೆ ನಾನು ಹೇಳಬಯಸುತ್ತಿರುವುದು ಯಾವುದೇ ಒಂದು ಸಂಸ್ಕೃತಿಯಲ್ಲಿ ಹೆಣ್ಣಿಗಿರುವ ಪ್ರಾಧಾನ್ಯ ಆಚರಣೆಗೆ ಬಂದಾಗ ಅವು ಪುರುಷನ ಅಂಕೆಗೆ ಒಳಪಟ್ಟು ಹೆಣ್ಣು ಅಲ್ಲಿ Submissive ಆಗುತ್ತಾಳೆ ಎನ್ನುವುದು.

ಒಂದು ಸಂಸ್ಕೃತಿಯಲ್ಲಿ ಹೆಣ್ಣನ್ನು ಹೇಗೆ ಕಂಡಿದ್ದಾರೆ ಎನ್ನುವುದು ಹೆಣ್ಣಿನ ಕೆಲಸಗಳನ್ನು ಹೇಗೆ ಕಂಡಿದ್ದಾರೆ ಎನ್ನುವುದನ್ನು ಅವಲಂಬಿಸಿರುತ್ತದೆ. ಪುರುಷಕೇಂದ್ರಿತ ಸಂಸ್ಕೃತಿಯಲ್ಲಿ ಪುರುಷ ಶ್ರೇಷ್ಠನಾಗಿದ್ದು ಸ್ತ್ರೀ ಕನಿಷ್ಠಳಾಗಿ ಕಂಡುಬರುತ್ತಾಳೆ ಈ ಶ್ರೇಷ್ಠ - ಕನಿಷ್ಠಗಳ ಕಲ್ಪನೆಯಲ್ಲಿ ಗಂಡು 'ಮುಂದೆ' - ಶ್ರೇಷ್ಠ, ಹೆಣ್ಣು 'ಹಿಂದೆ' - ಕನಿಷ್ಠ, ಗಂಡು -ಬಲ ಶ್ರೇಷ್ಠ, ಹೆಣ್ಣು ಎಡ- ಕನಿಷ್ಠ, ಗಂಡು 'ಮೇಲೆ' ಶ್ರೇಷ್ಠ-ಹೆಣ್ಣು ಕೆಳಗೆ -ಕನಿಷ್ಠ ಎನ್ನುವುದನ್ನು ಎಲ್ಲ ಸಂದರ್ಭಗಳಲ್ಲೂ ಜಾಗರೂಕವಾಗಿ ರೂಢಿಸಿಕೊಂಡು ಬರಲಾಗಿದೆ. ಇಂಥ

ಧೋರಣೆಗಳ ವಿರುದ್ಧ ಸ್ತ್ರೀವಾದಿ ಪ್ರಜ್ಞೆ ದನಿ ಎತ್ತುತ್ತದೆ. ಹೆಣ್ಣಿನ ಜೈವಿಕ ಸ್ವರೂಪಕ್ಕೆ ಅಂಟಿರುವ ತಪ್ಪುಗ್ರಹಿಕೆಯನ್ನು ತೊಡೆಯುವ ಹಾಗೂ ತನ್ನ ದೇಹ ಮತ್ತು ಮನಸ್ಸಿನ ಮೇಲೆ ತಾನು ಸ್ವಾಮ್ಯ ಪಡೆಯಬೇಕು ಎನ್ನುವ ಅಂಶದ ಮೇಲೆ ಒತ್ತುಹಾಕುತ್ತದೆ. ಇಲ್ಲಿ ಹೆಣ್ಣಿನ ಕೆಲಸಗಳನ್ನು ಕೂಡಾ ಕ್ಷುಲ್ಲಕವಾಗಿ ಪರಿಗಣಿಸಲಾಗುತ್ತದೆ. ಕರಾವಳಿ ಸಂಸ್ಕೃತಿಯನ್ನು ತೆಗೆದುಕೊಂಡರೆ ಭೂತಾರಾಧನೆಯಲ್ಲಿ ನಮ್ಮ ಈವರೆಗಿನ ಎಲ್ಲಾ ಗಮನ ಅದರ ಬಣ್ಣಗಾರಿಕೆಗೆ, ಕುಣಿತಕ್ಕೆ ಮತ್ತು ಪ್ರದರ್ಶನದ ಭಾಗಕ್ಕೆ ಇರುವುದು ಈ ಎಲ್ಲವೂ ಗಂಡಿನದು ಎನ್ನುವ ಧೋರಣೆಯಿಂದಾಗಿ. ಆದರೆ ವಾಸ್ತವಿಕವಾಗಿ ಆತ ಆ ಇಡೀ ಆರಾಧನೆಯಲ್ಲಿ ಕುಣಿತದ ಭಾಗವೊಂದನ್ನು ಮಾತ್ರ ನಿರ್ವಹಿಸುತ್ತಾನೆ. ಆರಾಧನೆಯ ಮುಖ್ಯ ಭಾಗವಾದ ಪಾಡ್ದನ ಸಾಹಿತ್ಯ ಪರಂಪರೆಯ ಹುಟ್ಟು ಮತ್ತು ಮುಂದರಿಕೆಯನ್ನು ಮಾಡುವವಳು. ಆತನ ಪಕ್ಕದಲ್ಲಿ ಕುಳಿತು ಆತನಿಗೆ ಬಣ್ಣ ಹಾಕುವಲ್ಲಿ, ವೇಷಭೂಷಣಗಳನ್ನು ಸಿದ್ಧಗೊಳಿಸುವಲ್ಲಿ ಕೆಲಸ ಮಾಡುವವಳು ಆತನ ತಾಯಿಯೋ, ಸೋದರಿಯೋ, ಹೆಂಡತಿಯೋ ಆಗಿರುವ ಹೆಣ್ಣು. ಆದರೆ ನಾವು ಭೂತ ಮಾಧ್ಯಮವನ್ನು ಕೇಂದ್ರವಾಗಿಟ್ಟು Focnus ಮಾಡುತ್ತೇವೆ. ಮತ್ತು ಆ ಹೆಣ್ಣನ್ನು ಪರಿಧಿಯಿಂದ ಹೊರಕ್ಕೆ ತಳ್ಳುತ್ತೇವೆ. ಇದು ಹೆಣ್ಣಿನ ಕೆಲಸವನ್ನು ಕ್ಷುಲ್ಲಕವಾಗಿ ತಿಳಿಯುವ ಪ್ರಕ್ರಿಯೆಯದು. ಭೂತಾರಾಧನೆಯಲ್ಲಿ ಹಿನ್ನೆಲೆಯಾಗಿ ಉಳಿದಿರುವ ಹೆಣ್ಣಿನ ಕೆಲಸ ಏನು, ಆರಾಧನೆಯ ಪೂರ್ಣ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾದರೆ ಇವಳ ಭಾಗ ಎಷ್ಟು ಎನ್ನುವುದನ್ನು ತಿಳಿಯಬೇಕಾದರೆ ಇವಳನ್ನು ಕೇಂದ್ರವಾಗಿಟ್ಟು ನೋಡುವ ಮೂಲಕ ಪ್ರಯತ್ನ ಮಾಡುವಂತಹದು. ಇಂತಹ ಅಧ್ಯಯನಗಳು ನಡೆದಾಗ ಹೆಣ್ಣಿನ ಲೋಕದೃಷ್ಟಿ ಏನು ಎನ್ನುವುದನ್ನು ತಿಳಿಯುವಂತಾದರೆ ಅದು ಬಹಳ ಮಹತ್ವದ್ದಾಗುತ್ತದೆ. ಈ ಕಾರಣಕ್ಕಾಗಿಯೇ ಸ್ತ್ರೀವಾದಿ ದೃಷ್ಟಿಕೋನದ ಮುಖ್ಯ ಕಾಳಜಿ ಸಂಸ್ಕೃತಿಯ ಲಿಂಗಭೇದದ ಕಾರಣಕ್ಕಾಗಿ ನಿರ್ಮಾಣವಾಗಿರುವ ಸಾಂಸ್ಕೃತಿಕವಾದಂಥ ಭಿನ್ನತೆಗಳನ್ನು ಗುರುತಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು, ಪ್ರಶ್ನಿಸುವ ಮೂಲಕ ನಿರಾಕರಿಸುವುದು.

ಪುರುಷನಿಷ್ಠವಾದ ಗ್ರಹಿಕೆಯಿಂದ ಹೆಣ್ಣಿನ 'ಸಿದ್ಧಮಾದರಿ'ಗಳನ್ನು ಚಾಲ್ತಿಗೆ ಬಿಡಲಾಯಿತು. ಈ ಮೌಲ್ಯಗಳ ಪ್ರತಿಕೃತಿಗಳಿಗಾಗಿ ಸೀತೆ, ಸಾವಿತ್ರಿಯಂಥ ಮಾದರಿಗಳನ್ನು ನಿಜವಾದ ಸ್ತ್ರೀತ್ವ ಎಂದು ತಿಳಿಯುವಂತಾಯಿತು. ಈ ಆರೋಪಿತ ಮೌಲ್ಯಗಳು ಸ್ತ್ರೀಯರ ವ್ಯಕ್ತಿತ್ವದೊಳಗೆ ಎಷ್ಟು ಗಾಢವಾಗಿ ಕೊರೆಯಲ್ಪಟ್ಟುವೆಂದರೆ ಪುರುಷಾಧೀನವೇ ಸುಖ, ಬೆಚ್ಚನೆಯದು ಎಂದು ಭ್ರಮಿಸುವಷ್ಟು. ಈ ಮೌಲ್ಯಗಳು ಎಷ್ಟು ಸಹಜ ಅನಿಸುತ್ತದೆ ಎಂದರೆ ನಮ್ಮ ಒಂದು ದ್ವೀಪದ ಮಹಿಳೆಯರ ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ಗಮನಕ್ಕೆ ಬಂದಂತೆ ಆ ದ್ವೀಪದ ಮಹಿಳೆಯರಿಗೆ ಹೊಡೆಯದ ಗಂಡನೊಬ್ಬನನ್ನು ಕಲ್ಪಿಸುವುದು ಕೂಡ ಸಾಧ್ಯವಿಲ್ಲ ಮತ್ತು ಅದನ್ನು ಅಷ್ಟೇ ಸಹಜವಾಗಿ ಅವರು ಸ್ವೀಕರಿಸುತ್ತಾರೆ. "ನಮ್ಮ ಗಂಡಂದಿರು ನಮಗೆ ಹೊಡೆಯದೆ ಇನ್ನು ಯಾರಿಗೆ ಹೊಡೆಯುವುದು", " ಈ ಗಂಡನನ್ನು ಬಿಟ್ಟು ಇನ್ನೊಬ್ಬ ಗಂಡನನ್ನು ಮದುವೆಯಾದರೆ ಅವನು ಹೊಡೆಯುವುದಿಲ್ಲವೇ?" ಎನ್ನುವ ಅವರ ಮಾತುಗಳು ವ್ಯವಸ್ಥೆಯ ಬಯಕೆಗೆ ಹೊಂದುವ ಹೆಣ್ಣಿನ ಆರೋಪಿತ ಮಾದರಿಯನ್ನು

ಪರಿಚಯಿಸುತ್ತದೆ. ಈ ಬಗೆಯ ಕುಟುಂಬದ ಅನಿವಾರ್ಯತೆಯನ್ನು ಸ್ತ್ರೀವಾದಿ ಪ್ರಜ್ಞೆ ಪ್ರಶ್ನಿಸುತ್ತದೆ. ಅದು ಆಯ್ಕೆಯ ಪ್ರಶ್ನೆಯಾಗಬೇಕು ಎನ್ನುವ ಒತ್ತಾಯವನ್ನು ತರುತ್ತದೆ.

ಇಂತಹ ಮೂಲಭೂತ ಯೋಜನಾ ಕ್ರಮವನ್ನೇ ನಾವು ಪ್ರಶ್ನಿಸಬೇಕಾಗಿದೆ. ಇಂತಹ ಯೋಜನಾ ಕ್ರಮಗಳಿಗೆ ಮೂಲವಾಗಿರುವ ನಮ್ಮ ಸಾಂಸ್ಕೃತಿಕ ರಾಜಕೀಯ ಧಾರ್ಮಿಕ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳನ್ನು ನಾವು ಶೋಧಿಸಬೇಕಾಗಿದೆ. ಯಾಕೆಂದರೆ ಈ ಎಲ್ಲಾ ಯೋಚನಾ ಕ್ರಮಗಳನ್ನು ಪ್ರಬಲ ಸಂಸ್ಕೃತಿ ರೂಪಿಸಿದೆ ಮತ್ತು ಆ ಪ್ರಬಲ ಸಂಸ್ಕೃತಿ ಅಷ್ಟೇ ಮಹತ್ವದ ಸ್ತ್ರೀಸಂಸ್ಕೃತಿಯನ್ನು ಅಲ್ಲಗಳೆದಿದೆ. ಈ ನಿರ್ಲಕ್ಷ್ಯ ಜನಸಂಸ್ಕೃತಿಯ ನೆಲೆಯಿಂದ ಒಟ್ಟು ಸಂಸ್ಕೃತಿಯನ್ನು ಪುನರ್ರಚಿಸಬೇಕಾಗಿದೆ.

ಒಟ್ಟಿನಲ್ಲಿ, ಸ್ತ್ರೀವಾದಿ ಪ್ರಜ್ಞೆ ಗಂಡು- ಹೆಣ್ಣಿನ ಲಿಂಗಾಧಾರಿತ ಅಸಮಾನತೆಯನ್ನು, ಈ ನೆಲೆಯ ಶೋಷಣೆಯನ್ನು ವಿರೋಧಿಸುತ್ತದೆ. ಕುಟುಂಬವೆಂಬುದು ಹೆಣ್ಣಿಗೆ ಅನಿವಾರ್ಯವಾಗಬಾರದು, ಬದುಕು ಆಯ್ಕೆಯ ಪ್ರಶ್ನೆಯಾಗಬೇಕು. ಕೌಟುಂಬಿಕ ಜವಾಬ್ದಾರಿಗಳು ಸಮನಾಗಿ ಹಂಚಿಕೆಯಾಗಬೇಕು, ಲೈಂಗಿಕ ಬದುಕು ಮತ್ತು ಪ್ರಜನನ ಉತ್ಪಾದನೆಯಲ್ಲಿ ನಿರ್ಣಯದ ಸ್ವಾತಂತ್ರ್ಯವಿರಬೇಕು. ಇವೇ ಮುಂತಾದವು ಮಹಿಳಾವಾದದ ಮುಖ್ಯ ನಿಲುವುಗಳು. ಒಂದೇ ಮಾತಿನಲ್ಲಿ ಸ್ತ್ರೀವಾದವನ್ನು ನಿರ್ವಹಿಸುವುದಾರೆ ಅದು ಆರೋಗ್ಯಕರ ಸಮಸಂಸ್ಕೃತಿಯ ಹುಟ್ಟನ್ನು ಬಯಸುತ್ತದೆ.

ಪರಾಮರ್ಶನ ಗ್ರಂಥಗಳ ವಿವರ

ಆರ್ಕೆ (ಡಾ) 1986
ಮಹಿಳಾ ಪ್ರಜ್ಞೆ ಮತ್ತು ಕಾವ್ಯ (ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ)
ನವ ಕರ್ನಾಟಕ- ಬೆಂಗಳೂರು.

ಕಮಲಾ ಭಾಸಿನ್ 1989
ಸ್ತ್ರೀವಾದ
ಕನ್ನಡಕ್ಕೆ ವೆಂ. ವನಜ ಮತ್ತು ಎಚ್. ಆರ್. ರಾಜೇಶ್ವರಿ.
ಸಮತಾ ಪ್ರಗತಿಪರ ಮಹಿಳಾ ವೇದಿಕೆ ಮೈಸೂರು - 23

ಪೊಲಂಕಿ ರಾಮಮೂರ್ತಿ (ಡಾ) 1984
ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ (ಸೀತಾಯಣ)
ವಿಚಾರಿ ಪ್ರಕಾಶನ, ಶಿವಮೊಗ್ಗ

ಬಸವರಾಜ ಸಬರದ (ಡಾ)1982
ಹೊಸದಿಕ್ಕು
ಪಲ್ಲವಿ ಪ್ರಕಾಶನ, ಬೀದರ್

ಮೈಥಿಲಿ ಶಿವರಾಮನ್ 1986
ವಿಮೋಚನೆಯೆಡೆಗೆ
ಕನ್ನಡಕ್ಕೆ ಬಿ. ಎನ್. ಸುಮಿತ್ರಾಬಾಯಿ
ಸಮತಾ ವೇದಿಕೆ, ಮೈಸೂರು-23

ವಿಜಯಾ ದಬ್ಬೆ (ಡಾ) 1989
ಮಹಿಳೆ ಸಾಹಿತ್ಯ ಸಮಾಜ
ರಚನಾ ಪ್ರಕಾಶನ ಮೈಸೂರು

ವಿಜಯಶ್ರೀ ಸಬರದ (ಡಾ) 1989
ಸಾಹಿತ್ಯ ಮತ್ತು ಮಹಿಳೆ
ನವಕರ್ನಾಟಕ ಪ್ರಕಾಶನ, ಬೆಂಗಳೂರು

ವಿವೇಕ್ ರೈ (ಡಾ) 1992
ಮಹಿಳಾ ನಿಷ್ಠ ಜಾನಪದ ಕಮ್ಮಟ ಮರವಂತೆ ಇಲ್ಲಿ ತರಬೇತುದಾರರಾಗಿ ನೀಡಿದ ಉಪನ್ಯಾಸ (ಅಪ್ರಕಟಿತ)

ವೀಣಾ ಬನ್ನಂಜೆ 1992
ಮಹಿಳಾನಿಷ್ಠ ಜಾನಪದ ಕಮ್ಮಟ ಮರವಂತೆ ಇಲ್ಲಿ ಮಂಡಿಸಿದ ವರದಿ (ಅಪ್ರಕಟಿತ)

* * * * *

ನೃತ್ಯದಲ್ಲಿ ರಸನಿಷ್ಪತ್ತಿ

- ತುಳಸೀ ರಾಮಚಂದ್ರ

'ರಸಜೀವ ಭಾವ ಒಡಲು ಅರ್ಥವವಯವ

ಶಬ್ದ ಶರಸವೇ ನುಡಿಯು ......'

ಎಂದು ಮುಂತಾಗಿ ರಾಘವಾಂಕ ಕಾವ್ಯವನ್ನು ಒಂದು ಸುಂದರ ಕನ್ನಿಕೆಗೆ ಹೋಲಿಸಿ ಅದರ ಗುಣಗಳನ್ನು ಪಟ್ಟಿ ಮಾಡುತ್ತಾನೆ. ಕಾವ್ಯದ ಉಸಿರೇ ಆಗಿರುವಂತಹ ಈ ರಸದ ಸ್ವರೂಪ ಏನು ? ರಸ ಎಂದರೇನು ? ನಾಟ್ಯಶಾಸ್ತ್ರಕಾರ ಭರತಮುನಿ "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾದ್ರಸನಿಷ್ಪತ್ತಿ:" ಎಂದು ರಸನಿಷ್ಪತ್ತಿಯ ಪ್ರಕಾರವನ್ನು ತಿಳಿಸುತ್ತಾನೆ. ಸ್ಥಾಯಿಯಾಗಿರತಕ್ಕ ಭಾವ ಉದ್ಬೋಧಗೊಂಡಾಗ ರಸ ನಿಷ್ಪತ್ತಿ ಸಾಧ್ಯ. ಸ್ಥಾಯೀ ಭಾವಗಳಾದ ರತಿ, ಶೋಕ, ಹಾಸ, ಕ್ರೋಧ, ಉತ್ಸಾಹ, ಭಯ, ಜುಗುಪ್ಸಾ ಮತ್ತು ವಿಸ್ಮಯಗಳು ಮಾನವರಲ್ಲಿ ನೆಲೆಯಾಗಿರತಕ್ಕವು. ಇವುಗಳಿಗೆ ತಕ್ಕ ವಿಭಾವ (ಕಾರಣ), ಅನುಭಾವ (ವಿಭಾವದಿಂದ ಹುಟ್ಟತಕ್ಕಂತಹ ಶಾರೀರಕ ಬದಲಾವಣೆ), ಸಂಚಾರಿಭಾವಗಳು ದೊರಕಿದಾಗ ರಸನಿಷ್ಪತ್ತಿಯಾಗುವುದೆಂದು ಭರತನ ಮತ.

ಲೋಕವ್ಯವಹಾರ ಹಾಗೂ ಕಲಾಜಗತ್ತಿಗೆ ಇರುವ ಮುಖ್ಯ ವ್ಯತ್ಯಾಸವನ್ನು ಗಮನಿಸಿ ರಸಸಿದ್ಧಾಂತವನ್ನು ಭರತನ ಅನಂತರ ಭಟ್ಟನಾಯಕ ಅಭಿನವಗುಪ್ತನವರೆಗೂ ನಟನ ದೃಷ್ಟಿ ಹಾಗೂ ಪ್ರೇಕ್ಷಕನ ದೃಷ್ಟಿಗಳಿಂದ ವಿಶ್ಲೇಷಿಸಿ ನಟ ಹಾಗೂ ಪ್ರೇಕ್ಷಕ ಇಬ್ಬರ ಸ್ಥಾಯೀಭಾವವೂ ಸಾಧರಣೀಕರಣಗೊಂಡಾಗ ಮಾತ್ರ ರಸಾಸ್ವಾದ ಸಾಧ್ಯ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಸಾಧಾರಣೀಕರಣ ಅಂದರೆ ಅನುಭವದ ಸಾರ್ವತ್ರೀಕರಣ ಕವಿ, ನಟ, ಪ್ರೇಕ್ಷಕ ಎಲ್ಲರಿಗೂ ಸಮಾನವಾದ ಅನುಭವ ಉಂಟಾಗುವಂತಹುದು.

ನಾಟಕವು ಒಂದು ದೃಶ್ಯಕಾವ್ಯ. ಅದಕ್ಕಾಗಿ ಒಂದು ರಂಗಭೂಮಿ, ನಟ, ನಟಿ, ಅದಕ್ಕೆ ತಕ್ಕ ಪರಿಕರ ಎಲ್ಲವೂ ಇರುತ್ತದೆ. ಹಾಗೆಯೇ ಕಾವ್ಯಕ್ಕೆ ಸಹೃದಯ, ಓದುಗ ಹಾಗೂ ಕವಿಯ ಮನೋಭೂಮಿಯೇ ವೇದಿಕೆ. ಆತ ತನ್ನ ಊಹಾ ಪ್ರಪಂಚವನ್ನು ಅನುಸರಿಸಿ ಒಂದು ಕಾವ್ಯವನ್ನು ದರ್ಶನ ಮಾಡಬಹುದು.

ಭರತನಾಟ್ಯಶಾಸ್ತ್ರ ಮುಖ್ಯವಾಗಿ ನಾಟಕವನ್ನೇ ಕುರಿತದ್ದು. ಪ್ರಸ್ತುತ ಲೇಖನದ ಉದ್ದೇಶ ಭರತನ ಮತದಂತೆ ನಾಟಕದಲ್ಲಿ ಅಥವಾ ನಾಟ್ಯದಲ್ಲಿ ಉಂಟಾಗುವ ರಸಾನುಭವಕ್ಕೂ ನೃತ್ಯದಲ್ಲಿ ಉಂಟಾಗುವ ರಸಾನುಭವಕ್ಕೂ ಇರುವ ಭೇದದ ಬಗ್ಗೆ ಬೆಳಕು ಚೆಲ್ಲುವಂತಹುದು.

ನೃತ್ಯದಲ್ಲಿ ರಸಾನುಭವವನ್ನು ಪಡೆಯುವ ಬಗೆ ಏನು ? ಇದನ್ನು ತಿಳಿಯಬೇಕಾದರೆ ನಾವು ನಾಟ್ಯ ನೃತ್ತ. ನೃತ್ಯ ಎಂಬ ಮೂರು ಮುಖ್ಯವಾದ ಚಿತ್ರಮಂಟಪಗಳನ್ನು ದಾಟಿ ಹೋಗುವುದು ಉತ್ತಮ. ಮೇಲಿನ ಮೂರೂ ಪದಗಳ ಮೂಲಧಾತುಗಳು ನಟ್ ಮತ್ತು ನೃತ್ ಅಂದರೆ ಕುಣಿಯುವುದು ಎಂಬ ಅರ್ಥವಿದೆಯಾದರೂ ನಾಟ್ಯ, ನೃತ್ತ, ನೃತ್ಯಗಳ ಲಕ್ಷಣಗಳು ಬೇರೆ ಬೇರೆ. ನಾಟ್ಯವು ಬ್ರಹ್ಮನ ಸೃಷ್ಟಿಯಾದರೆ ನೃತ್ತ ಮತ್ತು ನೃತ್ಯಗಳು ಅನುಕ್ರಮವಾಗಿ ಪರಮೇಶ್ವರ ಹಾಗೂ ವಿಷ್ಣುವಿನ ಸೃಷ್ಟಿ ಎಂದು ನಾಟ್ಯಶಾಸ್ತ್ರಜ್ಞರ ಅಭಿಪ್ರಾಯ.

ನಾಟ್ಯದಲ್ಲಿ ಅನುಕರಣವೇ ಪ್ರಧಾನ ಲಕ್ಷಣ. ಒಬ್ಬ ವ್ಯಕ್ತಿಯ ವೇಷಭೂಷ, ಸ್ಥಿತಿಗತಿ ಹಾಗೂ ಅವಸ್ಥೆಗಳನ್ನು ಅನುಕರಿಸಿ ತೋರಿಸುವವನನ್ನು ನಟ ಎಂದೂ ಆತನ ಅನುಕರಣೆಯನ್ನು ಅಭಿನಯ ಎಂದೂ ಕರೆಯುತ್ತಾರೆ. ನಾಟ್ಯದಲ್ಲಿ ಪರಮೇಶ್ವರನ ಅಣತಿಯಂತೆ ನೃತ್ತವನ್ನೂ ಸೇರಿಸಿದವನು ಭರತ. ಆದ್ದರಿಂದ ಭರತನು ನಾಟ್ಯಶಬ್ದವನ್ನು ಹೀಗೆ ಹೇಳುತ್ತಾನೆ; "ಸುಖದುಃಖಸಮನ್ವಿತವಾದ ಈ ಲೋಕ ಸ್ವಭಾವವು ಅಂಗಾದ್ಯಭಿನಯಗಳಿಂದ ಪ್ರದರ್ಶಿಸಲ್ಪಡುವುದು." ಆಂಗಿಕ, ವಾಚಿಕ, ಸಾತ್ವಿಕ ಹಾಗೂ ಆಹಾರ್ಯ ಅಭಿನಯಗಳಿಂದ ಕೂಡಿದ ನಾಟ್ಯವು ದೇವತೆಗಳ, ಋಷಿಗಳ ಹಾಗೂ ರಾಜರ ವೃತ್ತಾಂತವನ್ನು ಕುರಿತಾಗಿರುತ್ತದೆ. ಇಂದಿನ ಭಾಗವತಮೇಳ, ಯಕ್ಷಗಾನ ಹಾಗೂ ಕೂಚುಪುಡಿ ನೃತ್ಯಶೈಲಿಗಳು ಮೇಲಿನ ಲಕ್ಷಣಗಳಿಗೆ ಸರಿದೊರೆಯಾಗಿರುವಂತಹುದು.

ಪರಮೇಶ್ವರನ ಸೃಷ್ಟಿಯಾದ ನೃತ್ತವು ತಾಳ-ಲಯ ಪ್ರಧಾನವಾಗಿ ಭಾವಾಭಿನಯವಿಲ್ಲದೇ ಒಬ್ಬನಿಂದ ಅಥವಾ ಹಲವರಿಂದ ಕುಣಿಯಲ್ಪಡುವಂತಹುದು. ಕರಣ, ಅಂಗಹಾರ ಹಾಗೂ ಏಳು ಪ್ರಕಾರದ ತಾಂಡವ, ಹತ್ತು ವಿಧ ಲಾಸ್ಯ ಎಲ್ಲವೂ ಇದರಲ್ಲೇ ಬರುವಂತಹುದು.

ಮಹಾವಿಷ್ಣು ಅಧಿಪತಿಯಾಗಿರುವ ನೃತ್ಯವು ಭಾವಾಭಿನಯ ಹಾಗೂ ಲಾಲಿತ್ಯಪೂರ್ಣ ನೃತ್ತವನ್ನು ಒಳಗೊಂಡಿದ್ದು ಹಿತವಾದ ಸಂಗೀತ-ಲಯದ ಹಿಮ್ಮೇಳವಿದ್ದು ಸಂತೋಷ, ದುಃಖ, ವಿರಹ ಮುಂತಾದ ಭಾವಾಭಿನಯಗಳನ್ನು ಒಳಗೊಂಡಿರುವುದು. ನಾಟ್ಯದಲ್ಲಿ ಬರುವಂತೆ ಒಂದು ಇಡಿಯ ಕಥೆಯ ಅಗತ್ಯ ಇಲ್ಲಿ ಇಲ್ಲ. ಲಾಕ್ಷಣಿಕರು ಇದನ್ನು ರಸಭಾವಪೂರ್ಣ ಅಭಿನಯ ಎಂದಿದ್ದಾರೆ.

ರಸವು ಸಾಕ್ಷಾತ್ಕಾರರೂಪವಾಗಿ ಅನುಭವಕ್ಕೆ ಬರುವಂತಹುದು. ಆಸ್ವಾದನೆಯೇ ರಸದ ಪರಮ ಗುರಿ. ಸಮಾಧಿ ಸ್ಥಿತಿಯನ್ನು (ಒಂದು ರೀತಿಯ Mental Bliss) ಅನುಭವಕ್ಕೆ ತರುವ ಈ ರಸಾಸ್ವಾದವು ಬ್ರಹ್ಮಾನಂದ ಸದೃಶವೆಂದು ಲಾಕ್ಷಣಿಕರು ಅಭಿಪ್ರಾಯ ಪಡುತ್ತಾರೆ. ಲೌಕಿಕ ಜಗತ್ತಿನಲ್ಲಿರುವಂತೆ ಸ್ವಕೀಯ ಪರಕೀಯ ಭಾವಗಳಾಗಲೀ ರಾಗದ್ವೇಷಗಳಾಗಲೀ ಕಲಾಜಗತ್ತಿನಲ್ಲಿ ಇಲ್ಲದಿರುವುದರಿಂದ ಅಲ್ಲಿ ನಿರಂತರವಾದ ಆನಂದಾನುಭೂತಿ ಒದಗುತ್ತದೆ. ಈ ತರಹದ ರಸಾನುಭವ ನೃತ್ಯದಲ್ಲಿ

ಹೇಗೆ ಲಭಿಸುತ್ತದೆ ಎಂಬುದರ ವಿವಕ್ಷೆಯೇ ಪ್ರಸ್ತುತ ಲೇಖನದ ಉದ್ದೇಶ. ಕಾವ್ಯ ನಾಟಕಗಳನ್ನು ಒಬ್ಬ ಸಹೃದಯದ ಪ್ರೇಕ್ಷಕ ಅಥವಾ ಓದುಗ, ನಟ, ಕವಿ ಅನುಶೀಲನ ಮಾಡುವಾಗ ಆತನ ಚಿತ್ತವೃತ್ತಿಯಲ್ಲಿ ಸ್ಥಾಯಿಯಾಗಿರತಕ್ಕ ಭಾವಗಳಿಗೆ ತಕ್ಕ ವಿಭಾವಾದಿಗಳು ಲಭಿಸಿ ರಸೋತ್ಪಾದನೆಯಾಗುವುದು ಎಂಬುದು ರಸಸಿದ್ಧಾಂತಕಾರರ ಅಭಿಪ್ರಾಯ.

ನಾಟ್ಯದಲ್ಲಿ (ನಾಟಕದಲ್ಲಿ) ನಾಯಕ, ನಾಯಕಿ, ಕಥೆಗೆ ತಕ್ಕ ಪರಿಕರ, ಆಹಾರ್ಯ, ಹಿಮ್ಮೇಳಗಳು ಇದ್ದು ಒಬ್ಬ ಸಾಮಾನ್ಯ ಪ್ರೇಕ್ಷಕನೂ ಕೂಡ ವೇದಿಕೆಯ ಮೇಲೆ ಪ್ರದರ್ಶಿತವಾಗುತ್ತಿರುವ ರಸವನ್ನು ಗ್ರಹಣ ಮಾಡಬಲ್ಲ. ಉದಾ : ಸತ್ಯ ಹರಿಶ್ಚಂದ್ರ ನಾಟಕದಲ್ಲಿ ಚಂದ್ರಮತಿಯ ಪ್ರಲಾಪ. ಕರುಣರಸದ ಮಡುವಾಗಿರುವ ಈ ಪ್ರಸಂಗದಲ್ಲಿ ಲೋಹಿತಾಶ್ವನ ಕಳೇಬರವು ಶೋಕ ಸ್ಥಾಯಿಯನ್ನು ಉದ್ಬೋದಗೊಳಿಸುವಂತಹ ವಿಭಾವವಾಗುತ್ತದೆ. ಇದರಿಂದ ಸಭಿಕರಿಗೂ ಉಂಟಾಗುವ ಕಂಬನಿ, ನಡುಕ ಮುಂತಾದ ಶಾರೀರಕ ಬದಲಾವಣೆಗಳು ಅನುಭಾವವಾದರೆ ವೇದಿಕೆಯ ಮೇಲೆ ಶ್ಮಶಾನದ ಕಲ್ಪನೆಯನ್ನು ತಂದು ಅದಕ್ಕೆ ತಕ್ಕ ಸನ್ನಿವೇಶದ ನಿರ್ಮಾಣ, ಸ್ವತಃ ತಂದೆಯಾದರೂ ಸತ್ಯಹರಿಶ್ಚಂದ್ರ ತನ್ನ ಧಣಿಯಾದ ವೀರಬಾಹುವಿನ ಆಣತಿಯಂತೆ ಮಗುವಿನ ಕಳೇಬರದ ಸಂಸ್ಕಾರಕ್ಕಾಗಿ ತೆರವನ್ನು ಪತ್ನಿಯಲ್ಲೇ ಕೇಳುವುದು, ಕೊಡಲು ಆಕೆಗೆ ಏನು ಇಲ್ಲದಾಗ ಆಕೆಯನ್ನೇ ಕಡಿಯಲು ಮುಂದಾಗುವುದು. ಇವೆಲ್ಲಾ ಕರುಣ ರಸದ ಪರಿಣಾಮವನ್ನು ಇನ್ನೂ ಇಮ್ಮಡಿಗೊಳಿಸುವ ಅಂಶಗಳಾಗುತ್ತವೆ.

ಒಬ್ಬ ಸಹೃದಯ ಓದುಗ ಇಡೀ ಹರಿಶ್ಚಂದ್ರ ಕಾವ್ಯವನ್ನು ಓದಿ ಅಲ್ಲಿನ ಪದ್ಯದ ಲಯ, ಛಂದಸ್ಸು, ಶಬ್ದಗಳ ಜೋಡಣೆ ಕವಿಯಿಂದ ವರ್ಣಿತವಾಗಿರುವ ಅಲ್ಲಿನ ಸನ್ನಿವೇಶಗಳನ್ನು ಮನೋವೇದಿಕೆಯಲ್ಲೇ ಕಲ್ಪಿಸಿ, ಕರುಣರಸವನ್ನು ಸಾಕ್ಷಾತ್ಕರಿಸಿ ಕೊಳ್ಳಬಹುದು.

ಇದೇ ಸನ್ನಿವೇಶವನ್ನು ನೃತ್ಯದಲ್ಲಿ ಯಾವ ತರಹ ಚಿತ್ರಿಸಬಹುದು ಎಂದು ನೋಡೋಣ.

ಸಾಮಾನ್ಯವಾಗಿ ನೃತ್ಯವನ್ನು ಒಬ್ಬರೇ ನರ್ತಿಸುವುದರಿಂದ ನಾಟ್ಯದಲ್ಲಿ ಕಂಡಂತೆ ಆಯಾ ಪಾತ್ರಧಾರಿಗಳು ಇರುವುದಿಲ್ಲ. ವಾಚಿಕಾಭಿನಯವೂ ಇರುವುದಿಲ್ಲ. ರಂಗಸಜ್ಜಿಕೆಯೂ ಆ ರೀತಿ ಇರುವುದಿಲ್ಲ. ಚಂದ್ರಮತಿಯ ಪ್ರಲಾಪಕ್ಕೆ ತಕ್ಕಂತೆ ಇರುವ ಸಾಹಿತ್ಯವನ್ನು ಕರುಣರಸಕ್ಕೆ ಹೊಂದುವ ರಾಗದಲ್ಲಿ ಹಿನ್ನೆಲೆ ಗಾಯಕರು ಹಾಡುತ್ತಿರುತ್ತಾರೆ. ನರ್ತಕಿ ಇವುಗಳೆಲ್ಲವುಗಳಿಂದ ತನ್ನಲ್ಲಿರುವ ಶೋಕಸ್ಥಾಯಿಯನ್ನು ಉದ್ಬೋಧಗೊಳಿಸುತ್ತಾಳೆ. ನರ್ತಕಿಯೇ ಚಂದ್ರಮತಿ ಹಾಗೂ ಹರಿಶ್ಚಂದ್ರನ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ.

ಭಾವಾಭಿನಯಗಳಿಂದ ಕೂಡಿದ ನೃತ್ಯಬಂಧಗಳಾದ ಪದ ಅಷ್ಟಪದಿ, ದೇವರನಾಮ ಇವುಗಳನ್ನು ನರ್ತಕಿ ನರ್ತಿಸುತ್ತಿರುವಾಗ ಆಯಾ ನೃತ್ಯಬಂಧದ ಸಾಹಿತ್ಯದ ಅರಿವು ಆಕೆಗೆ ಚೆನ್ನಾಗಿ ಇರಬೇಕಾಗುತ್ತದೆ. ನಾಟ್ಯಶಾಸ್ತ್ರ ಹಾಗೂ ಅಭಿನಯದರ್ಪಣ ಪ್ರಣೀತವಾದ ಅಸಂಯುತ, ಸಂಯುತ (ಅಭಿನಯ) ಹಸ್ತಗಳ ಮೂಲಕ ಸಾಹಿತ್ಯದಲ್ಲಿನ ಪದಶಃ ಅರ್ಥವನ್ನು ಆಕೆ ಮಾಡುತ್ತಾಳೆ. ಉದಾ: ಕ್ಷೇತ್ರಜ್ಞನ ಪದ 'ಮುಂದಟಿವಲೆನಾಪ್ಪೈ ನೆನರುನ್ನದಾ ನಾ ಸಾಮಿ' ಅಂದರೆ 'ಮೊದಲಿನ ತರಹ ನನ್ನ ನೆನಪಿದೆಯೇ? ಸ್ವಾಮಿ' ಎಂದು ನಾಯಕಿ ನಾಯಕನನ್ನು ಪ್ರಶ್ನಿಸುತ್ತಾಳೆ. ಶೃಂಗಾರ ನಾಯಕಿಯ ಅವಸ್ಥೆಯನ್ನು ಅಭಿವ್ಯಕ್ತಿಗೊಳಿಸುವ ಈ ಪದದ ನಾಯಕಿ ಮಧ್ಯಧೀರಾ ಜ್ಯೇಷ್ಠೆ. ನರ್ತಕಿ ಸಂಪ್ರದಾಯದಂತೆ ಸಾಹಿತ್ಯದ ವಾಚ್ಯಾರ್ಥವನ್ನು ನೇರವಾಗಿ ಹಸ್ತಗಳ ಮೂಲಕ ಮಾಡಿ ತೋರಿಸುತ್ತಾಳೆ. ಆದರೆ ಸಾಹಿತ್ಯದಲ್ಲಿನ ಭಾವವನ್ನು ಹೊರಗೆಡಹಲು ಅದರ ವ್ಯಂಗ್ಯಾರ್ಥವನ್ನು ಅದರೊಳಗಿಹ ಧ್ವನಿಯನ್ನು ಅಭಿವ್ಯಕ್ತಿಗೊಳಿಸಿದರೆ ಮಾತ್ರ ರಸಾಸ್ವಾದ ಸಾಧ್ಯ. 'ಮೊದಲಿನ ತರಹ ನನ್ನ ನೆನಪಿದೆಯೇ ಸ್ವಾಮಿ' ಎಂದು ನಾಯಕನನ್ನು ಕೇಳುವಾಗ ಆತನೊಡನೆ ತಾನು ಕಳೆದ ಕ್ಷಣಗಳನ್ನು ನೆನಪಿಸಿಕೊಳ್ಳುವುದು, ಆತನ ಈಗಿನ ಉಪೇಕ್ಷೆಗೆ ಬೇಸರಿಸಬಹುದು, ಆತನ ಈಗಿನ ನಡವಳಿಕೆಗೆ ಆಶ್ಚರ್ಯಪಡಬಹುದು, ಕೋಪಿಸಿಕೊಳ್ಳಬಹುದು, ದುಃಖಿಸಬಹುದು. ಇವೆಲ್ಲವೂ ಸಂಚಾರಿಭಾವಗಳಲ್ಲಿ ತಂದು ಸಾಹಿತ್ಯದಲ್ಲಿ ಅಡಗಿರುವ ಮುಖ್ಯರಸವನ್ನು ಪೋಷಿಸಬಹುದು. ನೃತ್ಯದ ಒಂದು ವೈಶಿಷ್ಟ್ಯ ಎಂದರೆ ನರ್ತಕಿ ನಾಯಕಿ, ನಾಯಕ ಹಾಗೂ ನರ್ತಕಿ ಹೀಗೆ ಮೂರೂ ಪಾತ್ರಗಳ ಔಚಿತ್ಯವನ್ನು ಅರಿತು ಅದರ ಯೋಗ್ಯತೆಗನುಸಾರವಾಗಿ ಅಭಿನಯಿಸಬೇಕಾಗುತ್ತದೆ. ಸಹೃದಯ ಪ್ರೇಕ್ಷಕ ನರ್ತಕಿಯು ಅಭಿವ್ಯಕ್ತಿಗೊಳಿಸುತ್ತಿರುವ ರಸವನ್ನು ತಾನೂ ಆಸ್ವಾದ ಮಾಡುವಂತಾಗುತ್ತಾನೆ.

ರಾಧಾಕೃಷ್ಣ ಶೃಂಗಾರ ಲೀಲೆಗಳನ್ನು ಆದ್ಯಂತವಾಗಿ ವರ್ಣಿಸುವ ಜಯದೇವನ ಗೀತಗೋವಿಂದವು ನೃತ್ಯಕ್ಷೇತ್ರದಲ್ಲಿ ಸುಪ್ರಸಿದ್ಧ. ಈ ಅಷ್ಟಪದಿಗಳು ಹೇಗೆ ಬಿಗಿಯಾದ ಸಾಹಿತ್ಯ, ಛಂದಸ್ಸಿನಿಂದ ಕೂಡಿವೆಯೋ ಹಾಗೆಯೇ ಇವುಗಳನ್ನು ಅಭಿನಯಿಸಲು ನರ್ತಕಿಗೆ ಅಪಾರವಾದ ಅನುಭವ, ಭಾವಗಳ ಮೇಲಿನ ಹಿಡಿತ ಮತ್ತು ಉತ್ತಮ ಬೌದ್ಧಿಕ ಮಟ್ಟಗಳ ಅಗತ್ಯವಿದೆ. ರಾಧಾಕೃಷ್ಣರ ವಿಪ್ರಲಂಭ ಶೃಂಗಾರವನ್ನು ವರ್ಣಿಸುವ ಈ ಅಷ್ಟಪದಿಗಳು ವಿರಹದ ಹತ್ತು ಅವಸ್ಥೆಯನ್ನೂ ವಿವರವಾಗಿ ತೆರೆದಿಡುತ್ತವೆ.

ಇಲ್ಲಿಯೂ ನರ್ತಕಿ ಸಾಹಿತ್ಯದ ಧ್ವನಿಯನ್ನು ಪ್ರೇಕ್ಷಕರಿಗೆ ಮನಗಾಣಿಸಬೇಕಾದರೆ ಏಕಕಾಲದಲ್ಲಿ ರಾಧೆ, ಆಕೆಯ ಸಖಿ ಹಾಗೂ ನಾಯಕ ಕೃಷ್ಣನಾಗಬೇಕಾಗುತ್ತದೆ.

ಉದಾ : ಸ್ತನವಿನಿಹಿತಮಪಿ ಹಾರಮುದಾರಂ
ಸಾಮನುತೇ ಕೃಶತನುರತಿಭಾರಂ
ರಾಧಿಕಾ ತವ ವಿರಹೇ ಕೇಶವಾ ||

ರಾಧೆಯ ಆಪ್ತ ಸಖಿ ಕೃಷ್ಣನಿಗೆ ರಾಧೆಯ ವಿರಹೋತ್ಕಂಠಿತ ಅವಸ್ಥೆಯನ್ನು ತಿಳಿಸಿ ಹೇಳುತ್ತಾಳೆ. ' ಕೇಶವ! ನಿನ್ನ ವಿರಹವನ್ನು ತಾಳದೇ ಕಂದಿ ಕೃಶವಾಗಿ ಬಾಡಿ ಹೋದ ರಾಧೆ ತಾನು ವಕ್ಷಸ್ಥಳದಲ್ಲಿ ಧರಿಸಿದ ಹಾರವೂ ಕೂಡ ಭಾರವೆಂದು ಬಗೆದು ತೆಗೆದು ಎಸೆಯುತ್ತಾಳೆ.

ದಿಶಿ ದಿಶಿ ಕಿರತಿ ಸಜಲಕಣಜಾಲಂ
ನಯನನಲಿನಮಿವ ವಿಗಲಿತನಾಲಂ ||ರಾಧಿಕಾ ||

'ಕೇಶವಾ, ನಾಳದಂಡವಿಲ್ಲದ ಕಮಲಗಳೋ ಎನ್ನುವಂತಹ ಕಣ್ಣುಗಳುಳ್ಳ ರಾಧೆಯು ನಿನ್ನನ್ನು ಕಾಣುವ ಉತ್ಸಾಹದಿಂದ ಕಣ್ಣುಗಳನ್ನು ಸುತ್ತಲೂ ತಿರುಗಿಸುವಳು.'

ರಾಧೆಯ ಆಪ್ತಗೆಳತಿಯಾದ್ದರಿಂದ ಆಕೆಯ (ರಾಧೆಯ) ಸ್ವಭಾವ, ನಡೆ, ನುಡಿ ಎಲ್ಲವನ್ನು ಅನುಕರಿಸಬಹುದು. ಅಂದರೆ ಇಲ್ಲಿ ಅನುಕರಣವೇ ಪ್ರಧಾನವಾಯಿತು. ರಾಧೆಯ ವಿರಹವೇದನೆ ಇನ್ನೂ ಸ್ಪಷ್ಟವಾಗಿ ಗೋಚರಿಸುವಂತೆ ಮಾಡಲು (ರಾಧೆಯ ಗೆಳತಿಯಾಗಿದ್ದ) ನರ್ತಕಿ ಸ್ವತಃ ರಾಧೆಯೇ ತಾನಾಗಬೇಕಾಗುತ್ತದೆ. ಕೃಷ್ಣನ ಅಗಲಿಕೆಯನ್ನು ತಾಳಲಾರದೇ ವಿರಹವೇದನೆಯನ್ನು ಅನುಭವಿಸುತ್ತ ಕೊನೆಗೆ ಮರಣವನ್ನೇ ಅಪ್ಪುವಷ್ಟು ಸಂಕಟ, ಬಾಧೆ ಪಡುವುದನ್ನು ಅಭಿನಯಿಸಿದಾಗ ಸಹೃದಯ ಪ್ರೇಕ್ಷಕರ ಪರಿಸ್ಥಿತಿಯು ಅರಿವು ಮಾಡಿಕೊಳ್ಳಲು ಸಾಧ್ಯ.

ಉದಾ : ನಯನ ವಿಷಯಮಪಿ ಕಿಸಲಯತಲ್ಪಂ
ಕಲಯತಿ ವಿಹಿತಹುತಾಶವಿಕಲ್ಪಂ ||ರಾಧಿಕಾ ||

ನಿನ್ನ ವಿರಹ ತಾಪದಿಂದ ಬೇಯುತ್ತಿರುವ ರಾಧೆಯು ಚಿಗುರುಗಳಿಂದ ನಿರ್ಮಿತವಾದ ಹಾಸಿಗೆಯನ್ನೂ ಬೆಂಕಿಯೆಂದು ಭ್ರಮಿಸುತ್ತಿದ್ದಾಳೆ.

ಹರಿರಿತಿ ಹರಿರಿತಿ ಜಪತಿ ಸಕಾಮಂ
ವಿರಹವಿಹಿತಮರಣೇವ ನಿಕಾಮಂ

ಕೇಶವ' ನಿನ್ನ ವಿರಹಾತಿಶಯದಿಂದ ಮರಣವನ್ನೇ ಅಪ್ಪುತ್ತಿರುವ ರಾಧೆಯು ಹರಿ, ಹರಿ ಎಂದು ಕೂಗಿಕೊಳ್ಳುತ್ತಿದ್ದಾಳೆ.

ವಿಪ್ರಲಂಭ ಶೃಂಗರ ಉದ್ಬೋಧವಾಗಲು ತಕ್ಕ ವಿಭಾವ, ಅನುಭಾವ ಸಂಚಾರಿ ಲಭಿಸಿ ಅದು ರಸವಾಗಿ ಹೊರಹೊಮ್ಮಲು ಜಯದೇವನ ಅಷ್ಟಪದಿ, ಅದಕ್ಕೆ ತಕ್ಕರಾಗ ಸಂಯೋಜನೆ ಸುಶ್ರಾವ್ಯವಾಗಿ ಅನುಭವಿಸಿ ಹಾಡುವ ಗಾಯಕ, ಸಂವೇದನಶೀಲ ವಾದ್ಯಗಳ ನುಡಿಕಾರ ಪೋಷಕವಾಗುತ್ತಾರೆ. ಆಗ ಅಭಿನವಗುಪ್ತನ ಮತದಂತೆ ಭರತನ ರಸಸೂತ್ರ ಸಿದ್ಧಿಯಾಗುತ್ತದೆ.

ಇದೇ ರೀತಿ ದೇವರನಾಮದ ಅಭಿನಯದಲ್ಲೂ ಸಾಧ್ಯ. ಭಗವಂತನ ಭಕ್ತರಾದ ಕನಕ, ಪುರಂದರದಾಸರ ಕೃತಿಗಳು ಅವರ ಅಪಾರ ಅನುಭವಜ್ಞಾನದಿಂದಲೂ ಭಕ್ತನ ಅಂತರಾತ್ಮದಿಂದ ಹೊರಹೊಮ್ಮಿದ ಪದಗಳಾಗಿವೆ. ಭಕ್ತಿಯನ್ನು ಒಂದು ರಸವನ್ನಾಗಿ ಪರಿಗಣಿಸಬೇಕೆಂಬುದು ವಿದ್ವಾಂಸರಾದ ತೀ. ನಂ. ಶ್ರೀ ಅವರ ಅಭಿಪ್ರಾಯ.

ಇಂತಹ ದೇವರನಾಮಗಳನ್ನು ಅಭಿನಯಿಸುವ ನರ್ತಕಿ/ಕನಿ/ಗೆ/ಶುದ್ಧ ಸಾಹಿತ್ಯಜ್ಞಾನ, ಅಂತರಂಗಭಕ್ತರ ಹೃದಯದ ಜ್ಞಾನದ ಅರಿವು ಅಗತ್ಯ. ಇಲ್ಲದಿದ್ದರೆ ಆಕೆಯ ದೇವರನಾಮದ ಅಭಿನಯ ಪದಗಳಿಗೆ ತಕ್ಕಹಾಗೆ ಜೋಡಿಸಿದ ಹಸ್ತಗಳ ಚಲನೆಯು ಒಂದು ಕವಾಯಿತಿನಂತೆ ಇರುತ್ತದೆ.

ಕಾವ್ಯಲೋಕಕ್ಕೂ ನಾಟ್ಯ (ನೃತ್ಯ)ಲೋಕಕ್ಕೂ ಪ್ರಮುಖ ವ್ಯತ್ಯಾಸ. ಕಾವ್ಯಕ್ಕೆ ನಮ್ಮ ಮನೋಭೂಮಿಯೇ ವೇದಿಕೆ. ಅಲ್ಲಿ ಪಾತ್ರಗಳ, ಸನ್ನಿವೇಶಗಳ, ಆಹಾರ್ಯದ ಕಲ್ಪನೆ ಓದುಗ ಅಥವಾ ಕೇಳುವವನಿಗಿರುತ್ತದೆ.

ಉದಾಹರಣೆ: ಜೈಮಿನಿ ಭಾರತದಲ್ಲಿ ಸೀತಾಪರಿತ್ಯಾಗದ ಪ್ರಸಂಗದ ಕೆಲವು ಪದ್ಯಗಳು ಶ್ರೀರಾಮನ ಅಣತಿಯಂತೆ ಘೋರಾರಣ್ಯಕ್ಕೆ ಗರ್ಭಿಣಿ ಜಾನಕಿಯನ್ನು ರಥದಲ್ಲಿ ಕರೆತಂದ ಲಕ್ಷ್ಮಣ ತನ್ನ ಅಣ್ಣ; ರಾಜಾರಾಮನು ತನಗೆ ವಹಿಸಿದ ಉದ್ಯೋಗವನ್ನು ಹೇಳುತ್ತಾನೆ.

ದೇವಿ ನಿನಗಿನ್ನೆಗಂ ಪೇಳ್ವುದಿಲ್ಲಪವಾದ
ಮಾವರಿಸಿ ನಿನ್ನನೊಲ್ಲದೆ ರಘುಕುಲೋದ್ಭಹಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ
ಆ ನುಡಿಗಳನ್ನು ಕೇಳಿದ ಸೀತೆ
ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡನಡುಗುತ||

ಇಂತಹ ಬಲವಾದ ಹೊಡೆತದಿಂದ ಸಾವರಿಸಿಕೊಂಡು ಎದ್ದ ಸೀತೆ ತನಗೆ ತಾನೇ ಹೀಗೆ ಸಮಾಧಾನ ಮಾಡಿಕೊಳ್ಳುತ್ತಾಳೆ :

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ |
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ |
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಬೇಡ ನೀನು ||
ನಡೆ ಪೋಗು ನಿಲ್ಲದಿರ್ ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು
ಆಗ ಲಕ್ಷ್ಮಣ
ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗ
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರಕಾವುದು
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ |
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ |
ನೆಲೆ ತಾಯೆ ಭೂದೇವಿ ನಿನ್ನ ಮಗಳಿವಳೆಂದು ಸೌಮಿತ್ರಿ ಕೈಮುಗಿದನು.

ಇದು ನಾಟಕೀಯತೆಯ ಉತ್ತುಂಗ ಶಿಖರಕ್ಕೆ ಏರಿಸುತ್ತದೆ. ಕವಿ ಲಕ್ಷ್ಮೀಶನ ವಾಗ್ವಿಲಾಸ ಕರುಣ ರಸವನ್ನು ಉಕ್ಕಿ ಹರಿಸಿ ಪ್ರೇಕ್ಷಕರಲ್ಲಿ ಆಸ್ವಾದಿಸುವಂತೆ ಮಾಡುತ್ತದೆ.

ರೂಢಿಬದ್ಧವಾಗಿ ಬಳಸುವ ಹಸ್ತಗಳನ್ನೇ ನೃತ್ಯದಲ್ಲಿ ಬಳಸಿ ಅವನ್ನೇ ಸಂವಹನಕ್ಕೆ ಮೂಲವಾಗಿ ತೆಗೆದುಕೊಳ್ಳುವುದು ನೃತ್ಯದ ಒಂದು ಲಕ್ಷಣ. ಸಾಹಿತ್ಯದಲ್ಲಿ ಅಡಗಿದ ಭಾವವನ್ನು ಸಂಗೀತದೊಂದಿಗೆ ಕೇವಲ ಈ ಹಸ್ತಗಳನ್ನು ಬಳಸಿ ಇಡೀ ಸಾಹಿತ್ಯದ ಭಾವವನ್ನು ಹೊರಗೆಡಹುತ್ತಾರೆ. ಇಂತಹ ಹಸ್ತಗಳು ಅಭಿನಯ ಹಸ್ತಗಳೆಂದು ಪ್ರತ್ಯೇಕವಾಗಿ ವಿಭಾಗಿಸಲ್ಪಟ್ಟಿವೆ. ಯಾವುದೇ ಭಾವಾವೇಶಗಳಿಲ್ಲದೆ ಶುದ್ಧ ನೃತ್ತದಲ್ಲಿ ಬಳಸುವ ನೃತ್ತಹಸ್ತಗಳು ಬೇರೆಯಾಗಿವೆ. ಇವು ಶುದ್ಧ ನೃತ್ತದಲ್ಲಿ ಬಳಸುವ [illegible] ಹಸ್ತಗಳ ಸ್ಥೂಲ ತಿಳುವಳಿಕೆ ಇದ್ದರೂ ಒಬ್ಬ ಸಹೃದಯ ಪ್ರೇಕ್ಷಕ ನೃತ್ಯವನ್ನು ಸಂಪೂರ್ಣವಾಗಿ ಆಸ್ವಾದಿಸಬಲ್ಲ. ಆಗ ಕಾವ್ಯ ಕೇವಲ ಶ್ರವ್ಯವಾಗದೇ ಪ್ರತ್ಯಕ್ಷವಾಗಿಯೂ ಗೋಚರಿಸಿ ಭಾಷೆ ಅರಿಯದವನೂ ಕೂಡ ಆನಂದಿಸಬಲ್ಲ.

ಗ್ರಂಥ ಋಣ

1) ಭಾರತೀಯ ಕಾವ್ಯ ಮೀಮಾಂಸೆ - ತೀ. ನಂ. ಶ್ರೀ

2) ನಾಟ್ಯಶಾಸ್ತ್ರ - ಶ್ರೀರಂಗ

3) (ಜಯದೇವ ಕವಿಕೃತ) ಗೀತಗೋವಿಂದ -ಪಿ. ಎಲ್. ನರಸಿಂಹಶಾಸ್ತ್ರಿ

4) ಲಕ್ಷ್ಮೀಶನ ಜೈಮಿನಿಭಾರತ

* * * * *

ಜಾನಪದ ಬಲಿ ಸಂಪ್ರದಾಯ

- ಡಾ. ಶ್ರೀ ರಾಮ ಇಟ್ಟಣ್ಣವರ.

ಉದ್ದೇಶ ಮತ್ತು ವ್ಯಾಪ್ತಿ:

ಸಾಮಾಜಿಕ ನೆಮ್ಮದಿ ಮತ್ತು ವೈಯಕ್ತಿಕ ಬಯಕೆಗಳ ಈಡೇರಿಕೆಗಾಗಿ ಪ್ರಾಣಿಬಲಿ ಸಂಪ್ರದಾಯ ಬಹುಕಾಲದಿಂದ ಬೆಳೆದು ಬಂದಿದೆ. ಪ್ರಪಂಚದ ಬಹುತೇಕ ಜನಾಂಗಗಳು ಈ ಸಂಪ್ರದಾಯವನ್ನು ರೂಢಿಸಿಕೊಂಡಿವೆ. ದೇವರ ಹೆಸರಿನಲ್ಲಿಯೇ ಪ್ರಾಣಿಬಲಿ ನಡೆಯುತ್ತದೆ. ಧರ್ಮದ ಕಲ್ಪನೆಗೆ ಇದು ಹೊರತಾಗಿದ್ದರೂ ಧಾರ್ಮಿಕ ಮುಖಂಡರು ಇದನ್ನು ಖಂಡಿಸುತ್ತ ಬಂದಿದ್ದರೂ ಜಾನಪದ ಜೀವನ ಇದರಿಂದ ದೂರ ಉಳಿಯಲಿಲ್ಲವೆಂಬುದು ಗಮನಾರ್ಹ ಸಂಗತಿ. ಜಗತ್ತಿನಾದ್ಯಂತ ಪ್ರಚಲಿತವಿರುವ ಬಲಿಸಂಪ್ರದಾಯ ಕರ್ನಾಟಕ ಜಾನಪದ ಬದುಕನ್ನೂ ಆವರಿಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಇದು ಪ್ರಚಾರದಲ್ಲಿದೆ ಎಂಬುದಕ್ಕೆ ಕಾವ್ಯೇತಿಹಾಸಗಳ ಆಧಾರಗಳಿವೆ. ಜನಪದ ಧೋರಣೆ ಹೊತ್ತ ಶಿಷ್ಟ ಸಾಹಿತ್ಯದ ಅನೇಕ ಕಡೆಗಳಲ್ಲಿ ಉದಾಹರಣೆಗಳು ದೊರೆಯುತ್ತವೆ.

೧೧ ನೆಯ ಶತಮಾನದಲ್ಲಿ ಜನರು ದೇವರ ಹೆಸರಿನಲ್ಲಿ ಬಲಿಸಲ್ಲಿಸಿ ಮಾಂಸವನ್ನು ತಿನ್ನುತ್ತಿದ್ದರೆಂಬುದಕ್ಕೆ ಸಮಯ ಪರೀಕ್ಷೆ ಆಧಾರವಾಗಿದೆ:

ಪಲವೂ ಪ್ರಾಣಿಗಳಂ ನಿ
ಚ್ಚಲುಮಳಿಯಲು ಮದ್ಯಮಾಂಸಮಂ ಸೇವಿಸಲುಂ
ನಲಿವ ವರ್ಗಳ ಬಳರಿಯ ದೇ
ಗುಲಮಂ ಮಾಡಿಸುವರತ್ಥಿಯಿಂ ಪಾಪಿಷ್ಠರ್.[1]

ಎಂಬ ಪದ್ಯ ಪ್ರಾಣಿಬಲಿಗೂ ದೇವಾಲಯಕ್ಕೂ ಜನರು ಕಲ್ಪಿಸಿದ ಅನ್ಯೋನ್ಯ ಸಂಬಂಧವನ್ನು ಹೇಳುತ್ತದೆ. ಬಲಿಸಂಪ್ರದಾಯ ಹಬ್ಬದ ನೆಂಟಸ್ತಿಕೆಯನ್ನು ಪಡೆದಿತ್ತೆಂಬುದಕ್ಕೆ ಬಸವಣ್ಣನವರ ವಚನವೊಂದು ಸಾಕ್ಷಿ ನುಡಿಯುತ್ತದೆ:

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು
ಕೊಂದಹರೆಂಬುದನರಿಯದೆ
ಬೆಂದ ಒಡಲ ಹೊರೆವತ್ತಲ್ಲದೆ
ಅದಂದೆ ಹುಟ್ಟಿತ್ತು ಅದಂದೆ ಹೊಂದಿತ್ತು
ಕೊಂದವರುಳಿವರೆ ಕೂಡಲಸಂಗಮದೇವಾ.[2]

ಜನ್ನನ ಯಶೋಧರ ಚರಿತೆಯಲ್ಲಂತೂ ಬಲಿಸಂಪ್ರದಾಯದ ವಿಧಿ ವಿಧಾನಗಳು ಚಿತ್ರವತ್ತಾಗಿ ಕಣ್ಣೆದುರು ನಿಲ್ಲುತ್ತವೆ:

ತಳಮನುಡಿದಿಡುವ ಕಣ್ಣಂ

---

1 ಸಮಯ ಪರೀಕ್ಷೆ ೯-೮೯ ಪು. ೨೦೩- ೦೮ ಸಂ. ಡಾ. ಬಿ.ಎಸ್. ಕುಲಕರ್ಣಿ.

2 ಬಸವಣ್ಣನವರ ವಚನ ಸಂಪುಟ: ವಚನ ೧೨೯ ಪು.೩ ಸಂ.ಡಾ.ಎಂ.ಎಂ. ಕಲಬುರ್ಗಿ

ಕಳಿದೇಟಿಪಕರುಳ ತೋರಣಂಗಟ್ಟುವ ಕಾ
ಲ್ಗಳನುರಿವ ನೆತ್ತರಿಂ ಕೂ
ಥ್ಗಳನಡುತಿಹ ವೀರರೆತ್ತ ನೋಟ್ಪೊಡಮದಟಿೊಳ್.

ತಾಳುಗೆಯನುರ್ಚಿ ನೆತ್ತಿಯ
ಗಾಳಂ ಗಗನದೊಳವಿಲ್ವ ವಾರಿಯ ಬೀರರ್
ಪಾಳಿಯೊಳಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆರದಿಂ

ಆಡು ಕುಟಿ ಕೋಜಿ ಕೋಣನ
ಕೂಡಿದ ಪಿಂಡೂಳಟಿ ಪೆಳದೆ ಮಾರ್ದನಿಯಿಂದಂ
ಕೂಡೆ ಬನಮಟ್ಟುದುರ್ವರೆ
ಬೀಡೆಯಿನೆರ್ದೆಯೊಡೆದುದವ ಟ ಕೋಟಲೆಗಾಗಳ್.[1]

ಹೀಗೆ ನರ ಬಲಿ, ಪ್ರಾಣಿಬಲಿಗಳು ಪ್ರಾಚೀನ ಕಾಲದಿಂದಲೂ ಪ್ರಚಾರದಲ್ಲಿದ್ದುವೆಂಬುದಕ್ಕೆ ಸಾಲಾಗಿ ಉದಾಹರಣೆ ಕೊಡಬಹುದು.

ಇಂದಿಗೂ ಬಲಿಸಂಪ್ರದಾಯ ಢಾಳವಾಗಿಯೇ ಕರ್ನಾಟಕಮುದ್ದಕ್ಕೂ ದೊರೆಯುತ್ತದೆ.[2]

ಬಲಿ ಬೇಡುವ ದೇವರು : ಸಾಮಾನ್ಯವಾಗಿ ಹೆಣ್ಣುದೇವರಿಗೇ ಪ್ರಾಣಿಬಲಿಯನ್ನು ಸಮರ್ಪಿಸುವುದು ರೂಢಿಯಲ್ಲಿದೆ. ದುರಗವ್ವ, ದ್ಯಾಮವ್ವ, ಮರಗವ್ವ, ಲಕ್ಕವ್ವ, ಚಂದ್ರವ್ವ, ಅಂಕಾಲೆವ್ವ ಮುಂತಾದ ಜಾನಪದ ದೇವತೆಗಳು ಬಲಿ ಬೇಡುತ್ತವೆ ಎಂಬ ತಿಳುವಳಿಕೆ ಜನಸಾಮಾನ್ಯರಲ್ಲಿದೆ. ಈ ದೇವತೆಗಳು ಆಯಾ ಗ್ರಾಮಗಳ ಗ್ರಾಮದೇವತೆಗಳಾಗಿರಬಹುದು. ಅಥವಾ ಗ್ರಾಮವೊಂದರ ಓಣಿಯ ದೇವತೆಗಳೂ ಆಗಿರಬಹುದು. ಇಂಥ ದೇವತೆಗಳು ಕ್ರಮವಾಗಿ ಗ್ರಾಮಸ್ಥರಿಂದ, ಓಣಿಯವರಿಂದ ಪೂಜೆಗೊಳ್ಳುತ್ತವೆ.

ಇನ್ನು ಕೆಲವು ದೇವರು ಊರ ಜಮೀನಿಗೆ ಸಂಬಂಧಪಟ್ಟ ಸೀಮೆಗಳಲ್ಲಿದ್ದು ಭೂಮಿ ಸಂಪತ್ತನ್ನು ರಕ್ಷಿಸುತ್ತವೆ ಎಂಬ ತಿಳುವಳಿಕೆಯಿದೆ. ಇವನ್ನು ಸೀಮಿಲಕ್ಷ್ಮವ್ವ, ದೇವತಿಮರದವ್ವ, ಅಡಿವೆವ್ವ, ಕಡೆವ್ವ, ಹುಣಚೆಮರದವ್ವ, ಕೆರೆವ್ವ ಮುಂತಾಗಿ ಹೆಸರಿಟ್ಟು ಕರೆಯಲಾಗುತ್ತದೆ.

ಬಲಿ ನೀಡುವ ಭಕ್ತರು : ಬಲಿ ಕೊಡುವ ಭಕ್ತರನ್ನು ಎರಡು ವಿಧವಾಗಿ ವಿಂಗಡಿಸಬಹುದು. ಮೊದಲನೆಯದಾಗಿ ಊರೊಟ್ಟಿಗಿನ ಸಮಾಜದವರು, ಎರಡನೆಯದಾಗಿ ವೈಯಕ್ತಿಕ ನಿಷ್ಠೆಯುಳ್ಳವರು. ದೇವರ ಅನುಗ್ರಹ ಊರನ್ನು ಕಾಪಾಡುತ್ತದೆ ಎಂಬ ನಂಬಿಕೆ ಆ ದೇವರನ್ನು ಸಂತೃಪ್ತಗೊಳಿಸಬೇಕೆನ್ನುವುದಕ್ಕೆ

---

1. ಯಶೋಧರ ಚರಿತೆ.
2 ವಿಜಾಪುರ ಜಿಲ್ಲೆಯ ಬೀಳಗಿ ತಾಲೂಕಿನ ಪರಿಸರದಲ್ಲಿರುವ ಪ್ರಾಣಿಬಲಿ ಸಂಪ್ರದಾಯವನ್ನುಸುಲಕ್ಷಿಸಿ ಈ ಲೇಖನವನ್ನು ಸಿದ್ಧಗೊಳಿಸಲಾಗಿದೆ.

ಕಾರಣವಾಗುತ್ತದೆ. ದುರಗವ್ವ, ದ್ಯಾಮವ್ವ ಮುಂತಾದ ದೇವತೆಗಳು ಬಲಿಯಿಂದ ಮಾತ್ರ ಸಂತೃಪ್ತಗೊಳ್ಳುತ್ತಾರೆಂಬ ನಂಬಿಕೆ ಅನೂಚಾನವಾಗಿ ನಡೆದು ಬಂದಿದ್ದು ಊರೊಟ್ಟಿನ ಸಮಾಜ ಅದಕ್ಕೆ ಅಣಿಯಾಗುತ್ತದೆ. ಈ ಬಲಿ ಊರಗಾರಿಕೆಯದು ಎನ್ನಿಸುತ್ತದೆ. ಕೆಲವು ಊರುಗಳಲ್ಲಿ ಪ್ರತಿವರ್ಷಕ್ಕೊಮ್ಮೆ ಅಥವಾ ಮೂರು, ಐದು, ಒಂಭತ್ತು, ಹನ್ನೊಂದು ವರ್ಷಗಳಿಗೊಮ್ಮೆ ಜಾತ್ರೆ ಮಾಡಿ ಕೋಣವನ್ನು ಆಹುತಿಕೊಡುವ ನಿಯಮಿತತೆ ಉಂಟು. ಹೀಗೆ ನಿಯಮಿತವಾಗಿ ಬಲಿಕೊಡುತ್ತ ಹೋದರೆ ಊರಿಗೆ ಯಾವ ರೋಗಾದಿಗಳು ಬರದೆ ಜನ ಸುಖದಿಂದಿರುವರೆಂದೂ ಮಳೆ ಬೆಳೆ ಚೆನ್ನಾಗಿ ಬಂದು ಸಮೃದ್ಧಿಯ ಜೀವನಕ್ಕೆ ಈ ಬಲಿ ಕಾರಣವಾಗುತ್ತದೆಂದು ಒಂದು ಬಗೆಯ ವಿಶ್ವಾಸ ಹಳ್ಳಿಗರನ್ನಾಶ್ರಯಿಸಿದೆ. ಕೆಲವು ಊರುಗಳಲ್ಲಿ ಇಂತಿಷ್ಟು ವರ್ಷಗಳಿಗೊಮ್ಮೆಯೆಂಬ ಗಡುವು ಇರದೆ ದೇವಿ ಬಲಿ ಬಯಸಿ ಅಪ್ಪಣೆ ಕೊಡಿಸಿದಾಗ ನಡೆಯುತ್ತದೆ. ಊರ ಹಿರಿಯರ ಕನಸಿನಲ್ಲಿ ಬಂದೋ ದೇವಿಯ ಕುಪಿತಳಾಗಿ ಕಾಡುವಳೆಂಬ ಭಯ ಗ್ರಾಮೀಣರನ್ನು ಆವರಿಸಿದೆ. ಒಮ್ಮೊಮ್ಮೆ ಊರಲ್ಲಿ ಪೂಜೆಗೈಯ್ಯುವ ಪೂಜಾರಿಗಳ ಮೈತುಂಬಿಯೇ ದೇವಿಯು ತನಗೆ ಬಲಿಬೇಕೆಂದು ಹೇಳುವುದುಂಟಂತೆ. ಅವಳ ಈ ಅಪ್ಪಣೆಯನ್ನು ಈಡೇರಿಸದಿದ್ದರೆ ದೇವಿಯು ವ್ಯಾಪಕವಾಗಿ ಹರಡಿದ ರೋಗಗಳಿಗೆ, ಬೆಳೆಗಳ ವಿನಾಶಕ್ಕೆ ದೇವಿಯ ಕಾಟವೇ ಕಾರಣವೆಂದು ಭಾವಿಸಿಯೂ ಹಠಾತ್ತಾಗಿ ಬಲಿ ಕೊಡಲು ಅಣಿಯಾಗುವುದುಂಟು. ಈ ರೀತಿ ಬಲಿಕೊಡಬೇಕೆಂಬ ತೀರ್ಮಾನ ಒಬ್ಬರಿಂದಲೇ ನಡೆಯುವುದಿಲ್ಲ. ಈ ತೀರ್ಮಾನವನ್ನು ತೆಗೆದುಕೊಳ್ಳುವವರು ಊರಿನ ಪ್ರಮುಖ ಹಿರಿಯರು. ಬಲಿ ಅರ್ಪಣೆ ಎಂದು ನಡೆಯಬೇಕು, ಹೇಗೆ ನಡೆಯಬೇಕು, ತಗಲುವ ವೆಚ್ಚವೇನು ಮುಂತಾದವುಗಳನ್ನು ಚರ್ಚಿಸುವಲ್ಲಿ ಹಿರಿಯರ ಪಾತ್ರ ದೊಡ್ಡದು.

ವೈಯಕ್ತಿಕ ಮಟ್ಟದಲ್ಲಿ ಬಲಿಕೊಡುವ ಭಕ್ತನು ದೇವಿಗೆ ಬೇಡಿಕೊಳ್ಳುವ ಸಂದರ್ಭಗಳು ಎರಡು ಬಗೆಯಾಗಿವೆ. ಇಂಥ ಬಯಕೆ ಈಡೇರಿದರೆ ಬಲಿಕೊಡುತ್ತೇನೆನ್ನುವುದು ಒಂದು ಬಗೆಯಾದರೆ, ಬಂದಿರುವ ಸಂಕಷ್ಟ ಪರಿಹರಿಸಿದರೆ ಬಲಿ ಕೊಡುತ್ತೇನೆನ್ನುವುದು ಇನ್ನೊಂದು ಬಗೆ. ಸೀಮೆ ದೇವರಿಗೆ ಕೊಡುವ ಬಲಿಯೂ ವೈಯಕ್ತಿಕ ಮಟ್ಟದ್ದೇ. ಗ್ರಾಮಕ್ಕೆ ಸಂಬಂಧ ಪಡುವ ಒಂದೊಂದು ನಿಟ್ಟಿನಲ್ಲಿ ಇರುವ ಇಂಥ ದೇವರಿಗೆ ಬಲಿಕೊಡುವ ಉದ್ದೇಶ ಬೆಳೆ ಚೆನ್ನಾಗಿ ಬರಲೆಂಬುದೇ. ಸೀಮೆ ದೇವರು ಗುಡ್ಡದೊರೆಯಲ್ಲಿದ್ದರೆ ಇಲ್ಲಿಗೆ ಮೇಯಲು ಬರುವ ದನಕರುಗಳನ್ನು ಕ್ರೂರಮೃಗಗಳಿಂದ ರಕ್ಷಿಸಬೇಕೆಂಬ ಹಿನ್ನೆಲೆಯೂ ಬಲಿಗೆ ಕಾರಣವಾಗುತ್ತದೆ. ಒಂದು ಹಳ್ಳಿಯ ಭೂಮಿಯ ಸೀಮೆಯಲ್ಲಿರುವ ಬೇರೆ ಬೇರೆ ದೇವರು ಆ ನಿಟ್ಟಿನಲ್ಲಿರುವ ಅನೇಕ ಹೊಲಗಳಿಗೆ ಸಂಬಂಧ ಪಟ್ಟಿದ್ದರೂ ಇಲ್ಲಿ ಸಾಮೂಹಿಕ ಬಲಿ ನಡೆಯುವುದು ಕಡಿಮೆ, ವೈಯಕ್ತಿಕವಾಗಿ ನಡೆಯುವುದೇ ಬಹಳವಾಗಿ ತೋರುತ್ತದೆ. ವೈಯಕ್ತಿಕವಾಗಿ ಬಲಿಕೊಡುವ ಭಕ್ತರಲ್ಲಿ ವರ್ಷಕ್ಕೊಮ್ಮೆ ನಿಯಮಿತವಾಗಿ ಬಲಿಕೊಡುವವರೇ ಹೆಚ್ಚು. ಗ್ರಾಮೀಣರು ತಮ್ಮ ಊರಲ್ಲಿರುವ ದೇವರುಗಳಿಗೆ, ಸೀಮೆ ದೇವರುಗಳಿಗೆ ಬಲಿ ಭಕ್ತಿಯನ್ನು ಸಮರ್ಪಿಸುವುದು ಎಷ್ಟು ಸಹಜವೋ ಕೆಲವರು ಅಷ್ಟೇ ಸಹಜವಾಗಿ ಪರ ಊರಿಗೆ ಹೋಗಿ ಬಲಿ ಅರ್ಪಿಸಿ

ಬರುತ್ತಾರೆ. ತಮ್ಮ ಪೂರ್ವಜರಿದ್ದ ಊರದೇವರೆಂದೋ ತಮ್ಮ ಮನೆ ದೇವರೆಂದೋ ಇವರು ಪರಸ್ಥಳಗಳಿಗೆ ಹೋಗುತ್ತಾರೆ.

ಹೆಚ್ಚಾಗಿ ಸಾಮಾಜಿಕವಾಗಿ ಕೆಳಸ್ತರದವರೆನ್ನಿಸಿಕೊಂಡ ಹರಿಜನರು, ಬೇಡರು, ಕುರುಬರು ಮುಂತಾದವರೇ ಈ ಬಲಿಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. ಬಲಿಬೇಡುವ ದೇವರುಗಳ ಪೂಜಾರಿಗಳೂ ಇವೇ ಜಾತಿಗಳಿಗೆ ಸಂಬಂಧ ಪಟ್ಟವರಾಗಿದ್ದಾರೆ. ದ್ಯಾಮವ್ವನ ಪೂಜಾರಿಗಳು ಮಾತ್ರ ಪಂಚಾಳರು ಇರುತ್ತಾರೆ.

ಬಲಿಯಾಚರಣೆಯ ವಿಷಯದಲ್ಲಿ ಮೇಲುವರ್ಣದವರ ನಡವಳಿಕೆ ವಿಶಿಷ್ಟವಾದುದು. ಇವರು ಗ್ರಾಮದೇವತೆಗೋ ಸೀಮೆದೇವತೆಗೋ ನಿಯಮಿತವಾಗಿ ವೈಯಕ್ತಿಕ ಬಲಿ ಅರ್ಪಿಸುತ್ತಾರೆ. ಇವರು ಬಲಿಗೆ ಸಂಬಂಧಪಡುವ ಕಾರ್ಯಾಚರಣೆಯಲ್ಲಿ ನೇರವಾಗಿ ಭಾಗವಹಿಸಲಿಕ್ಕಿಲ್ಲ. ಪ್ರಾಣಿಯನ್ನು ಪೂಜಾರಿಗೆ ಕೊಂಡು ಕೊಟ್ಟು, ಬಲಿ ಅರ್ಪಿಸಲು ಹೇಳುವಲ್ಲಿಗೆ ಇವರ ಈ ತೆರನಾದ ಬಲಿ ಸಂಬಂಧದ - ಭಕ್ತಿ ಪರ್ಯವಸಾನ ಹೊಂದುತ್ತದೆ. ಇವರು ಬಲಿಗೆ ಸಂಬಂಧ ಪಡುವ ಆಚರಣೆಗಳಲ್ಲಿಯೇ ಪ್ರತ್ಯಕ್ಷ ಭಾಗ ತೆಗೆದುಕೊಳ್ಳುವುದಿಲ್ಲವೆಂದಾಗ ಇನ್ನು ಬಹಿರಂಗವಾಗಿ ಬಲಿ ಪ್ರಾಣಿಯ ಮಾಂಸದ ಅಡಿಗೆ ಮಾಡಿಕೊಂಡು ಊಟ ಮಾಡುವುದು ದೂರವೇ ಉಳಿಯಿತು (ಕೆಲವರು ಗುಟ್ಟಾಗಿ ತಿನ್ನಬಹುದು!)ಎಲ್ಲ ಹೊರಗಿನಿಂದ ಹೊರಗೇ ನಡೆಯುತ್ತದೆ. ಈ ಉಚ್ಚವರ್ಣದವರು ಊರಗಾರಿಕೆಯ ಬಲಿ ಉತ್ಸವದ ಅಂಗವಾಗಿ ನಡೆಯುವ ಕಾರ್ಯಕ್ರಮಗಳಲ್ಲೂ ಭಾಗವಹಿಸಲಿಕ್ಕಿಲ್ಲ. ಕೆಲವರಿಗೆ ಇದು ಮಾನಸಿಕವಾಗಿಯೇ ಒಪ್ಪಲಿಕ್ಕಿಲ್ಲ. ಆದರೆ ಉತ್ಸವಕ್ಕೆ ವಿನಿಯೋಗವಾಗುವ ತಮ್ಮ ಪಾಲಿನ 'ಪಟ್ಟಿ'ಯನ್ನು ಕೊಡದಿರುವುದಿಲ್ಲ. ಇವರು ಊರಗಾರಿಕೆಯ ಬಲಿ ಸಂಪ್ರದಾಯವನ್ನು ವಿರೋಧಿಸುವ ಗೋಜಿಗೆ ಹೋಗುವುದಿಲ್ಲ. ಮುಖ್ಯವಾಗಿ ಇದಕ್ಕೆ ಎರಡು ಬಗೆಯ ಕಾರಣಗಳುಂಟು. ಮೊದಲನೆಯದಾಗಿ ಕನಿಷ್ಠಪಕ್ಷ ತಮ್ಮ ಪಾಲಿನ ಪಟ್ಟಿಕೊಡದಿದ್ದರೆ ದೇವಿಯ ಅವಕೃಪೆಗೆ ಒಳಗಾದೇವೂ ಎಂಬ ಹೆದರಿಕೆ, ಎರಡನೆಯದಾಗಿ ಇಂಥ ಸಂಪ್ರದಾಯವನ್ನು ಒಪ್ಪಿಕೊಂಡ ಬಹು ಸಂಖ್ಯಾತ ಸಮಾಜದವರನ್ನು ಎದುರು ಹಾಕಿಕೊಳ್ಳಬೇಕಾದೀತೆಂಬ ಹೆದರಿಕೆ.

ಬಲಿಯಾಗುವ ಪ್ರಾಣಿಗಳು : ಕೋಣ ಬಲಿಗೆ 'ಕೋಣ ಕಡಿಯುವುದೆಂದೂ' ಆಡು-ಕುರಿಗಳ ಬಲಿಗೆ 'ಬ್ಯಾಟಿ' ಎಂದೂ ಕೋಳಿ ಬಲಿಗ 'ಕೋಳಿ ಕೊಡುವುದೆಂದೂ ಜಾನಪದದಲ್ಲಿ ರೂಢಿಯಲ್ಲಿರುವ ಪದಗುಚ್ಛಗಳು

ಬಲಿ ಕೊಡುವ ಪ್ರಾಣಿಗಳು ಅವರವರ ಹಣಕಾಸಿನ ಮಟ್ಟವನ್ನು ಅವಲಂಬಿಸಿವೆ. ಊರಗಾರಿಕೆಯ ಮಟ್ಟದಲ್ಲಿ ಕೋಣ ಬಲಿ ಸಾಮಾನ್ಯವೆನಿಸಿದೆ, ಪ್ರತಿಷ್ಠೆಯದೆನಿಸಿದೆ. ಈ ಕಾರ್ಯದಲ್ಲಿ ಗ್ರಾಮದವರೆಲ್ಲ ಹಿಂದಿರುವುದರಿಂದ ಒಂದು ಕೋಣವನ್ನು ಕೊಂಡು ದೇವಿಗೆ ಬಿಡುವುದಾಗಲಿ ಆ ಮಟ್ಟದ ವಿಜೃಂಭಣೆಯನ್ನು ನಡೆಸುವುದಾಗಲಿ ಕಷ್ಟವೆನಿಸುವುದಿಲ್ಲ. ಆದರೂ ಪ್ರತಿವರ್ಷವೂ ತಪ್ಪದಂತೆ ಈ ಕೋಣ ಬಲಿಯನ್ನು ನಡೆಸುವುದೆಂದರೆ ತೊಂದರೆದಾಯಕವೇ. ಆದ್ದರಿಂದ ಕೋಣ ಬಲಿ ಕೆಲವು ವರ್ಷಗಳ ಅಂತರದಲ್ಲಿ ನಡೆಯುತ್ತದೆ.ಕೋಣಬಲಿ ರೂಢಿಯಿರುವ ಹಳ್ಳಿಗಳಲ್ಲಿ ಪ್ರತಿವರ್ಷ ಕೋಣವಿಲ್ಲದಿದ್ದರೂ ಆಡು-ಕುರಿಗಳನ್ನು ಬಲಿಕೊಡುವುದು ಸಾಮಾನ್ಯ. ವೈಯಕ್ತಿಕ

ಮಟ್ಟದಲ್ಲಿ ಬಲಿಕೊಡುವವರೂ ಆಡು-ಕುರಿಗಳನ್ನೇ ಹೆಚ್ಚಾಗಿ ಬಲಿಕೊಡುತ್ತಾರೆ. ಸೀಮೆ ದೇವರಿಗೂ ಬಲಿಕೊಡುವುದು ಸಾಮಾನ್ಯವೆನ್ನಿಸಿದೆ. ತೀರ ಬಡವರಾದವರು ಕೇವಲ ಕೋಳಿಯನ್ನು ಮಾತ್ರ ಬಲಿಕೊಟ್ಟು ತಮ್ಮ ಭಕ್ತಿಭಾವವನ್ನು ಸಮರ್ಪಿಸಬೇಕಾಗುತ್ತದೆ.

ಹಳ್ಳಿಗಳಲ್ಲಿ ಗ್ರಾಮದೇವತೆಗೆ ಬಿಡುವ ಕೋಣವನ್ನು ಹಣಕೊಟ್ಟು ಕೊಳ್ಳಲಾಗುತ್ತದೆ. ಹೆಚ್ಚು ಹಣ ಕೊಟ್ಟಾದರೂ ಸರಿಯೆ ಒಳ್ಳೆಯ ತಳಿಯ ಕೋಣವನ್ನು ಬಿಡುತ್ತಾರೆ. ಇನ್ನು ತಮ್ಮ ತಮ್ಮ ಇಚ್ಛೆಗಾಗಿ ಬಲಿ ಕೊಡುವ ಭಕ್ತರು ಹೋತ, ಟಗರು, ಕೋಳಿಗಳನ್ನು ಕೊಳ್ಳುತ್ತಾರೆ. ಮನೆಯಲ್ಲಿಯೇ ಕುರಿ, ಆಡುಗಳನ್ನು ಸಾಕಿದವರು ಅವು ಹುಟ್ಟಿದ ಕೂಡಲೇ ದೇವಿಯ ಪ್ರಸಾದ ಹಚ್ಚಿ ಅವಳ ಹೆಸರಿನಲ್ಲಿ ಬಿಡುವುದುಂಟು. ಮನೆಯಲ್ಲಿ ಕೋಳಿ ಇದ್ದವರಂತೂ ಯಾವ ದಿನವಾದರೂ ಬಲಿಕೊಡಬಹುದು.

ವಿಧಾನ -ಆಚರಣೆಗಳು:

ಪ್ರಾಣಿಬಲಿ ಸಾಮಾನ್ಯವಾಗಿ ಯುಗಾದಿಯ ಸುತ್ತಮುತ್ತ ಬೇಸಿಗೆಯಲ್ಲಿ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ ನಡೆಯುವುದಿದೆ ಕಾರ ಹುಣ್ಣಿಮೆಯವರೆಗೂ ಮುಂದುವರೆಯಬಹುದು. ಸೀಮಿದೇವರಿಗೆ ಕೊಡುವ ಬಲಿಯನ್ನು ಜೋಳ ಕೀಳುವ ಮುನ್ನಾದಿನ. ಜೋಳ ಕಿತ್ತು ಗೂಡು ಬಡಿದಾಗ, ರಾಶಿ ಮಾಡುವಾಗ - ತಮ್ಮ ಅನುಕೂಲಕ್ಕೆ ತಕ್ಕಂತೆ ಮುಗಿಸಿ ಬಿಡಬಹುದು. ಬಲಿ ನಡೆಯುವ ದಿನಮಾನ ಯಾವುದೇ ಇರಲಿ ಬಲಿ ಮಾತ್ರ ಶಕ್ತಿವಾರಗಳಾದ ಮಂಗಳವಾರ ಅಥವಾ ಶುಕ್ರವಾರಗಳಂದೇ ನಡೆಯುತ್ತವೆ.

ಹೆಚ್ಚು ಸಂಕೀರ್ಣವೆನಿಸುವ ಕೋಣ ಬಲಿ ಸಂಪ್ರದಾಯವನ್ನು ಮೊದಲು ನೋಡಿ ತರುವಾಯ ಆಡು-ಕುರಿ-ಕೋಳಿಗಳನ್ನು ಬಲಿಕೊಡುವ ವಿಧಾನವನ್ನು ಗಮನಿಸಬಹುದು.

ಕೋಣಬಲಿ : ಕೋಣಬಲಿ ಸಂಪ್ರದಾಯದ ವಿಧಾನ- ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತವೆ. ಪ್ರಸ್ತುತ ಲೇಖನಕ್ಕೆ ಅತಿವ್ಯಾಪ್ತದೋಷತಗುಲಬಾರದೆಂಬ ಉದ್ದೇಶದಿಂದ ಒಂದು ಕಾಲಕ್ಕೆ ಬೀಳಗಿ ತಾಲ್ಲೂಕಿನ ಗಿರಿಸಾಗರ ಗ್ರಾಮದಲ್ಲಿ ನಡೆಯುತ್ತಿದ್ದ ಕೋಣಬಲಿಯ ಆಚರಣೆಗಳನ್ನೀಗ ಪರಿಶೀಲಿಸಬಹುದು. ಇದರಿಂದ ಒಂದೆಡೆ ಸಿಗುವ ಆಚರಣೆಗಳಿಗೆ ಒಂದು ಒಟ್ಟು ನೋಟ ಪ್ರಾಪ್ತವಾಗುತ್ತದೆಂದು ಭಾವಿಸಲಾಗಿದೆ.

ಹಿಂದೆ ಗಿರಿಸಾಗರದಲ್ಲಿ ಕೋಣಬಲಿ ಮೂರುವರ್ಷಗಳಿಗೊಮ್ಮೆ ನಿಯಮಿತವಾಗಿ ಜರುಗುತ್ತಿತ್ತು. ಇತ್ತಿತ್ತಲಾಗಿ ಈ ಪದ್ಧತಿಗೆ ಕೊರತೆಯುಂಟಾಗಿರುವುದರಿಂದಲೇ ಚೆನ್ನಾಗಿ ಮಳೆಯಾಗುತ್ತಿಲ್ಲ, ಚೆನ್ನಾಗಿ ಭೂಮಿ ಸೀಮಿ ಬೆಳೆಯುತ್ತಿಲ್ಲವೆಂಬುದು ಇಲ್ಲಿಯ ಕೆಲವಾದರೂ ಹಿರಿಯರ ಅನಿಸಿಕೆ. ಬೆಳೆಗಳು ಚೆನ್ನಾಗಿ ಬೆಳೆಯಬೇಕೆಂದರೆ ಕಾಯಿ-ಕರ್ಪೂರ, ಬಾನ ಮುಂತಾದವುಗಳಿಂದ ಭೂಮಿತಾಯಿಯ ಉಡಿ ತುಂಬಿ ಜಾತ್ರೆ ನೆರವೇರಬೇಕು. ಈ ಕಾರ್ಯಕ್ರಮದ ಬಹುಮುಖ್ಯ ಭಾಗವೇ ಬಲಿಸಂಪ್ರದಾಯ. ಊರಿನ ಗ್ರಾಮದೇವತೆ ಎನಿಸಿದ ಅಂತಾಲೆವ್ವ (ಓಂಕಾಲೆವ್ವಓಂಕಾರೇಶ್ವರಿ)ನ ಹೆಸರಿನಲ್ಲಿ ಈ ಕೋಣಬಲಿ ಕಾರ್ಯಕ್ರಮ ನಡೆಯುತ್ತದೆ. ಅಂಕಾಲೆವ್ವನ ಗುಡಿ ಊರ ಹೊರಭಾಗದಲ್ಲಿದೆ. ಬಲಿ ಉತ್ಸವ ಚೆನ್ನಾಗಿ ನೆರವೇರಿದರೆ ಭೂಮಿ ಚೆನ್ನಾಗಿ ಬೆಳೆಯನ್ನು ಕೊಟ್ಟೇಕೊಡುತ್ತದೆಂಬ

ವಿಶ್ವಾಸವನ್ನು ಇಲ್ಲಿಯ ಅನೇಕರು ಇಂದಿಗೂ ತಾಳಿದ್ದಾರೆ. ದೇವಿಯ ಅನುಗ್ರಹವನ್ನು ತನ್ಮಯರಾಗಿ ನೆನೆಯುವ ಈ ಜನ ಬಲಿ ವಿಷಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ.

ಕೋಣವನ್ನು ಮೂರುವರ್ಷ ಮುಂಚಿತವಾಗಿಯೇ ದೇವಿಯ ಹೆಸರಿನಲ್ಲಿ ಬಿಡುವುದು ವಾಡಿಕೆ. ಬಹಳಷ್ಟು ಸಲ ಇದನ್ನು ಇದೇ ತಾಲ್ಲೂಕಿನ ಯಡಹಳ್ಳಿಯಿಂದ ಕೊಂಡು ತರುತ್ತಾರೆ. ಇದಕ್ಕೆ ತಗಲುವ ಹಣವನ್ನು ದೈವದವರೇ ಭರಿಸುತ್ತಾರೆ. ಯಡಹಳ್ಳಿಯಲ್ಲಿ ಸಾಂಗಲಿ ಕಡೆಯ ಒಳ್ಳೆಯ ತಳಿಯ ಕೋಣಗಳು ದೊರೆಯುತ್ತವೆ ಎಂಬ ನಂಬಿಕೆಯೇ ಅಲ್ಲಿಂದ ತರಲು ಕಾರಣ. ಮೂರುವರ್ಷ ಮುಂಚಿತವಾಗಿಯೇ ತಂದ ಕೋಣವನ್ನು ದೇವಿಯ ಗುಡಿಗೆ ಒಯ್ದು ದೇವಿಗೆ ಎದುರಾಗಿ ನಿಲ್ಲಿಸಿ ಮೈತೊಳೆದು ಬಂಡಾರ, ಕುಂಕುಮ ಹಚ್ಚಿ ಬೇವಿನ ತಪ್ಪಲನ್ನು ಕೊರಳಲ್ಲಿ ಕಟ್ಟುತ್ತಾರೆ. ತರುವಾಯ ಗುಡಿಯ ಪೂಜಾರಿಯಿಂದ ಇದಕ್ಕೆ ಪೂಜೆಯಾಗಿ ಹಗ್ಗ ಬಿಚ್ಚಿ ಬಿಡಲಾಗುವುದು. ಇನ್ನು ಮೇಲೆ ಇದು ದೇವಿಗೆ ಬಿಟ್ಟಿರುವ 'ಪಟ್ಟದ ಕೋಣ' ಎನಿಸುತ್ತದೆ. ಇಲ್ಲಿಂದ ಮುಂದೆ ಮೂರುವರ್ಷಗಳವರೆಗೆ ಇದು ಆ ಊರಸುತ್ತಲಿರುವ ಯಾರ ಹೊಲವನ್ನಾದರೂ ಹೊಕ್ಕು ಮೇಯಬಹುದು. ಹೀಗೆ ಮೇಯುವ ಕೋಣಕ್ಕೆ ಯಾರೂ ಶಿಕ್ಷೆ ಕೊಡುವಂತಿಲ್ಲ. ಇದು ದೇವಿಯಲ್ಲಿ ಸಾಮಾಜಿಕರು ಇರಿಸಿದ ಭಕ್ತಿಯೂ ಹೌದು, ಸಾಮಾಜಿಕರಿಂದ ಹೊರಟ ತಿಳುವಳಿಕೆಯ ಪರಿಪತ್ರವೂ ಹೌದು. ಹೊಲಗಳಲ್ಲಿ ಬೇಕಾದಂತೆ ಮೇದು ದಷ್ಟಪುಷ್ಟನಾದ ಈ ಕೋಣದಿಂದ ಯಾರು ಬೇಕಾದರೂ ತಮ್ಮ ಎಮ್ಮೆಯನ್ನು ಕಟ್ಟಿಸಿಕೊಳ್ಳಬಹುದು, ಇದಕ್ಕೆ ಹಣವಿಲ್ಲ.

ಕೋಣ ಬಲಿಯಾಗುವ ಕ್ರಮವನ್ನು ಚರ್ಚಿಸಿ ನಿರ್ಧರಿಸುವವರು ಊರ ಹಿರಿಯರು. ಗಿರಿಸಾಗರದಲ್ಲಿ, ಕಾರ ಹುಣ್ಣಿಮೆ ಮುಂದಿರುತ್ತ ಹಿಂದಿನ ಮಂಗಳವಾರ ದೇವಿಯ ಉಡಿ ತುಂಬುವ ಕಾರ್ಯಕ್ರಮ ಜರುಗುತ್ತದೆ. ಮರುದಿನ ಬುಧವಾರವೇ ಕೋಣಬಲಿ. ಇದಕ್ಕೆ ಪೂರ್ವಭಾವಿಯಾಗಿ ನಾನಾ ಬಗೆಯ ಚಟುವಟಿಕೆಗಳು ಊರಲ್ಲಿ ಪ್ರಾರಂಭಗೊಳ್ಳುವುದುಂಟು. ಕೋಣಬಲಿ ಮುಂದಿರುತ್ತ ದೇವಿಗುಡಿಯನ್ನು ಸಾರಿಸಿ ಸುಣ್ಣ ಹಚ್ಚುವುದು ಮೊದಲನೆಯ ಕೆಲಸ. ಊರಲ್ಲಿರುವ ಮರಗವ್ವನ ಗುಡಿಯಲ್ಲಿ ಶುಕ್ರವಾರವೇ ದೇವಿಯ ಪಾದರಕ್ಷೆಗಳನ್ನು ಹೊಲಿದಿಟ್ಟು ಪೂಜಿಸಲಾಗುತ್ತದೆ.

ಅಂಕಾಲೆವ್ವನ ಜಾತ್ರೆಯ ಚಟುವಟಿಕೆಗಳು ಈ ರೀತಿ ಶುಕ್ರವಾರವೇ ಪ್ರಾರಂಭಗೊಂಡರೂ ಮಧ್ಯದಲ್ಲಿ ಹಣಮಂತದೇವರ ಓಕುಳಿಯೂ ಅಷ್ಟೇ ಮುಖ್ಯವೆನಿಸುತ್ತದೆ. ಶನಿವಾರ ದಿವಸ ಹಣಮಂತ ದೇವರ ಕಾರ್ತಿಕ ನಡೆಸಿ ರವಿವಾರ ಓಕುಳಿ ಮಾಡಲಾಗುತ್ತದೆ. ಹೀಗೆ ಹಣಮಂತ ದೇವರ ಉತ್ಸವ ಮುಗಿಸಿದ ಮೇಲೆಯೇ ಮಂಗಳವಾರ ಉಡಿ ತುಂಬುವುದು. ಹಣಮಪ್ಪನೂ ಗ್ರಾಮದ ಅಧಿದೈವವಾಗಿರುವುದರಿಂದ ಅವನನ್ನೂ ತೃಪ್ತಿಪಡಿಸಬೇಕೆಂಬ ಇಚ್ಛೆ ಗ್ರಾಮೀಣರಲ್ಲಿ ಬಲವತ್ತರವಾಗಿರುತ್ತದೆ.

ಹೊಲಗಳಲ್ಲಿ ಮೇಯುತ್ತಿರುವ ಕೋಣವನ್ನು ಮಂಗಳವಾರವೇ ಹಿಡಿದು ಮರಗವ್ವನ ಗುಡಿಯಿರುವ ಕೇರಿಯಲ್ಲಿ ಕಟ್ಟಲಾಗುತ್ತದೆ. ಹೀಗೆ ಕಟ್ಟಿ ಹಾಕಿದ ಕೋಣಕ್ಕೆ

ಸುಣ್ಣದ ನೀರನ್ನು ಕುಡಿಸಲಾಗುವುದು. ಇದರ ಹೊರತಾಗಿ ಕೋಣಕ್ಕೆ ಯಾವುದೇ ಬಗೆಯ ಮೇವು, ಆಹಾರ ಕೊಡುವುದಿಲ್ಲ.

ಮಂಗಳವಾರ ದಿವಸ ಪೂಜಾರಿಯ ಮನೆಯಲ್ಲಿರುವ ಪಾಲಕಿಯನ್ನು ಹೊರಡಿಸಿ ಊರ ತುಂಬ ಮೆರವಣಿಗೆ ಸಾಗುವುದು. ಪಾಲಕಿಯಲ್ಲಿ ದೇವಿಯ ಮೂರ್ತಿಯನ್ನಿಡಲಾಗುವುದು. ಹಲಗೆಯವರು, ಬಜಂತ್ರಿಯವರು, ಚೌಡಕಿಯವರು, ಡೊಳ್ಳಿನವರು ಮುಂತಾಗಿ ಹಲವಾರು ಬಗೆಯ ಜಾನಪದ ಮೇಳಗಳು ಮೇಳೈಸಿ ಮೆರವಣಿಗೆ ತುಂಬ ಅದ್ದೂರಿಯಾಗಿ ನಡೆದು ಗುಡಿ ತಲುಪಿ ಉಡಿ ತುಂಬುವ ಕಾರ್ಯಕ್ರಮ ಜರುಗಿ ಎಲ್ಲರೂ ಕಾಯಿ ಒಡೆಸುತ್ತಾರೆ. ಅಂದು ಪಲ್ಲಕ್ಕಿ ಗುಡಿಯಲ್ಲಿಯೇ ಉಳಿಯುತ್ತದೆ.

ಬುಧವಾರ ದಿನ ಕೋಣ ಬಲಿ. ಕೋಣವನ್ನು ಪ್ರತಿಸಲ ಇಂತವನೇ ಕಡಿಯಬೇಕೆಂಬ ನಿಯಮವಿದೆ. ಗಿರಿಸಾಗರದಲ್ಲಿ ಇದನ್ನು ಹರಿಜನ ಸಮಾಜದ ಮನೆತನದವನೊಬ್ಬ ನಡೆಸಿ ಕೊಡುತ್ತಾನೆ. ತಲೆಮಾರುಗಳಿಂದ ಇದು ಈ ಮನೆತನದಲ್ಲಿ ನಡೆದು ಬಂದಿದೆ. ಇದು ಈ ಮನೆತನಕ್ಕೊದಗಿದ ಒಂದು ಬಾಬವೆಂದೇ ಪರಿಗಣಿಸಲ್ಪಡುತ್ತದೆ. ಬುಧವಾರ ದಿನ ಮಧ್ಯಾಹ್ನದ ಹೊತ್ತಿಗೆ ಕೋಣ ಕಡಿಯುವವನನ್ನು ಕೇಂದ್ರವಾಗಿಟ್ಟುಕೊಂಡು ಮೆರವಣಿಗೆ ಮರಗಮ್ಮನ ಗುಡಿಯಿಂದ ಪ್ರಾರಂಭಗೊಳ್ಳುತ್ತದೆ. ಮರಗಮ್ಮನ ಗುಡಿಯಲ್ಲಿ ಶುಕ್ರವಾರದಿಂದ ಪೂಜಿಸಲ್ಪಡುತ್ತಿದ್ದ ಪಾದರಕ್ಷೆಗಳನ್ನು ಕೋಣ ಕಡಿಯುವ ಬಾಬದವನು ಹೊರುತ್ತಾನೆ. ಇದಕ್ಕೆ 'ಶಾಸ' ಹೊರುವುದೆಂಬ ಪರ್ಯಾಯ ಹೆಸರುಂಟು. ಇವನೇ ಒಂದು ಕೈಯಲ್ಲಿ ಖಡ್ಗ ಹಿಡಿದಿರುತ್ತಾನೆ. ಇದೇ ಖಡ್ಗದಿಂದ ಮುಂದೆ ಕೋಣವನ್ನು ಸಂಹರಿಸಲಿರುವುದರಿಂದ ಇದು ಈ ಸಮಯದಲ್ಲಿ ತುಂಬ ಪೂಜ್ಯನೀಯ ವಸ್ತುವೆನಿಸುತ್ತದೆ. ಇವನೊಂದಿಗೆ ಇವನ ಹೆಂಡತಿಯೂ 'ಗಟೇದ ಗಡಿಗೆ' ಹೊತ್ತು ನಡೆಯುತ್ತಾನೆ. ಗಟೇದಗಡಿಗೆ ಎಂಬುದು ಹಾಲಿಗೆ ಹೆಪ್ಪು ಹಾಕುವ ಆಕಾರ, ಪ್ರಮಾಣದಲ್ಲಿರುವ ಒಂದು ಮಡಿಕೆ. ಮರಗವ್ವನ ಗುಡಿಯಿಂದ ಹೊರಟ ಈ ಮೆರವಣಿಗೆ ಒಂದಿಷ್ಟು ಮುಂದೆ ಸಾಗಿದ ಮೇಲೆ ಬೇರೊಂದು ಕಡೆಯಿಂದ 'ಮೇಟಿ' ಬಾಬಿನವರ ಮೆರವಣಿಗೆ ಬಂದು ಕೂಡಿಕೊಳ್ಳುತ್ತದೆ. ಮೇಟಿ ಎಂಬುದು ಕುಂಟೆ ದಿಂಡು. ಇದಕ್ಕೆ ಸುಣ್ಣ, ಕೆಮ್ಮಣ್ಣು ಹಚ್ಚಿದ್ದು ಸಂಬಂಧಪಟ್ಟ ಬಾಬಿನವ ಹೊತ್ತಿರುತ್ತಾಳೆ. ಇದು 'ಕಾರಬಾನ' ಎಂದು ಕರೆಯಲ್ಪಡುತ್ತಿದೆ. ಹೀಗೆ ಮೇಳೈಸಿದ ಈ ಮೆರವಣಿಗೆ ಊರಿನ ಮುಖ್ಯ ಬೀದಿಗಳಲ್ಲಿ ಹಾಯುತ್ತಿದೆ. ನಿನ್ನೆ ಮಂಗಳವಾರ ಉಡಿ ತುಂಬುವ ಕಾಲಕ್ಕಿದ್ದ ಹುರುಪು, ಉತ್ಸಾಹಗಳಿಗೆ ಈಗ ಭಾವಾವೇಶ ತುಂಬುತ್ತದೆ. ತಾರಕಕ್ಕೇರಿ ಬಾರಿಸುವ ವಿಧ ವಿಧವಾದ ವಾದ್ಯಗಳಿಂದ ಊರೆಲ್ಲ ರಣಗುಡುವ ಮಟ್ಟಿಗೆ ರಾವು ತುಂಬಿಕೊಳ್ಳುತ್ತವೆ. ಮೆರವಣಿಗೆ ಗುಡಿ ತಲುಪಬೇಕಾದರೆ ಸಾಯಂಕಾಲ ಐದು ಗಂಟೆಯಾಗುತ್ತದೆ.

ಈ ಕಡೆಗೆ ಮೆರವಣಿಗೆ ನಡೆದಿರುವಾಗ ಮತ್ತೊಂದು ಕಡೆಗೆ ೧೦-೧೨ ಜನ ತರುಣರು ಮೇಲ್ಹಗ್ಗದಿಂದ ಕಟ್ಟಿದ್ದ ಕೋಣವನ್ನು ಹಿಡಿದುಕೊಂಡು ಒಂದೇ ಸವನೆ ಓಡಾಡಿಸುತ್ತಾರೆ. ಊರಿನಲ್ಲಿ ತುಂಬಿಕೊಂಡ ವಿಶೇಷಕ್ಕೆ ವಾದ್ಯಗಳಿಗೆ ಬೆದರಿಸಿದ ಕೋಣ ಇವರು ಎಷ್ಟೇ ಜಗ್ಗಿ ಹಿಡಿದಿದ್ದರೂ ಸುಲಭವಾಗಿ ನಿಯಂತ್ರಣಗೊಳ್ಳದೆ ತನ್ನ ಶಕ್ತಿ ಮೀರಿ ಸೆಣಸುತ್ತಲೇ

ಇರುತ್ತದೆ. ಹೀಗೆ ಓಡಾಡಿಸುವ ಮುಖ್ಯ ಉದ್ದೇಶ ಕೋಣದ ಶಕ್ತಿಗುಂದಿಸಬೇಕೆಂಬುದು. ಮೇಟಿ, ಗಟೇದ ಗಡಿಗೆಯೊದಿಗೆ ಹೊರಟ ಮೆರವಣಿಗೆ ಗಡಿ ತಲುಪುವ ಹೊತ್ತಿಗೆ ತರುಣರು ಓಡಾಡಿಸಿದ ಕೋಣದೊಂದಿಗೆ ಬಂದು ಸೇರುತ್ತಾರೆ.

ಮೆರವಣಿಗೆ ಗುಡಿ ಸೇರುವ ಮೊದಲೇ ಗುಡಿಯೆದುರು ಅಂಗಳದಲ್ಲಿ 'ರಂಗ' ಸಿದ್ಧಗೊಂಡಿರುತ್ತದೆ. ಗುಡಿಯ ಅಂಗಳದಲ್ಲಿ ಒಂದು ಚೀಲ ಅಥವಾ ಎರಡು ಚೀಲ ಜೋಳವನ್ನು ಹರಿಹಿ ಅದರ ಮೇಲೆಲ್ಲ ಕುಂಕುಮ, ಬಂಡಾರ ಲಿಂಬೆ ಹಣ್ಣುಗಳನ್ನು ಚೆಲ್ಲಿ ಈ ರಂಗವನ್ನು ಸಿದ್ಧಗೊಳಿಸಿರುತ್ತಾರೆ. ಸಜ್ಜುಗೊಂಡ ರಂಗದಿಂದ ಇಡೀ ಪರಿಸರ ರಾವು ಗೊಂಡಂತಿರುವುದು. ರಂಗದ ನಾಲ್ಕು ಮೂಲೆಗೆ ನಾಲ್ಕು ಕಂಬಗಳನ್ನು ನೆಟ್ಟು ಹಂದರ ಹಾಕಿರುತ್ತಾರೆ. ಇದೇ ದೇವಿಗೆ ಬಲಿಯನ್ನು ಸಮರ್ಪಿಸುವ ಪವಿತ್ರ ಸ್ಥಾನ. ಕೋಣವನ್ನು ರಂಗದಲ್ಲಿ ಕಡಿಯುವುದಿಲ್ಲ. ಕೋಣದ ತಲೆಯನ್ನು ಮಾತ್ರ ಇದರಲ್ಲಿಡುವ ಸಂಪ್ರದಾಯವಿದೆ,

ಮೆರವಣಿಗೆ ಗುಡಿ ಸೇರಿದ ಕೂಡಲೇ ಬಲಿಗೆ ವ್ಯವಸ್ಥೆ ನಡೆಯುತ್ತದೆ. ದೇವಿಗೆ ಒಮ್ಮೆಲೇ ಬಲಿಯನ್ನು ಅರ್ಪಿಸುವುದಿಲ್ಲ. ಅದಕ್ಕೆ ಮೊದಲು ಒಂದು ಹೋತವನ್ನು ಬಲಿಕೊಡಲಾಗುವುದು. ಪಟ್ಟದ ಕೋಣಕ್ಕಿಂತ ಸ್ವಲ್ಪ ಮುಂಚೆ ಬಲಿಯಾಗುವ ಹೋತವೂ ಕೂಡ ಪಟ್ಟದ ಹೋತವೆನ್ನಿಸುತ್ತದೆ. ಪಟ್ಟದ ಹೋತದ ಬಲಿಯಾದ ಕೂಡಲೇ ದೇವಿಗಭಿಮುಖವಾಗಿ ಪಟ್ಟದ ಕೋಣವನ್ನು ನಿಲ್ಲಿಸಲಾಗುವದು. ಅದಕ್ಕೆ ಪೂಜಾರಿ ದೇವಿಯ ಪ್ರಸಾದ ತಂದು ಹಚ್ಚುತ್ತಾನೆ. ಈ ಹೊತ್ತಿಗೆ ಕೋಣ ಸುತ್ತಲಿನ ಕೋಲಾಹಲಕ್ಕೆ ಬೆದರಿ ಅದನ್ನು ಹಿಡಿಯುವುದೇ ದುಸ್ತರವಾಗಿರುವುದರಿಂದ ಮುಂದಿನ ಕೆಲಸ ಅತಿ ಕ್ಷಿಪ್ರಗತಿಯಿಂದ ಸಾಗಬೇಕಾಗುತ್ತದೆ. ಪ್ರಸಾದ ಹಚ್ಚಿದ ತಕ್ಷಣವೇ ಕೋಣದ ಮುಂಗಾಲುಗಳನ್ನು ಆಚೀಚೆ ಅಗಲ ಮಾಡಿ ಗೀಚಿ ಕೋಣದ ಮುಖದ ತಳಭಾಗ (ಗದ್ದ) ವನ್ನು ನೆಲಕ್ಕೆ ತಗಲುವಂತೆ ಮಾಡಲಾಗುವುದು. ಕೋಣ ಈ ವೇಳೆಯಲ್ಲಿ ಮಿಸುಕದಂತೆ ಹತ್ತಿಪ್ಪತ್ತು ಜನ ಅದರ ಬೆನ್ನ ಮೇಲೆ ಕುಳಿತಿರುವರು. ಮರಗವ್ವನ ಗುಡಿಯಿಂದ ಕತ್ತಿಯನ್ನು ಹಿಡಿದು ಹೊರಟವನು ಮೊಟ್ಟಮೊದಲು ಕೋಣದ ಕುತ್ತಿಗೆಯನ್ನು ಕತ್ತಿಯಿಂದ ಕೊಯ್ಯ ತೊಡಗುವನು. ಕೋಣದ ಕುತ್ತಿಗೆ ಕೇವಲ ಕತ್ತಿಗೆ ಮಾತ್ರಕ ಹರಿಯುವುದಿಲ್ಲ, ಇವನು ಇಷ್ಟು ಮಹೂರ್ತ ಮಾಡಿದ ಕೂಡಲೇ ಹಲವಾರು ಜನ ತರುಣರು ಒಮ್ಮೆಲೆ ಮುಕುರಿ ಕೊಡಲಿಯಿಂದ ಬಟ್ಟು ಬಿಡದೆ ಕಾಪು ಹಾಕಿ ಕೋಣದ ಕುತ್ತಿಗೆಯನ್ನು ಕತ್ತರಿಸುತ್ತಾರೆ. ಈ ವೇಳೆಯಲ್ಲಿ ರಕ್ತ ಎತ್ತರೆತ್ತರಕ್ಕೆ ಪುಟಿಯುತ್ತಿರುತ್ತದೆ. ಸಾಮಾನ್ಯವಾಗಿ ಸಣ್ಣ ಮಕ್ಕಳು ಹೆದರುತ್ತವೆಯೆಂದು ಬಲಿಸ್ಥಾನಕ್ಕೆ ತಂದಿರುವುದಿಲ್ಲ. ದೊಡ್ಡವರನೇಕರು ಇದನ್ನು ನೋಡುವ ಹುಮ್ಮಸ್ಸಿದ್ದವರೇ ಈ ಕ್ಷಣದಲ್ಲಿ ಕಣ್ಣು ಮುಚ್ಚಿಕೊಳ್ಳುತ್ತಾರೆ; ಕೆಲವರಂತೂ ಈ ಕಡೆಗೆ ಬೆನ್ನು ತಿರುಗಿಸಿ ನಿಂತು ಬಿಡುತ್ತಾರೆ. ಕೋಣದ ದೇಹದಿಂದ ಬೇರ್ಪಟ್ಟ ತಲೆಯನ್ನು ಸಮಾಜದ ಪ್ರಮುಖನೊಬ್ಬ ಎತ್ತಿ ತಂದು ದೇವಿಗಭಿಮುಖವಾಗಿ ರಂಗದಲ್ಲಿಡುತ್ತಾನೆ. ಇದೇ ವೇಳೆಗೆ ಕೋಣದ ಬಲಗಾಲನ್ನು ಕಡಿದು ಅದರ ಬಾಯಲ್ಲಿಡುವ ಪದ್ಧತಿಯಿದೆ. ಅಂದು ಬಲಿಗೊಂಡ ಕೋಣದ ದೇಹವನ್ನು ಕಡಿದು ಗುಡಿಯ ಆವರಣದ ಒಂದು ಬದಿಯಲ್ಲೇ ಹರಿಜನ ಸಮಾಜದವರು

ಅಡುಗೆ ತಯಾರಿಸುತ್ತಾರೆ. ಈ ಅಡುಗೆಯನ್ನು ತಯಾರಿಸಿ ಊಟ ಮಾಡಲು ನಾಲ್ಕು ಚೀಲ ಜೋಳ, ಒಂದು ಚೀಲ ಮೆಣಸಿನಕಾಯಿ, ಉಪ್ಪು, ಎಣ್ಣೆ ಮುಂತಾದವುಗಳು ಊರ ದೈವವವರಿಂದ ಕೊಡಲ್ಪಡುತ್ತವೆ. ಏಳೆಂಟು ಊರುಗಳಿಂದ ಬಂದಿರುವ ಜನ ಈ ಅಡುಗೆಯನ್ನು ಉಣ್ಣುತ್ತಾರೆ. ಒಂದೇ ದಿನದಲ್ಲಿ ಈ ಅಡುಗೆ ತೀರುತ್ತದೆ. ಕೋಣವನ್ನು ಕಡಿದು ಮಾಂಸವನ್ನು ಹೊರಗೆ ತೆಗೆರೆಯುವ ಸಂದರ್ಭದಲ್ಲಿ ಉಳಿಯುವ ಕರುಳು ಮಂತಾದ 'ಕರ್ಚ'ನ್ನು ಒಂದು ಕರಕಲ ಹೆಡಿಗೆಯಲ್ಲಿ ತುಂಬಿ ಇಡಲಾಗುವುದು.

ಕೋಣ ಬಲಿಯ ತರುವಾಯ ಅನೇಕ ಬೇಡಿಕೊಂಡ ಊರಿನ ಜಾತ್ರೆಗೆ ಬಂದಿರುವ ಪರವೂರಿನ ಭಕ್ತರು ಆಡು, ಕುರಿಗಳನ್ನು ಬಲಿಕೊಡುತ್ತ ಅಡುಗೆ ಮಾಡಿ ಉಣ್ಣುತ್ತ ಅಲ್ಲಿಯೇ ಬಿಡಾರ ಹೂಡುವುದುಂಟು. ಹೀಗೆ ಬಲಿಯಾದ ಪ್ರಾಣಿಗಳ ತಲೆಗಳನ್ನು ಕೋಣದ ತಲೆಯ ಆಸುಪಾಸಿನಲ್ಲಿ ರಂಗದಲ್ಲಿಯೇ ಇಡುತ್ತಾರೆ.

ಗುರುವಾರ ದಿವಸ ಮುಂಜಾನೆ 'ಭೂತಬುಲ್ಲಿ' (ಭೂತಬಲಿ) ಅರ್ಪಿಸುವ ಕಾರ್ಯಕ್ರಮ. ಕೋಣಕಡಿದವನೇ ಬತ್ತಲೆಯಾಗಿ ಕರ್ಚು ತುಂಬಿದ ಹೆಡಿಗೆ ಹೊತ್ತು ಆವೇಶಗೊಂಡು ನಡೆಯುತ್ತಾನೆ. ಅವನ ಸೊಂಟದ ಸುತ್ತ ಮರ್ಯಾದೆಗೆ ಮಾತ್ರ ಬೇವಿನ ತಪ್ಪಲನ್ನು ಕಟ್ಟುತ್ತಾರೆ. ಹೆಡಿಗೆ ಹೊತ್ತವನ ಸುತ್ತ ಮುತ್ತ ಜನರು ಕೂಗುತ್ತ ಚೀರಾಡುತ್ತ, ಊರಸುತ್ತ ನಡೆಯುತ್ತಾರೆ. ಹೀಗೆ ಹೋಗುತ್ತಿರುವಂತೆಯೇ ಆಗೀಗ ಕೆಲವರು ಬುಟ್ಟಿಗೆ ಕೈಹಾಕಿ ಕರ್ಚನ್ನುಚೆಲ್ಲುತ್ತಾರೆ. ಊರ ಸುತ್ತಲಿನ ಮುಖ್ಯ ದಾರಿಗಳಲ್ಲೋ ಆಯಕಟ್ಟಿನ ಸ್ಥಳಗಳಲ್ಲೋ ಈ ಚಲನೆ ತಟಸ್ಥವಾಗುವುದುಂಟು. ಇಂಥ ಹೊತ್ತಿನಲ್ಲಿ ಹೆಡಿಗೆ ಹೊತ್ತವನಿಗೆ ಎದುರಾಗಿ ಲಿಂಬೆಹಣ್ಣು ಇಳುವಿ, ಕಾಯಿ ಒಡೆದು ಆವೇಶ ಕಡಿಮೆ ಮಾಡುವ ಯತ್ನ ನಡೆಯುತ್ತದೆ. ಇದಕ್ಕೂ ಬಗೆಹರಿಯದಿದ್ದರೆ ಹರಿಮರಿಗಳನ್ನು ಬಲಿಕೊಡಲಾಗುವುದು. ಹರಿಮರಿಗಳನ್ನು ಬಲಿಕೊಡುವ ವಿಧಾನ ವಿಶಿಷ್ಟವಾದುದು. ಸಣ್ಣ ಆಡು ಅಥವಾ ಕುರಿಮರಿಯ ಹಿಂಗಾಲು ಮುಂಗಾಲುಗಳನ್ನು ಹಿಂದೆ ಮುಂದೆ ಜಗ್ಗಿ ಹಿಡಿದಿರುವಂತೆಯೇ ಹೊಟ್ಟೆಯ ಮೇಲೆ ಕುಡುಗೋಲು ಹಾಕಿ ಕತ್ತರಿಸಲಾಗುತ್ತದೆ. ಹೀಗೆ ಹರಿದ ಮರಿಯ ಕೈಕಾಲುಗಳನ್ನು ತುಂಡುಮಾಡಿ ಮಾಂಸದ ಮುದ್ದೆ ಸಹಿತ ಮನ ಬಲ್ಲಂತೆ, ಕೇಕೆ ಹಾಕುತ್ತ ದೂರದೂರ ಚೆಲ್ಲುತ್ತಾರೆ. ಇದು ಊರ ಸುತ್ತಲಿರುವ ಭೂತ ಪಿಶಾಚಿಗಳಿಗೆ ಪ್ರೇತಾತ್ಮಗಳಿಗೆ ಬಲಿಯೆಂದು ನಂಬಲಾಗುತ್ತದೆ. ಊರಹೊರಬದಿಯಿಂದ ಪ್ರದಕ್ಷಿಣೆ ಹಾಕಿ ಇದು ಮಧ್ಯಾಹ್ನದ ಹೊತ್ತಿಗೆ ಮುಗಿದು ಮರಳಿ ಗುಡಿ ಸೇರುತ್ತಾರೆ. ಗುಡಿ ಸೇರುವ ಹೊತ್ತಿಗೆ ೨೦ ಹರಿಮರಿಗಳಾದರೂ ಬಲಿಯಾಗಿರುತ್ತವೆ.

ಕರ್ಚು ಹೊತ್ತವನು ಭೂತಬುಲ್ಲಿಗೆ ಆ ಕಡೆಗೆ ಹೋಗಿರುತ್ತ ಈ ಕಡೆಗೆ ಅವನ ಹೆಂಡತಿ ತಾಳಿ, ಓಲೆ ಮುಂತಾದ ಮುತ್ತೈದೆಯ ಸಂಕೇತದ ಮಂಗಳ ವಸ್ತುಗಳನ್ನು ತೆಗೆದು ಕಂಬಳಿಯ ಮುಸುಕು, ಹಾಕಿಕೊಂಡು ಗುಡಿಯೆದುರು ಕುಳಿತಿರುತ್ತಾಳೆ. ಯಾರೂ ಅವಳ ಮುಖವನ್ನು ನೋಡುವಂತಿಲ್ಲ ಎಂಬ ನಂಬಿಕೆ ಗಟ್ಟಿವಾಗಿದೆ. ಈ ಹೆಣ್ಣು ಮಗಳ ಗಂಡ ಭೂತ ಬುಲ್ಲಿಗೆ ಹೋಗಿರುವುದು ಸುತ್ತಲಿನ ಭೂತಗಳನ್ನು ಸಂತೃಪ್ತಿಪಡಿಸಲು ಈ ಸಂದರ್ಭದಲ್ಲಿ ಕರ್ಚು ಹೊತ್ತವನನ್ನು ಯಾವುದೋ ಭೂತ, ಬಲೀ ತೆಗೆದುಕೊಂಡು ಪ್ರಾಣಾಪಾಯ ಉಂಟಾಗಬಹುದು ಎಂಬುದೊಂದು ದೂರದ ಅಂಜಿಕೆ, ತರ್ಕ.

ಆದ್ದರಿಂದ ಅವನ ಹೆಂಡತಿ ಮಾನಸಿಕ ಸಿದ್ಧತೆ ಮಾಡಿಕೊಂಡೇ ಗುಡಿಯೆದುರು ಕುಳಿತುಕೊಳ್ಳಬೇಕೆಂಬುದರ ಸಂಕೇತವಿದು. ಇವಳ ಪತಿ ಭೂತಬುಲ್ಲಿಗೆ ಹೋದಾಗ ಭೂತಕ್ಕೆ ಬಲಿಯಾಗಿ ಬಿಟ್ಟರೆ ಇವಳು ವಿಧವೆಯಾಗಿ ಉಳಿಯುತ್ತಾಳೆ. ಜೀವಂತವಾಗಿ ಹಿಂದಿರುಗಿದರೆ ಮುತ್ತೈದೆತನವನ್ನು ಮರಳಿ ಪಡೆದಂತೆ; ಕಳಸವನ್ನು ಬೆಳಗಿ ಗಂಡನನ್ನು ಇದಿರುಗೊಳ್ಳುತ್ತಾಳೆ. ಭೂತಬುಲ್ಲಿ ಕಾರ್ಯಕ್ರಮವು ಮುಗಿದು ಎಲ್ಲರೂ ಗುಡಿಗೆ ಹಿಂದಿರುಗಿದ ಮೇಲೆ ಈ ಗಂಡ ಹೆಂಡಿರಿಬ್ಬರಿಗೂ ಸ್ನಾನವಾಗಿ ಸಮಾಜದವರು ಗಂಡನಿಗೆ ಧೋತ್ರ -ಅಂಗಿ, ಹೆಂಡತಿಗೆ ಸೀರೆ- ಕುಪ್ಪಸ ಮಾಡುವುದಿದೆ. ಪ್ರಸ್ತುತ ಉತ್ಸವದ ಐದೂ ದಿನಗಳ ಕಾಲ ಕೋಣ ಕಡಿಯುವವನು ಹೆಚ್ಚು ಕಡಿಮೆ ಉಪವಾಸವೇ ಇರುತ್ತಾನೆ. ಸಂಜೆಗೆ ಒಂದಿಷ್ಟು ಏನಾದರೂ ಆಹಾರ ಸೇವಿಸಬಹುದು. ಹೇಗಿದ್ದರೂ ಹೊಟ್ಟೆ ತುಂಬಿದಂತೆಯೇ ಇದ್ದು ಹಸಿವೆಯಾಗುವುದಿಲ್ಲವೆಂಬುದು ಅವನ ಅನುಭವ. ಈ ಐದೂ ದಿನಗಳ ಕಾಲ ಊರವರು ರೊಟ್ಟಿ ಮಾಡುವುದಿಲ್ಲ. ಕೇವಲ ಕುದಿಸಿದ ಅಡುಗೆಯನ್ನು ಸೇವಿಸುತ್ತಾರೆ.

ಕೋಣ ಬಲಿಯಂದು ದೇವಿಯ ಗುಡಿಯ ಎದುರಿಗೆ ಹಾಕಿದ ರಂಗವನ್ನು ಶುಕ್ರವಾರದಂದು ಬಳಿಯಲಾಗುತ್ತದೆ. ರಂಗ ಬಳಿಯುವುದಕ್ಕಿಂತ ಮೊದಲು ದೇವಸ್ಥಾನದ ಅಂಗಳದ ಒಂದು ಬದಿಯಲ್ಲಿರುವ ಹಗೆಯಲ್ಲಿ ಕಡಿದ ಕೋಣದ ತಲೆಯನ್ನು ಮುಚ್ಚಲಾಗುತ್ತದೆ. ಹಿಂದಿನ ಸಲ ಕಡಿದ ಕೋಣದ ತಲೆಯನ್ನು ಹೊರದೆಗೆದು ಅದನ್ನು ಹಗೆಯ ಮಗ್ಗುಲಲ್ಲಿರುವ ಗಿಡದ ಮೇಲೆ ಏರಿಸಲಾಗುತ್ತಿದೆ. ಹಗೆಯಲ್ಲಿ ತೆರವಾದ ಆ ಸ್ಥಾನವನ್ನು ಹೊಸ ಕೋಣದ ತಲೆ ಆವರಿಸುತ್ತದೆ. ತರುವಾಯ ಅಂಗಳದಲ್ಲಿ ರಂಗಕ್ಕಾಗಿ ಹರಡಿರುವ ಜೋಳವನ್ನು ಬಳಿದು ಶೇಖರಿಸುತ್ತಾರೆ. ರಂಗದ ಜೋಳವನ್ನು ಒಯ್ಯಲೂ ಒಬ್ಬರು ಬಾಬದವರಿರುತ್ತಾರೆ. ಅವರು ಈ ಕಾಳನ್ನು ಒಯ್ಯುವ ಮುಂಚೆ ಅಲ್ಲಿ ನೆರೆದಿರುವ ರೈತರಿಗೆ ಒಂದೊಂದು ಮುಷ್ಟಿಯಷ್ಟು ಹಂಚುತ್ತಾರೆ. ದೇವಿಯ ಅನುಗ್ರಹವನ್ನು ಪಡೆದುಕೊಂಡಿರುವ ಈ ಕಾಳು ತುಂಬ ಪವಿತ್ರವೆಂದು ಭಾವಿಸುವ ರೈತರು ಬಿತ್ತುವ ಬೀಜದಲ್ಲಿ ಈ ಕಾಳನ್ನು ಬೆರೆಸುತ್ತಾರೆ.

ಬುಧವಾರ ಕೋಣ ಬಲಿಯಾಗಿ ಮುಂಬರುವ ಮಂಗಳವಾರದಂದು ಮತ್ತೆ ಮುಂದಿನ ಜಾತ್ರೆಗೆಂದು ಹೊಸ ಕೋಣ ತಂದು ಬಿಡಲಾಗುತ್ತದೆ. ಈಗಿದು ಮುಂದಿನ ಸಲ ಬಲಿಯಾಗಲಿರುವ 'ಪಟ್ಟದ ಕೋಣ'.

ಹೀಗೆ ಹೊಸದಾಗಿ ಬಿಡುವ ಕೋಣದ ಸಂಗಡ ಹೋತು ಮರಿಯೊಂದನ್ನು ಬಿಡಲಾಗುತ್ತದೆ. ಈ ಹೊತು ಮರಿ ಒಂದು ವರ್ಷದಲ್ಲಿ ಅಂದರೆ ದೇವಿಯ ಉಡಿ ತುಂಬುವ ಸಂದರ್ಭದಲ್ಲಿ ಬಲಿಯಾಗುತ್ತದೆ. ಕೋಣವನ್ನು ಹಣಕೊಟ್ಟು ಕೊಳ್ಳುವಂತೆಯೇ ಈ ಮರಿಯನ್ನು ಸಮಾಜದವರೇ ಹಣಕೊಟ್ಟು ಕೊಂಡಿರುತ್ತಾರೆ. ಕೋಣ ಅಡ್ಡಾಡಿ ಹೊಲಗಳಲ್ಲಿ ಮೇಯುವಂತೆ ಇದು ಊರಲ್ಲಿ ಅವರಿವರು ಹಾಕಿದ ಕಾಳುಕಡ್ಡಿ, ಮೇವು ತಿಂದು ಸ್ವೇಚ್ಛೆಯಾಗಿ ಅಡ್ಡಾಡುತ್ತಿರುತ್ತದೆ. ಕೋಣವನ್ನು ಎಷ್ಟೇ ವರ್ಷಕ್ಕೆ ಕಡಿಯಲಿ ಹೋತುಮರಿ ಮಾತ್ರ ಊರ ಸಮಾಜದವರಿಂದ ವರ್ಷಕ್ಕೊಂದು ಅರ್ಪಿತವಾಗುತ್ತದೆ. ಕೋಣ ಬಲಿ ಇಲ್ಲದಾಗ ಹೋತನ್ನು ಉಡಿತುಂಬುವ

ಮಂಗಳವಾರದಂದೇ ಬಲಿ ಮಾಡಲಾಗುತ್ತದೆ. ಕೋಣ ಬಲಿಯಾಗುವ ವರ್ಷ ಮಾತ್ರ ಹೇಳಿತ್ತಿನ ಸರದಿಯೂ ಕೋಣದ ಸಂಗಡ ಬುಧವಾರವೇ ಬರುತ್ತದೆ. ಪ್ರತಿವರ್ಷ ಉಡಿ ತುಂಬುವ ಕಾರ್ಯಕ್ರಮದ ದಿನ ಊರಲ್ಲಿ ತಿರುಗಾಡುವ ಪಾಲಕಿಯ ಸಂಗಡ ಹೊರಟಿರುವ ಮೆರವಣಿಗೆಯಲ್ಲಿ ಈ ಹೋತವೂ ಪಾಲ್ಗೊಂಡಿರುತ್ತದೆ. ಏನೆಂದರೂ ಕೋಣ ಬಲಿಯ ಸಂದರ್ಭದಲ್ಲಿರುವ 'ಸಡಗರ' ಈಗಿರುವುದಿಲ್ಲ .

ಆಡು - ಕುರಿ - ಕೋಳಿ ಬಲಿ : ಆಡು - ಕುರಿ - ಕೋಳಿಗಳನ್ನು ಕೂಡ ಹೆಚ್ಚಾಗಿ ಹೆಣ್ಣು ದೇವತೆಗಳಿಗೇ ಬಲಿಕೊಡುತ್ತಾರೆ. ಬಲಿ ಊರಗಾರಿಕೆಯದೇ ಇರಲಿ, ವೈಯಕ್ತಿಕವೇ ಇರಲಿ ಆಡು ಕುರಿಗಳನ್ನು ಬಲಿಕೊಡದೇ ಸಾಮಾನ್ಯವಾಗಿ ಹೋತ ಅಥವಾ ಟಗರುಗಳನ್ನೇ ಬಲಿಕೊಡಲಾಗುವುದು.[1] ಈಯಲಾರದ, ಹಿಂಡಲಾರದ ಇವನ್ನೇ ಬಲಿಗೆ ಅರ್ಪಿಸುವುದು ಸಹಜವಾಗಿದೆ. ಇದು ಒಂದು ಬಗೆಯಲ್ಲಿ ಜಾನಪದರ 'ವ್ಯವಹಾರಿಕ' ರೀತಿಯನ್ನು ಎತ್ತಿತೋರಿಸುತ್ತದೆ.

ಆಡು-ಕುರಿಯನ್ನು ಬಲಿಕೊಡುವವರು ಹೆಚ್ಚಾಗಿ ಬಲಿಯ ಹಿಂದಿನ ದಿನ ಅದನ್ನು ಕೊಂಡು ತಂದು ಮನೆಯಲ್ಲಿ ಕಟ್ಟಿಕೊಂಡು ಅದಕ್ಕೆ ಬಂಡಾರ ಅಥವಾ ಪ್ರಸಾದ ಹಚ್ಚುತ್ತಾರೆ. 'ಎಂಟು ಕಾಲಿನ ಬೇಟೆ'ಯನ್ನು ಬೇಡಿ ಕೊಳ್ಳುವ ಜನ ತೀರ ಮುಂಚಿತವಾಗಿಯೇ ಆಡನ್ನು ದೇವರ ಹೆಸರಿನಲ್ಲಿ ಬಿಡುತ್ತಾರೆ. ಮುಂದೆ ಅದು ಗರ್ಭಧಾರಣೆ ಮಾಡಿ ಈಯಲು ಸ್ವಲ್ಪ ದಿನಗಳಿವೆ ಎನ್ನುವಾಗ ಹರಕೆ ಹೊತ್ತ ದೇವರಿಗೆ ಆಹುತಿ ಕೊಡಲಾಗುತ್ತದೆ. ಬಲಿಯಾಗುವ ಆಡಿನ ಕಾಲುಗಳು ನಾಲ್ಕು. ಅದರ ಗರ್ಭದಲ್ಲಿರುವ ಮರಿಯ ಕಾಲುಗಳು ನಾಲ್ಕು ಹೀಗಿದು ಎಂಟು ಕಾಲಿನ ಬೇಟೆ.

ದುರಗವ್ವ, ಮರಗವ್ವ, ಲಕ್ಕವ್ವ ಮುಂತಾದ ದೇವರಿಗೆ ವೈಯಕ್ತಿಕ ಮಟ್ಟದಲ್ಲಿ ಹರಕೆ ಹೊತ್ತವರು ಬಲಿ ಅರ್ಪಣೆಯ ದಿವಸ ಮನೆಯನ್ನು ಸಾರಿಸಿ ಮಡಿ ಮಾಡುತ್ತಾರೆ. ಇದಕ್ಕಿಂತ ನಾಲ್ಕಾರು ದಿನ ಮೊದಲೇ ಅಡುಗೆಗೆ ರೊಟ್ಟಿ, ತಾ ಮುಂತಾಗಿ ಸಜ್ಜು ಮಾಡಿಕೊಂಡಿರುತ್ತಾರೆ. ದೇವರಿಗೆ ಬಲಿಕೊಡುವ ದಿನ ಕೆಲವರು ಮುಂಜಾನೆ ಅಭಿಷೇಕ ಮಾಡಿಸುತ್ತಾರೆ. ಈ ಅಭಿಷೇಕವನ್ನು ಗುಡಿಯ ಪೂಜಾರಿಯೇ ನೆರವೇರಿಸುತ್ತಾನೆ. ಅಂದು ದೇವರ ನೈವೇದ್ಯಕ್ಕೆಂದು ಬೇಳಿಗೆ ಹಾಕಿ 'ಕುಡ ಗಡಬು' ಮಾಡಲಾಗುತ್ತದೆ. ಉರಿಸುತ್ತ ಭಾರಿಸುತ್ತ ಡೊಳ್ಳಿನವರು, ಜೋಗತಿಯವರು, ಹಲಿಗೆಯವರು ಮೆರವಣಿಗೆಯೊಂದಿಗೆ ಬಲಿ ಪ್ರಾಣಿಯನ್ನು ಹಿಡಿದುಕೊಂಡು ಹೊರಡುತ್ತಾರೆ. ಈ ಪ್ರಾಣಿಯ ಕೊರಳಲ್ಲಿ ಬೇವಿನ ತಪ್ಪಲು ಕಟ್ಟಲಾಗಿರುತ್ತದೆ. ಇದಕ್ಕೆ ದೇವರ ಪ್ರಸಾದ, ಬಂಡಾರ, ಕುಂಕುಮ ಹಚ್ಚಿರುತ್ತಾರೆ. ದೇವರ ಎದುರು ಪ್ರಾಣಿಗೆ ಚೂರಿ ಹಾಕಿ ರುಂಡವನ್ನು ಬೇರ್ಪಡಿಸಲಾಗುತ್ತದೆ.

ರುಂಡವನ್ನು ಕತ್ತರಿಸಿದ ಮೇಲೆ ಪ್ರಾಣಿ ಪಕ ಪಕ ಬಾಯಿ ಬಿಡುತ್ತಿರುವಂತ ಅದರ ಬಾಯಿಗೆ ನೀರು ಹನಿಸಲಾಗುತ್ತದೆ. ತರುವಾಯ ಬಲಿಯಾದ ಪ್ರಾಣಿಯ ಬಲಗಾಲನ್ನು ಕತ್ತರಿಸಿ ಅದರ ಬಾಯಲ್ಲಿಟ್ಟು ರುಂಡವನ್ನು ದೇವರಿಗೆ ಅಭಿಮುಖವಾಗಿ ಇಡಲಾಗುತ್ತದೆ.

---

1. ದೇವಿಗೆ ಹೆಚ್ಚಾಗಿ ಹೋತು, ಟಗರುಗಳನ್ನು ಬಲಿಕೊಟ್ಟರೂ ಇದನ್ನು ಪ್ರತ್ಯೇಕವಾಗಿ ಹೋತು ಬಲಿ ಟಗರು ಬಲಿಯೆಂದು ಕರೆಯಲಾಗುವುದಿಲ್ಲ. ಆಡು-ಕುರಿ ಬಲಿಯೆಂದೇ ಕರೆಯಲಾಗುತ್ತದೆ. ಇದನ್ನು ಸಂಕ್ಷೇಪಗೊಳಿಸಿ 'ಕುರಿಬಲಿ' ಎಂದು ಕರೆಯುವುದೇ ಹೆಚ್ಚು.

ಬಲಿಸಮರ್ಪಣೆಗೆ ಮೊದಲು ದೇವರಿಗೆ ಸೀರೆ ಉಡಿಸುವುದುಂಟು. ಮನೆಯಿಂದ ತಂದಿರುವ ಕುಚಗಡಬಿನ ನೈವೇದ್ಯವನ್ನು ದೇವರಿಗೆ ಹಿಡಿಯಲಾಗುತ್ತದೆ.

ಬಲಿಗೈದ ತುಸು ಹೊತ್ತಿನ ಮೇಲೆ, ದೇಹದಿಂದ ಬೇರ್ಪಟ್ಟ ಬಲಿ ಪ್ರಾಣಿಯ ತಲೆಯನ್ನು ಗುಡಿಯೆದುರು ಇರುವ ಹೊಂಡದಲ್ಲಿ ಮುಚ್ಚಿ ಮೇಲೆ ಕಲ್ಲು ಇಟ್ಟು ಮಣ್ಣೆಸುತ್ತಾರೆ. ಬಲಿ ಅರ್ಪಿಸುವ ಭಕ್ತರು ಊರವರೇ ಆಗಿದ್ದರೆ ಬಲಿಗೊಂಡ ಪ್ರಾಣಿಯ ದೇಹವನ್ನು ಬುಟ್ಟಿಯಲ್ಲಿ ಹಾಕಿಕೊಂಡು ಮನೆಗೆ ತಂದು ಸುಲಿದು ಅಡುಗೆ ಮಾಡಿಕೊಳ್ಳುವರು. ಪರ ಊರಿನವರಾಗಿದ್ದರೆ ಗುಡಿಯ ಮಗ್ಗುಲಲ್ಲಿಯೇ ಒಂದೆಡೆ ಅಡುಗೆಗೆ ಸಜ್ಜು ಮಾಡಿಕೊಳ್ಳುತ್ತಾರೆ. ಊರವರೇ ಇರಲಿ ಪರ ಊರಿನವರೇ ಇರಲಿ ಗುಡಿಯ ಪೂಜಾರಿಗಳಿಗೆ, ಮೆರವಣಿಗೆಯಲ್ಲಿ ಭಾಗಿಗಳಾದ ಡೊಳ್ಳಿನವರಿಗೆ, ಜೋಗತಿಯವರಿಗೆ ಮೊದಲು ಊಟಕ್ಕೆ ಹಾಕಿದ ತರವಾಯವೇ ಮನೆಯವರು ಸಂಬಂಧಿಕರು ಊಟ ಮಾಡುತ್ತಾರೆ.

ದ್ಯಾಮವ್ವನಿಗೆ ಸಂಬಂಧ ಪಡುವ ಬಲಿಯ ವಿಶೇಷತೆಯನ್ನು ಕುರಿತು ಇಲ್ಲಿ ಉಲ್ಲೇಖಿಸುವುದು ಅವಶ್ಯವೆನಿಸುತ್ತದೆ. ದ್ಯಾಮವ್ವನಿಗೆ ಬಣ್ಣ ಕೊಟ್ಟ ವರ್ಷ ಊರಲ್ಲಿ ದೇವಿಯ ಮೆರವಣಿಗೆ ಹೊರಡುತ್ತದೆ. ದ್ಯಾಮವ್ವನ ಮೆರವಣಿಗೆ ಊರಲ್ಲಿ ಬರುತ್ತ ಅಗಸೆ ಕೂಟುಗಳಲ್ಲಿ ಹರಿಮುರಿ ಸಮರ್ಪಣೆ ನಡೆಯುತ್ತದೆ. ಪೂಜಾರಿಗಳ ಮುತ್ತುಂ[illegible] ಈ ಹರಿಮುರಿ ಸಮರ್ಪಣೆಯನ್ನು ಮೆರವಣಿಗೆ ನಡೆವ ಬೀದಿಗಳಲ್ಲಿ ನಡೆಸಬೇಕಾ[illegible]

ಕೋಳಿ ಬಲಿಯ ಸಂದರ್ಭದಲ್ಲಿ ಯಾವುದೇ ಬಗೆಯ ವೈಭವವಿರುವುದಿಲ್ಲ. ಮನೆಯವರೇ ನಾಲ್ಕಾರು ಜನ ಹೋಗಿ ಬಲಿ ಅರ್ಪಿಸುತ್ತಾರೆ. ಇಲ್ಲಿಯೂ ರುಂಡವನ್ನು ದೇವರೆದುರು ನೆಲದಲ್ಲಿ ಮಣ್ಣೆಸಲಾಗುತ್ತದೆ. ಆಡು-ಕುರಿಗಳನ್ನು ಕೊಲ್ಲಲು ಅಶಕ್ತರಾದ ಬಡವರು ಮಾತ್ರ ಕೋಳಿಯನ್ನು ಬಲಿಕೊಟ್ಟು ತಮ್ಮ ಭಕ್ತಿಯನ್ನು ಮೆರೆಯುತ್ತಾರೆ. ಕೋಳಿಬಲಿಯನ್ನು ಅರ್ಪಿಸಿದವರು ಮನೆಗೆ ತಂದೇ ಅಡುಗೆ ಮಾಡಿಕೊಳ್ಳುತ್ತಾರೆ.

ಗಿರಿಸಾಗರದಲ್ಲಿ ಧರ್ಮದ ಕಟ್ಟೆ ಎಂಬುದಿದೆ. ಅಲ್ಲಿ ಕೋಳಿ ಬಲಿಯನ್ನು ನಡೆಸಲಾಗುತ್ತದೆ. ಒಂದು ಕಾಲಕ್ಕೆ ಧರ್ಮರೆಂಬುವರು ಬಂದು ಇಲ್ಲಿ ಗದ್ದಿಗೆಯನ್ನು ಮಾಡಿ ಹೋಗಿದ್ದಾರೆ. ಬೇಡಿಕೊಂಡವರು ಇಲ್ಲಿ ಬಲಿ ಕೊಡುತ್ತಾರೆ. ಸಾಮಾನ್ಯವಾಗಿ ಇಲ್ಲಿ ಬಲಿ ನಡೆಯುವುದು ಶಿವರಾತ್ರಿ ಅಮಾವಾಸ್ಯೆಯ ಹಿಂದಿರುವ ಗುರುವಾರದಂದು.

ಇತ್ತಿತ್ತಲಾಗಿ ಜಾನಪದ ಬಲಿ ಸಂಪ್ರದಾಯ ಕಡಿಮೆಯಾಗುತ್ತಿದೆ. ಕೋಣವನ್ನು ಕಡಿಯಬೇಕೆಂದಿರುವಾಗ ಇದು ಕಾಯ್ದೆ ಉಲ್ಲಂಘನೆಯಾಗುತ್ತದೆಂದು ಸರಕಾರಿ ಅಧಿಕಾರಿಗಳು ತಡೆಯುವುದುಂಟು. ಕೋಣ ಬಲಿ ತಡೆಯಲು ಹೆಚ್ಚು ಮುತುವರ್ಜಿವಹಿಸಲಾಗಿದೆ. ಈ ತಡೆಯುವಿಕೆಯ ಮೊದಲ ಹಂತದಲ್ಲಿ ಬಲಿಯಾಗಲಿರುವ ಕೋಣದ ಫೋಟೋ ತೆಗೆದುಕೊಂಡು ಹೋಗುತ್ತಾರೆ. ಹೀಗೆ ಬಲಿ ನಿಂತು ಬಿಟ್ಟರೆ ಸಂಪ್ರದಾಯವನ್ನು ನಿಲ್ಲಿಸುವಂತಿಲ್ಲ. ಕಣಕದ ಕೋಣ ಮಾಡಿ ಬಲಿಕೊಟ್ಟು ಉಳಿದ ಆಚರಣೆಯನ್ನು ಸಾಂಗಗೊಳಿಸಿದ ಉದಾಹರಣೆಗಳು ಅಲ್ಲಲ್ಲಿ ಉಂಟು. ಪ್ರಾಣಬಲಿಯ ಕಾನೂನು ಈಗ ಜಾರಿಯಲ್ಲಿದ್ದರೂ ಇದು ಇನ್ನೂ ಕದ್ದು ಮುಚ್ಚಿ ಅಲ್ಲಲ್ಲಿ ಜಾರಿಯಲ್ಲಿದೆ. ಈ ಕಾರಣದಿಂದಾಗಿಯೇ ಆಯಾ ಊರುಗಳಲ್ಲಿ

ಕೋಣ ಕಡಿದು ಮೂರು ವರ್ಷ, ಏಳು ವರ್ಷ, ಒಂಭತ್ತು ವರ್ಷ, ಹನ್ನೊಂದು ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಕಾಲಬದ್ಧತೆಯನ್ನು ಕಳೆದುಕೊಂಡಿದೆ. 'ಜಾತ್ರೆಯೇನೋ ಬಂತು ಕೋಣ ಕಡಿಯಬಾರದೆಂಬ ಕಾನೂನಿದೆ. ಈಗೇನೂ ಮಾಡುವಂತಿಲ್ಲ' ಎಂದು ನಟಿಸುವ ಹಿರಿಯರು ಒಂದು ದಿವಸ ಆಕಸ್ಮಿಕವಾಗಿ ಗುಟ್ಟಾಗಿ ಸೇರಿ ತುಸುವೇ ಜನರ ಸಮ್ಮುಖದಲ್ಲಿ ರಾತ್ರೋ ರಾತ್ರಿ ಕೋಣ ಕಡಿಯುವುದುಂಟು. ಇದು ಸಾಮಾನ್ಯವಾಗಿ ಆ ಊರಿನಲ್ಲಿರುವ ವಿದ್ಯಾವಂತರಿಗೆ, ನೌಕರಸ್ಥರಿಗೆ ಗೊತ್ತಾಗುವುದೇ ಇಲ್ಲ. ಇವರಿಗೆ ಕೋಣ ಬಲಿಯಾದ ವಿಷಯ ತಿಳಿಯುವುದು ಹೊಸ ಕೋಣ ಬಿಡುವ ಸಡಗರಕ್ಕೆ ಇವರನ್ನು ಕರೆದಾಗಲೇ!

ವಿಷಯ ಸಂಗ್ರಹಣೆಗೆ ನೆರವು:

೧. ಶ್ರೀ ವಸಂತ ಕುಲಕರ್ಣಿ ಗಿರಿಸಾಗರ

೨. ಶ್ರೀ ಯಂಕಪ್ಪ ಮೇತ್ರಿ ಗಿರಿಸಾಗರ

೩. ಶ್ರೀ ರಂಗಪ್ಪ ಬುಡ್ಡವ್ವಗೋಳ ಗಿರಿಸಾಗರ

೪. ಶ್ರೀ ಸಿದ್ದಪ್ಪ ಬದರಿ. ಬೀಳಗಿ

* * * * *

ಅಂತರರಾಷ್ಟ್ರೀಯ ಜಾನಪದ ವಿಜ್ಞಾನ

ಡಾ. ತೀ. ನಂ. ಶಂಕರನಾರಾಯಣ

I

ಜಾನಪದ ಕೇವಲ ಯಾವುದೇ ಒಂದು ಭಾಷೆಗೆ, ಒಂದು ಪ್ರದೇಶಕ್ಕೆ ಸೀಮಿತವಾದುದ್ದಲ್ಲ. ಪ್ರತಿಯೊಂದು ದೇಶದಲ್ಲಿಯೂ, ಪ್ರತಿಯೊಂದು ಭಾಷೆಯಲ್ಲಿಯೂ ಜಾನಪದ ಆಯಾ ಜನಪದರ ನಂಬಿಕೆ, ಸಂಪ್ರದಾಯ ಇವುಗಳಿಗನುಗುಣವಾಗಿ ಸೃಷ್ಟಿಯಾಗುತ್ತಲೇ ಬಂದಿದೆ. ಈ ಜಾನಪದವನ್ನು ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭ್ಯಾಸ ಮಾಡಬೇಕಾದುದು ಅಗತ್ಯ. ಈ ಮೂಲಕ ಜಾನಪದದ ಪ್ರಾದೇಶಿಕ ಸ್ವರೂಪವನ್ನು ತಿಳಿಯುವಂತೆಯೇ ರಾಷ್ಟ್ರೀಯ ಸ್ವರೂಪವನ್ನು ಹಾಗೂ ಅಂತರರಾಷ್ಟ್ರೀಯ ಸ್ವರೂಪವನ್ನು ತಿಳಿಯಲು ಸಾಧ್ಯ. ಪ್ರದೇಶದಿಂದ ಪ್ರದೇಶಕ್ಕೆ ಜಾನಪದದ ವಿವಿಧ ಪ್ರಕಾರಗಳಲ್ಲಿ ವ್ಯತ್ಯಾಸಗಳಿರುವಂತೆಯೇ ಸಾಮ್ಯವೂ ಇದೆ. ಜಗತ್ತಿನ ವ್ಯಾಪ್ತಿಯಲ್ಲಿ ಜಾನಪದದ ಸ್ವರೂಪ, ರಚನೆ, ಅರ್ಥ, ಕ್ರಿಯೆ ಹಾಗೂ ಮೌಲ್ಯಗಳನ್ನು ಕುರಿತು ವಿವಿಧ ಸಿದ್ಧಾಂತಗಳ ವಿಧಾನಗಳ ಮೂಲಕ ಅಧ್ಯಯನ ಮಾಡುವ ಶಿಸ್ತನ್ನು "ಅಂತರರಾಷ್ಟ್ರೀಯ ಜಾನಪದ ವಿಜ್ಞಾನ" ಎಂದು ಕರೆಯಲಾಗಿದೆ. ಈ ಅಧ್ಯಯನ ನಡೆಯಬೇಕಾದರೆ ಮೊದಲನೆಯದಾಗಿ ಪ್ರಾದೇಶಿಕ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಸಂಬಂಧವಾದ ಸಂಗ್ರಹ ಮತ್ತು ಅಧ್ಯಯನ ನಡೆಯಬೇಕಾದುದು ಅಗತ್ಯ. ಜನಪದ ವಿಜ್ಞಾನ ಮುಖ್ಯವಾಗಿ ತೌಲನಿಕ ವಿಧಾನವನ್ನುಅನುಸರಿಸುತ್ತದೆ. ಹಾಗೂ ಇತರ ಬೌದ್ಧಿಕ ಶಿಸ್ತುಗಳೊಡನೆ ಸಂಬಂಧಹೊಂದಿದೆ. ಮಾನವ ವಿಜ್ಞಾನ, ಮನೋವಿಜ್ಞಾನ, ಸಮಾಜ ವಿಜ್ಞಾನ, ಕಲೆಗಳು, ಸಾಹಿತ್ಯ, ಭಾಷಾವಿಜ್ಞಾನ ಮೊದಲಾದ ಅನೇಕ ಶಿಸ್ತುಗಳ ನೆರವನ್ನು ಪಡೆಯುವುದು ಮಾತ್ರವಲ್ಲದೆ ಅವುಗಳಿಗೂ ಕೂಡ ನೆರವು ನೀಡುತ್ತದೆ. ಹೀಗಾಗಿ ಜಾನಪದ ಅಧ್ಯಯನ ಸಮಾಜವಿಜ್ಞಾನವಾಗಿ ರೂಪುಗೊಂಡಿದೆ. ಇದರಲ್ಲಿ ಮಾನವಿಕ ವಿಷಯಗಳೂ ಕೂಡಾ ಅಡಕವಾಗುವುದರಿಂದ ಇದೊಂದು ವಿಶಿಷ್ಟ ವಿಜ್ಞಾನವಾಗಿ ಪರಿಣಮಿಸಿದೆ.

ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಬಗ್ಗೆ ಪ್ರೊ. ಡಂಡಸ್ ಅವರು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು. ಪ್ರೊ. ಡಂಡಸ್ ಅಂತರರಾಷ್ಟ್ರೀಯ ಜಾನಪದ ವಿಜ್ಞಾನದಲ್ಲಿ ವಿಶೇಷವಾಗಿ ಕೆಲಸ ಮಾಡಿದ್ದಾರೆ. ಅವರು ಹೀಗೆ ಹೇಳುತ್ತಾರೆ.

There are Folklorists who are interested in only one region, one area, one province . They devote their whole lives to collect Folklore of that region. It is fine. Folklorists should do this work too. There are some Folklorists who are National Folklorists not regional Folklorists. For example there are many Folklorists in America who

are interested in American Folklore. They know nothing of the International Folklorists. But there is a field of International Folklorists. There is an international community of scholars all over the world, who are interested in the study of Folktradition, whether it is proverbs or riddles or folktales or ballads or curses or chants or Myths or legends. There are hundreds of different kinds of Folklore and there are devoted scholars all over the world who study and they are part of international community. No one speaks of languages, no body knows all the languages, but somehow we try to communicate. So some write in English, some write in German, some write in French, some write in Spanish, some write in Kannada, some write in Hindi. We all write in different languages but we are a part of the same enterprice. I assure you that it is an extremely an international field and in fact more international field than most of the languages programmes because most of the language programmes are really quite narrow. They study one language, one literature, but Folklorists study the Folklore of the whole world".

ಪ್ರೊ. ಆ್ಯಲನ್ ಡಂಡಸ್ ಅವರು 1980ರ ಸಂದರ್ಶನವೊಂದರಲ್ಲಿ ಹೇಳಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. (ಸಂದರ್ಶಕರು:ತೀ. ನಂ. ಶಂಕರನಾರಾಯಣ ಮತ್ತು ಎಸ್. ಎ. ಕೃಷ್ಣಯ್ಯ 1988) ಸಂದರ್ಶಕದ ಈ ಮಾತುಗಳಲ್ಲಿ ಡಂಡಸ್ ಅವರು ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಮಹತ್ವ ಅಗತ್ಯ ಹಾಗೂ ಈ ಅಧ್ಯಯನಕ್ಕಿರುವ ತೊಡಕುಗಳು ಹಾಗೂ ಈ ತೊಡಕುಗಳನ್ನು ನಿವಾರಿಸಿಕೊಂಡು ಕೆಲಸ ಮಾಡುವ ಅಗತ್ಯವನ್ನು ಸ್ಪಷ್ಟಪಡಿಸಿದ್ದಾರೆ. ಎಷ್ಟೋ ಭಾಷಾ ಅಧ್ಯಯನಗಳು ಪ್ರಾದೇಶಿಕ ಮಟ್ಟದಲ್ಲಿ ನಿಂತು ಬಿಡುತ್ತವೆ. ಆದರೆ ಜಾನಪದ ಅಧ್ಯಯನ ಈ ಬಗೆಯ ಪ್ರಾದೇಶಿಕ ಪರಿಮಿತಿಗಳನ್ನು ಮೀರುವ ವಿಶ್ವ ವ್ಯಾಪಿಯಾದ ಗುಣವನ್ನು ಪಡೆದುಕೊಂಡಿದೆ ಎಂಬುದನ್ನುಸ್ಪಷ್ಟಪಡಿಸಿದ್ದಾರೆ. ಯಾವುದೇ ಭಾಷೆಯಲ್ಲಿ ಜಾನಪದದ ಬಗ್ಗೆ ಪ್ರಕಟವಾದ ಅತ್ಯುತ್ತಮ ಬರಹಗಳು ಇಂಗ್ಲೀಷ್ ಅಥವಾ ಹೆಚ್ಚು, ಪ್ರಸಾರವುಳ್ಳ ಇತರ ಭಾಷೆಗಳಿಗೆ ಅನುವಾದವಾಗುವುದು ಅಗತ್ಯ.

ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನ ಕಷ್ಟಕರವಾದದ್ದೇ ಹೌದು. ಏಕೆಂದರೆ ಇದರಲ್ಲಿ ಅನೇಕ ಭಾಷೆಗಳ ದೇಶಗಳ ಜಾನಪದವನ್ನು ಅಭ್ಯಾಸ ಮಾಡುವುದು ಅಗತ್ಯ. ಇದರಿಂದಾಗಿ ಓದಿನ ವ್ಯಾಪ್ತಿ ಹೆಚ್ಚಾಗದೇ ಕಾದದ್ದು ಅನಿವಾರ್ಯವಾಗುತ್ತದೆ.

ಅಗತ್ಯವಾದ ಪುಸ್ತಕಗಳು, ವಿದ್ವತ್ಪತ್ರಿಕೆಗಳು - ಇವುಗಳನ್ನು ದೊರಕಿಸಿಕೊಳ್ಳಬೇಕಾಗುತ್ತದೆ. ಕಂಪ್ಯೂಟರ್ ಜಾಲದ ಮೂಲಕ ಜಗತ್ತಿನ ಯಾವುದೇ ಭಾಷೆಯಲ್ಲಿರುವ ಜಾನಪದದ ವಿವರಗಳನ್ನು ತಿಳಿದುಕೊಳ್ಳಲು ಅಮೇರಿಕದಂಥ ದೇಶಗಳಲ್ಲಿ ಸುಲಭವಾಗುತ್ತದೆ. ಭಾರತದಂಥ ದೇಶದಲ್ಲಿ ಕಷ್ಟವಾಗುತ್ತದೆ. ಜಾನಪದದ ಯಾವುದೇ ಒಂದು ವಿಷಯವನ್ನು ಸಮಗ್ರವಾಗಿ ತಿಳಿದುಕೊಳ್ಳಬೇಕಾದರೆ ಕೇವಲ ಪ್ರಾದೇಶಿಕ, ಕೇವಲ ರಾಷ್ಟ್ರೀಯ ಮಟ್ಟದ ಅಭ್ಯಾಸ ಸಾಕಾಗುವುದಿಲ್ಲ. ಅಂತರರಾಷ್ಟ್ರೀಯ ಮಟ್ಟದ ಅಧ್ಯಯನವೇ ಬೇಕು. ಒಂದು ಉದಾಹರಣೆಯ ಮೂಲಕ ಈ ವಿಷಯವನ್ನು ಸ್ಪಷ್ಟಪಡಿಸಬಹುದು. ಚನ್ನೆಮಣೆ ಅಥವಾ ಹರಳುಗುಣಿಮಣೆ ಆಟ ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಆಟ. ಕರ್ನಾಟಕದ ಜಾನಪದವನ್ನು ಅಭ್ಯಾಸ ಮಾಡಿದಾಗ ನಾವು ಇದು ಕರ್ನಾಟಕಕ್ಕೆ ವಿಶಿಷ್ಟವಾದುದೆಂದು ಭಾವಿಸುತ್ತೇವೆ. ಆದರೆ ಈ ಆಟ ಭಾರತದ ಇತರ ರಾಜ್ಯಗಳಲ್ಲಿ ಇದೆಯೇ ಎಂದು ಹುಡುಕಲು ತೊಡಗಿದಾಗ ಅದು ಎಲ್ಲಾ ರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಈ ಮಟ್ಟದಲ್ಲಿ ಅಧ್ಯಯನ ಮಾಡಿದಾಗ ಇದು ಕೇವಲ ಪ್ರಾದೇಶಿಕವಾದ ಆಟ ಮಾತ್ರವಲ್ಲ, ರಾಷ್ಟ್ರೀಯವಾದ ಆಟ ಎಂದು ತಿಳಿದು ಬರುತ್ತದೆ. ಆದರೆ ಅಮೇರಿಕ, ಫಿಲಿಫೈನ್ಸ್, ಆಫ್ರಿಕಾ ಮೊದಲಾದ ದೇಶಗಳಲ್ಲಿಯೂ ಈ ಆಟ ರೂಢಿಯಲ್ಲಿರುವುದನ್ನು ತಿಳಿದಾಗ ಇದು ಅಂತರರಾಷ್ಟ್ರೀಯ ವ್ಯಾಪ್ತಿಯ ಆಟ ಎಂದು ತಿಳಿದು ಬರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಚನ್ನೆಮಣೆಯ ಸ್ವರೂಪ ಹಾಗೂ ಈ ಆಟದ ಉದ್ದೇಶದಲ್ಲಿ ಸಾಮ್ಯವಿರುವಂತೆಯೇ ವ್ಯತ್ಯಾಸಗಳನ್ನೂ ಗುರುತಿಸಬಹುದು ಪೀಟರ್ ಕ್ಲಾಸ್ ಚನ್ನೇಮಣೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಅಧ್ಯಯನ ಮಾಡಿ ಒಂದು ಸೊಗಸಾದ ಲೇಖನ ಬರೆದಿದ್ದಾರೆ. ಅಂತರರಾಷ್ಟ್ರೀಯ ಜಾನಪದ ವಿಜ್ಞಾನಕ್ಕೆ ಇದೊಂದು ಮಹತ್ವಪೂರ್ಣವಾದ ಕೊಡುಗೆ.

ಕೇವಲ ಪ್ರಾದೇಶಿಕ ಅಧ್ಯಯನಕ್ಕೆ ಸೀಮಿತವಾದ ಲೇಖನ ಇಷ್ಟು ತಿಳುವಳಿಕೆ ಕೊಡಲು ಸಾಧ್ಯವೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಸಿರಿ ಜಾತ್ರೆಯ ಮಾದರಿಯ ಜಾತ್ರೆಗಳು ಜಗತ್ತಿನ ಅನೇಕ ಕಡೆಗಳಲ್ಲಿ ರೂಢಿಯಲ್ಲಿವೆ. ಗಾದೆ ವಿವೇಕ ಹೇಳುವುದಕ್ಕೆ ಬಳಕೆಯಾಗುತ್ತದೆ ಎಂಬುದು ನಮಗೆ ನಮ್ಮ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಅಧ್ಯಯನದಿಂದ ತಿಳಿದು ಬರುತ್ತದೆ. ಆದರೆ ಆಫ್ರಿಕಾದಲ್ಲಿ ಗಾದೆಗಳನ್ನು ನ್ಯಾಯ ತೀರ್ಮಾನ ಮಾಡಲು ಬಳಸುತ್ತಾರೆ ಎಂಬ ವಿಷಯ ಅಂತರರಾಷ್ಟ್ರೀಯ ಜಾನಪದ ಅಧ್ಯಯನದಿಂದ ತಿಳಿದು ಬರುತ್ತದೆ. ಭಾರತದಲ್ಲಿ ಕಟ್ಟಕಣ್ಣಿನ ಪ್ರಭಾವವನ್ನು ಜನ ನಂಬುವ ವಿಷಯ ನಮಗೆ ನಮ್ಮ ರಾಷ್ಟ್ರೀಯ ಜಾನಪದದ ಅಧ್ಯಯನದಿಂದ ತಿಳಿದು ಬರುತ್ತದೆ. ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನದಿಂದ ಅದು ಇಂಡೋ-ಯೂರೋಪಿಯನ್ ಮತ್ತು ಸೆಮೆಟಿಕ್ ಭಾಷಾ ವರ್ಗದ ಜನರಲ್ಲಿ ಪ್ರಚಲಿತವಾಗಿದೆ ಎಂದೂ ಜಗತ್ತಿನ ಜನಸಂಖ್ಯೆಯ ಕೇವಲ 2/5ರಷ್ಟು ಜನ ಮಾತ್ರ ಇದನ್ನು ನಂಬುತ್ತಾರೆ ಎಂದೂ ತಿಳಿದು ಬರುತ್ತದೆ. ಹೀಗೆ ಜಾನಪದದ ನೂರಾರು ಪ್ರಕಾರಗಳನ್ನು ಜಗತ್ತಿನ ಜಾನಪದ ವಿಜ್ಞಾನದಲ್ಲಿ ತೌಲನಿಕವಾಗಿ ಅಭ್ಯಾಸ ಮಾಡಿದಾಗ ನಮಗೆ ದೊರಕುವ ತಿಳುವಳಿಕೆ ವ್ಯಾಪಕವಾದದ್ದಾಗಿರುತ್ತದೆ. ಈ ಬಗೆಯ ತೌಲನಿಕ ಅಧ್ಯಯನವನ್ನು ಮಾಡಬೇಕಾದರೆ ಜಗತ್ತಿನ ನೂರಾರು ವಿದ್ವತ್ಪತ್ರಿಕೆಗಳಲ್ಲಿ ಚದುರಿ ಹೋಗಿರುವ ಲೇಖನಗಳನ್ನು ವಿಷಯಕ್ಕನುಗುಣವಾಗಿ case book ಗಳ ರೂಪದಲ್ಲಿ

ತರಬೇಕಾಗುತ್ತದೆ. ಈ ಬಗೆಯ ಪ್ರಯತ್ನ ನಡೆದಿದೆ. Evil Eye, Flood Myth, Sacred narrative, Oedipus, Cyndrella ಮೊದಲಾದ case bookಗಳನ್ನು ಪ್ರೊ. ಡಂಡಸ್ ಅವರು ಪ್ರಕಟಿಸಿದ್ದಾರೆ. ತೌಲನಿಕ ಅಧ್ಯಯನಕ್ಕೆ ಇವು ತುಂಬಾ ಉಪಯುಕ್ತ. ಈ ದೃಷ್ಟಿಯಿಂದ ಅಂತರರಾಷ್ಟ್ರೀಯ ಜಾನಪದ ವಿಜ್ಞಾನವು ಪ್ರಾದೇಶಿಕ ಮತ್ತು ರಾಷ್ಟ್ರೀಯ ಜಾನಪದಕ್ಕಿಂತ ಭಿನ್ನವಾಗುತ್ತದೆ. ಆದರೆ ಪ್ರಾದೇಶಿಕ ಮತ್ತು ರಾಷ್ಟ್ರೀಯ ಜಾನಪದ ಅಧ್ಯಯನದಿಂದಲೇ ಅಂತರರಾಷ್ಟ್ರೀಯ ಜಾನಪದ ಅಧ್ಯಯನ ರೂಪುಗೊಂಡದ್ದು ಎಂಬುದನ್ನು ಮರೆಯಬಾರದು. ಇವು ಮೂರೂ ಕೂಡಾ ಜಾನಪದದ ಅಧ್ಯಯನದ ಮೂರು ಹಂತಗಳು. ಪ್ರಾದೇಶಿಕ ಅಧ್ಯಯನ ಮೊದಲ ಹಂತ. ರಾಷ್ಟ್ರೀಯ ಅಧ್ಯಯನ ಎರಡನೆ ಹಂತ. ಅಂತರರಾಷ್ಟ್ರೀಯ ಅಧ್ಯಯನ ಮೂರನೆಯ ಹಂತ. ಇವು ಮೂರು ಮುಖ್ಯವಾದ ಅಧ್ಯಯನಗಳೇ. ಇವುಗಳಲ್ಲಿ ಇದು ಹೆಚ್ಚು ಇದು ಕಡಿಮೆ ಎಂಬುದೇನೂ ಇಲ್ಲ. ಇವುಗಳಲ್ಲಿ ಯೂವುದರಲ್ಲಿ ಕೆಲಸ ಮಾಡಬೇಕು ಎಂಬುದು ಆಯಾ ವಿದ್ವಾಂಸರ ವೈಯಕ್ತಿಕ ಆಯ್ಕೆಯಾಗಿರುತ್ತದೆ.

II

ಅಂತರರಾಷ್ಟ್ರೀಯ ಜಾನಪದ ವಿಜ್ಞಾನವನ್ನು ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತದೆ. ಜಾನಪದ ವಿಜ್ಞಾನ ರೂಪುಗೊಂಡದ್ದು ಯೂರೋಪಿನಲ್ಲಿ, 19ನೇ ಶತಮಾನದಲ್ಲಿ. ಇದು ಆರಂಭವಾದದ್ದು ರೊಮ್ಯಾಂಟಿಕ್ ಮನೋಧರ್ಮದಿಂದ ಮತ್ತು ರಾಷ್ಟ್ರೀಯ ಪ್ರಜ್ಞೆಯಿಂದ ಮೂಡಿದ ಜಾನಪದ ಸಾಹಿತ್ಯದ ಸಂಗ್ರಹಕಾರ್ಯದಿಂದ. ಜರ್ಮನಿ, ಫಿನ್‌ಲೆಂಡ್, ಐರ್ಲೆಂಡ್, ಸ್ಕಾಟ್ಲೆಂಡ್, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಂಗ್ರಹಕಾರ್ಯನಡೆಯಿತು.

ಫಿನ್‌ಲೆಂಡಿನಲ್ಲಿ ಈ ಕಾರ್ಯ ಬಹಳ ಹಿಂದೆಯೇ ಹೆಚ್ಚು ವೈಜ್ಞಾನಿಕವಾದ ರೀತಿಯಲ್ಲಿ ನಡೆಯಿತು. ಕಾಲೇವಾಲ ಮಹಾಕಾವ್ಯವನ್ನು ಲೋನ್‌ರಾಟ್ ಎಲಿಯಾಸ್ ಸಂಪಾದಿಸಿದಾಗ ಆತ ಅದರ ಅನೇಕ ಭಿನ್ನಪಾಠಗಳ ನೆರವನ್ನು ಪಡೆಯಬೇಕಾಯಿತು. ಇಲ್ಲಿಂದ ಆರಂಭವಾದ ಈ ಸಂಪಾದನಾ ಕಾರ್ಯ ಜನಪದ ಕಥೆಗಳ ಕ್ಷೇತ್ರಕ್ಕೂ ವ್ಯಾಪಿಸಿತು. ಫಿನ್‌ಲೆಂಡಿನ ಜನಪದ ಕಥೆಗಳ ಹುಟ್ಟು, ರಚನೆ, ಇವುಗಳ ಬಗ್ಗೆ ಐತಿಹಾಸಿಕ -ಭೌಗೋಲಿಕ ಕ್ರಮವನ್ನು ಫಿನ್‌ಲೆಂಡಿನ ವಿದ್ವಾಂಸರು ರೂಪಿಸಿದರು. ಅನಂತರ ಇದು ಅಂತರರಾಷ್ಟ್ರೀಯ ಕೊಡುಗೆ ಎನಿಸಿತು. ಹೀಗಾಗಿ ಕೇವಲ ಪ್ರಾದೇಶಿಕ ಮಟ್ಟದಲ್ಲಿ ಆರಂಭವಾದ ಒಂದು ಅಧ್ಯಯನ ಇತರ ರಾಷ್ಟ್ರಗಳ ಜಾನಪದ ಅಧ್ಯಯನಕ್ಕೂ ಮಾದರಿಯಾಗಿ ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ಪಡೆಯಿತು. ಜನಪದ ಕಥೆಗಳ ವರ್ಗಗಳನ್ನು (Types)ಗುರುತಿಸುವ ಕಾರ್ಯ ಮೊದಲಿಗೆ ನಡೆದದ್ದು ಫಿನ್‌ಲೆಂಡಿನಲ್ಲಿ. ಅನಂತರದಲ್ಲಿ ಸ್ಮಿತ್ ಥಾಂಸನ್ ಅವರ ಪ್ರಯತ್ನದಿಂದಾಗಿ The Types of the Folktale ಗ್ರಂಥ ಯೂರೋಪಿನ ಜನಪದ ಕಥೆಗಳ ವರ್ಗಸೂಚಿಯಾಗಿ ಪರಿಣಮಿಸಿತು. ಈ ವರ್ಗಸೂಚಿಯನ್ನು ರೂಪಿಸಲು ಯೂರೋಪಿನ ವಿವಿಧ ದೇಶಗಳ ಜನಪದ ಕಥೆಗಳ ವರ್ಗಸೂಚಿಯನ್ನು ತಯಾರಿಸಲಾಯಿತು. ಹೀಗಾಗಿ ಇಂದು Types of the Folktale ಗ್ರಂಥ ಸಮಗ್ರ ಯೂರೋಪಿನ ಜನಪದ ಕಥಾ ವರ್ಗಸೂಚಿಯಾಗಿ ಪರಿಣಮಿಸಿದೆ. ಆದರೆ ಅದು ಜಗತ್ತಿನ ಜನಪದ ಕಥಾವರ್ಗಸೂಚಿ ಅಲ್ಲ. ಇಂತಹ

ಒಂದು ವರ್ಗಸೂಚಿ ಸಿದ್ಧವಾಗಬೇಕಾದರೆ ಜಗತ್ತಿನ ಇತರ ದೇಶಗಳಲ್ಲಿ ಆಯಾ ದೇಶಗಳ ಜನಪದ ಕಥಾವರ್ಗಸೂಚಿ ಸಿದ್ಧವಾಗಬೇಕಾದುದು ಅಗತ್ಯ. ಸ್ಟಿಥ್ ಥಾಂಸನ್ ಅವರ Motif Index of Folk Literatureನ ಆರು ಸಂಪುಟಗಳು ಸಿದ್ಧವಾದದ್ದು ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನದಿಂದಲೇ. ಈಚೆಗೆ ನಡೆದಿರುವ ಅಂತರ ರಾಷ್ಟ್ರೀಯ ಜಾನಪದ ವಿಜ್ಞಾನದ ಸಂಶೋಧನೆಗಳ ಹಿನ್ನಲೆಯಲ್ಲಿ ಈ ಕೃತಿಯೂ ಕೂಡ ಪರಿಷ್ಕಾರಗೊಳ್ಳಬೇಕಾಗಿದೆ. ಅಂತರ ರಾಷ್ಟ್ರೀಯ ಅಧ್ಯಯನದಲ್ಲಿ ಈ ಬಗೆಯ ವಿಷಯಗಳನ್ನು ಅಭ್ಯಾಸ ಮಾಡಲಾಗುತ್ತದೆ. ಹಾಗೆಯೇ ಪ್ರಾದೇಶಿಕ ಮತ್ತು ರಾಷ್ಟ್ರೀಯ ಅಧ್ಯಯನಗಳು ನಡೆಯದಿದ್ದಾಗ ಅಂತರರಾಷ್ಟ್ರೀಯ ಜಾನಪದವು ಕಷ್ಟವಾಗುತ್ತದೆ ಎಂದು ಇದರಿಂದ ತಿಳಿಯುತ್ತದೆ. ಇವುಗಳ ಪರಸ್ಪರಾವಲಂಬನೆ ಬಹಳ ಮುಖ್ಯವಾದುದು. ಪ್ರಾದೇಶಿಕ ಜಾನಪದ ಅಧ್ಯಯನ ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಸಂಪರ್ಕಕ್ಕೆ ಬಂದಾಗ ಅದರ ಗುಣಮಟ್ಟವೇ ಬದಲಾಗುತ್ತದೆ. ಇವುಗಳ ನಡುವಣ ಕೊಳುಕೊಡುಗೆಗಳು ಗಮನಾರ್ಹವಾದವುಗಳು ಎಂದು ಹೇಳಬಹುದು.

ಮ್ಯಾಕ್ಸ್‌ಮುಲ್ಲರ್, ಆಂಡ್ರೋಲ್ಯಾಂಗ್ ಮೊದಲಾದವರು ಜಾನಪದದ ತೌಲನಿಕ ಅಧ್ಯಯನದ ಬಗ್ಗೆ ಆಸಕ್ತರಾಗಿದ್ದರು. ಜಾನಪದದ ಅಧ್ಯಯನ ಅತರರಾಷ್ಟ್ರೀಯ ಮಟ್ಟದಲ್ಲಿ ನಡೆದಾಗ ತುಂಬಾ ಪ್ರಯೋಜನವಾಗುತ್ತದೆ ಎಂಬುದನ್ನು ಕಂಡುಕೊಂಡ ಫಿನ್‌ಲೆಂಡಿನ ಜಾನಪದ ಪ್ರಾಧ್ಯಾಪಕ (ಈತ ಜಗತ್ತಿನ ಮೊಟ್ಟಮೊದಲ ಜಾನಪದ ಪ್ರಾಧ್ಯಾಪಕ) ಕಾರ್ಲೆಕ್ರ್‍ಸ್ Folklore Fellows ಎಂಬ ಅಂತರರಾಷ್ಟ್ರೀಯ ಜಾನಪದ ಬಳಗವನ್ನು ಒಂದು ನೂರು ವರ್ಷಗಳ ಹಿಂದೆಯೇ ಆರಂಭಿಸಿದ್ದು ಹಾಗೂ ಆ ಸಂಸ್ಥೆಯ ಮೂಲಕ Folklore Fellows Communications ಎಂಬ ಗ್ರಂಥಮಾಲೆಯನ್ನು ಆರಂಭಿಸಿದ್ದು ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಸಂಗತಿಯಾಗಿದೆ. ಜಗತ್ತಿನ ಇತರ ಪ್ರದೇಶಗಳ ಜಾನಪದ ವಿದ್ವಾಂಸರ ಸಂಪರ್ಕವಿಟ್ಟುಕೊಳ್ಳಬೇಕು. ತೌಲನಿಕ ಅಧ್ಯಯನ ಮಾಡಬೇಕು ಎಂಬುದು ಆತನ ಆಶಯವಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಫಿನ್‌ಲೆಂಡಿನ ವಿದ್ವಾಂಸರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಣನೀಯವಾಗಿ ಕೆಲಸ ಮಾಡಿದ್ದಾರೆ. ಫಿನ್‌ಲೆಂಡಿನಲ್ಲಿರುವ ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್‌ಲೋರ್‌ನ ನಿರ್ದೇಶಕರಾದ ಪ್ರೋ. ಲೋರಿಹಾಂಕೋ ಅವರು ಜಾನಪದ ಸಂರಕ್ಷಣೆಗಾಗಿ ಯುನೆಸ್ಕೋ ರೂಪಿಸಿರುವ ಯೋಜನೆಗಳ ಶಿಲ್ಪಿಯಾಗಿದ್ದಾರೆ. ಐತಿಹಾಸಿಕ -ಭೌಗೋಲಿಕ ಕ್ರಮ ಅಂತರರಾಷ್ಟ್ರೀಯ ಜಾನಪದ ವಿಜ್ಞಾನಕ್ಕೆ ಫಿನ್ಲೆಂಡಿನ ಕೊಡುಗೆಯಾಗಿದೆ. ವಿಕಾಸವಾದ (Evolutionism)ಜರ್ಮನಿಯ ಕೊಡುಗೆಯಾಗಿದೆ. ಪ್ರದರ್ಶನ ಸಿದ್ಧಾಂತ (Performance Theory) ಹಾಗೂ ನಗರ ಜಾನಪದ(Urban Foklore) ಕಲ್ಪನೆ ಅಮೇರಿಕಾದ ಕೊಡುಗೆಯಾಗಿದೆ. ಪ್ರಕಾರ ಸಿದ್ಧಾಂತ (Genre Theory) ರೂಪುಗೊಳ್ಳುವುದಕ್ಕೆ ಫಿನ್‌ಲೆಂಡ್ ಮೊದಲಾದ ಯೂರೋಪಿನ ದೇಶಗಳು ಹಾಗೂ ಅಮೇರಿಕಾ ಕಾರಣವಾಗಿದೆ. ಹೀಗೆ ರಾಷ್ಟ್ರೀಯ ಜಾನಪದ ಅಧ್ಯಯನ ಅಂತರರಾಷ್ಟ್ರೀಯ ಜಾನಪದ ಅಧ್ಯಯನಕ್ಕೆ ಹೊಸ ಆಯಾಮವನ್ನು ತಂದುಕೊಡಬಹುದು.

ಅಮೇರಿಕಾದಲ್ಲಿ ಪ್ರೋ ಅಲನ್‌ಡಂಡಸ್ ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಕ್ಷೇತ್ರವನ್ನು ತತ್ವಗಳು ಮತ್ತು ವಿಧಾನಗಳ ಮೂಲಕ ಬೆಳೆಸಲು ವಿಶೇಷವಾಗಿ ಶ್ರಮಿಸುತ್ತಿದ್ದಾರೆ. ಅಮೇರಿಕನ್ ಜಾನಪದದ ಅಧ್ಯಯನದ ಆಧಾರದ ಮೇಲೆ ಅವರು 'ಜನಪದ'ದ ವ್ಯಾಪ್ತಿಯನ್ನು ಹಿಗ್ಗಲಿಸಿದರು. ಜನಪದ ಕೇವಲ ಗ್ರಾಮೀಣ ಸಮಾಜ ಮಾತ್ರವಲ್ಲ. ಆದಿವಾಸಿಗಳು, ನಗರವಾಸಿಗಳು,'ಜನಪದ'ವಾಗುತ್ತಾರೆ. ಸಮಾನವಾದ ಯಾವುದೇ ಒಂದು ಅಂಶವುಳ್ಳ ಗುಂಪು ಕೂಡಾ ಜನಪದವಾಗುತ್ತದೆ. ಭಾಷಿಕ ಗುಂಪುಗಳು, ಸಾಮಾಜಿಕ ಗುಂಪುಗಳು ವಯಸ್ಸಿನ ಗುಂಪುಗಳು-ಮೊದಲಾದವೆಲ್ಲ ಜನಪದವಾಗುತ್ತದೆ. ಪ್ರತಿಯೊಂದು ಕುಟುಂಬವೂ ಒಂದೊಂದು ಜನಪದ. ಜಾನಪದ ಕೇವಲ ಪ್ರಾಚೀನಕಾಲದ್ದು ಮಾತ್ರವಲ್ಲ. ಅದು ಈಗಲೂ ಮುಂದುವರಿಯುತ್ತಿದೆ. ಜಾನಪದ ಅವಿನಾಶಿ - ಡುಂಡೆಸ್ ಅವರು ಈ ಎಲ್ಲಾ ತತ್ವಗಳನ್ನು ಅಮೇರಿಕನ್ ಜಾನಪದದ ಅಧ್ಯಯನದಿಂದ ಪ್ರತಿಪಾದಿಸಿದರು. ಈಗ ಇವೆಲ್ಲ ಅಂತರರಾಷ್ಟ್ರೀಯ ಜಾನಪದದ ಅವಿಭಾಜ್ಯ ಅಂಗವಾಗಿದೆ. ರಾಷ್ಟ್ರಿಯ ಜಾನಪದದ ಅಧ್ಯಯನದಿಂದ ಅಂತರರಾಷ್ಟ್ರೀಯ ಜಾನಪದದ ಅಧ್ಯಯನವನ್ನು ಶ್ರೀಮಂತಗೊಳಿಸಬಹುದು ಎಂಬುದಕ್ಕೆ ಇದು ಒಳ್ಳೆಯ ನಿದರ್ಶನ.

ಜಗತ್ತಿನ ಪ್ರತಿಯೊಂದು ದೇಶದಲ್ಲಿಯೂ ಸಾಮಾನ್ಯವಾಗಿ ಆಯಾ ಪ್ರಾಂತ್ಯದ, ಆಯಾ ದೇಶದ ಜಾನಪದವನ್ನು ಮಾತ್ರಾ ಅಭ್ಯಾಸಮಾಡುವ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಜಾನಪದ ವಿದ್ವಾಂಸರ ಸಂಖ್ಯೆಯೇ ಹೆಚ್ಚು. ಅಂತರರಾಷ್ಟ್ರೀಯ ಜಾನಪದದಲ್ಲಿ ಕೆಲಸ ಮಾಡುವವರ ಸಂಖ್ಯೆ ತೀರ ಕಡಿಮೆ. ಅಮೇರಿಕದಲ್ಲಿ 500 ಜನ ಜಾನಪದ ವಿದ್ವಾಂಸರಲ್ಲಿ 20 ಜನ ಅಂತರರಾಷ್ಟ್ರೀಯ ಜಾನಪದ ವಿದ್ವಾಂಸರು ಇರಬಹುದು ಅಷ್ಟೇ! ಅಂತರರಾಷ್ಟ್ರೀಯ ಜಾನಪದ ವಿದ್ವಾಂಸರೆಂದರೆ ಕೇವಲ ಇಂಗ್ಲಿಷ್‌ನಲ್ಲಿ ಬರೆಯುವವರು, ಅಂತರರಾಷ್ಟ್ರೀಯ ಜಾನಪದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವವರು ಎಂದು ಮಾತ್ರ ಅರ್ಥವಲ್ಲ. ಆದರೆ ಅದಕ್ಕಿಂತ ಮುಖ್ಯವಾದುದು ಅಂತರರಾಷ್ಟ್ರೀಯ ದೃಷ್ಟಿಕೋನದಿಂದ ಕೆಲಸ ಮಾಡುವುದು. ಪ್ರಾದೇಶಿಕ ಮತ್ತು ರಾಷ್ಟ್ರೀಯ ಪರಿಮಿತಿಗಳನ್ನು ಮೀರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಮಾಡುವುದು ಅನೇಕರಿಗೆ ಕಷ್ಟವಾಗಬಹುದು ; ಅನಗತ್ಯ ಎನಿಸಬಹುದು. ನಮ್ಮ ದೇಶ, ನಮ್ಮ ಭಾಷೆಯ ಜಾನಪದ ಅಧ್ಯಯನ ಸಾಕು ಎಂಬ ತೃಪ್ತಿಯೂ ಇದಕ್ಕೆ ಕಾರಣವಿರಬಹುದು.

ಇಂದು ಜಾನಪದದ ಅಧ್ಯಯನಕ್ಕೆ ಮೀಸಲಾದ ಸಂಘಸಂಸ್ಥೆಗಳೂ ಕಡಿಮೆ. ಯೂರೋಪಿನಲ್ಲಿರುವ International Society for Folk Narrative Research ಅಂತರರಾಷ್ಟ್ರೀಯ ಸಂಸ್ಥೆ. ಈ ಸಂಸ್ಥೆ ನಾಲ್ಕು ವರ್ಷಗಳಿಗೊಂದು ಸಲ ಅಂತರ ರಾಷ್ಟ್ರೀಯ ಜಾನಪದ ಸಮ್ಮೇಳನಗಳನ್ನು ನಡೆಸುತ್ತದೆ. ಕಳೆದ ವರ್ಷ ಇದರ ಎಂಟನೆಯ ಸಮ್ಮೇಳನ ಯೂರೋಪಿನ ಬುಡಾಪೆಸ್ಟಿನಲ್ಲಿ ನಡೆಯಿತು. ಒಂಭತ್ತನೆಯ ಸಮ್ಮೇಳನ ಆಸ್ಟ್ರೀಯಾದ ಇನ್ಸ್‌ಬ್ರೂಕ್‌ನಲ್ಲಿ ನಡೆಯಿತು. ಅಂತರರಾಷ್ಟ್ರೀಯ ಜಾನಪದ ವಿಜ್ಞಾನವನ್ನು ಬೆಳೆಸುವುದರಲ್ಲಿ ಈ ಸಂಸ್ಥೆಯ ಪಾತ್ರ ತುಂಬಾ ಮಹತ್ವಪೂರ್ಣವಾದುದು. ಇತರ ಕೆಲವು ಸಂಘಸಂಸ್ಥೆಗಳು ಆಗಾಗ ಅಂತರರಾಷ್ಟ್ರೀಯ ಜಾನಪದ ವಿಚಾರ ಸಂಕಿರಣಗಳನ್ನು,

ಸಮ್ಮೇಳನಗಳನ್ನು ನಡೆಸುತ್ತದೆ. ಹೀಗಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ವಿದ್ವಾಂಸರು ಒಟ್ಟಿಗೆ ಸೇರಿ ವಿಚಾರ ಮಾಡಲು ಸಾಧ್ಯವಾಗುತ್ತದೆ. ಪ್ರೊ. ಲೋರಿಹಾಂಕೋ ಅವರು UNESCO ಹಾಗೂ ನಾರ್ಡಿಕ್ ದೇಶಗಳ ನೆರವಿನಿಂದ ಈವರೆಗೆ ನಡೆದಿರುವ ಫಿನ್ನಿಷ್-ಚೈನಾ, ಫಿನ್ನಿಷ್-ಬಾಂಗ್ಲಾದೇಶ್ ಮತ್ತು ಫಿನ್ನಿಷ್-ಇಂಡಿಯಾ ಜಾನಪದ ದಾಖಲಾತಿ ಯೋಜನೆಗಳು ಉಭಯ ದೇಶಗಳಿಗೂ ಉಪಯುಕ್ತವಾಗಿವೆ. ಫಿನ್ನಿಷ್-ಇಂಡಿಯಾ ಯೋಜನೆ ಈ ಬಗೆಯ ಮುಂದಿನ ದಾಖಲಾತಿ ಯೋಜನೆಗಳಿಗೆ ಮಾದರಿಯಾದುದು ಎಂದು ಯುನೆಸ್ಕೋ ಪರಿಗಣಿಸುವ ಸಾಧ್ಯತೆಯಿದೆ. ಅಂತರ ರಾಷ್ಟ್ರೀಯ ಜಾನಪದ ವಿಜ್ಞಾನ ಕ್ಷೇತ್ರಕ್ಕೆ ಇದು ಮಹತ್ವದ ಕೊಡುಗೆಯಾಗಿದೆ.

ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಬಗ್ಗೆ ಫಿನ್ಲೆಂಡ್ ದೇಶ ಕಳೆದ ಒಂದು ಶತಮಾನದಿಂದಲೂ ಮಹತ್ವಪೂರ್ಣವಾದ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದೆ. ಒಂದು ಶತಮಾನದ ನಂತರ ಸ್ಥಗಿತವಾಗಿದ್ದ Folklore Fellows ಎಂಬ ವ್ಯವಸ್ಥೆಗೆ ಪ್ರೊ. ಲೋರಿಹಾಂಕೊ ಹೊಸಚಾಲನೆಯನ್ನು ಕೊಟ್ಟಿದ್ದಾರೆ. 1991ರಲ್ಲಿ ಅವರು ಈ ಸಂಸ್ಥೆಯ ಮೂಲಕ ಫಿನ್ಲೆಂಡಿನ ತುರ್ಕುನಗರದಲ್ಲಿ ಅಂತರರಾಷ್ಟ್ರೀಯ ಜಾನಪದ ಕಮ್ಮಟ (Folklore Fellows Summer School)ವನ್ನು ಏರ್ಪಡಿಸಿದ್ದರು. ಜಗತ್ತಿನ ಹಲವಾರು ದೇಶಗಳ ಮೂವತ್ತು ಜನ ಅಭ್ಯರ್ಥಿಗಳು ಇದಕ್ಕೆ ಆಯ್ಕೆಯಾಗಿದ್ದರು. ಜಾನಪದ ಪ್ರಕ್ರಿಯೆ (Folklore Process) ಬಗ್ಗೆ ವಿಶೇಷವಾದ ಉಪನ್ಯಾಸಗಳು, ಚರ್ಚೆಗಳು, ಕ್ಷೇತ್ರಕಾರ್ಯಗಳು ನಡೆದವು. ಕರ್ನಾಟಕದಿಂದ ಪ್ರೊ. ಬಿ.ಎ. ವಿವೇಕರೈಯವರು ಉಪನ್ಯಾಸಕರಾಗಿಯೂ, ಡಾ. ತೀ. ನಂ. ಶಂಕರನಾರಾಯಣ ಮತ್ತು ಡಾ. ಚಿನ್ನಪ್ಪಗೌಡ ಅಭ್ಯರ್ಥಿಗಳಾಗಿಯೂ ಭಾಗವಹಿಸಿದ್ದರು. 1993ರಲ್ಲಿ ಫಿನ್ಲಂಡಿನ ತುರ್ಕುನಗರದಲ್ಲಿ ನಡೆದ ಎರಡನೆಯ folklore Fellows' Summer School ನಲ್ಲಿ ಕರ್ನಾಟಕದಿಂದ ಡಾ. ಜವಾಹರ್‌ಲಾಲ್ ಹಂಡೂ ಉಪನ್ಯಾಸಕರಾಗಿ ಭಾಗವಹಿಸಿದ್ದರು. Folklore fellows ಸಂಸ್ಥೆ ಪ್ರತಿ ಎರಡು ವರ್ಷಗಳಿಗೊಮ್ಮೆ ಈ ಬಗೆಯ ಕಮ್ಮಟಗಳನ್ನು ನಡೆಸುವ ಉದ್ದೇಶ ಹೊಂದಿರುವುದರಿಂದ ಇನ್ನೂ ಹೆಚ್ಚಿನ ಜನ ಅಂತರರಾಷ್ಟ್ರೀಯ ಜಾನಪದದ ಬಗ್ಗೆ ಹೆಚ್ಚಿನ ಜ್ಞಾನ ಪಡೆಯಲು ಹಾಗೂ ಕೆಲಸ ಮಾಡಲು ನೆರವಾಗಬಹುದೆಂದು ಆಶಿಸಬಹುದು. ಹಲವು ದೇಶಗಳ ವಿದ್ವಾಂಸರು ಒಟ್ಟಾರೆ ಸೇರಿ ಸಮಾನಾಸಕ್ತಿಯ ವಿಷಯುಗಳ ಬಗ್ಗೆ ಕೆಲಸ ಮಾಡಲು ಸಾಧ್ಯವಾಗುತ್ತಿದೆ. ದ. ಕ. ಜಿಲ್ಲೆಯ ಸಿರಿ ಪಾಡ್ದಾನವನ್ನು ಪ್ರೊ. ಲೋರಿಹಾಂಕೊ, ಪ್ರೊ. ವಿವೇಕರೈ, ಡಾ. ಚಿನ್ನಪ್ಪಗೌಡ ಮತ್ತು ಪಾಡ್ದಾನದ ಹಾಡುಗಾರರಾದ ಶ್ರೀಗೋಪಾಲನಾಯ್ಕ ಅವರು ಒಟ್ಟಾರೆ ಸೇರಿ ಸಂಪಾದಿಸುವ ಯೋಜನೆಯ ಕಾರ್ಯ ಮುಂದುವರಿಯುತ್ತಿದೆ.

ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಈ ದಶಕದ ಸಾಧನೆ ಎಂದರೆ ಜಾನಪದವನ್ನು ಜಗತ್ತಿನ ಬೌದ್ಧಿಕ ಆತಿ (Intellectual Property of the world) ಎಂದು ಯುನೆಸ್ಕೋ ಪರಿಗಣಿಸುವಂತೆ ಮಾಡಿದ್ದು ಪ್ರೊ, ಲೋರಿಹಾಂಕೋ ಜಗತ್ತಿನ ಜಾನಪದ ಸಂರಕ್ಷಣೆಯ ಬಗ್ಗೆ ಸಿದ್ಧಗೊಳಿಸಿದ UNESCO POLICY FOR

SAFEGUARDING OF FOLKLORE ಜಗತ್ತಿನಲ್ಲಿ ಜಾನಪದದ ಸ್ಥಾನಮಾನಗಳನ್ನು ಹೆಚ್ಚಿಸಿದೆ. ಕಳೆದ ಶತಮಾನದಲ್ಲಿ ಜಾನಪದದ ಅಧ್ಯಯನ ಆರಂಭವಾದಾಗಿನಿಂದ ಈಚಿನವರೆಗೂ ಜಾನಪದದ ಸಂರಕ್ಷಣೆ ಆಯಾ ದೇಶದ ಜವಾಬ್ದಾರಿ. ಏಕೆಂದರೆ ಅದು ಆಯಾ ದೇಶಕ್ಕೆ ಸೀಮಿತವಾದ ಬೌದ್ಧಿಕ ಆಸ್ತಿ ಎಂಬ ಅಭಿಪ್ರಾಯವಿತ್ತು. ಫಿನ್ಲೆಂಡ್, ಜರ್ಮನಿ, ಇಂಡಿಯಾ, ಅಮೇರಿಕಾ ಮೊದಲಾದ ದೇಶಗಳಲ್ಲೆಲ್ಲಾ ಜಾನಪದದ ಅಧ್ಯಯನ ಆರಂಭವಾದದ್ದು ರಾಷ್ಟ್ರೀಯ ಅಭಿಮಾನದ ಕಾರಣದಿಂದ.ಆದರೆ ಈಗ ಜಾನಪದ ಕೇವಲ ಆಯಾ ರಾಷ್ಟ್ರದ ಆಸ್ತಿ ಮಾತ್ರವಲ್ಲ, ಜಗತ್ತಿನ ಬೌದ್ಧಿಕ ಆಸ್ತಿ ಎಂದು ವಿಶ್ವರಾಷ್ಟ್ರಸಂಸ್ಥೆ ಪರಿಗಣನೆ ಮಾಡಿರುವುದರಿಂದ ನಿಸ್ಸಂಶಯವಾಗಿ ಜಾನಪದ ಹಾಗೂ ಅದರ ಅಧ್ಯಯನದ ಮಹತ್ವ ಹೆಚ್ಚಿದೆ. ಕಳೆದ ಒಂದು ದಶಕದ ಪ್ರಯತ್ನದ ನಂತರ ಇದು ಸಫಲಗೊಂಡಿದೆ. ಮುಂದುವರಿದ ರಾಷ್ಟ್ರಗಳು ಹಾಗೂ ಮುಂದುವರಿಯುತ್ತಿರುವ ರಾಷ್ಟ್ರಗಳು ಈ ಬಗ್ಗೆ ಆಸಕ್ತಿ ವಹಿಸಿರುವುದು ಕುತೂಹಲದ ಸಂಗತಿಯಾಗಿದೆ. ಮುಂದುವರಿದ ರಾಷ್ಟ್ರಗಳಲ್ಲಿ ರಾಷ್ಟ್ರೀಯತೆ ಹಾಗೂ ರೊಮ್ಯಾಂಟಿಕ್ ಮನೋಭಾವ ಈ ಆಸಕ್ತಿಗೆ ಕಾರಣವಾಗಿದೆ. ಮುಂದುವರಿಯುತ್ತಿರುವ ರಾಷ್ಟ್ರಗಳು ವಸಾಹತುಶಾಹಿಯ ಹಿಡಿತದಿಂದ ತಪ್ಪಿಸಿಕೊಂಡ ನಂತರ ಅಥವಾ ತಪ್ಪಿಸಿಕೊಳ್ಳುವ ಸಲುವಾಗಿ ಸಾಂಸ್ಕೃತಿಕ ಅನನ್ಯತೆಗಾಗಿ (cultural identity) ಜಾನಪದದ ಸಂಗ್ರಹ ಮತ್ತು ಸಂರಕ್ಷಣೆ ಮತ್ತು ಅಧ್ಯಯನದ ಬಗ್ಗೆ ಅದಮ್ಯವಾದ ಆಸಕ್ತಿಯನ್ನು ತೋರಿಸುತ್ತಿವೆ. ಜಾನಪದವು ದೇಶ ದೇಶಗಳ ನಡುವೆ ಹೆಚ್ಚಿನ ಅರಿವು ಹಾಗೂ ಸೌಹಾರ್ದವನ್ನು ಬೆಳೆಸುವುದರಲ್ಲಿ ನೆರವಾಗುವುದೆಂದು ಆಶಿಸಲಾಗಿದೆ.

ಯುನೆಸ್ಕೋ ಈ ಮೊದಲು ಕೂಡಾ ಸಂಸ್ಕೃತಿ ಸಂಬಂಧವಾದ ಕಾರ್ಯಚಟುವಟಿಕೆಗಳಿಗೆ ಕೊಡುತ್ತಿದ್ದ ಹಣದಲ್ಲಿ ಅಲ್ಪಸ್ವಲ್ಪ ಭಾಗವನ್ನು ಜಾನಪದ ಸಂಬಂಧವಾದ ಚಟುವಟಿಕೆಗಳಿಗೂ ಕೊಡುತ್ತಿತ್ತು. ಆದರೆ ಜಾನಪದದ ಸಲುವಾಗಿಯೇ ಪ್ರತ್ಯೇಕವಾದ ಪಾಲಿಸಿಯನ್ನು ಮಾಡಿದ ಮೇಲೆ ಯುನೆಸ್ಕೋ ಇನ್ನು ಹೆಚ್ಚಿನ ಪ್ರಮಾಣದ ಆರ್ಥಿಕ ತಾಂತ್ರಿಕ ನೆರವನ್ನು ಸದಸ್ಯರಾಷ್ಟ್ರಗಳಿಗೆ ಕೊಡಬೇಕಾಗುತ್ತದೆ. ಹೀಗಾಗಿ ಮುಂದಿನ ವರ್ಷಗಳಲ್ಲಿ ಜಾನಪದ ಸಂಗ್ರಹ ಸಂರಕ್ಷಣೆ ಹಾಗೂ ಸಂಶೋಧನೆಗಳಿಗಾಗಿ ಯುನೆಸ್ಕೋದಿಂದ ಭಾರತವೂ ಸೇರಿದಂತೆ ಎಲ್ಲಾ ಸದಸ್ಯ ರಾಷ್ಟ್ರಗಳೂ ಕೂಡಾ ಹೆಚ್ಚಿನ ನೆರವನ್ನು ನಿರೀಕ್ಷಿಸಬಹುದು. "The UNESCO Process of safeguarding of Folklore is probobly is mort authoratative statement of the value of the Folklore and traditional culture the world has seen" ಎಂದು ಸಂದರ್ಶನವೊಂದರಲ್ಲಿ ಪ್ರೊ.. ಲೋರಿಹಾಂಕೋ ಹೇಳುವ ಮಾತುಗಳಲ್ಲಿ ಈ ಪಾಲಿಸಿಯ ಮಹತ್ವ ಸ್ಪಷ್ಟವಾಗುತ್ತದೆ. (ಸಂದರ್ಶಕರು :ತೀ. ನ. ಶಂಕರನಾರಾಯಣ ಮತ್ತು ಎಸ್. ಎ. ಕೃಷ್ಣಯ್ಯ ; 1988)

ಕೇವಲ ಧನಸಹಾಯ ಮಾಡುವುದು ಮಾತ್ರ ಈ ಯೋಜನೆಯ ಉದ್ದೇಶವಲ್ಲ. ಒಂದೊಂದು ದೇಶಕ್ಕೆ ಪ್ರದೇಶಕ್ಕೆ ಸಂಬಂಧಿಸಿದ ಜಾನಪದ ವ್ಯಾಪಾರೀ ಪ್ರವೃತ್ತಿಗಳಿಂದಾಗಿ ಶೋಷಣೆಗೆ ಒಳಗಾಗದಂತೆ ತಪ್ಪಿಸಲು ಏನೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು, ಇವುಗಳ ನೈತಿಕ ಹಾಗೂ ಕಾನೂನಿನ ತೊಡಕುಗಳೇನು ಅವುಗಳನ್ನು ಬಗೆ ಹರಿಸಿಕೊಳ್ಳುವ ಬಗೆ ಹೇಗೆ

ಎಂಬುದನ್ನೂ ಕೂಡಾ ಈ ಪಾಲಿಸಿಯಲ್ಲಿ ವಿವರವಾಗಿ ನಿರೂಪಿಸಲಾಗಿದೆ. ಆಡಿಯೋ-ವಿಡಿಯೋ, ಟಿಲಿವಿಶನ್ ಮೊದಲಾದ ಮಾಧ್ಯಮಗಳ ಮೂಲಕ ನಡೆಯುತ್ತಿರುವ ಜಾನಪದದ ವಿಕೃತಿಯನ್ನು (Distortim) ಹಾಗೂ ಜಾನಪದವನ್ನು ಸೃಷ್ಟಿಸಿದ ವರ್ಗಗಳಿಗೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸಲು ಇದರಿಂದ ಸಾಧ್ಯವಾಗಬಹುದು. ಯುನೆಸ್ಕೋದ ಈ ಪಾಲಿಸಿ ಆದರ ಸದಸ್ಯ ರಾಷ್ಟ್ರಗಳಿಗೆ ಒಂದು ಮಾರ್ಗದರ್ಶಕ ಸೂತ್ರವಾಗುತ್ತದೆ.

III

ಕರ್ನಾಟಕದ ಜಾನಪದ ವಿದ್ವಾಂಸರಿಗೆ ಅಂತರರಾಷ್ಟ್ರೀಯ ಜಾನಪದದ ಸಂಪರ್ಕ ಕಳೆದ ಮೂರು ದಶಕಗಳಿಂದಲೂ ಇದೆ. 1966 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಜಾನಪದವನ್ನು ಕನ್ನಡ ಎಂ. ಎ. ಶಿಕ್ಷಣದಲ್ಲಿ ಅಳವಡಿಸಿದ್ದು ಅನಂತರ ಜಾನಪದ ಎಂ. ಎ. ಆರಂಭಿಸಿದ್ದರಿಂದ. ಕರ್ನಾಟಕದಲ್ಲಿ ಜಾನಪದ ವಿದ್ವಾಂಸರು ಪ್ರಾಚೀನ ಹಾಗೂ ರಾಷ್ಟ್ರೀಯ ಪರಿಮಿತಿಗಳನ್ನು ಮೀರಿ ಅಂತರರಾಷ್ಟ್ರೀಯ ಜಾನಪದ ವಿಜ್ಞಾನದ ಸಂಪರ್ಕ ಪಡೆದು, ಜಾನಪದ ವಿಜ್ಞಾನದ ತತ್ತ್ವಗಳನ್ನೂ ವಿಧಾನಗಳನ್ನೂ ತಿಳಿಯಲು ಸಾಧ್ಯವಾಯಿತು. ಇದಕ್ಕೆ ಕಾರಣರಾದ ಪ್ರೊ. ದೇಜಗೌ ಹಾಗೂ ಡಾ. ಹಾ. ಮಾ. ನಾಯಕ್‌ರವರ ಕೊಡುಗೆ ಸ್ಮರಣೀಯವಾದುದು. ಕರ್ನಾಟಕ ಜಾನಪದ ಪ್ರಾಧ್ಯಾಪಕ ಕ್ಷೇತ್ರದಲ್ಲಿ ಅಂತರ ರಾಷ್ಟ್ರೀಯ ದೃಷ್ಟಿಕೋನ ಬರಲು ವಿಶೇಷವಾಗಿ ದುಡಿದವರು ಭಾರತದಲ್ಲಿಯೇ ಮೊದಲ ಜಾನಪದ ಪ್ರಾಧ್ಯಾಪಕ ಡಾ. ಜೀ. ಶಂ. ಪ ಅವರು. ಡಾ. ಜವಾಹರ್‌ಲಾಲ್ ಹಂಡೂ ಅವರು ಅಂತರರಾಷ್ಟ್ರಿಯ ಜಾನಪದ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಜಾನಪದ ವಿಜ್ಞಾನಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳನ್ನು ಡಾ. ದೇಜಗೌ, ಡಾ. ಹಾ. ಮಾ. ನಾಯಕ್, ಡಾ. ಜೀ. ಶಂ.ಪ, ಡಾ. ಎಂ. ಚಿದಾನಂದ ಮೂರ್ತಿ, ಡಾ. ದೇವೇಂದ್ರ ಕುಮಾರ ಹಕಾರಿ, ಡಾ. ಸೋಮಶೇಖರ ಇಕೂಪುರ, ಡಾ. ವಿವೇಕರೈ, ಡಾ. ತೀ. ನಂ. ಶಂಕರನಾರಾಯಣ. ಡಾ. ಚಿನ್ನಪ್ಪಗೌಡ,

ಡಾ. ಪುರುಷೋತ್ತಮ ಬಿಳಿಮಲೆ, ಡಾ. ಆರ್. ವಿ. ಎಸ್ ಸುಂದರಂ, ಡಾ. ಹೆಚ್. ಎಂ. ಮಹೇಶ್ವರಯ್ಯ, ಶ್ರೀ ಹಿ. ಚಿ. ಬೋರಲಿಂಗಯ್ಯ, ಡಿ. ಬಸವರಾಜ ನೆಲ್ಲೀಸರ ಮೊದಲಾದವರು ಹೊಂದಿದ್ದಾರೆ. ಡಾ. ಜೀಶಂಪ ಅವರು ಇಂಡಿಯಾನಾ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದಾರೆ. ಯೂರೋಪಿನಲ್ಲಿ, ಇಂಗ್ಲೆಂಡ್, ಫಿನ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್ - ಮೊದಲಾದ ದೇಶಗಳ ಮ್ಯೂಸಿಯಂಗಳನ್ನು ಅಭ್ಯಾಸ ಮಾಡಿದ್ದಾರೆ. ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿದ್ದಾರೆ. ಇದರಿಂದಾಗಿ ಮೈಸೂರಿನ Folklore Museum ಅನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಲು ಸಾಧ್ಯವಾಗಿದೆ. ಪ್ರೊ. ಕು. ಶಿ. ಹರಿದಾಸಭಟ್ಟರು ಯೂರೋಪಿನ ಹಲವು ದೇಶಗಳಿಗೆ ಜಪಾನ್, ರಶಿಯಾ, ಮೊದಲಾದ ಕಡೆಗಳಿಗೆ ಕರ್ನಾಟಕದ ಯಕ್ಷಗಾನ ಹಾಗೂ ಜಾನಪದ ಕಲಾತಂಡಗಳನ್ನು ಕರೆದು ಕೊಂಡು ಹೋಗಿ ಗೌರವ ತಂದಿದ್ದಾರೆ ಫಿನ್ನಿಷ್-ಇಂಡಿಯಾ ಜಾನಪದ ದಾಖಲಾತಿ ಯೋಜನೆ ಸಾಧ್ಯವಾದದ್ದು ಪ್ರೊ. ಕು. ಶಿ. ಹರಿದಾಸಭಟ್ಟರ ಸತತ ಪ್ರಯತ್ನದಿಂದ. ಪ್ರೊ. ಪೀಟರ್‌ಕ್ಲಾಸ್ ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮತ್ತು ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ

ಕಾರ್ಯನಿರ್ವಹಿಸಿದ್ದಾರೆ. ಮಾರ್ತಾಆಷ್ಟೇನ್ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಯೂರೋಪಿನ ಮತ್ತು ಅಮೇರಿಕಾದ ಅನೇಕ ಜಾನಪದ ವಿದ್ವಾಂಸರು ಭಾರತದ ಜಾನಪದ ವಿದ್ವಾಂಸರೊಡನೆ ಸಂಶೋಧನೆ ನಡೆಸಲು ಆಸಕ್ತರಾಗಿದ್ದಾರೆ.

ಪೀಟರ್ ಕ್ಲಾಸ್ ಮತ್ತು ಡಾ. ವಿವೇಕ ರೈ ಸಂಪಾದಿಸಿದ Karnataka Folklore News Letter ಕೆಲವು ಸಂಚಿಕೆಗಳು ಪ್ರಕಟವಾಗಿ ಅನಂತರ ನಿಂತು ಹೋಯಿತು. ಮೂರುನಾಲ್ಕು ವರ್ಷಗಳ ಕಾಲಾವಧಿಯಲ್ಲಿ ಇದು ಉಪಯುಕ್ತ ಕೆಲಸಮಾಡಿತು. ಕಳೆದ ನಾಲ್ಕೈದು ವರ್ಷಗಳಿಂದ ಕೇರಳದ ತ್ರಿವೇಂಡ್ರಂನಲ್ಲಿರುವfolklore Society of South Indian Languages (FOSSILS) ಸಂಸ್ಥೆ ಒಂದುNews Letter ಪ್ರಕಟ ಮಾಡುತ್ತಿದೆ. ಇದರಿಂದಾಗಿ ಹೊರ ಜಗತ್ತಿಗೆ ದಕ್ಷಿಣ ಭಾರತದ ಜಾನಪದ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಗ್ರಹ ಸಂಶೋಧನೆಗಳ ಬಗ್ಗೆ ತಿಳಿಸಲು ಸಾಧ್ಯವಾಗುತ್ತಿದೆ. ತಮಿಳು ನಾಡಿನಲ್ಲಿರುವ ಪಾಲಯಂಕೋಟೆಯಲ್ಲಿರುವ St Xavior ಕಾಲೇಜಿನ ಜಾನಪದ ವಿಜ್ಞಾನ ವಿಭಾಗ ಭಾರತೀಯ ಜಾನಪದಕ್ಕೆ ಸಂಬಂಧಿಸಿದ ಜರ್ನಲ್‌ವೊಂದನ್ನು ಸದ್ಯದಲ್ಲಿಯೇ ಆರಂಭಿಸಲಿದೆ. ಇದರಿಂದಾಗಿ ಭಾರತದ ಜಾನಪದ ಕ್ಷೇತ್ರದ ಬಗ್ಗೆ ಇತರ ದೇಶಗಳ ವಿದ್ವಾಂಸರಿಗೆ ತಿಳುವಳಿಕೆವುಂಟಾಗಲು ಸಾಧ್ಯವಾಗಿದೆ. 1979 ರಲ್ಲಿ ಮೈಸೂರಿನಲ್ಲಿ ಆರಂಭವಾಗಿದ್ದ Folklore Fellows of India ಹಾಗೂ ಡಾ. ಹಾ. ಮಾ. ನಾ ಹಾಗೂ ಡಾ. ಜವಾಹರ್‌ಲಾಲ್ ಸುಂಡೂರವರ ಸಂಪಾದಕತ್ವದಲ್ಲಿ ಪ್ರಕಟಿಸದ Journal of Indian Folkloristicsನ ಕೆಲವು ಸಂಚಿಕೆಗಳು ಅಂತರರಾಷ್ಟ್ರೀಯ ಜಾನಪದಕ್ಕೆ ಭಾರತದ ಮುಖ್ಯವಾದ ಕೊಡುಗೆ. ಕಳೆದ ಒಂದು ದಶಕದಿಂದಲೂ ಡಾ. ಜವಾಹರ್‌ಲಾಲ್ ಹಂಡೂರವರ ಅಧ್ಯಕ್ಷತೆಯಲ್ಲಿ Indian Folklore Congress ಉಪಯುಕ್ತ ಕಾರ್ಯ ಮಾಡಿದೆ. ಮದರಾಸಿನ Institute of Asian Studies ಪ್ರಕಟಿಸಿದ Encyclopadea of Folk Culture of Karnataka ಒಂದು ಮಹತ್ವದ ಕೊಡುಗೆ.

ದಕ್ಷಿಣ ಭಾರತದಲ್ಲಿ ಅಂತರರಾಷ್ಟ್ರೀಯ ಜಾನಪದ ಪ್ರಜ್ಞೆಯನ್ನು ಬೆಳಿಸಲು For Foundation ನೀಡಿರುವ ಕೊಡುಗೆ ಗಮನಾರ್ಹವಾದುದು. 1988 ರಿಂದ 92 ರವರೆಗೆ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ - ಈ ರಾಜ್ಯಗಳಲ್ಲಿ ಅಂತರರಾಷ್ಟ್ರೀಯ ಜಾನಪದದ ಬಗ್ಗೆ ಭಾರತದ ಮತ್ತು ಅಮೇರಿಕಾದ ಮತ್ತು ಯೂರೋಪಿನ ಜಾನಪದ ವಿದ್ವಾಂಸರ ನೆರವಿನಿಂದ ಏರ್ಪಡಿಸಿದ್ದ ಜಾನಪದ ವಿಜ್ಞಾನ ಕಮ್ಮಟಗಳು ದಕ್ಷಿಣ ಭಾರತದ ಜಾನಪದ ಅಧ್ಯಯನಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿವೆ. ಉಡುಪಿಯ MGM ಕಾಲೇಜ್, ಪಾಲಯಂ ಕೋಟೆಯ St. Xavier's College,ಹೈದರಾಬಾದಿನ Central University ಗಳಲ್ಲಿ ಸ್ಥಾಪಿತವಾಗಿರುವ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರಗಳು ಆಯಾ ಪ್ರದೇಶದ ಜನಪದ ಕಲೆಗಳ ಸಂಗ್ರಹ ಮತ್ತು ದಾಖಲಾತಿ ಕೇಂದ್ರಗಳಾಗಿರುವುದು ಮಾತ್ರವಾಗಿರದೆ ಜನಪದ ಸಂಶೋಧನೆ ಮತ್ತು ತರಬೇತಿ ಕೇಂದ್ರಗಳೂ ಆಗಿವೆ.

ಅಂತರರಾಷ್ಟ್ರೀಯ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದ ಪುಸ್ತಕ ಭಂಡಾರಗಳನ್ನೂ ಹೊಂದಿವೆ.

IV

ಅಂತರರಾಷ್ಟ್ರೀಯ ಜಾನಪದ ಅಧ್ಯಯನಕ್ಕೆ ಕೆಲವು ಅಡಚಣೆಗಳಿವೆ. ಮೊದಲನೆಯದಾಗಿ ಜಗತ್ತಿನಲ್ಲಿ ಜಾನಪದದ ಸಂಗ್ರಹಕಾರ್ಯ ಅನೇಕ ದೇಶಗಳಲ್ಲಿ ನಡೆದಿಲ್ಲ; ನಡೆದಿದ್ದರೂ ಅದರ ಪ್ರಮಾಣ ಕಡಿಮೆ; ಅದು ವೈಜ್ಞಾನಿಕವಾದ ಸಂಗ್ರಹ ಕಾರ್ಯವಾಗಿಲ್ಲದೆಯೂ ಇರಬಹುದು. ಎರಡನೆಯದಾಗಿ ಸಂಗ್ರಹವಾಗಿರುವ ಜಾನಪದದ ಸಾಮಗ್ರಿ ಆಯಾ ಪ್ರಾದೇಶಿಕ ಭಾಷೆಗಳಲ್ಲಿಯೇ ಇರುವುದು. ಎಲ್ಲರೂ ಎಲ್ಲಾ ಭಾಷೆಗಳನ್ನೂ ಕಲಿಯಲು ಸಾಧ್ಯವಿಲ್ಲ. ಹೀಗಾಗಿ ಈ ಪ್ರಾದೇಶಿಕ ಭಾಷೆಗಳಲ್ಲಿರುವ ಜಾನಪದ ಇಂಗ್ಲಿಷ್ ಭಾಷೆಗೆ ಅನುವಾದವಾಗಬೇಕಾದದ್ದು ಅಗತ್ಯ. ಈ ಕಾರ್ಯ ನಡೆಯದ ಹೊರತು ಅಂತರ ರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನ ಕೊರತೆಯಿಂದ ಕೂಡಿರುವುದೆಂದೇ ಹೇಳಬೇಕು. ಮೂರನೆಯದಾಗಿ ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಪ್ರಕಟವಾಗುವ ಜಾನಪದ ಸಂಬಂಧವಾದ ಗ್ರಂಥಗಳು, ವಿದ್ವತ್ಪತ್ರಿಕೆಗಳು ದೊರಕುವುದು ಕಷ್ಟ. ದೊರಕಿದರೂ ಅನುವಾದದ ಸಮಸ್ಯೆ ಇದ್ದೇ ಇದೆ. ನಾಲ್ಕನೆಯದಾಗಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿಚಾರ ಸಂಕಿರಣಗಳಿಗೆ ಕಮ್ಮಟಗಳಿಗೆ ಎಲ್ಲಾ ಜಾನಪದ ವಿದ್ವಾಂಸರು ಹೋಗಲು ಇರುವ ಆರ್ಥಿಕ ತೊಂದರೆಗಳು. ಐದನೆಯದಾಗಿ ಅಂತರರಾಷ್ಟ್ರೀಯ ಜಾನಪದದ ಅಧ್ಯಯನಕ್ಕೆ ಬೇಕಾದ ತಾತ್ವಿಕ ಮನೋಭಾವ ಬಹಳಷ್ಟು ಜಾನಪದ ವಿದ್ವಾಂಸರಲ್ಲಿ ಇಲ್ಲದಿರುವುದು ; ಪ್ರಾದೇಶಿಕ, ರಾಷ್ಟ್ರೀಯ ಮೋಹ ಹೆಚ್ಚಾಗಿ ತಮ್ಮ ತಮ್ಮ ಜಾನಪದವೇ ಶ್ರೇಷ್ಠವೆಂಬ ಭಾವನೆಯನ್ನು ಬೆಳೆಸಿಕೊಳ್ಳುವುದು ಇನ್ನೊಂದು ಮುಖ್ಯವಾದ ಪರಿಮಿತಿ. ಈ ಎಲ್ಲಾ ಕಾರಣಗಳಿಂದಾಗಿ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಅಂತರರಾಷ್ಟ್ರೀಯ ಜಾನಪದ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವವರ ಸಂಖ್ಯೆ ಕಡಿಮೆ.

ಅಂತರರಾಷ್ಟ್ರೀಯ ಜಾನಪದ ವಿಜ್ಞಾನದಲ್ಲಿ ಕೆಲಸ ಮಾಡುವುದೆಂದರೆ ಪ್ರಾದೇಶಿಕ ಜಾನಪದ, ರಾಷ್ಟ್ರೀಯ ಜಾನಪದದಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಕೆಲಸ ಮಾಡಬೇಕೆಂದೇನೂ ಅಲ್ಲ. ಡಂಡೇಸ್, ಹಾಂಕೋ ಮೊದಲಾದ ಶ್ರೇಷ್ಠ ಜಾನಪದ ವಿದ್ವಾಂಸರು ತಮ್ಮ ಪ್ರದೇಶದ, ರಾಷ್ಟ್ರದ ಜಾನಪದದಲ್ಲಿ ಕೆಲಸ ಮಾಡುತ್ತಲೇ ಅಂತರರಾಷ್ಟ್ರೀಯ ಜಾನಪದ ವಿಜ್ಞಾನವನ್ನು ಬೆಳೆಸಿದ್ದಾರೆ. ಇದು ನಮಗೆ ಮಾದರಿಯಾಗಬೇಕು. ಅಂತರರಾಷ್ಟ್ರೀಯ ಜಾನಪದದ ಬಗ್ಗೆ ಅತಿ ಮೋಹವಾಗಲಿ ಅತಿ ತಾತ್ಸಾರವಾಗಲಿ ಅನಗತ್ಯ. Regional Folkloristics, National Folkloristics ಕೂಡ International Folkloristics ನಷ್ಟೇ ಮುಖ್ಯವಾದುದು - ಇವುಗಳಲ್ಲಿ International Folklorist ದೊಡ್ಡವನೆಂದಾಗಲಿ, ಉಳಿದವರು ಕಡಮೆಯೆಂದಾಗಲಿ ಸರಿಯಲ್ಲ. International Folklorists ಒಂದು ವಿಶಿಷ್ಟವಾದ ಅಧ್ಯಯನ ಕ್ಷೇತ್ರ ಅಷ್ಟೆ.

ಇಂಗ್ಲಿಷ್ ಭಾಷೆಯಲ್ಲಿ ಬರೆದದ್ದೆಲ್ಲಾ ಅಂತರರಾಷ್ಟ್ರೀಯ ಜಾನಪದ ವಿಜ್ಞಾನದಲ್ಲಿ ಮಹತ್ವಗಳಿಸುವುದೆಂಬ ಅಭಿಪ್ರಾಯ ಸರಿಯಲ್ಲ. ಆಲೋಚನೆಯ ಗುಣಮಟ್ಟ, ತಾತ್ವಿಕವಾಗಿ ಹೊಸದಾಗಿ ವಿಚಾರ ಮಾಡುವುದು ಮುಖ್ಯ. ಜಗತ್ತಿನ ಯಾವ ಭಾಷೆಯಲ್ಲಿ

ಬರೆವದ್ದೂ ಅಂತರರಾಷ್ಟ್ರೀಯ ಜಾನಪದ ವಿಜ್ಞಾನಕ್ಕೆ ಕೊಡುಗೆ ಆಗಬಹುದು - ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳು ಇಂಗ್ಲೀಷ್, ಫ್ರೆಂಚ್, ಜರ್ಮನ್ ಭಾಷೆಗಳಲ್ಲಿ ಹೆಚ್ಚಾಗಿ ನಡೆಯುತ್ತದೆ. ಹೀಗಾಗಿ ಮೌಲಿಕವಾದ ಬರವಣಿಗೆಗಳು ಈ ಯಾವುದಾದರೂ ಭಾಷೆಗೆ ಅನುವಾದವಾಗುವುದು ಅಗತ್ಯ. ಅನುವಾದವಾಗದಿದ್ದಲ್ಲಿ ವಿಚಾರಗಳು ಉಳಿದವರಿಗೆ ತಿಳಿಯುವುದು ತಡವಾಗಿತ್ತದೆ. ಹೀಗಾಗಿ ನಿಜವಾಗಿಯೂ ತಾತ್ವಿಕವಾಗಿ ಮಹತ್ವಪೂರ್ಣ ಬರಹಗಳು ವ್ಯಾವಹಾರಿಕ ದೃಷ್ಟಿಯಿಂದ ಅನುವಾದಗೊಳ್ಳುವುದು ಅಗತ್ಯ. ಪ್ರಾಪ್‌ನ The Morphology of the Folktale ರಷ್ಯನ್ ಭಾಷೆಯಲ್ಲಿ 1928ರಲ್ಲಿ ಪ್ರಕಟವಾಯಿತು. ಆದರೆ 30 ವರ್ಷಗಳ ಕಾಲ ಇಂಗ್ಲೀಷ್‌ನಲ್ಲಿ ಪ್ರಕಟವಾಗಲಿಲ್ಲ. ಆದರೆ ಅದು ಇಂಗ್ಲೀಷ್‌ನಲ್ಲಿ ಪ್ರಕಟವಾದ ನಂತರ Structuralism ಸಿದ್ಧಾಂತದ ಮೇಲೆ ವಿಶೇಷ ಪರಿಣಾಮ ಬೀರಿತು. ಈ ಪುಸ್ತಕ ಇನ್ನೂ ಮುಂಚೆ ಇಂಗ್ಲೀಷ್ ಭಾಷೆಗೆ ಅನುವಾದವಾಗಿದಿದ್ದರೆ ಜಾನಪದ ಸಂಶೋಧನಾ ಕ್ಷೇತ್ರದ ದಿಕ್ಕೇ ಬದಲಾಯಿಸುತ್ತಿತ್ತು. ಜಗತ್ತಿನ ಉಳಿದ ವಿದ್ವಾಂಸರೆಲ್ಲಾ ನಮ್ಮ ಭಾಷೆಯನ್ನು ಕಲಿಯಲಿ, ಬೇಕಾದರೆ ಅವರು ಅನುವಾದ ಮಾಡಿಕೊಳ್ಳಲಿ ಎಂಬ ನಿಲುವು ಒಂದು ರೀತಿಯಿಂದ ಸರಿಯಿರಬಹುದಾದರೂ ಇನ್ನೊಂದು ದೃಷ್ಟಿಯಿಂದ ನೋಡಿದಾಗ ನಮಗೇ ನಷ್ಟ ಎನಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ಆ ಗುಣಮಟ್ಟದ ತಾತ್ವಿಕ ಬರಹಗಳು ನಮ್ಮಲ್ಲಿರಬೇಕು.

ನಾರ್ಡಿಕ್ ದೇಶಗಳ ಜಾನಪದ ವಿದ್ವಾಂಸರಲ್ಲಿ ಬಹಳಷ್ಟು ಜನಕ್ಕೆ ಇಂಗ್ಲಿಷ್ ಬರುವುದುಮಲ್ಲ. ಆದರೆ ಓದಿ ಅರ್ಥ ಮಾಡಿಕೊಳ್ಳುವಷ್ಟು ಇಂಗ್ಲಿಷ್ ಕಲಿತಿರುತ್ತಾರೆ. ಫಿನ್ಲೆಂಡ್, ಸ್ವೀಡನ್, ಡೆನ್ಮಾರ್ಕ್, ನಾರ್ವೆ ಮತ್ತು ಐಸ್ಲೆಂಡ್ ಜಾನಪದ ವಿದ್ವಾಂಸರು Nsodil Indtitute of Folklore ನ ಸೆಮಿನಾರ್‌ಗಳಲ್ಲಿ ಭಾಗವಹಿಸುವಾಗ ಸ್ವೀಡನ್, ಅಥವಾ ಡ್ಯಾನಿಷ್ ಭಾಷೆಯಲ್ಲಿ ವ್ಯವಹಾರ ಮಾಡುತ್ತಾರೆ. ಸಾಮಾನ್ಯವಾಗಿ ಅವರ ವಿಚಾರಗಳೆಲ್ಲಾ Scandinavian ಅಥವಾ ಅವರ ಪ್ರಾದೇಶಿಕ ಭಾಷೆಗಳಲ್ಲಿ ನಡೆಯುತ್ತದೆ. ಅವರು ತಮ್ಮ ಪ್ರಾದೇಶಿಕ ಮಟ್ಟದಲ್ಲಿ, ಯೂರೋಪಿನ ಮಟ್ಟದಲ್ಲಿ ಕೆಲಸ ಮಾಡುವುದು ಮಾತ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕೆಲಸ ಮಾಡುತ್ತಾರೆ. ತಾತ್ವಿಕವಾಗಿ ನಿಜವಾಗಿಯೂ ಮೌಲಿಕವಾದ ಕೊಡುಗೆಯಾಗಿದ್ದರೆ ಆ ಬರಹಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುತ್ತಾರೆ. ಅವರ ದೇಶಗಳಲ್ಲಿ ಅನುವಾದ ತುಂಬಾ ದುಬಾರಿ. ತೀರಾ ಮುಖ್ಯವಾದುದನ್ನು ಮಾತ್ರ ಇಂಗ್ಲಿಷ್‌ಗೆ ಅನುವಾದಿಸುತ್ತಾರೆ. ಆದ್ದರಿಂದ ಇಂಗ್ಲಿಷ್ ಚೆನ್ನಾಗಿ ಬರುವುದು ಅಂತರರಾಷ್ಟ್ರೀಯ ಜಾನಪದದಲ್ಲಿ ಅನುಕೂಲವಿರಬಹುದು. ಆದರೆ ಅದೇ ಮುಖ್ಯವಲ್ಲ. ಅಂತರರಾಷ್ಟ್ರೀಯವಾದ ದೃಷ್ಟಿಕೋನ ಮತ್ತು ಗುಣಮಟ್ಟ ಮುಖ್ಯವಾದುದು. ಕರ್ನಾಟಕದ ಹಾಗೂ ಭಾರತದ ಜಾನಪದ ಸಮೃದ್ಧವಾದುದು. ವೈವಿಧ್ಯವಾದುದು ಎಂದು ಒಪ್ಪುವ ವಿದೇಶೀ ವಿದ್ವಾಂಸರು ಇಲ್ಲಿ ಸಂಗ್ರಹಕಾರ್ಯ ಹೆಚ್ಚು ನಡೆದಿದೆಯೇ ಹೊರತು ತಾತ್ವಿಕವಾದ (Theoritical) ಮತ್ತು ವಿಶ್ಲೇಷಣಾತ್ಮಕವಾದ (Analytical) ಕೆಲಸ ಹೆಚ್ಚಾಗಿ ನಡೆಯಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯ ಪಡುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಅಭ್ಯಾಸ ಮಾಡುವುದಕ್ಕೆ ಜೀವಂತವಾದ ಜನಪದ ಸಂಪ್ರದಾಯ ತೀರಾ ಕಡಿಮೆ ಪ್ರಮಾಣದಲ್ಲಿದೆ. ಹೀಗಾಗಿ ಪಾಶ್ಚಾತ್ಯ ವಿದ್ವಾಂಸರು ಭಾರತ,

ಚೈನಾ ಮೊದಲಾದ ಏಷ್ಯಾದ ದೇಶಗಳಿಗೆ ಹೆಚ್ಚಾಗಿ ಬರುತ್ತಿದ್ದಾರೆ ಎಂದು ಕೆಲವರು ಭಾರತೀಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಂತರರಾಷ್ಟ್ರೀಯ ಜಾನಪದ ಅಧ್ಯಯನ ಒಂದು ರೀತಿಯಲ್ಲಿ ಭಾರತದಲ್ಲಿ ಪಾಶ್ಚಾತ್ಯ ತತ್ತ್ವಗಳ ಅನುಕರಣೆಯಾಗಿದೆ. ವಸಾಹತುಶಾಹಿ ಧೋರಣೆಗಳನ್ನೂ ಒಪ್ಪಿಕೊಂಡಂತಾಗುತ್ತದೆ ಎಂದೂ ರಾಷ್ಟ್ರೀಯ ವಾದದ ಮತ್ತು ದೇಶೀಯವಾದದ ಸಮರ್ಥನೆ ಮಾಡುವ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಎಲ್ಲಾ ನಿಲುವುಗಳಲ್ಲಿಯೂ ಸರಿ ತಪ್ಪುಗಳೆರಡೂ ಇವೆ. ಅತಿ ಅಂತರರಾಷ್ಟ್ರೀಯವಾದ, ಅತಿ ಅಂತರರಾಷ್ಟ್ರೀಯತೆ, ಪಾಶ್ಚಾತ್ಯ ಸಿದ್ಧಾಂತಗಳ ಕುರುಡು ಅನುಕರಣೆಯಾಗಬಹುದು. ಅತಿ ದೇಶೀಯತೆ, ಅತಿರಾಷ್ಟ್ರೀಯತೆ ಜಾನಪದ ವಿದ್ವಾಂಸರಲ್ಲಿ ಕೂಪಮಂಡೂಕ ಪ್ರವೃತ್ತಿಯನ್ನು ಬೆಳೆಸಬಹುದು. ಭಾರತದಲ್ಲಿ ಇಂದು ಕೆಲಸ ಮಾಡುವ ಜಾನಪದ ವಿದ್ವಾಂಸರು ಈ ಎರಡೂ ಅಪಾಯಗಳಿಂದ ಪಾರಾಗಿ ಪ್ರಾದೇಶಿಕ ರಾಷ್ಟ್ರೀಯ ಜಾನಪದ ಅಧ್ಯಯನದಲ್ಲಿ ಆಳವಾಗಿ ಬೇರೂರಿ ಅಂತರರಾಷ್ಟ್ರೀಯ ಜಾನಪದ ವಿದ್ವತ್ತಿನ ಕ್ಷೇತ್ರದಲ್ಲಿ ಕೆಲಸ ಮಾಡುವ ಸವಾಲನ್ನು ಎದುರಿಸಬೇಕಾಗಿದೆ. ಈ ಬಗೆಯ ಪರಿಮಿತಿಗಳನ್ನು ಮೀರಿ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಒಟ್ಟಾರೆ ಸೇರಿ ಮಾಡಿರುವ ಕೆಲವು ಪ್ರಮುಖ ಅಧ್ಯಯನಗಳನ್ನು ಇಲ್ಲಿ ಉಲ್ಲೇಖಿಸಬಹುದು. ಪ್ರೊ. ಎ. ಕೆ. ರಾಮಾನುಜನ್ ಮತ್ತು ಸ್ಟುಯರ್ಟ್ ಬ್ಲ್ಯಾಕ್‌ಬರ್ನ್ ಅವರು ಸಂಪಾದಿಸಿರುವ Another Harmony ಎಂಬ ಗ್ರಂಥ, ಸ್ಟ್ಯೂಯರ್ಟ್‌ಬ್ಲ್ಯಾಕ್ ಬರ್ನ್ ಮತ್ತು ಪೀಟರ್ ಕ್ಲಾಸ್, ಬ್ರೆಂಡ್ ಬೆಕ್ ಮೊದಲಾದವರು ಸೇರಿ ಸಂಪಾದಿಸಿರುವ Oral Epics in India, ಪೀಟರ್ ಕ್ಲಾಸ್, ಡಿ. ಪಿ. ಪಟ್ನಾಯಕ್ ಮತ್ತು ಜವಾಹರಲಾಲ್ ಹಂಡೂ ಅವರು ಸಂಪಾದಿಸಿರುವ Indian Folklore ಭಾಗ 1, 2,ಬ್ರೆಂಡ್‌ಬೆಕ್ ಅವರ The Three Twins, The Telling of a South Indian Folk Epic ಪೀಟರ್ ಕ್ಲಾಸ್ ಅವರ ತುಳುವ ದರ್ಶನ ಮೊದಲಾದ ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು. ಈ ಕೃತಿಗಳಲ್ಲಿ ಭಾರತದ ಜನಪದ ಮಹಾಕಾವ್ಯಗಳು, ಜನಪದ ಕಥೆಗಳು, ಗಾದೆಗಳು, ಕಥನಗೀತೆಗಳು ಮೊದಲಾದ ಪ್ರಕಾರಗಳನ್ನು ಅಂತರರಾಷ್ಟ್ರೀಯ ದೃಷ್ಟಿಕೋನದಿಂದ ವಿಚಾರ ಮಾಡಲಾಗಿದೆ. ಈ ಬಗೆಯ ಕೆಲಸಕ್ಕೆ ಸಾಕಷ್ಟು ಶ್ರಮವಹಿಸಬೇಕಾಗುತ್ತದೆ. ಕನ್ನಡದ, ತುಳುವಿನ, ತಮಿಳಿನ, ತೆಲುಗಿನ, ಜನಪದ ಕಥೆಯೋ, ಮಹಾಕಾವ್ಯವೋ ಅದರ ಸ್ವರೂಪವೇನು ಎಂಬುದನ್ನು ಸುಲಭವಾಗಿ ವಿವರಿಸಬಹುದು. ಆದರೆ ಅದು ಜಗತ್ತಿನ ಇತರ ದೇಶಗಳ ಮತ್ತು ಇತರ ಭಾಷೆಗಳ ಅದೇರೀತಿಯ ಪ್ರಕಾರಗಳಿಗಿಂತ ಹೇಗೆ ಭಿನ್ನ, ಹೇಗೆ ವಿಶಿಷ್ಟ ಎಂಬುದನ್ನು ತಿಳಿಯಬೇಕಾದರೆ ತೌಲನಿಕವಾದ ಅಧ್ಯಯನ ಅಗತ್ಯ. ಮೇಲೆ ಉಲ್ಲೇಖಿಸಿದ ವಿದ್ವಾಂಸರು ಈ ಬಗೆಯ ಕೆಲಸ ಮಾಡಿದ್ದಾರೆ. ಅಂತರರಾಷ್ಟ್ರೀಯ ಜಾನಪದ ವಿಜ್ಞಾನಕ್ಕೆ ಕರ್ನಾಟಕದ, ಭಾರತದ ಜಾನಪದದ ವೈಶಿಷ್ಟ್ಯವನ್ನು ಈ ರೀತಿಯಲ್ಲಿ ಸ್ಪಷ್ಟಪಡಿಸಬೇಕಾದ ಅಗತ್ಯವಿದೆ. ಜಗತ್ತಿನ ಇತರ ಭಾಷೆಗಳ ಜಾನಪದ ಹಾಗೂ ಜಾನಪದ ಸಂಬಂಧವಾದ ಮಹತ್ವಪೂರ್ಣ ಬರಹಗಳು ಕನ್ನಡಕ್ಕೆ ಅನುವಾದಗೊಳ್ಳಬೇಕು. ಶ್ರೀ. ಹ. ಕ. ರಾಜೇಗೌಡರ ಜಗತ್ತಿನ ಜನಪದ ಕಥೆಗಳು, ವಿ. ಪಿ. ನಾವಡ ಮತ್ತು ಸುಭಾಶ್ಚಂದ್ರ ಅವರು ಅನುವಾದಿಸಿದ ತುಳುವ ದರ್ಶನ ಈ ಬಗೆಯ ಉದಾಹರಣೆಗಳು. ಡಾ. ಹಿ. ಶಿ. ರಾಮಚಂದ್ರೇಗೌಡ, ಡಾ. ಅಂಬಳಿಕೆ

ಹಿರಿಯಣ್ಣ. ಡಾ. ಕೃಷ್ಣಮೂರ್ತಿ ಹನೂರು. ಡಾ. ಡಿ. ಕೆ. ರಾಜೇಂದ್ರ, ಡಾ. ಕೆ. ಆರ್. ಸಂಧ್ಯಾರೆಡ್ಡಿ. ಡಾ. ಪೀರಣ್ಣ ಪುಂಡೆ, ಡಾ. ಪಿ. ಕೆ. ಖಂಡೋಬಾ ಮೊದಲಾದ ಹಲವಾರು ಜಾನಪದ ವಿದ್ವಾಂಸರು ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಗ್ರಂಥಸೂಚಿ.

1. ಜವರೇಗೌಡ. ದೇ. — ಜಾನಪದ ಅಧ್ಯಯನ 1376 ಮೈಸೂರು: ಡಿ. ವಿ. ಕೆ. ಮೂರ್ತಿ
2. ನಾಯಕ ಹಾ. ಮಾ. — ಜಾನಪದ ಸ್ವರೂಪ. 1971, ಮೈಸೂರು:ತ. ವೆಂ. ಸ್ಮಾರಕ
3. .ಪರಮಶಿವಯ್ಯ. ಜೀ. ಶಂ. — ದಕ್ಷಿಣ ಕರ್ನಾಟಕದ ಜಾನಪದ ಪ್ರಕಾರಗಳು. ೧೯೭೯.ಮಾಸೂರುಪ್ರಸಾರಾಂಗ:ಮೈಸೂರು ವಿ. ವಿ. ನಿಸಯ.
4. ಚಿದಾನಂದಮೂರ್ತಿ. ಎಂ. — ಪೂರ್ಣಸೂರ್ಯ ಗ್ರಹಣ. 1982, ಬೆಂಗಳೂರು: ಐಬಿಎಚ್ ಪ್ರಕಾಶನ
5. ಕ್ಲಾಸ್, ಪೀಟರ್., — ತುಳುವ ದರ್ಶನ (ಅನು. ಎ. ವಿ. ನಾವಡ ಮತ್ತು ಸುಭಾಶ್ಚಂದ್ರ)
6. ವಿವೇಕ ರೈ. ಬಿ. — ತುಳು ಜನಪದ ಸಾಹಿತ್ಯ
7. Blckburn, Stuart and Ramanujan, A.K. — Another Harmony (Eds), 1986. Berkeley: University of califerniaPress.
8. Blackburn, Stuart, — et.al. Oral Epics in India. 1989. U. S. A. Unoiversity of California Press
9. Back, Brenda. E. F., — The Three Twins: The Telling of A South Indian Folk Epic. 1982. U.S. A. Indian University Press, Bloomington.
10. Honko, Lauri., — (Ed) The Kaleval and World's Epics: An Introduction to Myth and Folklore in the World's Epics. 1990.
11. Duces, Alan — (Ed). The Study of Folklore, 1965. NewGercy: Prentis Hall.

12. --------------------,
The Evil. Eye: A Folklore casebook, 1981. Newyork:Garland poblishing co. Inc.

13. --------------------,
Cindrella: A folklore Casebook, 1982, Newyork.

14. --------------------,
Sacred Narrative: Readings In The Theory of Myth, 1984, Berlkeley and Los Angeles.

15. --------------------,
The flodd Myth, 1988, Berkeley and Los Angeles.

16. Propp, Vladimir
The Morphology of The Folklore, 1968 (Revised Ed) Tr.by L. Scett, Austria: University of Texas Press.

17. Claus, Peter J. and Pattanayak, D. P.
(Eds), 1981, Indian Folklore I Mysore: Central Institute of Indian Languages.

18. Claus, Peter J. and Handoo J. and Pattanayak
D. P. (Eds) Indian Folklore II, 1987, Mysore: Central Institute of Indian Languages.

* * * * *

ಜಾನಪದದ ಸಿದ್ಧಿ - ಜಾನಪದ ಲೋಕ

ಸರ್ವ ಮಂಗಳ

1994ರ ಮಾರ್ಚ್ 12ರಂದು ನಾಡಿನ ಜನತೆಗೆ ವಿಧ್ಯುಕ್ತವಾಗಿ ಅರ್ಪಿತವಾದ 'ಜಾನಪದ ಲೋಕ' ಕರ್ನಾಟಕ ಜನಪದ ಸಂಸ್ಕೃತಿ ಮತ್ತು ಕಲೆಗಳ ಸಂವರ್ಧನೆಗಾಗಿಯೇ ರೂಪುಗೊಂಡ ಬೃಹದ್ ಜಾನಪದ ಕಾಶಿ.

ಬೆಂಗಳೂರಿನಿಂದ ಕೇವಲ 53 ಕಿ. ಮೀ. ದೂರದಲ್ಲಿ ರಾಮನಗರದ ಬಳಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ 15 ಎಕರೆ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಈ ಜಾನಪದ ಲೋಕ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಭಾರತದಲ್ಲಿಯೇ ಅಪೂರ್ವವೆನಿಸಿದ ಒಂದು ಗ್ರಾಮೀಣ ಸಾಂಸ್ಕೃತಿಕ ಕೇಂದ್ರ.

ಕರ್ನಾಟಕದ ಜನಪದ ಕಲೆ ಹಾಗೂ ಸಾಹಿತ್ಯ ಸಂಪತ್ತನ್ನು ಒಂದೆಡೆ ಕಲೆಹಾಕಿ ಆಳವಾದ ಅಧ್ಯಯನ ಹಾಗೂ ಸಂಶೋಧನೆ ನಡೆಸುವ, ಪ್ರದರ್ಶನ-ಕಲೆಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಆದರ್ಶದೊಂದಿಗೆ ಹುಟ್ಟಿಕೊಂಡ ಕರ್ನಾಟಕ ಜಾನಪದಪರಿಷತ್ತು ಜಾನಪದಾಸಕ್ತರೆಲ್ಲ ಗಮನಿಸಲೇಬೇಕಾದ ಸಂಸ್ಥೆಗಳಲ್ಲೊಂದು. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹೆರಗನಹಳ್ಳಿಯ ದೊಡ್ಡಮನೆ ಕುಟುಂಬದಲ್ಲಿ ಹುಟ್ಟಿ ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಸಾರ್ಥಕ ಸೇವೆ ಸಲ್ಲಿಸಿದ ಶ್ರೀ ಎಚ್. ಎಲ್. ನಾಗೇಗೌಡರು ಸಾಹಿತ್ಯ ರಚನೆಯನ್ನು ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡವರು; ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ನಾಡಿನ ಉದ್ದಗಲಕ್ಕೂ ಹಲವಾರು ಬಾರಿ ಏಕಾಂಗಿಯಾಗಿ, ಸೂಕ್ತಪರಿಕರಗಳೊಂದಿಗೆ ಬಿಸಿಲು ನೆರಳೆನ್ನದೆ ಗಾಳಿ ಮಳೆಯೆನ್ನದೆ ಅಲೆದಾಡಿ ಎಲೆಮರೆಯ ಕಾಯಂತಿರುವ ನೂರಾರು ಕಲಾವಿದರನ್ನು ಗುರುತಿಸಿ ಅವರ ಕಲೆಗೆ ದನಿಕೊಟ್ಟವರು. ಹಲವಾರು ವರ್ಷಗಳು ಸರ್ಕಾರದೊಡನೆ ಬಡಿದಾಡಿದರೂ ಜಾನಪದ ಅಕಾಡೆಮಿ ಸ್ಥಾಪನೆ ನಿಧಾನವಾದಾಗ 1979ರಲ್ಲಿ ತಮ್ಮ ಅಭಿನಂದನಾ ಸಮಿತಿಯವರು ನೀಡಿದ ಒಂದು ಲಕ್ಷದ ಹದಿನೈದು ಸಾವಿರ ರೂ.ಗಳನ್ನುಮೂಲಧನವನ್ನಾಗಿ ನೀಡಿ ಎಚ್. ಎಲ್. ನಾಗೇಗೌಡ ಜಾನಪದ ಟ್ರಸ್ಟ್ ಸ್ಥಾಪಿಸಿದವರು (ನಂತರ ಸರ್ಕಾರದ ಅನುದಾನಿತ ಸಂಸ್ಥೆಯಾದ ಅದು ಈಗ ಕರ್ನಾಟಕ ಜಾನಪದ ಪರಿಷತ್ತಾಗಿದೆ).

ಅವರ ಆಸಕ್ತಿ ಕೇವಲ ಸಂಗ್ರಹ ಕಾರ್ಯಕ್ಕಷ್ಟೇ ಸೀಮಿತವಾಗದೆ ಒಂದು ಬೃಹತ್ ಗ್ರಾಮೀಣ ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ ಅವರ ಬಹುದಿನದ ಕನಸು. ಹಲವಾರು ಎಡರು ತೊಡರುಗಳೊಂದಿಗೆ ಹತ್ತು ಹಲವರ ಎಡೆಬಿಡದ ಶ್ರಮದ ಫಲವಾಗಿ ಸ್ಥಾಪಿತವಾದ ಜಾನಪದ ಲೋಕ ಈಗ ಜನಪದ ಕಲಾವಿದರ ಕಾಶಿ, ಸಂಶೋಧಕರ ತವನಿಧಿ; ಆಸಕ್ತರ ಡಿಸ್ನಿಲ್ಯಾಂಡ್.

ಪರಿಷತ್ತು ತನ್ನ ಕ್ರಿಯಾತ್ಮಕ ಚಟುವಟಿಕೆಗಳ ಮೊದಲ ಹಂತವಾಗಿ 1600 ಗಂಟೆಗಳಿಗೂ ಹೆಚ್ಚು ಕಾಲ ಕೇಳಬಹುದಾದಷ್ಟು ಜನಪದ ಸಾಹಿತ್ಯವನ್ನು ಧ್ವನಿಮುದ್ರಿಸಿಕೊಂಡಿದೆ. ಬೀಸುವ ಪದಗಳು, ಕುಟ್ಟುವಪದಗಳು, ಒಕ್ಕಲುತನದ ಪದಗಳು,

ಬಾಂಧವ್ಯದ ಪದಗಳು, ಒಸಗೆ ಪದಗಳು, ಮದುವೆ ಪದಗಳು, ಬಯಕೆ ಪದಗಳು, ಬಾಣಂತಿ, ಬಂಜೆಪದಗಳು, ದೂರಿಪದಗಳು, ಶಿಶುಪ್ರಾಸಗಳು, ತಿಂಗಳು ಮಾವನ ಪದಗಳು, ಧರ್ಮರ ಪದಗಳು, ಕುಂತಿ ಪದಗಳು, ತತ್ವಪದಗಳು, ಭಜನೆ ಮಂಗಳಾರತಿ ಪದಗಳು, ಕಥನ ಗೀತೆಗಳು ಮತ್ತು ಕಥನಕಾವ್ಯಗಳು, ಕಂಸಾಳೆಪದಗಳು, ಚೌಡಿಕೆ ಪದಗಳು, ಗೊಂದಲಿಗರ ಪದಗಳು, ಗೊರವರ ಪದಗಳು, ನೀಲಗಾರ, ದೊಂಬಿದಾಸ, ಗೊಲ್ಲ ಹೆಳವರು; ಕಿನ್ನರಿ ಜೋಗಿಗಳು, ಕರಪಾಲದವರು, ಗೀಗೀಯವರು ಮೊದಲಾದವರು ಹಾಡುವ ಪದಗಳು; ಅಂಟಿಕೆ-ಪಂಟಿಕೆ, ಹರದೇಶಿ-ನಾಗೇಶಿ ಮೊದಲಾದವು, ಹಚ್ಚಿ ಪದಗಳು, ಹಾಲಕ್ಕಿ ಒಕ್ಕಲಿಗರು, ಕುಮಾರ ಪಂತರು, ಅಗೇರರ ಹಾಡು, ಕೋಲಾಟದ ಪದಗಳು, ಪಂಡರಿ ಭಜನೆ, ಅಲಾವಿ ಪದಗಳು, ವೀರ ಮಕ್ಕಳ ಪದಗಳು, ಬೇರೆ ಬೇರೆ ಬುಡಕಟ್ಟು ಮತ್ತು ಆದಿವಾಸಿ ಜನಾಂಗದವರ ಹಾಡುಗಳು, ವೀರಗಾಸೆ, ಪುರವಂತಿಕೆ, ಒಡಪುಗಳು, ಜನಪದ ಕಥೆ ಪುರಾಣ, ಐತಿಹ್ಯಗಳು, ಗಾದೆ-ಒಗಟುಗಳು, ಅಡಿಗೆ, ವೈದ್ಯ ನಂಬಿಕೆ, ಸಂಪ್ರದಾಯ, ಹಬ್ಬ-ಹರಿದಿನ, ವೃತ್ತಿಜೀವನ, ವೇಷಭೂಷಣಗಳ ಬಗ್ಗೆ ವಿವರಣೆಗಳು, ಯಕ್ಷಗಾನ, ಬಯಲಾಟದಂತಹ ರಂಗಭೂಮಿ ಕಲೆಗಳ ಸಾಹಿತ್ಯ, ಜನಪದ ವಾದ್ಯಸಂಗೀತ, ಒಂದೆ-ಎರಡೆ ? ಪರಿಷತ್ತಿನ ಈ ಸಾವಿರಾರು ಗಂಟೆಗಳ ಧ್ವನಿಮುದ್ರಿಕೆಗಳಲ್ಲಿ ಆಯ್ದ ಸಾಹಿತ್ಯವನ್ನು 13 ಧ್ವನಿಸುರುಳಿಗಳಲ್ಲಿ ಬಿಡುಗಡೆಮಾಡಿದೆ. ಇನ್ನೂ ಸುಮಾರು 500 ಧ್ವನಿಸುರುಳಿಗಳಾದರೂ ಬಿಡುಗಡೆಯಾಗಬೇಕಾಗಿದೆ.

ಅಳಿಯುತ್ತಿರುವ ಜನಪದ ಕಲೆಗಳು, ನಾಗರೀಕತೆಯ ಪ್ರಭಾವದಿಂದ ಕಳೆಗುಂದುತ್ತಿರುವ ಹಬ್ಬ, ಜಾತ್ರೆಗಳು ಆಡಂಬರಕ್ಕೆ ಬಲಿಯಾಗಿ ನೈಜತೆ ಕಳೆಬುಕೊಳ್ಳುತ್ತಿರುವ, ಮೂಲಸತ್ವ ಮರೆಯಾಗುತ್ತಿರುವ ಯಕ್ಷಗಾನ, ಬಯಲಾಟ, ತೊಗಲುಗೊಂಬೆ, ಸೂತ್ರದ ಗೊಂಬೆ ನಾಟಕಗಳು, ಕೋಲಾಟ, ಪಟಕುಣಿತ, ನಂದಿಧ್ವಜ ಕುಣಿತ, ಸೋಮನ ಕುಣಿತ, ರಂಗದ ಕುಣಿತ, ಪೂಜಾ ಕುಣಿತ, ಒನಕೆ ಕುಣಿತ, ಪಂಜಿನ ಕುಣಿತ, ಬೀಸು ಕಂಸಾಳೆ, ಗೊರವರ ಕುಣಿತ, ಕರಗದ ಕುಣಿತ, ಕಾವಡಿ ಕುಣಿತ, ಹರಿಗೆ ಕುಣಿತ, ಗುಡ್ಡರ ಕುಣಿತ, ವೀರಭದ್ರನ ಕುಣಿತ, ಗಾರುಡಿಗೊಂಬೆ ಕುಣಿತ, ಹಲಗೆ ಕುಣಿತ, ಕೀಲುಕುದುರೆ ಕುಣಿತ, ಹನ್ನೆರಡು ಸೆರಗಿನ ಕುಣಿತ, ಪಾಳೆಗಾರನ ಕುಣಿತ, ಪೋತರಾ ಜನ ಕುಣಿತ, ವೀರಗಾಸೆ ಕುಣಿತ, ಡೊಳ್ಳುಕುಣಿತ, ಕರ್ಬಲ ಕುಣಿತ, ಮೊಹರಂ ಕುಣಿತ, ಕೊಡ ಊದುವ ಕುಣಿತ, ದಟ್ಟಿಕುಣಿತ, ಹೆಜ್ಜೆ ಕುಣಿತ, ಆಟಿಕಳಂಜ, ಕುಡಬಿ ಕುಣಿತ, ಕೊರಗ ತನಿಯ, ಜುಮಾದಿ ನೇಮ, ನಲ್ಕೆಯವರ ಕುಣಿತ, ನಾಗಮಂಡಲ, ಭೂತಕೋಲ, ಪಂಜುರ್ಲಿ ಕೋಲ, ಪಾಣಾರರ ಡಕ್ಕೆ ಬಲಿ, ಭೂತ ನೃತ್ಯ, ಸಿಂಹನೃತ್ಯ, ಮರಗಾಲು ಕುಣಿತ, ಮರಾಠಿ ನಾಯಕರ ಹೋಳಿಕುಣಿತ ಉಮ್ಮತ್ತಾಟ್, ಬೊಳಕಾಟ್, ಎರವರ ಕುಣಿತ, ಚಿಟ್ಟೆ ನೃತ್ಯ, ಗೊಂಡರ ಕುಣಿತ, ಡಪ್ಪು ರಾವತಿ, ಬಾಣದೇವರ ಕುಣಿತ ಮೊದಲಾದ ಜನಪದ ಕುಣಿತಗಳು-ಅಸಾದಿ ಮೇಳ, ಚೌಡಿಕೆ ಮೇಳ, ಜೋಗ್ತೇರ ಮೇಳ, ಗೀಗೀ ಮೇಳ, ಗೊಂದಲಿಗರ ಮೇಳ, ಜಾತಗಾರ ಮೇಳ, ತಂಬೂರಿ ಮೇಳ ಮೊದಲಾದ ಕಾವ್ಯ ಮೇಳಗಳು, ಕೊಂಬು-ಕಹಳೆ, ಹರೆ, ದೋಣು, ತಮಟೆ ನಗಾರಿ, ಸಮ್ಮಾಳ ತಿತ್ತಿವಾದ್ಯ, ಚಕ್ರಾದಿ ಬಳೆ, ಕರಟವಾದ್ಯ, ಪುಂಗಿ, ಕಾರಂಜಿ, ಮುಖವೀಣೆ, ಗಮಟೆ ಪಾಂಗ್ ಹಲಗೆ ಮೇಳ, ಚಿಟ್‌ಮೇಳ, ದುಡಿಮೇಳ ಜಗ್ಗಲಿಗೆ ಮೇಳ, ಬಣೆಹಲಗೆ ಮಜಲು, ಕರಡೆ

ಮಜಲು, ಡೊಳ್ಳು ಮೇಳಗಳಂತಹ ವಾದ್ಯಮೇಳಗಳು. ಜನಪದ ಕ್ರೀಡೆ. ಕಸರತ್ತುಗಳಾದ ಕೋಳಿ ಅಂಕ, ಟಗರಿನ ಕಾಳಗ, ಎತ್ತಿನಗಾಡಿ ಓಟದ ಸ್ಪರ್ಧೆ. ಜೋಕಾಲಿ ಆಟ. ಗುಡುಗುಡು ಆಟ. ಕಪ್ಪೆಚೆಂಡಾಟ. ಚಿನ್ನಿದಾಂಡು, ಬುಗುರಿ ಕುಸ್ತಿ, ಕತ್ತಿವರಸೆ. ದೊಣ್ಣೆವರಸೆ. ಪಂಜಿನ ವರಸೆ. ಬೆಂಕಿವರಸೆ, ಭರ್ಜಿವರಸೆ, ಬಿಜಲಿ ವರಸೆ. ಗುಂಡೆತ್ತುವುದು, ಕಣ್ಣಿನಿಂದ ಸೂಜಿ ತೆಗೆಯುವುದು. ತಲೆಯಮೇಲೆ ತೆಂಗಿನಕಾಯಿ ಒಡೆಯುವುದು. ತೊಡೆಯ ಮೇಲೆ ನಿಂಬೆಹಣ್ಣು, ಬಾಳೆಹಣ್ಣು ಮೊದಲಾದವನ್ನು ಕತ್ತರಿಸುವುದು. ಬಾಳೆ ಕಂಬದ ಮೇಲೆ ನಿಂತು ಅದನ್ನೇ ಕಡಿಯುವುದು ಅಲ್ಲದೆ ಹಳ್ಳಿಯ ಜನರ ದಿನನಿತ್ಯದ ಬದುಕಿನ ಬಗ್ಗೆ. ಹಳ್ಳಿಯ ಕಸುಬುದಾರರಾದ ಕುಂಬಾರ, ಕಮ್ಮಾರ. ಗಾಣಿಗ. ನೇಕಾರರ ಬಗ್ಗೆ ಇಲಿಗರು ಹಾವು ಗೊಲ್ಲರು. ಹಕ್ಕಿ ಪಿಕ್ಕಿಗಳು, ದೀವರು, ಲಂಬಾಣಿಗಳು, ಕುಡುಬಿಗಳು ಸಿದ್ದಿಗಳು ಹಸಲರು ಮೊದಲಾದ ವಿಶಿಷ್ಟ ಜನಾಂಗದವರ ಬಗ್ಗೆ 500 ಗಂಟೆಗಳಷ್ಟು ವಿ. ಹೆಚ್. ಎಸ್ ಮತ್ತು ಯು-ಮ್ಯಾಟಿಕ್ ವಿಡಿಯೋ ಚಿತ್ರೀಕರಣ ಮಾಡಿಕೊಂಡಿರುವ ಪರಿಷತ್ತು ಸುಸಜ್ಜಿತ ಹವಾನಿಯಂತ್ರಿತ ಸ್ಟುಡಿಯೋ ಒಂದನ್ನು ಜಾನಪದ ಲೋಕದಲ್ಲಿ ಸ್ಥಾಪಿಸುವ ಯತ್ನದಲ್ಲಿದೆ.

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಾವಿರಕ್ಕೂ ಹೆಚ್ಚು ವರ್ಣಪಾರದರ್ಶಿಕೆಗಳೂ ಹತ್ತು ಸಾವಿರಕ್ಕೂ ಮೇಲ್ಪಟ್ಟು ವರ್ಣ ಹಾಗೂ ಕಪ್ಪು ಬಿಳುಪು ಛಾಯಾಚಿತ್ರಗಳೂ ಇವೆ.

ಇದುವರೆಗೂ ಐದುಸಾವಿರಕ್ಕೂ ಹೆಚ್ಚು ವೈವಿಧ್ಯಮಯ ಗ್ರಾಮೀಣ ವಸ್ತುಗಳನ್ನು ಸಂಗ್ರಹಿಸಲಾಗಿದ್ದು ಇದನ್ನು ಐದು ಮ್ಯೂಸಿಯಂಗಳಲ್ಲಿ ಜೋಡಿಸಲಾಗಿದೆ.

ಆರು ಅಡಿ ಅಗಲದ ವಿಶಿಷ್ಟವಾದ ಎತ್ತು ಅಥವಾ ಕೋಣಗಳನ್ನು ಕಟ್ಟಿ ಬೀಸಬೇಕಾದ ಬೀಸುವ ಕಲ್ಲನ್ನು ಹೊಂದಿಕೊಂಡಂತೆ ಇರುವ **ಲೋಕ ಮಾತಾಮಂದಿರ** ಗ್ರಾಮೀಣ ಮಹಿಳೆಯ ಕುಶಲ ಕಲೆ ಹಾಗೂ ಮನೆ ಬಳಕೆಯ ವಸ್ತುಗಳ ಒಂದು ವಿಶಿಷ್ಟ ಸಂಗ್ರಹಾಲಯ. ರಾಜಾಸ್ತಾನದ ಮಧುಬನಿ ಕಲೆಗೆ ಸರಿಸಾಟಿಯಾಗಿ ನಿಲ್ಲುವ ಗೋಡೆ ಚಿತ್ತಾರಗಳು. ಹಸೆ ಚಿತ್ತಾರಗಳು. ಮರದಿಂದ ಮಾಡಿದ ಸೌಟು. ಅನ್ನದಕ್ಕೆ, ಒನಕೆ ಹುಟ್ಟುಗಳು, ಕಡಗೋಲುಗಳು. ಖರ್ಚಿಕಾಯಿ ಮಣೆ, ಬ್ಯಾಂಗೇದ ಮಣೆ. ಲಟ್ಟಣಿಗೆಗಳು, ಸ್ಯಾವಿಗೆ ಒರಳು. ಚಕ್ಕಲಿ ಒರಳು, ಕೊಣವಿಗೆಗಳು, ಮಣ್ಣಿನಿಂದ ಮಾಡಿದ ಎತ್ರಾಣಿ, ತುಪ್ಪದ ಮಿಳ್ಳೆ, ಕುಡಿಕೆಗಳು-ಪಡ್ಡಿನ ಹಂಚು, ಹೂಜಿ. ಇದ್ದಿಲು ಒಲೆ, ಒನಕೆ, ಕಲ್ಲು ಬಾನಿ. ಧೂಪಾರತಿ. ಗಂಟೆಗಳು. ನೀರು ದೀಪ. ಗೋಲಕಗಳು, ತೊಟ್ಟಿಲುಗಳು. ಉದ್ದವಾಡೆ, ಬುಡ್ಡುವಾಡೆ. ದುಂಡುವಾಡೆಗಳು. ಬಾನದ ಸಾಲು. ಕುಕ್ಕೆ, ಕುಂದಣಿಗೆ, ಈಳಿಗೆಮಣೆ. ನೆಲುವು ಹಿಟ್ಟು. ಗೆರಸೆ. ಗೇರು ಪೆಟ್ಟಿ, ಬುಜ್ಜಣಿಗೆ, ಜರಡಿ. ಹೂವಿನ ಚೊಟ್ಟೆ, ಇಲಿಬೋನು. ಗೊರಬು ಗುಡುಬು. ಎಸಮುಚ್ಚ, ಕಡಕಿನ ಮಣೆ. ಮರದ ಪಿಡಾರಿಗಳೇ ಅಲ್ಲದೆ ಬಣ್ಣ ಬಣ್ಣದ ಕಣ್ತುಂಬುವ ರಂಗೋಲಿ ಚಿತ್ತಾರ. ಗೂಡೆ ಚಿತ್ತಾರಗಳು ಲೋಕ ಮಾತಾ ಮಂದಿರವನ್ನಲಂಕರಿಸಿದೆ.

ಜನಪದರ ಬಾಳು-ಬದುಕಿನೊಡನೆ ಬೆರೆತುಹೋದ ಹೆಚ್. ಎಲ್. ನಾಗೇಗೌಡರ ಬಾಳಿನ ಕತೆಯನ್ನು ಸಾರುವ ಛಾಯಾಚಿತ್ರಗಳು, ಧ್ವನಿಸುರುಳಿಗಳು, ಸ್ಲೈಡ್‌ಗಳು, ವಿಡಿಯೋ ಕ್ಯಾಸೆಟ್‌ಗಳು, ಪುಸ್ತಕಗಳು ಹಾಗೂ ವಸ್ತುಗಳನ್ನೊಳಗೊಂಡದ್ದು 'ಚಿತ್ರಕುಟೀರ'.

ಕಾಲು ಶತಮಾನಕ್ಕೂ ಹೆಚ್ಚು ಕಾಲದಿಂದ ಸಂಗ್ರಹಿಸಲಾದ ಸಾವಿರಾರು ವಸ್ತುಗಳ ಪ್ರದರ್ಶನಾಲಯ ಎರಡು ಅಂತಸ್ತಿನ 'ಲೋಹಮಹಲ್', ಮೂಡಲಪಾಯ ಯಕ್ಷಗಾನದ ವೇಷಗಳಾದ ಲಂಕಿಣಿ, ಆಂಜನೇಯ, ದಾಸಯ್ಯ, ಗಾರುಡಿ ಗೊಂಬೆಗಳು, ಸೋಮಗಳು, ಕಿನ್ನರಿ ಜೋಗಿ, ಗೊರವಯ್ಯ ದೊಡ್ಡಾಟದ ವೇಷಗಳಾದ ರಾವಣ, ರಾಜವೇಷ, ವಿವಿಧ ಪ್ರದೇಶಗಳಲ್ಲಿ ಮದುವೆಯ ಸಂದರ್ಭದಲ್ಲಿ ಬಳಸುವ ಬಾಸಿಂಗಗಳು, ಅರಣಿ, ಬಳುವಳಿ ಸಟಗ, ಕಠಾರಿ, ಹಸೆಮಣೆಗಳು, ಕಳಸದ ಮಣೆಗಳು, ತೇವಟಿಗೆ ಮಣೆಗಳು, ಅಲ್ಲದೆ ಬಡಗಿಯ ಉಪಕರಣಗಳಾದ ಭೈರಿಗೆಗಳು, ತಂತಿನುಲಿಕೆ, ಅರ, ತಿರುಪುಳಿ, ಉಳಿ, ಕೈಗರಗಸಗಳು, ತೋಪಡ, ಊಸಿ, ಗೀರುಪಟ್ಟಿ, ಮೂಲೆ ಮಟ್ಟ, ಸುತ್ತಿಗೆಗಳು, ಬೇಸಾಯದ ಸಲಕರಣೆಗಳಾದ ಕುಡುಗೋಲುಗಳು, ಕೀರೆ ಸೊಪ್ಪು ಕುಡ್ಲುಗಳು, ಅಕ್ರಾಯಿ, ಚಕ್ಕಾರಿ, ಕಳಕ್ಕೆ, ವರಾರಿ, ಸಕ್ರೆಗುತ್ತಿ, ಬೆಲ್ಲದ ಅಚ್ಚುಮಣೆ, ಕೂರಿಗೆ ಬಟ್ಟಲು, ರಾಶಿಮುದ್ರೆಗಳು, ಟೆರ್ರಕೋಟಾದ ಬುದ್ಧ, ದೀಪದ ಮಲ್ಲಿ, ಕಾಲ್ಕಿಡಗ ತೊಡುತ್ತಿರುವ ಹೆಣ್ಣು, ಡೋಲು ವಾದ್ಯಗಾರ, ಹಾವಾಡಿಗ, ಗೃಹಾಲಂಕಾರ ವಸ್ತುಗಳು, ಗಂಡಭೇರುಂಡ, ಕಾಮಧೇನು, ಕುದುರೆ, ಆನೆ, ಬಸವ, ಮಕರ ವ್ಯಾಳಿ ಮೊದಲಾದ ಪೌರಾಣಿಕ ಪ್ರಾಣಿಗಳು, ವೆಕ್ಕೆಕಟ್ಟೆಯ ಭೂತಾರಾಧನೆಯ ವಿಗ್ರಹಗಳ ಮಾದರಿಗಳು, ಬಂಡೆಗುಡ್ಲು, ಹೊಡೆಗತ್ತಿ, ಚೂರಿ, ಗಂಡುಗೊಡಲಿ, ಹಾವು ಭರ್ಜಿ, ಕಠಾರಿ ಮೊದಲಾದ ಆಯುಧಗಳು, ಕೌದಿ, ತೋರಣ, ದುಬಟಿ ಮೊದಲಾದ ನೆಯ್ಗೆಗಳು, ಮಣ್ಣು ಮತ್ತು ಓತ್ತಾಳೆಯಿಂದ ಕಲಾತ್ಮಕವಾಗಿ ಮಾಡಿದ ದೀಪ ಧೂಪಗಳು, ವಿಭೂತಿ ಭರಣಿಗಳು, ಕುಂಕುಮದ ಭರಣಿಗಳು, ಕೂರ್ಮಾರತಿ, ಮುತ್ತಿನಾರತಿ, ಪಂಚಾರತಿಗಳು, ದೀಪಸ್ತಂಭಗಳು, ಮುಳ್ಳಾವಿಗೆಗಳು, ತೂಕ ಮತ್ತು ಅಳತೆ ಸಾಧನಗಳಾದ ಕೊಳಗ, ಸಿದ್ದೆ, ಹಾಸೆ, ತೂಕದಕಲ್ಲು, ಕುರಿಬಂಡ ಮುಂತಾದ ನೂರಾರು ವಸ್ತುಗಳು ನೆಲ ಅಂತಸ್ತಿನಲ್ಲಿದ್ದರೆ ಕಿಳ್ಳೆಕ್ಯಾತರ ಆಟವೆನಿಸಿಕೊಂಡ ತೊಗಲು ಗೊಂಬೆಗಳು ಮೊದಲ ಮಹಡಿಯಲ್ಲಿವೆ. ನಾಗಮಂಗಲ, ಬಿಜಾಪುರ, ಬಳ್ಳಾರಿ ಮೊದಲಾದ ಭಾಗಗಳಿಂದ ಸಂಗ್ರಹಿಸಲ್ಪಟ್ಟ ಇವು ಪ್ರಾದೇಶಿಕ ಭೇದಗಳ ತುಲನಾತ್ಮಕ ಅಧ್ಯಯನಕ್ಕೂ ಸಹಕಾರಿ. ಬಳ್ಳಾರಿ ಭಾಗದ ಗೊಂಬೆಗಳು ಆಳೆತ್ತರವಿದ್ದರೆ ನಾಗಮಂಗಲ ಭಾಗದವು ಎರಡು ಅಡಿ ಮಾತ್ರ ಇವೆ.

ಧಾರವಾಡ ಭಾಗದ ಸೂತ್ರದ ಗೊಂಬೆಗಳು ದೊಡ್ಡಾಟದ ಪಾತ್ರಗಳಂತೆಯೂ ದಕ್ಷಿಣ ಕನ್ನಡ ಭಾಗದವು ಬಡಗುತಿಟ್ಟುಯಕ್ಷಗಾನದ ಪಾತ್ರಗಳಂತೆಯೂ ಇರುವುದನ್ನು ಇಲ್ಲಿ ಗಮನಿಸಬಹುದು. ಅಲ್ಲದೆ ಬೆಂಗಳೂರು ಭಾಗದ ಪುತ್ಥಳಿ ಗೊಂಬೆಗಳು (ಸಲಾಕೆಗೊಂಬೆಗಳು), ಹಾಲಕ್ಕಿ ಸುಗ್ಗಿ ಕುಣಿತದ ವೇಷಗಾರ, ಲಂಬಾಣಿ ಹೆಂಗಸಿನ ಚಿತ್ರ, ಬಡಗುತಿಟ್ಟು ಯಕ್ಷಗಾನದ ವೇಷಗಳು, ತೆಂಕತಿಟ್ಟು ಯಕ್ಷಗಾನದ ವೇಷಗಳು, ಈಕನಾರ್, ಡೋಲು, ಮದ್ದಳೆ, ಗುಮಟೆ, ಚಂಡೆ ಮೃದಂಗ, ಡಮರುಗ, ಡಂಕ(ಟಕೂರಿ) ಚೌಗದ, ತಾರೆ, ದಪ್ಪು, ಸೂರ್ಯ ವಾದ್ಯ ಚಂದ್ರವಾದ್ಯ, ಬುಡುಬುಡಿಕೆ, ಡೊಳ್ಳು, ನಗಾರಿ ಮೊದಲಾದ

ಚರ್ಮವಾದ್ಯಗಳೂ, ಅನ್ನರಿ, ಏಕತಾರಿ, ತಂಬೂರಿ, ಚೌಡಿಕೆ, ಬಾರಿಕೆ, ತುಂತುಣೆ ಮೊದಲಾದ ತಂತಿ ವಾದ್ಯಗಳೂ, ತಿತ್ತಿ ಬೇಟೆ ಅಂಡೆ, ಸಿಂಗನಾದ, ತೋಡಿ, ಪುಂಗಿ, ಬಾನ್ಸುರಿ, ಶೃತಿ, ಮೌತಾರಿ, ಮುಖವೀಣೆ, ಭಾಗವಂತಿಕೆ ತಾಳ, ಕೇಳಿಕೆ ತಾಳ, ದೊಡ್ಡಾಟದ ತಾಳ, ಚಪ್ಪಟೆ ತಾಳ, ಚಕ್ರ ತಾಳ, ಹೆಳವರ ಗಂಟೆ, ಚಿಟಿಕ, ಚಕ್ಕಕೋಲು, ಗೆಜ್ಜೆ ಕೋಲು, ಚಕ್ರಾಟದ ಕೋಲು, ಕಂಸಾಳೆ, ಗಿಡಬುಡಿಕೆ, ಕಾಲ್ಕಡಗ ಮೊದಲಾದ ತಾಳವಾದ್ಯಗಳು ಆಕರ್ಷಕವಾದ ರೀತಿಯಲ್ಲಿ ಜೋಡಿಸಲ್ಪಟ್ಟಿವೆ.

ಮಣಿ, ಲಕ್ಕಿ ಹಾಗೂ ಹೊಳೆಯುವ ಬಣ್ಣ ಬಣ್ಣದ ಬಿಲ್ಲೆಗಳಿಂದ ಅಲಂಕರಿಸಲ್ಪಟ್ಟ ಚಿತ್ರಪಟಗಳು, ನೈಜತೆಗಾಗಿ ಬಟ್ಟೆಗಳನ್ನೇ ಹೊಲಿದು ಸೇರಿಸಿದ ದೇವತೆಗಳ ಫೋಟೋಗಳು ಅಲ್ಲದೆ ಜನಪದರಲ್ಲಿ ರೂಢಿಯಲ್ಲಿದ್ದು ಈಗ ಬಳಕೆ ತಪ್ಪುತ್ತಿರುವ ಚನ್ನಮಣೆ, ಗುಲಗಂಜಿ ಮಣೆ, ತಾಲ್ಲದ ಮಣೆ, ಹುಲಿಕುರಿ ಆಟದ ಮಣೆಗಳದೇ ಒಂದು ಸುಂದರ ಸಂಗ್ರಹ.

ಅಲ್ಲದೆ ತಿಮ್ಮಣ್ಣನಾಯಕ, ನ್ಯಾಸ್ ನಾಯಕ, ಬೊಬ್ಬರ್ಯ, ಜಟ್ಟಿಗ, ಚಿಕ್ಕುಯಕ್ಷಿ ಮೊದಲಾದವರ ಆಳೆತ್ತರದ ಮರದ ವಿಗ್ರಹಗಳ ಅಪೂರ್ವ ಸಂಗ್ರಹವೂ ಇಲ್ಲಿ ಇದೆ. ಇದರೊಂದಿಗಿರುವ ಷಣ್ಮುಖ, ಗಣಪತಿ, ನಂದಿ, ಭೃಂಗಿ, ರಾವಣ ಮತ್ತು ಋಷಿಗಳ ವಿಗ್ರಹಗಳೂ ಅಪರೂಪದವು.

ಹಿಂದಿನ ಕಾಲದ ಹೆಂಗಸರು ಧರಿಸುತ್ತಿದ್ದ ಆಭರಣಗಳಾದ ಜಾಗಟೊಳಿ ಬಟ್ಟಲುತಾಳಿ, ಒತ್ತುಕಾಸಿನಸರ, ದೊಡ್ಡಗುಂಡಿನ ಸರ, ಗೆಜ್ಜೆಡಾಬು, ಕೇದಿಗೆ, ಲಕ್ಷ್ಮಿನಾಗರ, ಅವಲಕ್ಕಿಸರ, ಸೇವಂತಿಗೆ, ಓಲೆ ಜುಮುಕಿ, ನೆಲ್ಲಿಕಾಯಿಗುಂಡಿನ ಸರ, ಡಾಬು, ಕಾಲುಜೈನು, ಸಿಂಹದ ಮುರಾವು, ಕುಪ್ಪಗೆ, ಗೊಲ್ಲುಗಡಗ, ಜೀರಾ ಪಟ್ಟಿದಾರಗಳು, ಕೈಕಡಗ, ಗೀರುಬಳೆಗಳ ಪ್ರದರ್ಶನ ವಿನ್ಯಾಸ ಮನಮೋಹಕವಾಗಿದೆ.

ರಾಮಾಯಣ ಮತ್ತು ದಶಾವತಾರವನ್ನು ಚಿತ್ರಿಸಿರುವ ಬೇರೆ ಬೇರೆ ಕಾಲದ ಬೇರೆ ಬೇರೆ ರಾಜ್ಯದ ಗಂಜೀಫಾಗಳು, ನಾಣ್ಯಗಳು, ದಸರಾ ಗೊಂಬೆಗಳು, ಚಂದನದ ಗೊಂಬೆಗಳು, ಮುಚ್ಚಿದ ಬಾಟಲಿಯೊಳಗಿನ ಮಂಚ-ಕುರಿಗೆಯ ಮಾದರಿಗಳು, ವಿವಿಧ ವಿನ್ಯಾಸದ ಕುಟ್ಟಾಣಿಗಳು, ತಾಮ್ರ ಪತ್ರಗಳು, ಓಲೆಗರಿ ಕಡತಗಳು, ಹಳೆಯ ಹಸ್ತಪ್ರತಿಗಳು, ವ್ಯಾಸಪೀಠ, ಠಸ್ಸೆ, ಹಣ-ಪತ್ರಗಳನ್ನಿಡುವ ಬಿದಿರಂಡೆ-ಲೋಕಮಹಲ್ ತನ್ನುದರಲ್ಲಿ ಅಡಗಿಸಿಕೊಂಡಿರುವ ಅಮೂಲ್ಯ ಸಾಮಗ್ರಿಗಳ ಪಟ್ಟಿ ಮಾಡುವುದು ಅಸಾಧ್ಯದ ಮಾತೇ ಸರಿ.

ನಾಡು ಮತ್ತು ನಾಡವರ ರಕ್ಷಣೆಗಾಗಿ, ಪಾತಿವ್ರತ್ಯದ ಹಿರಿಮೆಗಾಗಿ ಜೀವತೆತ್ತ ವೀರಯೋಧರ ಹಾಗೂ ವನಿತೆಯರ ಸ್ಮಾರಕಗಳಾದ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳ ಹೊರಾಂಗಣ ಮ್ಯೂಸಿಯಂ ಶಿಲ್ಪಮಾಳ, ಪಾರ್ಶ್ವನಾಥ ವಿಗ್ರಹ, ಕಾಳಿವಿಗ್ರಹ, 1700ರ ಕಾಲಕ್ಕೆ ಸೇರಿದ ಶಾಸನ, ದತ್ತಿಕಲ್ಲು ಮೊದಲಾದವನ್ನು ಶಿಲ್ಪಮಾಳದಲ್ಲಿ ಪ್ರದರ್ಶಿಸಲಾಗಿದೆ. ಇವಲ್ಲದೆ ಬೃಹತ್ ಪ್ರಮಾಣದ ಕಲ್ಲಿನ ಮರಿಗೆಗಳು, ಫಿರಂಗಿ, ದೇವಾಲಯದ ಕೆರೆಯ ಶಿಥಿಲಗೊಂಡ ರಥದ ಭಾಗಗಳು, ಬಾನಂದೂರಿನ ದೇವಾಲಯದ ಒಹುದೊಡ್ಡ ಮರದ ಕಂಭಗಳು, ಕಲ್ಮಗ್ರಾಮದ ನೀರು ಬಡಿ ಬಯಲು ವಸ್ತುಸಂಗ್ರಹಾಲಯದ ಪ್ರಮುಖ ಆಕರ್ಷಣೆಗಳು.

ಕೈಗಾರಿಕಾ ಕ್ರಾಂತಿ ಹಾಗೂ ವೇಗವಾಗಿ ಬದಲಾಗುತ್ತಿರುವ ಯಾಂತ್ರೀಕರಣದ ಫಲವಾಗಿ ಕಣ್ಮರೆಯಾಗುತ್ತಿರುವ ಬಡಗಿಗಳು, ಕುಂಬಾರರು, ಕಮ್ಮಾರರು, ಗಾಣಿಗರು ಮೊದಲಾದ ಆಯಗಾರರ ಕಸುಬಿಗೆ ಸಂಬಂಧಿಸಿದ ಎಲ್ಲ ಸಾಮಾನು ಸಲಕರಣೆಗಳನ್ನು ಜೋಡಿಸಿದ ಬಯಲು ಸಂಗ್ರಹಾಲಯ 'ಆಯಗಾರರ ಮಾಳ.'

ಇವಿಷ್ಟು ಜಾನಪದ ಲೋಕದ ಮುಖ್ಯ ಅಂಗಗಳು. ಆದರೆ ಲೋಕದ ಆಕರ್ಷಣೆಯನ್ನು ಇನ್ನೂ ಹೆಚ್ಚಿಸುವ ಹತ್ತು ಹಲವು ಅಂಶಗಳು ಜಾನಪದ ಲೋಕದಲ್ಲಿ ನೆಲೆಯಾಗಿವೆ. ಬಹು ದೂರದಿಂದಲೇ ಗೋಚರಿಸುವ ಹಿತ್ತಾಳೆಯ ನಂದಿಧ್ವಜಗಳು, ಹರಿಗೆಗಳ ವಿಶಿಷ್ಟವಿನ್ಯಾಸದೊಂದಿಗೆರೂಪುಗೊಂಡ ಮಹಾದ್ವಾರ, ಮುಖ್ಯದ್ವಾರದಿಂದ ಅರ್ಧ ಫರ್ಲಾಂಗ್ ಮುನ್ನಡೆದರೆ ಕಾಣುವ 'ಲೋಕದ ಲಾಂಛನ-ರಾಗಿಕಲ್ಲು ಬೀಸುವ ಮಹಿಳೆಯ ಚಿತ್ರ, ನೀರು ತುಂಬಿರುವಾಗ ದೋಣಿ ವಿಹಾರದ ಸೌಲಭ್ಯವುಳ್ಳ ಲೋಕಸರೋವರವೆಂಬ ಕೆರೆ, ಕಾಡಿನ ಅನುಭವವನ್ನು ಸೃಷ್ಟಿಸುವ ಸಾವಿರಾರು ಗಿಡಮರಗಳು, ಜನಪದ ವೈದ್ಯದಲ್ಲಿ ಬಳಸಲಾಗುವ ನೂರಾರು ಗಿಡಮೂಲಿಕೆಗಳು, ಮಕ್ಕಳಿಗಾಗಿ ಗಿರಿಗಿಟ್ಲೆ, ಆಕಾಶರಾಟೆಗಳು, ಲೋಕರುಚಿ ಉಪಹಾರ ಮಂದಿರ, ಹಾಲು ಮತ್ತು ಹಣ್ಣು ಮಾರಾಟ ಮಳಿಗೆಗಳು, ವಿಶ್ರಾಂತಿಗಾಗಿ ಅಲ್ಲಲ್ಲಿ ಕುಟೀರಗಳು ಮೊದಲಾದವನ್ನು ಹೆಸರಿಸಬಹುದು.

ಪ್ರತಿ ವಾರಾಂತ್ಯದಲ್ಲಿಯೂ ಕಾರ್ಯಕ್ರಮ ನೀಡುವ ಹಾಗೂ ಜನಪದ ಕಲೆಗಳ ಶಿಕ್ಷಣ ಮತ್ತು ಪ್ರದರ್ಶನ ನೀಡುವ ಮೂಲಕ ಪ್ರಸಾರ, ಪ್ರಚಾರ ನೀಡುವ ಉದ್ದೇಶ ಹೊಂದಿರುವ ಪರಿಷತ್ತು ಕಲಾವಿದರ ಊಟ ವಸತಿಗಾಗಿ 110x100 ಅಡಿ ಉದ್ದಗಲದ ತೊಟ್ಟಿ ಮನೆ ವಿನ್ಯಾಸದಲ್ಲಿ ಕಟ್ಟಲ್ಪಟ್ಟ ಕಟ್ಟಡ ದೊಡ್ಡಮನೆ, ಶಿಬಿರಗಳು, ಕಮ್ಮಟಗಳು, ಮದುವೆ ಮೊದಲಾದ ಸಂದರ್ಭಗಳಲ್ಲಿ ಬಳಸಿಕೊಳ್ಳಲು ಅತ್ಯಂತ ಅನುಕೂಲವಾಗುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ.

70X45 ಅಡಿ ವಿಸ್ತಾರದ ರಂಗಸ್ಥಳವಿದ್ದು 800 ಜನ ಕುಳಿತು ನೋಡಬಹುದಾದ, ರಂಗ ಪರಿಕರ ಕೋಠಿಯ ಕಟ್ಟಡ ಹಾಗೂ ಬಣ್ಣದ ಮನೆ ಹೊಂದಿರುವ ರಂಗ ಮಂದಿರ ಮತ್ತೊಂದು ಮಂದಿರ, ಸಭ್ಯದ ಆಡಳಿತ ಕಛೇರಿಯಾದ ಲೋಕ ನಿವಾಸ ಇನ್ನಿತರ ಆಕರ್ಷಣೆಗಳು.

ಸ್ಥಾಪಿತವಾದ ಮರುವರ್ಷವೇ ಅಧ್ಯಯನಾಸಕ್ತರಿಗೆ ವೇದಿಕೆಯೊಂದನ್ನು ಒದಗಿಸುವ ಉದ್ದೇಶದಿಂದ ಜಾನಪದ ಜಗತ್ತು ಪತ್ರಿಕೆಯನ್ನು ಆರಂಭಿಸಿದ ಸಂಸ್ಥೆ ಕಳೆದ 14 ವರ್ಷಗಳಿಂದಲೂ ಗೀತೆ, ಕಾವ್ಯ, ಲಾವಣಿ, ಗಾದೆ, ಒಗಟು, ಮಕ್ಕಳ ಪದಗಳು, ಕಥೆಗಳು, ಐತಿಹ್ಯ ಪುರಾಣಗಳು, ಚಮತ್ಕಾರದ ಪ್ರಶ್ನೆಗಳು, ಜನಪದ ಸಂಗೀತ, ಕಲೆ, ಕುಣಿತ, ಮೇಳಗಳು ರಂಗೋಲೆ, ಹಚ್ಚೆ, ಗ್ರಾಮದೇವತೆಗಳು, ಜಾತ್ರೆ, ಆಚರಣೆಗಳು, ನಂಬಿಕೆ ಸಂಪ್ರದಾಯಗಳು, ಜನಾಂಗಗಳು, ವ್ಯವಸಾಯ, ಪ್ರಾಣಿ, ಪಕ್ಷಿ, ಸಸ್ಯ, ಅಡುಗೆ, ವೈದ್ಯ, ಭಾಷೆ ಮೊದಲಾದ ಜಾನಪದದ ಸಹಸ್ರ ಮುಖಗಳನ್ನು ಪರಿಚಯಿಸುವ ವಿವರಣಾತ್ಮಕ ಲೇಖನಗಳನ್ನು ಪ್ರಕಟಿಸಿ ತುಲನಾತ್ಮಕ ಅಧ್ಯಯನಕ್ಕೆ ಸಹಕಾರಿಯಾಗಿದೆ.

ದೇಶ ವಿದೇಶೀ ಜಾನಪದದ ಬಗ್ಗೆ ಜನಪದ ಕಲಾವಿದರ ಬಗ್ಗೆ ಪರಿಚಯ ಮಾಡಿಕೊಟ್ಟಿದೆ. 550ಕ್ಕೂ ಹೆಚ್ಚು ಮೌಲಿಕ ಲೇಖನಗಳನ್ನೂ 300 ಕ್ಕೂ ಹೆಚ್ಚು ಲೇಖಕರನ್ನು ಬೆಳಕಿಗೆ ತಂದಿರುವ ಜಾನಪದ ಜಗತ್ತು ಪತ್ರಿಕೆ ಜಾನಪದ ಲೋಕದ ದನಿಯಾಗಿದೆ.

ಜಾನಪದಕ್ಕೆ ಸಂಬಂಧಿಸಿದ 1,200ಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಗ್ರಂಥ ಭಂಡಾರಕ್ಕೆ ಪ್ರಪಂಚದ ಎಲ್ಲ ಭಾಗಗಳಿಂದಲೂ ಪುಸ್ತಕಗಳನ್ನು ನಿಯತಕಾಲಿಕಗಳನ್ನು ತರಿಸಿಕೊಂಡು ಅಧ್ಯಯನ ಹಾಗೂ ಸಂಶೋಧನಾ ಕೇಂದ್ರವಾಗಿ ಸುಸಜ್ಜಿತ ರೂಪಕೊಡುವ ಪ್ರಯತ್ನ ನಡೆದಿದೆ.

ಕಲೆ ಹಾಗೂ ಸಾಹಿತ್ಯವನ್ನು ಸಂಗ್ರಹಿಸಿಡುವುದರಿಂದಷ್ಟೇ ಸಂಸ್ಕೃತಿಯ ಸಂವರ್ಧನೆಯಾಗುವುದಿಲ್ಲ. ಅವು ಜೀವಂತವಾಗಿ ಉಳಿಯಬೇಕಾದರೆ ಉತ್ತಮ ರೀತಿಯ ಪ್ರಚಾರ ಬೇಕು. ಪ್ರಸಾರ ಬೇಕು. ಅದಕ್ಕೆಂದೇ ಪರಿಷತ್ತು 'ಸಿರಿಗಂಧ' ಎಂಬ ವಿಶಿಷ್ಟ ಧಾರಾವಾಹಿಯನ್ನು ದೂರದರ್ಶನದಲ್ಲಿ ಬಿತ್ತರಿಸುತ್ತಿದೆ. ಅಲ್ಲದೆ ರಂಗಕಲೆ ಹಾಗೂ ಜನಪದ ಕಲೆಗಳ ಶಿಕ್ಷಣ ಕೇಂದ್ರವೊಂದನ್ನು ಜಾನಪದ ಲೋಕದಲ್ಲಿ ತೆರೆಯುತ್ತಿದೆ. 'ಜಾನಪದ ತಿರುಗಾಟ'ವೆಂಬ ವಿಶಿಷ್ಟ ಯೋಜನೆಯೊಂದನ್ನು ಹಮ್ಮಿಕೊಂಡು ಶಾಲೆ ಕಾಲೇಜುಗಳನ್ನು ಕೇಂದ್ರವಾಗಿರಿಸಿಕೊಂಡು ಜನಪದ ಕಲೆಗಳ ಪ್ರದರ್ಶನ ಹಾಗೂ ಪ್ರಚಾರ ಭಾಷಣಗಳನ್ನು ಏರ್ಪಡಿಸುವ ಉದ್ದೇಶ ಹೊಂದಿದೆ.

ಗ್ರಾಮದೇವತೆ ಮಾರಮ್ಮ, ಮೈಲಾರಲಿಂಗನ ಕಾವ್ಯ, ಹಾಡಾನ ಬನ್ನಿ ದನಿಯೆತ್ತಿ, ಹಾವು ತುಳಿದೇನ ಮೊದಲಾದ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದು ಹಲವಾರು ಅಚ್ಚಿಗೆ ಸಿದ್ಧವಾಗಿವೆ. ಪರಿಷತ್ತಿನ ಭಂಡಾರದಲ್ಲಿರುವ ಎಲ್ಲ ಧ್ವನಿಮುದ್ರಿಕೆಗಳು, ವಿಡಿಯೋ ಕ್ಯಾಸೆಟ್‌ಗಳು, ಲೋಕದ ಸಂಗ್ರಹಾಲಯಕ್ಕಾಗಿ ಸಂಗ್ರಹಿಸಿರುವ 5,000 ವಸ್ತುಗಳು 14 ವರ್ಷಗಳಿಂದ ಪ್ರಕಟಿಸುತ್ತಿರುವ ಜಾನಪದ ಜಗತ್ತು ಪತ್ರಿಕೆಯ ಲೇಖನಗಳು ಹಾಗೂ ಎಚ್. ಎಲ್. ನಾಗೇಗೌಡರ ಎಲ್ಲ ಗ್ರಂಥಗಳಿಂದ ಆರಿಸಿದ 50,000ಕ್ಕೂ ಹೆಚ್ಚು ಗ್ರಾಮೀಣ ಪದಗಳ ವಿಶಿಷ್ಟ 'ಕನ್ನಡ ಜಾನಪದ ಕೋಶ' ಪ್ರಕಟಣೆಗೆ ಸಿದ್ಧವಾಗುತ್ತಿದೆ.

ಜಾನಪದ ಲೋಕದ ಬಗ್ಗೆ ಇಷ್ಟೆಲ್ಲಾ ವಿವರಗಳು ಅದರ ಮೊದಲ ಹಂತದ ಚಿತ್ರಣವಷ್ಟೇ ಎಂದರೆ ಅಚ್ಚರಿಯ ಮಾತು. ಲೋಕದ ಬೆಳವಣಿಗೆಯ ಬಗ್ಗೆ ಬೆಟ್ಟದಷ್ಟು ಯೋಜನೆಗಳನ್ನು ಹಮ್ಮಿಕೊಂಡಿರುವ ಅಧ್ಯಕ್ಷ ಶ್ರೀ ಎಚ್. ಎಲ್. ನಾಗೇಗೌಡರ ಅವಿರತಶ್ರಮ, ನಿರಂತರ ತಪಸ್ಸು ಜಾನಪದ ಲೋಕದ ಚೇತನ ಶಕ್ತಿಯಾಗಿದೆ. ತಮ್ಮ ಕನಸಿನ ಕೂಸು ಜಾನಪದ ಲೋಕವನ್ನು ಆದಷ್ಟು ಬೇಗ ಜನತೆಯ ಕೈಗಿಡುವ ಹಂಬಲದಿಂದ 1994ರ ಮಾರ್ಚ್ 12ರಂದು ಔಪಚಾರಿಕವಾಗಿ ಉದ್ಘಾಟಿಸಿದರು.

ಪ್ರಾರಂಭದ ದಿನಗಳಿಂದಲೂ ಸಂಸ್ಥೆಯ ಮೇಲೆ ತಮ್ಮ ಕೃಪಾಶೀರ್ವಾದದ ನೆರಳು ಚೆಲ್ಲಿ ಮಹಾಪೋಷಕರಾಗಿರುವ ಆದಿಚುಂಚನಗಿರಿ ಸಂಸ್ಥಾನದ ಶ್ರೀ ಶ್ರೀ ಶ್ರೀ ಬಾಲ ಗಂಗಾಧರನಾಥ ಮಹಾಸ್ವಾಮಿಗಳು ತಮ್ಮ ಅಮೃತಹಸ್ತದಿಂದ ಮಹಾದ್ವಾರವನ್ನು ತೆರೆಯುವ ಮೂಲಕ ಜಾನಪದ ಲೋಕದ ಹಾದಿಯನ್ನು ಲೋಕದ ಜನತೆಗೆ ತೆರೆದಿಟ್ಟರು.

ಮೂರು ದಿನಗಳ ಹಗಲಿರುಳು ನಡೆದ ಕಾರ್ಯಕ್ರಮಗಳಲ್ಲಿ ನೂರಾರು ಕಲಾವಿದರು ಸಾವಿರಾರು ಪ್ರೇಕ್ಷಕರು ಪಾಲ್ಗೊಂಡು ಲೋಕದ ಪ್ರವೇಶೋತ್ಸವವನ್ನು ಅವಿಸ್ಮರಣೀಯಗೊಳಿಸಿದರು. ಸ್ಮರಣ ಸಂಚಿಕೆ, ಧ್ವನಿಸುರುಳಿಗಳ ಬಿಡುಗಡೆ, 33 ಕ್ಕೂ ಹೆಚ್ಚು ಗ್ರಾಮೀಣ ಕಲಾವಿದೆಯರಿಗೆ ಪ್ರಶಸ್ತಿ ಪತ್ರ, ನಗದು, ಸೀರೆ, ಕಣಗಳೊದಿಗೆ ಪುರಸ್ಕಾರ ಪ್ರದಾನ, 175ಕ್ಕೂ ಹೆಚ್ಚು ಮಹನೀಯರುಗಳಿಗೆ ನೆನಪಿನ ಕಾಣಿಕೆಗಳ ಗೌರವ, ಲೋಕದ ಓತ್ಸೈಷಿಗಳ ಸಮಾವೇಶ, ಚರ್ಮ ವಾದ್ಯಮೇಳ, ತಂತೀ ವಾದ್ಯಮೇಳ, ಜನಪದ ಗೀತ ಗಾಯನ ಮೇಳ, ಕುಣಿತ ಮೇಳಗಳು-ಓಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಪ್ರವೇಶೋತ್ಸವ ಸಂದರ್ಭಕ್ಕಾಗಿ ಹಮ್ಮಿಕೊಳ್ಳಲಾಗಿತ್ತು.

ಒಂದು ಲಕ್ಷ ರೂ. ಗಳ ಮೂಲಧನದೊಂದಿಗೆ ಆರಂಭವಾದ 'ಜಾನಪದ ಲೋಕ' ಇದುವರೆಗು 75 ಲಕ್ಷಕ್ಕೂ ಹೆಚ್ಚು ಹಣವನ್ನು ಸರ್ಕಾರದ ಅನುದಾನ, ವ್ಯಕ್ತಿ ಸಂಘಸಂಸ್ಥೆಗಳ ಕೊಡುಗೆಗಳಿಂದ ತನ್ನದಾಗಿಸಿಕೊಂಡಿದೆ. 'ಲೋಕದ' ಯೋಜನೆ ಪೂರ್ಣಗೊಳ್ಳಲು ಇನ್ನೂ ಹಲವು ಲಕ್ಷಗಳ ಅನಿವಾರ್ಯತೆ ಇದೆ. ದಾನಿಗಳ ನೆರವಿನಿಂದ ದತ್ತಿನಿಧಿ ಯೋಜನೆಗಳ ಮುಖಾಂತರ ತಮ್ಮ ಕನಸುಗಳನ್ನು ಸಾಕಾರಗೊಳಿಸುವ ಹಿರಿಯಾಸೆ ಗೌಡರದು. ವಿಶ್ವದ ಜಾನಪದ ಭೂಪಟದಲ್ಲಿ ಗುರ್ತಿಸಲ್ಪಟ್ಟು, ಎಲ್ಲ ಜಾನಪದ ಪ್ರೇಮಿಗಳ ಮೆಚ್ಚಿನ ತಾಣವೂ, ಗ್ರಾಮೀಣ ಸಂಸ್ಕೃತಿಯ ಜೀವವಾಹಿನಿಯೂ ಆಗಿ ಜಾನಪದ ಲೋಕ ಬೆಳೆಯಬೇಕೆ[illegible] ನಾಗೇಗೌಡರ ಹೆಬ್ಬಯಕೆ.

ಇಂತಹ ಒಂದು ಜನಪದ ಮಾಯಾಲೋಕವನ್ನು ಸೃಷ್ಟಿಸುವ ಕನಸು ನಾಗೇಗೌಡರದಾದರೂ ಅವರ ಎದೆಯಲ್ಲಿ ಆಸೆಯ, ಆಸಕ್ತಿಯ ಬೀಜ ಬಿತ್ತಿ ನೀರೆರೆದವರು ಹಲವರು. ಗ್ರಾಮೀಣ ಸಂಸ್ಕೃತಿಯನ್ನು ಗೌರವಿಸುವ, ಉಳಿಸಿಬೆಳೆಸುವ ಹಿರಿತನದ ಸ್ವಭಾವ ಗೌಡರಿಗೆ ಹಿರಿಯರಿಂದ ಬಂದ ಬಳುವಳಿ. ಸೋಬಾನೆ ಚಿಕ್ಕಮ್ಮ ಗೌಡರ ಹೃದಯದಲ್ಲಿ ಸುಪ್ತವಾಗಿದ್ದ ಜಾನಪದ ಪ್ರೀತಿಯನ್ನು ಬಡಿದೆಬ್ಬಿಸಿದರೆ, ಈ ಶತಮಾನದ ಪೂರ್ವಾರ್ಧದಲ್ಲಿಯೇ ಜಾನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ಪ್ರಚಾರದಲ್ಲಿ ಹೆಸರು ಮಾಡಿದ್ದ ಮಾಸ್ತಿ, ಬೇಂದ್ರೆ, ಹಲಸಂಗಿ ಸೋದರರು, ಗದ್ದಗೀಮಠ ಮೊದಲಾದವರು ಗೌಡರ ಸಂಗ್ರಹ ಕಾರ್ಯಕ್ಕೆ ಸ್ಫೂರ್ತಿ ನೀಡಿದರು. ಗೌಡರ ಸಂಗ್ರಹಕಾರ್ಯ ತ್ವರಿತಗತಿಯಲಿ ನಡೆಯಿತು. ಆದರೆ ಸಮಗ್ರ ಗ್ರಾಮೀಣ ಕೇಂದ್ರವೊಂದನ್ನು ತೆರೆದು ಎಲ್ಲ ಜನಪದ ಚಟುವಟಿಕೆಗಳಿಗೆ ಆಶ್ರಯ ತಾಣವೊಂದನ್ನು ಸ್ಥಾಪಿಸುವ ಗೌಡರ ಕನಸಿಗೆ ಪ್ರೇರಣೆ ನೀಡಿದವರಲ್ಲಿ ದೇ. ಜವರೇಗೌಡರು ಪ್ರಮುಖರು. ಮೊತ್ತಮೊದಲಬಾರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ 'ಜಾನಪದ'ವನ್ನು ಬೋಧನಾ ವಿಷಯವಾಗಿ ಮಾಡಿ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 'ಜಾನಪದ ವಸ್ತು ಸಂಗ್ರಹಾಲಯ' ಸ್ಥಾಪಿಸಿ 'ಕರ್ನಾಟಕ ಜಾನಪದ ಪರಿಷತ್ತು ಎಂಬ' ಸಂಸ್ಥೆಯೊಂದನ್ನು ತೆರೆದು 'ಜಾನಪದ ಪತ್ರಿಕೆಯನ್ನು ಹೊರತಂದ ದೇಜಗೌ ಅವರು ನಾಗೇಗೌಡರಿಗೆ ಅನುಕರಣೀಯರಾದುದರಲ್ಲಿ ಅಚ್ಚರಿಯೇನೂ ಇಲ್ಲ. ಜವರೇಗೌಡರು ವಿಶ್ವವಿದ್ಯಾಲಯದ ಮೂಲಕ ಸಾಧಿಸಿದ್ದನ್ನು ನಾಗೇಗೌಡರು ವೈಯಕ್ತಿಕವಾಗಿ ಸಾಧಿಸಿದರು. ಆದೂ ದೇಜಗೌ ಅವರೇ ಮೆಚ್ಚಿ 'ಜಾನಪದ

ಲೋಕ ಅತ್ಯದ್ಭುತ ಕಲ್ಪನೆ. ಆ ಕಲ್ಪನೆಯನ್ನು ಕಾರ್ಯಗತಗೊಳಿಸಿದ್ದಂತೂ ಸಾಹಸದ ಸಂಗತಿ. ಇದಕ್ಕಾಗಿ ನಾಡಿನ ಜನ ನಿಮಗೆ ಕೃತಜ್ಞರಾಗಿರಬೇಕಾಗಿದೆ. ಅಲ್ಲಿ ಜಾನಪದ ಗಂಗೋತ್ರಿ ಬಾಗೀರಥಿಯಾಗಿ, ಜಾಹ್ನವಿಯಾಗಿ, ಗಂಗೆಯಾಗಿ ಹರಿದು ನಾಡಿಗೆ ಸುಖ ಸಮೃದ್ಧಿಯನ್ನು ಕರುಣಿಸಲಿ" ಎಂದು ಹಾರೈಸುವಷ್ಟು ಎಂಬುದೇ ಹೆಗ್ಗಳಿಕೆಯ ವಿಷಯ.

ದೇ. ಜವರೇಗೌಡರು ಮತ್ತು ಅವರಂಥಹ ಹಲವು ಜಾನಪದ ಪ್ರೇಮಿಗಳು ಕನಸಿನ. ಶ್ರಮಿಸಿದ ಜಾನಪದದ ಸಿದ್ಧಿ ಈ ಜಾನಪದ ಲೋಕ.

* * * * *

ಗ್ರಾಮಾಂತರ ಪ್ರಾಣಿಗಳು

ಎಚ್. ಆರ್. ಚೇತನ

ಮಾನವನಿಗಿಂತ ಮೊದಲೆ ಪ್ರಾಣಿ ಪಕ್ಷಿಗಳ ಉಗಮವಾಗಿತ್ತೆಂಬುದನ್ನು ಜೀವ ವಿಜ್ಞಾನಿಗಳು ಖಚಿತಪಡಿಸಿದ್ದಾರೆ. ಇವುಗಳ ಉಗಮದ ಕಾಲ ಲೆಕ್ಕಕ್ಕೆ ಸಿಗದಷ್ಟು ಹಿಂದಕ್ಕೆ ಹೋಗುತ್ತದೆ ಎಂಬ ಅಭಿಪ್ರಾಯವೂ ಇದೆ. ಈ ಪ್ರಾಣಿ ಪಕ್ಷಿ ಸಂತತಿ ಅನೇಕ ಮಜಲುಗಳಲ್ಲಿ ಬದಲಾಗಿರುವುದೂ ಕಂಡು ಬರುತ್ತದೆ. ಅವುಗಳ ಆಕಾರ, ರೂಪು, ಆಹಾರ, ರೀತಿ ನೀತಿಗಳೂ ಬದಲಾಗಿರುವುದುಂಟು. ಆರಂಭದ ಎಷ್ಟೋ ಪ್ರಾಣಿ ಪಕ್ಷಿಗಳ ಸಂತತಿಯೇ ಮಾಯವಾಗಿದೆ ಎಂದು ಹೇಳುತ್ತಾರೆ. ನಮ್ಮ ಜನಪದ ಕಥೆಗಳಲ್ಲಿ ಬರುವ ಅನೇಕ ಪಕ್ಷಿಗಳ ಮನುಷ್ಯರನ್ನು ತಮ್ಮ ಬೆನ್ನ ಮೇಲೆ ಕೂರಿಸಿಕೊಂಡು ಸಾವಿರಾರು ಮೈಲಿ ಹೋಗಿ ಇಳಿಸುತ್ತಿದ್ದವು. ಸಪ್ತಸಮುದ್ರವನ್ನು ದಾಟಿಸುತ್ತಿದ್ದವು. ಗಂಡು ಭೇರುಂಡದ ಕತೆಯನ್ನೆ ನೋಡಬಹುದು. ಸಿಂಹ, ಆನೆಯನ್ನು ಕೋಳಿಮರಿಯಂತೆ ಹೊರಬಲ್ಲದಾಗಿತ್ತೆಂದು ಜನಪದ ಮತ್ತು ಶಿಷ್ಟ ಕಾವ್ಯಗಳು ಹೇಳುತ್ತವೆ. ಅನೇಕಾನೇಕ ದೈತ್ಯ ಪ್ರಾಣಿಗಳ ಬಗ್ಗೆ ಜೀವ ವಿಜ್ಞಾನಿಗಳು ಹೇಳಿದ್ದಾರೆ. ಆದರೆ ಅವಾವುವೂ ಇಂದು ನಮ್ಮಲ್ಲಿ ಉಳಿದಿಲ್ಲ. ಈಗಿರುವ ಪ್ರಾಣಿಗಳಲ್ಲಿ ಆನೆಯೇ ಅತ್ಯಂತ ದೈತ್ಯಗಾತ್ರದ ಪ್ರಾಣಿ ಎಂದು ಹೇಳಬಹುದು. ಪಕ್ಷಿಗಳಲ್ಲಿ ಆಫ್ರಿಕದ ಉಷ್ಟ್ರ ಪಕ್ಷಿಯೇ ಭಾರಿ ಪ್ರಮಾಣದ್ದು. ತಿಮಿಂಗಿಲವನ್ನು ಸಮುದ್ರಕ್ಕೆ ಸಂಬಂಧಿಸಿದ ದೈತ್ಯ ಪ್ರಾಣಿ ಎಂದು ಪರಿಗಣಿಸಲಾಗಿದೆ. ಇವೆಲ್ಲವೂ ನಮ್ಮ ಪ್ರಾಚೀನ ಪ್ರಾಣಿ ಪಕ್ಷಿಗಳ ಸಂಕ್ಷಿಪ್ತ ರೂಪ ಎಂಬ ಅಭಿಪ್ರಾಯವೂ ಇದೆ. ಭೂಮಿಯ ಮೇಲೆ ಮೊದಲ ಬಾರಿಗೆ ಜೀವ ತಳೆದ ಈ ಪ್ರಾಣಿಪಕ್ಷಿಗಳು ಇಂದಿಗೂ ಈ ಭೂಮಿಯ ರಕ್ಷಣೆಗೆ ಸಮತೋಲನಕ್ಕೆ ಅಷ್ಟೇ ಅಲ್ಲ ಮಾನವನ ಸರ್ವಕ್ಷೇತ್ರಗಳಿಗೂ ಅತ್ಯಾವಶ್ಯಕವೆನಿಸಿರುವುದನ್ನು, ಅನಿವಾರ್ಯವಾಗಿರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕು ಹನುಮನಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಮನುಷ್ಯ ನಾಗರಿಕನಾಗಿ ತನ್ನ ಗುಹಾಂತರ ಜೀವನದಿಂದ ಹೊರ ಬಂದು ಒಂದೆಡೆ ನೆಲೆ ನಿಲ್ಲಲಾರಂಭಿಸಿದ ದಿನಗಳಿಂದ ತನ್ನ ಸುತ್ತಮುತ್ತಲಿನ ಪರಿಸರವನ್ನು ಪ್ರಾಣಿ ಪಕ್ಷಿಗಳನ್ನು ತನ್ನ ಅನುಕೂಲ ಮತ್ತು ಆವಶ್ಯಕತೆಗಳಿಗೆ ಬಳಸಿಕೊಳ್ಳಲಾರಂಭಿಸಿದ. ಅಲೆಮಾರಿಯಾಗಿ ಬೇಟೆಯಾಡುತ್ತಾ ಆ ಮಾಂಸ ತಿನ್ನುತ್ತಾ ಪ್ರಕೃತಿಯಲ್ಲಿ ಸಿಗುವ ಗೆಡ್ಡೆ ಗೆಣಸು ಕಾಳು ಕಡ್ಡಿಗಳನ್ನು ತಿನ್ನುತ್ತಾ ಸಾವಿರಾರು ವರ್ಷಗಳನ್ನು ಕಳೆದ. ಕೂತುಂಡವನಿಗೆ ಕುಡಿಕೆ ಹೊನ್ನು ಸಾಲದೆಂಬಂತೆ ಅವನ ಸುತ್ತಮುತ್ತಲ ಪ್ರಾಣಿ ಪಕ್ಷಿಗಳು ಗೆಡ್ಡೆ ಗೆಣಸು, ಕಾಳು ಕಡ್ಡಿಗಳು ಮುಗಿದವು. ಅವುಗಳಿಗಾಗಿ ದೂರ ದೂರ ಅಲೆಯಬೇಕಾಯಿತು. ಈ ಅಲೆತವನ್ನು ತಪ್ಪಿಸಲು ಅವನು ತನ್ನ ಸುತ್ತಲಿನ ಭೂಮಿಯನ್ನು ಕೆದಕಿ ಕಾಳು ಬೆಳೆಯಲಾರಂಭಿಸಿದ. ಪ್ರಾಣಿ ಪಕ್ಷಿಗಳನ್ನು ಪಳಗಿಸಿ ತಾನೆ ಸಾಕಲಾರಂಭಿಸಿದ. ಕ್ರಿ. ಪೂ. ಸಾವಿರಾರು ವರ್ಷಗಳಷ್ಟು ಹಿಂದೆಯೇ ಭಾರತದಲ್ಲಿ ಒಂದು ಗ್ರಾಮ ನಾಗರಿಕತೆ ಆಗಿಹೋಗಿದೆಯೆಂದು

ಸಂಶೋಧಕರು ಹೇಳಿದ್ದಾರೆ. ನದೀ ತೀರಗಳಲ್ಲಿ ಆರಂಭವಾದ ಈ ಕೃಷಿ ಸಂಸ್ಕೃತಿ ನಿಧಾನವಾಗಿ ಜನ ಸಂಖ್ಯೆ ವೃದ್ಧಿಯಾದಂತೆಲ್ಲಾ ಬೇರೆ ಬೇರೆ ಸ್ಥಳಗಳನ್ನು ಆಕ್ರಮಿಸಿಕೊಂಡಿತು. ಮನುಷ್ಯ ತಾನೇ ಮಾಡುತ್ತಿದ್ದ ಬೇಸಾಯಕ್ಕೆ ಪ್ರಾಣಿಗಳನ್ನು ಬಳಸಿಕೊಳ್ಳಲಾರಂಭಿಸಿದ. ಹೀಗೆ ನಮ್ಮ ಗ್ರಾಮಜೀವನ ರೂಪುಗೊಂಡಿತು.

ಗ್ರಾಮಾಂತರ ಜನಜೀವನದಲ್ಲಿ ಪ್ರಾಣಿ ಪಕ್ಷಿಗಳು ಮಹತ್ತರವಾದ ಪಾತ್ರ ವಹಿಸುತ್ತವೆ. ಅದು ಈಗ ಎಷ್ಟರ ಮಟ್ಟಿಗಾಗಿದೆಯೆಂದರೆ ಜನರಿಲ್ಲದೆ ಪ್ರಾಣಿ ಪಕ್ಷಿಗಳು, ಪ್ರಾಣಿಪಕ್ಷಿಗಳಿಲ್ಲದೆ ಜನರು ಬದುಕಲು ಸಾಧ್ಯವಿಲ್ಲವೆಂಬಂತಾಗಿದೆ. ಗ್ರಾಮಾಂತರದ ಜನರು ಈ ಪ್ರಾಣಿಪಕ್ಷಿಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸುತ್ತಾರೆ. ಹಾಗೆಯೇ ಪ್ರಾಣಿಪಕ್ಷಿಗಳು ಕೂಡ. ಈಚೀಚೆಗೆ ಮನುಷ್ಯರು ಪ್ರಾಣಿ ಪಕ್ಷಿ ಸಂತತಿಗೆ ಮಾರಕವಾಗುತ್ತಿದ್ದಾರೆ. ಅವಶ್ಯಕತೆಗಿಂತ ಹೆಚ್ಚು ಬೇಕೆಂಬ ದುರಾಸೆಯೇ ಇದಕ್ಕೆ ಕಾರಣ. ಇದರಿಂದ ಅನೇಕ ಪ್ರಾಣಿ ಪಕ್ಷಿ ಸಂತತಿ ನಾಶದ ಅಂಚಿಗೆ ಬಂದಿದೆ. ಇವುಗಳ ಉಳಿವಿಗಾಗಿ ಸರ್ಕಾರಗಳು ಕಾನೂನು ಮಾಡುವಂಥ ಸ್ಥಿತಿ ಉಂಟಾಗಿದೆ. ಗ್ರಾಮಾಂತರದ ಹಿರಿಯರು ಹೇಳುವಂತೆ ಈ ಪ್ರಾಣಿಪಕ್ಷಿಗಳು ಕಾಡಿನವಾಗಿರಲಿ, ಸಾಕಿದವಾಗಿರಲಿ ಅವು ರೈತನ ಉಪಕಾರಿಗಳೆಂಬುದು ತಿಳಿಯುತ್ತದೆ. ಉದಾಹರಣೆಗೆ ನಾಗರಹಾವಿನ ವಂಶ ನಾಶವಾಗುತ್ತಿದೆ. ಕಾರಣ ಅದರ ಚರ್ಮದ ಆಕರ್ಷಣೆ. ಇದರಿಂದ ಹೊಲ ಗದ್ದೆಗಳಲ್ಲಿ ಇಲಿಗಳ ಹಾವಳಿ ಅತಿಯಾಗಿ ನಮ್ಮ ದೇಶದಲ್ಲಿ ಕೋಟ್ಯಾಂತರ ಟನ್ ಆಹಾರ ನಾಶವಾಗುತ್ತಿದೆ ಎಂದು ಹೇಳುತ್ತಾರೆ. ದಂತದ ಆಸೆಯಿಂದ ಆನೆ ನಾಶವಾಗುತ್ತಿದೆ. ಪರಿಸರ ಸಮತೋಲನಕ್ಕಾಗಿ ಇವುಗಳೆಲ್ಲಾ ಬದುಕಿರಬೇಕಾಗುತ್ತದೆ ಎಂದು ಪರಿಸರ ವಿಜ್ಞಾನಿಗಳು ಹೇಳುತ್ತಾರೆ.

ಪ್ರಾಣಿಪಕ್ಷಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಸಾಕಿದ ಪ್ರಾಣಿ ಪಕ್ಷಿಗಳು ಮತ್ತು ಕಾಡು ಪ್ರಾಣಿ ಪಕ್ಷಿಗಳು. ಸಾಕಿದವು ಕೂಡ ಒಂದು ಕಾಲದಲ್ಲಿ ಕಾಡಿನಲ್ಲಿದ್ದವುಗಳೆ. ಅವುಗಳ ಸಂತತಿ ಈಗಲೂ ಕಾಡುಗಳಲ್ಲಿ ಇರುವುದನ್ನು ಕಾಣಬಹುದು. ಆದುದರಿಂದ ಇಂದಿಗೂ ಸಾಕಿದ ಪ್ರಾಣಿ ಪಕ್ಷಿಗಳಿಗಿಂತ ಕಾಡಿನವೇ ಅಧಿಕ ಎಂದು ಹೇಳಬಹುದು. ಅನೇಕ ಪ್ರಾಣಿಪಕ್ಷಿಗಳನ್ನು ಮನುಷ್ಯ ಪಳಗಿಸುವ ಗೋಜಿಗೇ ಹೋಗಿಲ್ಲ. ಇದಕ್ಕೆ ಕಾರಣ ಅವುಗಳ ನಿಷ್ಪ್ರಯೋಜಕತೆ. ತನ್ನ ಆಹಾರಕ್ಕೆ, ಕೆಲಸಕ್ಕೆ ಉಪಯೋಗಕ್ಕೆ ಬಾರದವುಗಳನ್ನು ಮನುಷ್ಯ ಪಳಗಿಸುವ ಗೋಜಿಗೇ ಹೋಗಿಲ್ಲ. ಈ ಎರಡು ಗುಂಪಿನಲ್ಲಿ ಸಾಕಿದವನ್ನು ಸಂಪೂರ್ಣವಾಗಿ ಗುರುತಿಸಬಹುದಾದರೂ ಕಾಡಿನವನ್ನೆಲ್ಲಾ ಗುರುತಿಸುವುದು ಅನೇಕ ವರ್ಷಗಳ ಕೆಲಸ. ಆದುದರಿಂದ ಇಲ್ಲಿ ಮನುಷ್ಯನಿಗೆ ಹತ್ತಿರವಾದ ಪ್ರಾಣಿಪಕ್ಷಿಗಳು, ಅವುಗಳ ಆಹಾರ, ಸಂತಾನೋತ್ಪತ್ತಿ, ಗ್ರಾಮಜೀವನದಲ್ಲಿ ಅವುಗಳ ಪಾತ್ರ ಈ ಕೆಲವು ಸಂಗತಿಗಳನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ಗ್ರಾಮಾಂತರ ಜನರು ಅವುಗಳಿಗೆ ಕೊಟ್ಟಿರುವ ಹೆಸರುಗಳನ್ನೆ ಬಳಸಲಾಗಿದೆ. ಈ ಹೆಸರುಗಳಲ್ಲಿ ಕೆಲವಾದರೂ ಪ್ರಾದೇಶಿಕವಾಗಿ ಭಿನ್ನವಾಗಿರಬಹುದು. ಕೆಲವು ಪ್ರಾಣಿಪಕ್ಷಿಗಳು ಆ ಪ್ರದೇಶದಲ್ಲಿ ಇಲ್ಲದಿರಬಹುದು. ಆದುದರಿಂದ ಒಂದು ನಿರ್ದಿಷ್ಟ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಕ್ಷೇತ್ರಕಾರ್ಯ ನಡೆಸಿ ಸಿದ್ಧಪಡಿಸಿದ ಪ್ರಬಂಧವಿದು.

ಮನುಷ್ಯನೂ ಮೊದಲಿಗೆ ಒಂದು ಪ್ರಾಣಿಯೇ ಆಗಿದ್ದನೆಂದು ಜೀವ ವಿಜ್ಞಾನ ಹೇಳುತ್ತದೆ. ಕ್ರಮೇಣವಾಗಿ ಅವನ ಬುದ್ಧಿ ವಿಕಾಸಗೊಂಡು ಜಗತ್ತಿನ ಜೀವಿಗಳಲ್ಲಿ ಪ್ರಮುಖನಾದ. ಅವನು ನಾಗರೀಕನಾದಂತೆಲ್ಲಾ ತನ್ನ ಕೆಲಸಗಳಿಗೆ ಆಯುಧಗಳನ್ನು ಕಂಡುಕೊಂಡ. ಹಾಗೆಯೇ ಪ್ರಾಣಿಪಕ್ಷಿಗಳನ್ನು ಪಳಗಿಸಿ ಉಪಯೋಗಿಸಿಕೊಂಡ. ಮೊದಮೊದಲಿಗೆ ಅಗೆದು ವ್ಯವಸಾಯ ಮಾಡಿದ ಆತ ಕಾಡು ಪ್ರಾಣಿಗಳನ್ನು ಪಳಗಿಸಿ ಉಳಲು ಆರಂಭಿಸಿದ. ಹರಪ್ಪ ಮಹೆಂಜದಾರೊ ಮತ್ತು ಸಿಂಧುನದೀ ತೀರದ ನಾಗರಿಕತೆಗಳಲ್ಲಿಯೇ ಎತ್ತುಗಳ ಮುದ್ರೆಗಳು ದೊರೆತಿರುವುದಾಗಿ ಸಂಶೋಧಕರು ಹೇಳಿದ್ದಾರೆ. ಕೆಲಸಗಳಿಗೆ ಅಲ್ಲದೆ ತನ್ನ ಆಹಾರಕ್ಕೆ ಬೇಕಾದ ಪ್ರಾಣಿಪಕ್ಷಿಗಳನ್ನು ಪಳಗಿಸಿ ಮನುಷ್ಯ ಸಾಕಣೆಯನ್ನು ಆರಂಭಿಸಿದ. ಹೀಗಾಗಿ ಗ್ರಾಮಾಂತರ ಜೀವನದಲ್ಲಿ ಪ್ರಾಣಿಪಕ್ಷಿಗಳು ತಮ್ಮದೇ ಆದ ಪ್ರಮುಖ ಸ್ಥಾನಮಾನಗಳನ್ನು ಹೊಂದಿವೆಯಷ್ಟೇ ಅಲ್ಲ ಗ್ರಾಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿವೆ.

ವ್ಯವಸಾಯಕ್ಕೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪ್ರಾಣಿಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ಕುದುರೆ, ಒಂಟೆ, ಕೋಣಗಳನ್ನು ಉಳಲು ಉಪಯೋಗಿಸುತ್ತಾರೆ. ಆದರೆ ಎತ್ತುಗಳೇ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಪ್ರದೇಶದಲ್ಲಿ ಉಳುಮೆಗೆ ಉಪಯೋಗವಾಗುವುದು ಕಂಡು ಬರುತ್ತದೆ. ನಮ್ಮ ದೇಶದ ವ್ಯವಸಾಯವೂ ಇಂದಿಗೂ ಎತ್ತುಗಳನ್ನೇ ಅವಲಂಬಿಸಿದೆ ಎಂದರೆ ತಪ್ಪಾಗುವುದಿಲ್ಲ. ಆದುದರಿಂದ ಗ್ರಾಮಾಂತರ ಸಾಕು ಪ್ರಾಣಿಗಳಲ್ಲಿ ಎತ್ತು ಪ್ರಧಾನವಾಗಿ ದನಗಳು ಪ್ರಮುಖವಾದವು. ಕಾಡು ದನಗಳ ಕರುಗಳನ್ನು ಹಿಡಿದು ತಂದು ಸಾಕಿ ಪಳಗಿಸಿ ಊರುದನಗಳನ್ನಾಗಿ ಮಾಡಲಾಗಿದೆ. ಈಗಲೂ ಕಾಡು ದನ ಕಾಡೆಮ್ಮೆಗಳು ಇರುವುದನ್ನು ಕಾಣಬಹುದು. ಇವುಗಳಲ್ಲಿ ಗಂಡನ್ನು ಎತ್ತು ಎಂತಲೂ ಹೆಣ್ಣನ್ನು ಹಸು ಎಂತಲೂ ಕರೆಯುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ಎತ್ತುಗಳದೆ ಪ್ರಮುಖ ಪಾತ್ರ. ಒಂದು ಕಾಲಕ್ಕೆ ಹಸುಗಳನ್ನು ವ್ಯವಸಾಯ ಸಂಬಂಧಿ ಕೆಲಸಗಳಿಗೆ ಬಳಸಬಾರದೆಂಬ ನಿಯಮವೇ ಇತ್ತು. ಆದರೆ ಈಗ ಅದೆಲ್ಲಾ ಬದಲಾಗಿ ಹಸುಗಳನ್ನು ಕೃಷಿ ಕೆಲಸಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿಯೇ ಉಪಯೋಗಿಸುತ್ತಾರೆ. ಗಂಡು ಎಳೆಯವಾಗಿರುವಾಗಲೆ ಅವುಗಳಿಗೆ ಇಡ ಮಾಡಿಸಿ ಅಂದರೆ ಅವುಗಳ ಸಂತಾನ ಶಕ್ತಿ ಹರಣ ಮಾಡಿ ಬೆಳೆಸುತ್ತಾರೆ. ಕರುಗಳಿಗೆ ಒಂದು ವರ್ಷ ತುಂಬಿದ ಮೇಲೆ ಉಳುಮೆಯ ಕಲಿಕೆ ಆರಂಭವಾಗುತ್ತದೆ. ಇವುಗಳ ವಯಸ್ಸು ಮತ್ತು ಶಕ್ತಿಯನ್ನು ಹಲ್ಲುಗಳ ಆಧಾರದಿಂದ ಲೆಕ್ಕ ಹಾಕುತ್ತಾರೆ. ಎರಡು ಹಲ್ಲು ಆಗಿವೆ ಎಂದರೆ ಅವು ಆಗಷ್ಟೆ ವಯಸ್ಸಿಗೆ ಬರುತ್ತಿವೆ ಎಂದು. ನಾಲ್ಕು ಹಲ್ಲು ಆದಾಗ ಅದಕ್ಕೆ ಯೌವ್ವನದ ಕಾಲ ಸರಿಯಾದ ಕಾಲ. ಮುಂದೆ ಹಲ್ಲು ಕೂಡಿದವು ತಮ್ಮ ಬೆಳವಣಿಗೆಯ ಅಂತಿಮ ಹಂತ ತಲುಪಿದಂತೆ. ಹುಟ್ಟಿನಿಂದ ಬೆಳೆಯುತ್ತಾ ಬಂದ ಇವುಗಳ ಶಕ್ತಿ ಇಲ್ಲಿಂದ ಇಳಿಯುತ್ತಾ ಹೋಗುತ್ತದೆ. ಎತ್ತು ಅಥವಾ ದನ ಎಮ್ಮೆ ಮುಂತಾದ ಪ್ರಾಣಿಗಳ ಆಯಸ್ಸು ಸರಾಸರಿ ಹದಿನೈದರಿಂದ ಇಪ್ಪತ್ತು ವರ್ಷ ಎಂದು ಜನಪದರು ಹೇಳುತ್ತಾರೆ. ಭಾರತಾದ್ಯಂತ ಅನೇಕ ವಂಶಾವಳಿಯ ದನಗಳಿವೆ. ಕನ್ನಡ ನಾಡಿನಲ್ಲಿ ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಹಳ್ಳಿಕಾರ ದನಗಳ ತಳಿ ಅತ್ಯುತ್ತಮವಾದುದಾಗಿದೆ. ಕರ್ನಾಟಕದಾದ್ಯಂತ ಅನೇಕ ದನಗಳ ಜಾತ್ರೆಯೇ ನಡೆಯುತ್ತವೆ.

ಇಲ್ಲಿ ಮಾರುವ ಕೊಳ್ಳುವ ವ್ಯಾಪಾರ ನಡೆಯುತ್ತದೆ. ಸಾಮಾನ್ಯವಾಗಿ ಹಳ್ಳಿಕಾರ ತಳಿಯ ಹಸುಗಳನ್ನು ಸಂತಾನ ಅಭಿವೃದ್ಧಿಗೆ ಹೆಚ್ಚಾಗಿ ಸಾಕುತ್ತಾರೆ. ಇವಲ್ಲದೆ ಹಾಲುಕರೆಯುವ ಸಿಂಧಿ, ಮಿಶ್ರ ಮತ್ತು ಈಚೆಗೆ ವಿದೇಶೀ ತಳಿಯ ದನಗಳೂ ಇವೆ. ಉಳಿದ ದನಗಳು ದೇಶೀಯ. ಒಂದು ಕಾಲಕ್ಕೆ ದೊಡ್ಡ ರೈತರು ಹಾಲು ಮತ್ತು ಗೊಬ್ಬರಕ್ಕಾಗಿ ಇಂತಹ ನೂರಾರು ದನಗಳನ್ನು ಸಾಕುತ್ತಿದ್ದ ಉದಾಹರಣೆಗಳಿವೆ. ಏಳು ಹಟ್ಟಿದನಗಳು, ಏಳು ಹಟ್ಟಿ ಕುರಿಗಳನ್ನು ಹೊಂದಿದ್ದ ಒಕ್ಕಲು ಮುದ್ದೇಗೌಡನ ಕಥೆಯೇ ಇದೆ.

ದನಕರುಗಳನ್ನು ರೈತರು ತಮ್ಮ ಮಕ್ಕಳು ಮರಿಗಳಂತೆ ಕಾಣುತ್ತಾರೆ. ಒಂದು ಧರ್ಮಸಂಪ್ರದಾಯದವರು ಸೋಮವಾರವನ್ನು ದನಕರುಗಳ ದಿನವೆಂದು ನಂಬುತ್ತಾರೆ. ಇದಕ್ಕೆ ಕಥೆಯೊಂದಿದೆ. ಆಗ ದನಕರುಗಳೆಲ್ಲ ಮನುಷ್ಯರಂತೆ ಮಾತನಾಡುತ್ತಿದ್ದವು. ಒಂದು ಸೋಮವಾರ ಅತ್ತೆ ತನ್ನ ಸೊಸೆಗೆ ದನಕರುಗಳಿಗೆ ಸರಿಯಾಗಿ ಹುಲ್ಲು ನೀರು ಹಾಕಿ ನೋಡಿಕೊಳ್ಳಲು ತಿಳಿಸಿ ಎಲ್ಲಿಯೋ ಹೋಗಿದ್ದಳು. ಸೊಸೆ ಯಾವುದೋ ತನ್ನ ಸ್ವಂತ ಕಾರ್ಯದಲ್ಲಿ ನಿರತಳಾಗಿ ದನಕರುಗಳನ್ನು ಮರೆತಳು. ಸಂಜೆ ಅತ್ತೆ ಮನೆಗೆ ಬಂದು ಕೊಟ್ಟಿಗೆಗೆ ಹೋದಾಗ ದನಕರುಗಳೆಲ್ಲ ತಮಗೆ ಆ ದಿನವಿಡೀ ಹುಲ್ಲು ನೀರಿಲ್ಲದ ಬಗ್ಗೆ ದೂರು ಹೇಳಿಕೊಂಡವು. ಅತ್ತೆ ಸೊಸೆಯನ್ನು ಚೆನ್ನಾಗಿ ಬಯ್ದಳು. ಇದರಿಂದ ಸೊಸೆಗೆ ಕೋಪ ಬಂದು "ಸೋಮವಾರ ನಿಮ್ಮ ಸೊಲ್ಲಡಗ" ಎಂದು ಶಪಿಸಿದಳು. ಅಂದಿನಿಂದ ದನಕರುಗಳು ಮಾತನಾಡುವುದನ್ನು ನಿಲ್ಲಿಸಿದವು. ಈ ತಪ್ಪಿಗಾಗಿ ಸೋಮವಾರವನ್ನು ದನಕರುಗಳ ದಿನವಾಗಿ ಆಚರಿಸಿ ಅಂದು ಅವುಗಳಿಂದ ಯಾವ ಕೆಲಸವನ್ನು ಮಾಡಿಸುವುದಿಲ್ಲ. ಎತ್ತನ್ನು ಶಿವನ ವಾಹನ ನಂದಿಯೆಂದೂ ಆತ ರೈತನ ಸಹಾಯಕ್ಕಾಗಿ ಅವತಾರ ಎತ್ತಿದವನೆಂದೂ ರೈತರು ನಂಬುತ್ತಾರೆ. ಆದುದರಿಂದಲೆ ಸೋಮವಾರ ಇವುಗಳನ್ನು ಯಾವುದೇ ಕೃಷಿ ಕೆಲಸಕ್ಕೆ ಹೂಡಬಾರದೆಂಬ ನಂಬಿಕೆಯಿದೆ.

ಯುಗಾದಿಯ ದಿನ ಅಥವಾ ಯುಗಾದಿಯ ನಂತರ ಒಂದು ಶುಭ ದಿನ ಎತ್ತುಗಳನ್ನು ತೊಳೆದು ಪೂಜಿಸಿ ಹೊನ್ನಾರು ಕಟ್ಟುವುದು ಪದ್ಧತಿ. ಕಾರು ಹಬ್ಬವನ್ನು ದನಕರುಗಳ ಹಬ್ಬವಾಗಿಯೇ ಆಚರಿಸುತ್ತಾರೆ. ಆ ದಿನ ಆರುಮುಟ್ಟು ಅಂದರೆ ವ್ಯವಸಾಯ ಉಪಕರಣಗಳನ್ನೆಲ್ಲಾ ಒಂದೆಡೆ ಸೇರಿಸಿ ಪೂಜಿಸುತ್ತಾರೆ. ಆ ದಿನ ಮನೆಯ ದನಕರುಗಳನ್ನೆಲ್ಲಾ ತೊಳೆದು ಕಕ್ಕೆ ಸೊಪ್ಪಿನ ದಂಡೆ ಕಟ್ಟಿ ಅವುಗಳ ಕೊರಳಿಗೆ ಹಾಕುತ್ತಾರೆ. ಆದಿನ ಮನೆಯ ದನಕರುಗಳಿಗೆಲ್ಲಾ ಹಸಿರು ಹುಲ್ಲು ಹಾಕುತ್ತಾರೆ. ರಾತ್ರಿ ಆರುಮುಟ್ಟುಗಳ ಮುಂದೆ ಎಡೆ ಇಡುತ್ತಾರೆ. ಕಡುಬು, ಕಾಯಿಹಾಲು, ಹಲಸಿನ ಹಣ್ಣಿನ ರಸಾಯನ ಮಾಡುತ್ತಾರೆ. ಉಳುವ ಎತ್ತುಗಳನ್ನು ಮನೆಯೊಳಗೆ ತಂದು ಅವುಗಳ ಪಾದ ಪೂಜೆ ಮಾಡುವರು. ಅನಂತರ ಮನೆಯ ಯಜಮಾನ ಬಸವನ ಪಾದ ಹಿಡಿದು ಆ ವರ್ಷದ ಬೇಸಾಯವನ್ನು ಸುಗಮವಾಗಿ ನಡೆಸಿಕೊಡುವಂತೆ ಪ್ರಾರ್ಥಿಸುತ್ತಾನೆ. ಆರುಮುಟ್ಟಿನ ಎಡೆಯನ್ನು ಅವುಗಳಿಗೆ ತಿನ್ನಿಸುತ್ತಾರೆ. ಹೀಗೆಯೇ ದೀಪಾವಳಿಯಲ್ಲಿ ಗೋಪೂಜೆ ಮಾಡುತ್ತಾರೆ. ಸಂಕ್ರಾಂತಿಯಂದು ಮನೆಯ ದನಕರುಗಳನ್ನೆಲ್ಲಾ ತೊಳೆದು ಅವುಗಳಿಗೆ ಬಣ್ಣ ಹಚ್ಚಿ ಅಲಂಕಾರ ಮಾಡಿ ಅಲಂಕರಿಸುತ್ತಾರೆ. ಅವನ್ನೆಲ್ಲಾ ದೇವಾಲಯಕ್ಕೆ ಅಟ್ಟಿಕೊಂಡು ಹೋಗಿ ಸಂಜೆ ಹಿಂತಿರುಗುವಾಗ ಊರ ಹಣೆಯಲ್ಲಿ ಕಿಚ್ಚು ಹಾಯಿಸುತ್ತಾರೆ. ಕಿಚ್ಚು

ಹಾಯಿಸುವುದೆಂದರೆ ಓಣಿಯ ಈ ತುದಿಯಿಂದ ಆ ತುದಿಯವರೆಗೆ ತರಗು ಪುಳ್ಳಿ ಇತ್ಯಾದಿ ಒಟ್ಟಿ ಉರಿ ಮಾಡಿ ಅವುಗಳ ಮೂಲಕ ದನಗಳನ್ನು ಊರೊಳಗೆ ಹೊಡೆದುಕೊಂಡು ಹೋಗುತ್ತಾರೆ.

ದನಕರುಗಳಿಗೆ ಸಂಬಂಧಿಸಿದಂತೆ ಅನೇಕ ಆಚರಣೆಗಳು ನಂಬಿಕೆಗಳು ಗ್ರಾಮಾಂತರದಲ್ಲಿವೆ. ದನಕರುಗಳನ್ನು ಪ್ರಧಾನವಾಗಿ ಹಸುವನ್ನು ಹಿಂದುಗಳು ಗೋಮಾತೆ ಎಂದು ಕರೆದು ಪೂಜಿಸುತ್ತಾರೆ. ಹಸು ತಾಯಿಗೆ ಸಮಾನ ಎಂಬುದು ನಂಬಿಕೆ. ಹಾಗೆಯೇ ಗೋಪೂಜೆ, ಗೋದಾನಗಳೂ ಜಾರಿಯಲ್ಲಿವೆ. ಎತ್ತು ಅಥವಾ ಹಸು ಸತ್ತರೆ ಮನುಷ್ಯರಿಗೆ ಸಾವಿನ ಸಂಸ್ಕಾರ ಮಾಡುವಂತೆ ಮಾಡಿ ಹೂಳುವ ಪದ್ಧತಿ ಇದೆ. ಬೆಳಿಗ್ಗೆ ಎದ್ದಕೂಡಲೆ ದನಗಳ ಮುಖ ನೋಡಬೇಕು ನೋಡಿದರೇ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿದೆ. ಅನೇಕ ದೇವರುಗಳಿಗೆ ಬಸವನ ಬಿಡುವ ಸಂಪ್ರದಾಯವಿದೆ. ಹೀಗೆ ಬಸವನ ಬಿಡಲು ಗಂಡುದನ ಅಥವಾ ಹೋರಿಕರುವನ್ನೇ ಆಯ್ಕೆ ಮಾಡುತ್ತಾರೆ. ಒಮ್ಮೆ ಮುದ್ರೆಯೊತ್ತಿ ದೇವರ ಹೆಸರಿನಲ್ಲಿ ಬಸವನ ಬಿಟ್ಟ ಮೇಲೆ ಅದು ಎಲ್ಲಿಬೇಕಾದರೂ ಮೇಯಬಹುದು. ಯಾರೂ ಅದನ್ನು ತಡೆಯುವುದಿಲ್ಲ. ಎತ್ತುಗಳಿಗೆ ಸಂಬಂಧಿಸಿದಂತೆ ಉಳೋ ಎತ್ತಿನ ಕಾಲು ಮುರಿದಂಗೆ, ಎತ್ತುಏರಿಗೆಳೀತು ಎಮ್ಮೆ ನೀರಿಗೆಳೀತು, ಎತ್ತು ನೋಡಿದ್ರೆ ಗೊತ್ತು, ಗೆದ್ದೆತ್ತಿನ ಬಾಲಹಿಡಿದಂಗೆ ಮುಂತಾದ ಗಾದೆಯ ಮಾತುಗಳೂ ಜನಪದರಲ್ಲಿ ಚಾಲ್ತಿಯಲ್ಲಿವೆ. ಎತ್ತುಗಳಿಗೆ ಸಂಬಂಧಿಸಿದಂತೆ ಸುಳಿ ನೋಡುವ ಪದ್ಧತಿ ಪಾತಾಳ ಸುಳಿ, ಹೀನಸುಳಿ ಇದ್ದರೆ ಅಂತಹ ಎತ್ತುಗಳು ಎಷ್ಟೇ ಚೆನ್ನಾಗಿದ್ದರೂ ಬೆಲೆ ಇಲ್ಲ. ಹೀನಸುಳಿ ಬೋಳಿಸಿದರೆ ಹೋದೀತೆ ಎಂಬ ಗಾದೆಯ ಮಾತೇ ಆಗಿದೆ. ಅವುಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಇಲ್ಲ. ಹಾಗೆಯೇ ಎತ್ತಿದ್ದೋನ ಮನೆ ಎತ್ತ ನೋಡಿದರೂ ಸರಿ ಎಂಬ ಮಾತೂ ಇದೆ.

ದನಗಳು ಅವುಗಳ ಜಾತಿಯ ಅಥವಾ ತಳಿಯ ಆಧಾರದಿಂದಲೂ ಗುರುತಿಸಲ್ಪಡುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಹಳ್ಳಿಕಾರ, ಗುಜಮಾವು, ಉತ್ತಮ ತಳಿಯ ದನಗಳೆಂದು ಗುರುತಿಸಲಾಗಿದೆ. ಈ ಜಾತಿಯ ದನಗಳಿಗಾಗಿ ರಾಜ್ಯದಲ್ಲಿ ಅನೇಕ ಕಾವಲುಗಳಿದ್ದು ಅಲ್ಲಿ ಅಪಾರ ಸಂಖ್ಯೆಯಲ್ಲಿ ಈ ದನಗಳ ಸಂತಾನೋತ್ಪತ್ತಿ ಮಾಡಲಾಗುತ್ತಿತ್ತು. ಈ ಕಾವಲುಗಳು ಸಾವಿರಾರು ಎಕರೆಯಷ್ಟು ವಿಶಾಲವಾಗಿರುತ್ತಿದ್ದವು. ಇವುಗಳನ್ನು ಹಸುವಿನ ಕಾವಲು ಎಂದು ಕರೆಯಲಾಗುತ್ತಿತ್ತು. ಇವುಗಳ ಉಸ್ತುವಾರಿ ಸರ್ಕಾರಕ್ಕೆ ಸೇರಿತ್ತು. ವರ್ಷಕ್ಕೊಮ್ಮೆ ಅಲ್ಲಿ ಹುಟ್ಟುವ ಹೋರಿಗರುಗಳನ್ನು ಹರಾಜು ಮಾಡುತ್ತಿದ್ದರು. ಉಳಲು ಎತ್ತು ಬೇಕಾದವರು ಇಂತಹ ಹರಾಜುಗಳಲ್ಲಿ ಭಾಗವಹಿಸಿ ತಮಗೆ ಬೇಕಾದುವನ್ನು ಕೊಳ್ಳುತ್ತಿದ್ದರು. ಕರ್ನಾಟಕದಾದ್ಯಂತ ಅನೇಕ ಎತ್ತು ಮಾರುವ ಸಂತೆ, ಜಾತ್ರೆ, ಮಾರುಕಟ್ಟೆಗಳು ಇಂದಿಗೂ ಇರುವುದನ್ನು ಕಾಣಬಹುದು.

ಹಸುಗಳು ಅಥವಾ ಹೆಣ್ಣು ದನಗಳನ್ನು ತಾಯಿಗೆ ಸಮಾನ, ಕಾಮಧೇನು ಎಂದೆಲ್ಲಾ ಜನಪದರು ನಂಬುತ್ತಾರೆ. ಹಸುವು ತುಂಬಾ ಸಾಧು ಪ್ರಾಣಿ ಎಂದು ನಂಬಿಕೆಯಿದೆ. ಹಸುವಿನಂಥ ವ್ಯಕ್ತಿ ಎಂಬ ಮಾತಿದೆ. ಹಸುವನ್ನು ಹೊಡೆಯುವುದಾಗಲಿ, ಬಯ್ಯುವುದಾಗಲಿ ಗ್ರಾಮಾಂತರದಲ್ಲಿ ನಿಷಿದ್ಧ. ಹಸುವನ್ನು ದೇವತೆ ಎಂದು ಪರಿಗಣಿಸುತ್ತಾರೆ. ಹೊಸ ಮನೆಗೆ ಹಸುವನ್ನು ಹೊಗಿಸಿದರೆ ಸರ್ವಪಾಪಾದಿಗಳು ಪರಿಹಾರ ಎಂದು ನಂಬುತ್ತಾರೆ. ಹೊಸ

ಮನೆಗೆ ಪ್ರವೇಶಿಸುವಾಗ ಜನಪದರು ಜೋಯಿಸನನ್ನು ಕರೆಯುವ ಬದಲು ಹಸುವನ್ನು ಹೋಗಿಸುತ್ತಾರೆ. ಎಳೆಯ ಮಕ್ಕಳಿಗೆ ತಾಯಿಯ ಹಾಲು ಇಲ್ಲದಾಗ ಹಸುವಿನ ಹಾಲೇ ಒಳ್ಳೆಯದು. ಹಸುಗಳಲ್ಲಿ ಹೋರಿ ಹಾಕುವ ಜಾತಿ, ಹಾಲುಕರೆಯುವ ಜಾತಿಗಳಿವೆ. ಕುಳ್ಳದನಗಳು ಹಾಲು ಕರೆಯುತ್ತವೆ. ಈಗೀಗ ಮಿಶ್ರತಳಿಗಳೂ, ವಿದೇಶಿ ತಳಿಗಳೂ ಹೆಚ್ಚುತ್ತಿವೆ. ಕನ್ನಡಗೋವಿನ ಹಾಡು ಹಸುಗಳನ್ನೇ ಕುರಿತು ರಚಿತವಾದುದು.

ಸಾಕುಪ್ರಾಣಿಗಳಲ್ಲಿ ಎಮ್ಮೆಯೂ ಮುಖ್ಯವಾದುದು. ಗಂಡನ್ನು ಕೋಣವೆಂದೂ ಹೆಣ್ಣನ್ನು ಎಮ್ಮೆಯೆಂದೂ ಗುರುತಿಸಲಾಗಿದೆ. ಎಮ್ಮೆ ಸಹ ಪಳಗಿಸಿದ ಪ್ರಾಣಿಯೆ. ಈಗಲೂ ಅರಣ್ಯಗಳಲ್ಲಿ ಕಾಡೆಮ್ಮೆ ಕಾಡುಕೋಣಗಳನ್ನು ಕಾಣಬಹುದು. ಇದು ಸಸ್ಯಾಹಾರಿ ಪ್ರಾಣಿ. ಹಾಲು ಮತ್ತು ಗೊಬ್ಬರಕ್ಕಾಗಿ ಗ್ರಾಮಾಂತರಗಳಲ್ಲಿ ಎಮ್ಮೆ ಸಾಕುತ್ತಾರೆ. ಕೋಣ ಪ್ರಯೋಜನಕಾರಿಯಲ್ಲ. ಅದು ತುಂಬಾ ನಿಧಾನ ಪ್ರವೃತ್ತಿಯದಾದುದರಿಂದ ಬೇಸಾಯದ ಕೆಲಸಗಳಿಗೆ ಬರುವುದಿಲ್ಲ. ಆದರೆ ವಿಪರೀತ ಮಳೆ ಪ್ರದೇಶವಾದ ಕರಾವಳಿಯಲ್ಲಿ ಕೋಣವನ್ನು ಬೇಸಾಯದ ಕೆಲಸಗಳಿಗೆ ಉಪಯೋಗಿಸುತ್ತಾರೆ. ಎಮ್ಮೆ ಹತ್ತು ತಿಂಗಳು ಗರ್ಭಧರಿಸಿ ಒಂದು ಕರು ಹಾಕುತ್ತದೆ. ಅನಂತರ ಸುಮಾರು ಒಂದು ವರ್ಷಕಾಲ ಹಾಲು ಕೊಡುತ್ತದೆ. ಎಮ್ಮೆ ಯಾವುದೇ ಶುಭ ಕಾರ್ಯಗಳಿಗೆ ಬರುವುದಿಲ್ಲ. ಎಮ್ಮೆ ಹಾಲು ಗಟ್ಟಿಯಾದುದರಿಂದ ಯಥೇಚ್ಛವಾಗಿ ಬೆಣ್ಣೆ ದೊರೆಯುತ್ತದೆ. ಎಮ್ಮೆಯ ಬಗ್ಗೆ ಕೆಲವು ಗಾಧೆಯ ಮಾತುಗಳಿವೆ. ಎಮ್ಮೆ ಮೇಲೆ ಮಳೆ ಹುಯ್ದ ಹಾಗೆ. ಎಮ್ಮೆ ಹಾಲು ಕುಡಿದವನಂತೆ. ಕೋಣನ ಆರಂಭ ಗಾಣಿಗನ ವಿಶ್ವಾಸ. ಎಮ್ಮೆನೀರಿಗೆಳೀತು ಮುಂತಾದವು. ಈ ಪ್ರಾಣಿಯನ್ನು ಗ್ರಾಮಾಂತರಗಳಲ್ಲಿ ವ್ಯಾಪಕವಾಗಿ ಕಾಣಬಹುದು.

ಕುರಿಯು ಕೂಡ ಮನುಷ್ಯ ಪಳಗಿಸಿಕೊಂಡದ್ದು. ಇದರ ಸಂತತಿ ಕೂಡ ಕಾಡಿನಲ್ಲಿ ಇಂದಿಗೂ ಅಪಾರವಾಗಿದ್ದು ಕಾಡು ಕುರಿ ಎಂದು ಕರೆಸಿಕೊಳ್ಳುತ್ತದೆ. ಮನುಷ್ಯರು ಉಣ್ಣೆ ಮತ್ತು ಮಾಂಸಕ್ಕಾಗಿ ಕುರಿಗಳನ್ನು ಸಾಕುತ್ತಾರೆ. ಕುರಿಗಳಿಂದ ಒಳ್ಳೆಯ ಗೊಬ್ಬರವೂ ದೊರೆಯುತ್ತದೆ. ಗ್ರಾಮಾಂತರದಲ್ಲಿ ಕುರಿಗಳನ್ನು ಅಪಾರ ಸಂಖ್ಯೆಯಲ್ಲಿ ಸಾಕುತ್ತಾರೆ. ಹಿಂದೆ ಪ್ರತಿ ಮನೆಯಲ್ಲೂ ಸಾವಿರದವರೆಗೆ ಕುರಿಗಳನ್ನು ಸಾಕುತ್ತಿದ್ದರು. ಇವರು ಒಂದೆಡೆಯಿಂದ ಮತ್ತೊಂದೆಡೆಗೆ ಕುರಿಗಳಿಗೆ ಮೇವನ್ನರಸಿ ವಲಸೆ ಹೋಗುತ್ತಿದ್ದರು. ಕುರಿ ಮೇಯಿಸುವ ಕಾವಲುಗಳೇ ಇದ್ದವು. ಮಾನವನ ಭೂದಾಹದಿಂದಾಗಿ ಈ ಕಾವಲುಗಳೆಲ್ಲ ಮಾಯವಾಗಿವೆ. ಹಾಗಾಗಿ ಕುರಿ ಸಾಕಣೆ ಈಗ ಕಷ್ಟದ ಕೆಲಸ. ಆದರೂ ಗ್ರಾಮಾಂತರದಲ್ಲಿ ಈಗಲೂ ಎರಡು ಮೂರರಿಂದ ನೂರರವರೆಗೆ ಕುರಿ ಸಾಕುವವರನ್ನು ಕಾಣಬಹುದು. ಗಂಡು ಕುರಿಯನ್ನು ತಗರು ಎಂದು ಕರೆಯುತ್ತಾರೆ. ಒಂದು ಕುರಿ ವರ್ಷದಲ್ಲಿ ಎರಡು ಬಾರಿ ಮರಿ ಹಾಕುತ್ತದೆ. ಇವು ಎಳೆಂಟು ತಿಂಗಳಲ್ಲಿ ಬೆಳೆದು ದೊಡ್ಡವಾಗುತ್ತವೆ. ಒಂದು ಒಂದೂವರೆ ವರ್ಷದಲ್ಲಿ ಮಾಂಸಕ್ಕಾಗಿ ಅನೇಕವು ಹತವಾಗುತ್ತವೆ. ವರ್ಷವಲ್ಲಿ ಎರಡು ಬಾರಿ ಕುರಿಗಳ ತುಪ್ಪಟ ಕತ್ತರಿಸುತ್ತಾರೆ. ಇದರಿಂದ ಕಂಬಳಿ ನೇಯುತ್ತಾರೆ. ಕುರಿಗಳು ಹಗಲು ಹೊತ್ತಿನಲ್ಲಿ ಹುಲ್ಲು ಮೇಯಿದು ಬದುಕುತ್ತವೆ. ದನಗಳ ಹಾಗೆ ರಾತ್ರಿ ಅವುಗಳಿಗೆ ಹುಲ್ಲು ಅಥವಾ ಬೇರಾವುದೇ ಆಹಾರವನ್ನಾಗಲಿ ಹಾಕುವುದಿಲ್ಲ. ಸಾಮಾನ್ಯವಾಗಿ ತಗರು ಮರಿಗಳನ್ನು ಅಂದರೆ ಗಂಡನ್ನು ಕುರಿಮಂದೆಯಿಂದ ಅಗಚಿ ಮಾಂಸಕ್ಕಾಗಿ ಪ್ರತಿ ಆರುತಿಂಗಳು.

ವರ್ಷದೊಳಗೆ ಮಾರಿಬಿಡುತ್ತಾರೆ. ಹೆಣ್ಣು ಮರಿಗಳನ್ನು ಸಾಮಾನ್ಯವಾಗಿ ಮಾರುವುದಿಲ್ಲ. ವಯಸ್ಸಿಗೆ ಬಂದ ಹೆಣ್ಣು ಕುರಿಯನ್ನು ಕೊದಾರಿ ಎಂದು ಕರೆಯುತ್ತಾರೆ. ಕುರಿಗೆ ಕೆಲವು ರೋಗಗಳು ಬರುತ್ತವೆ. ಅವೆಂದರೆ ಸಿಡುಬು, ಭೇದಿ. ಕಸಕಲು ಮುಂತಾದವು. ಸಿಡಬು ಭಯಂಕರ ರೋಗ. ರೋಗಗಳು ಬರದಿರಲೆಂದು ವರ್ಷಕ್ಕೊಮ್ಮೆ ಕುರಿಗಳಿಗೆ ಕಸರೆ ಹಾಕುತ್ತಾರೆ. ಮೇಕೆಯನ್ನು ಕೊಯ್ದು ಅದರ ಜಠರದಲ್ಲಿರುವ ಅರೆ ಜೀರ್ಣವಾದ ಆಹಾರವನ್ನು ಅದರ ರಕ್ತದಲ್ಲಿ ಕಲಸಿ ಹೊಸ ಮಡಕೆಯ ಓಡುಗಳಲ್ಲಿ ಹಾಕುತ್ತಾರೆ. ಊರಿನ ಕುರಿಗಳನ್ನೆಲ್ಲಾ ಒಂದೆಡೆ ಸೇರಿಸಿ ಸುತ್ತಲೂ ನಿಂತು ಓಡುಗಳಲ್ಲಿರುವುದನ್ನು ಕುರಿಗಳ ಮೇಲೆ ಎರಚುತ್ತಾರೆ. ಆಡು ಅನೇಕ ರೀತಿಯ ಗಿಡಗಳನ್ನು ಮೇಯುವುದರಿಂದ ಅದರ ರಕ್ತ ಮತ್ತು ಕಸರೆ ಸೋಂಕಾಪಹಾರಿಯಾಗಿ ಕೆಲಸ ಮಾಡಬಹುದೆಂದು ತೋರುತ್ತದೆ. ಈಗ ಆಧುನಿಕ ವಿಧಾನಗಳು ಬಂದಿದ್ದು ಈ ಕಾಯಿಲೆಗಳಿಗೆ ಲಸಿಕೆ, ಮದ್ದು ಹಾಕುವುದೂ ಜಾರಿಗೆ ಬಂದಿದೆ.

ಕುರಿಗಳಲ್ಲಿ ಅನೇಕ ಜಾತಿ ಮತ್ತು ಸಂತತಿ ಮತ್ತು ಬಣ್ಣಗಳಿವೆ. ಅವುಗಳನ್ನು ಸಾಮಾನ್ಯವಾಗಿ ಬಣ್ಣದ ಮೇಲೆ, ಕೆಲವೊಮ್ಮೆ ಊರು ಪ್ರದೇಶಗಳ ಮೇಲೆ ಗುರುತಿಸುತ್ತಾರೆ. ಬಿಳಿ, ಕೆಂದ, ಕರಿ ಈ ಮೂರು ಬಣ್ಣಗಳಲ್ಲಿ ಕುರಿಗಳನ್ನು ಗುರುತಿಸುವುದುಂಟು. ಇವುಗಳಲ್ಲಿ ಬಿಳಿಯದು ಅತ್ಯುತ್ಕೃಷ್ಟವಾದುದು. ಉಣ್ಣೆ ಮತ್ತು ಮಾಂಸ ಈ ಎರಡೂ ದೃಷ್ಟಿಯಿಂದಲೂ ಬಿಳಿಕುರಿಗೆ ಮೊದಲನೆಯ ಸ್ಥಾನವಿದೆ. ಮಂಡ್ಯ ಜಿಲ್ಲೆಯಲ್ಲಿ ಬಂಡೂರು ಕುರಿ ಬಹಳ ಹೆಸರುವಾಸಿಯಾದ ತಳಿ. ಈ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಂಡೂರಿನಲ್ಲಿ ಈ ತಳಿಯ ಅಭಿವೃದ್ಧಿಗಾಗಿ ಸರ್ಕಾರ ಒಂದು ಫಾರಂ ನಡೆಸುತ್ತಿದೆ. ನಮ್ಮ ದೇಶದಲ್ಲಿ ಆಗತ್ಯಪಡುವ ಮಾಂಸದ ಮುಕ್ಕಾಲು ಪಾಲು ಕುರಿಗಳಿಂದ ಒದಗುತ್ತದೆ ಎಂದು ತಿಳಿದು ಬರುತ್ತದೆ. ಹಾಗೆಯೆ ಚರ್ಮ ಮತ್ತು ಉಣ್ಣೆಯ ಕೈಗಾರಿಕೆಗಳಿಗೂ ಇದು ಸಹಾಯಕವಾಗಿದೆ.

ಕುರಿಗಳನ್ನು ಗುಂಪಾಗಿ ಹಟ್ಟಿಗಳಲ್ಲಿ ಕೂಡುತ್ತಾರೆ. ಬೆಳಿಗ್ಗೆ ಸುಮಾರು 9 ರಿಂದ 10 ಗಂಟೆಯೊಳಗೆ ಮೇಯಲು ಬಿಡುತ್ತಾರೆ. ಈ ಕಾಲಕ್ಕೆ ಗ್ರಾಮಾಂತರದಲ್ಲಿ ದನಕುರಿ ಬಿಡುವ ಹೊತ್ತು ಎಂದೇ ಕರೆಯುತ್ತಾರೆ. ಕುರಿಗಳ ಒಕ್ಕೆ ಒಳ್ಳೆಯ ಗೊಬ್ಬರ. ಕುರಿಗಳನ್ನು ಸ್ವಲ್ಪ ದಡ್ಡ ಪ್ರಾಣಿಗಳೆಂದು ಜನ ತಿಳಿದಂತೆ ತೋರುತ್ತದೆ. ಆದುದರಿಂದಲೇ ಎಲ್ಲಾದರು ಕುರಿ ಕಾಯಿ ಹೋಗು, ನೀನೊಂದು ಕುರಿ ಎಂಬ ಹೇಳಿಕೆಗಳು ಹುಟ್ಟಿಕೊಂಡಿವೆ. ಕುರಿಯ ಕೆಲವು ಲಕ್ಷಣಗಳು ಇದಕ್ಕೆ ಕಾರಣವೆಂದು ತೋರುತ್ತದೆ. ಅವು ತಮ್ಮ ಗುಂಪಿನ ಮುಂದಾಳನ್ನು ಸುಮ್ಮನೆ ಹಿಂಬಾಲಿಸುತ್ತವೆ. ಒಂದು ಕುರಿಯನ್ನು ನೀರಿಗೆ ಎಸೆದರೆ ಎಲ್ಲವೂ ತಪತಪನೆ ನೀರಿಗೆ ಬೀಳುತ್ತವೆ. ಆದುದರಿಂದ ಕುರಿ ಹೊಂದಿರುವವರು ಇಂತಹ ಮುಂದಾಳಾದ ಕುರಿಯನ್ನು ಮುಂದೆ ಬರೋ ಕುರಿ ಎಂದೇ ಕರೆಯುತ್ತಾರೆ. ಕುರಿಗೆ ಎರಡು ಮೊಲೆಗಳಿದ್ದು ಮರಿಗೆ ಅನೇಕ ತಿಂಗಳು ಹಾಲು ಕುಡಿಸುತ್ತದೆ. ಕುರಿಗಳ ಬಗ್ಗೆ ಕೆಲವು ಗಾದೆಯ ಮಾತುಗಳೂ ಇವೆ. ಕುರಿ ಕಾಯಲು ತೋಳನಿಗೆ ಹೇಳಿದರಂತೆ, ಕುರಿಯ ಹಾಗೆ ಹೋಗುತ್ತಾನೆ, ತುಪಟದಾರತಿ ತಂದಳು, ಕುರಿ ನೀರಿಗೆ ಬಿದ್ದಂತೆ ಮುಂತಾದವು. ಕುರಿ ಕತ್ತರಿಸುವಾಗ ಕತ್ತರಿಸಿಯಾದ ಮೇಲೆ ಕತ್ತರಿಯನ್ನು ಕುರಿ ಉಣ್ಣೆಯ ಉಂಡೆಯ ಮೇಲಿಟ್ಟು, ಹಾಲು ಅನ್ನದ ಎಡೆ ಇಟ್ಟು ಪೂಜಿಸುತ್ತಾರೆ. ಗ್ರಾಮಾಂತರಗಳಲ್ಲಿ ಕುರಿಯಪ್ಪ, ಕುರಿಗೌಡ, ಕುರಿಷೈದ

ಪುಂಲಿಂಗವ ಅನ್ವರ್ಥ ನಾಮಗಳೇ ಕೆಲವರಿಗೆ ಅಂಟಿರುತ್ತವೆ. ಆದುದರಿಂದ ಗ್ರಾಮಾಂತರದವಲ್ಲಿ ಕುರಿ ತುಂಬಾ ಉಪಯುಕ್ತ ಪ್ರಾಣಿಯೆಂದು ಪರಿಗಣಿತವಾಗಿದೆ.

ಆಡು ಅಥವಾ ಮೇಕೆಯೂ ಕುರಿಯ ಜಾತಿಗೆ ಸೇರಿದ ಪ್ರಾಣಿಯೆ. ಮನುಷ್ಯ ಈ ಪ್ರಾಣಿಯನ್ನು ಸಾಕುವುದು ಮಾಂಸಕ್ಕಾಗಿಯೆ. ಆಡನ್ನು ಸೊಪ್ಪು ಕುರಿ ಎಂದೂ ಕರೆಯುತ್ತಾರೆ. ಗಂಡನ್ನು ಹೋತ ಎಂದು ಕರೆಯುತ್ತಾರೆ. ಗಡ್ಡದ ಹೋತಕ್ಕೆ ಸಂಬಂಧಿಸಿದ ಜನಪದ ಕತೆಗಳಿವೆ. ಆಡುಗಳಿಗೆ ಕೊಂಬಿರುತ್ತವೆ. ಕುರಿಯಲ್ಲಿ ಗಂಡಿಗೆ ಮಾತ್ರ ಕೊಂಬಿರುತ್ತವೆ. ಆಡಿನಲ್ಲಿ ಹೆಣ್ಣುಗಂಡು ಎರಡಕ್ಕೂ ಕೊಂಬಿರುತ್ತವೆ. ಆಡು ಪ್ರಧಾನವಾಗಿ ಸೊಪ್ಪು ತಿಂದು ಬದುಕುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯ ಮಾತೇ ಇದೆ. ಆಡು ವಿಷದಿಂದ ಸಾಯುವುದಿಲ್ಲ. ಅದಕ್ಕೆ ಕಾರಣ ಅದು ಎಲ್ಲಾ ಜಾತಿಯ ಸೊಪ್ಪು ಮೇಯುವುದು ಎಂದು ಹೇಳುತ್ತಾರೆ. ಆಡು ಕೂಡ ವರ್ಷದಲ್ಲಿ ಎರಡು ಸಾರಿ ಮರಿಹಾಕುತ್ತದೆ. ಆದರೆ ಇದು ಒಂದು ಸಲಕ್ಕೆ ಎರಡು ಮರಿ ಹಾಕುತ್ತದೆ. ಮೂರು ನಾಲ್ಕು ಹಾಕುವುದೂ ಉಂಟು. ಆಡು ಹುಟ್ಟಿ ಕಾಡು ನಾಶ ಎಂಬ ಮಾತಿದೆ. ಸರ್ಕಾರ ಕಾಡುಗಳಿಗೆ ಆಡು ಬಿಡುವುದು ಅಪರಾಧ ಎಂದು ಕಾನೂನನ್ನೇ ಮಾಡಿದೆ. ಆಡಿನ ಹಾಲು ಉತ್ಕೃಷ್ಟ ಎಂಬ ಅಭಿಪ್ರಾಯವಿದೆ. ಗಾಂಧೀಜಿಯವರು ಆಡಿನ ಹಾಲು ಕುಡಿಯುತ್ತಿದ್ದರು. ಆಡು ಜಿಂಕೆಯ ವಂಶಕ್ಕೆ ಸೇರಿದ್ದೆಂದು ಹೇಳುತ್ತಾರೆ. ಈಗಲೂ ಕಾಡಿನ ಆಡುಗಳೂ ಇವೆ. ಆಡಿನ ಚರ್ಮದಿಂದ ಒಳ್ಳೆಯ ಚರ್ಮದ ವಸ್ತುಗಳು ತಯಾರಾಗುತ್ತವೆ. ಆಡು ಪ್ರಧಾನವಾಗಿ ಮಾಂಸಕ್ಕಾಗಿ ಸಾಕುವ ಪ್ರಾಣಿ. ಕರಿಯ ಹೋತನನ್ನು ದೇವರಿಗೆ ಬಲಿ ಕೊಡುವ ಸಂಪ್ರದಾಯವೂ ಇದೆ.

ನಾಯಿ ಗ್ರಾಮಾಂತರದ ಒಂದು ವಿಶಿಷ್ಟ ಪ್ರಾಣಿ. ಇದರ ಮಾಂಸ ಹಾಲು, ಕಡೆಗೆ ಚರ್ಮ ಯಾವುದೂ ಉಪಯೋಗಕಾರಿಯಲ್ಲ. ಆದರೂ ಗ್ರಾಮಾಂತರದಲ್ಲಿ ನಾಯಿ ಇಲ್ಲದ ಮನೆ ಇಲ್ಲ. ನಾಯಿ ವಿಶ್ವಾಸಾರ್ಹ ಪ್ರಾಣಿ. ಪ್ರಧಾನವಾಗಿ ಕಾವಲು ಕೆಲಸವನ್ನು ನಾಯಿ ಅತ್ಯಂತ ಎಚ್ಚರಿಕೆ ಮತ್ತು ದಕ್ಷತೆಯಿಂದ ಮಾಡುತ್ತದೆ. ಇದು ಮಾಂಸಾಹಾರಿ ಪ್ರಾಣಿಯಾದರೂ ಸಾಕಿದವರ ಆಹಾರಕ್ಕೆ ಒಗ್ಗಿ ಬದುಕುತ್ತದೆ. ನಾಯಿಯನ್ನು ಗ್ರಾಮಾಂತರ ಜನರು ನಾರಾಯಣ ಎಂದು ನಂಬುತ್ತಾರೆ. ನಾಯಿ ನಾರಾಯಣ. ನಾಯಿ ನಂಬು ತಾಯಿ ನಂಬು ಅಂದರೆ ತಾಯಿ ಹೇಗೆ ಮೋಸ ಮಾಡುವುದಿಲ್ಲವೋ ಹಾಗೆ ನಾಯಿ ಕೂಡ ಎಂಬುದು ಮಾತಿನ ಅರ್ಥ. ತಾವು ಊಟ ಮಾಡುವಾಗ ಅಗಲ ಮುಂದೊಂದು ನಾಯಿ ಇರಬೇಕೆಂದು ನಂಬುತ್ತಾರೆ. ನಾಯಿ ಈ ಮನೆಯ ಜನ ಹೆಚ್ಚಲಿ ಎಂದು ಹಾರೈಸುತ್ತದೆಯಂತೆ. ಗ್ರಾಮಾಂತರ ನಾಯಿಗಳು ಸಾಮಾನ್ಯವಾಗಿ ಸ್ಥಳೀಯ ತಳಿಯವಾಗಿದ್ದೂ ಒಂದೇ ರೀತಿಯಾಗಿರುತ್ತವೆ. ಈಚೀಚೆಗೆ ಅಲ್ಲಿಯೂ ವಿದೇಶಿ ತಳಿಗಳ ಸಂಪರ್ಕವಾಗಿರುವುದನ್ನು ಕಾಣಬಹುದಾಗಿದೆ. ನಾಯಿ ಒಂದು ಸಾರಿಗೆ ಆರೇಳು ಮರಿಹಾಕುತ್ತದೆ. ಮರಿಗಳು ಹುಟ್ಟಿದ ಇಪ್ಪತ್ತನೆಯ ದಿನಕ್ಕೆ ಕಣ್ಣು ಬಿಡುತ್ತವೆ. ನಾಯಿಯನ್ನು ಪ್ರಧಾನವಾಗಿ ಬೇಟೆಗೆ ಬಳಸುತ್ತಾರೆ. ಅತ್ಯಂತ ವೇಗವಾಗಿ ಓಡಬಲ್ಲ ನಾಯಿ ಮೊಲ, ಜಿಂಕೆ, ಕಾಡು ಕುರಿ, ಕಾಡು ಹಂದಿ ಮುಂತಾದ ಪ್ರಾಣಿಗಳನ್ನು ಹಿಡಿಯಬಲ್ಲದು. ಭಯಂಕರವಾದ ಕಾಡುಹಂದಿ ಮತ್ತು ಕಿರುಬಗಳನ್ನು ತಡೆದು ನಿಲ್ಲಿಸಿದ, ಹೋರಾಡಿದ ಕಥೆಗಳಿವೆ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಆತಗೂರಿನ ಕಾಳಿ ನಾಯಿ ಹಂದಿಯನ್ನು ಕೊಂದು ಸತ್ತ ಕಥೆಯ ಶಾಸನ

ಸುಪ್ರಸಿದ್ಧವಾದುದು. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಗುತ್ತಿಯ ನಾಯಿ ಕಿರುಬನೊಡನೆ ಹೋರಾಡಿದ ಸಂಗತಿ, ಧರ್ಮರಾಯನನ್ನು ಸ್ವರ್ಗಕ್ಕೆ ದಾರಿತೋರಿಸಿ ಕರೆದುಕೊಂಡು ಹೋದ ಕಥೆ ಇವೆಲ್ಲ ನಾಯಿಯ ಪ್ರಾಮುಖ್ಯತೆ ತಿಳಿಸುತ್ತವೆ. ಕುರಿ ಸಾಕಿದವರಿಗೆ ಅವುಗಳು ಕಿರುಬು, ತೋಳ, ನರಿಗಳಿಗೆ ಸಿಗದಂತೆ ಕಾಪಾಡಲು ನಾಯಿ ಅತ್ಯಗತ್ಯ. ನಾಯಿಯ ಆಯುಷ್ಯ ಹತ್ತರಿಂದ ಹದಿನೈದು ವರ್ಷ ಎಂದು ಹೇಳುತ್ತಾರೆ. ನಾಯಿಯ ಬಗ್ಗೆ ಅನೇಕ ನಂಬಿಕೆಗಳಿವೆ. ನಾಯಿಯನ್ನು ಒದೆಯಬಾರದು. ನಾಯಿಗೆ ಒಂದು ತುತ್ತೂ ಹಾಕದೆ ಊಟ ಮಾಡಬಾರದು. ನಾಯಿ ಬೂದಿಯ ಮೇಲೆ ಮಲಗಿದರೆ ಭೂತದ ವಿಷಯಗಳನ್ನೆಲ್ಲಾ ತಿಳಿಯುತ್ತದೆ. ನಾಯಿ ಅತ್ತರೆ ಯಾರಾದರೂ ಆಪ್ತರು ಸಾಯುತ್ತಾರೆ ಮುಂತಾದ ನಂಬಿಕೆಗಳು ನಾಯಿಯ ಜೀವನದ ಸುತ್ತ ಹುಟ್ಟಿ ಹರಡಿಕೊಂಡಿವೆ. ನಾಯಿ ಗ್ರಾಮಾಂತರದ ಒಂದು ವಿಶಿಷ್ಟವೂ ವೈವಿಧ್ಯಪೂರ್ಣವೂ ಆದ ಸಾಕು ಪ್ರಾಣಿಯೆಂದು ಜನಪ್ರಿಯವಾಗಿದೆ. ಇದನ್ನು ಗ್ರಾಮ ಸಿಂಹ ಎಂದು ಕರೆಯುತ್ತಾರೆ.

ಬೆಕ್ಕು ಕೂಡ ಗ್ರಾಮಾಂತರ ಸಾಕು ಪ್ರಾಣಿಗಳಲ್ಲಿ ವಿಶಿಷ್ಟವಾದುದು. ಮನುಷ್ಯನ ಆಹಾರ ಉಡುಪು ಹೊದಿಕೆಗಳಿಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ. ಆದರೂ ಪ್ರತಿ ಮನೆಯಲ್ಲಿಯೂ ಬೆಕ್ಕು ಸಾಕುತ್ತಾರೆ. ರೈತರ ಆಹಾರ ಧಾನ್ಯಗಳನ್ನು ತಿಂದು ನಾಶ ಮಾಡುವ ಇಲಿಗಳ ನಿಯಂತ್ರಣಕ್ಕೆ ಬೆಕ್ಕು ಬೇಕು. ಬೆಕ್ಕು ಹುಲಿಯ ದಾಯಾದಿ ಎಂದು ಹೇಳುತ್ತಾರೆ. ಈ ಬಗ್ಗೆ ಕಥೆಯೊಂದು ಹೀಗಿದೆ. ಹುಲಿ ಬೆಕ್ಕಿನ ಹತ್ತಿರ ಬಂದು ತನಗೆ ಎಲ್ಲಾ ಶಿಕ್ಷಣ ಕೊಡಬೇಕೆಂದು ಕೇಳಿಕೊಂಡಿತು. ಆದರಂತೆ ಬೆಕ್ಕು ಹುಲಿಯನ್ನು ತನ್ನ ಶಿಷ್ಯನಾಗಿ ಸ್ವೀಕರಿಸಿ ಶಿಕ್ಷಣ ಕೊಟ್ಟಿತು. ಕಡೆಗೊಂದು ದಿನ ಬೆಕ್ಕು ಹುಲಿಯನ್ನು ಕುರಿತು ನಿನಗೆ ಬೇಕಾದಂಥದ್ದನ್ನೆಲ್ಲಾ ಕಲಿಸಿದ್ದೇನೆ. ಇನ್ನು ನೀನು ಅದರ ಆಧಾರದಿಂದ ಜೀವನ ಸಾಗಿಸು ಹೋಗು ಎಂದಿತು. ಹುಲಿ ಹಾಗಾದರೆ ನೀನು ಕಲಿಸಬೇಕಾದುದೇನೂ ಇಲ್ಲವೆ? ಎಂದು ಕೇಳಿತು. ಬೆಕ್ಕು"ಇಲ್ಲ" ಎಂದಿತು. ಕೂಡಲೆ ಹುಲಿ ಬೆಕ್ಕಿನ ಮೇಲೆ ಹಾರಿ ಹಿಡಿಯಲು ಹೋಯಿತು. ಬೆಕ್ಕು ತಪ್ಪಿಸಿಕೊಂಡು ಮರ ಹತ್ತಿ ಕುಳಿತು ಪಾರಾಯಿತು. ಅದು ಹುಲಿಗೆ ಮರ ಹತ್ತುವುದನ್ನು ಕಲಿಸಿರಲಿಲ್ಲ. ಇದರಿಂದ ಬೆಕ್ಕು ಬುದ್ಧಿವಂತ ಪ್ರಾಣಿ ಎಂಬುದು ವ್ಯಕ್ತವಾಗುತ್ತದೆ. ಬೆಕ್ಕಿಗೆ ರಾತ್ರಿಯ ಹೊತ್ತು ಕಣ್ಣು ಕಾಣುವುದರಿಂದ ದವಸ ಧಾನ್ಯ ತಿನ್ನಲು ಬರುವ ಇಲಿಗಳನ್ನು ಹಿಡಿದು ತಿಂದು ಹಾಕುತ್ತದೆ. ಸಾಮಾನ್ಯವಾಗಿ ಸಾಕಿದ ಬೆಕ್ಕು ಹಗಲು ಹೊತ್ತು ಅಟ್ಟದ ಮೇಲೋ ಇಲ್ಲವೆ ಅಡುಗೆ ಒಲೆಯ ಬೆಚ್ಚನೆಯ ಜಾಗದಲ್ಲಿಯೋ ಮಲಗಿರುತ್ತದೆ. ಬೆಕ್ಕು ಒಮ್ಮೆಗೆ ಎರಡರಿಂದ ನಾಲ್ಕರವರೆಗೆ ಮರಿಹಾಕುತ್ತದೆ. ಮರಿಗಳು ಅಪಾಯಕ್ಕೀಡಾಗಬಹುದೆಂದು ಅದು ಪದೇ ಪದೇ ಸ್ಥಳ ಬದಲಾಯಿಸುತ್ತಿರುತ್ತದೆ. ಮರಿ ಹಾಕಿದ ಬೆಕ್ಕು ಕ್ರೂರವಾಗಿರುತ್ತದೆ. ಅದು ತನ್ನ ಮರಿಗಳನ್ನು ಬಾಯಲ್ಲಿ ಹಿಡಿದು ಹೋಗುವ ದೃಶ್ಯ-ಅಪೂರ್ವವಾದುದು. ಶಬ್ಧವಾಗದಂತೆ ಅತ್ಯಂತ ಎಚ್ಚರಿಕೆಯಿಂದ ಅದು ಸಂಚರಿಸುತ್ತದೆ. ಆದುದರಿಂದ ಗಲಾಟೆಯಿಲ್ಲದ ಮನುಷ್ಯನನ್ನು ಕೊತ್ತಿಯಂಥವನು ಎಂದು ಕರೆಯುವುದುಂಟು. ಬೆಕ್ಕು ಮಲಮೂತ್ರ ಮಾಡುವುದು ಅನುಕರಣೀಯ. ತನ್ನ ಕಾಲುಗಳಿಂದ ಗುಂಡಿ ತೋಡಿ ಅದರಲ್ಲಿ ಮಲಮೂತ್ರಮಾಡಿ ಮುಚ್ಚುತ್ತದೆ. ಬಹುಶಃ ಇದರಿಂದಲೆ ಹತ್ತಿ ಹೂವು ಕಂಡವರಿಲ್ಲ ಕೊತ್ತಿ ಮಾಸು ಕಂಡವರಿಲ್ಲ ಎಂಬ ಗಾದೆ

ಹುಟ್ಟಿರಬೇಕು. ಎರಡು ಬೆಕ್ಕು ಸೇರಿದರೆ ಜಗಳ ಆರಂಭ. ಇದರಿಂದ ಬೆಕ್ಕಿನ ಜಗಳ ಎಂಬು ಮಾತು ಜಾರಿಗೆ ಬಂದಿದೆ. ಬೆಕ್ಕು ಅಡ್ಡಲಾದರೆ ಅಪಶಕುನ ಎಂದು ನಂಬುತ್ತಾರೆ. ನಮ್ಮ ಜನಪದ ಕಥೆಗಳಲ್ಲಿ ಬೆಕ್ಕುಸಾಕಷ್ಟು ಬರುತ್ತದೆ. ಸಾಕಿದ ಗಿಣಿ ಬೆಕ್ಕಿನ ಪಾಲಾಯಿತು. ಹಾಲು ಬೆಕ್ಕಿನ ಪಾಲಾಯಿತು ಇತ್ಯಾದಿ ಬೆಕ್ಕಿನ ಕಳ್ಳತನದ ಬಗೆಗಿನ ಮಾತುಗಳೂ ಇವೆ. ಬೆಕ್ಕನ್ನು ಬಹಳ ಪ್ರೀತಿಯಿಂದ ಸಾಕಿದ ರಾಜ ರಾಣಿಯರ ಕಥೆಗಳಿವೆ. ಬೆಕ್ಕಿಗೆ ತಮ್ಮ ಆಸ್ತಿ ಪಾಸ್ತಿಗಳನ್ನೆ ಬರೆದ ಪಾಶ್ಚಾತ್ಯರ ಕಥೆಗಳಿಗವೆ. ಅನೇಕ ಜಾತಿಯ ಬಣ್ಣದ ಬೆಕ್ಕುಗಳು ದೇಶಾದ್ಯಂತ ಗ್ರಾಮಾಂತರ ಮತ್ತು ನಗರಗಳಲ್ಲಿಯೂ ಕಂಡುಬರುತ್ತವೆ.

ಪ್ರಾಣಿಗಳಲ್ಲಿ ಹೆಚ್ಚಿನವು ಇನ್ನೂ ಕಾಡುಗಳಲ್ಲಿಯೇ ಇವೆ. ಮನುಷ್ಯ ಪಳಗಿರುವ ಪ್ರಾಣಿಗಳಲ್ಲಿ ದನ, ಎಮ್ಮೆ, ಕುರಿ ಆಡು ಇವುಗಳ ಸಂತತಿಯೂ ಕಾಡಿನಲ್ಲಿ ಹೇರಳವಾಗಿಯೇ ಇವೆ. ಗ್ರಾಮಾಂತರ ಪರಿಸರದಲ್ಲಿ ಇರಲಾಗದ ಆನೆ, ಹುಲಿ ಮುಂತಾದವು ದೊಡ್ಡ ದೊಡ್ಡ ಕಾಡುಗಳಲ್ಲಿವೆ. ಆನೆಯನ್ನು ಮನುಷ್ಯ ಪಳಗಿಸಿ ತನ್ನ ಕೆಲಸಗಳಿಗೆ ಬಳಸುತ್ತಾನಾದರೂ ದಿನನಿತ್ಯದ ಕೆಲಸಗಳಿಗೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮಾಂತರ ಪರಿಸರದಲ್ಲಿ ಗ್ರಾಮ ಜೀವನಕ್ಕೆ ಸತ್ತಿರವಾದ ಕಾಡು ಪ್ರಾಣಿಗಳನ್ನು ಇಲ್ಲಿ ಪರಿಗಣಿಸಲಾಗಿದೆ. ಆನೆ, ಹುಲಿ, ಸಿಂಹ, ಕರಡಿ, ಕಡವೆ ಮುಂತಾದವು ದೊಡ್ಡ ಕಾಡುಗಳಲ್ಲಿ ಮಾತ್ರ ಕಾಣಸಿಗುವುದರಿಂದ ಅವುಗಳ ಬಗ್ಗೆ ಇಲ್ಲಿ ಉಲ್ಲೇಖಿಸಿಲ್ಲ. ಗ್ರಾಮ ಸುತ್ತಮುತ್ತಲ ಬೆಟ್ಟಗುಡ್ಡ, ಕುರುಚಲಕಾಡು, ಕಡೆಗೆ ಕಬ್ಬಿನ ಗದ್ದೆಗಳಲ್ಲಿ ಅನೇಕಾನೇಕ ಕಾಡುಪ್ರಾಣಿಗಳನ್ನು ಕಾಣಬಹುದು. ಇವೆಲ್ಲ ಸಣ್ಣ ಪ್ರಮಾಣದವು. ಇಂತಹ ಗ್ರಾಮಾಂತರ ಕಾಡು ಪ್ರಾಣಿಗಳು ವೈವಿಧ್ಯಮಯವಾಗಿವೆ.

ಗ್ರಾಮಾಂತರ ಕಾಡು ಪ್ರಾಣಿಗಳಿಗೆ ಸಂಬಂಧಿಸಿದಂತೆ ಜಿಂಕೆ ಸಾಧು ಪ್ರಾಣಿಗಳ ಗುಂಪಿಗೆ ಸೇರುತ್ತದೆ. ಇದನ್ನು ಜನಪದರು ಹುಲ್ಲೆಕರ ಎಂದು ಕರೆಯುತ್ತಾರೆ. ಇವುಗಳು ಗುಂಪು ಗುಂಪಾಗಿ ವಾಸಿಸುತ್ತವೆ. ಎರಡು ವಂಶಾವಳಿಗೆ ಸೇರಿದ್ದು ಕೊಂಬಿನವು ಕೊಂಬಿಲ್ಲದವು ಎಂದು ವಿಂಗಡಿಸುತ್ತಾರೆ. ಮೈಮೇಲೆ ಚುಕ್ಕೆ ಇರುವುವನ್ನು ಶಿಷ್ಟರು ಕೃಷ್ಣ ಮೃಗ ಎಂದು ಕರೆಯುತ್ತಾರೆ. ಇದರ ಚರ್ಮ ಪವಿತ್ರವೆಂದು ಸನ್ಯಾಸಿಗಳು ಮಠಾಧಿಪತಿಗಳು ಅದರ ಮೇಲೆ ಕೂರುತ್ತಾರೆ. ಜಿಂಕೆ ಹುಲ್ಲು ತಿಂದು ಬದುಕುತ್ತದೆ. ಅತ್ಯಂತ ವೇಗವಾಗಿ ಓಡುವ ಶಕ್ತಿ ಈ ಪ್ರಾಣಿಗಿದೆ. ಆಡುಕುರಿಯಂತೆ ಇವೂ ವರ್ಷದಲ್ಲಿ ಎರಡು ಬಾರಿ ಮರಿ ಹಾಕುತ್ತವೆ ಎಂದು ಹೇಳುತ್ತಾರೆ. ಆದರೆ ಇವು ಒಂದೇ ಮರಿ ಹಾಕುತ್ತವೆ. ಕಾಡಿನಲ್ಲಿ ಒಂದನ್ನು ಉಳಿಸಿಕೊಳ್ಳುವುದೇ ಕಷ್ಟ. ಜಿಂಕೆಗಳು ಗುಂಪಿನಲ್ಲಿ ವಾಸ ಮಾಡುತ್ತವೆ. ಪ್ರತಿ ಗುಂಪಿಗೂ ಒಂದು ಸಾರಂಗ ಮುಖಂಡನಾಗಿರುತ್ತದೆ. ಇತರ ಸಾರಂಗಗಳೂ ಇರುತ್ತವೆ. ರಾತ್ರಿ ಹೊತ್ತು ತಗ್ಗು ಪ್ರದೇಶದಲ್ಲಿ ತಮ್ಮ ಮೈಬಣ್ಣದಂತಹ ಮಣ್ಣಿರುವ ಕೆಂಬಾರೆಗಳಲ್ಲಿ ಇವು ಮಲಗುತ್ತವೆ. ಗುಂಪಿನ ನಾಯಕ ಮತ್ತಿತರ ಗಂಡು ಜಿಂಕೆಗಳು ಎಲ್ಲಾ ದಿಕ್ಕಿಗೂ ತಿರುಗಿ ಮಲಗುತ್ತವೆಯಾದರೂ ಶತ್ರು ದಾಳಿಯನ್ನು ತುಂಬಾ ಎಚ್ಚರಿಕೆಯಿಂದ ಗಮನಿಸುತ್ತವೆ. ಸೂಚನೆ ಸಿಕ್ಕಿದೊಡನೆಯೆ ಇಡೀ ಗುಂಪು ಮಿಂಚಿನ ವೇಗದಲ್ಲಿ ಪಲಾಯನ ಮಾಡುತ್ತದೆ. ಆದರೂ ಮರಿಗಳು ಅಂಗಊನವಾದವು ಶತ್ರುಗಳ ವಶವಾಗುತ್ತವೆ. ಚಿರತೆ, ತೋಳ, ಕಾಡುನಾಯಿ, ಇವುಗಳ ಶತ್ರುಗಳು. ಬೇಟೆಗಾರರು ಕಾಡಿನ ಮಾಂಸಾಹಾರಿ ಪ್ರಾಣಿಗಳಿಗಿಂತ ಅಪಾಯಕಾರಿ. ಒಮ್ಮೆ ಒಂದು ಜಿಂಕೆಯನ್ನು ಬೇಟೆಯಾಡಿದ ಮೃಗಗಳು ವಾರಗಟ್ಟಲೆ ಮತ್ತೆ

ಬೇಟೆಗೆ ಹೋಗುವುದಿಲ್ಲ. ಆದರೆ ಮನುಷ್ಯ ಹಾಗಲ್ಲ. ಹೀಗೆ ನಾನಾ ಮುಖದ ದಾಳಿಯನ್ನು ಎದುರಿಸಿ ಅವು ಬದುಕಬೇಕು. ಇಪ್ಪತ್ತು ವರ್ಷಗಳ ಹಿಂದೆ ಹಿಂದು ಹಿಂಡಾಗಿ ಕಾಣ ಸಿಗುತ್ತಿದ್ದ ಜಿಂಕೆ ಇಂದು ಅಪರೂಪವಾಗುತ್ತಿದೆ ಎಂದ ಹಿರಿಯರು ಹೇಳುತ್ತಾರೆ. ಈಗೀಗ ಸರ್ಕಾರ ಬೇಟೆಯನ್ನು ನಿಷೇಧಿಸಿ ಕಾನೂನು ಮಾಡಿದ ಮೇಲೆ ಸ್ವಲ್ಪವಾಗಿ ಅಲ್ಲಲ್ಲಿ ಹಿಂದಿನಂತೆ ದೊಡ್ಡ ಗುಂಪಲ್ಲದಿದ್ದರೂ ಐದಾರರ ಒಂದೆರಡು ಜಿಂಕೆಯ ಗುಂಪುಗಳನ್ನಾದರೂ ಕಾಣಬಹುದು ಎಂದು ಜನ ಹೇಳುತ್ತಾರೆ. ಇದರೊಂದಿಗೆ ಮಾನವನ ಭೂಮಿದಾಹದಿಂದಾಗಿ ಜಿಂಕೆಗಳ ಮೇವಿಗೆ ಅಗತ್ಯವಿದ್ದ ಹುಲ್ಲುಗಾವಲು ಮತ್ತು ಕುರುಚಲು ಕಾಡುಗಳು ನಾಶವಾಗಿ ಅವುಗಳ ತಮ್ಮ ಆಹಾರಕ್ಕೆ ಭವಣೆ ಪಡುವ ಸ್ಥಿತಿ ಉಂಟಾಗಿದೆ. ಹೀಗೆ ಒಂದು ಅಪೂರ್ವ ಮೃಗ ಸಂತತಿ ತನ್ನ ಸುತ್ತಲಿನ ನಿರಂತರ ದಾಳಿಯನ್ನು ಎದುರಿಸಿ ಬದುಕುತ್ತಿವೆ.

ಮೊಲ ಮತ್ತೊಂದು ಕಾಡಿನಲ್ಲಿರುವ ಸಾಧು ಪ್ರಾಣಿ. ಇದು ಕಲ್ಲಿನ ಪೊಟರೆಗಳಲ್ಲಿ, ಪೊದೆಗಳಲ್ಲಿ ವಾಸ ಮಾಡುತ್ತದೆ. ಇದು ಸಹ ಸಸ್ಯಾಹಾರಿ ಪ್ರಾಣಿ. ಮೊಲದಲ್ಲಿ ಎರಡು ವಿಧ. ಬಿಳಿ ಮೊಲ, ಕೆಂದ ಮೊಲ ಎಂದು. ಬಿಳಿ ಮೊಲ ತುಂಬಾ ಮೆದು ಸ್ವಭಾವದ್ದಾಗಿದ್ದು ಕಾಡುಗಳಲ್ಲಿ ಅದರ ಸಂತತಿ ಕ್ಷೀಣಿಸುತ್ತಿದೆ. ಈಗೀಗ ಬಿಳಿಮೊಲಗಳನ್ನು ಸಾಕುತ್ತಿದ್ದಾರೆ. ಕೆಂದ ಮೊಲಗಳು ತುಂಬಾ ವೇಗವಾಗಿ ಓಡಬಲ್ಲ ಶಕ್ತಿಯನ್ನು ಹೊಂದಿರುವುದರಿಂದ ಗ್ರಾಮಾಂತರದಲ್ಲಿ ಅವುಗಳ ಸಂತತಿಯೇ ಉಳಿದುಕೊಂಡಿರುವುದು. ರಾತ್ರಿ ಹೊತ್ತು ಇವು ತಮ್ಮ ಗೊತ್ತಿನಿಂದ ಹೊರ ಬಂದು ತಮ್ಮ ಆಹಾರವನ್ನು ಹುಡುಕಿಕೊಳ್ಳುತ್ತವೆ. ಚೆನ್ನಾಗಿ ಬೆಳೆದ ಮೊಲ ಐದಾರು ಕೆ. ಜಿ. ತೂಕವಿರುತ್ತದೆಯೆಂದು ಹೇಳುತ್ತಾರೆ. ಮೊಲ ವರ್ಷಕ್ಕೊಮ್ಮೆ ಎರಡು ಮರಿ ಹಾಕುತ್ತದೆ. ಇದು ಮರಿ ಹಾಕುವ ಕಾಲ ಅಕ್ಟೋಬರ್ ತಿಂಗಳು ಎಂದು ಅಭಿಪ್ರಾಯವಿದೆ. ಆಗ ಹೊಲಗಳು ಬೆಳೆದಿರುತ್ತವೆ. ಅವುಗಳೊಳಗೆ ಜನರಾಗಲಿ ಸಾಕಿದ ಪ್ರಾಣಿಗಳಾಗಲಿ ಬರುವುದಿಲ್ಲ. ಊರ ಹತ್ತಿರದ ರೈತರು ಬೆಳೆ ಹಾಕಿದ ಈ ಹೊಲಗಳಿಗೆ ಕಾಡು ಪ್ರಾಣಿಗಳು ಬರುವುದು ಅಪರೂಪ. ಆದುದರಿಂದ ಬೆಳೆದ ಹೊಲ ಮರಿಗಳಿಗೆ ಸುರಕ್ಷಿತ ಸ್ಥಳವೆಂದು ಆರಿಸಿಕೊಳ್ಳುತ್ತದೆ. ಮರಿಹಾಕಿದ ದಿನ ಅವುಗಳಿಗೆ ಹಾಲು ಕುಡಿಸಿದರೆ ಮತ್ತೆ ಕುಡಿಸುವುದಿಲ್ಲ ಎಂದು ಹೇಳುತ್ತಾರೆ. ಅಂದು ಕುಡಿದ ಗಿಣ್ಣು ಹಾಲೇ ಮರಿಗಳಿಗೆ ಅವು ಚಿಗುರು ಮೇಯುವವರೆಗೆ ಸಾಕಾಗುತ್ತದೆಯಂತೆ. ಹೊಲ ಕುಯ್ಲಿಗೆ ಬರುವ ಹೊತ್ತಿಗೆ ಈ ಮರಿಗಳು ಬೆಳೆದು ಬೆಟ್ಟಗುಡ್ಡ ಸೇರಿಕೊಂಡು ಸ್ವತಂತ್ರ ಜೀವನ ನಡೆಸುತ್ತವೆ.

ಮೊಲದ ಮಾಂಸ ಗ್ರಾಮಾಂತರ ಜನರಿಗೆ ಬಹಳ ಪ್ರಿಯ. ಆದುದರಿಂದ ಅವರು ನಾನಾ ರೀತಿಯಲ್ಲಿ ಮೊಲ ಹಿಡಿಯುತ್ತಾರೆ. ಬಲೆ ಬಿಟ್ಟು ಹಿಡಿಯುತ್ತಾರೆ. ಹೊಲಗಳ ಅಂಚಿನಲ್ಲಿ, ಮೊಲ ಓಡಾಡುವ ಜಾಗಗಳಲ್ಲಿ ಬಲೆ ಬಿಟ್ಟು ಹಿಂದಿನಿಂದ ನಾಯಿ ಮತ್ತು ಮನುಷ್ಯರು ಸೋವುತ್ತಾ ಬರುತ್ತಾರೆ. ಈ ಗಲಾಟೆಗೆ ಹೆದರಿದ ಮೊಲ ಓಡಿಹೋಗಲು ಬಯಸಿ ಬಲೆಯಲ್ಲಿ ಬೀಳುತ್ತದೆ. ಹೀಗೆಯೆ ನಾಯಿ ಬಿಟ್ಟು ಹಿಡಿಸುವುದು, ಮರಸು ಬೇಟೆ, ಉರುಳು ಹಾಕಿ ಹಿಡಿಯುವುದು, ಬಂದೂಕಿನಿಂದ ಹೊಡೆಯುವುದು, ತ್ಕ್ವಾಣ ಬೆಳಕು ಹರಿಸುವುದು ಹೀಗೆ ಅನೇಕ ರೀತಿಯಲ್ಲಿ ಮೊಲ ಹಿಡಿಯುವ ಪದ್ಧತಿ ಗ್ರಾಮಾಂತರದಲ್ಲಿವೆ. ಹೀಗಾಗಿ ಮೊಲದ ಸಂತತಿಯೂ ಅಪಾಯದ ಅಂಚಿನಲ್ಲಿದೆ. ಮೊಲದ ಬಗ್ಗೆ

ಗ್ರಾಮಾಂತರದಲ್ಲಿ ಕೆಲವು ನಂಬಿಕೆಗಳಿವೆ. ಜೀವಂತ ಮೊಲ ಊರೊಳಗೆ ಬರಬಾರದು. ಬಂದರೆ ಊರಿಗೆ ಕೇಡಾಗುತ್ತದೆ ಎಂದು ನಂಬುತ್ತಾರೆ. ಮೊಲವನ್ನು ಕುರಿತಂತೆ ಈ ಮೋರೆ ನೋಡಿದರೆ ಮೊಲ ಓಡಿದಾತೆ. ಮೊಲ ಹಳಿಸಿ ಹೇಲಾಕೆ ಕೂತ. ಇತ್ಯಾದಿ ಒಂದೆರಡು ಗಾದೆಯ ಮಾತುಗಳೂ ಇವೆ. ಇತ್ತೀಚಿಗಿನ ಔಷಧಿ ಸಿಂಪಡಿಕೆ ಈ ಮುದ್ದು ಪ್ರಾಣಿಗಳಿಗೆ ಮಾರಕ ಎಂದು ತಿಳಿದುಬರುತ್ತದೆ. ವಿಷ ಪೂರಿತ ಕ್ರಿಮಿನಾಶಕ ಸಂಪಡಿಸಿದಲ್ಲಿ ಮೇಯ್ದು ಮೊಲಗಳು ಸತ್ತ ಬಗ್ಗೆ ಉದಾಹರಣೆಗಳಿವೆ. ಪ್ರಾಣಿಗಳಲ್ಲಿ ತೋಳ, ನರಿ, ನಾಯಿ, ಕೀರ, ಬೆಕ್ಕು ಮೊಲ ಓಡಿದು ತಿನ್ನುತ್ತವೆ. ಪಕ್ಷಿಗಳಲ್ಲಿ ಲಗಡು, ಗೂಬೆಗಳು ಮೊಲ ಓಡಿಯುತ್ತವೆ. ಈ ಎಲ್ಲಾ ದಾಳಿಗಳನ್ನು ಎದುರಿಸಿಯೂ ತನ್ನ ಸಂತತಿಯನ್ನು ಅಲ್ಪಸ್ವಲ್ಪವಾದರೂ ಉಳಿಸಿಕೊಂಡಿರುವ ಮೊಲಕ್ಕೆ ರಕ್ಷಣೆ ಬೇಕು.

ನರಿ ಗ್ರಾಮಾಂತರ ಕಾಡು ಪ್ರಾಣಿಗಳಲ್ಲಿ ಹೆಸರು ವಾಸಿಯಾದುದು. ಇದು ಮಾಂಸಾಹಾರಿ ಪ್ರಾಣಿ. ಆದರೂ ಒಂದು ರೀತಿಯಲ್ಲಿ ಸಾಧು ಪ್ರಾಣಿಗಳ ಗುಂಪಿಗೆ ಸೇರುತ್ತದೆ. ನರಿ ಉಪಾಯಕ್ಕೆ ತಂತ್ರಕ್ಕೆ ಪ್ರಸಿದ್ಧವಾಗಿದೆ. ನಮ್ಮ ಜನಪದ ಮತ್ತು ಶಿಷ್ಟ ಕಾವ್ಯಗಳಲ್ಲೆಲ್ಲಾ ಇದು ಉಲ್ಲೇಖಗೊಂಡಿದೆ. ಇವು ಸಾಮಾನ್ಯವಾಗಿ ಬೆಟ್ಟಗುಡ್ಡಗಳ ಪೊಟರೆಗಳಲ್ಲಿ ತಮ್ಮ ಗುದ್ದುಮಾಡಿಕೊಂಡು ವಾಸ ಮಾಡುತ್ತವೆ. ಕೆಲವೊಮ್ಮೆ ಕಬ್ಬಿನ ಗದ್ದೆಗಳಲ್ಲಿ ವಾಸ ಮಾಡುವುದೂ ಉಂಟು. ನಾಯಿಯಂತೆ ಒಮ್ಮೆಗೆ ಐದಾರು ಮರಿಗಳನ್ನು ಹಾಕುತ್ತದೆ. ಮಾಂಸಾಹಾರಿಯಾದ ಇದು ಸಣ್ಣ ಪುಟ್ಟ ಪ್ರಾಣಿಗಳನ್ನು ಬೇಟೆಯಾಡುತ್ತದೆ. ಮೊಲ, ಜಿಂಕೆ, ಮರಿಗಳು, ಕುರಿಮರಿ, ಕೋಳಿ, ಹಕ್ಕಿಗಳು ನರಿಯ ಬೇಟೆ. ನಳ್ಳಿ ನರಿಗೆ ಬಹಳ ಪ್ರಿಯವಾದ ಆಹಾರವೆಂದು ಹೇಳುತ್ತಾರೆ. ಬಿಲದಲ್ಲಿರುವ ನಳ್ಳಿಗಳನ್ನು ಅದು ಉಪಾಯದಿಂದ ಓಡಿಯುತ್ತದೆ. ತನ್ನ ಬಾಲವನ್ನು ನಳ್ಳಿಯ ಬಿಲಕ್ಕೆ ತೂರಿಸುತ್ತದೆ. ಏನೋ ಬಂತೆಂದು ನಳ್ಳಿ ಅದನ್ನು ಓಡಿಯುತ್ತದೆ. ಕೂಡಲೆ ನರಿ ತನ್ನ ಬಾಲವನ್ನು ನಳ್ಳಿ ಸಮೇತ ಈಚೆಗೆ ಎಳೆದು ಬಯಲಿಗೆ ಬಿದ್ದ ನಳ್ಳಿಯನ್ನು ಓಡಿದು ತಿನ್ನುತ್ತದೆ. ಮನೆಯ ಓತ್ತಲುಗಳಿಗೆ ನುಗ್ಗಿ ಸಾಕಿದ ಕೋಳಿಗಳನ್ನು ಕದಿಯುತ್ತದೆ. ನರಿಗಳಲ್ಲಿ ಅನೇಕ ಜಾತಿ ಅಥವಾ ವರ್ಗಗಳಿವೆಯೆಂದು ಗ್ರಾಮಾಂತರದ ಓರಿಯರು ಹೇಳುತ್ತಾರೆ. ಮುದ್ದೆನರಿ, ಗುಳ್ಳೆನರಿ, ಕಂಕನರಿ, ಹಕ್ಕಿ ನರಿ ಎಂದು ಇವುಗಳನ್ನು ಗುರುತಿಸುತ್ತಾರೆ.

ನಾಲ್ಕು ವಿಧದ ನರಿಗಳಲ್ಲಿ ಮುದ್ದನರಿ ಅಥವಾ ಮುದ್ದೆನರಿ ಆಲಸ್ಯ ಹಾಗೂ ಸೋಮಾರಿತನಕ್ಕೆ ಹೆಸರಾದುದು. ಬಹುಶಃ ಮೊದ್ದು ನರಿ ಮುದ್ದೆ ನರಿಯಾಗಿಬೇಕು. ಹೊಟ್ಟೆ ತುಂಬಿದಾಗ, ಬೇಟೆ ಸಿಕ್ಕಿದಾಗ ಸಮಯಾಸಮಯವಿಲ್ಲದೆ ಸಂತಸದಿಂದ ಬಳ್ಳು ಹಾಕಿ ಅಪಾಯಕ್ಕೊಳಗಾಗುತ್ತದೆ. ಇದನ್ನು ಮುದ್ದೆಲಕ್ಕಾ ಎಂದೂ ಹಳ್ಳಿಗರು ತಮಾಷೆ ಮಾಡುತ್ತಾರೆ. ಇದು ನಾಯಿಗಿಂತ ಸ್ವಲ್ಪ ದಪ್ಪನಾಗಿ ತೋಳಕ್ಕಿಂತ ಸ್ವಲ್ಪ ಸಣ್ಣವಾಗಿರುತ್ತವೆ. ಇದರ ಅನೇಕ ಅವಿವೇಕದ ಪ್ರಸಂಗಗಳನ್ನು ಕುರಿತು ಗ್ರಾಮಾಂತರದಲ್ಲಿ ಕಥೆಗಳಿವೆ. ಗುಳ್ಳೆ ನರಿ ಮಧ್ಯಮ ದರ್ಜೆಯ ಎತ್ತರವಿರುತ್ತದೆ. ಇದು ಸಮಯ ಸಾಧಕ ತನಕ್ಕೆ ಹೆಸರು ವಾಸಿಯಾಗಿದೆ. ತನ್ನದಲ್ಲದ್ದನ್ನು ತನ್ನದಾಗಿಸಿಕೊಳ್ಳುವ, ಯಾರ ಅರಿವಿಗೂ ಬರದಂತೆ ಕೆಲಸ ಸಾಧಿಸುವ ಗುಣ ಈ ಜಾತಿ ನರಿಯದು. ತನ್ನ ಕೆಲಸಗಳಲ್ಲಿ ಯಾವ ಗುರುತೂ ಉಳಿಯದಂತೆ ಎಚ್ಚರ ವಹಿಸುತ್ತದೆ. ಕಂಕ ನರಿಯನ್ನು ಕಂಕ ಭಟ್ಟ ಎಂದು ಕರೆಯುತ್ತಾರೆ. ಅಂದರೆ ಇದು

ಬುದ್ಧಿಶಕ್ತಿಯಲ್ಲಿ ಬ್ರಾಹ್ಮಣ ಇದ್ದಂತೆ ಎಂಬ ನಂಬಿಕೆಯಿದೆ. ಸಂಸ್ಕೃತ ಮತ್ತು ಭಾರತ ದೇಶದ ಎಲ್ಲಾ ಪ್ರಾದೇಶಿಕ ಭಾಷೆಯ ಜನಪದ ಕಾವ್ಯಗಳಲ್ಲಿಯೂ ಕಂಕನರಿಯ ಪಾತ್ರಗಳು ಬರುತ್ತವೆ. ಪಂಚತಂತ್ರದ ಕರಟಕದಮನಕರಂತೆ ಕನ್ನಡದ ನೂರಾರು ಜನಪದ ಕಥೆಗಳಲ್ಲಿ ನರಿಯಣ್ಣ, ನರಿ ಭಾವ, ನರಿ ಮಾವನ ಪಾತ್ರಗಳು ಬರುತ್ತವೆ. ಈ ನರಿಯನ್ನು ಬುದ್ಧಿವಂತರಾದ ಮಂತ್ರಿಗಳಿಗೆ ಹೋಲಿಸುತ್ತಾರೆ. ಅದು ತಿಳಿಯದ ತಂತ್ರವಿಲ್ಲ, ಉಪಾಯಗಳಿಲ್ಲ ಎಂಬುದು ಜನರ ನಂಬಿಕೆ. ಹಕ್ಕಿನರಿ ಒಂದು ಒಂದೂವರೆ ಅಡಿ ಎತ್ತರದ ಒಂದು ಚಿಕ್ಕ ಪ್ರಾಣಿ. ಇದರ ಬಗ್ಗೆ ವಿಶೇಷತೆಯೇನಿಲ್ಲ. ನರಿಯನ್ನು ಶುಭದ ಸಂಕೇತ ಎಂದು ಪರಿಗಣಿಸಲಾಗಿದೆ. ಯಾವುದೇ ಕೆಲಸಗಳಿಗೆ ಹೋಗುವಾಗ ನರಿ ಮುಖ ನೋಡಿದರೆ ಒಳ್ಳೆಯದಾಗುತ್ತದೆಯೆಂದು ನಂಬುತ್ತಾರೆ. ಯಾವುದೇ ಅಪಾಯದಿಂದ ಪಾರಾದವನನ್ನು ಎಲ್ಲೋ ಬೆಳಗ್ಗೆ ಎದ್ದು ನರಿ ಮುಖ ನೋಡಿದ್ದ ಎಂದು ಹೇಳುತ್ತಾರೆ. ಮಳೆ ಹುಯ್ಯುತ್ತಿದೆ. ಬಿಸಿಲು ಕಾಯುತ್ತಿದೆ ಹಳ್ಳೊಲದಲ್ಲಿ ಗುಳ್ಳೆ ನರಿ ಮದುವೆಯಾಗುತ್ತಿದೆ ಎಂಬುದೊಂದು ಶಿಶುಪ್ರಾಸವಿದೆ. ಜನೋಪಯೋಗಿಯಲ್ಲದಿದ್ದರೂ ನರಿ ಗ್ರಾಮಾಂತರ ಬದುಕಿನಲ್ಲಿ ತನ್ನದೇ ಆದ ಸ್ಥಾನ ಹೊಂದಿದೆ.

ತೋಳ ಮಾಂಸಾಹಾರಿ ಕಾಡು ಪ್ರಾಣಿ. ಆಲ್‌ಶೇಷನ್ ನಾಯಿಗಿಂತ ಸ್ವಲ್ಪ ಉದ್ದವಾಗಿರುತ್ತದೆ. ಆಕಾರ ಮಾತ್ರ ಹಾಗೆಯೆ. ತೋಳ ಮತ್ತು ನಾಯಿಗಳ ಸಂಪರ್ಕವೇ ಆಲ್‌ಶೇಷನ್ ನಾಯಿ ಎಂಬ ಅಭಿಪ್ರಾಯವೂ ಇದೆ. ತೋಳ ತನ್ನ ಆಹಾರಕ್ಕಾಗಿ ಬೇಟೆಯಾಡುತ್ತದೆ. ರೈತರು ಸಾಕಿದ ಆಡು, ಕುರಿ, ಕೋಳಿಗಳನ್ನು ಇದು ಹೊತ್ತುಕೊಂಡು ಹೋಗುತ್ತದೆ. ಒಮ್ಮೆ ತಿಂದು ಬಿಟ್ಟುದನ್ನು ಮತ್ತೆ ತಿನ್ನಲು ಬರುವುದಿಲ್ಲ. ಆದುದರಿಂದಲೆ ಇದರ ವಂಶ ನಾಶವಾಗದೆ ಉಳಿದರುವುದು. ಆದರೂ ಹಿಂದಿನ ಕಾಲದಲ್ಲಿದ್ದಷ್ಟು ತೋಳಗಳು ಈಗಿಲ್ಲವೆಂದು ಹಿರಿಯರು, ಹಳಬರು ಹೇಳುತ್ತಾರೆ. ನಾಯಿಯಂತೆ ತೋಳವೂ ನಾಲ್ಕೈದು ಮರಿಗಳನ್ನು ಹಾಕುತ್ತದೆ. ಈ ಪ್ರಾಣಿಯ ಬಗ್ಗೆ ತೋಳ ಸಾಕಿದ ಮಗು ಊರನಾಯಿ, ತೋಳ, ತೋಳ ಮತ್ತು ಕುರಿ ಮರಿ ಮುಂತಾದ ಕಥೆಗಳಿವೆ. ಹಸಿದ ತೋಳದಂತೆ, ಕುರಿ ಹಿಂಡಿಗೆ ತೋಳನುಗ್ಗಿದಂತೆ, ಕುರಿ ಕಾಯಲು ತೋಳವನ್ನು ನೇಮಿಸಿದಂತೆ, ತೋಳದಂತೆ ತಿನ್ನುವವನು ಮುಂತಾದ ಮಾತುಗಳು ಜನಪದರಲ್ಲಿ ಪ್ರಚಾರದಲ್ಲಿರುವುದನ್ನು ಕಾಣಬಹುದು.

ಕಿರುಬ ಬೆಕ್ಕಿನ ಜಾತಿಗೆ ಸೇರಿದ ಕಾಡು ಪ್ರಾಣಿ. ಇದನ್ನು ಚಿರತೆ ಎಂದೂ ಕರೆಯುತ್ತಾರೆ. ವೇಗವಾಗಿ ಓಡುವ ಒಂದು ರೀತಿಯಲ್ಲಿ ಹುಲಿ ಸಿಂಹಗಳಿಗಿಂತ ಕ್ರೂರ ಪ್ರಾಣಿಯಿದು ಎಂಬ ಅಭಿಪ್ರಾಯವಿದೆ. ಸಾಮಾನ್ಯ ಎತ್ತರದ ಬೆಟ್ಟಗಳ ಪಡೆ ಅಂದರೆ ಕಿರಿದಾದ ಗುಹೆಗಳಲ್ಲಿ ಇವು ವಾಸ ಮಾಡುತ್ತವೆ. ಒಂದು ಗಂಡು ಒಂದು ಹೆಣ್ಣು ಒಟ್ಟಿಗೆ ವಾಸ ಮಾಡುತ್ತವೆ. ಇವು ಒಮ್ಮೆಗೆ ಎರಡು ಮರಿ ಹಾಕುತ್ತವೆ. ಮರಿ ಸಾಕುವ ಬಗ್ಗೆ ಇದರ ಸ್ವಭಾವ ಬೆಕ್ಕಿನಂತೆ. ಯಾರಾದರೂ ಮರಿಗಳನ್ನು ಕಂಡು ಬಿಟ್ಟರೆ ಆ ಕೂಡಲೆ ಮರಿಗಳನ್ನು ಬೆಕ್ಕಿನಂತೆಯೆ ಬೇರೆ ರಹಸ್ಯ ಸ್ಥಳಕ್ಕೆ ಕೊಂಡೊಯ್ಯುತ್ತವೆ. ಮರಿಗಳ ಚಿಕ್ಕವಿದ್ದಾಗ ತಾಯಿ ಅಥವಾ ತಂದೆಯಲ್ಲೊಂದು ಕಾವಲಿದ್ದು ಇನ್ನೊಂದ ಆಹಾರಾನ್ವೇಷಣೆಗೆ ಹೋಗುತ್ತದೆ. ಕಿರುಬ ಮಾಂಸಾಹಾರಿ ಪ್ರಾಣಿ. ಜಿಂಕೆ, ಮೊಲ, ಕಾಡೆಮ್ಮೆ ಮತ್ತು ದನಗಳ ಕರುಗಳನ್ನು

ಬೇಟೆಯಾಡುತ್ತದೆ. ರೈತರ ಸಾಕುಪ್ರಾಣಿಗಳನ್ನು ಹಿಡಿದುಕೊಲ್ಲುತ್ತದೆ. ಇದಕ್ಕೆ ನಾಯಿ ಮಾಂಸ ಬಹಳ ಪ್ರಿಯವೆಂದು ಹಳ್ಳಿಗರು ಹೇಳುತ್ತಾರೆ. ಬೇಟೆಯನ್ನು ನಾಳೆಗಾಗಿ ಬಚ್ಚಿಡುವ ಇದರ ಸ್ವಭಾವವೇ ಇದರ ನಿರ್ನಾಮಕ್ಕೆ ಕಾರಣವಾಗಿದೆ. ತಾನು ಬಚ್ಚಿಟ್ಟ ಬೇಟೆಯನ್ನು ತಿನ್ನಲು ಬರುವ ಇದನ್ನು ಮರಸುಕುಳಿತು, ಕೋವಿ ಕಟ್ಟಿ ಕೊಲ್ಲುತ್ತಾರೆ. ಈಚೆಗೆ ಇನ್ನೂ ಭಯಂಕರವಾಗಿ ಇದು ಕೊಂದು ತಿಂದುಳಿದು ಮುಚ್ಚಿಟ್ಟ ಪ್ರಾಣಿಗಳಿಗೆ ಪಾಲಿಡಾಲ್ ಮುಂತಾದ ವಿಷಗಳನ್ನು ಸಿಂಪಡಿಸಿ ಕೊಲ್ಲುತ್ತಾರೆ. ಕಿರುಬ, ಚಿರತೆ, ಕತ್ತೆ ಕಿರುಬ ಎಂದು ಮೂರು ರೀತಿಯ ಕಿರುಬಗಳಿವೆ. ಕತ್ತೆ ಕಿರುಬ ಕರ್ನಾಟಕದಲ್ಲಿ ಅಪರೂಪ. ಅದರ ಹೆಸರೇ ಸೂಚಿಸುವಂತೆ ನಿಧಾನ ಪ್ರವೃತ್ತಿಯದು. ಮಿಕ್ಕೆರಡು ತಮ್ಮ ಮಿಂಚಿನ ನಡವಳಿಕೆಗೆ ಹೆಸರಾದವು. ಕಿರಬು ಹಿಡಿದಂತೆ ಎಂಬ ಮಾತೇ ಪ್ರಚಾರದಲ್ಲಿದೆ.

ಕಾಡು ಪ್ರಾಣಿಗಳಿಗೆ ಸಂಬಂಧಿಸಿದಂತೆ ಮೂರು ರೀತಿಯ ಹಂದಿಗಳನ್ನು ಗುರುತಿಸುತ್ತಾರೆ. ಕಾಡು ಹಂದಿ, ಮುಳ್ಳುಹಂದಿ, ಚಿಪ್ಪುಹಂದಿ ಈ ಮೂರೂ ಜಾತಿಯ ಹಂದಿಗಳೂ ಕುರುಚಲು ಕಾಡುಗಳಲ್ಲಿ ಕಂಡು ಬರುತ್ತವೆ. ಕಾಡು ಹಂದಿ ಊರು ಹಂದಿಗಳಿಗೆ ಅಷ್ಟೇನೂ ವ್ಯತ್ಯಾಸ ಕಂಡು ಬರುವುದಿಲ್ಲ. ಕಾಡು ಹಂದಿ ಕಾಡಿನಲ್ಲಿ ದೊರೆಯುವ ಗೆಡ್ಡೆ ಗೆಣಸು ತಿನ್ನುವುದರ ಜೊತೆಗೆ ರೈತರು ಬೆಳೆದ ಭತ್ತ, ರಾಗಿ, ಕಡಲೆಕಾಯಿ, ಆಲೂಗೆಡ್ಡೆಗಳ ಬೆಳೆಗಳಿಗೂ ದಾಳಿ ಮಾಡುತ್ತದೆ. ಒಂದು ಸಲಕ್ಕೆ ಹದಿನೈದರಿಂದ ಇಪ್ಪತ್ತರವರೆಗೆ ಮರಿಹಾಕುತ್ತದೆ. ಕಾಡು ಹಂದಿಯ ಬೇಟೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಅಧ್ಭುತವಾಗಿ ವರ್ಣಿತವಾಗಿದೆ. ವಿಷ್ಣುವಿನ ವರಾಹವತಾರ ಕಾಡು ಹಂದಿಯ ಸಂಕೇತ. ಗಂಡನ್ನು ಸಲಗ ಎಂದು ಕರೆಯುತ್ತಾರೆ. ಕಾಡು ಹಂದಿಯ ಬೇಟೆಯ ನಾನಾ ವಿಧಗಳೇ ಗ್ರಾಮಾಂತರದಲ್ಲಿರುವುದನ್ನು ಕಾಣಬಹುದು. ಹಂದಿಯ ಮಾಂಸ ಜನರಿಗೆ ಪ್ರಿಯವಾದುದರಿಂದ ಅವುಗಳನ್ನು ನಾನಾ ವಿಧದಲ್ಲಿ ಬೇಟೆಯಾಡುತ್ತಾರೆ. ಬಲೆಯನ್ನು ಒಡ್ಡಿ ಹಂದಿಯನ್ನು ಬೇಟೆಯಾಡುವುದೊಂದು ಪದ್ಧತಿ. ಹಂದಿ ಬಲೆಗಳೆಂದೇ ಬಲೆಗಳಿರುತ್ತವೆ. ಹಂದಿಗಳಿರುವ ತಾಣವನ್ನು ಮೊದಲು ಗುರುತಿಸುತ್ತಾರೆ. ಅವು ಓಡಾಡುವ ದಿಕ್ಕನ್ನು ಗುರುತಿಸುತ್ತಾರೆ. ಆನಂತರ ಆ ದಿಕ್ಕಿನಲ್ಲಿ ಬಲೆ ಬಿಟ್ಟು ಅದರ ವಿರುದ್ಧ ದಿಕ್ಕಿನಿಂದ ಗಲಾಟೆ ಮಾಡುತ್ತಾ ಸೋವುತ್ತಾ ಬರುತ್ತಾರೆ. ಈ ಗಲಾಟೆ ಕೇಳಿದ ಹಂದಿಗಳು ಗಾಬರಿಗೊಂಡು ಓಡಿ ಬಲೆಯಲ್ಲಿ ಬೀಳುತ್ತವೆ. ಅಲ್ಲೆ ಅವಿತಿದ್ದ ಬರ್ಜಿಯವರು ಅವುಗಳನ್ನು ಇರಿದು ಕೊಲ್ಲುತ್ತಾರೆ. ಬೆಳೆಗಳಿಗೆ ಬರುವ ಹಂದಿಗಳನ್ನು ಬಂಧೂಕ ಕಟ್ಟಿ ಕೊಲ್ಲುತ್ತಾರೆ. ಹಂದಿಗಳು ಬರುವ ದಾರಿಯನ್ನು ಗುರುತಿಸಿ ಸ್ವಲ್ಪ ಎತ್ತರದ ಜಾಗದಲ್ಲಿ ಹಂದಿಯ ತಲೆಗೆ ಏಟು ಬೀಳುವಂತೆ ಒಂದು ಕವೆಗೋಲಿಗೆ ಬಂಧೂಕನ್ನು ನಿಲ್ಲಿಸಿ ಅದರ ಕುದುರೆಯನ್ನು ಎತ್ತಿ ಅದರಿಂದ ಒಂದು ದಾರವನ್ನು ಹಂದಿಗಳ ದಾರಿಗೆ ಅಡ್ಡವಾಗಿ ಕಟ್ಟಿರುತ್ತಾರೆ. ಹಂದಿಗಳು ಬರುವಾಗ ಈ ದಾರ ಅವುಗಳ ಕಾಲಿಗೆ ತೊಡರಿ ಕುದುರೆ ಎಳೆದು ಗುಂಡು ಹಾರುತ್ತದೆ. ಇದನ್ನು ಸಿಡಿ ಎತ್ತುವುದು ಎಂದೂ ಹೇಳುತ್ತಾರೆ. ರಾತ್ರಿ ವೇಳೆಯಲ್ಲಿ ಹಂದಿಗಳು ಕಾಡಿನ ಹಣ್ಣಿನ ಮರಗಳ ಅಡಿಯಲ್ಲಿ ಉದುರಿದ ಹಣ್ಣು ತಿನ್ನಲು ಬರುವುದುಂಟು. ಅಂತಹ ಜಾಗಗಳನ್ನು ಗುರುತಿಸಿ ಅಕ್ಕ ಪಕ್ಕದ ಮರಗಳ ಮೇಲೆ ಮರಸು ಕೂತು ಅವುಗಳು ಬಂದಾಗ ಹೊಡೆಯುತ್ತಾರೆ. ನಾಯಿಗಳನ್ನು ಬಿಟ್ಟುಕೊಂಡು

ಬರ್ಜಿಹಿಡಿದು ಬೇಟೆಯಾಡುವುದೂ ಉಂಟು. ಇಂತಹ ಬೇಟೆಯಲ್ಲಿ ಗೆದ್ದ ಅಥವಾ ಸತ್ತ ಬೇಟೆ ನಾಯಿ ಮತ್ತು ವೀರರ ಕಥೆಗಳು ಶಾಸನಗಳಲ್ಲಿಯೂ ದೊರೆಯುತ್ತವೆ.

ಮುಳ್ಳು ಹಂದಿ, ಚಿಪ್ಪು ಹಂದಿಗಳು ಯಾವ ವಿಧದಲ್ಲಿಯೂ ಕಾಡು ಹಂದಿಯನ್ನು ಹೋಲುವುದಿಲ್ಲ. ಸ್ವಲ್ಪ ಮಟ್ಟಿನ ಆಕಾರ ಹೋಲಿಕೆಯನ್ನು ಮಾತ್ರ ಗುರುತಿಸಬಹುದು. ಮುಳ್ಳುಹಂದಿ ಹೆಸರೇ ಸೂಚಿಸುವಂತೆ ತನ್ನ ಶರೀರದ ತುಂಬ ಆರರಿಂದ ಹತ್ತು ಅಂಗುಲ ಉದ್ದದ ಮುಳ್ಳು ಹೊಂದಿದೆ. ಅಪಾಯ ಒದಗಿದಾಗ ಈ ಮುಳ್ಳುಗಳಿಂದ ಅದು ರಕ್ಷಣೆ ಪಡೆಯುತ್ತದೆ. ಬೆಟ್ಟಗುಡ್ಡಗಳ ಉದ್ದವಾದ ಕಲ್ಲುಸಂದುಗಳಲ್ಲಿ ತನ್ನ ಗೊತ್ತು ಮಾಡಿಕೊಂಡು ವಾಸಿಸುತ್ತದೆ. ಇದೂ ಒಮ್ಮೆಗೆ ನಾಲ್ಕರವರೆಗೆ ಮರಿಹಾಕುತ್ತದೆಯೆಂದು ಹೇಳುತ್ತಾರೆ. ರಾತ್ರಿ ಹೊತ್ತು ಆಹಾರಾನ್ವೇಷಣೆಗೆ ಹೊರಟಾಗ ಇದನ್ನು ಬೇಟೆಯಾಡುತ್ತಾರೆ. ಇದನ್ನು ಹೊಡೆಯಲು ಉದ್ದನೆಯ ಕೋಲನ್ನು ಉಪಯೋಗಿಸುತ್ತಾರೆ. ತಲೆಗೆ ಹೊಡೆದರೆ ಮಾತ್ರ ಸಾಯುವುದೆಂಬ ಅಭಿಪ್ರಾಯವಿದೆ. ಚಿಪ್ಪುಹಂದಿ ಒಂದು ವಿಚಿತ್ರ ಪ್ರಾಣಿ. ಇದರ ಮೈ ಈಚಲು ಮರದ ಹೊರ ಮೈನಂತಿರುತ್ತದೆ. ಇದು ಕಲ್ಲು ಪೊಟರೆಗಳಲ್ಲಿ ಕೆಲವೊಮ್ಮೆ ಅವೇ ಉಡುವೆಗಳಲ್ಲಿ ತೋಡಿ ಮಾಡಿಕೊಂಡ ಗುದ್ದಿನಲ್ಲಿ ವಾಸ ಮಾಡುತ್ತವೆ. ಚಿಪ್ಪುಹಂದಿ ಒಂದೇ ಮರಿ ಹಾಕುವುದೆಂದು ಹೇಳುತ್ತಾರೆ. ಇದು ಹುಳು ಹುಪ್ಪಟೆ ತಿಂದು ಬದುಕುತ್ತದೆ. ಇದನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ಈಗ ಮುಳ್ಳುಹಂದಿ, ಚಿಪ್ಪು ಹಂದಿಗಳ ವಂಶ ನಾಶದ ಅಂಚನ್ನು ತಲುಪಿದೆ.

ಮುಗುಸಿ ಮತ್ತೊಂದು ಕಾಡು ಪ್ರಾಣಿ. ಇವು ಬೆಟ್ಟ ಗುಡ್ಡಗಳ ಕಲ್ಲು ಪೊಟರೆಗಳಲ್ಲಿ, ಪೊದೆಗಳಲ್ಲಿ ವಾಸಮಾಡುತ್ತವೆ. ಇವುಗಳನ್ನು ಕೆಲವು ಕಡೆ ಕೀರ ಎಂದೂ ಕರೆಯುತ್ತಾರೆ. ಬೂದು ಬಣ್ಣದ ಉದ್ದನೆಯ ಕೂದಲುಳ್ಳ ಇವು ಬೆಕ್ಕಿನ ಗಾತ್ರ ಹೊಂದಿವೆ. ಬೆಳೆದ ರಾಗಿಯ ಹೊಲಗಳಲ್ಲಿ ವರ್ಷಕ್ಕೊಮ್ಮೆ ಮರಿ ಹಾಕಿ ಬೆಳೆಕೊಯ್ಲಿಗೆ ಬರುವ ಹೊತ್ತಿಗೆ ಮರಿಗಳು ತಾಯಿಯೊಂದಿಗೆ ತಮ್ಮ ಖಾಯಂ ಸ್ಥಳಗಳಿಗೆ ಹೋಗಲು ಸಮರ್ಥವಾಗಿರುತ್ತವೆ. ಬುಡುಬುಡಿಕೆ, ಗೊಂಬೆರಾಮ, ಹಕ್ಕಿಪಿಕ್ಕಿ ಮುಂತಾದ ಅಲೆಮಾರಿ ಜನಾಂಗದವರು ಮಾಂಸ ಮತ್ತು ಚರ್ಮಗಳಿಗಾಗಿ ಇವುಗಳನ್ನು ಬೇಟೆಯಾಡುತ್ತಾರೆ. ಮುಂಗುಸಿಗು ಹಾವಿಗೂ ಬದ್ಧ ವೈರ. ನಾಗರ ಹಾವನ್ನು ಕಂಡರೆ ಮುಂಗುಸಿ ಅದನ್ನು ಕೊಲ್ಲದೆ ಬಿಡುವುದಿಲ್ಲವೆಂದು ಹೇಳುತ್ತಾರೆ. ಹಾವು-ಕೀರನಂತೆ ವೈರ ಸಾಧಿಸಬಾರದು ಎಂಬ ಮಾತೇ ಗ್ರಾಮಾಂತರದಲ್ಲಿದೆ. ಹಾವಿನ ವಿಷ ತನಗೆ ತೊಂದರೆ ಮಾಡಂತೆ ಇದು ಹಸಿರು ಔಷಧಿ ಅಂದರೆ ಒಂದು ಗಿಡದ ಎಲೆಯನ್ನು ತಿನ್ನುತ್ತದೆಯಂತೆ. ಈ ಔಷಧಿಯ ಗಿಡ ಹತ್ತಿರದಲ್ಲಿಲ್ಲದಿದ್ದರೆ ಅದು ಹಾವನ್ನು ಕೊಲ್ಲಲು ಯತ್ನಿಸುವುದೇ ಇಲ್ಲವಂತೆ. ಕೀರ ಎಡದಿಂದ ಬಲಕ್ಕೆ ಅಡ್ಡಬಂದರೆ ಒಳ್ಳೆಯ ಶಕುನವೆಂದೂ ಬಲದಿಂದ ಎಡಕ್ಕೆ ಬಂದರೆ ಅಶುಭವೆಂದೂ ನಂಬಿಕೆಯಿದೆ. ಇದು ಹುಳು ಹುಪ್ಪಟೆ ಇಲಿ ಮುಂತಾದುವನ್ನು ತಿನ್ನುತ್ತದೆ. ರೈತರು ಸಾಕಿದ ಕೋಳಿಗಳನ್ನು ಹಿಡಿದು ತಿನ್ನುತ್ತದೆ.

ಅಳಿಲು ಗ್ರಾಮಾಂತರ ಪ್ರಾಣಿ ಸಮೂಹದಲ್ಲಿ ಒಂದು ಚಿಕ್ಕ ಪ್ರಾಣಿ. ಗ್ರಾಮಾಂತರ ಜನ ಇದನ್ನು ಅಳಿಕುಂಚ ಎಂದು ಕರೆಯುತ್ತಾರೆ. ಅಳಿಲು ಸಾಮಾನ್ಯವಾಗಿ ಹಣ್ಣು ಬಿಡುವ ಮರಗಳಲ್ಲಿ ವಾಸಿಸುತ್ತದೆ. ಇದೊಂದು ಸಸ್ಯಹಾರಿ ಪ್ರಾಣಿ. ಸಾಮಾನ್ಯವಾಗಿ ಗಂಡು ಹೆಣ್ಣು

ಜತೆಯಾಗಿಯೂ ಇರುತ್ತವೆ. ಮರದ ಪೊಟರೆ ತೆಂಗಿನ ಮರದ ಮೊಟ್ಟೆಯ ಸಂದಿನಲ್ಲಿ ಗೂಡುಕಟ್ಟಿ ಮರಿಹಾಕುತ್ತವೆ. ಒಮ್ಮೆಗೆ ಎರಡು ಮರಿಹಾಕುತ್ತದೆಂದು ಹೇಳುತ್ತಾರೆ ವರ್ಷದಲ್ಲಿ ಎರಡು ಬಾರಿ ಇದು ಸಂತಾನಭಿವೃದ್ಧಿಯಲ್ಲಿ ತೊಡಗುತ್ತದೆ. ಹದ್ದು, ಲಗಡು, ಗೂಬೆ ಕಾಡು ಮತ್ತು ಊರು ಬೆಕ್ಕು, ಹಾವು ಇವರ ಶತ್ರುಗಳು. ಇವು ಅಳಿಲನ್ನು ಹಿಡಿದು ತಿಂದು ಹಾಕುತ್ತವೆ. ಹಕ್ಕಿಪಿಕ್ಕಿ, ಬುಡುಬುಡಿಕೆ ಮುಂತಾದ ಅಲೆಮಾರಿ ಜನಾಂಗದವರು ಅಳಿಲನ್ನು ಬೇಟೆಮಾಡಿ ತಿನ್ನುತ್ತಾರೆ.

ಅಳಿಲಿನ ಬಗ್ಗೆ ಪೌರಾಣಿಕ ಕಥೆಯೊಂದಿದೆ. ಶ್ರೀರಾಮ ಲಂಕೆಗೆ ಹೋಗಲು ಸೇತುವೆ ಕಟ್ಟುವಾಗ ಜಗತ್ತಿನ ಅನೇಕ ಪ್ರಾಣಿಪಕ್ಷಿಗಳು ಆ ಕೆಲಸದಲ್ಲಿ ಸಹಾಯ ಮಾಡಿದವಂತೆ. ಈ ಪುಟ್ಟ ಪ್ರಾಣಿ ಅಳಿಲು ಹಿಂದೆ ಬೀಳಲಿಲ್ಲ. ನೀರಲ್ಲಿ ದೇಹ ಒದ್ದೆ ಮಾಡುವುದು ಅನಂತರ ಮಣ್ಣಿನಲ್ಲಿ ಹೊರಳಾಡಿ ತನ್ನ ದೇಹಕ್ಕೆ ಮಣ್ಣು ಅಂಟಿಸಿಕೊಳ್ಳುವುದು ಅದನ್ನು ಸೇತುವೆಯ ಬಿರುಕುಗಳಲ್ಲಿ ಉದುರಿಸುವುದು. ಈ ಪುಟ್ಟ ಪ್ರಾಣಿಯ ಕೆಲಸದಿಂದ ಸಂತೃಪ್ತನಾದ ಶ್ರೀರಾಮ ಅದರ ಮೈಸವರಿದನಂತೆ. ಅಳಿಲಿನ ಬೆನ್ನ ಮೇಲಿರುವ ಮೂರು ಗೆರೆಗಳು ಶ್ರೀರಾಮನ ಬೆರಳ ಗುರುತು ಎಂದು ಹೇಳುತ್ತಾರೆ. ಈ ಪ್ರಾಣಿಯ ಸಾಹಸ ಅಳಿಲು ಸೇವೆ ಎಂದೇ ಪ್ರಸಿದ್ಧವಾಗಿದೆ.

ಇಲಿಗಳನ್ನು ಗ್ರಾಮಾಂತರ ಪ್ರಾಣಿಗಳ ಗುಂಪಿಗೇ ಸೇರಿಸಬಹುದು. ಇಲಿಗಳಲ್ಲಿ ಅನೇಕ ವಿಧ. ಊರಿಲಿ ಅಥವಾ ಮನೆ ಇಲಿ, ಇವುಗಳನ್ನು ಮೂರು ಭಾಗ ಮಾಡಬಹುದು. ಹೆಗ್ಗಣ, ದೊಡ್ಡಿಲಿ, ಸುಂಡಿಲಿ, ಮೂಗಿಲಿ ಎಂಬ ಒಂದು ಜಾತಿಯೂ ಇದೆ. ಹೊಲದ ಇಲಿಗಳಲ್ಲಿ ಎರಡು ವಿಧ. ತೋಡ ಮತ್ತು ಜೆಕ್ಕಿಲಿ ತೋಡ ಸಾಮಾನ್ಯವಾಗಿ ಗದ್ದೆಯ ಬದುಗಳಲ್ಲಿ ಬಿಲ ಮಾಡಿ ವಾಸ ಮಾಡುತ್ತವೆ. ಇದು ಬಹು ಬುದ್ಧಿವಂತ ಪ್ರಾಣಿ. ನಾಲ್ಕಾರು ಕಡೆ ತೂತು ತಾನೆಲ್ಲಿದ್ದೇನೆಂಬುದು ಶತ್ರುಗಳಿಗೆ ತಿಳಿಯದಂತೆ ಮಾಡುತ್ತವೆ. ಇದು ಬೆಳೆಯನ್ನು ಕಡಿದು ತನ್ನ ಬಿಲದಲ್ಲಿ ತುಂಬಿಟ್ಟುಕೊಳ್ಳುತ್ತದೆ. ಆದುದರಿಂದ ರೈತರು ತಮ್ಮ ಗದ್ದೆಯ ಬದುವಿನಲ್ಲಿ ತೋಡದ ಬಿಲ ಕಂಡರೆ ಕೂಡಲೇ ಅಗೆದು ಅದನ್ನು ಹಿಡಿದು ಹಾಕುತ್ತಾರೆ. ಜೆಕ್ಕಿಲಿ ಹೊಲಗಳ ಬದುಗಳಲ್ಲಿ ತೇವವಿಲ್ಲದ ಕಡೆಯಲ್ಲಿ ವಾಸ ಮಾಡುತ್ತವೆ. ಇವು ಗುಂಪು ಗುಂಪಾಗಿರುತ್ತವೆ. ಇವು ಸಹ ರಾಗಿ ಮುಂತಾದ ಹೊಲದ ಬೆಳೆಯನ್ನು ಕಡಿದು ನಾಶ ಮಾಡುತ್ತವೆ. ಜೆಕ್ಕಿಲಿಯ ಬಿಲಕ್ಕೆ ನೀರು ತುಂಬಿದರೆ ಅವು ಈಚೆ ಬಂದು ಬಿಡುತ್ತವೆ. ಇವುಗಳನ್ನು ಜನರು ತಿನ್ನುತ್ತಾರೆ. ಇನ್ನೊಂದು ಜಾತಿಯ ಇಲಿ ತೆಂಗಿನ ಮರದಲ್ಲಿರುತ್ತದೆ. ಇದನ್ನು ಹ್ಯಾದ ಎಂದು ಕರೆಯುತ್ತಾರೆ. ಇದು ತೆಂಗಿನ ಮರದ ಎಳೆಯ ಕಾಯಿಗಳನ್ನು ಕೊರೆದು ಹಾಳು ಮಾಡುತ್ತದೆ. ಊರಿಲಿ ಮನೆಯ ಹೆಂಚಿನ ಸಂದುಗಳಲ್ಲಿ ವಾಸ ಮಾಡುತ್ತದೆ. ಸುಂಡಿಲಿ ಮನೆಯ ಗೋಡೆಗಳಲ್ಲಿ ಬಿಲ ಮಾಡಿ ಬದುಕುತ್ತವೆ. ಇವುಗಳೂ ರೈತನ ದವಸಧಾನ್ಯ ತಿಂದು ಹಾಕುತ್ತವೆ. ಇಲಿಗಳು ಒಮ್ಮೆಗೆ ಐದಾರು ಮರಿ ಹಾಕುತ್ತವೆ.

ಉಡ ಅಥವಾ ಜಿವಾಜಿ ಹಲ್ಲಿಯ ಆಕಾರದ ಒಂದು ಪ್ರಾಣಿ. ಇದು ಕುರುಚಲು ಗಿಡಗಳ ಕಾಡಿನ ಕಲ್ಲು ಪೊಟರೆಗಳಲ್ಲಿ ವಾಸ ಮಾಡುತ್ತದೆ. ಇದು ತುಂಬಾ ಶಕ್ತಿಯುತವಾದ ಪ್ರಾಣಿ ಎಂದು ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಯುದ್ಧಗಳಲ್ಲಿ ತೊಡಗುವವರು ಇವುಗಳನ್ನು ಸಾಕಿ ಕೋಟೆ ಹತ್ತಲು ಉಪಯೋಗಿಸುತ್ತಿದ್ದರಂತೆ. ಉಡದ ಸೊಂಟಕ್ಕೆ ಹಗ್ಗ ಕಟ್ಟಿ ಅದನ್ನು

ಕೋಟೆಯ ಮೇಲಕ್ಕೆ ಹತ್ತಿಸಿ ಅನಂತರ ಹಗ್ಗ ಹಿಡಿದು ಸೈನಿಕರು ಹತ್ತುತ್ತಿದ್ದರಂತೆ. ಉಡ ಹಿಡಿದಂತೆ ಎಂಬ ಮಾತೇ ಇದೆ. ಇದು ಮೊಟ್ಟೆಯನ್ನು ಸಡಿಲ ಮಣ್ಣಿನಲ್ಲಿ ಗುಂಡಿ ತೋಡಿ ಇಟ್ಟು ಮಣ್ಣು ಮುಚ್ಚುತ್ತದೆ. ಮೊಟ್ಟೆ ಮರಿಯಾಗುವ ವರೆಗೆ ಸರಿಯಾಗಿ ಬಂದೋಬಸ್ತನ್ನು ಕೆರೆಯುತ್ತದೆ. ಮರಿಗಳು ಮೊಟ್ಟೆಯಿಂದ ಈಚೆ ಬರುತ್ತವೆ. ಮರಿಗಳನ್ನು ಸಾಕುವ ಜವಾಬ್ದಾರಿ ತಾಯಿಗಿರುವುದಿಲ್ಲ. ಹೊರ ಬಂದ ಮರಿಗಳು ತಮ್ಮನ್ನು ತಾವು ನೋಡಿಕೊಳ್ಳುತ್ತವೆ. ಉಡದ ಮಾಂಸವನ್ನು ತಿನ್ನುತ್ತಾರೆ. ಉಡದ ಕೊಬ್ಬನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. ಒಂದು ಚೆನ್ನಾಗಿ ಬೆಳೆದ ಉಡ ನಾಲ್ಕೈದು ಕೆ. ಜಿ. ತೂಕವಿರುತ್ತದೆ ಎಂದು ಹೇಳುತ್ತಾರೆ.

ಕೋತಿಯನ್ನು ಮಾನವನ ಸಂಬಂಧಿ ಎಂದು ಹೇಳುತ್ತಾರೆ. ಮಂಗನಿಂದ ಮಾನವ ಎಂಬ ಮಾತೇ ಇದೆ. ಇವು ಗುಂಪಾಗಿ ಗ್ರಾಮಾಂತರ ಮರದ ತೋಪುಗಳಲ್ಲಿ ವಾಸ ಮಾಡುತ್ತವೆ. ಕೋತಿಯು ಒಮ್ಮೆಗೆ ಒಂದೇ ಮರಿ ಹಾಕುತ್ತದೆ. ಹುಟ್ಟಿದ ಕೂಡಲೆ ತಾಯಿಯನ್ನು ಹಿಡಿದು ಬದುಕುವುದು ಮರಿಯ ಕೆಲಸ. ಕೋತಿಗಳ ಗುಂಪಿಗೆ ಒಂದು ಮುಖಂಡ ಕೋತಿ ಇರುತ್ತದೆ. ಎಲ್ಲವೂ ಅದರ ಆದೇಶದಂತೆ ನಡೆಯಬೇಕು. ನಾಯಕನ ಆಜ್ಞೆ ಪಾಲಿಸದಿದ್ದಲ್ಲಿ ಶಿಕ್ಷೆಯಾಗುತ್ತದೆ. ಗುಂಪಿನಿಂದ ಹೊರ ಹಾಕಲಾಗುತ್ತದೆ. ಕೋತಿ ಹನುಮಂತನ ಅವತಾರ ಎಂಬ ನಂಬಿಕೆ ಇರುವುದರಿಂದ ಜನರು ಇವನ್ನು ಕೊಲ್ಲುವುದಿಲ್ಲ. ಕೆಲವು ಕಾಡು ಜನರು ಇವುಗಳನ್ನು ತಿನ್ನುತ್ತಾರೆಂದು ಹೇಳುತ್ತಾರೆ. ಕೋತಿ ಲಂಕೆ ಕೆಡಿಸಿತು. ಮಂಗನ ಕೈಲಿ ಮಾಣಿಕ್ಯ ಕೊಟ್ಟಂತೆ ಮುಂತಾದ ಗಾದೆಯ ಮಾತುಗಳಿವೆ.

ಗ್ರಾಮಾಂತರ ಪ್ರಾಣಿಗಳಿಗೆ ಸಂಬಂಧಿಯೋ ನಂಟರೊ ಆಗಬಹುದಾದ ಸಾವಿರಾರು ಭೂಚರ ಜಲಚರಗಳಿರುವುದು ಕಂಡುಬರುತ್ತದೆ. ಇವುಗಳನ್ನು ಪ್ರಾಣಿಗಳು ಎನ್ನಬಹುದೇ? ಹೇಳುವುದುಕಷ್ಟ. ನಮ್ಮ ಹಳ್ಳಿಗರು ಹಾವು ಹಲ್ಲಿ ಹುಳುಹುಪ್ಪಟೆ ಎಂದು ಹೇಳುತ್ತಾರೆ. ಅವು ಪ್ರತಿಯೊಂದನ್ನು ಹೆಸರಿಸುವುದು ಕಷ್ಟ. ಈ ಗುಂಪನ್ನು ವಿವರವಾಗಿ ಪ್ರಸ್ತಾಪಿಸಿಲ್ಲ. ಕ್ರಿಮಿ ಕೀಟಗಳದೇ ಒಂದು ಬೃಹತ್ ಅಧ್ಯಯನವಾಗುತ್ತದೆ. ಹಾವನ್ನು ತೆಗೆದುಕೊಂಡರೆ ಸಾಕು. ಎಷ್ಟು ಬಗೆಯ ಹಾವುಗಳಿವೆ. ನಾಗರಹಾವು ಅದರಲ್ಲಿಯೆ ಗೋಧಿನಾಗರ ಕಾಳಿಂಗನಾಗರ. ಮಿಡಿನಾಗರ ಇತ್ಯಾದಿ ಹೆಬ್ಬಾವು, ದಾಸಹಾವು ಇದಕ್ಕೆ ಶ್ರೀವೈಷ್ಣವರಂತೆ ನಾಮವಿರುವುದರಿಂದ ಈ ಹೆಸರು ಬಂದಿದೆ ಎಂದು ಹೇಳುತ್ತಾರೆ. ಮಂಡಲದ ಹಾವು. ಕೊಳಕುಮಂಡಲ, ಕೆರೇ ಹಾವು, ಕಟ್ಟಿನಹಾವು, ಹಸಿರು ಹಾವು ಹೀಗೆ ಅನೇಕ ಜಾತಿಯ ಹಾವುಗಳನ್ನು ಕಾಣಬಹುದು.

ಮೀನುಗಳನ್ನು ತೆಗೆದುಕೊಂಡರೂ ಎಷ್ಟೊಂದು ಜಾತಿಯ ಮೀನುಗಳಿವೆ. ಕುಚ್ಚ, ಕೊರವ, ಜಿರಲೆ, ಗಂಡೆ, ಸಸಲು, ಮಳ್ಳಿ, ಬೆಳ್ಳಿ ಹಾವು, ಹೀಗೆ ಗ್ರಾಮಾಂತರ ಕೆರೆಕಟ್ಟೆಯ ಮೀನುಗಳನ್ನು ಜನಪದರು ಗುರುತಿಸುತ್ತಾರೆ. ಈ ಎಲ್ಲವನ್ನು ಜನರು ತಿನ್ನುತ್ತಾರೆ. ಈ ರೀತಿಯ ಪಟ್ಟಿಗೆ ಸೇರುವ ಚೇಳು, ಕಪ್ಪರಶೆಟ್ಟಿ, ಸಾವಿರಕಾಲು ಹುಳು, ಸಗಣಿ ಹುಳು, ಜೇಡ, ನೆಲಪಟ್ಟು, ಈಚಲಹುಳು, ಇರುವೆ, ಗೊದ್ದ ಇತ್ಯಾದಿ ಇತ್ಯಾದಿ. ಇವುಗಳದೇ ಪ್ರತ್ಯೇಕ ಅಧ್ಯಯನ ನಡೆಯಬೇಕು. ಗ್ರಾಮಾಂತರ ಭೂಚರ ಜಲಚರಗಳ ಲೆಕ್ಕ ಸಿಗುವುದೇ ಇಲ್ಲವೆನ್ನಬಹುದು.

ಆನೆ, ಹುಲಿ, ಸಿಂಹ ಇವನ್ನು ಇಲ್ಲಿ ಹೆಸರಿಸಿಲ್ಲ. ಇವು ಈಗ ಅಪರೂಪದ ಪ್ರಾಣಿಗಳಾಗಿ ಕಾಡು ಸೇರಿ ಅಲ್ಲಿಯೂ ನಶಿಸುತ್ತಿವೆ. ಈ ಪ್ರಾಣಿಗಳಿಗೆ ಸರ್ಕಾರ ಈಗ ರಕ್ಷಣೆಯೊದಗಿಸುತ್ತಿದೆ. ಅಲ್ಲದೆ ಇವುಗಳ ಬಗ್ಗೆ ವಿವರವಾದ ಅಧ್ಯಯನವೂ ನಡೆದಿದೆ. ಈ ದೃಷ್ಟಿಯಿಂದ ಈ ಕಿರುಲೇಖನದಲ್ಲಿ ಅವುಗಳನ್ನು ಪ್ರಸ್ತಾಪಿಸುವುದು ಅನವಶ್ಯಕ.

ನಮ್ಮ ಗ್ರಾಮಾಂತರ ಪ್ರಾಣಿ ಪಕ್ಷಿಗಳ ಜೀವನ ವಿಧಾನ ಸಂತಾನ ಕ್ರಮ, ಆಹಾರ ಮುಂತಾದುವುಗಳ ಬಗ್ಗೆ ವಿವರವಾದ ಅಧ್ಯಯನ ನಡೆಯಬೇಕಾಗಿದೆ. ಕಾರಣ ಇವು ನಮ್ಮ ಪ್ರಕೃತಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತವೆ.

* * * * *

ಭಾಗ - ಐದು

ಕೃತಿ ಸಮೀಕ್ಷೆ

'ಹೋರಾಟದ ಬದುಕು' - ಅಪೂರ್ವ ಆತ್ಮಚರಿತ್ರೆ

- ಡಾ. ಎ. ಎಸ್. ವೇಣುಗೋಪಾಲ ರಾವ್

ನಮ್ಮ ಕಾಲದ, ಕನ್ನಡ ಸಾಹಿತ್ಯದ, ಸಮೃದ್ಧ ಬರಹಗಾರರಲ್ಲಿ ಡಾ. ದೇಜಗೌ ಪ್ರಥಮ ಪಂಕ್ತಿಯಲ್ಲಿ ನಿಲ್ಲುವಂಥವರು. ಗೌರವಾನ್ವಿತರಾದ ಮಾಸ್ತಿ ಹಾಗೂ ರಾಷ್ಟ್ರಕವಿ ಕುವೆಂಪು ಅವರೊಡನೆ ಎಣಿಕೆಗೆ ಸಲ್ಲುವವರು. ಕಾವ್ಯ ಅವರ ಆಯ್ಕೆಯ ಪ್ರಕಾರವಲ್ಲದುದರಿಂದ, ಗದ್ಯಶಿಲ್ಪಿ ಎಂದೇ ಅವರು ಹೆಸರಾದುದರಿಂದ, ಬಹುಮಟ್ಟಿಗೆ ಮಾಸ್ತಿಯವರೊಡನೆಯೇ ಅವರನ್ನು ಪರಿಗಣಿಸುವುದು ಹೆಚ್ಚು ಸೂಕ್ತ. ಏಕೆಂದರೆ ದೇಜಗೌ ಅವರ ಸಮೃದ್ಧ ಬರವಣಿಗೆಯಲ್ಲಿ, ಉಪನ್ಯಾಸಗಳು, ಪುಸ್ತಕ ವಿಮರ್ಶೆ, ಆತ್ಮಚರಿತೆ, ಜೀವನ ಚರಿತ್ರೆ, ಪತ್ರಲೇಖನ, ಅನುವಾದಗಳು, ಸಂಪಾದಿತ ಕೃತಿಗಳಿಗೆ ಬರೆದ ಸುದೀರ್ಘ ಮುನ್ನುಡಿಗಳೂ ಸೇರುತ್ತವೆ - ಮಾಸ್ತಿಯವರ ಬರಹದಂತೆ. ಅಲ್ಲದೆ ಮಾಸ್ತಿಯವರಂತೆ ತಮ್ಮದೇ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡವರು ಅವರು. ಪ್ರಾಯಶಃ ಅವರ ಮುಂದೆ ಇಂತಹ ಶೈಲಿಯ ನಿರ್ಮಾಣದ - ಆಯ್ಕೆಯ - ಸಮಸ್ಯೆಯೂ ಪ್ರಮುಖವಾಗಿದ್ದಂತೆ ತೋರುತ್ತದೆ. ಒಂದು ಕಡೆ ಶ್ರೀ ಕುವೆಂಪು ಅವರ 'ಭೀಮ ಸುಂದರ' ಜಲಪಾತ ರಭಸದ, ವಿಜೃಂಭಿತ ಓಜಸ್ವೀಶೈಲಿ, ಮತ್ತೊಂದೆಡೆಗೆ ಮಾಸ್ತಿಯವರ ಪ್ರಸನ್ನ ಮಧುರವಾದ ನಿರಾಭರಣ ಸುಂದರವಾದ ಪ್ರಸಾದೀಶೈಲಿ. ಈ ಎರಡು ಅತ್ತ-ಇತ್ತಗಳಿಂದ ಕಸಿಮಾಡಿಕೊಂಡ, ಸರಸಶೈಲಿಯನ್ನು ದೇಜಗೌ ಉದ್ದೇಶಪೂರ್ವಕವಾಗಿಯೇ ರೂಪಿಸಿಕೊಂಡಂತೆ ತೋರುತ್ತದೆ. ಕುವೆಂಪು ಅವರ ಶೈಲಿಯಲ್ಲಿ ಎಚ್ಚರಿಸುವ ಪಾಂಚಜನ್ಯದ ಮೊಳಗು, ಮಾಸ್ತಿಯವರಲ್ಲಿ ಹಿರಿಯ ಸಂತನ ಉಪದೇಶದ ವಾತ್ಸಲ್ಯ, ದೇಜಗೌ ಅವರಲ್ಲಿ ಅಂತಃಕರಣದ ಸಖ್ಯಸಾಮೀಪ್ಯ - ಆದುದರಿಂದಲೇ ಅದರಲ್ಲಿ ತಿವಿತ, ಬಡಿತದೊಡನೆ ಬೆನ್ನುತಟ್ಟುವ, ಕಣ್ಣುಕೊಳೆ ಕಳೆವ ಸ್ನಿಗ್ಧ ಸಂತೋಷವೇ ಪ್ರಮುಖ. ಒಂದರಲ್ಲಿ ಡಿಂಡಿಮದ ಆಹ್ವಾನ - ಮತ್ತೊಂದರಲ್ಲಿ ನಿರಂತರ ತಂಬೂರಶ್ರುತಿ - ದೇಜಗೌ ಅವರಲ್ಲಿ " ಈಗಿತ್ತ ಆಗತ್ತ ಕಿವಿಯಾಚೆ ದೂರತ್ತ" ಮುತ್ತಿ ಮುತ್ತಿ ಕೆಣಕುವ, ಸಂತೈಸುವ, ಲೇವಡಿಸುವ, ಸಹಕ್ರೀಡಿಸುವ, ವೇಣುನಾದದ ಬಾಗು ಬಳಕುಗಳ ಬಿನ್ನಾಣ. ಅದೊಂದು ಬಗೆಯ ಸಖ್ಯಯೋಗ.

"ದೇಜಗೌ ಅವರ ಗದ್ಯಶೈಲಿ" ಈ ಪ್ರಬಂಧದ ವಸ್ತುವಲ್ಲ. ಆದರೂ 'ಹೋರಾಟದ ಬದುಕನ್ನು' ಓದಲು ತೊಡಗಿದಾಗ ನನ್ನ ಮನಸ್ಸು ಹೇಗೆ ಹೇಗೋ ಹರಿಯಿತು. "ಶೈಲಿಯೇ ಶೀಲ" ಎಂಬುದು ದೇಜಗೌ ಬರಹದಲ್ಲಿಯಂತೂ ಸತ್ಯ. ಅವರ ಬದುಕು-ಬರಹಗಳಲ್ಲಿ ಅಂತಹ ಅದ್ವೈತ ದಾಂಪತ್ಯ. ಮತ್ತೆ ಹೇಳುತ್ತೇನೆ ಅದರ ಪ್ರಮುಖಗುಣ- ಅಂತಃಕರಣ.

'ಹೋರಾಟದ ಬದುಕು' ೧೯೬೪ ರಲ್ಲಿ ಮೊದಲು ಪ್ರಕಟವಾಯಿತಷ್ಟೆ! ಅದರ ವಿಸ್ತಾರ XII+284 ಪುಟಗಳು. ಆಗ ದೇಜಗೌ ಅವರಿಗೆ ಐವತ್ತು ವರ್ಷ.

ಗ್ರಂಥದಲ್ಲೆಲ್ಲೂ ಇದು ಮೊದಲ ಭಾಗ ಎಂಬ ಸೂಚನೆಯಿಲ್ಲ. ಪ್ರಾಯಶಃ ಆತ್ಮಚರಿತೆಯ ಪೂರ್ಣವಿರಾಮ ಎಂದು ಅವರು ಭಾವಿಸಿರಬಹುದು. ಆದರೆ ಹೋರಾಟದ ಬದುಕಿಗೆ ಅಂಥ ವಿರಾಮವೆಲ್ಲಿ? ದೇಜಗೌ ಎಪ್ಪತ್ತರ ಹೊಸ್ತಿಲಲ್ಲಿದ್ದಾಗ ಈ ಕಥನದ ಎರಡನೆ ಭಾಗ. ಒಂದು ನೂರು ಪುಟಗಳು ಪ್ರಕಟವಾದವು. ಆದರೆ ಅದೂ ಸಹ ಧಿಡೀರನೆ. ಥಟಕ್ಕನೆ. ಮುಕ್ತಾಯವಾಗಿ ಒಂದು ಬಗೆಯ ಅಪೂರ್ಣತಾ ಭಾವವನ್ನೇ ಉಂಟುಮಾಡುತ್ತದೆ. ಮುಂದಿನ ಪುಟಗಳಿಗಾಗಿ ಮನಸ್ಸು ಕಾತರವಾಗುತ್ತದೆ. ಈ ಅವಿಶ್ರಾಂತತೆ - ನಿರಂತರ ಚಲನಶೀಲತೆ ದೇಜಗೌ ಅವರ ವ್ಯಕ್ತಿತ್ವದ ಪ್ರಮುಖ ಅಂಶ. ಹೀಗಾಗಿ ಹೋರಾಟದ ಬದುಕು ಇನ್ನೂ ಅಪೂರ್ಣಗ್ರಂಥವೇ. ಅದಕ್ಕೆ ಪೂರ್ಣವಿರಾಮವಿಲ್ಲ.

-೨-

ದೇಜಗೌ ನಮ್ಮ ಸಮೃದ್ಧ ಬರಹಗಾರರಲ್ಲಿ ಪ್ರಮುಖರು ಎಂದು ಆಗಲೇ ಸೂಚಿಸಲಾಗಿದೆ. ಅವರ ಬರಹದ ವಿಸ್ತಾರ ವೈವಿಧ್ಯಗಳು ಬೆರಗುಗೊಳಿಸುವಂತಹುದು. ಸಂಪಾದಿತ ಕೃತಿಗಳನ್ನು ಅದರ ಅಪೂರ್ವ ವಿಮರ್ಶಾತ್ಮಕ ಮುನ್ನುಡಿಗಳನ್ನು ನಿರ್ದಾಕ್ಷಿಣ್ಯವಾಗಿ ಲಜ್ಜೆಯಿಲ್ಲದೆ ಮರೆತರೂ. ಉಳಿದ ಸ್ವಂತಕೃತಿಗಳು ಒಟ್ಟು ಪುಟ ಸಂಖ್ಯೆ ಈಗಾಗಲೇ 17500 ನ್ನೂ ಮೀರಿಯಾಗಿದೆ. ಮಿನಿ-ಮಿಡಿ- ಹನಿಗಳ ಇಂದಿನ ಸಾಹಿತ್ಯ ಕುಕ್ಕುಟ ಶಿಶುಗಳು ನಡುವೆ ಈ ಗಜಗಾತ್ರದ ಗಾಂಭೀರ್ಯವೇ ಮೊದಲ ನೋಟಕ್ಕೆ ವಿಸ್ಮಯಗೊಳಿಸುವಂತಹುದು. ದುರ್ಬಲ ವ್ಯಕ್ತಿಯೊಬ್ಬ ಎರಡೂ ಕೈಗಳನ್ನೂ ಚಾಚಿದರೂ ಈ ಗಾತ್ರವನ್ನು ತಬ್ಬಲಾರ. ಆದುದರಿಂದಲೇ ಈ ಕೃಷಿಯನ್ನು "ಸಮೃದ್ಧಿ" ಎಂದು ಸಂಕೇತಿಸಿದ್ದು. ಅದರಲ್ಲಿನ ವಸ್ತು ವೈವಿಧ್ಯವನ್ನೂ - ಅದು ತೆಕ್ಕೆಗೆ ತೆಗೆದುಕೊಳ್ಳುವ ಪ್ರಕಾರ ವೈವಿಧ್ಯವನ್ನೂ ಆಗಲೇ ಪ್ರಸ್ತಾಪಿಸಲಾಗಿದೆ. 130 ರಷ್ಟಿರುವ ಈ ಗ್ರಂಥ ಬಾಹುಳ್ಯದಲ್ಲಿ ಮಹತ್ವದ "ಒಂದು" ಕೃತಿಯ ಆಯ್ಕೆ ನಿಜಕ್ಕೂ ಕಂಗೆಡಿಸುವಂತಹುದೇ. ಆದರೂ ನನ್ನದೇ ವಿಶಿಷ್ಟ ಕಾರಣಗಳಿಗಾಗಿ ಇಂದಿಗೂ ನಾನು ಕನಸಿನಲ್ಲಿ ಕರೆದು ಕೇಳಿದರೂ "ಹೋರಾಟದ ಬದುಕು" ಕೃತಿಯನ್ನೇ ಆರಿಸಿಕೊಳ್ಳುತ್ತೇನೆ. ಅದು ಅಂತಹ ಅಪೂರ್ವ ಅನನ್ಯ ಕೃತಿ. ಈ ತೀರ್ಮಾನಕ್ಕೆ ನನ್ನ ಕಾರಣಗಳು ಒಂದಲ್ಲ - ಹಲವು.

ದೇಜಗೌ ಅವರ ಇತರ ಕೃತಿಗಳು ನಿಜಕ್ಕೂ ಅಮೂಲ್ಯವೇ - ಸಂದೇಹವಿಲ್ಲ. ಆದರೆ ದೇಜಗೌ ಅವರ ಕರ್ತೃತ್ವ ಶಕ್ತಿ ಇದ್ದರೆ. ಕೃತಿ ಹಾಗೂ ಕಾವ್ಯ ವಸ್ತುವಿನಲ್ಲಿ ಅವರಿಗಿರುವ ಆ ತನ್ಮಯತೆ ಇದ್ದರೆ. ವಿಷಯ ಸಂಗ್ರಹಕ್ಕಾಗಿ ಅವರು ಪಡುವ ಪಾಡು - ತೋರುವ ಶ್ರದ್ಧೆ ದಣಿವಿಲ್ಲದ ಶ್ರಮ ಪಡಲು ಸಿದ್ಧವಿದ್ದರೆ. ಆ ಹೃದಯದ ಔದಾರ್ಯ - ಸರ್ವಂಕಷ ಗ್ರಹಣ ಶಕ್ತಿಯೂ ಇದ್ದರೆ. ಬೇರೊಬ್ಬ ಲೇಖಕ ಅಂಥ ಕೃತಿಗಳನ್ನು ರಚಿಸಲು ಯತ್ನಿಸಬಹುದೇನೊ! ಅವರು ಅರ್ಧ ಶತಮಾನದಲ್ಲಿ ಮಾಡಿದ ಲೇಖನ ವ್ಯವಸಾಯವನ್ನು ಒಂದು ಶತಮಾನದಲ್ಲಿ ಅಥವಾ ಮತ್ತೊಂದು ಜನ್ಮದಲ್ಲಿ ಮುಟ್ಟಿ ಮುಂದುವರಿಸಬಹುದೇನೋ!! ಅಂಥ ಮಹತ್ವಾಕಾಂಕ್ಷಿಗಳೂ ಇದ್ದಾರು. ಆದರೆ ಆ "ಹೋರಾಟದ ಬದುಕು"? ಅದನ್ನು ಬಾಳುವ ಛಲ. ಅದು ಬಿಟ್ಟ ಫಲ. ಈ ಫಲಿತ ಯಜ್ಞದ ನೋವು. ನಲಿವು. ದುಗುಡ ದುಮ್ಮಾನ , ಮಾನಾಪಮಾನ. ಸಿದ್ಧಿಯ ಸಂತೋಷ. ಸಂತೃಪ್ತಿ - ಈ ಎಲ್ಲವನ್ನೂ ತೆರೆದ ಹೃದಯದಿಂದ ಸ್ನೇಹಾರ್ದ್ರ ಮನಸ್ಸಿನಿಂದ ಅಪ್ಪಟ

ಪ್ರಾಮಾಣಿಕತೆಯಿಂದ ಓದುಗರೊಡನೆ ಹಂಚಿಕೊಳ್ಳುವ ಆ ಔದಾರ್ಯ. ಇವೆಲ್ಲವೂ ಕಂಡರಿಸಿದಂತಿರುವ "ಬದುಕು"ನ್ನು 'ಹೀಗೆ' ಚಿತ್ರಿಸಬಲ್ಲ ಕೃತಿ ಯಾವುದು? ಬೇರೆ ಯಾರು ಅಂಥ ಬದುಕನ್ನು ಬರೆಯಬಲ್ಲರು? ಅದನ್ನು ಒಂದು ಸಂಸ್ಕೃತಿಯ ಇತಿಹಾಸವೇ ಆಗಿಸಬಲ್ಲರು? ಹೀಗಾಗಿ ಹಸಿದ ಬ್ರಾಹ್ಮಣನಂತೆ ಈ ರಸಾರ್ದ್ರಗವಳವನ್ನು ಅದೆಷ್ಟು ಬಾರಿ ಸವಿದು ಚಪ್ಪರಿಸಿದ್ದೆನೋ ನನಗೇ ತಿಳಿಯದು!

ಪ್ರಾಮಾಣಿಕತೆಯ ಮಾತು ಬಂತಲ್ಲವೆ ? ಮೊದಲೇ ಹೇಳಿ ಬಿಡುತ್ತೇನೆ. ಹಲವಾರು ಆತ್ಮ ಚರಿತ್ರೆಗಳ ಬಗ್ಗೆ ನನಗೆ ಒಂದು ಬಗೆಯ ಗುಮಾನಿ ಇದ್ದೇ ಇದೆ. ಒಬ್ಬ ವ್ಯಕ್ತಿಯ ಸಮಗ್ರ ವ್ಯಕ್ತಿತ್ವವನ್ನು ಕಂಡರಿಸುವಲ್ಲಿ ಆತ್ಮಚರಿತ್ರೆ- ಜೀವನಚರಿತ್ರೆ ಇವುಗಳಲ್ಲಿ ಯಾವುದನ್ನು ಹೆಚ್ಚು ಅಥೆಂಟಿಕ್ ಎಂದು ಪರಿಗಣಿಸಬಹುದು? ಎಲಾ ಇದಾವ ದುಷ್ಟಪ್ರಶ್ನೆ? ಆತ್ಮಚರಿತ್ರೆಯೇ ತಾನೆ? ತನ್ನನ್ನು ಕುರಿತು ತಾನಲ್ಲದೆ ಬೇರಾರು ಹೆಚ್ಚು ಸತ್ಯವನ್ನು ಕಾಣಬಲ್ಲರು? ನುಡಿಯಬಲ್ಲರು? ಎಂದು ಧಿಡೀರನೆ ನುಡಿಯ ಬೇಡಿ. ಈ ಅಭಿಪ್ರಾಯ ಮೇಲುನೋಟಕ್ಕೆ ತೇಲುನೋಟಕ್ಕೆ ನಿಜದ ಭ್ರಾಂತಿಯನ್ನುಂಟುಮಾಡಬಹುದು. ರಾಗದ್ವೇಷಗಳಿಂದ ಕೂಡಿದ ಮನಸ್ಸಿಗೆ ತನ್ನನ್ನು ತಾನು ಕಾಣುವುದು-ಕಂಡರೂ ನುಡಿಯುವುದು ಅಷ್ಟೇನೂ ಸುಲಭವಲ್ಲ.

ಮಹಾತ್ಮ ಗಾಂಧಿಯಂತಹ, ಹರಿವಂಶರಾಯ ಬಚನ್ ಅಂತಹ, ಹೋಗಲಿ ರಿಬೆಲ್ ಲೇಖಕಿ ಕಮಲಾದಾಸಳಂತಹ ಅಪ್ಪಟ ಪ್ರಾಮಾಣಿಕತೆ-ಧೈರ್ಯ ಅದೆಷ್ಟು ಮಂದಿಯಲ್ಲಿದೆ? ಸ್ವಮೋಹ, ಅನ್ಯರನ್ನು ಕುರಿತ ರಾಗದ್ವೇಷಗಳಿಂದ ಬಿಡಿಸಿಕೊಳ್ಳುವುದು ಅಷ್ಟು ಸುಲಭವೆ ? ತನ್ನದೇ ಮನದ ಕಗ್ಗತ್ತಲೆಯ ಖಂಡಗಳಿಗೆ ಬೆಳಕು ಹಾಯಿಸುವ ಧೈರ್ಯವಾದರೂ ಎಲ್ಲರಿಗೂ ಎಲ್ಲಿ? ಅವೆಲ್ಲ ತೀರಾ ಪರ್ಸನಲ್ - ಸಾರ್ವಜನಿಕ ಮಹತ್ವ ಪಡೆದವಲ್ಲ ಎಂಬ ಸಿಹಿಯಾದ ಕುಂಟು ನೆಪದಿಂದ ಅದೆಷ್ಟು ಮಂದಿಯ ನೆನಪು ಅಂಥ ಸಂಗತಿಗಳ ಬಗ್ಗೆ ಉದ್ದೇಶಪೂರ್ವಕವಾಗಿ ಮಸಕಾಗುವುದಿಲ್ಲ? ಅಲ್ಲದೇ ಮುಂದೆಂದೋ ಸ್ಮರಿಸಿಕೊಂಡು ಬರೆವಾಗ ಭ್ರಮೆ- ಆಲಸ್ಯ- ಮರಹುಗಳ ದೈಹಿಕ -ಮಾನಸಿಕ ದೌರ್ಬಲ್ಯಗಳಿಂದ ವ್ಯಕ್ತಿ- ಸಂಗತಿಗಳು ವಿರೂಪವಾಗಬಹುದು. ಅಸ್ಪಷ್ಟವಾಗಬಹುದು. ಗೋಜಲುಗೋಜಲಾಗಬಹುದು. ಹೀಗಾಗಿ ಆತ್ಮಚರಿತ್ರೆಯೂ ಅಧಿಕೃತ ಜೀವನ ಚರಿತ್ರೆಯ ಪ್ರಮುಖ ಆಕರವಾಗಬಹುದಲ್ಲದೆ ತನಗೆ ತಾನೇ ಸ್ವಯಂಪೂರ್ಣವೂ ಪೂರ್ಣ ಅಧಿಕೃತವೂ ಆಗದಿರುವ ಸಂದರ್ಭಗಳೇ ಅಧಿಕ. ಈ ಎಲ್ಲ ವಿವರಗಳನ್ನೂ ಸೋದಾಹರಣವಾಗಿ ಸಮರ್ಥಿಸಬಲ್ಲೆನಾದರೂ ಅದಕ್ಕೆ ಇಲ್ಲಿ ಎಡೆಯಿಲ್ಲ!

-೩-

ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ "ಹೋರಾಟದ ಬದುಕು" ಅಚ್ಚರಿಗೊಳಿಸುವಷ್ಟು ಪ್ರಾಮಾಣಿಕವೂ, ಸ್ವವಿಮರ್ಶಕವೂ, ಆಗಿದೆ. ಈ ತೆರೆದ ಹೃದಯದ ದಾಖಲೆಯೇ ಅದನ್ನು ಅಷ್ಟು ಆತ್ಮೀಯವಾಗಿಸಿದೆ. ಒಂದು ಪ್ರಸಂಗವನ್ನು ನೆನಪಿಸಿಕೊಳ್ಳುತ್ತೇನೆ. ಇತ್ತೀಚೆಗೆ ಬೆಂಗಳೂರು ದೂರದರ್ಶನವಲ್ಲಿ ದೇಜಗೌ ಅವರ ಸಂದರ್ಶನ ಪ್ರಸಾರವಾಯಿತು. ಸಂದರ್ಶಕಿ ಸೋದರಿ ನಾಗರತ್ನ ಅವರು. ನನ್ನೊಡನೆ ಹಿರಿಯ ಬಂಧುವೊಬ್ಬರು ಅದನ್ನು ಈಕ್ಷಿಸುತ್ತಿದ್ದರು. ಅವರೇನೂ ದೇಜಗೌ ಅವರನ್ನು

ಚೆನ್ನಾಗಿ ತಿಳಿದವರಲ್ಲ. ಅವರ ಕ್ಷೇತ್ರ ಬೇರೆಯಾದುದರಿಂದ ಆ ಬಗ್ಗೆ ವಿಶೇಷ ಆಸಕ್ತಿಯನ್ನೂ ತಳೆದವರಲ್ಲ. ಪೂಜ್ಯಗುರುಗಳು ಅಂದು ನಿರೂಪಿಸಿದ ಸಂಗತಿಗಳಲ್ಲಿ ಕೆಲವು "ಬದುಕು" ಪುಟಗಳಲ್ಲಿ ಬರೆದಂತಹುವೇ. ಅದನ್ನು ಕೇಳಕೇಳುತ್ತಾ ಈ ಬಂಧುಗಳು ಒತ್ತಿಬರುವ ಕಂಬನಿಯನ್ನು ಅದುಮಲು ಪ್ರಯತ್ನಿಸುತ್ತಾ, ಕಡೆಗೂ ಸಾಧ್ಯವಾಗದೆ ಪಕ್ಕದ ಕೋಣೆಗೆ ಎದ್ದು ಹೋಗಿ ಬಿಟ್ಟರು - ಮುಖಕ್ಕೆ ಮುಸುಕಿಹಾಕಿ ಮಲಗಿ ಬಿಟ್ಟರು. ಮುಂದೆ ನನ್ನಿಂದ "ಬದುಕು" ಕೃತಿಯನ್ನು ಪಡೆದು, ಓದಿ, ತುಂಬ ಉದ್ವೇಗದಿಂದ ನನ್ನ ಕೈ ಹಿಡಿದು "ಅಯ್ಯಾ ನಾನು ಸಾಹಿತಿಯಲ್ಲ, ನಿನ್ನ ಹಾಗೆ ಮಾತನಾಡೋದಿಕ್ಕೆ ಬರೆಯೋದಕ್ಕೆ ನನಗೆ ಬರದು. ಆದರೆ ಈ ವ್ಯಕ್ತಿ ಇಷ್ಟು ಹಿರಿಯ ಚೇತನ ಅಂತ ನನಗೆ ತಿಳಿದೇ ಇರಲಿಲ್ಲ - ಮನಸ್ಸು ಅಲುಗಾಡಿ ಹೋಯಿತು" ಎಂದು ಮತ್ತೊಮ್ಮೆ ಭಾವಗದ್ಗದರಾದರು. ಇಗೋ, ಹೀಗೆ ಮನಸ್ಸನ್ನು ಅಲುಗಾಡಿಸಿ ಬಿಡುವ, ನೋಡನೋಡುತ್ತಲೇ ಕರಗಿಸುವ ಗುಣ "ಬದುಕು"ವಿನಲ್ಲಿದೆ. ಒಂದು ಕೃತಿ ಮಹತ್ವದ ಕೃತಿಯಾಗಲು ಇದಕ್ಕಿಂತ ಮುಖ್ಯ ಕಾರಣ ಬೇರೆ ಯಾವುದು? ಈ ಮಹತ್ವವಿರುವುದು ಅದು ಅಪ್ಪಟ ಪ್ರಾಮಾಣಿಕವಾಗಿ ರುವುದರಿಂದಲೇ ಎಂದು ನನ್ನ ಭಾವನೆ.

"ಗುಡಿಸಿಲಿನಿಂದ ಗಂಗೋತ್ರಿಗೆ" ಎಂಬುದು ಇಂದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಗಾದೆಮಾತೇ ಆಗಿದೆ. ಸಾಧನೆ-ಸಿದ್ಧಿಯನ್ನು ಹಾದಿಯಲ್ಲಿನ ಕಂಟಕಗಳನ್ನು ಗೆದ್ದು- ನಿಲ್ಲುವ ಛಲದ ಏರುವೆಯನ್ನು, ಜ್ಞಾನ ದಾಹವನ್ನೂ ಅದರ ತೀರುವೆಯನ್ನೂ ಏಕಕಾಲದಲ್ಲಿ ಧ್ವನಿಸಿಬಿಡುವ ನುಡಿಗಟ್ಟು, ಅದು. "ಹೋರಾಟದ ಬದುಕು" ಮೊದಲ ಭಾಗ ಹಾಗೆನ್ನುತ್ತೇನೆ ದೇಜಗೌ ಅವರ ಜನ್ಮ-ಪರಿಸರ-ಪ್ರಭಾವ-ಪಯಣ- ನಿಲ್ದಾಣಗಳ ಭವ್ಯಕಥೆಯನ್ನು ತುಂಬ ಹೃದಯಂಗಮವಾಗಿ ಸೆರೆ ಹಿಡಿಯುತ್ತದೆ. ಅವರ ತಲೆಮಾರಿನ ಹಲವಾರು ವಿದ್ಯಾರ್ಥಿಗಳು ತುಂಬ ಶ್ರದ್ಧಾವಂತರಾದ "ವಾರಾನ್ನ - ಬೀದಿ ಬೆಳಕು" ವಿದ್ಯಾರ್ಥಿಗಳೇ ಆದರೂ, ದೇಜಗೌ ನಡೆದು ಬಂದ ಹಾದಿ ತೀರಾ ಬೇರೆಯೇ ಆದದ್ದು ಎನ್ನುವುದು ಕಣ್ಣುಕುಕ್ಕುವಂತೆ ಗಮನಕ್ಕೆ ಬರುತ್ತದೆ. (ಹೀಗಾಗಿ ಅದೊಂದು ವಿಶಿಷ್ಟ ಸಾಂಸ್ಕೃತಿಕ ಇತಿಹಾಸವೇ ಆಗುತ್ತದೆ)

ಈ ಕೃತಿಯಲ್ಲಿ ಕಾಣುವ ಅಪ್ಪಟ ಪ್ರಾಮಾಣಿಕತೆಯಿಂದ ನಿಷ್ಠುರ ಸ್ವವಿಮರ್ಶೆಯಿಂದ, ಈ ಲೇಖಕರು ನಮಗೆ ನೋಡನೋಡುತ್ತಾ ಅತ್ಯಂತ ಆಪ್ತರಾಗಿ ಬಿಡುತ್ತಾರೆ. ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು.

- ಬದುಕು ಗುಣದೋಷಗಳ ಬೆರಕೆ. ದೋಷಗಳನ್ನು ನಿರೂಪಿಸುವಾಗ ಕೈ ಸಹಜವಾಗಿ ನಡುಗುತ್ತದೆ; ಮನಸ್ಸು ಹಿಂಜರಿಯುತ್ತದೆ, ಧೈರ್ಯ ಕುಸಿಯುತ್ತದೆ. ಆದರೂ ನನ್ನರಿವಿಗೆ ನಿಲುಕಿದ ದೋಷ-ದೌರ್ಬಲ್ಯಗಳನ್ನೆಲ್ಲ ಸೂಚ್ಯವಾಗಿಯೋ ಅಡಕವಾಗಿಯೋ ಸ್ಪಷ್ಟವಾಗಿಯೋ ತಿಳಿಸಿದ್ದೇನೆಂಬ ವಿಶ್ವಾಸ ನನಗಿದೆ. (ಪುಟ VII)
- ನನ್ನದು ಆದರ್ಶದ ಬಾಳಲ್ಲ. ಆದರ್ಶವನ್ನು ಕಣ್ಣೆದುರಿಗಿಟ್ಟುಕೊಂಡು ಮಿಡಿದ ಬಾಳು. (VII)
- ಐವತ್ತು ದಾಟಿ ಅರವತ್ತರ ಕಡೆ ಮುಖ ಮಾಡಿರುವ ಈ ವಯಸ್ಸಿನಲ್ಲಿ ರಕ್ತಗತವಾಗಿ ಬಂದಿರುವ ಸ್ವಭಾವವನ್ನು ಬದಲಿಸುವುದು ಸಾಧ್ಯವೇ? ಹುಟ್ಟು ಸುಳಿ ಬೋಳಿಸಿದರೆ

ಹೋದೀತೆ? ಆ ಸಿಡುಕು ನನಗನಿಷ್ಟವಾದರೂ ಬೇರೆಯವರಿಗೆ ಅರಿಷ್ಟವಾಗದಿರಲೆಂಬುದೇ ನನ್ನ ಪ್ರಾರ್ಥನೆ. (ಪುಟ ೫)

- ನನಗಂತೂ ಸ್ವಜಾತಿ ಜನರಿಂದಾಗಿರುವ ಅನ್ಯಾಯವೇ ಹೆಚ್ಚು. ನನಗೆ ಬ್ರಾಹ್ಮಣರಿಂದೊದಗಿರುವ ಉಪಕಾರ, ದೊರಕಿರುವ ಸಹಕಾರ, ಬೇರೆಯವರಿಂದ, ಅದರಲ್ಲಿಯೂ ಸ್ವಜಾತಿಯವರಿಂದ ದೊರಕಿಲ್ಲ. (ಪುಟ ೧೦)
- ನಸುಕಿನಲ್ಲಿ ಕಡಲೆಕಾಯಿ ಕಿತ್ತು ಕೊಂಡು ತಿನ್ನುತ್ತಾ ಪಯಣ ಬೆಳೆಸುತ್ತಿದ್ದೆವು. ಈ ಚೋರಕಾರ್ಯದಲ್ಲಿ ನಾನು ಭಾಗಿಯಾಗುತ್ತಿರಲಿಲ್ಲ - ಆದರೆ ಕಳ್ಳತನದ ಮಾಲಿನಲ್ಲಿ ಮಾತ್ರ ಪಾಲುಗೊಳ್ಳುತ್ತಿದ್ದೆ ! (ಪುಟ ೩೩)
- ಪ್ರತಿದಿನ ಸಂಜೆ ಅವನ ಜೊತೆ ವಾಯುವಿಹಾರ ಹೋಗುತ್ತಿದ್ದೆ. ದಾರಿಯಲ್ಲಿ ಸಿಗುತ್ತಿದ್ದ ಹೆಣ್ಣುಗಳ ಅಂಗಾಂಗವರ್ಣನೆಯಲ್ಲಿ ಅವನು ರಮಿಸುತ್ತಿದ್ದ. ಅವನ ಆ ವರ್ಣನೆ ನನಗೆ ಅಹಿತವೆನಿಸುತ್ತಿರಲಿಲ್ಲ. ಮನಸ್ಸಿನ ತಳದಲ್ಲಿ ಗಸಿಗಟ್ಟಿದ್ದ ಬಯಕೆಗಳು ಮೆಲ್ಲಮೆಲ್ಲನೆ ಮೇಲಕ್ಕೇಳುತ್ತಿದ್ದವು..... ಇಸ್ಪೀಟಾಟದನಂತರ ಒಮ್ಮೊಮ್ಮೆ ವಿಶ್ವೇಶ್ವರಪುರದ ಕೆಲವು ಮನೆಗಳ ಕಾಂಪೌಂಡಿಗೆ ಮುತ್ತಿಗೆ ಹಾಕಿ ಹಣ್ಣು ಹಂಪಲುಗಳನ್ನು ಕದ್ದು ತರುತ್ತಿದ್ದೆವು.(ಪುಟ ೬೩- ೪)
- ಬಿಡುವು ವೇಳೆಯಲ್ಲಿ ಹುಡುಗಿಯರ ಅರ್ಜಿಗಳನ್ನು ತೆಗೆದು ಅವರ ಕುಲಗೋತ್ರಗಳನ್ನು ತನಿಖೆಮಾಡುವುದು, ಒಕ್ಕಲಿಗ ಹುಡುಗಿಯರ ವಿಳಾಸವನ್ನು ಗುರುತು ಹಾಕಿಕೊಳ್ಳುವುದು ನನ್ನ ಒಂದು ಹವ್ಯಾಸವಾಗಿತ್ತು. (ಪುಟ ೯೪)
- ಅವಳಿಂತು ತ್ರಿಕರಣಪೂರ್ವಕವಾಗಿ ಶುದ್ಧವಾಗಿದ್ದಾಳೋ ನಾನಂತೆಯೇ ಶುದ್ಧನಾಗಿರುವೆನೇ ಎಂಬ ಬಗ್ಗೆ ಮತ್ತೆ ಮತ್ತೆ ಯೋಚಿಸಬೇಕಾಗಿದೆ. ನನ್ನನ್ನು ನಾನೇ ಪರೀಕ್ಷಿಸಿಕೊಳ್ಳಬೇಕಾಗಿದೆ. (ಪುಟ ೧೧೬) (ಪತ್ನಿಯನ್ನು ಕುರಿತು)
- ಅವಳನ್ನು ನೋಡುವ ಸಲುವಾಗಿ ವಾರಕ್ಕೊಮ್ಮೆ ತಿಮ್ಮಸಂದ್ರಕ್ಕೆ ಹೋಗುತ್ತಿದ್ದೆ. ಶನಿವಾರ ಮದ್ಯಾಹ್ನ ಮೂರುಗಂಟೆಗೆ ಕಛೇರಿ ಕೆಲಸ ಮುಗಿಸುತ್ತಿದ್ದೆ. ನಾನೆಲ್ಲಿಯೂ ಹೊರಗೆ ಹೋಗಿಲ್ಲವೆಂಬ ಭ್ರಾಂತಿ ಸೂಪರಿಂಟೆಂಡೆಂಟರ ಮನಸ್ಸಿನಲ್ಲಿ ಮೂಡುವಂತೆ ಫೈಲು ಬಿಚ್ಚಿ ಕಲ್ಲು ಹೇರಿ, ನಿಲ್ದಾಣದ ಕಡೆಗೆ ಹೋಗುತ್ತಿದ್ದೆ. ಸೋಮವಾರ ಬೆಳಗ್ಗೆ ಮದ್ದೂರಿನ ಷಟಲ್ ಗಾಡಿಯಲ್ಲಿ ಓಂತಿರುಗುತ್ತಿದ್ದೆ. "ಏನ್ರೀ ಜವರೇಗೌಡರೆ ಶನಿವಾರ ಎಲ್ರೀ ಹೋಗಿದ್ರಿ? " ಎಂದು ಸೂಪರಿಂಟೆಂಡೆಂಟರು ಕೇಳಿದಾಗ "ಏನ್ ಸಾರ್, ರಿಕಾರ್ಡ್ಸ್ ಕೋಣೆಗೆ ಹೋಗಿದ್ದೆ ನಾನು ಬರುವುದರೊಳಗಾಗಿ, ನೀವು ಬೀಗ ಹಾಕಿಕೊಂಡು ಹೋಗುವುದೇ?" ಎಂದು ಅವರನ್ನೇ ಪ್ರಶ್ನೆ ಕೇಳಿ ಅವರು ನಿರುತ್ತರರಾಗುವಂತೆ ಮಾಡುತ್ತಿದ್ದೆ . . . ಎಂಥ ಜರೂರು ಕೆಲಸವಿದ್ದರೂ ಅದನ್ನೆಲ್ಲ ಮುಚ್ಚಿಟ್ಟು ಕಣ್ತಪ್ಪಿಸಿ ಹೋಗುತ್ತಿದ್ದೆ. ವಾರಾಂತ್ಯದಲ್ಲಿ ಹೆಂಡತಿಯ ದರ್ಶನ ನನಗೆ ಮುಖ್ಯವಾಗಿತ್ತೇ ಹೊರತು ಸರ್ಕಾರೀ ಕೆಲಸವಲ್ಲ. ಸರ್ಕಾರೀ ಸೇವೆಯೇ ರಾಷ್ಟ್ರ ಸೇವೆ. ರಾಷ್ಟ್ರಸೇವೆಗಿಂತ ಮಿಗಿಲಾದ ಸೇವೆ ಮತ್ತೊಂದಿಲ್ಲವೆಂಬ, ಸ್ವಸುಖದ ಲೋಲುಪತೆಯಲ್ಲಿ ಕರ್ತವ್ಯಭ್ರಷ್ಟನಾಗಬಾರದೆಂಬ ತತ್ವ ವಿಷಯಲಂಪಟನಾಗಿದ್ದ ನನಗೆ ಆಗ ಅರಿವಾಗಿರಲಿಲ್ಲ (ಪುಟ ೧೧೭)

ಪ್ರಾಯಶಃ ಬಾಪೂಜಿಯವರ "ಸತ್ಯ ಶೋಧನೆ" ಯಲ್ಲಿ ಮಾತ್ರವೇ ಕಾಣಬಹುದಾದ ಈ ಸ್ಫಟಿಕಶುದ್ಧ ಆತ್ಮಕಥನದಿಂದ."ಬದುಕು" ಮುಗಿಲೆತ್ತರಕ್ಕೆ ಏರುವ ಕೃತಿಯಾಗಿ ಬಿಡುತ್ತದೆ. ಮುಂದೆ ಈ ದಂಪತಿಗಳು ಬೆಳೆದ ಎತ್ತರ -ಬಿತ್ತರ ಸರಳವೂ ತ್ಯಾಗಮಯವೂ ನಿಷ್ಕಳಂಕವೂ ಆದ ಜೀವನಾದರ್ಶಗಳು. ಕನ್ನಡಿಗರ ಕಣ್ಣು ಮುಂದಿನ ಕಥೆಗಳೇ ಆಗಿವೆ. ಮನೆಮಠವನ್ನೂ. ಕೈಗೆ ಬಂದ ಅಷ್ಟಿಷ್ಟು ಗೌರವಧನವನ್ನೂ ಕನ್ನಡದ ಬೆಳವಣಿಗೆ - ಸಾಹಿತ್ಯ - ಸಂಶೋಧನೆ - ಪ್ರಚಾರ ಪ್ರೋತ್ಸಾಹಗಳಿಗೆ ಮೀಸಲಿಟ್ಟದ್ದು. ಅಧಿಕಾರದ ಸುಪ್ಪತ್ತಿಗೆಯನ್ನೇರಿದಾಗಲೂ ನಿವೃತ್ತಿಯ ನಂತರವೂ ನಡೆಸುತ್ತಿರುವ ಶುದ್ಧ -ಸತ್ಯ ಕಾಯಕ ಈ ನಾಡು ತಿಳಿಯದ ಸಂಗತಿಯಲ್ಲ. ತಮ್ಮ ಪತ್ನಿಯ ಬೆಳ್ಳಿ ಒಡವೆಗಳನ್ನೂ ಜಾನಪದ ವಸ್ತು ಸಂಗ್ರಹಾಲಯಕ್ಕೆ ಧಾರೆ ಎರೆದ ಸಂಗತಿಯೂ ಭಾಗ ಎರಡರಲ್ಲಿ ನಿರೂಪಿತವಾಗಿದೆಯಷ್ಟೆ. ಕುಲಪತಿಗಳ ನಿವಾಸಕ್ಕೆ ರತ್ನಗಂಬಳಿಗಳ ಅವಶ್ಯಕತೆಯಿಲ್ಲ "ಸಭಾಂಗಣಕ್ಕೆ ರತ್ನಗಂಬಳಿ ಅನವಶ್ಯಕ. ತೀರಾ ಅವಶ್ಯವೆಂದು ಲೋಕೋಪಯೋಗಿ ಇಲಾಖೆಗೆ ತೋರಿದ್ದಾದರೆ, ಕುಲಪತಿ ಭವನದ ರತ್ನಗಂಬಳಿಗಳನ್ನೊಯ್ದು ಕ್ರಾಫರ್ಡ್‌ಭವನದ ಕೋಣೆಗಳಲ್ಲಿ ಹಾಸಬಹುದು" ಎಂದು ಸಿಂಡಿಕೇಟ್ ಅಲಂಕರಣಕ್ಕೆ ಸಂಬಂಧಿಸಿದ 'ಜರೂರು' ಕಡತದಲ್ಲಿ ದೇಜಗೌ ಟಿಪ್ಪಣಿ ಬರೆದರಂತೆ. ದೇಜಗೌ - ಎಪ್ಪತ್ತರ ಹೊಸ್ತಿಲಲ್ಲಿ ಪುಟ -೨೩೧ ಕುಲಪತಿಯಾದ ತರುಣದಲ್ಲಿ ಮಂಗಳೂರಿಗೆ ಪರಿಶೀಲನಾಕಾರ್ಯಕ್ಕೆ ತೆರಳಿದಾಗ, ಊಟೋಪಚಾರಗಳ 'ಮಾಮೂಲನ್ನು' ಒದಗಿಸಿದುದಕ್ಕೆ ಬೇಸರಗೊಂಡು, ತುಂಬ ವ್ಯಥಿತರಾಗಿ ಬಿಲ್ಲು ಬಂದ ನಂತರ ಅದರ ಮೊತ್ತವನ್ನು ಬೇಬಾಕಿಯಾಗಿ ಪಾವತಿ ಮಾಡಿದರಂತೆ. (ಅದೇ: ಪುಟ ೨೮೭).

ಭಾಗ ಎರಡು ಇಂತಹ ವ್ಯಕ್ತಿ- ವಸ್ತು - ಘಟನೆಗಳ ದಟ್ಟವಾದ ವಿವರಗಳನ್ನು ಒಳಗೊಂಡಿದೆ. ಇದು ಸಹಜವೇ. ಏಕೆಂದರೆ ಈ ಭಾಗ ಒಳಗೊಂಡದ್ದು ಲೇಖಕರು ಪ್ರಾಧ್ಯಾಪಕರಾಗಿ, ಪರೀಕ್ಷೆಗಳ ಕಂಟ್ರೋಲರ್ ಆಗಿ, ನಿರ್ದೇಶಕರಾಗಿ, ಕುಲಪತಿಗಳಾಗಿ ತಮ್ಮನ್ನು ತಾವು ಆಡಳಿತ ವ್ಯವಸ್ಥೆಯಲ್ಲಿ ಗಾಢವಾಗಿ ತೊಡಗಿಸಿಕೊಂಡ ಕಾಲಾವಧಿಯನ್ನು. ಆದರೆ ಅಲ್ಲಿಯೂ ಆತ್ಮೀಯವಾದ ಸಂಗತಿಗಳು ಸಮೃದ್ಧವಾಗಿವೆ. ಅದನ್ನು ಮತ್ತೆ ಗಮನಿಸಬಹುದು. ಭಾಗ ಒಂದು ಮಾತ್ರ ಅತ್ಯಂತ ಸ್ನಿಗ್ಧವಾದ. ಹೃದಯವನ್ನು ತುಂಬಿಬಿಡುವ ಬಾಲ್ಯ-ಯೌವನಗಳ-ವೈಯಕ್ತಿಕ ಅನುಭವಗಳನ್ನು ದಾಖಲಿಸುತ್ತದೆ. ಬೆಂಗಳೂರು ಶಿವಮೊಗ್ಗ ತುಮಕೂರುಗಳಂತಹ ದೊಡ್ಡ ಊರುಗಳಲ್ಲಿ ಅದರಲ್ಲೂ ಮಧ್ಯಮ ವರ್ಗದ ಹಾರುವ ಕುಟುಂಬದ ಪರಿಸರದಲ್ಲಿ ಬೆಳೆದ ನನ್ನಂಥವನಿಗಂತೂ ಅದು ತೀರಾ ಅಪರಿಚಿತವಾದ ಗ್ರಾಮೀಣ ಲೋಕವನ್ನೇ ಬಿಚ್ಚಿ ಹರಡಿ ಬಿಡುತ್ತದೆ. ಬೆದರಿಸುತ್ತದೆ. ಸೋಜಿಗಗೊಳಿಸುತ್ತದೆ. ನಾಚಿಸುತ್ತದೆ. ಹನಿಗಣ್ಣಾಗಿಸುತ್ತದೆ.

-೭-

ದೇಜಗೌ ಆತ್ಮಚರಿತೆಯಲ್ಲಿ ಬಾಲ್ಯ- ಕೌಮಾರ್ಯಗಳ ಕಥನ ಮುಗ್ಧತೆಯ ಆಗರ - ಕುಕ್ಕಿ ಕೊಲ್ಲುವ ಬಡತನ. ಉಳಿದವರ ಏಳಿಗೆಯನ್ನು ಬಯಸದ ವರ್ಚಿಷ್ಟ ಶ್ರೀಮಂತ ಗೌಡರ ಶೋಷಣೆ. ಹುಡುಗನಲ್ಲಿ ತುಂಬಿದ ಅದಮ್ಯ ವಿದ್ಯಾದಾಹ. ಅದಕ್ಕೆ ಬಂದೆರಗುತ್ತಿದ್ದ ಅಡಚಣೆ. ಬಂದೊದಗುತ್ತಿದ್ದ ದೈವೀಕೃಪೆ. ಇಂಥ ವಿವರಗಳು ವಾಚಕನನ್ನು ಹಿಡಿದು ಕರುಳನ್ನು ಹಿಂಡಿಬಿಡುತ್ತವೆ. ದೇಜಗೌ ಬರೆಯುತ್ತಾರೆ :

- ಚಕ್ಕೆರೆಯಲ್ಲಿ ಮುನ್ನೂರು ಕುಟುಂಬಗಳು ತುಂಬ ಗರೀಬರು. ಬಹುತೇಕ ಜನ ಶ್ರೀಮಂತರ ಬಳಿ ಸಾಲಗಾರರು. ಓೀಗಾಗಿ ವರ್ಷದಲ್ಲಿ ಮೂರು ತಿಂಗಳು. ಈ ಮೂರು ತಿಂಗಳಲ್ಲಿ ಒಪ್ಪತ್ತು ಅಂಬಲಿ ಸೊಪ್ಪಿನ ಊಟವಾದರೆ. ಮತ್ತೊಂದು ಹೊತ್ತು ಉಪವಾಸ. (ಪುಟ ೧೬-೧೭).
- ಕ್ರುದ್ಧರಾದ ಹಣವಂತರು ಶಾಲೆಯನ್ನೇ ತೆಗೆಸಲು ಹವಣಿಸಿದ್ದುಂಟು. ಅವರ ಕಣ್ಣೆದುರಿಗೆ ಮಡಿ ಬಟ್ಟೆ ಉಟ್ಟ ಯಾವ ತರುಣನೂ ತಿರುಗಾಡುವಂತಿರಲಿಲ್ಲ. ಅಂಥ ತರುಣನ ತಂದೆಯನ್ನು ಗೌಡಮುಖಂಡರು ಕರೆಸಿ "ನಿನ್ನ ಮಗ ಬಹಳ ಕೊಬ್ಬಿದ್ದಾನೆ. ಸಾಬೂನಿನಿಂದ ಬಟ್ಟೆ ಮಡಿಮಾಡಿಕೊಂಡು ಊರಲ್ಲೆಲ್ಲ ಮೆಡೆಗಾರಿಕೆ ಮಾಡುತ್ತಾನೆ. ಅವನಿಗೆ ಸರಿಯಾಗಿ ಬುದ್ಧಿ ಹೇಳು. ಇಲ್ಲವಾದರೆ ತಕ್ಕ ಪ್ರಾಯಶ್ಚಿತ್ತವಾದೀತು' ಎಂದು ಕಟ್ಟೆಚ್ಚರಿಕೆ ನೀಡುತ್ತಿದ್ದರು. (ಪುಟ ೧೯)
- ನನ್ನನ್ನು ಐದು ವರ್ಷವಾಗುತ್ತಲೇ ಆಡು ಕಾಯಲು ಕಳುಹಿಸುತ್ತಿದ್ದರು. ನಾನು ಆಡುಗಳನ್ನು ಮೇಯಲು ಬಿಟ್ಟು ಹುಡುಗರೊಂದಿಗೆ ಶಾಲೆಗೆ ಹೋಗಿ ಕುಳಿತುಕೊಳ್ಳುತ್ತಿದ್ದೆ . . . ತಂದೆ ಶಾಲೆಯ ಬಳಿ ಬಂದು ನನ್ನನ್ನು ಹೊರಗೆ ಕರೆದರು. ಓಪ್ಪಲಿ ನೇರಳೆ ಕಡ್ಡಿಯಿಂದ ಚೆನ್ನಾಗಿ ಥಳಿಸಿದರು. "ಬಡ್ಡಿಮಗನೆ ನಿನ್ನ ಇಸ್ಕೂಲಿಗೆ ಹೋಗು ಅಂದೋರು ಯಾರು? ಎಷ್ಟು ದಿನ ನಿನಗೆ ಬ್ಯಾಡಾ ಅಂತ ಹೇಳೋದು?" ಎಂದು ಹಲ್ಲುಮುರಿ ಕಚ್ಚಿ ನಾನು ಬಾಯಿ ಬಾಯಿ ಬಡಿದು ಕೊಂಡು ನೆಲದಿಂದ ಮೇಲಕ್ಕೆ ಹಾರಿ ಹಾರಿ ಬೀಳುತ್ತಿದ್ದರೂ ಹೊಡಿದರು . . . . ಬೆತ್ತಲೆ ತೊಡೆಯಮೇಲೆ ಏಟು ಬಿದ್ದಾಗ ಬಾಸುಂಡೆ ಬುರುಬರನೆ ಎದ್ದು ಆ ಭಾಗ ಹೊಪ್ಪಳಿಯಾಗುತ್ತಿತ್ತು. (ಪುಟ ೨೩)
- ಆಡಿನ ಕೊಟ್ಟಿಗೆಯಲ್ಲಿ ಹುಟ್ಟಿದವನಿಗೆ ಯಾರು ತಾನೇ ಜಾತಕವನ್ನು ಬರೆದಿಟ್ಟಾರು? ದೊಡ್ಡವನಾದ ಮೇಲೆ ಒಮ್ಮೆ ತಂದೆ ತಾಯಿಯರನ್ನು ಕೇಳಿದಾಗ ಅವರು ಹೇಳಿದ್ದರು. "ಹೋಗೋ ನೀನು ಹುಟ್ಟಿದ್ದು ಯಾವಾಗ ಅಂತ ನಾವೇನು ಬರೆದು ಇಟ್ಟುಕೊಂಡಿದ್ದೇವಾ? ನೀನು ಹುಟ್ಟಿದಾಗ ಹುಟ್ಟಿದೆ. ಅದೆಲ್ಲ ನೋಡಿಕೊಳ್ಳೋಕೆ ನಾವೇನು ದೋಯಿಸರೆ?" (ಪುಟ ೨೫)
- " ನೋಡಿ ಓದುವುದೆಂದರೆ ಸಾಮಾನ್ಯವಲ್ಲ. ಜೀವವೆಲ್ಲ ಗಾರಾಗುತ್ತದೆ. ಜೊತೆಗೆ ಊಟದ ಸೌಖ್ಯವಿಲ್ಲ. ರಾಗಿ ರೊಟ್ಟಿತಿಂದರೆ ಮುದ್ದೆ ತಿಂದರೆ ಜ್ಞಾಪಕ ಶಕ್ತಿ ಹೆಚ್ಚುವುದಿಲ್ಲ. ಬ್ರಾಹ್ಮಣರು ಏತಕ್ಕೆ ಅಷ್ಟೊಂದು ಬುದ್ಧಿವಂತರಾಗಿದ್ದಾರೆ ಎಂದರೆ ಅನ್ನ ತುಪ್ಪ ವೈನವಾಗಿ ಹೊಡೀತಾರೆ. ಆದ್ದರಿಂದ ದಿನತಪ್ಪಿ ದಿನವಾದರೂ ನಿಮ್ಮ ಓದೋ ಮಗನಿಗೆ ಒಂದಿಷ್ಟು ಅನ್ನಾನಾದರೂ ಹಾಕಿ" ಎಂಬುದಾಗಿ ಅವರು (ಉಪಾಧ್ಯಾಯರು) ನಮ್ಮ ತಂದೆ ತಾಯಿಯರನ್ನು ಒತ್ತಾಯಪಡಿಸುತ್ತಿದ್ದರು. (ಪುಟ ೪೧).

ಇಂತ ಅದೆಷ್ಟು ಆರ್ದ್ರವಾದ ಸಂಗತಿಗಳ ನಿರೂಪಣೆ ಈ ಕೃತಿಯಲ್ಲಿದೆ! ಇವರ ಮನೆ ಅಂಗಳದಲ್ಲೇ ಸಂಸ್ಥಾಪಿತರಾಗಿದ್ದ ಮೇಷ್ಟ್ರು ಶ್ರೀನಿವಾಸಯ್ಯ ಪಾಠ ಹೇಳಿಕೊಡುವುದು ಎಂದರೆ ಹುಡುಗರನ್ನು ದನಚಚ್ಚಿದಂತೆ ಚಚ್ಚುವುದು ಎಂದೇ

ತಿಳಿದವರು. ಅವರ ಕಾಟ ತಡೀಲಾರದೆ ಇವರೂ ಮೇಷ್ಟರಿಗೆ ಕಿರುಕುಳ ಕೊಡುತ್ತಿದ್ದರಂತೆ. ಅವರ ಮನೆಗೆ (?) ಕೋಳಿ ಅಟ್ಟುವುದು. ಅವರ ಮಕ್ಕಳನ್ನು ಮನೆಯಿಂದ ದೂರ ಕರದುಕೊಂಡು ಹೋಗಿ ಹೊಡೆಯವುದು ಇತ್ಯಾದಿ(ಪುಟ ೨೬). ಸಂಕೋಚ ಲಜ್ಜೆಯ ಸ್ವಭಾವದ ದೇಜಗೌ ಗಂಡು ಹುಡುಗರ ಜೊತೆಯೇ ಹೆಚ್ಚು ಸೇರುತ್ತಿರಲಿಲ್ಲವಂತೆ. ಓರಗೆ ಹುಡುಗಿಯರ ಜೊತೆ ಜಂಪ. ಹರಳುಮಣೆ. ಉಪ್ಪುಪ್ಪು ಕಡ್ಡಿ. ಅಣ್ಣೆಕಲ್ಲು. ಕುಂಟೆಪಿಲ್ಲೆ ಆಡುತ್ತಿದ್ದರಂತೆ. ಮದುವೆ ಆಟ - ಗಂಡಹೆಂಡಿರ ಆಟ ದಿನನಿತ್ಯ ಇರುತ್ತಿತ್ತಂತೆ. ಚಂದ್ರಿಕೆಗಳಿಂದ ಕಟ್ಟಿದ ಮನೆ. ಇಬ್ಬರು ಮೂವರು ದುಡುಮಿ ಹುಡುಗಿಯರ ಜೊತೆ ಮದುವೆ ಆಟ (ಪುಟ ೨೯). ಮುಖ್ಯೋಪಾಧ್ಯಾಯರಾಗಿದ್ದ ಪುಟ್ಟಾಶಾಸ್ತ್ರಿಗಳು ಸ್ಕಾಲರ್‌ಷಿಪ್ ಕೊಡಿಸುವುದಕ್ಕೆಂದು ಬರಹೇಳಿದಾಗ ಭಯಗೊಂಡು ಬೆವರಿ ಕರುಳಲ್ಲಿ ನಡುಕ ಹುಟ್ಟಿ. ಭೇದಿ ಬಾಧೆ ಶಂಕೆ ಕಾಣಿಸಿತಂತೆ ಇವರಿಗೆ (ಪು ೩೫). ಅಂಥಾ ಪುಕ್ಕಲು ಸ್ವಭಾವ. ಹೈಸ್ಕೂಲಿಗೆ ಸೇರಿದ ಮೇಲೂ ಗುಡುಗು ಸಿಡಿಲು ಎಂದರೆ ಭಯ. ಒಬ್ಬರೇ ಮಲಗಲು ಭಯ. ಹಾಸಿಗೆಯಲ್ಲಿ ಮಲಗಿ ಗೊಳೋ ಅಂತ ಅಳುತ್ತಿದ್ದರಂತೆ (ಪು ೪೨). ಚನ್ನಪಟ್ಟಣದ ಮರಾಠಿಯವರ ಮನೆಯಲ್ಲಿ ವಸತಿ ಹೂಡಿದ್ದಾಗ ಯಜಮಾನರ ವಿಧವೆ ತಂಗಿಯ ಕಾಮಚೇಷ್ಟೆಗಳಿಗೆ ಬೆದರಿ ಆ ಮನೆ ಬಿಟ್ಟು ಓಟ ಕಿತ್ತು ಊರಿಗೆ ಬಂದು ಬಿಟ್ಟರಂತೆ (ಪು. ೪೭). ಅಣ್ಣನ ಮದುವೆ ಸಂದರ್ಭದಲ್ಲಿ ಪೇಟೆ ಸಾಮಾನಿಗೆ ತಂದೆ ಕೊಟ್ಟಿದ್ದ ಹತ್ತು ರೂಪಾಯಿ ಕಳೆದುಕೊಂಡು ತಂದೆಗೆ ಹೆದರಿ. ಊರು ಕೇರಿಸುತ್ತಿ. ಕೊಲ್ಲಾಪುರದಮ್ಮನ ಗುಡಿ. ರಾಮಮ್ಮನ ಕೆರೆ ಬಳಿ ತೋಟ ಎಲ್ಲಾ ಸುತ್ತಿ. ದಶವಾರದ ದೊಡ್ಡಮ್ಮನ ಮನೆ ಹಾದಿ ಹಿಡಿದು. ಹಾದಿಯಲ್ಲಿ ಗಾಡಿಯಲ್ಲಿ ಬರುತ್ತಿದ್ದ ದೊಡ್ಡಮ್ಮನ ಮಗನ ಕಣ್ಣಿಗೆ ಬಿದ್ದು . . . ರಾಮ ರಾಮಾ! ದೊಡ್ಡ ಅವಾಂತರ ಈ ದೊಡ್ಡ ಜವರೇಗೌಡರದ್ದು! ಊರಿಗೆ ಬಂದ (ಅಂತೂ!) ಮಗರಾಯನನ್ನು ಕಂಡು ತಂದೆ ತಬ್ಬಿ ಕಂಬನಿ ಸುರಿಸಿ. ತಲೆ ನೇವರಿಸಿ "ಹತ್ತು ರೂಪಾಯಿ ಏನು ಮಹಾ? ಹೋದರೆ ಹೋಯಿತು. ನನಗೆ ನಿನ್ನ ಜೀವ ದೊಡ್ಡದೋ. ಹತ್ತು ರೂಪಾಯಿ ದೊಡ್ಡದೋ? ಕೆರೆಕಟ್ಟೆ, ಬಿದ್ದುಬುಟ್ಟೆಯೇನೋ ಅಂತ ನಮಗೆ ಜೀವವೇ ಹಾರಿ ಹೋಗಿತ್ತು" ಎಂದು ಗೊಳೋ ಅಂತ ಅತ್ತರಂತೆ (ಪು. ೫೩) ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಹೊರಟಾಗ "ಪಟ್ಟಣ ಜೋಕೆಯಪ್ಪ. ಗಾಡಿಗಳ ಸಂಚಾರ ಜಾಸ್ತಿಯಂತೆ. ಬಾಳೆಹಣ್ಣು ಜಾಸ್ತಿ ತಿನ್ನಬೇಡ. ರೋಗ ಬಂದೀತು. . . ." ಇತ್ಯಾದಿ ತಂದೆಯ ಬುದ್ಧಿವಾದ. ಹಾಸ್ಟಲಿಂದ ಇಂಟರ್‌ಮೀಡಿಯೇಟ್ ಕಾಲೇಜಿಗೆ ಒಬ್ಬರೇ ನಡೆದು. ಧೈರ್ಯವಾಗಿ. ಎಲ್ಲೂ ತಪ್ಪಿಸಿಕೊಳ್ಳದೆ ಸುರಕ್ಷಿತವಾಗಿ ಹಿಂತಿರುಗಿ ಬಂದಾಗ ಅವರಿಗೇ ಅಚ್ಚರಿ - ಹೆಮ್ಮೆ!(ಪು. ೫೬) ಆದರೆ ಈ ಕಾಲೇಜು ದಿನಗಳ ವಯಸ್ಸಿನಲ್ಲೂ ಹುಡುಗನಿಗೆ ಅಮ್ಮನ ನೆನಪು. ಒಂಟಿತನದ ಭಯ. ರಾತ್ರಿಯೆಲ್ಲ ಅತ್ತು ಅತ್ತು ಸುಸ್ತಾಗುವ ತಳಮಳ.

ಇಂಥ ಅದೆಷ್ಟು ಸಂಗತಿಯನ್ನು ದೇಜಗೌ ಅದೆಷ್ಟು ಸ್ವಾರಸ್ಯವಾಗಿ ಆತ್ಮೀಯವಾಗಿ ಹೇಳುತ್ತಾರೆ. ತೆರೆದ ಹೃದಯದಿಂದ. "ಬದುಕು" ಕೃತಿಯ ಪ್ರಧಾನಗುಣವೇ ಈ ಭಾವುಕತೆ - ಆತ್ಮೀಯತೆ - ಅಪ್ಪಟವಾದ ಚೊಕ್ಕಚಿನ್ನದಂತಹ ಮೆರುಗು. ನಾನು ಕವಿಯಲ್ಲ - ಕಾವ್ಯ ನನಗೆ ಒಲಿಯಲಿಲ್ಲ. ಗದ್ಯದ ಒಲವೇ ನನಗೆ ಹೆಚ್ಚು ಎಂದು ಅವರು ಹೇಳುತ್ತಾರೆ. ಆಗಲಿ.

ಏನು ನಷ್ಟ? ಗದ್ಯವೆಂದರೂ ಎಂತಹ ಗದ್ಯ ಅದು! ಬಾಗುತ್ತ ಬಳುಕುತ್ತ ಸಿಡಿಯುತ್ತ ಚಟಪಟಗುಟ್ಟುತ್ತ ಸರಸವಾಡುವ ಆ ಗದ್ಯ ಯಾವ ಕವಿತೆಗೆ ಕಡಿಮೆ? ಅದು ಹೃದ್ಯಮಪ್ಪಗದ್ಯ. ಮಾಸ್ತಿಯವರಲ್ಲಿ ಸರಳತೆಯ ಚೆಲುವು ಇದೆ ನಿಜ. ಆದರೆ ಈ ಲವಲವಿಕೆಯ ಚೈತನ್ಯ ತನ್ನದೇ ಬಿಂಕದಿಂದ ಕೂಡಿದೆ. ಮಾಸ್ತಿಯವರಲ್ಲಿ ಹದವಾದ ಹಾಲುಖೀರಿನ ಸವಿ ಇರಬಹುದು. ಅದೇ ಅದರ ಪರಿಮಿತಿಯೂ ಆಗಿಬಿಡುತ್ತದೆ. ದೇಜಗೌ ಗದ್ಯದಲ್ಲಿ ಅಷಾಢದ ಕುಳಿರ್ಗಾಳಿಯಲ್ಲಿ ಹಳ್ಳಿಮನೆಯ ಬೆಚ್ಚನೆಯ ಕೋಡೊಲೆಯ ಮುಂದೆ ಕುಳಿತು ಗರಂಗರಂ ಎನ್ನುವ ಹುರಿಗಾಳು ಮೆಲ್ಲುವ ತುಂಟ ಸ್ವಾದವಿದೆ. ಅದೆಷ್ಟು ಹುರಿ. ಒನಿ. ಕಾಳು. ಕೊಬ್ಬರಿ! ಎಷ್ಟು ಸವಿದರೂ ತಟ್ಟೆ ಖಾಲಿಯಾಗುತ್ತದೆಯೇ ವಿನಹ ಹೊಟ್ಟೆ ಬೇಡುತ್ತಲೇ ಇರುತ್ತದೆ. ಅದರಲ್ಲಿನ ಮುಖ್ಯ ಗುಣವೇ ಸ್ನೇಹದ ಮುಗ್ಧತೆ. ಅಂತಃಕರಣದ ಆರ್ದ್ರತೆ. ನಾಲ್ಕಾರು ಉದಾಹರಣೆಗಳನ್ನು ಮಾತ್ರ ನೆನಪಿಸಬಲ್ಲೆ.

- ಮರೆತದ್ದು ಅಪಾರ ನೆಪ್ಪು ; ಕಂಡದ್ದು ಒಂದೆರಡು ಹನಿ. ನೆನಪಿಗೆ ಬಂದದೆಲ್ಲ ಲೇಖನಿಗೆ ಸಿಕ್ಕಿಲ್ಲ; ಸಿಕ್ಕಿದ್ದೆಲ್ಲ ಮಾತ್ರ ನಿಜ.(ಮೊದಲ ಮಾತು VII).
- ಹುಟ್ಟಿದ್ದು ಕುರಿಮಂದೆಯ ನಡುವೆ; ಬೆಳೆದದ್ದು ದನದ ಕೊಟ್ಟಿಗೆಯಲ್ಲಿ- ತಂದೆ ತಾಯಿಯರು ನಿರಕ್ಷರ ಕುಕ್ಷಿಗಳು. ಆದರೆ ಭಗವದ್ಭಕ್ತರು(ಪುಟ ೧)
- ಗುರು ದೊರೆತರೂ ಗುರಿಯಿಲ್ಲದೆ ಬಾಳು ಅಸ್ತವ್ಯಸ್ತ. ಅದರ ದಾರಿ ಅಂಕು ಡೊಂಕು . . . ಪಾಲಿಗೆ ಬಂದದ್ದೇ ಪಂಚಾಮೃತ. ಬಂದದ್ದನ್ನು ಬಿಡಲಿಲ್ಲ. ಬಾರದ್ದಕ್ಕೆ ಬಾಯಾರಲಿಲ್ಲ: ಮುಂದು ಹೋಕರನ್ನು ನೋಡಿ ಕರುಬಲಿಲ್ಲ. ಆಸರೆ ಸಿಕ್ಕಿದಾಗ ನೇಸರು ಮರೆಯಲಿಲ್ಲ ; ಗುರಿ ಎಟುಕಿದಾಗ ಏಣಿ ಒದೆಯಲಿಲ್ಲ. (ಅದೇ)
- ನಾನೇನಾಗುತ್ತಿದ್ದೆ? ಹೊಲ ಉತ್ತು ಚಿಂದಿಯುಟ್ಟು ಗಂಜಿಯುಟ್ಟು ಬಡತನದಿಂದ ನರಳಿ ಕಣ್ಣೀರಿನಲ್ಲಿ ಬಿಂದು. ಓದೆಯಾಗಿ ಹುಳುವಾಗಿ ಕಾಲುಕಸವಾಗಿ ಅಜ್ಞಾತವಾಗಿ ಮಣ್ಣುಗೂಡುತ್ತಿದ್ದೆ. (ಪುಟ ೨)
- ಗರ್ವಿಗೆ ಗರ್ವಿ. ವಿನಯಿಗೆ ವಿನಯಿ. ಎರಡರಲ್ಲೂ ನಾನು ಸ್ಪರ್ಧಿಸಬಲ್ಲೆ. (ಪುಟ ೯)
- ಮನೆಮನೆಗಳಿಗೆ ಅಲೆದದ್ದಾಯಿತು. ಮೋಸಮಾಡಿಯಾಯಿತು. ಅವರು ಗೆದ್ದದ್ದೂ ಆಯಿತು. ಗೆದ್ದ ಮೇಲೆ ಗತ್ತು ಬಂತು. (ಪುಟ ೧೧)
- ರಾತ್ರಿಯ ವೇಳೆಯಂತೂ ನಾನು ನಮ್ಮ ತಾಯಿಯ ಮಗ್ಗುಲಲ್ಲೇ ಮಲಗಬೇಕು. .. . . ಅವರು ನನ್ನ ತಲೆಗೆ ಬೆರಳಿಟ್ಟು ಬೆಂಟುತ್ತಾ ಕೈಗೆ ಸಿಕ್ಕಿದ ಹೇನಿನ ದಡಿಯನ್ನು ಒಸುಕುತ್ತಾ ಇದ್ದಾಗ. ನಿದ್ದೆ ಅವರ ಬೆರಳಿನಿಂದ ಇಳಿಯುತ್ತಿದೆಯೋ ಅನ್ನುವ ಹಾಗೆ ಸೊಗಸಾಗಿ ಗಾಢವಾಗಿ ನಿದ್ರೆ ಬರುತ್ತಿತ್ತು. (ಪುಟ ೩೩)
- ಕಾಲ ಮತ್ತು ದೂರ ಸಂಕಟ ಸ್ನೇಹ ವಾತ್ಸಲ್ಯಗಳನ್ನು ಮರೆಸುತ್ತದೆ. ಹೆಣ್ಣು ಗಂಡನ ಕೈಹಿಡಿದ ನಂತರ ಗಂಡ ಹೆಂಡತಿಯ ಕೈ ಹಿಡಿದ ನಂತರ ತಾಯಿ ತಂಗಿ ಅಣ್ಣ ತಂದೆಯರ ವಾತ್ಸಲ್ಯದ ನೆನಪು ಕಾಲಕ್ರಮೇಣ ನಂದಿ ಹೋಗುತ್ತದೆ. (ಪುಟ ೮೯)

ಹೀಗೆ ತೆಕ್ಕೆ ತೆಕ್ಕೆಯಾಗಿ ಆರಿಸಿಕೊಡಬಹುದಾದ ವಾಕ್ಯಗಳು ವಾಕ್ಯವೃಂದಗಳು

"ಬದುಕು" ಕೃತಿಯನ್ನು ಶ್ರೀಮಂತಗೊಳಿಸಿವೆ. ಅನುಭವ -ಅಭಿವ್ಯಕ್ತಿಗಳ ಸುಂದರ ಸಮನ್ವಯವನ್ನು ಅಲ್ಲಿ ಕಾಣಬಹುದು. ಹೃದಯವನ್ನು ಆಕರ್ಷಿಸಿ ಹಿಡಿದು ನಿಲ್ಲಿಸಿ ದ್ರವೀಕರಿಸುವ ಗುಣವೇ ಸೌಂದರ್ಯ ಎನ್ನುವುದಾದರೆ ಅದು ದೇಜಗೌ ಅವರ ಈ ಮಹತ್ವದ ಕೃತಿಯಲ್ಲಿ ಮೈತುಂಬಿ ನಿಂತಿದೆ. ಅದು ಯಾವ ಮಹತ್ವದ ಕಾವ್ಯಕ್ಕೂ ಕಡಿಮೆಯದಲ್ಲ.

-೫-

ಈ ಕೃತಿಯಲ್ಲಿ ಕಾಣುವ ಶಬ್ದ ಸೃಷ್ಟಿಯ ಸಂಭ್ರಮವೂ ಗರಿಗರಿಯಾದ 'ಹಮುಲ್ಕೀ ಪಾಕ' ವೇ ಸರಿ! ದೇಜಗೌ ನಿಜಕ್ಕೂ ಶಬ್ದಬ್ರಹ್ಮರೇ ಎಂಬುದನ್ನು ಈ ಕೃತಿ ಸಾಬೀತು ಪಡಿಸುತ್ತದೆ. ಮಾರ್ಗದರ್ಶಕ ಕೃತಿಯಾಗುತ್ತದೆ. ಶಬ್ದ ಸೃಷ್ಟಿಯಲ್ಲಿ ಹೇಗೋ ಶಬ್ದ ಶಿಲ್ಪದಲ್ಲೂ ಅವರು ನಿಪುಣರು. ಹೀಗಾಗಿ ಅವರು ಶಿಲೆಯನ್ನೂ ನಿರ್ಮಿಸಬಲ್ಲರು- ಕಲೆಯನ್ನೂ ನಿರ್ಮಿಸಬಲ್ಲರು ಎಂಬುದಕ್ಕೆ 'ಬದುಕು' ತಕ್ಕಷ್ಟು ಉದಾಹರಣೆಗಳನ್ನು ಒದಗಿಸುತದೆ. ಒಂದೆರಡನ್ನು ಮಾತ್ರ ಇಲ್ಲಿ ಉದಾಹರಿಸಬಹುದಷ್ಟೇ ಅಧಿಕಾರ ಮದ, ಅಧಿಕಾರಮೋಹ, ಅಧಿಕಾರ ಲಾಲಸೆ, ಎಂಬಿತ್ಯಾದಿಗಳು ನಮಗೆ ಸಾಕಷ್ಟು ಪರಿಚಿತವೇ. ಆದರೆ ದೇಜಗೌ 'ಅಧಿಕಾರದ ಒಗಚು' ಎನ್ನುತ್ತಾರೆ. ಉಳಿದ ಸಮಾಸಗಳಲ್ಲಿ ಅಧಿಕಾರದ ಬಗ್ಗೆ ತಿರಸ್ಕೃತಿಯಿದೆ. ಒಗಚು ಹಾಗಲ್ಲ. ಅದು ಷಡ್ರಸಗಳಲ್ಲಿ ಒಂದು. ಆದರೆ ಅದಕ್ಕೆ ಪಕ್ವವಲ್ಲದ್ದು ಎಂಬ ಅರ್ಥವೂ ಇದೆಯಷ್ಟೆ! ಹೀಚೂ ಅಲ್ಲದ ಹಣ್ಣೂ ಅಲ್ಲದ ಅತಂತ್ರ ಸ್ವಾದ ಅದರದ್ದು. ಇತ್ತ ಬೇಡವೆಂಬ ಸಪ್ಪೆಯಲ್ಲ- ಹಣ್ಣಿನ ಸ್ವಾದ- ಪಕ್ವಗುಣ ಅದಕ್ಕಿಲ್ಲ. ನೋಡುವ ಆಸೆ, ಕೂಡುವ ಆಸೆ, ಆದರೆ ಮೈಮನ ತುಂಬದ ಅತೃಪ್ತಿ. ಅದು ಒಗಚು! ನೆಮ್ಮಾಗಿ, ಹೀದೆ, ಹೆದರು(ಹೆದರಿಕೆ ಎಂಬ ಅರ್ಥದಲ್ಲಿ, ಆಮದಾನಿ (ಮಾಮೂಲಿ?), ಕೊಡೆಗೈ (ಕೊಡುಗೈ ಎಂಬಂತೆ-ಕೊಡೆ ಹಿಡಿದ ಕೈ), ಕುಲುಕೋಟ(ಕುಲುಕುತ್ತಾ ಓಟ - ವೇಗದ ಬೆಡಗಿನ ನಡಿಗೆ), ತೊಳಕೆ (ತೊಳಲಾಟ), ಅಳುಗುನ್ನಿ, ಸಾರೋಣ (ಸಾರುವುದು), ಕೀಳರು (ಕೀಳುಜನ), ಅಲಗಣಸು, ಸಾಕಿಗ (ಸಾಕುವವ), ಮುದಲಾಡು, ಗುರುಮೆ, ಹುಕುಮಿಸು, ಆರ್ಡರಿಸು,

ಇಂಥ ಅದೆಷ್ಟು ಹೊಸ ಇಲ್ಲವೆ ಅಪರೂಪದ ಶಬ್ದಾರ್ಥಗಳು ಅವರ ಬತ್ತಳಿಕೆಯಲ್ಲಿ! ಸಂಕ್ಷಿಪ್ತಾಕ್ಷರಗಳನ್ನು ಸರಸರನೆ ನೇಯ್ದು ಬಿಡುತ್ತಾರೆ. ಭೂವಿಪ್ರ, ಪ್ರಾವಿಪ್ರ, ಸವಿಪ್ರ, ಸಂವಿಪ್ರ, ಇಂವಿಪ್ರ ಇತ್ಯಾದಿ. ಇವು ಸೂಚ್ಯವೆಂದರೆ ಸೂಚ್ಯ, ಬಲ್ಲವರಲ್ಲಿ ವಾಚ್ಯ- ಅದರಿಂದ ಮಂದಹಾಸ ಮಿನುಗುತ್ತದೆ - ದೇಜಗೌ ಜಾಣತನಕ್ಕೆ. ಗ್ರಾಮದ ಬಾಳಿನಲ್ಲಿ ಬೆರೆತ ಅವರಿಗೆ ಗಾದೆ ಮಾತುಗಳ ಪ್ರಯೋಗ ನೀರುಕುಡಿದಷ್ಟು ಸರಾಗ - ಪಾಲಿಗೆ ಬಂದದ್ದು ಪಂಚಾಮೃತ, ಹುಟ್ಟುಸುಳಿ ಬೋಳಿಸಿದರೆ ಹೋದೀತೆ? ಬಡವರ ಮನೆ ಹೆಣ್ಣಿನ ಕಡಗ ಚಿನ್ನದ್ದಾದರೂ ಹಿತ್ತಾಳೆ, ಕಾಮಾಲೆ ಕಣ್ಣಿಗೆ ಪ್ರಪಂಚವೆಲ್ಲ ಹಳದಿ, ತನ್ನ ಹೊಟ್ಟೆಗೆ ಬಲಿಯಾಗದ ಕುರಿ ತೋಳನಿಗೆ ಹೊಲ್ಲ, ಶಠರಿಗೆ ಶಾಠ್ಯವೇ ಮದ್ದು, ಮನೆ ಗೋಳಿನ ಹುತ್ತ ಆಯ್ತು; ಗೂಬೆ ಹೊರಸು. ಇಂಥ ಗಾದೆ ಮಾತುಗಳು ನುಡಿಗಟ್ಟುಗಳು ಸಂದರ್ಭೋಚಿತವಾಗಿ ಬಂದು ಊರದೀಪ ಬೀದಿಯನ್ನು ಬೆಳಗುವಂತೆ, ವಸ್ತು ವಿಷಯಗಳನ್ನು ಮನದಟ್ಟುಸುತ್ತದೆ. ಹೃದ್ಯವಾಗಿಸುತ್ತದೆ. 'ಮಕ್ಕಳಿದ್ದ ಮೇಲೆ ಅವರು ಸುಖ ಕಂಡರು" (ಪುಟ. ೧೨೫) ಎಂಬ ಪ್ರಯೋಗದಲ್ಲಿ ಮಕ್ಕಳಾದ ಮೇಲೆ ಎಂದಿರಬೇಕು

- ಇದು ಅಚ್ಚುದೋಷವಿರಬೇಕು ಎಂದು ಮೊದಲ ಓದಿಗೆ ಭಾವಿಸಿದ್ದೆ. ಅವರೆ ಮೆಲುಕು ಹಾಕಿದಾಗ ಎಲಾ! ಇದು ಮಕ್ಕಳು ಬೆಳೆದ ಮೇಲೆ - ಅಭಿವೃದ್ಧಿ ಹೊಂದಿದ ಮೇಲೆ ಎಂಬರ್ಥವಲ್ಲಿ ದೇಜಗೌ ಅವರ ವಿಶಿಷ್ಟ ಪ್ರಯೋಗವಲ್ಲವೆ? ಎಂದು ಹೊಳೆದು ಮನಸ್ಸಿಗೆ ಖುಷಿಯಾಯಿತು.

ಪುರಾಣಗಳಿಂದ ಜಾನಪದ ಕಥೆಗಳಿಂದ ಹೋಲಿಕೆಗಾಗಿ. ಸಂದರ್ಭೋಚಿತವಾಗಿ. ಉಪಮೆಗಳನ್ನು ನೇಯುವುದರಲ್ಲಿ ದೇಜಗೌ ಸಿದ್ಧಹಸ್ತರು. ಸ್ವಾರ್ಥಪರರಾಗಿ ಎಷ್ಟು ತಿಂದರೂ ಸಾಲದೆಂಬ ಭ್ರಷ್ಟಾಚಾರಿಗಳನ್ನು ಕುರಿತು ಬರೆಯುವಾಗ "ಏಕಚಕ್ರನಗರದ ಬಕಾಸುರನಂತೆ, ಇಗ್ಗಲೂರಿನ ಮಾರಮ್ಮನಂತೆ ಸರದಿಯ ಮೇಲೆ ದಕ್ಕಿನ ಮರಿಗಾಗಿ ಬಾಯ್ತೆರೆಯುತ್ತಾರೆ: ಒಂದು ದಿನ ತಪ್ಪಿದರೆ ಸಾಕು. ಊರೂರನ್ನೆ ಮುಕ್ಕುವುದಾಗಿ [illegible]ಸುತ್ತಾರೆ " ಎಂದು ಉಪಮಿಸುತ್ತಾರೆ (ಪುಟ ೪). ಪುರಾಣ- ಜಾನಪದ ಹೇಗೆ ಇಲ್ಲಿ [illegible]ಯಾಗುತ್ತಿದೆ ನೋಡಬಹುದು. ಸಾಮಾಜಿಕ ಪಿಡುಗಾದ ಜಾತೀಯತೆಯನ್ನು [illegible] ಎಂದು ರೂಪಿಸುತ್ತಾರೆ. ಕೊಡಲಿ ಕಾವು ಮರಕ್ಕೆ ಮಿತ್ತು (ಪುಟ. ೧೦). [illegible] ಪಾತಾಳ ಒಂದು ಮಾಡು (ಪುಟ ೧೯) ಎಂಬಂಥ ಗ್ರಾಮೀಣ ಪ್ರಯೋಗಗಳು [illegible] ಉದ್ದಕ್ಕೂ ದೊರೆಯುತ್ತವೆ. "ಸುಳ್ಳು ಹೇಳಬಾರದು, ಕಳ್ಳತನ ಮಾಡಬಾರದು. ಭಗವಂತನ ಸ್ಮರಣೆ ಬಿಡಬಾರದು" ಇದು ಅವರ ತಂದೆ ಸಾರುತ್ತಿದ್ದ ಮಹಾವಾಕ್ಯಗಳು. ಸತ್ಯದ ಅಭಿವ್ಯಕ್ತಿ ನಮ್ಮ ಗ್ರಾಮೀಣರಲ್ಲಿ ಅದೆಷ್ಟು ಸರಳ - ಬೈಬಲ್‌ನಂತೆ!

ಮುಗ್ಧ ಗ್ರಾಮೀಣರಿಗೆ ಪಟ್ಟಣದ ಚೂಪುಗಾರಿಕೆ ತಿಳಿಯದು. ಅವರ ಬದುಕು ನೇರ. ಮಾತು ನೇರ. ಹಾಗೆಯೇ ಅವರ ಕೋಪತಾಪದ ಉಗ್ರತೆಯೂ ರೂಕ್ಷ ಭಯಂಕರ ನೇರ. ಬೆಣ್ಣೆಯಲ್ಲಿ ಕೂದಲು ತೆಗೆವ ನಯಗಾರಿಕೆ. ಬೆನ್ನ ಹಿಂದೆ ಇರಿವ ನಾಗರಿಕತೆ ಅವರಿಗೆ ತಿಳಿಯದು. ಸುಳ್ಳು ಹೇಳಿ ಕಳ್ಳತನ ಋಜುವಾತಾದಾಗ ತಂದೆ "ಕಂಬಕ್ಕೆ ಕಟ್ಟಿ ಹೊಡೆಯುತ್ತಿದ್ದರು. ಇಲ್ಲವೇ ಮೆಣಸಿನಕಾಯಿ ಹೊಗೆ ಹಾಕುತಿದ್ದರು" (ಪುಟ ೨೮). ಬಿಮುಕಿನ ಸೊಗಸು. ಮಾರ್ದವತೆಗಳೂ ಹಾಗೆಯೇ. ಮೊದಲಬಾರಿ ಕರಿಯ ಹೊಸಕೋಟು ಧರಿಸಿದ ಮಗನನ್ನು ಕಂಡು "ಮೇಲೆ ಕೋಟಿರುವಾಗ ಒಳಗೆ ಶರಟಿನ ಅವಶ್ಯಕತೆಯುಂಟೆ?- ನನ್ನ ತಾಯಿ ಕಣ್ಣೆವೆಯಿಕ್ಕದೆಯೇ ನನ್ನನ್ನು ನೋಡಿ ನೋಡಿ ಓರಿ ಓರಿ ಹಿಗ್ಗಿದುದುಂಟು" (ಪುಟ ೩೦). "ನನ್ನ ಕೂದಲು ತುಂಬಾ ದಟ್ಟವಾಗಿ ಉದ್ದವಾಗಿ ಬೆಳೆದಿರುತ್ತಿತ್ತು. ಸ್ನಾನ ಮಾಡುತ್ತಿದ್ದುದು ವಾರಕ್ಕೋ ಹತ್ತು ದಿನಕ್ಕೋ ಒಂದು ಬಾರಿ ಹೀಗಾಗಿ ಹೇನುಕೂರೆಗಳ ಆಶೀರ್ವಾದ ನನಗೆ ಯಾವಾಗಲೂ ತಪ್ಪಿದ್ದಲ್ಲ. ನನ್ನ ತಲೆ ಉದ್ದವಾಗಿ ಬೆಳೆದಿದ್ದುದರಿಂದ ನಮ್ಮ ತಾಯಿ ಆಗಾಗ ಜಡೆಹಾಕಿ ಹೂ ಮುಡಿಸಿ ಕಳುಹಿಸುತ್ತಿದ್ದರು" (ಪುಟ ೩೪). "ನನ್ನ ಬಟ್ಟೆಗಳನ್ನು ನಾನೇ ಒಗೆದು ಮಡಿ ಮಾಡಿಕೊಳ್ಳುತ್ತಿದ್ದೆ. ಪ್ರತಿ ಭಾನುವಾರ ಬೆಳಗ್ಗೆ ಅರೆಕಟ್ಟೆಗೆ ಹೋಗಿ ಬಟ್ಟೆಯೊಗೆದು ಆರಿಸಿಕೊಂಡು ಬರುತ್ತಿದ್ದೆ. ಆಗ ನನ್ನ ಹತ್ತಿರ ಇದ್ದದ್ದು ಒಂದೇ ಒಂದು ಜೊತೆ ಬಟ್ಟೆ. ಅವನ್ನೇ ಒಗೆದು ಆರಿಸಿ ಹಾಕಿಕೊಳ್ಳಬೇಕಿತ್ತು. ಅದು ಸಂಪೂರ್ಣವಾಗಿ ಹರಿದು ಅಂಗಾಂಗಗಳೆಲ್ಲ ಪ್ರದರ್ಶನವಾಗುವವರೆಗೂ ಹೊಸ ಜೊತೆ ಸಿಗುತ್ತಿರಲಿಲ್ಲ" (ಪುಟ ೩೪). ಇಲ್ಲಿನ ಗ್ರಾಮೀಣ ಬದುಕು. ಅದನ್ನು ಚಿತ್ರಿಸುವ ಭಾಷೆ ಎರಡೂ ಮನಸ್ಸನ್ನು

ಸೆಳೆಯುತ್ತದೆ. ಹುಟ್ಟಿ ಕಣ್ಣು ಬಿಡುತ್ತಿದ್ದಂತೆಯೇ ಮಮ್ಮಿ ಡ್ಯಾಡಿ ಎಂದು ಕನವರಿಸುವ. ಬ್ಯೂಟಿಪಾರ್ಲರುಗಳಲ್ಲಿ ತಲೆ ಬೋಳಿಸಿಕೊಳ್ಳುವ. ಪುಸ್ತಕದ ಹೇರುಗಳನ್ನು ಹೊತ್ತು ವ್ಯಾನು - ಆಟೋ - ಬಸ್ಸುಗಳಲ್ಲಿ ಧಾವಿಸುವ. ನಮ್ಮ ಮಗುವಿಗೆ ಹತ್ತೇ ಸೆಟ್ಟು ಬಟ್ಟೆಯಾಯಿತು ಏನು ಗತಿ? ಎಂದು ಕಂಗಾಲಾಗುವ. ಬೂಟು-ಟೈ- ಯೂನಿಫಾರಂ ಗಳಿಗಾಗಿ ಟೈಲರ್‌ಗಳ ಕುತ್ತಿಗೆ ಮೇಲೆ ಕುಳಿತು ಹೊಲಿಸುವ. ನರ್ಸರಿ ಶಾಲೆಗೆ ಮಗು ಬಸಿರಿನಲ್ಲಿದ್ದಾಗಲೇ ಡೊನೇಷನ್ ಸೀಟು ಕಾದಿರಿಸಲು ಧಾವಿಸುವ. ಮಗುವಿಗೆ ಮೂಗಿನಲ್ಲಿ ಹನಿಗಾಣಿಸಿದರೆ, ನರ್ಸಿಂಗ್ ಹೋಮಿಗೆ ಸೇರಿಸಿ ಕಂಬನಿ ಸುರಿಸುವ ನಮ್ಮ ಇಂದಿನ ನಾಗರಿಕ ಪ್ಯಾಟೆಯ ಮಕ್ಕಳು ಹಾಗೂ ಮಮ್ಮಿ ಡ್ಯಾಡಿಗಳು ಅವಶ್ಯವಾಗಿ ಈ ಕೃತಿಯನ್ನು ಅದರ ಸೊಗಡು ನುಡಿಯನ್ನೂ ಓದಬೇಕು. ಅದೊಂದು ರಮ್ಯಕತೆ ಎಂದೇ ಅವರು ಭಾವಿಸಿದರೂ ಚಿಂತೆಯಿಲ್ಲ!

-೬-

ಹೀಗೆ ಅಪ್ಪಟ ಮಣ್ಣಿನ ಬದುಕು- ಭಾಷೆಗಳ ಸೊಗಡನ್ನು ಮೈಗಾಣಿಸುವ ದೇಜಗೌ ತಮ್ಮ ಆದರ್ಶವ್ಯಕ್ತಿಗಳನ್ನು ನೆನಪಿಸಿಕೊಂಡು ರೋಮಾಂಚಿತರಾಗುವಾಗ ಭಾವುಕ ಹೃದಯದ ಕವಿಯಾಗಿಬಿಡುತ್ತಾರೆ. ಭಾಷೆಗೆ ಮೋಹಕತೆ- ಮಿಸ್ಟಿಕ್ ಚೆಲುವು ಮೈಗೂಡುತ್ತದೆ. ರಕ್ತಾಕ್ಷಿ ನಾಟಕದ ಮುಖಪುಟದ ಋಷಿಕವಿಯ ಭಾವಚಿತ್ರದ ಪಡಿಯಚ್ಚನ್ನೇ ಪ್ರಬುದ್ಧ ಕರ್ನಾಟಕದಲ್ಲಿ ಕಂಡಾಗ ಅವರಲ್ಲಿ ಉಕ್ಕಿದ ಭಾವಗಂಗೋತ್ರಿ ಇದು: " ಆ ಚಿತ್ರ ಕಣ್ಣಿಗೆ ಬೀಳುತ್ತಿದ್ದಂತೆಯೇ ಯಾವುದೋ ಜನ್ಮಾಂತರದ ಬಾಂಧವ್ಯ ಮರುಕಳಿಸಿದಂತೆ. ಅನನ್ಯ ಸಾಧಾರಣ ಆತ್ಮೀಯತೆ ಅರಳಿದಂತೆ ಅಂತರಿಂದ್ರಿಯ ಗೋಚರವಾಯಿತು. ಕನಸಿನಲ್ಲಿ ಕಾಣುತ್ತಿದ್ದ ಕಲ್ಪನೆಯ ಮೂರ್ತಿ ನನ್ನ ಕಣ್ಮುಂದೆ ಪ್ರತ್ಯಕ್ಷವಾದಂತಾಯಿತು. ಜನ್ಮ ಜನ್ಮಾಂತರದಿಂದ ಯಾವ ಮಹಾವ್ಯಕ್ತಿಯ ಸಾನ್ನಿಧ್ಯ ಸಂಪರ್ಕಗಳಿಗಾಗಿ ಹಂಬಲಿಸಿ ಹಾರೈಸುತ್ತಿದ್ದೆನೋ ಆ ವ್ಯಕ್ತಿಯೇ ಜೀವತುಂಬಿ ನಿಂತಂತಾಯಿತು. ಅರಸುತ್ತಿದ್ದ ನಿಧಿ ಸಿಕ್ಕಿದಂತಾಗಿ ಆನಂದ ತುಂದಿಲನಾದೆ." (ಪುಟ ೫೪). ಭಾವುಕತೆಗೂ - ಭಾಷೆಗೂ ಅನನ್ಯ ದಾಂಪತ್ಯ ಇಲ್ಲಿ ಸಿದ್ಧಿಸಿದೆ. ಗ್ರಂಥಾಲಯದ ಈ ಸಂಚಿಕೆಯ ಚಿತ್ರವನ್ನು ಕತ್ತರಿಸಿಕೊಂಡು, ಗುಜರಿಯಲ್ಲಿ ಕಟ್ಟು ಹಾಕಿಸಿ, ಮೇಜಿನ ಮೇಲೆ ಪ್ರತಿಷ್ಠಾಪಿಸಿ ಹೂಗಂಧಗಳಿಂದ ಪೂಜಿಸಿದ ಸಂಗತಿಯನ್ನೂ ಅವರು ಹೃದಯಂಗಮವಾಗಿ ಚಿತ್ರಿಸುತ್ತಾರೆ. ಮುಂದೆಲ್ಲ ಈ ಆದರ್ಶದ ಅಧಿದೈವವನ್ನು ಚಿತ್ರಿಸುವಾಗಲೆಲ್ಲ ಅವರ ಭಾಷೆಗೆ ಇದೇ ಕಾಮನಬಿಲ್ಲಿನ ಮೋಹಕವರ್ಣಮಯತೆ. "ಮುಗ್ಧಮೋಹಕವಾದ ಅವರ ವದನ, ತೇಜಃಪುಂಜವಾದ ಅವರ ನೇತ್ರಗಳು, ಗಂಭೀರ ವ್ಯಕ್ತಿತ್ವ, ಸಿಂಹವಾಣಿ" (ಪುಟ ೬೩), ". . . . ಅವರ ಇಡೀ ವ್ಯಕ್ತಿತ್ವವೇ ಮಾತಾಡುತ್ತಿದ್ದಂತೆ ಅನುಭವವಾಗುತ್ತಿತ್ತು; ನನ್ನ ಬುದ್ಧಿಗೆ ಪ್ರತಿಭಾಸಂಸ್ಪರ್ಶವಾದಂತೆ ನರನಾಡಿಗಳಲ್ಲಿ ವಿದ್ಯುತ್ ಸಂಚಾರವಾದಂತೆ ಭಾಸವಾಗುತ್ತಿತ್ತು...... ಅವರ ಬಳಿ ನನ್ನ ಶಿಷ್ಯವೃತ್ತಿ ಅಂದಿಗೇ ಮುಗಿಯಲಿಲ್ಲ. ಅದು ಅನಾದಿಯಾಗಿ ಅನಂತವಾಗಿ ಉಳಿದಿದೆ." (ಪುಟ ೮೧-೨). ಇಂಥದೇ ಕಾವ್ಯಮಯತೆ ಅವರು ಮೇಕೆದಾಟನ್ನು, ಅರ್ಕಾವತಿ - ಕಾವೇರಿ ಸಂಗಮವನ್ನೂ ವರ್ಣಿಸುವಾಗ ಕಾಣುತ್ತದೆ. (ಪುಟ ೬೬- ೬೭). ವೃತ್ತಿಪದ ಸಂಗ್ರಹಣೆಗಾಗಿ, ಡಾ. ಹಾ. ಮಾ. ನಾಯಕರೊಡನೆ ಅವರು ಮಾಡಿದ ಪ್ರವಾಸದ ವರ್ಣನೆ

ಒಂದು ಉತ್ತಮ ಪ್ರವಾಸಸಾಹಿತ್ಯವೇ ಆಗಿದೆ. ಐತಿಹಾಸಿಕ ಹಾಗೂ ಪ್ರಸ್ತುತ ಸ್ಥಿತಿಯ, ವಸ್ತುಸಂಗತಿಗಳ ಬರಿಯ ವಿವರಗಳನ್ನು ಹೇಳುವಾಗಲೂ ಅವರ ಭಾಷೆ ಬಡಕಲಾಗುವುದಿಲ್ಲ. ತನ್ನ ಹೊಗರನ್ನು ಕಳೆದುಕೊಳ್ಳುವುದಿಲ್ಲ.

ಏನು ಹೇಳುತ್ತಿದ್ದೇನೆ ? ದೇಜಗೌ ಅವರ ಸಾಹಿತ್ಯಶೈಲಿಯನ್ನು ವಿಶಿಷ್ಟ ನೆಲೆಯಲ್ಲಿಯೇ ಪರಿಶೀಲಿಸಬೇಕಾಗುತ್ತದೆ. ಜಲಪಾತದ ಭೋರ್ಗರೆತ, ಹರಿಯುವ ಹೊಳೆ, ಉಕ್ಕುವ ಚಿಲುಮೆ, ಸುತ್ತಿಗೆ ಪೆಟ್ಟು, ಬೆಳದಿಂಗಳ ಮಂದಹಾಸ, ಹೀಗೆ ಒಂದೊಂದು ರೂಪಕಗಳಲ್ಲಿ ಉಳಿದವರ 'ಶೈಲಿ' ಯನ್ನು ನಿರ್ದೇಶಿಸಿಬಿಡಬಹುದು. ಪ್ರಾಯಶಃ ಇಂಥ ನಿರ್ದಿಷ್ಟ ಗುಣಗಳ ಆಧಾರದ ಮೇಲೆಯೇ - ಓಜಸ್ಸು, ಮಾಧುರ್ಯ, ಪ್ರಸಾದ ಇತ್ಯಾದಿ. ಪ್ರಾಚೀನ ಲಾಕ್ಷಣಿಕರು ಶೈಲಿಯನ್ನು ಗೌಡೀ, ವೈದರ್ಭಿ, ಲಾಟೀ, ಪಾಂಚಾಲೀ - ಮುಂತಾಗಿ ನಿರ್ದೇಶಿಸಿದಂತೆ ತೋರುತ್ತದೆ. ಆದರೆ ದೇಜಗೌ ಶೈಲಿಯನ್ನು ಇಷ್ಟು ಸುಲಭವಾಗಿ ಹೆಸರಿಸಲಾಗುವುದಿಲ್ಲ. ಅದು ಪ್ರಾಯಶಃ ಶಿಲ್ಪಿಯ ಕಾಯಕ- ಅಮೂರ್ತದಿಂದ ಮೂರ್ತವನ್ನು ಸೃಷ್ಟಿಸುವಾಗ ಅವನ ಬೆರಳುಗಳ ಮೋಡಿಯಾಟದಲ್ಲಿ ಅಂತರಂಗದ ಭಾವವೇ ಮುರಳೀಧರನಾಗಿಯೂ, ಸೊಂಡಿಲಗಣಪನಾಗಿಯೂ, ಚಾಮುಂಡಿಯಾಗಿಯೂ, ರಾಧೆಯಾಗಿಯೂ, ಬಾಲಕೃಷ್ಣನಾಗಿಯೂ, ಪೂತನಿ ಯಾಗಿಯೂ, ಯಶೋಧೆಯಾಗಿಯೂ, ನೋಡನೋಡುತ್ತಾ ರೂಹುಗೊಳ್ಳುಬಹುದಲ್ಲ ದಲ್ಲವೆ? ಎಲ್ಲದರಲ್ಲೂ ವಿಚಿತ್ರ ಮೋಹಕತೆ- ಕಾಂತಿಯುಂಟಲ್ಲವೆ? ಈ ಭಾವಾನುಲಯದ ಗಾಡಿಯನ್ನು - ಶಿಲ್ಪ ಶೈಲಿಯನ್ನು- "ವಿಶ್ವಕರ್ಮಶೈಲಿ" ಎನ್ನಬಹುದೇ? ಪಂಡಿತರು ಹೇಳಬೇಕು.

ಕಾವ್ಯ ರಚನೆಯಂತೂ ತಮಗಲ್ಲ ಎಂದು ದೇಜಗೌ ಬಿಟ್ಟುಬಿಟ್ಟರು. ಆದರೆ 'ಬದುಕು' ಒಳಗೊಂಡಿರುವ ಅತ್ಯಂತ ಹೃದ್ಯವಾದ ವ್ಯಕ್ತಿಚಿತ್ರಣಗಳನ್ನೂ ಕ್ಷೇತ್ರ ವರ್ಣನೆಯನ್ನು ಕಂಡಾಗ ಇಂಥ ಸೊಗಸಾದ ಶಬ್ದ ಚಿತ್ರಣಗಳನ್ನು ರಚಿಸಬಲ್ಲವರು ಏಕೆ ಕಥೆ ಬರೆಯಲಿಲ್ಲ- ಕಾದಂಬರಿ ಬರೆಯಲಿಲ್ಲ ಎಂದು ನಿಟ್ಟುಸಿರುವಂತಾಗುತ್ತದೆ. ಇತಿಹಾಸವನ್ನು ನಿರ್ಮಿಸುವವರಿಗೆ - ಕಥೆಯಾಗುವವರಿಗೆ ಪ್ರಾಯಶಃ ಕಥೆ ಬರೆಯುವುದರಲ್ಲಿ ಅಷ್ಟಾಗಿ ಆಸಕ್ತಿ ಇಲ್ಲವೋ ಏನೋ! ಹೀಗಾಗಿ ಅವರ ಕಥನ ಕುಶಲತೆಯನ್ನು ದೇಜಗೌ ಅವರ ವ್ಯಕ್ತಿಚಿತ್ರಗಳಲ್ಲಿ ಪ್ರವಾಸ ಕಥನಗಳಲ್ಲಿ, ಜೀವನ ಚರಿತ್ರೆಯ ಪುಟಗಳಲ್ಲಿಯೇ ಕಂಡು ಹರ್ಷಿಸಬೇಕಾಗಿದೆ. 'ಬದುಕು' ಪಾತ್ರಗಳಲ್ಲಿ ಲೇಖಕರ ತಂದೆಯ ಚಿತ್ರಣಕ್ಕೆ ಮೊದಲ ಸ್ಥಾನ - ಅವರು ತಂದೆಯಿಂದ ಪಡೆದ ಪ್ರಭಾವವೇನೂ ಕಡಿಮೆಯದಲ್ಲ. ಸತ್ಯನಿಷ್ಠೆ, ಹಟ, ಸಾತ್ವಿಕರೋಷ, ಅಕ್ಕರೆ, ಹೆಂಗರುಳು, ಮುಗ್ಧತೆ, ಅಳು, ಇತ್ಯಾದಿಗಳು ಇಂದಿಗೂ ಉಳಿದು ಬಂದಿವೆ. ಔದಾರ್ಯ - ಅಂತಃಕರಣ ಮಿತಿಯಿಲ್ಲದೆ ಬೆಳೆದಿದೆ. "ಮಂಡಿವರೆಗಿನ ತುಂಡು ಪಂಚೆ, ಎದೆ ಬೆನ್ನುಗಳ ಮೇಲೆ ಇಳಿಬಿಟ್ಟಿದ್ದ ವಲ್ಲಿ ಜೂಲು ಜೂಲಾದ ಪಂಚೆಯ ಪೇಟ - ಇವೇ ಅವರ ಉಡುಪು. ಹರಿದ ತುಂಡು ಪಂಚೆ ಅಥವಾ ವಲ್ಲಿ ಅವರ ತಲೆಯುಡುಪಾಗುತ್ತಿತ್ತು. ಹೊಕ್ಕುಳ ಮಟ್ಟದ ದೊಣ್ಣೆಯೊಂದು ಅವರ ನಿತ್ಯ ಸಂಗಾತಿಯಾಗಿತ್ತು. ಐದುಮುಕ್ಕಾಲಡಿ ಎತ್ತರ ಮೀರದ ದಪ್ಪವೂ ಅಲ್ಲದ ತೆಳುವೂ ಅಲ್ಲದ ಮಟ್ಟತರ ಗಾತ್ರದ ಆ ವ್ಯಕ್ತಿಗೆ ಮೀಸೆಯೊಂದೇ ಶೋಕಿಯಾಗಿತ್ತು. ಕಣ್ಣು

ಚೆನ್ನಾಗಿದ್ದಾಗ ಅವರು ರಸಿಕರಾಗಿದ್ದಿರಬೇಕೆಂದು ಅವರ ಮಾತುಕತೆಗಳಿಂದ ಚರ್ಯೆಯಿಂದ ವ್ಯಕ್ತವಾಗುತ್ತಿತ್ತು. ಅವರ ಕೆನ್ನೆ ಹೊಟ್ಟೆಗಳ ಮೇಲೆ ಬಡತನ ಅಚ್ಚೊತ್ತಿದಂತಿತ್ತು. ಸಿಡುಕು ಅವರ ಹುಟ್ಟುಗುಣವಾಗಿತ್ತು. ಅದರೆ ಅದು ಬಹುಬೇಗ ಇಂಗಿಹೋಗುತ್ತಿತ್ತು. ಕನಿಕರ - ಅನುಕಂಪೆ ಅವರ ಸಹಜಗುಣಗಳಾಗಿದ್ದುವು. ತಮ್ಮ ಆತ್ಮಗೌರವಕ್ಕೆ ಯಾರಿಂದಲಾದರೂ - ಗೌಡನಾಗಲೀ ತೋಟಿಯಾಗಲಿ - ಭಂಗ ಬಂದದ್ದಾದರೆ ಅವರ ಕೈಕಾಲೆಲ್ಲ ಮಾತನಾಡುತ್ತಿದ್ದುವು. ..." (ಪುಟ ೧೨೪) ಮುಂತಾದ ವಿವರಗಳನ್ನು ಓದುವಾಗ ಬೇಗ ಮರೆಯಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ಪ್ರತಿರೂಪದಂತೆ ಅವರು ಕಾಣುತ್ತಾರೆ. ರೇಗುವ. ಬಡಿಯುವ. ಚಚ್ಚುವ. ಕೊರಳು ಕಟ್ಟಿಕೊಂಡು ಗಟ್ಟಿಯಾಗಿ ಅಳುವ ಈ ವ್ಯಕ್ತಿ ಬಹುಬೇಗ ನಮಗೆ ಹತ್ತಿರವಾಗಿಬಿಡುತ್ತಾರೆ. ಕಾಲೇಜುದಿನಗಳಲ್ಲಿ ಪಾಠ ಹೇಳಿದ. ವ್ಯಕ್ತಿತ್ವವನ್ನು ರೂಪಿಸಿದ ತೀ.ನಂ.ಶ್ರೀ. ಟಿ. ಎಸ್. ವೆಂಕಣ್ಣಯ್ಯ ಮುಂತಾದವರ ರೇಖಾಚಿತ್ರಗಳೂ ತುಂಬ ಸೊಗಸಾಗಿ ಮೂಡಿ ಬಂದಿವೆ. (ಪುಟ ೭೯-೮೦). ತಮ್ಮ ಸಮಸ್ತ ಬದುಕಿನ ಕ್ರತುಶಕ್ತಿಯಾದ ಶ್ರೀ ಕುವೆಂಪು ಅವರ ಬಣ್ಣನೆಯಲ್ಲಿ ಕವಿ ಭಾವುಕರಾಗಿ ಮೈಮರೆತುಬಿಡುತ್ತಾರೆ. ಗದ್ಯ ಶಿಲ್ಪಿಯ ಲೇಖನಿಗೆ ಕಾವ್ಯದ ಬಣ್ಣ ಒಂದು ಬಿಡುತ್ತದೆ. ಮುಖ್ಯವಾಗಿ ಕುವೆಂಪು "ಧ್ಯಾನಮೂರ್ತಿ" ಆಚಾರ್ಯ. ಋಷಿ. ಸಂತ. ಅವರೊಡನೆ ಲೇಖಕರು ಎಷ್ಟು ತಮ್ಮನ್ನು ಬೆಸೆದುಕೊಂಡಿದ್ದರೆಂದರೆ. ಉದ್ಯೋಗ. ಬಡ್ತಿ, ವರ್ಗದಂತಹ ಖಾಸಗಿ ವಿಷಯಗಳಲ್ಲೂ ಕುವೆಂಪು ಅವರ ಅಭಿಪ್ರಾಯವೇ ಇವರ ಅಭಿಪ್ರಾಯ. ಎಂ. ಆರ್. ಶ್ರೀನಿವಾಸಮೂರ್ತಿಗಳು ಒಡ್ಡಿದ ಉದ್ಯೋಗದ ಬಲೆಗೂ ಅವರು ಸಿಲುಕಲಿಲ್ಲ. ರಾಜ್ಯದ ಮುಖ್ಯ ಸಚಿವರಾದ ಗೌರವಾನ್ವಿತ ಕೆಂಗಲ್ ಹನುಮಂತಯ್ಯನವರ ಅತ್ಯಂತ ಆಕರ್ಷಕ ಉದ್ಯೋಗದ ಕೊಡುಗೆಯನ್ನೂ ಅವರು ನಿರಾಕರಿಸಿದರು. "ನನ್ನನ್ನು ಬಿಟ್ಟುಹೋಗ್ತೀರಾ?" ಎಂಬ ಕವಿವರ್ಯರ ಪ್ರಶ್ನೆಯಿಂದಲೇ ದೇಜಗೌ ಹನಿಗಣ್ಣಾದರು. ಈ 'ಅಶ್ರುಗಂಗೆಯೇ' ಅವರ ಬದುಕನ್ನು ರೂಪಿಸಿದ ನಿರ್ಮಲವಾರಿಯಾಯಿತು. ಇಂಥ ಭಾವಪೂರ್ಣ ವಿವರಗಳಿಂದ 'ಬದುಕು' ಕಾವ್ಯಸ್ನಿಗ್ಧವಾಗಿದೆ. ಮುಂದೆ ಕನ್ನಡದ ಕೆಲಸದಲ್ಲಿ ಕವಿವರ್ಯರು ಜ್ಞಾನಶಕ್ತಿಯಾಗಿಯೂ. ದೇಜಗೌ ಕ್ರಿಯಾಶಕ್ತಿಯಾಗಿಯೂ ಬೆಳಗಿದುದು ಈಗ ಇತಿಹಾಸವೇ ಆಗಿದೆ. ಅವರು ಗರ್ಭಗುಡಿಯ ಅಚಲಮೂರ್ತಿ. ಇವರು ಉತ್ಸವಮೂರ್ತಿ - ಅವರಿಗಾಗಿ. ಅವರಿಂದಾಗಿ. ಅವರ ಶ್ರೀಕೃಷ್ಣ ಹಸ್ತ ಬೆನ್ನುಸವರಿದುದಲ್ಲದೆ ಇವರ ಅರ್ಜುನಪಾದ ಮುಂದೆ ಅಡಿಯಿಡದು. ಒಮ್ಮೆ ದೇಜಗೌ ಸರಿಯಾಗಿಯೇ ಹೇಳುತ್ತಾರೆ : "ಪೂರ್ವಜನ್ಮದ ಪುಣ್ಯದಿಂದ ತಮ್ಮ ಬಳಿ ಸೇವೆ ಸಲ್ಲಿಸುವ ಅವಕಾಶ ದೊರೆತಿದೆ. ನನಗೆ ಯಾವ ಅಧಿಕಾರವೂ ಬೇಕಾಗಿಲ್ಲ. ನೀವು ಹೇಳಿದ್ದನ್ನು ಸದ್ದಿಲ್ಲದೆ ಮಾಡುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ" (ಪುಟ. ೧೬೨).

-೭-

ಇಂತಹ ಹೃದಯ ಸಂಬಂಧದ ಸುಳಿಗಳು ಈ ಗ್ರಂಥವನ್ನು ಆರ್ದ್ರವಾಗಿಸುವ ಪ್ರಮುಖ ಅಂಶಗಳಾಗಿವೆ. ಸರಳ ಮುಗ್ಧ ಸ್ವಭಾವದ ಸುಸಂಸ್ಕೃತ ಹೃದಯವಂತಿಕೆಯ ಪತ್ನಿಯ ಚಿತ್ರಣದಲ್ಲಾಗಲೀ (ಪುಟ ೧೧೬) ಬೆಂಗಳೂರಿನಲ್ಲಿ ಕಾಯಿಲೆಯಿಂದ ತೀರಿಕೊಂಡ ಮೊದಲ ಮಗು ಶಾಂತಳ ವರ್ಣನೆಯಲ್ಲಾಗಲೀ. ಮಗ ಶಶಿಧರನ

ಆತಂಕಗೊಳಿಸುವ ಕಾಯಿಲೆಯ - ಅದನ್ನು ಗೆದ್ದು ಬದುಕಿದ ಪವಾಡಗಳ ಚಿತ್ರಣದಲ್ಲಾಗಲೀ, ಮುದ್ದು ಮಕ್ಕಳನ್ನು ಮೂರು ತಿಂಗಳು ಆಗಲಿ ಪುಣೆಯಲ್ಲಿ ಅನುಭವಿಸಿದ ಏಕಾಂತ ವ್ಯಥೆಯ ವರ್ಣನೆಯಲ್ಲಾಗಲೀ ಇಂಥ ಅಕ್ಕರೆ - ವಾತ್ಸಲ್ಯ - ಕಾರುಣ್ಯದ ಸ್ನಿಗ್ಧತೆಯನ್ನು ಕಾಣಬಹುದು. ದೇಜಗೌ ಶಿವಮೊಗ್ಗೆಯ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದುದು ಕೇವಲ ಮೂರೂವರೆ ತಿಂಗಳು. ಆದರೂ ಆ ಊರನ್ನು ಅದೆಷ್ಟು ಹಚ್ಚಿಕೊಂಡು ಬಿಟ್ಟರೆಂದರೆ " ಶಿವಮೊಗ್ಗೆಯನ್ನು ಬಿಟ್ಟು ಹೊರಡುವಾಗ, ಸ್ನೇಹಿತರಿಂದ ಬೀಳ್ಕೊಂಡಾಗ ನನ್ನ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಮೈಸೂರಿಗೆ ಹಿಂತಿರುಗಿದ ನಂತರವೂ ಕೆಲವು ದಿನಗಳ ತನಕ ಶಿವಮೊಗ್ಗೆಯ ಸವಿನೆನಪುಗಳು ಆಗಾಗ್ಗೆ ನನ್ನ ಮನಸ್ಸನ್ನು ಕಲಕುತ್ತಿದ್ದವು" ಎಂದು ಅವರು ಬರೆಯುತ್ತಾರೆ (ಪುಟ. ೨೦). ದೇಜಗೌ ಅವರ ವ್ಯಕ್ತಿತ್ವದ ಮಹತ್ವದ ಅಂಶವೇ ಈ ಅಂತಃಕರಣ - ಆರ್ದ್ರ ಹೃದಯದ ಭಾವುಕತೆ. ಇಂಥವರು ಮೈಸೂರಿನ ವಿಶ್ವವಿದ್ಯಾನಿಲಯದ ಆಡಳಿತದ ರಾಜಕೀಯ ಒಳಸುಳಿಗಳ ನಡುವೆ ಹೇಗೆ ಏಗಿದರು ಎಂದು ವಿಸ್ಮಯವಾಗುತ್ತದೆ - ಏಗಿದುದು ಮಾತ್ರವಲ್ಲ ಅತ್ಯಂತ ದಕ್ಷರೂ ಶುದ್ಧಹಸ್ತರೂ ಆಗಿ ವಿಶ್ವವಿದ್ಯಾನಿಲಯದ ರೂವಾರಿಗಳಲ್ಲೊಬ್ಬರಾದವರು ಎಂಬುದು ಮತ್ತಷ್ಟು ವಿಸ್ಮಯವನ್ನುಂಟುಮಾಡುತ್ತದೆ. ಮೈಸೂರಿನಿಂದ ಬಹು ದೂರವಿದ್ದು ತಣ್ಣಗೆ ಬದುಕುತ್ತಿರುವ ನನ್ನಂತಹ ಬಹುಮಂದಿಗೆ ಮೈಸೂರೆಂದರೆ ಸರಸ್ವತಿಯ ದೇಗುಲ - ಪವಿತ್ರ ಕ್ಷೇತ್ರ, ಶೈಕ್ಷಣಿಕ ಸಾಂಸ್ಕೃತಿಕ ದಾಹವನ್ನು ತಣಿಸುವ ಮಂಗಳದ ಅಂಗಳ. ಅಂಥ ವಾತಾವರಣದಿಂದ ಸೌಲಭ್ಯಗಳಿಂದ ಸಾಂಸ್ಕೃತಿಕ ವಲಯದಿಂದ ವಂಚಿತರಾಗಿ ಯಾವುದೋ ಕಾಡುಕೊಂಪೆಯಲ್ಲಿ ಕುಸಿಯುತ್ತಿರುವ ನಾವು ಕಡುಪಾಪಿಗಳು! ಇತ್ಯಾದಿ ಭ್ರಮೆಗಳು ನಮ್ಮನ್ನು ಕಾಡುವುದುಂಟು. ಆದರೆ "ಬದುಕು" ಭಾಗ ಒಂದು - ಭಾಗ ಎರಡು (ಮುಖ್ಯವಾಗಿ) ಒಮ್ಮೆ ಓದಿದವರಿಗೆ ಭ್ರಮನಿರಸನವಾಗುತ್ತದೆ. ಪರೀಕ್ಷೆಗಳ ಹಗರಣ, ಅವ್ಯವಹಾರ, ಜಾತಿ ರಾಜಕೀಯ, ಚೂಪುಗಾರಿಕೆಯ ರಾಜಕೀಯ, ಬೆನ್ನಿನಲ್ಲಿ ಚೂರಿ ಇರಿತ, ನಯ ವಂಚಕರ ಮುಖವಾಡಗಳು . . . . ರಾಮ ರಾಮ! ಇವುಗಳನ್ನು ದೇಜಗೌ ಬಯಲು ಮಾಡುತ್ತಾ ಹೋಗುವಾಗ 'ದೂರದ ಬೆಟ್ಟ ನುಣ್ಣಗೆ' ಎಂಬುದು ಅರಿವಾಗುತ್ತದೆ. ಈ ಸುಳಿಗಳಿಗೆ ಸಿಲುಕದೆ ಅಷ್ಟೋ ಇಷ್ಟೋ ಕನ್ನಡದ ಕೆಲಸವನ್ನು ಸಮಾಧಾನದಿಂದಲೇ ಮಾಡುತ್ತ ನೆಮ್ಮದಿಯಾಗಿರುವ ಬಗ್ಗೆ ನಮ್ಮನ್ನು ನಾವೇ ಅಭಿನಂದಿಸಿಕೊಳ್ಳುವಂತಾಗುತ್ತದೆ! ಎಲ್ಲ ಊರುಗಳಲ್ಲೂ ಕೊಳಚೆಯಿರುವುದು ನಿಜ - ಊರು ಎಂದರೆ ಹಂದಿಗಳೂ ಹೊಲೆ ಗೇರಿಗಳೂ ಅನಿವಾರ್ಯ. ಆದರೆ ಎಲ್ಲ ಊರುಗಳ ಬಗ್ಗೆ ನಾವು ಭ್ರಮೆಗಳನ್ನು ಕಲ್ಪಿಸುವುದಿಲ್ಲ. ಆದರೆ ನನ್ನಂತಹ ವಿನೀತ - ಪೆದ್ದು ಅಧ್ಯಾಪಕರಿಗೆ ಯಾವುದು ಕಾಶೀರಾಮೇಶ್ವರವೆನಿತಸಿತ್ತೋ ಅದರ ಸತ್ಯದರ್ಶನ - ಬೆಚ್ಚು ಬೀಳಿಸುವ ವಿಕೃತಿ - ಈ ಗ್ರಂಥದಲ್ಲಿ ನಮಗೆ ದೊರಕುತ್ತದೆ. ಮನಸ್ಸು ದುಗುಡದಿಂದ ತುಂಬಿ ಹೋಗುತ್ತದೆ. ಆದರೆ ಇಂಥಲ್ಲೇ ಹಟತೊಟ್ಟು ನಂದನವನ ನಿರ್ಮಿಸಲು ಹೊರಟ ದೇಜಗೌ ಅವರ ಛಲ, ಏಕಾಂಗ ಸಾಹಸ, ಅದಕ್ಕೆ ಸದಾ ರಕ್ಷೆಯಾದ ಶ್ರೀ ಗುರುಕೃಪೆಗಳನ್ನು ನೆನೆದು ಮನಮುದಗೊಳ್ಳುತ್ತದೆ. ಇಂಥಲ್ಲೇ ಬದುಕಿದ, ಬಾಳಿದ, ವಿಶ್ವವಿದ್ಯಾನಿಲಯದ ಕೀರ್ತಿಯನ್ನು ದಿಗಂತ ವಿಶ್ರಾಂತವಾಗಿಸಲು ತಪಸ್ಸುಗೈದ ತೀನಂಶ್ರೀ, ಬಿ. ಎಂ. ಶ್ರೀ,

ಕುವೆಂಪು, ಎ. ಆರ್. ಕೃ, ಟಿಎಸ್‌ವೆಂ. ಮುಂತಾದ ಮಹಾಚೇತನಗಳನ್ನು ಸ್ಮರಿಸಿದಾಗ ಮನ ಪ್ರಫುಲ್ಲಗೊಳ್ಳುತ್ತದೆ. ಏನಾದರಾಗಲೀ ದೇಜಗೌ ತಮ್ಮ ಗ್ರಂಥದಲ್ಲಿ ನೀಡಿರುವ ದಟ್ಟವಾದ ನಿಷ್ಠುರವಾದ ಸತ್ಯದರ್ಶನ ನನ್ನಂಥವರ ಕಣ್ಣು ತೆರೆಸುವಂತಹುದು "ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ಚಕ್ಷುರುನ್ಮೀಲಿತಂಯೇನ ತಸ್ಮೈ ಶ್ರೀ ಗುರವೇ ನಮಃ ಹೀಗೆ ಐತಿಹಾಸಿಕ ದಾಖಲೆಯಾಗಿಯೂ "ಬದುಕು" ಮಹತ್ವದ ಗ್ರಂಥವಾಗುತ್ತದೆ.

-೮-

ಆತ್ಮಚರಿತೆಯ ನಾಯಕ, ಲೇಖಕನೇ ಹೌದಾದರೂ ಅವನ ಬಾಳಿನ ಸುತ್ತ ಹಬ್ಬಿಹರಡುವ ಹತ್ತಾರು ಪಾತ್ರಗಳ ಚಿತ್ರಣ ಅನಿವಾರ್ಯವಷ್ಟೆ! ಆ ಬಾಳನ್ನು ಅರಳಿಸಿದವರು, ಅದಕ್ಕೆ ನೀರೆರೆದವರು, ಬಿಸಿ ನೀರೆರೆದವರು, ಕಟ್ಟಿಕೊಂಡವರು, ಆಸರೆಯ ಕೈನೀಡಿದವರು, ಕೈ ಕೊಟ್ಟವರು, ಕೊಂಬೆರೆಂಬೆಗಳನ್ನು ಕಡಿಯಲು ಕತ್ತಿ ಮಸೆದವರು, ಬುಡವನ್ನೇ ಉರುಳಿಸಲು ಕಾತರರಾದ ಪರಶುಧರರು. . . . ಇಂಥವರನ್ನು ನೆನೆಯದಿದ್ದರೆ ಆತ್ಮಚರಿತೆ ಅಪೂರ್ಣವಾಗುತ್ತದೆ. ಆದರೆ ದೇಜಗೌ ಇಂಥ ಚಿತ್ರಣದಲ್ಲಿ ತೋರುವ ಕೃತಜ್ಞತೆ ಹಾಗೂ ಸಂಯಮ ಎರಡೂ ಅಪೂರ್ವವೇ. ತಮಗೆ ಬೆಂಬಲವಾಗಿ ಬೆನ್ನು ತಟ್ಟಿದವರ ಬಗ್ಗೆ, ಸಹಕರಿಸಿದವರ ಬಗ್ಗೆ ಮುಕ್ತ ಮನದ ನಿರರ್ಗಳವಾದ ಮಾತುಗಾರಿಕೆ - ನಮನ ಪುಷ್ಪಹಾರ ಅವರದ್ದು. ಅಂಥವರ ಹೆಸರನ್ನು ಚಪ್ಪರಿಸುತ್ತಾ ಸ್ಮರಿಸುತ್ತಾರೆ. ಶ್ರೀ ಕುವೆಂಪು, ಶ್ರೀ ಮಲ್ಲಿಕಾರ್ಜುನಪ್ಪನವರು, ಡಾ. ಶ್ರೀಮಾಲಿ, ಡಾ. ಕೊಠಾರಿ, ಶಂಕರಗೌಡರು, ಕೆಂಗಲ್ ಹನುಮಂತಯ್ಯನವರು... ಹೀಗೆ ಈ ಪಟ್ಟಿ ಬೆಳೆಯುತ್ತದೆ. ಇವರೆಲ್ಲ 'ಬದುಕಿ'ನ ಯೌವನದಲ್ಲಿ ಬಂದವರು - ಹಾಗಿರಲಿ. ತೀರ ಎಳೆತನದಲ್ಲಿ ತಮ್ಮನ್ನು ತಂದೆಯ ಬೆತ್ತದ ಪ್ರಹಾರದಿಂದ ಪಾರುಮಾಡಿ, ವಿದ್ಯಾದಾನ ಮಾಡಿ, ಪ್ರೋತ್ಸಾಹಿಸಿದ ಮೇಷ್ಟ್ರು ವೆಂಕಟರಾಮಯ್ಯಂಗಾರ್ಯರನ್ನೂ ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ (ಪುಟ ೨೩-೨೪). ವೀರಣ್ಣ ಗೌಡರನ್ನು ಮರೆಯುವುದಿಲ್ಲ. ಬಾಲ್ಯದ ಒಡನಾಡಿ, ಒಡನೋದಿ ಗೌರಮ್ಮನನ್ನು ನೆನೆಯುತ್ತಾರೆ. ಅಣ್ಣನಂತೆ ಬಾಚಿಕೊಂಡು ಎತ್ತಿಕೊಂಡೇ ಹಳ್ಳ ದಾಟಿಸುವ ಚನ್ನಪ್ಪನವರನ್ನು ಉಲ್ಲೇಖಿಸುತ್ತಾರೆ. ಹಾಗೆಯೇ ಮೇಷ್ಟ್ರು ಕೃಪಾದಾಸರನ್ನೂ ಪುಟ್ಟಾಶಾಸ್ತ್ರಿಗಳನ್ನೂ. ಆದರೆ 'ಶೂದ್ರಮುಂಡೇಗಂಡ ಹೊಲ ಉಳಲಾರದೆ ಓದುವುದಕ್ಕೆ ಬಂದಿದೀಯಾ ? ಜೊತೆಗೆ ಸಂಸ್ಕೃತ ಬೇರೆ ಕಲೀತೀನಿ ಅಂತೀಯಾ? ನಿನಗೂ ಸಂಸ್ಕೃತಕ್ಕೂ ದೂರ ಕಣಯ್ಯ ಹೋಗು ಹೋಗು ಬೆಪ್ಪು ಮುಂಡೇದೆ" ಎಂದು ಹೀಗಳೆದ ಮೇಷ್ಟ್ರ ಹೆಸರೂ ಸೂಚಿಸುವುದು ಅವರಿಗೆ ಸಲ್ಲದು. ಘಟನೆಯನ್ನು ಮಾತ್ರ ಹೇಳುತ್ತಾರೆ. ಶಿಕ್ಷಣ ಇಲಾಖೆಯ ಕಛೇರಿಯಲ್ಲಿ ಲಂಚರುಷುವತ್ತುಗಳಿಗೆ ಕೈ ಒಡ್ಡದ ಖೈಡ್ ಆಸಾಮಿ ಗುಮಾಸ್ತ "ಶ್ರೀ ಕೃಷ್ಣಪ್ಪ" ಎಂದು ಖಚಿತವಾಗಿ ಹೆಸರಿಸುವ ದೇಜಗೌ ಲಂಚಕೋರ ಆಸಾಮಿಯನ್ನು ಕುರಿತು 'ಸು' ಎಂದುಮಾತ್ರ ಸಂಕೇತಿಸುತ್ತಾರೆ! (ಪುಟ ೯೪-೯೫) ದ್ವಿತೀಯ ಭಾಗಗಳಲ್ಲಂತೂ ಕಂಟಕರ ಹೆಸರುಗಳು ಭೂವಿಪ್ರ, ಪ್ರಾವಿಪ್ರ, ಗಳಾಗಿ ಬಿಡುತ್ತವೆ. ಹಿರಿಯರೂ ವಿದ್ವಾಂಸರೂ ಸಜ್ಜನರೂ ಆದ ಹೆಚ್. ದೇವೀರಪ್ಪನವರನ್ನು ಬಾಯಿ ತುಂಬ ಬಣ್ಣಿಸುತ್ತಾರೆ (ದೇಜಗೌ - ಎಪ್ಪತ್ತರ ಹೊಸ್ತಿಲಲ್ಲಿ- ಪುಟ ೨೦೪-೫). ಅಹಿತ ಸಂಗತಿಗಳನ್ನು ಹೇಳುವಾಗ "ಹುಡುಗಿಯರ ಆಟಪಾಟಗಳನ್ನು ನೋಡಿಕೊಂಡಿರುತ್ತಾ ಹೊರಗೆ ಹೋದಾಗ ದೊಂಬಿ

ಮಾಡುವಂತೆ ಪುಸಲಾಯಿಸುತ್ತಾ ಹಿಂಸಾತ್ಮಕ ಕಾರ್ಯಗಳಲ್ಲಿ ನೇರವಾಗಿ ತೊಡಗಿದ "ಕೆಲವು ಪ್ರಿನ್ಸಿಪಾಲರು" ಎಂದು ತೇಲಿಸುತ್ತಾರೆ (೧೯೨). ಅನೇಕ ಅತೃಪ್ತರು ಗುಂಪು ಕಟ್ಟಿಕೊಂಡು ರಾಜಕೀಯ ಮಾಡುತ್ತಿದ್ದುದುಂಟು ಎಂದು ಮಾತ್ರ ಸೂಚಿಸುತ್ತಾರೆ (೨೨೮). ಪೂಜ್ಯ ಪುತಿನ. ಹರಿದಾಸಭಟ್ಟರು. ಮುಂತಾದವರನ್ನು ಅದೆಷ್ಟು ಹೃದಯಂಗಮವಾಗಿ ಬಣ್ಣಿಸುತ್ತಾರೆ! (ಪುಟ೨೪೫-೨೪೬). ರಾಜ್ಯಪಾಲ ಧರ್ಮವೀರರನ್ನೂ. ಮೋಹನಲಾಲ ಸುಖಾಡಿಯಾ ಅವರನ್ನೂ ಚಿತ್ರಿಸುವ ಸಂದರ್ಭದಲ್ಲಿ ಅವರ ಲೇಖನಿಗೆ ಜೇನಿನ ಸವಿ. ಆದರೆ ಅವರ ಮನಸಿನ ಮೇಲೆ ಆಳವಾದ ಅಳಿಯದ ಗಾಯವನ್ನು ಮಾಡಿದ. ಹಿಂದೊಮ್ಮೆ ಅವರ ಹೃದಯಕ್ಕೆ ತೀರಾ ಹತ್ತಿರವಾಗಿದ್ದು ಇದೇ ಕೃತಿಯಲ್ಲೇ ಮತ್ತೆ ಮತ್ತೆ ಪ್ರಶಂಸಿತರಾಗಿರುವ ವ್ಯಕ್ತಿಯಿಂದ ಉಂಟಾದ ನೋವನ್ನು ಚಿತ್ರಿಸುವಾಗ ಅವರು ಆ ಹೆಸರನ್ನು ಬೇಕೆಂದೇ ಮರೆಸುತ್ತಾರೆ. ಆದರೆ ಆ ಚುಚ್ಚುವ್ಯಥೆ ಅದೆಷ್ಟು ನೋವನ್ನು ತಂದಿರಬಹುದು ಎಂಬುದು ಸೂಕ್ಷ್ಮಜ್ಞನಾದ ಯಾರಿಗಾದರೂ ಅವರ ಮಾತಿನ ನೆರಳಿನಲ್ಲಿ ಅರ್ಥವಾಗುತ್ತದೆ. "ಕನ್ನಡ ಇಲಾಖೆಯ ಸುವರ್ಣೋತ್ಸವ ದಶಮಾನೋತ್ಸವಗಳು ಈ ಭವ್ಯ ಕಟ್ಟಡದಲ್ಲಿಯೇ ನಡೆದಿರಬೇಕೆಂದು ತೋರುತ್ತದೆ. ಕಳೆದ ಜನವರಿ ತಿಂಗಳಲ್ಲಿ ಅದರ ದ್ವಿಶತಮಾನೋತ್ಸವ ನಡೆಯಿತು. ಇಂದಿನ ನಿರ್ದೇಶಕರಾದ ಎಚ್. ತಿಪ್ಪೇರುದ್ರಸ್ವಾಮಿಯವರ ಔದಾರ್ಯ ಸೌಜನ್ಯಪೂರ್ಣ ಆಹ್ವಾನದಿಂದಾಗಿ. ಆ ಉತ್ಸವವನ್ನು ಉದ್ಘಾಟಿಸುವ ಸದವಕಾಶ ನನಗೆ ದೊರೆಯಿತು (ದೇಜಗೌ-ಎಪ್ಪತ್ತರ ಹೊಸ್ತಿಲಲ್ಲಿ -ಪುಟ. ೨೧೫). ರಾಜಕೀಯದಲ್ಲಿ ಮುಳುಗಿದ ಅಧ್ಯಾಪಕರಿಂದಲೇ ಮಾಲಿಯೆಂದೂ. ಕಂತ್ರಾಟುದಾರನೆಂದೂ. ಬಸವಯ್ಯನೆಂದೂ ಕುಕ್ಕಿಸಿಕೊಳ್ಳುತ್ತಲೇ ಗಂಗೋತ್ರಿಯನ್ನು ಕಟ್ಟಿ ಬೆಳೆಸಿದ ಈ ಮಹಾನ್ ಚೇತನ ಮೇಲಿನ ಮಾತುಗಳನ್ನು ಆಡುವಾಗ. ಬಲ್ಲವರಿಗೆ. ಕಂಡವರಿಗೆ. ಕೇಳಿದವರಿಗೆ. ಆ ವ್ಯಥೆಯ ಕಥೆ ಅರ್ಥವಾಗುತ್ತದೆ. ಅದರ ವಿಸ್ತರಣೆ ಇಲ್ಲಿ ಅನಾವಶ್ಯಕ. ನಾನು ಹೇಳ ಹೊರಟದ್ದೆಂದರೆ. ನಿಷ್ಠಾವಂತನಾದ ಕಛೇರಿಯ ಗುಮಾಸ್ತನನ್ನೂ ಹೆಸರಿಸಿ ಹೊಗಳುವ ದೇಜಗೌ. ತಮ್ಮ ಮನಸ್ಸಿಗೆ ನೋವು ತಂದ ಪ್ರಸಂಗಗಳನ್ನು ವಿವರಿಸುವಾಗ ಸಂಬಂಧಪಟ್ಟವರ ಹೆಸರನ್ನು ಹೇಗೆ ಮರೆಸುತ್ತಾರೆ. ತೇಲಿಸುತ್ತಾರೆ ಎಂಬುದನ್ನು. ಇದು ಅವರ ಸಭ್ಯತೆಗೆ. ಸಂಸ್ಕೃತಿಗೆ ಸಾಕ್ಷಿ. ಅವರ ಸಹಜ ಸ್ವಭಾವವೇ ಆದ ಉದ್ವೇಗ ಆವೇಗಗಳೂ ಆಗ ಸಂಯಮಪೋಷಿತವಾಗಿ ವಿನಮ್ರವಾಗಿ ಬಿಡುತ್ತವೆ. ಅನೇಕರ ಪಾಲಿಗೆ ಆತ್ಮಚರಿತೆಗಳು ತಮ್ಮ ಹಗೆಗಳ ಬಗ್ಗೆ ನಂಜುಕಾರಿಕೊಳ್ಳುವ ಹಾಳೆಗಳು. ಅಂಥವರನ್ನು ನೇರವಾಗಿ ಎದುರಿಸುವ ಸಾಮರ್ಥ್ಯ ಆತ್ಮಸಾಕ್ಷಿ ಇಲ್ಲದವರಿಗಂತೂ ಈ ನಂಜುಕಾರುವ ಹಸಿಯ ಚಪಲದ ಹಸಿವು ಹೆಚ್ಚು. ಆದರೆ ಒಳಿತನ್ನು ಸದ್ಗುಣವನ್ನು ಥಟಕ್ಕನೆ ಗುರುತಿಸುವ. ಸ್ವಲ್ಪ ಹೆಚ್ಚಿಂದೇ ಪ್ರಶಂಸಿಸುವ ನಿರೂಪಣೆಯಲ್ಲಿ ತೋರುವ ಸಂಯಮ ಅಪೂರ್ವದ್ದು. ಅಚ್ಚರಿಗೊಳಿಸುವಂತಹುದು. ಆದರ್ಶಪ್ರಾಯವಾದದ್ದು. ದೇಜಗೌ ಬರೆಯುತ್ತಾರೆ : "ಏನೇ ಆದರೂ ಗತ್ಯಂತರವಿಲ್ಲದೆ ಪರರಿಗೆ ನೋವುಂಟು ಮಾಡಬಹುದಾದ ಕೆಲವು ಸಂಗತಿಗಳು ಕತೆಯೊಳಗೆ ನುಸುಳಬಹುದು. ಒಬ್ಬ ವ್ಯಕ್ತಿಯ ವಿಷಯದಲ್ಲಿ ಒಂದೆರಡು ಕಟು ಸಂಗತಿಗಳು ನಿರೂಪಣೆಗೊಂಡ ಮಾತ್ರಕ್ಕೆ ಅವನು ಕೆಟ್ಟವನಾಗುವುದಿಲ್ಲ. ಯಾವುದೋ ಸನ್ನಿವೇಶದಲ್ಲಿ, ಯಾವುದೋ ನಿಮಿಷದಲ್ಲಿ, ಕತೆಗಾರನ ದೃಷ್ಟಿಯಲ್ಲಿ

ಅವನು ಹೇಗೆ ಕಂಡನೆಂಬುದು ಉಲ್ಲೇಖಗೊಂಡ ಮಾತ್ರಕ್ಕೆ. ಅವನ ಇಡೀ ವ್ಯಕ್ತಿತ್ವಕ್ಕೆ ಆ ಉಲ್ಲೇಖ ಕನ್ನಡಿಯಾಗುವುದಿಲ್ಲ. ಅಷ್ಟೇ ಅಲ್ಲ. ಕತೆಗಾರನ ದೃಷ್ಟಿ ದೋಷಯುಕ್ತವಾದದ್ದೆಂದು ಇತರರಿಗೆ ಅನಿಸಿದರೆ ಆಶ್ಚರ್ಯವಿಲ್ಲ." ಈ ಶುಭದೃಷ್ಟಿ. ಸಂಯಮದ. ಆತ್ಮಪರೀಕ್ಷಣದ ಮುಕ್ತದೃಷ್ಟಿ. ಅಲ್ಲಿ ವ್ಯಕ್ತವಾಗುವ ಜೀವನ ಶ್ರದ್ಧೆ- ದೇಜಗೌ ಅವರನ್ನು ಹಿರಿಯ ಚೇತನವಾಗಿಯೂ ಆದರ್ಶ ಆತ್ಮಚರಿತಕಾರರಾಗಿಯೂ 'ಬದುಕು' ವಂತೆ ಮಾಡಿದೆ.

-೯-

"ಬದುಕು" ಓದಿ ಮುಗಿಸಿದಾಗಲೆಲ್ಲ ಒಂದು ರಹಸ್ಯಮಯ ಕೌತುಕ ನನ್ನನ್ನು ಕಾಡುತ್ತಲೇ ಇದೆ. ಯಾವ ಬೌದ್ಧಿಕ ತಾರ್ಕಿಕತೆಯಿಂದಲೂ ಅದಕ್ಕೆ ಉತ್ತರವನ್ನು ಕಂಡುಕೊಳ್ಳಲಾಗಿಲ್ಲ. ಪ್ರಾಯಶಃ ಅದು ಸಾಧಾರಣ ಮನಶ್ಶಾಸ್ತ್ರವನ್ನು ಮೀರಿದ ಪರಾಮಾನಸದ ಕ್ಷೇತ್ರ. ಇನ್ನೂ ಆಚೆಗೆ ಹೋದರೆ ಅದು ಜನ್ಮಜನ್ಮಾಂತರದ ಕರ್ಮ ಮೀಮಾಂಸೆಗೆ ತೆಕ್ಕೆ ಬೀಳುತ್ತದೆ. ಮೊದಲೇ ಹೇಳಿಬಿಡುತ್ತೇನೆ ಇಲ್ಲಿ ಪ್ರಸ್ತಾಪಿಸುತ್ತಿರುವುದು ಆಹಾರ ಮೀಮಾಂಸೆಯಲ್ಲ. ಸಂಸ್ಕೃತಿಗೂ ಮಾಂಸಾಹಾರಕ್ಕೂ ಏನು ಸಂಬಂಧ? ವೇದಕಾಲದ ಋಷಿಗಳು ಮಾಂಸಾಹಾರಿಗಳಾಗಿರಲಿಲ್ಲವೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ನನಗೆ ಶಕ್ತಿ ಸಾಲದು. "ಯುಕ್ತಾಹಾರ" ಎಂಬ ಗೀತಾಚಾರ್ಯನ ಪರಿಕಲ್ಪನೆಗೆ ನಾನು ವ್ಯಾಖ್ಯಾನ ಬರೆಯಲಾರೆ. ನನ್ನನ್ನು ಕಾಡುತ್ತಿರುವುದು ಒಂದು ವ್ಯಕ್ತಿತ್ವವನ್ನು ರೂಪಿಸುವ ಸುಳಿ ಒಳಸುಳಿಗಳ - ಅಗೋಚರ ಗೂಢಗಳ ಸಮಸ್ಯೆ. ಪರಿಸರ -ವೈಯಕ್ತಿಕತೆ ಇವುಗಳ ಸಂಬಂಧ ಸಂಕೀರ್ಣವಾದುದು. ಪರಿಸರ ಒಂದೇ ವ್ಯಕ್ತಿತ್ವದ ರೂಪಣದಲ್ಲಿ ಪೂರ್ಣ ಪಾತ್ರ ವಹಿಸುವುದಾದರೆ, ದೇಜಗೌ ಅವರಂತಹ ಧೀಮಂತ ವ್ಯಕ್ತಿತ್ವ ಸೃಷ್ಟಿಯಾಗುತ್ತಿರಲಿಲ್ಲ. ಆಡುಕುರಿಗಳ ನಡುವೆ, ಹೊಡೆತ ಬಡಿತಗಳ, ಶೋಷಣೆ ತಿರಸ್ಕೃತಿಗಳ ನಡುವೆ ಬೆಳೆದ ಬಾಲಕನಲ್ಲಿ ಅಂಥ ವಿದ್ಯಾದಾಹವೇಕೆ ? ಅತ್ಯಂತ ಉನ್ನತವಾದ ವ್ಯಕ್ತಿಗೆ ತೆಕ್ಕೆ ಬೀಳುವ ಹಂಬಲವೇಕೆ ? ತರಗತಿಯಲ್ಲಿ ಮೇಲ್ಪಂಕ್ತಿಯ - ವರ್ಗದ - ಸುಖೀ ಬಾಲಕರ ಮಧ್ಯೆ ಮೊದಲಿಗನಾಗುವ ಛಲವೇಕೆ ? ಸಂಸ್ಕೃತದ ಬಗೆಗೆ ತೀರದ ಒಲವು ಏಕೆ? ಆಲಿಂಗನಕ್ಕೆ ಸಿದ್ಧವಾದ ಆಮಿಷವನ್ನು ಕಿತ್ತೆದ್ದು ಹೋಗುವ ಛಲವೇಕೆ? ಇವೆಲ್ಲವೂ ಹಾಗಿರಲಿ. ಈ ಮಾತುಗಳ ರಹಸ್ಯವೇನು? "ನಮ್ಮ ಮನೆಯವರೆಲ್ಲ ಮಾಂಸಾಹಾರಿಗಳೇ. ಆದರೆ ನನಗೆ ಮಾತ್ರ ಅದು ಸೇರುತ್ತಿರಲಿಲ್ಲ. ಶೈಶವದಲ್ಲೇ ಮಾಂಸದ ಚೂರನ್ನು ತಿನ್ನಿಸಲು ತಾಯಿ ಪ್ರಯತ್ನಿಸಿದಾಗ ನಾನು ವಾಂತಿ ಮಾಡಿಕೊಳ್ಳುತ್ತಿದ್ದೆನೆಂದು ಅವರು ಹೇಳುವುದುಂಟು. ಅದನ್ನು ಅಭ್ಯಾಸ ಮಾಡಿಸಲು ನನ್ನ ತಂದೆ ತಾಯಿಯರು ಅನೇಕ ಬಾರಿ ಪ್ರಯತ್ನಿಸಿದುದುಂಟು. ಮನೆಯಲ್ಲಿ ಮಾಂಸದ ಅಡಿಗೆ ಮಾಡಿದಾಗ ಅವರು ತುಂಬಾ ಪೇಚಾಡಿಕೊಳ್ಳುತ್ತಿದ್ದರು. ಯಾವ ಯಾವುದೋ ರಸಗಳನ್ನು ಕುಡಿಸಿ ನನಗೆ ಧೈರ್ಯಹೇಳಿ ಮಾಂಸ ತಿನ್ನಿಸಿದ ಹತ್ತು ಹದಿನೈದು ನಿಮಿಷದಲ್ಲಿಯೇ ನಾನು ಕಕ್ಕಿ ಬಿಡುತ್ತಿದ್ದೆ; ನನ್ನ ಮೈಯೆಲ್ಲ ಗಂದೆಯಿಂದ ಊದಿಕೊಳ್ಳುತ್ತಿತ್ತು. ಒಂದು ಸಾರಿ ನಮ್ಮ ಚಿಕ್ಕಪ್ಪನ ಮಗನ ಮದುವೆಯ ಸಂದರ್ಭದಲ್ಲಿ ನೆರೆದ ನೆರವಿಗೆ ಮಾಂಸದ ಭೋಜನ ಏರ್ಪಾಟಾಗಿತ್ತು. ನಮ್ಮ ಚಿಕ್ಕಪ್ಪ ನಾನು ಊಟ ಮಾಡಬೇಕೆಂದು ಪೀಡಿಸಿದರು. ಒಲ್ಲೆನೆಂದಾಗ ಚೆನ್ನಾಗಿ ಬೆಳೆದಿದ್ದ ನನ್ನ ಜುಟ್ಟು ಹಿಡಿದು ಅನಾಮತ್ತಾಗಿ ಮೇಲೆತ್ತಿ ನೆಲವ

ಮೇಲೆ ಕುಕ್ಕಿದರು.ಇನ್ನೂ ಮುಂದೆ ಏನು ಹಿಂಸೆಯಾಗುವುದೋ ಎಂಬ ಭಯದಿಂದ ನಾನು ಮಾಂಸವನ್ನು ತಿಂದು ಬಿಟ್ಟೆ. ಅನಂತರ ಶಾಲೆಗೆ ಹೋದೆ. ಐದು ಹತ್ತು ನಿಮಿಷದಲ್ಲೇ ಅಲ್ಲಿ ವಾಂತಿಭೇದಿ ಆಗಿ ಆ ಕೋಣೆಯೆಲ್ಲ ದುರ್ವಾಸನೆಯಿಂದ ತುಂಬಿಹೋಯಿತು. ಮೈಯೆಲ್ಲ ಗಂದೆಯಿಂದ ಬಾತುಕೊಂಡಿತು" (ಪುಟ. ೨೯). ಈ ವಿವರ ನನ್ನನ್ನು ಬೆರಗು ಗೊಳಿಸುತ್ತದೆ. ವಾಂತಿ-ಗಂದೆ- ಎಂಬ ಪ್ರತಿಕ್ರಿಯೆಗಳು ಅಲರ್ಜಿಯನ್ನು ಸೂಚಿಸಬಹುದು. ಆದರೆ ಅಲರ್ಜಿ ಎಂಬುದೇ ಆಧುನಿಕ ವೈದ್ಯವಿಜ್ಞಾನದಲ್ಲಿ ಇಂದಿಗೂ ರಹಸ್ಯವೇ! ಮಾಂಸಾಹಾರದ ಯಾವುದೋ ಆಗದ ಎಲಿಮೆಂಟು ಬೇರೆ ಯಾವ ಆಹಾರ ಪದಾರ್ಥದಲ್ಲಿಯೂ ಇಲ್ಲವೇ? ಮಾಂಸಾಹಾರದ ಬಗ್ಗೆಯೇ ಮುಂದೆ ಸಾತ್ವಿಕ ಚೇತನವಾಗಿ ಬೆಳೆದ ಈ ಬಾಲಕನಿಗೆ ಏಕಿಷ್ಟು ಪ್ರತಿರೋಧ? ಜುಗುಪ್ಸೆ? ಶೈಶವದಿಂದಲೇ ಈ ಅನುಭವ ಎಂದ ಮೇಲೆ ಆಗ ದೇಜಗೌ ಅವರು ಬಾಪೂಜಿಯನ್ನು ಓದಿಯಾಗಲೀ ನೋಡಿಯಾಗಲೀ ಇರಲಿಲ್ಲವಲ್ಲ! ಬಾಪೂಜಿ ವಿದೇಶದಲ್ಲಿ ಮಾಂಸಾಹಾರದ ಪ್ರಲೋಭನೆಯನ್ನು ಗೆದ್ದುದಾದರೂ ಕೇವಲ ಛಲದಿಂದ, ತಾಯಿಗೆ ಮಾತು ಕೊಟ್ಟು, ವಚನ ಭಂಗವಾದೀತೆಂಬ ಮೌಲ್ಯ ಪ್ರಜ್ಞೆಯಿಂದ ಅರೋಚಿಕತೆಯಿಂದಲ್ಲ. ಮುಂದೆ ಜ್ವರತಪ್ತವಾದ ಮಗನಿಗೆ ಮಾಂಸದಸಾರು ಕುಡಿಸಲು ವೈದ್ಯರ ಒತ್ತಾಯವನ್ನೂ ತಿರಸ್ಕರಿಸಿದುದೂ, ತಾವೇ ಕಟ್ಟಿಕೊಂಡ ಮೌಲ್ಯ ಪ್ರಜ್ಞೆಯಿಂದ. ಆದರೆ ಇಲ್ಲಿ ತದ್ವಿರುದ್ಧ "ಪರಿಸರ" ಉಂಟು. ಸ್ವತಃ ತಾಯಿಯೇ ಒತ್ತಾಯಿಸಿ ಪುಸಲಾಯಿಸಿ ಧೈರ್ಯ ಹೇಳುತ್ತಿದ್ದರೂ ಈ ಮಗುವಿನ ನರನಾಡಿಗಳೂ - ಸಮಸ್ತ ಜೀವಕೋಶಗಳೂ ಏಕೆ ಮಾಂಸಾಹಾರವನ್ನು ಪ್ರತಿರೋಧಿಸುತ್ತಿವೆ - ತಿಳಿಯದು. "ನಾನು ಕುರಿಕೋಳಿ ತಿನ್ನುವ ಬ್ರಾಹ್ಮಣ" ಎಂದು ಹೆಮ್ಮೆಯಿಂದಲೇ ಸಾರುವ ಬ್ರಾಹ್ಮಣ ಮುಖ್ಯಮಂತ್ರಿಯೊಬ್ಬರೂ ಈ ರಾಜ್ಯದಲ್ಲಿ ಆಗಿಹೋದರು! ಇಂಥಲ್ಲಿ ದೇಜಗೌ ಅವರ ಈ 'ಬದುಕು' ನನ್ನನ್ನು ನಿಜಕ್ಕೂ ವಿಸ್ಮಯಗೊಳಿಸಿದೆ. ಅವರಿಗೆ ಪುನರ್ಜನ್ಮದ ಬಗ್ಗೆ ವಿಶ್ವಾಸವಿದ್ದಂತಿಲ್ಲ. ಆದರೆ ಅವರ ಗುರುವರ್ಯ ಶ್ರೀಕುವೆಂಪು ಅವರಿಗಂತೂ ನೂರಕ್ಕೆ ನೂರರಷ್ಟು ಇದೆ - ಈ ವಿನೀತಲೇಖಕನಿಗೂ ಇದೆ! ಪರಿಸರ - ವ್ಯಕ್ತಿ ವಿಶಿಷ್ಟತೆಗಳ ನಡುವಣ ಸಂಕೀರ್ಣ ಸಂಬಂಧಗಳ ಸುಳಿಯನ್ನು ಅಲ್ಲಿಯೇ ಹುಡುಕಲೇ? ಮುಂದೆ ದೇಜಗೌ ಖಾದೀಧಾರಿಗಳಾದರು. ಬಾಪೂಜಿಯ ಪ್ರಭಾವದಿಂದ ಕನ್ನಡವನ್ನು ಕಟ್ಟಿಕೊಂಡರು ಶ್ರೀಕುವೆಂಪು ಅವರ ಪ್ರೇರಣೆಯಿಂದ. ಸೀದಾ ಸಾದಾ - ಸರಳವಾದ - ಮಣ್ಣಿನ ಮಗನ ಜೀವನವನ್ನೇ ಕುಲಪತಿಯಾಗಿದ್ದಾಗಲೂ ನಡೆಸಿದರು. ಬಾಲ್ಯದ ಪರಿಸರದ ನೆನಪು -ಗಾಢ ಪ್ರಭಾವದಿಂದ ಎಂದೆಲ್ಲ ಸೂತ್ರೀಕರಿಸಿ ದಾಟಿಬಿಡಬಹುದು. ಆದರೆ ಮೇಲೆ ವಿವರಿಸಿದ ವ್ಯಕ್ತಿ ವಿಶಿಷ್ಟತೆಗೆ ಉತ್ತರವನ್ನು ಎಲ್ಲಿ ಹುಡುಕಬೇಕು? ಅಲ್ಲದೆ ಉಳಿದ ಸಂದರ್ಭಗಳನ್ನೂ ಚಿಂತಿಸುವುದಾದರೆ, ಸ್ವಾತಂತ್ರ್ಯೋತ್ತರ ಭಾರತದ ಭ್ರಷ್ಟಾಚಾರಿ ರಾಜಕಾರಣಿಗಳಲ್ಲಿ, ವಿಲಾಸ ವೈಭವಗಳ ಬೇರು ಬಾರುಗಳ ಖದೀಮರಲ್ಲಿ ಅದೆಷ್ಟು ಮಂದಿ ಗಾಂಧಿಯನ್ನು ಕಂಡಿಲ್ಲ-ಕೇಳಿಲ್ಲ-ಬಾಲ್ಯದ ಕೆಲ ಹಸುದಿನಗಳಲ್ಲಿ ತಾರುಣ್ಯದ ತುಸುದಿನಗಳಲ್ಲಿ ಅವರ ಪ್ರಭಾವಕ್ಕೆ ಒಳಗಾಗಿರಲಿಲ್ಲ ? ಆದರೆ ಮುಂದೆ ಏನಾಯಿತು ? ದೇಜಗೌ ಅವರ ಮೌಲ್ಯ ನಿಷ್ಠೆ ಅವರಲ್ಲಿ ಸದಾ ಸರ್ವದಾ ಉಳಿಯಿತೇ ?

-೧೦-

ಅಪಾರ ಆಡಳಿತಾತ್ಮಕ ಅನುಭವವನ್ನೂ ಶೈಕ್ಷಣಿಕ ಅನುಭವವನ್ನೂ ಪಡೆದುಕೊಂಡ ನಾಡಿನ ಕೆಲವೇ ಶಿಕ್ಷಣ ತಜ್ಞರಲ್ಲಿ ದೇಜಗೌ ನಿಸ್ಸಂದೇಹವಾಗಿ ಒಬ್ಬರು. ಅಂಥವರ ಶೈಕ್ಷಣಿಕ ಚಿಂತನಗಳು ನಿಜಕ್ಕೂ ತುಂಬ ಮೌಲಿಕವಾದವುಗಳು. ಈ ಕೃತಿಗಳಲ್ಲಿ ಸಾಂದರ್ಭಿಕವಾಗಿ ವ್ಯಕ್ತಗೊಂಡ ಅಂಥ ಚಿಂತನಗಳನ್ನು ಗಂಭೀರವಾಗಿ ಗಮನಿಸಬೇಕು. ನಮ್ಮ ಮುಂದಿನ ಪೀಳಿಗೆಯ ಶುಭದ ದೃಷ್ಟಿಯಿಂದ ಆದಷ್ಟು ಆಚರಣೆಗೆ ತರಲು ಯತ್ನಿಸಬೇಕು. ಹೀಗಾಗಿ "ಬದುಕು" ಶೈಕ್ಷಣಿಕ ಮಹತ್ವವನ್ನು ಪಡೆದ ಮೌಲಿಕ ಕೃತಿಯಾಗುತ್ತದೆ. ಕೆಲವನ್ನು ಮಾತ್ರ ಇಲ್ಲಿ ಸೂಚಿಸಿದೆ.

- ಸರಸ್ವತಿ ಮಂದಿರದಲ್ಲಿ ಜಾತೀಯತೆಯ ವಿಷ ಹರಡಬಾರದು. ಆ ವಿಷವೃಕ್ಷವನ್ನು ಬೆಳೆಸುವ ವ್ಯಕ್ತಿ ಉಪಾಧ್ಯಾಯನೆಂಬ ಬಿರುದಿಗೆ ಪಾತ್ರನಾಗಲಾರ. ಅವನು ಮಾತಾಪಿತೃಗಳಂತೆ ಪಕ್ಷಪಾತದೂರನಾಗಿರಬೇಕು, ನಿರ್ವಂಚಕನಾಗಬೇಕು, ಧರ್ಮ ಪ್ರವೃತ್ತನಾಗಿರಬೇಕು; ವಿದ್ಯಾರ್ಥಿಗಳನ್ನು ಔರಸಪುತ್ರರಂತೆ ಪ್ರೀತಿಸಬೇಕು; ಪರೀಕ್ಷೆಗಳಲ್ಲಿ ಸತ್ಯನಿಷ್ಠೆ ಪ್ರಾಮಾಣಿಕ ಶ್ರದ್ಧೆಗಳಿರಬೇಕು. ಹಾಗೆಯೇ ಸಾಹಿತ್ಯ ಮೌಲ್ಯಮಾಪನಕ್ಕೆ ಜಾತಿ ಅಳತೆಗೋಲಾಗಬಾರದು(ಪುಟ ೧೦).

- ಎಳೆತನದಲ್ಲಿ ನನ್ನಲ್ಲಿ ಕಳ್ಳತನದ ಪರಿಪಾಠ ಬೆಳೆಯಲು ಕಾರಣರಾದವರು ನಮ್ಮ ಅಧ್ಯಾಪಕರೇ. ಅಧ್ಯಾಪಕರು ಏನಾದರೂ ತರಕಾರಿಯನ್ನೋ ಸಾಮಾನನ್ನೋ ತರುವಂತೆ ವಿದ್ಯಾರ್ಥಿಗಳನ್ನು ಪೀಡಿಸುತ್ತಿದ್ದರು. .. (ಅವರ) ಏಟನ್ನು ತಡೆಯಲಾರದ ಸಂಕಟಕ್ಕೆ ಒಂದು ದಿನ ನಸುಕಿನಲ್ಲಿ ಎದ್ದು, ಪರರ ಮೆಣಸಿನ ಮಡಿಯನ್ನು ಹೊಕ್ಕು ಕಾಯಿಕಿತ್ತು ತಂದು, ಶಾಲೆಯ ಪಕ್ಕದ ಮರಳೋಣಿಯಲ್ಲಿ ಹೂಳಿದೆ. ಶಾಲೆಯ ಸಮಯಕ್ಕೆ ಸರಿಯಾಗಿ ಅದನ್ನು ತಂದು ಕೊಟ್ಟು, ಮೇಷ್ಟರ ಪ್ರೀತಿಗೆ ಪಾತ್ರನಾದೆ (ಪುಟ ೨೮).

- ಇಡೀ (ಅಮರ) ಕೋಶವನ್ನು ನಾನು ಗಟ್ಟುಮಾಡಿದ್ದೆ ಇದೇನಾದರೂ ನನ್ನ ಮನಸ್ಸಿನ ಒಳಪದರದಲ್ಲಿ ಕೆಲಸಮಾಡುತ್ತಿತ್ತೋ ಏನೋ ಗೊತ್ತಿಲ್ಲ.. . . ಸಂಸ್ಕೃತ ತೆಗೆದುಕೊಳ್ಳಬೇಕೆಂಬ ಭಾವನೆ ನನ್ನ ಮನಸ್ಸನ್ನು ಕೊರೆಯ ತೊಡಗಿತು. (ಪಂಡಿತರು ಅಲ್ಲವೋ ಶೂದ್ರ ಮುಂಡೇಗಂಡ . . . . ಇತ್ಯಾದಿ ಛೇಡಿಸುವವರೆಗೂ) ಶೂದ್ರನೆಂಬ ಭಾವನೆ ಅಲ್ಲಿಯತನಕ ನನ್ನ ಮನಸ್ಸಿನಲ್ಲಿ ಎಂದೂ ಹೊಳೆದಿರಲಿಲ್ಲ. ಬ್ರಾಹ್ಮಣರ ಮಕ್ಕಳ ಜೊತೆಯಲ್ಲಿ ಏನೂ ವ್ಯತ್ಯಾಸವಿಲ್ಲವೆಂಬಂತೆ ನಾನು ಆಟವಾಡಿದ್ದೆ. ನನ್ನ ಎಂಜಲನ್ನವರು, ಅವರ ಎಂಜಲನ್ನು ನಾನು ರುಚಿನೋಡಿದ್ದೆ. ಬ್ರಾಹ್ಮಣ ಅಧ್ಯಾಪಕರು ನನ್ನನ್ನು ಪ್ರೀತಿಯಿಂದ ಕಂಡಿದ್ದರು. ನನ್ನ ಶೂದ್ರತನದ ಭಾವನೆಗೆ ಮೊಟ್ಟಮೊದಲ ಬಾರಿಗೆ ಅಂಕುರಾರ್ಪಣ ಮಾಡಿದವರು ಈ ಶಾಲುಪಂಡಿತರು (ಪುಟ ೪೦).

- ಮೌಢ್ಯ ದಾರಿದ್ರ್ಯಗಳ ಮೂಲೋತ್ಪಾಟನೆಗೆ ವಿದ್ಯೆಯೇ ರಾಮಬಾಣ . . . . ಹಳ್ಳಿಗಳಲ್ಲಿ ಸಾಂಸ್ಕೃತಿಕ ವಾತಾವರಣವನ್ನು ಹುಟ್ಟಿಸುವುದು. ಸೂಕ್ತ ಮಾಧ್ಯಮಗಳ ಮೂಲಕ ಜ್ಞಾನ ಪ್ರಸಾರ ಮಾಡುವುದು ಅಧ್ಯಾಪಕರ ಆದ್ಯಕರ್ತವ್ಯ. ಅದಕ್ಕಾಗಿ

ಮೊದಲು ಅಧ್ಯಾಪಕರು ಸಂಘಟನೆಗೊಳ್ಳಬೇಕು. . . . ವಾರದಲ್ಲಿ ಕೆಲವು ಗಂಟೆಗಳಾದರೂ ಹಳ್ಳಿಗರೊಡನೆ ಬೆರೆತು ಪ್ರಜಾಪ್ರಭುತ್ವದ ಮೂಲಸೂತ್ರಗಳನ್ನು. ಪ್ರಪಂಚದ ಪ್ರಚಲಿತ ಸುದ್ದಿಗಳನ್ನು ಉಪದೇಶಿಸಬೇಕು . . .. (ಪುಟ ೮೫)

- ಸಾಮಾನ್ಯವಾಗಿ ಅಧ್ಯಾಪಕ ವೃತ್ತಿ ಸುಲಭವೆಂದು ಸಾಮಾನ್ಯ ಜನರೂ, ಇತರ ಇಲಾಖೆಗಳ ಅಧಿಕಾರಿಗಳೂ ಹೇಳಿಕೊಳ್ಳುವುದುಂಟು. ಅಧ್ಯಾಪಕನಾದವನು ಸದಾ ವಿದ್ಯಾರ್ಥಿಯಾಗಿದ್ದುಕೊಂಡು ವರ್ಷಕ್ಕೆ ೩೬೫ ದಿನವೂ ವ್ಯಾಸಂಗ ಸಂಶೋಧನೆಗಳಲ್ಲಿ ನಿರತನಾಗಿರಬೇಕು. ದಿನದಿನವೂ ಹೊಸ ಹೊಸ ವಿಷಯಗಳನ್ನು ಸಂಗ್ರಹಿಸುತ್ತಾ ಪ್ರತಿಕ್ಷಣವೂ ನೂತನ ವಿಧಾನವನ್ನು ಆಲೋಚಿಸುತ್ತಾ ವಿದ್ಯಾರ್ಥಿಗಳಿಗೆ ಹೊಸ ಹೊಸ ವಿಚಾರಗಳನ್ನು ಹೇಳುತ್ತಿರಬೇಕು. ತನ್ನ ನಡೆನುಡಿಗಳಿಂದ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ಪೂರ್ವಗ್ರಹ ಪೀಡಿತನಾಗದೆ ಮದಮಾತ್ಸರ್ಯಗಳಿಂದ ವರ್ತಿಸದೆ ಅವರನ್ನು ಮಕ್ಕಳಿಗಿಂತ ಹೆಚ್ಚಾಗಿ ವಾತ್ಸಲ್ಯ ಸಹಾನುಭೂತಿಗಳಿಂದ ಕಾಣಬೇಕು. ಅವರು ತಪ್ಪು ಮಾಡಿದಾಗ ಸಹನೆ ಕಳೆದುಕೊಳ್ಳಬಾರದು. ಅವರನ್ನು ಪ್ರೀತಿಯಿಂದ ಗೆಲ್ಲುವುದು ಸುಲಭ. . . (ಪುಟ ೧೩೫)

- ವಿದೇಶೀ ಸಾಹಿತ್ಯದ ಸಂಪರ್ಕವಿಲ್ಲದೆ ಯಾವ ಸಾಹಿತ್ಯವೂ ಸಂಪುಷ್ಟವಾಗಿ ವಿನೂತನವಾಗಿ ಬೆಳೆಯಲಾರದು. ಯಾವ ಸಾಹಿತ್ಯದ ಇತಿಹಾಸ ನೋಡಿದರೂ ಅದರಲ್ಲಿ ನಡೆದಿರುವ ಕ್ರಾಂತಿಗೆ ಭಾಷಾಂತರಗಳೂ ಬಹುಮಟ್ಟಿಗೆ ಕಾರಣ. . . .ಯಾವ ಸಾಹಿತ್ಯವನ್ನು ತೆಗೆದುಕೊಂಡರೂ ಮೂಲಸೃಷ್ಟಿ ಒಂದು ಪಾಲಾದರೆ ಭಾಷಾಂತರ ಸೃಷ್ಟಿ ಹತ್ತು ಪಾಲು... ಇಂಗ್ಲೀಷ್ ಅಧ್ಯಾಪಕರೆಲ್ಲ ತಮ್ಮ ಜೀವಿತದ ಸಮಯದಲ್ಲಿ ಆಂಗ್ಲ ಭಾಷೆಯ ಒಂದೊಂದು ಕೃತಿಯನ್ನು ಕನ್ನಡಿಸಿದ್ದರೆ ಈ ಹೊತ್ತಿಗೆ ನಾಡಿನ ಪುಸ್ತಕ ಭಂಡಾರಗಳೆಲ್ಲ ಕನ್ನಡ ಗ್ರಂಥಗಳಿಂದ ತುಂಬಿರುತ್ತಿದ್ದವು. (ಪುಟ ೨೦೧).

- ತಿಳಿಯದ ವಿಷಯವನ್ನು ತಿಳಿಯದಂತಹ ಭಾಷೆಯಲ್ಲಿ ಬೋಧಿಸುವಂತಹ ದುರಂತ ಮತ್ತೊಂದಿಲ್ಲ. ಉಪಾಧ್ಯಾಯ ಬೋಧಿಸಿದ್ದು ವಿದ್ಯಾರ್ಥಿಗಳಿಗೆ ಗ್ರಾಹ್ಯವಾಗದಿದ್ದರೆ ಅದು ನಿಷ್ಪ್ರಯೋಜಕವಾಗುತ್ತದೆ. ಅರಣ್ಯರೋದನವಾಗುತ್ತದೆ; ಅರ್ಥ ಹೀನವಾಗುತ್ತದೆ. ಇದು ಶಿಕ್ಷಣದ ಮೂಲಸೂತ್ರ. ಈ ಮೂಲ ಸೂತ್ರವನ್ನಲ್ಲಗಳೆದಾಗ ಇಡೀ ಶಿಕ್ಷಣ ವ್ಯವಸ್ಥೆಯೇ ಕುಸಿದು ಬೀಳುತ್ತದೆ. ರಾಷ್ಟ್ರಕ್ಕೆ ಹಾನಿ ಸಂಭವಿಸುತ್ತದೆ.. . . . (ಪುಟ ೨೧೯)

ಹೀಗೆ ಮೌಲಿಕ ಚಿಂತನಗಳನ್ನು "ಬದುಕು" ಪುಟಗಳಿಂದ ಹೆಕ್ಕಿ ಹೆಕ್ಕಿ ತೆಗೆಯಬಹುದು. ಅವು ಸರಳ-ನೇರ- ಸ್ವಯಂಪರಿಪೂರ್ಣ. ವ್ಯಾಖ್ಯಾನವನ್ನು ಬೇಡುವಂತಹುದಲ್ಲ, ನಿಷ್ಕ್ರಿಯ ಆಚರಣೆಯನ್ನು ಬಯಸುವಂತಹವು. ದೇಜಗೌ ಅವರ ಉಪನ್ಯಾಸ -ಲೇಖನ - ಕೃತಿಗಳಲ್ಲಿ ಇತರ ಎಡೆಗಳಲ್ಲಿ ಅವುಗಳ ವಿಸ್ತಾರ ಭಾಷ್ಯವೇ ದೊರೆಯುತ್ತದೆ. ಆದರೆ ಇಲ್ಲಿ ಅವು ಸ್ವಾನುಭವದ ಸಿಹಿಕಹಿಗಳ ಒಡನೆ ತಳುಕು ಹಾಕಿಕೊಂಡು ಮತ್ತಷ್ಟು ಆತ್ಮೀಯ ಹಾಗೂ ಹೃದ್ಯವಾಗುತ್ತವೆ. ನೇರವಾಗಿ ಮನಸ್ಸನ್ನು ಮುಟ್ಟುತ್ತವೆ. ಹೀಗಾಗಿ "ಬದುಕು" ಬರಿಯ

ಆತ್ಮಕಥೆಯಾಗದೆ ಶೈಕ್ಷಣಿಕ ಮಹತ್ವದ ಕೃತಿಯೂ ಆಗುತ್ತದೆ. ಹೀಗೆಯೇ ಅವರ ಸಾಮಾಜಿಕ ಸಾಂಸ್ಕೃತಿಕ ಚಿಂತನಗಳ ಸ್ಪಷ್ಟತೆ ಹಾಗೂ ಸಮಗ್ರತೆಗಳನ್ನು ಈ ಕೃತಿಗಳಲ್ಲಿ ಗುರುತಿಸಬಹುದು. ಮುಖ್ಯವಾಗಿ ಅವು ಅಧ್ಯಾಪಕರಿಗೂ ಅಧ್ಯಾಪಕ ವೃತ್ತಿಯನ್ನು ಬಯಸುವವರಿಗೂ ಬೈಬಲ್‌ನಂತೆ ಮಹತ್ವಪೂರ್ಣವಾಗಿದೆ ಎನ್ನಬಹುದು.

ದೇಜಗೌ ಅವರ ಸ್ವಾನುಭವದ ಸಂಕಟ -ಸಂತೋಷಗಳಿಂದ. ಆಳವಾದ ಅಭ್ಯಾಸ ಆಲೋಚನೆಗಳಿಂದ ಹರಳುಗಟ್ಟಿದ ಅವರ ಸಾಮಾಜಿಕ - ರಾಜಕೀಯ ಚಿಂತನವೂ ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಿದೆ. ಅವರ ಪ್ರಕಾರ ಜಾತೀಯತೆಯ ಭೂತವೇ ನಮ್ಮ ನಾಡಿನ ಪ್ರಥಮ ಶತ್ರು. ನಿಜವಾದ ಪ್ರತಿಭೆಯೂ ಇಲ್ಲಿ ಕಮರಿ ಹೋಗುವುದು. ಎಲ್ಲ ಪ್ರಗತಿಯೂ ಅರ್ಥಶೂನ್ಯವಾಗುವುದೂ ಈ ಪೆಡಂಭೂತದಿಂದಲೇ. ಈ ಚಿಂತನವನ್ನು ತಮ್ಮದೇ ಕಂಡುಂಡ ಅನುಭವದಿಂದ ಅವರು ರೂಪಿಸಿಕೊಂಡಿದ್ದಾರೆ. ಎಳೆತನದಲ್ಲಿ ಸಂಸ್ಕೃತವನ್ನು ಪ್ರೀತಿಸಿದರೂ ಓದಲಾಗದ, ಅವಹೇಳನಕ್ಕೆ ಒಳಗಾದ ಸಂಗತಿ ಅವರ ಸ್ಮೃತಿಕೋಶದಲ್ಲಿದೆ. ಬ್ರಾಹ್ಮಣರ ಮನೆಯಲ್ಲಿ ಹೊರಗಿನ ಪಡಸಾಲೆಯಲ್ಲಿ ಪ್ರತ್ಯೇಕವಾಗಿ ಊಟ ಬಡಿಸುತ್ತಿದ್ದುದು, ಕೊಡುವ ತಿಂಡಿಯನ್ನು ಕೈಸೋಕದಂತೆ ಎತ್ತರದಿಂದ ಹಾಕುತ್ತಿದ್ದುದೂ ನೆನಪಿಗೆ ಬರುತ್ತದೆ. ಕಾಲೇಜು ದಿನಗಳಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಉದಾಸೀನದಿಂದ - ತಿರಸ್ಕಾರದಿಂದ ಕಾಣುವ ಚಿತ್ರಗಳು ಮೂಡುತ್ತವೆ. ಅಂಕಗಳಿಗೆ ಪಂಗನಾಮ ಹಾಕುವ ಸಂಗತಿಗಳೂ ಗೋಚರಿಸುತ್ತವೆ. ಉದ್ಯೋಗ ಕ್ಷೇತ್ರದಲ್ಲೂ ಹೆಜ್ಜೆ ಹೆಜ್ಜೆಗೆ ಕಾಡಿ ಕುಕ್ಕುವ ಜಾತೀಯತೆ ಅವರನ್ನು ಕನಲಿಸುತ್ತದೆ, ಕುದಿಸುತ್ತದೆ. ಹೀಗಾಗಿ "ನಾನು ಬಡತನದಲ್ಲಿ ಹುಟ್ಟಿದವನು, ಅದಕ್ಕೂ ಮಿಗಿಲಾಗಿ ಹಿಂದುಳಿದ ಕೋಮಿಗೆ ಸೇರಿದವನಾದ್ದರಿಂದ ವರ್ಣೋತ್ತಮರಿಗಿಂತ ಕನಿಷ್ಠನೇನೋ ಎಂಬ ಭ್ರಾಂತಿ ಬಹಳ ದಿನಗಳವರೆಗೆ ಮನಸ್ಸಿನಲ್ಲಿ ಮನೆಮಾಡಿಕೊಂಡಿರು"ತ್ತದೆ (ಪುಟ ೮೪). ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿಗಳ ಮುಗ್ಧ ಮನಸ್ಸನ್ನು ಕೆಡಿಸುವ, ಅವರನ್ನು ಎತ್ತಿ ಕಟ್ಟುವ ಪ್ರಸಂಗಗಳಿಂದ ಅವರು ಬೆಕ್ಕಸಬೆರಗಾಗುತ್ತಾರೆ. ಅತೀವವಾಗಿ ನೊಂದುಕೊಳ್ಳುತ್ತಾರೆ. ತಾವು ಸಂಪೂರ್ಣವಾಗಿ ಈ ಪಿಡುಗಿನಿಂದ ಮುಕ್ತರಾಗಬೇಕೆಂದು ಹಟತೊಟ್ಟು ದಕ್ಷತೆ - ಪ್ರತಿಭೆಯನ್ನು ಹುಡುಕಿ ಹುಡುಕಿ ವಿಶ್ವವಿದ್ಯಾನಿಲಯವನ್ನು ಬೆಳೆಸುವಾಗ "ನೀವು ಬ್ರಾಹ್ಮಣರನ್ನೇ ತಂದು ತುಂಬುತ್ತೀರಿ. ನಿಮ್ಮ ನೀತಿಯಿಂದ ನಮಗೆ ಬೇಸರವಾಗಿದೆ. . . . ನಿಮ್ಮ ಆಡಳಿತಕ್ಕೆ ಸಹಕಾರ ನೀಡುವುದು ಕಷ್ಟವಾಗುತ್ತದೆ "ಮುಂತಾದ ಪ್ರಗತಿವಿರೋಧ ಟೀಕೆ, ಬೆದರಿಕೆಗಳನ್ನು ಜಾತಿಬಾಂಧವರಿಂದ ಕೇಳಿ ಕುಪಿತರಾಗುತ್ತಾರೆ. " ನನಗೆ ಕೆಲಸ ಹಾಗೂ ಯೋಗ್ಯತೆ ಮುಖ್ಯವೇ ಹೊರತು ಜಾತಿಯಲ್ಲ. ಈ ಕೆಲಸಕ್ಕೆ ಬೇಕಾದವರು ಬ್ರಾಹ್ಮಣೇತರರೂ ಅಲ್ಲ, ಬ್ರಾಹ್ಮಣರೂ ಅಲ್ಲ; ಸತತಾಭ್ಯಾಸನಿರತರೂ ಜ್ಞಾನಭಿಕ್ಷುಗಳೂ ಪ್ರತಿಭಾವಂತರೂ ಪ್ರಾಮಾಣಿಕರೂ ಆದ ವಿದ್ವಾಂಸರು. . . . ಎಲ್ಲಾದರೂ ಸರಿಯೆ ನನ್ನ ಧೋರಣೆಯನ್ನು ಸಮರ್ಥಿಸಿಕೊಳ್ಳಬಲ್ಲೆ ಎಂಬ ವಿಶ್ವಾಸ ನನಗಿದೆ" ಎಂದು ಕುಲಪತಿಗಳ ಎದುರೇ ಅವರು ಗುಡುಗಬೇಕಾಗುತ್ತದೆ (ದೇಜಗೌ-ಎಪ್ಪತ್ತರ ಹೊಸ್ತಿಲಲ್ಲಿ - ಪುಟ ೨೪೦-೪೧). "ನಾನು ವಿಶ್ವವಿದ್ಯಾನಿಲಯದ ಕುಲಪತಿಯೆ ಹೊರತು ಒಕ್ಕಲಿಗರ ಕುಲಪತಿಯಲ್ಲವೆಂಬ ಸತ್ಸಂಕಲ್ಪದಿಂದ ತ್ರಿಕರಣ

ಶುದ್ಧಿಯಾಗಿ, ಆತ್ಮಸಾಕ್ಷಿಯಾಗಿ ಆರುವರ್ಷ ದುಡಿದಿದ್ದೇನೆ. ಜಾತೀಯತೆಗೆ ನಾನು ಒತ್ತುಕೊಟ್ಟಿದ್ದರೆ ಅನೇಕ ಹೊಸ ಇಲಾಖೆಗಳ ಪ್ರಸವ ಸಾಧ್ಯವಾಗುತ್ತಿರಲಿಲ್ಲ . . . . ಉನ್ನತಾಧಿಕಾರದಲ್ಲಿರುವ ಜನ ಸರ್ವರ ಸ್ವತ್ತಾಗಬೇಕೇ ಹೊರತು ಕೆಲವರ ಮೀಸಲು ಆಸ್ತಿಯಾಗಬಾರದು. ಸಣ್ಣ ಜನ ಯಾವಾಗಲೂ ಸಣ್ಣದಾಗಿಯೇ ಯೋಚಿಸುತ್ತಾರೆ; ಕೆಟ್ಟ ಮನಸ್ಸು ಸದಾ ಕೆಟ್ಟದನ್ನೇ ಯೋಚಿಸುತ್ತದೆ. ಕುಲಪತಿಯಾದವನು ಆ ದರ್ಜೆಗಿಳಿದರೆ ಸರಸ್ವತಿಯ ಪೀಠಕ್ಕೆ ಕಳಂಕ ತಟ್ಟುತ್ತದೆ' ಎಂದು ಮುಂದೆ ತಾವೇ ಕುಲಪತಿಯಾದಾಗ ಅವರು ಹೃದಯವನ್ನು ತೆರೆದು ತೋರಬೇಕಾಗುತ್ತದೆ. (ಪುಟ ಅದೇ. ೨೭೫ - ೭೬)

ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದ ಒಂದು ಸುವರ್ಣ ಅಧ್ಯಾಯದ ನಿರ್ಮಾಣದಲ್ಲಿ ಎದುರಿಸಬೇಕಾದ ಎದುರಿಸಿ ಸಫಲವಾದ ಸಂದರ್ಭಗಳ ದಾಖಲೆಯಾಗಿಯೂ "ಬದುಕು" ಮಹತ್ವದ ಗ್ರಂಥವಾಗುತ್ತದೆ. ಅದು ಧೀರೋದಾತ್ತ ವ್ಯಕ್ತಿಯೊಬ್ಬರ ಜ್ಞಾನಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿಗಳನ್ನೂ ಸಪ್ರಮಾಣಿಸುವ ಅಪೂರ್ವ ಕೃತಿಯಾಗುತ್ತದೆ.

-೧೧-

'ಹೋರಾಟದ ಬದುಕು' ಸುಖದುಃಖಗಳಲ್ಲಿ ಸಹಭಾಗಿನಿಯಾದ ತಮ್ಮ ಸೌಭಾಗ್ಯ ಶ್ರೀಮಂತಿನಿ ಸಾವಿತ್ರಮ್ಮನವರಿಗೆ ಅರ್ಪಿತವಾಗಿರುವುದು ಅತ್ಯಂತ ಉಚಿತವಾಗಿದೆ. ದೇಜಗೌ ಅವರ ಸುಖದುಃಖಗಳನ್ನು ಈ ತಾಯಿ ತಾವು ಹಂಚಿಕೊಂಡದ್ದು ಮಾತ್ರವಲ್ಲದೆ ಕಷ್ಟಗಳನ್ನು ಬಹುಮಟ್ಟಿಗೆ ತಾವೇ ಹೊತ್ತುಕೊಂಡು ಪತಿಯನ್ನು ನಾಡುನುಡಿಗಳ ಸೇವೆಗೆ ಧಾರೆ ಎರೆದುಬಿಟ್ಟರು. ತಾವು ಕೇವಲ ಶೀತಲ ಛಾಯೆಯಾಗಿ ಅವರ ಆಯಾಸವನ್ನು ಸಂತೈಸುವುದರಲ್ಲಿಯೇ ಸಾರ್ಥಕತೆಯನ್ನು ಕಂಡರು. ಹಾಗೆ ನೋಡಿದರೆ 380 ಪುಟಗಳ ಒಟ್ಟು ಕೃತಿಯಲ್ಲಿ ಈ ತಾಯಿಗೆ ಮೀಸಲಾದ ಪುಟಗಳು ಕಡಿಮೆ ಎಂದೇ ಹೇಳಬೇಕು. ಆದರೆ ಅಲ್ಲಲ್ಲಿ ಹಂಚಿಕೊಂಡ ಆಕೆಯ ಚಿತ್ರ ಅರುಂಧತೀ ನಕ್ಷತ್ರದಂತೆ ಶುಭ್ರ ಸುಂದರವಾದದ್ದು. ಸ್ನೇಹಾರ್ದ್ರವಾದದ್ದು. ಸ್ವಭಾವತಃ ಸಿಡುಕರೆಂದೂ ಶೀಘ್ರಕೋಪಿಗಳೆಂದೂ ದೇಜಗೌ ತಮ್ಮನ್ನು ಬಣ್ಣಿಸಿಕೊಂಡಿದ್ದಾರೆ. ಬದುಕಿನಲ್ಲಿ ಬಹುಭಾಗ ಬಡತನದಲ್ಲಿಯೇ ಸವೆದುದನ್ನೂ ಚಿತ್ರಿಸಿದ್ದಾರೆ. ಇಂತಹ ಪರಿಸರವನ್ನೂ - ಪತಿಯನ್ನೂ, ಶ್ರೀಮಂತ ಕುಟುಂಬದ ಹೆಣ್ಣು ನಿಭಾಯಿಸಿದುದು. ಮಕ್ಕಳನ್ನು ಸುಸಂಸ್ಕೃತರಾಗಿ ಬೆಳೆಸಿದುದು. ಸುಂದರ ಸಂಸಾರವನ್ನು ಕಟ್ಟಿ ಬೆಳೆಸಿದುದು ಸಾಮಾನ್ಯ ಸಂಗತಿಯಲ್ಲ. ದೇಜಗೌ ಬಣ್ಣಿಸುವಂತೆ ಆಕೆ ನಿಜಕ್ಕೂ ತಪಸ್ವಿನಿಯೇ ಸರಿ. ಶ್ರೀಕುವೆಂಪು ಅವರ ಕೃತಿಗಳನ್ನು ಓದಿ ಸುಸಂಸ್ಕೃತವಾಗಿದ್ದ ಆ ಜೀವಕ್ಕೆ ಹೀಗೆ ಬರೆಯುವಂಥವರನ್ನೇ ಮದುವೆಯಾಗಬೇಕೆಂಬ ಬಯಕೆ ಎಂಟುವರ್ಷದ ಬಾಲಕಿಯಾಗಿದ್ದಾಗಲೇ ಮೂಡಿತ್ತಂತೆ. ಹತ್ತು ವರ್ಷದನಂತರ ಅಂತಹ ಬರಹಗಾರರು - ಅದರಲ್ಲೂ ಶ್ರೀಕುವೆಂಪು ಅವರ ಪ್ರೀತಿಯ ಶಿಷ್ಯರೇ ಕೈಹಿಡಿಯ ಬಂದಾಗ ಮನಸ್ಸು ಮುದಗೊಂಡಿತಂತೆ. "ಇವರನ್ನೇ ಪತಿಯಾಗುವಂತೆ ಅನುಗ್ರಹಿಸಿ ಎಂದು ಮಹಾತಾಯಿಯವರನ್ನು ಸದಾ ಕಾಲವೂ ಪ್ರಾರ್ಥಿಸುತ್ತಿದ್ದ"ರಂತೆ. ಮದುವೆಯಲ್ಲಿ ಖಾದಿಧಾರಿ ಪತಿರಾಯರು ಮಾಂಗಲ್ಯವನ್ನುಳಿದು ಬೇರೇನೂ ಒಡವೆಗಳನ್ನು ತಂದಿರಲಿಲ್ಲವಂತೆ. ಆದರೂ ಈಕೆಗೆ "ಅವರೇ ಅಮೂಲ್ಯ ಆಭರಣವಾಗಿದ್ದರು. (ವಿವರಗಳು - ಸಾವಿತ್ರಮ್ಮ ದೇಜಗೌ ಅವರ

'ನೆನಪಿನ ಸುರುಳಿ' - ಪುಟ ೯೩ - ೯೯) ದೊಡ್ಡ ಸಂಸಾರದ ಕಷ್ಟದಲ್ಲಿ ಹುಟ್ಟಿ ಬೆಳೆದವರು ಆ ತಾಯಿ -ಆದರ್ಶ ಚಿಕ್ಕ ಚೊಕ್ಕ ಸಂಸಾರವನ್ನು ಅಪೇಕ್ಷಿಸಿದ್ದರೆ ಸಹಜವೇ. ಆದರೆ ಪತಿ ದೇವರಿಗೆ ಊರೆಲ್ಲ ನೆಂಟರು. ಕೊಡುಗೈ ಸಾರ್ವಭೌಮರು ಅವರು. ಅವರ ಔದಾರ್ಯದಿಂದ ಸದಾ ತುಂಬಿದ ಮನೆ. ಬೆಂಗಳೂರು ಮೈಸೂರು ಪಟ್ಟಣವಾಸ. ಕಾಯಿಲೆ ಮಕ್ಕಳು. ಅಲ್ಪ ವರಮಾನ. ಎಲ್ಲವನ್ನೂ ನಗುನಗುತ್ತಾ ನಿಭಾಯಿಸಿದರು. ಮಾತ್ರವಲ್ಲ "ಇಂಥ ಪತಿ ಮತ್ತು ಮಕ್ಕಳನ್ನು ಪಡೆದಿರುವ ಪುಣ್ಯವೇ ನನ್ನದಾಗಿರುವಾಗ ಇದಕ್ಕಿಂತ ಸಂತೋಷದ ಹೆಮ್ಮೆಯ ವಿಷಯ ಬೇರೇನಿದೆ?" ಎಂದು ಸಂತೃಪ್ತ ಮನಸ್ಸು ಆ ತಾಯಿಯದು. ಪತಿಗೆ ನಿಜಕ್ಕೂ ಸಖಿಯಾಗಿ, ಸಹಚರಿಯಾಗಿ, ಕ್ಷಮೆಯಾ ಧರಿತ್ರಿಯಾಗಿ, ಮಾತೆಯಾಗಿ ಕಾಪಾಡುತ್ತಿರುವ ಧನ್ಯ ಜೀವ ಶ್ರೀಮತಿ ಸಾವಿತ್ರಮ್ಮನವರು.

ಇಂಥ ಮಡದಿಗೆ ಎಂಥ ನುಡಿ ಕಾಣಿಕೆಯನ್ನು ದೇಜಗೌ ತಮ್ಮ ಕೃತಿಯಲ್ಲಿ ಸಲ್ಲಿಸಿದ್ದಾರೆ, ನೋಡಬೇಕು.

- "ಪೂರ್ವಜನ್ಮದ ಬಂಧುಗಳಂತೆ ನಾವಿಬ್ಬರೂ ಜೊತೆಗೂಡಿದೆವು. . . . ಆಕೆ ಭೌತಿಕ ಶ್ರೀಮಂತಿಕೆಯನ್ನು ಬಯಸದೆ ಹೃದಯ ಶ್ರೀಮಂತಿಕೆಯನ್ನಪೇಕ್ಷಿಸಿ ಕೈಹಿಡಿದವಳೆಂಬ ಭಾವನೆ ನನ್ನ ಮನಸ್ಸಿನಲ್ಲಿ ದೃಢವಾಗಿ ಸ್ಫುರಿಸಿತು. ಅವಳಿಗೆ ಬೇಕಾಗಿದ್ದುದು ಪೆಟ್ಟಿಗೆ ತುಂಬ ಹಣವಲ್ಲ, ಭವ್ಯ ಭವನವಲ್ಲ, ಬೆಳ್ಳಿ ಬಂಗಾರವಲ್ಲ, ನಿಷ್ಕಳಂಕವಾದ ನಿರ್ವ್ಯಾಜ ಪ್ರೇಮ. . . . ದ್ವೇಷ ಮಾತ್ಸರ್ಯಗಳಿಗೆ ಅವಳ ಮನಸ್ಸಿನಲ್ಲಿ ಸ್ವಲ್ಪವೂ ಸ್ಥಳವಿರಲಿಲ್ಲ. ಲಜ್ಜೆ ಸಂಕೋಚಗಳು ಅವಳ ಸಹಜ ಸ್ವಭಾವವಾಗಿದ್ದವು. ಕೆಲವು ದಿನಗಳ ಅವಳ ಸಂಪರ್ಕದಿಂದಲೇ ಪುರಾಣಯುಗದ ಸೀತಾದಮಯಂತಿ ಮಂಡೋದರಿಯರು ಕೇವಲ ಕಾಲ್ಪನಿಕ ವ್ಯಕ್ತಿಗಳಲ್ಲ, ಸಮಾಜದಲ್ಲಿ ಬಾಳಿಬದುಕಿದ ಜೀವಂತ ವ್ಯಕ್ತಿಗಳೆಂಬ ಭಾವನೆ ನನ್ನ ಮನಸ್ಸಿನಲ್ಲಿ ಮೈದೋರಿತು. ಅವಳಿಂದ ನನ್ನ ಬಾಳು ಹಸನಾಗುತ್ತದೆಂದೂ, ನನ್ನ ಬಡತನ ಹಾರಿಹೋಗುತ್ತದೆಂದೂ ನಾನು ಒಳಗೊಳಗೇ ಹರ್ಷಿಸಿದೆ. ನನ್ನ ಅಂದಿನ ನಿರೀಕ್ಷೆ ಇಂದಿಗೂ ಸತ್ಯವಾಗಿ ಉಳಿದಿದೆ"? (ಬದುಕು - ಪುಟ ೧೧೬)

ಛಲದ - ಜಿಗುಟು ಸ್ವಭಾವದ -ಶೀಘ್ರಕೋಪಿಯಾದ ಪತಿಯಿಂದ ಇಂತಹ ಸುಂದರ ಶೀತಲ ನಿರ್ಮಲ ನುಡಿಸಲಿಲದ ಅಭಿಷಿಂಚನವನ್ನು ಪಡೆದ ತಾಯಿ ಸಾವಿತ್ರಮ್ಮನವರು ನಿಜಕ್ಕೂ ಪುಣ್ಯವಂತೆ. ಅದು ಆಕೆಯ ಅರ್ಹತೆಗೂ ಹಿಡಿದ ಕನ್ನಡಿ. ತಮ್ಮ ತಂದೆಯ ಲೇವಾದೇವಿ ಹಣವನ್ನೂ ತಾವು ಶ್ರಮದಿಂದ ಗಳಿಸಿದ ಫಲವತ್ತಾದ ಜಮೀನನ್ನೂ ದೇಜಗೌ ತಮ್ಮ ಅಣ್ಣನಿಗೆ ಒಂದು ಕ್ಷಣದಲ್ಲಿ ಕೈ ನೀರೆರೆದು ಕೊಟ್ಟುಬಿಟ್ಟಾಗ ಮಡದಿ ಕೊಂಚವೂ ವಿಚಲಿತೆಯಾಗಲಿಲ್ಲವಂತೆ-ಕನಿಸು ತೋರಲಿಲ್ಲವಂತೆ (ಪುಟ ೧೨೯). ಶ್ರೀಮಂತ ಕುಟುಂಬದಿಂದ ಬಂದಿದ್ದರೂ ಪತಿಯಂತೆಯೇ ಆಕೆಯ ಅವಶ್ಯಕತೆಗಳು ತುಂಬ ಸರಳ - ಮಿತ. ಬಟ್ಟೆಯ ಶೋಕಿಯಿಲ್ಲ, ಕಾಫಿಯ ಲಾಲಸೆಯಿಲ್ಲ, ಸಿನಿಮಾ ನೋಡುವ ಹುಚ್ಚು ಇಲ್ಲ. ಕಾಯಿಲೆ ಮಗುವನ್ನು ನೋಡಿಕೊಂಡು ಇದ್ದವರಿಗೆ ಬಂದವರಿಗೆ ಅಡಿಗೆ ಮಾಡಿ ಬಡಿಸುವ ಆ ಸೂಕ್ಷ್ಮ ಶರೀರಿಯ ಬಗೆಗೆ ಪತಿಯ ರೇಗಾಟ ಸಿಡಿತಗಳೂ ಇದ್ದದ್ದೇ "ನನ್ನ ಸಿಡಿತವನ್ನೆಲ್ಲ ನುಂಗಿಕೊಂಡು ಮಗುವಿನ ಕಾಟವನ್ನು

ಸಹಿಸಿಕೊಂಡು ಎಂದೂ ಸಿಡುಕದೆ ಆಸರ ಬೇಸರವಿಲ್ಲದೆ ಸಂಸಾರದಲ್ಲಿ ಮಧುರ ವಾತಾವರಣವನ್ನು ಆಕೆ ಕಲ್ಪಿಸಿದ್ದಳು" ಎಂದು ದೇಜಗೌ ಬರೆಯುತ್ತಾರೆ. ತಮ್ಮ ಕಡುಕೋಪವನ್ನು ಸರ್ವಾಧಿಕಾರಿ ಪ್ರವೃತ್ತಿಯನ್ನೂ ನಿಂದಿಸಿಕೊಳ್ಳುತ್ತಾರೆ. "ಅಂದಿನಿಂದ ಇಂದಿನವರೆಗೆ ಅವಳಾಗಿ ಏನೂ ಕೇಳಿಲ್ಲ. ನನಗೆ ಸಾವಿರಾರು ರೂಪಾಯಿ ಸಂಪಾದನೆಯಾದಾಗಲೂ ಅವಳೆಂದೂ ತಾನಾಗಿ ಕೇಳಿ ತೆಗೆದುಕೊಂಡಿಲ್ಲ" ಎಂದು ಆ ತ್ಯಾಗಮಯಿಯನ್ನು ಸ್ಮರಿಸುತ್ತಾರೆ (ಪುಟ ೧೪೨). ಈ ಸಂಸಾರ ತಪಸ್ವಿನಿಯ ಮಧುರ ಆಖ್ಯಾನ "ಬದುಕು" ಕೃತಿಯ ಮಂಗಳಕಥನ. ಇಂಥ ಅದ್ವೈತ ದಾಂಪತ್ಯವನ್ನು ಕಂಡಾಗ "ಧನ್ಯೋಗೃಹಸ್ಥಾಶ್ರಮ" ಎನಿಸುವುದಲ್ಲವೆ ? ದೇಜಗೌ ತಾವೇ ಉದ್ಗರಿಸುತ್ತಾರೆ "ಅನುಕೂಲೆಯಾದ ಮಡದಿಯಿಂದ ಇಂಗಿತಜ್ಞರಾದ ಮಕ್ಕಳಿಂದ ಸಂಸಾರ ಹೂವಿನ ಹಾಸುಗೆಯಾಗಿದೆ. ಆನಂದದ ಉಕ್ಕಂದವಾಗಿದೆ. ಮನೆಯೇ ತೀರ್ಥಕ್ಷೇತ್ರವಾಗಿದೆ. (ಪುಟ.೬)

ಈ ಪ್ರಬಂಧದ ಲೇಖಕನೂ, ಬಹುಮಂದಿ ವಾಚಕರೂ ಪೂಜ್ಯ ದೇಜಗೌ ಅವರ ಔದಾರ್ಯ ಕಾರುಣ್ಯ ನ್ಯಾಯನಿಷ್ಠುರತೆಗಳನ್ನು ಸ್ವಾನುಭವದಿಂದಲೇ ಬಲ್ಲವರಾಗಿದ್ದಾರೆ. ಈ ಅನುಭವ ಬಹುಮಟ್ಟಿಗೆ ಸಮಸಮವಾಗಿಯೇ ಇರಬಹುದು. ಅವರೆಲ್ಲ ದೇಜಗೌ ಅವರನ್ನು ಪ್ರತ್ಯಕ್ಷವಾಗಿಯೇ ತಿಳಿದವರಾಗಿದ್ದಾರೆ. ಆದರೆ ಅವರನ್ನು ಎಂದೂ ಕಾಣದವರು, ಕೇಳದವರು (ಅಂಥವರೂ ಇದ್ದರೆ), ಅಥವಾ ಮುಂದಿನ ತಲೆಮಾರಿನವರು "ಹೋರಾಟದ ಬದುಕು" ಓದಿ ಮುಗಿಸಿದಾಗ, ಎಂತಹ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಹುದು?- ಅದು ಬಹುಮಟ್ಟಿಗೆ ಹೀಗಿರಬಹುದಲ್ಲವೆ? "ಈತ ನಿಜಕ್ಕೂ ಕ್ರಿಯಾಶೀಲ ಆದರ್ಶವ್ಯಕ್ತಿ. ಅಪ್ಪಟ ಮಣ್ಣಿನ ಮಗ. ಸಾಚಾತನ, ಸರಳತೆ, ಭಾವುಕ ಉದ್ವೇಗ, ಅಂತಃಕರಣದ ಸ್ನಿಗ್ಧತೆ ಆ ಮಣ್ಣಿನ ಗುಣ. ಆದರೆ ಅಲ್ಲಿಯೇ ಆದರ್ಶದ ಮಹತ್ವಾಕಾಂಕ್ಷೆಯ ಚಿನ್ನದ ಬೆಳಸನ್ನು ಬಿತ್ತಬಲ್ಲ ಧೀರ, ಬೆಳೆಯಬಲ್ಲ ಸಾಹಸಿ, ಉದಾರವಾಗಿ ಹಂಚಿ ಸುಖಿಸಬಲ್ಲ ಉದಾರಿ. ಕಷ್ಟದ ಹಾದಿಯನ್ನೇ ಉದ್ದೇಶಪೂರ್ವಕವಾಗಿ ಆರಿಸಿಕೊಂಡು ಕಂಟಕಗಳನ್ನು ಸವರಿಕೊಂಡು, ಪ್ರಗತಿಯ ಶಿಖರವನ್ನೇರ ಬಯಸುವ - ಏರಬಲ್ಲ ಚೇತನ. ಕ್ಷುದ್ರತನ - ಅಲ್ಪತೆಯೆಂದರೆ ಸಿಡುಕುವ, ಕ್ರೋಧದ ಖಡ್ಗವನ್ನು ಝಳಪಿಸುವ ಖಡ್ಗಧಾರಿ; ಶೀಘ್ರಕೋಪಿಯಾದಂತೆಯೇ ಅತಿಶೀಘ್ರ ಕ್ಷಮಾಶೀಲ; ಅಧಿಕಾರದ ಮತ್ತು ತಲೆಗೇರದ. ಅದರ ಅಮಲಿನಲ್ಲಿ ಮಾನವೀಯ ಮೌಲ್ಯಗಳನ್ನು ಕಿಂಚಿತ್ತೂ ಮರೆಯದ ವಾತ್ಸಲ್ಯಮಯಿ; 'ತೇನ ತ್ಯಕ್ತೇನ ಭುಂಜೀಥ ' ಎಂಬ ಈಶಾವಾಸ್ಯ ಆದರ್ಶ ಈತನದು - ತ್ಯಾಗದಿಂದಲೇ ಸುಖಿಸುವ ಅಪೂರ್ವ ವ್ಯಕ್ತಿ; ಪ್ರೇಮಮಯಿಯಾದ ತಂದೆ - ತಮ್ಮ - ಪತಿ - ತಾತ ; ಅಕ್ಕರೆಯ ಸಂಸಾರಿ ನಿಚ್ಚಳವಾದ ಗುರಿಯ ಹಿಂದೆ ಧೀರತೆಯಿಂದ ಸಾಗುವ ಸರದಾರ. ಗುರುಕೃಪೆಯ ತಮಾಲಛಾಯೆಯಲ್ಲಿ ಸದಾಸರ್ವದಾ ನಿರ್ಭೀತ, ಸುರಕ್ಷಿತ, ಪಥಿಕ. ನಾಡು ನುಡಿಯೆಂದರೆ ಈತನ ಉಸಿರು. ಅವುಗಳ ಸಂರಕ್ಷಣೆಯಲ್ಲಿ ಸದಾ ಜಾಗೃತ, ಯಾವುದೇ ಬೆಲೆಯನ್ನು ತೆರಬಲ್ಲ ದೇಶಪ್ರೇಮಿ, ಭಾಷಾಪ್ರೇಮಿ. ಕೆಲಸ - ಕೆಲಸ - ದುಡಿಮೆ ದುಡಿಮೆ ಇದೇ ಈತನ ತಾರಕ ಮಂತ್ರ. ಅದರ ಸಾಧನೆಯಲ್ಲಿ ಮೇಲುಕೀಳೆಂಬ, ಗುಮಾಸ್ತೆ - ಮಂತ್ರಿ ಎಂಬ, ಕೂರುನ

ಪೆಟ್ಟಿಗೆ ಸಿಂಹಾಸನವೆಂಬ. ಸಚಿವಾಲಯ ತಾಲ್ಲೂಕು ಕಛೇರಿ ಎಂಬ. ತಾರತಮ್ಯವೇ ಇಲ್ಲದೆ ಎಲ್ಲೆಂದರಲ್ಲಿ ನುಗ್ಗಿ, ಕಲೆತು ಕೆಲಸ ಸಾಧಿಸುವ ಕ್ರಿಯಾಶೀಲ. ಕನ್ನಡ ನಾಡು ನುಡಿಯ, ಕನ್ನಡ ನಾಡಿನ ವಿಶ್ವವಿದ್ಯಾನಿಲಯದ ಎತ್ತರ - ಬಿತ್ತರಗಳನ್ನು [illegible] ಬೆಳೆಸಿದ ಧೀಮಂತ; ಎಣೆಯಿಲ್ಲದ ಅಕ್ಕರೆಯ ಶಿಷ್ಯಪ್ರೇಮಿ - ಅವರ ಪ್ರಗತಿಯನ್ನು ಪ್ರಚೋದಿಸುವ -ಪೋಷಿಸುವ ಕಂಡು ಓರಿಓರಿ ಓಗ್ಗುವ ನಿರ್ಮತ್ಸರಿ; ಈತನ ಬಾಳು ಒಂದು ತೆರೆದ ಪುಸ್ತಕ - ಅದರ ಪುಟ ಪುಟಗಳಲ್ಲಿ ಆದರ್ಶದ ಕನಸು. ಕ್ರಿಯಾಶೀಲತೆಯ ನನಸು. ಪ್ರೀತಿಯ ಜೇನ ಹನಿ. ಸಾತ್ವಿಕ ರೋಷದ ಬಸಿರಿ ಮೋಡದ ಗುಡುಗು. ಕ್ಷುದ್ರತೆಯನ್ನು ಕೊಚ್ಚಿಕೊಲ್ಲುವ ಸಿಡಿಲು. ಕ್ಷಮೆಯ ಮಿಂಚಿನ ಮಂದಹಾಸ. ಉದಾತ್ತತೆಯ ಶ್ರಾವಣದ ಧಾರೆ ಧಾರೆ. ಪ್ರಗತಿಯ ಬಿತ್ತು. ಸಮೃದ್ಧಿಯ ಬೆಳಸು. ಶ್ರೇಯಸ್ಸಿನ ಸುಗ್ಗಿ. ಈತ ಉದಾತ್ತ ಮಹಾಪುರುಷ. ಇತಿಹಾಸ ನಿರ್ಮಾಪಕ ಅಪರೂಪದ ನಿರೂಪಕ. "ಹೋರಾಟದ ಬದುಕು" ಪೊತ್ತಿಸಿ ನೀಡಿದ ಬೆಳಕು - ಅಂದಿಗೆ. ಇಂದಿಗೆ. ಎಂದೆಂದಿಗೂ" ಅದನ್ನು ಬದುಕಿದ ಚೇತನ ನಿಜಕ್ಕೂ ಧನ್ಯ.

[ಶತಮಾನಗಳ ಅನಂತರ ಕಾವ್ಯಶೈಲಿಯ ಅಭ್ಯಾಸದಿಂದಲೇ ಕವಿ ನಾಗಚಂದ್ರನ ವ್ಯಕ್ತಿತ್ವವನ್ನು ರೂಪಿಸಲು ಕಲಿಸಿದ ಆಚಾರ್ಯ ಡಿ. ಎಲ್. ಎನ್. ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.]

*****

ದೇಜಗೌರವರ ಎರಡು ಕೃತಿಗಳು

-ಡಾ. ಡಿ. ಎಸ್. ಜಯಪ್ಪಗೌಡ

ದೇಜಗೌರವರ ಬರವಣಿಗೆಯಲ್ಲಿ ಕಳಕಳಿ ಮತ್ತು ಭಾವುಕತೆ ತುಂಬಿರುವುದು ಒಂದು ಲಕ್ಷಣ. ಅವರ ಎಲ್ಲ ಬರವಣಿಗೆಗಳ ಹಿಂದೆ ಮನಸ್ಸು ಬಿಚ್ಚಿ ಹೇಳುವ ತುಡಿತ ಉದ್ದಕ್ಕೂ ಕೇಳಿ ಬರುತ್ತದೆ. ಅವರ ಈ ಅನನ್ಯಶೈಲಿ ಅವರ ಗದ್ಯ ಬರವಣಿಗೆಗೆ ವೈಶಿಷ್ಟ್ಯ ಮತ್ತು ಮೆರುಗನ್ನು ತಂದುಕೊಟ್ಟಿದೆ. ನಾನು ಇಲ್ಲಿ ಅವಲೋಕಿಸುತ್ತಿರುವ ಅವರ ಎರಡು ಕಿರು ಕೃತಿಗಳಲ್ಲೂ ಈ ಲಕ್ಷಣಗಳಿವೆ. ಇವುಗಳಲ್ಲಿ ಒಂದು ವೈಚಾರಿಕ ಪ್ರಧಾನವಾದುದಾದರೆ ಇನ್ನೊಂದು ಸಾಮಾಜಿಕ ಬದ್ಧತೆಯಲ್ಲಿ ಸಾಹಿತಿಯ ಪಾತ್ರವನ್ನು ಗುರುತಿಸುವಂತಹದು.

"ವಿಚಾರ ಕ್ರಾಂತಿಗೆ ಕುವೆಂಪು ಕರೆ" ಎಂಬುದು ಒಂದು ಕಿರುಕೃತಿ. ಆದರೆ ಅದರ ಶೀರ್ಷಿಕೆಯೇ ಸೂಚಿಸುವಂತೆ ಅದು ಕುವೆಂಪು ಅವರ ವೈಚಾರಿಕ ನಿಲುವುಗಳ ಸಾರಸಂಗ್ರಹದ ನಿರೂಪಣೆಯಾಗಿರುವುದರಿಂದ ಹೆಚ್ಚು ಮಹತ್ವಪೂರ್ಣವಾದುದೂ ಹೌದು. ವಿಚಾರವಾದಿ ಡಾ. ಎಚ್. ನರಸಿಂಹಯ್ಯನವರ ನೇತೃತ್ವದಲ್ಲಿ 'ಭಾರತ ಜನ ಜ್ಞಾನ ವಿಜ್ಞಾನ ಜಾಥ' ಸಂಘಟನೆಯ ವತಿಯಿಂದ ಈ ಕೃತಿ ಪ್ರಕಟಗೊಂಡಿರುವುದು ಇದರ ಇನ್ನೊಂದು ವಿಶೇಷ. ಕುವೆಂಪು ಅವರ ವೈಚಾರಿಕತೆಯನ್ನು ಸಂಗ್ರಹವಾಗಿ ನಿರೂಪಿಸಲು ಲೇಖಕರು ಇಲ್ಲಿ ಅವರ ಸಾಹಿತ್ಯ ಮತ್ತು ಭಾಷಣಗಳಿಂದ ಅನೇಕ ಭಾಗಗಳನ್ನು ಉಲ್ಲೇಖಿಸಿದ್ದಾರೆ.

ಭಾರತದಲ್ಲಿ ಬಹುಪಾಲು ವಿಜ್ಞಾನಿಗಳು, ರಾಜಕೀಯಸ್ಥರು ಮತ್ತು ಸಾಹಿತಿಗಳಂತಹ ಸಮಾಜದ ಮುಂಚೂಣಿಯಲ್ಲಿರುವ ವ್ಯಕ್ತಿಗಳು ಸಂಪ್ರದಾಯಬದ್ಧತೆಗೆ ಜೋತು ಬಿದ್ದಿರುವುದನ್ನು ಕುವೆಂಪುರವರು ವಿಷಾದದಿಂದ ದಾಖಲಿಸಿರುವುದನ್ನು ಲೇಖಕರು ಉಲ್ಲೇಖಿಸುವ ಮೂಲಕ ಕೃತಿ ಪ್ರಾರಂಭವಾಗುತ್ತದೆ. ಕುವೆಂಪು ಅವರು ಸ್ವಾತಂತ್ರ್ಯಪೂರ್ವದಲ್ಲೇ ರಚಿಸಿದ 'ಜಲಗಾರ' ಕೃತಿಯ ವೈಚಾರಿಕ ಮಹತ್ವವನ್ನು ದೇಜಗೌರವರು ವಿಶೇಷವಾಗಿ ಪ್ರತಿಪಾದಿಸಿದ್ದಾರೆ."ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು" ಎಂದು ಕುವೆಂಪುರವರು ತಿರುಕನ ಬಾಯಿಂದ ಹೇಳಿಸುವ ಮಾತುಗಳು ಹಿಂದೂ ಧರ್ಮದ ದೇವಾಲಯ ಸಂಸ್ಕೃತಿಯನ್ನು ಪ್ರಶ್ನಿಸುವವಾಗಿವೆ. 'ಆಗುನೀ ಅನಿಕೇತನ' ಎಂದು ನುಡಿವ ಕವಿಗೆ ದೇವಾಲಯಗಳ ಧಾರ್ಮಿಕತೆಗೆ ಮೀರಿದ ಉಪನಿಷತ್ ಋಷಿಗಳ ಆಧ್ಯಾತ್ಮಿಕ ದೃಷ್ಟಿಯಿದೆ. ಆದರೆ ಜನಸಾಮಾನ್ಯರು ಈ ಎತ್ತರಕ್ಕೇರದೆ ಗುಡಿಗುಡಾರಗಳ ಸಂಸ್ಕೃತಿಯಲ್ಲೇ ಬದುಕಿಗೆ ಸಾಂತ್ವನ ಕಂಡುಕೊಳ್ಳುವವರಾಗಿದ್ದಾರೆ. ಈ ಪರಿಮಿತಿಯಲ್ಲೇ ಜನರಿಗೆ ವಿಚಾರವಾದದ ಅರಿವಾಗಬೇಕಿದೆ.

ಅಂತಹವರಿಗೆ ಕುವೆಂಪುರವರು ನಿರಂಕುಶಮತಿಗಳಾಗಿ ಎಂದು ಕರೆಕೊಟ್ಟಿದ್ದಾರೆ. ವೈಜ್ಞಾನಿಕ ದೃಷ್ಟಿ, ವ್ಯಕ್ತಿ ಆಧ್ಯಾತ್ಮಿಕತೆ, ಮೂಢನಂಬಿಕೆಗಳ ತ್ಯಾಜ್ಯ-ಇವು ನಿರಂಕುಶಮತಿಗೆ ಆಧಾರ ಸ್ತಂಭಗಳು. ಆದರೆ ದೇಜಗೌರವರು ಹೇಳುವಂತೆ " ಈ ದೇಶದಲ್ಲಿ, ವಿಜ್ಞಾನದ ಯಂತ್ರ ವಿದ್ಯೆಯಿಂದ ಪಂಚವಾರ್ಷಿಕ ಯೋಜನೆಗಳು ಮುಂಬರಿದರೂ ವೈಜ್ಞಾನಿಕ ದೃಷ್ಟಿಯಾಗಲಿ, ವಿಚಾರವಾದವಾಗಲಿ ವಿಜಯ ಪಡೆಯುವ ಕಾಲ ಹತ್ತಿರದಲ್ಲಿ ಎಲ್ಲಿಯೂ

ಗೋಚರವಾಗುತ್ತಿಲ್ಲ". ಕುವೆಂಪುರವರು ನಿರಂಕುಶಮತಿಗಳಾಗಿ ಎಂದು ಕರೆ ಕೊಟ್ಟಿರುವ ಉದ್ದೇಶ ಜನರು ಕೇವಲ ಸಂಪ್ರದಾಯಶರಣತೆಯನ್ನು ವಿರೋಧಿಸಿ ಬರಡು ಮನಸ್ಸಿನ ಗೂಡು ಕಟ್ಟಿಕೊಳ್ಳುವ ಸಿನಿಕರಾಗಬೇಕೆಂದಲ್ಲ. ಅದು ಆತ್ಮಶ್ರೀಗಾಗಿ ಅಂದರೆ ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಲು ಸಹಾಯಕವಾಗಬೇಕು. ಆಗ ಮಾತ್ರ ಒಂದರ ಕೆಡುಕನ್ನು ತೆಗೆದು ಒಳಿತನ್ನು ಸಾಧಿಸಿದಂತಾಗುತ್ತದೆ. ಇಲ್ಲದಿದ್ದರೆ ಇಲ್ಲ. ಎರಡನೆಯ ಕೃತಿಯಾಗಿ ಪ್ರಸ್ತಾಪಿಸುತ್ತಿರುವ ಗ್ರಂಥದಲ್ಲಿ ದೇಜಗೌರವರೇ ಹೇಳಿರುವಂತೆ "ಶತಮಾನಗಳ ವಸಾಹತುಷಾಹಿ ಶೋಷಣೆ ಮತ್ತು ಧರ್ಮಗಳಿಂದ ದೇಶಕ್ಕೆ ಹಾನಿಯುಂಟಾಗಿದ್ದರೆ, ಕಳೆದ ಕೆಲವು ದಶಕಗಳಲ್ಲಿನ ಸಾಮಾಜಿಕ ರಾಜಕೀಯ ವಾತಾವರಣದಿಂದ ಉಂಟಾದ ಹಾನಿ ದೇಶವನ್ನು ವಾಸ್ತವವಾಗಿ ಹೆಳವಾಗಿಸಿಬಿಟ್ಟಿದೆ. ಈ ಅವಧಿಯಲ್ಲಿ ಮನುಷ್ಯ-ಮನುಷ್ಯರ ನಡುವೆ ಮತ್ತು ನೆರೆಹೊರೆಯವರ ನಡುವೆ ಅಪನಂಬಿಕೆ ಮತ್ತು ಅಶಾಂತಿಯನ್ನು ಬಿತ್ತಿ ದೇಶವನ್ನು ಒಡೆಯಲು ಎಲ್ಲ ಮಾರ್ಗೋಪಾಯಗಳನ್ನು ಭಾಷೆ, ಜಾತಿ, ಗುಂಪು, ವರ್ಣ ಮತ್ತು ಧರ್ಮ- ಇವುಗಳನ್ನು ಬಳಸಿಕೊಳ್ಳಲಾಯಿತು" (ಪು. 51)ಎಂದು ಹೇಳದೆ ವಿಧಿಯಿಲ್ಲ. ಆದ್ದರಿಂದ ಧರ್ಮ ಯಾವುದೇ ಕಾಲಕ್ಕೂ ಮೌಲ್ಯಯುತವಾದುದೇ. ಆದರೆ ಅದರಲ್ಲಿ ಬೆಳೆದಿರುವ ಶೋಷಣೆ, ಮೂಢನಂಬಿಕೆ, ಕಂದಾಚಾರ ಮತ್ತು ತಾರತಮ್ಯಗಳೆಂಬ ಬಂದಳಿಕೆಗಳನ್ನು ಕತ್ತರಿಸಿ ಧರ್ಮದ ಮರವನ್ನು ಕಸಿ ಮಾಡಬೇಕು. ಇಲ್ಲದಿದ್ದರೆ ವಿಚಾರವಾದವೆಂದರೆ ಅವೈಜ್ಞಾನಿಕವಾದುದನ್ನು ವಿರೋಧಿಸುವುದರ ಜೊತೆಗೆ ಜೀವನಮೌಲ್ಯಗಳಾದ ಹಾಗೂ ಧರ್ಮದೊಂದಿಗೆ ಹಾಸುಹೊಕ್ಕಾದ ಸತ್ಯ, ಅಹಿಂಸೆ, ಪ್ರೀತಿ, ಪ್ರಾಮಾಣಿಕತೆಗಳನ್ನು ಸಹ ಅಸಡ್ಡೆಯಿಂದ ಕಾಣುವುದೆಂಬ ಅಪಾಯಕ್ಕೆ ತೆರೆದುಕೊಳ್ಳುತ್ತವೆ.

ಕುವೆಂಪುರವರು ಬಾಲ್ಯದಿಂದಲೂ ವೈಚಾರಿಕತೆಯನ್ನು ಬೆಳೆಸಿಕೊಂಡವರೆಂಬುದು ಈ ಕೃತಿಯಿಂದ ತಿಳಿದುಬರುತ್ತದೆ. ಆದರೆ ಅವರು ಮೌಲ್ಯಗಳಿಗೆ ಅಷ್ಟೇ ಬೆಲೆ ಕೊಟ್ಟರು. ಪುರೋಹಿತ ಮತ್ತು ರಾಜನ ಕಪಟತನವನ್ನು ವಿಡಂಬಿಸುತ್ತಲೇ ಗುರುಭಕ್ತಿ ಬೆಳೆಸಿಕೊಂಡರು. ಹಿಂದೂಧರ್ಮದ ಜಾತಿ ಪದ್ಧತಿಯಂತಹ ಅನಿಷ್ಟಗಳನ್ನು ವಿಮರ್ಶಿಸುತ್ತಲೇ ರಾಮಕೃಷ್ಣ ಪರಮಹಂಸರಿಂದ ಸ್ಫೂರ್ತಿ ಪಡೆದರು. ದೇಜಗೌರವರು ಈ ಸಂಕ್ಷಿಪ್ತ ಕೃತಿಯಲ್ಲಿ ದೊಡ್ಡ ಅಧ್ಯಯನಕ್ಕೆ ಅರ್ಹವಾದ ಕುವೆಂಪುರವರ ವೈಚಾರಿಕ ಸಾಹಿತ್ಯ ಮತ್ತು ಉಪದೇಶಗಳನ್ನು ಹಿಡಿದಿಡಲು ಪ್ರಯತ್ನಿಸಿರುವುದರಿಂದ ಅನೇಕ ಕಡೆ ಸಮಗ್ರ ಚಿತ್ರಣ ಕಂಡುಬರುವುದಿಲ್ಲ. ಅದು ಅವರ ಉದ್ದೇಶವೂ ಅಲ್ಲ. ಇದೊಂದು ಮಾರ್ಗದರ್ಶಿ ಸೂತ್ರಗಳ ಸಂಕಲನವೆನ್ನಬಹುದು. ಕೊನೆಯಲ್ಲಿ "ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕವಾಗಿ ದಾಸ್ಯದಿಂದ ಪಾರಾಗಲೆಂಬುದೇ ಕುವೆಂಪು ಅವರ ವಿಚಾರಧಾರೆಯ ಸಾರಸರ್ವಸ್ವ. ಈ ವಿಚಾರಧಾರೆಯ ಅನುಷ್ಠಾನದಲ್ಲಿ ಯುವಕರ ಅಭ್ಯುದಯವಿದೆ. ದೇಶದ ಪ್ರಗತಿಯಿದೆ. ಸಮಾಜದ ಉದ್ಧಾರವಿದೆಯೆಂಬುದನ್ನು ಒತ್ತಿಹೇಳಬೇಕಾಗಿಲ್ಲ" ಎಂದು ಹೇಳುವ ಮೂಲಕ ಈ ಮಹಾಕವಿ ಮತ್ತು ದಾರ್ಶನಿಕರ ಸದುದ್ದೇಶವನ್ನು ಸಾರಿದ್ದಾರೆ. ಇದೇ ನಿಟ್ಟಿನಲ್ಲಿ ಕುವೆಂಪು ಅವರ ವೈಚಾರಿಕತೆಯನ್ನು ಕುರಿತು ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರ ಒಂದು ಗ್ರಂಥವು ಹೊರಬಂದಿದೆ. ಇದು ಸ್ವಾಗತಾರ್ಹ ಬೆಳವಣಿಗೆಯೇ ಸರಿ. ಆದ್ದರಿಂದ

ದೇಜಗೌರವರ ಈ ಕೃತಿ ಕುವೆಂಪು ಅವರ ವೈಚಾರಿಕತೆಯ ಅಧ್ಯಯನಕ್ಕೆ ಒಂದು ಉತ್ತಮ ಸೇರ್ಪಡೆಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ದೇಜಗೌರವರ ಇನ್ನೊಂದು ಕೃತಿ 'ಸಾಹಿತಿಯ ಸಾಮಾಜಿಕ ಬದ್ಧತೆ'. ಇದನ್ನು ಮೈಸೂರಿನ ಪ್ರತಿಧ್ವನಿ ಪ್ರಕಾಶನದವರು ಹೊರ ತಂದಿದ್ದಾರೆ. ಇದರಲ್ಲಿ ಲೇಖಕರ ಹತ್ತು ಬಿಡಿ ಲೇಖನಗಳಿವೆ. ಇವುಗಳಲ್ಲಿ ಹೆಚ್ಚಿನವು ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣಗಳೇ ಆಗಿವೆ. ದೇಜಗೌರವರ ಭಾಷಣಗಳು ಬರಹ ರೂಪಕ್ಕೆ ಬಂದಾಗ ಅವು ಸಮೃದ್ಧತೆಯನ್ನು ಪಡೆಯುತ್ತವೆ. ಇಲ್ಲಿನ ಬಹುತೇಕ ಲೇಖನಗಳಲ್ಲಿ ಸಮಕಾಲೀನ ಸಮಸ್ಯೆಗಳ ಕುರಿತ ಚಿಂತನೆ ತುಂಬಿದೆ.

ಈ ಕೃತಿಯ ಮೊದಲ ಲೇಖನವೇ 'ಸಾಹಿತಿಯ ಸಾಮಾಜಿಕ ಬದ್ಧತೆ'. ಅದೇ ಈ ಕೃತಿಯ ಶೀರ್ಷಿಕೆಯೂ ಹೌದು. 132 ಪುಟಗಳ ಈ ಕೃತಿಯ ಸಂದೇಶವೆಂದರೆ "ಸಾಮಾಜಿಕ ಕ್ರಾಂತಿ ಭಾರತೀಯ ಸಾಹಿತಿಯ ಜವಾಬ್ದಾರಿಯಾಗಿದೆ" ಎಂಬುದು. ಮೊದಲ ಲೇಖನದಲ್ಲಿ ಲೇಖಕರು ಕರ್ನಾಟಕ ಮತ್ತು ಕನ್ನಡಕ್ಕೆ ಸಂಬಂಧಿಸಿದಂತೆ ವ್ಯಾಪಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಕನ್ನಡದ ಏಳಿಗೆಗೆ ಆಗಬೇಕಾದ ಕೆಲಸಗಳನ್ನು ಒತ್ತಿ ಹೇಳಿದ್ದಾರೆ. ಭಾಷೆ, ಜಾತಿ, ರಾಜಕೀಯ, ಸಾಂಸ್ಕೃತಿಕ ಚಳವಳಿಗಳು ಇವೆಲ್ಲ ಅವರ ವಿಚಾರಮತಿಯಲ್ಲಿ ಚರ್ಚಿತವಾಗಿವೆ.

ಲೇಖಕರಿಗೆ ಪ್ರಸ್ತುತ ರಾಜಕೀಯ ಮತ್ತು ಆಡಳಿತ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಮನೆ ಮಾಡಿರುವ ಭ್ರಷ್ಟಾಚಾರ ಮತ್ತು ಶೋಷಣೆಯನ್ನು ಕಂಡು ಎಲ್ಲಿಲ್ಲದ ಆತಂಕ. ಅದಕ್ಕಾಗಿ ಅವರು ಅದರ ವಿವರವಾದ ಚಿತ್ರಣವನ್ನೇ ಹೀಗೆ ನೀಡಿದ್ದಾರೆ.

"ಲೋಕಾಯುಕ್ತ, ನ್ಯಾಯಾಲಯ, ಪೋಲೀಸ್ ಇಲಾಖೆಗಳಿದ್ದರೂ ಭಾರತದಲ್ಲಿ ಭ್ರಷ್ಟಾಚಾರ ಅತಿವ್ಯಾಪಕವಾಗಿ, ವ್ಯವಸ್ಥಿತವಾಗಿ ನಡೆಯುತ್ತಿದೆ. ಶ್ರೀಮಂತರ ಶೋಷಣೆಯೂ ಭ್ರಷ್ಟಾಚಾರದ ಮತ್ತೊಂದು ಮುಖ. ಕೆಲಸ ಮಾಡದೆ ಸಂಬಳ ತೆಗೆದುಕೊಳ್ಳುವುದೂ ಭ್ರಷ್ಟಾಚಾರವೇ. ಕೋಟಿ ಕೋಟಿ ಹಣ ಲಪಟಾಯಿಸಿದ ಭ್ರಷ್ಟಾಚಾರಿಗಳಿಗೆ ಈ ದೇಶದಲ್ಲಿ ಶಿಕ್ಷೆಯಾದದ್ದಿಲ್ಲ; ಆದರೂ ಕಣ್ಣೊರೆಸುವ ಶಿಕ್ಷೆ. ಅಮಾನತ್ತಿನಲ್ಲಿಟ್ಟಾಗ ಕೈತುಂಬ ಸಂಬಳ ಬರುತ್ತದೆ. ವಿಳಂಬವಾದ ವಿಚಾರಣೆ ಮುಗಿಯುವುದರೊಳಗಾಗಿ ಲಂಚಕೋರ ಎಲ್ಲವನ್ನೂ, ಎಲ್ಲರನ್ನೂ ಸರಿಪಡಿಸಿಕೊಳ್ಳುತ್ತಾನೆ. ಇತ್ತೀಚೆಗೆ ಪದಚ್ಯುತಿ ಹೊಂದಿದ ರುಮೇನಿಯಾದ ಅಧ್ಯಕ್ಷನಿಗೂ ಅವನ ಹೆಂಡತಿಗೂ ಸಂದ ಗತಿಯೇನು? ಕೆಲವು ಅಪರಾಧಿಗಳಿಗೆ ಕಪ್ಪುಹಣ ಸಂಗ್ರಹಣಕಾರರಿಗೆ. ಮಠದೇವಾಲಯಗಳ ರಕ್ಷಣೆಯೂ ದೊರೆಯುವುದುಂಟೆಂದು ಕೇಳಿದ್ದೇನೆ. ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಭ್ರಷ್ಟಾಚಾರವಂತು ಅಕ್ಷಮ್ಯ. ಎಷ್ಟು ಸಂಬಳ ಕೊಟ್ಟರೂ ಖಾಸಗಿ ಬೋಧೆಯಾಗಲಿ, ಅಂಕಗಳ ಮಾರಾಟವಾಗಲಿ, ಲಂಚ ಸ್ವೀಕಾರವಾಗಲಿ ನಿಲ್ಲುವಂತಿಲ್ಲ." ಹೀಗೆ ದೇಜಗೌರವರು ಸಮಕಾಲೀನ ಸಮಾಜದ ದೋಷ ದೌರ್ಬಲ್ಯಗಳನ್ನು ಕಳಂಕಗಳನ್ನು ಹೇಳುತ್ತಾ ಹೋಗಿದ್ದಾರೆ. ಬೆಕ್ಕಿಗೆ ಗಂಟೆ ಕಟ್ಟುವವರಾರು ಎಂಬಂತಹ ಈ ಸಂದರ್ಭದಲ್ಲಿ ದೇಜಗೌರವರಂತಹ ಜವಾಬ್ದಾರಿಯುತ

ಸ್ಥಾನದಲ್ಲಿದ್ದವರು ಇದನ್ನೆಲ್ಲ ತೋಡಿಕೊಂಡಿರುವುದು ಹೆಚ್ಚು ಪರಿಣಾಮಕಾರಿಯೆಂದೇ ಹೇಳಬೇಕು.

"ರಾಜಧಾನಿಯ ಕನ್ನಡಿಗರ ಹೊಣೆಗಾರಿಕೆ" ಇನ್ನೊಂದು ಲೇಖನ. ಇದು 1991 ರಲ್ಲಿ ದೆಹಲಿಯಲ್ಲಿ ನಡೆದ ಎಂಟನೆಯ ರಾಷ್ಟ್ರೀಯ ಕನ್ನಡ ಸಮ್ಮೇಳನದ ಅಧ್ಯಕ್ಷ ಭಾಷಣ. ಇದರಲ್ಲಿ ಭಾರತೀಯ ಸಂದರ್ಭದಲ್ಲಿ ಭಾಷೆ ಮತ್ತು ಸಂಸ್ಕೃತಿಗಳ ಘಟ್ಟವನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ರಾಜಕೀಯ ಮತ್ತು ಸಾಮಾಜಿಕ ವಿಷಯಗಳೂ ವಿಪುಲವಾಗಿ ಬಂದಿವೆ.

ದೇಜಗೌರವರ ವ್ಯಕ್ತಿತ್ವ ಹೊರಗೆ ಬಿಗು ಒಳಗೆ ಮೃದು. ತಮ್ಮ ಲೇಖನಗಳಲ್ಲಿ, ಭಾಷಣಗಳಲ್ಲಿ ವಿಚಾರಗಳನ್ನು ಮನಮುಟ್ಟುವಂತೆ ನಿರೂಪಿಸುವುದರೊಂದಿಗೆ ತಮ್ಮ ಮನದಾಳದ ಅನ್ನಿಸಿಕೆಗಳು ಮತ್ತು ಅಳಲುಗಳನ್ನು ಮರೆಮಾಚದೆ ಹೊರಹಾಕುತ್ತಾರೆ. ಅವರು ತಮ್ಮ 'ಪ್ರಶಸ್ತಿ ಪ್ರಧಾನೋತ್ತರ ಭಾಷಣದಲ್ಲಿ ಈ ರೀತಿ ಮನ ಬಿಚ್ಚಿ ಮಾತನಾಡಿದ್ದಾರೆ. ಕನ್ನಡಕ್ಕೆ ಸರಿಯಾದ ಸ್ಥಾನಮಾನ ಸಿಕ್ಕಿಲ್ಲವೆಂಬ ಕಾರಣಕ್ಕಾಗಿ ಪ್ರಶಸ್ತಿಯನ್ನು ನಿರಾಕರಿಸುವ (1973) ದಿಟ್ಟತನವೂ ಮುಂದೆ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಬರುವುದು ತಡವಾದಾಗ ಅಂದಿನ ಅಧಿಕಾರಸ್ಥರು ಬೇಗ ನೀಡಲಿಲ್ಲವೆಂಬ ಅಸಮಾಧಾನ-ಇವೆರಡೂ ದೇಜಗೌರವರಲ್ಲಿ ನೇರವಾಗಿ ವ್ಯಕ್ತವಾಗುತ್ತವೆ. ದೇಜಗೌರವರು ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ಪ್ರಧಾನವಾದ ವೇದಿಕೆಗಳಲ್ಲಿ ಮಾತನಾಡಲಿ. ಅಲ್ಲಿ ಕನ್ನಡಕ್ಕಾಗಿ. ಕರ್ನಾಟಕ್ಕಾಗಿ. ಕನ್ನಡ ಬರಹಗಾರರಿಗಾಗಿ ಆಗಬೇಕಾದ ಕಾರ್ಯಗಳು ಏನೇನು ಅವನ್ನು ಹೇಗೆ ಅನುಷ್ಠಾನಗೊಳಿಸಬೇಕು ಎಂಬ ಸಲಹೆ ಮತ್ತು ಆಗ್ರಹಗಳಿದ್ದೇ ಇರುತ್ತವೆ. ಇದು ಈ ನಾಡಿನ ಮತ್ತು ನುಡಿಯ ಬಗೆಗಿನ ಅವರ ಪ್ರೀತಿಯನ್ನು, ಕಳಕಳಿಯನ್ನು ತೋರುತ್ತದೆ.

ಇಲ್ಲಿನ 'ಬಿನ್ನಹಕೆ ಬಾಯಿಲ್ಲವಯ್ಯ' ಎಂಬ ಲೇಖನ ದೇಜಗೌರವರಿಗೆ ಅರುವತ್ತು ವರ್ಷ ತುಂಬಿದಾಗ ಅವರಿಗೆ "ರಸಷಷ್ಟಿ" ಅಭಿನಂದನಾ ಗ್ರಂಥವನ್ನು ಅರ್ಪಿಸಿ ಸನ್ಮಾನಿಸಿದಾಗ ಮಾಡಿದ ಕೃತಜ್ಞತಾ ರೂಪದ ಭಾಷಣ. ಅವರು ಭಾವಜೀವಿಗಳು. ತಮ್ಮ ಸಾಧನೆಗಳನ್ನು ಹೇಳಿಕೊಳ್ಳುವಂತೆಯೇ ತಮ್ಮ ದೌರ್ಬಲ್ಯಗಳನ್ನೂ ಒಪ್ಪಿಕೊಳ್ಳುವ ಮನಸ್ಸುಳ್ಳವರು. "ಕುವೆಂಪು ಅವರ ಜ್ಯೋತಿಯಿಂದ ನನ್ನ ಬತ್ತಿಯನ್ನು ಹತ್ತಿಸಿಕೊಂಡೆನೆಂಬ ಹೆಮ್ಮೆ ನನ್ನದಾಗಿದೆ. ಅಂದರೆ ನನ್ನಲ್ಲಿ ದೋಷ ದೌರ್ಬಲ್ಯಗಳಿಲ್ಲವೆಂದಲ್ಲ. ಅವುಗಳಿಗೆ ನಾನೇ ಕಾರಣ. ಅವುಗಳಲ್ಲಿ ಕೆಲವು ಇತರರಿಗೆ ತಿಳಿದಿರುವಂಥವು; ಹಲವು ನನ್ನೊಳಗೆ ಅವಿತಿರುವಂಥವು. ಅವು ಬೇರೆಯವರಿಗೆ ತಿಳಿಯಬಾರದೆಂದು ಸಹ ನಾನು ಎಚ್ಚರಿಕೆ ವಹಿಸಿದ್ದೇನೆ. ಇತರರಿಗೆ ಕಿಂಚಿತ್ತು ಅನ್ಯಾಯ ಮಾಡಿಲ್ಲವೆಂಬ ಭರವಸೆ ಸಹ ನೀಡಲಾರೆನೆ" ಎಂದು ಹೇಳುವಾಗ ಅವರು ಇತರ ಬಹು ಜನರ ವ್ಯಕ್ತಿತ್ವದೊಳಗಿರುವ ದ್ವಂದ್ವಗಳನ್ನೇ ಹೇಳಿಕೊಂಡಂತಾಯಿತು. ಆದರೆ ಇಲ್ಲಿ ಹೀಗೆ ಹೇಳಿಕೊಳ್ಳುತ್ತಿರುವ ಅವರ ಗುಣ ದೊಡ್ಡದೆನ್ನಬೇಕು. ಸೋಗುತನಕ್ಕಿಂತ ಇದು ಮೇಲು.

ಡಿ. ವಿ. ಜಿ ಯವರ ಒಂದು ಸಂಕಲನಕ್ಕೆ ಬರೆದ ಮುನ್ನುಡಿ 'ಜೀವನ ಮೌಲ್ಯಗಳು ಮತ್ತು ಸಾಹಿತ್ಯ' ಎಂಬ ಲೇಖನವಾಗಿದೆ. ಇದರಲ್ಲಿ ಡಿ. ವಿ. ಜಿ ಯವರ ಲೇಖನಗಳ ಬಗ್ಗೆ

ವ್ಯಾಖ್ಯಾನವಿದೆ. "ಬದುಕಿನಲ್ಲಿ ಪತ್ರಿಕೆ" ಎಂಬ ಅವರ ಇನ್ನೊಂದು ಲೇಖನ ಜನಜೀವನದಲ್ಲಿ ಪತ್ರಿಕೆಗಳ ಪಾತ್ರವನ್ನು ಚಿತ್ರಿಸುವುದಾಗಿದೆ. ಅವರು "ಪ್ರಜಾಪ್ರಭುತ್ವದ ಯಶಸ್ಸಿಗೆ ದೇಶಭಾಷೆಗಳಷ್ಟು ಮುಖ್ಯವೋ ಅವುಗಳಿಗಿಂತ ಅಧಿಕ ಪ್ರಮಾಣದಲ್ಲಿ ಪತ್ರಿಕೆಗಳು ಮುಖ್ಯ ಮಾತ್ರವಲ್ಲ, ಅನಿವಾರ್ಯವೂ ಹೌದು. ಇದು ಸುದ್ದಿ ಯುಗ. ಆಧುನಿಕ ಜೀವನದ ಯಶಸ್ಸಿಗೆ ಅದು ಅತ್ಯಗತ್ಯವಾಗಿದೆ. ಸಾರ್ಥಕವಾದ ಬದುಕಿಗೆ ಜ್ಞಾನ ವಿಜ್ಞಾನ ಶಾಖೆಗಳ ಸಂಶೋಧನಾವಿಷ್ಕಾರಗಳ ಅರಿವು ತಕ್ಕಮಟ್ಟಿಗಾದರೂ ಬೇಕಾಗುತ್ತದೆ. ಸರ್ಕಾರದ ಕಾರ್ಯವಿಧಾನ ಚಟುವಟಿಕೆಗಳು ಮತ್ತು ಯೋಜನೆಗಳು ಅಂತೆಯೇ ನ್ಯಾಯಾಂಗ ಶಾಸಕಾಂಗಗಳ ನಡೆವಳಿಗಳು ಜನಜೀವನದ ಮೇಲೆ ಅಗಾಧ ಪರಿಣಾಮ ಬೀರುವುದರಿಂದ ಅವುಗಳ ತಿಳಿವಳಿಕೆ ಅತ್ಯವಶ್ಯಕ" ಎಂಬಿತ್ಯಾದಿ ಪತ್ರಿಕೆಗಳ ಮಹತ್ವವನ್ನು ಸ್ಪಷ್ಟಪಡಿಸುವ ವಿವರಗಳನ್ನು ನೀಡಿದ್ದಾರೆ.

'ರಾಜಕಾರಣಿಯೊಬ್ಬರ ಆತ್ಮಕಥೆ' ಎಂಬ ಲೇಖನ ದಿವಂಗತ ಶ್ರೀ ಎಚ್. ಕೆ. ವೀರಣ್ಣಗೌಡರ 'ಬದುಕು ಮೆಲುಕು' ಎಂಬ ಆತ್ಮ ಚರಿತ್ರೆಗೆ ದೇಜಗೌರವರು ಬರೆದ ಮುನ್ನುಡಿ ದೇಜಗೌರವರಿಗೆ ವೀರಣ್ಣಗೌಡರು ಅಕ್ಷರ ಕಲಿಸಿದ ಗುರುಗಳಲ್ಲದೆ ಅವರ ವಿದ್ಯಾಭ್ಯಾಸ ಮುಂದುವರಿಯಲು ಕಾರಣವಾದ ಜೀವನ ಮಾರ್ಗದರ್ಶಿ ಕೂಡ. ಇದನ್ನು ಸ್ಮರಿಸುತ್ತಾ ದೇಜಗೌರವರು ಈ ಮುನ್ನುಡಿಯನ್ನು ಮನತುಂಬಿ ಬರೆದಿದ್ದಾರೆ. 'ಖಾಂಡೇಕರ್ ಅವರ ಯಯಾತಿ' ಎಂಬ ಲೇಖನ ಎಂ. ವಿ. ಇನಾಂದಾರ್‌ರು ಕನ್ನಡಿಸಿದ 'ಯಯಾತಿ' ಕಾದಂಬರಿಗೆ ಬರೆದ ಹಾರೈಕೆ ನುಡಿ. ಈ ಲೇಖನ 15 ಪುಟಗಳಷ್ಟಿದ್ದು ಅದರಲ್ಲಿ ಲೇಖಕರು ತಮ್ಮ ಪಾಂಡಿತ್ಯ ಮತ್ತು ವಿಮರ್ಶಕ ಶಕ್ತಿಯನ್ನು ಸತ್ವಪೂರ್ಣವಾಗಿ ದುಡಿಸಿದ್ದಾರೆ. ಇದು ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನಕಾರರಿಗೆ ಉಪಯುಕ್ತವಾಗಿದೆ.

"ಸಾಹಿತಿಗಳಿಗೆ ಸವಾಲಾಗಿರುವ ಸಮಸ್ಯೆಗಳು" ಲೇಖನ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರು ಶ್ರೀ ಕೆ. ವಿ. ಶಂಕರಗೌಡ ದತ್ತಿ ಉಪನ್ಯಾಸ ಮಾಲೆಯಲ್ಲಿ ಉಪನ್ಯಾಸ ನೀಡಿದ ಸಂದರ್ಭದಲ್ಲಿ ದೇಜಗೌರವರು ಆಡಿದ ಮುಕ್ತಾಯ ಮಾತುಗಳ ನಿರೂಪಣೆಯಾಗಿದೆ. ಏಳು ಪುಟಗಳ ಈ ಲೇಖನದಲ್ಲಿ ಲೇಖಕರು. ಭಾರತೀಯ ಪರಂಪರೆ. ಸಂಸ್ಕೃತಿ- ಅವುಗಳ ದೋಷ ದೌರ್ಬಲ್ಯಗಳು ಇವನ್ನೆಲ್ಲ ಹೇಳಲು ಪ್ರಯತ್ನಿಸಿದ್ದಾರೆ. ಜೊತೆಗೆ ಇಂದಿನ ಭ್ರಷ್ಟ ವಾತಾವರಣ. ಅಂತರರಾಷ್ಟ್ರೀಯ ಪರಿಸ್ಥಿತಿ. ವಿಚಾರವಾದದ ಅಗತ್ಯ- ಇವೆಲ್ಲ ಸೇರಿವೆ. ಇಷ್ಟೊಂದು ವಿಷಯಗಳನ್ನು ಈ ಚಿಕ್ಕ ಲೇಖನದಲ್ಲಿ ಹೇಳಲು ಪ್ರಯತ್ನಿಸಿರುವುದರಿಂದ ಅಸ್ಪಷ್ಟತೆ. ವಿರೋಧಾಭಾಸಗಳು ನುಸುಳಲು ಅವಕಾಶವಾಗಿದೆ. ಭಾರತೀಯ ಸಂಸ್ಕೃತಿಯ ಒಳಿತನ್ನು ಮರೆತು ಕೆಡುಕನ್ನು ಮಾತ್ರ ಪ್ರತಿಬಿಂಬಿಸಲು ಹೋಗುವುದು ವಿಚಾರವಾದಿಯ ಜವಾಬ್ದಾರಿಯೆಂಬ ದೃಷ್ಟಿ, ಇಂತಹ ಲೇಖನಗಳ ಮಹತ್ವವನ್ನು ತಗ್ಗಿಸುತ್ತವೆ. ಇದು ಸಾವಧಾನವಾಗಿ ವಿಚಾರ ಮಾಡಬೇಕಾದ ಮಹತ್ವದ ವಿಷಯವಾಗಿದ್ದು ದಿಢೀರ್ ನಿರ್ಣಯಗಳು ಓದುಗರ ಮನಗೆಲ್ಲುವುದರಲ್ಲಿ ಸಫಲವಾಗುವುದಿಲ್ಲ. ಆದರೆ ಸದ್ಯದ ಸಾಮಾಜಿಕ. ಸಾಂಸ್ಕೃತಿಕ ವ್ಯವಸ್ಥೆಯಲ್ಲಿರುವ

ಕುಂದುಗಳು ಎಷ್ಟೊಂದು ದುಷ್ಪರಿಣಾಮಕಾರಿ ಎಂಬುದು ಈ ಲೇಖನದಿಂದ ತಿಳಿದುಬರುತ್ತದೆ.

ಈ ಸಂಕಲನದ ಕೊನೆಯ ಲೇಖನ 'ಗ್ರಂಥಾಮೃತ' ಮೈಸೂರು ನಗರ ಕೇಂದ್ರ ಗ್ರಂಥಾಲಯಕ್ಕೆ ಎಪ್ಪತ್ತೈದು ವರ್ಷ ತುಂಬಿದ ಸ್ಮರಣೆಗೆ ಹೊರತಂದ ಸಂಚಿಕೆಯ ಪ್ರಧಾನ ಸಂಪಾದಕರಾಗಿ ದೇಜಗೌರವರು ಬರೆದ ಮಾತುಗಳು ಈ ಲೇಖನ. ಅವರು "ಐತಿಹಾಸಿಕ ವೈಭವದ ದೃಷ್ಟಿಯಿಂದ ಈ ಗ್ರಂಥಾಲಯಕ್ಕೆ ಸರಿಸಾಟಿಯಾದ ಗ್ರಂಥಾಲಯ ಕರ್ನಾಟಕದಲ್ಲಿ ಮತ್ತೊಂದಿರಲಾರದು. ಇದರ ರೂವಾರಿ ರಾಷ್ಟ್ರದ ಶ್ರೇಷ್ಠತಮ ಶಿಲ್ಪಿ ಮಹಾಮುತ್ಸದ್ದಿ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಇದನ್ನು ಉದ್ಘಾಟಿಸಿದವರು ಅಂದಿನ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರು; ಇದನ್ನು ಹರಸಿದವರು ರಾಜರ್ಷಿ ಶ್ರೀ ಕೃಷ್ಣರಾಜ ಒಡೆಯರ್ ಅವರು; ಇದನ್ನು ಪೋಷಿಸಿದವರು ಕನ್ನಡ ಕಣ್ವ ಬಿ. ಎಂ. ಶ್ರೀಕಂಠಯ್ಯ ಹಾಗೂ ಮಹಾತತ್ತ್ವಜ್ಞ ಸರ್ವಪಲ್ಲಿ ರಾಧಾಕೃಷ್ಣನ್ ಅವರು; ಇದರ ಅಮೃತತ್ವವನ್ನುಂಡು ರಾಷ್ಟ್ರಕವಿಗಳಾಗಿ ಚಿತ್ತಪಸ್ ಶಕ್ತಿಯಿಂದ ಗಗನೋನ್ನತವಾಗಿ ಬೆಳೆದವರು ಶ್ರೀ ಕುವೆಂಪು ಅವರು. ಪ್ರತಿ ವರ್ಷವೂ ಲಕ್ಷಗಟ್ಟಳೆ ಜ್ಞಾನೋಪಾಸಕರು ಈ ಗ್ರಂಥಾಲಯದ ಪ್ರಯೋಜನವನ್ನು ಪಡೆದುಕೊಳ್ಳುತ್ತಿರುವುದರಿಂದ ಇದರ ಪುಣ್ಯಕ್ಕೆಣೆಯಿಲ್ಲವೆಂದೇ ಹೇಳಬಹುದು' ಎಂದು ದಾಖಲಿಸುವ ಮೂಲಕ ಈ ಗ್ರಂಥಾಲಯದ ಪರಂಪರೆಯನ್ನು ಅದರ ಉಪಯುಕ್ತತೆಯನ್ನೂ ನೆನೆದಿದ್ದಾರೆ. ಗ್ರಂಥಗಳ ಮಹತ್ವ' ಈ ಸ್ಮರಣ ಸಂಚಿಕೆಯ ಸ್ವರೂಪ. ಸಂಪಾದಕತ್ವದ ಸಮಸ್ಯೆಗಳು ಇತ್ಯಾದಿ ವಿಷಯಗಳು ಇದರಲ್ಲಿ ಬಂದಿವೆ. ದೇಜಗೌರವರಂತಹ ಹಿರಿಯ ಮತ್ತು ಮಹತ್ವದ ವಿದ್ವಾಂಸರು ಈ ಸ್ಮರಣಸಂಚಿಕೆಯ ಪ್ರಧಾನ ಸಂಪಾದಕತ್ವ ವಹಿಸಿಕೊಂಡದ್ದು ಅವರ ಗ್ರಂಥ ಪ್ರೀತಿಯ ದ್ಯೋತಕವಾಗಿದೆ.

ಹೀಗೆ ದೇಜಗೌರವರ 'ನಾಹಿತಿಯ ಸಾಮಾಜಿಕ ಬದ್ಧತೆ' ಬಹುರೂಪಿ ಲೇಖನಗಳ ಸಂಗ್ರಹ. ಈ ಲೇಖನಗಳು ಅವರ ಬಹುಶ್ರುತತ್ವದ ಮತ್ತು ಜೀವನ ಬದ್ಧತೆಯ ಸಂಕೇತಗಳಾಗಿವೆ. ಒಳ್ಳೆಯ ಮುದ್ರಣದಲ್ಲಿ ಬಂದಿದ್ದರೆ ಇದೊಂದು ಆಕರ್ಷಕ ಹೊತ್ತಿಗೆಯಾಗುತ್ತಿತ್ತು. ಈ ಕೃತಿ ದೇಜಗೌರವರ ಲೇಖನಗಳ ಅಕ್ಷಯ ಭಂಡಾರದಲ್ಲಿರುವ ಮಾದರಿ ಮಾತ್ರವಾಗಿದ್ದು ಅವರ ಬಿಡಿ ಲೇಖನಗಳ ಬೃಹತ್ ಹೊತ್ತಿಗೆಯೊಂದು ಹೊರಬರಲೆಂದು ಹಾರೈಸುತ್ತೇನೆ.

* * * * *

ಯುದ್ಧ ಮತ್ತು ಶಾಂತಿ-ಅನ್ನಾಕರೆನಿನ

- ಬಸವರಾಜ ಕಲ್ಗುಡಿ

ಈ ವರ್ಷ ಪ್ರಕಟವಾಗಿರುವ ಎರಡು ಅನುವಾದಿತ ಕಾದಂಬರಿಗಳನ್ನು ಅವಶ್ಯಕವಾಗಿ ಪ್ರಸ್ತಾಪಿಸಬೇಕು. ವಿಶ್ವ ಸಾಹಿತ್ಯದ ಎರಡು ಮೇರುಕೃತಿಗಳಾದ ಲಿಯೊ ಟಾಲ್‌ಸ್ಟಾಯ್ ಅವರ 'ಯುದ್ಧ ಮತ್ತು ಶಾಂತಿ' ಹಾಗೂ 'ಅನ್ನಾಕರೆನಿನಾ' ಎಂಬ ಬೃಹತ್ ಕಾದಂಬರಿಗಳನ್ನು ದೇ. ಜವರೇಗೌಡ ಅವರು ತುಂಬಾ ಸಮರ್ಥವಾಗಿ ಅನುವಾದಿಸಿ ಕನ್ನಡಕ್ಕೆ ತಂದಿದ್ದಾರೆ. ಈ ಎರಡೂ ರಷ್ಯನ್ ಕಾದಂಬರಿಗಳ ಇಂಗ್ಲೀಷ್ ಭಾಷಾಂತರಗಳನ್ನು ದೇಜಗೌ ಮೂಲವಾಗಿಟ್ಟುಕೊಂಡಿದ್ದಾರೆ. ಇತರ ಯೂರೋಪಿಯನ್ ಭಾಷೆಗಳಿಂದ ನೇರವಾಗಿ ಅನುವಾದ ಮಾಡಬಲ್ಲ ತಜ್ಞರು ಕನ್ನಡದಲ್ಲಿ ಅಷ್ಟಾಗಿ ಇಲ್ಲ. ಹಾಗಾಗಿ ಯೂರೋಪಿಯನ್ ಸಾಹಿತ್ಯ ಹೆಚ್ಚಾಗಿ ಇಂಗ್ಲೀಷ್ ಮೂಲಕ ಕನ್ನಡಕ್ಕೆ ಬರುತ್ತಿದೆ. ಇದರಿಂದ ಸಹಜವಾಗಿಯೇ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಇಷ್ಟಾದರೂ ಕೆಲಸಗಳಾಗುತ್ತಿರುವುದಕ್ಕೆ ನಾವು ಸಂತೋಷಪಡಬೇಕು.

ಟಾಲ್‌ಸ್ಟಾಯ್ ಬೃಹತ್ ಕಾದಂಬರಿಗಳ ಅನುವಾದ ಕೇವಲ ಸಾಹಿತ್ಯ ಪ್ರೀತಿಯನ್ನಲ್ಲದೆ ಅಪಾರ ಭೌತಿಕ ಶ್ರಮ, ಸಹನೆಗಳನ್ನೂ ಬೇಡುವಂತದ್ದು. ಈ ಕೆಲಸವನ್ನು ದೇಜಗೌ ತುಂಬಾ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ನೆರವೇರಿಸಿದ್ದಾರೆ.

ಟಾಲ್‌ಸ್ಟಾಯ್ ಕಾದಂಬರಿಗಳೆಂದರೆ ವಿಶ್ವಸಾಹಿತ್ಯದ ಮಹಾಕುತೂಹಲಗಳು. ಅವುಗಳ ಕೇಂದ್ರ ವಸ್ತು ಮನುಷ್ಯನೇ ಆಗಿದ್ದಾನೆ. ಮನುಷ್ಯನನ್ನು ಏಕಕಾಲದಲ್ಲಿ ವ್ಯಕ್ತಿಯಾಗಿಯೂ ವರ್ಗಮಾದರಿಯಾಗಿಯೂ ನೋಡುವುದು ಟಾಲ್‌ಸ್ಟಾಯ್ ಅವರ ವೈಶಿಷ್ಟ್ಯ. ಇನ್ನೊಂದು ರೀತಿಯಲ್ಲಿ ಅವರು ಕ್ರಾಂತಿಪೂರ್ವ ರಷ್ಯಾದ ಜನಸಮೂಹದ ಚರಿತ್ರೆಯನ್ನೇ ಬರೆದಿದ್ದಾರೆ. ಒಂದು ಸಂಕ್ರಮಣ ಕಾಲದಲ್ಲಿ ಸಾಮಾಜಿಕ ವರ್ಗಗಳು ಸ್ಥಿತ್ಯಂತರ ಹೊಂದುತ್ತಿದ್ದ, ರಷ್ಯನ್ ಚರಿತ್ರೆ ಮತ್ತೊಂದು ನಿರ್ಣಾಯಕ ಘಟ್ಟಕ್ಕೆ ಹೊರಳಿಕೊಳ್ಳುತ್ತಿದ್ದ ಪ್ರಕ್ರಿಯೆಯನ್ನೇ ಅವರ ಕೃತಿಗಳು ಕಲಾತ್ಮಕವಾಗಿ ದಾಖಲಿಸಿವೆ. ಹೀಗೆ ಮಾಡುವಾಗ ಅತ್ಯಂತ ಚಿಕ್ಕ ಪಾತ್ರಗಳೂ ತಮ್ಮ ವಿಶಿಷ್ಟ ಬಣ್ಣ, ಚಹರೆ ವಾಸನೆಗಳೊಂದಿಗೆ ಜೀವಂತ ವ್ಯಕ್ತಿಗಳಾಗಿ ಮೂಡಿಬಂದಿರುವುದು ಒಂದು ದೊಡ್ಡ ಸಾಧನೆಯಾಗಿದೆ. 'ವಾಸ್ತವಿಕವಾದ' ಎನ್ನುವುದು ಟಾಲ್‌ಸ್ಟಾಯ್ ಕಾದಂಬರಿಗಳಲ್ಲಿ ಬಹಿರಂಗ ಪ್ರಪಂಚದ ತೀರಾ ಸಾಮಾನ್ಯ ಭೌತಿಕ ವಿವರಗಳಿಂದ ಅಂತರಂಗ ಪ್ರಪಂಚದ ಸೂಕ್ಷ್ಮಾತಿಸೂಕ್ಷ್ಮ ಭಾವಸತ್ಯಗಳವರೆಗೆ ವ್ಯಾಪಿಸಿಕೊಂಡುಬಿಡುತ್ತದೆ. ಟಾಲ್‌ಸ್ಟಾಯ್ ನಿರ್ಮಿಸುವ ಬೃಹತ್ ವಿಶ್ವದಲ್ಲಿ ಮನುಷ್ಯನ ರಾಗದ್ವೇಷಗಳ, ಪ್ರೀತಿ ಮೋಹಗಳ ಭಾವತೀವ್ರ ಸನ್ನಿವೇಶಗಳ ಜೊತೆ ಜೊತೆಯಲ್ಲೇ ಬದುಕಿನ ಅರ್ಥದ ತಾತ್ವಿಕ ಪ್ರಶ್ನೆಗಳೂ ಮಂಡಿತವಾಗಿ ದರ್ಶನ ಸಂಕೀರ್ಣವಾಗುತ್ತದೆ.

'ಯುದ್ಧ ಮತ್ತು ಶಾಂತಿ' ಹತ್ತಿರ ಹತ್ತಿರ ಎರಡು ಸಾವಿರ ಪುಟಗಳಷ್ಟು

ದೊಡ್ಡದಾದ ಕಾದಂಬರಿ. (ದೇಜಗೌ ಅನುವಾದ ಮೂರು ಸಂಪುಟಗಳಲ್ಲಿ ಪ್ರಕಟವಾಗಿದೆ) ಈ ಕಾದಂಬರಿಯನ್ನು ಬರೆಯಲು ಏಳು ವರುಷಗಳನ್ನು ತೆಗೆದುಕೊಂಡು ಟಾಲ್‌ಸ್ಟಾಯ್ ಅದನ್ನು ಮೂರು ಬಾರಿ ತಿದ್ದಿ ಬರೆದರಂತೆ. ಅದು ೧೮೦೫ -೧೮೧೨ರ ಅವಧಿಯ ರಷ್ಯನ್ ಚರಿತ್ರೆಯನ್ನು ಒಳಗೊಳ್ಳುತ್ತದೆ. ನೆಪೋಲಿಯನ್ನನ ಆಕ್ರಮಣದ ಹಿನ್ನೆಲೆಯಲ್ಲಿ. ಯುದ್ಧದ ದೀರ್ಘ ನೆರಳಿನಲ್ಲಿ ಅದು ಭೂಮಾಲೀಕ ವರ್ಗಗಳ ಖಾಸಗಿ ಬದುಕನ್ನು. ರೈತಾಪಿ ಜನರ ಆಶೋತ್ತರಗಳನ್ನು. ಅಧಿಕಾರ ವರ್ಗದ ಒಳ ಜಗತ್ತನ್ನು ಬಿಚ್ಚುವ ಪರಿ ಅದ್ಭುತವಾದದ್ದು. ಚರಿತ್ರೆಯ ಬಗ್ಗೆ. ಮನುಷ್ಯ ಸ್ವಭಾವದ ಬಗ್ಗೆ. ಮನುಷ್ಯ ಜೀವನದ ವಿವಿಧ ಅವಸ್ಥೆಗಳ ಬಗ್ಗೆ. ಮನುಷ್ಯ ಸಂಬಂಧಗಳ ಬಗ್ಗೆ ಟಾಲ್‌ಸ್ಟಾಯ್ ಅವರ ವಿಚಾರಗಳೂ ಈ ಕಾದಂಬರಿಗಳಲ್ಲಿ ವಿವರವಾಗಿ ಪ್ರತಿಪಾದಿತವಾಗಿವೆ. ಮನುಷ್ಯ ತನಗಾಗಿ ಬದುಕಬೇಕೋ. ಇತರರಿಗಾಗಿ ಬದುಕಬೇಕೊ? ಚರಿತ್ರೆಯ ಮನುಷ್ಯನ ವಿಧಿಯನ್ನು ರೂಪಿಸುತ್ತದೆಯೊ. ಮನುಷ್ಯ ಸಂಕಲ್ಪ ಚರಿತ್ರೆಯ ಗತಿಯನ್ನು ನಿರ್ದೇಶಿಸುತ್ತವೆಯೊ ' ಮುಂತಾದ ಮೂಲಭೂತ ಪ್ರಶ್ನೆಗಳು ಇಲ್ಲಿ ಶೋಧನೆಗೆ ಒಳಗಾಗುತ್ತವೆ.

'ಅನ್ನಾಕರೆನಿನಾ' ಕಾದಂಬರಿಯ ಮೊದಲ ವಾಕ್ಯವೇ ಅವರ ಆಳ ಅಗಲಗಳನ್ನು ಸೂಚಿಸುವಂತಿದೆ. "ನೆಮ್ಮದಿಯಿರುವ ಎಲ್ಲ ಕುಟುಂಬಗಳು ಪರಸ್ಪರ ಹೋಲುತ್ತವೆ. ಪ್ರತಿಯೊಂದು ಅಸಂತುಷ್ಟ ಕುಟುಂಬವೂ ತಂತನ್ನ ರೀತಿಯಲ್ಲಿ ಅಸುಖಿವಾಗಿರುತ್ತವೆ. ಅನ್ನಾ ಮತ್ತು ವ್ಯಾಸ್ಕಿ. ಕಿಟ್ಟಿ ಮತ್ತು ಲೆವಿನ್. ಅಬ್ಲಾನ್ಸ್ಕಿ ಮತ್ತು ಡಾಲಿ ಹೀಗೆ ಹಲವು ಗಂಡು-ಹೆಣ್ಣು ಸಂಬಂಧಗಳ ಮೂಲಕ ಟಾಲ್‌ಸ್ಟಾಯ್ ಪ್ರೀತಿ. ಪ್ರೇಮ. ವಿವಾಹ. ದಾಂಪತ್ಯ. ಕುಟುಂಬಗಳ ಅರ್ಥವನ್ನು ವಿಶ್ಲೇಷಿಸುತ್ತಾರೆ. ಇನ್ನೊಂದು ಹಿನ್ನೆಲೆಯಲ್ಲಿ ಈ ಕಾದಂಬರಿ ಭೂಮಿ ಮತ್ತು ಮನುಷ್ಯನ ಸಂಬಂಧ. ಒಡೆಯ-ಒಕ್ಕಲುಗಳ ಸಂಬಂಧಗಳನ್ನು ಪರಿಶೀಲಿಸುತ್ತದೆ. ಕಾದಂಬರಿಯ ಪ್ರಾರಂಭದಲ್ಲಿಯೇ ಟಾಲ್‌ಸ್ಟಾಯ್ ಬೈಬಲಿನ ಸೂಕ್ತಿಯೊಂದನ್ನು ಉದ್ಧರಿಸುತ್ತಾನೆ : ವೆಂಜಿಯೆಂಸ್ ಇಸ್‌ಮೈನ್. ಐ ವಿಲ್ ರಿ ಪೇ. (ಈ ಸೂಕ್ತಿ ದೇಜಗೌ ಭಾಷಾಂತರದಲ್ಲಿ ಬಿಟ್ಟು ಹೋಗಿದೆ.) ಈ ವಾಕ್ಯ ಕಾದಂಬರಿಯ ನೈತಿಕ ಆಯಾಮಗಳ ಬಗ್ಗೆ ಅರ್ಥಪೂರ್ಣ ಸೂಚನೆಯೊಂದನ್ನು ನೀಡುತ್ತದೆ.

ಟಾಲ್‌ಸ್ಟಾಯ್ ಅವರ ಈ ಕಾದಂಬರಿಗಳೆಂದರೆ ಗದ್ಯಮಹಾಕಾವ್ಯಗಳೇ ಸರಿ. ಭಾರತೀಯ ಸಾಹಿತ್ಯದ ಮೇಲೆ. ಗಾಂಧೀಜಿಯವರ ಮೂಲಕ ಭಾರತೀಯ ಚಿಂತನೆಯ ಮೇಲೆ ಟಾಲ್‌ಸ್ಟಾಯ್ ಸಾಕಷ್ಟು ಪ್ರಭಾವ ಬೀರಿದ್ದಾರೆ. ಇವರ ಕಾದಂಬರಿಗಳ ಪ್ರಕಾರದ ಬಗ್ಗೆ ಚರ್ಚಿಸುವಾಗ. ವಾಸ್ತವತಾವಾದದ ಬಗ್ಗೆ ಚರ್ಚಿಸುವಾಗ ಟಾಲ್‌ಸ್ಟಾಯ್ ಕಾದಂಬರಿಗಳು 'ಟಚ್‌ಸ್ಟೋನ್'ಗಳಾಗಬಲ್ಲವು. ದೇಜಗೌ ಅನುವಾದಗಳು [illegible] ಕನ್ನಡ ಸಾರಸ್ವತ ಪ್ರಪಂಚ ಸಂದರ್ಭದಲ್ಲಿ ಖಂಡಿತವಾಗಿಯೂ ದೊಡ್ಡ ಸಾಧನೆಗಳೇ.

* * * * *

'ಕುವೆಂಪು ಶೈಲಿ', 'ಕುವೆಂಪು ವಿಶ್ವಮಾನವ ಸಂದೇಶ' . . .

-ಡಾ. ಟಿ. ಎನ್. ಸಾಗರತ್ನ

ಶೈಲಿಯನ್ನು ವಿದ್ವಾಂಸರು ಅನೇಕ ರೀತಿಗಳಲ್ಲಿ ಗ್ರಹಿಸಿ ವ್ಯಾಖ್ಯಾನಿಸಿರುವರು. 'ಒಬ್ಬ ವ್ಯಕ್ತಿಯ ಪದ ಪ್ರಯೋಗ ವೈಶಿಷ್ಟ್ಯ'ವೇ ಶೈಲಿಯೆನ್ನುವುದರಿಂದ ಹಿಡಿದು 'ಗ್ರಂಥಕರ್ತನ ಶೀಲವೇ ಶೈಲಿ' ಎನ್ನುವವರೆಗೂ ಅಭಿಪ್ರಾಯಗಳು ವ್ಯಕ್ತವಾಗಿವೆ. ಒಟ್ಟಾರೆ ಕವಿಯ ಅಥವಾ ಲೇಖಕನ ಭಾವಾನುಭವವನ್ನು ಸಹೃದಯನಿಗೆ ತಲುಪಿಸುವ ಮಾಧ್ಯಮವೇ ಶೈಲಿಯೆಂದು ಸ್ಥೂಲವಾಗಿ ಅರ್ಥೈಸಬಹುದು. ಅದು ಆಯಾ 'ವ್ಯಕ್ತಿ ವೈಶಿಷ್ಟ್ಯದ ಸಂಕೇತ'ವೂ ಹೌದು; 'ಅಭಿವ್ಯಕ್ತಿಯ ತಂತ್ರ'ವೂ ಹೌದು. ಕಲಾವಿದನೊಬ್ಬನ ಯಶಸ್ಸು ಅವನ ಸೂಕ್ಷ್ಮಸಂವೇದನೆ ಹಾಗೂ ಅದನ್ನು ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆ. ಭಾವಕ್ಕೆ ತಕ್ಕ ಭಾಷೆ ಭಾಷೆಗೆ ತಕ್ಕ ಲಯ ರೂಪುಗೊಂಡು ವ್ಯಕ್ತಿ ವಿಶಿಷ್ಟಶೈಲಿ ಮೈದಾಳುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು ಸಾಹಿತ್ಯವನ್ನು ಅಭ್ಯಾಸಮಾಡಿದುದರ ಫಲವೇ 'ಕುವೆಂಪು ಶೈಲಿ' ಗ್ರಂಥ.

ಅಭ್ಯಾಸಾನುಕೂಲಕ್ಕಾಗಿ ಇಲ್ಲಿ ಕುವೆಂಪು ಕೃತಿಸಮೂಹವನ್ನು ನಾಲ್ಕು ಪ್ರಮುಖ ಭಾಗಗಳಲ್ಲಿ ವಿಭಾಗಿಸಿಕೊಂಡು ಸಾಹಿತಿಯ ವ್ಯಕ್ತಿತ್ವವೇ ಶೈಲಿಯೆನ್ನುವ ದೃಷ್ಟಿಯಿಂದ ವಿಮರ್ಶಿಸಿದೆ: (೧) ಪದ್ಯಶೈಲಿ (೨)ನಾಟಕಶೈಲಿ (೩)ಪದ್ಯಶೈಲಿ. ಮತ್ತು (೪) ಮಹಾಕಾವ್ಯಶೈಲಿ. ಈ ಸ್ಥೂಲವಿಭಾಗಗಳನ್ನು ಮತ್ತು ಒಳವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಗದ್ಯಶೈಲಿಯಲ್ಲಿ ಕಥನಶೈಲಿ. ಪ್ರಬಂಧಶೈಲಿ. ವಚನಶೈಲಿ ಮತ್ತು ಶಾಸ್ತ್ರಶೈಲಿಗಳು ಸೇರುತ್ತವೆ.

ಕುವೆಂಪುರವರ ಗದ್ಯಲೇಖನದ ಪ್ರಥಮದಾಖಲೆ 'ಮಲೆನಾಡಿನ ಚಿತ್ರಗಳು' ಪುಸ್ತಕವನ್ನು ಕುರಿತು ಲೇಖಕರು, "ಹರಟೆಗೂ ಕತೆಗೂ ಮಧ್ಯವರ್ತಿಯಾದ. ಎರಡರ ಲಕ್ಷಣಗಳನ್ನೂ ಒಳಗೊಂಡಿರುವ ರಚನೆಗಳನ್ನು ಚಿತ್ರಗಳೆಂದು ಕರೆದಿರುವಲ್ಲಿ ಔಚಿತ್ಯವಿದೆ" ಎಂದಿರುವುದಲ್ಲದೆ. ಅನುಭವಗಳೇ ಭಾಷಾರೂಪದ ಚಿತ್ರಗಳಾಗಿ ಮೈದೋರಿವೆ. ಒಂದೊಂದು ಚಿತ್ರವೂ ಆತ್ಮಕಥೆಯ ಧಾಟಿಯಲ್ಲಿದೆ. ಉತ್ತಮ ಪುರುಷದಲ್ಲಿ ಕಥಾನಿರೂಪಣೆಯಿರುವುದರಿಂದ ವಾಚಕರೆಲ್ಲ ಶ್ರೋತೃಗಳಾಗಿ ಆತ್ಮೀಯತೆಯ ಅನುಭವ ವನ್ನು ಪಡೆಯುವಂತಾಗಿದೆ. ಸರಳ ಸರಸ ಹಾಸ್ಯಪ್ರಧಾನ ನಿರೂಪಣೆಗಳಿವು ಎಂಬುದನ್ನು ಎತ್ತಿತೋರಿಸಿ ಹೆಜ್ಜೆಹೆಜ್ಜೆಗೂ ಕುತೂಹಲ ಕೆರಳಿಸುವ ನಿರೂಪಣೆಯತ್ತ ಓದುಗರ ಗಮನ ಸೆಳೆಯುವರು. 'ಅಜ್ಜಯ್ಯನ ಅಭ್ಯಂಜನ', 'ಕತೆಗಾರ ಮಂಜಣ್ಣ', 'ರಾಮರಾವಣರ ಯುದ್ಧಗಳು. ಹಾಸ್ಯದ ಚಿಲುಮೆಗಳಾಗಿ ಓದುಗರನ್ನು ಸೆಳೆದಿವೆ. ಕುವೆಂಪುರವರ ಈ ಪ್ರಾರಂಭಿಕ ಗದ್ಯಸಾಹಿತ್ಯ ಕೃಷಿಯಲ್ಲಿ ಕ್ರಮಬದ್ಧವಾದ ಆಲೋಚನೆ. ಕಾಯ್ದುಕೊಂಡ ಸಮತೂಕಗಳಿಂದ ತಾರ್ಕಿಕಶೈಲಿ ಸಾಧ್ಯವಾಗಿದೆಯೆಂಬುದನ್ನು ಗುರುತಿಸಿ. ಲೇಖಕರು ಅದನ್ನು'ಮುಗ್ಧ ಶುದ್ಧ ಸರಳ ಸಹಜ ಸುಂದರ ಶೈಲಿ'ಯೆಂದು ಕರೆದಿರುವುದು ಆಪ್ಯಾಯಮಾನವಾಗಿದೆ.

ಅಲ್ಲದೆ ಪ್ರಾರಂಭದ ಕತೆಗಳಲ್ಲಿನ ಪ್ರಥಮಾ ವಿಭಕ್ತಿ ಪ್ರತ್ಯಯದ ಪ್ರಯೋಗ ಹಾಗೂ ಕರ್ಮಣೀ ಪ್ರಯೋಗದ ಬಳಕೆಗಳನ್ನು ಗುರುತಿಸಿ ಅದು ಕುವೆಂಪು ಶೈಲಿಯ ಪೂರ್ವಾವಸ್ಥೆಯೆಂದು ಗುರುತಿಸಿದ್ದಾರೆ. ಕುವೆಂಪು ಅವರ ಸಾಹಿತ್ಯಶಕ್ತಿ ಮುಂದುವರಿದಂತೆ ಕನ್ನಡ ಭಾಷೆಯಲ್ಲಿ 'ಹುದಗಿದ್ದ ಶಕ್ತಿಸಾಮರ್ಥ್ಯಗಳು ಹೊರಹೊಮ್ಮಿದ ರೀತಿ', ಅದರ 'ಸರ್ವಸಾಧ್ಯತೆಗಳನ್ನು ಸೂರೆಗೊಂಡಾಗ ಒದಗಿಬಂದ ವೈವಿಧ್ಯ' ನಿಜಕ್ಕೂ ಅಚ್ಚರಿತರುವಂಥ ಬೆಳವಣಿಗೆ.

ಕುವೆಂಪುರವರ ಕಥಾವಲಯಕ್ಕೆ ಬಂದರೆ ಅವರ ಹದಿನೇಳು ಕಥೆಗಳಲ್ಲಿ 'ಸಾಲದ ಮಗು', 'ಯಾರೂ ಅರಿಯದ ವೀರ' ಮತ್ತು 'ಶ್ರೀಮನ್ಮೂಕವಾಗಿತ್ತು' ಕಥೆಗಳು ಕಲೆಯ ಹಾಗೂ ಮಾನವೀಯತೆಯ ದೃಷ್ಟಿಯಿಂದ ಶ್ರೇಷ್ಠಕಥೆಗಳೆಂದು ಅವುಗಳನ್ನು ಪರಿಚಯಿಸಲಾಗಿದೆ. ಕಥೆಗಳಲ್ಲಿನ ಹೃದಯ ವಿದ್ರಾವಕ ಸನ್ನಿವೇಶಗಳು. ಅವು ಒಸರುವ ಕರುಣರಸ. ಅಲ್ಲಿಯ ಭಾವಾರ್ದ್ರಭಾಷೆ ಓದುಗರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿವೆ. ಅತಿಯೆನ್ನಿಸುವಷ್ಟು ನಿಸರ್ಗವರ್ಣನೆ ಕುವೆಂಪುರವರ ಶೈಲಿಯ ಹೆಗ್ಗಳಿಕೆ. 'ಸಾಲದ ಮಗು' ಕಥೆಯಲ್ಲಿನ ಕಾರ್ಗತ್ತಲೆಯ ಇರುಳಿನ ವರ್ಣನೆ ಓದುಗರ ಮೈಯನ್ನು ಜುಮ್ಮಗುಟ್ಟಿಸಿವಂತಿದೆ. ಬಿರುಗಾಳಿ ಮಳೆಹನಿ ಕಪ್ಪೆಗಳ ವಟಗುಟ್ಟುವಿಕೆಗಳು ಇರುಳಿನ ಭೀಕರತೆಯನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಸಫಲವಾಗಿವೆ. ನೇರ ನಿರೂಪಣೇ. ಸರಳಕನ್ನಡ ಮಾತುಗಳ ಬಳಕೆ ಅಲ್ಲಲ್ಲಿ ಇಣಕುವ ಸಂಸ್ಕೃತ ಶಬ್ದಗಳು ಈ ಕಥೆಗಳಲ್ಲಿನ ವೈಶಿಷ್ಟ್ಯ. 'ಧನ್ವಂತರಿಯ ಚಿಕಿತ್ಸೆ'ಕಥೆಯಲ್ಲಿನ ಭಾಷೆ ಮಾನವೀಯತೆಯ ಸಿಂಚನದೊಂದಿಗೆ ದಟ್ಟವಾದ ಭಾವಾನುಭವಗಳನ್ನು ಗರ್ಭೀಕರಿಸಿಕೊಂಡು ಸಹಜ ಸರಳವಾಹಿನಿಯಾಗಿ ಹರಿದಾಡಿದೆ. ಇಂತಹ ಸತ್ವಯುತ ಕಥೆಯ ಬಗ್ಗೆ ಲೇಖಕರ ಮಾತುಗಳನ್ನೇ ನೇರವಾಗಿ ಉದಾಹರಿಸುವುದು ಸೂಕ್ತ: "ವಾಸ್ತುಶಿಲ್ಪಿಯ ಪೂರ್ವಯೋಜಿತ ನೀಲಿನಕ್ಷೆಯ ಪ್ರಕಾರ ನಿರ್ಮಿಸಿದ ಕಲಾಪ್ರದರ್ಶನಾಲಯದಂತಿದೆ ಈ ಕತೆ. ಎಲ್ಲಿಯೂ ಅನವಶ್ಯವಾದ ಗೋಡೆ ಗುಡಾರಗಳಾಗಲೀ ಅಲಂಕಾರ ಹೇರುಪೆಕ್ಕಳಗಳಾಗಲಿ ಇಲ್ಲ. ಘಟನೆಯಿಂದ ಘಟನೆಗೆ ಕತೆ ಸಾಗುತ್ತು. ನೇರವಾಗಿ ಗುರಿಮುಟ್ಟುತ್ತದೆ. ನಡುನಡುವೆ ಬಹುವ ಲಘುವರ್ಣನೆಗಳು ಕತೆಯ ನಿಶ್ಚಿತೋದ್ದೇಶಕ್ಕೆ ಪೋಷಕವಾಗಿದೆ. ವಿಡಂಬನೆಯೇ ಈ ಕತೆಯ ಜೀತಧಾತುವಾಗಿದೆ ಅದರ ಒರಿಮೆಯ ಕೈವಾರವಾಗಿದೆ. . . . . . ಒಂದು ಕಡೆ ರೈತರ ಸಂಕಟ. ಮತ್ತೊಂದು ಕಡೆ ಆ ಸಂಕಟವನ್ನು ಗುರುತಿಸದ ಶ್ರೀಮಂತಿಕೆಯ ವಿಕಟಾಟ್ಟಹಾಸದ ವಿಡಂಬನೆ ಇಲ್ಲಿ ಸಾರ್ಥಕವಾಗಿ ಮೈಗೊಂಡಿದೆ ಎನ್ನುವುದು"- ಇಂತಹ ಕಡೆಗಳಲ್ಲಿ ಕುವೆಂಪುರವರ ಕತೆಯ ಸೌಂದರ್ಯವನ್ನು ಸವಿಯೋಣವೋ ಲೇಖಕರ ವಿಮರ್ಶೆಯ ಚೆಲುವನ್ನು ಆಸ್ವಾದಿಸೋಣವೋ ಎಂದು ಒಂದು ಗಳಿಗೆ ಯೋಚಿಸುವಂತಾಗುತ್ತದೆ.

"ನಿಸರ್ಗದಿಂದ ಅವರ (ಕುವೆಂಪುರವರ) ವ್ಯಕ್ತಿತ್ವವನ್ನಾಗಲೀ ಶೈಲಿಯನ್ನಾಗಲೀ ಬೇರ್ಪಡಿಸಲಾಗದು" ಎಂಬ ಲೇಖಕರ ಮಾತು ಅಕ್ಷರಶಃ ನಿಜ. 'ನಿಸರ್ಗದ ಮಲ್ಲಿಗೆಯ ಕಂಪು ಕುವೆಂಪುರವರ ಶೈಲಿಯನ್ನೆಲ್ಲ ಆವರಿಸಿದೆ; ರೂಪಿಸಿದೆ. ಕುವೆಂಪು ಶೈಲಿಯ ಹೊರಗನ್ನು ಒಗ್ಗಿಸುವ ಅನೇಕ ಉಪಮೆ ರೂಪಕಗಳನ್ನು ಕೃತಿಯಲ್ಲಿ ಎತ್ತಿತೋರಿಸಿದೆ. "ಕುವೆಂಪುರವರ

ಗದ್ಯವಾಮನ (ಸಣ್ಣಕಥೆಗಳು) ಕಾದಂಬರಿ ಕ್ಷೇತ್ರಕ್ಕೆ ಪದಾರ್ಪಣೆ ಮಾಡುವಷ್ಟರಲ್ಲಿ ತ್ರಿವಿಕ್ರಮವಾಗಿ ವಿಜೃಂಭಿಸುತ್ತದೆ. . . . . . ಪಾತ್ರಚಿತ್ರಣದ [illegible]ಗಿದೆ. ವರ್ಣನೆಗಳ ಚೆಲುವಿಗೆ, ಸಂಭಾಷಣೆಗಳ ಪರಿಣಾಮ ರಮಣೀಯತೆಗೆ, ಕ್ರಿಯೆಯ ಹದವರಿತ ಗತಿ ನಿಯಂತ್ರಣಕ್ಕೆ ಮಾತಿನ ಮೋಡಿಯೇ ಮೂಲ" ಈ ವಾಮನ ವಿಮರ್ಶೆಯಲ್ಲಿ ಕುವೆಂಪುರವರ ತ್ರಿವಿಕ್ರಮ ಗದ್ಯಸಾಹಿತ್ಯ ಅಡಗಿದೆ!

‘ನೆನಹು ಬಾಳಿನಬುತ್ತಿ’ ‘ಅನುಭವಗಳ ಅಕ್ಷಯನಿಧಿ’ ಇತ್ಯಾದಿ ಸೂತ್ರಪ್ರಾಯದ ವಾಕ್ಯಗಳು ಲೇಖಕರು ಗುರುತಿಸಿರುವಂತೆ ಕುವೆಂಪು ಶೈಲಿಯ ಇನ್ನೊಂದು ವೈಶಿಷ್ಟ್ಯ. ‘ಉಚ್ಚಾರಣೆಗೆ ಕಷ್ಟವಲ್ಲದ ಪದಗುಚ್ಛ, ಶ್ರುತಿಸುಭಗ ಪದಮೈತ್ರಿ, ಮಧುರ ಪದಬಂಧಗಳೇ ಕುವೆಂಪು ಶೈಲಿಯ ಹೆಗ್ಗುಣ’ವೆಂಬುದನ್ನು ಸಾಕಷ್ಟು ನಿದರ್ಶನಗಳ ಮೂಲಕ ತೋರಿಸಿಕೊಡಲಾಗಿದೆ. ಕಥೆಗಳಲ್ಲಿ ನಿರೂಪಣೆಯ ಏಕತಾನತೆಯನ್ನು ಮುರಿಯಲು ಸಂವಾದ ತಂತ್ರವನ್ನು ಒಂದು ಪ್ರಬಲ ಸಾಧನವಾಗಿ ಬಳಸಿರುವುದು ಗಮನಾರ್ಹ. ಜೊತೆಗೆ ಅವು ಪಾತ್ರಗಳ ಒಳಗನ್ನೂ ಅತ್ಯಂತ ಪರಿಣಾಮಕಾರಿಯಾಗಿ ತೋರಿಸುತ್ತದೆ. ಅಲ್ಲದೆ ಕಥೆಯ ಕ್ರಿಯೆಯೂ ಮುಂದುವರಿಯುತ್ತದೆ. ಈ ದೃಷ್ಟಿಯಿಂದ ‘ನನ್ನ ದೇವರು ಮತ್ತು ಇತರ ಕತೆಗಳನ್ನು’ ನೋಡಬಹುದೆಂದಿದ್ದಾರೆ, ಲೇಖಕರು. ಅಂತೆಯೇ ‘ಉಪಮೆ ರೂಪಕ ಚಮತ್ಕಾರರೋಕ್ತಿಗಳೂ ಬಳಕೆಯಾಗಿದ್ದು ಭಾಷೆಯ ಸೊಗಡನ್ನು ಒಡಿಮಕೊಟ್ಟಿವೆ’ ‘ಅಜ್ಜಯ್ಯನ ಅಭ್ಯಂಜನ’ ಕತೆಯ ‘ಬೆಂಕಿ’ ಶಬ್ದ ಲೇಖಕರಿಗೆ ‘ರಣಚಂಡಿಯ ಆ ಬೆಂಕಿಯ ಮಗಳು’ ಎನ್ನುವ ರೌದ್ರರಸದ ಸಾಲನ್ನು ನೆನಪಿಸಿದೆ.

ಕುವೆಂಪು ಕಾದಂಬರಿಗಳಲ್ಲಿ ಬರುವ ನೂರಾರು ಪಾತ್ರಚಿತ್ರಣಗಳಲ್ಲಿ ಒಂದರಂತೆ ಮತ್ತೊಂದಿಲ್ಲ. ‘ಕಾನೂರು ಸುಬ್ಬಮ್ಮ ಹೆಗ್ಗಡತಿ’ಯನ್ನು ಕುರಿತಂತೆ ಒಂದೊಂದರ ಚಿತ್ರಣಕ್ಕೂ ಬಳಸುವ ಭಾಷಾದ್ರವ್ಯ ಬೇರೆ ಬೇರೆಯಾಗಿದೆಯೆನ್ನುವ ಕಡೆ ಲೇಖಕರು ಓದುಗರ ಗಮನ ಸೆಳೆದಿರುವರು. (ಪು. ೨೫) ಕೆಳಕಾನೂರು ಅಣ್ಣಯ್ಯಗೌಡರ, ಕಿಲಿಸ್ತರ ಜಾತಿಯ ಸೀತೆಯ ವರ್ಣನೆಗಳನ್ನು ಉದಾಹರಿಸಿ ತಮ್ಮ ಮಾತನ್ನು ಸಮರ್ಥಿಸಿಕೊಂಡಿರುವರು. ಅದರಲ್ಲೂ ‘‘ಸಂಸಾರ ತಾಪತ್ರಯದಲ್ಲಿ ಬೆಂದು ಬಸವಳಿದಿದ್ದು ಲೋಕದ ಗೋಳೇ ಮೂರ್ತಿವೆತ್ತಂತಿದ್ದ ಅಣ್ಣಯ್ಯ ಗೌಡರ ಚಿತ್ರವನ್ನು ಕಾದಂಬರಿಕಾರರು ಬಣ್ಣ ಬಣ್ಣದ ಕುಂಚದಿಂದ ಬಿಡಿಸಿದಂತಿದೆ... ಪಾತ್ರ ಸನ್ನಿವೇಶ ಘಟನೆಗಳಿಗೆ ತಕ್ಕಂತೆ ವರ್ತಿಸುವ, ಹೊಂದಿಕೊಳ್ಳುವ ಸ್ವರೂಪ ಸ್ವಧರ್ಮ ಪರಾವರ್ತನ ಶಕ್ತಿ ಶಬ್ದಗಳಿಗಿರುವುದರಿಂದಲೇ ಇಂಥ ವ್ಯಕ್ತಿಚಿತ್ರಣ ಸಾಧ್ಯ’’ವೆನ್ನುವುದು ಲೇಖಕರ ದೃಢನಂಬಿಕೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೆಚ್ಚು ಕಡಿಮೆ ಪ್ರಾರಂಭದಿಂದ ಕೊನೆಯವರೆಗೆ ಕಥೆಯ ಹಾಸುಹೊಕ್ಕಾಗಿ, ಕತೆಯ ಓಟಕ್ಕೆ ಅನಿವಾರ್ಯ ಪ್ರೇರಕಶಕ್ತಿಯಾಗಿರುವ, ಜಗತ್ತಿನ ಸಾಹಿತ್ಯದಲ್ಲಿಯೇ ಅಪರೂಪವಾಗಿರುವ ಗುತ್ತಿಯನ್ನು ಕಂಡರಿಸಿದಂಥ ಕಾದಂಬರಿಕಾರರು ಗೊಮ್ಮಟಶಿಲ್ಪಿಯೇಸರಿ.’’ ಕಾದಂಬರಿಗಳ ಭಾಷೆ ಬೇರೆಜಾತಿ ವರ್ಗ ವೃತ್ತಿ ಲಿಂಗ ಮತ್ತು ವಯೋಗುಣಗಳಿಗನುಗುಣವಾಗಿ ‘‘ಭಾಷೆಯ ಏರಿಳಿತಗಳನ್ನು, ನಯ ಒರಟುಗಳನ್ನು, ಹರಿತಕೊರೆತಗಳನ್ನು, ಹಮ್ಮುಬಿಮ್ಮುಗಳನ್ನು, ಕೊಂಕು ಕೊಸರುಗಳನ್ನು

ಶ್ಲೀಲಾಶ್ಲೀಲಗಳನ್ನು, ಟಕ್ಕುಟೌಳಿಗಳನ್ನು, ಬುರುಗು ಬಿರುಸುಗಳನ್ನು ಒಟ್ಟಿನಲ್ಲಿ ಅದರ ಹಲವಾರು ಅವತಾರಗಳನ್ನು ಕಾಣಬಹುದು". ಎಂದು ಹೇಳಿರುವುದಲ್ಲದೆ (ಪು. ೨೯) ಈ ಎಲ್ಲ ವೈವಿಧ್ಯಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಈ ಎಲ್ಲ ಅಂತರಂಘ ಬಹಿರಂಗಗಳ ಅವಲೋಕನದಿಂದ ಕಾದಂಬರಿಗಳು ತಮ್ಮಲ್ಲಿ ಅಡಗಿಸಿಕೊಂಡಿರುವ ನಾನಾ ತೆರದ ಸಂಸ್ಕೃತಿಗಳ ಮೆರವಣಿಗೆಯನ್ನು ಕಂಡು ಲೇಖಕರು ಮೂಕವಿಸ್ಮಿತರಾಗಿರುವರು; ಕಾದಂಬರಿಕಾರರು ಭಾಷೆಯನ್ನು ದುಡಿಸಿಕೊಂಡಿರುವ ರೀತಿಯನ್ನು ಮೆಚ್ಚಿರುವರು.

ಕುವೆಂಪು ಗದ್ಯ ಶೈಲಿಯ ಕೃತಿಗಳ ಬಗ್ಗೆ ಪ್ರಸ್ತುತ ಲೇಖಕರ ಅಭಿಪ್ರಾಯವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ "ಮಲೆನಾಡಿನ ಗ್ರಾಮೀಣ ಜೀವನವನ್ನು ಇಷ್ಟೊಂದು ಸಮೃದ್ಧವಾಗಿ ಸಮಗ್ರವಾಗಿ ಹಿಡಿದಿಟ್ಟಿರುವ ಗ್ರಂಥಗಳು ವಿರಳ". "ಅಲ್ಲಿಯ ನಂಬಿಕೆ ನಡಾವಳಿಕೆಗಳು, ವಿಧಿ ಆಚರಣೆಗಳು, ವೃತ್ತಿ ಪದ್ಧತಿಗಳು ವೇಷಭೂಷಣಗಳೊಂದಿಗೆ ಅಲ್ಲಿಯ ಭಾಷೆಯನ್ನು ಅನಾಮತ್ತಾಗಿ, ಅದರ ವೈವಿಧ್ಯದೊಡನೆ ಸೆರೆಹಿಡಿದಿರುವ ಸಶಕ್ತಶೈಲಿ, ಕುವೆಂಪುರವರದು. ಅಲ್ಲಿ ಸಂಸ್ಕೃತದ ಶಿಷ್ಟರೂಪಗಳು ಗ್ರಾಮ್ಯರೂಪಗಳಾಗಿರುವತ್ತ (ಹೋಟೆಲ್ -ಓಟ್ಲು ಇತ್ಯಾದಿ) ಅವರ ನೂರಾರು ನುಡಿಕಟ್ಟುಗಳ, ಗಾದೆಗಳ, ಸುಭಾಷಿತಗಳ ('ಕುರುವಿನ ಮೇಲೆ ಬೊಕ್ಕೆಬರ, ' ಎಲೆಗೆ ಸುಣ್ಣಹಚ್ಚೋ ಒಳಗಾಗಿ' ಇತ್ಯಾದಿ) ಬಳಕೆಯತ್ತ, ಅವು ಗದ್ಯದಲ್ಲಿ ಸಂದರ್ಭೋಚಿತವಾಗಿ ಬಂದು ಗದ್ಯದ ಸೊಗಸು ಹೆಚ್ಚಿರುವತ್ತ ಅವುಗಳ ಇಂಗಿತಾರ್ಥ ಸಿದ್ಧಿಸಿರುವತ್ತ ನಮ್ಮ ಗಮನಸೆಳೆಯುತ್ತಾರೆ. ಕಾದಂಬರಿಗಳಲ್ಲಿ ಬಳಕೆಯಾಗಿರುವ ಅನೇಕ ಹೊಚ್ಚಹೊಸ ಉಪಮನೆಗಳನ್ನು ಹೆಕ್ಕಿ ತೋರಿಸಿದ್ದಾರೆ (ಪು. ೪೦), ಜೊತೆಗೆ ಮಹೋಪಮೆಗಳನ್ನು ಕನ್ನಡಕ್ಕೆ ಮೊದಲು ತಂದವರು ಕುವೆಂಪುರವರು ಎಂದು ತಿಳಿಸಲು ಮರೆತಿಲ್ಲ.

ಕುವೆಂಪು ಶೈಲಿಯ ಇನ್ನೊಂದು ಪ್ರಧಾನಗುಣ ವರ್ಣನೆಗಳು, ಅದರಲ್ಲೂ ಪ್ರಕೃತಿವರ್ಣನೆ. ಅವರು ವರ್ಣನೆಗೆ ತೊಡಗಿದರೆ 'ಅವರ ಲೇಖನಿಗೆ ಮೈದುಂಬಿದಂತಾಗುತ್ತದೆ'. ಅಂತೆಯೇ ಕಾದಂಬರಿಗಳಲ್ಲಿ ಬರುವ ಮನೆ, ಕಾಡು, ಬೇಟೆ, ಹಬ್ಬಹುಣ್ಣಿಮೆ, ಕಳ್ಳಂಗಡಿ, ರೂಢಿ ಸಂಪ್ರದಾಯಗಳ ವರ್ಣನೆಗಳನ್ನು ಸ್ವತಃ ಓದಿಯೇ ತಣಿಯಬೇಕು. ಲೇಕಕರು ಪಿತ ಧರ್ಮವಿಗೆ ತಾನು ಹುಲಿ ಬೇಟೆಗೆ ಕುಳಿತ್ತಿದ್ದ ಪರಿಯನ್ನು ರಸವತ್ತಾಗಿ ಬಣ್ಣಿಸಿದ ಸಂದರ್ಭವನ್ನು ಪರಿಚಯಿಸಿದ್ದಾರೆ (ಪು ೪೨) ಮತ್ತು ಕಾನೂರು ಚಂದ್ರಯ್ಯಗೌಡರ ದೊಡ್ಡ ಹೆಂಚಿನ ಮನೆಯ ಮುಂಚೆಕಡೆಯ ಸೂಕ್ಷ್ಮಾತಿಸೂಕ್ಷ್ಮ ವರ್ಣನೆಯನ್ನು ಉದಾಹರಿಸಿ ತೋರಿಸಿರುವರು.

ಕುವೆಂಪುರವರ ವಿಮರ್ಶಾಗದ್ಯದ ಬಗ್ಗೆ ಹೇಳುತ್ತಾ ಲೇಖಕರು ಅಲ್ಲಿ ಸಂಸ್ಕೃತದ ಬಳಕೆ ಸ್ವಲ್ಪ ಹೆಚ್ಚು ಎಂಬುದನ್ನು ಗುರುತಿಸಿಹೇಳಿದ್ದಾರೆ, 'ಸಂದರ್ಭಕ್ಕೆ ತಿರುವುಕೊಡಲು, ಭಾವತೀವ್ರತೆಯನ್ನು ಸೂಚಿಸಲು, ಭಾಷೆಯ ಏಕತಾನತೆಯನ್ನು ಮುರಿಯಲು' ಸಂಸ್ಕೃತವನ್ನಾಶ್ರಯಿಸುವರೆಂದು ಹೇಳಿ ದೋಷವಾಗಬಹುದಿದ್ದ ಆ ಅಂಶವನ್ನು ಗುಣವಾಗಿ ಸಮರ್ಥಿಸಿದ್ದಾರೆ. ಪ್ರಕೃತಿಯ 'ದಿವ್ಯಭವ್ಯ ಸೌಂದರ್ಯವನ್ನೂ'

'ರುದ್ರರಮಣೀಯತೆ'ಯನ್ನೂ ವರ್ಣಿಸುವಲ್ಲಿ ಕುವೆಂಪುರವರ ಶೈಲಿ ಸಂಸ್ಕೃತಭೂಯಿಷ್ಠವಾಗುತ್ತದೆಂಬ ಮಾತು ಉತ್ತಮ ಗ್ರಹಿಕೆ. ಕುವೆಂಪುರವರ ಪ್ರಕೃತಿ ವರ್ಣನೆಯ ಶೈಲಿ "ಸಹಜ ರುಂದ್ರ ಮಂದ್ರ ಅಕುಟಿಲ ನಾದಮಯ ಭದ್ರ ಮನೋಹರ ಶೈಲಿಯ ಸ್ವರೂಪ"ವಾಗಿ ಕಂಡಿದೆ, ಲೇಖಕರಿಗೆ. 'ದ್ರೌಪದಿಯ ಶ್ರೀಮುಡಿ', 'ತಪೋನಂದನ'ಗಳನ್ನು ಕುರಿತು "ಸ್ಪಷ್ಟತೆ ಸುಭಗತೆ ಹದ ಬನಿ ಸಮರ್ಪಕತೆ ಇಲ್ಲಿಯ ವಿಮರ್ಶಾ ಭಾಷೆಯ ಲಕ್ಷಣಗಳು" ಎಂದು ಗುರುತಿಸಿ ಹೇಳಿರುವುದಲ್ಲದೆ "ಪಕ್ವಾನುಭವದ, ಆತ್ಮವಿಶ್ವಾಸದ, ದಾರ್ಶನಿಕ ದೃಷ್ಟಿಯ ಶುದ್ಧಬುದ್ಧಿಯ ಪರಿಣಾಮವಾಗಿ ಲಬ್ಧವಾದ ದಿಟ್ಟತನ ಲವಲವಿಕೆಯ ನಿರೂಪಣೆ ಸರ್ವತ್ರ ತಾಂಡವವಾಡುತ್ತಿದೆ" ಎಂದು ಅಭಿಪ್ರಾಯ ಪಡುವರು." 'ಕಲಾ ಸುಂದರಿ'ಯ ಮುನ್ನುಡಿ ಶ್ರೇಷ್ಠ ಮೀಮಾಂಸಾ ಪ್ರಬಂಧವಾಗಿದೆ. ಕುವೆಂಪು ಅವರ ಸಾಹಿತ್ಯವೆಲ್ಲಿ ಅಲ್ಲಿನ ಮಹತ್ವ ವಿಚಾರಗಳ ವಿಸ್ತರಣೆ, ಬೆಳವಣಿಗೆ ಮತ್ತು ಸಾಕ್ಷಾತ್ಕಾರವೆನ್ನಬಹುದು' ಎನ್ನುವ ವಿಮರ್ಶಕರ ಮಾತಿಗೆ "ಭಾರತೀಯ ಕಾವ್ಯಮೀಮಾಂಸೆಗೆಕುವೆಂಪು ಕೊಟ್ಟಿರುವಷ್ಟು ಹೊಸ ವಿಚಾರಗಳು - ಭೂಮಾನುಭೂತಿ, ಮಹೋಪಮೆ, ಭವ್ಯತೆ, ಪ್ರತಿಮಾವಿಧಾನ ಇತ್ಯಾದಿ- ಬೇರೆ ವಿಮರ್ಶಕರಿಂದ ಬಂದಿಲ್ಲ" ಎಂಬ ಅಭಿಪ್ರಾಯಕ್ಕೆ ಲೇಖಕರು ತಾವೂ ದನಿಗೂಡಿಸಿದ್ದಾರೆ (ಪು. ೬೧). ಕುವೆಂಪು ಕೃತಿಗಳ ಬಗ್ಗೆ ಇಷ್ಟೆಲ್ಲ ಭಕ್ತಿ,ಮೆಚ್ಚುಗೆಗಳಿದ್ದಾಗ್ಯೂ "ಮಹೋಪಮೆಯಾಗಲಿ ಪ್ರತಿಮಾ ವಿಧಾನವಾಗಲಿ ಭೂಮಾನುಭೂತಿಯಾಗಲಿ ಭವ್ಯತೆಯಾಗಲಿ ಪ್ರಪಂಚಕ್ಕೆ ಹೊಸವಲ್ಲ; ಅವುಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ, ಸ್ವತಂತ್ರವಾಗಿ ಆಲೋಚಿಸಿ, ಅವು ಕನ್ನಡದಲ್ಲಿ ನೂತನಾವತಾರವೆತ್ತಿದವೇನೋ ಎನ್ನುವಂತೆ ವ್ಯಾಖ್ಯಾನಿಸಿದ ಯಶಸ್ಸು ಅವರಿಗೆ ಸಲ್ಲುತ್ತದೆ. ವಿನೂತನ ಸ್ವತಂತ್ರ ವ್ಯಾಖ್ಯಾನಗಳ ಮೂಲಕ ಆ ಪರಿಕಲ್ಪನೆಗಳನ್ನು, ಆ ಸಿದ್ಧಾಂತಗಳನ್ನು ವಿಜ್ಞಾನದ ತಳಹದಿಯ ಮೇಲೆ ಪ್ರತಿಷ್ಠಾಪಿಸಿದ್ದಾರೆನ್ನಬಹುದು" ಎಂಬ ಅಭಿಪ್ರಾಯ ಲೇಖಕರ ಆರೋಗ್ಯಕರ ಮನಸ್ಸು, ಸಮತೋಲನ ದೃಷ್ಟಿಗಳಿಗೆ ದೃಷ್ಟಾಂತವಾಗಿದೆ. ಕುವೆಂಪುರವರ ಪೂರ್ಣ ದೃಷ್ಟಿ -ಸಾಹಿತ್ಯ ಹಾಗೂ ಜೀವನಗಳಲ್ಲಿ -ಯ ಒಲವನ್ನು ಅವರ ಪ್ರಾರಂಭದ 'ಸಾಹಿತ್ಯಪ್ರಚಾರ'ದ ಪ್ರಬಂಧಗಳಲ್ಲೇ ಗುರುತಿಸಿದ್ದಾರೆ. ಮತ್ತು ಕನ್ನಡದಲ್ಲಿ ಸಾಮಾಜಿಕ ಕಳಕಳಿಯ ವಿಚಾರ ಸಾಹಿತ್ಯವೇ ಅಪರೂಪವಾಗಿದ್ದ ದಿನಗಳಲ್ಲಿ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಲ್ಲದೆ 'ನಿಂತಲ್ಲಿ ಕುಳಿತಲ್ಲಿ ಬಂದವರೊಡನೆ, ಸಭೆ ಸಮಾರಂಭಗಳಲ್ಲಿ, ಮಾತುಕತೆಗಳಲ್ಲಿ, ಭಾಷಣಗಳಲ್ಲಿ ಪಾದ್ರಿಯ ಆವೇಶದಿಂದ, ಪ್ರಾಮಾಣಿಕತೆಯಿಂದ, ಛಲದಿಂದ ಶ್ರದ್ಧಾಯುಕ್ತವಾದ ನೈಷ್ಠುರ್ಯದಿಂದ, ವೀರ್ಯವತ್ತಾಗಿ, ಸದೃಢವಾಗಿ, ಸಾತ್ವಿಕಕ್ರೋಧದಿಂದ ಆ ಸಮಸ್ಯೆಗಳನ್ನು ಕುರಿತುವಾದಿಸಿದ, ತಾವು ಹೇಳಿದ್ದನ್ನು ಜೀವನದಲ್ಲಿ ನಡೆಸಿದ್ದ ಸಾಹಿತಿ ಕುವೆಂಪುವೊಬ್ಬರೇ (ಇತ್ತೀಚಿನ ಕೆಲವು ದಲಿತ ಬಂಡಾಯ ಸಾಹಿತಿಗಳನ್ನು ಬಿಟ್ಟರೆ)"ಎಂದು ದನಿಯೆತ್ತಿ ಸಾರಿರುವರು. (ಪು. ೬೬).

ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಭಾಷಣ -'ವಿಚಾರಕ್ರಾಂತಿಗೆ ಆಹ್ವಾನ'ದಲ್ಲಿ ಕುವೆಂಪು ಅವರ ಸಾಮಾಜಿಕ ಪ್ರಜ್ಞೆ ಸಾತ್ವಿಕ ಕ್ರೋಧ, ಬುದ್ಧಿಭಾವ ಭಾಷೆಗಳ ವಿದ್ಯುತ್ ಸಂಗಮ ಹಾಗೂ ವಾಗ್ವೈಭವ ಪರಮಾವಧಿಯನ್ನು ಮುಟ್ಟಿವೆಯೆಂದೇ

ಹೇಳಬೇಕು.. .. . ಒಂದೊಂದು ವಾಕ್ಯವೂ ಕಲಾವಿದ ಕಟ್ಟಿದ. . . . ಹೂಮಾಲೆಯಲ್ಲಿ, ರಾಷ್ಟ್ರಪ್ರೇಮಿ ವೀರಯೋಧ ತಯಾರಿಸಿದ ಗುಡುಗು ಸಿಡುಲುಗಳ ಸರಮಾಲೆಯಂತಿವೆ" (ಪು. ೬೮) ಇದು ಲೇಖಕರು ಕುವೆಂಪು ಶೈಲಿಯನ್ನು ಗ್ರಹಿಸಿರುವ ರೀತಿ. ಭಾಷಣ, ಲೇಖನ, ಮುನ್ನುಡಿಗಳನ್ನುಳ್ಳ 'ಷಷ್ಟಿನಮನ' 'ಸಂಸ್ಕೃತಿ ಕರ್ಣಾಟಕ'ಗಳಲ್ಲಿ "ಬೊಜ್ಜೂ ಇಲ್ಲದ ಕೃಶವೂ ಅಲ್ಲದ ಮಾಂಸಲ ಸುಪುಷ್ಟ ಅಂಗಾಂಗಗಳುಳ್ಳ, ನಾಗರಿಕಾಭಿರುಚಿಯ, ವಿದ್ವತ್ಸಮ್ಮತವಾದ, ಅನಲಂಕೃತವಾದರೂ ಆಕರ್ಷಕವಾದ, ಲಾಘವಕ್ಕೆಡೆಯಿರದ ಶೈಲಿ"ಯನ್ನು ಗುರುತಿಸಿರುವರು. 'ಶ್ರೀ ನೆಹರೂ' ವ್ಯಕ್ತಿಚಿತ್ರದ ಸುಟಿಯಾದ ಗರಿಗರಿಯಾದ ಸುಗ್ನಿಗಗ್ಗ, ಉಲ್ಲಾಸಕರವಾದ, ಕ್ಲಿಷ್ಟತೆಗೆಡೆಯಿಲ್ಲದ ಭಾಷೆ-ಶೈಲಿಗಳು; 'ಕಿಂಕಿಣಿ'ಯ 'ಅರ್ಥಮುಕ್ತ' ಭಾವದೀಪ್ತ ಧ್ವನಿಪ್ರಚುರ' ಶೈಲಿ ಲೇಖಕರಿಗೆ ಮೆಚ್ಚುಗೆ. ಒಟ್ಟಿನಲ್ಲಿ ಕುವೆಂಪು ಗದ್ಯಶೈಲಿಯನ್ನು ಲೇಖಕರು ಹೀಗೆ ಹಿಡಿದಿಟ್ಟಿರುವರು: "ದರ್ಪಕ್ಕೆ ಮಣಿಯದ, ಅಧಿಕಾರಕ್ಕೆ ಜಗ್ಗದ, ಸತ್ಯದ ಸತ್ಪಥದಲ್ಲಿ ಮಾತ್ರ ತಲೆಯೆತ್ತಿ ನಡೆಯುವ ಕೆಚ್ಚು ನೆಚ್ಚು ಚಲಗಳು ಕುವೆಂಪು ಲೇಖನಿಯಲ್ಲಿ ಧಾರಾಕಾರವಾಗಿ ಹರಿಯುತ್ತದೆ. ಪದಪದಗಳಲ್ಲಿ, ವಾಕ್ಯವಾಕ್ಯಗಳಲ್ಲಿ ಡಿಂಡಿಮ ನಿನಾದ, ಗಾಂಡೀವಧ್ವನಿ, ಪಾಂಚಜನ್ಯದ ಮೊಳಗು ಅನುರಣಿಸುತ್ತದೆ. ಪ್ರಲಯ ರುದ್ರನ ಡಮರುಗದ ಎಚ್ಚರಿಕೆಯ ಧ್ವನಿ ಮಾರ್ಮೊಳಗುತ್ತದೆ; ಸುದರ್ಶನದ ಮಿಂಚು ಥಳಥಳಿಸುತ್ತದೆ." ಕುವೆಂಪು ಗದ್ಯಸಾಹಿತ್ಯದಲ್ಲಿ ಕಣ್ಣಾಡಿಸಿದವರು ಯಾರೇ ಆಗಲಿ ಈ ಮಾತುಗಳನ್ನು ಕೇಳಿ 'ಹೌದು, ಹೌದು' ಎನ್ನದೆ ವಿಧಿಯಿಲ್ಲ!

ಕುವೆಂಪುರವರ ಒಟ್ಟು ಹದಿನಾಲ್ಕು ನಾಟಕಗಳಲ್ಲಿ ಎರಡು ಮಕ್ಕಳ ನಾಟಕಗಳು. ಆ ಪೈಕಿ 'ನನ್ನ ಗೋಪಾಲ' ಒಂದೇ ಗದ್ಯನಾಟಕ. ಅದರಲ್ಲೂ ಮೂರು ಹಾಡುಗಳಿವೆ. 'ಚಿಕ್ಕ ಚಿಕ್ಕ ದೃಶ್ಯಗಳು, ಪುಟ್ಟ ಪುಟ್ಟ ವಾಕ್ಯಗಳು; ಅಪ್ಪಟ ಕನ್ನಡಮಾತುಗಳು' ಅವುಗಳ ಪ್ರಮುಖ ಲಕ್ಷಣ ಕುವೆಂಪುರವರ ಪ್ರಾರಂಭದ ನಾಟಕಗಳ ಶೈಲಿಯನ್ನು ಕುರಿತು ಲೇಖಕರ 'ಲಯಸೌಂದರ್ಯ, ಸಂವಾದದ ಮುಕ್ತಾಯ, ಸರಳರಗಳೆಯ ನಿರಂರತೆ'ಗಳನ್ನು ಗುರುತಿಸಿ ಹೇಳಿದ್ದಾರೆ. 'ಯಮನಸೋಲು' ನಾಟಕವನ್ನು ಉದಾಹರಿಸಿ, ಅಲ್ಲಿಯ ಐದು ಮಾತ್ರೆಗಳ ನಾಲ್ಕುಗಣಗಳ ಪಂಕ್ತಿಯನ್ನು ತೋರಿಸಿ 'ಈ ವಿನ್ಯಾಸ ನಾಟ್ಯಛಂದಸ್ಸಿನ ಪ್ರಮುಖ ಲಕ್ಷಣ'ವೆಂದು ಹೇಳಿರುವರು. ಅದರೊಂದಿಗೆ ಭಾವಕ್ಕೆ ತಕ್ಕ ಗಣವಿನ್ಯಾಸ ರೂಪುಗೊಂಡು ಛಂದೋವೈವಿಧ್ಯಸಾಧಿತವಾಗಿರುವುದನ್ನು ಲೇಖಕರು ತೋರಿಸಿಕೊಟ್ಟಿರುವರು. ಈ ನಾಟಕಗಳ ಛಂದೋಬದ್ಧರಚನೆ ಪ್ರಾಚೀನತೆಯ ಕಲ್ಪನೆಯನ್ನು ಮೂಡಿಸಲು ಸಹಕಾರಿಯೆಂಬ ಲೇಖಕರ ಗ್ರಹಿಕೆ ಸಾಧುವಾದುದು. ವರ್ಗಗಳೇ ಪಾತ್ರಗಳಾಗಿರುವ ತಂತ್ರ 'ಜಲಗಾರ' ನಾಟಕದ್ದು ಎಂದು ವಿಶ್ಲೇಷಿಸಿ ಆದ್ದರಿಂದ ಅದೊಂದು ಸಾಂಕೇತಿಕ ಸಾಮಾಜಿಕ ನಾಟಕ'ವೆಂದು ವಿಮರ್ಶಿಸಿರುವರು.

ಲೇಖಕರು ಗಮನಿಸಿರುವಂತೆ ವಿಧಿವಿಡಂಬನೆ ಕುವೆಂಪು ನಾಟಕಗಳ ಪ್ರಧಾನಗುಣ. 'ವಾಲ್ಮೀಕಿಯ ಭಾಗ್ಯ' ನಾಟಕದ ಶಿಲ್ಪವನ್ನು ಕುರಿತು: "ಈ ನಾಟಕದ ಭಾಷಾಶಿಲ್ಪ ಅದ್ಭುತವಾದದ್ದು. ಒಂದು ಮಾತು ಹೆಚ್ಚಿಲ್ಲ, ಒಂದು ಮಾತು ಕಡಿಮೆಯಿಲ್ಲ. ಪ್ರತಿಯೊಂದು ಮಾತ್ನು ಎಚ್ಚರಿಕೆಯಿಂದ ಬಳಸಿದಂತಿದೆ. ಬೇಲೂರಿನ ಶಿಲಾಬಾಲಿಕೆಯರ ಅಂಗಾಂಗ

ಸಾಮರಸ್ಯ ಇಲ್ಲಿಯ ಛಾಷಾಛಂದಸ್ಸುಗಳ ಪ್ರಯೋಗದಲ್ಲಿ ಎದ್ದು ಕಾಣುತ್ತದೆ. ಅವೆರಡರಲ್ಲಿಯೂ ಪರಸ್ಪರ ಹೊಂದಾಣಿಕೆಯಿದೆ. ಕಟಕಿ ಹಾಸ್ಯ ಕನಿಕರ ಮರುಕ ರೋಷ ಸಂಕಟಗಳೇ ಭಾಷೆಯ ರೂಪದಲ್ಲಿ ಮೈದೋರಿದಂತೆ ಹೊಳೆಯುತ್ತದೆ." ಇಲ್ಲಿ ಮೂಲ ನಾಟಕ ಹಾಗೂ ಈ ವಿಮರ್ಶೆಗಳು ಒಂದನ್ನೊಂದು ಮೀರಿಸುವಂತಿರುವುದು ಗಮನಾರ್ಹ. ಕಾವ್ಯಮಯ ಭಾಷೆ 'ಬಲಿದಾನ' ನಾಟಕದ ಪ್ರಧಾನ ಗುಣವೆಂಬುದನ್ನು 'ಚಂದ್ರಹಾಸ' ನಾಟಕದ ಶೈಲಿಯನ್ನು ಹೇಳುವಾಗ ಅದರ ಗದ್ಯಪದ್ಯಗಳ ಮಿಶ್ರ ಬಂಧವನ್ನೂ ಗುರುತಿಸಿ ಹೇಳಿರುವರು. ನಾಟಕಗಳ ಗುಣಗಳನ್ನು ಗ್ರಹಿಸಿ ಇಷ್ಟೆಲ್ಲ ಮೆಚ್ಚಿನುಡಿದರೂ ಲೇಖಕರು ಅವುಗಳ ಮಿತಿಗಳನ್ನ ಕುರಿತು ಹೇಳಿರುವರು. ಪಾತ್ರಪ್ರಧಾನವಾದ ಸಾಮಾಜಿಕ ನಾಟಕ 'ಜಲಗಾರ'ದಲ್ಲಿ ವಿಭಿನ್ನ ಸಂಸ್ಕಾರಾಭಿರುಚಿಗಳ ಪಾತ್ರಗಳು ಬಂದರೂ "ಎಲ್ಲರೂ ಬಳಸುವ ಭಾಷೆ ಒಂದೇ ಸರಳಸುಲಭ ಕನ್ನಡ. ಸಹಜವಾಗಿ ಕೆಲವರು ಬಾಯಲ್ಲಿ ಆಡುಭಾಷೆ ಮೆಕೆಯಬಹುದಿತ್ತು. ಹುಡುಕಿ ನೋಢಿದರೂ ಸಿಗುವುದಿಲ್ಲ. ಜತೆಗೆ ಅಪರೂಪವಾಗಿಯಾದರೂ ಹೊಸಗನ್ನಡದಲ್ಲಿಲ್ಲದ ಐಕಿಲ್, ಪಳವಾತು, ಪುಗಲಿಂ ಚರದಿ, ಪಿಂಗೆ, ಬಿಜ್ಜೆವಳ, ಮೊದಲಾದ ಪದಗಳನ್ನಿಲ್ಲಿ ಬಳಸಲಗಿದೆ. ಶಿಷ್ಟ ಭಾಷೆಯ ಪ್ರಯೋಗವನ್ನು ಮರೆತರೂ, ಜಲಗಾರನ ಬಾಯಲ್ಲಿ ಬರುವ 'ಕರ್ಮವಾರಾಧನೆ, ಸೇವೆಯೇ ಪೂಜೆ.' 'ನಿನ್ನ ನೇಗಿಲಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?' 'ಲೋಕನಗಬೇಕಾದರಾರಾದರಳಬೇಕು'. . . . . ಇವೇ ಮೊದಲಾದವುಗಳ ಔಚಿತ್ಯ ಪ್ರಶ್ನಾರ್ಹವಾಗುತ್ತದೆ" ಎಂದಿದ್ದಾರೆ. ಅಂತೆಯೇ ಚಂದ್ರಹಾಸ ನಾಟಕದ ಗದ್ಯಪದ್ಯಗಳ ಮಿಶ್ರಬಂಧವನ್ನು ಹೇಳುತ್ತಾ 'ಓಂದಿನಿಂದೆಳೆದ ಹಾಂಗಾಗುತ್ತಿತ್ತು', 'ನನಗೆಂದೂ ಓಂಗಾಗಿರಲಿಲ್ಲ' ಇತ್ಯಾದಿ ಮಾತುಗಳನ್ನು ಉದಾಹರಿಸಿ 'ಇವು ಪದ್ಯದ ಸಾಲುಗಳಂತಿದ್ದರೂ ಗದ್ಯತನವೇ ಇಲ್ಲಿ ಅಬ್ಬರಿಸುತ್ತದೆ' ಎಂದು ಹೇಳುವಲ್ಲಿ ಲೇಖಕರ ವಿಮರ್ಶಾಪ್ರಜ್ಞೆ ಜಾಗ್ರತವಾಗಿರುವುದನ್ನು ಕಾಣುತ್ತೇವೆ. "ಬಿ. ಎಂ. ಶ್ರೀಯವರು ಗದಾಯುದ್ಧ ಅಥವಾ ಸಾಹಸಭೀಮ ವಿಜಯದ ಗರ್ಭದಲ್ಲೊಂದು ನಾಟಕವನ್ನು ಗುರುತಿಸಿದಂತೆ, ಜೈಮಿನಿ ಭಾರತದ ಬಸಿರಿನಲ್ಲಿ ಮಲಗಿದ್ದ ನಾಟಕವನ್ನು ಎಚ್ಚರಿಸಿದ ಶ್ರೇಯಸ್ಸಿ ಕುವೆಂಪು ಅವರಿಗೆ ಸಲ್ಲಬೇಕು" ಎನ್ನುವ ಲೇಖಕರ ಅಭಿಪ್ರಾಯ ಓದುಗರಿಗೂ ಒಪ್ಪಿತವೇ, 'ರಕ್ತಾಕ್ಷಿ' ನಾಟಕದ ವಿವಿಧ ಛಂದೋಲಯಗಳು 'ನಾಟ್ಯಛಂದಸ್ಸು' ಎಂದು ಕರೆಸಿಕೊಂಡಿದೆ. 'ಟೆಂಪೆಸ್ಟ್' ನಾಟಕದಲ್ಲಿನ ಜೀವನ ದರ್ಶನ ಭಾರತೀಯ ಜೀವನದರ್ಶನದಿಂದ ಅಭಿನ್ನವಾಗಿ ಕಂಡಿರುವುದರಿಂದ ಅಲ್ಲಿಯ ಪಾತ್ರ ಸನ್ನಿವೇಶಗಳಲ್ಲಿ ಭಾರತೀಯತೆಯೇ ಮೈದುಂಬಿದೆ; 'ಬಿರುಗಾಳಿ' ಟೆಂಪೆಸ್ಟ್ ಕೃತಿಯ ಕೇವಲ ಅನುವಾದವಲ್ಲ; ಅದರ ಪುನರಾವತಾರವೆಂಬುದನ್ನು ಸೋದಾಹರಣವಾಗಿ ನಿರೂಪಿಸಲಾಗಿದೆ. ಅಂತೆಯೇ 'ರಕ್ತಾಕ್ಷಿ' ಎಂಬ ಹೆಸರೇ ಸಾಕು ಎಂದು ಲೇಖಕರ ಅಭಿಪ್ರಾಯ ಸಹೃದಯ ಸಮ್ಮತವಾದುದು; ಕುವೆಂಪುರವರ ಅನುವಾದ ನಾಟಕಗಳನ್ನು ಕುರಿತಂತೆ "ಕುವೆಂಪುರವರದು ಪದಶಃ ಭಾಷಾಂತರವಲ್ಲಿ, ಮೂಲಕೃತಿ ಅವರಿಗೊಂದು ನೆಪ ವೃಕ್ಷಕ್ಕೆ ಬೀಜವಿದ್ದ ಹಾಗೆ ಆ ಬೀಜ ಕುವೆಂಪು ಪ್ರತಿಭಾಕೋಶಲ್ಲಿ ಬಿದ್ದದ್ದೇ ತಡ. ತನ್ನನ್ನೇ

ಮನೆಸಿಬಿಡುವಂತೆ ಪಟಿಷ್ಪಕ್ಷವಾಗಿ ಬೆಳೆಯುತ್ತದೆ" ಎಂದು ಲೇಖಕರು ವಸ್ತುಸ್ಥಿತಿಯನ್ನು ಆಲಂಕಾರಿಕವಾಗಿ ನಮ್ಮ ಮುಂದಿಟ್ಟಿರುವರು.

ಶ್ಮಶಾನ ಕುರುಕ್ಷೇತ್ರ, ಶೂದ್ರತಪಸ್ವಿ ಮತ್ತು ಬೆರಳ್‌ಗೆ ಕೊರಳ್ ನಾಟಕಗಳನ್ನು ಲೇಖಕರು ಕುವೆಂಪುರವರ ಅನನ್ಯ ಅಸಾಧಾರಣ ಪ್ರತಿಭೆಯ ಪ್ರತೀಕಗಳೆಂದು ಗುರುತಿಸುವರು. ಅವರಲ್ಲೂ ಶ್ಮಶಾನ ಕುರುಕ್ಷೇತ್ರ 'ಮಹಾಭಾರತದ ಭವ್ಯದರ್ಶನವನ್ನು ಅಂಗೈಯ ಕಿರುಗನ್ನಡಿಯಲ್ಲಿ ತೋರಿಸುವ ಸಾಹಸದ ಫಲ.' 'ಪ್ರೌಢ ಹಳಗನ್ನಡ ಮಿಶ್ರಿತ ಗದ್ಯಪದ್ಯ ಸಮ್ಮಿಶ್ರಶೈಲಿ', 'ಓಜೋಸ್ವಿತಭಾಷೆ'- ಅದರ ವೈಶಿಷ್ಟ್ಯ. ನಾಟಕದ ಭಾವ ರಸ ಭಾಷೆಗಳು ಸಾಂದ್ರವಾಗಿದ್ದು, ಒಂದರೋಡನೊಂದು ಪೈಪೋಟಿ ನಡೆಸಿವೆ. ಹರಿತ ಸಂಭಾಷಣೆಗಳು, ಮೈ ನಡುಗಿಸುವ ರೋಷಭಾಷಣ ಕರುಣಾಕ್ರಂದನಗಳು ಇಲ್ಲಿ ತುಂಬಿಕೊಂಡಿವೆ. 'ನಾಟ್ಯ ವೃಂದನ್ಯಾಸ ವಿವಿಧ ಭಂಗಿ ಭಣಿತೆಗಳ ರುದ್ರ ಲೀಲಾಲಾಸ್ಯ" ಇಲ್ಲಿ ಕಾಣಬಹುದು ಇತ್ಯಾದಿ ಮಾತುಗಳು ಅತಿಶಯೋಕ್ತಿಗಳಲ್ಲ. ನಾಟಕದ ಕೊನೆಯಲ್ಲಿ ಅಶ್ವತ್ಥಾಮ ಹೇಳುವ "ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ" ಎಂಬ ಒಂದೇ ಒಂದು ವಾಕ್ಯ ಇಡೀ ಭಾರತದ ದೃಶ್ಯವನ್ನು ಕಣ್ಮುಂದೆ ತಂದು ನಿಲ್ಲಿಸುವ ಪ್ರತಿಮಾಸಂಕೇತವಾಗಿದೆ, ದರ್ಶನಧ್ವನಿಯಾಗಿದೆ " ಎಂದು ಲೇಖಕರು ಗುರುತಿಸಿರುವುದೂ, "ಈ ನಾಟಕದ ಗದ್ಯವೂ ಮಿಂಚಾಗಿ, ಸಿಡಿಲಾಗಿ, ಉಲ್ಕೆಯಾಗಿ ಕಣ್ಣೀರಾಗಿ ಹರಿಯುತ್ತದೆ' ಎಂದು ಹೇಳಿರುವುದೂ ಕೇವಲ ಅನುಭವಗಮ್ಯ ವಿಚಾರಗಳು. ಹೌದು, "ಅಳುವರನ್ ಸಂತವಿಡೆ ಅಳಲುಕ್ಕಿ ಪರಿವವುದು' ಇತ್ಯಾದಿ ಸೂತ್ರಪ್ರಾಯದ ಸುಭಾಷಿತ ಸದೃಶ್ಯವಾಕ್ಯಗಳ ಗಣಿ ಶ್ಮಶಾನ ಕುರುಕ್ಷೇತ್ರ.

'ಶೂದ್ರ ತಪಸ್ವಿ' ಮೌಲ್ಯಪ್ರಧಾನ ನಾಟಕ. " ಸಂಭಾಷಣೆಯಲ್ಲಿ ಬರುವ ಒಂದೊಂದು ವಾಕ್ಯವೂ ಭಾವಾಲೋಚನೆಗಳ ಹರಳುಗಳನ್ನೂ ಮುತ್ತುಗಳನ್ನು ಪೋಣಿಸಿದಂತಿದೆ. ಶೈಥಿಲ್ಯಕ್ಕಾಗಲಿ, ಶಬ್ದಾಡಂಬರಕ್ಕಾಗಲಿ ವ್ಯರ್ಥಪದಪ್ರಯೋಗಕ್ಕಾಗಲಿ ಇಲ್ಲಿ ಜಾಗವಿಲ್ಲ. ಅಸ್ತ್ರವಿದ್ಯಾ ಗುರುವಿನ ಬಾಣದಂತೆ ಒಂದೊಂದು ಮಾತೂ ಗುರಿಯನ್ನು ಸೇರುತ್ತದೆ". ಇದು ಅದರ ಶೈಲಿಯ ಸ್ವರೂಪ.

' ಬೆರಳ್‌ಗೆ ಕೊರಳ್' ಏಕಲವ್ಯನ ಜೀವನವನ್ನು ಕುರಿತ ದಾರ್ಶನಿಕನಾಟಕ. ಇಲ್ಲಿಯ ಸರಳ ಸುಂದರ ಮಾತುಗಳು. "ಸಾಲಿನಿಂದ ಸಾಲಿಗೆ ಕುತೂಹಲ ಹುಟ್ಟಿಸುವ, ಮೈ ನವಿರೇಳಿಸುವಸಂವಾದಕೌಶಲ, ಆ ಕೌಶಲವನ್ನು ಬೆಳಗುವ, ಸೊರಯಿಸುವ ಛಂದಸ್ಸು- ಒಂದಕ್ಕೊಂದು ಒಂದು ಮಿಗಿಲೆನ್ನುವಂತೆ ಸೃಷ್ಟಿಗೊಂಡಿದೆ. ಪುರಾಣ ಪಾತ್ರಗಳನ್ನು ಆಧುನಿಕ ವೈಜ್ಞಾನಿಕ ದೃಷ್ಟಿಗೊಪ್ಪುವಂತೆ ಸೃಷ್ಟಿಸುವುದು ಕುವೆಂಪುರವರ ನಾಟಕದ ಉದ್ದೇಶಗಳಲ್ಲೊಂದು. "ಇಂಥ ಕಡೆಗಳಲ್ಲೆಲ್ಲ ಸೃಷ್ಟಿಯ ಮೂಲಮಂತ್ರಗಳಾದ ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಗಳು ನಾಟಕಕಾರರ ದಾರಿದೀಪಗಳಾಗುತ್ತವೆ".

ಹಳಗನ್ನಡ ಮತ್ತು ಹೊಸಗನ್ನಡಗಳ ಸಮ್ಮಿಶ್ರ ಶೈಲಿ, ಮುಕ್ತ ಛಂದೋವಿಧಾನದ

ನಾಟ್ಯಛಂದಸ್ಸು. ಅಂದರೆ 'ಮಿಶ್ರಭಾಷೆ' ಮತ್ತು 'ಸಮ್ಮಿಶ್ರ ಛಂದಸ್ಸು' ಕುವೆಂಪು 'ಪ್ರೌಢಶೈಲಿ'ಯಾಗಿದ್ದು, 'ನಾಟಕಲೋಕದಲ್ಲೊಂದು ಮಹಾವಿಕ್ರಮವನ್ನು ಸಾಧಿಸುತ್ತದೆ' ಎಂಬುದು ಲೇಖಕರ ಒಟ್ಟಾರೆ ಅಭಿಪ್ರಾಯ. ಸರಳರಗಳೆಯೇ ಈ ನಾಟ್ಯಛಂದಸ್ಸಾಗಿ ದ್ವಿರೂಪಧಾರಣೆ ಮಾಡಿ ಅವತರಿಸಿದೆಯೆಂಬುದು ಅವರ ಗ್ರಹಿಕೆ. ಎಲ್ಲಕ್ಕಿಂತ ಮುಖ್ಯವಾಗಿ "ಕಾವ್ಯಕ್ಕೆ ಮಹಾಛಂದಸ್ಸಾಗಿಯೂ, ನಾಟಕಕ್ಕೆ ನಾಟ್ಯಛಂದಸ್ಸಾಗಿಯೂ ಪರಿವರ್ತಿತವಾಗುವ ವಿಕಾಸದ ಹಾದಿಯಲ್ಲಿ ರಗಳೆ ಅಪ್ರಾಸಛಂದಸ್ಸಿನ 'ಸರಳರಗಳೆ'ಯಾಗಿ ಅವರ (ಕುವೆಂಪುರವರ) 'ಜಲಗಾರ'ದಲ್ಲಿ ಕಣ್ದೆರೆಯಿತು" ಎಂಬ ಲೇಖಕರ ಪರಿಶೀಲನೆ ನಿಜಕ್ಕೂ ಮೌಲಿಕವಾದುದು.

ಕುವೆಂಪು ಪದ್ಯಶೈಲಿಯನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಅವರ ಪ್ರತಿಭೆಯಂತೆಯೇ ಅವರ ಶೈಲಿಯೂ ಸರ್ವಾಂಕಶವಾದುದೆಂದು ಸೂಚಿಸಿ, ಇಂಗ್ಲೀಷಿನಲ್ಲಿ ಕಾವ್ಯರಚನೆ ಆರಂಭಿಸಿದ ಕುವೆಂಪುರವರು ಹೇಗೆ ಅಲ್ಲಿಯ "ಛಂದೋವೈವಿಧ್ಯ ಶೈಲಿ ಪ್ರಕಾರಗಳು ಕಾವ್ಯಮೀಮಾಂಸಾ ತತ್ವಗಳೆಲ್ಲವನ್ನೂ ಕನ್ನಡಕ್ಕಳವಡಿಸಲು ಪ್ರಯತ್ನಿಸಿ ಯಶಸ್ವಿಯಾಗುತ್ತಾರೆ. ಎಂಬುದನ್ನು ಲೇಖಕರು ಕುವೆಂಪು ಅವರ ಆತ್ಮಕಥೆಯನ್ನಾಧರಿಸಿ, ಸಂಗ್ರಹಿಕೊಟ್ಟಿರುವರು. ಭಾಷಾಪ್ರಭುತ್ವಕ್ಕಾಗಿ ಲಕ್ಷ್ಮೀಶಾದಿ ಕನ್ನಡ ಕವಿಗಳನ್ನು ಅಭ್ಯಾಸಮಾಡಿದ ಕುವೆಂಪು ಕ್ರಮೇಣ ಕನ್ನಡದ ವೈಶಿಷ್ಟ್ಯವಾದ ದ್ವಿತೀಯಾಕ್ಷರ ಪ್ರಾಸವನ್ನು ಕೈಬಿಟ್ಟಿದ್ದು, ('ಜ್ಞಾನಗೀತೆ'ಯಲ್ಲಿ)ಅಂತ್ಯಪ್ರಾಸವೂ ಇಲ್ಲದೆ ಕವಿ ಸ್ವಾತಂತ್ರ್ಯವಹಿಸಿ ಮುಂದುವರೆದುದನ್ನು ಅವರ ಪದ್ಯಗಳ ಮೂಲಕವೇ ಗುರುತಿಸಿ ತೋರಿಸಲಗಿದೆ. ಮುಂದೆ ಸಾನೆಟ್ಟುಗಳ ರಚನೆಯಾಗಿ ಆ ಛಂದಸ್ಸು ಶ್ರೀರಾಮಾಯಣ ದರ್ಶನಂ ಮಹಾಛಂದಸ್ಸಿಗೆ ಮೆಟ್ಟಿಲಾಗುತ್ತದೆ. " ಮುಂದೆ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದಲ್ಲಿ ತನ್ನ ಮಹೋನ್ನತ ಪರಿಪೂರ್ಣ ಭವ್ಯಾಕಾರದಲ್ಲಿ ವಿಜೃಂಭಿಸುತ್ತಿರುವ ಮಹಾಛಂದಸ್ ತ್ರಿವಿಕ್ರಮನಿಗೆ ಮೂಲ ಬೀಜಾಂಕುರಾರ್ಪಣೆಯಾದುದು ಈ ಅಣುವವಾಮನ (ಸಾನೆಟ್)ನಲ್ಲಿ" ಎನ್ನುವ ಕವಿಯ ಮಾತನ್ನು ಹಾಗೂ ಸಾನೆಟ್ಟುಗಳ ಮಾತ್ರೆ, ಗಣವಿಭಜನೆ, ಯತಿ, ಪ್ರಾಸಗಳ ಬಗ್ಗೆ ಕವಿಯ ಸೂಕ್ಷ್ಮಾವಲೋಕನವನ್ನು ಇಲ್ಲಿ ಲೇಖಕರು ನಮಗೆ ಪುನರ್ದರ್ಶನ ಮಾಡಿಸಿರುವರು.

ನಿಸರ್ಗಪ್ರೀತಿ ಅಧ್ಯಾತ್ಮಪ್ರೇರಣೆಗಳು ಒಟ್ಟೊಟ್ಟಿಗೇ ಕೆಲಸ ಮಾಡಿ ಕುವೆಂಪು ಪದ್ಯ ಶೈಲಿಯನ್ನು ರೂಪಿಸಿವೆಯೆಂಬದನ್ನು ಲೇಖಕರು ಹೀಗೆ ಹೇಳುತ್ತಾರೆ: "ಸುಗ್ಗಿಯ ಬನದ ಹೂಗಳಿಂದ ಮಾಗಿಯ ಮಂಜಿನ ಮಣಿಗಳಿಂದ ಕೆಲವು ಕವಿತೆಗಳನ್ನು ಪಡೆದದ್ದುಂಟು; ಮತ್ತು ಕೆಲವನ್ನು ಪಕ್ಷಿಗಳ ನುಣ್ಚರಗಳಿಂದ ಕಸಿದುಕೊಂಡದ್ದುಂಟು; ಕಾಮನಬಿಲ್ಲಿನ ದಾರದಿಂದ ಮೊಳಗು ಮಿಂಚುಹನಿಗಳನ್ನು ಪೋಣಿಸಿ, ಕವನಮಾಲೆಯನ್ನು ಕಟ್ಟಿದ್ದುಂಟು. ನಿಸರ್ಗಸೌಂದರ್ಯ, ಅಧ್ಯಾತ್ಮ ಸೌಂದರ್ಯ ಮತ್ತು ಜೀವನಸೌಂದರ್ಯಗಳೇ ಕುವೆಂಪು ಕಾವ್ಯದ ಜೀವಾಳ ಅಥವಾ ಅಂತಸ್ಸತ್ವವೆಂಬುದು ಈ ಸ್ಫೂರ್ತಿ ಪ್ರೇರಣೆಗಳಿಂದ ಸ್ಪಷ್ಟವಾಗುತ್ತದೆ" (ಪು ೧೪೨) ಇಂಥಲ್ಲಿ ಗುರು-ಶಿಷ್ಯರ ಶೈಲಿಯ ಪೈಪೋಟಿ ಗಮನಾರ್ಹ.

ಲೇಖಕರು ಹೇಳುವಂತೆ "ಕುವೆಂಪು ಅವರ ಉಪಮಾ ರೂಪಕಗಳ ವೈಭವವನ್ನು,

ಸಂಕೇತ ಪ್ರತಿಮೆಗಳ ಶ್ರೀಮಂತಿಕೆಯನ್ನು, ಶಬ್ದಚಿತ್ರಗಳ ಮೆರವಣಿಗೆಯನ್ನು ಪ್ರಾರಂಭದ ಕವಿತೆಗಳಲ್ಲಿಯೇ ಗುರುತಿಸಬಹುದು." ನಿಸರ್ಗ ಅಧ್ಯಾತ್ಮ ಲೌಕಿಕಾನುಭವಗಳ ರಸಾಯನ ಕುವೆಂಪು ಕವನಗಳು. ರತಿ, ಸಂಜೆವೆಣ್ಣು ಮಳೆಬಿಲ್ಲು, ಎಲ್ಲಿಹೆ?, ಸಗ್ಗದ ಬಾಗಿಲು ಇತ್ಯಾದಿ ಕವನಗಳನ್ನು ಗಮನಿಸಬಹುದು. 'ಅಡಿಯಗೆಜ್ಜೆ ನಡುಗೆ ಹೆಜ್ಜೆಯಿಡುತ ಸುಗ್ಗಿ ಬರುತಿದೆ' ಎನ್ನುವಲ್ಲಿ ಕವಿ ಭೋಗದ ಲಯವನ್ನು ಸೂರೆಗೊಂಡಿರುವ ರೀತಿ ಅನ್ಯಾದೃಶವಾದುದು. ಪದ ಪದಗಳಲ್ಲೂ ಹೊಮ್ಮಿ ಚಿಮ್ಮುವ ನರ್ತನೋತ್ಸಾಹದ ಅನುರಣನೆ ಮೈಮನಗಳನ್ನು ಮುದಗೊಳಿಸುತ್ತದೆ. "ಒಟ್ಟಿನಲ್ಲಿ (ಕುವೆಂಪುರವರ) ಕೊಳಲು ಕನ್ನಡ ಛಂದಸ್ಸಿನ ಹಾಗೂ ಭಾವಗೀತೆಗಳ ಪ್ರಯೋಗಾಲಯದಂತಿದೆ" ಎನ್ನುವ ಲೇಖಕರ ಅಭಿಪ್ರಾಯಕ್ಕೆ ಎರಡನೆಯ ಮಾತಿಲ್ಲ. ಕುವೆಂಪುರವರ ಬಹುಸಂಖ್ಯೆ ಕವನಗಳನ್ನು ಶೈಲಿಯ ದೃಷ್ಟಿಯಿಂದ ಅಭ್ಯಾಸಮಾಡಲು ಪ್ರಕೃತಿ ಕವನಗಳು, ಪ್ರಣಯಕವನಗಳು, ಅಧ್ಯಾತ್ಮಕವನಗಳು, ವಿಚಾರಕವನಗಳು, ಕಥನಕವನಗಳು, ಪ್ರಗಾಥಗಳು-ಎಂದು ವಿಂಗಡಿಸಿಕೊಂಡು ಪರಿಶೀಲಿಸಿರುವುದರಿಂದ ಅವು ಓದಿತಕ್ಕೆ ಸಿಕ್ಕಿವೆ.

ಆದಿಶಕ್ತಿಯಾದ 'ಪ್ರಕೃತಿಯಾರಾಧನೆಯ ಪರಮನಾರಾಧನೆ'-ಕುವೆಂಪುರವರ ದೃಷ್ಟಿಯಲ್ಲಿ, ಸೃಷ್ಟಿರತಿ, ಕಲಾಸುಂದರಿ, ಜಗದ್ಧಾತ್ರಿ, ಜಗಜ್ಜನನಿ, ಮಹಾಮಾಯೆ ಆಕೆ. ಪ್ರಕೃತಿ ಕವನಗಳ ಸಂದರ್ಭದಲ್ಲಿ ಅವುಗಳ ಸರಳ ಸುಭಗಲಯ ಮಾಧುರ್ಯವನ್ನು ಗಮನಿಸಿದ ಲೇಖಕರು ವರ್ಡ್ಸ್‌ವರ್ತನನ್ನು ಕುವೆಂಪುರವರ ಗುರುವೆಂದು ನೆನೆದರೂ, ವೇದಾಂತದ ಓನ್ನೆಲೆಯಿಂದಾಗಿ ಕುವೆಂಪು ಅವನಿಗಿಂತ ಎತ್ತರಕ್ಕೇರಿದ್ದಾರೆಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಅವರ ನಾಡಿಯ ನಾಡಿಯಾಗಿ, ಉಸಿರಿನ ಉಸಿರಾಗಿ ಪ್ರಕೃತಿ ತಾನಾಗಿಯೆ ಅವರ ಬುದ್ಧಿಭಾವ ಕಲ್ಪನೆಗಳ ಮೂಲಕ ಹರಿದು ಭಾಷೆಯಲ್ಲಿ ರೂಪ ಪಡೆದಿದೆಯೆಂದು ಹೇಳಬೇಕಾಗುತ್ತದೆ." ಅವರ ಪ್ರಕೃತಿ ವರ್ಣನೆಯ ಹಸುರಿನ ಸಾಂದ್ರತೆ 'ಹಚ್ಚನೆ ಪಚ್ಚನೆ, ಅನುಭವಕ್ಕೆ ಬರುತ್ತದೆ. "ಅವರ ದೇವರ ರುಜು ಒಂದು ಸುಂದರ ಅಲೋಕಿಕ ಕಲ್ಪನೆ" ಎನ್ನುವಲ್ಲಿ ತಾತ್ವಿಕ ಸೌಂದರ್ಯದೊಡನೆ ಅದರ ಕಾಲ್ಪನಿಕ ಸೌಂದರ್ಯವೂ ಕೆನೆಗಟ್ಟಿದೆ. ಅವರ 'ಮುಂಗಾರು' ಕವನದಲ್ಲಿ ಭಾಷೆಯ ಮುಡಿಗೆದರಿ ಗುಟುರುಹಾಕಿ ಛೀಳಿಟ್ಟು ಬುಸುಗಟ್ಟಿರುವುದನ್ನು ಕಾಣಬಹುದು: 'ಗುಟುರನುಹಾಕಿತು ಮುಂಗಾರ್‌ಗಾಳಿ

ಛೀಳಿಟ್ಟೊರಲಿತು ಘನ ಘಟೆಯಾಳಿ

ಬುಸುಗುಟ್ಟಿತು, ಬೀಸಿತು ಬಿರುಗಾಳಿ

ಸುತ್ತಲು ಮುತ್ತಿತು ಕಾರ್ಮೋಡ" ರೌದ್ರ, ವೀರ ಭಾವಗಳಿಗೆ ತಕ್ಕ ಭಾಷೆಯನ್ನಿಲ್ಲಿ ಅನುಭವಿಸಬಹುದು. "ದಿಗುತಟದಲಿ ತೆರೆಯತಿತ್ತು ಹಗಲಿನಕ್ಷಿ; ಮುಗಿಲಗರಿಯ ಕಾಯಿಸಿತ್ತು ಗಗನಪಕ್ಷಿ" 'ಭಾದ್ರಪದದ ಸುಪ್ರಭಾತ'ದಲ್ಲಿನ ಈ ರೂಪಕ ಸಂಪತ್ತು ಲೇಖಕರು ಗುರುತಿಸಿರುವಂತೆ ನಿಜಕ್ಕೂ ಮೈನವಿರೇಳಿಸುವಂಥದು.

ಕುವೆಂಪುರವರ ಪ್ರಣಯ ಕವನಗಳನ್ನು ಕುರಿತ "ಸರ್ವ ಪರಿಚಿತವಾಗಿ ಶೃಂಗಾರ ಭಾವ, ಪ್ರಣಯಾನುಭವ, ಆದರ್ಶಪ್ರೇಮ, ಸೌಂದರ್ಯಕಲ್ಪನೆ ಮತ್ತು ರಸಿಕತೆಗಳುವಿಲ್ಲ; ಪ್ರೇಮ ಕಸ್ತೂರಿಯ ಪರಿಮಳವಿದೆ; ಮಾತುಗಳಲ್ಲಿ ಕೊಂಕಿಲ್ಲ, ಕೆಸರಿಲ್ಲ; ಪ್ರೇಣದ ಗಂಗೆಯಲ್ಲಿ ಅವು

ಮಿಂದುಬಂದಂತಿವೆ' ಎಂಬ ಲೇಖಕರ ಮಾತುಗಳು ರಸಿಕರೆಲ್ಲರ ಹೃದಯದ ಮಾರ್ದನಿಗಳೇ ಆಗಿವೆ. ಅವರ ಅಧ್ಯಾತ್ಮನಿಷ್ಠ ಕವನಗಳಲ್ಲಿ ಸಹಜವಾಗಿ ಸಂಸ್ಕೃತಭಾಷೆಯ ಬಳಕೆ ಹೆಚ್ಚು. ಗಹನವಾದ ಭಾವಾಲೋಚನೆಗಳಿಗೆ ತಕ್ಕಂತೆ ಭಾಷೆಯೂ ಗಹನವಾಗಿದೆ. ವಿಶ್ವಕೇಂದ್ರದ ಬೃಂದಾವನದಲ್ಲಿ, ಜೀವನ ಜಮುನೆಯ ಕೂಲದಲ್ಲಿ ಇಡೀ ಜಗತ್ತೇ 'ರಾಸಲೀಲೆ' ಯಲ್ಲಿ ಮಗ್ನವಾಗಿದೆಯೆಂಬ ಕವಿಕಲ್ಪನೆಯನ್ನು ಲೇಖಕರು ಎತ್ತಿತೋರಿಸಿರುವರು. 'ಹರಗಿರಿಜಾ' ಕವಿತೆಯಲ್ಲಿಯ ಸಂಸ್ಕೃತ -ಕನ್ನಡ ಭಾಷೆಗಳ ಮಿಲನವನ್ನು 'ಹಳೆಯ ತಾಮ್ರದ ತಂತಿಗಳಲ್ಲಿ ವಿದ್ಯುತ್ ಪ್ರವಾಹವನ್ನು ಹರಿಸಿದ್ದಾರೆಂದು ರೂಪಕಮಾಡಿ ಹೇಳಿರುವರು. ಅಂತೆಯೇ ಕುವೆಂಪುರವರ 'ಘೋರಾಂಧಕಾರದೋಳು'.'ಆಹ್ವಾನ', 'ತವರೂರು'-ಇತ್ಯಾದಿ ಕವನಗಳನ್ನು ಉದಾಹರಿಸಿದ ಲೇಖಕರು ಹೇಗೆ ಒಂದೇ ಪದ ಉಕ್ಕಿನ ಗುಂಡಾಗಬಹುದು. ಬೆಂಕಿಯ ಕೆಂಡವಾಗಬಹುದು. ಅಣುಬಾಂಬಾಗಬಹುದು. ಬೆಲ್ಲದ ಅಚ್ಚಾಗಬಹುದು. ಜೇನಿನಹನಿಯಾಗಬಹುದು. ಬೆಣ್ಣೆಯ ಮುದ್ದೆಯಾಗಬಹುದು. ಕೋಮಲ ಸುಮವಾಗಬಹುದು. ಅದರಲ್ಲಿ ರೇಷ್ಮೆಯ ನುಣಪಿರಬಹುದು. ಮೇಣದ ಮೃದುತ್ವವಿರಬಹುದು. ವಜ್ರದ ಕಠೋರತ್ವವಿರಬಹುದು. ಅವು ಸೃಷ್ಟಿಸ್ಥಿತಿಲಯಗಳಿಗೆ ಪ್ರತಿಮೆಗಳೂ ಆಗಬಹುದು. ಅವು ಸರಸ್ವತಿಯ ಚರಣಚಿಹ್ನೆಗಳಾಗಬಹುದು. ಕೃಷ್ಣನ ಕೊಳಲಿನ ಸ್ವರಗಳಾಗಬಹುದು. ಶಿವನ ಡಮರುಗದ ನಿಕ್ವಣವಾಗಬಹುದು" ಎಂಬುದನ್ನು ವಿಶ್ಲೇಷಿಸಿರುವರು.

ಕುವೆಂಪುರವರ ಸಾಮಾಜಿಕಬದ್ಧತೆಯಿರುವ ವಿಚಾರ ಕವನಗಳಲ್ಲಿನ ಅವರ ಅಭಿಪ್ರಾಯಗಳನ್ನು ಎತ್ತಿ ಹೇಳಿರುವುದಲ್ಲದೆ ಲೇಖಕರು "ಭರತಖಂಡದ ನಾನಾ ಅನಿಷ್ಟಗಳಿಗೆ ಮೌಢ್ಯ, ಜಾತೀಯತೆ, ಮತೀಯ ಕಲಹಗಳೇ ಮುಖ್ಯ ಕಾರಣಗಳು. ಅವುಗಳ ನಿರ್ಮೂಲನದಿಂದ ಮಾತ್ರ ರಾಷ್ಟ್ರದ ಪುನರ್‌ನಿರ್ಮಾಣ ಸಾಧ್ಯ" ಎಂಬ ಕವಿಯ ಖಚಿತ ನಿಲುವನ್ನು ಅವರ ಕವನಗಳ ಮೂಲಕವೇ ತೋರಿಸಿಕೊಟ್ಟಿರುವರು; ಅಲ್ಲಿಯ ಅವರ ಶೈಲಿ ಹೇಗೆ ಅವರ ಮನಸ್ಸನ್ನೇ ತೆರೆದಿಟ್ಟಿವೆಯೆಂಬುದನ್ನು ಓದುಗರ ಅನುಭವಕ್ಕೆ ತಂದುಕೊಡುವರು. ಶತಶತಮಾನಗಳಿಂದ ಕೊರಡಾಗಿ ಬಿದ್ದಿರುವ ಜನರನ್ನೆಚ್ಚರಿಸಲು ಕುವೆಂಪುರವರ ಭಾಷೆ ಅಂಥವರಿಗೆ ಕೊರಡಿನ ಬಿಗಿತವಾಗಿದೆ. ಕಬ್ಬಿಣದ ಸರಳಾಗಿದೆಯೆಂಬುದನ್ನು "ನೂರುದೇವರನೆಲ್ಲ ನೂಕಾಚೆದೂರ", "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ" ಇತ್ಯಾದಿ ಮಾತುಗಳನ್ನು ಉದಾಹರಿಸುವ ಮೂಲಕ ಸ್ಪಷ್ಟಪಡಿಸಿರುವರು. 'ಕಲ್ಕಿ' ಗೀತೆಯನ್ನು ಕನ್ನಡದ ಶ್ರೇಷ್ಠಕ್ರಾಂತಿಗೀತೆಯೆಂದು ಕರೆದು ಅದರ ಪ್ರತಿಮಾಧ್ವನಿಯತ್ತ ನಮ್ಮ ಗಮನ ಸೆಳೆಯಲಾಗಿದೆ. 'ಮೌಢ್ಯನಿರ್ಮೂಲನ ಜಾತಿನಿವಾಶ ಅಸಮಾನತೆಯ ನಾಶಗಳು ಸಾಕ್ಷಾತ್ ದೇವರಪೂಜೆ'ಯೆನ್ನುವ ಹೃದಯಕ್ಕೆ ಸ್ಪಂದಿಸಿದ ಲೇಖಕರು ಅಲ್ಲಿಯ 'ಕನಸಿನ ದೃಶ್ಯ' ಆಲೋಚನಾಸರಣಿಗೆ ತಕ್ಕಂಥ ಮಾತಿನ ಬಳಕೆ, ಗಣರಚನೆ, ಪ್ರಾಸಕೌಶಲ, ಕಲ್ಪನಾಚಾತುರ್ಯ, ಮುಡಿ, ಗಣಪರಿವೃತ್ತಿ ಮೊದಲಾದ ಕಾವ್ಯತಂತ್ರಗಳು ಅದ್ಭುತ ಪರಿಣಾಮಕಾರಿಯಾಗಿವೆ'ಯೆಂದು ಮನಮೆಚ್ಚಿನುಡಿದಿದ್ದಾರೆ.

ಕುವೆಂಪುರವರ ಕಥನಕವನಗಳಲ್ಲಿನ ಬದುಕಿನ ನೈಜಚಿತ್ರಗಳು, ವಿಚಾರವಂತಿಕೆ,

ಚಿಂತನೆ, ವಾಸ್ತವಿಕಪ್ರಜ್ಞೆ, ಸಾಮಾನ್ಯತಾ ದೃಷ್ಟಿ, ವೈಜ್ಞಾನಿಕ ನಿಲುವು ಮತ್ತು ವೈಚಿತ್ರ್ಯಭಾವ; ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಸಾಮಾನ್ಯನ ಬಗ್ಗೆ ಅವರು ತೋರಿಸಿರುವ ಕಾಳಜಿಯೆಡೆಗೆ ಲೇಖಕರು ಸಹೃದಯರನ್ನು ಕರೆದೊಯ್ಯುವರು. ಪಾದಪಾದಕ್ಕೂ ಭಾವತೀವ್ರತೆ ಕ್ರಮವಾಗಿ ಏರುತ್ತ, ಅಂತ್ಯದಲ್ಲಿ ಪರಮಾವಧಿಯನ್ನು ಮುಟ್ಟುವ, ವಸ್ತು ಭಾವ ಭಾಷೆಗಳ ಸಮತೋಲನವನ್ನು ಸಾಧಿಸಿರುವ ಕುವೆಂಪುರವರ ಸಾನೆಟ್‌ಗಳೂ ಒಂದೊಂದು ಸ್ವಯಂಪೂರ್ಣ ಪುಟ್ಟಪ್ರಪಂಚ. ಇಲ್ಲಿಯ ಪ್ರಾಸ ಸಂಯೋಜನೆ 'ಉಪಮಾರೂಪಕಗಳ ಅಷ್ಟೈಶ್ವರ್ಯ ಹಾಗೂ ಸುಧೀರ, ಗಂಭೀರ, ಸುಸ್ವನಯುಕ್ತ, ಗಾಮಿ ಗೆಜ್ಜೆಪೂಜೆಯಂತಿದೆ. ಕವಿಶೈಲ, ಹೇಬ್ಬ, ರಸವೊಂದೆ ಕವಿಗೆ ನೀತಿ, ಕವಿಯ ಮನಸ್ಸು, ರಸಸಿದ್ಧಿ, ಗ್ರಾಮಸಿಂಹ, ಕೀರ್ತಿಶನಿ, ಪಳುಸೀಳು,ಕನ್ನಂಬಾಡಿ, ಊರ್ಮಿಳಾದೇವಿ, ಹೋಮರ್, ಪಂಜೆಯವರಿಗೆ, ಸ್ವಾಮಿಜಿಗೆ, ಅಶೋಕಚಕ್ರವರ್ತಿ, ಬೆಕ್ಕು ಇಲಿ, ಕಾಲ- ಇವು ಒಂದೊಂದೂ ಗರುಡಮಣಿಗಳು " ಎಂದು ಪರಿಚಯಿಸಿರುವರು 'ಕವನಗಳೆ ಮಂತ್ರಗಳು' ಎನ್ನುವ ಕವಿವಾಣಿ 'ಕೃತ್ತಿಕೆ'ಯ ಸಾನೆಟ್ಟುಗಳಿಗೆ ಅನ್ವಯಿಸುತ್ತದೆಂಬುದು ಲೇಖಕರ ನಿಲುವು.

'ಗಣೇಶಗಾಥಾ', 'ಶ್ರೀ ಸ್ವಾತಂತ್ರ್ಯೋದಯ ಮಹಾಪ್ರಗಾಥ', 'ಶ್ರೀ ಗೋಮಟ ಮಹಾಮಸ್ತಕಾಭಿಷೇಕ ಪ್ರಗಾಥಂ'-ಇವು ಕುವೆಂಪು ಪ್ರಗಾಥಗಳಲ್ಲಿ ಮುಖ್ಯವಾದುವುಗಳೆಂದು ಹೆಸರಿಸಿರುವ ಲೇಖಕರು ಅವುಗಳ ಶೈಲಿಯ ಬಗ್ಗೆ : "ಆಧುನಿಕ ಛಂದಸ್ಸಿನ ಅನೇಕ ಪ್ರಕ್ರಿಯೆಗಳ ಪ್ರಕಾರಗಳ ಹಾಗೂ ದೀರ್ಘ ಹ್ರಸ್ವಪಂಕ್ತಿಗಳ ಮೂಲಕ ವೈವಿಧ್ಯ ವೈಭವವನ್ನು, ಭಾವ ಸೌಂದರ್ಯವನ್ನು, ವಿಚಾರ ವಿಸ್ತಾರವನ್ನು ಸಾಧಿಸಲಾಗಿದೆ. ನಡುನಡುವೆ ಬರುವ ಸಂಬೋಧನೆಗಳಂತು ಉತ್ಸಾಹದ, ಸಡಗರದ, ಆನಂದದ ಝರಿಗಳಾಗಿವೆ"ಯೆಂದು ಅಭಿಪ್ರಾಯಪಡುವರು.

ಹಳಗನ್ನಡ ನಡುಗನ್ನಡ ಹೊಸಗನ್ನಡ ಹಾಗೂ ಸಂಸ್ಕೃತಗಳ ಬೆರಕೆಯ ಪ್ರಯೋಗ'ಚಿತ್ರಾಂಗದ' ಕಾವ್ಯದಲ್ಲಿದೆ. "ಸರಳ ರಗಳೆಯನ್ನು ಮಹಾಶೈಲಿಗೊಗ್ಗಿಸಿಕೊಳ್ಳಲು,ರಗಳೆಯ ಅಂಶವನ್ನು ಕಿತ್ತುಹಾಕಲು, ನಾನಾ ಛಂದಃ ತರಂಗಗಳ ಸ್ವರೂಪ ಸೌಂದರ್ಯಗಳನ್ನು ಪರೀಕ್ಷಿಸಲು, ಮಹಾಶೈಲಿಗೆ ತಕ್ಕ ಕಾವ್ಯಭಾಷೆಯನ್ನು ರೂಪಿಸಲು ಕುವೆಂಪು ಇಲ್ಲಿಯೇ ಸಿದ್ಧತೆ ನಡೆಸಿದ್ದಾರೆಂದು ಲೇಖಕರು ಸರಿಯಾಗಿ ಗುರುತಿಸಿದ್ದಾರೆ. ಅಲ್ಲಿಯ ಉಪಮಾ ರೂಪಕಗಳ ಸತ್ವಯುತ ಬಳಕೆಯನ್ನು ಹೇಳುತ್ತಾ "ಚಿತ್ರವತ್ತಾದ ಶಬ್ದಗಳ ಮೆರವಣಿಗೆ ಕಾವ್ಯದುದ್ದಕ್ಕೂ ನಡೆಯುತ್ತದೆ ಎನ್ನುತ್ತಾರೆ. ಒಟ್ಟಾರೆ, ಚಿತ್ರಾಂಗದಾ ಕಾವ್ಯದ ಶೈಲಿ ಮಹಾಕಾವ್ಯದ ಮಹಾಶೈಲಿಗೆ ಮುನ್ನುಡಿಯಂತಿದೆಯೆಂಬುದು ಲೇಖಕರ ಇಂಗಿತ.

ಶ್ರೀ ರಾಮಾಯಣದರ್ಶನಂ 'ಶ್ರೀ ಕುವೆಂಪುರವರನ್ನೇ ಸೃಜಿಸಿದ' ಮೇರುಕೃತಿ. ಕತೆ ಹಳೆಯದಾದರೂ ಅದರ ದರ್ಶನ ಹೊಸತು. ಉಳಿದವೆಲ್ಲ ಸ 'ರಾಮಾಯಣ', ಕುವೆಂಪುರವರದು 'ರಾಮಾಯಣದರ್ಶನಂ' ಅಷ್ಟೇ ವ್ಯತ್ಯಾಸ!. ದರ್ಶನದ ರಾಮನ ಪಾತ್ರ 'ರಮ್ಯನವ್ಯಭವ್ಯೋತ್ತರ'. ರಾವಣನ ಪಾತ್ರ 'ಮಹಾ ಸಾಧಕನ ಪಾತ್ರ'ವಂತೆ ಉದಾತ್ತೀಕರಣಗೊಂಡಿದೆ. ಅಲ್ಲಿಯ ಪಾತ್ರಗಳು ಸನ್ನಿವೇಶ ವರ್ಣನೆಗಳು- ಎಲ್ಲವೂ

ದರ್ಶನದೀಪ್ತವಾಗಿ ಹೊರಹೊಮ್ಮಿವೆ. 'ಧ್ವನಿ ಶ್ರೀಮಂತಿಕೆ, ಕಲಾವಂತಿಕೆ, ದರ್ಶನೋಜ್ವಲತೆ' ಗಳಿಂದ ಕುವೆಂಪು ರಾಮಾಯಣ ದರ್ಶನಂ ಮುನ್ನಿನ ರಾಮಾಯಣಗಳನ್ನಲ್ಲ ಇಕ್ಕಿಮೆಟ್ಟಿದೆ. ಅಲ್ಲಿಯ ಸನ್ನಿವೇಶಗಳ ಶೀರ್ಷಿಕೆಗಳೇ ಸಾಕು. ' ಮಮತೆಯ ಸುಳಿ ಮಂಥರೆ', 'ಅಶ್ರುಗಂಗೋತ್ರಿ', 'ಶಬರಿಗಾದನು ಅತಿಥಿದಾಶರಥಿ' 'ತಪಸ್ಸಿದ್ಧಿ'-ಒಂದೊಂದೂ ಕವಿಯ ಸೃಜನಶೀಲ ಪ್ರತಿಭೆಗೆ ಓಡಿದ ಕನ್ನಡಿಯೇ ಸರಿ. ಕುವೆಂಪುರವರ ಪ್ರಕೃತಿಯ ಒಲವು ಈ ಮಹಾಕಾವ್ಯದಲ್ಲಿ ಅಡೆತಡೆಗಳಿಲ್ಲದೆ ಭೋಗ ರೆದು ಪ್ರವಹಿಸಿವೆ. ಲೇಖಕರು ಹೇಳುವಂತೆ ಅವು ಈ ಕಾವ್ಯದ 'ರಸಸರೋವರ'ಗಳಾಗಿ ಪರಿಣಮಿಸಿವೆ. ತುಂಬಿ ಹರಿಯುತ್ತಿದ್ದ ಮಂದಾಕಿನಿ ರಾಮನಲ್ಲಿ ಮಾತೃ ವಾತ್ಸಲ್ಯವನ್ನುಕ್ಕಿಸುತ್ತದೆ. ಸೀತೆ ಸಾಕ್ಷಾತ್ ಪ್ರಕೃತಿಯ ಸಂಕೇತವಾಗಿ ಕಂಡಿದ್ದಾಳೆ. ಈ ಮಹಾಕಾವ್ಯದುದ್ದಕ್ಕೂ ಕವಿ 'ಉಪಮಾರೂಪಕಗಳ ಮೂಲಕ'ವೇ 'ಮಾತಾಡುತ್ತಿರುವಂತೆ ತೋರುತ್ತದೆ.' "ಕುವೆಂಪುರವರ ವರ್ಣನಾಪ್ರತಿಭೆ, ಅವರ ಅತ್ಯಂತ ಪ್ರಖರವಾದ ಪ್ರಥಮ ದರ್ಜೆಯ ಪ್ರತಿಭೆ, ಅನನ್ಯ ಸದೃಶವಾದ ಒಳನೋಟ, ಪ್ರಗಾಢವಾದ ವ್ಯಾಪಕ ಲೋಕಾನುಭವ, ಅಪಾರವಾದ ಬಹುಶ್ರುತತೆ, ನಭೋಗಾಮಿಯಾದ ಕಲ್ಪನಾಶೀಲತೆ-ಇವುಗಳಿಂದ ಆದು ಪಪ್ರಜ್ವಲಗೊಂಡಿದೆ." ಕಥೆಯ ಕ್ರಿಯೆ, ಪಾತ್ರ ಸನ್ನಿವೇಶಾದಿಗಳೊಡನೆ ಹೊಂದಿಕೊಂಡು 'ರಸೋತ್ಕರ್ಷವನ್ನು ಪ್ರೇರಿಸುವುದಕ್ಕೆ ಸಹಕಾರಿಯಾಗಿದೆ. ಇವೆಲ್ಲವುಗಳನ್ನೂ ಗಮನಿಸಿದ ಲೇಖಕರು "ಕಾಳಿದಾಸ ಪಂಪ ಕುಮಾರವ್ಯಾಸ ಲಕ್ಷ್ಮೀಶರು ಇಪ್ಪತ್ತನೆಯ ಶತಮಾನದಲ್ಲಿ ಒಟ್ಟಾಗಿ ಕುವೆಂಪು ರೂಪದಲ್ಲಿ ಅವತರಿಸಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು"-ಎಂದು ಲೇಖಕರು ತಮ್ಮ ಮನದಾಳದ ಮಾತನ್ನು ನಮ್ಮೊಡನೆ ಹಂಚಿಕೊಂಡಿದ್ದಾರೆ. ಮಹಾಕಾವ್ಯದಲ್ಲಿ ಮೈದೋರಿರುವ 'ಅಧ್ಯಾತ್ಮಿಕೋಪಮೆ ' ವೈಜ್ಞಾನಿಕೋಪಮೆಗಳತ್ತ ಓದುಗರ ಗಮನ ಸೆಳೆದಿರುವರು. (ಪು. ೧೮೭)ಅವುಗಳಿಲ್ಲಿ ಕೆಲವನ್ನು ಮಾತ್ರ ಉದಾಹರಿಸಿ ನಮ್ಮಲ್ಲಿ ಕುವೆಂಪುರವರ ಉಪಮಾಶ್ರೀಮಂತಿಕೆಯನ್ನು ಇನ್ನೂ, ಇನ್ನೂ ಅರಿಯುವ ಕುತೂಹಲ ಮೂಡಿಸಿದ್ದಾರೆ.

ಅಂತೆಯೇ ಕಾವ್ಯದ ಮೈಯಲ್ಲಿ ಅರಳಿರುವ ನೂರಾರು ರೂಪಕಗಳ ಬಗ್ಗೆಯೂ ಲೇಖಕರು ಸಹೃದಯರ ಗಮನ ಸೆಳೆಯುತ್ತಾರೆ. 'ತರುಹಿಡಿಂಬರ್' 'ಮಲೆಯಗೂಳಿ' ಇತ್ಯಾದಿ ರೂಪಕಗಳ ರುಚಿತೋರಿಸಿರುವರು. ಮಹೋಪಮೆಯಂತೂ ಕುವೆಂಪುರವರಿಂಲೇ ಕನ್ನಡ ಕಾವ್ಯಕ್ಷೇತ್ರಕ್ಕೆದಕ್ಕಿದ್ದು. ಮಹೋಪಮೆಯ ಲಕ್ಷಣಗಳನ್ನು ಕುವೆಂಪುರವರಿಂದಲೇ 'ತಪೋನಂದನ'ದಲ್ಲಿ ಹೇಳಿರುವರೆಂದೂ, ಅನೇಕ ವಿದ್ವಾಂಸರು ಆ ಬಗ್ಗೆ ಪ್ರಸ್ತಾಪ ಮಾಡಿರುವುದಾಗಿಯೂ ಸೂಚಿಸಿ, ಸೀತಾರಾಮಲಕ್ಷ್ಮಣರು ವನವಾಸಕ್ಕೆ ತೆರಳಿದ ಬಳಿಕ ಪುತ್ರಶೋಕದಿಂದ ದಶರಥನ ಮನಃಸ್ಥಿತಿಯನ್ನು ವರ್ಣಿಸುವ ಒಂದೇ ಒಂದು ಮಹೋಪಮೆಯನ್ನು ಉದಾಹರಿಸಲಾಗಿದೆ. ಉಪಮೆರೂಪಕಗಳನ್ನು ತನ್ನೊಡಲೊಳಗೆ ಹುದುಗಿಸಿಕೊಂಡು ಮಹೋಜ್ವಲವಾಗುವ ಮಹೋಪಮೆ ಕನ್ನಡ-ಸಂಸ್ಕೃತಗಳ ಮೈತ್ರಿಕೂಟದಿಂದ ಎಂತಹ ಅದ್ಭುತ ಪರಿಣಾಮವನ್ನುಂಟು ಮಾಡಬಲ್ಲುದೆಂಬುದನ್ನು ವಿಶ್ಲೇಷಿರುವರು.

ಕವಿಯ ಶೈಲಿ ಬೇರೆಯಲ್ಲ ಕವಿ ಬೇರೆಯಲ್ಲ. ಶೈಲಿ ಪ್ರಧಾನವಾಗಿ ಭಾಷಾಸ್ವರೂಪಕ್ಕೆ. ಅದನ್ನು ಬಳಸುವ ಕಲೆಗೆ ಅನ್ವಯಿಸಿದರೂ ಆ ಕಲೆಯನ್ನು ರೂಪಿಸುವ ಪ್ರೇರಿಸುವ ಶಕ್ತಿಗಳು ಹಲವು - ಎನ್ನುವ ಕಟ್ಟೆಚ್ಚರದಿಂದ ಲೇಖಕರು ಕುವೆಂಪು ಶೈಲಿಯನ್ನು ಎಳೆಎಳೆಯಾಗಿ ಬಿಡಿಸಲ್ಪಟ್ಟಿರುವರು. ವಸ್ತು ಪಾತ್ರ ಸನ್ನಿವೇಶ ಭಾವಭಾವನೆಗಳೆಲ್ಲವೂ ಭಾಷೆಯ ಮೂಲಕವೇ ಮೈದುಂಬ ಬೇಕು. ವಸ್ತು. ಭಾವನೆಗಳಿಗೆ ತಕ್ಕ ಭಾಷೆ. ಭಾಷೆಗೆ ತಕ್ಕ ಬಂಧ. ಬಂಧಕ್ಕನುಗುಣವಾದ ಛಂದೋಲಾಸ್ಯ - ಒಂದು ಕೃತಿ ರೂಪುಗೊಳ್ಳಲು ಈ ಎಲ್ಲ ಪರಿಕರಗಳೂ ಹಾಳತವಾಗಿ ಔಚಿತ್ಯಪೂರ್ಣವಾಗಿ ಸಂಭವಿಸಬೇಕು. ಅಂತಹ ಒಂದು ಧಾರಣಶಕ್ತಿಯನ್ನು ಸರಳರಗಳೆಯಲ್ಲಿ ಗುರುತಿಸಿದ ಕುವೆಂಪುರವರು ಅದನ್ನು ಮಹಾ ಛಂದಸ್ಸನ್ನಾಗಿ ರೂಪಿಸಿ. 'ಸರ್ವಛಂದಸ್ಸುಗಳ ಸಂಗಮಕ್ಷೇತ್ರ' ಅದೆಂದು ಘೋಷಿಸಿ ಅದನ್ನು ತಮ್ಮ ಮಹಾಕಾವ್ಯದಲ್ಲಿ ಬಳಸಿಕೊಂಡ ಪರಿಯನ್ನು ಲೇಖಕರು ವಿಶ್ಲೇಷಿಸಿ ಹಂತಹಂತವಾಗಿ ಗುರುತಿಸಿ ವಿಮರ್ಶಿಸಿ ತೋರಿಸಿರುವರು. ಅವರ ದೃಷ್ಟಿಯಲ್ಲಿ ಈ ಮಹಾ ಛಂದಸ್ಸು 'ಕುವೆಂಪು ಛಂದಸ್ಸು' ಪಂಪನ ಗಾಂಭೀರ್ಯ. ರನ್ನನ ವೀರ್ಯ. ಜನ್ನನ ಕಥನಕೌಶಲ. ರಾಘವಾಂಕನ ನಾಟಕೀಯತೆ ಇತ್ಯಾದಿಗಳನ್ನೆಲ್ಲ ಮೈಗೂಡಿಸಿಕೊಂಡ ಜೀರ್ಣಿಸಿಕೊಂಡ 'ದರ್ಶನ 'ಕುವೆಂಪುರವರ ಕಾವ್ಯಶೈಲಿಯಾಗಿ ಪರಿಣಮಿಸಿತು. ಅನಿಪ್ರಾಸ ಒಳಪ್ರಾಸಗಳ ಚೆಲುವು. ಅನಿಯತ ಪಾದಗಳ ಹಾಸುಬೀಸು ಹದವಾಗಿ ಬೆರೆತ ಸಂಭಾಷಣಾ ತಂತ್ರ. ಪಾತ್ರಗಳ ಬಾಯಲ್ಲಿ ಬರುವ ಅನುಭವಾಮೃತಗಳೇ ಆಗಿರುವ ಭಾಷಣಗಳು. ಹದವಾಗಿ ಬೆರೆತ ಸಂಸ್ಕೃತ - ಕನ್ನಡ ಮಾತುಗಳು. ಸೂಕ್ತಿ . ಸುಭಾಷಿತಗಳು ಒಂದೊಂದೂ 'ರಾಮಾಯಣದರ್ಶನಂ' ಕಾವ್ಯದ ಶೈಲಿಯ ಉತ್ತಮಿಕೆಗೆ. ಉನ್ನತಿಕೆಗೆ ದುಡಿದಿವೆ. ಕಾವ್ಯದ ಒಟ್ಟಂದವನ್ನು ಹೆಚ್ಚಿಸಿವೆ.

ಭವ್ಯತೆ ಕುವೆಂಪು ಮಹಾಶೈಲಿಯ ಮತ್ತೊಂದು ಲಕ್ಷಣ. ಅಹಲ್ಯೋದ್ಧಾರ. ಹನುಮಂತನ ಸಾಗರೋಲ್ಲಂಘನ. ಕುಂಭಕರ್ಣನನ್ನೆಬ್ಬಿಸುವ ಸಂದರ್ಭವೇ ಮೊದಲಾದ ಕಡೆಗಳಲ್ಲಿ ಈ ಭವ್ಯತೆಯ ಅನುಭವವಾಗುತ್ತದೆಂದು ಹೇಳಿರುವ ಲೇಖಕರು ಹನುಮನ ಸಾಗರೋಲ್ಲಂಘನ ಪ್ರಸಂಗವನ್ನು ಈ ದೃಷ್ಟಿಯಿಂದ ವಿವೇಚಿಸಿಲುರವರು. 'ಬಾಳ್‌ದೋಣಿ','ಆತ್ಮಪಕ್ಷಿ','ಲತಾನಟಿ', 'ತರುತಪಸ್ವಿ'ಯಂತಹ ನೂರಾರು ರೂಪಕಗಳಿಂದ. 'ಬೆಂಕಿಮಲ್ಲಿಗೆ','ಕನಸುಣಿ', 'ಮೈಯ್ಮಿಲಿ'ಯಂತಹ ಹೊಸಹೊಸ ಶಬ್ದರೂಪಗಳಿಂದ. ಹಲವಾರು ಗಾದೆಮಾತುಗಳಿಂದ. ನುಡಿಗಟ್ಟುಗಳಿಂದ ದೀಪ್ತವಾಗಿರುವ. ಸಮೃದ್ಧವಾಗಿರುವ ಕುವೆಂಪು ಶೈಲಿಯನ್ನು ಅದರ ಉಪಮಾರೂಪಕ ಪ್ರತಿಮೆಗಳು. ಪ್ರಕಾರ ವೈವಿಧ್ಯ. ಭಾಷಾವೈವಿಧ್ಯ. ಛಂದೋವೈವಿಧ್ಯಗಳೊಡನೆ 'ಕುವೆಂಪುಶೈಲಿ'ಯಪುಟ ಪುಟದಲ್ಲೂ ಬಿಡಿಸಿಟ್ಟಿರುವರು. ಸರಳ ಪರುಷ ಹ್ರಸ್ವ ದೀರ್ಘಾಕ್ಷರಗಳ ಬಳಕೆಯ ಔಚಿತ್ಯ. ನಾದಸ್ವರೂಪ. ಭಾವಗಳು ಚಿಂತನೆಗಳು - ಇವೆಲ್ಲವುಗಳ ಮೂಲಕ ವ್ಯಕ್ತವಾಗುವ ಕವಿಮನೋಧರ್ಮವನ್ನು ಅಭ್ಯಸಿಸಿ ಕುವೆಂಪು ಶೈಲಿಯೆಂಬುದಾಗಿ ೨೦೭ ಪುಟಗಳಲ್ಲಿ ಕಟ್ಟಿಕೊಡುತ್ತಾರೆ. ಕರಿಯನ್ನು ಕನ್ನಡಿಯಲ್ಲಿ ಒಡಿಯುವ. ಚಂದ್ರಮನನ್ನು ಬಟ್ಟಲೆಣ್ಣೆಯಲ್ಲಿ ತೋರುವ ಸಾಹಸ. ಜಾಣ್ಮೆ ಲೇಖಕರದು. ಹಾಗೆ ಕುವೆಂಪು ಸಾಹಿತ್ಯವಾಙ್ಮಯವನ್ನು ತೋರಿಸುವಲ್ಲಿ ಅವರ ಒಂದೊಂದೂ ಕೃತಿಯ

ವಿಮರ್ಶೆ. ಮೂಲ ಕೃತಿಗಳೊಂದಿಗೆ ಅವುಗಳ ತೌಲನಿಕ ಅಭ್ಯಾಸದ ವಿವರಗಳು;ಗದ್ಯ, ಚಿತ್ರ, ಕತೆ, ಕಾದಂಬರಿ, ಜೀವನಚರಿತ್ರೆ, ಮಹಾಕಾವ್ಯ, ಇತ್ಯಾದಿ ವಿವಿಧ ಸಾಹಿತ್ಯ ಪ್ರಕಾರದ ಲಕ್ಷಣಗಳು; ಕನ್ನಡದ ಇತರ ಪ್ರಮುಖ ಕವಿ -ಕೃತಿಗಳೊಂದಿಗೆ ಕುವೆಂಪುರವರ ಹಾಗೂ ಅವರ ಕೃತಿಗಳ ಹೋಲಿಕೆ ಎಲ್ಲವೂ ಔಚಿತ್ಯ ಪೂರ್ಣವಾಗಿ ಬೆರೆತು ಲೇಖಕರ ಅಭ್ಯಾಸದ ಹರಹನ್ನು, ವ್ಯುತ್ಪತ್ತಿಯನ್ನು ತೋರಿಸುತ್ತಿವೆ. ಚಂದ್ರಹಾಸ ನಾಟಕದ ಶೈಲಿಯ ಬಗ್ಗೆ ಬರೆಯುವಾಗ ಅದರಲ್ಲಿ ಜೈಮಿನಿ ಭಾರತದ (ಪು.೮೭-೮೯) ಅದೇ ಸಂದರ್ಭದಲ್ಲಿ ಕುವೆಂಪು ಮೇಲೆ ಪಂಪನ ಪ್ರಭಾವವನ್ನು ತೋರಿಸಿಕೊಟ್ಟು 'ಇದು ಕುವೆಂಪು ಸಂಪನಿಗೆ ಸಲ್ಲಿಸಿರುವ ಗೌರವ' ವೆನ್ನುವರು. 'ಟೆಂಪೆಸ್ಟ್' ನಾಟಕದೊಡನೆ 'ಬಿರುಗಾಳಿ'ಯನ್ನು ಹೋಲಿಸಿ ಸುದೀರ್ಘವಾಗಿ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು, ನಿರ್ಣಯಗಳನ್ನು ಮಂಡಿಸಿರುವರು (ಪು. ೧೦೦-೧೦೩). ಕಾನೀನ ನಾಟಕದ ವಸ್ತುವನ್ನು ಮಹಾಭಾರತದ ವಸ್ತುವಿನೊಡನೆ ಹೋಲಿಸಿ ಹೇಳಿರುವರು. ರನ್ನ ಲಕ್ಷ್ಮೀಶ ಕುಮಾರವ್ಯಾಸ ರಾಘವಾದಿ ಕವಿಗಳ ಪ್ರಸ್ತಾಪ ಮಾತ್ರವಲ್ಲ; ಲೇಖಕರ ದೃಷ್ಟಿ ವ್ಯಾಟಿಕನ್ ನಗರ, ಲೆನಿನ್‌ಗ್ರಾಡ್ ನಗರ, ಲಂಡನ್, ಹಳಗನ್ನಡ, ನಡುಗನ್ನಡ, ರಗಳೆ, ಸರಳ ರಗಳೆ, ಮಹಾಛಂದಸ್ಸು, ಸಾನೆಟ್, ಭಾವಗೀತೆ, ಮಹಾಕಾವ್ಯ, ಸಾಕ್ರಟೀಸ್, ಕಾಳಿದಾಸ, ಬಯೋತಂತ್ರಜ್ಞಾನ, ಎಸ್.ವಿ. ರಂಗಣ್ಣ, ಹಸುಗಳ ವಿವಿಧ ತಳಿಗಳು, ರಾಮಕೃಷ್ಣ ಪರಮಹಂಸ, ಗಾಂಧಿ, ವಿವೇಕಾನಂದ - ಎಲ್ಲ ಕಡೆಗಳಲ್ಲೂ ಹರಿದಾಡಿದೆ.. "ಕನ್ನಡ ಮಹಾಕವಿ ಸಂಸ್ಕೃತ ಮೋಹಿಯೂ ಅಲ್ಲ ದ್ವೇಷಿಯೂ ಅಲ್ಲ. ಭಾವಕ್ಕೆ ತಕ್ಕ ಭಾಷೆಯ ಬಳಕೆ ಅವರ ವೈಶಿಷ್ಟ್ಯ" ವೆಂದು ಹೇಳುವ ಮೂಲಕ ಕೆಲವು ವಿಮರ್ಶಕರಿಗೆ ಮರು ಪರಿಶೀಲನೆಗೆ ಅವಕಾಶವಿತ್ತಿರುವರು.

ಒಂದೇ ಮಾತಿನಲ್ಲಿ ಹೇಳುವುದಾದರೆ ಕುವೆಂಪು ಶೈಲಿ ಗದ್ಯ, ಪದ್ಯ, ನಾಟಕ, ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಕ್ರಮವಾಗಿ ಬಿಚ್ಚಿಕೊಳ್ಳುತಾ ಮಹಾಕಾವ್ಯದತ್ತ ಮುನ್ನುಗ್ಗಿದೇ; ಗದ್ಯ ನಾಟಕದ ಕಾವ್ಯ ಶೈಲಿಗಳಾಗಿ ರೂಪುಗೊಂಡು ಮಹಾಕಾವ್ಯ ಶೈಲಿಯಾಗಿದೆ; ನಿಸರ್ಗ ಆಧ್ಯಾತ್ಮ ಶೈಲಿಯಾಗಿ ದುಡಿದು ದರ್ಶನವಾಗಿ ಪರಿಣಮಿಸಿದೆಯೆಂಬುದನ್ನು ಲೇಖಕರು ಇಲ್ಲಿ ಸಮರ್ಥವಾಗಿ ಸೂಕ್ಷ್ಮ ಕುಸುರಿಗೆಲಸ ಮಾಡಿ ತೋರಿಸಿಕೊಟ್ಟಿದ್ದಾರೆ. ಕುವೆಂಪುರವರ ಎಲ್ಲ ಪಾತ್ರ ಸನ್ನಿವೇಶ ಕತೆಗಳೂ ಹೇಗೆ ಅವರ ಪೂರ್ಣದೃಷ್ಟಿಗೆ ಪೂರಕವಾಗಿದೆ ದರ್ಶನದತ್ತ ದಾಪುಗಾಲು ಹಾಕಿವೆಯೆಂಬುದನ್ನು ಸೋದಾಹರಣವಾಗಿ ವಿವರಿಸಿ ಓದುಗರಿಗೆ ಮನದಟ್ಟು ಮಾಡಿಸಿರುವರು.

'ಕುವೆಂಪು ಶೈಲಿ' ಕುವೆಂಪು ಸಾಹಿತ್ಯದ ಒಳಗು ಹೊರಗುಗಳೆರಡನ್ನೂ ಪರಿಚಯಿಸಿದರೆ 'ಕುವೆಂಪು ವಿಶ್ವಮಾನವ ಸಂದೇಶ'ವೆಂಬ ಕೇವಲ ೮೪ ಪುಟಗಳ ಪುಟ್ಟಪುಸ್ತಕ ಕುವೆಂಪು ಸಾಹಿತ್ಯದ ಆಂತರ್ಯ, ದರ್ಶನಗಳನ್ನೇ ತೆರೆದಿಡುತ್ತದೆ. ಶ್ರೀ ಕುವೆಂಪುರವರ 'ವಿಶ್ವ ಮಾನವ ಸಂದೇಶ'ವನ್ನು ಮೂರು ಭಾಗಗಳಲ್ಲಿ ಪರಿಚಯಿಸುತ್ತದೆ:

(1) ಮನುಜಮತ ವಿಶ್ವಪಥ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಗಳನ್ನೊಳಗೊಂಡ ಪಂಚಮಂತ್ರ.

(2) ವಿಶ್ವಮಾನವರಾಗಲು ನಾವು ಸಾಧಿಸಲೇಬೇಕಾದ ಮೂಲಭೂತ ಸ್ವರೂಪದ ತತ್ತ್ವ

ಪ್ರಣಾಳಿಕೆಯನ್ನೊಳಗೊಂಡ ಸಪ್ತಸೂತ್ರ.

(3) ವಿಶ್ವಮಾನವಗೀತೆ ಅನಿಕೇತನ

ಜಗತ್ತಿನ ಸರ್ವ ವಿಪತ್ತುಗಳಿಗೂ ಮಾನವನ ಮನಸ್ಸೇ ಮೂಲ. ಸೃಷ್ಟಿಯ ಕೇಂದ್ರಬಿಂದುವಾದ ಮನುಷ್ಯನ ಮನಸ್ಸು 'ಒಳಿತು ಕೆಡಕುಗಳ ಪ್ರಕ್ಷುಬ್ಧ ಸಾಗರ.' ವ್ಯಕ್ತಿ ವ್ಯಕ್ತಿಗಳಲ್ಲಿ ಒಂದರ ಪ್ರಮಾಣ ತುಸು ಹೆಚ್ಚಿರಬಹುದು ; ಇನ್ನೊಂದು ಸ್ವಲ್ಪ ಕಡಿಮೆಯಿರಬಹುದು. ಅಷ್ಟೇ. ಒಳ್ಳೆಯ ಸ್ವಭಾವ ಹೆಚ್ಚಿದ್ದಲ್ಲಿ ರಾಮನಾಗುವನು ಕೆಟ್ಟ ಸ್ವಭಾವದ್ದೇ ಮೇಲುಗೈಯಾದಲ್ಲಿ ರಾವಣನೆನಿಸಿಕೊಳ್ಳುವನು. ಮನುಷ್ಯನ ಮೂಲಭೂತ ರಾಗದ್ವೇಷಗಳು ಅಲ್ಲಿಗೇ ನಿಲ್ಲವು. ಜನಾಂಗದ್ವೇಷ, ಜಾತಿಮತ್ಸರ ಕುಲಗೋತ್ರಗಳ ಬಗೆಗಿನ ಅಸಹನೆ, ಸ್ವಾರ್ಥಸಾಧನೆಗಳ ಪರಿಣಾಮವಾಗಿ ಹಿಂಸೆ, ಕ್ರೌರ್ಯಗಳ ಜನನ;ಹೊಡೆತ ಬಡಿತ ಕಗ್ಗೊಲೆಗಳ ಸಮರಕ್ಕೆ ಆಹ್ವಾನ. ಇಂತಹ ಮೌಢ್ಯ ಮತಭ್ರಾಂತಿ ವೈಜ್ಞಾನಿಕ ಪ್ರಗತಿಗೆ ಮಹಾಕಂಟಕವೆಂಬುದನ್ನು ಮನಗಂಡ ಕುವೆಂಪುರವರು ಸುಮಾರು ೫೦ ವರ್ಷಗಳ ಹಿಂದೆಯೇ ತಮ್ಮ ವಿಚಾರೋಪನ್ಯಾಸಗಳಲ್ಲಿ ಪ್ರಸ್ತಾಪಿಸಿದ್ದಾರೆ. ತಮ್ಮ ಕವಿತೆ ನಾಟಕ ಕಾದಂಬರಿಗಳಲ್ಲಿ ಈ ಬಗ್ಗೆ ಜನರನ್ನೆಚ್ಚರಿಸಿ; 'ಮನುಜ ಮಂತ್ರ ವಿಶ್ವಪಥ' ಮಾನವ ಮಾತ್ರರ ಗುರಿಯಾಗಬೇಕೆಂದು ಸಾರಿ ಹೇಳಿದ್ದಾರೆ. ಮತ ಯಾರೊಬ್ಬರ ಮೀಸಲ ಹಕ್ಕಲ್ಲ; ಆಸ್ತಿಯಲ್ಲ. ಸ್ವತಂತ್ರ ಆಲೋಚನೆ ಎಲ್ಲರ ಜನ್ಮಸಿದ್ಧಹಕ್ಕು. ಮತೀಯ ಜಾತೀಯ ಕಟ್ಟುಪಾಡುಗಳಿಗೊಳಗಾಗದೆ ಅವರವರ ಮತಿಯೊಪ್ಪಿದಂತೆ ನಡೆಯುವುದು ಅತ್ಯಗತ್ಯ. 'ಮತಿ'ಯೇ 'ಮತ'ವಾಗಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನೆಲ್ಲ ಆಲೋಚನಾ ಸಂಪತ್ತನ್ನೂ ವಿಚಾರದ ನಿಕಷಕ್ಕೆ ತಿಕ್ಕಿ, ಒರೆಹಚ್ಚಿ ಸತ್ಯಾಸತ್ಯತೆಗಳನ್ನು ಪತ್ತೆಹಚ್ಚಿಕೊಳ್ಳಬೇಕು. ಈ ವೈಜ್ಞಾನಿಕ ಬುದ್ಧಿಯೇ ವಿಜ್ಞಾನದ ಮೂಲಾಧಾರ. ಇದು ತೋರಿಸುವ ಮಾರ್ಗವೇ ವಿಶ್ವಪಥ. ನಿಜವಾದ ಮಾನವಧರ್ಮಕ್ಕೆ ಮಾತ್ರ ಇಲ್ಲಿ ಎಡೆ

ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ!

ಅಜ್ಞಾನ ಮೌಢ್ಯ ಅವಿವೇಕಗಳ ವಿರುದ್ಧ ಸಮರ ಸಾರಬೇಕು. ವಿಶ್ವಪ್ರೇಮ ಕಾತರತೆಯ ದೃಷ್ಟಿಯಿಂದ ಮುಂದುವರಿಯಬೇಕು - ಎಂಬ ಕುವೆಂಪು ಸಾಹಿತ್ಯದ ಕರೆಯನ್ನು ಲೇಖಕರು ಎಳೆಎಳೆಯಾಗಿ ಬಿಡಿಸಿ ಮನದಟ್ಟು ಮಾಡಿರುವರು. ಕುವೆಂಪು ಧರ್ಮವಿರೋಧಿಯಲ್ಲವೆಂಬುದನ್ನು ಒತ್ತಿಹೇಳುವುದಲ್ಲದೆ ಪ್ರಪಂಚದ ಎಲ್ಲ ಧರ್ಮಗಳೂ ಮೂಲಭೂತವಾಗಿ ಪರಸ್ಪರ ಪೂರಕಗಳು; ಒಂದೇ ಸನಾತನ ಧರ್ಮದ ಹಲವಾರು ಪ್ರತಿಬಿಂಬಗಳು. ಆದ್ದರಿಂದ ನಾವು ಎಲ್ಲ ಧರ್ಮಗಳನ್ನು ಗೌರವಿಸಬೇಕೆಂಬುದು ಕುವೆಂಪು ಆಶಯವೆಂದಿರುವರು. ದೇವರ ಹೆಸರಿನಲ್ಲಿ ಕಿತ್ತಾಡುವವರು ಧರ್ಮದ್ರೋಹಿಗಳೇ ವಿನಾ ಧರ್ಮನಿಷ್ಠರಲ್ಲ. ತಮ್ಮ ಧರ್ಮವೇ ಶ್ರೇಷ್ಠವೆಂಬ ಭಾವನೆ ಸಂಕುಚಿತ ದೃಷ್ಟಿಯ ಪ್ರತೀಕ. ವಿಚಾರ ಆಚಾರಗಳಲ್ಲಿ ಒಮ್ಮತವಿರುವುದು ಅತಿಮುಖ್ಯ. ದೊರೆ ಪುರೋಹಿತರಿಬ್ಬರೂ ನಿರ್ನಾಮಗೊಂಡಾಗ ಮಾತ್ರ ಜನತೆಗೆ ಬಿಡುಗಡೆ. ಕಳ್ಳಗುರುವಿನ ಸುಳ್ಳು ಉಪದೇಶ

ನಿಲ್ಲಬೇಕು. ಪುರೋಹಿತಶಾಹಿಗಳ ಭದ್ರಕೋಟೆ ನುಚ್ಚುನೂರಾಗಬೇಕು - ಇತ್ಯಾದಿ ಕುವೆಂಪು ವಿಚಾರಧಾರೆಗೆ ಸ್ಪಂದಿಸುತ್ತಾ "ಈ ಪುರೋಹಿತರ ಬಲೆಗಳಿಗೆ ಬೀಳುವ ಎಬಡರು ಆತ್ಮಶ್ರದ್ಧೆಯಿಲ್ಲದ, ಬುದ್ಧಿಲವಲೇಶವಿಲ್ಲದ, ದಾಸ್ಯ ಮನೋಭಾವದ, ಭಯಭೀತ ಪಶುಗಳೇ ಹೊರತು, ಮನುಷ್ಯರಲ್ಲ" -ಎಂದು ದನಿಗೂಡಿಸುತ್ತಾರೆ. ಲೇಖಕರು 'ಜಲಗಾರ' ನಾಟಕದಲ್ಲಿಯ ಮತದ ಹುಟ್ಟು ಬೆಳವಣಿಗೆಯ ಬಗ್ಗೆ ಕುವೆಂಪು ವಿಚಾರಗಳಲ್ಲಿ "ಫ್ರಾನ್ಸ್, ರಷ್ಯಾ ಮೊದಲಾದ ಜಗತ್ತಿನ ಎಲ್ಲ ಸಮಾಜವಾದಿಗಳ, ಮಾನವತಾವಾದಿಗಳ ಮತ್ತು ಕ್ರಾಂತಿಕಾರರ ಅನುಭವಸಾರ ಅಡಕಗೊಂಡಿದೆ. ಭೇದ ನಿರ್ಮೂಲನವೆ ಸರ್ವಸಮತ್ವಕ್ಕೆ ಮೊದಲು; ಅದೇ ಜಗತ್ಕಲ್ಯಾಣಕ್ಕೆ ಆದಿ. ಸರ್ವರ ಸುಖೀರಾಜ್ಯ ಸ್ಥಾಪನೆಯಾಗಬೇಕಾದರೆ ಉಚ್ಚ ನೀಚ ಶ್ರೀಮಂತ ದರಿದ್ರ ಎಂಬ ಭಾವನೆಗಳು ಬುಡಮಟ್ಟ ಹೋಗಬೇಕು. ಇದೇ ಜ್ಞಾನ ವಿಜ್ಞಾನಗಳ ಎಲ್ಲ ತಂತ್ರಮಂತ್ರಗಳ ಸಕಲ ಸಾಧನೆಗಳ ಹಾಗೂ ಮಾನವ ಜೀವನದ ಸರ್ವಗುರಿಯಾಗಬೇಕು"-ಎಂದು ಕುವೆಂಪುರವರ ಸೂತ್ರಪ್ರಾಯ ಮಾತುಗಳನ್ನು ವ್ಯಾಖ್ಯಾನಿಸಿರುವರು(ಪು.೧೭).

"ಸೆಕ್ಯುಲರ್ ಸ್ಟೇಟ್" ಎಂದರೆ ಧರ್ಮಬಾಹಿರ ,ಮತ ವಿದ್ವೇಷಕರ, ನಾಸ್ತಿಕ ಅಥವಾ ಚಾರ್ವಕ ಎಂದರ್ಥವಲ್ಲ. ಸಮನ್ವಯರಾಷ್ಟ್ರ ಎಂದರ್ಥ ಎಂಬುದು ಕುವೆಂಪು ಅವರ ವಿವರಣೆ"-ಎಂದು ಲೇಖಕರು ಸ್ಪಷ್ಟಪಡಿಸಿರುತ್ತಾರೆ. ಎಲ್ಲ ಮತಗಳೂ ನಮ್ಮನ್ನು ಸತ್ಯಪಥದೆಡೆಗೆ ಕೊಂಡೊಯ್ಯುವ ವಿಭಿನ್ನ ದಾರಿಗಳು. ಆದ್ದರಿಂದ ಮತಗಳ ಪರಸ್ಪರ ನಿಂದನೆಗೆ ಅರ್ಥವೂ ಇಲ್ಲ; ಕಾರಣವೂ ಇಲ್ಲ. ಮತ್ತು ಮತಾಂತರಗೊಳಿಸುವ 'ಬರ್ಬರ ಕ್ರಿಯೆ' ಗಳಿಗೂ ಇಲ್ಲಿ ಅರ್ಥವಿಲ್ಲವೆನ್ನುವ ಕುವೆಂಪುರವರ ಇಂಗಿತವನ್ನು ಸಾಕಷ್ಟು ವಿವರವಾಗಿ ವಿವೇಚಿಸಲಾಗಿದೆ. ಕುವೆಂಪುರವರ ಈ ಅಭಿಪ್ರಾಯಕ್ಕೆ ಪೂರಕವಾಗಿ ಅವರ'ಷಷ್ಟಿನಮನ' 'ವಿಚಾರಕ್ರಾಂತಿಗೆ ಆಹ್ವಾನ ' 'ಘಟಿಕೋತ್ಸವದ ಭಾಷಣ'ಎಲ್ಲವನ್ನೂ ಬಳಸಿಕೊಂಡಿರುವುದು ಲೇಖಕರು ಕುವೆಂಪು ಸಾಹಿತ್ಯದಲ್ಲಿ ಎಷ್ಟರಮಟ್ಟಿಗೆ ಮುಂದು ಮಡಿಯುಟಇದ್ದಾರೆಂಬುದನ್ನು ಸ್ಪಷ್ಟಪಡಿಸುತ್ತದೆ. ಸಂವಿಧಾನಕರ್ತರ ಮನಸ್ಸಿನಲ್ಲಿ ಇಷ್ಟಲ್ಲ ಅರ್ಥವಿತ್ತೇ ಎನ್ನುವುದು ಸಂಷಯಾಸ್ಪದ ಸಂಗತಿ.ಆಗಿ ಕಂಡಿದೆ, ಲೇಖಕರಿಗೆ. ನಮ್ಮ ಧಾರ್ಮಿಕ ಮುಖಂಡರು, ರಾಜಕೀಯ ಪಟುಗಳು ಈ ವಿಷಯದಲ್ಲಿ ಕೇವಲ 'ಹಾಲುಹೊತ್ತ ವಾಹನಗಳು', ಅಷ್ಟೇ. ಅದರ ಅರ್ಥ ಅವರಿಗಾಗಿದ್ದರೆ ಬಾಬರಿಮಸೀದಿ ರಾಮಜನ್ಮಭೂಮಿ ಪ್ರಕರಣ ಇಷ್ಟು ಪ್ರಕೋಪಕ್ಕೆ ಹೋಗಬೇಕಾಗಿರಲಿಲ್ಲವೆಂಬುದು ಲೇಖಕರ ಅಭಿಪ್ರಾಯ. ವೈಯಕ್ತಿಕವಾದ ಧರ್ಮಕ್ಕೂ ಸರ್ಕಾರಕ್ಕೂ ಯಾವ ರೀತಿಯ ಸಂಬಂಧವೂ ಇರಬಾರದು. ಸತ್ಯಶೋಧನೆಗಳೇ ಆಗಿದ್ದ ವಿವಿಧ ಮತಾಚಾರ್ಯರ ಬೋಧನೆಗಳು ಬರುಬರುತ್ತಾ ಹೇಗೆ ಯೂನಿಯನ್‌ಗಳಾದವೂ, ,ಇಂಡಿಕೇಟ್‌ಗಳಾದುವು; ಜನತೆಯನ್ನು ಒಗ್ಗೂಡಿಸುವ ಬದಲು ವಿಚ್ಛಿದ್ರಕಾರಕ ಶಕ್ತಿಗಳಾದುವು ಎಂಬುದನ್ನು ಸರಳ ಮಾತುಗಳಲ್ಲಿ, ಹಂತಹಂತವಾಗಿ ಬಿಡಿಸಿ ಹೇಳಲಾಗಿದೆ. 'ಮತ ಮತ್ತು ರಾಜಕೀಯದ ಕಾಲ ಆಗಿಹೋಯಿತು. ಇನ್ನೇನಿದ್ದರೂ ಅಧ್ಯಾತ್ಮ ಮತ್ತು ವಿಜ್ಞಾನಗಳಿಗಿಲ್ಲದ್ದರಿಂದಲೇ ಪ್ರಪಂಚ ಅಪಾಯದ ಅಂಚಿಗೆ ದಿನೇ ದಿನೇ ಸರಿಯುತ್ತಿದೆ' -ಎಂಬ ತಮ್ಮ ವ್ಯಾಖ್ಯಾನದಿಂದ

ಪುಷ್ಟೀಕರಿಸಿರುವರು. ''ಕುವೆಂಪು ಅವರು ಜಾತ್ಯತೀತರು. ಅವರದು ವಿಶ್ವಪ್ರಜ್ಞೆಯ ಸಮಾನತಾ ದೃಷ್ಟಿಯೆಂಬುದಂತು ನಿಜ''-ಎನ್ನುವ ಲೇಖಕರು 'ಸನಾತನವೂ ಶಾಶ್ವತವು ಆಧ್ಯಾತ್ಮಿಕವೂ ವಿಚಾರ ಮತ್ತು ವಿಜ್ಞಾನಗಳಿಗೆ ಅವಿರುದ್ಧವೂ ಆಗಿರುವ ಸತ್ಯ ಎಲ್ಲಿಯೇ ಇರಲಿ (ಅಭಾರತೀಯವಾದರೂ ಸರಿಯೆ) ಅದನ್ನು ನಾನು ಸ್ವೀಕರಿಸಿದ್ದೇನೆ''-ಎನ್ನುವ ಕುವೆಂಪು ಮಾತಿನ ಧೋರಣೆಯತ್ತ ಓದುಗರ ಗಮನ ಸೆಳೆದಿರುವರು.

ನಮ್ಮ ದೇಶದಲ್ಲಿ ಸಾಕಷ್ಟು ವಿಜ್ಞಾನವಿದೆ;ಆದರೆ ವೈಜ್ಞಾನಿಕ ಮನೋಭಾವವಿಲ್ಲ. ಆಚಾರ ಡಂಭಾಚಾರಗಳು ಯಥೇಚ್ಛವಾಗಿವೆ; ಆದರೆ ವಿಚಾರವಿಲ್ಲ. ಚಂದ್ರಲೋಕಕ್ಕೆ ಮನುಷ್ಯನು ಪದರ್ಪಣೆ ಮಾಡಿ ಯಶಸ್ವಿಯಾಗಿ ಹಿಂತಿರುಗಿದ್ದರೂ ಸೂರ್ಯಚಂದ್ರರಿಗೆ ಇನ್ನೂ ರಾಹುಕೇತುಗಳಕಾಟ ತಪ್ಪಿಲ್ಲ.... ಈಗಿನ ಶಿಕ್ಷಣ ಪದ್ಧತಿ ಅವಿದ್ಯಾವಂತ ಕೋಮುವಾದಿಯನ್ನು ವಿದ್ಯಾವಂತ ಮೂಢನಂಬಿಕಸ್ಥನನ್ನಾಗಿಯೂ, ಅವಿದ್ಯಾವಂತ ಕೋಮುವಾದಿಯನ್ನು ವಿದ್ಯಾವಂತ ಕೋಮುವಾದಿಯನ್ನಾಗಿಯೂ ಮಾಡುತ್ತಾ ಇದೆ. ವಿದ್ಯಾವಂತ ಮೂಢನಂಬಿಕಸ್ಥ, ವಿದ್ಯಾವಂತ ಕೋಮುವಾದಿ ಸಮಾಜಕ್ಕೆ ಉಳಿದಲ್ಲರಿಗಿಂತಲೂ ಹೆಚ್ಚು ಅಪಾಯ - ಇತ್ಯಾದಿ ಕುವೆಂಪು ವಿಚಾರಸರಣಿಯನ್ನು ಕ್ರೋಡೀಕರಿಸಿ, ಆ ಪ್ರಶಸ್ತ ಹಿನ್ನೆಲೆಯಲ್ಲಿ ಲೇಖಕರು ವಿಶ್ವಮಾನವ ಸಂದೇಶವನ್ನು ಅರ್ಥೈಸಹೋಗಿರುವುದು ಅರ್ಥಪೂರ್ಣವಾಗಿದೆ.

ಜೀವನ ಬಹುಮುಖಿ; ವೈವಿಧ್ಯಪೂರ್ಣ;ವೈರುಧ್ಯಗಳ ಆಗರ. ಇವುಗಳ ನಡುವೆ ಸಿಲುಕಿ ಕಂಗಾಲಾದ ವ್ಯಕ್ತಿ ಇತರರೊಡನೆ ಸೌಹಾರ್ದ ಸಾಮರಸ್ಯ ಮನೋಭಾವದಿಂದ ವರ್ತಿಸತೊಡಗುತ್ತಾನೆ. ವೈವಿಧ್ಯದಲ್ಲಿ ಏಕತೆಯೆಂಬುದು ಭಾರತೀಯ ಸಮನ್ವಯ ಮನೋಧರ್ಮದ ತಾತ್ವಿಕ ಅಭಿವ್ಯಕ್ತಿ. ಈ ತತ್ವ ಆಚರಣೆಯಲ್ಲಿ ಬಂದಿಗ ಮಾತ್ರ ಅದು ಅರ್ಥಪೂರ್ಣ. ಭೇದಗಳಳಿಯಲು ಸಮನ್ವಯಭಾವವೊಂದೇ ದಿವ್ಯೌಷಧ. ಅದೇ ಜೀವನವನ್ನು ನೋಡುವ ಪೂರ್ಣದೃಷ್ಟಿಯೂ ಹೌದು. ಇಂಥ ಮನಸ್ಸು ಸರ್ವರ ಅಭ್ಯುದಯವನ್ನೂ ಬಯಸುತ್ತದೆ. ವಿನೋಬಾರವರು ಹೇಳುವಂತೆ 'ಅಂತ್ಯೋದಯ'ವೇ ಸರ್ವೋದಯದ ಪರಮಗುರಿಯೂ ಆಗಿದೆ. ಬಸವಣ್ಣನವರ ಕಾಯಕ ಸಿದ್ಧಾಂತವೂ ಈ ಪರಿಕಲ್ಪನೆಯ ಇನ್ನೊಂದು ರೂಪವೇ. 'ಸರ್ವೋದಯ'ವೇ ಈ ಮನೋಭಾವಗಳ ಹಿಂದಿರುವ ತತ್ವ -ಕುವೆಂಪುರವರ ಈ ವಿಚಾರಧಾರೆಯನ್ನು ರಾಮಕೃಷ್ಣ ಪರಮಹಂಸ, ವಿವೇಕಾನಂದ, ರಸ್ಕಿನ್, ಟಾಲ್‌ಸ್ಟಾಯ್, ಕ್ರಿಸ್ತಾ, ಥೋರೋ, ವಿನೋಬಾ ಮೊದಲಾದವರ ವಿಚಾರಗಳೊಡನೆ ಹೋಲಿಸಿ ಹೇಳುವಲ್ಲಿ ಲೇಖಕರ ವ್ಯುತ್ಪತ್ತಿಯ ಹರಹು ಗೋಚರವಾಗುತ್ತದೆ..

ಕುವೆಂಪುರವರ 'ಪೂರ್ಣದೃಷ್ಟಿ' ಪರಿಕಲ್ಪನೆಯನ್ನು ಲೇಖಕರು ಸೊಗಸಾದ ದೃಷ್ಟಾಂತದ ಮೂಲಕ ವ್ಯಾಖ್ಯಾನಿಸಿರುವರು. ನಾವೆಲ್ಲ ತಿಳಿದಿರುವಂತೆ ಮಂಥರೆ ರಾಮಾಯಣದಲ್ಲಿ ಒಂದು ಯಃಕಶ್ಚಿತ್ ಕುರೂಪಿಯ ಪಾತ್ರ. ತಬ್ಬಲಿಯಾಗಿ ಕಾಡಿನಲ್ಲಿ ರೋಧಿಸುತ್ತಿದ್ದು, ದಶರಥನ ಔದಾರ್ಯದಿಂದ ಅರಮನೆಗೆ ಬಂದ ಪಾತ್ರ. ಆದರೆ ರಾಮಾಯಣ ದರ್ಶನದ ಕವಿಯ ಪೂರ್ಣದೃಷ್ಟಿಯಲ್ಲಿ ಅದೊಂದು ಸಹಜವಾದ ಆದರೆ

ಅನಿವಾರ್ಯವಾದ ಘಟನೆ. ಮುಂದೆ ಶ್ರೀರಾಮಲಕ್ಷ್ಮಣ ಸೀತೆಯರು ಕಾಡಿಗೆ ಹೋದದ್ದು. ರಾಮ ಅಯೋಧ್ಯೆಯ ಭುವನಾಭಿರಾಮನಾದದ್ದು ಆ ಪಾತ್ರವಿದ್ದುದರಿಂದಲೇ. ಸೃಷ್ಟಿಯಲ್ಲಿ ನಡೆಯುವ ಯಾವ ಒಂದು ಘಟನೆಯೂ ತನ್ನಷ್ಟಕ್ಕೆ ತಾನೇ ನಡೆಯುವುದಿಲ್ಲ; ಇತರ ಎಲ್ಲ ಘಟನೆಗಳಿಗೆ ಸಂಬಂಧಿಸಿಯೇ ನಡೆಯುತ್ತದೆಂದು ಗ್ರಹಿಸುವುದು ಪೂರ್ಣದೃಷ್ಟಿ ಅಥವಾ ಅಖಂಡಸೃಷ್ಟಿ.

ಹುಟ್ಟು ಆಕಸ್ಮಿಕ. ವರ್ಣಗಳು ಗುಣಕರ್ಮಗಳಿಗನುಗುಣವಾದವುಗಳು. ಮನುಷ್ಯಕುಲ ಒಂದೇ. 'ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು', ಜಾತಿಪದ್ಧತಿ -ಯಾವ ದೇಶ, ಮತಗಳಲ್ಲಿದ್ದರೂ ಇದನ್ನು ನಿರ್ನಾಮಗೊಳಿಸಬೇಕು. ಜಾತಿ ವಿನಾಶವೇ ವಿಶ್ವಶಾಂತಿಗೆ, ಸಾಮಾಜಿಕ ಸೌಹಾರ್ದಕ್ಕೆ ಮೂಲ. ಅಸ್ಪೃಶ್ಯತೆ ಹಿಂದೂಮತ ಸೃಷ್ಟಿಸಿರುವ ಪಾಪ. ಮತತೊಲಗಿ ಅಧ್ಯಾತ್ಮ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು. ಮತ ಮನುಜ ಮತವಾಗಿ ಪಥ ವಿಶ್ವಪಥವಾದಾಗ ಮಾತ್ರ ಮಾನವ ವಿಶ್ವಮಾನವನಾಗಬಲ್ಲ. ಮತಾಂಧತೆ ಮತಾಂತರಗಳೆರಡೂ ಅನಾಗರೀಕತೆಯ ಬರ್ಬರತೆಯ ಸಂಕೇತಗಳೇ ಆಗಿವೆ. 'ಬ್ರಾಹ್ಮಣಜಾತಿ' ಹಾಗೂ 'ಬ್ರಾಹ್ಮಣ್ಯ'ಗಳೆರಡು ಒಂದೇ ಅಲ್ಲ. ಈಗ ಬ್ರಾಹ್ಮಣ್ಯ ಗುಣಗಳುಳ್ಳ ಬ್ರಾಹ್ಮಣರಿಲ್ಲವಾದ್ದರಿಂದ ಬ್ರಾಹ್ಮಣ್ಯ ಜಾತಿ ಬೇಕಿಲ್ಲವೆಂಬುದು ಕುವೆಂಪು ನಿಲುವು - ಜಾತಿ ಮತಗಳ ಬಗ್ಗೆ ಕುವೆಂಪು ಅಭಿಪ್ರಾಯವನ್ನು ಲೇಖಕರು ಸ್ಪಷ್ಟಪಡಿಸಿರುವ ರೀತಿಯಿದು.

ವಿಶ್ವಮಾನವ ಸಂದೇಶದ ಮೂರನೆಯ ಭಾಗ ವಿಶ್ವಮಾನವಗೀತೆ. 'ಅನಿಕೇತನ'. ೧೯೫೨ರಲ್ಲಿ ಆತ್ಮನನ್ನು ಸಂಬೋಧಿಸಿ ರಚಿತವಾಗಿರುವ ಗೀತೆಯಿದು. ಮತ ಜಾತ್ಯಾದಿ ಉಪಾಧಿಗಳಿಂದ ಮುಕ್ತವಾದ ಆತ್ಮಕ್ಕೆ ಅನಂತವೇ ಗುರಿಯಾದಾಗ ನಿಜವಾದ ಅರ್ಥದಲ್ಲಿ ಮನುಷ್ಯ ಸ್ವತಂತ್ರನಾಗುತ್ತಾನೆಂಬ ಕುವೆಪು ನಿಲುವನ್ನು ಲೇಖಕರು ಇಲ್ಲಿ ಗೀತೆಯ ಶ್ಲೋಕಗಳ ಮೂಲಕ ವಿವರಿಸಿದ್ದಾರೆ. ನಿರ್ದಿಗಂತವಾದ ಪರಮಸತ್ಯದ ಶೋಧನೆಯೇ ಆತ್ಮಯಾತ್ರೆಯ ಪರಮಕರ್ತವ್ಯ. ಅನಂತತೆಯ ಅನುಭಾವವೇ ಬ್ರಹ್ಮಾನಂದ. ಜಗತ್ತಿನ ಮಹಾಸಾಧಕರ ದೃಷ್ಟಿಯೆಲ್ಲವೂ ಅತ್ತಲೇ; ಆ ಅತಿಮಾನಸದ ಅನಂತತೆಯ ಕಡೆಗೇ ಎಂಬುದನ್ನು ಸರಳವಾದ ಮಾತುಗಳಲ್ಲಿ ವಿವರಿಸಲಾಗಿದೆ.

ಲೇಖಕರ ಪ್ರಕಾರ ಈ ವಿಶ್ವಮಾನವ ಸಂದೇಶಕ್ಕೆ ಪ್ರತಿಮಾರೂಪಕವಾಗಿದೆ. ರಾಮಾಯಣ ದರ್ಶನಂ ಮಹಾಕಾವ್ಯ. ಪ್ರಾಚೀನ ಅರ್ವಾಚೀನ ದರ್ಶನ ತತ್ತ್ವಗಳ ಸತ್ವವನ್ನು ವೈಜ್ಞಾನಿಕ ಮನೋಧರ್ಮದ ಒರೆಗಲ್ಲಿಗೆ ತೀಡಿ, ವಿಚಾರಮತಿಯ ಗಾಳಿಯಿಂದ ಅದನ್ನು ಮತ್ತೆ ತೂರಿ ಬಳಿಕ ಕೆಳಗಿಳಿದ ತ್ರಿಕಾಲಾಬಾಧಿತ ಗಟ್ಟಿಕಾಳುಗಳುಂತಿರುವ ಸತ್ಯವನ್ನಲ್ಲಿ ಕಾಣುತ್ತೇವೆ. ಜಾತಿಮತಗಳಿಂದ ಮುಕ್ತವಾದ ಅನಂತಾತ್ಮದ ಅಭಿವ್ಯಕ್ತಿ ಅಲ್ಲಿದೆ. ಕುವೆಂಪುವನ್ನೇ ಸೃಜಿಸಿದ, ಸಮನ್ವಯ ಸರ್ವೋದಯ ಪೂರ್ಣ ದೃಷ್ಟಿಗಳನ್ನೊಳಗೊಂಡ ಮಹಾಕಾವ್ಯವದು. ಪ್ರೇಮ ಅಹಿಂಸೆಯ ಮಾರ್ಗಗಳಿಗೇ ಅಲ್ಲಿ ಒತ್ತು ಕೊಡಲಾಗಿದೆ. 'ಎಲ್ಲಕ್ಕೂ ಪ್ರೇಮವೊಂದೇ ಮದ್ದು. ಸೇಡಿಗೆ ಸೇಡು, ದ್ವೇಷಕ್ಕೆ ದ್ವೇಷ, ವೈರಕ್ಕೆ ವೈರ ಮದ್ದಲ್ಲ'ವೆಂಬ ವಿವೇಕ ಕೃತಿಯಲ್ಲಿ ಎದ್ದುಕಾಣುತ್ತದೆ. 'ಪರಮಪಾಪಿಗೂ ಉದ್ಧಾರವಕಾಶವಿದೆ'

'ಮತಗಳು ಸೃಷ್ಟಿಸಿದ ದ್ವೇಷಾಸೂಯಗಳು ಶಸ್ತ್ರಾಸ್ತ್ರಗಳಿಗಿಂತ ಭೀಕರವಾದವು' ಇತ್ಯಾದಿ ಅನೇಕ ಮಾನವೀಯ, ವೈಜ್ಞಾನಿಕ ತತ್ವಗಳು ಅಲ್ಲಿ ಕಾಣಸಿಗುತ್ತವೆ. ಹೆಜ್ಜೆಹೆಜ್ಜೆಗೂ ಮಹಾಕಾವ್ಯದಲ್ಲಿ ತಪಸ್ಸು, ಪೂರ್ಣದೃಷ್ಟಿ, ಸರ್ವೋದಯ, ಪ್ರಾರ್ಥನೆಗಳ ಪ್ರಬಲಶಕ್ತಿಗಳು ಅರಿವಿಗೆ ಬರುವುದನ್ನು ಲೇಖಕರು ಎತ್ತಿತೋರಿಸಿರುವರು. 'ತನ್ನತಾನ್ ಇಲ್ಲಗೈಮದೆ', 'ಆತ್ಮಲಯವೆ' ಎಲ್ಲ ಸಾಧನೆಗೆ ಕೊನೆಯ ಗುರಿಯೆಂದು ಹೇಳಿ 'ತಪಸ್ಸಿದ್ಧಿ'ಯಿಂದಲೇ ಕಾವ್ಯ ಮುಕ್ತಾಯಗೊಳ್ಳುವುದರತ್ತನಮ್ಮಗಮನ ಸೆಳೆದಿರುವುರು. ಪ್ರಸ್ತುತ ಕಾವ್ಯದ ಒಟ್ಟು ಸಂದೇಶವೇ ಇದು. ಪ್ರಾರ್ಥನೆ ಧ್ಯಾನ ತಪಸ್ಸುಗಳೇ ಮಾನವ ಶ್ರಮಿಸಬೇಕಾಗಿರುವ ವಿಶ್ವಪಥಗಳು. ಸಮನ್ವಯ ಮತ್ತು ಪೂರ್ಣದೃಷ್ಟಿಗಳ ಅನುಷ್ಠಾನದಿಂದ ದ್ವಂದ್ವಗಳ ನಡುವಿನ ಭೇದ ನಿವಾರಣೆಯಾಗಿ ಸರ್ವೋದಯವೆಂಬ ಸತ್ಯದರ್ಶನವಾಗುವುದೇ ' ರಾಮಾಯಣದರ್ಶನಂ' ಕಾವ್ಯದ ' ತಪಸ್ಸಿದ್ಧಿ'
ಯೆಂಬುದು ಸುಸ್ಪಷ್ಟ.

ಭಾರತೀಯ ಪರಂಪರೆಯ ವಿಶ್ವಮಾನವ ಸಂದೇಶಕ್ಕೆ ಶ್ರೀ ಕುವೆಂಪುರವರ ಕೊಡುಗೆಯೇನು ಎಂಬುದನ್ನು ಗ್ರಂಥದ ಕೊನೆಯ ಭಾಗದಲ್ಲಿ ಲೇಖಕರು ವಿಶ್ಲೇಷಿಸಿ ತೋರಿಸಿದ್ದಾರೆ. ವಿಶ್ವಮಾನವ ಪ್ರಜ್ಞೆಯ ಉದಯ ಪ್ರಧಾನವಾಗಿ ಭಾರತೀಯ ಸಂಸ್ಕೃತಿಯಲ್ಲಿ. ಸರ್ವೋದಯ ಪರಿಕಲ್ಪನೆಯನ್ನು ಅನುಷ್ಠಾನಕೆ ತಂದು ಅದನ್ನು ತಾತ್ವಿಕ ಮಟ್ಟಕ್ಕೇರಿಸಿದವರು ಗಾಂಧೀಜಿ. ಸಮನ್ವಯ ತತ್ವ ಶ್ರೀ ರಾಮಕೃಷ್ಣ ಪರಮಹಂಸರ ಜೀವನಾನುಭವ. ಮನುಜಮತ ವಿಶ್ವಪಥಗಳು ಸ್ವಾಮಿ ವಿವೇಕಾನಂದರ ಮಾನಸಜನ್ಯ ಶಿಶುಗಳು. ಪೂರ್ಣದೃಷ್ಟಿ, ಅನಿಕೇತನ ಪರಿಕಲ್ಪನೆಗಳು ಗೀತೆ ಉಪನಿಷತ್ತುಗಳ ಸಾರಫಲಗಳು. ಈ ಎಲ್ಲ ಪ್ರಾಚೀನ ತತ್ವಗಳನ್ನು ಆಧುನಿಕ ವಿಜ್ಞಾನ, ವಿಚಾರ ಹಾಗೂ ದರ್ಶನಗಳೊಡನೆ ಮೇಳೈಸಿ ಅವುಗಳನ್ನು ಹೊಸದೃಷ್ಟಿಯಿಂದ ಅರ್ಥೈಸಿದ್ದಾರೆ, ಶ್ರೀ ಕುವೆಂಪು. ಅವುಗಳನ್ನು ಇಡಿಯಾಗಿ ಗ್ರಹಿಸಿ ಪ್ರತಿಮಾರೂಪದ ಮಹಾಕಾವ್ಯವಾಗಿ ಬಿತ್ತರಿಸಿರುವರು. ವಿಶ್ವಪ್ರಜ್ಞೆ, ವಿಶ್ವವಿದ್ಯೆಗಳಿಂದ ಮೂಡುವ ವಿಶ್ವಮೈತ್ರಿಯನ್ನು ಅನುಭವಿಸಬಲ್ಲವನೇ ವಿಶ್ವಮಾನವ. ಇಂತಹ ವಿಶ್ವಮಾನವನ ಸೃಷ್ಟಿ ಸಾಹಿತ್ಯದಿಂದಾಗಬೇಕು. ವಿಶ್ವವಿದ್ಯಾನಿಲಯಗಳಿಂದಾಗಬೇಕೆನ್ನುತ್ತಾರೆ ಕುವೆಂಪು. ಪರಮಾರ್ಥಸಾಧನೆಯಿಲ್ಲದ ವಿದ್ಯೆ ಅಪೂರ್ಣ ಅವರದೃಷ್ಟಿಯಲ್ಲಿ- ಎಂಬುದನ್ನು ಸ್ಪಷ್ಟಪಡಿಸುತ್ತಾ ಲೇಖಕರು ಪುಸ್ತಕದ ಅನುಬಂಧವಾಗ ಭಾರತದ ಭದ್ರತೆಗೆ ಸರ್ವರೂ ಅನುಸರಿಸಬೇಕಾಗಿರುವ ೧೨ ಸೂತ್ರಗಳನ್ನು ಹೇಳಿ ' ಕುವೆಂಪು ವಿಶ್ವಮಾನವ ಸಂದೇಶ' ಕೃತಿಯನ್ನು ಮುಗಿಸಿದ್ದಾರೆ.

ಒಟ್ಟಿನಲ್ಲಿ ' ಕುವೆಂಪುಶೈಲಿ', 'ಕುವೆಂಪು ವಿಶ್ವಮಾನವ ಸಂದೇಶ' ಈ ಎರಡು ಕೃತಿಗಳೂ ಕುವೆಂಪುರವರ ಅಗಾಧ ಸಾಹಿತ್ಯ ವಾಙ್ಮಯದ ಅಂತರಂಗ ಬಹಿರಂಗ, ದರ್ಶನ ಸ್ವರೂಪಗಳನ್ನು ಓದುಗರಿಗೆ ಸರಳವಾಗಿ, ಆಪ್ತವಾಗಿ, ಅರ್ಥಪೂರ್ಣವಾಗಿ ಪರಿಚಯ ಮಾಡಿಕೊಟ್ಟಿವೆಯೆನ್ನಬಹುದು. ಈ ಎರಡು ಗ್ರಂಥಗಳ ಅಧ್ಯಯನ ಮಾಡಿದಲ್ಲಿ ಶ್ರೀ ಕುವೆಂಪು ಸಾಹಿತ್ಯದ ಒಟ್ಟಾರೆ ಅಧ್ಯಯನವಾದಂತೆಯೇ ಸರಿ.

* * * * *

ಪುಣ್ಯಾಸ್ರವದಲ್ಲಿ ಚಿತ್ರಕಲೆ

- ಅ. ಲ. ನರಸಿಂಹನ್

ಪ್ರೊ. ದೇ. ಜವರೇಗೌಡರು ಸಂಪಾದಿಸಿದ ಗ್ರಂಥಗಳಲ್ಲಿ 'ಪುಣ್ಯಾಸ್ರವ' ಗಮನಾರ್ಹವಾದುದು. ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿದ್ದ ಗುಲಬರ್ಗ ಜಿಲ್ಲೆಯ ಸೇಡಂ ಊರಿನ ನಾಗರಾಜು ಕವಿ ವಿರಚಿತ 'ಪುಣ್ಯಾಸ್ರವ' ವನ್ನು ಹಲವಾರು ಹಸ್ತಪ್ರತಿಗಳ ಸಹಾಯದಿಂದ ಪ್ರೊ. ದೇಜಗೌರವರು 1977 ರಲ್ಲಿ ಪ್ರಥಮಬಾರಿಗೆ ಸಂಪಾದಿಸಿದ್ದು ಆ ನಂತರವೂ ಈ ಗ್ರಂಥ ಪುನರ್ ಸಂಪಾದನೆಯಾದಂತೆ ಕಂಡು ಬರುವುದಿಲ್ಲ. ಕನ್ನಡ ಸಾರಸ್ವತ ಲೋಕದಲ್ಲಿ ಏಕಮೇವಾದ್ವಿತೀಯವಾಗಿರುವ ಈ ಗ್ರಂಥ ಉಳಿದ ಹಲವಾರು ಜೈನ ಧಾರ್ಮಿಕ ಗ್ರಂಥಗಳಂತೆ ಕಥೆ - ಉಪಕಥೆಗಳಿಂದ ಕೂಡಿದೆ. ಅಲ್ಲದೆ ಪ್ರಾಸಂಗಿಕವಾಗಿ ಕೆಲವು ಕಥೆಗಳಲ್ಲಿ ಚಿತ್ರಕಲೆಯನ್ನು ಕುರಿತು ಕೆಲ ವಿವರಗಳು ಬಂದಿವೆ.

ಪ್ರೊ. ದೇಜಗೌರವರು ಪ್ರಾಸಂಗಿಕವಾಗಿ ಮುನ್ನುಡಿಯಲ್ಲಿ ತಾವು "ಇಲ್ಲಿಯ ಕತೆಗಳ ಮೂಲವನ್ನು ಹುಡುಕುವ ಅಥವಾ ಅವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಗೋಜಿಗೂ ಗಮನಹರಿಸಿಲ್ಲ " ವೆಂದೂ, "ಕೆಲವು ಕಡೆ ಅಂಗೀಕೃತ ಪಾಠಾಂತರಗಳಿಗಿಂತ ಅಡಿ ಟಿಪ್ಪಣಿಯ ಪಾಠಾಂತರಗಳೇ ಗ್ರಾಹ್ಯವಾಗಿದೆಯೆಂದು" ತಿಳಿಸುತ್ತಾರೆ. (ಪು 207). ಇಲ್ಲಿಯ ಚಿತ್ರ ಕಲೆಗೆ ಸಂಬಂಧಿಸಿದಂತಹ ಕಥೆಗಳು ಬೇರೆಡೆಯೂ ಬಂದಿದ್ದು ಅವು ಇಲ್ಲಿಗಿಂತ ಹೆಚ್ಚಿನ ಅಂಶಗಳನ್ನು ಹೊಂದಿಲ್ಲವಷ್ಟೇ ಅಲ್ಲ. ಸಂಪಾದಕರು ಪಾಠಾಂತರಗಳನ್ನು (ಚಿತ್ರಕಲೆಗೆ ಸಂಬಂಧಿಸಿದ ಕಥೆಗಳಲ್ಲಿಯ) ಎಚ್ಚರಿಕೆಯಿಂದಲೇ ಸ್ವೀಕರಿಸಿದ್ದಾರೆ. ಆದರೂ ಈ ಗ್ರಂಥ ಕರ್ನಾಟಕದಲ್ಲಿ ಜೈನಧರ್ಮ ಕ್ಷೀಣವಾಗುತ್ತಿದ್ದ ಕಾಲದಲ್ಲಿ ಬಂದಿದ್ದು ಆ ಹಿಂದೆ ಬಂದ ಕೆಲವು ಗ್ರಂಥಗಳಲ್ಲಿ ಇರುವ ಇದೇ ಕಥೆಯೊಂದಿಗೆ ಇಲ್ಲಿಯದನ್ನು ಹೋಲಿಸುವ ಹಾಗೂ ನಾಲ್ಕೈದು ಪಾಠಾಂತರಗಳನ್ನು ಸ್ವೀಕರಿಸಬಹುದಿತ್ತೇನೋ ಎಂಬ ಸೂಚನೆಯನ್ನು ಮಾತ್ರ ಈ ಲೇಖನದಲ್ಲಿ ಮಾಡಿದೆ.

1. ಪ್ರಭಾಮಂಡಲನ ಕಥೆಯಲ್ಲಿ ಜನಕ ಹಾಗೂ ಆತನ ಮಡದಿ ವಿದೇಹಿಗೆ ಒಂದು ಗಂಡು - ಒಂದು ಹೆಣ್ಣು ಅವಳಿ - ಜವಳಿ ಮಕ್ಕಳಾಗಿ ಗಂಡು ಕೂಸನ್ನು ರಾಕ್ಷಸನೊಬ್ಬ ಒಯ್ದಿದ್ದು ಪ್ರಭಾಮಂಡಲನೆಂಬ ಹೆಸರಿನಿಂದ ಬೆಳೆಯುತ್ತಿರುತ್ತಾನೆ. ಜನಕ ಮಗಳಿಗೆ ಸೀತೆಯೆಂದು ಹೆಸರಿಟ್ಟು, ಸಲಹುತ್ತಿರುತ್ತಾನೆ. ಒಂದು ದಿನ ನಾರದ ಸೀತೆಯ ಮಾಡಕ್ಕೆ ಬಂದಾಗ ಕೆಳದಿಯರು ನಾರದನನ್ನು ಅಣಕಿಸಿ ಆತನ ಬೋಳು ತಲೆಯನ್ನು ತಟ್ಟಲು ಆತ ಕುಪಿತನಾಗಿ ಕೈಲಾಸಕ್ಕೆ ಹೋಗಿ ಸೀತೆಯ ರೂಪನ್ನು ಬರೆದು ('ಸೀತೆಯ ರೂಪಂ ಪಟದೊಳುದ್ಧರಿಸಿ') ಆ ಚಿತ್ರವನ್ನು ಪ್ರಭಾಮಂಡಲನ ಕ್ರೀಡಾವನದಲ್ಲಿ ನೇತು ಹಾಕುತ್ತಾನೆ. ಪಟಕಂಡು ಪ್ರಭಾಮಂಡಲ ಮೂರ್ಛೆ ಹೋಗಿ ನಂತರ ಆಕೆ ತನ್ನ ಸಹೋದರಿ ಎಂದು ತಿಳಿದು ಮುಂದೆ ರಾಮ ಸೀತೆಯರಿಗೆ ವಿವಾಹವಾಗುತ್ತದೆ. ಹೀಗೆ ಆಗಲು ಅವರ ಹಿಂದಿನ ಜನ್ಮಕ್ಕೆ ಸಂಬಂಧಿಸಿದ ಕಥೆಯೇ ಕಾರಣವಾಗಿರುತ್ತದೆ. ನಾರದನ

ಈ ಕಥೆ ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಲ್ಲಿ ವಿಸ್ತಾರವಾಗಿ ಬಂದಿದೆ. ಅಲ್ಲಿ ರಾಮನಿಗೆ ಸೀತೆಯನ್ನು ಕೊಡುವ ವಿಷಯ ಕೇಳಿ ನಾರದ ಸೀತೆಯನ್ನು ನೋಡಬಯಸಿ ಬಂದು, ನೋಡಿ, ಮೋಹಿಸಿ, ಓಡುತ್ತಿರುವ ಸೀತೆಯ ಹಿಂದೆ ಓಡಿ, ಜನರಿಂದ ಅವಮಾನಿತನಾಗಿ ಸೀತೆಯ ಚಿತ್ರ ಬರೆದು ಪ್ರಭಾಮಂಡಲನಿಗೆ ಕಾಣುವಂತೆ ಹಾಕಿದ್ದು. ಸ್ವಯಂವರದಲ್ಲಿ ರಾಮ ಪ್ರಭಾಮಂಡಲನ ಉಪಟಳ ತಡೆದು, ಬಿಲ್ಲು ಬಗ್ಗಿಸಿ ಸೀತೆಯನ್ನು ವಿವಾಹವಾಗುತ್ತಾನೆ.

ನಾಗಚಂದ್ರನ ನಾರದ ನಿಜವಾಗಿಯೂ ಚಿತ್ರಕಲಾಕೋವಿದ

"ಮೂಲ ಪವಣ್ ಪವಣ್‌ಗೆ ಬರೆ ನಿಮ್ನ ಘನೋನ್ನತ ಪ್ರದೇಶಮಂ

ಪೋಲಿಸಿ ನಾರದಂ ವಿಷಮ ಚಿತ್ರ" ವಿಚಿತ್ರ ಕಲಾವಿಶಾರದಂ

ಬಾಲೆಯ ಮುದ್ದುಗೆಯ್ತ ಮುಮನಾಕೆಯ ರೂಪಮಂ ಮಹಾ

ಲೀಲೆಯಮಂ ದುಕೂಲ ಪಟದೊಳ್ ಬರೆದಂ ಪ್ರತಿಬಿಂಬ ವೆಂಬಿನಂ"

'ಲಿಂತುಂ ಪರವಿದ್ಧ ಪರಿಣತಿಯಂ ಮೆರೆದಾಪಟಮಂ'

ಪ್ರಭಾಮಂಡಲ ನೋಡಿ ಚಿತ್ರದ

" ಸಮುದಾಯ ಶೋಭೆ ವರ್ಣ

ಕ್ರಮದಿಂ ಪ್ರತ್ಯೇಕ ಶೋಭೆ ಚೆಲ್ವಿಂ ನಯನ

ಕ್ರಮರ್ದಂ ಮುಂದಿಡೆ ಖೇಚರ

ನೆಮೆಯಿಕ್ಕದೆ ಬಯಸಿ ನೋಡಿ

ಬರೆದುರುಗ ಲೇಖೆ ಮೂರ್ಛಾ

ಪರಿಣತಿಯಂ ಮಂತ್ರಶಕ್ತಿಯಿಂ ಪುಟ್ಟಿಪವೋಲ್

ಬರೆಪದ ಕನ್ನೆ ಭವಾಂತರ

ಪರಿಚಯದಿಂ ಮೋಹ ಮೂರ್ಛೆಯಂ ಪುಟ್ಟಿಸಿದಳ್"

ಇತ್ಯಾದಿಯಾಗಿ ವರ್ಣನೆ ಬರುತ್ತದೆ. ಇಲ್ಲಿ ನೆರಳು ಬೆಳಕಿನ ಮೂಲಕ 'ನಿಮ್ನ ಘನೋತ್ತರ' ಭಾಗ ತೋರುತ್ತಿದ್ದ ಬಗ್ಗೆ ವಿಷಮ ಚಿತ್ರ (ಪ್ರಾಯಶ ಪ್ರತಿಕೃತಿ) ದ ಬಗ್ಗೆ 'ಪರವಿದ್ಧ ಪರಿಣತಿ'ಯ ಬಗ್ಗೆ ಸಮುದಾಯ ಶೋಭೆ (ಸಂಯೋಜ Composition sence)ಯ ವರ್ಣಕ್ರಮ (colour scene); ಪ್ರತ್ಯೇಕ ಶೋಭೆ (total effect) ಇತ್ಯಾದಿ ಚಿತ್ರಕಲೆಯ ಪಾರಿಭಾಷಿಕ ಶಬ್ದಗಳು ದೊರೆಯುತ್ತವೆ. ಪುಣ್ಯಾಸ್ರವದ ನಾಗರಾಜನಿಗೆ ಈ ವಿವರಗಳ ಅಗತ್ಯವಿರಲಿಲ್ಲ. ಪುಣ್ಯಾಸ್ರವದ 'ಪ್ರಭಾವತಿಯ ಕಥೆ'ಯಲ್ಲಿಯೂ ಪ್ರಭಾವತಿಯೊಂದಿಗೆ ವಾದದಲ್ಲಿ ಸೋತ ದಾದಿ ಮಂಡೋದರಿ ಎಂಬಾಕೆ ಪ್ರಭಾವತಿಯ ಚಿತ್ರ ಬರೆದು ಶತ್ರು ರಾಜನಿಗೆ ತೋರಿಸಿ ಯುದ್ಧಕ್ಕೆ ಕಾರಣಳಾಗುತ್ತಾಳೆ.

2. ಪುಣ್ಯಾಸ್ರವದ ಸೀತಾದೇವಿಯ ಕಥೆಯಲ್ಲಿ ಸಕಳಭೂಷಣ ಎಂಬ ರಾಜನ ಹೆಂಡತಿ ಕಿರಣ ಮಂಡಳೆ, ಸಹೋದರ ಹೇಮಮುಖಿ. ಒಮ್ಮೆ ರಾಜ ವೈಹಾಳಿಗೆ ಹೋಗಿದ್ದಾಗ ಅಂತಃಪುರದ ಗೆಳತಿಯರು ಹೇಮಮುಖಿನ ಚಿತ್ರ ರಚಿಸಲು ಕಿರಣಮಂಡಳೆಗೆ ಒತ್ತಾಯಿಸುತ್ತಾರೆ. ಆದರೆ ಆಕೆ

"ಪರ ಪುರುಷರ ನಿಜರೂಪಂ
ಬರೆವುದು ತಾಂ ಧರ್ಮ ಮಲ್ತು ಪಣ್ಯಾಂಗನೆಯರ್
ಬರೆವರ್ಬುಳಿದವರ್ ಬರದಡ
ಪುರುಷನ ಚಿತ್ರದೊಳ್ ತೋರ್ಪುದತಿ ವಿಪರೀತಂ"

ಎಂದು ನಿರಾಕರಿಸಿದರೂ ಕಲೆಗಾಗಿ ಬರೆದರೆ ತಪ್ಪಿಲ್ಲವೆಂದು (ಸ್ವಭಾವದಿಂ ರೂಪಂ ಬರೆವುದು ನಿರ್ವಿಕಲ್ಪ ಭಾವಕ್ಕೆ ದೋಷಮಿಲ್ಲ ಬರೆದು ತೋರ್ಪುದೆಂದೆಲ್ಲರುಂ ಪ್ರಾರ್ಥಿಸಿ) ಗೆಳತಿಯರು ಒತ್ತಾಯಿಸಿದಾಗ ಕಿರಣಮಂಡಳಿ ಚಿತ್ರ ಬರೆಯುತ್ತಾಳೆ. ಆಗ ವೈಹಾಳಿಯಿಂದ ಬಂದ ಸಕಳ ಭೂಷಣ ಚಿತ್ರ ಪಠ ಕಂಡು ಕುಪಿತನಾಗುತ್ತಾನೆ. (ಮುಂದೆ ಈತ ಕೇವಲಿಯಾಗಿ ಆಕಾಶ ಮಾರ್ಗದಿಂದ ಬರುತ್ತಿರುವಾಗ ಅಗ್ನಿಪ್ರವೇಶ ಮಾಡುತ್ತಿರುವ ಸೀತೆಯ ಬಳಿಗೆ ಬಂದಾಗ ಅಗ್ನಿ ಸಹಸ್ರ ದಳ ಕಮಲವಾಗುತ್ತದೆ.)

ಈ ಕಥೆ ಜನಪದ ಮೂಲದ್ದೆಂಬಂತೆ ಕಂಡುಬರುತ್ತದೆ. ಅಲ್ಲಿ ಈ ರೀತಿ ಪರಪುರುಷನ ಚಿತ್ರ ರಚಿಸಿ. ತೊಂದರೆಗೆ ಒಳಗಾಗುವವಳು ಸ್ವತಃ ಸೀತೆಯೇ ಆಗಿದ್ದಾಳೆ. ಜನಪದ ನಾಟಕ 'ಚಿತ್ರಪಟ ರಾಮಾಯಣ'ದಲ್ಲಿ ಶೂರ್ಪನಖಿ ಸೀತೆಯನ್ನು ಒತ್ತಾಯಿಸಿ ರಾವಣನ ಚಿತ್ರ ಬರೆಯಿಸಿಕೊಂಡು ಅದರ ಭಯಂಕರತೆಗೆ ಹೆದರಿದಂತೆ ನಟಿಸಿ ಪಟವನ್ನು ಅಲ್ಲಿಯೇ ಬಿಟ್ಟು ಅದು ರಾಮನ ಕಣ್ಣಿಗೆ ಬಿದ್ದು ಸೀತೆಯನ್ನು ಕಾಡಿಗೆ ಅಟ್ಟಲು ಕಾರಣವಾಗುತ್ತದೆ. ಇನ್ನೊಂದು ಜನಪದ ಕಥೆಯಲ್ಲಿ ಸೀತೆ ರಾವಣನ ಪಾದದ ಹೆಬ್ಬೆರಳು ಮಾತ್ರ ಬರೆದಿದ್ದು ಶೂರ್ಪನಖಿ ಇಡೀ ಚಿತ್ರ ಪೂರೈಸುತ್ತಾಳೆ. ಮತ್ತೊಂದು ಕಥೆಯ ಪ್ರಕಾರ ಸೀತೆಯಿಂದ ಒತ್ತಾಯವಾಗಿ ಚಿತ್ರಬರೆಸಿಕೊಳ್ಳುವವಳು ಕೈಕೇಯಿ. ಹೀಗೆ ಜನಪದದಲ್ಲಿ ಸೀತೆಯ ಕಥೆಯಲ್ಲಿದ್ದ ಪ್ರಸಂಗ ಪುಣ್ಯಾಸ್ರವದಲ್ಲಿ ಕಿರಣ ಮಂಡಲೆಗೆ ಅಲ್ಲಿಯೂ ಸೀತೆಯ ಕಥೆಯಲ್ಲಿಯೇ ವರ್ಗಾವಣೆಗೊಂಡಿರಬಹುದು.

3. ಜೈನ ಕಥೆಗಳಲ್ಲಿ ನಾಗಕುಮಾರನ ಕತೆ ಪ್ರಸಿದ್ಧವಾದುದು. ಹಲವಾರು ಕಡೆಗಳಲ್ಲಿ ಕಾಣಿಸಿಕೊಂಡಿದ್ದು ಪುಣ್ಯಾಸ್ರವದಲ್ಲಿಯೂ ಸಂಕ್ಷಿಪ್ತವಾಗಿ ಬಂದಿದೆ. ಕಥೆಯ ಆರಂಭದಲ್ಲಿಯೇ ಕನಕಪುರದ ಅರಸ ಜಯಂಧರನ ಗೆಳೆಯ ವಾಸವ ಎಂಬಗ ವರ್ತಕ ಹಲವಾರು ಪಾರಿತೋಷಕಗಳೊಂದಿಗೆ ಪೃಥ್ವೀದೇವಿಯ ಚಿತ್ರಪಟವನ್ನು ಅರಸನಿಗೆ ನೀಡುತ್ತಾನೆ.

'ಬರೆಪದ ಪೆಣ್ಣನಾಗಳವನೀಶ್ವರ' ನೋಡಿ ರಸಕ್ಕೆ ರೇಖೆಗಂ
ಗರುವತನಕ್ಕೆ ಸೌಷ್ಟವದ ದೇಸೆಗೆ ಜವ್ವನದೆಳ್ತರಕ್ಕೆಯ
ಚ್ಚರಿಮಿಗೆ ಸೋಲ್ತು ಅಂಗಜಶರಂ ಮನಮಂಕೊಳೆ ನೊಂದು ಸಾತ್ವಿಕೋ
ತ್ತರಮಿಗೆ ಚಿರ್ತಿಕರ್ಬರೆದ ಚಿತ್ರದರೂಪನೆ ಭೂಪ ನೋಡಿದಂ''

ಮುಂದೆ ಜಯಂಧರನಿಗೂ ಪೃಥ್ವೀದೇವಿಗೂ ಮದುವೆಯಾಗಿ ನಾಗಕುಮಾರ ಜನಿಸುತ್ತಾನೆ. ಇವನು ಪ್ರೌಢ ವಯಸ್ಕನಾದ ಮೇಲೆ ಈತನ ಗೆಳೆಯ ಮಹಾವ್ಯಾಳ ಎಂಬಾತ ನಾಗಕುಮಾರನ ಚಿತ್ರ ಬರೆಯಿಸಿಕೊಂಡು ಉಜ್ಜಯನಿಯ ಅರಸುಗುವರಿ ಮೇನಕೆಗೆ ತೋರಿಸಿ. ಪರಸ್ಪರ ವಿವಾಹ ಮಾಡಿಸುತ್ತಾನೆ. ಈ ಎರಡು ಸಂದರ್ಭದಲ್ಲೂ ಅರಸ ಜಯಂಧರನಿಗೂ. ಮಗ ನಾಗಕುಮಾರನಿಗೂ ಈಗಾಗಲೇ ವಿವಾಹಗಳಾಗಿದ್ದರೂ

ಚಿತ್ರದ ಹೆಣ್ಣನ್ನು ನೋಡಿಯೇ ಮನೋಭವನ ಬಾಣಕ್ಕೆ ತನುವನೊಪ್ಪಿಸಿರುತ್ತಾರೆ.

ಹದಿನೆಂಟನೆಯ ಶತಮಾನದಲ್ಲಿ ಶ್ರೀರಂಗಪಟ್ಟಣದಲ್ಲಿ ಕವಿ ಬೊಮ್ಮಣ್ಣ 'ನಾಗಕುಮಾರ ಷಟ್ಪದಿ' ಯನ್ನು ಸುದೀರ್ಘವಾಗಿ ರಚಿಸಿದ್ದು ಅದರಲ್ಲಿಯೂ ಮೇಲಿನ ಕಥಾ ಸಂದರ್ಭದಲ್ಲಿ ಚಿತ್ರ ಪಟವೂ ಭಾಗವಹಿಸುತ್ತದೆ. ವಾಸವನೆಂಬ ಹರದಿಗನು

ಕಡೆಯಾಣಿ ರತ್ನಗಳ ಕಾಣಿಕೆ

ಗೊಡುತ ಮುಂದಿರಿಸಿದನು ಪಟದೊಳು

ಬಿಡಗ ಬಿಂಕದೊಳೆಸವ ಪೆಣ್ಣಿನ ಭಾವಚಿತ್ರವನು

ಅರಸನಿಗೆ ಉಳಿದ ಬಹುಮಾನಗಳಿಗಿಂತ ಚಿತ್ರಿತ ಕನ್ಯೆ ಹೆಚ್ಚು ಆಕರ್ಷಕವಾಗುತ್ತದೆ. ಪುಣ್ಯದೇವತೆಯೇ ಬರೆಸಿಕಳಿಸಿದ್ದಾಳೆ ಎನ್ನುತ್ತಾನೆ ಮಂತ್ರಿಯೊಬ್ಬ. ಸ್ಮರನ ಬಾಣಕೆ ಗುರಿ ಮಾಡಿದ ಇದು

ಬರಿದೆ ಚಿತ್ರವೊ ಭಾವಚಿತ್ರವೊ

ಬರೆಸಿ ನೀನಿದ ತಂದ ಬಗೆಯನು

ಮರೆಯದೇತಕೆ ಪೇಳ್ವದೆಂದನು ರಾಯ

ಮುಂದೆ ನಾಗಕುಮಾರನ ಭಾವಚಿತ್ರವನ್ನು ಮಹಾವ್ಯಾಳ ಬರೆಸಿಕೊಂಡು ಹೋಗಿ ಉಜ್ಜಯನಿಯಲ್ಲಿ 'ದೊರೆಯ ಚಾವಡಿಯಲ್ಲಿ ಕಟ್ಟಲು' ಮೇನಕೆ ಅದನ್ನು ಕಂಡು ಮನ್ಮಥನ ಬಾಣಕ್ಕೆ ಈಡಾಗಿ, ಮೂರ್ಛೆ ಹೋಗಿ ಸಖಿಯರುಪಾಚಾರದಿಂದ ತಿಳಿದೇಳುತ್ತಾಳೆ. ವ್ಯಾಳ್ವ ಮೇನಕೆಯ ಚಿತ್ರವನ್ನು ಬರೆಯಿಸಿ ನಾಗಕುಮಾರನ ಮುಂದೆ 'ಪಟದ ಸುರಳ್ದಿಗೆದಿರಿ'ಸುತ್ತಾನೆ. ಚಿತ್ರಿತ ಕನ್ಯೆಯ ವರ್ಣನೆ ಎರಡು ಷಟ್ಪದಿಗಳಲ್ಲಿದೆ. ನಂತರ ನಾಗಕುಮಾರ ಮೇನಕೆಯರ ವಿವಾಹವಾಗುತ್ತದೆ.

ನಾಗಕುಮಾರ 24 ಕಾಮದೇವರಲ್ಲಿ ಒಬ್ಬನಾಗಿದ್ದು, ಈತನಿಗೆ ಸಂಬಂಧಿಸಿದ 'ನೋಂಪಿ' ಜನಪ್ರಿಯವಾಗಿದ್ದು ಹಲವಾರು ಕಥೆಗಳಲ್ಲಿ ಹಾಗೂ ಪ್ರತ್ಯೇಕವಾಗಿ ಕಾವ್ಯ ಮತ್ತು ಹಾಡುಗಳಾಗಿಯೂ ಕಾಣಿಸಿಕೊಂಡಿದೆ. 'ನಾಗಕುಮಾರ ಷಟ್ಪದ'ದ ಸಂಪಾದಕರಾದ ಹಂಪನಾ ಅವರು ಆ ಗ್ರಂಥದಲ್ಲಿ ನಾಗಕುಮಾರನಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳನ್ನು ನೀಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಕಥೆಗಳಲ್ಲೂ ಚಿತ್ರ ಪಟದ ಪ್ರಸಂಗ ಎರಡೂ ಕಡೆಗಳಲ್ಲಿ ಬರುತ್ತದೆ. ಹದಿನೆಂಟನೆಯ ಶತಮಾನದ ಕೊನೆಯ ಕಾಲದ್ದೆನ್ನಬಹುದಾದ ಶ್ರವಣಬೆಳಗೊಳದ ಶ್ರೀಮಠದಲ್ಲಿರುವ ಭಿತ್ತಿ ಚಿತ್ರದಲ್ಲೂ ನಾಗಕುಮಾರನ ಕಥೆ ವಿವರವಾಗಿ ಚಿತ್ರಿಸಲ್ಪಟ್ಟಿದೆ. ಅಲ್ಲಿಯೂ ಚಿತ್ರಕಲಾ ಪ್ರಸಂಗವನ್ನು ಚಿತ್ರಿಸಿದೆ.

ಪುಂಡರೀಕಿಣಿ ಪುರದರಸ ವಜ್ರದಂತ. ಅರಸಿ ಲಕ್ಷ್ಮೀಮತಿಯರ ಮಗಳು ಶ್ರೀಮತಿ. ತನ್ನ ಹಿಂದಿನ ಜನ್ಮದ ಪತಿಯನ್ನು ನೆನೆಸಿಕೊಂಡು ದುಃಖಿತಳಾಗಿದ್ದಾಗ ಸಖಿ ಪಂಡಿತೆ "ನಿನ್ನ ಮುನ್ನಿನ ದೇವಲೋಕದ ವೃತ್ತಕಮಂ ಪಟದೊಳ್ ಬರೆದು ಕುಡೆಂದು" ಹೇಳಿದಾಗ ಶ್ರೀಮತಿ "ಕರಲೇಸೆಂದು ತಾನಿರ್ದ ವಿಮಾನಮಂ ತಮ್ಮಿಬ್ಬರ ರೂಪಮಂ ನಂದನವನ ವಿಳಾಸಮಂ ಪರಿಚಾರಕ ದೇವರುಂ, ದೇವಿಯರುಮಂ ಪಟದೊಳ್ ಬರೆದು ಗುಪ್ತವಿನ್ನಾಣಗಳಂ ಪೇಳ್ದು" ಕೊಡುತ್ತಾಳೆ. ಪಂಡಿತೆ ಆ ಪಟವನ್ನು ಹೊತ್ತು ನಾನಾ

ದೇಶಗಳಲ್ಲಿ ಅಲೆದಾಡಿ "ಮಹಾಪೂತ" ಜಿನಾಲಯ ಬಾಗಿಲ್ವಾಡದ ಮುಂದೆ ಪಟಮಂ ಕಟ್ಟಿ ತಾನು ಮರೆ ನಿಲ್ಲುತ್ತಾಳೆ. ವಾಸವ ಎಂಬಾತ ಬಂದು ಚಿತ್ರ ಪಟ ನೋಡಿ ಮೈಮರೆತು ಚಿತ್ರಿತಕನ್ಯೆ ತನ್ನ ಪತ್ನಿಯೆಂದು ಸುಳ್ಳೇ ಹೇಳಿ ಪಂಡಿತೆ ಕೇಳಿದ 'ಗುಪ್ತ ವಿನ್ನಾಣ' ಗಳನ್ನು ಹೇಳಲಾರದೆ ಅವಮಾನಿತನಾಗಿ ಹೋಗುತ್ತಾನೆ. ಶ್ರೀಮತಿಯ ಹಿಂದಿನ ಜನ್ಮದಲ್ಲಿ ಪತಿಯಾಗಿದ್ದ ಲಲಿತಾಂಗನು ಈಗ ವಜ್ರಜಂಘನಾಗಿ ಹುಟ್ಟಿದ್ದು ಆತ ಬಂದು ಚಿತ್ರವನ್ನು ಕುಂಡು ಜಾತಿಸ್ಮರನಾಗಿ ಶ್ರೀಮತಿಯ ಹಾಗೂ ತನ್ನ ಪೂರ್ವಜನ್ಮದ ಪ್ರಣಯವನ್ನು ಪಂಡಿತೆಗೆ ತಿಳಿಸುತ್ತಾನೆ. ಮತ್ತೆ ಈ ಜನ್ಮದಲ್ಲಿ ಅವರು ಒಂದಾಗುತ್ತಾರೆ.

ಈ ಕಥೆ ಗುಣಸೇನಾಚಾರ್ಯರ ಮಹಾಪುರಾಣ, ಪಂಪನ ಆದಿಪುರಾಣಗಳಲ್ಲಿ ವಿಸ್ತಾರವಾಗಿ ಬಂದಿದೆ. 'ಮಹಾ ಪುರಾಣ'ದಲ್ಲಿ ಶ್ರೀಮತಿ ('ವಿಲಿಖಿತಂ ಪೂರ್ವ ಸಂಬಂಧ ಪಟ್ಟಕಂ') ಬರೆದ ಚಿತ್ರವನ್ನು ಪಂಡಿತೆ ಚಿತ್ರಕಲೆಯಿಂದ ತುಂಬಿದ್ದ ಜೈನಗೃಹದಲ್ಲಿ ನೆಲದ ಮೇಲೆ ಹರಡುತಾಳೆ (ಪ್ರಸಾರ್ಯಂ ಪಟ್ಟಕಂ). ಅದೇ ಪಂಪನಲ್ಲಿ ಪಂಡಿತೆ ಜಿನಗೃಹದ ಗೋಡೆಗೆ 'ಏರಿ'ಸುತ್ತಾಳೆ. ಪುಣ್ಯಾಸ್ರವದಲ್ಲಿ ಪಂಡಿತೆ ಜಿನಗೃಹದ ಬಾಗಿಲುವಾಡಕ್ಕೆ 'ಕಟ್ಟು'ತ್ತಾಳೆ ಎಂದರೆ ಮಹಾಪುರಾಣದಲ್ಲಿ ಚಿತ್ರ ಸುರುಳಿಸುತ್ತಿದ್ದ ಪಟಚಿತ್ರದಂತಿದ್ದು ಪಂಪನಲ್ಲಿ ಅದು ಬಿಡಿ ಚಿತ್ರವಾಗಿ ಗೋಡೆಗೆ ಹಾಕಬಹುದಾಗಿತ್ತು. ಪುಣ್ಯಾಸ್ರವದಲ್ಲಿ ಬಾಗಿಲುವಾಡಕ್ಕೆ ಕಟ್ಟಬಹುದಾದಷ್ಟು ಚಿಕ್ಕದಾಯಿತು. ಎಂದರೆ ಆಯಾ ಕವಿಗಳು ತಾವು ಸಮಕಾಲೀನದಲ್ಲಿ ಕಂಡಿರುವುದನ್ನೇ ತಮ್ಮ ಕಥೆಗಳಲ್ಲಿ ತಂದಿದ್ದಾರೆಂದು ಊಹಿಸಬಹುದು. ಉಳಿದಂತೆ ವಾಸವ ಬಂದು ಸುಳ್ಳು ಹೇಳುವುದು; ವಜ್ರಜಂಘ ಚಿತ್ರ ನೋಡಿ ತನಗೆ ಹಾಗೂ ಶ್ರೀಮತಿಗೆ ಮಾತ್ರ ತಿಳಿದಿದ್ದ 'ವಿನ್ನಾಣ' (ಅಭಿಜ್ಞ)ಗಳನ್ನು ಹೇಳುವುದು ಇತ್ಯಾದಿಗಳು ಎಲ್ಲ ಕಡೆಗಳಲ್ಲಿ ಒಂದೇ ರೀತಿಯಾಗಿ ಬಂದಿದೆ.

ಪುಣ್ಯಾಸ್ರವದ ಶ್ರೇಣಿಕನ ಕಥೆಯೂ ಜನಪದ ಕಥೆಯಂತೆ ಕಂಡು ಬರುತ್ತದೆ.

'ದೊರೆವೆತ್ತು ತೋರ್ಪಯೋಧ್ಯಾ। ಪುರದೊಳ್ ಚಿತ್ರಕಲಲಾಮ ನಿಪ್ಪನದೊರ್ವಂ

ಭರತಂ ಸುರೇಖ ರಾಯಂ। ಸುರುಚಿರ ಕಾಯಂ ವಿಚಿತ್ರ ಕುಶಲೋಪಾಯಂ!!

ಆಗಿದ್ದ ಈ ಭರತ ಎಂಬ ಚಿತ್ರಕಲಾವಿದ "ಪದ್ಮಾವತಿಯಾರಾಧನೆಯಂ ಮಾಡಿ ಯಾವುದೊಂದು ರೂಪಂ ಚಿತ್ತದೊಳ್ ಭಾವಿಸಿ ಲಕ್ಕಣಿಕೆಯ ಪಟದ ಮೇಲಿರಿಸಿದೊಡಾ ರೂಪಿನ ಜಾತಿಯಾಗಲ್ವೇಕೆಂದು ವರವಂ ದೇವಿಯ ಕೈಯೊಳ್" ಪಡೆದಿರುತ್ತಾನೆ. ತನ್ನ ಈ ವಿದ್ಯೆಯನ್ನು ಅನೇಕ ದೇಶಗಳಲ್ಲಿ ಮೆರೆದು, ಸಿಂಧೂ ದೇಶದ ವೈಶಾಳಿಪುರಕ್ಕೆ ಬರುತ್ತಾನೆ. ಆ ಊರಿನ ದೊರೆ ಚೇಟಕನಿಗೂ ಮಡದಿ ಸುಭದ್ರೆಗೂ ಏಳು ಜನ ಹೆಣ್ಣು ಮಕ್ಕಳು.- ಭರತ

"ಅರಮನೆಯ ಪಿರಿಯ ಕೋಂಟೆಯ

ಸಿರಿಬಾಗಿಲ ಮುಂದನೇಱ ಲಕ್ಕಣಿಕೆಯನಾ

ಪುರದೊಳಗಣ ಚಿತ್ರಿಕರಂ

ಭರತ ಪರಿಭಾವಿಪೆನೆಂದು ನೆಗಳ್ದಿರ್ಪನೆಗಂ

ಚೇಟಕ ಮಹಾರಾಜ ಕೇಳ್ದು ತನ್ನ ಪಟ್ಟಣದ ಚಿತ್ರಿಕರೆಲ್ಲರಂ ಕರೆದು ವಾದವಂ ಮಾಡಿಸುವುದಂ ಆತ್ಮವಿದ್ಯಾ ಪರವಿದ್ಯೆಯೆಂಬ ಪಲವಂ ಭೇದದೊಳ್ ಎಲ್ಲರಂ ಗೆಲಲರಸಂ ಮೆಚ್ಚಿ ಭರತಂಗೆ ವೃತ್ತಿಯ ಕೊಟ್ಟು, ತನ್ನೇಳು ಮಕ್ಕಳರೂಪಂ ಪಟದೊಳ್

ಬರೆಸಿ ಅರಮನೆಯ ಬಾಗಿಲೊಳ್ ಕಟ್ಟುವುದುಮೆಲ್ಲಾ ಜನಂಗಳ್ ನೋಡಿ

ಭಾವಕ್ಕ ರಸಕ್ಕಂ ನಿ

ರ್ಭಾವಂಬಡೆದಿರ್ದ ರೇಖೆಗಂ ಮುದದಿಂದಂ

ಭೂವಳಿಯಿದ ಜನಮೆಲ್ಲಂ

ಜೀವ ಕಳಾಕಳಿತೆ ಗಂಡು ಮೆಚ್ಚುತಿರ್ದರ್

ಬಳಿಕ್ಕ ಕಂಡಕಂಡವರೆಲ್ಲರೂ ಪಟಕ್ಕೆ ನಮಸ್ಕಾರಮಂ ಮಾಡಿ ತಮತಮಗೆ ಒಂದೊಂದು ಪಟದೊಳ್ ಕುಮಾರಿಯರ ರೂಪಂ ಬರೆಸಿ ತಮ್ಮ ತಮ್ಮ ಮನೆಯ ಬಾಗಿಲೊಳ್ ಕಟ್ಟಿ ಸಪ್ತಮಾತೃಕೆಯರೆಂದು ಕೊಂಡಾಡುತಿರ್ಪುಮವರೊಳ್ ನಾಲ್ವರಿಗೆ ಮದುವೆಯಾಗಲ್ ಮೂವರ್ ತಮ್ಮ ತಮ್ಮ ಕನ್ಯಾಮಾಡಂಗಳೊಳಿರುತ್ತಿರಲೊಮ್ಮೆ ಭರತಂ ಚೇಳಿನಿಯ ನಿರ್ಗ್ರಂಥ ರೂಪಂ ಮನದೊಳ್ ಸ್ಮರಿಸಿ ಪಟದ ಮೇಲೆ ಲಕ್ಕಣೆಕೆಯ ನಿಕ್ಕದ ಮುನ್ನವೆ [1]ರೂಪಿನ[1] ಜಾತಿಯಳವಡಲಾ ಚಿತ್ರದ ಶರೀರದೊಳ್ ತೊಡೆಯ ಮೇಲೆ [2]ಕಾಡಿಗೆಯ ಬಿಂದು ಬಿರ್ದುದುಮು[2] ನ್ನುಳ್ಳ ಮಚ್ಚೆಯಾಗಿರ್ಪುದುವಾ ಚಿತ್ರದ ರಚನೆಯುಂ [3]ಭರತಂ ಚೇ[3] ಟಕ ಮಹಾರಾಜರಿಗೆ ತೋಜಲ್ ಕಂಡಿವ ನೀಕನ್ನಿಕೆಯ ಏಕಾಂತ ಪ್ರದೇಶದ ಮಚ್ಚೆಯ ನಂತಱಿದನೆಂದು ಸಂಶಯಂ ಪುಟ್ಟೆ ಚಿತ್ರ[4] ಕನ ಮೇಲೆ ಕೋಪಮಂ ತಾಳ್ದಿರಲದನವಂ ಕೆಲವರ ಕೆಯ್ಯಿಂ ಕೇಳ್ದೋಡಿ ಪೋಗಿ ರಾಜಗೃಹ ಪಟ್ಟಣಮಂ ಪೊಕ್ಕು ಚೇಳಿನಿಯ ರೂಪಿನ ಪಟಮಂ ಶ್ರೇಣಿಕಂಗೆ ಕಾಣಿಕೆಯಂ ಕೊಡುವುದು ದೂತನದಂ ನೋಡಿ ....*.

ವಿರಹಾಗ್ನಿಗೆ ಒಳಗಾಗುತ್ತಾನೆ. ಮುಂದೆ ಚೇಳಿನಿಯನ್ನು ವಿವಾಹವಾಗುತ್ತಾನೆ. ಈ ಕಥೆ ಚಾವುಂಡರಾಯ ಪುರಾಣದಲ್ಲೂ ಬಂದಿದೆ. ಅಲ್ಲಿ ಚೇಟಕ ಮಹಾರಾಜ ಮಕ್ಕಳ ಪ್ರೇಮದಿಂದ ಅವರ ರೂಪವನ್ನು 'ಪಟ್ಟಕದೊಳ್ ಬರೆಯಿಸಿ'ರುತ್ತಾನೆ. ಅದರಲ್ಲಿ "ಚೇಳಿನಿಯ ರೂಪಿನ್ನುಣೆಡೆಯೊಳ್ ಸಿಲ್ಕಿದ ಬಿಂದುವಂ ಕಂಡು ಚಿತ್ರಕರಿಗೆ ಮುಳಿದೊಳಾತನಿಲ್ಲಿ ಸಿಕ್ಕಿದ ಬಿಂದುವ ನಾಂ ಪಲವು ಸೂಟ್ಕಳಿದೊಡಂ ಪೋಗದಿರ್ದೊಡೀ ಪ್ರದೇಶದೊಳೀ ಲಕ್ಷಣಮುಂಟಕ್ಕು" ಎಂದು ಅನುಮಾನದಿಂದ ತಿಳಿದುಕೊಂಡೆ ಎಂದು ಚಿತ್ರಕ ಹೇಳಿದ್ದು ಅರಸ ಅವನಿಗೆ "ಮೆಚ್ಚುಗೊಟ್ಟು ನಿಚ್ಚಮಾ ಪಟ್ಟಕಮಂ ದೇವಾರ್ಚನಾ ಸಮಯದೊಳ್ ಜಿನಬಿಂಬದ ಸಮೀಪದೊಳ್ ಇಟ್ಟು ಗಂಧ ಪುಷ್ಪಾದಿಗಳಿಂ"ದ ಅರ್ಚಿಸುತ್ತಿದ್ದ. ಅದನ್ನು ಶ್ರೇಣಿಕ ಕಂಡು ಪ್ರಶ್ನಿಸಿ ಮುಂದೆ ಚೇಳಿನಿಯನ್ನು ವಿವಾಹವಾಗುತ್ತಾನೆ. ಹಲವಾರು ಪ್ರಮಾಣಗಳಲ್ಲಿ 'ಅನುಮಾನ ಪ್ರಮಾಣವೂ' ಒಂದು. ಈ ಮೇಲಿನ ಕಥೆಯಲ್ಲಿ ದೇವಿಯ ವರ ಇತ್ಯಾದಿಗಳ ಪ್ರಸ್ತಾಪವಿಲ್ಲ.

ಇದೇ ಬಗೆಯ ಕಥೆಯೊಂದು ಕಥಾಮೃತದಲ್ಲಿಯೂ ಇದ್ದು ಅಲ್ಲಿಯೂ 'ಅನುಮಾನ'ದ ಪ್ರಸ್ತಾಪ ಬರುತ್ತದೆ. ಯೋಗಾನಂದ ಎಂಬ ರಾಜ ಹಾಗೂ ಆತನ ಹೆಂಡತಿಯ ಚಿತ್ರವನ್ನು ಚಿತ್ರಗಾರ ಬರೆದಾಗ ವರರುಚಿ ಎಂಬಾತ ರಾಣಿಯ ಸೊಂಟದ

---

* ಮೂಲದ ಕಥೆಯಲ್ಲಿ ಸಾಕಷ್ಟು ಪಾಠಾಂತರಗಳಿವೆ. ಅವುಗಳಲ್ಲಿ ನಾಲ್ಕನ್ನು ಮಾತ್ರ ಇರಿಸಿಕೊಂಡು ಮುಂದೆ ವಿವರಿಸಲಾಗಿದೆ.

ಬಳಿ ಮಚ್ಚೆಯೊಂದನ್ನು ಊಹಿಸಿ ಬರೆಯುತ್ತಾನೆ. ಅದನ್ನು ನೋಡಿದ ರಾಜ ಇದು ರಹಸ್ಯ ಸಂಗತಿ. ಇವನಿಗೆ ಅಂತಃಪುರದಲ್ಲಿ ಪ್ರವೇಶವಿರಬೇಕೆಂದು ತಿಳಿದು ಕೊಲ್ಲಿಸಲು ಆಜ್ಞೆಮಾಡಿದಾಗ, ವರರುಚಿ "ಲಕ್ಷಣಗಳಿಂದಲೂ, ಅನುಮಾನದಿಂದಲೂ, ಪ್ರತಿಭೆಯಿಂದಲೂ, ಪ್ರಜ್ಞಾಶಾಲಿಗಳಿಗೆ ಇಂಥದು ಗೊತ್ತಾಗುತ್ತದೆ. ಸೊಂಟದ ಮೇಲಿನ ಮಚ್ಚೆಯನ್ನು ನಾನು ತಿಳಿದಿದ್ದು ಹೀಗೆಯೇ" ಎಂದು ಹೇಳಿ ತಪ್ಪಿಸಿಕೊಳ್ಳುತ್ತಾನೆ. ಎಂದರೆ ಇಲ್ಲೆಲ್ಲಾ ಕಲಾವಿದನಿಗೆ ಒಂದು ಅತೀಂದ್ರಿಯ ಜ್ಞಾನ ಇರುವಂತೆ ಭಾವಿಸಲಾಗಿದೆ. ಪುಣ್ಯಾಸ್ರವದ ಕಥೆಯಲ್ಲಿಯಂತೂ ದೇವಿಯ ವರಪ್ರಸಾದವೇ ಇದೆ.

ಪುಣ್ಯಾಸ್ರವದ ಚೇಳಿನಿಯ ಕಥೆಯಲ್ಲಿ (ಶ್ರೇಣಿಕನ ಕಥೆ) ಕಲಾವಿದ ಭರತ ಪದ್ಮಾವತಿಯಾರಾಧನೆಯನ್ನು ಮಾಡಿ ಅವಳಿಂದ ವರ ಪಡೆದಿರುತ್ತಾನೆಯೆಂದ ಮೇಲೆ ಆತ ಲಕ್ಕಣಿಕೆ ಇರಿಸಿ ಧ್ಯಾನಿಸಿದಾಗ ಚೇಳಿನಯ ರೂಪು 'ಪದ್ಮನಿ' ಜಾತಿಯ ಸ್ತ್ರೀಯಷ್ಟೆ ಸುಂದರವಾಗಿರುತ್ತದೆ(?). ಇಂತಹ ಕಲಾವಿದ ಕೋಟೆಯ ಬಾಗಿಲಿಗೆ 'ಲಕ್ಕಣಿಕೆಯನ್ನು ಏರಿಸಿ' ಆ ಊರಿನ ಚಿತ್ರಕಾರರನ್ನು 'ಪರಿಭಾವಿಸುವಂತೆ'? ಮಾಡುತ್ತಾನೆ ಪ್ರಾಯಶಃ ಕಲಾವಿದರನ್ನು ತನ್ನೊಂದಿಗೆ ಸ್ಪರ್ಧೆಗೆ ಕರೆಯುತ್ತಾನೆ ಎಂದು ಭಾವಿಸಬಹುದು. ಈ ರೀತಿ ಪಂಥಾಹ್ವಾನ ನೀಡುವುದನ್ನು ಸಂಗೀತಗಾರರು, ನೃತ್ಯಗಾರರು, ಕುಸ್ತಿಪಟುಗಳು ಇತ್ಯಾದಿಯವರ ಕಥೆಗಳಲ್ಲಿ ಕಾಣುತ್ತೇವೆ. ಚಿತ್ರಗಾರರೂ ಈ ರೀತಿ 'ಸವಾಲು' ಹಾಕುತ್ತಿದ್ದಿರಬಹುದು ಕಥಾಮೃತದಲ್ಲಿ ಈ ರೀತಿಯ ಪ್ರಸಂಗ ಬರುತ್ತದೆ. ಕೋಶಲನಗರದ ರಾಜಕುಮಾರ ಕಮಲಾಕರನ 'ವಂದಿ'ಯೊಬ್ಬ (ಈತನಿಗೂ 'ಮನೋರಥ ಸಿದ್ಧಿ'ಯಾಗಿರುತ್ತದೆ) ವಿದಿಶಾಪಟ್ಟಣದ ರಾಜಕುವರಿ ಹಂಸಾವಳಿಯ ನೃತ್ಯವನ್ನು ಕಂಡು, ಕಮಲಾಕರನಿಗೆ ಈಕೆ ಅನುರೂಪಳೆಂದು ತಿಳಿದು, ಅರಮನೆಯ ಹೊರಗೆ 'ತನಗೆ ಸಮನಾದ ಚಿತ್ರಕಾರರು ಯಾರಾದರೂ ಇದ್ದರೆ ಬಗಲಿ' ಎಂದು ಬರೆದು ತನ್ನ ಶಲ್ಯ (ಚೀರಿಕಾ)ವನ್ನು ಅಪ್ಪಗಟ್ಟುತ್ತಾನೆ. ಅದನ್ನು ಯಾರೂ ಹರಿಯದಿರಲು ರಾಜ ವರದಿಯನ್ನು ತನ್ನ ಮಗಳ ಅಂತಃಪುರದಲ್ಲಿ ಚಿತ್ರ ಕಲಾವಿದನಾಗಿ ನೇಮಿಸಿಕೊಳ್ಳುತ್ತಾನೆ. ಕಥಾಮೃತದ ಇನ್ನೊಂದು ಕಥೆಯಲ್ಲಿ ಕುಮಾರಿದತ್ತ ಎಂಬ ಕಲಾವಿದ ಮುಕ್ತಿಪುರ ಎಂಬಲ್ಲಿಗೆ ಹೋಗಿ ತನಗೆ ಸಮಾನರಾದ ಕಲಾವಿದರು ಇಲ್ಲ ಎಂದು ರಾಜದ್ವಾರದಲ್ಲಿ ತನ್ನ ದಟ್ಟಿಯನ್ನು ಏರಿಸಿ ಕಟ್ಟುತ್ತಾನೆ. ಪುಣ್ಯಾಸ್ರವದ ಕಲಾವಿದ ಭರತನೂ ಇದೇ ರೀತಿ ಕೋಟೆ ಬಾಗಿಲ ಮುಂದೆ ತನ್ನ 'ಲೆಕ್ಕಣಿಕೆಯನ್ನೇ 'ಏರಿ'ಸುತ್ತಾನೆ. ಚೇಟಕ ಮಹಾರಾಜ ತನ್ನ ಪಟ್ಟಣದ ಚಿತ್ರಕಾರರನ್ನು ಕರೆಸಿ 'ವಾದ'ವನ್ನು ಏರ್ಪಡಿಸುತ್ತಾನೆ. ಭರತ 'ಆತ್ಮವಿದ್ಯಾಪರವಿದ್ಯಾ' ಎಂಬ ಹಲವು 'ಭೇದ'ಗಳಿಂದ ಎಲ್ಲರನ್ನು ಗೆಲ್ಲುತ್ತಾನೆ. ಇಲ್ಲಿ 'ವಿದ್ಯಾ' ಅಲ್ಲ 'ವಿದ್ಧ' ಎಂದಾಗಬೇಕು. ನಾಗಚಂದ್ರನ ಮಲ್ಲಿನಾಥ ಪುರಾಣದಲ್ಲಿಯೂ ಚಿತ್ರಕಲೆಗೆ ಸಂಬಂಧಿಸಿದ ಪ್ರಸಂಗವೊಂದರಲ್ಲಿ "ಶ್ರುತಿವಿದ್ಧ", ಆತ್ಮವಿದ್ಧ, ಪರವಿದ್ಧ" ಎಂಬ ಪ್ರಯೋಗವಿದೆ. (ಇಲ್ಲಿ ಪರವಿದ್ಧಕ್ಕೆ 'ರಸವಿದ್ಧ' ಎಂಬ ಪಾಠಾಂತರವು ಇದೆ.) ಶಾಸ್ತ್ರಗ್ರಂಥಗಳಲ್ಲಿ ನಾಲ್ಕು ಬಗೆಯಲ್ಲಿ ಚಿತ್ರಗಳನ್ನು ವಿಂಗಡಿಸಿದ್ದು ಅವುಗಳಂತೆ 'ವಿದ್ಧ' ಎಂದರೆ ವಾಸ್ತವಿಕ ಚಿತ್ರಣ. ವಸ್ತುವಿನೊಂದಿಗೆ ದರ್ಪಣದ ಪ್ರತಿಬಿಂಬದಂತೆ ಕೂಡುವುದು.'ಅವಿದ್ಧ' ವೆಂದರೆ ಕಾಲ್ಪನಿಕ; ಚಿತ್ರಕಾರನ ಭಾವೋಲ್ಲಾಸದ

ಉತ್ಸಾಹದಲ್ಲಿ ಬರೆದ ಚಿತ್ರ *ಎಂದಾಗುತ್ತದೆ. ಇಲ್ಲಿಯೂ ಅರಸ ಭರತನಿಗೆ ಆಸ್ಥಾನದಲ್ಲಿ ಕಲಾವಿದನ ಸ್ಥಾನ ನೀಡಿ ತನ್ನ ಮಕ್ಕಳ ಚಿತ್ರ ಬರೆಯಿಸಿ ಅರಮನೆಯ ಬಾಗಿಲಿನಲ್ಲಿ ಪ್ರದರ್ಶಿಸಿರುತ್ತಾನೆ. ಮದುವೆಗಾಗಿ ವಧೂವರರ ಭಾವಚಿತ್ರ ರಚನೆ ಸಾಕಷ್ಟು ಕಾವ್ಯಗಳಲ್ಲಿ ಬರುತ್ತದೆ. ವಧೂ ವರರೇ ತಮ್ಮ ಚಿತ್ರ ರಚಿಸಿ ಪರಸ್ಪರ ವಿನಿಮಯ ಮಾಡಿಕೊಳ್ಳುವುದೇ ಅಧಿಕ. ಅಂತೆಯೆ ಇಲ್ಲಿಯೂ ಚೇಟಕ ಮಹಾರಾಜ ತನ್ನ ಏಳು ಜನ ಕುಮಾರ್ತೆಯರ ವಿವಾಹಕ್ಕೆ ಅನುರೂಪರಾದ ವರ ದೊರೆಯಲೆಂದೇ ಚಿತ್ರಪಟ ಬರೆಯಿಸಿರುತ್ತಾನೆ. ಚಿತ್ರ ಪಟ ನೋಡಿಯೆ ಎಂಬಂತೆ ನಾಲ್ವರು ಕನ್ಯೆಯರಿಗೆ ವಿವಾಹವೂ ಆಗುತ್ತದೆ. ಪುರಜನರೂ ಏಳು ಕನ್ಯೆಯರ ಚಿತ್ರಗಳನ್ನು 'ಸಪ್ತಮಾತೃಕೆ'ಯರ ಚಿತ್ರವೆಂಬಂತೆ ಬರೆಯಿಸಿಕೊಂಡು ತಮ್ಮ ಮನೆಯ ಬಾಗಿಲಿನಲ್ಲಿ ಕಟ್ಟಿಕೊಳ್ಳುತ್ತಾರೆ. ಚಾವುಂಡರಾಯ ಪುರಾಣದಲ್ಲಿ ರಾಜನೇ ತನ್ನ ಮಕ್ಕಳ ಚಿತ್ರವನ್ನೇ ಪೂಜಿಸುತ್ತಿದ್ದರೆ, ಪುಣ್ಯಾಸ್ರವದಲ್ಲಿ ಕನ್ಯೆಯರನ್ನು ಸಪ್ತಮಾತೃಕೆಯರಂತೆ ಭಾವಿಸುತ್ತಾರೆ. ಪಾರ್ಶ್ವನಾಥ ಪುರಾಣದಲ್ಲಿ ಪಾರ್ಶ್ವಜಿನ ಕುಮಾರನ ರೂಪವನ್ನು ನೋಡಲು, ಧ್ಯಾನ ಮಾಡಲು ಚಿತ್ರದ ಪಲಗೆಯಲ್ಲಿ ಬರೆಯಲು ಜನ ಆತುರಪಡುತ್ತಿದ್ದರೆಂಬ ಮಾತು ಬರುತ್ತದೆ. ಹೀಗೆ ಜೀವಂತ ವ್ಯಕ್ತಿಯ ಚಿತ್ರರಚಿಸಿ ಪೂಜಿಸುತ್ತಿದ್ದರೆಂಬ ವಿಷಯ ಸಮಾಜದಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಕಲೆಯನ್ನು ಉತ್ಪ್ರೇಕ್ಷಿಸುವಂತೆ ಕವಿಯ ಕಲ್ಪನೆಯಾಗಿರಬಹುದು.

ಭರತ ಚೇಳಿನಿಯ ನಿರ್ಗ್ರಂಥ ರೂಪವನ್ನು ನೆನಸಿಕೊಂಡು ಚಿತ್ರ ರಚನೆಗೆ ತೊಡಗುತ್ತಾನೆ. ನಿರ್ಗ್ರಂಥ ರೂಪವೆಂದರೆ (ಜೈನ) ದಿಗಂಬರ ಎಂದೂ ವಸ್ತ್ರ ರಹಿತವೆಂದೂ ಅರ್ಥವಿದ್ದು ಕಲಾವಿದ ಚೇಳಿನಿಯ ನಿರ್ವಾಣರೂಪನ್ನು ಬರೆಯಲೆಂದೇ, ಆಶಿಸಿರಬಹುದು. ಕಲಾವಿದನ ಅರಿವಿಗೆ ಬಾರದಂತೆಯೇ ದೇವಿಯ ದಿವ್ಯಜ್ಞಾನದ ಮೂಲಕ, ತೊಡೆಯ ಭಾಗದಲ್ಲಿ ಕಪ್ಪು ಮಸಿ ಬಿದ್ದು, ಚೇಳಿನಿಗೆ ನಿಜವಾಗಿಯೂ ಆ ಪ್ರದೇಶದಲ್ಲಿ ಮಚ್ಚೆಯೊಂದು ಇದ್ದು, ಅರಸ ಚಿತ್ರ ನೋಡಿ ಈ ರಹಸ್ಯ ಚಿತ್ರಕನಿಗೆ ಹೇಗೆ ತಿಳಿಯಿತೆಂದು ಕೋಪಿಸಿಕೊಂಡಿದ್ದು ಬೇರೆಯವರಿಂದ ತಿಳಿದು ಕಲಾವಿದ ಚಿತ್ರದೊಂದಿಗೇ (ಅಥವ ಇನ್ನೊಂದು ಚಿತ್ರ ಬರೆದುಕೊಂಡು) ಓಡಿ ಹೋಗುತ್ತಾನೆ. ಜನಪದ ಕಥೆಗಳಲ್ಲಿ ತರ್ಕಬದ್ಧತೆಯನ್ನು ಪ್ರಶ್ನಿಸುವುದು ಉಚಿತವಲ್ಲ.

ಇಲ್ಲಿಯ ಪಾಠಾಂತರದ ಬಗ್ಗೆ ಒಂದೆರಡು ಬದಲಾವಣೆ ಸೂಚಿಸಬಹುದು 'ಲಕ್ಕಣಿಕೆಯ ನಿಕ್ಕದ ಮುನ್ನವೇ ರೂಪಿನ ಜಾತಿ ಅಳವಡಲಾಚಿತ್ರ' ಎಂಬಲ್ಲಿ 'ರೂಪಿನ' ಗೆ 'ಯಾ ಪದ್ಮಿನಿ' ಎಂಬ ಪಾಠಾಂತರವಿದ್ದು ಹಿಂದೆ ತಿಳಿಸಿದಂತೆ ಪದ್ಮಾವತಿಯಾರಾಧನೆಯಿಂದ ಚಿತ್ರಿಕನಿಗೆ ವರಪ್ರಸಾದ ದೊರೆತಿದ್ದು, ಸ್ತ್ರೀ ಜಾತಿಗಳಲ್ಲಿ ಪದ್ಮಿನಿಸ್ತ್ರೀ ಹೆಚ್ಚು ಆಕರ್ಷಕವಾಗಿದ್ದಿರಬಹುದಾಗಿ 'ಮುನ್ನವೆಯಾ ಪದ್ಮಿನಿ ಜಾತಿಯಳವಡಲಾ ಚಿತ್ರ' ಎಂದು ಸ್ವೀಕರಿಸಬಹುದಾಗಿದೆ. ಎರಡನೆಯದಾಗಿ 'ಕಾಡಿಗೆಯ ಬಿಂದು ಬಿರ್ದುದು ಮು'ನ್ನುಳ ಎಂಬಲ್ಲಿ 'ಮು' ಎಂದರೆ 'ಮುನ್ನುಳ' ಎಂಬ

---

* ಉಳಿದೆರಡು 'ರಸಚಿತ್ರ' ಭಿನ್ನ ಭಿನ್ನ ರಸಗಳ ಅಭಿವ್ಯಕ್ತಿ ಎಂದೂ ನಾಲ್ಕನೆಯದು 'ಧೂಲಿಚಿತ್ರ' ಎಂದೂ (ಪ್ರಾಯಶಃ ರಂಗೋಲಿ) ಶಾಸ್ತ್ರಗ್ರಂಥಗಳಲ್ಲಿ ಅರ್ಥೈಸಿದೆಯಾದರೂ ಈ ಅರ್ಥಗಳನ್ನು ಪುನರ್ ಪರಿಶೀಲಿಸಬೇಕಾಗಿದೆ

ಪಾಠಾಂತರವಿದೆ. ಕಲಾವಿದ ರಾಜಕುಮಾರಿಯ ಏಕಾಂತ ಪ್ರದೇಶವನ್ನು ಕಂಡೆನಸಲ್ಲ. ಆಕೆ ಶ್ರೇಣಿಕನ ಮೀಸಲು ಕನ್ಯೆ. ಆತನನ್ನು ಮದುವೆಯಾಗಿ ಆತನ ಧಾರ್ಮಿಕತೆಯನ್ನೇ ಪ್ರಶ್ನಿಸುವವಳಿದ್ದಾಳೆ. ಕಲಾವಿದ ಆಕೆಗೆ ತಕ್ಕವನೂ ಅಲ್ಲ. ಚಿತ್ರವೇ ದೇವಿಯ ಸ್ಮರಣೆಯಿಂದ ಬರೆದಿರುವಾಗ ಭರತನನ್ನು ಉಳಿಸಲು 'ಕಾಡಿಗೆಯ ಬಿಂದು ಬಿತ್ತು' ಎಂದು ಕಥೆಗಾರ ಹೇಳಬೇಕಾಗಿಲ್ಲ. ಆದುದರಿಂದ ಮುನ್ನುಳಿ ಎಂದಷ್ಟೇ ಸ್ವೀಕರಿಸಬಹುದು.

"ರಾಜ 'ಚಿತ್ರಕನ ಮೇಲೆ ಕೊಪಮಂ ತಾಳ್ದು" ಎಂಬಲ್ಲಿ 'ತ್ರಿ' ಪಾಠಾಂತರವಿದ್ದು 'ಚಿತ್ರಿಕ' ಎಂದಾಗು ್ವೆ. ಇಡೀ ಗ್ರಂಥದಲ್ಲಿ ಕಲಾವಿದನ ಬಗ್ಗೆ ಹೇಳುವಾಗ 'ಚಿತ್ರಕ' ಎಂದೇ ಇದ್ದು ಇಲ್ಲಿಯೂ 'ಚಿತ್ರಕ' ನನ್ನೇ ಸ್ವೀಕರಿಸಬಹುದು.

"ಚಿತ್ರದ ರಚನೆಯಂ 'ಭರತಂ ಚೇ'ಟಕ ಮಹಾರಾಜಂಗೆ ತೋರಲ್" ಎಂಬಲ್ಲಿ 'ಚೇ' ಎಂಬಷ್ಟೇ ಪಾಠಾಂತರವಿದ್ದು. 'ಚಿತ್ರದ ರಚನೆಯಂ ಚೇಟಕ ಮಹಾರಾಜಂಗೆ ತೋರಲ್' ಎಂದಷ್ಟೇ ಆಗುತ್ತದೆ. ಚಿತ್ರವನ್ನು ಕಂಡ ಮಹಾರಾಜ ಕೋಪವನ್ನು ತಾಳಿದ ಎಂಬ ವಿಚಾರವನ್ನು ಭರತ 'ಕೆಲವರ ಕೆಯಿಂ ಕೇಳ್ದು'ದಲ್ಲದೆ ಹೆದರಿ ಓಡಿಯೂ ಹೋಗುತ್ತಾನೆ. ಆದುದರಿಂದ ಕಲಾವಿದನೇ ಚಿತ್ರವನ್ನು ನೇರವಾಗಿ ಅರಸನಿಗೆ ತೋರಿಸಲಿಲ್ಲ ಅಥವಾ ಅರಸ ಚಿತ್ರನೋಡುತ್ತಿದ್ದಾಗ ಕಲಾವಿದ ಅಲ್ಲಿರಲಿಲ್ಲ. ಮೂರು ಪ್ರತಿಗಳಲ್ಲೂ ಭರತನ ಹೆಸರು ಇಲ್ಲದಿರುವುದೂ ಸಹ ಪಾಠಾಂತರವನ್ನು ಸ್ವೀಕರಿಸಬಹುದೆಂದು ಸೂಚಿಸುತ್ತದೆ.

ಪುಣ್ಯಾಸ್ರವದ ಸಂಪಾದಕರ ಪ್ರೊ. ದೇಜಗೌ ಅವರು ಸ್ವೀಕರಿಸಿರುವ ಗ್ರಂಥ ಪಾಠವೂ ಸೂಕ್ತವಾಗಿಯೇ ಇದೆ. ಆದರೆ ಚೇಳಿನಿಯ ಕಥೆಯಲ್ಲಿ ಮಾತ್ರ ಈ ಕೆಲವೊಂದು ಪಾಠಾಂತರಗಳನ್ನು ಇರಿಸಿ ನೋಡಬಹುದೆಂಬ ಸೂಚನೆಯನ್ನಷ್ಟೇ ಇಲ್ಲಿ ಮಾಡಿದೆ. ಉಳಿದಂತೆ ಪುಣ್ಯಾಸ್ರವದ ಕಥೆಗಳಲ್ಲಿ ಕಂಡು ಬರುವ ಚಿತ್ರಕಲೆಗೆ ಸಂಬಂಧಿಸಿದ ಪಾರಿಭಾಷಿಕ ಪದಗಳು, ಕಲೆ ಮತ್ತು ಕಲಾವಿದರ ಬಗ್ಗೆ ಇದ್ದ ಆದರಾಸಕ್ತಿಗಳು, ಸಮಕಾಲೀನ ಅಂಶಗಳು ಇತ್ಯಾದಿಗಳು ಅಭ್ಯಾಸಯೋಗ್ಯವಾಗಿದೆ.

* * * * *

ಮಹಾಕವಿ ಪಂಪನ ದ್ವಂದ್ವ ಮನೋಭಾವ

- ಡಾ. ಶ್ರೀನಿವಾಸ ಕುಲಕರ್ಣಿ

ಕವಿಕೃತಿಯನ್ನು ಅಭ್ಯಸಿಸುವ, ವಿಶ್ಲೇಷಿಸುವ ಸಂದರ್ಭದಲ್ಲಿ ಆ ಕೃತಿಯ ಮೂಲಕ ಕಾಣುವ ಕವಿಮನಸ್ಸನ್ನು ಮನಸ್ಸಿನ ಪದರಗಳನ್ನು ಅರ್ಥವಿಸಿಕೊಳ್ಳುವುದು ಮುಖ್ಯವಾಗುತ್ತದೆ; ಅರ್ಥಪೂರ್ಣವೆನಿಸುತ್ತದೆ. ಯಾವುದೇ ಮೂಲ ದ್ರವ್ಯವನ್ನು, ಅನುಭವ ವಿಶೇಷವನ್ನು ಕವಿಮನಸ್ಸು ತನ್ನ 'ವಿಶಿಷ್ಟರೀತಿ'ಯಲ್ಲಿ ಪರಿಭಾವಿಸಿ, ಸ್ಪಂದಿಸಿ, ಅದನ್ನು ಪುನರ್‌ಸೃಷ್ಟಿಸುತ್ತದೆ. ಪ್ರತಿಯೊಂದು ಕಾಲದ ಪ್ರತಿಯೊಬ್ಬ ಕವಿಯೂ ಹೀಗೆ ತನ್ನ ಮನಸ್ಸೆಂಬ ಕನ್ನಡಿಯಲ್ಲಿ ಮೂಡುವ ಪ್ರತಿಬಿಂಬಗಳನ್ನು, ಅವುಗಳ ವಿಶಿಷ್ಟ ಗುಣ, ಸ್ವಭಾವ, ಆಕಾರಗಳನ್ನು ತನ್ನ ಕೃತಿಯಲ್ಲಿ ಚಿತ್ರಿಸುತ್ತಾನೆ. " ಒಂದು ಮಹಾಕೃತಿ ಕರ್ತೃವಿನ ಮೆದುಳು ಹಾಗೂ ಹೃದಯದಿಂದ ಹುಟ್ಟುತ್ತದೆ ; ಅವನು ಅದರ ಪುಟಗಳಲ್ಲಿ ತನ್ನನ್ನೇ ಹುದುಗಿಸಿರುತ್ತಾನೆ. . . . . . . "[೧] ಎಂಬ ಹಡ್ಸನ್ನನ ಮಾತು ತುಂಬ ಅರ್ಥಪೂರ್ಣವೂ ಮೌಲಿಕವೂ ಆದುದು. ಹೀಗಾಗಿಯೇ ಒಂದೇ ಕಥಾವಸ್ತು, ಒಂದೇ ಅನುಭವ, ಹಲವು ಕವಿಗಳ ಕೈಯಲ್ಲಿ ಸಿಕ್ಕು ಹಲವು ಭಿನ್ನ ಭಿನ್ನ ಅವತಾರಗಳನ್ನು ತಾಳುವುದು ಸಾಧ್ಯವಾಗುತ್ತದೆ. ಕವಿಯ ಧೋರಣೆ, ಜೀವನದೃಷ್ಟಿ, ಹಾಗೂ ತನಗರಿವಿಲ್ಲದಂತೆಯೇ ಆತ ಬೆಳಸಿಕೊಂಡಿರಬಹುದಾದ ಪೂರ್ವಗ್ರಹಗಳು - ಇವೆಲ್ಲವೂ ಆತನ ಕೃತಿರಚನೆಯ ಸಂದರ್ಭದಲ್ಲಿ ನೇರವಾದ ಪರಿಣಾಮವನ್ನು ಬೀರುತ್ತವೆ.

ಕವಿ, ಪಂಪ, ಕನ್ನಡದ ಸರ್ವಕಾಲೀನ ಶ್ರೇಷ್ಠ ಕವಿ ; ಮಹಾಕವಿ. ಆತನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ'ಗಳು ಆತನ ಶ್ರೇಷ್ಠತೆಯನ್ನು ಮಹಾಕವಿತ್ವಶಕ್ತಿಯನ್ನು ಸಾಬೀತುಪಡಿಸುವ ಒರೆಗಲ್ಲುಗಳು. ಈ ಎರಡೂ ಕಾವ್ಯಗಳನ್ನು ಪರಿಭಾವಿಸುವ ಮೂಲಕ ಪಂಪನ ಮನಸ್ಸಿನ ಸ್ವರೂಪವನ್ನು 'ಒಂದು ಮಿತಿಯಲ್ಲಾದರೂ' ತಿಳಿಯಬಹುದು, ವಿಶ್ಲೇಷಿಸಬಹುದು. ಅದರಲ್ಲೂ ಅವನ ಮನಸ್ಸು ಒಂದಿಷ್ಟು ಸ್ಪಷ್ಟವಾಗಿ ನಮ್ಮರಿವಿಗೆ ನಿಲುಕುವುದು 'ವಿಕ್ರಮಾರ್ಜುನ ವಿಜಯ'ದ ಮೂಲಕವೇ. ಏಕೆಂದರೆ ಧಾರ್ಮಿಕ ಕಾವ್ಯವಾದ ಆದಿಪುರಾಣದಲ್ಲಿ ಪಂಪನು ಜೀನಸೇನಾಚಾರ್ಯರ 'ಪೂರ್ವಪುರಾಣ'ದ ಹೆಜ್ಜೆಗಳಲ್ಲಿ ಹೆಜ್ಜೆ ಹಾಕಿದ್ದಾನೆ ; ಅದಕ್ಕೆ ಬಹು ವಿಧೇಯನಾಗಿಯೇ ನಡೆದುಕೊಂಡಿದ್ದಾನೆ. ಅಲ್ಲಿ ಅವನ ವೈಯಕ್ತಿಕ ದೃಷ್ಟಿ-ಧೋರಣೆಗೆ ಇಂಬು ಇಲ್ಲ, ಅಥವಾ ಪಂಪ ತಾನಾಗಿಯೇ ತನಗೆ ದತ್ತವಾದ 'ಕವಿಸ್ವಾತಂತ್ರ್ಯ'ವನ್ನು ಉದ್ದೇಶ ಪೂರ್ವಕವಾಗಿಯೇ ನಿರಾಕರಿಸಿದ್ದಾನೆ ಎಂಬುದು ಸ್ಪಷ್ಟವಾಗಿಯೇ ಇದೆ. ವಸ್ತು ನಿರ್ವಹಣೆಯಲ್ಲಾಗಲೀ, ಸನ್ನಿವೇಶ ನಿರ್ಮಾಣದಲ್ಲಾಗಲೀ, ಪಾತ್ರಗಳ ಗುಣ

---

೧. ವಿಲಿಯಂ ಹೆನ್ರಿ ಹಡ್ಸನ್ - ಸಾಹಿತ್ಯ ಪ್ರವೇಶ. ಅನು - ಸಿ. ಪಿ. ಕೃಷ್ಣಕುಮಾರ (೧೯೬೫) ಪು. ೯.

-ಸ್ವಭಾವಗಳನ್ನು ರೇಖಿಸುವಲ್ಲಾಗಲೀ ಪಂಪ, ಜಿನಸೇನಾಚಾರ್ಯರು ವಿಧಿಸಿದ 'ಲಕ್ಷ್ಮಣ ರೇಖೆ'ಯನ್ನು ದಾಟಿಲ್ಲವೆಂಬುದು ನಮಗಿಂದು ತಿಳಿದ ಸಂಗತಿ.[೧] ಹೀಗಾಗಿ ನಾವು ಆತನ ಮನಸ್ಸಿನ ಅಧ್ಯಯನಕ್ಕೆ 'ವಿಕ್ರಮಾರ್ಜುನ ವಿಜಯ'ದ ಸುತ್ತಲೇ ಪ್ರದಕ್ಷಿಣೆ ಹಾಕಬೇಕಾಗುತ್ತದೆ.

ಪಂಪ, ತನ್ನ ಕಾವ್ಯಪ್ರಜ್ಞೆಯನ್ನು ಎರಡು ಭಿನ್ನ ಪರಿವುಗಳಲ್ಲಿ ಹರಿಯಬಿಟ್ಟುದನ್ನು ತಾನೇ 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಂ' ಎಂದು ಹೇಳಿಕೊಳ್ಳುತ್ತಾನೆ. ಧರ್ಮ ಜೀವನ, ಮತ್ತು ಲೋಕಜೀವನ ಇವೆರಡೂ ಒಂದರೊಳಗೊಂದು ಬೆರೆತುಕೊಂಡ ತಮ್ಮ ವ್ಯಕ್ತಿತ್ವದಂಶಗಳನ್ನು ಹಂಗಿಸಿಕೊಂಡು ಒಂದರೊಳಗೊಂದು ಲೀನಗೊಂಡು ಏಕಗೊಳ್ಳುತ್ತವೆ. ಆದರೆ ಪಂಪನ ಧೋರಣೆಯೇ ಬೇರೆ. ಆತ ಬದುಕನ್ನು ಹೀಗೆ ವಿಭಜಿಸಿ, ಅವುಗಳೆರಡರ ವಿಶಿಷ್ಟ ಅನುಭವ ದ್ರವ್ಯವನ್ನು ಹಾಗೂ ಜೀವನ ಮೌಲ್ಯಗಳನ್ನು ಎರಡು ಭಿನ್ನ ಭಿನ್ನ ಕೃತಿಗಳಲ್ಲಿಯೇ ಕಂಡರಿಸುತ್ತಾನೆ. "ಹೀಗೆ ಬದುಕನ್ನು ವಿಭಜನೆ ಮಾಡಿಕೊಳ್ಳುವುದು, ಈ ಎರಡರಲ್ಲಿಯೂ ಮೈ ಪಡೆಯುವ ಅನುಭವಗಳು ಕವಿಯ ಒಂದೇ ಪ್ರಜ್ಞಾಕೇಂದ್ರದಲ್ಲಿ ಶೋಧಿತವಾಗಿ ಅರ್ಥಪೂರ್ಣವಾಗಬೇಕಾದುವುಗಳು ಎಂಬ ಅರಿವು ಆತನಿಗೆ ಇರಲಿಲ್ಲವೆಂಬುದನ್ನು ತೋರಿಸುತ್ತದೆ. ತನ್ನ ವಿಶಿಷ್ಟವಾದ ಪ್ರಜ್ಞಾಕೇಂದ್ರದಿಂದ ಬದುಕಿನ ಸಮಗ್ರ ಅನುಭವಗಳನ್ನೂ ಸ್ವೀಕರಿಸುವ, ಪರಿಭಾವಿಸುವ, ತೂಗುವ, ಆ ಮೂಲಕ ಸಮಗ್ರ ಬದುಕನ್ನು ಕುರಿತಂತೆ ಪುರುಷಾರ್ಥಗಳನ್ನು ಶೋಧಿಸಿಕೊಳ್ಳುವ, ಏಕಕಾಲದಲ್ಲಿ ತೀರ ವೈಯಕ್ತಿಕವೂ ಆಗುವ ಸಾರ್ವತ್ರಿಕ ಮತ್ತು ಸಾರ್ವಕಾಲಿಕತೆಗೂ ಸಲ್ಲುವ ಅರ್ಥಪೂರ್ಣತೆಯನ್ನು ಕೃತಿಯ ಒಳಗೆ ಹೊರೆಸಬೇಕೆಂಬ ಪ್ರಜ್ಞೆ ಪಂಪನಿಗಿಲ್ಲವೆಂದು ತೋರುತ್ತದೆ".[೨] ಪಂಪನ ಈ ವಿಶಿಷ್ಟ 'ಪ್ರಜ್ಞೆ'ಯನ್ನು ರೂಪಿಸಿದುದು, ಬೆಳಗಿದುದು ಆತನ 'ವಿಶಿಷ್ಟ ಧೋರಣೆ'.

ಪಂಪ ತನ್ನ ಕಾವ್ಯಗಳಿಗೆ ವಸ್ತುಗಳನ್ನಾಯ್ದುಕೊಂಡುದು ಆಗಲೇ ಸಾಕಷ್ಟು ಪ್ರಸಿದ್ಧಿ, ಪ್ರಚಾರ ಪಡೆದ ಸ್ಥಾಪಿತ ಮೂಲಗಳಿಂದಲೇ (Established Sources). ಜಿನಸೇನಾಚಾರ್ಯರ ಪೂರ್ವಪುರಾಣವನ್ನು ಆಧರಿಸಿ, ಅನುಸರಿಸಿ 'ಆದಿಪುರಾಣ' ರಚನೆಗೊಂಡಿದ್ದರೆ, ವ್ಯಾಸರ ಮಹಾಭಾರತವನ್ನನುಸರಿಸಿ 'ವಿಕ್ರಮಾರ್ಜುನ ವಿಜಯ' ರೂಪತಾಳಿದೆ. ಆದರೆ ಇಲ್ಲಿ ಪಂಪ, ಪೂರ್ವಪುರಾಣಕ್ಕೆ ವಿಧೇಯನಾಗಿರುವ ರೀತಿಯಲ್ಲಿ, ಪ್ರಾಮಾಣಿಕನಾಗಿರುವ ರೀತಿಯಲ್ಲಿ, ಆ ಪ್ರಮಾಣದಲ್ಲಿ ವ್ಯಾಸರ ಮಹಾಭಾರತಕ್ಕೆ ವಿಧೇಯನಾಗಿಲ್ಲ, ಪ್ರಾಮಾಣಿಕನಾಗಿಲ್ಲ. ಹೀಗೆ ಮೂಲ ಆಕರಗಳನ್ನು ಅನುಸರಿಸುವಲ್ಲಿ, ಕಾವ್ಯಗಳನ್ನು ಪುನರ್‌ಸೃಷ್ಟಿಸುವಲ್ಲಿ ಆತನ ಧೋರಣೆ, ಮನೋಭಾವ ಸ್ಪಷ್ಟವಾಗುತ್ತದೆ. ಅಂದರೆ ಧಾರ್ಮಿಕ ಕಾವ್ಯ ಬರೆಯುವಲ್ಲಿ ಆತ ಮೂಲಕ್ಕೆ ಬದ್ಧನಾಗಿದ್ದಾನೆ; ಆದರೆ ಲೌಕಿಕ

---

೧. ಆದಿಪುರಾಣ ರಚನೆಯಲ್ಲಿ ಪಂಪನು ಕೈಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂತೆ ಕಾಣಿಸುತ್ತಾನೆ. ತೀ. ನಂ. ಶ್ರೀ. - ಪಂಪ - ಪು ೧೪

೨. ಪಂಪ ಒಂದು ಅಧ್ಯಯನ : ಜಿ. ಎಚ್. ನಾಯಕ : ಪಂಪನ ಅಭಿವ್ಯಕ್ತಿ ಪು. ೨೧೫

ಕಾವ್ಯ ಎಂದು ಆತ ಪರಿಗಣಿಸಿದ ಮಹಾಭಾರತ ರಚನೆಯಲ್ಲಿ ಆ ಬದ್ಧತೆಯ ಅವಶ್ಯಕತೆಯನ್ನವನು ಕಾಣುವುದಿಲ್ಲ. ಹಾಗಾಗಿಯೇ ಮಹಾಭಾರತದ ಮೂಲ ಸ್ವರೂಪಕ್ಕೆ ಭಂಗ ಬಂದರೂ ಸರಿ, ಅದನ್ನು ಬದಲು ಮಾಡುವ ಮಹಾಸಾಹಸಕ್ಕೆ ಕೈಹಾಕುತ್ತಾನೆ.

ಅಷ್ಟೇ ಅಲ್ಲ, ಆದಿಪುರಾಣದಲ್ಲಿ ಯಾವ ಮೌಲ್ಯಗಳನ್ನು ಜೀವನದ ಪರಮ ಪುರುಷಾರ್ಥಗಳೆಂದು ಆತ ಪ್ರತಿಪಾದಿಸುತ್ತಾನೋ ಅವುಗಳ ವಿರುದ್ಧ ದೆಸೆಯ ಹಾದಿಯಲ್ಲಿ ಸಾಗುತ್ತಾನೆ ಪಂಪ, ವಿಕ್ರಮಾರ್ಜುನ ವಿಜಯದಲ್ಲಿ. 'ತನ್ಮಯತೆ ಮತ್ತು ಅಪರಿಮಿತ ಭಕ್ತಿ' ಜೀವನದ ಪರಮ ಪುರುಷಾರ್ಥಗಳೆಂದು ಆದಿಪುರಾಣದಲ್ಲಿ ಘಂಟಾಘೋಷವಾಗಿ ಹೇಳಿದರೆ, ಇವುಗಳಿಗೆ ವ್ಯತಿರಿಕ್ತವಾಗಿರುವಂಥ ಮೌಲ್ಯಾದರ್ಶಗಳನ್ನು ತನ್ನ ಪ್ರಿಯ ಒಡೆಯನಾದ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ 'ತಗುಳ್ಚಿ' 'ಅಮ್ಮಿ'ಯಿಂದ ವರ್ಣಿಸುವುದನ್ನು 'ವಿಕ್ರಮಾರ್ಜುನ ವಿಜಯ'ದಲ್ಲಿ ಕಾಣುತ್ತೇವೆ. ಅಂದರೆ ಲೌಕಿಕ ಜೀವನದ ನಿರಾಕರಣ-ಭೋಗನಿರಸನ, ಅಹಂಕಾರ ನಿರಸನ, ಅಭಿಮಾನ ನಿರಸನ- ಆದಿಪುರಾಣದ ಸಂದೇಶವಾದರೆ, ಅದಕ್ಕೆ ವ್ಯತಿರಿಕ್ತವಾದ-ಪ್ರಾಯದ ಪೆಂಪೆ ಪೆಂಪು, ಮೀರಿದರಂ ತವೆ ಕೊಂದ ಪೆಂಪು, ಕಟ್ಟಾಯದ ಪೆಂಪು-ಮೌಲ್ಯಾದರ್ಶಗಳನ್ನು ವಿಕ್ರಮಾರ್ಜುನ ವಿಜಯದಲ್ಲಿ ಮೆರೆಯುತ್ತಾನೆ.[೧] "ಭಾರತ ಎಷ್ಟರಮಟ್ಟಿಗೆ ಹಿಂಸಾಕಾವ್ಯವೊ, ಆದಿಪುರಾಣ ಅಷ್ಟರಮಟ್ಟಿಗೆ ಅಹಿಂಸಾಕಾವ್ಯ. ಅಲ್ಲಿ ರಾಜ್ಯ ಸಂಪಾದನೆಗಾಗಿ ಒಂದು ಕುರುಕ್ಷೇತ್ರವೇ ಏರ್ಪಟ್ಟರೆ, ಇಲ್ಲಿ ರಾಜ್ಯ ಪರಿತ್ಯಾಗದಿಂದಲೇ ಅನೇಕ ತಪಃಕ್ಷೇತ್ರಗಳು ಉದ್ಭವಿಸುತ್ತವೆ. ಅಲ್ಲಿಯ ರಣವ್ರತದ ಸ್ಥಾನವನ್ನು ಇಲ್ಲಿ ಅಣುವ್ರತ ಆಕ್ರಮಿಸುತ್ತದೆ " ಎಂದು ಕುವೆಂಪು ಆ ಎರಡೂ ಕಾವ್ಯಗಳ ಪರಸ್ಪರ ವಿರುದ್ಧ ಮೌಲ್ಯಾದರ್ಶಗಳನ್ನು ಸರಿಯಾಗಿಯೇ ಗುರುತಿಸಿದ್ದಾರೆ.[೨] ಹೀಗೆ ಒಬ್ಬ ಕವಿ ನಿಗದಿತ ಕಾಲಾವಧಿಯಲ್ಲಿ ಪರಸ್ಪರ ವಿರುದ್ಧ ಆಶಯ, ಧೋರಣೆಗಳ, ಮೌಲ್ಯಾದರ್ಶಗಳ ಕಾವ್ಯಗಳನ್ನು ರಚಿಸಿದುದು ಒಂದು ವಿಶೇಷ ಸಂಗತಿ. ಜೀವನವನ್ನು ಕುರಿತ ಹಾಗೆ, ಜೀವನದ ಮೌಲ್ಯಾದರ್ಶಗಳನ್ನು ಕುರಿತ ಹಾಗೆ ಪಂಪನಲ್ಲಿ ಕಂಡುಬರುವ ಈ'ಸ್ವ-ವಿರೋಧ' ದೃಷ್ಟಿ, ಆತನ ಮನಸ್ಸಿನಾಳದಲ್ಲಿ ಸ್ಥಾಯಿಯಾಗಿದ್ದಿರಬಹುದಾದ ದ್ವಂದ್ವ ದೃಷ್ಟಿಗೆ ಪ್ರತ್ಯಕ್ಷ ಪ್ರತಿಮೆಗಳಾಗಿವೆ.[೩]

---

೧. ಪ್ರಾಯದ ಪೆಂಪೆ ಪೆಂಪವುಗೆ ಮೀಱಿದರಂ ತವೆ ಕೊಂದ ಪೆಂಪು ಕ
ಟ್ಟಾಯದ ಪೆಂಪು ಶಕ್ರನೊಡನೇಱಿದ ಪೆಂಪಿವು ಪೆಂಪುವೆತ್ತು ನಿ
ಟ್ಟಾಯುಗಳಾಗಿ ನಿನ್ನೊಳಮರ್ದಿರ್ಪುವು ನೀಂ ತತಿಪೀಸದುರ್ವರಾ
ಶ್ರೀಯುಸಿದಾಗದೆನ್ನದೊಳಕೊಳ್ ಪರಮೋತ್ಸವದಿಂ ಗುಣಾರ್ಣವಾ

೨. ಕುವೆಂಪು : ತಪೋನಂದನ, ಪಂಪನಲ್ಲಿ ಭವ್ಯತೆ. ಪು. ೪೩ - ೪೪

೩. ಗಮನಿಸಿ :........ ಬದುಕಿನ ಬಗೆಗೆ ಮೂಲಭೂತವಾಗಿ, ಆತನ ಕಾವ್ಯಗಳ ಮೂಲಕ ಪ್ರಕಟವಾಗುವ ಪಂಪನ ಧೋರಣೆ ಏನು ಎನ್ನುವುದೇ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಜಿ. ಎಚ್. ನಾಯಕ - ಪಂಪನ ಅಭಿವ್ಯಕ್ತಿ - ಪಂಪ - ಒಂದು ಅಧ್ಯಯನ. ಪು. ೨೧೭

'ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ' ಎಂದು ವಿಕ್ರಮಾರ್ಜುನ ವಿಜಯದ ಪ್ರಾರಂಭದಲ್ಲಿ ಮಹರ್ಷಿವ್ಯಾಸನನ್ನು, ಮಹಾಸಾಗರ ಸದೃಶ ಆತನ ಕೃತಿಯನ್ನು ಅತ್ಯಂತ ಗೌರವ ಕೃತಜ್ಞತೆಗಳಿಂದ ಸ್ಮರಿಸಿಕೊಳ್ಳುತ್ತಿರುವಷ್ಟರಲ್ಲಿಯೇ, ಪಂಪನ ಮನಸ್ಸು ಕವಲೊಡೆದು, ಟಿಸಿಲಾಗಿ, ವೈದಿಕ ಕಾವ್ಯಕರ್ತೃವಾದ ವ್ಯಾಸ, ಜೈನನಾದ ತನಗಷ್ಟೊಂದು ಪೂಜಾರ್ಹನಲ್ಲವೆಂಬ ಸಂಗತಿ ಪಟಕ್ಕನೆ ಗೋಚರಿಸಿ, ತಕ್ಷಣ 'ಕವಿವ್ಯಾಸನೆಂಬ ಗರ್ವಮೆನಗಿಲ್ಲ' ಎಂಬ ಮಾತು ಹೇಳುತ್ತಾನೆ. ಇಲ್ಲಿ ಪಂಪನ ಮನಸ್ಸು ವ್ಯಾಸರ ನೆನಪಿನಲ್ಲಿ ತುಯ್ದಾಟದಲ್ಲಿದ್ದುದು ಮೇಲಿನ ಎರಡೂ ಮಾತುಗಳನ್ನು ಜೊತೆ ಜೊತೆಗಿಟ್ಟು ಪರೀಕ್ಷಿಸಿದಾಗ ತಿಳಿಯುತ್ತದೆ. ಒಮ್ಮೆ ಒಂದು ಭಾವ 'ವ್ಯಾಸಮುನೀಂದ್ರ' ಎಂದರೆ (ವಿಪ್ರ ಮೂಲದ ರಕ್ತ ಮತ್ತು ಪೂರ್ವ ಸಂಸ್ಕಾರ ಕಾರಣವಾಗಿ), ಇನ್ನೊಂದು ಭಾವ, 'ಕವಿವ್ಯಾಸ' (ಈಚೆಗಿನ ಜೈನಧರ್ಮ ಕಾರಣವಾಗಿ) ಎಂದೇ ನಿರ್ಣಯಿಸುತ್ತದೆ; ಹೀಗಾಗಿಯೇ ಇದು ಆತನಿಗೆ ಲೌಕಿಕ ಕಾವ್ಯವಾಗಿ ಕಾಣುವುದು ಸಾಧ್ಯವಾಯ್ತು. ಹಾಗೆ ನೋಡಿದರೆ ಈ ಮಹಾಭಾರತ, ಒಂದು ಲೌಕಿಕ ಕಾವ್ಯವೇ ಸೈ! ಇಲ್ಲಿನ ಬದುಕು-ಬಾಳು ಸಾಮಾನ್ಯ ಜನರದು, ಸಾಮಾನ್ಯ ಸ್ತ್ರೀ-ಪುರುಷರ ರೀತಿಯದು; ಸಾವಿರಾರು ವರ್ಷಗಳಿಂದ ಭಾರತದ ಜನತೆ ಬದುಕಿರುವಂಥದು. ಇಲ್ಲಿನ ಎಲ್ಲ ಸನ್ನಿವೇಶಗಳೂ ಮಾನವ ಮಟ್ಟದಲ್ಲಿ ನಿರ್ವಹಿಸಲು ಅಥವಾ ಕೈಕೊಳ್ಳಲು ತಕ್ಕದ್ದು. ಜೊತೆಗೆ, ಪಂಪ ಇಲ್ಲಿ 'ತಗುಳ್ಚಿ' ಹೇಳುವ, ತನ್ನ ಪ್ರೀತಿ-ವಿಶ್ವಾಸಗಳನ್ನು ಗೆದ್ದುಕೊಂಡ ಅರಿಕೇಸರಿಯೂ ವೈದಿಕ ಪರಂಪರೆಗೇ ಸೇರಿ ಮಹಾಭಾರತದ ಮೌಲ್ಯಾದರ್ಶಗಳನ್ನು ಒಪ್ಪಿಕೊಂಡವನು. ಈ ಅರಿಕೇಸರಿಯನ್ನು ಅರ್ಜುನನೊಂದಿಗೆ 'ಸಮನಿಸುವ' ಕಾರ್ಯಕ್ಕೆ ಬದ್ಧನಾದ ಪಂಪ, ಈ ಹಾದಿಯಲ್ಲಿಯೂ ಒಮ್ಮನಸ್ಸಿನಿಂದ ಸಾಗುವುದಿಲ್ಲ. ಹಾಗೆ ಒಮ್ಮನಸ್ಸಿನಿಂದ ಸಾಗುವುದಾಗಿದ್ದರೆ, ಪಂಪ, ತನ್ನ ವೈಯಕ್ತಿಕ ಮತಧರ್ಮದ ಪ್ರೀತಿ-ಪಕ್ಷಪಾತಗಳನ್ನು ಇಲ್ಲಿ ಪ್ರದರ್ಶಿಸಬೇಕಾದ, ತನ್ಮೂಲಕ ಈ ಮೂಲಕಥಾ ದ್ರವ್ಯದಲ್ಲಿ ಜೈನಮತೀಯ ದ್ರವ್ಯಗಳನ್ನು ಸೂಕ್ಷ್ಮವಾಗಿಯಾದರೂ ಸೇರಿಸಬೇಕಾದ ಯಾವ ಲೌಕಿಕ ಒತ್ತಡವೂ ಇಲ್ಲ. ಭಾರತೀಯ ಪರಿಸರದಲ್ಲಿ ಯಾವುದೇ ಕಾಲ, ಪರಿಸ್ಥಿತಿಗಳಲ್ಲೂ ಹೊಂದಿಕೆಯಾಗುವ ಸ್ಥಿತಿ-ಸ್ಥಾಪಕ ಗುಣವಿರುವ ಕಥಾದ್ರವ್ಯ ಈ ಮಹಾಭಾರತದ್ದು. ಅದನ್ನು ಏನೂ ಮಾರ್ಪಾಟು, ಅಥವಾ ಮಿಶ್ರಣ ಮಾಡದೆಯೇ ಲೌಕಿಕ ಕಾವ್ಯವಾಗಿ ಚಿತ್ರಿಸುವುದು ಸಾಧ್ಯವಿತ್ತು. ಆದರೆ ಆದೇ ತಾನೇ ಜೈನ ಮತಾವಲಂಬಿಯಾಗಿ ಪರಿವರ್ತನೆಗೊಂಡ ತಂದೆ, ಅವನನ್ನನುಸರಿಸಿ ತಾನೂ ತನ್ನ ಮತವನ್ನು ಬದಲಿಸಿಕೊಂಡ ಪಂಪ, ಮಹಾಭಾರತದ ಹಲವಾರು ಸಂದರ್ಭಗಳಲ್ಲಿ ಜೈನಮತದ ಪ್ರಕ್ರಿಯೆಗಳನ್ನು, ಎಳೆಗಳನ್ನು ನೆಯ್ದುಬಿಡುತ್ತಾನೆ.[೧] ಅರ್ಜುನ ಹುಟ್ಟುವಾಗ ಕುಂತಿಯನ್ನು

೧. ಹೊಸದಾಗಿ, ಮತ್ತೊಂದು ಧರ್ಮ, ಮತ, ಸಿದ್ಧಾಂತ, ಪಕ್ಷಗಳನ್ನು ಒಪ್ಪಿಕೊಂಡ ವ್ಯಕ್ತಿಗಳಲ್ಲೆಲ್ಲ ಈ ಹೊಸ ಹುರುಪು ಔಚಿತ್ಯ, ವಿವೇಕಗಳನ್ನು ಮರೆಸಿಬಿಡುತ್ತದೆ. ಅಷ್ಟೇ ಅಲ್ಲ, ಮೂಲ ಜನರಿಗಿಂತಲೂ ಅಭಿಮಾನ, ನಿಷ್ಠೆಗಳು ಮತಾಂತರಗೊಂಡವರಲ್ಲಿ ಅಧಿಕವಾಗಿರುವುದು ಲೋಕಪ್ರಸಿದ್ಧವಾಗಿದೆ.

'ಜಿನಜನನಿ'ಎಂದು ವರ್ಣಿಸುವುದು. ಆತನ ಹುಟ್ಟು, ತೀರ್ಥಂಕರನೊಬ್ಬನ ಜನ್ಮಾಭಿಷೇಕ ಉತ್ಸವ ಎಂಬಂತೆ ವರ್ಣಿಸುವುದು ಮುಂತಾದ ಸಂದರ್ಭಗಳನ್ನು ಇಲ್ಲಿ ಗಮನಿಸಬಹುದು. ಇಂಥ ಮತೀಯ ದೃಷ್ಟಿಕೋನದಿಂದಲೇ ಮಹಾಭಾರತದ ಹೃದಯದಂತಿರುವ ಭಗವದ್ಗೀತಾ ಭಾಗವನ್ನು ಪದ್ಯವೊಂದರ ಉತ್ತರಾರ್ಧದ ಎರಡು ಸಾಲುಗಳಲ್ಲಿ ಮುಗಿಸಿ ಕೈತೊಳೆದುಕೊಂಡು ಬಿಡುತ್ತಾನೆ. ಅಷ್ಟೇ ಅಲ್ಲ. ದ್ರೌಪದಿಯು ಅರ್ಜುನನೊಬ್ಬನಿಗೆ ಮಡದಿಯಾಗಿದ್ದಳೆಂಬ ಸಂಗತಿಯು ಜೈನ ಮಹಾಭಾರತಗಳಲ್ಲಿ ಸ್ಪಷ್ಟವಾಗಿ ಬರುತ್ತದೆ. ಈ ಒಂದು ಧಾರ್ಮಿಕ ಭಾವನೆಯೂ ಕಾರಣವಾಗಿ, ದ್ರೌಪದಿಯನ್ನು ಅರ್ಜುನನೊಬ್ಬನ ಪತ್ನಿಯಾಗಿ ಪಂಪ ಚಿತ್ರಿಸಿದ. ಪಂಪನ ಮಾರ್ಪಾಡಿಗೆ ಮುಖ್ಯವಾಗಿ ಪ್ರೇರಣೆ ಇಲ್ಲಿಂದಲೇ (ಜೈನ ಮಹಾಭಾರತ) ಒದಗಿರಬೇಕು.[೧] ಹೀಗೆ, ಲೌಕಿಕ ಕಾವ್ಯವನ್ನಾಗಿ ಮಹಾಭಾರತವನ್ನು ರಚಿಸುತ್ತಾನೆ; ಅರಿಕೇಸರಿಯನ್ನು ಅರ್ಜುನನೊಂದಿಗೆ ತಗುಳ್ಚುತ್ತೇನೆ ಎಂಬ ಸಂಕಲ್ಪದ ಪಂಪ, ತನ್ನ ದ್ವಂದ್ವ ಮನೋಭಾವದ ಮೂಲಕ ಅದನ್ನು ಪೂರೈಸಲಾಗಲಿಲ್ಲ. ಹೀಗಾಗಿ ಆತನ ಭಾರತ ಪೂರ್ಣ ಪ್ರಮಾಣದಲ್ಲಿ ಕನ್ನಡ ಮಹಾಭಾರತವೂ ಆಗಲಿಲ್ಲ; ಲೌಕಿಕ ಕೃತಿಯೂ ಆಗಲಿಲ್ಲ; ಇಲ್ಲವೇ ಅರಿಕೇಸರಿಯ ವಂಶದ ಇತಿಹಾಸವೂ ಆಗಲಿಲ್ಲ.

ಪಂಪನ ಈ ಮನಃಸ್ಥಿತಿ, ಅವನ ಮಾತುಗಳಲ್ಲಿಯೇ ಅಭಿವ್ಯಕ್ತವಾಗುವುದು ಗಮನಾರ್ಹವಾದ ಸಂಗತಿ. ತನ್ನ ತಂದೆಯ ಮತಾಂತರದ ಸಂದರ್ಭವನ್ನು ಹೇಳುವಲ್ಲಿ 'ಜಾತಿಯೊಳೆಲ್ಲ ಮುತ್ತಮದ ವಿಪ್ರಕುಲಂಗೆ ' ಎಂದು ಹೇಳುತ್ತಾನೆ. ಈ ಜಾತಿಗಳಲ್ಲಿಯೇ ಉತ್ತಮ ಜಾತಿಯ ವಿಪ್ರಕುಲಕ್ಕೆ 'ದೊರೆ'ಯಾದುದು 'ಜಿನೇಂದ್ರ ಧರ್ಮಮೆ ವಲರಂ' ಎಂದು ನಂಬಿದ ಭೀಮಪಯ್ಯ. ತನ್ನ ಜಾತಿಯನ್ನು ಇನ್ನಷ್ಟು ಹೆಚ್ಚಿಸಲು ಜೈನನಾದನು(ತಜ್ಜಾತಿಯನುತ್ತರೋತ್ತಮನೆ ಮಾಡಿ ನೆಗಳ್ಚಿದಂ). ಈ ಮಾತುಗಳ ಹಿನ್ನೆಲೆಯಲ್ಲಿ "ಗುಣ-ಕರ್ಮಗಳ ಆಧಾರದಿಂದ ಮಾಡಿದ ವಿಭಜನೆಯಲ್ಲಿ ಅಂದಿನ ಯುಗ ಮೌಲ್ಯಾನುಸಾರ ದ್ವಿಜಜಾತಿ ಉತ್ತಮವೆಂದು ತಿಳಿಸುತ್ತಾನೆ" ಎಂದು ಡಾ. ಹಂಪನಾ ನುಡಿಯುತ್ತಾರೆ.[೨] ಆದರೆ ಮೇಲಿನ ಮಾತುಗಳು ಕೇವಲ 'ಯುಗಮೌಲ್ಯಾನುಸಾರ' ಹೇಳಿದ 'ಹೇಳಿಕೆಯಲ್ಲ'. ಏಕೆಂದರೆ ಒಂದು ಮತವನ್ನು ತ್ಯಜಿಸಿ, ಇನ್ನೊಂದು ಮತವನ್ನು ಒಪ್ಪಿಕೊಳ್ಳುವುದು, ಅಪ್ಪಿಕೊಳ್ಳುವುದು, ಒಂದು ಅಂಗಿಯನ್ನು ಕಳಚಿ ಇನ್ನೊಂದು ಅಂಗಿಯನ್ನು ಹಾಕಿಕೊಳ್ಳುವಷ್ಟು ಸುಲಭವೂ ಸರಳವೂ ಆದ ಪ್ರಕ್ರಿಯೆ ಅಲ್ಲ. ಹಾಗಾಗಿ ಪಂಪನ ಧಮನಿಗಳಲ್ಲಿ ಹರಿಯುತ್ತಿದ್ದ ಆಚಾರವಂತ 'ವಿಪ್ರರಕ್ತ' ಜೈನನಾದ ಕೂಡಲೇ ಬಸಿದು ಬರಿದಾಗುವುದು ಸಾಧ್ಯವಲ್ಲದ ಸಂಗತಿ. ಹೀಗಾಗಿಯೇ ಪಂಪ, ವೈಯಕ್ತಿಕವಾಗಿ ಆ ವಿಪ್ರಕುಲವನ್ನು ಮೆಚ್ಚಿದವನು, ಅಭಿಮಾನ ತಾಳಿದವನು ಎನ್ನಬೇಕಾಗುತ್ತದೆ. ಒಂದು ಧರ್ಮವನ್ನು ತ್ಯಜಿಸಿದ ಆರಂಭದಲ್ಲಿ ಹುರುಪು,

೧. ತೀ. ನಂ. ಶ್ರೀ : ಪಂಪ - ಪು. ೩೬

೨. ಪಂಪ ಒಂದು ಅಧ್ಯಯನ : ಜಿ. ಎಚ್. ನಾಯಕ : ಪಂಪನ ಅಭಿವ್ಯಕ್ತಿ ಪು. ೨೪೮

ಆವೇಶಗಳಿಂದ ಪೂರ್ವಧರ್ಮವನ್ನು ಹಳಿಯುವ, ಹೊಸ ಧರ್ಮವನ್ನು ಪ್ರಶಂಸಿಸುವ ಸಾಮಾನ್ಯ ರೀತಿ ಪಂಪನದಲ್ಲ. ಹಾಗಾಗಿ ಒಮ್ಮೆ 'ಇವಳು' ಒಮ್ಮೆ'ಅವಳು' ಪಂಪನ ಮನಸ್ಸನ್ನು ಎಳೆಯುತ್ತಿರುವುದರ ಸ್ಪಷ್ಟ ಸೂಚನೆಯೆಂದೇ ಆ ಮಾತುಗಳನ್ನು ಗಮನಿಸಬೇಕೆನಿಸುತ್ತದೆ. ಈ ಎಳೆದಾಟದಲ್ಲಿ ಆತನ ಮನಸ್ಸು ಸಿಲುಕಿದೆ. ಉಳಿದೆಲ್ಲರ ಹಾಗೆ, ಬಿಟ್ಟು ಬಂದ ವಿಪ್ರಕುಲವನ್ನು, ವೈದಿಕ ಪರಂಪರೆಯನ್ನು ಹಳಿಯುವ ಹಾಗಿಲ್ಲ; ಏಕೆಂದರೆ ಪೂರ್ವಸಂಸ್ಕಾರದ ಅಭಿಮಾನ ಹೋಗಿಲ್ಲ; ಅದಕ್ಕೂ ಹೆಚ್ಚಾಗಿ ವೈದಿಕ ಅರಸನ ಆಸ್ಥಾನದ ಪಂಡಿತರಲ್ಲಿ ತಾನೂ ಒಬ್ಬ! ಅಷ್ಟೇ ಅಲ್ಲ, ಅರಸನಿಗೆ ಅತ್ಯಂತ ಹತ್ತಿರದವ. ಅಂತೆಯೇ ಈ ಮಹಾಭಾರತದಲ್ಲಿ ಎಲ್ಲರಿಗೂ ತಿಳಿಯುವ ಹಾಗೆ ಸ್ಪಷ್ಟವಾಗಿ ಜೈನ ಎಳೆಗಳನ್ನು ನೇಯುವಂತಿಲ್ಲ. ಆದರೆ ಹೊಸ ಧರ್ಮದ ಪ್ರೀತಿ, ಅಭಿಮಾನ ಹಾಗೆ ಅವನನ್ನು ಸುಮ್ಮನಿರಗೊಡಲಿಲ್ಲ. ಹೀಗಾಗಿ ಏನಿದ್ದರೂ ಕಂಡೂ ಕಾಣದಂತಿರುವ ಹಾಗೆ ತನ್ನ ಜೈನ ಅಭಿಮಾನ-ನಿಷ್ಠೆಗಳನ್ನು ಮರೆಯಬೇಕಾದ 'ಇಕ್ಕಟ್ಟಿಗೆ' ಪಂಪ ಸಿಕ್ಕಿದ್ದಾನೆ.

ಪಂಪನ ವ್ಯಕ್ತಿತ್ವದಲ್ಲಿಯೇ (ಸಾಮಾನ್ಯವಾಗಿ) ವಿರೋಧಾಂಶಗಳಂತೆ ಕಾಣುವ ಪ್ರವೃತ್ತಿಗಳು ಸಮಸಮವಾಗಿ ಕಾಣುತ್ತವೆ. (ಸಮ -ಸಮವಾಗಿ ಕಾಣುವುದು ಬೇರೆ, ಸಮನ್ವಯಗೊಂಡು ಕಾಣುವುದು ಬೇರೆ ಎಂಬ ಅಂಶವನ್ನು ಗಮನಿಸಬೇಕು). ಆತನೇ ಹೇಳುವ ಹಾಗೆ ಪಂಪ ಕವಿಯೂ, ಕಲಿಯೂ ಆದ ವಿಶಿಷ್ಟವ್ಯಕ್ತಿ. ಲೇಖನಿ ಹಿಡಿದರೆ ಸುಭಗವಾದ ಕಾವ್ಯ ಬರೆಯುವ ಪ್ರತಿಭೆ ಹೊಂದಿರುವ ಪಂಪ, ಆಯುಧ ಹಿಡಿದು ರಣರಂಗಕ್ಕೆ ಧುಮುಕಿದರೆ ಶೌರ್ಯ-ಪ್ರತಾಪಗಳಿಂದ ಯುದ್ಧ ವಿದ್ಯೆಯನ್ನು ಮೆರೆಯಬಲ್ಲಂತಹ ಪರಾಕ್ರಮಿ. ಅವನ ಕವಿತ್ವ ಶಕ್ತಿಯನ್ನು ನಿಖರವಾಗಿ ನಿರ್ದೇಶಿಸುವುದಕ್ಕೆ ಆತನ ಕಾವ್ಯಗಳು ನಮ್ಮ ಕಣ್ಣೆದುರಿಗಿವೆ. ಆದರೆ ಆತನ ಕಲಿತನದ ಸ್ವರೂಪವೇನು ? ಎಂಬುದನ್ನು ತಿಳಿಯಪಡಿಸುವ ನಿದರ್ಶನಗಳಾಗಲೀ, ದಾಖಲೆಗಳಾಗಲೀ ಇಲ್ಲ. ' ಏಂ ಕಲಿಯೋ' ಎಂದು ತನ್ನನ್ನೇ ಆತ್ಮವಿಶ್ವಾಸದಿಂದ ಬಣ್ಣಿಸಿಕೊಳ್ಳುವುದರಿಂದ ಆತನು ಗಣನೀಯವಾದ, ಗಮನಾರ್ಹವಾದ ಪ್ರಮಾಣದಲ್ಲಿ ಶೌರ್ಯ-ಪ್ರತಾಪಗಳನ್ನು ಹೊಂದಿದ್ದಿರಬೇಕು. ಈ ಕಲಿತನವೂ ಕಾರಣವಾಗಿ ಪಂಪ ಅರಿಕೇಸರಿಗೆ ಪ್ರಿಯನಾಗಿ, ಆತ್ಮೀಯನಾಗಿ ಸ್ನೇಹಿತನಾಗಿರಬೇಕು.[೧] ಹೀಗೆ ಆತನ ವ್ಯಕ್ತಿತ್ವದ ಪ್ರಮುಖ ಟಿಸಿಲುಗಳು ಅವನ ಜೀವನ ಧೋರಣೆಯ ಹಿನ್ನೆಲೆಯಲ್ಲಿ ಮಹತ್ವದ ಅಂಶಗಳಾಗಿ ಕಾಣುತ್ತವೆ.

ಪಂಪ ತನ್ನ ಕಾವ್ಯ ಭಾಷೆಗೆ ಸಂಬಂಧಿಸಿದಂತೆ ಹೇಳುವುದನ್ನು ಗಮನಿಸಬೇಕು. "ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಟೆಯೆ ತಿರುಳ್ಗನ್ನಡದೊಳ್ ನಿವ್ರ್ಯಾಜದೇಸಕ-ದೊಳೆ ಪುದಿದೊಂದೋಜೆಯೆ ಬಲದಿನಿಯ ಕವಿತೆ,[೨] ಪಂಪನ ಕವಿತೆ

---

೧. ದುರ್ಯೋಧನನಿಗೆ ಕರ್ಣ ಪ್ರಿಯನಾದುದು, ಸ್ನೇಹಿತನಾದುದು ತನ್ನ ಬಿಲ್ವಿದ್ಯಾಚಾತುರ್ಯದಿಂದಲೇ. ಕರ್ಣನ ಚಾಪವಿದ್ಯಾ ಪ್ರಾವೀಣ್ಯ ಆತನಿಗೆ ದುರ್ಯೋಧನನ ಆತ್ಮೀಯ ಸ್ನೇಹವನ್ನು, ಅಂಗರಾಜ್ಯಾಧಿಪತ್ಯವನ್ನು ದೊರಕಿಸಿಕೊಟ್ಟವು.

೨. ವಿಕ್ರಮಾರ್ಜುನ ವಿಜಯ. ೧೪ - ೫೮

ಹೀಗೆ ತನ್ನ ಕಾವ್ಯಭಾಷೆಯು 'ಪುಲಿಗೆರೆಯ ತಿರುಳ್ಕನ್ನಡ' ಎಂದು ಹೇಳುವಲ್ಲಿ ತಿರುಳ್ ಕನ್ನಡದ ಬಗೆಗೆ ತನಗಿರುವ ಪ್ರೇಮ, ಅಭಿಮಾನಗಳನ್ನು ಕುರಿತು ಪ್ರಸ್ತಾಪಿಸುವನು.[೧] ಆದರೆ ಆತನ ಆದಿಪುರಾಣದಲ್ಲಿ ಸಂಸ್ಕೃತದ ಮೇಲಾಟವನ್ನು ವಿಶೇಷವಾಗಿ ಕಾಣುತ್ತೇವೆ. ವಿಕ್ರಮಾರ್ಜುನ ವಿಜಯದಲ್ಲೂ ಈ ಸಂಸ್ಕೃತದ ಮೇಲಾಟ ಸಾಕಷ್ಟು ಮೂಡಿ ಬಂದಿರುವುದನ್ನು ಗಮನಿಸುತ್ತೇವೆ. ದಂಡಿ, ಭವಭೂತಿಗಳಂತೆ ಉದ್ದುದ್ದ ಸಂಸ್ಕೃತ ಸಮಸ್ತ ಪದಗಳ ಬಳಕೆ ಆತನಿಗೆ ವಿಶೇಷ ಮೋಹ. ಗದ್ಯ-ವಚನಗಳಲ್ಲಿ ಕೂಡ ಉದ್ದುದ್ದ ಸಮಾಸಗಳನ್ನಷ್ಟೇ ಅಲ್ಲ, ಶ್ಲೇಷ, ವಿರೋಧಾಭಾಸಾದಿ ಅರ್ಥಾಲಂಕಾರಗಳನ್ನು, ಅನುಪ್ರಾಸಾದಿ ಶಬ್ದಾಲಂಕಾರಗಳನ್ನೂ ಹೇರಳವಾಗಿ ಬಳಸುತ್ತಾನೆ. ಅಲಂಕಾರಗಳ ಪ್ರಯೋಗಗಳಲ್ಲಂತೂ ಅವನು ಸಂಸ್ಕೃತದ ಪಂಡಿತ ಕವಿಗಳಾದ ಭಾರವಿ, ಮಾಘಾದಿಗಳಿಗೆ ಮನಸೋತಿದ್ದಾನೆ. ಅಷ್ಟಾದಶವರ್ಣನೆಗಳನ್ನು ಪಂಪನು ತನ್ನ ಕೃತಿಗಳಲ್ಲಿ ತಂದುದರ ಮುಖ್ಯ ಉದ್ದೇಶ, ಕತೆಯನ್ನು ಪುಷ್ಟಿಗೊಳಿಸುವುದೂ ಅಲ್ಲ ; ಪಾತ್ರ ಸ್ವಭಾವವನ್ನು ಚಿತ್ರಿಸುವುದೂ ಅಲ್ಲ, ಆದರೆ ಮಾಘ, ಭಾರವಿಗಳಂತೆ ಅಲಂಕಾರಗಳ ಚಮತ್ಕಾರವನ್ನು ಮೆರೆಸುವುದೇ ಆಗಿದೆ.[೨] "ಪಂಡಿತರೆ ತಗುಳ್ದು ಬಿಚ್ಚಳಿಸಲ್ ಪೇಳಲೋಡರ್ಚಿದೆನೀ ಪ್ರಬಂಧಮಂ" ಎಂದಿರುವ ಪಂಪ, ಸಹಜವಾಗಿಯೇ ಅವರನ್ನು ಮೆಚ್ಚಿಸಬೇಕಾಗಿದೆ. ಹೀಗಾಗಿ ಆತನು ಸಂಕಲ್ಪಿಸಿದ 'ಸಾಜದ ಪುಲಿಗೆರೆಯ ತಿರುಳ್ಗನ್ನಡ ' ಕಾವ್ಯರಚನೆ ಬರಿ ಆದರ್ಶವಾಯಿತೇ ವಿನಾ ವಾಸ್ತವರೂಪ ತಾಳಿ ಹೊರಬರಲಿಲ್ಲ.

ವಸ್ತುಕ-ಮತ್ತು ವರ್ಣಕಗಳನ್ನು ಕೂಡಿಸುವ, ಹೊಂದಿಸುವ ಮಾತನ್ನು ಪಂಪ ಹೇಳುತ್ತಾನೆ. 'ವರ್ಣಕಂ ಕತೆಯೊಳಡಂ ಬಡೆಯೆ ಪೇಳ್ವೊಡೆ ಪಂಪನೇ ಪೇಳ್ಗುಂ ' ಎಂದು ಆತ ನುಡಿಯುತ್ತಾನೆ.[೩]

ತನ್ನ ಆಶ್ರಯದಾತನೂ ಗೆಳೆಯನೂ ಆದ ಅರಿಕೇಸರಿಯ ಉದಾತ್ತ ವ್ಯಕ್ತಿತ್ವದಿಂದ ಪ್ರಭಾವಿತನಾದ ಕವಿ ಪಂಪ, ಅವನನ್ನೇ ಕುರಿತು ಸ್ವತಂತ್ರ ಕಾವ್ಯವೊಂದನ್ನು ಬರೆಯಬಹುದಿತ್ತು, ಸಂಸ್ಕೃತದ 'ಹರ್ಷಚರಿತೆ'ಯ ಹಾಗೆ. ಆ ದಾರಿಯನ್ನೊಲ್ಲದೆ ಮಹಾಭಾರತದ ಅರ್ಜುನನೊಂದಿಗೆ ಆತನನ್ನು 'ತಗುಳ್ಚಿ' ಹೇಳುವ ಪ್ರಯತ್ನ ಮಾಡುತ್ತಾನೆ. ಆಸ್ಥಾನದಲ್ಲಿ ಪಂಪನನ್ನು ಪಂಡಿತರು ಕೇಳಿದುದು, ' ಮುಂ ಸಮಸ್ತ ಭಾರತಮನಪೂರ್ವಮಾಗೆ ಪೇಳ್ದ ಕವೀಶ್ವರರಿಲ್ಲ, ಪೇಳ್ವೊಡೆ ಪಂಪನೆ ಪೇಳ್ಗೊಂ'

---

೧. ತಿರುಳ್ಕನ್ನಡ, ತಿರುಳ್ಗನ್ನಡ ಕಾವ್ಯ ಸ್ವರೂಪ ಇವುಗಳನ್ನು ಕುರಿತ ನಿಚಿತ ಮಾಹಿತಿ ನಮಗಿಲ್ಲ ಎಂಬ ತಿಳಿವಳಿಕೆಯೂ ಇದೆ.

೨. ಪಂಪ ಒಂದು ಅಧ್ಯಯನ : ಡಾ. ಕೆ. ಕೃಷ್ಣಮೂರ್ತಿ - ಪಂಪನಿಗಿದ್ದ ಸಂಸ್ಕೃತದ ಒಣ್ಣೆಲೆ. ಪು. ೬

೩. ವಸ್ತುಕ - ವರ್ಣಕಗಳನ್ನು ಕುರಿತಂತೆ, ಅವುಗಳ ಸ್ವರೂಪ ಕುರಿತಂತೆ ಇನ್ನೂ ಚರ್ಚೆ, ವಾದ ನಡದೇ ಇದೆ. ಇದಮಿತ್ಥಂ ಎಂಬಂತಹ ಅಭಿಪ್ರಾಯ ಇನ್ನೂ ರೂಪಗೊಂಡಿಲ್ಲ. ಆದರೆ ನಾನಿಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು ಮಂಡಿಸುವ ಪುರಾಣವಸ್ತು ಕಾವ್ಯ = ವಸ್ತುಕ; ಐತಿಹಾಸಿಕ ವಸ್ತು ಕಾವ್ಯ = ವರ್ಣಕ ಎಂಬ ಅಭಿಪ್ರಾಯ ಸ್ವೀಕರಿಸಿದ್ದೇನೆ. ನೋಡಿ. ಪಂಪ ಒಂದು ಅಧ್ಯಯನ. ಪು. ೩೩

ಎಂದು. ಆದರೆ ಪಂಪ, 'ಸಂದ ಅರ್ಜುನನೊಳ್ ಪೋಲೀ ಕಥಾ ಭಿತ್ತಿಯಂ ಅನುನಯದಿಂ ಪೇೞವಿಲೆಂದೆತ್ತಿಕೊಂಡೆಂ' ಎಂದು ಹೇಳುತ್ತ 'ಈ ಕಥೆಯೊಳ್ ತಗುಳ್ಚಿ ಪೋಲಿಪಡೆನಗೞ್ತಿಯಾದುದು' ಎಂದು ಸಾರುತ್ತಾನೆ. ಹೀಗಾಗಿ ಸಾಮಂತ ಚೂಡಾಮಣಿಯಾದ ಅರಿಕೇಸರಿ, ಹಾಗೂ ಅರ್ಜುನ 'ಒಂದೇ ಎಂಬ ಕಟ್ಟೆಚ್ಚರಿಕೆಯಿಂದ ಕಾವ್ಯ ಪ್ರಾರಂಭಿಸುವನು. ಆದರೆ ಸಮಗ್ರ ಮಹಾಭಾರತದ ಕಥಾನಿರ್ವಹಣೆಯ ಸಂದರ್ಭದಲ್ಲಿ ಈ 'ತಗುಳ್ಚಿ' ಹೇಳುವ ಪ್ರಯತ್ನ ಕಾರಣವಾಗಿ ಹಲವು ಅವಾಂತರಗಳನ್ನು, ವಿರೋಧಾಂಶಗಳನ್ನು ಪಂಪ ಕಣ್ಮುಚ್ಚಿ ಚಿತ್ರಿಸಬೇಕಾಯ್ತು. ಇದರಿಂದಾಗಿ ಅದು ಒಂದು ಕಡೆ ವಸ್ತುಕವೂ (ಪುರಾಣ ಕಾವ್ಯ) ಆಗದೇ, ಇನ್ನೊಂದು ಕಡೆ ವರ್ಣಕವೂ (ಇತಿಹಾಸ ಕಾವ್ಯ) ಆಗದೇ ಇರುವ ದ್ವಂದ್ವ ಸ್ಥಿತಿಯನ್ನು ನಾವಿಂದು ಗಮನಿಸುತ್ತೇವೆ.

ಕಾವ್ಯ ಮಾರ್ಗವನ್ನು ಕುರಿತಂತೆ ಕೂಡ ಈ ದ್ವಂದ್ವ ಧೋರಣೆ ಪಂಪನಲ್ಲಿ ಕಂಡು ಬರುತ್ತದೆ. 'ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಪ್ಪುದು'[೧] ಎಂದು ಮಾರ್ಗ ಮತ್ತು ದೇಸಿಗಳನ್ನು ಕೂಡಿಸಿ, ಹೊಂದಿಸಿ, ಕಾವ್ಯ ಬರೆಯುವುದರ ಸೂಚನೆಯನ್ನು ನೀಡಿದ್ದಾನೆ. ದೇಸಿ ಎಂಬುದು ಪ್ರಾದೇಶಿಕ ಕಾವ್ಯ ರೀತಿ, ಅಥವಾ ಪ್ರಾದೇಶಿಕ ಚೆಲುವಿನ ಬಗೆ (ಸ್ಥೂಲವಾಗಿ). ಮಾರ್ಗ ಎಂದರೆ ಸಂಸ್ಕೃತ ಕಾವ್ಯ ರೀತಿ ಅಥವಾ ಸ್ಥಾಪಿತ (Standard or Established) ಕಾವ್ಯಮಾರ್ಗ. ಮಹಾಭಾರತವನ್ನು ಪೂರ್ಣವಾಗಿ ಬರೆಯಬೇಕು ಎಂದು ಬಿನ್ನವಿಸಿದ್ದನ್ನು ಆಲಿಸಿ, ಕಾವ್ಯ ರಚನೆಗೆ ಕೈಹಾಕುವ ಪಂಪ, ಸಹಜವಾಗಿ, ಅವರೂ ಮೆಚ್ಚುವ ಮಾರ್ಗಶೈಲಿಯಲ್ಲಿ ಬರೆಯುವುದು ಅನಿವಾರ್ಯವಾಯ್ತು. ಆದರೆ ವೈಯಕ್ತಿಕವಾಗಿ ಆತ 'ದೇಸಿ' ಚೆಲುವಿಗೆ ಒಲಿದವ; ಅದು ಶ್ರೇಷ್ಠ ಕಾವ್ಯ ಮಾರ್ಗ ಎಂದು ಭಾವಿಸಿದವ. ಹೀಗಾಗಿ ಮಾರ್ಗ ಮತ್ತು ದೇಸಿಗಳೆರಡನ್ನೂ ಕೂಡಿಸುವ ಪ್ರಯತ್ನ ಮಾಡುತ್ತಾನೆ. ಈಗಾಗಲೇ ಗಮನಿಸಿದ ಹಾಗೆ ಸಂಸ್ಕೃತದ ಮಾರ್ಗ ಪದ್ಧತಿಯ ಕಾಳಿದಾಸ, ಮಾಘ, ಭಾರವಿ, ಭರ್ತೃಹರಿ, ದಂಡಿ, ಭವಭೂತಿ ಹಾಗೂ ಭಟ್ಟನಾರಾಯಣ ಮುಂತಾದ ಕವಿಗಳ ಮಾರ್ಗಪದ್ಧತಿಯನ್ನು ಧಾರಾಳವಾಗಿ ಅನುಸರಿಸುವನು. ಈ ಕಾರಣವಾಗಿ ಮಾರ್ಗ-ದೇಸಿಗಳೆರಡೂ ಒಂದಾಗಿ, ಸಮರಸವಾಗಿ ಪ್ರವಹಿಸುವುದು ಸಾಧ್ಯವಾಗಲಿಲ್ಲ. ಪ್ರಬಂಧ ಕಾವ್ಯದ ಲಕ್ಷಣಗಳಿಗನುಗುಣವಾಗಿ ಆತ ತನ್ನ ಗದ್ಯ-ಪದ್ಯಗಳನ್ನು, ಹಲವಾರು ಛಂದೋಪ್ರಕಾರಗಳ ವಿವಿಧ ಲಯಗಳನ್ನು ಆತ ಕುಶಲತೆಯಿಂದ ನಿರ್ವಹಿಸುತ್ತಾನೆ. ಕೃತಿಯ ಅಂಗಾಂಗಗಳು ಪ್ರಮಾಣಬದ್ಧವಾಗಿದ್ದು ಅವುಗಳಲ್ಲಿ ಐಕ್ಯವಿರಬೇಕೆಂಬುದು ಪಂಡಿತಕವಿ ಪಂಪನಿಗೆ ಚೆನ್ನಾಗಿ ಗೊತ್ತು. ವರ್ಣನೆಯ ವಿಸ್ತಾರಕ್ಕಾಗಲೀ, ಸಂಕೋಚಕ್ಕಾಗಲೀ ಅಲ್ಲಿ ತರ್ಕಬದ್ಧವಾದ ಕಾರಣವಿರುತ್ತದೆ. ಪ್ರಬಂಧ ಕಾವ್ಯದ

---

೧. ವಿಕ್ರಮಾರ್ಜುನ ವಿಜಯ. ೧ - ೮

ಪ್ರಮುಖ ಲಕ್ಷಣವಾದ ನಿಯಮಶೀಲತೆ'ಯನ್ನು ಪಂಪ, ಗೌರವದಿಂದ ಅನುಸರಿಸುತ್ತಾನೆ. ಇಂಥ ಸಂದರ್ಭದಲ್ಲಿ ದೇಸಿ ಅವನಿಗೊಲಿದುದು, ಅವನ ಪಂಡಿತ ಮನೋಭಾವದೊಂದಿಗೆ ಒಂದಾದುದು ಅಪರೂಪವೇ ಎನ್ನಬೇಕಾಗುತ್ತದೆ.[೧]

ಹಳತು-ಹೊಸತು, ಧರ್ಮ-ಕಾವ್ಯ, ಪಾರಮಾರ್ಥಿಕ -ಲೌಕಿಕ, ಇತಿಹಾಸ-ಕಾವ್ಯ, ಸ್ವಧರ್ಮ-ಪರಧರ್ಮ, ಸಂಸಾರ-ಧರ್ಮ, ಸಂಪ್ರದಾಯ-ನಾವೀನ್ಯತೆ, ಹೀಗೆ ಪಂಪನ ಸಮನ್ವಯ ದೃಷ್ಟಿ ಬೆಳೆಯುತ್ತ ಹೋಯಿತು'. ಎಂಬ ಹಂಪನಾ ಅವರ ಮಾತಿಗೆ[೨] ಪಂಪನ ಕಾವ್ಯಗಳಲ್ಲಿ ಸ್ಪಷ್ಟವಾದ ಪುರಾವೆಗಳು ಸಿಗುವುದಿಲ್ಲ. ಅಷ್ಟೇ ಏಕೆ ಈ ದ್ವೈತ ಮನೋಭಾವ, ಅವನಿಗರಿವಿಲ್ಲದಂತೆಯೇ ಎಲ್ಲ ಕಡೆಗೂ ಕ್ರಿಯಾಶೀಲವಾಗಿದೆ. 'ಕೃಷ್ಣನನ್ನು ಸಾಮಾನ್ಯ ವ್ಯಕ್ತಿ' ಎಂಬಂತೆ ಚಿತ್ರಿಸುವುದು ಆತನ ಖಚಿತ ನಿಲುವಾಗಿದ್ದರೂ ಅದನ್ನು ನಿರ್ವಹಿಸುವುದಕ್ಕೆ ಆತನಿಗೆ ಸಾಧ್ಯವಾಗದೇ ಹೋಗಿದೆ. ಹಲವಾರು ಬಾರಿ ಆತನನ್ನು 'ಆದಿಪುರುಷ', ' ಪುರಾಣಪುರುಷ', 'ಮುರಾರಿ', 'ಮಧುಕೈಟಭಾರಿ' ಎಂದು ಹೆಸರಿಸುತ್ತ ಆತನ ದೈವತ್ವವನ್ನು ಒಪ್ಪಿಕೊಳ್ಳುತ್ತಾನೆ. ಅಷ್ಟೇ ಅಲ್ಲ, ಮಹಾಭಾರತ ಯುದ್ಧದ ಕೊನೆಗೆ ಅರ್ಜುನ ಕೃಷ್ಣನಿಗೆ ಹೇಳುತ್ತಾನೆ: 'ನಿನ್ನ ದಯೆಯಿಂದ ಅರಿನೃಪರಂ ನೆರೆಕೊಂದು, ಎನಗೆ ಸರಳ ರಾಜ್ಯಶ್ರೀಯಂ, ನಿನ್ನ ಬಲದಿಂದೆ ಸಾರ್ದುದು, ನಿನ್ನ ಉಪಕಾರಮಂ ಅದೇತರೊಳ್ ನೀಗುವೆನೋ?' ಅರ್ಜುನ ಹೀಗೆ ಕೃಷ್ಣನಿಗೆ ಹೇಳುವುದು ಬರಿ ಸೌಜನ್ಯಕ್ಕಾಗಲೀ, ಮರ್ಯಾದೆ ಸಲ್ಲಿಸುವುದಕ್ಕಾಗಿಯಾಗಲೀ ಅಲ್ಲ. ಮಹಾಭಾರತದ ಯುದ್ಧ ಈ ಸ್ಥಿತಿ, ಹಂತ ತಲುಪಿದುದು ಪುರಾತನ ಪುರುಷ ಕೃಷ್ಣನಿಂದಲೇ ಎಂಬುದು 'ಪಂಪಪ್ರಜ್ಞೆ'ಗೆ ಚೆನ್ನಾಗಿ ಗೊತ್ತು!

ದ್ರೌಪದಿಯ ಪಾತ್ರಣವನ್ನು ಈ ದೃಷ್ಟಿಯಿಂದ ಗಮನಿಸಬೇಕು. ಪಾಂಚಾಲಿ-ಪಂಚವಲ್ಲಭೆ ಎಂಬುದನ್ನು ತಳ್ಳಿ ಹಾಕಿ, ಕೇವಲ ಅರ್ಜುನನೊಬ್ಬನಿಗೇ ಮದುವೆ ಮಾಡಿಸಿದ ಪಂಪ, ಕೊನೆಯುವರೆಗೂ ಅದನ್ನು ನಿರ್ವಹಿಸಿಕೊಂಡು ಹೋಗುವುದಕ್ಕಾಗದೇ, ಅವಳನ್ನು ಹಲವಾರು ಸಂದರ್ಭಗಳಲ್ಲಿ 'ಭೀಮನ ತಳೋದರಿ' ಎಂಬಂತೆ ಚಿತ್ರಿಸುವನು. ದುಶ್ಶಾಸನನ ವಧೆಯ ಪ್ರತಿಜ್ಞೆ, ಕೀಚಕನ ಬಾಧೆಗೆ ಪಕ್ಕಾಗಿ, ಬೇಸತ್ತ ದ್ರೌಪದಿ ಅನ್ಯ ಉಪಾಯವಿಲ್ಲದೇ ಭೀಮನಲ್ಲಿಗೆ ಬಂದುದು, ವೇಣೀ ಬಂಧನದ ಸಂದರ್ಭ ಮುಂತಾದ ಪ್ರಸಂಗಗಳನ್ನು ಇಲ್ಲಿ ಗಮನಿಸಬೇಕು. ದ್ರೌಪದಿಯ ಕೇಶಪಾಶವು ಕುರುಕುಲಕ್ಕೆ ಮಾತ್ರವಲ್ಲ, ಸಮಸ್ತ ರಾಜಕುಲಕ್ಕೆ ಯಮಪಾಶವಾಯ್ತು, ಅದನ್ನು ದುಶ್ಶಾಸನನು ಮುಟ್ಟಿದ್ದೇ, ಮಹಾಭಾರತಕ್ಕೆ ಅಡಿಯಾಯ್ತು! ಎಷ್ಟೆಲ್ಲ ಎಚ್ಚರಿಕೆ ವಹಿಸಿದರೂ 'ಕಾವ್ಯಾವೇಶ'ದಲ್ಲಿ ಕವಿಪಂಪ ಈ ಮಾತನ್ನು ತನಗರಿವಿಲ್ಲದಂತೆಯೇ ಹೇಳಿಬಿಡುತ್ತಾನೆ. ಅವರೆ ಮುಂದೆ

---

೧. ಆತನನ್ನು (ಪಂಪನನ್ನು) ಮಾರ್ಗಕಾವ್ಯ ಪರಂಪರೆಯಲ್ಲಿ ಗುರುತಿಸಲಾಗಿದೆ. ಡಾ. ಕೆ. ವಿ. ನಾರಾಯಣ - ಪಂಪನ ದೇಸಿ - ಪಂಪ ಒಂದು ಅಧ್ಯಯನ. ಪು. ೨೦೭

೨. ಪಂಪ - ಒಂದು ಅಧ್ಯಯನ. ಪು. ೨೪೯

ಮಹಾಭಾರತ ಯುದ್ಧಾನಂತರ ಇದನ್ನೆಲ್ಲ ಮರೆತು, ದ್ರೌಪದಿಯು ಪಂಚವಲ್ಲಭೆಯೆಂದು ನೆನಪಾಗಿ ಅರ್ಜುನನ ಪಕ್ಕದಲ್ಲಿ ಸುಭದ್ರೆಯನ್ನು ಕುಳ್ಳಿರಿಸುತ್ತಾನೆ.

ಕರ್ಣನ ಪಾತ್ರವಿವರಣೆಯಲ್ಲಂತೂ ಇದು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ. ಪಂಪ ಮಹಾಭಾರತ ರಚಿಸಲು ಮೂಲ ಕಾರಣ ಅರಿಕೇಸರಿ. ಮಹಾಭಾರತವೀರ ಅರ್ಜುನನೊಂದಿಗೆ ಸಮೀಕರಿಸಿ ಆತನನ್ನು ಹೊಗಳುತ್ತಾನೆ. ಆದರೆ ಆವೇಶದಲ್ಲಿ ಅರ್ಜುನನ ಪರಮವೈರಿಯಾದ ಕರ್ಣನನ್ನು ಕುರಿತು ಎಂಥ ಪ್ರಶಂಸೆಯ ಉದ್ಗಾರ ತೆಗೆಯುತ್ತಾನೆ !''ನೆನೆವೊಡೆ ಕರ್ಣನಂ ನೆನೆಯ", ''ಕರ್ಣ ರಸಾಯನಮಲ್ತೆ ಭಾರತಂ"!

ಹೀಗೆ ಹತ್ತು -ಹಲವು ದಿಕ್ಕಿನಿಂದ ಪಂಪನ ದ್ವಂದ್ವ ಮನೋಭಾವ ವ್ಯಕ್ತವಾಗುತ್ತದೆ ಸ್ಪಷ್ಟವಾಗುತ್ತದೆ. ಈ ದ್ವೈತ, ದ್ವಂದ್ವ ಮನೋಭಾವ ಕಾರಣವಾಗಿ ವಿಕ್ರಮಾರ್ಜುನ ವಿಜಯದ ಕಾವ್ಯವಸ್ತು, ಧೋರಣೆ, ಶೈಲಿ ಹಾಗೂ ಗ್ರಥನ ಕೌಶಲ್ಯಗಳು (Craftmanship) ವಿಶಿಷ್ಟ ರೂಪ ಧರಿಸಿವೆ. ಎರಡೆರಡು ಭಾವಗಳನ್ನು ಜೊತೆ ಜೊತೆಗೆ ಸಮಾಂತರವಾಗಿ (Parallel) ಗುರುತಿಸುವುದು, ಚಿತ್ರಿಸುವುದು ಪಂಪನ ಧೋರಣೆ ಮತ್ತು ವೈಶಿಷ್ಟ್ಯ. ಅಂತೆಯೇ ಈತನಲ್ಲಿ ಸಹೋಕ್ತಿ ಅಲಂಕಾರ[೧] ತುಂಬ ಪ್ರಚುರವಾಗಿ, ಸಫಲವಾಗಿ ಕಾವ್ಯದಲ್ಲಿ ಮೈ ಪಡೆಯುತ್ತದೆಂಬುದು ಗಮನೀಯ ಅಂಶ. 'ಪಗೆ ಮಸೆದಂದೆ ಕೈದು ಮಸೆದಿರ್ದುವು', 'ಅಸ್ತಮನೆಯ್ದಿದರ್ ಅರ್ಕನುಂ ಕುರುಕುಲಾರ್ಕನುಂ' ಈ ಬಗೆಯ ಹಲವಾರು ವಾಕ್ಯಗಳು ಪಂಪನ ಕೃತಿಯಲ್ಲಿ ದೊರೆಯುತ್ತವೆ. ಅಷ್ಟೇ ಅಲ್ಲ, ತನ್ನ ಕೃತಿಯಲ್ಲಿ ಸ್ನೇಹ ಮತ್ತು ವೈರ- ಈ ಒಂದಕ್ಕೊಂದು ಎರಡೂ ವಿಭಿನ್ನ ಪ್ರವೃತ್ತಿಗಳನ್ನು ಪಂಪ ಅಳವಡಿಸುವ ರೀತಿಯೂ ಆತನ ಮನೋಧೋರಣೆಗೆ ಅನುಗುಣವಾಗಿಯೇ ಇದೆ.

ಅರ್ಜುನ-ಕೃಷ್ಣರ ಸ್ನೇಹ, ದುರ್ಯೋಧನ-ಕರ್ಣನ ಸ್ನೇಹ ಇವು ಒಂದು ಕಡೆಗಿದ್ದರೆ, ಅರ್ಜುನ-ಕರ್ಣ ಇವರ ನಡುವಿನ ವೈರ, ಭೀಮ ಮತ್ತು ದುರ್ಯೋಧನರ ವೈರ-ಮತ್ತೊಂದೆಡೆ ಚಿತ್ರಣಗೊಂಡಿವೆ. ಇವುಗಳನ್ನು ಕನ್ನಡಿಗಳಂತೆ ಕುಶಲವಾಗಿ ಪಂಪ ಬಹುವಿಚಕ್ಷಣತೆಯಿಂದ ಜೋಡಿಸುತ್ತಾನೆ.

ಹೀಗೆ ಪಂಪನ ಮನಸ್ಸಿನ ಅಧ್ಯಯನದಲ್ಲಿ, ಈ ಹಲವಾರು ವಿವರಣೆಗಳ, ಪ್ರಸಂಗಗಳ, ಸಂದರ್ಭಗಳ ಹಿನ್ನೆಲೆಯ ವಿಶ್ಲೇಷಣೆಯಲ್ಲಿ ಆತನ ಮನಸ್ಸು ದ್ವಂದ್ವ ಮನೋಭಾವಕ್ಕೆ ಪಕ್ಕಾಗಿದ್ದುದು ಸ್ಪಷ್ಟವಾಗುತ್ತದೆ. ಆತನ ಈ ದ್ವಂದ್ವ ಮನೋಭಾವಕ್ಕೆ ಮೂರು ಖಚಿತ ಕಾರಣಗಳನ್ನು ನೀಡಬಹುದು. ೧. ತಂದೆ ಭೀಮಪಯ್ಯ ವೈದಿಕ ಮತವನ್ನು ತ್ಯಜಿಸಿ, ಜೈನಧರ್ಮವನ್ನು ಅಪ್ಪಿಕೊಂಡುದು. ೨. ತಾನು ವೈದಿಕ ಅರಸು ಅರಿಕೇಸರಿಯ ಆಸ್ಥಾನದಲ್ಲಿ ವೈದಿಕ ಪಂಡಿತ ಮಂಡಳಿಯಲ್ಲಿದ್ದುದು; ಅದಕ್ಕೂ ಹೆಚ್ಚಾಗಿ,

---


೧. 'ಸಹೋಕ್ತಿಸ್ಸಹಭಾವಶ್ಚೇದ್ಭಾಸತೇ ಜನರಂಜನ:'-ಸಹೃದಯ ರಂಜಕ -ವಾದ ಸಹಭಾವವಿದ್ದಲ್ಲಿ - ಎಂದರೆ ಎರಡು ವಸ್ತುಗಳು ಒಟ್ಟಿಗೇ ಇದ್ದವು, ಅಥವಾ ಒಟ್ಟಿಗೇ ಹೋದವು ಎಂದು ಮುಂತಾಗಿ ವರ್ಣಿಸಿದರೆ ಅದು ಸಹೋಕ್ತಿ ಅಲಂಕಾರವಾಗುವುದು. ನೋಡಿ : ಕನ್ನಡ ಕೈಪಿಡಿ, ಭಾಗ I ಪು. ೨೯೧.

ಆ ವೈದಿಕ ಅರಸು ಅರಿಕೇಸರಿಗೆ ಅತ್ಯಂತ ಆತ್ಮೀಯನಾಗಿದ್ದುದು. ೩. ಸ್ವತಃ ಪಂಪನ ವ್ಯಕ್ತಿತ್ವ ವಿಶೇಷ. ಎಷ್ಟೇ ಆದರೂ, ಎಂಥ ಮಹಿಮಾಶಾಲಿಯಾದರೂ, ಪರಿಸ್ಥಿತಿ ಮತ್ತು ಪರಿಸರಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲಾರನೆಂಬುದು ಸ್ಪಷ್ಟವೇ. ಪಂಪ ಹೀಗೆ ಪರಿಸ್ಥಿತಿ- ಪರಿಸರಗಳ ಒತ್ತಡದಲ್ಲಿ, ಸಂಸ್ಕಾರದಲ್ಲಿ ದ್ವಂದ್ವ ಮನೋಭಾವ ಬೆಳಸಿಕೊಂಡ ಅನಿವಾರ್ಯವಾಗಿ.

* * * * *

'ಸಂಗ್ಯಾಬಾಳ್ಯಾ' ಸಣ್ಣಾಟ-ಗಂಗಿಯ ದುರಂತ ಕಥೆ

- ಡಾ. ವೀರಣ್ಣ ದಂಡೆ



ಈ ಮೇಲಿನ ರೇಖಾಚಿತ್ರ 'ಸಂಗ್ಯಾಬಾಳ್ಯಾ'ದ ಒಟ್ಟು ಕ್ರಿಯೆಯನ್ನು ಹಾಗೂ ಪಾತ್ರಗಳ ಸಂಬಂಧವನ್ನೂ ತೋರಿಸುತ್ತದೆ. ಗಂಗಿ ವರ್ತುಲದ ಕೇಂದ್ರದಲ್ಲಿ ಸ್ಥಾನ ಪಡೆಯುತ್ತಾಳೆ. ಈರ್ಯಾ ಹಾಗೂ ಸಂಗ್ಯಾ ಆಕೆಯ ದೈಹಿಕ ಸಂಬಂಧ ಹೊಂದಿ, ಕಥೆಯ ವರ್ತುಲದಲ್ಲಿ - ಆಕೆಯ ನಂತರದ ಸ್ಥಾನ ಪಡೆಯುತ್ತಾರೆ. ಈರ್ಯಾನೆಡೆ ಅವನ ತಮ್ಮಂದಿರು, ಸಂಗ್ಯಾನೆಡೆ ಪರಮ್ಮ ಬಾಳ್ಯಾರು - ಅವರಿಗೆ ಸಹಾಯಕರಾಗಿ ಬರುವುದರಿಂದ - ಅವರು ಮೂರನೆಯ ವರ್ತುಲದಲ್ಲಿ ನಿಲ್ಲುತ್ತಾರೆ. ಹೀಗೆ ಬಾಳ್ಯಾ ಮತ್ತು ಪರಮ್ಮರು ವರ್ತುಲದಲ್ಲಿ ಗಂಗಿಯಿಂದ ದೂರದ ಸ್ಥಾನ ಪಡೆದೂ, ಇವರ ಸಂಬಂಧ ಹಾಗೂ ಓಡಾಟಗಳು ಗಂಗಿಯವರೆಗೆ ಹೋಗಿಬಂದು ಮಾಡುತ್ತಿರುತ್ತವೆ: ಇರಪಕ್ಷಿ ಬಸವಂತ ಅವಳ ಮೈದುನರಾಗಿ, ಪರಮ್ಮ ಅವಳ ಜೊತೆ ಇರುವವಳಾಗಿ, ಬಾಳ್ಯಾನು ಸಂಗ್ಯಾನ ಮಧ್ಯವರ್ತಿಯಾಗಿ ಗಂಗಿಯಲ್ಲಿಗೆ ಸುಳಿದಾಡುತ್ತಿರುತ್ತಾರೆ. ಆದರೆ ಇವರು ಅಪರಾಧದ ದೃಷ್ಟಿಯಲ್ಲಿ ಎರಡನೆಯವರಾಗಿ, ಈರ್ಯಾ ಸಂಗ್ಯಾರು ಮೊದಲನೆಯವರಾಗಿ ನಿಲ್ಲುತ್ತಾರೆ.

ರೇಖಾಚಿತ್ರವನ್ನು ಇಬ್ಭಾಗ ಮಾಡಿದ್ದು - ಮೇಲಿನ ಅಂಗಳದಲ್ಲಿ ಗಂಗಿಯ ಕೌಟುಂಬಿಕ ಸಂಬಂಧವಿದೆ. ಆ ವಲಯದಲ್ಲಿಯೇ ಗಂಗಿ ಇದ್ದಿದ್ದರೆ, ಆ ಮಾತೇ ಬೇರೆಯಾಗಿರುತ್ತಿತ್ತು. ಆದರೆ ಆಕೆ ಜಾರಿ ಕೆಳಗಿನ ಅಂಗಳಕ್ಕೆ ವಾಲುತ್ತಾಳೆ. ಅಲ್ಲಿ

ಸಂಗ್ಯಾನಂಥ ಲಂಪಟರೂ, ಪರಮ್ಮ ಬಾಳ್ಯಾರಂಥ ದ್ರೋಹಿಗಳೂ ಇದ್ದಾರೆ. ಇದು ಸಂಪೂರ್ಣವಾಗಿ ಕಪ್ಪುಲೋಕ. ತನ್ನ ಕೌಟುಂಬಿಕ ಸಂಬಂಧದಲ್ಲಿ ಇರಲಾಗದ ಗಂಗಿ, ಈ ಅದೋಲೋಕದ ಆಕರ್ಷಣೆಗೆ ಒಳಗಾದುದು- ಅವಳ ಅವಸಾನಕ್ಕೆ ಕಾರಣವಾಗುತ್ತದೆ. ಕಥೆಯ ಕ್ರಿಯೆಯ ಬಹುಭಾಗ ನಡೆಯುವುದು ಈ ಕೆಳಲೋಕದಲ್ಲಿಯೇ. ಆಟದ ಕೊನೆಯಲ್ಲಿ ಗಂಗಿಯನ್ನು ಹಾಳುಮಾಡಿದ ಸಂಗ್ಯಾನ ಕೊಲೆಗೈಯ್ಯಲು ಈರ್ಯಾನೊಂದಿಗೆ ಅವನ ತಮ್ಮಂದಿರೂ ಕೆಳಗಿನ ಅಂಗಣಕ್ಕೆ ಇಳಿದು ಬರುತ್ತಾರೆ. ಇಲ್ಲಿ - ಒಬ್ಬ ಕೊಲೆಗೀಡಾಗುತ್ತಾನೆ, ಇನ್ನೊಬ್ಬ ಗಲ್ಲಿಗೇರುತ್ತಾನೆ. ಗಂಗಿ ಸಂಪೂರ್ಣವಾಗಿ ದುರಂತದ ದೆಸೆ ಹೊಂದುತ್ತಾಳೆ.

ಒಗೆ ಒಳ್ಳೆಯದಕ್ಕೆ ಸಂಕೇತವಾದ ಮೇಲಿನ ಅಂಗಳ- ಆಟ ಮುಗಿಯುವ ಹೊತ್ತಿಗೆ ಸಂಪೂರ್ಣವಾಗಿ ಒರಿದಾಗಿರುತ್ತದೆ. ಕೊನೆಗೆ ಈ ಕಥೆ ಒಳ್ಳೆಯದರ ಮೂಲಕ ಪ್ರೇಕ್ಷಕರಿಗೆ ಹೇಳಲು ಏನನ್ನೂ ಇಟ್ಟುಕೊಂಡಿರುವುದೇ ಇಲ್ಲ. ಕಥೆ ಹೇಳುವುದೆಲ್ಲ ಕಪ್ಪುಲೋಕದಿಂದಲೇ. ಹೀಗಾಗಿ ಪ್ರೇಕ್ಷಕರ ಮೇಲೆ ಕೊನೆಯವರೆಗೆ ದುಷ್ಪರಿಣಾಮವನ್ನೇ ಬೀರುವ ಕಥೆ, ಅವಸಾನದ ಫಲಿತಾಂಶ ಕೊಟ್ಟು, ಪರ್ಯಾಯವಾಗಿ ಹೀಗಿರಬಾರದು ಎಂದು ಹೇಳುತ್ತದೆ. ಹೀಗಿರಬೇಕೆಂದು ನೇರವಾಗಿ ಹೇಳುವ ಅವಕಾಶ ಈ ಕಥೆಯಲ್ಲಿ ಇಲ್ಲವೇ ಇಲ್ಲ ಎನ್ನಬೇಕು.

* * *

ಗಂಡಸರಿಬ್ಬರ ಹೆಸರನ್ನು ಹೊತ್ತ 'ಸಂಗ್ಯಾಬಾಳ್ಯಾ' ಸಣ್ಣಾಟದ [illegible] ಹೆಂಗಸಾದ ಗಂಗಿಯ ಸುತ್ತಲೇ ಹಬ್ಬಿಕೊಂಡಿವೆ. ಹೀಗಾಗಿ ಗಂಗಿಯೇ ಈ ಬಯಲಾಟದ ಕೇಂದ್ರಬಿಂದುವೆನಿಸುತ್ತಾಳೆ. ಅವಳ ಜೊತೆಗೆ ಅನ್ಯೋನ್ಯ ಸಂಬಂಧ ಹೊಂದಿದ ಎರಡು ಗಂಡು ಪಾತ್ರಗಳು- ಒಂದೆಡೆ ಅವಳ ಗಂಡನಾಗಿ ಈರ್ಯಾ, ಇನ್ನೊಂದೆಡೆ ಅವಳ ಗೆಣೆಕಾರನಾಗಿ ಸಂಗ್ಯಾ-ಆಕೆಯ ಪಾತ್ರದ ಸುತ್ತಲೂ ಸುತ್ತುತ್ತಿರುತ್ತಾರೆ.

ಈ ಕಥೆಯಲ್ಲಿ ಗಂಗಿಯನ್ನು ಹೊರತುಪಡಿಸಿ, ಎರಡು ಗುಂಪುಗಳಿವೆ (ರೇಖಾಚಿತ್ರ ಗಮನಿಸಿ). ಗಂಗಿ ತಾತ್ವಿಕವಾಗಿ ಈರ್ಯಾನ ಕುಟುಂಬಕ್ಕೆ ಸೇರಿದರೂ ಆಕೆಯನ್ನು ನಾವು ಪ್ರತ್ಯೇಕವಾಗಿ ನಿಲ್ಲಿಸಿದಾಗ, ಮೂರು ಮೂರು ಜನಗಳ ಎರಡು ಗುಂಪುಗಳು ನಮಗೆ ಕಾಣಸಿಗುತ್ತವೆ. ಈರ್ಯಾನ ಕುಟುಂಬ ಒಂದು ಗುಂಪಾದರೆ, ಸಂಗ್ಯಾನ ಗುಂಪು ಇನ್ನೊಂದಾಗಿದೆ.

ಈರ್ಯಾನ ಗುಂಪು ಇಬ್ಬರು ಜೊತೆಗಾರರಿಂದ ಕೂಡಿದ್ದರೆ, ಸಂಗ್ಯಾನ ಗುಂಪೂ ಇಬ್ಬರೂ ಜೊತೆಗಾರರಿಂದ ಕೂಡಿದೆ. ಪರಮ್ಮ ಗಂಗಿಯ ಜೊತೆಗಿದ್ದರೂ ತಾತ್ವಿಕವಾಗಿ ಆಕೆ ಸಂಗ್ಯಾನ ಪರವಾಗಿಯೇ ನಿಲ್ಲುತ್ತಾಳೆ. ಆದುದರಿಂದ ಆಕೆಯ ಸ್ಥಾನವನ್ನು ಸಂಗ್ಯಾನ ಗುಂಪಿನಲ್ಲಿಯೇ ತೋರಿಸುವುದು ಉಚಿತವೆನಿಸುತ್ತದೆ. ಬಾಳ್ಯಾನಂತೂ ಸಂಗ್ಯಾನ ಜೊತೆಗಾರನೇ ಆಗಿದ್ದು, ಅವನ ಕೆಲಸಗಳಿಗೆಲ್ಲ ಸಹಾಯ ಮಾಡುತ್ತಲೇ ಇರುತ್ತಾನೆ.

ಈರ್ಯಾನ ಗುಂಪಿನಲ್ಲಿ ಅವನ ತಮ್ಮಂದಿರಾದ ಇರಪಕ್ಷಿ ಬಸವಂತರು ಆತನಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಾರೆ.

* * * * *

ಒಂದನೇ ಗುಂಪಿನಲ್ಲಿಯ ಗಂಗಿಯ ಗಂಡ ಮೈದುನರು- ಅವಳ ಮನದಳಲನ್ನೇ ಅರಿಯದ ಮೂಢರು. ಗಂಡಬೇಪಾರಿ, ಮೈದನರು ಬೇಜವಾಬ್ದಾರಿ. ಗಂಡ ವ್ಯಾಪಾರಕ್ಕೆಂದು ತಿರುಗಿದರೆ, ಮೈದುನರು ಹೊಲಮನೆ ಎಂದು ತಿರುಗುತ್ತಾರೆ. ಗಂಗಿಯ ಸುಖದಲ್ಲಿ ಯಾರೂ ಭಾಗಿಯಾಗರು. ಇದು ಪೂರ್ವದ ಕಥೆ. ಅನಂತರ ಕಥೆಯ ಕ್ರಿಯೆಯಿಂದ ಹೊರಗಾಗುವ ಈ ಗುಂಪು, ಪ್ರವೇಶವಾಗುವುದು ಗಂಗಿ ಅವಸಾನ ಹೊಂದಿದ ಮೇಲೆ. ತಾವೇ ಮುಂದಾಗಿ ಗಂಗಿಗೆ ಶಿಕ್ಷೆ ಕೊಡುತ್ತಾರೆ-ತವರು ಮನೆಗೆ ಕಳಿಸುತ್ತಾರೆ.

ನಾಟಕದ ಕ್ರಿಯೆಗೆ ಸಂಬಂಧಪಟ್ಟಂತೆ, ಒಂದನೇ ಗುಂಪು ಎರಡನೇ ಗುಂಪಿನಷ್ಟು ಕ್ರಿಯಾಶೀಲವಾಗಿಲ್ಲ. ವ್ಯಾಪಾರದ ಉದ್ದೇಶಕ್ಕಾಗಿ ನಾಟಕದ ಮುಖ್ಯ ಹರಿವಿನಿಂದ ಕಡೆಗಾಗುವ ಈರ್ಯಾನೊಂದಿಗೆ- ಆತನ ತಮ್ಮಂದಿರ ಕೆಲಸವೂ ಮುಗಿಯುತ್ತದೆ. ಈಗ ಉಳಿಯುವ ಗಂಗಿ ಒಬ್ಬಳ ಜೊತೆಗೇ ನಾಟಕದ ವ್ಯಾಪ್ತಿಯಲ್ಲಿ ಸಂಗ್ಯಾನ ಪಂಗಡದವಳಾಗಿ ವರ್ತಿಸುವ ಪರಮ್ಮ, ಗಂಗಿಯ ಜೊತೆಗೂಡುವುದರಿಂದ. ಅಪಾಯದ ಎಳೆಯೊಂದು ಗಂಗಿಯ ಸುತ್ತ ಜಾಳಗೆ ಹಾಕಲು ಪ್ರಾರಂಭವಾಗುತ್ತದೆ.

ತಾವು ಸೃಷ್ಟಿಸುವ ಸಂದರ್ಭಗಳಲ್ಲೇ ಗಂಗಿ ಇನ್ನಷ್ಟು ಇನ್ನಷ್ಟು ಸಿಕ್ಕು ಹಾಕಿಕೊಳ್ಳುವಂತೆ ಮಾಡುವ ಎರಡನೇ ಗುಂಪು, ಅಮಾಯಕ ಹೆಣ್ಣನ್ನು ಅತ್ಯಂತ ಹೃದಯಹೀನವಾಗಿ ನಡೆಸಿಕೊಂಡು ಬಿಡುತ್ತದೆ. ಮೆಲ್ಲಮೆಲ್ಲಗೆ ಸಂಗ್ಯಾ ಸೃಷ್ಟಿಸುವ ಜಾಲದ ಒಳಗಡೆ ಸಿಕ್ಕಿಹಾಕಿಕೊಳ್ಳುತ್ತ, ತನ್ನ ಅವಸಾನದ ದಾರಿಗೆ ಧುಮ್ಮುಕ್ಕುವ ಗಂಗಿ, ದೈಹಿಕವಾಗಿ ತೃಪ್ತಿಪಟ್ಟರೂ, ಮಾನಸಿಕವಾಗಿ ನರಳಾಡುತ್ತಾಳೆ.

ಒಮ್ಮೆ ಅಕಸ್ಮಾತ್ ತಪ್ಪು ಮಾಡಿದ ಗಂಗಿ, ತಿರುಗಿಬಾರದ ಉರುಳುವಿಕೆಯಲ್ಲೇ ಕಾಲ ಕಳೆಯುತ್ತಾಳೆ. ತಾನು ತಪ್ಪು ಮಾಡುತ್ತಿರುವುದರ ಅರಿವಿರುವ ಗಂಗಿ, ಸಂಗ್ಯಾನ ಸಂಗ ಬೆಳಸಲು ಮೊದಲಿಗೆ ನಿರಾಕರಿಸುವ, ತಿಳುವಳಿಕೆಯ, ಪ್ರತಿಭಟನೆಯ ಮಾತನಾಡುತ್ತಾಳೆ. ಆದರೆ ದುರಂತವೆಂದರೆ ಗಂಗಿ ಕೊನೆಗೆ ಸೋಲನ್ನಪ್ಪುತ್ತಾಳೆ. ಅಲ್ಲ ಆಕೆಯನ್ನು ಸೋಲಿಸುವ ಹುನ್ನಾರದಲ್ಲಿ ಮುಗ್ಗರಿಸುತ್ತಾಳೆ. ಹೀಗಾಗಿ ಇಡೀ ಆಟದ ತುಂಬ ಈ ಎರಡೂ ಗುಂಪಿನ ಬಲಾತ್ಕಾರ, ಸೆಳೆತಕ್ಕೆ ಒಳಗಾಗುವ ಗಂಗಿಯ ಆಕ್ರಂದನವೇ ಕೇಳಿಸುತ್ತದೆ.

ಸ್ತ್ರೀವಾದಿ ದೃಷ್ಟಿಯಿಂದ ಈ ಕಥೆಯನ್ನು ಗಮನಿಸುವುದಾದರೆ ಪುರುಷ ಪ್ರಧಾನ ಸಮಾಜ ಒಂದು ಹೆಣ್ಣನ್ನು ನಡೆಸಿಕೊಂಡ ರೀತಿ, ತೀರ ಅಮಾನವೀಯವೆನಿಸುತ್ತದೆ.

ಅಂತಹ ದೊಡ್ಡ ಮನೆ. ಐಶ್ವರ್ಯ ಇನ್ನೂ ತಾಯ್ತನ ಪಡೆಯದ ತುಂಬು

ಯೌವ್ವನದ ಸುಂದರ ಹೆಂಡತಿಯನ್ನು ವ್ಯಾಪಾರಕ್ಕೆ ಬೇಡವೆಂದರೂ ಬಿಟ್ಟುಹೋಗುವ ಗಂಡ. ಗಂಗಿಯ ಮನಸ್ಸನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. ಹೀಗೆ ಈರ್ಯಾ ವ್ಯಾಪಾರಕ್ಕಾಗಿ ಹೊರಡುವುದರೊಂದಿಗೆ, ಮನೆಯಲ್ಲಿ ಗಂಗಿ ಏಕಾಂಗಿ ಆಗುತ್ತಾಳೆ. ಈರ್ಯಾನ ನಿರ್ಗಮನದಿಂದಾಗಿ ಆಕೆಯ ಬಂಧನವೇ ಕಥೆಯ ಹರವಿನಿಂದ ದೂರ ಸರಿಯುತ್ತದೆ. ಈಗ ಗಂಗಿಗೆ ಯಾವ ರಕ್ಷಣೆಯೂ ಇಲ್ಲದಂತಾಗುತ್ತದೆ. ಜೊತೆಗೆ ಅವಳಿಗೆ ಯಾವುದೇ ರೀತಿಯ ಪೋಷಣೆ ಕೊಡಲು ಸಾಧ್ಯವಿಲ್ಲದ ಪರಮ್ಮನನ್ನು ಗಂಗಿಯ ಜೊತೆಗೆ ಬಿಟ್ಟುಹೋಗುವುದು, ಈರ್ಯಾನ ಬೇಜವಾಬ್ದಾರಿ ಕೆಲಸವೆನಿಸುತ್ತದೆ. ಇದರಿಂದಾಗಿ ಹೊರಗಿನ ಆಕ್ರಮಣಗಳಿಗೆ ದಾರಿಮಾಡಿಕೊಡುವ, ಈ ಮೂಲಕ ಇಡೀ ಗಂಗಿಯ ಪಾತ್ರವನ್ನು ಪೊಳ್ಳಾಗಿಸುವ ಪರಮ್ಮಳಂಥವರ ಪ್ರವೇಶದಿಂದಾಗಿ, ಭದ್ರವಾದ ತನ್ನ ಮನೆಯಲ್ಲಿ ಪರಮ್ಮನೆಂಬ ದಾರಿ ತೆರೆದುಕೊಳ್ಳುತ್ತದೆ. ಇದರಿಂದ ಹೊರಗಿನವರೂ ಸುಲಭವಾಗಿ ತನ್ನ ಮನೆ ಪ್ರವೇಶಿಸುವಂತಾಗಿ, ಗಂಗಿಯ ರಂಗಮಂಚದವರೆಗೆ ಸುಳಿದಾಡಬಹುದಾದ ಸುಲಭ ದಾರಿಯನ್ನು ಈರ್ಯಾ ತಾನೇ ನಿರ್ಮಿಸಿದನೇನೋ ಎನಿಸುತ್ತದೆ. ಏಕೆಂದರೆ ಪರಮ್ಮ ಸುಳಿದಾಡಿದ ದಾರಿಯಲ್ಲೇ ನಡೆದು ಅಥವಾ ಪರಮ್ಮಳ ಇನ್ನೊಂದು ವೇಷದಲ್ಲಿಯ ಸಂಗ್ಯಾನು ಗಂಗಿಯ ಒಳಮನೆಯನ್ನು ಪ್ರವೇಶಿಸುತ್ತಾನೆ. ಒಂದು ಬಗೆಯಲ್ಲಿ ಪರಮ್ಮನನ್ನು ಗಂಗಿಯ ಜೊತೆಗೆ ತಂದು ಬಿಡುವುದೇ ಸಂಗ್ಯಾಬಾಳ್ಯಾದ ಬಹುಮುಖ್ಯವಾದ ಪ್ರಥಮ ಕ್ರಿಯೆಯಾಗಿದೆ. ಹಾಗಾಗಿ ಮುಂದೆ ನಡೆಯುವ ಗಂಗಿಯ ಅವಸಾನದ ತೆರೆಯನ್ನು - ಪರಮ್ಮಳನ್ನು ಪ್ರವೇ[illegible] ಮೂಲಕ ಈರ್ಯಾನೇ ಅನಾವರಣಗೊಳಿಸುತ್ತಾನೆ ಎನಿಸುತ್ತದೆ.

ಇನ್ನು ಸಂಗ್ಯಾ, ಬೇಜವಾಬ್ದಾರಿ ಮತ್ತು ಉಡಾತನದ ಮನುಷ್ಯ. ತನಗೆ ಪೂರ್ವಪರಿಚಯವಿಲ್ಲದ, ಜಾತ್ರೆಯಲ್ಲಿ ಕಂಡ, ಅದರಲ್ಲೂ ಮದುವೆಯಾದ ಹೆಣ್ಣನ್ನು ಮೋಹಿಸಿ, ಬಾಳ್ಯಾನಿಂದ ಪರಮ್ಮಳಿಂದ ಹೇಳಿಸಿ, ಒತ್ತಾಯಿಸಿ, ಗಂಗಿಯನ್ನು ತಪ್ಪು ದಾರಿ ಹಿಡಿಯಲು ಪ್ರೇರೇಪಿಸುತ್ತಾನೆ. ಈ ಎಲ್ಲ ಒತ್ತಡಗಳಿಂದ ಗಂಗಿಗೆ ಸಂಗ್ಯಾನನ್ನು ತನ್ನ ಮಂಚದವರೆಗೆ ಅವಕಾಶ ಮಾಡಿಕೊಡುವ ದುರಂತ ಸ್ಥಿತಿ ಉಂಟಾಗುತ್ತದೆ. ಇದು ಹೆಣ್ಣಿಗೆ ಸಂಬಂಧಿಸಿದಂತೆ ಗಂಡ ನೊಬ್ಬನ ಅತ್ಯಂತ ದಮನಕಾರಿ ಪ್ರವೃತ್ತಿ ಎನಿಸುತ್ತದೆ.

ಸಂಗ್ಯಾ ಪ್ರಾರಂಭದಿಂದಲೇ ಸ್ವಾರ್ಥಸ್ವಭಾವದವನಾಗಿ ಕಂಡು ಬರುತ್ತಾನೆ. 'ಜೀವದ ಗೆಳೆಯ' ಎಂದು ಹೇಳುತ್ತಲೇ ಬಾಳ್ಯನನ್ನು ತನಗಾಗಿ ಬಳಸಿಕೊಳ್ಳುತ್ತಾನೆ. ಬಾಳ್ಯಾನ ಬಡತನಕ್ಕೆ ಸಹಾಯ ಮಾಡುವವನಂತೆ ವರ್ತಿಸುತ್ತಾನೆ. ಆಗಾಗ ಅರಿವೆ ಅಂಚಟ, ಮನೆ ಖರ್ಚೆಂದು ಅಷ್ಟಿಷ್ಟು ಸಹಾಯ ಮಾಡುತ್ತ, ಅವನನ್ನು ತನ್ನ ಋಣದಲ್ಲಿ ಸಿಲುಕಿಸಿಕೊಂಡಿರುತ್ತಾನೆ. ಬಾಳ್ಯಾನ ಈ ಬಡತನದ ದೌರ್ಬಲ್ಯವನ್ನು ಬಳಸಿಕೊಂಡೆ, ತನ್ನಿಂದ ನೀಗದ ಕೆಲಸವನ್ನು ಅವನಿಂದ ಮಾಡಿಸುತ್ತಾನೆ. ಪರಮ್ಮಳನ್ನು ಕೂಡ ಆಸೆ-ಆಮಿಷಗಳಿಗೆ ಒಡ್ಡಿಯೇ ತನ್ನೆಡೆ ಸೆಳೆದುಕೊಂಡು - ಗಂಗಿಯ ಮನೆಯಲ್ಲಿ ಸ್ಥಳ ಪಡೆಯಲು ಉಪಯೋಗಿಸಿಕೊಳ್ಳುತ್ತಾನೆ.

ಇರಪಕ್ಷಿ ಬಸವಂತರು ಅಣ್ಣನಿಲ್ಲದಾಗ ತಾವು ನಿರ್ವಹಿಸಲೇಬೇಕಾದ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ. ಅವರು ಕರ್ತವ್ಯಚ್ಯುತರಾದುದರಿಂದ - ತಮ್ಮ ಮನೆಯಲ್ಲಿ ಸಂಗ್ಯಾನ ಪ್ರವೇಶ ಇನ್ನಷ್ಟು ಸರಳವಾಗಲು ಸಾಧ್ಯವಾಗುತ್ತದೆ. ಆಶ್ಚರ್ಯವೆಂದರೆ, ಗಂಗಿಯಲ್ಲಿಗೆ ಸಂಗ್ಯಾ ಬಂದು- ಹೋಗುವ ಸಂಗತಿ ಊರಲ್ಲೆಲ್ಲಾ ಹಬ್ಬಿದರೂ ಗಂಗಿಯ ಮನೆಯವರಿಗೆ ಗೊತ್ತಾಗುವುದು ಗಂಡ ಊರಿಗೆ ಬಂದ ಮೇಲೆಯೇ.

ಹಾಗೆಯೇ ತನ್ನದಲ್ಲದ ಇಚ್ಛೆಯನ್ನು ಇನ್ನೊಬ್ಬರಿಗಾಗಿ ಪೂರೈಸಿ ಕೊಡಬೇಕಾದಾಗ ಗಂಗಿ ಬೇರೊಬ್ಬರ ಹೆಂಡತಿ, ಅವಳಿಗೆ ಅನ್ಯಾಯವಾಗುತ್ತದೆಂದು ಬಾಳ್ಯಾ- ಪರಮ್ಮ ಯೋಚಿಸಲೇ ಇಲ್ಲ. ಬಾಳ್ಯಾನು ಸಂಗ್ಯಾನ ಸೆಳೆತಗಳಿಗೆ ಅನೇಕ ಸಲ ಬುದ್ಧಿ ಹೇಳಲು ಪ್ರಯತ್ನಿಸುವನಾದರೂ ಕೊನೆಗೆ ಸಂಗ್ಯಾನ ಮಾತಿಗೆ ಮಣಿದು, ಅವನ ಇಚ್ಛೆಯಂತೆಯೇ ವರ್ತಿಸುತ್ತಿರುತ್ತಾನೆ. ಹೀಗಾಗಿ ಬಾಳ್ಯಾನಿಗೊಂದು ಸ್ವತಂತ್ರ ವ್ಯಕ್ತಿತ್ವವೆಂಬುದೇ ಕಾಣಿಸುವುದಿಲ್ಲ.

ಪರಮ್ಮಳ ಪ್ರವೇಶದಿಂದಲೇ ಕಥೆಗೆ ಲೈಂಗಿಕತೆಯ ಲೇಪ ಅಂಟಿಕೊಳ್ಳುತ್ತದೆ. ಪರಮ್ಮನ ಮರ್ಯಾದಿತವಲ್ಲದ ಮಾತುಗಳು. ಹಗುರ ವ್ಯಕ್ತಿತ್ವದ ಹರಿಗಡೆಯೊಳಗೆ ಗಂಗಿ ತನ್ನ ಗಂಭೀರತೆಯ ಮುದ್ರೆಯನ್ನು ಒಡೆದುಕೊಳ್ಳುತ್ತಾಳೆ. ತನ್ನ ವ್ಯಕ್ತಿತ್ವವನ್ನು ಹಗುರವಾಗಿಸಿಕೊಳ್ಳುತ್ತಾಳೆ. ಈ ಮೂಲಕ ತನಗೊಂದು ಕಪ್ಪುಛಾಯೆಯನ್ನು ಹೊದಿಸಿಕೊಳ್ಳುತ್ತಾಳೆ. ಮುಂದೆ ಪರಮ್ಮ ಹೆಣ್ಣಾಗಿಯೂ ಗಂಡಿನ ಪರವಾಗಿ ಕೆಲಸ ಮಾಡುವ ಶಕ್ತಿಯಾಗಿಯೇ ನಿಂತು, ಇನ್ನೊಂದು ಹೆಣ್ಣನ್ನು ದುರ್ಬಲಗೊಳಿಸುವ ಹಾಳು ಮಾಡುವ ಕೆಲಸದಲ್ಲಿಯೇ ನಿರತಳಾಗಿರುತ್ತಾಳೆ. ಇವಳಿಂದಾಗಿಯೇ ಗಂಗಿ ಅವಸಾನದ ಅಂಚಿಗೆ ತಳ್ಳಲ್ಪಡುತ್ತಾಳೆ.

ಗಂಗಿ ಜಾತ್ರೆಯಲ್ಲಿ ತನ್ನ ಕೊರಳ ಸರಿಗೆಯನ್ನು ಕಳೆದುಕೊಳ್ಳುವುದು, ಒಂದರ್ಥದಲ್ಲಿ ಆಕೆ ಎಲ್ಲರೆದುರಿಗೂ ತನ್ನ ಪಾತಿವ್ರತ್ಯವನ್ನು ಹಾಳುಮಾಡಿಕೊಳ್ಳುವುದರ ಸಂಕೇತವೂ ಆಗುತ್ತದೆ. ಜೊತೆಗೆ, ಸಂಗ್ಯಾನಿಗೆ ಸರಗಿ ದೊರೆತು, ಆ ಮೂಲಕ ಬಾಳ್ಯನನ್ನು ಗಂಗಿಯಲ್ಲಿಗೆ ಕಳಿಸಲು, ಆಕೆಯ ವಿಳಾಸ-ವಿವರಗಳನ್ನು ಪಡೆಯಲು ಕಾರಣವಾಗುತ್ತದೆ. ಒಂದರ್ಥದಲ್ಲಿ- ಪರಮ್ಮ ಗಂಗಿಯ ಮನೆ ಪ್ರವೇಶಿಸಿದ್ದು, ಹಾಗೂ ಸರಗಿ ನೆವದಿಂದಾಗಿ ಬಾಳ್ಯಾ ಅವಳ ಮನೆಗೆ ಬರುವುದು- ಸಮಾನವಾದ ಮತ್ತು ಗಮನಾರ್ಹವಾದ ಕ್ರಿಯೆಗಳೆನಿಸುತ್ತವೆ.

ಇನ್ನೊಂದು ಬಹುಮುಖ್ಯ ಅಂಶವೆಂದರೆ - ಸರಗಿ ಕಳೆದಾಗ ಗಂಗಿ ಧೃತಿಗೆಡುವುದು ಮತ್ತು ಗಾಬರಿಯಾಗುವುದು. ಅಷ್ಟೆಲ್ಲ ಶ್ರೀಮಂತಿಕೆ ಇದ್ದರೂ ತನ್ನ ಒಂದು ಕೊರಳ ಸರ ಕಳೆದಾಗ ಗಂಗಿ ಅಷ್ಟೊಂದು ಭಯಗ್ರಸ್ತಳಾಗುವಲ್ಲಿ ಕಾರಣವಿದೆ. ಸರಗಿ ಕಳೆದುಕೊಂಡುದಕ್ಕೆ ಗಂಡ ತನಗೆ ತೊಂದರೆ ಕೊಡುವನೆಂಬ ಭಯವೇ ಇದಕ್ಕೆ

ಕಾರಣವಾಗಿದೆ. ಗಂಗಿಯೂ ಮನೆಯೊಡತಿಯಾದರೂ ಹೆಣ್ಣಾಗಿ ಮನೆಯ ಸಂಪತ್ತಿನ ಮೇಲೆ ಗಂಡನಿಗಿರುವಷ್ಟು ಹಕ್ಕು ಅವಳದಾಗಿಲ್ಲ. ಅರ್ಥಾತ್ ಇದು ಹೆಣ್ಣಿನ ಆರ್ಥಿಕ ಪರಾವಲಂಬನೆಯನ್ನೇ ಹೇಳುತ್ತದೆ.

ಗಂಗಿ ಸಂಗ್ಯಾನಿಗೆ ಬಲಿಯಾಗುವಲ್ಲಿ, ಬಾಳ್ಯಾ-ಪರಮ್ಮರ ಒತ್ತಾಯ, ಇರಪಕ್ಷಿ ಬಸವಂತರ ಬೇಜವಾಬ್ದಾರಿಯ ಜೊತೆಗೆ ಸರಗಿಯ ಪಾತ್ರವೂ ಗಮನಾರ್ಹವೆನಿಸುತ್ತದೆ.

'ಸಂಗ್ಯಾಬಾಳ್ಯಾ' ಸಣ್ಣಾಟದಲ್ಲಿ ಗಂಗಿಯದೇ ಪ್ರಮುಖ ಪಾತ್ರ. ಆಕೆಯ ಸರಿಸಮಾನವಾಗಿ ಉಳಿದ ಯಾವ ಪಾತ್ರಗಳೂ ಅಲ್ಲಿ ಬೆಳೆದು ನಿಲ್ಲಲಾರವು. ಅವಳ ಅವಸಾನದ ಕಥೆಯೇ ಸಂಗ್ಯಾಬಾಳ್ಯದ ವಸ್ತು. ಈರ್ಯಾ ಗಂಗಿಯ ಗಂಡನಾಗಿ, ಸಂಗ್ಯಾ ಅವಳ ಮಿಂಡನಾಗಿ ಆಕೆಗೆ ಯಾವುದೇ ರೀತಿಯ ಸಹಾಯ ಮಾಡುವ ಸಂದರ್ಭವೇ ಇಲ್ಲ. ಅಬಲೆಯಾದ ಹೆಣ್ಣನ್ನು ಕೇವಲ ಪೀಡಿಸುವ, ಅವಮಾನಗೊಳಿಸುವ ಕೆಲಸದಲ್ಲಿಯೇ ನಿರತರಾಗಿರುತ್ತಾರೆ.

ಈರ್ಯಾ ಸಂಗ್ಯಾರ ಜೊತೆಗೆ ಈ ಕಥೆಯಲ್ಲಿಯೇ ಇತರ ಪಾತ್ರಗಳು ಕೂಡಾ ನೇರವಾಗಿ ಗಂಗಿಗಾಗಿ ಮತ್ತು ಗಂಗಿಗೆ ಸಂಬಂಧಿಸಿಯೇ ತಮ್ಮ ವರ್ತನೆಗಳನ್ನು ಗೈಯ್ಯುತ್ತವೆ, ಪಾತ್ರವಾಡುತ್ತವೆ. ಗಂಗಿಯ ಅವಸಾನದ ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ಚೆಲ್ಲಿ, ಆಕೆಗೆ ಅನೇಕ ತೊಂದರೆಗಳನ್ನು ಕೊಡುತ್ತವೆ. ಆಕೆ ಅವಸಾನ ಹೊಂದುವಂತೆ ಮಾಡಿ, ಆಕೆಯನ್ನು ಕೈ ಹಿಡಿದುಕೊಂಡು ಬಂದು, ದುರಂತದ ಕುಂಡಕ್ಕೆ ತಳ್ಳುತ್ತ ತಾವೂ ಆ ಜಾಲದಲ್ಲಿಯೇ ಸಿಗಿಬಿದ್ದು ಒದ್ದಾಡುತ್ತವೆ.

ಹೆಣ್ಣಿನ ದೈಹಿಕ ಸಂಪತ್ತು ಮತ್ತು ಎಲ್ಲ ದೌರ್ಬಲ್ಯಗಳನ್ನು ಪಡೆದ ಗಂಗಿ, ಇನ್ನೊಬ್ಬರ ಪ್ರೇರಣೆಯಿಂದ ತಪ್ಪು ಹೆಜ್ಜೆ ಇಡುತ್ತಾಳೆ. ಹೀಗೆ ಅಕಸ್ಮಾತ್ ಗೈಯ್ಯುವ ತಪ್ಪಿನಿಂದಾಗಿ ದುರಂತದ ಮಡುವಿಗೆ ಧುಮುಕುತ್ತಾಳೆ. ಹೊರಗೆ ಗಂಡನ ಭಯ, ಒಳಗೆ ತನ್ನ ಅವಸಾನದ ನೋವು. ಹೀಗೆ ಇಬ್ಬಂದಿಯಲ್ಲಿ ತಳಮಳಿಸುತ್ತಾ ಪ್ರತಿದಿನವೂ ತಪ್ಪು ಮಾಡುತ್ತಲೇ, ಜನರ ಹರಲಿಯನ್ನು ಕಿವಿಯಾರೆ ಕೇಳುತ್ತಲೇ ಕರುಣಾಜನಕ ಸ್ಥಿತಿಗೆ ಬಂದು ತಲುಪುತ್ತಾಳೆ. ಆಕೆಗೆ ಅಮರಿಕೊಳ್ಳುವ ಎಲ್ಲ ದುರಂತಗಳ ನಡುವೆ, ಸ್ತ್ರೀ ಶೋಷಣೆಯ ಸಂಕೇತವಾಗಿ ತೋರುವ ಆಕೆ, ಕೊನೆಯಲ್ಲಿ ದುರಂತನಾಯಕಿಯಾಗಿ ಬೆಳೆದು ನಿಲ್ಲುತ್ತಾಳೆ.

ಅತ್ಯಂತ ದುರ್ದರ ಪ್ರಸಂಗದಲ್ಲೂ ಗಂಗಿ ತೋರುವ ನಡತೆಗಳು ನಮ್ಮಲ್ಲಿ ಆಶ್ಚರ್ಯವನ್ನುಂಟುಮಾಡುತ್ತವೆ. ಸಂಗ್ಯಾನ ಜೊತೆಯಲ್ಲಿ ತಾನಿದ್ದಾಗ, ಈರ್ಯಾ ಬಂದು ಹೊರಗೆ ಒದರುವಾಗ-ಬಾಗಿಲು ತೆರೆದರೆ ಸಾಕು, ತನ್ನ ಶವ ಬೀಳಬಹುದೆಂಬ ಸಂದರ್ಭವಲ್ಲಿ- ಸಂಗ್ಯಾನನ್ನು ಪಾರುಮಾಡಲು ಯೋಚಿಸುತ್ತಾಳೆ. ಆತ ಪಾರಾಗಲು ಬೇಕಾಗುವ- ದೀಪ ಹಚ್ಚದೇ ಇರುವ ಕತ್ತಲೆಯ ಸಂದರ್ಭವನ್ನು ಸೃಷ್ಟಿಸುತ್ತಾಳೆ. ಅಪಾಯವನ್ನು ತಾನು ಸ್ವೀಕರಿಸಿ, ಸಂಗ್ಯಾನನ್ನು ಪಾರುಮಾಡುವಲ್ಲಿ ತಾನು ಅವಸಾನ ಹೊಂದುತ್ತಿದ್ದರೂ ಕೂಡ ಇನ್ನೊಬ್ಬರನ್ನು ಬದುಕಿಸುವಲ್ಲಿ ಅವಳ ಉದಾತ್ತ

ಮನೋಧರ್ಮ ಕಂಡು ಬರುತ್ತದೆ.

ಸಂಗ್ಯಾನು ಬಾಳ್ಯಾನ ಜಾಲದಲ್ಲಿ ಬೀಳಲಿರುವಾಗ ಪತ್ರ ಬರೆದು ಬರಬೇಡವೆಂದು ತಿಳಿಸುತ್ತಾಳೆ. ಆದರೂ ಬಾಳ್ಯಾನ ದ್ರೋಹಕ್ಕೆ ಸಂಗ್ಯಾ ಬಲಿಯಾದಾಗ - ಪುನಃ ಅವನನ್ನು ದಕ್ಕಿಸಲು ಪ್ರಯತ್ನಿಸುತ್ತಾಳೆ. ಇಲ್ಲೆಲ್ಲ ದುರಂತನಾಯಕಿಯ ಉದಾರತನ, ನಿರ್ಲಿಪ್ತ ಮನಸ್ಥಿತಿಗಳೇ ಕೆಲಸ ಮಾಡುವುದನ್ನು ಕಾಣುತ್ತೇವೆ.

ಸಂಗ್ಯಾ ವ್ಯಕ್ತಿತ್ವಹೀನ ಮನುಷ್ಯನಾಗಿ ಕಂಡು-ಇತರರ ಅನ್ನದ ಗಡಿಗೆಗೆ ಬಾಯಿ ಹಾಕುವ ನಾಯಿಯಂತೆ ತೋರುತ್ತಾನೆ. ತನ್ನ ಮನೆಯ ಅನ್ನದ ಗಡಿಗೆಯನ್ನು ಕಳ್ಳನಾಯಿಯ ಸಂಗಾತಿಗೆ, ಕಾಯಲು ಹಚ್ಚಿದಂತಾಗಿದೆ- ಪರಮ್ಮಳ ಪಾತ್ರ. ಆಕೆ ಗಡಿಗೆ ಕಾಯುವ ಬದಲು, ನಾಯಿಯ ಪಾಲಾಗುವಂತೆ ಮಾಡುತ್ತಾಳೆ. ಈ ಕೆಲಸದಲ್ಲಿ ಬಾಳ್ಯಾನಿಗಿಂತ ಪರಮ್ಮಳದೇ ಒಂದು ಕೈ ಮೇಲೆನಿಸುತ್ತದೆ. ಆದರೆ ಬಾಳ್ಯಾನು ಮಿತ್ರದ್ರೋಹದ ಕುಂಡದಲ್ಲಿ, ಪಾಪದ ಪಿಂಡವಾದ ಸಂಗ್ಯಾನನ್ನು ದಬ್ಬುವುದು- ಪರಮ್ಮ ಗಂಗಿಗೆ ಮಾಡಿದ ಮೋಸದ ಸರಿಸಮನಾಗಿಯೇ ಇದೆ: ತನಗೆ ಕಾಯಲು ಹಚ್ಚಿದನ್ನು-ಆಸೆಗೆ ಬಿದ್ದು, ನಾಯಿ ಪಾಲಾಗುವಂತೆ ಪರಮ್ಮ ವರ್ತಿಸಿದರೆ, ಅಂತಹದೇ ಆಸೆಗೆ ಬಿದ್ದು ಬಾಳ್ಯಾನು ಸಂಗ್ಯಾನನ್ನು ಮೃತ್ಯುವಿನ ಬಾಯಿಗೆ ತುರುಕುತ್ತಾನೆ.

* * *

ಮದುವೆಯಾದ ಹೆಣ್ಣು ಹಾದರಕ್ಕಿಳಿಯುವುದು ಜನಪದ ಸಾಹಿತ್ಯ ಸ್ವೀಕರಿಸಿದಂತೆ ಅಪರಾಧವೇ ಆಗಿದೆ. ಅದಕ್ಕಾಗಿ ಶಿಕ್ಷೆ ಕಾದಿಟ್ಟದ್ದು. ಶೀಲ ಕಾಪಾಡಬೇಕಾದ ಗಂಗಿ ಅದನ್ನು ಕಳೆದುಕೊಳ್ಳುವ ಮೂಲಕ ಅಪರಾಧಿಯಾಗುತ್ತಾಳೆ. ಆದರೆ ಆಕೆಗೆ ದೊರೆಯುವ ಶಿಕ್ಷೆ, ಕೇವಲ ಗಂಡನ ಮನೆಯಿಂದ ಹೊರದೂಡುವುದು ಮಾತ್ರ. ಏಕೆಂದರೆ ಆಕೆಯೇ ಹಂಬಲಿಸಿ ಸಂಗ್ಯಾನೊಂದಿಗೆ ಕೂಡಲು ಬಯಸಿದವಳಲ್ಲ. ಬಾಳ್ಯಾ ಪರಮ್ಮರಂಥ ಪ್ರೇರಕ ಶಕ್ತಿಗಳ ಪ್ರಭಾವದಲ್ಲಿ ಪಾಪದ ಕೂಪಕ್ಕೆ ತಳ್ಳಲ್ಪಟ್ಟವಳು. ಹೀಗಾಗಿ ಆಕೆಗೆ ಜನಪದರಿಂದ ದೊರೆತ ಶಿಕ್ಷೆ ತೀರ ನಿರ್ದಯವಾದುದಾಗಿಲ್ಲ. ಅಥವಾ ಆಕೆಯನ್ನು ಆ ಸ್ಥಿತಿಯಲ್ಲಿ ಉಳಿಯುವಂತೆ ಮಾಡುವುದೇ ತಕ್ಕ ಶಿಕ್ಷೆಯಾಗಿರಬೇಕು.

ಈ ಆಟದ ಮುಖ್ಯ ಅಪರಾಧಿ ಸಂಗ್ಯಾನೆ. ಆದಕ್ಕಾಗಿಯೇ ಆತ ಭೀಕರ ರೀತಿಯಲ್ಲಿ ಕೊಲೆಗೀಡಾಗುತ್ತಾನೆ. ಇನ್ನೊಬ್ಬರ ಹೆಂಡತಿ ಎಂಬುದನ್ನು ತಿಳಿದೂ ಗಂಗಿಯ ಮೇಲೆ ಕಣ್ಣಿಡುತ್ತಾನೆ. ಬಾಳ್ಯಾ ಪರಮ್ಮನಂಥವರನ್ನು ಬಳಸಿಕೊಳ್ಳುತ್ತಾನೆ. ತನಗೆ ದೊರೆತ ಕೊರಳ ಹಾರದಂಥ ವಸ್ತುವಿನ ದುರುಪಯೋಗ ಮಾಡಿಕೊಳ್ಳುತ್ತಾನೆ. ಈ ಎಲ್ಲವುಗಳ ಹಿನ್ನೆಲೆಯಲ್ಲಿ ಸಂಗ್ಯಾನ ಭೀಕರ ಕೊಲೆ ನಿರ್ದಯವಾದುದೆಂದು ಅನಿಸದು.

ಸಂಗ್ಯಾನ ಕೊಲೆಗೈದ ಈರ್ಯಾ ಕಾನೂನಿನ ಕಣ್ಣಿನಲ್ಲಿ ಅಪರಾಧಿಯಾಗಿ, ಗಲ್ಲಿಗೇರುವಾಗ - ಕಥೆ ತನ್ನೆಲ್ಲ ಪರಿಣಾಮವನ್ನು ಕಳೆದುಕೊಂಡಿರುತ್ತದೆ. ಈ ಘಟನೆ ಪ್ರಸ್ತುತ ಕಲಾಕೃತಿಯ ಮೈಯ್ಯ ಹೊರಗಡೆ ನಡೆದಂತಹ ಭಾಸ ನಮಗುಂಟಾಗುತ್ತದೆ.

ಆದರೆ ಈ ಕಥೆಯ ತುಂಬ ಪ್ರೇರಕ ಶಕ್ತಿಗಳಾಗಿ ನಿಲ್ಲುವ ಬಾಳ್ಯಾ ಮತ್ತು ಪರಮ್ಮರಂಥವರಿಗೆ ಯಾವುದೇ ಶಿಕ್ಷೆ ಆಗದಿರುವುದು ಆಶ್ಚರ್ಯ. ಜನಪದ ಸಮಾಜ ಇಂತಹ ಜನರನ್ನು, ಅವರ ನಡತೆಯನ್ನು ಸ್ವೀಕರಿಸಿದ ರೀತಿ ನೈಜವೆನಿಸುತ್ತದೆ: ಬಾಳ್ಯಾನಂಥವರ ಗೆಳೆತನ, ಪರಮ್ಮನಂಥವರ ಹಿರಿತನ ನಮ್ಮ ಜನಪದರು ಒಪ್ಪಲಾರದ ಮಾತುಗಳು. ಇವೆರಡೂ ಹೇಸಿ ಜೀವಗಳು. ಮನುಷ್ಯನ ಬಾಳಿನ ಒಳಗಡೆ ಸ್ಥಾನ ಪಡೆಯದ ಮೌಲ್ಯಗಳು ನಾವು ಸೂಚಿಸಿದ ರೇಖಾಚಿತ್ರದ ಮೂರನೆಯ ಪದರಿನಲ್ಲಿ ಮಾತ್ರ ಓಲಾಡುವ ಇವು, ಕೇವಲ ಹೊಟ್ಟೆಪಾಡಿಗಾಗಿ ಬಡಿದಾಡುವ ಜೀವಗಳು. ಅದಕ್ಕಾಗಿ ಕಥೆಯ ಆವರಣದ ಒಳಗಡೆ ಇವರು ಪರಿಣಾಮವನ್ನು ಭೋಗಿಸುವುದೇ ಇಲ್ಲ.

ಗಂಗಿ ಪ್ರಾರಂಭದಲ್ಲಿ ದಾರಿ ತಪ್ಪಿದಾಗ ಅದು ನಮಗೆ ದುರಂತವೆನ್ನಿಸದೇ, ಶೃಂಗಾರ ಸನ್ನಿವೇಶದಂತೆ ಕಾಣಿಸಿ, ಅದರ ಪರಿಣಾಮವನ್ನು ಕೊನೆಗೆ ಗಂಗಿ ಅನುಭವಿಸುವಾಗ ನಮಗೆ ಆಕೆಯ ಅವಸಾನದ ಮತ್ತು ದುರಂತದ ಅನುಭವವಾಗುತ್ತದೆ. ಆದುದರಿಂದ 'ಸಂಗ್ಯಾಬಾಳ್ಯಾ'ದ ಕಡೆ 'ಶೃಂಗಾರದ ಪದರಿನಲ್ಲಿ ಕಟ್ಟಿಕೊಟ್ಟ ದುರಂತದ ಮೂಟೆಯಾಗಿದೆ' ಎಂದು ಹೇಳಬಹುದು.

* * * * *

ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಸ್ವರೂಪ

- ಡಾ. ಗುರುಪಾದ ಮರಿಗುದ್ದಿ

'ಸಂಸ್ಕೃತಿ'ಯ ಅರ್ಥವ್ಯಾಪ್ತಿಯನ್ನು ಅರಿಯಲು, ಅರ್ಥೈಸಲು ನಡೆದ ಪ್ರಯತ್ನಗಳು ಒಂದೆರಡಲ್ಲ; ಹತ್ತು ಹಲವು. ಈ ಪ್ರಯತ್ನಗಳಿಂದ ಸಂಸ್ಕೃತಿಯ ಸ್ವರೂಪವು ಸ್ಫುಟಗೊಳ್ಳುವುದರ ಬದಲಾಗಿ ಹೆಚ್ಚು ಸಂಕೀರ್ಣವಾಗುತ್ತ ಹೋಯಿತು. ಕಳೆದ ಶತಮಾನದ ಕೊನೆಯ ಮತ್ತು ಈ ಶತಮಾನದ ಆರಂಭದ ದಶಕಗಳಲ್ಲಿ ಸಂಸ್ಕೃತಿಯ ಬಗ್ಗೆ ಹಲವು ತೆರನಾದ ಅಧ್ಯಯನಗಳು ನಮ್ಮ ದೇಶ ಭಾಷೆಗಳಲ್ಲಿ ನಡೆದವು. ಮೊದಮೊದಲು ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು ನಡೆಸಿದ ಜಿಜ್ಞಾಸೆಯ ಫಲವಾಗಿ ಸಂಸ್ಕೃತಿಯ ಕ್ಷೇತ್ರಕ್ಕೂ ಲಾಭ ಒದಗಿತು. ಇದೊಂದು ಪ್ರತ್ಯೇಕ ಅಧ್ಯಯನದ 'ಶಿಸ್ತು' ಎಂಬ ವಿಚಾರ ಬೆಳೆದದ್ದು ಮಾತ್ರ ಇತ್ತೀಚೆಗೆ.

ಶಾಸನಗಳು, ನಾಣ್ಯಗಳು, ಉತ್ಖನನ ವಸ್ತುಗಳು, ಕೈಫಿಯತ್ತುಗಳು, ಕಟ್ಟಡ-ವಾಸ್ತು, ಮೂರ್ತಿ ರಚನೆಗಳು, ಸಂಸ್ಕೃತಿಯ ಪ್ರಮುಖ ಆಕರಗಳು ಎಂದು ಪರಿಗಣಿತವಾದವು. ಸಾಹಿತ್ಯ ಕೃತಿಗಳ ಬಗೆಗೆ ವಿದ್ವಾಂಸರು ಬಹುಕಾಲ ನಿರ್ಲಕ್ಷ್ಯ ತೋರಿದರೆಂದು ಹೇಳಬಹುದು. ಲಲಿತಗುಣಗಳ ಸೃಷ್ಟಿರೂಪವೆಂದೇ ಅವುಗಳನ್ನು ಗ್ರಹಿಸಿದರು. ಅವು ವಾಸ್ತವದ ದಾಖಲೆಗಳಂತೆ ನಂಬಲರ್ಹ ಎಂದು ಭಾವಿಸಿರಲಿಲ್ಲ. ಆದರೆ ಸಾಹಿತ್ಯ ಕೂಡ ಮಾನವ ಚರಿತ್ರೆಯ, ಆಗುಹೋಗುಗಳ, ಸಂಸ್ಕೃತಿಯ ಪ್ರಕ್ರಿಯೆಯಲ್ಲಿ ಜೀವ ಪಡೆಯುವುದರಿಂದ ಅವುಗಳ ಜೊತೆಗೆ ಅಂತರ್ ಸಂಬಂಧ ಪಡೆದಿರುತ್ತದೆ ಎಂಬುದು ಗಮನಾರ್ಹವಾಗಿದೆ. "ಸಾಹಿತ್ಯವೆಂದರೆ ಸಾಂಸ್ಕೃತಿಕ ಪ್ರಕ್ರಿಯೆಯ ಒಂದು ಅಂಗ. ಸಾಹಿತ್ಯ ಕೃತಿ ಎಂದರೆ ಒಂದು ವಸ್ತುವಲ್ಲ- ಅದೂ ಒಂದು ಪ್ರಕ್ರಿಯೆಯೇ. ಕವಿ-ಸಹೃದಯ ಲೇಖಕ-ಓದುಗ ಇವರ ನಡುವೆ ನಡೆಯುವ ಸಂವಹನೆಯ ಪ್ರಕ್ರಿಯೆ. ಸಾಹಿತ್ಯ ಕೃತಿಯಲ್ಲಿ ಇರುವ ಅಂಶಗಳೆಲ್ಲ ಚಂಚಲ, ಚಲನಕ್ಷಮ, ಜ್ವಲಂತ, ಜೀವಂತ"[1]-ಎಂಬ ಹೇಳಿಕೆ ಸಾಹಿತ್ಯ-ಸಂಸ್ಕೃತಿಯ ಸಂಬಂಧದಲ್ಲಿ ಸತ್ಯವಾಗಿ ನಿಲ್ಲುತ್ತದೆ.

ಕನ್ನಡದ ಕೆಲವು ಪ್ರಾಚೀನ ಕಾವ್ಯ ಕೃತಿಗಳಲ್ಲಿ ಅಂದಂದಿನ ಸಂಸ್ಕೃತಿಯ ವಿವಿಧ ಮುಖಗಳನ್ನು ದರ್ಶಿಸುವಷ್ಟು ಆಕರಸಾಮಗ್ರಿ ತುಂಬಿಕೊಂಡಿದೆ. ಪಂಪ, ಹರಿ-ಹರ, ಕುಮಾರವ್ಯಾಸ, ಕನಕದಾಸ, ನಂಜುಂಡಕವಿ, ರತ್ನಾಕರವರ್ಣಿ ಮುಂತಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಧರ್ಮವನ್ನು, ಯುಗಧರ್ಮವನ್ನು ಕೂಡಿಯೇ ನೀಡಿದ್ದಾರೆ. ಕಾವ್ಯಗಳನ್ನು ಹೊರತುಪಡಿಸಿದರೂ ಶಾಸ್ತ್ರಗ್ರಂಥಗಳಲ್ಲಿ, ಲಕ್ಷಣ ಕೃತಿಗಳಲ್ಲಿ, ಪುರಾಣ ವೃತ್ತಾಂತ ಗಳಲ್ಲಿಯೂ ಸಾಂಸ್ಕೃತಿಕ ವಿವರಗಳು ಕಾಣಿಸುತ್ತವೆ.

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯು ವಿಶಿಷ್ಟ ಸ್ಥಾನ ಪಡೆದಿದೆ. ಅದು ಕನ್ನಡದಲ್ಲಿ ನಿಧಾನವಾಗಿ ಮೂಡಿಬಂದು ಶೀಘ್ರದಲ್ಲಿ ಬೆಳೆದುನಿಂತು, ಸಿದ್ಧಿಸಾಧನೆಗಳಲ್ಲಿ ಎತ್ತಿ ತೋರಬಹುದಾದ ಕೃತಿಗಳನ್ನು ನೀಡಿದೆ. ಇದಕ್ಕಿಂತ ಮುಖ್ಯವಾಗಿ ತಂತ್ರ ವಿನ್ಯಾಸ ಅಭಿವ್ಯಕ್ತಿಗಳಲ್ಲಿ ಪಾಶ್ಚಾತ್ಯ ಪ್ರಭಾವ ಪ್ರೇರಣೆಗಳನ್ನು ಪಡೆದರೂ, ಕನ್ನಡ ನಾಡು ನುಡಿಗಳ

ಮಣ್ಣಿನ ಸೊಗಡಿನಲ್ಲಿ ಉಸಿರಾಡಿದ್ದು, ಸ್ವಂತಿಕೆಯನ್ನು ಒಡಲಲ್ಲಿ ತುಂಬಿಕೊಂಡದ್ದು ಲಕ್ಷಿಸಬೇಕಾದ ಅಂಶ. ಕನ್ನಡ ಕಾದಂಬರಿಗಳು ನಮ್ಮ ಪರಂಪರಾಗತ ಸಾಹಿತ್ಯ ಕೃತಿಗಳಿಗಿಂತ ರೂಪದಲ್ಲಿ, ತಂತ್ರದಲ್ಲಿ ಭಿನ್ನವಾಗಿದ್ದರೂ, ಸಂಸ್ಕೃತಿಯ ಸಾರಸತ್ವದ ರಸ ಹೀರಿಕೊಂಡೇ ಬೆಳೆದವು. "ಸಾಹಿತ್ಯ ಸಂಸ್ಕೃತಿಯ ತಾಯಿಬೇರು, ಸುಸಮೃದ್ಧ ಖನಿ, ರಕ್ಷಾಗಾರ ಹಾಗೂ ಸಂವರ್ಧನ ಸಾಧನ. ಕತೆ ಕಾದಂಬರಿ ನಾಟಕ ಮಹಾಕಾವ್ಯಗಳಲ್ಲಿ ಆಯಾಯಾ ಕಾಲ ದೇಶಗಳ ಸಾಂಸ್ಕೃತಿಕ ಸಂಗತಿಗಳು ಸಾಂದ್ರವಾಗಿ ವ್ಯಾಪಿಸಿ ಕೊಂಡಿರುತ್ತವೆ. ಸಾಹಿತ್ಯ ಜನಜೀವನದ ಪ್ರತಿಬಿಂಬವೆನ್ನುವುದು ಈ ಅರ್ಥದಲ್ಲಿಯೇ. ಜನತೆಯ ಜೀವನವನ್ನು ಪ್ರತಿಬಿಂಬಿಸದ, ಅವರ ಆಸೆ ಆಕಾಂಕ್ಷೆ ಅಭೀಪ್ಸೆಗಳನ್ನು ಗರ್ಭೀಕರಿಸಿಕೊಳ್ಳದ, ಭೂತಕಾಲದ ಕೈಪಿಡಿಯಾಗಿ, ವರ್ತಮಾನದ ಕನ್ನಡಿಯಾಗಿ, ಭವಿಷ್ಯದ ಮುನ್ನುಡಿಯಾಗಿ ರೂಪಗೊಳ್ಳದ ಸಾಹಿತ್ಯ ಬೇರಿಲ್ಲದ ವೃಕ್ಷವಾಗುತ್ತದೆ; ಜೀವವಿಲ್ಲದ ದೇಹವಾಗುತ್ತದೆ"[2]-ಎಂದು ವಿದ್ವಾಂಸರು ಸಾಹಿತ್ಯ ಕೃತಿಗಳಿಂದ ಅಪೇಕ್ಷಿಸಿದ ಸಂಗತಿಗಳು ಕೆಲವು ಕನ್ನಡದ ಕಾದಂಬರಿಗಳಲ್ಲಿ ಧಾರಾಳವಾಗಿ ಲಭಿಸುತ್ತವೆ. ಮೊದಲ ಹಂತದ ಸ್ವತಂತ್ರ ರಚನೆಗಳಾದ ಇಂದಿರಾಬಾಯಿ, ವಾಗ್ದೇವಿ, ಮಾಡಿದ್ದುಣ್ಣೋಮಹಾರಾಯಾ ಮತ್ತು ನಂತರದ ಮರಳಿ ಮಣ್ಣಿಗೆ, ನಿಸರ್ಗ, ಗ್ರಾಮಾಯಣ, ಮಲೆಗಳಲ್ಲಿ ಮದುಮಗಳು, ಸಮರಸವೇ ಜೀವನ-ಕಾದಂಬರಿಗಳನ್ನು ಸಾಂಸ್ಕೃತಿಕ ಅಧ್ಯಯನದ ತೆಕ್ಕೆಗೆ ಒಳಪಡಿಸಿಕೊಂಡು, ವಿಶ್ಲೇಷಿಸಿದರೆ ಅನೇಕ ಸಂಗತಿಗಳು ಬೆಳಕಿಗೆ ಬರುವುದು ಖಂಡಿತ.

ಕುವೆಂಪು ಅವರ ಎರಡು ಕಾದಂಬರಿಗಳನ್ನು ಕನ್ನಡದ ಮಹಾಕಾದಂಬರಿಗಳೆಂದು ಕರೆಯಲಾಗುತ್ತದೆ. ಮೊದಲ ಕಾದಂಬರಿ 'ಕಾನೂರು ಹೆಗ್ಗಡತಿ' ೧೯೩೬ ರಲ್ಲಿ 'ಮಲೆಗಳಲ್ಲಿ ಮದುಮಗಳು' ೧೯೬೭ ರಲ್ಲಿ ಪ್ರಕಟಗೊಂಡ ಕೃತಿಗಳು. ಕುವೆಂಪು ತಮ್ಮ ಮೊದಲ ಕಾದಂಬರಿಯಲ್ಲಿ "ಈ ನನ್ನ ಪ್ರಥಮ ಕಾದಂಬರಿಯನ್ನು ಓದುವವರಲ್ಲಿ ನನ್ನದೊಂದು ವಿಜ್ಞಾಪನೆ. ಇದನ್ನು ಕಥೆಯ ಕೋಲಾಹಲಕ್ಕಾಗಿ ಓದಬೇಡಿ. ಸಾವಧಾನವಾಗಿ ಸಚಿತ್ರವಾಗಿ ಸಜೀವವಾಗಿ ಓದಿ. ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ. ಅನೇಕರಿಗೆ ಅದು ಸಂಪೂರ್ಣವಾಗಿ ಹೊಸ ಪ್ರಪಂಚವಾಗುತ್ತದೆ. ಹೊಸ ಊರಿಗೆ ಹೋಗುವವರು ಅಲ್ಲಿಯ ಜನ ಮತ್ತು ಜೀವನದ ವಿಚಾರವಾಗಿ ತಟಕ್ಕನೆ ಯಾವ ನಿರ್ಣಯಗಳನ್ನೂ ಮಾಡಿಕೊಳ್ಳದೆ ಸ್ವಲ್ಪಕಾಲ ತಾಳ್ಮೆಯಿಂದಿದ್ದು ಕ್ರಮೇಣ ಬಳಕೆಯಿಂದ ಜನರನ್ನೂ ಜೀವನವನ್ನೂ ಪರಿಚಯ ಮಾಡಿಕೊಳ್ಳುವಂತೆ ಈ ಕಾದಂಬರಿಯ ಅರಣ್ಯ ಜಗತ್ತನ್ನು ಪ್ರವೇಶಿಸುವ ವಾಚಕನು ವರ್ತಿಸಬೇಕಾಗುತ್ತದೆ "[3] ಎಂದು ಹೇಳಿಕೊಂಡಿದ್ದಾರೆ. ಎರಡನೆಯ ಕಾದಂಬರಿಯ ಮೊದಲಲ್ಲಿ ಅವರು ಹೇಳುವುದು ಹೀಗೆ-" ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ; ಯಾವುದಕ್ಕೂ ಮೊದಲಿಲ್ಲ; ಯಾವುದಕ್ಕೂ ತುದಿಯಿಲ್ಲ; ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ; ಕೊನೆಮುಟ್ಟುವುದೂ ಇಲ್ಲ!"[4] ಎರಡೂ ಕಾದಂಬರಿಗಳಲ್ಲಿ 'ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ' ಎಂದಿದ್ದರೂ, ಅವೆರಡು ಕೃತಿಗಳಲ್ಲಿ ಒಂದು ಕಾಲದ ಒಟ್ಟು ಮಲೆನಾಡಿನ ಬದುಕಿನ

ಸಮಗ್ರತೆ ಮತ್ತು ಸಂಕೀರ್ಣತೆಗಳು ಸಜೀವವಾಗಿ ಗೋಚರಿಸುತ್ತವೆ.

ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಸ್ವರೂಪವನ್ನು ಹಲವು ತೆರನಲ್ಲಿ ಅರಿಯಬಹುದು. ಮುಖ್ಯವಾಗಿ ಈ ಅಂಶಗಳನ್ನು ವಿಶ್ಲೇಷಿಸಿ ಕಾಣುವುದು-

1. ಸಾಮಾಜಿಕ ವ್ಯವಸ್ಥೆ-ಸಂಸ್ಥೆ-ಆಚರಣೆಗಳ ಸ್ತರದಲ್ಲಿ
2. ಧಾರ್ಮಿಕ ವಿಧಿ-ನಿಷೇಧ-ನಂಬಿಕೆಗಳ ಸ್ತರದಲ್ಲಿ
3. ಕಲೆ, ವಾಸ್ತುಗಳ ರೂಪ-ರಚನೆಗಳ ಸ್ತರದಲ್ಲಿ
4. ಭಾಷೆಯ ಸ್ತರದಲ್ಲಿ ಹಾಗೂ,
5. ವೃತ್ತಿ-ಉದ್ಯೋಗಗಳ ಸ್ತರದಲ್ಲಿ.

ಈ ಕಾದಂಬರಿಗಳು ಕೊಡುವ ವೃತ್ತಿ-ಉದ್ಯೋಗ ವಿವರಗಳ ಮೂಲಕ ಜನರ ಸಂಸ್ಕೃತಿಯ ಸ್ವರೂಪ ಅರಿಯುವ ಪ್ರಯತ್ನವಿಲ್ಲಿ ಪ್ರಸ್ತುತವೆಂದು ತೆಗೆದುಕೊಂಡರೆ, ಅವುಗಳಿಂದ ಹೊರಡುವ ಅನೇಕ ವಿವರವಾದ ಅಂಶಗಳು ಅಚ್ಚರಿ ನೀಡಬಲ್ಲವು.

ಮಾನವನು ಕಾಲಕಾಲಕ್ಕೆ ತನ್ನಯ ಮತ್ತು ತನ್ನವರ ಉದರಪೋಷಣೆಗಾಗಿ ಕೈಕೊಂಡ ಕಸಬುಗಳಿಂದಾಗಿ ಕಲಾತ್ಮಕ, ಆರ್ಥಿಕ, ಸಾಮಾಜಿಕ, ಮತ್ತಿತರ ಪ್ರಕ್ರಿಯೆಗಳು ಸಹಜವಾಗಿ ಉಂಟಾದವು. ಕಸಬುಗಳಿಂದಾಗಿ ಕ್ರಿಯಾಶೀಲ ಮನುಷ್ಯಚೇತನ ಅನೇಕ ಅಭಿವ್ಯ[illegible] ಕಾರಣವಾಯಿತು. ಅನೇಕ ಕೊಡು-ಕೊಳ್ಳುವಿಕೆಗೆ ಮೂಲವಾಯಿತು. ಈ ಕಾರಣಗ[illegible]ದ ಉದ್ಯೋಗಗಳಿಗೆ ಬೆಲೆ ನೀಡಬೇಕಿದೆ. ಕುವೆಂಪು ಕಾದಂಬರಿಗಳಲ್ಲಿ ಬರುವ ಜನವರ್ಗ ಕೈಕೊಂಡ ಉದ್ಯೋಗಗಳನ್ನು ಹೀಗೆ ಬೇರೆ ಬೇರೆಯಾಗಿ ಎತ್ತಿತೋರಬಹುದು.

1. ಒಕ್ಕಲುತನ
2. ಪ್ರಾಣಿಸಾಕಾಣಿಕೆ
3. ಬೇಟೆಗಾರಿಕೆ
4. ಕೂಲಿ ಮತ್ತು ಜೀತಗಾರಿಕೆ
5. ಕುಶಲ ಕರ್ಮಗಳು
6. ಗ್ರಾಮ ವೈದ್ಯಕೀಯ
7. ಪೌರೋಹಿತ್ಯ
8. ಇತರ ವೃತ್ತಿಗಳು

ಮಲೆನಾಡಿನ ಗೌಡ-ಹೆಗ್ಗಡೆಗಳಂಥ ಒಕ್ಕಲಿಗರ ಮನೆತನಗಳು ಒಕ್ಕಲುತನವನ್ನು ಪ್ರಧಾನ ವೃತ್ತಿಯನ್ನಾಗಿ ಸ್ವೀಕರಿಸಿವೆ. ಅಲ್ಲಿರುವ ಇತರ ಜಾತಿ-ಮತಗಳ ಜನರು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆ. ಜಾತಿ ವೃತ್ತಿಯನ್ನು, ವೃತ್ತಿ ಜಾತಿಯನ್ನು ನಿರ್ದೇಶಿಸುವ ನಿರ್ಣಯಿಸುವ ಪರಂಪರಾಗತ ವ್ಯವಸ್ಥೆ ಇಲ್ಲಿ ಮುಂದುವರೆದಿದೆ. ಒಕ್ಕಲಿಗರು ಒಕ್ಕಲುತನ, ಹಳೆಪೈಕದವರು ಬಗನಿ ಕಾರ್ಯವನ್ನು, ಸೆಟ್ಟರು ಸೇರೆಗಾರಿಕೆಯನ್ನು, ಬ್ರಾಹ್ಮಣರು ಪೌರೋಹಿತ್ಯವನ್ನು, ಬೇಲರು ಹಸಲರು ಇತರರು ಕೂಲಿ ಜೀತವನ್ನು ಮಾಡುತ್ತಿದ್ದರು. ಆಯಾ ವೃತ್ತಿಗಳನ್ನು ಆಯಾ ಜನರೇ ಮಾಡಬೇಕಾದ ಅನಿವಾರ್ಯವಾದ ಸಾಮಾಜಿಕ

ವ್ಯವಸ್ಥೆಯಿತ್ತು. ಇದು ಕಟ್ಟಳೆಯಂತೆ ಗ್ರಾಹ್ಯವೆನಿಸಿತ್ತು. ಆದರೆ ಚಲನಶೀಲ ಸಾಮಾಜಿಕ ಪ್ರಕ್ರಿಯೆಯಲ್ಲಿ ಇಂಥ ಕಟ್ಟಳೆಗಳು ಬಿರುಕು ಬಿಡುವುದೂ ಉಂಟು. ಹಳೆಪೈಕದವರ ಬಗ್ಗೆ ಕಾದಂಬರಿಯಲ್ಲಿ ಬರುವ ಈ ಭಾಗ ನೋಡಬಹುದು "ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು, ಬಗನಿಯ ಮರದಿಂದ ಕಳ್ಳು ಇಳಿಯಿಸಿ ಕುಡಿದು, ಮಾರಿ ಜೀವನ ಮಾಡುವ ಹಳೆಪೈಕದವರಿಗೆ (ಅವರಿಗೆ ದೀವರು ಎಂಬ ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ; ಮಹಾ ಅನಾಚಾರವೆಂದೂ ಅನೇಕರ ಮನಸ್ಸು."[5] ಲಕ್ಕುಂದದ ಹಳೆಪೈಕದ ಸೇನನಾಯ್ಕ ಜಾತಿಯ ಮಿತಿಗಳನ್ನು ಮುರಿದು ಜಮೀನು ಹೊಂದಿದ್ದನು. ಈ ನಿದರ್ಶನವನ್ನು ಹೊರತುಪಡಿಸಿದರೆ ಇತರ ಯಾರೂ ಜಮೀನು ಹೊಂದಿ ಕೃಷಿಕಾರ್ಯ ಮಾಡುವ ಅನ್ಯವರ್ಗದ ಜನರು ದೊರೆಯುವುದಿಲ್ಲ.

ಕೃಷಿಯ ವಿವರಗಳು ಕಾದಂಬರಿಗಳಲ್ಲಿ ಬಿಡಿಬಿಡಿಯಾಗಿಯೂ ಒಟ್ಟಾಗಿಯೂ ಅನೇಕ ಕಡೆಗಳಲ್ಲಿ ಕಾಣಿಸುತ್ತವೆ. ಬಿಡುವಿನಲ್ಲಿ ನೆಲವನ್ನು ಸಿದ್ಧಪಡಿಸುವುದು, 'ಆರು' ಹೊಡೆಯುವುದು, ಕಳೆ ತೆಗೆಯುವುದು, ನಾಟಿ ಮಾಡುವುದು, ಗೊಬ್ಬರ ನೀರು ಹಾಕುವುದು, ಕೊಯ್ಲು ಮಾಡುವುದು ಇಲ್ಲಿ ಚಿತ್ರಿತವಾಗಿವೆ. "ಅಡಕೆ ಕೊಯಿಲು ಪ್ರಾರಂಭವಾಗಿ ಸ್ವಲ್ಪ ದೂರ ಮುಂದುವರೆದಿತ್ತು. ಕಾನೂರು ಮನೆಯಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೊನೆ ತೆಗೆಯುವುದು, ಕುತ್ತರೆ ಹಾಕುವುದು, ಮೆಟ್ಟುಗತ್ತಿಯಿಂದ ಅಡಕೆ ಸುಲಿಯುವುದು, ಚೊಗರು ಹಾಕಿ ಬೇಯಿಸುವುದು, ಚಪ್ಪರದ ಮೇಲೆ ವಾಟೆಯ ತಟ್ಟೆಗಳಲ್ಲಿ ಹರಡಿ ಬಿಸಿಲಿನಲ್ಲಿ ಆರಿಸುವುದು, ಈ ಕಾರ್ಯಗಳೆಲ್ಲವೂ ಭರದಿಂದ ಸಾಗಿದ್ದವು. .... ಚೌಕಿಯ ಮೂಲೆಯಲ್ಲಿ ದೊಡ್ಡದಾದ ಅಡಿಕೆಯೊಲೆಯ ಮೇಲೆ ಕರಿಹಿಡಿದು ಚೊಗರುಬಿದ್ದು ಚಿತ್ರವಿಚಿತ್ರವಾಗಿದ್ದ ತಾಮ್ರದ ದೊಡ್ಡ ಹಂಡೆಯಲ್ಲಿ ಅಡಕೆ ತಕಪಕನೆ ಕುದಿಯುತ್ತಿತ್ತು. ಇನ್ನೊಂದು ಕಡೆ ಆ ರಾತ್ರಿ ಬೇಯಿಸಿದ ಅಡಕೆಯನ್ನು ಒಣಗಿಸಲು 'ಹೊಗೆದಟ್ಟೆ'ಯೂ ಸಿದ್ಧವಾಗಿದ್ದೀತು. ಅಡಕೆಯೊಲೆಯಲ್ಲಿ ಬೆಂಕಿ ಭೀಮಾಕಾರವಾಗಿ ಉರಿಯುತ್ತಿತ್ತು."[6] ಅಡಕೆ ಸುಗ್ಗಿಯಲ್ಲಿ ಇಂಥ ಸನ್ನಿವೇಶ ಮಲೆನಾಡಿನ ಮನೆ ಮನೆಯಲ್ಲಿ ಸಹಜವಾಗಿತ್ತು. ಕೊನೆ, ಕುತ್ತುರೆ, ಮೆಟ್ಟುಗತ್ತಿ, ಚೊಗರು, ಅಡಕೆಯೊಲೆ, ಹೊಗೆದಟ್ಟೆಗಳು ಅಡಕೆ ಸುಗ್ಗಿಯಲ್ಲಿ ಬರುವ ವಿಶಿಷ್ಟ ಸಂಗತಿಗಳು. ಅವಿಲ್ಲಿ ಕೃಷಿಕಾರ್ಯದ ಪಾರಿಭಾಷಿಕ ಪದಗಳಾಗಿ ಆ ಭಾಗದಲ್ಲಿ ಬಳಕೆಯಲ್ಲಿದ್ದವು. ಮೆಟ್ಟುಗತ್ತಿ' ಎಂಬುದು ಕಾಲಲ್ಲಿಟ್ಟು ಅಡಿಕೆಯ ಹಸಿ ತೊಗಟೆಯನ್ನು ಸುಲಿಯಲು ಬಳಸುವ ಉಪಕರಣವಾದರೆ,'ಚೊಗರು' ಅಡಕೆಯನ್ನು ಬಣ್ಣಬರುವಂತೆ ಮಾಡುವ ಪದಾರ್ಥ ವಾಗಿದೆ. ಅಡಕೆಯ ಕಾರ್ಯದಲ್ಲಿ ತೊಡಗಿರುವ ಕೋಣೂರು ರಂಗಪ್ಪಗೌಡರ ಆಳುಗಳ ವಿವರಗಳಲ್ಲಿ ಮತ್ತೆ ಬೇರೆ ಕೆಲವು ಇಂಥ ಪದಗಳು, ವಿಚಾರಗಳು ತಿಳಿಯುತ್ತವೆ. ಕಾನೂರು ನೆಲವನ್ನು ನೇಗಿಲಿನಿಂದ ಬಿತ್ತನೆಗಾಗಿ ಸಿದ್ಧಪಡಿಸುತ್ತಿದ್ದ ಸಿದ್ಧ, ಬೈರರ ಕೆಲಸದಲ್ಲಿ ಕೃಷಿಕಾರ್ಯದ ಬೇರೆಯೇ ವಿವರಗಳಿವೆ. ಈ ವಿವರಗಳು ಕಥಾನಕದಲ್ಲಿ ಕೇವಲ ಸಾಂದರ್ಭಿಕವಾಗಿ ಬರುತ್ತವೆಯಷ್ಟೆ. ಪೂರ್ತಿ ಮಲೆನಾಡಿನ ಕೃಷಿಯ ಬಗ್ಗೆ ಅಲ್ಲಲ್ಲಿ ಬರುವ ಉಲ್ಲೇಖಗಳಿಂದ ಒಟ್ಟಾರೆ ಚಿತ್ರಣವನ್ನು ಕಲ್ಪಿಸಬೇಕಾಗುತ್ತದೆ.

ಅಡಕೆ, ಭತ್ತ, ತೆಂಗು ಬಾಳೆಯಂತಹ ಬೆಳೆಗಳು, ಬಿತ್ತನೆ ಪೂರ್ವದ ಸಿದ್ಧತೆಗಳು,

ಬಿತ್ತನೆಯ ಕಾರ್ಯಗಳು, ಸುಗ್ಗಿಯ ಚಟುವಟಿಕೆಗಳು ಹಾಗೂ ಬಳಕೆಗೊಳ್ಳುವ ಸಾಮಗ್ರಿ ಪರಿಕರಗಳಿಂದ ಜನರ ಕೃಷಿಕತನದ ಬಗ್ಗೆ ತಿಳಿಯುವಂತೆ, ಕೃಷಿಸಂಸ್ಕೃತಿಯ ಬಗೆಗೂ ತಿಳಿಯುತ್ತದೆ. ಕೃಷಿಯೊಂದಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಜನರು ಹೊಂದಿರುವ ಸಂಪರ್ಕದಿಂದಾಗಿ ಕೆಲವು 'ವ್ಯವಸ್ಥೆ'ಗಳು ರೂಪಗೊಂಡಿವೆ. ಒಕ್ಕಲಾಳು, ಗಟ್ಟದಾಳು, ಕೂಲಿಯಾಳು, ಜೀತದಾಳುಗಳಂಥ ವಿಶಿಷ್ಟ ವರ್ಗಗಳು ಒಂದೆಡೆ ಕೃಷಿಯೊಂದಿಗೆ ಸಂಬಂಧ ಪಡೆದಿವೆ. 'ಪಡಿ '’ಕೊಡುವುದು 'ಬಾಯಿಗೆ'ನೀಡುವುದು ಇಂಥ ಕೆಲವು ವಿರಳ ನಿತ್ಯದ ವ್ಯವಹಾರಗಳು ಇದರಿಂದ ಹುಟ್ಟಿಕೊಂಡಿವೆ. ಇನ್ನೊಂದೆಡೆಗೆ ಹರಕೆ, ದೆಯ್ಯದೆ ಜಾತ್ರೆ, ಭೂತಬಲಿ; ಆರಾಧನೆಗಳೂ ಬರುತ್ತವೆ. ಕೃಷಿಕಾರ್ಯಕ್ಕಾಗಿ ಘಟ್ಟದ ಮೇಲಿನ ಕೆಳಗಿನ ಪ್ರದೇಶಗಳ ಜನರಲ್ಲಿ ಅಂದಿನ ಸಂಪರ್ಕ ಸೌಲಭ್ಯವಿಲ್ಲದ ದಿನಗಳಲ್ಲಿ-ಸಂಬಂಧ ಏರ್ಪಟ್ಟಿತು. ನಾಟಿ ಕಾರ್ಯಗಳಲ್ಲಿ ಗುಂಪಾಗಿ ಹಾಡುತ್ತ ಹಾಡುತ್ತ ದುಡಿದ ಮೂಲಕ ಜಾನಪದ ಹಾಡುಗಳೂ, ಕೆಲವು ಸಮೂಹ ನೃತ್ಯಗಳೂ ಹುಟ್ಟಿಕೊಂಡವು. ಒಕ್ಕಲುತನ ಒಂದು ಜೀವನ ವಿಧಾನವನ್ನು, ಜನವರ್ಗದ ವಿಚಾರಸರಣಿಯನ್ನು ರೂಪಿಸಿದೆ. ಎರಡೂ ಕಾದಂಬರಿಗಳ ಸಮಸ್ತ ಜನವರ್ಗ ಒಂದಿಲ್ಲೊಂದು ತೆರನಲ್ಲಿ ಈ ಮಣ್ಣಿನ ಕಾರ್ಯಗಳಿಂದ, ಬದುಕಿನಿಂದ ಪ್ರಭಾವಿತಗೊಂಡಿದೆ.

ಕಾದಂಬರಿಗಳ ಒಳಗೆ 'ಅರಣ್ಯಜಗತ್ತು' ವ್ಯಾಪಿಸಿದೆ. ಮನುಷ್ಯ-ಕಾಡಿನ ಸಂಘರ್ಷ-ಒಡನಾಟ ನಿರಂತರವಾಗಿದೆ. ಸಹ್ಯಾದ್ರಿ ಗಿರಿಕಾನನದ ಮಹತ್ತಾದ ಪ್ರದೇಶ ವಿಶಿಷ್ಟವಾದ, ಸಾಮಾನ್ಯವಾದ, ಕ್ಷುಲ್ಲಕವಾದ ಅನೇಕ ಘಟನೆಗಳು ಎದುರಾಗುತ್ತವೆ. ಗಿರಿಜನರ ಬದುಕಿನ ಸಾಮಾನ್ಯ ಸಂಗತಿಯಾದ ಬೇಟೆಯ ಬದುಕು ಕೂಡ ಇಲ್ಲಿದೆ. ಕೃಷಿಯು ಪ್ರಧಾನವಾಗಿರುವ ಕಾರಣ ಬೇಟೆಯು ಉಪವೃತ್ತಿಯಾಗಿ, ಹವ್ಯಾಸವಾಗಿ ಮಾತ್ರ ಬರುತ್ತದೆ. ಕಾದಂಬರಿಗಳಲ್ಲಿ ಬರುವ ಒಕ್ಕಲಿಗರಿಂದ ಒಡಿದು, ಬೇಲ ಹಸಲ ಬಿಲ್ಲವರವರೆಗೂ (ಬ್ರಾಹ್ಮಣರನ್ನು ಹೊರತುಪಡಿಸಿ) ಬೇಟೆಯನ್ನು ಆಡಬಲ್ಲರು. ಕಾಡುಪ್ರಾಣಿ, ಪಕ್ಷಿ, ಮೀನು ಏಡಿಗಳ ಬೇಟೆ ವಿವರವಾಗಿಯೂ, ಇರುವೆ ಜೇನು ಇತರ ಬೇಟೆಗಳು ವಿರಳವಾಗಿಯೂ ಬಂದಿವೆ.

ಭೂಮಿ ಹುಣ್ಣಿಮೆಯ ಹಿಂದಿನ ದಿನ ಬೇಟೆಯಾಡುವುದೊಂದು ಮಲೆನಾಡಿನ ಸಂಪ್ರದಾಯವಾಗಿತ್ತು. ಕಾನೂರು, ಕೆಳ ಕಾನೂರುಗಳ ಬೇಟೆಗಾರರು ಹೀಗೆ ಒಂದು ಸಲ ಬೇಟೆಗೆ ಹೋಗುತ್ತಾರೆ. ''ನೂಲೆಗೆಣಸು, ಬೆರಕೆಸೊಪ್ಪುಗಳನ್ನು ತಂದ ಹಾಗೂ ಆಯಿತು, ಬೇಟೆ ಆಡಿದ ಹಾಗೂ ಆಯಿತು ಎಂದುಕೊಂಡು ಹಬ್ಬದ ಹಿಂದಿನ ದಿನ ಹೂವಯ್ಯ ರಾಮಯ್ಯ ವಾಸು ಪುಟ್ಟಣ್ಣ, ಬೇಲರ ಬೈರ ಸಿದ್ಧ ಇವರೆಲ್ಲ ಒಟ್ಟುಗೂಡಿ ಕಾಡಿಗೆ ಹೊರಟರು. ಸತ್ಯ ಹೇಳುವುದಾದರೆ ಎಲ್ಲ ಒಟ್ಟುಗೂಡಿ ಹೊರಡಲಿಲ್ಲ; ಹೊರಟ ಮೇಲೆ ಕಾನು ಬೈಲಿನಲ್ಲಿ ಎಲ್ಲರೂ ಒಟ್ಟಾದರು. ರಾಮಯ್ಯ ವಾಸು ಬೇಲರ ಸಿದ್ಧ ಇವರು ಚಂದ್ರಯ್ಯಗೌಡರ ಅಪ್ಪಣೆ ಪಡೆದು, ನಾಯಿ, ಕೋವಿ, ಹಾರೆ, ಸಮೆಗೋಲು, ಬೆಂಕಿಪೊಟ್ಟಣ ಮೊದಲಾದ ಸಲಕರಣೆಗಳನ್ನೆಲ್ಲ ತೆಗೆದುಕೊಂಡು ಕಾಯುತ್ತಿದ್ದ ಹೂವಯ್ಯನ ದಳವನ್ನು ಕೂಡಿಕೊಂಡು ಮುಂಬರಿದರು..................ಬೇಟೆಗಾರರ ಗುಂಪು ಕೆಲವು ಸಾರಿ ವಿನೋದದ ಮಾತನ್ನಾಡುತ್ತ, ಕೆಲವು ಸಾರಿ ಮಾತಿಲ್ಲದೆ ಆಲಿಸಿ

ನೋಡುತ್ತ, ಒಮ್ಮೆ ಪಿಸುಮಾತಿನಲ್ಲಿ ಮಂತ್ರಾಲೋಚನೆ ಮಾಡುತ್ತ, ಒಮ್ಮೆ ಸುತ್ತಲೂ ನೆಲವನ್ನು ಮೂಸುತ್ತ, ತೂಳ ತೂಳಲಿ ಬರುತ್ತಿದ್ದ ನಾಯಿಗಳಿಗೆ ಪಿಸುದನಿಯಲ್ಲಿ ಛೂ ಛೂ ಎನ್ನುತ್ತ, ಕೈ ಚಿಟಿಕೆ ಹೊಡೆದು ಸನ್ನೆ ಮಾಡುತ್ತ, ಒಂದೊಂದು ಸಲ ಅಲ್ಲಲ್ಲಿ ನೂಲೆ ಬಳ್ಳಿಗಳನ್ನು ಹುಡುಕುತ್ತ, ಬೆರಕೆ ಸೊಪ್ಪನ್ನು ಕೊಯ್ಯುತ್ತ, ಸರುವಿಗಿಳಿದು, ಅಬ್ಬರಿಯೇರಿ, ಸರಸ ಸಾಹಸದಿಂದ ಮುಂದುವರಿದರು."[7] ದೊಡ್ಡಣ್ಣ ಹೆಗ್ಗಡೆಯ ಜೊತೆ ಐತ ಹುಡುಗನಾಗಿದ್ದಾಗ ಆಡಿದ ಮರಸು ಬೇಟೆ, ದೊಡ್ಡಣ್ಣ ಹೆಗ್ಗಡೆಯ ಹುಲಿಬೇಟೆಗಳ ವಿವರಗಳು, ಅಂದಿನ ಜನರ ಬೇಟೆಯ ಬದುಕಿನ ದೃಷ್ಟಿಯಿಂದ ಮುಖ್ಯವಾಗುತ್ತವೆ. ಪುಟ್ಟಣ್ಣನ ಕಾಡುಹಂದಿಯ ಬೇಟೆಯಾಗಲಿ, ಸೋಮನ ಇರುವೆ ಬೇಟೆಯಾಗಲಿ ಅಷ್ಟೆ ಮಹತ್ವ ಪಡೆಯುತ್ತವೆ. ಬಾಡುಗಳ್ಳನೆಂದೇ ಹೆಸರಾದ ಸೋಮನ ಇರುವೆ ಬೇಟೆ ನಡೆದದ್ದು ಹೀಗೆ-"ಮೊರದೊಡನೆ ಆಲದ ಮರವನ್ನೇರಿ ಚಗಳಿಯ ಗೂಡಿದ್ದ ಕೊಂಬೆಗೆ ಹೋಗಿ ಮೊರವನ್ನು ಗೂಡಿನ ಕೆಳಗಡೆ ಹಿಡಿದು, ಗೂಡು ಕಟ್ಟಿದ್ದ ಸಣ್ಣ ಕೊಂಬೆಯನ್ನು ಕಡಿಯತೊಡಗಿದನು. ಚಗಳಿರುವೆಗಳು ಬಳಬಳನೆ ಮೊರಕ್ಕೆ ಉದುರಿದುವು. ಅವುಗಳೊಡನೆ ಹರಿದ ಗೂಡಿನಿಂದ ಗೋಧಿಯ ಗಾತ್ರದ ಬಿಳಿಯ ಮೊಟ್ಟೆಗಳೂ ಬಿದ್ದುವು. ಇರುವೆಗಳು ಮೊರದಿಂದ ಹರಿದೋಡದಂತೆ ಸೋಮ ಮೊರವನ್ನು ಹಿಂದಕ್ಕೂ ಮುಂದಕ್ಕೂ, ಎಡಕ್ಕೂ ಬಲಕ್ಕೂ ಅಲುಗಾಡಿಸುತ್ತಿದ್ದನು. ಮೊರದಲ್ಲಿದ್ದ ಉಪ್ಪು ಬರಬರನೆ ಸದ್ದಾಗುತ್ತಿತ್ತು. ಚಗಳಿರುವೆಗಳು ಉಪ್ಪಿನ ದೆಸೆಯಿಂದ ಹುಳಿಯನ್ನು ಕಾರಿಕೊಂಡು ನಿಶ್ಚಲವಾಗತೊಡಗಿದವು."[8] ಸೋಮ ಇರುವೆ ಬೇಟೆಗೂ, ಬೇಲರ ಬೈರನ ಮೀನು ಏಡಿಬೇಟೆಗೂ ಮಲೆನಾಡಿನ ಜನರ ಬದುಕಿನಲ್ಲಿ ಸ್ಥಾನವಿದ್ದೇ ಇತ್ತು. ಪುಟ್ಟಣ್ಣನ ಕಣೆ ಹಂದಿಯ ರೋಮಾಂಚಕ ಬೇಟೆಯಂತೆ, ದೊಡ್ಡಣ್ಣ ಹೆಗ್ಗಡೆಯ ಹುಲಿಬೇಟೆಯೂ ಸಾಹಸದ್ದೇ ಆಗಿವೆ. ಪ್ರಾಣಿಗಳಲ್ಲಿ ಹುಲಿ ಹೊಡೆಯುವುದು ಶೌರ್ಯ-ಸಾಹಸದ ಕಾರ್ಯವೆನಿಸಿದ್ದರೆ, ಕಾಡು ಹಂದಿಯ ಬೇಟೆ ಜನಪ್ರಿಯವಾಗಿತ್ತು. ಮೀನು, ಏಡಿ, ಹಕ್ಕಿ ಬೇಟೆಗಳ ಹಲವಾರು ಸಂದರ್ಭ ಸಂಗತಿಗಳು ಕಾದಂಬರಿಗಳಲ್ಲಿವೆ.

ಕಾದಂಬರಿಗಳಲ್ಲಿ ಉಲ್ಲೇಖವಾಗಿರುವ ಹಲವು ಬೇಟೆಯ ಸಂದರ್ಭಗಳಿಂದ ಮಲೆನಾಡಿನಲ್ಲಿ ಅಂದು ಪ್ರಚಲಿತದಲ್ಲಿದ್ದ ಬೇಟೆಯ ವಿಧಾನಗಳು ತಿಳಿಯುತ್ತವೆ.

ಅವು;

ಅ) ಪ್ರಾಣಿಬೇಟೆ

1. ಕೂಡು ಬೇಟೆ ಅಥವಾ ದೊಡ್ಡಬೇಟೆ
2. ಸಾರಿಕೆ ಬೇಟೆ
3. ಮರಸು ಬೇಟೆ
4. ಕೋವಿ ಕಟ್ಟುವಿಕೆ
5. ಕರೆ ಬೇಟೆ

ಆ) ಹಕ್ಕಿ ಬೇಟೆ

1. ಸೆಬೆ ಬೇಟೆ

2. ಬಿಲ್ಲು ಬೇಟೆ
3. ಕೋವಿ ಬೇಟೆ

ಇ) ಮೀನು ಬೇಟೆ

1. ಹೊಂಡ ತೋಣಕು
2. ಕಡು ಬೇಟೆ
3. ಕೂಣೆ-ಹೆಗ್ಗೂಣೆ ಬೇಟೆ
4. ಗಾಳ-ಬಲೆ ಬೇಟೆ
5. ಸತ್ತು ಮೀನು ಬೇಟೆ

ಈ) ಇತರ ಬೇಟೆಗಳು-ಇತರ ವಿಧಾನಗಳು

ಬೇಟೆಯ ಪರಿಕರಗಳು, ಬೇಟೆಯ ಪರಸ್ಪರರ ನಿಯಮಾವಳಿಗಳು, ನಾಯಿಗಳು, ಬಲೆಗಳು, ಬೇಟೆ ನಂಬಿಕೆಗಳು, ಬೇಟೆಯ ದೇವರು, ಪ್ರಾಣಿಗಳನ್ನು ತುಂಡರಿಸುವ ವಿಧಾನ, ಪಾಲು ಮಾಡುವ ವಿಧಾನಗಳಿಂದ ಬೇಟೆಯು ಜನರ ಅನೇಕ ಆಚರಣೆ-ನಂಬಿಕೆಗಳಿಗೆ ಕಾರಣವಾಗಿದೆ. ಕಾಡಿನ ಸೌಲಭ್ಯ ರಹಿತ, ದುರ್ಗಮವಾದ ಪರಿಸರದಲ್ಲಿಯೂ ಆ ಜನರು ತಾವಾಗಿಯೇ ಕಂಡುಕೊಂಡ ಬೇಟೆಯ ಮಾರ್ಗೋಪಾಯಗಳು ಅವರ ಬುದ್ಧಿ ಪಂತಿಕೆಗೆ [illegible] ಧೈರ್ಯ ಮತ್ತು ಸಾಹಸಗಳ ಅಭಿವ್ಯಕ್ತಿಗೆ ಕೂಡ ಕಾರಣವಾಗಿವೆ.

ಆದರೂ ಬೇಟೆಯೊಂದನ್ನೇ ಪ್ರಧಾನ ವೃತ್ತಿಯಾಗಿ ಸ್ವೀಕರಿಸಿದ ಜನರು ಕಾದಂಬರಿಗಳಲ್ಲಿ ಕಾಣಿಸುವುದಿಲ್ಲ. ಅದೊಂದು ಮುಖ್ಯ ವೃತ್ತಿಯಾಗಿರದೆ ಎಲ್ಲರಲ್ಲಿಯೂ ಉಪವೃತ್ತಿಯಾಗಿ ಬರುತ್ತದೆ. ಬೇಟೆ ಮಾಡಿದ ಪ್ರಾಣಿ ಪಕ್ಷಿಗಳ ಮಾಂಸವನ್ನು ಮನೆಯಲ್ಲಿ ಪಾಲು ಮಾಡುತ್ತಿರಲಿಲ್ಲ. ಮನೆಯಲ್ಲಿ ಬೇಯಿಸಿ ಅಡುಗೆ ಮಾಡದೆ, ಮನೆಯ ಮಗ್ಗಲಲ್ಲಿ ಅಥವಾ ಹಿತ್ತಲಿನಲ್ಲಿ ಅದಕ್ಕಾಗಿ ಪ್ರತ್ಯೇಕವಾಗಿದ್ದ "ಹೊಲಸಿನ ಒಲೆ"ಯಲ್ಲಿ ಬೇಯಿಸುವ ಒಕ್ಕಲಿಗರನ್ನು ನೋಡಬಹುದು. ಉತ್ತಮರ ಎದುರಲ್ಲಿ ಶೂದ್ರರು ಮಾಂಸಾಹಾರಕ್ಕೆ 'ಪ' ಕಾರವೆಂದು, ಸಾಂಕೇತಿಕವಾಗಿ ಕರೆಯುತ್ತಾರೆ. ಇದಕ್ಕೆ ಚಾರಿತ್ರಿಕವಾದ ಕಾರಣಗಳಿವೆ. ಒಕ್ಕಲಿಗರ ಮೇಲೆ ಕಾಲ ಕಾಲಕ್ಕೆ ಉಂಟಾದ ಜೈನ, ವೀರಶೈವ ಸಂಪರ್ಕ ಪ್ರಭಾವಗಳಿಂದಾಗಿ ಈ ಸಂಕೀರ್ಣ ಸ್ಥಿತಿ ಕಾಣಿಸಿದೆ. ಒಟ್ಟಿನಲ್ಲಿ ಬೇಟೆಯ ಸಾಂಪ್ರದಾಯಿಕ ಅಸ್ತಿತ್ವವನ್ನು ಮಲೆನಾಡಿಗರು ಉಳಿಸಿಕೊಂಡಿದ್ದಾರೆ. ಆದರಿಂದಲೇ ಹೊಟ್ಟೆ ಹೊರೆದುಕೊಳ್ಳುವ ಸ್ಥಿತಿಯಲ್ಲಿ ಯಾರೂ ಇಲ್ಲ. ಒಕ್ಕಲುತನದಲ್ಲಿ ತೊಡಗಿ ತಲೆಮಾರುಗಳು ಉರುಳಿದ್ದರೂ, ಆಗಾಗ್ಗೆ ಕೋವಿ ಬಲೆ ನಾಯಿ ಹಿಡಿದುಕೊಂಡು ಈ ಜನರು ಬೇಟೆಗೆ ಹೋಗುವುದೂ ಸಹಜವಾಗಿತ್ತು.

ಪ್ರಾಣಿ ಸಾಕಾಣಿಕೆಯು ಇಲ್ಲಿಯ ಮತ್ತೊಂದು ಲಕ್ಷಣ. ಕೃಷಿ ಮತ್ತು ಬೇಟೆಗಳೊಂದಿಗೆ ಇದು ಆಂತರಿಕವಾಗಿ ಸಂಬಂಧ ಪಡೆದಿದೆ. ಪ್ರತಿಷ್ಠಿತ ಹೆಗ್ಗಡೆಗಳ 'ಮನೆ' ಎಂಬುದು ಕುಟುಂಬದ ಸದಸ್ಯರು ವಾಸಿಸುವ ಸ್ಥಳ ಮಾತ್ರವಲ್ಲ; ಅಕ್ಕಪಕ್ಕದಲ್ಲಿ ದನಕರುಗಳ 'ಕೊಟ್ಟಿಗೆ' ಮತ್ತು ಕೋಳಿ, ಹಂದಿಗಳ 'ಒಡ್ಡಿ'ಗಳು ನಾಯಿ ಬೆಕ್ಕುಗಳ ಒತ್ತಲು ಜಾಗಗಳೂ ಸೇರಿರುತ್ತಿದ್ದವು. ನಾಯಿ, ಬೆಕ್ಕು, ಹುಂಜ, ಕೋಳಿ, ಹಂದಿ, ಹೋತ, ಆಡು,

ಕುರಿ, ಎತ್ತು , ಆಕಳುಗಳು ಅನೇಕ ಸಲ ಮನೆಯ ಜನರೊಂದಿಗೆ ಕೂಡಿಯೇ ಇರುವ ಹಾಗೆ ತೋರುತ್ತಿತ್ತು. ಹಳೆಮನೆ ಹೆಗ್ಗಡೆಗಳ ಒಂದು ಮನೆಯ ಸ್ಥಿತಿ ಹಾಗಿದೆ;

''ಸುಬ್ಬಣ್ಣ ಹೆಗ್ಗಡೆಯವರ ಮನೆಯ ಮುಂದೆಯೇ ಹಂದಿಗಳಿಗೆ ಒಡ್ಡಿಗಳನ್ನು ಮಾಡಿದ್ದರಿಂದ ಎಲ್ಲಿ ನೋಡಿದರೂ ಗಲೀಜಾಗಿ ಗಬ್ಬು ವಾಸನೆ ಸದಾ ಹಬ್ಬಿರುತ್ತಿತ್ತು.................. ಸುಬ್ಬಣ್ಣ ಹೆಗ್ಗಡೆಯವರಿಗೆ ಮಾತ್ರ ಸ್ವಲ್ಪವೂ ಅಸಹ್ಯವಾಗುತ್ತಿರಲಿಲ್ಲ. ಅವರಿಗೆ ಕೋಳಿ ಒಡ್ಡಿ, ಕುರಿ ಒಡ್ಡಿ, ಹಂದಿ ಒಡ್ಡಿಗಳೆಂದರೆ ಗದ್ದೆ ತೋಟಗಳಷ್ಟೆ ಮುಖ್ಯವಾಗಿದ್ದವು; ಅಮೂಲ್ಯವಾಗಿದ್ದವು. ಸಹಸ್ರಾರು ರೂಪಾಯಿಗಳಿಗೆ ಸ್ವಾಮಿಯಾಗಿದ್ದರೂ ಕಂಬಳಿ ಹೊದೆದುಕೊಂಡು, ಕೊಳಕಲು ಪಂಚೆಯೊಂದನ್ನು ಮೊಳಕಾಲಿನವರೆಗೆ ಸುತ್ತಿಕೊಂಡು, ಕುಟುಂಬದ ಯೋಗಕ್ಷೇಮವನ್ನು ವಿಚಾರಿಸು ವುದಕ್ಕಿಂತಲೂ ಸಾವಿರಪಾಲು ಹೆಚ್ಚಿನ ಮಮತೆಯಿಂದಲೂ ಕುತುಹಲದಿಂದಲು ಆ ಪ್ರಾಣಿಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾ ಸೇವೆ ಮಾಡುತ್ತಿದ್ದರು. ಅವುಗಳಿಗಿರುವ ಒಡ್ಡಿಗಳು ಕಣ್ಣಿನಿಂದ ಮರೆಯಾಗಿದ್ದರೆ ಮನಸ್ಸಿನಿಂದಲೂ ಎಲ್ಲಿಯಾದರೂ ಮರೆಯಾಗಿ ಬಿಟ್ಟಾವು ಎಂಬ ಅಳುಕಿನಿಂದಲೇ ಜಗಲಿಯ ಎದುರುಗಡೆ ನೇರವಾಗಿ ಕಾಣುವಂತೆ ಒಡ್ಡಿಗಳನ್ನೆಲ್ಲಾ ಕಟ್ಟಿಸಿದ್ದರು.''[9] ಹಳೆಪೈಕದ ಸೇಸನಾಯ್ಕನ ಮನೆಯನ್ನು ಸುತ್ತಿ ಓತ್ತಲಿಗೆ ಹೊರಟಿದ್ದ ಗುತ್ತಿಯು ಅಲ್ಲಿಯ ಕುರಿ, ಕೋಳಿ ಹಂದಿಯ ಒಡ್ಡಿಗಳನ್ನು ದಾಟಿ ಬರುತ್ತಾನೆ. ಒಡ್ಡಿಗಳಲ್ಲಿಯ ಸಾಕುವ ಪ್ರಾಣಿಗಳು ಆ ಜನರ ಹಬ್ಬ-ಹುಣ್ಣಿಮೆಗಳಲ್ಲಿ, ನೆಂಟರು ಬಂದಾಗ'ಬಾಡಿನೂಟ'ಕ್ಕೆ ಒದಗುತ್ತಿದ್ದವು. ಕೆಲವು ಸಲ ಬರಿ ಹರಕೆಗಳಿಗಾಗಿ ಬಲಿಯಾಗುತ್ತಿದ್ದರೆ, ವಿರಳವಾಗಿ ವಸ್ತುವಿಗೆ ಪ್ರತಿಯಾಗಿ ವಿನಿಮಯ ವ್ಯವಹಾರದಲ್ಲಿ ಚಲಾವಣೆಗೂ ಬರುತ್ತಿದ್ದವು.

ಸುಬ್ಬಣ್ಣ ಹೆಗ್ಗಡೆಯವರ ಬಾಲ್ಯ ಮತ್ತು ಯೌವ್ವನದಲ್ಲಿ ಕೋಳಿ, ಕುರಿ, ಆಡು, ಹಂದಿ, ಮೊಲಗಳನ್ನು ಒಡ್ಡಿಗಳಲ್ಲಿ ಸಾಕುವುದು ಸ್ಥಿತಿವಂತಿಕೆಯ ಲಕ್ಷಣ ಎನಿಸಿತ್ತು. ಕಥಾನಕದ ಆಧಾರದಿಂದ ಈ ಕಾಲ ಹತ್ತೊಂಬತ್ತನೆಯ ಶತಮಾನದ ಮೊದಲರ್ಧದ ಕಾಲವಾಗುತ್ತದೆ. ಮುಂದಿನ 40-50 ವರ್ಷಗಳಲ್ಲಿ ದುರ್ಗಮ ಕಾಡು ಹಲವು ಕಾಲುದಾರಿಗಳನ್ನು ಕಂಡಿದೆ' ಬದಲಾವಣೆಯ ಗಾಳಿ ಅಲ್ಲಿ ನಿಧಾನ ಬೀಸಿದೆ. ಹಾಗಾಗಿ ಕ್ರಮೇಣ ಈ 'ಒಡ್ಡಿ'ಗಳು ಪ್ರತಿಷ್ಠೆಗೆ ಕುಂದು ಎನ್ನಿಸಿದವು. ಇದಕ್ಕೆ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರ ಅಣ್ಣನ ಮಗ ಶಂಕರ ಹೆಗ್ಗಡೆ ನಿದರ್ಶನವಾಗಿದ್ದಾನೆ. ಅವನಿಗೆ ಈ ಒಡ್ಡಿಗಳು, ಅದರಲ್ಲಿಯ ಪ್ರಾಣಿಗಳು ಎಂದರೆ ಎಲ್ಲಿಲ್ಲದ ತಿರಸ್ಕಾರ. ಬಹುಸಂಖ್ಯೆ ಜನರು ಮಾತ್ರ ಕೊಟ್ಟಿಗೆ, ಒಡ್ಡಿಗಳ ಜೊತೆಗೆ ಬದುಕಿರುವುದು ಕಾಣಿಸುತ್ತದೆ.

ಹಳೆಪೈಕದವರು ಮಲೆನಾಡಿನಲ್ಲಿ ಬಗನಿಕಾರ್ಯವನ್ನು ಪರಂಪರಾಗತವಾಗಿ ಮಾಡಿಕೊಂಡು ಬಂದಿದ್ದಾರೆ. ಅದೊಂದು ಜಾತಿಯ ಹಕ್ಕು ಎಂಬ ಭಾವನೆಯಿಂದ ಅವರು ಕಾರ್ಯ ಮಾಡಿದ್ದಾರೆ. ಕಾನೂರು ಚಂದ್ರಯ್ಯಗೌಡರ ಹತ್ತಿರ ತಿಮ್ಮನೆಂಬ ಹಳೆಪೈಕದವನಿದ್ದನು. ಆತನ ಬಗೆಗೆ ಬಂದಿರುವ ವಿವರವಿದು. ''ಪಕ್ಕದ ಕಾಡುಗಳಲ್ಲಿ 'ಬಗನಿ ಕಟ್ಟಿ,' ಕಳ್ಳು ಇಳಿಸುವುದು ತಿಮ್ಮನ ಕುಲ ಕಸಬಾಗಿತ್ತು. ಅವನು ಅದನ್ನು ಹೊರಗಡೆ ಮಾರಾಟ ಮಾಡುತ್ತಿರಲಿಲ್ಲ ಎಂದಾದರೂ ಒಂದೊಂದು ಸಾರಿ ಕಳ್ಳು ಹೆಚ್ಚಾಗಿ ಉಳಿದರೆ

ಕಳ್ಳಂಗಡಿಗೆ ಕದ್ದು ಮಾರುತ್ತಿದ್ದನು. ಸಾಧಾರಣವಾಗಿ ಅವನು ಇಳಿಸುತ್ತಿದ್ದ ಕಳ್ಳೆಲ್ಲ ಕಾನೂರಿನವರಿಗೇ ಸಾಲುತ್ತಿರಲಿಲ್ಲ. ಅದರಲ್ಲಿಯೂ ಚಂದ್ರಯ್ಯಗೌಡರಿಗೆ ಪ್ರತಿದಿನವೂ 'ಕಾನುಬೈಲಿ'ನಲ್ಲಿ ಕಳ್ಳು ಕಾಯಿಸಿಕೊಡುವುದು ಮಾಮೂಲಾಗಿತ್ತು..................... ತಿಮ್ಮನಂತೆ ಯಾರಿಗೂ ಬಗನಿ ಕಟ್ಟಿ ಕಳ್ಳು ಇಳಿಸಲು ತಿಳಿದಿರಲಿಲ್ಲ. ಅದು ಅವನ ಜಾತಿಯ ಗುಟ್ಟಾಗಿತ್ತು. ಬೇಲರು, ಕುಂಬಾರರು, ಮರಾಟಿಗರು, ಸೆಟ್ಟರು, ಒಕ್ಕಲಿಗರು ಇವರು ಯಾರಿಗೂ ಜಾತಿಪದ್ಧತಿಯಂತೆ ಬಗನಿ ಕಟ್ಟುವ ಹಕ್ಕಿಲ್ಲ. ಆ ಹಕ್ಕು ಹಳೆಪೈಕರದು. ಆದ್ದರಿಂದಲೆ ಕಾನೂರಿನಲ್ಲಿ ಹಳೆಪೈಕದ ತಿಮ್ಮನೊಬ್ಬನೇ ಬಗನಿ ಮರಗಳ ಆಡಳಿತಕ್ಕೆ ಸರ್ವಾಧಿಕಾರಿಯಾಗಿದ್ದನು. ಬೇರೆ ಯಾರಾದರೂ ಆ ಕೆಲಸಕ್ಕೆ ಕೈಹಾಕಿದ್ದರೆ ಕೂಡಲೆ ಜಾತಿ ಬಾಹಿರವಾಗಿ ಬಹಿಷ್ಕೃತರಾಗುತ್ತಿದ್ದರು."[10] ಬೇಲರ ಬೈರ ರಹಸ್ಯವಾಗಿ ಬಗನಿ ತೆಗೆಯುವ ವಿಚಾರದಲ್ಲಿ ನಡೆದ ಘಟನಾವಳಿಗಳನ್ನು ಈ ಹಿನ್ನಲೆಯಲ್ಲಿ ನೋಡಬೇಕು. ಬಗನಿ ತೆಗೆಯುವ ಉದ್ಯೋಗವನ್ನು ಪ್ರಧಾನವಾಗಿ, ಒಕ್ಕಲಾಳುಗಳಾಗಿ ಕೃಷಿಕೂಲಿಗಳನ್ನು ಉಪವೃತ್ತಿಯಾಗಿ ಹಳೆಪೈಕದವರು ಸ್ವೀಕರಿಸಿದ್ದರು. ಕೆಲವರು ನೆಲದ ಒಡೆಯರಾಗುವ ಪ್ರಯತ್ನ ನಡೆಸಿದ್ದರು. ಇಂಥ ಪ್ರಯತ್ನಗಳಿಗೆ ಜಾತಿಯ ಒಳ-ಹೊರಗೆ ವಿರೋಧವಿತ್ತು.

ಕಾದಂಬರಿಗಳಲ್ಲಿ ಬರುವ ಪುರೋಹಿತ ವೃತ್ತಿಯ ಜನರು ಕೈಬೆರಳ ಮೇಲೆ ಎಣಿಕೆ ಮಾಡುವಷ್ಟು ಇದ್ದಾರೆ. ಆದರೆ ಅವರು ಸಾಮಾಜಿಕ, ಆರ್ಥಿಕ, ನ್ಯಾಯಿಕ ವ್ಯವಸ್ಥೆಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ. ದೇವರ ಪೂಜೆ, ಆರಾಧನೆ ಮೊದಲಾದ ಧಾರ್ಮಿಕ ಕೆಲಸ-ಕಾರ್ಯ ಮಾಡಿ ದಾನ-ದಕ್ಷಿಣ ಪಡೆಯುವಷ್ಟಕ್ಕೆ ಅವರು ಸೀಮಿತರಾಗಿಲ್ಲ. ನೆಲದ ಬದುಕಿಗೆ ಬೆನ್ನುತಿರುವಿ ಬದುಕಿರುವ ವೆಂಕಪ್ಪಯ್ಯ ಜೋಯಿಸರಂತಹ ಪುರೋಹಿತರು ಶೂದ್ರಾದಿಗಳನ್ನು ನಾನಾ ತೆರನಾಗಿ ಶೋಷಿಸುತ್ತ ಬದುಕಿದ್ದಾರೆ. ವಿದ್ಯಾಭ್ಯಾಸ ಕೊಡಿಸಿದರೆ ಮಕ್ಕಳು ಕೆಟ್ಟು ಹೋಗುತ್ತಾರೆ ಎಂದೇ ಅವರ ಅಭಿಮತವಾಗಿತ್ತು. ಅವರು ಚಂದ್ರಯ್ಯಗೌಡರಿಗೆ "ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿ ಬಿಡುತ್ತದೆ! ದೇವರು ದಿಂಡರು ಭಕ್ತಿ ಗಿಕ್ತಿ ಎಲ್ಲ ನಿರ್ನಾಮ".[11] ಎಂದೂ, ಹೂವಯ್ಯನಿಗೂ "ಹೂವಯ್ಯ, ನಿನಗೆ ಈ ಬುದ್ಧಿ ಒಳ್ಳೆಯದಲ್ಲ. ಹಿಂದಿನಿಂದ ನಡೆದು ಬಂದ ಆಚಾರ, ದೇವರು, ವೇದ, ಶಾಸ್ತ್ರಗಳನ್ನೆಲ್ಲ ಅಲ್ಲಗಳೆಯುವ ನಿನಗೆ ಕೇಡು ತಪ್ಪಿದ್ದಿಲ್ಲ"[12] ಎಂದೂ ಹೇಳುತ್ತಾರೆ. ಕುವೆಂಪು ಈ ಅಧ್ಯಾಯವನ್ನು 'ಹಳತು ಹೊಸತು ಸೇರಿದರೆ'ಎಂದು ಹೆಸರಿಸಿರುವುದೂ ಈ ಸಾಂಸ್ಕೃತಿಕ ಮುಖಾಮುಖಿಯನ್ನು ಅರ್ಥ ಪೂರ್ಣವಾಗಿಸುತ್ತದೆ. ಪುರೋಹಿತಶಾಹಿಯ ಅತಿರೇಕಗಳನ್ನು ಜನರು ಶತಮಾನಗಳ ಕಾಲ ಸುಮ್ಮನೆ ಒಪ್ಪಿಕೊಂಡು ಬಂದಿದ್ದಾರೆ. ಇದಕ್ಕೆ ಪ್ರತಿರೋಧ, ಆಘಾತ ಒದಗಿದ್ದು ಪಾಶ್ಚಾತ್ಯ ವಿಚಾರ ಧಾರೆಯ "ನವಪುರೋಹಿತರು" ಮಲೆನಾಡಿಗೆ ಕಾಲಿಟ್ಟಾಗ. ಕ್ರಿಶ್ಚಿಯನ್ ಪಾದ್ರಿ ಜೀವರತ್ನಯ್ಯ ಆಸ್ಪತ್ರೆ ಕಟ್ಟಿಸುವ, ಶಾಲೆ ಕಟ್ಟಿಸುವ ಮೂಲಕ ಮತ್ತು ಕೆಳವರ್ಗದವರಿಗೆ ಧರ್ಮದೀಕ್ಷೆ ನೀಡುವ ಮೂಲಕ ಅಸ್ಪೃಶ್ಯತೆಯನ್ನು, ಯಥಾ ಸ್ಥಿತಿಯನ್ನು ಕಲಕುತ್ತಾನೆ. ಇಲ್ಲಿಯೂ ಮತಪ್ರಚಾರ, ಇನ್ನೊಂದು ಮೂಢನಂಬಿಕೆಯ ಅಪಾಯ ಇರುವುದನ್ನು ಅಲ್ಲಗಳೆಯುವಂತಿಲ್ಲ.

ವೃತ್ತಿಗಳ ಜಾಡು ಹಿಡಿದು ಹೊರಟರೆ, ಕಾದಂಬರಿಗಳಲ್ಲಿಯ ಜನವರ್ಗದ

ಸಾಂಸ್ಕೃತಿಕ ಸ್ತರಗಳು ಹಲವಾರು ಪದರು-ಪದರುಗಳಾಗಿ ಬಿಚ್ಚಿಕೊಳ್ಳುತ್ತವೆ. ಕಥೆಯ ಕಾಲಮಾನ ದೃಷ್ಟಿಯಿಂದ'ಮಲೆಗಳಲ್ಲಿ ಮದುಮಗಳು' ಮೊದಲಲ್ಲಿ ಬರುತ್ತದೆ. 'ಕಾನೂರು ಹೆಗ್ಗಡತಿ'ಯ ಕಥೆಯ ಕಾಲ ಹೆಚ್ಚು ಆಧುನಿಕಕ್ಕೆ ಸಮೀಪಿಸುತ್ತದೆ. ಹಾಗಾಗಿ 'ಕಾನೂರು ಹೆಗ್ಗಡತಿ'ಯಲ್ಲಿ ರಾಷ್ಟ್ರೀಯತೆಯ, ನವೀನ ವಿಚಾರಗಳ, ಸಾಕ್ಷರತಯ ಗಾಳಿ ಪ್ರಬಲವಾಗುತ್ತದೆ. ಹೊಸ ಆದರ್ಶಗಳ, ಕನಸುಗಳ ಜನಾಂಗ ಸಿದ್ಧಗೊಳ್ಳುವ ಸಂಕೇತಗಳೂ ಕಾಣಿಸುತ್ತವೆ. ತಲೆಮಾರುಗಳಿಂದ ಬಂದ ಉದ್ಯೋಗಗಳಲ್ಲಿ, ನಂಬಿಕೆಗಳಲ್ಲಿ ಬದಲಾವಣೆ ಮೂಡುತ್ತಿದೆ. ಆದರೆ 'ಮಲೆಗಳಲ್ಲಿ ಮದುಮಗಳು' ದಲ್ಲಿ ಮಲೆನಾಡಿನ ಬದುಕಿನ ಸಂಕೀರ್ಣತೆಯಲ್ಲಿ ಜನರು ತತ್ಪರರಾಗಿ ಮುಳುಗಿದ್ದಾರೆ. ನೆಲದ ಬದುಕಿನ ಆಗು - ಹೋಗುಗಳೆಲ್ಲ ಮಣ್ಣಿನ ಬಣ್ಣ-ವಾಸನೆ ಪಡೆದಿವೆ. ಪ್ರತಿಯೊಬ್ಬರೂ ಬದುಕಿಗೆ ತೀವ್ರವಾಗಿ ಸ್ಪಂದಿಸಿದ್ದಾರೆ. ತಾನು ಒಲಿದ ಹೆಣ್ಣನ್ನು ಹಾರಿಸಿಕೊಂಡು ಬಂದು ವಿವಾಹವಾಗಲು ಅಪಾರ ಕಷ್ಟನಷ್ಟ ಅನುಭವಿಸುವ ನಾಯಿಗುತ್ತಿಯಾಗಲಿ, ತಾನೊಲಿದವನನ್ನು ಕೈಹಿಡಿಯಲು ಅಸಾಧಾರಣ ಧೈರ್ಯ, ಸಾಹಸ ತೋರುವ ಚಿನ್ನಕ್ಕಳಾಗಲಿ ತುಂಬ ಕ್ರಿಯಾಶೀಲರಾಗಿ, ಚೈತನ್ಯದ ವ್ಯಕ್ತಿಗಳಾಗಿ ಮಿಂಚಿದ್ದಾರೆ. ಕಾಡು, ಪ್ರಕೃತಿ, ನದಿ, ಪ್ರಾಣಿ, ಪಕ್ಷಿ, ಹೆಣ್ಣು, ಗಂಡುಗಳೆಲ್ಲ ಒಂದಕ್ಕೊಂದು ಪೂರಕವಾಗಿ, ಪ್ರತಿಯಾಗಿ ಸವಾಲೆಸೆಯುತ್ತ ಕೂಡುಬಾಳನ್ನು ಬಾಳಿರುವುದು ಗಮನಾರ್ಹ. ಸಹಜವಾದ ರಾಗ-ದ್ವೇಷಗಳ ನಡುವೆ 'ಮಲೆನಾಡ ಸಂಸ್ಕೃತಿ'ಯೊಂದನ್ನು ರೂಪಿಸಿದ್ದಾರೆ.

ಹಾಗಾಗಿ ಈ ಕಾದಂಬರಿಗಳ ಸಾಂಸ್ಕೃತಿಕ ಜಗತ್ತು ವಿವರಗಳಿಂದ ಸಮೃದ್ಧ, ಶ್ರೀಮಂತವಾಗಿದ್ದರೂ, ಕೇವಲ ಉದಾತ್ತತೆಯನ್ನು, ಶ್ರೇಷ್ಠತೆಯನ್ನು ಎತ್ತಿತೋರುವ ಮೌಲ್ಯಗಳಿಗೆ ಸೀಮಿತವಾದುದಲ್ಲ.

ಟಿಪ್ಪಣಿಗಳು

1. ಶಾಂತಿನಾಥ ದೇಸಾಯಿ: ಕನ್ನಡ ಸಾಹಿತ್ಯ ಪ್ರತಿಭೆಯ ಸ್ವರೂಪ-ಒಂದು ತೌಲನಿಕ ಚಿಂತನೆ:ಪು15 (ಸಂ:ಡಾ.ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ) ಪ್ರಸಾರಾಂಗ ಬೆಂಗಳೂರು ವಿ. ವಿ. ಬೆಂಗಳೂರು, 1989.
2. ದೇಜಗೌ: ಪ್ರಧಾನ ಸಂಪಾದಕರ ನುಡಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ:ಪು xi (ಲೇ:ಹಾ. ಗುರುಪಾದ ಮರಿಗುದ್ದಿ) ಸಹ್ಯಾದ್ರಿ ಪ್ರಕಾಶನ ಮೈಸೂರು.1989.
3. ಕುವೆಂಪು:ಅರಿಕೆ: ಕಾನೂರು ಹೆಗ್ಗಡತಿ ಪು।।।ಸ ಉದಯರವಿ ಪ್ರಕಾಶನ ಮೈಸೂರು 1970
4. ಕುವೆಂಪು: ಓದುಗರಿಗೆ: ಮಲೆಗಳಲ್ಲಿ ಮದುಮಗಳು:ಪು III, ಉದಯರವಿ ಪ್ರಕಾಶನ ಮೈಸೂರು 1967.
5. ಮಲೆಗಳಲ್ಲಿ ಮದುಮಗಳು:ಪು 9
6. ಕಾನೂರು ಹೆಗ್ಗಡತಿ: ಪು 400-401
7. ಕಾನೂರು ಹೆಗ್ಗಡತಿ - ಪು: 384-385
8. ಅದೇ- ಪು:307
9. ಮಲೆಗಳಲ್ಲಿ ಮದುಮಗಳು:ಪು 38-39.
10. ಕಾನೂರು ಹೆಗ್ಗಡತಿ - ಪು106-107
11. ಅದೇ - ಪು 74.
12. ಅದೇ- ಪು 115.

(1980 - 90) ದಶಕದ ಕಾದಂಬರಿಗಳು - ಒಂದು ಸಮೀಕ್ಷೆ

- ಎಸ್. ಎ. ಶ್ರೀನಿವಾಸರಾವ್

17 ನೇ ಶತಮಾನದ ಪೂರ್ವರ್ಧದಲ್ಲಿ ಸ್ಪೈನ್‌ನಿಂದ ಪ್ರಪಂಚದ ಪ್ರಥಮ ಕಾದಂಬರಿ ಸರ್ವಾಂಟೀಸ್ ಬರೆದ 'ಡಾನ್-ಕ್ವಿವೋತ್' ಹೊರಬಂದರೆ ಇದಾದ ಒಂದು ಶತಮಾನದ ನಂತರ ಇಂಗ್ಲೀಷ್ ಭಾಷೆಯ ಪ್ರಥಮ ಕಾದಂಬರಿ ಡೇನಿಯಾ ಡಿಫೊ ರಚಿಸಿದ ರಾಬಿನ್ ಸನ್ ಕ್ರೂಸೊ (1719) ಬೆಳಕು ಕಂಡಿತು. ಕನ್ನಡ ನಾಡಿನಲ್ಲಿ ಕಾದಂಬರಿ ಸಾಹಿತ್ಯ ಕಾಣಿಸಿಕೊಂಡುದು19ನೇ ಶತಮಾನದ ಪೂರ್ವಾರ್ಧದಲ್ಲಿ. ಅಂದು ಪ್ರಾರಂಭವಾದ ಕನ್ನಡ ಕಾದಂಬರಿ ಸಾಹಿತ್ಯ ಈ ದಿನಗಳಲ್ಲಿ ಸಾಕಷ್ಟು ಹುಲುಸಾಗಿ ಬೆಳೆದಿದೆ. ಬೆಳೆಯುತ್ತಿದೆ. ಈ ದಶಕದಲ್ಲಿ ಬಂದ ಕಾದಂಬರಿಗಳ ಸಮೀಕ್ಷೆ ನಡೆಸುವ ಮುನ್ನ ಅದು ನಡೆದುಬಂದ ದಾರಿಯನ್ನು ಗುರುತಿಸುವುದು ಒಳಿತು ಎನಿಸುತ್ತದೆ.

ಕಾದಂಬರಿ (ನಾವಲು) ಕ್ಷೇತ್ರದೊಳಗೆ ಕನಿಷ್ಠ ಅರ್ಹತೆಯೊಡನೆ ಪ್ರವೇಶಿಸಬಹುದಾದ 17 ನೇ ಶತಮಾನದ ಕೃತಿಗಳೆಂದರೆ ಕೃಷ್ಣರಾಜ ಒಡೆಯರ 'ಸೌಗಂಧಿಕಾ ಪರಿಣಯ' ಮತ್ತು ಕೆಂಪು ನಾರಾಯಣನ 'ಮುದ್ರಾ ಮಂಜೂಷ (1823)' ಇದಾದ ನಂತರ ಕನ್ನಡ ಸಾಹಿತ್ಯ ಪ್ರವೇಶಿಸಿದ್ದು ಅನುವಾದಿತ ಕಾದಂಬರಿಗಳು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಇಂಗ್ಲೀಷ್ ಕಾದಂಬರಿಗಳ ಅನುವಾದ. 'ಯಾತ್ರಿಕನ ಸಂಚಾರ' ಮತ್ತು 'ರಾಬಿನ್ ಸನ್ ಕ್ರೂಸೊ', ಮರಾಠಿಯ 'ಯಮುನಾ ಪರ್ಯಟಣ' - ಬಂಗಾಳಿಯಿಂದ ಬಿ. ವೆಂಕಟಾಚಾರ್ಯರು ಅನುವಾದಿಸಿದ ಬಂಕಿಮ ಚಂದ್ರರ 'ದುರ್ಗೇಶ ನಂದಿನಿ' (1885).

19 ನೇ ಶತಮಾನದ ಉತ್ತರಾರ್ಧದಲ್ಲೆ ಸ್ವತಂತ್ರ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ಪ್ರಾರಂಭವಾದುವು. 1892 ರ ಸುಮಾರಿನಲ್ಲಿ ಬಂದ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತ', ಎಂ. ವೆಂಕಟಕೃಷ್ಣಯ್ಯನವರ 'ಚೋರ ಗ್ರಹಣ ತಂತ್ರ' (1899), ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' (1899) ಹೆಸರಿಸಬಹುದು. ಇವು ಕನ್ನಡಿಗರಲ್ಲಿ ಓದುವ ಪ್ರಚೋದನೆ ನೀಡುವಲ್ಲಿ ಸಹಕಾರಿಯಾಗಿದ್ದುವು.

20 ನೇ ಶತಮಾನದ ಪೂರ್ವಾರ್ಧದಲ್ಲಿ ಹೊರಬಿದ್ದ ಪ್ರಮುಖ ಕಾದಂಬರಿಗಳೆಂದರೆ ಬೋಳಾರ ಬಾಬುರಾಯರ ವಾಗ್ದೇವಿ (1905), ಎಂ. ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ(1915), ಕೆರೂರು ವಾಸುದೇವಾ ಚಾರ್ಯರ 'ಇಂದಿರಾ' (1908), ಯದು ಮಹಾರಾಜ (1913-14), ಯವನ ಸೈರಂಧ್ರೀ (1914), ಭ್ರಾತೃಘಾತಕನಾದ ಔರಂಗ ಜೇಬ (1913-14), ಗಳಗನಾಥರ ಪ್ರಬುದ್ಧ ಪದ್ಮನಯನೆ, ಕುಮುದಿನಿ, ಮಾಧವ ಕರುಣಾ ವಿಲಾಸ, ನಂಜನಗೂಡು ತಿರುಮಲಾಂಬಾರವರ 'ಸುಶೀಲೆ' ಮುಂತಾದವುಗಳು. ಬಹಳಷ್ಟು ಮೇಲಿನ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಕಥಾವಸ್ತು ಇರುವುದಲ್ಲದೆ ಭಾಷೆ ಸಂಸ್ಕೃತಭೂಯಿಷ್ಠವಾಗಿದ್ದು ವಿವರಣೆಗಳಿಂದ ತುಂಬಿದೆ. ಆದರೂ ಕುತೂಹಲಕಾರಿ ನಿರೂಪಣೆಯಿಂದಾಗಿ ಇವು ಸಾಕಷ್ಟು ಜನಪ್ರಿಯವಾಗಿದ್ದುವು.

ಮುಂದಿನ ಒಂದು ದಶಕದಲ್ಲಿ ಹೆಸರಿಸಬಹುದಾದ ಕಾದಂಬರಿಗಳು ಕಾಣಸಿಗುವುದಿಲ್ಲ.

ಮುಂದಿನ ಒಂದು ದಶಕದಲ್ಲಿ ಅಂದರೆ, 1920 ರಿಂದ 1930 ರೊಳಗೆ ಹೊರಬಂದ ಪ್ರಮುಖ ಕಾದಂಬರಿಗಳೆಂದರೆ ಕಾರಂತರ ವಿಚಿತ್ರ ಕೂಟ (1923), ಭೂತ (1924), ಸೂಳೆಯ ಸಂಸಾರ(1925), ದೇವದೂತರು(1928); ಮಾಸ್ತಿ ವೆಂಕಟೇಶ ಅಯಂಗಾರ್‌ರವರ 'ಸುಬ್ಬಣ್ಣ'(1928); ದೇವುಡುರವರ 'ಮಯೂರ' (1928).

ಮುಂದಿನ ದಶಕದ ಪ್ರಮುಖ ಕಾದಂಬರಿಗಳು: ಗೋಕಾಕರ 'ಇಜ್ಜೋಡು' (1931), ಕಾರಂತಕನ್ಯಾಬಲಿ (1932), ಚೋಮನ ದುಡಿ (1933), ಆನಂದಕಂದರ ಸುದರ್ಶನ (1933), ಅ.ನ.ಕೃ ರವರ ಜೀವನ ಯಾತ್ರೆ (1934), ಉದಯರಾಗ (1934), ಸಂಧ್ಯಾರಾಗ (1937), ನಟಸಾರ್ವಭೌಮ(1938), ಶ್ರೀರಂಗರ ಹೊರಗಿನವನು (1934), ವಿಶ್ವಾಮಿತ್ರ ದೃಷ್ಟಿ (1935), ಕುವೆಂಪುರವ ಕಾನೂರ ಸುಬ್ಬಮ್ಮ ಹೆಗ್ಗಡಿತಿ (1936).

1920ರಿಂದ 1945 ರೊಳಗೆ ಒಟ್ಟು 80 ಕಾದಂಬರಿಗಳು ಬೆಳಕು ಕಂಡವೆಂದು ಡಾ|| ರಂ. ಶ್ರೀ ಮುಗಳಿಯವರು ಕನ್ನಡ ಕಾದಂಬರಿಗಳು ಲೇಖನದಲ್ಲಿ ಹೇಳಿದ್ದಾರೆ. ಆ ದಿನಗಳಲ್ಲಿ ಕಾದಂಬರಿಗಳು ಬಹು ಮಿತ ಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದೆಂದು ಈ ಸಮೀಕ್ಷೆ ತಿಳಿಸುತ್ತದೆ.

1940-50ರಲ್ಲಿ ಹೊರಬಂದ ಹೆಸರಿಸಬಹುದಾದ ಕಾದಂಬರಿಗಳೆಂದರೆ ಕಾರಂತರ 'ಮರಳಿ ಮಣ್ಣಿಗೆ' (1941), ಬೆಟ್ಟದ ಜೀವ (1943), ಹೆತ್ತಳಾ ತಾಯಿ (1945), ಮುಗಿದ ಯುದ್ಧ (1945), ಔದಾರ್ಯದ ಉರುಳಲ್ಲಿ (1947), ಸನ್ಯಾಸಿಯ ಬದುಕು (1947), ಗೊರೂರರ ಹೇಮಾವತಿ(1946),ಮೆರವಣಿಗೆ (47), ಬಸವರಾಜ ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆ (47), ತ. ರಾ. ಸು ರವರ ರಕ್ತತರ್ಪಣ(47), ಎಂ. ವಿ. ಸೀತಾರಾಮಯ್ಯನವರ ಮಾದನ ಮಗಳು(48), ಮಿರ್ಜಿ ಅಣ್ಣಾರಾಯರ ನಿಸರ್ಗ(45), ಅ. ನ. ಕೃ ರವರ ಶನಿ ಸಂತಾನ, ನಗ್ನ ಸತ್ಯ (48) ಮುಂತಾದವು.

ಇಲ್ಲಿಯವರೆಗಿನ ಕಾದಂಬರಿ ಸಾಹಿತ್ಯದ ಹೆಜ್ಜೆಗಳನ್ನು ಗುರುತಿಸಿದರೆ ಸೂಕ್ಷ್ಮವಾಗಿ ನಡೆದು ಬಂದ ದಾರಿ ಹೀಗೆ ಕಾಣಿಸುತ್ತದೆ.

ಅನುವಾದ	-	ಸಾಂಪ್ರದಾಯಿಕ ಕಥೆಗಳು
(1870 -1900)		(1900 - 1920)
ಪ್ರಗತಿಶೀಲ	-	ನವೋದಯ
(1930 -40)		(1940ರ ನಂತರ)

ಎರವಲು ಸಾಹಿತ್ಯ ತಿಂದು, ಅರಗಿಸಿಕೊಂಡ ಜೀವನ ದ್ರವ್ಯ ಸೈದ್ಧಾಂತಿಕ ಅಲೆಗಳೊಡನೆ ತಿಕ್ಕಾಡಿ, ಸಾಮಾಜಿಕ ಸಂಘರ್ಷದ ಬಿಸಿಯುಂಡು, ಕ್ರಾಂತಿಯ ಕಹಳೆ ಊದಿ ಮಾನವೀಯತೆಯ ಶ್ವೇತ ಪತಾಕೆ ಹಾರಿಸಿತು. ಇದು ಸೃಜನಾತ್ಮಕ ಕಾದಂಬರಿ ಸಾಹಿತ್ಯದ ಪ್ರಥಮ ಹಂತ; ಅನಂತರ ಬಂದದ್ದು ಪ್ರಗತಿಶೀಲ ಸಾಹಿತ್ಯ. ಈ ಪಥಾನ್ವೇಷಕರಲ್ಲಿ ನಾವು

ಕಾಣುವ ಮುಖ್ಯ ಅಂಶಗಳೆಂದರೆ ಬಡವರ, ಶ್ರಮಿಕರ ಬಗೆಗೆ ಸಹಾನುಭೂತಿ, ಶೋಷಣೆಗೆ ವಿರೋಧ, ಸಾಮಾಜಿಕ ವೈಷಮ್ಯಗಳ ಬಗೆಗೆ ಅಸಮಾಧಾನ, ರಾಜಕೀಯ ಆಂದೋಲನದತ್ತ ಸೆಳೆತ, ಮಾರ್ಕ್ಸ್ ಲೆನಿನ್ ಸಿದ್ಧಾಂತಗಳತ್ತ ಒಲುವು.

ಪ್ರಗತಿಶೀಲರ ನವಚೈತನ್ಯ ಹೊಸ ಲವಲವಿಕೆ ಭಿನ್ನ ನಡಿಗೆ, ಸತ್ವಪೂರ್ಣ ಚಿಂತನೆಯನ್ನು ನವೋದಯ ಕಾಲದ ಕಾದಂಬರಿಗಳಲ್ಲಿ ಗುರುತಿಸಬಹುದು.

ಸಾಹಿತ್ಯ ಹರಿವ ನೀರಿದ್ದಂತೆ. ಅದಕ್ಕೆ ಸೇರುವ ಉಪನದಿಗಳೆಷ್ಟೋ. ಒಂದೊಂದೂ ಹರಿವ ನೆಲದ ಬಣ್ಣ ಸತ್ವವನ್ನು ಹೊತ್ತೇ ತಂದಿರುತ್ತವೆ. ನದಿಯ ವೇಗವೂ ಪಾತ್ರ ಕ್ಷೇತ್ರದ ಸ್ಥಿತಿಯನ್ನೆ ಅವಲಂಬಿಸಿರುತ್ತದೆ. ಈ ಉಪನದಿಗಳನ್ನು ತಡೆಯುವ ಶಕ್ತಿಯಾಗಲಿ, ನಿಯಂತ್ರಿಸುವ ಚೈತನ್ಯವಾಗಲಿ ಮಹಾನದಿಗೂ ಇರದು. ಅದು ಎಲ್ಲವನ್ನೂ ಅರಗಿಸಿಕೊಂ[illegible] ತನ್ನ ಶಕ್ತಿಯನ್ನೇ ವೃದ್ಧಿಸಿಕೊಂಡು 'ತನ್ನದೇ ಜಾಡನ್ನು' ಹಿಡಿಯುತ್ತದೆ.

ಸಾಹಿ[illegible] ಕ್ಷೇತ್ರಕ್ಕೂ ಈ ಸಾದೃಶ್ಯ ಒಪ್ಪುತ್ತದೆ. ಪ್ರತ್ಯೇಕತೆಯನ್ನು ಪ್ರಾರಂಭ[illegible]ಲ್ಲಿ ಗುರುತಿಸಲು ಶಕ್ಯವಾದರೂ ಮುಖ್ಯ ವಾಹಿನಿಯಲ್ಲಿ ಸೇರಿಕೊಂಡಾಗ ಇವನ್ನು [illegible]ಕ್ಕಿ ತೆಗೆಯುವುದು ದುಸ್ಸಾಧ್ಯ. ಆದರೆ, ಪ್ರತ್ಯೇಕ ಗುಣಗಳು ಇರುವುದನ್ನು ಶಂಕಿಸಲಾಗುವುದಿಲ್ಲ.

ಮುಂದೆ ಕಾಣುವ ಹೆಜ್ಜೆ ದಾರಿ ನಿರ್ಮಿತಗೊಂಡಿರುವುದೇ ಹಿಂದಿನವರು ಇಟ್ಟ [illegible] ಸತ್ವ ಸರ್ವಕಾಲೀನ[illegible]ದುದು. ಆದುದರಿಂ[illegible]ಲೇ ಯಾವು[illegible] [illegible]ಥ ಪಂಥ ಸರ್ವ[illegible]ವೂ ಪ್ರತ್ಯೇಕತೆಯನ್ನು ಉಳಿಸಿಕೊಂಡಿರುವುದು ದುಸ್ಸಾಧ್ಯ.

ನವೋದಯ ಕಾಲದಲ್ಲಿ ಪ್ರಗತಿಶೀಲರನ್ನು ಕಾಣುತ್ತೇವೆ. ಸಾಂಪ್ರದಾಯಿಕ ಕಥಾ ರಚಕರನ್ನು ನೋಡುತ್ತೇವೆ. ಅನುವಾದಕ ಸಹೃದಯರಂತೂ ಎಲ್ಲಾ ಕಾಲಗಲ್ಲೂ ಇದ್ದೇ ಇರುತ್ತಾರೆ.

ಈ ಬಗ್ಗೆ ಶ್ರೀ ಗಿರಡ್ಡಿ ಗೋವಿಂದ ರಾಜ ಅವರು 'ಸಾಹಿತ್ಯದಲ್ಲಿ ಸಂಪ್ರದಾಯ, ಹೊಸ ಮಾರ್ಗ ಮತ್ತು ಸಾಹಿತ್ಯ ನಿರ್ಮಿತಿ' ಲೇಖನದಲ್ಲಿ (ದಶವಾರ್ಷಿಕ ವಿಮರ್ಶೆಗಳು 1974-83) ಹೇಳಿರುವ ಮಾತು ಉಲ್ಲೇಖನೀಯ :

"ಯಾವುದೇ ಸಾಹಿತ್ಯದ ಇತಿಹಾಸದಲ್ಲಿಯೂ ಕಾಲಕಾಲಕ್ಕೆ ಬರವಣಿಗೆಯ ಸಂಪ್ರದಾಯಗಳು ಬದಲಾಗುವುದು ಒಂದು ಸಾಮಾನ್ಯ ಸಂಗತಿ. ಪ್ರತಿಯೊಂದು ಹೊಸ ಸಂಪ್ರದಾಯವೂ ತನ್ನ ಹಿಂದಿನ ಸಂಪ್ರದಾಯದಲ್ಲಿನ ಕೆಲವೊಂದು ಗುಣಧರ್ಮಗಳ ಬಗೆಗೆ ಭಿನ್ನಾಭಿಪ್ರಾಯ ತಳೆದು, ಅದಕ್ಕೆ ಪ್ರತಿಕ್ರಿಯೆಯಾಗಿ, ಪ್ರತಿಭಟನೆಯಾಗಿ ಆರಂಭವಾಗುತ್ತದೆ. ಚಳವಳಿಯಾಗಿ ಬೆಳೆಯುತ್ತದೆ. ಕೊನೆಗೆ ತಾನೂ ಒಂದು ಸಂಪ್ರದಾಯವಾಗಿ ಪ್ರತಿಷ್ಠಿತವಾಗುತ್ತದೆ. ಹೀಗೆ ಒಂದು ಸಂಪ್ರದಾಯ ಸ್ಥಾಪಿತವಾಗಿ ಅದರಲ್ಲಿ ಸಾಕಷ್ಟು ಪ್ರಮಾಣದ ಕೃತಿ ರಚನೆ ನಡೆದ ಮೇಲೆ ಅದರದೇ ಆದ ಒಂದು ಸಿದ್ಧ ಮಾರ್ಗ ನಿರ್ಮಾಣವಾಗುತ್ತದೆ. ಅದಕ್ಕೆ ವಿಶಿಷ್ಟವಾದ ವಸ್ತುಗಳು, ಶೈಲಿ, ಧೋರಣೆಗಳು ಹುಟ್ಟಿಕೊಳ್ಳುತ್ತವೆ. ಇಷ್ಟಾದ ಮೇಲೆ ವ್ಯಾಪಕವಾದ ಅನುಕರಣೆ ನಡೆದು ಸಾಹಿ[illegible] ಜಾಡು ಬಿದ್ದ ಹಾದಿಯಾಗುತ್ತದೆ. ಆ ಸಂಪ್ರದಾಯ ಹುಟ್ಟಿಕೊಳ್ಳುವಾಗ ಹೊಸದಾ[illegible]

ಗೋಚರಿಸಿದ್ದು ಬದುಕಿನ ಹಾಗೂ ಅಭಿವ್ಯಕ್ತಿಯ ಹೊಸ ಅವಕಾಶಗಳು ಮುಗಿದುಹೋಗಿ ಚರ್ವಿತಚರ್ವಣಕ್ಕೆ ಆರಂಭವಾಗುತ್ತದೆ. ಆಗ ಈ ಸಂಪ್ರದಾಯದ ದೌರ್ಬಲ್ಯಗಳು ಕೂಡ ಬಯಲಿಗೆ ಬೀಳುತ್ತವೆ. ಇಂಥ ದೌರ್ಬಲ್ಯಗಳ ವಿರುದ್ಧ ಮತ್ತೆ ಅಸಮಾಧಾನ, ಪ್ರತಿಭಟನೆ ಆರಂಭವಾಗಿ ಇನ್ನೊಂದು ಹೊಸ ಮಾರ್ಗದ ಅನ್ವೇಷಣೆ ಆರಂಭವಾಗುತ್ತದೆ.''

ಹೀಗೆ ಹೊಸ ಹೊಸ ಸಂಪ್ರದಾಯಗಳು ಹುಟ್ಟಿಕೊಳ್ಳುವುದು ಸೃಜನಶೀಲತೆಯ ಆವಶ್ಯಕತೆಯಾಗಿರುತ್ತದೆ. ಆದ್ದರಿಂದ ಸಾಹಿತಿಗಳನ್ನು ಯಾವುದೇ ಒಂದು ಪಂಥಕ್ಕೆ ಸೀಮಿತಗೊಳಿಸುವುದು ಅದರ ಕ್ರಿಯಾಶೀಲತೆಯ ವ್ಯಾಪಕತೆಯನ್ನು ಸಂಕುಚಿತ ಗೊಳಿಸಿದಂತಾಗುತ್ತದೆ. ಆದ್ದರಿಂದ ಸಾಹಿತಿಗಳನ್ನು ಯಾವುದೇ ಒಂದು ಪಂಥಕ್ಕೆ ಸೇರಿದವರೆಂದು. ಪಥಗ್ರಾಹಿಗಳೆಂದು ನಾನು ಹೆಸರಿಸಲು ಇಚ್ಛಿಸುವುದಿಲ್ಲ.

ನವೋದಯ ಕಾಲದ ಕ್ರಿಯಾತ್ಮಕ ಬರವಣಿಗೆಯನಂತರ ಪ್ರತಿಕ್ರಿಯಾತ್ಮಕ ದೃಷ್ಟಿಕೋನ ಕಾಣಿಸಿಕೊಂಡಿತು. ಈ ದಿಸೆಯಲ್ಲಿ ಸೃಷ್ಟಿಗೊಂಡ ಸಾಹಿತ್ಯವನ್ನು ನವ್ಯಸಾಹಿತ್ಯವೆಂದು ವಿಮರ್ಶಕರು ಗುರುತಿಸಿದ್ದಾರೆ. ಈ ರೀತಿಯ ಸಾಹಿತ್ಯ 1950 ರ ಸುಮಾರಿನಿಂದ ಪ್ರಾರಂಭವಾಗಿದೆ ಎಂದು ಸ್ಥೂಲವಾಗಿ ಹೇಳಬಹುದು.

1950-60 ಈ ದಶಕದಲ್ಲಿ ಹೊರಬಂದ ಪ್ರಮುಖ ಕಾದಂಬರಿಗಳು: ಕಾರಂತರ ಕುಡಿಯರ ಕೂಸು(51), ಚಿಗುರಿದ ಕನಸು (51) ಜಾರುವ ದಾರಿಯಲ್ಲಿ (52), ಅಳಿದ ಮೇಲೆ (60); ಅ.ನ.ಕೃ.ರವರ ರುಕ್ಮಿಣಿ (54), ದೇವುಡುರವರ ಮಹಾಬ್ರಾಹ್ಮಣ(52), ಮಹಾಕ್ಷತ್ರಿಯ (60); ಗೋಪಾಲಕೃಷ್ಣ ಅಡಿಗರ 'ಕೃಷ್ಣನ ಕೊಳಲು' (52) ಹಿಮಗಿರಿಯ ಕಂದರ (52), ಶ್ರೀರಂಗರ ಪ್ರಕೃತಿ ಮತ್ತು ಪುರುಷ (54), ವ್ಯಾಸರಾಯ ಬಲ್ಲಾಳರ ಹೇಮಂತಗಾನ (54); ಮಿರ್ಜಿ ಅಣ್ಣಾರಾವ್‌ರವರ ನಿಸರ್ಗ (54); ನಿರಂಜನರ ವಿಮೋಚನೆ (53), ಬನಶಂಕರಿ (54), ಸೌಭಾಗ್ಯ (54), ಅಭಯ (54), ರಂಗಮ್ಮನ ವಠಾರ (54), ದೂರದ ನಕ್ಷತ್ರ, ನವೋದಯ (56), ಪಾಲಿಗೆ ಬಂದ ಪಂಚಾಮೃತ(55), ಏಕಾಂಗಿನಿ (55), ಚಿರಸ್ಮರಣೆ (55), ಕೊನೆ ನಮಸ್ಕಾರ (55), ಕಲ್ಯಾಣಸ್ವಾಮಿ (56), ವಿಲಾಸಿನಿ (56), ಅಂಜನ (57), ವಿಶಾಲಾಕ್ಷಿ(58); ಕೆ. ವಿ. ಅಯ್ಯರ್‌ರವರ ಶಾಂತಲಾ (54); ಮಾಸ್ತಿಯವರ ಚನ್ನಬಸವನಾಯಕ (50), ಚಿಕ್ಕವೀರರಾಜೇಂದ್ರ (56); ಕೃಷ್ಣಮೂರ್ತಿ ಪುರಾಣಿಕರ ರಾಮನಕಥೆ (56) ಶಂಕರ ಮೊಕಾಶಿಯವರ ಗಂಗವ್ವ ಮತ್ತು ಗಂಗಾ ಮಾಯಿ(56), ರಾವ್ ಬಹದ್ದೂರ್‌ರವರ ಗ್ರಾಮಾಯಣ(57) ಮುಂತಾದವು.

ಮುಂದಿನ ದಶಕ (1960-70)ರ ಪ್ರಮುಖ ಕಾದಂಬರಿಗಳು : ನಿರಂಜನರ ಹೆಣ್ಣಾಗಿ ಕಾಡಿತ್ತು ಮಾಯೆ (62), ಬಂಗಾರದ ಜಿಂಕೆ (63), ನಂದಗೋಕುಲ (64), ಸ್ವಾಮಿ ಅಪರಂಪಾರ (67); ಅನಕೃ ರವರ 'ಧರ್ಮಪತ್ನಿ' (60); ತ್ರಿವೇಣಿಯರ ಶರಪಂಜರ (68), ಶಾಂತಿನಾಥ ದೇಸಾಯರ ಮುಕ್ತಿ (61), ದೇವುಡುರವರ ಮಹಾಕ್ಷತ್ರಿಯ(61), ಮಹಾದರ್ಶನ (63); ಯು. ಆರ್. ಅನಂತಮೂರ್ತಿಯವರ ಸಂಸ್ಕಾರ (66); ಬಿ. ಪುಟ್ಟ ಸ್ವಾಮಯ್ಯನವರ 'ಕ್ರಾಂತಿ ಕಲ್ಯಾಣ' (63), ಪಿ. ಲಂಕೇಶ್‌ರವರ ಬಿರುಕು (67), ಕುವೆಂಪುರವರ ಮಲೆಗಳಲ್ಲಿ ಮದುಮಗಳು (67), ಭೈರಪ್ಪನವರ ವಂಶ ವೃಕ್ಷ (65), ಗೃಹಭಂಗ(70), ಶ್ರೀಕೃಷ್ಣ ಆಲನಹಳ್ಳಿಯವರ ಕಾಡು, ಎಂ. ಕೆ. ಇಂದಿರಾರವರ

ಸದಾನಂದ (65), ಕುಸುಮಾ ದೇವರ ಗೆಣ್ಣೂರ ಅವರ ನಾಲ್ಕನೆಯ ಆಯಾಮ (66), ಶ್ರೀಮತಿ ಮಲ್ಲಿಕಾ ಅವರ 'ಜೀವನ ಗಂಗಾ (66), ಭಾರತೀಸುತರ ಗಿರಿಕನ್ಯಕಾ (67), ಶ್ರೀನಿವಾಸ ಉಡುಪರ ಒಲಿದು ಬಂದವಳು (67), ಜಯತೀರ್ಥ ರಾಜ ಪುರೋಹಿತರ ಸುಳಿಗಾಳಿ (69); ಲಂಕೇಶ್‌ರವ ಮುಸ್ಸಂಜೆಯ ಕಥಾ ಪ್ರಸಂಗ (70). ಕುಂಬಾರರ ಕರಿಮಾಯಿ (69), ಸೂರ್ಯನಾರಾಯಣ ಜಡಗರ ಮನೆತನ (70) ಮುಂತಾದವು.

ಈ ದಶಕದಲ್ಲಿ ನವ್ಯಪ್ರಜ್ಞೆ ಮುಂದುವರಿದು ಬಂಡಾಯ ಏಳಲು ಹವಣಿಸುತ್ತಿರುವುದನ್ನು ಕಾಣಬಹುದು.

ಮುಂದಿನ ದಶಕದ ನುಪತ್ತರ ಕಾದಂಬರಿಗಳು (1970-80) ರಾವ್ ಬಹದ್ದೂರ್‌ಗವರ ಬಿತ್ತಿ ಬೆಳೆದವರು (71), ವಿಷ್ಣು ಶರಣರ ಕಡಲು, ಭೈರಪ್ಪನವರ ದಾಟು(7[illegible] ಮಾತೆ ಮಹಾದೇವಿಯವರ ಕಡಲು(72), ಎಂಡಮೂರಿಯವರ ಕುದುರೆ ಮೊಟ್ಟೆ(7[illegible]. ಭಾರತೀ ಸುತರ ಗಿಳಿಯು ಪಂಜರದೊಳಿಲ್ಲ (73), ಚಂದ್ರಕಾಂತ ಕುಸನೂರರವರ ಯಾತನಾ ಶಿಬಿರ (74), ಎಂ. ಕೆ. ಇಂದಿರಾರವರ ಫಣಿಯಮ್ಮ (75), ನಾ. ಮೊಗಸಾಲೆಯವರ ನನ್ನದಲ್ಲದ್ದು (76), ಯಶವಂತ ಚಿತ್ತಾಲರ ಶಿಕಾರಿ (78), ವೇಣುಗೋಪಾಲ ಸೊರಬರ ಬಯಲಾಗದ ಜನ (78), ಸುತ್ತು ಬಳಸು(78), ಎಸ್. ವಿ. ಶ್ರೀನಿವಾಸರಾಯರ ಸುಣ್ಣವಿಲ್ಲದ ವೀಳ್ಯ (71), ಮಬ್ಬು ಮುಂಜಾವು (72), ಕಾಡ ಬೆಳದಿಂಗಳು (72), ಸೋನಾರ್ ಬಾಂಗ್ಲಾ (73), ಸ್ವರ ಮೇಳ (75), ಅನುಬಂಧ (76), ಮಂಥನ ([illegible]), ಇಬ್ಬನಿ (80); ಸುಂದರ ನಾಡಕರ್ಣಿರವರ ಮುಂದಿಮನೆ (72), ರಾವ ಬಹದ್ದೂರ್‌ರವರ ಗೌಡರ ಕೋಣ (78), ಸಿ. ಎನ್. ಜಯಲಕ್ಷ್ಮೀದೇವಿಯವರ ಗಂಗರಸ ದುರ್ವಿನೀತ(79), ಕುಂ. ವೀರಭದ್ರಪ್ಪ ಅವರ ಕಪ್ಪು (80), ಸಿ. ಕೆ. ನಾಗರಾಜರಾಯರ ಪಟ್ಟ ಮಹಾದೇವಿ ಶಾನ್ತಲಾ ದೇವಿ (77), ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು (76), ಪೂರ್ಣಚಂದ್ರ ತೇಜಸ್ವಿಯವರ ಕಾರ್ವಾಲೊ (79), ಚದುರಂಗರ ವೈಶಾಖ(80), ದೇವನೂರ ಮಹಾದೇವರ ಒಡಲಾಳ (80), ರೇಖಾಕಾ ಖಂಡಕಿಯವರ ಕೋಟೆ (80).

ಎಚ್. ಎಲ್. ನಾಗೇಗೌಡರ ದೊಡ್ಡ ಮನೆ, ಸೊನ್ನೆಯಿಂದ ಸೊನ್ನೆಗೆ, ಭೂಮಿಗೆ ಬಂದ ಗಂಧರ್ವ ಗಮನಾರ್ಹ ಕಾದಂಬರಿಗಳು.

1980-90 ದಶಕದ ಪ್ರಮುಖ ಕಾದಂಬರಿಗಳು

ಚಂದ್ರಶೇಖರ ಕಂಬಾರರ ಸಿಂಗಾರೆವ್ವ ಮತ್ತು ಅರಮನೆ (71), ಶೇಷ ನಾರಾಯಣರವರ 'ಬೀಸು' (81), ಯಶವಂತ ಚಿತ್ತಾಲರ ಕಥೆಯಾದಳು ಹುಡುಗಿ (81), ವ್ಯಾಸರಾಯ ಬಲ್ಲಾಳರ ಹೇಮಂತಗಾನ (82), ತರಾಸು ರವರ ದುರ್ಗಾಸ್ತಮಾನ (81), ಭೂಸನೂರ ಮಠ ರವರ ಭವ್ಯಮಾನವ (82), ಡಾ. ಮ. ನ. ಜವರ ಮಾಗಿ (87), ಮಾಸ್ತಿಯವರ ಚಿಕ್ಕವೀರ ರಾಜೇಂದ್ರ(82), ವ್ಯಾಸರಾಯ ಬಲ್ಲಾಳರ ಬಂಡಾಯ (85), ಪೂರ್ಣಚಂದ್ರ ತೇಜಸ್ವಿರವರ ಚಿದಂಬರ ರಹಸ್ಯ (84), ಭೈರಪ್ಪನವರ ಸಾಕ್ಷಿ (85), ಡಾ\\ ಎಂ. ಪಿ. ಉಮಾದೇವಿ ಅವರ ಬದುಕಲಾರದ ಬಲವಂತರು (87) ವೇಣುಗೋಪಾಲ ಸೊರಬರ ಅನಾಥಪ್ರಭು (83), ಪ್ರಸಂಗ (85), ಸೆಚ್. ಕೆ.

ಅನಂತರಾವ್ ರವರ ... ಘನೆ. ಅಂತ (81), ಕೆ. ಟಿ ಗಟ್ಟಿ ಅವರ ಮೃತ್ಯೋರ್ಮಾ ಅಮೃತಂಗಮಯ (81). ಟಿ. ಕೆ. ರಾಮರಾಯರ ಜಗದೇವರಾಯ (81) ಎಸ್. ವಿ. ಶ್ರೀನಿವಾಸರಾಯರ ಪವನ ಚಕ್ರ(83). ರಂಗಸ್ಥಳ(84), ಗೆಜ್ಜೆ ಕಟ್ಟಿದ ಹೆಜ್ಜೆ (88), ಪ್ರೌಢ ಪ್ರತಾಪ ವೀರರಾಜೇಂದ್ರ (87) ಯಶವಂತ ಚಿತ್ತಾಲರ ಪುರುಷೋತ್ತಮ (80), ರಂ. ಶ್ರೀ ಮುಗಳಿರವರ ಅಗ್ನಿವರ್ಣ (82), ಶಂಕರ ಮೊಕಾಶಿಯವರ ಅವಧೇಶ್ವರಿ (88), ಕೆ. ಟಿ. ಗಟ್ಟಿ ಅವರ ಗ್ಲಾನಿ. ಅನಂತರ ಸಿ. ಎನ್. ಮುಕ್ತಾರವರ 'ಕಳೆದು ಹೋದವರು'; ಕಾ. ತ. ಚಿಕ್ಕಣ್ಣ ಅವರ ಮುಂಜಾವು. ಆದ್ಯ ರಾಮಾಚಾರ್ಯರ ವಿಕ್ರಾಂತ ಕೇಸರಿ. ಫಕೀರ್ ಮಹಮದ್ ಕಟ್ಪಾಡಿಯವರ ಸರಕುಗಳು. ಶಂಕರ ನಾರಾಯಣರವರ ನಟನಾರಾಯಣಿ. ಶ್ರೀ ಕೃಷ್ಣ ಆಲನಹಳ್ಳಿಯವರ ಭುಜಂಗಯ್ಯನ ದಶಾವತಾರ. ದೇವನೂರ ಮಹಾದೇವರವರ ಕುಸುಮ ಬಾಲೆ. ಸುಂದರ ನಾಡಕರ್ಣಿಯವರ ಈ ಕೂಪ. ವಿಶುಕುಮಾರ್‌ರವರ ಪ್ರಜೆಗಳು ಪ್ರಭುಗಳು. ಡಿ. ಲಿಂಗಯ್ಯನವರ ಅಸಹಾಯಕರು. ಹೆಚ್. ಎಸ್. ವೆಂಕಟೇಶಮೂರ್ತಿ ಅವರ ಅಗ್ನಿಮುಖ (ಬಾಲಸಾಹಿತ್ಯ). ಕೆ. ಟಿ. ಗಟ್ಟಿಯವರ ಮೂಕವನ. ಟಿ. ಗಿರಿಜಾರವರ ದುರ್ಗದ ದಿಗ್ವಿಜಯ. ದೊಡ್ಡೇರಿ ವೆಂಕಟಗಿರಿರಾಯರ ಇಷ್ಟಕಾಮ್ಯ. ಶೇಷ ನಾರಾಯಣರವರ ಒಂದುಗೂಡಿದ ನದಿಗಳು. ಬಿ. ಎಸ್. ಸ್ವಾಮಿಯವರ ಮಹಾಜ್ಯೋತಿ ಮಾದೇಶ್ವರ; ಪ್ರೇಮಾಭಟ್‌ರವರ ಮಹೂರ್ತ; ನಾ. ಮೊಗಸಾಲೆಯವರ ನೆಲಮುಗಿಲುಗಳ ಮಧ್ಯೆ; ಈಶ್ವರಚಂದ್ರರ ಒಂದೇ ಸೂರಿನ ಕೆಳಗೆ ಮತ್ತು ... ಮನುಷ್ಯರು. ಟಿ. ಜಿ. ರಾಘವರವರ ವಿಕೃತಿ. ದು. ಸಿಂ. ಬೆಳಗಲಿಯವರ ಸೀಮೆಗಳು. ನಾ. ಡಿಸೋಜಾರವರ ಗಾಂಧಿ ಬಂದರು ಮತ್ತು ಒಂದು ಜಲಪಾತದ ಸುತ್ತ. ಬರಗೂರು ರಾಮಚಂದ್ರಪ್ಪ ಅವರ 'ಸೂರ್ಯ'. ದೊಡ್ಡೇರಿ ವೆಂಕಟಗಿರಿರಾವ್‌ರವರ 'ಲಂಚ ಮಾಲಾ' ಮುಂತಾದವು. ಈ ದಶಕದಲ್ಲಿ ಸುಮಾರು 2000 ಕಾದಂಬರಿಗಳು ಬೆಳಕು ಕಂಡಿವೆ ಎಂದು ಊಹಿಸಬಹುದು.

ಗ್ರಂಥಲೋಕದ ಅವಗಾಹನೆಗೆ ಬಂದಿರುವ ಕಾದಂಬರಿಗಳು 1987 ರಲ್ಲಿ -190. 1988ರಲ್ಲಿ 73, 1989ರಲ್ಲಿ 82. ಆದರೆ ಈ ಸಂಖ್ಯೆ ಪ್ರತಿವರ್ಷ 200 ಮೀರಿರಬಹುದು ಎಂದು ಊಹಿಸಲಾಗಿದೆ.

ಈ ಕಾದಂಬರಿಗಳನ್ನು ಸ್ಥೂಲವಾಗಿ ಹೀಗೆ ವಿಭಜಿಸಬಹುದು.

ಸಾಮಾಜಿಕ - ರಾಜಕೀಯ - ಐತಿಹಾಸಿಕ - ಹಾಸ್ಯ - ವಿಡಂಬನ

ಪತ್ತೆದಾರಿ - ಮನೋವಿಜ್ಞಾನ - ವೈಜ್ಞಾನಿಕ - ಸಾಹಸ - ಪೌರಾಣಿಕ.

ಈ ಎಲ್ಲಾ ವಿಭಾಗದಡಿ ಬಂದಿರುವ 2000 ಕ್ಕೂ ಹೆಚ್ಚು ಕಾದಂಬರಿಗಳನ್ನು ಕೂಲಂಕಷವಾಗಿ ಸಮೀಕ್ಷಿಸುವುದು ಅಸಾಧ್ಯ. ಆದ್ದರಿಂದ ಸೂಕ್ಷ್ಮವಾಗಿ ಇವುಗಳ ಬಗ್ಗೆ ವಿವೇಚನೆ ನಡೆಸಿ ಈ ಅವಧಿಯಲ್ಲಿ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ಗಳಿಸಿರುವ ಕಾದಂಬರಿಗಳನ್ನು ಮಾತ್ರ ಸಮೀಕ್ಷಿಸಿದ್ದೇನೆ.

ಈ ಕಾದಂಬರಿಗಳನ್ನು ಶೇಕಡವಾರು ವಿಂಗಡಿಸಿದರೆ 60ಕ್ಕೂ ಹೆಚ್ಚು ಭಾಗ. ಸಾಮಾಜಿಕ ಕಾದಂಬರಿಗಳು. 20 ಭಾಗ ಪತ್ತೆದಾರಿ ಕಾದಂಬರಿಗಳು ಆಕ್ರಮಿಸಿರುವುದು ಕಂಡುಬರುತ್ತದೆ. ಉಳಿದ ಭಾಗಗಳನ್ನು ರಾಜಕೀಯ, ಐತಿಹಾಸಿಕ, ಹಾಸ್ಯ - ವಿಡಂಬನೆ.

ಮನೋವಿಜ್ಞಾನ, ವೈಜ್ಞಾನಿಕ, ಪೌರಾಣಿಕ ಹಾಗೂ ಸಾಹಸ ಕಾದಂಬರಿಗಳು ಹಂಚಿಕೊಂಡಿವೆ. ತ್ರಿವೇಣಿಯವರ ನಂತರ ಮನೋವಿಶ್ಲೇಷಾತ್ಮಕ ಕಾದಂಬರಿಗಳನ್ನು ಕನ್ನಡದಲ್ಲಿ ರಚಿಸುವವರ ಸಂಖ್ಯೆ ಅತ್ಯಲ್ಪವಾಗಿದೆ.

ಈ ದಶಕದಲ್ಲಿ ಸಾಮಾಜಿಕ ಕಾದಂಬರಿಗಳನ್ನು ರಚಿಸುವಲ್ಲಿ ಮಹಿಳೆಯರ ಪಾತ್ರ ಅತಿ ಹೆಚ್ಚಿನದಾಗಿದೆ. ಕೌಟುಂಬಿಕ ಸಮಸ್ಯೆಗಳು, ಹೆಣ್ಣು ಗಂಡುಗಳ ಪ್ರೇಮ, ವಿರಸ, ವಿಧವಾ ವಿವಾಹ, ವಿವಾಹದಲ್ಲಿ ಜಾತಿ ಮತಗಳ ಗೊಂದಲ, ಹೆಣ್ಣುಗಳಿಗೆ ಆಗುತ್ತಿರುವ ಹಲವು ವಿಧದ ಮೋಸ, ಶೋಷಣೆ ಇವುಗಳ ಸುತ್ತಲೇ ಕಥಾ ಹಂದರ ಹರಡಿರುವುದನ್ನು ಕಾಣುತ್ತೇವೆ. ಈ ದಿಸೆಯಲ್ಲಿ ಹೆಸರಿಸಬಹುದಾದ ಲೇಖಕಿಯರೆಂದರೆ

ಸಾಯಿಸುತೆ : ನಲಿದ ಸಿಂಧೂರ, ನವ್ಯಚೈತ್ರ, ಸೊಬಗಿನ ಪ್ರಿಯದರ್ಶಿನಿ, ಅಭಿಲಾಷೆ, ಬಿಳಿಮೋಡಗಳು, ಇಬ್ಬನಿ ಕರಗಿತು, ಮಂಗಳದೀಪ, ಮಂದಾರ ಕುಸುಮ, ನಮ್ರತಾ ಗಂಧರ್ವಗಿರಿ, ಚೈತ್ರದ ಕೋಗಿಲೆ, ಸುಮಧುರ ಮುಂತಾಗಿ ಐವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ.

ಹೆಚ್. ಜಿ. ರಾಧಾದೇವಿ : ಗೆಲುವಿನ ಹಾದಿ, ಚಂದನ ಕಸ್ತೂರಿ, ಮನಸ್ಸಿನ ಕಣ್ಣು, ಸೊಬಗಿನ ಸೆರಮನೆ, ಅಮೃತಘಳಿಗೆ, ಸಿರಿದೇವಿನಕ್ಕಾಗ, ಆಕಾಶಚುಂಬನ, ಬೇರುಕಡಿದ ಮರ, ಶ್ರೀಮಂತ ಸಂಬಂಧ, ನಿನ್ನ ಸಿಹಿ ನೆನಪು, ರಥ ಕದಲಿತು, ಬಿಸಿಲಿಗೆ ಬಿದ್ದ ಚಿಗುರು ಮುಂತಾಗಿ 25ಕ್ಕೂ ಹೆಚ್ಚು ಕೊಡುಗೆಗಳು.

ಉಷಾನವರತ್ನರಾವ್ : ಭಲೇ ಹುಡುಗಿ, ವಿಭಜನೆ, ಕೃಷ್ಣಾ ನೀ ಬೇಗನೆ ಬಾರೋ, ನನ್ನ ಮರಿ, ಅತಿಕ್ರಮಣ, ತನುವು ನಿನ್ನದು ಮನವು ನಿನ್ನದು, ಹರಸು ಬಾ ನನ್ನನು, ಮದನಿಕಾ, ಕೈಹಿಡಿದು ನಡೆಸೆನ್ನನು, ಹೊಸ ಬಾಳಿಗೆ ನೀ ಜೊತೆಯಾದೆ, ಮೂಡಿ ಬಂದ ಬೆಳಕು, ದೋಣಿ ಸಾಗಲಿ ಮುಂದೆ ಹೋಗಲಿ ಮುಂತಾದ ಸುಮಾರು 35 ಕಾದಂಬರಿಗಳು.

ಈಚನೂರು ಶಾಂತಾ : ಆಕ್ರಂದನ, ಬದುಕು ಬಣ್ಣದ ಚಿತ್ತಾರ, ವಿಭ್ರಾಂತ, ಸ್ಪಂದನ, ಸ್ವೀಕೃತಿ ಮುಂತಾದ ಹತ್ತು ಕೃತಿಗಳು.

ಈಚನೂರು ಜಯಲಕ್ಷ್ಮಿ: ದಡ ಬಿಟ್ಟ ದೋಣಿ, ಅಂತರದೊಳಗೊಂದು ಕಿರುದನಿ, ಮುಂಜಾನೆಯ ಮಂಜು ಮುಂತಾಗಿ ಸುಮಾರು 8 ಕಾದಂಬರಿಗಳು.

ಎಂ. ಕೆ. ಇಂದಿರಾ : ಅತ್ಯಂತ ಜನಪ್ರಿಯ ಕಾದಂಬರಿಗಾರ್ತಿ. ಇವರ ಇತ್ತೀಚಿನ ಕಾದಂಬರಿಗಳು: ಜಾತಿ ಕೆಟ್ಟವಳು, ಅಗೋಚರ, ಕಲ್ಪವೃಕ್ಷ, ಹಸಿವು ಮುಂತಾದವು. (45ಕ್ಕೂ ಹೆಚ್ಚು ಜನಪ್ರಿಯ ಕಾದಂಬರಿಗಳನ್ನು ರಚಿಸಿರುವ ಹೆಗ್ಗಳಿಕೆ ಇವರದು. ಸಾಹಿತ್ಯ ಅಕಾಡೆಮಿ ಪುರಸ್ಕಾರಗಳನ್ನು ಗಳಿಸಿರುವುದಲ್ಲದೆ ಅಕಾಡೆಮಿಯಿಂದ ಸನ್ಮಾನಿತರೂ ಆಗಿದ್ದಾರೆ. ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ ಮುಂತಾದವು ಚಲನಚಿತ್ರಗಳಾಗಿವೆ)

ಪ್ರೇಮಾಭಟ್ : ಮುತ್ತಿನ ಕೋಟೆ, ಯಜ್ಞ, ಗತಿ, ಬಿಂದು, ಕೊನೆ ಗೊಂದಲ, ಮಿಣುಕುಹುಳ, ಎರಡು ಜೊತೆ ಕಣ್ಣುಗಳು, ಭ್ರಮಣ, ಮುಹೂರ್ತ (ಒಟ್ಟು ಕಾದಂಬರಿಗಳ ಕೊಡುಗೆಗಳು ಸುಮಾರು 30)

ಆರ್ಯಾಂಬ ಪಟ್ಟಾಭಿ : ವಿಶ್ವಧರ್ಮ, ನರಭಕ್ಷಕ, ಅಸಂಗತ (ಒಟ್ಟು 25ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಕೆಲವು ಚಲನ ಚಿತ್ರಗಳಾಗಿವೆ)

ಸಿ. ಎನ್. ಮುಕ್ತಾ : ಕ್ಷಮಯಾಧರಿತ್ರಿ, ಕಳೆದು ಹೋದವರು, ನಾನೊಂದು ತೀರ, ದಡ ಸೇರಿದ ನೌಕೆ, ಜೀವನ ಚಕ್ರ, ಪ್ರೀತಿಯ ತೆರೆ, ಬದುಕಿನ ಬಲೆಯಲ್ಲಿ, ಜೀವನ ತರಂಗ ಮುಂತಾದವು (ಒಟ್ಟು ಕೃತಿಗಳು 15)

ವಿಜಯಶ್ರೀ : ಆಕಾಶಸುಂದರಿ, ಕೀರ್ತಿ ಮಯೂರಿ, ಶಯನ, ಅಲೆಗಳ ನಡುವೆ, ಕಾದಿರುವಳೋ ಕೃಷ್ಣ, ಮೋಡದದ ಅಂಚು ಮುಂತಾದವು (ಒಟ್ಟು ಕಾದಂಬರಿಗಳ ಕೊಡುಗೆ ಸುಮಾರು 30)

ಕೆ. ಆರ್. ಪದ್ಮಜೆ : ಚೈತ್ರದ ಕನಸು, ಕೆಂಡ ಸಂಪಿಗೆ, ಹೂವಿನ ಸೊಬಗು, ಹೊಸ ಹರುಷ, ಸಾವಿನ ಅಲೆ, ರಕ್ತದ ಅರಮನೆ, ಗಂಡಭೇರುಂಡ (ಒಟ್ಟು ಕಾದಂಬರಿಗಳು 18)

ವಿಶಾಲಾಕ್ಷಿ ದಕ್ಷಿಣಾಮೂರ್ತಿ : ದುಂಬಿಹಂಬಲ, ಆರಾಧಕ, ಗೌರವಾನ್ವಿತೆ, ಪತಂಗಗಳು (ಒಟ್ಟು ಸುಮಾರು 10 ಕಾದಂಬರಿಗಳು)

ಈ ದಶಕದಲ್ಲಿ ಸಾಮಾಜಿಕ ಕಾದಂಬರಿಗಳನ್ನು ರಚಿಸಿರುವ ಇತರ ಲೇಖಕಿಯರು.

ಗುಡಿಬಂಡೆ ಪೂರ್ಣಿಮಾ : ಸೆಲೆ, ಕಾಮ ಪ್ರೇಮ, ಮಾಗಿದ ಫಲ, ಒಳಗಿನದೇ ಬೇರೆ, ಪ್ರಣಯ ರವಿ, ಪ್ರೇಮದ ಕೊಡುಗೆ, ಭ್ರಮೆ.

ಅನುಸೂಯಾ ರಾಮರೆಡ್ಡಿ : ದೇವಿಯ ದರ್ಶನ, ಬೆಳಕಿನ ಬಳ್ಳಿ, ಹರಿಗೋ ಪಂಜರ, ಸಂಭಾವಿತರು.

ಹೆಚ್. ಕೆ. ಅನುಸೂಯಾ ಸಂಪತ್ : ಮುತ್ತಿನ ಮಂಟಪ, ಹೂವಿನ ಹುತ್ತ, ಮಂಜುಳ ಗೀತ, ಸುಗಂಧ ಸಿಂಚನ, ಹೂವು ಮೊಗ್ಗು.

ಎಸ್. ಪಂಕಜ : ಬರಲೆ ಇನ್ನು ಯಮುನೆ, ಬಳ್ಳಿ ಮೊಗ್ಗು, ಉಷಾನಿಷೆ, ಮಲಯ ಮಾರುತ, ಮುಗಿಲ ಮಿಂಚು, ಗಗನ, ಗೂಡುಬಿಟ್ಟ ಹಕ್ಕಿ, ಸಂಧ್ಯಾ ಬರುವಳಿಕೆ, ತೆರೆ ಸರಿಯಿತು, ತೇಲಿ ಬಂದ ಬಂಧನ (18 ಕಾದಂಬರಿಗಳು);

ಎ. ಪಂಕಜ : ತೇಜತ್ರಯರು, (ಒಟ್ಟು ಕಾದಂಬರಿಗಳು ಸುಮಾರು 15)

ನೀಳಾದೇವಿ : ಹೊಸಿಲು, ಒಲವಿನ ಜಾಲ, ಅಂತರ, ಹುಲ್ಲು ಹಸಿರಾಯಿತು ಮುಂತಾದವು. (ಒಟ್ಟು 15)

ಪದ್ಮಶ್ರೀ : ಅನ್ಯೋನ್ಯ, ಗ್ರಾಮಸಿಂದೂರ, ಕಪ್ಪು ಮೋಡದಲ್ಲಿ ಬಿಳಿ ಅಂಚು, ಮಂಗಳ ಮುಂಜಾನೆ, ಆರಿದ ದೀಪ.

ಛಾಯಾದೇವಿ ಸಂಜಪ್ಪ : ಪ್ರೀತಿಯ ನೆರಳು, ತೌರ ಮನೆ, ಸಂಗಮ, ಸ್ನೇಹಬಿಂದು (ಒಟ್ಟು 15 ಕಾದಂಬರಿಗಳು)

ಸುನೀತಿ ಕೃಷ್ಣಮೂರ್ತಿ : ಗಿಣಿ, ರಾಗಿಣಿ-ವಿರಾಗಿಣಿ, ಸಂಧ್ಯಾಕಿರಣ, ದೀಪಲಕ್ಷ್ಮಿ.

ಚಿತ್ರಲೇಖ : ಮೃದುಲಾ, ಹಂಗಿನ ಮುಸುಕಿನಲ್ಲಿ, ಹೂಮಂಚ, ಎರಡು ದಳ.

ವೈ. ಕೆ. ಸಂಧ್ಯಾಶರ್ಮ : ನೃತ್ಯ ಸರಸ್ವತಿ, ಮಧುಸಿಂಚನ, ಕವಣೆ ಗಿಟ್ಟ ಕಲ್ಲು, ತಾಳ ತಪ್ಪಿದ ಮೇಳ;

ದೇವಕಿಮೂರ್ತಿ : (ಒಡಕು ದೋಣಿ, ಬಿರುಕು - 'ಉಪಾಸನೆ ' ಚಲನಚಿತ್ರವಾಗಿದೆ) ಪದ್ಮಾ ಗುರುರಾಜ್(ಛಾಯಾ, ಅವಳ ಕನಸು, ಬಂದಾನೊ ಬಾರನೊ,)ಗಾಯತ್ರಿ ಮೂರ್ತಿ (ಹಂಬಲ, ದೋಣಿಸಾಗಲಿ),ಭಾಷ್ಯಂ ತನುಜೆ (ಪ್ರೀತಿಯ ಹೊನಲು), ಶಾರದೆ (ಮಾರಮ್ಮನ ಜಾತ್ರೆ, ಸಂಸಾರ ಸಾಗರ); ಕಾಕೋಳು ಸರೋಜರಾವ್ (ಮುಸುಕು); ನಿರುಪಮಾ ಅಮೃತ ಕಲಶ, ಭುವನ ವಿಜಯ, ಪರಿತ್ಯಕ್ತೆ, ಜೀವನಸ್ರವಂತಿ, ಮಿಡಿತ-ಸಿಡಿತ, ರಾಗ-ರಾಗಿಣಿ, ಜಯಂತಿ, ನೃತ್ಯ ಸಾಮ್ರಾಜ್ಞೆ, ದೇವರೇ ಸಾಕ್ಷಿ ಮುಂತಾದ 12 ಕಾದಂಬರಿಗಳು)

ಇವರುಗಳಲ್ಲದೆ ಆನೆಕಲ್ ಶಾರದ, ಸಾವಿತ್ರಿ ದೇವಿನಾಯುಡು, ಭರಣಿ, ಅಶ್ವಿನಿ, ಪದ್ಮಜಾ ಸುಂದರೇಶ್, ಶೈಲಜಾ ಪ್ರಕಾಶ್, ಎಂ. ಸಿ ಪದ್ಮಾ, ಎಂ. ಕೆ. ಜಯಲಕ್ಷ್ಮಿ, ಪದ್ಮಶ್ರೀ ಕಾಕೋಳು, ತನುಜ, ಮಂಗಳಾಸತ್ಯನ್, ಪದ್ಮಜಾ ಸುಂದರೇಶ್, ಎಂ. ಆರ್. ಜಯಶ್ರೀ ಮುಂತಾದವರೂ ಜನಪ್ರಿಯ ಸಾಮಾಜಿಕ ಕಾದಂಬರಿಗಳನ್ನು ರಚಿಸುತ್ತಿದ್ದಾರೆ.

ಮೇಲ್ಕಂಡ ರೀತಿಯ ಕಾದಂಬರಿಗಳಿಂದ ವಿಭಿನ್ನ ದೃಷ್ಟಿಕೋನ ಹೊಂದಿದ, ಕ್ರಾಂತಿಕಾರಿಕ ಮನೋಭಾವದ ಬಂಡಾಯ ಪ್ರವೃತ್ತಿಯ ಹೆಣ್ಣಿನ ಶೋಷಣೆಯನ್ನು ಪ್ರತಿಭಟಿಸುವಿಕೆಯನ್ನು ಕಾದಂಬರಿಯ ಮೂಲ ದ್ರವ್ಯವಾಗಿ ಉಪಯೋಗಿಸಿ ವೈಶಿಷ್ಟ್ಯತೆಯನ್ನು ಮೆರೆದಿರುವ ಈ ಕೆಳಕಂಡ ಲೇಖಕಿಯರ ಕಾದಂಬರಿಗಳ ಬಗ್ಗೆ ದೃಷ್ಟಿಹರಿಸೋಣ.

ಡಾ|| ಅನುಪಮಾ ನಿರಂಜನ : ಈ ದಶಕದಲ್ಲಿ ಹೊರಬಂದಿರುವ ಆಳ (89); ಮುಕ್ತಿ ಚಿತ್ರ(88);ಘೋಷ (85)-ಕೊಳಚೆ ಕೊಂಪೆಯ ದಾನಿಗಳು, ಈ ನಾಲ್ಕು ಕಥಾ ವಸ್ತುವಿನ ವಿಭಿನ್ನತೆಯಿಂದಾಗಿ, ನಿರೂಪಣೆಯ ವೈಶಿಷ್ಟ್ಯದಿಂದಾಗಿ, ಇತರ ಸಾಮಾಜಿಕ ಕಾದಂಬರಿಗಳಿಗಿಂತ ಬೇರೆಯದಾಗಿಯೇ ಕಾಣಿಸುತ್ತದೆ. ಪ್ರತ್ಯೇಕಸ್ತರದಲ್ಲೇ ನಿಲ್ಲುತ್ತವೆ.

ಆಳ : ಈ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಗಂಡು ಸಮಾನ ವಿದ್ಯೆ, ಪಾಂಡಿತ್ಯಗಳನ್ನು ಗಳಿಸಿದ್ದರೂ ಹೆಣ್ಣು ಹೇಗೆ ನ್ಯಾಯಕ್ಕಾಗಿ ಹೋರಾಡಬೇಕೆಂಬುದೇ 'ಅಳ' ಕಾದಂಬರಿಯ ಕಥಾದ್ರವ್ಯ. ನೆಲದಾಳ ಅಗಿದರೂ ಮನದಾಳ ಲೆಕ್ಕಹಾಕಲು ಸಾಧ್ಯವಿಲ್ಲ ಎಂಬ ಮಾತು ಕಥೆಗೆ ಚಾಲನೆ ನೀಡುತ್ತದೆ.

ಮುಕ್ತಿ ಚಿತ್ರ : ಮಹಿಳೆ ಶೋಷಣೆಯ ವಿರುದ್ಧ ಬಂಡೇಳುವುದೇ ಈ ಕಾದಂಬರಿ ಕಥಾವಸ್ತು ಆಂದೋಲನದಿಂದಲೇ ತನ್ನ ಗುರಿಸಾಧಿಸುವುದೇ ಕಾದಂಬರಿಯ ಆಶಯ.

ಘೋಷ : ಲೇಖಕಿಯರೇ ಹೇಳಿರುವಂತೆ ಕಾದಂಬರಿಯ ವಸ್ತು, ಶೈಲಿ, ಆಕೃತಿ, ಕಾಳಜಿ ಈ ಎಲ್ಲ ದೃಶ್ಯಗಳಿಂದಲೂ ಇತರ ಕಾದಂಬರಿಗಳಿಗಿಂತ ಭಿನ್ನವಾದದ್ದು ಇದು ಒಂದು ವಿಧದಲ್ಲಿ ರಾಜಕೀಯ ಕಾದಂಬರಿಯೇ ಆ... ಕಾದಂಬರಿಯಲ್ಲಿ ಕಲ್ಪನೆ ಕಸರತ್ತು ನಡೆಸಿದ್ದಾಗ ಭಾರತದ ತುರ್ತು ಪರಿಸ್ಥಿತಿಯ ಭಾವಾತ್ಮಕ ಚಿತ್ರ ಇಲ್ಲಿ ಮೈತಳೆದು ನಿಲ್ಲುತ್ತದೆ.

ಕೊಳಚೆ ಕೊಂಪೆಯ ದಾನಿಗಳು : ಬಡವರ, ಶೋಷಿತರ, ದುಡಿವ ವರ್ಗದ ಬದುಕಿನ ಸುತ್ತ ನಡೆಯುವ ಸೂಕ್ಷ್ಮ ವಿವರಗಳನ್ನು ಈ ಕಾದಂಬರಿ ನೀಡುತ್ತದೆ. ಕೊಳಚೆ ಕೇರಿಯ ಜನ ಭ್ರಷ್ಟರಾಗುವುದಕ್ಕೆ ಕಾರಣಗಳನ್ನು ಲೇಖಕಿ ವಿಶ್ಲೇಷಿಸಿದ್ದಾರೆ. ಹೊಸ ಮಾರ್ಗ ತೋರಿಸಿದ್ದಾರೆ.

ಈ ಮೇಲ್ಕಂಡ ನಾಲ್ಕು ಕಾದಂಬರಿಗಳ ಕಥಾವಸ್ತು, ಕಥೆ ನಡೆಯುವ ಪರಿಸರ ಪಾತ್ರಗಳ ಅನಿಸಿಕೆಗಳು, ನಡವಳಿಕೆಗಳು ಇತರ ಕಾದಂಬರಿಗಳಿಂದ ಭಿನ್ನವಾಗಿರುವುದಲ್ಲದೆ, ಕಥಾನಕದುದ್ದಕ್ಕೂ ಬಂಡಾಯದ ಬಿಸಿ ಹರಡುತ್ತಿರುವುದನ್ನು ಗಮನಿಸುತ್ತೇವೆ.

ವಿಷಯಗಳ ಹೊಸತನ ಕಾದಂಬರಿಗಳ ವೈಶಿಷ್ಟ್ಯ, ಕಲ್ಪಾತ್ಮಕ ನಿರೂಪಣೆ ಅಭಿನಂದನಾರ್ಹ.

ಇದೇ ಬಂಡಾಯದ ದನಿ ಎತ್ತುವ, ಸಾಮಾಜಿಕ ವ್ಯವಸ್ಥೆಯನ್ನು ತಳಮಳಗೊಳಿಸುವ, ಕ್ರಾಂತಿಕಾರಿ ಮನೋಭಾವದ ಕಾದಂಬರಿಗಳನ್ನು ರಚಿಸಿರುವ ಗೀತಾ ನಾಗಭೂಷಣ ಸಹ ಸಹಜವಾಗಿ ಇತರೆ ಕಾದಂಬರಿಗಾರ್ತಿಯರಿಂದ, ಭಿನ್ನವಾಗಿ ನಿಲ್ಲುತ್ತಾರೆ. ಇವರ ಮುಖ್ಯ ಕಾದಂಬರಿಗಳು ಹಸಿ ಮಾಂಸ ಮತ್ತು ಹದ್ದು, ಮೋಹಪಾ, ನಿನ್ನ ತೋಳುಗಳಲ್ಲಿ, ನನ್ನ ನಿನ್ನ ನಡುವೆ, ಆಸರೆಗಳು, ಮಾವುರ ತಾಯಿಯ ಮಕ್ಕಳು.

ಮಾಮೂಲು ಸಾಂಸಾರಿಕ ಕಥೆಯಿಂದ ಹೊರತಾದ 'ಕಿತ್ತು ತಿನ್ನುವ ಮುಪ್ಪು' ಶಾಂತಾನಾಗರಾಜರ ಒಂದು ಗಮನ ಸೆಳೆಯುವ ಕೊಡುಗೆ.

ಸಿಡಿದೆದ್ದು ಬಿಸಿಮಾತಿನಲ್ಲೇ ಹಸಿಸತ್ಯದ ಕರಾಳತೆಯನ್ನು ಕಡೆದು ನಿಲ್ಲಿಸುವ ಕಾದಂಬರಿಗಾರ್ತಿ ಡಾ|| ವೀಣಾಶಾಂತೇಶ್ವರ್ ಅವರ 'ಗಂಡಸರು', ' ಶೋಷಣೆ 'ಮತ್ತು 'ಬಂಡಾಯ' ಈ ದಶಕದ ಮಹತ್ವದ ಕಾದಂಬರಿಗಳು,

ಇದೇ 'ಬಂಡಾಯ' ವಸ್ತುವನ್ನೇ ಕಾದಂಬರಿಗಳ ಮೂಲದ್ರವ್ಯವಾಗಿ ಬಳಸುತ್ತಿರುವ ಕಾದಂಬರಿಗಾರ್ತಿ ಸಾರಾ ಅಬೂಬಕರ್ ಉಲ್ಲೇಖನೀಯರು. ಇವರ ಇತ್ತೀಚಿನ ಕಾದಂಬರಿಗಳಾದ 'ವಜ್ರಗಳು' 'ಚಪ್ಪಲಿಗಳು'- ಈ ಮನೋಧರ್ಮವನ್ನು ಪ್ರತಿನಿಧಿಸುತ್ತವೆ.

ಶೋಷಣೆ ವಿರುದ್ಧ ಲೇಖನಿ ಎತ್ತಿ ಹೋರಾಟ ನಡೆಸಿರುವ ಇನ್ನೊಬ್ಬ ಲೇಖಕಿ ಲಲಿತಾ ಬಿ.ಟಿ. ನಾಯಕ್. ಇವರ ಕಾದಂಬರಿ 'ನೆಲೆ-ಬೆಲೆ' (ಇದು 1981 ರಲ್ಲೇ ಸುಧಾ' ಕಾದಂಬರಿ ಸ್ಪರ್ಧೆಯಲ್ಲಿಬಹುಮಾನಗಳಿಸಿದೆ).

ಈ ದಶಕದ ಗಮನ ಸೆಳೆಯುವ ಇತರ ಕಾದಂಬರಿಗಳು, ಬಣ್ಣದ ಬದುಕನ್ನು ಚಿತ್ರಿಸುವ ಸುಂದರ ನಾಡಕರ್ಣಿಯವರ 'ವೇಷ', ಲಂಚಕೋರತನದ ವಿಶ್ಲೇಷಣೆ ನಡೆಸಿರುವ ಕುಂ. ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ', ಅನಾಥ ಬಾಲಕನೊಬ್ಬನ ಜನ್ಮ ಹಿನ್ನಲೆಯನ್ನು ಭೇದಿಸುವ ಯಶವಂತ ಚಿತ್ತಾಲರ ಬೃಹತ್ ಕಾದಂಬರಿ 'ಪುರುಷೋತ್ತಮ'; ಹೆಣ್ಣು-ಗಂಡುಗಳ ಸಂಬಂಧಕ್ಕೆ ಅರ್ಥಶೋಧಿಸುವ ಡಾ|| ಎಸ್.ಎಲ್. ಭೈರಪ್ಪನವರ 'ನೆಲೆ'; ಗ್ರಾಮ್ಯಜೀವದ ನಿಜ ಚಿತ್ರ ನೀಡುವ ಆಡುಭಾಷೆಯ, ಒಡೆಯರ್ ದಿ. ಹೆಗಡೆಯವರ ಹರಕೆಯ ಶಿಕ್ಷೆ'; ವಿದ್ಯುತ್ತಿನ ಗಳಿಕೆಯಿಂದ ಪರಮಹಂಸ ಪದವಿಗೇರಿದ ವ್ಯಕ್ತಿಯೊಬ್ಬನ ಸಾಹಸ ನಿರೂಪಿಸಿರುವ ಎಂ.ಜಿ. ನಂಜುಂಡಾರಾಧ್ಯರ

'ಪರಮಹಂಸ ಶ್ರೀಪತಿ ಪಂಡಿತಾಚಾರ್ಯ'; ವಿಡಂಬನ ಧಾಟಿಯಲ್ಲಿ ರಾಜಕೀಯ ವಿಶ್ಲೇಷಿಸಿರುವ ಬರಗೂರು ರಾಮಚಂದ್ರಪ್ಪನವರ 'ಭರತನಗರಿ', ಮಲೆನಾಡಿನ ಸುತ್ತ ಹರಿಯುವ ಕಥಾವಸ್ತು ಹೊಂದಿರುವ ಹಾಡ್ಲಹಳ್ಳಿ ನಾಗರಾಜ್‌ರವರ 'ಬಾಡಿಗೆ ಬಂಟರು', ಮುಂಬಯಿಯ ನೈಜ ಚಿತ್ರಣ ನೀಡುವ ಯಶವಂತ ಚಿತ್ತಾಲರ 'ಛೇದ', ಹಳ್ಳಿಯ ಹುಡುಗ ಸೈನ್ಯಕ್ಕೆ ಸೇರಿದ ಕಥೆ ಹೆಣೆದಿರುವ ಗೋವಿಂದ ಮೂರ್ತಿ ದೇಸಾಯರ 'ಸುಬೇದಾರ ಸೀತಾರಾಮು'; ಹೊಸಧಾಟಿಯ ರಂ. ಶಾ ರವರ 'ನೂರು ತಲೆ ಹತ್ತು ಕಾಲು'; ಹೆಣ್ಣಿನ ಶೋಷಣೆ ಚಿತ್ರಿಸಿರುವ ಕಮಲಾಸುತರ 'ಒಂಟಿ ಹೆಣ್ಣಿನ ಕೂಗು', ಮಕ್ಕಳ ಸಾಹಸ ಕಾದಂಬರಿ ಬಿ.ಎಲ್. ವೇಣುರವರ 'ಗುಹೆ ಸೇರಿದವರು'; ವಿವಾಹ ವಿಚ್ಛೇದನದ ಹಿನ್ನೆಲೆಯ ಟಿ.ವಿ. ನಾರಾಯಣರ 'ನಿರ್ಧಾರ'; ಹದಿಹರೆಯದ ಯುವಕನ ಕಲ್ಪನೆಯ ಮೇಲೆ ಮೂಡಿ ಬಂದಿರುವ ಡಿ.ಆರ್. ಬಾಲುರವರ 'ಮೋಹಿತ್'; ಅರ್ಥಪೂರ್ಣ ದಾಂಪತ್ಯ ಜೀವನದ ಹಿನ್ನೆಲೆಯ ದೊಡ್ಡೇರಿ ವೆಂಕಟರಾಯರ 'ದೃಷ್ಟಿದಾನ'; ಗ್ರಾಮೀಣ ಜೀವನ ಚಿತ್ರಿಸಿರುವ ಎಂ. ರಾಮಕೃಷ್ಣರವರ 'ಅಂತರಗಂಗೆ'; ವೃದ್ಧಾಶ್ರಮದ ಹಿನ್ನೆಲೆಯ ಕಥೆ ಸರೋಜಾ ನಾರಾಯಣರಾವ್ ರವರ 'ವಾನ ಪ್ರಸ್ಥ'; ಇದೇ ಮುಂತಾಗಿ ಇನ್ನೂ ನೂರಾರು ಕಾದಂಬರಿಗಳನ್ನು ಗುರುತಿಸಲು ಸಾಧ್ಯ. ಆದರೆ ಅಲ್ಪಾವಧಿಯಲ್ಲಿ ನಾನು ಅವುಗಳನ್ನು ಗುರುತಿಸುವಲ್ಲಿ ಅಸಮರ್ಥನಾಗಿದ್ದೇನೆ ಎಂದು ನಮ್ರನಾಗಿ ವಿನಂತಿಸಿಕೊಳ್ಳಬಯಸುತ್ತೇನೆ.

ಸಾಮಾಜಿಕ ಕಾದಂಬರಿಗಳ ನಂತರ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಂಡಿರುವ ಕಾದಂಬರಿ ಪ್ರಾಕಾರವೆಂದರೆ 'ಪತ್ತೇದಾರಿ'.

ಈ ವಿಭಾಗದಡಿ ಅತ್ಯಂತ ಹೆಸರು ಗಳಿಸಿರುವ ಕಾದಂಬರಿಕಾರರುಗಳೆಂದರೆ ಟಿ.ಕೆ. ರಾಮರಾವ್, ರಹಸ್ಯ ಪತ್ರ, ನಿಗೂಢರು, ತ್ರಿಕೋಣದ ಮನೆ-ಜೋಡಿ ಛಾಯೆ, ಕನಸುಗಾರ, ಕಣಿವೆ ಸೇರಿದವಳು, ಬಣ್ಣದ ಹುಳು, ಪಶ್ಚಿಮ ಮುಖಿ, ಹಾವಿಲ್ಲದ ಹುತ್ತ, ಅಲೆಮಾರಿ, ಚುಕ್ಕೆಯ ಪಾರಿವಾಳ- ವಜ್ರದ ಕೊಂಬು, ಆರಿದ ಲಾಂದ್ರ - ಡೊಂಕುಮರ - ರಾಣಿಜೇನು ಮುಂತಾದ - 50 ಕಾದಂಬರಿಗಳು ; ವಿಜಯ ಸಾಸನೂರ (ವಿಗ್ರಹಚೋರರು, ಸಾಮ್ರಾಟ್, ಮಾಯಾ ಅಜಿತ್, ಶಿವತಾಂಡವ, ಅಪರಂಜಿ, ಯುದ್ಧ, ಪಾಂಚಜನ್ಯ ಮುಂತಾದವು) ವಿದ್ಯುಲ್ಲತಾ ರಥಸಪ್ತಮಿ, ರಕ್ತ ಸಂಬಂಧ, ಇಂಚರ, ದೂರ; ಎನ್. ನರಸಿಂಹಯ್ಯ (ಕೊಲೆ ಮಾಡಿದ್ದೇಕೆ, ಗುಟ್ಟಿನ ಗುಲಾಮ, ಛಲತೊಟ್ಟಚಲುವೆ, ಭಾನುಮತಿ ಪ್ರಭಾವ; ಮೋಹಬಿಡದ ಮೋಹಿನಿ, ಕೊಲ್ಲದೆ ಬಿಡಲಾರೆ, ಕಾಮದ ಕಣ್ಣು, ಪ್ರಚಂಡ ಚೋರ ಮುಂತಾದವು ಸುಮಾರು ಮುನ್ನೂರಕ್ಕೂ ಹೆಚ್ಚು ಕಾದಂಬರಿ) (ಪತ್ತೇದಾರಿ) ಗಳನ್ನು ರಚಿಸಿರುವುದು ಇವರ ವೈಶಿಷ್ಟ್ಯ; ಮಾ. ಭಿ. ಶೇ. (ಹೆಂಗಸರು ಮತ್ತು ಹೆಣಗಳು, ಹುಷ್- ಅಪಾಯ, ಓ! ಸುಂದರಿ ನೀನೆಷ್ಟು ಅಪಾಯಕಾರಿ, ಮಾಯವಾದಳು, ಸತ್ತವಳ ಸಂಶಯ, ಆ ಭೂತದ ಮನೆ, ಮೈಸೂರು ಪೋಲೀಸ್, ಇಂಡಿಯಾದ ನಂ.1 ಗೂಢಚಾರ, ನರಕದ ದೆವ್ವ ಮುಂತಾದವು.

ಬಿ. ಹೆಚ್. ಸಂಜೀವಮೂರ್ತಿ : ತೆರೆಮರೆಯ ಕೊಲೆಗಾರ, ಸಮುದ್ರ ಕನ್ಯೆಯರು, ಮಾಯದ ಬುಲ್ಲೆಟ್, ಮಿಸ್ ಅರೇಂಬಿಯಾ, ಪ್ರೇಮ ಮತ್ಸರದ ಪ್ರೇಯಸಿ, ಅಪಾಯಕಾರಿ

ಅಬಲೆ, ರಾಂಗ್‌ನಂ. ಮುಂತಾದವು.

ಕೋಳು ರಾಮಯ್ಯ : ಸೇಡಿನ ಬಲೆ ಕಾಸಾವಿನ ಚದುರಂಗ, ಮಾಯಾಪುರದ ಮರ್ಮ, ಚಕ್ರವ್ಯೂಹದಲ್ಲಿ ಚಾಣುಕ್ಯ, ಡೇಂಜರಸ್ ಡೆವಿಲ್ ಅಡ್ವೆಂಚರ್ಸ್ ಇನ್ ಐಸ್‌ಲ್ಯಾಂಡ್, ಮುಂತಾದವು.

ಕ್ಯಾತ್ಸಂದ್ರ ಚಂದ್ರಶೇಖರ್ : ರಕ್ತದಾಹದ ಪಿಶಾಚಿ, ಹಂತಕರ ಮರ್ಮ, ಭಯಾನಕ ಢಾಕಿನಿ, ಅಗ್ನಿ ಶಿಖೆ, ಚಾಕುರಾಣಿ, ವಿಪ್ಲವಕಾರಿ, ನರಕದ ನೆರಳು, ಮೃತ್ಯುವಿನೊಡನೆ ಸರಸ ಮುಂತಾದವು.

ಶಿವಾಜಿರಾವ್ ಎಂ. : ಕೊಲೆಗಡುಕರು, ರಕ್ಕಸಕೊಳ್ಳ, ದ್ವೀಪ, ಕ್ಲೂ, ಗರಡೀಮನೆ, ರೈಫಲ್ ಮೆನ್, ಆಕ್ಟೋಪಸ್, ಅಪರಾಧಿ ಯಾರು, ಮುಂತಾದವು ; ಚೈತನ್ಯ: ಹಾರದ ಹಕ್ಕಿ, ಹುಚ್ಚಿ ಕಣ್ಮರೆಯಾದ ನಳಿನಿ, ಆಕಾಶದಿಂದ ಇಳಿದವರು, ಕ್ರಾಂತಿ, ಉನ್ನತ ಸರಸ್ವತಿ, ಬ್ಯಾಂಕ್ ದರೋಡೆ ಮುಂತಾದವು) ; ಜಿ. ಪ್ರಕಾಶ : ಬ್ಲ್ಯಾಕ್ ಕ್ಯಾಟ್, ಪಾಕಿಸ್ತಾನದಲ್ಲಿ ಪ್ರದೀಪ, ಕಮಾಂಡರ್, ಪ್ರೊಟೆಕ್ಟರ್, ಸ್ಪೈಡರ್, ಸೀಕ್ರೇಟ್ ಏಜೆಂಟ್, ಗೆಸ್ಟ್‌ಫಾರ್ ಗೋಸ್ಟ್, ಪ್ಲೈಯಿಂಗ್ ಸ್ಟಾರ್, ಡಿ. ಜಾಂಗೋ, ಆಕ್ಸಿಡೆಂಟ್, ಪಾಕಿಸ್ತಾನದಲ್ಲಿ ಲಕ್ಕಿ, ಬ್ಲಾಕ್ ಮೈಲ್ ಮುಂತಾದವು; ಬಿ. ಕೆ. ಸುಂದರ ರಾಜ್: (ಹೆಣ್ಣಿನ ಮೋಸ, ಮುತ್ತಿನ ಕೋಟೆ, ಅಪರಾಧಿಯ ಹಂಬಲ, ರಕ್ತ ರಾಕ್ಷಸಿ, ಅನಾಮದೇಯ ಪತ್ರ ಮುಂತಾದವು.

ಚನ್ನವೀರಯ್ಯ ಸಿ. ಎನ್. : ಟೈಗರ್, ರಸದಾಳಿ, ರೊಚ್ಚಿಗೆದ್ದ ರೂಪಾ ಮುಂತಾದವು)

ಈ ಪ್ರಕಾರದಲ್ಲಿ ಕೃತಿ ರಚಿಸಿರುವ ಇತರರು: ಜಿಂದೆನಂಜುಂಡಸ್ವಾಮಿ, ಬಿ. ಪಿ. ಕಾಳೆ, ಪುಲಿಕೇಶಿ, ಶೇಷಾಚಲ, ಕೆ. ಆರ್. ಪದ್ಮಜೆ, ರಮೇಶ, ವಿಜಯ ಸುದಾಕರ್, ರಘುಸುತ, ವಿ. ಸುಬ್ರಮಣ್ಯಂ, ಎಸ್. ಜಿ. ಶಿವಶಂಕರ್, ವಿಜಯ ದಿವಾಕರ್, ಗೀತಾನಂದ, ಹೆಚ್. ಎಸ್. ರವಿ, ಮುರಳಿ, ಚೂಡಾಮಣಿ, ಆರ್. ಜಿ. ಕಮಲ ಮುಂತಾದವರು.

ಚಾರಿತ್ರಿಕ ಕಾದಂಬರಿಗಳು

ಈ ವಿಭಾಗವನ್ನು ಸಂಪನ್ನಗೊಳಿಸಿದ್ದ ಹಿರಿಯರುಗಳೆಂದರೆ ಬಿ. ವೆಂಕಟಾಚಾರ್ಯ, ಗಳಗನಾಥ, ಬಿ. ಪುಟ್ಟಸ್ವಾಮಯ್ಯ, ಕೊರಟಿ ಶ್ರೀನಿವಾಸರಾವ್, ಕೆ. ವಿ. ಅಯ್ಯರ್, ಕೆರೂರು ವಾಸುದೇವಾಚಾರ್ಯ, ಆನಂದಕಂದ, ಅ.ನ.ಕೃ, ಮಾ. ನ. ಮೂರ್ತಿ, ವೀರಕೇಸರಿ ಸೀತಾರಾಮ ಶಾಸ್ತ್ರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಇವರ ಚಿಕವೀರ ರಾಜೇಂದ್ರ ಬೃಹತ್ ಕಾದಂಬರಿಗೆ 1984ರ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರ ಮತ್ತೊಂದು ಬೃಹತ್ ಕಾದಂಬರಿ ಚನ್ನಬಸವನಾಯಕ); ತ. ರಾ. ಸು. (ದುರ್ಗಾಸ್ತಮಾನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ (1983).

ತರಾಸುರವರ ಪ್ರಸಿದ್ಧ ಹಾಗೂ ಅತ್ಯಂತ ಜನಪ್ರಿಯ ಕಾದಂಬರಿಗಳು : ನೃಪತುಂಗ; ಕಂಬನಿ ಕುಯಿಲು; ರಕ್ತರಾತ್ರಿ; ತಿರುಗುಬಾಣ; ಹೊಸಹಗಲು ಮುಂತಾದವು

ಈ ದಶಕದ ಪರಿಧಿಗೆ ಸೇರದವರಾದರೂ ಈ ವಿಭಾಗದಲ್ಲಿ ನೆನೆಯಲೇಬೇಕಾದ

ಎರಡು ಹೆಸರುಗಳು ಸಿ. ಕೆ. ನಾಗರಾಜರಾವ್. ಇವರ ಬೃಹತ್ ಕಾದಂಬರಿ 'ಪಟ್ಟ ಮಹಾದೇವಿ ಶಾಂತಲಾ' ಗೆ ಜ್ಞಾನ ಪೀಠ ಪ್ರಶಸ್ತಿಗೆ ಸಮಾನವಾದ ಮೂರ್ತಿದೇವಿ ಪುರಸ್ಕಾರ(1978) ರಲ್ಲಿ ಲಭಿಸಿದೆ.

(ii) ನಿರಂಜನರೂ ಎರಡು ಚಾರಿತ್ರಕ ಕಾದಂಬರಿಗಳನ್ನು ರಚಿಸಿದ್ದಾರೆ 'ಕಲ್ಯಾಣ ಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ'

ಈ ದಶಕದಲ್ಲಿ 1980-90ರಲ್ಲಿ ಹೊರಬಂದಿರುವ ಚಾರಿತ್ರಕ ಕಾದಂಬರಿಗಳು :

ಆದ್ಯ ರಾಮಾಚಾರ್ಯ : ಶ್ರೀ ಸಮರ್ಥ ಮತ್ತು ಸೂರ್ಯಾಸ್ತ (ಇವೆರಡೂ ಶಿವಾಜಿಯನ್ನು ಕುರಿತ ಕಾದಂಬರಿಗಳು); ರಂಭಾ, ಭವಾನಿ, ಬಿಜಾಪುರ ಪತನ, ಇತರ ಕೃತಿಗಳು.

ಬಿ. ಎಲ್. ವೇಣು : 'ಗಂಡುಗಲಿ ಮದಕರಿ'.

ಟಿ. ಕೆ. ರಾಮರಾವ್ : ಜಗದೇವರಾಯ- ಚೆನ್ನಪಟ್ಟಣದ ಪ್ರಭುವಿನ ಕಥೆ ಮನೋಜ್ಞವಾಗಿ ಮೂ ಬಂದಿದೆ.

ಎಸ್. ವಿ. ಶ್ರೀನಿವಾಸರಾವ್ : ಕೊಡಗಿನ ಧೀಮಂತರಾಜ 'ಪ್ರೌಢ ಪ್ರತಾಪ ವೀರರಾಜೇಂದ್ರ' ನ ಸಾಹಸಮಯ ಜೀವನ ಚಿತ್ರಣ.

ಈ ಪ್ರಕಾರದಲ್ಲಿ ಹೊರಬಂದಿರುವ ಇತರ ಕೃತಿಗಳು.

ಮೈಸೂರು ಮನೆತನಕ್ಕೆ ಸಂಬಂಧಿಸಿದ ಸಮೇತನಹಳ್ಳಿ ರಾಮರಾಯರ ಕೃತಿ 'ಯದುವೊಡೆಯ', ನಿಡುಗಲ್‌ನ ವೈಭವ ನಿರೂಪಿಸಿರುವ ತಾ. ಸು. ಪುಷ್ಪರವರ 'ನಿಡುಗಲ್ ವೈಭವ'. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಎಚ್. ವಿಠ್ಠಲ ಶೆಣೈ ರವರ 'ಸರದಾರ ತಿಮ್ಮಯ್ಯ'; ಮಾತೆ ಮಹಾದೇವಿಯವರ 'ವೀರಶಿರೋಮಣಿ ಕೆಳದಿ ಚೆನ್ನಮ್ಮ ರಾಣಿ', ಲಿಂಗದೇವರು ಹಳೇಮನೆಯವರ 'ಚಿಕ್ಕದೇವ ಭೂಪ', ಗೋವಿಂದಮೂರ್ತಿ ದೇಸಾಯರ 'ರುಧಿರಾರತಿ', ಸಾಲಿ ರಾಮಚಂದ್ರ ರಾಯರ 'ಯದುಪತಿ', ಗೀತಾ ಮೋಹನ ಮುರಳಿಯವರ 'ಅಂತಿಮ ಮೊಗಲ್ ಸಾಮ್ರಾಟ್', ಪದ್ಮನಾಭ ಸೋಮಯಾಜಿಯವರ 'ಪಂಡಿತ ರಾಜ ಜಗನ್ನಾಥ', ಜಿ. ಎಚ್. ಹನ್ನೆರಡುಮಠರವರ 'ಉಳವಿನಲ್ಲಿ ಓಂಕಾರ', ಜೀವಂಧರ ಕುಮಾರ ಹೋತ ಪೇಟಯವರ 'ಚಾಮುಂಡರಾಯ ವೈಭವ', ಒಡೆಯರ್ ಡಿ. ಹೆಗ್ಗಡೆಯವರ 'ಕ್ರಾಂತಿವೀರ ಸಂಗೊಳ್ಳಿರಾಯಣ್ಣ', ಎಸ್. ವಿ. ಶ್ರೀನಿವಾಸರಾವ್‌ರವರ ಮಕ್ಕಳ ಕಾದಂಬರಿಗಳು - ಪರಮೇಶ್ವರ ಪುಲಿಕೇಶಿ ಮತ್ತು 'ಗಂಗರಸ ದುರ್ವಿನೀತ', ರುದ್ರಮೂರ್ತಿಶಾಸ್ತ್ರಿಗಳ 'ಔರಂಗಜೇಬ್', ಕೆದಂಬಾಡಿ ಗೌತಮಿಯವರ 'ಕೋಹಿನೂರ ದುರಂತ'.

ಪೌರಾಣಿಕ ಕಾದಂಬರಿಗಳು

ಈ ವಿಭಾಗದಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ಹೆಸರು ಚಿರಸ್ಮರಣೀಯ ಮಹಾ ಬ್ರಾಹ್ಮಣ ಮಹಾಕ್ಷತ್ರಿಯ ಮಹಾದರ್ಶನ ಮಹಾಸನ್ಯಾಸಿ ಅಮೋಘ ಕೃತಿಗಳು.

ಈ ವಿಭಾಗದಲ್ಲಿ ಹೆಚ್ಚಿನ ಕೃಷಿ ನಡೆಯದೆ ಇರುವುದು ಒಂದು ಕೊರತೆ.

ಸತ್ಯಕಾಮರೊಬ್ಬರೇ ಹೆಚ್ಚಿನ ಸಂಖ್ಯೆಯಲ್ಲಿ ಈ ವಿಭಾಗ ಸಂಪನ್ನಗೊಳಿಸಿದ್ದಾರೆ. (ಚಂಡ ಪ್ರಚಂಡ, ರಾಜಬಲಿ, ಪಂಚ 'ಮ'ಗಳ ನಡುವೆ, ಕೃಷ್ಣಾರ್ಪಣ, ಮನ್ವಂತರ, ಅರ್ಧದಾರಿ, ವಿಚಿತ್ರ ವೀರ್ಯ, ನಾಗರನಂಜು ಮುಂತಾದವು).

ಆದ್ಯ ರಾಮಾಚಾರ್ಯರು (ರಾಧೇಯ, ಧನಂಜಯ, ಪ್ರಸನ್ನ ವೆಂಕಟ).

ಜಿ. ಬ್ರಹ್ಮಪ್ಪನವರ 'ಗಂಧದವನೊಡನೆ ಗುದ್ದಾಟ' (ಪಾರ್ಶ್ವನಾಥನೆಂಬ ಧಾರ್ಮಿಕ ಕ್ರಾಂತಿ ಪುರುಷನ ಭವಾವಳಿಗಳ ಚಿತ್ರಣ), ಕಟ್ಟೀಮನಿ ಯವರ ಆಧುನಿಕ ಬಸವಣ್ಣ(1986), ಜಿ. ಎಚ್. ಹನ್ನೆರಡು ಮಠವರ 'ಉಳವಿನಲ್ಲಿ ಓಂಕಾರ', ಡಾ. ಬಿ. ಎಸ್. ಸ್ವಾಮಿಯವರ 'ಮಹಾಜ್ಯೋತಿ ಮಾದೇಶ್ವರ'.

ಸಾಹಸ /ವೈಜ್ಞಾನಿಕ ಕಾದಂಬರಿಗಳು

ಈ ವಿಭಾಗ ಇತ್ತೀಚಿನ ಬೆಳವಣಿಗೆ. ಇದರಲ್ಲಿ ಕೃಷಿ ಮಾಡುತ್ತಿರುವವರುಗಳೆಂದರೆ **ಹೆಚ್. ಕೆ. ಅನಂತರಾವ್** (ಅಂತ, ಶಾಂತಿ ಶೋಧ- ಸುಧಾದಲ್ಲಿ ಧಾರವಾಹಿಯಾಗಿ ಬಂದಿದೆ.

ವಿಜಯ ಸಾಸನೂರು ಹಾಗೂ ಇವರ ಪತ್ನಿ ವಿದ್ಯುಲ್ಲತೆ, ಮನು ಚಕ್ರವ್ಯೂಹ, ಓಮಜ್ವಾಲೆ, ಆಯನ, ಐರಾವತ, ಅಗ್ನಿದಿವ್ಯ, ಖಡ್ಗ, **ಆಷಾಡದ ಮೋಡಗಳು**, ಮಹಾಪ್ರಸ್ಥಾನ, ಸುದರ್ಶನ ಚಕ್ರ ಮುಂತಾದವು). ವಿ. ಕೆ. ಮೂರ್ತಿ (ಶತ್ರುಪಂಜರ), ರಾಜಶೇಖರ ಭೂಸನೂರಮಠ (ಅಟ್ಲಾಂಟಿಸ್, ರಾಕ್ಷಸ ದ್ವೀಪ, ಶತಮಾನದಾಚೆ, ಅದ್ಭುತಗಳು, ನಾಳೆ-ನಿನ್ನ ಪಾಳಿ, ಮಂಗಳ ಮುಂತಾದವು);

ಎಸ್. ವಿ. ಶ್ರೀನಿವಾಸರಾವ್ (ಗೆಜ್ಜೆ ಕಟ್ಟಿದ ಹೆಜ್ಜೆ, ಪವನ ಚಕ್ರ), **ಪೂರ್ಣಚಂದ್ರ ತೇಜಸ್ವಿ**(ಕರ್ವಾಲೊ - ರಾಜ್ಯ ಸಾಹಿತ್ಯ ಅಕಾಡೆಮಿಯ ವಿಶೇಷ ಪ್ರಶಸ್ತಿ ವಿಜೇತ ಕೃತಿ, ವಿಜ್ಞಾನ ಹಿನ್ನೆಲೆಯಲ್ಲಿ ರಚನೆಗೊಂಡಿವೆ);

ಹ. ಶಿ. ಭೈರನಟ್ಟಿ (ಟ್ರಿಪ್ಲೆಟ್ ಸಿಗ್ಮಾ, ನೆರಳು, ಬ್ಲೂ ಫೀಲ್ಮ್); **ಎಂ. ವಿ. ನಾಗರಾಜರಾವ್**(ಟ್ರೋಪಾಜ್)

ಹಾಸ್ಯ/ವಿಡಂಬನ

ಈ ಕ್ಷೇತ್ರದಲ್ಲಿ ಕೃಷಿ ಮಾಡಿರುವವರು - ಬೀ. ಚಿ. ಸುನಂದಮ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಾಡಿಗೇರ ಕೃಷ್ಣರಾವ್, ನಾಡಿಗೇರ್ ಗೋವಿಂದ ರಾವ್, ಡಾ॥ ಎಂ. ಶಿವರಾಂ, ಪ್ರೊ॥ ಅ. ರಾ. ಮಿತ್ರ, ಪಾವೆಂ (ಪಾಡಿಗಾರು ವೆಂಕಟರಮಣಾಚಾರ್ಯ), ಲಾಂಗೂಲಾ ಚಾರ್ಯ.(ಪ್ರಿಯತಮೆಯ ಶೋಧನೆಯಲ್ಲಿ), ಎಂ. ಎಸ್. ನರಸಿಂಹ ಮೂರ್ತಿ, ಎ. ಎನ್. ಮೂರ್ತಿರಾವ್, ಅ. ರಾ. ಸೇ (ಸೊಗದಿರುಳು ನವ್ವಗಲು); ಎಂ. ಎಸ್ ನರಸಿಂಹಮೂರ್ತಿ (ಮಂದಸ್ಮಿತ), ಕೇಫ (ಭಲೋ ಆಯ್ತು ಶೌರಿ); ಅನಂತ ಕಲ್ಲೋಳ (ರಾಜಾ ಪಾಯಿಂಟ್), ಎಂ. ಪಿ. ಮನೋಹರ ಚಂದ್ರನ್(ಸ್ವರ್ಗಕ್ಕೆ ಭೂ ಬಾಣ ಮತ್ತು ಆಸ್ಫೋಟ).

ಈ ದಿಸೆಯಲ್ಲಿ ಅಪಾರ ಸಂಖ್ಯೆಯಲ್ಲಿ ಲೇಖನಗಳು, ಪ್ರಬಂಧಗಳು ಪ್ರಕಟಗೊಳ್ಳುತ್ತಿದ್ದರೂ ಕಾದಂಬರಿಗಳ ಸಂಖ್ಯೆ ಬಹು ಕಡಿಮೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿರುವ ಕಾದಂಬರಿಗಳು

ಚದುರಂಗರ 'ವೈಶಾಖ' : (1981) ಗ್ರಾಮದ ಸಂಕೀರ್ಣ ಜನಜೀವನದ ಅಂತರ್‌ದರ್ಶನ ಮಾಡಿಸುವ, ಕಾಮ ಜೀವನದ ಮಡಿವಂತಿಕೆಯನ್ನು ತೆರೆದು ತೋರಿಸುವ, ಮಾನವನ ಅಸಹಾಯಕ ತುಮುಲಗಳಿಗೆ ಶಬ್ದ ನೀಡುವ ಕೆಲಸವನ್ನು ಈ ಕಾದಂಬರಿಕಾರರು ಹೃದಯಂಗಮವಾಗಿ ಮಾಡಿದ್ದಾರೆ. ರುಕ್ಮಿಣಿ ಅತ್ಯಾಚಾರಕ್ಕೊಮ್ಮೆ ಒಳಗಾಗಿ ಮತ್ತೆ ಕಾಡುವ ಕಾಮದ ದಾಹಕ್ಕೆ ಲಕ್ಕನಿಗೆ ದೇಹ ತೆತ್ತು ಬಸುರಾಗಿ ತೊಳಲಾಡುವುದೇ ಕಥಾ ದ್ರವ್ಯ. ಕಾದಂಬರಿಯಲ್ಲಿ ಆಡು ಭಾಷೆಯ ಬಳಕೆ ಬಹಳ ರಸಪೂರ್ಣವಾಗಿದೆ. ಇದೊಂದು ಸತ್ವ ಪೂರ್ಣವಾದ ಪರಿಪಕ್ವ ಕಾದಂಬರಿ.

ತ. ರಾ.ಸು ಅವರ 'ದುರ್ಗಾಸ್ತಮಾನ' : (1985) ಆದಿಯಿಂದ ಅಂತ್ಯದವರೆಗೆ ಈ ಕಾದಂಬರಿ ಕುತೂಹಲವನ್ನು ಕೆರಳಿಸಿ, ತಣಿಸದೆ ಅತೃಪ್ತಿಯನ್ನು ಓದುಗನಲ್ಲಿ ಉಂಟುಮಾಡಿ, ನಮ್ಮನ್ನು ಹಿಂದಿನ ಚಿತ್ರದುರ್ಗದ ಸಿರಿಸೌರಭದ ಭ್ರಮಾಲೋಕಕ್ಕೆ ಕೊಂಡೊಯ್ದು ಧೀರೋದಾತ್ತ ಪಾಳಿಯಗಾರ, ಮದಕರಿಯ ದರ್ಶನ ಮಾಡಿಸುತ್ತದೆ. ಆತನ ಮೇಲೆ ಅಪಾರ ಅಭಿಮಾನ ಮೆಚ್ಚುಗೆ ಉಂಟಾಗುವಂತೆ ನಮ್ಮ ಮನಸ್ಸನ್ನು ಸಿದ್ಧಪಡಿಸುತ್ತದೆ. ಚಾರಿತ್ರಿಕ ಕಾದಂಬರಿಗೆಂದೇ ಸಾಣೆ ಹಿಡಿದ ಹೊಳಪಿನ ನುಡಿ ಮುತ್ತುಗಳು ಓದುಗರನ್ನು ಮಂತ್ರಮುಗ್ಧಗೊಳಿಸುತ್ತದೆ. ಬಹಳಷ್ಟು ವೈಭವೀಕರಿಸಿರುವ ಮದಕರಿನಾಯಕ ದುರ್ಗದ ನಾಶದೊಂದಿಗೆ ತಾನೂ ಅಂತ್ಯಗೊಂಡಾಗ ಓದುಗರಲ್ಲಿ ಕಣ್ಣೀರು ತುಳುಕುತ್ತದೆ. ಇದೇ ಯಶಸ್ವೀ ಕಾದಂಬರಿಯ ಸಾರ್ಥಕತೆ. ಕಥೆ ಹೇಳುವ ಕಲಾಗಾರಿಕೆಯನ್ನು ಸಿದ್ಧಿಸಿಕೊಂಡಿರುವ ತ. ರಾ.ಸು. ರವರದು ಇದೊಂದು ವಿಶಿಷ್ಟ ಕೊಡುಗೆ.

ವ್ಯಾಸರಾಯ ಬಲ್ಲಾಳರ 'ಬಂಡಾಯ' : (1986) ಮುಂಬಯಿ ಕಾರ್ಮಿಕರ ಜೀವನ ಕುರಿತಾದ ಕಥೆ. ವ್ಯಕ್ತಿ ಮತ್ತು ಸಮಾಜದ ಮಧ್ಯದ ಸಂಘರ್ಷ ಇಲ್ಲಿನ ಕಥಾಭ್ರೂಣ, ಶೋಷಕ ಹಾಗೂ ಶೋಷಿತರ ಸಂಬಂಧದ ಏರಿಳಿತವೇ ಈ ಕಾದಂಬರಿಯ ಉಚ್ಛ್ವಾಸ-ನಿಶ್ವಾಸ. ಶಕ್ತಿ ಪ್ರವಹಿಸುವುದು ಬಂದೂಕದ ನಳಿಗೆಯ ಮುಖಾಂತರ, ಈ ನಕ್ಸಲೈಟ್ ತ್ಯಜಿಸಿ ಕಾರ್ಮಿಕ ನಾಯಕನಾಗಿದ್ದ ರಾಜೀವ ಮತ್ತು ಪರಿಸ್ಥಿತಿಯ ಒತ್ತಡಗಳಿಂದಾಗಿ ಹಿಂಸೆಯ ದಿಕ್ಕಿಗೆ ತಿರುಗುವುದೇ ಕಾದಂಬರಿಯ ಕೊನೆಯ ತಿರುವು. ಮೇಲುವರ್ಗ ಹಾಗೂ ಕೆಳವರ್ಗದ ಕೌಟುಂಬಿಕ ಚಿತ್ರಣ ಹೃದಯಂಗಮವಾಗಿ ಮೂಡಿ ಬಂದಿದೆ. ರಾಜಕೀಯ ಚದುರಂಗದಲ್ಲಿ ಕಾಯಿಗಳ ನಡಿಗೆಯನ್ನು ನಿಯಂತ್ರಿಸುವ ನಿಗೂಢ ಶಕ್ತಿಯ ಅರಿವು ಮೂಡಿಸುತ್ತಾರೆ ಲೇಖಕರು.

ವಸ್ತುವಿನ ಸಂಕೀರ್ಣತೆ ಕಾದಂಬರಿಯಲ್ಲಿ ಮಾರ್ಮಿಕವಾಗಿ ಮೂಡಿಬಂದು ಕಾದಂಬರಿಕಾರನ ಮೂಲೋದ್ದೇಶಕ್ಕೆ ಸಾರ್ಥಕತೆ ನೀಡುತ್ತದೆ.

'ಬಂಡಾಯ' ಒಂದು ಯಶಸ್ವೀ ಕಾದಂಬರಿ.

ತೇಜಸ್ವಿಯವರ 'ಚಿದಂಬರ ರಹಸ್ಯ' : (1987) ಕೆಸರೂರು ಕಾದಂಬರಿಯ ಬಹಳಷ್ಟು ಘಟನೆಗಳು ಘಟಿಸುವ ಮೂಲ ಸ್ಥಳ. ಒಂದು ಸಂಸ್ಕೃತಿಯ ಅವನತಿಯ ಏಳು

ಬೀಳುಗಳ ದಾರುಣ ಚಿತ್ರಣ ಇಲ್ಲಿದೆ. ಪಾತ್ರಗಳಲ್ಲಿ ತೋರುವ ನಿಗೂಢತೆಯನ್ನು ಅನುಭವದ ಮೂಲಕ ಶೋಧಿಸುವದೇ ಇಲ್ಲಿನ ನಿರೂಪಣೆಯಲ್ಲಿನ ವಿಶೇಷತೆ. ಪತ್ತೆದಾರಿ ಕಾದಂಬರಿಯಲ್ಲಿನ ಕೊಂಡಿಗಳಂತೆ ಇಲ್ಲೂ ಕಾಣಿಸುವ ಕೊಂಡಿಗಳನ್ನು ಬಿಡಿಸುತ್ತಾ ಸಾಗುವುದೇ ಕಾದಂಬರಿಯ ವೈಶಿಷ್ಟ್ಯ. ದುರ್ಬಲ ಸಮಾಜವನ್ನು ಸರಿಪಡಿಸುವುದು ದುಸ್ಸಾಧ್ಯ ಎಂದೇ ಲೇಖಕರು ನಂಬಿದಂತಿದೆ. ಆದರೆ ಅದಕ್ಕೆ ಆರೈಕೆ ನೀಡುವ ಸಾಹಸಕ್ಕೆ ಕೈ ಹಾಕಿದ್ದಾರೆ. ಇಲ್ಲಿನ ಪಾತ್ರಗಳಾದ ರಾಮಚಂದ್ರ, ಕಥೆಗಾರ ಜಯರಾಮ್, ಎಲಕ್ಕಿ ಕೇಂದ್ರದ ಪಾಟೀಲರು, ಹೆಗ್ಗಡೆ, ಮಹಮ್ಮದ್, ಕೃಷಿ ವಿಜ್ಞಾನಿ ಜೋಗಿಹಾಳರು ಮುಂತಾದವರುಗಳ ಮನಸ್ಸಿನ ಸೂಕ್ಷ್ಮಗಳು ದ್ವಂದ್ವಗಳು ವೈರುಧ್ಯಗಳನ್ನು ಹಿಂಜಿ ಹಿಂಜಿ ನೋಡಿದ್ದಾರೆ.

ಸೊಗಸಾದ ಸೊಗಡು ತುಂಬಿದ ಭಾಷೆ, ಅರ್ಥಪೂರ್ಣ ನಿರೂಪಣಾ ಶೈಲಿ ಕಾದಂಬರಿಯನ್ನು ಮಹತ್ತರ ಮಟ್ಟಕ್ಕೇರಿಸಿದೆ.

ಮೊಕಾಶಿಯವರ 'ಅವಧೇಶ್ವರಿ': (1987) ಲೇಖಕರ ಮಾತಿನಲ್ಲೇ ಇದೊಂದು ವೇದಕಾಲೀನ ರಾಜಕೀಯ ಕಾದಂಬರಿ. 'ಋಗ್ವೇದ' ಮತ್ತು 'ಬೃಹ ದೇವತಾ' ಗ್ರಂಥಗಳಲ್ಲಿನ ಬೀಜ ರೂಪದ ಕಥೆಗೆ ಮೊಕಾಶಿಯವರು ಗೊಬ್ಬರ ಹಾಕಿ ನೀರು ಹುಯ್ದು ತಮಗೆ ಅನುಕೂಲವಾದ ಪರಿಸರದಲ್ಲಿ ಬೆಳೆಸಿದ್ದಾರೆ. ಕಥಾ ಲತೆ ಹುಲುಸಾಗಿ ಬೆಳೆದು ಕಳ ಕಳಿಸುತ್ತಿದೆ. ಅವಧೇಶ್ವರಿ ಕಥೆ ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದರಲ್ಲಿ ಅವಧೇಶ್ವರಿಯ ರಾಜ್ಯ ವ್ಯವಹಾರ ಕುಶಲತೆ ನಿರೂಪಿತಗೊಂಡಿದ್ದರೆ ಎರಡನೆ ಭಾಗದಲ್ಲಿ ವೈಶೌಜಾನ ಮತ್ತು ಸಸ ದಸ್ಯುವಿನ ತಿಕ್ಕಾಟದ ಚಿತ್ರಣವಿದೆ.

ಲೇಖಕರು ಪುರಾಣ ಕತೆಗೆ ಕಲ್ಪನೆಯ ಮಧುಪಾನ ಮಾಡಿಸಿ ಬೇಕಾದ ರೀತಿಯಲ್ಲಿ ಪಾತ್ರಗಳಿಂದ ನೃತ್ಯ ಮಾಡಿಸಿದ್ದಾರೆ. ಬೇಕೆಂದೆಡೆಗೆ ಹರಿದಾಡಿಸಿದ್ದಾರೆ. ಕಾಮ-ಪ್ರೇಮದ ಕಡೆ ಸಿಹಿಯನ್ನು ಪಾತ್ರಗಳಿಗೆ ಉಣಬಡಿಸಿದ್ದಾರೆ. ಅದ್ಭುತ ಉತ್ಪ್ರೇಕ್ಷೆಯಿಂದ ಅಸಂಭವನೀಯ ಘಟನೆಗಳನ್ನು ಸಂಭವನೀಯ ಮಾಡಿ ತೋರಿಸಿದ್ದಾರೆ. ಒಟ್ಟಿನಲ್ಲಿ ಕಥಾನಕ ಓದುಗರ ಕುತೂಹಲ ಕೆರಳಿಸಿ ಆನಂದ ಸುಷೀಪ್ತಿಯಲ್ಲಿ ತೇಲಿಸಿ ಬಿಡುತ್ತದೆ. ಪೂರ್ಣ ಮನರಂಜನೆ ನೀಡುತ್ತದೆ.

ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿರುವ ಕೃತಿಗಳು (1980-90)

ಸಿ. ಎನ್. ಜಯಲಕ್ಷ್ಮೀ ದೇವಿಯವರ 'ಗಂಗರಸ ದುರ್ವಿನೀತ' : ಈ ಐತಿಹಾಸಿಕ ಕಾದಂಬರಿಗೆ 1980 ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಮಹಿಳೆಯರು ಇಂತಹ ಕಥಾನಕವನ್ನು ಆರಿಸಿಕೊಳ್ಳುವುದು ತೀರಾ ಅಪರೂಪ. 500 ಪುಟಗಳ ಈ ಬೃಹತ್ ಕಾದಂಬರಿಯಲ್ಲಿ ಲೇಖಕಿ ಚಾರಿತ್ರಿಕ ಕಥೆಯನ್ನು ಬಹಳ ಕುತೂಹಲಕಾರಿಯಾಗಿ ನಿರೂಪಿಸಿದ್ದಾರೆ. ಸರಳ ಸುಂದರ ಭಾಷೆ, ಚಾಲುಕ್ಯ ಕಾಲದ ಪರಿಸರವನ್ನು ನಿರ್ಮಿಸುವಲ್ಲಿ ಲೇಖಕಿ ಸಾಕಷ್ಟು ಯಶಸ್ವಿಯಾಗಿದ್ದಾರೆ.

ಕುಂ ವೀರಭದ್ರಪ್ಪನವರ ಕಾದಂಬರಿ 'ಕಪ್ಪು' : (1981) ಇವರ ಪ್ರಥಮ ಕಾದಂಬರಿಗೇ ಪುರಸ್ಕಾರ ದೊರೆತಿರುವುದು ಅವರ ಕರ್ತೃತ್ವ ಶಕ್ತಿಯನ್ನು ಪ್ರಬುದ್ಧತೆಯನ್ನು

ತಿಳಿಸುತ್ತದೆ. ಈ ಕಾದಂಬರಿಯಲ್ಲಿ ಮೇಲ್ವರ್ಗದವರು ಕೆಳವರ್ಗದವರನ್ನು ತುಳಿಯುವ ಕ್ರೂರ ವ್ಯವಸ್ಥೆಯ ಚಿತ್ರಣವಿದೆ. ಎರಡು ಗ್ರಾಮದ ಹಿರಿಯ ಗೌಡರುಗಳ ಮಧ್ಯೆ ಬದ್ಧ ದ್ವೇಷವಿದ್ದರೂ, ಹೆಣ್ಣಿನ ಬಗ್ಗೆ ಚಿಂತಿಸುವಾಗ ಏಕತಾನತೆ ಕಂಡುಬರುತ್ತದೆ. ರೂಪಸಿ ಗೌರಿಯನ್ನು ಇಬ್ಬರು ಗೌಡರೂ ಬಯಸುತ್ತಾರೆ. ಒಬ್ಬ ಗೌಡನ ಸವಿಮಾತಿಗೆ ಸಿಕ್ಕಿ ಬಿದ್ದ ಅವಳನ್ನು ಇನ್ನೊಂದು ಬಣದ ಜನ ಕದ್ದೊಯ್ಯುತ್ತಾರೆ. ಅವಳನ್ನು ಬಸವಿಯಾಗಿ ಮಾಡಲು ಹವಣಿಸುತ್ತಾರೆ. ಬಸವಿ ಆಗಲು ಬಯಸದ ಗೌರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಕಥೆ ಹೆಣೆಯುವಲ್ಲಿ ಲೇಖಕರ ಕೌಶಲ್ಯ ಎದ್ದು ಕಾಣುತ್ತದೆ. ಭಾಷೆಯಲ್ಲಿನ ವ್ಯಂಗ್ಯ ಕಥೆಯುದ್ದಕ್ಕೂ ಮೈ ಮುರಿಯುತ್ತಾ ಸಾಗಿ ನಿರೂಪಣೆಗೆ ಹೊಸತನವನ್ನು ನೀಡುತ್ತದೆ.

ಡಾ|| ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' : (1982) ಈ ಕೃತಿಯಲ್ಲಿ ಲೇಖಕರು ಪ್ರೀತಿ ದ್ವೇಷಗಳ ನೆರಳಾಟವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಕಥೆಯ ನಿರೂಪಣಾ ತಂತ್ರ ಉತ್ತರ ಕರ್ನಾಟಕದ ಸೊಗಡು ತುಂಬಿದ ಭಾಷೆ. ಕಾದಂಬರಿಯನ್ನು ಉತ್ಕೃಷ್ಟವಾಗಿಸಿದೆ. ಕಾಮವೇ ಕಥೆಯ ಜೀವತಂತುವಾಗಿ ನಿರ್ಭಯವಾಗಿ ಹರಿದು ಸೋತು ಗೆಲ್ಲುತ್ತದೆ. ಗಂಡನಿಂದ ಬಸಿರಾಗದ ಸಿಂಗಾರವ್ವೆ ಪ್ರೇಮಿ ಮರ್ಯಾನನ್ನು ಕೂಡಿ ಬಸಿರಾಗುತ್ತಾಳೆ. ಶೋಷಿತ ಮರ್ಯಾ ಗೆದ್ದ ಗೆಲುವಿನಿಂದ ಬೀಗುತ್ತಾನೆ. ಗಂಡ ದೇಸಾಯಿ ಅವಮಾನದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಗಂಡನ ಸಾವಿಗೆ ತಾನೆ ಕಾರಣವೆಂದು ನೊಂದು ಜೈಲು ಸೇರಿ, ಅಲ್ಲೇ ಹೆರಿಗೆಯಲ್ಲಿ ಮರಣ ಹೊಂದುತ್ತಾಳೆ. ಇವಳ ಮಗ ಬೆಳೆದು ದೊಡ್ಡವನಾದಾಗ ಈ ಅರಮನೆಯನ್ನು ಪಾಠಶಾಲೆಗೆ ದಾನ ಮಾಡಿ ಪಾಪ ಕೂಪದಿಂದ ಹೊರಬಂದಂತೆ ಸಮಾಧಾನ ಗೊಳ್ಳುತ್ತಾನೆ.

ಜಾನಪದ ಕಥಾನಕವೊಂದು ನುರಿತ ಲೇಖಕರ ಕಲಾಕುಂಚದಲ್ಲಿ ಜೀವತಳೆದು ಮಿಂಚಿದೆ.

ಡಾ|| ಎಸ್. ಎಲ್. ಭೈರಪ್ಪ ರವರ 'ಸಾಕ್ಷಿ' : (1986) ಜೀವನದಲ್ಲಿ ಒಂದೇ ಒಂದು ಸುಳ್ಳು ಹೇಳಿದ ಪರಮೇಶ್ವರಯ್ಯ ಪಶ್ಚಾತ್ತಾಪ ಪಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಯಮಧರ್ಮನಿಂದ ವರ ಪಡೆದ ಆತನ ಆತ್ಮ ಭೂಲೋಕಕ್ಕೆ ಬಂದು ಎಲ್ಲರ ಒಳಗು ಹೊರಗು ಪರೀಕ್ಷಿಸುತ್ತದೆ. ನೀತಿ, ನೆಲೆಯ ಶೋಧನೆ ತುಲನೆ ನಡೆಸುತ್ತದೆ. ನಿಜವು ನೀತಿಯ ನೆಲೆಯೇ? ನೀತಿಯು ನಿಜದ ನೆಲೆಯೇ? ಈ ಮೂಲಭೂತ ಪ್ರಶ್ನೆಗೆ ಸಾಕ್ಷಿ ಎನ್ನಬೇಕಾದ ಜೀವ ಮೌನ ತಾಳುತ್ತದೆ.

ಕಲಾತ್ಮಕ ಪಾತ್ರ ರಚನೆ, ಕಥಾ ಸಂವಿಧಾನ, ಬಾಷೆಯ ಸೊಗಸು, ಕುತೂಹಲ ಕೆರಳಿಸುವ ನಿರೂಪಣಾ ಶೈಲಿ ಕಾದಂಬರಿಯನ್ನು ಶ್ರೇಷ್ಠ ಮಟ್ಟಕ್ಕೊಯ್ಯುತ್ತದೆ.

ಡಾ|| ಮ. ನ. ಜವರಯ್ಯನವರ 'ಮಾಗಿ' : (1987) ದಲಿತರ ಜೀವನವನ್ನು ಪ್ರತಿನಿಧಿಸುವ ಕಾದಂಬರಿ 'ಮಾಗಿ' ಹೇಗೆ ಕೆಚ್ಚೆದೆಯಿಂದ ಆತಂಕಗಳನ್ನು ಎದಿರಿಸುತ್ತಾಳೆ ಎಂಬುದನ್ನು ಲೇಖಕರು ಮನೋಜ್ಞವಾಗಿ, ಹರಿತವಾದ ಭಾಷೆಯಲ್ಲಿ ಚಿತ್ರಿಸಿದ್ದಾರೆ.

'ಒಡಲಾಳ', 'ಕುಸುಮ ಬಾಲೆ' ಕಾದಂಬರಿಗಳ ಜೊತೆಯಲ್ಲಿ ನಿಲ್ಲುವ ಮೌಲ್ಯಾಧಾರಿತ ಈ ಕಾದಂಬರಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿದೆ. ಇಲ್ಲಿನ ನೂರಾರು ಪಾತ್ರಗಳು ಕ್ರೌರ್ಯ, ಶೋಷಣೆ, ದಾರಿದ್ರ್ಯ ಪ್ರತಿನಿಧಿಸಿ ಕಾದಂಬರಿಗೆ ವೈಶಿಷ್ಟ್ಯತೆಯನ್ನು ತಂದು ಕೊಟ್ಟಿವೆ. ಅನುಭವದ ಸಾರ ಹಾಗೂ ಭಾಷಾ ಪ್ರೌಢಿಮೆ ಸೇರಿ ಇದು ಅಪೂರ್ವ ಕೃತಿಯಾಗಿ ನಿಲ್ಲುತ್ತದೆ.

ಡಾ|| ಎಂ. ಪಿ. ಉಮಾದೇವಿಯವರ 'ಬದುಕಲಾರದ ಬಲವಂತರು' : ಎರಡು ಕುಟುಂಬಗಳ ಏಳು ಬೀಳುಗಳ ಸಜೀವ ಚಿತ್ರಣ ಇಲ್ಲಿದೆ. ಸಾಂದರ್ಭಿಕವಾಗಿ ಸ್ವಾತಂತ್ರ್ಯೋತ್ತರ ಶಿಕ್ಷಣದ ವೈಫಲ್ಯ ಸಹ ತಿಳಿದುಬರುತ್ತದೆ. ಲೇಖಕಿ ಆರಿಸಿಕೊಂಡಿರುವ ಕಥಾ ಭಿತ್ತಿ ಬಹಳ ದೊಡ್ಡದು. ಪಾತ್ರಗಳೂ ಅಧಿಕ.

ಕಾದಂಬರಿಯ ನಾಲ್ಕು ಭಾಗಗಳಲ್ಲಿ ವಕೀಲರ ಹಾಗೂ ಅವರ ದೊಡ್ಡಪ್ಪನವರ ಕುಟುಂಬಗಳ ಸವಿಸ್ತಾರ ವಿವರ ದೊರೆಯುತ್ತದೆ. ಎರಡೂ ಕುಟುಂಬಗಳಲ್ಲಿ ಒಂದೊಂದು ಆತ್ಮಹತ್ಯೆ ನಡೆಯುತ್ತದೆ; ಮತ್ತೆ ನಿರಾಶೆ, ಸಂಕಟ, ದುರಂತಗಳಿಂದ ಸಂಸಾರಗಳು ತಲ್ಲಣ ಗೊಳ್ಳುತ್ತವೆ ಆದರೂ ಬೇಡದ ಬದುಕನ್ನು ಎಲ್ಲರೂ ಬಾಳುತ್ತಿರುತ್ತಾರೆ.

ಉಮಾದೇವಿಯವರು ಪಾತ್ರಗಳನ್ನು ಕೇವಲ ಕಣ್ಣಿನಿಂದ ನೋಡಿರುವುದಿಲ್ಲ. ಕ್ಷ-ಕಿರಣ ಹಾಯಿಸಿ ಆಂತರ್ಯವನ್ನೂ ಶೋಧಿಸಿದ್ದಾರೆ. ಇಲ್ಲಿನ ಆಡುಭಾಷೆ ಇನ್ನೊಂದು ಆಕರ್ಷಕ ಅಂಶ......ನಿರೂಪಣೆ ಸರಳ ಆದರೆ ಸತ್ವಪೂರ್ಣ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಪುರಸ್ಕಾರ ಪಡೆದಿರುವ ಕಾದಂಬರಿಗಳು (ಸೃಜನಶೀಲ ಸಾಹಿತ್ಯ (1980))

ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ' : ವೈಜ್ಞಾನಿಕ ಹಿನ್ನೆಲೆಯಲ್ಲಿ ರೂಪಿತಗೊಂಡಿರುವ ಈ ಕಾದಂಬರಿ ವಿಶಿಷ್ಟವಾದ ಕಥಾವಸ್ತು ಹಾಗೂ ನಿರೂಪಣಾ ಶೈಲಿಯಿಂದಾಗಿ ವೈಶಿಷ್ಟ್ಯತೆ ಗಳಿಸಿದೆ.

ಕರ್ವಾಲೋ ಕೀಟಶಾಸ್ತ್ರಜ್ಞ, ಮಂದಣ್ಣ ಆತನ ಪ್ರಿಯ ಶಿಷ್ಯ. ಬಹಳ ಅಚ್ಚು ಮೆಚ್ಚಿನವನು. ಕಳ್ಳಭಟ್ಟಿ ತಪಾಸಣೆ ನಡೆಸಿದ ಪೊಲೀಸರು ಮಂದಣ್ಣನನ್ನು ಹಿಡಿದುಕೊಂಡು ಹೋಗುತ್ತಾರೆ. ಕರ್ವಾಲೋ ಬಹಳ ಆಸಕ್ತಿ ವಹಿಸಿ ಆತನನ್ನು ಬಿಡಿಸುತ್ತಾನೆ. ಕರ್ವಾಲೋ ಮತ್ತು ಮಂದಣ್ಣನ ಮಧ್ಯದ ಗಾಢ ಸ್ನೇಹಕ್ಕೆ ಕಾರಣವೇನು? ಇದೇ ಕಥೆಯ ಮೂಲ ಕೊಂಡಿ? ಹಾರುವ ಓತಿ ಹಿಡಿಯುವ ಪ್ರಕರಣ ಬಹಳ ರೋಚಕವಾಗಿದೆ.

ಈ ಕೃತಿಯ ಬಗ್ಗೆ ವಿಮರ್ಶಕ ಟಿ. ಪಿ. ಅಶೋಕರ ಮಾತು ಉಲ್ಲೇಖನೀಯ :

'ಇಲ್ಲಿ ಅನುಭವ - ಅನುಭಾವ, ವಿಚಾರ - ಕುತೂಹಲ, ಸದೃಶ್ಯ- ವೈದೃಶ್ಯ, ನೋಟ ನಿಗೂಢಗಳು ಪುಟ ಪುಟದಲ್ಲೂ ಘರ್ಷಿಸುತ್ತಾ ಒಂದನ್ನೊಂದು ಬೆಳೆಸುತ್ತಾ ಒಂದು ಅಪರೂಪ ಸಂದರ್ಭ ಸೃಷ್ಟಿಯಾಗಿದೆ. ಈ ಪ್ರಯೋಗ ಮಹತ್ವಪೂರ್ಣ ಘಟ್ಟವಾಗಿದೆ.'

ಇದೇ ರೀತಿಯ ವಿಶೇಷ ಬಹುಮಾನ ಗಳಿಸಿರುವ ಇತರ ಕೃತಿಗಳು (ii) ಚದುರಂಗರ

'ವೈಶಾಖ' (1981); (iii) ತ.ರಾ.ಸು ರವರ 'ದುರ್ಗಾಸ್ತಮಾನ' (1982); ಶೇಷನಾರಾಯಣ ಅವರ 'ಬೀಸು' (1983); (iv) ವ್ಯಾಸರಾಯ ಬಲ್ಲಾಳರ 'ಬಂಡಾಯ' (1986); ಕಾ. ತ. ಚಿಕ್ಕಣ್ಣ ಅವರ'ಮುಂಜಾವು' (1989)

ಇವುಗಳ ಬಗ್ಗೆ ಸಮೀಕ್ಷೆಯನ್ನು ಹಿಂದೆಯೆ ಮಾಡಲಾಗಿದೆ.

ಈ ಮೇಲಿನ ಸಮೀಕ್ಷೆಯಿಂದ ಕನ್ನಡ ಕಾದಂಬರಿ ಕ್ಷೇತ್ರ ಸಮೃದ್ಧ ಸಂಖ್ಯೆಯಿಂದಲೇ ಸಂಪನ್ನವಾಗಿ ಬೆಳೆಯುತ್ತಿದೆ ಎಂದು ಸಮಾಧಾನವಾಗುತ್ತದೆ.

* * * * *

ಜೀತಪದ್ಧತಿಯನ್ನೊಳಗೊಂಡ ಎರಡು ಕಥೆಗಳು

-ಜಯಲಕ್ಷ್ಮೀ ಸೀತಾಪುರ

ಕನ್ನಡ ಸಣ್ಣ ಕತೆಗಳ ಕ್ಷೇತ್ರದಲ್ಲಿ ಪ್ರಾದೇಶಿಕ ಜೀವನದ ಹಿನ್ನೆಲೆಯಲ್ಲಿ ಕೃತಿರಚನೆ ಮಾಡಿದವರು ಹೆಚ್ಚು ಸಂಖ್ಯೆಯಲ್ಲಿಲ್ಲ. ಕುವೆಂಪು, ಕಾರಂತ ಹಾಗೂ ಗೊರೂರರವರನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದಾಗಿದೆ. ಮುಂದಿನ ಪೀಳಿಗೆಯ ಗದ್ಯ ಲೇಖಕರಲ್ಲಿ ಗ್ರಾಮೀಣ ಬದುಕನ್ನು ತಮ್ಮ ಸಾಹಿತ್ಯಕ್ಕೆ ಅಳವಡಿಸಿಕೊಂಡು ಕೃತಿ ರಚನೆ ಮಾಡಿದವರಲ್ಲಿ ಡಾ. ಜೀ. ಶಂ. ಪರಮಶಿವಯ್ಯ ಅವರು ಅಗ್ರಗಣ್ಯರು. ಸಣ್ಣಕತೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ಕವಿತೆ ಹಾಗೂ ಮಕ್ಕಳ ಸಾಹಿತ್ಯದಲ್ಲಿ ಕೈಯಾಡಿಸಿರುವ ಇವರು ಗ್ರಾಮ ಜೀವನದ ಬದುಕಿನ ನಿಷ್ಠುರ ಸತ್ಯಗಳನ್ನು ತಮ್ಮ ಬರವಣಿಗೆಗಳಲ್ಲಿ ಕಲಾತ್ಮಕವಾಗಿ ಪಡಿಮೂಡಿಸಿದ್ದಾರೆ. ಜೀಶಂಪ ಎಂಬ ಕಾವ್ಯನಾಮದಿಂದ ಹೆಸರಾಗಿರುವ ಇವರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಗ್ರಾಮೀಣ ವಸ್ತುವನ್ನು ಸಮರ್ಥವಾಗಿ ಬಳಸಿ ವಿನೂತನ ಪ್ರಯೋಗಗಳನ್ನು ತಮ್ಮ ಕತೆಗಳಲ್ಲಿ ಮಾಡಿತೋರಿಸಿದರು. ಐವತ್ತರ ದಶಕದಿಂದಲೇ ಸಣ್ಣಕತೆಗಳನ್ನು ಬರೆಯಲು ತೊಡಗಿದ ಜೀಶಂಪ ಅವರು ಅನೇಕ ಬಹುಮಾನಗಳನ್ನು ಪಡೆದವರು. ಪ್ರಬುದ್ಧ ಕರ್ನಾಟಕದಲ್ಲಿ 1954-55 ರ ಸುಮಾರಿಗೆ ಇವರ ಕತೆಗಳು ಪ್ರಕಟವಾಗುತ್ತಿದ್ದಾಗ ಹೊಸ ರೀತಿಯ ಸಂವೇದನೆಗಳು ಗ್ರಾಮೀಣ ಭಾಷೆಯ ಸೊಗಡು ಮನಮುಟ್ಟುವ ವಸ್ತುಗಳು ಎಲ್ಲರ ಮೆಚ್ಚುಗೆಯನ್ನು ಪಡೆದವು. ಜೀಶಂಪ ಅವರ ಮೊದಲ ಕಥಾಸಂಕಲನ 'ಕಾವಲುಗಾರ ಮತ್ತು ಇತರ ಕತೆಗಳು' ಪ್ರಕಟವಾದುದು 1955 ರಲ್ಲಿ. ಅವರ ಎರಡನೆ ಸಂಕಲನ 'ಮಬ್ಬುಜಾರಿದ ಕಣಿವೆಯಲಿ' ಪ್ರಕವಾದುದು 1960 ರಲ್ಲಿ. ಅವರ ಸಮಗ್ರ ಕತೆಗಳ ಸಂಪುಟ ಪ್ರಕಟವಾದುದು 1974 ರಲ್ಲಿ. ಅವರ ಆಯ್ದ ಕತೆಗಳ ಪಠ್ಯಪುಸ್ತಕ ಆವೃತ್ತಿ ಪ್ರಕಟವಾದುದು 1988ರಲ್ಲಿ. ಒಟ್ಟಾರೆ ಇವರ ವಿದ್ವತ್ತಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಲಭ್ಯವಾಗಿದೆ.

ಕನ್ನಡದಲ್ಲಿ ಜೀತಪದ್ಧತಿಯನ್ನು ಕುರಿತಂತೆ ಪರಿಣಾಮಕಾರಿಯಾಗಿ ಜೀಶಂಪ ಅವರು 'ಮಬ್ಬು ಜಾರಿದ ಕಣಿವೆಯಲ್ಲಿ' ಚಿತ್ರಿಸಿದ್ದಾರೆ. ಈ ಶೀರ್ಷಿಕೆಯ ಕೆಳಗೆ ಪ್ರಕಟವಾಗಿರುವ ಕತೆಯನ್ನು ಮುಂದೆ ವಿಶ್ಲೇಷಿಸಲಾಗುವುದು. ಮಂಡ್ಯ ಜಿಲ್ಲೆಯವರೇ ಆದ ಜೀಶಂಪ ಅವರು ತಮ್ಮ ಸುತ್ತಣ ಪರಿಸರದ ಹಿನ್ನೆಲೆಯಲ್ಲಿ ಜೀತಪದ್ಧತಿಯ ಮೇಲೂ ಬೆಳಕು ಚೆಲ್ಲಿರುವುದು ಇಲ್ಲಿ ಗಮನಾರ್ಹ.

ಮಂಡ್ಯ ಜಿಲ್ಲೆಯಿಂದಲೇ ಬಂದ ಮತ್ತೊಬ್ಬ ಉತ್ತಮ ಕತೆಗಾರರು ಡಾ. ಬೆಸಗರಹಳ್ಳಿ ರಾಮಣ್ಣನವರು. ಸಣ್ಣಕತೆಯ ಕ್ಷೇತ್ರದಲ್ಲಿ ಗಮನಾರ್ಹವಾದ ಕೆಲಸ ಮಾಡಿರುವರು. ಮಂಡ್ಯ ಜಿಲ್ಲೆಯ ಬದುಕನ್ನು ತಮ್ಮ ಕತೆಗಳಲ್ಲಿ ಹಾಸುಹೊಕ್ಕಾಗಿ ಹಿಡಿದಿಟ್ಟಿರುವ ಶ್ರೀಯುತರು ಕಳೆದ ಎರಡು ದಶಕಗಳಿಂದ ಸತತವಾಗಿ ಕಥಾಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬಂದು ಆ ಕ್ಷೇತ್ರಕ್ಕೆ ಗಟ್ಟಿಯಾದ ಕೊಡುಗೆಯನ್ನು ಕೊಟ್ಟವರು.

ಡಾ. ಬೆಸಗರಹಳ್ಳಿ ರಾಮಣ್ಣನವರಿಗೆ 1965ರಲ್ಲಿ ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ

ಪ್ರಥಮ ಬಹುಮಾನ 1968, 1972ರಲ್ಲಿ ಕಥಾ ಸಾಹಿತ್ಯ ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಥಮ ಬಹುಮಾನಗಳು 'ಒಂದು ಹುಡುಗನಿಗೆ ಬಿದ್ದ ಕನಸು' ಕಥಾ ಸಂಕಲನಕ್ಕೆ 1979ರಲ್ಲಿ ಪ್ರಕಟವಾದ ಶ್ರೇಷ್ಠ ಪುಸ್ತಕವೆಂದು, ಉದಯೋನ್ಮುಖ ವರ್ಧಮಾನ ಪ್ರಶಸ್ತಿ ದೊರಕಿದೆ. 1962ರಿಂದ 1984ರವರೆಗೆ ಬರೆದ ಅವರ, ಎಲ್ಲಾ ಕತೆಗಳು 'ಕನ್ನಂಬಾಡಿ' ಯಲ್ಲಿ ಪ್ರಕಟಗೊಂಡಿವೆ.

ರಾಷ್ಟ್ರದ ಸಮಸ್ಯೆಗಳನ್ನೂ, ಗ್ರಾಮೀಣ ಬದುಕಿನ ತುಡಿತಮಿಡಿತಗಳನ್ನೂ ಸಮರ್ಥವಾಗಿ ಚಿತ್ರಿಸುವಲ್ಲಿ ಸಾರ್ಥಕ್ಯವನ್ನು ಪಡೆದಿದ್ದಾರೆ. ಡಾ. ಜೀಶಂಪ ಅವರ "ಮಬ್ಬು ಜಾರಿದ ಕಣಿವೆಯಲ್ಲಿ" ಹಾಗೂ ಡಾ. ಬೆಸಗರಹಳ್ಳಿ ಅವರ "ಜೀತ" ಕತೆಗಳನ್ನು ಆರಿಸಿಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ.

ಈ ಎರಡೂ ಕತೆಗಳಲ್ಲಿ ವ್ಯತವಾಗಿರುವ ದಲಿತರ ಬವಣೆ ಅಸಹಾಯಕತೆ ಮನ ಕರಗಿಸುವಂತದ್ದು. ಸಮಾಜದ ವ್ಯವಸ್ಥೆಯ ಬಗೆಗೆ ವ್ಯಥೆಪಡುವಂಥ, ಮಾರ್ಮಿಕ ಸನ್ನಿವೇಶಗಳ ಚಿತ್ರಣವಾಗಿದೆ.

ಜೀಶಂಪ ಅವರ ಕತೆಯ ಪ್ರಾರಂಭ 'ಸಂಜೆ ಅಲ್ಲಿಯೇ ತಂಗಿದರು!' ಎನ್ನುವ ಆಶ್ಚರ್ಯ ಕುತೂಹಲಗಳ ನಡುವೆ ನಮ್ಮನ್ನು ಸಿಲುಕಿಸುತ್ತಾರೆ. ಒಂದೇ ರೀತಿಯಲ್ಲಿ ನಡೆಯುವ ಈ ಕತೆ ಮಾನಸಿಕವಾಗಿ ಬಹಳ ಬದಲಾವಣೆಯನ್ನು ಕಾಣುತ್ತದೆ. ರಾಮಜ್ಜ ಬಾಲ್ಯದಿಂದಲೂ ಜೀತದಲ್ಲಿ ಇದ್ದು ಜೀವನ ಸಾಗಿಸಿದವನು. ತನ್ನ ಮಕ್ಕಳನ್ನು ಜೀತಕ್ಕಿಟ್ಟವನು. ತಾನು ಜೀತಕ್ಕಿದ್ದ ಮನೆಗೆ ಮಗಳ(ವಿಧವೆ) ಮಗನನ್ನು ಕರೆದೊಯ್ದಿದ್ದಾನೆ. ಜೀತಕ್ಕಿರಿಸುವುದು ಮಗಳಿಗೆ ಅಸಮಾಧಾನ. ತಾನಿದ್ದ ಭಯಾನಕ ರಾತ್ರಿಗಳನ್ನು ರಾಮಜ್ಜ ಇಂದು ಜಗುತಿಯ ಮೇಲೆ ನೆನಸಿಕೊಳ್ಳುತ್ತಾನೆ. ಮೊಮ್ಮಗನಿಗೆ ಧೈರ್ಯ ತುಂಬುತ್ತಾನೆ. ನಿತ್ಯ ಖಾಯಂ ಆಗಿ ಮಲಗುವ ಜಾಗದ ಅರಿವನ್ನು ಮನವರಿಕೆ ಮಾಡಿಕೊಡುತ್ತಾನೆ.

ಅಂದು ರಾತ್ರಿ ಭಯಂಕರವಾದ ವಿಕಟರೂಪದ ಸದ್ದು ಆಗುತ್ತದೆ. ಅರಳಿಮರ ಬುಸಗುಟ್ಟಂತೆ . . . . . ಅರಳಿಮರ ಮುಪ್ಪಾಗಿದೆ ರಾಮಜ್ಜನಿಗೂ ಅರಳಿಮರದಷ್ಟು ಮುಪ್ಪಡರಿದೆ. ಮರದೆಲೆಯ ಸದ್ದಿನ ಜೊತೆಗೆ ಉದಾ:(ಪುಟ 4) 'ಗುಗ್ಗುಗೂ . . . . ಗೂ . ಗುಗ್ಗುಗೂ. . . ಗೂ'ಎನ್ನುವ ಸದ್ದು, ಲೇಖಕರೇ ಹೇಳುವಂತೆ 'ಶೂನ್ಯದ ಒಡಲಿಗೆ ಚೂರಿಯನ್ನು ಎಸೆದಂತೆ, ಎಷ್ಟು ಸಮರ್ಥ ಪ್ರತಿಮೆ! ಕಿವಿಯ ಮೇಲೆ ಮಸೆದ ಆ ಸದ್ದಿಗೆ ರಾಮಜ್ಜನ ಎದೆಯೇ ನಡುಗಿಹೋಯಿತು. ಮೊಮ್ಮಗ ಹೆದರಿಯಾನು ಎಂದು. . . .

'ಮಗಾ. . . . . "ಹ್ಞೂ.. . . . ."

ಭಯದ ವಾತಾವರಣವನ್ನು ಮರೆಸಲು ಯಾರೇ ಆದರೂ ನಿಜ ಜೀವನದಲ್ಲಿ ಹೀಗೆ ಆ ಸನ್ನಿವೇಶದಲ್ಲಿ ಧೈರ್ಯ ತಂದುಕೊಳ್ಳಲು ಬದಲಿ ಮಾತನ್ನಾಡುವುದು ಸಹಜ. ಹಾಗೆಯೇ ಇಲ್ಲಿ ರಾಮಜ್ಜ

". . . . . . . .ನಮ್ಮೂರ್ಗಿಂತ ಸಳೀಲ."

"ಹೂ. . . . . . ಇಲ್ವಾ?"

ಜೀಶಂಪ ಅವರು ಬಳಸುವ ಪ್ರತಿಮೆಗಳು ಹೆಚ್ಚು ಪರಿಣಾಮಕಾರಿ. ಉದಾ: ಅಲಬಿಯನೆತ್ತಿ ಗೂಗರೆಯಿತು. ಪ್ರೇತ ಸ್ವಪ್ನದಂತೆ ! ಹಾಗೂ 'ಪುಟ್ಟರಂಗನ ಕಿವಿಗಳೇ ನೋಡಿದವು'! ಕಿವಿಗಳು ನೋಡಲು ಸಾಧ್ಯವೇ? ಇಲ್ಲಿ ಸಾಧ್ಯವಾಗಿದೆ. ಈಸಂದರ್ಭದಲ್ಲಿ ಅಜ್ಜನ ಮನಸ್ಸಿನಲ್ಲಿ ನಡೆಯುವ ಹೋರಾಟ, ಚಿಂತತೆ ಒಂದು ದಿಕ್ಕಾದರೆ ಮೊಮ್ಮಗನದೆ ಇನ್ನೊಂದು. ಉದಾ: 'ಅಪ್ಪ ಇನ್ನೂವೆ ಎಚ್ಚರಾಗೇ. . . . . . . .ಗೀಪ ಬಿಡಿಸ್ಕೊಂಡೇ ಕುಂತವಳೀನಜ್ಜ ಇತ್ಲಾಗೆ ನೋಡ್ತಾ . . . . ." ಈ ಮಾತು ಎಂಥ ಕಲ್ಲೆದೆಯನ್ನು ಕರಗಿಸುವಂಥದ್ದು. ಈತನ ಎಳೆಯ ಮನಸ್ಸು ಇನ್ನೂ ಅಪ್ಪನ ಆಸರೆಯನ್ನು ಬಯಸುವುದು ಸಹಜ. ಬಿಸಿಯ ಮಡಿಲಲ್ಲಿ ನಿದ್ರಿಸುವ ವಯಸ್ಸು. ಆದರೆ ಜೀವನ ಸಾಗಿಸಲು ಅನ್ಯಮಾರ್ಗವಿಲ್ಲದೆಯೇ ರಾಮಜ್ಜನಿಗೆ ಇದು ಅನಿವಾರ್ಯವಾಗಿದೆ.

ರಾಮಜ್ಜನಿಗೂ ಮಗಳಿಗೂ ಮಾತು ಹೀಗೆ ನಡೆದಿತ್ತು. "ನನ್ನ ಮಗ ನನಗೆ ಹೊರೆಯಾಗಿಲ್ಲ 'ಕಣಪ್ಪ! ನನ್ನ ಕೈಕಾಲು ಗಟ್ಟಿಗರೋತಂಕ ಅವನ್ನ ನೆರ್ಮನೆ ಜೀತದ ಎತ್ತು ಮಾಡಾಕೆ ನನಗ್ಮನ್ಸಿಲ್ಲ. . . . ." ಹೆಣ್ಣಾದರೂ ಈಕೆ ಸ್ವಾಭಿಮಾನದ ನುಡಿಯಾಡಿದ್ದಾಳೆ. ತಾನು ದುಡಿದು ಹಾಕುವ ಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದಾಳೆ. ಮತ್ತು ಜೀಶಂಪ ಅವರ ಪ್ರತಿಮೆ 'ಜೀತದ ಎತ್ತು' ಎನ್ನುವಲ್ಲಿ ವ್ಯಕ್ತವಾಗಿದೆ. ಮೂಗುದಾರವನ್ನು ಹಾಕಿದ ಎತ್ತು ಹೇಗೆ ಬೇಕಾದರೂ ನಡೆಸಿಕೊಳ್ಳಬಹುದು. ಜೀತದ ಆಳಿಗೆ ಅನ್ವರ್ಥನಾಮವಾಗಿದೆ ಇಲ್ಲಿ ಜೀತವ ಎತ್ತು. ಇನ್ನೊಂದು ಹೆಣ್ಣು ಧ್ವನಿಯೇ ಜೀತವನ್ನು ಪ್ರತಿಭಟಿಸಿರುವುದು ಗಮನಾರ್ಹ. ಉದಾ. ಪುಟ ೬ ರಲ್ಲಿ "ನಮ್ಮಪ್ಪ ಸಾಯ್ತಾಗ ಕೊನೆವರ್ಗು ಹೇಳೀ ಸತ್ತು. . . . . 'ನೆರ್ಮನೆ ಜೀತುಕ್ಕಾಕಬ್ಯಾಡಿ ಮಕ್ಕಳ. . . . . ನಮ್ಮನೆ ಗಂಜಿ ಕುಡುಮ್ರು ಅಂತ ಬಾಳ್ಮೆ ಬ್ಯಾಡ ಅಂತ". ಸ್ವಾಭಿಮಾನದ ನಿಟ್ಟುಸಿರೇ ಹೊರತು ಈ ಮಾತುಗಳ ಅಡಿಯಲ್ಲಿ ನೋವನ್ನು ಗುರುತಿಸಬಹುದು. ಸಾಧನೆ ಮಾತ್ರ ವಿಫಲ. ಇದೇ ಸಂದರ್ಭದಲ್ಲಿ ರಾಮಜ್ಜನ ಬಾಯಿಂದ ಮಗಳನ್ನು ಕುರಿತು... (ಪು.6)' ನೀವೆಲ್ಲಾ ಕೈಲರೀದ ಜನ.... ನಿನ್ನ ಗಂಡ್ನೂ ಅಂಗೆಯ ಅವನು ಮೈಮುರಿದು ಕೆಲ್ಸ ಮಾಡಿದ್ರೆ ಆ ಕಾಯ್ಲೆ ತಾನೆ ಯಾಕೆ ಬತ್ತಿತ್ತು ಎಲ್ಲಾ ಅವರವರು ತಂದ್ಕೊಳ್ಳೊದು....'ಎನ್ನುವಲ್ಲಿ ಶರೀರವ ಆರೋಗ್ಯವನ್ನು ಕಾಪಾಡಿಕೊಳ್ಳುವ ಅಗತ್ಯವನ್ನು ಕುರಿತಂತೆ ಗಟ್ಟಿ ಮಾತಿನಲ್ಲಿ ನುಡಿದಿರುವುದು ಸೂಕ್ತವಾಗಿದೆ.

ನಿದ್ದೆ ತಾತ-ಮೊಮ್ಮಗನಿಗೆ ಇಬ್ಬರಿಗೂ ಬಂದಿರಲಿಲ್ಲ. ಪುಟ್ಟರಂಗ ರಾಮಜ್ಜನನ್ನು ಕುರಿತು ಜಾತೀಯತೆಯ ಒಳಪದರವೇ ಕಳಚಿಕೊಳ್ಳುವ ಸಹಜ ಪ್ರಶ್ನೆಗಳನ್ನು ಮಾಡುತ್ತಾನೆ. ಮುಗ್ಧವಾಗಿ ಕೇಳುತ್ತಾನೆ. ಉದು: "ಏನ್ ತಾತಾ.... ನಾವು ಯಾವತ್ತೂವೆ ಈ ಮನೆ ಒಳೀಕೆ ಹೋಗಿಲ್ವ?"

" ಹೋಗ್ತೋದಲ್ಲ. ನಮ್ಮನೆ ಒಳೀಕೆ ಯಾವತ್ತೇಕಾದ್ರೂ ಹೋಗ್ತೋದು"!

"ಅಲ್ಲ...... ಇವ್ರ ಮನೆ ಒಳೀಕೆ".

"ಇಲ್ಲ....ಇಲ್ಲ...... ಅದು ಮಾತ್ರ ಆಗೋದಲ್ಲ..... ಹನುಮಂತ್ರಾಯ ಬಿಟ್ಟಾನ? ಎರಡು ಕಣ್ಣೂ ಕಿತ್ಕೊಂಬಿಡ್ತಾನೆ'. ಇಲ್ಲ ಎನ್ನುವ ಪುನರುಕ್ತಿ ಗಾಬರಿಯನ್ನು ಸೂಚಿಸುವ

ದ್ಯೋತಕವಾಗಿ ಬಳಸಿರುವುದು ತಕ್ಕದ್ದಾಗಿದೆ. ದೇವರೇ ಇದನ್ನ ಒಪ್ಪಲ್ಲ ಎನ್ನುವಷ್ಟರ ಮಟ್ಟಿನ ತಿಳುವಳಿಕೆ ರಾಮಜ್ಜನದು.

ಪುನಃ ಮೊಮ್ಮಗ "ಅವ್ರೆ ಕರದ್ರೂವೆ?".......

"ಅವ್ರೆ ಕರದ್ರು ಹೋಗಬ್ಯಾಡ್ದು"

"ಜಗ್ತಿಮ್ಯಾಲೆ ನೀನೊಬ್ನೆ ಮನಿಕತ್ತಿದ್ದಾ ತಾತಾ....." ಎಂದು ಭಯದಿಂದ ಕೇಳ್ತಾನೆ.

"ಇನ್ನೇನು ಕಿಬ್ಲಿಗೊಂದು ಕಲ್ ಕಟ್ಕಳ್ಲ?"ಅಸಹನೆಯಿಂದ ತಾತ ನಾನು ಒತ್ತರಿಕೆ ಪೊತ್ನಂತೆ ಎದ್ದು ಹೋಗ್ಬೇಕು ಅಂತಾನೆ. ಇಲ್ಲಿ 'ಅವ್ರೆ ಕರದ್ರು ಹೋಗಬ್ಯಾಡ್ದು'ಎನ್ನುವ ರಾಮಜ್ಜನ ಮಾತಿನ ಜಾಡನ್ನು ಒಡಿದು ಚಿಂತಿಸಿದಲ್ಲಿ ಆತನಲ್ಲಿ ಆಳವಾಗಿ ಬೇರೂರಿರುವ ಸಂಪ್ರದಾಯ ನಂಬಿಕೆಗಳ ಕೊಂಡಿಯನ್ನು ಬಿಡಿಸಿಕೊಳ್ಳಲಾಗದೆ ಹೊಂದಿಕೊಂಡಿರುವುದು ಗೋಚರವಾಗುತ್ತದೆ.

ನಂತರದ ಕಥಾವಸ್ತುವೇ ಬೇರೆ . ರಾಮಜ್ಜನಿಗೆ ಅರೆನಿದ್ದೆಯಲ್ಲಿ ಕನಸೊಡೆಯುತ್ತದೆ. ತನ್ನ ಮೊಮ್ಮಗ ಕಿರುಬನ ಬಾಯಿಗೆ ತುತ್ತಾಗುವ ಸನ್ನಿವೇಶ ಕುರಿ ಮೇಯಿಸುವಾಗ, ಆತಂಕದಿಂದ ಹೌಹಾರಿದ ರಾಮಜ್ಜ ಚಿಂತೆ ಭಯಗಳ ಸರಮಾಲೆಯಿಂದ ಮುಕ್ತನಾಗುತ್ತಾನೆ. ಶ್ರೀಯುತರು 'ಮಂಜು ಕವಿದಂತಾಗಿ, ಪೃಥ್ವಿ ಮಂಕಾಗಿದ್ದ' ಎನ್ನುವ ಪ್ರಯೋಗ ಅರ್ಥಪೂರ್ಣವಾದುದು. ರಾಮಜ್ಜನ ಮಿದುಳು ಸಂಪೂರ್ಣ ಜಾಲಾಗಿ ಬೆಳಕಿನೆಡೆಗೆ ಧಾವಿಸಿದೆ. ಈ ಸಂದರ್ಭದಲ್ಲಿ ಕೋಳಿ ಕೂಗುವ ಹೊತ್ತನ್ನು ನೈಜವಾಗಿ ಚಿತ್ರಿಸಿದ್ದಾರೆ. ಉದಾ...... ಅರಳಿಯ ಮರದ ನೆತ್ತಿಯಲ್ಲಿ ಮುಳುಗುತ್ತಿದ್ದ ಚಂದ್ರನ ಕೊನೆಯ ಕಿರಣಗಳು ಬಿದ್ದು ಎಲೆಗಳು ಬೆಳ್ಳಿಯ ಗೆರೆಗಳಾಗಿ ಮಿರುಗುತ್ತವೆ.... ಬೆಳ್ಳಿಗೆರೆಗಳು ರಾಮಜ್ಜನ ಪರಿವರ್ತನೆಯ ಸಾಂಕೇತಿಕ ಗುರುತಾಗಿವೆ. ರಾಮಜ್ಜನ ಪಾತ್ರದಲ್ಲಿ ಹೊಸ ತಿರುವು ಮೂಡುತ್ತದೆ. ಇಲ್ಲಿನ ಮನೋವಿಶ್ಲೇಷಣಾ ರೀತಿ ಅತ್ಯುತ್ತಮವಾದುದು. ಜೀತದ ರೌದ್ರತೆಯನ್ನು ವ್ಯಗ್ರಗೊಳಿಸದ ಹಾಗೆ, ಅಸಹಾಯಕ ಸನ್ನಿವೇಶಗಳ ಕ್ರೌರ್ಯವನ್ನು ನಿವಾರಿಸಿ ಕಲಾತ್ಮಕತೆಯಿಂದ ಕುಸುರಿಸಿದ್ದಾರೆ. ರಾಮಜ್ಜ ಯಾರ ಪ್ರಭಾವವು ಇಲ್ಲದೆ ಸನ್ನಿವೇಶದ ಒತ್ತಡದಿಂದ ತನಗೆ ತಾನೇ ಪರಿವರ್ತನೆಗೊಂಡು ಒಂದೇ ರಾತ್ರಿಯಲ್ಲಿ ಬಹಳಷ್ಟು ಎತ್ತರವಾಗಿ ಬೆಳೆದಿದ್ದಾನೆ, 'ಮಬ್ಬು ಜಾರಿತು' ಎನ್ನುವ ಶೀರ್ಷಿಕೆ ಸೊಗಸಾಗಿದೆ ಸಾರ್ಥಕವಾಗಿದೆ. ರಾಮಜ್ಜನ ಮಬ್ಬು ಜಾರಿತು ಕಣಿವೆಗಳಿಗೆ ಬೆಳಕು ಬೀಳುವುದು ನಿಧಾನ ಅಂತೆಯೇ ಕಣಿವೆಯ ಸಂಕೇತವಾಗಿದ್ದಾನೆ ರಾಮಜ್ಜ.

ಜೀಶಂಪ ಅವರು ಗ್ರಾಮ್ಯಪದಗಳ, ಸಂಭಾಷಣೆಯನ್ನು ನೈಜವಾಗಿ ಹೆಣೆದಿದ್ದಾರೆ. ರಾಮಜ್ಜನ ಕಲ್ಪನೆಯಲ್ಲಿಯೇ ಕತೆಯ ನೆಯ್ಗೆಯನ್ನು ಸಂಪೂರ್ಣ ನೆಯ್ದಿರುವುದು ಶ್ಲಾಘನೀಯ.

ಡಾ. ಬೆಸಗರಳ್ಳಿ ಅವರು, ಅವರ ಕತೆಯ ಪ್ರಾರಂಭದಲ್ಲಿ ನಮಗೆ ಪೌರಾಣಿಕ ನಾಟಕದ ರುಚಿಯನ್ನು ತೋರಿಸುತ್ತಾರೆ. ಕಲೆಯ ಗೀಳು. ಯಾರನ್ನು ಬಿಟ್ಟದ್ದಲ್ಲ. ಗ್ರಾಮೀಣ ಜನತೆಯ ಮನರಂಜನಾ ಮಾಧ್ಯಮ ಪೌರಾಣಿಕ ನಾಟಕಗಳು, ಕರ್ಣ, ಭೀಮ, ದುರ್ಯೋಧನ, ಧರ್ಮರಾಯರು ಅವರ ನಿತ್ಯಜೀವನದ ಸಮೀಪ ಬಂಧುಗಳು. ಜೀವನ ಬಂಧುಗಳು.

'ಜೀತ'ಕತೆಯಲ್ಲಿ ಸಾಹೂಕಾರ್ ದೇವಿರಯ್ಯನ ಮನೆಯಲ್ಲಿರುವ ಚಿಕ್ಕರಾಮ ಕಷ್ಟಪಡುವ ಜೀವಿ. ಚಿಕ್ಕರಾಮ ಚಿಕ್ಕವನೇ ಆದರೂ ಆತನ ಕೆಲಸದ ಬಾಹುಳ್ಯ ಹೆಚ್ಚು. ರಾತ್ರಿಯೆಲ್ಲಾ ನಿದ್ದೆಗೆಟ್ಟು ಕುರುಕ್ಷೇತ್ರ ನಾಟಕ ನೋಡಿದ್ದಾನೆ. ಬೆಳಕರಿತ್ಲೆ ಮುವ್ವತ್ತು ಮಕ್ಕರಿ ಕಸಗುಡಿಸಿ ಹೊತ್ತಾಕಿದ್ದಾನೆ. ಹಸಿಹುಲ್ಲು ಕುಯ್ದು ತಂದಿದ್ದಾನೆ. ಗಡದ್ದಾಗಿ ತಂಗ್ಳೂಟ ಮಾಡಿ ದನಕುರಿಯನ್ನು ಮೇಯಿಸಲು ಹೊಡೆದುಕೊಂಡು ಹೋಗುತ್ತಾನೆ. ತನ್ನ ಗೆಳೆಯನ ಕೂಡ ಮಾವಿನ ತೋಪಿನಲ್ಲಿ ನಾಟಕದ ಅಭಿನಯವನ್ನು ಮಾಡುತ್ತಾನೆ. ಈ ಸಂದರ್ಭದಲ್ಲಿ ಯುದ್ಧದ ಆಯುಧವಾಗಿ 'ಸರ್ವೆ' ಚಿಬ್ಬೆಯನ್ನು ಮುರಿದು ತಂದಿದ್ದಾನೆ. ಕಾದಾಡಿ ಇಬ್ಬರೂ ಯುದ್ಧ ಸನ್ನಿವೇಶದಲ್ಲಿ ತಣಿದರು. ಗೆಳೆಯ ಪಟ್ಟನಿಂಗ ತನ್ನ ದನ ನೋಡಲು ಆ ಕಡೆ ಹೋದ. ಈ ಕಡೆ ಈತನಿಗೆ ನಿದ್ದೆ ಹತ್ತಿತು. ಗಾಢವಾದ ನಿದ್ದೆ. ದಣಿದ ದೇಹ ತಂಗ್ಳೂಟ ಎಚ್ಚರವೇ ಇಲ್ಲದ ಹಾಗೆ ಮತ್ತು. ಕೆಳಗಿನ ಸನ್ನಿವೇಶದಲ್ಲಿ ಕತೆಗಾರರು ಹೃದಯ ಕಲಕುವ ಚಿತ್ರಣವನ್ನು ಕೊಟ್ಟು, ಸಮಾಜದ ತಾರತಮ್ಯದ ಬಗೆಗೆ ಚಿಂತನೆ ಮಾಡುವಂತೆ ನಿರೂಪಿಸಿದ್ದಾರೆ.

ಚಿಕ್ಕರಾಮನಿಗೆ ಅರಿವಿಲ್ಲದ ಹಾಗೆ ಅಲ್ಲಿಗೆ ಧಾವಿಸಿದ ದೇವೀರಯ್ಯನಿಗೆ ತನ್ನ ದನಗಳಿಂದಲೇ ತನ್ನ ಗದ್ದೆಯ ಲೂಟಿ ನೋಡಿ ಅಗ್ನಿಯ ಅವತಾರವಾಗಿದ್ದಾನೆ. ತನಗಾದ ಲಾಸನ್ನು ಚಿಕ್ಕರಾಮನಿಗೆ ಬಡಿಯುವುದರಿಂದ ತೀರಿಸಿಕೊಳ್ಳುತ್ತಾನೆ. ಅಲ್ಲೇ ಬಿದ್ದಿದ್ದ 'ಸರ್ವೆ' ಚಿಬ್ಬೆಯನ್ನು ಸಾಹೂಕಾರ ತೆಗೆದುಕೊಂಡು ದನ ಬಡಿಯುವ ಹಾಗೆ ಬಡಿಯುತ್ತಾ " ಲೋ ಸೂಳೀಮಗನೇ, ಇದ್ಕೆ ಏನ್ಲ ನಿಂಗೆ ವರ್ಷಕ್ಕೆ ಅರವತ್ತು ರೂಪಾಯಿ ಕೊಟ್ಟು, ಓಟ್ಟು ಬಟ್ಟೆ ಕೊಟ್ಟು, ಜೀತಕ್ಕೆ ಮಡಿಕೊಂಡಿರೋದು. ಕಬ್ಬಿನ ಗದ್ದೆ ನುಗ್ಗಿ ಎರಡು ಪಾತಿ ನುಣ್ಣಗೆ ಮೆಯ್ಕೊಂಡವಲ್ಲೋ" ಎಂದು ಮುಖಮೋರೆ ನೋಡದೆ ಬಾರಿಸುತ್ತಾರೆ (ಪುಟ87).

ಅಭಿಮನ್ಯುವಿನ ಪಾತ್ರ ಮಾಡಿದಂತೆ ಕನಸು ಕಾಣುತ್ತಾ ಕರ್ಣ, ದ್ರೋಣ ಮುಂತಾದ ವೀರರನ್ನು ಸೋಲಿಸುತ್ತಾ ಇದ್ದ ಚಿಕ್ಕರಾಮನಿಗೆ ಈ ಹೊಡೆತದಿಂದ ಭ್ರಾಂತನಾಗಿ ಅಯ್ಯೋ, ಅವ್ವೋ, ಅಪ್ಪೋ, ಅಣ್ಣೋ ಎಂದು ಬಯಲು ಒಂದಾಗುವ ಹಾಗೆ ಅರಚುತ್ತಾನೆ. ಈ ಸಂದರ್ಭದಲ್ಲಿ ಕತೆಗಾರರು ಬಳಸಿರುವ ಕನಸಿನ ಅಭಿಮನ್ಯು ಚಿಕ್ಕರಾಮ ನಿತ್ಯಜೀವನದಲ್ಲಿ ಕೇವಲ ತನ್ನ ದುಡಿತಕ್ಕೆ ತಕ್ಕಷ್ಟು ಊಟ ವಸತಿಯನ್ನು ಒದಗಿಸಿದ ಸಾಹುಕಾರನನ್ನು ಎದುರಿಸಲಾರದೆ ಹೋಗುವುದು ಎಷ್ಟು ನೋವು ತರುವಂತದ್ದು. ವೀರಾವೇಶದ ಹೋರಾಟ ಕನಸಿನಲ್ಲಿ ಮಾತ್ರ ಸಾಧ್ಯವಾಗಿದೆ. ಆಳುವ ಅರ್ಥ ಧ್ವನಿಯೊಂದು ಬಿಟ್ಟರೆ ಆತ ಅಸಹಾಯಕ. ಮಾನವೀಯತೆಯಿಲ್ಲದ ದೇವೀರಯ್ಯನ ಬಗ್ಗೆ ಶ್ರೀಯುತರು ಯಾರಿಗೂ ರೋಷ ಉಕ್ಕಿಸುತ್ತಾರೆ. ಶ್ರೀಮಂತ ವರ್ಗದ ಅಟ್ಟಹಾಸದ ನಾಯಕನಾಗಿ ಮೆರೆದಿದ್ದಾನೆ. ಚಿಕ್ಕರಾಮನ ಸ್ಥಿತಿಯನ್ನು ಗೆಳೆಯ ಪುಟ್ಟನಿಂಗ ಓಡಿಹೋಗಿ ಶಿವಲಿಂಗಣ್ಣನ ಮನೆಯಲ್ಲಿ ಜೀತಕ್ಕಿದ್ದ ಚಿಕ್ಕರಾಮನ ಅಣ್ಣ ಪುಟ್ಟಸ್ವಾಮಿಗೆ ತಿಳಿಸುತ್ತಾನೆ. ಆತಂಕದಿಂದ ಓಡಿಬಂದ ಪುಟ್ಟಸ್ವಾಮಿ'ನೀ ಮನ್ಸನೋ ದನವಯ್ಯ' (ಪುಟ 89) ಎಂದು ಸಾಹುಕಾರನ ಕೈ ತಡೆಯುತ್ತಾನೆ.

'ನೀ ಯಾವೋನೋ ಕೇಳೋಕೆ?'

'ನಾನು ಅವರಣ್ಣ'. ತಪ್ಪು ಮಾಡ್ದ ಅಂತ ಪ್ರಾಣ ತಗದೀಯಯ್ಯ, ಸ್ವಾಭಿಮಾನಿಯಾದ

ಪುಟ್ಟಸ್ವಾಮಿ ಸಹೋದರನ ಏಟುಗಳನ್ನು ನೋಡಿ ದುಃಖ ಉಕ್ಕಿ ಬಂದು ತಾನಿರುವ ಮನೆಗೆ ಕರೆದೊಯ್ಯುತ್ತಾನೆ. ರಾತ್ರಿಯೆಲ್ಲಾ ಚಿಂತಿಸಿ ಸ್ವಂತೂರಿಗೆ ಹೋಗುವ ನಿರ್ಧಾರ ಮಾಡುತ್ತಾನೆ. ಪ್ರತಿಭಟನೆಯ ಧ್ವನಿಯಾಗಿ ಈತ ಇಲ್ಲಿ ಒಡಮೂಡಿದ್ದರೂ ಆ ಧ್ವನಿ ಅಲ್ಲೆ ಅಂತರ್ಗತವಾಗುತ್ತದೆ. ಈ ಹಂಗಿನ ಜೀವನ ಬೇಡವೆಂದು ಹೊರಟಾಗ ತಮ್ಮ ಅಣ್ಣಾ ಎಲ್ಲಿಗೆ ಎಂದು ಕೇಳುತ್ತಾನೆ. ಊರಿಗೆ "! ಎಂದಾಗ, ಅಲ್ಲಿ ಮಳೆ ಬೆಳೆಯಿಲ್ಲದೆ, ಅವ್ವ-ಅಪ್ಪನೇ ಇಲ್ಲಿಗೆ ಬರುವ ಸುದ್ದಿಯನ್ನು ನೆನೆಸುತ್ತಾನೆ. ಪುಟ್ಟಸ್ವಾಮಿಯ ಸ್ವಾಭಿಮಾನ ಸಮಾಧಿಯಾಗುತ್ತದೆ. ಮಾನವೀಯತೆಯಿಲ್ಲದ, ಮಾನವರ ಜೊತೆಗೆ ಪ್ರಕೃತಿಯೂ ಇಂಬಾಗಬೇಕೆ? ಈ ವಿಪರ್ಯಾಸಕ್ಕೆ ಯಾರು ಹೊಣೆ.

ಸಮಾಜದಲ್ಲಿ ದಾಸಪ್ಪನಂಥ ಬುದ್ಧಿಹೀನರು ಇರುತ್ತಾರೆ. ದೇವೀರಯ್ಯನ ಏಟು ತಿನ್ನಲಾರದೆ ತಪ್ಪಿಸಿಕೊಂಡ ಚಿಕ್ಕರಾಮನನು ಹಿಡಿಯುವಲ್ಲಿ ನೆರವಾಗುತ್ತಾನೆ. ದೇವೀರಯ್ಯ ಗುತ್ತಿಗೆದಾರನಾದ ಈತ ಅವನ ಕೃಪಾಕಟಾಕ್ಷಕ್ಕಾಗಿ ಈ ಕೆಲಸವನ್ನು ನೆರವೇರಿಸುತ್ತಾನೆ. ಅಲ್ಲಿ ನೆರದವರಿಂದ ಛೀಮಾರಿಯನ್ನು ಹಾಕಿಸಿಕೊಳ್ಳುತ್ತಾನೆ. ಪ್ರಜ್ಞಾಹೀನ ದೊಂಬಿಯ ಸಂಕೇತವಾಗಿ ಈತ ಇಲ್ಲಿ ಕಾಣಿಸಿಕೊಂಡಿದ್ದಾನೆ.

ಪುಟ್ಟಸ್ವಾಮಿ ಜೀತಕ್ಕಿದ್ದ ಮನೆಯ ಯಜಮಾನ ಶಿವಲಿಂಗಣ್ಣ ಚಿಕ್ಕರಾಮನನ್ನು ಹೊಡೆಯುತ್ತಿರುವಲ್ಲಿಗೆ ಬಂದರೂ ಯಾವ ಪ್ರತಿಭಟನೆಯನಊ ವ್ಯಕ್ತಪಡಿಸುವುದಿಲ್ಲ. ಹಾಗೆಯೇ ಇಲ್ಲಿ ಕತಚಿಗಾರರು. 'ಶಿವಲಿಂಗಣ್ಣ ಬಂದುದನ್ನು ನೋಡಿ ದೇವೀರಯ್ಯನಿಗೆ ಬೆವರು ನೆತ್ತಿಯಿಂದ ಪಾದಕ್ಕಿಳಿಯಿತು ' ಎನ್ನುವ ಮಾತಿಗೆ ಹಿನ್ನೆಲೆಯನ್ನು ಒದಗಿಸಿಲ್ಲ. ಬಹುಶಃ ಅವರಿಬ್ಬರಿಗೂ ಯಾವುದೋ ವೈಷಮ್ಯ ಇದ್ದಿರಬೇಕು.

ಎರಡೂ ಕತೆಗಳಲ್ಲಿಯೂ ಒಂದು ಮುಖ್ಯ ಅಂಶವನ್ನು ಗಮನಿಸಬಹುದು. ಉದಾ:2

'ನೀವೇನಾದ್ರು ಅನ್ನಿ ಹಾಳು ಜೀತಕ್ಕೆ ಮಕ್ಕಳು ಇರಿಸೋದು ಅಂದ್ರೆ ನಂಗೆ ಸಂಕಟ ಬೆಟ್ಟದಷ್ಟು ಬಂದು ಎದೆ ಮೇಲೆ ಅದೀಕಂಡಾಗಾಯ್ತದೆ' ಇತ್ಯಾದಿ ಜೀತವನ್ನು ವಿರೋಧಿಸಿ ಎಷ್ಟೇ ಕಷ್ಟಬಂದರೂ ಈ ಹಂಗೂ ಬ್ಯಾಡ ಎನ್ನುವ ಮಾತುಗಳನ್ನು ಸ್ತ್ರೀಯರೇ ನುಡಿದಿರುವುದು ಗಮನಾರ್ಹ. ಬಹುಶಃ ಹೆತ್ತ ಕರುಳು ಬಾಧಿಸುವುದು ಹೆಚ್ಚು ಹೆಣ್ಣಿಗೆ ಎನ್ನುವ ಅರಿವು ಯಾರಿಗಾದರೂ ಮೂಡುತ್ತದೆ

ಶ್ರೀಯುತರು 'ಬಾಸುಂಡೆ ನುಲಿದುಕೊಳ್ಳುವ ಹಾಗೆ' ದೇವೀರಯ್ಯನವರು ಹೊಡೆಯುವ ಸನ್ನಿವೇಶದಲ್ಲಿ ನಿಜಕ್ಕೂ ನೈಜದಪಾಯವನ್ನೇ ತೋಡಿದ್ದಾರೆ. ದಲಿತರ ಬದುಕಿನ ಆರ್ದ್ರತೆಯನ್ನು ಆರ್ಥಿಕ ತೊಂದರೆಯ, ಪರಾಕಾಷ್ಠತೆಯನ್ನು ಅಂತ್ಯದಲ್ಲಿ ದಾರಣವಾಗಿ ಕೃತಿಸಿದ್ದಾರೆ. ಶೈಲಿ ಗ್ರಾಮ್ಯದ ಸೊಗಡಿನಿಂದ ಕೂಡಿ ಶೋಭಿಸಿದೆ. ಹಾಗೆಯೇ ದೇವೀರಯ್ಯನ ಕುದಿಯುವ ಮನಸ್ಸನ್ನು 'ಕುದಿಯುವ ಬೆಲ್ಲದ ಕೊಪ್ಪರಿಕೆಗೆ ಎತ್ತಿಹಾಕಿದಂತಾಯಿತು, ಎನ್ನುವ ಚಿತ್ರಣ ಕೊಡುವಾಗ ಲೇಖಕರು ಉದಾಹರಣೆಗೆ ಎಲಲ್ಲೂ ಹುಡುಕಾಡದೆ ಇಂಥ ಗದ್ದೆಬಯಲಿನ ಅಜುಬಾಜಿನ ವಸ್ತುವನ್ನು ಉಪಮೆಯಾಗಿರಿಸಿರುವುದು ಮೆಚ್ಚುವಂಥದ್ದು.

ಉದಾ: ಇಲ್ಲಿ ಇವರ ಇನ್ನೊಂದು ಪ್ರತಿಭೆಯನ್ನು ಸ್ಮರಿಸಬಹುದು. ಜೀತಕ್ಕಿರುವ

ವಿಷಯದಲ್ಲಿ ಚಿಕ್ಕರಾಮನ ತಂದೆ... ಹೆತ್ತೋಳ್ಗೆ ದುಃಖ ಎಷ್ಟಿರಬಹುದು..... ಎಂದು ದೀಪದ ಬೆಳಕಿನಿಂದ ಕತ್ತಲೆ ಚೆಲ್ಲಿದ ಗೋಡೆಯ ಕಡೆಗೆ ತಿರುಗಿ ಕಣ್ಣೊರೆಸಿಕೊಂಡ ಎನ್ನುವಲ್ಲಿ ಇವರ ಬದುಕಿಗೆ ಇನ್ನು ಕತ್ತಲೆಯೇ ಎನ್ನುವ ಅರ್ಥವಂತಿಕೆಯನ್ನು ಬಹು ಸಹಜವಾಗಿ ಮೂಡಿಸಿದ್ದಾರೆ.

ಶ್ರೀಯುತರು ಕತೆಯ ಅಂತ್ಯವನ್ನು ಆಳವಾದ ತಿರುವಿನಲ್ಲಿ ನಿಲ್ಲಿಸಿದ್ದಾರೆ. ಗೋಪುರ ಕತ್ತಲೆಯ ಬಸಿರನ್ನು ಸೀಳಿ ಈ ಎರಡು ಮೌನಜೀವಿಗಳ ಗೋಳನ್ನು ಅಸಹಾಯಕವಾಗಿ ನಿಂತು ನೋಡುತ್ತಿತ್ತು ಎನ್ನುವಲ್ಲಿ (ಪುಟ. 94) ಬಹುಶಃ ನಿಷ್ಕ್ರಿಯವಾದ ಸಮಾಜವನ್ನು ಗೋಪುರದ ನಿರ್ಜೀವ ವಸ್ತುವಾಗಿ ಪ್ರತಿಭಟಿಸದಿರದ ಪ್ರತಿಮೆಯಾಗಿರಿಸಿದ್ದಾರೆ.

ಒಟ್ಟಾರೆ ಸಮಾಜದ ಅನಿಷ್ಟ ಪದ್ಧತಿ ಈ ಜೀತ ಪದ್ಧತಿ. ಈ ಕತೆಗಳು 'ಜೀತ'ದ ಮುಕ್ತಿಯ ನಿಟ್ಟಿನಲ್ಲಿ ಸಮಾಜ ಸಾಗರದ ತೆಪ್ಪಕ್ಕೆ ಹುಟ್ಟಾಗಿ ಒಡಮೂಡಿವೆ.

ಡಾ. ಜೀಶಂಪ ಅವರು ಒಂದೇ ರಾತ್ರಿಯಲ್ಲಿನ ತಂತ್ರವನ್ನು ಬಳಸಿ ಕತೆಯ ಬೆಳವಣಿಗೆಯನ್ನು ಸಫಲತೆಗೊಳಿಸಿದ್ದಾರೆ. ಕತೆಯಲ್ಲಿ ನೇತ ಪ್ರತಿಭಟನೆಗೆ, ರೌದ್ರತೆಗೆ ಆಸ್ಪದವಿಲ್ಲ.ಸಮಾಜದ ಕುಂದುಕೊರತೆಗಳನ್ನುಶಾಂತಿಯುತವಾಗಿ ಸಹಿಸಿ ನಿವಾರಿಸುವಲ್ಲಿ ಇವರ ಪರಿವರ್ತನಾ ನೋಟ.

ಡಾ. ಬೆಸಗರಹಳ್ಳಿ ಅವರು ಸನ್ನಿವೇಶಗಳ ಚಿತ್ರಣವನ್ನು ಕರುಳು ಕತ್ತರಿಸುವ, ನೇರವಾಗಿ ವಾಸ್ತವದ ಅರಿವನ್ನು ತಟ್ಟುವ ಹಾಗೆ ಸಾರ್ಥಕ ಚಿತ್ರಣವನ್ನು ನೀಡುವಲ್ಲಿ ಸಮರ್ಥರು. ಸಮಾಜದ ಒಳಿತಿಗಾಗಿ ಪ್ರತಿಭಟನೆಯ ನಿಟ್ಟಿನಲ್ಲಿ ಇವರ ಓಟ.

* * * * *

ಡೆಪ್ಯೂಟಿ ಚೆನ್ನಬಸಪ್ಪನವರ ಸುತ್ತೋಲೆಗಳು

- ಡಾ. ಬಾಳಣ್ಣ ಸೀಗೀಹಳ್ಳಿ

ಸುಮಾರು ಎರಡುಸಾವಿರ ವರ್ಷಗಳಿಗೂ ಮಿಗಿಲಾದ ಸಾಂಸ್ಕೃತಿಕ ಚರಿತ್ರೆ ಹೊಂದಿರುವ ಕರ್ನಾಟಕ ಕಲ್ಯಾಣ ಚಾಲುಕ್ಯರ ಬಳಿಕ ದೇವಗಿರಿ ಯಾದವರು, ದೋರ ಸಮುದ್ರದ ಯಾದವರು(ಹೊಯ್ಸಳರು) ಎಂದು ಎರಡು ಹೋಳಾಗಿ, ಅನಂತರ ಬಹಮನೀ ಸುಲ್ತಾನರ ದಾಳಿಗೆ ತುತ್ತಾಗುವಲ್ಲಿ ಅದರ ಆಂತರ್ಯ ಅವಸಾನದ ಹಾದಿಹಿಡಿಯಿತು. ಇದರಿಂದ ಎಚ್ಚೆತ್ತುಕೊಂಡ ವಿಜಯನಗರ ಸಾಮ್ರಾಜ್ಯ ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ, ಈ ಸಾಂಸ್ಕೃತಿಕ ಪತನವನ್ನು ತಡೆಯಲು ಎಷ್ಟೇ ಸಾಹಸ ಮಾಡಿದರೂ ಅದು ಸಾಧ್ಯವಾಗಲಿಲ್ಲವೆಂಬುದು ಚಾರಿತ್ರಿಕ ಸತ್ಯ.

ತಾಳೀಕೋಟೆಯ ನಿರ್ಣಾಯಕಯುದ್ಧ (ಕ್ರಿ. ಶ. ೧೫೬೫)ರಲ್ಲಿ ವಿಜಯನಗರ ಸಾಮ್ರಾಜ್ಯ ಸೋಲುವುದೇ ತಡ, ಹೇಗೋ ಒಂದಾಗಿದ್ದ ಕರ್ನಾಟಕದ ಅರ್ಧಭಾಗ ಪಾಳೆ-ಪಟ್ಟುಗಳಾಗಿ ಒಡೆದುಹೋಯಿತು. ಹೀಗೆ ತುಂಡಾಗಿದ್ದ ರಾಜ್ಯಗಳು ಅಂತಃ ಕಲಹದಲ್ಲಿ ನಿರತವಾಗಿದ್ದ ಸಮಯ ಸಾಧಿಸಿ ಈ ನಾಡಿನಲ್ಲಿ ನುಗ್ಗಿದುದೆಂದರೆ ಮರಾಠ ರಾಜ್ಯಶಕ್ತಿ. ಸನ್ನಿವೇಶದ ವ್ಯಂಗ್ಯವೆಂದರೆ ವಿಜಯನಗರದಂಥ ಒಂದು ಬಹುದೊಡ್ಡ ಸಾಮ್ರಾಜ್ಯವನ್ನೇ ಒಳಸಂಚಿನ ಮೂಲಕ ಧ್ವಂಸಮಾಡಿದ್ದ ಮುಸಲ್ಮಾನ ಅರಸರು ಒಂದು ಕಡೆಯಿಂದ ತಮ್ಮ ಭಾಷೆ-ಸಂಸ್ಕೃತಿಗಳನ್ನು ಬಲಾತ್ಕರದಿಂದ ಹೇರುತ್ತಿದ್ದರೆ, ಮತ್ತೊಂದು ಕಡೆಯಿಂದ ಕನ್ನಡಿಗರು ಈ ದುರ್ಬಲ ಕ್ಷಣಗಳಲ್ಲಿ ಮರಾಠಿ ಭಾಷೆ-ಸಂಸ್ಕೃತಿಗಳನ್ನು ತಾವಾಗಿಯೇ ಮನೆತುಂಬಿಸಿಕೊಳ್ಳುತ್ತ ನಡೆದರು. ಈ ವಿಕರ್ಷಣೆಗೆ ಹೆಚ್ಚು ಬಲಿಯಾದ ಪ್ರದೇಶವೆಂದರೆ ಮಹಾ ರಾಷ್ಟ್ರಕ್ಕೆ ಹೆಚ್ಚು ಹತ್ತಿರದಲ್ಲಿಯೇ ಇದ್ದ ಉತ್ತರ ಕರ್ನಾಟಕ.

ಅವಕಾಶವಾದೀ ಮನೋಧರ್ಮದ ಈ ಅನ್ಯ ರಾಜಕೀಯ ಶಕ್ತಿಗಳಿಗೆ ಭೂಗೋಲವನ್ನು ಕಬಳಿಸುವ ಮಹಾತ್ವಾಕಾಂಕ್ಷೆಯ ಜೊತೆಗೆ ತಮ್ಮ ಆಡಳಿತದ ಸೌಲಭ್ಯಕ್ಕಾಗಿ ಭಾಷೆ -ಸಂಸ್ಕೃತಿಯನ್ನು ಹೇರುವ ಚಪಲ ಹುಟ್ಟಿದ್ದು ಸಹಜವೇ ಆಗಿತ್ತು. ಆದರೆ ಇದು ಕನ್ನಡನಾಡಿನ ಜನತೆಯ ಪಾಲಿಗೆ ನಿಧಾನ ಪರಿಣಾಮ ಬೀರುವ ವಿಷಪ್ರಾಶನದಂತಾಯಿತು. ಅದು ಸದ್ದಿಲ್ಲದಂತೆ ಇಲ್ಲಿಯ ಸಾಂಸ್ಕೃತಿಕ - ಜೀವಕೋಶ ಗಳನ್ನೇ ನಾಶಮಾಡಿತು. ಇದರಿಂದಾಗಿ ಈ ಭಾಗ ಸಂಪೂರ್ಣ ಮರಾಠಿಮಯವಾಗಿ ಹೋಯಿತಷ್ಟೇ ಅಲ್ಲ; ಇದು "ದಕ್ಷಿಣಮಹಾರಾಷ್ಟ್ರ" ಎಂದೂ ಹೆಸರು ಪಡೆಯಿತು. ಮುಂದೆ ರಸೆಲ್ಲರು ಈ ಭಾಗದ ಎಜ್ಯುಕೇಶನಲ್ ಇನ್ಸಸ್ಪೆಕ್ಟರರಾಗಿ ಬರುವವರೆಗೂ ಬ್ರಿಟಿಶ್ ಅಧಿಕಾರಿಗಳೂ ಅದನ್ನೇ ನಂಬಿ ವ್ಯವಹರಿಸಿದರು. ಪರಿಣಾಮವಾಗಿ ಕನ್ನಡಿಗರ ಬದುಕಿನ ಎಲ್ಲರಂಗಗಳಲ್ಲಿ ಮರಾಠಿಯೇ ವಿಜೃಂಭಿಸಿತು. ಈ ಹೊರಗಿನ ರಾಜಕೀಯ ಶಕ್ತಿಗೆ ಒಳಗಿನ ಹಿತಾಸಕ್ತಿಯೂ ಕೈಗೂಡಿಸಿದಾಗ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ಕೆಲವೇ

ಕೆಲವು ಪ್ರಜ್ಞಾವಂತರನ್ನು ಬಿಟ್ಟರೆ ಇನ್ನುಳಿದವರೆಲ್ಲ ಸಹಜವಾಗಿಯೇ ಮರಾಠಿ ವ್ಯಾಮೋಹವನ್ನು ಬೆಳೆಸಿಕೊಂಡರು. ಕನ್ನಡ ನೆಲದಲ್ಲಿಯೇ ಕನ್ನಡ ಅಸ್ಪೃಶ್ಯ ಭಾಷೆಯೆನಿಸಿತು. ಆಳುವ ವರ್ಗವನ್ನು ಓಲೈಸುವ ಸಂಭ್ರಮದಲ್ಲಿ ತಾವು ಎಂಥ ವಿನಾಶದತ್ತ ಸಾಗುತ್ತಿದ್ದೇವೆ ಎಂಬುದನ್ನೇ ಮರೆತುಬಿಟ್ಟರು. ಇಲ್ಲಿಯ ಜನ. ಇದು ಮರಾಠಿಗರ ಪಾಲಿಗೆ ನಿದ್ರೆ ಬಂದವರಿಗೆ ಹಾಸಿಗೆ ಹಾಕಿಕೊಟ್ಟಷ್ಟು ಅನುಕೂಲವನ್ನು ಒದಗಿಸಿತು.

ತಮಗೂ ಮರಾಠಿ ಬರುತ್ತದೆ. ಎಂಬುದೇ ಕನ್ನಡಿಗರ ಪಾಲಿಗೆ ಒಂದು ವರವಾಗಿ ಪರಿಣಮಿಸಿದಾಗ ನೋಡುತ್ತಿರುವಂತೆಯೇ ಕನ್ನಡ ಭಾಷೆ-ಸಂಸ್ಕೃತಿಗಳು ಮಣ್ಣುಪಾಲಾಗ ತೊಡಗಿದವು. ಮರಾಠಿ ಶಾಲೆಗಳೇ ಎಲ್ಲ ಕಡೆಗೂ ತಲೆಯೆತ್ತಿ ಇಲ್ಲಿಯ ಶಿಕ್ಷಣಕ್ಷೇತ್ರ ಸಂಪೂರ್ಣ ದುರ್ಲಕ್ಷ್ಯಕ್ಕೆ ಒಳಗಾಯಿತು. ಈಗಾಗಲೆ ಪುಣೆ. ಮಹಾರಾಷ್ಟ್ರದ ರಾಜಧಾನಿ ಎನಿಸಿದ್ದರಿಂದ ಅದು ಹಲವು ಚಟುವಟಿಕೆಗಳ ಕೇಂದ್ರವೂ ಆಯಿತು. ಮುಖ್ಯವಾಗಿ ಶಿಕ್ಷಣ ಕೇಂದ್ರವೆಂಬ ಪ್ರತೀತಿ ಬೆಳೆಯಿತು. ಉಚ್ಚ ಶಿಕ್ಷಣ ಪಡೆಯಬೇಕೆಂಬ ಕನ್ನಡಿಗರು ಪುಣೆಗೆ ಹೋಗುವುದು ಅನಿವಾರ್ಯವಾಯಿತು. ಹೀಗೆ ಪುಣೆಗೆ ವ್ಯಾಸಂಗಕ್ಕಾಗಿ ಹೋದವರೂ 'ಪುಣೇರಿ' ಗಾಳಾಗಿಯೇ ಹಿಂತಿರುಗತೊಡಗಿದರು.

ಇಂಥ ಸಾಮಾಜಿಕ ಸಂದರ್ಭದ 'ಅರಿವು ಕಣ್ತೆರೆದಂತೆ' ಹುಟ್ಟಿದವರು ಡೆಪ್ಯೂಟಿ ಚನ್ನಬಸವಪ್ಪನವರು(೧೮೩೩). ಇಂದು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಹೆಸರು ಪಡೆದಿರುವ ಧಾರವಾಡದಲ್ಲಿ ಹುಟ್ಟಿ, ಅಂದು ಮಹಾರಾಷ್ಟ್ರದ ಸಾಂಸ್ಕೃತಿಕ -ಶೈಕ್ಷಣಿಕ ರಾಜಧಾನಿ ಎನ್ನಿಸಿಕೊಳ್ಳುತ್ತಿದ್ದ ಪುಣೆಯಲ್ಲಿ ಶಿಕ್ಷಣ ಪಡೆಯಲು ಅವರು ಹೋದದ್ದು ಒಂದು ರೀತಿಯ ದೈವಸಂಕಲ್ಪವೇ ಎನ್ನಬೇಕು. ಹನ್ನೆರಡು ವರ್ಷದ ಕನ್ನಡಿಗ ಭಾಷೆ-ಸೀಮೆ ಗೊತ್ತಿಲ್ಲದ ನಾಡಿಗೆ ಕಾಲ್ನಡಿಗೆಯಲ್ಲಿ ಹೋಗಿ ಇಂಜಿನೀಯರಿಂಗ್ ಕಲಿತದ್ದು, ಮರಳಿ ಕನ್ನಡನಾಡಿಗೆ ಬಂದು ಶಿಕ್ಷಣ ಕ್ಷೇತ್ರ ಪ್ರವೇಶಿಸಿದ್ದು, ಕನ್ನಡದ ಪುನರುಜ್ಜೀವನಕ್ಕೆ ತಮ್ಮನ್ನು ಸಮರ್ಪಿಸಿಕೊಂಡದ್ದು ತರ್ಕಕ್ಕೆ ನಿಲುಕಲಾರದ ಒಂದು ಸೋಜಿಗ !.

ಮರಾಠಿಗರು ತಮ್ಮ ಭಾಷೆ, ಸಂಸ್ಕೃತಿ ಮತ್ತು ನಾಡಿನ ವಿಷಯಗಳಲ್ಲಿ ಬೆಳೆಸಿಕೊಂಡಿದ್ದ ಪ್ರೀತಿ ಸ್ವಾಭಿಮಾನ, ಆತ್ಮಗೌರವಗಳು ಚೆನ್ನಬಸಪ್ಪನವರ ಒಳಗಣ್ಣನ್ನು ತೆರೆಸಿದವು. ಅಲ್ಲಿಯ ಸಮಾಜ ಮುಖಂಡರಾಗಿದ್ದ ಜ್ಯೋತಿಬಾ ಫುಲೆ, ಲೋಕಮಾನ್ಯ ಟಿಳಕ, ಗೋಪಾಲಕೃಷ್ಣ ಗೋಖಲೆ, ಗೋಪಾಲ ಗಣೇಶ ಆಗರಕರ ಮೊದಲಾದವರ ಕಾರ್ಯವಿಧಾನಗಳನ್ನು ಪ್ರತ್ಯಕ್ಷಕಂಡ ಚೆನ್ನಬಸಪ್ಪನವರು ಅಲ್ಲಿಯೇ ಒಂದು ' ಚೈತನ್ಯ' ವಾಗಿ ರೂಪುಗೊಂಡರು. ಕರ್ನಾಟಕಕ್ಕೆ ಕಾಲಿರಿಸಿದ್ದೇ ತಡ, ನೆಪಕ್ಕೆ ಕೆಲವು ದಿನ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಶಿಕ್ಷಣ ಇಲಾಖೆಗೆ ಪದಾರ್ಪಣ ಮಾಡಿದರು. ೧೮೫೭ರಲ್ಲಿ ಆರಂಭಗೊಂಡ ಧಾರವಾಡದ ನಾರ್ಮಲ್‌ಸ್ಕೂಲಿನ ಪ್ರಿನ್ಸಿಪಾಲರಾಗಿ ಸೇವೆಯನ್ನು

ಆರಂಭಿಸಿದ ಈ 'ಮಹಾಚೇತನ' ಆ ಸ್ಕೂಲನ್ನು ಟ್ರೇನಿಂಗ್ ಕಾಲೇಜನ್ನಾಗಿ ಬೆಳೆಸಿದರಲ್ಲದೆ ಆ ಮೂಲಕ ಕನ್ನಡನಾಡಿಗೆ ಎಂದೂ ಮರೆಯಲಾರದ ಘನತೆ -ಗೌರವಗಳನ್ನು ಸಂಪಾದಿಸಿಕೊಟ್ಟರು. ಈ ಎಲ್ಲ ಹಿನ್ನೆಲೆಯನ್ನು ಹೊತ್ತ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಆಗಿ ಬಡತಿಹೊಂದಿ ಈ ನಾಡಿನಲ್ಲಿ ನಡೆಸಿದ ಶೈಕ್ಷಣಿಕ ಕ್ರಾಂತಿಯ ಒಂದೊಂದು ದಿಟ್ಟಹೆಜ್ಜೆಯ ಕುರುಹುಗಳಾಗಿವೆ. ಅವರು ಹೊರಡಿಸಿದ ಸುತ್ತೋಲೆಗಳು ಆಧುನಿಕ ಕನ್ನಡನಾಡಿನ ಪುನುರುಜ್ಜೀವನದ ಇತಿಹಾಸದಲ್ಲಿ ಚೆನ್ನಬಸಪ್ಪನವರ ಸ್ಥಾನವೇನು ? ಎಂದು ಪ್ರಶ್ನಿಸುವವರಿಗೆ ಅವರ ಈ ಒಂದೊಂದು ಸುತ್ತೋಲೆಗಳೇ ಸೂಕ್ತವಾದ ಉತ್ತರ ನೀಡಬಲ್ಲವು. ವಸ್ತು, ಭಾಷೆ, ಉದ್ದೇಶ, ಪರಿಣಾಮಗಳ ದೃಷ್ಟಿಯಿಂದ ತುಂಬ ವಿಶಿಷ್ಟವಾಗಿರುವ ಈ ಸುತ್ತೋಲೆಗಳು ಎಂದೆಂದೂ ಸಂಗತವಾಗಿವೆ, ಚೇತೋಹಾರಿಯಾಗಿವೆ.

ಇವುಗಳನ್ನು ನೋಡುತ್ತಿದ್ದಂತೆ ಅಂದಿನ ಇಡೀ ಪ್ರಾಥಮಿಕ ಶಿಕ್ಷಣ ರಂಗವೇ ರೂಪುತಳೆದು ನಿಲ್ಲುತ್ತದೆ. ಶಿಕ್ಷಕರ ಸ್ಥಾನಮಾನ, ಅವರ ಸಾಮಾಜಿಕ - ಸಂಬಂಧ, ಅವರ ಆರ್ಥಿಕ -ಬೌದ್ಧಿಕ ಮಟ್ಟ, ಅವರ ಕಾರ್ಯಬಾಹುಳ್ಯ ವಿದ್ಯಾರ್ಥಿಗಳ ಒಡನಾಟ, ಅವರ ಕಾರ್ಯವೈಖರಿ - ಮೇಲಧಿಕಾರಿಗಳ ಬಗೆಗಿನ ಭಯ-ಭಕ್ತಿ, ಅವರು ತಮ್ಮ ಕಾತುರ್ಯಕ್ಕೆ ಅನುಭವಿಸುತ್ತಿದ್ದ ದಂಡ-ಶಿಕ್ಷೆಗಳು, ಅವರ ಕಲಿಕೆಯ ವಿಧಾನ - ಬಳಸುತ್ತಿದ್ದ ಭಾಷೆ, ಅಂದಿನ ಮರಾಠಿ ಪ್ರಭಾವ-ಪರೀಕ್ಷಾ ಪದ್ಧತಿ, ದಾಖಲೆಗಳನ್ನು ಶಾಲೋಪಯೋಗಿ ಸಲಕರಣೆಗಳನ್ನು ಇಡುವ ಬಗೆಗಿನ ತಿಳುವಳಿಕೆ, ಒಳ್ಳೆಯ ಶಿಕ್ಷಕರು ಪಡೆಯುತ್ತಿದ್ದ ಪ್ರೋತ್ಸಾಹ - ಮೆಚ್ಚುಗೆ, ಕೆಲವು ಶಿಕ್ಷಕರು ತಮ್ಮ ವೃತ್ತಿಯ ಬಗ್ಗೆ ತೋರುತ್ತಿದ್ದ ಅನಾಸಕ್ತಿ, ಶಿಕ್ಷಕರನ್ನು ನೇಮಿಸುತ್ತಿದ್ದ ರೀತಿ ಬಡತಿ - ಹಿಂಬಡತಿ, ಸಂಬಳದ ಹೆಚ್ಚಳ-ಕಡಿತ, ಕೆಲಸದಿಂದ ತೆಗೆಯುವುದು ಇಂಥ ಒಂದು ವಿಸ್ತಾರವಾದ ಪ್ರಪಂಚವೇ ಈ ಸುತ್ತೋಲೆಗಳಲ್ಲಿ ಅಡಕವಾಗಿದೆ.

ಇದು ಕೇವಲ ಅಧಿಕಾರದ ಗತ್ತು ಪ್ರದರ್ಶಿಸುವುದಕ್ಕಾಗಿ ಹೊರಡಿಸುತ್ತಿದ್ದವುಗಳಂತೂ ಅಲ್ಲ. ಪ್ರತಿಯೊಂದು ಸುತ್ತೋಲೆಯ ಹಿಂದೆ ಅದರ ವಿಷಯಾನುಸಾರ ಪ್ರಾಮಾಣಿಕ ಕಳಕಳಿ ಕಂಗೊಳಿಸುತ್ತಿರುವುದನ್ನು ಯಾರೂ ಸುಲಭವಾಗಿ ಗ್ರಹಿಸಬಹುದಾಗಿದೆ. ನ್ಯಾಯ - ನಿಷ್ಠುರ ಮನೋಧರ್ಮ ಹಾಗೂ ಕಾರ್ಯಾನುಷ್ಠಾನದ ತೀವ್ರಾಸಕ್ತಿಯ ಈ ಸುತ್ತೋಲೆಗಳ ಜೀವಾಳ. ಲಭ್ಯವಾದ ಸುತ್ತೋಲೆಗಳ ಸಂಖ್ಯೆ ೯೯. ಈ ಒಂದೊಂದು ಸುತ್ತೋಲೆಗೂ ಪ್ರತ್ಯೇಕವಾದ ಆಶಯವಿರುವುದರಿಂದ ಇವುಗಳನ್ನು ವರ್ಗೀಕರಿಸಿಕೊಂಡರೆ ಎಲ್ಲಿ ಇವುಗಳ ಸಹಜತೆ ಮುಕ್ಕಾಗುತ್ತದೊ ಎಂಬ ಭಯ. ಆದರೂ ಅಭ್ಯಾಸದ ಅನುಕೂಲಕ್ಕಾಗಿ ಅವುಗಳನ್ನು ವರ್ಗೀಕರಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ:

೧. ಕನ್ನಡ ನಿಷ್ಠೆಯ ಸುತ್ತೋಲೆಗಳು.

೨. ಭಾಷೆ-ಬರೆಹ ಸು[illegible]ಗೆ ಒತ್ತುನೀಡಿದ ಸುತ್ತೋಲೆಗಳು.

೩. ಶಾಲೆ-ಶಿಕ್ಷಕ-ವಿದ್ಯಾರ್ಥಿ ಕೇಂದ್ರಿತ ಸುತ್ತೋಲೆಗಳು.

೪. ನೇಮಕಾತಿ, ವರ್ಗಾವರ್ಗಿ, ಬಡತಿ-ಹಿಂಬಡತಿ, ದಂಡ-ಶಿಕ್ಷೆ ಇತ್ಯಾದಿ ಆಡಳಿತಾತ್ಮಕ ಸುತ್ತೋಲೆಗಳು.

೫. ಇತರ ಸುತ್ತೋಲೆಗಳು.

ಹೀಗೆ ಒಟ್ಟು ಸುತ್ತೋಲೆಗಳನ್ನು ೫ ತಲೆಕಟ್ಟಿನಡಿಯಲ್ಲಿ ವಿಭಾಗಿಸಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. ಈ ಲೇಖನದ ಮಿತಿಯಲ್ಲಿ ಈ ಐದೂ ವಿಭಾಗಗಳಿಗೆ ಸಂಬಂಧಿಸಿದ ಕೆಲವಷ್ಟು ಪ್ರಾತಿನಿಧಿಕ ಸುತ್ತೋಲೆಗಳನ್ನು ನೋಡಬಹುದು.

(೧) ಕನ್ನಡ ನಿಷ್ಠೆಯ ಸುತ್ತೋಲೆಗಳು :

ಇವುಗಳ ಸಂಖ್ಯೆ ಸುಮಾರು ಹತ್ತು. ಈ ಸುತ್ತೋಲೆಗಳಲ್ಲಿ ವ್ಯಕ್ತವಾಗಿರುವ ಚೆನ್ನಬಸಪ್ಪನವರ ಕನ್ನಡದ ನಿಷ್ಠೆ ಅನನ್ಯ ಹಾಗೂ ಪ್ರಶ್ನಾತೀತವಾದುದು. ಡೆಪ್ಯೂಟಿ ಎಜ್ಯುಕೇಶನಲ್ ಹುದ್ದೆಯಿಂದ, ಮಠ ಪತ್ರಿಕೆಯ ಮೂಲಕ ಹೊರಡಿಸುತ್ತಿದ್ದ ಈ ಸುತ್ತೋಲೆಗಳು ಅಂದಿನ ಐತಿಹಾಸಿಕ ಸಂದರ್ಭದ ಮಹತ್ವಪೂರ್ಣ ಹಾಗೂ ನಿಬಿಡವಾದ ಶೈಕ್ಷಣಿಕ ದಾಖಲೆಗಳೆನಿಸಿವೆ. ಈ ಸುತ್ತೋಲೆಗಳನ್ನು ಅಭ್ಯಸಿಸುತ್ತ ಹೋದಂತೆ ಆಗಿನ ಶೈಕ್ಷಣಿಕ ರಂಗದ ಅನೇಕ ನಿಟ್ಟುಗಳು ತಾನಾಗಿಯೇ ಅನಾವರಣಗೊಳ್ಳುತ್ತ ಹೋಗುತ್ತವೆ. ಇಲ್ಲಿಯವರೆಗೆ ಮರಾಠಿ ಭಾಷೆಯ ಪ್ರಾಬಲ್ಯವನ್ನು ಸಹಿಸಿಕೊಂಡಿದ್ದ ಕನ್ನಡ ಜನಾಂಗದ ಪ್ರಾತಿನಿಧಿಕ ದನಿಯಾಗಿ ಚೆನ್ನಬಸಪ್ಪನವರು ಹೋರಾಟದ ಕಣಕ್ಕಿಳಿಯುತ್ತಾರೆ. ಈ ಪ್ರತಿಭಟನೆಗೆ ಅಗತ್ಯವಿದ್ದ ಎಲ್ಲ ಸಿದ್ಧತೆಯನ್ನೂ ಅವರು ಮಾಡಿಕೊಂಡಿದ್ದರು. ಇದರ ಸ್ಪಷ್ಟ ನಿದರ್ಶನವೆಂದರೆ ತಮ್ಮ ಮೊಟ್ಟಮೊದಲ ಸುತ್ತೋಲೆಯನ್ನೇ ಅವರು ಕನ್ನಡಪರವಾಗಿ ಹೊರಡಿಸಿದ್ದು. ಬರೀ ನೌಕರೀ ಮೇಲೆ, ಅದರಿಂದ ಬರುವ ಆದಾಯದ ಮೇಲೆ ಕಣ್ಣಿಟ್ಟು ಕೆಲಸಮಾಡುವ ಇವತ್ತಿನ ಸಾಮಾಜಿಕ ಸಂದರ್ಭದೊಂದಿಗೆ ಅಂದು ಡೆಪ್ಯೂಟಿಯವರು ಕೈಗೆತ್ತಿಕೊಂಡ ಕಾರ್ಯನಿಷ್ಠೆ, ಸಾಹಸಿಮನೋಧರ್ಮಗಳನ್ನು ತೂಗಬೇಕಾಗುತ್ತದೆ. ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕನ್ನಡ ಮತ್ತೆ ಇಲ್ಲಿ ತಲೆಯೆತ್ತುವಂತೆ ಮಾಡಲು ಅವರು ಶುದ್ಧಾಂತಃಕರಣದಿಂದ ತಮ್ಮನ್ನು ಈ ಕ್ಷೇತ್ರಕ್ಕೆ ಸಮರ್ಪಿಸಿಕೊಂಡರು. ಅವರ ಸುತ್ತೋಲೆಯ ಕೆಲವು ಅಂಶಗಳ ಮೂಲಕ ಈ ಸಂಗತಿಗಳನ್ನು ಮನದಟ್ಟುಮಾಡಿಕೊಳ್ಳಬಹುದಾಗಿದೆ.

೧. "......ಯಾವತ್ತೂ ಕನ್ನಡ ಸ್ಕೂಲ ಮಾಸ್ತರರಿಗೆ ತಿಳಿಯಪಡಿಸುವದೇನೆಂದರೆ ನಿಮ್ಮ ಕಡಿಯಿಂದ ನಂಮ ಕಡಿಗೆ ಬರುವ ಪತ್ರಗಳೆಲ್ಲಾ ಕನ್ನಡದಲ್ಲಿ ಬರಿಬೇಕು".

(ಮಠ ಪತ್ರಿಕೆ: ೧-೧೧, ಪು. ೨೬೦, ಫೆಬ್ರುವರಿ ೧೮೬೭)

೨. ಕನ್ನಡ ಸಾಲಿಗಳಲ್ಲಿ ಯಾವತ್ತೂ ವಿಷಯಗಳನ್ನು ಕನ್ನಡಿದಲ್ಲಿ ಕಲಿಸುವದಿಲ್ಲಾ.

ಇಮು ಬಂದು ಮಾಡಿ ಯಾವತ್ತು ವಿಷಯಗಳನ್ನು ಕನ್ನಡದಲ್ಲಿ ಕಲಿಯಬೇಕು. ಲೆಕ್ಕಮಾಡುವಾಗ್ಗೆ ಕನ್ನಡ ಅಂಕಿಗಳನ್ನು ಹಾಕಬೇಕು. ಆರೆ ಅಂಕಿಗಳನ್ನು ಹಾಕಿಕೊಡಬಾರದು.

(ಶಾಲಾ ಪತ್ರಿಕೆ ೩-೩ ಪುಟ ೮೪ - ೮೭, ಜೂನ ೧೮೬೬)

೩. " .....ಈಗ ಎರಡು ತಿಂಗಳ ಮುಂದೆ ನಮ್ಮ ಕಡಿಗೆ ಕಳುಹಿಸುವ ಕಾಗದ ಪತ್ರಗಳನ್ನು ಕನ್ನಡಿನಲ್ಲಿ ಬಂದು ಕಳುಹಿಸುತ್ತ ಹೋಗಬೇಕೆಂದು ನೋಟೀಸು ಕೊಟ್ಟಿರಲಿಕ್ಕಾಗಿ ನಿಂಮಲ್ಲಿಯ ಕೆಲವರ ಕಡಿಯಿಂದ ಕನ್ನಡಿನಲ್ಲಿ ಕಾಗದ ಪತ್ರಗಳು ಬರುವದಿಲ್ಲಾ. ಅಂದರೆ ಇನ್ನು ಮೇಲೆ ಹೀಗೆ ಮಾಡದೆ ಕನ್ನಡಿನಲ್ಲಿ ಬರದು ಕಳುಹಿಸುತ್ತಾ ಹೋಗಬೇಕು. ಯಾರಿಗೆ ಕನ್ನಡು ಬರಿಯಲಿಕ್ಕೆ ಬರುವದಿಲ್ಲ ಅವರು ಕನ್ನಡು ಬರಿಯಲಿಕ್ಕೆ ಕಲಿಯಬೇಕು.

(ಶಾಲಾ ಪತ್ರಿಕೆ:೩-೫, ಪುಟ ೧೪೮, ಆಗಸ್ಟ ೧೮೬೭)

೪. " ... ನಿಂಮ ಸಾಲಿಗಳಲ್ಲಿ ನೀವು ಹುಡುಗರಿಗೆ ಯಾವತ್ತೂ ವಿಷಯಗಳನ್ನು ಕನ್ನಡಿನಲ್ಲಿ ಕಲಿಸಬೇಕು. ಮತ್ತು ಕನ್ನಡ ಅಂಕಿಗಳಿಂದ ಲೆಕ್ಕ ಮಾಡಿಸಬೇಕು. ......"

(ಶಾಲಾ ಪತ್ರಿಕೆ: ೨-೫, ಪುಟ ೧೫೩, ಆಗಸ್ಟ, ೧೮೬೭)

೫. "..... ಹಿಂದಕ್ಕೆ ನಾವು ನಿಂಮ ಸಾಲಿಗಳಲ್ಲೆಲ್ಲಾ ಬಾಳಬೋಧ ಪುಸ್ತಕಗಳನ್ನು ಮೊದಲಿಕ್ಕೆ ಕಲಿಸದೆ ಕನ್ನಡು ಕಲಿಸಬೇಕೆಂದು ಹೇಳಿದ್ದಿವಿ. ಅದರಂತೆ ವಹಿವಾಟು ನಡೆಸಿದ್ದರಾದೀತು. ಯಲ್ಲೆ ಇಂನು ವಹಿವಾಟು ನಡೆದಿರಲಿಕ್ಕಿಲ್ಲಾ ಅಲ್ಲೆ ಈ ನೋಟೀಸ ಕಂಡ ದಿನದಿಂದ ಬಾಳಬೋಧ ಮೊದಿಸುವದು ಬಂದು ಮಾಡಬೇಕು. ಮತ್ತು ಯಾವತ್ತು ವಿಷಯಗಳನ್ನು ಕನ್ನಡಿನಿಂದ ಕಲಿಸಬೇಕು....."

(ಶಾಲಾ ಪತ್ರಿಕೆ:೩-೬, ಪುಟ ೧೭೪ -೭೫, ಸೆಪ್ಟೆಂಬರ ೧೮೬೭)

೬. "..... ನೀವು ನಿಂಮ ದಫ್ತರಗಳನ್ನು ಕನ್ನಡಿನಲ್ಲಿ ಯಿಡ್ರಿ. ಇತ್ತ ಕಡಿಯಿಂದಾಗಲಿ ಅಥವಾ ಮತ್ತ್ಯಾವ ಕಡಿಯಿಂದಾಗಲಿ ನಿಮಗೆ ಆರೇ ಬರದು ಬಂದರೂ ಸಹಾ ನೀವು ಕನ್ನಡಿನಲ್ಲಿ ಉತ್ತರಕೊಡುತ್ತ ಬರ್ರಿ. ಯಿನ್ನ ಮೇಲೆ ನಿಂಮ ಕಡಿಗೆ ಬರುವ ಕಾಗದಗಳು ಆರೇದಲ್ಲಿ ಬರಬಾರದು.

(ಶಾಲಾ ಪತ್ರಿಕೆ:೩-೬ ಪುಟ ೧೭೫, ಸೆಪ್ಟೆಂಬರ್ ೧೮೬೭)

೭. " ಕೆಲವು ಮಾಸ್ತರರು ಕನ್ನಡ ಪತ್ರಗಳನ್ನು ನಮ್ಮ ಕಡಿಗೆ ಬರದು ಅವಗಳಲ್ಲಿ ಕಡಿಗೆ (Hindi ಸೇವೆಯಲ್ಲಿ ಶ್ರುತವಿರಲಿ ಅಂತಾ ವಿನಂತಿ) ಅಥವಾ ಹೀಗೆ ಮತ್ತೇನಾದರೂ ಬರೆಯುತ್ತಿರುತ್ತಾರೆ. ಆದರೆ ಈ ವಹಿವಾಟು ಬಂದುಮಾಡಬೇಕು. ಕನ್ನಡ ಪತ್ರಗಳಲ್ಲಿ ಯಾವತ್ತೂ ಕನ್ನಡ ಬರಿಯಬೇಕು ...."

(ಶಾಲಾ ಪತ್ರಿಕೆ: ೪-೬, ಪುಟ ೧೭೯-೧೮೦, ಸೆಪ್ಟೆಂಬರ ೧೮೯೮)

ಕನ್ನಡ ಮಾತಾಡುವುದನ್ನು, ಬರೆಯುವದನ್ನೂ ಮರೆತುಬಿಟ್ಟಿದ್ದ ಕನ್ನಡಿಗರಿಗೆ ಚೆನ್ನಬಸಪ್ಪನವರು " ಬಡಿದು ಭಕ್ತಿಯ ಕಲಿಸಿದಂತೆ" ಕನ್ನಡವನ್ನು ಕಲಿಸಬೇಕಾಗಿತ್ತು. ಇಂದಿನಹಾಗೆ ವೇದಿಕೆಯ ಭಾಷಣಗಳಿಂದಲೋ, ಪತ್ರಿಕಾ ಹೇಳಿಕೆಗಳಿಂದಲೋ ಇದನ್ನು ಸಾಧಿಸುವುದು ಸಾಧ್ಯವಿಲ್ಲವೆಂಬುದು ಚೆನ್ನಬಪ್ಪನವರಿಗೆ ಹೊಳೆದಿತ್ತು. ಆದ್ದರಿಂದ ತಮ್ಮ ಕೈಕೆಳಗಿನ ಶಿಕ್ಷಕರನ್ನು ತಮ್ಮ ಉದ್ದೇಶಸಾಧನೆಗೆ ಸಾರ್ಥಕವಾಗಿ ಬಳಸಿಕೊಳ್ಳಲು ಅವರು ನಿರ್ಧರಿಸಿದರೆಂದು ತೋರುತ್ತದೆ. ಒಬ್ಬ ಶಿಕ್ಷಕನ ಕನ್ನಡ ನಿಷ್ಠೆ ಸಾವಿರ ಸಾವಿರ ವಿದ್ಯಾರ್ಥಿಗಳ ಕನ್ನಡನಿಷ್ಠೆಯಾಗಿ ಫಲಿಸುವದೆಂಬ ದೂರದೃಷ್ಟಿಯಿಂದಲೇ ಚೆನ್ನಬಸಪ್ಪನವರು ಇಷ್ಟೊಂದು ಆಸ್ಥೆವಹಿಸಿ ಕೆಲಸಮಾಡುವುದು ಸಾಧ್ಯವಾಯಿತು. ಕನ್ನಡವನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿ ಅವರು ಬೇಸರವಿಲ್ಲದೆ ಶಿಕ್ಷಕರನ್ನು ಆಗ್ರಹಿಸಿದರು. ನಿರ್ಬಂಧಿಸಿದರು. ಕನ್ನಡದಲ್ಲಿ ಬರೆಯಬೇಕು, ಕನ್ನಡದಲ್ಲಿಯೇ ಕಲಿಸಬೇಕು, ಕನ್ನಡದ ಅಂಕಿಗಳನ್ನೇ ಬಳಸುವದನ್ನು ರೂಢಿಸಿಕೊಳ್ಳಬೇಕು, ಕನ್ನಡ ಬಾರದವರು ಕನ್ನಡ ಕಲಿಯಬೇಕು. ಪತ್ರ ವ್ಯವಹಾರವೆಲ್ಲ ಕನ್ನಡದಲ್ಲಿಯೇ ನಡೆಯಬೇಕು. ಧಪ್ತರಗಳನ್ನು ಕನ್ನಡದಲ್ಲಿಯೆ ಬರೆಯಬೇಕು. ಮರಾಠಿ ಪತ್ರಗಳಿಗೆ ಕನ್ನಡದಲ್ಲಿಯೇ ಉತ್ತರಿಸಬೇಕು. ಕನ್ನಡ ಭಾಷೆಯೊಡನೆ ಮರಾಠಿ ಶಬ್ದ-ವಾಕ್ಯಗಳನ್ನು ಸೇರಿಸಿ ಬರೆಯಬಾರದು - ಹೀಗೆ ಹತ್ತಾರು ಬದಿಗಳಿಂದ ಅಂದಿನ ಮರಾಠಿಮಯವಾಗಿದ್ದ ವಾತಾವರಣದಲ್ಲಿ ಕನ್ನಡವನ್ನು ತುಂಬಲು ಹೆಣಗಿದರು. ಇದರಿಂದ ಕನ್ನಡದ ಪುನುರುಜ್ಜೀವನಕ್ಕೆ ಭದ್ರ ನೆಲೆ ದೊರಕುವಂತಾಯಿತು.

ಚೆನ್ನಬಸಪ್ಪನವರು ಅಂದು ಕೈಕೊಂಡ ಕನ್ನಡದ ಈ ಕೈಂಕರ್ಯಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಯಾಕೆಂದರೆ ದೇಶದ ಆಡಳಿತ ಸೂತ್ರ ಆಗ ಆಂಗ್ಲರ ಕೈಯಲ್ಲಿತ್ತು. ಅವರ ಮನವೊಲಿಸದೆ ಯಾವ ಕಾರ್ಯದಲ್ಲೂ ಮುಂದುವರೆಯುವುದು ಸಾಧ್ಯವಿರಲಿಲ್ಲ. ಇನ್ನು ಮರಾಠಿ ವ್ಯಾಮೋಹಕ್ಕೆ ಬಲಿಯಾಗಿರುವ ನಾಡಿನ ಜನತೆಗೆ 'ಪರಿಸ್ಥಿತಿ'ಯ ಅರಿವು ಮೂಡಿಸಬೇಕಿತ್ತು. ಈ ಎರಡೂ ಕೆಲಸಗಳನ್ನು ನಿತ್ತರಿಸುತ್ತಲೇ ಅವರು ಕನ್ನಡದ ಅನುಷ್ಠಾನಕ್ಕೆ ದಾರಿ ನಿರ್ಮಿಸಿಕೊಂಡದ್ದು ಅತ್ಯಂತ ಅಭೂತಪೂರ್ವ. ಇಂದು ದೇಶದ ಆಡಳಿತಯಂತ್ರ ನಮ್ಮವರ ಕೈಯ್ಯಲ್ಲಿ ಇದ್ದರೂ, ಕರ್ನಾಟಕವನ್ನು ಕನ್ನಡಿಗರೇ ಆಳುತ್ತಿದ್ದರೂ, ಹಲವಾರು ಕನ್ನಡಪರ ಸಂಘಟಣೆಗಳು ಈ ನಿಟ್ಟಿನಲ್ಲಿ ಕೆಲವು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಮಾಡುತ್ತಿದ್ದರೂ ಸಾಧನೆ ಮಾತ್ರ ನಿರಾಶಾದಾಯಕವಾಗಿಯೇ ಇದೆ. ಆದರೆ ಚೆನ್ನಬಸಪ್ಪನವರು ಮುದ್ರಣ ಸೌಲಭ್ಯವಿಲ್ಲದ, ಸಮೂಹ ಮಾಧ್ಯಮಗಳ ಬೆಂಬಲವಿಲ್ಲದ ಆ ಕಾಲದಲ್ಲಿ ತಾವೇ ಆರಂಭಿಸಿದ 'ಮಠಪತ್ರಿಕೆ' ಯಂತಹ ಒಂದು ಶೈಕ್ಷಣಿಕ ಪತ್ರಿಕೆಯನ್ನು ಕನ್ನಡ ಕಟ್ಟುವ ಕೆಲಸಕ್ಕೆ ಬಳಸಿಕೊಂಡುದು ಅವರ ಅಪ್ರತಿಮ ಮೇಧಾಶಕ್ತಿಗೆ, ಅಪೂರ್ವ ಕನ್ನಡ ಕಳಕಳಿಗೆ ಚಿರಂತನ ಸಾಕ್ಷಿ. ಅಷ್ಟೇ ಅಲ್ಲ; ಈ ಕಾರ್ಯಕ್ಕೆ ಅವರು ಹಾಕಿಕೊಂಡ ಯೋಜನೆಗಳು, ಸ್ವರೂಪ ಮತ್ತು ಪರಿಣಾಮಗಳು ಕೂಡ ಚರಿತ್ರಾರ್ಹವೆಂಬುದು ಮನವರಿಕೆಯಾಗುತ್ತದೆ.

ಹೊಸಗನ್ನಡ ಭಾಷೆ , ಸಾಹಿತ್ಯಚರಿತ್ರೆಯನ್ನು ಬರೆಯುವವರು ಚೆನ್ನಬಸಪ್ಪನವರಿಂದಲೇ ಆರಂಭಿಸಬೇಕಾಗುತ್ತದೆ.

೨. ಭಾಷೆ -ಬರೆಹ ಶುದ್ಧಿಗೆ ಒತ್ತುನೀಡಿದ ಸುತ್ತೋಲೆಗಳು :

ಒಂದು ಭಾಷೆ ಜೀವಂತವಾಗಿರುವುದು ಎಷ್ಟು ಮುಖ್ಯವೋ ಅದನ್ನು ಶುದ್ಧವಾಗಿ ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಇದರ ಅರಿವಿದ್ದ ಚೆನ್ನಬಸಪ್ಪನವರು ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವುದಷ್ಟೇ ಮುಖ್ಯವೆಂದು ಭಾವಿಸಲಿಲ್ಲ. ಅದನ್ನು ಶುದ್ಧವಾಗಿ ಉಳಿಸಿಕೊಳ್ಳುವುದರ ಕಡೆಗೂ ಕಟ್ಟೆಚ್ಚರವಹಿಸಿದರು. ಅವರ ೫ ಸುತ್ತೋಲೆಗಳು ಈ ಸಂಗತಿಯನ್ನು ಪ್ರಮಾಣೀಕರಿಸುತ್ತದೆ.

೧. "ನಂಮ ಕಡಿಗೆ ಬರುವ ಕಾಗದ ಪತ್ರಗಳಲ್ಲಿ ಕೆಲವು ಪಂತೋಜಿಗಳು ಶುದ್ಧ ಬರಿಯುವದರ ಕಡಿಗೆ ಬಹು ದುರ್ಲಕ್ಷ ಮಾಡಿರುವ್ವದು ನಂಮ ದೃಷ್ಟಿಗೆ ಬೀಳುತ್ತದೆ. ಅಂದರೆ ಯಿವತ್ತಿನಿಂದ ಓಡಿದು ಅವರು ಶುದ್ಧ ಬರೆಯುವದರ ಕಡಿಗೆ ಹೆಚ್ಚ ಲಕ್ಷಕೊಡಬೇಕು".

(ಮಠಪತ್ರಿಕೆ: ೧-೧೨ ಪುಟ. ೨೮೪ -ಮಾರ್ಚ್ ೧೮೬೬)

೨. ".....ಕೆಲವು ಪಂತೋಜಿಗಳು ತಮಗೆ ಶುದ್ಧ ಬರಿಯಲಿಕ್ಕೆ ಬರದ ಕಾರಣದಿಂದಾಗಲಿ ಅಥವಾ ಮನಸುಗೊಟ್ಟು ಬರಿಯದ ಕಾರಣದಿಂದಾಗಲಿ ನಮ್ಮ ಕಡಿಗೆ ಕಳುಹಿಸುವ ಕನ್ನಡ ಕಾಗದ ಪತ್ರಗಳಲ್ಲಿ ನಾನಾ ಪ್ರಕಾರದ ತಪ್ಪುಗಳನ್ನು ಮಾಡುತ್ತಾರೆ. ಅಂದರೆ ಇಂಥವರು ನೆಟ್ಟಗೆ ಬರಿಯಲಿಕ್ಕೆ ಕಲಿಯಬೇಕು.

(ಶಾಲಾಪತ್ರಿಕೆ ३-३, ಪುಟ ೮೪ -೮೭ ಜ್ಯೂನ ೧೮೬೬)

३. " .....ಕೆಲವು ಮಾಸ್ತರರು ನಂಮ ಕಡಿಗೆ ಕಳಿಸಿಕೊಡುವ ಕಾಗದ ಪತ್ರಗಳನ್ನು ಹೊಲಸು ಆಕರ್ಷಣೆಗಳಿಂದ ಬರೆದು ಕಳುಹಿಸುತ್ತಾರೆ. ಆದರೆ ಇನ್ನು ಮುಂದೆ ಯಾವತ್ತೂ ಮಾಸ್ತರರು ಛಾಪಿಸಿದ ಅಕ್ಷರಗಳಂತೆ ವಿರಲವಾಗಿಯೂ ಶುದ್ಧವಾಗಿಯೂ ಬರೆದು ಕಳುಹಿಸುವದಕ್ಕೆ ತಮ್ಮ ಕೈಲಾದ ಮಟ್ಟಿಗೆ ಶ್ರಮ ತೆಗೆದುಕೊಳ್ಳಬೇಕು ತಿಳಿಯುವದು.

(ಆಕರ:ಕನ್ನಡದ ದೀಪ: ಪುಟ-೭೮)

೪. "..... ತಾವು ಇತ್ತ ಕಡಿಗೆ ಕಳುಹಿಸುವ ಕಾಗದ ಪತ್ರಗಳಂನು ಎಚ್ಚರದಿಂದ ಬರೆದು ಕಳುಹಿಸುತ್ತ ಹೋಗಬೇಕು.

೧. ಓದಲಿಕ್ಕೆ ಬರುವ ಹಾಗೆ ಅಕ್ಷರಗಳಂನು ಸ್ಪಷ್ಟವಾಗಿ ಬರೆಯಬೇಕು.

೨. ಅಶುದ್ಧ ಬರಿಯಬಾರದು.

३. ತಂಮ ಕೈಲಾದ ಮಟ್ಟಿಗೆ ಶ್ರಮಪಟ್ಟು ಛಾಪಿಸಿದ ಅಕ್ಷರಗಳಂತೆ ಅಕ್ಷರಗಳಂನು ಬರಿಯಲಿಕ್ಕೆ ಕಲಿಯಬೇಕು. ಕಚೇರಿ ತರದ ಅಕ್ಷರಗಳಂನು ಅಗದಿ ಬರಿಯಬಾರದು.

೪: ಬರದದ್ದೆಲ್ಲಾ ವ್ಯಾಕರಣದ ನೇಮಕ್ಕೆ ತಪ್ಪದ ಹಾಗೆ ಬರಿಯುವುದಕ್ಕೆ ಕಲಿಯಬೇಕು ......"

(ಶಾಲಾಪತ್ರಿಕೆ: ೫ -೩, ಪುಟ. ೯೨-೯೪, ಜ್ಯೂನ ೧೮೬೯)

೫. ಜೆನರಿಗೆ ತಿಳಿಯದ ಶಬ್ದಗಳನ್ನು ಹಾಕಿ ಬರಿಯುವದೊಂದು ಶಾಹಣೆತನವೆಂದು ತಿಳಕೊಂಡು ಕೆಲವರು ಸಾಧಾರಣ ಶಬ್ದಗಳನ್ನು ಬಿಟ್ಟುಕೊಟ್ಟು ಜನರಿಗೆ ತಿಳಿಯದ ಶಬ್ದಗಳ ಉಪಯೋಗವನ್ನು ಮಾಡುತ್ತಾರೆ. ಈ ಕೆಳಗೆ ಬರೆದಿರುವ ಪತ್ರವು ಈ ಮಾಸಲೇದ್ದು ಇದನ್ನು ಓದಿದಾಕ್ಷಣವೆ ನಮಗೆ ನಗಿ ಬಂತು. ಮತ್ತು ಪರೀಕ್ಷೆಕ್ಕೆ ಹೋದ ಸಮಯದಲ್ಲಿ ಈ ಮಾಸ್ತರರಿಗೆ ನಾವು ಛಿಮಾರಿ ಹಾಕುವವರಿದ್ದೇವೆ....."

ಓೀಗೆ ಸುತ್ತೋಲೆಗಳನ್ನು ಹೊರಡಿಸುತ್ತ ಭಾಷೆಯ ಮೈಕಟ್ಟು, ಅದರ ಪ್ರಯೋಗ, ಸತ್ವ ಇತ್ಯಾದಿಗಳ ಕಡೆಗೂ ಚೆನ್ನಬಸಪ್ಪನವರು ಗಮನಹರಿಸಿದ್ದರೆಂಬುದನ್ನು ನೋಡುವಾಗ ಒಟ್ಟಾರೆ ಕನ್ನಡ ಭಾಷೆಯ ಬಗೆಗೆ ಅವರ ಒಳನೋಟಗಳೇನಿದ್ದವು ಎಂಬುದು ನಿಚ್ಚಳವಾಗುತ್ತದೆ. ಈ ಸುತ್ತೋಲೆಗಳ ಭಾಷೆ ಇಂದಿನ ನಮ್ಮ ಕಣ್ಣಿಗೆ ಅಶುದ್ಧವೆನಿಸಬಹುದಾದರೂ, ಅಂದು ಇಷ್ಟು ಬರೆಯುವುದೇ ಶುದ್ಧವೆನಿಸುತ್ತಿದ್ದಿತು. ಇದನ್ನು ನೋಡಿದರೆ ಸಾಮಾನ್ಯರ ಭಾಷಾ ಅಶುದ್ಧಿ ತೀರ ಶೋಚನೀಯ ವಾಗಿದ್ದಿರಬಹುದೆನಿಸುತ್ತದೆ.

೩. ಶಾಲೆ - ಶಿಕ್ಷಕ - ವಿದ್ಯಾರ್ಥಿ ಕೇಂದ್ರಿತ -ಸುತ್ತೋಲೆಗಳು :

ಶಿಕ್ಷಕನಾದವನು ವಿದ್ಯಾರ್ಥಿ, ಶಾಲೆ, ಮತ್ತು ಸಮಾಜ, ಈ ಮೂರಕ್ಕೂ ಕೇಂದ್ರಬಿಂದುವಾಗುವುದರಿಂದ ಇವೆಲ್ಲಕ್ಕೂ ಅವನು ನಿಷ್ಠನಾಗಿರಬೇಕಾಗುತ್ತದೆ. ಇವು ಶಿಕ್ಷಕನಿಂದ, ವೃತ್ತಿಗೌರವ, ಪ್ರಬುದ್ಧತೆ, ಪ್ರಾಮಾಣಿಕತೆ, ಸೌಜನ್ಯ ಹಾಗೂ ದೂರದೃಷ್ಟಿಯನ್ನು ಅಪೇಕ್ಷಿಸುತ್ತವೆ. ಒಬ್ಬ ಶಿಕ್ಷಕ ಮಾಡುವ ಒಂದು ಸಣ್ಣ ತಪ್ಪು ತನ್ನ ಸಾವಿರಾರು ಜನ ಶಿಷ್ಯರಿಗೆ ವರ್ಗಾವಣೆ ಹೊಂದುತ್ತ ಹೋಗುವುದನ್ನು ನಿರ್ದಾಕ್ಷಿಣ್ಯವಾಗಿ ಅಳಿಸಿಹಾಕುವ ಪಣತೊಟ್ಟು ಕಾರ್ಯೋನ್ಮುಖರಾದವರು, ಚೆನ್ನಬಸಪ್ಪನವರು. ಈ ನಿಲುವಿನ ಸುಮಾರು ೧೮ ರಷ್ಟು ಸುತ್ತೋಲೆಗಳು ಕಂಡುಬರುತ್ತವೆ. ಅವುಗಳಲ್ಲಿ ವಿಶಿಷ್ಟ ವೆನ್ನಿಸಬಹುದಾದವುಗಳನ್ನು ಪರಿಶೀಲನೆಗೆ ಎತ್ತಿಕೊಳ್ಳಲಾಗಿದೆ:

೧. "....ಚಿಕ್ಕ ಹುಡುಗರಿಗೆ ಸಸಾರ ಶಬ್ದಗಳನ್ನು ಬರಿಯಲಿಕ್ಕೂ, ಓದಲಿಕ್ಕೂ ಕಲಿಸುವದನ್ನು ಬಿಟ್ಟು ಬಿಟ್ಟು ಅಕರಕ್ಕೆ ಜಾಟಕ್ಕೆ ತುಂಬ ತಿಳಿಯ ದಂತಾವುಗಳನ್ನು ಕಲಿಸುವದು ನಂಮ ದೃಷ್ಟಿಗೆ ಬಿತ್ತೂ. .... ಈ ರೀತಿಯಿಂದ ಕಲಿಸುವುದು ನಮಗೆ ನೆಟ್ಟಗೆ ಕಾಣುವುದಿಲ್ಲ. ಮೊದಲು ಹುಡುಗರಿಗೆ ಸಸಾರ ಹೆಸರುಗಳನ್ನು ಬರಿಯಲಿಕ್ಕೂ ಓದಲಿಕ್ಕೂ ಕಲಿಸಿದ ಬಳಿಕ ಮೆಲ್ಲ ಮೆಲ್ಲನೆ ಯಿಂಥಾ ವಿಷಯಗಳಂನು ಕಲಿಸಲಿಕ್ಕೆ ಆರಂಭಮಾಡಬೇಕು. ......"

(ಮಠಪತ್ರಿಕೆ :೧-೧೧, ಪು-೨೬೦-೬೧, ಫೆಬ್ರುವರಿ ೧೮೬೭)

"…..ನಾವು ಸಾಲಿಗಳ ಪರೀಕ್ಷೆ ತೆಗೆದುಕೊಂಬೋ ಸಮಯದಲ್ಲಿ ಪಂತೋಜಿಗಳಿಗೆ ಏನಾದರೂ ಕೇಳಿದರೆ ಅವರು ನಮಗೆ ಅದು ಬರುವದಿಲ್ಲಾ ಅಥವಾ ನಾಂವು ಅದಂನು ಮರೆತೆವು ಎಂದು ಹೇಳುತ್ತಾರೆ. ಇದು ಅವರಿಗೆ ಅತಿ ಅಯೋಗ್ಯವೂ.

ಪಂತೋಜಿಗಳು ಮನಿಯಲ್ಲಿ ಕೂಡಿದ್ದಾಗ್ಗೆ ಅಭ್ಯಾಸ ಮಾಡುತ್ತಿರಬೇಕು. ಅಂದರೆ ಕಲಿತಷ್ಟಾದರೂ ಮರಿಯಲಿಕ್ಕಿಲ್ಲಾ. ಬರುವ ವರುಷ ಹೀಗೆ ಮೇಹನತ ಮಾಡದ ಪಂತೋಜಿಗಳು ನಂಮ ಕಣ್ಣಿಗೆ ಬಿದ್ದರೆ ಅವರ ವಿಷಯಕ್ಕೆ ನಮ್ಮ ಮನಸ್ಸಿಗೆ ಬಂದಂತೆ ನಾವು ತಜವಿಜಿಯನ್ನು ನಡಿಸುವೆವು.

ತಾವು ಬಹು ಶಾಹಣೇರು ಮತ್ತು ಹುಷಾರಿಯಿಂದ ಕೆಲಸ ನಡಿಸುವವರು ಎಂದು ನಮಗೆ ತೋರಿಸಬೇಕೆಂಬ ಹುಚ್ಚಹುಮ್ಮಸ್ಸಿನಿಂದ ಕೆಲವು ಪಂತೋಜಿಗಳು ತಮ್ಮ ಹಿಂದಿನ ಚರಿತ್ರೆಯನ್ನು ತಮ್ಮ ಬಾಯಿಂದ ನಂಮ ಮುಂದೆ ವರ್ಣನೆ ಮಾಡಿ ಬಹು ಸಂತೋಷ ಪಡುವಂತೆ ಕಾಣುತ್ತಾರೆ. ಇಂಥವರನ್ನು ನೋಡಿ ನಮಗೆ ಶಿಟ್ಟು ಮತ್ತು ನಗಿಯು ಕೂಡಾ ಬರುತ್ತದೆ. ಆದರೆ ಸ್ವಂತ ಶ್ರಮದಿಂದ ತಮ್ಮ ಅಭ್ಯಾಸವನ್ನು ಹೆಚ್ಚಿಸುವವರಿಗೆ ಯೇನಾದರೂ ಪ್ರಯೋಜನವಾಗುವದಲ್ಲದೇ ಇಂಥಾ ಹುಚ್ಚ ಆತ್ಮಸ್ತುತಿಗಳಿಂದ, ನಾಶಮಾತ್ರವಾಗುವುದು.

(ಮಠಪತ್ರಿಕೆ:೧-೧೩. ಪುಟ ೩೦೧-೩೦೨, ಏಪ್ರೀಲ್ ೧೮೬೬)

೩. "…. ಯಾವ ಪಂತೋಜಿಗಳಾದರೂ ಮೆಹನತಿನಿಂದ ಮನಸ್ಸುಕೊಟ್ಟು ಕಲಿಸದ್ದು ಮುಂದಿನವರ್ಷ ಪರೀಕ್ಷದ ಸಮಯಕ್ಕೆ ಕಂಡು ಬಂದರೆ ಅದರ ವಿಷಯಕ್ಕೆ ಯೋಗ್ಯ ತಜವಿಜ ಮಾಡಲಾಗುವುದು.

೧. ವಕ್ಕೆ ಸಂಣ ಏ ಮತ್ತು ಥ ಕ್ಕೆ ದೊಡ್ಡ ಏ ಎಂದು ಹುಡುಗರು ಅನ್ನುತ್ತಾರೆ. ಹಾಗೆ ಪಂತೋಜಿಗಳು ಕಲಿಸಬಾರದು …..''

೨. ದ್ವಿತ್ವ ಅಕ್ಷರಗಳು ಅಂದರೆ ಕ್ವ, ತ್ವ, ನ್ನು ಇತ್ಯಾದಿ ಅಕ್ಷರಗಳನ್ನು ಕವ, ತವ, ಇನಪು ಎಂದು ಉಚ್ಚಾರ ಮಾಡುತ್ತಾರೆ ಮತ್ತು ಬರಿಯುತ್ತಾರೆ. ಹೀಗೆ ಉಚ್ಚಾರ ಮಾಡಗೊಡಬಾರದು ಮತ್ತು ಬರಿಯಗೊಡಬಾರದು.

೩. ಶ ಬರಿಯೆಂದರೆ ಹುಡುಗರು 'ಸ' ಆಗಲಿ ಷ ಆಗಲಿ ಬರಿದು ತೋರಿಸುತ್ತಾರೆ. ಹಾಗೆ ಬರಿಯಗೊಡಬಾರದು ಶ, ಸ, ಮತ್ತು ಷ ಇವುಗಳಲ್ಲಿರುವ ಭೇದವನ್ನು ನೆಟ್ಟಗೆ ತಿಳಿಸಿಕೊಡಬೇಕು.

೪. ಧೂಳಾಕ್ಷರ ಕಲಿಯುವ ಹುಡುಗರ ಕಡಿಗೆ ಮುಖ್ಯ ಪಂತೋಜಿಗಳು ಬಿಲ್‌ಕುಲ್ ಲಕ್ಷ ಕೊಡುವುದಿಲ್ಲಾ. 'ಇದು ಬಹಳ ಗೈರು ಶಿಸ್ತು'. ಮುಂದೆ ಹೀಗೆ ಮಾಡಗೊಡಬಾರದು.

೫. " ಒಂದೇ ವರ್ಗದಲ್ಲಿ ಬೇರೆ ಬೇರೆ ಅಭ್ಯಾಸ ಮಾಡುವ ಹುಡುಗರನ್ನು

ಹಾಕಿರುತ್ತಾರೆ. ಹೀಗೆ ಮಾಡಬಾರದು ....”

೬. “ ಕೆಲವು ಪಂತೋಜಿಗಳಿಗೆ ೧ನೇ ಎರಡನೇ ಪುಸ್ತಕಗಳೊಳಗಿನ ಶಬ್ದಗಳು ಬರುವದಿಲ್ಲಾ. ಅಂದರೆ ಯಾರಿಗೆ ಯಾವ ಶಬ್ದಗಳು ಬರುವದಿಲ್ಲಾ ಅವರು ಆ ಶಬ್ದಗಳನ್ನು ಬರದು ಇತ್ತಕಡೆ ಕಳುಹಿಶಿ ಕೊಟ್ಟರೆ ಅವುಗಳ ಅರ್ಥವನ್ನು ಬರೆದು ಕಳುಹಿಸುವೆವು.”

(ಶಾಲಾಪತ್ರಿಕೆ : ೩-೩, ಪುಟ. ೮೪-೮೭, ಜ್ಯೂನ ೧೮೬೬)

೪. “......ಶಾಲೆಯಲ್ಲಿ ಮೇಪಹರ್ಬಾನ ಇನ್‌ಸ್ಪೆಕ್ಟರ ಧೊರೆಗಳಾಗಲಿ, ಬೇರೆ ಯಾರಾದರೂ ದೊಡ್ಡ ಮನುಷ್ಯರಾಗಲೀ ಬಂದರೆ ವಿದ್ಯಾರ್ಥಿಗಳೆಲ್ಲರು ಯೆದ್ದುನಿಂತು ಅವರು ಕೊಡ್ರುವುದಕ್ಕೆ ಹೇಳುವ ಮಟ್ಟಿಗೆ ಹಾಗೇ ನಿಂದಿರುವ ಬಗ್ಗೆ ನೀವು ನಿಮ್ಮ ನಿಮ್ಮ ವಿದ್ಯಾರ್ಥಿಗಳಿಗೆ ಚಂದಾಗಿ ಬೋಧಿಸತಕ್ಕದ್ದು. ತಿಳಿಯೋದು’.

(ಶಾಲಾ ಪತ್ರಿಕೆ:೩೬ ಪುಟ ೧೮೬, ಸೆಪ್ಟೆಂಬರ ೧೮೬೭)

೫. “..... ನಿಮ್ಮ ಸಾಲಿಗಳಿಗೆ ಮುಂದಿನ ವರ್ಷಕ್ಕೆ ರಿಪೇರಿ ದಶಿಯಿಂದ ಯೆಷ್ಟೇಷ್ಟು ಖರ್ಚು ಹತ್ತುವುದು ಇದನ್ನು ಚೌಕಸಿ ಮಾಡಿ ಇತ್ತ ಕಡಿಗೆ ತಾರೀಖು ೧೫ನೇ ಫೆಬ್ರವರಿ ಸನ್ ೧೮೬೮ನೇ ಇಸವಿಯೊಳಗೆ .... ಮುಟ್ಟುವಹಾಗೆ ಬರೆದು ಕಳುಹಿಸಬೇಕು.

(ಶಾಲಾಪತ್ರಿಕೆ: ೩-೮,ಪುಟ ೨೫೫, ನವ್ಹೆಂಬರ ೧೮೬೭)

೬. “ .... ನಾವು ಸಾಲಿಯಲ್ಲಿ ಪರೀಕ್ಷೆ ತೆಗೆದುಕೊಳ್ಳುವಾಗ್ಗೆ ಒಬ್ಬ ಹುಡುಗನಿಗೆ ಏನಾದರೊಂದು ಪ್ರಶ್ನೆ ಕೇಳಿದರೆ ಆ ಹುಡುಗನ ಪತ್ರ ಇದ್ದ ಹುಡುಗರು ಆ ಪ್ರಶ್ನದ ಉತ್ತರವನ್ನು ಹೇಳುತ್ತಾರೆ. ಇಲ್ಲವೆ ಬಾಯಿಲೆ ಸುಂಮನೆ ವಟವಟ ಅನ್ನುತ್ತಾರೆ. ಅಥವಾ ಮೇಲ್ಲಗೆ ಆ ಹುಡುಗನಿಗೆ ಹೇಳುತ್ತಾರೆ. ಅಂದರೆ ಮಾಸ್ತರರು ಹೀಗೆ ಆಗದಂತೆ ಮೊದಲಿನಿಂದ ಅಭ್ಯಾಸ ಮಾಡಿಸಬೇಕು.”

(ಶಾಲಾ ಪತ್ರಿಕೆ:೩-೧. ಪುಟ ೩೧೦-೩೧೧, ಜನವರಿ ೧೮೬೮)

೭. “..... ನಾವು ವಾರ್ಷಿಕ ಪರೀಕ್ಷೆ ತೆಗೆದುಕೊಂವದಕ್ಕೆ ಕೆಲವು ಸ್ಥಳಗಳಲ್ಲಿ ಹೋದಾಗ್ಗೆ ಸಾಲಿಯ ಹತ್ತಿರ ಅತಿಶಯ ಹೊಲಸು ಇರುವುದರಿಂದ ಸಾಲಿಯಲ್ಲಿ ದುರ್ಗಂಧವಾಸ ಬರುತ್ತಿದ್ದರೂ ಆ ಮಾಸ್ತರರು ನಮ್ಮ ಕಡಿಗೆ ರಿಪೋರ್ಟ ಮಾಡಿ ತಜವಿಜ ಮಾಡಲಿಲ್ಲ. ಇದು ಬಹಳ ಮುಗ್ಗಲಗೇಡಿತನವು. ಇನ್ನು ಮುಂದೆ ಈ ಪ್ರಕಾರ ಆಗದಂತೆ - ಮಾಸ್ತರರು ಎಚ್ಚರಿಕೆಯನ್ನಿಡಬೇಕು”

(ಶಾಲಾ ಪತ್ರಿಕೆ: ಪೆಭ್ರುವರಿ ೧೮೬೮, - ಆಕರ ; ಕನ್ನಡದ ದೀಪ. ಪುಟ ೭೪)

ಈ ಪ್ರಕಾರ ವಿವಿಧ ನೆಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹುಟ್ಟಿಕೊಂಡ ಸುತ್ತೋಲೆಗಳು ಶಾಲೆಯ ಪರಿಸರ, ಶಿಕ್ಷಕರ ಹೊಣೆಗಾರಿಕೆ, ಅವರ ಬೋಧನೆಯ

ವಿಧಾನ, ವಿದ್ಯಾರ್ಥಿಗಳ ವರ್ತನೆ, ಅವರ ಕಲಿಕೆಯ ಸಾಧನಗಳು, ಅವರ ಗುಣಮಟ್ಟದ ತಪಾಸಣೆ, ಸಹಶಿಕ್ಷಕರಿಗೆ ವಿಷಯಜ್ಞಾನ ಮಾಡಿಕೊಡುವುದು, ವಿದ್ಯಾರ್ಥಿಗಳಿಂದ ಶಿಕ್ಷಕರು ತಮ್ಮ ಮನೆಗೆಲಸಗಳನ್ನು ಮಾಡಿಸಿಕೊಳ್ಳದಿರುವುದು, ಶಾಲೆಯ ಹಾಜರೀ ರಜಿಸ್ಟರ ಇತ್ಯಾದಿ ವಿಷಯಗಳಲ್ಲಿ ಏಕರೂಪತೆಯನ್ನು ತರುವುದು, ವಿದ್ಯಾರ್ಥಿಗಳ ಪಾಲನೆ ಪೋಷಣೆಯನ್ನು ಸಂಪೂರ್ಣ ಸರಕಾರವೇ ವಹಿಸಿಕೊಳ್ಳುವಂತೆ ನೋಡಿಕೊಳ್ಳುವುದು - ಇತ್ಯಾದಿ ಹಲವು -ಹದಿನೆಂಟು ಸಂಗತಿಗಳ ಬಗ್ಗೆ ಅಪ್ರತಿಮವಾದ ಕಳಕಳಿಯನ್ನೂ, ಆಸಕ್ತಿಯನ್ನೂ ವ್ಯಕ್ತಪಡಿಸುತ್ತವೆ. ಸಂಬಳಕ್ಕಾಗಿ ವೃತ್ತಿಕೈಕೊಂಡವರಿಗೆ ಈ ಎಲ್ಲ ಶೈಕ್ಷಣಿಕ ಸಂವರ್ಧನೆಯ ಸಾಧ್ಯತೆಗಳು ಹೊಳೆಯುವುದು ಕನಸಿನ ಮಾತು. ಅವುಗಳನ್ನು ಕಾರ್ಯಾನುಷ್ಠಾನಕ್ಕೆ ತರುವುದಂತೂ ದೂರದ ಮಾತು. ಚೆನ್ನಬಸಪ್ಪನವರು ಶಿಕ್ಷಣದ ಸವ್ಯಸಾಚಿಯಂತೆ ಏಕೋಭಾವದಿಂದ ಈ ಕ್ಷೇತ್ರದಲ್ಲಿ ಗುರಿ ಇಟ್ಟದ್ದನ್ನು ಸಾಧಿಸಿ ಚಿರಸ್ಮರಣೀಯರೆನಿಸಿದರು.

೪. ನೇಮಣೂಕಿ, ವರ್ಗಾವರ್ಗಿ, ಬಡತಿ -ಹಿಂಬಡತಿ, ಸಂಬಳಕಡಿತ ದಂಡ-ಶಿಕ್ಷೆ ಇತ್ಯಾದಿ ಆಡಳಿತಾತ್ಮಕ ಸುತ್ತೋಲೆಗಳು :

ಸುಮಾರು ೨೦ ರಷ್ಟು ಸುತ್ತೋಲೆಗಳಲ್ಲಿ ಅಡಕವಾಗಿರುವ ವಿಷಯಸಂಪತ್ತು ಅದ್ಭುತವಾದುದು. ಅಂದಿನ ಶಿಕ್ಷಣ ಕ್ಷೇತ್ರದ ಇನ್ನು ಹಲವಾರು ಒಳಮುಖಗಳನ್ನು ನೋಡುವ ವಿಪುಲ ಅವಕಾಶ ಇಲ್ಲಿದೆ. ಇಂದಿಗೂ ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಬೇಕೆನ್ನುವ ಪ್ರಾಮಾಣಿಕ ಮನಸ್ಸಿನ ಪ್ರಯೋಗಶೀಲರಿಗೆ ಈ ಸುತ್ತೋಲೆಗಳು ಸಾಲುದೀಪಗಳು. ಒಂದಿಷ್ಟು ಮಾದರಿಗಳನ್ನು ಇಲ್ಲಿ ನೋಡಬಹುದು.

೧. "ಕೆಲವು ಪಂತೋಜಿಗಳು ಹುರುಮಿನ ಹೊರ್ತು ಮತ್ತು ಕಾರಣವಿಲ್ಲದೇ ತಂಮ ಸಾಲಿಯ ಕೆಲಸವಂನು ಶಿಕ್ಷಕರ ಕಡಿಗೆ ಒಪ್ಪಿಸಿ ನಂಮ ಭೆಟ್ಟಿಗೆ ಬರುತ್ತಾರೆ. ಇದು ಬಹಳ ಗೈರಶಿಸ್ತು..... ಅಪ್ಪಣೆ ತೆಗೆದುಕೊಳ್ಳದೆ ನಂಮ ಭೆಟ್ಟಿಗೆ ಬರುವುದೇನು ಕಾರಣವಿಲ್ಲವು, ಬಂದರೆ ಆ ವಿಷಯಕ್ಕೆ ಜವಾಬು ಕೊಡಬೇಕಾಗುವುದು.

(ಮಠಪತ್ರಿಕೆ:೧-೧೨, ಪು. ೨೮೩-೮೪, ಮಾರ್ಚ ೧೮೬೬)

೨. "…. ಪಂತೋಜಿಗಳನ್ನು ಒಂದೂರಿಂದ ಮತ್ತೊಂದು ಊರಿಗೆ ವರ್ಗ ಮಾಡಿದರೆ ಅವರು ಹುಕ್ಕುಂ ಕಂಡಕೂಡ್ಲೆ ತಮ್ಮ ತಯಾರಿ ಮಾಡಿಕೊಂಡು ನೇಮಿಸಿದ ಊರಿಗೆ ಹೋಗುವುದನ್ನು ಬಿಟ್ಟು ನಮ್ಮ ಕಡಿಗೆ ತಾವು ಬಂದು ಅನೇಕ ತರಹೇದ ಸುಳ್ಳು ಹೇಳುತ್ತಾರೆ. ಯಿಲ್ಲವೆ ಸುಳ್ಳ ಮಜಕೂರಿನ ಅರ್ಜಿಯನ್ನು ಕಳುಹಿಸುತ್ತಾರೆ. ….. ಅರ್ಜೀ ತಾವೇ ತಯಾರಮಾಡಿ ಅದರ ಕೆಳಗೆ ಗ್ರಾಮಸ್ಥರ ಸಹಿತೆಗೆದುಕೊಂಡು ನಮ್ಮ ಕಡಿಗೆ ಕಳುಹಿಸುವ ಹಂಚಿಕೆ ಮಾಡುತ್ತಾರೆ, ಹೀಗೆ ಮಾಡುವುದು ಬಹಳ ಗೈರು ……"

(ಮಠಪತ್ರಿಕೆ: ೧-೧೩, ಪು ೩೦೦-೩೦೧, ಏಪ್ರಿಲ್ ೧೮೬೬)

೩. "... ನಂದಗಡ ಸಾಲಿಯ ಹೆಡ್‌ಮಾಸ್ತರರಾದ ವಿನಾಯಕ ಮೋರೇಶ್ವರ ಪಾಟಣಕರ ಯಿವರು ತಂಮ ಕೆಲಸವನ್ನು ಲಕ್ಷಕೊಟ್ಟು ಮಾಡದ್ದರಿಂದಲೂ. ಬೆಳಗಾಂವಿಗೆ ತಂಮ ಮನಸಿಗೆ ಬಂದು ಮನಸಿಗೆ ಬಂದಾಗ್ಗೆ ಹೋಗಿದ್ದಾ ತಿಳಿದು ಬಂದದರಿಂದಲೂ. ತಿಂಗಳ ಅಖೈರಕ್ಕೆ ನಂಮ ಕಡಿಗೆ ಕಳಿಸುವ ಲೆಖ್ಖವನ್ನೆಲ್ಲಾ ಮನಸಿಗೆ ಬಂದಂತೆ ತಯಾರು ಮಾಡಿ ಕಳುಹಿಸಿದ್ದು ನಮಗೆ ತಿಳಿದದ್ದರಿಂದಲೂ. ಶೀಕ್ಷಕರ ಪಗಾರ ಕೊಡುವುದರಲ್ಲಿ ಧಾಂದಲೇ ಮಾಡಿದರಿಂದಲೂ ಮತ್ತು ನಮಗೆ ಗೈರಶಿಸ್ತ ಜವಾಬ ಕೊಟ್ಟದರಿಂದಲೂ .... ಯಿವರನ್ನು ಕೆಲಸದಿಂದ ದುರ ಮಾಡುವ ಬಗ್ಗೆ ರಿಪೋರ್ಟ್ ಮಾಡಲಾಗಿ ಮೇಹರಬಾನ ಸಾಹೇಬರವರು ಸದರೀ ಮಾಸ್ತರಿಂನ ಕೆಲಸದಿಂದ ದೂರಮಾಡಿ ಯೀ ಪ್ರಕಾರದ ನೋಟೀಸು ಶಾಲಾಪತ್ರಿಕೆಯಲ್ಲಿ ಛಾಪಿಸುವ ಬಗ್ಗೆ ನಂಮ ಕಡಿಗೆ ಬರದು ಕಳುಹಿಸಿದ್ದಾರೆ."

(ಶಾಲಾಪತ್ರಿಕೆ:೩-೭ ಪುಟ ೨೧೬-೨೧೭. ಆಕ್ಟೋಬರ ೧೮೬೭)

೪. (೧) " ಸೂಡಿ ಮಾಸ್ತರರಾದ ಯೋಗೇಶ್ವರ ದೋಂಡದೇವ ಇವರು ತಮ್ಮ ಸಾಲಿಯಲ್ಲಿ ರಜಿಸ್ಟರಕ್ಕೆ ದಾಖಲೆ ಮಾಡದೆ ನಾಲ್ಕಾರು ಹುಡುಗರನ್ನು ಸಾಲಿಗೆ ಬರುಗೊಡುತ್ತಿದ್ದರು. ಅದರ ದಶಿಂದ ಅವರ ಪಗಾರ ೩ ರೂಪಾಯಿ ಕಡಿಮೆ ಯಾಯಿತು.

೨. ಹಾವೇರಿಪೇಠಿ ಸಾಲಿಯ ಇಂಚಾರ್ಜ ಮಾಸ್ತರರಾದ ಕೇಶವ ನರಸಿಂಹ್ಪ ಧಾರವಾಡಕರ ಇವರು ಒಪತ್ತಿನ ಹಾಜರೀ ತುಂಬದ ಕಾರಣ ಅವರಿಗೆ ಒಂದು ರೂಪಾಯಿ ದಂಡವಾಯಿತು. ಇವರು ಒಂದು ವೇಳೆ ಇನ್ನೊಮ್ಮೆ ಈ ಪ್ರಕಾರದ ತಪ್ಪು ಮಾಡಿದರೆ ಕೆಲಸದಿಂದ ದೂರಾಗವರು.

೩. ತಿರ್ಲಾಪೂರ ಸಾಲಿಯ ಮಾಸ್ತರರಾದ ಅಡಿವೆಯ್ಯಾ ರುದ್ರಯ್ಯಾ ಇವರು ಉತ್ಕೃಷ್ಟ ಕೆಲಸ ಮಾಡಿದ್ದರಿಂದ ಇವರ ಪಗಾರವನ್ನು (೧೭ ರೂಪಾಯಿಯಿಂದ ೨೦ ರೂಪಾಯಿ) ಮಾಡಿ ಇವರನ್ನು ಕರ್ಜಗಿ ಸಾಲಿಯ ಹೆಡಿಮಾಸ್ತರ ಕೆಲಸಕ್ಕೆ ನೇಮಿಸಿತು."

(ಶಾಲಾ ಪತ್ರಿಕೆ:೧೨-೧೩. ಪುಟ ೬೫-೬೭. ಫೆಬ್ರುವರಿ ೧೮೬೮).

೪. "..... ಸವದತ್ತೀ ತಾಲೂಕಿನಲ್ಲಿರುವ ಎಕ್ಕುಂಡಿ ಊರಲ್ಲಿ ಸಾಲಿಯಾಗಿ ಈವತ್ತಿಗೆ ಒಂದು ವರ್ಷವಾಯಿತು. ಅಂದರೆ ನಾವು ತಿಂಗಳ ಮುಂದೆ ಅಲ್ಲಿಗೆ ಹೋದಾಗ್ಗೆ ಸಾಲಿಯ ಪರೀಕ್ಷಾ ತೆಗೆದುಕೊಳ್ಳಲಾಗಿ ಬಹಳ ಚನ್ನಾಗಿ ಆದದ್ದರಿಂದ ಆ ಸಾಲಿಯ ಮಾಸ್ತರರಾದ ಕೃಷ್ಣಾಜೀ ನರಸೋ ಇವರಿಗೆ ೨ ರೂಪಾಯಿ ಸಂಬಳ ಹೆಚ್ಚು ಮಾಡಬೇಕೆಂದು ನಾವು ಮೆಹರಬಾನ ಇನಸ್ಪೆಕ್ಟರ್ ಸಾಹೇಬರ ಕಡಿಗೆ ಶಿಫಾರಸ ಮಾಡಲಾಗಿ ಸಾಹೇಬರವರು ಮಂಜೂರಿ ಕೊಟ್ಟು ಈ ಮಜಕೂರು ಕನ್ನಡ ಮಠಪತ್ರಿಕೆಯಲ್ಲಿ ಛಾಪಿಸಬೇಕೆಂದು ಬರೆದು ಕಳುಹಿಸಿದ್ದಾರೆ...."

(ಶಾಲಾಪತ್ರಿಕೆ:೫೨ ಪುಟ ೫೭, ಮೇ ೧೮೬೯)

೬. "…. ಕಸಬಾ ಗುತ್ತಲ ತಾಲೂಕ ಕರ್ಜಗಿ ಇಲ್ಲಿಯ ಮಾಸ್ತರರಾದ ಮೋರೋ ವಿನಾಯಕ ಜೋಸಿ ಇವರು ತಂಮ ರಾಜೀನಾಮೆಯನು ಮಂಜೂರು ಮಾಡುವುದಕ್ಕಿಂತ ಮುಂಚೆ ತಂಮ ಕೆಲಸದ ಚಾರ್ಜವನ್ನು ಶಿಕ್ಷಕನಿಗೆ ಕೊಟ್ಟು ಹೋದಕಾರಣ ಮೆಹರ್ಬಾನ ಇಜ್ಯೂಕೇಶನಲ್ ಇನಸ್ಪೆಕ್ಟರ್ ಪ್ರಾಂತ ದಕ್ಷಿಣಭಾಗ ಇವರು ಸದರ ಮಾಸ್ತರರ ರಾಜೀನಾಮೆಯನ್ನು ಮಂಜೂರು ಮಾಡದೆ ಅವರಂನು ಈ ಖಾತೇದಿಂದ ತೆಗಿದು ಹಾಕಿದ್ದಾರೆ …."

(ಶಾಲಾ ಪತ್ರಿಕೆ: ೭-೧೧, ಪುಟ ೧೧೪, ಫೆಬ್ರುವರಿ ೧೮೭೨)

೭. " ……ನವಲಗುಂದ ತಾಲೂಕ ಪೈಕಿ ಗುಡಿಸಾಗರ ಮಾಸ್ತರ ಗವಸಖಾನ ಸರದಾರಖಾನ ಇವರು ಒಂದು ವರ್ಷ ತಂಮ ಸಾಲಿಯ ಹಾಜರಿ ಶೀಸಪೆನಸಿನಿಂದ ತುಂಬಿದ್ದಾರೆ ಮತ್ತು ಆದರಲ್ಲಿ ಮಸಿ ಚಿತ್ತಕಾಟ ಮಾಡಿದ್ದಾನೆ. ಈ ಸಂಗತಿ ರಾವಸಾಹೇಬ ಆ.ಡಿ.ಎ. ಇನಸ್ಪೇಕ್ಟರ ಜಿಲ್ಲಾ ಧಾರವಾಡ ಇವರ ನಜರಿಗೆ ಬಿದ್ದದರಿಂದ ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಪ್ರಾಂತ ದಕ್ಷಿಣಭಾಗ ಇವರ ಮಂಜೂರಿ ಮ್ಯಾಲಿಂದ ವೊಂದು ತಿಂಗಳ ಪಗಾರ ದಂಡ ಮಾಡಿರುತ್ತೇವೆ. …"

(ಶಾಲಾ ಪತ್ರಿಕೆ:೧೫-೩, ಪುಟ ೬೮-೬೯, ಮಾರ್ಚ್ ೧೮೮೦)

೮. " ಸದರೀ ಕನವಳ್ಳೀ ಸಾಲಿಯ ಮಾಸ್ತರ ಕೆಲಸಕ್ಕೆ ಕಲಘಟಗಿ ಸಾಲಿನ ಆ. ಮಾಸ್ತರರಾದ ಧೋಂಡೋ ನರಸಿಂಹ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೦".

"ಇಲ್ಲಿಯ ಹೆಡ್‌ಮಾಸ್ತರ ಕೆಲಸಕ್ಕೆ ಕಲಘಟಗೀ ತಾಲೂಕ ಓರೇ ಹೊಂನೀಹಳ್ಳಿ ಸಾಲಿಯ ಮಾಜೀ ಮಾಸ್ತರನಾದ ಹಣಮಂತ ದೇವಜೀ ಸವಣೂರಕರ ಇವರನ್ನು ನೇಮಿಸಿರುತ್ತದೆ. ಸಂಬಳ ರೂಪಾಯಿ ೮.

" ಇಲ್ಲಿಯ ಹೆಡ್‌ಮಾಸ್ತರ ಜಾಗಾದ ಮೇಲೆ ಬಾಳಕೃಷ್ಣ, ಬಾಪೂಜಿ ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿ ಇವರನ್ನು ನೇಮಿಸಿರುತ್ತದೆ. ಪಗಾರ ರೂಪಾಯಿ ೧೨. ಸಾತಯ್ಯ ಶಂಕರಯ್ಯಾ ಹೆಡ್‌ಮಾಸ್ತರ ಗರ್ಲಸ್ಕೂಲ ನವಲಗುಂದ ಇವರನ್ನು ಟ್ರೇನಿಂಗ್ ಕಾಲೇಜಕ್ಕೆ ಕಳುಹಿಸಿ, ಕಾಲೇಜದ ವಿದ್ಯಾರ್ಥಿಯಾದ ಬಾಳಪ್ಪ ಮುಸೆಪ್ಪ ಇವರನ್ನು ನೇಮಿಸಿರುತ್ತದೆ. ರೂಪಾಯಿ ೧೨

(ಶಾಲಾ ಪತ್ರಿಕೆ :೧೧-೧, ಪುಟ ೧೭-೨೦, ೧೮೭೫)

ಶಿಕ್ಷಕರು ಮಾಡುತ್ತಿದ್ದ ತಪ್ಪುಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು. ಅಂಥ ಸಂದರ್ಶನಗಳಲ್ಲಿ ಅವರವರ ತಪ್ಪಿನ ಪ್ರಮಾಣ ಹಾಗೂ ಪರಿಣಾಮಗಳನ್ನು ಅನುಲಕ್ಷಿಸಿ ಕ್ರಮಗಳನ್ನು ಕೈಕೊಳ್ಳಲಾಗುತ್ತಿತ್ತು. ಯೋಗ್ಯ ಶಿಕ್ಷಕರಿಗೆ

ಸಂಬಳ ಹೆಚ್ಚಿಸಿಯೋ, ಬಡತಿ ನೀಡುವುದರ ಮೂಲಕವೋ ಪುರಸ್ಕಾರವೂ ಇದ್ದೇ ಇರುತ್ತಿತ್ತು. ಕೆಲವೊಮ್ಮೆ ನಿವೃತ್ತರಾಗಿದ್ದ ಒಳ್ಳೆಯ ಶಿಕ್ಷಕರನ್ನು ಮರುನೇಮಣೂಕಿ ಮಾಡಿಕೊಂಡ ಉದಾಹರಣೆಗಳೂ ಉಂಟು. ಇದೇ ರೀತಿ ಟ್ರೇನಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ಸಮರ್ಥರೆನಿಸಿದರೆ ಅವರನ್ನು ನೇರವಾಗಿ ಶಿಕ್ಷಕರಾಗಿ, ಹೆಡ್‌ಮಾಸ್ತರರಾಗಿಯೂ ನೇಮಿಸಿದ ಸಂದರ್ಭಗಳುಂಟು.

ಒಂದು ಕಾಲಘಟ್ಟದ ಶೈಕ್ಷಣಿಕ ಕ್ಷೇತ್ರದ ಅಧ್ಯಯನ ಎಂಬ ಭಾವನೆಯಿಂದ ನೋಡುವಾಗ - ಖೊಟ್ಟಿ ದಾಖಲೆಗಳನ್ನಿಡುವ, ಸೃಷ್ಟಿಸುವ ಹಾಗೂ ಕೆಲಸದ ಬಗ್ಗೆ ಅನಾಸಕ್ತ, ಬೇಜವಾಬ್ದಾರಿ ಶಿಕ್ಷಕರಿಗೆ ಆಗಲೂ ಕೊರತೆಯಿದ್ದಿರಲಿಲ್ಲವೆಂಮು ತೋರುತ್ತದೆ. ಆದರೆ ಅತ್ಯಂತ ಗಮನಾರ್ಹವಾದ ಸಂಗತಿಯೆಂದರೆ ಯಾವ ತಪ್ಪಿತಸ್ಥ ಶಿಕ್ಷಕನೂ ಅದರ ಪರಿಣಾಮದಿಂದ ತಪ್ಪಿಸಿಕೊಂಡು ಕೆಲಸದಲ್ಲಿ ಮುಂದುವರೆಯುವದು ಸಾಧ್ಯವಿರುತ್ತಿದ್ದಿಲ್ಲ. ಅರ್ಧದಿನ ಹಾಜರೀ ತುಂಬದ ಶಿಕ್ಷಕನಿಗೂ ದಂಡ ಶಿಕ್ಷೆಗಳು ಇದ್ದೇ ಇರುತ್ತಿದ್ದವು. ಸುಳ್ಳು, ಮೋಸ, ವಂಚನೆಗಳು ದೃಢಪಟ್ಟರೆ ಕೆಲಸ ಕಳೆದುಕೊಳ್ಳುವುದು ಖಾತ್ರೀಯಾಗಿರುತ್ತಿತ್ತು. ಅಂದು ಯಾವ ಸಿ.ಓ.ಡಿ. ಸಿ.ಬಿ.ಐ. ತನಿಖೆಗಳ ಅಗತ್ಯವಿದ್ದಿರಲಿಲ್ಲ. ಮನಸ್ಸಾಕ್ಷಿಯ ಆಧಾರದ ಮೇಲೆ ಕ್ರಮಗಳನ್ನು ಕೈಕೊಳ್ಳಲಾಗುತ್ತಿತ್ತು. ತಪ್ಪುಮಾಡಿದವರೂ ತಮ್ಮ ಆತ್ಮಸಾಕ್ಷಿಗೆ ಹೆದರಿ ಅದನ್ನು ಒಪ್ಪಿಕೊಳ್ಳುತ್ತಿದ್ದರು. ಹೀಗಾಗಿ ಈಗಿನಂತೆ ಮೋಸ, ವಂಚನೆ, ಅನ್ಯಾಯಗಳೇ ಜೀವನಶೈಲಿಯಾಗುವುದಕ್ಕೆ ಆಸ್ಪದವಿರಲಿಲ್ಲವೆಂಬುದು ಮುಖ್ಯ.

೫. ಇತರ ಸುತ್ತೋಲೆಗಳು : ಒಂದು ಕ್ಷೇತ್ರಕ್ಕೆ ವ್ಯವಸ್ಥಿತವಾದ ರೂಪು ಬರಬೇಕಾದರೆ ಅದರ ಎಲ್ಲ ಪಾರ್ಶ್ವಗಳನ್ನು ಸಮಾನ ಆಸಕ್ತಿಯಿಂದ ಕಟ್ಟಬೇಕಾಗುತ್ತದೆ. ಈ ಕಾರ್ಯವನ್ನು ಚೆನ್ನಬಸಪ್ಪನವರು ಹೇಗೆ ಮಾಡಿದರೆಂಬುದಕ್ಕೆ ಅವರ ಇತರ ಸುತ್ತೋಲೆಗಳೂ ಅಷ್ಟೇ ಮಹತ್ವದವು ಎನಿಸುತ್ತವೆ.

೧. "…. ಸಾಲಿಯಲ್ಲಿ ಹೊಸದಾಗಿ ಹುಡುಗರ ತೆಗಿದುಕೊಳ್ಳಬೇಕಾದರೆ ಮೊದಲು ಅವರ ಕಡಿಯಿಂದ ಫೀ ವಸೂಲಿ ಮಾಡಿ ತೆಗೆದುಕೊಳ್ಳಬೇಕು. ಹಾಗೇ ಸಾಲಿಯಲ್ಲಿ ಬರಕೊಡಬಾರದು. ಯಾವ ದಿವಸ ಫೀ ವಸೂಲಿ ಆಗುತ್ತದೊ ಅದೆ ದಿವಸ ಲೆಖ್ಖಕ್ಕೆ ಜಮಾ ಮಾಡಬೇಕು.

(ಮಠಪತ್ರಿಕೆ: ೧-೧೨, ಪು ೨೮೨-೮೩, ಮಾರ್ಚ್ ೧೮೬೬)

೨. "… ಹುಡುಗರ ಕಡಿಯಿಂದ ಸಾಲಿ ಫಿ ಯಿಸಕೊಂಡು ಮಾಫಿಯಂತೆ ಅವರ ಹೆಸರು ದಾಖಲ ಮಾಡಿ ತಂದು ಬದಲಿ ಯರಡನೇ ಸ್ಥಳಕ್ಕೆ ಆಗಿ ಅಲ್ಲಿಗೆ ತಾವು ಹೋಗುವ ಮುಂದೆ ಆ ಹುಡುಗರಿಗೆ ನಾವು ಮಾಫಿ ಇದ್ದವರೆಂದು ಬರುವ ಪಂತೋಜಿಗಳಿಗೆ ಹೇಳರೆಂದು, ಹೇಳಿದ್ದೂ ನಮ್ಮ ನಜರಿನೆ ಬಿತ್ತೂ. ಈ ವಹಿವಾಟು ಬಹಳ ಗೈರು. ಇಂಥವರ ಮೇಲೆ ಸರಕಾರಿ ಖಟ್ಲೆ ತಯಾರ ಆಗುವದಕ್ಕೆ ಅಡಚಣೆಯಿಲ್ಲಾ …"

(ಮಠಪತ್ರಿಕೆ:೧-೧೩ ಪು. ೩೦೨ -೩೦೩. ಏಪ್ರಿಲ್ ೧೮೬೬)

೩. "....ಬರುವ ವಾರ್ಷಿಕ ಲೆಖ್ಖಕ್ಕೆ ಫಕ್ತ ಹೊಲ ಮಾಡುವವರ ಹುಡುಗರ ಸಂಖ್ಯೆ ಬೇಕಾಗುವುದು ಅದನ್ನು ತಗದಯಿಡಬೇಕು. ಕೆಲವರು ಲೋಕಲ್ ಫಂಡ ಕೊಡತ್ತಿದ್ದು ಸ್ವಂತಃ ಹೊಲ ಮಾಡುವದಿಲ್ಲ ಯಿಂಥವರನ್ನು ಅದರಲ್ಲಿ ಶೇರಿಸಬಾರದು..."

(ಶಾಲಾಪತ್ರಿಕೆ :೪-೪. ಪುಟ ೧೧೯-೧೨೦. ಜುಲೈ ೧೮೬೮)

೪. ".... ನಮ್ಮ ಕಡಿಯಿಂದ ಹೋಗುವ ಲಖೋಟಿಗಳು ವ್ಯಾಳ್ಯಕ್ಕೆ ಮುಟ್ಟದೆ. ತಿಂಗಳಾದರೂ ಮುಟ್ಟುವದಿಲ್ಲವೆಂದು ಕೇಳುತ್ತೇವೆ. ಆದರೆ ಇನ್ನು ಮುಂದೆ ನಮ್ಮ ಕಡಿಂದಾ ಲಖೋಟಿಗಳು ರವಾನೆ ಆದ ನಂತರಾ ೧೦ ದಿವಸದ ಮೇಲೆ ಬಂದು ಮುಟ್ಟಿದರೆ ಲಖೋಟಿಗಳನ್ನು ಸಾಕ್ಷಿಗಳಿಂದ ತಗೊಂಡು. ಮೇಲಿನ ಕವರ ಇಟ್ಟಕೊಂಡು ಯಿತ್ತ ಕಡಿಗೆ ರಪೋರ್ಟ ಮಾಡಬೇಕು..."

(ಶಾಲಾಪತ್ರಿಕೆ: ೪.೪ ೧೨೦-೧೨೧. ಜುಲೈ ೧೮೬೮)

೫. " ....ಕೆಲವು ಮಾಸ್ತರರು ತಿಂಗಳ ಲೆಖ್ಖಗಳನ್ನು ತಮ್ಮ ತಮ್ಮ ಮನಸಿಗೆ ಬಂದಾಗೆ ಕಳುಹಿಸುತ್ತಾರೆ. ಇದರಿಂದ ಕೆಲಸಕ್ಕೆ ಅಡ್ಡಿಯಾಗುತ್ತದೆ. ಅಂದರೆ ಈ ನೋಟೀಸು ತಿಳಿದಂದಿನಿಂದ ೨ನೇ ಅಥವಾ ೩ನೇ ತಾರೀಖಿನ ದಿವಸ ಹಿಂದಿನ ತಿಂಗಳದ ಲೆಖ್ಖವನ್ನು ತಯಾರು ಮಾಡಿ ಆವತ್ತಿನ ದಿವಸ ಟಪಾಲಿಗೆ ಹಾಕಬೇಕು. ಈ ಪ್ರಕಾರ ನಡಕೊಳ್ಳದವರಿಗೆ ದಂಡ ಮಾಡಬೇಕಾಗುವುದು"

(ಶಾಲಾಪತ್ರಿಕೆ:೫-೬. ಪುಟ ೨೧೪-೨೧೫. ಅಕ್ಟೋಬರ ೧೮೬೯)

೬. ".... ಸಾಲಿಯ ರಜಿಸ್ಟರಕ್ಕೆ ದಾಖಲಿರುವ ಯಾವತ್ತು ಹುಡುಗರ ವಯಸ್ಸು ಇಷ್ಟೇಯೆಂಬುವ ಬಗ್ಗೆ ಪ್ರತ್ಯೇಕ ಹುಡುಗರ ತಂದಿಗಳ ಕಡಿಯಿಂದ ಅಥವಾ ಸಂರಕ್ಷಣ ಮಾಡುವವರ ಕಡಿಯಿಂದ ದಾಖಲೇ ತೆಗೆದು ಕೊಂಡು ಆ ದಾಖಲೆಗಳನ್ನು ಒಂದು ಫೈಲಿನಲ್ಲಿ ಹಚ್ಚಿ ಇಡಬೇಕು ..."

(ಶಾಲಾಪತ್ರಿಕೆ:-೧೪-೨. ಪುಟ ೩೬ ಫೆಬ್ರವರಿ ೧೮೭೯)

ಈ ರೀತಿ ಫೀ ವಸೂಲಿ. ಪತ್ರ ತಲುಪುವ ಬಗ್ಗೆ. ಲೆಖ್ಖಗಳನ್ನು ತಡವಾಗಿ ತಯಾರುಮಾಡುವ ಬಗ್ಗೆ. ಮಕ್ಕಳ ವಯಸ್ಸಿನ ದಾಖಲೆ ಬಗ್ಗೆ. ಪುಸ್ತಕಗಳು ಶಿಲಕು ಇಲ್ಲದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಹೊರಡಿಸುತ್ತಿದ್ದ ಸುತ್ತೋಲೆಗಳು ಶಿಕ್ಷಣ ಕ್ಷೇತ್ರಕ್ಕೆ ಇನ್ನಷ್ಟು ಅಚ್ಚುಕಟ್ಟುತನವನ್ನು ಒದಗಿಸಿರಬೇಕೆಂಬುದು ನಿಸ್ಸಂಶಯ.

ಚೆನ್ನಬಸಪ್ಪನವರು ಈ ಸುತ್ತೋಲೆಗಳನ್ನು ತಾವು ಎಲ್ಲೆಲ್ಲಿ 'ಕ್ಯಾಂಪು' ಮಾಡುತ್ತಾರೋ ಅಲ್ಲಿಂದಲೇ ಬರೆದು ಪ್ರಕಟಣೆಗೆ ಕಳಿಸುತ್ತಿದ್ದರೆಂದು ತಿಳಿಯುತ್ತದೆ. ಯಾಕೆಂದರೆ ಪ್ರತಿಯೊಂದು ಸುತ್ತೋಲೆಯೂ ಪ್ರಸಿದ್ಧಿಯಾದ ಸ್ಥಳ. ತಾರೀಖು ಮತ್ತು

ಕಾಲವನ್ನು ಸೂಚಿಸುತ್ತವೆ. ಇವುಗಳ ಭಾಷೆಯ ಒಂದಿನ ಪ್ರಾಮಾಣಿಕತೆ ಎಷ್ಟೊಂದು ತೀವ್ರಪರಿಣಾಮಕಾರಿ ಎಂದರೆ, ಓದಿದ ತಕ್ಷಣ ವಿದ್ಯುದಾಘಾತವನ್ನು ನೀಡುವಷ್ಟು ಸತ್ವಶಾಲಿ. ಉದಾಹರಣೆಗೆ: ಈ ನೋಟೀಸು ಕಂಡ ದಿವಸದಿಂದ, ಯೋಗ್ಯ ತಜವಿಜ ಮಾಡಲಾಗುವುದು. ಇದು ಬಹಳ ಗೈರುಶಿಸ್ತು, ಇದು ಬಹಳ ಮುಗ್ಗಲಗೇಡಿತನವು. ಮಾಸ್ತರನಿಗೂ ವರ್ಗದ ಶಿಕ್ಷಕನಿಗೂ ದಂಡ ಮಾಡಲಾಗುವುದು. ಈ ಮಾಸ್ತರರಿಗೆ ನಾವು ಛೀಮಾರಿ ಹಾಕುವವರಿದ್ದೇವೆ. ಸದರಿ ಮಾಸ್ತರನ ಕೆಲಸದಿಂದ ದೂರಮಾಡಲಾಗಿದೆ. ಈ ವಿಷಯಕ್ಕೆ ನಾವು ನೆಟ್ಟಗೆ ಬಂದೋಬಸ್ತ ಮಾಡುವೆವು. ಹುಷಾರಿಯಿಂದ ಕೆಲಸ ನಡಿಸಬೇಕು. ಅವರಿಗೆ ಶಿಕ್ಷೆ ಮಾಡುವೆವು. ಇದೇ ಶಿಕ್ಷೆಗೆ ಪಾತ್ರರಾಗುವರು. ಮಾಸ್ತರನನ್ನು ಶಾಲಾ ಖಾತೆಯಿಂದ ತೆಗೆದಿದ್ದೇನೆ. ಎಂಬಂತಹ ಮಾತುಗಳಲ್ಲಿನ 'ಕಠೋರತೆ' ಎಂಥವರನ್ನೂ ತಬ್ಬಿಬ್ಬಾಗಿಸುತ್ತದೆ. ಆದರೆ ಆದರ ಒಂದಿನ ಕಳಕಳಿ ಮಾತ್ರ ಅನನ್ಯವಾದುದು.

* * * * *

ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ

-ಟಿ. ಎಂ. ಸರಸ್ವತಿ

ಡಾ|| ಎಂ. ಎಚ್. ಮರಿಗೌಡರನ್ನು ಕುರಿತು ದೇಜಗೌರವರು ಬರೆದಿರುವ ಜೀವನಚರಿತ್ರೆಯೇ ಈ 'ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ' ಎಂಬ ಕೃತಿ. ಇದರಲ್ಲಿರುವ ವಿಚಾರಗಳು ಹೊಸಬರಿಗೆ ಅತಿಶಯವೆಂಬಂತೆ ಕಂಡು ಬರಬಹುದಾದರೂ ಅವರನ್ನು ಹತ್ತಿರದಿಂದ ಕಂಡವರಿಗೆ ಜವರೇಗೌಡರು ಅರ್ಥೈಸಿರುವುದು ಸಹಜವಾಗಿ ಕಾಣಬರುತ್ತದೆ. ಕರ್ನಾಟಕದ ತೋಟಗಾರಿಕೆ ಇಲಾಖೆಯು ಪ್ರವರ್ಧಮಾನಕ್ಕೆ ಬರಲು, ದೇಶವಿದೇಶದ ಜನರು ಇದರತ್ತ ಕಣ್ಣುಹಾಯಿಸಿ ಮೆಚ್ಚುವಂತೆ ಮಾಡಲು ಕಾರಣಪುರುಷರಾದವರು ಮರಿಗೌಡರು. ಅವರು ಸಾಧಿಸಿದ ಸಾಧನೆಯ ಬಗೆಗೆ, ಅವರ ಕಾಯಕದ ಪರಿಯನ್ನು ತಿಳಿಸುವ ದೇಜಗೌರವರ ಈ ಕೃತಿ ಸಾಕಷ್ಟು ವಿವರಗಳನ್ನು ಒಳಗೊಂಡಿದೆ. ಹತ್ತು ಅಧ್ಯಾಯಗಳಲ್ಲಿ ವಿಂಗಡಿಸಲ್ಪಟ್ಟಿದೆ.

'ದೇವಾಲಯವೀ ಹೂವಿನ ತೋಟಂ' ಎಂಬ ಫಲಕವನ್ನು ಹೊತ್ತ ಲಾಲ್‌ಬಾಗ್ ಮನಮೋಹಕವಾದ ಹೂವಿನ ತೋಟವಷ್ಟೇ ಅಲ್ಲ, ದೇವಸ್ಥಾನವನ್ನು ಹೊಕ್ಕ ಪ್ರಶಾಂತ ಅನುಭವವನ್ನು ಕೊಡುವ, ಮನಸ್ಸಿಗೆ ಪ್ರಫುಲ್ಲತೆಯನ್ನು ಉಂಟುಮಾಡುವ ಮಂದಿರದಂತೆಯೇ ಇದೆ. ಅದನ್ನು ಸುಂದರ ಸಾಕಾರಗೊಳಿಸಲು 'ಪ್ರಕೃತಿಯಾರಾಧನೆಯೇ ಪರಮನಾರಧನೆ'ಯೆಂದು ನಂಬಿ ದುಡಿದ ಮರಿಗೌಡರ ಸಾರ್ಥಕ ಸೇವೆಯ ವಿವರವನ್ನು ಸಮರ್ಪಕವಾಗಿ ಹೇಳುವ ಜವರೇಗೌಡರು ಅವರ ನಿಕಟವರ್ತಿಗಳು ಹಾಗೂ ಬಂಧುಗಳು.

ಕೃತಿಯ ಮೊದಲನೆಯ ಅಧ್ಯಾಯವು ಕುವೆಂಪು ವಿಸೀಯವರು ಸುಂದರ ಉದ್ಯಾನವನ್ನು ಕುರಿತು ರಚಿಸಿದ ಕವಿತೆಯ ಸಾಲುಗಳಿಂದ ಆರಂಭಗೊಂಡಿದೆ. ಲಾಲ್‌ಬಾಗಿನ ಸೌಂದರ್ಯವನ್ನು ಕಂಡು ಆನಂದಿಸುವ ಜನರ ಬಗ್ಗೆ ಹೇಳುತ್ತಾ "ಈ ಕೆಂಪುತೋಟ ಕವಿಗಳಿಗೆ ಹುಚ್ಚು, ರಸಿಕರಿಗೆ ಮೆಚ್ಚು, ಜ್ಞಾನಿ ವಿಜ್ಞಾನಿಗಳಿಗೆ ನೆಚ್ಚು" ಎನ್ನುತ್ತಾರೆ.

ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡಿದ ಮರಿಗೌಡರು ಆದರ ಮೂಲಕ ಕರ್ನಾಟಕಕ್ಕೆ ಏಕೆ ಇಡೀ ಭಾರತ ದೇಶಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. ಸಾಮಾನ್ಯ ಮಾನವನೊಬ್ಬ ತನ್ನ ಸಾಧನೆ ಸಿದ್ಧಿಯಿಂದ ಮೇಲೇರಿ ಅಸಾಮಾನ್ಯನೆನಿಸಿ, ಯೋಗಪುರುಷನೆನಿಸುತ್ತಾನೆಂಬುದಕ್ಕೆ ಗೌಡರು ಸಾಕ್ಷಿಯಾಗಿದ್ದಾರೆ. ಅವರು ಹುಟ್ಟಿ ಬರಲು ರೈತರ ಅಭೀಪ್ಸೆಯೇ ಕಾರಣವಾಯಿತೇನೋ ಎನ್ನುವ ದೇಜಗೌರವರು ಕುವೆಂಪುರವರು ರಾಮಾಯಣದರ್ಶನಂನಲ್ಲಿ ರಾಮಾವತಾರಕ್ಕೆ 'ಜನಮನದ ಶಕ್ತಿ ಮೇಣವರಭೀಪ್ಸೆಯೇ ಕಾರಣವಾದಂತೆ. "ರೈತನ ಅಭೀಪ್ಸೆ ಮತ್ತು ಋತದಿಚ್ಛೆಗಳು ಒಂದುಗೂಡಿ ಬಂದು ಇಂಥಾ ಯೋಗಪುರುಷನ ಉದಯವಾಯಿತೆಂದು" ತಮ್ಮ ಕಾವ್ಯಮಯ ಗದ್ಯಶೈಲಿಯಲ್ಲಿ ಬಣ್ಣಿಸುತ್ತಾರೆ.

ಸುಂದರ ಲಾಲ್‌ಬಾಗ್ ಉದ್ಯಾನವನ್ನು ವರ್ಣಿಸಲು, ಕನ್ನಡ ಕಾವ್ಯಗಳಲ್ಲಿ ಬರುವ ಉದ್ಯಾನವರ್ಣನೆಯ ನೆನಪನ್ನು ತಂದುಕೊಳ್ಳುತ್ತಾ ಹರಿಹರ, ಕುವೆಂಪುರವರ ಸಾಲುಗಳನ್ನು

ಉದ್ಧರಿಸುವ ಲೇಖಕರು ಪ್ರಕೃತಿಪ್ರಜ್ಞೆಯ ಪರಿಚಯವನ್ನು ಮಾಡಿಕೊಡುತ್ತಾರೆ. ಈ ಉದ್ಯಾನವನ ಸರ್ವಾಂಗ ಸುಂದರವಾಗುವಲ್ಲಿ ಹಗಲಿರುಳು ಸರ್ವಸಮರ್ಪಣ ಭಾವದಿಂದ ದುಡಿದು, ಕರ್ನಾಟಕದ ತೋಟಗಾರಿಕೆಯು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಲು ಹೆಣಗಿದ ಮಹಾಪುರುಷ ಡಾ. ಎಂ. ಎಚ್. ಮರಿಗೌಡರು ಎಂಬುದನ್ನು ಕಾಯಕದಲ್ಲಿ ಅವರಿಗಿರುವ ತಾದಾತ್ಮ್ಯ, ಪ್ರಾಮಾಣಿಕತೆಗಳನ್ನು ಗುರುತಿಸುತ್ತಾ ಕಾಯಾ-ವಾಚಾ-ಮನಸಾ ಶ್ರದ್ಧೆಯಿಂದ ಕೆಲಸಮಾಡಿದ ಪುಣ್ಯಜೀವಿಯನ್ನು ಕೊಂಡಾಡುವ ಕೃತಿ ಇದಾಗಿದೆ.

ಟಿ. ನರಸೀಪುರ ತಾಲ್ಲೂಕಿನ ಸಾಮಾನ್ಯ ರೈತ ಕುಟುಂಬದ ಹೊಂಬೇಗೌಡ -ನಿಂಗಮ್ಮ ದಂಪತಿಗಳ ಐದನೆಯ ಸುಪುತ್ರರಾಗಿ ಜನಿಸಿದ ಮರಿಗೌಡರು ಹನುಮನಾಳು, ಬನ್ನೂರಿನಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಮೈಸೂರಿನ ಮಹಾರಾಜಾ ಹೈಸ್ಕೂಲಿನಲ್ಲಿ ಮೆಟ್ರಿಕ್ ಪಾಸು ಮಾಡುತ್ತಾರೆ. ಇಂಟರ್ ಮಿಡಿಯೇಟಿನಲ್ಲಿ ಸಸ್ಯವಿಜ್ಞಾನವನ್ನು ಓದಿ ಸಸ್ಯಾರಾಧಕರಾಗುವ ಅವಕಾಶ ಸಿಕ್ಕುತ್ತದೆ. ರಾಮಕೃಷ್ಣಾಶ್ರಮದ ವಿದ್ಯಾರ್ಥಿನಿಲಯದಲ್ಲಿದ್ದಾಗ ಕವಿ ಕುವೆಂಪುರವರ ಸ್ನೇಹಲಾಭ ಲಭಿಸುತ್ತದೆ. ಅವರೊಡನೆ ಒಡನಾಟದಲ್ಲಿದ್ದ ಮರಿಯಪ್ಪನ ವಿಚಾರ ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಆತ್ಮಕಥೆಯಿಂದ ಸಿಕ್ಕುವುದನ್ನು ೧೬ ನೇ ಪುಟದಲ್ಲಿ ಕಾಣಬಹುದು. ಬಿ ಎಸ್ ಸಿ ಯ ನಂತರ ಬೀರ್‌ಬಲ್ ಸಹಾನಿ ಎಂಬ ಪ್ರಸಿದ್ಧ ಸಸ್ಯವಿಜ್ಞಾನಿಗಳ ಸನ್ನಿಧಿಯಲ್ಲಿ ಎಂ. ಎಸ್‌ಸಿ. ಕಲಿಯುವ ಅವಕಾಶ ಪ್ರಾಪ್ತವಾಗಿ, ಮರಿಗೌಡರ ಬುದ್ಧಿವಂತಿಕೆಗೆ ಸಾಣೆ ಹಿಡಿದಂತಾಗುತ್ತದೆ. ವಿದ್ಯಾವಂತರಾದ ಅಣ್ಣಂದಿರ ಪ್ರೋತ್ಸಾಹ (ಹೈಕೋರ್ಟ್ ನ್ಯಾಯಾಧೀಶರಾಗಿದ್ದ ಹೊಂಬೇಗೌಡರು ಮತ್ತು ಛೀಫ್ ಇಂಜಿನಿಯರ್ ಮಂಚಿಗಯ್ಯ) ತಮ್ಮಲ್ಲಿದ್ದ ಏಕಾಗ್ರತೆಯ ಬಲದಿಂದ ಮೇಲೇರಿದ ಮರಿಗೌಡರಿಗಿದ್ದ ಅನುಕೂಲದ ವಿಚಾರವನ್ನು ಲೇಖಕರು ಹೀಗೆ ಬರೆಯುತ್ತಾರೆ: ''ಮರಿಗೌಡರಲ್ಲಿ ಆತ್ಮಾಭಿಮಾನ, ಆತ್ಮಸ್ಥೈರ್ಯ ಮತ್ತು ನಿರ್ಭೀತಿ ಕುದುರಲು ಕುವೆಂಪು ಹೊಂಬೇಗೌಡರ ಸಂಪರ್ಕವೂ ಕಾರಣವಾಗಿರಬೇಕು. ದರಿದ್ರರ ಮನೆಗಳಿಂದ ಬಂದ ಇತರ ಹುಡುಗರಂತೆ ಅವರು ಇಂದಿಂದಿಗೆಂತು ನಾಳಿಂಗೆಂತೆಂತು ಖರ್ಚುವೆಚ್ಚಗಳಿಗಾಗಿ ಬವಣೆ ಪಡಬೇಕಾಗಿರಲಿಲ್ಲ. ಕೊಡುಗೈ ಸೋದರರಿದ್ದುದರಿಂದ ಅವರು ತಮ್ಮ ವೇಳೆಯನ್ನೆಲ್ಲಾ ಓದಿಗೆ ಮುಡುಪಾಗಿಡಬಹುದಾಗಿತ್ತು; ಏಕಾಗ್ರತೆಯಿಂದ ವ್ಯಾಸಂಗದಲ್ಲಿ ಜ್ಞಾನಾರ್ಜನೆಯಲ್ಲಿ ತೊಡಗಬಹುದಾಗಿತ್ತು. (ಪು. ೧೮-೧೯)

ಮುಂದೆ ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಗುರುಗಳ ಸಹಕಾರದಿಂದ ಸಂಶೋಧನಾಭಿರುಚಿಯನ್ನು ಬೆಳಸಿಕೊಂಡು, ಸಸ್ಯಗಳ ಬೆಳವಣಿಗೆಗೆ ಸಂರಕ್ಷಣೆಗೆ ತಮ್ಮನ್ನೇ ಅರ್ಪಿಸಿಕೊಂಡರು. ಆದಕ್ಕಾಗಿ ಅವರು ಸರ್ಕಾರದೊಡನೆ ನಿರಂತರ ಹೋರಾಟವನ್ನೇ ನಡೆಸಿದರು. ಸರಿಯಾದ ಸಮಯಕ್ಕಾಗಿ ಕಾದುಕೊಂಡಿದ್ದು ಜೀರ್ಣಾವಸ್ಥೆಯಲ್ಲಿದ್ದ ಉದ್ಯಾನವನ್ನು ಉದ್ಧಾರಮಾಡಲು ಪಣ ತೊಟ್ಟರು. ಅವರ ಈ ಮನೋಭಾವವನ್ನು ದೇಜಗೌರವರು 'ಒಡ್ಡರ ಬಂಡಿಗೆ ಹೂಡಿದ ಚಟುಲ ತೇಜಿಯಂತಿದ್ದರು, ಎನ್ನುತ್ತಾರೆ. ಭಾರತ ಸ್ವತಂತ್ರರಾಷ್ಟ್ರವಾದ ಸಂದರ್ಭದಲ್ಲಿ ಲಂಡನ್ನಿಗೆ

ಉದ್ಯಾನ ತರಬೇತಿಗಾಗಿ ತೆರಳಿದ್ದ ಮರಿಗೌಡರು ಇನ್ನು ಸ್ವತಂತ್ರಭಾರತಕ್ಕೆ ದುಡಿಯುವ ಕೆಲಸ ತಮ್ಮದೆಂದು ಹಿಗ್ಗಿದರು. ಲಂಡನ್ನಿನಿಂದ ಅಮೆರಿಕೆಗೆ ತೆರಳಿ ತಮ್ಮ ಜ್ಞಾನತೃಷೆಯನ್ನು ತೃಪ್ತಿಪಡಿಸಿಕೊಂಡು ೫೧ ರಲ್ಲಿ ಬೆಂಗಳೂರಿಗೆ ಮರಳುತ್ತಾರೆ. ತೋಟಗಾರಿಕೆ ಇಲಾಖೆಯ ಸೂಪರಿಂಟೆಂಡೆಂಟ್‌ರಾಗಿ ಅಧಿಕಾರ ವಹಿಸಿಕೊಂಡು ಕಾರ್ಯಶೀಲರಾದುದು ಅವರ ರೀತಿಯನ್ನು ದೇಜಗೌ ಮಾತಿನಲ್ಲೇ ನೋಡಬಹುದು: " ಅವರು ಬೆಂಗಳೂರಿನ ನೆಲದ ಮೇಲೆ ಕಾಲಿಡುತ್ತಿದ್ದಂತೆ, ವಿದೇಶದಲ್ಲಿ ತಾವು ಕಲಿತ ವಿದ್ಯೆಯನ್ನು, ಪಡೆದ ಅನುಭವವನ್ನು, ನೋಡಿದ ಸಂಗತಿಗಳನ್ನು ರೈತಾಪಿ ಬಂಧುಗಳ ಅಭ್ಯುದಯಕ್ಕಾಗಿ ಕಾರ್ಯಗತಗೊಳಿಸಬೇಕೆಂದು ಕೃತಸಂಕಲ್ಪರಾಗುತ್ತಾರೆ. ಲಾಲ್‌ಬಾಗ್ ಅನ್ನು ವಿಸ್ತರಿಸಿ, ವಿಶ್ವಮಾನ್ಯವಾಗಬಹುದಾದ ಸಸ್ಯವಿಜ್ಞಾನದ ಕ್ಷೇತ್ರವನ್ನಾಗಿ ಪರಿವರ್ತಿಸಲು, ಉದ್ಯಾನಗಳನ್ನು ಪುನರ್‌ನವೀಕರಿಸಲು, ಇವುಗಳಿಗಿಂತ ಮಿಗಿಲಾಗಿ ಇಲಾಖೆ, ಹಳ್ಳಿಯ ಬದುಕಿಗೆ ಉಪಯುಕ್ತವಾಗುವಂತೆ ಮಾಡಲು ಶಕ್ತಿಮೀರಿ ದುಡಿಯುತ್ತಾರೆ. ಮೂರು ಹೊತ್ತು ರೈತರದೇ ಚಿಂತೆ. ಅವರಂತೆ ಹಳ್ಳಿಯ ಜನರ ದೇಶದ ಪ್ರಜೆಗಳ ಹಿತಸಾಧನೆಗಾಗಿ ದುಡಿಯುವ ಅಧಿಕಾರಿಗಳೇ ಕಡಿಮೆ." (ಪು. ೨೫)

ಮರಿಗೌಡರ ಪರಿಶ್ರಮದ ಫಲವಾಗಿ ಇಂದು ಬಂಜರು ಭೂಮಿಗಳೆಲ್ಲಾ ಫಲವತ್ತಾಗಿವೆ. ಹಳ್ಳಿ ಹಳ್ಳಿಗಳಲ್ಲೂ ಹಣ್ಣಿನ ಗಿಡಗಳು ನಳನಳಿಸುತ್ತಿವೆ. ನಲವತ್ತು ವರ್ಷಗಳ ಹಿಂದೆ ಸಪೋಟಾದ ಪರಿಚಯವೇ ಇರದಿದ್ದ ಭಾರತೀಯ ರೈತ ಇಂದು ಸಾಕಷ್ಟು ಪ್ರಮಾಣದಲ್ಲಿ ಅದನ್ನು ಬೆಳೆಯುತ್ತಿದ್ದಾನೆ. ಅದಕ್ಕೆ ಕಾರಣರಾದವರು ಮರಿಗೌಡರು. ನೆಲದ ಗುಣವನ್ನು ಕಂಡುಕೊಂಡು, ಅಲ್ಲಿಯ ಹವಾಮಾನಕ್ಕನುಗುಣವಾಗಿ ಯಾವ ಗಿಡ ಹಾಕಿದರೆ ಆದೀತೆಂಬುದನ್ನು ಮನಗಂಡು, ರೈತರನ್ನು ಕರೆದು ಪುಕ್ಕಟೆಯಾಗಿ ಸಸಿಗಳನ್ನು ಹಂಚಿ ಬೆಳೆಸುತ್ತಾರೆ. ಸಮತೋಲನ ಆಹಾರ ಸೇವನೆಯಿಂದ ಮಾತ್ರ ಮನುಷ್ಯ ರೋಗ ವಿಮುಕ್ತನಾಗಲು ಸಾಧ್ಯ. ಅದನ್ನು ಮನಗಂಡ ಮರಿಗೌಡರು ಸಾಕಷ್ಟು ಪ್ರಮಾಣದಲ್ಲಿ ಹಣ್ಣು-ತರಕಾರಿ ಬೆಳೆಯಲು ರೈತರನ್ನು ಪ್ರಚೋದಿಸುತ್ತಾರೆ. "ಆಹಾರ ಪದಾರ್ಥಗಳೆಂದರೆ ಬರಿಯ ರಾಗಿ ಭತ್ತ ಜೋಳ ಗೋಧಿ ಮಾತ್ರವಲ್ಲ. ಅವಷ್ಟರಿಂದಲೇ ಮನುಷ್ಯನ ಆಹಾರ ಪರಿಪೂರ್ಣವಾಗುವುದಿಲ್ಲ. ಅವನ ಆರೋಗ್ಯಕ್ಕೆ ಹಾಗೂ ದೇಹದಾರ್ಢ್ಯಕ್ಕೆ ಶರ್ಕರ ಪಿಷ್ಟಾದಿಗಳು ಸಾರಜನಕ ಲೋಹಗಳೂ ಬೇಕಾಗುತ್ತವೆ. ಅವು ಹಣ್ಣು-ತರಕಾರಿಗಳಲ್ಲಿ ಮಾತ್ರ ಲಭ್ಯವಾಗುವಂಥವು. "(ಪು-೨೬-೨೭) ಹಣ್ಣು-ತರಕಾರಿಗಳನ್ನು ರೈತರಿಗೆ ಎಲ್ಲಾ ನೆರವನ್ನು ಮರಿಗೌಡರು ನೀಡುತ್ತಾರೆ. ಒಣಬೇಸಾಯದ ಆದ್ಯಪ್ರವರ್ತಕರಾಗಿ ಪಾದ್ರಿಯ ಶ್ರದ್ಧೆಯಿಂದ ಜನಹಿತಕ್ಕಾಗಿ ದುಡಿಯುತ್ತಾರೆ. ಸರ್ಕಾರದ ನಿಧಾನ ಪ್ರವೃತ್ತಿ ಅವರಿಗೆ ಹಿಡಿಸುತ್ತಿರಲಿಲ್ಲ. ಸರ್ಕಾರ ಅನುಮತಿ ಕೊಡುವ ಮೊದಲೇ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಆರಂಭಿಸುತ್ತಿದ್ದರು. ಅದನ್ನು ವಿವರಿಸುತ್ತಾ ದೇಜಗೌ ಹೀಗೆ ಬರೆಯುತ್ತಾರೆ: " ಅವರ ಜಾಯಮಾನಕ್ಕೆ ವಾಜಿವೇಗ ವೊಗ್ಗುವಂತೆ ಮಹಿಷಗತಿ ಹಿಡಿಸುವುದಿಲ್ಲ. ಭಾನಸ ಸ್ವಭಾವದ ಮಂದಗತಿಯಿಂದ ಅವರ ದೇಹದ ನರಗಳೆಲ್ಲಾ ಉದ್ವೇಗಕ್ಕೊಳಗಾಗುತ್ತವೆ. ಅವರ ವೇಗಕ್ಕೆ ತಕ್ಕಂತೆ ಸರ್ಕಾರ ಹೆಜ್ಜೆ ಹಾಕುವುದಿಲ್ಲ. ಎಲ್ಲಿಯೂ ಅಂಗೈ ಅಗಲ ಬಂಜರು ನೆಲ ಇರಕೂಡದು. ಎಲ್ಲೆಲ್ಲೂ ಎಲ್ಲ ಋತುಗಳಲ್ಲಿಯೂ ಹಸುರು ಸಮೃದ್ಧಿಯಾಗಿ

ಕಂಗೊಳಿಸಬೇಕು ಎಂಬುದೇ ಅವರ ನಿಶ್ಚಿತ ಧ್ಯೇಯ. ತಮ್ಮ ಅಧಿಕಾರಾವಧಿಯಲ್ಲಿಯೇ ಅದು ಸಿದ್ಧಿ ಪಡೆಯಬೇಕೆಂಬುದು ಅವನ ಅನುದಿನದ ಪ್ರಾರ್ಥನೆ. ಅದರ ಈಡೇರಿಕೆಗಾಗಿ ವಿಧಾನಸೌಧದ ಅಧಿಕಾರಿಗಳಿಂದ ಅವಮಾನಕ್ಕೆ ಗುರಿಯಾಗಲೂ ಅವರು ಸಿದ್ಧ. ದೃಢ ಹಟದಿಂದೊಡಗೂಡಿದ ನಿರಂತರ ಪ್ರಾರ್ಥನೆಯ ಹಾಗೂ ದುಡಿಮೆಯ ಫಲವಾಗಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಹಾಗೂ ತಾಲ್ಲೂಕುಗಳಿಗೆ ಉದ್ಯಾನಲಕ್ಷ್ಮಿಯ ಕಟಾಕ್ಷ ಕುಡಿವರಿಯುತ್ತದೆ. ಕರ್ನಾಟಕ ಏಕೀಕರಣವಾದನಂತರ ಅವರ ಉತ್ಸಾಹ ಶತಗುಣಗೊಂಡು ಸಸ್ಯರೂಪದಲ್ಲಿ ನಾಡಿನಲ್ಲೆಲ್ಲ ರಾಸಕ್ರೀಡೆಯಾಡುತ್ತದೆ. ನಲವತ್ತು ವರ್ಷಗಳ ಹಿಂದೆ ನಮ್ಮ ಜನ ಸಪೋಟದ ರುಚಿಯನ್ನು ಸವಿಯುವುದಿರಲಿ, ಅದರ ರುಚಿಯನ್ನೇ ಕೇಳರಿಯರು. ಈ ಹೊತ್ತು ಹಳ್ಳಿಯ ಮಕ್ಕಳೂ ಅದರ ರುಚಿಯನ್ನು ಬಲ್ಲವರಾಗಿದ್ದಾರೆ'. (ಪು. ೪೬) ಸಸ್ಯೋದ್ಯಾನ ಇಲಾಖಾ ನಿರ್ಮಾಣದಲ್ಲಿ ಮರಿಗೌಡರ ಕಾರ್ಯವೈಖರಿಯನ್ನು ಕಂಡು ಬೆರಗುಗೊಳ್ಳುವ ಲೇಖಕರು "ಶೂನ್ಯದಿಂದ ವನಲಕ್ಷ್ಮಿಯನ್ನು ಸೃಷ್ಟಿಸುವ ಜಾದೂಗಾರಿಕೆಯಲ್ಲಿ ಮರಿಗೌಡರು ಸಿದ್ಧಹಸ್ತರು" ಎಂಬುದಾಗಿ ಹೊಗಳುತ್ತಾರೆ. ಅವರ ಪರಿಶ್ರಮದ ಪರಿಣಾಮವಾಗಿ ಈಗ ಸುಮಾರು ನಾನೂರು ಕ್ಷೇತ್ರಗಳು ಅಸ್ತಿತ್ವದಲ್ಲಿದೆಯೆಂಬುದನ್ನು ಹೇಳುತ್ತಾ ಸೋಜಿಗ ಪಡುತ್ತಾರೆ.

ರೈತಾಪಿ ಜನರ ಸಮಸ್ಯೆಗಳು ರೈತ ಮಗನಾದ ಮರಿಗೌಡರಂಥವರಿಗೇ ತಿಳಿದು ಬರುವುದು. ಅವನು ಮಾತ್ರ ಸದಾಕಾಲ ಅವರ ಬಗ್ಗೆ ಚಿಂತಿಸಬಲ್ಲ, ಪರಿಹಾರ ಹುಡುಕಬಲ್ಲ ಎಂಬುದನ್ನು ಹೇಳುವಲ್ಲಿ ದೇಜಗೌರವರು ಕೊಡುವ ಉದಾಹರಣೆ ಮನೋಜ್ಞವಾಗಿದೆ. "ಕರೆಯುವ ಹಸುವಿಗೆ ಸಾಕಷ್ಟು ಮೇವು-ತಿಂಡಿಗಳನ್ನು ಕೊಟ್ಟರೆ ಮಾತ್ರ ಅದು ಸಮೃದ್ಧವಾಗಿ ಹಾಲು ಹಿಂಡುತ್ತದೆಂಬ ಸತ್ಯ ಗೋವಳಿಗನಿಗೆ ಮಾತ್ರ ಅರಿವಾಗುತ್ತದೆ". ರೈತರ ಸಂಕಷ್ಟಗಳೇನೆಂಬುದು ಇತರ ಅಧಿಕಾರಿಗಳಿಗೆ ತಿಳಿದಿರುವುದಿಲ್ಲ. ಅವರಾದರೂ ಏನು ಮಾಡಲು ಸಾಧ್ಯ? ಇದನ್ನು ಸರ್ಕಾರ ಅರಿತುಕೊಳ್ಳಬೇಕು. ಮರಿಗೌಡರು ರೈತರಿಗೆ ಕೊಟ್ಟ ಸಲಹೆ ಸೌಕರ್ಯಗಳು ಅಪಾರ. ಅವರು ತಮ್ಮ ಅಭಿಪ್ರಾಯವನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದರೆ 'ದುಡಿಮೆಯೊಂದೇ ಸಂಪತ್ತಿಗೆ ಮೂಲತತ್ವ' ಎಂಬುದನ್ನು ಬೋಧಿಸುತ್ತಿದ್ದರು. "ಹಳ್ಳಿಯ ರೈತನಾಗಲೀ, ವಿಧಾನಸೌಧದ ನೌಕರನಾಗಲೀ ಪ್ರಾಮಾಣಿಕತೆಯಿಂದ ದುಡಿಯದಿದ್ದರೆ ದೇಶದ ದಾರಿದ್ರ್ಯವನ್ನಾಗಲೀ, ಅದರಿಂದ ಸಂಭವಿಸುವ ಇತರ ಕ್ರೂರ ಸಮಸ್ಯೆಗಳನ್ನಾಗಲಿ ಪರಿಹರಿಸಲಾಗದೆಂಬುದು ಅವರ ನಿಶ್ಚಿತ ನಿಲುವು"-ಅದಕ್ಕಾಗಿ ಅವರು ತಮ್ಮ ವಿದೇಶಾನುಭವಗಳನ್ನು ವಿವರಿಸುತ್ತಿದ್ದರು. ಮರಿಗೌಡರು ನೇರವಾದ, ಸರಳವಾದ ಮಾತುಗಳಿಂದ ತಮ್ಮ ಜಮೀನನ್ನು ಫಲವತ್ತಾಗಿಸಿಕೊಳ್ಳಲು ರೈತ ಹೆಚ್ಚು ಶ್ರಮಪಡಬೇಕಾಗಿಲ್ಲ ಎಂಬುದನ್ನು ಯಾವ ರೀತಿ ಹೇಳುತ್ತಿದ್ದರೆಂಬುದಕ್ಕೆ "ಮನಸ್ಸು ಬಂದ ಕಡೆ ಜಲಬಾಧೆ ತೀರಿಸಿಕೊಳ್ಳುವ ಜನ ನಾವು. ನೀರು ಕಂಡಲ್ಲಿ ಹೇಲುವ ಜನ ನಾವು. ಬದಲಾಗಿ ತೋಟದಲ್ಲಿ ಅಥವಾ ಹೊಲದಲ್ಲಿ ಮೂರಂಗುಲ ಗುಂಡಿ ಮಾಡಿ ಜಲಬಾಧೆ ತೀರಿಸಿ ತಕ್ಷಣ ಮಣ್ಣು ಮುಚ್ಚಿದ್ದರೆ ದುರ್ಗಂಧವೂ ಇರುವುದಿಲ್ಲ; ಅದು ಗಾಳಿಯಲ್ಲಿ ಸೇರಿ ಹವಾಗುಣ ಕೆಡಿಸುವ ಮುನ್ನ

ಭೂಮಿಯು ಫಲವತ್ತಾಗುತ್ತದೆ" ಎಂಬ ಸತ್ಯವನ್ನು ರೈತರಿಗೆ ತಿಳಿಸಿಕೊಡುತ್ತಿದ್ದರು. ಗೌಡರ ಆಲೋಚನೆಗಳು 'ಉಗುಳಿದರೆ ಕಸ ನುಂಗಿದರೆ ರಸ' ಎಂಬ ಗಾದೆ ಮಾತಿನಂತೆ ಎಂಬುದನ್ನು, ಅದನ್ನು ಕಸರಸಚಕ್ರವೆಂದು ವ್ಯಾಖ್ಯಾನಿಸಿರುವುದನ್ನು ಲೇಖಕರು ನೆನೆಯುತ್ತಾರೆ.

ಈ ಕೃತಿಯಲ್ಲಿ ಮರಿಗೌಡರ ಹತ್ತಿರದ ಬಂಧುಗಳ ವ್ಯಕ್ತಿಚಿತ್ರಗಳು ಸಹ ಬಂದಿವೆ. ಅವರ ಸೋದರ ಹೊಂಬೇಗೌಡರ ಮತ್ತು ಹಿರಿಯ ಅಳಿಯ ಡಾ|| ಟಿ. ಪ್ರಭು ಅವರ ವ್ಯಕ್ತಿತ್ವದ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ. ಕರ್ನಾಟಕದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಒಕ್ಕಲಿಗ ಜನಾಂಗಕ್ಕೆ ಕೀರ್ತಿಶಿಖರದಂತಿದ್ದ ಹೊಂಬೆಗೌಡರ ದಾನಶೀಲತ್ವ, ಸರಳ ಸಜ್ಜನಿಕೆ, ಕಾವ್ಯಪ್ರೇಮ ಇವುಗಳನ್ನೂ ದೇಜಗೌ ೭೩, ೭೪ ನೇ ಪುಟಗಳಲ್ಲಿ ಪ್ರಸ್ತಾಪಿಸುತ್ತಾರೆ.

ಡಾ. ಟಿ. ಪ್ರಭುವಿನ ಸೌಮ್ಯಾಕಾರದ ವರ್ಣನೆಯನ್ನು, ಅವರ ಸ್ವಭಾವದ ಪರಿಚಯವನ್ನು ಮಾಡಿಕೊಡುತ್ತಾ, ಅಂಥ ಅಳಿಯನನ್ನು ಪಡೆಯಲು ಮರಿಗೌಡರು ಮಾಡಿದ ಪ್ರಯತ್ನವನ್ನು, ಮರಿಗೌಡ ಸೋದರರ ದೊಡ್ಡತನವನ್ನೂ ಪ್ರಕಾಶಪಡಿಸುವ ಪ್ರಸಂಗವೊಂದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುತ್ತಾರೆ. ಮರಿಗೌಡರ ಅವಸಾನ ಕಾಲದಲ್ಲಿ ಪ್ರಭು ಮಾಡಿದ ಸೇವೆಯನ್ನು ಸ್ಮರಿಸುತ್ತಾರೆ.

ಮರಿಗೌಡರ ದಾಂಪತ್ಯಜೀವನ ತೃಪ್ತಿಕರವಾಗಿತ್ತು. ಅವರ ಕುಟುಂಬದವರು ಸುಸಂಸ್ಕೃತರು. ಮನಮೆಚ್ಚಿದ ಗೃಹಿಣಿಯಿಂದಾಗಿ ಅವರ ಮನೆ ಸ್ವರ್ಗದೋಪಾದಿಯಲ್ಲಿತ್ತು. ಸುಖ ಸಂಸಾರದಲ್ಲಿ ಹೆಣ್ಮಸ್ಥಾನವೆಂಥದೆಂಬುದಕ್ಕೆ 'ಸಿದ್ಧರಾಮ ಚರಿತೆ'ಯಲ್ಲಿನ ಕವಿತೆಯೊಂದನ್ನು ಬರೆಯುತ್ತಾ ಲೇಖಕರು ಮಹದೇವಮ್ಮ ಮರಿಗೌಡರ ಸಚ್ಚಾರಿತ್ರ್ಯದ ಚಿತ್ರಣವನ್ನು ಕೊಡುತ್ತಾರೆ. ಅಂಥಾ ಪತ್ನಿಯನ್ನು ಕಳೆದುಕೊಂಡಾಗ ಮರಿ ಗೌಡರಿಗಾದ ಆಘಾತ ವರ್ಣಿಸಲಸದಳವಾದದ್ದು. ಮರಿಗೌಡರ ಪತ್ನಿ ಪ್ರೇಮವನ್ನು, ತಮ್ಮ ತೊಡೆಯ ಮೇಲೆ ತಲೆಯಿಟ್ಟು ಪ್ರಾಣಬಿಟ್ಟ ಮಡದಿ ಮಹದೇವಮ್ಮನವರ ನೆನಪಿಗಾಗಿ ಅವರು ರಚಿಸಿರುವ ಕಿರು ಕವಿತಾ ಸಂಕಲನವನ್ನು ಉದ್ಧರಿಸಿ 'ಅವರರ ಭಾವತೀವ್ರತೆಯ ಕಣ್ಣೀರ ಧಾರೆ ಶಬ್ದಮಣಿ ಹಾರವಾಗಿ ಕೋದುಕೊಂಡಿದೆ' ಎಂಬುದಾಗಿ ಬರೆಯುವ ಲೇಖಕರ ಮಾತುಗಳು ಕಾವ್ಯದ ಜಾಡಿನಲ್ಲೇ ಮೂಡಿ ನಿಂತಿದೆ.

> "ತಮ್ಮ ಜೀವದ ಜೀವವಾಗಿದ್ದ, ತಮ್ಮ ಬದುಕನ್ನೆಲ್ಲಾ ತುಂಬಿಕೊಂಡಿದ್ದ ತಮ್ಮ ಸುಖಕ್ಕಾಗಿ ಸರ್ವಸ್ವವನ್ನು ಧಾರೆಯೆರೆದಿದ್ದ, ತಮಗೆ ದಿಕ್ಕು ದಾರಿಗಳೆಲ್ಲವೂ ಆಗಿದ್ದ ಮಡದಿಯ ಚೇತನ ಜ್ಯೋತಿ ದೇಹದಿಂದ ಪ್ರತ್ಯೇಕಗೊಂಡಾಗ ಅವರು ಕಂಗಾಲಾಗುತ್ತಾರೆ. ಅವರ ಕಣ್ಣುಗಳಲ್ಲಿ ಕತ್ತಲು ತುಂಬಿ ಕೊಳ್ಳುತ್ತದೆ. ಆಗ ಅವರ ಅಂತರಂಗ ಭಾವ ತುಮುಲದ ರಣರಂಗವಾಗುತ್ತದೆ. ಆ ಭಾವವೇ ಕಾವ್ಯಲಹರಿಯಾಗಿ ಹರಿಯುತ್ತದೆ".

ಮರಿಗೌಡರು ತಮ್ಮ ಹೆಂಡತಿಯ ಬಗ್ಗೆ ಬರೆದಿರುವ ಚರಮಗೀತೆ 'ಓ ನನ್ನ ಮಹದೇವಿ ಎಂಬ ಕವಿತಾ ಸಂಕಲನದಿಂದ ಪದ್ಯಗಳನ್ನು ಉದ್ಧರಿಸಿದ್ದಾರೆ. ಪತ್ನಿಯ ಆಪೇಕ್ಷೆಯಂತೆ

ತಾವಿರುವವರೆಗೂ ಆಕೆಯ ಚಿತಾಭಸ್ಮವನ್ನು ಜೋಪಾನವಾಗಿರಿಸಿಕೊಂಡು ಅದಕ್ಕೆ ತಮ್ಮ ಬಾವಪೂಜೆಯನ್ನು ಸಲ್ಲಿಸುತ್ತಿದ್ದರೆಂಬ ವಿಚಾರವನ್ನು ಹೇಳುತ್ತಾರೆ. ಕೊನೆಗಾಲದಲ್ಲಿ ವಿಧಿವಿಲಾಸಕ್ಕೆ ತುತ್ತಾಗಿ ಸೊಂಟದ ಮೂಳೆ ಮುರಿದುಕೊಂಡು ಅಸಹಾಯಕರಾದ ಮರಿಗೌಡರ ಸೇವೆಯನ್ನು ಶ್ರದ್ಧೆಯಿಂದ ಮಾಡಿದ ಪ್ರಭು ದಂಪತಿಗಳನ್ನು ಪ್ರಶಂಸಿಸುತ್ತಾರೆ.

'ಸ್ನೇಹಭಾಗ್ಯ' ಎಂಬ ಭಾಗದಲ್ಲಿ ಮರಿಗೌಡರ ಗೆಳೆಯರ ಬಗ್ಗೆ ಪ್ರಸ್ತಾಪವಿದೆ. ಆದರೆ ಅವರ ನಿಜವಾದ ಗೆಳೆಯನೆಂದರೆ ರೈತ ಎಂಬುದನ್ನು ಒತ್ತಿ ಹೇಳುತ್ತಾರೆ. ರೈತರ ಹಿತವನ್ನು ಕೋರುವವರೆಲ್ಲರೂ ಗೌಡರಿಗೆ ಗೆಳೆಯರೇ ಆಗಿರುತ್ತಿದ್ದರು. ಇದನ್ನು "ಯಾರು ರೈತರ ಅಭ್ಯುದಯದಲ್ಲಿ ನಿತ್ಯ ಕಾತರರಾಗಿದ್ದಾರೆಯೋ, ಯಾರು ತಮ್ಮ ಬುದ್ಧಿಶಕ್ತಿಯನ್ನು ರೈತರ ಪ್ರಯೋಜನಕ್ಕಾಗಿ ಬಳಸುತ್ತಾರೆಯೋ ಅವರಲ್ಲಿ ಗೌಡರಿಗೆ ಅಪಾರ ಮಮತೆ ಹಾಗೂ ಗೌರವ. ಅಂಥವರ ಶ್ರೇಯಸ್ಸಿಗಾಗಿ ಎಂಥಾ ತ್ಯಾಗಕ್ಕಾದರೂ ಅವರು ಸಿದ್ಧ" ಎಂಬ ಅವರ ಮನೋಭಾವವನ್ನು ಬಿಡಿಸಿ ಹೇಳಿದ್ದಾರೆ. ರೈತರಿಗಾಗಿ, ರೈತರಿಗೋಸ್ಕರ ಪೇಚಾಡುತ್ತಿದ್ದ ಮರಿಗೌಡರು ಅವರಿಗೆ ಸಹಾಯ ಮಾಡಲು ತುದಿಗಾಲಲ್ಲಿ ನಿಂತಿರುತ್ತಿದ್ದರು. ಅದಕ್ಕಾಗಿ ಕಾನೂನು, ನಿಯಮ ಎಂದು ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಈ ಕಾರಣಕ್ಕಾಗಿಯೇ ಅವರು ಸರ್ಕಾರಕ್ಕೆ ಉತ್ತರ ಕೊಡಬೇಕಾಗುತ್ತಿತ್ತು. ಅವರಿಗೆ ಮಾನವತೆಯೇ ಮೊದಲ ದೇವರು. ಕಲ್ಲುದೇವರುಗಳಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಗೌಡರ ಪರೋಪಕಾರ ಬುದ್ಧಿ, ಸ್ವಾರ್ಥದೂರವಾದ ನಿಷ್ಕಪಟ ಸ್ನೇಹ ಮತ್ತು ಹೃದಯ ವೈಶಾಲ್ಯತೆಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ.

ಮನಮೋಹನ್ ಅತ್ತಾವರ ಅವರು ಮರಿಗೌಡರ ಆತ್ಮೀಯರಲ್ಲಿ ಒಬ್ಬರು. ಅವರು ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್ ಸಂಸ್ಥೆಯ ಸಂಸ್ಥಾಪಕರಾಗಿ ವಿಖ್ಯಾತರಾಗಲು ಮರಿಗೌಡರು ನೀಡಿದ ಸಹಕಾರ ಅಪಾರವಾದುದು. ಅದರ ಬಗ್ಗೆ ವಿವರವಾಗಿ ಬರೆಯುತ್ತಾ ಲೇಖಕರು ಮರಿಗೌಡರು ಧನ್ಯತೆಗೊಂಡ ಬಗ್ಗೆ ಹೀಗೆ ಬರೆಯುತ್ತಾರೆ: "ಹಳ್ಳಿ ಹಳ್ಳಿಗೂ ತೋಟಗಾರಿಕೆಯ ತಂತ್ರಜ್ಞಾನ ಹರಡಿದ್ದರಿಂದ ತಮ್ಮ ಜೀವನ ಸಾರ್ಥಕವಾಯಿತೆಂದು ಗೌಡರು ಸಮಾಧಾನ ತಂದುಕೊಳ್ಳುತ್ತಾರೆ. ವಿಜ್ಞಾನಿಯೊಬ್ಬರು ಲೋಕವಿಖ್ಯಾತರಾಗುವಲ್ಲಿ ತಾವೂ ಅಷ್ಟೋ ಇಷ್ಟೋ ಕಾರಣವಾಗಲಾಗಿ ತಮ್ಮ ಬದುಕು ಪುನೀತವಾಯಿತೆಂದವರು ಹೆಮ್ಮೆ ಪಡುತ್ತಾರೆ; ಧನ್ಯತೆಯಿಂದ ಆನಂದತುಂದಿಲರಾಗುತ್ತಾರೆ." (ಪು. ೯೭)

ಮರಿಗೌಡರ ಉಪಕಾರ ಸ್ಮರಣೆ ಮಾಡುವ ಮನಮೋಹನ್‌ರವರ ವ್ಯಕ್ತಿತ್ವದ ಬಗೆಗೂ ಲೇಖಕರು ಬರೆಯುತ್ತಾರೆ. ಸಸ್ಯಾರಾಧಕರಾದ ಮರಿಗೌಡರು ಜ್ಞಾನಪಿಪಾಸುಗಳಾದರೂ'ಕರ್ಮಸಿದ್ಧಾಂತ'ದ ಕಡೆಗೆ ಹೆಚ್ಚು ವಾಲಿದವರು. ಅದನ್ನು ಹೇಳಲು ದೇಜಗೌರವರು ಷಣ್ಮುಖಸ್ವಾಮಿಗಳ ವಚನವನ್ನುದ್ಧರಿಸುತ್ತಾ "ಕ್ರಿಯೆಯಿಂದ ಸಮುಗ್ ಜ್ಞಾನ, ಜ್ಞಾನದಿಂದ ಸತ್ಕ್ರಿಯೆ ಫಲಿಸುತ್ತದೆಂಬ ಮೌಲಿಕ ತತ್ತ್ವವನ್ನು ರಕ್ತಗತಮಾಡಿಕೊಂಡಿದ್ದ ಮರಿಗೌಡರನ್ನು ಕೊಂಡಾಡುತ್ತಾರೆ. ಅವರು ಬರೆದಿರುವ ಕಿರುಹೊತ್ತಗೆಗಳ ಮತ್ತು ಲೇಖನಗಳ ಬಗ್ಗೆ ಹೇಳುತ್ತಾ, ಅದರಲ್ಲಿರುವ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ಮನಮುಟ್ಟುವಂತೆ ಬರೆಯುವ ಅವರ ಭಾಷೆ, ಶೈಲಿಗಳ ಬಗ್ಗೆ

ತಮ್ಮ ಪ್ರೌಢಶೈಲಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. " ಅವರ ಬರವಣಿಗೆಯಂತು ಲಾಲಿತ್ಯದ ಕಡೆ ವಾಲುತ್ತದೆ. ಸತ್ಯ ಸರಳ ನೇರವಾದ್ದರಿಂದ, ಅದರ ಸಂವಹನ ಮಾಧ್ಯಮವೂ ಸರಳವಾಗಿರಬೇಕೆಂಬುದೂ ಅವರ ಉದ್ದೇಶ. ವೈಜ್ಞಾನಿಕ ವಿಷಯಗಳ ನಿರೂಪಣೆಯಲ್ಲಿ ಭಾಷೆ ಆಭರಣಗಳ ಭಾರದಿಂದ ಕುಗ್ಗಬಾರದು. ಹಾವಭಾವ ವಿಲಾಸದಿಂದ ಓದುಗರ ದಿಕ್ಕು ಕೆಡಿಸಬಾರದೆಂಬುದೇ ಅವರ ಸಿದ್ಧಾಂತ. ಅವರ ಭಾಷೆ ಮುಟ್ಟಬೇಕಾದದ್ದು ಮನವನ್ನೇ ಹೊರತು ಹೃದಯವನ್ನಲ್ಲ. ಆದ್ದರಿಂದ ಅವರ ಭಾಷೆ ಶೀಘ್ರವಾಗಿ ಗುರಿಯನ್ನು ತಲುಪುವ ಸಲುವಾಗಿ ನೇರಹಾದಿಯನ್ನು ಹಿಡಿಯುತ್ತದೆ. ಕೆಲವೊಮ್ಮೆ ಓದುಗರ ಮನವನ್ನೊಲ್ಲಿಸಿಕೊಳ್ಳುವ ಸಲುವಾಗಿ, ತಮ್ಮ ಭಾವ ಭಾವನೆಗಳು ಅವರ ಮನಸ್ಸಿನ ಮೇಲೆ ಅಚ್ಚೊತ್ತಲೆನ್ನುವ ದೃಷ್ಟಿಯಿಂದ ಉಪಕಥೆ, ದೃಷ್ಟಾಂತಕಥೆ ಮತ್ತು ಗಾದೆಗಳನ್ನು ಜೋಡಿಸುವುದು ಉಂಟು. ಒಟ್ಟಿನಲ್ಲಿ ತಮ್ಮ ಆಲೋಚನೆಗಳು ಸಾಮಾನ್ಯ ಜನರಿಗೆ ತಲುಪಬೇಕೆಂಬುದೇ ಅವರ ಬರಹಗಳ ಗುರಿ." (ಪು. ೧೦೦-೧೦೧)

ಅಲ್ಲಲ್ಲಿ ಮರಿಗೌಡರ ಬರವಣಿಗೆಯ ಮಾತುಗಳನ್ನು ಉಲ್ಲೇಖಿಸುತ್ತಾ, " ಅವರ ಮಾತಿನಲ್ಲಿ ವೈಜ್ಞಾನಿಕ ಸತ್ಯವಿದೆ. ಇದನ್ನೆಲ್ಲ ಹೇಳುವ ವಿಧಾನದಲ್ಲಿಯೇ ಅಪೂರ್ವ ಸೊಗಸಿದೆ. ಮಾತು ಮಿತ, ಸರಳ. ಅರ್ಥ ಅಮಿತ, ಮೌಲಿಕ" ಎನ್ನುತ್ತಾರೆ.

ರೈತನೇ ದೇಶದ ಬೆನ್ನೆಲುಬು, ಅವನ ಕಾಯಕ ಕೇವಲ ಅವನಿಗಾಗಿ ಅಲ್ಲ ಎಂಬುದನ್ನು ಮರ-ಬೇರಿನ ಹೋಲಿಕೆಯೊಡನೆ ರಮಣೀಯವಾಗಿ ಹೇಳುವ ಮರಿಗೌಡರ ಮಾತುಗಳು ಎಷ್ಟು ಸತ್ಯಪೂರ್ಣವಾದುವು ಎಂಬುದನ್ನು ಲೇಖಕರು ಅವರ ಮಾತುಗಳನ್ನಿಲ್ಲಿ ಹೇಳುತ್ತಾರೆ."ಮರದ ಬೇರು ಅಗೋಚರ, ಅದರ ಬೇರಿನ ಕಾರ್ಯವೆಲ್ಲಾ ತನಗಾಗಲ್ಲ; ಮರಕ್ಕಾಗಿ. ಅಂತೆಯೇ ರೈತನ ದುಡಿಮೆಯೂ ತನಗಾಗಲ್ಲ, ದೇಶಕ್ಕಾಗಿ. ಆದರೆ ರೈತನ ಸಿದ್ಧಿ ಸಾಧನೆ ಮಾತ್ರ ಮರದ ಬೇರಿನಂತೆ ಅಗೋಚರ." ಹೀಗೆ ಮರಿಗೌಡರು ಆಹಾರ ಪದಾರ್ಥಗಳ ಬಗ್ಗೆ, ಸಮತೋಲನ ಆಹಾರ ಸೇವನೆಯ ಬಗ್ಗೆ, ಬಸುರಿಯರ-ರೈತರ ಆಹಾರದ ಬಗ್ಗೆ ಬರೆದಿರುವ ವೈಜ್ಞಾನಿಕ ವಿಚಾರಗಳನ್ನೊಳಗೊಂಡ ಬರವಣಿಗೆಯನ್ನು 'ರೈತರ ಕೈಪಿಡಿ' ಎಂದು ಕರೆಯುತ್ತಾರೆ.

ಮರಿಗೌಡರು ಯಾವುದನ್ನೂ ಬಾಯಲ್ಲಿ ಆಡಿ ಸುಮ್ಮನಾಗುತ್ತಿರಲಿಲ್ಲ. ಅದನ್ನು ಮಾಡಿ ತೋರಿಸುತ್ತಿದ್ದರು. ಇದನ್ನು ಸಮರ್ಥಿಸಲು ಲೇಖಕರು ಅನೇಕ ಉದಾಹರಣೆಗಳನ್ನು ಕೊಟ್ಟು ಅವರನ್ನು ಪರಿಚಯಿಸುತ್ತಾರೆ. ಮರಿಗೌಡರು ನಿವೃತ್ತರಾದರೂ ತಮ್ಮ ಕಾರ್ಯದಲ್ಲಿ ಪ್ರವೃತ್ತರಾಗಿಯೇ ಇದ್ದವರು. ಅವರ ಈ ನಿರಂತರ ಕಾರ್ಯಶೀಲತೆಯನ್ನು ಲೇಖಕರ 'ಲೋಕಸೇವಕರಿಗೆ ನಿವೃತ್ತಿಯುಂಟೇ?' ಎಂದು ಪ್ರಶ್ನೆ ಮಾಡುತ್ತಲೇ ಅವರ ಕಾರ್ಯ ವೈಖರಿಯನ್ನು ತಿಳಿಸಿಕೊಡುತ್ತಾ, ಅವರ ಕಳಕಳಿಯು ವ್ಯಕ್ತವಾಗುವಂಥ, ಸರ್ಕಾರಕ್ಕೆ, ಅಧಿಕಾರಿಗಳಿಗೆ ಅವರು ಬರೆದ ಪತ್ರಗಳನ್ನು ಇಲ್ಲಿ ಕೊಟ್ಟಿದ್ದಾರೆ. ಸರ್ಕಾರದ ಬೇಜವಾಬ್ದಾರಿತನದಿಂದ ಮನನೊಂದ ಗೌಡರು ತಮಗೆ ದೊರಕಿದ ರಾಜ್ಯೋತ್ಸವ ಪ್ರಶಸ್ತಿಯನ್ನು ನಿರಾಕರಿಸುತ್ತಾರೆ.

ತಮ್ಮ ಕೊನೆಗಾಲದವರೆಗೂ ಸಸ್ಯಗಳ ಅಭಿವೃದ್ಧಿಯಲ್ಲಿ ತಳಿ ಸಂಶೋಧನೆಯಲ್ಲಿ ನಿರತರಾಗಿರುತ್ತಿದ್ದ ಮರಿಗೌಡರ ಜೀವನ ರೀತಿಯು ಅನುಕರಣೀಯವಾದುದು. ಅಂಥವರನ್ನು ಪಡೆದ ವನಸಿರಿ ಧನ್ಯೆಯಾಗಿದ್ದಾಳೆ. ಮರಿಗೌಡರ ನಿಸ್ವಾರ್ಥಸೇವೆಯ ಬಗೆಗೆ, ನಿಷ್ಕಪಟ ಬಾಳಿನ ಚಿತ್ರಣವನ್ನು ಈ ಕೃತಿಯು ಸಮರ್ಥವಾಗಿ ಚಿತ್ರಿಸುತ್ತದೆ.

ದೇಜಗೌ ಅವರ ಗದ್ಯಶೈಲಿ ವಿಶಿಷ್ಟವಾದುದು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅದಕ್ಕೊಂದು ಅಪೂರ್ವ ಸ್ಥಾನವಿದೆ. ಹಲವು ಗದ್ಯ ಬರಹಗಳ ಮೂಲಕ ಅವರು ಗದ್ಯದ ಶ್ರೀಮಂತಿಕೆ ಏನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಗದ್ಯಗ್ರಂಥಗಳ ಭಾಷಾಂತರ, ಜೀವನ ಚರಿತ್ರೆಗಳು, ಆತ್ಮ ಚರಿತ್ರೆ, ಪ್ರವಾಸ ಸಾಹಿತ್ಯ, ವೈಚಾರಿಕ ಬರಹಗಳು..... ಮುಂತಾದುವುಗಳ ಮೂಲಕ ವೈವಿಧ್ಯಪೂರ್ಣವಾದ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಅವರ ಕಾವ್ಯಮಯವಾದ ಗದ್ಯ ಶೈಲಿ ಹೆಚ್ಚು ಆಕರ್ಷಕ ವಿಷಯಗಳನ್ನು ಅಡಕಗೊಳಿಸುವ ಕಲೆಗಾರಿಕೆ ಅವರಿಗೆ ಸಿದ್ಧಿಸಿದೆ.

'ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ' ಕೂಡ ಇದಕ್ಕೆ ಹೊರತಾಗಿಲ್ಲ. ಮಣ್ಣಿನ ಮಗನಾದ ಮರಿಗೌಡರ ಬದುಕಿನ ಕಣಗಳ

ಮುತ್ತಿನ ಮಣಿಗಳಂತೆ ಅಲ್ಲಿ ಸ್ಥಾನ ಪಡೆದಿವೆ. ಒಬ್ಬ ಸಾಹಸಿಯ ಬದುಕು ಅಲ್ಲಿ ಅದ್ಭುತ ರೀತಿಯಲ್ಲಿ ಚಿತ್ರಿತವಾಗಿದೆ. ಅವರ ಬಗ್ಗೆ ತಿಳಿದಿದ್ದವರಿಗೆ ಅವೆಲ್ಲವೂ ವಾಸ್ತವ ಹಾಗೂ ಹೃದಯಸ್ಪರ್ಶಿಯಾದರೆ ಉಳಿದವರಿಗೆ ಅಚ್ಚರಿ.

* * * * *

ಭಾಗ - ಆರು

ದೇಜಗೌ ಗ್ರಂಥ ಸಂಪದ

ದೇಜಗೌ ಗ್ರಂಥ ಸಂಪದ

-ಎಂ. ಆರ್. ಸಣ್ಣರಾಮೇಗೌಡ

೧ ಆತ್ಮಕಥೆ

೧.೧ ನನ್ನ ಉಪವಾಸದ ಕಥೆ 1

ಮೊ. ಮು. 1994 ಪು. iv + 84 ತ.ವೆಂ. ಸ್ಮಾರಕ ಗ್ರಂಥಮಾಲೆ. ಮೈಸೂರು

ಅನ್ಯಾಯದ ವಿರುದ್ಧ ಮೂರು ಸಲ ಮಾಡಿದ ಉಪವಾಸ ಸತ್ಯಾಗ್ರಹದ ವಿವರ.

೧.೨ ನೆನಪಿನ ಬುತ್ತಿ 2

ಮೊ. ಮು. 1994 ಪು. 158 ದೇಜಗೌ ಅಭಿನಂದನ ಸಮಿತಿ, ಬೆಂಗಳೂರು.

೧ ಪೀಠಿಕೆ ೨ ನಾನು ಶಿಕ್ಷಣ ೩ ನನ್ನ ಸ್ವಭಾವ:ಭಾವುಕತೆ ಅಳುಬುರುಕುತನ ೪ ನಾನು ಮತ್ತು ಪಲವರು ೫ ನಾನು- ನೆಂಟರು ೬ ಹಿರಿಕೊಡಿಗೆ ಕುಪ್ಪಳ್ಳಿ ಮತ್ತು ನಾನು ೭ ತಪ್ಪೊಪ್ಪಿಗೆ ೮ ಮಠಗಳೊಡನೆ ನನ್ನ ಸಂಬಂಧ ೯ ನಾನು ನನ್ನ ಕಾಯಿಲೆ ೧೦ ನಾನು ಕಾರುಕೊಂಡಿದ್ದು ೧೧ ನಾನು ದೇಜಗೌ ಟ್ರಸ್ಟ್ ೧೨ ಬರಹ ನನ್ನ ಬದುಕಿನ ಅಣಿಭಾಗ ೧೩ ಸದ್ಯಕ್ಕೆ ಮುಕ್ತಾಯ

೧.೩ ಹೋರಾಟದ ಬದುಕು (ಸಂಪುಟ.1) 3

ಮೊ. ಮು. 1968 ಪು. 12 + 284 ಗೀತಾ ಬುಕ್ ಹೌಸ್, ಮೈಸೂರು.

ಬಹು ಜನಪ್ರಿಯವಾದ ದೇಜಗೌರವರ ಆತ್ಮಚರಿತ್ರೆ.

೧.೪ ಹೋರಾಟದ ಬದುಕು (ಸಂಪುಟ-2) 4

ಮೊ. ಮು. 1987 ಪು. VIII + 196 ದೇಜಗೌ ಸಾಂಸ್ಕೃತಿಕ ಪ್ರತಿಷ್ಠಾನ, ಕಲಾ ನಿಲಯ, ಮೈಸೂರು.

೧.೫ ಕುಲಪತಿಯ ದಿನಚರಿ-1 5

ಮೊ. ಮು. 1973 ಪು. 7 + 528 ಸುರುಚಿ ಪ್ರಕಾಶನ. ಮೈಸೂರು.

ಕುಲಪತಿಯಾಗಿದ್ದ ಅವಧಿಯಲ್ಲಿ ನಡೆದ ಘಟನೆಗಳ ವಿವರ. ಇದು ಅವರ ಅಂತರಂಗದ ಚರಿತ್ರೆಯೂ ಆಗಿದೆ.

೨ ಪತ್ರಗಳು

೨.೧ ಕುಲಪತಿಯ ಪತ್ರಗಳು-1 6

ಮೊ. ಮು. 1975 ಪು. 201, ನೆಲಮನೆ ಪ್ರಕಾಶನ, ಮೈಸೂರು.

ಜುಲೈ1, 1970ರಿಂದ ಜುಲೈ 28, 1972ರವರೆಗೆ 73 ಪತ್ರಗಳನ್ನು ಕುಲಪತಿಯಾಗಿ ಹಿರಿಯ ರಾಜಕಾರಣಿಗಳಿಗೆ, ಸಾಹಿತಿಗಳಿಗೆ ಮತ್ತು ಇತರ ಗಣ್ಯ ವ್ಯಕ್ತಿಗಳಿಗೆ ಬರೆದ ಪತ್ರಗಳು. ಅವರಲ್ಲಿ ಕೆಲವರು ಡಾ. ಕೆ. ವಿ. ಪುಟ್ಟಪ್ಪ, ಶ್ರೀ ಕೆ. ವಿ. ಶಂಕರಗೌಡ. ಶ್ರೀ ರಾಮಕೃಷ್ಣ ಹೆಗ್ಗಡೆ, ಶ್ರೀ ಎ. ಆರ್. ಬದರಿನಾರಾಯಣ್, ಡಾ. ರಾಜಾರಾಮಣ್ಣ, ಶ್ರೀ ಬಿ. ಡಿ. ಜತ್ತಿ, ನ್ಯಾಯಮೂರ್ತಿ ಇ. ಎಸ್. ವೆಂಕಟರಾಮಯ್ಯ, ಬಿಷಪ್ ಫರ್ನಾಂಡಿಸ್, ಶ್ರೀ

ಎಸ್. ಸತ್ಯ, ಶ್ರೀ ನಿಡುಮಾಮಿಡಿ ಸ್ವಾಮಿಗಳು, ಶ್ರೀ ದೇವರಾಜ ಅರಸ್, ಶ್ರೀ ನೂರುಲ್ ಹಸನ್, ಶ್ರೀ ಕೆ. ಹನುಮಂತಯ್ಯ ಮುಂತಾದವರು.

೨.೨ ತುಡಿತ 7

ಮೊ. ಮು. 1979 ಪು. 10 + 136 ಸವಿತಾರ ಪ್ರಕಾಶನ, ಮೈಸೂರು.

ಮಾನವೀಯ ಹೃದಯಸ್ಪಂದನ-ತುಡಿತ. ಲೌಕಿಕ ಸಂಸಾರದ ಚುಂಬಕ ಶಕ್ತಿಯಾಗಿ ಬಾಂಧವ್ಯದ ಮೆರುಗಿನಿಂದ ಜೀವನವನ್ನು ರಸಮಯವನ್ನಾಗಿ, ಆನಂದಭರಿತವನ್ನಾಗಿ ಮಾಡುವುದು. ಮಗಳಿಗೆ ಬರೆದ ಪತ್ರಗಳಾದರೂ ಸಾರ್ವಜನಿಕ ಸಾರ್ವತ್ರಿಕ ಮೌಲ್ಯಗಳನ್ನು ನೋಡಬಹುದು.

೩ ಭಾಷಣಗಳು

೩.೧ ಕುಲಪತಿಯ ಭಾಷಣಗಳು-೧ 8

ಮೊ. ಮು. ೧೯೭೦ ಪು. ೨೯೦, ಸುರುಚಿ ಪ್ರಕಾಶನ, ಮೈಸೂರು.

ಕುಲಪತಿಯಾಗಿದ್ದಾಗ ಮಾಡಿದ ಭಾಷಣಗಳ ಸಂಗ್ರಹ. ಪುಸ್ತಕದ ಕೊನೆಯಲ್ಲಿ ೪-೧೧-೧೯೬೯ ರಿಂದ ೨-೧೦-೧೯೭೦ರವರೆಗೆ ಮಾಡಿದ ಭಾಷಣಗಳ ಸಂದರ್ಭ ಸೂಚನೆಯಿದೆ.

೧ ವಿಶ್ವವಿದ್ಯಾಲಯ ಪಠ್ಯ ಪುಸ್ತಕಗಳು ೨ ಕನ್ನಡ ಅಧ್ಯಯನ ಸಂಸ್ಥೆ ೩ ಕನ್ನಡ ವಿಶ್ವಕೋಶ ೪ ಕುಲಪತಿಯ ಸ್ಥಾನ ಹೂವಿನ ಹಾಸಿಗೆಯಲ್ಲ ೫ ಸಾಹಿತ್ಯ ಹಾಗೂ ಧರ್ಮ ೬ ದಾದಿಯರ ಪತ್ರ ೭ ಅಂಧಾನುಕರಣ ಬೇಡ ೮ ಜನಸಾಮಾನ್ಯರ ಹಿತಸಾಧನೆಗಾಗಿ ಸಂಶೋಧನೆ ೯ ರಾಷ್ಟ್ರೀಯ ಕ್ರೀಡೆ ೧೦ ಸಪ್ತ ಸಾಮಾಜಿಕ ಪಾಪಗಳು ೧೧ ಕನ್ನಡನಾಡು ೧೨ ವ್ಯಾಸಂಗದ ಪ್ರಯೋಜನ ೧೩ ಪುಸ್ತಕ ಪರೀಕ್ಷೆಗಿಂತ ಜೀವನ ಪರೀಕ್ಷೆ ದೊಡ್ಡದು ೧೪ ಕನ್ನಡ ಶ್ರೀಮಂತ ಭಾಷೆ ೧೫ ವಿಜ್ಞಾನಯುಗದಲ್ಲಿ ಮತದ ಅವಶ್ಯಕತೆ ೧೬ ಹೋರಾಟದ ಅಗತ್ಯ ೧೭ ಪೆರಡಾಲ: ಸಾಹಿತ್ಯ ಸಂಸ್ಕೃತಿಗಳ ಕೇಂದ್ರ ೧೮ ಭಾಷಾ ಸಮನ್ವಯ ೧೯ ಕುಟಿತ ವಿದ್ಯಾರ್ಥಿ ೨೦ ರಾಜಕಾರಣಿಗೆ ಉತ್ತರ ೨೧ ಭಾಷಾ ಸಮಸ್ಯೆ ೨೨ ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ ೨೩ ಮಹಾಸಂಸ್ಥೆಯ ಶತಮಾನೋತ್ಸವ ೨೪ ಕಾಲೇಜು ಸಂಸ್ಕೃತಿಯ ದೇಗುಲ ೨೫ ಭಾರತೀಯ ಭಾಷೆಗಳಲ್ಲಿ ನಿಘಂಟು ರಚನೆ ೨೬ ಲೆನಿನ್ ಮಹಾಪುರುಷ ೨೭ ಸಂಖ್ಯಾಶಾಸ್ತ್ರ ಬೇಸಿಗೆ ಶಿಬಿರ ೨೮ ಅಂಚೆ ಶಿಕ್ಷಣ ೨೯ ಗಂಗೋತ್ರಿ ಕ್ಷೇತ್ರದಲ್ಲಿ ಬೇಸಿಗೆ ಶಿಬಿರಗಳು ೩೦ ಜಾತೀಯತೆ ೩೧ ಪ್ರಾಥಮಿಕ ಶಿಕ್ಷಣದ ತತ್ವಗಳು ಮತ್ತು ಸಮಸ್ಯೆಗಳು ೩೨ ಕೆಲವು ಸಾಹಿತ್ಯ ಸಮಸ್ಯೆಗಳು ೩೩ ಆಹಾರ ವಿಜ್ಞಾನ ಪದವೀಧರರಿಗೆ ಪ್ರಮಾಣ ಪತ್ರ ವಿತರಣೆ ೩೪ ಕನ್ನಡಕ್ಕೆ ಆಗಿರುವ ಅಪಾರ ಅನ್ಯಾಯ ೩೫ ಅಂತರರಾಷ್ಟ್ರೀಯ ವಿದ್ಯಾವರ್ಷ ೩೬ ಲಲಿತಕಲಾ ಕಾಲೇಜು ಹಾಗೂ ಸ್ತ್ರೀ ಶಿಕ್ಷಣ ೩೭ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿದ್ಯಾರ್ಥಿಗಳು ೩೮ ಗುರುನಾನಕ್ ಹಾಗೂ ಸಿಖ್‌ಮತ ೩೯ ಸಂಗೀತ ಶಿಕ್ಷಣದ ಅವಶ್ಯಕತೆ ೪೦ ಶಿಕ್ಷಕನ ಸ್ಥಾನಮಾನ ೪೧ ವಿ. ಸೀ ಅವರ ಎಪ್ಪತ್ತೆರಡನೆಯ ವರ್ಧಂತಿ ೪೨ ಗಾಂಧೀ ಜಯಂತಿ

೩.೨ ಕುಲಪತಿಯ ಭಾಷಣಗಳು -೨ 9

ಮೊ. ಮು. ೧೯೭೧ ಪು. ೨೩೮, ಸುರುಚಿ ಪ್ರಕಾಶನ, ಮೈಸೂರು.

ಕುಲಪತಿಯಾಗಿ ಎರಡನೆ ವರ್ಷದ ಅವಧಿಯಲ್ಲಿ ಮಾಡಿದ ಭಾಷಣಗಳು. ಪುಸ್ತಕದ ಕೊನೆಯಲ್ಲಿ ದಿನಾಂಕ ೧-೧೧-೭೦ ರಿಂದ ೩೧ -೧೦-೭೧ ವರೆಗೆ ಮಾಡಿದ ಭಾಷಣಗಳ ಸಂಗ್ರಹ

೧. ಮೋಹಕ ರಾಷ್ಟ್ರ ರಷ್ಯಾ ೨ ವಿಶ್ವವಿದ್ಯಾಲಯದ ಪಳ್ಗಿ ಎಲ್ಲಿ? ೩ ವಿದ್ಯಾರ್ಥಿ ಮಾರ್ಗದರ್ಶನ ೪ ಹೊಯ್ಸಳ ಮನೆತನ ೫ ಕನ್ನಡದಿಂದಲೇ ಕನ್ನಡಿಗರಿಗೆ ಮುಕ್ತಿ -೬ ಕನ್ನಡದಿಂದಲೇ ಕನ್ನಡಿಗರಿಗೆ ಮುಕ್ತಿ-೭ ಶಿಕ್ಷಕರ ತರಬೇತಿಯ ಗುರಿ ೮ ಮಾನವಶಾಸ್ತ್ರ ವ್ಯಾಸಂಗದ ಅಗತ್ಯ ೯ ತೋಂಟದ ಸಿದ್ಧಲಿಂಗೇಶ್ವರರು ೧೦ ಯೋಜನೆ

ಮತ್ತು ಅಭಿವೃದ್ಧಿಗಾಗಿ ಸಾಮಾನ್ಯ ವಿಜ್ಞಾನಗಳಲ್ಲಿ ಸಂಶೋಧನೆ ೧೧ ಪ್ರಿ-ಯೂನಿವರ್ಸಿಟಿ ಶಿಕ್ಷಣ ೧೨ ಅಖಿಲ ಭಾರತ ವಾಕ್ ಶ್ರವಣ ಅಧ್ಯಯನ ಕಾರ್ಯಶಿಬಿರ ೧೩ ಕನ್ನಡ ವಿದ್ವತ್ತಿನ ಮೂಲ ಪುರುಷ ಕಿಟೆಲ್ ೧೪ ಕನ್ನಡ ಅಧ್ಯಾಪಕರ ಸಂಘಟನೆ ೧೫ ಬದಲಾಗುತ್ತಿರುವ ಸಮಾಜ ೧೬ ಕೊಡಗು ಕನ್ನಡನಾಡಿನ ಹೆಮ್ಮೆ ೧೭ ಭಾರತೀಯ ಜೀವನ ಮತ್ತು ಸಾಹಿತ್ಯದ ಮೇಲೆ ಮಾರ್ಕ್ಸ್‌ವಾದದ ಪ್ರಭಾವ ೧೮ ಅಮೆರಿಕನ್ ಸಾಹಿತ್ಯದ ಸಾಂದ್ರ ಶಿಕ್ಷಣ ೧೯ ವಾಚನ ಕಲೆಯ ಅವಶ್ಯಕತೆ ೨೦ ರೋಟರಿ ಕ್ಲಬ್ಬುಗಳು ಅವಶ್ಯಕವೇ? ೨೧ ನನಗೆ ಐವತ್ತು ಮೂರು ವರ್ಷ ೨೨ ಆದಿವಾಸಿ ಜನರ ಸಮಸ್ಯೆಗಳು ೨೩ ತೆಲುಗು ವಂಶವೃಕ್ಷ ೨೪ ತೆಲುಗು - ಕನ್ನಡಗಳ ಬಾಂಧವ್ಯ ಚಿರಾಯುವಾಗಲಿ ೨೬ ಪತ್ರಿಕೋದ್ಯಮ ಸಮಾಜಕ್ಕೆ ರಕ್ಷೆಯಾಗಲಿ ೨೭ ಶಿಕ್ಷಣದಲ್ಲಿ ಕ್ರಾಂತಿ ೨೮ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಪ್ರಯೋಜನ

೩.೩ ಕುಲಪತಿಯ ಭಾಷಣಗಳು - ೩ 10

ಮೊ. ಮು. ೧೯೭೩, ಪು. ೨೬೮ ಸುರುಚಿ ಪ್ರಕಾಶನ, ಮೈಸೂರು

ಕುಲಪತಿಯ ಹುದ್ದೆಯಲ್ಲಿದ್ದಾಗ ಮಾಡಿದ ಭಾಷಣಗಳು. ಪುಸ್ತಕದ ಕೊನೆಯಲ್ಲಿ ದಿನಾಂಕ ೮-೧೧-೭೧ ರಿಂದ ೧೯-೩-೭೨ ರವರೆಗೆ ಮಾಡಿದ ಭಾಷಣಗಳ ಸಂಗ್ರಹವಿದೆ.

೧ ಹಾಸನ ಜಿಲ್ಲೆಯ ಹಿರಿಮೆ ೨ ರಾಜ್ಯೋತ್ಸವ ಏಕೆ? ೩ ಸಾಹಿತ್ಯ ಹಾಗೂ ಸಮಾಜವಾದ ಸಂಸ್ಕೃತಿ ೪ ಭವಿಷ್ಯ ಜಗತ್ತಿನ ಗುದ್ದಲಿಪೂಜೆ ೫ ಶಿಕ್ಷಣ ಸುಧಾರಣೆ ೬ ಸಹಕಾರವೇ ಪ್ರಗತಿಗೆ ಹೆದ್ದಾರಿ ೭ ಹಿಂದುಳಿದ ಕನ್ನಡಿಗ ೮ ಕಣ್ಮರೆಯಾದ ಅ. ನ. ಕೃ ೯ ಕಾವ್ಯವಾಚನ ಮತ್ತು ಭಾಷಣ ಕಲೆ ೧೦ ಕಿವಿ ಮತ್ತು ಕಂಠರೋಗ ಶಾಸ್ತ್ರಜ್ಞರ ಮೂರನೆಯ ಸಮ್ಮೇಳನ ೧೧ ಮಠ ಮಸೀದಿಗಳಲ್ಲಿ ಭಾರತೀಯತ್ವಬೇಕು ೧೨ ಮಂಡ್ಯ ನನಗೆ ಹತ್ತಿರ ೧೩ ಸಮಕಾಲೀನ ಭಾರತೀಯ ನಾಟಕ ೧೪ ಆಧುನಿಕ ಯುಗದಲ್ಲಿ ಮಠಗಳು ೧೫ ಆಯುರ್ವೇದ ವ್ಯಾಸಂಗ ೧೬ ಕಾಫಿ ಬೋರ್ಡಿನ ಸಂಶೋಧನಾ ಕೇಂದ್ರ ೧೭ ಗಮಕ ಕಲೆಯ ಅವಶ್ಯಕತೆ ೧೮ ಚಿತ್ಸಭೆ ೧೯ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ೨೦ ಕಾಸರಗೋಡು ಸಮ್ಮೇಳನ -೧. ೨೧ ಕಾಸರಗೋಡು ಸಮ್ಮೇಳನ-೨. ೨೨ ಸಾಹಿತ್ಯ ಧರ್ಮಗಳ ಬಾಂಧವ್ಯ ೨೩ ನವಯುಗದ ಸುವರ್ಣೋತ್ಸವ ೨೪ ಕನ್ನಡ ಅಭಿವೃದ್ಧಿ ೨೫ ಸಂಗೀತದ ಮಹತ್ವ ೨೬ ಸ್ವಾತಂತ್ರ್ಯ ರಜತಮಹೋತ್ಸವ ೨೭ ಪೂರ್ಣಯೋಗಿ ಶ್ರೀ ಅರವಿಂದರು ೨೮ ಸ್ತ್ರೀ ವಿದ್ಯಾಭ್ಯಾಸ ೨೯ ಭಾರತೀಯ ಶಿಕ್ಷಣ ಎತ್ತ ಸಾಗಿದೆ? ೩೦ ಅಂಚೆ ಶಿಕ್ಷಣದ ಬಗ್ಗೆ ರಾಷ್ಟ್ರೀಯ ವಿಚಾರಗೋಷ್ಠಿ ೩೧ ಉನ್ನತ ಗ್ರಾಮೀಣ ಶಿಕ್ಷಣ ೩೨ ದೂರದಿಂದ ಬಾಬಾ ೩೩ ಜಾನಪದದಲ್ಲಿ ಭಾರತದ ಸಾಂಸ್ಕೃತಿಕ ಐಕ್ಯ

೩.೪ ಕುಲಪತಿಯ ಭಾಷಣಗಳು-೪-೫ 11

ಮೊ. ಮು. ೧೯೭೪, ಪು. ೩೩೮, ಸುರುಚಿ ಪ್ರಕಾಶನ, ಮೈಸೂರು.

ಕುಲಪತಿಯಾಗಿ ನಾಲ್ಕು ಮತ್ತು ಐದನೆಯ ವರ್ಷದ ಅವಧಿಯಲ್ಲಿ ಮಾಡಿದ ಭಾಷಣಗಳು (೧-೧೧-೭೨ರಿಂದ ೩೧-೧೦-೧೯೭೪ರ ವರೆಗೆ)

೧ ಅಂತಃಕರಣ ೨ ಸ್ವೇಚ್ಛಿಕ ಸಂಸ್ಥೆಗಳ ಸಮ್ಮೇಳನ ೩ ಆಹ್ವಾನ ಕಲೆ ೪ ಪುಸ್ತಕ ಪ್ರಭಾವ ೫ ಮಾಂಸೋತ್ಪಾದನಾ.ವಿಚಾರಗೋಷ್ಠಿ ೬ ಪ್ರೊ. ಹಿರಿಯಣ್ಣ ಶತಮಾನೋತ್ಸವ ೭ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ೮ ಪುರಾತತ್ವದ ಹೊಸ ಜಾಡು ೯ ಭೂ ಸುಧಾರಣೆ ೧೦ ಪತ್ರಿಕೋದ್ಯಮದ ಗೊತ್ತುಗುರಿಗಳು ೧೧ ಪತ್ರಿಕೋದ್ಯಮ ಶಿಕ್ಷಣ ೧೨ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡದ ಸ್ಥಾನ ೧೩ ವ್ಯಕ್ತಿತ್ವ ಹಾಗೂ ಹೊಂದಾಣಿಕೆ ೧೪ ಬಂಗಾಲದ ವಿರುದ್ಧ ಯುವಜನ ೧೫ ನನ್ನ ಆದರ್ಶ ವಿಶ್ವವಿದ್ಯಾನಿಲಯ ೧೬ ಪರಸಂಸ್ಕೃತಿಯ ಅವಹೇಳನವೇ ಆತ್ಮದ್ರೋಹ ೧೭ ವಿಶ್ವವಿದ್ಯಾನಿಲಯಗಳ ವಿಧೇಯಕ-೧೯೭೩ ೧೮ ರಾಷ್ಟ್ರೀಯ ವೈದ್ಯ ಪದ್ಧತಿ ೧೯ ಕನ್ನಡ ಸರ್ವಮಾಧ್ಯಮವಾಗಬೇಕು ೨೦ ಸಂಶೋಧನಾ ವಿಧಾನಶಾಸ್ತ್ರದ ಅವಶ್ಯಕತೆ ೨೧ ಅಮೇರಿಕೀಯತೆ ೨೨ ಸಾಹಿತ್ಯ ಧರ್ಮಗಳ ಸಾಮರಸ್ಯ ೨೩ ಹಿಂದಿ ಯೋಜನೆ ೨೪ ಸಮಾಜಕ್ಕೆ ಬೇಕಾಗುವ ವಿಜ್ಞಾನ ೨೫ ಕರ್ನಾಟಕ ನಾಮಕರಣೋತ್ಸವ ೨೬ ಶಿಕ್ಷಣ ಮತ್ತು ನಾಯಕತ್ವ ೨೭ ರಾಷ್ಟ್ರೈಕ್ಯ ಸಾಧನೆಯ ದಾರಿ ೨೮ ನವೋದಯ ಹರಿಕಾರ ಪಂಜೆಯವರು ೨೯ ದ್ರಾವಿಡ ಜಾನಪದ ೩೦ ಉಚ್ಚ ಶಿಕ್ಷಣದ ಕೆಲವು ಸಮಸ್ಯೆಗಳು ೩೧ ಅಧಿಕಾರ ವರ್ಗಾವಣೆ ೩೨ ಪ್ರಥಮ ಏಷ್ಯನ್ ವಿಚಾರಗೋಷ್ಠಿ -೧. ೩೩ ಗ್ರಾಮಾಂತರ ಸಮಾಜದ ಅಭ್ಯುದಯ ೩೪ ಪ್ರಥಮ ಏಷ್ಯನ್ ವಿಚಾರಗೋಷ್ಠಿ-೨. ೩೫ ಕಾನೂನು ವ್ಯಾಸಂಗ ೩೬ ರಾಷ್ಟ್ರಹಿತಸಾಧನೆಯ ಮಾರ್ಗಗಳು ೩೭ ವೈದ್ಯ ವಿಜ್ಞಾನ

ಸಮನ್ವಯ ೩೮ ವಿದೇಶಿಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಬಾಂಧವ್ಯ ೩೯ ಮತ: ಒಂದು ತೌಲನಿಕ ವಿವೇಚನೆ ೪೦ ಇಂಜನಿಯರಿಂಗ್ ಶಿಕ್ಷಣದ ಗೊತ್ತುಗುರಿಗಳು ೪೧ ಕನ್ನಡಕ್ಕೀಗ ಕೋಡು ಮೂಡಿದೆ ೪೨ ಭಾರತೀಯ ಸಾಹಿತ್ಯ ಶ್ರೀವೃದ್ಧಿಗೆ ಕನ್ನಡದ ಕೊಡುಗೆ ೪೩ ಯೋಜನೆ ಸಂಶೋಧನೆ ಬಾಂಧವ್ಯ ೪೪ ಕರ್ನಾಟಕಕ್ಕೊಂದು ಹೊಸ ಪುರಾತತ್ವ ವಲಯ

೩.೫ ಕುಲಪತಿಯ ಭಾಷಣಗಳು-೬ **12**

ಮೊ. ಮು. ೧೯೭೫ ಪು. ೨೮೧ ಸುರುಚಿ ಪ್ರಕಾಶನ, ಮೈಸೂರು.

ಕುಲಪತಿಯಾಗಿ ಆರನೆ ವರ್ಷದ ಅವಧಿಯಲ್ಲಿ ಮಾಡಿದ ಭಾಷಣಗಳ ಸಂಗ್ರಹ ದಿನಾಂಕ (೨-೧೧-೭೪ರಿಂದ ೩೧ -೧೦-೧೯೭೫ ರವರೆಗೆ)

೧ ವಿದ್ಯೆಯೇ ಬದುಕು. ಅವಿದ್ಯೆಯೇ ಸಾವು ೨ ಆಕಾಶವಾಣಿಯನ್ನು ಕುರಿತ ಕೆಲವು ವಿಚಾರಗಳು ೩ ಜೈನಧರ್ಮದ ವೈಶಿಷ್ಟ್ಯ ೪ ಜನಸಂಖ್ಯೆಯ ಸಮಸ್ಯೆ ೫ ಪದವೀಧರರಿಗೆ ಹಿತವಚನ ೬ ಗ್ರಂಥ ಪ್ರದರ್ಶನದ ಪ್ರಾಮುಖ್ಯತೆ ೭ ದ್ರಾವಿಡ ಅಧ್ಯಯನ ಬಗ್ಗೆ ಕೆಲವು ಬಿಡಿ ಆಲೋಚನೆಗಳು ೮ ಕರ್ನಾಟಕದಲ್ಲಿ ಕನ್ನಡ ಸಾಹಿತ್ಯದ ಅಭಿವೃದ್ಧಿ ೯ ಅನಕ್ಷರತೆ: ರಾಷ್ಟ್ರೀಯ ಪಾತಕ ೧೦ ಬಾಲ ಸಾಹಿತ್ಯ ರಚನೆ ೧೧ ಅಂಚೆ ಶಿಕ್ಷಣ ಮತ್ತು ಮುಕ್ತ ವಿಶ್ವವಿದ್ಯಾನಿಲಯ ೧೨ ರೈತ ಸಂಘಟನೆಯಿಂದ ಮಾತ್ರ ದೇಶಕ್ಕೆ ಮುಕ್ತಿ ೧೩ ಧಾರ್ಮಿಕ ಕ್ಷೋಭೆ ೧೪ ಉದಯೋನ್ಮುಖ ಲೇಖಕರ ತರಬೇತಿ ೧೫ ಭಾರತೀಯ ಭಾಷೆಗಳ ಭವಿಷ್ಯ ೧೬ ವಯಸ್ಕರ ಶಿಕ್ಷಣದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಪಾತ್ರ ೧೭ ವಯಸ್ಕರ ಶಿಕ್ಷಣ ಮತ್ತು ರಾಷ್ಟ್ರಾಭಿವೃದ್ಧಿ ೧೮ ಧಾರ್ಮಿಕ ಕ್ರಾಂತಿ ೧೯ ಸ್ನೇಹಮಯ ಸೂರ್ಯನಾರಾಯಣ ಅಡಿಗರು ೨೦ ಸಾಂಸ್ಕೃತಿಕ ನಗರಿ. ಮೈಸೂರು ೨೧ ಮೈಸೂರು ವಿಶ್ವವಿದ್ಯಾನಿಲಯದ ಮುನ್ನಡೆ ೨೨ ಸಾಂಸ್ಕೃತಿ ನಿಧಿ ೨೩ ಪರೀಕ್ಷಾ ಸುಧಾರಣೆಗಳು ೨೪ ಕರ್ನಾಟಕ ಹಿಂದೆ: ಮುಂದೆ ೨೫ ಸಂಚಾರಿ ಗ್ರಂಥಾಲಯದ ಅವಶ್ಯಕತೆ ೨೬ ನೆನಹು ಕೊಡುಗೆ ೨೭ ಬೀಳ್ಕೊಡಿಗೆ ೨೮ ಗಾಂಧಿತತ್ವ ಸರ್ವರೋಗಾಪಹಾರಿ ೨೯ ಕೃಷಿ ಮಾರಾಟ ಆಡಳಿತಾಧ್ಯಯನ ೩೦ ಜೀವನ ಶಿಕ್ಷಣದ ಆದ್ಯತೆ ೩೧ ಕೃತಜ್ಞತೆ ೩೨ ನೆನಪಿನ ಹೊರೆ - ಕರುಳಿನ ಕರೆ

೩.೬ ನಿರಂತರ (ಭಾಷಣಗಳ ಸಂಕಲನ) **13**

ಮೊ. ಮು. ೧೯೩೯ ಪು. IV + ೧೭೦ ಗುರುದೇವ ಉದ್ಯಮ ಕೇಂದ್ರ, ಮೈಸೂರು

ಕುಲಪತಿಯಾಗಿದ್ದಾಗ ಮತ್ತು ಮತ್ತೆ ಪ್ರಾಧ್ಯಾಪಕ ಹುದ್ದೆಗೆ ಮರಳಿದಾಗ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಮಾಡಿದ ಕಿರು ಭಾಷಣಗಳ ಸಂಕಲನ. ೨೩. ಭಾಷಣಗಳಿವೆ.

೧ ವಿದ್ಯಾರ್ಥಿ ಸಮಸ್ಯೆ ೨ ಕನ್ನಡಕ್ಕೊಂದು ಸಮಗ್ರಯೋಜನೆ ೩ ಮನತೆರೆದ ಮಾತು ೪ ಮಹಾಕ್ರಾಂತಿಗೆ ನಾಂದಿ ೫ ತರುಣರಿಗೆ ಕಿವಿ ಮಾತು ೬ ಶಾಲೆಗಳ ರಾಷ್ಟ್ರೀಕರಣ ೭ ೧೯೬೦-೬೯ ರ ಕನ್ನಡಕಾವ್ಯ ೮ ನಾಡು ನುಡಿ: ಪದ್ಯ ಮತ್ತು ಗದ್ಯದಲ್ಲಿ ಆದರ ಪಾತ್ರ ೯ ಕಾದಂಬರಿ ನಾಟಕವಾದಾಗ ೧೦ ಗದ್ಯ ಸಾಹಿತ್ಯ ೧೧ ತುರ್ತುಪರಿಸ್ಥಿಯ ಅತಿರೇಕ ೧೨ ಬಂಗಾರದ ಮನುಷ್ಯ ೧೩ ಯೋಜನೆಗೆ ಗ್ರಾಮ ಮೂಲ ಘಟಕವಾಗಬೇಕು ೧೪ ಮಂಗಲ್ಯಾಡಿನಲ್ಲಿ ಮೂರು ವಾರ ೧೫ ಬದುಕೇ-ಒಂದು ಕಲೆ ೧೬ ಯಕ್ಷಗಾನ ೧೭ ಆಯುರ್ವೇದ ೧೮ ರೋಟರಿಯ ಧ್ಯೇಯ ಹೊಸತಲ್ಲ ೧೯ ಪರ್ವತವಾಣಿಯವರು ೨೦ ಸಂಕುಚಿತಭಾವ ಸಲ್ಲದು ೨೧ ಕೇಂದ್ರೀಕರಣ ಸಲ್ಲದು ೨೨ ಕನ್ನಡ ಚಳುವಳಿ ೨೩ ತೆರೆದ ಬಾಗಿಲು

ಕೊನೆಯಲ್ಲಿ ಅನುಬಂಧ ಭಾಷಣಗಳ ದಿನಾಂಕ ಮತ್ತು ಸ್ಥಳ ಸೂಚನೆ ಇದೆ

೪ ಪ್ರವಾಸ ಸಾಹಿತ್ಯ

೪.೧ ಆಫ್ರಿಕಾಯಾತ್ರೆ **14**

ಮೊ. ಮು. 1975 ಪು. 152. ಸುರುಚಿ ಪ್ರಕಾಶನ ಮೈಸೂರು. ಎ. ಮು. 1991 ಪು. ಕ್ರೌ 180 + viii(ಸಂಕ್ಷಿಪ್ತ) ಚೇತನ ಬುಕ್‌ಹೌಸ್, ಮೈಸೂರು-(ಕುವೆಂಪು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ)

೧೯೭೧ ಆಗಸ್ಟ್ ತಿಂಗಳಲ್ಲಿ ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಒಕ್ಕೂಟದ ಸಭೆ ನಡೆಯಿತು. ಕೇವಲ ಎರಡೂವರೆ ವಾರ ಅವರು ಅಲ್ಲಿದ್ದರೂ, ಅವರು ಕಂಡದ್ದು, ಅನುಭವಿಸಿದ್ದೂ ಅಪಾರ. ನೈಜೀರಿಯಾ, ಘಾನ ಹಾಗೂ ಕೆನ್ಯಾ ರಾಷ್ಟ್ರಗಳಿಗೆ ಅವರು ಅಲ್ಲಿ ಇದ್ದ ಅಲ್ಪ ಅವಧಿಯಲ್ಲಿ ಭೇಟಿ ನೀಡಿದ್ದರು. ಅಜ್ಞಾನ, ಅಂಧಕಾರ, ಅನಾಗರಿಕತೆ ಹಾಗೂ ಸುಲಿಗೆಗೆ ಆಫ್ರಿಕಾ ಎನ್ನುವ ಹೆಸರು ಸಾಂಕೇತಿಕವಾಗಿದೆ ಎಂಬ ಅಭಿಪ್ರಾಯವನ್ನು ತಲೆಯಲ್ಲಿ ಹೊತ್ತು ಹೋಗಿದ್ದ ಅವರಿಗೆ ಕಂಡದ್ದು ಬೇರೆ. ಅವರಿಗೂ ಇತಿಹಾಸವಿದೆ, ನಾಗರಿಕತೆ ಇದೆ, ಸಿರಿವಂತಿಕೆ ಇದೆ, ಬಡತನವಿದೆ, ವಿದ್ಯೆಯಿದೆ, ಬುದ್ಧಿ ಇದೆ, ಧರ್ಮವಿದೆ, ನೀತಿ ನಡವಳಿಕೆಗಳಿವೆಯೆಂಬುದನ್ನವರು ಪ್ರವಾಸ ಕಾಲದಲ್ಲಿ ಕಂಡುಕೊಂಡರು. ಒಟ್ಟಿನಲ್ಲಿ ಹೇಳುವುದಾದರೆ ಅವರಿಗೂ ಒಂದು ಸಂಸ್ಕೃತಿ ಇದೆ. ಅವರೂ ನಮ್ಮಂತೆಯೇ ಮಾನವರು ಎಂಬ ಅಭಿಪ್ರಾಯವನ್ನು ಈ ಪ್ರವಾಸ ಗ್ರಂಥದಲ್ಲಿ ಕಾಣಬಹುದು.

೪.೨ ಪ್ರವಾಸಿಯ ದಿನಚರಿ 15

ಮೊ. ಮು. 1974 ಪು. 8 + 172 ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು

ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟಕ್ಕೆ ಸೇರಿದ ಕುಲಪತಿಗಳ ಸಮ್ಮೇಳನಕ್ಕೆ ಇಂಗ್ಲೆಂಡಿಗೆ ಹೋಗಿದ್ದಾಗ (ದಿನಾಂಕ 7 ಆಗಸ್ಟ್, 1973 ರಿಂದ ದಿನಾಂಕ 22 ಆಗಸ್ಟ್, 1973ವರೆಗೆ) ಲೇಖಕರು ಗುರುತುಹಾಕಿಕೊಂಡ ದಿನಚರಿ.

೪.೩ ಯೇಸು ವಿಭೀಷಣರ ನಾಡಿನಲ್ಲಿ 16

ಮೊ. ಮು. 1978 ಪು. IV + 126 ಗುರುದೇವ ಉದ್ಯಮ ಕೇಂದ್ರ ಮೈಸೂರು

ಐರ್ಲೆಂಡ್, ಇಸ್ರೇಲ್ ಮತ್ತು ಶ್ರೀಲಂಕೆ ಈ ಮೂರು ದೇಶಗಳ ಪ್ರವಾಸಾನುಭವಗಳನ್ನು ಕುರಿತ ಗ್ರಂಥ.

೪.೪ ವಿದೇಶದಲ್ಲಿ ನಾಲ್ಕು ವಾರ 17

ಮೊ. ಮು. 1970 ಪು. 8 + 225 ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು,

ನಾಲ್ಕು ವಾರಗಳ ಪ್ರವಾಸದ ಕತೆ. ರಷ್ಯ, ಆಸ್ಟ್ರಿಯಾ, ಜರ್ಮನಿ ಮತ್ತು ಇಂಗ್ಲೆಂಡಿನಲ್ಲಿ ದಿನಾಂಕ 16-10-1970 ರಿಂದ 16-11-1970ರವರೆಗೆ ಪ್ರವಾಸ ಮಾಡಿದಾಗ ಅನುಭವಿಸಿದ, ನೋಡಿದ ವಿಷಯ ಸಂಗ್ರಹವಾಗಿದೆ.

೪.೫ ವಿದೇಶದಲ್ಲಿ ಮೂರು ವಾರ (ಪಠ್ಯಗ್ರಂಥ) 18

ಮೊ. ಮು. 1991 ಪು. 181 + VI ನರೇಶ್ ಅಂಡ್ ಕಂಪನಿ ಬೆಂಗಳೂರು

'ವಿದೇಶದಲ್ಲಿ ನಾಲ್ಕುವಾರ', ಇದರ ಸಂಕ್ಷಿಪ್ತರೂಪವೇ ವಿದೇಶದಲ್ಲಿ ಮೂರುವಾರ.

೫ ಜೀವನ ಚರಿತ್ರೆಗಳು

೫.೧ ಅಮೆರಿಕಾ ಗಾಂಧಿ 19

ಮೊ. ಮು. 1982 ಪು. 197 ನರೇಶ್ ಅಂಡ್ ಕಂಪನಿ, ಬೆಂಗಳೂರು ಎ. ಮು.

ಮೂ. ಮು. 1991 ಕ್ರೌ. ಪು. 167 (ಪಠ್ಯ: ಗುಲ್ಬರ್ಗಾ ವಿಶ್ವವಿದ್ಯಾನಿಲಯ)

ಗಾಂಧೀಜಿಯಿಂದ ಸ್ಫೂರ್ತಿ ಪಡೆದು ನೀಗ್ರೋ ಜನಾಂಗದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಯಶಸ್ವಿಯಾದ ಮಾರ್ಟಿನ್ ಲೂಥರ್‌ಕಿಂಗ್ ಜೀವನ ಕುರಿತ ಗ್ರಂಥ

೫.೨ ಆಲ್‌ಬರ್ಟ್ ಐನ್‌ಸ್ಟೀನ್ (ಜೀವನ ಪರಿಚಯ) 20

ಮೊ. ಮು 1962 ಪು. 40 ಸುರುಚಿಪ್ರಕಾಶನ, ಮೈಸೂರು.

ಎ. ಮು 1979 ಪು. 40 ಗುರುದೇವ ಉದ್ಯಮ ಕೇಂದ್ರ ಮೈಸೂರು 3 ಚಿತ್ರಗಳು

ಮೊ. ಮು 1984, ನಾ. ಮು 1991 ಪು 40 ಗುರುದೇವ ಉದ್ಯಮಕೇಂದ್ರ, ಮೈಸೂರು

ವಿಜ್ಞಾನ ಮಹರ್ಷಿಯ ಜೀವನ ಚರಿತ್ರೆಯನ್ನು ಸುಲಭವಾಗಿ ಎಳೆಯ ಮಕ್ಕಳಿಗೆ ತಿಳಿಸುವ ಗ್ರಂಥ

೫.೩ ಋಷಿ ಕವಿ ರವೀಂದ್ರರು (ಜೀವನ ಪರಿಚಯ) 21

ಮೊ. ಮು. 1961 ಪು 38 ಎ. ಮು. 1978 ಪು. 40 ಸುರುಚಿ ಪ್ರಕಾಶನ, ಮೈಸೂರು

ರವೀಂದ್ರನಾಥ ಟಾಗೊರ್ ಅವರ ಬಾಲ್ಯ, ಸಾಧನೆ, ಸಿದ್ಧಿಗಳನ್ನು ಕುರಿತ ಗ್ರಂಥ

೫.೪ ಕನ್ನಡನಾಡಿನ ಕಲಿ 22

ಮೊ. ಮು. 1967 ಪು. 28 (ಸಚಿತ್ರ) ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು

ಕುಮಾರ ರಾಮನ ಸಂಕ್ಷಿಪ್ತ ಜೀವನ ಪರಿಚಯ

೫.೫ ಕರ್ನಾಟಕ ರೂವಾರಿ 23

ಮೊ. ಮು. 1985 ಪು. 465+16+20 ಚಿತ್ರಗಳು, ಕಲಾ ಕಂಠೀರವ ಟಿ. ಎಸ್. ಕರಿಬಸವಯ್ಯ ಟ್ರಸ್ಟ್, ಬೆಂಗಳೂರು, ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಸಮಗ್ರ ಜೀವನ ಚರಿತ್ರೆ

೫.೬ ಕಲಾಕಂಠೀರವ ಶ್ರೀ ಕರಿಬಸವಯ್ಯ (ಜೀವನ ಚರಿತ್ರೆ) 24

ಮೊ. ಮು. 1978 ಪು. 81 ಕಂಠೀರವ ಕಲಾವೃಂದ, ಬೆಂಗಳೂರು

ಟಿ. ಎಸ್. ಕರಿಬಸಯ್ಯನವರ ಕಿರುಪರಿಚಯ, ತುಂಬ ಚಿತ್ರಗಳಿವೆ.

೫.೭ ಕ್ರಾಂತಿಕಾರ ಡಾ. ಅಂಬೇಡ್ಕರ್ 25

ಮೊ. ಮು. 1978 ಪು. 12+336 ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ

ಅಂಬೇಡ್ಕರ್‌ರವರ ಸಾಹಸಮಯ ಜೀವನ. ಆ ಮಹಾ ಆಲೋಚಕನ ಹೋರಾಟದ ಕತೆ, ಅವರ ಅಪೂರ್ವ ಸಾಧನೆ ಸಿದ್ಧಿಗಳ ನೆಲೆಬೆಲೆಗಳನ್ನು ಇಲ್ಲಿ ಕಾಣಬಹುದು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದರ ಸಂಕ್ಷಿಪ್ತ ಆವೃತ್ತಿಯನ್ನು ಪ್ರಕಟಿಸಿದೆ.

೫.೮ ಕಾಯಕಯೋಗಿ ರಾಷ್ಟ್ರನಾಯಕ (ಜೀವನ ಚಿತ್ರ) 26

ಮೊ. ಮು. 1992 ಪು. 55 ದೇಜಗೌ ಟ್ರಸ್ಟ್, ಮೈಸೂರು.

ಶ್ರೀ ನಿಜಲಿಂಗಪ್ಪ ಅವರ ಸಂಕ್ಷಿಪ್ತ ಜೀವನ ಚಿತ್ರ.

೫.೯ ಗೋಪಾಲಕೃಷ್ಣ ಗೋಖಲೆ (ಜೀವನ ಚಿತ್ರ) 27

ಮೊ. ಮು. 1953 ಪು. 32 ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಎ. ಮು. 1977. ಪು. 28 ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ವಯಸ್ಕರಿಗಾಗಿ ಬರೆದ ಜೀವನ ಚಿತ್ರ. ಗೋಖಲೆ ಅವರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ಚಿತ್ರಿಸಿದ್ದಾರೆ.

೫.೧೦ ತೀ ನಂ ಶ್ರೀ (ಜೀವನ ಚರಿತ್ರೆ) 28

ಮೊ. ಮು. 1967 ಪು. XXVIII + 124 ಕನ್ನಡ ಸಂಘ ಮಾನಸಗಂಗೋತ್ರಿ ಮೈಸೂರು.

ತೀ.ನಂ.ಶ್ರೀ ಅವರ ಜೀವನಚರಿತ್ರೆ ಕುರಿತ ಗ್ರಂಥ

೫.೧೧ ದಕ್ಷಿಣೇಶ್ವರಕ್ಕೆ ನಮನ(ಜೀವನ ಚರಿತ್ರೆ) 29

ಮೊ. ಮು. 1987 ಪು. viii + 156 ಪ್ರಕಾಶಕ. ಜಿ. ಕಲ್ಲಯ್ಯ (ಕೊಟ್ಟಿರುವ ವಿಳಾಸ. ಕಲಾ ನಿಲಯ, ಮೈಸೂರು)

ಎ. ಮು. 1989 (ಬಿ. ಎ. ಪಠ್ಯಪುಸ್ತಕ, ಮೈಸೂರು ವಿಶ್ವವಿದ್ಯಾನಿಲಯ)

ಶ್ರೀರಾಮಕೃಷ್ಣ ಪರಮಹಂಸ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನಚಿತ್ರ -ಸಂದೇಶಗಳನ್ನೊಳಗೊಂಡಿರುವ ಕೃತಿ-

೧ ಸರ್ವಧರ್ಮ ಸಮ್ಮೇಳನದಲ್ಲಿ ವೇದಾಂತದ ಡಿಂಡಿಮ ೨ ಶ್ರೀಗುರು. ೩ ಮನುಕುಲದ ಆಚಾರ್ಯ ೪ ವಿಶ್ವಮಾನವ ೫ ಜನನೀಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ ೬ ಮಹಾಮಾತೆ ೭ ಬೆಳಕು ಬೆಳಕಿನಲ್ಲಿ ಕರಗಿತು ೮ ಗ್ರಂಥ ಋಣ.

೫.೧೨ ದಾರಿದೀಪಗಳು (ಜೀವನಚಿತ್ರ) 30

ಮೊ. ಮು. 1985 ಪು. 8 + 160 ಸಾವಂತ್ರಿ ಪ್ರಕಾಶನ, ಮೈಸೂರು

೧ ಜ್ಞಾನಪೀಠ ಪ್ರಶಸ್ತಿ ವಿಜೇತ ಮಾಸ್ತಿ ಅವರು. ೨ ಸಂಶೋಧಕರ ಸಾರ್ವಭೌಮ ಶಂಬಾ ಜೋಶಿ ೩ ಕನ್ನಡದ ಕಂಪು ೪ ಟಿ. ಚೌಡಯ್ಯ ೫ ಇಲಕಲ್ಲ ಪುಣ್ಯ ಕನ್ನಡನಾಡು ಧನ್ಯ ೬ ಗುರುದಕ್ಷಿಣೆ ೭ ಅಜ್ಞಾನ ಕರ್ಮಯೋಗಿ ೮ ಕನ್ನಡದ ಕೀರ್ತಿ ರಾಜಕುಮಾರ್ ೯ ಕರ್ನಾಟಕದ ಶಿಲ್ಪಿ ೧೦ ಕರ್ನಾಟಕ ಸಂಸ್ಕೃತಿಯ ಅಧ್ವರ್ಯು ೧೧ ಧ್ಯೇಯ ಸಂಪನ್ನ ಧೀಮಂತ ನಾಯಕ ೧೨ ಸಿದ್ಧಗಂಗಾ ಸಿದ್ಧಗುರು ೧೩ ಕನ್ನಡಕ್ಕೆ ಕಿಟ್ಟೆಲ್ ಅವರ ಕಾಣಿಕೆ ೧೪ ಕಾರಣಪುರುಷ ಅಂಬೇಡ್ಕರ್ ೧೫ ನನ್ನ ಜೀವನ ಕಥೆ

೫.೧೩ ನಮ್ಮ ನೆಹರು (ಜೀವನ ಚಿತ್ರ) 31

ಮೊ. ಮು. 1956 ಪು. 32 ಸಾಧನ ಸಾಹಿತ್ಯ ಮಂದಿರ, ಮೈಸೂರು

ಮಕ್ಕಳಿಗಾಗಿ ಬರೆದ ನೆಹರು ಜೀವನ ಚರಿತ್ರೆ ಎ. ಮು. 1989 ಪು. 56 ಕಾವ್ಯಕಲಾ ಪ್ರಕಾಶನ, ವಿಜಯನಗರ, ಬೆಂಗಳೂರು.

೫.೧೪ ನಾನು ಮೆಚ್ಚಿದವರು 32

ಮೊ. ಮು. 1994 ಪು. VI + 121 ಪ್ರತಿಧ್ವನಿ ಪ್ರಕಾಶನ ವಿಶ್ವಚೇತನ ಕಲಾನಿಲಯ ಜಯಲಕ್ಷ್ಮಿಪುರಂ, ಮೈಸೂರು -12.

ಈ ಗ್ರಂಥದಲ್ಲಿ ೧೪ ಪ್ರಸಿದ್ಧ ವ್ಯಕ್ತಿಗಳ ಸಂಕ್ಷಿಪ್ತ ಜೀವನ ಚರಿತ್ರೆ

೧ ಕನ್ನಡಕೊಬ್ಬ ರಾಜಕುಮಾರ ೨ ಹಿರಿಯ ಚೇತನ ೩ ರೈ ಕವಿಗೆ ಮಣಿಹ ೪ ಸಮೇತನಹಳ್ಳಿಯ ಧೀರ ಸಾಹಿತಿ ೫ ಶ್ರೀ ಕೃಷ್ಣ ಆಲನಹಳ್ಳಿ ೬ ನಾ ಕಂಡ ಯಮುನಾಚಾರ್ಯರು ೭ ಆದರ್ಶ ಸಮಾಜ ಸುಧಾರಕರು ೮ ಕನ್ನಡದ 'ಮಹಾಬಲ' ೯ ದಲಿತ ಭಾರತದ ನಚಿಕೇತ ಜಗಜೀವನರಾಂ ೧೦ ವಾತ್ಸಲ್ಯ ರಕ್ಷೆ ೧೧ ಸ್ವಚ್ಛ ರಾಜಕಾರಣಿ ಕಡಿದಾಳ ಮಂಜಪ್ಪನವರು ೧೨ ವಿಜ್ಞಾನ ಮಾನವನ ಕನಸು - ನನಸು ೧೩ ಮಾದರಿ ಮೈಸೂರಿನ ಮಹಾಶಿಲ್ಪಿ ೧೪ ನಾಯಕರೆಂದರೆ ಬಂಗಾರಪ್ಪ

೫.೧೫ ನಿತ್ಯಸಚಿವ 33

ಮೊ. ಮು. 1986 ಪು. VIII + 224 + 16 ಚಿತ್ರಗಳು. ದೇಜಗೌ ಟ್ರಸ್ಟ್ ಮೈಸೂರು.

ಶ್ರೀ ಕೆ. ವಿ. ಶಂಕರಗೌಡ ಅವರ ಜೀವನ ಚರಿತ್ರೆಯನ್ನು ಎಪ್ಪತ್ತೆರಡನೆಯ ಜನ್ಮೋತ್ಸವ ಸಂದರ್ಭದಲ್ಲಿ ಅರ್ಪಿಸಲಾಯಿತು.

೫.೧೬ ಪಂಡಿತ ಮೋತಿಲಾಲ್ ನೆಹ್ರು 34

ಮೊ. ಮು. 1961 ಪು. 6 + 176 ಜನಪದ ಸಾಹಿತ್ಯ ಅಕಾಡೆಮಿ ಮೈಸೂರು ಎ. ಮು. 1963 ಮೂ. ಮು. 1965 ನಾ. ಮು. 1988

ಶತಮಾನೋತ್ಸವ ಸಮಯಕ್ಕೆ ಸರಿಯಾಗಿ ಪಂಡಿತ ಮೋತಿಲಾಲ್ ಅವರ ಜೀವನ ಚರಿತ್ರೆಯನ್ನು ಅವರ ವ್ಯಕ್ತಿತ್ವ ಸ್ಫುಟವಾಗಿ ಮೈದೋರುವಂತೆ ಚಿತ್ರಿಸಿರುವ ಗ್ರಂಥ.

೫.೧೭ ಬಸವ ಬೆಳಕು 35

ಮೊ. ಮು. 1984 ಎ. ಮು. 1985 ಪು. VII + 82 ಬಸವ ತತ್ತ್ವ ಪ್ರಚಾರ ಟ್ರಸ್ಟ್ ಬೆಂಗಳೂರು.

ಬಸವಣ್ಣನವರ ಜೀವನ ಸಂದೇಶಗಳನ್ನು ಕುರಿತದ್ದು

೫.೧೮ ಬೂಕರ್ ಟಿ ವಾಷಿಂಗ್‌ಟನ್ 36

ಮೊ. ಮು. 1981 ಪು. VIII + 64 ಐಬಿಹೆಚ್ ಪ್ರಕಾಶನ. ಬೆಂಗಳೂರು

ಅಮೆರಿಕಾದ ನೀಗ್ರೋನಾಯಕನ ಜೀವನಚರಿತ್ರೆ. ಆತನು ತನ್ನ ಜನರನ್ನು ದಾಸ್ಯ. ಸಂಕೋಲೆಯಿಂದ ಮುಕ್ತಗೊಳಿಸಲು ನಡೆಸಿದ ಹೋರಾಟದ ಚಿತ್ರವಿದೆ.

೫.೧೯ ಮಕ್ಕಳ ಏಕಲವ್ಯ 37

ಮೊ. ಮು. 1984 ಪು. 42 ನರೇಶ್ ಅಂಡ್ ಕಂಪನಿ. ಬೆಂಗಳೂರು

ಕುವೆಂಪು ಅವರ "ಬೆರಳ್‌ಗೆ ಕೊರಳ್" ಎಂಬ ನಾಟಕವನ್ನು ಮಕ್ಕಳಿಗಾಗಿ ಸುಲಭ ಮತ್ತು ಸರಳ ರೀತಿಯಲ್ಲಿ ಬರೆದ ಗ್ರಂಥ.

೫.೨೦ ಮಕ್ಕಳ ಶೂದ್ರ ತಪಸ್ವಿ 38

ಮೊ. ಮು. 1985 ಪು. 4 + 32 ಗುರುದೇವ ಉದ್ಯಮ ಕೇಂದ್ರ. ಮೈಸೂರು

ಎ. ಮು. 1991 ಪು. 4 + 32 ಗುರುದೇವ ಉದ್ಯಮ ಕೇಂದ್ರ. ಮೈಸೂರು

ಶ್ರೀಕುವೆಂಪು ಅವರ ಶೂದ್ರ ತಪಸ್ವಿ ನಾಟಕದ ಸರಳಾನುವಾದ

೫.೨೧ ಮಹರ್ಷಿ ಟಾಲ್‌ಸ್ಟಾಯ್ 39

ಮೊ. ಮು. 1976 ಎ.ಮು 1979 ಮೂ. ಮು. 1984 ನಾ. ಮು. 1991 ಪು. 40 ಗುರುದೇವ ಉದ್ಯಮ ಕೇಂದ್ರ. ಮೈಸೂರು

ಮಹರ್ಷಿ ಟಾಲ್‌ಸ್ಟಾಯ್ ಅವರ ಸಂಕ್ಷಿಪ್ತ ಜೀವನ ಚರಿತ್ರೆ. ಎಳೆಯ ಮಕ್ಕಳಿಗೆ ಸ್ಫೂರ್ತಿಯನ್ನು ಮೂಡಿಸುವಂಥ ಗ್ರಂಥ

೫.೨೨ ಮೇಡಂ ಕ್ಯೂರಿ (ಜೀವನ ಪರಿಚಯ) 40

ಮೊ. ಮು. 1960 ಪು. 50 ನರೇಶ್ ಅಂಡ್ ಕಂಪನಿ. ಬೆಂಗಳೂರು

ಎ. ಮು. 1977 ಪು. 40 ಹಂಸಧ್ವನಿ ಪ್ರಕಾಶನ. ಬೆಂಗಳೂರು

ಕ್ಯಾನ್ಸರ್ ರೋಗಕ್ಕೆ ದಿವ್ಯೌಷಧವಾದ ರೇಡಿಯಂ ಕಂಡು ಹಿಡಿದ ಮೇಡಂ ಕ್ಯೂರಿಯ ಸಂಕ್ಷಿಪ್ತ ಜೀವನ ಚಿತ್ರ.

೫.೨೩ ಮೋತಿಲಾಲ್ ನೆಹರೂ 41

ಮೊ. ಮು. ?. ಪು.32 ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಎ. ಮು. 1954 ಪು. 40 ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಮೂ. ಮು. 1988 ಪು. 40 ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು

ಮೋತಿಲಾಲ್ ನೆಹರೂ ಅವರ ಸಂಕ್ಷಿಪ್ತ ಜೀವನ ಚಿತ್ರವನ್ನು ಮಕ್ಕಳಿಗಾಗಿ ಬರೆದದ್ದು.

೫.೨೪ ಯಾತ್ರಿಕರು (ಜೀವನ ಚಿತ್ರ) 42

ಮೊ. ಮು. 1982 ಪು. 14 + 160 ಪುರೋಗಾಮಿ. ಬೆಂಗಳೂರು

ಈ ಸಂಕಲನದಲ್ಲಿ ಹದಿಮೂರು ವ್ಯಕ್ತಿಚಿತ್ರ ಮತ್ತು ಮಿನಿ ಜೀವನ ಚಿತ್ರಗಳಿವೆ.

೧ ಕನ್ನಡದ ಶ್ರೀರಕ್ಷೆ ೨ ಕನ್ನಡದ ಪ್ರಥಮ ಪ್ರಾಧ್ಯಾಪಕರು ೩ ಗುರುವಂದನೆ ೪ ಯದುಗಿರಿಯ ಸಂತ ಕವಿ 5 ಕನ್ನಡದ ರತ್ನ ೬ ಸಜ್ಜನರ ಸಂಗವದು ೭ ಸ್ನೇಹಮಯಿ ಹಿರೇಮಠರು ೮ ರಸಯೋಗಿ ೯ ಕಲಾಜೀವಿ ೧೦ ಸಾಹಿತ್ಯ ಪೋಷಕ ೧೧ ಜಾನಪದ ಗಾರುಡಿಗ ೧೨ ಸಾರಸ್ವತ ತಪಸ್ವಿ ೧೩ ಆದರ್ಶಗುರು.

೫.೨೫ ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ ಡಾ. ಎಂ. ಎಚ್. ಮರಿಗೌಡರು 43

ಮೊ. ಮು. 1993 ಪು. XII + 152 + 9 ಚಿತ್ರಗಳು. ಡಾ||ಎಂ. ಎಚ್ ಮರಿಗೌಡ ಅಭಿನಂದನ ಸಮಿತಿ, ಬೆಂಗಳೂರು.

ಡಾ|| ಎಂ. ಎಚ್. ಮರಿಗೌಡರ ಜೀವನಚರಿತ್ರೆ

೫.೨೬ ಲೋಕದ ಬೆಳಕು 44

ಮೊ. ಮು. 1983 ಪು. VI + 172 ಗಾಂಧೀಭವನ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಮಹಾತ್ಮಾ ಗಾಂಧಿ ಅವರನ್ನು ಕುರಿತ ಗ್ರಂಥ

೫.೨೭ ಲೋಕನಾಯಕ 45

ಮೊ. ಮು. 1980 ಪು. 126 ಶಿವರಂಜನಿ ಪಬ್ಲಿಕೇಷನ್, ಮೈಸೂರು

ಜಯಪ್ರಕಾಶ್‌ನಾರಾಯಣರ ಜೀವನ ಚರಿತ್ರೆ

೫.೨೮ ವ್ಯಾಕರಣದ ಮಲ್ಲಪ್ಪನವರು 46

ಮೊ. ಮು. 1980 ಪು. 4 + 82 ವೀರಶೈವ ಅಧ್ಯಯನಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ವ್ಯಾಕರಣದ ಮಲ್ಲಪ್ಪ ಅವರು ಮೈಸೂರು ಪ್ರದೇಶದ ಕನ್ನಡ ಪ್ರಾಧ್ಯಾಪಕರು. ಶ್ರೀಯುತರು ಬಸವಪ್ಪ ಶಾಸ್ತ್ರಿ, ಬಿ. ಎಲ್. ರೈಸ್ ಮೊದಲಾದ ಕವಿಗಳ, ಸಂಶೋಧಕರ ಪರಿವಾರದಲ್ಲಿ ಪಾಂಡಿತ್ಯದ ಮದಗಜವೆನಿಸಿದವರು. ಅನೇಕ ಗ್ರಂಥಗಳ ಜೊತೆಗೆ 'ಶಬ್ದಾದರ್ಶ' ಹೆಸರಿನ ಸುಪ್ರಸಿದ್ಧ ವ್ಯಾಕರಣದ ರಚನೆಯಿಂದಾಗಿ 'ವ್ಯಾಕರಣದ ಮಲ್ಲಪ್ಪ' ನವರೆಂದೇ ಹೆಸರಾದ ಪುರುಷರನ್ನು ಕುರಿತ ಗ್ರಂಥವಿದು

೫.೨೯ ವಿಚಾರವಾದಿ ಪೆರಿಯಾರ್ 47

ಮೊ.ಮು. 1980 ಪು. 166 ಶಿವರಂಜನಿ ಪಬ್ಲಿಕೇಷನ್, ಮೈಸೂರು.

ವೈಚಾರಿಕ ಆಂದೋಳನ ಭಾರತಕ್ಕೆ ಹೊಸದೇನೂ ಅಲ್ಲ. ಪೆರಿಯಾರ್ ಅವರ ಸಾಹಸ ಮಯ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ದಲಿತೋದ್ಧಾರಕ್ಕಾಗಿ ದಕ್ಷಿಣ ಭಾರತದ ಸಂರಕ್ಷಣೆಗಾಗಿ ಬದುಕನ್ನೇ ಮೀಸಲಿಟ್ಟ ವಿಚಾರವಂತನ ಸಮಗ್ರಜೀವನ ಚಿತ್ರ.

೫.೩೦ ವಿವೇಕಾನಂದರು (ಜೀವನ ಚಿತ್ರ) 48

ಮೊ. ಮು. 1978 ಪು. 48 ಭಾರತ - ಭಾರತಿ ಪುಸ್ತಕ ಸಂಪದ, ಬೆಂಗಳೂರು

ಮಕ್ಕಳಿಗಾಗಿ ಬರೆದ ಸ್ವಾಮಿ ವಿವೇಕಾನಂದರ ಸಂಕ್ಷಿಪ್ತ ಜೀವನ ಚರಿತ್ರೆ. ಇಂಗ್ಲೀಷಿಗೂ ಭಾಷಾಂತರವಾಗಿದೆ.

೫.೩೧ ಸಮಾಜವಾದಿ ಲೋಹಿಯಾ (ಜೀವನ ಚರಿತ್ರೆ) 49

ಮೊ. ಮು. 1989 ಪು. VIII + 110 ಶ್ರೀಕುವೆಂಪು ವಿದ್ಯಾ ಪರಿಷತ್ತು ಮೈಸೂರು.

ಲೋಹಿಯಾ ಅವರ ಜೀವನ ಹಾಗೂ ಅವರ ಸಮಾಜವಾದ ಸಿದ್ಧಾಂತ.

೫.೩೨ ಸಾಹಿತಿಗಳ ಸಂಗದಲ್ಲಿ (ಜೀವನ ಚಿತ್ರ) 50

ಮೊ. ಮು.1964 ಪು. VI + 205 ಎ. ಮು. 1972 ಪು. 8 + [illegible]7 ಉಷಾ ಸಾಹಿತ್ಯಮಾಲೆ, ಮೈಸೂರು.

ಹತ್ತು ಲೇಖಕರ ಜೀವನ - ಸಾಹಿತ್ಯ ಪರಿಚಯವನ್ನು ಮಾಡಿಕೊಡುವ ಗ್ರಂಥ. ಸಾಹಿತ್ಯ ಸಂಶೋಧನೆ ಮತ್ತು ಸಾಹಿತ್ಯ ರಚನೆಗೆ ಸಾಹಿತಿಗಳ ಜೀವನ ವಿಚಾರಗಳು ಅತ್ಯ[illegible]ಲ್ಯವಾದ ಸಾಮಗ್ರಿಯನ್ನೊದಗಿಸುತ್ತವೆ ಸಾಹಿತಿಗಳ ಜೀವನ ಚರಿತ್ರೆಯ ಆವಶ್ಯಕತೆ ಇದೆ ಎಂಬುದಾಗಿ ತಿಳಿದು ಪ್ರೇರೇಪಿಸಿದ ಸಾಹಿತಿಗಳ ಜೀವನ ಚರಿತ್ರೆ.

ಇದರಲ್ಲಿ 20 ಸಾಹಿತಿಗಳ ಸಂಕ್ಷಿಪ್ತ ಜೀವನ ಚಿತ್ರಗಳಿವೆ

೧ ಬಿಂಡಿಗನವಲೆ ವೆಂಕಟಾಚಾರ್ಯರ ಕೃತಿಗಳು ೨ ಪ್ರೊ. ಹಿರಿಯಣ್ಣನವರು ೩ ಎಂ. ಎಸ್. ಪುಟ್ಟಣ್ಣನವರ ಕನ್ನಡಸೇವೆ ೪ ಕಣ್ಮರೆಯಾದ ಗೋವಿಂದ ಪೈ ಅವರು ೫ ಎಂ. ಆರ್. ಶ್ರೀ ಅವರು ೬ ಡಿ. ವಿ. ಜಿ. ಅವರು ಮತ್ತು ಅವರ ಕೃತಿಗಳು ೭ ಶ್ರೀನಿವಾಸ ಅವರ ಕೃತಿಗಳು ೮ ಋಷಿಕವಿ ಕುವೆಂಪು ೯ ನಾ ಕಂಡ ಗುರುವರ್ಯ ತೀನಂಶ್ರೀ ಅವರು ೧೦ ಸ್ನೇಹನಿಧಿ ಕಾವ್ಯಾನಂದರ ಕಾವ್ಯಯೋಗ ೧೧ ಶ್ರೀಆಚಾರ್ಯರೊಡನೆ ೧೨ ಪ್ರೊ. ಮರಿಯಪ್ಪಭಟ್ಟರು ೧೩ ಕನ್ನಡದ ಕೆಚ್ಚು - ನೆಚ್ಚು ಕಟ್ಟೀಮನಿ ೧೪ ಗೋಕಾಕರು ನಾ ಕಂಡಂತೆ ೧೫ ಕೀರ್ತನಕೇಸರಿ ಶಿವಮೂರ್ತಿ ಶಾಸ್ತ್ರಿಗಳು ೧೬ ವಿಜ್ಞಾನ ಸಾಹಿತ್ಯ ನಿರ್ಮಾಪಕ ೧೭ ಕನ್ನಡದ ರಕ್ಷಾಮಣಿ ಅ. ನ. ಕೃ. ೧೮ ವಿದ್ಯಾಸಾಗರ ಕಾರಂತರು ೧೯ ಪ್ರೊ. ಎಸ್. ವಿ. ರಂಗಣ್ಣ ಕನ್ನಡ ವಿಮರ್ಶಕರ ಹೆಗ್ಗಡೆ ೨೦ ಕನ್ನಡದ ರತ್ನ

೬ ಕುವೆಂಪು ಸಾಹಿತ್ಯ

೬.೧ ಕುವೆಂಪು ಅವರ ಶಿಕ್ಷಣ ತತ್ವ ವಿಚಾರಗಳು 51

ಮೊ. ಮು.1977 ಪು. 12 + 140 ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಶ್ರೀಕುವೆಂಪು ಸಾಹಿತ್ಯದಲ್ಲಿ ಕಂಡು ಬರುವ ಶೈಕ್ಷಣಿಕ ವಿಚಾರಗಳ ವಿವರಣೆ. ೧ ಪ್ರವೇಶ ೨ ಕವಿಗುರು ೩ ಶೈಕ್ಷಣಿಕ ಸಮಸ್ಯೆಗಳು ೪ ವೈಚಾರಿಕ ಶಿಕ್ಷಣ ೫ ವಿದ್ಯಾರ್ಥಿಗಳಿಗೆ ಕರೆ ೬ ಉಪಸಂಹಾರ

೭.೨ ಕುವೆಂಪು ದರ್ಶನ ಮತ್ತು ಸಂದೇಶ 52

ಮೊ. ಮು. 1975 ಪು. vii + 144 ಸಹ್ಯಾದ್ರಿ ಪ್ರಕಾಶನ, ಮೈಸೂರು

ಕುವೆಂಪು ಸಾಹಿತ್ಯ ಕುರಿತ ಹಲವು ಪ್ರಬಂಧಗಳ ಸಂಕಲನ.

೧ ಗುರು ೨ ನಾಡು ನುಡಿ ಪ್ರೇಮ ೩ ಯಶಸ್ಸು ೪ ಯುದ್ಧದ ಫಲಾಫಲಗಳು ೫ ಸಾಮಾನ್ಯತಾ ಶ್ರೀ ೬ ಸಂಸಾರ ಸಂಹಿತೆ ೭ ನಿಸರ್ಗಪ್ರೇಮ ೮ ಆಧ್ಯಾತ್ಮ ಸಾಧನೆ ೯ ಪ್ರಾರ್ಥನೆ ಹಾಗೂ ತಪಸ್ಸು ೧೦ ವಿದ್ಯೆ ೧೧ ಧರ್ಮ ೧೨ ದೇವರು ೧೩ ವಿಧಿ-ಕರ್ಮ ೧೪ ಆಶಾವಾದ ೧೫ ಲೋಕವ್ಯವಹಾರ ೧೬ ಜಾತಿಮತ ೧೭ ವೈಜ್ಞಾನಿಕ ದೃಷ್ಟಿ, ವಿಚಾರ ಕ್ರಾಂತಿ ೧೮ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದ ಸಂದೇಶ ೧೯ ಉಪಸಂಹಾರ

೭.೩ ಕುವೆಂಪು ವಿಶ್ವಮಾನವ ಸಂದೇಶ 53

ಮೊ. ಮು. 1993 ಪು. iv + 84 ಸಹ್ಯಾದ್ರಿ ಪ್ರಕಾಶನ, ಮೈಸೂರು

8 ಅಧ್ಯಾಯಗಳಿವೆ.

೧ ದ್ವಂದ್ವ ೨ ಪುರೋಹಿತಶಾಹಿ ೩ ಸೆಕ್ಯೂಲರ್ ಸೋಲ್ ೪ ಪಂಚಮಂತ್ರ. ೫ ಸಪ್ತಸೂತ್ರಗಳು ೬ ವಿಶ್ವ ಮಾನವಗೀತೆ ೭ ಶ್ರೀಯವರ ಮಹಾಕಾವ್ಯ ಮತ್ತು ವಿಶ್ವಮಾನವ ಸಂದೇಶ ೮ ವಿಶ್ವಮಾನವ ಪ್ರಜ್ಞೆಯ ಉದಯ.

೭.೪ ಕುವೆಂಪು ಶೈಲಿ 54

ಮೊ. ಮು. 1991 ಪು. ಡೆಮಿ vi + 208 ಸಹ್ಯಾದ್ರಿ ಪ್ರಕಾಶನ, ಮೈಸೂರು

1 ಪ್ರವೇಶ 2 ಗದ್ಯಶೈಲಿ 3 ನಾಟಕ ಶೈಲಿ 4 ಪದ್ಯಶೈಲಿ 5 ಮಹಾಕಾವ್ಯಶೈಲಿ 6 ಉಪಸಂಹಾರ

೭.೫ ಕುವೆಂಪು ಸಾಹಿತ್ಯ- ಕೆಲವು ಅಧ್ಯಯನಗಳು -1 55

ಮೊ. ಮು. 1971 ಪು 254 ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೧ ಮಹಾಕವಿ ಕುವೆಂಪು ೨ ರಾಷ್ಟ್ರಕವಿ ಕುವೆಂಪು ೩ ಶ್ರೀಕವಿ ಕೃತುದರ್ಶನಂ ೪ ಸಾಮಾನ್ಯತಾ ಶ್ರೀ ೫ ವಜ್ರಿರಂಹರ್ ೬ ವಾಲಿ ೭ ಮಂಥರೆ ೮ ಕೈಕೆ ೯ ಶಬರಿ ೧೦ ಊರ್ಮಿಳೆ ೧೧ ಶೈಲಿ ೧೨ ಜಗದ್ಭವ್ಯ ಮೇರುಕೃತಿ ೧೩ ಜನಪ್ರಿಯ ವಾಲ್ಮೀಕಿ ರಾಮಾಯಣ ೧೪ ಶೂದ್ರ ತಪಸ್ವಿ ೧೫ ಬೆರಳಿಗೆ ಕೊರಳ್ ೧೬ ಮಲೆಗಳಲ್ಲಿ ಮದುಮಗಳು ೧೭ ಕೋಗಿಲೆ ಮತ್ತು ಸೋವಿಯತ್ ರಷ್ಯಾ ೧೮ ಕುವೆಂಪು ಸಾಹಿತ್ಯದಲ್ಲಿ ರಾಜಕೀಯ ವಿಚಾರಧಾರೆ ೧೯ ಕುವೆಂಪು ಅವರ ಕನ್ನಡ ದೀಕ್ಷೆ ೨೦ ಕುವೆಂಪು ಸಾಹಿತ್ಯದಲ್ಲಿ ನಿಸರ್ಗ.

ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಮೊದಲನೆಯದು ವ್ಯಕ್ತಿತ್ವವನ್ನು ಕುರಿತದ್ದು. ಎರಡನೆಯದು ಶ್ರೀರಾಮಾಯಣ ದರ್ಶನಂ ಕುರಿತದ್ದು. ಮೂರನೆಯದು ಸಂಕೀರ್ಣ.

೭.೬ ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು -2 56

ಮೊ. ಮು. 1982 ಪು. 4 + 256 ಸಹ್ಯಾದ್ರಿ ಪ್ರಕಾಶನ, ಮೈಸೂರು

ಶ್ರೀಕುವೆಂಪು ಸಾಹಿತ್ಯವನ್ನು ಕುರಿತ ಕೆಲವು ವಿಮರ್ಶಾತ್ಮಕ ಲೇಖನಗಳ ಸಂಗ್ರಹ

ಶ್ರೀಕುವೆಂಪು ವ್ಯಕ್ತಿ, ಸಾಧನೆ, ಸಿದ್ಧಿ ೨ ವಿಮರ್ಶೆಯ ಕೆಲವು ಸೂತ್ರಗಳು ೩ ಶ್ರೀರಾಮಾಯಣದರ್ಶನದಲ್ಲಿ ಮಂಡೋದರಿ ೪ ಶ್ರೀರಾಮಾಯಣದರ್ಶನಂ ಮಹಾಕಾವ್ಯ ೫ ನೆನಪಿನ ದೋಣಿಯಲ್ಲಿ ಯಾತ್ರೆ ೬ ನೆನಪಿನ ದೋಣಿಯಲ್ಲಿ ಯಾತ್ರೆಯನ್ನು ಕುರಿತು. ೭ ನೆನಪಿನ ದೋಣಿಯಲ್ಲಿ ಪರಿಚಯ ೮ ಸಮುದ್ರ ಲಂಘನ- ಒಂದು ಖಂಡ ಕಾವ್ಯ ೯ ಮುಕ್ತಿರಾಹು ೧೦ ಅದ್ಭುತ ರಾಮಾಯಣ ಅಥವಾ ವಾಲ್ಮೀಕಿಗೊಂದು ಎಚ್ಚರಿಕೆ ೧೧ ಕುವೆಂಪು ಶಿಶು ಸಾಹಿತ್ಯ ೧೨ ಶ್ರೀ ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ೧೩ ಕುವೆಂಪು ಛಂದಸ್ಸಿನ ವಿಕಾಸ ೧೪ ಟೀಕೆಗಳಿಗೆ ಉತ್ತರ

೭.೭ ಕುವೆಂಪು ಸಾಹಿತ್ಯ- ಕೆಲವು ಅಧ್ಯಯನಗಳು-3 57

ಮೊ. ಮು. 1989 ಪು. 4 + 184 ಸಹ್ಯಾದ್ರಿ ಪ್ರಕಾಶನ, ಮೈಸೂರು

೧ ಕುವೆಂಪು ನಿರ್ಮಿತ ರಾಮಕೃಷ್ಣ - ವಿವೇಕಾನಂದ ಸಾಹಿತ್ಯ ೨ ಕುವೆಂಪು ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ೩ ದಾಂಪತ್ಯದರ್ಶನ ೪ ದಾಂಪತ್ಯ ದರ್ಶನದ ಪರಮಾಗಮ ೫ ಕುವೆಂಪು ದೃಷ್ಟಿಯಲ್ಲಿ ನಾರಿ ೬ ಕುವೆಂಪು

ಕಾದಂಬರಿ ನಾಟಕಗಳಲ್ಲಿ ವಾತ್ಸಲ್ಯಭಾವ ೭ ಕುವೆಂಪು ಕಥಾಸಾಹಿತ್ಯ ೮ ಕುವೆಂಪು ಅವರ ಮೊದಲ ಕಥೆಗಳು ೯ ಕುವೆಂಪು ಅವರ ಮಹಾದರ್ಶನ ಮತ್ತು ಪ್ರಾಯಶ್ಚಿತ್ತ ೧೦ ಕುವೆಂಪು ಸಾಹಿತ್ಯ ವಿಮರ್ಶೆಯ ವಿಮರ್ಶೆ ೧೧ ಸುಜನಾ ಅವರ ಪರಂಪರೆ ಮತ್ತು ಕುವೆಂಪು ೧೨ ಭಾರತೀಯ ಕಾವ್ಯ ವಿಮಾಂಸೆಗೆ ಶ್ರೀ ಕುವೆಂಪು ಅವರ ಕೊಡುಗೆ ೧೩ ಪಂಪ ಪ್ರಶಸ್ತಿಯ ಕುವೆಂಪು ೧೪ ಕುವೆಂಪು ಸಾಹಿತ್ಯದಲ್ಲಿ ಉಪಮಾ ವೈಭವ

೬.೮ ಕುವೆಂಪು ಸಾಹಿತ್ಯದಲ್ಲಿ ಮಕ್ಕಳು **58**

ಮೊ. ಮು. 1980 ಪು IV + 48 ಚಿಂತನ ಪ್ರಕಾಶನ, ಬೆಂಗಳೂರು

ಕುವೆಂಪು ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಮಕ್ಕಳ ಪಾತ್ರ ಚಿತ್ರಣವನ್ನು ವಿವಿಧ ದೃಷ್ಟಿ ಕೋನಗಳಿಂದ ಅವಲೋಕಿಸಿದ್ದಾರೆ.

೬.೯ ಕುವೆಂಪು ಸಾಹಿತ್ಯದಲ್ಲಿ ರೈತ **59**

ಮೊ. ಮು. 1987 ಪು. 72 ಪ್ರತಿಧ್ವನಿ ಪ್ರಕಾಶನ, ಮೈಸೂರು

ಶ್ರೀಕುವೆಂಪು ಅವರು ರೈತರ ಬಗ್ಗೆ ಹಲವು ಕವಿತೆಗಳಲ್ಲಿ, ಕತೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಈ ಕೆಳಗಿನ ಲೇಖನಗಳಲ್ಲಿ ತಿಳಿಸಿದ್ದಾರೆ.

೧ ಕುವೆಂಪು ಸಾಹಿತ್ಯದಲ್ಲಿ ರೈತ ೨ ನೇಗಿಲ ಯೋಗಿ ೩ ಕುಳದ ಕಲಿಗೆ ೪ ಹಾಡು ನೇಗಿಲಯೋಗಿ ೫ ಸುಗ್ಗಿಹಾಡು ೬ ಹಾಳೂರು ೭ ರೈತನ ದೃಷ್ಟಿ ೮ ಗೊಬ್ಬರ ೯ ಧನ್ವಂತರಿಯ ಚಿಕಿತ್ಸೆ ೧೦ ಇಂದಿನ ದೇವರು

೬.೧೦ ರಾಷ್ಟ್ರಕವಿ ಕುವೆಂಪು **60**

ಮೊ. ಮು. 1968 ಪು.312 + 8 ಸುರುಚಿ ಪ್ರಕಾಶನ ಮೈಸೂರು. ಎ. ಮು. 1985 ಕರ್ನಾಟಕ ಸರ್ಕಾರ ಬೆಂಗಳೂರು ಮೂ. ಮು. 1989. ಪು viii + 369, ದೇಜಗೌ ಟ್ರಸ್ಟ್, ಮೈಸೂರು.

೬.೧೧ ರಾಷ್ಟ್ರಕವಿ ಭಾಷಣಗಳು **61**

ಮೊ. ಮು. 1976 ಪು. 8 + 168 ಸಹ್ಯಾದ್ರಿ ಪ್ರಕಾಶನ, ಮೈಸೂರು

ಪೂಜ್ಯ ಶ್ರೀಕುವೆಂಪು ಅವರು1952 ರಿಂದ 1960 ರವರೆಗೆ ಅನೇಕ ಸಂದರ್ಭ ಸಮಾರಂಭಗಳಲ್ಲಿ ಮಾಡಿದ 25 ಭಾಷಣಗಳಿವೆ

೧ ಸಹೃದಯ ವಿಭೂತಿಗೆ ನಮೋ ೨ ಪತ್ರಿಕಾ ಮನೋಧರ್ಮ ೩ ವಿದ್ಯಾರ್ಥಿಗಳಿಗೆ ಮಂತ್ರದೀಕ್ಷೆ ೪ ವಯಸ್ಕರಿಗಾಗಿ ಸಾಹಿತ್ಯರಚನೆ ೫ ಕಾವ್ಯಸಾಧನೆ ೬ ಭಾಷಾ ಸಮಸ್ಯೆ ೭ ಕನ್ನಡ ಮಾಧ್ಯಮ ಪ್ರಸಾರ ೮ ಭಾಷಾ ವೈವಿಧ್ಯ ಲೋಕಕ್ಕೆ ಅಡಚಣೆಯಲ್ಲ ೯ ಭರತ ಖಂಡದ ಐಕ್ಯತೆ ನಮ್ಮೆಲ್ಲರ ಉಸಿರಾಗಬೇಕು ೧೦ ಭಾರತೀಯ ಮನೋವಿಜ್ಞಾನದ ಮಹತ್ವ ೧೧ ವಿದ್ಯಾರ್ಥಿಜೀವನದಲ್ಲಿ ಸಾಹಿತ್ಯದ ಅವಶ್ಯಕತೆ ೧೨ ಕರ್ನಾಟಕದ ಕಲ್ಯಾಣ ೧೩ ಮನಃಸ್ವಾಸ್ಥ್ಯವೇ ದೇಹಾರೋಗ್ಯಕ್ಕೆ ಮೂಲ ೧೪ ವಿವಿಧ ವೈದ್ಯ ಪದ್ಧತಿಗಳ ಸಮನ್ವಯ ೧೫ ಸೇವೆಯೇ ಪದವಿಗಳ ಗುರಿಯಾಗಲಿ ೧೬ ಕನಸು ನನಸಾಯಿತೆ ? ೧೭ ವಿದ್ಯಾರ್ಥಿ ಸಾಮರ್ಥ್ಯಕ್ಕೆ ಕುಂದಿಲ್ಲ ೧೮ ಶಿಕ್ಷಣ ಕ್ಷೇತ್ರದಲ್ಲಿ ಮನೋವಿಜ್ಞಾನದ ಪಾತ್ರ ೧೯ ಶಿಕ್ಷಣ ರಾಷ್ಟ್ರ ಜೀವನಕ್ಕೆ ನೆರವಾಗಬೇಕು ೨೦ ಪ್ರೌಢ ಶಿಕ್ಷಣದಲ್ಲಿ ಸಮಾಜ ವಿಜ್ಞಾನ ೨೧ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದ ಅಗತ್ಯತೆ ೨೨ ಶಾಂತಿಗಾಗಿ ಅಣು ಶಕ್ತಿ ೨೩ ವ್ಯಷ್ಟಿ ಕ್ಷೇಮ ಸಮಷ್ಟಿ ಕ್ಷೇಮಕ್ಕೆ ಅರ್ಪಿತವಾಗಲಿ ೨೪ ವಿದ್ಯಾರ್ಥಿಗಳಿಗೇಕೆ ಸಾಹಿತ್ಯ ೨೫ ಬೇಸಾಯದ ಮಹತ್ವ

೬.೧೨ ರಾಷ್ಟ್ರಕವಿ ಸಂದರ್ಶನ **62**

ಮೊ. ಮ. 1984 ಪು xvi + 96 ಸಹ್ಯಾದ್ರಿ ಪ್ರಕಾಶನ, ಮೈಸೂರು

ಎ. ಮು. 1988 ಪು. II + 180 (ವಿಸ್ತೃತ)

೬.೧೩ ವಿಚಾರ ಕ್ರಾಂತಿಗೆ ಕುವೆಂಪು ಕರೆ 63

ಮೊ. ಮು. 1993 ಪು. 46 + 10 ಭಾರತ ಜನಜ್ಞಾನ ವಿಜ್ಞಾನ ಜಾಥ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು

೬.೧೪ ಶ್ರೀ ಕುವೆಂಪು ಸೂಕ್ತಿಮಾಲೆ (ಶಶಿಕಲಾ ಅವರೊಡನೆ) 64

ಮೊ. ಮು. 1979 ಪು. 6 + 93 ಸಹ್ಯಾದ್ರಿ ಪ್ರಕಾಶನ, ಮೈಸೂರು

ಎ. ಮು. 1988 ಪು. VIII + 136 ಸಹ್ಯಾದ್ರಿ ಪ್ರಕಾಶನ, ಮೈಸೂರು.

ಶ್ರೀಕುವೆಂಪು ಅವರ ಕೃತಿಗಳಿಂದ ಆಯ್ದ ಸೂಕ್ತಿಗಳನ್ನು ಸಂಗ್ರಹಿಸಿರುವ ಗ್ರಂಥ.

೬.೧೫ ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ 65

ಮೊ. ಮು. 1954 ಎ. ಮು. 1969 ಮೂ. ಮು. 1972 ಸುಲಭ ಬೆಲೆಯ ಮೊ. ಆವೃತ್ತಿ 1972 ಪು. 334 ಸುರುಚಿ ಪ್ರಕಾಶನ, ಮೈಸೂರು. ನಾ.ಮು. 1991 ಪು. vi + 356 ಸಹ್ಯಾದ್ರಿ ಪ್ರಕಾಶನ ಮೈಸೂರು (ಮುನ್ನುಡಿ ಟಿಪ್ಪಣಿಗಳನ್ನು ಬಿಡಲಾಗಿದೆ)

ರಾಷ್ಟ್ರಕವಿ ಶ್ರೀಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯದ ಗದ್ಯಾನುವಾದ.

೭ ಸಂಶೋಧನೆ - ವಿಮರ್ಶೆ

೭.೧ ಇಣುಕು ನೋಟ 66

ಮೊ.ಮು. 1984 ಪು + 128 ದೇಜಗೌ ಟ್ರಸ್ಟ್ ಮೈಸೂರು.

ಅನೇಕ ಮಿತ್ರರ ಗ್ರಂಥಗಳಿಗೆ ಆಗಾಗ್ಗೆ ಬರೆದ ವಿಮರ್ಶಾತ್ಮಕ ಮುನ್ನುಡಿಗಳ ಸಂಕಲನ.

೧ ಉಪಭಾಷಾ ನಿಘಂಟುಗಳ ಆವಶ್ಯಕತೆ. ೨. ಪಾರಿಭಾಷಿಕ ಪದಕೋಶಗಳ ಅಗತ್ಯತೆ ೩. ಸಸ್ಯರಾಧಕರ್ಸೈತ ೪ ಕರಿಬಂಟನ ಕಥೆ - ಒಂದು ಟಿಪ್ಪಣಿ ೫ ಸಕ್ಕರೆಯ ಸೀಮೆ ೬ ಚಿಪ್ಪಿನೊಳಗಿನ ಮುತ್ತು ೭ ಕಾಣಿಕೆ ನುಡಿ ೮ ಕನ್ನಡದಲ್ಲಿ ಭಾಷಾವಿಜ್ಞಾನ ೯ ಗಾಂಧಿ ಅನುಯಾಯಿ ೧೦ ಕಾದಂಬರಿಕಾರಿ ೧೧ ಭೀಷ್ಮ ಶಕ್ತಿಯ ಸನ್ಯಾಸಿ ೧೨ ಭಾರತ ಮಹಾಪುರುಷರು ೧೩ ಹೊ. ಶ್ರೀನಿವಾಸಯ್ಯನವರ ವಿದೇಶ ಪ್ರವಾಸ ೧೪ ವಿಮರ್ಶಾಸುಧೆ ೧೫ ಕನ್ನಡದ ಕಣ್ಣು ಉತ್ತರದ ಮಣ್ಣು ೧೬ ಸಾಕ್ಷರತೆಯ ಸಾಕ್ಷಾತ್ಕಾರ ೧೭ ಶಿಕ್ಷಣ- ಚಿಂತನ ಮಂತ್ರ ೧೮ ಸರ್ವೋದಯ ನಾಯಕ ೧೯ ಗೊರೂರ ಕಣ್ಣಿನಲ್ಲಿ ಗಾಂಧೀಜಿ ೨೦ ಪ್ರಪಂಚದ- ಕಂಪು.

೭.೨ ಗದ್ಯ ಶೈಲಿ 67

ಮೊ. ಮು. 1978 ಪು. 295 ಡಿ ವಿ ಕೆ ಮೂರ್ತಿ, ಮೈಸೂರು.

ಶೈಲಿಯ ಅಧ್ಯಯನದಲ್ಲೊಂದು ಸವಾಲೂ ಅಹುದು, ರೋಮಾಂಚಕಾರಿ ಕ್ರಿಯೆಯೂ ಅಹುದು. ಕನ್ನಡ ಗದ್ಯದ ವ್ಯಕ್ತಿ ವೈಶಾಲ್ಯಗಳನ್ನು ಔನ್ನತ್ಯ ಗಹನತೆಗಳನ್ನು ವೈವಿಧ್ಯ ವೈಶಿಷ್ಟ್ಯಗಳನ್ನು ಗಮನಿಸಿದಾಗ ಈ ಮಾತಿನ ಯಾಥಾರ್ಥತೆ ಬುದ್ಧಿಗೋಚರ ಗಮ್ಯವಾಗುತ್ತದೆ. ಕೇವಲ ಸ್ಥೂಲ ಸರ್ವೇಕ್ಷಣೆಯಿಂದ ಅದರ ಗತಿ ಗಮನಗಳನ್ನೂ ಸಾಧನೆ ಸಿದ್ಧಿಗಳನ್ನೂ ಹೃದ್ಗತ ಮಾಡಿಕೊಳ್ಳಬೇಕೆನ್ನುವ ಕುತೂಹಲ ಚಾಪಲ್ಯಗಳಿಂದ ಚೋದಿತವಾದ ಪ್ರಯತ್ನದ ಫಲವೇ ಈ ಕೃತಿ. ಈ ಕೃತಿಯಲ್ಲಿ ಸಾಮಾನ್ಯ ತತ್ವಗಳು, ಶೈಲಿಯ ಪ್ರಭೇದಗಳು, ಕನ್ನಡ ಗದ್ಯಶೈಲಿ ಎಂಬ ಮೂರು ಅಧ್ಯಾಯಗಳಿವೆ. ಗದ್ಯ ಶೈಲಿಯನ್ನು ಕುರಿತ ಕನ್ನಡದ ಮೊದಲನೆಯ ಗ್ರಂಥ.

೨.೩ ಗದುಗಿನ ಭಾರತ (ಕುಮಾರವ್ಯಾಸ : ಒಂದು ಸಾಂಸ್ಕೃತಿಕ ಅಧ್ಯಯನ) 68

ಮೊ.ಮು. 1978 ಪು 154 ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨.೪ ನಂಜುಂಡ ಕವಿ 69

ಮೊ. ಮು. 1964 ಪು. VIII + 191 ಪಂಪ ಸಾಹಿತ್ಯ ಪ್ರಕಾಶನ: ಮೈಸೂರು

ನಂಜುಂಡ ಕವಿಯ ಕಾವ್ಯವನ್ನು ಕುರಿತ ವಿಸ್ತಾರವೂ ಮೌಲ್ಯಾತ್ಮಕವೂ ಆದ ವಿಮರ್ಶಾಕೃತಿ

೨.೫ ನೂರೆಂಟು ಪುಸ್ತಕಗಳು 70

ಮೊ. ಮು. 1972 ಪು. 276 ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

1946 ನೆಯ ಇಸವಿಯಿಂದ 1972 ನೆಯ ಇಸವಿಯವರೆಗೆ ಬರೆದ ವಿಮರ್ಶೆಯ ಲೇಖನಗಳು ಇಲ್ಲಿವೆ. ಮೊದಲು ಪುಸ್ತಕ ಪ್ರಪಂಚ, ಪ್ರಬುದ್ಧ ಕರ್ನಾಟಕ, ಕನ್ನಡ ನುಡಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು ಈಗ ಗ್ರಂಥರೂಪದಲ್ಲಿ ಬಂದಿವೆ. ಈ ಕೆಳಗೆ ಕಂಡ ಕೃತಿಗಳನ್ನು ನಾವು ನೋಡಬಹುದು.

೧ ಅಶೋಕ ಚಕ್ರ ೨ ಅಭಿನೇತ್ರಿ ೩ ಅಪೂರ್ವ ಪಶ್ಚಿಮ ೪ ಅಂಚೆಯ ಮನೆ ೫ ಇತ್ಯಾದಿ

೨.೬ ಬಸವೇಶ್ವರ -ಅಂಬೇಡ್ಕರ್ 71

ಮೊ. ಮು. 1992 ಪು. VIII +120 ಬಸವಧರ್ಮ ಪ್ರಸಾರ ಸಂಸ್ಥೆ, ಹಿರೇಮಠ ಸಂಸ್ಥಾನ, ಭಾಲ್ಕಿ

ಜನ್ಮಪರಿಸರ, ಸಾಮಾಜಿಕ ಕ್ರಾಂತಿ, ಧಾರ್ಮಿಕ ಆಂದೋಳನ, ರಾಜಕೀಯ ವಿಚಾರಧಾರೆ, ಆರ್ಥಿಕ ಚಿಂತನೆ, ಉಪಸಂಹಾರ

೨.೭ ಬಸವೇಶ್ವರ - ಕಾರ್ಲ್ ಮಾರ್ಕ್ಸ್ 72

ಮೊ. ಮು. 1989 ಪು. VI +128 ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨.೮ ಮುನ್ನುಡಿಗಳು 73

ಮೊ. ಮು. 1970 ಪು. 208 ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

ಈ ಗ್ರಂಥ ಹಲವಾರು ಮುನ್ನುಡಿಗಳ ಸಂಗ್ರಹ. ಮೃಗಪ್ರಭುತ್ವ, ಪ್ರಾಣಿಪಕ್ಷಿ, ಗಂಗೋತ್ರಿ, ಪ್ರಬುದ್ಧ ಕರ್ನಾಟಕ, ಕನ್ನಡ ವಿಶ್ವಕೋಶ, ಮನೋವಿಜ್ಞಾನಕೋಶ, ಜ್ಞಾನ ಗಂಗೋತ್ರಿ, ಪುಸ್ತಕ ಪ್ರಪಂಚ ಇತ್ಯಾದಿ ಪುಸ್ತಕಗಳಿಗೆ ಬರೆದ ಮುನ್ನುಡಿಗಳ ಸಂಗ್ರಹ.

೨.೯ ವಚನಗಳಲ್ಲಿ ವೈಚಾರಿಕತೆ 74

ಮೊ. ಮು. 1992, ಪು. 6+59, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೨.೧೦ ವಚನಗಳಲ್ಲಿ ಸಮಾಜವಾದ 75

ಮೊ. ಮು. 1981 ಪು. 8+64 ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಶಿವಶರಣರ ವಚನಗಳಲ್ಲಿ ತಲೆದೋರುವ ಸಮಾಜವಾದದ ಎಳೆಗಳನ್ನಿಲ್ಲಿ ಒಂದು ಕಡೆ ಜೋಡಿಸಿದೆ. ಈ ಕಿರುಹೊತ್ತಿಗೆ ಭಾರತೀಯ ಸಮಾಜವಾದದ ಕೈಗನ್ನಡಿಯಾಗಿದೆ.

೭.೧೧ ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ 76

ಮೊ. ಮು. 1993. ಪು. VIII + 152 ಮೈಸೂರು

೧ ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ ೨ ವಚನಗಳಲ್ಲಿ ವೈಚಾರಿಕತೆ ೩ ಶರಣ ವಿಚಾರ ಧಾರೆ ೪ ಇಸ್ಲಾಂ ಹಾಗೂ ವೀರಶೈವ ಸಂಸ್ಕೃತಿ ೫ ಕಾಲಜ್ಞಾನ ಸಾಹಿತ್ಯ ೬ ತೋಂಟದ ಸಿದ್ಧಲಿಂಗೇಶ್ವರರು ೭ ಮರುಳ ಸಿದ್ಧೇಶ್ವರ

೭.೧೨ ಶರಣ ಪಥ 77

ಮೊ. ಮು. 1983 ಪು. x + 160 ಶ್ರೀಜಗದ್ಗುರು ಮೂರುಸಾವಿರ ಮಠ, ಹುಬ್ಬಳ್ಳಿ.

ಬೇರೆ ಬೇರೆ ಕಾಲಗಳಲ್ಲಿ ಬರೆದ ಐದು ಸಂಶೋಧನ ಹಾಗೂ ವಿದ್ವತ್ಪೂರ್ಣ ಪ್ರಬಂಧಗಳ ಸಂಕಲನ.

೧ ದಲಿತೋಯದ ಡಿಂಡಿಮ ಬಾರಿಸಿದ ಬಸವಯುಗ ೨ ಇಂದಿನ ಬದುಕಿಗೆ ಶರಣರ ಮೌಲ್ಯಗಳು ೩ ವೀರಶೈವ ತರುಣರಿಗೆ ಕರೆ ೪ ಬಸವಣ್ಣನವರ ಕಲ್ಪನೆಯ ಸಮಾಜ ೫ ಲೋಕಾಯುತ - ಲಿಂಗಾಯತ.

೭.೧೩ ಶ್ರೀ ಕುವೆಂಪು ಅವರ ದಾಂಪತ್ಯ ದರ್ಶನದ ನಾಲ್ಕು ಮಹಾಕವನಗಳು 78

ಮೊ. ಮು. 1986, ಪು. 40 ಸಹ್ಯಾದ್ರಿ ಪ್ರಕಾಶನ, ಮೈಸೂರು.

ದಾಂಪತ್ಯ ದರ್ಶನದ ನಾಲ್ಕು ಮಹಾ ಕವನಗಳ ವ್ಯಾಖ್ಯಾನ ೧ ದಾಂಪತ್ಯದರ್ಶನದ ಪರಮಾಗಮ ೨ ಹರಗಿರಿಜಾ ೩ ಅನುತ್ತರಾ ೪ ಸ್ವರ್ಗದ್ವಾರದಿ ಯಕ್ಷ ಪ್ರಶ್ನೆ ೫ ವರ್ಧನ್ತಿ.

೭.೧೪ ಷಡಕ್ಷರ ದೇವ 79

ಮೊ. ಮು. 1959, ಪು. VI + 57 ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ಕವಿಕಾವ್ಯ ಪರಿಚಯ. ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಕ ಮಾಲೆಯ 84ನೆಯ ಪುಸ್ತಕ. ಈಚೆಗೆ ಹಲವು ಮುದ್ರಣಗಳಾಗಿವೆ.

ಷಡಕ್ಷರಿಯನ್ನು ಕುರಿತ ವಿಮರ್ಶಾಕೃತಿ

೭.೧೫ ಸರ್ವಜ್ಞ (ಒಂದು ಅಧ್ಯಯನ) 80

ಮೊ. ಮು. 1974. ಪು. 52 ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಕನ್ನಡದ ವಿಶಿಷ್ಟ ಕವಿಗಳಲ್ಲಿ ಒಬ್ಬನಾದ ಸರ್ವಜ್ಞನ ನಾಲ್ಕನೆಯ ಶತಮಾನೋತ್ಸವ ಸಂದರ್ಭದಲ್ಲಿ ಕವಿಯನ್ನು ಕುರಿತ ಕಿರುಹೊತ್ತಿಗೆ.

೭.೧೬ ಸ್ಥಳನಾಮ ವ್ಯಾಸಂಗ 81

ಮೊ. ಮು. 1990. ಪುಟ. VIII + 158 ಸಹ್ಯಾದ್ರಿ ಪ್ರಕಾಶನ, ಮೈಸೂರು.

ಪ್ರವೇಶ. ಸ್ಥಳನಾಮಗಳ ಉಗಮ. ಸ್ಥಳನಾಮ ವಿಜ್ಞಾನದ ವ್ಯಾಪ್ತಿ- ಪ್ರಭಾವ. ಸ್ಥಳನಾಮ ವಿಜ್ಞಾನದ ಇತಿಹಾಸ. ಸಂಶೋಧನಾ ವಿಧಾನ. ಸಾಧನ. ವರ್ಗೀಕರಣ. ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ. ಕ್ಷೇತ್ರಕಾರ್ಯ. ಗ್ರಾಮನಾಮ ಜಾನಪದ ಮೈಸೂರು ನಗರದ ಬೀದಿ ಹೆಸರುಗಳು. ಅನುಬಂಧಗಳು ಕೊಡವರ ಹೆಸರುಗಳು. ಹೆಸರುಗಳ ಬದಲಾವಣೆ- ಒಂದು ಟಿಪ್ಪಣಿ. ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಅಗತ್ಯತೆ.

೭.೧೭ ಸಾಹಿತ್ಯ ಮಾರ್ಗ -1 82

ಮೊ. ಮು. 1964, ಪು. 4 + 167 ಸರಸ ಸಾಹಿತ್ಯ ಪ್ರಕಾಶನ, ಮೈಸೂರು.

ಭಾಷಣ ಲೇಖನ ವಿಮರ್ಶೆಗಳ ಕುರಿತ ಗ್ರಂಥ. “ ಕನ್ನಡ ಮುನ್ನಡೆ” ಎಂಬ ಮೊದಲನೆಯ ಲೇಖನ 29 -2-1963 ರಂದು ಸಿದ್ಧಗಂಗಾ ಕ್ಷೇತ್ರದಲ್ಲಿ ನಲವತ್ತ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಸಾಹಿತ್ಯ ಗೋಷ್ಠಿಯ ಪ್ರಾರಂಭ ಭಾಷಣ. ತೆರೆ 1 ಮತ್ತು ತೆರೆ 2 ಎರಡು ಭಾಗಗಳಿಂದ ಒಟ್ಟು 15 ಲೇಖನಗಳಿವೆ.

೧ ಕನ್ನಡದ ಮುನ್ನಡೆ ೨ ಸಾಹಿತ್ಯ ಜನಜೀವನದ ಪ್ರತಿಬಿಂಬ ೩ ಹೊಸಗನ್ನಡ ಸಾಹಿತ್ಯದಲ್ಲಿ ಋತುವರ್ಣನೆ ೪ ಗದ್ಯ ಶಿಲ್ಪ ೫ ಸಾಹಿತ್ಯಾಭ್ಯಾಸದ ಅವಶ್ಯಕತೆ ೬ ಕೋಗಿಲೆ ಮತ್ತು ಸೋವಿಯಟ್‌ರಷ್ಯಾ ೭ ವಿ. ಸೀ. ಅವರ ಪ್ರಬಂಧಗಳು ಮತ್ತು ವಿಮರ್ಶೆಗಳು ೮ ಕುಡಿಯರ ಕೂಸು ೯ ಜಾರುವ ದಾರಿಯಲ್ಲಿ ೧೦ ಚಿಗುರಿದ ಕನಸು ೧೧ ಅಪೂರ್ವ ಪಶ್ಚಿಮ ೧೨ ಚೆನ್ನಬಸವ ನಾಯಕ ೧೩ ಶಾಪ ೧೪ ಸ್ವರ್ಗದ ಬಾಗಿಲು ೧೫ ಶ್ರೀ ಎ. ಆರ್. ಕೃ ಅವರ ಗದ್ಯಶೈಲಿ.

೭.೧೮ ಸಾಹಿತ್ಯ ಯಾತ್ರೆ 83

ಮೊ. ಮು. 1989, ಪು. iv + 200 ಪ್ರತಿಧ್ವನಿ ಪ್ರಕಾಶನ, ಮೈಸೂರು.

೧ ಶ್ರೀಯವರ ಕನ್ನಡತನ ೨ ಮುಳಿಯ ತಿಮ್ಮಪ್ಪನವರು ನಡೆದ ದಾರಿ ೩ ನಭದಲ್ಲಿ ಲೀನಗೊಂಡ ನಭ ೪ ದುಡಿದು ಅಮರರಾಗಿರುವ ಮಾಸ್ತಿ ೫ ಶ್ರೀಕೃಷ್ಣ ಆಲನಹಳ್ಳಿಗೆ ನುಡಿಸ್ಮಾರಕ ೬ ಅಜ್ಞಾತಮಹಾನುಭಾವ ೭ ಭಾರತೀಸುತರ ಕಾದಂಬರಿಗಳಲ್ಲಿ ಪ್ರಾದೇಶಿಕತೆ ೮ ದಿಟ್ಟಹೆಜ್ಜೆ - ಧೀರಕ್ರಮ ೯ ಪರಮೇಶ್ವರ ಭಟ್ಟರ ಅಷ್ಟಮುಖ ೧೦ ನನ್ನ ಮೆಚ್ಚುಗೆಯ ಚದುರಂಗರು೧೧ ವಚನೋದ್ಯಾನ ದರ್ಶನ ೧೨ ಸ್ನೇಹಸೇತುವೆ ೧೩ ಕವಿ ಅಕ್ಬರ್ ಅಲಿಯವರು.

೭.೧೯ ಸಾಹಿತಿಯ ಸಾಮಾಜಿಕ ಬದ್ಧತೆ 84

ಮೊ. ಮು. 1993. ಪು, IV + 132 ಪ್ರತಿಧ್ವನಿ ಪ್ರಕಾಶನ, ಮೈಸೂರು

೧ ಸಾಹಿತಿಯ ಸಾಮಾಜಿಕ ಬದ್ಧತೆ ೨ ರಾಜಧಾನಿಯ ಕನ್ನಡಿಗರ ಹೊಣೆಗಾರಿಕೆ ೩ ಪ್ರಶಸ್ತಿ ಪ್ರದಾನೋತ್ತರ ಭಾಷಣ ೪ ಬಿನ್ನಹಕೆ ಬಾಯಿಲ್ಲವಯ್ಯ ೫ ಜೀವನ ಮೌಲ್ಯಗಳು ಮತ್ತು ಸಾಹಿತ್ಯ ೬ ಬದುಕಿನಲ್ಲಿ ಪತ್ರಿಕೆ ೭ ರಾಜಕಾರಿಣಿಯೊಬ್ಬರ ಆತ್ಮಕಥೆ ೮ ಖಾಂಡೇಕರ್ ಅವರ ಯಯಾತಿ ೯ ಸಾಹಿತಿಗಳಿಗೆ ಸವಾಲಾಗಿರುವ ಸಮಸ್ಯೆಗಳು ೧೦ ಗ್ರಂಥಾಮೃತ

೮ ಶಿಕ್ಷಣ ಸಾಹಿತ್ಯ

೮.೧ ಕೆಲವು ಶೈಕ್ಷಣಿಕ ವಿಚಾರಗಳು 85

ಮೊ. ಮು. 1991, ಪು. 83 ಪ್ರತಿಧ್ವನಿ ಪ್ರಕಾಶನ, ಮೈಸೂರು.

೮.೨ ಮಂಡ್ಯ ಜಿಲ್ಲೆಯ ಸಮಗ್ರ ಶಿಕ್ಷಣಾಭಿವೃದ್ಧಿ ಸಮೀಕ್ಷೆ 86

ಮೊ. ಮು. ಪು. XVI + 102 ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಂಡ್ಯ.

೮.೩ ವಿದ್ಯಾಪೀಠಗಳು 87

ಮೊ. ಮು. 1952. ಎ. ಮು. 1972 ಪು. VI + 88 ಹನ್ನೊಂದು ಚಿತ್ರಗಳು.

ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಡೆನ್ಮಾರ್ಕಿನ ವಯಸ್ಕರ ವಿದ್ಯಾಪೀಠಗಳ ಐತಿಹಾಸ, ಸ್ವರೂಪ ಇತ್ಯಾದಿ ಕುರಿತ ಗ್ರಂಥ

೯ ಜನಪದ ಸಾಹಿತ್ಯ

೯.೧ ಜಾನಪದ ಅಧ್ಯಯನ 88

ಮೊ. ಮು. 1976 ಪು. 24 + 380 ಡಿ. ವಿ. ಕೆ. ಮೂರ್ತಿ, ಮೈಸೂರು

ಎ. ಮು. 1991 ಪು. VIII + 444. ಚೇತನ ಬುಕ್ ಹೌಸ್, ಮೈಸೂರು

ಜಾನಪದದ ವಿಶ್ವರೂಪ ದರ್ಶನ ಮಾಡಿಸಿಕೊಡುವ ಕನ್ನಡದ ಮೊಟ್ಟಮೊದಲನೆಯ ವಿದ್ವತ್ಪೂರ್ಣ ಗ್ರಂಥ. ಪ್ರಾರಂಭದಲ್ಲಿ ಜಾನಪದ ಸ್ವರೂಪ ಲಕ್ಷಣಗಳನ್ನೊಳಗೊಂಡ ಪೀಠಿಕೆ ಇದೆ. ಜನಪದ ಗೀತೆ ಜನಪದ ಕತೆ, ಜನಪದ ಕಥನ ಕಾವ್ಯ, ಐತಿಹ್ಯ ಪುರಾಣಗಳು ಕುಣಿತ ಮತ್ತು ಬಯಲಾಟ, ಗಾದೆಗಳು, ಒಗಟುಗಳು, ಮಾಟ ಮಂತ್ರ, ನಂಬಿಕೆಗಳು ಸಂಪ್ರದಾಯಗಳು ಮತ್ತು ಹಬ್ಬಗಳು, ಸಸ್ಯ ಜಾನಪದ, ಪ್ರಾಣಿ ಜಾನಪದ- ಇವು ಇಲ್ಲಿ ವಿವರಣೆಗೊಂಡಿರುವ ವಿಷಯಗಳು.

೯.೨ ಜಾನಪದ ವಾಹಿನಿ 89

ಮೊ. ಮು. 1983 ಪು. 8 + 242 ಡಿ. ವಿ. ಕೆ. ಮೂರ್ತಿ, ಮೈಸೂರು.

ಕನ್ನಡನಾಡಿನಲ್ಲಿ ಹಾಗೂ ಇತರ ಭಾಗಗಳಲ್ಲಿ ಜಾನಪದ ಬೆಳೆದ ರೀತಿಯನ್ನು ವಿವರಿಸುವ ಗ್ರಂಥ. ಜಾನಪದ ಕ್ರೀಡೆಗಳು, ವೈದ್ಯ ಜಾನಪದ, ಕಾನೂನು ಜಾನಪದ, ಜಾನಪದ ಉಪಯುಕ್ತ ಕಲೆಗಳು, ಕೃತಕ ಜಾನಪದ , ದಕ್ಷಿಣ ಭಾರತದ ಜಾನಪದ ನಂಬಿಕೆಗಳು, ಜಾತ್ರೆಗಳು, ಅಮೆರಿಕೆಯ ಜಾನಪದ ನಂಬಿಕೆಗಳು, ಕೆಂಪು ಇಂಡಿಯನ್ನರ ಜಾನಪದ, ಜಾನಪದ ಮೂಲದ ಜಪಾನಿ-

೯.೩ ಜಾನಪದ ಸೌಂದರ್ಯ 90

ಮೊ. ಮು. 1977. ಪು. 6 + 174 ಸಹ್ಯಾದ್ರಿ ಪ್ರಕಾಶನ, ಮೈಸೂರು.

ಎ. ಮು. 1989 ಪು. 6 + 172 ಸಹ್ಯಾದ್ರಿ ಪ್ರಕಾಶನ, ಮೈಸೂರು.

1945ರಿಂದ 1977ರ ವರೆಗೆ ಬರೆದ ಜಾನಪದ ಸಂಬಂಧವಾದ ಲೇಖನಗಳು.

೧. ಜನಪದ ಗೀತೆಗಳಲ್ಲಿ ಶಿಶು. ೨ ಕಾವ್ಯಗಳಲ್ಲಿ ಜಾನಪದ ೩ ಜಾನಪದ ಸಾಹಿತ್ಯದಲ್ಲಿ ಉತ್ತರ ದೇವಿಯ ಪ್ರಸಂಗ ೪ ಯಕ್ಷಗಾನ ವಿಚಾರ ೫ ವ್ಯಕ್ತಿ ನಾಮಗಳು೬ ಜಾನಪದ ಸಾಹಿತ್ಯದಲ್ಲಿ ಸಮಾಜದರ್ಶನ ೭ ಜಾನಪದ ಸಾಹಿತ್ಯ-ಸ್ಥೂಲ ಪರಿಚಯ ೮.ಗರತಿಯ ಹಾಡುಗಳು ೯ ಚಕ್ಕರೆ ಪಟಲದಮ್ಮ-ಒಂದು ನೋಟ ೧೦ ಮಂಡ್ಯ ಜಿಲ್ಲೆಯ ಜನಪದ ಕಥೆಗಳು ೧೧ ಕಥಕ್ಕಳಿ ೧೨ ಪಡುಕೋಗಿಲೆ.

೧೦ ಪ್ರಬಂಧ - ಹರಟೆ

೧೦.೧ ಕೆನೆ 91

ಮೊ. ಮು. 1978 ಪು. 12 + 128 ಗುರುದೇವ ಉದ್ಯಮ ಕೇಂದ್ರ , ಮೈಸೂರು.

30 ಲಲಿತ ಪ್ರಬಂಧಗಳ ಸಂಕಲನ.

೧ ತಾಯಿ ೨ ಮನೆ ೩ ಸುಖ ೪ ಏಕಾಗ್ರತೆ ೫ ಜೀವನದಲ್ಲಿ ಔಚಿತ್ಯದ ಅವಶ್ಯಕತೆ ೬ ವೈವಿಧ್ಯವೇಕತೆ ೭ ವೈವಿಧ್ಯವೇಚೈತನ್ಯ ೭ ವೈಚಾರಿಕತೆ ೮ ಈಶ್ವರ ಸೃಷ್ಟಿಯಲ್ಲಿ ಕೀಳು ಮೇಲುಗಳಿಲ್ಲ ೯ ಕರ್ಮಫಲ ೧೦ ಜ್ಞಾನ-ಅಜ್ಞಾನ ೧೧ ಅಜ್ಞಾನದ ಮೋಜು ೧೨ ಅನುಭವಾಂತರವಾಗದ ಜ್ಞಾನ ಬರಿಯ ಹೊರೆ ೧೩ ದುಡಿಮೆಯೇ ದೇವರು ೧೪ ಕಾಯಕಯೋಗ ೧೫ ದೇಹವೇ ದೇವಾಲಯ ೧೬ ಪರರ ಚಿಂತೆ ಬೇಡ ೧೭ ಹಂಗು ೧೮ ಮರವೆ

ಒಂದು ವರವೂ ಹೌದು ೧೯ ಪಾಪಿಗೂ ಉದ್ಧಾರವುಂಟು ೨೦ ಮಾನವನ ಆರು ತಪ್ಪುಗಳು ೨೧ ಪ್ರಶಂಸೆಯ ಗುಣದೋಷಗಳು ೨೨ ಕೃತಘ್ನತೆ ೨೩ ಅಧಿಕಾರ ಮುಳ್ಳಿನ ಹಾಸಿಗೆ ೨೪ ಸಮಾಜವಾದಿ ಯಾರು ? ೨೫ ರಾಜಕೀಯ-ಭ್ರಷ್ಟಾಚಾರ ೨೬ ಮಾನವನ ಮಂಗ ಚೇಷ್ಟೆ ೨೭ ಸುಳ್ಳು ೨೮ ಮಾತು ೨೯ ಬದುಕೊಂದು ಸಮರ ೩೦ ಭವಿಷ್ಯಾಘಾತ

೧೦.೨ ತೆನೆ 92

ಮೊ. ಮು. 1983 ಪು. 8 + 158 ಬಾಪ್ಕೋ ಪ್ರಕಾಶನ, ಬೆಂಗಳೂರು

1983 ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದೆ. 35 ಲಲಿತ ಪ್ರಬಂಧಗಳ ಸಂಗ್ರಹ

೧ ಸಹಜ ಶಿಕ್ಷಣ ೨ ಕಾವ್ಯಕನಸಿನ ಕಾಮಧೇನು ೩ ಅಹಂಕಾರ ೪ ಪರಿವರ್ತನೆ ೫ ಕನ್‌ಫ್ಯೂಷಿಯೆಸ್ಸನ ಬೋಧೆ ವಿವೇಕ ೭ ಭಾವನೆಗಳು ೮ ಜಾನಪದ ಪ್ರಾರ್ಥನೆ ೯ ಭೀತಿ ೧೦ ತಪ್ಪು ೧೧ ಸಿರಿವಂತಿಕೆ ೧೨ ಪುಸ್ತಕಗಳು ೧೩ ಏಕರೂಪತೆ ಅಪಾಯಕಾರೀ ೧೪ ಪ್ರಗತಿ ಕ್ರಾಂತಿ ೧೫ ಹಬ್ಬ ೧೬ ಮಕ್ಕಳು ೧೭ ಕರ್ತವ್ಯಪ್ರಜ್ಞೆ ೧೮ ಅಭಿಪ್ರಾಯ ೧೯ ಭಾವೈಕ್ಯ ೨೦ ಅಸ್ಪೃಶ್ಯತೆಯೊಂದು ಮಹಾ ಪಾಪ ೨೧ ನಿತ್ಯಶಿವರಾತ್ರಿ ೨೨ ಪರೀಕ್ಷೆ ೨೩ ವ್ಯಕ್ತಿಪೂಜೆ ೨೪ ಅವಶ್ಯಕತೆ ೨೫ ದೃಷ್ಟಾಂತ ಕತೆಗಳು ೨೬ ಮತ ೨೭ ಕನ್ನಡಿಗರ ಹಿರಿಮೆ ೨೮ ಮಹಾಪುರುಷ ಯಾರು? ೨೯ ಅಭ್ಯಾಸ ೩೦ ಹೆಸರು ೩೧ ರಾಷ್ಟ್ರದ ಅನಾಥ ರೈತ ೩೨ ನನ್ನ ನಾಡಿನ ಹೊರಗೆ ೩೩ ಆಲೋಚನೆಯೇ ಬದುಕು ೩೪ ಮಾನವೀಯತೆ ೩೫ ಸತ್ಕರ್ಮಕ್ಕಾಗಿ ಉಚಿತ ಶಿಕ್ಷಣ.

೧೦.೩ ಬೆರಕೆ ಸೊಪ್ಪು 93

ಮೊ. ಮು. 1971 ಪು. 330 ಸುರುಚಿ ಪ್ರಕಾಶನ, ಮೈಸೂರು

ಇದೊಂದು ಸಮ್ಮಿಶ್ರ ಲೇಖನ, ಪ್ರಬಂಧ ಮತ್ತು ಹರಟೆಗಳ ಸಂಗ್ರಹ. ಒಟ್ಟು ಐವತ್ತಿದೆ. ಇಲ್ಲಿ ಒಂದೊಂದು ಲೇಖನವೂ ಒಂದೊಂದು ವಿಷಯವನ್ನೊಳಗೊಂಡಿದೆ. ಭಿನ್ನ ಭಿನ್ನ ವಸ್ತುವಿನ, ಭಿನ್ನ ಭಿನ್ನ ಶೈಲಿಯ, ವಿವಿಧ ರುಚಿಯ, ಪರಸ್ಪರ ಸಂಬಂಧವಿರದ ಲೇಖನಗಳ ಸಂಗ್ರಹದ ಕೃತಿ " ಬೆರಕೆ ಸೊಪ್ಪು." ಇಲ್ಲಿ ಒಗರು, ಸಿಹಿ, ಹುಳಿ, ಕಾರ ಎಲ್ಲವೂ ಸೇರಿವೆ.

೧೧ ಕನ್ನಡನಾಡು- ನುಡಿಗಳಿಗೆ ಸಂಬಂಧಿಸಿದ ಕೃತಿಗಳು

೧೧.೧ ಕನ್ನಡಕ್ಕಾಗಿ ಕೈಯೆತ್ತು 94

ಮೊ. ಮು. 1981 ಪು. 13 + 123 ಜೆ. ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು.

1979, 80 ಮತ್ತು 81 ರಲ್ಲಿ ನಾನಾ ವೇದಿಕೆಗಳಿಂದ ಕನ್ನಡನಾಡು ನುಡಿಗಳನ್ನು ಕುರಿತು ಮಾಡಿದ ಭಾಷಣಗಳ ಮಾಲೆಯೇ ಈ ಗ್ರಂಥ. ಹದಿನಾರು ಭಾಷಣಗಳಿವೆ.

೧ ಕನ್ನಡಿಗನ ಕರೆ ಮೊರೆ ೨ ನಾ ಕಂಡ ಕರ್ನಾಟಕ ೩ ಕನ್ನಡವಿಲ್ಲದ ಕರ್ನಾಟಕ ಬೇಡ ೪ ಇಪ್ಪತ್ತೈದು ವರ್ಷಗಳ ಕರ್ನಾಟಕ ೫ ಭಾಷಾ ನೀತಿಯಲ್ಲಿ ವಾಸ್ತವ ದೃಷ್ಟಿ ೬ ಆಡಳಿತ ಭಾಷೆ ಕನ್ನಡ ಎಂತು? ೭ ಸರ್ಕಾರ ಮತ್ತು ಕನ್ನಡ ೮ ಕೊಡಗು ಕೊಡವರು ಮತ್ತು ಕೊಡಗು ಭಾಷೆ ೯ ಕನ್ನಡ ಚಳುವಳಿಯ ಗೊತ್ತು ಗುರಿಗಳು ೧೦ ನನ್ನ ದೃಷ್ಟಿಯಲ್ಲಿ ರಾಜಕೀಯದ ಗುರಿ ೧೧ ಕನ್ನಡ ತರುಣರ ಹೊಣೆಗಾರಿಕೆ ೧೨ ಎಂದೆಂದಿಗೂ ನೀ ಕನ್ನಡವಾಗಿರು ೧೩ ರಾಷ್ಟ್ರ ಕ್ಷೇಮ ಸಾಧನೆ ಎಂತು@೧೪ ಅನ್ಯರಾಷ್ಟ್ರಗಳಲ್ಲಿ ಭಾಷೆ ಸಮಸ್ಯೆ ೧೫ ಜಾತೀಯತೆಯ ಅಭಿಶಾಪ ೧೬ ಪ್ರಾದೇಶಿಕ ಪಕ್ಷದ ಅವಶ್ಯಕತೆ.

೧೧.೨ ಕನ್ನಡಕ್ಕೆ ನಮನ 95

ಮೊ. ಮು. 1985, ಪು. 4 + 146 ದೇಜಗೌ ಟ್ರಸ್ಟ್, ಮೈಸೂರು.

ಕನ್ನಡದ ಸ್ಥಾನಮಾನಗಳ ಬಗ್ಗೆ ಇರುವ ಲೇಖನಗಳು.

೧ ಕನ್ನಡ ಸಂಸ್ಕೃತಿ ೨ ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾವ್ಯಾಸಂಗ ೩ ಕನ್ನಡಿಗರ ಸತ್ವಪರೀಕ್ಷೆಯ ಕಾಲ ೪ ತ್ರಿಭಾಷಾ ಸೂತ್ರದ ತ್ರಿಶೂಲ ೫ ಕರ್ನಾಟಕ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ೬ ಪ್ರಾದೇಶಿಕ ಪಕ್ಷವೇಕೆ? ೭ ಕನ್ನಡ ಹಾಗೂ ಕಾಸರಗೋಡು ೮ ಸರ್ಕಾರಿ ನಿರೂಪದ ನ್ಯೂನತೆ ೯ ಕನ್ನಡ- ಮುಂದೇನಾಗಬೇಕಾಗಿದೆ? ೧೦ ಸ್ಥಳನಾಮಗಳ ಬದಲಾವಣೆ ಸಲ್ಲದು ೧೧ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳು ೧೨ ಕಾವೇರಿ ಗೋಡೆಯರ ಆಚೆಗಿದ್ದ ಕನ್ನಡ ನಾಡು ೧೩ ರಾಜ್ಯಾಂಗ ಹಾಗೂ ಭಾಷಾ ಸಮಸ್ಯೆ ೧೪ ಕನ್ನಡ ಕೋರ್ಟ್‌ಭಾಷೆ ೧೫ ಜಯಹೇ ಕರ್ನಾಟಕ ಮಾತೆ ೧೬ ವಯಸ್ಕರ ಸಾಹಿತ್ಯ- ಒಂದು ಹಕ್ಕಿನೋಟ ೧೭ ಕೇಂದ್ರ ರಾಜ್ಯಗಳ ಪರಸ್ಪರ ಸಂಬಂಧ ಸಮಸ್ಯೆಗಳು ೧೮ ಕನ್ನಡ ಜನತೆಗೆ ಹಾಗೂ ಹೆಗ್ಗಡೆಯವರಿಗೆ ಅಭಿನಂದನೆ.

೧೧.೩ ಕನ್ನಡಿಗರೇ ಎಚ್ಚರಗೊಳ್ಳಿ 96

ಮೊ. ಮು. 1951 ಪು. 11+60 ಕರ್ನಾಟಕ ಸಂಘ ಮಹಾರಾಜಾ ಕಾಲೇಜು, ಮೈಸೂರು.

ಕನ್ನಡದ ಸ್ಥಾನಮಾನಗಳ ಬಗ್ಗೆ ವಿಚಾರ ಪೂರ್ವಕವಾಗಿ ಚರ್ಚಿಮಾಡಿರುವ ಗ್ರಂಥ.

೧೨ ಐತಿಹಾಸಿಕ ಕಾದಂಬರಿಗಳು

೧೨.೧ ಕಡುಗಲಿ ಕುಮಾರರಾಮ 97

ಮೊ. ಮು. 1961 ಎ. ಮು. 1962 ಪು. IV+134 ನರೇಶ್ ಅಂಡ್ ಕಂಪನಿ. ಬೆಂಗಳೂರು.

ಕುಮಾರ ರಾಮನನ್ನು ಕುರಿತ ಐತಿಹಾಸಿಕ ಕಾದಂಬರಿ. ಕನ್ನಡ ನಾಡಿನ ಐತಿಹಾಸಿಕ ವ್ಯಕ್ತಿಯಾದ ಕಡುಗಲಿ ಎಂದೇ ಹೆಸರಾಗಿದ್ದ ಕುಮಾರ ರಾಮನ ವ್ಯಕ್ತಿತ್ವ ಚಿತ್ರಣ ಹಾಗೂ ಸಾಹಸ ಜೀವನವನ್ನೊಳಗೊಂಡ ಕೃತಿ.

೧೨.೨ ಬೆಂಗಳೂರು ಕೆಂಪೇಗೌಡ 98

ಮೊ. ಮು. 1950 ಎ. ಮು. 1952 ಐದನೆಯ ಮುದ್ರಣ 1958. ಪು. 100

ಉಷಾ ಸಾಹಿತ್ಯ ಮಾಲೆ ಮೈಸೂರು.

ಮೊದಲ ಎರಡು ಮುದ್ರಣಗಳನ್ನು ಲೇಖಕರೇ ಪ್ರಕಟಿಸಿದ್ದಾರೆ.

ಬೆಂಗಳೂರನ್ನು ನಿರ್ಮಿಸಿದ ಕೆಂಪೇಗೌಡನನ್ನು ಕುರಿತ ಐತಿಹಾಸಿಕ ಕಾದಂಬರಿ.

೧೩ ಅನುವಾದಗಳು

೧೩.೧ ಅಕ್ಬರ್ 99

ಮೊ. ಮು. 1963 ಪು. 145 ಉಷಾ ಸಾಹಿತ್ಯ ಮಾಲೆ, ಮೈಸೂರು.

ನ್ಯಾಷನಲ್ ಬುಕ್ ಟ್ರಸ್ಟ್ ವತಿಯಿಂದಲೂ ಪ್ರಕಟವಾಗಿದೆ.

ಲಾರೆನ್ಸ್ ಬಿನಿಯನ್ ಅವರ ಆಂಗ್ಲಭಾಷೆಯ ಗ್ರಂಥದ ಅನುವಾದ. ಭರತ ಖಂಡದ ಮೊಗಲ್ ಸಾರ್ವಭೌಮರಲ್ಲಿ ಅಗ್ರಗಣ್ಯನಾದ ಅಕ್ಬರ್ (1555 - 1605)ನ ಬಗ್ಗೆ ಬಹುಮುಖ್ಯವಾದ ಮೂಲಾಧಾರ ಗ್ರಂಥ.

೧೩.೨ ಗುರುನಾನಕ್ 100

ಮೊ. ಮು. 1963 ನರೇಶ್ ಅಂಡ್ ಕಂಪನಿ, ಬೆಂಗಳೂರು

ಎ. ಮು. 1969 ಪು. 148 ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ನವದೆಹಲಿ.

ಡಾ. ಗೋಪಾಲಸಿಂಗ್ ಅವರು ಬರೆದ ಆಂಗ್ಲಭಾಷೆಯ ಗ್ರಂಥದ ಅನುವಾದ.

ಸಂತ ಗುರುನಾನಕ್ ಅವರ ಭವ್ಯ ಚಿತ್ರ.

೧೩.೩ **ಟಾಲ್‌ಸ್ಟಾಯ್‌ರ ಎರಡು ನಾಟಕಗಳು** 101

ಮೊ. ಮು. 1978 ಪು 4 + 168 ನಭಶ್ರೀ ಪ್ರಕಾಶನ, ಮೈಸೂರು

ಲಿಯೋಟಾಲ್‌ಸ್ಟಾಯ್ ಅವರ Light Shines in Darkness

ಕತ್ತಲಲ್ಲಿ ಬೆಳಕು ಮತ್ತು The Cause of it all- ಇದೇ ಅಷ್ಟಕ್ಕೆಲ್ಲಾ ಕಾರಣ.

೧೩.೪ **ನೆನಪು ಕಹಿಯಲ್ಲ** 102

ಮೊ. ಮು. 1949 ಪು. 232 ಚೇತನ ಪ್ರಕಟನಾಲಯ, ಮೈಸೂರು.

ಶ್ರೀಮತಿ ಕೃಷ್ಣ ಹತೀಸಿಂಗ್ ರವರ With no Regrets ಎಂಬ ಕೃತಿಯ ಭಾಷಾಂತರ. ಸರೋಜಿನಿ ನಾಯಿಡು ಅವರ ಮುನ್ನುಡಿ ಇದೆ.

೧೩.೫ **ಪುನರುತ್ಥಾನ** 103

ಮೊ. ಮು. 1965 ಪು. 11 + 595 ಡೆಮಿ ಆಕಾರದಲ್ಲಿ.

ಶಾರದಾ ಮಂದಿರ ಮೈಸೂರು.

ಟಾಲ್‌ಸ್ಟಾಯ್‌ರವರ 'ರಿಸರೆಕ್ಷನ್' ಎಂಬ ಕಾದಂಬರಿಯ ಭಾಷಾಂತರ.

೧೩.೬ **ಭಾರತದ ಜಾನಪದ ಕಥೆಗಳು** 104

ಮೊ. ಮು. 1979 ಪು. 104 + 2 ಐಬಿಹೆಚ್ ಪ್ರಕಾಶನ, ಬೆಂಗಳೂರು.

೧೩.೭ **ವಿಷವೃಕ್ಷ ನಾಟಕ** 105

ಮೊ. ಮು. 1976 ಪು. 104 ಸುರುಚಿ ಪ್ರಕಾಶನ, ಮೈಸೂರು.

ಬಂಗಾಳಿ ಭಾಷೆಯ ಬಂಕಿಮಚಂದ್ರರ ಕೃತಿಯನ್ನು ಬಿ. ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದನ್ನು ಆಧರಿಸಿ ಈ ನಾಟಕವನ್ನು ರಚಿಸಲಾಗಿದೆ.

೧೩.೮ **ಯುದ್ಧ ಮತ್ತು ಶಾಂತಿ** 106

ಮೊ. ಮು. 1989 ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಪ್ರಥಮ ಸಂಪುಟ - ಪು. XXII + 584 + 2 ಭೂಪಟ

ದ್ವಿತೀಯ ಸಂಪುಟ - ಪು. XX + 607 + 2 ಭೂಪಟ

ತೃತೀಯ ಸಂಪುಟ - ಪು. XVI + 583

ಲಿಯೋ ಟಾಲ್‌ಸ್ಟಾಯ್ ಅವರ ಕೃತಿಯ ಭಾಷಾಂತರ.

೧೩.೯ **ಹಮ್ಮು - ಬಿಮ್ಮು** 107

ಮೊ. ಮು. 1961 ಪು. XXVIII + 374 ಶಾರದಾ ಮಂದಿರ, ಮೈಸೂರು

ಜೇನ್ ಆಸ್ಟಿನ್ ಅವರ Pride and Prejudice ಕಾದಂಬರಿಯ ಭಾಷಾಂತರ.

೧೪ ದೇಜಗೌ ಸಂಪಾದಿಸಿದ ಪ್ರಮುಖ ಗ್ರಂಥಗಳು

(ನೂರಾರು ಸಂಪಾದಿಸಿದ ಗ್ರಂಥಗಳ ಪೈಕಿ ಕೆಲವನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ)

೧. ಗಂಗೋತ್ರಿ
೨. ಸಿರಿಯೊಡಲು
೩. ಸುವರ್ಣ ಮಂಡ್ಯ
೪. ಸಹ್ಯಾದ್ರಿ
೫. ಪುತಿನ ಅಭಿನಂದನ ಗ್ರಂಥ
೬. ಕಬ್ಬಿನ ಹಾಲು

೧೫ ಇತರ ಸಂಪಾದಿತ ಕೃತಿಗಳು

೧೫.೧ ಅಜಿತ ತೀರ್ಥಂಕರ ಪುರಾಣ ತಿಲಕಂ 108

ಮೊ. ಮು. 1959 ಪು. XII + 12 + 211 ಜೈನ ಸಾಹಿತ್ಯ ಪ್ರಚಾರ ಸಂಘ, ಮೈಸೂರು.

ಶ್ರೀ ಹೆಚ್. ದೇವೀರಪ್ಪ ಅವರೊಡನೆ ಸಂಪಾದಿತ ಗ್ರಂಥ

ರನ್ನನ ಕೃತಿಯನ್ನು ತಾಳೆಗರಿ ಪ್ರತಿಗಳಿಂದ ಸಂಪಾದಿಸಲಾಗಿದೆ.

೧೫.೨ ಕನಕ ಸಾಹಿತ್ಯ ದರ್ಶನ ಸಂಪುಟ-1 109

ಮೊ. ಮು. 1989-90 ಪು. 906 + XV ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಪ್ರಧಾನ ಸಂಪಾದಕರಾಗಿ ಪ್ರಕಟಿಸಿದ ಗ್ರಂಥ

೧೫.೩ ಕಬ್ಬಿಗರ ಕಾವ್ಯ 110

ಮೊ. ಮು. ೧೯೬೪ ಪು. ೭೨ + ೧೩೦ ಶಾರದಾ ಮಂದಿರ, ಮೈಸೂರು.

ಎ. ಮು. ೧೯೬೭ ಮೂ. ಮು. ೧೯೬೯

ಆಂಡಯ್ಯನ ಈ ಕೃತಿಯನ್ನು ಸಂಪಾದಿಸಲಾಗಿದೆ. ಕವಿಕಾವ್ಯ ವಿಚಾರವನ್ನು ಕುರಿತ ವಿಸ್ತಾರವಾದ ಪೀಠಿಕೆ ಇದೆ.

೧೫.೪ ಕಟ್ಟೀಮನಿ: ಬದುಕು ಬರಹ 111

ಮೊ. ಮು. ೧೯೬೯ ಪು ೨೭೨ ಗೀತಾ ಬುಕ್ ಹೌಸ್, ಮೈಸೂರು.

ಅಗ್ರಗಣ್ಯ ಕಾದಂಬರಿಕಾರರಲ್ಲಿ ಒಬ್ಬರಾದ ಶ್ರೀ ಬಸವರಾಜ ಕಟ್ಟೀಮನಿ ಅವರಿಗೆ ಐವತ್ತು ತುಂಬಿದ ಶುಭ ಸಂದರ್ಭದಲ್ಲಿ ಮಿತ್ರರು ಮತ್ತು ಅಭಿಮಾನಿಗಳು ಸಮರ್ಪಿಸಿದ ಉಡುಗೊರೆ ಗ್ರಂಥ. ಈ ಗ್ರಂಥವನ್ನು ರಾಷ್ಟ್ರಕವಿ ಪೂಜ್ಯ ಶ್ರೀ ಕುವೆಂಪು ಅವರು ಬಿಡುಗಡೆ ಮಾಡಿ ಶ್ರೀ ಕಟ್ಟೀಮನಿಯವರನ್ನು ಆಶೀರ್ವದಿಸಿದರು. ಸಿ. ಪಿ. ಕೆ. ಅವರೊಡನೆ ಈ ಗ್ರಂಥವನ್ನು ಸಂಪಾದಿಸಿದ್ದಾರೆ.

೧೫.೫ ಕವಿ ದರ್ಶನ (ಶ್ರೀ ಕುವೆಂಪು ಕೃತಿ ಪರಿಚಯ) 112

ಮೊ. ಮು: ೧೯೫೨ ಪು.೪ + ೧೬೨ ಸಾಹಿತ್ಯ ದರ್ಶನ ಮಾಲೆ ಮೈಸೂರು.

ಶ್ರೀ ಕುವೆಂಪು ಅವರ ಕೃತಿಗಳ ಪರಿಚಯವನ್ನು ವಿವಿಧ ಲೇಖಕರು ಮಾಡಿಕೊಟ್ಟಿದ್ದಾರೆ.

೧೫.೬ ಕಾನೂನು ಮಿತ್ರ **113**

ಮೊ. ಮು. ೧೯೮೩ ಪು. ೨೫೨ ಶ್ರೀ ಪಿ. ಯಂ. ಚಿಕ್ಕಬೋರಯ್ಯ ಸನ್ಮಾನ ಸಮಿತಿ, ಮೈಸೂರು.

ಶ್ರೀಮಾನ್ ಚಿಕ್ಕಬೋರಯ್ಯ ಅವರಿಗೆ ಅರುವತ್ತು ತುಂಬಿದ ಶುಭಸಂದರ್ಭದಲ್ಲಿ ಅವರಿಗೆ ಅರ್ಪಿಸಿರುವ ಅಭಿನಂದನ ಗ್ರಂಥ.

೧೫.೭ ಕುವೆಂಪು ಕವನಗಳು (ಅನ್ವಯಿಕ ವಿಮರ್ಶೆ) **114**

ಮೊ. ಮು. ೧೯೬೮ ಪು. ೧೨ + ೧೪೨ ಸಹ್ಯಾದ್ರಿ ಪ್ರಕಾಶನ, ಮೈಸೂರು.

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಎಪ್ಪತ್ತೈದನೆಯ ಜನ್ಮ ದಿನೋತ್ಸವ ಸಮಯದಲ್ಲಿ ಅವರ ಕವನಗಳನ್ನು ಕುರಿತ ವಿವಿಧ ಲೇಖಕರ ವಿವರಣಾತ್ಮಕ ಲೇಖನಗಳನ್ನು ಸಂಪಾದಿಸಿ ಪ್ರಕಾಶಪಡಿಸಿದ ಗ್ರಂಥ

೧೫.೮ ಕುವೆಂಪು ನಾಟಕ ವಿಹಾರ **115**

ಮೊ. ಮು. ೧೯೭೭ ಪು. ೧೦ + ೭೪ ಸಹ್ಯಾದ್ರಿ ಪ್ರಕಾಶನ, ಮೈಸೂರು.

೧೫.೯ ಗ್ರಂಥಾಮೃತ **116**

ಮೊ. ಮು. ೧೯೯೦ ಪು. XXVIII + ೬೭೨ ಮೈಸೂರು ನಗರ ಗ್ರಂಥ ಪ್ರಾಧಿಕಾರದ ಅಮೃತೋತ್ಸವ ಸಮಿತಿ, ಮೈಸೂರು.

ಪ್ರಧಾನ ಸಂಪಾದಕರಾಗಿ ಮೈಸೂರು ನಗರ ಗ್ರಂಥ ಪ್ರಾಧಿಕಾರದ ಅಮೃತೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಗ್ರಂಥ

೧೫.೧೦ ಗಿರಿಜಾ ಕಲ್ಯಾಣ ಮಹಾಪ್ರಬಂಧಂ **117**

ಮೊ. ಮು. ೧೯೫೧ ಎ. ಮು. ೧೯೫೩ ಪು. ೧೧೧ + ೧೧೪ ಗೌರಿಶಂಕರ ಡಿಪೋ, ಮೈಸೂರು

ಶ್ರೀ ಹೆಚ್. ದೇವೀರಪ್ಪನವರೊಡನೆ ಸಂಪಾದಿಸಿದ ಗ್ರಂಥ.

ಹರಿಹರನ ಮಹಾಕಾವ್ಯದ ಸಂಗ್ರಹ ರೂಪ

೧೫.೧೧ ಚಿಕ್ಕುಪಾಧ್ಯಾಯನ ರುಕ್ಮಾಂಗದ ಚರಿತ್ರೆ **118**

ಮೊ. ಮು. ೧೯೮೨ ಪು. ೮೬ + ೩೭೨ ನರೇಶ್ ಅಂಡ್ ಕಂಪನಿ, ಬೆಂಗಳೂರು.

೧೫.೧೨ ಜನಪದ ಗೀತಾಂಜಲಿ **119**

ಮೊ. ಮು. ೧೯೭೮. ಎ. ಮು. ೧೯೯೦ ಪು ೨೦೪ ಸಾಹಿತ್ಯ ಅಕಾಡೆಮಿ, ನವದೆಹಲಿ.

ಕನ್ನಡ ಜಾನಪದ ಗೀತೆಗಳ ಸಂಕಲನ. ಸುದೀರ್ಘ ಮುನ್ನುಡಿ ಇದೆ.

೧೫.೧೩ ಜೈಮಿನಿ ಭಾರತ ಸಂಗ್ರಹ **120**

ಮೊ . ಮು. ೧೯೫೯ ಪು. ೭೮ + ೨೩೮ + ೩೪ ವಯಸ್ಕರ ಶಿಕ್ಷಣ ಸಮಿತಿ ಮೈಸೂರು.

ವಿಸ್ತಾರವಾದ ಮುನ್ನುಡಿ ಇದೆ.

೧೫.೧೪ ಧರ್ಮಾಮೃತ ಸಂಗ್ರಹ 121

ಮೊ. ಮು. ೧೯೫೭ ಎ. ಮು. ೧೯೬೪ ಪು. LXXXI + ೧೦೪ ನರೇಶ್ ಅಂಡ್ ಕಂಪನಿ ಬೆಂಗಳೂರು.

ನಯಸೇನನ ಅದೇ ಹೆಸರಿನ ಗ್ರಂಥವನ್ನು ಸಂಪಾದಿಸಿ ಸಂಗ್ರಹಿಸಲಾಗಿದೆ. ಕವಿ ಕಾವ್ಯ ವಿಚಾರವನ್ನು ಕುರಿತ ವಿಸ್ತಾರವಾದ ಪೀಠಿಕೆಯಿದೆ.

೧೫.೧೫ ನಳಚರಿತ್ರೆ 122

ಮೊ. ಮು. ೧೯೬೫ ಪು. ೩೧ + ೧೨೯ ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ ರಾಜ್ಯ ಸಮಿತಿ, ಬೆಂಗಳೂರು.

ಕನಕದಾಸರ ನಳಚರಿತ್ರೆಯನ್ನು ಸಂಪಾದಿಸಲಾಗಿದೆ. ಪ್ರಾರಂಭದಲ್ಲಿ ಉಪಯುಕ್ತವಾದ ಪೀಠಿಕೆಯಿದೆ.

೧೫.೧೬ ನೆನಪಿನ ದೋಣಿಯಲ್ಲಿ ಯಾತ್ರೆ 123

ಮೊ. ಮು. ೧೯೮೧ ಪು. ೨೦ + ೧೨೭ ಸಹ್ಯಾದ್ರಿ ಪ್ರಕಾಶನ, ಮೈಸೂರು.

ಪೂಜ್ಯ ಶ್ರೀ ಕುವೆಂಪು ಅವರ ಎಪ್ಪತ್ತೇಳನೆಯ ಜನ್ಮೋತ್ಸವ ಸಮಾರಂಭದ ಅಂಗವಾಗಿ 27-12-1980ರಂದು 'ನೆನಪಿನ ದೋಣಿಯಲ್ಲಿ' ಕೃತಿಯನ್ನು ಕುರಿತ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ

೧೫.೧೭ ಪುಣ್ಯಾಸ್ರವ (ನಾಗರಾಜಕವಿ ವಿರಚಿತ) 124

ಮೊ. ಮು. ೧೯೭೭ ಪು ೧೩ + ೨೧೨ + ೫೦೬ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಾಗರಾಜ ಕವಿಯ ಪುಣ್ಯಾಸ್ರವವನ್ನು ತುಂಬ ಸಮರ್ಥವಾದ ರೀತಿಯಲ್ಲಿ ಸಂಪಾದಿಸಿದ್ದಾರೆ. ವಿಸ್ತಾರವಾದ ಪೀಠಿಕೆ ಇದೆ.

೧೫.೧೮ ಬಸವ ಸಂಹಿತೆ 125

ಮೊ. ಮು. ೧೯೭೯ ಪು. ೪ + ೧೬೧ ಶರತ್ ಪ್ರಕಾಶನ, ಮೈಸೂರು.

ವಚನಗಳ ಸಂಗ್ರಹ, ವಿಸ್ತಾರವಾದ ಪೀಠಿಕೆಯಲ್ಲಿ ಬಸವಣ್ಣನವರ ಕಲ್ಪನೆಯ ಸಮಗ್ರ ಕ್ರಾಂತಿಯ ಪೂರ್ಣ ವಿವೇಚನೆ ಇದೆ.

೧೫.೧೯ ರಾಮಧ್ಯಾನ ಚರಿತ್ರೆ 126

ಮೊ. ಮು. ೧೯೬೫ ಪು. ೫೫ ಶ್ರೀಕನಕದಾಸರ ನಾಲ್ಕನೆಯ ಶತಮಾನೋತ್ಸವ ರಾಜ್ಯ ಸಮಿತಿ, ಬೆಂಗಳೂರು.

ಕನದಾಸರ ಈ ಅಣಕು ಮಹಾಕಾವ್ಯವನ್ನು ವೈಜ್ಞಾನಿಕವಾಗಿ ಸಂಪಾದಿಸಲಾಗಿದೆ. ಭಾಮಿನಿ ಷಟ್ಪದಿಯಲ್ಲಿದೆ. ಪ್ರಾರಂಭದಲ್ಲಿ ಕಾವ್ಯವನ್ನು ಕುರಿತ ಪ್ರೌಢ ವಿಮರ್ಶೆ ಇದೆ.

ಎ. ಮು. ೧೯೭೯ ಪು. ೨೨ + ೬೦ ಡಿ. ವಿ. ಕೆ. ಮೂರ್ತಿ ಮೈಸೂರು

ಮುನ್ನುಡಿ ವಿಸ್ತರಿಸಲಾಗಿದೆ.

೧೫.೨೦ ಲೀಲಾವತಿ ಪ್ರಬಂಧಂ 127

ಮೊ. ಮು. ೧೯೬೬ ಪು. XLV + ೩೬೧ ಶಾರದಾ ಮಂದಿರ, ಮೈಸೂರು.

ಶ್ರೀ ಕೆ. ವೆಂಕಟರಾಮಪ್ಪನವರೊಡನೆ ಸಂಪಾದಿಸಿದ ಕೃತಿ. ನೇಮಿಚಂದ್ರನ ಈ ಕೃತಿಗೆ ದೇಜಗೌ ಕವಿ ಕಾವ್ಯ ವಿಚಾರವನ್ನು ಕುರಿತು ವಿಸ್ತಾರವಾದ ಮುನ್ನುಡಿ ಬರೆದಿದ್ದಾರೆ.

೧೫.೨೧ ವಜ್ರದೀಪ್ತಿ 128

ಮೊ. ಮು. ? XVI + ೨೬ + ೫೩೩ + ೧೭೯

೬೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು.

ಪ್ರಧಾನ ಸಂಪಾದಕರಾಗಿ ೬೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಪ್ರಕಟಿಸಿದ ಗ್ರಂಥ.

೧೫.೨೨ ಶ್ರೀಕುವೆಂಪು ಶಿಶುಸಾಹಿತ್ಯ 129

ಮೊ. ಮು. ೧೯೭೯ ಪು. ೧೪ + ೮೦ ಸಹ್ಯಾದ್ರಿ ಪ್ರಕಾಶನ, ಮೈಸೂರು.

ಐದು ಪ್ರಬಂಧಕಾರರು ಐದು ಲೇಖನಗಳನ್ನು ಬರೆದಿದ್ದಾರೆ. ಮಕ್ಕಳ ಸಾಹಿತ್ಯವು ಮುಖ್ಯವಾಗಿ ಅವರ ಕುತೂಹಲಾಸಕ್ತಿಗಳನ್ನು ಕೆರಳಿಸುವಂತಿರಬೇಕು. ಅವರ ಜ್ಞಾನದಾಹವನ್ನು ತಣಿಸುವಂತಿರಬೇಕು ಮಾತ್ರವಲ್ಲ, ಅವರು ಮೆಚ್ಚುವಂತೆಯೂ ಅವಕಾಶ ಕಲ್ಪಿಸಬೇಕು ಇತ್ಯಾದಿ ಕುರಿತ ಲೇಖನಗಳಿವೆ.

೧೫.೨೩ ಶ್ರೀಮತಿ ಹೇಮಾವತಿ ಕುವೆಂಪು 130

ಮೊ. ಮು. ೧೯೮೩ ಪು. ೪ + ೧೯೬ ಸಹ್ಯಾದ್ರಿ ಪ್ರಕಾಶನ, ಮೈಸೂರು.

ಶ್ರೀಮಾತೆ ಹೇಮಾವತಿ ಕುವೆಂಪು ಅವರು ಪರಂಧಾಮವನ್ನೈದಿ ಒಂದು ವರ್ಷವಾದಾಗ ಅವರ ಸವಿನೆನಪಿಗಾಗಿ ಸಂಪಾದಿಸಿದ ಲೇಖನಗಳ ಸಂಗ್ರಹ.

೧೫.೨೪ ಶ್ರೀ ರಾಮಾಯಣ ದರ್ಶನಂ ಉಪನ್ಯಾಸಮಾಲೆ 131

ಮೊ. ಮು. ೧೯೫೪ ಪು. VI + ೧೧೨ ಸಾಹಿತ್ಯ ದರ್ಶನ ಮಾಲೆ, ಮೈಸೂರು.

1954ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ನಡೆದ ಉಪನ್ಯಾಸಮಾಲೆಯ ಸಂಕಲನ.

೧೫.೨೫ ಸಾಹಿತ್ಯಾರಾಧನೆ 132

ಮೊ. ಮು. ೧೯೭೦ ಪು. ೮ + ೩೦೪ ಮೋಹನ ಪ್ರಕಾಶನ, ಮೈಸೂರು.

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಸಾಹಿತ್ಯವನ್ನು ಕುರಿತ ಬೇರೆ ಬೇರೆ ಲೇಖಕರ ವಿಮರ್ಶಾ ಲೇಖನಗಳಿವೆ.

೧೫.೨೬ ಸುವರ್ಣ ಸಂಚಯ 133

ಮೊ. ಮು. ೧೯೬೭ ಪು. ೧೪ + ೪೧೧ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

1966ರ ಡಿಸೆಂಬರ್ 8-9-10ರಂದು ಮಾನಸಗಂಗೋತ್ರಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವ ಸಮಾರಂಭಗಳ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನ.

೧೫.೨೭ **ಹೊಸಗನ್ನಡ ಕಥಾ ಸಂಗ್ರಹ** 134

ಮೊ. ಮು. ೧೯೫೭ ಪು. XIV + ೨೩೧ ನವಚೇತನ ಪ್ರಕಟನಾಲಯ. ಬೆಂಗಳೂರು.

ವಿವಿಧ ಬರಹಗಾರರ ಹದಿನಾಲ್ಕು ಸಣ್ಣ ಕಥೆಗಳ ಸಂಕಲನ.

೧೬ ಇತರೆ

೧೬.೧ **ಪ್ರತಿಧ್ವನಿ: ಯುಗೇ ಯುಗೇ ಸಂಭವಾಮಿ** 135

ಮೊ. ಮು. ೧೯೮೬ ಪು. ೪ + ೧೨೨ ಪ್ರತಿಧ್ವನಿ ಪ್ರಕಾಶನ, ಮೈಸೂರು.

೧ ಪ್ರತಿಧ್ವನಿ ಯುಗೇ ಯುಗೇ ಸಂಭವಾಮಿ: ದೇಜಗೌ ೨ ಮಹಾಕವಿಯೊಡನೆ ಮಾತುಕತೆ: ಎಂ. ಆರ್. ಶಿವಣ್ಣ, ಕೆ. ಎಸ್. ಭಗವಾನ್ ೩. ಬೇರು ಬುಡದಿಂದ ಕೊಂಬೆರೆಂಬೆಯವರೆಗೆ : ಜಿ. ಎಸ್ ಶಿವರುದ್ರಪ್ಪ ಅನುಬಂಧಗಳು: ೧. ಬ್ರಾಹ್ಮಣರ ಬಹಿರಂಗ ಸಭೆಯ ಅಂತರಂಗ: ದೇವನೂರ ಮಹಾದೇವ೨ ಬ್ರಾಹ್ಮಣ ಸಂಘದವರಿಗೆ ಬಹಿರಂಗ ಪತ್ರ: ತ .ಹ ನಾಗರಾಜನ್ ೩. ಇದು ವೈಚಾರಿಕ ವಿರುದ್ಧ ಸನಾತನ ಸಮರ: ಅಲ್ಲಮಪ್ರಭು, ಬೆಟ್ಟದೂರು. ಶ್ರೀ ಕುವೆಂಪು ಅವರನ್ನು ಕುರಿತ ಬ್ರಾಹ್ಮಣರ ಟೀಕೆಗಳಿಗೆ ಕೊಟ್ಟ ವೈಚಾರಿಕವಾದ ಉತ್ತರ.

೧೬.೨ **ರಾಷ್ಟ್ರೀಯ ಮೂಲಭೂತ ಸಮಸ್ಯೆಗಳು** 136

ಮೊ. ಮು. ೧೯೯೧ ಪು. ೧೦ + ೫೬ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ದಿನಾಂಕ 5-12-1991ರಂದು ನೀಡಿದ ಮೂಲಭೂತ ಉಪನ್ಯಾಸ.

೧೬.೩ **ಕುವೆಂಪು ದೃಷ್ಟಿಯಲ್ಲಿ ಶ್ರೀಬಸವೇಶ್ವರರು** 137

ಮೊ. ಮು. ೧೯೮೫ ಪು ೩ + ೪೦ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ,

ಶ್ರೀ ಸುತ್ತೂರು ಮಠ, ಮೈಸೂರು.

ಶ್ರೀ ಕುವೆಂಪು ಅವರನ್ನು ಸಂದರ್ಶಿಸಿ ಶ್ರೀ ಬಸವೇಶ್ವರರ ಬಗ್ಗೆ ಅವರ ನಿಲುವನ್ನು ಸಂಗ್ರಹ ರೂಪದಲ್ಲಿ ತಂದಿರುವ ಗ್ರಂಥ.

ಎ. ಮು. ೧೯೮೯ ಪು. ೮ + ೪೪

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಶ್ರೀ ಸುತ್ತೂರು ಮಠ, ಮೈಸೂರು.

೧೬.೪ **ಸುಲಭ ಭಾಷಾಂತರ ಪಾಠಗಳು-1, 2, 3** 138

ಮೊ. ಮು. ಪು VI + ೬೭, VI + ೬೪, VI + ೫೯. ಜಿ. ಕೆ. ಅಂಡ್ ಬ್ರದರ್ಸ್, ಬೆಂಗಳೂರು.

ಪ್ರೊ. ಸಿ. ಡಿ. ಗೋವಿಂದರಾವ್ ಅವರೊಡನೆ ಸಿದ್ಧಪಡಿಸಿದ ಕೃತಿ.

೧೭ ದೇಜಗೌ ಕುರಿತ ಗ್ರಂಥಗಳು

೧೭.೧ **ಕನ್ನಡದ ಕಣ್ಮಣಿ (ದೇಜಗೌ ಜೀವನ ಪರಿಚಯ) -ಲಿಂಗೇಗೌಡ, ಬೆಳಕೆರೆ**

ಮೊ. ಮು: ೧೯೭೯ ಪು. ೩೮ ಲೀಲಾಪ್ರಕಾಶನ, ಬೆಂಗಳೂರು.

ಚಿಕ್ಕ ಮಕ್ಕಳಿಗೆ ಪೂಜ್ಯ ದೇಜಗೌ ಜೀವನ ಪರಿಚಯವನ್ನು ಮಾಡಿಕೊಡುವ ಗ್ರಂಥ

೧೭.೨ ಕನ್ನಡ ಸೇನಾನಿ-ಕೊತ್ತಪಲ್ಲಿ ಶೇಖರ

ಮೊ. ಮು. ೧೯೯೧ ಪು. ೨೪ ಕನ್ನಡ ಸಾಹಿತ್ಯ ಪರಿಷತ್ತು

ನವ ಸಾಕ್ಷರರಿಗಾಗಿ ಬರೆದ ಗ್ರಂಥ

೧೭.೩ ಕರ್ಮಯೋಗಿ- ಕೆ. ಆರ್. ಕಮಲೇಶ

ಮೊ. ಮು. ೧೯೮೦. ಪು. ೧೨ + ೭೨ ಶಿವರಂಜಿನಿ ಪಬ್ಲಿಕೇಷನ್, ಮೈಸೂರು.

ಪೂಜ್ಯ ದೇಜಗೌ ಅವರ ಸಾಧನೆಯ ಸಮೀಕ್ಷೆಯನ್ನು ಕೆಳಗಿನ ಅಧ್ಯಾಯಗಳಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ.

೧. ಕರ್ಮಯೋಗಿ ೨. ಪತ್ರಿಕೆಗಳಲ್ಲಿ ದೇಜಗೌ ೩. ಮಹತ್ಕಾರ್ಯದಲ್ಲಿ ಅಡೆ-ತಡೆ.

೧೭.೪ ಕುಲಪತಿಯ ಸಾಧನೆಗಳು- ಸಂ. ಸತ್ಯಪ್ರಿಯ

ಮೊ. ಮು. ೧೯೭೨. ಪು. ೮೬ ಆದಿಚುಂಚನಗಿರಿ ಯುವಜನ ಬಳಗ, ಮೈಸೂರು.

೧. ಕುಲಪತಿಯಾಗಿ ೧೦೦೦ ದಿನಗಳನ್ನು ಕಳೆದ ದೇಜಗೌ-ಡಾ. ನಾಡಿಗ ಕೃಷ್ಣಮೂರ್ತಿ ೨. ಮೂರು ವರ್ಷದ ಸಾಧನೆಗಳು- ಹ. ಕ. ರಾಜೇಗೌಡ ೩. ಗಾಳಿಕುದುರೆ ಸವಾರಿ-ತರಾಸು ೪. ಪ್ರಾಮಾಣಿಕ ದುಡಿಮೆ-ಕೆ. ಆರ್. ಲಿಂಗಪ್ಪ ೫. ಹುರುಳಿಲ್ಲದ ಆಕ್ಷೇಪಣೆಗಳು-ಎಚ್. ಬಿ. ಕೃಷ್ಣಪ್ಪ ೬. ನಿಷ್ಪಕ್ಷಪಾತ ಕುಲಪತಿ-ದೊಡ್ಡನಂಜೇಗೌಡ ೭. ಅಭಿನಂದನೀಯ ಕಾರ್ಯ- ಕೆ. ವೆಂಕಟರಾಮಪ್ಪ ಮತ್ತು ಹೆಚ್. ಎಮ್. ಶಂಕರನಾರಾಯಣರಾವ್ ೮. ಮೈಸೂರು ವಾರ್ಸಿಟಿ ಮೇಲೆ ಪೊಳ್ಳು ಆರೋಪ- ಕೆ. ಟಿ. ಚನ್ನಬಸವೇಗೌಡ ೯. ಆರೋಪಗಳ ಉದ್ದೇಶ-ಕೋಣಂದೂರು ಲಿಂಗಪ್ಪ ೧೦. ಕುಲಪತಿಗಳು ಕಂಡ ಸುವರ್ಣಸ್ವಪ್ನ-ಡಾ. ಪ್ರಭುಶಂಕರ ೧೧. ವಿಸ್ಮಯಕಾರಕ ಕ್ರಿಯಾಶಕ್ತಿ-ಪ್ರಪಂಚ ವಾರಪತ್ರಿಕೆ ೧೨. ಕುಲಪತಿ ದೇಜಗೌ-ನಿರಂಜನ ೧೩. ಕನ್ನಡದ ಧ್ಯಾನ-ಎಚ್ಚೆಸ್ಕೆ ೧೪. ಕರ್ತವ್ಯಭಾರ-ಎಚ್ಚೆಸ್ಕೆ ೧೫. ಕನ್ನಡಕ್ಕೊಂದು ಗರಿ- ಡಾ. ಹಾ. ಮಾ. ನಾಯಕ್

೧೭.೫ ಗುಡಿಸಲಿನಿಂದ ಗಂಗೋತ್ರಿಗೆ -ಕೆ. ಆರ್. ಕಮಲೇಶ್

ಮೊ. ಮು. ೧೯೭೯ ಪು. ೮ + ೧೪೩, ಶಿವರಂಜಿನಿ ಪಬ್ಲಿಕೇಷನ್, ಮೈಸೂರು.

ಪೂಜ್ಯ ದೇಜಗೌ ಅವರ ಸಂಕ್ಷಿಪ್ತ ಜೀವನ ಚರಿತ್ರೆ.

೧೭.೬ ದೇಜಗೌ 75-ಒಂದು ಸಂದರ್ಶನ: ಸಂ. ಎಂ. ಶಿವಕುಮಾರಸ್ವಾಮಿ

ಮೊ. ಮು. ೧೯೯೩ ಪು. VIII + ೧೦೦ + ೪ ಚಿತ್ರಗಳು ಸಂವಹನ, ಈವನಿಂಗ್ ಬಸಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು.

೧೮ ಅಭಿನಂದನ ಗ್ರಂಥಗಳು

೧೮.೧ ಅಂತಃಕರಣ (ಸಂ. ಶ್ರೀಕೃಷ್ಣ ಆಲನಹಳ್ಳಿ)

ಮೊ. ಮು. 1972 ಪು. 8 + 274 ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

42 ಲೇಖನಗಳಿವೆ.

೧. ಸಂಬಂಧ ಶ್ರೀ -ಕುವೆಂಪು ೨ ಬಹುಮುಖ ಶಕ್ತಿಯ ಕುಲಪತಿ-ಡಿ ಎಲ್ ನರಸಿಂಹಾಚಾರ್ ೩ ಸ್ವಪ್ರಯತ್ನಪಟು-ಎಸ್. ವಿ. ರಂಗಣ್ಣ ೪ ಸ್ವಸಾಮರ್ಥ್ಯ, ಸ್ವಪ್ರತಿಭೆ- ಎಚ್. ಕೆ. ವೀರಣ್ಣಗೌಡ ೫ ನನ್ನ ತಂದೆ-ಜೆ ಶಶಿಕಲ ೬ ನನ್ನ ಪತಿ -ಸಾವಿತ್ರಮ್ಮ ೭ ನನ್ನ ಬಂಧು-ದೇಸಿಗೌಡ ೮ ಕನ್ನಡದ ಏಕನಿಷ್ಠ ಸೇವೆ:ವಿ ಕೃ ಗೋಕಾಕ ೯ ಕಾಯಕವೇ ಕೈಲಾಸ-ಬಸವರಾಜ ಕಟ್ಟೀಮನಿ ೧೦ ಅನಿಮಿತ್ತ ಬಂಧು-ಸಿಂಪಿಲಿಂಗಣ್ಣ ೧೧ ಸ್ನೇಹಶೀಲ ಸ್ವಭಾವ-ರಾವಬಹಾದ್ದೂರ ೧೨ ಋಣಮುಕ್ತ-ಚದುರಂಗ ೧೩ ವಿನಯಶೀಲ, ಖಂಡಿತವಾದಿ-ಎಚ್ಚೆಸ್ಕೆ ೧೪ ಸರಸ ಸಜ್ಜನಿಕೆಯ ಸಾಕಾರಮೂರ್ತಿ-ಎಂ ಅಕಬರ ಅಲಿ ೧೫ ಅಸಾಧಾರಣ ಕಾರ್ಯನಿರ್ವಾಹಕ-ಆರ್. ಎಲ್ ಹೆಗಡೆ

೧೬ ನಿಷ್ಕಪಟ ಹೃದಯ-ಎನ್ ಪ್ರಹ್ಲಾದರಾವ್ ೧೭ ರಚನಾತ್ಮಕ ಧೋರಣೆ- ಜಿ. ಟಿ. ನಾರಾಯಣರಾವ್ ೧೮ ಶತಾವಧಾನಿ-ಮಿರ್ಜಿ ಅಣ್ಣಾರಾಯ ೧೯ ಕನ್ನಡ ಪ್ರಜ್ಞೆಯ ಪ್ರತೀಕ-ಗೊರೂರು ರಾಮಸ್ವಾಮಿ ಅಯ್ಯಂಗಾರ್ ೨೦ ಸಹಪಾಠಿ-ಸಹೋದ್ಯೋಗಿ -ಜಿ ವರದರಾಜರಾವ್ ೨೧ ಸ್ನೇಹಸೇತು ನಿರ್ಮಾಪಕ-ಎಂ. ಆರ್ ರಾಜಶೇಖರ ಶೆಟ್ಟಿ ೨೨ ಕನ್ನಡದ ಮಿತ್ರ- ಕೆ. ಎಸ್. ಕೃಷ್ಣಮೂರ್ತಿ ೨೩ ಅನ್ಯಾದೃಶ ಶಿಷ್ಯವಾತ್ಸಲ್ಯ-ಹಂಪ ನಾಗರಾಜಯ್ಯ ೨೪ ಸುಲಭಸಾಧ್ಯರು- ಟಿ. ವಿ. ವೆಂಕಟಾಚಲ ಶಾಸ್ತ್ರೀ ೨೫ ನಿರ್ಮಲ ಸ್ನೇಹ- ಬಿ. ಎಸ್. ರುಕ್ಕಮ್ಮ ೨೬ ಪರೇಂಗಿತ ಪ್ರಜ್ಞೆ -ಸುಧಾಕರ ೨೭ ಶಿಕ್ಷಕ ರಕ್ಷಾಮಣಿ-ಪ ಪಿ ಚಂದ್ರಶೇಖರ ೨೮ ಆತ್ಮೀಯತೆಯ ಶ್ರೀಗುರು-ಜಿ. ಎಸ್. ಪರಶಿವಮೂರ್ತಿ ೨೯ ಸೌಜನ್ಯ ಪೂರ್ಣತೆ-ಎಚ್. ತಿಪ್ಪೇರುದ್ರ ಸ್ವಾಮಿ ೩೦ ಅನ್ನದಾತ-ಸಿಪಿಕೆ ೩೧ ಕನ್ನಡದ ಪುಣ್ಯ-ಪ್ರಧಾನ್ ಗುರುದತ್ ೩೨ ವಾತ್ಸಲ್ಯಪಕ್ಷ-ರಾಗೌ ೩೩ ರೂವಾರಿ-ಜೀ ಶಂ ಪರಮಶಿವಯ್ಯ ೩೪ ಬಹುಮುಖ ವಿಚಾರಧಾರೆ-ಹಾ. ಮಾ. ನಾಯಕ ೩೫ ಕರ್ಮವೀರ-ಎಸ್ ವಿ. ಪಾಟೀಲ ೩೬ ಅಚ್ಚಕನ್ನಡ ಒಕ್ಕಲು-ಎಚ್ಚೆಸ್ಕೆ ೩೭ ಕರ್ತೃತ್ವಶಕ್ತಿ- ಹ. ವೆಂ. ನಾಗರಾಜರಾವ್ ೩೮ ಧ್ಯೇಯ ಸಂಪನ್ನ-ಅರಳುಮಲ್ಲಿಗೆ ಪಾರ್ಥಸಾರಥಿ ೩೯ ಶಿಕ್ಷಣ ತಜ್ಞ-ಜಿ. ಎಸ್. ಭಟ್ಟ ೪೦ ತೀರ್ಥಸ್ನಾನ-ತರಾಸು ೪೧ ಭದ್ರರಕ್ಷೆ-ಗೀತಾ ಕುಲಕರ್ಣಿ ೪೨ ಶೈಕ್ಷಣಿಕ ಹೋರಾಟ-ಮೇ ರಾಜೇಶ್ವರಯ್ಯ

೧೮.೨ ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ (ಸಂ. ಹಾ. ಮಾ. ನಾಯಕ)

ಮೊ. ಮು. ೧೯೬೮ ಪು. ೧೬+೩೦೪ ದೇಜಗೌ ಗೆಳೆಯರ ಬಳಗದ ಪ್ರಕಟಣೆ. ಮೈಸೂರು. ೩೧ ಲೇಖನಗಳಿವೆ

೧ ದೇಜಗೌ-ಜೀವನ ಪರಿಚಯ-ಹಾ ಮಾ ನಾಯಕ ೨ ಹೋರಾಟದ ಬದುಕು-ದೇಜಗೌ ೩ ಸಾಧುಗೆ ಸಾಧು-ಎಸ್ ವಿ ರಂಗಣ್ಣ ೪ ಧ್ಯೇಯ ಸಂಪನ್ನ-ಪುತಿನ ೫ ಉದಯರವಿ ಕಿರಣಗಳು ಪಲ್ಲವಿಸಿದ ಪುಷ್ಪ-ಎಂ ಮರಿಯಪ್ಪ ಭಟ್ಟ ೬ ಹೂವಿಗಿಂತ ಮೃದು: ವಜ್ರಕ್ಕಿಂತ ಕಠೋರ-ಆರ್ ಸಿ ಹಿರೇಮಠ ೭ ಕನ್ನಡದ ಹಿತರಕ್ಷಕ ಡಿ ಕೆ ಭೀಮಸೇನರಾವ್ ೭ ಕನ್ನಡದ ಶಕ್ತಿ-ಬಿ ಶಿವಮೂರ್ತಿ ಶಾಸ್ತ್ರಿ ೮ ಕನ್ನಡದ ಕಿರೀಟ-ಬಸವರಾಜ ಕಟ್ಟೀಮನಿ ೯ ಹೋರಾಟಗಾರ - ಸ. ಸ. ಮಾಳವಾಡ ೧೦ ಅಭಯಹಸ್ತ-ತರಾಸು ೧೧ ದಂಡನಾಯಕ-ನಿರಂಜನ ೧೨ ವಿನಯಮೂರ್ತಿ-ಕೆ. ಕೃಷ್ಣಮೂರ್ತಿ ೧೩ ಅಣ್ಣ-ಕು ಶಿ ಹರಿದಾಸ ಭಟ್ಟ ೧೪ ಸ್ನೇಹಿತ-ವಿ ಎಂ ಇನಾಂದಾರ್ ೧೫ ಸ್ನೇಹಪರ ವಿದ್ವಾಂಸ- ಜಿ ವೆಂಕಟಸುಬ್ಬಯ್ಯ ೧೬ ವಾಸ್ತವವಾದಿ-ಕೋ ಚನ್ನಬಸಪ್ಪ ೧೭ ವಿದ್ವತ್ತು ವ್ಯವಹಾರ ಕೌಶಲ್ಯಗಳ ಸರಿಬೆರಕೆ-ಸಿದ್ದಯ್ಯ ಪುರಾಣಿಕ ೧೮ ಜವಾಹಿರಿಗೌಡರು-ಎಚ್ ಎಂ ಶಂಕರ ನಾರಾಯಣ ರಾವ್ ೧೯ ಹೆಂಗರುಳು-ಚದುರಂಗ ೨೦ ಮಾರ್ಗದರ್ಶಕ-ಎಚ್ ಎಲ್ ನಾಗೇಗೌಡ ೨೧ ಅನುಕರಣೀಯ ಆದರ್ಶ-ಕೆ ವೆಂಕಟರಾಮಪ್ಪ ೨೨ ಮೂರು ವಿಮರ್ಶನಗ್ರಂಥಗಳು- ಸಿಪಿಕೆ. ೨೩ ನಾಲ್ಕು ಅನುವಾದಗಳು-ಎಂ ರಾಮರಾವ್ ೨೪ ಸಂಪಾದಿತ ಕೃತಿಗಳು-ಎಚ್ ತಿಪ್ಪೇರುದ್ರಸ್ವಾಮಿ ೨೫ ಇಬ್ಬರು ಕನ್ನಡ ಸಾಹಿತಿಗಳ ಜೀವನ ಚಿತ್ರಣ-ಎಸ್ ವಿ ಪರಮೇಶ್ವರ ಭಟ್ಟ ೨೬ ಸಾಹಿತಿಗಳ ಸಂಗದಲ್ಲಿ-ಎಚ್ಚೆಸ್ಕೆ ೨೭ ಮೋತಿಲಾಲ್ ನೆಹ್ರೂ- ಗೊರೂರು ರಾಮಸ್ವಾಮಿ ಅಯ್ಯಂಗಾರ್ ೨೮ ಎರಡು ಐತಿಹಾಸಿಕ ಕಥಾನಕಗಳು-ಜಿ ವರದರಾಜರಾವ್ ೨೯ ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ-ಸುಜನಾ ೩೦ ಹೊಸದಾಗಿ ಓದು ಕಲಿತ ವಯಸ್ಕರ ಮತ್ತು ಮಕ್ಕಳ ಸಾಹಿತ್ಯ ಉ ಕಾ ಸುಬ್ಬರಾಯಾಚಾರ್ ೩೧ ವಿದ್ಯಾಪೀಠಗಳು- ರಾ ವೆಂ. ಶ್ರೀನಿವಾಸಮೂರ್ತಿ

೧೮.೩ ರಸಪುಷ್ಪಿ (ಸಂ. ಕೆ. ವಿ. ಶಂಕರಗೌಡ)

ಮೊ. ಮು. ೧೯೮೦: ಪು . ೯೩೬+೧೬. ದೇಜಗೌ ಷಷ್ಟ್ಯಬ್ಧಿನಂದನ ಸಮಿತಿ. ಮೈಸೂರು. ೧೧೩ ಲೇಖನಗಳಿವೆ

೧ ದೇಜಗೌ- ಕೆ ವಿ ಶಂಕರಗೌಡ ೨ ಅಪೂರ್ವ ವಿದ್ಯಮಾನ-ಎಸ್ ವಿ ರಂಗಣ್ಣ ೩ ಶ್ರೇಷ್ಠ ವ್ಯಕ್ತಿ- ಎಸ್ ಬಿ ನಾಗರಾಜ ೪ ಶತಾಯುವಾಗಲಿ-ಗೊರೂರು ರಾಮಸ್ವಾಮಿ ಅಯ್ಯಂಗಾರ್ ೫ ಹೆಮ್ಮೆ ತಂದ ಆಡಳಿತಗಾರ-ಸಿ ನಿಜಲಿಂಗಪ್ಪ ೬ ಸೌಜನ್ಯಶೀಲ-ಕಡಿದಾಳ ಮಂಜಪ್ಪ ೭ ಚೊಕ್ಕ ಸಂಸಾರಿ-ಪು ತಿ ನರಸಿಂಹಾಚಾರ್ ೮ ಸ್ನೇಹದ ಸಾಕಾರಮೂರ್ತಿ-ಆರ್ ಸಿ ಹಿರೇಮಠ ೯ ಪುರುಷ ಸಿಂಹ-ಎಚ್ ಎಂ ಶಂಕರನಾರಾಯಣರಾವ್ ೧೦ ಶ್ರೀ ಸಾಮಾನ್ಯ-ಪಿ. ಎನ್ ಜವರಪ್ಪಗೌಡ ೧೧ ದೊಡ್ಡಮನಸ್ಸಿನ ದಿಟ ವ್ಯಕ್ತಿ- ಬಸವರಾಜ ಕಟ್ಟೀಮನಿ ೧೨ ಅನುಕರಣೀಯ ಮಾರ್ಗದರ್ಶಕ-ಎಂ ಎಸ್ ಆತ್ಮಾನಂದ ೧೩ ಗುರುವರೇಣ್ಯ-ಅಲಮೇಲು ಅಯ್ಯಂಗಾರ್ ೧೪

ಸ್ವಲ್ಪ ದೂರದಿಂದ -ಚೆನ್ನವೀರ ಕಣವಿ ೧೫ ವಿನಯಶಾಲಿ ವೀರ ಕನ್ನಡಿಗ-ಎಂ ವಿ ಸೀತಾರಾಮಯ್ಯ ೧೬ ಕನ್ನಡದ ಕುಲಪತಿ-ಕೆ ರಾಮಕೃಷ್ಣ ಉಡುಪ ೧೭ ಕನ್ನಡದ ಧೀರ ಸೇನಾನಿ -ಕಯ್ಯಾರ ಕಿಞ್ಞಣ್ಣ ರೈ ೧೮ ಸಮರ್ಥ ಇಂಜನೀಯರ್-ಎಂ ಚಿಕ್ಕಣ್ಣಯ್ಯಪ್ಪ ೧೯ ಆತ್ಮೀಯ ಮಿತ್ರ-ಕು ಶಿ ಹರಿದಾಸ ಭಟ್ಟ ೨೦ ಹಿರಿತನದ ಹಿರಿಯ-ಹೆಚ್ ಆರ್ ದಾಸೇಗೌಡ ೨೧ ಆಚಾರ್ಯ ದ್ರೋಣ- ವಿ ಪುಟ್ಟಮಾದಪ್ಪ ೨೨ ಮಾನವ ಕುಲಪತಿ-ಸಿ ಕೆ ಎನ್ ರಾಜ ೨೩ ಧೀಮಂತ ವ್ಯಕ್ತಿ-ಹೆಚ್ ನರಸಿಂಹಯ್ಯ ೨೪ ವಿಶಾಲ ಹೃದಯ-ಟಿ ಎಸ್ ರಾಜಾಮಣಿ ೨೫ ಅಚಲ ಗಾಂಧೀವಾದಿ- ಕೆ ಎಸ್ ನಾರಾಯಣ ಸ್ವಾಮಿ ೨೬ ಕನ್ನಡದ ಕೆಲಸದಲ್ಲಿ- ಯು ಆರ್ ಅನಂತಮೂರ್ತಿ ೨೭ ಕನ್ನಡದ ಹಿತರಕ್ಷಕ- ಸಾ ಮಂಚಯ್ಯ ೨೮ ನನಗೊಲಿದ ಭಾಗ್ಯ-ಎಂ. ಆರ್ ಸಣ್ಣರಾಮೇಗೌಡ ೨೯ ಗೃಹತಪಸ್ವಿನಿಯ ಭಾಗ್ಯವಂತ-ಪಾರ್ವತಮ್ಮ ಜವರಪ್ಪಗೌಡ ೩೦ ಮರೆಯಲಾರದ ಬೋಧಕ- ಎಚ್ ಎಚ್ ಅಣ್ಣಯ್ಯಗೌಡ ೩೧ ಚಾಣಾಕ್ಷ ಕಾರ್ಯಕರ್ತ-ಜಿ ಎಸ್ ಗಾಯಿ ೩೨ ಕನ್ನಡ ರಥಿಕ -ಎಸ್ ಮೋಹಿನಿ ೩೩ ಕನ್ನಡ ಮತ್ತು ನಾನು-ಕೆ ಶಿವರಾಮ ಐತಾಳ ೩೪ ಕನ್ನಡದ ಅಭಿಜ್ಞಾನ-ಎಂ ಎಲ್ ಅಚ್ಯುತರಾವ್ ೩೫ ಸಹಜ ಉದಾರಿ-ಕೊ ವ್ಯಾ ರಮೇಶ ೩೬ ಅಭಯಹಸ್ತ-ಜೆ ಆರ್ ನಂಜುಂಡೇಗೌಡ ೩೭ ನಮ್ಮ ಅಕ್ಕರೆಯ ತಂದೆ- ಜೆ ಶಶಿಧರ ಪ್ರಸಾದ್ ೩೮ ಡಾ ದೇಜಗೌ ಸಾಂಗತ್ಯ-ಎಸ್ ವಿ ಪರಮೇಶ್ವರ ಭಟ್ಟ ೩೯ ದೇಜಗೌ ದೀಕ್ಷೆ-ಜಿ ಜಿ ಮಂಜುನಾಥನ್ ೪೦ ಮೋಡಿಕಾರ-ಪುಲಿಕೇಶಿ ೪೧ ದೇಜಗೌ ಕುರಿತು-ಕೇ ನ ಶಿವತೀರ್ಥನ್ ೪೨ ನಾಡವರ ಸಂಕುಲದ ಕುಲಪತಿ- ಡಿ ಎಸ್ ಭಿಡೆ ೪೩ ಹೆಪ್ಪುಗಟ್ಟಿದ ತುಪ್ಪ ದೇಜಗೌ- ಸಂಗಮೇಶ ಹಂಡಗಿ ೪೪ ಡಾ. ದೇ ಜವರೇಗೌಡ-ಚಂದ್ರಶೇಖರ ಹಿರೇಮಠ ೪೫ ಕನ್ನಡದ ಕಣ್ಮಣಿ - ದೇಜಗೌ ನಾಗವೇಣಿ ಮತ್ತಿಹಳ್ಳಿ ೪೬ ನನ್ನನ್ನು ನಾ ಕಂಡಂತೆ-ದೇ ಜವರೇಗೌಡ ೪೭ ದೇಜಗೌ ಟ್ರಸ್ಟ್ ಉಗಮ ವಿಕಾಸ-ಸಾವಿತ್ರಮ್ಮ ೪೮ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್-ನಭ ೪೯ ದೇಜಗೌ ಮತ್ತು ಕನ್ನಡ ಅಧ್ಯಾಪಕ ಪರಿಷತ್ತು-ಹೆಚ್ ನಂಜೇಗೌಡ ೫೦ ಜ್ಞಾನೋದಯದಿಂದ ಮಹಾಜನ ಸಭಾ-ಕೆ ಆರ್ ಕಮಲೇಶ್ ೫೧ ಹೋರಾಟದ ಬದುಕು- ಒಂದು ನೋಟ-ವಿ ಕೃ ಗೋಕಾಕ್ ೫೨ ರಾಷ್ಟ್ರಕವಿ ಕುವೆಂಪು-ಬಿ. ಎಚ್ ಶ್ರೀಧರ ೫೩ ಕ್ರಾಂತಿಕಾರ ಡಾ ಅಂಬೇಡ್ಕರ್-ಬಿ ಎಸ್ ಗುಂಡೂರಾವ್ ೫೪ ಕಡುಗಲಿ ಕುಮಾರ ರಾಮ- ದು ನಿಂ. ಬೆಳಗಲಿ ೫೫ ತೀನಂಶ್ರೀ-ಮಂಚಯ್ಯ ೫೬ ನೆನಪು ಕಹಿಯಲ್ಲ-ಸದಾಶಿವ ಎಣ್ಣೆ ಹೊಳೆ ೫೭ ಸಾಹಿತಿಗಳ ಸಂಗದಲ್ಲಿ -ಟಿ ವಿ ಪದ್ಮಾವತಿ ೫೮ ಕಿರಿಯರಿಗಾಗಿ-ಎಂ ವಿ ನಾಗರಾಜರಾವ್ ೫೯ ಗದ್ಯಶೈಲಿ-ಕೆ ಕೃಷ್ಣಮೂರ್ತಿ ೬೦ ಕೆನೆ-ಸಿದ್ಧಯ್ಯ ಪುರಾಣಿಕ ೬೧ ಗದುಗಿನ ಭಾರತ-ಒಂದು ಸಾಂಸ್ಕೃತಿಕ ಅಧ್ಯಯನ-ಕೆ ಅನಂತರಾಮು ೬೨ ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ-ಟಿ ಕೇಶವ ಭಟ್ಟ ೬೩ ನಂಜುಂಡ ಕವಿ-ಜಿ ವರದರಾಜರಾವ್ ೬೪ ಕುಲಪತಿಯ ಪತ್ರಗಳು-ಜಿ ವಿ ಡಿ ೬೫ ತುಡಿತ-[illegible] ಪಟ್ಟಾಭಿ ೬೬ ಕುವೆಂಪು ಅವರ ಶಿಕ್ಷಣ ತತ್ವವಿಚಾರ- ಎಸ್ ಶಂಕರನಾರಾಯಣಭಟ್ಟ ೬೬ ಕನ್ನಡಿಗರೆ ಎಚ್ಚರಗೊಳ್ಳಿ ಮತ್ತು ನಿರಂತರ-ಎಲ್ ಎಸ್ ಶೇಷಗಿರಿರಾವ್ ೬೭ ಸಾಹಿತ್ಯ ಮಾರ್ಗ - ವೈ ಸಿ ಭಾನುಮತಿ ೬೮ ನಾಗರಾಜನ ಪುಣ್ಯಾಸ್ರವ-ರಂ ಶ್ರೀ ಮುಗಳಿ ೬೯ ಲೀಲಾವತಿ ಪ್ರಬಂಧ- ಎಂ ಎಸ್ ಸುಂಕಾಪುರ ೭೦ ಜಾನಪದ ಅಧ್ಯಯನ-ಆರ್ವೀಯಸ್ ಸುಂದರಂ ೭೧ ಜಾನಪದ ಸೌಂದರ್ಯ- ಶಂ ಸ ಐತಾಳ ೭೨ ಬೆರಕೆಸೊಪ್ಪು-ಬಿ ಶಾಮಸುಂದರ ೭೩ ಶಿಕ್ಷಣ ಸಂಸ್ಕೃತಿ ಮತ್ತು ಸಮಾಜ-ಎನ್ ಎಸ್ ವೀರಪ್ಪ ೭೪ ಬೆಂಗಳೂರು ಕೆಂಪೇಗೌಡ-ಚಕ್ಕೆರೆ ಶಿವಶಂಕರ್ ೭೫ ಕುಲಪತಿಯ ದಿನಚರಿ-ಜಿ ಎಸ್ ಭಟ್ಟ ೭೬ ಪ್ರವಾಸಿ ದಿನಚರಿ-ಲಿಂಗೇಗೌಡ ಬೆಳಕೆರೆ ೭೭ ಶ್ರೀ ರಾಮಾಯಣ ದರ್ಶನಂ ಉಪನ್ಯಾಸಮಾಲೆ-ಸರೋಜ ನಂಜುಂಡೇಗೌಡ ೭೮ ಕುಲಪತಿಯ ಭಾಷಣಗಳು-ರಾಮಕೃಷ್ಣ ಜೋಷಿ ೭೯ ವಿದೇಶದಲ್ಲಿ ನಾಲ್ಕುವಾರ-ಗೌರೀಶ ಕಾಯ್ಕಿಣಿ ೮೦ ಆಫ್ರಿಕಾ ಯಾತ್ರೆ-ಜೆ ಎಸ್ ಪರಶಿವಮೂರ್ತಿ ೮೧ ಯೇಸು ವಿಭೀಷಣರ ನಾಡಿನಲ್ಲಿ- ಕೆ ಎನ್ ರಾಮಕೃಷ್ಣ ೮೨ ವಿಷವೃಕ್ಷ ನಾಟಕ-ಎಚ್ ಕೆ ರಾಮನಾಥ್ ೮೩ ಮುನ್ನುಡಿಗಳು- ಬಿ ನಂ ಚಂದ್ರಯ್ಯ ೮೪ ನೂರೆಂಟು ಪುಸ್ತಕಗಳು-ಕೆ ಆರ್೮೫ ಹಮ್ಮು-ಬಿಮ್ಮು-ಸ ಸ ಮಾಳವಾಡ ೮೬ ಅಕ್ಬರ್-ಶ್ರೀನಿವಾಸ ಉಡುಪ ೮೭ ಭಾಷಾಂತರ ಕಲೆಯಲ್ಲಿ ದೇಜಗೌ ಅವರ ಸಾಧನೆ - ವಿ ಜಿ ಕೃಷ್ಣಮೂರ್ತಿ ೮೮ ದೇಜಗೌ ಶೈಲಿ- ಎಂ ರಾಮಕೃಷ್ಣ ೮೯ ದೇಜಗೌ ಶಬ್ದ ಪ್ರಯೋಗ ಪರಿಣತಿ-ನಂ ತಪಸ್ವಿಕುಮಾರ್ ೯೦ ದೇಜಗೌ ಮತ್ತು ಭಾಷಾ ವಿಜ್ಞಾನ-ಸೋಮಶೇಖರಗೌಡ ೯೧ ಸಂಪಾದನ ಕಾರ್ಯಕೌಶಲ-ಸಗರ ಕೃಷ್ಣಾಚಾರ್ಯ ೯೨ ಸಾಹಿತ್ಯದ ವಿಮರ್ಶಕರಾಗಿ ದೇಜಗೌ- ನಿಂಗಣ್ಣ ಸಣ್ಣಕ್ಕಿ ೯೩ ಶ್ರೀ ಕುವೆಂಪು ಕಾವ್ಯದ ವ್ಯಾಖ್ಯಾನಕಾರ ದೇಜಗೌ- ಸಾ. ಶಿ. ಮರುಳಯ್ಯ ೯೪ ಜಾನಪದ ಜ್ಯೋತಿ ಜವರೇಗೌಡರು-ಮಲ್ಲಿಕಾರ್ಜುನ ೯೫ ಕನ್ನಡ ಜಾನಪದಕ್ಕೆ ದೇಜಗೌ ಅವರ ಕೊಡುಗೆ-ತೀ ನಂ ಶಂಕರನಾರಾಯಣ ೯೬ ಡಾ. ದೇಜಗೌ ಅವರ ಹಳಗನ್ನಡ ವಿದ್ವತ್ತು-ಕೆ. ರಾಘವೇಂದ್ರರಾವ್ ೯೭ ಕನ್ನಡ ನಿಘಂಟು ರಚನೆಯಲ್ಲಿ ದೇಜಗೌ

ಪಾತ್ರ- ಎನ್. ಬಸವಾರಾಧ್ಯ ೯೮ ದೇಜಗೌ ಸಾಹಿತ್ಯದಲ್ಲಿ ಬರುವ ನುಡಿಗಟ್ಟುಗಳು-ಎಂ ಪಿ ಚಿತ್ರಲಿಂಗಯ್ಯ ೯೯ ಗದ್ಯ ಸಾಹಿತಿಯಾಗಿ ದೇಜಗೌ-ಕೆ ಭೈರವ ಮೂರ್ತಿ ೧೦೦ ಗಾಂಧೀ ವಿಚಾರ ಮತ್ತು ದೇಜಗೌ-ಜಿ ಪಿ ನಾರಾಯಣಮೂರ್ತಿ ೧೦೧ ದೇಜಗೌ ಮತ್ತು ಕನ್ನಡ- ಚದುರಂಗ ೧೦೨ ಭಾಷೆಗಳನ್ನು ಕುರಿತು ದೇಜಗೌ ವಿಚಾರಗಳು- ರಾಜೇಶ್ವರಯ್ಯ ೧೦೩ ವಿಚಾರಶೀಲ ದೇಜಗೌ- ಡಿ. ಕೆ. ರಾಜೇಂದ್ರ ೧೦೪ ದೇಜಗೌ ಮತ್ತು ವೈಚಾರಿಕತೆ- ಶ್ರೀಕಂಠ ಕಡಿಗೆ ೧೦೫ ದೇಜಗೌ ಅವರ ಭಾಷಣಗಳಲ್ಲಿ ಪರಿಸರ ಪ್ರಜ್ಞೆ - ಶ್ರೀ ನಾಗರಾಜರಾವ್ ೧೦೬ ದೇಜಗೌ ಸಾಹಿತ್ಯದಲ್ಲಿ ಐತಿಹಾಸಿಕ ಪ್ರಜ್ಞೆ-ಡಿ ಪ ಮುತ್ತೇಗೌಡ ೧೦೭ ಭಾಷೆ ಶಿಕ್ಷಣ ಮತ್ತು ಆಡಳಿತದಲ್ಲಿ ಕುಶಾಲಪ್ಪಗೌಡ ೧೦೮ ದೇಜಗೌ ಅವರ ಕೆಲವು ಶೈಕ್ಷಣಿಕ ವಿಚಾರಗಳು-ಹೆಚ್. ಪಿ. ಶ್ರೀರಂಗರಾಜು ೧೦೯ ಪೂರ್ಣತೆಯ ವಿನ್ಯಾಸ-ಸಿಪಿಕೆ ೧೧೦ ದೇಜಗೌ ದರ್ಶನ ಸಂದರ್ಶನ-ತಿಪ್ಪೇಸ್ವಾಮಿ ೧೧೧ ದೇಜಗೌ- ವಯಸ್ಕರ ಶಿಕ್ಷಣ-ರಾ ವೆಂ ಶ್ರೀ ೧೧೨ ದೇಜಗೌ ಸಾಹಿತ್ಯಕ ದರ್ಶನ-ಚಿರಂತನ ೧೧೩ ಸನ್ಮಾನ ಪತ್ರಗಳಲ್ಲಿ ದೇಜಗೌ- ನಟರಾಜ ಚೌಧುರಿ.

೧೮.೪ ದೇಜಗೌ ಎಪ್ಪತ್ತರ ಹೊಸ್ತಿಲಲ್ಲಿ (ಸಂ. ಎಂ. ಆರ್. ಸಣ್ಣರಾಮೇಗೌಡ)

ಮೊ ಮು. ೧೯೮೭ ಪು. XVI + ೩೪೦ ದೇಜಗೌ ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು.

ಆದಿಯಲ್ಲಿ ಅಭಿನಂದನೆ-ಸಿಪಿಕೆ ೧ ಶ್ರೀ ಗುರುದರ್ಶನ- ಡಾ. ಎ. ಎಸ್. ವೇಣುಗೋಪಾಲರಾವ್ ೨. ದೇಜಗೌ-ಡಾ. ಮಾಣಿಕರಾವ್‌ಧನಶ್ರೀ ೩ ಕನ್ನಡ ಅಧ್ಯಯನ ಸಂಸ್ಥೆಯ ರೂವಾರಿ ದೇಜಗೌ-ಡಾ. ಹೆಚ್ ತಿಪ್ಪೇರುದ್ರಸ್ವಾಮಿ ೪ ಗುಡಿಸಲಿನ ತಳದಿಂದ ಗಂಗೋತ್ರಿಯ ನೆತ್ತಿಯವರೆಗೆ - ಪ್ರೊ. ದೇಜಗೌ - ಪ್ರೊ. ಎಚ್ಚೆಸ್ಕೆ ೫ ದೇ ಜವರೇಗೌಡಡಾ. ಜೀ. ಶಂ. ಪರಮಶಿವಯ್ಯ ೬ ಲೋಕಾಭಿರಾಮಪ್ರೊ ಕು. ಶಿ ಹರಿದಾಸಭಟ್ಟ ೭ ಕನ್ನಡದ ಸೇನಾನಿಡಾ. ಹೆಚ್. ಸಿ. ವಿಷ್ಣುಮೂರ್ತಿ ೮ ದೇಜಗೌತಿಅರವತ್ತುಶಿವರಾಮು ಕಾಡನಕುಪ್ಪೆ ೯ ಕನ್ನಡ ಡಿಂಡಿಮ ದೇಜಗೌ ಹೆಚ್. ಜೆ. ಲಕ್ಕಪ್ಪಗೌಡ ೧೦ ಪ್ರೊ. ಜವರೇಗೌಡ ಪ್ರೊ. ಎಚ್ಚೆಸ್ಕೆ ೧೧ ದೇ ಜವರೇಗೌಡ(ದೇಜಗೌ)-ಸಿ. ಎಸ್. ಶಿವಕುಮಾರ ಸ್ವಾಮಿ ೧೨ ದೇಜಗೌ ಮತ್ತು ಭಾರತೀಯ ಸ್ಥಳನಾಮ ಪರಿಷತ್-ಡಾ. ಕೆ. ಪಿ. ರಮೇಶ ೧೩ ಮಕ್ಕಳೇ. ಇವರನ್ನು ನೀವು ಬಲ್ಲಿರಾ ಎಸ್. ಪಿ. ಶ್ರೀನಿವಾಸರಾವ್ ೧೪. ಪ್ರೊ. ದೇಜಗೌ ಅವರ ಶೈಕ್ಷಣಿಕ ವಿಚಾರಗಳು-ಕ್ಯಾತನಹಳ್ಳಿ ರಾಮಣ್ಣ ೧೫ ವಿಶ್ವಕೋಶ, ದೇಜಗೌ ಮತ್ತು ನಾನು- ಜಿ. ಟಿ. ನಾರಾಯಣರಾವ್ ೧೬ ದೇಜಗೌ ರವರ ಮೊದಲ ನಾಟಕ ಕೃತಿ 'ವಿಷವೃಕ್ಷ' ನಾಟಕ-ಡಾ. ಹೆಚ್ ಬಿ. ಯಶೋಧರ ೧೭ ದೇಜಗೌ ಅವರು ಸಂಪಾದಿಸಿದ ಪುಣ್ಯಾಸ್ರವ ಮತ್ತು ರುಕ್ಮಾಂಗದ ಚರಿತ್ರೆ- ಡಾ. ಎ. ಎಸ್. ವೇಣುಗೋಪಾಲರಾವ್ ೧೮ ದೇಜಗೌ ಅವರ ಇತ್ತೀಚಿನ ಕೃತಿಗಳು-ಡಾ. ಡಿ. ಕೆ. ರಾಜೇಂದ್ರ ೧೯ ಜಾನಪದ ಅಧ್ಯಯನ-ಒಂದು ಸಮೀಕ್ಷೆ- ಡಾ. ನಂ. ತಪಸ್ವೀಕುಮಾರ್ ೨೦ ಕ್ರಾಂತಿಕಾರ ಡಾ. ಅಂಬೇಡ್ಕರ್-ದು. ನಿಂ. ಬೆಳಗಲಿ ೨೧ ಜಾನಪದ ಹರಿಕಾರ ದೇಜಗೌ- ಚಕ್ಕೆರೆ ಶಿವಶಂಕರ್ ೨೨ ಹೋರಾಟದ ಬದುಕು-ಭಾಗ ೨ -ದೇಜಗೌ ೨೩ ದೇಜಗೌ ಗ್ರಂಥ ಸೂಚಿ -ಎಂ. ಆರ್. ಸಣ್ಣರಾಮೇಗೌಡ.

೧೯. ದೇಜಗೌ ಅವರ ಕೃತಿಗಳು ಇತರ ಭಾಷೆಗಳಲ್ಲಿ

೧೯.೧. **Basava Deepti-** Basava Belaku has Selected by C. Kamala Devi, Institute of Kannada Studies into Malayalam. Published by Dr. K. Sadasivan c/o Basava Tatwa Prachara Trust Bangalore Pub. 1988

೧೯.೨. **ಬಸವ ವಿಳಕ್ಕು** Translated into Tamil by Dr. Shantha Gnana Deshikan Prof of Tamil in Published 1989 PP

೨೦. ಇಂಗ್ಲೀಷ್ ಕೃತಿಗಳು

೨೦.೧ **Culture, Education and Society** 139

1974. P. P. 210 + 10 Institute of Development Studies, Mysore University, Mysore.

Contains a set of selected lectures and speeches. It covers a wide spectrum of subjects such as religion, history, international understanding, social science research, population problem, centre-state relations, land reforms, regional planning, higher education and contemporary Literature

1. Cultural unity of India as Revealed in Folklore 2. Guru Nanak and his Philosophy 3. Hoysalas contributions to the composite culture of Karnataka 4. Recent Trends in Historical Development 5. Mutual understanding- need of the day 6. Andhras are nearer to Kannadigas than others 7. Americanism 8. Social Science Research for Planning and Development 9. Population Problem of India 10. Centre-State Relations-Perspectives in India 11. On Land Reforms in Karnataka 12. Regional planning for District Development 13. Our Food Habits 14. University, Society and the state: A critique of the proposed Karnataka University, Bill, 1973. 15 Towards a New Approach to University Education 16 Pre-university Education Some basic issues and problems. 17. On continuing education 18. Educating the Rural Masses 19. Higher Education in India 20. Personality and Adjustment 21. Need for Training in Research Methodology 22. Tribal Languages of India 23. Hiriyanna's contribution to Sanskrit 24. Contemporary Indian Drama 25 Impact of Marxism on Indian Literature 26 American Literature: Its Relevance to India 27 Gandhiji in Indian Literature 29. Vamshavriksha: A social novel.

೨೦.೨ **Oxford Picture Dictionary (with Shashikala Chandra shekar)** **140**

Kannada and English

೨೦.೩ **Selected Poems of Kuvempu ed by Dr. Javaregowda and Pradhan Gurudata** **141**

Pub. 1988. Ppx11 + 242 Sri Kuvempu Vidya Parishat, Mysore.

೨೧ ದೇಜಗೌ ಜೀವನದ ಮುಖ್ಯ ಘಟನೆಗಳು

1918 ಜನನ (ಜುಲೈ-6)

1941 ಬಿ. ಎ. ಆನರ್ಸ್ ಪದವಿ

1941 -42 ಸ್ವಾತಂತ್ರ್ಯ ಹೋರಾಟ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು ಒಂದು ವರ್ಷ ಕಾಲ ವಿದ್ಯಾಭ್ಯಾಸ ತ್ಯಜಿಸಿದ್ದುಂಟು

1943 ಎಂ. ಎ. ಪದವಿ. ವಿವಾಹ. ಸೆಕ್ರೆಟರಿಯೇಟ್‌ನಲ್ಲಿ ಗುಮಾಸ್ತೆ ಉದ್ಯೋಗ

1946 ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ

1949 ಮೊದಲ ಕೃತಿ "ನೆನಪು ಕಹಿಯಲ್ಲ" (ಅನುವಾದ)

1954 ಕಾರ್ಯದರ್ಶಿ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆಗಳು (ಪ್ರಸಾರಾಂಗ)

1955 ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್. ಮೈಸೂರು ವಿಶ್ವವಿದ್ಯಾನಿಲಯ

1957 ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿ ಮತ್ತು ಪ್ರಿಂಟಿಂಗ್ ಪ್ರೆಸ್ಸಿನ ಕಾರ್ಯನಿರ್ವಾಹಕ ಅಧಿಕಾರಿ

1960 ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲ್

1960 ಕನ್ನಡ ವಿಭಾಗದ ರೀಡರ್ ಮತ್ತು ವಾರ್ಡನ್. ಪಿ. ಜಿ. ಹಾಸ್ಟಲ್ ಮಾನಸಗಂಗೋತ್ರಿ ಮೈಸೂರು

1962 ಕನ್ನಡ ಪ್ರಾಧ್ಯಾಪಕರು ಮತ್ತು ಇಲಾಖೆಯ ಮುಖ್ಯಸ್ಥರು

1963 ೪೪ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ "ಸಾಹಿತ್ಯ ಗೋಷ್ಠಿ"ಯ ಉದ್ಘಾಟನೆ

1965 ವಿಶ್ವವಿದ್ಯಾನಿಲಯದ ಕಲಾವಿಭಾಗದ ಡೀನ್. "ಪುನರುತ್ಥಾನ" ಪ್ರಕಟಣೆ.

1966 ಕನ್ನಡ ಅಧ್ಯಯನ ಸಂಸ್ಥೆಯ ಆರಂಭ. ಸಂಸ್ಥೆಯ ಪ್ರಥಮ ಸಂಸ್ಥಾಪಕ ನಿರ್ದೇಶಕರು

1967 "ಸೋವಿಯಟ್ ಲ್ಯಾಂಡ್" ನೆಹ್ರು ಪ್ರಶಸ್ತಿ

1967 ೪೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ "ಸಾಹಿತ್ಯಗೋಷ್ಠಿ" ಅಧ್ಯಕ್ಷತೆ. ತುಮಕೂರು.

1968 "ಜ್ಞಾನ ಗಂಗೋತ್ರಿ" ಸಂಪಾದಕ ಸಮಿತಿಯ ಅಧ್ಯಕ್ಷರು

1968 ಉಪಾಧ್ಯಕ್ಷರು. ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು

1968 ಮೈಸೂರು ವಿಶ್ವವಿದ್ಯಾನಿಲಯದ. ಸಿಂಡಿಕೇಟ್ ಸದಸ್ಯರು.; "ದೇಜಗೌ:ವ್ಯಕ್ತಿ ಮತ್ತು ಸಾಹಿತ್ಯ" ಅಭಿನಂದನ ಗ್ರಂಥದ ಸಮರ್ಪಣೆ (ಜುಲೈ 6); ಪ್ರಧಾನ ಸಂಪಾದಕರು ಕನ್ನಡ ವಿಶ್ವಕೋಶ. 'ಪ್ರಬುದ್ಧ ಕರ್ನಾಟಕ' ಸಂಪಾದಕ ಮತ್ತು ಪ್ರಧಾನ ಸಂಪಾದಕ

1968-72 ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು

1969 ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ (ನವೆಂಬರ್-1)

1970 ೪೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

1970-75 ಸುರತ್ಕಲ್ ಎಂಜನಿಯರಿಂಗ್ ಕಾಲೇಜು. ಗವರ್ನಿಂಗ್ ಕೌನ್ಸಿಲ್‌ನ ಅಧ್ಯಕ್ಷರು. ಉಡುಪಿಯಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ ಸಂಗ್ರಹಿಸುತ್ತಿರುವ ತುಳು ನಿಘಂಟು ಸಮಿತಿ ಸದಸ್ಯ.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತು ಪರಿಷತ್ತಿನ ಸಂಸ್ಥಾಪಕರು ಮತ್ತು ಗೌರವ ನಿರ್ದೇಶಕರು

1972 ಕರ್ನಾಟಕ ಪ್ರಿಯೂನಿವರ್ಸಿಟಿ ಬೋರ್ಡಿನ ಅಧ್ಯಕ್ಷರು

1972 "ಅಂತಃಕರಣ" ಅಭಿನಂದನ ಗ್ರಂಥ ಸಮರ್ಪಣೆ

1974 ಕುರುಕ್ಷೇತ್ರದಲ್ಲಿ ನಡೆದ ಅಖಿಲಭಾರತ ಓರಿಯಂಟಲ್ ಸಮ್ಮೇಳನದ ದ್ರಾವಿಡ ವಿಭಾಗದ ಅಧ್ಯಕ್ಷತೆ

1975 ಕಲ್ಕತ್ತಾ ವಿಶ್ವವಿದ್ಯಾನಿಲಯ ಆಶ್ರಯದಲ್ಲಿ ಜರುಗಿದ ಪ್ರಥಮ ರಾಷ್ಟ್ರೀಯ ಸಾಕ್ಷರತಾ ಸಮ್ಮೇಳನದ ಉದ್ಘಾಟನೆ

1975 ಮೈಸೂರು ವಿಶ್ವವಿದ್ಯಾನಿಲಯದ ಎರಡು ಸ್ನಾತಕೋತ್ತರ ಕೇಂದ್ರಗಳ ಜತೆಗೆ 24 ಇಲಾಖೆಗಳನ್ನು ಪ್ರಾರಂಭಿಸಿದ್ದು.

1975 ಕೊಲಂಬೋದಲ್ಲಿ ನಡೆದ ವಿಶ್ವವಿದ್ಯಾನಿಲಯ ವಯಸ್ಕರ ಶಿಕ್ಷಣ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದು

1975 ಕುಲಪತಿ ಸ್ಥಾನದಿಂದ ಪ್ರಾಧ್ಯಾಪಕ ಸ್ಥಾನಕ್ಕೆ ಮರಳಿದ್ದು (ಅಕ್ಟೋಬರ್ 31)

1975 ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ

1976 ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ

1977-1990 ಪ್ರಧಾನ ಸಂಪಾದಕರು. "ಪುಸ್ತಕ ಪ್ರಪಂಚ" (15ವರ್ಷ)

1977 ಪ್ರಾಧ್ಯಾಪಕ ಸ್ಥಾನದಿಂದ ನಿವೃತ್ತಿ

1977 "ಭಾರತೀಯ ಸ್ಥಳನಾಮಗಳು" ಎಂಬ ಸಂಸ್ಥೆಯ ಸ್ಥಾಪನೆ. ಉಡುಪಿಯಲ್ಲಿ ಅದ್ದೂರಿ ಸಮ್ಮೇಳನ

1978 ಸದಸ್ಯರು. ಬಸವ ಸಮಿತಿ ವರ್ಕಿಂಗ್ ಕಮಿಟಿ ಬೆಂಗಳೂರು (ಪ್ರಾರಂಭದಿಂದ)

1979 ತಿರುವಾಂಕೂರಿನ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆಯ ವತಿಯಿಂದ ಸೀನಿಯರ್ ಫೆಲೊ ಗೌರವ

1979 ಬೀದರ್‌ನಲ್ಲಿ 61ನೆ ವರ್ಷದ ಸನ್ಮಾನ

1979 ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಲಿ ಎಂದು ಸತ್ಯಾಗ್ರಹ ಹೂಡಿದ್ದು

1980 "ರಸಷಷ್ಟಿ" ಅಭಿನಂದನ ಗ್ರಂಥ ಸಮರ್ಪಣೆ

1983 ಸದಸ್ಯರು. ಬಸವ ತತ್ವ ಪ್ರಚಾರ ಟ್ರಸ್ಟ್ ಬೆಂಗಳೂರು ಪ್ರಾರಂಭದಿಂದ ಬಸವ ಸಮಿತಿಯ ಕಾರ್ಯಸಮಿತಿಯ ಸದಸ್ಯ (ಒಂದು ದಶಕ)

1984-85 ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1985 ರಾಜ್ಯೋತ್ಸವ ಪ್ರಶಸ್ತಿ

1987 "ದೇಜಗೌ-ಎಪ್ಪತ್ತರ ಹೊಸ್ತಿಲಲ್ಲಿ" ಅಭಿನಂದನ ಗ್ರಂಥ ಸಮರ್ಪಣೆ

1987-88 ಸದಸ್ಯ, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ

1989 ಅಧ್ಯಕ್ಷ ಕೆ. ವಿ. ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ. ಮಂಡ್ಯ.

1988-89 ಮಾಜಿ ಅಧ್ಯಕ್ಷ. ಮೈಸೂರು ವಿಶ್ವವಿದ್ಯಾನಿಲಯ ಸಹಕಾರ ಸಂಘ

1988-89 ಅಧ್ಯಕ್ಷ. ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ. ಮಂಗಳೂರು.

(ಅನೇಕ ಅಭಿನಂದನ ಸಮಿತಿಯ ಅಧ್ಯಕ್ಷ)

Founder Vice President, Elder Citizen's Council Jayalakshmi Puram Mysore.

1989-90 ವಿಶ್ವಮಾನವ ಪ್ರಶಸ್ತಿಯ ಸ್ಥಾಪನೆ (ದೇಜಗೌ ಟ್ರಸ್ಟ್, ಆಶ್ರಯದಲ್ಲಿ)

1989-90 ಪ್ರಧಾನ ಸಂಪಾದಕ ಕನಕ ಸಂಪುಟ

1990-91 ಪ್ರಾದೇಶಿಕ ಫಿಲ್ಮ್ ಪ್ರಮಾಣೀಕರಣ ಸಮಿತಿಯ ಸದಸ್ಯ

1990-91 ಸದಸ್ಯ ಪರಿಶೀಲನ ಸಮಿತಿ. ಅಂಬೇಡ್ಕರ್ ಸಾಹಿತ್ಯ ಭಾಷಾಂತರ ಮಂಡಲಿ ಸದಸ್ಯ. ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳು

1990 ಸಾವಿತ್ರಮ್ಮ ದೇಜಗೌ ಮಹಿಳಾ ಪುರಸ್ಕಾರ ನಿಧಿ

1992 ಸಂಸ್ಥಾಪಕ ಅಧ್ಯಕ್ಷ. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ

1993 President, Indo - Danish Institute of Culture, Mysore.

1993 ಅಧ್ಯಕ್ಷ. ಅಖಿಲ ಕರ್ನಾಟಕ ವಾಚನ ಸಾಹಿತ್ಯ ಪರಿಷತ್ ಮೈಸೂರು

1994 Vice President, Forum for Democracy and Communal amity Karnataka Branch

1994 President, Mysore District Unit of Forum for Democracy and Communal amity.

೨೨. ಪ್ರವಾಸ ಮಾಡಿರುವ ದೇಶಗಳು

ಅಮೆರಿಕಾ. ಆಸ್ಟ್ರಿಯಾ. ಇಟಲಿ. ಇಸ್ರೇಲ್. ಐರ್ಲೆಂಡ್. ಕೀನ್ಯಾ. ಗ್ರೇಟ್‌ಬ್ರಿಟನ್. ಘಾನಾ. ಜಪಾನ್. ಜರ್ಮನಿ. ನೈಜೀರಿಯಾ. ಫ್ರಾನ್ಸ್. ಸಿಂಗಪುರ. ಸೋವಿಯೆಟ್‌ದೇಶ ಹಾಗೂ ಶ್ರೀಲಂಕಾ.

೨೩ ಅಚ್ಚಿಗೆ ಸಿದ್ಧವಾಗಿರುವ ಗ್ರಂಥಗಳು

ಅಚ್ಚಿಗೆ ಸಿದ್ಧವಾಗಿರುವ ಪುಸ್ತಕಗಳು

೧. ಶ್ರೀ ನಾರಾಯಣ ಗುರು (ಜೀವನ ಚರಿತ್ರೆ)

೨. ಯಾತ್ರೆ(ಪ್ರವಾಸಿ ಕಾದಂಬರಿ)

3. A study of Village Names of Mysore District

೪. ಕನ್ನಡ ಸಾಹಿತ್ಯ ಚರಿತ್ರೆಯ ಕೆಲವು ಪಾಠಗಳು

೫ ಕುವೆಂಪು ಸಾಹಿತ್ಯ: ಕೆಲವು ಅಧ್ಯಯನಗಳು 4

೬ ಕುವೆಂಪು ಅವರ ಕೊನೆಯದಿನಗಳು

೭ ಮುನ್ನುಡಿ - ಮಿನುಗು

೮. Studies in Karnataka Culture and Folklore (a) A brief survey of Kannada language and literature (b) Pampa, the earliest poet (c) Basaveswara, the great reformer (d) Basaveswara's contribution to World economic thought (e). Contribution of Kannada writers to the enrichment Indian literature (f) Impact of Kannadigas on other states (g) Masti as I know him (h) Kuvempu, the great seer-poet. (i) Professor S. V. Ranganna (j) Need for a comparative study of Dravidian and African cultures (k) Dravidian and African affinities (l) Stray thoughts on Dravidian folklore (m) Folk beliefs in South India (n) Place Names in Folklore (o) A note on name change (p) Some street names of Mysore city (q) Some stray thoughts on nick names (r)A case for the national dictionary of place names (s) Illiteracy, a cause (t) University adult education programmes and National development (u) University adult (Continuing) education in India (v) The concept of continuing education (w) Religious crisis

* * * * *

ಅಮೃತವರ್ಷದ ಲೇಖಕರು

೧ ಡಾ. ದೇ. ಜವರೇಗೌಡ
ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ, ವಿಶ್ವಚೇತನ ಕಲಾನಿಲಯ,
ಜಯಲಕ್ಷ್ಮೀಪುರಂ, ಮೈಸೂರು -570 012

೨ ಹೆಜ್ಜಿಗೆ ಲಿಂಗಣ್ಣ
ನ್ಯಾಯವಾದಿ, ಸ್ವಾತಂತ್ರ್ಯ ಹೋರಾಟಗಾರರು, ನಂಜನಗೂಡು

೩ ಡಾ. ಸೋಮಶೇಖರಗೌಡ
ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -570 006

೪ ನಾಸಿಕಾ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -570 006

೫ ಸಮೇತನಹಳ್ಳಿ ರಾಮರಾಯ
ಕೋಟೆಮನೆ, 518 ನಾಲ್ಕನೆಯ ದೊಡ್ಡಬೀದಿ ಗೋಕುಲ ಮೂರನೇ ಹಂತ,
ಮೈಸೂರು - 2

೬ ಸಿದಬಟ್ಟೆ ಬಸವಣ್ಣ

೭ ಟಿ. ಜಿ. ಸಿದ್ದಪ್ಪಾರಾಧ್ಯ
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೮ ಪ್ರೊ. ಸಂಗಮೇಶ ಹಂಡಗಿ

೯ ಲತಾರಾಜಶೇಖರ್
ಜಯಲಕ್ಷ್ಮೀಪುರಂ, ಮೈಸೂರು-570 012

೧೦ ಎಸ್. ನಿಜಲಿಂಗಪ್ಪ
ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಚಿತ್ರದುರ್ಗ

೧೧ ಡಾ. ಎಸ್. ವಿ. ಪರಮೇಶ್ವರ ಭಟ್ಟ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಕೃಷ್ಣಮೂರ್ತಿಪುರಂ ಮೈಸೂರು -570 004

೧೨ ಡಾ. ಪು. ತಿ. ನರಸಿಂಹಾಚಾರ್
ಕನ್ನಡದ ಹಿರಿಯ ಕವಿಗಳು, ಬೆಂಗಳೂರು

೧೩ ಡಾ. ಎಚ್. ಜೆ. ಲಕ್ಕಪ್ಪಗೌಡ
ಕನ್ನಡ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ

೧೪ ಪ್ರೊ. ಎಚ್. ಆರ್. ದಾಸೇಗೌಡ
ವಿಶ್ರಾಂತ ಪ್ರಾಧ್ಯಾಪಕ, ಅನುರಾಧ ಅನುರೂಪ, ವಿಜಯನಗರ, ಬೆಂಗಳೂರು -560 040

೧೫ ಡಾ. ಚಂದ್ರಶೇಖರ ಕಂಬಾರ
ಕುಲಪತಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ

೧೬ ಡಾ ಸಿ. ಕೆ. ಎನ್. ರಾಜ
ಪ್ರಾಧ್ಯಾಪಕರು, ನ್ಯಾಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು -570 006

೧೭ ಡಾ. ಕೆ. ಎಸ್. ರಾಮೇಗೌಡ
ವಿಶ್ರಾಂತ ನಗರ ಯೋಜನಾ ನಿರ್ದೇಶಕರು, ಜಯನಗರ, ಬೆಂಗಳೂರು-560 011

೧೮ ಅರಳು ಮಲ್ಲಿಗೆ ಪಾರ್ಥಸಾರಥಿ

೧೯ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ವಿಶ್ರಾಂತ ಸಂಪಾದಕರು, ಕನ್ನಡ ವಿಶ್ವಕೋಶ, 7ನೇ ಮುಖ್ಯರಸ್ತೆ, ಸರಸ್ವತಿಪುರಂ,
ಮೈಸೂರು 570 009

೨೦ ಶ್ರೀಮತಿ ಸಾವಿತ್ರಮ್ಮ ದೇಜಗೌ
ವಿಶ್ವಚೇತನ ಕಲಾನಿಲಯ, ಜಯಲಕ್ಷ್ಮೀಪುರಂ, ಮೈಸೂರು -570 012

೨೧ ಚಂದ್ರಯ್ಯ ನಾಯ್ಡು
ಕನ್ನಡ ಅಧ್ಯಾಪಕರು, ಸರ್ಕಾರಿ ಪದವಿ ಕಾಲೇಜು, ಚಿಕ್ಕಮಗಳೂರು

೨೨ ಪಿ. ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು, ಲಲಿತಕಲಾ ಅಕಾಡಮಿ, ನೃಪತುಂಗ ರಸ್ತೆ, ಬೆಂಗಳೂರು560 002

೨೩ ಡಾ. ಜೆ. ಶಶಿಧರ ಪ್ರಸಾದ್
ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ, ಮಾನಸಗಂಗೋತ್ರಿ, ಮೈಸೂರು 570 006

೨೪ ಟಿ. ಗುರುರಾಜ್

೨೫ ಶ್ರೀ. ಕೆ. ಎಸ್. ಭಗವಾನ್
ಅಧ್ಯಾಪಕರು, ಇಂಗ್ಲೀಷ್ ವಿಭಾಗ, ಯುವರಾಜಾ ಕಾಲೇಜು, ಮೈಸೂರು 570 005

೨೬ ಡಾ. ಟಿ. ಎನ್. ನಾಗರತ್ನ
ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -570 006

೨೭ ಹೊ. ಶ್ರೀನಿವಾಸಯ್ಯ
ವಿಶ್ರಾಂತ ಇಂಜನಿಯರ್, 3ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003

೨೮ ಡಾ. ಡಿ. ಕೆ. ರಾಜೇಂದ್ರ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -570 006

೨೯ ಎಸ್. ಮಂಚಯ್ಯ
ವಿಶ್ರಾಂತ ನಿರ್ದೇಶಕರು, ಶಿಕ್ಷಣ ಇಲಾಖೆ, ಬೆಂಗಳೂರು

೩೦ ಡಾ. ಪದ್ಮಾ ಶೇಖರ್
ರೀಡರ್, ಜೈನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು -570 006

೩೧ ಕ್ಯಾತನಹಳ್ಳಿ ರಾಮಣ್ಣ
ಸಂಶೋಧನ ಸಹಾಯಕ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು -570 006

೩೨ ಜ. ಹೋ. ನಾರಾಯಣಸ್ವಾಮಿ
ನ್ಯಾಯವಾದಿ, 2064/6 ಮಾನವ ಉತ್ತರ ಬಡಾವಣೆ, ಹಾಸನ -573 201

೩೩ ಡಾ. ಸಿ. ಪಿ. ಕೃಷ್ಣಕುಮಾರ್
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -570 006

೩೪ ಮುತ್ತುರಾಜು
ನಂ. 3333, 40 ಅಡಿಮುಖ್ಯರಸ್ತೆ, ಕುಮಾರ ಸ್ವಾಮಿ ಬಡಾವಣೆ, ಎರಡನೇ ಘಟ್ಟ,
ಬೆಂಗಳೂರು -560 078

೩೫ ಜಿ. ಜಿ. ಮಂಜುನಾಥನ್
ಹಿರಿಯ ಸಂಶೋಧಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು -570 006

೩೬ ಡಾ. ತಿಪ್ಪೇಸ್ವಾಮಿ
ಹಿಂದಿ ಪ್ರಾಧ್ಯಪಕ, ಮಾನಸ ಗಂಗೋತ್ರಿ, ಮೈಸೂರು -6

೩೭. ಡಾ. ಕೆ. ವೈ. ಶಿವಕುಮಾರ
ರೀಡರ್, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

೩೮. ಹ. ಕ. ರಾಜೆಗೌಡ
ನಂ. 4, ಹನುಮನಹಳ್ಳಿ, ಸಂತೇಬಾಚಹಳ್ಳಿ ಅಂಚೆ, 571 436 ಮಂಡ್ಯ ಜಿಲ್ಲೆ

೩೯. ಎಂ. ಎನ್. ಲಿಂಗಪ್ಪ
ಅಧ್ಯಾಪಕರು, ವಿವೇಕಾನಂದ ಕಿರಿಯ ಕಾಲೇಜು, ಕುವೆಂಪು ಟ್ರಸ್ಟ್,
ಜಯಲಕ್ಷ್ಮೀಪುರಂ, ಮೈಸೂರು 570012

೪೦. ಡಾ. ಎಂ. ಬಿ. ನೇಗಿನಹಾಳ
ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಕರ್ನಾಟಕ ವಿಶ್ವವಿದ್ಯಾನಿಲಯ, ಬೆಳಗಾಂ.

೪೧. ಡಾ. ಪುರುಷೋತ್ತಮ ಬಿಳಿಮಲೆ
ಜಾನಪದ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ.

೪೨. ಎನ್. ಮರಿಶಾಮಾಚಾರ್
ನಂ. 88, 1ನೇ 'ಎ' ಕ್ರಾಸ್ 7ನೇ ಮೇನ್. 2ನೇ ಬ್ಲಾಕ್. ಜಯನಗರ,
ಬೆಂಗಳೂರು -560 011

೪೩. ಡಾ. ಅಂಬಳಿಕೆ ಹಿರಿಯಣ್ಣ
ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-570 006

೪೪. ಡಾ. ಎಂ. ಎಂ. ಕಲ್ಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

೪೫. ಬಿ. ಜಿ. ಕನಕೇಶಮೂರ್ತಿ
ಸಂಶೋಧನ ಸಹಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,
ಮೈಸೂರು-570 006.

೪೬. ಎ. ವಿ. ನಾವಡ
ಭಂಡಾರ್‌ಕರ್ ಕಾಲೇಜು, ಪುತ್ತೂರು

೪೭. ಪಿ. ವಿ. ಕೃಷ್ಣಮೂರ್ತಿ

೪೮. ವೈ. ಸಿ. ಭಾನುಮತಿ
ಹಿರಿಯ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು-570 006

೪೯. ಗಾಯತ್ರಿ ನಾವಡ
ಪುತ್ತೂರು

೫೦. ತುಳಸಿ ರಾಮಚಂದ್ರ

೫೧. ಡಾ. ಶ್ರೀರಾಮ ಇಟ್ಟಣ್ಣವರ

೫೨. ಡಾ. ತೀ. ನಂ. ಶಂಕರನಾರಾಯಣ
ಕನ್ನಡ ಪ್ರಾಧ್ಯಾಪಕರು. ಕುವೆಂಪು ವಿಶ್ವವಿದ್ಯಾನಿಲಯ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ.

೫೩. ಸರ್ವಮಂಗಳ
ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ಮೈಸೂರು ಹೆದ್ದಾರಿ. ರಾಮನಗರ,
ಬೆಂಗಳೂರು ಜಿಲ್ಲೆ

೫೪. ಎಚ್. ಆರ್. ಚೇತನ
ಜಾನಪದ ಅಧ್ಯಾಪಕಿ. ಮಹಾರಾಜಾ ಕಾಲೇಜು, ಮೈಸೂರು-570 005

೫೫. ಡಾ. ಎ. ಎಸ್. ವೇಣುಗೋಪಾಲರಾವ್
ನಂದಗೋಕುಲ, ೩ನೇ ಕ್ರಾಸ್. ಜಯನಗರ. ಶಿವಮೊಗ್ಗ

7990

೫೬. ಡಾ. ಡಿ. ಎಸ್. ಜಯಪ್ಪಗೌಡ
ಭಾಷಾಂತರಕಾರರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು-570 006

೫೭. ಬಸವರಾಜ ಕಲ್ಗುಡಿ

೫೮. ಅ. ಲ. ನರಸಿಂಹನ್

೫೯. ಡಾ. ಶ್ರೀನಿವಾಸ ಕುಲಕರ್ಣಿ
ಕನ್ನಡ ವಿಭಾಗ, ರಾಣಿ ಪಾರ್ವತೀ ದೇವಿ ಕಾಲೇಜು, ಬೆಳಗಾವಿ -590 076

೬೦ ಡಾ. ವೀರಣ್ಣದಂಡೆ

೬೧ ಡಾ. ಗುರುಪಾದ ಮರಿಗುದ್ದಿ
ಕನ್ನಡ ಪ್ರಾಧ್ಯಾಪಕರು, ಸಂಕೇಶ್ವರ, ಬೆಳಗಾಂ ಜಿಲ್ಲೆ

೬೨ ಎನ್.ವಿ. ಶ್ರೀನಿವಾಸ ರಾವ್
ಕಾದಂಬರಿಕಾರರು, ಬೆಂಗಳೂರು

೬೩ ಜಯಲಕ್ಷ್ಮಿ, ಸೀತಾಪುರ
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು-570 006

೬೪ ಡಾ. ಬಾಳಣ್ಣ ಸೀಗಿಹಳ್ಳಿ

೬೫ ಟಿ.ಎಂ. ಸರಸ್ವತಿ
ನಂ. 48 ವಂದನ, ಮಾರುತಿ ದೇವಾಲಯ ರಸ್ತೆ
ಕುವೆಂಪು ನಗರ ಮೈಸೂರು-570 023

೬೬ ಎಂ. ಆರ್. ಸಣ್ಣರಾಮೇಗೌಡ
ಉಪಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

* * * * *

ನನ್ನ ಮತ್ತು ದೇಜಗೌ ಅವರ ಸಂಬಂಧವನ್ನು ಯಾವ ಪದಗಳಿಂದ ವರ್ಣಿಸಬಲ್ಲುದೋ ನನಗೆ ಅರಿಯದು: ಪ್ರೀತಿ? ವಿಶ್ವಾಸ? ಸ್ನೇಹ? ಅಕ್ಕರೆ? ಭಕ್ತಿ? ಗೌರವ? ಪೂಜ್ಯತೆ? ಒಂದೆಂದೂ ಸಾಲದಾಗುತ್ತದೆ; ಸೋಲುತ್ತದೆ; ಅತಿವ್ಯಾಪ್ತವಾಗುತ್ತದೆ? ಅಥವಾ ಅವ್ಯಾಪ್ತವಾಗುತ್ತದೆ? ಅಹೇತುಕ ಮೈತ್ರಿ? ನಿಷ್ಕಾರಣ ವಾತ್ಸಲ್ಯ? ಜನ್ಮಾಂತರ ಬಾಂಧವ್ಯ! ಮಾತುಗಳಿಗೇನು! ಬೇಕಾದಷ್ಟಿವೆ: ಮಾತಿಗೆ ಮಿರಿದ್ದನ್ನು ಹೇಳುವಾಗ ಮಾತಿಲ್ಲದಿರುವುದೆ ಲೇಸು!

ಸುಮಾರು ಮೂವತ್ತು ವರ್ಷಗಳಿದ್ದಾಗಿದೆ. ಅವರ ಮತ್ತು ನನ್ನ ಪರಿಚಯ. ಖರ್ಪರಸದೃಶವಾಗಿದ್ದ ನನ್ನ 'ಜನಸಂಸದಿಯ ಆರತಿ' ಯನ್ನು ಮತ್ತು 'ವಿವಿಕ್ತ ಸೇವಿತ್ವದ ನೈಷ್ಠುರ್ಯದ ದುರ್ಗ'ವನ್ನು ತಮ್ಮ ವಿನಯಪೂರ್ವಕವಾದ ಮಾರ್ದವತೆಯಿಂದಲೆ ಮೃದುಗೊಳಿಸಿ, ಅರಳಿಸಿ, ಪ್ರವೇಶಿಸಿ, ಆಕ್ರಮಿಸಿದ್ದಾರೆ ಶ್ರೀ ಜವರೇಗೌಡರು. ಅಂದಿನಿಂದ ಇಂದಿನವರೆಗೂ ಆ ಸಂಬಹಧಶ್ರೀ ಅನೇಕ ಭೂಮಿಕೆಗಳಲ್ಲಿ ನಾನಾ ಮುಖವಾಗಿ ವಿವಿಧ ವಿಭವಗಳಿಂದ ಅವಿರಾಮವಾಗಿ ಸುಸ್ರೋತಸ್ವನೀ ಆಗಿದೆ. ಆ ಅಮೃತ ಮಧು ಪ್ರವಾಹ ಚಿರಕಾಲಿಕವಾದುದೆಂದು ನಂಬಿದ್ದೇನೆ.

" ಶ್ರೀ ಸ್ವಾಮಿ ಸಿದ್ದೇಶ್ವರಾನಂದರು ನನ್ನ ಆಧಾತ್ಮಿಕ ಗುರುಗಳು. ಶ್ರೀ ಜವರೇಗೌಡರು ನನ್ನ ಮಾರ್ಗದರ್ಶಕರು". ಯಾರಿಗೆ ಯಾವಾಗ ಹೇಳಿದ್ದೇನೋ ನನಗೆ ನೆನಪು ಬರುವುದಿಲ್ಲ. ಆದರೆ ಹಿಂದೆ ಹೇಳಿರದಿದ್ದ ಪಕ್ಷದಲ್ಲಿ ಇಂದು ಅದನ್ನು, ವಿವರದಲ್ಲಿ ಅಲ್ಲದಿದ್ದರೂ ಒಟ್ಟಿನಲ್ಲಿ, ಒಪ್ಪಿ, ಅವರ ಹೇಳಿದರಂತೆ' ಯನ್ನು 'ಹೇಳಿದ್ದಾರೆ' ಗೊಳಿಸುತ್ತೇನೆ!

– ಕುವೆಂಪು